egd. No. M. 3618

1-9-1949

30ನೇ ವರ್ಷ
Estd: 1921 ಸ್ಥಾಪನೆ.

LICENCE No. 31
Licensed to Post without Prepayment

FOUNDER:
Sri A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
೬ ತಿಂಗಳಿಗೆ ರೂ. 3-0-0
ಒಂದು ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ನವಯುಗ

NAVAYUGA WEEKLY Post Box No. 22 UDIPI, S. K.

ವರ್ಷ ೩೦ | ವಾರ ೧

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ನೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 30
No. 1

ಎಲ್ಲವೂ ಸ್ವಭಾವಾನುಸಾರ-

ಗಾಂಧಿಜೀ ತನ್ನ ಪ್ರತಿಯೊಂದು ಕಾರ್ಯಕ್ರಮದ ಮಟ್ಟಿಗೂ ಹೃದಯ ಪರಿವರ್ತನೆ, ಬುದ್ಧಿ ಬದಲಾವಣೆಯನ್ನೇ ಮೂಲ ಸೂತ್ರವಾಗಿ ಇಟ್ಟುಕೊಳ್ಳುತಿದ್ದರು. ಒಂದು ಘೋರಣೆಗೆ ಅಥವಾ ಸುಧಾರಣೆಗೆ ವಿರುದ್ಧವಿರುವವರ ಹೃದಯ ಮತ್ತು ತಲೆಯನ್ನು ಮಾರ್ಪಡಿಸಿಯೇ ಕಲಸ ಮಾಗಬೇಕೆನ್ನುವದು ವ್ಯವಹಾರ್ಯವೇ, ಎಂಬ ಸಂದೇಹ ಆ ಕಾಲದಲ್ಲಿ ಮೂಡಿದ್ದಿತು. ಆದರೆ ಒಂದು ಸುಧಾರಣೆಯು ಕಾರ್ಯತಃ ಮತ್ತ ದೃಢವಾಗಿ ಅಸ್ತಿತ್ವಕ್ಕೆ ಬರಬೇಕಾದರೆ, ಅದಕ್ಕನುಕೂಲವಾದ ಕಾನೂನು ಮಾಡುಪದಕ್ಕಿಂತಲೂ, ಸಂಬಂಧಪಟ್ಟ ಜನತೆಯ ಮೆದುಳು, ಹೃದಯಗಳನ್ನು ಅದಕ್ಕನುಗುಣವಾಗಿ ಮಾರ್ಪಾಡಿಸುವುದು ಅಗತ್ಯವೆಂಬುದು ಈಗ ಪ್ರತ್ಯಕ್ಷಾನುಭವದಿಂದ ಮಂದಟ್ಟಾಗುತ್ತಿದೆ.

ಬಹುಮತವನ್ನಾಧರಿಸಿರುವ ಪ್ರಜಾ ಪ್ರಭುತ್ವದಲ್ಲಿ, ಬಹು ಸಂಖ್ಯಾಕರ ಬುದ್ಧಿ ಸಾಕಷ್ಟು ಪಕ್ವವಗೊಂಡು ಯಾವುದೇ ಮಾರ್ಪಾಟನ್ನು ಸ್ವಾಗತಿಸಿಕೊಂಡು ತಮ್ಮುದನ್ನಾಗಿ ಮಾಡಿಕೊಳ್ಳುವ ಅಥವಾ ಅದಕ್ಕೆ ಮತ್ತು ಅಧ್ಯತೆ ಬೆಳೆದಿರುವಲ್ಲಿ ಅಂತಹ ಬದಲಾವಣೆಯನ್ನು ಕಾಯಿದೇ ಮೂಲಕ ಜಾರಿಗೆ ತಂದರೆ ಗುಂಪಿನ ನಡುವೆ ಸಂಘರ್ಷ ಧ್ರುವವನ್ನು ಚೆಲ್ಲಿದಂತಾಗಿ ಅದು ಸರ್ವತ್ರ ಲೇಪನಗೊಳ್ಳುವದು; ಹಾಗೆ ತಯಾರಾಗದ ಜನತೆಯ ನಡುವೆ ಕಾಯಿದೇ ಮೂಲಕ ಮಾರ್ಪಾಟವನ್ನೊಡ್ಡುವದಾದರೆ, ಅದವರ ಮಟ್ಟಿಗೆ ದುರ್ವಾಸನಾದ್ವೇಷಕ್ಕೆ ಬೀಳುತ್ತದೆಂದಾಗಿ ಎಲ್ಲರೂ ಸಾಧ್ಯವಿದ್ದಷ್ಟು ವೈದೆಗೆದು ನಿಲ್ಲುವರು.

ನಿಜಕ್ಕೂ ಆಗಲೇಬೇಕಾಗಿರುವ-ರಾಷ್ಟ್ರ ಹಿತಕ್ಕಾಗಿ, ಸಮಾಜದ ಆಘನೈದ್ಧಿಗಾಗಿ ಅನಿವಾರ್ಯವಾಗಿರುವ-ಎಂತಹ ಬದಲಾವಣೆಯನ್ನು ತರುವಾಗಲಾದರೂ, ಆ ಬದಲಾವಣೆಯನ್ನು ನಿರಂತರಂಕವಾಗಿ ಅಧಿಕಾರಪೂರ್ವಕಶರಲಾಗುವಂತಿದ್ದರೂ ಕೂಡಾ, ಅದು ಸಾಫಲ್ಯ ಹೊಂದಬೇಕಾದರೆ ಸಕಲದಲ್ಲಿ ಜನರ ಬುದ್ಧಿ ಮತ್ತು ಹೃದಯವನ್ನು ಅದಕ್ಕನುಕೂಲವಾಗಿ ಮಾರ್ಪಡಿಸಿಕೊಳ್ಳಬೇಕಾದುದು ಅಗತ್ಯ. ಈ ಅವಶ್ಯಕತೆಯನ್ನು ಮನಗಾಣಿಸುವ ನಿದರ್ಶನಗಳು ಇಂದು ಎಲ್ಲೆಲ್ಲೂ ನೋಡಲು ಸಿಗುತ್ತಿವೆ.

ಮುಸ್ಲಿಂ ಜನತೆಯಲ್ಲಿ ಸಾಮಾಜಿಕ ದ್ವೇಷ ಭಾವನೆಯನ್ನು ಮತ್ತು ಹರಮಾರಿ ತನವನ್ನು ನಿರ್ಮಿಸಿ ಲೀಗ್ ನಾಯಕರು ಪಾಕಿಸ್ತಾನ ಗಳಿಸಿಕೊಂಡರು; ಇಂತಹ ದ್ವೇಷ ಭಾವನೆಯುಳ್ಳ ಗಣ್ಯ ಸಂಖ್ಯೆಯವರನ್ನು ಕೂಡಿಕೊಂಡು ಯಾವ ಭವಿಷ್ಯವನ್ನೂ ಕಟ್ಟುವದಸಾಧ್ಯವೆಂದು ತಿಳಿದೇ ಕಾಂಗ್ರೆಸ್‌ನಾಯಕರು ಪಾಕಿಸ್ತಾನ್ ನಿರ್ಮಾಣಕ್ಕೊಪ್ಪಿದ್ದರು. ಆದರೆ ಈ ಮಾರ್ಪಾಟಿಕ್ಕನುಗುಣವಾದ ಜ್ಞಾನವನ್ನಾಗಲೀ ಹೃದಯ ಪರಿವರ್ತನೆಯನ್ನಾಗಲೀ ಆ ಭಾಗದ ಮುಸ್ಲಿಮರಲ್ಲಿ ಉಂಟು ಮಾಡಿದವರಲ್ಲವಾದ್ದರಿಂದ ಪಾಕಿಸ್ತಾನ್ ಸಾಧನಾ ಕಾಲದ ಭಾವನೆಯೇ ಪಾಕಿಸ್ತಾನ್ ಸರಕಾರದ ಕಾಲದಲ್ಲೂ ಉಳಿದುಕೊಂಡು, ಸ್ವಾತಂತ್ರ್ಯ ದಿನದಲ್ಲಿ 'ಕಾಂಗ್ರೆಸ್ ಧ್ವಜ'ವನ್ನೆತ್ತಿ ಕರಾಚೀ ಮುಸ್ಲಿಮರು ಭಾರತ ಧ್ವಜದಿದಿರು ಗೊಂದಲ ವೆಬ್ಬಿಸಿದರು.

ಪಾಕಿಸ್ತಾನ್ ಸ್ಥಾಪನೆಗಾಗಿ 'ಮುಸ್ಲಿಂ ಜನತಾಂ'ದ ಹೆಸರು ಹೇಳುತ್ತಾ ಕಾಂಗ್ರೆಸ್ ಮಾಡಿದ್ದೆಲ್ಲಾ ತಪ್ಪೆಂದು ಸಾರುವುದನ್ನೂ, ಯಾವ ಪ್ರಶ್ನೆ ಮುಂದೆ ಬಂದರೂ ಕಾಂಗ್ರೆಸಿನ ನಿರ್ಧಾರವಾಗುವ ವರೆಗೆರಾದು ಮರುದಿನ ತದ್ವಿರುದ್ಧ ನಿರ್ಣಯ ಮಾಡುವದನ್ನೂ ಮುಸ್ಲಿಂ ಲೀಗ್ ನಾಯಕರು ಕಲಿತಿದ್ದರಲ್ಲದೆ, ಬೇರಾವ 'ಸ್ವಂತ' ಕಾರ್ಯವನ್ನೂ ಮಾಡಲರಿತಾದಿಲ್ಲ. ಈ ಅಭ್ಯಾಸ ಬಲದಿಂದ ಈಗ ಹೇಗಾಗಿದೆಯೆಂದರೆ, ಪಾಕಿಸ್ತಾನದ ಘಟನಾ ಕಾರ್ಯವನ್ನು ಮುಂದೊತ್ತುವದಕ್ಕೂ ಭಾರತದ ಘಟನಾ ಸಮಿತಿಯ ಕಾರ್ಯ ವಿಧಾನಗಳನ್ನು ನೋಡಿಕೊಳ್ಳಬೇಕಾಗಿ ಬಂದಿದೆ. ತಾನು ಪ್ರತ್ಯೇಕ ರಾಷ್ಟ್ರದ ನಾಯಕನೆಂಬ ಜ್ಞಾನ ಕೂಡಾ ಇಲ್ಲದೆ, ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನರ ಬಾಯಿಯಿಂದ ಹಿಂದಿನಂತೆಯೇ ಭ್ರಾಂತದ 'ಮುಸ್ಲಿಂ ಸಮಾಜ'ದ ಸುಖದುಃಖದ ಮಾತು ಇಣ್ ಹೆಬ್ಬದ ದಿನ ಬಂದು ಬಿಟ್ಟಿದೆ.

ಪರಕೀಯಾಡಳಿತೆಯಿದ್ದಾಗ, ಅದನ್ನು ದೂರುವ ಸುಲಭಸಾಧ್ಯ ಚಟವನ್ನು ಸಾರ್ವಜನಿಕರಿಗೆ ಕಲಿಸಿದಂತೆ ಸ್ವಾಧಿಕಾರ ನಿರ್ವಹಣದಿ ಹೊಣೆಗಾರಿಕೆಯ ಪಾಠ ಕೊಟ್ಟಿರಲಿಲ್ಲ. ಆದ್ದರಿಂದ ಇಂದಿನ ಸ್ವಾಧಿಕಾರವನ್ನಾದರೂ, ದೂರುವ ಅಂಶವಿದ್ದಲ್ಲಿಅತಿಯಾಗಿ ದೂರುವದೊಂದೆ ನಡೆಯುತ್ತಿದೆಯಲ್ಲದೆ, ಹೊಣೆ ನಿರ್ವಹಣದ ಕಷ್ಟ ಹೆಚ್ಚಿನವರಿಗೆ ಮಂದಟ್ಟಾಗಿಲ್ಲ; ಕಾರಣ-ಅದರ ಗುರುತಾರ್ಥನೇ ಜನತೆಗಾದದಿಲ್ಲ.

ಬಹುಮಟ್ಟಿಗೆ ಕಾಂಗ್ರೆಸಿನ ಧ್ಯೇಯ, ಧೋರಣೆ, ಕಾರ್ಯಕ್ರಮಗಳೇ ಉಳ್ಳ ಸಮತಾವಾದಿ ಸಕ್ಷದ ಪ್ರಮುಖರಿಗೆ, ಕಾಂಗ್ರೆಸು ತಾವು ನೆನೆಸಿದಷ್ಟು ಕ್ಷಿಪ್ರಗತಿಯಿಂದ ನಡೆಯುತ್ತಿಲ್ಲವೆಂಬುದು ಅನಿವಾರ್ಯ ವಿಳಂಬವಾಗಿ ತೋರುವ ಬದಲಿಗೆ ಅಕ್ಷಮ್ಯ ಅಪರಾಧವಾಗಿ ತೋರಿ ಅವರು ಕಾಂಗ್ರೆಸಿನಿಂದ ದೂರಸರಿದುಬಿಟ್ಟರು. ಹೀಗೆ ತನ್ನು ತೀವ್ರಗಾಮಿತ್ವವನ್ನು ಸಾರುತ್ತಾ ದೂರಹೋಗುವ ಲಭ್ಯಾನವನ್ನು ಜನತೆಯ ಮಟ್ಟಿಗೂ ಅವರು ಬಿಟ್ಟಲ್ಲವೆಂಬಂತೆ, ಜನತಾ ಸಂಪರ್ಕವನ್ನು ಸಾಕಷ್ಟು ಮಾಡಿಕೊಂಡಿಲ್ಲ. ಇನ್ನು "ಕಾಂಗ್ರೆಸು ಸಾಕಷ್ಟು ಮಾಡಿಲ್ಲ"ವೆಂದು ದೂರುವ ಎಲ್ಲಾ ವಿಷಯಗಳೂ ಈ ಅಭ್ಯಾಸ ಬುದ್ಧಿಯ ಬಲದಿಂದಾಗಿ ನಮ್ಮೊಳಗೂ ಪರಸ್ಪರ ದೂರ ದೂರ ಹೋಗುತ್ತಿವೆಯಲ್ಲದೆ ಕೂಡಿ ನಡೆಯಲಾಗಿಲ್ಲ. ಸಮತಾವಾದಿ, ಸೋಷಿಯಲಿಸ್ಟ್ ರಿಪಬ್ಲಿಕ್ ಮೊದಲಾದ ಕಾಂಗ್ರೆಸಿನ ವಿರೋಧಿ ವಿಪಕ್ಷಗಳ ವಿಘಪಕ್ಷ ನಿರ್ಮಾಣ ಸಂಘಾನ ಮಾತುಕತೆ ಮುಂದು ಹೋಗಿ ಜೈ ಪ್ರಕಾಶ್-ಶರತ್ ಬೋಸರೊಳಗೀಗ ವಾಗ್ಯುದ್ಧ ನಡೆದಿದೆ.

ಅಸ್ಪರ್ಶತಾ ನಿವಾರಣೆ ಮತ್ತು ಹರಿಜನರ ದೇವಾಲಯ ಪ್ರವೇಶದ ಕೂಗು ಜನಜಾಗೃತಿ ನಿರ್ಮಿಸುವ ಪ್ರಚಾರಗಳು ಕಾಂಗ್ರೆಸಿಗೆ ಅಧಿಕಾರವಿರದಿದ್ದ ಸ್ವಾತಂತ್ರ್ಯ ಚಳವಳಿ ಕಾಲದಿಂದಲೂ ಕೆಲವಂಶ ನಡೆದಿದ್ದುವು. ಪರಸ್ಪರ ಸಮ್ಮತಿಯನ್ನಾಧರಿಸಿ ದೇವಾಲಯ ಪ್ರವೇಶವಾದುದೂ ಇದೆ. ಈಗ ಮಂದಿರ ಪ್ರವೇಶ ನಿರ್ಬಂಧವು ಕಾಯಿದೇ ಮೂಲಕ ರದ್ದಾಗಿ, ಆ ಕಾನೂನು ಜಾರಿಗಾಗಿ ಹೆಚ್ಚು ಸಂಖ್ಯೆಯ ದೇವಸ್ಥಾನಗಳಿಗೆ ಒಮ್ಮೊಮ್ಮೆ ಹರಿಜನ ಪ್ರವೇಶವಾದುದಿದ್ದರೂ, ಜನಜಾಗೃತಿಗೊಂಡ ಪರಿಮಾಣವನ್ನು ಮಿಕ್ಕೆ ೯೫ ನಿರಾಯತಿಂಯ ಕಾರಣದಿಂದಲೇ ಹರಿಜನ ಪ್ರವೇಶವು ಸಂಗವಾಗಿ ನಿಶ್ಯಂಕೆಯಿಂದ ಎಲ್ಲಿಯೂ ನಡೆಯುತ್ತಿಲ್ಲ. ಸುಧಾರಕರು, ತಾವು ಹೃದಯ ಪರಿವರ್ತನೆಗೊಳಿಸಿ ಮಾಡಿಸಬೇಕಾಗಿದ್ದ ಕಾರ್ಯವನ್ನು ಕಾನೂನು ಮಾಡಿದೆ ಎಂಬುದರಿಂದ ಸುಮ್ಮನಿದ್ದಾರಾದರೆ, ಮೇಲ್ವಾತಿಯವರ ಮರ್ಜಿ ಗಂಜಿಯೇ ದೂರವಿರುವ ಹರಿಜನರು, ಅವರ ಆ ಮನಸ್ಸಾಗಲೀ ತಮ್ಮ ಮನೋಸ್ಥಿತಿಯಾಗಲೀ ಸುಧಾರಿಸದೆ ಇದ್ದಂತಿರುವುದರಿಂದ ಕಾನೂನನ್ನಾಧರಿಸುವ ವಿಶೇಷ ವರ್ತನೆಗೆ ಮಾತ್ರವಷ್ಟು ಹೆದಂದಂತಿದೆ.

ಅಧಿಕಾರ ಬದಲಾಗಿದೆ; ಪರಕೀಯರು ಹೋಗಿ ಸ್ವಕೀಯ ಅಧಿಕಾರಿಗಳು ಬಂದಿದ್ದಾರೆ ಪರದೇಶಿಗಳದ್ದಾಗ, ಅವರಿಗೆ ಪ್ರತಿಕೂಲವಾಗಿ ನಿರ್ಮಿಸಿದ್ದ ಸ್ವದೇಶಾಭಿಮಾನವು ಈ ಮಾರ್ಪಾಟಿದೊಂದಿಗೆ ಸ್ವಾಧಾವಿಕವಾಗಿ ಮಂಕ್ಕಾಯಗೊಂಡಿದೆ. ಆದರೆ ಸ್ವಕೀಯಾಡಳಿತೆಗನುಗುಣವಾದ ವಿಶಿಷ್ಟ ಗುಣನಡತೆ, ಜ್ಞಾನಾನುಭವವಾದುದಿಲ್ಲವಾದ್ದರಿಂದ, ಇಂದು ಪೀಡವಾಗಿರುವ ಹಿಂದಿನ ಎಲ್ಲಾ ಅಭ್ಯಾಸಗಳೂ ಹಾಗೆಯೇ ಉಳಿದುಹೋಗಿವೆ!

ವಿಮೆಮಾಡಲಿಕ್ಕೆ ಯಾ ಕ್ಲೈಮಿನ ವಿಷಯಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ--
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಾನ ಕಾರ್ಯಾಲಯ:-ಧಾರವಾಡ,

THE UNITED KARNATAK INSURANCE COMPANY, LIMITED.

ಒಂದು ಒಳ ನೋಟ

ದ. ಕ. ಜಿಲ್ಲಾಬೋರ್ಡಿನ ಕಾಂಗ್ರೆಸ್ ಉಮೇದ್ವಾರಿಕೆ.

('ನಿಷ್ಪಕ್ಷಪಾತಿ ವಿಮರ್ಶಕ'ನಿಂದ)

ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಇಪ್ಪತ್ತರಲ್ಲೇ ಪ್ರಬಲ ಬಹುಮತ ಪಡೆದು ಗೆದ್ದು ಬಂದಿದೆ. ಬೋರ್ಡಿನಲ್ಲಿರುವ ಒಟ್ಟು ಸ್ಥಾನಗಳ ಪೈಕಿ ಸುಮಾರು 30ರಷ್ಟು ಸ್ಥಾನಗಳು ಅವಿರೋಧವಾಗಿ ಕಾಂಗ್ರೆಸಿಗೆ ದೊರೆತಿವೆ. ವಿರುದ್ಧ ನಾಮಪತ್ರ ದಾಖಲಾಗದೆ-ದಾಖಲಾದವುಗಳು ಸಕಾಲದಲ್ಲಿ ಹಿಂಪೆಗೆಯಲ್ಪಟ್ಟು-ಇಷ್ಟೂ ಸ್ಥಾನಗಳನ್ನು ಕಾಂಗ್ರೆಸಿಗರು ಸ್ಪರ್ಧೆಯಿಲ್ಲದಾ ಗಳಿಸಿಕೊಂಡರು. ಇನ್ನುಳಿದ ಹತ್ತು ಹದಿನಾಲ್ಕು ಸ್ಥಾನಗಳಿಗೆ ಸೆಪ್ಟೆಂಬರ್ 26ರಲ್ಲಿ ಚುನಾವಣೆ ನಡೆಯಲಿದೆ; ಇಲ್ಲಿಯೂ ಹೆಚ್ಚಿನ ಸ್ಥಾನಗಳು ಕಾಂಗ್ರೆಸಿಗೇನೇ ದೊರೆಯುವ ಸಂಭವವಿದೆ ಅಂತೂ ದ. ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸಿದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ತನ್ನ ಕೆಲಸ ಸಾಧಿಸಿಕೊಂಡಿತೆಂಬುದು ನಿರ್ವಿವಾದ. ದ.ಕ. ಜಿಲ್ಲಾ ಬೋರ್ಡು ಚುನಾವಣಾ ಕಾರ್ಯವು ಪೂರ್ಣಮುಗಿದ ಮರುದಿನವೃತಾವು ಮಹಾ ವಿಜಯಗಳಿಸಿಕೊಂಡೆವೆಂದು ಜಿಲ್ಲೆಯ ಕಾಂಗ್ರೆಸಿಗರು ಹೆಗ್ಗಳಿಕೆ ಪಡುವ ಸುದಿನವಾಗುವದಂತೂ ಖಂಡಿತ; ಬೇರಾವುದೇ ಚ.ನಾವಣೆಯಲ್ಲಿ ಕಾಂಗ್ರೆಸು ಗಳಿಸಿರುವ ವಿಜಯದ ಪರಿಮಾಣಕ್ಕೇನೂ ಕಡಿಮೆಯಿಲ್ಲದಂತಹ ಜಯವಿದು. ಮದ್ರಾಸ್ ಪ್ರಾಂತ್ಯದಲ್ಲೆಲ್ಲಾ ನಡೆದ ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ, ಎಲ್ಲಾ ಜಿಲ್ಲೆಗಳಲ್ಲೂ ಕಾಂಗ್ರೆಸಿಗರೇ ಅತಿ ಹೆಚ್ಚಿನ ಬಹುಸಂಖ್ಯಾಕರಾಗಿ ಗೆದ್ದುಬಂದ ನಾರ್ತೆಗಳಿವೆ. ಕೊನೆಗೆ, ಈ ವಿಚಿತ್ರಕ್ಕೆ ಯಾರು ಮುಂದು, ಎಂದು ತುಲನೆಮಾಡುವಾಗ ದ ಕ್ಷಿಣಕನ್ನಡವೇ ಪ್ರಥಮ ಬಹುಮಾನ ಪಡೆದೀತೆಂಬ ಅಭಿಪ್ರಾಯಕೂಡಾ ಇದೆ. ದ. ಕ. ಜಿಲ್ಲೆಯು ಹೆಗ್ಗಳಿಕೆ ಪಡಬೇಕಾದ ವಿಷಯ ಅದು.

ಅಭಿವಂದನೆ

ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರ ಮತ್ತು ವ್ಯವಸ್ಥೆ ಮಾಡಿ, ಇಂತಹ ವಿಜಯವನ್ನು ಗಳಿಸಿಕೊಂಡ ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಅಭಿನಂದಿಸಬೇಕು. ಈ ಚುನಾವಣಾ ಕಾರ್ಯಕ್ಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯಿಂದ ನಿರ್ಮಾಣಗೊಂಡು, ಆ ಕೆಲಸವನ್ನೀರೀತಿ ಜಯಶೀಲವಾಗಿ ನಿರ್ವಹಿಸಿಕೊಂಡ 'ಚುನಾವಣಾ ಸಮಿತಿ'ಗೆವಿಶೇಷ ರೀತಿಯ ಅಭಿವಂದನೆಗಳು ಸಲ್ಲಬೇಕು. ಕಾಂಗ್ರೆಸ್ ಉಮೇದ್ವಾರಿಗಳೇ ಅಧಿಕ ಸಂಖ್ಯೆಯಿಂದ ಜವಿಜೋಧವಾಗಿ ಆರಿಸಿ ಬರುವಂತೆಮಾಡಿದ ಮಧ್ಯಸ್ಥಗಾರಪ್ರಮುಖರು ಪ್ರತ್ಯೇಕವಿದ್ದಾರೆ. ಇವರು ಹೆಚ್ಚಿನ ಧನ್ಯವಾದಗಳರ್ಹರು. ತಾವು ಹಿಂದೆ ಗೆದ್ದು ಕಾಂಗ್ರೆಸ್ ಉಮೇದ್ವಾರಿಗಳಿಗೆ ಸ್ಥಾನಗಳನ್ನು ತೆರವು ಮಾಡಿಕೊಟ್ಟ ಪ್ರತಿಸ್ಪರ್ಧೀ ಉಮೇದ್ವಾರಿಗಳನ್ನೂ, ಪೈಕೈ ಕ್ಷಾಪ್ರೈಕ್ಷ ರೀತಿಯಿಂದ ಕಾಂಗ್ರೆಸಿಗಿಂತಹ ಅವಿರೋಧ ವಿಜಯ ದೊರಕುವಂತೆ ಮಾಡಿದ ಸರ್ವರನ್ನೂ ಈ ಸಂದರ್ಭದಲ್ಲಿ ಅಭಿನಂದಿಸಬೇಕು. ಪಕ್ಷದ ಪ್ರತಿಷ್ಠೆ, ಪ್ರತಿಪೈಸೆ, ಜಾತಿಯರ್ಯ, ಮನೋನಿಗ್ರಹ, ಸಹನೆ, ತ್ಯಾಗಗಳ ಪರಿಣಾಮವೇ ಕಾಂಗ್ರೆಸಿನ ಈ ಅವಿರೋಧ ವಿಜಯ. ಚುನಾವಣಾ ಸಂದರ್ಭದಲ್ಲೀಕಾಲ ಅಟ್ಟಿಸಿಕಲಾಟಗಳೆಂತಹವು-ಹೃದಯ ಮತ್ತು ಮೆದುಳು ಮಂಥನಮಾಡುವ ರೀತಿಯದು-ಎಂಬುದಕ್ಷರಶಃ ತವರು ಈ ವಿಜಯದ ಹಿನ್ನೆಲೆಯಲ್ಲಿ ಮೆದುಳು ಮತ್ತು ರಕ್ತದ ಬಸಿಯಿಷ್ಟಿದ್ದೀತೆಂಬುದನ್ನು ಊಹಿಸಬಲ್ಲರು. ಕಾಂಗ್ರೆಸಿಗಾಗಿ ಇಂತಹ 'ಜ್ವರ'ಕ್ಕೀಡಾಗುವವರಿದ್ದಾರೆ, ಎಂಬುದು ನಿಜಕ್ಕೂ ಅಭಿಮಾನಪಡತಕ್ಕ ಸಂಗತಿ.

ಒಳನೋಟ

ಸರಿ; ಜಿಲ್ಲಾಬೋರ್ಡಿನ ಸ್ಥಾನಗಳಗೆದ್ದು ಗಳಿಸಿಕೊಳ್ಳುವ ಕಾರ್ಯದಲ್ಲಿ ಕಾಂಗ್ರೆಸ್ ವಿಜಯಿಯಾಯಿತು:-ಸಂಖ್ಯೆಯನ್ನು ಕೊಂಡು ಕಾಂಗ್ರೆಸ್ ಜಿಲ್ಲೆ ದಕ್ಷಿಣಕನ್ನಡಕ್ಕೆ ಹೊರಗಿನವರು 'ಶಹಭಾಸ್'ಕೊಡುವಂತಾಯಿತು. ಒಂದು ಚುನಾವಣೆಯಲ್ಲಿ, ಸಂಬಂಧಪಟ್ಟ ಸ್ಥಾನಗಳನ್ನು ಗೆದ್ದುಕೊಳ್ಳುವದೊಂದಲ್ಲದೆ ಬೇರಾವ ಗುರಿಯಿದೆ, ಎನ್ನುವವರಿದ್ದಾರೆ, ಅಂಥವರಲ್ಲಿ ಸಫಲತೆಗೊಂದಿದ್ದಾರೆ; ಏನೂ ನಷ್ಟವಿಲ್ಲದೆ ಲಾಭಹೊಂದಿದ್ದಾರೆ. ಅವರೇ 'ಕಾಂಗ್ರೆಸ್ ಮತ್ತು ಜಿಲ್ಲಾಬೋರ್ಡು ಚುನಾವಣೆ' ಮಟ್ಟಿಗೆ ಕೇವಲ ಸ್ಥಾನಗಳ ಲಾಭ-ನಷ್ಟದ ಮೇಲಿಂದ ಜಯಾಪಜಯಗಳನ್ನು ನಿರ್ಣಯಿಸಲಾಗುವದಿಲ್ಲ. ಈ ದಿನ ಕಾಂಗ್ರೆಸಿಗರು ಜಿಲ್ಲಾ ಬೋರ್ಡು ಸ್ಥಾನಗಳನ್ನು ಗೆದ್ದುಕೊಳ್ಳುವುದರಲ್ಲಿ ಅಂತಹ ವಿಶೇಷವೇನೂ ಇಲ್ಲ; ಇದೊಂದು ಅಪೂರ್ವ ಘಟನೆಯೂ ಅಲ್ಲ. ತ್ಯಾಗ, ಕಷ್ಟ ನಷ್ಟ, ಸಹನೆ, ಯೋಧತ್ವದಿಂದ ರಾಷ್ಟ್ರದ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುವಷ್ಟು ಜನತಾ ಬೆಂಬಲ ಪಡೆದಿರುವ ಕಾಂಗ್ರೆಸು ಚುನಾವಣೆಗಳನ್ನು ಗೆಲ್ಲುವದೊಂದು ದೊಡ್ಡ ಸಂಗತಿಯಲ್ಲ. ಚುನಾವಣಾ ವಿಜಯಕ್ಕಾಗಿ, ಅದು ತನ್ನೀ ಕೀರ್ತಿ ಭಂಡಾರವನ್ನು ವೆಚ್ಚಮಾಡಬೇಕಾಗಿ ಬಂದಿತೇ, ಅಥವಾ ಈ ಚುನಾವಣೆಯ ಮೂಲಕ ಆ ಭಂಡಾರಕ್ಕೆ ಇನ್ನಷ್ಟು ಎತ್ತನ್ನಾದರೂ ಅದು ಹೆಚ್ಚಿಗೆ ಸೇರಿಸಿತೇ ಎಂಬುದೇ ಇಲ್ಲಿ ನೋಡಬೇಕಾಗಿರುವ ಅಂಶ. ಕಾಂಗ್ರೆಸು ಈ ಮೊದಲಿನ ತನ್ನ ಬೇರೆ ಕಾರ್ಯಗಳ ಮೂಲಕ ಗಳಿಸಿಕೊಂಡಿದ್ದ ಪ್ರತಿಷ್ಠೆಗಳಲ್ಲಿ ಎತ್ತನ್ನಾದರೂ ಈ ಚುನಾವಣೆಯಲ್ಲಿ ವ್ಯಯ ಮಾಡಿಕೊಂಡುಬಿದ್ದರೆ ಅದು ನಷ್ಟವೇ-ಅದರ ಪರಿಣಾಮವಾಗಿ ಹೆಚ್ಚಿನ ಸ್ಥಾನಗಳು ದೊರೆತುವೆಂದರೂ ಅದು ನಷ್ಟದ ಬಾಬೇ. ಬದಲಿಗೆ ಕಾಂಗ್ರೆಸಿನ ಪ್ರತಿಷ್ಠೆ ಮತ್ತಷ್ಟು ಹೆಚ್ಚಿದುದಿದ್ದರೆ, ಅದೇ ಲಾಭ; ಇಂತಹ ಲಾಭನಾಥನೆಯಲ್ಲಿ ಕೆಲವು ಸ್ಥಾನಗಳು ನಷ್ಟವಾಗುವಂತಾದರೂ ಕೂಡ ಅದು ಲಾಭವೇ. ಈ ಲಾಭನಷ್ಟವನ್ನಾಧರಿಸಿಯೇ ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದೆಯೋ ಸೋತಿದೆಯೋ ಎಂಬುದನ್ನು ನೋಡಿಕೊಳ್ಳಬೇಕು. ಸಂಬಂಧಪಟ್ಟ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಮನಸ್ಸಾಕ್ಷಿಮೂಲಕ ಈ ಅಳತೇ ತಕ್ಕಡಿಯನ್ನೆತ್ತಿ, ಯಾವಕಡೆಯ ತಕ್ಕಡಿ ತಗ್ಗಿದೆ, ಎಂಬುದನ್ನೊಮ್ಮೆ ನೋಡಿಕೊಳ್ಳುವರೆ? ಗೆದ್ದುಕೊಂಡ ಮತ್ತು ಇನ್ನು ಗೆದ್ದುಕೊಳ್ಳಲಿರುವ ಸ್ಥಾನಗಳ ಸಂಖ್ಯೆಯನ್ನು ಜಮ್ಮಾಮಾಡಿ ಒಂದು ಕಾಗದದಲ್ಲಿ ಪೃಥಕ್ಕರಿಸಿಟ್ಟು ಬಿಡೋಣ-ಹೊರಗಿನವರಿಗೆ ತೋರಿಸಿ, ಜಿಲ್ಲೆಯ ಹೆಸರನ್ನು ಪೆರಿದಾಡಿಸುವದಕ್ಕಾಗಿ ಮಾತ್ರ ಅದನ್ನು ಉಪಯೋಗಿಸಿದರೆ ಸಾಕು. ನಾವು ನಮ್ಮೊಳಗೇನೇ ಮುತ್ತೊಂದು ಪ್ರತ್ಯೇಕ ಕಾಗದದಲ್ಲಿ ಕಾಂಗ್ರೆಸ್ ಪ್ರತಿಷ್ಠೆಗಾದ ಲಾಭ-ನಷ್ಟಗಳ ಲೆಕ್ಕಹಾಕಿ ನೋಡೋಣ. ಭವಿಷ್ಯದ ದೃಷ್ಟಿಯಿಂದ ಇಂತಹ ಆತ್ಮವಿಮರ್ಶೆ ಅತ್ಯಗತ್ಯ-ಕಾಂಗ್ರೆಸಿನ ತತ್ವ, ಧೋರಣೆ, ಕಾರ್ಯಕ್ರಮಗಳ ಇರಸುಕೆಗಾಗಿ ಹೀಗೆ ಒಳವಿಮರ್ಶೆ ನಡೆಸಬೇಕಾದುದು ಅವಶ್ಯಕ. ಆದ್ದರಿಂದಲೇ ವಿಧಾಯಕ ವಿಮರ್ಶೆಗಳಿಗೆ ಕಾಂಗ್ರೆಸ್ ನಾಯಕರ ಕರೆಯಿದೆ. ಜನಹಿತ ದೃಷ್ಟಿಯಿಂದ, ಸ್ವತಃ ಕಾಂಗ್ರೆಸಿನ ಮೇಲಿನ ಅಭಿಮಾನದಿಂದ, ನ್ಯಾಯು ಪಕ್ಷಪಾತತೆಗಾಗಿ ಇಲ್ಲಿ ಹೀಗೊಳನೋಟ ಬೀರಲಾಗಿದೆ ಹೊರತು ಯಾರನ್ನೇ ಆದರೂ ದೂರುವ ಬಯಕೆಯಂದಲ್ಲ. ಅಂತರ್ಗತ ಕೊಳಕುಗಳೆಲ್ಲವನ್ನೂ ಮಥಿಸಿ, ಮೇಲಕ್ಕೆ ತರುವ ಚುನಾವಣೆಯಂತಹ ಕದಡು ವಾತಾವರಣದಲ್ಲಿ ಅವಿಶ್ರಾಂತವಾಗಿ, ಉತ್ಸಾಹಪೂರ್ವಕ ಚಾಲಕತ್ವ ನಿರ್ವಹಿಸಿರುವ-ನಿರ್ವಹಿಸುತ್ತಿರುವ-ಕಾಂಗ್ರೆಸ್ ಕಾರ್ಯಕರ್ತರನ್ನು ಟೀಕಿಸಬೇಕಾಗಿ ಬರುವಾಗ ನಮಗೆ ವ್ಯಸನವಾಗುತ್ತಿದೆ. ಆದರೆ ನಿರ್ವಾಹವಿಲ್ಲ.

ಗುರಿ ಯಾವುದು?

ಶಾಸನ ಸಭೆಗಳ ಚುನಾವಣೆಗಳಲ್ಲಿ ರಾಜಕೀಯ ಪಕ್ಷಗಳು ಭಾಗವಹಿಸಬೇಕಾದುದು ಅನಿವಾರ್ಯವಾಗಿರುವಂತೆ ಜಿಲ್ಲಾ ಬೋರ್ಡಿನಂತಹ ಸ್ಥಳೀಯ ಸಂಸ್ಥೆಗಳ ಮಟ್ಟಿಗೂ ಅವು ಕೈಹಾಕಲೇಬೇಕೆಂಬ ನಿಬಂಧವೇನೂ ಇರಲಿಲ್ಲ. ಜಿಲ್ಲಾ ಬೋರ್ಡಿನ ಮೂಲಕ ಸಾಧಿಸುವಂತಹ ರಾಜಕೀಯ ಗುರಿಯೇನಿದೆ? ಉತ್ತಮಾಡಳಿತೆಗೆರ್ಹರಾದವರು ಆಲ್ಲಿ ತುಂಬಿ ಹೋದರೆಷ್ಟೇ ಸಾಕೆದ್ದಿತು. ಅಂತಹ ಯೋಗ್ಯರನ್ನು ಆರಿಸಿಕಳುಹುವುದಕ್ಕಾಗಿ-ಸೋತಿಯಲಿಸ್ಟ್, ಕಮ್ಯೂನಿಸ್ಟರಂತಹ ಇತರ ರಾಜಕೀಯ ಪಕ್ಷಗಳನ್ನು ಸೋಲಿಸುವುದಕ್ಕಾಗಿ-ಜಾತೀಯ ಭಾವನೆಯಂತಹ ದುಶ್ಚೆಷ್ಟೆಗಳು ಮೊಳೆಯದಂತೆ ನೋಡಿ-ವದಕ್ಕಾಗಿ-ಕಾಂಗ್ರೆಸ್ ವೈಶಿಷ್ಟ್ಯವನ್ನು ಪ್ರದರ್ಶಿಸುವುದಕ್ಕಾಗಿ—ಕಾಂಗ್ರೆಸು ಈ ಚುನಾವಣೆಯಲ್ಲಿ ಭಾಗಿಯಾಗುವುದು ನ್ಯಾಯವೇ ಇದ್ದಿತು. ಈ ಗುರಿಗಳು ಎಷ್ಟೆಷ್ಟು ಪರಿಮಾಣದಲ್ಲಿ ಸಿದ್ಧಿಸಿವೆ? ಎಷ್ಟುದರೂ ಸಿದ್ಧಿಸಿರುವುದಾದರೆ ಆದರಲ್ಲಿ ದ. ಕ. ಕಾಂಗ್ರೆಸ್ ಸಮಿತಿಯಿಂದ ನೇಮಕಗೊಂಡಿದ್ದ ಚುನಾವಣಾ ಸಮಿತಿಯ ಪಾಲೆಷ್ಟು? 'ಕಾಂಗ್ರೆಸ್ ಸಮಿತಿಯಿಂದಾದರೇನು, ಬೇರೆಯವರಿಂದಾದರೇನು, ಆಗಿದುವುದು ಕಾಂಗ್ರೆಸ್ ಕಾರ್ಯವೇ ಎಂದ ಮೇಲೆ ಆ ಕೀರ್ತಿಯೆಲ್ಲವೂ ಕಾಂಗ್ರೆಸಿಗಲ್ಲವೇ' ಎಂಬ ವಾದಕ್ಕರ್ಥವಿಲ್ಲ. ಅವರವರ ಕೆಲಸಕ್ಕೆ ಅವರವರೇ ಹೊಣೆಗಾರರು. ಕಾಂಗ್ರೆಸ್ ತತ್ವ, ಧೋರಣೆಗನುಸಾರವಾಗಿ ಕಾರ್ಯರೂಪಿಸತಕ್ಕ ಹೊಣೆಯು ಸಂಪೂರ್ಣವಾಗಿ ಕಾಂಗ್ರೆಸ್ ಸಮಿತಿಯದೇ; ಆ ರೀತಿ ತಮ್ಮ ಕಾರ್ಯ

The Canara Industrial & Banking Syndicate Ltd.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.
ಕುಟುಂಬದ ಯಜಮಾನನ ಜವಾಬ್ದಾರಿ
ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಯೋಜನೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲಿ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ರಕ್ಷೆಯಿದೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.
ಟಿ. ಎಂ. ಎ. ಪೈ.
ಜೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.



ನಿಶ್ಚೈಸಿಕೊಂಡ ಮೇಲೆ ಅದಕ್ಕೆ ಯಾರಾರಿಂದ ಯಾವ ಯಾವ ಸಹಾಯ ಬೇಕೋ ಅದನ್ನು ಆಂಧ್ರವರಿಂದ ಈ ಸವಿತಿಯು ಪಡಕೊಳ್ಳಬಹುದೇ ಹೊರತು, ಈ ಸಮಿತಿಯು ಮಾಡಿದ ತಪ್ಪನ್ನು ಸರಿಗೊಳಿಸುವ-ಈ ಸಮಿತಿಯನ್ನು ಮೂಲಕೋರ್ಟಾಗಿ ಮಾಡಿ ಕಾವು ಹಿಪ್ಪಿಲು ಕೋರ್ಟಾಗಿ ನಿಂತು ಮೂಲ ನಿರ್ಣಯವನ್ನು ಬದಲಾಯಿಸಬಲ್ಲ-ಬೇರೆಯವರು ತೋರಿಬಂದರೆ, ಕಾಂಗ್ರೆಸ್ ಸಮಿತಿಯ ಘನತೆಯೆಲ್ಲಿ ಉಳಿಯಿತು? ಅಂತಹ ಬೇರೆಯವರಿಂದಾದ ಸತ್ಕಾರ್ಯಗಳೆಲ್ಲವೂ ತಮ್ಮವೆನ್ನಿತ್ತಾ, ತಪ್ಪುಗಳಾಗಿದ್ದರೆ ಅವುಗಳಿಗೆ ಆ ಬೇರೆಯವರನ್ನೇ ಹೊಣೆಮಾಡುವುದು ಕಾಂಗ್ರೆಸ್ ಸಮಿತಿಗೆ ಹೇಳಿಸಿದ್ದಲ್ಲವಷ್ಟೆ? ಆದ್ದರಿಂದ ಕಾಂಗ್ರೆಸ್ ಚುನಾವಣಾ ಸಮಿತಿಯವರು ಈ ಜಿಲ್ಲಾ ಬೋರ್ಡು ಚುನಾವಣಾ ಸಂಬಂಧದಲ್ಲಿ ಆಗಿರುವ ಒಳ್ಳೆತು-ಕೆಡುಕುಗಳಲ್ಲಿ ತಮ್ಮ ವಾಲೆಷ್ಟು ಎಂಬುದನ್ನು ವಿಂಗಡಿಸಿ ನೋಡಿಕೊಳ್ಳಬೇಕು. ಸಾರ್ವಜನಿಕ ಕಣ್ಣಿಗೆ ಅವೆಲ್ಲವೂ ವಿಂಗಡ ವಿಂಗಡವಾಗಿ ತೋರುತ್ತಿವೆ ಯಾದ್ದರಿಂದ ಸವಿತಿಯವರು ''ಒಳ್ಳೆತೆಲ್ಲವೂ ನಮ್ಮಿಂದಲೇ ಆದುದು.'' ಎಂಬ ಭ್ರಮೆಯಿಂದಿದ್ದಾರಾಗದು. ಕಾಂಗ್ರೆಸಿಗರಿಂದಿಂಗದುದು, ಅನ್ಯ ಕಾರಣಗಳಾ ಇರಬಹುದಾದ ಏನ್ಯರಿಂದಾಯಿತೆಂಬುದು ಜನತೆಯಲ್ಲಿ ಕಾಂಗ್ರೆಸ್ ಪ್ರತಿಷ್ಠೆಯನ್ನು ಬೆಳೆಸುವಂತಿಲ್ಲ

ಚುನಾವಣಾ ಸೂತ್ರವಾವುದು?

ಮೇಲ್ಕಡೆ ನಮೂದಿಸಿದ ಕಾರಣಗಳಿಂದಾಗಿ, ಅಗತ್ಯಬಿದ್ದೇ ಕಾಂಗ್ರೆಸು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರ ಮಾಡಿತೆನ್ನೋಣ. ಪಾಗೆ ಚುನಾವಣೆಗಿಳಿಯುವಾಗ, ತನ್ನ ಪಕ್ಷವು ಅನುಸರಿಸಲಿಚ್ಛಿಸುವ ಕಾರ್ಯವಿಧಾನಗಳನ್ನೊಳಗೊಂಡ 'ಚುನಾವಣಾ ಘೋಷಣೆ'ಯನ್ನು ಮತದಾರರ ಮುಂದಿಡಬೇಕಾದುದು ಸಂಪ್ರದಾಯ. ಈ ಬಾರಿಯ ಬೋರ್ಡು ಚುನಾವಣಾರಂಗಕ್ಕೆ ಧುಮುಕಿರುವ ಕಾಂಗ್ರೆಸ್, ಸೋಶಿಯಲಿಸ್ಟ್, ಕಮ್ಯೂನಿಸ್ಟ್ ಪಕ್ಷಗಳಲ್ಲಾವುದೂ ಈ ವಿಧಾನವನ್ನೇಕೆ ಅಂಗೀಕರಿಸಿಲ್ಲವೋ ಅರ್ಥವಾಗುವದಿಲ್ಲ. ಕಾಂಗ್ರೆಸಿನ ಧ್ಯೇಯ, ಘೋಷಣೆ, ಕಾರ್ಯಕ್ರಮಗಳ ಪರಿಚಯವು ಜನತೆಗಿರುವುದರಿಂದ ಕಾಂಗ್ರೆಸಿನ ಮಟ್ಟಿಗೆ ಅಂತಹ ಘೋಷಣೆ ಅಗತ್ಯವಿಲ್ಲವೆಂಬ ವಾದಕ್ಕೆ ಬೆಲೆಯಿಲ್ಲ; ಈ ವಾದಾನುಸಾರವಾಗಿ ಕಾಂಗ್ರೆಸು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಭಾಗವಹಿಸುವುದೂ ಅಗತ್ಯವಿಲ್ಲದ್ದೇ. ವ್ಯಾವಸ್ಥಾಧಿಕಾರ ಕಾಂಗ್ರೆಸಿನ ಕೈಯಲ್ಲಿದೆ; ಆದರ ಒಳಿಂಗವಾಗಿರುವ ಜಿಲ್ಲಾ ಬೋರ್ಡಿನೊಳಗೆ ಕಾಂಗ್ರೆಸ್ ಪಕ್ಷವು ಪ್ರವೇಶಿಸಿ ಹೋರಾಡುವಂತಹದೇನೂ ಇಲ್ಲ ಅಥವಾ ಜಿಲ್ಲಾ ಬೋರ್ಡಿನೊಳಗೆ ಬೇರಾರನ್ನೇ ಪ್ರವೇಶಿಸಲು ಬಿಟ್ಟೆರೂ, ಅವರು ಮೇಲಧಿಕಾರಿ ಕಾಂಗ್ರೆಸ್ ಸರಕಾರದ ಆಜ್ಞಾ ಗಡಿ ಬೇಲಿಯೊಳಗೇನೇ ಇರಬೇಕಾಗುತ್ತದಾದ್ದರಿಂದ ಆ ಮಟ್ಟಿಗೆ ಕಾಂಗ್ರೆಸಿಗರೇ ಆಗುತ್ತಾರೆ. ಆದಮೇಲೆ ಆ ದೃಷ್ಟಿಯಿಂದ ಪ್ರತ್ಯೇಕವಾಗಿ ಕಾಂಗ್ರೆಸ್ ಪಕ್ಷವೆಂಬುದೊಂದು ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂದೇ ಇರಲಿಲ್ಲ. ಆದರೆ ಬೇರೆ ಕಾರಣಗಳಿಗಾಗಿ, ಈ ಚುನಾವಣೆಗಿಳಿದ ಮೇಲೆ ಜಿಲ್ಲಾ ಬೋರ್ಡಿನ ಅಧಿಕಾರಕ್ಕೊಳಪಟ್ಟ ಶಾಲೆ, ರಸ್ತೆ, ಆಸ್ಪತ್ರೆ, ಕಡವು ಮತ್ತಿತರ ವಿಭಾಗಗಳಲ್ಲಿ ಇಂತಿಂತಹ ಸುಧಾರಣೆಗಳನ್ನು ಗುರಿಯಾಗಿ ಇಟ್ಟುಕೊಂಡಿದ್ದೇವೆ ಎಂಬುದನ್ನು ಜನತೆಗೆ ತಿಳಿಸುವ ಚುನಾವಣಾ ಘೋಷಣೆಯನ್ನು ಅವರು ಮುಂದಿಡಲೇ ಬೇಕಿದ್ದಿತು. ''ಕಾಂಗ್ರೆಸಿಗರು ಅಧಿಕಾರಕ್ಕೆ ಬಂದರೆ ಸಾಕು, ಅವರು ಮಾಡಿದುದೆಲ್ಲವೂ ಸರಿ'' ಎಂಬ ಅಂಧಭಕ್ತಿಯ ಮಾತು ಕಾಂಗ್ರೆಸಿಗರಿಗೆ ಶೋಭೆಯಲ್ಲ. ಕಾಂಗ್ರೆಸಿಗರು ಅಧಿಕಾರಕ್ಕೆ ಬಂದಮೇಲೆ ಅವರು ಮಾಡಿದುದೆಲ್ಲವೂ ಸರಿಯಲ್ಲ; ಅವರಲ್ಲಿಯೂ ಅಧಿಕಾರಮದದಿಂದ ಕೆಲವು ತಪ್ಪುಗಳಾಗಿರಬಹುದು. ಆದರೆ ಕಾಂಗ್ರೆಸಿಗರು ಅಧಿಕಾರಕ್ಕೆ ಬಂದಮೇಲೆ ಅವರು ಮಾಡಿದುದೆಲ್ಲವೂ ಸರಿ ಎಂಬ ಭಾವನೆಯಿಂದ ಜನತೆಯು ಕಾಂಗ್ರೆಸಿಗರಿಗೆ ಮತ ಕೊಟ್ಟಿತೆಂಬುದು ಸರಿಯಲ್ಲ. ಕಾಂಗ್ರೆಸಿಗರು ಅಧಿಕಾರಕ್ಕೆ ಬಂದಮೇಲೆ ಅವರು ಮಾಡಿದ ತಪ್ಪುಗಳನ್ನು ಎತ್ತಿ ತೋರಿಸಿ ಅವರನ್ನು ಸರಿದಾರಿಗೆ ತರಲಿಕ್ಕಾಗಿಯೇ ಜನತೆಯು ಕಾಂಗ್ರೆಸಿಗರಿಗೆ ಮತ ಕೊಟ್ಟಿತೆಂಬುದು ಸರಿಯಾದ ಭಾವನೆ. ಆದ್ದರಿಂದ ಕಾಂಗ್ರೆಸಿಗರು ಅಧಿಕಾರಕ್ಕೆ ಬಂದಮೇಲೆ ಅವರು ಮಾಡಿದ ತಪ್ಪುಗಳನ್ನು ಎತ್ತಿ ತೋರಿಸಿ ಅವರನ್ನು ಸರಿದಾರಿಗೆ ತರಲಿಕ್ಕಾಗಿಯೇ ಜನತೆಯು ಕಾಂಗ್ರೆಸಿಗರಿಗೆ ಮತ ಕೊಟ್ಟಿತೆಂಬುದು ಸರಿಯಾದ ಭಾವನೆ. ಆದ್ದರಿಂದ ಕಾಂಗ್ರೆಸಿಗರು ಅಧಿಕಾರಕ್ಕೆ ಬಂದಮೇಲೆ ಅವರು ಮಾಡಿದುದೆಲ್ಲವೂ ಸರಿ ಎಂಬ ಭಾವನೆಯಿಂದ ಜನತೆಯು ಕಾಂಗ್ರೆಸಿಗರಿಗೆ ಮತ ಕೊಟ್ಟಿತೆಂಬುದು ಸರಿಯಲ್ಲ.

ನ. ಹೆಗ್ಗಳಿಕೆ, ಸಂತೋಷ, ಅಭಿಮಾನಗಳನ್ನು ನಿರ್ಮಿಸಿಲ್ಲವೆಂಬ ತುಲನಾತ್ಮಕ ತೀರ್ಮಾನಕ್ಕೆ ಬರಬೇಕಾಗುತ್ತದೆ ಉಮೇದ್ವಾರಿಗಳ ಯೋಗ್ಯತೆ ಪರೀಕ್ಷೆಯ ಒರೆಗಲ್ಲನ್ನು ಜಿಲ್ಲಾ ಕಾಂಗ್ರೆಸ್ ಕಮಿಟಿಯು ಇಟ್ಟುಕೊಳ್ಳಬೇಕಾಗಿದ್ದಂತೆಯೇ ಆ ಒರೆಗಲ್ಲನ್ನು ಪ್ರಥಮತಃ ತನ್ನ ಸ್ಥಳೀಯ ಶಾಖೆಗಳಾದ ಸರ್ಕಲ್ ಕಾಂಗ್ರೆಸ್ ಸಮಿತಿಗಳ ಕೈಗೆಕೊಟ್ಟು, ಸ್ಥಳೀಯ ವಿದ್ಯಮಾನಗಳ ಹೆಚ್ಚಿನ ಪರಿಚಯ ಮತ್ತು ಸಂಬಂಧವಿರುವ ಅವುಗಳ ಮೂಲಕವೇ ಆಯಾಯ ಸ್ಥಳದ ಉಮೇದ್ವಾರಿಗಳ ಅರ್ಹತೆಯ ಪ್ರಥಮ ಪರೀಕ್ಷೆಯನ್ನು ನಡೆಯಿಸಬೇಕಿದ್ದಿತು. ಸರ್ಕಲ್ ಕಾಂಗ್ರೆಸ್ ಸಮಿತಿಗಳೇ ತಂತಮ್ಮ ಸರ್ಕಲಿಗೆ ಸಂಬಂಧಿಸಿದ ಉಮೇದ್ವಾರಿಗಳನ್ನು ಶಿಫಾರಸು ಮಾಡುವ ವ್ಯವಸ್ಥೆಯಿರಬೇಕಿದ್ದಿತು. ಅವುಗಳ ವಿಶ್ವಾಸಕ್ಕೆನಿಲ್ಲಿ ಏನಾದರೂ ಕಾಂದು ಕೊರತೆ ಅಥವಾ ಅನುಮಾನ ತೋರಿ ಬಂದರೆ, ಭಿನ್ನಾಭಿಪ್ರಾಯಕ್ಕೆಡೆ ದೊರೆಯದ ರೀತಿಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯೇ ನಿಶ್ಚಿತ ಒರೆಗಲ್ಲಿನಿಂದ ಸ್ವತಃ ಪರೀಕ್ಷಿಸಿ ಕೊನೆಯ ತೀರ್ಮಾನ ಕೊಡಬಹುದಿದ್ದಿತು. ಹೀಗಾಗುತಿದ್ದರೆ ಸ್ಥಳೀಯ ಅಭಿಮತಗಳೇನೆಂಬುದು ಸ್ಥಳೀಯ ಕಾಂಗ್ರೆಸ್ ಸಮಿತಿಗಳಿಂದ ಸಂಗ್ರಹವಾಗಿ ಜಿಲ್ಲಾ ಸಮಿತಿಯ ವಶ ಎಲ್ಲಾ ಸ್ಥಳಗಳ ಸ್ಪಷ್ಟ ಸ್ಥಿತಿಚಿತ್ರ ಸಂಗ್ರಹವಾಗುತಿತ್ತು. ನ್ಯಾಯಬದ್ಧ ತೀರ್ಮಾನ ಕಾರ್ಯವು ಸುಲಭವಾಗುತಿತ್ತು. ಹಾಗೆ ಮಾಡುವ ಬದಲಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಚುನಾವಣಾ ಸಮಿತಿಯವರು ಎಲ್ಲಾ ಹರಿಕೀಲನಾಧಿಕಾರವನ್ನೂ ತಾವೇ ವಹಿಸಿ, ಜನತೆಯ ಅಭಿಪ್ರಾಯ ತಿಳಿಯುವದಕ್ಕೆಂದು ಸಂಚಾರದ ಹೊರಟು ಜಿಲ್ಲೆಲ್ಲಿ ಬಂಗ್ಲೆ ಮೊಕ್ಕಾಂ ಮಾಡಿದರು; ಆದರಾ ತಿಥ್ಯಗಳನ್ನು, ಅವೇಶಾಕ್ರೋಶಗಳನ್ನು ಗ್ರಹಿಸಿಕೊಂಡಷ್ಟು ಜನತೆಯ ಅಭಿಪ್ರಾಯಗಳನ್ನು ಸಂಗ್ರಹಿಸಲಾರದೆ ಹೋದರು; ಜನಮತ ಸಂಗ್ರಹಕ್ಕೆಂದು ಬಂದವರು ತೀರ್ಮಾನವನ್ನೇ ಮುಂದಾಗಿ ಸಾರುತ್ತಾ ಹೋದ ವಾರ್ತೆಗಳೂ ಇವೆ. ನಿರ್ವಿಕಾರ ಬುದ್ಧಿಯ ನಿಷ್ಪಕ್ಷಪಾತಿ ನ್ಯಾಯಾಧೀಶರಂತಿರಬೇಕಾಗಿದ್ದ ಈ ವಿಚಾರಣಾ ಸಮಿತಿಯವರು ವಿಚಾರಣೆ ಮುಗಿಯುವ ಮೊದಲೇ ತೀರ್ಪನ್ನು ಸಾರುತ್ತಾ ಹೋದುದಿದು! ಕ್ರಮಬದ್ಧ ತೀರ್ಮಾನದ ಹಂಗೇ ಇಲ್ಲವೆಂಬಂತೆ ಮುಂದಾಗಿ ವಾಗ್ದಾನ—ತೀರ್ಮಾನಾನಂತರ ವಿಚಾರಣೆ—ಇಂತಹ ಹಿಂದುಮುಂದು ವರ್ತನೆಗಳ ಅವಲಕ್ಷಣಗಳು ಚುನಾವಣೆಯಲ್ಲಿ ಜಿಗುಪ್ಸೆ ಮೊಳೆಯಿಸುವಷ್ಟು ಮೂಡಿ ತೋರಿದುವು. ಉಮೇದ್ವಾರೀ ನೇಮಕಗಳ ಕುರಿತು ತನ್ನ ಕೈಕೆಳಗಿನ ಸ್ಥಳೀಯ ಕಾಂಗ್ರೆಸ್ ಸಮಿತಿಗಳಿಂದ, ಸಾವಧಾನವಾಗಿ ಗಾಢ ವಿಚಾರ ವಿಮರ್ಶೆ ನಡೆಯಿಸಿ, ತಾನು ಕೊನೆಯ ತೀರ್ಮಾನ ಕರ್ತನಾಗಿ ನಿಲ್ಲಬೇ ಹೋದ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಸಂಗತಕ್ಕೆ ಪ್ರತಿಫಲ ದೊರೆಯಿತು—ಆ ಮೂಲಕ ಆದ ಕೆಲವು ತಪ್ಪುಗಳನ್ನು ತೊಡೆದುಹಾಕಲು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮೇಲಧಿಕಾರಿಗಳೆಂಬಂತೆ ಕೆಲವು ಅಧ್ಯರು ಮಂಡಾಗಬೇಕಾಯಿತು. ತಮ್ಮ ಅನುಯಾಯಿಗಳನ್ನು ಅಧಿರಿಸಲಾರದವರು ಈ ರೀತಿ ಮತ್ತೊಬ್ಬರ ಅನುಯಾಯಿಗಳಾಗಲು ಬದರಿದಾರೆಯು ಡವನ್ನಾಧರಿಸಿರದ ಮಂವು, ಹೊರಗಿನ ಅಧಾರ ಕಂಭಕ್ಕೆ ಮಾಲಿ ನಿಲ್ಲಲೇಬೇಕಾಗುತ್ತದೆ! ಅಂತೆಯೇ ಬೇರೆಯವರ ಪಾಲಿನ ಅಧಿಕಾರಾಂಶಗಳನ್ನೂ ತನ್ನೆಲ್ಲಿಯೇ ಜಮೆಯಿಟ್ಟುಕೊಂಡು, ತನ್ನ ಸೆರಗಿನಲ್ಲಿ ಹಿಡಿಸುಲಾರದಷ್ಟು ಅಧಿಕಾರವನ್ನು ತುಂಬಿಸಿಕೊಂಡಆತ್ಯಾಶೆಯಿಂದಾಗಿ,ಅದು ಬಿಚ್ಚಿ ಹೋಗಿ ಹಾದಿ ಬೀದಿಗೆ ಚಿಲ್ಲಿಬಿದ್ದ ನಿದರ್ಶನಗಳೂ ಕಂಡು ಬಂದಿವೆ. ಸ್ಥಳೀಯರ ಅಭಿಮತವನ್ನು ಸರಿಯಾಗಿ ಕೇಳಿಕೊಳ್ಳದೆ, ತಾನೇ ತಾನಾಗಿ ವರ್ತಿಸಿ, ಕಟ್ಟಿಕೊಂಡ ಉಮೇದ್ವಾರಿಗಳು ತಪ್ಪಿ ಹೋಗಿ ಕೊನೆಗೆ ಸಂದರ್ಭವಶಾತ್ ಒದಗಿದವರನ್ನಿಕೆಳಗೆ ಬಿದ್ದ ಟೀಕೆಟನ್ನು ಹಿಕ್ಕಿಕೊಂಡ ದೃಷ್ಟಾಂತವಿದೆ.

ಸ್ಪರ್ಧೆ ಗೆಂಜಬಹುದೆ?

ಕಾಂಗ್ರೆಸ್ ಉಮೇದ್ವಾರಿಗಳು ಅವಿರೋಧವಾಗಿಯೇ ಆರಿಸಿಬರುವಂತೆ ಮಾಡುವ ಸರ್ವ ಪ್ರಯತ್ನ ನಡೆಯಿತು.ವರ್ಚಸ್ಸುಳ್ಳವರನ್ನು ಮುಂದೊಡ್ಡಿ—ಸ್ಥಳೀಯ ಪ್ರಮುಖರನ್ನು ಸಮಜಾಯಿಸಿ—ಸಾಧ್ಯವಿದ್ದಲ್ಲಿಲ್ಲಾ ಪ್ರತಿಸ್ಪರ್ಧಿ ನಾಮಪತ್ರಗಳನ್ನು ಹಿಂದೆಗೆಯಿಸಲಾಯಿತು. ಇದರ ಉದ್ದೇಶವೇನು? ಸ್ಥಳೀಯ ಜನತೆಯಲ್ಲಿ ಜಾಗೃತೀ ಪ್ರಚಾರ ಮಾಡುವ ಒಂದು ಸುಸಂದರ್ಭವೆಂಬುದರಿಂದಲೇ ಜಿಲ್ಲಾ ಬೋರ್ಡು ಚುನಾವಣೆಗೆ ಶುದ್ಧ ಕಾಂಗ್ರೆಸ್ ದೃಷ್ಟಿಯಿಂದ ಪ್ರಾಮುಖ್ಯತೆಯಿರಬೇಕಲ್ಲದೆ ಅನ್ಯಥಾ ಇಲ್ಲ; ಆದರೆ ಅಂತಹ ಸಂದರ್ಭವನ್ನು ತಪ್ಪಿಸಿಹಾಕಲು ಪ್ರಯತ್ನಿಸಿದ ಕಾಂಗ್ರೆಸಿಗರು ಕೇವಲ ಬೋರ್ಡು ಸ್ಥಾನಗಳನ್ನು ಸಂಪಾದಿಸಿಕೊಳ್ಳುವದಕ್ಕೇನೇ ಪ್ರಾಮುಖ್ಯತೆ ಕೊಟ್ಟದ್ದರಿಂದು ಸ್ಪಷ್ಟ. ತ್ರೀಮಂತಿಕೆ,ಂದಲ್ಲೊಂದು ವಿಧದ ಪ್ರತಿಷ್ಠೆಯುಳ್ಳ ಕೆಲವೇ ಮಂದಿಗಳನ್ನೊಲಿಸಿಕೊಳ್ಳುವ ಮೂಲಕ, ಮತದಾರರನ್ನೊಲಿಸಿಕೊಳ್ಳುವ ಸಂದರ್ಭವನ್ನೇ ಕಳಕೊಂಡ ಕಾಂಗ್ರೆಸಿಗರು "ತ್ರೀಮಂತ ಪಕ್ಷಪಾತಿಗಳು" ಎಂಬ ಕಮ್ಯೂನಿಸ್ಟ್, ಸೋಶಿಯಲಿಸ್ಟ್ ವಾದಿಗಳನ್ನು ಕಾರ್ಯಮೂಲಕ ಅನುಮೋದಿಸಿದಂತಾಗಿಲ್ಲವೆ? ಜಿಲ್ಲಾ ಬೋರ್ಡಿನ ಸ್ಥಾನ ಮತ್ತು ಆದಕ್ಕಾಗಿ ಜನತಾರಂಗದಲ್ಲಿ ನಡೆಯುವ ಪ್ರಚಾರಾಂದೋಲನಗಳನ್ನು ಪರಸ್ಪರ ತುಲನೆ ಮಾಡಿ ನೋಡಿದರೆ ನಿಜಕ್ಕೂ ಆ ಸ್ಥಾನ ಸಣ್ಣದು-ಈ ಪ್ರಚಾರದೊಡ್ಡದು. ಈ ಪೈಕಿ ಅಲ್ಪಲಾಭವಾದ ಸ್ಥಾನವನ್ನೆಜ್ಜೇ ಸಂಪಾದಿಸಿಕೊಂಡು ದೊಡ್ಡಲಾಭ ಪ್ರಚಾರಸುಯೋಗವನ್ನು ಕಳಕೊಳ್ಳುವ ಹೆಡ್ಡತನ ಕಾಂಗ್ರೆಸಿಗರಿಂದಾಗಿದೆ. ಯಾಕೆದು? ಅಜೆಕಾರ್ ಸರ್ಕಲಿನ ಕಾಂಗ್ರೆಸ್ ಉಮೇದ್ವಾರಿಯಂತಹ ಸಾದಾ ಸ್ವಯಂಸೇವಕರು ಚುನಾವಣಾ ವ್ಯಯ ಹೊರಲಾರರೆಂಬುದರಿಂದ, ಆಂಥವರ ಅವಿರೋಧ ಆಯ್ಕೆಗೆ ನ್ಯಯತ್ತಿಸಿದುದೇನೋ ಸರಿ ಆದರೆ, ಕಾಂಗ್ರೆಸ್ ತತ್ವಕ್ಕನುಚಿತವಾದ ರೀತಿಯಲ್ಲಾ ಗಳಿಸಿದ್ದ ಹಣವಿರಬಹುದಾದ ಉಮೇದ್ವಾರಿಗಳ ವೆಚ್ಚದಿಂದ, ಕಾಂಗ್ರೆಸ್ ಪ್ರಚಾರ ನಡೆಸುವದಕ್ಕೂ ಈ ಕಾಂಗ್ರೆಸಿಗರಿಗೇಕೆ ದಾಕ್ಷಿಣ್ಯ? ತಮ್ಮ ಸ್ವಂತ ಪ್ರಚಾರ ನೆಂದರೆ ಇಂತಹ ಅಳುಕು ಮತ್ಸರಾಲಸ್ಯ-ಸ್ಥಾನಾಭಿಲಾಷೆಯಿಂದ ತಮ್ಮವರಾಗಿರುವ ಧನಾಢ್ಯ ಉಮೇದ್ವಾರಿಗಳ ಹಣವೆಂದರೆ ಇಂತಹ ಪೂಜ್ಯ ಭಾವನೆ-ಕಾಂಗ್ರೆಸಿಗರೆಲ್ಲಿ ಕೋರಿ ಬಂದುದು ನೀತಿಯೆ? ಒಂದೆಡೆಯಿಲ್ಲಂತೂ, ಸ್ಪರ್ಧೆ ಅತ್ಯಂತ ಪ್ರಬಲವಿದೆಯೆಂದು-ಅನಪೇಕ್ಷಿತ ದುರ್ಘನೆಗೆಕೊಡಗಬಹುದೆಂದು-—ಇದಿರುವಾದಿಯೊಂದಿಗೆ ಕಾಂಗ್ರೆಸ್ ಉಮೇದ್ವಾರಿಯನ್ನೂ ಹಿಂತೆಗೆಯಿಸಲಾಯಿತು. ಯಾವ ಅಪಾಯಕ್ಕಾಂಜಿ, ಇಲ್ಲಿ ಕಾಂಗ್ರೆಸ್ ಮಂಡಿಟ್ಟ ಪ್ರತಿಷ್ಠೆಯನ್ನು ಮೂರೇ ದಿನದಲ್ಲಿ ಹಿಂದಿಟ್ಟಕೋ ಆ ಅಪಾಯವನ್ನು ಜನಸಾಮಾನ್ಯವು ಕೂಡಾ ಮೊದಲೇ ನಿರೀಕ್ಷಿಸಿದ್ದರೂ, ನೇಮಕದ ವೇಳೆ ಕಾಂಗ್ರೆಸ್ ಅಧಿಕಾರಿಗಳ ಕಣ್ಣಿಲ್ಲಿಕ್ಕುತ್ತು? ನಾಮಪತ್ರ ರಂಗದಲ್ಲೇ ಕಾಂಗ್ರೆಸ್ ಈ ರೀತಿ ಮುಂದೆ ಹೊಗಿ ಹಿಂದೆ ಬಂದುದೊಂದು ಹೊಸ ದಾಖಲೆ. ಹೀಗೆಲ್ಲಾ ಜನತೆಯೊಕ್ಕುಟ್ಟು, ತಾನೊತ್ತುಟ್ಟಾಗಿ ನಿಂತು ಕಾಂಗ್ರೆಸಿನ ಮೂಲ ಕರ್ತೃಭಂಡಾರವನ್ನು ವ್ಯಯಿಸಿ, ಸ್ಥಾನಗಳನ್ನೆಷ್ಟೇ ಗಳಿಸಿಕೊಳ್ಳುವುದಕ್ಕಿಂತ, ಕಾಂಗ್ರೆಸಿನ ಕುರಿತು ಇಂದು ಹರಡಿರುವ ಅಪಪ್ರಚಾರಗಳ ನಿವಾರಣೆಗಾಗಿ, ಭಾವೀ ವಿಧಾನ ಚುನಾವಣೆಯ ದೃಷ್ಟಿಯಿಂದ, ಚುನಾವಣಾ ರಂಗದಲ್ಲಿ ಹೋರಾಡುವ ಸಂದರ್ಭಗಳನ್ನು ಎದೆಗಾರಿಕೆಯಿಂದ ಸ್ವಾಗತಿಸಬೇಕಿದ್ದಿತು. ಇಂತಹ ದೂರದೃಷ್ಟಿಯಿಟ್ಟುಕೊಂಡೇ, ಸೋಶಿಯಲಿಸ್ಟರು ಮತ್ತು ಕಮ್ಯೂನಿಸ್ಟರು, ಸಾಧ್ಯವಿದ್ದಕಡೆ ತಮ್ಮ ನಾಮಮಾತ್ರ ಉಮೇದ್ವಾರಿಗಳನ್ನಾದರೂ ಮುಂದೊಡ್ಡಿ ಪ್ರಚಾರ ಸಂದರ್ಭವನ್ನು ದೊರಕಿಸಿಕೊಂಡಿದ್ದಾರೆ. ಕೇವಲ ಬೋರ್ಡ ಸ್ಥಾನವೊಂದೇ ಸರ್ವಸ್ವವೆಂದಾಗುತಿದ್ದರೆ ಆ ಮಟ್ಟಿಗೆ ತಮಗೆ ಸೋಲು ಕಟ್ಟಿಟ್ಟದ್ದೆಂಬುದನ್ನು ಅರಿಯದಷ್ಟು ಹೆಡ್ಡರು ಅವರಲ್ಲ. ಆದರೆ ನಮ್ಮ ಕಾಂಗ್ರೆಸಿಗರಿಗೆ ಮಾತ್ರ ಇಂದೊಮ್ಮೆ ಜಯಿಸಿದೆವೆಂದಾದರೆ ಸರ!

ಸಾರಾಂಶ

ಇನೆಲ್ಲಾ ಘಟನೆಗಳನ್ನೆತ್ತಿಕೊಂಡು ಅಣಕಿಸುವದು ಅಥವಾ ಹಂಗಿಸುವದು ನಮಗೆ ಸಂತೋಷದಾಯವಾಗಿಲ್ಲ. ಆದ್ದರಿಂದ ಸವಿವರ ವಿಮರ್ಶೆಗಿಲ್ಲಿ ಹೋಗುವದಿಲ್ಲ. ಇಂತಹ ಜನಪ್ರತಿನಿಧಿ ಹೊಣೆ ನಿರ್ವಹಣ ಕಾರ್ಯಗಳಲ್ಲಿ ಅವರವರ ಪಾಲಿನ ನ್ಯಾಯುಕ್ತ ಕರ್ತವ್ಯಗಳೆಷ್ಟೋ ಅಷ್ಟನ್ನೇ (ಕಾಂಗ್ರೆಸ್ ಸಮಿತಿ ಮಾತ್ರವಲ್ಲ) ಯಾರೂ ಮಾಡುತ್ತಿಲ್ಲ. ಜನಪ್ರಿಯವಾಗಿರುವ ಕಾಂಗ್ರೆಸಿನ ಮೂಲಕ, ಜನರಿಂದಾಗಬೇಕಾದ ತಮ್ಮ ಕೆಲಸವನ್ನು ಮಾಡಿಕೊಳ್ಳುವದು ಸುಲಭವೆಂಬುದರಿಂದ ಎಲ್ಲರೂ ತಂತಮ್ಮ ಸ್ವಂತ ಆಸೆ, ಅಭಿರುಚಿಗಳಿಗೆ ತಕ್ಕಂತೆ ಸಮಿತಿಯವರನ್ನು ಎಲ್ಲಾ ದಿಕ್ಕಿನಿಂದಲೂ ಎಳೆಯುವಾಗ, ಹೆಚ್ಚೆ ತಪ್ಪದೆ ನಿಂತುಕೊಳ್ಳಲು ಕಾಂಗ್ರೆಸ್ ಸಮಿತಿಗೆಂತಹ ಕಷ್ಟವಿದೆಯೆಂಬುದನ್ನು ನಾವು ಊಹಿಸಬಲ್ಲೆವು. ಆದರೆ ಇಂತಹ ಸಂದರ್ಭದಲ್ಲೂ ಹೆಜ್ಜೆ ತಪ್ಪದವರೇ ಜನತೆಗೆ ಬೇಕಾದ ಅನಿವಾರ್ಯ ಒತ್ತಡಗಳಿಂದ ಅಥವಾ ತಮ್ಮ ದೌರ್ಬಲ್ಯದಿಂದ ತಾವು ತೂಕತಪ್ಪಿ ಹಾಕಿದ ಹೆಜ್ಜೆಯೇ ಸರಿಯಾದ ಮಾರ್ಗವೆನ್ನುವವರು ಜನತೆಯ ದೃಷ್ಟಿಗೆ ದಿಗ್ಭ್ರಾಂತರಾಗಿ ತೋರಿದುದಾರು ಹೊರತು ದಿಗ್ದರ್ಶಕರಾಗಿರಲಾರರು. ಜಿಲ್ಲಾ ಬೋರ್ಡು ಕಾಂಗ್ರೆಸ್ ಉಮೇದ್ವಾರಿಗಳ ನೇಮಕದ ಸಂಬಂಧವಾಗಿ ಸಾರ್ವಜನಿಕರಲ್ಲಿ ಮೂಡಿರುವ ಕೆಲವು ಭಾವನೆಗಳನ್ನು ಸಾಂಕೇತಿಕವಾಗಿಯಾದರೂ ಪಡಿಮೂಡಿಸದೆ ಬಿಡುವುದು ಹಿತಕರವಲ್ಲ—ತಮ್ಮ ರೀತಿ ನೀತಿ ವರ್ತನೆಗಳಿಂದಾಗಿ 'ಎಲ್ಲವೂ ಎಲ್ಲರೂ ಸುಸ್ಥೇಮ'ವೆಂಬ ಭಾವನೆಯು ಕಾಂಗ್ರೆಸ್ ಕಾರ್ಯಾಧಿಕಾರಿಗಳಲ್ಲಿ ಉಳಿದು ಹೋದರೆ ಇನ್ನು ಮುಂದಕ್ಕಾದರೂ ಇಂತಹ ಪ್ರಮಾದಗಳಾಗದಂತೆ ಜಾಗರೂಕತೆ ವಹಿಸುವ ಬದಲು ಇನ್ನೂ ದೊಡ್ಡ ಅಪರಾಧಗಳು ನಡೆಯುತ್ತಾ ಹೋಗಬಹುದು—ಎಂಬುದಕ್ಕಾಗಿಯೇ ಇಲ್ಲಿ ಸ್ಪಷ್ಟ ಪ್ರಕಾಶ ಚೆಲ್ಲಬೇಕಾಯಿತು. ದ.ಕ.ಜಿಲ್ಲಾ ಕಾಂಗ್ರೆಸ್ ಸಮಿತಿಯವರಾಗ ಉತ್ಸಾಹ ಬೇಕಾಗಿರುವ ಸವಾಲುಗಳ ಸಾರಾಂಶ ವಿಷ್ಟೇ:-ಉಮೇದ್ವಾರಿಗಳ ಆಯ್ಕೆಗಾಗಿ ಪರೀಕ್ಷಾ ಸೂತ್ರಗಳನ್ನೇನಾದರೂ ತಾವು ಇಟ್ಟುಕೊಂಡಿದಿದೆಯೆ? ತಮ್ಮ ಮೇಲಧಿಕಾರೀ ನಾಯಕರು ಮತ್ತು ಪ್ರಾಂತಿಕ ಮಂತ್ರಿಗಳು ತಮ್ಮ ಕಡೆಗೆ ಸೌಕರ್ಯ ಗಮನ ಕೊಡುವದಿಲ್ಲವೆಂದು ದೂರುವ ತಾವೇ ತಮ್ಮ ಕೆಳಗಿನವರ ಕಡೆಗೆ ಅಂತಹ ಲಕ್ಷ್ಯ ಕೊಟ್ಟುದಿದೆಯೆ? ಸ್ಥಳೀಯ ಜನಾಭಿಪ್ರಾಯ ಸಂಗ್ರಹಕ್ಕಾಗಿ ಸಂಚರಿಸಿದಲ್ಲಿ ಸರಿಯಾದ ರೀತಿಯಿಂದ ಮತ್ತು ವಿಚಾರಣಾ ನೀತಿ, ನಿಯಮ, ನಿಷ್ಪಕ್ಷಪಾತತೆಗನುಸಾರವಾಗಿ ತಾವು ಜನಮತ ಸಂಗ್ರಹಿಸಿದುದಿದೆಯೆ? ಇವುಗಳಲ್ಲಿ ತಪ್ಪು ತಡೆಗಳಾದುದರಿಂದಾಗಿಯೇ ಪ್ರಥಮಾಂಶ: ಆದ ತೀರ್ಮಾನಗಳು ನಾಮಕರಣವಾದ ಮೇಲೆ ಬದಲಾದುದೂ, ನಾಮಕರಣದ ಮೊದಲೇ ಮೊಳೆಯಬೇಕಾಗಿದ್ದ ವಿಚಾರ ವಿಮರ್ಶೆಗಳು, ನಾಮಪತ್ರ ಹಿಂದೆಗೆವ ವಾಯಿದೇ ದಿನಗಳಲ್ಲಿ ಮೂಡಿದುದೂ ಸರಿಯೆನ್ನುವಿರಾ? ಕಾಂಗ್ರೆಸಿಗಿಷ್ಟು ಸ್ಥಾನಗಳು ಅವಿರೋಧವಾಗಿ ದೊರೆಯಲು ಸ್ವತಃ ಕಾಂಗ್ರೆಸು ಗಳಿಸಿರುವ ಸ್ಥಾನವಾನವೊಂದನೇ ಕಾರಣ—ಕಳದ ಬಾರಿಯ ಜುನಾವಣೆಯಲ್ಲಿದ್ದ ಮತದಾರರ ಪಟ್ಟಿಯೇ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ನಿಹಾರಸ್ಥಳಗಳೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಠಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಕೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ನೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಈ ಬಾರಿಯ ಚುನಾವಣೆಯಲ್ಲಿರುವುದೂ, ಕಳದ ಬಾರಿ ಕಾಂಗ್ರೆಸ್ಸನ್ನು ವಿರೋಧಿಸಿ ಕೈಸುಡಿಸಿಕೊಂಡವರ ನಿದರ್ಶನಗಳು ಈಗ ಎಲ್ಲರ ನೆನಪಿನಲ್ಲಿರುವುದೂ ಎರಡನೇ ಕಾರಣ—ಸ್ಥಳೀಯ ಉಮೇದ್ವಾರಿಗಳು ಮತ್ತು ಸಾಯಿಕರುಗಳು ತನ್ಮೂಲಕವೂ ಅಧ್ಯ ಮಧ್ಯಸ್ಥಗಾರರಿಂದಲೂ ಸಂಧಾನ, ಸಮಜಾಯಿಸುವಿಕೆಗಳನ್ನು ನ ಡೆಯಿಸಿದುದು ಮೂರನೇ ಕಾರಣ—ಎಂಬುದು ನಿಜವಷ್ಟೆ? ಜನಜಾಗೃತಿ ಪ್ರಚಾರಕ್ಕೆಂದು ಸುಸಂದರ್ಭವಾದ ಚುನಾವಣಾ ಹೋರಾಟಗಳನ್ನು ತಪ್ಪಿಸಿಕೊಳ್ಳಲು ವಿವಿಧೋಪಾಯಗಳಿಂದ ಪ್ರಯತ್ನಿಸಿದ್ದೇಕೆ? ಕಾಂಗ್ರೆಸ್ ಚುನಾವಣಾಧಿಕಾರಿ ಸಮಿತಿಯಲ್ಲಿ ತಾವಿಯವ ಬದಲಿಗೆ ತೀರಾ ಹೊಸ ಬರು ಕೆಲವರು ಇರುತ್ತಿದ್ದರೆ, ಜಂಘಟನೆಯಿಂದ ಆಗುತಿದ್ದುದಕ್ಕಿಂತ ಹೆಚ್ಚಿನದನ್ನು ತಮ್ಮಿಂದಕಿತ ಆಪೇಕ್ಷಿಸಿದ್ದೇಕೆ? ಅನುಭವಿ, ಸುಸಂಸ್ಕೃತರೂ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರಿದ್ದು ಸಾಧಿಸಿದಿರಿ ಎಂಬುದನ್ನು ಹೇಳಬಲ್ಲಿರಾ? ಸಾರ್ವಜನಿಕ ರಂಗದಲ್ಲಿ ಕೇಳಿ ಬರುತ್ತಿರುವ ಆಪೇಕ್ಷೆಗಳಲ್ಲಿ ಅರ್ಥವುಳ್ಳವುಗಳನ್ನಷ್ಟೇ ಆಯ್ದುಕೊಂಡು, ಕಾಂಗ್ರೆಸ್ ಕಾರ್ಯಕರ್ತರ ಮೇಲಿನ ಅತ್ಯಂತ ಭಾವನೆಯಿಂದ ಅವುಗಳನ್ನು ಮೇಲಿನ ಪ್ರಶ್ನೆಗಳಾಗಿ ರೂಪಿಸಿ ಮುಂದಿಡಲಾಯಿತಲ್ಲದೆ, ಇಲ್ಲಿ ಆನ್ಯೋದ್ದೇಶವಿದೆಯೆಂದು ದಯೆಯಿಟ್ಟು ಯಾರೂ ಭಾವಿಸಿಕೊಳ್ಳದಿರಲಿ.

ಮತದಾರರೊಡನೆ

ಮೇಲಿನ ಟೀಕೆ, ವಿಮರ್ಶೆಗಳೆಲ್ಲವೂ ಕಾಂಗ್ರೆಸ್ ಸಮಿತಿಯ ಅವಗಾಹನೆಗಾಗಿ; ಅವು ಕೇವಲ ಕವಿಮಾತುಗಳು. ಮತದಾರರ ಮುಂದಿಟ್ಟ ಘೋಷಣೆಯಲ್ಲ. ಅವರು ವಿಚಾರಿಸತಕ್ಕ ಅಂಶಗಳು ಬೇರೆಯೇ ಇವೆ. ನಿರ್ದೋಷವಾದ ಒಂದು ಚುನಾವಣಾ ಕಾರ್ಯವು ಪ್ರಾಯಶಃ ಚುನಾವಣಾ ಚರಿತ್ರೆದಲ್ಲೇ ಇರಲಾರದು. ಈಗಿನ ಕಾರ್ಯಕರ್ತರ ಬದಲಿಗೆ ಬೇರೆಯವರಿರುತ್ತಿದ್ದರೆ, ಈಗಿನ ತಪ್ಪುಗಳ ಬದಲಿಗೆ ಬೇರೆ ವರ್ಗದ ತಪ್ಪುಗಳಾಗುತಿದ್ದುವೇನೋ! ಹಿಂದಿನ ದ ಕ. ಜಿಲ್ಲಾ ಬೋರ್ಡು ಚುನಾವಣೆಗಳಲ್ಲೂ ಕಾಂಗ್ರೆಸ್ ರಂಗದಲ್ಲಿ ಪ್ರಮಾದಗಳಾಗಿದ್ದುವು; ಲಜ್ಜಿಸತಕ್ಕ ಪ್ರಸಂಗಗಳೂ ನಡೆದಿದ್ದುವು. ಈ ಬಾರಿಯ ಕಾಂಗ್ರೆಸ್ ಕಾರ್ಯಕರ್ತರು ನಾಳೆ ಚುನಾವಣಾ ರಂಗದಲ್ಲಾಗಲಿದ್ದ ಗೊಂದಲಗಳನ್ನೆಲ್ಲಾ ಇಂದಿನ ನಾಮಪತ್ರ ರಂಗಕ್ಕೇನೇ ಎಳೆದಿದ್ದರಲ್ಲದೆ ಬೇರಲ್ಲ. ಹೇಗಿದ್ದರೂ, ಪ್ರಮಾದಗಳ ಪಂಚಯ ಕೊಡವೆ ನುಚ್ಚಿಟ್ಟುಕೊಳ್ಳುವುದು, ರೋಗಕ್ಕೆ ಪದೇ ಪದೇ ಮತ್ತು ಚಿಕಿತ್ಸೆ ಮಾಡಿಸಿಕೊಳ್ಳದೆ ಬಚ್ಚಿಟ್ಟುಕೊಳ್ಳುವಷ್ಟೇ ಅಪಾಯಕರವೆಂಬುದರಿಂದ ಇಲ್ಲಿ ವಿಮರ್ಶೆಗಳಿಯಬೇಕಾಯಿತು ಹೊರತು, 'ಆ ದು ದೆ ಲ್ಲ ಪೂ ತಪ್ಪು ತಪ್ಪೇ' ಎಂದಿಲ್ಲಿಯ ವಾದವಲ್ಲ. ಕಾಂಗ್ರೆಸ್ ಸಮಿತಿಯವರಿಂದ ಅಕ್ಷಮ್ಯ ಅಪರಾಧವೇನಾದರೂ ಆಗಿರುವುದು ಕಂಡುಬಂದರೆ, ಆ ದಕ್ಕೆ ಪ್ರಾಯಶ್ಚಿತ್ತವನ್ನಾಡುವ ವಿಧಾನಗಳು ಶ್ರತ್ಯೇಕವಿವೆ. ಆವರನ್ನು ಆ ಮೂಲಕವೇ ಶ.ದ್ಧೀಕರಿಸಲು ಅತ್ತ ಬಿಟ್ಟು ಬಡೋಣ. ಇನ್ನು ತಮ್ಮಿಂದಲೂ ಆಂತಹ ಯಾವುದೇ ತಪ್ಪು ಸಂಭವಿಸದಂತೆ ಮತದಾರರು ಕೇವಲ ತಮ್ಮ ಕರ್ತವ್ಯದತ್ತ ಲಕ್ಷ್ಯಕೊಡಲಿ. ಕಾಂಗ್ರೆಸ್ ಉಮೇದ್ವಾರಿಗಳ ಆಯಕೆಯಲ್ಲಿ ಎಂತಹ ಅಕ್ಷಮ್ಯ ಅನ್ಯಾಯ ನಡೆಯಿತೆಂದು ಎಲ್ಲೆಲ್ಲಿ ಯಾರಾರಿಗೆ ಏನೇನು ತೋರುತ್ತಿದೆಯೋ ಯಾರು ಬಲ್ಲ? ಆದರೆ ಕಾಂಗ್ರೆಸ್ ಉಮೇದ್ವಾರಿಗಳನ್ನು ನಿಲ್ಲಿಸುವ ಅಧಿಕಾರವಿದ್ದವರೇ ಅವರನ್ನು ನಿಲ್ಲಿಸಿದ್ದಾರೆಂಬುದು ನಿಜವಷ್ಟೆ? ಅವರಿಗೊಂದು ಉಪಕಾರವೆಂಬ ದೃಷ್ಟಿಯಿಂದಲ್ಲ—ಸ್ವತಃ ತಮ್ಮ ಹಿತದೃಷ್ಟಿಯಿಂದ ಈ ಬಾರಿ ಕಾಂಗ್ರೆಸ್ ಉಮೇದ್ವಾರಿಗಳನ್ನೇ ಆರಿಸಿ ಕಳುಹಿಸುವುದು ತಮ್ಮ ಕರ್ತವ್ಯವೆಂಬುದನ್ನು ಮತದಾರರು ಸ್ಪಷ್ಟವಾಗಿ ತಿಳಿದುಕೊಂಡರೆ ಸರಿ. ಕಾಂಗ್ರೆಸ್ ಕಾರ್ಯಕರ್ತೃತ್ವವೇ ಇರಲಿ, ಕಾಂಗ್ರೆಸ್ ಉಮೇದ್ವಾರಿಕೆಯೇ ಆಗಲಿ, ಆ ಸ್ಥಾನಗಳಿಗೆ ಜನತೆಯ ನಡುವೆ ಇರುವವರನ್ನೇ ಆರಿಸಿಕೊಳ್ಳಬೇಕಾಗುತ್ತದೆ ಹೊರತು, ಅದಕ್ಕಾಗಿ ಸತ್ಯಲೋಕದಿಂದ ಅಥವಾ ರಾಮರಾಜ್ಯದಿಂದ ಯಾರನ್ನಾದರೂ ಕರೆದು ತರಲಾಗುವದಿಲ್ಲ. ಈಗ ಯಾರ ಸಮಕ್ಷಮದಲ್ಲಿ ಕಾಂಗ್ರೆಸ್ ಉಮೇದ್ವಾರಿಕೆ ಸಂಧಾನಕ್ಕಾಗಿ ಪೈಪೋಟಿ ನಡೆಯಿತೋ, ಆ ಕಾಂಗ್ರೆಸ್ ಅಧಿಕಾರ ಸ್ಥಾನ ಸಂಪಾದಿಸಿಕೊಳ್ಳಲು ಕಾಂಗ್ರೆಸ್ ಕಾರ್ಯ ಮಾಡುವ ಮೂಲಕ ಸ್ಪರ್ಧಿಸಿದವರಿಂದ್ದಾರೆ ಸಂಗತಿ ಹೀಗಿರುವಾಗ ಜನತೆಯಲ್ಲಿರುವ ದೌರ್ಬಲ್ಯ ಮತ್ತು ಲೋಪದೋಷಗಳು ಈ ಜನ ಪ್ರತಿನಿಧಿಗಳಲ್ಲೂ ಕೆಲವಂಶ ತೋರಿಬರುವುದು ಸ್ವಾಭಾವಿಕ. ಅವುಗಳನ್ನಾದರೂ ತಿದ್ದುವ ಕ್ರಮ ಫಲಿಯಿಸಗಳು, ಅಂಕೆಯಲ್ಲಿಟ್ಟುಕೊಳ್ಳುವ ಕಡಿಣ ಸೂ ಪ್ರ ಗಳು ಜಲ್ಲಿ ಪ್ರತ್ಯೇಕವಿವೆ. ಆದರೆ ಆ ಕಾರ್ಯಕರ್ತರಿಂದಾದ ಲೋಪದೋಷಗಳನ್ನೇ ನೆವನವಾಗಿ ಮಾಡಿ, ಕಾಂಗ್ರೆಸಿಗರಿದಿರು ಬೀಳುವ ಮೂಲಕ ಮತದಾರರು ಕವಲಿಗೆ ತಾವೇ ಅನ್ಯಾಯ ಮಾಡಿಕೊಳ್ಳುತ್ತಾರಾದರೆ ಅದರ ಹಾನಿಯನ್ನು ಮಾತ್ರ ಸ್ವತಃ ಅವರೇ ಅನುಭವಿಸಿ ತೀರಿಸಬೇಕಲ್ಲದೆ ಬೇರೆ ಪರ್ಯಾಯವಿತ್ಯವಿಲ್ಲ. ಅಂತಹ ಇಷ್ಟಾಪರಾಧ ಮತದಾರರಿಂದ ಎಲ್ಲಿಯೂ ಆಗದಿರಲಿ. ಸದ್ಯ ಸ್ಥಿತಿಯಲ್ಲಿ ಹೊಸ ಘಟನೆಯನ್ವಯ ಹೊಸ ರಾಜ್ಯಭಾರ ಸ್ಥಾಪನೆಯಾಗುವ ವರೆಗೂ ಕಾಂಗ್ರೆಸಿಗರೇ ಅಧಿಕಾರ ನಿರ್ವಹಿಸಬೇಕಾದುದು ಅಗತ್ಯ. ಸ್ವಾತಂತ್ರ್ಯವನ್ನು ಸಾಧಿಸಿಕೊಂಡು, ಅದರ ಸ್ಥಾಪನೆಯ ಆದಿ ಭಾಗದ ಅನಾಧಿಕ್ಯ ನವ್ಯತೆಗಳ ಬಿರುಗಾಳಿ ಬಂಡೆಗಳೆಡೆಯಿಂದ ಆಡಳಿತನೌಕೆಯನ್ನು ಜಯಶೀಲವಾಗಿ ಸುರಕ್ಷಿತ ನೆಲೆಗೆ ತಂದಿತ್ತಿರುವ ಕಾಂಗ್ರೆಸಿಗರ ಅನ ಭನ, ಅಧ್ಯತ್ವ ಮತ್ತು ಜನತಾ ವಿಶ್ವಾಸವು ಈ ಅವಧಿಯ ವರೆಗೂ ರಾಷ್ಟ್ರಕ್ಕಾಗತ್ಯವಾಗಿ ಬೇಕು. ಇನ್ನೂ ಉಳಿದಿರುವ ಅತಂಕಾವಶೇಷಗಳನ್ನು ನಿರ್ಮೂಲಿಸಿಕೊಂಡನಂತರ ಆರ್ಥಿಕ ಸಾಮಾಜಿಕ ಪ್ರಗತಿ ಮತ್ತು ಸಮಾನತೆ ಸಾಧಿಸುವುದೇ ತಮ್ಮ ಮುಖ್ಯೋದ್ದೇಶವೆಂದು ಕಾಂಗ್ರೆಸಿಗರು ಘೋಷಿಸಿತಿದ್ದಾರೆ. ಯಾರು ಏನೆಂದರೂ ಕಾಂಗ್ರೆಸಿಗರಿಂತ ಮುಂದಾಗಿ ಮತ್ತು ಸುವ್ಯವಸ್ಥೆಯಿಂದ ಈ ಸಮಾನತೆ ಮತ್ತು ವ್ಯಕ್ತಿ ಸಾಧಿಸಬಲ್ಲವರು ಬೇರಿದ್ದಾರೆ ಎಂಬ ನಂಬಿಕೆ ಹುಟ್ಟುವುದಿಲ್ಲ; ಹಾಗೆ ವಿಶ್ವಾಸವಿಡಲಾಗುವ ಯೋಗ್ಯತೆ ಬೇರೆಯವರಲ್ಲಿ ಕಂಡು ಬಂದಿಲ್ಲ. ಪ್ರಗತಿಶೀಲ ಜನತಾರಾಜ್ಯ ಸ್ಥಾಪನೆಗಾಗಿ ಕಾಂಗ್ರೆಸಿಗರು ಕೆಲಕಾಲದ ಅವಧಿ ಮಾತ್ರ ಕೇಳುತ್ತಾರಾದರೆ, ವಿ.ಕ್ಷ ಪಕ್ಷಗಳವರು ಅದಕ್ಕಾಗಿ ಏನೇನನ್ನು ಬಯಸುತ್ತಾರೋ ಹೇಳುವದಾವ್ಯ! ಅವ್ಯವಹಾರದಿಂದ ಕಾಂಗ್ರೆಸಿಗರೇನೇ ಅವಧಿ ಕೊಟ್ಟು ನೋಡೋಣ. ಆ ನಾಯಿದೆಯ ವರೆಗೆ ಕಾಂಗ್ರೆಸ್ ರಾಜ್ಯಭಾರವು ತಡೆ ತೊಡಕುಗಳಲ್ಲದೆ ಸಾಗುವಂತೆ ಜಿಲ್ಲಾ ಬೋರ್ಡಿನಂತಹ ಸ್ಥಳೀಯ ಸಂಸ್ಥೆಯಿಂದಾರಂಭಿಸಿ, ಕೇಂದ್ರ ಸರಕಾರದ ವರೆಗೂ ಕಾಂಗ್ರೆಸಿಗರನ್ನೇ ಇಟ್ಟುಕೊಳ್ಳೋಣ. ಯಾವ ಪಕ್ಷಕ್ಕೂ ನೇರದೆ ತಾವು ಸ್ವತಂತ್ರರೆನ್ನುವವರಂತೂ ವ್ಯಕ್ತಿಶಃ ತಮಗಾಗಿ ಆ ಸಾರ್ವಜನಿಕ ಸ್ಥಾನವನ್ನೂ ಸ್ವಾರ್ಥ ದೃಷ್ಟಿಯಿಂದ ಕಂಡು, ಮುರುಟಿಸಿ ತೋರಿಸುವವರೇ. ಈಗ ಇರುವವರು ಟ್ಟಿಗೆ ಸರ್ವೋತ್ತಮ ಕಾಂಗ್ರೆಸ್: ಇದ್ದರಿಂದ ರಂಕ ಸಂದೇಹ ಬೇಡ- ಕಾಂಗ್ರೆಸ್ ಉಮೇದ್ವಾರಿಗೇ ಗೆದ್ದಬ ಲಿ. ಜೈ-ಹಿಂದ್!

ಕಾಂಗ್ರೆಸಿಗರ ಪರೀಕ್ಷಾ ಕಾಲ

ಪಂಡಿತ ನೆಹರುಗಳ ಹೃದಯಸ್ಪರ್ಶಿ ಮಾತು

ಭಾರತ ಪ್ರಧಾನಿ ಪಂಡಿತ ಜವಾಹರಲಾಲರು, ಅಗೋಸ್ತು ತಾ. 27 ರಲ್ಲಿ ಕಾನ್‌ಪುರದಲ್ಲಿ ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಮುಂದೆ, ಜಮೀನ್ದಾರೀ ಬರ್ಖಾಸ್ತು ಮತ್ತು ಭೂಸುಧಾರಣಾ ಸಂಬಂಧದ ನಿರ್ಣಯವನ್ನು ಸಮರ್ಥಿಸುತ್ತಾ ಆಂತರ್ಯಕರಣ ಪೂರ್ವಕ ಹೇಳಿದ ಈ ಕೆಳಗಿನ ಮಾತುಗಳು ಅಖಿಲ ರಾಷ್ಟ್ರದ ಎಲ್ಲಾ ಕಾಂಗ್ರೆಸಿಗರು ಅಕ್ಷರಶಃ ಮನನಮಾಡತಕ್ಕಂತಹವಿವೆ:—

"ಕಳದ ಎರಡು ವರೂ ವರುಷಗಳಿಂದ ಕಾಂಗ್ರೆಸು ಮಾಡುತ್ತಾ ಬಂದಿರುವ ಕಾರ್ಯ ವಿಧಾನವು ವಿಶೇಷ ಗೌರವಾರ್ಹವಾದುದಲ್ಲ. ಈ ಂಪೃದಲ್ಲಿ ಒಂದು ಕ್ರಾಂತಿಯನ್ನು ನಡಸಿದ್ದ ಸಂಸ್ಥೆಯು ಇದೇನು, ಎಂದು ಸ್ವರಾಷ್ಟ್ರದ ಮತ್ತು ಹೊರಗಿನ ಜನರು ಆಶ್ಚರ್ಯಪಡುತ್ತಿದ್ದಾರೆ. ಕಾಂಗ್ರೆಸ್ ಸಂಸ್ಥೆಯು ಅವಸಾನಗೊಂಡಿತೆಂದು ಇದರ ಅರ್ಥವಲ್ಲ. ಆದರದು ದಣಿದು ಹೋಗಿದೆಯೇನೊ. ಗತಕಾಲದಲ್ಲಿ, ನಮಗೆ ಶಕ್ತಿಯನ್ನು ಕೊಟ್ಟು ಮಹಾ ಕಂಡಾಂತರಗಳಿದಿರಲ್ಲಿ ನಾವು ವಿಜಯಗಳಿಸಿಕೊಳ್ಳುವಂತೆ ಮಾಡಿದ್ದು ದಾವುದೇ? ತನ್ನ ತತ್ವ ಹಾಗೂ ಕಾರ್ಯವಿಧಾನಗಳ ಮೂಲಕ ಮಹಾತ್ಮಾ ಗಾಂಧಿಯವರು ಕೊಟ್ಟಿದ್ದ ಶಕ್ತಿಯಂದು. ನಾವೇನೋ ಮಹಾತ್ಮಾ ಗಾಂಧಿಯವರ ಹೆಸರನ್ನು ಬಾರಿಬಾರಿಗೂ ಉಚ್ಚರಿಸುತಿದ್ದೇವೆ; ಥಿಲ್ಲಿಯ ರಾಜಘಾಟಿನಲ್ಲಿರುವ ಅವರ ಸಮಾಧಿಯಿದ್ದಲ್ಲಿಗೆ ಹೋಗಿ ಜನರು ಹೂ ಮಾಲೆ ಹಾಕುತಿದ್ದಾರೆ. ಆದರೆ ಇವಿಷ್ಟೇ ನಾಕಾಗಲಾರವು. ಕಳದ 25 ವರುಷಗಳಿಂದ ನಾವು ಮುಂದಿಟ್ಟುಕೊಂಡಿದ್ದ ತತ್ವಗಳಂದಿಗೆ ನಾವು ದೂರವಾಗಿರುವೆವೋ, ನಾವು ನಮ್ಮ ವಂಥ ಬಿಟ್ಟು ಅಡ್ಡಿ ಹಾದಿ ಹಿಡಿದಿರುವೆವೋ ಎಂಬುದನ್ನು ಯೋಚಿಸಿಕೊಳ್ಳಬೇಕು. ಇದೀಗ ನಮ್ಮ ಪಾಲಿಗೆ ಅತಿ ದೊಡ್ಡ ಪರೀಕ್ಷಾ ಕಾಲ. ಇಪ್ಪರ ನರೆಗೂ ನಾವು ಹಿಂದಿನ ಕಾಲದಲ್ಲಿ ಗಳಿಸಿಟ್ಟಿದ್ದುದರಿಂದಲೇ ಬಾಳಿಕೊಂಡು ಬಂದಿದ್ದೇವೆ; ಈ ಸ್ಥಿತಿ ಎಂದೆಂದಿಗೂ ಮುಂದುವರಿಯಲ್ಲು ಸಾಧ್ಯವಿಲ್ಲ. ಗತ ಕಾಲದಲ್ಲಿ ಜನತೆಯು ನಡುವೆ ಕಾಂಗ್ರೆಸ್‌ಗಳಿಸಿದ್ದ ವರ್ಚಸ್ಸಿಂತಹದೇ ಇದ್ದರೂ, ಅದಿದ್ದುದು ಕಾಂಗ್ರೆಸಿಗರು ತಮ್ಮ ಉಚ್ಚ ತತ್ವ ಗಳಿಗಾಗಿ ಮತ್ತು ಜನತಾ ಸೇವೆಗಾಗಿ ಪಟ್ಟ ಕಷ್ಟ ನಷ್ಟ ಮತ್ತು ಮಾಡಿದ್ದ ತ್ಯಾಗದ ಪರಿಮಾಣ ನು ನಾರವಾಗಿಯೇ. ಆ ಕಾಲದಲ್ಲಿ ನಾವು ನಮ್ಮ ತ್ಯಾಗ ಮತ್ತು ಸೇವೆಯನ್ನಾಧರಿಸಿಕೊಂಡು ಜೀವಿಸಿದ್ದೆವು; ಈಗಲೂ ಹಾಗೆ ಮಾಡಲಾರೆವಾದರೆ, ನಾವು ತಮಗಾಗಿ ಮಾಡಿದ್ದುದೆಲ್ಲವನ್ನೂ ಜನತೆ ಮರೆತುಬಿಡಬಹುದು. ಕಾಂಗ್ರೆಸಿನೊಳಗಡೆಯಲ್ಲೇ ಖಂಡನಾರ್ಹ ಭಿನ್ನಾಭಿಪ್ರಾಯಗಳೂ ಪಕ್ಷ ಹಂಗಡಗಳೂ ಹುಟ್ಟಿಕೊಂಡಿವೆ. ಇನ್ನೊಬ್ಬರ ದೌರ್ಬಲ್ಯಕ್ಕಾಗಿ ಹೀಯಾಳಿಸುವುದರಿಂದ ಈ ತಂಟೆಗಳನ್ನು ನಿವಾರಿಸಲಾಗುವದಿಲ್ಲ ಗತಕಾಲದಲ್ಲಿ ನಮಗೆ ಶಕ್ತಿದಾನವಾಡಿ, ತನ್ನ ವೈರಿಗಳ ಹೃದಯವನ್ನು ಕೂಡಾ ಗೆದ್ದುಕೊಳ್ಳುವ ಸಾಮರ್ಥ್ಯ

[೬ನೇ ಪುಟ ನೋಡಿರಿ]

NOtice.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O- S- No- 248/49-

ರಾಮಯ್ಯ ಸೆಟ್ಟಿ ... ... ವಾದಿ.

ಮತ್ತು

ತೀಜಪ್ಪ ಸೆಟ್ಟಿ ಕೂಡಾ .... ಪ್ರತಿವಾದಿರು.

ಯಿವರೊಳಗೆ

2ನೇ ಪ್ರತಿವಾದಿಯು:- ನಾಗಮ್ಮ ಸೆಡ್ತಿ- ನಂದಂಮ ಸೆಡ್ತಿರ ಮಗಳು, 4ನೇ ಪ್ರತಿವಾದಿಯು:-ಮಡ್ಡಂಮ ಸೆಡ್ತಿ-ಪುಟ್ಟಮ್ಮ ಸೆಡ್ತಿಯರ ಮಗಳು. 8ನೇ ಪ್ರತಿವಾದಿಯು:-ಪದ್ಮಕ್ಕ ಸೆಡ್ತಿ-ತೀನಂಮ ಸೆಡ್ತಿಯರ ಮಗಳು, 9ನೇ ಪ್ರತಿವಾದಿಯು:-ಮಿನಕ್ಕ ಸೆಡ್ತಿ, ಕಾವೇರಿ ಸೆಡ್ತಿರ ಮಗಳು. ಉಡ್ಪಿತಾಲ್ಲು ಬೆಳ್ಳಂಪಳ್ಳಿ ಗ್ರಾಮದಲ್ಲಿ ಯಿರುವವರು.

ಸದ್ರಿ 2, 4, 8 ಮತ್ತು 9ನೇ ಪ್ರತಿವಾದಿರಿಗೆ ಯಿ ಮೂಲಕ ತಿಳಿಯಪಡಿಸುವದೇನೆಂದ್ರೆ-

ಪಾದಿಯು ಪ್ಲೇಂಟಿನಲ್ಲಿ ವ್ಯತ್ತಿ ಬಗ್ಗೆ ವಾಕ್ಲುವಾಡಿದ ಮೇಲ್ಕಾಂದ ನಂಬ್ರದ 9-9-49 ಕೈ ತನ್ನಿಗೆ ಯಿತೋರಾಗಾಯಿದೆ. ಆ ಕುರಿತು ನಿಮ್ಮ ಅಕ್ಷೇಪಣೆ ಯೇನಾದರೂ ಯಿದ್ದರೆ ಸದ್ರಿ ದಿವಸ ||ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ತಪ್ಪದೆ ಹಾಜರಾಗಿ ಜಾಬಿದಾರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಿಂದ ಸದ್ರಿ ನಂಬ್ರವು ತೀರ್ಮಾನಿಸಲ್ಪಡುವುದು.

K. J Ballal
Vakil for Plaintiff

Udipi
Date- 29-8-1949

ESTD. 1926
CROWN RUBBER STAMP CO.
RUBBER STAMPS ENGRAVERS
BALMATTA ROAD MANGALORE S.K.
Approved firm by the Govt. of Mysore Certificated by theA gent of the Govt.of Cylone & Indian.

ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರು—
ಕಾರವಾರ, ಭಟ್ಕಳ, ಮಲ್ಪೆ, ಮಂಗಳೂರು
ಇವುಗಳ ಪೈಕಿ
ಎಲ್ಲಾದರೇನಂತೆ!

ರಾಷ್ಟ್ರದ ಹಿತಕ್ಕಾಗಿ, ನೈಸರ್ಗಿಕ ಸೌಕರ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ, ಇವುಗಳಲ್ಲಿ ಅತ್ಯುತ್ತಮವಾವುದನ್ನು ಭಾರತ ಕೇಂದ್ರ ಸರಕಾರವು ಆರಿಸುವುದೆಂಬ ಧೃಢ ವಾದ ಭರವಸೆ ನಮಗಿದೆ. ಅದು ಕಾರಣ "ಇದೇ ಪ್ರಬುದ್ಧ ಬಂದರಾಗಬೇಕು, ಇದು ಆಗಬಾರದು" ಎಂದು ಸೂಚಿಸುವವರು ನಾವಲ್ಲ. ಸಮಗ್ರ ಭಾರತದ ಹಿತವನ್ನಾಲಿಸುವ ವಿಶಾಲ ಮನೋವೃತ್ತಿ ನಮ್ಮದು.

ನೂತನ ಪ್ರಬುದ್ಧ ಬಂದರು ಯಾವುದೇ ಇರಲಿ, ಪಶ್ಚಿಮ ಕರಾವಳಿಯಲ್ಲಿರುವ ಖುಂದಾಪುರ, ಮಲ್ಪೆ, ಮಂಗಳೂರು, ಕಣ್ಣಾನೂರು, ತಲಚೇರಿ, ಕಲ್ಲಿಕೋಟೆ, ಕೊಚ್ಚಿ ಹಾಗೂ ಅದರ ಹಿನ್ನಾಡಿನಲ್ಲಿರುವ ಹುಬ್ಬಳ್ಳಿ, ಧಾರವಾಡ, ಸಾಗರ, ತೀರ್ಥಹಳ್ಳಿ, ಶಿವ ಮೊಗ್ಗಾ, ಹಾಸನ, ಸಕಲೇಶಪುರ, ಮಡಿಕೇರಿ, ವಿರಾಜಪೇಟೆಗಳಲ್ಲಿರುವ ನಮ್ಮ ಶಾಖೆಗಳು ಬಂದರಿದ ಆರ್ಥಿಕ ಅಭಿವೃದ್ಧಿಗೆ ಸದಾ ನೆರವು ನೀಡಲು ಸಿದ್ಧ ವಿವೆಯೆಂಬುದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
ಉಡುಪಿ, ದ. ಕ.
The Canara Banking Corporation Limited
ESTD: 1906

ಗುರುವಾರ, ಉಡುಪಿ, ೧-೯-೧೯೪

ಭಾರತ— ಪಾಕಿಸ್ತಾನ್

ಪುರಾತನ ಕಾಲದಿಂದಲೂ ಅಖಂಡವಾಗಿದ್ದ ರಾಜ್ಯವನ್ನು ಸ್ವಾಧಿಕಾರ ಮತ್ತು ಶಾಂತಿ ಸೌಜಾರ್ದತಾ ಸ್ಥಾಪನೆಗಾಗಿ ಭಾರತವನ್ನು ಪಾಕಿಸ್ತಾನವೆಂದು ವಿಂಗಡಿಸಿ ಹಾಕಿ ಎರಡು ವರುಷಗಳು ಕಳೆದಿರುವ ಈ ಅವಧಿಯಲ್ಲೊಮ್ಮೆ ರಾಷ್ಟ್ರ ವಿಭಜನೆಯ ಆ ಉದ್ದೇಶ ಸಫಲವಾಯಿತೇ ಎಂಬುದನ್ನು ವಿಚಾರಿಸಿ ನೋಡುವದು ಅಗತ್ಯವಿದೆ; ಕೇವಲ ಪರೀಕ್ಷಾರ್ಥವಾಗಿ ವಿಚಾರಿಸ ಬೇಕೆಂದಿಲ್ಲ—ಆ ವಿಚಾರವನ್ನು ಬಡಿದೆಬ್ಬಿಸುವ ಘಟನೆಗಳು ನಡೆದಿವೆ. ಕಾಲಂಶ ವನ್ನು ಪಾಕಿಸ್ತಾನವಾಗಿ ವಿಂಗಡಿಸಿದ್ದೂರ ದಲ್ಲಿಟ್ಟುದರಿಂದ ಉಳಿದ ಮುಕ್ಕಾಲುಂಶ ದಲ್ಲಿ ಅನಿರ್ಬಂಧವಾಗಿ ಕಾರ್ಯ ಸಾಧಿ ಸಲು ಅಗಿರುವ ಅನುಕೂಲತೆಯು ದೊಡ್ಡ ಅಂಶ ಇಲ್ಲಿ ಇದ್ದೇ ಇದೆ. ವಿಭಜನಾ ಉದ್ದೇಶದ ಗಣ್ಯ ಭಾಗವಾದ ಸ್ವಾಧಿಕಾರ ಸ್ಥಾಪನೆ ಮತ್ತು ದಕ್ಕಿಸುಗೂಣವಾದ ಕಾರ್ಯಗಳೆಲ್ಲವೂ ನಿರಾತಂಕವಾಗಿವೆ. ಅಂತೆಯೇ ಇವೆರಡು ರಾಷ್ಟ್ರಗಳೊಳಗೆ ಶಾಂತಿ, ಸೌಹಾರ್ದತೆ ನೆಲೆಗೊಂಡು, ಅವು ಪರಸ್ಪರ ನೈತ್ರಿಯಿಂದಿರುವ ಆಂಶವೂ ಇಷ್ಟರಲ್ಲೇ ತುಂಬಿ ಬರಬೇಕಿದ್ದಿತು. ಆದರೆ ಈ ಭಾಗದಲ್ಲಿ ನಿಜಕ್ಕೂ ಕತ್ತಲೆ ಕವಿದಂತಿದೆ. ಇದು ಅತ್ಯಂತ ಶೋಚನೀಯ.ಮಾತ್ರವಲ್ಲ, ಭವಿಷ್ಯದ ಕುರಿತು ಗಾಢಯೋಚನೆಗೀಡುಮಾಡಾವಂತಹ ಸನ್ನಿವೇಶ. ಚಿರ ಕಾಲದಿಂದ ಏಕರೂಪವಾಗಿದ್ದ ಒಂದು ಭೂ ರಾಷ್ಟ್ರವನ್ನು ಎರಡು ಹೋಳುಗಳಾಗಿ ಹೋದ ಎರಡೇ ವರುಷಗಳೊಳಗೆ ಅವುಗಳೊಳಗಿನ ಎಲ್ಲಾ ವ್ಯವಹಾರ ವಹಿವಾಟುಗಳೂ ತೀರ್ಮಾನವಾಗದೆ ಉಳಿದುಕೊಂಡಿದ್ದರೆ, ಆಶ್ಚರ್ಯಕ್ಕಾಗಿ ಯಾರೂ ದಿಗಿಲುಬೀಳುತ್ತಿರಲಿಲ್ಲ. ಸೂಕ್ಷ್ಮ ಕಾಲದಿಂದಲೂ ಪ್ರತ್ಯೇಕ ವಿರುವ ನೆರೆಯ ರಾಷ್ಟ್ರಗಳೊಳಗೂ ಒಂದಲ್ಲೊಂದು ವಿವಾದ ಇದ್ದೇ ಇರುವದಿದೆ. ಆದರೆ ಯಾವ ಗುರಿಸಾಧನೆಗಾಗಿ ಆ ಕಾಲದಲ್ಲಿ ಮುಸ್ಲಿಮರ ನಡುವೆ ದ್ವೇಷಭಾವನೆ ಹಬ್ಬಿಕೊಂಡಿತೋ ಅದೇ ಭಾವನೆಯು ಆ ಗುರಿಸಿದ್ಧಿಸಿದ ಮೇಲೂ, ಪಾಕಿಸ್ತಾನದಲ್ಲಿ ಉಳಿದುಕೊಂಡಿರುವುದು ಎಷ್ಟಕ್ಕೂ ಸಲ್ಲಶ್ಲಿಣವಲ್ಲ. ನೆರೆಯ ಎರಡು ದೇಶಗಳೊಳಗಿರಬೇಕಾದ ಸಹಜ ಸಂಬಂಧಕ್ಕನು ಗುಣವಾಗಿ, ನ್ಯಾಯವನ್ನಾಧರಿಸಿ ತೀರ್ಮಾನಿಸಿಕೊಳ್ಳಲಾಗದಂತಹ ಪ್ರಶ್ನೆಗಳಾವುವೂ ಭಾರತ ಮತ್ತು ಪಾಕಿಸ್ತಾನಗಳೊಳಗಿಲ್ಲ. ಕಾಶ್ಮೀರದ ವಿವಾದವೊಂದು ಬಗೆಹರಿಯ ಲೊಲ್ಲದೆ, ಕೊಳೆಯುತ್ತಾ ಉಳ್ಳಿನೆ. ಸಂಧಾನ ಪ್ರಯತ್ನದಲ್ಲಿ ಮೊಲಿಂದ ಮೇಲೆ ಸೋತ ರಾಷ್ಟ್ರೀರ ಕಮಿಶನ್ನನವರು ಪುನಃ ಹೊಸ ಶಾಂತಿ ಸೂತ್ರಗಳನ್ನು ಇಕ್ಕುಡೆಗೂ ಒಯ್ದಿದ್ದಾರೆಂದು ವಾರ್ತೆಯಿದೆ. ಇದೊಂದು ಶಾಡಾಖಾಡಿ ವಿವಾದ. ಇದರ ತೀರ್ಮಾನಕ್ಕೆ ಶಾಂತಿ ಮತ್ತು ಯುದ್ಧದ ಎರಡು ಸ್ಪಷ್ಟ ರಂಗಗಳಿವೆ ಒಂದಲ್ಲವಾದರಿನ್ನೊಂದರಲ್ಲಿ, ಎಂದಾದರೊಂದು ದಿನ ಅದು ತೀರ್ಮಾನ ಹೊಂದಲೇ ಬೇಕು. ಆದರೆ ತನ್ನ ರಾಷ್ಟ್ರದಲ್ಲಿ ಮುಸ್ಲಿಮೇತರ ಪಲಾಯನಗಾರರು ಬಿಟ್ಟುಹೋಗಿರುವ, ಮತ್ತು ಅಲ್ಲಿ ಈಗಲೂ ಇರುವ ಮುಸ್ಲಿಮೇತರರ ಆಸ್ತಿಪಾಸ್ತಿಗಳ ಕುರಿತು ಪಾಕಿಸ್ತಾನ್ ಸರಕಾರವು ವಹಿಸಿರುವ ಧೋರಣೆ ಮಾತ್ರ ನಿಜಕ್ಕೂ ಭಾರತವನ್ನು ತೀವ್ರ ಕೆಣಕುವಂತಹದು. ರಾಷ್ಟ್ರ ವಿಭಜನೆಯನ್ನನುಸರಿಸಿ ನಡೆದಿದ್ದ ಭೀಕರ ಜಾತೀಯ ಗೊಂದಲಗಳಲ್ಲಿ ಭಾರತದಲ್ಲಿರುವ ಮುಸ್ಲಿಮರೂ ಪಾಕಿಸ್ತಾನದಲ್ಲಿರುವ ಮುಸ್ಲಿಮೇತರರೂ, ತಂತಮ್ಮ ಆಸ್ತಿ ಬಿಟ್ಟುಕುಗಳನ್ನು ಅಲ್ಲಲ್ಲೇ ಬಿಟ್ಟು ಜೀವದಾಸೆಯಿಂದ ಒಂದು ರಾಷ್ಟ್ರದಿಂದ ಇನ್ನೊಂದಕ್ಕೋಡಿದ್ದರು. ಆ ಗಲಭೆ ಶಾಂತವಾದ ಬೆನ್ನಲ್ಲೇ, ಎರಡೂ ರಾಷ್ಟ್ರಗಳಲ್ಲಿರುವ ಇಂತಹ ನಿರಾಶ್ರಿತಾಸ್ತಿಗಳ ಕುರಿತು ಮೂಲ ಮ್ಯಾಲಕರಿಗೆ ಕಕ್ಷ್ಯವಿದ್ದೆವ್ವ ನ್ಯಾಯದಾನ ಮಾಡಬೇಕೆಂಬ ಉದ್ದೇಶದಿಂದ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳು ಒಪ್ಪಂದ ಕರಾರುಗಳನ್ನು ಮಾಡಿಕೊಂಡಿದ್ದುವು.ಈಗ ಆ ಕರಾರಿನ ಶರ್ತ ಮುರಿದು, ತನ್ನಲ್ಲಿರುವ ಮುಸ್ಲಿಮೇತರ ಪಲಾಯನಗಾರರ ಆಸ್ತಿಗಳನ್ನು ಪಾಕಿಸ್ತಾನ್ ಸರಕಾರವು ವಶ ಪಡಿಸಿಕೊಳ್ಳ ಹೆತ್ತಿದೆ; ಇಂತಹ ಆಸ್ತಿಗಳ ಕ್ರಮಬದ್ಧ ಗೇಣಿ ಬಾಡಿಗೆಗಳನ್ನು ಉದ್ದೇಶ ಪೂರ್ವಕ ತಗ್ಗಿಸಿ, ಆ ವುಗಳ ಮೌಲ್ಯವನ್ನು ತೀರಾ ಕಡಿಮೆಗಿಳಿಸಿ, ಆ ದಾಯ ತೆರಿಗೆ ಕೊಡಲಿಲ್ಲವೆಂಬಂತಹ ಕಾರಣಗಳಿಂದ ಪಾಕಿಸ್ತಾನ್ ಸರಕಾರವೀಗ ಒಂದೇ ಸವನೆ ಮಾರಾಟೆ ಮಾಡಹತ್ತಿದೆ. ತಮ್ಮೊಳಗಾಗಿರುವ ಒಪ್ಪಂದಕ್ಕಿದು ವಿರುದ್ಧವೆಂದು ಭಾರತ ಸರಕಾರವು ಪಾಕಿಸ್ತಾನಕ್ಕೆ ನಿಷೇಧ ಸೂಚನೆ ಕಳುಹಿಸಿದ ಬೆನ್ನಲ್ಲೇ ಪಾಕಿಸ್ತಾನವುಮತ್ತೊಂದು ಅತಿರೇಕ ವರ್ತನೆಗಿಳಿದಿದೆ. ಪಾಕಿಸ್ತಾನದಲ್ಲೇ ಇರುವ ಹಿಂದುಗಳು ಲೇಂಕಿನಲ್ಲಿಟ್ಟಿರುವ ಮತ್ತು ತಮ್ಮ ಕಾರ್ಯಾಲಯಗಳಲ್ಲಿಟ್ಟಿರುವ ಹಣವನ್ನೆಲ್ಲಾ ಜಡ್ತಿಮಾಡಿಕೊಳ್ಳುವಸ್ರತ್ಯಕ್ಷ ಸುಲಿಗೆಯನ್ನೀಗ ಪಾಕಿಸ್ತಾನ್ ಸರಕಾರವು ಕಾನೂನು ಬದ್ಧವಾಗಿ ಕೈಕೊಂಡಿದೆ. ಮುಸ್ಲಿಮೇತರರು ಪಾಕಿಸ್ತಾನ ಬಿಟ್ಟು ಹೋಗಲಿಚ್ಛಿಸಿದ್ದಾರೆಂಬುದೇ ಈ ಅತ್ಯಾಚಾರದ ಸಮರ್ಥನೆಗಾಗಿ ಪಾಕಿಸ್ತಾನವು ಹೇಳುತ್ತಿರುವ ನೆವ ನ. ಇದೂ ಎರಡು ರಾಷ್ಟ್ರಗಳೊಳಗೆ ಈ ಸಂಬಂಧದಲ್ಲಾಗಿರುವ ಒಪ್ಪಂದಕ್ಕೆ ಬದ್ಧ ವಿರೋಧವಾದ ವರ್ತನೆ. ಇಂತಹ ಅತಿರೇಕಕ್ಕಾಗಿ ವಿತ್ತೊಂದು ತೀವ್ರ ನಿಷೇಧ ಸೂಚನೆ ಭಾರತ ಸರಕಾರದಿಂದ ಹೋಗಿದೆ. ಪಾಕಿಸ್ತಾನವು ತನ್ನ ಪದ್ಧತಿಯ ನೆವನ ಹೇಳಿ ತಪ್ಪಿಸಿಕೊಳ್ಳಲು ನೋಡಬಹುದು- ಆದರಿದು ಕೇವಲ ನಿಷೇಧ ಸೂಚನೆ, ಮತ್ತದಕ್ಕೆ ಉತ್ತರವನ್ನಷ್ಟೇ ಪಡೆದೂ ಸುಮ್ಮನಿರಲಾಗುವ ಪ್ರಶ್ನೆಯಲ್ಲ. ಈ ಸಂಬಂಧದ ಸ್ಥಿತಿಗತಿಗಳ ಸರಿಯಾದ ಪರಿಚಯವುಳ್ಳ ಭಾರತ ಸರಕಾರವು ಈ ಕುರಿತು ತಕ್ಕ ಕಾರ್ಯ ಕೈಕೊಳ್ಳುವದೆಂಬ ನಂಬಿಕೆಯಿಡಬಹುದು. ಆದರೆ ಪಾಕಿಸ್ತಾನವು ಯಾವ ದೃಷ್ಟಿಯಿಟ್ಟುಕೊಂಡು ಹೇಗೆ ಹೆಜ್ಜೆ ಯಿಡುತ್ತಿದೆ, ಎಂಬುದು ಈ ರೀತಿ ಮೇಲಿಂದ ಮೇಲೆ ಸ್ಪಷ್ಟವಾಗುತ್ತಿರುವಾಗ, ಮುಂದೇನು ಎಂಬ ಕುರಿತು ಜನತೆಯೂ ಆಸಕ್ತಿ ವಹಿಸದೆ ನಿರ್ವಾಹವಿಲ್ಲ.

ನೆಹರೂ ನಿರ್ದೇಶ

[ಜನೇ ಪುಟದಿಂದ ಮುಂದುವರಿದುದು]

ನನ್ನು ಮಹಾತ್ಮಾಜಿಗೆ ಕೊಟ್ಟುಬಾವುದು? ಗಾಂಧಿಜೀ ಯಾವನೊಬ್ಬನ ಲೋಪದೋಷಗಳನ್ನೂ ಎತ್ತಿ ತೋರಿಸದೆ, ಸದಾಕಾಲ ಅವನ ಸದ್ಗುಣಗಳ ಕಡೆಗೇನೇ ಲಕ್ಷ್ಯ ಕೊಡುತ್ತಿದ್ದರು; ಅತನು ಸದ್ದಾರಿ ಹಿಡಿಯುವದು ಒಂದು ರೀತಿಯಿಂದ ಅನಿವಾರ್ಯವಾಗುವಂತೆ ಈ ಮೂಲಕ ಮಾಡುತಿದ್ದರು. ಇದೇ ಕ್ರಮವನ್ನನುಸರಿಸಲು ನಾವೂ ಪ್ರಯತ್ನಿಸಬೇಕು. ಇಲ್ಲವಾದರೆ ಈ ಮಹಾಸಂಸ್ಥೆಯು ಚಲ್ಲಾಪಿಲ್ಲಿಯಾಗುವದು. ಬ್ರಾಯ್ಲಿನಿನ ನಮ್ಮ ರಾಯಭಾರಿ ಕಚೇರಿಯ ಸಿಬ್ಬಂದಿಯ ಸದಸ್ಯರು ನನ್ನೊಡನಂದರು— ಅಲ್ಲಿಯ ಒಳ ಹಳ್ಳಿ ಮೂಲೆಗಳ ಜನರಿಗೆ ಭಾರತದ ಹೆಸರೇ ಗೊತ್ತಿಲ್ಲವಂತೆ; ಆದರೆ ಅವರು ಮಹಾತ್ಮರ ಹೆಸರನ್ನು ಬಲ್ಲರು. ನಮ್ಮ ಜನರನ್ನು ಕಂಡರೆ ಅಲ್ಲಿಯವರು ಕೇಳುವ ಪ್ರಶ್ನೆ "ನೀವು ಮಹಾತ್ಮಾ ಗಾಂಧಿಯವರ ದೇಶದವರೋ?" ಗಾಂಧಿಜಿಯ ತತ್ವಗಳೊಂದಿಗೆ ಇಳೆದ 25 ವರುಷಗಳಿಂದ ಕೂಡಿಕೊಂಡಿದ್ದು ಈಗ ನಾವವುಗಳನ್ನು ಮರೆತಿರುವುದನ್ನು ಕಂಡು ನನಗಾಶ್ಚರ್ಯವಾಗುತ್ತಿದೆ. ಆ ತತ್ವಗಳ ಅನುಕರಣೆಯಿಂದ ನಮ್ಮ ಶಕ್ತಿ ಹೆಚ್ಚಿರುವುದನ್ನು ನಾವು ಕಂಡಿದ್ದೂ, ನಾವು ದುರ್ಬಲರಂತಿದ್ದೇವೆ. ಗತಕಾಲದ ಅನುಭವಗಳ ಉಪಯೋಗ ಪಡಕೊಳ್ಳಲಾರೆವಾದರೆ ಭವಿಷತ್ಕಾಲದಲ್ಲಿ ನಾವು ಏಳುವದಾದರೂ ಹೇಗೆ? ಭಾರತದಲ್ಲಿ ಮಹತ್ಕಾದ ಕ್ರಾಂತಿ ನಡೆದು ಹೋಯಿತು. ಒಂದು ಕ್ರಾಂತಿಯಲ್ಲಿ ಲಾತೀ ಚಾರ್ಜು ಮತ್ತು ಗುಂಡು ಹಾರಾಟಗಳೇ ಇರಬೇಕೆಂಬ ಆರ್ಥವಲ್ಲ. ಕ್ರಾಂತಿಯೆಂದರೆ ಜನ ಜೀವನ ವಿಧಾನವನ್ನು ಮಾರ್ಪಡಿಸುವಂತ ಹದೇ. ಒಂದು ಕ್ರಾಂತಿಯಾಗಿ ಹೋ ದ ಮೇಲೆ ನಾವಿನ್ನು ಸ್ವೈಸ್ಥ ಕುಳಿತು ವ್ಯಕ್ತಿ ಸ್ವಾರ್ಥದತ್ತ ಗಮನ ಕೊಡಬಹುದೆಂದು ನೀವು ನೆನಸಿಕೊಂಡರೆ ಆತ್ಮ ವಂ ಚನೆ ಮಾಡಿಕೊಂಡಂತೆಯೇ ಸರಿ. ನಿಮ್ಮ ಕಾರ್ಯ ವಿಮುಖತೆಯೇ, ನಿ ನ್ನು ನಿಸರ್ಬಂಕೆಯಂತೆ ಮೂಲೆಗೆ ಗುಡಿಸಿ ಬಡುವ ಹೊಸ ಶಕ್ತಿಗಳ ಜನನಕ್ಕೆ ಅವ ಕಾಶ ಕೊಡಬಹುದು. ಇವೆಲ್ಲಾ ಕಂಟಿ ಕಕಾರಗಳಿಂದ ನಾನು ಸೋತು ಹೋ ಗಿದ್ದೇನೆ. ಕಾಂಗ್ರೆಸಿಗರ ಕುರಿತು ನನಗೆ ಹೆಗ್ಗಳಿಕೆಯಿದೆ; ಆದರೆ ಅವರ ಹಗಳಗಂಟೆ ತನವು ನನ್ನನ್ನು ನಿರಾಶೆಗೀಡು ಮಾಡಿದೆ. ಈ ಪಕ್ಷ ಪಂಗಡವಾರು ಕಲಹಗಳಿಗೆ ಹೆದರುವವನು ನಾನಲ್ಲ. ಆದರೆ ಇವುಗಳಿಂದಾಗಿ ಕಾಂಗ್ರೆಸ್ ಕೆಲಸ ಹಾಳಾಗುತ್ತಿದೆ. ಕಂದ ಕೆಲವು ತಿಂಗಳುಗಳಲ್ಲಿ ನೀವಾವ ಕೆಲಸ ಮಾಡಿರುವಿರಿ? ಒಂದೋ ನೀವು ದುಡಿಯಬೇಕು, ಇಲ್ಲವೇ ನಿಮ್ಮೊಳಗೆ ಹೋರಾಡಿಕೊಂಡಿರಬೇಕು. ನಾನು ರೈತರ ನಡುವೆ ಕೆಲಸ ಮಾಡುವ ಮೂಲಕವೇ ನನ್ನ ಸಾರ್ವಜನಿಕ ಜೀವನವನ್ನು ಅರಂಭಿಸಿದವ. ಈ ಸರಳ ಹೃದಯದ ಜನತೆಗೆ ನನ್ನ ಯೋಚನೆಯನ್ನು ತಿಳಿಯಪಡಿಸುವುದು ಹೆಚ್ಚು ಸುಲಭದ್ದಾಗಿ ನನಗೆ ಕಾಣಿಸುತ್ತಿದೆ. ಕೆಸಾನರ ಸಮಸ್ಯೆಗಳಲ್ಲಿ ನನಗೆ ಸದಾ ಆಸಕ್ತಿಯಿದೆ."

× × ×

ಭಾರತ ಪ್ರಧಾನಿ ಪಂಡಿತ ನೆಹರೂಗಳು ಅಗೋಸ್ತು ತಾ. 27 ಮತ್ತು 28 ರಲ್ಲಿ ರಾಷ್ಟ್ರಪರದಲ್ಲಿತ್ತ ಭಾಷಣಗಳಲ್ಲಿ ರಾಷ್ಟ್ರದ ಆಹಾರ ಮತ್ತು ಕೆಲವರ ಆತಿರೇಕಾಚರಣೆಗಳಿಗೆ ಸಂಬಂಧಿಸಿದ ಹಿತ ವಚನಗಳೂ ಒಂದಿವೆ. ಅವುಗಳ ಸಾರಾಂಶವು ಇಲ್ಲಿದೆ:-

ಆಹಾರ ನಿಯಂತ್ರಣ

"ಈ ರಾಷ್ಟ್ರದಲ್ಲಿ ಆಹಾರಾಂಭಾವವು ಳಿದಿರುವ ವರೆಗೂ ಆಹಾರ ನಿಯಂತ್ರಣವನ್ನು ರದ್ದುಪಡಿಸುವ ಉದ್ದೇಶ ಸರಕಾರಕ್ಕಿಲ್ಲ. ಅಧಾವಿರುವಾಗಲೇ ಆ ಹಾರ ನಿಯಂತ್ರಣ ತೆಗೆದು ಹಾಕುವಂಥಾ ಹಿಂದೊಮ್ಮೆ ಮಾಡಿದ ತಪ್ಪನ್ನು ನಾವು ಮತ್ತೊಮ್ಮೆ ಮಾಡಲಾರೆವು. ಗತ ಕಾಲದಲ್ಲಿ ನಿಯಂತ್ರಣ ರದ್ದು ಪಡಿಸಿದುದರ ಪರಿಣಾಮವಾಗಿ ಆಹಾರ ಧಾನ್ಯಗಳ ಬೆಲೆಯು ಅತಿರೇಕವೇರಿ, ಆ ಮೂಲಕ ಕೆಲವರು ಕೋಟಿಗಟ್ಟಲೆ ರೂಪಾಯಿ ಗಳಿಸಿಕೊಳ್ಳುವಂತಾಯಿತು; ಆದರೆ ನಾವ್ಯ

ಜನರು ಶಸ್ತ್ರಸನ್ನಹಗಳಿಗೀಡಾದರು. ಹೊರಗಿನಿಂದ ಆಹಾರ ಧಾನ್ಯಗಳನ್ನು ಆಮದುಪಡಿಸಿಕೊಳ್ಳುವುದಕ್ಕಾಗಿ ಹೇರಳ ಹಣ ವ್ಯಯವಾಗುತ್ತಿದೆ. ಹೀಗೆಯೇ ಆದರೆ ರಾಷ್ಟ್ರವು ಸದ್ಯದಲ್ಲೇ ದಿವಾಳಿ ತೆಗೆಯಬೇಕಾದೀತು. ಯುದ್ಧಾರಂಭವಾಯಿತೆಂದರೆ ಹೊರಗಿನಿಂದಾಮದು ಅಸಾಧ್ಯವಾಗುವದು ಯಾವ ರಾಷ್ಟ್ರವಾದರೂ ಆಹಾರದ ಮಟ್ಟಿಗೆ ಸ್ವಾವಲಂಬಿಯಾಗಿರದಿದ್ದರೆ, ಅದು ಇನ್ನೊಂದು ರಾಷ್ಟ್ರವನ್ನು ಅವಲಂಬಿಸಿರಬೇಕಾಗುವುದು. ಆದ್ದರಿಂದಲೇ ಉದ್ದಿಮೇ ರಾಷ್ಟ್ರವಾಗಿರುವ ಬ್ರಿಟನು ಕೂಡಾ ಅತಿ ರಭಸದ ಬೇಸಾಯೋತ್ಪತ್ತಿ ಕಾರ್ಯವನ್ನು ಕೈಕೊಂಡು ಕಳದ ಎರಡು ಮೂರುವರುಷಗಳಲ್ಲಿಉತ್ಪನ್ನವನ್ನು ಸೇ 25ರಷ್ಟು ಹೆಚ್ಚಿಸಿ ಕೊಂಡಿದೆ. ಭಾರತವು ಒಂದು ಬೇಸಾಯೀ ರಾಷ್ಟ್ರ. ಆದಕ್ಕನುಗುಣವಾಗಿಯೇ ನಾವಿದ್ದುಕೊಂಡು, ಆಹಾರೋತ್ಪತ್ತಿಯನ್ನು ಹೆಚ್ಚಿಸಿಕೊಳ್ಳದೆ ಹೋದರೆ ನಾವು ಸಶಕ್ತ ಹೊಂದುವದೇ ಸರಿ. ನಮ್ಮ ರಾಷ್ಟ್ರವು ಹಲವು ಯುದ್ಧೋತ್ಕರ ಸವಸ್ತುಗಳನ್ನು ದಿರಿಸಿನ; ಅವುಗಳನ್ನೆಲ್ಲಾ ಏಂಪ್ರಜಾಲದಿಂದ ಮಾಯಗೊಳಿಸಲಾಗುವದಿಲ್ಲ. ನಾವು ಕೈಕೊಂಡಿರುವ ಅಖಾರ ಅಭಿವೃದ್ಧಿ ಯೋಜನೆಗಳಂತಾಗಿ 15 ಅಥವಾ 20 ವರುಷಗಳ ನಂತರ ರಾಷ್ಟ್ರದ ಸ್ಥಿತಿಯು ಸ್ವಪ್ನ ರೀತಿಯಿಂದ ಬದಲಾಗಲಿದೆಯೆಂಬ ಕುರಿತು ಅಮಾನವಿಲ್ಲ. ನಮ್ಮ ಸ್ಥಿತಿ ಸುಧಾರಣೆಗಾಗಿ, ಕಠಿಣ ವಿಧಾಯಕ ಕಾರ್ಯಗಳನ್ನು ನಾವು ಮಾಡಬೇಕಾಗಿದೆ. ಉದ್ದಿಮೆವಾಲರ ಮತ್ತು ವ್ಯಾಪಾರಿಗಳ ಧೋರಣೆಯು ಈ ಮಟ್ಟಿಗೆ ನಮಗೆ ನೆರವಾಗಿಲ್ಲ."

ರಾಷ್ಟ್ರರಕ್ಷಣೆ

"ಏನೇ ನಡೆದರೂ ಕಾಂಗ್ರೆಸನ್ನು ದೂರುವುದೊಂದೇ ಈಗ ಕೆಲವು ಜನರ ಉದ್ಯೋಗವಾಗಿದೆ. ಕಾರ್ಯತಃ ಯಾವುದು ಹೇಗಾಗಬೇಕಿತ್ತೆಂಬ ಅಭಿವ್ಯಾಯವಾವುದೂ ಇಂಥವರಲ್ಲಿಲ್ಲ. ಭಾರತದಲ್ಲಿ ತಮಗೆ ತೋರಿ ಬರುವ ಕುಂದು ಕೊರತೆಗಳ ಕಡೆಗೆ ಕೈ ತೋರಿಸುವುದಷ್ಟನ್ನೇ ಇಂಥವರು ಮಾಡುತ್ತಿದ್ದಾರೆ. ಅವುಗಳ ಹಿದರಿಕೆ ನನಗಿಲ್ಲ; ನಮ್ಮ ದೋಷಗಳನ್ನು ನಮಗೆ ತೋರಿಸಿ ಕೊಡುವ ಕೆಲಸ ಕೆಲವರಿಂದಾಗುವುದು ಒಳ್ಳೆಯದೇ. ಹೇಗಿದ್ದರೂ ನಾವು ಆತ್ಮ ತೃಪ್ತಿಯಿಂದಿರಲಾರೆವು; ಸ್ವತೃಪ್ತಿ ಯೆಂಬುದು ಪತನದತ್ಯ ಕೊಂಡೊಯ್ಯುವ ದುರ್ಗುಣ. ಆದರೆ ವಿಮರ್ಶಕರು ಸದ್ಯದ ಸ್ವತಂತ್ರ ಭಾರತ ಚಿತ್ರದಲ್ಲಿ ಕಂಡು ಬರುವ ಕೆಲವು ಮುಖ್ಯ ವಿಷಯಗಳನ್ನು ಗಮನಿಸಬೇಕು. ಸದ್ಯ ಸ್ಥಿತಿಯಲ್ಲಿ ವಿದೇಶಾಕರ್ಷಣೀಯವಾಗಿ ತೋರದಿದ್ದರೂ, ಕಳದೆರಡು ವರುಷಗಳಲ್ಲಿ ಕಾಂಗ್ರೆಸ್ ಸರಕಾರಗಳು ಮಾಡಿದ್ದ ಕೌತುಕಗಳನ್ನು ಈ ರಾಷ್ಟ್ರದ ಅಥವಾ ಹೊರ ರಾಷ್ಟ್ರಗಳ ಯಾವುದೇ ಸರಕಾರಿಗಳಿಂದಲೂ ನೂಡಲಾಗುತ್ತಿರಲಿಲ್ಲವೆಂದು ನನ್ನ ಅಭಿವ್ಯಾಯ. ಕಾಂಗ್ರೆಸ್ ಸರಕಾರಗಳು ಇದಿರಿಸಿದಂತಹ ಅಖಾರ ಸಮಸ್ಯೆಗಳನ್ನೂ, ಎಗಾಧ ಕಾರ್ಯಕಷ್ಟಗಳನ್ನೂ ಇದಿರಿಸಬೇಕಾಗಿ ಬರುತ್ತಿದ್ದರೆ ಸ್ವತಃ ಬೇರಾವ ಸರಕಾರವೂ ಗಟ್ಟಿ ನಿಲ್ಲದಂತಾಗುತ್ತಿತ್ತು. ನಾವು ನಮ್ಮೆಲ್ಲಾ ಶಕ್ತಿಸಾಮರ್ಥ್ಯಗಳನ್ನೂ ನಮ್ಮಿಂದ ಸಾಧ್ಯವಿದ್ದನ್ನೆಲ್ಲವನ್ನು ಮಾಡಲು ನ್ಯಯೋಗಿಸಿದ್ದೆವು. ಏನೆಂದರೂ 36ಕೋಟಿ ಜನರನ್ನಾಳುವದೆಂದರೆ ಅದೇನೂ ಸುಲಭದ ಕೆಲಸವಲ್ಲ. ಹೊರಗಿನ ಯಾವುದೇ ಆಕ್ರಮಣದ ಭೀತಿ ನನಗಿಲ್ಲ; ಆದರೆ ನನ್ನನ್ನು ವಿಶೇಷ ಚಿಂತೆಗೀಡುಮಾಡಿರುವುದೆಂದರೆ ನಮ್ಮ ಆಂತರಿಕ ದೌರ್ಬಲ್ಯಗಳು; ಅದರಲ್ಲೂ ಆರ್ಥಿಕ ದುಸ್ಥಿತಿ. ಭಾರತ ಸರಕಾರವು ವಿಶ್ವಾಸ ಪೂರ್ವಕ ಇದಿರಿಸಲಾಗದಂತಹ ಹೊರಗಿನ ಧಾಳಿಯು ಆಪಾಯವಾವುದೂ ನಮಗಿಲ್ಲ. ಭಾರತದ ರಕ್ಷಣಾ ವ್ಯವಸ್ಥೆಯ ದೃಷ್ಟಿಯಿಂದ ನಾವು ಹೊರಗಿನವರ ಆಕ್ರಮಣಕ್ಕಾಗಿ ಹೆದರುವ ಅಗತ್ಯವಿಲ್ಲ. ನಿಸ್ಸಂಶಯವಾಗಿಯೂ, ಇಂತಹ ವಿಷಯಗಳ ಮಟ್ಟಿಗೆ ವ್ಯತಿಯೊಂದು ರಾಷ್ಟ್ರವೂ ಎಚ್ಚರಿಕೆಯಿಂದಿರಬೇಕಾಗಿದೆ; ನಮ್ಮ ರಾಷ್ಟ್ರದ ರಕ್ಷಣಾ ಕಾರ್ಯಭಾರ ಹೊತ್ತವರು ಆ ಎಚ್ಚರಿಕೆಯಿಂದಿದ್ದಾರೆಂಬ ನಂಬಿಕೆ ನನಗಿದೆ. ವಿದೇಶಿ ಆಕ್ರಮಣದ ವೇಳೆ ಸಶಸ್ತ್ರ ಸೈನಿಕರೇ ರಾಷ್ಟ್ರ ರಕ್ಷಣೆ ಮಾಡಬೇಕೆಂಬುದು ನಿಸ್ಸಂದೇಹ. ಆದರೆ ರಾಷ್ಟ್ರದ ಶಕ್ತಿ ನಿರ್ಣಾಯಕ ಮುಖ್ಯ ಸಂಗತಿಗಳೆರಡು ಬೇರೆ ಇವೆ. ಅವೆಂದರೆ ಮೊದಲನೆಯ ಬಾಗ ಆರ್ಥಿಕ ಸುಸ್ಥಿ ಮತ್ತು ಎರಡನೆಯ ಬಾಗ ರಾಷ್ಟ್ರದ ಜನತೆಯ ಬುದ್ಧಿ ಮತ್ತು ಹೃದಯ. ಸಶಸ್ತ್ರ ಸೈನ್ಯಗಳನ್ನು ಹೆಚ್ಚಿಸಬೇಕೆಂಬ ಸೂಚನೆಯೊಂದು ಕೇಳಿ ಬರುತ್ತಿದೆ. ಆದರೆ ಜನತೆಯು ಹೆಜ್ಜೆ ಹೆಜ್ಜೆ ಉಳ್ಳನ್ನಗೊಳಿಸಿ ರಾಷ್ಟ್ರವನ್ನು ಸ್ವಾವಲಂಬಿಯನ್ನಾಗಿ ಮಾಡದಿದ್ದರೆ, ಕೇವಲ ಸೇನಾ ದಳಗಳ ಸಂಖ್ಯೆ ಹೆಚ್ಚಿಸಿಯೇ ಭಾರತವು ಬಲಶಾಲಿಯಾಗುವಂತಿಲ್ಲ"

ಆರ್. ಯಸ್. ಯಸ್. ಮತ್ತು ಕಮ್ಯೂನಿಸ್ಟ್

"ಆರ್. ಯಸ್. ಯಸ್. ನವರು ಜನತೆಯ ನಡುವೆ ಸಂಕುಚಿತ ಮನೋವೃತ್ತಿಯನ್ನು ನಿರ್ಮಾಣಮಾಡುತಿದ್ದಾರೆ. ಭಾರತೀಯ ಸಂಸ್ಕೃತಿಗೆ ವಿರುದ್ಧವಾದ ಆಚರಣೆ ಅವರದು. ಅವರ ಹಾದಿಯನ್ನ ಅನುಕರಿಸಿದವ್ದಿಲ್ಲಿ ರಾಷ್ಟ್ರಕ್ಕೆ ಅಘೋಗತಿ ಖಂಡಿತ. "1941ರ ಗಲಭೆಯ ಪೀಳಿಗೆ ಧಿಷ್ಟಿಯನ್ನು ಮುಸ್ಲಿಮರ ಹೊಡೆತದಿಂದ ರಕ್ಷಿಸಿಕೊಡುವುದಕ್ಕಾಗಿ ಕೇಂದ್ರ ಸರಕಾರದ ಮಂತ್ರಿಗಳು ಆರ್. ಎಸ್. ಯಸ್. ನಾಯಕರನ್ನು ಆಮಂತ್ರಿಸಿದ್ದರು" ಎಂಬ ಪ್ರಜಾರವೊಂದು ಇತ್ತೀಚೆಗೆ ಜನತೆಯ ನಡುವೆ ನಡೆದಿರುವುದು ನನ್ನ ಕಿವಿಗೆ ಬಿದ್ದಿದೆ. ಇದು ಸಂಪೂರ್ಣ ಸುಳ್ಳು. ನಾಜೀ ಪದ್ಧತಿಯ ಆರ್. ಯಸ್. ಯಸ್. ಕೃತ್ಯಗಳನ್ನು ನಾವು ಖಚಿತವಾಗಿ ನಿಷೇಧಿಸುತ್ತೇವೆ. ಕಮ್ಯೂನಿಸ್ಟ್ ಕೃತ್ಯಗಳಿಗೆ ನನ್ನ ವಿರೋಧವಿಲ್ಲ. ಆದರೆ ಅವರ ಕಾರ್ಯವಿಧಾನಗಳಿಗೆ ನಾನು ವಿರೋಧಿ. ಅವರ ಧೋರಣೆಯು ರಾಷ್ಟ್ರಕ್ಕೆ ಅನಾಹುತವನ್ನೆಸಗದೆ ಬೇರೇನನ್ನೂ ತರಲಾರದು. ಮತದಾರ ಪೆಟ್ಟಿಗೆ ಮೂಲಕ ನಾವು ಗೆಲ್ಲಲಾರೆವೆಂದು ನೆನಸಿ, ಕಮ್ಯೂನಿಸ್ಟರು ಹಿಂಸಾತ್ಮಕ ಚಟುವಟಿಕೆಗಳಿಗೆ ತೊಡಗಿದ್ದಾರೆ. ನಾವೀಗಕಮ್ಯೂನಿಸ್ಟರ ಕಾರ್ಯರೀತಿಗಳನ್ನು ವಿರೋಧಿಸುವೆವು; ನಾವು ರಕ್ಷಕ್ಕೆ ವಿರೋಧವಲ್ಲ. ಈಗ ತಾನೇ ಡಾ| ರಾಧಾಕೃಷ್ಣನ್‌ರಂತಹ ವ್ಯಮಾಜ ಭಾರತೀಯನನ್ನು ರಕ್ಷಕ್ಕೆ ರಾಯಭಾರಿಯಾಗಿ ಕಳುಹಿದ್ದೇವೆ ಚೈನದ ಕಡೆಗೂ ನಮ್ಮ ದಿದೇ ಮರ್ಜಿ. ನಾವು ಯಾವ ರಾಷ್ಟ್ರದ ಕಡೆಗೂ ದ್ವೇಷ ಭಾವನೆಯುಳ್ಳವರಲ್ಲ. ಅನ್ಯರ ಸ್ವಾತಂತ್ರ್ಯಕ್ಕಡ್ಡಬಾರದಿರುವಂತೆಯೇ ಅನ್ಯರು ಕೆಲಸಗಳ ನಡುವೆ ಕೈಹೊಗಿಸಲು ನಾವು ನೋಡಲಾರೆವು. ನಾವು ನಮ್ಮಷ್ಟಕ್ಕೆ ಸ್ವಾತಂತ್ರ್ಯವನ್ನು ಅನುಭೋಗಿಸುವಾಗ ಇನ್ನೊಬ್ಬರನ್ನು ಅದರ ನಡುವೆ ಕೈಹಾಕಲು ಬಡಲಾರೆವು."

ಸ್ಥಳಾಭಾವದಿಂದ ಕೆಲವು ಜಾತ್ಮಿಗಳನ್ನು ಈ ವಾರ ಪ್ರಕಟಿಸಲಾಗಲಿಲ್ಲ.— ಸಂ. ನ.

ಚಂದಾದಾರರಲ್ಲಿ--

ಚಂದಾಹಣ ಬಾಕಿ ಇರುವ ಚಂದಾದಾರರಿಗೆಲ್ಲಾ ಕ್ರಮಪ್ರಕಾರ ಈ ವಾರದಿಂದಲೇ ಪತ್ರಿಕೆಯನ್ನು ವಿ. ಪಿ. ಮಾಡಿ ಕಳಿಸಲು ಪ್ರಾರಂಭಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ವಿ. ಪಿ. ಯನ್ನು ಸಕಾಲದಲ್ಲಿ ಸ್ವೀಕರಿಸಿಕೊಂಡು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

ಸ್ಮಾಲ್ ನಂಬ್ರ 219/1949.

ಪಿ. ಮಹಮ್ಮದ ಕುಂಞ -ವಾದಿ

B. M. ಅಬ್ದಾ ಬ್ಯಾರಿ, ಮಂಜ್ಯೂಞ ಹಾಜಿ ಮಗ. ಕಾಸರಗೋಡು ತಾಲೂಕು ಜಂಗಲ್ ಗ್ರಾಮದ ವೇಲುಂಬೆಯಲ್ಲಿರುವವ — ಪ್ರತಿವಾದಿ.

ವಾದಿಯು ಪ್ರತಿವಾದಿಯ ಮೇಲೆ ಮೈ. ನೋಟೀಸ ಆ್ಯವಜಿಗೆ ದಾಕ್ಲು ಮಾಡಿದ ಸದ್ರಿ ವ್ಯಾಜ್ಯವು ತಾರೀಕು 10-9-1949ಕ್ಕೆ ಯಿಟ್ಟಿರುವ ಸಂಗ್ತಿ ತಿಳಿಸೋಣಾಗಿಯಜೆ.

Sd/ **P. Ahmad.**

Advocate for Plaintiff.

ಕಾಸರಗೋಡು, 23-8-49.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಜಾಮೀನಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky. S K.

The Canara Banking Corporation Ltd., Malpe.

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಲಿಮಿಟೆಡ್, ಮಲ್ಪೆ.

ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬ್ಯಾಂಕಿನಲ್ಲಿ ಅಡವಿಟ್ಟ ನಗದಗಳನ್ನು ಬಡಿಸಿಕೊಂಡು ಹೋಗದೆ ಇದ್ದುದರಿಂದ ಅವರಿಗೆ ಬಟ್ಟ ರಿಜಿಸ್ಟ್ರಿ ನೋಟೀಸು[1] ವಿಳಾಸದಾರರ ಪತ್ತೆಇಲ್ಲ.[2]. ಸದ್ರಿಯವರು ಸ್ವತಹಟ್ಟರು ನರು. ಎಂದು ತಾಖಾಡು ಬಂದುದರಿಂದ ಈ ಮೂಲಕ ಅವರಿಗೆ ಯಾ ಅವರ ವಾರಿಸ್ದಾರರಿಗೆ ತಿಳಿಸುವದೇನೆಂದರೆ ಸದ್ರಿ ನಗದಗಳ ಬಾಬ್ತು ಅಸಲು, ಬಡ್ಡಿ, ಬಡ್ಡಿಯ ಬಡ್ಡಿ, ಇತರ ನುತ್ತು ಈ ನೋಟೀಸುಗಳ ಬಿಡುಗಡೆಯಲ್ಲದೆ ಮುಂದಿನ ವಸೂಲಿ ತರಿಗಿನ ಬಡ್ಡಿ ಸಮೇತ ತಾ 17-9-1949ರ ಒಳಗೆ ಬ್ಯಾಂಕಿಗೆ ತಂದು ಕೊಟ್ಟು ಪಡಿಸಿಕೊಂಡು ಹೋಗಬೇಕು. ಹಾಗೆ ಕೊಂಡುಹೋಗಲಿಕ್ಕೆ ತಪ್ಪಿದರೆ ಸದ್ರಿ ನಗದಗಳನ್ನು ತಾ 8-10-1949ನೇ ಶನಿವಾರ ಮಧ್ಯಾಹ್ನ ಒಂದು ಗಂಟೆಗೆ ಯಾ ಬ್ಯಾಂಕಿಗೆ ಯುಕ್ತತೋರುವ ಇತರ ದಿನಗಳಲ್ಲಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂನಾಡಿ ಸದ್ರಿ ಏಲಂನಿಂದ ಹುಟ್ಟಿಬರುವ ಏನೇಜಿನಲ್ಲಿ ನಿಲಂ ಖರ್ಚು ಕಳದು ಬಾಕಿ ಉಳಿಯುವ ಏನೇಜನ್ನು ಸದ್ರಿಯವರ ಲೆಕ್ಕಕ್ಕೆ ಜಮಾವಾಡಿ ನಂತರ ಸದ್ರಿಯವರ ಮೇಲೆ ಇನ್ನೂ ಜಾಕಿಯಾಗಿ ಬಹುದಾದ ಏನೇಜಿಗೆ ಆಗತ್ಯವುಳ್ಳ ವ್ಯವಹರಣೆ ನಡಿಸೋಣಾದೀತು. ಆ ಸಂಬಂಧ ಬ್ಯಾಂಕಿಗೆ ಉಂಟಾಗ ಬಹುದಾದ ಸಕಲ ಖರ್ಚು ವ ನಷ್ಟ ತೆರಲಿಕ್ಕೆ ಕೂಡಾ ಸದ್ರಿಯವರು ಜವಾಬ್ದಾರರಾಗಿರುತ್ತಾರೆ.

ಜಂಬ್ರಾ ನಂಬ್ರ 1. ಸಾಲದ ನಂಬ್ರ 705-47.

ಹೆಸರು ಉತ್ತರ ಕನ್ನಡ ಜಿಲ್ಲಾ ಭಟ್ಕಳ ತಾಲೂ ಮಾವಿನ ಕುರ್ವೆ ಗೋವಿಂದನ ಮಗ ಬಾಕಿ ಕಾರ್ಯ. ಅಸಲು ರೂಪ್ಯಾ 10/-

ಜಂಬ್ರಾ ನಂಬ್ರ 2. ಸಾಲದ ನಂಬ್ರ 917-48 ಇಸಾಬ್ ಸಾಹೇಬರ ಮಗ ಮಿರಾಸಾಹೇಬ್ C/o ಮಲ್ಪೆ ಹೋಟೇಲು ವ್ಯಾಪಾರಿ ಮಹಮೂದ್ ಸಾಹೇಬ್. ಅಸಲುರೂಪ್ಯಾ52/-

ಟಿ. ಅನಂತರಾಮು ಕಲ್ಯೂರ

ಮನೇಜರ್,

ಬ್ಯಾಂಕಿನ ಆಫೀಸು

ಮಲ್ಪೆ ತಾ. 26—8—1949

ಶಯ್ಯಾಗೃಹದ ಫೊಟೋಗಳು

(ಅಸ್ಪಾಯಶ್ಯಂಗೆನಿಸ್ಕಯಯೋಗಾಗಲಿಕ್ಕಿಲ್ಲ)

ಶಯ್ಯಾಗೃಹದ ದೃಶ್ಯ, ಸೌಂದರ್ಯಾದಿಗಳನ್ನು ನೋಡಲಪೇಕ್ಷಿಸುವಿರಾದರೆ ಇಂದೇ ಆರ್ಡರು ಕೊಡಿರಿ 50 ಫೊಟೋಗಳ ಸೆಟ್ಟಿನ ಬೆಲೆ ರೂಪಾಯಿ **6/-** ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

V. P. Store [N. U.]

Post Box 51, Meerut, U. P.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಈಗ ನಡೆಯುವ ಚಿತ್ರ

ರಂಜಿತ್ ಪಿಕ್ಚರ್ಸ್‌ರವರ-ಕುರ್ಬಿದ್, ನೋತಿಲಾಲ್, ದೀಪ್ತಿತ್ ಮತ್ತು ನಜೀರ್ ಬೇಗಮ್ ನಟಿಸಿದ

ಪೂಲ್‌ವಾರಿ

ಬರುವ ಚಿತ್ರ ತಾರೀಕು 6—9—49ರಿಂದ

ಫೆಡರಲ್ ಒಪರೇಟರ್ 99

(ಇಂಗ್ಲಿಷ್ ಸೀರಿಯಲ್)

ಉಡುಪಿ.

ನಗರ ಸಭೆಯು-ಕಳದ ತಾ 29ರಲ್ಲು ಶ್ರೀ ಉಪೇಂದ್ರ ಶ್ರೀನಿವಾಸನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಸೈನ್ ಶಾಲೆಯಕುರಿತು ಕೇಳಿದ ಶ್ರೀ ಆರ್. ಎ. ಸ್ವಾಮಿನ್ಸರ ಪ್ರಶ್ನೆಗಳಿಗೆ ಚೀಯರ್‌ಮೇನರು ಸದುತ್ತರಗಳನ್ನು ಕೊಟ್ಟು ಬಳಿಕ ಸರಕಾರಿ ಜಿ. ಹಿ. ಗಳು ರಿಕಾರ್ಡು ಮಾಡಲಾದುವು. ಪಬ್ಲಿಯೂ ದಿವಾಡಿನ ಬೀದಿನಗುಡ್ಡೆ ಸಮಿಪದ ಜಾಗದಲ್ಲಿ ಆಹಾರಧಾನ್ಯಗಳನ್ನು ಬೆಳೆಸುವರೆ ಮುನಿಸಿಪಲ್ ಸಂಘದ ಸದಸ್ಯರಿಗೆ ಕೌನ್ಸಿಲಿನ ಒಪ್ಪಿಗೆ ಜೊರಯಿತು. ಕೌನ್ಸಿಲಿನ 1948-49ನೆ ವರ್ಷದ ಆದಕಿತದ ಕುರಿತು ಕಲೆಕ್ಟರರು ಬರೆದ ರಿಮಾರ್ಕುಗಳನ್ನು ರಿಕಾರ್ಡು ಮಾಡಲಾಯಿತು. ಮುನಿಸಿಪಲ್ ಶಾಲೆಗಳಿಗೆ ನಾಮಾನುಗಳನ್ನು ಒದಗಿಸುವರೆ ರೂಪ್ಯಾ 750-ಸೆಂಕ್ಷನ್ ಮಾಡಲಾಯಿತು. ಸ್ವಾತಂತ್ರ್ಯ ದಿನಾಚರಣೆ ಸಮಿತಿಯವರು ಅಜ್ಜರಕಾಡು ಮೈದಾನದಲ್ಲಿ! ಕಟ್ಟಿಸಿದ ಅಶೋಕಸ್ತಂಭ ಮತ್ತು ಕೆಲವು ಆಸನಗಳನ್ನು ಕೌನ್ಸಿಲು ಸ್ವೀಕರಿಸಿತು.

ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಶ್ರೀ. ಎಮ್. ರಾಮಚಂದ್ರರಾಯರಿಗೆ ಆ ಕಾಲೇಜಿನ ವಿದ್ಯಾರ್ಥಿ ವೃಂದದವರೂ ಸಂಡಿತರೂ ಹಳೆ ವಿದ್ಯಾರ್ಥಿ ಸಂಘದವರೂ ಮಾನಪತ್ರ, ಸಂಭಾವನೆ ಮೊದಲಾದುವನ್ನಿತ್ತು ಗೌರವಿಸಿದರು.

ಕೊಡವೂರು ಸರ್ಕಲಿನಿಂದ ಜಿಲ್ಲಾ ಬೋರ್ಡು ಚುನಾವಣೆಗೆ ಶ್ರೀ. ಉಪೇಂದ್ರ ಶ್ರೀನಿವಾಸನಾಯಕ್ [ಕಾಂಗ್ರೆಸ್] ಶ್ರೀ. ಸಿದ್ದು ಪೂಜಾರಿಮತ್ತು ಶ್ರೀ. ಜೋಬು ಅಮ್ಮಣ್ಣ (ಸೋಶಿಯಲಿಸ್ಟ್) ಉಮೇದ್ವಾರರಿರುವುದರಿಂದ ಚುನಾವಣೆ ನಡೆಯಲಿದೆ. ಡಾ। ಪಿ. ಜಿ. ಆರ್ಯಾರೂ ಶ್ರೀ ಎಂ. ಕೆ. ಶ್ರೀನಿವಾಸನವರೂ ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು.

ಬ್ರಹ್ಮಾವರ ಸರ್ಕಲಿನಲ್ಲಿ ಚುನಾವಣೆ ಉಮೇದ್ವಾರರಾದ ಶ್ರೀ ಇರ್ಮಾಡಿ ಆನಂದ ಸೆಟ್ಟಿ. (ಕಾಂಗ್ರೆಸ್) ಶ್ರೀ ಬಿ. ಜಗಜ್ಜೀವನ ದಾಸ ಸೆಟ್ಟಿ ಇವರಿಬ್ಬರೂ ಮಧ್ಯಸ್ಥಿಗರ ಮಾತಿಗೆ ಬೆಲೆಕೊಟ್ಟು ತಂತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು ಆದುದರಿಂದ ಮುಂದಕ್ಕೆ ಉಪಚುನಾವಣೆ ನಡೆಯಲಿದೆ.

ದ. ಕ. ಜಿಲ್ಲಾ ಬೋರ್ಡು ಚುನಾವಣೆ

ಕಾಂಗ್ರೆಸ್ ಉಮೇದುವಾರರು

ಜಿಲ್ಲಾ ಬೋರ್ಡು ಚುನಾವಣೆಗೆ ಕಾಂಗ್ರೆಸ್ ವತಿಯಿಂದ ಹುಂಯಿಗಳಿಗಳನ್ನಾಗಿ ಈ ಕೆಳಗಿನವರನ್ನು ಆರಿಸಲಾಗಿದೆಯೆಂದು ತಿಳಿದುಬರುತ್ತದೆ. ಮಂಗಳೂರು: ಶ್ರೀ. ಬಿ. ಗಂಗಾಧರದಾಸ್, (ಜನರಲ್ ಸೀಟಿಗೆ); ಶ್ರೀ ಎಫ್. ಎಕ್ಸ್. ಡಿ. ಸಿಂಟೋ (ಕ್ರಿಶ್ಚಿಯನ್). ಮೂಡುಬಿದ್ರೆ: ಶ್ರೀ. ಕೆ. ಕೃಷ್ಣ ಸೆಟ್ಟಿ. ವೇಣೂರು: ಶ್ರೀ ಧರಣಪ್ಪ ಅಧಿಕಾರಿ. ಬೈಂದೂರು: ಶ್ರೀ. ವೈ. ಮಂಜಯ್ಯ ಸೆಟ್ಟಿ. ವಂಡ್ಸೆ: ಶ್ರೀ ಕೆ. ಸೂರಪ್ಪ ಸೆಟ್ಟಿ. ಕುಂದಾಪುರ: ಶ್ರೀ ಎಚ್. ಎಸ್. ಸಪ್ಪೋತ್ತಮ ಪೈ; ಶ್ರೀಮತಿ ಪ್ರಭುಲ್ಲ ಎಸ್. ಆರ್. ಹೆಗ್ಡೆ (ಸ್ತ್ರೀಯರ ಸ್ಥಾನಕ್ಕೆ). ಕಾರ್ಕಳ: ಶ್ರೀ. ಕೆ. ಸಿ. ಮುಳಿಯಂದ ಪ್ರಭು (ಜನರಲ್ ಸೀಟಿಗೆ) ಶ್ರೀ ಕೆ. ಸುಂದರ (ಹರಿಜನರ ಕಾದಿಟ್ಟ ಸ್ಥಾನಕ್ಕೆ) ಕೋಟ: ಶ್ರೀ ಎಸ್. ಎಸ್. ಪರಮೇಶ್ವರಯ್ಯ. ಬಸ್ರೂರು: ಶ್ರೀ ಬಿ. ಮಂಜಯ್ಯ ಹೆಗ್ಡೆ. ಬ್ರಹ್ಮಾವರ, ಶ್ರೀ ಇರ್ಮಾಡಿ ಆನಂದ ಸೆಟ್ಟಿ. (ಹಿಂದಗೆಯಲಾಗಿದೆ) ಹಿರಿಯಡ್ಕ: ಡಾ। ಕೆ. ಕೆ. ಹೆಗ್ಡೆ. ಕಾಪು: ಶ್ರೀ ಬಿ. ಬಾಲಕೃಷ್ಣ ಸೆಟ್ಟಿ. ಮೂಲ್ಕಿ: ಡಾ। ಎಸ್. ಚಂಪಾ. ಗುರುಪುರ: ಶ್ರೀ ಪದ್ಮಯ್ಯ ಅಳ್ವ. ಬಂಟ್ವಾಳ: ಶ್ರೀ ಬಿ. ಕೇಶವ ಬಾಳಿಗಾ. ಪಾಣೆಮಂಗಳೂರು: ಡಾ। ಕೆ. ನಾಗಪ್ಪ ಅಳ್ವ. ಕೋಟೆಕ್ಕಾರ್: ಶ್ರೀ ಬಿ. ಅನಂತ ರೈ; ಜನರಲ್ ಯು. ಎ. ಖಾದರ್ (ನುಸ್ಲಿಂ ಕಾದಿಟ್ಟಸ್ಥಾನ). ಮಂಜೇಶ್ವರ: ಶ್ರೀ ಬಾಲಕೃಷ್ಣ ಆಡ್ಯಂತಾಯ ಕುಂಬಳೆ: ಶ್ರೀ ಬಿ. ದೇವಪ್ಪ ಅಳ್ವ. ಕಾಸರಗೋಡು: ಶ್ರೀ. ಎಂ. ಉಮೇಶರಾವ್. ಮುಳಿಯಾರು: ಶ್ರೀ ಬಿ. ಎಸ್. ಕಕ್ಕಿಲ್ಲಾಯ. ವಿಟ್ಲ: ಶ್ರೀ ಬಿ. ವಿಠಲದಾಸ್ ಸೆಟ್ಟಿ. ಪುತ್ತೂರು: ಶ್ರೀ ಎಂ. ಸದಾಶಿವರಾವ್ (ಜನರಲ್ ಸೀಟಿಗೆ) ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿ.(ಸ್ತ್ರೀಯರ ಕಾದಿಟ್ಟ ಸ್ಥಾನ). ಕೊಕ್ಕಡ: ಶ್ರೀ ಎಸ್. ನರಸಪ್ಪಯ್ಯ. ಸುಳ್ಯ: ಶ್ರೀ ಕೆ. ವೆಂಕಟ್ಟಪ್ಪಣ ಗೌಡ. ಉಪ್ಪಿನಂಗಡಿ: ಡಾ। ಕೆ ಬಾಲಪ್ಪ ಶೆಟ್ಟಿ. ಕಡಬಾಡಿ: ಡಾ। ಯು. ಶೇಷರಾವ್, ಶ್ರೀ ಯಂ. ಜಿ. ನಜರೆತ್ (ಕ್ರಿಶ್ಚಿಯನ್). ಬೆಳ್ತಂಗಡಿ: ಶ್ರೀ ಡಿ. ಪುಟ್ಟುಸ್ವಾಮಿ. ಕೊಡವೂರು: ಶ್ರೀ. ಪಿ. ಉಪೇಂದ್ರ ನಾಯಕ್ (ಜನರಲ್ ಸೀಟಿಗೆ) ಶ್ರೀಮತಿ ಗಿರಿಜಹೆಗ್ಡಡ್ತಿ (ಸ್ತ್ರೀಯರ ಕಾದಿಟ್ಟ ಸ್ಥಾನಕ್ಕೆ)

ಪುತ್ತೂರು ಮೆಲೆನಾಡಿನ ಬೇಸಾಯಗಾರರಿಗೆ ಸೌಕರ್ಯ:- ಕಪ್ಪಶಟ್ಟು ಬೆಳೆಸಿದ ದವಸಧಾನ್ಯಗಳು ಕಾಡುಪ್ರಾಣಿಗಳ ಹಾವಳಿಯಿಂದಾಗಿ ನಾಶವಾಗುತ್ತಿರುವುದನ್ನು ಮನಗಂಡ ಶ್ರೀ ಕೆ. ಆರ್. ಕಾರಂತರು ಆದರ ನಿವಾರಣೋಪಾಯಕ್ಕಾಗಿ ಜಿಲ್ಲಾ ಕಲೆಕ್ಟರರಿಗೆ ಬರೆದ ಪತ್ರಗಳ ಕುರಿತು ಕಲೆಕ್ಟರರಿಂದ ಆವರಿಗೆ ಬಂದ ಉತ್ತರದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ. ಮಲೆನಾಡಿನ ರೈತರು ಅಗತ್ಯ ಗಮನಿಸತಕ್ಕ ವಿಷಯ.

ಕಾಡುಪ್ರಾಣಿಗಳ ಹಾವಳಿಯನ್ನು ನಿವಾರಿಸಲು ಈ ಜಿಲ್ಲೆಯ ರೈತರ ಸೌಕರ್ಯಕ್ಕಾಗಿ 100 ಎಸ್. ಬಿ. ಬಿ. ಎಲ್, ಕೋವಿಗಳನ್ನು ರೂಪಾಯಿ 150ರಂತೆ ಅಗ್ಗದ ದರದಲ್ಲಿ ವಿಕ್ರಯಿಸಲು ತಕ್ಕ ವ್ಯವಸ್ಥೆ ಮಾಡಲಾಗಿದೆ.

ಹರಿಪರ, ವಾಲ್ತಡ್ಕ ಮೊದಲಾದೆಡೆಗಳಲ್ಲಿ ಪುತ್ತೂರು ತಾಲೂಕಿನ ಒಳಪ್ರದೇಶಗಳಲ್ಲಿ ಕಾಡಾನೆಗಳು ಗುಂಪುಕಟ್ಟಿಕೊಂಡು ಬಂದು ಬೆಳೆಯನ್ನು ನಾಶಮಾಡುವುದನ್ನು ನಿಲ್ಲಿಸುವರೆ ಸಾಧಾರಣ ಇಪ್ಪತ್ತೈದುಮಂದಿ ಕೂಡಿಕೊಂಡು ಕೋವಿಧಾರಿಗಳಾಗಿ ರಿಜರ್ವ್ ಕಾಡಿಗೆ ಹೋಗಿ ಕಾಡಾನೆಗಳನ್ನು ಓಡಿಸಬಹುದು. ಆದರೆ ಆವರು ಹೋಗುವ ಸಮಯವನ್ನು ಜಂಗ್ಲಿ ಇಲಾಖಾ ಪಹರೆಯವರಿಗೂ ಗ್ರಾಮದ ಅಧಿಕಾರಿಗಳಿಗೂ ಮುಂಚಿತವಾಗಿ ತಿಳಿಸಬೇಕಾಗಿದೆ. ಅಲ್ಲದೆ ಕಾಡು ಹಾಳಾಗದಂತೆಯೂ ಆ ರೂಪಸೊಳ್ಳದಂತೆಯೂ ಗಮನಿಸಬೇಕಾಗಿದೆ.

ಪುನಹ 144ನೆ ಸೆಕ್ಷನ್ ಸ್ಥಳೀಯ ಟ್ರೇಡ್ ಯೂನಿಯನ್ ಕಾಂಗ್ರೆಸಿನವರು ರಾಜಕೀಯ ಕೈದಿಗಳ ಕೇಳಿಕೆಗಳ ದಿನಾಚರಣೆಯ ಸಂಬಂಧ ಪೆರವಣಿಗೆ, ಸಭೆ ಇತ್ಯಾದಿಗಳನ್ನು ನಡೆಸುವರೆಂದು ತಿಳಿದುಬಂದ ಕಾರಣ ಮಂಗಳೂರಿನ ಪೋಲಿಸ್ ಸರ್ಕಲ್ ಮತ್ತು ನಗರದೊಳಗೆ ತಾ20-8-49ರಿಂದ ಮುನಪ 15ದಿವಸಗಳ ವರೆಗೆ 144ನೆ ಕಲಮನ್ನು ಮುಂದುವರಿಸಲಾಗಿದೆ.

ಮಂಗಳೂರು ವಕೀಲರ ಗುಮಾಸ್ತರ ಸಂಘದಮಹಾಸಭೆಯು ತಾ. 21ರಲ್ಲು ಶ್ರೀ ಎಮ್. ಮಂಗೇಶಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರುಷದ ಬಗ್ಗೆ ಅಧಿಕಾರಿಗಳ ಚುನಾವಣೆ ನಡೆದು ಶ್ರೀ ಬೋಳೂರು ವೆಂಕಟನಾಯರು ಅಧ್ಯಕ್ಷರಾಗಿಯೂ ಶ್ರೀ. ಡಿ. ನಾರಾಯಣ ಭಟ್ಟರು ಕಾರ್ಯದರ್ಶಿಗಳಾಗಿಯೂ ಶ್ರೀ ಎಸ್. ಕೇಶವನಾಯ್ಕರು ಖಜಾನ್ಜಿಯಾಗಿಯೂ ಆರಿಸಲ್ಪಟ್ಟರು.

ಅಭಿವಂದನೆ ದ. ಕ. ಜಿಲ್ಲಾ ಪಂಡಿತ ಸಂಘದ ಮಹಾಸಭೆಯು ತಾ 21ರಲ್ಲು ಶ್ರೀ ಸೇಡಿಯಾಪು ಕೃಷ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳ ಸ್ವಾಗತ, ವರದಿವಾಚನಗಳಾದ ಮೇಲೆ ಆಸ್ಥಾನ ಕವಿ ಶ್ರೀ ಎಮ್. ಗೋವಿಂದ ಪೈಗಳನ್ನು ಆಭಿನಂದಿಸುವ ಮತ್ತು ಬಿ. ಒ. ಎಲ್. ಆಗಿ ಬಿ. ಟಿ ತರಬೇತಿ ಹೊಂದಿದವರು ಬಿ. ಟಿ. ಯಲ್ಲಿ ತ ಜ್ಞತೆಪಡೆದ ವಿಷಯಗಳನ್ನು ಹ್ಯಾಸ್ಯಾಲು ತರಗತಿಗಳಿಗೆ ಕಲಿಸುವಂತಾಗಬೇಕೆಂದು ವಿದ್ಯಾಂಗದ ಅಧಿಕಾರಿಗಳನ್ನು ಕೇಳಿಕೊಳ್ಳುವ ನಿರ್ಣಯಗಳನ್ನು ಮಂಜೂರಾದುವು.

ಕೃ. ವಾ. ಎಮ್. ನಿ ಶಾಸ್ತ್ರಿಗಳು.

ಆಖಿಲ ಕರ್ನಾಟಕ ಹಾಗೂ ದ. ಕ. ಜಿಲ್ಲೆಯ ಆಯುರ್ವೇದ ವೈದ್ಯರಲ್ಲಿಗಣನೀಯ ಸ್ಥಾನವನ್ನು ಪಡೆದು ಜನತಾಜನಾರ್ದನನ ಸೇವೆಯನ್ನು ಸಹಿತ ಸಲ್ಲಿಸುತ್ತ ಬಂದಿದ್ದ ಸುಪ್ರಸಿದ್ಧ ಶ್ರೀ. ಎಮ್. ನಿ. ಶಾಸ್ತ್ರಿಗಳು ತಾ. 22-8-49ನೇ ಸೋಮವಾರ ತನ್ನ 69ನೆ ವಯಸ್ಸಿನಲ್ಲಿ ಹೃದಯಸ್ಥಂಭನದಿಂದ ಕೈಲಾಸವಾಸಿಗಳಾದರೆಂಬುದನ್ನು ತಿಳಿಸಲು ತುಂಬಾ ವ್ಯಸನವಾಗುತ್ತದೆ. ದ. ಕ. ಜಿಲ್ಲೆಯಲ್ಲಿ ಆಯುರ್ವೇದದ ಮಹತ್ವವನ್ನು ಪ್ರಚಾರಪಡಿಸಿದವರಲ್ಲಿ ಶ್ರೀ ಶಾಸ್ತ್ರಿಗಳು ಪ್ರಥಮ ಶ್ರೇಣಿಯ ಪ್ರಥಮಸ್ಥಾನ ಪಡೆದವರೆಂದರೆ ಅತಿಶಯೋಕ್ತಿಯಾಗಲಾರದು ಕೈಲಾಸವಾಸಿಗಳು ಬರೀ ಧನಾರ್ಜನೆಯ ದೃಷ್ಟಿಯನ್ನಿಟ್ಟುಕೊಳ್ಳದೆ ಬಡಜನರ ಸೇವಾ ನಿರತರಾಗಿದ್ದರು. ಇಂತಹ ಮಹಸ್ಸೀಯರ ಅಗಲುವಿಕೆಯಿಂದ ದ ಕ. ಜಲ್ಲೆಯು, ಹೆಜ್ಜೇಕೆ, ಆಖಿಲ ಕರ್ನಾಟಕವೇ ಆಯುರ್ವೇದ ರತ್ನವೊಂದನ್ನು ಕಳಕೊಂಡಂತಾಯಿತು. ದಿವಂಗತರ ದಿವ್ಯಾತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಬಂಧುಬಳಗದವರಿಗುಂಟಾದ ಶೋಕದಲ್ಲಿ ಸಹ ಸಂತಾಪವನ್ನು ಸೂಚಿಸುವೆವು.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಜೀವವಿಮೆಗಾಗಿ
ವಿಚಾರಿಸಿರಿ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್ ಪಿಟಿ ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ
ಚಿದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟು
ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ಶಾಖೆ:
ಕೆ.ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ:
"ಯುನ್ಯಾಟಿಡ್ ಇಂಡಿಯಾ ಲ್ಯಾಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

Notice.

In the matter of the Canara Forest and Farms Ltd (In liquidation)

Notice to the creditors of the above company top rove their debts:—

Please take notice that the Liquidator of the above Company has fixed 18th day of September 1949 as the day for proof of debts of the Company. The creditors of the Company who desire to participate in the distribution of the assets of the Company must prove their debts before the Liquidator on 18-9-'49 between 10 A. M. to 5 P.M. in his office at Karkal. The creditors who do not prove their debts will be disentitled to participate in the assets of the Company.

(*Sd*) **N. M. Adyanthaya.**
Liquidator,
Canara Forest & Farms Ltd.
Karkal.
28—8—'49

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

R. E. P. 147/1949. O. S. 264/1948

ದೇಜುಪೂಜಾರಿ. ಪರ್ಮಾದಿ ಹೆಂಗ್ಸಿನಮಗ. ಕಾರ್ಕಳತಾಲ್ಲ್ಯ ಕೊಳ್ಕೆ ಇರ್ವತ್ತೂರು ಗ್ರಾಮದ ಗರಡಿ ಮನೆಯಲ್ಲಿರುವವ-

ಅರ್ಜಿದಾರ [ಪಾದಿ]

ಮತ್ತು

ರಘುರಾಮ ಕಾಮ್ಯ-ಸಾಣೂರು ಗಣಪತಿಯಾನೆ ಗೋವಿಂದ ಕುಡ್ವರ ಮಗ. ಕಾರ್ಕಳ ತಾಲ್ಲ್ಯ. ಬೆಳುವಾಯಿಗ್ರಾಮದ ಕೆಸರುಬೈಲು ಯೆಂಬಲ್ಲಿ. — ಎದ್ರಿ [ಪ್ರತಿವಾದಿ]

ಸದ್ರಿ ಎದ್ರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಮೇಲ್ಕಂಡ ದಿಕ್ಕಿ ಅವ್ವಜ್ಜಾರಿಮಲ್ತಿ ಅರ್ಜೀದಾರನು ಎದ್ರಿಯ ವಳತನ ಕುಟುಂಬದ ಹಕ್ಕಿನ ಬಾಬ್ತು ಸ್ಥಿರಾಸ್ತಿಜಪ್ತಿಗೆ ಅಪೇಕ್ಷಿಸಿದ್ರಿ ಎದ್ರಿಗೆ ಪ್ರೋಹಿಬಿಟರಿಆರ್ಡರ್ ಹುಕುಂ ಆಗಿ(Substitute Service ಪ್ರಕಾರ) ತನ್ನಿ ಬಗ್ಗೆ ಇವೇ ತಾ 2-9-49ಕ್ಕೆ ಯಿಡೋಣಾಗಿಯಿದೆ. ಆದ್ರಿಂದ ಸದ್ರಿ ತಾರೀಕಿಗು ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಪಡಿಸತಕ್ಕದ್ದು. ತಪ್ಪಿದಲ್ಲಿ ಕೋರ್ಟಿನವರಿಗೆ ಯುಕ್ತವೋದುವಂತೆ ಮುಂದಿನಿಲಾಗುವುದು. ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗಿಯಿದೆ.

Sd **K Venkatesha Pai**
ಆರ್ಜಿದಾರನ ಕಡೆ ವಕೀಲ.

ಕಾರ್ಕಳ.
ತಾ 15-8-49.

ದ. ಕನ್ನಡ

ಕಾಸರಗೋಡು ತರಬೇತಿಶಾಲೆ:– ಜಿಲ್ಲೆಯ ಗಂಡಸರ ಮೂರು ಹಾಯರ್‌ಗ್ರೇಡ್ ಉಪಾಧ್ಯಾಯರುಗಳ ತರಬೇಕಿ ಶಾಲೆಗಳಲ್ಲಿ ಉಡುಪಿ ಮತ್ತು ಮಂಗಳೂರು ಶಾಲೆಗಳಲ್ಲಿ ವಿದ್ಯಾರ್ಥಿಗಳು ಭರ್ತಿಯಾಗಿ, ಈ ವರ್ಷ ಹೊಸತಾಗಿ ತೆರೆದ ಕರಬೇತಿ ಶಾಲೆಯಾದ ಮಾಯಿಪಾಡಿಯಲ್ಲಿ ಕೆಲವು ಸ್ಥಾನಗಳು ಖಾಲಿಇರುತ್ತವೆ ಎಂದು ತಿಳಿದುಬರುತ್ತದೆ.

ಕುಂಬಳೆ:– ಮೊಗ್ರಾಲಿನಲ್ಲಿ ಹುರಿಹಗ್ಗ ಗುಡಿ ಕೈಗಾರಿಕೆಯನ್ನು ಪ್ರಸಾರಮಾಡಲು ಒಬ್ಬರು ಸ್ತ್ರೀ ಇನ್ಸ್‌ಪೆಕ್ಟೆಸ್ಸನ್ನು ನೇಮಿಸಲಾಗಿದೆ

ಬೇಳೂರು:– ತಾ 20-8-'49ನೇ ದಿನ "ಸಸಿದಿನಾಚರಣೆ"ಯು ಶ್ರೀ. ಎಸ್. ಎಸ್. ಬೇಳೂರ ಇವರ ಅಧ್ಯಕ್ಷತೆಯಲ್ಲಿ ಬೇಳೂರು ಬೋರ್ಡುಶಾಲಾ ವರಾಂಡದಲ್ಲಿ ನೆರವೇರಿಸಲ್ಪಟ್ಟಿತು. ಶಾಲಾ ಅಧ್ಯಾಪಕರೂ, ಊರ ಪ್ರಮುಖರೂ ಈ ಕಾರ್ಯದಲ್ಲಿ ಭಾಗವಹಿಸಿದ್ದರು.

ಕರಿಮಂಜೇಶ್ವರ:– ತಾ 19-8-49ರಂದು ಕರಿಮಂಜೇಶ್ವರ ಶಾಲಾ ವರಾಂಡದಲ್ಲಿ ಸಸಿನೆಡುವ ದಿನಾಚರಣೆಯು ಶ್ರೀ. ಆರ್‌ಹೊಳೆ ನಾಗಪ್ಪಮಂಜರ ಅಧ್ಯಕ್ಷತೆಯಲ್ಲಿ ಜರಗಿತು. ಕಂಬದಕೋಣೆ ಸಂಜೀವರಾಯರು ಸಸಿನಾಟ್ಟಿಹದ ವಿಷಯದಲ್ಲಿ ಕೆಲವು ಮಾತುಗಳನ್ನಾಡಿದರು. ಆ ಮೇಲೆ ಸಿಹಿಹಂಚಲಾಯಿತು. ಹೀಗೆ ಸಭೆಯು ಮುಕ್ತಾಯವಾಯಿತು.

ಕೊಕ್ಕರ್ಣೆ:– ಇದೇ ಆಗೋಸ್ತು 15ರಲ್ಲು ಸ್ವಾತಂತ್ರ್ಯ ದಿನಾಚರಣೆಯು ಕೊಕ್ಕರ್ಣೆ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಡಾ: ರಾಜುಬೋಂಟ್ರನವರ ಅಧ್ಯಕ್ಷತೆಯಿಂದ ಜರುಗಿತು. ಸಭೆಯಲ್ಲಿ ಡಾ: ಸಂಕಶೆಟ್ಟು, ಸದ್ರಿ ಶಾಲಾ ಉಪಾಧ್ಯಾಯರಾದ ಶ್ರೀ.ಲಕ್ಷ್ಮೀನಾರಾಯಣರಾಯರುಮತ್ತು ಶ್ರೀ.ವಿಠ್ಠಲಶೆಟ್ಟಿ ಭಾಷಣವಿತ್ತರು. ಮಕ್ಕಳಿಗೆ ಸಿಹಿತಿಂಡಿ ವಿತರಣವಿತ್ತು. ಮತ್ತು ತಾ 18ರಲ್ಲು ಸೆಸಿದಿನಾಚರಣೆಯು ಡಾ: ಪಸಂತಶೆಟ್ಟಿ ಅಧ್ಯಕ್ಷತೆಕುಲ್ಲಿ ಸದ್ರಿ ಶಾಲೆಯಲ್ಲಿಯೇ ಯಶಸ್ವಿಯಾಗಿ ಜರುಗಿತು. ಡಾ: ರಾಜುಬೋಂಟ್ರರೇ ಮೊದಲಾದವರು ಭಾಷಣವಿತ್ತರು.

ಆರಂಭ ಕಾಲದಲ್ಲಿ ವಿದೇಶ ಸಂಬಂಧ, ದೇಶ ಸಂರಕ್ಷಣೆ, ಸಂಚಾರ ಪಡವಾಟು ಸಂಬಂಧಗಳು ಮತ್ತು ಈ ವಿಭಾಗಗಳಿಗೆ ದೇಕಾದಷ್ಟೇ ಹಣ ಕಾಸಿನ ಅಧಿಕಾರ ವುಳ್ಳ ಕೇಂದ್ರದ ಹಾಗೂ A.B C. ಎಂಬ ಮೂರು ಪ್ರಾಂತಿಕ ಗುಂಪುಗಳ ಹಾಗೂ ಕೇಂದ್ರ ಸಂಬಂಧದ ಶಾಸನಗಳ ತಯಾರಿ ಕೆಲಸ ಮಾತ್ರ ಈ ಘಟನಾ ಸಮಿತಿಯ ಮುಂದಿದ್ದಿತು. ಮುಸ್ಲಿಮರ ಮತ್ತು ಇತರ ಅಲ್ಪ ಸಂಖ್ಯಾಕ ಸಮಾಜಗಳವರ ಅನುಮತಿ ವಿನಹ ಇಂತಹ ಶಾಸನ ತಯಾರಿ ಸಬಾರದೆಂಬ ಕೆಲವು ನಿರ್ಬಂಧಗಳೂ ಇದ್ದುವು. ಪ್ರಾರಂಭದ ಕೆಲವು ಅಧಿವೇಶನಗಳು ಮುಸ್ಲಿಂ ಲೀಗ್ ಸದಸ್ಯರಿಲ್ಲದೇನೇ ನಡೆದಿದ್ದುವು. ಪಾಕಿಸ್ತಾನವಾಗದೆ ಅನೇ ಸ್ಥಿತಿ ಮುಂದುವರಿಯುತಿದ್ದರೆ ಘಟನಾ ಸಮಿತಿಯು ಒಂದೊಂದು ತೀರ್ಮಾನಕ್ಕೆ ಬರಬೇಕಾದರೇನೇ ಎಷ್ಟು ಸಮಯ ಹಿಡಿಯುತಿತ್ತೋ— ಅಥವಾ ಯಾವುದೇ ತೀರ್ಮಾನ ಸಾಧ್ಯವಾಗುತಿತ್ತೋ ಇಲ್ಲವೋ— ಹೇಳುವದಸಾಧ್ಯ. ಆದೂ ಕೇಂದ್ರಾಧಿಕಾರದ ಎರಡು ಮೂರು ವಿಷಯುಗಳ ಮಟ್ಟಿಗೆ ಮಾತ್ರ. ಅಸ್ಥಿರತೆ, ಅಪನಂಬಿಕೆಗಳೇ ಸರ್ವ ವಿಭಾಗಗಳಲ್ಲೂ ಮೂಡಿ ತೋರುತಿದ್ದುವಲ್ಲದೆ, ಸ್ಪಷ್ಟತೆ ಮತ್ತು ಪ್ರಗತಿ ಸಾಧನೆ ಅಸಾಧ್ಯವಾಗುತಿತ್ತು. ಇಂದಿನಂತೆ ಭಾರತವನ್ನು ಜಾತ್ಯತೀತ ಜನತಾರಾಜ್ಯವಾಗಿ ನಿರ್ಮಿಸುವುದು ಅಸಾಧ್ಯವಾಗುತಿತ್ತು; ಪ್ರತ್ಯೇಕ ಮತಿದಾನ ಸದ್ಧತಿ ಮತ್ತು ಕಾದಿಟ್ಟ ಸ್ಥಾನಗಳನ್ನು ರದ್ದು ಪಡಿಸಿಕೊಳ್ಳಲಾಗುತ್ತಿರಲಿಲ್ಲ; ಕೇಂದ್ರಾಧಿಕಾರವನ್ನು ಇಷ್ಟೊಂದು ಸುದೃಢ ಮತ್ತು ಸರ್ವ ವ್ಯಾಪಿಯಾಗಿ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಪಾಕಿಸ್ತಾನವು ಪ್ರತ್ಯೇಕವಾಗಿ ಹೋದುದರಿಂದ ಈ ಕಾರ್ಯ ಮಾಡಲಸಾಧ್ಯವಾಗುವ ನಿರ್ಬಂಧಗಳೂ ಮಾಯವಾಯವು, ಆಶಂಕೆಯುವವರೂ ಆ ಕಡೆಗೆ ಹೊರಟು ಹೋಗಿದರು. ಆ ಮೇಲೆ ಸಬಲ ಕೇಂದ್ರ ರಚನೆಗಾಗಿ--ಜಾತ್ಯತೀತ ಜನತಾ ರಾಜ್ಯಧಾರಕ್ಕಾಗಿ--ರಾಜ್ಯಾಂಗಗಳೆಲ್ಲವೂ ನಿರಾತಂಕವಾಗಿ ನಿರ್ವಿಕಾರ ಬುದ್ಧಿಯ ಪರಿಶೀಲನೆಯೊಂದಿಗೆ ನಡೆಯುತ್ತಾ ಬಂದುವು. ಪ್ರಾಂತ್ಯಗಳ ಪಾಲಿನ ಕೆಲವು ಅಧಿಕಾರಗಳನ್ನು ಕೇಂದ್ರದ ವಶಪಡಿಸಿರುವ ಇಂದಿನ ನವ ರಾಜ್ಯಾಂಗ ಶಾಸನದ ನಿಭಾಗಗಳು ನ್ಯಾಯವೇ ಎಂಬ ಕುರಿತು ಕೆಲವು ದೂರದೃಷ್ಟಿಯ ವಿಚಾರಿಗಳೂ, ಸಾಧಾರ ವಿಂಕೆಗಳನ್ನು ವ್ಯಕ್ತಪಡಿಸುತಿದ್ದಾರೆ. ಅಂತೆಯೇ ಪ್ರಾಂತಿಕ ಶಾಸನ ಸಭೆಗಳ ಸದಸ್ಯರೂ ಜನ ಸಂಖ್ಯೆಯ ಹತ್ತು ಲಕ್ಷ ಮಂದಿಗೊಬ್ಬನಂತೆ ತಾವೇ ಆರಿಸಿ ಳುಹಿದ ಸದಸ್ಯರಿಂದಲೇ ಈ ಘಟನಾ ಸಮಿತಿ ರೂಪುಗೊಳ್ಳುವ ಬದಲಿಗೆ ನೇರವಾಗಿ ಜನತೆಯಿಂದು ರಿಸಿಪ್ಪಟ್ಟವರು ರಾಷ್ಟ್ರದ ಭವಿಷ್ಯ ನಿರ್ಮಾಪಕರಾಗಿ ಅಲ್ಲರಬೇಕಿದ್ದಿತೆಂಬ ನ್ಯಾಯೋಚಿತ ವಾದವೂ ಇವೆ. ಆದರೂ ಕಾಲ, ವಿದ್ಯಮಾನಗಳಿಗನುಸಾರವಾಗಿ, ಈ ಘಟನಾ ಸಮಿತಿಯ ರೂಪರೇವೆ ಮತ್ತು ಕಾರ್ಯಧೋರಣೆಗಳು ಹೆಚ್ಚಿನಂದ ಸನ್ನಾನ್ಯವೆಂಬುದರಲ್ಲಿ ಸಂದೇಹವಿಲ್ಲ.

The Maharashtra Apex Bank Limited,

UDIPI.

NOTICE

Is hereby given that the Register of Members and share Transfer Books of the Bank will remain closed from 18th September, 1949 to 18th October, 1949. (both days inclusive).

(By Order)

Ramanjaneya Buildings, UDIPI, Date: 1st September, 1949.

(Sd.) U. A. Pai, Managing Director.

ಜಾಗತಿಕ ಶಾಂತಿಗೆ ಧಕ್ಕೆ ಸ್ಥಳಗಳು-

ಜಾಗತಿಕ ವಿದ್ಯಮಾನಗಳೆಲ್ಲವೂ ಹೆಚ್ಚಿನಂಶ ಇದ್ದಂತಿವೆ. ಆದರೆ ಅವುಗಳ ಚಟುವಟಿಕೆಗಳಲ್ಲಿ ಒಂದು ರೀತಿಯ ವಿಶೇಷ ಚುರುಕುತನ ಕಂಡುಬಂದಿದೆ. ಇಂತಹ ತೀವ್ರ ಚಲನವಲನದಲ್ಲಿ ಲೋಕ ಶಾಂತಿಯ ಅಪಾಯ ಸೂಚನೆ ಸ್ಪಷ್ಟವಾಗಿ ಗೋಚರಿಸುತ್ತಿದೆ ಹೊರತು ಪ್ರಗತಿ ಚಿಹ್ನೆ ಕಂಡುಬರುವಲ್ಲ. ಎಲ್ಲವನ್ನೂ ಮತ್ತೊಮ್ಮೆ ಸೂಕ್ಷ್ಮವಾಗಿ ಪರಿತೀಲಿಸಿದರೆ, ಈಗಿನ ವಿಧಾನಗಳಿಂದ ಜಾಗತಿಕ ಶಾಂತಿ ಸ್ಥಾಪನೆಯಾಗುವದು ಅಸಾಧ್ಯ; ಆದಕ್ಕಾಗಿ ಯಾವುದಾದರೊಂದು ಹೊಸ ಪ್ರಬಲ ಹಸ್ತವೇ ತೋರಬೇಕು' ಎಂದು ಮತ್ತೊಮ್ಮೆ ಬಯಸಬೇಕಾಗುತ್ತದೆ.

ಹೋರಾಟ ರಂಗ

ಜೈನಿದ ಹೋರಾಟವು ಕಮ್ಯೂನಿಸ್ಟ್ ಸೈನ್ಯಗಳಿಗೆ ಗಣನೀಯ ವಿಜಯ ದೊರಕಿಸಿಕೊಡುತ್ತಾ ದಕ್ಷಿಣ ಜೈನಾ ರಂಗವಲ್ಲಿ ಅತ್ಯಂತ ಬಿರುಸಾಗಿ ಸಾಗುತ್ತಿದೆ. ರಾಷ್ಟ್ರೀಯ ಸರಕಾರದ ಈಗಿನ ರಾಜಧಾನಿಯಾದ ಕೇಂಟನ್ ನಗರವನ್ನು ಹಿಡಿದುಕೊಳ್ಳಲು ಕಮ್ಯೂನಿಸ್ಟ್ ಸೈನ್ಯಗಳೀಗ ಆಯಕಟ್ಟಿನ ಸ್ಥಳಗಳನ್ನು ಹಿಡಿದುಕೊಳ್ಳುತ್ತಾ ಮುಂದೂತ್ತುತ್ತಿವೆ. ಮುಂದಾಗಿ ಗೂರಿಲ್ಲಾ ಸೇನೆಗಳನ್ನು ಕಳುಹಿಸಿ, ಸರಕಾರದ ಸರಬರಾಯಿ ಜೋಡಣೆ ಹಾಗೂ, ರಕ್ಷಣಾ ನಿರ್ವಾಣಗಳನ್ನು ಧ್ವಂಸಪಡಿಸಿ, ಬೆನ್ನು ಹಿಡಿದುಕೊಂಡು ಕಮ್ಯೂನಿಸ್ಟ್ ಕ್ರಮಬದ್ಧ ಸೇನೆ ಬರುವಾಗ, ಅಲ್ಲಿ ಅವುಗಳನ್ನು ತಡೆಗಟ್ಟುವಂತಹದಾವುದೂ ಇಲ್ಲದಂತಹ ದೃಶ್ಯ ಕಾಣುತ್ತಿದೆ. ಇನ್ನೇನು, ಒಂದೂವರೆ ವಾರದೊಳಗೆ ಕೇಂಟನ್ ನಗರವು ಕಮ್ಯೂನಿಸ್ಟರ ಬಗಲೊಳಗೆ ಬೀಳಬಹುದೆಂದು ನಿರೀಕ್ಷಕರನ್ನು ತಿಳಿದ್ದಾರೆ. ಅಕ್ಟೋಬರದ ವರೆಗೂ ಉದನ್ನು ರಕ್ಷಿಸಿಕೊಳ್ಳುವಷ್ಟು ಸೇನಾ ಬಲ ತಮಗಿದೆಯೆಂದು ಚಿಯಾಂಗ್ ಕೈ ಶೇಕ್ ಸರಕಾರೀ ಕಡೆಯವರನ್ನು ತಿಳಿಸಿದ್ದಾರೆ. ಕೇಂಟನನ್ನು ವಶಪಡಿಸಿಕೊಂಡು ಸೇನಾ ಭದ್ರತೆ ಸ್ಥಾಪಿಸಿದ ಮೇಲೆ ಕಂಪು ಸೇನೆಯು ಮುಂದಿನ ಹೆಜ್ಜೆಯೇ ಬ್ರಿಟಿಷ್ ಅಡಳಿತೆಯಲ್ಲಿರುವ ಹೋಂಗ್ ಕೋಂಗಿನ ಮೇಲೆಂಬ ನಿರೀಕ್ಷೆಯಿದೆ; ಅಥವಾ ಫೋರ್ಮೋಸಾ ಮತ್ತು ಹೈನಾನ್ ಗಳ ಮೇಲೆ ಬೀಳಲೂ ಬಹುದು. ಹೋಂಗ್ ಕೋಂಗಿನ ಥಾಳಿನಿರೀಕ್ಷೆಯಿಂದ ಅಲ್ಲಿಯ ಬ್ರಿಟಿಷ್ ಸೇನಾನಿ ಲೆಫ್ಟಿನೆಂಟ್ ಜನರಲ್ ಫೆಸ್ಟಿಂಗರು ವಿಶೇಷ ಕಾಲ್ಬಲ, ನಾವೆ, ವಿಮಾನಬಲಗಳನ್ನು ಅಮದುಪಡಿಸಿಕೊಂಡು ಸುದೃಢ ರಕ್ಷಣಾವ್ಯವಸ್ಥೆ ಮಾಡಿಕೊಂಡಿದ್ದಾರೆ. ಕಳದ ಯುದ್ಧ ಕಾಲದಲ್ಲಿ ಲಂಡನ್ ನಗರದ ರಕ್ಷಣೆಗಾಗಿ ಮಾಡಿಕೊಂಡಿದ್ದಂತಹ ಪ್ರಬಲ ಸಿದ್ಧತೆಗಳೇ ಈಗ ಹೋಂಗ್ ಕೋಂಗಿನಲ್ಲಾಗಿವೆ. ಜೈನೀ ಕಮ್ಯೂನಿಸ್ಟರ ಸರ್ವಸೇನಾ ನಾಯಕರಾದ ಲಿನ್ ಪಿಯಾವೋ ಸಮೀಪದ ಸಹಾಯವಲ್ಲವಾದರೆ ಜೈನೀ ಕಮ್ಯೂನಿಸ್ಟ್ ವಿಜಯ ಅಸಾಧ್ಯವಾಗುತಿತ್ತು. ಸದ್ಯದಲ್ಲೇ ಅಖಿಲ ಜೈನವು ಸ್ವತಂತ್ರಗೊಳ್ಳುವದು. ಹೊಸ ಹಾಗೂ ಪ್ರಬಲ ಸ್ವತಂತ್ರ ಜೈನವನ್ನು ಸ್ಥಾಪಿಸುವದೇ ನವ್ಯ ಮುಖ್ಯ ಗುರಿ. ಈ ಗುರಿ ಸಾಧನೆಗಾಗಿ ನಾವು ಎಲ್ಲಾ ಅಪ್ರಾಗಲಿಕ ಶೇಷಾಂಶಗಳನ್ನೂ ಸಾಮ್ರಾಜ್ಯ ದಾಹಿಗಳ ಯುಕ್ತಿ ಹೆಂಚಿಕೆಗಳನ್ನೂ ನಿರ್ಮೂಲಿಸಿಕೊಳ್ಳಬೇಕು" ಎಂದು ಘೋಷಿಸಿದ್ದಾನೆ. ಭಾರತದ ಗಡಿಯೊಳಗೆಂಬಂತಿರುವ ಟಿಬೇಟು ಮೂಲತಃ ಜೈನದ ಭಾಗವೆಂದೂ ಟಿಬೇಟ್, ಸಿಂಕಿಯಾಂಗ್, ಹೈನಾನ್ ಮತ್ತು ತಾಯ್‌ವಾನ್ ಸಮೇತ ಜೈನದ ಎಲ್ಲಾ ಭಾಗಗಳನ್ನೂ ಸ್ವತಂತ್ರಗೊಳಿಸಿ, ಜೈನದ ಹಕ್ಕಿನ ಪ್ರತಿಯೊಂದಿಂಚು ಭೂಮಿಯನ್ನೂ ಜೈನೀ ಜನತಾ ರಾಜ್ಯದೊಳಗೆ ಸೇರಿಸಿಕೊಳ್ಳದೆ ತಾವೆಂದಿಗೂ ಸುಮ್ಮನಿರಲಾರೆವೆಂದೂ ಕಮ್ಯೂನಿಸ್ಟರು ಸಾರಿದ್ದಾರೆ.

ಬರ್ಮದ ಮತ್ತು ಗ್ರೀಸಿನ ಅಂತರ್ಯುದ್ಧಗಳು ಯಥಾಪ್ರಕಾರ ಸಾಗಿವೆ. ಬರ್ಮದ ವಿದೇಶ ಮಂತ್ರಿಗಳು ಲಂಡನ್ನಿಗೆ ಹೋಗಿ ಮರಳಿದ್ದಾರೆ. ಅಲ್ಲಿರುವ ಕೆಲವು ಭಾರತೀಯರು ಬಂಡಾಯಗಾರರೊಂದಿಗೆ ಸೇರಿರುವರೆಂದು ಪತ್ರಿಕೆ ಮತ್ತು ಆಕಾಶವಾಣಿ ಮೂಲಕ ನದೆದಿದ್ದ ಪ್ರಚಾರವನ್ನು ಅಲ್ಲಗಳೆದು ಹೇಳಿಕೆಯೊಂದನ್ನು ರಂಗೂನಿನಲ್ಲಿರುವ ಹಿಂದೀ ರಾಯಭಾರಿ ಕಚೇರಿಯು ಕೊಟ್ಟಿದೆ.

ವಿವಾದ ರಂಗ

ಯುಗೊಸ್ಲೇವಿಯದ ಸರಕಾರೀ ನಾಯಕ ಮಾರ್ಷಲ್ ಟಿಟೋ ಮತ್ತು ರಶ್ಯದ ಸರಕಾರಗಳೊಳಗೆದ್ದಿರುವ ವಿವಾದವು ತೀಕ್ಷ್ಣಗೊಂಡು ಘರ್ಷಣೆಯ ಗಡಿ ಸಮೀಪಿಸಿದೆ; ನೆಸ್ಸೀಟಭೀತಿಯೆದ್ದಿದೆ; ಬಾಲ್ಕನಿನಲ್ಲಿ ಪರಸ್ಪರ ಘರ್ಷಣೆಗಳಾರಂಭವಾಗಿ ಅಲ್ಲಿಯ ಶಾಂತಿ ನಿರ್ಮೂಲವಾಗುವದಷ್ಟೇ ಅಲ್ಲ, ಲೋಕ ಶಾಂತಿಗೂ ಧಕ್ಕೆ ಬೀಳುವ ಅಪಾಯ ಕಾಣುತ್ತಿದೆ. ರಶ್ಯಾ ಮತ್ತು ಯುಗೊಸ್ಲೇವಿಯಗಳೊಳಗೆ ಕಳದ ಸುಮಾರು 14 ತಿಂಗಳುಗಳಿಂದಲೂ ಕಠಿಣ ಮನಸ್ತಾಪವೆದ್ದಿದ್ದು ಪ್ಯಾರಿಸಿನಲ್ಲಿ ರಶ್ಯಾ, ಇಂಗ್ಲಾಂಡ್, ಅಮೆರಿಕ, ಫ್ರಾನ್ಸುಗಳ ವಿದೇಶ ಮಂತ್ರಿಗಳ ಸಮ್ಮೇಳನವಾದ ಬೆನ್ನಲ್ಲೇ, ಜೂನ್ ತಾ22ರಿಂದ ಪರಸ್ಪರ ಆರೋಪಿಸಿಕೊಳ್ಳುವ ನಿಷೇಧ ಪತ್ರವ್ಯವಹಾರಗಳು ನಡೆದಿದ್ದುವು. ಮೊದಲೇ ವೈಮನಸ್ಸಿದ್ದ ಸ್ಟಾಲಿನ್- ಟಿಟೋರ ಒಳಸಂಬಂಧವನ್ನು ಚತುರಾಸ್ಫೋಟಿಯ ವಿದೇಶ ಮಂತ್ರಿಗಳ ಸಮ್ಮೇಳನದ ಮುಂಜೆ ಬಂದಿದ್ದ ಒಂದು ಪ್ರಶ್ನೆಯು ತೀರಾ ಕೆಡಿಸಿ ಹಾಕಿತ.. ಯುಗೊಸ್ಲೇವಿಯದ ಗಡಿವ್ಯಾಮ್ಯವಾದ ಸೆಜ್ಲಿವೆಸ್ ಆರಿಂತಿಯವು ಹಕ್ಕು ವ್ಯಕಾರ ಯುಗೊಸ್ಲೇವಿಯದ್ದಾದರೂ ಆದೀನ ಆಸ್ಟ್ರಿಯದ ವಶದಲ್ಲಿದೆ. ಈ ಸಂಬಂಧದ ವ್ಯವಹಾರದಲ್ಲಿ ಮಾರ್ಷಲ್ ಟಿಟೋ, ಬ್ರಿಟನ್, ಅಮೆರಿಕ, ಫ್ರಾನ್ಸುಗಳೊಡನೆ ಒಳಸಂಚು ಹೂಡಿ ರಶ್ಯದ ವಿರುದ್ಧ ಹೊಂಚಿಕೆಯಲ್ಲಿ ಸೇರಿಕೊಂಡಿರುವನೆಂದು ರಶ್ಯದ ಆಪಾದನೆ. ರಶ್ಯವು ತನ್ನ ನ್ಯಾಯಬದ್ಧ ಬೇಡಿಕೆಗೆ ಅಡ್ಡಗಾಲಿಕ್ಕಿತೆಂದು ಟಿಟೋನ ಆರೋಪ. ಆಸ್ಟ್ರಿಯದ ಅಧ್ಯಕ್ಷ ಕಾರ್ಲ್ ರೆನ್ನರ್‌ರಿಗೆ ಮಾರ್ಷಲ್ ಸ್ಟಾಲಿನರು ಒಂದು ಪತ್ರ ಬರೆದು ಆಸ್ಟ್ರಿಯದ ರಕ್ಷಣೆಗಾಗಿ ಸಾಧ್ಯವಿದ್ದ ಸಹಾಯ ಕೊಡಲು ತಾವು ಸಿದ್ಧರಿದ್ದೇವೆಂದು ಹುರಿದುಂಬಿಸಿದ್ದಾರೆ. ಆಸ್ಟ್ರಿಯದ ವಶವಿರುವ ಸ್ಥಳದ ಕುರಿತು ಟಿಟೋನ ಬೇಡಿಕೆಗೆ ಕನ್ನ ಅನುಮೋದನೆಯನ್ನಿಲ್ಲವೆಂದು ರಶ್ಯ ಸಾರಿದೆ. ಬ್ರಿಟನ್, ಫ್ರಾನ್ಸ್, ಅಮೇರಿಕಗಳು ಈ ಕುರಿತು ಮುಂದೇನು ಮಾಡಬೇಕೆಂಬ ಗಾಢ ಯೋಚನೆಗೆಳಗಾಗಿವೆ. ಯುಗೊಸ್ಲೇವಿಯದ ಸ್ವಂತ ಕಾರ್ಯದಲ್ಲಿ ಕೈ ಹಾಕಿ ಬಾಲ್ಟಿಕ್ ಶಾಂತಿಯನ್ನು ಭಂಗಪಡಿಸಬಾರದೆಂದು ರಶ್ಯಕ್ಕೆ ಎಚ್ಚರಿಕೆ ಕೊಡುವ ಆಲೋಚನೆಯನ್ನು ಈ ಪಾಶ್ಚಾತ್ಯ ರಾಷ್ಟ್ರಗಳೀಗ ಮಾಡುತ್ತಿವೆ. ಟಿಟೋನನ್ನು ಕೆತ್ತೆಸೆದೇ ಸಿದ್ಧವೆಂದು ರಶ್ಯವು ನಡುಬಿಗಿದಂತಿದೆ. ಯುಗೊಸ್ಲೇವಿಯದ ಉತ್ತರ ಗಡಿವಲಯದಲ್ಲಿ ಸುಮಾರು 30000 ರಶ್ಯನ್ ಸುಸಜ್ಜಿತ ಸೈನಿಕರೂ 500 ಟ್ಯಾಂಕುಗಳೂ ಜಮೆಯಾಗಿವೆಯೆಂದೂ, ಇವು ಮುನ್ನುಗ್ಗಿದರೆ ಒಂದೇ ದಿನದೊಳಗೆ ಯುಗೊಸ್ಲೇವಿಯದ ರಾಜಧಾನಿ ಬೆಲ್ಗ್ರೇಡನ್ನು ಪ್ರವೇಶಿಸಬಲ್ಲವೆಂದೂ ತಿಳಿದು ಬರುತ್ತದೆ. ಯುಗೊಸ್ಲೇವಿಯವು ಜಾಗತಿಕ ಸಂಘಕ್ಕೆ ದೂರಾದುವ ಸಂಭವವಿದೆ. ಅಂತೂ ಅಲ್ಲಿಯ ವಾತಾವರಣವು ವಿಶೇಷ ಬಿಸಿಯೇರಿದೆ.

ಇಂಡೋನೇಶಿಯ ದಲ್ಲಿ ಸ್ವಧಿಕಾರ ಸ್ಥಾಪಿಸುವ ಸಂಬಂಧವಾಗಿ ದ.ಂಡುಮೇಜು ಸಮ್ಮೇಳನ ಮತ್ತಾದರ ಉಪಾಂಗ ಸಮಿತಿಗಳ ಪರ್ಯಾಲೋಚನೆಗಳು ನಡುತ್ತಿವೆ.

ಮಂಗಳೂರು-ಪ್ರಬುದ್ಧ ಬಂದರಾಗಿ

ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ ಬದಾವಣಾ ಸಮಿತಿಗೆ, ಈ ವಿಷಯದ ಮೇಲೆ, ತಜ್ಞರು ತಮ್ಮ ಅಭಿಪ್ರಾಯಗಳನ್ನೊಪ್ಪಿಸಿರುವರು.

ಸಮಿತಿಯು ಯೋಗ್ಯ ತೀರ್ಮಾನಕ್ಕೆ ಬರುವುದೆಂಬ ವಿಷಯದಲ್ಲಿ ನಮಗೆ ಸಂದೇಹವಿಲ್ಲ.

ಎಲ್ಲಾ ವಿಷಯಗಳನ್ನು ಪರ್ಯಾಲೋಚಿಸಿದಾಗ, ಮಂಗಳೂರೇ ಪ್ರಬುದ್ಧ ಬಂದರವಾಗಿ ಆರಿಸಲ್ಪಡುವುದೆಂದು ನಮ್ಮ ಭರವಸೆ.

ಹಿಂದುಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ
ಸದಾ ಸೇವೆ ಗೈಯುತ್ತಿರುವ,

ಕೆನರಾ ಬ್ಯಾಂಕ್, ಲಿಮಿಟೆಡ್.
ಇವರಿಂದ ಪ್ರಕಟಿಸಲ್ಪಟ್ಟಿದು.

CANARA BANK, LIMITED
Estd: 1906

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ನೋಟೀಸು

ಉಪ್ಪಿ ಡಿ. ಮು ಕೋರ್ಟ್-ನಲ್ಲಿ

ಕ್ರಮನಂಬ್ರ 293/1949

ತೋಸ್ಸೆ ಪಟ್ಟುಕಣಿ . . . . . ವಾದಿ.

ಮತ್ತು

ಜ್ಯಾರೆ ಫೆರ್ನಾಂಡ್ಸಿ ಕೂಡ 3ಜನರು . . . ಪ್ರತಿವಾದಿರು

2ನೇ ಪ್ರತಿವಾದಿ ನೋಬರ್ನಾಕೋಡ್ರಿಬ್ಯಾ. ಎಫ್ರಜಿನ್ ಪೆರ್ನಾಂಡ್ಸಿಸ್ ವಿರುದ್ಧ. 3ನೇ ಪ್ರತಿವಾದಿ ಮೇರಿ ಪೆರ್ನಾಂಡ್ಸಿಬ್ಯಾ. ಎಫ್ರಜಿನ್ ಪೆರ್ನಾಂಡ್ಸಿಸ್ ಮಗಳು. ಇವರೆಲ್ಲರು ಉಡ್ಡಿ ತಾಲೂಕು ಮೂಡುತೋನ್ಸೆ ಗ್ರಾಮದಲ್ಲಿರುವವರು.

ವಾದಿಯ ತಂದೆಯವರಿಗೆ ಪ್ರತಿವಾದಿಯ ಪೂರ್ವಾಧಿಕಾರಿಯು ತಾ 30-10-1946ರಲ್ಲಿ ರಿಜಿಸ್ಟರಿ ಬರಕೊಟ್ಟ ಮೂಲಗೇಣಿಗೆ ಕಾರಣವಾದ ಆಸ್ತಿಗಳ ಪೈಕಿ ದಾವಾ ಆಸ್ತಿಗಳನ್ನು ಪ್ರತಿವಾದಿರು ಅನುಭವನ್ನಿ ಬರುತ್ತಿದ್ದ್ರೂ ಕಳದ ಸರ್ವಧಾರಣೆಯ ಬಾಬ್ತು ಬರತಕ್ಕ ಗೇಣಿ, ಬಡ್ಡಿ ಇವೇಜಿನಲ್ಲಿ ವಾದಿರಿಗೆ ಪ್ಲಸಲು ಬಂದ ಐವೇಜು ರೂ 50-0-0ಕ್ಕೆ ಮಿಕ್ಕ ಐವೇಜು ಗಳನ್ನು ಬರಮಾಡಿಕೊಳ್ಳುವದರ ಬಾಕ್ಕು ಮಾಡಿದ ಮೇಲ್ಕಂಡ ದಾವೆಯು ತಾ 24-9-49ಕ್ಕೆ ತನ್ನಿಗೆ ಇಟ್ಟಿರುವುದರಿಂದ ಸದ್ರಿ ದಿನ ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟಿನಮುಂದೆ ಹಾಜರಾಗಬೇಕಾಗಿಯೂ, ಇಲ್ಲವಾದ್ರೆ ನಿಮ್ಮಗಳನ್ನು ಸದ್ರಿ ದಿನ್ನೆ ಶಿನ್ನಾ ಮಾಡಲಾಗಿ ಬಾವೆಯನ್ನು ಕೀರ್ಮಾನ ಮಾಡಲಾದೀತು ಎಂತ ಈ ಮೂಲಕ ತಿಳಿಸೋಡಾಗುತ್ತದೆ.

Udipi-
5-9-49

K. Vittal Nayak
Vakil for Plff.

ಹೊಂಗ್‌ಕೊಂಗ್, ಟಿಟೊ ಮತ್ತು ಕಾಶ್ಮೀರ.

ಅಶ್ವದ ರಾಷ್ಟ್ರಗಳಗೆಲ್ಲಾ ಮುಖ್ಯವಾಗಿ ಭಾರತಕ್ಕೆ ಬ್ರಿಟನು ಸಂದಾಯಮಾಡಲು ಉಳಿದಿರುವ ಸ್ಟರ್ಲಿಂಗ್ ವ್ಯವಸ್ಥೆಯು ಬ್ರಿಟನಿನ ಇಂದಿನ ಅರ್ಥಿಕ ಮಸ್ಥಿತಿಯಲ್ಲಿ ಅಸಾಧ್ಯವಾಗಿರುವುದರಿಂದ ಆ ಸಂಬಂಧದ ಮಾತುಕತೆಗಳು ಅನೇಕಬಿಕದ ರಾಜಧಾನಿ ವಾಷಿಂಗ್ಟನಿನಲ್ಲಿ ಅಮೇರಿಕ ಮತ್ತು ಬ್ರಿಟನುಗಳೊಳಗೆ ನಡೆದಿವೆ. ಇಲ್ಲಿ ಹಾಜರಂದ್ದು ಭಾರತದ ಹಿತರಕ್ಷಣೆಗಗತ್ಯವುಳ್ಳ ಅನುಭವ, ಸಲಹೆ ಕೊಡಲು ಭಾರತ ಸರಕಾರದ ಅರ್ಥಿಕ ಸಲಹೆಗಾರ ಹಾಗೂ ಅಂತರ್‌ರಾಷ್ಟ್ರೀಯ ಅರ್ಥ ನಿಧಿಯ ಹಿಂದಿ ಗವರ್ನರ್ ಆಗಿರುವ ಸರ್. ಚಿಂತಾಮಣಿ ದೇಶಮುಖರು ಲಂಡನಿಗೆ ಹೋಗಿದ್ದಾರೆ.

ಕಾಶ್ಮೀರ ವಿವಾದ

ತೀರ್ಮಾನಕ್ಕೆ ತ್ರಿಯಾಶಕರವಾಗಿ, ದೀರ್ಘಾವಧಿಯಿಂದ ಕೊಳೆಯುತ್ತಿರುವ ಕಾಶ್ಮೀರ ವಿವಾದವು ಸಂಬಂಧಪಟ್ಟ ಭಾರತ ಮತ್ತು ಪಾಕಿಸ್ತಾನಗಳ ಪಾಲಿಗೆ ಸ್ವಂತ ಹಿತದ ಹಾಗೂ ಸ್ವಾಭಿಮಾನದ ಪ್ರಶ್ನೆಯಾಗಿದ್ದರೆ ಬ್ರಿಟನು, ಅಮೇರಿಕಗಳಿಗೆ ಅದೊಂದು ಅಪಾಯದವಿಷಯವಾಗಿತೋರುತ್ತಿರುವಂತಿದೆ. ಇಂದಿನ ಪ್ರಾಪಂಚಿಕಾಂದೋಲನಗಳ ಪೈಕಿ ಮಹಾಯುದ್ಧದ ಅವಾಯ ನಿರ್ಮಾಣದ ಮಟ್ಟಿಗೆ ಕಾಶ್ಮೀರ ಕ್ಕೆ ಮೂರನೇ ಸ್ಥಾನವಿದೆಯೆನ್ನಬಹುದು. ಈಗ ತೋರುತ್ತಿರುವಂತೆ ಒಂದನೇ ಅವಾಯ ನೆಲೆ ಯುಗೊಸ್ಲೇವಿಯಾ; ಎರಡನೆಯದು ಹೋಂಗ್‌ಕೊಂಗ್; ಮೂರನೆಯದೇ ಕಾಶ್ಮೀರ ಬ್ರಿಟನ್, ಅಮೆರಿಕಗಳ ಹೇಯ ಸಂಬಂಧ ಕಟ್ಟಿಕೊಂಡಿದೆಯೆಂದು ಯುಗೊಸ್ಲೇವಿಯದ ಗಡಿಯಲ್ಲೇ ರಶ್ಯದ ಸೇನಾಚಲನೆಯಾಗುತ್ತಿರುವ ವಾರ್ತೆಯಿದ್ದರೆ, ಬ್ರಿಟಿಷರ ಹೋಂಗ್‌ಕೋಂಗಿಗೆ ಕೆಲವೇ ಮೈಲುಗಳಿರ ನ ವರೆಗೂ ಚೈನೀ ಕೆಂಪು ಸೇನೆ ಮುಂದೊತ್ತಿ ಬಂದಿರುವ ಸುದ್ದಿಯಿದೆ. ಇತ್ತ ಕಾಶ್ಮೀರದ ಸರಹದ್ದಿನಲ್ಲಿ ಭಾರತದೊಳಗೆ ಪ್ರವೇಶಿಸುವ ರಶ್ಯದ ಹಾದಿಯಿರುವುದೂ, ಅಮೆರಿಕಾಧ್ಯಕ್ಷರು ಪಂಡಿತ ನೆಹರುಗಳನ್ನು ಆಮಂತ್ರಿಸಿದಂತೆಯೇ ರಶ್ಯದ ಸ್ಟಾಲಿನರು ವಿಲಿಯಾಖತರನ್ನು ಕರೆದಿರುವುದೂ ಸಾರ್ವಾಭೌಮ ರಾಷ್ಟ್ರಗಳಲ್ಲಿ ತಲೆಸಿಡಿತವನ್ನು ಉಂಟು ಮಾಡಿದೆ. ಕಾಶ್ಮೀರ ಕಲಹದ ಕುರಿತು ಭಾರತ ಮತ್ತು ಪಾಕಿಸ್ತಾನಗಳು ರಾಜಿ ಮಾಡಿಕೊಳ್ಳದಿದ್ದರೆ ಬಲ್ಲಿ ರಶ್ಯದ ಆಟಕ್ಕೆ ಅವಕಾಶ ದೊರಕೀತೆಂಬ ಭೀತಿ ಇಂಗ್ಲಂಡು ಅಮೆರಿಕಗಳಿಗೆ ಬಡಿದಿರಬೇಕು. ಆದ್ದರಿಂದಲೇ ಬ್ರಿಟನಿನ ಪ್ರಧಾನಿ ಆಟ್ಲಿ ಮತ್ತು ಅಮೆರಿಕಾಧ್ಯಕ್ಷ ಟ್ರುಮೇನರು ಕಾಶ್ಮೀರ ಕಮಿಶನಿನ ಇತ್ತೀಚೆಗಿನ ಸಂಧಾನ ಸೂಚನೆಗಳನ್ನು ಒಪ್ಪಿಕೊಳ್ಳಬೇಕೆಂದು ಭಾರತ ಮತ್ತು ಪಾಕಿಸ್ತಾನ್ ಸಂಸ್ಥಾನಗಳೊಡನೆ ವಿಶೇಷ ವಿನಂತಿ ಮಾಡಿಕೊಂಡಿದ್ದಾರೆ. ಜಾಗತಿಕ ಸಂಘದಿಂದ ನೇಮಿಸಲ್ಪಟ್ಟಿದ್ದ ಕಾಶ್ಮೀರ ಕಮಿಶನಿನವರು ಕೊನೆಯ ಸಂಧಾನ ವ್ಯವಸ್ಥೆ ಎಂತಾಕತೆಗಳಿಗಾಗಿ ಥಿಲ್ಲಿಯಲ್ಲಿ ಕರೆದಿದ್ದ ಭಾರತ-ಪಾಕಿಸ್ತಾನ್ ಜತೆ ಸಮ್ಮೇಳನದ ಕಾರ್ಯಕ್ರಮ ನಿರ್ಧಾರಂದಲ್ಲೇ ಅಭೇದ್ಯ ಬಿಕ್ಕಟ್ಟು ತೋರಿ ಬಂದುದರಿಂದ ಕಮಿಶನಿನವರು ಕರೆದ ಸಮ್ಮೇಳವನ್ನು ನಿಲ್ಲಿಸಿಕೊಂಡಿದ್ದರು. ಆದರೆ ಸಂಧಾನ ಪ್ರಯತ್ನವನ್ನು ಅಷ್ಟರಲ್ಲೇ ನಿಲ್ಲಿಸದೆ ಹೊಸ ಶಾಂತಿ ಸೂಚನೆಗಳನ್ನು ಮುಂದಿಟ್ಟಿದ್ದಾರೆ. ಆ ವುಗಳನ್ನು ಅಂಗೀಕರಿಸಿಕೊಂಡು, ಲೋಕ ಶಾಂತಿಗಾಗಿ, ಪ್ರಪಂಚದಲ್ಲೇ ಕಾಶ್ಮೀರದ ಕುರಿತೊಂದು ತೀರ್ಮಾನ ಹೊಂದಬೇಕೆಂದು ಅಮೇರಿಕಾಧ್ಯಕ್ಷ ಟ್ರುಮೇನರೂ ಬ್ರಿಟಿಷ್ ಪ್ರಧಾನಿ ಆಟ್ಲಿಯವರೂ ಭಾರತ ಪ್ರಧಾನಿ ಪಂಡಿತ ನೆಹರುಗಳಿಗೂ ಪಾಕಿಸ್ತಾನ್ ಪ್ರಧಾನಿ ಲಿಯಾಕತ್ ಅಲಿಖಾನರಿಗೂ ಖಾಸಗೀ ಪತ್ರಗಳನ್ನು ಬರೆದಿದ್ದಾರೆ. ಇವು ಕೇವಲ ವಿಜ್ಞಾಪನೆಗಳು.. ಕಾಶ್ಮೀರ ಕಮಿಶನಿನವರು ಮುಂದಿಟ್ಟ ಕೊನೆಯ ಸೂಚನೆಗಳಲ್ಲಿ ಮುಖ್ಯವಾದುದೆಂದರೆ, ಭಾರತ ಮತ್ತು ಪಾಕಿಸ್ತಾನಗಳೊಳಗೆ ಭಿನ್ನಾಭಿಪ್ರಾಯವಿರುವ ವಿಷಯಗಳನ್ನು ಮೂರನೆಯವನಾದ ಓರ್ವ ವ್ಯಕ್ತಿ ಮುಖ್ಯ ವ್ಯಕ್ತಿಯ ತೀರ್ಮಾನಕ್ಕೆ ಬಿಟ್ಟು ಆ ತೀರ್ಮಾನವನ್ನು ಇಕ್ಕಡೆಯವರೂ ಒಪ್ಪಿಕೊಳ್ಳಬೇಕೆಂಬುದೇ. ಕಾಶ್ಮೀರದ ಹೂರ್ವಭಾವೀ ಒಪ್ಪಂದ ವ್ಯವಸ್ಥೆಯಾದ ಮೇಲಿನ ಅಲ್ಲಿಯ ಜನಮತ ಸಂಗ್ರಹಾಡಳಿತೆಯ ನಾಯಕನಾಗಿ ನೇಮಕಗೊಂಡಿರುವ ಎಡ್ಮಿರಲ್ ನಿಮಿಟ್ಸ್‌ರನ್ನೇ ಈ ತೀರ್ಮಾನಾಧಿಕಾರಿಯಾಗಿ ನೇಮಿಸಬಹುದೆಂಬ ಸೂಚನೆಯು ಪೂರ್ವವಾಗಿದೆ. ಈ ಸೂಚನೆಗಳ ಸಂಗತಿಯನ್ನರಿತೇ ಟ್ರುಮೇನ್, ಆಟ್ಲಿಗಳು ಆದನ್ನೆಂಗೀಕರಿಸಿಕೊಳ್ಳಬೇಕೆಂದು ನೆಹರು, ಲಿಯಾಖತರನ್ನು ಕೇಳಿಕೊಂಡಿದ್ದರೆಂದು ತಿಳಿದು ಬರುತ್ತದೆ. ಟ್ರುಮೇನ್ ಆಟ್ಲಿ ವಿನಂತಿಯನ್ನು ತಾವು ಅನುಕೂಲಬುದ್ಧಿಯಿಂದ ಆಲೋಚಿಸುವೆವೆಂದು ಸರ್. ಝಫರುಲ್ಲಾಖಾನರೆಂದಿದ್ದಾರೆ. ಭಾರತದ ಸ್ಥಧಾನ ಮಂತ್ರಿ ಪಂಡಿತ ನೆಹರುಗಳು, ಈಗ ಆರೋಗ್ಯ ಸಂಪಾದನೆಗಾಗಿ ಬೋಬಾಯಿಯಲ್ಲಿ ವಿಶ್ರಾಂತಿ ಸೇವಿಸುತ್ತಿರುವ ಸರ್ದಾರ್ ವಲ್ಲಭಾಯಿಗಳ ಅಭಿಪ್ರಾಯ ಕೇಳಿಕೊಂಡು, ಆ ಮೇಲೆ ಮಂತ್ರಿಮಂಡಲದ ಸಭೆ ಕರೆದು ಯೋಚಿಸಿ, ಬರುವ ವಾರ ಉತ್ತರ ಕೊಡಬಹುದು. ಆಂತೂ ಇತ್ತೀಚೆಗೆ ನಿರಾತಂಕತೆಯ ಕೊನೆಯಗಡಿಗೆ ಮುಟ್ಟಿದ್ದ ಕಾಶ್ಮೀರ ವಿವಾದದ ಕುಲಕು ಟ್ರುಮೇನ್, ಆಟ್ಲಿಗಳು ಕೈಡಾಕಿದ ದೆಸೆಯಿಂದ ಸವೀನ ಆಶ್ಚರ್ಯ ಚಿಗುರಿದೆ. ಮುಂದೇನಾಗುವದೋ ನೋಡಬೇಕು!

ನೆಹರೂ ಸ್ಪಷ್ಟೀಕರಣ

ಆರ್. ಯಸ್. ಯಸ್. ಮೇಲಿನ ಬಹಿಷ್ಕಾರವನ್ನು ರದ್ದುಪಡಿಸಿದ ಕುರಿತು ರಾಷ್ಟ್ರದ ಕೆಲವರಲ್ಲಿ ಅತೃಪ್ತಿ ಹರಡಿದೆಯೆಂಬುದು ಸ್ಪಷ್ಟ. ಕಾಂಗ್ರೆಸ್ ಸರಕಾರವು, ಇದಿರುವಾದಿ ರಾಜಕೀಯ ಪಕ್ಷಗಳು ತಲೆಯೆತ್ತ ಬಾರದೆಂಬ ಧೋರಣೆಯಿಟ್ಟುಕೊಂಡು ಅವುಗಳನ್ನು ದಬಾಯಿಸುತ್ತಿದೆ, ಎಂಬ ಪ್ರಚಾರ ನಡೆದಿರುವುದೂ ಆಪ್ಪೇ ಸ್ಪಷ್ಟವಿದೆ. ಇವೆರಡರ ಮಟ್ಟಿಗೂ ಕಾಂಗ್ರೆಸ್ ನಾಯಕರು ಆನುಚಿತ ಹಾಗೂ ಅನ್ಯಾಯೀ ವರ್ತನೆ ವಹಿಸಿಲ್ಲವೆಂಬುದು ವಿಚಾರಿಗಳಿಗೆ ಸ್ವತಃ ಮಂದಟ್ಟಾಗುವ ವಿಷಯ. ಪಂಡಿತ ನೆಹರುಗಳು ಈ ಸಂಬಂಧದ ಕಾಂಗ್ರೆಸ್ ಧೋರಣೆಯನ್ನು ಇದೇ ತಾ. ೩ರಲ್ಲಿ ಅಲಹಾಬಾದ್ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದಲ್ಲಿತ್ತ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. ಸಾರಾಂಶ ಹೀಗಿದೆ: "ನಮ್ಮ ಸರಕಾರದ ವಿರುದ್ಧವಾಗಿ ಸ್ವರ ವೆತ್ತುವ ಹಾಗೂ ನಮ್ಮ ಧೋರಣೆಯನ್ನು ಟೀಕಿಸುವ ಪೂರ್ಣ ಸ್ವಾತಂತ್ರ್ಯವನ್ನು ಯಾವುದೇ ಪಕ್ಷ ಅಥವಾ ಸಂಸ್ಥೆಗೆ ಒದಗಿಸಿ ಕೊಡುವುದೇ ನಮ್ಮ ಧೋರಣೆಯಾಗಿದೆ. ನಮ್ಮೊಡನವರಿಗೆ ಅಸಮ್ಮತಿ ಬಿದ್ದಲ್ಲಿ, ಅವರ ಅಭಿಪ್ರಾಯವನ್ನು ಪ್ರಕಟಿಸುವ ಸರಿಯಾದ ಸಂದರ್ಭವನ್ನು ನಾವವರಿಗೆ ದೊರಕಿಸಿ ಕೊಡುತ್ತೇವೆ. ಅವರ ಸೂಚನೆಗಳು ನಮಗೆ ಪ್ರಯೋಜನಕಾರಿಯಾಗಬಹುದು. ಫೆಸಿಸ್ಟ್, ಕಿಂಗೋಲಿಳ್ಳ ಆರ್. ಯಸ್. ಯಸ್. ಸಂಸ್ಥೆಯ ಮೇಲಿನ ಬಹಿಷ್ಕಾರ ರದ್ದುಪಡಿಸಿದ ಸರಕಾರದ ವರ್ತನೆಯನ್ನು ತೀವ್ರವಾಗಿ ಖಂಡಿಸಿ, ಮುನ್ನ ಆ ಸಂಸ್ಥೆಯ ಮೇಲೆ ಕಠಿಣ ನಿರ್ಬಂಧ ಹಾಕಬೇಕೆಂದು ಕೇಳಿಕೊಳ್ಳುವ ಪತ್ರವನ್ನು ಅಲಹಾಬಾದಿನ ತರುಣ ಸಮತಿವಾದಿ ಲೀಗಿನವರು ನನಗೆ ತಾನೇ ಒಪ್ಪಿಸಿದ್ದಾರೆ. ಆವರು ಮುಂದಿಟ್ಟ ದೂರುಗಳು ನಿರಾಧಾರವಾದ ವುಗಳಲ್ಲ. ತನ್ನ ಚಟುವಟಿಕೆಗಳನ್ನು ಶಾಂತ ರೀತಿಯಿಂದ ನಡಿಸುವ ಯಾವುದೇ ಪಕ್ಷ ಅಥವಾ ಸಂಸ್ಥೆಯ ಮೇಲೆ ಯಾವುದೇ ಪಕ್ಷ ಅಥವಾ ಸಂಸ್ಥೆಯು ಪ್ರಚಲಿತ ಸರಕಾರದ ವಿರುದ್ಧ ಸ್ವರವೆತ್ತಿದ ಅಥವಾ ಅದರ ಧೋರಣೆಯನ್ನು ಖಂಡಿಸಿದ ಮಾತ್ರಕ್ಕೆ ಸರಕಾರವು ಅದರ ಮೇಲೆ ಬಹಿಷ್ಕಾರ ಹೇರುವಂತಿಲ್ಲ. ಯಾವ ಪಕ್ಷ ವಾದರೂ ರಾಷ್ಟ್ರ ಹಿತಕ್ಕೆ ಧಕ್ಕೆ ಕೊಡಲು ಪ್ರಯತ್ನಿಸಿದರೆ, ಆಗ ಮಾತ್ರ ಸರಕಾರವು ನಿಜಕ್ಕೂ ಹೃತಿಭಟಿಸುವುದು. ಸರಕಾರಕ್ಕೆ ಆರ್. ಯಸ್. ಯಸ್. ಸಂಸ್ಥೆಯೊಡನೇನೂ ಸಾಹಾದರ್ಯತೆಯಿಲ್ಲ. ಆದರೆ ಅವರು ಹಿಂಸಾ ವಿಧಾನವನ್ನು ಅಂಗೀಕರಿಸದೆ ಶಾಂತ ರೀತಿಯಿಂದ ವರ್ತಿಸುವವರೆಗೆ, ನೇಲಿನ ಕಾರಣಕ್ಕಾಗಿಯೆ ಆ ಸಂಸ್ಥೆಯ ಮೇಲೆ ನಿಬಂಧ ಹಾಕಲಾಗುವದಿಲ್ಲ. ಹಿಂದೂ ಸಂಸ್ಕೃತಿ ಅಥವಾ ಹಿಂದೂ ರಾಜ್ಯವೆಂಬ ಎಲ್ಲಾ ಗದ್ದಲಗಳೂ ಕೇವಲ ಕೃತಕಾವೇಶಗಳೆ. ಇಂತಹ ಸಂಕುಚಿತ ಸ್ವಭಾವವನ್ನು ನಾವು ಬಿಟ್ಟುಬಿಡಲೇಬೇಕು.ಲೋಕದ ಬೇರಾವುದರ ಕುರಿತೂ ಈ ದಿನ ನನಗಾವ ಹೆದರಿಕೆಯೂ ಇಲ್ಲ.ಆದರೆ ಭಾರತೀಯ ಜನತೆಯ ಮನಸ್ಸಿನಲ್ಲಿರುವ ಸಂಕುಚಿತ ಭಾವನೆಯೆಂಬುದು ಅತಿ ಭಯಂಕರವಾದ ಸಂಗತಿ. ಭಾರತವು ವೈವಿಧ್ಯತೆಗಳ ಒಂದು ವಿಲಕ್ಷಣ ಏಕರೂಪ. ಈ ಏಕ್ಯತೆಯನ್ನು ನಾವು ಉಳಿಸಿಕೊಂಡು ಬಲಪಡಿಸಬೇಕು. ಇಲ್ಲವಾದರೆ ನಾವು ನಿರ್ನಾಮವಾಗಿ ಹೋಗುವೆವು. ನಿಜ, ಭಾರತದಲ್ಲಿ ಹಿಂದುಗಳೇ ಅತ್ಯಧಿಕ ಸಂಖ್ಯಾಕರು. ಆದರಿಲ್ಲಿ ಮುಸ್ಲಿಮರು, ಕ್ರೈಸ್ತರು, ಪಾರ್ಸಿಗಳು, ಜೈನರೇ ಮೊದಲಾದ ಇತರ ಅಲ್ಪ ಸಂಖ್ಯಾಕರೂ ಇದ್ದಾರೆಂಬುದನ್ನು ನಾವು ಮರೆಯಬಾರದು. ಇಂತಹ ಭಾರತವು "ಹಿಂದೂ ರಾಷ್ಟ್ರ"ವೆಂದು ಭಾವಿಸುವ [illegible] ಸಮಾಜಗಳವರಿಗೆ ಈ ರಾಷ್ಟ್ರದ ನಾಗರಿಕತೆಯು ನೂರಕ್ಕೆ ನೂರರಷ್ಟು ಇಲ್ಲವೆಂಬ ಅರ್ಥವಾಗುವುದು. ಭಾರತವು ಜಾತ್ಯತೀತ ಜನತಾರಾಜ್ಯವೆಂದು ನಾವು ಜಾರಿಗೆ ಮಾಡಿದ್ದೇವೆ. ಆ ಗುಣ ನಡತೆಯನ್ನು ನಾವು ಸುಸ್ಥಿರಪಡಿಸಿಕೊಳ್ಳಬೇಕು. ಇತರ ಸ್ವತಂತ್ರ ರಾಷ್ಟ್ರಗಳಲ್ಲಿರುವಂತೆ ಎಲ್ಲಿಯ ಪ್ರತಿಯೊಬ್ಬ ನಾಗರಿಕನೂ ಪೂರ್ಣ ಸ್ವತಂತ್ರನಿದ್ದಾನೆ."

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadanand Rao Kanfoor,
Manager.

ಚಂದಾದಾರರಲ್ಲಿ-

ಚಂದಾಪಣ ಬಾಕಿಇರುವ ಚಂದಾದಾರರಿಗೆಲ್ಲಾ ಕ್ರಮಪ್ರಕಾರ ಈ ವಾರದಿಂದಲೇ ಪತ್ರಿಕೆಯನ್ನು ವಿ.ಪಿ. ಮಾಡಿ ಕಳಿಸಲು ಸ್ವಾರಂಭಿಸಿರುತ್ತೇವೆ ಅವರೆಲ್ಲರೂ ದಯಮಾಡಿ ವಿ.ಪಿ. ಯನ್ನು ಸಕಾಲದಲ್ಲಿ ಸ್ವೀಕರಿಸಿಕೊಂಡು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted

ನವಯುಗ
ಉಡುಪಿ, ಗುರುವಾರ, ೮-೯-೧೯೪೮

ಮನೋಮಟ್ಟ

ಇದೇ ತಾ. ೫ರಲ್ಲಿ ಅಲಹಾಬಾದಿನಲ್ಲಿ ಭಾಷಣಮೀಯುತ್ತಾ ಭಾರತ ಪ್ರಧಾನಿ ಪಂಡಿತ ನೆಹರುಗಳಂದರು: "ನಾನು ಬೇಚ್ಚಿ ಬೀಳುವಂತಹ ವಿಷಯವಾವುದೂ ಈ ದಿನ ಪ್ರಪಂಚದಲ್ಲಿಲ್ಲ. ಆದರೆ ಭಾರತೀಯರ ಬುದ್ಧಿ ಸಂಕುಚಿತತೆಯೆಂಬುದು ಅತ್ಯಂತ ಭೀಕರ ವಿಷಯ". ಹಿಂದೂ ರಾಷ್ಟ್ರವಾದವನ್ನು ದೃಷ್ಟಿ ಪಥದಲ್ಲಿಟ್ಟು ಕೊಂಡು ಪಂಡಿತಜೀ ಈ ಮಾತನ್ನು ಉದ್ಗರಿಸಿರಬಹುದು. ಭಾರತ ಪ್ರಧಾನಿಯಂತಹ ಅಗ್ರಸ್ಥಾನದಲ್ಲಿರುವವರ ಮನೋಯಿಸುತ್ತಾ ಸಂಕುಚಿತ ಹಿಂದೂವಾದವು ಇಷ್ಟಿದ್ದರೆ, ಸರ್ವ ಸಾಮಾನ್ಯರಿಗೆ ಚುನಾವಣೆಯಂತಹ ಸಂದರ್ಭಗಳಲ್ಲಿ—ಯಾವುದೇ ಸಾರ್ವಜನಿಕ ಕಾರ್ಯದಲ್ಲಿ—ಮಾತ್ಸರವಲ್ಲ, ನಿತ್ಯಜೀವನದಲ್ಲೂ ಜನುಭವವಾಗುತ್ತಿರುವ ಸಂಕುಚಿತ ಸ್ವಭಾವವು ಅತ್ಯಂತ ಕೆಳಮಟ್ಟದ್ದು; ಪ್ರಧಾನಿ ಮತ್ತೋರ್ವ ಸಾಮಾನ್ಯನೊಳಗಿರುವ ಪ್ರೇಂ ಅಂತರವು, ಆ ಪ್ರಧಾನಿಯು ಮತ್ತೋರ್ವ ಸಾಮಾನ್ಯನ ಮನಸ್ಸಿಗೆ ನಾಟುವ ಸಂಕುಚಿತ ಸ್ವಭಾವಗಳೊಳಗೂ ಕಡಿಮೆಯೆನ್ನಬಹುದು ಧಾರ್ಮಿಕವಾದ ದ್ವೇಷ, ಘರ್ಷಣೆಗಳಿಗಿಂತಲೂ ಜಾತಿ, ಒಳಜಾತಿಗಳೊಳಗಿನ ದ್ವೇಷಾಸೂಯೆಗಳು ಕಳತೆಯನೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಇಂತಹ ಜಾತ್ಯಭಿಮಾನಕ್ಕಿಂತ ಧರ್ಮಾಭಿಮಾನವು ಮೇಲ್ಮಟ್ಟದ್ದಿದೆ; ಆದಕ್ಕೂ ಮೇಲ್ತರಗತಿಯದು ರಾಷ್ಟ್ರಭಿಮಾನ. ಸಾಮೂಹಿಕ ಜೀವನ ಮತ್ತು ಸಾರ್ವಜನಿಕ ಕಾರ್ಯಗಳ ಮಟ್ಟಿಗಾದರೂ ರಾಷ್ಟ್ರೀಯತೆಯೇ ಭಾರತೀಯರ ಸ್ವಭಾವವಾಗಿರುತಿದ್ದರೆ, ಅದರ ಕೆಳ ತರಗತಿಗಳಾದ ಇವೆರಡು ಅಭಿವಾನಗಳಿಗೂ ಅವಕಾಶವಿರುತ್ತಿಲ್ಲಿ ಅದರೆ ಈ ವರೆಗೂ ಹಿಂದೀಜನ ಮನೋವೃತ್ತಿಯಲ್ಲಿ ರಾಷ್ಟ್ರೀಯತೆಯು ಸಾಕಷ್ಟು ಬೆರಕೆಗೊಂಡಿಲ್ಲವೆಂಬುದು ನಿಜಕ್ಕೂ ವಿಷಾದನೀಯ, ಮತ್ತು ಆಶ್ಚರ್ಯಕರ. ದೀರ್ಘಾವಧಿ ಗುಲಾಮಗಿರಿಯಲ್ಲಿದ್ದ ರಾಷ್ಟ್ರದಲ್ಲಿ ಗಾಂಧಿಜೀ ಮತ್ತಿತರ ನಾಯಕರು ಜಾಗೃತಿ ನಿರ್ಮಿಸಿರುದು ರಾಷ್ಟ್ರೀಯತೆಯನ್ನು ಪ್ರಜ್ವೋದಿಸಿಯೇ. ಭಾರತಕ್ಕೆ ಸ್ವಾತಂತ್ರ್ಯ ಬೊರೆತುದು ಕಾಂಗ್ರೆಸಿಗರ ಪ್ರಯತ್ನದಿಂದಲೇ ಎಂಬ್ವಾದವನ್ನು, ಆಕ್ಷೇಪಿಸಲಾಗದ ಕೆಲವು ಕಾರಣಗಳಿದ್ದರೂ ಇರಬಹುದು; ಕಾಂಗ್ರೆಸಿನ ಯಾವ ಸ್ವಾತಂತ್ರ್ಯ ಹೋರಾಟವೂ ಗುರಿ ಮುಟ್ಟದ್ದಿಲ್ಲವೆಂದ. ವಾದಿಸಲು ಸಾಧ್ಯವಿದೆ. ಆದರೆ ಮಹಾತ್ಮಾಜೀ ನಾಯಕತ್ವದಲ್ಲಿ ಕಾಂಗ್ರೆಸು ಭಾರತೀಯರಲ್ಲಿ ಸ್ವಾತಂತ್ರ್ಯದೈಶ ದೇಶಾಭಿಮಾನವನ್ನು ನಿರ್ಮಿಸಿತೆಂಬ ವಾದವನ್ನು ಅಲ್ಲಗಳೆಯುವುದು ಯಾರಿಂದಲೂ ಅಸಾಧ್ಯ; ತೋರುವಿಕೆಗೆ ಬೇರೆ ಕಾರಣಗಳು ಇದ್ದರೂ ಕೂಡಾ ಹಿಂದೀಯರ ಈ ರಾಷ್ಟ್ರಭಿಮಾನದಿರಲ್ಲಿ ಅನ್ಯೋನ್ಯಾಯ ನಡೆಯಿದೆಂಬುದರಿಂದಲೇ ಬ್ರಿಟಿಷರು ಭಾರತವನ್ನು ಬಿಟ್ಟರೆಂಬುದೂ ನಿರ್ವಿವಾದ. ಆದರೆ ಇಂತಹ ರಾಷ್ಟ್ರೀಯತೆ ಕೂಡಾ ಗಾಂಧಿಜೀಯ ಸತ್ಯಾಹಿಂಸೆಗಳಂತೆ, ಕೇವಲ ಸ್ವಾತಂತ್ರ್ಯ ಸಾಧನೆ ಉಪಕರಣವಾಗಿತ್ತಲ್ಲದೆ, ಜನತಾ ಸ್ವಭಾವದಲ್ಲಿ ಬೇರೂರಿಲ್ಲವೆಂಬ ಅನುಭವವಾಗುತ್ತಿರುವುದು ನಿಜಕ್ಕೂ ಆಶ್ಚರ್ಯ ಮತ್ತು ದುಃಖದ ಸಂಗತಿ. ಪಂಡಿತ ನೆಹರುಗಳಂತೆ, ಪ್ರಪಂಚದಲ್ಲಿ ಬೇರಾವುದಕ್ಕೆ ಹೆದರದಿದ್ದರೂ ಈ ಮನೋವೃತ್ತಿಗೆ ಹೆದರಲೇ ಬೇಕು! ಮಾನವನ ಕಾಲದಿಂದಲೂ ಜಾತಿ, ಮತ, ಧರ್ಮಗಳೇ ಜನಜೀವನ ರಂಗದಲ್ಲಿ ಪ್ರಾಮುಖ್ಯತೆ ಪಡೆದು ಬಂದಿರುವ ದೇಶ ಭಾರತ; ಈ ಮನೋಸ್ಥಿತಿಯು ಇನ್ನೆಷ್ಟು ಮುರುಟಿಹೋಗುವಂತೆ ಮತ್ತು ಎಂದಿಗೂ ವಿಕಾಸಗೊಳ್ಳದಂತೆ ತಡೆಯಬೇಕೆನ್ನುವುದಾದಲ್ಲಿ ಪರಕೀಯ ಗುಲಾಮಗಿರಿಯ ದೆಸೆಯಿಂದಾಗಿ ಅದಲ್ಲೇ ಕೊಳೆತು ಕೀಯ ಸ್ಥಿತಿಗಿಳಿದಿರಬೇಕು. ಕಾಂಗ್ರೆಸ್ ನಿರ್ಮಿಸಿದ ರಾಷ್ಟ್ರಭಿಮಾನವೆಂಬುದು ಅದಕ್ಕೆ ಕೊಟ್ಟ ಒಪ್ಪ ಮಾತ್ರವಾಯಿತು ಹೊರತು, ಅದನ್ನ ಶಕ್ತಿಕರಿಸಲಾರದೆ ಹೋಯಿತು. ಪರದಾಸ್ಯದೊಂದಿಗೆ ಈ ಒಪ್ಪವೂ ಕಳೆದು ಹೋಗಿ, ಈಗ ಮೂಲ ಸಂಕೋಚ ಬುದ್ಧಿಯು ನಿಜರೂಪದಿಂದ ಪ್ರಕಾಶಗೊಳ್ಳಹತ್ತಿದೆಯೆಂಬ ಭಯವೇಳುತ್ತಿದೆ. ಕೇವಲ ಸ್ವಭಾವ ಬಲದಿಂದಾಗಿ, ಹುಟ್ಟು ಜಾತ್ಯಾಭಿಮಾನದಿಂದಾಗಿ, ಜನತಾವಂಗದಲ್ಲಿ ನಡೆಯುತ್ತಿರುವ ಸಂಚು ಹೆಂಚಿಕೆಗಳನ್ನು ಕಾಣುವಾಗ ಭವಿಷ್ಯದ ಕುರಿತು ದೇಶಾಭಿಮಾನಿಗಳೊಮ್ಮೆ ನಿರಾಶೆಗೀಡಾಗಲೇಬೇಕು. ಕಾಂಗ್ರೆಸ್ ಕ್ಷೇತ್ರವಿರಲಿ, ಇತರ ಸಾರ್ವಜನಿಕ ರಂಗಗಳೇ ಇರಲಿ—ಯಾವ ಹೆಸರು ಹಾಕಿಕೊಂಡರೂ ನಮ್ಮೆಲ್ಲಿ ಹೆಚ್ಚಿನವರು ಗುರಿ ಧೋರಣೆಗಳ ಮುಖವು ಸ್ವಜಾತಿಯ ಕಡೆಗೇನೇ ತಿರುಗುತ್ತಿರುವಂತೆ ತೋರುತ್ತಿದೆ. ಸ್ವತಂತ್ರ ರಾಜ್ಯಭಾರದಲ್ಲಿ ಈ ಮನೋವೃತ್ತಿಯನ್ನು ವಾರ್ಪಡಿಸಬಲ್ಲ ಸಂದರ್ಭಗಳೇಳುವುದು ಅತ್ಯಪರೂಪವಾಗಿ; ಪರಕೀಯರನ್ನೋಡಿಸುವಂತಹ ಸರ್ವರಿಗೂ ಸಮಾನವಾದ ವಿಶೇಷ ಕಾರ್ಯಭಾರವು ಎಲ್ಲರ ಮೇಲೆ ಒಟ್ಟಿಗೆ ಇನ್ನು ಬೀಳಲಿಕ್ಕಿಲ್ಲ. ಎಲ್ಲರ ಲಕ್ಷ್ಯವನ್ನೊಂದುಗೂಡಿಸಿ ಒಂದೆಡೆಗೆ ಯಜಲ್ಲಂತಹ ವಿಶೇಷ ಸನ್ನಿವೇಶಗಳೂದಗಲಾರವು. ಇರುವ ಅಧಿಕಾರಗಳನ್ನು ಅನುಭೋಗಿಸುವ ಕಡೆಗೇನೇ ಲಕ್ಷ್ಯ ಕೊಡುವಾಗ, ಜಾತೀಯತಾ ಮೇಲಾಟಗಳೆದ್ದು ಜಾತೀಯ ದ್ವೇಷಾಸೂಯೆಗಳು ಪ್ರಬಲಿಸುತ್ತಾ ಹೋಗಬಹುದು. ಅಂತಹ ದುಶ್ಚಿಹ್ನೆಗಳೇ ಇಂದು ಚುನಾವಣೆಯಂತಹ ಸಂದರ್ಭಗಳಲ್ಲಿ ಒಡೆದು ತೋರುತ್ತಿವೆ. ಜನತಾ ರಾಜ್ಯಕ್ಕೆ ಈ ಮಾದರಿಯ ಸಂಕುಚಿತ ಸ್ವಭಾವವು ಸತ್ಯಕ್ಕೂ ರಾಹುಪ್ರಾಯವಾಗಬಹುದು. ಸ್ವತಂತ್ರ ಭಾರತವನ್ನು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿ, ಪ್ರತ್ಯೇಕ ಮತದಾನ ಪದ್ಧತಿಯನ್ನು ರದ್ದು ಪಡಿಸಿಕೊಂಡ ಮಾತ್ರಕ್ಕೆ ಭಾರತೀಯರ ಮನೋಮಟ್ಟ ಮೇಲೇರಿತೆಂದು ನಿರೀಕ್ಷಿಸಲಾಗದಲ್ಲ. ಅರ್ಧಿಕ, ಸಾಮಾಜಿಕ ಸಮಾನತೆಗೇನೇ ಪೂರ್ಣ ಪ್ರಾಮುಖ್ಯತೆ ಕೊಟ್ಟ ಆ ಸಮಾನತಾ ಯತ್ನವನ್ನು ಜನತಾ ರಂಗದ ಸರ್ವದಿಗ್ಗಲ್ಲೂ ರಭಸದಿಂದ ಚಾಲು ಮಾಡಿದರೆ, ಅದರಂತಿರುಲ್ಲಿ ಸಿಕ್ಕಿ ಈ ಸಂಕುಚಿತ ಮನೋವೃತ್ತಿ ನಶಿಸಿ ಹೋಗಬಹುದೆಂಬ ಆಶೆಯುದಿಹಾಗೆ ಬೇರು ಸಮೇತ ಅಡಿಮೇಲು ಮಾಡಿ ಹಾಕಬೇಕಲ್ಲದೆ, ಯಾವುದೇ ರೀತಿಯಿಂದ ಜೊಗುರು ಕತ್ತರಿಸಿದ ಮಾತ್ರಕ್ಕೆ ನಶಿಸಿ ಹೋಗದಂತಹ ವಿಷ ವೃಕ್ಷವಿದು ಸರಕಾರವೂ ಜನತೆಯೂ ಇದರ ನಿರ್ಮೂಲನದ ಪ್ರ ಲಕ್ಷ್ಯ ಕೊಡಬೇಕಾದುದು ಅಗತ್ಯ. ಜನಸಾಮಾನ್ಯರ ಮನೋಮಟ್ಟ ಮೇಲೇರದೆ, ಬುದ್ಧಿ ವಿಕಾಸಗೊಳ್ಳದೆ ಜನತಾ ರಾಜ್ಯ ಸ್ಥಾಪನೆಗೊಂಡರೂ ಸಾರ್ಥಕಗೊಳ್ಳದು; ಸಫಲ ಹೊಂದದು.

ಈ ವಾದ-ವಿವಾದಗಳು

ಮಾನವ ಸಹಜ ಸ್ವಾರ್ಥ ಮೇಲಾಟ ಬುದ್ಧಿಯು ಸಮಾನ ನ್ಯಾಯದ ಎಲ್ಲೆ ಮೀರಿ ಮುಂದುವರಿಯದಂತಹ ನಿಯಂತ್ರಣಗಳು ಎಲ್ಲಾ ರಂಗಗಳಲ್ಲೂ ಇರುತಿದ್ದರೆ, ವ.ಹಾಯುದ್ಧಗಳಂದಾರಂಭಿಸಿ, ಸಣ್ಣ ಹುಟ್ಟ ಗೃಹ ಕಲಹಗಳ ವರೆಗಿನ ಎಲ್ಲಾ ತಂಟೆ ತಕರಾರುಗಳೂ ಹುಟ್ಟದಂತಹ ವಾತಾವರಣವಿರುತಿದ್ದಿತು. ಅಂತಹ ನ್ಯಾಯ ಕಡಿವಾಣಗಳು ಇಂದೇಕಾದಲ್ಲೆಲ್ಲಾ ಇಲ್ಲ; ಇದ್ದ ಕಡೆಗಲ್ಲೂ ಕೆಲವೊಮ್ಮೆ ಸ್ವಾರ್ಥಪೂರಿತ ಮೇಲಾಟಗಳ ಶಕ್ತಿ ಹೆಚ್ಚಾಗಿ ಅವು ಕಡಿದು ಹೋಗುತ್ತಿವೆ. ಹೀಗಾಗಿ ಕಂದು ಎಲ್ಲೆಲ್ಲೂ ವಾದ ವಿವಾದ, ಸ್ಪರ್ಧೆ, ಘರ್ಷಣೆಗಳು ಕಂಡು ಬರುತ್ತಿವೆ.

೦೦೦

ಪಾಕಿಸ್ತಾನ್ ಸ್ಥಾಪನೆಯಾದ ದೆಸೆಯಿಂದ ಪಂಜಾಬ್ ಮತ್ತು ಬಂಗಾಳ ಪ್ರಾಂತ್ಯಗಳು ಎರಡೆಡಾಗಿ ಭಾರತ ಪಾಕಿಸ್ತಾನಗಳೊಳಗೆ ಪಾಲಾಗಿರುವುದಷ್ಟೆ? ಈ ಎರಡು ನಾಡುಗಿರಿಗಳ ವಲಯಗಳಲ್ಲೂ ಅಂದಿನಿಂದೀ ವರೆಗೂ ಸಬಲ್ಲ ಸಂದರ್ಭಗಳೇಳುವುದು ಅತ್ಯಪರೂಪವಾಗಿ; ಪರಕೀಯರನ್ನೋಡಿಸುವಂತಹ ಸರ್ವರಿಗೂ ಸಮಾನವಾದ ವಿಶೇಷ ಕಾರ್ಯಭಾರವು ಎಲ್ಲರ ಮೇಲೆ ಒಟ್ಟಿಗೆ ಇನ್ನು ಬೀಳಲಿಕ್ಕಿಲ್ಲ. ಎಲ್ಲರ ಲಕ್ಷ್ಯವನ್ನೊಂದುಗೂಡಿಸಿ ಒಂದೆಡೆಗೆ ಯಜಲ್ಲಂತಹ ವಿಶೇಷ ಸನ್ನಿವೇಶಗಳೂದಗಲಾರವು. ಇರುವ ಅಧಿಕಾರಗಳನ್ನು ಅನುಭೋಗಿಸುವ ಕಡೆಗೇನೇ ಲಕ್ಷ್ಯ ಕೊಡುವಾಗ, ಜಾತೀಯತಾ ಮೇಲಾಟಗಳೆದ್ದು ಜಾತೀಯ ದ್ವೇಷಾಸೂಯೆಗಳು ಪ್ರಬಲಿಸುತ್ತಾ ಹೋಗಬಹುದು. ಅಂತಹ ದುಶ್ಚಿಹ್ನೆಗಳೇ ಇಂದು ಚುನಾವಣೆಯಂತಹ ಸಂದರ್ಭಗಳಲ್ಲಿ ಒಡೆದು ತೋರುತ್ತಿವೆ. ಜನತಾ ರಾಜ್ಯಕ್ಕೆ ಈ ಮಾದರಿಯ ಸಂಕುಚಿತ ಸ್ವಭಾವವು ಸತ್ಯಕ್ಕೂ ರಾಹುಪ್ರಾಯವಾಗಬಹುದು. ಸ್ವತಂತ್ರ ಭಾರತವನ್ನು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಿ, ಪ್ರತ್ಯೇಕ ಮತದಾನ ಪದ್ಧತಿಯನ್ನು ರದ್ದು ಪಡಿಸಿಕೊಂಡ ಮಾತ್ರಕ್ಕೆ ಭಾರತೀಯರ ಮನೋಮಟ್ಟ ಮೇಲೇರಿತೆಂದು ನಿರೀಕ್ಷಿಸಲಾಗದಲ್ಲ. ಅರ್ಧಿಕ, ಸಾಮಾಜಿಕ ಸಮಾನತೆಗೇನೇ ಪೂರ್ಣ ಪ್ರಾಮುಖ್ಯತೆ ಕೊಟ್ಟ ಆ ಸಮಾನತಾ ಯತ್ನವನ್ನು ಜನತಾ ರಂಗದ ಸರ್ವದಿಗ್ಗಲ್ಲೂ ರಭಸದಿಂದ ಚಾಲು ಮಾಡಿದರೆ, ಅದರಂತಿರುಲ್ಲಿ ಸಿಕ್ಕಿ ಈ ಸಂಕುಚಿತ ಮನೋವೃತ್ತಿ ನಶಿಸಿ ಹೋಗಬಹುದೆಂಬ ಆಶೆಯುದಿ. ಹಾಗೆ ಬೇರು ಸಮೇತ ಅಡಿಮೇಲು ಮಾಡಿ ಹಾಕಬೇಕಲ್ಲದೆ, ಯಾವುದೇ ರೀತಿಯಿಂದ ಜೊಗುರು ಕತ್ತರಿಸಿದ ಮಾತ್ರಕ್ಕೆ ನಶಿಸಿ ಹೋಗದಂತಹ ವಿಷ ವೃಕ್ಷವಿದು ಸರಕಾರವೂ ಜನತೆಯೂ ಇದರ ನಿರ್ಮೂಲನದ ಪ್ರ ಲಕ್ಷ್ಯ ಕೊಡಬೇಕಾದುದು ಅಗತ್ಯ. ಜನಸಾಮಾನ್ಯರ ಮನೋಮಟ್ಟ ಮೇಲೇರದೆ, ಬುದ್ಧಿ ವಿಕಾಸಗೊಳ್ಳದೆ ಜನತಾ ರಾಜ್ಯ ಸ್ಥಾಪನೆಗೊಂಡರೂ ಸಾರ್ಥಕಗೊಳ್ಳದು; ಸಫಲ ಹೊಂದದು.

ಸ್ಥಳಾಧಿಕಾರ ಸಂಬಂಧದ ವಿವಾದಗಳು ಇದ್ದೇ ಇವೆ. ಕೆಲವೆಡೆ ಸಣ್ಣ ಪುಟ್ಟ ಹೋರಾಟಗಳೂ ಆಗುತ್ತಿವೆ. ಬಂಗಾಳದಲ್ಲಿ ಭಾರತದ ಮುರ್ಶಿದಾಬಾದ್ ಜಿಲ್ಲೆ ಮತ್ತು ರಾಜಶಾಹಿ ಡಿವಿಜನ್ ಕ್ಷೇತ್ರಗಳಲ್ಲಿ ಆಗಿಂದಾಗ ಇಕ್ಕಡೆಯವರೊಳಗೆ ಘರ್ಷಣೆಗಳಾಗುತ್ತಾ ಬಂದಿದ್ದುವು. ಈ ವಿವಾದದ ವಿಚಾರಣೆ ನಡೆಸಿ ಸ್ಪಷ್ಟ ತೀರ್ಮಾನ ಕೊಡಲು ಈಗ ಮೂರು ಮಂದಿ ನ್ಯಾಯಾಧಿಕಾರಿಗಳ ಒಂದು ಕಮಿಶನು ಇಕ್ಕಡೆಯ ಸಮ್ಮತಿಯಿಂದ ನೇಮಕಗೊಂಡಿದೆ; ಮದ್ರಾಸ್ ಹೈ ಕೋರ್ಟಿನ ಮಾಜೀ ಜಡ್ಜ ಶ್ರೀ ಚಂದ್ರಶೇಖರ ಅಯ್ಯರರು ಭಾರತದ ಕಡೆಯಿಂದಲೂ, ಮದ್ರಾಸ್ ಹೈ ಕೋರ್ಟಿನ ಮತ್ತೊಬ್ಬ ಮಾಜೀ ಜಡ್ಜ ಜಸ್ಟೀಸ್ ಶಹಬುದ್ದೀನರು ಪಾಕಿಸ್ತಾನದ ಕಡೆಯಿಂದಲೂ ಈ ಕಮಿಶನಿನ ಸದಸ್ಯರಾಗಿದ್ದಾರೆ. ಮಾರನೆಯವರೆಂದರೆ ಇಕ್ಕಡೆಯವರ ಒಪ್ಪಿಗೆಯಿಂದ ಆರಿಸಲ್ಪಟ್ಟ ಸ್ವೀಡನಿನ ಸುಪ್ರಸಿದ್ಧ ನ್ಯಾಯಾಧೀಶರೊಬ್ಬರು. ಈ ಸ್ವೀಡಿಶ್ ಜಡ್ಜರೇ ತ್ರಿಮೂರ್ತಿ ಸಮಿತಿಯ ಲಧ್ಯಕ್ಷರಾಗಿದ್ದವರು. ಬಂಗಾಳದ ಗಡಿ ವಿವಾದ ತೀರ್ಮಾನಕ್ಕೆ ಈ ವಿಧಾನವನ್ನು ಅಂಗೀಕರಿಸುವ ಒಪ್ಪಂದವು ಭಾರತ-ಪಾಕಿಸ್ತಾನಗಳೊಳಗೆ ಕಳದ ಫೆಬ್ರವರಿಯಲ್ಲೇ ಆಗಿದ್ದರೂ ನ್ಯಾಯಾಧೀಶರಾರೆಂಬ ಕುರಿತು ಭಿನ್ನಾಭಿಪ್ರಾಯಗಳಿದ್ದುದರಿಂದ ಇಷ್ಟು ಸಮಯ ವಾದವಿವಾದದಲ್ಲೇ ಕಳೆದು ಹೋಯಿತು. ಪಂಜಾಬಿನ ಗಡಿ ವಿವಾದದಂತೆಯೇ ಭಾರತದ ಪಂಜಾಬಿನವರ ಹುಟ್ಟು, ಪಾಕಿಸ್ತಾನ್ ಪಂಜಾಬಿಗೆ ಹರಿಯುವ ನೀರಿನ ಹರಿವಿನ ಸಂಬಂಧದ ಪಾಕಿಸ್ತಾನದ ದೂರು ಇನ್ನೂ ಉಳಿದಿದೆ. ಇಂತಹ ಬುದ್ಧಿ ಕಟ್ಟು ಕೂಡುವರೊಡನೆ ಇವೆಲ್ಲಾ ವಿವಾದಗಳ ಕುರಿತು ಸಂಧಾನ ಮಾಡಿಕೊಳ್ಳಲು ಸಾಧ್ಯವೆ?

೦೦೦

ಪಾಕಿಸ್ತಾನಕ್ಕೇಗಲೂ ಭಾರತದ ವೈಲೆಂತಹ ದ್ವೇಷಾಸೂಯೆಯಿದೆಯೆಂಬುದಕ್ಕೆ ಮತ್ತೊಂದು ದೊಸ ನಿದರ್ಶನ ಕೋಲಂಬಂದಿದೆ. ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿನ ಒಂದು ಸ್ಥಾನಕ್ಕೆ ಈ ಬಾರಿಯು ಚುನಾವಣೆಯಲ್ಲಿ ಭಾರತವು ತನ್ನ ಉಮೇದ್ವಾರಿಕೆಯನ್ನು ಪ್ರಕಟಿಸಿದ್ದಿತು. ಆದಕ್ಕೆ ಬ್ರಿಟನಿನ ಅನುಮೋದನೆಯದೆಯೆಂದು ತಿಳಿದು ಬಂದಿದೆ. ಆದರೆ ಪಾಕಿಸ್ತಾನದ ಪ್ರತಿನಿಧಿಯಾಗಿ ಅಲ್ಲಿರುವ ಪಾಕಿಸ್ತಾನ್ ವಿದೇಶ ಮಂತ್ರಿ ಸರ್. ಝುಫುಲ್ಲಾಖಾನರು ಭಾರತವು ಭದ್ರತಾ ಕೌನ್ಸಿಲಿನ ಸ್ಥಾನ ಸಂಪಾದಿಸುವ ಕುರಿತು ತಮ್ಮ ಗಿರುವ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. "ಕಾಶ್ಮೀರ ವಿವಾದವು ಭದ್ರತಾ ಕೌನ್ಸಿಲಿನ ಮುಂದೆ ಬರುವಹುದಾದ ಸಂದರ್ಭದಲ್ಲಿ ಭಾರತವು ಭದ್ರತಾ ಕೌನ್ಸಿಲಿನ ಸದಸ್ಯತ್ವದ ಅವಕಾಶವನ್ನು ತೋರಿಸಿರುವುದು ಆಕ್ಷೇಪಾರ್ಹವಾದುದು. ಭಾರತ ಮತ್ತು ಪಾಕಿಸ್ತಾನಗಳೊಳಗಿನ ಕಾಶ್ಮೀರ ಜಗಳ ತೀರ್ಮಾನಗೊಳ್ಳದೆ ಬಾಕಿಯಿರುವ ವರೆಗೂ ಭಾರತವು ಈ ಸ್ಥಾನ ಸಂಪಾದನೆಗಾಗಿ ಮುಂದಾಗದಿರುವುದೇ ನ್ಯಾಯ ಮತ್ತು ಗೌರವ ಪ್ರದವಾಗು

ತಿತ್ತು. ಆವಕ್ಕೆ ಬೆಂಬಲಕೊಡುವ ವಾಗ್ದಾನವಿತ್ತಿರುವ ಇತರ ರಾಷ್ಟ್ರಗಳೂ ಈ ವಿಷಯವನ್ನು ಲಕ್ಷ್ಯದಲ್ಲಿಟ್ಟುಕೊಳ್ಳಲಿ. ಇದೊಂದು ವಿವಾದವಲ್ಲವಾದರೆ ನಾವೂ ಭಾರತದ ಉಮೇದ್ವಾರಿಕೆಯನ್ನು ಸ್ವಾಗತಿಸುತಿದ್ದೆವು. ಆದರೀಗ, ಕಾಶ್ಮೀರ ವಿವಾದವು ಭದ್ರತಾ ಕೌನ್ಸಿಲಿನ ಮುಂದೆ ಬರುವಾಗ, ಮೋಟನ ಹಕ್ಕಿಲ್ಲದಿದ್ದರೂ ಭಾರತೀಯರು ಅಲ್ಲಿಯು ಹಿಡ್ಡರ ನಡುವೆ ಕುಳಿತುಕೊಳ್ಳುವ ಸಂಭವ ನಿರೀಕ್ಷೆಯಿಂದ ನಾವು ದಿಗಿಲುಗೊಂಡಿದ್ದೇವೆ" ಎಂದು ಸರ್. ಝುಫರುಲ್ಲಾರ ವಾದ. ಭದ್ರತಾ ಕೌನ್ಸಿಲಿನಲ್ಲಿರುವ ಒಟ್ಟು ಸದಸ್ಯರ ಸಂಖ್ಯೆ 11. ಆ ಪೈಕಿ 5 ಸ್ಥಾನಗಳು ರಶ್ಯಾ, ಅಮೆರಿಕ, ಇಂಗ್ಲಾಂಡು, ಫ್ರಾನ್ಸು, ಚೈನಾ ಈ ಐದು ರಾಷ್ಟ್ರಗಳಿಗೆ ಶಾಶ್ವತವಾಗಿ ಕಾದಿರಿಸಲ್ಪಟ್ಟಿವೆ. ಉಳಿದ 6 ಸ್ಥಾನಗಳಿಗೆ ಎರಡು ವರ್ಷಗಳಗೊಮ್ಮೆ ಚುನಾವಣೆ ನಡೆದು ಉಳಿದ ರಾಷ್ಟ್ರಗಳ ಪ್ರತಿನಿಧಿಗಳಾರಿಸಲ್ಪಡಬೇಕು. ಈ ಬಾರಿ ನಡೆಯುವ ಅಂತಹ ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ ಭಾರತವು ಉಮೇದ್ವಾರಿಯಾಗಿದೆ. ಭದ್ರತಾ ಕೌನ್ಸಿಲಿನ ಮುಂದೆ ಬರುವ ಯಾವುದೇ ವಿವಾದದೊಡನೆ ಸಂಬಂಧವುಳ್ಳ ಸದಸ್ಯರಿಗೆ, ಆ ವಿವಾದದ ಜರ್ಜಿಯಲ್ಲಿ ಭಾಗವಹಿಸುವ ಅಥವಾ ಮತದಾನ ಮಾಡುವ ಹಕ್ಕಿಲ್ಲ ವೆಂಬ ಸ್ಪಷ್ಟ ನಿಯಮವಿದೆ. ಹೀಗಿದ್ದರೂ ಕಾಶ್ಮೀರದ ನೆವನ ಹೇಳುತ್ತಾ ಸರ್. ಝುಫರುಲ್ಲಾ ಭಾರತದ ಉಮೇದ್ವಾರಿಕೆಗೆ ವಿರೋಧ ಸೂಚಿಸಿರುವುದು ಕೇವಲ ದ್ವೇಷಾಸೂಯೆಯಿಂದ ಎಂಬುದು ಸ್ಪಷ್ಟ. ತನ್ನ ಹಕ್ಕದಲ್ಲೇ ಇಂತಹ ಅಹಿತ ಚಿಂತಕ ಮತ್ಸರ ರಾಷ್ಟ್ರವಿರುವ ಭಾರತವು ಜಾಗ್ರತೆಯಿಂದಿದ್ದಷ್ಟೂ ಕಡಿಮೆಯೆನ್ನಬೇಕು!

೦೦ ೦೦

ಲೋಕವಿರುವುದು ಮತ್ತು ಇರುವುದು ಕೇವಲ ತಮಗಾಗಿ, ಎಂಬ ತಪ್ಪು ಭಾವನೆ ಕಟ್ಟಿಕೊಂಡವರು ಎಂತಹ ಅಧಿಕಪ್ರಸಂಗಗಳನ್ನು ಮಾಡಿ ಬಿಡುತ್ತಾರೆಂಬುದಕ್ಕೆ ಕಾಶ್ಮೀರ ವಿವಾದದಲ್ಲಿ ಟ್ರುಮೇನ್, ಅಟ್ಲಿಗಳು ಮಧ್ಯ-ಪ್ರವೇತಿಸಿರುವ ನಿದರ್ಶನವೊಂದೇ ಸಾಕು. "ವರಸ್ವರ ಜಗಳವಿಲ್ಲದೆ ಶಾಂತಿ ಸೌಹಾರ್ದತೆಯಿಂದಿದ್ದು ಬಿಡಿ" ಎಂದು ಟ್ರುಮೇನರು ನೆಹರು, ಲಿಯಾಖತರಿಗೆ ಹೇಳಬಹುದು; ನೆಹರುಗಳು ಟ್ರುಮೇನ್, ಸ್ಟಾಲಿನರಿಗೂ ಬೋಧಿಸಬಹುದು. ಆದರೆ ಒಂದು ತೀರ್ಮಾನವನ್ನು ಅಂಗೀಕರಿಸಿಕೊಳ್ಳಿರೆಂದು ಬೋಧಿಸುವ ಮೊದಲು ಆ ಸಂಬಂಧದ ವಿವಾದದ ಮತ್ತು ತೀರ್ಮಾನದ ಸ್ವಷ್ಟ ಪರಿಶೀಲನೆ ಮಾಡಿಕೊಳ್ಳಬೇಕಾದುದು ಅಗತ್ಯ. ಟ್ರುಮೇನ್, ಅಟ್ಲಿಗಳು ಅಂತಹ ಯೋಚನೆ ಮಾಡದೇನೇ ಕಾಶ್ಮೀರ ಕಮಿಶನ್ನಿನ ಕೊನೆಯ ಸೂಚನೆಗಳನ್ನು ಅಂಗೀಕರಿಸಿಕೊಳ್ಳಬೇಕೆಂದು ಭಾರತ-ಪಾಕಿಸ್ತಾನ್ ನಾಯಕರುಗಳನ್ನು ಕೇಳಿಕೊಳ್ಳುವ ಅಧಿಕ ಪ್ರಸಂಗ ಮಾಡಿದ್ದಾರೆ. ಅದು ಮನಸ್ಸಿಗೆ ನಾಟಿ, ಭಾರತ ಪ್ರಧಾನಿ ಪಂಡಿತ ನೆಹರು ಇದೇ ತಾ. 4ರಲ್ಲಿ ಅಲಹಾಬಾದಿನ ಸಾರ್ವಜನಿಕ ಸಭೆಯಲ್ಲಿಯೂ ಹೇಳಿದರು:-"ಕಾಶ್ಮೀರ ವಿವಾದದಲ್ಲಿ ಅಮೆರಿಕಾಧ್ಯಕ್ಷ ಟ್ರುಮೇನ್ ಮತ್ತು ಬ್ರಿಟಿಷ್ ಪ್ರಧಾನಿ ಅಟ್ಲಿಗಳು ಕೈಹಾಕಿದುದನ್ನು ಕಂಡು ನಾನು ಆಶ್ಚರ್ಯಗೊಂಡಿದ್ದೇನೆ. ಭಾರತದ ಭಾಗವಾಗಿರುವ ಕಾಶ್ಮೀರದ ಮೇಲೆ ಪಾಕಿಸ್ತಾನದಿಂದ ಧಾಳಿಗಾರರು ನುಗ್ಗಿ, ಅದರ ಶಾಂತ ಹಳ್ಳಿಗಳನ್ನು ಆಡಿಮೆಲು ಮಾಡಿ ಹಾಕಿದರೆಂಬುದೇ ಈ ಸಮಸ್ಯೆಯ ಮೂಲ ತಿರುಳು. ಅಂತರ್ರಾಷ್ಟ್ರೀಯ ಕಾಯಿದೆಗೆ ವಿರುದ್ಧವಾದ ಅನಪೇಕ್ಷಿತ ಆಕ್ರಮಣವದು. ನಾವು ಹೇಳುವದು ಸತ್ಯ ಸ್ಥಿತಿಯೆಂದಾದರೆ, ನಮ್ಮ ವರ್ತನೆಯು ನ್ಯಾಯವಾದುದೆಂದು ಇಡೀ ಪ್ರಪಂಚವು ಮನ್ನಿಸಬಹುದು. ನಾವು ಮಾಡಿದುದು ತಪ್ಪೆಂದಾದರೆ ಅದನ್ನು ಸ್ಪಷ್ಟವಾಗಿ ಹೇಳತಕ್ಕದ್ದು. ಇದರಿಗೆ ಈ ಘರ್ಷಣೆಯ ಮೂಲ ಭೂತ ಕಾರಣವನ್ನು ಒತ್ತಟ್ಟಿಗೆ ಸರಿಸಿಬಿಡುವುದು ನ್ಯಾಯವಲ್ಲ. ಅಂತಹ ವಿದ್ಯಮಾನವನ್ನು ನಮ್ಮಲ್ಲಿ ಅವಿರಾಮ ಮತ್ತು ಯಾತನೆ ನಿರ್ಮಿಸಲು ಬದ್ಧವಿದೆ. ಕಾಶ್ಮೀರದ ಮೇಲಿನ ಆಕ್ರಮಣವು ನಮ್ಮ ಪಾಲಿಗೆ ಅತಿ ಪ್ರಾಮುಖ್ಯ ಸಮಸ್ಯೆಯಿದ್ದು ಹಲವು ಮುಖ್ಯ ಪ್ರಶ್ನೆಗಳನ್ನೆಬ್ಬಿಸುವಂತಹದಿದೆ. ಗುಜಡೆಸಿತ ಮುಕ್ತಾಯವಾ ಒಡಂಬಡಿಕೆಯ ಶರತ್ತುಗಳನ್ನು ಪಾಕಿಸ್ತಾನವು ಮುರಿದುಕೊಂಡಿದೆ. ಕಾಶ್ಮೀರವಿಟ್ಟಿರುವದು ಮಿ. ಜಿನ್ನ ಮತ್ತು ಮುಸ್ಲಿಂ ಲೀಗ್ ಪ್ರಜೋದಿಸಿರುವ ದ್ವಿರಾಷ್ಟ್ರ ತತ್ವಕ್ಕೆ ವಿರುದ್ಧ ಹೆಜ್ಜೆಯನ್ನೇ. ಕಾಶ್ಮೀರದಲ್ಲಿ ಮುಸ್ಲಿಮರ ಪ್ರಾಧಾನ್ಯತೆಯಿರುವುದರಿಂದ, ಅದನ್ನು ಪಾಕಿಸ್ತಾನದೊಳಗೆ ಸೇರಿಸಿಕೊಳ್ಳಬೇಕೆಂಬುದೇ ಪಾಕಿಸ್ತಾನದ ತತ್ವ. ಈ ಅರ್ಥ ಪ್ರಕಾರ ಮುಸ್ಲಿಮರು ಅಧಿಕ ಸಂಖ್ಯಾಕರಿರುವ ಸ್ಥಳಗಳನ್ನೆಲ್ಲಾ ಪಾಕಿಸ್ತಾನ್ ಕ್ಷೇತ್ರದೊಳಗೆ ಸೇರಿಸಿಬಿಡಬೇಕೆಂದಾಗುವದು. ಪಾಕಿಸ್ತಾನದ ಈ ವಾದದ ಪ್ರಭಾವವನ್ನೇ, ಕಾಶ್ಮೀರದಲ್ಲಿರುವ ಮುಸ್ಲಿಮರಲ್ಲಿ ಶೇ. 80ರಷ್ಟು ಮಂದಿ ಪಾಕಿಸ್ತಾನದೊಡನೆ ಸೇರಿಕೊಳ್ಳಲಿಚ್ಛಿಸುತ್ತಿರಬಹುದೆಂದು ನೆನಸಿರುವ ಸಂಯುಕ್ತ ರಾಷ್ಟ್ರ ಸಂಘದ ಮೇಲೆ ಬಿದ್ದಂತೆ ಕಾಣುತ್ತಿದೆ. ಪಾಕಿಸ್ತಾನವನ್ನು ಸೇರಲಿಚ್ಛಿಸದ ಕಾಶ್ಮೀರ ಜನತೆಯು 'ಇಸ್ಲಾಮೀ ತಾತ್ವಿಕ ರಾಷ್ಟ್ರ'ವನ್ನಿಸಿರುವ ಪಾಕಿಸ್ತಾನದ ಅಸ್ತಿತ್ವಕ್ಕೇನೇ ಯುದ್ಧಾಹ್ವಾನವಿತ್ತಿದ್ದಾರೆ. ಭಾರತವು ತನ್ನ ಭವಿಷ್ಯದ ಆಸ್ಮಿವಾರವಾಗಿ ಮಾಡಿಕೊಂಡಿರುವ ಮಹಾತ್ಮಾ ಗಾಂಧಿಯವರ ತತ್ವಗಳನ್ನು ಕಾಶ್ಮೀರವು ಅನುಮೋದಿಸಿದೆ".

ಪಂಡಿತಜೀಯ ಮೇಲಿನ ಉದ್ಗಾರಗಳು ಅಮೆರಿಕಾಂಗ್ಲ ನಾಯಕರ ಮನಸ್ಸಿನ ಮೇಲೆ ಪರಿಣಾಮ ಮಾಡುವಂಥವುಗಳು. ಟ್ರುಮೇನ್, ಅಟ್ಲಿ ಮತ್ತು ಸಂಯುಕ್ತ ರಾಷ್ಟ್ರ ಸಂಘದವರಿಗೆ ಕಾಶ್ಮೀರ ಪರಿಸ್ಥಿತಿಯ ಕುರಿತು ಸಾಕಷ್ಟು ಅನುಭವವಿಲ್ಲದೆ ಅವರೆಲ್ಲರೂ ತಪ್ಪು ಅಭಿಪ್ರಾಯ ಕಟ್ಟಿಕೊಂಡಿರುವಂತೆ ಕಾಣುತ್ತದೆ. ಭಾರತ ಸರಕಾರವು ಇಂತಹ ಯಾವುದೇ ಬಲೆಯಲ್ಲಿ ಬಿದ್ದು, ನ್ಯಾಯ ದ್ರೋಹ ಮಾಡಿಕೊಳ್ಳಲು ಶಯಾರಿಲ್ಲ. ಪಂಡಿತ ನೆಹರುಗಳು, ಲೇಕ್ ಅಬ್ದುಲ್ಲರೊಂದಿಗೆ ಅಲಹಾಬಾದಿನಿಂದ ಬೊಂಬಾಯಿಗೆ ಬಂದು, ಸರ್ದಾರ್ ಪಟೇಲರೊಂದಿಗೆ ಪರ್ಯಾಲೋಚನೆ ನಡೆಸುತಿದ್ದಾರೆ. ಭಾರತ ಸಂಕಾರದ ಅಭಿಮತವು ಸದ್ಯದಲ್ಲೇ ತಿಳಿದು ಬರಬಹುದು.

೦೦ ೦೦

ಸ್ವತಂತ್ರ ಭಾರತದ ಅಧಿಕೃತ ಭಾಷೆಯಾವುದೆಂಬ ಕುರಿತು ನಡೆದಿರುವ ವಾದ ವಿವಾದಗಳು ಪ್ರಾಮುಖ್ಯವಾದವುಗಳು. ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಘಟನಾ ಸಮಿತಿಯ ಕಾಂಗ್ರೆಸ್ ಸದಸ್ಯರ ಸಭೆಯು ಈ ಕುರಿತು ತನ್ನ ನಿರ್ಧಾರವನ್ನು ಇಷ್ಟರಲ್ಲೇ ಮಾಡಿದೆ. ಯಾವ ಅಂಕೆಯನ್ನು ಅಂಗೀಕರಿಸಿಕೊಳ್ಳಬೇಕೆಂಬ ಕುರಿತು ಸಂಸಮ ಭಿನ್ನಾಭಿಪ್ರಾಯಗಳಿರುವುದರಿಂದ ಅದಕ್ಕಾಗಿ ಘಟನಾ ಸಮಿತಿಯ ತೀರ್ಮಾನವನ್ನೇ ಕಾಯಬೇಕಾದೆ. ದೇವನಾಗರಿ ಲಿಪಿಯುಳ್ಳ ಹಿಂದಿಯೇ ರಾಷ್ಟ್ರ ಭಾಷೆಯಾಗಬೇಕು; ಆದರೆ ಇನ್ನು ಹದಿನೈದು ವರುಷಗಳ ವರೆಗೆ ಇಂಗ್ಲಿಷನ್ನೇ ಸರಕಾರೀ ಭಾಷೆಯಾಗಿ ಇಟ್ಟುಕೊಳ್ಳಬೇಕು; ಈ ನಡುವೆ ಮತ್ತೆ ನಂತರ ಪ್ರಾಂತ್ಯಗಳು ತಮ್ಮ ಕ್ಷೇತ್ರಾಧಿಕಾರದೊಳಗಿನ ಕಾರ್ಯ ಕಲಾಪಗಳ ಮಟ್ಟಿಗೆ ತಮ್ಮ ಸ್ವಭಾಷೆಗಳನ್ನೇ ಅಂಗೀಕರಿಸಿಕೊಳ್ಳಬಹುದು, ಎಂಬ ತೀರ್ಮಾನವು ಶೇ. 95ರಷ್ಟು ಅದಂತಿದೆ. ಘಟನಾ ಸಮಿತಿಯ ಬರುವ ವಾರದ ಸಭೆಯಲ್ಲಿ ಕೊನೆಯ ಸ್ಪಷ್ಟ ನಿರ್ಧಾರಗಳಾಗಲಿವೆ.

ಉಡುಪಿ

ಆಕಸ್ಮಿಕ ಮರಣ-ಇದೇ ತಾ. 2 ರಲ್ಲಿ ಉಡುಪಿಯ ಸಂತೆಕಟ್ಟೇ ರಸ್ತೆಯಲ್ಲಿ ಸುಖವಾಗಿ ನಡೆಯುತ್ತಾ ಸಾಗಿದ್ದ ಬ್ರಾಹ್ಮಣ ನೊಬ್ಬ, ಅಲ್ಲಿಯೇ ಬಿದ್ದು ಅಗಲೇ ಮರಣ ಗೊಂಡರು.

ಅವಲಕ್ಕಿ ತಯಾರಿಸಲು ಸರಕಾರದ ಅಜ್ಞೆ-ಕೆನರಾ ಜೀಲಾ ಬೋರ್ಡ್ ಅಧ್ಯಕ್ಷರ ಕೋರಿಕೆಯನ್ವಯ ವಿನಂತಿ ಮೇರೆಗೆ ಮದ್ರಾಸ್ ಜಿಲ್ಲೆಯಾದ್ಯಂತ ಹಳ್ಳಿಗಳಲ್ಲೂ ರೇಶನ್ ಪ್ರದೇಶಗಳಲ್ಲೂ ಅವಲಕ್ಕಿ ತಯಾರಿಸುವರೆ 100ಟನ್‌ಗಳಷ್ಟು ಬತ್ತವನ್ನು ಪ್ರತಿ ತಿಂಗಳಿಗೆ ಕೊಡಬೇಕೆಂದು ಮದ್ರಾಸ್ ಸರಕಾರವು ಜಿಲ್ಲಾ ಕಲೆಕ್ಟರರಿಗೆ ತಿಳಿಸಿರುವುದೆಂದು ತಿಳಿದುಬರುತ್ತದೆ.

2ವರ್ಷದ ಮಕ್ಕಳಿಗೂ ರೇಶನ್-ಈ ಮೊದಲು 2 ವರ್ಷದ ಒಳಗಿನ ಮಕ್ಕಳಿಗೆ ರೇಶನ್ ಇಲ್ಲವಿದ್ದು ಇನ್ನುಮುಂದೆ ಅರ್ಧ ರೇಶನ್‌ದೊರೆಯುವುದು. ಕಾರ್ಡುದಾರರು ಸಂಬಂಧಪಟ್ಟವರಿಂದ ತಮ್ಮ ಕಾರ್ಡಿನಲ್ಲಿ ಮಕ್ಕಳ ಸಂಖ್ಯೆಯನ್ನು ಸೇರಿಸಿಕೊಳ್ಳಬೇಕಾಗಿದೆ.

ರೈತರಿಗೆ ಅರ್ಧದರದಲ್ಲಿ ಗೊಬ್ಬರ-ಬತ್ತದ ಬೆಳೆ ಬೆಳೆಸುವ ರೈತರಿಗೆ ಸರಕಾರದವರು 'ಫೊಸ್ಫೇಟ್' ಗೊಬ್ಬರವನ್ನು ಅರ್ಧ ಕ್ರಯದಲ್ಲಿ ಕೊಡಲಿದ್ದಾರೆ. ಈ ಗೊಬ್ಬರದ ಉಪಯೋಗದಿಂದ ಉತ್ತಮ ಬೆಳೆಯಾಗಬಹುದೆಂದು ನಿರೀಕ್ಷಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕೃಷಿ ಇಲಾಖೆಯವರಿಂದ ಪಡಕೊಳ್ಳಬಹುದಾಗಿದೆ.

ಮಂತ್ರಿ ಭೇಟ್ಟಿವತ್ಸಲಂರು ಇದೇತಾ 15ಕ್ಕೆ ಸಮ್ಮ ಜಿಲ್ಲೆಗೆ ಬರಲಿರುವರೆಂದು ತಿಳಿದು ಬರುತ್ತದೆ.

ಮಂಗಳೂರು ಮುನ್ಸಿಪಲ್ ನಂಬ್ರ ೨ ಮತ್ತು ೧೭ ನೇ ವಾರ್ಡಿನ ಉಪಚುನಾವಣೆಯು ತಾ. 24.9.49ಕ್ಕೆ ನಡೆಯಲಿದೆ. ನಾಮಪತ್ರವು ಇದೇ ತಾ 14, 15, 16ಕ್ಕೆ ಸ್ವೀಕರಿಸಲ್ಪಡುವುದು.

'ಅಂತರಂಗ'ಕ್ಕೆ
6 ರೂಪಾಯಿ
ಚಂದಾ ಕೊಟ್ಟು
ಒಂದೇ ವರ್ಷದಲ್ಲಿ
50 ಪುಸ್ತಕಗಳನ್ನು ಪಡೆಯಿರಿ.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 399/49

ವಾದಿ—ನಾಗ ಪೂಜಾರಿ

ಪ್ರತಿವಾದಿ—ಅಣ್ಣಪ್ಪ.

ಕುಂದಾಪುರ ತಾಲ್ಲು ಮೊಳಹಳ್ಳಿ ಗ್ರಾಮದಲ್ಲಿರುವ ದಾರು ಹೆಂಗ್ಸಿನ ಮಗ ಅಣ್ಣಪ್ಪನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ಪ್ರತಿವಾದಿಯು ವಾದಿಗೆ ಬರಕೊಟ್ಟ ಡಿ ಮಾಂಡು ನೋಟಿನ ಹಣ ಬಡ್ಡಿ ಮತ್ತು ಪ್ರತಿವಾದಿಯು ವಾದಿಯಿಂದ ಪಡೆದ ಕೈಗಡದ ಹಣದ ಬಗ್ಯೂ ಕೂಡಾ ವಾದಿಯು ಪ್ರತಿವಾದಿ ಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾ. 14-9-49ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಅಕ್ಷೇಪಣೆಗಳಿದ್ದಲ್ಲಿ ಮೇಲಿನ ಕೋರ್ಟು ಮುಂದೆ ಸದ್ರಿ ದಿನ ಹಗಲು 11 ಗಂಟೆಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಲಾಗುತದೆ.

N. S. Parameshwariah.
Advocate for Plff.

Date 1-9-49
Coondapoor

ನೀವು ಅಳಿಯಸಂತಾನಿಗರೊ?

ಹಾಗಿದ್ದರೆ ಈಗತಾನೆ ಪಾಸಾದ

ಮುದ್ರಾಪುಸ್ತಕ

ಅಳಿಯಸಂತಾನ ಕಾನೂನು

ಇದನ್ನು ಹಿಡಲೇಬೇಕು

ಇದರ ಮಾಹಿತಿಯನ್ನು, ಪಡೆಯಲೇಬೇಕು

ಇಂಗ್ಲಿಷ್ ಪ್ರತಿಗಳೂ ಕನ್ನಡ ಪ್ರತಿಗಳೂ ದೊರೆಯುತ್ತವೆ.

ಕ್ರಯ 0-8-0. (ಟಪ್ಪಾಲು ಖರ್ಚು ಪ್ರತ್ಯೇಕ)

0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.

ಸಿಗುವ ಸ್ಥಳ:—

ನವಯುಗ ಪ್ರೆಸ್, ಉಡುಪಿ

ಉಡುಪಿ

ವೈದ್ಯ ಸಭೆ:—ಉಡ್ಪಿ ತಾಲೂಕು ನಿವಿಷ್ಪ ಭಾರತೀಯ ವೈದ್ಯ ಸಂಘದ ಆಶ್ರಯದಲ್ಲಿ ತಾ. 4-9-1949ನೇ ರವಿವಾರ ಆಕ ರಾತ್ರಿ ಗಂಟೆ 3ಕ್ಕೆ ನಂ ಬಿಯಾರ್ ಆರ್ಯವೈದ್ಯ ಶಾಲೆಯಲ್ಲಿ, ಸದರಿ ಸಂಘದ ಅಧ್ಯಕ್ಷರೂ ಡಿ. ಕೆ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆಗಿರುವ ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ನಮ್ಮ ಜಿಲ್ಲೆಯಲ್ಲಿ ಅನೇಕ ವರುಷಗಳಿಂದ ಆಯುರ್ವೇದ ಚಿಕಿತ್ಸಾ ಪದ್ಧತಿಯು ಶ್ರೇಯಸ್ಸಿಗಾಗಿ ಪಾಡಿದು ದಿವಂಗತರಾದ ಶ್ರೀ M. V. ಶಾಸ್ತ್ರಿ ಮತ್ತು ಶ್ರೀ ಎ. ತಿಮ್ಮಪ್ಪ ಪಂಡಿತರವರ ನಿಧನಕ್ಕಾಗಿ ಈ ಸಭೆಯು ಸಂತಾಪಗೊಳ್ಳುತ್ತದೆ.

ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ಪ್ರಚಾರದಲ್ಲಿದ್ದು ಭಾರತೀಯ ಸಂಸ್ಕೃತಿಯ ಒಂದಂಗವಾಗಿ ಭಾರತೀಯರು ಪರಂಪರಾಗತವಾಗಿ ಪಾಲಿಸಿಕೊಂಡು ಬಂದಿರುವ ಆಯುರ್ವೇದ ಚಿಕಿತ್ಸಾ ಪದ್ಧತಿಯು ಅಧುನಿಕ ಪ್ರಜಾಪ್ರಭುತ್ವದಲ್ಲಿ ಸರ್ವತ್ರ ಪ್ರಚಾರದಲ್ಲಿರುವ ವೈದ್ಯಕೀಯ ವಿದ್ಯೆಗಳಿಗೂ ಅಗತ್ಯವಾದ ಸಾಧನವನ್ನು ಒದಗಿಸುತ್ತಾ, ಆದರ ಶಿಕ್ಷಣ ಮತ್ತು ಪ್ರಚಾರಗಳಿಂದ ಆದರ ಸಂಪೂರ್ಣ ಲಾಭವನ್ನು ಪಡೆಯುವ ಸುಯೋಗವು ಸ್ವತಂತ್ರ ಭಾರತದಲ್ಲಿ ನಮಗೆ ಪ್ರಾಪ್ತವಾಗಬಹುದೆಂಬ ಆಶೆಯನ್ನಿಟ್ಟುಕೊಂಡವರು, ಸರಕಾರಗಳ ಪ್ರಕೃತದ ಧೋರಣೆಯಿಂದ ಸಂಪೂರ್ಣವಾಗಿ ನಿರಾಶರಾಗಿರುತ್ತಾರೆ. ಈ ದೇಶದ ಭೂಗುಣ ಮತ್ತು ಹವಾಮಾನಗಳಿಗೂ ಸಂಸ್ಕೃತಿಗೂ ಅನುಗುಣವಾಗಿ ಪ್ರಾಚೀನ ಋಷಿಗಳು ರಚಿಸಿರುವ ಆಯುರ್ವೇದ ಶಾಸ್ತ್ರಗಳ ಚಿಕಿತ್ಸಾ ಪದ್ಧತಿಯಲ್ಲಿ ದೇಶದ ಬಹುಸಂಖ್ಯಾಕ ಪ್ರಜೆಗಳಿಗೆ ಅಚಲ ವಿಶ್ವಾಸವಿರುವಾಗ, ನಮ್ಮ ಸರಕಾರಗಳು ಪಾಶ್ಚಾತ್ಯ ವೈದ್ಯ ವಿದ್ಯೆಗೂ, ಔಷಧಗಳಿಗೂ ಕೊಡುವಷ್ಟೇ ಪ್ರೋತ್ಸಾಹವನ್ನು ಆಯುರ್ವೇದಕ್ಕೆ ಇನ್ನೂ ಕೊಡದಿರುವುದು ನಮ್ಮ ದೇಶದ ದೌರ್ಭಾಗ್ಯವೆಂದೇ ಈ ಸಭೆಯು ಭಾವಿಸುತ್ತದೆ. ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯಲ್ಲಿ ಉಚ್ಚ ಶಿಕ್ಷಣವನ್ನು ಪಡೆದ ತಜ್ಞರಾದರೂ ಆಯುರ್ವೇದದ ಮಹತ್ವವನ್ನರಿಯದ ಅನಭಿಜ್ಞ ಸಮಿತಿಗಳನ್ನು ನೇಮಿಸಿ, ಅವರ ಸಲಹೆಯಂತೆ ಸರಕಾರವು ಮೂಡಲೆಳಸುವ ಸುಧಾರಣೆಗಳು ಆಯುರ್ವೇದದ ಪ್ರಗತಿಗೆ ವಿಘಾತಕವಾಗುವ ಸಂಭವವಿರುವುದೆಂದು ಈ ಸಭೆಯು ಅಭಿಪ್ರಾಯ ಪಡುತ್ತದೆ. ಅಧಿಕಾರದಲ್ಲಿರುವ ಪ್ರಜಾ ಸರಕಾರಗಳು ಆಯುರ್ವೇದ ಶಾಸ್ತ್ರದಲ್ಲಿ ಪಾರಂಗತರಾದ ತಜ್ಞರ ಸಮಿತಿಗಳನ್ನು ನೇಮಿಸಿ ಆ ಸಮಿತಿಗಳ ಸೂಕ್ತ ಸಲಹೆಗಳಂತೆ ಆಯುರ್ವೇದದ ಪ್ರಗತಿಗೆ ಅವಶ್ಯವುಳ್ಳ ಯೋಜನೆಗಳನ್ನು ಶೀಘ್ರದಲ್ಲಿಯೇ ಕಾರ್ಯರೂಪಕ್ಕೆ ತರುವಂತೆ ಈ ಸಭೆಯು ಭಾರತ ಸರ್ವಸಿದ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳನ್ನು ಆದರ ಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತದೆ.

ಮುದ್ಯಾನ ನಿರೋಧ ಕಾಯಿದೆಯನ್ನು ಪ್ರಾಂತದಲ್ಲೆಲ್ಲಾ ಜಾರಿಗೆ ತಂದುದಕ್ಕಾಗಿ ಈ ಸಭೆಯು ಮದ್ರಾಸು ಸರಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತದೆ. ಆದರೆ ಈ ಕಾಯಿದೆಯ ಮಸ್ಪರಿಣಾಮಗಳು ಸದರಿ ಕಾಯಿದೆಯ ಪಕ್ಷಪಾತಿಗಳಾದ ಆಯುರ್ವೇದ ಚಿಕಿತ್ಸಕರ ವೃವಸಾಯದ ಮೇಲಾಗಿರುವುದರಿಂದ, ಆದರಿಂದಾಗಿರುವ ಆತಂಕಗಳನ್ನು ನಿವಾರಿಸುವ ಅವಶ್ಯಕತೆಯನ್ನು ಈ ಸಭೆಯು ಒತ್ತಿ ಹೇಳುತ್ತದೆ. ಸರ್ವಸಾಧಾರಣವಾಗಿ ಎಲ್ಲಾ ಚಿಕಿತ್ಸಕರೂ ತಮ್ಮ ವೃವಸಾಯದಲ್ಲಿ ರೋಗಿಗಳ ರಕ್ಷಣಾರ್ಥವಾಗಿ ಅನಿವಾರ್ಯವಾಗಿ ಮಾಡಬಹುದಾದ ಕಾರ್ಯಗಳಿಂದ ವೈದ್ಯಕೀಯ ವೃವಸಾಯದ ಮೇಲೆ ಹೊರಿಸಬಹುದಾದ ಅರೋಪಗಳಿಗಾಗಿ ಆಯುರ್ವೇದ ಪದ್ಧತಿಯನ್ನೇ ಆವಲಂಬಿಸಿಕೊಂಡಿರುವ ದೇಶಿವೈದ್ಯರನ್ನು ಮಾತ್ರವೇ ದಂಡಿಸುವುದರಲ್ಲಿ ನ್ಯಾಯವಿಲ್ಲವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ಉದ್ದೇಶ ಪೂರ್ವಕವಾಗಿ ಮದ್ಯನಿರೋಧ ಕಾಯಿದೆಯನ್ನು ಉಲ್ಲಂಘಿಸಿದವರನ್ನು ನ್ಯಾಯಸ್ಥಾನದ ಮುಂದೆ ತಂದು ದಂಡಿಸುವ ವ್ಯವಸ್ಥೆಯು ಇರುವಾಗ ಆಯುರ್ವೇದ ಶಾಸ್ತ್ರೀತ್ಯಾನಿರ್ಮಾಣವಾಗುವ ಔಷಧಗಳ ಮೇಲೆ ವಿಶೇಷ ನಿಯಂತ್ರಣದ ಆವಶ್ಯಕತೆಯು ಇಲ್ಲವೆಂದು ಈ ಸಭೆಯು ಅಭಿಪ್ರಾಯಪಡುತ್ತದೆ. ರೋಗನಿವಾರಣೆಗೆ ಮತ್ತು ಸ್ವಾಸ್ಥ್ಯರಕ್ಷಣೆಗೆ ಆತ್ಯವಶ್ಯವಾಗಿರುವ ಔಷಧ ದ್ರವ್ಯಗಳ ಸಾರವನ್ನು ದ್ರವರೂಪದಲ್ಲಿ ದೀರ್ಘಕಾಲದ ತನಕ ಗುಣಸಹಿತವಾಗಿರಿಸುವ ಶಾಸ್ತ್ರೀಯ ವಿಧಾನದಿಂದಲೇ ನಿರ್ಮಾಣವಾಗುವ ಆಸವಾರಿಷ್ಟಗಳಲ್ಲಿ, ಕನಿಷ್ಠ ಪ್ರಮಾಣದಲ್ಲಿರಬಹುದಾದ ಸ್ವಯಂಜನ್ಯ ಮಾದಕ ವಸ್ತುವು ಅಮಲುಕಾರಿಯಾಗದಿರುವುದರಿಂದ, ಆಸವಾರಿಷ್ಟಗಳನ್ನು ಮದ್ಯನಿರೋಧ ಕಾಯಿದೆಯಿಂದ ವಿನಾಯಿತಿಗೊಳಿಸಿ, ಪ್ರಜೆಗಳ ಹಿತದೃಷ್ಟಿಯಿಂದ, ಆಯುರ್ವೇದ ಔಷಧಗಳ ವ್ಯವಸಾಯಕ್ಕೆ ಪ್ರೋತ್ಸಾಹವನ್ನೀಯುವಂತೆ ಈ ಸಭೆಯು ಮದ್ರಾಸು ಸರಕಾರವನ್ನು ಕೇಳಿಕೊಳ್ಳುತ್ತದೆ.

ಕಲಾವೃಂದದಲ್ಲಿ ದಿನ ೩೧-೮-೪೯ರಂದು ಶ್ರೀ ಬನ್ನಂಜೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ 'ಮಾತೃಭಾಷೆಯೂ, ರಾಷ್ಟ್ರ ಭಾಷೆಯೂ' ಎಂಬ ವಿಷಯದ ಕುರಿತು ಶ್ರೀ ಸ. ವೆಂಕಟೇಶ್ವರ ಭಟ್ಟರ ಉಪನ್ಯಾಸ ಮತ್ತು ಆಧ್ಯಕ್ಷರ ಭಾಷಣವಾಯಿತು.

"ಕೃತಜ್ಞತೆ ಸಮರ್ಪಣೆ"

ಅಜೆಕಾರು ಸರ್ಕಲಿನಿಂದ ಜಿಲ್ಲಾ ಬೋರ್ಡಿಗೆ ನನ್ನನ್ನು ಕಾಂಗ್ರೆಸ್ ಪಕ್ಷವು ಉಮೇದ್ವಾರನನ್ನಾಗಿ ಚುನಾಯಿಸಲ್ಪಡುವಂತೆಯೂ, ಆ ಬಳಿಕ ಅವಿರೋಧವಾಗಿ ಆರಿಸಿ ಬರುವಂತೆಯೂ ಕಾಂಗ್ರೆಸಿನ ಮತ್ತು ನನ್ನ ಮೇಲಿನ ಪ್ರೇಮಾಭಿಮಾನಗಳಿಂದ ಸಹಾಯವನ್ನಿತ್ತು ಪ್ರೋತ್ಸಾಹಿಸಿದ ಎಲ್ಲಾ ಮಹನೀಯರುಗಳಿಗೂ ನಾನು ಈ ಮೂಲಕ ಹೃತ್ಪೂರ್ವಕ ವಂದನೆಯನ್ನರ್ಪಿಸುತ್ತೇನೆ. ಮಾತ್ರವಲ್ಲ, ಮುಂದೆ ನನ್ನ ಸದಸ್ಯತನವು ಸಾರ್ಥಕವಾಗುವಂತೆ ಸಹಕರಿಸಬೇಕಾಗಿಯೂ ವಿನಂತಿಸುತ್ತೇನೆ.

ಜೈ ಹಿಂದ್.

27 8-49. ಮುದ್ರಾಡಿ ಕೃಷ್ಣಯ್ಯ ಶೆಟ್ಟಿ

ಉಡುಪಿ.

ಕೊಡವೂರು ಸರ್ಕಲಿನ ಮತದಾರರಿಗೆ ಧನ್ಯವಾದ.

ಉಡುಪಿ ತಾಲೂಕು ಕೊಡವೂರು ಸರ್ಕಲಿನ ಮಹಿಳೆಯರ ರಿಜರ್ವ್ ಸ್ಥಾನಕ್ಕೆ ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ನಿಂತು ಅವಿರೋಧವಾಗಿ ನನ್ನನ್ನು ಆರಿಸಿದ್ದಕ್ಕಾಗಿ ಕೊಡವೂರು ಸರ್ಕಲಿನ ಮತದಾರರೆಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

—ಬಡಗಬೆಟ್ಟು ಗಿರಿಜ ಹೆಗ್ಗಡ್ತಿ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

S. C. S. No. 171/1949.

ಮುತ್ತು ಬಂಗಾ.ದೇವಜಪ್ಪ ಬಂಗರ ಆಳಿಯ, ಕಾರ್ಕಳತಾಲ್ಲೂ ಬೆಳುವಾಯಿಗ್ರಾಮದ ಅಂಬೂರಿಯಂಬಲ್ಲಿರುವವ — ಪಾದಿ

ಮತ್ತು

ರಗುರಾಮ ಕುಡ್ವಾ, ಸಾಣೂರು ಗಣಸತಿ ಕುಡ್ವರ ಮಗ, ಕಾರ್ಕಳ ತಾಲ್ಲೂ ಬೆಳುವಾಯಿಗ್ರಾಮದ ಕೆಸ್ರಗದ್ದೆಯಂಬಲ್ಲಿರುವವ. ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಸುವದೇನಂದರೆ ನೀವು ಕಳದ ತಾರೀಕು 16-4-1948ರಲ್ಲು ವಾದಿಗೆ ರೂಪಾಯಿ 100-ಕ್ಕೆ ಬರಕೊಟ್ಟ ದಿವಾಂದ ನೋಟಿನ ಆ್ಸಲು ಬಡ್ಡಿ ಖರ್ಚಿಲು ವಾದಿಯು ನಿಮ್ಮ ಮೇಲ್ಕಂಡ ದಾವೆಯು ತಾರೀಕು 21-9-1949ಕ್ಕೆ ಮುಟ್ಟುವಷ್ಟಿಂದ ಸದ್ರಿ ದಿವ್ಸ ಹಗಲು 10 ಘಂಟೆಗೆ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜ್ರುಆಗಿ ಉದಾಹರಣೆಕೊಡದೆ ಹೋದರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವದು ಯಂಬಸಂಗತಿ ಯೂ ಮೂಲಕ ನಿಮಗೆ ತಿಳಿಸೋಣವಾಗುತ್ತದೆ.

ಕೋರ್ಟು ಹುಕ್ಕಂ ಪ್ರಕಾರ.

K. V. Kamath
Advocate for Plaintiff

ಕಾರ್ಕಳ.
ತಾರೀಕು 2-9-1949

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. No. 76/48. R. E. P. No. 159/1949

ವೆಂಕಪ್ಪ ಹೆಗಡೆ — ಪಾದಿ

ಮುದ್ದಾಣಿಶೆಟ್ಟಿ, ಕುಟುಂಬದ ಯಜಮಾನ, ಆರ್ಜಿದಾರ.

1. ಕಾಂತ್ರುಶೆಟ್ಟಿ, 2. ರಗುನಾಥಹೆಗ್ಡೆ, ಎರ್ರಿರು

ಸದ್ರಿ 2ನೇ ಎರ್ರಿ ರಗುನಾಥಹೆಗ್ಡೆ, ರಾಮಂಜಹೆಗ್ಡೆರ ಆಳಿಯ, ಕಾರ್ಕಳತಾಲ್ಲೂ ನಾಡ್ಪಾಲಿಗ್ರಾಮದ ತಿರಗಳಿಯಂಬಲ್ಲಿರುವವ.

ಯಿವರೀಗೆ ಈ ಮೂಲಕ ತಿಳಿಯಪಡ್ಸುವದೇನಂದರೆ.

ವಾದಿಯು ನಿಮ್ಮಮೇಲೆ ಕೂಡಾ ಪಡಿಪ ಮೇಲ್ಕಂಡ ಕ್ರಮನಂಬ್ರ 76/1948ನೇ ದಿಕ್ಕಿಯ ಸಮಾಧಾನಕ್ಕೆ ಆರ್ಜಿದಾರನು ದಾಕ್ಲು ಮಾಡಿದ ಸದ್ರಿ R. E. P. No. 159/49 ನೇ ಅಪ್ಲುಜಾರಿಯು ನಿಮಗು ನೋಟ್ಸುಬಗ್ಗೆ ತಾ 16-9-1949ಕ್ಕೆ ಮುಟ್ಟುವಷ್ಟಿಂದ ಸದ್ರಿ ದಿವ್ಸ ಹಗಲು 10ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜ್ರುಆಗಿ ಉದಾಹರಣೆ ಹೇಳ್ಲು ಮಾಡದೆ ಹೋದರೆ ನಿಮ್ಮ ಗೈರು ಹಾಜ್ರಿಯಲ್ಲಿ ಸದ್ರಿ ಅಪ್ಲುಜ್ಜಾರಿಯು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು ಯಂಬ ಸಂಗತಿ ಕೋರ್ಟು ಹುಕ್ಕಂ ಪ್ರಕಾರ ಈ ಮೂಲಕ ತಿಳಿಸೋಣವಾಗುತ್ತದೆ.

K. V. Kamath
Advocate for Petitioner

ಕಾರ್ಕಳ
ತಾ 2-9-49

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ನಡೆಯುವ ಚಿತ್ರ

ಫೈಡರಲ್ ಓಪರೇಟರ್ 99

(ಇಂಗ್ಲಿಷ್ ಸೀರಿಯಲ್)

ಬರ್ಪುವ ಚಿತ್ರ **ಊರ್ವಶಿ**

ಸುರಯ್ಯ, ಪ್ರೇಮ್ ಅದಿಬ್, ಶೋಭನಾ ಸಮರ್ಥ್, ಇನರು ನಟಿಸಿದ.

ಆನಂತರ:

ಚೆಂದ್ರಹಾಸ, ನೀಲಕಮಲ್, ಘರ್ಕಿ ಇಜ್ಜತ್, ಲಾಹೋರ್, ನದಿಯಾಕೆ-ಹಾರ್ ಇತ್ಯಾದಿ.

ಕುಲಾಲ ಸಮಾಜೋದ್ಧಾರಕ ಸಮಿತಿ:—ಉಡುಪಿ ಶಾಖೆಯ ಪ್ರಚಾರ ಸಭೆಯು ತಾ 18-9-49ನೇ ಆದಿತ್ಯವಾರ ಬೆಳಿಗ್ಗೆ 9 ಗಂಟೆಗೆ ಕುಂದಾಪುರ ತಾಲ್ಲೂ ಹಚ್ಚೆಮಕ್ಕಿ ಬೋರ್ಡು ಶಾಲೆಯಲ್ಲಿ ಜರಗಲಿರುವುದೆಂದೂ ಆ ಸಭೆಗೆ ಸ್ವಜಾತಿ ಬಂಧುಗಳೆಲ್ಲರೂ ಬರಬೇಕೆಂದೂ ಕಾರ್ಯದರ್ಶಿಗಳು ವಿನಂತಿಸುತ್ತಾರೆ.

ಎಲ್ಲರಪಾಡಿ:—ಬೈಲೂರು ಪೇಟೆಗೆ ಸಮೀಪದಲ್ಲಿರುವ ಎಲ್ಲರಪಾಡಿಯಲ್ಲಿ ಶ್ರೀ ಭೋಜಪ್ಪ ಅತಿಕಾರಿಗಳು ನೂತನವಾಗಿ ಕಟ್ಟಿಸಿದ ದಾಲಾ ಕಟ್ಟೋಣಿಜ ಉದ್ಘಾಟನ ಸಮಾರಂಭವು ತಾ. 5-9-49ರಲ್ಲಿ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ ಕೆ. ಶ್ರೀನಿವಾಸ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಡಾ। ಎ. ಕೆ. ಎಲ್. ನಾರಾಯಣ ಮೊದಲಾದವರ ಭಾಷಣಗಳಿದ್ದುವು. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಎಚ್. ರಾಮರಾಯರು ಮುಂತಾದ ದಿನ ಮಹಾತ್ಮಾಗಾಂಧಿಯವರ ಭಾವಚಿತ್ರದ ಅನಾವರಣ ಮಾಡಿದರು.

ಕಲ್ಯಾಣಪುರ:—14 ವರ್ಷ ಪ್ರಾಯದ ಬಿ. ಕೇಶವ ಪೈ ಎಂಬ ಸ್ಥಳೀಯ ಹೈಸ್ಕೂಲ ವಿದ್ಯಾರ್ಥಿಯು ತಾ 5ರಲ್ಲಿ ಹರಿದಾಸ ಶ್ರೀ ಸಂಜೀವರಾಯರ ನೇತೃತ್ವದಲ್ಲಿ 'ಭಕ್ತಗೋರ ಕುಂಬಾರ' ಎಂಬ ಹರಿಕತೆ ಮಾಡಿ ಜನ ಮೆಚ್ಚುಗೆ ಪಡೆದನು.

ಹಿರಿಯಡ್ಕ ಸರ್ಕಲಿನ ಮತದಾರರಿಗೆ ಧನ್ಯವಾದ

ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಡುಪಿ ತಾಲೂಕಿನ ಹಿರಿಯಡ್ಕ ಸರ್ಕಲಿನ ಸಾರ್ವಜನಿಕ ಸ್ಥಾನಕ್ಕೆ ಕಾಂಗ್ರೆಸ್ ಪರವಾಗಿ ನನ್ನನ್ನು ಅವಿರೋಧವಾಗಿ ಆರಿಸಿದುದಕ್ಕಾಗಿ ಆ ಸರ್ಕಲಿನ ಎಲ್ಲಾ ಮತದಾರರಿಗೂ ನನ್ನ ಕೃತಜ್ಞಪೂರ್ವಕ ಧನ್ಯವಾದಗಳು. ನನ್ನ ಪರವಾಗಿ ತನ್ನ ಉಮೇದ್ವಾರಿಕೆಯನ್ನು ಹಿಂದೆಗೆದ ಶ್ರೀ. ಯು. ಭಾಸ್ಕರ ನೆಟ್ಟರಿಗೂ ನನ್ನ ಅವಿರೋಧ ಆಯ್ಕೆಗೆ ನೆರವಾದ ಇತರ ಎಲ್ಲರಿಗೂ ನನ್ನ ಹಾರ್ದಿಕ ಅಭಿವಂದನೆಗಳಿವೆ. —ಡಾ। ಕೆ. ಕೆ. ಹೆಗ್ಡೆ.



ಶ್ರೀ ಕೊರಡ್ಕಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'

(ENGLISH MADE EASY)

ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.

ಬೆಲೆ: ೧—೮—೦

ಡಾ॥ಶ್ಯಾಂ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'

(HOME REMEDIES)

೨೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿ ಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨-

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—

ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ಪ್ರೆಸ್, ಉಡುಪಿ.

ಮಂಗಳೂರು.

ಮಂಗಳೂರು ವೈದ್ಯಮಂಡಲದ

ವಿಶೇಷ ಸಭೆಯೊಂದು ತಾ. ೨೪-೮-೪೯ರಲ್ಲಿ ವೈದ್ಯಗುರು ಡಾ। ಯಂ. ಆರ್. ಭಟ್ಟರ ಮನೆಯಲ್ಲಿ ಆಯುರ್ವೇದ ಭೂಷಣ ಶ್ರೀ। ಯಂ. ವಿ. ಶಾಸ್ತ್ರಿ ಇವರ ನಿಧನದ ಕುರಿತು ಸಂತಾಪ ಸೂಚನೆಗೋಸ್ಕರ ವೈದ್ಯ ಶ್ರೀ। ಯಂ. ಯಸ್. ಎ. ಶರ್ಮರ್‌ಅಧ್ಯಕ್ಷತೆಯಲ್ಲಿ ಸೇರಿ ದುಃಖ ಸೂಚಕ ಠರಾವನ್ನು ಸರ್ವಾನುಮತದಿಂದ ಮಾಂಜೂರುಮಾಡಿತು.

ಮೆ॥ ನಗರ್‌ಕಾರ್ ಬೇಂಕಿನ ಮೊಕದ್ದಮೆ:—

ಮೋಸ, ಒಳಸಂಚುಗಳ ಆರೋಪ ಹೊರಿಸಿ, ನಮ್ಮ ಸರ್ ಡಿ। ಮೆಚಿ ಸ್ಟೈರ್ ಶ್ರೀ। ಎಸ್. ಯು, ಪರರುರಾವ ನಾಯ್ಕ ಬಿ. ಎ. ಬಿ. ಎಲ್., ಇವರ ಕೋರ್ಟಿನಲ್ಲಿ ವಿಚಾರಣೆಗೆ ಗುರಿಪಡಿಸಿದ್ದ ಮೆಃ ನಗರ್‌ಕಾರ್ ಬೇಂಕ್, ಲಿಮಿಟೆಡ್‌ನ ಮಾಜಿ ಪೇಡೆ ರಾವಯ್ಯ ಸೆಟ್ಟಿ, ಈತನಿಗೆ ಸಜೆ ಮತ್ತು ಜುಲ್ಮಾನೆ ವಿಧಿಸಿ, ಬೇಂಕಿನ ಮಾಜಿ ಏಜೆಂಟ್ ಕೆ. ವಾಸುದೇವ ಭಕ್ತ ಈತನಿಗೆ ಬಿಡುಗಡೆಯಾಯಿತು.

ಈಗ ಕಾಣೆಯಾಗಿರುವ ಬಂದರದ ಸಾಹುಕಾರ ಡಿ. ಮೋಹನ ಪೈ, ಮೆ॥ ನಗರ್‌ಕಾರ್ ಬೇಂಕಿನಲ್ಲಿ ಸಂಕಾಗಳ ಭದ್ರತೆಯ ಮೇಲೆ ಆಗಾಗ ಮುಂಗಡದ ಸಾಲ ಪಡೆದಿದ್ದ; ಅದು ಸುಮಾರು ೫೫,೦೦೦ ಸಾವಿರ ರೂ. ಗಳಷ್ಟಿತ್ತು; ಆದರಲ್ಲಿ ಒಳಸಂಚು, ಮೋಸ ಕೃತ್ಯ ನಡೆದಿತ್ತು; ಈ ನೈಜಸಾರಗಳು ನಡೆದದ್ದು ಸುಮಾರು ತಾ. ೧೫-೮-೩೬ ಮತ್ತು ೨೨-೩-೪೦ರ ಮಧ್ಯಕಾಲದಲ್ಲಿ ಎಂದು ಹೇಳಲಾಗಿದೆ.

ರಾಮಯ್ಯ ಸೆಟ್ಟಿಗೆ ಒಳಸಂಚಿನ ಆರೋಪದ ಸಂಬಂಧ ೬ತಿಂಗಳ ಕ. ಸಜೆ ಮತ್ತು ೧೦೦ರೂ. ಜುಲ್ಮಾನೆ ತಪ್ಪಿದರೆ ಇನ್ನೊಂದು ತಿಂಗಳ ಕ. ಸಜೆಯೂ ಮೋಸ ಕೃತ್ಯದ ಬಗ್ಗೆ ಆತನಿಗೇ ೪ತಿಂಗಳ ಕ್ಕೆ ಸಜೆಯನ್ನು ೨೦೦ರೂ ಜುಲ್ಮಾನೆ ತಪ್ಪಿದರೆ ಇನ್ನೆರಡು ತಿಂಗಳ ಕ. ಸಜೆಯೂ ಆಗಿ ಎರಡನ್ನೂ ಒಟ್ಟಿಗೆ ಅನುಭವಿಸುವಂತೆ ವಿಧಿಸಲಾಗಿದೆ.

ಮಂಗಳೂರು-ಮುಂಬೈಗಳ ನಡುವೆ ಹಡಗು ಚಲಾವಣೆ:—

ಮುಂಬೈ ಮತ್ತು ಮಂಗಳೂರಿಗಳ ನಡುವೆ ಪ್ರಯಾಣಿಕರನ್ನು ಹಾಗೂ ಸರಕುಗಳನ್ನು ಒಯ್ಯುವ ಹಡಗದ ಜಲಾವಣೆಯು ಹಣವಾನಿನ ತೊಂದರೆಗಳಿಲ್ಲದಿದ್ದರೆ ಇದೇ ತಾ. ೧೫-೯-೪೯ರಲ್ಲಿ ಮುಂಬಯಿಂದ ಹೊರಟು ಕರಾವಳಿಯ ಮಾರ್ಗವಾಗಿ ೧೪ಕ್ಕೆ ಮಂಗಳೂರಿಗೆ ತಲಪಿ ೧೫-೯-೪೯ನೇ ಬುಧವಾರ ಬೆಳಿಗ್ಗೆ ೬ಘಂಟೆಗೆ ಮಂಗಳೂರಿನಿಂದ ಹಿಂದಿರುಗಿ ಮುಂಬಯಿಗೆ ಮರು ಪ್ರಯಾಣ ಮಾಡುವುದೆಂದು ತಿಳಿದು ಬರುತ್ತದೆ.

ನೆರೆರಿ ತೆರಗತಿಯೊಂದು ಧಗ್ನೀ

ಮಾಜದ ಆಶ್ರಯದಲ್ಲಿ ೩೦ರಿಂದ ೫ವರ್ಷಗಳಿನ ಮಕ್ಕಳಿಗಾಗಿ ಥಿಯೋಸಾಫಿಕಲ್ ಟ್ಟಡದಲ್ಲಿ ತಾ ೧-೯-೪೯ರಿಂದ ಪ್ರಾರಂಭವಾಗಿ ದೆ. ಪ್ರತಿದಿನ (ಆದಿತ್ಯವಾರ ಬಿಟ್ಟು) ಬೆಳಿಗ್ಗೆ ೯-೩೦ರಿಂದ ೧೨ಗಂಟೆ ವರೆಗೆ ತರಗತಿ ನಡೆಯುವುದು.

DR. OSBORNE'S
Famous
REMEDY-REJUVENATOR
"SUPER D'sELIPHOSE"
with atomised GOLD Now available in India. A boon to the happy & suffering humanity. Contains Vitamins, A. B. C. D.- Valuable literature on REJUVENATION & brilliant appreciative letters from Doctors & gentlemen sent free on request Apply early or ask your chemist Price Rs. 6/- only. (Full course)- Distributors
F. A. SIMONS Esqr.,-M. C.
UDIPI, SOUTH KANARA.

ನಗರಸಭಾ ಸಮಿತಿಯ ಸಭೆಯೊಂದು

ಕಳೆದ ತಾ 29ರಂದು ಶ್ರೀ. ಎಲ್. ಪಿ. ಸಾಯಸರ ಅಧ್ಯಕ್ಷತೆಯಲ್ಲಿ ಜರಗಿ ಪುರಭವನ ಸಮಿತಿಯು ತಾ 1-4-4950ರಿಂದ 5 ವರ್ಷಗಳ ಅವಧಿಯನ್ನು ಕಟ್ಟಡ ನಿರ್ಮಿಸಲು ಕೊಡಬೇಕೆಂದು ಮಾಡಿಕೊಂಡ ವಿನಂತಿಯನ್ನು ನಿರಾಕರಿಸಲಾಯಿತು. ಅಲ್ಲದೆ ಅವರು ಭವನಕ್ಕೆ ಬೇರೆಯೇ ಸ್ಥಳ ನೋಡಬೇಕೆಂಬಾ ಈಗ ಆರಿಸಿದ ಜಾಗದಲ್ಲಿ ನಗರ ಸಭೆಯು ವಿಹಾರೋದ್ಯಾನವೊಂದನ್ನು ನಿರ್ಮಿಸಲಿದೆಯೆಂದೂ ನಿರ್ಣಯಿಸಲಾಯಿತು. ಪೆಂಟ್ಲೆಂಡ್ ಪೇಟೆಯಲ್ಲಿ ರೇಡಿಯೋ ಗುಡಿ ಮತ್ತು ಉದ್ಯಾನವಾದ ಬೆಸೆಯಂದ ಟೋಳೂರು ಮಾರ್ಕೇಟ್ ರಸ್ತೆಯ ಸಮೀಪ ರಚಿಸಬೇಕೆಂದಿದ್ದ ವಿಹಾರೋದ್ಯಾನದ ಯೋಜನೆಯನ್ನು ರದ್ದುಗೊಳಿಸಲಾಯಿತು. ಪಾಕಸ್ಥಾನದಿಂದ ನಗರಕ್ಕೆ ಬಂದ 12ನಿರಾಶ್ರಿತ ಕುಟುಂಬದವರಿಗೆ ಸಹಾಯವಿಧಿಯುವುದಾಗಿ ಕಲೆಕ್ಟರರಿಗೆ ಥರವೆ ಸೆಯಿಯಲಾಯಿತು.

ಉಪನ್ಯಾಸ:—

ಸೈಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ತಾ 30ರಂದು ಇಂಡಿಯಾ ಸರಕಾರದ ನಿವೃತ್ತ ಸ್ಟೆಟಿಸ್ಟಿಕಲ್ ಅಧಿಕಾರಿಗಳಾದ ರಾವ್‌ಬಹದ್ದೂರ್ ಎಂ. ವೈದ್ಯನಾಥನರು 'ಅಮೆರಿಕ ಮತ್ತು ಯುರೋಪುಗಳಲ್ಲಿನ ವಿಶ್ವವಿದ್ಯಾನಿಲಯಗಳ ವಿದ್ಯಾಪ್ರಸಾರ' ಎಂಬ ಕುರಿತು ಉಪನ್ಯಾಸ ಮಾಡಿದರು.

ಉದ್ಘಾಟನೆ:—

ಸ್ಥಳೀಯ. ಬಿ. ಸಿ.ಯ.೦ ಪ್ಯೆಸ್ಕೂಲಿನವರಿಗೆ ಪ್ರತ್ಯೇಕ ಪ್ರಾಥಮಿಕ ಶಾಲೆತೆರೆಯಲು ೬ಸಮಿತಿ ಮಾಡಿರುವುದರಿಂದ ತಾ 31ರಲ್ಲಿ ಹೊಸಶಾಲೆಯು ಉದ್ಘಾಟನೆಯು ಶ್ರೀ ಕರುಣಾಕರ್ (ಮೆನೆಜರ್) ಇವರ ಹಸ್ತದಿಂದ ನಡೆಯಿತು. ಡಾ। ಬಿ. ಆರ್. ಪೈಗೆ ಮತ್ತು ಶ್ರೀ ಹೊಸಬೆಟ್ಟು ರಾಮರಾವ್ ಇವರು ಸಂದರ್ಭೋಚಿತ ಭಾಷಣಮಿತ್ತರು.

ಸರ್ಕ್ಯುಲೇಟಿಂಗ್ ಪುಸ್ತಕಾಲಯ

ಪ್ರೊಂದನ್ನು ಹಂಪನಕಟ್ಟೆಯ ಸ್ಯೂಸ್ ವಿಜಯ ಹೌ ಶ್ರೀ. ಜೋನ್ ಕೆಸ್ಟೆಲಿನೋರವರು ಆರಂಭಿಸಿರುತ್ತಾರೆ.

ದ. ಕ. ಜಿಲ್ಲಾ ಬೋರ್ಡ್ ಉಪೇಂದ್ರಾವರ ಕೊನೆಯ ಪಟ್ಟಿ

ಪ್ರತಿಸ್ಪರ್ಧಿಗಳಿರುವ ಕ್ಷೇತ್ರಗಳು ಮತ್ತು ಉಪೇಂದ್ರಾರರು:—

೧ ಕುಂದಾಪುರ— ಶ್ರೀಗಳಾದ ಎಚ್. ಸರ್ವೋತ್ತಮ ಪೈ [ಕಾಂ] ಮತ್ತು ಮಿನೇಜಸ್ ಇಗ್ನೇಶಿಯಸ್. (ಸ್ವ)

೨ ಉಡುಪಿ:-ಶ್ರೀಗಳಾದ ಪಿ. ಯು. ಎಸ್. ನಾಯ್ಕ್ [ಕಾಂ] ೨. ಸಿದ್ದು ಪೂಜಾರಿ [ಸ್ವತಂತ್ರ-ಈಗ ಹಿಂತೆಗೆದಿರುವರು] ೩ ಕೆ ಯೇಬು ಅಮ್ಮಣ್ಣ [ಸೋಶ್ಯಲಿಸ್ಟ್].

೩ ಕಾಪು:-ಶ್ರೀ ಬಿ. ಬಾಲಕೃಷ್ಣ ಸೆಟ್ಟಿ [ಕಾಂ,] ಮತ್ತು ಶ್ರೀ ಕೃಷ್ಣ ಸುಂತರ್ತಿರಾವ್ [ಸ್ವ]

೪ ಬಾರ್ಕಳ:-[ಜನರಲ್ ಸೀಟ್] ಶ್ರೀ ಮುಂಕುಂದ ಪ್ರಭು [ಕಾಂ] ಮತ್ತು ಶ್ರೀ ಶೇಷಪ್ಪ ಹೆಗ್ಗಡೆ [ಸ್ವ](ಲಿಬ್ರೊಲ್ಡ್‌ಕಾಸ್ಟ್‌ಎ) ಶ್ರೀಗಳಾದ ಸುಂದರ [ಕಾಂ] ಮತ್ತು ಪೆರ್ಣ [ಸ್ವ]

೫ ಮೂಡಬಿದಿದ್ರೆ:- ಶ್ರಿಗಳಾದ ಕೃಷ್ಣಶೆಟ್ಟಿ [ಕಾಂ] ಮತ್ತು ಧರ್ಮ ಸಾಮ್ರಾಜ್ಯಯ್ಯ [ಸ್ವ] (ಮುಸ್ಲಿಂ ಸೀಟ್) ಜ. ಎಫ್. ಎ. ಶಕ್ಕರ್ [ಕಾಂ] ಮತ್ತು ಜ. ಮಿರ್ ಹೈದರ್ [ಸ್ವ]

೬ ಮಂಗಳೂರು:-ಶ್ರೀ ಬಿ. ಗಂಗಾಧರ ದಾಸ್ (ಕಾಂ) ಮತ್ತು ಶ್ರೀ ಬಾಳಪ್ಪ [ಸೋಶಿಯಲಿಸ್ಟ್]

೭ ಸುರತ್ಕಲ್:-ಶ್ರೀ ಬಿ. ಎಸ್. ಸಾಸ್ತರ ಪೈ [ಕಾಂ] ಮತ್ತು ಶ್ರೀ ಎಂ. ವೆಂಟೇಶ ಪೈ [ಸೋಶಿ]

೮ ಗುರುಪುರ:- ಶ್ರೀಸಿದ್ಧನಾಳ ಅಳ್ವ [ಕಾಂ] ಮತ್ತು ಶ್ರೀ ಸೋಮಪ್ಪ [ಸೋಶಿ]

೯ ಕೋಟೇಕಾರ್:-ಶ್ರೀಗಳಾದ ಅನಂತ ಪೈ [ಕಾಂ] ೨ ಎಳ್. ಜ. ಸಾಲೆನ್ಸ್, ೩ ಡಿಸೊಜ ಸೇವಿಯರ್, ೪ ತಿಮ್ಮಪ್ಪಮಲ್ಲಿ [ಸ್ವತಂತ್ರರು]

೧೦ ಬಂಟ್ವಾಳ:-ಶ್ರೀ ಕೇಶವ ಬಾಳಿಗ [ಕಾಂ] ಮತ್ತು ಶ್ರೀ ಅಮ್ಮು ಸೆಟ್ಟಿ [ಕಮ್ಯುನಿಸ್ಟ್]

೧೧ ಕೊಕ್ಕಡ:-ಶ್ರೀ ಎಸ್. ನರಸಪ್ಪಯ್ಯ [ಕಾಂ] ಮತ್ತು ನೇಮಿರಾಜ ಅಜ್ರಿ [ಸ್ವತಂತ್ರ]

೧೨ ವಿಲ್ಲಾ:-ಶ್ರೀಗಳಾದ ವಿಶ್ವಲಿಂಗಪ್ಪ [ಕಾಂ] ಮತ್ತು ಶ್ರೀ ರಾಮಣ್ಣರೈ [ಸ್ವ]

೧೩ ಕುಂಬಳೆ:- ಶ್ರೀಗಳಾದ ದೇವಪ್ಪ ಅಳ್ವ [ಕಾಂ] ಮತ್ತು ಗಣಪತಿ ಕಿನ್ನಿ. (ಸ್ವ)

೧೪ ಕಾಸರಗೋಡು:-(ಹಿಂದೂ ಸೀಟ್ ೧ ಮುಸ್ಲಿಂ ಸೀಟ್ ೧) ಶ್ರೀಗಳಾದ ಎಂ. ಉಮೇಶರಾವ್ [ಕಾಂ] ೨ ಕಾಕೆರ, ೩ ಜ. ಎಚ್. ಎಚ್. ಶಮ್ಮದ್, ೪ ಜ. ಮೊಹಿಂ ರಮ್ಮದ್ ಎಂ ಎಲ್. ಎ.

೧೫ ಮುಳಿಯಾರ್:-ಶ್ರೀ ಗಳಾದ ಬ ಶ್ರೀಧರ ಕಕ್ಕಿಲಾಯ [ಕಾಂ] ೨.ಕಳ ಕೆಲಂಪೆರ ಬ್ಯಾರಿ[ಸ್ವ] ೩ ಅಬ್ದುಲ್ಲಾ ಕಾಸಿ [ಸೋಶಿ] ೪ ನಾರಾಯಣಂಬಿಯಾರ್ [ಸ್ವ]

೧೬ ಪೊಸಡುಗೂರು:-ಜನಾಬ್ ಅಬ್ದುರಹಿಮಾನ್ ಚಿತ್ತಾರಿ; ೨ ಶ್ರೀ ಜಗನ್ನಾಯಕ್. ಯಸ್. ಯನ್. ೩ ಶ್ರೀ ರಜನ್ ಬಿ.

೧೭ಚರ್ಮತ್ತೂರು:-ಶ್ರೀ ಗಳಾದ ಬ ಕೃಷ್ಣನ್ ಎನ್. ಕೆ. ೨ ಜೆಂಜು ಸಿ. ರವಿವರ್ಮ ರಾಜ ಟಿ. ಸಿ.

ಈ ಜಿಲ್ಲಾ ಬೋರ್ಡಿನಲ್ಲಿ ೧೧ ರಿಜರ್ವ್ ಸ್ಥಾನಗಳೂ ಸೇರಿ 44½ ಸ್ಥಾನಗಳು, ಇದರ ಕಾಂಗ್ರೆಸ್ ಉಮೇದುವಾರಿಗಳು ೪೭ಬ್ರಿಟ ವರ ಸರ್ಕಾರಿನಲ್ಲಿ ಉಪ ಚುನಾವಣೆ ನಡೆಯಲಿದೆ.

ಅವಿರೋಧ ಆಯ್ಕೆ. ಕಾಂಗ್ರೆಸಿಗೆ ದೊರತ ಸ್ಥಾನಗಳು

೧ ಮಂಗಳೂರು ತಾಲೂಕು ೧ ಮಿ. ಎನ್. ಪಿ. ಡಿಸೋಜ್ (ಯುರೋಪಿಯನ್ ಸ್ಥಾನ; ಸ್ವತಂತ್ರ); ೨ ಡಾ. ಕೆ. ನಾಗಪ್ಪ ಆಳ್ವ (ಪಾಜೆಮಂಗಳೂರು), ೩ ಡಾ. ಎಸ್. ಜಂಪ (ಮೂಲ್ಕಿ) ೪ ಮಿ. ಎಫ್. ಎಕ್ಕ ಡಿ. ಸಿಂಟೋ (ಕ್ರಿಶ್ಚಿಯನ್ ವಿ. ಸ್ಥಾನ) ಮೂವರು ಕಾಂಗ್ರೆಸ್.

೨ ಕುಂದಾಪುರ ತಾಲೂಕು ೧ ಶ್ರೀಗಳಾದ ವೈ. ಮಂಜಪ್ಪ ಶೆಟ್ಟಿ (ಬೈಂದೂರು) ಕೆ. ಸೂರಪ್ಪ ಶೆಟ್ಟಿ (ವಂಡ್ಸೆ) ೩ ಬಿ. ಮಂಜಯ್ಯ ಹೆಗ್ಗಡೆ (ಬಸ್ರೂರ್) ೪ ಶ್ರೀಮತಿ ಪ್ರಫುಲ್ಲ ಎಸ್. ಆರ್. ಹೆಗ್ಗಡೆ (ಕುಂದಾಪುರ ಮಹಿಳಾ ವಿ.ಸ್ಥಾನ) (ಇವರೆಲ್ಲ ಕಾಂ.

೩ ಉಡುಪಿ ತಾಲೂಕು ಶ್ರೀಗಳಾದ ಎನ್. ಎಸ್. ಸಂಜೀವಪ್ಪಯ್ಯ (ಕೋಟ) ಮಾರ್ಟಿಸ್ ಗ್ರೆಗರಿ ನಜರೇತ್ (ಕ್ರಿ ವಿ. ಸ್ಥಾನ ಕಟ್ಟಾದಿ) ೩ ಶ್ರೀಮತಿ ಗಿರಿಜಾ ಹೆಗ್ಗಡ್ತಿ (ಉಡುಪಿ ಮ. ವಿ. ಸ್ಥಾನ) ಡಾ. ಕೆ. ಕೆ. ಹೆಗ್ಗಡೆ (ಹಿರಿಯಡ್ಕ) ೫ ಶ್ರೀ ವೀರರಾವ್(ಕಟ್ಟಾದಿ)ಇವರೆಲ್ಲಾ ಕಾಂಗ್ರೆಸ್

೪ ಕಾರ್ಕಳ ತಾಲೂಕು ೧ ಶ್ರೀ ಕೃಷ್ಣಯ್ಯ ಸೆಟ್ಟಿ (ಅಜೆಕಾರು) ೨ ಶ್ರೀ ಧರಣಪ್ಪ ಅಧಿಕಾರಿ (ಕಾರ್ಕಳ)ಇಬ್ಬರೂ ಕಾಂಗ್ರೆಸ್.

೫ ಕು. ... ತಾಲೂಕು ಪಟೇಲ ಶ್ರೀ ತ್ಯಾಂಪಣ್ಣ ಸೆಟ್ಟಿ (ಮಂಟೇಪ್ಪರ)

೬ ಪುತ್ತೂರು ತಾಲೂಕು ಶ್ರೀಗಳಾದ ಡಿ. ಪುಟ್ಟು ಸ್ವಾಮಿ (ಬೆಳ್ತಂಗಡಿ) ೨ ಎಂ. ಪದಾಶಿವ ರಾವ್ (ಪುತ್ತೂರು) ೩ ಡಾ. ಕೆ. ಬಾಲಪ್ಪ ಸೆಟ್ಟಿ (ಉಪ್ಪಿನಂಗಡಿ) ೪ ಕೆ. ಮೊಕ್ಟಿಯಮಣ ಗೌಡ (ಸುಳ್ಯ) ೫ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ (ಪುತ್ತೂರು ಮ. ವಿ. ಸ್ಥಾನ) ಇವರೆಲ್ಲ ಕಾಂಗ್ರೆಸ್.

ನೋಟೀಸು

ಪುತ್ತೂರು ಡಿ. ವಿ.ಂ. ಕೋರ್ಟಿನಲ್ಲಿ S. C. 121/1949

ಗಂಗಮ್ಮ — ವಾದಿ
ರಾಮಂಣ ರೈ — ಪ್ರತಿವಾದಿ

ಪ್ರತಿವಾದಿಯು ಕುರಿತ್ತಿ ಮೂರು ಜತ್ತಂ ಣ ಪಕ್ಕರ ಆಳಿಯ, ಉಪ್ಪಿತಾಲ್ಯ ಸಾಮೂರು ಗ್ರಾಮದಲ್ಲಿ ವಾಸ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಪ್ರತಿವಾದಿ ಬರೆಸಿಕೊಟ್ಟ ನೋಟಿನಜಾಬ್ತು ಬಹ ಜ್ಯನಜು ಪಸೂಲು ಪಾಡುವರೆ ನಾದಿಯು ದಾಕಲ್ಲುಗೂಡಿದ ಮೇಲ್ಕಂಡ ವ್ಯಾಜ್ಯವು ತಾ 16-9-1949ಕ್ಕೆ ಇಟ್ಟುತ್ತುವಾದ್ರಿಂದ ಸದ್ರಿ ವ್ಯಾದೆ ದಿವಸ ಮೂರ್ವಾಹ್ನ ಘಂಟೆ 11 ಕ್ಕೆ ನೀವು ಈ ಕೋರ್ಟಿಗೆ ಮುಂದೆ ಹಾಜ್ರಾಗಿ ಉದಹರಿಸಿಕೊಳ್ಳತಕ್ಕದ್ದು. ಇಲ್ಲವಾದಲೆ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ವ್ಯಾಜ್ಯವು ಏಕಪಕ್ಷವಾಗಿ ತೀರ್ಮಾನಿಸಲ್ಪಡುವುದು.

(ಕೋರ್ಟಿನ ಮುದ್ರೆ ಪ್ರಕಾರ)

S. Soorappaya
Vakil for Plff.

ನೊಕ್ಕಾರು: ಪುತ್ತೂರು
ತಾ. 23-8-49

ಹಲವು ವರ್ಷಗಳಿಂದ ಕಲಾಸೇವೆ ನಡೆಸಿ ಮಂಗಳೂರಿನ ಕಲಾಭಿಮಾನಿಗಳ ಆದರಕ್ಕೆ ಪಾತ್ರರಾದ ಶ್ರೀ. ಎಂ. ಎ. ದೇವಡಿಗಾರ್ ಇವರು
ಮಿರ್ಸನ್ ಹೈಸ್ಕೂಲಿನ ಬಳಿ ನೂತನವಾಗಿ ತೆರೆದ
'ಸಂಗೀತ ವಿದ್ಯಾಲಯ'ದ ಸಹಾಯಾರ್ಥವಾಗಿ
ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಸಭಾ,
ಮಂಗಳೂರು— ಇವರು
ಶ್ರೀ ಯಂ. ನಾರಾಯಣ ರಾಯರಿಂದ ಬರೆಯಲ್ಪಟ್ಟ,
ಶ್ರೀ ಯಂ. ಎ. ದೇವಡಿಗಾರರಿಂದ ದಿಗ್ದರ್ಶಿಸಲ್ಪಟ್ಟ
ರಾ ಲ ಚಕ್ರ
ಎಂಬ ಅಧುನಿಕ ಸಾಮಾಜಿಕ ಕನ್ನಡ ನಾಟಕವನ್ನು
ತಾ. 10-9-1949ನೇ ಶನಿವಾರ ರಾತ್ರಿ 9 ಗಂಟೆಗೆ
ಮಿರ್ಸನ್ ಹೈಸ್ಕೂಲಿನ ಸೆಂಟೆನರಿ ಸಭಾಸದನದಲ್ಲಿ
ಶ್ರೀಮಾನ್ ಬಿ. ಗಂಗಾಧರ್‌ದಾಸ್, ಬಿ. ಎ., ಬಿ. ಎಲ್., ಎಡ್ವಕೇಟ್,
ಮತ್ತು ವೈಸ್ ಚೆಯರ್‌ಮೆನ್, ಮುನ್ಸಿಪಲ್ ಕೌನ್ಸಿಲ್, ಮಂಗಳೂರು,
ಇವರ ಅಧ್ಯಕ್ಷತೆಯಲ್ಲಿ ಅಭಿನಯಿಸಲಿರುವರು.

ದ- ಕನ್ನಡ

ಕಟಪಾಡಿ:— ಹರಿಜನ ದಿನಾಚರಣೆಯು ತಾ 30-8-49ರಂದು ಉಡುಪಿ ಸೌತ್ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಮಿಸೆಸ್ ಎಲ್. ಡಿ. ಸೋಜ, ಎಮ್. ಎಲ್. ಟಿ. ಅವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಎಸ್. ವಿ. ಎಸ್. ಹಾ. ಎ. ಶಾಲೆಯಲ್ಲಿ ಸುತ್ತುಮುತ್ತಿನ 5 ಶಾಲೆಗಳ ಸಹಕಾರದೊಂದಿಗೆ ಆಚರಿಸಲ್ಪಟ್ಟಿತು. ಮಟ್ಟು, ಮೂಡಬೆಟ್ಟು, ಯೇಣಗುಡ್ಡೆ ಮೊದಲಾದ ಗ್ರಾಮಗಳ ಹಲವು ಹರಿಜನ ಸ್ತ್ರೀಪುರುಷರು ನೆರೆದಿದ್ದರು. ಇಂತಹ ದಿನಾಚರಣೆಯ ಉದ್ದೇಶ, ಹರಿಜನರ ನಡೆ-ನುಡಿ, ರೀತಿ-ನೀತಿ ಮೊದಲಾದವುಗಳ ಕುರಿತು ಶ್ರೀ. ಕೆ. ವಾಸುದೇವ ಕಾಮತ್ ಮತ್ತು ಶ್ರೀಕೃಷ್ಣ ಮರಕಾಲರು ರುಳುಭಾಷೆಯಲ್ಲಿ ಜೋಥಪ್ರದವಾದ ಭಾಷಣಗಳಿತ್ತರು. ಅಧ್ಯಕ್ಷೆಯರು ಕೂಡಾ ಹರಿಜನರಿಗೆ ಹಲವು ಉಪಯುಕ್ತ ಸಲಹೆಗಳನ್ನಿತ್ತ ಬಳಿಕ ಎಸ್. ವಿ ಎಸ್. ಹಾ. ಎ. ಶಾಲಾ ಬಾಲಕ-ಬಾಲಕಿಯರಿಂದ ಕುಮ್ಮಿ, ಕೋಲಾಟ, ತುಳು ಪ್ರಹಸನ, ಯಕ್ಷಗಾನ ಪ್ರದರ್ಶನಗಳಾಗಿ ಶ್ರೀ ಯು. ರಾಮಚಂದ್ರ ಮಯ್ಯರು ಧನ್ಯವಾದಗಳನ್ನು ಸಮರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ವಿಶ್ವೇಂದ್ರನಗರ:- ಇನ್ನಂಜೆ— ದ. ಕ. ಜಿಲ್ಲಾ ಬೋರ್ಡಿನ ಬರುವ ಚುನಾವಣೆಗೆ ಕಟಪಾಡಿ ಸರ್ಕಲಿನಿಂದ ಕೋಂಗ್ರೆಸ್ ಉಮೇದುವಾರರಾಗಿ ಆವಿರೋಧವಾಗಿ ಆರಿಸಲ್ಪಟ್ಟ ಇನ್ನಂಜೆ 'ಶ್ರೀ ವಾದಿರಾಜ ಗುರುಕುಲ ಸಂಪರಿಂಟಿಂಡೆಂಟರಾದ ಶ್ರೀ. ಪಾ. ಯು. ಶೇಷರಾಯರಿಗೆ ಸದ್ರಿ ಗುರುಕುಲದ ನಿವಾಸಿಗಳು ತಾ. 31-8'49ರಲ್ಲಿ ಶ್ರೀ. ಅನಂತಕೃಷ್ಣಾಚಾರ್ಯ, ಬಿ. ಎ ಬಿ. ಟಿ. ಇವರ ಸನ್ನಿಧ್ಯದಲ್ಲಿ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರಕೂಟವನ್ನೇರ್ಪಡಿಸಿ ಮಾನಪತ್ರವನ್ನರ್ಪಿಸಿದರು.

ಆಲೆವೂರು:— ತಾ- 1-9-49ರಲ್ಲಿ "ಸರ್ವೋದಯ ವಯಸ್ಕರ ಶಾಲಾ" ಪ್ರಾರಂಭೋತ್ಸವವು ದಾ। ವಾಂಗಾಳ ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸ್ಥಳೀಯ ಸುಭೋಧಿನೀ ಉನ್ನತ ಪ್ರಾಥಮಿಕ ಶಾಲಾ ಸಂಚಾಲಕರಾದ ಶ್ರೀ. ಮಂಡಪುರ ಅಚ್ಚಣ್ಣಶೆಟ್ಟಿ ಸದ್ರಿ ಸಂಸ್ಥೆಯನ್ನು ಉದ್ಘಾಟಿಸಿದರು. ಸಭಿಕರ ಪರವಾಗಿ ಶ್ರೀಗಳಾದ ಯಂ. ರಾಮಶೆಟ್ಟಿ, ಕುರ್ಕಾಲು ಸಂಜೀವಶೆಟ್ಟರೇ ಮೊದಲಾದವರು ಸಂಸ್ಥೆಯ ಉದ್ದೇಶ, ಕಾರ್ಯಕಲಾಪಗಳ ವಿಚಾರ ಭಾಷಣವಿತ್ತರು. ಸಂಸ್ಥೆಯ ಸಂಚಾಲಕರೂ ಅಧ್ಯಾಪಕರೂ ಆದ ಶ್ರೀ. ಬಿ. ಸಪ್ತೋತ್ಸವಶೆಟ್ಟರು ಊರವರ ಬೆಂಬಲವನ್ನು ಕೋರಿ ಧಾರಣವಿತ್ತುಮೇಲೆ ಧನ್ಯವಾದ, ಜನಗಣಮನ ಗೀತೆಯೊಂದಿಗೆ ಸಭಾಂತ್ಯವಾಯ್ತು.

ಹಂಗಾರಕಟ್ಟೆ:— ಸ್ಥಳೀಯ ಜೈಹಿಂದ್ ಪುಸ್ತಕ ಭಂಡಾರದ ತೃತೀಯ ವರ್ಧಂತ್ಯುತ್ಸವವು ತಾ. 30-8-49ರಲ್ಲಿ ಶ್ರೀ. ಕಾಂಡೇಶ್ವರ ಗಣಪತಿ ವೆಂಕಟರಮಣ ಚಡಗರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಶ್ರೀಗಳಾದ K. S. R. ಪುಲ್ಲ, P. ಅಚ್ಚಾಪ್ಪ ಚಡಗ, ಲಕ್ಷ್ಮೀನಾರಾಯಣ ಕೆದ್ಲಾಯ ಮೊದಲಾದವರು ಪುಸ್ತಕ ಭಂಡಾರದ ಉಪಯೋಗವನ್ನು ವಿವರಿಸಿದರು.

ನಮ್ಮ ನಾಡಸರಕಾರದವರು ಇತ್ತೀಚೆಗೆ ಮಂಗಳೂರಿನ Circulating Library Schemeನ್ನು ಮೂರು ವರ್ಷಗಳ ಹಿಂದೆಯೇ ಕಾರ್ಯರೂಪಕ್ಕೆ ತಂದು ಬಹಳ ಜನರ ಜ್ಞಾನಾಭಿವೃದ್ಧಿಗೆ ಕಾರಣವಾಗುವಂತೆ ಮಾಡಿದ ಕಾರ್ಯದರ್ಶಿಯವರಿಗೆ ನೆರೆದ ಸಭಿಕರ ಪರವಾಗಿ ಅಧ್ಯಕ್ಷರು ಅಭಿನಂದನೆಗಳನ್ನು ಅರ್ಪಿಸಿದರು.

ಈ ಸಮಾರಂಭದಲ್ಲಿ ನಡೆದ ಮಕ್ಕಳ ಸ್ಪರ್ಧೆಗಳಲ್ಲಿ ಗೆದ್ದ ಸ್ಥಳೀಯ ವಿದ್ಯಾರ್ಥಿ, ವಿದ್ಯಾರ್ಥಿನಿಗಳಿಗೆ ಬಹುಮಾನ ಹಂಚಲಾಯಿತು.

ನಿಂಜೂರು:— ನಿಂಜೂರು ಶ್ರೀ ರಾಮಾ ಎಲಿಮೆಂಟರೀ ಶಾಲೆಯಲ್ಲಿ ತಾ 1-9-49 ನೇ ರಾತ್ರಿ 7ಗಂಟೆಗೆ ಶ್ರೀ. N. ಸಂಜೀವಶೆಟ್ಟಿ ನೇತೃತ್ವದಲ್ಲಿ ಬಾಪೂ ನಯಸ್ಕರ ಶಿಕ್ಷಣಮಂದಿರವನ್ನು ತೆರೆಯಲಾಗಿದೆ. ವಯಸ್ಕರ ಉಪಾಧ್ಯಾಯರಾದ ಶ್ರೀ N. ಹಿರಿಯಣ್ಣತೆಟ್ಟು ವಯಸ್ಕರ ಶಿಕ್ಷಣದ ಮಹತ್ವವನ್ನು ವಿವರಿಸಿದರು ಊರ ಮಹನೀಯರು ಸದ್ರಿ ಶಾಲೆಗೆ ಶುಭವನ್ನು ಕೋರಿದರು. ಆನಂತರ 22ಮಂದಿ ವಯಸ್ಕರನ್ನು ಸೇರಿಸಿಕೊಳ್ಳಲಾಯಿತು ರಾತ್ರಿ ನಿಂಜೂರು ಜೈಹಿಂದ್ ಯಕ್ಷಗಾನ ಕಲಾಮಂಡಳಿಯವರು ಕೃಷ್ಣ ಸಂಧಾನ ಪೌರಾಣಿಕ ಪ್ರಸಂಗವನ್ನು ಅಡಿತೋರಿಸಿದರು.

ಕುರುಕಾಲು:— ಸನಿ ಸಪ್ತಾಹದಲ್ಲಿ ಗ್ರಾಮದ ಪ್ರತಿಮನೆಯವರು ವಿದ್ಯಾವಂತರಾಗಿ ಆತ್ಯಧಿಕ ಸನಿಗಳನ್ನು ನೆಡಬೇಕಾಗಿ, ಗ್ರಾಮಾಭಿವೃದ್ಧಿ ಸಂಘದವರು ಪ್ರಚಾರಮಾಡಿದ ಮೇರೆಗೆ, ನೆಟ್ಟಿ ಗಿಡಸನಿಗಳ ಪೋಷಣೆಯಾರಿತೆಗೆಯಲು, ಕುರುಕಾಲು ಗ್ರಾಮದಲ್ಲಿ ಜುಮ್ಲಾ 11160ಸನಿಗಳು ನೆಡಲ್ಪಟ್ಟಿವೆ. ಆದರೆ ಕಳದವರ್ಷದ ಸನಿಸಪ್ತಾಹದಲ್ಲಿ ಈ ಗ್ರಾಮದಲ್ಲಿ ನೆಟ್ಟ ಜುಮ್ಲಾ ಸನಿಗಳು 7070ಆಗಿತ್ತು ಎಂಬುದಾಗಿ ಕುರುಕಾಲು ಗ್ರಾಮಾಭಿವೃದ್ಧಿ ಸಂಘದ ಪ್ರೆಸಿಡೆಂಟರು ತಿಳಿಸುತ್ತಾರೆ.

ಕಾರ್ಕಳ:— ಕಳದ ತಾ 29ರಂದು ಕಾರ್ಕಳ ತಾಲೂಕು ವೈದ್ಯ ಮಂಡಳದ ಸಭೆಯೊಂದು ಡಾ। ಕೆ. ವಿ. ಕೆ. ಉಪಾಧ್ಯಾಯರ ಅಧ್ಯಕ್ಷತೆಗಾಲ್ಲಿ ಜರಗಿ ಆಯುರ್ವೇದಕ್ಕೆ ಅಪಾರ ಸೇವೆಸಲ್ಲಿಸಿ ಕರ್ನಾಟಕಕ್ಕೆ ಆಮರ ಕೀರ್ತಿಗಳಿಸಿಕೊಟ್ಟ ಆಯುರ್ವೇದ ಭೂಷಣ ಎಂ. ವಿ. ಶಾಸ್ತ್ರಿಗಳ ಸ್ಮಿತನಕ್ಕಾಗಿ ಹುಟುವಿಸೂಚಿಸಿ ನಿರ್ಣಯಮಾಡಲಾಯಿತು.

ಕುಂಬ್ಳೆ:— ಬೋರ್ಡು ಸರ್ವಿಸಿಗೆ ರಾಜೀನಾಮೆಯಿತ್ತ ಅಂಗಡಿಮೊಗರು H. E. ರ ಲೆಯ ಮುಖ್ಯಾಧ್ಯಾಪಕ ಶ್ರೀ. ಕೆ. ಗಣಪತಿಭಟ್ಟರನ್ನು ತಾ 3ರಂದು ಜನಾಬ್ ಎ. ಕೆ. ಕೆರೂಲ್ ಸಾಹೇಬರ ಅಧ್ಯಕ್ಷತೆಯಲ್ಲಿ ಊರವರು ಬೀಳ್ಕೊಂಡರು. ಈ ವರುಷದ ಬತ್ತದ ಬೆಳೆಯು ಆಸ್ಪೊಂದು ಜೆನ್ನಾಗಿಲ್ಲವೆಂದು ಕಂಡುಬರುತ್ತದೆ.

ನಾವೂರು:— ಒಂದುಕಾಲದಲ್ಲಿ ವಾಹನ ಸಂಚಾರಕ್ಕೆ ಯೋಗ್ಯವಾಗಿದ್ದ ಬೆಳ್ತಂಗಡಿ ನಾವೂರು ರಸ್ತೆಯು ಇತ್ತೀಚೆಗೆ ತೀರಾ ಹಾಳುಬಿದ್ದಿರುವುದು, ಜಂಡಿ ಮತ್ತು ಅಕ್ಕಪಕ್ಕದಲ್ಲಿ ಕಾಡು ಬೆಳೆದಿರುವುದು. ಹಳ್ಳಿಗಳಿಗೆ ಸಂಚಾರಾನುಕೂಲತೆಗಳನ್ನು ಹೆಚ್ಚಿಸಬೇಕಾದ ಈ ಕಾಲದಲ್ಲಿ ಇದ್ದ ರಸ್ತೆಗಳನ್ನು ದುರಸ್ತಿಪಡಿಸದಿರುವುದು ಹಳ್ಳಿಗರ ದೌರ್ಭಾಗ್ಯವೆಂದೂ ಇನ್ನಾದರೂ ಸಂಬಂಧಪಟ್ಟವರು ಈ ಕಡೆಗೆ ಗಮನಕೊಡಬೇಕೆಂದೂ ಬಾತ್ಮೀದಾರರೊಬ್ಬರು ತಿಳಿಸುತ್ತಾರೆ.

ಪುತ್ತೂರು:— ಕಳೆದ ತಾ ೨೮ನೇ ಆದಿತ್ಯವಾರ ಪುರಜನರ ಸಭೆಯೊಂದು ಸ್ಥಳೀಯ ಸಹಕಾರಿ ಕಟ್ಟಡದಲ್ಲಿ ಶ್ರೀಯುತರುಗಳಾದ ಶಿವರಾಮ ಕಾರಂತ, ಯಂ. ಸದಾಶಿವ ರಾವ್ ಅವರುಗಳ ನೇತೃತ್ವದಲ್ಲಿ ಸಾಯಂಗಂಟೆ ಸಮಯಕ್ಕೆ ಸೇರಿತ್ತೆಂದೂ, ಹೆಣ್ಣು ಹುಡುಗಿಯರಿಗೆ ಹ್ಯಾಸ್ಕೂಲಿನಲ್ಲಿ ಪ್ರವೇಶ ದೊರಕದ ವಿಚಾರದಲ್ಲಿ ವಿಚಾರ ವಿನಿಮಯ ನಡೆದು ಜಾತೀಯ ಸಂಸ್ಥೆಯ ಮೇಲ್ವಿಚಾರದಲ್ಲಿ ನಡೆಸುತ್ತಿರುವ ಸ್ಥಳೀಯ ಸೇಂಟ್ ವಿಕ್ಟರ್ಸ್ ಹುಡುಗಿಯರ ಹ್ಯಾಸ್ಕೂಲಿಗೆ ಹೆತ್ತವರು ತಮ್ಮ ಮಕ್ಕಳನ್ನು ಕಳುಹಿಸಲು ಒತ್ತಾಯಮಾಡಲು ಬರುವುದಿಲ್ಲವೆಂದೂ, ಸಾರ್ವಜನಿಕರ ಸಹಕಾರದಿಂದ ನಡೆಯುವ ಸ್ಥಳೀಯ ಹ್ಯಾಸ್ಕೂಲಿನಲ್ಲಿ ಇಚ್ಛೆ ಇರುವ ಎಲ್ಲಾ ಹುಡುಗಿಯರನ್ನು ಸೇರಿಸಿಕೊಳ್ಳುವ ಅನುಕೂಲತೆ ಮಾಡಬೇಕೆಂದೂ, ವಿದ್ಯಾ ಮಂತ್ರಿಗಳಿಗೂ, ಡ್ಯಾರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರೆಕ್ಷನ್ ಅವರಿಗೂ ಮನವಿಗಳನ್ನು ಸಾರ್ವಜನಿಕರು ಶ್ರೀ ಶಿವರಾಮ ಕಾರಂತರ ಮುಖಾಂತರ ಕಳುಹಿಸಿಕೊಟ್ಟಿರುವರೆಂದೂ ಗೊತ್ತಾಗಿದೆ.

ಬೊಂಬಾಯಿ

ಕಾಮಗಾರ ಧರ್ಮಾರ್ಥ ರಾತ್ರಿ ಶಾಲೆ

ಬೊಂಬಾಯಿಯಲ್ಲಿರುವ ದಕ್ಷಿಣ ಕನ್ನಡದ ಬಡಕೈತರ 'ಕಾಮಗಾರಿ' ಅವಿದ್ಯಾವಂತ ಮಕ್ಕಳಿಗಾಗಿ ಈಗಾಗಲೇ ಮಾಟುಂಗ ಕೇಂದ್ರಗಳಲ್ಲಿ ರಾತ್ರಿಶಾಲೆಗಳು ತೆರೆಯಲ್ಪಟ್ಟು ಮುನ್ನೂರಕ್ಕೆ ಸಿಕ್ಕಿ ವಿದ್ಯಾರ್ಥಿಗಳು ಹೆಂದಿಯನ್ನೂ ಆಧ್ಯಾತ್ಮವಾಡುತ್ತಿರುವರು. ಇನ್ನೂ ಕೆಲವು ಕೇಂದ್ರಗಳಲ್ಲಿ ರಾತ್ರಿ ಶಾಲೆಗಳು ತೆರೆಯಬೇಕೆಂಬ ಬೇಡಿಕೆಗಳು ಬಲವಂತವಾಗಿರುವುದರಿಂದ ವಿದ್ಯಾವಂತ ತರುಣರು ಉಪಾಧ್ಯಾಯರಾಗಿಯೂ ಸಿರಿವಂತರು ಕೊಡುಗೈಯಿಂದ ಆರ್ಥಿಕ ಸಹಾಯ ನೀಡಿಯೂ ಪ್ರೋತ್ಸಾಹಿಸಬೇಕೆಂದು ಕಾಮಗಾರ ಧರ್ಮಾರ್ಥ ರಾತ್ರಿಶಾಲಾ ಸಮಿತಿಯು ವಿನಂತಿಯಿದೆ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.



ನವಜೀವನ ಎಂಬ ಸೂತಿಕಾ ರಸಾಯನ

ಲಿಮಿಸ್ಟಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೭ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಳಂತಿಪನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದ ಕ
ಸ್ಯಾಕಿಸ್ಟರು. ಡಾ। ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ESTD. 1926
KROWN RUBBER STAMP CO.
Mfrs of
RUBBER STAMPS
ENGRAVERS
BALMATTA ROAD. MANGALORE. S.K

Approved firm by the Govt. of Mysore
Certificated by theA gent of the Govt. of Cylone & Indina.

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಧ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೇರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:— ಹೆರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ತಯಾರಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಮುಲ್ಕಿ ಧಾರ್ಮಸಿ,—ಮುಲ್ಕಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರಸ್ಸ್ ಆರ್ ಎಲ್ ಕವಲಾಪುರ ,ಕೆಮಿಸ್ಟ, ಹಾವೇರಿ ಬ್ಯಾಡಗಿ

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷ್ನರಿಗಳು
ದೊರೆಯುತ್ತವೆ.
ಬೆಲೆ. ರೂ. 4 8 0
ಸಿರಿಗನ್ನಡ ಆರ್ಥಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಆಥವಾ
ನವಯುಗ ಆಫೀಸು, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಪಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಣಿ ವ್ಯಾಸರಾಯರ್ಯ,
ರಥಬೀದಿ, ಉಡುಪಿ.

ಕರ್ಣಾಟಕದ ಆಯುರ್ವೇದ ಭೂಷಣ ಬ್ರಹ್ಮಶ್ರೀ ಯಂ. ವಿ. ಶಾಸ್ತ್ರಿಗಳವರು

ಶ್ರೀ ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರಿಗಳವರ ಪೂರ್ಣ ನಾಮವು ಮಂಗಳೂರು ವೆಂಕಟೇಶ ಶಾಸ್ತ್ರಿಗಳೆಂದಾಗಿರುತ್ತದೆ. ಅವರ ಜನ್ಮತಾ. 24-6-1881 (ಪಿಶಂವತ್ಸರದ 11 ಸಲುವ ಮಿಥುನ ಮಾಸ ಶುಕ್ರವಾರ) ದಿನ. ಮಂಗಳೂರಿಂದ ಸುಮಾರು 24ಮೈಲು ಉತ್ತರದಲ್ಲಿರುವ ಇನ್ನ ಕ್ಯಾದಿಗೆ ಎಂಬ ಮನೆತನಕ್ಕೆ ಸೇರಿದ ಸ್ಮಾರ್ತಬ್ರಾಹ್ಮಣರ ಕುಲದಲ್ಲಿ ನಾರಾಯಣಶರ್ಮ ಮತ್ತು ಕಾವೇರ್ಯಮ್ಮನವರಿಗೆ ಜನಿಸಿದರು. ಇವರ ತೀರ್ಥರೂಪರು ಬಹಳ ಚಿಕ್ಕ ವಯಸ್ಸಿನಲ್ಲಿಯೇ ಮೃತರಾಗಿದ್ದುದರಿಂದ ಇವರ ವಿದ್ಯಾಭ್ಯಾಸಕ್ಕೆ ಕಷ್ಟವುಂಟಾಗದಿತು. ಇವರ ಬಾಲ್ಯ ವಿದ್ಯಾಭ್ಯಾಸವು ಅಜ್ಜಿಯ ಗ್ರಾಮ ಶಾಲೆಯಲ್ಲಿ ಆಗಿತ್ತು. ನಂತರ ಇವರು ಕೆಲವು ಸಮಯ ನಮ್ಮ ಜಿಲ್ಲೆಯಲ್ಲಿ ಪ್ರಖ್ಯಾತ ಹರಿದಾಸರಾಗಿದ್ದ ಶಾಮಂಜೆ ಲಕ್ಷ್ಮೀನಾರಾಯಣಪ್ಪಯ್ಯನವರಲ್ಲಿ ಕೆಲವುಕಾಲ ಕಾವ್ಯವ್ಯಾಸಂಗ ಮಾಡಿದ್ದರು. ಆ ಕಾಲದಲ್ಲಿ ಹೆಚ್ಚಿನ ಸಂಸ್ಕೃತ ಕಲಿಯುವರಿಗೆ ಈಗಿನಂತೆ ನಮ್ಮ ಜಿಲ್ಲೆಯಲ್ಲಿ ಸೌಕರ್ಯವಿರಲಿಲ್ಲವಾದ್ದರಿಂದ ದೇಶಾಂತರಕ್ಕೆ ಹೋಗಬೇಕಾಯಿತು. ಸುಮಾರು 13ನೇ 14ನೇ ವಯಸ್ಸಿನಲ್ಲಿ ಒಬ್ಬಂಟಿಗನಾಗಿ ಮೈಸೂರಿಗೆಹೋಗಿ ಅಲ್ಲಿ ಕೆಲಕಾಲ ಸಂಸ್ಕೃತ ಅಭ್ಯಾಸಮಾಡಿಕೊಂಡು ಅಲ್ಲಿಂದ ತನ್ನ ಗುರುಗಳ ಬೋಧನೆ ಮೇರೆಗೆ ಕಾಶಿಗೆ ಹೋದರು. ಕಾಶಿಯಲ್ಲಿ ಸಂಸ್ಕೃತ, ಸಾಹಿತ್ಯ, ವ್ಯಾಕರಣ ಮತ್ತು ವೇದಾಂತಾದಿ ಗ್ರಂಥಗಳನ್ನು ವ್ಯಾಸಂಗಮಾಡಿ ಅಲ್ಲಿಯ ವಿಶೇಷ ವಿದ್ವತ್ ಪರೀಕ್ಷೆಯಲ್ಲಿ ಪ್ರಥಮ ತರಗತಿಯಲ್ಲಿ ಉತ್ತೀರ್ಣರಾದರು ಆ ಮೇಲೆ ಕಲ್ಕತ್ತ ಮೊದಲಾದ ಉತ್ತರ ಹಿಂದುಸ್ಥಾನದ ಪ್ರಾಮುಖ್ಯ ನಗರಗಳನ್ನು ನೋಡಿಕೊಂಡು ಮದ್ರಾಸಿಗೆ ಬಂದರು ಮದ್ರಾಸಿನಲ್ಲಿ ಇವರಿಗೆ ವೈದ್ಯರತ್ನ ಪಂಡಿತ ಡಿ. ರಾಜಗೋಪಾಲಾಚಾರ್ಯ ಮಹಾಶಯರ ಪರಿಚಯವಾಯಿತು. ಇವರ ಅಪಾರ ಪಾಂಡಿತ್ಯವನ್ನು ನೋಡಿ ಪಂಡಿತ ಗೋಪಾಲಾಚಾರ್ಯರು ಇವರನ್ನು ಆಯುರ್ವೇದ ಕಾಲೇಜಿನಲ್ಲಿ ಸೇರಿಸಿದರು. ಶ್ರೀ ಶಾಸ್ತ್ರಿಗಳವರು ಅಲ್ಲಿ ಸುಮಾರು ನಾಲ್ಕು ವರ್ಷಕಾಲ ವ್ಯಾಸಂಗಮಾಡಿ ಆಯುರ್ವೇದ ಭೂಷಣ ಪರೀಕ್ಷೆಯಲ್ಲಿ 1910ನೇ ಇಸ್ವಿಯಲ್ಲಿ ಪ್ರಥಮ ತ್ರೈಣಿಯಲ್ಲಿ ಉತ್ತೀರ್ಣರಾದರು. ಅದೇ ವರ್ಷ ಮಂಗಳೂರಿಗೆ ಬಂದು ತನ್ನ ವೈದ್ಯಾಭ್ಯಾಸವನ್ನು ಪ್ರಾರಂಭಿಸಿದರು. ಆ ಕಾಲದಲ್ಲಿ ಸುಸಿಕ್ಷಿತ ನಗರದವರಲ್ಲಿ ಆಯುರ್ವೇದವು ಶಾಸ್ತ್ರೀಯ ವೈದ್ಯಶಾಸ್ತ್ರವೆಂದು ಪ್ರಮಾಣೀಕರಿಸಿದವರೇ ಇವರು ತನ್ನ ವೈದ್ಯಶಾಲೆಯನ್ನು ಆಂಗ್ಲವೈದ್ಯರಂತೆ ಕ್ರಮವರಿಸಿ ಆರಂಭಿಸಿ ಜನತೆಗೆ ಆಯುರ್ವೇದದಲ್ಲಿ ಅಭಿಮಾನವನ್ನು ಹುಟ್ಟಿಸಿ ಇಂದಿಗೆ ಆಯುರ್ವೇದ ವೈದ್ಯ ಬಂಧುಗಳಿಗೆ ಮೇಲ್ಪಂಗ್ತಿಯನ್ನು ಪ್ರಕಾಶಿಸಿಟ್ಟವರು ಇವರೇ. ಇವರು 1930ನೇ ಇಸ್ವಿಯಲ್ಲಿ ತನ್ನ ಗುರುವರ್ಯರಾದ ವೈದ್ಯರತ್ನಪಂಡಿತ ಗೋಪಾಲಾಚಾರ್ಯರವರ ಪುಣ್ಯ ಹೆಸರಿನಲ್ಲಿ ಕಛ್ಚಿಯಲ್ಲಿ ಗೋಪಾಲ ಭೇಷಜಾಶ್ರಮವೆಂಬ ಚಿಕಿತ್ಸಾಶ್ರಮವು ತೆರೆದರು. ಆದರ ಶಾಖಾರೂಪವಾಗಿ ಜೇಡಿಗುಡ್ಡೆಯಲ್ಲಿ ಔಷಧಗೃಹವನ್ನು ತೆರೆದು ನಡಿಸಿಕೊಂಡು ಬರುತ್ತಿದ್ದರು. ಸಂಸ್ಕೃತ, ಸಾಹಿತ್ಯ, ವ್ಯಾಕರಣ, ವೇದಾಂತ ಮತ್ತು ಆಯುರ್ವೇದದಲ್ಲಿ ಶಾಸ್ತ್ರಿಗಳನ್ನು ಮೀರುವವರು, ದಕ್ಷಿಣ ದೇಶದಲ್ಲಿಯೇ ಇಲ್ಲವೆಂದು ಹೇಳಿದರೂ ತಪ್ಪಾಗದು. ಇವರು ತಮಿಳು, ತೆಲುಗು, ಮಲೆಯಾಳ, ಕೊಂಕಣಿ ಮೊದಲಾದ ಅನೇಕ ಭಾಷೆಗಳನ್ನು ಅರಿತವರಾಗಿದ್ದರು. ಸಂಸ್ಕೃತ, ಉತ್ಕೃಷ್ಟ ದೇಶದ ಸ್ವಚ್ಛ ಹಿಂದುಸ್ಥಾನಿ, ಮತ್ತು ಕನ್ನಡದಲ್ಲಿ ಹೆಚ್ಚಿನ ವಾಕ್ಚಾತುರ್ಯವಿತ್ತವಿತ್ತು. ಇವರು ಆಯುರ್ವೇದ ಅಭ್ಯಾಸಿಗಳಲ್ಲಿ ದಕ್ಷಿಣ ಕರ್ನಾಟಕ ಮಾತ್ರವಲ್ಲ, ದಕ್ಷಿಣ ಹಿಂದುಸ್ಥಾನದಲ್ಲಿಯೇ ಸುಪ್ರಸಿದ್ಧಿಯನ್ನು ಹೊಂದಿದ್ದರು. 1927 ವರ್ಷದಲ್ಲಿ ನಮ್ಮ ಈ ಕನ್ನಡ ಜಿಲ್ಲೆಯಲ್ಲಿ ಅಧ್ವೈತ ವೇದಾಂತವನ್ನು ಪ್ರಚಾರ ಮಾಡುವುದಕ್ಕೋಸ್ಕರ 'ಅದ್ವೈತ ಸಮಿತಿ' ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿದ ಸ್ಥಾಪಕರಲ್ಲೊಬ್ಬರಾಗಿದ್ದೆ, ಸಮಿತಿಯ ಆಶ್ರಯದಲ್ಲಿ ಸ್ಥಾಪಿಸಲ್ಪಟ್ಟ ಉಚ್ಚಾಲದ ಅದ್ವೈತಾಶ್ರಮದ ಸ್ಥಳವನ್ನು ಸಮಿತಿಗೆ ಉಚಿತವಾಗಿ ಕೊಟ್ಟರುವರು. ಅಲ್ಲದೆ ಕಟ್ಟಡ ಕಟ್ಟಿಸುವುದಕ್ಕೆ ಅಪಾರ ಧನ ಸಹಾಯ ಮಾಡಿ ಅದ್ವೈತಾಶ್ರಮದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಶಿಲಾ ವಿಗ್ರಹವನ್ನು ಸ್ಥಾಪಿಸಿದರು. ಅಲ್ಲದೆ ಇವರು ಅನೇಕ ಶಿಲಾ ಶಾಸನ ಮತ್ತು ಹಳೆ ಗ್ರಂಥಗಳ ಸಂಶೋಧನೆಗಳಿಂದ ತನ್ನನ ರಿಗೂ ಇತರರಿಗೂ ತನ್ನ ಮತದ ತ್ರೈಕ್ಯತೆಯು ಸ್ವಯಕ್ತವಪಡಿಸಿ ಶ್ರೀಮಠ ಜಗದ್ಗುರು ಶೃಂಗೇರಿ ಮಠದಲ್ಲಿ ಗೌರವವನ್ನು ಹೊಂದಿ ಕನ್ನಡ ಜಿಲ್ಲೆಯ ಶ್ರೀಮಠ ಪುಣ್ಯ ಕೆಲವು ಕಾಲ ಬಿಟ್ಟು ಹೋದ ಸಂಬಂಧವನ್ನು ಪುನರು ಜ್ಜೀವನಗೊಳಿಸಿರುತ್ತಾರೆ.

ಶಾಸ್ತ್ರಿಗಳು ಬಿಜಾಪುರ, ಬಿಕಾನೀರ್, ಮೈಸೂರು ಮೊದಲಾದ ಸ್ಥಳಗಳಲ್ಲಿ ಜರಗಿದ ಅಖಿಲ ಕರ್ನಾಟಕ ಆಯುರ್ವೇದ ಮಂಡಲದಲ್ಲಿಯೂ ಅಖಿಲ ಹಿಂದುಸ್ಥಾನ ಆಯುರ್ವೇದ ಮಹಾ ಮಂಡಲದಲ್ಲಿಯೂ ಅಧ್ಯಕ್ಷ ಪದವಿಯನ್ನು ವಹಿಸಿ ತನ್ನ ವಿದ್ವತ್ತನ್ನು ಇಡೀ ಹಿಂದುಸ್ಥಾನದಲ್ಲಿ ಪ್ರಸರಿಸಿರುತ್ತಾರೆ.

ಅದೂ ಅಲ್ಲದೆ ಅವರುಸ್ಥಳೀಯ ವೈದ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ನಿಖಿಲ ಕರ್ನಾಟಕ ವೈದ್ಯ ಮಂಡಲದ ಮತ್ತು ನಿಖಿಲ ಭಾರತ ಆಯುರ್ವೇದ ಮಹಾ ಮಂಡಲದ ಆಜೀವ ಸದಸ್ಯರಾಗಿ ನಿಖಿಲಭಾರತ ಆಯುರ್ವೇದ ಪಾರದ ಮದ್ರಾಸ್ ಗವರ್ನ್‌ಮೆಂಟ್ ಆಯುರ್ವೇದ ಕಾಲೇಜಿನ ಮತ್ತು ಮೈಸೂರು ಗವರ್ನ್‌ಮೆಂಟ್ ಆಯುರ್ವೇದ ಕಾಲೇಜಿನ ಪರೀಕ್ಷಕರಲ್ಲೊಬ್ಬರಾಗಿಯೂ ಕೂಡಾ ಇದ್ದರು. ಪ್ರತಿ ವರ್ಷವೂ ಧರ್ಮಸ್ಥಳದಲ್ಲಿ ನಡಿಯುವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಜೈನ, ಬುದ್ಧಮತ್ತು ಅದ್ವೈತ ಮೊದಲಾದ ಧರ್ಮಗಳ ವಿಷಯದಲ್ಲಿ ಸ್ವರಿಸ್ಮವಾದ ಭಾಷಣಗಳನ್ನು ಮಾಡುತ್ತಿದ್ದರು. ಪೂರ್ವ



ತಯಾರಿ ಇಲ್ಲದೇನೇ ಸಂಸ್ಕೃತ, ಕನ್ನಡ, ಇ ಹಿಂದಿಯಲ್ಲಾಗಲೀ ಬೊಡ್ಡ ವಿದ್ವಾಂಸರ ಮಹಾ ಸಭೆಗಳಲ್ಲಿ ಭಾಷಣ ಮಾಡುವ ಅಪಾರ ವಾಕ್ಪಟುತ್ವವು ಅವರಿಗಿತ್ತು.

ರೋಗಿಗಳ ಚಿಕಿತ್ಸೆಯೇ ತನ್ನ ದೇವರ ಪೂಜೆಯೆಂದು ತಿಳಿದಿದ್ದರು. ಪ್ರಯೋಜನ ವಿಲ್ಲವೆಂದು ಬೇರೆ ವೈದ್ಯರು ಬಿಟ್ಟ ರೋಗಗಳನ್ನು ಚಿಕಿತ್ಸೆ ಮಾಡಿ ಶಾಸ್ತ್ರಿಗಳು ಕೃತಕೃತ್ಯರಾಗಿದ್ದಾರೆ. ಇವರು ಸಾಧಾರಣ 1922 ರಿಂದ ಆಂತ್ಯದ ವರೆಗೂ ಸತತ ಬಾದಿಧಾರಿಗಳು, ಅತ್ಯಂತ ಉದಾರ ಹೃದಯಿಗಳು. ಬಡವರಿಗೆ ಶಕ್ತಿಮೀರಿ ದಾನಮಾಡುತ್ತಿದ್ದರು. ಎಷ್ಟೋ ವಿದ್ಯಾರ್ಥಿಗಳಿಗೆ ಮತಭೇದವಿಲ್ಲದೆ ಕ್ರತಿಂಗಳು ಸ್ವಲ್ಪಮಟ್ಟಿಗೆ ಧನಸಹಾಯ ಮಾಡುತ್ತಿದ್ದರು. ಇವರ ವೈದ್ಯಾಶ್ರಮಕ್ಕೆ ಧರ್ಮಾಸ್ಪತ್ರೆಗಳಂತೆ ರೋಗಿಗಳು ಕಿಕ್ಕಿರಿದು ಬರುತ್ತಿದ್ದರು ಇದಕ್ಕೆಲ್ಲ ಸುಶಿಕ್ಷಿತ ಚಿಕಿತ್ಸೆಯೇ ಕಾರಣ ಪ್ರತಿನಿಧಿ ತನ್ನ ಗೋಸಾಲ ಭೇಷಜಾಶ್ರಮದಲ್ಲಿ ಎಷ್ಟೆಷ್ಟು ರೋಗಿಗಳು ಯಾವಯಾವ ಸಮಯಗಳಲ್ಲಿ ಗಣನೆಯೊಂದಿಟ್ಟಿರುತ್ತಾರೆ ಎಂಬ ದೊಡ್ಡ ಪುಸ್ತಕವನ್ನು ಪುಸ್ತಕ ರೂಪವಾಗಿ ಬರೆದು, ಜನತೆಗೆ ಆಯುರ್ವೇದದ ಮಹತ್ವವನ್ನು ಮನಗಾಣಿಸಿರುತ್ತಾರೆ ಇವರ ಸುಪ್ರಸಿದ್ಧ "ನವಜೀವಾತು" ಮತ್ತು "ಕರ್ಪೂರನಿಶ್ರೇಣಿ ದರಮೂಲ" ಗಳೆಂಬ ಬಾಣಂತಿ ರಸಾಯನಗಳು ಹಿಂದುಸ್ಥಾನವಲ್ಲದೆ ಹೊರದೇಶಗಳಲ್ಲಿಯೂ ಪ್ರಸಿದ್ಧಿಯನ್ನು ಪಡೆದಿವೆ.

ಇವರು ತನ್ನ ಮೂವತ್ತೈದು ವರ್ಷಗಳ ವೈದ್ಯಾಭ್ಯಾಸಗಳಲ್ಲಿ ಸಹಸ್ರಗಟ್ಟಿಲೆ ಧನ ಸಂಪಾದಿಸಿದರೂ ಆ ಹಣವನ್ನು ಕೇಬುಬಿಡದೆ ಪಿನಿಯೋಗಿಸುತ್ತಿದ್ದರಲ್ಲದೆ ತನ್ನ 14 ಮಂದಿ ಪುತ್ರಪುತ್ರಿಯರಿಗೆ ಉಚ್ಚ ಶಿಕ್ಷಣವನ್ನು ಕೊಟ್ಟು ಅವರನ್ನು ಸರಿಯಾದ ದಾರಿಗೆ ಹಚ್ಚಿದ್ದಾರೆ. ಶಾಸ್ತ್ರಿಗಳಿಗೆ 2 ಯಾ 3 ವರುಷಗಳ ಹಿಂದೆ ಸ್ವಲ್ಪ ಪರಿಣಾಮ ಶೂಲೆಯು ಉದ್ಭವಿಸಿತ್ತು. ಆದರೆ ಈಗ 2 ವರ್ಷಗಳಿಂದ ಅದು ಗುಣವಾಗಿತ್ತು. ಆದೇ ಶೂಲೆಯು ಅವರ ಅಂತ್ಯ ಕಾಲದಲ್ಲಿ ಸ್ವಲ್ಪಮಟ್ಟಿಗೆ ತೋರಿ ಮಾಯವಾಯಿತು. ತನ್ನ 69ನೇ ವಯಸ್ಸಿನಲ್ಲಿ ಕಾ. 22ನೇ ಆಗೋಸ್ತು 1949ನೇ ಸೋಮವಾರ ಸಾಯಂಕಾಲ ಸಾಧಾರಣ 5 ಘಂಟೆ ಸಮಯಕ್ಕೆ ಹೃದಯಸ್ತಂಭನದಿಂದ ತನ್ನ ಇಹಲೋಕ ಯಾತ್ರೆಯನ್ನು ತೀರಿಸಿದರು.

ಈ ಮಹಾ ಪಂಡಿತರ ಅನಿರೀಕ್ಷಿತ ನಿಧನ ದಿಂದಾಗಿ ಆಯುರ್ವೇದ ಪ್ರಪಂಚಕ್ಕೆ ದೊಡ್ಡ ಬಾದ ನಷ್ಟವು ಸಂಭವಿಸಿಯಿದೆ ಎಂದು ಹೇಳಲು ವಿಷಾದಪಡುತ್ತೇನೆ. ಈ ಮಹಾಪುರುಷರ ಶಿಷ್ಯತ್ವವನ್ನು ಪರಮಾತ್ಮನು ನನಗೆ ಪದಗಿಸಿಕೊಟ್ಟಿದ್ದಕ್ಕಾಗಿ ದೇವರಿಗೆ ಧನ್ಯವಾದವನ್ನು ಅರ್ಪಿಸುತ್ತೇನೆ.

ಡಾ। ಎಂ. ಎಸ್. ಎ ಕೆಮ್ಮಣ್ಣು.

The Southern India Apex Bank Limited.
Head Office: Kalsank, UDIPI.

NOTICE

Is hereby given that the Register of Members and Transfer Books of the Bank will remain closed from 16-9-1949 to 12-10-1949, both days inclusive.

(By order of the Board)

Registered office of the Bank, Kalsank, U D I P I. 3-9-1949.

K. K. Pai, Managing Director.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar, Vaidya

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established 1931)
Chairman: r. M. C. T M Chida m barm Chettyai.
A Policy in this progressive Life Office is a good investment; its Agency is a valuable business connection.
MANGALORE BRANCH: K. S. R. Road, Hampankatta, Mangalore.
HEAD OFFICE: United India Life Building, MADRAS

ಜನನುತ

ಬೀಡಿ

ಬೀಡಿಯು ಉದ್ಯೋಗವನ್ನೂ ಸೇವನೆಯನ್ನೂ ಸರಕಾರ ಪ್ರತಿಬಂಧಿಸಬಹುದೆ?

ಬೀಡಿ! ಇದೊಂದು ನಿತ್ಯೋಪಯೋಗಿ "ಅಪರ" ವಸ್ತು. ಇದು ಪೌರಾಣಿಕ ಮತ್ತು ಇತಿಹಾಸಿಕ ಕಾಲಗಳಿಂದ ಪರಂಪರಾಗತವಾಗಿ ನಡೆದು ಬಂದು ರಕ್ತಗತ-ರೂಢಿಗತವಾದ ಚಟವಿರದೆ ಇತ್ತೀಚೆಗೆ ಬಂದು ಶತಮಾನದಿಂದ ಬಳಕೆಯಲ್ಲಿ ಬಂದ ದುಶ್ಚಟವೆಂದು ಹೇಳಿಸಿಕೊಳ್ಳುತ್ತಿದ್ದರೂ ಅದೊಂದು ಸಾವಿರಾರು ಜನರಿಗೆ ಅನ್ನ ಕೊಡುವ ಉದ್ಯೋಗವಾಗಿ ಪರಿಣಮಿಸಿ ಲಕ್ಷಾಂತರ ಜನರಿಗೆ ಸ್ಫೂರ್ತಿಯಕ್ತ ನಸ್ತುವಾಗಿ, ಪರಸ್ಪರ ಸಂದರ್ಶನದಲ್ಲಿ ಸ್ವಾಗತವಸ್ತುವಾಗಿ, ಹೊಸ ಸ್ನೇಹಿತರನ್ನೂ ಸ್ನೇಹವನ್ನೂ ಕಲ್ಪಿಸಿಕೊಡುವ ಸಾಧನವಾಗಿ ನಿಂತಿದೆ. ಇಂತಹ ಸರ್ವೋತ್ತಾಹೀ ವಸ್ತುವನ್ನು ನೆಗಳಬೇಕೇ ಹೊಗಳಬೇಕೇ?

ತಂಬಾಕು ನಮ್ಮ ದೇಶಕ್ಕೆ ವಾಷ್ಕೋಡಿ ಗಾಮನ ಕಾಲದಿಂದ ಬಂದದ್ದಾದರೂ ಅದನ್ನು ಬೀಡಿಯ ರೂಪಕ್ಕೆ ಮಾರ್ಪಡಿಸಿ ಶತಮಾನವೆಷ್ಟೆ ಆಗಿರುತ್ತದೆ. ಅದರ ಉಪಯೋಗವು ಜನತೆಯಲ್ಲಿ ಬಂದು ಅದಕ್ಕೆ ಬೇಕಾದ ಸಾಧನಗಳು ಅತೀವ ಕಡಿಮೆ ಬೆಲೆಗೆ ದೊರೆಯುವಂತೆ ಮಾಡಿದ ಸಾಹಸಪ್ರಜ್ಞಾಗಳಿಗೆ ಸಲ್ಲುತ್ತದೆ. ಹಿಂದುಸ್ತಾನದಲ್ಲಿ ರಾಯಾಪುರದ ಕಡೆಗೆ ಬೆಳೆಯುವಷ್ಟು ತುಮರಿ ಎಲೆ (ಬೀಡಿಎಲೆ) ಬೇರಾವ ಕಡೆಯಲ್ಲಿಯೂ ಸಿಗುವುದಿಲ್ಲ. ಸಾಮಾನ್ಯ ಮೂರು ಪೈಸೆ ಬೆಲೆಗೆ ಐದಾರು ಬೀಡಿಗಳು ಸಿಗಬೇಕಾದರೆ ಅದನ್ನು ಆಫೀಸ್ ಆಗ್ಗವಾಗಿ ತಯಾರಿಸುವ, ಅದರಿಂದಲೇ ಎಲೆಯಿಂದ ಹೊಗೆಯ ವರೆಗೆ ಬೀಡಿಯನ್ನೇ ದೇವರಾಗಿ ಪೂಜಿಸಿದ್ದಕ್ಕೆ ಆವರಿಗೆ ಧನ್ಯವಾದಗಳು.

ಬೀಡಿಯು ಸುಲಭೋದ್ಯೋಗ, ಕಷ್ಟಪಡಿಕೆಯನಲ್ಲ. ಮೈ ಕೈಗಳಿಗೆ ಕೆಸರು ಸೋಂಕುವ ಭಯವಿಲ್ಲ. ಬೆಳಗ್ಗಿನಿಂದ ಸಂಜೆಯ ತನಕ ಬೀಡಿಕಟ್ಟಿ ಸಂಜೆಗೊಂದು ಸಿನೇಮಾ ನೋಡಿ ಸಿನೇಮಾದ ಪ್ರಣಯ ಕತೆಯ ಪ್ರಯೋಗದಲ್ಲಿ ತಾವೂ ನಟರಾಗಿ ಜೀವನ ಸಾಗಿಸುವುದು ಬೀಡಿ ಕಟ್ಟುವವರ ದಿನಚರಿ. ಹೀಗೆ ಶಾರೀರಿಕ ಶ್ರಮದ ಯಾವದೇ ತೊಡಕಿಲ್ಲದೆ ಜನ್ಮ ಸಿದ್ಧ ಕಕ್ಕುಲತೆಯ ಉಪಯೋಗವಾಗದೆ, ಶಕ್ತಿ ಶಿಥಿಲವಾಗಿ ಮನುಷ್ಯನು ಕ್ಷೀಣನಾಗಿ ನಿಸ್ತೇಜನಾಗುತ್ತ ನಡೆದು ಮುಂದೆ ಅವನಿಂದ ಹುಟ್ಟಿ ಬಹುದಾದ ಪೀಳಿಗೆಯೂ ಕ್ಷೀಣವಾಗಿ ದೇಶ, ಜನತೆ, ರಾಷ್ಟ್ರಗಳೇ ನಿಸ್ತೇಜವಾಗಿ ನಡೆಯುವುದರಲ್ಲಿ ಸಂದೇಹವಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರೊಂದರಲ್ಲೇ ೧೪೦೦೦ ಕ್ಕಿಂತಲೂ ಹೆಚ್ಚಿನ ಜನ ಬರಿಯ ಬೀಡಿ ಕಟ್ಟುವ ಉದ್ಯೋಗದಲ್ಲಿ ನಿರತರಾಗಿರುವ ರೆಂದ ಮೇಲೆ ಅಂತಹ ನೂರಾರು ಊರು, ಜಿಲ್ಲೆ, ಸ್ಥಾನ, ದೇಶಗಳಲ್ಲಿ ದುಶ್ಚಟವನ್ನು ಸಮಾಜದಲ್ಲಿ ಪಸರಿಸುವವರೆಷ್ಟು ಮಂದಿ ಇರಬಹುದು?

ಬೀಡಿ ಸೇದುವುದರಿಂದ ಪ್ರಕೃತಿಯು ಕ್ಷಯ ರೋಗವನ್ನೇ ಆಹ್ವಾನಿಸುತ್ತದೆ. ಇದು ಬೀಡಿ ಭಕ್ತರನ್ನು ಕಂಡಾಗಲೇ ತಿಳಿಯಬೇಕು. ಲಕ್ಷಾಂತರ ಜನರನ್ನು ನಿಸ್ತೇಜಗೊಳಿಸಿ ರಾಷ್ಟ್ರವನ್ನು ದುರ್ಬಲಗೊಳಿಸುವ ಈ ಬೀಡಿಯನ್ನು ಆರ್ಥಾತ್ ಬೀಡಿಯ ಉದ್ಯೋಗವನ್ನು ಸಮಾಜ ಸುಧಾರಕರೂ ಸರಕಾರವೂ ಸೇರಿ ಪ್ರತಿಬಂಧಿಸಿ, ಬೀಡಿ ಕಟ್ಟುವ ಜನತೆಯನ್ನು ಒತ್ತಾಯಪೂರ್ವಕವಾಗಿ "ಅಧಿಕ ಆಹಾರ ಬೆಳೆ"ಯಿಸುವ ಯೋಜನೆಯಲ್ಲಿ ತೊಡಗಿಸಬಹುದು; ಬೇಕು

ಪ್ರಬುದ್ಧರನ್ನೇ ಒಡಿಸುವ ಭಾರತೀಯರು ಮನಸ್ಸು ಮಾಡಿದರೆ ಅವರಿಂದ ಪ್ರಚೋದಿತವಾಗಿ ಸಮಾಜದ ಆರೋಗ್ಯದ ತಳಹದಿಯನ್ನು ಹಾಳು ಮಾಡಿದ ಬೀಡಿಯನ್ನು ಓಡಿಸುವುದು ಕಷ್ಟವಾಗಲಾರದು. ಸಮಾಜವಾದೀ ಧುರೀಣರಾದ ಶ್ರೀ ರಾಮ ಮನೋಹರ ಲೋಹಿಯಾರು ಹೇಳಿದ "ಆಹಾರ ಸೈನ್ಯ" ರಚನಾ ಯೋಜನೆಗಿಂತಲೂ ಈ ಯೋಜನೆಯು ಹೆಚ್ಚು ಪರಿಣಾಮಕಾರಿಯಾಗಬಹುದೆಂದು ಅನಿಸುತ್ತದೆ.

ಶಿರಸಿ, ೮-೮-೪೮ —ಕೆ. ಎನ್. ರಾವ್ (ಕ. ವೀ:)

ದ. ಕ. ಗ್ರಾಮ ಕೈಗಾರಿಕಾ ಸಂಘ, ಮಂಗಳೂರು
(S. K. V. I. A.)

ಚರಖಾ ಜಯಂತಿ ಮಹೋತ್ಸವ

[19-9-49ರಿಂದ 2-10-49ರ ತನಕ]

ಪೂಜ್ಯ ಗಾಂಧೀಜಿಯವರ ಆಶೇಕ್ಷೆ ಮೇರೆಗೆ ಹಿಂದೆ ಆಚರಿಸಿಯಲ್ಪಡ್ಡಿದ್ದ ಗಾಂಧಿ ಜಯಂತಿಯು 'ಚರಖಾ ಜಯಂತಿ' ಎಂದು ಮುಂದೆ ಆಚರಿಸಲ್ಪಡುವುದು. ಅಖಿಲ ಭಾರತ ಹರಿಜನ ಸಂಘದವರು ಜಯಂತಿಯನ್ನು ನೂಲುವ ಮಂಡಲಿಗಳ ಸ್ಥಾಪನೆ, ವಸ್ತ್ರ ಸ್ವಾವಲಂಬನೆ, ಸಾಮೂಹಿಕ ಸೂತ್ರ ಯಜ್ಞ, ಇತ್ಯಾದಿ ಗಳಿಂದ ಆಚರಿಸಲು ಕಾರ್ಯಕ್ರಮವು ಸಿದ್ಧಗೊಳಿಸಿರುತ್ತಾರೆ. ನಮ್ಮ ಜಿಲ್ಲೆಯಲ್ಲಿಯೂ ಜಯಂತಿಯನ್ನು ಯಶಸ್ವಿಯಾಗಿ ಆಚರಿಸಲು ಸಂಘದವರು ಈ ಕೆಳಗಿನ ಕಾರ್ಯಕ್ರಮವನ್ನು ಕೈಕೊಳ್ಳಲು ನಿರ್ಧರಿಸಿದ್ದಾರೆ.

ಕಾರ್ಯಕ್ರಮ

1. ಬಾಡಿ ಹುಂಡಿಗಳ ಮಾರಾಟ.
2. ನೂಲುವ ಮತ್ತು ಹಿಂಜುವ ಯಜ್ಞಗಳು.
3. ಸಮಾಜದಲ್ಲಿ ನೆಲೆಗೊಂಡ ವಿಷಮತೆಯನ್ನು ಕಿತ್ತೊಗೆಯಲು ಪ್ರಚಾರ ಸಭೆಗಳು.
4. ಸಮಗ್ರ ಗ್ರಾಮ ಸೇವಾ ಯೋಜನೆಯ ಪ್ರಚಾರ ಕಾರ್ಯ.
5. ಸ್ವಾವಲಂಬೀ ನೂಲುವವರ ಮತ್ತು ಸತತ ಖಾದಿಧಾರಿಗಳ ಪಟ್ಟಿ ತಯಾರಿಸುವದು.

ನೂಲಿನ ಪರೀಕ್ಷೆಗೆ ಸಂಬಂಧ ಖಾದಿಧಾರಿಗಳಿಗೆ ಇದ್ದ ಆಡಚಣೆಯನ್ನು ಹೋಗಲಾಡಿಸಿ ಖಾದಿ ಬೇಕಾದವರಿಗೆ ಒದಗಿಸುವ ವ್ಯವಸ್ಥೆಯನ್ನು ಸಂಘದವರು ಮಾಡಿರುತ್ತಾರೆ. ಖಾದಿ ಹುಂಡಿಗಳನ್ನು ಸರ್ವರೂ ಕೊಂಡುಕೊಂಡು ಖಾದೀ ಪ್ರಚಾರ ಕಾರ್ಯಕ್ಕೆ ಪ್ರೋತ್ಸಾಹ ಕೊಡಬೇಕಾಗಿ ವಿನಂತಿ. ಇದರಿಂದ ಖಾದಿ ಕಾರ್ಯವು ಜಿಲ್ಲೆಯಲ್ಲಿ ವಿಸ್ತಾರ ಹೊಂದಲು ಅವಕಾಶ ಉಂಟಾಗುವುದು.

ಎಚ್. ನಾರಾಯಣರಾವ್,
ಗೌ। ಕಾರ್ಯದರ್ಶಿ
ದ. ಕ. ಗ್ರಾಮ ಕೈಗಾರಿಕಾ ಸಂಘ.

ಸ್ವೀಕಾರ

ಪುಷ್ಪ–ಉಡುಪಿಯಿಂದ ಹೊಸತಾಗಿ ಶ್ರೀ. ಕೆ. ಪ್ರಭಾಕರರಾಯರ ಸಂಪಾದಕತ್ವದಲ್ಲಿ ಶ್ರೀ. ಕಿದಿಯೂರು ಆನಂದ ಸೆಟ್ಟರ ಸಂಚಾಲಕತ್ವದಲ್ಲಿ ಆತ್ಮವಿಶ್ವಾಸದಿಂದ ಹೊರಟ ಕನ್ನಡ ಮಾಸಪತ್ರಿಕೆ. 1/8 ಕ್ರೌನ್ ಆಕಾರ. ಬಿಡಿ ಪ್ರತಿಗೆ 0-2-0.

ಪ್ರಗತಿ–ಹೆಬ್ಬಳ್ಳಿಯಿಂದ ನೂತನವಾಗಿ ಹೊರಡಲಾರಂಭಿಸಿದ ಕ್ರೌನ್ ಆಕಾರದ ಎಂಟು ಪುಟಗಳ ಕನ್ನಡ ವಾರಪತ್ರಿಕೆ. ಸಂಪಾದಕ ಮಂಡಲಿ, ಶ್ರೀಗಳಾದ ವಿನ್ನಪ್ಪ ವೀರಕ್ಷಣಿ, ಬಿ. ಎಚ್. ಹೂಗಾರ ಮತ್ತು ರಾ. ಪಾ. ಶಿರೋಳ. ಬಿಡಿಪ್ರತಿ 0-1-0

ಸಾಧನೆ–ಹೈದರಾಬಾದಿನಿಂದ ಕ್ಷಡೆಮ್ಮಿ ಸ್ವಾಮಿಜಿಯ ಎಂಟು ಪುಟಗಳ ಕನ್ನಡ ವಾರಪತ್ರಿಕೆ. ಕೆ. ಸಂಪಾದಕರು ಶ್ರೀ ಆರ್. ಜಿ. ಜಾಗೀರದಾರ್ ಅವರು. ಬಿಡಿಪ್ರತಿ 0-2-0

ಕೊಂಕಣಿಯ ಎವಕ್– ಶ್ರೀ ಜೋಜ್ ಎಮ್. ಫರ್ನಾಂಡಿಸರ ಸಂಪಾದಕತ್ವದಲ್ಲಿ ಮಂಗಳೂರಿಂದ ಹೊರಡುವ ಕೊಂಕಣಿಭಾಷೆಯ ಮಾಸಪತ್ರಿಕೆ. ಆಕಾರ I/4ಕ್ರೌನ್ 24ಪುಟಗಳು. ಬಿಡಿ ಪ್ರತಿಬೆಲೆ 0-4-0

ಮಲೆನಾಡು–ಶ್ರೀ ಎನ್. ಎನ್. ಭಡೆಯರ ಸಂಪಾದಕತ್ವದಲ್ಲಿ ಮಂಗಳೂರಿಂದ ಹೊರಡುವ ಕನ್ನಡ ಮಾಸಪತ್ರಿಕೆ. ಕ್ರೌನ್ನಿಮ್ಮ ಸ್ಯಾಟಿನ 48ಪುಟಗಳು. ಬಿಡಿಪ್ರತಿ 0-6-0

ವರದಿಗಳು–ಮೊಗವೀರ ವ್ಯವಸ್ಥಾಪಕ ಮಂಡಳಿ, ಬೊಂಬಾಯಿ ಇದರ ನಾಲ್ವತ್ತಾರನೆ ವಾರ್ಷಿಕ ವರದಿಯಲ್ಲಿ ಸಂಘದ ಕಾರ್ಯಕಲಾಪಗಳು ಸವಿಸ್ತಾರವಾಗಿ ಸಾಮಾಜಿಕ ಪಟ್ಟಿಗಳು. ವೇತನ ಪಡೆದವಿದ್ಯಾರ್ಥಿಗಳ ಮತ್ತು ಸಂಘಕ್ಕೆ ಸಹಾಯ ನೀಡಿದವರ ಹೆಸರು ಮತ್ತು ಪೂರ್ಣ ವಿವರ, ಆಯ ವ್ಯಯದ ಪಟ್ಟಿ ಸಹಾ ಕೊಡಲ್ಪಟ್ಟಿವೆ. ವೇರೆವೇರೆ ಭಾಷೆಗಳ ಜನರ ಬಯ ದೊಡ್ಡ ಕೇಂದ್ರವಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಮೊಗವೀರ ಬಂಧುಗಳು ತಮ್ಮದೊಂದು ಸಂಘವನ್ನು ಸ್ಥಾಪಿಸಿಕೊಂಡು ಸ್ವಜನೋದ್ಧಾರಕ್ಕಾಗಿ ಗಣನೀಯ ಕೆಲಸವನ್ನು ಮಾಡುತ್ತಿರುವುದು ಅತ್ಯಂತ ಸಂತೃಪ್ತಿವಿದೆ.

ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮದ 1948ನೆ ಮಾರ್ಚ 31ಕ್ಕೆ ಅಂತ್ಯವಾದ ವರದಿಯಲ್ಲಿ ಆಶ್ರಮದ ಕಛೇರಿಯಿಂದ ಬಡ ವಿದ್ಯಾರ್ಥಿಗಳಿಗೆ ಕೊಡೋಣಾದ ಊಟ, ವಸತಿ, ವಿದ್ಯಾ ದಾನಾದಿಗಳು ತಿಳಿಸಲಾಗಿವೆ. ಯಲ್ಲದೆ ಮಹಾತ್ಮರ ಹೆಚ್ಚಿನ ಪ್ರೋತ್ಸಾಹ, ನೆರವನ್ನೂ ಅಪೇಕ್ಷಿಸಲಾಗಿದೆ

ಮುಂಬಯಿಯ ಬಾಳೂರು ಬಿಲ್ಲವರ ಜಾರಿಟಿ ಸಂಘದ 1948-49ನೆ 32ನೇ ವಾರ್ಷಿಕ ವರದಿಯಲ್ಲಿ ವಿದ್ಯಾರ್ಥಿದ ಕಾರ್ಯಕಲಾಪ, ವಂತಿಗೆ ವಸೂಲು, ಆಯವ್ಯಯದ ಪಟ್ಟಿಗಳು ಕೊಡಲ್ಪಟ್ಟಿವೆ. ಹೆಚ್ಚಿನ ಸಹಾಯವನ್ನು ಜನರಿಂದ ಕೋರಲಾಗಿದೆ.

ಬೋರ್ಡು ಪ್ರೌಢ ಪ್ರಾಥಮಿಕ ಶಾಲಾ, ಕೋಟೇಶ್ವರ–ಇದಂ ಅಗಸ್ಟ್ 15ರಂದು ಪ್ರಕಟವಾದ ಸುಂದರವಾದ ರಜತೋತ್ಸವ ಸ್ಮಾರಕ ಸಂಚಿಕೆಯು ನಮ್ಮ ಹಸ್ತಗತವಾಗಿದೆ ಕ್ರೌನ್ 1/4 ಆಕಾರದ 88 ಪುಟಗಳು. ಸಂಪಾದಕರು–ಶ್ರೀಗಳಾದ ಕೆ. ವಿ. ಪುರಾಣಿಕ, ಬಿ. ಎಸ್. ಹತ್ವಾರ್, ಕೆ. ಜಿ. ಹೆಬ್ಬಾರ, ಎಂ. ಎಸ್. ವಾಸುದೇವ, ಎಂ. ಜನಾರ್ದನ ಇವರು. ಈ ಬೆಳ್ಳಿ ಹಬ್ಬದ ನೆನಪಿನ ಸಂಚಿಕೆಯಲ್ಲಿ ಶಾಲೆಯ ಸಂಪ್ರತ್ತ ಇತಿಹಾಸವಲ್ಲದೆ ಹಲವು ಹಿರಿಯರ ಭಾವ ಸಂದೇಶಗಳೂ ಶ್ರೀಗಳಾದ ಕೋಟ ಶಿವರಾಮ ಕಾರಂತ, ಬಿ. ಎಚ್. ಶ್ರೀಧರ, ಸಿದ್ಧವನ ಹಳ್ಳಿ ಕೃಷ್ಣ ಶರ್ಮ, ಜೆ. ಪಿ. ರಾಜರತ್ನಂ ಮೊದಲಾದವರ ಉತ್ತಮ ಲೇಖನ ಕವನಗಳೂ ಇದ್ದು ಸಂಚಿಕೆಯು ವಾಚನೀಯವೂ ಸಂಗ್ರಾಹ್ಯವೂ ಆಗಿದೆ.

ನೋಟೀಸು

ಉಡುಪಿ ಡಿ. ಮುನ್ಸಿ. ಕೋರ್ಟಿನಲ್ಲಿ.
O. S. 276/1949.

ರಿಕೀವರ್ ಪಿ. ಸಂಜೀವರಾವ್ —ವಾದಿ.
ಮತ್ತು
ಆಂಡಯ ಸೆಟ್ಟಿ —ಪ್ರತಿವಾದಿ.
ಇವರೊಳಗೆ

ಮೇಲ್ಕಂಡ ವ್ಯಾಜ್ಯವು ಡಾಲಗೇಟಿನ ಗೇಣಿ ಬಾಕಿಗೆ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ನೋಟೀಸಿನ ಬಗ್ಗೆ ತಾ. 19-9-1949ಕ್ಕೆ ಯಿಟ್ಟುರುವದ್ರಿಂದ ಆ ದಿವಸ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ವಗೈರೆ ಯಿದ್ರೆ ಸ್ವತಹಾ ಪ ನವೀಲರ ಮೂಖಾಂತ್ರ ಹಾಜ್ರಾಗಿ ಜಾಹೀರು ಮಾಡಿಕೊಳ್ಳ ಬೇಕು. ಯಿಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

P. Padmanabha Rao.
Vakil for Plaintiff.

ಉಡುಪಿ, ತಾ. 1-9-49

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜಪಲ್ಲು ವೇದನೆಗಳಿಗೂ, ಎದೆ ನೋವು, ಭಾಯಗಳು, ಬಾತುಕೊಳ್ಳುವುದು, ಚೇಳಿವಿಷಮುಂತಾದವು, ಪಕ್ಷವಾತ, ಮೊಡಿಮೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD

ಹಬಳುಕದ್ದಿ ನುಪ್ಪುನಮ್ಮಲ್ಲಿ ನಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಖಾಯವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂವು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುಕ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹೆಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡಕಕ್ಕ ವಿಳಾಸಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

PRINTED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

15-9-1949

30ನೇ ವರ್ಷ
Estd: 1921 ಸ್ಥಾಪನೆ.

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
೬ ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ ೩೦ | ವಾರ ೩

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol. 30
No. 3

ತಿಳಿದಿರಬೇಕಾದ ವಿಷಯ-

ನಮ್ಮ ಸಾರ್ವಜನಿಕ ಕಾರ್ಯಗಳ ನ್ಯಾಯಾನ್ಯಾಯ, ಉಚಿತಾನುಚಿತತೆಗಳ ಸರಿ ತಪ್ಪುಗಳನ್ನು ಇದ್ದಂತೆ ತಿಳಿದುಕೊಳ್ಳುವುದರಲ್ಲಾಗಲಿ, ಅವುಗಳನ್ನು ಇಡಬೇಕಾದ ಅಯಾಯಾ ಸ್ಥಾನಗಳಲ್ಲಿ ಇಟ್ಟು ತೀರ್ಮಾನಿಸಿಕೊಳ್ಳುವುದರಲ್ಲಾಗಲಿ ನಾವು ಹಿಚ್ಚಿನಂಶ ತಪ್ಪಿ ಬೀಳುತಿದ್ದೇವೆ. ಒಂದು ವಿಷಯದಲ್ಲಿ ನ್ಯಾಯವೆನ್ನಿಸಿದ್ದು, ಅನ್ಯಾಯವೆನ್ನಿಸಿದ್ದು? ಯಾವ ಗಡಿಯಾ ವರೆಗೆ ಒಂದು ವಿಷಯವು ನ್ಯಾಯವನ್ನಿಸುವುದು-ಮತ್ತಾ ಗಡಿ ಮೀರಿ ಹೋದಾಗಲ್ಲಿ ಆ ನ್ಯಾಯವೇ ಅನ್ಯಾಯವಾದೀತು? ಎಂಬುದನ್ನು ತುಲನೆ ಮಾಡಿ ನೋಡಿಕೊಳ್ಳುವಿಕೆ-ಕ್ಷೇತ್ರದ ಇಂಚಿಂಚಿತ್ತು, ನಿಯಮ ನಿರ್ಬಂಧ, ಉಚಿತಾನುಚಿತತೆಯ ಗೊಡವೆಯಿಲ್ಲದೆ- ನಾವು ತಪ್ಪು ಮಾಡಿ ಬಿಡುತ್ತೇವೆ. ಈ ವಿಧಾನವನ್ನು ತಿದ್ದಿಕೊಂಡು ಸರಿಯಾದ ಮತ್ತು ನೇರಾದ ಹಾದಿ ಹಿಡಿಯಲು ಸಾರ್ವಜನಿಕರು ಕಲಿತುಕೊಳ್ಳುವದೇ ಪ್ರಗತಿಶೀಲ ಜನತಾ ರಾಜ್ಯ ಸ್ಥಾಪನೆಗೆ ತಳಕಟ್ಟು.

ನಿದರ್ಶನಕ್ಕಾಗಿ ಇಂದಿನ ಜಿಲ್ಲಾ ಬೋರ್ಡ ಚುನಾವಣೆಯನ್ನೇ ಮತ್ತೊಮ್ಮೆ ಎತ್ತಿಕೊಳ್ಳೋಣ. ಇಲ್ಲಿ ಯಾರಾರ ಕರ್ತವ್ಯ ಏನೇನು, ಎಂಬುದನ್ನು ಸ್ಪಷ್ಟವಾಗಿ ಮುಂದಿಟ್ಟು ಮಾಡಿಕೊಳ್ಳೋಣ.

"ಸ್ವರಾಜ್ಯ", "ಜನತಾರಾಜ್ಯ" ಎಂದ ಮೇಲೆ, ಜನಪ್ರತಿನಿಧಿ ಚುನಾವಣೆಯಲ್ಲಿ ನೋಡಬೇಕಾದುದೊಂದನ್ನೆ:— ಜನಹಿತ ಸಾಧಕ ಪಕ್ಷವಾವುದು ಎಂಬುದನ್ನು ಮಾತ್ರ. ಯಾವ ಪಕ್ಷವೇ ಇರಲಿ, ಅದು ಜನತೆಗಾಗಿ ಇರಬೇಕಲ್ಲದೆ ಜನತೆ ಅದಕ್ಕಾಗಿ ಇರಬೇಕೆಂದಿಲ್ಲ. ಈ ಮೂಲ ತತ್ವವನ್ನು ಒರೆಗಲ್ಲಾಗಿ ಇಟ್ಟುಕೊಂಡು ಪ್ರತಿಯೊಂದನ್ನೂ ಪರೀಕ್ಷಿಸುತ್ತಾ ಹೋಗಬೇಕಾಗಿದೆ.

ಇಂದು ಜನಹಿತ ಸಾಧಕ ಪಕ್ಷವಾವುದು? ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸಿಗರು, ಸ್ವತಂತ್ರರು, ಸಮತಾವಾದಿಗಳು, ಕಮ್ಯೂನಿಸ್ಟರು ಸ್ಪರ್ಧಿಸುತಿದ್ದಾರೆ. ಈ ಪೈಕಿ ಯಾರು ಮೇಲು? ಈ ಮಟ್ಟಿಗೆ ವಿಶೇಷ ಪರೀಕ್ಷಿಸಿ ನೋಡುವ ಪ್ರಯಾಸವೆಲ್ಲಿದೆ? ಅದರೂ ಸರಿಯಾಗಿ ಮನಸ್ಸಿಗೆ ನಾಟಿಸಿ ಕೊಳ್ಳುವದಕ್ಕಾಗಿ ಗೊತ್ತಿದ್ದುದನ್ನೇ ಮತ್ತೊಮ್ಮೆ ಮಂದಟ್ಟು ಮಾಡಿಕೊಳ್ಳೋಣ.

ಇತರ ಯಾವುದೇ ಸಕ್ಷ ತಲೆಯೆತ್ತುವ ಮೊದಲೇ ಲೋಕದ ಅತಿ ಪ್ರಬಲ ಬ್ರಿಟಿಷ್ ಸಾಮ್ರಾಜ್ಯದೊಡನೆ ಪ್ರಜಾಜಕ್ಕೇನೇ ಅಪರಿಚಿತವಾದ ಅತ್ಯುತ್ಪಮ ವಿಧಾನಗಳಿಂದ ಸ್ವಾತಂತ್ರ್ಯ ಹೋರಾಟ ಕೊಟ್ಟ ಸಂಸ್ಥೆ ಕಾಂಗ್ರೆಸ್; ರಾಷ್ಟ್ರಕ್ಕಿಂದಿನ ಸ್ವಾತಂತ್ರ್ಯ ದೊರಕಿಸಿಕೊಟ್ಟುದು ಕಾಂಗ್ರೆಸ್ಸೇ. ಅದರೂ ಕುಟುಂಬಕ್ಕೊಂದು ಲಂಚ ಸಾಧಿಸಿ ಕೊಟ್ಟವನೇ ಆದನ್ನು ಮೇಲೆ ಅನಾವ್ಯಯ ಮಾಡುತ್ತಾನೆಂದಾದರೆ ಬುದ್ಧಿಯುಳ್ಳ ಇತರರು ಅದನ್ನು ಅವನ ಕೈಯಿಂದ ಕಸಗೊಂಡು ಕುಟುಂಬಾರ್ಥಕ್ಕಾಗಿ ಸದ್ವಿನಿಯೋಗ ಮಾಡಬಾರದೆಂದಿಲ್ಲ; ಜರ್ಮನ್ ಯುದ್ಧದಿಂದ ಇಂಗ್ಲಾಂಡನ್ನು ಉಳಿಸಿ ಕೊಟ್ಟ ಚರ್ಚಿಲ್ಲರನ್ನು ಯುದ್ಧ ಮುಗಿದ ಬೆನ್ನಲ್ಲೇ ಬ್ರಿಟಿಷ್ ಮತದಾರರು ಅಧಿಕಾರದಿಂದಿಳಿಸಿ ಬಿಡಲಿಲ್ಲವೆ? ಅಂತೆಯೇ, ಕುಟುಂಬಕ್ಕಾಗಿ ಆಸ್ತಿ ಮಾಡಿ ಕೊಟ್ಟವನು, ಆದರ ಮೇಲೆ ತನ್ನ ಗಿರುವ ಸ್ವಾಭಾವಿಕ ಆಸಕ್ತಿ ಯಿಂದ ಆದನ್ನು ಉಳಿಸಿಕೊಳ್ಳುಲು ಒದ್ದಾಡುತ್ತಿರುವಾಗಲೆ, ಅದರ ಅನುಭೋಗದ ಆತಿಯೊಂದೇ ಹೊರತು ಬೇರೇನೂ ಇಲ್ಲದ ಇತರ ಉಡಾಡಿ ಸದಸ್ಯರು ಅವನ್ನು ದುರ್ವಿನಿಯೋಗಗೊಳಿಸಲುತ್ಸಾಹಿಸುತ್ತಾರಾದರೆ ಮಾತ್ರ ಅಂಥವರನ್ನು ಎಸ್ಟಕ್ಕೂ ಬಿಡಬಾರದು. ಇಂದು ಕಾಂಗ್ರೆಸು ತಾನು ಸಂಪಾದಿಸಿಕೊಟ್ಟ ಸ್ವಾತಂತ್ರ್ಯವನ್ನು ಸದ್ವಿನಿಯೋಗ ಮತ್ತು ಸಾರ್ಥಕಗೊಳಿಸುವ ಶಕ್ತಿಯೇ, ಅಥವಾ ಅದನ್ನು ಕಸಗೊಳ್ಳುವದಕ್ಕಾಗಿ ಕಾಂಗ್ರೆಸಿನೊಡನೆ ಹೋರಾಡುತ್ತಿರುವರ ವರ್ತನೆಯೇ ನ್ಯಾಯವೇ, ಎಂಬುದನ್ನು ನೋಡೋಣ.

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಕಾಂಗ್ರೆಸು ಜಿಕ್ಕಿಸಿ ತೋರಿಸಿದ್ದಂತಹ ಸ್ವಾತಂತ್ರ್ಯ ಈಗ ಇಲ್ಲ-ಆಗ ಅದು ಕೊಟ್ಟಿದ್ದ ಛಂದಸೆಗಳನ್ನು ಈಗ ವಾಪಸಿಲ್ಲ-ಎಂಬ ದೂರು ಕೇಳಿ ಬರುತ್ತಿದೆ. ಸ್ವಾತಂತ್ರ್ಯವನ್ನು ಆ ರೀತಿ ಸಾರ್ಥಕ ಪಡಿಸಿಕೊಳ್ಳಲು ಈ ವರೆಗೆ ಸಾಧ್ಯವಾಗಿಲ್ಲವೆಂಬ ಪಶ್ಚಾತ್ತಾಪವು ಈ ದೂರುವವರಿಗಿಂತ ಹೆಚ್ಚಾಗಿ ಕಾಂಗ್ರೆಸಿಗರಲ್ಲೇ ಇದೆ.

ಸ್ವಾತಂತ್ರ್ಯ ಸ್ಥಾಪನೆಯೊಂದಿಗೆ ಎದ್ದಿದ್ದ ಜಾತೀಯ ಗೊಂದಲಗಳು, ವಿತ್ತೀತರಾಜ್ಯಗಳ ಸಮಸ್ಯೆ, ಮತ್ತಿತರ ಅನಾವ್ಯದ್ಯ ಕಷ್ಟನಷ್ಟಗಳೆಂತ ಹೆಚ್ಚು-ಅವುಗಳನ್ನು ಕಾಂಗ್ರೆಸು ಎಷ್ಟೊಂದು ಪರಿಣಾಮಕಾರಿಯಾಗಿ ಬಗೆಹರಿಸಿಕೊಂಡಿತೆಂಬುದು ಎಲ್ಲರಿಗೂ ತಿಳಿದಿರುವ ವಿಷಯ. ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಸ್ವಾತಂತ್ರ್ಯದ ಸ್ಥಾಪನೆಯೊಂದಿಗೆ ಇಂತಹ ಮಹಾ ಗಂಡಾಂತರಗಳು ಎಳಲಿವೆಯೆಂದು ಅವುಗಳ ರೂಪರೇಷೆ ನಮೂದಿಸಿ ಯಾರಾದರೂ ಆಗ ಭವಿಷ್ಯ ಹೇಳಿದವರಿದ್ದಾರೆಯೆ? ಆಗ ಗೊತ್ತಿರುತ್ತಿದ್ದರೆ "ಈ ಗಂಡಾಂತರಗಳನ್ನು ಜಯಶೀಲವಾಗಿ ನಿವಾರಿಸಿಕೊಂಡ ಮೇಲೇನೇ ರಾಷ್ಟ್ರದಜನತೆಗೆ ಸುಖ ಸಮೃದ್ಧಿ ಸಂಪಾದಿಸಿ ಕೊಡುವೆವು" ಎಂದು ಕಾಂಗ್ರೆಸಿಗರು ಶರ್ತ ಹಾಕಿಯೇ ಆಶ್ವಾಸನೆ ಕೊಡಬಹುದಿದ್ದಿತು. ಆ ಕಾಲದಲ್ಲಿ ನಿರೀಕ್ಷಿಸದಿದ್ದ ಗಂಡಾಂತರಗಳು ಈ ಕಾಲದಲ್ಲಿ ಒದಗಿದರೂ ಅವುಗಳನ್ನು ಮುಂದಾಗಿ ನಿವಾರಿಸಿಕೊಳ್ಳದೇನೇ ಆಯಿತೆ ಹೇಳಿದ್ದಂತೆ ಸ್ವಾತಂತ್ರ್ಯವನ್ನು ರೂಪಿಸುವ ಕಡೆಗೆ ಈಗಲೇ ಲಕ್ಷ್ಯ ಕೊಡಬೇಕಿದ್ದಿತೆಂದು ಬುದ್ಧಿ ಸ್ವಾಸ್ಥ್ಯವುಳ್ಳವರಾರಾದರೂ ಹೇಳಿಯಾರೆ? ಮನೆಗೆ ಹತ್ತಿದ ಬೆಂಕಿ ನಂದಿಸುವುದಲ್ಲೇ ಇದ್ದಾರೆಂದು ದನ್ನು ನೋಡಿಯೂ- "ಮಾತುಕೊಟ್ಟಂತೆ ಈ ಮನೆಯಲ್ಲಿ ಸಮಾನಾಧನೆಯೇಕೆ ನಡೆದಿಲ್ಲ?" ಎಂದು ದೂರುವವರನ್ನು ಏನೆನ್ನಬೇಕು?

ಕಾರಣಗಳನ್ನು ಕಂಡೂ "ಮಾತುಕೊಟ್ಟಂತೆ ಕಾಂಗ್ರೆಸ್ ಜನತೋದ್ಧಾರವಾಗಿಲ್ಲ" ಎಂದು ಟೀಕೆಸುವವರು ಕಾಂಗ್ರೆಸಿನ ಮೇಲಿನ ದ್ವೇಷಾಸೂಯೆಗಾಗಿಯೇ ಟೀಕೆ ಸುತಿದ್ದಾರೆ, ಹೊರತು ಆ ದಿನ ಕಾಂಗ್ರೆಸ್ ಕೊಟ್ಟಿದ್ದ ಆಶ್ವಾಸನೆಗಳನ್ನು ಈದಿನ ಜಾರಿಗೆ ತರುತ್ತೇವೆ ಎಂಬ ವಿಶ್ವಾಸಾರ್ಹ ಭರವಸೆಯನ್ನೇನೂ ತೋರಿಸುತ್ತಿಲ್ಲ. ಆದರೆ ಕಾಂಗ್ರೆಸಿಗೆ ಮಾತ್ರ ತಾನು ಗುರಿಯಾಗಿಟ್ಟುಕೊಂಡ ಮಾದರಿಯ ಸ್ವಾತಂತ್ರ್ಯವನ್ನು ಈವರೆಗೆ ರೂಪಿಸಲಾಗಲಿಲ್ಲವೆಂಬ ಪಶ್ಚಾತ್ತಾಪವೂ ಸಮಯೋಚಿತವಾಗಿ ಪ್ರಯತ್ನಿಸಿಯಿಂದ ಅದನ್ನು ಸಾಧಿಸಿಯೇ ತೀರಬೇಕೆಂಬ ಛಲವೂ ಇದೆ. ಇಂತಹ ಪ್ರಗತಿ ಸಾಧನೆಯನ್ನು ಕಾಂಗ್ರೆಸಿಗಿಂತ ಹಿತಕರವಾಗಿ ಅಥವಾ ಕಾಂಗ್ರೆಸಿಗಿಂತ ಬೇಗನೇ ಮಾಡಬಲ್ಲ ವೀರೂದು ಪಕ್ಷವಾವುದಿದೆ? ಎಲ್ಲಿದೆ?

ಕಮ್ಯೂನಿಸ್ಟರು ಹಿಂಸಾತ್ಮಕ ಹಾಗೂ ಧ್ವಂಸಾತ್ಮಕ ಚಟುವಟಿಕೆಗಳಿಂದ ಇಂದಿನ ರಾಜ್ಯಭಾರ ಪದ್ಧತಿಯನ್ನೇ ಅಡಿಮೇಲು ಮಾಡಿ ಹಾಕಿ ತಮಗಿಂಬಿಟ್ಟಿರುವಂತೆ ಮಾಡಿಕೊಳ್ಳುವವರು. ಅಂಥವರು ಈ ರಾಜ್ಯಭಾರಕ್ಕೆ ಬಂದಾಗ ಚುನಾವಣೆಯಲ್ಲಿ ಧಾರಾಳವಾಗಿ ಹಣ ಕೊಡಲು ಮುಂದಾಗುವದೇಕೆ? ಅಂಥವರ ಕೈಕುಲುಕಲು ಮುಂದೆಹೋಗಿ ಸ್ವಂತಾಪಾಯವನ್ನು ಆಹ್ವಾನಿಸಿಕೊಳ್ಳುವಷ್ಟೂ ಮತದಾರರು ಹೆಡ್ಡರೆ?

ಇನ್ನು ಸಮತಾವಾದಿಗಳ ಕಡೆಗೆ ನೋಡೋಣ. ಕಾಂಗ್ರೆಸನ್ನು ವಿರೋಧಿಸುವ ಬೊಂದಲ್ಲದೆ ಬೇರಾವ ವ್ಯವಹಾರೋಚಿತ

ವಿಮೆಮಾಡಲಿಕ್ಕೆ ಯಾ ಕ್ಲಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಾಪನೆ ಕಾರ್ಯಾಲಯಃ-ಧಾರವಾಡ,
THE UNITED KARNATAK INSURANCE COMPANY, LIMITED.

ಧೋರಣೆ ಅವರಲ್ಲಿ ಕಂಡುಬರುತ್ತಿದೆ? ದ. ಕ. ಜಿಲ್ಲಾ ಬೋರ್ಡು ಚುನಾವಣೆಯ ಸಂಬಂಧವಾಗಿ ಇವರು ಮುಂದಿಟ್ಟಿರುವ ಚುನಾವಣಾ ಘೋಷಣೆಯನ್ನು ಕಾಣುವಾಗ ಕಾಂಗ್ರೆಸಿನ ಮೇಲೆ ವೈರ ಸಾಧಿಸುವ ಗಡಿಬಿಡಿಯಿಂದ, ಅವರು ಜನತೆಯ ಬುದ್ಧಿಶಕ್ತಿಯನ್ನೇ ಹೀಯಾಳಿಸಿದ್ದಾರೆ, ಎಂಬುದು ಸ್ಪಷ್ಟವಲ್ಲವೆ? ಆವರು ಹೇಳುತ್ತಿರುವಂತೆ ಹಳ್ಳಿ ಹಳ್ಳಿ ದರ್ಮಾರ್ಥ ಆಸ್ಪತ್ರೆ, ಧರ್ಮಾರ್ಥ ಶಾಲೆ, ಧರ್ಮಾರ್ಥ ವಾಚನಾಲಯ, ಧರ್ಮಾರ್ಥ ಎಲ್ಲವನ್ನೂ ಮಾಡಬೇಕಾದರೆ ಒಂದೋ ಇಡೀ ಮದ್ರಾಸ್ ಪ್ರಾಂತಿಕ ಸರಕಾರದ ಖಜಾನೆಯನ್ನು ದ. ಕ. ಜಿಲ್ಲಾ ಬೋರ್ಡಿಗೆ ತಂದು ಕೊಡಬೇಕು; ಇಲ್ಲವೇ ದಕ್ಷಿಣ ಕನ್ನಡದಲ್ಲಿರುವ ಆಸ್ಪಿ ವ.ನೆಗಳ ಉತ್ಪತ್ತಿಗಳನ್ನೆಲ್ಲಾ ಈ ಧರ್ಮಾರ್ಥ ವಿಭಾಗಗಳ ಸ್ವಾಧೀನ ಪಡಿಸಿ ಆ ಆಸ್ತಿ ಮನೆಗಳ ಜನರನ್ನೂ ಈ ಧರ್ಮಾರ್ಥ ಶಾಲೆ, ಆಸ್ಪತ್ರೆ, ವಾಚನಾಲಯಗಳಲ್ಲಿ ತುಂಬಿಸಿ ದಿನ ತೆಗೆಯಿಸಬೇಕು! ಸಾರ್ವಜನಿಕರು ಮುಂದೆ ಇಂತಹ ಗಾಳಿಗೋಪುರ ಕಟ್ಟಿ ತೋರಿಸುವವರು ಒಂದೋ ಇಸ್ಪೂ ಆದೂರ ದೃಷ್ಟಿಯವರಿರಬೇಕು-ಇಲ್ಲವೇ ಇಂತಹ ಮಿರುಗು ಮಾತಿಗೆ ಮೆಚ್ಚುವುದಕ್ಕಿಂತ ಹೆಚ್ಚಿನ ಜ್ಞಾನವೇ ಜನರಲ್ಲಿಲ್ಲವೆಂದು ಭಾವಿಸಿಕೊಂಡಿರಬೇಕು! ಇಂಥವರನ್ನು ಪ್ರತಿನಿಧಿಗಳಾಗಿ ಆರಿಸಿಕೊಂಡರೆ ಹೇಗಾದೀತು? ಅದೊಂದು ಸ್ವಪ್ನಾ ಸಾಮ್ರಾಜ್ಯದ ಚುನಾವಣೆಯೇ ಆದೀತು!

ಇನ್ನೊಂದು ವರ್ಗವಿದೆ-ಸ್ವತಂತ್ರವಾಗಿ ಕಾಂಗ್ರೆಸನ್ನು ವಿರೋಧಿಸಿ ನಿಂತಿವರು. ಒಂದೆಲ್ಲೊಂದು ಧ್ಯೇಯಧೋರಣೆಕಟ್ಟೆಕೊಂಡ ಇತರ ಪಕ್ಷಗಳಿಲ್ಲದಿರುವ ಚುನಾವಣಾರಂಗದಲ್ಲಿ ಯಾವ ಕಡೆಗೂ ಸೇರದ 'ಸ್ವತಂತ್ರ'ರೆಂಬವರು ತೋರಿಬರುತ್ತಾರಾದರೆ, ಅಂಥವರು ಜನತೆಯ ಸುಖದುಃಖ ಸಂಬಂಧದಿಂದಲೇ ದೂರವಾಗಿ ತಮ್ಮಷ್ಟಕ್ಕೆ ತಾವಿರುವ ಸ್ವತಂತ್ರರೆಂದೇ ಅರ್ಥ. ಪರೀಕ್ಷೆಯ ಕಟ್ಟು ನಿರ್ಬಂಧಗಳಿಂದ ಸ್ವತಂತ್ರಗೊಂಡ ರಾಷ್ಟ್ರವಾದರೂ ಸ್ವಕೀಯ ನಿಯಮ ನಿಯಂತ್ರಣಗಳಿಂದ ಸ್ವತಂತ್ರವಾಗಿರಲಾರದು; ಯಾವದೇ ಹಂಗು ದಾಕ್ಷಿಣ್ಯಗಳಿಲ್ಲದೆ ಮೇಲು ಕೀಳನ್ನರಿತು ಸ್ವೇಚ್ಛೆಯಿಂದ ವರ್ತಿಸುವ ಸ್ವಾತಂತ್ರ್ಯವಿರಬೇಕಾದ ಮತದಾರನಾದರೂ ತನ್ನ ಹೊಣೆಗೆ ಸಂಬಂಧಿಸಿದ ನೀತಿನಿಯಮಗಳನ್ನು ಬಿಟ್ಟು ಸ್ವತಂತ್ರನಾಗಿರಕೂಡದು; ಈ ಸ್ವತಂತ್ರ ರಾಜ್ಯದಲ್ಲಿ, ಈ ಸ್ವತಂತ್ರ ಮತದಾರರ ಪ್ರತಿನಿಧಿಯಾಗಿ ನಿಲ್ಲುವವನಂತೂ ಸಾರ್ವಜನಿಕ ಕಾರ್ಯಧೋರಣೆ, ಧ್ಯೇಯವನ್ನಿಟ್ಟುಕೊಂಡಿರುವ ಒಂದುಪಕ್ಷಕ್ಕೆ ಸೇರಿಕೊಂಡಿರದೇಇರಲೆಬೇಕು. ಇಲ್ಲಿಯೂ 'ಸ್ವತಂತ್ರ'ವೆಂಬುದರ ಅರ್ಥ-'ಸ್ವಂತ'ದ್ದೆಂಬುದೇ; ಜನತಾಪ್ರತಿನಿಧಿ ಸ್ಥಾನವನ್ನು ತನ್ನ ಖಾಸಗೀ ಹಕ್ಕಿನದ್ದೆಂದು ಒಬ್ಬ ಗಣಿಸಿದ್ದಾನೆಂದೇ ತಾತ್ಪರ್ಯ. ಮತದಾರರು ತಮ್ಮೆಲ್ಲರ ವಾಲಿನ ಸಾರ್ವಜನಿಕ ಹಕ್ಕಿನದ್ದೆಂದು ವೋಟನ್ನು ಕೇವಲ ಒಬ್ಬನ ಖಾಸಗೀ ಸ್ವಾತಂತ್ರ್ಯಕ್ಕಾಗಿ ಕೊಟ್ಟಬಿಟ್ಟು ದುರ್ವಿನಿಯೋಗ ಮಾಡಬಹುದೆ? ಸಾರ್ವಜನಿಕ ಸೇವೆಯ ಬದಲು ವ್ಯಕ್ತಿಸೇವೆ ಸಲ್ಲಿಸಲು-ಒಂದು ಪಕ್ಷದ ಹಿಂದೆನಿಲ್ಲುವ ಬದಲು ವ್ಯಕ್ತಿಯ ಹಿಂದೆ ನಿಲ್ಲಲು-ಮತದಾರರು ಮನಸ್ಸಮ್ಮಾದಬಹುದೆ?

ಕೂಡದು; ಇಂತಹ ಪ್ರಮಾದಗಳಲ್ಲಾವೂ ಮತದಾರರಿಂದ್ಗನಡೆಯಬಾರದು. ಕಮ್ಯೂನಿಸ್ಟರಿಗೆ ಮತಕೊಟ್ಟುಅತ್ಯದ್ರೋಹ ಸಾಧಿಸುವುದಾಗಲೀ, ಸಮತಾವಾದಿಗಳಿಗೆ ಮತಕೊಟ್ಟು ಆಜ್ಞಾನಿಗಳನ್ನಿಸುವದಾಗಲೀ, ಸ್ವತಂತ್ರ ಉಮೇದ್ವಾರಿಗಳಿಗೆ ಮತ ಕೊಟ್ಟು ವ್ಯಕ್ತಿಯನ್ನವಲಂಬಿಸಿದ ಜವಾಬ್ದೇಹನಕ್ಕೀಡಾಗುವದಾಗಲೀ ಯಾರಿಗೂ ಬೇಕಿಲ್ಲದ್ದಲ್ಲ.

ಕಾಂಗ್ರೆಸು ಮಾಡದೆ ಉಳಿದಿರುವುದು ಬಹಳವಿದೆ. ಮಾಡಿರುವವುಗಳಲ್ಲಿ ಹೇರಳ ತಪ್ಪುಗಳಿವೆ. ಇವುಗಳ ಕಾರಣಗಳೂ ಜನತೆಯ ಕಣ್ಣಿಗೆ ಮುಂದಿವೆ. ಮುಂತೆಯೇ ಬಾಕಿಯುಳಿದಿರುವವುಗಳನ್ನು ಪೂರಾಯುವುದರಲ್ಲೂ ತಪ್ಪುಗಳನ್ನು ತಿದ್ದಿಕೊಳ್ಳುವುದರಲ್ಲೂ ಕಾಂಗ್ರೆಸು ನಿರತವಾಗಿದೆ. ಈ ಪ್ರಗತಿ ಮತ್ತು ಶುದ್ಧೀಕರಣಕ್ಕಾಗಿ ಕಾಂಗ್ರೆಸಿಗೆ ಬೇಕು ಜನತಾ ಬೆಂಬಲ. ತಮ್ಮ ಹಿತ ಸಾಧಿಸಿಕೊಡುವ ಶಕ್ತಿ ನಾಮಾರ್ಥ್ಯ, ಆಸಕ್ತಿ ಮತ್ತು ಹಿಂದಿನ ದಾಖಲೆಯುಳ್ಳ ಕಾಂಗ್ರೆಸಿನ ಮೂಲಕವೇ ತಮ್ಮ ಕೆಲಸ ಸಾಧಿಸಿಕೊಳ್ಳುವದು ಜನತೆಯ, ಆದರಲ್ಲೂ ಮತದಾರರ ಕರ್ತವ್ಯ. ಕಾಂಗ್ರೆಸಿನಂತೆ ತಮಗಾಗಬಲ್ಲ-ಬೇರೆ ಪಕ್ಷವಾವುದೂ ಪ್ರಕೃತ ಇಲ್ಲದಿರುವಾಗ ಕಾಂಗ್ರೆಸನ್ನು ಆಧಂಸುವುದೊಂದೇ ಮತದಾರರ ಮುಂದಿರುವ ಹಾದಿ.

ಹ್ಞಾದು. ಕಾಂಗ್ರೆಸ್ ಕಾರ್ಯಕರ್ತರಿಂದ ತಪ್ಪುಕಾರ್ಯಗಳಾಗಿವೆ; ತಪ್ಪು ನೇಮಕಗಳಾಗಿವೆ. ಕಾಂಗ್ರೆಸಿಗೇನೇ ಅವರಿಂದ ದ್ರೋಹಗಳಾಗಿವೆ. ಆದರೆ ಅವರು ಕಾಂಗ್ರೆಸಿಗರು ಹೊರತು ಕಾಂಗ್ರೆಸ್ಸೇತರರಿಂದಲ್ಲ-ನ ಮಗಾಗಿ ಕಾಂಗ್ರೆಸಿನಾಶ್ರಯಬೇಕು ಹೊರತು ಕಾಂಗ್ರೆಸಿಗಾಗಿ ನಿನಾವಿಲ್ಲ ಎಂಬುದು ಸದಾನೆನಪಿರಬೇಕು. ಅವರಿಂದಾದ ಅನ್ಯಾಯತಪ್ಪಿಗಳಿಂದಲೂ ಕಾಂಗ್ರೆಸಿಗಾಗದಂತೆ ಮತದಾರರು ಎಚ್ಚರಿಕೆಯಿಂದಿರಬೇಕು. ಅನ್ಯರಿಂದಾಗಿದ ತಪ್ಪುಗಳೂ ಆತಾಗಿ ಹೋಗುವ ರೀತಿಯಲ್ಲಿ ಎಲ್ಲೆಲ್ಲೂ ಕಾಂಗ್ರೆಸಿಗೆ ಜಯ ದೊರಕಿಸಿಕೊಡಬೇಕು.

ಕಾಂಗ್ರೆಸ್ ಅಧಿಕಾರ ಸ್ಥಾನದಲ್ಲಿರುವ ಏರು ಅಲ್ಲಲ್ಲಿ ಅಸ್ಪಿಷ್ಟವಾಕಾಂಗ್ರೆಸ್ ತತ್ವಬಾಹಿರಂಗುವಂತೆ ಮಾಡುವ ವಿದ್ಯಮಾನಗಳು, ಒತ್ತಡಗಳು, ತಡೆತೊಡಕುಗಳು ಬಂದಿರಬಹುದು:-ಸ್ವಾತಂತ್ರ್ಯಪೂರ್ವದಲ್ಲಿ ಕಾಂಗ್ರೆಸ್ ಘೋಷಿಸಿದ್ದುದನ್ನು ಸ್ವಾತಂತ್ರ್ಯಾನಂತರ ಮಾಡಲಾಗದಂಥಾತಡೆ ತೊಡಕುಗಳು ಬಂದಂತೆ! ಅನಿರ್ವಾಹವಾಗಿಯಲ್ಲದೆ ಉದ್ದೇಶ ಪೂರ್ವಕ ಅವರಾಧಗಳಾಗಿದ್ದರೆ, ಅಂತಹ ಅವರಾಧಗಳಿಗೆ ಪ್ರಾಯಶ್ಚಿತ್ತ ಮಾಡುವ ವಿಧಾನಗಳು ಈ ದೇಶ ವ್ಯಾಪಿ ಕಾಂಗ್ರೆಸ್ ಸಂಸ್ಥೆಯೊಳಗಡೆ ಪ್ರತ್ಯೇಕ ವಿವೆ. ಮೇಲ್ನಡೆ ನವೂಡಿಸಿರುವ ಕಾರಣಗಳಿಂದಾಗಿ ಈ ದಿನ ನಮಗೆ ಕಾಂಗ್ರೆಸ್ ಸಂಸ್ಥೆ ಬೇಕಾಗಿರುವುದು ಹೌದಾದರೆ 'ಅದರ ಕ್ರಮ ನಿಯಮಗಳು ಮಾತ್ರ ಬೇಡ, ಅದರ ಸಮಿತಿಗಳು, ಅಧಿಕಾರಿಗಳು ಮಾತ್ರ ಬೇಡ' ಎಂದು ಮನಸೇಚ್ಛೆವರ್ತಿಸುವ ಅಧಿಕಾರ ನಮಗಿಲ್ಲ. ಕಾನೂನನ್ನು ಜನರೂ ತಮಗಿಚ್ಛೆ ಬಂದಂತೆ ತಮ್ಮ ಕೈಗೆ ತೆಗೆದುಕೊಂಡರೆ ಹೇಗೆ ಆ ರಾಜಕತೆ ವ್ಯಾಪಿಸುವುದೋ ಹಾಗೆಯೇ ಕಾಂಗ್ರೆಸ್ ಕ್ರಮನಿಯಮಗಳ ಕಠಿಣ ಸ್ವೇಚ್ಛೆಯಿಂದ ವರ್ತಿಸಹತ್ತಿದರೆ ಕಾಂಗ್ರೆಸ್ ಯಂತ್ರದ ಕೀಲುತಪ್ಪುವದು; ಕಾಂಗ್ರೆಸ್ ದುರ್ಬಲಗೊಳ್ಳುವದು.

ತಂತಮ್ಮ ಕರ್ತವ್ಯಗಳಲ್ಲಿ ತಪ್ಪುಗಳಾಗದಂತೆ ನೋಡಿಕೊಂಡು, ತಂತಮ್ಮ ಹೊಣೆಗಾರಿಕೆಯನ್ನು ಸರಿಯಾಗಿ ನಿರ್ವಹಿಸುವದೊಂದೇ ಈಗ ಎಲ್ಲಾ ಕರ್ತವ್ಯ. ಕಾಂಗ್ರೆಸ್ ಕಾರ್ಯಗಳಲ್ಲಿ, ಕಾಂಗ್ರೆಸ್ ಉಮೇದ್ವಾರಿಗಳ ನೇಮಕಗಳಲ್ಲಿ ತಪ್ಪುಗಳಾಗದಂತೆ ಕಾರ್ಯಕರ್ತರು ನೋಡಿಕೊಳ್ಳಬೇಕು. [ಅವರೇ ತಪ್ಪುಮಾಡಿದಲ್ಲಿ ಅವನ್ನು ವಿಚಾರಿಸುವ ಮಾರ್ಗದಿಂದಲೇ ವಿಚಾರಿಸಬೇಕು.] ಅಧಿಕೃತವಾಗಿ ಯಾರು ಕಾಂಗ್ರೆಸ್ ಉಮೇದ್ವಾರಿಗಳಾಗಿರುವರೋ ಅವರಿಗೇನೇಮತದಾರರು ಮತದಾನ ಮಾಡಬೇಕು. ಕಾಂಗ್ರೆಸ್ಅಧಿಕಾರಿಗಳಿಂದಾದ ತಪ್ಪುಗಳನ್ನೆತ್ತಿ ತೋರಿದು ಹಾಕಿವ ವಿಧಾನಗಳು ಪ್ರತ್ಯೇಕವಿವೆ. ಆದರೆ ಮತದಾರರಿಂದಾದ ತಪ್ಪಿಗೆ ಮತ್ತೆ ತಿದ್ದುಪಡಿಯೆಂಬುದೇ ಇಲ್ಲ ಆದನ್ನು ಜನರೇ ಅನುಭವಿಸಿ ಮುಗಿಸಬೇಕು. ಆದ್ದರಿಂದ ಮತದಾರರು-ಸಾರ್ವಜನಿಕರು-ತಾವಾಗಿ ಮತ್ತು ತಮಗಾಗಿ ಕಾಂಗ್ರೆಸಿಗೇನೇ ಬೆಂಬಲವಾಗಲಿ.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ.

O. S. No 300/49 R-1, Si No. 825/1949

ಕೆ. ನಂದ್ಯಪ್ಪ ಸೆಟ್ಟಿ ... ... ವಾದಿ.

ಮತ್ತು

ಮುದ್ದು ಸೆಟ್ಟಿ ಕೂಡಾ ... ಪ್ರತಿವಾದಿಯು.

ಯಿವರೊಳಗೆ

7ನೇ ಪ್ರತಿವಾದಿ- ಯೆಲ್ಲಪ್ಪಸೆಟ್ಟಿ. ಆಕ್ಕಂ ಮನೆಕ್ತಿಯ ಮಗ, ಉಪ್ರಿಸಲ್ಲು ಪಾಗಾಳ ಗ್ರಾಮದ ಮುಕ್ಕಾಲಿ ಸೂರಾಸೆಟ್ಟಿ ಮನೆಯಲ್ಲಿ ಯಿರುವವ.

ಮೇಲ್ಕಂಡ ವಾದಿಯು ಪ್ರತಿವಾದಿಯು ಸ್ಥೀರವಿಟು ನಿವೃತ್ತಿಬಗ್ಗೆ ದಾಕಲುಮಾಡಿದ ಸದ್ರಿ ನಂಬ್ರವು ತಾರೀಕು 27-9-49ಕ್ಕೆ ತಪ್ಪಿಬಗ್ಗೆ ಯಿಡೋಣಾಗಿದುದೆ. ಆದುದರಿಂದ ಯಾ ವಾದಿನಲ್ಲಿ ನಿಮ್ಮ ಆಕ್ಷೇಪಣೆಯೇನಾದರೂ ಯಿದ್ರೆ ಮೇಲ್ಕಂಡ ತಾರೀಕು 27-9-49ಕ್ಕೆ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಉದಪರಿಸಲಿಕ್ಕೆ ತಪ್ಪಿದರೆ ಸದರಿ ನಂಬ್ರವು ನಿಮ್ಮ ಯೆಕ್ಪಪಾರ್ಟಿಯಿಂದ ತೀರ್ಮಾನಿಸಲಾಗುವದೆಂಬ ಸಂಗತಿ ಯಿಂದ ಮೂಲಕ ತಿಳಿಸೋಣಾಗಿಯದೆ.

K. J. Ballal
Vakil for Plaintiff.

9—9—49
Udipi

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 281/49 O.S 547/40

ಕಮಲಯಮಾನೆ ಲಕ್ಷ್ಮಿಅಮ್ಮ-ಆರ್ಜಿದಾರಳು

ವಿರುದ್ಧ

ಕಾಮತ್ ಸಹಾ — ಎದುರುದಾರರು.

13 ರಾವುಜ್ಜಿ ಸಂಜಿತ. ನಾರಾಯಣ ಸಂಜಿತರ ಮಗ. 16 ಲಕ್ಷ್ಮಣಾಯ್ಕ ಅನಂತ ನಾಯ್ಕರ ಮಗ. ಉದ್ಯೋಗಾಲ್ಕು ಕೆಜ್ಜೂರು ಗ್ರಾಮ.

ಆರ್ಜಿದಾರಳು ಈ ಮೂಲ್ಕ ಬಾಹೀರು ಮಾಡಿಕೊಳ್ಳುವಮೇನೆಂದ್ರೆ-

ಸದ್ರಿ ಅಮ್ಲ ಜಾರಿಯಲ್ಲಿ 1ರಿಂದ 4ನೇ ವರೇಗಿನ ಎದ್ರಿರ ಸ್ತಿರಾಸ್ತಿ ಲೈಲಾ ನಾಮಿಸುವರ್ಗೋಸ್ಕರ ಹಾಜ್ರುಪಡ್ಸಿದ ಯಿನ್ಸಿಹಾದನ ತರ್ಜಮಾರ್ಥಯಿಸುವರ್ಗೋಸ್ಕರವಾ 27-9-49ಕ್ಕೆ ತಪ್ಪಿಗೆ ಯಿಡೋಣಾಗಿಯದೆ. ಆ ತಾರೀಕು ನಿಮ್ಮಮೇನಾದ್ರೂ ಆಕ್ಷೇಪವಿದ್ರೆ ಸದ್ರಿ ಒನ್ನ ಹೊಗಲು 11ಗಂಟೆಗೆ ಸ್ವತಹಾ ವ ವಕೀಲರ ದ್ವಾರಾ ಮೇಲ್ಕಂಡ ಕೋರ್ಟುಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ವಿಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗತಿ ಈ ಮೂಲ್ಕ ತಿಳಿಯಪಡಿಸಿದೆ.

G. Sanjiva Rao
Pleader for Petitioner

Kundapur
Date 8-9-49.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಾಗಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗಿದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡ್ಯಾರೆಕ್ಟರ್.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ಇಂದಿನ ಛಲವಂತ-ಮಾರ್ಶಲ್ ಟಿಟೊ.

ಮಾರ್ಶಲ್ ಟಿಟೊ-ಯುಗೊಸ್ಲೇವಿಯದ ನಾಯಕ ಇಂದು ಪ್ರಪಂಚದಲ್ಲಿ ಪ್ರಸಿದ್ಧನೆನಿಸಿದ್ದಾನೆ. ರಶ್ಯದಕೆಂಪಣ್ಣ ಈ ಮನುಷ್ಯನನ್ನು ಸೃಷ್ಟಿಸುವುದಕ್ಕಾಗಿ ಈಗ ಅರಿಯುವಂತಿದೆ; ಅದರ ಕತ್ತಿಗೆ ಪ್ರತ್ಯೇಕ ಟಿಟೊನ ತಲೆಯನ್ನೇ ಗುರಿಮಾಡಿದಂತಿದೆ. ಪೂರ್ವ ಯುರೋಪಿನ ಒಂದು ಚಿಕ್ಕ ರಾಜ್ಯ ಯುಗೊಸ್ಲೇವಿಯದ ನಾಯಕ ಇಡೀ ಕಮ್ಯುನಿಸ್ಟ್ ಪ್ರಪಂಚಕ್ಕೆ ವಿರೋಧಿಯಾಗಿ ನಿಲ್ಲುವುದು ಹೇಗೆ? ತನ್ನನ್ನು ತಾನು ಸಮರ್ಥಿಸಿಕೊಳ್ಳುವುದಕ್ಕಾಗಿ ಟಿಟೊ ಹೇಳಿದ್ದಾನೆ! ತನ್ನನ್ನು ನಂಬಿದ್ದ ಗುಲಾಮರನ್ನು ಗೊಳಿಸಿ, ಆಜೆಗೆಸೆದುಬಿಡಬೇಕೆಂದು ರಶ್ಯದ ಉಕ್ಕಿನ ಮೂರ್ತಿಯೇ ಕೈಯೆತ್ತಿರುವುದನ್ನು ಕಂಡೂ ನಿಶ್ಯಂಕೆಯಿಂದ, ಗೊಂದಲರಹಿತವಾದ ಧೈರ್ಯದಿಂದ ಹೇಗೆ ತಾನೆ ಟಿಟೊ. ಅದು ಯಾವುದೇ ರಾಜಕೀಯ ಕಾರ್ಯಕ್ಕಾಗಿ ಅಲ್ಲ; ಕೇವಲ ತನ್ನ ಭಾವನೆ ಮತ್ತು ವಾದವೇ ಸರಿಯೆಂಬ ಹಠಕ್ಕಾಗಿ. ಮಾರ್ಶಲ್ ಟಿಟೊನ ವ್ಯಕ್ತಿತ್ವದ ವಿಶೇಷತೆಯೇ ಇದು.

ಕಲಹಕ್ಕೆ ಕಾರಣ

ಮಾರ್ಶಲ್ ಟಿಟೊ ಕಮ್ಯೂನಿಸ್ಟ್ ಪುಢಾರಿ; ಸೋವಿಯೆಟ್ ರಶ್ಯದಲ್ಲೇ ತರಬೇತಿಗೊಂಡವ. ಅವನ ನಾಯಕತ್ವದಲ್ಲಿ ಯುಗೊಸ್ಲೇವಿಯವು ಸಮತಾವಾದಿ ರಾಷ್ಟ್ರವಾಗಿಯೇ ಇದೆ. ಭಾರತದಲ್ಲಿ ಕಾಂಗ್ರೆಸ್ ಸಂಸ್ಥೆ ಸುತ್ತು ಬೇರೆಬೇರೆ ಕಾಂಗ್ರೆಸ್ ಸರಕಾರಗಳಿರುವಂತೆ ಜಾಗತಿಕ ಕಮ್ಯೂನಿಸ್ಟ್ ಸಂಸ್ಥೆ 'ಕಮಿನ್‌ಫಾರ್ಮ್' ಎಂಬುದಿದ್ದು ಅದು ಕಮ್ಯೂನಿಸ್ಟ್ ಸರಕಾರಗಳೇ ರಶ್ಯ ಮತ್ತಿತರ ಹಿಂಬಾಲಕ ಪೂರ್ವ ಯುರೋಪು ರಾಷ್ಟ್ರಗಳನ್ನೆಲ್ಲ. ಈ ಎಲ್ಲ ಕಮ್ಯೂನಿಸ್ಟ್ ರಾಷ್ಟ್ರಗಳ ಅಧಿಪತಿ ಸ್ಥಾನವು ರಶ್ಯಕ್ಕೆ. ರಶ್ಯ ಸೋಂದೇ ಪೂರ್ಣ ಸಮತಾವಾದಿ ರಾಷ್ಟ್ರವೆಂದು 'ಕಮಿನ್ ಫೋರ್ಮ್' ಒಪ್ಪಿಕೊಂಡಿದೆ; ಮಿಕ್ಕ ಸಣ್ಣ ರಾಷ್ಟ್ರಗಳೂ ಹಾಗೆ ಪೂರ್ಣತೆಗೊಂಡಿರದ, ರಶ್ಯದ ವೇಲ್ಚಾಯನ್ನು ಅನುಕರಿಸಲು ಬದ್ಧವಾಗಿವೆ ಎಂದು ಈ ಕಮಿನ್‌ಫೋರ್ಮ್ ಪಕ್ಷದ ತತ್ವ. ಮಾರ್ಶಲ್ ಟಿಟೊ ಇದನ್ನೊಪ್ಪದೆ, ಯುಗೊಸ್ಲೇವಿಯವನ್ನು ಪೂರ್ಣ ಸಮತಾವಾದಿ ರಾಷ್ಟ್ರವೆಂದು ಗಣಿಸಬೇಕೆಂದು ವಾದಿಸಿದ. ರಶ್ಯದ ಮತ್ತು ಅದರ ಅನುಯಾಯಿ ಕಮ್ಯೂನಿಸ್ಟ್ ರಾಷ್ಟ್ರಗಳವರು ಟಿಟೊವಾದವನ್ನು ವಿರೋಧಿಸಿದರು. ಈ ವಿವಾದವು ಬೆಳೆಯುತ್ತಾ ಹೋಗಿ ಈಗ ಪರಮಾವಧಿಗೆ ಮುಟ್ಟಿದೆ. ಟಿಟೊನನ್ನು ಕಮಿನ್‌ಫೋರ್ಮ್‌ನಿಂದ ಹೊರ ತಳ್ಳಿದ್ದಾರೆ; ಅವನನ್ನೂ ಅವನ ಸಾಕಾರವನ್ನೂ ನಿರ್ಮೂಲಿಸಿ ಯುಗೊಸ್ಲೇವಿಯವನ್ನು ಸಂಪೂರ್ಣವಾಗಿ ತನ್ನ ಕೈಗೊಂಬೆ ರಾಷ್ಟ್ರವನ್ನಾಗಿ ಮಾಡಿಕೊಳ್ಳಬೇಕೆಂದು ರಶ್ಯ ವೀಗ ನಡು ಬಿಗಿದಿದೆ. ಆದಕ್ಕಾಗಿ ರಶ್ಯದ ಪತ್ರಿಕೆಗಳೂ ಆಕಾಶವಾಣಿಗಳೂ ಮಾರ್ಶಲ್ ಟಿಟೊ ಮತ್ತು ಯುಗೊಸ್ಲೇವಿಯದ ಮೇಲೆ ಕಠೋರ ಟೀಕಾ ಪ್ರಹಾರಗಳನ್ನು ಮಾಡುತ್ತಿವೆ. ಯುಗೊಸ್ಲೇವಿಯದ ರಾಜಧಾನಿ ಬೆಲ್ಗ್ರೇಡಿನೊಳಗೆ ಒಂದು ದಿನ ರಶ್ಯನ ರಾಯಭಾರಿಯು ಸೆರೆ ಹಿಡಿದಿದ್ದರು. ಈತನೇ ತನ್ನ ಸೇನೆಯಿಂದ ನುಸುಳಿಕೊಂಡು ರಶ್ಯನರಿಗೆ ಸೆರೆಸಿಕ್ಕಿದ್ದನೆಂದೂ ಕೆಲವರನ್ನು ತಪ್ಪಿಸಿದರೆ. 1917 ರಲ್ಲಿ ರಶ್ಯದಲ್ಲಿ ಬೊಲ್ಶೆವಿಕ್ ಕಾಂತ್ರಿಯು ನೇಳೆ ಈತ ಸೆರೆವಾಸದಿಂದ ಬಿಡುಗಡೆಗೊಂಡ. ಕೂಡಲೇ ರಶ್ಯದ ಕೆಂಪು ಸೇನೆಯಲ್ಲಿ ಸೇರಿಕೊಂಡ. ರಶ್ಯದ ಕೆಂಪು ಕ್ರಾಂತಿ ವಿಜಯಗೊಂಡಿತು. ಜೋಸಿಪ್ ಬ್ರೋಝ್‌ಕಟ್ಟು ಗ್ರ ಕಮ್ಯೂನಿಸ್ಟನಾಗಿ ಯುಗೊಸ್ಲೇವಿಯಕ್ಕೆ ಮರಳಿದ. ಅಗಿನ ಯುಗೊಸ್ಲೇವಿಯದ ಸರಕಾರೀ ಶಾಸನದಂತೆ ಟಿಟೋನ ಕಮ್ಯೂನಿಸ್ಟ್ ಚಳವಳವು ಕಾಯಿದೇ ವಿರುದ್ಧವಾಗಿದ್ದಿತು. ಆದ್ದರಿಂದ ಟಿಟೋ ಬಂಧನಕ್ಕೊಳಗಾಗಿ ದೀರ್ಘಾವಧಿ ಜೈಲಿ ನಲ್ಲಿರಬೇಕಾಯಿತು. 1936ರಲ್ಲಿ ಈತ ಬಿಡುಗಡೆಗೊಂಡಾಗ ಸ್ಪೇನಿಶ್ ಅಂತರ್ಯುದ್ಧ ನಡೆಯುತಿತ್ತು. ಕಮ್ಯೂನಿಸ್ಟ್ ಅಂತರ್ರಾಷ್ಟ್ರೀಯ ಸಂಘಟಕರು ಈ ಯುದ್ಧದಲ್ಲಿ ಜೋರಾಗಿ ಅಖಿಲ ಯುರೋಪಿನಿಂದ ದಳಗಳನ್ನು ಕಳುಹಿಸಿದ್ದರು. ಟಿಟೋ ಅವುಗಳ ಮುಖ್ಯ ಸಂಘಟಕರಲ್ಲೊಬ್ಬನಾಗಿ ಕೆಲಸಮಾಡಿದ. 1937ರಲ್ಲಿ ಅಂತರ್ರಾಷ್ಟ್ರೀಯ ಕಮ್ಯೂನಿಸ್ಟ್ ಸಂಸ್ಥೆಯ ಯುಗೊಸ್ಲೇವಿಯದ ಮುಖ್ಯ ಕಾರ್ಯದರ್ಶಿಯಾಗಿ ನೇಮಕಗೊಂಡ. ಹಿಟ್ಲರನು ಯುಗೊಸ್ಲೇವಿಯವನ್ನು ಆಕ್ರಮಿಸಿಕೊಂಡ ಮೇಲೆ ಗುಪ್ತಗಾಮಿಯಾಗಿ ಗೆರಿಲ್ಲಾ ಸೇನೆಗಳನ್ನು ಸಂಘಟಿಸಿ ನಾಜಿಗಳಿಂದನ ಗೊರಿಲ್ಲಾ ಹೋರಾಟ ಕೊಟ್ಟ ಟಿಟೋ. ಆಗ ಬ್ರಿಟನು ಅಂತರ್ಗಾಮೀ ವಿಮಾನಗಳ ಮೂಲಕ ಟಿಟೋನಿಗೆ ಸಹಾಯ ಸಲ್ಲಿಸುತ್ತು. ಯುದ್ಧ ಮುಗಿದು ಯುಗೊಸ್ಲೇವಿಯವು ಸ್ವತಂತ್ರವಾದೊಡನೆ ಅಲ್ಲಿ ಟಿಟೋ ಸರಕಾರ ಸ್ಥಾಪನೆಯಾಯಿತು.

ಅಪ್ರತಿಮ ದೇಶಾಭಿಮಾನಿ

ಟಿಟೋನ ಸ್ವದೇಶಾಭಿಮಾನವು ಅಚಲವಾದುದು; ಸ್ವಂತ ವೈಶಿಷ್ಟ್ಯವು ಅಚಲವಾದುದು, ನಾಜಿಗಳ ವಿರುದ್ಧ ಗುಪ್ತ ಹೋರಾಟದಲ್ಲಿರುವಾಗ, ಚರ್ಚಿಲ್ಲರಿಂದ ಕಳುಹಿಸಲ್ಪಟ್ಟು ಟಿಟೋನನ್ನು ಕೂಡಿಕೊಂಡಿದ್ದ ಬ್ರಿಟನಿನ ಫಿಟ್ಸ್‌ರೋಯಿ ಮೇಕ್ಲೀನ್ ಎಂಬವರೊಮ್ಮೆ ತಮ್ಮ ಸ್ವಭಾವವನ್ನು ಸಾರವಾಗಿ ಪರೀಕ್ಷಿಸಲು ಪ್ರಶ್ನೆ ಹಾಕಿದ್ದರು. "ಯುದ್ಧ ವಿಜಯಗೊಂಡ ಮೇಲೆ ಯುಗೊಸ್ಲೇವಿಯವು ಸ್ವತಂತ್ರ ರಾಷ್ಟ್ರವಾಗುವುದೋ, ರಶ್ಯದೊಂದು ಭಾಗವಾಗಿ ಹೊಂದುಬಿಡುವುದೋ?", ಆಗ ಮಾರ್ಶಲ್ ಟಿಟೋ ಹೇಳಿದ್ದ: "ಯುಗೊಸ್ಲೇವಿಯವನ್ನು ಸ್ವತಂತ್ರಗೊಳಿಸಬೇಕೆಂದು ನಾವೆಷ್ಟು ತ್ಯಾಗ ಮಾಡುತ್ತಿದ್ದೇವೆಂಬುದೆಲ್ಲಾ ನಿಮ್ಮ ನೆನಪಿನಲ್ಲಿರಬೇಕು. ಇಷ್ಟು ವೆಚ್ಚದಿಂದ ಸಂಪಾದಿಸಿಕೊಂಡುದೊಂದನ್ನು ನಾವು ಸುಲಭದಲ್ಲಿ ಕಳಕೊಂಡೇವೆಂದು ನೀವು ನೆನಸುವುದು ಅನಗತ್ಯ". ಈಗಲಾದರೂ ಸರಿಯೇ. ರಶ್ಯದೊಡನೆ ಇಂತಹ ಅನಾಯಕರೀ ವೈಮನಸ್ಸಿದ್ದರೂ ಯುಗೊಸ್ಲೇವಿಯವು ಪಾಶ್ಚಾತ್ಯ ರಾಷ್ಟ್ರಗಳ ಪಾಳಯದೊಳಗೆ ಸೇರಿಕೊಳ್ಳುವ ಸಂಭವವಿಲ್ಲ; ಅಂತಹ ಕಲ್ಪನೆಯೇ ಮಾರ್ಶಲ್ ಟಿಟೋನಲ್ಲಿಲ್ಲ. ಬ್ರಿಟನಿನ ಸ್ವತಂತ್ರ ಕೂಲಿಗಾರ ಪಾರ್ಲಿಮೆಂಟ್ ಸದಸ್ಯ ಮಿ. ಕೊನ್ನಿಥಿಲ್ಲಾಕಸ್ ಎಂಬವರು ಬೆಲ್ಗ್ರೇಡಿಗೆ ಹೋಗಿ ಟಿಟೋನೊಡನೆ ಮಾತಾಡಿದಾಗ ಆತ ಈ ವಿಷಯವನ್ನು ಸ್ಪಷ್ಟ ಪಡಿಸಿದ್ದಾನೆ. "ಭಂಡ ನಾಳಶಾಹಿತ್ವವು ಆಪತ್ಕಾಯರ ಸ್ವತ್ತು ವಿರುದ್ಧ ವಿಷಯ. ಸಮತಾವಾದೀ ಸಮಾಜ ರಚನೆ ಮಾಡುವ ಯುಗೊಸ್ಲೇವಿಯದ ಧೋರಣೆಯು ಅಚಲವಾದುದು" ಎಂದು ಖಚಿತವಡಿಸಿದ್ದಾನೆ. ಇಷ್ಟೆಲ್ಲಾ ಗದ್ದಲಗಳಿದ್ದರೂ ರಶ್ಯಾ-ಯುಗೊಸ್ಲೇವಿಯಾ ಹೋರಾಟವೆದ್ದೀತೆಂಬ ಭಯವೇ ಮಾರ್ಶಲ್ ಟಿಟೋಗಾಗಲೀ, ಅವನ ಪಕ್ಷ ನಾಯಕರಿಗಾಗಲೀ ಇಲ್ಲ. ಮಾತ್ರವಲ್ಲ, ಯುಗೊಸ್ಲೇವಿಯದ ಜನತೆ ಕೂಡಾ ಅಂತಹ ಅಪಾಯ ಸಂಭವಸಾಧ್ಯವೆಂಬ ನಂಬಿಕೆಯಿಂದ ನಿತ್ಯದ ಶಾಂತ ಜೀವನವನ್ನೇ ನಡೆಸುತಿದ್ದಾರೆ ಇನ್ನು ಕೆಲವು ವರುಷಗಳೊಳಗೆ ಉಚ್ಚ ಮಾನವೀಯತೆಯ ಸಮತಾವಾದಿ ರಾಷ್ಟ್ರವಾಗಿ ಯುಗೊಸ್ಲೇವಿಯವು ರಾಜಕಶರವೆಯೆಂಬ ಭವ್ಯ ಭವಿಷ್ಯವೊಂದೇ ಈಗಲೂ ಮಾರ್ಶಲ್ ಟಿಟೋನ ಕಣ್ಣು ಮುಂದಿದೆ. ರಶ್ಯದ ಘರ್ಜನೆಗಳಿಂದಾಗಿ ಹೊರ ವಲಯಗಳಲ್ಲೆದ್ದರುವ ಕಂಪನವಾವುದೂ ಟಿಟೋನ ಹೃದಯ ಅಥವಾ ಯುಗೊಸ್ಲೇವಿಯದ ಜನಜೀವನ ರಂಗದಲ್ಲಿ ಕಂಡು ಬರುತ್ತಿಲ್ಲ. ಮಾರ್ಶಲ್ ಟಿಟೋ ಅಂತಹ ಗಟ್ಟಿ ಮನುಷ್ಯ!

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor, Manager.

ವಿವಿಧ ಪಾತ್ರೆಗಳು

ಯಾವಶ್ಯ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ದರದಲ್ಲಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ನ್ಯಾಸಾಚಾರ್ಯ,

ರಥಬೀದಿ, ಉಡುಪಿ.

ಜಾಗತಿಕ ರಂಗದ ವಾದ ವಿವಾದಗಳು.

ಪ್ರಾಯಃ ಅಂಚಿಕೆ ವಿದ್ಯಮಾನಗಳೆಲ್ಲವೂ ಹೆಚ್ಚಿನಂಶ ಇದ್ದಂತಿವೆ; ಕೆಲಕಾಲದಿಂದ ಯಾಪ ಹಾಗಿ ಹುಡಿದು ನಾಗಾಪ್ತಾ ಬಂದಿರುವವೋ ಅದೇ ಗತಿಯಲ್ಲಿವೆ. ಸಮುದ್ರದ ಅಲೆ, ಅಂದೋಲನಗಳಂತೆ ಜಾಗತಿಕ ರಾಜಕೀಯದಲ್ಲೂ ಗೊಂದಲ, ವಾದ ವಿವಾದಗಳು ಇರುವಂತಹವೇ. ಆದರೆ, ಇವು ಸ್ಪಷ್ಟವಾಗಿ ಭವಿಷ್ಯನಿರ್ಮಿಸುವಂತಹವೇ, ಅಥವಾ ಆಧೋಗತಿಯತ್ತ ತಳ್ಳುವಂತಹವೇ ಎಂಬುದನ್ನು ಅಸ್ಥಿತಿಗತಿಗಳ ರೂಪರೇಖೆಗಳಿಂದ ಊಹಿಸಲು ಸಾಧ್ಯವಿದೆ. ಇಂದಿನ ಜಾಗತಿಕ ಅಗುಹೋಗುಗಳು ಭವ್ಯ ಭವಿಷ್ಯದ ಆಶೆಯನ್ನು ಮೊಳೆಯಿಸುವ ಬದಲಿಗೆ ಕತ್ತಲೆಯತ್ತ ಚಲಿಸುತ್ತಿರುವಂತೆ ಕಾಣುತ್ತಿವೆ ಇದು ಮಾತ್ರ ಖೋಚನೀಯವೆಂದು ಮತ್ತೊಮ್ಮೆ ಹೇಳಬೇಕಾಗಿದೆ.

ಚೀನದ ಸಮರ

ಚಿಯಾಂಗ್-ಕೈ-ಶೇಕರ ರಾಷ್ಟ್ರೀಯ ಸರಕಾರವ ವಶವಿರುವ ದಕ್ಷಿಣ ಚೈನಾ ಭಾಗಗಳನ್ನೂ ಗೆದ್ದುಕೊಳ್ಳಲು ಕಮ್ಯೂನಿಸ್ಟ್ ಸೇನೆಗಳೀಗ ಹೊಸ ಹೊಸ ಪ್ರಹಾರಗಳಿಗೆಳನ್ನು ಹೂಡಿವೆ. ೧೭ನೆ ದಿಂದ ಮಜಂದೊತ್ತುತ್ತಿವೆ. ಬರ್ಮಾ ಹಾಗೂ ಇಂಡೋಚೈನಕ್ಕೆ ಸಮೀಪವಿರುವ ಚೈನದ ಯುನಾನ್ ಪ್ರಾಂತ್ಯದ ಗವರ್ನರ್ ಜನರಲ್ ಲು ಹಾನರು ರಾಷ್ಟ್ರೀಯ ಸರಕಾರದ ಸಂಬಂಧ ಕಡಿದುಕೊಂಡು ಸ್ವತಂತ್ರರಾದರೆಂಬ ವಾರ್ತೆಯು ಒಮ್ಮೆ ಚಿಯಾಂಗ್ ಸರಕಾರವನ್ನು ದಿಗಿಲುಗೊಳಿಸಿದ್ದಿತು; ಅವರು ಕಮ್ಯೂನಿಸ್ಟ್ ಪಕ್ಷ ಸೇರಿಕೊಳ್ಳುವರೆಂಬ ಊಹಾಪೋಹಗಳೆದ್ದಿದ್ದುವು. ಆದರೆ ಅವರು ಚಿಂಕಿಂಗಿಗೆ ಬಂದು ಚಿಯಾಂಗ್-ಕೈಶೇಕರೊಡನೆ ಮಾತಾಡಿ ಒಂದು ತಾತ್ಕಾಲಿಕ ಶಾಂತಿ ಒಪ್ಪಂದ ಮಾಡಿಕೊಂಡು ಮರಳಿದಂತಿದೆ. ಚೈನಾ ಯುದ್ಧರಂಗದ ಘಟನೆಗಳ ಮೇಲಿಂದ ಈ ಒಪ್ಪಂದಕ್ಕೇನೂ ಬೆಲೆಯಿಲ್ಲವೆಂದೂ ಯುನಾನ್ ಪ್ರಾಂತ್ಯವು ಇದ್ದಂತೆಯೇ ರಾಷ್ಟ್ರೀಯ ಸರಕಾರದ ಕೈಯಿಂದ ಜಾರಿ ಹೋಯಿತೆಂದೂ ಕಟ್ಟಿಕೊಳ್ಳಲಡ್ಡಿಯಿಲ್ಲ. ದಕ್ಷಿಣ ಚೈನದ ಆಯಕಟ್ಟಿನ ಸ್ಥಳಗಳಲ್ಲಿ ಸರಕಾರೀ ಸೇನೆಗಳು ಹಿಂದಿಗಿಂತ ಪ್ರಬಲವಾಗಿ ಕಮ್ಯೂನಿಸ್ಟ್ ಸೇನೆಗಳನ್ನು ವಿರೋಧಿಸುತ್ತಿರುವುದು ಕಂಡುಬರುತ್ತಿದೆ. ಕೆಲವು ತಿಂಗಳ ಮೊದಲೇ ಅಮೆರಿಕದ ಸಹಾಯ ಪಡೆಯಲು ವಾಷಿಂಗ್ಟನ್ನಿಗೆ ಹೋಗಿದ್ದ ಮೇಡಮ್ ಚಿಯಾಂಗರು ಮರಳಿ ಚೈನಾಕ್ಕೆ ಬಂದಿದ್ದಾರೆ ಅವರು ಹೊಸ ಆಶೆ, ಭರವಸೆಗಳನ್ನು ತಂದಿರಬೇಕೆಂದು ಊಹಿಸಲಾಗಿದೆ. ಹೀಗಿದ್ದರೂ ಪರರಾಷ್ಟ್ರಗಳ ದೊಡ್ಡ ಪ್ರಮಾಣದ ಪ್ರತ್ಯಕ್ಷ ಸಹಾಯವು ದೊರೆಯದಿದ್ದರೆ, ಅಥವಾ ಕಮ್ಯೂನಿಸ್ಟರು ವಶಪಡಿಸಿಕೊಂಡಿರುವ ಸ್ಥಳಗಳವರು ಒಳಗಡೆಯಲ್ಲಿ ಮಾಡಾ ಬಂಡಾಯವೇಳದಿದ್ದರೆ ದಕ್ಷಿಣ ಚೈನವನ್ನೂ ಚಿಯಾಂಗರ ಕೈಯಿಂದ ಕಮ್ಯೂನಿಸ್ಟರು ಕಸಗೊಳ್ಳದಂತೆ ಎತಾಡಿವಂತಹದಲ್ಲ ಇಲ್ಲ. ಅಂತಹ ಸಹಾಯ ದೊರೆವ ಸಂಭವವಿಲ್ಲ. ಕೆಂಪು ಸೇನೆ ಮುಂದೊತ್ತುತ್ತಲೇ ಇದೆ. ಅದು ಮುಂದೊತ್ತುತ್ತಾ ಬಂದಂತೆ ಬ್ರಿಟಿನ ಕೈಯಲ್ಲಿರುವ ಹೊಂಗ್‌ಕೊಂಗಿನಲ್ಲೇನು ಎಂಬ ಪ್ರಶ್ನೆ ಹತ್ತಿರ ಹತ್ತಿರ ಗಾತ್ತಾ ಇದೆ.

ಇತರ ವಿವಾದಗಳು

ಬ್ರಿಟಿನಿನ ಡೋಲರ್ ಅಭಾವದ ದೆಸೆಯಿಂದಾಗಿ ಸ್ಟರ್ಲಿಂಗ್ ಕ್ಷೇತ್ರದಲ್ಲಿದ್ದಿರುವ ಬಿಕ್ಕಟ್ಟನ್ನು ಬಗೆಹರಿಸಲು ಆಮೆರಿಕದ ರಾಜಧಾನಿ ವಾಷಿಂಗ್ಟನಿನಲ್ಲಿ ಕಳದ ವಾರದಿಂದ ನಡೆದಿರುವ ಅಮೆರಿಕ-ಬ್ರಿಟನ್-ಕೆನಡಾ ತ್ರಿರಾಷ್ಟ್ರೀಯ ಸಮ್ಮೇಳನವು ಪ್ರಪಂಚದ ಆರ್ಥಿಕ ರಂಗದ ದೊಡ್ಡ ಘಟನೆಯೆನ್ನಬಹುದು. ಈ ಸಮ್ಮೇಳನದ ಪರ್ಯಾಲೋಚನಾ ಭಾಗಿಯಾಗಲು ಭಾರತ ಸರಕಾರದ ಅರ್ಥ ತಜ್ಞ ಪ್ರತಿನಿಧಿಯೂ ಅಲ್ಲಿದ್ದಾರೆ. ಬ್ರಿಟಿನಿನ ಬಡತನದಿಂದಾಗುವ ದುಷ್ಪರಿಣಾಮಗಳನ್ನು ತಪ್ಪಿಸುವದಕ್ಕಾಗಿ ಸ್ಟರ್ಲಿಂಗ್ ಕ್ಷೇತ್ರಗಳಲ್ಲಿ ಅವಿಂಕದ ಭಂಡವಾಳಗಳನ್ನು ಹಾಕುವ ಯೋಚನೆಯು ಸಮ್ಮೇಳನದಲ್ಲಾದಂತಿದೆ. ಇತರ ವಿಷಯಗಳೂ ಪರ್ಯಾಲೋಚನೆಯಲ್ಲಿವೆ.

ಇಂಡೋನೇಶಿಯದ ವಿಪಬ್ಲಿಕ್ ಸರಕಾರ ಡಚನಿಗೆ ಸಂಬಂಧಿಸಿದ ದಂಡುಮೇಜು ಸಮ್ಮೇಳನವು ಇಜ್ ಮತ್ತು ಇಂಡೋನೇಶಿಯದ ಪ್ರಮುಖ ಪಕ್ಷಗಳ ಪ್ರತಿನಿಧಿಗಳೊಳಗೆ ಳೆಳದ ಮೂರು ವಾರಗಳಿಂದ ನಡೆಯುತಿದ್ದು ಈಗ ನಾಲ್ಕನೇ ವಾರದಲ್ಲಿ ರಾಜ್ಯಭಾರಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಿಗೆ ಕೊನೆಯ ಆಕಾರ ಕೊಡುವ ಕೆಲಸಗಳು ಆಗುತ್ತಿವೆ. ಈ ಪರಿಣತ ಎಲ್ಲಾ ಮಾತುಕತೆಗಳೂ ಸೌಹಾರ್ದಪೂರ್ಣ ನಡೆದಿವೆ. ಭಾರತದ ಸ್ವಾತಂತ್ರ್ಯ ಹೋರಾಟಗಳನ್ನು ವಿರೋಧಿಸಿ ಜಯಶೀಲರಾದ ಬ್ರಿಟಿಷರು ಕೊನೆಗೆ ಇಲ್ಲಿಗೆ ವ್ಯವಸ್ಥಾಪೂರ್ವಕ ಸ್ವಾತಂತ್ರ್ಯ ದಾನ ಮಾಡಲು ನಿಶ್ಚೈಸಿ, ಭಿನ್ನ ಪಕ್ಷಗಳೊಡನೆ ಪರ್ಯಾಲೋಚನೆ ನಡೆಸಿದ್ದ ಆಂದಿನ ವಿದ್ಯಮಾನಗಳ ದ್ವಿಪ್ರತಿ ಈಗಿನ ಇಂಡೋನೇಶಿಯದ್ದು.

ದಕ್ಷಿಣಾಫ್ರಿಕದ ಹಿಂದೀಯರ ಮೇಲೆ ಜಾರಿಯಲ್ಲಿರುವ ಅಮಾನುಷ ಕಾಯಿದೆಗಳ ಸಂಬಂಧವಾಗಿ ಅಲ್ಲಿಯ ಮಲಾನ್ ಸರಕಾರವು ಮತ್ತಷ್ಟು ಕಠಿಣ ಧೋರಣೆ ವಹಿಸಿ, ಉಗ್ರ ಕಾರ್ಯಾಚರಣೆಗಳನ್ನು ಕೈಕೊಳ್ಳಹತ್ತಿದೆ ಈ ಸಂಬಂಧವಾಗಿ ಭಾರತ, ಪಾಕಿಸ್ತಾನ್, ಮತ್ತು ದಕ್ಷಿಣಾಫ್ರಿಕ ಸರಕಾರೀ ಪ್ರತಿನಿಧಿಗಳ ತ್ರಿರಾಷ್ಟ್ರೀಯ ಸಮ್ಮೇಳನವು ಸದ್ಯದಲ್ಲೇ ಸೇರಿ ಮಾತುಕತೆ ನಡೆಸಲಿದೆಯೆಂದು ತಿಳಿದು ಬರುತ್ತದೆ.

ಬರ್ಮಯುದ್ಧ ಮತ್ತು ಲೋಕದ ಇತರ ಕಡೆಗಳ ಬೇರೆ ವಿವಾದಗಳು ಹೆಚ್ಚಿನಂಶ ಇದ್ದಂತಿವೆ. ಇತ್ತೀಚೆಗೆ ಜರುಗಿದ ಕಾಮನ್‌ವೆಲ್ತ್ ಸಂಬಂಧಗಳ ಸಮ್ಮೇಳನದಲ್ಲಿ ಕಮ್ಯೂನಿಸಮನ್ನು ಜಯಶೀಲವಾಗಿ ತಡೆಗಟ್ಟುವ ಶುರಿತು ಮಾತುಕತೆಗಳು ನಡೆದುವು. ಕಮ್ಯೂನಿಸಮನ್ನು ವಿರೋಧಿಸುವ ಉತ್ಸಾಹವಾವುದು— ಸೈನಿಕಾಚರಣೆಯೋ ಆರ್ಥಿಕಾಚರಣೆಯೋ ಎಂಬುದೇ ವಾದ ವಿಷಯವಾಗಿತ್ತು. ಬ್ರಿಟನ್, ಕೆನಡಾ, ಮತ್ತಿತರ ಪಾಶ್ಚಾತ್ಯ ರಾಷ್ಟ್ರಗಳು ಸೈನಿಕಾಚರಣೆಗೆ ವಿಶೇಷ ಪ್ರಾಮುಖ್ಯತೆ ಕೊಟ್ಟಿದ್ದರೆ, ಆರ್ಥಿಕಸ್ಥಿತಿ ಸುಧಾರಣೆಯಿಂದಲೇ ಕಮ್ಯೂನಿಸಮ್ ಹಟ್ಟದಂತೆ ಮಾಡಬೇಕೆಂದು ಭಾರತ ಮತ್ತು ಪಾಕಿಸ್ತಾನಗಳು ವಾದಿಸಿದ್ದುವು.

ಸಂಯುಕ್ತ ರಾಷ್ಟ್ರಸಂಘದ ಕಾರ್ಯವಿಧಾನಗಳೇನೂ ಪರಿಣಾಮಕಾರಿಯಾಗಿಲ್ಲವೆಂಬ ನಿರಾಶೆಯು ಈಗ ಸಂಬಂಧಪಟ್ಟ ಸರ್ವರಲ್ಲೂ ವ್ಯಾಪಿಸಿದಂತಿದೆ. ತವಗೆ ಅಹಿತಕರವಾದ ಯಾವ ಪ್ರಶ್ನೆಯನ್ನಾದರೂ ಚರ್ಚಾಬಾಹಿರವಾಗೊಳಿಸುವ ವಿಶೇಷಾಧಿಕಾರವು ಭದ್ರತಾ ಕೌನ್ಸಿಲ್ ಸದಸ್ಯರಾಗಿರುವ ಪಂಚ ಮಹಾ ರಾಷ್ಟ್ರಗಳ ಪೈಕಿ ಪ್ರತಿಯೊಂದಕ್ಕೂ ಇರುವುದರಿಂದ ಪ್ರಾಮುಖ್ಯ ವಿವಾದಗಳನ್ನು ಬಗೆಹರಿಸಿಕೊಳ್ಳಲು ಭದ್ರತಾ ಕೌನ್ಸಿಲ್ ಅಶಕ್ತವಾಗಿದೆ. ಸಂಯುಕ್ತ ರಾಷ್ಟ್ರಕೂಟದ ಕಾರ್ಯಕ್ಷೇತ್ರಗಳಂದಾಗಿ ಕಲಹಗಳ ಆಯುಷ್ಯ ಬೆಳೆಯುತ್ತಾ ಹೋಗುವುದೊಂದಲ್ಲದೆ ಯಾವ ಕಲಹವೂ ಸಂಪೂರ್ಣವಾಗಿ ಕೊಂಡ ದಾಖಲೆಯಿಲ್ಲ. ಇವೆಲ್ಲಾ ಕಾರಣಗಳಿಂದ ಈ ಸಂಘದ ರೂಪರೇಖೆಗಳನ್ನೇ ಬದಲಾಯಿಸಿಕೊಳ್ಳುವ ಆತುರವು ಮೊಳೆತಿದೆ. ಜಾಗತಿಕ ಸಂಯುಕ್ತ ಸರಕಾರ ಸ್ಥಾಪನೆಯ ಅಭಿಪ್ರಾಯಕ್ಕೆ ಹಚ್ಚೆಚ್ಚು ಆನುಮೋದನೆಗಳಾಗಿ ದೊರಕಹತ್ತಿವೆ ಜಾಗತಿಕ ಸಂಸ್ಥೆದ ಬರೆವ ಮಹಾಧಿವೇಶನದಲ್ಲಿ ಈ ಸಂಬಂಧದ ಸೂಚನೆಯೇ ಮಿಕ್ಕೆಲ್ಲಕ್ಕಿಂತ ಹೆಚ್ಚಾಗಿ ಚರ್ಚಿಸಲ್ಪಡುವ ಸಂಭವ ಕಾಣುತ್ತಿದೆ.

ಕಾಶ್ಮೀರದಲ್ಲೇನು?

ಭಾರತದ ಪೂರ್ವಿಗೆ ಈಗ ವಿಶೇಷ ಬಿಳಿಯಾತನೆ ನಿರ್ಮಿಸುತ್ತಿರುವ ಸಮಸ್ಯೆಯೆಂದರೆ ಕಾಶ್ಮೀರದ ವಿವಾದದ ಶುರಿತು ರಾಷ್ಟ್ರಸಂಸ್ಥೆಯು ಆಡುತ್ತಾ ಬಂದ ಆಟ. ಕೈಮುಬದ್ಧವಾಗಿ ತನ್ನೊಡನೆ ವಿಲೀನಗೊಂಡಿದ್ದ ಕಾಶ್ಮೀರದ ಮೇಲೆ ಪಾಕಿಸ್ತಾನದಿಂದ ಪ್ರೇರಣೆಗೊಂಡ ಧಾಳಿಗಾರರು ಅಕ್ರಮ ಪ್ರವೇಶಮಾಡಿರುವುದರಿಂದ ಆ ಶುರಿತು ಪಾಕಿಸ್ತಾನವನ್ನು ವಿಚಾರಿಸಬೇಕೆಂದೂ, ಇಲ್ಲವಾದರೆ ತಾನು ಆ ಕೈ ಬೀಳುವ ಕಾರ್ಯ ಕೈಕೊಳ್ಳುವೆನೆಂದೂ ಭಾರತ ಸರಕಾರವು ಭದ್ರತಾ ಕೌನ್ಸಿಲಿಗೆ ದೂರು ಕೊಟ್ಟಿದ್ದಿತು. ಇದು ಸತ್ಯ ಸ್ಥಿತಿಯೇ— ಸತ್ಯವಾಗಿದ್ದರೆ ತಾನೇ ಶುರಿತು ಮಾಡ

ಕೆಲವು ಉತ್ತಮ ನಾಟಕಗಳು

ದೇಶಭಕ್ತ	(ಕೆ. ಕೆ ಶೆಟ್ಟಿ)	1	4	0
ಸಂಶಯ ಪಿಶಾಚಿ	(,,)	0	8	0
ಕುರಲವ	(,,)	0	6	0
ವ್ಯಭಿಚಾರಿಣಿ ಯಾರು	(,,)	1	0	0
ಹೆಂಡ್ತಿ ಗಂಡನಾದರೆ	(,,)	0	4	0
ಪುರುಷ ವಧು	(,,)	0	4	0
ಪ್ರೇಮ ವಿಜಯ	(,,)	1	0	0
ಸ್ವತಂತ್ರ ಜೀವನೋಪಾಯ	(ಕೆ. ಎಚ್. ಶೆಟ್ಟಿ)	0	3	0
ಮೂರು ಪ್ರಹಸನಗಳು	(ಕೊರಡ್ಕಲ್)	0	14	0
ಸೇವಾಪಥ	(ಸುಬ್ರಹ್ಮಣ್ಯಂ)	0	8	0
ರಂಗಭೂಮಿ	(ವೆಂಕಟರಾಜು)	0	8	0
ಪ್ರಕಾಶ	(ರಾಜವಾಡೆ)	2	4	0
ಸ್ವರಾಜ್ಯ ವಿಜಯ	(ಎಂ. ವಿ. ಹೆಗ್ಡೆ)	0	8	0
ಹೈದರಾಬಾದ್ ವಿಜಯ	(,,)	0	3	0
ಜೀವಪ ಸಂಗ್ರಾಮ	(ಸಿ. ಶೇಷ ಶೆಟ್ಟಿ)	1	8	0
ನೀರಾಬಾಯಿ	(ಡಾ। ಮಾಧವಾಚಾರ್)	0	10	0
ಸರಸ್ವತಿ	(,,)	0	12	0
ಪ್ರತೀಕಾರ	(ಶ್ರೀರಂಗ)	0	8	0
ಶಂಭುಕ ವಧೆ	(ಎನ್. ಎಸ್. ಜೈನಿ)	0	2	0
ಬಲಿ ಪೀಠದಲ್ಲಿ	(ಆರ್. ಕಲ್ಯಾಣಮ್ಮ)	0	3	0
ಬಾಡಿಗೆಯ ಮನೆ	(ವರದರಾಜ ಹುಯಿಲಗೋಳ)	0	3	0

ಸಿಗುವ ಸ್ಥಳಗಳು:—

[1] ನವಭಾರತ ಬುಕ್ ಡಿಪೊ, ಉಡುಪಿ. [೭] ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, [3] ಎಂ. ಎಸ್. ಮಯ್ಯ, ಪುತ್ತೂರು.
[4] ನವಯುಗ ಪ್ರೆಸ್, ಉಡುಪಿ.



Approved firm by the Govt. of Mysore
Certificated by theA gent of the Govt. of Cylone & Indian.

ಕಾಶ್ಮೀರದ ಕಲಹ.
ಘಟನಾ ಸಮಿತಿ ಚರ್ಚೆ.

ಬೇಕಾದುದೇನು, ಎಂಬುದೂ ಒಂದನ್ನೇ ವಿಚಾರಿಸಬೇಕಾಗಿದ್ದ ಭದ್ರತಾ ಕೌನ್ಸಿಲು, ಆ ಮೂಲ ಪ್ರಶ್ನೆಯನ್ನು ಒತ್ತಟ್ಟಿಗೆ ಸರಿಸಿ, ಕಾಶ್ಮೀರವನ್ನು ಭಾರತ ಮತ್ತು ಪಾಕಿಸ್ತಾನಗಳೊಳಗಿನ ಒಂದು ವಾದ ಸ್ಥಳವಾಗಿ ಗಣಿಸಿ, ಇತ್ಯರ್ಥಿಯವರೂ ಎಳೆದಾಡಿಕೊಳ್ಳುವವರೆಂಬಂತೆ ಎರಡುಪಕ್ಷಗಳಿಗೂ ಸಮಾನ ಸ್ಥಾನ ಕೊಟ್ಟು ತಾನು ಮಧ್ಯಸ್ಥಿಕೆ ವಹಿಸಿತು. ಕಾಶ್ಮೀರ ಕಮಿಶನನ್ನು ನೇಮಿಸಿತು. ಅದಿಭಾಗದಲ್ಲಿ ತನಗೂ ಕಾಶ್ಮೀರದ ಧಾಳಿಗಾರರಿಗೂ ಸಂಬಂಧವೇ ಇಲ್ಲವೆಂದು ವಾದಿಸಿದ್ದ ಪಾಕಿಸ್ತಾನವು ಭದ್ರತಾ ಕೌನ್ಸಿಲಿನ ಈ ಧೋರಣೆಯಿಂದಾಗಿಯೇ ಕೊನೆಯಲ್ಲಿ ಕಾಶ್ಮೀರವು ತನ್ನ ಶಕ್ತಿನದಾದ್ದರಿಂದ ಅಲ್ಲಿಗೆ ತನ್ನ ಸೇನೆಗಳನ್ನು ಕಳುಹಿರುವುದನ್ನು ಒಪ್ಪಿಕೊಂಡಿರುವುದಷ್ಟೇ ಅಲ್ಲ, ಆಝಾದ್ ಕಾಶ್ಮೀರ್ ನಾಮಾಂಕಿತ ಸೇನೆಯು ತನ್ನ ಸೇನಾಂಗವೆಂದೂ ಜರೂರು ಮಾಡಿದ. ಕಾಶ್ಮೀರ ವಿವಾದವು ನ್ಯಾಯಬದ್ಧವಾಗಿ ತೀರ್ಮಾನಗೊಳ್ಳಬೇಕೆಂಬ ಆತುರದಿಂದ, ಭಾರತ ಸರಕಾರವು ಮಿಕ್ಕೆಲ್ಲವನ್ನೂ ಮರೆತು ಕಾಶ್ಮೀರ ಕಮಿಶನಿನ ಕಾರ್ಯಕಲಾಪಗಳಲ್ಲಿ ಸಹಕರಿಸುತ್ತಾ ಬಂತು. ಶಾಂತಿ ನಿರ್ಣಯದಕುರಿತು ಸ್ಪಷ್ಟೀಕರಣ ಕೇಳಿ, ಬಂಡಯಗಾರ 'ಆಜಾದ್ ಕಾಶ್ಮೀರ್' ಸೈನ್ಯಗಳನ್ನು ಬರ್ಖಾಸ್ತುಪಡಿಸುವ ಸ್ವಷ್ಟ ಆಶ್ವಾಸನೆಯನ್ನು ಭಾರತ ಸರಕಾರವು ಕಾಶ್ಮೀರ ಕಮಿಶನಿನ ಸಂಧಾನ ಸೂಚನೆಗೂ ಉತ್ತರತಯಾರೀ ನಿರ್ಣಯಮಾಡಿದರು, ತದನುಗುಣವಾಗಿ ನವಢಿಲ್ಲಿಯಲ್ಲಿರುವ ಅಮೇರಿಕದ ಮತ್ತು ಬ್ರಿಟನಿನ ರಾಯಭಾರಿಗಳಮೂಲಕ ಟ್ರುಮೇನ್‌ರವರ್ತು ಅಟ್ಲೀ ಗಳಿಗೆ ಪಂಡಿತನೆಹರುಗಳ ಉತ್ತರವುಹೋಗಿದೆ. ಅಂತೆಯೇ ಕಾಶ್ಮೀರ ಕಮಿಶನಿನವರಿಗೂ ಉತ್ತರ ಕಳುಹಲಾಗಿದೆ. ಕಮಿಶನುಕೊಟ್ಟ ದ್ವಂದ್ವವಿವಾದವಿಷಯಗಳನ್ನು ವಮ್ಯಸ್ಥಿಕೆ ತೀರ್ಮಾನಕ್ಕೆ ಬಿಡುವ ಸೂಚನೆಯನ್ನು ತಿರಸ್ಕರಿಸಿಯೆ ಭಾರತದ ಉತ್ತರ ಹೋಗಿದೆ ಎಂದು ನಂಬಲಾಗಿದೆ. ಭಾರತವು ಮುಖ್ಯವಾಗಿ ಎರಡು ಕಾರಣಗಳ ಮೇಲಿಂದ ಈ ಕಮಿಶನ್ ಸೂಚನೆಯನ್ನು ಧಿಕ್ಕರಿಸಿದೆ. ಒಂದನೆಯದಾಗಿ ಪಂಚಾಯತದಾರನ ತೀರ್ಮಾನಕ್ಕೆ ಬಿಡುವ ವಿಷಯಗಳಾವುವೆಂಬುದನ್ನು ಸ್ಪಷ್ಟಪಡಿಸಿಲ್ಲ; ಅದನ್ನೂ ಪಂಚಾಯತದಾರನ ಇಚ್ಛೆಗೇನೇ ಬಿಟ್ಟಂತಿದೆ. ಎರಡನೆಯ ದಾಗಿ ಕಮಿಶನಿನವರು ಸ್ಪಷ್ಟವಾಗ್ದಾನ ಮಾಡಿದ್ದ ಮತ್ತು ಜನಮತ ಸಂಗ್ರಹದ ಮೊದಲು ಪಾಲಿಸಲ್ಪಡಬೇಕೆಂದು ಪ್ರಮುಖ ಶರ್ತವಾಗಿದ್ದ ಆಜಾದ್ ಕಾಶ್ಮೀರ ಸೇನೆಯನ್ನು ಬರ್ಖಾಸ್ತುಗೊಳಿಸುವ ವಿಷಯವನ್ನೇ ಭಾರತವು ಮರೆತು ಬಿಟ್ಟು ಆ ಪೂರ್ವನಿಶ್ಚಿತ ಪ್ರಶ್ನೆಯನ್ನೂ ಮಧ್ಯಸ್ಥಗಾರನ ತೀರ್ಮಾನಕ್ಕೆ ಬಿಟ್ಟಂತಿದೆ. ಆದ್ದರಿಂದ ಆ ಸೂಚನೆಯನ್ನು ಒಪ್ಪಿಕೊಳ್ಳುವುದು ಅಸಾಧ್ಯವೆಂದು ಭಾರತ ಸರಕಾರವು ತಿಳಿಸಿದೆ. ಈ ವಿಷಯಗಳನ್ನೇ ನಮೂದಿಸಿ ಅಟ್ಲೀ–ಟ್ರುಮೇನ್‌ರಿಗೂ ಭಾರತ ಸರಕಾರದ ಉತ್ತರ ಹೋಗಿದೆ. ಅತ್ತ ಪಾಕಿಸ್ತಾನವು ಕಾಶ್ಮೀರ ಕಮಿಶನಿನ ಸೂಚನೆಗಳಿಗೆ ಒಪ್ಪಿಗೆ ಕೊಟ್ಟು ಕಮಿಶನಿನವರಿಗೂ ಅಟ್ಲೀ, ಟ್ರುಮೇನ್‌ರಿಗೂ ಉತ್ತರ ರವಾನಿಸಿದೆ. ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀ ಖಾನರು ಎಡ್ಮಿರಲ್ ನಿಮಿಟ್ಸ್‌ರ ಮಧ್ಯಸ್ಥಿಕೆಗೆ ತಮ್ಮ ಒಪ್ಪಿಗೆಯನ್ನು ನಮೂದಿಸಿ ಅಟ್ಲೀ, ಟ್ರುಮೇನ್‌ರಿಗೆ ಪತ್ರ ರವಾನಿಸಿದ್ದಾರೆ. ಈ ಸಂಬಂಧದ ಪಾಕಿಸ್ತಾನ್ ಅಧಿಕೃತ ಹೇಳಿಕೆಯೊಂದರಲ್ಲಿ ಭಾರತವು ಕಾಶ್ಮೀರ ಕಮಿಶನಿನ ಸೂಚನೆಯನ್ನು ನಿರಾಕರಿಸಿದುದರ ಕುರಿತು ದುಃಖ ಸೂಚನೆಯಿದೆ. "ಎಡ್ಮಿರಲ್ ನಿಮಿಟ್ಸ್‌ರು ಬಂದ ಮೇಲೂ ಕಾಶ್ಮೀರದ ನೂತನಸಂಗ್ರಹದ ಮೊದಲುನಿವಾರಿಸಿಕೊಳ್ಳಬೇಕಾದ ಬೇರೆ ಹಲವು ಕಂಟಕಗಳು ಉಳಿಯಲಿವೆ. ಅದರೂ ಕೊನೆಯ ಪಕ್ಷ, ಇದು ನಮ್ಮ ಹಾದಿಯಲ್ಲಿ ಒಂದು ಹೆಜ್ಜೆಯಾದರೂ ಆಗುವುದು. ಆಸ್ಥಾದ ಇಂದಿನ ಮಾರ್ಪಟಿತ ಪರಿಸ್ಥಿತಿಯ ಮೇಲಿಂದ ಈ ಭೂಭಾಗದ ಶಾಂತಿ ನಾಲನೆ ಮತ್ತು ಲೋಕ ಶಾಂತಿ ರಕ್ಷಣೆಗಾಗಿ ಕೂಡಾ ಭಾರತ ಮತ್ತು ಪಾಕಿಸ್ತಾನಗಳು ಕಾಶ್ಮೀರದ ಕುರಿತೊಂದು ಒಪ್ಪಂದಕ್ಕೆ ಬರಬೇಕಾದುದು ಅಗತ್ಯವಿದೆ" ಎಂದು ಪಾಕಿಸ್ತಾನದ ಅಧಿಕೃತ ಹೇಳಿಕೆಯಲ್ಲಿದೆ. ಇತ್ಯಾದಿಯವರ ಉತ್ತರಗಳನ್ನೂ ಪಡೆದ ಕಾಶ್ಮೀರ ಕಮಿಶನು ಸಭೆ ಸೇರಿ ಆ ಕುರಿತು ತನ್ನ ಮುಂದಿನ ಕಾರ್ಯನಿರ್ಧಾರ ಮಾಡಿರುವುದೆಂದು ತಿಳಿದುಬಂದಿದೆ. ಆ ನಿರ್ಧಾರದ ರೂಪರೇಷೆ ಯಾವುದೆಂಬುದು ಪ್ರಕಟವಾಗಿಲ್ಲ ಸಂಧಾನ ಮಾತುಕತೆಗಳಿಗಾಗಿ ಈ ಮೊದಲು ಢಿಲ್ಲಿಯಲ್ಲಿ ಕರೆದಿದ್ದ ಸಮ್ಮೇಳನದ ಕಾರ್ಯಕ್ರಮವು ನಿರ್ಧಾರ ಸಂಬಂಧದ ಪರಸ್ಪರ ಅಸಮ್ಮತಿಯಿಂದಾಗಿ ಸೇರದಂತಾದ ವಿಷಯವೂ ಎಲ್ಲರಿಗೂ ಪ್ರಕಾಶವೇ. ಭಾರತ, ಪಾಕಿಸ್ತಾನಗಳೊಡನೆ ತಾವು ನಡೆಸಿದ್ದ ಪತ್ರವ್ಯವಹಾರಗಳನ್ನು ಕಾಶ್ಮೀರ ಕಮಿಶನಿನವರು ಪ್ರಕಟಿಸಿದ್ದಾರೆ. ಕಾಶ್ಮೀರ ವಿವಾದದ ಸಂಬಂಧವಾಗಿ ಭಾರತವು ವಹಿಸಿರುವ ಖಂಡತುಂಡ ಧೋರಣೆಯ ಕುರಿತು ಟ್ರುಮೇನ್, ಅಟ್ಲೀ ಮತ್ತು ಕಾಶ್ಮೀರ ಕಮಿಶನಿನ ಪ್ರತಿಕ್ರಿಯೆಗಳೇನು ಎಂಬುದನ್ನು ನೋಡಲಿಕ್ಕಿದೆ.

ಭಾರತದ ಅಸಮ್ಮತಿ

ಕಾಶ್ಮೀರ ಕಮಿಶನಿನ ಈ ಹೊಸ ಸೂಚನೆ ಮತ್ತಧನ್ನು ತಿರಸ್ಕಾರ ಮಾಡಿ ಅಮೇರಿಕಾಧ್ಯಕ್ಷ ಹಾಗೂ ಬ್ರಿಟನಿನ ಪ್ರಧಾನ ಮಂತ್ರಿಯ ಪತ್ರ ಬಂದೊಡನೆ ಪಂಡಿತ ಜವಾಹಿರಲಾಲರು ಅಲಹಾಬಾದ್ ಭಾಷಣದಲ್ಲೇ ಆ ಕುರಿತು ಆಶ್ಚರ್ಯ ಸೂಚಿಸಿದ್ದರು. ಭಾರತವು ಮುಂದಿಟ್ಟ ಮೂಲ ಭೂತ ವಿಷಯಗಳು ಹೇಗೆ ಕಡೆಗಣಿಸಲ್ಪಟ್ಟವೆ ಎಂಬ ಕುರಿತು ಮತ್ತೊಮ್ಮೆ ಪ್ರಕಾಶ ಚೆಲ್ಲಿದ್ದರು. ಭಾರತ ಸ್ವಧಾನಿ ನೆಹರು ಗಳು ಕಾಶ್ಮೀರದ ಪ್ರಧಾನಿ ಶೇಖ್ ಅಬ್ದುಲ್ಲಾರನ್ನು ಕೂಡಿಕೊಂಡು ಅಲ್ಲಿಂದಲೇ ಬೊಂಬಾಯಿಗೆ ಬಂದು ಅಲ್ಲಿ ವಿಶ್ರಾಂತಿ ಪಡೆಯುತ್ತಿರುವ ಸರ್ದಾರ್ ವಲ್ಲಭಾಯಿ ಗಳೊಂದಿಗೆ ಎಲ್ಲಾ ವಿಷಯಗಳ ಗಾಢ ಪರ್ಯಾಲೋಚನೆ ನಡೆಸಿ, ಢಿಲ್ಲಿಗೆ ಮರಳಿದವರೇ ಮಂತ್ರಿ ಮಂಡಲದ ಸಭೆ ಕರೆದು ಅಟ್ಲೀ ಟ್ರುಮೇನ್‌ರ ಪತ್ರಗಳಿಗೂ ಕಾಶ್ಮೀರ ಕಮಿಶನಿನ ಸಂಧಾನ ಸೂಚನೆಗೂ ಉತ್ತರ ತಯಾರೀ ನಿರ್ಣಯಮಾಡಿದರು. ತದನುಗುಣವಾಗಿ ನವಢಿಲ್ಲಿಯಲ್ಲಿರುವ ಅಮೇರಿಕದ ಮತ್ತು ಬ್ರಿಟನಿನ ರಾಯಭಾರಿಗಳಮೂಲಕ ಟ್ರುಮೇನ್‌ರವರ್ತು ಅಟ್ಲೀಗಳಿಗೆ ಪಂಡಿತನೆಹರುಗಳ ಉತ್ತರವುಹೋಗಿದೆ. ಅಂತೆಯೇ ಕಾಶ್ಮೀರ ಕಮಿಶನಿನವರಿಗೂ ಉತ್ತರ ಕಳುಹಲಾಗಿದೆ. ಕಮಿಶನುಕೊಟ್ಟ ದ್ವಂದ್ವವಿವಾದವಿಷಯಗಳನ್ನು ವಮ್ಯಸ್ಥಿಕೆ ತೀರ್ಮಾನಕ್ಕೆ ಬಿಡುವ ಸೂಚನೆಯನ್ನು ತಿರಸ್ಕರಿಸಿಯೆ ಭಾರತದ ಉತ್ತರ ಹೋಗಿ

ಘಟನಾಸಮಿತಿಯಲ್ಲಿ

ಭಾರತದ ಘಟನಾ ಸಮಿತಿಯು ಘಟನೆಯ ಪ್ರಾಮುಖ್ಯ ಹಾಗೂ ವಿಶೇಷ ಚರ್ಚಾಸ್ಪದ ಕಲಮುಗಳನ್ನು ನಿರ್ಣಯಿಸುವ ಕಾರ್ಯ ನಿರತವಾಗಿದೆ. ಘಟನಾ ಸಮಿತಿಯಲ್ಲಿ ಸುದೀರ್ಘ ಚರ್ಚೆಯನ್ನೂ ವಿವಿಧ ರೀತಿಯ ಅಭಿಪ್ರಾಯಗಳನ್ನೂ ಎಬ್ಬಿಸಿರುವ ಒಂದು ವಿಷಯವೆಂದರೆ ಒಬ್ಬನ ಅಸ್ಪೃಶ್ಯನ್ನು ಕಡ್ಡಾಯವಾಗಿ ಕಾನೂನು ಮೂಲಕ ಸರಕಾರವು ವಶಪಡಿಸಿಕೊಳ್ಳುವಾಗ ಕೊಡಬೇಕಾದ ಪರಿಹಾರ ದ್ರವ್ಯಗಳಿಗೆ ಸಂಬಂಧಿಸಿದುದು. ಈ ಸಂಬಂಧದ ಸೂಚನೆಯನ್ನು ಪಂಡಿತನೆಹರುಗಳು ಘಟನಾ ಸಮಿತಿಯ ಮುಂದಿಟ್ಟು

(೭ನೇ ಪುಟ ನೋಡಿರಿ)

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. 40/1949

(1) ಶ್ರೀದೇವಿಅಂಮು.ನಾರಾಣಪ್ಪಯ್ಯನವರ ವಿಧವೆ. (2) ಶ್ರೀನಿವಾಸರ್ ಮೋತಿ]ನೇಯವಳಿ ಮಗ, ಉಡ್ಪಿತಾಲೂಕು ತೆಂಕಗ್ರಾಮದ ಎಮ್ಮಾಳು ... ... ಅರ್ಜಿದಾರರು.

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವದೇನೆಂದರೆ:—

ತಾರೀಕು 13-7 1949ನಲ್ಲಿ ಉಡ್ಪಿತಾಲೂಕು ತೆಂಕಗ್ರಾಮದಲ್ಲಿ ಮೃತಪಟ್ಟಿರುವ ನಾರಾಣಪ್ಪಯ್ಯನವರ ಮಗ ಪಾಸ್‌ಪೋರ್ತಿ ಬಾಬ್ತು ದಿ. ಬೊಂಬ್ಯಾ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯು ನಂಬ್ರ 906879ನೇ ಸೊಲಿಸಿಯು ಹಣವನ್ನೂ, ದಿ. ಕೆನರಾ ಬೇಂಕಿನ Fixed Deposit No. 84/47ರ ಹಣವನ್ನೂ ಸದ್ರಿ ಬೇಂಕಿನ Savings Bank Account No. 7ರ ಹಣವನ್ನೂ, ಉಡ್ಪಿ ಪೋಸ್ಟಾಪೀಸಿನ Savings Bank Account No. 31037ರ ಹಣಗಳನ್ನೂ ವರಸುಲು ಮಾಡುವರೆ 1ನೇ ಅರ್ಜಿದಾರರಿಗೆ ಒಂದು ವಾರೀಸು ಹಕ್ಕು ಸರ್ಟಿಫಿಕೇಟು ಕೊಡಬೇಕಾಗಿ ಅವೇ ಕ್ಟಿಸಿ ಪಾಮಲುಮಾಡಿದ ಮೇಲ್ಕಂಡ ಅರ್ಜಿಯು ತಾರೀಕು. 21-9-1949ಕ್ಕೆ ಯಿಟ್ಟಿರುವದ್ರಿಂದ ಅಕ್ಷೇಪಪುಳ್ಳವರು ಆ ದಿವ್ಸ ಹಾರ್ವಾಸ್ತ ಘಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು.

K. Ramakrishna Rao
Vakil for Petitioner.

ಉಡ್ಪಿ
ತಾ. 5-9-1949.

ಏಲಂ ನೋಟೀಸು

ಕಾರ್ಕಳ ತಾಲೂಕು ಕಣಜಾರು ಗ್ರಾಮದಲ್ಲಿರುವ ಉಡುಪಿ ಶ್ರೀ ಅದಮಾರು ಮಠದ ಕಾಳೀಯ ಮರ್ದನ ಶ್ರೀ ಕೃಷ್ಣ ದೇವರ ಹೆಸರಲ್ಲಿ ಬೇರೇಸಾಲದ ಬಾಬ್ತು ಈ ಕೆಳಗೆ ವಿವರಿಸಿದ ಸ್ವಳಗಳಲ್ಲಿರುವ ಕಿರಾಲ್‌ದೋಗಿ ವಗೈರೆ ಮರಮಟ್ಟುಗಳನ್ನು ಕೆಳಗೆ ವಿವರಿಸಿದ ಪ್ರಕಾರ ಮೂರು ಪ್ಲಾಟುಗಳಾಗಿ ವಿಂಗಡಿಸಿ ಪ್ರತ್ಯೇಕ್ಷತ್ಯೇಕವಾಗಿ ಇದೇ ಬರುವ ತಾ. 21—9—1949ನೆ ಬುಧವಾರ ದಿನ ಸಾಯಂಕಾಲ ಘಂಟೆ 3ಕ್ಕೆ ಉಡುಪಿ ಶ್ರೀ ಅದಮಾರು ಮಠದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಲೇವಾರಿಯಾಗುತ್ತದೆ. ಉಮೇದುವಾರರು ಸದ್ರಿ ಸಮಯ ಒಟಬೇಕಾಗಿ ಅಪೇಕ್ಷಿಸುತ್ತೇವೆ. ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬಂದು ವಿಚಾರಿಸಬಹುದು.

ಪ್ಲಾಟುಗಳ ವಿವರ

	ಸಂ. ನಂ.	ಸ. ಡಿ. ನಂ.	ಕಸಂ.	ವಿಸ್ತೀರ್ಣ.
I	221	2	ಪುಂಜ	8—25
II	222	1	,,	8—72
III	223	1	,,	3—72
	186	2 A	,,	1—47
				22—16

For Sri Admar Mutt.
P. Sripathi Rao,
Agent.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted

ನವಯುಗ
ಉಡುಪಿ, ಗುರುವಾರ, ೧೫-೯-೧೯೪

ಲೋಕ ಶಾಂತಿ?

ಪ್ರಥಮ ಲೋಕ ಯುದ್ಧದ ನಂತರ ರಚಿಸಲ್ಪಟ್ಟದ್ದು, ದ್ವಿತೀಯ ಮಹಾಯುದ್ಧಕ್ಕೆ ಅಸ್ತಿವಾರ ಹಾಕಿ ಬಿಟ್ಟಿದ್ದು ಅಂದಿನ 'ರಾಷ್ಟ್ರಕೂಟ'ಕ್ಕೂ, ದ್ವಿತೀಯ ಜಾಗತಿಕ ಯುದ್ಧದ ಬೆನ್ನಲ್ಲೇ ಸ್ಥಾಪನೆಗೊಂಡು ಈಗ ಕಾರ್ಯ ನಿರ್ವಹಿಸುತ್ತಿರುವ 'ಸಂಯುಕ್ತ ರಾಷ್ಟ್ರ ಸಂಘ'ಕ್ಕೂ ಇರುವ ಗಣ್ಯ ವೃತ್ಯಾಸವೇನೆಂಬುದೇ ಅರ್ಥವಾಗುವದಿಲ್ಲ. ಹಿಂದಿನ 'ಲೀಗ್ ಆಫ್ ನೇಶನ್ಸ್' ದಿಂದುಗಿದ್ದ ಅನುಭವಗಳೆಲ್ಲವೂ ಈಗ ಪ್ರಪಂಚಕ್ಕೆ ವಿರೆತು ದೋಗಿವೆ; ಇಂದಿನ ಈ 'ಯುನೈಟೆಡ್ ನೇಶನ್ಸ್'ದ ಕಾರ್ಯಕಲಾಪಗಳ ಪರಿಣಾಮವೇನು, ಎಂಬುದನ್ನು ಶುದ್ಧ ದೃಷ್ಟಿಯಿಂದ ನೋಡಲಾಗದಷ್ಟು ಲೋಕದ ಕಣ್ಣು ಈಗ ಹಾಳಾಗಿದೆ. ಹೀಗಾಗಿ ಅಂದಿನ ಮತ್ತಿಂದಿನ 'ಶಾಂತಿಸಾಧಕ್ಕಜಾಗತಿಕೋಹ ಕರಣ'ಗಳೊಳಗಿರುವ ನಿಕಟ ಸಾಮ್ಯತೆಯು ಮುಂದಟ್ಟಾಗಿಲ್ಲ. ಲೋಕಶಾಂತಿ ಸಾಧನೆಯೆಂಬ ಮಂತ್ರವಠನೆ ಮಾಡುತ್ತಾ ಅಂದಿನ ರಾಷ್ಟ್ರಕೂಟದಂತೆ ಇಂದಿನ ಸಂಯುಕ್ತರಾಷ್ಟ್ರ ಸಂಘದಲ್ಲೂ ಪ್ರಮುಖ ರಾಷ್ಟ್ರಗಳು ತಂತಮ್ಮ ಸ್ವಾರ್ಥ ದಾಟಿಗಳನ್ನೇ ಆಡುತ್ತಿವೆ. ಪರಿಸ್ಥಿತಿ ಹೀಗೆಯೆ ಮುಂದುವರಿದರೆ ಆ ಕಾಲದ ಸಂಘಕ್ಕೂ ಗತಿದ ಆದೃಷ್ಟವೇ ಈಗಿನ ಸಂಘಕ್ಕೂ ಒದಗೀತೆಂಬ ಹೆದರಿಕೆ ಸ್ವಾಭಾವಿಕವಲ್ಲವೆ? ರೀತಿ, ನೀತಿ, ಗುರಿ, ಗಮನ, ಇವೆಲ್ಲವುಗಳ ಮಟ್ಟಿಗೂ ಒಂದನೇ ರಾಷ್ಟ್ರ ಕೂಟದಂತೆಯೇ ಎರಡನೇ ರಾಷ್ಟ್ರ ಸಂಘವೂ ಎಂದ ಮೇಲೆ, ಎರಡನೇ ಲೋಕ ಯುದ್ಧದಂತಯೇ ಮೂರನೆಯದೊಂದೂ ಬರಬಹುದೆಂಬ ಭೀತಿಗೆದೆಯಿಲ್ಲವೆ?

ಯಥಾರ್ಥವಾಗಿ ಜಾಗತಿಕ ಕ್ಷೇಮ ಚಿಂತನ ಮಾಡುವವರೂ ಇಂದಿನ ಸಂಯುಕ್ತ ರಾಷ್ಟ್ರ ಸಂಘದ ಕಾರ್ಯಕಲಾಪಗಳಿಂದ ಸಮಾಧಾನ ಪಡುವಂತಿಲ್ಲ. ಸ್ಥಾಪನೆಗೊಂಡಿಂದಿನಿಂದ ಈವರೆಗೆ, ತನ್ನ ಮುಂದೆ ಬಂದಿದ್ದ ಯಾವ ವಿವಾದವನ್ನಾದರೂ ಈ ಸಂಘವು ಪರಿಣಾಮಕಾರಿಯಾಗಿ ಇತ್ಯರ್ಥಿಸಿದ ನಿದರ್ಶನವೊಂದಿಲ್ಲ. ಜೈವದ ಅಂತರ್ಯುದ್ಧದಂತಹ ಲೋಕ ಶಾಂತಿಗೆ ತೀರ್ಮಾನಿಸಬಲ್ಲ ಯೋಗ್ಯತೆಯಾಗಲೀ ಕ್ಷೇತ್ರಾಧಿಕಾರವಾಗಲೀ ಈ ಸಂಘಕ್ಕಿಲ್ಲ. ತಾನು ಕೈ ಹಾಕಿದಂತಹ ಸಮಸ್ಯೆಗಳನ್ನಾದರೂ ಸದ್ವಿಧಾನಗಳ ಮೂಲಕ ಸಕಾಲದಲ್ಲಿ ಬಿಡಿಸಿಕೊಳ್ಳಲು ಈ ಸಂಘಕ್ಕೆ ತಿಳಿದಿಲ್ಲವೆಂಬುದಕ್ಕೆ ಪೆಲೆಸ್ತೈನ್, ಶಾಶ್ಮೀರದಂತಹ ವಿವಾದಗಳಲ್ಲಿ ಅದು ಒದ್ದಾಡುತ್ತಿರುವ ನಿದರ್ಶನವೇ ಸಾಕು. ಕಾಶ್ಮೀರ ವಿವಾದದ ರೂಪರೇಷೆಯೇನು-ಸಂಯುಕ್ತ ರಾಷ್ಟ್ರ ಸಂಘವು ಆ ಸಂಬಂಧವಾಗಿ ಮಾಡುತ್ತಿರುವುದೇನು-ಎಂಬುದನ್ನು ನೋಡುವಾಗ ಅದು ನಿಜಕ್ಕೂ ರೋಗ ಪರಿಹ್ಯೆಯಿಲ್ಲದ ಡಾಕ್ಟರನ ಚಿಕಿತ್ಸೆಯೆಂಬುದು ಸ್ಪಷ್ಟವಾಗುತ್ತಿದೆ. ಸಂಗತಿ ಜ್ಞಾನವಿಲ್ಲದ ಆ ಅಪರಿಚಿತರುಗಳಾನ ಬಲವೊಂದೇ ತೀರ್ಮಾನ ಯೋಗ್ಯತೆಯೆಂಬ ಭ್ರಮೆಯಿಂದ ತಮ್ಮ ಆ ಜ್ಞಾನದ ಸೆರಗಿನಲ್ಲಿ ವಸ್ತುಸ್ಥಿತಿಯನ್ನು ಕಟ್ಟಿಕೊಳ್ಳಲು ಹವಣಿಸುತ್ತಿರುವಂತಿದೆ. ಲೋಕಮತ ಮತ್ತು ನ್ಯಾಯದ ಬಲವಲ್ಲದೆ ಬೇರಾವ ಬೆಂಬಲವೂ ಜಾಗತಿಕ ಸಂಘದ ತೀರ್ಮಾನಗಳಿಗಿಲ್ಲ ಹಸ್ತ ನಿರ್ಣಯಗಳನ್ನು ಸೇನಾಬಲದಿಂದಿದು ಜಾರಿಗೆ ತರಲಾರದು; ಜಾಗತಿಕ ಶಾಂತಿ ರಕ್ಷಕ ದಳಗಳನ್ನೇನೂ ಅದು ಕಟ್ಟಿಕೊಂಡಿಲ್ಲ. ಇಂತಹ ಸ್ಥಿತಿಯಲ್ಲಿ ಸಂಬಂಧಪಟ್ಟ ವಿಷಯಗಳ ಸರಿಯಾದ ಜ್ಞಾನ ಸಂಪಾದಿಸಿಕೊಂಡು, ಸತ್ಯ ಮತ್ತು ನ್ಯಾಯವೆಸ್ಸೇ ಆಳದಲ್ಲಿ ಹುಗಿದಿಡಲ್ಪಟ್ಟಿದ್ದರೂ ಲಕ್ಷಿಂದ ಅವುಗಳನ್ನೆತ್ತಿ ತೋರಿಸುವ ಮೂಲಕವೇ ಜಾಗತಿಕ ಸಂಘವು ಲೌಕಿಕ ನ್ಯಾಯ ದಾನ ಮಾಡಬೇಕು; ಆ ಮೂಲಕ ವಿಶೇಷ ಲೋಕಮತವನ್ನೊಲಿಸಿಕೊಳ್ಳಬೇಕು. ಆದರಿಂದು ಸಂಯುಕ್ತ ರಾಷ್ಟ್ರಕೂಟದಲ್ಲಿ ಇಂತಹ ಯೋಗ್ಯತೆ ಕಂಡುಬರುತ್ತಿಲ್ಲ.ಕಲಹೋದ್ಯತ್ತ ಪಕ್ಷಗಳಲ್ಲಿರುವ ಸ್ವಾರ್ಥ, ಅಜ್ಞಾನಗಳಂತಹ ದುರ್ಬಾವನೆಗಳೇ ಈ ಶಾಂತಿದಾತಾರನ್ನಿಸುವರಲ್ಲೂ ಒಂದಲ್ಲೊಂದು ರೂಪದಿಂದ ಕಾಣುತ್ತಿವೆ. ಅಲಸ್ಯ ಮತ್ತು ತಾತ್ಸಾರ ಬುದ್ಧಿಹೆಚ್ಚಿಗೆ ನೇರಿಕೊಂಡಿವೆ. ಇಂಥವರಿಂದ ಲೋಕ ಕ್ಷೇಮ ಸಾಧನೆಯಾದೀತೆಂದು ನಿರೀಕ್ಷಿಸಬಹುದೆ? ಸಂಯುಕ್ತ ರಾಷ್ಟ್ರ ಸಂಘದ ಭಾವನೆ, ಧೋರಣೆಗಳು ಹೀಗಿದ್ದರೆ ಅದರ ಆಕಾರ ಕೂಡಾ ಯಾವ ಕಾರ್ಯವನ್ನೂ ಪರಿಣಾಮಕಾರಿಯಾಗಿ ಸಾಗಿಸಲಾಗದ ಮಾದರಿಯಲ್ಲಿ ಇದೆ. ವಿದರ್ಶನಕ್ಕಾಗಿ ಈ ಸಂಘ ರೂಪೀ ದೇಹದ ಹೃದಯ ಮತ್ತು ಮೆದುಳಾಗಿರುವ 'ಭದ್ರತಾ ಕೌನ್ಸಿಲ್'ನ್ನು ನೋಡಬಹುದು. ಈ ಕೌನ್ಸಿಲ್‌ನಲ್ಲಿರುವ ಒಟ್ಟು 11 ಸ್ಥಾನಗಳ ಪೈಕಿ 5 ಸ್ಥಾನಗಳು ಶಾಶ್ವತವಾಗಿ ಅಮೆರಿಕ, ಬ್ರಿಟನ್, ಫ್ರಾನ್ಸ್, ಚೈನಾ, ರಶ್ಯಾ ಈ ಐದು ರಾಷ್ಟ್ರಗಳ ಹಕ್ಕಿನವಾಗಿವೆ. ಕಳದ ಮಹಾ ಯುದ್ಧದಲ್ಲಿ ಮುಖ್ಯವಾಗಿ ಹೋರಾಟಕೊಟ್ಟವುಗಳೆಂಬ ಯೋಗ್ಯತೆಯ ಮೇಲಿಂದಲೇ ಈ ಪಂಚರಾಷ್ಟ್ರಗಳಿಗೀ ಉಡುಗರೆ ದೊರೆತಿದೆ. ಭದ್ರತಾ ಕೌನ್ಸಿಲಿನ ಮುಂದೆ ಬರುವ ಯಾವ ವಿವಾದವೇ ಆದರೂ, ತನಗೆ ಬೇಡವಾದುದೆಂದು ತೋರಿದರೆ ಅದು ಮುಂದೆ ಬಾರದಂತೆ ಮಾಡುವ ವಿಶೇಷಾಧಿಕಾರವು [Veto] ಈ ಐದು ರಾಷ್ಟ್ರಗಳ ಪೈಕಿ ಪ್ರತಿಯೊಂದಕ್ಕೂ ಇದೆ. ಪ್ರಚಲಿತ ವ್ಯಾಪಂಚಿಕ ಭಿನ್ನಾಭಿಪ್ರಾಯಗಳಿಗೆ ರಕ್ಯಾ ಮತ್ತು ಅಮೆರಿಕ, ಇಂಗ್ಲಾಂಡುಗಳೊಳಗಿನ ಸ್ಪರ್ಧೆಯೇ ಕಾರಣವೆಂಬುದು ಸರ್ವವಿದಿತ ವಿಷಯ; ಲೋಕದ ಎಲ್ಲಾ ಸಮಸ್ಯೆಗಳಲ್ಲೂ ಇವೆಂಡು ಪಾಳಯಗಳ ಸಂಬಂಧವಿದ್ದೇ ಇದೆ. ಆದರೂ ಯಾವುದಾದರೊಂದು ಪ್ರಶ್ನೆಯನು ತೀರ್ಮಾನಕ್ಕಾಗಿ ಭದ್ರತಾ ಕೌನ್ಸಿಲಿನಿದಿರು ಬರುವದು ತನಗೆ ಅಸಮ್ಮತವೆಂದಾದರೆ ರಶ್ಯವೊಂದೇ ಆದನ್ನು ತಳ್ಳಿಹಾಕಬಲ್ಲುದು. ತಮ್ಮ ಸರದಿಬಂದಾಗ ಬ್ರಿಟನು, ಅಮೆರಿಕ, ಫ್ರಾನ್ಸ್, ಚೈನಾ, ಇವುಗಳಲ್ಲಿ ಪ್ರತಿಯೊಂದೂ ಆಟನ್ನೇ ಮಾಡಬಲ್ಲುದು. ಭದ್ರತಾ ಕೌನ್ಸಿಲಿನಲ್ಲಿ ಅಮೇರಿಕಾಂಗ್ಲ ಪಕ್ಷಪಾತಿ ಸದಸ್ಯರು ಹೆಚ್ಚಿಗಿರುವುದರಿಂದ ರಶ್ಯವು ತನ್ನೀ ನೆಟೋ ಅಧಿಕಾರವನ್ನು ಬಾರಿಬಾರಿಗೂ ಪ್ರಯೋಗಿಸಬೇಕಾಗಿ ಬಂದಿದೆ. ಅಂತೂ, ಈ ಪಂಚಮಹಾ ರಾಷ್ಟ್ರಗಳ ಮನಸ್ಸಿಗೆ ಹಿತಕರವಾಗಿ ತೋರದಂತಹ ಯಾವ ವಿಷಯವೂ ಭದ್ರತಾ ಕೌನ್ಸಿಲಿನ ಮುಂದೆಬರುವ ಅವಕಾಶವಿಲ್ಲ. ಇವುಗಳ ಮನಸ್ಸು ಶುದ್ಧವಿಲ್ಲವೆಂಬುದೂ, ಈ ಪ್ರಮುಖ ರಾಷ್ಟ್ರಗಳ ಮನೋ ಮಾಲಿನ್ಯದಿಂದಾಗಿಯೇ ಪ್ರಾಪಂಚಿಕ ಸಮಸ್ಯೆಗಳೆದ್ದಿವೆ ಮತ್ತು ವಿಕಸಿತವೆಯೆಂಬುದೂ ಖಂಡಿತ.ಲೋಕಶಾಂತಿಗೆ ಕಂಟಕವಾಗಿರುವಂಥ ಕಲ್ಮಶವನ್ನು ಶುದ್ಧೀಕರಿಸುವ ಅಧಿಕಾರವು ಭದ್ರತಾ ಕೌನ್ಸಿಲಿಗಿಲ್ಲವೆಂಬುದೇ ಇದರ ಅರ್ಥ.ಅಂದಮೇಲೆ ಸಂಯುಕ್ತರಾಷ್ಟ್ರ ಸಂಘದಿಂದ ಲೋಕ ಶಾಂತಿ ಸ್ಥಾಪನೆಯಾದೀತೆಂದು ನಿರೀಕ್ಷಿಸುವುದರ್ಥವಿದೆಯೆ? ಸಂಘದ ರೂಪ ದೌರ್ಬಲ್ಯವು ಮಂದಟ್ಟಾಯಿದರಿಂದಲೇ ಅದನ್ನು ಪುನರ್ಘಟಿಸಿಕೊಳ್ಳಬೇಕೆಂಬ ಸೂಚನೆಯೀಗ ಮುಂದೆ ಬಂದಿದೆ. ಸಂಯುಕ್ತ ರಾಷ್ಟ್ರ ಸಂಘದ ಬರುವ ಮಹಾಧಿವೇಶನದಲ್ಲಿ ಈ ಸೂಚನೆಯು ಚರ್ಚೆಗೆ ಬೀಳುವ ಸಂಭವ ಕಾಣುತ್ತಿದೆ. ಬೆಂಬಲವಲ್ಲದಿದ್ದರೂ ತನಗಿರುವ ವಿಶೇಷಾಧಿಕಾರ ಬಲವೊಂದರಿಂದಲೇ ರಶ್ಯವು ಭದ್ರತಾ ಕೌನ್ಸಿಲಿನಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಹಂಚಿಕೆಗಳಿಗೆ ಅಡ್ಡಗಾಲಿಡುತ್ತಾ ಬರುತ್ತಿರುವುದರಿಂದ ಅದರ ಆಟವನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಪಾಶ್ಚಾತ್ಯ ರಾಷ್ಟ್ರಗಳು ಈ ಪುನರ್ರಚನೆಗೆ ಮನಸ್ಸು ಮಾಡಿರಬಹುದು. ಆದ್ದರಿಂದ ಈ ನವರಚನೆಯು ಕುರುಡು ಭಂಡಸೆಯಿಡಲಾಗುವದಿಲ್ಲ. ಅಂತೆಯೇ ರಾಷ್ಟ್ರೀಯ ಸಾರ್ವಭೌಮಾಧಿಕಾರವನ್ನು ನಿಯಮಿತಗೊಳಿಸಿ, ಅವಿಲ ಜಗತ್ತಿಗೊಂದು ಸಂಯುಕ್ತ ಸರಕಾರ ಸ್ಥಾಪಿಸಿಕೊಳ್ಳಬೇಕೆಂಬ ಅಭಿಪ್ರಾಯವೂ ಈಗ ಅನೇಕರ ತಿಕ್ಕಿದೆ. ಪಂಡಿತ ನೆಹರುಗಳೇ ಆದಿಯಾಗಿ ಲೋಕ ಹಿತಚಿಂತಕ ಮುತ್ಸದ್ದಿಗಳೆಲ್ಲರೂ ಲೋಕೈಕಾಡಳಿತೆಯನ್ನು ದೂರದ ಗುರಿಯಾಗಿ ಇಟ್ಟುಕೊಂಡವರೇ. ಅಖಿಲ ಮಾನವ ಜನಾಂಗದ ಹಿತ ಸಾಧನೆ ಮತ್ತು ಲೋಕ ಶಾಂತಿ ಸ್ಥಾಪನೆಯ ದೃಷ್ಟಿಯಿಂದ ಇದು ಅತ್ಯುತ್ಕೃಷ್ಟ ಯೋಜನೆಯೆಂಬುದು ನಿರ್ವಿವಾದ. ಆದರೆ ಸದ್ಯಸ್ಥಿತಿಯಲ್ಲಿ ಇದು ವ್ಯವಹಾರಸಾಧ್ಯವಾಗಿ ಕಂಡುಬರುತ್ತಿದೆಯೆ? ಭಿನ್ನಮತ, ಭಿನ್ನ ಸಂಸ್ಕೃತಿಯೆಂಬ ಕಾರಣದಿಂದ ಪುರಾತನ ಅಖಂಡ ರಾಷ್ಟ್ರ ಭಾರತವು ಇಬ್ಭಾಗವಾಗಬೇಕಾಯಿತು. ಇದಕ್ಕೂ ಹೆಚ್ಚಿನ ಭಿನ್ನತೆಯಿರುವ ವಿವಿಧ ಜನಾಂಗಗಳನ್ನು ವಿಶ್ವಭ್ರಾತೃಪ್ರಜ್ಞೆಯಲ್ಲಿ ಒಂದುಗೂಡಿಸಲು ಸಾಧ್ಯವೆ? ಎಲ್ಲೆಡೆಗಳವರ ಬುದ್ಧಿ ಶಕ್ತಿಗೊಂಡು, ಮಾನವೀಯ ಹೆಗ್ಗುಣಗಳು ಎಲ್ಲರಲ್ಲೂ ಹೂರ್ಣ ತುಂಬಿಕೊಂಡಾಗ ಮಾತ್ರ ಜಗದೇಕ ಸರಕಾರ ಸ್ಥಾಪನೆಯಾಗಬಲ್ಲುದು. ಈಗ ಅಮೆರಿಕದಂತಹ ರಾಷ್ಟ್ರಗಳಲ್ಲಿ ಕೇಳಿಬರುತ್ತಿರುವ 'ಜಾಗತಿಕ ಐಕ್ಯ ಸರಕಾರ' ರಚನೆಯ ಮಾತು ಕೂಡಾ, ರಶ್ಯಕ್ಕೆ ದಿಗಿಲಾಗಿ 'ಅಟ್ಲಾಂಟಿಕ್ ಚಾರ್ಟರ್' 'ಯ ರೋಪಿಯನ್ ಕಾನ್ಸಿಲ್'ಗಳನ್ನು ಮಾಡಿಕೊಂಡ ಮಾದರಿಯಲ್ಲಿ ಜಗತ್ತನ್ನೇ ಸೂಡಿಕಟ್ಟಿಣವೆಂಬ ಬಯಕೆಯದಿ.ಬೇಕು. ಅದ್ದರಿಂದ ನಿಜಕ್ಕೂ ಅನ್ಯವಹಾರ್ಯ ಹಾಗೂ ಆಪಾಯಕರ ಸೂಚನೆಯಿದು. ಇವೆಲ್ಲಾ ವಿದ್ಯಮಾನಗಳ ಮೇಲಿಂದ ಲೋಕಶಾಂತಿ ಸ್ಥಾಪನೆ ಅಥವ ವ್ಯಾಪಂಚಿಕ ಒಕ್ಕೂಟನ ಯಥಾರ್ಥ ಪ್ರಯತ್ನವಾವುದೂ ಇಂದು ನಡೆದಿಲ್ಲವೆಂಬುದು ಸ್ಪಷ್ಟವಿದೆ. ಪ್ರಪಂಚದ ಎಲ್ಲೆಡೆಯಲ್ಲೂ ಅಧಿಕಾರ ಸೂತ್ರದ ಮೂಲಗೂಟವು ಜನಸಾಮಾನ್ಯರ ಮಧ್ಯದಲ್ಲಿರದೆ ಒಂದಲ್ಲೊಂದು ವಿಧದ ಸ್ವಾರ್ಥ ಪಕ್ಷ ಪಂಗಡಗರ ಕೈಯಲ್ಲಿರುವುದೇ ಇದಕ್ಕೆ ಕಾರಣ. ಎಲ್ಲಾ ರಾಷ್ಟ್ರಗಳ ಜನಸಾಮಾನ್ಯರಲ್ಲಿ ಸಾಕಷ್ಟು ಜಾಗ್ರತಿ ಮತ್ತು ಶಕ್ತಿ, ಯೋಗ್ಯತೆಗಳು ತೋರಿಬಂದರೆ ಮಾತ್ರ ಅಖಿಲ ಮಾನವ ಜನಾಂಗದ ಸೌಹಾರ್ದತೆ, ಸಮಾನತೆಗಳುಸ್ವಶಕ್ತಿನೆಲೆನಿಂತು, ಲೋಕಶಾಂತಿ ಮತ್ತು ಲೋಕೈಕ್ಯ ವ್ಯವಸ್ಥೆ ಸ್ಥಾಪನೆಯಾಗಲು ಸಾಧ್ಯವಿದೆ. ಹೀಗಾಗುವ ಕಾಲವೆಂದು ಒದಬಹುದು? ಪ್ರತಿಯೊಂದು ರಾಷ್ಟ್ರದ ಸಾಮಾನ್ಯ ಜನತೆಯಲ್ಲಿ ದೂರದೃಷ್ಟಿ, ತಲನಾತ್ಮಕ ಬುದ್ಧಿ ಮತ್ತು ಜ್ಞಾನ ಮೊಳೆಯಲು ಎಷ್ಟು ಅವಧಿ ಹಿಡಿಯಬಹುದೋ ಆ ಅವಧಿಯ ವರೆಗೂ ಈ ಸುಖ ಜಗತ್ತಿನ ನಿರ್ಮಾಣಕ್ಕಾಗಿ ಕಾಯ ಬೇಕಾದೀತು. ಜನ ಸಾಮಾನ್ಯರು ತಮ್ಮಲ್ಲಿ ಅಂತಹ ಯೋಗ್ಯತೆಯನ್ನು ತುಂಬಿಸಿಕೊಂಡಿಗಲೇ ಲೋಕಾಭ್ಯುದಯ ಸಾಧನೆ ಮಾಡಿದಂತೆ. ಆದ್ದರಿಂದ ಈ ಕಡೆಗೇನೇ ಸರ್ವರ ಲಕ್ಷ್ಯ ಬೀಳಬೇಕಾದುದು ಅಗತ್ಯ.

ಚಂದಾದಾರರಲ್ಲಿ-

ಚಂದಾಹಣ ಬಾಕಿಇರುವ ಚಂದಾದಾರರಿಗೆಲ್ಲಾ ಕೈವುಪ್ಕಾರ ಈ ವಾರದಿಂದಲೇ ಪತ್ರಿಕೆಯನ್ನು ವಿ.ಪಿ. ಮಾಡಿ ಕಳಿಸಲು ಸ್ವಾರಂಭಿಸಿರುತ್ತೇವೆ. ಅವರೆಲ್ಲರೂ ದಯಮಾಡಿ ವಿ.ಪಿ. ಯನ್ನು ಸಕಾಲದಲ್ಲಿ ಸ್ವೀಕರಿಸಿಕೊಂಡು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

((ಜನವೇ ಪುಟದಿಂದ ಮುಂದುವರಿದುದು))

ಸರಕಾರೀ ಧೋರಣೆ ಯಾವುದಿರಬೇಕೆಂಬುದನ್ನು ಸ್ಪಷ್ಟ ಪಡಿಸಿದರು. ಸಮತಾವಾದಿಗಳು ಕಮ್ಯೂನಿಸ್ಟರೇ ಮೊದಲಾದವರು, ಜವಾಹರ್‌ಲಾಲರ ಬರ್ಮಾಸ್ತು ವೇಳೆ ಜಮೀನ್ದಾರರಿಗೆ ಪರಿಹಾರವೇನನ್ನೂ ಕೊಡಬಾರದೆಂದು ವಾದಿಸುತ್ತಿರುವುದನ್ನು ಗಣನಾಗಿ ಭಾವೀ ಭಾರತ ಸರಕಾರಗಳಿಗೆ ಸ್ಪಷ್ಟ ನಿರ್ದೇಶವೀಯುವ ಈ ವಿಭಾಗವು ರಾಜ್ಯ ಘಟನೆಯಲ್ಲಿರಬೇಕಾದುದು ಅತ್ಯಗತ್ಯ ತಾ. 10ರ ಘಟನಾ ಸಮಿತಿ ಸಭೆಯಲ್ಲಿ ಈ ಸಂಬಂಧದ ಚರ್ಚೆಯಲ್ಲಿ ಹಲವು ಸದಸ್ಯರು ಭಾಗವಹಿಸಿ ಅದು ಮಂಜೂರಾಗಿದೆ.

ರಾಷ್ಟ್ರಪತಿಯ ಸದಸ್ಯರೊಳಗೂ ವಿವಿಧಾಭಿಪ್ರಾಯಗಳನ್ನೂ ವಿಶೇಷ ರೀತಿಯ ವಿಚಾರ ಮಂಥನಗಳನ್ನೂ ಎಬ್ಬಿಸಿರುವ ವಿಷಯವೆಂದರೆ ರಾಷ್ಟ್ರ ಭಾಷೆಯದು. ಈ ಕುರಿತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯವಾಗಿದೆ. ದೇವನಾಗರಿ ಲಿಪಿಯುಳ್ಳ ಹಿಂದಿಯನ್ನೇ ರಾಷ್ಟ್ರ ಭಾಷೆಯಾಗಿ ಪರಿಷ್ಕೃತ ಅಂತರಾಷ್ಟ್ರೀಯ ಅಂಕೆ ಸಂಖ್ಯೆಗಳನ್ನು ಸ್ವೀಕೃತ ಅಂಕಗಳಾಗಿ ಅಂಗೀಕರಿಸಿಕೊಳ್ಳಬೇಕು; ಇನ್ನು ಹದಿನೈದು ವರುಷಗಳ ವರೆಗೆ ಇಂಗ್ಲೀಷೇ ಸಂಕಾಂತೀ ಭಾಷೆಯಾಗಿರಬೇಕು, ಎಂಬುದೇ ಹೆಚ್ಚಿನಂಶ ಮಾನ್ಯವಾಗಿದೆ. ಆದರೂ ಇವೆಲ್ಲ ವಿಷಯಗಳ ಕುರಿತು ಘಟನಾ ಸಮಿತಿಯ ಕಾಂಗ್ರೆಸ್ ಸದಸ್ಯರ ಪಕ್ಷ ದೃಢಗೊಳಿಸಿದ ಪೂರ್ಣ ಒಮ್ಮತವಾಗಿಲ್ಲ ಒಂದು ಬಹುಮತದ ನಿರ್ಣಯ ಮಾಡಿಕೊಳ್ಳುವುದೂ ಅನಿವಾರ್ಯವಾಗಿದೆ. ಆದ್ದರಿಂದ ಈ ಕರಿತ. ಸದಸ್ಯರು ಸ್ವತಂತ್ರವಾಗಿ ಮತದಾನ ಮಾಡಬಹುದೆಂಬ ಅನುಮತಿ ದೊರೆತಿದೆ. ಸಂಸ್ಕೃತವನ್ನೇ ಸಂಯುಕ್ತ ಭಾರತದ ಸರಕಾರೀ ಭಾಷೆಯಾಗಿ ಅಂಗೀಕರಿಸಿಕೊಳ್ಳಬೇಕೆಂಬ ಒಂದು ಸೂಚನೆ ಮುಂದೆ ಬಂದಿದೆ. ಈ ಸೂಚನೆ ತಯಾರಿಸಿದವರಲ್ಲಿ ಭಾರತದ ಕಾನೂನು ಮಂತ್ರಿ ಡಾ. ಅಂಬೇದ್ಕರ್, ಭಾರತದ ವಿದೇಶ ಸಂಬಂಧ ಖಾತೆಯ ಉಪ ಸಚಿವ ಡಾ. ಬ ವಿ. ಕೇಸ್ಕರ್, ಮಿ. ನಾಜಿರುದ್ದೀನ್ ಅಹಮ್ಮದ್, ಮತ್ತಿತರ ಪ್ರಮುಖ ಸದಸ್ಯರಿದ್ದಾರೆ. ಈ ಸಂಬಂಧವಾಗಿ ಡಾ. ಅಂಬೇಡ್ಕರ್‌ರನ್ನು ಪ್ರಶ್ನಿಸಿದಾಗ 'ಸಂಸ್ಕೃತವಾಗುವುದರಲ್ಲಿ ತಪ್ಪೇನಿದೆ?' ಎಂದಿದ್ದಾರೆ. ಇದೇ ತಾ. 11 ರಂದ ಘಟನಾ ಸಮಿತಿಯಲ್ಲಿ ರಾಷ್ಟ್ರ ಭಾಷಾ ಸಂಬಂಧದ ಸುಮಾರು 350 ಉಪಸೂಚನೆಗಳ ಪರಿಶೀಲನೆಯೂ ದೀರ್ಘವಾದ ವಿವಾದಗಳೂ ಆರಂಭವಾಗಿವೆಯೆಂದು ತಿಳಿದು ಬರುತ್ತದೆ. ಹಿಂದಿಯನ್ನಲ್ಲ-ಹಿಂದುಸ್ಥಾನಿಯನ್ನೇ ರಾಷ್ಟ್ರಭಾಷೆಯಾಗಿ ಅಂಗೀಕರಿಸಿಕೊಳ್ಳಬೇಕೆಂದು ಉರ್ದು ಪತ್ರಿಕೆಗಳ ವಾದ. ಮಹಾತ್ಮಾಗಾಂಧಿಯವರು ರಾಷ್ಟ್ರಭಾಷೆಯಾಗಿ ಹಿಂದುಸ್ಥಾನಿಯನ್ನೆ ಶಿಫಾರಸು ಮಾಡಿದ್ದರೆಂಬುದನ್ನು ಈ ಪತ್ರಿಕೆಗಳಿಗೆ ನೆನಪು ಮಾಡಿಕೊಡುತ್ತಿವೆ. ಭಾರತ ಸರಕಾರದ ವಿದ್ಯಾ ಮಂತ್ರಿ ಮೌಲಾನಾ ಅಬುಲ್ ಕಲಾಮ್ ಆಜಾದರೂ ಹಿಂದುಸ್ಥಾನಿಯನ್ನೇ ಸಮರ್ಥಿಸಿದ್ದರು. ಒಂತೂ ಭಾಷಾ ಸಂಬಂಧದ ವಿವಾದವು ತೀವ್ರ ರೂಪ ಹೊಂದಿದೆ.

ಕಾಶ್ಮೀರೀ ಮುಸ್ಲಿಮರೇ ಪಾಕಿಸ್ತಾನ ಬಿಟ್ಟರು!

ಕಾಶ್ಮೀರದ ಸಂಬಂಧದ ವಿವಾದದ ಮಟ್ಟಿಗೆ ಭಾರತ ಮತ್ತು ಪಾಕಿಸ್ತಾನಗಳೊಳಗೊಂದು ಬಡಿಬಡಿಕೆಯಾಗುವುದು ಅತ್ಯಂತ ಪ್ರಯಾಸವೆಂಬುದು ಸ್ವತಃಸಿದ್ಧ ವಿಷಯ. ಆಟ್ಲೀ, ಟ್ರಿವೇಲ್ಯನ್ ವಿಷಯಂತಿಯನ್ನೂ ಗಣಿಸದೆ ಭಾರತ ಸರಕಾರವು ಕಾಶ್ಮೀರ ಕವಿ ಶಿಖರನ ಕೊನೆಯ ಶಾಂತಿ ಸೂಚನೆಗಳನ್ನು ನಿರಾಕರಿಸಿತೆಂಬುದರಿಂದ ಸಂಗತಿಯರಿಯದವರಲ್ಲಿ ಈ ಕುರಿತು ತಪ್ಪಭಿಪ್ರಾಯ ಮೊಳೆಯಬಹುದು. ಮುಸ್ಲಿಮರೇ ಅಧಿಕ ಸಂಖ್ಯೆಯಲ್ಲಿರುವ ಕಾಶ್ಮೀರದಲ್ಲಿ ಜನಮತ ಸಂಗ್ರಹಿಸಿದರೆ, ಅದು ಪಾಕಿಸ್ತಾನಕ್ಕೆ ಸೇರಬಹುದೆಂಬ ಭೀತಿಯಿಂದ ಭಾರತ ಸರಕಾರವು ಜನಮತ ಸಂಗ್ರಹವನ್ನು ಅದಷ್ಟು ಹಿಂದೆಹಾಕಲು ಇಂತಹ ಕುಯುಕ್ತಿಗಳನ್ನು ಹೂಡುತ್ತಿದೆ, ಎಂದು ಪಾಕಿಸ್ತಾನಿಗಳ ಅಪಪ್ರಚಾರವೂ ಇದೆ. ಕಾಶ್ಮೀರದ ಜನಮತಕ್ಕೆ ಹೆದರಿ ಭಾರತವು ಕಾಲಹರಣಮಾಡುವ ಅವಶ್ಯಕತೆಯೇನೂ ತೋರುವುದಿಲ್ಲ. ಆಲ್ಲಿ ಮುಸ್ಲಿಮರು ಅಧಿಕ ಸಂಖ್ಯಾಕರೇನೋ ನಿಜ. ಪಾಕಿಸ್ತಾನಿಗಳ ಇಸ್ಲಾಂ ನಿಷ್ಠೆಯ ಪ್ರಚಾರ ನಡೆದಿರುವುದೂ ನಿಜವೇ- ಆದರೆ ಆ ಪ್ರಜ್ಞಾಂಕ್ಕಿಂತ ಹೆಚ್ಚಾಗಿ ಪಾಕಿಸ್ತಾನಿಗಳ ಸ್ವಭಾವದ ಪ್ರತ್ಯಕ್ಷ ಪರಿಚಯವು ಕಾಶ್ಮೀರದ ಜನತೆಗೀಗ ಆಗಿದೆ. ಪಾಕಿಸ್ತಾನಿಗಳ ಕೈಯಲ್ಲಿ ತಮ್ಮ ಭವಿಷ್ಯ ಹೇಗಾದೀತೆಂಬುದು ಅಲ್ಲಿಯವರಿಗೆ ಸಾಕಷ್ಟು ಮಂದಟ್ಟಾಗಿದೆ.

ಕಾಶ್ಮೀರದಲ್ಲಿ ಕವಿ ಶಿಖರನಿವರು ಯುದ್ಧಮುಕ್ತಾಯ'ಮಧ್ಯಗಡಿಗಳನ್ನು ಭಾರತ-ಪಾಕಿಸ್ತಾನಗಳ ಪಾಲಿಗೆ ವಿಂಗಡಿಸಿ ಹಾಕಿದ್ದಾರಷ್ಟೆ? ಈ ಗಡಿ ನಿರ್ಣಯವಾಗ ಅಲ್ಲಿಲ್ಲಿ ಸ್ಥಳೀಯ ಜನತೆಯ ಇಚ್ಛೆಯನ್ನು ರಕ್ಷಿಸಿಕೊಂಡು ವರ್ಗವಾಯಿಸುವ ಆಗತ್ಯ ಬಿದ್ದಿತ್ತು. ಅಂತಹ ವಿಚಾರಣೆಯ ವೇಳೆ ಪಾಕಿಸ್ತಾನದ ಅಡಳಿತೆಯೊಳಗಿದ್ದ ಕೆಲವು ಹಳ್ಳಿಯ ಮುಸ್ಲಿಮರು ತಾವಾಗಿ ಭಾರತದ ಪಲಯಕ್ಕೆ ಬರುವ ಬಯಕೆ ಪ್ರದರ್ಶಿಸಿ ವರ್ಗ ಮಾಡಿಸಿಕೊಂಡಿದ್ದಾರೆ. ಕಾಶ್ಮೀರದ ಟೂಲೆಲ್ ಕಂದರದ ಉತ್ತರ ಭಾಗದಲ್ಲಿ ಎರಡು ಹಳ್ಳಿಗಳಿವೆ ಒಂದರ ಜನರು ಕೆಲ್ಯಾಯ, ಮತ್ತೊಂದರ ಜನರು ತಶ್ಕಿ ಕೆಲ್ಯಾಯ. ಒಂದನೆಯದು ಪಾಕಿಸ್ತಾನದ ಭಾಗದಲ್ಲಿದ್ದರೆ, ಎರಡನೆಯದು ಭಾರತದ ವಲಯದಲ್ಲಿದೆ. ಕೆಲ್ಯಾಯ ಹಳ್ಳಿಯಲ್ಲಿದ್ದುದು ಕೇವಲ 221 ಮುಸ್ಲಿಂ ನಿವಾಸಿಗಳು. ಈ ವೈಕಿ ಇಬ್ಬರನ್ನು ಬಿಟ್ಟು ಮಿಕ್ಕೆಲ್ಲರೂ ತಾವು ತಮ್ಮ ಮನೆಮಾರುಗಳನ್ನು ಬಿಟ್ಟು ಭಾರತದ ತಶ್ಕಿ ಕೆಲ್ಯಾಯಿಗೆ ಹೋಗುವೆವೆಂದು ಸಂಯುಕ್ತ ರಾಷ್ಟ್ರ ಸಂಘದ ನಿರೀಕ್ಷಕರ ಮತ್ತು ಪಾಕಿಸ್ತಾನ್ ಸೇನಾನಿಗಳ ಸಮ್ಮುಖದಲ್ಲೇ ಅಗ್ರಹಪಟ್ಟರು. ಆಲ್ಲೇ ನಿಲ್ಲಲಿಚ್ಚಿಸಿದ ಇಬ್ಬರು ತರುಣ ಮುಸ್ಲಿಮರು ಪಾಕಿಸ್ತಾನಿಗಳು ಅಪಹರಿಸಿಕೊಂಡು ಹೋಗಿರುವ ತಮ್ಮ ಪತ್ನಿಯರನ್ನು ಮರಳಿ ಪಡೆಯುವುದಕ್ಕಾಗಿ ತಾವಿಲ್ಲೇ ನಿಲ್ಲಬೇಕಾಗಿದೆ, ಎಂದರು. ಗುಜ್ಜಾರ್ ಮತ್ತು ಅಬ್ದುಲ್ಲಾ ಎಂಬೆರಡು ಹಳ್ಳಿಗಳಲ್ಲಿ ಒಟ್ಟು 400 ಮಂದಿಯಿದ್ದರು. ಆ ಹಳ್ಳಿಗಳನ್ನು ಪಾಕಿಸ್ತಾನಿಗಳು ಅಕ್ರಮಿಸಿಕೊಂಡಿದ್ದಾಗ ಗಡಿ ಹಾಕುವಾಗ ಅವು ಭಾರತದ ವಲಯದೊಳಗೆ ಬಂದಿದ್ದುವು. ಅಲ್ಲಿಯ ಹಳ್ಳಿಗರು ಪಾಕಿಸ್ತಾನ್ ಗಡಿಯೊಳಗೆ ಸೇರಲಿಚ್ಚಿಸುತ್ತಾರೆ, ಎಂದು ಪಾಕಿಸ್ತಾನ್ ಸೇನಾನಿ ವಾದಿಸಿದ. ತದನಂತರವಾಗಿ ಪಾಕಿಸ್ತಾನ್, ಭಾರತದ ಸೇನಾನಿಗಳು ಸಂಯುಕ್ತ ರಾಷ್ಟ್ರಸಂಘದ ನಿರೀಕ್ಷಕರು ಹಾಜರಿದ್ದು ಜನೌರ್ಸ್ಯ 29ರಲ್ಲಿ ಆ ಹಳ್ಳಿಗರ ಸಭೆ ಕರೆಯಲ್ಪಟ್ಟಿತು. ಅಲ್ಲಿ ಪಾಕಿಸ್ತಾನ್ ಸೇನಾನಿಯ ಮತ್ತು ಅವನ ಸಹಾಯಕ ನಾಗರಿಕಾಧಿಕಾರಿಯ ಭಾಷಣಗಳಾದವು. ಭಾರತ ಸೇನಾನಿ ಮತ್ತು ತೇಜ್ ಬಹದ್ದೂರ್ ಪಂಡಿತರ್ ಗೈರು ಹಾಜರಿಯಲ್ಲಿ ಆ ಹಳ್ಳಿಗ ನಾಯಕರು ಮಾತಾಡುವಂತೆ ಮಾಡಲಾಯಿತು. ಆದರೂ ಕೊನೆಗೆ ಮತ ತೆಗೆದಾಗ ಆ 400 ಮಂದಿಗಳ ವೈಕಿ ಒಬ್ಬನಾದರೂ ಪಾಕಿಸ್ತಾನ್ ವಲಯಕ್ಕೆ ಹೋಗಲು ತಯಾರಿಲ್ಲವೆಂದು ತಿಳಿದು ಬಂತು. ಪಾಕಿಸ್ತಾನದ ತಾತ್ಪೋಜತ್ ಹಳ್ಳಿಯ 100ಕ್ಕೂ ಮಿಕ್ಕಿದವರು ಭಾರತದ ಗಡಿಯೊಳಗೆ ಸ್ವೇಚ್ಛೆಯಿಂದ ಬಂದಿದ್ದಾರೆ. ಕಾಶ್ಮೀರದ ಉತ್ತರ ವಲಯಗಳ ಗಡಿಗಳಲ್ಲಿ ಜನಾಭಿಪ್ರಾಯದಂತೆ ವರ್ಗಾಯಿಸಿಕೊಂಡ ದೆಸೆಯಿಂದ 1300ಕ್ಕೂ ಮಿಕ್ಕಿದ ಮುಸ್ಲಿಮರು ಪಾಕಿಸ್ತಾನ್ ಭೂಮಿ ಬಿಟ್ಟು ಭಾರತದ ಗಡಿಯೊಳಗೆ ವಾಸಿಸುವೆವೆಂದು ಬಂದಿದ್ದಾರೆ. ಕಾಶ್ಮೀರದ ಜನತೆಯು ಪಾಕಿಸ್ತಾನಕ್ಕನುಕೂಲವಿದೆಯೆಂಬ ಅಭಿಪ್ರಾಯವನ್ನು ಉದ್ದೇಶಪೂರ್ವಕ ಹರಡಿಸುತ್ತಿರುವವರು ಇದಕ್ಕೇನನ್ನುವರೋ!

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ನುಂಗನೂರು.

ಕಳದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಉಡುಪಿ

ಭಾಷಣ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ಇದೇ ತಾ 9ರಲ್ಲು ಇಂಡಿಯಾ ಸರಕಾರದ ವಾತಾವರಣ ಶಾಸ್ತ್ರಜ್ಞ ಶ್ರೀ ವಿರಲ ದಸ್ತೂರು ಇಂಡಿಯಾ ದೇಶದ ಹವಾಮಾನದ ಕುರಿತು ಭಾಷಣಮಿತ್ತರು.

ಮುನಿಸಿಪಲ್ ಕೌನ್ಸಿಲು ಸಭೆಯು ಇದೇ ತಾ 10ರಲ್ಲು ಶ್ರೀ ಜಯೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಗ್ರಿ ಗುಡ್ಡೆಯಲ್ಲಿ ಕಾಲೇಜಿಗಾಗಲಿರುವುದರಿಂದ ಅಲ್ಲಿರುವ 'ಕಾಂಕ್ರೀಟ್ ಕಾಲೇಜಾಗಲಿರುವುದರಿಂದ ಅಲ್ಲಿರುವ 'ಕಾಂಕ್ರೀಟ್ ರೋಗಜಾಧಿಗೊಳಗಾದವರ ಶುಶ್ರೂಷೆ ಕೊರಡಿ'ಯನ್ನು ಒಟ್ಟುಕೊಡಬೇಕೆಂದು ಮಹಾತ್ಮಾಗಾಂಧಿ ಮೆಮೋರಿಯಲ್ ಟ್ರಸ್ಟ್‌ನವರು ಬರೆದ ಪತ್ರವನ್ನು ಓದಲಾಯಿತು. ಅಂತಹದೇ ಕೊರಡಿಯನ್ನು ನಗರಸಭೆಯು ಹೇಳುವ ಸ್ಥಳದಲ್ಲಿ ಕಟ್ಟಿಕೊಡುವುದಾದರೆ ಲೆಟ್ಟುಕೊಡಲು ಕೌನ್ಸಿಲಿನ ಒಪ್ಪಿಗೆಯಿದೆ ಎಂದು ಟ್ರಸ್ಟ್‌ನವರಿಗೆ ತಿಳಿಸಬೇಕೆಂಬಾಯಿತು ಜಾಡಂತಿ ಮತ್ತು ಮಳಿಗೆ ಕ್ಷೇತ್ರ ಚಂತನಾಲಯಕ್ಕೆ ತಾ 10-8-1949ರಿಂದ ತಿಂಗಳೊಂದರ ಬಾಡಿಗೆ 13/- ರಂತೆ ಬಾಡಿಗೆಕೊಡಬಹುದೆಂದಾಯಿತು.

ಬ್ರಹ್ಮಾವರ ಸರ್ಕಲ್ ಉಪಚುನಾವಣೆಯು ಬರುವ ತಿಂಗಳ ತಾ 6ಕ್ಕೆ ನಡೆಯಲಿದ್ದು ಇದೇ ತಾ 12ನ್ನು 13ರಲ್ಲಿ ಉಮೇದ್ವಾರರು ನಾಮಪತ್ರವನ್ನು ಹಾಕಬೇಕಾಗಿತ್ತು. ಕಾಂಗ್ರೆಸ್ ಟಿಕೇಟು ಕೊಡಲ್ಪಟ್ಟ ವಕೀಲ್ ಶ್ರೀ ಕೆ. ಸದಾಶಿವ ಶೆಟ್ಟರೇ ಕಟ್ಟಿ ಕಡೆಗೆ ನಾಮಪತ್ರಹಾಕಿ ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಆಹಾರ ಸಮಿತಿ ಸಭೆ ಉಡು. ತಾಲೂಕು ಆಹಾರ ಸಮಿತಿ ಸಭೆಯು ಇದೇ ತಾ. 8ರಲ್ಲು ಸರ್ಕಲ್ಟರ್ ಶ್ರೀ ಜಾರ್ಜ್ ಎಸ್ ಜೋಸ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ಬೆಳೆಯ ಭತ್ತ ಆಕ್ಕಿಯನ್ನು ಸ್ಟೋರಿಗೆ ಗಳಿಗೆ ಒಪ್ಪಿಸುವ ತಾರೀಕನ್ನು ತಾ 15-11-1949ರಿಂದ 30-11-49ಕ್ಕೆ ಮುಂದರಿಸಿಬೇಕೆಂದು ನಿರ್ಣಯವಾಯಿತು.

ನಗರಾಡಳಿತ ವರದಿ ಕುರಿತು ಚೀಫ್ ಆಫೀಸರ್ ಮತ್ತು ಕಲೆಕ್ಟರರ ರಿಮಾರ್ಕ್ಸ್. ಉಡುಪಿ ಮುನಿಸಿಪಾಲಿಟಿಯ 1948-49ನೇ ಸಾಲಿನ ಆಡಳಿತ ವರದಿಯನ್ನು ಸರಕಾರಕ್ಕೆ ಒಪ್ಪಿಸುವಾಗ ದ. ಕ. ಜಿಲ್ಲಾ ಕಲೆಕ್ಟರರು ಒಟ್ಟಿನ ರಿಮಾರ್ಕ್ಸ್‌ಗಳ ಸಾರಾಂಶ ಹೀಗಿದೆ :ಮುನಿಸಿಪಾಲಿಟಿಯ ಪ್ರಾಮುಖ್ಯ ರಸ್ತೆಗಳಲ್ಲಿ ಧೂಳು ಹಾರದಂತೆ ಮಾಡುವ ಯೋಜನೆಯು ಬೇಗನೆ ಫಲಕಾರಿಯಾಗಬೇಕಾಗಿದೆ. ದಿನನಹಿ, ವಾರಸಂತೆ ಮಾರ್ಕೆಟುಗಳೂ ಕಸಾಯಿ ಖಾನೆಯೂ ಇನ್ನಷ್ಟು ಸ್ವಚ್ಛಂದವಾಗಿರುವಂತೆ ನೋಡಿಕೊಳ್ಳಬೇಕಾಗಿದೆ. ಟ್ರಾನ್ ಸರ್ವೇಯಾಗದಿದ್ದ ಕಾರಣದಿಂದಾಗಿ ಪತ್ತೆ ಹಚ್ಚಲ್ಪಟ್ಟ 65 ಸ್ಥಳಕ್ತೆಗಳಲ್ಲಿ ಸಾಲ್ಕು ಮಾತ್ರ ತೀರ್ಮಾನ ಹೊಂದಿದೆ. ಬೇಕ್ಕೆ ವಸೂಲಿ ಕೆಲಸವು ಉತ್ತಮವಿದ್ದು ಕೌನ್ಸಿಲಿನ ಪಣಕಾಸಿನಗಳ ಸ್ಥಿತಿಗತಿ ಭದ್ರವಾಗಿದೆ. ಚೇಯರ್‌ಮೆನ್, ಕೌನ್ಸಿಲರ್ಸ್ ಮತ್ತು ಕಮಿಷನರರೊಳಗೆ ಪರಸ್ಪರ ಸೌಹಾರ್ದವಿದ್ದು ನಗರಾಡಳಿತದಲ್ಲಿ ಜನತೆಗೆ ನಂಬಿಕೆಯಿದೆ. ವರದಿ ವರ್ಷದ ಆವಧಿಗೆ 'Fair' ಎಂದಿನ್ಸಲಾಗಿದೆ.

ದೇವಾನೆ-ತ-ನ ತೆಗೆದಿದ್ದ ಕೆಳಯ ಸಭೆ, ಸಮಾರಂಭ, ನೆಲೆಗಳ ಜಲಚ್ಛಿತ್ರಗಳನ್ನು ಶ್ರೀ ಟಿ. ಎ. ಪೈಗಳು ಇದೇ ತಾ 11ನೇ ಮುಂಜಾನೆ ಶ್ರೀ ಯಸ್. ಆರ್. ಧಿಯೇಟರಿನಲ್ಲಿ ಪ್ರದರ್ಶಿಸಿದರು.

ಉಡುಪಿ

ಕೇಂದ್ರ "ಕರ್ನಾಟಕ ಸಂಘ"ದ ೫ನೇಯ ವರ್ಷ ವರ್ಧಂತಿ ಮಹೋತ್ಸವವು ಇದೇ ತಾ. ೨೮ಕ್ಕೂ, ಸಂಘದ ಆರನೆಯ ಸಾಹಿತ್ಯೋತ್ಸವವು ಇದೇ ತಾ. ೨೯ರಿಂದ ಆಕ್ಟೋಬರದ ತಾ. ೧೧ ವರೆಗಿನ ಮೂರು ದಿನಗಳೂ ನಡೆಯುವುದು ನಿಶ್ಚಯವಾಗಿದೆ. ಕನ್ನಡದ ಮಾನ ನೀಯ ರಾಜಕವಿ ಶ್ರೀ ಎಮ್. ಗೋವಿಂದ ಪೈಗಳಿಗೆ ಮಾನಪತ್ರ ಸಮರ್ಪಣಾ ಸಪ್ತೆಂಬರ ತಾ. ೨೮ರಂದು ಸಂಜೆಗೆ ನಡೆಯಲಿದೆ. ಮೂದಲ ಮೂರು ದಿನಗಳಲ್ಲಿ ಸಂಜೆ ೪ರಿಂದ ೬-೪೦ ವರೆಗೂ ನಾಲ್ಕನೆಯ ದಿನದಂದು ಬೆಳಗಿನ ೯ರಿಂದ ೧೧-೪೦ ವರೆಗೂ ಭಾಷಣ ವಾಚನ ಕಾರ್ಯಕ್ರಮವೂ, ನಾಲ್ಕು ದಿನಗಳಲ್ಲಿಯೂ, ಸಿಕಪ್ರಕಾರವಾಗಿ ರಾತ್ರಿ ೯ರಿಂದ ೧೧ ರ ವರೆಗೆ ನಾಟಕ, ಸಂಗೀತ, ಯಕ್ಷಗಾನ ನೊದಲಾದ ಸಿನೋದ ಕಾರ್ಯಕ್ರಮಗಳೂ ಜರಗುವುವು; ಇದೇ ಅವಸರದಲ್ಲಿ ದಿವಂಗತ ಪಂಡಿತ ವೆಂಕಟರಾಮಾಚಾರ್ಯ ಸ್ಮಾರಕ ಕಪ್ಪಿನ ವಿಚಾರವಾಗಿ ಸಂಘದಿಂದ ಪ್ರತೀವರ್ಷ ನಡೆಯಿಸಲ್ಪಡುತ್ತಿರುವ ೪ ಭಾಷಣ ಸ್ಪರ್ಧೆ(ಹೈಸ್ಕೂಲುಗಳ ವಿದ್ಯಾರ್ಥಿಗಳಿಂದ ಮಾತ್ರ ಸ್ಪರ್ಧಿಸಲ್ಪಡಲು ಆರ್ಹವಾಗಿದ್ದು) ಸಪ್ತೆಂಬರ ತಾ. ೨೮ರಂದು ಸಂಜೆ ೧ರಿಂದ ೩ರ ವರೆಗೂ ಹೈಸ್ಕೂಲುಹಾಯರ್ ಎಲಿಮೆಂಟರಿ ಸ್ಕೂಲುಗಳ ವಿದ್ಯಾರ್ಥಿಗಳಿಗಾಗಿ ಸಂಘದ ಸ್ವಂತ ಬಹುಮಾನಗಳಿಗೊಳಪಟ್ಟು ನಡೆವ ೪ ಲೇಸಿನ್ಸ್ ದಾಸಸಾಹಿತ್ಯ-ಕಾವ್ಯವಾಚನ ಸ್ಪರ್ಧೆಗಳೂ ಅನುಕ್ರಮವಾಗಿ ಸಪ್ತೆಂಬರ ತಾ. ೨೮ರಿಂದ ೩೦ ವರೆಗಿನ ದಿನಗಳಲ್ಲಿ ಮಾತ್ರ ಬೆಳಿಗಿನ ಗಂಟೆ ೯ರಿಂದ೧೧-೪೦ ವರೆಗೂ ನಡೆಯಲಿವೆ; ಸ್ಪರ್ಧೆಗಳ ನಿಯಮಗಳನ್ನು ಜಿಲ್ಲೆಯ ಇನ್ನಿಲ್ಲ ತರಗತಿಗಳ ಶಾಲೆಗಳಿಗೂ ಸದ್ಯ ಕಳುಹಿಸಲಾಗುವುದು; ವಿದ್ಯಾರ್ಥಿಗಳು ತರಗತಿಗನುಸರಿಸಿ ಹೆಚ್ಚು ಸಂಖ್ಯೆಗಳಿಂದ ಈ ಸ್ಪರ್ಧೆಗಳಲ್ಲಿ ಭಾಗಿಗಳಾಗುವರೆಂದೂ, ಸಂಘದ ಸದಸ್ಯರೂ ಪ್ರೇಕ್ಷಕರೂ ಹೆಚ್ಚು ಸಂಖ್ಯೆಗಳಾದ ಈ ಸೇಲಿನ ಮಹೋತ್ಸವಗಳನ್ನು ಸಂದರ್ಶಿಸುವರೆಂದೂ, ಅತ್ಯಾತುರ-ಅವರಗಳಿಂದ ಅಶಿಸಲಾಗುತ್ತಿರುವೆಯೆಂದು ಸಂಘದ ಕಾರ್ಯವಾಹೀ ಸಮಿತಿ ಈ ಸೇರಿನ ಸಮಸ್ತರನ್ನೂ ಈ ಮೂಲಕವಾಗಿ ಆಹ್ವಾನಿಸುತ್ತಿದೆ.

ಕ್ಷೇಮವಾದ! ಹಲ್ಲುಪುಡಿ!

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ

ವ್ಯಾಪಾರಸ್ಥರಿಗೆ ಕಮಿಷನ್ ಕೊಡಲ್ಪಡುವುದು. ವಿಶೇಷ ಮಾಹಿತಿ ಬಗ್ಗೆ ಬರೆಯಿರಿ.

ವಿಳಾಸ:—

ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ
ಸಂತೆಕಟ್ಟೆ, ಉಡುಪಿ

ಪೆರಿಸಿನ ಸೌಂದರ್ಯ!

ಪೆರ್ಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ಗಳ ನವೀನ ಸ್ಥಿರ ಚಿತ್ರಗಳ ಸಂಗ್ರಹವು ಈಗ ತಾನೆ ಒಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಕಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡಿದ್ದಿರೆ ನೀವು ಏನೂ ನೋಡಿದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟಪೋಸ್) ರೂ. 4-0-0 ಮಾತ್ರ. ಸಂಗ್ರಹ ಕಚ್ಚಿಲ್ಲ. ಕೂಡಲೇ ಓರ್ಡರು ಕೂಡಿರಿ. ಅಂಜೆವೆಚ್ಚ ಪ್ರತ್ಯೇಕ.

Moonlight Traders.
(N-W-U-)
Lothian Road, Delhi

ಮಂಗಳೂರು

ಮೊನ್ಯಮಂತ್ರಿ ಭಕ್ತವತ್ಸಲಮ್ ಅವರು ಇದೇ ತಾ 14 ರಲ್ಲು ಸಂಜೆ ಕಾಸರಗೋಡಿಗೆ ಬಂದಿಳಿದು, ಮರುದಿನ ಬೆಳಿಗ್ಗೆ ಶಿರಿಯಕ್ಕೆ ಹೋಗಿ ಅಲ್ಲಿಯ ರಟ್ಟನ್ನು ಪರಿಶೀಲಿಸುವರು ನಂತರ ಅಲ್ಲಿಂದ ಸುಳ್ಯಕ್ಕೆ ತೆರಳಿ, ಪುತ್ತೂರಿಗೆ ಬಂದು ಅಲ್ಲಿಯ ಕಾರ್ಯಕ್ರಮವನ್ನು ಕೀರಿಸಿ ಸಂಜೆ ಮಂಗಳೂರಿಗೆ ಬರುವರು. ತಾ 16ರಲ್ಲು ಮಂಗಳೂರಲ್ಲಿ ಭೇಟಿ, ಸಂದರ್ಶನಗಳ ವಿವಿಧ ಕಾರ್ಯಕ್ರಮವು ನುಗಿಸಿ ತಾ 17ನೆ ಶನಿವಾರ ಬೆಳಿಗ್ಗೆ 9ಗಂಟೆಗೆ ಮೂಡಬಿದ್ರೆ, 10 ಗಂಟೆಗೆ ಕಾರ್ಕಳ ಸೆಂಟರುಗಳನ್ನು ಸಂದರ್ಶಿಸಿ ಮಧ್ಯಾಹ್ನ 12ಗಂಟೆಗೆ ಉಡುಪಿಗೆ ಬಂದು 1 ಗಂಟೆಯ ತನಕ ಭೇಟಿಕೊಡುವ, ಮನವಿಗಳನ್ನು ಸ್ವೀಕರಿಸುವ ಕಾರ್ಯಕ್ರಮವನ್ನು ಮುಗಿಸುವರು. ಅನಂತರ ಮಧ್ಯಾಹ್ನ ಊಟಮಾಡಿ ವಿಶ್ರಮಿಸಿ 3 ಗಂಟೆಗೆ ಮರ್ಲೆ ಬಂದರವನ್ನು ಸಂದರ್ಶಿಸಿ, 5 ಗಂಟೆಗೆ ಉಡುಪಿಗೆ ಮರಳಿ ಸಾರ್ವಜನಿಕ ಭಾಷಣವಿತ್ತು 7 ಗಂಟೆಗೆ ಮಂಗಳೂರಿಗೆ ತೆರಳಿ ತಾ 18 ನೇ ಆದಿತ್ಯವಾರ ಬೆಳಿಗ್ಗೆ ಮದ್ರಾಸಿಗೆ ಪ್ರಯಾಣ ಮಾಡುವರು.

ಸಾಹಿತ್ಯ ಸಭೆ—ಮಂಗಳೂರು ಗವರ್ನಮೆಂಟ್ ಹಾಗೂ ಎ ಟ್ರೈನಿಂಗ್ ಶಾಲಾ ಸಭಾ ಭವನದಲ್ಲಿ ಇದೇ ತಾ 7 ರಲ್ಲು ಮುನಿಸಿಪಲ್ ಕೌನ್ಸಿಲರ್ ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯಸಭೆಯೊಂದು ಜರಗಿತು. ಶ್ರೀಮತಿ ಪರಮೇಶ್ವರಿಯವರ ಪುರಾಣವಾಚನ, ಶ್ರೀ ಕೆ. ವಿ. ಪುರಾಣಿಕ ಹಾಡುಗಾರಿಕೆಯಿತ್ತು. ಅಧ್ಯಕ್ಷೆಯರು ಶಿಕ್ಷಕರ ಕರ್ತವ್ಯದ ಕುರಿತು ಮಾತನಾಡಿದರು. ಶ್ರೀ ಬಿ. ರಾಮಯ್ಯ ಶೆಟ್ಟಿ ಧನ್ಯವಾದ ವಿತ್ತರು.

ಭಾಷಣಗಳು—ಮದ್ರಾಸಿನ ಲೋಯೊಲಾ ಕಾಲೇಜಿನ ಪ್ರಿನ್ಸಿಪಾಲ್ ರೆ| ಫಾ| ಜೆರೋಮ್ ಡಿ| ಸೋಜರವರು ತಾ 3 ರಲ್ಲು ಮಂಗಳೂರು ಕೆಥೋಲಿಕ್ ಕ್ಲಬ್ಬಿನಲ್ಲಿ ಜಾಯು. ಪಿ. ಮಲ್ಯ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಭಾಷಣವೀಯುತ್ತಾ ಭಾರತದ ಸದ್ಯದ ರಾಜಕೀಯ ವಿಚಾರಗಳನ್ನು ವಿಮರ್ಶಿಸಿದರು. ನಗರ ಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಿಸರು ಧನ್ಯವಾದಗಳನ್ನರ್ಪಿಸಿದರು. ತಾ 5 ರಲ್ಲು ಸೈಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿಸಂಘದ ನೇತೃತ್ವದಲ್ಲಿ ಶ್ರೀ ಸಿ.ವಿ.ವಿಶ್ವನಾಥನ್ ಅವರಅಧ್ಯಕ್ಷತೆಯಲ್ಲಿಸದ್ಯಿಯವರು ಭಾಷಣವೀಯುತ್ತಾ ವಿದ್ಯಾರ್ಥಿಗಳುದೇಶದ ರಾಜಕೀಯವನ್ನುಯಾವರೀತಿಯಲ್ಲಿ ನಿರೀಕ್ಷಿಸಬೇಕೆಂಬುದನ್ನು ತಿಳಿಸಿದರು. ಕಾರ್ಯದರ್ಶಿ ಶ್ರೀ ಬಟ್ಟರ್ಂಡಿಸಿಲ್ವರು ವಂದನೆಗಳನ್ನರ್ಪಿಸಿದರು.

ದುಃಖಸೂಚಕ ಸಭೆಗಳು— ಪ. ಕ. ಆದ್ಯುತ ಸಮಿತಿಯ ವಿಶೇಷ ಕಾ. ನಿ. ಮಂಡಲದ ಸಭೆಯೊಮ್ಮೆ ತಾ. 4-9-49ನೇ ರವಿವಾರ ಸಾಯಂಕಾಲ ಕೊಡಿಯಾಲಬೈಲ್‌ನಲ್ಲಿ ಆನಂದ ಭವನದಲ್ಲಿ ಜರಗಿತು. ಈ ಸಭೆಯಲ್ಲಿ ಆದ್ಯುತ ಸಮಿತಿಯ ಸ್ಥಾಪಕರೂ, ಆದ್ಯ ಕಾರ್ಯದರ್ಶಿಗಳೂ ಆದ್ಯುತಶ್ರಮದ ಕ ಟ್ಟೋಣ ಸ್ಥಳದಾತೃಗಳೂ, ಸಮಿತಿಗೆ ಅಪಾರ ಧನಸಹಾಯ ಮಾಡಿದವರೂ, ಶ್ರೀ ವೈ ಗೋವಿ ಮರದಿಂದ ಗೌರವ ಹೊಂದಲ್ಪಟ್ಟವರೂ, ಮತ್ತು ಕನ್ನಡ ಜಿಲ್ಲೆಯ ಪ್ರಮುಖ ಆಯುರ್ವೇದಿಕರೂ ಆದ ಬ್ರಹ್ಮಶ್ರೀ ಯಂ. ವಿ. ಶಾಸ್ತ್ರಿಗಳವರ ಆಸಂಕ್ಷಿತ ನಿಧನಕ್ಕಾಗಿ ಸಮಿತಿಯು ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಚಿರಶಾಂತಿಯನ್ನು ಪ್ರಕ್ಷ ಪಡಿಸುತ್ತದೆ.

ಪ. ಕ. ನಿ. ಭಾ. ನೌಕ್ರ ಸಂಘದ ಸಭೆಯು ಇದೇ ತಾ 4ರಲ್ಲಿ ಜರಗಿ ಸಂಘದ ಪ್ರಥಮ ಅಧ್ಯಕ್ಷರೂ, ವಾಸ್ತುಶಿಲ್ಪ ವಿದ್ಯಾವಿಭೂಷಿತರೂ ಆಯುರ್ವೇದ ಚಿಕಿತ್ಸೆಯಲ್ಲಿ ಶ್ರದ್ಧೆಯನ್ನುಂಟುಮಾಡಿದವರೂ, ಮಂಗಳೂರು ಗೋಪಾಲ ಭೇಷಜಾಶ್ರಮದ ಸಂಸ್ಥಾಪಕರೂ ಆಗಿದ್ದ ಆಯುರ್ವೇದ ಭೂಷಣ ಎಮ್. ವಿ. ಶಾಸ್ತ್ರಿಗಳ ನಿಧನಕ್ಕಾಗಿ ದುಃಖಿಸುವ, ವ್ಯತೀರ ಆತ್ಮ ಎಬ್ಬಿಫಿಕೇಟುಗಳೊಂದಿಗೆ ಪರಾಂಬರಿಸುವುದೆಂದೂ ನಿರ್ಣಯವಾಯಿತು.

ಹೆರಿಗೆ ಮತ್ತು ಶಿಶು ಸಂಗೋಪನೆಯ ಗೃಹವು—ನಗರ ಸಭೆಯ ಆಶ್ರಯದಲ್ಲಿ ತಾ. 9ರಲ್ಲು ಜಿಲ್ಲಾ ಕಲೆಕ್ಟರ್ ಜನಾಬ್ ಶಮ್ಸುದ್ದೀನ್ ಅಹಮ್ಮದ್ ಸಾಹೇಬರ ಹಸ್ತದಿಂದ ಕಂಕನಾಡಿಯಲ್ಲಿ ತೆರೆಯಲ್ಪಟ್ಟಿತು. ನಗರ ಸಭಾಧ್ಯಕ್ಷ ಶ್ರೀ ಎಲ್. ಸಿ. ಪಾಯಸರ ಸ್ವಾಗತ ಭಾಷಣ, ಕಮಿಶನರ್ ಶ್ರೀ ಸಂಜೀವ ತಲ್ಲಾರರ ವರದಿವಾಚನ, ಅಧ್ಯಕ್ಷರ ಸಮಯೋಚಿತ ಭಾಷಣ ಕಾರ್ಯಕ್ರಮಗಳಾದ ಬಳಿಕ ಶ್ರೀ ಎಸ್. ಗೋಪಾಲ ಸಾಲೆನ್ನರು ಧನ್ಯವಾದಗಳನ್ನರ್ಪಿಸಿದರು.

ನೀವು ಅಳಿಯಸಂತಾನಿಗರೊ?

ಹಾಗಿದ್ದರೆ ಈಗತಾನೆ ಪಾಸಾದ

ಮದ್ರಾಸು

ಅಳಿಯಸಂತಾನ ಕಾನೂನು

ಇದನ್ನು ಓದಲೇಬೇಕು

ಇದರ ಮಾಹಿತಿಯನ್ನು ಪಡೆಯಲೇಬೇಕು

ಇಂಗ್ಲಿಷ್ ಪ್ರತಿಗಳೂ ಕನ್ನಡ ಪ್ರತಿಗಳೂ ದೊರೆಯುತ್ತವೆ.

ಕ್ರಯ **0—8- 0.** (ಟಪ್ಪಾಲು ಖರ್ಚು ಪ್ರತ್ಯೇಕ)

0-9-0 ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುವುದು.

ಸಿಗುವ ಸ್ಥಳ:—

ನವಯುಗ ಪ್ರೆಸ್, ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾ. 15—9—49 ರಿಂದ

ಬಾಲ ರಾಜು

ತೆಲುಗು ಚಿತ್ರಗಳಲ್ಲಿ ಇದು ಶ್ರೇಷ್ಠವೆಂದು ನಾವು ಹೇಳುವುದಕ್ಕಿಂತ ನೀವು ನೋಡುವುದರಲ್ಲಿ ಸ್ವಾರಸ್ಯವಿದೆ-

ಅಂಜಲಿದೇವಿ, ನಾಗೇಶ್ವರರಾವ್, ಶಿವರಾವ್ ಮೊದಲಾದವರು.

ಬರುವ ಚಿತ್ರ ಫೊರ್—ಕಿ—ಇಜ್ಜತ್

ADVERTISEMENT.

Applications are Invited for appointment as a Prevocational Inspector in one of the Harijan Welfare Higher Elementary Schools, in this district on a pay of 35—2—55 with the dearness allowance applicable to the scale of pay. The post is a temporary one in the first instance and it is likely to be extended. The intending applicant should posses theGovernment Teacher's Certificate of the lowar grade in "TAILORING" or in "NEEDLE WORK AND DRESS MAKING" The applications should be addressed to the District Harijan Welfare Officer, South Kanara, with the certificate, aed should reach him on or before 20-9-49. Applicatiions received thereafter will next be censidered.

Sd B. G. Pinto.
Dt. Harijan Welfare Officer,

ದ. ಕನ್ನಡ

ವಿಟ್ಲ ಸರ್ಕಲಿನ ಓಟಿರರಲ್ಲಿ ವಿನಂತಿ.

ಈ ಬಾರಿಯಜಿಲ್ಲಾ ಬೋರ್ಡು ಚುನಾವಣೆಯಲ್ಲಿ ವಿಟ್ಲ ಸರ್ಕಲಿಗೆ ಶ್ರೀ. ಬಿ ವಿಠಲ್‌ದಾಸ್ ಶೆಟ್ರನ್ನು ಕಾಂಗ್ರೆಸ್ ಉಮೇದ್ವಾರಿಯಾಗಿ ಆರಿಸಲಾಗಿದೆ. ಅವರು 1941ರ ವೈಯಕ್ತಿಕ ಸತ್ಯಾಗ್ರಹದಲ್ಲಿಯೂ, ಆ ಮೇಲೆ 1942ರ ಸ್ವಾತಂತ್ರ್ಯ ಚಳವಳಿಯಲ್ಲಿಯೂ ಭಾಗವಹಿಸಿ, ತ್ಯಾಗ ಮಾಡಿದವರು. ಸಾರ್ವಜನಿಕ ಕೆಲಸದಲ್ಲಿ ನಿಷ್ಠೆ ಮತ್ತು ಉತ್ಸಾಹವಿರುವ ತರುಣರು ಮುಖ್ಯವಾಗಿ ಜನಸೇವಾ ಮನೋವೃತ್ತಿಯವರು.

ದೇಶದ ಸ್ವಾತಂತ್ರ್ಯ ಸಾಧಿಸಿದ ಕಾಂಗ್ರೆಸ್ಸು, ರಾಜ್ಯಭಾರದ ಜವಾಬ್ದಾರಿಯನ್ನು ಹೊತ್ತಮೇಲೆ ನಡೆಯುವ ಮೊದಲನೆಯ ಈ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ, ಜನಸಾಮಾನ್ಯರು ಕಾಂಗ್ರೆಸ್ ಪುರುಷಾಳುವಿಗೇನೇ ತಮ್ಮ ಮತವಿತ್ತು ಕಾಂಗ್ರೆಸ್ಸಿನ ಮೇಲೆ ವಿಶ್ವಾಸ ತೋರಿಸುವುದು ಪ್ರಸ್ತುತದ ಪರಿಸ್ಥಿತಿಯಲ್ಲಿ ಅತ್ಯಗತ್ಯವಾಗಿದೆ. ಲೋಕದಲ್ಲೇ ನವೀನವಾದ, ಗಾಂಧಿವಾದ ಮತ್ತು ವಿಧಾನದಿಂದ ದ್ವೇಷವಿಂಜಿತ ರಾಂತವಾಗಿರದಲ್ಲಿ ಹೊಸ ಸಮಾಜ ರಚನೆಯನ್ನು ಮಾಡುವ ಜವಾಬ್ದಾರಿಯು ಕಾಂಗ್ರೆಸ್ಸಿನ ಮೇಲಿವೆ ಆ ಧಾರದಿಂದ ಜನಸಾಮಾನ್ಯರೆಲ್ಲ ಆದಕ್ಕೆ ಉತ್ಸಾಹದಲ್ಲಿ ಬೆಂಬಲವಿತ್ತು ಕೆಲಸಮಯ ಪರೀಕ್ಷೆಸಬೇಕಾಗಿದೆ. ಇಂದೀಗ ದೇಶದ ಇತರ ಯಾವ ಪಕ್ಷಗಳಿಗಿಂತಲೂ ಕಾಂಗ್ರೆಸ್ಸೇ ಉತ್ತಮ ರಾಜಕೀಯ ಪಕ್ಷವಾಗಿದ್ದು, ದೇಶದ ನಿಜವಾದ ಅಭ್ಯುದಯಕ್ಕೆ ತಳಹದಿ ಹಾಕಿರುವುದರಿಂದ ಜನತಾವಿಜಯಗಳಲ್ಲಿ ಅದಕ್ಕೇನೇ ಬೆಂಬಲ ಕೊಡುವುದು ಜನತೆಯ ಕರ್ತವ್ಯವಾಗಿದೆ. ಆದುದರಿಂದ ಯಾವ ರೀತಿಯಲ್ಲಿಯೂ ಕೆಲಸ ಮತ್ತು ಜಾತೀಯ ವೈಷಮ್ಯವನ್ನಾದರೂ ಈ ಸಂದರ್ಭದಲ್ಲಿ ಪರಿಗಣಿಸದೆ ತಮ್ಮಿಷ್ಟರ ಓಟನ್ನು ಇದೇ ತಾ. 26ರಲ್ಲು ನಡೆಯಲಿರುವ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರಿಯಾಗಿ ನಿಂತಿರುವ ಶ್ರೀ. ಬಿ ವಿಠಲ್‌ದಾಸ್ ಶೆಟ್ರಿಗೇನೇ ಕೊಡಬೇಕಾಗಿ ವಿನಂತಿ.

ಕೆ. ಅರ್. ಕಾರಂತ, ಎಸ್. ಎಲ್. ಎ; ಸಿ. ಎಸ್ ಶಾಸ್ತ್ರಿ, ವಕೀಲ್, ಪುತ್ತೂರು; ಎಸ್. ಸದಾಶಿವರಾವ್, ವಕೀಲ್, ಪುತ್ತೂರು; ಉರಿಮಜಲು ವೆಂಕಪ್ಪಯ್ಯ, ಅಧ್ಯಕ್ಷ, ಪುತ್ತೂರು ಸರ್ಕ್ಯೂಲ್ ಕಮಿಟಿ; ಬಿ. ಆರ್. ಕರ್ಕೇರ ಮಂಗಳೂರು; ಎಸ್. ಪದ್ಮನಾಭ ಬಾಬು ಪೈ, ಮಂಗಳೂರು.

ಬೊಂಬಾಯಿಯಲ್ಲಿ ದ ಕ. ಜಿಲ್ಲೆಯ ಶ್ರೀ. ಕೆ. ಕೃಷ್ಣಪುರಾಣಿಕ ಇವರ ನೃತ್ಯ ಪ್ರದರ್ಶನ:-

ತಾ 21-8-49ರಲ್ಲಿ ಬೊಂಬ್ಬಾಯಿ ಮಾಟುಂಗಾದ ಪೋದ್ದರ್ ಕಾಲೇಜ್ ಭವನದಲ್ಲಿ "ಗೌಡಸಾರಸ್ವತಸಭೆಯ" ಸ್ಮಾರಕ ದಿನೋತ್ಸವ ಸಮಾರಂಭದಲ್ಲಿ ಶ್ರೀ. ಕೆ. ಕೃಷ್ಣಪುರಾಣಿಕರ "ಹನುವಾದಿ" ನೃತ್ಯವು, ಇವರ ಶಿಷ್ಯೆಯರಾದ, ಕುಮಾರಿ ಕುಮುದಾ, ಮತ್ತು ಕುಮಾರಿ ನಿರ್ಮಲಾ ಇವರ "ಅಪ್ಸರಾಂಗಭವ" ನೃತ್ಯವೂ ಆತ್ಯುತ್ತಮವಾಗಿ ಪ್ರದರ್ಶಿಸಲ್ಪಟ್ಟವು. ಶ್ರೀ ಪುರಾಣಿಕರಿಗೆ, ಸಮಾರಂಭದ ಅಧ್ಯಕ್ಷರು, ಬೊಂಬ್ಬಾಯಿ ಸರಕಾರದ ರಿಯೇಬಿಲೇಶನ್ ಖಾತೆಯ ಸೆಕ್ರೆಟರಿ ಶ್ರೀ ಪಾಂಗಾಳ ರವಿಮಾನಾಥ ನಾಂಬ್ಯಾ, ಐ ಸಿ. ಎಸ್. ಇವರು ಸಭೆಯಪರವಾಗಿ ಹಿಮ್ಮಿನಿಯನ್ನು ಬಸುಮಾನಿಸಿದರು "ಗೌಡಸಾರಸ್ವತಸಭೆ"ಯ ಅಧ್ಯಕ್ಷ ಶ್ರೀ. ಕೆ. ಪಿ ಭಕ್ತ (ಬೊಂಬ್ಬಾಯಿನ ಸಿವಿಲಿಟಿಯ ಇಂಜಿನಿಯರ್) ಇವರು ನೃತ್ಯ ಪ್ರದರ್ಶನದ ಜಾತಾರ್ಯವನ್ನು ಪ್ರರಂಸಿಸಿ ಮಾತಾಡಿದರು.

ಕುಂಬಳೆ:-(1)ಸಪ್ತಪದ್ಮಿಹವು ಕುಂಬಳೆ ಫಿರ್ಕಾದಲ್ಲಿ ಆಗೋಸ್ತು ತಾ 15ರಿಂದ 22ರ ತನಕ ನಡೆದು ಫಲಕೊಡುವ ಸಸಿಗಳನ್ನು ನಡಲಾಯಿತು (2) ಏಳು ಮಾರ್ಗಗಳ ಕೆಲಸವು ಆರಂಭಿಸಲ್ಪಟ್ಟು, ಭರದಿಂದ ಸಾಗುತ್ತಿದೆ. (3) ಎಂಡು ಕಾಲುಸಂಕಗಳ ಕೆಲಸವು ಶ್ರದ್ಧಾದಿಂದ ಸಾಗುತ್ತಿದೆ (4) ಒಂದು ನೀರಾವರಿ ಕಾರ್ಯವು ತೊಡಗಿ ಮುಂದರಿಯುತ್ತಿದೆ (5 ಎರಡು ಗ್ರಾಮಸೇವಾ ಸಂಘಗಳು ಸ್ಥಾಪಿತವಾದವು (6) ವಸತಿಗೃಹ ಮತ್ತು (7) ನೀರಾವರಿ ಯೋಜನೆಗಳು ಕಯಾರಿಸಲ್ಪಟ್ಟವು

ನಾವೂರು:-ಕೆಲವು ವರ್ಷಗಳಿಂದ ನುಲೆಯೂ ಹಾಗೂ ಕಾಡುಮನುಗಳ ಹಾವಳಿಯ ದೆಸೆಯಿಂದ ನಾವೂರು ಮತ್ತು ಆಸುಪಾಸುಗಳಲ್ಲಿ ನೂರಾರು ಎಕ್ರೆ ಜಮೀನು ಪಡಿಲು ಬಿದ್ದಿರುವುದು ಕೆಲವು ವರ್ಷದಾರರು ತೀರ್ಪೆಯನ್ನೂ ಕೈಯಿಂದ ಕೊಡುತ್ತಿದ್ದಾರೆ. ತೀರ್ಪೆಯನ್ನು ಕೊಡಲಾರದೆ ಸರಕಾರದ ವಶವಾದ ಭೂಮಿಯೂ ಇದೆ. ಹಳ್ಳಿಯ ಕೃಷಿಕರಿಗೆ ತಕ್ಕ ಪ್ರೋತ್ಸಾಹವಿಲ್ಲದ್ದರಿಂದ ಅವರು ವರ್ಷಂಪ್ರತಿ ಹಳ್ಳಿಬಿಟ್ಟು ಪೇಟೆಸೇರುತ್ತಿದ್ದಾರೆ. ಹಳ್ಳಿಗರಿಗೆ ಕೃಷಿಗೆಬೇಕಾದ ಅನುಕೂಲತೆಗಳನ್ನು ಒದಗಿಸಿಕೊಡುವ ವ್ಯವಸ್ಥೆಯ ಕುರಿತು ಜನಸಮುದಾಯದವರೂ ಸರಕಾರದವರೂ ಯೋಚಿಸುವುದು ಅಗತ್ಯವಿದೆ.

ಬಾರ್ಕೂರು: ಹರಿಜನ ದಿನೋತ್ಸವವು ತಾ 30-8-49ರಲ್ಲಿ ಶ್ರೀ. ಪಿ. ಎನ್. ಭೋಜರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ ರಾಧಾಕೃಷ್ಣಪೂಜಾರ್, ಡಾ। ಎ. ಆನಂದಬಿಟ್ಟು ಇವರ ಸಂದರ್ಭೋಚಿತ ಭಾಷಣಗಳಾದುವು.

ಶಿವರ್:-ಶಿವರ್ ಪಂಚಾಯ್ತ್ ಬೋರ್ಡಿನ ಸಭೆಯು ತಾ 6-9 49ರಲ್ಲು ಪ್ರೆಸಿಡೆಂಟ್ ಯಸ್. ಆಂಡಯ್ಯ ಹೆಬ್ಬೆರ ಅಧ್ಯಕ್ಷತೆಯಲ್ಲಿ ಕೂಡಿ ಈಗಿರುವ ರೇಡಿಯೋದ ಬಗ್ಗೆ ನೀತಿಯ ಮಧ್ಯದಲ್ಲಿ ಒಂದು ಸ್ಕೂಲ್ ಕಟ್ಟಿಸಿ ಅಲ್ಲಿಗೆ ಒಯ್ಯಬೇಕೆಂಬುವ, ದಿನದಿಂದ ದಿನಕ್ಕೆ ಎಸ್ಕರಿಸುವ ಪೇಟೆಯ ಜನರ ಅನುಕೂಲತೆಬಗ್ಗೆ ಇನ್ನೊಂದು ಸಾರ್ವಜನಿಕ ಸ್ಮಶಾನ ಸ್ಥಳವನ್ನೂ ಪಂಚಾಯ್ತ್ ಬೋರ್ಡಿನಿಂದ ನಿರ್ಮಿಸಬೇಕೆಂಬುವ ಇತ್ಯಾದಿ ನಿರ್ಣಯಗಳಾದುವು

ಯೆಡ್ತೊರೆ:-ತಾ 5-9-49ರಲ್ಲು ಅನಿತ್ಯಾನಂದ ವಜ್ರುಸ್ವರ ಶಿಕ್ಷಣ ಮಂದಿರವನ್ನು ಶ್ರೀ ಯಸ್. ವಿಠಲಶೆಟ್ಟಿ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ಇದರ ಸಂಚಾಲಕಾಧ್ಯಾಪಕ ಶ್ರೀ ಯಸ್. ತಿಮ್ಮಪ್ಪಶೆಟ್ಟು ವಯಸ್ಕರ ಶಿಕ್ಷಣದ ಉದ್ದೇಶ, ಮಹತ್ತ್ವಗಳನ್ನು ವಿವರಿಸಿ ಜನರ ಬೆಂಬಲವನ್ನು ಕೋರಿದರು. ಅಧ್ಯಕ್ಷರ ಭಾಷಣವಾಗಿ ಸಿಹಿತಿಂಡಿ ಹಂಚಿದ ನಂತರ ರಾಷ್ಟ್ರಗೀತೆಯೊಂದಿಗೆ ಸಭಾಕಾರ್ಯಗೊಂಡಿತು.

ಬೈಲೂರು:-ತಾ 1-9-49ನೇ ಆದಿತ್ಯವಾರ ಅಪರಾಹ್ನ ಗಂಟೆ 4ಕ್ಕೆ ನೀರೆಬೈಲು ಬಾಲೆಯಲ್ಲಿ ಆಹಾರ ಉತ್ಪಾದನೆ ಹೆಚ್ಚಿಸುವ ವಿಚಾರ ಸಭೆಯು ಶ್ರೀ. ಕೆ ಸದಾನಂದ ಹೆಗ್ಡೆ M A. ಒ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದು ಗ್ರಾಮ ಸಂಪದ ಅಧ್ಯಕ್ಷರು ತಿಳಿಸುತ್ತಾರೆ.

ಮೂಲ್ಕಿ:-ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಇದೇ ತಾ 6ರಲ್ಲು ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮದಿನಾಚರಣೆಯು ಶ್ರೀ ಸಿ. ಕರುಣಾಕರವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಅಂದಿನ ಯಾತ್ರೆಗೆ ವೆಚ್ಚವನ್ನು ಪಡಿಸಿದ ಶ್ರೀ. ಕೆ ಕೊಕ್ರಮಾಸ್ಟರರಿಗೆ ಮನೆಯಂದ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರ ಪ್ರತಿಮಾ ಮೆರವಣಿಗೆಯು ಬ್ಯಾಂಡು ವಾದ್ಯ ಮೊದಲಾದ ಬಿರುದಾವಳಿಗಳಿಂದ ಕೂಡಿದ್ದು ದಾರಿಯುದ್ದಕ್ಕೂ ಭಕ್ತಾದಿಗಳು ದಬ್ಬಾಕಾಯಿಗಳನ್ನು ಸಮರ್ಪಿಸುವ ದೃಶ್ಯವು ಮನೋಹರವಾಗಿತ್ತು. ಮೆರವಣಿಗೆಯು ಸಂಘಕ್ಕೆ ಕಲ್ಪಿ ಅಧ್ಯಕ್ಷರ ಅನುಮತಿಯಂತೆ ಸಭಾಕಾರ್ಯಗಳು ಜರಗಿದುವು ನೆರೆದ ಸಭಿಕರಲ್ಲಿ ಶ್ರೀ ಕೆ ವಿಶ್ವನ್ನನವರೇ ಹೊದಲಾದವರ ಭಾಷಣಗಳಾದ ಮೇಲೆ ಕುಬಿಪುರು ಶ್ರೀ ಧೂಮ ಶೆಟ್ರು ಮತ್ತು ಕುಬಿಪುರು ಶ್ರೀ.ದೇವದಾಸ ಪುಟ್ಟಣ್ಣ ಶೆಟ್ರುಗಳಿಂದ ಶ್ರೀ ಗುರು ಮಹಾತ್ಮೆಯು ವಾಚನಮಾಡಲ್ಪಟ್ಟತು. ನಂತರ, ಗುರುಪೂಜೆಯಾಗಿ ಧನ್ಯೋತ್ಪತ್ತಿ ಆರಣವಾದ ಮೇಲೆ ಶ್ರೀ ಗುರುಪ್ರಸಾದ ಪಡಿದ ನಂತ ಸಭೆಯು ಕೊನೆಗೊಂಡಿತು

ಉಪ್ಪೂರು ರುಕ್ಮಿಣಿ ಶೆಡ್ತಿರ ನಿಧನ-

ಉಪ್ಪೂರ ತಿಮ್ಮಪ್ಪ ಹಡಿಯಾಳರ ಧರ್ಮಪತ್ನಿ, ಹಂದಾಡಿ ತೆಕ್ಕಮನೆ ಉಪ್ಪೂರು ರುಕ್ಮಿಣಿ ಶೆಡ್ತಿರು ತಮ್ಮ ಸ್ವಗೃಹವಾದ ಉಪ್ಪೂರು ಮನೆಯಲ್ಲಿ ತಾ 24-8-49ರಂದು ವೃದ್ಧಾಪ್ಯದ ಕಾರಣದ 71ನೇ ವರ್ಷ ವಯಸ್ಸಿನಲ್ಲಿ ನಿಧನ ಹೊಂದಿರುವರೆನ್ನಲು ವಿಷಾದವಾಗುತ್ತದೆ ಇವರು ತ್ರೀಚೆಗೆ ತನ್ನ ಒಬ್ಬನೇ ಪುತ್ರ ಕೊಲ್ಲೂರು ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಯು. ನಾರಾಯಣಶೆಟ್ಟಿರ ಬೈಂದೂರು ಪಿಡಾರದಲ್ಲಿದ್ದು ಅಜ್ಜಿ ಕಾಯಿಲೆ ಪ್ರಾರಂಭವಾಗಲು ಉಡುಪಿ ಹೆಂಗಸರ ಆಸ್ಪತ್ರೆಗೆ ತರಲ್ಪಟ್ಟರು ಪ್ರಯೋಜನವಿಲ್ಲದಂತು ತಿರುಗಿಹೋಗಿ ಉಪ್ಪೂರಿಗೊಯ್ಯಲ್ಪಟ್ಟು ಮರುದಿನವೇ ಮೃತಪಟ್ಟರು.

Notice

ಕುಂದಾಪುರ ಡಿ ಮು ಕೋರ್ಟಿನಲ್ಲಿ

O. S 354/1949

ವಾದಿ—ಗೊವಿಂದ ಉಪಾಧ್ಯ

ಪ್ರತಿವಾದಿರು—1. ವೀರಣ್ಣ ಶೆಟ್ಟಿ.
2. ಲಚ್ಚಮ್ಮ ಶೆಡ್ತಿ.

ಕುಂದಾಪುರ ತಾಲ್ಲೂ ಬೇಳೂರು ಗ್ರಾಮದ ದಬ್ಬರಿಯ ಮೂಡುಬೆಟ್ಟು ಅಣ್ಣಯ್ಯ ಶೆಟ್ಟಿ ಅಯಿಯ ವೀರಣ್ಣ ಶೆಟ್ಟಿ.1, ಈತನ ಅಕ್ಕ ಲಚ್ಚಮ್ಮ ಶೆಡ್ತಿ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

1ನೇ ಪ್ರತಿವಾದಿಯು ಪಾದಿಗೆ ಬರಕೊಟ್ಟ 2 ಕಡು ದಸ್ತಾವೇಜುಗಳ ಬಾಬ್ತು ವಿಧೋಧಿ ಸಂವತ್ಸರಕ್ಕೆ ಬರತಕ್ಕ ಬಡ್ಡಿ ಅ್ಯವಜನ್ನು ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಕ್ಲೆ ಮಾಡಿದ ಮೇಲಿನ ದಾವೆಯು ತಾ 23-9 49ಕ್ಕೆ ನೋಲಿನ ಕೋರ್ಟಿನಲ್ಲಿ ತನ್ನಗೆ ಇಟ್ಟುಕೊಂಡಿದೆ. ಆ ಕಾರಿತು ಏನಾದೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಮೇಲಿನ ಕೋರ್ಟುಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಯಾಬೀರುಮಾಡಿಕೊಳ್ಳಕ್ಕಕ್ಕಿದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah
Advocate for Plff.
Date 3-9-49
Coondapoor

ಶಯ್ಯಾಗೃಹದ ಫೊಟೊಗಳು

(ಅಪ್ರಾಯಸ್ಥರಿಗೆವಿಕ್ರಯಿಸೋಣಾಗಲಿಕ್ಕಿಲ್ಲ)

ಶಯ್ಯಾಗೃಹದ ದೃಶ್ಯ, ಸೌಂದರ್ಯಾದಿಗಳನ್ನು ನೋಡಲಪೇಕ್ಷಿಸುವಿರಾದರೆ ಇಂದೇ ಆರ್ಡರು ಕೊಡಿರಿ 50 ಫೊಟೊಗಳ ನೆಟ್ಟನೆ ಬೆಲೆ ರೂಪಾಯಿ 6/- ಮಾತ್ರ.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

V. P. Store [N. U.]
Post Box 51, Meerut, U. P.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರದಲ್ಲಿ ಹಳದೀ ಧಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಥಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉರುಡು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಿಂವು ಸೆರಗು ಹೋಗುತ್ತಿದ್ದರೆ, ಕೂಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಮೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ನೊವಾ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಜರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಮೀನು, ಕುಂಬಳಕಾಯಿ, ಒಳೈಣ್ಣೆ ಬಿಡಬೇಕು.

ದಾಖ್ಲು ೧೯೫೨ ಸಾಲು. ಪೋಸ್ಟ್ ಚಾರ್ಜ್ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಂಡೇಶ್ವರ ಮೂರ್ತ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ.

REGD

ಹುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಬಂ-ದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



ಜನಮತ.

ಕಾಪು ಸರ್ಕಲಿನ ಮಹಾಜನರಲ್ಲಿ ಕಾಂಗ್ರೆಸು ಸಂಸ್ಥೆಯ ಪರವಾಗಿ ವಿನಂತಿ.

ನಮ್ಮ ಜಿಲ್ಲಾ ಕಾಂಗ್ರೆಸು ಕಮಿಟಿಯವರು ಕಾಪು ಸರ್ಕಲಿನ ಪಾದಬೆಟ್ಟು ಗ್ರಾಮದ ಮೂಗಣ್ಣಡಿ ಕಾಳಪ್ಪ ಶೆಟ್ರ ಮಗ ಈಗ ನುಂಗಲೂರಿನಲ್ಲಿ ವಕೀಲರಾಗಿರುವ ಶ್ರೀ 'ಬಾಲಕೃಷ್ಣ ಶೆಟ್ರನ್ನು' ಕಾಂಗ್ರೆಸ್ ಪರವಾಗಿ ನಮ್ಮ ಕಾಪು ಸರ್ಕಲಿಗೆ ಆರಿಸಿಯಿವರು. ಶ್ರೀಯುತರು ಚಿಕ್ಕಂದಿನಲ್ಲಿ ಇದೇ ಪಡುದಿಬ್ರಿ ಎಮ್ಮಾಳು ಶಾಲೆಗಳ ವಿದ್ಯಾರ್ಥಿಯಾಗಿದ್ದು ಈ ಸರ್ಕಲಿಗೆ ಸಂಬಂಧಪಟ್ಟ ಪ್ರತಿಯೊಂದು ಗ್ರಾಮದಲ್ಲಿಯೂ ಸರ್ವ ಸಾಮಾನ್ಯನಾಗಿ ಪರಿಚಿತರಾಗಿದ್ದು ಈ ಸರ್ಕಲಿನ ಅನೇಕ ಗ್ರಾಮಗಳು ನೇರವಾಗಿ ಕಾರ್ಕಳ ತಿಪ್ಪಿಸ್ವಾಮಿ ಮುನ್ಸಿಫ್ ಕೋರ್ಟಿನಲ್ಲಿ ಕಳೆದ ಎಂಟು ಹತ್ತು ವರ್ಷಗಳ ವರೆಗೆ ವಕೀಲರಾಗಿ ಈ ಗ್ರಾಮಗಳ ಪರಿಚಯವನ್ನು ಚೆನ್ನಾಗಿ ಮಾಡಿಕೊಂಡವರಿದ್ದಾರೆ. ಶ್ರೀ ಬಾಲಕೃಷ್ಣ ಶೆಟ್ರು ಉತ್ಸಾಹಿತರುಣರೂ ಸರಳ ಸ್ವಭಾವದವರೂ, ರೀತಿ, ನೀತಿಯಲು ಮತ್ತು ಧೈರ್ಯಗಳಲ್ಲಿ ನಿಸ್ಸೆಯುಳ್ಳವರೂ ಸಾರ್ವಜನಿಕ ಕೆಲಸಗಳಲ್ಲಿ ತುಂಬಾ ಶ್ರದ್ಧೆಯಿಂದ ಸುಮಾರು ವರ್ಷಗಳಿಂದ ಭಾಗವಹಿಸಿದ್ದು ಕಾರ್ಕಳ ಹರಿಜನ ಸೇವಾ ಸಂಘದ ಕಾರ್ಯಾನಿರ್ವಾಹಕ ಮಂಡಳಿಯ ಸದಸ್ಯರೂ ಆಗಿ ಕೆಲಸ ಮಾಡಿದ್ದರಲ್ಲದೆ ಈಗ ನುಂಗಲೂರಲ್ಲಿ ತನ್ನ ವಕೀಲ ವೃತ್ತಿಯನ್ನು ಅವಲಂಬಿಸಿಕೊಂಡಿದ್ದು ವಿಜಯಾ ಬ್ಯಾಂಕು ಮತ್ತು 'ಜನತಾ ಸಾಹಿತ್ಯಗಳ'ಗಳ ಡೈರೆಕ್ಟರರಾಗಿಯೂ ದಿ. ನ್ಯೂ. ಕರ್ನಾಟಕ ಪ್ರೊವಿಡೆಂಟ್ ಇನ್ಸ್ಯೂರೆನ್ಸ್ ಕಂಪೆನಿಯ ಚೇಯರ್‌ಮೇನ್ ರಾಗಿಯೂ ಇರುತ್ತ ಅದಳಿತೆಯಲ್ಲಿ ತುಂಬಾ ಅನುಭವವುಳ್ಳವರಿದ್ದಾರೆ. ಇವರನ್ನು ಯಾವ ಪ್ರಕಾರದಿಂದ ನೋಡಿದರೂ ನಮ್ಮ ಕಾಂಗ್ರೆಸ್ ಚುನಾವಣಾ ಸಮಿತಿಯವರು ನಮ್ಮ ಸರ್ಕಲಿಗೆ ಆರಿಸಿರುವುದು ಅತ್ಯುತ್ತಮವಾದ ಆಯ್ಕೆ ಎಂದು ಹೇಳುವುದರಲ್ಲಿ ಅನುಮಾನವಿಲ್ಲ.

ಇವರ ಎದುರಾಗಿ ಶುಂಜೂರು ಶ್ರೀ ಕೃಷ್ಣ ಮೂರ್ತಿರಾಯರು "ಸ್ವತಂತ್ರ" ಎಂಬ ನಾಮಸೂಚ್ಯವನ್ನಿಟ್ಟುಕೊಂಡು ಸ್ಪರ್ಧಿಸಲು ಇಳಿದು ಮತಗಳನ್ನು ಗಳಿಸುವರೆ ಪ್ರಯತ್ನಿಸುತ್ತಿದ್ದಾರೆ. ಕಾಂಗ್ರೆಸಿನಲ್ಲಿ ಸ್ವತಂತ್ರ ಕಾಂಗ್ರೆಸ್ ಎಂಬ ಬೇರೊಂದು ಪಕ್ಷವಿರುವುದಿಲ್ಲ. ಕಾಂಗ್ರೆಸ್ ಎಂದರೆ ವಕೀಲ್ ಶ್ರೀ ಬಾಲಕೃಷ್ಣ ಶೆಟ್ರನ್ನು ಆರಿಸಿ ನಿಲ್ಲಿಸಿರುವ ಸಂಸ್ಥೆ ಒಂದೇ. ಆದುದರಿಂದ ಮತದಾರರು ಈ ವಿಷಯ ಸ್ಪಷ್ಟ ತಿಳಿದುಕೊಂಡಿರಬೇಕೆಂದು ವಿಜ್ಞಾಪನೆ. ಶ್ರೀ ಮೂರ್ತಿಯವರು ಕಾಂಗ್ರೆಸ್ ಚುನಾವಣಾ ಸಮಿತಿಗೆ ತನ್ನನ್ನು ಆರಿಸುವರೆ ಅರ್ಜಿ ಕೊಡಿಸಿ ಕೊಟ್ಟವರಲ್ಲ. ಈ ಬಗ್ಗೆ ಮತದಾರರಲ್ಲಿ ಅವರು ಹೇಳುತ್ತ ಬರುವ ಯಾವುದೊಂದು ವಿಚಾರವೂ ಸತ್ಯಸ್ಥಿತಿಗೆ ಸರಿಯಾಗಿರುವುದಿಲ್ಲವೆಂಬುದನ್ನು ಗಮನಿಸಿತಕ್ಕದ್ದು.

ಮಹಾತ್ಮಾ ಗಾಂಧೀಜಿಯವರಂತಹ ಮಹಾ ವ್ಯಕ್ತಿಗಳು ತ್ಯಾಗ ಮತ್ತು ಪ್ರಾಣ ಬಲಿದಾನಮಾಡಿದ ಕಾಂಗ್ರೆಸಿಗೆ ನೀವು ವಿರೋಧವಾಗಿ ಸ್ಪರ್ಧಿಸಬಾರದೆಂದೂ ಕಾಂಗ್ರೆಸಿನ ಗೌರವಕ್ಕೆ ಧಕ್ಕೆಯನ್ನುಂಟುಮಾಡಬಾರದೆಂದೂ ನಮ್ಮ ಜಿಲ್ಲೆಯ ಆಡ್ಯ ಮಹನೀಯರೂ ಗಣನೀಯ ಕಾಂಗ್ರೆಸು ಮುಖಂಡರೂ ಆದರ ಮನೆಬಾಗಿಲಿಗೆ ಹೋಗಿ ಅತಿವಿನಯದಿಂದ ಅವರ ವಿವೇಕಕ್ಕೆ ವಿನಂತಿ ಮಾಡಿಕೊಂಡರೂ ಅಂಥವರ ಮಾತಿಗೆ ಮನ್ನಣೆಯನ್ನು ಕೊಡದೆ ನವ್ಯ ಕಾಪು ಫಿರ್ಕವು ಕಾಂಗ್ರೆಸಿಗೆ ವಿರೋಧವಾಗಿ ಸಾಧಿಸಬೇಕೆಂದು ಮತದಾರರಲ್ಲಿ ಅಪಸ್ವಾರಕ್ಕೆ ತೊಡಗಿರುವರು. ಆದರೆ ಪವಿತ್ರವಾದ ಕಾಂಗ್ರೆಸು ಸಂಸ್ಥೆಗೆ ನಮ್ಮ ಕಾಪು ಸರ್ಕಲು ವಿರೋಧವಾಗಿಲ್ಲ, ಎಂಬುದನ್ನು ನಮ್ಮ ಸರ್ಕಲಿನ ಮತದಾರರೆಲ್ಲರೂ ಕಾಂಗ್ರೆಸಿನಿಂದ ಆರಿಸಲ್ಪಟ್ಟ 'ಬಾಲಕೃಷ್ಣ ಶೆಟ್ರಿಗೇನೇ' ತಮ್ಮ ಮತಗಳನ್ನು ಕೊಟ್ಟು ಕಾಂಗ್ರೆಸಿನ ಅಭಿಮಾನವನ್ನು ವ್ಯಕ್ತಪಡಿಸತಕ್ಕದ್ದು. ಪ್ರಜಾ ಪ್ರಭುತ್ವದಲ್ಲಿ, ಅದರಲ್ಲಿಯೂ, ಜಾತಿ, ಜನಾತಿ ಜೇಷ್ಠಯೆಂಬ ಬಿನ್ನಾಭಿಪ್ರಾಯದಿಂದ ತುಂಬಿದ ನಮ್ಮ ಹಿಂದುಸ್ಥಾನದ ಇಂದಿನ ಪರಿಸ್ಥಿತಿಯಲ್ಲಿ ನಾವು ಸಂಕುಚಿತ ಭಾವನೆಗಳಿಗೆ ತುತ್ತಾಗದೆ ಯೋಗ್ಯ ವ್ಯಕ್ತಿಯನ್ನು ಆರಿಸಿ ಕಳುಹಬೇಕೆಂದಿದ್ದರೆ, ನ್ಯಾಯವಾಗಿ ಸಮಸ್ತ ಪಂಗಡಗಳ ಮಕ್ತು ಸ್ಥಳಗಳ ಹಿತಾಭಿವೃದ್ಧಿಯನ್ನು ಇಟ್ಟುಕೊಂಡಿರುವ ಕಾಂಗ್ರೆಸ್ ಆರಿಸಿದ, ಉತ್ಸಾಹಿ ವಕೀಲ ಶ್ರೀ ಬಾಲಕೃಷ್ಣ ಶೆಟ್ರಿಗೇನೇ ತಮ್ಮ ಅಮೂಲ್ಯವಾದ ಮತಗಳನ್ನು ಕೊಟ್ಟು ಪ್ರಜಾಂಡ ಬಹುಮತ ಪಡೆದು ಆರಿಸಿ ಬರುವಂತೆ ಮಾಡುವ ಹೊಣೆಯು ಇಂದು ಕಾಪು ಸರ್ಕಲಿನ ಮತದಾರರಲ್ಲಿದೆ. ಅಷ್ಟೇ ಅಲ್ಲದೆ ಕಾಂಗ್ರೆಸ್ ಎಂಬ ಸುನ್ನಿ ಸಂಸ್ಥೆಯನ್ನು ವಿರೋಧಿಸುವುದು ತಪ್ಪಾಗುವುದು ಎಂದು ಪ್ರತಿಸ್ಪರ್ಧಿಗಳಿಗೆ ಸಾಕಷ್ಟನ್ನು ಕಲಿಸುವ ಜವಾಬ್ದಾರಿಯೂ ಈ ಕ್ಷೇತ್ರದ ಮತದಾರರಲ್ಲಿರುತ್ತದೆ.

ಸ್ವತಂತ್ರವಾಗಿ ಆರಿಸಿಹೋಗುವ ವ್ಯಕ್ತಿಗಿಂತ ಬಂದು ಪಕ್ಷವನ್ನು ಹಿಡಿದು ಆರಿಸಲ್ಪಡುವ ವ್ಯಕ್ತಿಗೆ ಮಾತ್ರವೇ ಜನತೆಯ ಹಿತವನ್ನು ಸಾಧಿಸಲು ಸಾಧ್ಯವಿದೆ. ಇಂದು ಜಿಲ್ಲಾ ಬೋರ್ಡಿನ ಬಹುಪಕ್ಷದ ಸ್ಥಾನವು ಕಾಂಗ್ರೆಸಿಗೆ ಈಗಾಗಲೇ ಅವಿರೋಧವಾಗಿ ದೊರೆತು ಉಳಿದ ಸ್ಪರ್ಧೆಯ ಸ್ಥಾನಗಳಲ್ಲಿಯೂ ಕಾಂಗ್ರೆಸು ಉಮೇದ್ವಾರರಿಗೆ ಪ್ರಚಂಡ ಬಹುಮತವು ದೊರೆಯುವ ಲಕ್ಷಣಗಳು ಕಂಡು ಬರುತ್ತಿವೆ. ಹೀಗಿರುತ್ತಾ ಬಹುಪಕ್ಷಾಕ್ಷ ಕಾಂಗ್ರೆಸ್ ಪಂಗಡದ ವಿರೋಧ ಕಟ್ಟಿಕೊಂಡು ಗೆದ್ದು ಬರುವ ಸ್ವತಂತ್ರ ಉಮೇದ್ವಾರರ ಯಾವ ಸೂಚನೆಗೂ ಬೋರ್ಡಿನಲ್ಲಿ ಬೆಂಬಲಿಗರು ವುದು ತೀರಾ ಅಸಂಭವ. ಎಂದಮೇಲೆ ಆ ಸರ್ಕಲಿಗೆ ಸ್ವತಂತ್ರ ಉಮೇದ್ವಾರನಿಂದ ಏನೂ ಪ್ರಯೋಜನ ದೊರೆಯಲಾರದು, ಎಂಬ ಈ ವಿಚಾರವನ್ನು ಮತದಾರರು ಗಮನಿಸಿ ಈ ಸರ್ಕಲಿನವರು ಕಾಂಗ್ರೆಸು ಉಮೇದ್ವಾರರಾಗಿರುವ ಶ್ರೀ ಶೆಟ್ರನ್ನು ಆರಿಸಿ ಕಳುಹಿಸಿಕೊಡುವುದರಲ್ಲಿ ಜನತೆಗೂ ಇಡೀ ಕಾಪು ಸರ್ಕಲಿಗೂ ಹಿತವಿದೆ. ಆದುದರಿಂದ ಈ ಎಲ್ಲಾ ವಿಷಯಗಳನ್ನು ಮತದಾರರು ಪರಾಂಬರಿಸಿ ಇಡೀ ರಾಷ್ಟ್ರವನ್ನಾವರಿಸಿಕೊಂಡು ಬಲಿಷ್ಠ ವ್ಯಕ್ತಿಗಳ ಸೇವೆಯಿಂದ ಬಹುಕಾಲದಿಂದ ಬೆಳೆದುಬಂದು ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಹೊಡೆದೋಡಿಸಿದ ಕಾಂಗ್ರೆಸಿನ ಯಾವ ಪವಿತ್ರವಾದ ತತ್ವಕ್ಕೆ ಪೂಜ್ಯ ಮಹಾತ್ಮರು ತನ್ನ ಪ್ರಾಣದಾನವನ್ನಾತ್ಪರೋ, ಅಂತಹ ಕಾಂಗ್ರೆಸಿನ ವತಿಯಿಂದ ಆರಿಸಲ್ಪಟ್ಟ ಶ್ರೀಯುತ ಬೆಳ್ಳೆ ಬಾಲಕೃಷ್ಣ ಶೆಟ್ರ, B. A. L. L. B. ರವರಿಗೆ ಪ್ರತಿಮತದಾನ ಕ್ಷೇತ್ರದಲ್ಲಿ ಅವರ ಬಗ್ಗೆ ಇರಿಸೋಣವಾಗಿ ಹಿಡಿದಿರುವ ಬೆಗೆಗೆ ನಿಮ್ಮ ಅಮೂಲ್ಯವಾದ ಮತಗಳನ್ನು ಪುಂಖಿಸಿ ಜಾತ್ಯಾತೀತವಾದ ಕಾಂಗ್ರೆಸಿನ ವಿಜಯವನ್ನು ಸಾಧಿಸುವದಲ್ಲದೆ ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನಿಂದ ನಮಗೆ ಸಿಗುವ ಸಂಪೂರ್ಣ ಫಲಪ್ರಯೋಜನಗಳನ್ನು ಹೊಂದುವುದಷ್ಟೇ ಅಲ್ಲ; ಕಾಂಗ್ರೆಸಿನ ಸೇನೆಯನ್ನೂ ಸಲ್ಲಿಸಬೇಕಾಗಿ ಸಾರ್ವಜನಿಕರಲ್ಲಿ ವಿಜ್ಞಾಪಿಸುತ್ತೇವೆ.

'ಜೈಹಿಂದ್'

ಕೆ. ಶ್ರೀನಿವಾಸಶೆಣೈ, ಸಂಘಟಕ.
ಥೋಮಸ್ ಆಂದ್ರಾದೆ ಸಂಚಾಲಕ
ಪಡುಬಿದ್ರಿ ಕಾಂಗ್ರೆಸ್ ಸೇವಾದಳ

Notice.

ಉಡುಪಿ ಡಿ. ಮುನ್ಸಿ. ಕೋರ್ಟಿನಲ್ಲಿ.

O. P. No. 43/49

1) ಸರಸ್ವತಿ ಅಂಮ. ಎಮ್., ಶ್ರೀನಿವಾಸರಾಯರ ವಿಧವೆ-2) ಸುಬ್ರಾಯ-ಮ್ಯಾನೇಜರ್, ಎವ್ವ. ಶ್ರೀನಿವಾಸರಾಯರ ಮಗ, ರಕ್ಷಕಳು. ಇವರು 1ನೇ ಅರ್ಜಿದಾರಳು. ಮಂಗಳೂರು ತಾಲೂಕು ಕೂಳೂರು ಗ್ರಾಮದಲ್ಲಿರುವವರು. ಅರ್ಜಿದಾರರು—

ಈ ಮೂಲಕ ಸರ್ವರಿಗೂ ತಿಳಿಸುವುದೇನಂದ್ರೆ:—

ಸದ್ರಿ ಅರ್ಜಿ ವ್ಯವಹರಣೆಯಲ್ಲಿ 1ನೇ ಅರ್ಜಿದಾರಳ ಗಂಡ ವ 2ನೇ ಅರ್ಜಿದಾರನ ತಂದೆ ತಾ 21-3-49ಲ್ಲು ಮೃತಪಟ್ಟ M ಶ್ರೀನಿವಾಸರಾಯರಿಗೆ ಮೇಲ್ಕಂಡ ಅರ್ಜಿಯಲ್ಲಿ ಕಾಣಿಸಿದಂತೆ ವಸೂಲಾಗತಕ್ಕ ಸಾಲವನ್ನು ವಸೂಲು ಪಡಿಯುವರೆ ಅರ್ಜಿದಾರರೇ ಹಕ್ಕುದಾರರೆಂತಲೂ-ಆ ಬಗ್ಗೆ 1ನೇ ಅರ್ಜಿದಾರಳ ಹೆಸರಿಗೆ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜಿದಾರರು ಪ್ರಾರ್ಥನಾಪೂರ್ವಕವಾಗಿ ಮೇಲ್ಕಂಡ ಅರ್ಜಿಯು ತಾ 7-10-1949ಕ್ಕೆ ಯಿಟ್ಟ್ಕೊಂಡಿತ್ತು. ಅಕ್ಷೇಪ ಹೇಳಲುಳ್ಳವರು ಸದ್ರಿ ತಾ 7-10-49ನೇ ದಿವ್ಸ ಬೆಳಿಗ್ಗೆ 10ಘಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ವಕೀಲರ ಮುಖಾಂತರ ಹಾಜರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು, ತಪ್ಪಿದಲ್ಲಿ ಏಕಪಕ್ಷವಾಗಿ ತೀರ್ಪಾನಿಸಲ್ಪಡುವುದು.

P V. Acharya
Vakil for Petitioners

ಉಡುಪಿ
ತಾ 10-9-49.

ಸಂತೆಕಟ್ಟೆಯಿಂದ ಕೊಕ್ಕರ್ಣೆಯ ವರೆಗಿನ ರಸ್ತೆಯ ದುರವಸ್ಥೆ:—

ಸಂತೆಕಟ್ಟೆಯಿಂದ ಕೊಕ್ಕರ್ಣೆಯ ವರೆಗಿನ 7ಮೈಲು ರಸ್ತೆಯು ಬಹಳ ದುರವಸ್ಥೆಯಲ್ಲಿದೆ. ಇದನ್ನು ನೋಡಿದರೆ ಸುರಾತನ ಕಾಲದ ಸ್ಟೇಟ್ ಬೆಟ್ಟಗಳ ಕಲಿದಾರಿಯನ್ನು ಹೋಲುತ್ತಿದೆ. ಇದರ ಎಲ್ಲಾ ಮೊರಿಗಳು ಹಾಳಾಗಿವೆ. ಕೆಲವು ಗಳು ಜಾಲರಿ. 3ಮೊರಿಗಳಂತೂ ಬಹಳ ಅಪಾಯ ಸೂಚಕವಾಗಿವೆ. ಕೆಲವೆಡೆ ಎರಡುಪಕ್ಕದ ಸಾಗುವಳಿ ಭೂಮಿಯು ಎತ್ತರವಾಗಿದ್ದು ಮಧ್ಯರಸ್ತೆಯು ತಗ್ಗಾಗಿ ನೀರು ಪರಿದು ಅಲ್ಲಲ್ಲಿ ಕಣಿಗಳು ಬಿದ್ದಿವೆ. ಇದರ ಹಲ ಕಡೆ ಜರಿಂದಿ ದುರಸ್ತಿಲ್ಲದೆ ನೀರು ತುಂಬಿ ಸ್ತೆಯ ಮೇಲೆ ಕೆಸರಾಗಿ ಕೆಸರಲ್ಲಿ ಜಲವು ಡಿಗಳು ಅಪಾಯಕ್ಕೆ ಗುರಿಯಾಗಿವೆ. ಸಂಟ್ಟಿಯಿಂದ 5ಮೈಲು ಕೊಕ್ಕರ್ಣೆ ಪೂರ್ಗರೆಗಿ ಹೋದರೆ ಬೆಗ್ರಿ ಬೆಟ್ಟೆಂಬ ಸ್ಥಳದಲ್ಲಿ ರ ಯು ಕೆಸರು ಗದ್ದೆಯೋ, ಪುರಾತನಕಾಲ ಮುಚ್ಚಿಹೋದ ಕೆರೆಯೋ ಎಂದು ತಿಳಿಯ ವುದು ಕಷ್ಟ. ಇಲ್ಲಿ ಧೈರ್ಯರು ಹುಳದೆ ಹಾವಿಯಿಂದ ಆಗೆ ಅಂದ್ರೆ ನೇಜಿಯ ಅಭಾವವಾ ಗಾಡಿಯಲ್ಲಿ ನೇಜಿ ತರುವಾಗ ಸಬ್ಬಲ್ ಜಾರಿದು ಹಾಳಾದ ಗಾಡಿಗಳು ಹಲವಿವೆ. ಜೋ ಮಣ್ಣಿನ ಪ್ರೇಲೆ ತಿಳಿನೀರು ಹರಿದು ಪರಿಯವಿಲ್ಲದವರು ಕಾಲುಊರಿ ಹೂತುಹೋಪಾದರೆಕ್ಕೆಯನ್ನು ಕೀಳಲು ಬಾರದೆ ಅಲ್ಲೆ ಕಳೆದುಕೊಂಡು ಬರಿಗಾಲಿನಿಂದಲೇ ಮುಂ ಹೋದವರೂ ಇದ್ದಾರೆ. ಕಳೆದ ತಾ 5 8 49ನೇ ಶನಿವಾರ ಬೆಲ್ಲಾ ಕಲೆಕ್ಟರ್ ದೊರೆ ಳವರ ಅನುಮತಿಯಂತೆ ಸಪ್ಲೈ ಆಫೀರರು ಕೂಡಾ 26 ಮಂದಿ ರಿಕ್ವಿಸಿಶನ್ ಧಿಕಾರಿಗಳನ್ನು ಒಳಗೊಂಡು ಬಂದ ವಾಹವೆ ಒಂದೇ ಸವನೆ ಹೂತು ಹೋಯಿತು ಡ್ರೈವರರು ಎಷ್ಟು ಪ್ರಯತ್ನಿಸಿದರೂ ನೋಕೈ ಬಾರದೆ ಹೋಯಿತು! ಹಿಂದೆ ಬರುತ್ತಿರುವ ಆಫೀಸರರು ಒಬ್ಬರೇ ಕುಳಿತಿರುವ ಕಾರು ಸ್ವಲ್ಪಳಿಸಿರಲ್ಲೇ ಹೂತುಹೋಗಲಜನರ ಪ್ರಯತ್ನದಿಂದವಷ್ಟೆ ಎಳಿಸಿಕೊಂಡು ಬಾಪಾಸು ತಿರುಗಿದರು. ವ್ಯಾನನ್ನು ಅಲ್ಲೇ ಬಿಟ್ಟು ಅಧಿಕಾರಿಗಳು ಕಾಲ್ನಡಿಯಲ್ಲಿಯೇ ಮುಂದುವರಿದರು. ಇದನ್ನು ತಿಳಿದು ಬೆಜೆಮಂಗೂರು ಗ್ರಾಮದ ಪರೇಲ್ ಸಾನೇಂದ್ರ ತೋಳಾರರವರ ಪ್ರಯತ್ನದಿಂದ ಹಗ್ಗಕಟ್ಟಿ ಟೋರಿಯನ್ನು ಎಳೆಸಿಕೊಟ್ಟರು. ಈಗ ಕೆಲ ಸಂಕಾರಿ ನೌಕರರಿಗೂ ಈ ರಸ್ತೆಯ ದುರವಸ್ಥೆಯ ಪರಿಚಯವಾಗಬಹುದಾಯಿತು. ಇನ್ನಾದರೂ ಈ ರಸ್ತೆಯನ್ನು ಸಂಬಂಧಪಟ್ಟವರು ದುರಸ್ತಿಪಡಿಸುವ ವ್ಯವಸ್ಥೆಯನ್ನು ಮಾಡುವರೆ?

ಅಕ್ಕಪಕ್ಕದ ಗ್ರಾಮಸ್ಥರೆಲ್ಲೆಲ್ಲಾ.

ಅಲೆವೂರು ರಸ್ತೆಯ ದ. ಸ್ಥಿತಿ

ಉಡುಪಿ ಮುನ್ಸಿಪಾಲಿಟಿ ಗದಿಯಿಂದ ಅಲೆವೂರಿನತ್ತ ಹೋಗುವ ರಸ್ತೆಯು ಸುಮಾರು ಮುಕ್ಕಾಲು ಮೈಲುಗಳ ವರೆಗೆ ಅದೊಂದು ರಸ್ತೆಯೋ ಅಥವಾ ಕೆಸರುಗದ್ದೆಯೋ ಎನ್ನುವಷ್ಟು ಕೆಸರು, ಕಣ್ಣು ಹಳ್ಳ ಕೊಳ್ಳಗಳಿಂದ ತುಂಬಿಹೋಗಿದೆ. ವಾಹನ ಸಂಚಾರವಂತೂ ಅಸಾಧ್ಯ; ನಡೆದು ಹೋಗುವುದು ಕೂಡಾ ಪ್ರಯಾಸವೇ. ಜನಸಂಚಾರವಿರುವ ಇಂತಹ ಹಾದಿಯನ್ನು ಹೀಗೆ ಹಾಳುಗೆಡವಿ, ಯಾವ ಉಪಯೋಗಕ್ಕೂ ಬೀಳದಂತೆ ಮಾಡುವದಕ್ಕಿಂತ 'ಅಧಿಕಾರಿ ಬೆಳೆ'ಬೇಕಾದ ಈ ಕಾಲದಲ್ಲಿ ಅಷ್ಟು ಉದ್ದಕ್ಕೆ ಏನನ್ನಾದರೂ ಬಿತ್ತಿದರೆ ಬೆಳೆಯಾಗಲಾರದೆ? ಆ ರಸ್ತೆಯು ಈಗಿನ ಸ್ಥಿತಿಯಲ್ಲಿ ಉಳುವ ಕೆಲಸವೇನೂ ಇಲ್ಲ. ಸಂಬಂಧಪಟ್ಟ ಅಧಿಕಾರಿಗಳು ಬಂದೋಕೂಡಲೇ ಅರಸ್ತೆಯ ದುರಸ್ತಿ ಮಾಡಿಸಿ, ಇಲ್ಲವೇ, ಅಧಿಕಾರಾವಕಾಶವನ್ನು ಉಪಯೋಗಿಸಿ, ಸಾರ್ಥಕಗೊಳಿಸಲಾರರೇ, ಎಂದು ಪ್ರಯಾಣಿಕರ ಹಾರೈಕೆ.

—ಪ್ರಯಾಣಿಕ

ಶೀಘ್ರವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಯೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎವ್ವೆ ಪಿಟಿ. ಎವ್ವ. ಚಿದಂಬರವ್ ಚಿಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

The most Powerful medicine for ASTHMA.
(Registered and Genuine).
CHITRAKOT
ASTHMA-SPECIFIC.
Hundred years fame to cure the dreaded disease permanently only by one dose to be taken on Sharadpurnima (full moon) dated 6—10—49.
Apply at once in English
Kr. Badri Nath Singh,
Shubh Chintak Karyalaya
CHITRAKOT, Distt, Banda, U. P.

ನಮ್ಮ ಪೂರ್ವಜರು ಮರಗಳನ್ನು ಪೂಜಿಸುತಿದ್ದರೇಕೆ?

ಮನುಷ್ಯರಿಗೆ ಅವುಗಳ ಉಪಕಾರ, ಸಸಿ ನೆಡುವುದರ ಮಹತ್ವ.

ಈಗೆರಡು ವರ್ಷಗಳಿಂದ ನಮ್ಮ ದೇಶದಲ್ಲೆಲ್ಲ ಸಸಿನೆಡುವ ಸಪ್ತಾಹವನ್ನು ಜರಗಿಸಲಾಗುತ್ತಿದೆ. ಕಳೆದ ಯುದ್ಧದಲ್ಲಿ ನಮ್ಮ ದೇಶದಲ್ಲಿನ ಮರಗಳು ವಿಶಾಲ ಸಂಖ್ಯೆಯಲ್ಲಿ ಕಡಿಯಲ್ಪಟ್ಟುವು. ಇದರಿಂದ ದೇಶಕ್ಕೆ ತುಂಬಾ ಹಾನಿಯಿದೆಯೆಂದು ಭೂಶಾಸ್ತ್ರಜ್ಞರು ಎಚ್ಚರಿಸಿದ್ದರು. ಇದನ್ನು ಮನಗಂಡ ನಮ್ಮ ಧುರೀಣರೂ, ಸರಕಾರಗಳೂ ಸಸಿನೆಡುವ ಪ್ರಚಾರವನ್ನು ಕೈಕೊಂಡರು. ಮಾನವಕೋಟಿಗೆ ಮರಗಳ ಉಪಯುಕ್ತತೆಯು ವರ್ಣಿಸಲಸದಳವಾದುದಾಗಿದೆ. ಅದುದರಿಂದಲೇ ನಮ್ಮ ಪೂರ್ವಜರು ಮರಗಳನ್ನು ದೇವತೆಗಳಂತೆ ಪೂಜಿಸುತಿದ್ದರು.

ಅರಣ್ಯಗಳು ಪ್ರಾಚೀನಕಾಲದ ನಮ್ಮ ವಿದ್ಯಾಪೀಠಗಳಿಗೂ ಸಾಂಸ್ಕೃತಿಕ ಕೇಂದ್ರಗಳಿಗೂ ಆಶ್ರಯದಾತವಾಗಿದ್ದುವು. ಬುದ್ಧನು ಒಂದು ಮಾವಿನ ತೋಪಿನೊಳಗೆ ತನ್ನ ಆಶ್ರಮವನ್ನು ಕಟ್ಟಿ ಅಲ್ಲಿಂದ ತನ್ನ ಉಪದೇಶಗಳನ್ನು ಸಾರಿದ್ದನು. ವೇದಗಳೂ ಉಪನಿಷತ್ತುಗಳೂ, ರಾಮಾಯಣ ಮೊದಲಾದ ಪ್ರಾಚೀನ ಶ್ರೇಷ್ಠ ಕೃತಿಗಳೂ ಅರಣ್ಯಗಳಲ್ಲೇ ಉಗಮವಾದವುಗಳೆಂದರೆ ಅತಿಶಯವಲ್ಲ. ಇಂದಿನ ಸಂಸ್ಕಾರವು ಸಸಿನೆಡುವುದನ್ನು ಪ್ರಚಾರ ಮಾಡುತ್ತಿದೆ. ಆದರೆ ಸಸಿ ನೆಡುವುದು ಪ್ರಾಚೀನ ಕಾಲದಲ್ಲಿ ಒಂದು ಶಾಸ್ತ್ರ ನಿರ್ದೇಶಿತ ಪಾವಿ ವಿಧಿಯಾಗಿತ್ತು. ಈ ಸಂಗತಿಯನ್ನು ನಮ್ಮ ಪುರಾಣ ಶಾಸ್ತ್ರಗಳಿಂದಲೂ ವಿಶಾಶಾಸನಗಳಿಂದಲೂ ಸ್ಪಷ್ಟ ತಿಳಿಯುತ್ತದೆ. ಸಾರ್ವಜನಿಕ ಸ್ಥಾನದಲ್ಲಿ ನೆಡಲ್ಪಟ್ಟ ಮರಗಳ ನೆರಳು, ಹೂ, ಹಣ್ಣುಗಳನ್ನು ಎಲ್ಲಾ ಜನರೂ ಉಪಯೋಗಿಸುತಿದ್ದರು. ತಮ್ಮಪ್ಪಕ್ಕೆ ಬದ್ಧ ಋಣಗಳ್ಲು, ಕಡ್ಡಿ, ಎಲೆಗಳನ್ನು ಬಡಜನರು ತಮ್ಮ ಒಲೆಗಳಿಗೆ ಉಪಯೋಗಿಸಬಹುದಿತ್ತು. ಆಗಿನ ಕಾಲದಲ್ಲಿ ಮರಗಳನ್ನು ಅನಾವಶ್ಯಕ ಕಡಿದು ಹಾಕುವುದು ಒಂದು ಪಾಪಕಾರ್ಯ ವೆಂದು ಪರಿಗಣಿಸಲ್ಪಡುತಿತ್ತು. ಹಾಗೆ ಮಾಡಿದವರನ್ನು ಶಿಕ್ಷಿಸಿಗೊಳಪಡಿಸಲಾಗುತಿತ್ತು. ಮರಕ್ಕೆ ಹಾನಿಯುಂಟುಮಾಡುವುದು ಒಂದು ಪಾತಕವೆ ಎಂದು ಮನುಸ್ಮೃತಿಯಲ್ಲಿ ಹೇಳಲ್ಪಟ್ಟಿದೆ. ಆದಕ್ಕೆ ಶಾಸ್ತ್ರ ವಿಧಾನದ ಪ್ರಾಯಶ್ಚಿತ್ತ ವಿಧಿಯೂ ಆದರಲ್ಲಿ ತಿಳಿಸಲಾಗಿದೆ.

ಮಹಾಪಾತಕಗಳು

ಔಷಧೀಯ ಮರಗಳನ್ನು ನಾಶಮಾಡುವುದಂತೂ ಮಹಾಪಾತಕವೆಂದು ನಮ್ಮ ಶಾಸ್ತ್ರಿಗಳು ತಿಳಿಹೊಂದಿದ್ದರು. ಕೆಲವು ಎಲೆಗಳನ್ನು ಕೀಳುವಾಗಲೂ ಮಂತ್ರಗಳನ್ನು ಜಪಿಸುತಿದ್ದರು. ಪ್ರದ್ಯೋತನನೆಂಬ ರಾಜನು ತನ್ನ ಪುತ್ರಳಿಗೆ ಯುದ್ಧ ವಿದ್ಯೆಯನ್ನು ಕಲಿಸಲಿಕ್ಕಾಗಿ ಉದಯಾನನೆಂಬ ಅರಸನನ್ನು ಬಂಧಿಸಿ ಬಲಾತ್ಕಾರದಿಂದ ತನ್ನ ಪುತ್ರಳಿಗೆ ಆವನಿಂದ ಯುದ್ಧ ವಿದ್ಯೆಯನ್ನು ಕಲಿಸಿದನು, ಉದಯಾನನ ಕೈಳಿಗೆ ರಾಜಕುಮಾರರು ಪಡೆದ ಸಮಂಬಿದ್ಯಾ ಪರಿಪೂರ್ಣತೆಯನ್ನು ಮನಗಂಡ ಪ್ರದ್ಯೋತನ ರಾಜನು ಉದಯಾನನಿಗೆ ತಾನುಮಾಡಿದ ತಪ್ಪಿಗಾಗಿ ಪಶ್ಚಾತ್ತಾಪನವನ್ನು ವ್ಯಕ್ತಪಡಿಸಿದನು. "ರೋಗಿಸ್ಥನು ಮಂದ್ದಿಗಾಗಿ ಮಂದ್ದಿನ ಗಿಡವನ್ನು ಬೇರು ಸಮೇತ ಕಿತ್ತ ಪಾಕಕದಷ್ಟೇ ಘೋರವಾದ ಕೃತ್ಯವನ್ನು ನಾನು ಮಾಡಿದೆ" ಎಂದವನು ಕ್ಷಮೆಯನ್ನು ಬೇಡುತ್ತಾನೆ.

ಅಶೋಕನು ಮಾರ್ಗದ ಸಾಲಿನಲ್ಲಿ ಪ್ರಯಾಣಿಕರ, ಯಾತ್ರಿಕರ ಹಿತಕ್ಕಾಗಿ ಮರಗಳನ್ನು ನೆಟ್ಟು ಸಂಗತಿಯು ಚಿರ ಪ್ರಖ್ಯಾತಿಹೊಂದಿದ.

ಮರಗಳ ರಕ್ಷಕರು ಯಜ್ಞಗಳಿಗೆ ಅಗ್ರಪೂಜೆಗೆ ಪಾತ್ರರು. ಪೃಷ್ಟ ವಿಜ್ಞಾನಗಳ ಕುರಿತು ಅವರು ಶಾಸ್ತ್ರೀಯವಾದ ಗ್ರಂಥಗಳನ್ನು ಬರೆದಿದ್ದಾರೆ. ಸೌಸ್ಯತಾಭ್ಯಾಸಿಗಳಿಗೆ ಈ ಸಂಗತಿಯು ಚೆನ್ನಾಗಿ ತಿಳಿದಿದೆ.

ಪುರಾಣಗಳ ಉಲ್ಲೇಖ

ವರತಂತು ಮುನಿಯ ಶಿಷ್ಯನಾದ ಕಾಟ್ಸ ನೆಂಬವನು ರಘುರಾಜನನ್ನೊಂದು ಸಲ ಕಾಣಲು ಬಂದನು. ಆಗ ರಘುರಾಜನು ಕೇಳಿದ ಮೊದಲ ಪ್ರಶ್ನೆಯೆಂದರೆ: "ಮಕ್ಕಳಂತೆ ನೀವು ಸಾಕುವ ಮತ್ತು ಅತಿಥಿಗಳ ದಣಿವನ್ನು ಪರಿಹರಿಸುವ ಆಶ್ರಮದ ಮರಗಳು ಸುಸ್ಥಿತಿಯಲ್ಲಿರುವವಲ್ಲವೆ? ಬಿರುಸಾದ ಗಾಳಿಯಿಂದವು ತೊಂದರೆಗೀಡಾಗದಿರುವುವಲ್ಲವೆ?" ಎಂಬುದು.

ಅರಣ್ಯದಲ್ಲಿ ಬಿಡಲ್ಪಟ್ಟ ಗರ್ಭಿಣಿ ಸೀತೆಯನ್ನು ವಾಲ್ಮೀಕಿಯು ತನ್ನ ಆಶ್ರಮಕ್ಕೆ ಒಯ್ದನು. ಮುನಿಯು ಆವಳಿಗೆ ಆಶ್ರಮದಲ್ಲಿನ ಎಳೆ ಸಸಿಗಳನ್ನು ಸಾಕಿ ಸಲಹುವಂತೆಯೂ ಆದರಿಂದ ಮಕ್ಕಳಾಗುವ ಮೊದಲೇ ಮಕ್ಕಳ ಸುಖವನ್ನು ಪಡೆಯಬಹುದೆಂದೂ ಬೋಧಿಸಿದನು.

ಆದೇ ರೀತಿ ಗರ್ಭಿಣಿ ಶಕುಂತಲೆಯನ್ನು ಪತಿಗೃಹಕ್ಕೆ ಕಳುಹಿಸಿಕೊಡುವಾಗ ಕಣ್ವನು ಆಶ್ರಮದ ಎಂಠಗಳನ್ನುದ್ದೇಶಿಸಿ ಹೀಗೆಂದಿದ್ದನು: "ಯಾರು ನಿಮಗೆ ನೀರೆರೆಯದೆ ಉಣ್ಣುತ್ತಿರಲಿಲ್ಲವೊ, ಶೃಂಗಾರ ಪ್ರಿಯಳಾದರೂ ಯಾರು ನಿಮ್ಮ ಎಳೆ ಚಿಗುರುಗಳನ್ನು ಚಿವುಟುತ್ತಿರಲಿಲ್ಲವೊ, ಯಾರು ನೀವು ಹೂಬಿಟ್ಟುದನ್ನು ನೋಡಿ ಆನಂದಪಡುತ್ತಿದ್ದಳೋ ಆವಳನ್ನು ತನ್ನ ಪತಿಗೃಹಕ್ಕೆ ಹೋಗಲು ಅಪ್ಪಣೆ ಕೊಡಿ" ಈ ಮಾತುಗಳು ನಾಟಕ ಕೃತಿಗಳಲ್ಲೇ ಅತ್ಯಂತ ರಮ್ಯವಾದುವುಗಳೆಂದು ಪೇಳಲ್ಪಟ್ಟಿವೆ.

ವೃಕ್ಷ ವಿವಾಹ

ಜಿಮೂತವಾಹನ ರಾಜನು ತನ್ನ ವಿದೂಷಕನೊಡನೆ ಒಂದು ಅರಣ್ಯವನ್ನು ಪ್ರವೇಶಿಸುತ್ತಲೆ ಅಲ್ಲಿನ ಕೆಲವು ಮಂಗಳ ತೊಗಟೆ ಗಂಟುಸ್ವಲ್ಪ ಕೀಳಲ್ಪಟ್ಟುದನ್ನು ಕಂಡನು. ಆದರಿಂದಲೇ ಅವನು ಆ ಸ್ಥಳವು ಮುನಿನಿವಾಸ ವಿರಬೇಕೆಂದೂ ಆವರು ಮರಗಳಿಗೆ ಹೆಚ್ಚು ನೋವಾಗದಂತೆ ತಮ್ಮ ವೃಸನಗಳಿಗಾಗಿ ತೊಗಟೆಗಳನ್ನು ಸ್ವಲ್ಪವೇ ಕೀಳಿರುವರೆಂದೂ ಸರಿಯಾಗಿಯೇ ಊಹಿಸಿದನು. ಯಜ್ಞಗಳಿಗೂ ಮರಗಳಿಗೂ ಇದ್ದ ಸಂಬಂಧವನ್ನು ಈ ಸಂಗತಿಯು ತಿಳಿಸುತ್ತದೆ.

ಪ್ರಾಚೀನ ಕಾಲದಲ್ಲಿ ಹಿಂದುಗಳು ಮರಗಳನ್ನು ದೇವತೆಗಳೆಂದು ಪೂಜಿಸುತಿದ್ದರೆಂಬುದಕ್ಕೆ ಆಧಾರಗಳಿವೆ. ಅಶ್ವತ್ಥ ಮರವು ವೃಕ್ಷ ಜಾತಿಯಲ್ಲಿ ರಾಜಮರ್ಯಾದೆಯನ್ನು ಗಳಿಸಿದೆ. ನಿಂಬೆ ಸ್ಥಿಗಿಡವೊಂದನ್ನು ಆದರ ಬಳಿ ನಿಟ್ಟು, ಆವೆಡಕ್ಕೂ ವಿವಾಹವನ್ನು ಜರಗಿಸುತಿದ್ದರು. ಹುಣ್ಣಿಮೆಯು ಸೋಮವಾರದಂದು ಬಂದರೆ ಆಂಥ ಮರಗಳನ್ನು ಅಂದು ಪೂಜಿಸಿ ಆದರ 108 ಸುತ್ತುಗಳನ್ನು ತೆಗೆಯುವ ಪದ್ಧತಿಯು ಈಗಲೂ ಇದೆ. ಅಶ್ವತ್ಥ ಮರದಡಿಯಲ್ಲೇ ಬುದ್ಧನು ಜ್ಞಾನಜ್ಯೋತಿಯನ್ನು ಕಂಡನು. ಆಂದಿನಿಂದ ಬೌಧರು ಕೂಡ ಆದನ್ನು ಮಹಾಬೋಧಿ ವೃಕ್ಷವೆಂದು ಪೂಜಿಸುತ್ತಾರೆ.

ನಮ್ಮ ಕಾಡುಗಳು

ಮರಗಳು ನೆಲವ ಮಂಜು ಕೊರೆದುಹೋಗದಂತೆ ಬಿಗಿಯಾಗಿರುಸುತ್ತವೆ. ನೆಲದ ನೀರಸೆಸೆ ಆರಿಹೋಗದಂತೆ ತಂಪನ್ನುಂಟು ಮಾಡುತ್ತವೆ. ಮೋಡಗಳನ್ನು ತಣಿಸಲು ಗುಡ್ಡ ಬಿದಿಯಲ್ಲಿನ ಕಾಡುಗಳು ತುಂಬಾ ಸಹಾಯ ಮಾಡುತ್ತವೆ. ಸುತ್ತಲಿನ ಕಾಡುಗಳು ಮಧ್ಯದ ಬಯಲುಗಳ ಪೈರು ಆತ್ಯುತ್ಪತ್ತಿಂದ ಪಾಳಾಗದಂತೆ ರಕ್ಷಿಸುತ್ತವೆ.

ಕೆಲವು ವರ್ಷಗಳಿಂದ [illegible]ಗಳನ್ನು ಬೆಳೆಸುವ ಕ್ರಮವನ್ನು ಮಂಡಿಸ್ಥೇವೆ. ಮರಗಳ ವಿಷಯವಾವ ನಮ್ಮ ಆದರವು ಕಡಿಮೆಯಾಗಿದೆ. ಪರಿಣಾಮವಾಗಿ ಕಾಡುಗಳು ಕ್ರಮೇಣ ಕ್ಷೀಣವಾಗಿವೆ. ಆದರಿಂದ ಮಳೆಯೂ ಕಡಿಮೆಯಾಗಿವೆ. ನೀರು ನದಿಗಳು ಈಗ ಕೇವಲ ಮರಳಿನಿಂದ ತುಂಬಿವೆ. ದೊಡ್ಡ ಕೆರೆಗಳು ಮರಗಳ ನಾಶದಿಂದಾಗಿ ಬತ್ತಿ ಕೆಸರು ತುಂಬಿಕೊಳ್ಳಾಗಿವೆ. ಮರಗಳ ಕೊರತೆಯಿಂದ ಎಲೆಗೊಬ್ಬರವೂ ಸಾಕಷ್ಟು ಸಿಗದಂತಾಗಿದೆ. ಇದೇ ಪರಿಸ್ಥಿತಿ ಮುಂದರಿದರೆ ದೇಶದ ಉತ್ಪನ್ನ ಶಕ್ತಿಯೂ ಕ್ರಮೇಣ ಕುಂದುವುದು. ಮರಗಳ ಮಹತ್ವವನ್ನು ಅರಿತು ನಾವು ಈ ಕುರಿತಾದ ನಮ್ಮ ಸಾಲಿನ ಕರ್ತವ್ಯವನ್ನು ತೀರಿಸಿ ನಾಡಕೇವೆಯನ್ನು ಮಾಡೋಣ.

—ಸ.ದೇಶಾಭಿಮಾನಿ

ಬ್ಯೆ-ಹಿಂದ್

ಪಂಡ್ಸೆ ಸರ್ಕಲಿನ ಮತದಾರರಲ್ಲಿ ವಿಜ್ಞಾಪನೆ

ನನ್ನ ಹಲವು ಮಿತ್ರರ ಹಾಗೂ ಮತದಾರರ ಅಪೇಕ್ಷೆಯಂತೆ ನಮ್ಮ ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಿಕೆಯ ಸ್ಥಾನಕ್ಕೆ ಕಾಂಗ್ರೆಸು ನಕ್ಷದ ಉಮೇದ್ವಾರನಾಗಿ ನಿಂತು ಎದುರಾಳಿಲ್ಲದೆ ಆರಿಸಿಬಂದ ಸುಗತಿಯನ್ನು ತಿಳಿಸಲು ಸಂತೋಷಪಡುತ್ತೇನೆ.

ನೀವು ನನ್ನ ಮೇಲೆ ಇಟ್ಟ ಪ್ರೀತಿ ವಿಶ್ವಾಸಗಳಿಗೆ ನಾನು ನಿಮಗೆ ಚಿರಋಣಿಯಾಗಿರುತ್ತೇನೆ.

ನಾನು ನಮ್ಮ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ನಿಮ್ಮೆಲ್ಲರ ಪ್ರತಿನಿಧಿಯಾಗಿ ಕೈಲಾದ ಜನತಾ ಸೇವೆಯನ್ನು ಮಾಡುತ್ತೇನೆಂತ ಈ ಮೂಲಕ ಆಶ್ವಾಸನವೀಯುತ್ತೇನೆ.

ನಿಮ್ಮ ವಿನಾದ ಕೊಳ್ಕೆಬೈಲು ಸೂರಪ್ಪ ಸೆಟ್ಟಿ. ಬಿ. ಎ. ಬಿ. ಎಲ್., ಎಡ್ವೊಕೇಟ್, ಕುಂದಾಪುರ. 29-8-49

ನೆನಪಿರಲಿ ಕೈಲಾಸ ಚಿಟ್ಟಿದ ಗಿಡ ಜೂಲಿಕೆಯ (ರಿಜಿಸ್ಟರ್ಡ್) ಒಂದು ಜೋಸ್ ಪಿಸ್ ಔಷಧವನ್ನು ತಾ 6 10-49ನೆ ಶನಿವಾರ ಹುಣ್ಣಿಮೆದಿನ ಸೇವಿಸಿದರೆ ಎಂತಹ ಅಸ್ವಸ್ಥ-ರೋಗಿಯಾದರೂ ಬಚಾವಾಗುವ ಸಂಭವ ಕಡಿಮೆಯಾಗುವುದು.

ಸತ್ಯನ್ವೇಷಣಾ ಇಂಡಿಸಿನಲ್ಲಿ.

Bramhachari G. Das,
Shri Sidh Bramhacharya,
Sewo Ashram,
P. O. Chitrakot (U. P.)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಆಮೋಘವಾದ ಮಧುರದ್ರವ ರೆಸಾಯನ.

ನವಜೀವಾತು ಎಂಬ ಸೂತಿಕಾ ರಸಾಯನ

ಆಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.

ಆ ಔಷಧಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೪ ದಿವಸಗಳಿಗೆ ಬರುವದು. ಆಂದರೆ ಕೇವಲ ೪ ರೂಪ್ಯಾಗಳೆ ಒಂದು ಬಾಳಂತಿನನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ ನಂ. 5 ಕೊಡಿಯಾಲಬೈಲು, ಮಂಗಳೂರು.

ಸ್ವಾತಿಸ್ಥರು. ಪಾ. ಏ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆದಗು, ಪ್ರದರದೋಷಗ, ಹೊಲಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹೆರವೀಜಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪ ಶಕೇರಪ್ಪ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿವರಂಗಿರು:—ಶುಚ್ಚಿ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಲಾನಸ್ಥ ಸಕ್ಕಲಿಂಗಪ್ಪ ಧಾರವಾಡಕರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಫ್ರೆಸ್ಸ್ ಅರ್ ಎಲ್ ಕಮಲಾಪುರ ಹೊಸಪೇಟೆ ಬ್ಯಾಡಗಿ

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಗ್ರಾಮೋದ್ಯೋಗಗಳ ಪುನರುಜ್ಜೀವನವೇ ನಿರುದ್ಯೋಗ ನಿವಾರಣೆಗೆ ಹೆದ್ದಾರಿ!

—ಚಂದ್ರಶೇಖರ.

ಹಿಂದುಸ್ತಾನದಲ್ಲಿ ಗ್ರಾಮೋದ್ಯೋಗಗಳು ಬೆಳೆಯಬೇಕೆಂದು ಹೇಳಿದರೆ—"ಇವನೊಬ್ಬ ಗಾಂಧೀವಾದಿ" ಎಂದು ಸಹಜವಾಗಿ ಶರಾ ಬರೆದು ಬಿಡುತ್ತಾರೆ ಇಂದಿನ ನಮ್ಮ ಜನರು. ಆದರೆ ಔದ್ಯೋಗೀಕರಣದ ಶಿಖರವನ್ನು ಮುಟ್ಟಿದ ಜರ್ಮನಿ, ರಶಿಯಾ, ಜಪಾನ ಮೊದಲಾದ ರಾಷ್ಟ್ರಗಳಲ್ಲಿ ಸಹ ಗ್ರಾಮೋದ್ಯೋಗಗಳಿಗೆ ಮಹತ್ವವನ್ನು ಕೊಡಲಾಗುತ್ತಿದೆ ಎಂಬುದರ ಅರಿವಿಲ್ಲ ಇವರಿಗೆ. ಜಪಾನದಲ್ಲಿ ೧೯೦೯ ಇಂದಕ್ಕೆ ಗ್ರಾಮೋದ್ಯೋಗಗಳಿರುತ್ತವೆ ಎಂಬುದನ್ನು ಇವರು ಮರೆತು ಬಿಟ್ಟಿದ್ದಾರೆ. ಜರ್ಮನಿಯಲ್ಲಿಯ ನಿರುದ್ಯೋಗತನವನ್ನು ಹೋಗಲಾಡಿಸುವದಕ್ಕಾಗಿ ಹಿಟ್ಲರನೂ ಸಹ ಗ್ರಾಮೋದ್ಯೋಗಗಳಿಗೆ ಘೋಷಣೆ ಕೊಟ್ಟಿದ್ದನು. ಅಂದಮೇಲೆ ಭಾರತವು ಔದ್ಯೋಗೀಕರಣದತ್ತ ಸಾಗಿದರೂ ಸಹ ಗ್ರಾಮೋದ್ಯೋಗಗಳಿಗೆ ಯೋಗ್ಯವಾದ ಮಹತ್ವ ಸಾಏಂದು ಕೊಡಲೇಬೇಕಾಗಿದೆ.

ಇಂಗ್ಲಂಡ ಅಥವಾ ಅಮೇರಿಕೆಯಲ್ಲಿರುವಂತಹ ಪರಿಸ್ಥಿತಿ ಹಿಂದುಸ್ತಾನದಲ್ಲಿಲ್ಲ. ಹಿಂದುಸ್ತಾನವು ಒಕ್ಕಲಿಗರ ದೇಶ ಉದ್ಯಮಗಳಲ್ಲಿ ನುಂದುವರೆದ ರಾಷ್ಟ್ರಗಳಲ್ಲಿ ಭಾರತವೂ ಒಂದು ಎಂದು ಎಣಿಸಲ್ಪಡುತ್ತಿದ್ದರೂ, ಹಿಂದುಸ್ತಾನದಲ್ಲಿ ಉದ್ದಿಮೆಗಳಲ್ಲಿ ಕೆಲಸ ಮಾಡುವ ಜನರು ಬಹು ಕಡಿಮೆ. ೧೦೦ಕ್ಕೆ೬೦ಪ್ಪು ಜನರು ಒಕ್ಕಲತನವನ್ನೇ ತಮ್ಮ ಜೀವನದ ಉದ್ಯೋಗವನ್ನಾಗಿ ಸ್ವೀಕರಿಸಿದ್ದಾರೆ ಆ ಒಕ್ಕಲಿಗರಾದರೂ ತಮ್ಮ ತಮ್ಮ ಪೊಲಗಳಲ್ಲಿ ವರ್ಷಕ್ಕೆ ಎಂಟು ತಿಂಗಳು ಮಾತ್ರ ದುಡಿಯುವದರಿಂದ, ಉಳಿದ ನಾಲ್ಕು ತಿಂಗಳಲ್ಲಿ ಅವರು ಸೋಮಾರಿಗಳಾಗಿ ಕಾಲ ಕಳೆಯುತ್ತಾರೆ. ಇಂತಹ ನಿಯತಕಾಲಿಕ(Seasonal) ನಿರುದ್ಯೋಗತನವು ಹಿಂದುಸ್ತಾನದಲ್ಲಿಯಷ್ಟು ಬೇರಾವ ದೇಶದಲ್ಲಿಯೂ ಇರುವದಿಲ್ಲ. ಆದ್ದರಿಂದ ಈ ತರದ ನಿರುದ್ಯೋಗತನವನ್ನು ಹೋಗಲಾಡಿಸಬೇಕಾದರೆ ಉಪ ಉದ್ಯೋಗ ಅಂದರೆ ಗ್ರಾಮೋದ್ಯೋಗಗಳಿಗೆ ಉತ್ಕರ್ಷ ಕೊಡುವದು ಅತ್ಯವಶ್ಯ.

ಗ್ರಾಮೋದ್ಯೋಗಗಳಿಗೆ ದೊಡ್ಡ ಪ್ರಮಾಣದಷ್ಟು ಕೂಲಿಕಾರರಾಗಲಿ, ಇಲ್ಲವೆ ಭಾಂಡವಳವಾಗಲಿ ಬೇಕಾಗುವದಿಲ್ಲ ಗ್ರಾಮೋದ್ಯೋಗಗಳನ್ನು ಕೈಕೊಳ್ಳುವನು ಮತ್ತು ಅವನ ಮನೆಯವರೇ ಕೂಲಿಕಾರರಾಗುವರು. ಅವನ ಮನೆಯೇ ಕಾರ್ಖಾನೆಯಾಗುವದು. ಅವನ ಉತ್ಪನ್ನದ ಸ್ವಲ್ಪ ಭಾಗವೇ ಭಾಂಡವಳವಾಗಬಲ್ಲುದು. ನೂಲುವದು, ಹಿಂಜುವದು, ತೊಗಲು ಹದ ಮಾಡುವದು, ಛತ್ರಿ ಕುಟ್ಟುವದು, ಎಣ್ಣೆ ತಯಾರಿಸುವದು, ಎಟ್ಟಿಗಳನ್ನು ಹೆಣೆಯುವದು, ಕೋಳಿ ಸಾಕುವದು, ಹಣ್ಣಿನ ಗಿಡಗಳನ್ನು ಬೆಳೆಯಿಸುವದು ಇವೇ ಮೊದಲಾದ ಗ್ರಾಮೋದ್ಯೋಗಗಳನ್ನು ಅಲ್ಪ ಭಾಂಡವಳದಲ್ಲಿಯೇ ಪರ್ಯಾಪ್ತವಾಗಿ ಮಾಡಬಹುದು. ಇಲ್ಲವೆ ಇವುಗಳಲ್ಲಿಯೂ ಕೆಲವು ಉದ್ಯೋಗಗಳನ್ನು ಬಿಡುವಿನ ವೇಳೆಯಲ್ಲಿಯೂ ಮಾಡಲಿಕ್ಕೆ ಬರುತ್ತದೆ.

ಈ ತರಹ ಗ್ರಾಮೋದ್ಯೋಗಗಳು ನಿಯತಕಾಲಿಕ ನಿರುದ್ಯೋಗತನವನ್ನು ಹೋಗಲಾಡಿಸಿ, ಒಕ್ಕಲಿಗರಿಗೂ ಮತ್ತು ಹಳ್ಳಿಗರಿಗೂ ಜೀವನಾವಶ್ಯಕವಾದ ಉತ್ಪನ್ನವನ್ನು ಕೊಡುವವೆಂಬುದರಲ್ಲಿ ಸಂಶಯವಿಲ್ಲ.

ಈ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನ ಕೊಡಬೇಕೆಂದರೆ, ಔದ್ಯೋಗಿಕರಣಕ್ಕೆ ಪ್ರೋತ್ಸಾಹನ ಕೊಡಬಾರದೆಂದಲ್ಲ. ಇಂದಿನ ಔದ್ಯೋಗೀಕರಣದಿಂದ ನಿರುದ್ಯೋಗತನವನ್ನು ಹೋಗಲಾಡಿಸುವದು ಶಕ್ಯವಾಗಿಲ್ಲವಾದ್ದರಿಂದ ಔದ್ಯೋಗೀಕರಣವನ್ನು ಸಂಪೂರ್ಣವಾಗಿ ಸಾಧಿಸಿ ನಿರುದ್ಯೋಗತನವನ್ನು ಸಂಪೂರ್ಣವಾಗಿ ಇಲ್ಲದಂತೆ ಮಾಡುವ ವರೆಗಾದರೂ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನ ಕೊಡುವದು ಅತ್ಯವಶ್ಯ. ಆದ್ದರಿಂದಲೇ ಮುಂಬೈ ಯೋಜನೆ (Bombay Plan)ಯ ಪುರಸ್ಕರ್ತರು ಗ್ರಾಮೋದ್ಯೋಗಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ

ಇನ್ನು ಗ್ರಾಮೋದ್ಯೋಗಗಳಿಂದ ನಿರ್ಮಿತವಾಗುವ ಸರಕುಗಳ ಉತ್ಪಾದನ ಕ್ರಯವು ಕಾರ್ಖಾನೆಗಳಲ್ಲಿ ತಯಾರಾಗುವ ಸರಕುಗಳ ಉತ್ಪಾದನ ಕ್ರಯಕ್ಕಿಂತ ಹೆಚ್ಚಿರುವದರಿಂದ, ಗ್ರಾಮೋದ್ಯೋಗಗಳಿಂದ ತಯಾರಾದ ಸರಕುಗಳ ಧಾರಣೆಯು ಪೇಟೆಯಲ್ಲಿ ಹೆಚ್ಚಿರುತ್ತದೆ. ಮತ್ತು ಕಾರ್ಖಾನೆಗಳಿಂದ ತಯಾರಾದ ಸರಕುಗಳ ಧಾರಣೆಯು ಕಡಿಮೆ ಇರುತ್ತದೆ. ಆದ್ದರಿಂದ ಕೈಗಾರಿಕೆಯಿಂದ ತಯಾರಾದ ಸರಕುಗಳು ಪೇಟೆಯಲ್ಲಿ ಮಾರಾಟವಾಗದೇ ಉಳಿಯುತ್ತವೆ. ಹೀಗಾಗಿ ಗ್ರಾಮೋದ್ಯೋಗಗಳನ್ನು ಬಿಟ್ಟು ಬಿಡುವ ಪ್ರಸಂಗ ಬರುತ್ತದೆ. ಆದ್ದರಿಂದ ಕಾರ್ಖಾನೆಗಳಿಂದ ತಯಾರಾದ ಸರಕುಗಳಲ್ಲಿ ಮತ್ತು ಗ್ರಾಮೋದ್ಯೋಗಗಳಿಂದ ತಯಾರಾದ ಸರಕುಗಳಲ್ಲಿ ಪೈಪೋಟಿ (Competetion) ಬೀಳದಂತೆ ನೋಡಿಕೊಳ್ಳಬೇಕು. ಅಂದರೆ ಮಾತ್ರ ಗ್ರಾಮೋದ್ಯೋಗಗಳು ಜೀವಿಸಿ ಉಳಿಯುವವು.

ಇನ್ನೂ ಕೆಲವು ಅಡೆತಡೆಗಳು ಗ್ರಾಮೋದ್ಯೋಗಗಳ ಬೆಳವಣಿಗೆಯನ್ನು ತಡೆಹಿಡಿದಿರುತ್ತವೆ ಅವುಗಳಲ್ಲಿ ಮುಖ್ಯವಾದವುಗಳೆಂದರೆ ಕಚ್ಚಾವಾಲಿನ ಪೂರೈಕೆ, ವ್ಯವಸ್ಥಿತ ಪೇಟೆ, ಹಣದ ಪೂರೈಕೆ ಮತ್ತು ವಾಹನ ಸೌಕರ್ಯ. ಈ ಅಡೆತಡೆಗಳನ್ನು ದೂರವಾಗಬೇಕಾದರೆ ಸರಕಾರವು ಮತ್ತು ಜನರು ಹೆಚ್ಚಾಗಿ ಗ್ರಾಮೋದ್ಯೋಗಗಳಲ್ಲಿ ಆಸ್ಥೆವಹಿಸಬೇಕು. ಕೇವಲ ಕಾರ್ಖಾನೆಗಳಲ್ಲಿ ತಯಾರಾದ ನೂಲನ್ನು ಉಪಯೋಗಿಸದೇ ಗ್ರಾಮೋದ್ಯೋಗಗಳಿಂದ ತಯಾರಾದ ನೂಲನ್ನು ಉಪಯೋಗಿಸಲು ಜನತೆಯು ಆಗ್ರಹಮಾಡಿಕೊಳ್ಳಬೇಕು. ಅಂದರೆ ಗ್ರಾಮೋದ್ಯೋಗಗಳಿಂದ ತಯಾರಾದ ಸರಕುಗಳ ಮಾರಾಟವಾಗಿ ಅವು ಬೆಳವಣಿಗೆ ಹೊಂದುತ್ತವೆ. ಇನ್ನು ಸಹಕಾರ ಸಂಘಗಳ ಮೂಲಕ ಕಚ್ಚಾ ವಾಲಿನ ಪೂರೈಕೆ, ಹಣದ ಪೂರೈಕೆಯು ವ್ಯವಸ್ಥೆ ಮಾಡಿಕೊಳ್ಳಬಹುದು. ಸರಕಾರವು ವಾಹನ ಸೌಕರ್ಯವನ್ನು ಒದಗಿಸಿಕೊಡಬೇಕು.

ಅಲ್ಲದೆ ಸಂಶೋಧನಾ ಸಂಸ್ಥೆಗಳನ್ನು ಸ್ಥಾಪಿಸಿ ಜನ ಅಭಿರುಚಿಗನುಗುಣವಾದ ಸರಕುಗಳನ್ನು ತಯಾರಿಸುವದಕ್ಕೆ ಹಳ್ಳಿಗರಿಗೆ ಶಿಕ್ಷಣ ಕೊಡಬೇಕು. ಈ ಪ್ರಕಾರ ಜನತೆಯೂ ಪುತ್ತು ಸರಕಾರವೂ ಸಹಕಾರ ನೀಡಿದಲ್ಲಿ ನಮ್ಮ ದೇಶದಲ್ಲಿ ಗ್ರಾಮೋದ್ಯೋಗಗಳು ತೀವ್ರ ಬೆಳವಣಿಗೆ ಹೊಂದಿ ನಿರುದ್ಯೋಗತನವನ್ನು ಇಲ್ಲದಂತೆ ಮಾಡುವವಲ್ಲದೆ, ನಮ್ಮ ದೇಶದ ಬದತನವನ್ನು ಹಿಂಗಿಸುವವು. —ಪ್ರಗತಿ.

ಸ್ವೀಕಾರ—ವಿಮರ್ಶೆ

೧ ನರಸಿಂಹ (ಧಾರವಾಡದ ಮಾಸಪತ್ರಿಕೆ)ಆಗಸ್ಟ್ ವಿಶೇಷಾಂಕ. ಸಂಪಾದಕರು: ಶ್ರೀರಂಗ. ಸಹಸಂಪಾದಕರು: ನಾಡಿಗೇರ ರಘುನಾಥ.

ಈಗೀಗ ನೂತನ ಪತ್ರಿಕೆಗಳು ತುಂಬ ಹೊರಟಿವೆ. ಅವುಗಳಲ್ಲಿ ಕೆಲವು ಎರಡೋ ಮೂರೋ ಮಾಸನಡೆದು ಮತ್ತೆ ನಿಂತ ನಿದರ್ಶನ ತುಂಬ ಇವೆ. ಹೆಚ್ಚಾಗಿ ಸಂಪಾದಕನ ಹೊಡೆಯನ್ನಾರಿಯದೆ ಹುದುಗಾಟಿಕೆಯ ಪತ್ರಿಕೆಗಳೇ ಆಗಿರುತ್ತವೆ, ಎನ್ನುವುದಕ್ಕೆ ನಿಷಾದ ಪಡಬೇಕಾಗಿದೆ ನರಸಿಂಹ, ಪತ್ರಿಕೆಯ ಧ್ಯೇಯಧೋರಣೆಯಿಂದಲೇ ಪ್ರಕಟವಾಗುತ್ತದೆ. ನರಸಿಂಹಾವಲೋಕನ,ಹನ್ನಂತಪ್ಪನಜಾರಿಕೆ, ಅಭ್ಯಾಸ ಪೂರ್ಣ ಬರಹಗಳಾಗಿರುತ್ತವೆ. ಶ್ರೀ ವಿ. ಎಂ. ಇನಾಮದಾರರ 'ಪುನರ್ವಿಚಿನ' (ಏಕಾಂಕವ್ಯಕ್ತಿ) ರೇಶನ್ ಆಫೀಸಿನಲ್ಲಿ ನಡೆಯುತ್ತಿರುವ ಹೊಲಸು ಕತೆಯನ್ನು ಚಿತ್ರಿಸಿದೆ. ಅಂತೂ ನರಸಿಂಹ ಕನ್ನಡದ ಮಾಸಪತ್ರಿಕೆಗಳಲ್ಲಿ ಆದರ್ಶ ಮಾಸಪತ್ರಿಕೆ. ನರಸಿಂಹ ಇದೇ ಗಾಂಭೀರ್ಯದಲ್ಲಿ ಕನ್ನಡದೇಶದಲ್ಲಿ ಮೆರೆದಾಡಲಿ!

೨ ಸ್ಕೂಲ್-ಡೇ(ಏಕಾಂಕಪ್ರಹಸನ) ಬರೆದವರು. ಹಾರ್ಮೋನಿಯಂ ಮಾಸ್ತರು. ಪ್ರಕಾಶಕರು: ವೀಣಾಪ್ರಕಟಣಾಲಯ, ಶಿವ.

ನಾಟಕಕಾರ ಕೈಲಾಸಂ ಅವರ 'ನರ್ಮ್‌ಕಂಪ್ಲಿ' ಶ್ರೀ ಶಿವರಾಮ ಕಾರಂತರ 'ನಾಟಕಮೆಂಬ ನಾಟಿಕ' ಇದ್ದಹಾಗೆಯೇ 'ಸ್ಕೂಲ್‌ಡೇ'ಯೂ ಕೂಡಾ ನಾಟಕರಂಗದ ಚಿತ್ರವನ್ನು ರೂಪಿಸುತ್ತದೆ 'ನರ್ಮ್‌ಕಂಪ್ಲಿ' ಮತ್ತು 'ನಾಟಕಮೆಂಬ ನಾಟಿಕ'ಗಳಲ್ಲಿ ರಂ ಪಂಚಿಗದ ಅಭಾವ—ಸಮಯೋಚಿತವಲ್ಲದ ಸಂಗೀತದ ಸುರಿಮಳೆ—ನಟರಅಸ್ವಾಭಾವಿಕತೆಯ ಸಂಬಾವನೆ—ಈ ಎಲ್ಲ ನ್ಯೂನ್ಯತೆಗಳನ್ನು ಸುರಸವಾಗಿ ಚಿತ್ರಿಸಿದಾರೆ. ಸ್ಕೂಲ್-ಡೇ ಅವರದಕ್ಕಿಂತ ತುಸು ಭಿನ್ನವಾಗಿದೆ. ಇದರಲ್ಲಿ ಹಾರ್ಮೋನಿಯಂ ಮಾಸ್ತರ್ ಹಾಗೂ ತಬ್ಲಾ ಮಾಸ್ತರರ ಪಾತ್ರವೆರಡು ಸ್ವಾರಸ್ಯಪೂರ್ಣವಾಗಿವೆ. ಶಾಲಾ ವರ್ಧಂತಿಕಾಲದಲ್ಲಿ ಅಧಿಕಾರಿಗಳ ಕಣ್ಣಿಗೆ ಮಣ್ಣೆರೆಚುವುದಕ್ಕಾಗಿ ಈಗಲೂ ಈ ರೀತಿಯ ಕಲೆಯ ಕೊಲೆನಡೆಯುತ್ತದೆ. ಶಾಲಾ ಅಧ್ಯಾಪಕರು ವಿದ್ಯಾರ್ಥಿಯ ಕಲಾಶಕ್ತಿಯನ್ನು ನೋಡದೆ ನಗರಸಭಾಧ್ಯಕ್ಷರೋ-ಜಹಗಿರದಾರೋ-ಆಪವರ ಮಕ್ಕಳಿಗೆ ಪಾತ್ರಕೊಟ್ಟು ಅಭಾಸ ಅಭಿನಯವನ್ನು ಕಂಡೂ ಮೆಡಲು ಕೊಟ್ಟು ಬಯಮಾಸಿಸುತ್ತಾರೆ' ರಾವಣನಂತಹ ಗಂಭೀರವ್ಯಕ್ತಿಯ ಪಾತ್ರವನ್ನು ಹನ್ನೆರಡು ವರ್ಷದ ಶಿಶುವಿಗೆ ಒಪ್ಪಿಸಿ, ಬಟ್ಟೆಯಿಂದ ಹೊಟ್ಟೆ ಬಿರಿಯುವಂತೆ ಮಾಡಿ ರಂಗದ ಮೇಲೆ ಅದು ಕೊವಲ್ಲುತಿಯುತ್ತಾ ತನ್ನೆರಡೂ ಕೈಗಳಿಂದ ಬಿಗಿಹಿಡಿಯುತ್ತಾ ಎಲ್ಲಿ ಬಟ್ಟೆ ಜಾರುತ್ತದೋ-ಎಲ್ಲಿ ಪದಕಂರ ಉರುಳುತ್ತದೋ ಎಂದು ಕಂಗಾಲಾಗುವ ಪರಿಸ್ಥಿತಿಯನ್ನುನಾವು ಈಗಲೂ ಸ್ಕೂಲ್ ಡೇಗಳಲ್ಲಿ ಕಾಣಬಹುದಾಗಿದೆ!"ಸ್ಕೂಲ್ ಡೇ' ಯನ್ನು ಬರೆದ ಮಾಸ್ತರು ಅಲ್ಲಿನ ಚಿತ್ರವನ್ನು ಮರ್ಮಿಕವಾಗಿಯೂ, ಪರಿಣಾಮಕಾರಿಯಾಗಿಯೂ ಚಿತ್ರಿಸಿದ್ದಾರೆ. ಈ ನಾಟಿಕವನ್ನು ಓದಿದಾಗ ಆದ ಆನಂದವು ರಂಗದಲ್ಲಿ ಕಂಡಂತಾಗದು! ಕೆಲವು ಕಡೆ ಅಸ್ವಾಭಾವಿಕತೆಯು ಮಾತುಗಳು ಬರುತ್ತವೆ. ನಾಟಕ ಪ್ರೇಮಿಗಳಿಗೂ, ನಾಟಕ ಕಾಧನಯಗಾರರಿಗೂ ತುಂಬ ಮಚ್ಚಿಕೆಯಾದೀತು! —ಯಸ್ಸೆಲ್

BUY INDIAN' ENCOURAGE INDIAN INDUSTRY'

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಯತುಸ್ವಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪು ಯತುಸ್ರಾವವಾಗುವುದು ಸಿ ಹೊಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಗಳೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ; ರೂ 3-; ಸೈಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ದ. ಪ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.

ಸ್ವಾತಿಸ್ವರೂ: ಶಹಾಕಂಪೆನಿ, ಮಂಗಳೂರು

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕರ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕಡಿದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

English copies of

MADRAS ALIYASANTHANA ACT of 1949

are available.

NAVAYUGA PRESS, UDIPI.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

22-9-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 4

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 4

ಮತದಾರರೊಡನೆ-

ದ. ಕ. ಜಲ್ಲಾ ಬೋರ್ಡು ಚುನಾವಣೆಯಲ್ಲಿ ಈಗ ಬಂದಿರುವುದು ಮತದಾರರ ಪರೀಕ್ಷಾ ಕಾಲ. ರಾಷ್ಟ್ರದ, ಅರ್ಧಾತ್ ಸ್ವತಃ ತಮ್ಮ ಹಿತ ಸಾಧಿಸಿಕೊಳ್ಳುವ ಮನಸ್ಸು ಮತ್ತು ತಿಳುವಳಿಕೆಇಲ್ಲಿಯ ವೋಟರರಿಗಿದೆಯೋ ಇಲ್ಲವೋ, ಎಂಬುದನ್ನು ಗೊತ್ತು ಹಚ್ಚಲಾಗುವ ಸನ್ನಿವೇಶ.

ಬ್ರಿಟಿಷ್ ಆಡಳಿತೆಯಿದ್ದಾಗ, ಸಾರ್ವಜನಿಕ ಹೊಣೆಗಾರಿಕೆಗಳಲ್ಲಿ ಆ ಪರಕೀಯರಿಂದಾಗುತ್ತಿದ್ದ ಅನ್ಯಾಯಗಳಿಗಾಗಿ, ನಾವವರನ್ನು ಸಹಜವಾಗಿ ಖಂಡಿಸುತ್ತಿದ್ದೆವು, ಪರದಾಸ್ಯ ತೊಲಗಿ ಸ್ವಕೀಯಾಡಳಿತೆ ಬಂದ ಮೇಲೂ ನಮ್ಮವ್ಯಸ್ವಂತ ಆಡಳಿತೆಗಾರರಿಂದಾಗಿರುವ ಮತ್ತು ಆಗಿದೆ ಎಂದು ನಾವೆನೆಸಿರುವ ತಪ್ಪುಗಳಿಗಾಗಿ ನಾವವರನ್ನು ಟೀಕಿಸುತ್ತಲೇ ಇದ್ದೇವೆ ಆ ಹೊಣೆಗಾರಿಕೆಯನ್ನು ನಿರ್ವಹಿಸಿ ತೋರಿಸುವ ಸರದಿ ಈಗ ಮತದಾರರ ಪಾಲಿಗೆ ಬಂದಿದೆ. ಮತದಾರರು ಹೇಗೆ ವರ್ತಿಸುವರು? ಇವರೆಂದಿಗೂ ತಪ್ಪಿ ಬೀಳಲಾರರಲ್ಲವೆ?

ಉಪರಾಧಿ ಪರಕೀಯಾಧಿಕಾರಿಗಳನ್ನು ಇಲ್ಲಿಂದ ಓಡಿಸುವ ಅಧಿಕಾರ ನಮಗಿದ್ದಿತು; ಅವರಿಂದ್ದನಿವಾರಿಸಿಕೊಳ್ಳಲು ಸಾಧ್ಯವಿದ್ದಿತು. ಈಗ ಅಧಿಕಾರ ಸೂತ್ರ ವಹಿಸಿರುವ ರಾಷ್ಟ್ರ ನಾಯಕರೂ ಹಾಗೂ ಜನಪ್ರತಿನಿಧಿಗಳು ಅಕ್ಷವ್ಯ ಅಪರಾಧಿಗಳೆಂದು ತೋರಿ ಬಂದರೆ, ಅವರನ್ನು ಅಧಿಕಾರದಿಂದ ಇಳಿಸುವ ಹೆಕ್ಕು ನಮಗಿದೆ. ಅವರು ತಪ್ಪಿಸಿ ಹಾತೆದುದನ್ನು ಆ ಮೂಲಕ ದುರಸ್ತಿ ಮಾಡಿಕೊಳ್ಳಬಲ್ಲೆವು. ಆದರೆ ಮತದಾರರು ಅಪರಾಧ ಮಾಡಿದರೆ ಅದಕ್ಕೆ ಅನ್ಯಥಾ ವರಹಾರವಿಲ್ಲ. ಆದ್ದರಿಂದ ಯಾರು ತಪ್ಪಿಬಿದ್ದರೂ ಮತದಾರರುತಪ್ಪಿಬೀಳಬಾರದು. ಮಿಕ್ಕೆಲ್ಲರ ತಪ್ಪುಗಳನ್ನು ವಿಮರ್ಶಿಸುವ ಮತ್ತು ತಿದ್ದುವ ಅಧಿಕಾರವುಳ್ಳ ಮತದಾರರೇ ತಪ್ಪಿತಸ್ಥರಾದರೆ ಮನೇ ಯಜಮಾನನಲ್ಲೇ ಮಂಕುತನವಿದ್ದಂತಾಗಿ ಮನೆ ಹಾಳಾಗುವದು! ಔಷಧಿಯಲ್ಲೇ ರೋಗಾಣುವಿದ್ದಂತಾಗಿ ಆವಸಾನ ಸಮೀಪಿಸುವದು!

ಆದ್ದರಿಂದ ಮತದಾರರೀಗ ಸಾಕ್ಷಾನ್ ನ್ಯಾಯ ಮೂರ್ತಿಗಳಾಗಬೇಕು. ತಮ್ಮ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಒಳಿತಾವುದು ಕೆಡುಕಾವುದು ಎಂಬುದನ್ನು ತುಲನೆ ಮಾಡಿ ನೋಡಿಕೊಂಡು ಮಿಕ್ಕೆಲ್ಲವನ್ನೂ ಪ್ರತಿಭಟಿಸಿ, ಒಳ್ಳೆಯದನ್ನೇ ಮಾಡುವೆವು ಎಂದು ಶಪಥ ಮಾಡಿಕೊಳ್ಳಬೇಕು

ಜನತೆಯ ಸರ್ವತೋಮುಖ ಅಭಿವೃದ್ಧಿಗಾಗಿ ಉಪಯೋಗಿಸಲಾಗುವ ಸಶಕ್ತ ಹಾಗೂ ಸುಸಜ್ಜಿತ ಉಪಕರಣವೊಂದು ರಾಷ್ಟ್ರಕ್ಕೆದೆಯಾದರೆ ಅದು ಕಾಂಗ್ರೆಸ್ ಸಂಸ್ಥೆಯೆಂಬುದು ನಿರ್ವಿವಾದ. ಪ್ರಗತಿಶೀಲ ಜನತಾ ರಾಜ್ಯ ಸ್ಥಾಪನೆಯ ಆಸ್ತಿವಾರವಾಗಿ ಇಂದು ಕಾಂಗ್ರೆಸ್ಸನ್ನಿಲ್ಲದೆ ಬೇರಾವ ಶಕ್ತವನ್ನೂ ಎರಿಸಿಕೊಳ್ಳುವದಸಾಧ್ಯನೆಂಬುದು ಸ್ವತಃ ಸಿದ್ಧ. ಪ್ರತ್ಯಕ್ಷಾನುಭವದಿಂದಲೂ, ಸ್ಥಿತಿಗತಿಗಳ ತುಲನಾತ್ಮಕ ವಿಮರ್ಶೆಯ ನೇಲಿಂದಲೂ ಸರ್ವರಿಗೂ ಮಂದಟ್ಟಾಗಿರುವ ವಿಷಯವಿದು. ಈ ಪೂರ್ವಲೇ ಸ್ಪಷ್ಟಪಡಿಸಿರುವ ಈ ಸಂಗತಿಯ ಶುರಿತು ಇಲ್ಲಿ ಶುನಃ ವರ್ಣನೆ ಅನಗತ್ಯ.

ಹಿಂದಿನ ಕಾಂಗ್ರೆಸ್ ಇಂದಿಲ್ಲ-ಕಾಂಗ್ರೆಸು ನಲ್ಲೀಗ ಶ್ರೀಮಂತರು, ಸ್ವಾರ್ಥಿಗಳು ಮತ್ತು ವಿವಿಧ ರೀತಿಯ ದುರ್ಬುದ್ಧಿಯವರು ತುಂಬಿ ಹೋಗಿ ಅನ್ಯಾಯಗಳನ್ನು -ಮಾಡುತಿದ್ದಾರೆ- ಎಂಬುದು ಸರ್ವಸಾಮಾನ್ಯ ದೂರು. ಒಪ್ಪಿಕೊಳ್ಳೋಣ. ಆದರೆ ಇದಕ್ಕೆ ಹೊಣೆಗಾರರಾರು? ಮೂಲ ಹೊಣೆಗಾರರು ಸಾರ್ವಜನಿಕರೇ!

ಕಾಂಗ್ರೆಸಿನ ಧ್ಯೇಯ, ಧೋರಣೆ, ಕ್ರಮ ನಿಬಂಧನೆಗಳಲ್ಲಿ ತಪ್ಪುಗಳಿವೆಯೆ? ಆವು ಶ್ರೀಸಾಮಾನ್ಯರಿಗೆ ಹಿತ ಸಾಧಿಸಿಕೊಡುವ ಮಾದರಿಯಲ್ಲಿವೆಯೇ? ಅಥವಾ ಅದರ ದ್ವಾರವು ಧನಿಕರಿಗೆ, ಕುಹಕಿಗಳಿಗೆ ಮಾತ್ರ ಪ್ರವೇಶಿಸಲಾಗುವ ರೀತಿಯಲ್ಲಿದೆಯೆ? ಇಲ್ಲ ರಾಷ್ಟ್ರದ ಅರ್ಧಾತ್ ಸಾರ್ವಜನಿಕರ ಹಿತಸಾಧಕ ಧ್ಯೇಯ, ಧೋರಣೆ ಕ್ರಮ ನಿಬಂಧನೆಗಳನ್ನಿಟ್ಟುಕೊಂಡು, ಸರ್ವರಿಗೂ ಪ್ರವೇಶವುಳ್ಳ ಸಂಸ್ಥೆಯಿದು. ಅಲ್ಲಿಯೂ ಸ್ವಾರ್ಥಿಗಳ, ಶ್ರೀಮಂತರ ಕೈ ಮೇಲಾಗಿದೆಯಾದರೆ, ಅಂಧವರಿಗೆ ಈ ಅವಕಾಶವೊದಗಿಸಿಕೊಡುವಷ್ಟೂ ಜನಸಾಮಾನ್ಯರು ಅಜ್ಞಾನಾಲಸ್ಯದಿಂದಿದ್ದಾರೆಂಬುದೇ ಅರ್ಥ. ಅಂದ ಮೇಲೆ ಅವಕ್ಕಾಗಿ ಜನತೆ ತನ್ನನ್ನೇ ತಾನು ದೂರಿಕೊಳ್ಳಬೇಕಾಗಿದೆ; ತನ್ನಿಂದಾದ ಆ ತಪ್ಪನ್ನು ತಾನೇ ತಿದ್ದಿಕೊಳ್ಳಬೇಕಾಗಿದೆ ಕಾಂಗ್ರೆಸ್ ಮಾತ್ರವೆಂದೇನ?

ಇಂತಹ ಪರಿಸ್ಥಿತಿಯಲ್ಲಿ ಯಾವುದೇ ಆದರೂ ಈ ದುರ್ಗತಿಗಿಳಿಯಬೇಕಾಗಿದೆ ಯೆಂಬುದೇ ಸರಿ. ಭಜಕರು ಹಾಗೂ ಚಾಪಲುಗಾರರು ಅವಕಾಶವೊದಗಿಸಿಕೊಟ್ಟಲ್ಲಿ, ದೇವಾಲಯದೊಳಗಾದರೂ ಅಲ್ಲಿಯ ಭಂಗಾರ ಕೀಳುವ ಕಳ್ಳರು ಶುಗ್ಗುವದು ಸಹಜ ತಾನೆ!

ಈ ರೀತಿ, ಕಾಂಗ್ರೆಸಿಗರಿಂದ, ಕಾಂಗ್ರೆಸ್ ಕಾರ್ಯಕರ್ತರನ್ನಿಸುವವರಿಂದ ಈಗ ಆಗುತ್ತಿರುವ ಅಪರಾಧಗಳಿಗೂ ಜನತೆಯೇ ಜವಾಬ್ದಾರಿ; ಆ ತಪ್ಪುಗಳ ನಿವೇತ ಎಲ್ಲವನ್ನೂ ಶುದ್ಧೀಕರಿಸಿ ಕಾಂಗ್ರೆಸ್ಸನ್ನು ಬಲಪಡಿಸುವ ಕೆಲಸವಿನ್ನಾದರೂ ಜನತೆಯಿಂದಲೇ ಆಗಲಿ. ಮತದಾರರಾಗಿರುವವರು ಕಾಂಗ್ರೆಸಿಗೆನೇ ಮತ ಕೊಡಬೇಕಾದುದು ಆ ಕರ್ತವ್ಯದೊಂದು ಅಂಗ

"ಹಾಗೇಕೆ? ಕಾಂಗ್ರೆಸಿಗೆ ವಿರುದ್ಧ ಮತ ಕೊಡುವ ಮೂಲಕ ಕಾಂಗ್ರೆಸ್ ಕಾರ್ಯಕರ್ತರನ್ನಿಸಿಕೊಂಡು ಏನೇನೋ ಮಾಡುತ್ತಿರುವ ಕೆಲವರಿಗೆ ಬುದ್ಧಿ ಕಲಿಸಬಾರದೇಕೆ?" ಎಂಬ ಪ್ರಶ್ನೆಯೀಗ ಹಲವರ ತಲೆಯಲ್ಲಿ ಸುಳಿದಾಡುತ್ತಿರುವಂತೆ ಕಾಣುತ್ತಿದೆ. ಇದು ಕಾಂಗ್ರೆಸಿನ ಪಾಲಿಗೆ-ಮಾತೆಯೆಂಬ ಮಮತೆಯಿಂದ ಹಿರಿಯ ಮಗ ಬೆರೆಗೆ ಕಚ್ಚಿದನೆಂದು ಕಿರಿಯ ಮಕ್ಕಳೆಲ್ಲಾ ಕೊರಳಿಗೇನೇ ಕಚ್ಚಿದಂತೆ! ಜುಜ್ಞಿನ ಮೇಲೆ ಜೊಕ್ಕೆಯೆದ್ದಂತೆ! ಬೂದಿಯೊಳಗೆ ಕೆಂಡವಿದೆಯೆಂಬ ಕಾರಣಕ್ಕಾಗಿ ದೊಡ್ಡ ಬೆಂಕಿಯನ್ನೇ ಎಬ್ಬಿಸಿಬಿಟ್ಟಂತೆ! ಪಾರ ಕೊಡುವ ವಿದ್ಯಾರ್ಥಿ ತಪ್ಪು ಬರೆದನೆಂಬ ನಿಟ್ಟಿನಿಂದ ಪಾರ ಕಲಿಸಬೇಕಾದ ಉಪಾಧ್ಯಾಯನು ಆದರಕ್ಕೂ ದೊಡ್ಡ ತಪ್ಪನ್ನು ಮೇಲ್ಪಂಗ್ತಿಯಾಗಿ ಬರೆದಂತೆ! ಹಾಕಿದಂತೆ! ಕಾರ್ಯಾಧಿಕಾರಿಗಳಿಂದ ಕಾಂಗ್ರೆಸಿನ ತತ್ವ ಧ್ಯೇಯವಾಯಿತೆಂದು ಮತದಾರರು ಕಾಂಗ್ರೆಸಿನ ಸ್ಥಾನ ಧ್ವಸ್ತ ಮಾಡಲು ನೋಡಿದರೆ, ಅಲ್ಪಾವಂಧವು ಮಹಾಪರಾಧವಾಗಿ ಬೆಳೆದಂತಾಗುವದೇ ಹೊರತು, ಎಷ್ಟಕ್ಕೂ ಉಜ್ಜಿ ಹೋಗದು.

ಇನ್ನು ಜಾತಿವಾತ್ಸಲ್ಯ, ಸ್ಥಳಾಭಿಮಾನ, ಸಂಬಂಧಪ್ರೇಮ, ಹಂಗು ದಾಸ್ಯತ್ವಗಳ ಬಂಧನ, ಹಣ ಮತ್ತಿತರ ಸಹಾಯ ಸಲಕರಣೆಗಳ ನೇಲಿನ ಲಾಲಸೆ—ಮೊದಲಾದುವುಗಳಿಂದಾಗಿ ಕಾಂಗ್ರೆಸನ್ನು ಬಿಟ್ಟು ಇದ್ದ ಅಭ್ಯರ್ಥಿಗಳಿಗೊಟ್ಟಿಗುವವರಿದ್ದಾರಾದರೆ, ಅಂಧವರು ತಮಗೆಂಬವರಿಂತಿರಲೆಂದು ಬಯಸಿದರೇನು ಎಂಬುದನ್ನು ಸ್ಪಷ್ಟ ಪಡಿಸಬೇಕಾಗಿಲ್ಲವೆಂಬುದು ಸ್ಪಷ್ಟ. ರಾಷ್ಟ್ರೀಯ ಹಾಗೂ ಸಾಮೂಹಿಕ ಹೊಣೆಗಾರಿಕೆಯ ಮಾತು ಹಾಗಿರಲಿ—ಎಂದಿಗೂ ಸಫಲವಾಗದ ಕೃತಕ ಬಾಲಸೆಗಳಿಗಾಗಿ ಸ್ವಂತ ವ್ಯಕ್ತಿತ್ವವನ್ನೇ ಮಾರಿಕೊಳ್ಳಲು ಸಿದ್ಧರಿರುವ ಇಂಥವರ ಕೈಗೆ ಬಂದ ಮತಾಧಿಕಾರ ಹಾಳು; ಇಂಥವರಿರುವದೇ ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ರಾಹು ಪ್ರಾಯವಾಗಿ, ಎಂದಲ್ಲದೆ ಬೇರೇನನ್ನೂ ಹೇಳಲಿಕ್ಕಿಲ್ಲ.

ರಾಷ್ಟ್ರದ ಸ್ವಾತಂತ್ರ್ಯವನ್ನು ಸಾರ್ಥಕಪಡಿಸಿ, ಅದನ್ನು ಸಾರ್ವಜನಿಕ ಹಿತಕಾರಿ ಜನತಾರಾಜ್ಯವಾಗಿ ವ್ಯವಸ್ಥೆಯಿಂದ ಮಾಪರಿಡಿಸುವ ಶಕ್ತಿ, ಯೋಗ್ಯತೆಯಿರುವ ರಾಜಕೀಯ ಪಕ್ಷವೆಂದರೆ ಕಾಂಗ್ರೆಸ್ ಎಂದು ನಂಬಿರುವವರೆಲ್ಲರೂ, ಕಾಂಗ್ರೆಸಿನ ಧ್ಯೇಯ, ಕಾರ್ಯಕ್ರಮ ಮತ್ತು ರೂಪರೇಷೆಗಳನ್ನು ಸ್ಪಷ್ಟವಾಗಿ ತಿಳಿದಿರಬೇಕು

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:—ಧಾರವಾಡ,
THE UNITED KARNATAK INSURANCE COMPANY, LIMITED.

ಕಾಂಗ್ರೆಸಿನ ಪಾಲಿಗಿದ್ದ 'ಮಹಾತ್ಮಾ ಗಾಂಧಿ' ಒಬ್ಬನೇ. ಅವರ ಎಲ್ಲಾ ಮಾತು ಗಳು ಆಕ್ಷರಶಃ ಅಮೂಲ್ಯವೆಂದು ಭಾವಿಸಿ ರುವ ನಾವು ''ನಾನು ಹಿಮಾಲಯದಂತ ಹ ಪ್ರಮಾದ ಮಾಡಿದೆ'' ಎಂದು ಸ್ವತಃ ಅವರೇ ಒಮ್ಮೊಮ್ಮೆ ಹೇಳಬೇಕಾಗಿ ಬಂದಿ ದ್ದ ಮಾತನ್ನೂ ಸತ್ಯವೆಂದು ಒಪ್ಪಿಕೊಳ್ಳ ಲೇ ಬೇಕು. ಗಾಂಧಿಜೀಯವರಿಂದಲೂ ತ ಪ್ಪುಗಳಾಗಿದ್ದುವೆಂದಮೇಲೆ, ತಪ್ಪು ಬೀಳು ವದು ಮನುಷ್ಯರಿಗಿದ್ದದ್ದೇ ಎಂಬುದನ್ನು ತಿಳಿದಿರಬೇಕು. ಆದರೆ ಅಪರಾಧವು ಉ ದ್ದೇಶಪೂರ್ವಕವಾಗಿರಬಾರದು; ಯಾರಾ ದರೂ ಉದ್ದೇಶಪೂರ್ವಕವಾಗಿ ಅಪರಾಧ ಮಾಡಿದರೂ, ಅದ ಕ್ಕಾಗಿ ಬೇರೆಯವರು ಉದ್ವೇಗಪೂ ರ್ಣಕ ಮಹಾಪರಾಧ ಮಾಡಬಾರದು.

ಕಾಲಸ್ಥಿತಿಯೇ ಹೀಗಿದೆ; ವಾತಾವರಣ ಹಾಳಾಗಿದೆ. ಮಾನವ ಸಹಜ ಕ್ರಮನಿಯ ಮಗಳಿಲ್ಲವನ್ನೂ ಮನುಷ್ಯರೆಲ್ಲರೂ ಪಾಲಿ ಸಿ-ತ್ಯಿರುವರೇನು? ಕಾಂಗ್ರೆಸ್ ಕಾರ್ಯ ಸಂಬಂಧದ ನೀತಿ ನಿಯಮಗಳಿಲ್ಲವನ್ನೂ ಕಾಂಗ್ರೆಸ್ ಕಾರ್ಯಾರ್ಥಿಕಾರಿಗಳೂ ಪಾಲಿ ಸಲಿಲ್ಲ-ಪಾಲಿಸುತ್ತಿಲ್ಲ-ಎಂಬುದು ನಿಜ. ಆದರೆ ಕಾಂಗ್ರೆಸ್ ಅಧಿಕಾರಿಗಳ ತಪ್ಪಿಗಾಗಿ ಕಾಂಗ್ರೆಸಿಗೇನೇ ದ್ರೋಹ ಸಾಧಿಸಲು ಬಗೆ ದರೆ ಸಮಾಜದಲ್ಲಿ ಅನಸೇಕ್ಷಿತ ವ್ಯಕ್ತಿಗಳ ದ್ವಾರಿಂಬುದಕ್ಕಾಗಿ ಸಮಾಜ ದ್ರೋಹ ಸಾ ಧಿಸಿದಂತೆಯೇ ಸರಿ. ಅವರಿಂದಾದ ತಪ್ಪು ಕಮ್ಮಿಂದಲೂ ಆಗದಂತೆ, ಮಾತ್ರವಲ್ಲ, ಆ ತಪ್ಪು ಕೂಡಾ ತೊಡೆದುಹೋಗುವಂತೆ ವರ್ತಿಸಬೇಕಾದುದೇ ಇಲ್ಲಿ ಮತದಾರರ ಕರ್ತವ್ಯ

ಸಂಗತಿ ಹೀಗಿದೆ:-ಕಾಂಗ್ರೆಸ್ ಸಂಸ್ಥೆ ಯೆಂಬುದು ಕಟ್ಟಲ್ಪಟ್ಟಿರುವುದು ಕ್ರಮ ಬದ್ಧ ನಿಧಿ ನಿಬಂಧನೆಗಳ ತಳಕಟ್ಟು-ಗೋ ಡೆ, ಸಂದು, ಕೀಲುಗಳಿಂದ. ಕಾಂಗ್ರೆಸ ನ್ನೊಪ್ಪುವವರೆಲ್ಲರೂ ಅದರ ಈ ರಚನಾ ವಿಧಾನಗಳನ್ನು ಒಪ್ಪಲೇಬೇಕು. ಈ ವಿ ಧಾನಗಳಿಗನುಸರಿಸಿ ಯಾರು ಕಾಂಗ್ರೆಸ್ ಪ್ರತಿನಿಧಿಗಳಾಗಿ ನಿಂತಿರುವರೋ ಅವರು ಮಾತ್ರವೇ ಕಾಂಗ್ರೆಸ್. ಅಂಥವರನ್ನು ಬೇರೆ ಯಾವುದೇ ಕಾರಣಕ್ಕಾಗಿ 'ಕಾಂ ಗ್ರೆಸ್' ಅಲ್ಲವೆನ್ನುವವರೆಲ್ಲರೂ ಕಾಂಗ್ರೆಸ್ ನಿಬಂಧನೆಯನ್ನು, ಅರ್ಥಾತ್ ಕಾಂಗ್ರೆಸ ನ್ನೇ ಅಲ್ಲಾಳಿಯುತ್ತಿದ್ದಾರೆಂಬುದು ಸ್ಪಷ್ಟ.

"ಕಾಂಗ್ರೆಸ್ ತನ್ನ ಉಮೇದ್ವಾರಿಯ ನ್ನು ನೇಮಿಸುವಾಗ ಇಂತಿಂತಹ ವಿಷಯ ವನ್ನ ನೋಡಿಕೊಳ್ಳಬೇಕು" ಎಂದು ಜೀಳುವ ಅಂಶಗಳೆಲ್ಲವನ್ನೂ 'ಇಂತಹ ವಾಯಿದೆಯೊಳಗೆ ಹೇಳಬೇಕು' ಎಂದಿದ್ದ ಗಡಿಯೊಳಗೇನೇ ಜೀಳಿ ಮುಗಿಸಬೇಕ; ಆ ಗಡಿ ದಾಟಿದ ಮೇಲೆ ಮತ್ತೆ ಕಾಂಗ್ರೆಸಿ ನ ಅಧಿಕೃತ ಪ್ರತಿನಿಧಿ ಆಲ್ಲಿ ಯಾರಿರುವ ರೋ ಆವರನ್ನು ಸಮರ್ಥಿಸುವ ಮೂಲ ಕ ಕಾಂಗ್ರೆಸ್ಸನ್ನು ಸಮರ್ಥಿಸಬೇಕು. ಕಾಂ ಗ್ರೆಸ್ ಬೇಕು ಎಂಬ ಆಸೆ ಯಾರಲ್ಲಿದೆ ಯೋ, ಅವರೆಲ್ಲರೂ ಇಂತಹ ಶಿಸ್ತಿನ ಬಲದಿಂದಲೇ ಕಾಂಗ್ರೆಸ್ ಉಳಿಯಬೇಕ ಲ್ಲದೆ ಅನ್ಯಥಾ ಅಸಾಧ್ಯವೆಂಬುದನ್ನು ಸ್ವ ಸ್ವವಾಗಿ ತಿಳಿದಿರಬೇಕು ಹಿಂದಿನ ಮತ್ತು ಇಂದಿನ ದೂರು, ಆಕ್ಷೇಪಗಳನ್ನು ಮುಂ ದಿಡಲಾಗುವ ಕ್ಷೇತ್ರ ಮತ್ತು ಸಂದರ್ಭ ಗಳು ಮತದಾರರಿಗೆ ಇನ್ನು ಮುಂದಕ್ಕೂ ದೊರೆಯಲಿವೆ. ಆದರೆ, ಅವರು ಈಗ ಕಾಂ ಗ್ರೆಸಿಗೆ ಮತಕೊಡುವ ಮೂಲಕ ತಮ್ಮ ಕರ್ತವ್ಯವನ್ನು ಸರಿಯಾಗಿ ನೆರವೇರಿಸಿ ಕೊಂಡ ಮೇಲೆಯೇ ಮಿಕ್ಕವರ ಕರ್ತವ್ಯ ಲೋಪಗಳ ಕುರಿತು ಪ್ರಶ್ನಿಸಲರ್ಹರು. ಈಗ ಬಂದಿರುವುದು ಮತದಾರರ ಕರ್ತವ್ಯ ಪಾಲನಾ ಸಂದರ್ಭ. ಈಗಿನ ಈ ಕರ್ತವ್ಯ ವನ್ನು ಮರೆತು ಅನ್ಯಥಾ ಯೋಚಿಸುತ್ತಿ ರುವುದಾಗಲಿ, ಅಥವಾ ವಿಚಾರಿಸುತ್ತಾ ವೈಮನಸ್ಯವು ವದು ಮಹಾಪರಾಧವೇ ಸರಿ. ಅನ್ಯರಿಂದ ಎಷ್ಟೋ ತಪ್ಪುಗಳಾಗಿರಬಹುದು; ಆಗ ದಿರಬಹುದು ಆ ಮಾತು ಈಗಲ್ಲ. ಅವುಗಳ ಚಿಂತನೆ ಆಥವಾ ನೆವನದಿಂದ ತಮ್ಮ ಸರದಿಬಂದಾಗ ಮತದಾರರು ತಪ್ಪು ಮಾಡಿಬಿಟ್ಟರೆ ಮಾತ್ರ ಕಾಂಗ್ರೆಸಿಗೆ ಮ ಹಾದ್ರೋಹ— ಆತ್ಮ ದ್ರೋ ಹ ದಂ ತಹ ಅಪರಾಧ— ಆಗುವದಂತೂ ಖಂ ಡಿತ.

ಮತದಾರರಿಂದ ಅಂತಹ ತಪ್ಪುಗಳಾಗ ದಿರಲಿ. ಅವರೆಲ್ಲರೂ ಕಾಂಗ್ರೆಸಿನ ಹಿಂದೆ ನಿಲ್ಲಲಿ. ಕಾಂಗ್ರೆಸ್ ಉಮೇದ್ವಾರಿಗಳಿಗೇ ನೇ ಮತ ತೊಡಲಿ. ಆ ಮೂಲಕ ಸ್ವತಃ ತಮ್ಮ ಹಿತಸಾಧನೆ ಮಾಡಿಕೊಳ್ಳುವ, ಹಾ ಗೂ ರಾಷ್ಟ್ರದ ಸೇವೆ ನಲ್ಲಿಸುವ ಸುಯೋ ಗವು ಈಗ ತಾನೇ ಮತದಾರರಿಗೊದಗಿದೆ.

ಇದೇನೂ ಸಣ್ಣ ಭಾಗ್ಯವಲ್ಲ. ಕಾಂಗ್ರೆ ಸನ್ನು ಬಲಗೊಳಿಸುವ ಇಂತಹ ಸಂದರ್ಭ ಗಳು ಬೇರೆಬೇರೆ ರೀತಿಯಿಂದ ಒದಗಿದಾ ಗಲೆಲ್ಲಾ ತಂತಮ್ಮ ಯೋಗ್ಯತಾನುಸಾರ ಪ್ರಾಣ ಬಲಿದಾನ ಮಾಡಿದವರ-ಅಪಾರ ತ್ಯಾಗ, ನಷ್ಟ ನಷ್ಟ ಸಹನೆ ಮಾಡಿದವರ-ಪುಣ್ಯಸ್ಮರಣೆ ನಮಗಿದೆ. ಅಂತಹ ಕಾಂ ಗ್ರೆಸಿಗಾಗಿ ಕೇವಲ ವೋಟು ಕೊಡಬೇ ಕಾದ ಅನಾಹಾಸಕರ ಸುಸಂದರ್ಭವೊ ದಗಿರುವಾಗ, ಅದನ್ನಷ್ಟೇ ಕೊಟ್ಟು, ಆ ಮೂಲ್ಯ ಚರಿತ್ರೆಯುಳ್ಳವರೆಲ್ಲಾ ಸೇರಿರು ವ ಆ ಕಾಂಗ್ರೆಸ್‌ಭಕ್ತರ ಪಂಕ್ತಿಯಲ್ಲಿ ಕ-ವೂ ಸೇರಿಕೊಳ್ಳಲು ಮತದಾರರು ಹಿಂದಿರಿದಾರೆ! ಎಷ್ಟಕ್ಕೂ ಹಿಂದಿರಿಯ ಲಾರರು. ಅವರ ವೋಟು ಕಾಂಗ್ರೆಸ್ಸಿಗಿ ದಲಿ.

ಜೈ ಹಿಂದ್!

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಚುನಾವಣೆಯ—

ಸಾರ್ವಜನಿಕ ಭಾವಾಂದೋಲನ ನಿ ರ್ಮಾಣಕ್ಕೂ, ಯುಕ್ತಿ, ಒಳಸಂಚು, ಕ ಪಟ ನಾಟಕಗಳನ್ನಾಡುವುದಕ್ಕೂ ಚುನಾ ವಣೆಯಲ್ಲಿರುವಷ್ಟು ಅವಕಾಶವು ಪ್ರಾಯ ಶಃ ಬೇರಾವುದರಲ್ಲೂ ಇರಲಾರದು. ಅದು ಮುಖ್ಯತಃ ಮತದಾರರ ಮನಸ್ಸು ಹೇಗಿ ದೆ ಎಂಬುದನ್ನು ಪರೀಕ್ಷಿಸುವ ಸಂದರ್ಭ. ಆದರೆ ಜನತೆಯಲ್ಲೇ ಹಲವರ ಯೋಗ್ಯತಾ ಪರೀಕ್ಷೆ, ಹೃದಯ ಪರೀಕ್ಷೆಗಳು ವಿಶೇಷ ರೀತಿಯಿಂದಾಗಿಬಿಡುತ್ತವೆ. ಚುನಾವಣೆಗೆ ಮೊದಲು ಒಬ್ಬ ಮನುಷ್ಯನ ಕುರಿತು ಕ ಟ್ಟಿಕೊಂಡಿದ್ದ ಭಾವನೆಗಳೇ ಚುನಾವ ಣಾನಂತರ ಸೂರ್ಣ ಬದಲಾಗಿ, ಅತನ ನ್ನು ಬೇರೆ ದೃಷ್ಟಿಯಿಂದ ನೋಡಬೇ ಕಾಗುವಂತಹ ಸಂದರ್ಭಗಳೊದಗುತ್ತವೆ. ಲೌಕಿಕ ವ್ಯವಹಾರ ಚಾತುರ್ಯ, ದೂರದೃಷ್ಟಿ, ಪ್ರಸಂಗಾವಧಾನತೆ, ಸೂ ಕ್ಷ್ಮ ಬುದ್ಧಿಗಳ ನಿದರ್ಶನಗಳು ಬೇಕಾಗಿ ದ್ದರೆ ಚುನಾವಣಾಂದೋಲನಗಳ ಕಡೆಗೆ ದೃಷ್ಟಿ ಹರಿಸಬೇಕು. ಅಸಾಧಾರಣ ತಾಳ ಲಾಟೆ, ಒತ್ತಡಗಳಿಗೆ ಸಿಕ್ಕಿಬೀಳುವ ಮತ ದಾರರು ಅಜಲರಾಗಿರಬೇಕಾದರೆ,ಅವರಲ್ಲಿ ಕಚ್ಚಿನ ದೃಢಬುದ್ಧಿ ಮತ್ತು ಸ್ಪಷ್ಟ ಧೋ ರಣೆಯಿರಬೇಕು. ಅವರನ್ನು ಮುನ್ನಡೆಸು ವವರಲ್ಲಿ ಬಿರುಗಾಳಿಯ ನಡುವೆ ನಾವೆಯ ನ್ನು ನಡೆಸುವಂತಹ ನಾವಿಕನ ಸ್ಥಿಲ ರ್ಯವೇ ಇರಬೇಕು.

೦೦ ೦೦ ೦೦

ಎನಿಲ್ಲೆಂದರೂ ಈ ತನಕ ರಾಷ್ಟ್ರದ ಚುನಾವಣಾರಂಗದಲ್ಲಿ ಮಿಕ್ಕೆಲ್ಲಾ ಪಕ್ಷ ಪಂಗಡಗಳಿಗಿಂತ ಕಾಂಗ್ರೇಸೇ ಅತ್ಯಂತ ಮುಂಚೂಣಿಗದಲ್ಲಿದೆ. ಇದು ಸಹಜ, ಸ್ವಾ ಭಾವಿಕ; ಆಶ್ಚರ್ಯಕರ ವಿಜಯ ವಲ್ಲ; ಇದಕ್ಕಾಗಿ ಅತಿಯಾಗಿ ಹಿಗ್ಗ ಳಿಕೆ ಪಡಬೇಕೆಂದಿಲ್ಲ. ಆದರೆ ಈಬಾರಿಯ ಚುನಾವಣೆಗಳಲ್ಲಿ ಅಲ್ಲೊಂದೆಡೆ, ಇಲ್ಲೊಂ ದೆಡೆ ಕಾಂಗ್ರೆಸು ಸೋಕುತಿದ್ದರೆ, ಆ ಕಡೆ ಗೆ ಮಾತ್ರ ಹೆಚ್ಚಿನ ಲಕ್ಷ್ಯ ಕೊಡಬೇ ಕಾದುದು ಅಗತ್ಯ. ನುದ್ರಾಸ್ ಪ್ರಾಂತ್ಯ ದ ಆಂಧ್ರ ಮತ್ತು ತಮಿಳು ನಲಯದಲ್ಲಿ ಜಿಲ್ಲಾ ಬೋರ್ಡು ಚ ನಾವಣೆಗಳಿಗಾಗ ನ ಡೆದು ಮುಗಿದಿವೆ. ಹೊಸತಾಗಿ ಚು ನಾಯಿಸಲ್ಪಟ್ಟ ಜಿಲ್ಲಾ ಬೋರ್ಡುಗಳು ಪ್ರಥಮ ಸಭೆ ಸೇರಿ, ಅಧ್ಯಕ್ಷ ಉಪಾಧ್ಯಕ್ಷ ರನ್ನು ಚುನಾಯಿಸಿಕೊಳ್ಳುವ ಸಂಬಂಧದ ಗದ್ದಲಗಳು ಕೇಳಿಬರುತ್ತಿವೆ. ಮಲಬಾರು ಮತ್ತು ದಕ್ಷಿಣಕನ್ನಡ, ಇವೆರಡು ಜಿಲ್ಲಾ ಗಳಲ್ಲಿ ಸ್ವರ್ಧೆಗಳಿರುವ ಸ್ಥಾನಗಳಿಗೆ ಚುನಾ ವಣೆಗಳು ಇದೇತಿಂಗಳ ತಾ 26ನೇ(ನೋವಾ ವಾರ ನಡೆಯಲಿವೆ. ಆ ಮೇಲೆಈ ಜಿಲ್ಲಾ ಬೋರ್ಡುಗಳ ಅಧ್ಯಕ್ಷ,ಉಪಾಧ್ಯಕ್ಷರ ಚು ನಾವಣೆಗಳಾಗಬೇಕು. ಬೊಂಬಾಯಿ, ಮ ದ್ರಾಸ್, ಗುಂಟೂರುಗಳಂತಹ ಅಲ್ಲಲ್ಲಿಯ ನಗರ ಸಭೆಗಳಿಗೂ ಉಪಚುನಾವಣೆಗಳು ಹಾಗೂ ಚುನಾವಣೆಗಳು ಆಗಿವೆ. ಪಶ್ಚಿಮ ಬಂಗಾಳದ ಪ್ರಾಂತಿಕ ಎಸೆಂಬ್ಲಿಯ ಸಾ ರ್ವತ್ರಿಕ ಚುನಾವಣೆಯು ಬರುವ ಜನವ ರಿ ತಿಂಗಳಿಗೆ ನಡೆಯುವದೆಂದು ನಿಶ್ಚಿಯ ವಾಗಿದೆ. ಅಂತೆಯೇ ಈಗ ಮುಖ್ಯತಃ ಫೆ ಟನಾ ಸಮಿತಿಯೂ ಆಗಿದ್ದು ಕೆಲಸ ಮಾ ಡುತ್ತಿರುವ ಭಾರತದ ಕೇಂದ್ರ ಶಾಸನ ಸಭೆಯನ್ನು, ಫೆಟನಾ ಕಾರ್ಯ ಮುಗಿ ದೊಡನೆ ಬರ್ಖಾಸ್ತುಪಡಿಸಿಕೊಂಡು ಬರು ವ ಜನವರಿಯೊಳಗೆ ಪ್ರಾಂತಿಕ ಶಾಸನ ಸ ಭೆಗಳ ಮೂಲಕವೇ ಹೊಸತಾಗಿ ಚುನಾ ಯಿಸಿಕೊಳ್ಳಲಾಗುವದೆಂದೂ ತಿಳಿದುಬಂ ದಿದೆ. ಆ ಮೇಲೆ 1951ಕ್ಕೆ ಹೊಸ ರಾ ಜ್ಯ ಶಾಸನದನ್ವಯ ಪಾರ್ಲಿಮೆಂಟನ ಮ ತ್ತು ಎಲ್ಲಾ ಪ್ರಾಂತಿಕ ಶಾಸನ ಸಭೆಗಳ ಮ ಹಾ ಚುನಾವಣೆಯು ಪ್ರಾಯಸ್ಥರ ಮ ತದಾನವನ್ನಾಧರಿಸಿ ನಡೆಯುಲಿದೆ ಅಂ ತೂ ಇನ್ನೂ ಮುಂದಿನದು ಭಾರತದ ಒಳ ರಂಗದಲ್ಲಿ ಚುನಾವಣೆಯ ಕಾಲ. ಮತದಾ ರರು, ಆರ್ಥಾತ್ ಸಾರ್ವಜನಿಕರು ತಮ್ಮ ಹೊಣೆಗಾರಿಕೆಗಳನ್ನು ನಿರ್ವಹಿಸಬೇಕಾಗಿ ರುವ ಅವಧಿ ಈ ಗಡಿಗೆ ಪ್ರವೇತಿಸಿರುವ ನಾವು, ಈಗಿನ ಚುನಾವಣೆಗಳಲ್ಲಾಗಿರುವ ಕೆಲವು ವಿಶೇಷ ಘಟನೆಗಳ ಕುರಿತು ಸಾಕ ಷ್ಟು ಲಕ್ಷ್ಯ ಹರಿಸಿ, ಅವುಗಳಿಂದ ಕಲಿತು ಕೊಳ್ಳಲಿಚ್ಛಿಸುವ ಅಂಶಗಳನ್ನು ಮಂದಟ್ಟು ಮಾಡಿಕೊಳ್ಳಬೇಕಾದುದು ಅಗತ್ಯ.

೦೮ ೦೦ ೦೦

ಮದ್ರಾಸ್ ಪ್ರಾಂತ್ಯದಲ್ಲಿ ಇಪ್ಪತ್ತೆರಲ್ಲೇ ನಡೆದು ಮುಗಿದಿರುವ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಕಾಂಗ್ರೆಸ್ಸೇ ಬಹುಮತ ಪಡೆದು ಗೆದ್ದು ಬಂದಿದೆ. ದಕ್ಷಿ ಣ ಕನ್ನಡವ ತ್ತು ಮಲಬಾರು ಜಿಲ್ಲೆಗಳ ಚುನಾವಣೆಗಳು ಇದಕ್ಕಪವಾದವಾಗು ವಂತಿಲ್ಲವೆಂಬುದ. ಈಗಲೇ ಖಚಿತ. ಒಂದೇ ಒಂದು ಅಸಾಧಾರಣವೆಂದರೆ ತ ಮಿ ಳು ನಾ ಡಿನ ತಿರುಚಿನಾಪಳ್ಳಿ ಜಿ ಲ್ಲೆ ಯ ದು. ಅಲ್ಲಿಯ ಬೋ ರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಉ ಮೇದ್ವಾರಿಗಳಿಗಿಂತ ಅಧಿಕ ಸಂಖ್ಯೆಯಲ್ಲಿ ಸ್ವತಂತ್ರ ಉಮೇದ್ವಾರಿಗಳು ಗೆದ್ದು ಬಂ ದಿದ್ದಾರೆ ಕೆಲವು ಗಣ್ಯ ಕಾಂಗ್ರೆಸಿಗರು

THE

PANGAL NAYAK BANK, LTD..

Head Office: UDIPI

SAVE FOR THE FUTURE.

SEASON DEPOSITS terminable on or before 30—6—1960 are accepted from 1—10—1949 at the following rates:

For 3, 4 or 5 months at 3 % p. a.
For 6, 7 or 8 months at 3½% p. a.

Invest in our 3 YEAR CASH CERTIFICATES yielding interest at about 4½% p. a.

For particulars please contact any of our Branch offices.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ.

ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ಶುಭ್ರ ಮಾಡುತ್ತವೆ.

ವಿಳಾಸ:-

ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ್, ಉಡುಪಿ.

——ವಿಶೇಷ ಘಟನೆಗಳು

ಸ್ಥಾನ ಕಳಕೊಂಡಿದ್ದಾರೆ. ಈ ಅಸಜಯಕ್ಕಾಗಿ ಲಜ್ಜಿಸಿ, ತಿರುಚಿಯಪ್ಪಳ್ಳಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರು ರಾಜೀನಾಮೆಯಿತ್ತಿದ್ದಾರೆ. ತಮಿಳು ನಾಡು ಪ್ರಾಂತೀಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ. ಕಾಮರಾಜ ನಾದರರು ತಿರುಚಿನಾಪಳ್ಳಿಗೆ ಬಂದು ಚುನಾವಣೆಯಲ್ಲಿ ಕಾಂಗ್ರೆಸಿಗಾದ ಜಯಾಪಜಯಗಳ ಕಾರಣಗಳನ್ನು ಪರಿಶೀಲಿಸಿದರಲ್ಲದೆ, ಸ್ವತಂತ್ರ ಸದಸ್ಯರ ಬೆಂಬಲ ದೊರಕಿಸಿಕೊಂಡು ಬೋರ್ಡು ಅಧ್ಯಕ್ಷ ಸ್ಥಾನವನ್ನಾದರೂ ಕಾಂಗ್ರೆಸಿಗೆ ದೊರಕಿಸಿ ಕೊಳ್ಳಬೇಕೆಂಬ ಪ್ರಯತ್ನವನ್ನೂ ಮಾಡಿದಂತಿದೆ. ಆದರೆ ಸ್ವತಂತ್ರವಾಗಿ ಆರಿಸಲ್ಪಟ್ಟ ಸದಸ್ಯರು ತಾವೆಲ್ಲಾ ಒಂದು ಪಕ್ಷವಾಗಿ ಸಂಘಟನೆಗೊಂಡು, ಕಾರ್ಯಕಾರೀ ಮಂಡಲಿಯನ್ನು ಆರಿಸಿಕೊಂಡಿದ್ದಾರೆ. ಈ ಸ್ವತಂತ್ರ ಪಕ್ಷವು ಅಧ್ಯಕ್ಷಸ್ಥಾನಕ್ಕೆ ತನ್ನ ಉಮೇದ್ವಾರಿಯನ್ನು ನಿಲ್ಲಿಸಲಿದೆ.

೦೦ ೦೦ ೦೦

ಇನ್ನೊಂದು—ಆಂಧ್ರ ಪ್ರಾಂತ್ಯದ ಗುಂಟೂರು ಮುನ್ಸಿಪಲ್ ಚುನಾವಣೆ. ಇಲ್ಲಿಯ ಚುನಾವಣೆಯಲ್ಲಿಯೂ ಕಾಂಗ್ರೆಸಿಗರಿಂತ ಸ್ವತಂತ್ರರು ಮೇಲಾಗಿದ್ದಾರೆ. ಆಂಧ್ರ ನಾಯಕ ಶ್ರೀ ಟಿ. ಪ್ರಕಾಶಮರ ಮಾತಿನ ಮೇಲಿಂದ ಇದರ ಆಪೋಷ ಮದ್ರಾಸಿನ ಮಂತ್ರಿಗಳ ಮೇಲೂ ಬಿದ್ದಿದೆ. ಆಂಧ್ರ ಪ್ರಾಂತೀಕ ಕಾಂಗ್ರೆಸ್ ಮತ್ತು ಹೆಚ್ಚಿನ ಕಾಂಗ್ರೆಸ್ ಉಪಸಮಿತಿಗಳು ಶ್ರೀ ಟಿ. ಪ್ರಕಾಶಮ್ ಪಕ್ಷಪಾತಿಗಳಿವೆ. ಪ್ರಕಾಶಮರು ಇಂದಿನ ಮದ್ರಾಸ್ ಮಂತ್ರಿ ಮಂಡಲದ ಇದಿರುವಾದಿ. ಗುಂಟೂರಿನ ಮುನ್ಸಿಪಾಲಿಟಿಯಲ್ಲಿ ಕಾಂಗ್ರೆಸ್ ಉಮೇದ್ವಾರಿಗಳು ಗೆಲ್ಲುವ ದೆಂದರೆ ತಕ್ಕು ಇದಿರಾಳುಪ್ರಕಾಶಂ ವಪ್ಪಿಯರು ಗೆದ್ದಂತೆ ಎಂಬ ಭಾವನೆಯಿಂದ ಮದ್ರಾಸಿನ ಕೆಲವು ಮಂತ್ರಿಗಳ ಬೆಂಬಲವು ಅಲ್ಲಿಯ ಸ್ವತಂತ್ರ ಉಮೇದ್ವಾರಿಗಳಿಗಿತ್ತೆಂದು ಪ್ರಕಾಶನರು ಆರೋಪ. ಮದ್ರಾಸ್ ಮಂತ್ರಿಗಳ ಮೇಲಿನ ತನ್ನ ಆಪಾದನೆಗಳಲ್ಲಿ ಇದನ್ನೂ ಒಂದಾಗಿ, ತಾನು ಗಣಿಸುತ್ತೇನೆಂದು ಶ್ರೀ. ಟಿ. ಪ್ರಕಾಶಮಂಗಾ ಸಾರಿದ್ದಾರೆ ಇದರ ಸತ್ಯಸ್ಥಿತಿಯೇನು, ಎಂಬುದನ್ನು ಊಹಿಸುವುದು ಕಷ್ಟ. ಕಾಂಗ್ರೆಸ್ ಮಂತ್ರಿಗಳಾಗಿದ್ದವರು, ಯಾವ ಕಾರಣಕ್ಕಾಗಿಯಾದರೂ ಕಾಂಗ್ರೆಸ್ ಉಮೇದ್ವಾರಿಗಳ ವಿರುದ್ಧವಾಗಿ ಕೆಲಸ ಮಾಡಲು ಸಾಧ್ಯವಿದೆಯೆ? ಇದೂ ಸಾಧ್ಯವೆಂದಾದರೆ ಇನ್ನು ಕಾಂಗ್ರೆಸ್ ಕಾರ್ಯಕ್ಷೇತ್ರದಲ್ಲಿ ಅಸಾಧ್ಯವಾದುದಾವುದು? ಈಗ ಗುಂಟೂರು ನಗರ ಸಭೆಯ ಅಧ್ಯಕ್ಷರ ಚುನಾವಣೆಯೂ ನಡೆದು ಸ್ವತಂತ್ರ ಉಮೇದ್ವಾರಿಗೆ 18, ಕಾಂಗ್ರೆಸ್ ಉಮೇದ್ವಾರಿಗೆ 13 ಮತಗಳು ದೊರೆತು ಸ್ವತಂತ್ರ ಉಮೇದ್ವಾರಿಯೇ ಗೆದ್ದು ಬಂದಿದ್ದಾರೆ.

೦೦ ೦೦ ೦೦

ಚುನಾವಣೆಗೆ ಸಂಬಂಧಿಸಿದ ಕೆಲವು ವಿಶೇಷವಾರ್ತೆಗಳೂ ಕೇಳಿ ಬರುತ್ತಿವೆ. ತಿರುಚಿನಾಪಳ್ಳಿ ಜಿಲ್ಲೆಯಲ್ಲಿ ಕಾಂಗ್ರೆಸಿಗಾದ ಸೋಲನ್ನು ನಿವಾರಿಸಿಕೊಳ್ಳಬೇಕೆಂದು, ಮದ್ರಾಸ್ ಸರಕಾರವು ಹೆಂಚಿಕೆ ಹೂಡಿದೆಯೆಂದೂ, ಅದಕ್ಕಾಗಿ ಇತ್ತೀಚೆಗೆ ಪ್ರಾಂತ್ಯದೊಂದಿಗೆ ವಿಲೀನಗೊಂಡ ಪುದುಕೋಟೆ ಸಂಸ್ಥಾನದ ಪರವಾಗಿ ಕೆಲವು ಸದಸ್ಯರನ್ನು ಸ್ವತಃ ತಿರುಚಿ ಜಿಲ್ಲಾ ಬೋರ್ಡಿಗೆ ನೇಮಿಸಿಕೊಂಡು ಮದ್ರಾಸ್ ಸರಕಾರವು ಕಾಂಗ್ರೆಸ್ ಪಕ್ಷೇತರ ಸಂಖ್ಯೆಯನ್ನು ಹೆಚ್ಚಿಸಲು ಏರ್ಪಾಡಿಸಿದೆಯೆಂದೂ ಕೆಲವು ಪತ್ರಿಕೆಗಳು ಪ್ರಕಟಿಸಿದ್ದುವು. ಆದರೆ ಮದ್ರಾಸ್ ಸರಕಾರವು ಇಂತಹ ಬಯಕೆ ತನಗಿಲ್ಲವೆಂದೀಗ ಸ್ಪಷ್ಟವಾಗಿ ಜಾಹೀರು ಮಾಡಿದೆ. ಮಧುರಾ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ ಪರವಾಗಿ ಆರಿಸಲ್ಪಟ್ಟಿದ್ದ ಶ್ರೀಮತಿ ವೇಳಮ್ಮಾಳ್ ಎಂಬವರು ಇದೇ ತಾ. 15ರಲ್ಲಿ ತನ್ನ ಮನೆಯಲ್ಲೇ ಮೃತರಾಗಿ ಬಿದ್ದಿದ್ದುದು ಕಂಡು ಬಂದಿದೆ ಕಾರಣವೇನೆಂಬುದು ಗೊತ್ತಾಗಿಲ್ಲ; ಪರಿಶೋಧನೆ ನಡೆದಿದೆ. ತಿರುಚೂರಿನಲ್ಲಿ ಚುನಾವಣಾ ಸಂಬಂಧವಾಗಿ ಹೊಡೆದರೆಂದು ಇಬ್ಬರು ಕಮ್ಯೂನಿಸ್ಟ್ ಕೆಲಸಗಾರರ ದಸ್ತಗಿರಿಯಾದ ವಾರ್ತೆಯಿದೆ. ಎರಡು ಕಡೆ ಚುನಾವಣೆಯಲ್ಲಿ ಗೆದ್ದ ಉಮೇದ್ವಾರಿಗಳ ಸದಸ್ಯತನ ರದ್ದತಿಗಾಗಿ ದಾವೆಗಳು ದಾಖಲಾಗಿವೆ. ಗಲಭೆಗಂಜ ಅಲ್ಲಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿದ್ದಿತು. ಬೆಳಕಿಗೆ ಬೀಳದ ಉದ್ವೇಗಾವೇಶ ಜನ್ಯ ಘಟನೆಗಳು ಬಹಳ ವಿರಬಹುದು. ಚುನಾವಣೆಯೆಂದರೇನೇ ಹೀಗೆ; ಎಲ್ಲಾ ವಿಧದಿಂದಲೂ ರಕ್ಕಮತ್ತು ಮೆದುಳನ್ನು ಬಿಸಿಯೇರಿಸುವಂತಹ ಒಂದು ಆಟ.

೦೦ ೦೦ ೦೦

ಕೆಳದ ವಾರ ನಡೆದು ಫಲಿತಾಂಶ ಪ್ರಕಟವಾಗಿರುವ ಬೊಂಬಾಯಿ ಕೋರ್ಪರೇಶನಿನ ನಾಲ್ಕು ಸ್ಥಾನಗಳ ಉಪಚುನಾವಣೆಯು ನಿಜಕ್ಕೂ ಆಲೋಚನೆಯನ್ನು ಕೆರಳಿಸುವಂತಹದು; ಕಾಂಗ್ರೆಸಿಗರ ಕಣ್ಣನ್ನು ತೆರೆಯಿಸುವಂತಹದು. ಕಾಂಗ್ರೆಸಿನ ಭವಿಷ್ಯ ಪರೀಕ್ಷೆಯ ದೃಷ್ಟಿಯಿಂದ ಆ ಬಾರಿ ನಡೆದ ಬಂಗಾಳಾ ಎಸೆಂಬ್ಲಿಯ ಕಲ್ಕತ್ತಾ ಉಪಚುನಾವಣೆಗಿಂತಲೂ ಬೊಂಬಾಯಿಯ ಈ ಉಪಚುನಾವಣೆಗಳಿಗೆ ವಿಶೇಷ ಪ್ರಾಮುಖ್ಯತೆಯಿದೆ. ನಾಲ್ಕು ಮಂದಿ ಕಮ್ಯೂನಿಸ್ಟ್ ಮುನ್ಸಿಪಲ್ ಸದಸ್ಯರು ತಮ್ಮ ಸದಸ್ಯತನದ ಹಕ್ಕನ್ನು ಕಳಕೊಳ್ಳುವಂತಾಗುವ ವರೆಗೂ, ನಗರ ಸಭಾ ಮೀಟಿಂಗುಗಳಿಗೆ ಗೈರು ಹಾಜರಾದುದರಿಂದ ಬೊಂಬಾಯಿ ಕೋರ್ಪರೇಶನಿನ ನಾಲ್ಕು ಸ್ಥಾನಗಳು ಖಾಲಿ ಬಿದ್ದಿದ್ದುವು. ದಿಗ್ಬಂಧನಕ್ಕೊಳಗಾಗಿ ಅಥವಾ ವಾರಂಟನ್ನು ತಪ್ಪಿಸಿಕೊಳ್ಳುವುದಕ್ಕಾಗಿ ತಲೆ ಮರೆಸಿಕೊಂಡಿರುವುದರಿಂದ ಈ ನಾಲ್ವರು ಕಮ್ಯೂನಿಸ್ಟರು ಅನುಕ್ರಮವಾಗಿ ಗೈರು ಹಾಜರಾಗಬೇಕಿದ್ದಿತು. ಆ ಸ್ಥಾನಗಳಿಗೆ ನಡೆದ ಉಪಚುನಾವಣೆಗಳಲ್ಲಿ ನಾಲ್ಕು ಸ್ಥಾನಗಳಲ್ಲೂ ಕಾಂಗ್ರೆಸಿಗರು, ಸಮತಾವಾದಿಗಳು ಮತ್ತು ಕಮ್ಯೂನಿಸ್ಟರು ಸ್ಪರ್ಧಿಸಿಕೊಂಡಿದ್ದರು. ಒಂದು ಸ್ಥಾನಕ್ಕೆ ದಕಿತ ವರ್ಗದ ಸಂಸ್ಥೆಯ ಉಮೇದ್ವಾರಿಯೂ ನಿಂತಿದ್ದರು. ಈ ನಾಲ್ಕು ಸ್ಥಾನಗಳಲ್ಲೂ ಸಮತಾವಾದಿಗಳೇ ಗೆದ್ದು ಬಂದಿದ್ದಾರೆ. ಸೋತಿಯಾಲಿಸ್ಟರಿದಿರು ಕಮ್ಯೂನಿಸ್ಟರಂತೆಯೇ ಕಾಂಗ್ರೆಸಿಗರೂ ಸೋಲಬೇಕಾಗಿ ಬಂದಿದೆ. ಬೊಂಬಾಯಿ ನಗರದಲ್ಲಿ ಕೆಲಕಾಲದಿಂದ ಬೊಂಬಾಯಿ ಎಸೆಂಬ್ಲಿ ಮತ್ತು ಕೋರ್ಪರೇಶನುಗಳಿಗೆ ನಡೆದ ಉಪಚುನಾವಣೆಗಳಲ್ಲಿ ಅನುಕ್ರಮವಾಗಿ ಕಾಂಗ್ರೆಸು ಸಡೆಯುತ್ತಾ ಬಂದ ನಾಲ್ಕನೇ ಅಪಜಯವಿದು. ಈ ನಾಲ್ಕು ಬಾರಿಯೂ ಸೋತಿಯಲಿಸ್ಟ್ ಪಕ್ಷೇತರೇ ಗೆದ್ದರು. ಈ ಬಾರಿಯ ಕೋರ್ಪರೇಶನ್ ಉಪಚುನಾವಣೆಯಲ್ಲಿ ಕೋರ್ಪರೇಶನಿನ ಮೇಯರರೂ, ಬೊಂಬಾಯಿ ಪ್ರಾಂತೀಕ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆಗಿರುವ ಶ್ರೀಯುಸ್. ಕೆ. ಪಾಟೇಲರು ತನ್ನ ಮೇಯರ್ ಸ್ಥಾನೋಚಿತವಾದ ನಿಷ್ಪಕ್ಷಪಾತತೆ ಮತ್ತು ತಾಟಸ್ಥ್ಯದ ನಿಯಮ ಮೀರಿ ಕಾಂಗ್ರೆಸ್ ಉಮೇದ್ವಾರಿಗಳ ಪರವಾಗಿ ಕೆಲಸ ಮಾಡಿದ್ದರಿಂದು ಕೋರ್ಪರೇಶನಿನಲ್ಲಿ ಸಮತಾವಾದಿ ಸದಸ್ಯರು ಆವರ ಮೇಲೆ ಅವಿಶ್ವಾಸ ಸೂಚನೆ ತಂದಿದ್ದರು. ಆದರೆ ಅದು ಬಿದ್ದು ಹೋಯಿತು.

೦೦ ೦೦ ೦೦

ಅಂತೂ ರಾಷ್ಟ್ರದ ಅಲ್ಲಲ್ಲಿ ನಡೆದ ಚುನಾವಣೆ, ಉಪಚುನಾವಣೆಗಳ ಫಲಿತಾಂಶಗಳ ಮೇಲಿಂದ ಸಾರ್ವಜನಿಕರೀಗಲೂ ಕಾಂಗ್ರೆಸಿನ ಹಿಂದಿದ್ದಾರೆ, ಎಂಬುದು ಕಂಡು ಬಂದಿದೆ. ಇದೇ ರೀತಿ ಚುನಾವಣಾಕಾರ್ಯಕಲಾಪಗಳ ಕುಂದುಕೊರತೆಗಳು ಯಥಾಪ್ರಕಾರ ಈಗಲೂ ಉಳಿದಿರುವದೂ ತೋರಿಬಂದಿದೆ. ಮೇಲಾಗಿ ಈ ಬಾರಿ ನಡೆದ ಎಲ್ಲಾ ಚುನಾವಣೆಗಳೂ ಸುಮಾರು ಹತ್ತು ಪರುಷಗಳ ಹಿಂದೆಯೇ ತಯಾರಾಗಿದ್ದ ನಿಯಮಿತ ಮತದಾರರ ಪಟ್ಟಿಯನ್ನಾಧರಿಸಿ ನಡೆದವುಗಳೇ ಹೊರತು ಹೊಸ ಪಟ್ಟಿಯನ್ನಾಯ್ದೆಯ ಪ್ರಾಯಸ್ಥರೆಲ್ಲರ ಮತದಾನದಿಂದ ನಡೆಯಲಿರುವ ಭಾವೀ ಮಹಾ ಚುನಾವಣೆಯ ಫಲಿತಾಂಶಗಳ ಕಿರುಬಿಂಬಗಳೆಂದು ಈಗಿನ ಚುನಾವಣಾ ಸರಿಣಾಮಗಳನ್ನು ಕಟ್ಟಿಕೊಳ್ಳುವುದು ಕಷ್ಟ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಪ್ರಾಶಸ್ತ್ಯರೆಲ್ಲರೂ ಭಾಗಿಗಳಾಗುವ ಭಾವೀ ಚುನಾವಣೆಗಳು ಇಂದಿಗಿಂತ ಹೆಚ್ಚಾಗಿ ಕಾಂಗ್ರೆಸಿಗೆ ಪ್ರತಿಕೂಲವಾಗಬಹುದೆಂದು ನಿರೀಕ್ಷಿಸಲಡ್ಡಿಯಿಲ್ಲ. ಬೊಂಬಾಯಿ ದಲ್ಲಿ ಇತ್ತೀಚೆಗೆ ಅನುಕ್ರಮವಾಗಿ ನಡೆದ ಮೂರು ನಾಲ್ಕು ಉಪ ಚುನಾವಣೆಗಳಲ್ಲೂ ಸಮತಾವಾದಿಗಳಿದಿರು ಕಾಂಗ್ರೆಸು ಸೋಲುತ್ತಾ ಬಂದುದರಲ್ಲಿ ವಿಶೇಷ ಆರ್ಥವಿದೆ. ಬೊಂಬಾಯಿಯು ಭಾರತದ ಹೃದಯ ಪ್ರದೇಶದಂತಿದೆ. ಅಲ್ಲಿಯ ಸ್ಪಂದನವು ದೇಶರೂಪೀ ದೇಹದಲ್ಲಿ ಪರಿಣಾಮ ಮಾಡುವಂತಹದು. ಆದ್ದರಿಂದಲೇ ಕಾಂಗ್ರೆಸಿನ ಎಲ್ಲಾ ಸ್ವಾತಂತ್ರ್ಯ ಹೋರಾಟಗಳೂ ಬಹುತೇಕವಾಗಿ ಬೊಂಬಾಯಿಯಲ್ಲೇ ಪ್ರಾರಂಭಿಸಲ್ಪಟ್ಟಿದ್ದುವು. ಅಂತಹ ಬೊಂಬಾಯಿಯಲ್ಲೇ ಸಮತಾವಾದಿಗಳ ವಿಜಯವಾರಂಭಿಸಿದ ಲಕ್ಷಣ ಕಾಣುತ್ತಿದೆ. ಇದು ರಾಷ್ಟ್ರ ವ್ಯಾಪಿಯಾಗುವ ಕಾಲ ಬಂಬಹುದು. ಭಾರತದ ಹಳ್ಳೀ ಮೂಲೆಗಳವರೆಗೆ ಮನೆಸ್ಸಿನಲ್ಲಿ ಒನ್ಮೆ ಕೆತ್ಕಲ್ಪಟ್ಟಿದನ್ನು ಸವರಿ ತೆಗೆದು, ಹೊಸತನು ಮೂಡಿಸುವುದು ಪ್ರಯಾಸದ ಕೆಲಸ. ಆದ್ದರಿಂದ ಹಳ್ಳಿಗರ ಕಾಂಗ್ರೆಸ್‌ನಿಷ್ಠೆಯನ್ನು ವಜಾಮಡಿಸಿ, ಸಮತಾವಾದಿ ಭಾವನೆಯನ್ನು ಮೊಳೆಯಿಸಲು ಸುಲಭದಿಂದಾಗದು. ಆದರೆ ದೊಡ್ಡ ದೊಡ್ಡ ನಗರಗಳಲ್ಲಿ ಈಗ ಕ್ರಮವಕ ಸಮತಾವಾದಿಗಳು ಪ್ರಬಲಿಸುತ್ತಾ ಬಂದಿದ್ದಾರೆ; ಚುನಾವಣೆಗಳಲ್ಲೂ, ಇತರ ಸಾರ್ವಜನಿಕ ರಂಗಗಳಲ್ಲೂ ಕಾಂಗ್ರೆಸ್ಸನ್ನು ಹಿಂದೆ ಹಾಕಲುರಂಭಿಸಿದ್ದಾರೆ. ಹೀಗೆಯೇ ಬೆಳೆದರೆ ನಗರಗಳ ಪ್ರಭಾವವು ಹಳ್ಳೀ ಮೂಲೆಗಳಿಗೂ ಬೀಳುತ್ತಾ ಹೋಗಿ ರಾಷ್ಟ್ರವಿಡೀ ಮಾರ್ಪಟಿಗೊಳ್ಳುವ ಕಾಲ ಸಹಜವಾಗಿ ಬರಬಹುದು. ಕಾಂಗ್ರೆಸಿನ ಗತಕಾಲದ ಪ್ರತಿಷ್ಠಾ ಭಂಡಾರವನ್ನು ವ್ಯಯಿಸುತ್ತಿರುವ ಇಂದಿನ ಕಾಂಗ್ರೆಸ್ ಕಾರ್ಯಕರ್ತರು ಈ ಕಡೆಗೆ ಕಣ್ಣು ಬಿಡಬೇಕಾದುದು ಅಗತ್ಯ.

ಮಂಗಳೂರು-ಪ್ರಬುದ್ಧ ಬಂದರಾಗಿ

ಇಂಡಿಯಾ ಸರಕಾರದಿಂದ ನೇಮಿಸಲ್ಪಟ್ಟ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ ಬಡಾವಣಾ [ಸಮಿತಿಗೆ, ಈ ವಿಷಯದ ನೋಲೆ, ತಜ್ಞರು ತಮ್ಮ ಅಭಿಪ್ರಾಯಗಳನ್ನೊಪ್ಪಿಸಿರುವರು

ಸಮಿತಿಯು ಯೋಗ್ಯ ತೀರ್ಮಾನಕ್ಕೆ ಬರುವುದೆಂಬ ವಿಷಯದಲ್ಲಿ ನಮಗೆ ಸಂದೇಹವಿಲ್ಲ

ಎಲ್ಲಾ ವಿಶಯಗಳನ್ನು ಪರ್ಯಾಲೋಚಿಸಿದಾಗ, ಮಂಗಳೂರೇ ಪ್ರಬುದ್ಧ ಬಂದರವಾಗಿ ಆರಿಸಲ್ಪಡುವುದೆಂದು ನಮ್ಮ ಭರವಸೆ

ಹಿಂದುಸ್ಥಾನದ ಸರ್ವತೋಮುಖ ಅಭಿವೃದ್ಧಿಗಾಗಿ

ಸದಾ ಸೇವೆ ಗೈಯುತ್ತಿರುವ,

ಕೆನರಾ ಬ್ಯಾಂಕ್, ಲಿಮಿಟೆಡ್.

ಇವರಿಂದ ಪ್ರಕಟಿಸಲ್ಪಟ್ಟಿದು

CANARA BANK, LIMITED

Estd: 1906

ಮೃತ್ಯುಸ್ರಾವ ನಿಂತಿತು

'ಲುಮಾರಾ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಪಪ್ಪಿ ಮೃತ್ಯುಸ್ರಾವವಾಗುವುದು ಸುಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಯೂ ಇರಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ 3.; ಸ್ಪೆಶ್ಯಲ್ ರೂ. 5.; ಅಧಿಕಾಧಿಕ ಸ್ಪೆಶ್ಯಲ್ ರೂ. 8-[ವಿ. ಪಿ. ಹೆಚ್ಚುವರಿಯಾಗಿ ಪ್ರತ್ಯೇಕ]

Mrs. D. DEVEE, F. D.S. (N. Y.)
Tollygunge CALCUTTA.

ಸ್ವಾಧಿಸ್ಥರು: ಶಹಾಕಂಪೆನಿ, ಮಂಗಳೂರು

ಅಂತರಾಷ್ಟ್ರೀಯ ವಹಿವಾಟುಗಳಲ್ಲಿ ಗಣ್ಯ ಹೊಸ ಮಾರ್ಪಾಟುಗಳನ್ನೂ ತೋರಿ ಬರುತ್ತಿಲ್ಲ. ಜಾಗತಿಕ ಮಹಾ ಘರ್ಷಣೆಗಳಿಗೆ ಹೇತುವಾಗಬಲ್ಲ ವಿವಾದಗಳಲ್ಲಿ ಕೆಲವಾದರೂ ಮುಂಬರುವ ಸಂಯುಕ್ತ ರಾಷ್ಟ್ರ ಕೂಟದ ಮಹಾಧಿವೇಶನದ ಕಾಲದಲ್ಲಿ ವಿಚಾರ ವಿನಿಮಯಕ್ಕೊಳಗಾಗುವ ಸಂಭವವಿದೆ. ಸತ್ಯ ಸ್ಥಿತಿಯೆಂದರೆ ಸ್ಪಷ್ಟ ರಾಜಕೀಯ ತಾಕಲಾಟಗಳಿಗಿಂತಲೂ ಬಿಗುವಾಗಿ ಆರ್ಥಿಕ ಬಿಕ್ಕಟ್ಟು ನಿಂತಿದೆ. ಭಾರತ-ಪಾಕಿಸ್ತಾನಗಳೊಳಗಿನ ಭಿನ್ನಾಭಿಪ್ರಾಯಗಳು ಇಂದು ಉದ್ವೇಗಜನಕರೂ ಪ್ರಾಂತಿನೆ. ರಶ್ಯ-ಯುಗೊಸ್ಲೇವಿಯಗಳೊಳಗಿನ ವಿವಾದದೊಳಗೆ ಹುಗಿದಿರುವ ಮುಹಾ ಘರ್ಷಣೆಯ ಸೂಚನೆಗಿಂತಲೂ ಹೆಚ್ಚಿನ ಭಯಸೂಚಕ ಚಿಹ್ನೆಯು ಇಂದಿನ ಭಾರತ-ಪಾಕಿಸ್ತಾನ್ ವಿವಾದದಲ್ಲಿ ಕಂಡುಬರುತ್ತಿದೆ.

ಜಾಗತಿಕ ರಂಗ

ಚೈನಾ ಯುದ್ಧವು ಯಥಾ ಪ್ರಕಾರ ಸಾಗಿದೆ; ಕಮ್ಯೂನಿಸ್ಟ್ ಸೇನೆಗಳು ತಾವು ಆರಂಭಿಸಿದ ಕೊನೆಯ ಮಹಾಪ್ರಾಕಾರದಲ್ಲಿ ವಿಜಯಗಳಿಸುತ್ತಾ ಮುಂದೊತ್ತಿವೆ. ಕಮ್ಯೂನಿಸ್ಟರ ಪ್ರಗತಿಯನ್ನು ತಡೆದು ನಿಲ್ಲಿಸಿದ್ದೇವೆಂದೂ, ಕೆಲವೆಡೆ ಮುನ್ನುಗ್ಗಿದ ಕೆಂಪು ಸೈನಿಕರು ವಿಶೇಷ ನಷ್ಟಕ್ಕೀಡಾಗಿ ಹಿನ್ನೆಟ್ಟಬೇಕಾಯಿತೆಂದೂ ಸಂಕಾರೀ ಹೇಳಿಕೆಯಿದೆ. ಚೈನದ ಕುರಿತು ತಾನಾವ ಘೋರಣೆ ಹಸಬೇಕೆಂದು ವಿಚಾರಿಸುವದಕ್ಕಾಗಿ ಆಹ್ವಾನಿಸಿದ್ದ ತನ್ನ ರಾಯಭಾರಿಯನ್ನು ಬ್ರಿಟಿಷ್ ಸರಕಾರವು ಲಂಡನಿಗೆ ಕರೆಯಿಸಿಕೊಂಡು ಮಾತಾಡಿದೆ.

ಬರ್ಮ ಮಿತ್ರರ ಕಡೆಗಳ ಹೋರಾಟಗಳು ಯಥಾಸ್ಥಿತಿಯಲ್ಲಿರುವುದರಿಂದ ಇತ್ತೀಚಿಗಿನ ದಿನಗಳಲ್ಲಿ ವಿಶೇಷ ವಾರ್ತೆಗಳಿಲ್ಲ.

ಸಂಯುಕ್ತ ರಾಷ್ಟ್ರ ಕೂಟದ ಮಹಾಧಿವೇಶನವು ಇದೇ ತಾ. 20ನೇ ಮಂಗಳವಾರದಿಂದ ನ್ಯೂಯೋರ್ಕಿನಲ್ಲಿ ಪ್ರಾರಂಭಿಸಿದೆ. ಜಾಗತಿಕ ಸಂಘದ ಹೊಸ ಅಧ್ಯಕ್ಷನ ಮತ್ತು ಭದ್ರತಾ ಕೌನ್ಸಿಲಿನ ನಾಲ್ಕು ಸ್ಥಾನಗಳ ಚುನಾವಣೆಗಳು ಈ ವಾರ ನಡೆಯಲಿವೆ. ಭದ್ರತಾ ಕೌನ್ಸಿಲಿನೊಂದು ಸ್ಥಾನಕ್ಕೆ ಭಾರತವು ಉಮೇದ್ವಾರಿಯಾಗಲಿದ್ದು ಪಾಕಿಸ್ತಾನದ ಆಕ್ಷೇಪಣೆಯಾದರೂ ಆದು ಆರಿಸಲ್ಪಡುವ ಸಂಭವವಿದೆ. ಇದೇ ಸಂದರ್ಭದಲ್ಲಿ ರಶ್ಯಾ, ಬ್ರಿಟನ್, ಅಮೆರಿಕ, ಫ್ರಾನ್ಸ್, ಈ ನಾಲ್ಕು ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನವೂ ನಡೆದು ಹಿಂದಿನ ಪ್ಯಾರಿಸ್ ಸಮ್ಮೇಳನದಲ್ಲಿ ಅಲೋಚಿಸಿದ್ದ ಕೆಲವು ವಿಷಯಗಳನ್ನು ಇಲ್ಲಿ ಪರ್ಯಾಲೋಚಿಸಲಾಗುವದೆಂದು ತಿಳಿದು ಬಂದಿದೆ.

ಆರ್ಥಿಕ ಬಿಕ್ಕಟ್ಟಿನ ನಿವಾರಣೆಗಾಗಿ ಅಮೆರಿಕದ ವಾಷಿಂಗ್ಟನಿನಲ್ಲಿ ಸೇರಿದ್ದ ಬ್ರಿಟಿಷ್, ಅಮೆರಿಕ, ಫ್ರಾನ್ಸ್ ಆರ್ಥ ಮಂತ್ರಿಗಳ ಮತ್ತು ವಿದೇಶ ಮಂತ್ರಿಗಳ ಸಮ್ಮೇಳನವೀಗ ಮುಗಿದಿದೆ. ಹಣಕಾಸಿನ ಕುರಿತೂ ದೂರಪ್ರಾಚ್ಯ ರಾಷ್ಟ್ರಗಳಲ್ಲಿ ಈ ತ್ರಿರಾಷ್ಟ್ರಗಳು ಅನುಸರಿಸಬೇಕಾದ ಘೋರಣೆಯ ಕುರಿತೂ ಜಯಶೀಲ ಮಾತುಕತೆಗಳೂ ನಿರ್ಧಾರಗಳೂ ಆದುವೆಂದು ಸ್ಪಷ್ಟವಾಗಿದೆ.

ಇಂಡೋನೇಶಿಯದ ಸ್ವತಂತ್ರ ಭವಿಷ್ಯ ನಿರ್ಧರಿಸುವುದಕ್ಕಾಗಿ ಡಚ್ಚರು ಮತ್ತು ಇಂಡೋನೇಶಿಯದ ವಿವಿಧ ಪ್ರಜ್ಞೀಯರೊಳಗೆ ಅಲ್ಲಿಯ ಹೇಗ್ಯೂನಲ್ಲಿ ನಡೆವು ದಿನಗಳ ವರೆಗೆ ದುಂಡು ಮೇಜು ಸಮ್ಮೇಳನ ನಡೆದಿತ್ತಷ್ಟೆ ಕೊನೆಯಲ್ಲಿ ಈ ಪ್ರತಿನಿಧಿಗಳು ಗೊಪ್ರ ಸಂಘಾಪಣೆಗಾಗಿ ಬೆಲ್ಜಿಯಮಿಗೆ ಹೋಗಿ ಅಲ್ಲಿಯ ಒಂದು ನಗರದಲ್ಲಿ ಕಿವಿಮಾತುಕತೆಗಳ ಚರ್ಚೆ ನಡೆಸುತಿದ್ದಾರೆ.

ಉತ್ತರ ಅಟ್ಲಾಂಟಿಕ್ ಒಡಂಬಡಿಕೆಗೆ ಸೇರಿರುವ 12 ರಾಷ್ಟ್ರಗಳು ಈಗ ವಾಷಿಂಗ್ಟನಿನಲ್ಲಿ ಸೇರಿ, ಆ ಒಪ್ಪಂದಾನ್ವಯ ತಮ್ಮ ಒಂದು ರಕ್ಷಣಾ ಸಮಿತಿಯನ್ನು ರಚಿಸಿಕೊಂಡಿವೆ.

ನೆಹರೂ ಘರ್ಜನೆ

ಭಾರತದ ಪಾಲಿಗೀಗ ಕಾಶ್ಮೀರದ ಸಮಸ್ಯೆ ಮತ್ತು ಅದಕ್ಕೆ ಸಂಬಂಧಿಸಿದ ಹಾಗೂ ಇತರ ವಿವಾದಗಳ ಕುರಿತು ಪಾಕಿಸ್ತಾನವು ವಹಿಸಿರುವ ಅಳತ್ಯ ಧೋರಣೆಯೇ ಮುಖ್ಯ ಕಂಟಕವಾಗಿದೆ. ಈ ಸಂಬಂಧವೀಗ ಯಾವ ಸ್ಥಿತಿಗೆ ಬಂದಿದೆಯೆಂಬುದನ್ನು ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರು, ಭಾರತ-ಪಾಕಿಸ್ತಾನ್ ಗಡಿಯೂರಾದ ಫಿರೋಜ್‌ಪುರದಲ್ಲಿ ಇದೇ ತಾ. 17ರಲ್ಲಿ ಆಡಿದ ವೀರ ವಾಣಿಗಳು ಸೂಚಿಸುತ್ತಿವೆ. ಅಲ್ಲಿಯ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತ, ಪಂಡಿತ ಜೀ ಭಾರತ ಸರಕಾರದ ದೃಢ ನಿರ್ಧಾರವನ್ನು ಘಂಟಾಘೋಷವಾಗಿ ಸಾರಿದರು: "ಭಾರತದ ಭದ್ರತೆಗೆ ಕಾಶ್ಮೀರವು ಅಗತ್ಯ. ಆದ್ದರಿಂದ ಭಾರತವೀಸಂಬಂಧದಲ್ಲಿ ಇಷ್ಟರಲ್ಲೇ ವಹಿಸಿರುವ ಧೋರಣೆಯನ್ನು ಎಂತಹ ಪರಿಸ್ಥಿತಿಯಲ್ಲೇ ಆದರೂ ಬದಲಾಯಿಸಿಕೊಳ್ಳಲು ಎಷ್ಟಕ್ಕೂ ತಯಾರಿಲ್ಲ. ತಾನೆಂತಹ ಅಂತರಂಕ ಜೊಂದರೆಗಳಲ್ಲಿ ಸಿಲುಕಿಕೊಂಡಿದ್ದರೂ ಭಾರತವು ಕಾಶ್ಮೀರ ಜನತೆಯ ಆಪತ್ಸರದ ಕರೆಯನ್ನು ಮನ್ನಿಸಿ ಸಹಾಯಕ್ಕೆ ಬಂತು. ಪಾಕಿಸ್ತಾನದ ವಿರುದ್ಧವಾಗಿ ಭಾರತವು ಜಾಗತಿಕ ಸಂಘದ ಮುಂದಿಡಲಿಚ್ಛಿಸಿದ್ದ ಹಲವು ಆಪಾದನೆಗಳನ್ನು ಈಗ ಕಡೆಗಣಿಸಲಾಗಿದೆ. ಪಾಕಿಸ್ತಾನವು ಅಸ್ತ್ರ ಬಲವಾಗಿ ಅಲ್ಲಗಳೆದಿದ್ದರೂ, ಕಾಶ್ಮೀರ ಕಮಿಶನಿಗೆ ಸತ್ಯವೆಂದು ಖಚಿತವಾಗಿರುವ ಪಾಕಿಸ್ತಾನದ ಮೋಸ, ವಂಚನೆ ಮತ್ತು ಅದು ಕಾಶ್ಮೀರವನ್ನು ಹಾಳುಗೆಡಹಲು ಮಾಡಿರುವ ಅಡಚಣೆಗಳನ್ನೆಲ್ಲಾ ಈಗ ಮರೆತು ಬಿಡುವ ಉದ್ದೇಶ ಕಂಡು ಬಂದಿದೆ. 'ಪ್ರಥಮತಃ ಕಾಶ್ಮೀರದ್ದನಂತರ ಪಾಟಿಯಾಲ; ಆ ಮೇಲೆ ಥಿಲ್ಲಿಯ ಮೇಲೆ' ಎಂಬುದೇ ಪಾಕಿಸ್ತಾನದ ಪಲ್ಲವಿ. ಇದೆಂದಿಗೂ ನಡೆಯದು. ಕಳದ ಮುವತ್ತು ವರುಷಗಳಿಂದಲೂ ಗಾಂಧಿಜೀ ನಮಗೆ ಕಲಿಸಿದ್ದ ಪಾಠ ಶಾಂತಿ. ಆದ್ದರಿಂದ ಶಾಂತಿಗಾಗಿ ನಾನು ವಾದಿಸುವುದೆಲ್ಲವೂ ಯಥಾರ್ಥತೆಯಿಂದಲೇ. ಭಾರತಕ್ಕೇನೇ ಯುದ್ಧ ಭಾವನೆಯಿದೆಯೆಂದಾದರೆ ಅದು ಲೋಕಕ್ಕೆ ಶಾಂತಿಜ್ಯೋತಿ ಕೊಡುವುದಾದರೂ ಹೇಗೆ? ನಿಶ್ಚಯವಾಗಿಯೂ ನಾನೊಬ್ಬ ಶಾಂತಿಯ ಮನುಷ್ಯನಾದರೂ, ಭಾರತ ಸಶಸ್ತ್ರ ಸೈನಿಕರು ಸದಾ ಸಿದ್ಧರಿದ್ದು ಎಂತಹ ಯುದ್ಧಾಪತ್ತನ್ನ ವನ್ನಾದರೂ ಸ್ವೀಕರಿಸಲು ತಯಾರಿರುವರಾದ್ದರಿಂದ ನಿಶ್ಚಿಂತೆಯಿಂದ ಜನರಂಬೇಕೆಂದು ಆಶ್ವಾಸನೆಕೊಡುತ್ತೇನೆ. ಪಾಕಿಸ್ತಾನ್ ಪತ್ರಿಕೆಗಳ ಮತ್ತು ಇತರ ಪತ್ರಿಕೆಗಳ ಕಟ್ಟುಕಥೆಗಳಿಗಾಗಲೀ ಮನಸ್ಸನ್ನು ಕೊಡಬಾರದು; ಗೊಂದಲಕ್ಕೀಡಾಗಬಾರದು. ಭಾರತ-ಪಾಕಿಸ್ತಾನಗಳೊಳಗಿನ ಯುದ್ಧ ಸಂಭವದ ಸುದ್ದಿ ಮಿತ್ರರ ಗಾಳೀ ವಾರ್ತೆಗಳಿಗೆ ಜನರು ಬಲಿಬೀಳಬಾರದು. ಎರಡು ರಾಷ್ಟ್ರಗಳೂ ತಂತಮ್ಮ ಕ್ಷೇತ್ರಗಳಲ್ಲೇ ಮಾಡಬೇಕಾದ ಕೆಲಸಗಳೆಷ್ಟೋ ಇವೆ. ವ್ಯಾಯಶಃ ಎಲ್ಲಿಯೋ ಬುದ್ಧಿಕಟ್ಟ ಸಂಕಟಕ್ಕೀಡಾಗಿರುವೆಯೆಂದೂ ಆ ಕಾರಣದಿಂದಲೇ ವಿನಾಕಾರಣ ಭಾರತದ ವಿರುದ್ಧ ಆಗಾಗ ಬೊಬ್ಬೆಯಿಬ್ಬಿಸುವದಕ್ಕೂ ಆತ್ಮಹತ್ಯಾ ಸದೃಶ ಕಾರ್ಯಗಳನ್ನು ಮಾಡುವದಕ್ಕೂ ಮನಸ್ಸು ಮಾಡಿರುವಿಯೆಂದೂ ನಾನು ಪಾಕಿಸ್ತಾನಕ್ಕೆ ಹೇಳಬೇಕಾಗಿದೆ. ಇನ್ನೊಂದು ಯುದ್ಧವೆಂದರೆ ಪೂರ್ಣನಾಶವಾದ್ದರಿಂದ ನಿಜಕ್ಕೂ ಪ್ರಪಂಚಕ್ಕೆ ಇನ್ನೊಂದು ಯುದ್ಧ ಬೇಕಾಗಿಲ್ಲ. ನಾನಿಲ್ಲಿ ಪಾಕಿಸ್ತಾನವೆನ್ನು ದೂರಲು ಹೊರಟಿಲ್ಲ; ಹೀಗೆಯೇ ಮುಂದುವರಿಯಲು ಬಿಟ್ಟಲ್ಲಿ ಹೆಚ್ಚಿನ ಕಂಟಕಗಳನ್ನೂ ಹಾನಿಗಳನ್ನೂ ತಂದೊಡ್ಡಬಲ್ಲ ಪರಿಸ್ಥಿತಿಯತ್ತ ನಾನು ಕೈತೋರಿಸಿದ್ದೆನಷ್ಟೆ. ಕಾಶ್ಮೀರದಂತೆಯೇ ಭಾರತ ಮತ್ತು ಪಾಕಿಸ್ತಾನಗಳೊಳಗೆ ಇತ್ಯರ್ಥಗೊಳ್ಳಬೆ ಬಾಕಿಯಿರುವ ಹಲವಾರು ಪ್ರಶ್ನೆಗಳಿವೆ. ನ್ಯಾಯಬದ್ಧ ಹಾಗೂ ನ್ಯೆತ್ರೀ ಪೂರ್ಣ ಒಡಂಬಡಿಕೆಗಳಿಗೆ ಭಾರತವು ಸದಾ ಅನುಕೂಲವಾಗಿತ್ತು. ಆದರೆ ಅದು ಖಡ್ಗದ ತುದಿಯ ತೀರ್ಮಾನಕ್ಕೆ ಕೈಯೊಡ್ಡಲು ಮತ್ತು ಜಲುಮೆಯದಿರಲ್ಲಿ ಬಗ್ಗಲು ತಯಾರಿಲ್ಲ. ಭಾರತ ಮತ್ತು ಪಾಕಿಸ್ತಾನಗಳೊಳಗೆ ತೀರ್ಮಾ

ಭಾರತ ಪಾಕಿಸ್ತಾನಗಳೊಳಗೆ ಮುಂದೇನು?

Retailers' Choice:

MILL CLOTH - Unlimited choice of Qualities and Varieties to suit every one's taste. All Varieties in Stock.

SILKS - Just unpacked – Wide range of selection— at reduced rates. Finest Products of the Famous Producers.

FOREIGN CLOTH - Imported Varieties— Noted for their uniform and unvarying quality— Yet Prices within the reach of one and all.

All varieties are avaliable in many beautiful shades and designs

Visit will convince you—

VITHALJI & CO., LTD.

The Pioneer Cloth Dealers of the District.

MANGALORE.

ನೋಟೀಸು

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ
O. S. 3/8/1949

ಅನಂತ ಭಟ್ಟ ... ...ವಾದಿ

ಮತ್ತು

ರಾಮ ಶೆಟ್ಟಿ —ಅಂಚೆಯ್ಯ ಶೆಟ್ಟಿ ಆಳಿಯ. ಉಪ್ಪಿ ತಾಲೂಕು ಶಿವಳ್ಳಿ ಗ್ರಾಮವಾಸ್ತವ್ಯರಾದ ಬಳ್ಳಿ —ಪ್ರತಿವಾದಿ

ಇವರೊಳಗೆ

ಸದ್ರಿ ಪ್ರತಿವಾದಿಗೆ—

ನಿಮ್ಮಿಂದ ಬರತಕ್ಕ ಚಾಲಗೇಣಿ ಬಾಕಿಗೂ ಆಸ್ತಿ ಸ್ವಾಧೀನತೆಗೂ ವಾದಿಯು ನಿಮ್ಮ ಮೇಲೆ ಮಾಡಿರುವ ನೆಲ್ಕಂಡ ದಾವೆಯು ತಾರೀಕು. 5-10-49ಕ್ಕೆ ಯಿದೋಗತಾಗಿಯದೆ. ಆ ಕುರಿತು ಯಾವಾಹರಿಸುವಂಥಾದ್ದಿದ್ದರೆ ಆ ದಿವ್ಸ ಫೂರ್ವಾಪ್ನ ಘಂಟೆ 10ಕ್ಕೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀನು ಮಾಡಿ ಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

K. Ramakrishna Rao
Vakil for plaintiff.

ಉಡುಪಿ, ತಾರೀಕು. 19-9-49.

ಚಂದಾದಾರರಲ್ಲಿ-

ಚಂದಾಹಣ ಬಾಕಿಇರುವ ಚಂದಾದಾರರಿಗೆಲ್ಲಾ ಕೃಮಪ್ರಕಾರ ಈ ತಿಂಗಳ ಆರಂಭದಿಂದಲೇ ಪತ್ರಿಕೆಯನ್ನು ನಿಲ್ಲಿಸಿ ಮಾಡಿಕಳಿಸಲು ಸ್ವಾರಂಭಿಸಿರುತ್ತೇವೆ ಅವರೆಲ್ಲರೂ ದಯಮಾಡಿ ವಿ. ಪಿ. ಯನ್ನು ಸಕಾಲದಲ್ಲಿ ಸ್ವೀಕರಿಸಿಕೊಂಡು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್.

ರಾಷ್ಟ್ರಭಾಷಾ ಸಂಬಂಧದ ತೀರ್ಮಾನ.

ನಗೊಳ್ಳದೆ ಉಳಿದಿರುವ ಎರಡು ಪ್ರಮುಖ ಪ್ರಶ್ನೆಗಳೆಂದರೆ ಕಾಶ್ಮೀರ ಮತ್ತು ನಿರಾಶ್ರಿತರ ಅಸ್ತಿ ಸಂಬಂಧದ್ದು. ಪಾಕಿಸ್ತಾನದ ಕುರಿತು ಕಟ್ಟು ಮಾತುಗಳನ್ನಾಡಲು ನನಗೆ ಇಷ್ಟವಿಲ್ಲ. ಏನಿಲ್ಲೆಂದರೂ ಅವರು ನಮ್ಮ ನಿನ್ನೆಯ ಸಹೋದರರು. ಯುದ್ಧ ಕ್ಕಿಳಿದು ನಮ್ಮೊಳಗಿನ ವಿವಾದವನ್ನು ಕೀರ್ಮಾನಿಸಿಕೊಳ್ಳಬೇಕೆಂಬ ಇಚ್ಛೆ ನನ್ನದಲ್ಲ. ಬದಲಿಗೆ ಎರಡು ವಸಾಹತುಗಳೂ ತಂತಮ್ಮ ಬಡತನ, ಅಜ್ಞಾನ, ರೋಗರುಜಿಗಳ ಮೇಲೇನೇ ಯುದ್ಧ ಸಾರುವದು ಲೇಸು." ಫಿರೋಜ್ ಪುರದ ಆ ಸಾರ್ವಜನಿಕ ಸಭೆಯಲ್ಲೂ ಕಮ್ಯೂನಿಸ್ಟರ ಪೂರ್ವ ತರ್ಜನೆಗಳ ಮಾದರಿಯೊಂದು ತೋರಿ ಬಂತು. ನೆಹರೂ ಭಾಷಣದ ಮಧ್ಯಾವಧಿಯಲ್ಲಿ ಅರು ಮಂದಿ ಕಮ್ಯೂನಿಸ್ಟರು ಕೆಂಪು ಧ್ವಜ ಹಾರಿಸುತ್ತಾ ಉದ್ರೇಕದಾಯೀ ಘೋಷಣೆಗಳನ್ನೆಬ್ಬಿಸಹತ್ತಿದರು. ಕಾಂಗ್ರೆಸ್ ಸ್ವಯಂಸೇವಕರು ಅವರನ್ನು ಸಮಜಾಯಿಸಲು ನೋಡಿದರು. ಆದರೀ ಕಮ್ಯೂನಿಸ್ಟರು ಅವರನ್ನು ದೂಡಿಕೊಂಡು ಗಲಭೆಯೆಬ್ಬಿಸುತ್ತಾ ಮುಂದೊತ್ತಿದಾಗ ಪೋಲಿಸ್ ಸಬ್ ಇನ್ಸ್‌ಪೆಕ್ಟರೊಬ್ಬರು ಈ ಕಮ್ಯೂನಿಸ್ಟರನ್ನು ಹಿಂದೊತ್ತಲು ಪ್ರಯತ್ನಿಸಿದರು. ಆಗ ಕಮ್ಯೂನಿಸ್ಟರುಗುಂದು ಹಿಂತ ಲ್ಯಾಯುಧದಿಂದ ತಿವಿದ ಪ್ರತಿಯೆಂದ ಸಬ್‌ಇನ್ಸ್‌ಪೆಕ್ಟರರ ತಲೆಮತ್ತು ಕುತ್ತಿಗೆಗೆ ಭೀಕರ ಜಖಮುಗಳಾದುವು. ಆದರೂ ಅದನ್ನು ಲೆಕ್ಕಿಸದೆ ತನ್ನ ಬೈಯ ರಿವಾಲ್ವರನ್ನು ಕಸಗೊಳ್ಳಲು ಪ್ರಯತ್ನಿಸುತ್ತಿದ್ದ ಕಮ್ಯೂನಿಸ್ಟರೊಡನೆ ಉರುಡಾಡಿ ಆ ಸಬ್ ಇನ್ಸ್‌ಪೆಕ್ಟರರು ತನ್ನ ಮೇಲೆ ಬೀಳುತ್ತಿದ್ದ ಒಬ್ಬ ಕಮ್ಯೂನಿಸ್ಟನಿಗೆ ಗುಂಡು ಹಾರಿಸಿದರು. ಆತ ಜಖಂಗೊಂಡ ಕೂಡಲೇ ಉಳಿದ ಐವರು ಓಡಿ ಹೋಗುತಿದ್ದಾಗ ಸಭಿಕರು ಅವರನ್ನು ಹಿಡಿದು ಪೋಲೀಸರಿಗೆ ಕೊಟ್ಟರು. ಈ ಗದ್ದಲಗಳಿಂದ ಆ ಭಾಗದ ಸಭೆಕರು ಜಲ್ಲಾಪಿಲ್ಲಿಯಾದುದಕ್ಕಾಗಿ, ಪಂಡಿತ ನೆಹರೂಗಳು ಅವರನ್ನು ಜರೆದು ಮಾತಾಡಿ, ತನ್ನ ಕಲ್ಕತ್ತಾ ಸಭೆಯ ನಿದರ್ಶನ ಕೊಟ್ಟು ಇಂತಹ ಸಂದರ್ಭದಲ್ಲಿ ಜನರು ಎದೆಗೆಡಬಾರದೆಂದು ಬೋಧಿಸಿದರು. ಪಂಡಿತ ಜವಾಹರಲಾಲರು ಫಿರೋಜ್ ಪುರದ ಸಣ್ಣಹಳ್ಳಿಗಳಿಗೂ ಸೇನಾ ಶಾಣ್ಯಕ್ಕೂ ಭೇಟಿ ಕೊಟ್ಟು ಅವರಲ್ಲಿ ಆಶೆ ಮತ್ತು ಎದೆಗಾರಿಕೆನಿರ್ಮಿಸುವ ಮಾತುಗಳನ್ನಾಡಿದರು. "ಪರಿಹದ್ದು ವಲಯಗಳಲ್ಲಿ ವಾಸಿಸುತ್ತಿರುವ ನಿಮ್ಮ ಮನಸ್ಸು ಗೊಂದಲಕ್ಕೀಡಾಗಿದೆ. ನೀವು ಯುದ್ಧ ಭೀತಿಗೊಳಗಾಗಿರುವಿರಿ. ಆದರೆ ನಾನು ನಿಮಗೆ ಭರವಸೆಯೀಯುತಿದ್ದೇನೆ-ನಿಮ್ಮ ಭದ್ರತೆಗಾಗಿ ನನ್ನ ಸರಕಾರ ಮತ್ತು ಭಾರತದ ಸಶಸ್ತ್ರ ಸೇನೆಗಳು ಸದಾ ರಾಲ ಸಿದ್ಧವಿವೆ. ಹೇಗಿದ್ದರೂ ನೀವು ಎಚ್ಚರಿಕೆಯಿಂದಿರಬೇಕು. ಪಾಕಿಸ್ತಾನವು ಸ್ಥಾಪನೆಗೊಂಡಾಯಿತು; ಇನ್ನು ನಾವದಕ್ಕೆ ಹಿತ ಮತ್ತು ಶಾಂತಿಯನ್ನೇ ಹಾರೈಸುತ್ತೇನೆ. ಭಾರತಕ್ಕೆ ತನ್ನ ನೆರೆಯವರ ಮೇಲೆ ಆಕ್ರಮಣಶೀಲತೆಯಿಲ್ಲವೇ ಇಲ್ಲವೆಂಬ ನನ್ನ ಹಿಂದಿನ ಆಶ್ವಾಸನೆಯನ್ನೇ ಇಲ್ಲಿ ಪುನರುಚ್ಚರಿಸುತ್ತೇನೆ. ಆಕ್ರಮಣೇಚ್ಛೆಯು ಸುದ್ದಿಗಳು ಗಾಳಿಯಲ್ಲಿ ಹಾರಾಡುತ್ತಿರುವಾಗ ನಿಮ್ಮ ಮನಸ್ಸು ಗೊಂದಲಕ್ಕೀಡಾಗುವದು ಸಹಜವೇ. ಅಂತಹ ಆಪಾಯವೇನಾದರೂ ಸಂಭವಿಸಿದರೆ, ನೀವು ಶಾಂತಚಿತ್ತದ ನಿರ್ಧಾರಗಳನ್ನು ಮಾಡಿಕೊಳ್ಳಬೇಕು; ಉದ್ರೇಕಾಧೀನರಾಗಬಾರದು. ಹೆದರಲು ಕಾರಣವಾವುದೂ ವ್ಯಕ್ತಿಶಃ ನನಗೆ ಕಾಣಿಸುತ್ತಿಲ್ಲ. ಆದೇ ಕಾಲದಲ್ಲಿ ನಾನು ನಿಮ್ಮನ್ನು ತ್ಯೇನೆ—ಯಾವ ರಾಷ್ಟ್ರವೇ ಆದರೂ ತನ್ನ ಒಂದೇ ಒಂದಿಂಚು ನೆಲವನ್ನು ಹಿಡಿದುಕೊಳ್ಳಲು ಪ್ರಯತ್ನಿಸುವುದನ್ನು ಭಾರತವೆಂದಿಗೂ ಸಹಿಸುವಂತಿಲ್ಲ."ಭಾರತದ ಪಾಲಿನ ಪೂರ್ವ ಪಂಜಾಬುಮತ್ತು ಪಾಕಿಸ್ತಾನದ ಪಾಲಿನಪಶ್ಚಿಮ ಪಂಜಾಬುಗಳ ಮಧ್ಯೆಗಡಿಯಲ್ಲಿರುವ ಈ ಎಲಯಗಳಲ್ಲಿ ಆಗಾಗ ಸಣ್ಣ ಪುಟ್ಟ ಗೊಂದಲಗಳು ನಡೆದಿದ್ದುವು. ಪಶ್ಚಿಮಕ್ಕೆ ಪಾಕಿಸ್ತಾನ್ ಕಡೆಯವರು ಈ ಕಡೆಗೆ ಕಳ್ಳ ಹೆಜ್ಜೆಯಿಟ್ಟು ಗೋಗ್ರಹಣ ಮಾಡುತಿದ್ದರು. ಈಗೀಗ ಆಲ್ಲಿಯ ಪರಿಸ್ಥಿತಿ ಥಂಡಾಗೊಂಡಿರುವುದೆಂದು ತಿಳಿದು ಬಂದಿದೆ. ಫಿರೋಜ್‌ಪುರದ ಒಂದು ಸೇತುವೆಯ ಆ ತುದಿಯು ಪಾಕಿಸ್ತಾನದ ಹಕ್ಕಿನದಾದರೆ ಈ ತುದಿಯು ಭಾರತದ ಹಕ್ಕಿನದು. ಆ ಬದಿಯಲ್ಲಿ ಪಾಕಿಸ್ತಾನ್ ಸೇನಾ ಶಾಣ್ಯವೂ ಈ ಬದಿಯಲ್ಲಿ ಭಾರತೀಯ ಸೇನಾ ಶಾಣ್ಯವೂ ಇದೆ. ಈ ಕಡೆಯ ಸೇನಾ ಕಟ್ಟೆಯನ್ನು ಸಂದರ್ಶಿಸಿದ ಪಂಡಿತಜೀ ಸೀದಾ ಸೇತುವೆ ದಾಟಿ ಪಾಕಿಸ್ತಾನ್ ಬದಿಗೆ ಹೋದರು. ಅಲ್ಲಿದ್ದ ಕೆಲವೇ ಮಂದಿ ಪಾಕಿಸ್ತಾನ್ ಸೈನಿಕರು ಸೇನಾನಿಧೇಯಾನುಸಾರ ನೆಟ್ಟಗೆ ನಿಂತರಲ್ಲದೆ ಅವರ ಸೇನಾನಿ ನೆಹರುಗಳಿಗೆ ವಂದನೆ ಕೊಟ್ಟ. ಪಂಡಿತಜೀ ಅದನ್ನು ಸ್ವೀಕರಿಸಿ ಮರಳಿದರು.

ವಿವಾದ ವಿಷಯಗಳು

ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಪ್ರವೇಶ ಮಾಡಿರುವುದನ್ನು ವಿಚಾರಿಸಬೇಕೆಂಬುದೇ ಭಾರತವು ಜಾಗತಿಕ ಸಂಘಕ್ಕೆ ಕೊಟ್ಟಿದ್ದ ದೂರು. ಆ ಆಪಾದನೆಗಳೆಲ್ಲವೂ ಸತ್ಯವೆಂದು ಕಾಶ್ಮೀರ ಕಮಿಶನಿಗೆ ವಿಚಾರಣಾನಂತರ ತಿಳಿದು ಬಂತು; ಕೊನೆಯಲ್ಲಿ ಪಾಕಿಸ್ತಾನವು ಸ್ವತಃ ತನ್ನ ಕೈತ್ಯಗಳನ್ನು ಒಪ್ಪಿಕೊಂಡಿತು. ಆದರೀಗ ಪಾಕಿಸ್ತಾನದ ಆ ತಪ್ಪುಗಳೆಲ್ಲವೂ ಮಾನ್ಯವೆಂಬಂತೆ ಕಾಶ್ಮೀರ ಕಮಿಶನಿನವರು ಭಾರತ ಮತ್ತು ಪಾಕಿಸ್ತಾನಗಳನ್ನು ಸಮಾನ ಸ್ಥಾನದಲ್ಲಿರಿಸಿರುವುದಷ್ಟೇ ಅಲ್ಲ; ಇವರೆಡರೊಳಗಿನ ರಾಜೀ ಮಾತುಕತೆಗಳ ಸಂಬಂಧವಾಗಿ ತಾವು ಆದಿ ಭಾಗದಲ್ಲಿ ಕೊಟ್ಟಿದ್ದ ಆಶ್ವಾಸನೆಗಳಿಗೆ ವಿರುದ್ಧವಾಗಿ ತಾವೇ ಹೊಸ ಸೂಚನೆಗಳನ್ನು ಕೊಡಹತ್ತಿದ್ದಾರೆ. ಇಂತಹ ನ್ಯಾಯ ವಿಮುಖತೆಗೆ ಒಪ್ಪಿಗೆ ಕೊಡದೆ ಭಾರತ ಸರಕಾರವು ಕಾಶ್ಮೀರ ಕಮಿಶನಿನ ವಿಲಕ್ಷಣ ಸೂಚನೆಗಳನ್ನೂ ಆಟ್ಲೀ-ಟ್ರುಮೇನರುಗಳ ವಿಜ್ಞಾಪನೆಯನ್ನೂ ತಿರಸ್ಕರಿಸಿದೆ. ಇದನ್ನೇ ನೆವನವಾಗಿ ಮಾಡಿ ಭಾರತವು ಸಂಧಾನಕ್ಕೆ ತಯಾರಿಲ್ಲವೆಂಬ ಅರ್ಥದ ಆರೋಪ ಹೊರಿಸಿ, ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಝಫರುಲ್ಲಾಖಾನರು ದೂರಿದ್ದಾರೆ. "ಭಾರತವು ತತ್ವತಃ ಮಧ್ಯಸ್ಥಿಕೇ ಸೂಚನೆಯನ್ನು ನಿರಾಕರಿಸಿಲ್ಲ; ಆದರೆ ಆ ಮಧ್ಯಸ್ಥಿಕೆಯೆಂಬುದು ಸ್ಪಷ್ಟ ಹಾಗೂ ನಿಶ್ಚಿತ ವಿಷಯಗಳನ್ನಾಧರಿಸಿಯೇ ನಡೆಯಬೇಕೆಂದು ಸೂಚಿಸಿದೆ. ಇಂತಹ ಸ್ಪಷ್ಟತೆಗೆ ವಿರೋಧವಿರುವ ಸೂಚನೆಯನ್ನಷ್ಟೇ ನಿರಾಕರಿಸಿದೆ" ಎಂದು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಭಾರತದ ಪ್ರತಿನಿಧಿಯಾಗಿರುವ ಸರ್ ಟಿ ನಿ ಗ ಲ್ ಪರಸಿಂಗರಾಯರು ಸ್ಪಷ್ಟೀಕರಿಸಿದ್ದಾರೆ.

ಪಾಕಿಸ್ತಾನದಲ್ಲಿರುವ ಹಿಂದೂ ನಿರಾಶ್ರಿತರ ತಾಸ್ತಿಗಳನ್ನು ಪಾಕಿಸ್ತಾನ್ ಸರಕಾರವು ಅಪಹರಿಸಿಟ್ಟುಕೊಳ್ಳಲು ಕುಹಕ ಹಾಗೂ ಉಗ್ರ ಉಪಾಯಗಳನ್ನು ಕೈಕೊಂಡಿದೆ. ಇದು ಕೂಡಾ ಈ ಮೊದಲಾಗಿರುವ ಒಪ್ಪಂದಗಳಿಗೆ ಬದ್ಧ ವಿರೋಧವಿದೆ. ರಾಷ್ಟ್ರೀಯ ಹಾಗೂ ಮಾನವೀಯ ಹಕ್ಕುಬಾಧ್ಯತೆಗಳಿಗೂ ಲಕ್ಷ್ಯವಿಲ್ಲದ ಮಂದಿಯ ಜೀವನಕ್ಕೆ ಸಂಬಂಧಿಸಿರುವ ಈ ವಿಷಯವನ್ನು ಭಾರತವು ಕಡೆಗಣಿಸಲು ಸಾಧ್ಯವಿಲ್ಲ.

ಪೂರ್ವ ಪಂಜಾಬಿನಿಂದ ಪಶ್ಚಿಮ ಪಂಜಾಬಿಗೆ ಹರಿಯುತ್ತಿರುವ ನೀರು ಕಾಲುವೆಗಳ ಸಂಬಂಧ ವಿವಾದವು ಭಾರತ ಪಾಕಿಸ್ತಾನ್‌ಗಳೊಳಗೆ ಪ್ರತ್ಯೇಕ ವಿದೆ. ಪಾಕಿಸ್ತಾನವೀ ಕುರಿತು ಭದ್ರತಾ ಕೌನ್ಸಿಲಿಗೂ ದೂರಿಡುವುದಕ್ಕೂ ಸಿದ್ಧವಾಗಿದೆ ವಿಶ್ವವ್ಯವಸ್ಥೆಗಳಂತೆ ಈ ಸಂಬಂಧದ ಒಡಂಬಡಿಕೆಗಳನ್ನು ಕೂಡಾ ಪಾಕಿಸ್ತಾನವೇ ಮುರಿದುಕೊಂಡಿದ್ದರೂ ಸರ್. ಝುಫರುಲ್ಲಾ ಖಾನರು ಭಾರತದ ಮೇಲೆ ಅಲ್ಲಸಲ್ಲದ ಆಪಾದನೆಗಳನ್ನು ಹೊರಿಸಿದ್ದಾರೆ. ಇದು ಅಸಹ್ಯವಾಗಿಯೇ ಭಾರತ ಸರಕಾರದ ಸಂಚಾರ ಮಹಿವಾಟು ಖಾತೆಯ ಮಂತ್ರಿ ಶ್ರೀ. ಎನ್. ಗೋಪಾಲ ಸ್ವಾಮಿ ಅಯ್ಯಂಗಾರರು ಇದೇ ತಾ. 17 ರಲ್ಲಿ ನವದೆಹಲಿಯಲ್ಲಿ ಪತ್ರಿಕಾ ಪ್ರತಿನಿಧಿ ಮಂಡಲಿಯ ಮುಂದೆ ಹೇಳಿದರು: "ಪಾಕಿಸ್ತಾನದ ವಾದವು ತಪ್ಪು ತಪ್ಪು ಮತ್ತು ಕೆಲವು ಸಂದರ್ಭಗಳಲ್ಲಿ ಅಸತ್ಯ ಹೇಳಿಕೆಗಳ ಮೇಲೆಯೇ ಕಟ್ಟಲ್ಪಟ್ಟಿದೆ. ಮೇಲಿಂದ ಮೇಲೆ ಕೆಸರು ಬಿಸಾಡುತ್ತಾ ಬಂದರೆ ಕೆಲವು ಕೆಸರು ಮುದ್ದೆಗಳಾದರೂ ತಾಗಬಹುದೆಂಬ ಆಶೆಯಿಂದ, ಭಾರತದ ಮೇಲೆ ಒಂದಷ್ಟು ಕೆಸರು ಜೆಲ್ಲುಲು ಉದ್ದೇಶ ಪೂರ್ವಕ ಕೈಕೊಂಡಿರುವ ಅಸಹ್ಯಚಾರ ವಿದು".

ಇನ್ನು ಹಲವು ವಿಷಯಗಳಲ್ಲಿ ಮತ್ತು ಸೊತ್ತು ಸಾಮಾಗ್ರಿಗಳ ಸಂಬಂಧವಾಗಿ ಭಾರತ ಮತ್ತು ಪಾಕಿಸ್ತಾನಗಳೊಳಗಾಗಿದ್ದ ವಿಭಜನೋತ್ತರ ಒಡಂಬಡಿಕೆಗಳ ರ್ತಗಳಂತೆ ವರ್ತಿಸದೆ ಪಾಕಿಸ್ತಾನವು ಅಡ್ಡಗಾಲಿಡುತ್ತಾ ಬಂದಿದೆ. ಈಗ ಕರಾಚಿ ಮೊದಲಾದ ಪಾಕಿಸ್ತಾನ್ ಊರುಗಳಲ್ಲಿ ಭಾರತೀಯ ವಸ್ತುಗಳನ್ನು ಬಹಿಂಗವಾಗಿ ಸುಸುವ ದ್ವೇಷ ಪ್ರದರ್ಶನಗಳಾಗಿವೆ. ಇದರಲ್ಲಿ ತನ್ನ ಕೈಯಿಲ್ಲವೆಂದು ಪಾಕಿಸ್ತಾನ್ ಸರಕಾರದ ಹೇಳಿಕೆಯಿದೆಯಾದರೂ ಭಾರತದ ಕುರಿತು ತನ್ನ ರಾಷ್ಟ್ರದಲ್ಲಿ ಇಂತಹ ಬಹಿರಂಗ ದ್ವೇಷಾಸೂಯಾಗ್ನಿಯೇ ಳದಂತೆ ಪಾಕಿಸ್ತಾನ್ ಸರಕಾರವಾವ ಶಮನೋಪಾಯವನ್ನೂ ಕೈಕೊಂಡುದಿಲ್ಲ.

ಪಾಕಿಸ್ತಾನ್ ಪತ್ರಿಕೆಗಳು, ಆ ಸಂಬಂಧವಲ್ಲಗಿರುವ ಒಪ್ಪಂದಕ್ಕೆ ವಿರೋಧವಾಗಿ ಭಾರತದ ಕುರಿತು ಈಗಲೂ ನಿಜಸುಳ್ಳುಗಳ ಪ್ರಚಾರಗಳು ಕೂಡಾ ಅಸಹ್ಯವಿವೆ. ಜವಾಬ್ದಾರೀ ಸ್ಥಾನಗಳಲ್ಲಿರುವ ಪಾಕಿಸ್ತಾನ್ ಪ್ರಜಾಧಿಕಾರಿಗಳು ಆಂಬೋಣಗಳೂ ಅದೇ ಮಾದರಿಯವುಗಳು.

ಈ ರೀತಿ ಭಾರತ ಮತ್ತು ಪಾಕಿಸ್ತಾನಗಳೊಳಗೆ ಯಾವ ಯಾವ ವಿಷಯಗಳಲ್ಲಿ ಸಂಬಂಧವಿದೆಯೋ ಅವೆಲ್ಲಾ ವಿಷಯಗಳಲ್ಲೂ ಪಾಕಿಸ್ತಾನವು ದ್ವೇಷಾಸೂಯೆಯಿಂದ ಅಡ್ಡಗಾಲಿಡುತ್ತಾ ಬಂದಿದೆ. ಆ ಕಾಲದ ಮುಸ್ಲಿಂ ಲೀಗ್ ಧೂರ್ತನೀತಿಯೇ ಪಾಕಿಸ್ತಾನ್ ಸರಕಾರೀ ಧೋರಣೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಂಧಾನ ಹೇಗೆ ಸಾಧ್ಯ? ಸಂಧಾನವಸಾಧ್ಯವೆಂದ ಮೇಲೆ ಈ ವೈವನಸ್ಸು ಹೀಗೆಯೇ ಬೆಳೆಯುತ್ತಾ ಹೋದರೆ ಮುಂದಿನ ಪರಿಣಾಮವೇನು?

ಭಾರತ ಸರಕಾರಿ ಭಾಷೆ

ಸ್ವತಂತ್ರ ಭಾರತದ ಸರಕಾರೀ ಭಾಷೆಯು ದೇವನಾಗರಿ ಲಿಪಿಯುಳ್ಳ ಹಿಂದಿ ಮತ್ತು ಅಂತರ್‌ರಾಷ್ಟ್ರೀಯ ಅಂಕೆಗಳೇ ಅಂಕೆಗಳೆಂದು ಸುದೀರ್ಘ ಹಾಗೂ

The Canara Industrial & Banking Syndicate Ltd.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಬೊಂಬಾಯಿ, ದ. ಭಾರತ.
ಕುಟುಂಬದ ಯಜಮಾನನ ಜವಾಬ್ದಾರಿ
ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ. ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಸೋಪಜೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲಿ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯಗಳಿಲ್ಲವನ್ನೂ ಬಗೆಹರಿಸಲು ತಕ್ಕವಿವೆ. ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.
ಟಿ. ಎಂ. ಎ. ಪೈ.
ಜೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ಉಡುಪಿ, ಗುರುವಾರ, ೨೨-೯-'೪೯

ಘಟನಾ ಕಾರ್ಯ.

ಸ್ವತಂತ್ರ ಭಾರತದ ರಾಜ್ಯಾಂಗ ರಚಿಸುತ್ತಿರುವ ಘಟನಾ ಸಮಿತಿಯು, ನವಢಿಲ್ಲಿಯಲ್ಲಿ ಈ ಬಾರಿ ಏಳು ವಾರಗಳ ವರೆಗೆ ನಡೆದು, ಒಕ್ಟೋಬರ್ 6ಕ್ಕೆ ಮುನಃ ಸೇರಬೇಕೆಂಬ ನಿರ್ಣಯದೊಡನೆ ಇದೇ ತಾ. 18ರಲ್ಲಿ ತಾತ್ಕಾಲಿಕವಾಗಿ ಮುಂದುವರಿಸಲ್ಪಟ್ಟಿದೆ. ಒಕ್ಟೋಬರ್ 6ಕ್ಕೆ ಸೇರುವ ಸಮಿತಿಯು ತಾ. 18 ಅಥವಾ 19ರ ವರೆಗೆ ನಡೆದು ಘಟನೆಯ ದ್ವಿತೀಯ ವಾಚನವನ್ನು ಮುಗಿಸಿಕೊಳ್ಳುವದೆಂದು ನಿರೀಕ್ಷಿಸಲಾಗಿದೆ. ಆ ಮೇಲೆ ಹೆಚ್ಚಿನ ಕೆಲಸವೇನೂ ಇಲ್ಲದ ತೃತೀಯ ವಾಚನಕ್ಕಾಗಿ ಪ್ರಾಯಶಃ ದಶಂಬರ ತಿಂಗಳಲ್ಲಿ ಮುನಃ ಸೇರಿ, ಘಟನಾ ತಯಾರೀ ಕಾರ್ಯಗಳೆಲ್ಲವನ್ನೂ ಕ್ರಮಬದ್ಧವಾಗಿ ಪೂರೈಸಿಕೊಂಡು, 1950ನೇ ಜನವರಿ 26ರಲ್ಲಿ ಈ ಹೊಸ ರಾಜ್ಯ ಶಾಸನದೊಂದಿಗೆ ರಿಪಬ್ಲಿಕ್ ಭಾರತ'ವು ಅಸ್ತಿತ್ವಕ್ಕೆ ಬರಲಿದೆ. 1929ನೇ ದಶಂಬರದಲ್ಲಿ ಸೇರಿದ್ದ ಲಾಹೋರು ಕಾಂಗ್ರೆಸು 'ಸೂರ್ಣ ಸ್ವಾತಂತ್ರ್ಯವೇ ಭಾರತದ ಗುರಿ' ಎಂದು ನಿರ್ಣಯಿಸಿಕೊಂಡ ನಂತರ ಜನವರಿ ತಾ. 26 ಭಾರತದ 'ಸ್ವಾತಂತ್ರ್ಯ ದಿನ' ವಾಗಿ ಆಚರಿಸಲ್ಪಡುತ್ತಾ ಬಂದಿದೆ. 26 ನೇ ಜನವರಿಯೆಂಬುದು ಅಂದಿನಿಂದೀ ವರೆಗೆ 20ಬಾರಿ ಬಂತು. 21ನೇ ಸಲ 1950ರಲ್ಲಿ ಬರಲಿರುವ ಜನವರಿ 26ನಾಕಾರ ಸ್ವಾತಂತ್ರ್ಯವನ್ನು ಪ್ರತ್ಯಕ್ಷ ಜಾರಿಗೆ ತರಲಿದೆ; ಎಷ್ಟೋ ವರುಷಗಳಿಂದ ಭಾರತೀಯರು ನಾನಾರ್ಥ ಸಂಗ್ರಹ ಮತ್ತು ರಚನೆಮಾಡುತ್ತಾ ಬಂದಿರುವ ಸ್ವಾತಂತ್ರ್ಯ ಕಟ್ಟಡಕ್ಕೆ ಬರುವ ಜನವರಿ ತಾ. 26ಲ್ಲಿ ಕಳಶವೇರಲಿದೆ. ಲಾಹೋರು ಕಾಂಗ್ರೆಸಿನ ಸ್ವಾತಂತ್ರ್ಯ ನಿರ್ಧಾರ ಕಾಲದಿಂದಾರಂಭಿಸಿ ರಿಪಬ್ಲಿಕ್ ಭಾರತದ ಸ್ವತಂತ್ರ ರಾಜ್ಯಾಂಗವ್ಯವಹಾರಿಗೆ ಬರುವ ವರೆಗಿನ ಅವಧಿಯ ಆ ಬಿಡುವಿಂದೀ ತುದಿಯ ತನಕ ದೃಷ್ಟಿಯೋಡಿಸಿದಾಗ ಮನುಷ್ಯಯತ್ನ ಮತ್ತು ಕಾಲಮಹಾತ್ಮೆಯು ಮನಸ್ಸಿಗೆ ಗಾಬರಿಹುಟ್ಟಿಸುತ್ತವೆ. ಆ ಕಾಲದಲ್ಲಿ ಬ್ರಿಟಿಷರು ಮಾತ್ರವಲ್ಲ, 'ಸಂಘಾವಿತ'ರೆನ್ನಿಸಿದ್ದ ಮಿತಗಾಮೀ ಭಾರತೀಯರು ಕೂಡಾ ಕೇವಲ ಹುಗಲ್ಬನಸೆಂದು ತಾತ್ಸಾರ ಮಾಡುತ್ತಿದ್ದ ವಿಷಯವಿದು-ಈ ಪೂರ್ಣ ಸ್ವಾತಂತ್ರ್ಯ! ಅಂದಿನಿಂದೀ ವರೆಗೆ ಎಂತೆಂತಹ ಅಂದೋಲನೆಗಳಾಗಿ ಹೋದುವು-ಏನೇನು ಪರಿವರ್ತನೆಗಳಾಗಿವೆ! ಆದರೂ ಆಗ ದೂರದ ಗುರಿಯಾಗಿದ್ದ ಸ್ವಾತಂತ್ರ್ಯವು, ವಸ್ತು ಸ್ಥಿತಿಯಾಗಿ ನಿಲ್ಲುವಂತೆ ಮಾಡಬಲ್ಲುದಾವುದೂ ನಡೆಯಲಿಲ್ಲ. ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯ ಬಂತು; ರೂಪುಗೊಳ್ಳುತ್ತಿದೆ.

ಸ್ವರಾಜ್ಯಭಾರ ಚೌಕಟ್ಟು ನಿರ್ಮಾಣದ ಈ ಕೆಲಸವನ್ನು ಘಟನಾ ಸಮಿತಿಯು ಸುಮಾರು ಮೂರು ವರುಷಗಳಿಂದ ಮಾಡುತ್ತಾ ಬಂದಿದೆ ಕಾರ್ಯದ ಕೆಲವಂಶ ನಿನ್ನೂ ಬಾಕಿಯಿರುವ ಈ ಸಂದರ್ಭದಲ್ಲಿ ಹೊಸ ರಾಜ್ಯ ಶಾಸನದ ಅಮೂಲಾಗ್ರ ವಿಮರ್ಶೆ ನಡಿಸ ಪುದೆನಃ ಧ್ಯ. ಆದರ ಅಂದಚೆಂದವನ್ನು ಅವಲೋಕಿಸಲು ಇನ್ನು ಸ್ವಲ್ಪ ಕಾಲ ತಡವಾಡಬೇಕು; ಆದರೆ ಆಕಾರವು ಈಗಲೇ ಸ್ಪಷ್ಟವಿದೆ. ನಮ್ಮ ಹೊಸ ರಾಜ್ಯಾಂಗ ಶಾಸನದ ರೂಪ ರೇಖೆಯ ಕುರಿತು ಸರ್ವಸಾಮಾನ್ಯವಾಗಿ ತಿಳಿಯಬೇಕಾದಷ್ಟನ್ನು ಈಗಲೇ ತಿಳಿದುಕೊಳ್ಳಬಹುದು. ಭಾರತವು ಅಖಂಡ ರಾಷ್ಟ್ರ ಮತ್ತು ಭಾರತೀಯರು ಏಕಜನಾಂಗವೆಂದು ಭಾವಿಸಿಕೊಂಡೇ– ಈ ಏಕರೂಪವನ್ನು ಸುದೃಢ ಶಾಸ್ತ್ರತಗೊಳಿಸಬೇಕೆಂಬ ನಿರ್ಧಾರದಿಂದಲೇ– ನವರಾಜ್ಯ ಶಾಸನದ ಚೌಕಟ್ಟನ್ನು ರೂಪಿಸಲಾಗಿದೆ ಎಂಬುದು ಅದರ ನೋಟ ಮಾತ್ರದಿಂದ ಹೊಳೆಯುವ ಸಂಗತಿ. ಇಂತಹ ಅಖಂಡತಾರಚನೆಯು ಸಾಧ್ಯವಾದುದು ಪಾಕಿಸ್ತಾನವನ್ನು ಪ್ರತ್ಯೇಕಿಸಿ ಬಿಟ್ಟುದರಿಂದಾಗಿಯೆ; ಈ ವಿಕರೂಪವು ಅಗತ್ಯವೆಂಬ ಆಗ್ರಹ ಮಾಡಿದುದು ಕಡಾ ಪಾಕಿಸ್ತಾನ್ ಸ್ಥಾಪನಾ ಸಂಬಂಧದ ಅನುಭವಗಳ ಮೇಲಿಂದಲೇ. ಹಾಗಲ್ಲವಾಗಿದ್ದರೆ ಧರ್ಮ, ಜಾತಿ, ಪ್ರಾಂತ್ಯ, ಭಾಷಾ ಸಂಬಂಧದ ವಿವಿಧ ಅಭಿಮಾನಾಸಕ್ತಿಗಳಿಂದ ತುಂಬಿ ಹೋಗಿರುವ ಭಾರತದಂತಹ ವಿಶಾಲ ರಾಷ್ಟ್ರವನ್ನು ಸಬಲ ಕೇಂದ್ರಾಧಿಕಾರದಡಿಯಲ್ಲಿ ಏಕಾಕಾರ ಕೊಟ್ಟು ನಿಲ್ಲಿಸಿಡುವುದು ಕಷ್ಟವಾಗುತಿತ್ತು. ಹಿಂದಿಯನ್ನು ರಾಷ್ಟ್ರದ ಸರಕಾರೀ ಭಾಷೆಯಾಗಿ ನಿರ್ಣಯಿಸುವ ಸಂಬಂಧದ ಚರ್ಚೆಯು ಮೊನ್ನೆ ಘಟನಾ ಸಮಿತಿಯಲ್ಲಿ ನಡೆದಾಗ ಮದ್ರಾಸ್ ಪ್ರಾಂತ್ಯದ ಸದಸ್ಯರು ಮತ್ತು ಹಿಂದಿಯೇ ಪ್ರಾಂತೀಯ ಭಾಷೆಯಾಗಿರುವ ಉತ್ತರ ಭಾಗದ ಸದಸ್ಯರೊಳಗೆ ನಡೆದ ಭಾವನಾ ಘರ್ಷಣೆಯು ಮೇರೆಯಿಂದಲೇ, ಭಾರತವು ಎಂತೆಂತಹ ತೀವ್ರ ಭಿನ್ನಾಭಿಪ್ರಾಯ, ಭಿನ್ನಾಸಕ್ತಿಗಳಿರುವ ಜನರ ದೇಶವೆಂಬುದು ಹೊಳೆಯದಿರದು. ಇಂತಹ ರಾಷ್ಟ್ರವು ಈ ಭಿನ್ನತೆಗಳ ದೆಸೆಯಿಂದಲೇ ಒಳಗಡೆಯಲ್ಲಿ ಭಿನ್ನಭಿನ್ನಗೊಳ್ಳುವದು ಸಂಭವನೀಯ; ಈ ಅಂತರ್ದೌರ್ಬಲ್ಯದ ದೆಸೆಯಿಂದ ಹೊರಗಿನ ಧಾಳಿಗಳಿಗೆ ಸುಲಭದಲ್ಲಿ ಬಲಿಬೀಳುವದೂ ಸಾಧ್ಯವೇ ಇಂತಹ ಅಪಾಯಗಳು ರಾಷ್ಟ್ರದ ಯಾವುದೇ ಭಾಗಕ್ಕೆ ಅಥವಾ ಯಾವುದೇ ಅಭಿರುಚಿ ಆಸಕ್ತಿಕಟ್ಟಿಕೊಂಡವರಿಗೆ, ಎಂದಿಗೂ ಸುಖವನ್ನೊದಗಿಸಲಾರವು. ಆದ್ದರಿಂದ ಒಳಹೊರಗಿನ ಅಪಾಯಗಳಿಗವಕಾಶ ದೊರೆಯದಂತೆಯೂ, ರಾಷ್ಟ್ರವು ಸಮಾನವಾಗಿ ಹಾಗೂ ಸಾರ್ವತ್ರಿಕವಾಗಿ ಪ್ರಗತಿ ಹೊಂದಲಾಗುವಂತೆಯೂ ಸಶಕ್ತ, ಸುದೃಢ ಹಾಗೂ ದೇಶದ ಶಿರಸ್ಸು ಮತ್ತು ಹೃದಯವಾಗಬಲ್ಲ ಕೇಂದ್ರವು ಹೊಸ ರಾಜ್ಯಾಂಗ ಶಾಸನದ ನ್ಯಸ ರೂಪಿಸಲ್ಪಟ್ಟಿದೆ. ಪ್ರಾಂತ್ಯಾಧಿಕಾರಗಳನ್ನು ನಿಯಮಿತಗೊಳಿಸಲಾಗಿದೆಯಲ್ಲದೆ, ಕೆಲವೊಂದು ವಿಶೇಷ ಸಂದರ್ಭಗಳಲ್ಲಿ ಇಚ್ಛಿಸಿದ ಅಧಿಕಾರವನ್ನು ಮತ್ತು ಸರ್ವಾಧಿಕಾರಗಳನ್ನು ಕೇಂದ್ರವೇ ವಹಿಸಿಕೊಳ್ಳುವ ಕ್ರಮ ಬಂದಿದೆ. ಪ್ರಾಂತೀಕ ಸರಕಾರಗಳ ಪಾಲಿನ ಅಧಿಕಾರಗಳನ್ನು ಕಡಿಮೆ ಮಾಡಿದುದು ಸಾಮಾನ್ಯ ಕಾಲಗಳಲ್ಲಿ ಅನ್ಯಾಯವಾಗಿ ತೋರಬಹುದು; ಆದರೆ ಅಂಬಲೇ ಸಹಜವಾಗಿ ಟೀಕೆಗಳು ಕೇಳಿ ಬರುತ್ತಿವೆ. ಆದರೆ ರಾಷ್ಟ್ರದ ಒಕ್ಕಟ್ಟು, ಸುರಕ್ಷಿತತೆ, ಎಂದರೆ ಅದೇನೂ ಬೇರೆಯವರ ಪಾಲಿನದಾಗಿರದೆ, ಪ್ರತಿಯೊಂದು ಪ್ರಾಂತ್ಯದ ಮತ್ತು ಪ್ರತಿಯೊಬ್ಬನದ್ದೆಂಬುದನ್ನು ಗಮನಿಸಬೇಕು ಈ ಅನುಕೂಲತೆಗಳೊಂದಿಗೆ ಇನ್ನೊಂದೆಡೆ ತಮಗಾಗುವ ಅನಾನುಕೂಲತೆಗಳನ್ನು ತೂಗಿ ನೋಡಿಕೊಂಡೇ ನಿರ್ಧರಿಸಬೇಕು. ತುಲನಾತ್ಮಕವಾಗಿ ಹೇಳುವುದಾದರೆ ಇಂದಿನ ಪ್ರಬಲ ಕೇಂದ್ರದ ವ್ಯವಸ್ಥೆಯು ತಪ್ಪಲ್ಲ. ಹೊಸ ರಾಜ್ಯ ಶಾಸನದಲ್ಲಿ ಕುಂದು ಕೊರತೆಗಳಿರಬಹುದು. ನೇರಾಗಿ ಪ್ರಾಯಸ್ಥರ ಮತದಿಂದಾರಿಸಲ್ಪಡದೆ, ಶಾಸನ ಸಭಾ ಸದಸ್ಯರಿಂದಾರಿಸಲ್ಪಟ್ಟರುವ ಘಟನಾ ಸಮಿತಿಯ ರಚನೆಯೇ ತಪ್ಪು, ಎಂಬ ಸಮಂಜಸವಾದಿಗಳ ಅಭಿಪ್ರಾಯವೇನೋ ಸರಿ. ಆದರೆ ಈ ಘಟನಾ ಸಮಿತಿ ರಚನೆಗೊಂಡಿದ್ದ ಆ ಕಾಲದ ಸ್ಥಿತಿಯೇ ಈ ವಿಧಾನಕ್ಕೆ ಕಾರಣ. ಮೇಲಾಗಿ, ಈಗ ರಾಜ್ಯಾಂಗ ತಯಾರಿಸುತ್ತಿರುವವರು ಜನತೆಯ ವಿಶ್ವಾಸಕ್ಕೆ ಅಪಾತ್ರರಿನ್ನೆಲಾಗುವದಿಲ್ಲ. ಈಗ ಚುನಾವಣೆ ನಡೆಸಿದರೂ ಜನಸಾಮಾನ್ಯರ ಇಂದಿನ ಮನೋಸ್ಥಿತಿಯಲ್ಲಿ ಘಟನಾ ಸಮಿತಿಯ ಈಗಿನ ಸದಸ್ಯರಲ್ಲಿ ಹೆಚ್ಚಿನವರು ಪುನಃ ಆರಿಸಲ್ಪಡುವರೆಂದು ನಿರೀಕ್ಷಿಸಬಹುದು. ಜನತೆಯನ್ನು ಸಾಧಾರಿಸಿದಲ್ಲಿ ಸಮಿತೀ ನಿರ್ಮಾಣದಲ್ಲೇ ಇರುವ ಮೂಲ ದೋಷವಾಗಲೀ, ನವ ರಾಜ್ಯಶಾಸನದಲ್ಲಿ ಬಹುದಾದ ಕುಂದುಕೊರತೆಗಳಾಗಲೀ, ಪ್ರಗತಿಗೆ ತಡೆಯಾಗಿ ಬರುವಂತಿಲ್ಲ. ಜನತೆಯ ದೌರ್ಬಲ್ಯಗಳನ್ನು ನಿವಾರಿಸಿದಂತೆ, ಮತ್ತು ದರ ದೆನ್ನಲ್ಲಿ ಜನತಾ ಬೆಂಬಲದಿಂದಲೇ ಘಟನಾ ದೋಷಗಳನ್ನೂ ನಿವಾರಿಸಿಕೊಳ್ಳಬಹುದು. ಆದ್ದರಿಂದ ಘಟನಾ ಸಮಿತಿ ಮತ್ತು ಘಟನಾ ವಿಧಾನಗಳ್ಕುರಿತು ಅತೃಪ್ತಿ ಪಡುವ ಅಥವಾ ಅಸಹಕಾರ ಮಾಡುವ ಬದಲಿಗೆ ಅದನ್ನು ತಂತಮ್ಮ ಧ್ಯೇಯಾನುಸಾರ ಸಾಧ್ಯವಿದ್ದಷ್ಟು ಸದುಪಯೋಗ ಪಡಿಸಿಕೊಳ್ಳಬೇಕಾದುದೇ ಈಗ ಎಲ್ಲರ ಕರ್ತವ್ಯ.

ಸ್ಟರ್ಲಿಂಗ್-ಟಿ

ಬ್ರಿಟಿಷ್ ಸರಕಾರವು ಅಕಸ್ಮಾತ್ತಾಗಿ ತನ್ನ ಪೌಂಡು ಸ್ಟರ್ಲಿಂಗಿನ ಮೌಲ್ಯ ವಿಚ್ಛೇದನ ಮಾಡಿಕೊಂಡಿದೆ. ಬ್ರಿಟಿಷ್ ಸರಕಾರದ ಹಣಕಾಸಿನ ಮಂತ್ರಿ ಸರ್ ಸ್ಟಾಫರ್ಡ್‌ಕ್ರಿಪ್ಸರು, ಹಣಕಾಸಿನ ಸಂಬಂಧದ ಮಾತುಕತೆಗಳಿಗಾಗಿ ವಾಷಿಂಗ್ಟನಿಗೆ ಹೋಗಿದ್ದವರು ಮರಳಿ ಬಂದ ಮರು ದಿನ ತಾ. 18ರಲ್ಲಿ ಸ್ಟರ್ಲಿಂಗಿನ ಮೌಲ್ಯ ತಗ್ಗಿಸುವ ನಿರ್ಧಾರವನ್ನು ಜಾಹೀರು ಮಾಡಿದರು. ತಾ. 19ರಂದೇ ಈ ಮೌಲ್ಯ ವಿಚ್ಛೇದನವು ಜಾರಿಗೆ ಬಂತು. ಆನಿರೀಕ್ಷಿತವಾಗಿ ಈ ಬದಲಾವಣೆಯನ್ನು ಜಾರಿಗೆ ತಂದ ಕುರಿತು ತನ್ನ ಅಕಾಶವಾಣೀ ಭಾಷಣದಲ್ಲಿ ಸರ್ ಕ್ರಿಪ್ಸರು ಈ ಕೆಳಗಿನ ಕಾರಣಗಳನ್ನು ಮುಂದಿಟ್ಟಿದ್ದಾರೆ. ಸಾರಾಂಶವಿದು: "ನಾರ್ಥಲ್ ಯೋಜನಾನುಸಾರವಾಗಿ ಬ್ರಿಟನು ಸಹಾಯ ಪಡೆಯುತ್ತಿದ್ದರೂ ಬ್ರಿಟನಿನ ಭಂಗಾರ ದಾಸ್ತಾನು ತೀವ್ರಗತಿಯಿಂದ ಸುರಿದಾಗುತ್ತಾ ಬರುತ್ತಿದೆ. ಬ್ರಿಟನು ಮತ್ತು ಆಸ್ಟ್ರೇಯಾ, ಭಾರತ, ಮುಂತಾದ ಕಾಮನ್‌ವೆಲ್ತ್ ವಾಷ್ಟ್ರಗಳು ಸ್ಟರ್ಲಿಂಗ್ ಕ್ಷೇತ್ರಗಳಾಗಿವೆ. ಈ ರಾಷ್ಟ್ರಗಳೆಲ್ಲವು ಅಮೇರಿಕದಂತಹ ಡೋಲರ್ ಕ್ಷೇತ್ರಗಳೊಂದಿಗೆ ವಿಶೇಷ ವ್ಯಾಪಾರ ವಹಿವಾಟುಗಳನ್ನು ನಡೆಸಬೇಕಾಗಿರುವುದರಿಂದ ಡೋಲರ್ ದಾಸ್ತಾನಿಡಬೇಕಾಗಿದೆ. ಹಾಗಾಗಿ ಈ ಸಮಸ್ಯೆಯು ಸ್ಟರ್ಲಿಂಗ್ ಕ್ಷೇತ್ರಗಳ ಬೇಕಿರುವಾಗಿರುವ ಬ್ರಿಟನಿಗೆ ವಿಶೇಷತಃ ಲಗಾವಾಗುತ್ತಿದ್ದರೂ, ಇದು ಎಲ್ಲಾ ಸ್ಟರ್ಲಿಂಗ್ ಕ್ಷೇತ್ರಗಳಿಗೆ ಅರ್ಥಾತ್ ಡೋಲರ್ ಕ್ಷೇತ್ರವಾಗಿರದ ಇಡೀ ಪ್ರಪಂಚಕ್ಕೆ ಲಗಾವಾಗುತ್ತದೆ. ಮಾತ್ರವಲ್ಲ, ನ್ಯಾಯವಿದನ್ನು ಏಕಾಕಿಯಾಗಿ ಬಗೆಹರಿಸಿಕೊಳ್ಳಲಾರವು. ಡೋಲರ್ ರಾಷ್ಟ್ರಗಳೂ ಈ ವಿಧಾನದಲ್ಲಿ ನಮಗೆ ಸಹಾಯವಾಗಬೇಕು. ಡೋಲರೇತರ ಕ್ಷೇತ್ರಗಳು ಹೆಚ್ಚು ಡೋಲರುಗಳನ್ನು ಸಂಪಾದಿಸಿಕೊಳ್ಳಬೇಕು. ಆದ್ದರಿಂದಪೌಂಡುಸ್ಟರ್ಲಿಂಗಿಗೆ ಈ ವರೆಗಿದ್ದ 4.03 ಡೋಲರು ಮೌಲ್ಯವನ್ನು 2.80 ಡೋಲರು ಮೌಲ್ಯಕ್ಕಿಳಿಸಲಾಗಿದೆ" ಈ ಧಾರಣೆ ಮತ್ತು ಈ ಬದಲಾವಣೆಯನ್ನು ಯಾರೂ ನಿರೀಕ್ಷಿಸದಿದ್ದ ದರಿಂದ ಅರ್ಥಿಕ ವಲಯಗಳಲ್ಲಿ ಒಮ್ಮೆ ಕಕ್ಕಾವಿಕ್ಕೆಯೆದ್ದಂತಾಗಿದೆ. ಬ್ರಿಟನು ತನ್ನ ಸ್ಟರ್ಲಿಂಗ್ ಮೌಲ್ಯವನ್ನು ಸೇ. 30 5ರಷ್ಟು ತಗ್ಗಿಸಿಕೊಂಡಂತಾಯಿತು. ಈ ಸಂಬಂಧದಲ್ಲೇಳಬಹುದಾದ ಗೊಂದಲಗಳ ನಿವಾರಣೆಗಾಗಿ ಬ್ರಿಟನಿನ ಎಲ್ಲಾ ಬೇಂಕುಗಳು ಮತ್ತು ಅರ್ಥಿಕ ವಹಿವಾಟು ಕೇಂದ್ರಗಳು ತಾ 19ರಲ್ಲಿ ಮುಚ್ಚಲ್ಪಟ್ಟಿದ್ದವು.

ರೂಪಾಯಿ ಬೆಲೆ.

ಬ್ರಿಟಿಷ್ ಸರಕಾರವು ತನ್ನ ಪೌಂಡ್ ಸ್ಟರ್ಲಿಂಗಿನ ಬೆಲೆ ತಗ್ಗಿಸಿಕೊಂಡೊಡನೆಯೇ ಸ್ಟರ್ಲಿಂಗ್ ಕ್ಷೇತ್ರದೊಳಗಿನ ಭಾರತ ಸರಕಾರವೂ ಅದಕ್ಕನುಗುಣವಾಗುವಂತೆ ತನ್ನ ರೂಪಾಯಿಯ ಆದಲು ಬದಲಾವಣಾಧಾರಣೆಯನ್ನು ಅಷ್ಟೇ ಪಾಲು ತಗ್ಗಿಸಿಕೊಂಡಿದೆ. ಆಂತರ್ರಾಷ್ಟ್ರೀಯ ಅರ್ಥಿಕ ನಿಧಿಯ ಅಭಿಮತ ಪಡೆದು ಇದೇ ತಾ 19

— ರೂಪಾಯಿ ಮೌಲ್ಯ ವಿಚ್ಛೇದನಾ.

ರಲ್ಲಿ ಭಾರತ ಸರಕಾರವು ಈ ಬದಲಾವಣೆಯನ್ನು ಜಾಹೀರುಮಾಡಿದೆ. ಈ ಸಂಬಂಧದಲ್ಲೇಳಬಹುದಾದ ಉದ್ವೇಗಾವೇಗ ಮತ್ತು ಬಜಾರಿನ ಅಸ್ತವ್ಯಸ್ತತೆಗಳನ್ನು ತಪ್ಪಿಸುವುದಕ್ಕಾಗಿ ಸರಕಾರವು ಇದೇ ತಾ 19, 20, 21ರ ವರೆಗಿನ ಮೂರು ದಿನಗಳನ್ನು ರಜಾದಿನವಾಗಿ ಜಾಹೀರು ಮಾಡಿದುದರಿಂದ ಸರಕಾರದ ಎಲ್ಲಾ ಖಜಾನೆಗಳು, ಬೇಂಕುಗಳು, ಟಪ್ಪಾಲಾಫೀಸಿನ ಆರ್ಥಿಕಾಮದು ರಫ್ತುಗಳು ಮತ್ತಿತರ ಹೊಣಕಾಸಿನ ವಹಿವಾಟುಗಳು ಈ ಮೂರು ದಿನ ನಿಲ್ಲಿಸಲ್ಪಟ್ಟಿದ್ದುವು. ಸಾಕಿನ್ಯಾಸವು ತಾ19 ಮತ್ತು 20ನ್ನು ಬೇಂಕುಗಳ ರಜಾದಿನವಾಗಿ ಜಾಹೀರುಮಾಡಿದರೂ ತನ್ನ ರೂಪಾಯಿ ಮೌಲ್ಯದ ಕುರಿತು ಕೂಡಲೇ ನಿರ್ಣಯವೊಂದಕ್ಕೆ ಬಾರದೆ ಆಲೋಚನೆಗೀಡಾಗಿದೆ. ಭಾರತದಂತೆಯೇ ಆಸ್ಟ್ರೇಲಿಯಾ, ದಕ್ಷಿಣಾಫ್ರಿಕ, ಫ್ರಾನ್ಸ್, ಐರ್ಲೆಂಡು, ನ್ಯಾಜಿಲೆಂಡ್, ನೋರ್ವೆ, ಡೆನ್ಮಾರ್ಕ್, ಇಸ್ರಾಯೇಲ್, ಸ್ವೀಡನ್; ಈಜಿಪ್ಟ್ ಮೊದಲಾದ ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳೂ ಬ್ರಿಟನಿನ ಮೌಲ್ಯವಿಚ್ಛೇದನಾನುಸಾರ ತಂತಮ್ಮ ನಾಣ್ಯಗಳ ಧಾರಣೆ ತಿದ್ದಿಕೊಂಡಿವೆ.

ಆರ್ಥಿಕ ಗೊಂದಲ.

ಬ್ರಿಟನು ತಕ್ಷ ಸ್ಟರ್ಲಿಂಗ್ ಮೌಲ್ಯ ವಿಚ್ಛೇದನಾ ಮೂಲಕ ಶ್ರಮಂಚದ ಆರ್ಥಿಕ ರಂಗದಲ್ಲೇ ಒಂದು ಅಂದೋಲನವನ್ನೆಬ್ಬಿಸಿ ಬಿಟ್ಟಿದೆ. ತನ್ನ ಸಾಮಾನುಗಳನ್ನು ಅಗ್ಗದಂದಲ್ಲಿ ಹೊಂದೇಶಗಳಿಗೆ, ಅದರಲ್ಲೂ ಡೋಲರ್ ಕ್ಷೇತ್ರಗಳಿಗೆ ಮಾರಲಾಗುವ ಅನುಕೂಲತೆ ಸಂಪಾದಿಸಿಕೊಳ್ಳುವದೇ ಈ ಮೌಲ್ಯ ವಿಚ್ಛೇದನದಲ್ಲಿ ಬ್ರಿಟನಿಗಿದ್ದ ಮುಖ್ಯೋದ್ದೇಶವೆಂದು ನಂಬಲಾಗಿದೆ. ಆದಕ್ಕನುಸಾರವಾಗಿ ಆಕಸ್ಮಾತ್ತಾಗಿ ಭಾರತವು ತನ್ನ ರೂಪಾಯಿಯ ಮೌಲ್ಯ ವಿಚ್ಛೇದನ ಮಾಡಿಕೊಂಡುದರಿಂದ ರಾಷ್ಟ್ರದ ಒಳಗಿನ ವ್ಯಾಪಾರ ವಹಿವಾಟುಗಳಲ್ಲೂ ಪರಿಣಾಮಗಳಾಗಬಹುದು. ಭಂಗಾರದ ಬೆಲೆಯೇರಬಹುದೆಂಬ ವಾದ ಮತ್ತು ನಮ್ಮಲ್ಲೀಗಾಲೇ ಆದರ ಬೆಲೆಯು ಸಾಕಷ್ಟೇರಿರುವುದರಿಂದ ಇನ್ನು ಹೆಚ್ಚು ವಂತಿಲ್ಲವೆಂಬ ಪ್ರತಿವಾದವುವಹಿವಾಟುರಂಗಗಳಲ್ಲಿ ಕೇಳಿಬರುತ್ತಿವೆ. ಈ ಬದಲಾವಣೆಯ ಸರಿಯಾದ ಅಂದಾಜನ್ನು ಕಟ್ಟಲು ಅಸಾಧ್ಯವಾಗಿದೆ. ಆದಿಭಾಗದ ಆತುರ, ನಿರೀಕ್ಷೆಗಳೇ ಈಗ ಎಲ್ಲೆಲ್ಲೂ ಕಂಡುಬರುತ್ತಿವೆ. ಹದಿನೆಂಟು ವರುಷಗಳ ಮೊದಲೊಮ್ಮೆ ಬ್ರಿಟನು ತನ್ನ ಪೌಂಡುಸ್ಟರ್ಲಿಂಗನ ಮೌಲ್ಯವಿಚ್ಛೇದನ ಮಾಡಿಕೊಂಡಿದ್ದಿತು. ಇದೀಗ ಎರಡನೇ ಬಾರಿ. ಈ ಬಾರಿಯ ನಿರ್ಧಾರವನ್ನು ಸಂಬಂಧಪಟ್ಟ ಭಾರತ ಮೊದಲಾದ ಕಾಮನ್‌ವೆಲ್ತ್ ರಾಷ್ಟ್ರಗಳೊಡನೆ ಆಲೋಚಿಸಿಕೊಂಡೇ ಬ್ರಿಟನು ಮಾಡಿದಂತಿದೆ. ಇದರ ಪರಿಣಾಮವು ಇಂಗ್ಲಾಂಡಿನ ಆರ್ಥಸಚಿವ ಸರ್. ಕ್ರಿಪ್ಸರ ಊಹೆಗೆ ವಿರುದ್ಧವಾಗಬಾರದೆಂದಿಲ್ಲ, ಎಂದು ಆರ್ಥ ಶಾಸ್ತ್ರಜ್ಞರಿನ್ನಾಡಿದ್ದಾರೆ.

ಭಾರತಕ್ಕೆ ಹಾನಿ?

ಬ್ರಿಟನಿನ ಸ್ಟರ್ಲಿಂಗ್ ಮತ್ತು ಭಾರತದ ರೂಪಾಯಿಮೌಲ್ಯ ವಿಚ್ಛೇದನದಿಂದ ಭಾರತಕ್ಕೆ ನಷ್ಟವಿದೆಯೆಂದೂ ಲೆಕ್ಕಾಚಾರ ನಿಪುಣರು ಊಹಿಸಿದೆ. ಇದರ ಪರಿಣಾಮವಾಗಿ, ಭಾರತಕ್ಕೆ ಬ್ರಿಟನಿನಿಂದ ಬರಬೇಕಾಗಿರುವ ಸ್ಟರ್ಲಿಂಗ್ ಮೊತ್ತಗಳ ಡೋಲರ್ ಮೌಲ್ಯವು ತಗ್ಗುವದು. ಈ ಮೊದಲಿನ ಧಾರಣೆಯಂತೆ 15 ಮಿಲಿಯ ಪೌಂಡು ಸ್ಟರ್ಲಿಂಗ್‌ಗಳನ್ನು ವಸೂಲಿಸಿ 60ಮಿಲಿಯ ಡೋಲರುಗಳನ್ನು ಪಡೆಯಬಹುದಾಗಿದ್ದರೆ ಈಗಿನ ಧಾರಣೆಯಂತೆ ಇಷ್ಟೇ ಮೊತ್ತವನ್ನು ಪಡೆಯಲು 20ಮಿಲಿಯಕ್ಕೂ ಮಿಕ್ಕಿ ಸ್ಟರ್ಲಿಂಗುಗಳನ್ನು ನಾವು ಹಾಕಬೇಕಾಗುವುದು. ಸ್ಟರ್ಲಿಂಗ್ ಸಾಲಗಳ ಪರಿಮಾಣವನ್ನು ತಗ್ಗಿಸಬೇಕೆಂದು ಬ್ರಿಟನಿನ ಕೆಲವು ಜಿಪುಣರು ಮೊದಲಿನಿಂದಲೂ ವಾದಿಸುತ್ತಿದ್ದರು. ಇಂದಿನ ಧಾರಣೆ ಬದಲಾವಣೆಯು ಅವರ ಇಚ್ಛೆಯನ್ನು ಈಡೇರಿಸಿದಂತಿದೆ. ರೂಪಾಯಿಯ ಮೌಲ್ಯ ವಿಚ್ಛೇದನದ ಸದ್ಯದ ಪರಿಣಾಮವು ಭಾರತಕ್ಕೆ ಪ್ರತಿಕೂಲವಾಗುವುದೆಂಬುದು ಸ್ಪಷ್ಟವಿದೆ. ಇದರ ಪರಿಣಾಮವಾಗಿ ಡೋಲರ್ ಕ್ಷೇತ್ರವಾದ ಅಮೆರಿಕದ ಸಾಮಾನುಗಳಿಗೆ ಭಾರತವು ಕೂಡಲೇ ಸೇ. 30ಕ್ಕಯಷ್ಟು ಹೆಚ್ಚಿಗೆ ಧಾರಣೆ ಕೊಡಬೇಕಾಗುವದು. ಭಾರತದ ಔದ್ಯೋಗಿಕ ಹುನ್ನಾರ್ತನಗೀಗ ಅವಶ್ಯವಿರುವ ಅಮೆರಿಕದ ಯಂತ್ರ ಸಾಮಗ್ರಿಗಳೇ ಮೊದಲಾದವುಗಳಿಗೆ ೩ನೇ ಅಂಶ ಕ್ರಯವೇರುವುದು. ಡೋಲರ್ ಕ್ಷೇತ್ರಗಳಿಂದ ಭಾರತಕ್ಕಾಮದಾಗುವ ಆಹಾರ ವಸ್ತುಗಳು, ಯಂತ್ರೋಪಕರಣಗಳೇ ಮೊದಲಾದವುಗಳ ಮೌಲ್ಯವು ಇದೇ ಪರಿಮಾಣದಲ್ಲಿ ಹೆಚ್ಚುವದು. ಬ್ರಿಟನಿಗೆ ಅಮೇರಿಕದಿಂದ ಬರುತ್ತಿರುವ, ಈ ವರ್ಷದಲ್ಲೇ 900 ಮಿಲಿಯ ಪೌಂಡುಗಳಷ್ಟುಡೋರೆತಿರುವ, ಸಹಾಯದಂತಹ ಹೊರಗಿನ ಸಹಾಯವಾವುದೂ ಭಾರತಕ್ಕಿಲ್ಲ. ತನ್ನ ಔದ್ಯೋಗಿಕಾಭಿವೃದ್ಧಿಗಾಗಿ ಅತಿ ಹೆಚ್ಚಿನ ಉಪಕರಣಗಳನ್ನು ಭಾರತವು ಹೊರಗಿನಿಂದಲೇ ಈಗ ತರಿಸಿಕೊಳ್ಳುತ್ತಿದೆ. ರಾಷ್ಟ್ರದೊಳಗಡೆ ಧಾರಣೆಗಳೇನೂ ಸ್ಥಿರತೆಕ್ಕೆ ಬಂದಿಲ್ಲ. ಇಂತಹ ಸ್ಥಿತಿಯಲ್ಲಿ ಈಗ ಬಂದಿರುವ ಮೌಲ್ಯವಿಚ್ಛೇದನವುದಾ ರಾಷ್ಟ್ರಕ್ಕೆ ನಷ್ಟದಾಯಕ ಹೊರತು ಲಾಭಕರ ವಲ್ಲವೆಂದೂ ಆರ್ಥಿಕಾನುಕೂಲ ವಾತಾವರಣವು ರಾಷ್ಟ್ರದಲ್ಲಿ ನಿರ್ಮಾಣಗೊಂಡಿದ್ದಾಗ ತರುವ ಇಂತಹ ಬದಲಾವಣೆ ಮಾತ್ರ ಹಿತಕರವಾಗಬಹುದೆಂದೂ ಅರ್ಥತಜ್ಞರ ಅಭಿಪ್ರಾಯ. ಪ್ರಧಾನ್ಯಮಂತ್ರಿ ಪಂಡಿತ ಜವಾಹರಲಾಲರು ಈ ಮೌಲ್ಯವಿಚ್ಛೇದನಾ ಘೋರನೆಯ ಕಾರಣ ಮತ್ತು ಪರಿಣಾಮಗಳನ್ನು ವಿವರಿಸಿ ಇದೇ ತಾ 20ರಲ್ಲಿ ಆಕಾಶವಾಣಿ ಭಾಷಣವಿತ್ತಿದ್ದಾರೆ.

(ಜನೇ ಪುಟದಿಂದ ಮುಂದುವರಿದುದು)

ಉದ್ವೇಗಪರ ವಿಜಾರ ವಿಮರ್ಶೆಗಳ ನಂತರ ಘಟನಾ ಸಮಿತಿಯಲ್ಲಿ ನಿರ್ಧಾರವಾಗಿದ ಪ್ರಸೃತವಸ್ತು ರಾಷ್ಟ್ರಭಾಷೆಯಾಗಿ ಇಡಬೇಕೆಂಬ ಸೂಚನೆಯಿದ್ದಿತು. ಅಂತೆಯೇ ಹಿಂದುಸ್ತಾನಿಯಿಂದ ಆರಂಭಿಸಿ, ಇತರ ಹೆಲವು ಬಾಸೆಗಳ ಪರವಾಗಿಯೂ ಸೂಚನೆಗಳು ಬಂದೆ ಬಂದಿದ್ದುವು. ದೇವನಾಗರೀ ಅಂಕೆಗಣಿತಗಳನ್ನೇ ಅಂಗೀಕರಿಸಿಕೊಳ್ಳಬೇಕೆಂಬ ವಾದವೂ ಪ್ರಾಮುಖ್ಯವಾಗಿದ್ದಿತು. ರಾಜ್ಯ ತೀರ್ಮಾನದಂತೆ ಹಿಂದಿ ತೀರ್ಮಾನವೊಂದು ಕಟ್ಟಕಡೆಗಾಗಿದೆ. ಅದರ ರೂಪರೇಷೆ ಹೀಗಿದೆ:–ಭಾರತದ ಸರಕಾರೀ ಭಾಷೆಯು ಹಿಂದಿ. ದೇವನಾಗರಲಿಪಿ; ಅಂತರ್ರಾಷ್ಟ್ರೀಯ ಸಂಖ್ಯಾಗಣಿತಗಳೇ ಅಂಕೆಗಳು. ಮುಂದಿನ ಹದಿನೈದು ವರುಷಗಳ ವರೆಗೆ ಇಂಗ್ಲೀಷೇ ಸರಕಾರೀ ಭಾಷೆಯಾಗಿ ಇರತಕ್ಕದ್ದು. ಈ ಅವಧಿಯೊಳಗೆ ಯಾವುದೇ ಅಧಿಕಾರೀ ಉದ್ದೇಶಗಳಿಗಾಗಿ ಇಂಗ್ಲಿಷಿನೊಟ್ಟಿಗೆ ಹಿಂದಿಯನ್ನೂ ಅಂತರ್ರಾಷ್ಟ್ರೀಯ ಅಂಕೆ ಸಂಖ್ಯೆಗಳೊಂದಿಗೆ ಹಿಂದೀ ಅಂಕೆ ಸಂಖ್ಯೆಗಳನ್ನೂ ಉಪಯೋಗಿಸಲು ಅಧ್ಯಕ್ಷರು ಬಿಡಬಹುದು. ಈ 15 ವರುಷಗಳ ನಂತರ ಇಂಗ್ಲೀಷ್ ಭಾಷಾ ಉಪಯೋಗ ಮತ್ತು ಹಿಂದೀ ಅಂಕೆಗಳ ಉಪಯೋಗದ ಸಂಬಂಧವಾಗಿ ಪಾರ್ಲಿಮೆಂಟು ಮನಃ ಚರ್ಚಿಸಿ ನಿರ್ಣಯಮಾಡುವದು. ಭಾರತದ ಔದ್ಯೋಗಿಕ, ಸಾಂಸ್ಕೃತಿಕ, ಹಾಗೂ ವೈಜ್ಞಾನಿಕ ಪ್ರಗತಿಗಳ ಕಡೆಗೂ ಹಿಂದೀ ಮಾತಾಡದ್ದಭಾಗಗಳ ಹಿತಸಂಬಂಧಗಳಿಗೆ ಹಾನಿಯಾಗದಂತೆಯೂ ಸಂಯಾದ ಲಕ್ಷ್ಯ ಕೊಟ್ಟು ಹಿಂದಿಯನ್ನು ಶ್ರಮಬದ್ಧ ಪ್ರಯೋಗಾಭಿವೃದ್ಧಿಗೊಳಿಸುವ ಕ್ರಮಗಳ ಶಿಫಾರಸುಗಳನ್ನು ಮಾಡುವದಕ್ಕಾಗಿ ವಿವಿಧ ಪ್ರಾಂತಿಕ ಭಾಷೆಗಳ ಪ್ರತಿನಿಧಿಗಳುಳ್ಳ ಸಮಿತಿಯೊಂದನ್ನು ಅಧ್ಯಕ್ಷರು ನೇಮಿಸಿಕೊಳ್ಳಬೇಕು. ಆದರ ವರದಿಯು ಪರಿಶೀಲನೆಗಾಗಿ ಪಾರ್ಲಿಮೆಂಟಿನ ಎರಡೂ ಸಭೆಗಳ ಜತೆ ಸಮಿತಿಯೊಂದಕ್ಕೆ ಒಪ್ಪಿಸಲ್ಪಟ್ಟು ಕೈಕೊಳ್ಳಬೇಕಾದ ಕಾರ್ಯಕ್ರಮಗಳನ್ನು ಈ ಜತೆ ಸಮಿತಿಯು ಅಧ್ಯಕ್ಷರಿಗೆ ಶಿಫಾರಸುಮಾಡಬೇಕು. ಅಧಿಕಾರೀ ರಂಗದಲ್ಲಿ ಇಂಗ್ಲಿಷನ್ನು ಈಗಲೇ ಬಿಟ್ಟುಕೊಡಲು ತಯಾರಾಗಲ್ಲ ಪ್ರಾಂತ್ಯಗಳು ಅಧ್ಯಕ್ಷರ ಅನುಮತಿ ಪಡೆದುಕೊಂಡು ಹಿಂದಿ ಅಥವಾ ಬೇರಾವುದೇ ಭಾಷೆಯನ್ನು ತೀರ್ಮಾನ ಮತ್ತು ಡಿಕ್ರಿಗಳ ವಿಷಯ ಹ್ಯಾಕೋರ್ಟುಗಳಲ್ಲಿಯೂ, ಶಾಸನ ಸಭೆಗಳಲ್ಲಿಯೂ ಜಾರಿಗೆ ತರಬಹುದು. ಆದರೆ ಶಾಸನ ಸಭೆಗಳಲ್ಲಾಗುವ ಶಾಸನಗಳು, ಹುಕುಮುಗಳು ಮೊದಲಾದುವುಗಳನ್ನು ಇಂಗ್ಲಿಷಿನಲ್ಲಿಯೂ ಪ್ರಕಟಿಸಬೇಕು. ಎರಡು ಅಥವಾ ಮೂರು ಪ್ರಾಂತ್ಯಗಳು ತಮ್ಮೊಳಗಿನ ವಹಿವಾಟುಗಳನ್ನು ಹಿಂದಿಯಲ್ಲೇ ನಡಿಸಬೇಕು. [illegible] ಹಾಗೂ ಮಾಡಬಹುದು.

WANTED

Wanted a trained mathematics or science graduate knowing Kannada for temporary vacancy till end of may. Christian preferred. Apply immediately to

The correspondet,

Christian High School,

Udipi.

DR. OSBORNE'S

Famous

REMEDY-REJUVENATOR

"SUPER D'SELIPHOSE"

with atomised GOLD. Now available in India. A boon to the happy & suffering humanity. Contains Vitamins, A. B C D.- Valuable literature on REJUVENATION & brilliant appreciative letters from Doctors & gentlemen sent free on request. Apply early or ask your chemist Price Rs 6/- only. (Full course)- Distributors.

R. A. SIMONS Esqr a M. C. UDIPI, SOUTH KANARA.

ಶ್ರೀ ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ.

ಇದೇ ತಾ. 30ನೆ ಶುಕ್ರವಾರ ಸಾಯಂಕಾಲ ಘಂಟೆ 3-45ಕ್ಕೆ

ಕರ್ನಾಟಕ ಸಂಘದ ಆಶ್ರಯದಲ್ಲಿ

ಬೋರ್ಡು ಹೈಸ್ಕೂಲಿನ ಪೀಪಲ್ಸ್ ಹಾಲಿನಲ್ಲಿ

ದಿವಂಗತ ಶ್ರೀ ಕೊರಡ್ಕಲ್ ಶ್ರೀನಿವಾಸರಾಯರ

ತೈಲಚಿತ್ರ ಅನಾವರಣವೂ

[ಜನಾಬ್ ಎಚ್. ಎಸ್. ಹುಸ್ಸೇನ್, ಎಮ್. ಎಲ್. ಎ. ಅವರಿಂದ]

ಕೊರಡ್ಕಲ್ ಸ್ಮಾರಕ ಗ್ರಂಥದ ಉಡ್ಡಾಟನೆಯೂ

[ಶ್ರೀ ನುಂಜೇಶ್ವರ ಸೋನಿಂದ ಸೈಗಳಿಂದ]

ಜರಗಲಿವೆ.

ಸರ್ವರೂ ಬಂದು ಸಹಕರಿಸಬೇಕಾಗಿ ಆದರಪೂರ್ವಕ ಅಪೇಕ್ಷಿಸುವ.

ಡಾ। ಸುಂದರರಾಮು ಪೈ, ಬೈಲೂರು ವಾಸುದೇವರಾವ್, ಕೆ.ಎಚ್.ಶೆಟ್ಟಿ

ಎಕ್ಸ್‌ಪ್ರೆಸ್ ಬಸ್ಸುಗಳು

ಸಾಮಾನ್ಯದರಕ್ಕಿಂತ ಒಂದೂವರೆಪಾಲು ಚಾರ್ಜು ಪಡೆಕೊಂಡು ಕಾರ್ಕಳದಲ್ಲಿನಮಾತ್ರ ಐದು ಯಾ ಹತ್ತು ನಿಮಿಷ ನಿಂದು ಎರಡು-ಎರಡೂವರೆ ಗಂಟೆಯೊಳಗೆ ಉಡುಪಿಯಿಂದ ಮಂಗಳೂರಿಗೂ, ಮಂಗಳೂರಿನಿಂದ ಉಡುಪಿಗೂ ಎರಡೆರಡು ಎಕ್ಸ್‌ಪ್ರೆಸ್ ಸರ್ವೀಸುಗಳು ಓಡಾಡುತ್ತಿವೆ. ಆದರೆ ಇತ್ತೀಚೆಗೆ ಆವುಗಳಲ್ಲಿ ಪ್ರಯಾಣ ಮಾಡುವ ಪ್ರಯಾಣಿಕರ ಮುಂದಿನ ಸ್ಥೈಯನ್ನು ಹೇಳಿಕ್ಕೆ ತೀರದಾಗಿದೆ. ಡೋಸ್ತಿಗಳನ್ನು' ಅಲ್ಲಲ್ಲಿ ಅಪಾಯ ರಫ್ತು ಮಾಡುವ ವಿಜಾರವಂತರಿಲ್ಲ. ಕೆಲವು ಸಲ ಹಾಳು ಬಸ್ಸುಗಳನ್ನು ಹಾಕಿ ಪ್ರಯಾಣಿಕರ ನೆತ್ತಿ ಬೇಸಾಡಿಸಿದ್ದುಂಟು. ಉಪಾಹಾರಗಾರ್ಥವಾಗಿ ಇದೇ ತಾ 20ರಲ್ಲು ಮಂಗಳೂರಿನಿಂದ ಮಧ್ಯಾಹ್ನ 2½ ಕಾಸಿಗೆ ಹೊರಡ ಬೇಕಾಗಿದ್ದ ಎಕ್ಸ್‌ಪ್ರೆಸ್ ಬಸ್ಸು ಕಾದು ಕಾದು ಸುಸ್ತಾಗಿ ಒರುಮೂರು ಗಂಟೆಗೆ ಹೇಗೂ ಬಂದು ಪ್ರಯಾಣಿಕರನ್ನು ತುಂಬಿಸಿಕೊಂಡು ಹೊರಡಕ್ಕೆ ಟ್ಟಿಯಂಗ್ಯಾರೇಜಿಗೆ ಹೋದಾಗ, ಅಲ್ಲಿ ಸುಮಾರು ಹತ್ತು ನಿಮಿಷದ ಮೇಲೆ ಹೊಂಟಿತು. ಈ ಬಸ್ಸು ಮೂರು ಸಾಲ್ಕು ಕಿಲೋಮೀಟ್ರಿ ನಂತರ ಹೇಗೂ ತ್ರೈವರನ ಸಾಹಸದಿಂದ ಹಿರಿಯಡ್ಕದ ವರೆಗೆ ಬಂತು. ಅಲ್ಲಿಂದೆ ಬೇರೆ ಬಸ್ಸು ತರಿಸಿ ಉಡುಪಿಗೆ ಪ್ರಯಾಣಿಕರನ್ನು ಜಯಿಸುವ ಪರಿಸ್ಥಿತಿ ಒದಗಿತು. ಇನ್ನಾದರೂ ಒಳ್ಳೆಯ ಬಸ್ಸುಗಳನ್ನು ಹಾಕುವಂತೆಯೂ ಗಾಡಿ ಪ್ರಕಾರ ಅವುಗಳು ಹೊರಡುವ ತಲಪುವಂತೆಯೂ ತಕ್ಕ ವ್ಯವಸ್ಥೆಯನ್ನು ಸಂಬಂಧ ಪಟ್ಟವರು ಮಾಡಿಯಾರು ಎಂದು ನಿರೀಕ್ಷಿಸುವ ಪುಟಿಗೆ

ಉಡುಪಿ

ಕರ್ನಾಟಕ ಸಂಘ, ಉಡುಪಿ:— ಇದರ ವರ್ಧಂತಿ ಹಾಗೂ ಸಾಹಿತ್ಯೋತ್ಸವ ಸಮಾರಂಭಗಳು ತಾ 27-9-49ರಿಂದ 1-10-49ರ ತನಕ ಜರಗುವುವು- ಮೊದಲದಿನ ಮಂಗಳವಾರ ಸಂಜೆ ಪಂಡಿತ ವೆಂಕಟರಾಮಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆ. ಮರುದಿನ ಬೆಳಿಗ್ಗೆ ಸಂಘದ ಕಾರ್ಯವಾಚನ ಸ್ಪರ್ಧೆ, ಸಾಹಿತ್ಯೋತ್ಸವ. ಸಂಜೆ ಗಂಟೆ 3-45 ಕ್ಕೆ ಶ್ರೀ ನುಂಡೇಶ್ವರ ಗೋವಿಂದ ಪೈಗಳಿಂದ ಶ್ರೀ ಕೊರಡ್ಕಲ್ ಸ್ಮಾರಕ ಗ್ರಂಥದ ಉದ್ಘಾಟನ, ಬಳಿಕ ಜನಾಬ್ ಎಚ್. ಎಸ್. ಪುಸ್ಸೀನ್ ಸಾಹೇಬ್, ಎಮ್. ಎಲ್. ಎ. ಅವರಿಂದ ಶ್ರೀ ಕೊರಡ್ಕಲ್ಲರ ತೈಲಚಿತ್ರದ ಅನಾವರಣ, ಭಾಷಣ, ಕಾವ್ಯವಾಚನ, ಇತ್ಯಾದಿ. ರಾತ್ರಿ ನಾಟಕ ಪ್ರದರ್ಶನ. ತನಿವಾರ ದಿವಸ ಬೆಳಿಗ್ಗೆ ಸಾಹಿತ್ಯೋತ್ಸವದ ಸಮಾಪನ. ಬಹುಮಾನ ವಿತರಣ, ಸಂಜೆ ಭಾಷಣ, ವೀಣಾವಾದನ, ಯಕ್ಷಗಾನ ತಾಳಮದ್ದಳೆಗಳಾಗುವುವು. ಈ ಐದು ದಿನಗಳ ಕಾರ್ಯಕ್ರಮಗಳೂ ಬೋರ್ಡಿಂಗ್ ಹೈಸ್ಕೂಲ್ ಪೀಪಲ್ಸ್‌ಪಾಲಿನಲ್ಲಿ ಜರಗುವುವು

ಪ್ರಚಾರ ಸಭೆ—ದ ಕ. ಜಿಲ್ಲಾ ಸೋಶಲಿಸ್ಟ್ ಪಾರ್ಟಿಯ ಕಡೆಯಿಂದ ಹರಿಯಾಳಾಗಿ ದ. ಕ. ಜಿಲ್ಲಾ ಬೋರ್ಡಿಗೆ ಕೊಡಪೂರು ಸರ್ಕಲಿನಿಂದ ನಿಂತ ಶ್ರೀ ಯೇಬು ಅಮ್ಮುಞ್ಞನವರ ಉಮೇದ್ವಾರಿಕೆಯನ್ನು ಸಮರ್ಥಿಸಿ ಅವರಿಗೇ ಓಟು ಕೊಡಬೇಕೆಂದು ಮತದಾರರನ್ನು ವಿನಂತಿಸುವ ಪ್ರಚಾರ ಸಭೆಯು ತಾ 19ಲ್ಲು ಸಂಜೆ ಮಲ್ಪೆ ಸಂಟರಿನಲ್ಲಿ ಶ್ರೀ ಡಿ. ಮೆಲ್ಲೋರವರ ಅಧ್ಯಕ್ಷತೆಯಲ್ಲಿ ಜರಗಿತು. ಬೊಂಬಾಯಿಯ ಸಮತಾವಾದಿ ಶ್ರೀ ದಿನಕರ ದೇಸಾಯಿಯವರು ಸೋಶಲಿಸ್ಟ್ ಪಾರ್ಟಿಯ ತತ್ವ, ಧ್ಯೇಯಗಳನ್ನೆತ್ತಿ ಭಾಷಣಮಾಡಿದರು.

ಕವಿಸಾಡಿ:— ಇಲ್ಲಿಯ ಶ್ರೀ ವೆಂಕಟರಮಣ ಸ್ವಾಮಿ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ "ಸ್ವಾತಂತ್ರ್ಯ ದಿನಾಚರಣೆ"ಯು ತಾ 7-9-49ರಂದು ಶ್ರೀ ಕೆ. ನಾರಾಯಣ ಕಾಮತರ ಅಧ್ಯಕ್ಷತೆಯಲ್ಲಿ ಜರಿಗಿಸಲ್ಪಟ್ಟಿತು. ಶಾಲಾ ಮುಖ್ಯ ಅಧ್ಯಾಪಕ ಶ್ರೀ. ಯು. ರಾಮಚಂದ್ರ ಮಯ್ಯರು ಶಾಲೆಯು ಸಂಕ್ಷಿಪ್ತ ವರದಿಯನ್ನು ಓದಿದ ಬಳಿಕ ಶ್ರೀ. ಕೆ ಆರ್. ಶೆಣೈಯವರು ಶಾಲಾ ಸ್ಥಾಪಕರಲ್ಲಿ ಅಗ್ರಗಣ್ಯರಾದ ದಿವಂಗತ ಪಾಂಗಾಳ ವೈಕುಂಠ ನಾಯಕ್ ಮತ್ತು ಪಾಂಗಾಳ ಶ್ರೀನಿವಾಸ ನಾಯಕರ ಗುಣ ಕಥನವನ್ನು ಮಾಡಿದರು. ಶ್ರೀಯುತರುಗಳಾದ ಕೆ. ರಾಮಚಂದ್ರ ಭಟ್, ಮತ್ತು ಕೆ. ಗಣಪತಿ ಶೆಣೈ ರಿಂದ ಸಂದರ್ಭೋಚಿತ ಭಾಷಣಗಳಾದವು. ಶಾಲಾ ಬಾಲಕ ಬಾಲಕಿಯರಿಂದ ವಿವಿಧ ವಿನೋದಾವಳಿಗಳ ಪ್ರದರ್ಶನ, ಶಾಲಾ ಮುಖ್ಯ ಅಧ್ಯಾಪಕರಿಂದ ಧನ್ಯವಾದ ಸಮರ್ಪಣೆಯಾಗಿ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಪ್ರಕಟಣೆ



ಕಟ್ಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ-ಇದೇ ಅಶ್ವೀಜ ಶುದ್ಧ ಪಂಚಮಿ ತಪನಾರ ಲಾಗಾಯ್ತು ಆಶ್ವೀಜ ಶುದ್ಧಂಗ ಶುಕ್ರವಾರ (ತಾ. 1-10-49ಕ್ಕೆ ಪ್ರಾರಂಭವಾಗಿ 7-10-49) ತನಕ ಏಳು ದಿನಗಳ ಅಮೋಘ ರಾತ್ರಿ ಭಜನಾಸಪ್ತಾಹವು ಶ್ರೀದೇವತಾನುಗ್ರಹದಿಂದಲೂ, ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿಯೂ ದಾರಾಳ ಹಸ್ತದಿಂದಮಾಡಿದ ದ್ರವ್ಯಸಹಾಯದಿಂದಲೂ, ಇಂದಿನಂತೆ ಸರ್ವ ವಿಧಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು ಈ ಮಹೋತ್ಸವಕ್ಕೆ ತಾವು ಆಗತ್ಯವಾಗಿ ಬಂದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ನಡೆಯಬಹುದಾದ ಸದ್ಭಿನೋಗಗಳ ವಿವರ:- ರಾತ್ರಿ ಕಾಲದ ಹೂವಿನ ಪೂಜೆಗೆ ರೂ.10. ಹೂವಿನ ಪೂಜೆಗೆ ರೂ.5. ದೀಪಾರಾಧನೆ ರೂ. 2. ವಿಟ್ಲ ಪಿಂಡಿ 0-8-0. ಕರ್ಪೂರಾರತಿ 0-2-3 ತುಳಸೀಹಾರ ರೂ0-1-3. ಅಹೋರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ. 25.

ಪಾಂಗಾಳ ಅಣ್ಣಪ್ಪ ನಾಯಕ್
ಪ್ರಕೃತ ಆಡಳ್ತೆದಾರ
ಕಟಪಾಡಿ 19—9—49.

ಇದೇ ಕಳದ ಎಪ್ರಿಲ್ ತಿಂಗಳಿಂದ ಜಾರಿಗೆ ಬಂದಿರುವ

ಮದ್ರಾಸು

ಅಳಿಯ ಸಂತಾನ ಕಾನೂನು

ಇದರ ಕನ್ನಡ ಪ್ರತಿಗಳೂ ಇಂಗ್ಲಿಷ್ ಪ್ರತಿಗಳೂ ದೊರೆಯುತ್ತವೆ

ಪ್ರಸ್ತಾವನೆ, ನಿಘಾಪ ಮತ್ತು ಆದರ ಬಿಡುಗಡೆ, ಅರನಾಧ ಮತ್ತು ರಕ್ಷಣೆ, ಮರಣ ಶಾಸನರಹಿತನ ವಾರಿಸ್ಸಾರಿಕೆ, ಕುಟುಂಬ ಮತ್ತು ಆದರ ಆಡಳಿತೆ, ವಿಭಾಗ ಕ್ರಮ ಮೊದಲಾದ ವಿವರಗಳು ಮೂಲ ಪ್ರತಿಯಲ್ಲಿರುವಂತೆಯೇ ಚೆನ್ನಾಗಿ ವಿವರಿಸಲ್ಪಟ್ಟಿವೆ.

ಅಳಿಯ ಸಂತಾನಿಗರೆಲ್ಲರೂ ಇದನ್ನು ಓದಿ ತಿಳಿಯಲೇಬೇಕು.

ಕ್ರಯ ಪ್ರತಿ 1ಕ್ಕೆ 0—8—0
ಒಂಭತ್ತಾಜಿ ಸ್ಟಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುತ್ತೆ.

ನವಯುಗ ಪ್ರೆಸ್, ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ತಾ 21—9—49 ರಿಂದ

ಪುರ್-ಕೆ-ಇಜ್ಜತ್

ಮುಮತಾಜ್ ಶಾಂತಿ, ದಿಲೀಪ್ ಕುಮಾರ್, ಮನೋರಮ, ದೀಕ್ಷಿತ್
ಜೀವನ್, ಗೋಪ್, ಮತ್ತು ಗುಲಾಬ್,
ಬರುವ ಚಿತ್ರ **ವಾಸವದತ್ತ**
ಎಮ್.ಎಸ್. ಸರೋಜ, ಸುಂದರ,

BUY INDIAN! ENCOURAGE INDIAN INDUSTRY!

ಅಮಲಕೇ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD.

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established: 1934)

Chairman: **Sri. M. C. T. M. Chidambarma Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Buildug,
MADRAS

ಮಂಗಳೂರು

ಅರ್ಧ ದರದಲ್ಲಿ ರಸಾಯನಿಕ ಗೊಬ್ಬರ ವಿತರಣೆ—ಕೃಷಿಕ ರೈತ ಬಂಧುಗಳಿಗೆ ರಸಾಯನಿಕ ಗೊಬ್ಬರವು ಮೂಲಕ್ಯದ ಅರ್ಧಾಂಶ ದರದಲ್ಲಿ ವಿತರಣ ಮಾಡಲಾಗುವುದೆಂದು ಜಿಲ್ಲಾ ಎಗ್ರಿಕಲ್ಚರಲ್ ಆಫೀಸರರ ಪ್ರಕಟಣೆಯೊಂದು ಹೊರಟಿದೆ.

ಸಾಹಿತ್ಯಸಭೆ: ಮಂಗಳೂರು ಹಾ, ಎಟ್ರೈನಿಂಗ್ ಶಾಲಾ ಸಭಾ ಭವನದಲ್ಲಿ ತಾ. 15ರಲ್ಲಿ ಅಪರಾಹ್ನ ವಿದ್ವಾನ್ ಕೆ ಕಪಿಗೋಡ್ಲು ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಭೆಯೊಂದು ಜರಗಿತು. ಸಭೆಯಲ್ಲಿ ತುಳುನಾಡಿನ ಕನ್ನಡ ಸಾಹಿತಿಗಳ ಕುರಿತು ಶ್ರೀ ಪಿ. ಗಣಪ ಗೋಪಾಲಕೃಷ್ಣ ಮತ್ತು ಬಿ. ಗೋಪಾಲಕೃಷ್ಣ ಭಟ್ಟರು ಭಾಷಣನಿತ್ತರು. ಕಾರ್ಯದರ್ಶಿ ಶ್ರೀ. ಪಿ. ರಾಮಯ್ಯ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಪುತ್ತೂರು. ವರ್ಗಾವರ್ಗಿ— ಸ್ಥಳೀಯ ತಹಶೀಲ್ದಾರ್ ಶ್ರೀ. ನಂಕಪ್ಪನವರು ರಜೆಯ ಮೇಲೆ ಹೋಗಲಿರುವುದರಿಂದ ಇಲ್ಲಿಗೆ ಡಿಪ್ಯುಟಿ ಕಲೆಕ್ಟರರಾಗಿ ರಜೆಯ ಮೇಲಿದ್ದ ಶ್ರೀ ಕೆ. ಸದಾನಂದಿ ಪೈಗಳು ತಹಶೀಲ್ದಾರರಾಗಿ ನೇಮಕ ಹೊಂದಿರುವರೆಂದೂ ಆದರೆ ಅವರು ಪುಸಪ ಎದುರು ತಿಂಗಳ್ಕರಜೆಗೆ ಬರಕೊಂಡಿರುವರೆಂದೂ ತಿಳಿದು ಬರುತ್ತದೆ.

ನೋಟೀಸು

ಕಾಸರಗೋಡು ಡಿವಿಜನ್ ಕೋರ್ಟಿನಲ್ಲಿ
ಕ್ರಮನಂಬ್ರ 366/1949
ಅಬ್ಬಾಸ ಬ್ಯಾರಿ —ವಾದಿ
ಇಬ್ರಾಯಿಲ್ ಬ್ಯಾರಿ ಅಬ್ಬಾಸ ಕುಟ್ಟಿಬ್ಯಾರಿ ಮಗ, ಕಾಸರಗೋಡು ತಾಲೂಕು ಡಂಗಳ ಗ್ರಾಮದಲ್ಲಿರುವವ —ಪ್ರತಿವಾದಿ

ವಾದಿಯು ಪ್ರತಿವಾದಿಯ ಮೇಲೆ ಪ್ರೋನೋಟಿನ ಅವಧಿಯೇಗೆ ಪಾಕ್ಕು ಮಾಡಿದ ಸದ್ರಿ ವ್ಯಾಜ್ಯವು ತಾ. 6-10-49ಕ್ಕೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿಯದೆ.

(Sd) **P Ahmad,**
Advocate for Plff.

ಕಾಸರಗೋಡು
17-9-49

ಶ್ರೀ ಕೊರವ್ವಲ್ ಶ್ರೀನಿವಾಸ ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ
ಬೆಲೆ: ೧—೮—೦

ಡಾ.ಕ್ಟರ್ ಕೊರಡ್ಕಲ್ ವೆಂಕಟ್ರಾಯರ

'ಮನೆ ಮದ್ದು'
(HOME REMEDIES)
೩೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨-

ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ-
ನವಭಾರತ ಪುಸ್ತಕ ಭಂಡಾರ,
ಉಡುಪಿ.

ನವಯುಗ ಪ್ರೆಸ್, ಉಡುಪಿ.

ದ. ಕನ್ನಡ

ಮುರವಂತೆ:—ಇತ್ತೀಚೆಗೆ ಇಲ್ಲಿಂದು ಬ್ರಾಂಚ್ ಪೋಸ್ಟ್ ಆಫೀಸು ತೆರೆಯಲ್ಪಟ್ಟಿದೆ.

ಪುತ್ತೂರು:—ಸಿ. ಎ. ಸಿ ಕಂಪೆನಿಯಲ್ಲಿ ಸುಮಾರು ಇಪ್ಪತ್ತು ವರ್ಷಗಳಿಂದ ಜನಪ್ರೀತ ಡ್ರೈವರರಾಗಿದ್ದ ಶ್ರೀ ಎಚ್. ವೆಂಕಟೇಶ ಪೈಗಳವರು ಸುಮಾರು 8-10 ತಿಂಗಳಿಂದ ವಾತಸಂಬಂಧ ಕಾಯಿಲೆಯಲ್ಲಿದ್ದು ತಾ 13ರಲ್ಲಿ ಮೃತರಾದ್ದರು ವಿಷಾದಕರವಾಗಿದೆ.

ಶ್ರೀಗಳಾದ ಬೆಳ್ತಂಗಡಿ ರಾಮಕೃಷ್ಣ ರಾಯರೂ ಮುನಿರಾಜ ಅಜ್ರಿಯವರೂ ತಮ್ಮ ಉಮೇದ್ವಾರಿಕೆಗಳನ್ನು ಹಿಂತೆಗೆದಿರುವುದರಿಂದ ಕೊಳ್ತಡಿಂದ ಕಾಂಗ್ರೆಸ್ ಉಮೇದ್ವಾರ ಶ್ರೀ ಎಸ್. ನರ್ಸಪ್ಪಯ್ಯನವರು ಅವಿರೋಧವಾಗಿ ಜಿಲ್ಲಾ ಬೋರ್ಡಿಗೆ ಚುನಾಯಿತರಾಗಿದ್ದಾರೆಂದು ತಿಳಿದು ಬರುತ್ತದೆ.

ಮಂಗಳೂರು:— ಸ್ಥಳೀಯ ಪುಂಜೈತ್ ಬೋರ್ಡ್ ಮೆಂಬರ್ ಶ್ರೀ ಯಂ. ನೋವ್ಯ ಪೈ ಕರ್ಕೇರರಲ್ಲಿ ಇನೇ ತಾ 16 ರಲ್ಲಿ ಒಂಬು ದನವು ಅನಿಷ್ಟ ಜಮೀನು ಕರುಗಳನ್ನು ಪಾಕವೆ. ಆವು ಸೌಮ್ಯದಲ್ಲಿವೆ.

ಕಟೀಲು:— ಎಂದಿನಂತೆ ಜರಗುವ ನವರಾತ್ರಿಯು ಕಾರ್ಯಕ್ರಮವು ಇದೇ ತಿಂಗಳ ತಾರೀಕು 23ರಿಂದ ಪ್ರಾರಂಭಿಸಿ 1-10-49 ರ ತನಕ ಪರಿಶೆ, ನಾಟಕ, ಸಂಗೀತ, ಭಾಷಣ ಗೀತಾಪಾಠನ ವಿವಿಧ ಚಟುವಟಿಕೆಗಳಿಂದ ಸ್ಥಳೀಯರ ಮನ ಮೆಚ್ಚಿಸುವುದು ಕಲಾಭಿಮಾನಿಗಳಿಲ್ಲರೂ ಈ ಮಂಗಳಕಾರ್ಯದಲ್ಲಿ ಸಹಕರಿಸಬೇಕಾಗಿ ಬಾ. ಕೆ ಜೆ. ಕಿಣಿಯವರು ವಿನಂತಿಸಿಕೊಂಡಿದ್ದಾರೆ.

ಕುರ್ಕಾಲು:— ಬಗ್ಗೆ ಜಿಲ್ಲಾ ಪರಿಷತ್ ಗ್ರಾಮಸ್ಥರ ಸಹಕಾರದಿಂದ ಇತ್ತೀಚೆಗೆ ತೆರೆದಿರುವ "ಉಳಕಾಲು ನಿತ್ಯಾನಂದ ವಾಚನ ಮಂದಿರ"ದ ಉದ್ಘಾಟನಾ ಸಮಾರಂಭವನ್ನು ಇನ್ಸಂಜ್ಮೆಂಟಿಲೆ ಶ್ರೀ ನಾರಾಯಣ ಬಿಟ್ಟರು ನೆರವೇರಿಸಿದರು.

ಅಮೃತಾಂಜನ

ತಲೆನೋವಿನೆ, ಶಿರೋನೋವಿನೆ, ಉಳುಕು ಉಷ್ಣಗೆ, ಭಾಜಹಲ್ಲು ನೋವಿನೆಗೆಗೂ, ಎದೆ ನೋವು, ಪ್ರಾಯಗಳು, ಬಾತುಕೊಳ್ಳುವುದು, ಚೇಳಿವಿಷಯಂ ಇವ್ಯ, ಪಕ್ಷವಾತ, ಮೊದಿವೆ ಮೆದಲಾದ ಎಲ್ಲಾ ನೋವುಗಳಿಗೂ ಸಿದ್ಧೌಷಧ.



REGD

ಪುಳುಕಡ್ಡಿ ನುದ್ದುನನ್ನಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ವ ದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ESTD. 1926
CROWN RUBBER STAMP CO.
MAKERS OF
RUBBER STAMPS
ENGRAVERS
BALMATTA ROAD MANGALORE S.K

Approved firm by the Govt. of Mysore
Certificated by theA gent of the Govt. of Cylone & Indian.

ಸಾದರ ಸ್ವೀಕಾರ-ವಿಮರ್ಶೆ.

೧ ತಾಯಿ! (ನೀಳ್ಗತೆ)

ಬರೆದವರು-ಕುಲಕರ್ಣಿ ಬಿಂದುಮಾಧವ ಬಾದಾಮಿ. ವಿಕಾಸ ಸಾಹಿತ್ಯಮಾಲೆ (ಪುಬ್ಬಳ್ಳಿ)ಯ ಪ್ರಥಮ ಪುಷ್ಪ.

ಚಲುವಿ, ದೇವರ ಹೆಸರಿನಲ್ಲಿ ದೇಹವನ್ನು ನೀಡುವ ಹೆಣ್ಣು. ಊರ ಜನಕ್ಕೆ ಕಾನೂನ ಕಣ್ಣಾಗಿ ನಿರೆದೆ ಬಸವಿಯಾಗಳು. ವಯಸ್ಸಿಗೆ ಸರಿಯಾಗಿ ದೈಹಿಕೇಚ್ಛೆಗೆ ನೈಯೊಡ್ಡಿ ಕಾನೂಲೀಲೆಯಾಡಿದ ಪೂಜಾರಿ ರಾಮಪ್ಪನ ಮಗನೇ ಚಂದು. ಅದರೆ ಆತ ಪೂಜಾರಿ. ಚಲುವಿ ಸೂಳೆ; ಅಸ್ಪೃಶ್ಯ. ಕಾಮುಕ್ತೆ ಧರ್ಮ ಸಿಲ್ಲ; ಸ್ವಶಾಸ್ತ್ರಶ್ಯತೆಯ ಕಟ್ಟಿಲ್ಲ! ಆದರೆ ಆತನ ಕಾಮದ ಫಲವಾಗಿ ಬೆಳೆದ ಜಂದು, ಸಾಹಸದಲ್ಲಿ ಪಾಯಲ್ಟಾಹೋದರೆ ಪೂಜಾರಿ ಕುದ್ದಿಗಾಗಿ ಮುಳುಕಹಾಕುತ್ತಾನೆ. ಜಂದು ಬಸವಿಯ ಮಗನಾದರೇನು? ಆತನಿಗೂ ಹೃದಯವಿದೆ. ಓದಬೇಕೆಂಬ ಹಂಬಲವಿದೆ. ಜನ ಪಜೆಯುತ್ತಿರುವ ಸುಖದಲ್ಲಿ ತಾನೂ ಪಾಲುಗೊಳ್ಳಬೇಕೆಂದು ಹಾರೈಸುತ್ತಾನೆ. ಆದರೆ ಆತನ ಬಾಳೋ-ಒಂದು ಪುರಂತವೇ ಆಗಿದೆ. ಎಳೆಯ ಮುಗ್ಧವಾದ ಮನಸ್ಸಿಗೆ "ಆನಗೆ ತಂದೆಯಿಲ್ಲ—ತಾನು ಸೂಳೆಯಮಗ—ಎಲ್ಲರಂತೆರಲು ನನಗೆ ಅಧಿಕಾರವಿಲ್ಲ! ಧರ್ಮದ ದೃಷ್ಟಿಯಲ್ಲಿ ನಾನು ಕಡಿಮೆ.—ಜನದ ಅಭಿಪ್ರಾಯದಲ್ಲಿ ತಾನು ಛೀಕಿಬಾಹಿರ" ಎಂಬುದಾಗಿ ತಿಳಿದು ಆಘಾತವಾಗಿದೆ. ಶಾಲೆಯಲ್ಲಿ ಗೆಳೆಯರೂ, ಅಧ್ಯಾಪಕರೂ ಆತನನ್ನು ಹೀನೈಸುವವರು. ಹಾದಿಬೀದಿಯಲ್ಲೂ ನೂರಾರು ಜನ ಬೆರಳು ತೋರಿಸಿ "ಬಸವಿಯ ಮಗ-ಸೂಳೆಯ ಕೃಷ್ಣ-ಜಲವಿಯ ಹೊಲೆಯ" ಎಂದು ಗೇಲಿಯಾಡುವವರು. ಜಂದು ಕಲಿತು ವಿದ್ವಾಂಸನಾಗಿ ಬಾಳಬೇಕೆಂಬ ಚಲುವಿಯ ಬಯಕೆಯನ್ನು ಜಾತಿಯಭೂತ ತಡೆಯಿತು! ಕೃತ್ರಿಮ ನೀತಿನ್ಯಾಸಗೂಸು ಬಾಳಿಸುವ ಕ್ಕೂ ಕಣ್ಣೀರೇ ಆಹಾರವಾಗಿ ಬದುಕಬೇಕಾಯಿತು. ಮಗನ ಬಾಳನ್ನು ಕಂಡು ಚಲುವಿ ಕಲ್ಲಾಗಿಹೋದಳು! ಜಗಲಿದುಳು ಕಣ್ಣೀರು ಸುರಿದಳು! ಹೆಂಗಸಿನ ಕುರಿತು ಗಂಡುಸು ತೋರಿದ ಅನಾದರಕ್ಕಾಗಿ ಛೀಗಳೆದಳು. ಆದರೇನು? ಶಾಸ್ತ್ರಸಲ್ಲಾಗಲೀ ಧರ್ಮದಲ್ಲಾಗಲೀ ಸಮಾಜ ಅವಳೊಡನೆ ಸಹಕರಿಸುವ ಮಾರ್ಗದರ್ಶನವಿಲ್ಲ! ಜಾತೀಯತೆಯ ಆಮಾನವನ್ನು ಪ್ರಾಯಕ್ಕೆ ಬರುವ ವರೆಗೂ ಕಡೆದು ನಿಂತು, ಕೊನೆಗೊಂದು ದಿನ ತಾಯಿಯೇ ಇದಕ್ಕೆ ಕಾರಣಳೆಂದು ತಿಳಿದು ಕೊಡಲಿ ಹಿಡಿದು ಕಡಿಯಲು ಹೋಗುತ್ತಾನೆ! ತಾಯಿ ಮಗನ ಆವತಾರವನ್ನು ಕಂಡು ಬೆದರಾದಳು! "ಅಯ್ಯೋ ಹೆಣ್ಣುಬಾಳೇ" ಎಂದು ನಿಡಿದುಸಿರು ಬಿಟ್ಟು ಛಾಕೆ.

ದೇಶ ಪ್ರಗತಿಯನ್ನು ಹೊಂದಿದಷ್ಟೂ ನಮ್ಮಲ್ಲಿಯ ಕಟ್ಟುಗಳೂ, ಸಂಪ್ರದಾಯಗಳೂ ಇನ್ನೂ ಸಡಿಲಗಳಿಲ್ಲ! "ನಾವು ಜಾತೀಯತೆಯನ್ನು ಏಗುರ್ಮೂಲಗೊಳಿಸಬೇಕು"ಎನ್ನುತ್ತಾ ಧುರೀಣರು ಭಾಷಣ ಕೊಡುತ್ತಾರೆ. ಧರ್ಮನೇತಾರರು ಮಾಡುವ ಕೃತ್ಯಕ್ಕೆ ನಾವು ಮನ್ನಣ ಕೊಡುತ್ತೇವೆ. ಜಾತಿಯವರು ನಡೆಸುವ ಅನಾಚಾರಕ್ಕೂ ಒಂದು ಗೌರವವನ್ನು ಕಲ್ಪಿಸುತ್ತವೆ. ಆದರೆ ಕೆಳಜಾತಿಯವರ ಕಷ್ಟ ಕಿತು ನಾವು ಎಷ್ಟು ನಿಸ್ಸುರಿಗಳಾಗಿದ್ದೇವೆಂದು "ತಾಯಿ!" ಓದಿದ ಮೇಲೆ ತಿಳಿಯಬಹುದು. ಕನ್ನಡದ ಸುಪ್ರಸಿದ್ಧ ಬರಹಗಾರರಾದ ಕುಲಕರ್ಣಿ ಬಿಂದುಮಾಧವರು ಈ ಪೀಳ್ಗತೆಯಲ್ಲಿ ಜಾತೀಯತೆಯಲ್ಲಿ ನಪುಣಿರುವ ಆಂಧ್ರಪ್ರದೇಶವನ್ನೂ, ತಿಳಿದವರು ನೂಡುವ ಅನಾಯವನ್ನೂ ಹೃದಯಂಗಮವಾಗಿ ಸರಳವಾದ ಭಾಷೆಯಿಂದ ಹೆಣೆದಿದ್ದಾರೆ. ದದಿನಾಲ್ಕಾಣೆಯ ಈ ಕಿರಿಪೊತ್ತಗೆ ಅತ್ಯನೂಲ್ಯವೂ ಸಂಗ್ರಹ ಯೋಗ್ಯವೂ ಆಗಿರುತ್ತದೆ. ವಿಕಾಸ ಸಾಹಿತ್ಯಮಾಲೆಯು ಇಂತಹ ಕೃತಿಯನ್ನು ಪ್ರಕಟಿಸಿ ಕನ್ನಡ ದೇಶದ ಜ್ಞಾನನಿಕೇತನ ಕಾರ್ಯದಲ್ಲಿ ಗೆಲುವನ್ನು ಸಂಪಾದಿಸಿಲಿ!

೨ ನಂದಾದೀಪದ ನಂದಿನಿ

ಲೇಖಕರು-ಶ್ರೀ ಕೆ. ಶ್ರೀಧರ, ಸಹ್ಯಾದ್ರಿ ಯ ಸಾಹಿತ್ಯಮಾಲೆ, ಹುಬ್ಬಳ್ಳಿ

'ನಂದಾದೀಪದ ನಂದಿನಿ' ಅಮೆರಿಕೆಯಲ್ಲಿ ಭಾರತದ ರಾಯಭಾರಿಯಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತಳ ಕುರಿತಾಗಿ ಬರೆದಿರುವ ಶ್ರೀಧರರೆಂದಿದಾರೆ. ಪುಸ್ತಕವನ್ನು ಕೈಗೆತ್ತಿದಾಗ ಆಕೆಯ ಕುರಿತೇ ಇರಬೇಕೆಂದು ನಮಗೆ ಊಹಿಸಬಹುದಾಗಿದೆ. ಏಮ ಪುಸ್ತಕ ಆಕೆಯ ಕತೆಯಲ್ಲ; ಆಕೆಯ ನಾಡಿ ನೊಡಲಲ್ಲಿ ಸ್ವಲ್ಪ ಮತ್ತೆ ಕೊನೆಯಲ್ಲಿ ಸ್ಪರ್ಶ ಮಾತ್ರವೆ. ಹೆಚ್ಚಾಗಿ ನೆಹ್ರೂ ಮನೆತನದ ಕುರಿತೂ ರಾಜಕೀಯದ ಕುರಿತೂ ವಿಮರ್ಶನವಿದೆ. ನೆಹ್ರೂ ಮನೆತನದ ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗ ಅನ್ಯಾದುದು. ತಲೆಯಂಬ ತಲೆಗೆ ಆವರ ದೇಶಾಭಿಮಾನದ ಹೆಜ್ಜುತ್ತಾ ಜನಾನುರಾಗಕ್ಕೆ ಪಾತ್ರವಾಯಿತ್ತು, ಮೋತಿಲಾಲ್, ಈಗ ನಮ್ಮ ಪ್ರಧಾನ ಅವಶ್ಯಕತೆಗಾಗಿರುವ ನೆಹ್ರೂ, ವಿಜಯಲಕ್ಷ್ಮಿ ಪಂಡಿತ್ ಈ ಮೂವ [illegible] ಭಾರತದ [illegible] ಯಿಂದ ಮೀಸಲಾಯಿಸೋಣ. [illegible] ರುತ್ತದೆ. ಭಾರತವ ಮಹಿಳೆಯರಲ್ಲಿ ವಿಜಯಲಕ್ಷ್ಮಿಯ ಕಾರ್ಯ ಅಪ್ರತಿಮ ಸಾಹಸದಿಂದ ತುಂಬಿದುದು. ಅಮೆರಿಕ ದೇಶದ ಜನರ ಒಲವನ್ನು ಭಾರತದೆಡೆಗೆ ಪರಿಣಾಮಪೂರ್ಣವಾಗಿ ಕಾಲಿಸಿರುವಳೆ! ಅವ್ಯಕ್ತವಾದ ಮುಖಭಂಗವನ್ನು ಮಾಡಿ ವಿಜಯವನ್ನು ಸಾಧಿಸಿದ ಅಕೆಯ ಪ್ರತಿಭೆ ಭಾರತಕ್ಕೇನೇ ಕೀರ್ತಿಕರವಾದುದು. ಪ್ರೇಮಾನ್ ಕೆ. ಶ್ರೀಧರರು ನೆಹ್ರೂ ಮನೆತನದ ಪರಿಚಯವನ್ನು ಮಾಡಿಕೊಟ್ಟು ರಾಜಕೀಯದಲ್ಲಿ ಶ್ರೀಮತಿ ಕುಟುಂಬದ ಪಾತ್ರವೆಂತದೆಂಬುದನ್ನು ತೋರಿಸಿಕೊಟ್ಟಿದ್ದಾರೆ. ಮೊತ್ತ ಶ್ರೀಮತಿ ವಿಜಯಲಕ್ಷ್ಮಿಯ ಕಾರ್ಯಕ್ಷಮತೆಯನ್ನೂ ಮಾಡಿಕೊಡುತ್ತಾರೆ. ಒಳಿ ಸಂಶಯವಾದಿ. ಅಲ್ಲಲ್ಲಿ ಕೆಲವು ಅಯ್ಯೋಪಗಳು ಕಾಣುಬರುತ್ತವೆ. ರಾಜಕೀಯ ಧುರೀಣರ ನೆಹ್ರೂ ಮನೆತನದ ಪರಿಚಿತಿಗಾಗಿ ಇದನ್ನು ಅವಶ್ಯ ಓದಬೇಕು

— ಯು. ಎಸ್.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕಿಗು, ಪ್ರದರದೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಿಗುಳಿಗೆ ಮಧ್ಯಾಹ್ನಕ್ಕೆ ಗಿಗುಳಿಗೆ, ಸಂಜೆಗೆ ಗಿಗುಳಿಗೆಯಂತೆ ಊಟದ ಮೊದಲು ಕಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಬೆಲೆ:—ಹೆರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ಗಿ ಆಣೆ.

ಮೂಲಕರು:—ಹಾಲಪ್ಪಾ ಹಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿಠಿಂದಿಗಿ:—ಹುಬ್ಬಳ್ಳಿ ಧಾರ್ಮಸಿ,—ಹುಬ್ಬಳ್ಳಿ, ಗದಗ ಬಾಗಲಕೋಟೆ ಧಾರವಾಡ ವಿಜಾಪುರ— ವಾನಪ್ಪ ಸಿದ್ಧಲಿಂಗಪ್ಪ ಭೂರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ಡಾವಣಗೆರಿ ಡಾವಣಗೆರಿ:—ಡಾವಣಗೆರಿ ಪ್ರೆಸ್ಸು ಆರ್ ಎಲ್ ಕಮಲಾಪುರ, ಕೆಮಿಸ್ಟ, ಹಾವೇರಿ ಬ್ಯಾಡಗಿ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವಿಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ವಿವಿಧ ಪಾತ್ರೆಗಳು



ಯಾವಪಣ್ಣು ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರವೀ ಆಗಿಯೂ ಚಿಲ್ಲರೆಯಾಗಿಯೂ ಮೊದೆಯಬಹುದೆ.

ಕಲ್ಲಿಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಕಾಸರಗೋಡಿನಲ್ಲಿ

ಮಾನ್ಯ ಮಂತ್ರಿ ಶ್ರೀ ಭಕ್ತವತ್ಸಲಂ ಅವರು ಇವೇ ತಾ 14 ರಲ್ಲು ಸಂಜೆ ಮೈಲ್ ಗಾಡಿಯಲ್ಲಿ ಕಾಸರಗೋಡಿನಲ್ಲಿ ಬಂದಿಳಿದಾಗ ಅವರನ್ನು ಜಲ್ಲಾ ಕಲೆಕ್ಟರ್ ಮೊದಲಾದ ಅಧಿಕಾರಿಗಳೂ ಕಾಂಗ್ರೆಸ್ ಕೆಲಸಗಾರರೂ ಸ್ವಾಗತಿಸಿದರು.

ಬಂಗ್ಲೆಯಲ್ಲಿ ಮಂತ್ರಿಗಳೂ ಇನ್ನಿತರರೂ ಸ್ವೀಕಾರಾರ್ಹ ಯೋಜನೆಯ ಕುರಿತು ವಿಚಾರ ವಿನಿಮಯ ಮಾಡಿ ಸಮುದ್ರ ಕರಾವಳಿಗೆ ಹೋದರು. ಈಗ ಇರುವ ಕಾಲು ಸಂಕವನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿ ಮಾಡಬೇಡಿಸುವ ವಿಷಯದಲ್ಲೂ ವಿಚಾರ ನಡೆಯಿತು. ನಂತರ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಬಳಿಯಲ್ಲಿ ಶ್ರೀ ಬಿ. ಎಸ್. ಕಕ್ಕಿಲ್ಲಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ಜರಗಿತು. ಈ ಸಂದರ್ಭದಲ್ಲಿ ಕಳಸಾಡು ರೈಲ್ವೆ ಸಂಕಕ್ಕೆ ಕಾಲ್ದಾರಿ ಕಟ್ಟಿಸುವ, ಕಾಸರಗೋಡು ಕಡಲು ಪಡಕ್ಕೆ ಹೋಗುವ ಕಾಲು ಸಂಕವನ್ನು ದೊಡ್ಡ ಸಂಕವನ್ನಾಗಿ ಮಾರ್ಪಡಿಸುವ ಕುರಿತು ಮಾನ್ಯ ಮಂತ್ರಿಗಳಿಗೆ ಮನವಿಗಳು ಅರ್ಪಿಸಲಾದುವು.

ಕಾಲು ಸಂಕವನ್ನು ದೊಡ್ಡ ಸಂಕವನ್ನಾಗಿ ಮಾಡಬೇಕಾದರೆ ಆವನ್ನು ಜಿಲ್ಲಾ ಬೋರ್ಡಿಗೆ ಬಿಟ್ಟು ಕೊಡಬೇಕಾಗುವುದೆಂಬುದು ಆ ಸಂದರ್ಭದಲ್ಲಿ ಸರಕಾರವು ಸಹಾಯವನ್ನೀಯುವುದಾಗಿಯೂ ಮಂತ್ರಿಗಳು ತಿಳಿಸಿದರು. ಕಳಸಾಡು ಸಂಕಕ್ಕೆ ಕಾಲ್ದಾರಿ ಹಾಕುವ ಕುರಿತು ತಕ್ಷಣಾ ಕೊಲಾಗುವುದೆಂದು ಸೂಚಿಸಿದರು. ಜಿಲ್ಲಾ ಬೋರ್ಡು ಚುನಾವಣೆಯ ಕುರಿತು ಮಾತನಾಡುತ್ತಾ ಕಾಂಗ್ರೆಸ್ ಉಮೇದ್ವಾರಿ ಶ್ರೀ ಎಸ್. ಉಮೇಶರಾಯರಿಗೇನೇ ಓಟು ಕೊಡಬೇಕಾಗಿ ಕಾಸರಗೋಡು ಸರ್ಕಲ್ ನುತ ವಾರದವರನ್ನು ದ್ವೇಷಿಸಿ ವಿನಂತಿ ಮಾಡಿದರು. ಶ್ರೀ ಉಮೇಶರಾಯರೂ ಮತದಾರರ ಸಹಕಾರವನ್ನು ಅಪೇಕ್ಷಿಸಿ ಮಾತನಾಡಿದರು.

ಮರುದಿನ ಬೆಳಿಗ್ಗೆ ಮಂತ್ರಿಗಳು ತಮ್ಮ ಪಾರ್ಟಿಯೊಂದಿಗೆ ಸಿರಿಯಪ ಆಡಕಟ್ಟಿನ ಮತ್ತು ಅಲ್ಲಿಯ ನೀರಾವರಿ ಕೆಲಸದ ಕುರಿತು ಪರಿಶೀಲನೆ ನಡೆಸಿ ಸುಳ್ಯ ಮಾರ್ಗವಾಗಿ ಪುತ್ತೂರಿಗೆ ತೆರಳಿದರು.

ಪುತ್ತೂರಲ್ಲಿ

ಸ್ಥಳೀಯ ಸಹಕಾರಿ ಸಂಘದ ಕಟ್ಟಡದಲ್ಲಿ ಸಂಜೆ ಜರುಗಿದ ಸಾರ್ವಜನಿಕ ಸಭೆಯಲ್ಲಿ ಮಂತ್ರಿಗಳಿಗೆ ಪುತ್ತೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಹಾಗೂ ಉಪ್ಪಿನಂಗಡಿ ಸರ್ಕಲ್ ಕಮಿಟಿಗಳ ಪರವಾಗಿ ಮನವಿಗಳು ಅರ್ಪಿಸಲಾದುವು. ಯೋಗ್ಯ ಮಾರ್ಗಗಳು, ನೀರಾವರಿ ಕಾರ್ಯಗಳು, ವಿದ್ಯುದ್ದೀಪಗಳೇ ಮೊದಲಾದ ಅಪೇಕ್ಷಿತ ಬೇಡಿಕೆಗಳ ವಿಷಯದಲ್ಲಿ ಸಾಧ್ಯವಿದ್ದಷ್ಟು ಅನುಕೂಲತೆಗಳನ್ನು ಒದಗಿಸಿ ಕೊಡಲಾಗುವುದೆಂದು ಮಂತ್ರಿಗಳು ಉತ್ತರವಿತ್ತರು. ಶ್ರೀ ಎಮ್. ಸದಾಶಿವರಾಯರು ಧನ್ಯವಾದಗಳನ್ನರ್ಪಿಸಿದರು. ಸಂಜೆ ಮಂಗಳೂರಿಗೆ ಮಾನ್ಯ ಮಂತ್ರಿಗಳು ಚಿತ್ತೈಸಿದರು.

ಮಂಗಳೂರಲ್ಲಿ

ವಾಣಿಜ್ಯ ಸಂಘದಲ್ಲಿ ಮಾನ್ಯ ಮಂತ್ರಿಗಳಿಗೆ ಒಂದು ಬಿನ್ನವತ್ತಳೆ ಸಮರ್ಪಿಸಲಾಯಿತು. ಆದರಲ್ಲಿ ಪಶ್ಚಿಮ ಕರಾವಳಿ ಪ್ರಬುದ್ಧ ಬಂದರ ಸಮಿತಿಯ ನಿರ್ಣಯ ಮತ್ತು ಆದರ ಪರಿಣಾಮಗಳನ್ನು ವಿವರಿಸಲಾಗಿತ್ತು. ಮಂಗಳೂರಿಗೊಂದು ಎಕ್ಸ್‌ಪೋರ್ಟ್ ಟ್ರೈನ್ ಸ್ಥಾಪಿಸಬೇಕು, ಅದಷ್ಟು ಬೇಗನೆ ವಿದ್ಯುತ್ತಿಗೆ ಬೇಕು, ಸಾಗಣಿ ಸಂಪರ್ಕಗಳಲ್ಲಿ ಇನ್ನೂ ಸುಧಾರಣೆಗಳಾಗಬೇಕು, ಕೂಳೂರು ಸೇತುವೆಯ ಕೆಲಸ ಬೇಗನೆ ಪ್ರಾರಂಭಿಸಬೇಕು, ನೀರಿನ ಸರಬರಾಯಿ ಯೋಜನೆಯು ಇನ್ನೂ ಸ್ಪುಟ್ಟರದಿಂದ ಕೆಲಸ ನಡಾಡಬೇಕು, ಟಪ್ಪಾಲು ಮತ್ತು ತಂತಿ ಸಲಹಾ ಸಮಿತಿಯಲ್ಲಿ ವಾಣಿಜ್ಯ ಸಂಘಕ್ಕೂ ಪ್ರಾತಿನಿಧ್ಯ ಬೇಕು, ಸರಕಾರಿ ಪ್ರಕಟಣೆಗಳನ್ನು ಪುಕ್ಕಟೆಯಾಗಿ ವಾಣಿಜ್ಯ ಸಂಘಕ್ಕೂ ಕಳುಹಿಸಿಕೊಡಬೇಕು, ಇತ್ಯಾದಿ ಕೇಳಿಕೆಗಳು ಬಿನ್ನವತ್ತಳೆಯಲ್ಲಿ ಸೂಚಿಸಲ್ಪಟ್ಟಿದ್ದವು. ಮಂತ್ರಿಗಳು ಉತ್ತರವೀಯುತ್ತ, ಪ್ರಬುದ್ಧ ಬಂದರವು ಮಲ್ಪೆಗಾದರೂ ನಿಮ್ಮಲ್ಲಿಗೆ ಬಂತೆಂಬ ಸಂತೋಷ ತಾಳಿರೆಂದರು. ಇತರ ಕೇಳಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಆಶ್ವಾಸನೆಯಿತ್ತರು.

ಅಲ್ಲಿಂದ ಮಂತ್ರಿಗಳು ಬಸ್ತಿ ಗಾರ್ಡನ್ ಮುನ್ಸಿಪಲ್ ಬಾಲಕಿಯರ ಪಾಠಶಾಲೆಯಲ್ಲಿರುವ ಸರಕಾರಿ ಮಹಿಳಾಭಿವೃದ್ಧಿ ಕೇಂದ್ರಕ್ಕೆ ದರ್ಶನವಿತ್ತರು. ಮಲಬಾರು ಮತ್ತು ದಕ್ಷಿಣ ಕನ್ನಡಗಳ ಅಸಿಸ್ಟಾಂಟ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಮತಿ ಕಲ್ಲಾಟಿಯವರು ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ತಮ್ಮ ಉತ್ತರದಲ್ಲಿ ಸ್ವತಂತ್ರಭಾರತದ ನಿರ್ಮಾಣ ಕಾರ್ಯದಲ್ಲಿ ಮಹಿಳೆಯರ ಪಾತ್ರ ದೊಡ್ಡದೆಂದು ಹೇಳಿ ಸಮಾಜದ ಆಕ್ಷೇ ಮಹಿಳೆಯರು ಈ ರಂಗದಲ್ಲಿಳಿದು ಸೇವೆ ಸಲ್ಲಿಸಬೇಕೆಂದರು. ಶ್ರೀಮತಿ ರಾಂಭಾವಿ ಆರ್ ಪೂಂಜರು ಧನ್ಯವಾದಗಳನ್ನರ್ಪಿಸಿದರು.

ನಂತರ ಮಂತ್ರಿಗಳು ಕಂಕನಾಡಿಯ ಮುಸ್ಲಿರರ ಧರ್ಮಾಸ್ಪತ್ರೆಯನ್ನು, ಅಲ್ಲಿನ ಕುಷ್ಠ ರೋಗಿಗಳ ನಿವಾಸಸ್ಥಾನವನ್ನು ಸಂದರ್ಶಿಸಿದಾಗ ಸಂಸ್ಥೆಯ ಡ್ಯಾರೆಕ್ಟರರಾದ ರೆ॥ ಫಾ ರೆಜಿನಾಲ್ಡ್ ಪಿಂಟೋ, ಲೆಫ್ಟನೆಂಟ್ ಕರ್ನಲ್ ಸಿ. ಎ. ಮೆಥ್ಯೂ ಮೊದಲಾದ ಡಾಕ್ಟರರು ಸ್ವಾಗತವಿತ್ತರು. ಮಹಿಳಾ ವಾರ್ಡಿಗೆ ಭೇಟಿಯಿತ್ತಾಗ ಆ ವಿಭಾಗದ ಡಾಕ್ಟರ್ ಕುಮಾರಿ ಎಮ್. ಎಸ್. ಮಂಗಳಾ ಅವರಿಂದ ಸ್ವಾಗತ ಪಡೆದರು. ನಂತರ ಮಂತ್ರಿಗಳು ಜಿ. ಕ. ಜಿಲ್ಲಾ ಕೊಪರೇಟಿವ್ ಸೆಂಟ್ರಲ್ ಬ್ಯಾಂಕಿನ ಆಶ್ರಯದಲ್ಲಿರುವ ಪುಸ್ತಕ ಭಂಡಾರವನ್ನು ತೆರೆದರು. ಈ ಸಂದರ್ಭದಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರು ಮಂತ್ರಿಗಳನ್ನು ಸ್ವಾಗತಿಸಿದರು. ಶ್ರೀ ಎಮ್. ಎಸ್. ಮಾಧವರಾಯರು ಧನ್ಯವಾದಗಳನ್ನರ್ಪಿಸಿದರು.

ವಾಣಿಜ್ಯ ಸಂಘಕ್ಕೆ ಬರುವ ಮೊದಲು ಮಂತ್ರಿಗಳು ವಿದ್ಯುನ್ಮಂದಿರಕ್ಕೆ ಹೋಗಿ ಮಹಾಕ್ಯಾಜೆಯವರ ಭಾವಚಿತ್ರ ಅನಾವರಣ ಮಾಡಿದರು. ಶ್ರೀ ಎಮ್. ವೆಂಕಟೇಶಪ್ಪಗಳು ಮಂತ್ರಿಗಳನ್ನು ಸ್ವಾಗತಿಸಿದರು.

ಪೂರ್ವಾಹ್ನ ಮಂತ್ರಿಗಳು ಕಲೆಕ್ಟರರ ಕಛೇರಿಯಲ್ಲಿ ಶಿಪ್ಪಮಂಡಲಗಳ ಬಿನ್ನವತ್ತಳೆಯನ್ನು ಸ್ವೀಕರಿಸಿದರು. ಶ್ರೀಗಳಾದ ಎಮ್. ಗಿರಿಯಪ್ಪ, ಜಿ. ಸೋಮಶೇಖರರಾವ್ ಮೊದಲಾದವರು ಉಳ್ಳಾಲಕ್ಕೊಂದು ಸಂಕವಾಗ ಬೇಕಂದು ಕೇಳಿಕೊಂಡರು. ಜಿಲ್ಲಾ ಅಭಿವೃದ್ಧಿ ಸಂಘದವರು ಜಿಲ್ಲೆಯ ಹಲವಾರು ಕೇಳಿಕೆಗಳನ್ನು ಮಂತ್ರಿಗಳ ಗಮನಕ್ಕೆ ತಂದರು. ಶ್ರೀ ಎಮ್. ಆರ್. ಪೂಂಜರು ಜಿಲ್ಲೆಯಲ್ಲಿ ಕಟ್ಟಕಟ್ಟು ನೀರುಹಾಯಿಸಿಕೊಳ್ಳಲು ಸರಕಾರವು ಸ್ವೀಕಾ ಕೊಪ್ಪು ಪ್ರೋತ್ಸಾಹಿಸಬೇಕೆಂದರು. ಶ್ರೀಗಳಾದ ಕೆ. ಆರ್. ಕಾಂತ, ಕೆ. ಬಿ. ಜನರಾಜ ಹೆಗ್ಡೆ ಮತ್ತು ಎಸ್. ಎಸ್. ಭಿಡೆಯವರು ಮಲೆನಾಡಿನ ವಿಚಾರ ನಾಗಿ ಮಾತಿನಿಡರು. ಮಂತ್ರಿಗಳು ಸರ್ವರಿಗೂ ಸಹಾನುಭೂತಿಪರ ಉತ್ತರವಿತ್ತರು.

ತಾ 17 ರಲ್ಲು ಬೆಳಿಗ್ಗೆ ಮಾನ್ಯ ಮಂತ್ರಿಗಳು ಮಂಗಳೂರಿನಿಂದ ಹೊಂಟು ಮೂಡಬಿದ್ರೆ, ಕಾರ್ಕಳ ಮಾರ್ಗವಾಗಿ ಉಡುಪಿಗೆ ಮಧ್ಯಾಹ್ನ 12 ಗಂಟೆಗೆ ಬಂದರು.

ಉಡುಪಿನಲ್ಲಿ

ಮಾನ್ಯ ಮಂತ್ರಿ ಭಕ್ತವತ್ಸಲಂ ಅವರು ತಾ 17ರಲ್ಲು ಮಧ್ಯಾಹ್ನ ಜಿಲ್ಲಾ ಫಿಷರೀಸ್ ಗಳೇ ಮೊದಲಾದವರೊಂದಿಗೆ ಉಡುಪಿಗೆ ಆಗಮಿಸಿದರು. ಅವರನ್ನು ಸ್ಥಳೀಯ ಕಾಂಗ್ರೆಸ್ ಕೆಲಸಗಾರರು, ಸಹಕಾರಿಬ್ಬರ್ ಶ್ರೀ ಪಿ. ಸೀತಾರಾಮು ಶೆಟ್ಟಿ, ಮುನಿಸಿಪಲ್ ಚಿಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯಕ್, ಸೋದೆ ಮಠದ ಮೈನರ್ ಸ್ವಾಮಿರ ಟ್ರಸ್ಟಿ ಶ್ರೀ ಶ್ರೀಪತಿಆಚಾರ್ ಮೊದಲಾವವರೊಡನೆ ಪೂತಕುತಕೆ ನಡಿಸಿ, ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ತಯೋ ರಾಜ ಭೋಜನಕೂಟದಲ್ಲಿ ಭಾಗವಹಿಸಿದರು.

ಭೋಜನಾನಂತರ ಸ್ವಲ್ಪ ವಿಶ್ರಾಂತಿ ಪಡೆದ ಬಳಿಕ ಮಾನ್ಯ ಮಂತ್ರಿಗಳನ್ನು ಸ್ಥಳೀಯ ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಜೆ. ಬಲ್ಲಾಳರು ಭೇಟಿಯಾಗಿ ಉಡುಪಿ ತಾಲೂಕಿನ ನೀರಾವರಿ ಯೋಜನೆಗಳ ಆವಶ್ಯಕತೆ, ಹಿಂಡಿಗೊಬ್ಬರದ ಸರಬರಾಯಿ ಮತ್ತು ವಿತರಣೆಯ ಯೋಗ್ಯ ವಿಷಯಗಳು ಇತ್ಯಾದಿ ವಿಷಯಗಳನ್ನು ಮಂತ್ರಿಗಳ ಗಮನಕ್ಕೆ ತಂದರು. ಕೈಲಾದ ವ್ಯವಸ್ಥೆ ಮಾಡಲಾಗುವುದೆಂದು ಮಂತ್ರಿಗಳು ಭರವಸೆಯಿತ್ತರು. ನಂತರ ಸರ್ಕಲ್ ಕಾಂಗ್ರೆಸ್ ಕಮಿಟಿಯ ಪರವಾಗಿ ಅಧ್ಯಕ್ಷ ಶ್ರೀ ಬಾಳ್ಕಟ್ಟೆ ಬೀಡು ಕೃಷ್ಣಯ್ಯ ಹೆಗ್ಡೆರು ಒಂದು ಭಿನ್ನವತ್ತಳೆಯನ್ನು ಮಂತ್ರಿಗಳಿಗೆ ಅರ್ಪಿಸಿದರು. ಯೋಗ್ಯ ರಸ್ತೆಗಳ ನಿರ್ಮಾಣ, ವಿದ್ಯುತ್ ಸರಬರಾಯಿಯನ್ನು ನೆನಸ್ಥೆ, ಪತ್ತಿನೆ ಹೊಳೆಗೆ ಸಂಕದ ಅವಶ್ಯಕತೆ, ಮಲ್ಪೆ ಬಂದರವು ಪ್ರಬುದ್ಧ ಬಂದರವಾಗುವಂತೆ ಮಂತ್ರಿಗಳ ಸಹಾನುಭೂತಿಯಾಜಿನೆ ಇತ್ಯಾದಿ ವಿಷಯಗಳು ಭಿನ್ನವತ್ತಳೆಯಲ್ಲಿ ಸೂಚಿಸಲಾಗಿತ್ತು. ಮಂತ್ರಿಗಳು ಉತ್ತರವೀಯುತ್ತಾ ಮಲ್ಪೆ ಬಂದರವು ಪ್ರಬುದ್ಧ ಬಂದರವಾಗುವ ಸಂಭವವಿದೆಯೆಂದು ಸೂಚನೆಯಿತ್ತರು. ನೀರಾವರಿ ಯೋಜನೆಗಳು, ಮಂದಗ, ಕೆರೆಗಳ ದುರಸ್ತಿ ಕಾರ್ಯಗಳು ಬೇಗನೆ ಕಾರ್ಯರೂಪಕ್ಕೆ ಬರಲು ರಕ್ಕ ವಿದೆಯೆಂದರು. ಅಂತೂ ಬೇಡಿಕೆಗಳೆಲ್ಲವೂ ಇಂತಿಷ್ಟೆ ಸಮಯದೊಳಗಾಗಿ ಪೂರ್ತಿಸಲಾಗುವುದೆಂಬ ಭರವಸೆ ಕೊಡಲು ಆಸಾಧ್ಯವೆಂದರು. ಶ್ರೀ. ಕೆ. ನರಹರಿ ಕಾಮತ್, ಕಾರ್ಯದರ್ಶಿಯವರು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಂತ್ರಿಗಳು ಮಲ್ಪೆ ಬಂದರವನ್ನು ಸಂದರ್ಶಿಸಿದಾಗ ಮಲ್ಪೆ ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಬಾದರಾಯ ದಾಜಾರ್, ಮಿ. ಜೋನಾ ಪಾರ್ಟಿಸ್ ಮೊದಲಾದವರು ಸ್ವಾಗತವನ್ನಿತ್ತರು. ಶ್ರೀ.ಟ. ಆನಂತ ಪೈಗಳು ಮಲ್ಪೆ ಬಂದರದ ಯೋಗ್ಯತೆಯನ್ನು ವಿವರಿಸಿದರು. ಫಿಶರಿ ರಾಜೆಯಲ್ಲಿ ಸರ್ಕಡಿಸಲಾದ ಜಹಾ ಸತ್ಕಾರವನ್ನು ಸ್ವೀಕರಿಸಿ ಮಂತ್ರಿಗಳು ಸಂಜೆ ವಂಗಳೂರಿಗೆ ಪ್ರಯಾಣ ಬೆಳೆಸಿದರು.

ದ. ಕ. ಜಿಲ್ಲೆಯಲ್ಲಿ ಮಾನ್ಯ ಮಂತ್ರಿ ಭಕ್ತವತ್ಸಲಂ

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗಂಗತಿಗೆ ಎಳುದ್ದ. ಈ ಚಿತ್ರಗಳನ್ನು ನೀವು ನೋಡದಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶೇಷವೋವ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ. ಕೂಡಲೇ ಬಿರ್ಡರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
(N-W-U-)
Lothian Road, Delhi

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಥಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಾಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೆಡಲ ದಿವಸ ಮಾತ್ರವ ಮಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನಿನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕಾಂಬಳಕಾಯಿ, ಒಳೈಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹೆಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೆರೆ,
ಆಯುರ್ವೇದ ಔಷಧಾಲಯ, ಗದಗ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S K.

ಮಕ್ಕಳ ಪೋಷಣೆಗೆ ಪ್ರತಿಯೊಬ್ಬ ಮಾನವನ ಜೀವನದಲ್ಲಿ ಬಹಳ ಮಹತ್ವವಿದೆ. ಆದರೆ ಹೊಸ ಮುಖ್ಯವಾಗಿ ನಾರಿಯರ ಮೇಲಿದೆ; ಏಕೆ, ಅವರ ಜೀವನಕ್ಕೇ ಹೊಂದಿಕೊಂಡಿದೆ. "ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು" ಎಂಬ ನಾಣ್ನುಡಿಯನ್ನು ಇಲ್ಲಿ ಉಲ್ಲೇಖಿಸುವದು ಉಚಿತ. ಭವಿಷ್ಯತ್ತಿನಲ್ಲಿ ಉಚ್ಚ ಜನಾಂಗವನ್ನು ನಿರ್ಮಿಸುವ ಜವಾಬ್ದಾರಿ ಇಂದಿನ ಮಾತೆಯರ ಮೇಲಿದೆ. ಮಕ್ಕಳಿದ್ದಾಗೆ ದೊರೆಯುವ ಆರೈಕೆಯು ಜೀವನದ ತಳಹದಿ. ಈ ತಳಪದಿಯ ಮೇಲೆ ಮಕ್ಕಳ ಭವಿಷ್ಯ ಜೀವನವನ್ನು ಕಟ್ಟಬೇಕಾಗಿದೆ.

ಮಕ್ಕಳ ಆರೈಕೆ ಇನ್ನೂ ತಾಯಿಯ ಹೊಟ್ಟೆಯಲ್ಲಿದ್ದಾಗಲೇ ಪ್ರಾರಂಭವಾಗುತ್ತದೆ. ಆದುದರಿಂದ ಗರ್ಭಿಣಿಯು ತನ್ನ ಆರೋಗ್ಯವನ್ನು ಬಹಳ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕು. ಆಕೆಯು ಪುಷ್ಟಿಕಾರಕ ಆಹಾರ ಅಂದರೆ ಹಾಲು, ಹಣ್ಣು, ತುಪ್ಪ, ತರಕಾರಿ, ಮುಂತಾದವನ್ನು ಸೇವಿಸಿ, ಈ ಮುಖಾಂತರ ಗರ್ಭದಲ್ಲಿನ ಶಿಶುವಿಗೆ ಪುಷ್ಟಿಕೊಡುವ ಆಹಾರವನ್ನು ಒದಗಿಸಬೇಕು. ಜೊಕ್ಕಟವಾದಲ್ಲಿ ಗಾಳಿ ಬೆಳಕುಗಳಿರುವ ಸ್ಥಳದಲ್ಲಿ ವಾಸಿಸತಕ್ಕದ್ದು. ಕುಟ್ಟುವದು, ಬೀಸುವದು, ನೀರು ಸೇದುವದು, ಮುಂತಾದ ಕಷ್ಟ ಕೆಲಸಗಳನ್ನು ಮಾಡಬಾರದು, ಅಂದರೆ ಯಾವಾಗಲೂ ಕೊಕಿರಬೇಕೆಂದು ಅರ್ಥವಲ್ಲ. ಹಿಗೆ ಮಾಡುವದು ಅಪಾಯಕರ. ತಿಂದ ಆಹಾರವನ್ನು ಜೀರ್ಣಿಸಿಕೊಳ್ಳಲು ಆರೋಗ್ಯವನ್ನು ಕಾಪಾಡಿಕೊಳ್ಳಲು ಸಾಕಷ್ಟು ವ್ಯಾಯಾಮ ಆವಶ್ಯಕ. ಈ ವಿಷಯ ಬಡವರಿಗಿಂತ ಶ್ರೀಮಂತರಿಗೆ ಹೆಚ್ಚು ಅನ್ವಯಿಸುತ್ತದೆ. ಮನೆಯಲ್ಲಿ ಕೆಲಸವಿಲ್ಲದ ಶ್ರೀಮಂತರ ಹೆಂಗಸರು ಸಾಯಂಕಾಲ ಬೆಳಿಗ್ಗೆ ಅಡ್ಡಾಡಲು ಹೋಗಬೇಕು. ಗರ್ಭಿಣಿಯರು ಮಲಬದ್ಧತೆ ವಿಷಯದಲ್ಲಿ ಜಾಗರೂಕತೆ ವಹಿಸಿ ತಿಂಗಳಿಗೆ ಒಂದು ಸಲ ವರೆಳೆಕ್ಕೆ ಕುಡಿಯುತ್ತಿರಬೇಕು. ರಕ್ತದ ಕೊರತೆ ಉಂಟಾಗದಂತೆ ನೋಡಿಕೊಳ್ಳಬೇಕು. ಆಗಾಗ ವೈದ್ಯರಿಂದ ದೇಹಪರೀಕ್ಷೆ ಮಾಡಿಸಿಕೊಳ್ಳಬೇಕು.

ಮಗು ಹುಟ್ಟಿದನಂತರ ಆದಕ್ಕೆ ದಿನಾಗಲೂ ಸ್ನಾನಮಾಡಿಸಬೇಕು. ಆದರ ಬಾಯಿ, ಕಣ್ಣುಗಳು, ಮೂಗು, ಕಿವಿ ಸ್ವಚ್ಛವಾಗಿಡಿಯಾವಾಗಲೂ ಶುಚಿಯಾಗಿಯಿಡತಕ್ಕದ್ದು. ಬಹಳ ಬಿಸಿಯಾಗಿರುವ ನೀರಿನಲ್ಲಿ ಸ್ನಾನಮಾಡಿಸಬಾರದು. ಮಗುವನ್ನು ಸಾಕಷ್ಟು ಗಾಳಿ ಬೆಳಕುಗಳು ಇರುವ ಕೋಣೆಯಲ್ಲಿ ಮಲಗಿಸಬೇಕು. ಅದರ ಬಟ್ಟೆಗಳನ್ನು ಸ್ವಚ್ಛವಾಗಿಡಬೇಕು. ಬೇಸಿಗೆಯ ಹೊರತು ಮಿಕ್ಕ ಕಾಲದಲ್ಲಿ ಬೆಚ್ಚಗಿನ ವಸ್ತ್ರವನ್ನು ಹೊದಿಸಬೇಕು.

ಮಕ್ಕಳ ಆಹಾರ

ಮಕ್ಕಳಿಗೆ ಆಹಾರ ಕೊಡುವ ವಿಷಯವೇ ಮುಖ್ಯವಾದದ್ದು. ಅದರಲ್ಲಿರುವ ಕೊರತೆಯು ಅನೇಕ ಮಕ್ಕಳ ಸಾವಿಗೆ ಕಾರಣವಾಗಿದೆ. ಶಿಶುವಿಗೆ ಅತ್ಯಂತ ಶ್ರೇಷ್ಠವಾದ ಆಹಾರ ತಾಯಿಯ ಹಾಲು. ಇದರಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಎಲ್ಲಾ ಆಹಾರ ಪದಾರ್ಥಗಳು ಇರುತ್ತವೆ. ಕಾರಣ ಮಕ್ಕಳಿಗೆ ತಾಯಿಯ ಹಾಲು ಕೊಟ್ಟರೆ ಪೊಟ್ಟೆಯ ಯಾವ ರೋಗಗಳೂ ಬರುವದಿಲ್ಲ. ಕೆಲವು ವಿದ್ಯಾವಂತ ಮತ್ತು ಉಚ್ಚ ವರ್ಗದ ಸ್ತ್ರೀಯರು ತಮ್ಮ ಹಾಲು ಕೊಟ್ಟರೆ ತಮ್ಮ ರೂಪಕ್ಕೆ ಭಂಗ ತಗಲುತ್ತದೆಂದು ಹಾಲು ಕೊಡುವದಿಲ್ಲ. ಅದು ತಪ್ಪು.

ಕೆಲವು ಅನಿವಾರ್ಯಕಾರಣದಿಂದ ತಾಯಿಯ ಹಾಲು ಇಲ್ಲವಾಗಿ ಇತರ ಹಾಲನ್ನು ಕುಡಿಸಬೇಕಾಗುತ್ತದೆ ತಾಯಿಗೆ ಯಾವುದಾದರೂ ರೋಗವಿದ್ದರೆ ಆಕೆಯ ಹಾಲನ್ನು ಕುಡಿಸಬಾರದು. ಇಂತಹ ಸಂದರ್ಭದಲ್ಲಿ ಆರೋಗ್ಯವಂತಳಾದ ದಾಯಿಯನ್ನಿಡಬೇಕು ಆ ದಾಯಿಗೆ ಆದೇ ವಯಸ್ಸಿನ ಮಗುವಿರಬೇಕು. ಇದು ಸಾಧ್ಯವಿಲ್ಲವಾದರೆ ಮಗುವಿಗೆ ಹಸುವಿನ ಹಾಲನ್ನಾಗಲೀ, ಆಥವಾ ಆಡಿನ ಹಾಲನ್ನಾಗಲೀ ಕುಡಿಸಬೇಕು. ಆಡಿನ ಹಾಲು ತಾಯಿಯ ಹಾಲಿನಷ್ಟೇ ಶ್ರೇಷ್ಠ. ಮೂರು ತಿಂಗಳುವರೆಗೂ, ಹಾಲಿನಷ್ಟೇ ನೀರನ್ನು, ಆರು ತಿಂಗಳವರೆಗೂ ಎರಡು ಭಾಗ ಹಾಲು ಒಂದು ಭಾಗ ನೀರು, ಒಂಬತ್ತು ತಿಂಗಳವರೆಗೆ ಮೂರು ಭಾಗ ಹಾಲು ಒಂದು ಭಾಗ ನೀರು ಬೆರಸಿ ಕುಡಿಸಬೇಕು. ಹಾಲನ್ನು ನೀರನ್ನು ಬೇರೆ ಬೇರೆಯಾಗಿ ಕಾಯಿಸಿ ನಂತರ ಮಿಶ್ರ ಮಾಡಬೇಕು. ಸ್ವಲ್ಪ ಸಕ್ಕರೆ ಹಣ್ಣಿನ ರಸವನ್ನು ಸೇರಿಸಬಹುದು. ಮಗುವಿಗೆ ಹಾಲು ಆರು ವಾರದ ವರೆಗೂ ತಿಂಗಳಿಗೆ ಒಮ್ಮೆ, ಆ ಮೇಲೆ ೪ಗಂಟೆಗೆ ಒಂದುಸಲ ಕುಡಿಸಬೇಕು.

ಮಗುವಿಗೆ ನಿಯಮಿತವಾದ ಆಹಾರವನ್ನು ಕೊಡಬೇಕು. ಅದು ನಿದ್ದೆ ಮಾಡುತ್ತಿರುವಾಗ ಎಬ್ಬಿಸಿ ಹಾಲು ಕುಡಿಸಬಾರದು. ಅದಕ್ಕೆ ನಿಯಮಿತ ವೇಳೆಯಲ್ಲಿ ಹಾಲು ಕುಡಿಯುವ ಅಭ್ಯಾಸ ಮಾಡಿಕೊಟ್ಟರೆ, ಆ ಹೊತ್ತಿಗೆ ತಾನೇ ವಿಳಂಬಿಸುತ್ತದೆ. ಮಗುವು ಅಳುವದು ಯಾವಾಗಲೂ ಹಾಲಿಗೆಯೆಂದು ತಿಳಿಯಬಾರದು. ಅದಕ್ಕೆ ಹೊಟ್ಟೆನೋವು, ಇನ್ನೇನಾದರೂ ಇರಬಹುದು. ನಾವು ಇದೆನ್ನು ಕಂಡುಹಿಡಿದು ಪರಿಹಾರೋಪಾಯಗಳನ್ನು ಕೈಕೊಳ್ಳಬೇಕು.

ಹಾಲು ಕುಡಿಸಲು 'ಫೀಡಿಂಗ್ ಬಾಟಲ್' ಅಂದರೆ ಹಾಲು ಕುಡಿಸುವ ಶೀಶೆ ಹೆಚ್ಚು ಉಪಯುಕ್ತವಾಗಿದೆ. ಉಪಯೋಗಿಸಿದ ತಕ್ಷಣ ಶೀಶೆಯನ್ನು ತೊಳೆದು ರಬ್ಬರು ಪೊಟ್ಟಣಗಳನ್ನು ನೀರಿನಲ್ಲಿ ಕುದಿಸಿ ನಂತರ ಇನ್ನೆಲ್ಲವನ್ನು ಶುದ್ಧವಾದ ನೀರಿನಲ್ಲಿ ಇಟ್ಟಿರಬೇಕದ್ದು.

ಮಗುವು ಕ್ರಮವಾಗಿ ಸವಟ್ಟಿಕೆ ಹೋಗಬೇಕು. ಇದು ಬಹು ಮುಖ್ಯ. ಈ ಅಭ್ಯಾಸವನ್ನು ಮಗುವಿಗೆ ಬೆಳೆಸಿಕೊಡಬೇಕು. ಆಗಾಗ್ಗೆ ಭೇದಿ ಎಣ್ಣೆಯನ್ನು ಕುಡಿಸಬೇಕು. ಮಲಬದ್ಧತೆ ಕೆಟ್ಟದ್ದು. ಇದರಿಂದ ಅನೇಕ ರೋಗಗಳು ಬರುವುದರಿಂದ ಇದು ಉಂಟಾಗದಂತೆ ನೋಡಿಕೊಳ್ಳಬೇಕು. ಮಗುವನ್ನು ಆಗಾಗ್ಗೆ ಕೊಗಿ ನೋಡಬೇಕು. ಮಗುವಿನ ಭಾರವು ಕ್ರಮವಾಗಿ ಜೆಚ್ಚುತ್ತಿದ್ದರೆ ಮಗುವು ಆರೋಗ್ಯವಾಗಿದೆ ಎಂದು ತಿಳಿಯಬೇಕು.

ಮಗುವಿಗೆ ಪಲ್ಲು ಬರುವಾಗ ಬಾಯಿಯಲ್ಲಿ ಯಾವ ಗಟ್ಟಿ ವಸ್ತುವನ್ನೂ ಇಟ್ಟುಕೊಳ್ಳದಂತೆ ನೋಡಿಕೊಳ್ಳಬೇಕು. ಇದರಿಂದ ಪಲ್ಲುಗಳು ಸೊಟ್ಟ ಬರುತ್ತವೆ. ದನದಿಹಲ್ಲು ಬಂದಮೇಲೆಯೇ ಅನ್ನ ಮುಂತಾದ ಆಹಾರಗಳನ್ನು ಕೊಡಬೇಕು. ಈಗಲೂ ಸಪ್ಕ ಮಬದ್ಧವಾಗಿ ಸಾಕಷ್ಟು ಆಹಾರವನ್ನು ಕೊಡಬೇಕು. ಹಟಮಾಡುತ್ತದೆಂದು ಕೇಳಿದ್ದನ್ನೆಲ್ಲ ಕೊಡಬಾರದು. ಎರಡು ಊಟಗಳ ಮಧ್ಯೆ ೩ ಗಂಟೆ ಅಂತರವಿರಬೇಕು. ಮಗುವನ್ನು ಯಾವಾಗಲೂ ಎತ್ತಿಕೊಂಡಿರಬಾರದು. ಆವಕ್ಕೆ ಕೈಕಾಲುಗಳನ್ನು ಅಡಿಸಿ ವ್ಯಾಯಾಮವಾಗುವಂತೆ, ಅದರ ಬುದ್ಧಿಶಕ್ತಿ ಬೆಳೆಯಲು ಸಹಾಯವಾಗಲು ಕೆಲಗೆ ಮಲಗಿಸಿರಬೇಕು. ಆದು ಕಣ್ಣುಗಳಿಂದ ನೋಡಿ ಜ್ಞಾನ ಸಂಪಾದಿಸುವ ದಿನಗಳವು

ಹುಟ್ಟಿದಾಗ ಮಕ್ಕಳಿಗೆ ಒಂದು ಖಾಲಿ ಮೆದುಳು ಇರುತ್ತದೆ. ಹೇಗೆ ಮೇಣಕ್ಕೆ ಬೇಕು ಬೇಕಾದ ಆಕಾರವನ್ನು ಕೊಡಲು ಬಯಸೋ ಹಾಗೆಯೇ ಮಗುವಿನ ಬುದ್ಧಿಯನ್ನು ಬೆಳಿಸಬಹುದು. ನಮ್ಮ ಮಕ್ಕಳಿಗೆ ಉಂಡಾಗುವ ಬುದ್ಧಿಗೆ ತಂದೆತಾಯಿಗಳೇ ಜವಾಬ್ದಾರರು. ತಂದೆತಾಯಿಗಳು ಆವಕಾರ ಕಲ್ಪಿಸಿಕೊಟ್ಟಂತೆ ಮಗುವು ಜ್ಞಾನ ಸಂಪಾದಿಸುತ್ತದೆ ಮಗುವನ್ನು ಹೊದಲಿನಿಂದಲೂ ಶಿಸ್ತಿನಲ್ಲಿಡತಕ್ಕದ್ದು. ವಿಧೇಯತೆ, ದೇವರಲ್ಲಿ ಭಕ್ತಿ, ಸತ್ಯ ನನ್ನಾಡುವದು, ಮುಂತಾದ ಗುಣಗಳನ್ನು ಮೊದಲಿನಿಂದಲೂ ಹೇಳಿಕೊಡಬೇಕು. ಒಂದು ಸಣ್ಣ ತಪ್ಪು ಮಾಡಿದರೂ ತಕ್ಷಣವೇ ಬುದ್ಧಿ ಹೇಳಬೇಕು. ಮಗು ನಮ್ಮಿಂದಲೇ ಪ್ರತಿಯೊಂದನ್ನು ಕಲಿಯುವದರಿಂದ ಆದರೆ ಎದುರಿನಲ್ಲಿ ಕೆಟ್ಟ ಮಾತುಗಳನ್ನಾಡಬಾರದು. ಮಗುವಿಗೆ ಆದು ಮಾಡಬಾರದು, ಇದು ಮಾಡಬಾರದು, ಎಂದು ತಂದೆ ತಾಯಿಗಳು ಮಾತ್ರ ಹೇಳುತ್ತಿದ್ದರೆ ಆದಕ್ಕೆ ಬೆಲೆ ಇರುವದಿಲ್ಲ. ನಾವುಳ ಗಂಟೆವರೆಗೆ ಮಲಗಿ ಮಗುವು ಮಾತ್ರ ಬೆಳಗಿನಜಾವಕಾಲೆ ಏಳಬೇಕೆಂದರೆ ನಡೆಯುವದೇ? ಮುಖ್ಯವಾಗಿ ಎಚ್ಚರಿಕೆಯಿಂದ ತಂದೆ ತಾಯಿಗಳು ಮೇಲ್ಪಂಕ್ತಿ ಹಾಕಿಕೊಡಬೇಕು.

ಮಕ್ಕಳನ್ನು ಶಿಶುವಿಹಾರಕ್ಕೆ ಕಳಿಸಬೇಕು. ಆದರಿಂದ ಸರಕಾರದ ಒಂದು ಇಕ್ಕಟ್ಟಿನ ವಾತಾವರಣಕ್ಕಿಂತ ಹೆಚ್ಚು ಮಾನಸಿಕ ವಿಕಸನಕ್ಕೆ ಅವ್ಯವಹಿಯಿತ್ತದೆ. ಶಿಶುವಿಹಾರದಲ್ಲಿ ಅನೇಕ ಮಕ್ಕಳುಗಳ ಮಧ್ಯ ಇರುವುದರಿಂದ ಮಗುವು ಸ್ವಾಭಾವಿಕವಾಗಿ ಕನ್ನಡದೇ ಆದ ವಾತಾವರಣದಲ್ಲಿ ಸ್ವತಂತ್ರವಾಗಿ ವಿಹರಿಸುತ್ತದೆ. ಮುಂದೆ ಪಾಠಶಾಲೆಗೆ ಹೋಗಲು, ಮತ್ತು ಸಹಜವಾಸ್ಪದ ಆಥವ ನಾಗರಿಕ ಸಮಾಜದ ಒಂದು ಘಟಕವಾಗಲು ಅನುವು ಮಾಡಿಕೊಟ್ಟಂತಾಗುತ್ತದೆ.

ಮಗುವನ್ನು ಹೊಡೆಯಬಾರದು. ಹೊಡೆಯುವದು, ಬಯ್ಯುವದರಿಂದ ಆದರ ಕೋಮಲ ಮನಸ್ಸು ಒರಟಾಗುತ್ತದೆ. ನಮ್ಮ ಮೇಲ್ಪಂಕ್ತಿಯಿಂದಲೂ ಪ್ರೇಮದಿಂದಲೂ ನಮ್ಮ ಮಾತನ್ನು ಮೀರದ ಹಾಗೆ ಒಲವನ್ನು ಭಕ್ತಿಯನ್ನು ಸಂಪಾದಿಸಬೇಕು. ಇದು ಹೊರಲಿನಿಂದಲೂ ಶಿಕ್ಷೆಯು ಬರಬೇಕು. ಹೊದಲು ಆಜ್ಞಾಗ್ರತೆಯಿಂದ ಇದ್ದು, ಆದರಿಂದುಂಟಾದ ಕೆಟ್ಟ ಪರಿಣಾಮಗಳನ್ನು ಅನುಭವಿಸಿ ಪರಿಪಕ್ವಗೊಳಿಸುವದು ಆವಶ್ಯಕ. ಒಂದೇ ಮಗುವಿದ್ದರೆ ಅದನ್ನು ಮುದ್ದು ಮಾಡಿ ಕೇಳಿದ್ದನ್ನೆಲ್ಲ ಕೊಟ್ಟು ಕೆಡಿಸಬಾರದು. ಮಗುವನ್ನು ಹೆದರಿಸಿ ಬಾಂದು ಬೇರೆಪಡಿಸುವದರಿಂದ ಅಂಜುಬುರುಕತನ ಉಂಟಾಗುತ್ತದೆ. ನಮಗಿರುವ ನೀತಿ ಕಥೆಗಳನ್ನು, ವೀರರ ಕಥೆಗಳನ್ನು ಹೇಳಬೇಕು.

ಮೇಲೆ ಹೇಳಿದ್ದಿಷ್ಟು ಒಳಿತು ಸಾಲಭ್ಯ ಸಾಧ್ಯವಾದ ಉಪಾಯಗಳು. ಎಷ್ಟವರ್ಗದವರು ಅನುಸರಿಸುವುದಕ್ಕಾಗಿ ಮೇಲೆ ನೀಳಿದ ರೀತಿಯಲ್ಲಿ ಮಕ್ಕಳನ್ನು ಬೆಳೆಸಿದರೆ, ಆಗ ಅವರ ಮುಂದೆ ದೇಶದ ಹೊಸಯುಗವನ್ನು ಹೊರುವ ಸಾಮರ್ಥ್ಯ ಉಂಟಾಗುವದರಲ್ಲಿ ಸಂಶಯವಿಲ್ಲ.

ವನಿತಾ ವಿಭಾಗ

ಮಕ್ಕಳ ಆರೈಕೆ

ಶ್ರೀಮತಿ ಲೀಲಾಬಾಯಿ ಪ್ರಾಜ್ಞೇಶಾಚಾರ್ಯ ಆವರು ತಾ. 25-8 1949ರಂದು ಡೆಕ್ಕನ್ ರೇಡಿಯೋದಿಂದ ಮಾಡಿದ ಭಾಷಣ.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 105/1949.

ಅಮ್ಮುಚು ಕುಡುವಾ—ವಾದಿ,

ಮೆಕ್ಕ

ನಾಗಪ್ಪಚಾರಿ ಸಹಾ—ಪ್ರತಿವಾದಿರು.

ಯಿವರೊಳಗೆ

4 ಶ್ರೀಧರಾಚಾರಿ.] ನೇ ಪ್ರ. ನಾಗಪ್ಪಚಾರಿ ಮಗ. ಮಂಗಳೂರು ತಾಲೂಕು ತಾಲಿಪಾಡಿ ಗ್ರಾಮದ ವೈಮಾನ ಯೆಂಬಲ್ಲಿರುವನ.

6. ನಾಜೆ ಆಚಾರಿ. ವೀರಪ್ಪಚಾರಿ ಮಗ.

7. ಪೂಮಪ್ಪಚಾರಿ. ಧರ್ಮಚಾರಿ ಮಗ. ಮಂಗಳೂರು ತಾಲೂಕು ಬಲ್ಲುಂಜೆ ಮಾಗಣೆ ಉಳೆಪಾಡಿ ಗ್ರಾಮದ ಕೊಲ್ಲೊಟ್ಟು ಯೆಂಬಲ್ಲಿರುವನವರು.

ಸದ್ರಿ ದಾನೆಯ 4, 6, 7 ನೇ ಪ್ರತಿವಾದಿರಾದ ನಿಮಗೆ ಯೂ ನೂಲಕ ತಿಳಿಯಪಡಿಸುವದೇನೆಂದರೆ—

ಮೇಲ್ಕಂಡ ದಾನೆಯ ಣಾದಿ ಅನ್ಯಾಯು ಕುಡುವರು ವಾದಿರಾಗಿ ನಿಮ್ಮ ಮೇಲೆ ಕೂಡಾ ಹಿರೆ ಬಗ್ಗೆ ಕಾರ್ಕಳ ಡಿ ಮು. ಕೋರ್ಟಿನಲ್ಲಿ ದಾಕ್ಲು ಮಾಡಿದ ಸದ್ರಿ ದಾನೆಯು ನಿಮ್ಮ ಹಾಜರಾತಿ ಬಗ್ಗೆ ಇದೇ ಬರುವ ಶಾರೀಕು 27-9-1949ಕ್ಕೆ ಯಿಟ್ಟಿರುತ್ತದೆ. ಆದ್ರಿಂದ ನೀವು ಸದ್ರಿ ತಾ 27-9-1949ನೇ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ನಿಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯಲ್ಲಿ ನಿಮ್ಮನ್ನು ಏಕ್ಪಾ ನಾಡಿ ಆದನ್ನು ನಿಮ್ಮ ಅತ್ಸೇಪಸ ಉಜೂರು ಏಕ್ಪಾ ತೀರ್ಮಾನಿಸೋಣಾಗುವುದು.

I. N. Nayak,
Pleader for Plff.

ಮೊಕ್ಕಾಂ: ಕಾರ್ಕಳ
ತಾ 15-9-1949

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರ್‌ಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಿಂದಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅನೋಘವಾದ ಮಧುರದ್ರವ್ಯ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಲಭವಾಗಿರುವುದು.

ನವಜೀವಾಮೃತ ಎಂಬ
ಸೂತಿಕಾ ರಸಾಯನ

೮ ದಿನ್ನಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪ್ಯಾಗಳಿಗೆ ಒಂದು ಬಾಳಂತಿತನಕ್ಕೆ ಸಾಕಾಗುವುದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ಪ ಕ
ಸ್ವಾತಿಸ್ಟರು. ಡಾ। ಬಿ. ಕೆ. ಶಿವರಾಮ ರಾವ್, ಕಂಬಿಬೆಟ್ಟು, ಉಡುಪಿ.

ಹಿಂದೂ ಧಾರ್ಮಿಕ ಉಂಬಳಿಗಳ ಮಸೂದೆ

ಮಠ ದೇವಸ್ಥಾನಗಳ ದುಂದುಗಾರಿಕೆ, ದುರಾಚಾರಗಳಿಗೊಂದು ತಡೆ!

ಹಿಂದೂ ಮಸೂದೆಯ ಸುಧಾರಣೆಗಳು!

ಹಿಂದೂ ಧಾರ್ಮಿಕ ಉಂಬಳಿಗಳ ಮಸೂದೆಯನ್ನು ಹಿಂದೂ ಸಂಸ್ಥಗಳ ಮತ್ತು ದೇವಸ್ಥಾನಗಳ ಆಸ್ತಿಗಳು ಹಾಳಾಗದಂತೆ ನೋಡಲಿಕ್ಕೂ, ಅವುಗಳ ಉತ್ಪನ್ನವು ಉಂಬಳಿ ಬಿಟ್ಟವರ ಉದ್ದೇಶದಂತೆ ಸರಿಯಾಗಿ ವಿನಿಯೋಗವಾಗಬೇಕೆಂಬ ಉದ್ದೇಶದಿಂದಲೂ ಕಯಾರಿಸಲಾಗಿದೆ. 1922ರಲ್ಲಿ ಮೊದಲನೆಯ ಬಾರಿ ಇಂತಹ ಸಂಸೂದೆಯು ತಯಾರು ಸಲ್ಪಟ್ಟಾಗ, ಮಸೂದೆಯನ್ನು ತಯಾರಿಸಿದವರು ಬಹಳ ಜಾಗ್ರತೆಯಿಂದ ಮುಂದುವರಿಯುವುದೇಕೆಂಬ ಇಚ್ಛೆಯಿಂದ, ಎಲ್ಲಾ ಸುಧಾರಣೆಗಳ ಬಗ್ಗೆ ಕಾನೂನನ್ನು ತಯಾರಾಗಿಲ್ಲ. ಮಸೂದೆಯ ಉದ್ದೇಶವು ಪೂರ್ಣವಾಗಬೇಕಾದರೆ ಇನ್ನೂ ಕೆಲವು ಕಲಮುಗಳನ್ನು ಮಸೂದೆಗೆ ಸೇರಿಸಬೇಕೆಂಬುದು ಕಳೆದ 24 ವರ್ಷಗಳ ಅನುಭವದಿಂದ ಗೊತ್ತಾಗುತ್ತದೆ. 1926ರ ನಂತರ ಅನೇಕ ತಿದ್ದುಪಡಿಗಳು ಪಾಸಾಗಿವೆ. ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಒಂದು ಅಕ್ಟ್ ತಯಾರು ಮಾಡುವುದು ಅವಶ್ಯವೆಂದು ಕಂಡುಬಂದಿದೆ. ಇದಕ್ಕಾಗಿ ಈಗಿರುವ ಮಸೂದೆಯನ್ನು ರದ್ದುಗೊಳಿಸಿ, ಹೊಸತಾದ, ಸರ್ವ ಸುಧಾರಣೆಗಳನ್ನು ಒಳಗೊಂಡ ಅಕ್ಟನ್ನು ತಯಾರಿಸಬೇಕೆಂದು ನಿಶ್ಚಯಿಸಲಾಯ್ತು. ಹೀಗೆ ಹೊಸ ಅಕ್ಟನ್ನು ತಯಾರಿಸುವಾಗ್ಗೆ, ಆಡಳಿತೆಯ ಅಧಿಕಾರಗಳಲ್ಲಿರುವ ಕೆಲವು ಕುಂದುಕೊರತೆಗಳನ್ನು ಹೋಗಲಾಡಿಸುವುದು ಅವಶ್ಯವೇರಾ ಕಂಡು ಬಂದಿತು.

ಹೊಸ ಮಸೂದೆಯ ಪ್ರಕಾರ ಆಗುವ ಮುಖ್ಯ ಬದಲಾವಣೆ ಎಂದರೆ, ಪ್ರಾಂತೀಯ ಸರಕಾರಕ್ಕೆ ಧಾರ್ಮಿಕ ಸಂಸ್ಥೆಗಳ ಮೇಲ್ವಿಚಾರಣೆ ನಡೆಸುವ ಹಕ್ಕು ಬರುವುದು. ಇದಕ್ಕಾಗಿ ನಿಯಮಿಸಲ್ಪಡುವ ಕಮಿಶನರುಗಳ ಮೂಲಕ ಸರಕಾರವು ಮೇಲ್ವಿಚಾರಣೆ ನಡೆಸುವುದು. ಈಗ ಇರುವ ಬೋರ್ಡು ಯಾವುದಾದರೂ ನಿರ್ಣಯವನ್ನು ಕೈಕೊಳ್ಳಬೇಕಾದರೆ ಪರಸ್ಪರ ವಿಚಾರಮಾಡಬೇಕಾಗುವುದು. ಈಗ ಬೋರ್ಡಿಗೆ ಕೊಟ್ಟಿರುವ ಅಧಿಕಾರಗಳನ್ನು ಕಮಿಶನರ್ ಮತ್ತು ಡಿಪ್ಯುಟೆ ಕಮಿಶನರ್‌ರೊಳಗೆ ಹಂಚಬೇಕೆಂದು ನಿಶ್ಚಯಿಸಲಾಗಿದೆ. ಹೀಗೆ ಮಾಡುವುದರಿಂದ ಕಾರ್ಯಗಳನ್ನು ಶೀಘ್ರವಾಗಿ ತೀರಿಸಬಹುದು.

ಈಗ ಇರುವ ಅಕ್ಟ್ ಪ್ರಕಾರವೂ ಸರಕಾರ ಧಾರ್ಮಿಕ ಸಂಸ್ಥೆಗಳ ಮೇಲೆ ಅಧಿಕಾರ ನಡೆಸಲು ಬರುತ್ತದೆ. ಹೇಗೆಂದರೆ ಕೆಲವು ಧಾರ್ಮಿಕ ಸಂಸ್ಥೆಗಳಿಗೆ ಈ ಅಕ್ಟ್ ಲಗಾವು ಆಗದ ಹಾಗೆಯೂ ಮಾಡಬಹುದು, ಅಥವಾ ಅಕ್ಟಿನ ಮಸೂದೆಗಳನ್ನು ಜೈನ ಉಂಬಳಿಗಳಿಗೂ ಲಗಾವು ಮಾಡಬಹುದು. ಕೆಲ್ಕ ಪರಿಶೋಧನೆ ಮಾಡಲು ಆಡಿಟರ್‌ಗಳನ್ನು ಈಗಲೂ ಸರಕಾರವೇ ನಿಯಮಿಸುತ್ತದೆ. ಆಡಳಿತೆದಾರರು ಆಪೀಲುಗಳನ್ನು ಈಗಲೂ ಸರಕಾರಕ್ಕೇ ಮಾಡಬೇಕು. ಯಾವುದಾದರೊಂದು ಸಂಸ್ಥೆಯು, ಅಥವಾ ದೇವಸ್ಥಾನವು ಅಕ್ಟಿನ V1-A ಕಲಮಿನಲ್ಲಿ ಬರುತ್ತದೆಂದು ಸರಕಾರವು ಈಗಲೂ ಜ್ಞಾಪನಮಾಡಬಹುದು. ಟ್ರಸ್ಟಿಗಳ ಮೇಲೆ ಹೊರಿಸಿರುವ ಜುಲುಮಾನೆಯನ್ನು ಮಾಫಿ ಮಾಡುವ ಹೆಕ್ಕು ಸರಕಾರಕ್ಕೆ ಇದೆ. ಈ ಅಧಿಕಾರಗಳನ್ನು ಒಂದಾದ ಮೇಲೆ ಒಂದರಂತೆ ತೆಗೆದುಕೊಳ್ಳಲಾಗಿದೆ. ಮೊಕಾರಿ ನೌಕರರ ಮೂಲಕ ಸಂಪೂರ್ಣ ಯಾಲ್ಟಿಚಾರಣೆ ನಡೆಸಬೇಕೆಂಬ ಅಲೋಚನೆ ಬರಲು ಸಮರ್ಥವಾಗಿ ಬರುವುದು.

ಲಿತೆಯನ್ನು "ಆ ಧಾರ್ಮಿಕ ಸಂಸ್ಥೆಗಳ ಆಡಳಿತವನ್ನು ಜನರಾನೇ ನಡೆಸುತ್ತದೆ ಎಂಬ ತಪ್ಪು ಭಾಗದಲ್ಲಿ ಸರಳ್ಲಿ ಇದೆ. ಬೆಲ್ಲಿನ ಯಾವುದೇ ನೌಕರರುಗಳೇ ಇರಲಿ, ಸದಸ್ಯರಾಗಿರಲಿ, ಮಠದ ದೇವಸ್ಥಾನದ ಟ್ರಸ್ಟಿಗಳಾಗಿರಲಿ, ಮಠದ ಆಡಳಿತೆ ತಾನೇ ನಹಿಸಿ, ಸಂಪೂರ್ಣ ಸ್ಥಿರಚರ ಸೊತ್ತುಗಳನ್ನು ಸ್ವಾಧೀನ ಪಡಿಸಿಕೊಂಡು, ಆದಾಯಗಳನ್ನು ವಸೂಲು ಮಾಡಿ, ಪೂಜೆ ಪುನಸ್ಕಾರ, ಜಾತ್ರೆಗಳನ್ನು ನಡೆಸಬಹುದು ಎಂದು ಹೇಳಿಲ್ಲ. ಈಗ ಎಂಹೋಮೆಂಟ್ ಬೋರ್ಡಿಗೆ ಹೇಗೆ ಮೇಲ್ವಿಚಾರಣೆ ನಡೆಸುವ ಅಧಿಕಾರ ಇದೆಯೋ, ಅದೇ ರೀತಿ 6ನೇ ಕಲಮಿನ ಪ್ರಕಾರ, ಕಮಿಶನರನು ಸರಕಾರದ ಹೇಳಿಕೆ ಪ್ರಕಾರ ಮೇಲ್ವಿಚಾರಣೆ ನಡೆಸುತ್ತಾನೆ. 19ನೇ ಕಲಮಿನಲ್ಲಿ (ಆಡಳಿತೆದಾರನು ತನ್ನ ವಶದಲ್ಲಿರುವ ಮಠದ ಸೂಚಿ ಪುನಸ್ಕಾರಗಳನ್ನು ನಡೆಸಲು ಬಾಧ್ಯನಾಗುತ್ತಾನೆ ಎಂದು ಹೇಳಿದೆ. ಈಗಿರುವಂತೆಯೇ ಆಡಳಿತೆಯ ಕೆಲಸವನ್ನು ಟ್ರಸ್ಟಿಯೇ ನಡೆಸಿಕೊಂಡು ಹೋಗುವನು.

ಬೆಲ್ಲಿನ ಬಗ್ಗೆ ಇರುವ ಇನ್ನೊಂದು ಟೀಕೆ ಎಂದರೆ ಆದು ಧಾರ್ಮಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತದೆ ಎಂಬುದು. ಹೊಸ ಅಕ್ಟಿನ 82ನೇ ಕಲಮು ಹಿಂದಿನ ಅಕ್ಟಿನ 79ನೇ ಕಲಮನ್ನು ಅಕ್ಷರಶಃ ಹೋಲುತ್ತದೆ. ಇದರಲ್ಲಿ ಬೆಲ್ಲಿನಲ್ಲಿ ಹೇಳಲಾಗಿರುವ ಯಾವುದೇ ಅಂಶವು ಜನರ ಧಾರ್ಮಿಕ ಸ್ವಾತಂತ್ರ್ಯವನ್ನಾಗಲೀ ಸಂಸ್ಥೆಗಳ, ಅದಾಯ, ಗೌರವ, ಮರ್ಯಾದೆಗಳನ್ನು ಯಾವ ರೀತಿಯಿಂದಲೂ ಕಡಿಮೆಗೊಳಿಸುವುದಿಲ್ಲ. ಈಗಿನಂತೆಯೇ, ಹೊಸ ಅಕ್ಟಿನಲ್ಲಿಯೂ, ಯಾವುದಾದರೂ ಅಭಿಪ್ರಾಯ ಭೇದವುಂಟಾದಲ್ಲಿ, ಕೋರ್ಟಿಗೆ ಹೋಗುವ ಹಕ್ಕು ಮರಗಳಿಗೆ ಇದೆ.

16ನೇ ಕಲಮಿನ ಪ್ರಕಾರ ಧಾರ್ಮಿಕ ಸ್ವತಂತ್ರ್ಯವೆಲ್ಲಿಪನ್ನೂ ಕಸಿದುಕೊಳ್ಳಲಾಗುತ್ತದೆ ಎಂಬ ಜನರು ಹೇಳುತ್ತಾರೆ. ಈ ಕಲಂ ಪ್ರಕಾರ ಪ್ರವೇಶ ಮಾಡುವ ಅಧಿಕಾರವು ತನ್ನ ಅಧಿಕಾರವನ್ನು ಜ್ಯಾರಿ ಮಾಡಲಿಕ್ಕಾಗಿ ಸರಕಾರಿ ನೌಕರನಿಗೆ ಕೊಡಲ್ಪಟ್ಟಿರುತ್ತದೆ. ಮೇಲ್ವಿಚಾರಣೆಯ ಹಕ್ಕು ಮಾತ್ರ ಹೆಚ್ಚು ಇದೆಯಲ್ಲದೆ ಬೇರೆ ಏನೂ ಇಲ್ಲ.

ಹೊಸ ಅಕ್ಟಿನ ಇನ್ನೊಂದು ವಿಶೇಷವೆಂದರೆ ಸಾರ್ವಜನಿಕ ನಿಧಿಗಳಿಗೂ ಈ ಅಕ್ಟನ್ನು ಲಗಾವುಪಡಿಸಬಹುದು. ಸರಕಾರವು ಸಾರ್ವಜನಿಕ ನಿಧಿಯು ಆಡಳಿತೆಯನ್ನು ನಿರ್ವಹಿಸಬೇಕೆಂದು ಬಯ್ಯಯಿಸಿದಲ್ಲಿ ತನ್ನ ನಿರ್ಣಾರವನ್ನು ಜನರಿಗೆ ತಿಳಿಸಿ, ಜನಾಭಿಪ್ರಾಯವನ್ನು ತಿಳಿಸುಕೊಂಡು, ನಂತರ ಅಕ್ಟನ್ನು ಅವುಗಳಿಗೂ ಲಗಾವು ಮಾಡಬಹುದು. ಈಗ ಸಾರ್ವಜನಿಕ ನಿಧಿಗಳ ಮೇಲೆ ಯಾವ ತರದ ಹತೋಟೆ ಇರುವುದಿಲ್ಲ. ಬೋರ್ಡು ಆಫ್ ರೆವಿನ್ಯೂ ಗೆ, ಇವುಗಳ ಮೇಲ್ವಿಚಾರಣೆ ಹಕ್ಕು ಇದ್ದರೂ ಕಾರ್ಯ ಬಾಹುಳ್ಯದ ಮೂಲಕ ರೆವಿನ್ಯೂ ಬೋರ್ಡಿನವರು ಏನೂ ಮೇಲ್ವಿಚಾರಣೆ ನಡೆಸುವುದಿಲ್ಲ, ಇಂತಹ ಸಾರ್ವಜನಿಕ ನಿಧಿಗಳು, ಸಾರ್ವಜನಿಕರಿಗೆ ಏನೂ ಉಪಕಾರಮಾಡದೆ, ಉತ್ಪನ್ನವನ್ನೆಲ್ಲಾ ಆಡಳಿತೆಯವರು ತಮ್ಮ ಸ್ವಂತಕ್ಕೆ ಉಪಯೋಗಿಸುತ್ತಾರೆ. ಆದ್ದರಿಂದ ಧಾರ್ಮಿಕ ನಿಧಿಗಳಂತೆಯೇ, ಸಾರ್ವಜನಿಕ ನಿಧಿಗಳ ದುರುಪಯೋಗವನ್ನು ನಿಶ್ಚಿಸುವುದು ಸರಕಾರದ ಕರ್ತವ್ಯವಾಗಿದೆ. ರೆವಿನ್ಯೂ ಬೋರ್ಡಿಗೆ ಈಗ ಇರುವ ಅಧಿಕಾರವು ಹೊಸ ಡಿಪಾರ್ಟ್‌ಮೆಂಟಿಗೆ ಬರುತ್ತದೆ. ಈ ಕಲಮನ್ನು ಯಾರೂ ವಿರೋಧಿಸಿದುದಿಲ್ಲ.

ಮಠಗಳಲ್ಲಿ ದುಂದುಗಾರಿಕೆ, ದುರಾಚಾರವು ತುಂಬಿವೆ. ಆಡಳಿತೆಯ ಅವ್ಯವಸ್ಥೆಯಂತೂ ಹೇಳ ತೀರದಷ್ಟು ಇದೆ. ಆದರೂ ಬರೇ ಸ್ವಲ್ಪ ವಿಷಯಗಳಲ್ಲಿ ಮಾತ್ರ ಸರಕಾರವು ಪ್ರವೇಶಿಸುವುದಲ್ಲದೆ, ಹಣದ ದುರುಪಯೋಗವು ಮಿತಿಮೀರಿದಾಗ್ಗೆ ಮಾತ್ರ ಸರಕಾರಿ ಅಧಿಕಾರಿಗಳು ಅಧಿಕಾರವಹಿಸುವರು. ಮಠಗಳಿಗೆ ಹಣದ ದುರುಪಯೋಗ ಮಾಡದಂತೆ, ತಕ್ಕ ಮುಂಜಾಗ್ರತೆ ಕೊಡಲಾಗುವುದು; ಸರಕಾರವು ಆಡಳಿತೆ ವಹಿಸಿದರೂ, ಮಠವು ಹೊಸ ಕಾರ್ಯಕರ್ತರನ್ನು ನೇಮಿಸಿದರೆ, ಅವರ ಆಡಳಿತೆಯು ಸಮರ್ಪಕವಾಗಿದ್ದರೆ, ಅಧಿಕಾರವನ್ನು ಮುತ್ತೈಶ್ವರಿಗೆ ಬಿಟ್ಟುಕೊಡಬಹುದು. ಇನ್ಸ್ಪಾದರೂ ಮಠದ ಸ್ವಾಮಿಯ ಧರ್ಮಾಧಿಕಾರಕ್ಕೆ ಯಾವ ತರದ ಕುಂದು ಬರುವುದಿಲ್ಲ. ಈಗಿನಂತೆಯೇ ಟ್ರಸ್ಟಿಗಳನ್ನು ತೆಗೆಯುವ ಅಧಿಕಾರವು ಕೋರ್ಟಿಗೆ ಇರುತ್ತದೆ. ಈಗ ಇರುವುದಕ್ಕಿಂತ ಹೆಚ್ಚು ಆಡಳಿತೆದಾರರನ್ನು ನಿಯಮಿಸುವ ಅಧಿಕಾರವು ಸರಕಾರಕ್ಕೆ ಇರುವುದಿಲ್ಲ. ಅಲ್ಲದೆ ಆ ವಶದ ಆಡಳಿತೆದಾರರನ್ನು ಮಾತ್ರ ಟ್ರಸ್ಟಿಯಾಗಿ ನಿಯಮಿಸಬಹುದು. ಗವರ್ನಮೆಂಟಿನ ಕಡೆಯಿಂದ ನಿಯಮಿಸಲ್ಪಡುವ ಮ್ಯಾನೇಜರನು ಸದ ಮರದ ಸ್ವಾಮಿಗಳ ಒಪ್ಪಿಗೆ ಇರುವವನು ಆಗಿರಬೇಕು.

85 ನೇ ಕಲಂ, ಕೋರ್ಟಿನ ಅಧಿಕಾರವನ್ನು ಕಸಿದುಕೊಳ್ಳುತ್ತದೆ ಎಂದು ಹೇಳಲಾಗುತ್ತದೆ. ಹೊಸ ಅಕ್ಟ್ ಈಗ ಇರುವ ಮಸೂದೆಯಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲ. ಎಂಡೋಮೆಂಟ್ ಅಕ್ಟ್ ತಯಾರಿಸಿದರ ಉದ್ದೇಶವು ಧಾರ್ಮಿಕ ಸಂಸ್ಥೆಗಳ ಹಣವು ಕೋರ್ಟು ವ್ಯವಹಾರಗಳಲ್ಲಿ ವ್ಯರ್ಥ ಹಾಳಾಗಬಾರದೆಂದು ಇದೆ. ಈಗಿನ ಅಕ್ಟ್ ಪ್ರಕಾರ ಒಂಭತ್ತು ವಿಷಯಗಳಲ್ಲಿ ಬೋರ್ಡಿನ ವಿರುದ್ಧ ಅಪೀಲು ಮಾಡಬಹುದು. ಹೊಸ ಬಿಲ್ ಪ್ರಕಾರ ಐದು ವಿಷಯಗಳ ಬಗ್ಗೆ ಆಪೀಲುಮಾಡುವ ಹಕ್ಕು ಕೊಡಲಾಗಿದೆ. ಉಳಿದ ನಾಲ್ಕಕ್ಕೆ ಡಿಪ್ಯೂಟಿ ಕಮಿಶನರ ವಿರುದ್ಧ ಕಮಿಶನರಿಗೆ ಅಪೀಲ್ ಮಾಡುವ ಹಕ್ಕು ಇರುತ್ತದೆ.

ಹೊಸ ಅಕ್ಟಿನಲ್ಲಿ ಬರುವ ಸುಧಾರಣೆಗಳು ಕೆಳಗಿನವುಗಳಾಗಿರುತ್ತವೆ.

[1] ಈಗ ವಿನಾಪರೂ ಮುಖ್ಯ ಕಾರ್ಯವಾಗಬೇಕಿದ್ದರೆ ಬೋರ್ಡಿನ ಅನುಮತಿಯು ಅವಶ್ಯವಿದೆ. ಬೋರ್ಡು ಆಫೀಸ್ ಮದ್ರಾಸಿನಲ್ಲಿ ಇರುವುದರಿಂದ, ವಿನಾಪರೂ ನಿರ್ಣಯವನ್ನು ಪಡೆಯಲು ಬಹಳ ಕಾಲವಿಳಂಬವಾಗುತ್ತದೆ, ಆಲ್ಲದೆ ವಿಚಾರ ವಿಪರೀತ ಬರುತ್ತದೆ. ಹೊಸ ಬಿಲ್ಲ್‌ಪ್ರಕಾರ ಅನುಕೂಲ ಸ್ಥಳಗಳಲ್ಲಿ ಡಿಪ್ಯೂಟಿ ಕಮಿಶನರನ್ನು ನೇಮಿಸಿ, ಅವರು ಸರ್ವ ವಿಚಾರಣೆಗಳನ್ನು ನಡೆಸುವಂತೆ ನೋಡಲಾಗುವುದು. ಹೀಗಾಗಿ ವಿಚಾರಣೆಗಳು ತೀರ್ಪುಗಳು ಬಸಲ ಶೀಘ್ರವಾಗಿ ನಡೆಯುವುವು.

[2] ಇದಲ್ಲದೆ ಕಮಿಶನರ್, ಅಸಿಸ್ಟೆಂಟ್ ಕಮಿಶನರ್, ಡಿಪ್ಯೂಟಿ ಕಮಿಶನರ್ ಇವರ ತೀರ್ಪನ್ನು ಮರು ವಿಚಾರ ಮಾಡುವ ಅಧಿಕಾರವು ಸರಕಾರಕ್ಕೆ ಇರುತ್ತದೆ.

[3] ಈಗಿನ ಅಕ್ಟಿಪ್ರಕಾರ ವಿಚಾರಣೆಯು ನಿಯಮಿತ ಕ್ರಮಗಳನ್ನು ಸ್ಪಷ್ಟವಾಗಿ ನಮೂದಿಸಿಲ್ಲ. ಹೊಸ ಅಕ್ಟಿನಲ್ಲಿ ವಿಚಾರಣೆಯು 84 ನೇ ಕ್ಲಾಜು ಪ್ರಕಾರ, ಕ್ರಿ. ಪೊ. ಕೊ. 1908, ಇಂಡಿಯನ್ ಎವಿಡೆನ್ಸ್ ಆಕ್ಟ್ ಮತ್ತು ಇಂಡಿಯನ್ ಓತ್ಸ್ ಆಕ್ಟು ಲಗಾವಾಗುವುದರಿಂದ ಈ ವಿಚಾರಣೆಗಳಿಗೆ ನ್ಯಾಯ ವಿಚಾರಣೆಯ ಲಕ್ಷಣಗಳು ಬರುವುವು.

[4] ದೇವಸ್ಥಾನದ ಹೊರಗೆ ನಡೆಸಲ್ಪಡುವ ಪೂಜಾ ವಿನಿಯೋಗಗಳಿಗೂ ಕೆಲವು ನಿಧಿಗಳು ಇರುತ್ತವೆ. ಅವುಗಳನ್ನು ಸಹ ಈ ಅಕ್ಟಿನ ಅಧಿಕಾರದೊಳಗೆ ತರಲಾಗುವುದು.

[5] ಹೊಸ ಅಕ್ಟ್‌ಪ್ರಕಾರ ಟ್ರಸ್ಟಿಗಳನ್ನು ನಿಯಮಿಸುವ ಹಕ್ಕು ಸಹ ಸರಕಾರಕ್ಕೆ ಬರುತ್ತದೆ.

[6] ಯಾವನಾಪಬೊಬ್ಬ ಟ್ರಸ್ಟಿಯ ವಿರುದ್ಧ ಬೋರ್ಡಿನ ಮುಂದೆ, ಅಥವಾ ಕೋರ್ಟಿನಲ್ಲಿ ವಿಚಾರಣೆ ದಿಡೆಯುತ್ತಿದ್ದರೆ, ಅಂತಹ ಟ್ರಸ್ಟಿಯು, ದೇವಸ್ಥಾನಗಳ ಭಂಡಾರದ ಹಣವನ್ನೇ ಇಪ್ಪಬಂದಂತೆ, ಕೋರ್ಟಿನ ಖರ್ಚಿಗೆ ಉಪಯೋಗಿಸುತ್ತಾನೆ. ಈ ರೀತಿಯಲ್ಲಿ ಹಣದ ದುರುಪಯೋಗ ನಡೆಯಕೂಡದೆಂದು 19 [3]ನೇ ಕ್ಲಾಜ್ ಹೇಳುತ್ತದೆ.

[7] ಎಲ್ಲಾ ದೇವಸ್ಥಾನಗಳಲ್ಲಿಯೂ ಬಹಳ ಬಂಗಾರದ ಆಭರಣಗಳು ಇರುತ್ತವೆ. ಇವುಗಳು ಹೆಚ್ಚಾಗಿ ಪೂಜಾರಿಯ ವಶದಲ್ಲಿ ಇರುತ್ತವೆ. ಎಷ್ಟೊ ದೇವಸ್ಥಾನದ ಒಡವೆಗಳು ಅಜಾಗ್ರತೆಯಿಂದ ಕಳೆದು ಹೋಗಿವೆ. ಇನ್ನು ಮುಂದೆ ಆಭರಣಗಳನ್ನು ಪೂಜಾರಿಗಳ ವಶದಲ್ಲಿ ಇಡದೆ, ಡಬಲ್‌ಲೋಕ್ ಕ್ರಮದಲ್ಲಿ ಕಾಯ್ದಿಡಲಾಗುವುದು.

[8] ಹೆಚ್ಚಿನ ದೇವಸ್ಥಾನಗಳು ತಮ್ಮ ಉತ್ಪನ್ನವನ್ನೆಲ್ಲಾ ಸಂಪೂರ್ಣ ವಿಚಾರ ಮಾಡಿ ಬಿಡುತ್ತಾರೆ. ಉತ್ಪನ್ನದ ಸ್ವಲ್ಪ ಭಾಗವನ್ನು ಕಷ್ಟಕಾಲಕ್ಕೆಂದು ಉಳಿಸುವ ಕ್ರಮವು ಇಲ್ಲವೇ ಇಲ್ಲ. ಹೀಗಾಗಿ ದೇವಸ್ಥಾನಗಳ ಕರೆಗಳು ರಿಪೇರಿಗೆ ಸಹ, ಹಣವಿಲ್ಲದೆ ಪಾಳು ಬಿದ್ದ ದೇವಸ್ಥಾನಗಳು ಎಷ್ಟೋ ಇವೆ. 56 ನೇ ಕಲಂ ಪ್ರಕಾರ ಉತ್ಪನ್ನದ ಸ್ವಲ್ಪ ಭಾಗವನ್ನು ಪ್ರತಿ ದೇವಸ್ಥಾನವೂ ರಿಸರ್ವ್ ಫಂಡ್ ಎಂದು ತೆಗೆದು ಇಡಬೇಕು.

(9) ಈಗಿನ ಆಡಳಿತೆಯಲ್ಲಿ ಅತಿ ದೊಡ್ಡ ತೊಡಕೆಂದರೆ, ಒಮ್ಮೆ ಅಧಿಕಾರದಲ್ಲಿದ್ದವರನ್ನು ತೆಗೆದು ಹಾಕಿ, ಹೊಸಬರನ್ನು ಅಧಿಕಾರಿಗಳನ್ನಾಗಿ ನಿಯಮಿಸುವಾಗ್ಗೆ, ಮೊದಲಿನ ಅಧಿಕಾರಿಗಳು ಹೊಸಬರಿಗೆ ದೇವಸ್ಥಾನಕ್ಕೆ ಸಂಬಂಧಪಟ್ಟ ಎಲ್ಲಾ ಆಸ್ತಿಗಳು, ರಿಕಾರ್ಡುಗಳು, ಆಭರಣಗಳು, ಹಣ, ಇವುಗಳನ್ನು ಸರಿಯಾಗಿ ಸ್ವಾಧೀನ ಪಡಿಸುವುದಿಲ್ಲ. ಇದರಿಂದಲಾಗಿ ಆಡಳಿತೆ ಬದಲಾವಣೆಗಳು ಸಂಪೂರ್ಣ ನಿರುಪಯೋಗಿಯಾಗಿವೆ. ಬೋರ್ಡಿನಿಂದ ನಿಯಮಿಸಲ್ಪಟ್ಟ ಟ್ರಸ್ಟಿಗಳು ಪ್ರವೇಶಿಕದಂತೆ ಏನಾದರೊಂದು ಕಾರಣದಿಂದ ತಡೆಯನ್ನು ಹಾಕುವರು. ಇಂಥಹ ಕೋರ್ಟು ವ್ಯವಹಾರಗಳಿಗೂ, ನಿಧಿಯ ಹಣವನ್ನು ಉಪಯೋಗಿಸುವರು. ಹೊಸ ಕಾನೂನು ಈ ಕುಂದುಗಳನ್ನು ಹೋಗಲಾಡಿಸಿ, ಹೊಸದಾಗಿ ನಿಯಮಿಸಲ್ಪಟ್ಟ ಆಡಳಿತೆದಾರನಿಗೆ ಸರಕಾರವು ಸಂಪೂರ್ಣ ಅಧಿಕಾರವನ್ನು ಆಸ್ತಿ ಸ್ವಾಧೀನತೆಗಳನ್ನು ಮಾಡಿಸಿಕೊಡುವುದು. ಈ ಸುಧಾರಣೆಗಳಿಂದ ಧಾರ್ಮಿಕ ನಿಧಿಗಳನ್ನು ರಕ್ಷಿಸಲು ಬಹಳ ಸಹಕಾರ ಮಾಡಿದಂತೆ ಆಗುತ್ತವೆ.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

English copies of
MADRAS ALIYASANTHANA ACT of 1949
are available.
NAVAYUGA PRESS, UDIPI.

Regd. No. M. 3618

29-9-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 5

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 5

ಇನ್ನಾದರೂ ಹೀಗಿರಲಿ-

ನಮ್ಮ ಜನತೆಯ ಸ್ಥಿತಿ ಮತ್ತು ಬುದ್ಧಿ ಸಾಕಷ್ಟು ಮೇಲ್ಮಟ್ಟಕ್ಕೇರಿಲ್ಲ. ಶ್ರೀಮಂತರು ಹಾಗೂ ಪ್ರತಿಷ್ಠಾವಂತರ ಆಶ್ರಯ, ಹಂಗು, ದಾಕ್ಷಿಣ್ಯಗಳಿಗೊಳಗಾಗದೆ ಜನಸಾಮಾನ್ಯರು ಸ್ವಾವಲಂಬಿಗಳಾಗಿರುವ ಸುಸ್ಥಿತಿ ಈಗಿಲ್ಲ. ಅಂತೆಯೇ ಪ್ರತಿಯೊಬ್ಬನೂ ತನ್ನ ಮೇಲಿರುವ ರಾಷ್ಟ್ರೀಯ, ಸಾಮಾಜಿಕ, ಸಾರ್ವಜನಿಕ ಹೊಣೆಗಾರಿಕೆಯನ್ನು ಅರಿತುಕೊಂಡು, ಸ್ಥಿತಿಗತಿಯನ್ನು ವಿಮರ್ಶಿಸಿ ಸ್ವಂತ ನಿರ್ಧಾರಕ್ಕೆ ಬರುವಷ್ಟು ಸಾರ್ವಜನಿಕರ ಮನೋಮಟ್ಟವೇರಿಲ್ಲ.

ಹೀಗಾಗಿ, 'ವೋಟು' ಎಂದರೆ ಭೀತಿಗಾಗಿ, ಹಂಗಿಗಾಗಿ ಅಥವಾ ಒಂದು ಮಹದುಪಕಾರವಾಗಿ, ಇಲ್ಲವೇ ಅಲ್ಪ ಲಾಭಕ್ಕಾಗಿ ಕೊಟ್ಟುಬಿಡುವ ವಸ್ತುವೆಂದಲ್ಲದೆ, ತನ್ನ ಪಾಲಿನ ಸಾರ್ವಜನಿಕ ಕರ್ತವ್ಯ ಪಾಲನೆಯೆಂಬ ಅರಿವಳಿಕೆ ಅಧಿಕ ಸಂಖ್ಯಾಕ ವೋಟರಲ್ಲಿನ್ನೂ ಮೂಡಿಲ್ಲ.

ವೋಟರರ ಈ ಸ್ಥಿತಿಮತಿಯನ್ನಾಧರಿಸಿ, ಶ್ರೀಮಂತರು, ವರ್ಚಸ್ವಿಗಳು ಮಾತ್ರವೇ ಪ್ರತಿನಿಧಿ ಸ್ಥಾನಗಳಿಗೆ ಉಮೇದ್ವಾರರಾಗಬೇಕಾಗುತ್ತದೆ. ಮತದಾರರ ಮನಸ್ಸಿನಲ್ಲಿ ಮತಕ್ಕಿರುವ ಮೌಲ್ಯವಾಗಿರುವ ಪುಸಲಾಯಿಸುವಿಕೆ, ಒತ್ತಾಯ, ಹೆಂಗುಳುಡುಗೊರೆಗಳನ್ನೇ ಮುಂದೊಡ್ಡಬೇಕಾತ್ತದೆ. ಚುನಾವಣೆಯೊಂದರಲ್ಲಿ ಗೆಲ್ಲುವ ದೊಂದನ್ನೇ ಉದ್ದೇಶವಾಗಿಟ್ಟುಕೊಂಡಿರುವ ಯಾವ ಪಕ್ಷವಾದರೂ ಇಂತಹ ಆಟಗಳ ಮೂಲಕ ಅಧಿಕ ಮತ ಸಂಪಾದಿಸಿಕೊಳ್ಳಬಲ್ಲವನನ್ನು ಮಾತ್ರವೇ ತನ್ನ ಉಮೇದ್ವಾರಂಗಳಾಗಿ ನಿಲ್ಲಿಸಬೇಕಾಗುತ್ತದೆ. ಈಗ ತಾನೇ ನಡೆದು ಮುಗಿದಿರುವ ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು (ಪ್ರಾಂತ್ಯದ ಎಲ್ಲಾ ಜಿಲ್ಲಾ ಬೋರ್ಡುಗಳ ಮತ್ತಿತರ ಕಡೆಗಳ ಚುನಾವಣೆಗಳೂ ಇದೇ ರೀತಿ) ಚುನಾವಣೆಯಲ್ಲಾದುದು ಹೀಗೆಯೇ.

ಅಂತೂ, ಚುನಾವಣೆಯು ಗದ್ದಲವೊಂದು ಕಳೆದು ಹೋಯಿತು. ಆದರೆ ಅದರೊಟ್ಟಿಗೇನೇ ಅದರ ದುಷ್ಪರಿಣಾಮಗಳೆಲ್ಲವೂ ಅಳಿದು ಹೋದುವೆನ್ನಲು ಸಾಧ್ಯವಿಲ್ಲ. ವಾತಾವರಣವನ್ನು ಕೊಳೆಯಿಸಿಯೇ ಅದಕ್ಕೊಂದು ಆಕಾರ ಕೊಟ್ಟಲ್ಲಿ ಆ ಕೆಲಸ ಮುಗಿದರೂ ಅದರ ದುರ್ವಾಸನೆ ಅಲ್ಲಿಗೇ ನಿಲ್ಲುವಂತಿಲ್ಲ ದುರ್ಗಂಧವನ್ನು ಮೂರ್ತ ಶ.ದ್ಧೀಕರಿಸಿಕೊಳ್ಳದೆ, ಅದನ್ನು ಕದಡುವುದನ್ನು ಹಾಗೂ ಜೆಲ್ಲುವುದನ್ನು ನಿಲ್ಲಿಸಿಕೊಂಡ ಮಾತ್ರಕ್ಕೆ ನಾತ ಹೋಗದು. ಜನತೆಯ ಆಜ್ಞಾನ ಮತ್ತು ಪರಾವಲಂಬನಾ ಸ್ಥಿತಿಯನ್ನಾಧರಿಸಿ ನಡೆದ ಚುನಾವಣೆಯ ದುರ್ವಿಧಾನಗಳ ದುಷ್ಪರಿಣಾಮಗಳು ಇನ್ನೂ ತೋರಿಬರಬಹುದು.

ಚುನಾವಣೆಯ ಮೂಲ ರೀತಿನೀತಿಗಳಿಗೆ ವಿರೋಧವಾಗಿ ಉಮೇದ್ವಾರಿಯ ದುಷ್ಪ್ರಚೆ್ತ್ತ ಮತ್ತು ಮತದಾರನ ದೌರ್ಬಲ್ಯ, ಉಮೇದುಗೊಂಡವನ ದುರ್ವರ್ತನೆ ಮತ್ತು ಮತಕೊಡುವವನ ಅಜ್ಞಾನಗಳ ಮೇಲಿಂದ ನಡೆಯುವ ಚುನಾವಣೆಯಲ್ಲಿ ಸಾರ್ವಜನಿಕ ಪ್ರಾತಿನಿಧ್ಯ ಸ್ವರೂಪವಿರುವ ಬದಲಿಗೆ ವ್ಯಕ್ತಿಗತ ಮೇಲು ಕೀಳು ರೂಪವೇ ಇರುವುದು ಸ್ವಾಭಾವಿಕ. ಆದರ ಜಯಾಪಜಯಗಳು ಕೂಡಾ ಹೆಚ್ಚಿನಂತೆ ಅಯಾಯ ವ್ಯಕ್ತಿಗೇನೇ ಲಗಾವಾಗುವದು ಸಹಜವೇ. ಆದ್ದರಿಂದ ಮತದಾರನ, ತಾನು ವೋಟುಕೊಟ್ಟು, ಓರ್ವ ಮಹಾನುಭಾವನಿಗೆ ಉಪಕಾರ ಮಾಡಿದೆನೆಂದು ನೆನೆಸುವಾಗ, ತನಗೆ ವೋಟು ಕೊಡದ ಮತದಾರನು ತನಗೆ ಅಪಕಾರಿ, ತನ್ನ ವೈರಿಯೆಂದು ಉಮೇದ್ವಾರಿಯಾಗಿದ್ದವನು ನೆನೆಸುತ್ತಾನೆ. ರಾಷ್ಟ್ರದ ಹಾಗೂ ಸಾರ್ವಜನಿಕ ಹೊಣೆಗಾರಿಕೆಯ ಸ್ಥಾನವಿದ -ಇದಕ್ಕೆ ಉಮೇದ್ವಾರಿಯಾಗಿ ನಿಂತವನು ಆ ಮೂಲಕ ತನ್ನ ಪಾಲಿನ ಜನತಾ ಹೊಣೆಗಾರಿಕೆ ವಹಿಸುತ್ತಾನಾದರೆ, ಅದಕ್ಕೆ ಮತ ಕೊಟ್ಟವನು ಈ ಮೂಲಕ ತನ್ನ ಜನಾಬ್ದಾರಿ ನಿರ್ವಹಿಸಿದೆ- ಎಂದಿರುತ್ತಿದ್ದರೆ, ವೋಟು ಪಡೆಕೊಳ್ಳುವ ಮತ್ತು ಕೊಡುವ ಈ ವಹಿವಾಟು ಪೆರಿಗೆ ವಸೂಲಿ ಮತ್ತದರ ಸಂದಾಯದಂಕಾಗುತಿತ್ತು. ಆದರೀಗ, ವ್ಯಕ್ತಿ ರಾ ಒಬ್ಬನಿಗಾಗಿ ಮತ್ತು ಅವನಿಗೊಂದು ದೊಡ್ಡ ಉಪಕಾರವೆಂಬಂತೆ ವೋಟು ಕೊಟ್ಟ ಮತ್ತು ಒಬ್ಬನನ್ನು ಕಾಡಿ ಬೇಡಿ ನಾನಾ ಉಪಾಯಗಳಿಂದ ಸಿಕ್ಕಿಸಿ ಹಾಕಿದ ಮತ ಪಡೆಕೊಂಡ. ಈ ಕೊಡುಕೊಂಡವೆಂಬುದು ನಿಜಕ್ಕೂ ಅವ ಇವನಿಗೆ ಸಾಲ ಕೊಟ್ಟಂತಾಗಿದೆ. ಈ ರೀತಿ ಸಾರ್ವಜನಿಕ ಹೊಣೆಗಾರಿಕೆಯು ಖಾಸಗೀ ವಹಿವಾಟಾಗಿ ಪರಿಣಮಿಸಿದೆ. ಖಾಸಗೀ ಉದ್ದಿಮೆಗಳನ್ನು ನಿಂತ ಹೆಜ್ಜೆಯಲ್ಲೇ 'ರಾಷ್ಟ್ರೀಕರಣ'ಗೊಳಿಸಬೇಕೆಂದು ವಾದಿಸುತ್ತಿರುವ ಉಗ್ರಗಾಮಿಗಳು, ಜನತೆಯಲ್ಲಿ ಸಾಕಷ್ಟು ಬುದ್ಧಿ ಸಂಸ್ಕಾರವನ್ನು ಪ್ರಥಮತಃ ನಿರ್ಮಿಸಿಕೊಳ್ಳಬೇಕೆ, ಯಾವುದನ್ನೇ ಆದರೂ ರಾಷ್ಟ್ರೀಕರಣಗೊಳಿಸಬೇಕಲ್ಲಿ, ಅದು ಯಾವ ರೂಪಕ್ಕೆ ತಿರುಗೀತೆಂಬುದನ್ನು ಈ ನಿದರ್ಶನದಿಂದ ಕಲಿತುಕೊಳ್ಳಬೇಕು. ರಾಷ್ಟ್ರೀಯ ಹಕ್ಕುಗಳು, ನಾಗರಿಕ ಲಕ್ಷಣವಾಗಿ, ಸಾರ್ವಜನಿಕ ಸಮಾನಾಧಿಕಾರವಾಗಿ ಬಂದಿರುವ ವಿತರಣಾಧಿಕಾರವೇ ಈ ರೀತಿ ಖಾಸಗೀ ಸೊತ್ತಾಗಿ ಹೋದ ಮೇಲೆ, ಇಂತಹ ಸ್ಥಿತಿಯಲ್ಲಿ ಮಿಗ್ಗಿವುಗಳ ರಾಷ್ಟ್ರೀಕರಣದ ಪ್ರಸ್ತಾಪನೆಕ್ಕಳ್ಳದು ಯಾವ ಧೈರ್ಯದಿಂದ?

ಒಂದು 'ಖಾಸಗೀ' ರೂಪದಿಂದ ನಡೆದು ಹೋದ ದರಣಾಮಗಳನ್ನೂ ಖಾಸಗಿಯಾಗಿಯೇ ಎದುರ್ಸಿಗೆ ಕಟ್ಟಿಕೊಂಡು ಅಜ್ಞಪ್ತಿ ಹಂಚಾಫೆನೆ, ವೈರಾಸೂಯೆ, ಜಾತೀಯದ್ವೇಷಗಳುಳಿದು ಕೊಳ್ಳಬಹುದು. ಆ ಮೂಲಕ ಈ ಚುನಾವಣೆಯ ದುಷ್ಪರಿಣಾಮಗಳು ಮುಂದಿನ ಸಾರ್ವಜನಿಕ ಹಾಗೂ ನಿತ್ಯ ಜೀವನ ರಂಗಗಳಲ್ಲೂ ಒಂದಲ್ಲೊಂದು ರೂಪದಿಂದ ತೋರಿಬರಬಹುದು. ಇದು ಅಪಾಯಕರ ಮತ್ತು ಅತ್ಯಂತ ಶೋಚನೀಯ. ಸಮುದ್ರದಂತೆ ವಿಶಾಲ ಹಾಗೂ ಸರ್ವಸಮಾನವಾಗಿರಬೇಕಾದ ಸಾರ್ವಜನಿಕ ಜೀವನವನ್ನು ನೆರೆಮನೆಗ ಳೊಳಗಿನ ಜಗಳಕ್ಕೆ ಕೇಳುವಾದ ಮಧ್ಯಭಾಏಯ ಅಕಾರಕ್ಕೆಳಿದುದು ನಿಜಕ್ಕೂ ಅವನ ತಿಜ.ಸಂವರ್ತಿರಗಳಿಂತು ನಿತ್ಯದ ವಾತಾವರಣವು ಪ.ನರ್ನಿರ್ಮಾಣಗೊಳ್ಳುತ್ತಿರುವ ಈ ದಿನಗಳಲ್ಲಿ, ಆ ವಿರಸಗಾಳಿಯು ತಂದೊಡ್ಡಿದ ಕಸ, ಕಲ್ಮಶ ಕಂಟಿಕಗಳು ಸುತ್ತಿದು ಉಂಟಾಗಿಸಿಹಾಕಿದ ಮರಸಾಡುಗಳು ಎಲ್ಲೆಲ್ಲವನೆಯೋ ಅಲ್ಲೆಲ್ಲಾ ಕೂಡಲೇ ಸ್ವಚ್ಛಮಾಡಿಕೊಳ್ಳಬೇಕು; ಅದರ ಯಾವ ದುಷ್ಟಿನ್ಯೆಯೂ ಜನತೆಯ ನಡುವೆ ಇನ್ನುಮುಂದೆ ತೋರಿಬರಕೂಡದು. ಚುನಾವಣೆಯ ಕಾಲದಲ್ಲಿ ಬಲಿತ ಹಾಗೂ ಶುದ್ಧ ನುನ್ಮಿನಿಂದ ಕೆಲಸ[illegible] ಗಿದ್ದರೂ, ಆ ದನ್ನು ಚಾಟಿ ಹೆಜ್ಜೆ ಮುಂದಿಟ್ಟರುವ ಈಗಲಾದರೂ, ಕೆದಕುತೋದ ಅಳಿವಿನೆಯ ಕಡೆಗೆ ನಿರ್ಮಲ ದೃಷ್ಟಿಯಿಂದ, ಆಟಗಾರ ಸ್ಫೂರ್ತಿಯಿಂದ ನೋಡಲು ಕಲಿಯಬೇಕು.

ಗೆದ್ದ ಉಮೇದ್ವಾರಿಗಳು, ತಾವು ಸಾರ್ವಜನಿಕ ಹಿತಸಾಧಕ ಧ್ಯೇಯ ಧೋರಣೆಗಳುಳ್ಳ ಪಕ್ಷದ ಪರವಾಗಿ ನಿಂತು ಗೆದ್ದಿರುವುದಾದರೆ, ಆ ವಿಜಯವನ್ನು ಸಂಪೂರ್ಣವಾಗಿ ಹಾಗೂ ಅಂತಃಕರಣಪೂರ್ವಕ ಪಕ್ಷದ ಪಾಲಿಗೇನೇ ಕಟ್ಟಬಿಡಬೇಕು, ಆ ಪಕ್ಷವು ಮುಂದೆ ನೀಡಿದ ಕೈ ಕಾನ್ಸು— ಮತದಾರರು ತನ್ನನ್ನು ಹಿಡಿದೆತ್ತಿದುದು ವಕ್ಷಕ್ಕೆ ಕೊಟ್ಟ ಹೆಸ್ತಲಾಘವ ಮಾತ್ರ— ಎಂದು ನೆನಸಬೇಕು. ಕಾನ್ಸು ಎಂದಿಗೂ ಕೀಲುತಪ್ಪದೆ ನಕ್ಷದ ಆಂಗಾಂಗಾಗಿ ಯುವನೆನಂಬ ನಿಷ್ಠೆ ವಹಿಸಬೇಕು. ಯಾವುದೇ ಧ್ಯೇಯ, ಧೋರಣೆ, ಕಾರ್ಯಕ್ರಮವನ್ನು ಕಣ್ಣಮುಂದಿಟ್ಟುಕೊಳ್ಳದೇನೇ ಗೆದ್ದವರಿದ್ದರೆ, ಸಾರ್ವಜನಿಕ ಸ್ವಾನೋಚಿತ

ವಿನಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿಂ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯಃ—ಧಾರವಾಡ,
THE UNITED KARNATAK INSURANCE COMPANY, LIMITED.

ವಾಗಿ ಇನ್ನಾದರೂ ಅವರು ಅಂತಹದನ್ನು ಅಂಗೀಕರಿಸಿಕೊಳ್ಳಬೇಕು

ಸೋತವರು ಯಾವುದರಲ್ಲೇ ಆದರೂ, ಯಾರಿಗೇನೇ ಆದರೂ, ಸೋಲು ಇದ್ದದ್ದೇ ಎಂಬ ಆತ್ಮಸಮಾಧಾನದ ಆಡಿಗೆ ಹಾಕಿ, ತಮ್ಮ ಎಲ್ಲಾ ನೋವು, ನಷ್ಟಗಳನ್ನೂ ಜಜ್ಜಿಕೊಳ್ಳಬೇಕು. ವ್ಯಕ್ತಿಯ ಮಟ್ಟಿಗೆ ಹೇಳುವದಾದರೆ, ಗೆದ್ದವನಿಗಿಂತಲೂ ಸೋತವನ ಜಾಲಿಗೆ ಭವಿಷ್ಯ ಭವ್ಯವಾಗಿರುತ್ತದೆ; ಅನುಭವ ಹೆಚ್ಚಿನದಾಗಿರುತ್ತದೆ. ಸರ್ವ ಮಾನ್ಯ ಹಾಗೂ ಜನಹಿತ ಸಾಧಕ ಪಕ್ಷವೊಂದರ ವರವಾಗಿ ನಿಂತು ಸೋತವರದ್ದರೆ, ಬಂಧುವರು ಯಾತನೆ ಅಥವಾ ಲಜ್ಜೆಗೀಡಾಗಲು ಎಳ್ಳಷ್ಟೂ ಕಾರಣವಿಲ್ಲ. ಚುನಾವಣಾ ಹೋರಾಟದಲ್ಲಿ ಉಮೇದ್ವಾರಿಯು ಮೇಲಿನ ಹೊಡೆತಗಳನ್ನು ತಡೆಯುತ್ತಾ ವಜ್ರಕವಚವಾಗಿ ಇದ್ದ ಆ ಪಕ್ಷದ ಮೇಲೆಯೇ ಚುನಾವಣಾ ಪರಾಭವವೂ ಹೆಚ್ಚಾಗಿ ಬೀಳುತ್ತದಲ್ಲದೆ ವ್ಯಕ್ತಿಯ ಮೇಲಲ್ಲ. ತನ್ನ ಪರಾಜಿತ ಉಮೇದ್ವಾರಿಗಾದ ಕಷ್ಟ, ನಷ್ಟದ ಕುರಿತು ಆ ಸರ್ವಮಾನ್ಯ ಪಕ್ಷವು ಕಿಡುವ ಸಹಾನುಭೂತಿಯು ನಿಜಕ್ಕೂ ಈ ಜಿಲ್ಲಾ ಬೋರ್ಡು ಸ್ಥಾನಕ್ಕಿಂತ ಅಮೂಲ್ಯವಾದುದು; ಗೌರವಪ್ರದವಾದುದು. ಇಂದು ಇಂತಹ ದಿಲೆಯುಳ್ಳ ಸಹಾನುಭೂತಿ ದೊರಕಿತರೆ, ಮುಂದಕ್ಕಂತೂ ಇವರಿಗೆ ಒಳ್ಳೆ ಭವಿಷ್ಯವಿದೆ. ಅದ್ದರಿಂದ ಈ ಸೋಲೆಂಬುದು ಕಸಿವಿಸಿಪ್ಪದಂತೆ, ಹೊರತು ಕಷ್ಟರಸಿ ಹಾಕಿದಂತಲ್ಲ. ಇಂತಹ ಒಂದು ಪಕ್ಷಕ್ಕೆ ಯಾವುದೇವಿಧಾನವನ್ನು ನುಸರಿಸ್ಪಪರಾಭವವನ್ನೊಡ್ಡಿದವರ ಭವಿಷ್ಯವು ಮಹಾ ಪ್ರವಾಹವನ್ನು ದಾಟುವೆನೆನ್ನುತ್ತಾ ಎದೆಯೊಳದ ವರೆಗೂ ಆದರ ನೀರಿಗಿಳಿದಲ್ಲಿಗೆ ಬಂತೆನ್ನಬಹುದು. ಇನ್ನೂ ಹಾಗೆಯೇ ಮುಂದೊಕ್ಕಿದರೆ ಸೆಳೆತದಲ್ಲಿ ತೇಲಿಹೋಗುವುದೇ ಸರಿ; ಹೆಜ್ಜೆ ಹಿಂದಿಟ್ಟರೆ ಅಲ್ಲಿವರೆಗೆ ಮುಂದೊಕ್ಕಿದೆಯೂ ವ್ಯರ್ಥ. ಒರ್ವನ ವ್ಯಕ್ತಿಗತವಾಗಿ ಉಚ್ಚನ್ಯೇಯವುಳ್ಳ ಒಂದು ಜನತಾ ಪಕ್ಷವನ್ನು ಇದಿರಿಸಿದರೆ ಅವನ ಸಾರ್ವಜನಿಕ ಜೀವನವೆಂಬುವುದು ಮರವನ್ನಾಧರಿಸಿ ಬೆಳೆಯಬೇಕಾದ ಬಳ್ಳಿಯು, ಆ ಮರವನ್ನೇ ಕಟ್ಟಿಹಾಕುವುದಕ್ಕಾಗಿ ಕೇಳ್ಲುಟ್ಟು ಇಲ್ಲೇ ಒಣಗಿಹೋದಂತೆಯೇ ಸರಿ. ಅದ್ದರಿಂದ ಹಾಗೆ ಗೆದ್ದವರು ಇನ್ನಾದರೂ ಸರಿದಾರಿಗೆ ಬರಬೇಕು.

ಮತದಾರರು, ತಾವು ಒಬ್ಬ ಉಮೇದ್ವಾರಿಗೆ ಅಥವಾ ಒಂದು ಪಕ್ಷಕ್ಕೆ ಇಂತಿಷ್ಟು ಉಪಕಾರವನ್ನೂ, ಇದಿರುಕಡೆಗೆ ಇಂತಿಷ್ಟು ಶಿಕ್ಷೇಣವನ್ನೂ ಮಾಡಿದೆವೆಂದು ಲೆಕ್ಕ ಹಾಕಿ ನೋಡಿಕೊಳ್ಳುವ ಬದಲಿಗೆ ಸ್ವತಃ ತಮ್ಮದಾದ ಕರ್ತವ್ಯ ಪಾಲನೆ ತಮ್ಮಿಂದಾದುದಷ್ಟು,ಆಗದಿಹೋದುದೆಷ್ಟು ಎಂಬುದನ್ನು ತಾಲನೆ ಮಾಡಿನೋಡಿಕೊಳ್ಳಬೇಕು. ಈ ದೃಷ್ಟಿಯಿಂದ ತಾವು ಈ ಬಾರಿ ಪಡೆದ ಅನುಭವವೊಂದನ್ನಲ್ಲದೆ, ಬೇರಾವುದನ್ನೂ ಕಟ್ಟಿಕೊಳ್ಳದೆ ನಿರ್ಲಿಪ್ತರಾಗಿರಬೇಕು. ಚುನಾವಣಾ ರಂಗದಲ್ಲಿ ಕೆಲಸಮಾಡಿದ್ದ ಎಲ್ಲಾ ಕಾರ್ಯಕರ್ತರೂ ಇದೇ ಧೋರಣೆ ಮತ್ತು ಧೀರವನೆ ವಹಿಸಬೇಕು.

ಅಂತೂ, ಪ್ರಜಾಪ್ರಭುತ್ವದ ಪರಿಶುದ್ಧ ರೀತಿ ನಿಯಮಗಳಿಗನುಸಾರವಾಗಿರದೆ, ಅನ್ಯ ವಿಧಾನಗಳಿಂದ ನಡೆದುಹೋದ ಚುನಾವಣಾ ಸಂಬಂಧದ ಎಲ್ಲಾ ಕಲ್ಮಷಗಳೂ ವಿಜಯಭಾವನೆ, ಕ್ಷಮೆ ದಮೆಗಳಿಂದ ತೊಳೆದು ಹೋಗಿ ವಾತಾವರಣವು ಮರುದಿನದಿಂದಲೇ ನಿರ್ಮಲವಾಗಬೇಕು. ನಿರ್ಮಲ ಅಲೆಗಳನ್ನೆಬ್ಬಿಸುವ ಬದಲಿಗೆ ಕದಡಿಹೋದ, ಕಳಂಕಗೊಂಡ ಭಾವನಾ ಸರೋವರವು ಈಗಲೇ ತಿಳಿಗೊಳ್ಳಬೇಕು.

ಜಿಲ್ಲಾ ಬೋರ್ಡಿನಲ್ಲಿ ಅಧಿಕ ಸಂಖ್ಯಾಕರಾಗಿ ಆರಿಸಲ್ಪಟ್ಟಿರುವ ಕಾಂಗ್ರೆಸ್ ಸದಸ್ಯರಿಗೊಂದು ಮಾತು. ಪ್ರಥಮತಃ ಉಮೇದ್ವಾರಿಗಳನ್ನು ನೇಮಿಸುವ ಅಧಿಕಾರೀ ಕಾಂಗ್ರೆಸ್ ಕಾರ್ಯಕರ್ತರ ಕಡೆಗೆ ಎಲ್ಲರ ಲಕ್ಷ್ಯ ಹರಿದಿದ್ದಿತು; ಅವರಿಂದಾದ ಲೋಪದೋಷಗಳು ಟೀಕಿಸಲ್ಪಟ್ಟವು. ಆ ಮೇಲೆ ಮತದಾರರ ಸರದಿ ಬಂತು; ಅವರಿಂದಾದ ಕೆಲಸವೀಗ ವಿಮರ್ಶಿಸಲ್ಪಡುತ್ತಿದೆ. ಇನ್ನು ಉಳಿದಿರುವುದು ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಸದಸ್ಯರ ಕಾಲ. ಅವರು ಮನಸ್ಸು ಮಾಡಿದರೆ ಈ ವರೆಗಾಗಿರುವ ಎಲ್ಲಾ ಜನಹಿತ ಸಾಧನೆಗಳನ್ನೂ ಊರ್ಜಿತಗೊಳಿಸಬಲ್ಲರು. ಮಾತ್ರವಲ್ಲ, ಕರಿಣ ಟೀಕೆಗೊಳಗಾಗಿರುವ ಎಲ್ಲಾ ಲೋಪದೋಷಗಳನ್ನೂ, ಅವು ನಡೆದದೇ ಸಳ್ಳು ಎನ್ನಲಸಾಧ್ಯವಾಗುವಂತೆ ನಿವಾರಿಸಿ ಬಿಡಬಲ್ಲರು.

ಈ ಸತ್ಯ ಸ್ಥಿತಿಯು ಲಕ್ಷ್ಯದಲ್ಲಿರಲಿ.ಜಿಲ್ಲಾ ಬೋರ್ಡು ಸದಸ್ಯರೆಲ್ಲರೂ ಒಂದೆದೆಯಿರುವಾಗ, ಯಾವ ದೃಷ್ಟಿಯಿಂದ ನೋಡಿದರೂ ಕಾಂಗ್ರೆಸ್ ಸದಸ್ಯರನ್ನು ಏಂಗಡಿಸಿ ತಿಳಿಯಲಾಗುವದು ಅಸಾಧ್ಯ. ಕಾಂಗ್ರೆಸ್ ಸದಸ್ಯರನ್ನು ಬೇರೆ ಪಂಗ್ತಿಯಾಗಿ ನಿಲ್ಲಿಸಿದಾಗಲಾದರೂ ಅಲ್ಲಿ ಬಿಲ್ಲೆ ಮತ್ತು ಪೋಣಾಕು ಸಮತೆಯಂತಹವಾವುದೂ ಇರದಿದ್ದರೆ, ಆ ಸಾಲಿನಲ್ಲಿ ಕಾಂಗ್ರೆಸ್ ವೈರಿಪಕ್ಷವೇನಾದರೂ ತೋರಿ ಬರುವುದೂ ಅಸಂಭವ. ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಪಕ್ಷೀಯರು ಇನ್ನು ಮುಂದಿನ ತಮ್ಮ ವರ್ತನೆಗಳಿಂದಲೇ ಅದನ್ನು ಪುರಸ್ಕರಿಸಬೇಕಾಗಿದೆ.

ಕಾಂಗ್ರೆಸ್ ತತ್ವ, ಧೋರಣೆ ಮತ್ತು ಕಾರ್ಯಕ್ರಮಗಳಿಗೆ ವಿರುದ್ಧವಾದ ಭಾವನೆ, ವರ್ತನೆ, ಆಚಾರವಾವುದೇ ಆದರೂ ತಮ್ಮಲ್ಲೀವರೆಗೆ ಇರುವುದಾದರೆ ತಾವು ಕಾಂಗ್ರೆಸಿನ ನಿಜ ಪ್ರತಿನಿಧಿಗಳೆನ್ನಿಸುವುದಕ್ಕಾಗಿ ಮತ್ತು ಕೇವಲ ಅಷ್ಟಕ್ಕಾಗಿಯಾದರೂ ಇನ್ನು ಅವುಗಳನ್ನು ತೊರೆದುಕೊಳ್ಳಬೇಕು. ನಿರ್ದೋಷ ಹಾಗೂ ಸಂಪೂರ್ಣ ಕಾಂಗ್ರೆಸ್ ನಿಷ್ಠೆ ವಹಿಸಬೇಕು. ಜಿಲ್ಲಾ ಬೋರ್ಡಿನಿಂದಾಗಬೇಕಾದ ಕಾಂಗ್ರೆಸ್ ಕಾರ್ಯಯೋಜನೆ ಮತ್ತು ಸದಸ್ಯ ವರ್ತನೆಯು ಸ್ವಪ್ನ ಧೋರಣೆ ಮತ್ತು ಶಿಸ್ತು ಅಲ್ಲಿ ಕಂಡುಬರಬೇಕು. ಕಾಂಗ್ರೆಸ್ ಅಧಿಕಾರಿ ವರ್ಗ ಬಿಲ್ಲೆ ಹಚ್ಚಿದರೂ ಆ ಮೇಲೆ ಮತದಾರ ವರ್ಗ ಅದಕ್ಕೆ ಸೈಗೊಟ್ಟರೂ, ಒಬ್ಬನು ಕಾಂಗ್ರೆಸ್ ಕವಚವನ್ನು ಗಟ್ಟಿಯಾಗಿ ತೊಟ್ಟುಕೊಂಡಾಯಿತೇ ಹೊರತು ಆತ ಸ್ವತಃ ಕಾಂಗ್ರೆಸಿಗನಾಗಲಾರ. ಹೀಗೆ ತೊಟ್ಟುಕೊಂಡಂತೆ ಕಳಚಿಕೊಳ್ಳಲಿಕ್ಕೂ ಆಗುವ-- ಹಾಕಿಕೊಂಡಿಲ್ಲೇ ಹೆಂದು ಹೋಗಬಲ್ಲ-- ಅಂಗಿಯಾಗಿರುವ ಬದಲಿಗೆ ಈ ಸದಸ್ಯರಲ್ಲಿ ಅದು ಅಂಗವಾಗಿರಬೇಕು. ಅವರು ಕಾಂಗ್ರೆಸಿನೊಂದಿಗೆ ತಲ್ಲೀನತೆ ಹೊಂದಬೇಕು.

ಈ ರೀತಿ ಚುನಾವಣಾ ಸಂಬಂಧದ ಕಂಟಕ ಕಲ್ಮಷಗಳೆಲ್ಲವನ್ನೂ ಝಾಡಿಸಿ ತೆಗೆದುಕೊಂಡು, ಆ ಮೂಲಕ ದೊರೆತ ಪಾಠಗಳನ್ನಷ್ಟೇ ನೆನಪಿನಲ್ಲಿಟ್ಟುಕೊಂಡು ಇನ್ನು ಮುಂದಕ್ಕಾದರೂ ಪ್ರಗತಿಶೀಲ ಜನತಾರಾಜ್ಯ ಸ್ಥಾಪನೆಯ ಪ್ರಜಾಸತ್ತಾತತ್ವಗಳೇ ತೋರಿ ಬರುವಂತೆ ಎಲ್ಲರೂ ಶುದ್ಧೀಕರಣ ಕೊಂದಬೇಕು.

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಜೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಆಗಿ ಹೋದ-

ಮಾನವ ನಿರ್ಮಿತ ಅದ್ಭುತಗಳಿಗಿಂತ ಪ್ರಕೃತಿ ಜನ್ಯ ಸೌಂದರ್ಯಗಳೇ ಪ್ರಪಂಚದಲ್ಲಿ ಮಿಗಿಲಾದುವುಗಳೆನ್ನಬೇಕು. ವಿಜ್ಞಾನವು ಎಷ್ಟೇ ಮುಂದುವರಿದು, ಸೃಷ್ಟಿಕ ಸಹಜ ವಿಚಿತ್ರತೆಗಳಲ್ಲಿ ಎಷ್ಟೇ ಬಲವಾಗಿ ಕೈಯಾಡಿಸುತಿದ್ದರೂ ಮಾನವನ ಶಕ್ತಿ, ಊಹೆಗೆ ಮಿಕ್ಕಿದವುಗಳೆಷ್ಟೋ ಇನ್ನೂ ನಿಸರ್ಗಬದ್ಧವಾಗಿ ನಡೆದು ಹೋಗುತ್ತಿವೆ. ಕಳದ ತಾ. 22ನೇ ಗುರುವಾರ ನಡೆದ ಎರಡು ಆಕಸ್ಮಿಕ ದುರಂತಗಳು ಅದ್ಭುತದ ಆಟವೆಂಬಹದೆಂಬುದನ್ನು ಸೂಚಿಸುತ್ತಿವೆ. ಒಂದು ಬೊಂಬಾಯಿಯ ಅಸಾಧಾರಣ ಮಳೆ; ಮತ್ತೊಂದು ಕಾಶ್ಮೀರದಲ್ಲಿ ಭಾರತ ಸೇನಾನಿಗಳೆಲ್ಲೊಬ್ಬರಾಗಿದ್ದ ಮೇಜರ್ ಜನರಲ್ ಆತ್ಮ ಸಿಂಗರಿಗಾದ ಅವಘಡ ಮರಣ.

ಬೊಂಬಾಯಿಯ ಮಳೆ

ಕೆಳದ ಬುಧವಾರದಿಂದ ಗುರುವಾರದ ವರೆಗಿನ ಸುಮಾರು 30 ತಾಸುಗಳ ವರೆಗೆ ಬೊಂಬಾಯಿ ನಗರ ಮತ್ತು ಉಪನಗರಗಳಲ್ಲಿ ಬಿದ್ದ ಮಳೆಯಂತಹ ಮಹಾ ವೃಷ್ಟಿಯು ಹಿಂದೆಂದೂ ಬಿದ್ದ ನೆನಪು ಅ ನಗರ ವಾಸಿಗಳಿಗಿಲ್ಲವಂತೆ. ಈ ಇಡೀ ಒಂದೂಕಾಲು ದಿನದಲ್ಲಿ ೬೭ ಇಂಚು ಮಳೆ ಬಿದ್ದು 40 ಲಕ್ಷ ಜನರುಳ್ಳ ಆ ನಗರವು ನೀರ ಮೇಲೆ ನಿಂತಂತೆ ತೋರುತ್ತಿತ್ತು. ಟ್ರೈನ್, ಬಸ್, ಹಾಗೂ ಟ್ರಾಮ್ ಸರ್ವಿಸುಗಳೆಲ್ಲಾ ಮಳೆಯ ಆವಧಿಯುದ್ದಲ್ಲಿ ನಿಲ್ಲಿಸಲ್ಪಟ್ಟಿದ್ದುವು ಸಾಂತಾಕ್ರುಝ್ ಮತ್ತು ಜುಹು ವಿಮಾನ ನಿಲ್ದಾಣಗಳಿಂದರಲ್ಲೂ ವಿಮಾನಗಳ ಇಳಿತ ಮತ್ತು ಹೊರಡೋಣವನ್ನು ಪ್ರತಿಬಂಧಿಸಲಾಗಿದ್ದಿತು. ಮಳೆಯ ದೆಸೆಯಿಂದ ಗಗನ ಮಸಕಾಗಿ ನಿಲ್ದಾಣ ಕಾಣುತ್ತಿರಲಿಲ್ಲ. ಹೀಗಾಗಿಯೇ ಇಂಡೋನೇಶಿಯಕ್ಕೆ ಹೋಗಿ ಸ್ವದೇಶಕ್ಕೆ ಮರಳುತಿದ್ದ ಡಚ್ ಕಾಲಂ ವಿಮಾನವು ಕಳದ ಬುಧ ಬೊಂಬಾಯಿಯ ನಿಲ್ದಾಣ ಕಂಡು ಹಿಡಿಯಲಾರದೆ ಒಳಿಯು ಗುಡ್ಡಕ್ಕೆ ಢಿಕ್ಕಿ ಹೊಡೆದು ಪ್ರಯಾಣಿಕರಲ್ಲಿ ಒಬ್ಬನೂ ಉಳಿಯದೆ ನಜ್ಜುಗುಜ್ಜಾಗಿ ಹೋದ, ಭಾರತದ ಆಕಾಶಯಾನ ಚರಿತ್ರೆಯಲ್ಲೇ ಅತ್ಯಪರೂಪದ್ದಾದ ಘಟನೆಯು ಎಲ್ಲರ ಸ್ಮರಣೆಯಲ್ಲಿ ಇದೆ. ರಾಜಕೀಯದಂತೆಯೇ ಆಕಸ್ಮಿಕ ಮಹಾ ಘಟನಾಗಳನ್ನು ನಿರ್ಮಿಸುವುದರಲ್ಲೂ ಭಾರತದಲ್ಲಿ ಬೊಂಬಾಯಿಗೇನೇ ಹೆಚ್ಚಿನ ಸ್ಥಾನವನ್ನೆ ಬಹುದು. ಹಡಗು ಸೈಕ್ಲೋನಿಂತಹ ಮಹಾ ದುರಂತಗಳಾದುದು ಅಲ್ಲಿಯೇ. ಈ ಬಾರಿಯ ಮಳೆ

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ.
ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ಶುಭ್ರ ಮಾಡುತ್ತದೆ

ವಿಳಾಸ:-
ಪಾಥ್ರಿಸ್ (ಆಯುರ್) ಫ್ರೊಡಕ್ಟ್ಸ್,
ಉಡುಪಿ.

—ಅಕಸ್ಮಿಕ ಘಟನೆಗಳು.

ಯೂ ಅತಿ ಹೆಚ್ಚಿನದೇ. ಈ ಅಭೂತಪೂರ್ವ ಮಳೆಯ ದೆಸೆಯಿಂದ ಇಲೆಕ್ಟ್ರಿಕ್ ಹಾಳಾಗಿ ಏಳೆಂಟುಕಡೆ ಬೆಂಕಿ ಹಿಡಿದ, ಮತ್ತು ಬೊಂಬಾಯಿಮಧ್ಯ ವಲಯದಲ್ಲಿ ಎರಡುಮನೆಗಳು ಜರಿದು ಬಿದ್ದವಾರ್ತೆಗಳಿವೆ. ಒಂದು ಮನೆಯ ಗೋಡೆ ಜರಿದು ಬಿದ್ದುದರಿಂದ ಒಬ್ಬನು ಮರಣಗೊಂಡಿದ್ದಾನೆ. ಮತ್ತೊಂದು ಮನೆ ಮುರಿದು ಬಿದ್ದು ಆರು ಮಂದಿಗೆ ಜಖಮುಗಳಾಗಿವೆ. ಒಬ್ಬ ಮನುಷ್ಯ ನೆರೆಯಲ್ಲಿ ತೇಲಿ ಹೋಗಿರುವನೆಂದು ತಿಳಿದು ಬರುತ್ತದೆ. ಬಂದ್ರ ದಲ್ಲಿ ಒಂದು ಮನೆ ಮಾಡು ಕುಸಿದು ಬಿದ್ದು ಇಬ್ಬರು ಗಂಡಸರೂ ಮತ್ತೊಂದು ಮಗು ಮರಣಗೊಂಡರು. ಅಡೇ ವಲಯದಲ್ಲಿ ಜೀವಂತ ವಿದ್ಯುತ್ ಸಂಗೆ ತಾಗಿ ಒರ್ವ ಪೋಲೀಸನು ಮರಣಗೊಂಡನೆಂದೂ ಸುದ್ದಿಯಿದೆ. ಮಣ್ಣಿನೊಳಗೆ ಹೂತು ಹೋದ ಆರು ಮಂದಿಯನ್ನು ಉಸ್ಪತ್ರೆಗೆ ಸಾಗಿಸಬೇಕಾಯಿತು. ಮಹಾಲಕ್ಷ್ಮಿ ಬಳಿಯ ಸಮುದ್ರದಲ್ಲಿ ಸಣ್ಣ ದೋಣಿಯೊಂದರಲ್ಲಿ ಕುಳಿತು ಹೊರಟಿದ್ದ ಇಬ್ಬರು ಮೊಗವೀರರು ದೋಣಿ ಸಮೇತ ಮುಳುಗಿ ಹೋದರು. ಮಳೆ ನಿಂತ ಬೆನ್ನಲ್ಲೇ ಬಂದ ವಾರ್ತೆಗಳಿಗನುಸಾರವಾಗಿ ಒಂಭತ್ತು ಮಂದಿ ಮಡಿದ ನುದ್ದಿಯಿದೆಯಾದರೂ ಬೇರೆ ಮರಣಗಳಾಗಿರಲೂ ಬಹುದು. ಎಂತಹ ಅವಾಂತರಗಳಲ್ಲಾದರೂ ಆಶ್ಚರ್ಯಕರ ರೀತಿಯಿಂದ ಪಾರಾಗುವ ನಿದರ್ಶನಗಳಿರುತ್ತವೆ. ಬೊಂಬಾಯಿ ನೆರೆಯ ಒಂದು ಅಶ್ಚರ್ಯವೆಂದರೆ ಮುನ್ನೂರಕ್ಕೂ ಮಿಕ್ಕಿದ ವರ್ಗಗಳ ಮೃಗಾಲಯ, ಪಕ್ಷಿಗಳು ಮತ್ತು ಪ್ರಾಣಿಗಳಿರುವ ಅಲ್ಲಿಯ 'ವಿಕ್ಟೋರಿಯಾ ಗಾರ್ಡನ್'ಗೆ ಯಾವ ಹಾನಿಯೂ ಆಗದಿದ್ದುದು. ಮರಗಳ ಕೆಲವು ಗೆಲ್ಲುಗಳು ಮುರಿದು ಬಿದ್ದು ಜಲ್ಪಸ್ವಲ್ಪ ಹಾನಿಗಳಾಗಿದ್ದರೂ ಒಳಗಿನ ಜಂತುಗಳಲ್ಲಿ ಯಾವುದಕ್ಕೂ ಏನೂ ಆಗದಿದ್ದುದೊಂದು ವಿಶೇಷ. ಕುರ್ಲಾ ವಿದ್ಯುಚ್ಛಕ್ತಿ ಸ್ಟೇಶನಿಗೆ ನಿಡಿಲು ಬಡಿದು ಕುರ್ಲಾ ಮತ್ತು ದಾದರ್‌ಗಳ ನಡುವೆ ಆರು ಘಂಟೆ ಕಾಲ ವಿದ್ಯುತ್ ಸರಬರಾಯಿ ನಿಂತು ಹೋಗಿದ್ದಿತು. ಮಾನವ ನಿರ್ಮಿತ ಯಾವುದೇ ಮುಸ್ಸೂರಿ, ಹರತಾಳಗಳಿಂದಲೂ ಬಿಗಿದಿದ್ದಷ್ಟು ಸಂಪೂರ್ಣವಾಗಿ ಪ್ರಕೃತಿಜನ್ಯ ಮಹಾವರ್ಷವು ಬೊಂಬಾಯಿ ನಗರದ ಎಲ್ಲಾ ಸಂಚಾರ ವಹಿವಾಟುಗಳನ್ನೂ ನಿಲ್ಲಿಸಬಿಟ್ಟಿದ್ದಿತು. ಈ ರೀತಿ ಸ್ವತಃ ನಾನೆಬಿಡಲಾಗದೆ ಮತ್ತು ಎಲ್ಲಾ ಮನೆಗಳಲ್ಲೂ ಸುರಕ್ಷಿತವಾಗಿ ಇರಲಾಗದ ಸ್ಥಿತಿಯಲ್ಲಿ ಸರಕಾರವು ಗುರು ವಾರವನ್ನು ಬೊಂಬಾಯಿ ಮತ್ತು ಒತ್ತಿನ ಜಿಲ್ಲೆಗಳಲ್ಲಿ ರಜಾದಿನವಾಗಿ ಜಾಹೀರು ಮಾಡಿದ್ದಿತು. ನಾಲ್ಕು ಮಿಲಿಯ ಜನರು ಳ್ಳ ಬೊಂಬಾಯಿಯಲ್ಲಿ ಸಂಚಾರಜೀವನ, ಕಾಲ್ತಾರೀ ಅನ್ಯಮಾಡಿಕೊಂಡು ಜೀವಿಸುವವರೂ ಸಣ್ಣ ಪುಟ್ಟಮಾಡುಗಳಿಯ ಜೀವಿಗಳೂ ಅಧಿಕ ಸಂಖ್ಯೆಯಲ್ಲಿದ್ದಾರೆ. ಈ ಮಹಾಮಳೆಯಿಂದ ವಿಶೇಷಳಪ್ಪನಪ್ಪಗಳ ಗೀಡಾದವರೆಂದರೆ ಈ ಬಡಜನ ವರ್ಗ. ಕೆಲಸಗಾರ ಕುಟುಂಬಗಳಿಗೆ ಆಶ್ರಯವಾಗಿ ಅಲ್ಲಿಯ ಮುನ್ಸಿಪಲ್ ಶಾಲಾ ಕಟ್ಟಡಗಳನ್ನು ಉಪಯೋಗಿಸಬೇಕಾಯಿತು. ಮಳೆ ನಿಂತೊಡನೆಯೇ ಸಂಚಾರ ವಹಿವಾಟುಗಳು ಎಂದಿನಂತೀಗ ಪ್ರಾರಂಭಿಸಿವೆ. ಬೊಂಬಾಯಿ ನಗರಕ್ಕೆ ಈ ದೆಸೆಯಿಂದಾದ ಒಟ್ಟು ಹಾನಿಯನ್ನು ಅಂದಾಜು ಮಾಡುವದಸಾಧ್ಯ. ಸರಕಾರದೊಂದು ಧಾನ್ಯ ಗೋಡೌನಿಗೆ ಕೂಡಾ ಈ ಮಳೆಯಿಂದ ಹಾನಿಯಾಗಿದೆಯೆಂದು ತಿಳಿದು ಬಂದಿದೆ. ಅಂತೂ ಬೊಂಬಾಯಿ ಒಂದು ಚಿಕ್ಕ ರೀತಿಯ ಜಲಪ್ರಳಯವನ್ನೇ ಅನುಭವಿಸಿತು. ಕಾಲ ಪ್ರಭಾವ!

ಆತ್ಮಸಿಂಗರ ಮರಣ

ಕಾಶ್ಮೀರದ ರಣರಂಗದಲ್ಲಿ ಹಿಂದೀ ಸೇನೆಯ ಕಮಾಂಡರರಾಗಿದ್ದ ಮೇಜರ್ ಜನರಲ್ ಆತ್ಮಸಿಂಗರು ಮೋಟಾರು ಅಪಘಾತದೊಂದಕ್ಕೆ ಸಿಲುಕಿ ಇದೇ ತಾ. 22 ರಲ್ಲಿ ಮರಣಗೊಂಡರು. ಆ ದಿನ ಅಪರಾಹ್ನ ಜಮ್ಮುವಿನಲ್ಲಿ ಮಧ್ಯಾಹ್ನದ ಊಟ ತೀರಿಸಿ, ಆತ್ಮ ಸಿಂಗರು 'ಜೀಪ್' ಗಾಡಿಯಲ್ಲಿ ಸೇನಾ ತನವಿಗಾಗಿ ಹೊಂಟಿದ್ದರು. ಜಮ್ಮು-ಶ್ರೀನಗರ ರಸ್ತೆಯ ಮಧ್ಯದಲ್ಲಿರುವ 15ನೇ ಮೈಲು ಕಲ್ಲಿನ ಬಳಿ ರಸ್ತೆ ತಿರುಗುವಲ್ಲಿ ಇದಿರಿಗೆ, ವರ್ಕ್ ಶೋಪಿನ ಜೀಪ್ ಒಂದುಧಾವಿಸಿ ಬಂದುದರಿಂದ ಎರಡೂ ಮೋಟಾರುಗಳು ಢಿಕ್ಕಿ ಹೊಡೆದುಕೊಂಡು ಸ್ಫೋಟವಾದುವು. ಮೇಜರ್ ಜನರಲ್ ಆತ್ಮಸಿಂಗರ ತೋಳು ಘಾಯವಾಗಿ ರಕ್ತ ಸುರಿಯಹತ್ತಿತು. ಅದರೂ ಅವರು ತನ್ನೊಂದಿಗೆ ಕುಳಿತಿದ್ದ ತನ್ನ 'ಸ್ಟಾಫ್ ಆಫೀಸರ್' ಲೆಫ್ಟ್ಯಿನೆಂಟ್ ಕರ್ನಲ್ ಶಿವದಯಾಳರೊಂದಿಗೆ ತನ ಗಂತಹದೇನೂ ಆಗಲಿಲ್ಲವೆನ್ನುತ್ತಾ ಕುಡಿಯಲು ನೀರು ಕೇಳಿದರು. ನೀರು ಕೊಡಲಾಯಿತು. ಅಲ್ಲಿದ್ದ ಎ ಡಿ ಸಿಯು ಆತ್ಮಸಿಂಗರ ಬೂಟುಗಳನ್ನು ಮತ್ತು ಜಾಕೆಟನ್ನು ಮೂರೇ ಮಿನಿಟುಗಳಲ್ಲಿ ಕಳಚಿದರು. ಅಷ್ಟರಲ್ಲೇ ಆ ಹಾದಿಯಾಗಿ ಬರುತ್ತಿದ್ದ ಮತ್ತೊಂದು ಸೇನಾ ಬಂಡಿಯನ್ನು ನಿಲ್ಲಿಸಿ, ಅದರಲ್ಲಿ ಅವಸರದಿಂದ ಒಂದು ಹಾಸಿಗೆಯಂತೆ ಮಾಡಿ, ಜಮಖಂಗೊಂಡ ಕಮಾಂಡರನ್ನು ಮಲಗಿಸಲಾಯಿತು. ಹಾಗೆ ನಾಲ್ಕು ಮೈಲು ಹೋದ ಕೂಡಲೇ ಜನರಲ್ ಆತ್ಮಸಿಂಗರ ಸ್ಥಿತಿಯು ಒಮ್ಮೆಗೇ ಹಾಳಾಗಿ, 2.50ಘಂಟೆಗೆ ಅವರು ಮರಣಗೊಂಡರು. ಮರುದಿನ ಅವರ ಶವವನ್ನು ವಿಮಾನ ಮೂಲಕ ಢಿಲ್ಲಿಗೆ ತಂದು, ಅಲ್ಲಿ ಸಿಖ್ ಸಂಪ್ರದಾಯಾನುಸಾರವಾಗಿ, ಪರಿಪೂರ್ಣ ಸೇನಾ ಗೌರವಗಳೊಂದಿಗೆ ದಹನವಾಗಿಸಲಾಯಿತು. ಶವ ದಹನದ ವೇಳೆಗೆ ಗವರ್ನರ್ ಜನರಲರ ಮತ್ತು ಭಾರತ ಪ್ರಧಾನಿಗಳ ಪ್ರತಿನಿಧಿಗಳೂ, ಏಕಾಶ್ ನೆಲ-ಜಲ ದಳಗಳ ಮುಖ್ಯಾಧಿಕಾರಿಗಳೆಲ್ಲರೂ ಹಾಜರಿದ್ದರು.

ಮೇಜರ್ ಜನರಲ್ ಆತ್ಮಸಿಂಗರು 44 ವರುಷ ಪ್ರಾಯದವರು. ಸಿಖ್ ವೀರ. ಅವರ ನಿಧನದಿಂದ ಭಾರತ ಸೇನೆಯ ಅತಿ ಸಮರ್ಥ ಸೇನಾನಿಯೊಬ್ಬನು ಕಳೆದು ಹೋದಂತಾಯಿತು. ಅವರು ತನ್ನ ಜಾತೀಯರಾತಿಗೆ ಲಜ್ಜಿಸುವ ಮನುಷ್ಯ. ಆದರೆ ತನ್ನ ಸೇನೆಯೊಳಗಿನ ಪ್ರತಿಯೊಬ್ಬ ಉಪನಾಯಕನ ಆತ್ಮೀಯತೆ ಹಾಗೂ ಎಲ್ಲಾ ಜವಾನರ ಅಂತಃಕರಣ ಪೂರ್ವಕ ಪ್ರಾಗೂ ವಿಶೇಷ ರೀತಿಯ ಗೌರವಾದರಗಳನ್ನು ಗಳಿಸಿಕೊಂಡವರು. ಆಖಂಡ ಭಾರತದ ೮ ದಿನಗಳಲ್ಲಿ ಐದು ವರುಷ ಗಡಿನಾಡು ಪ್ರಾಂತ್ಯದ ಕಾವಲು ಸೇನಾನಿಯಾಗಿ ಅನುಭವವಿದ್ದವರು. ವಿಕ್ಟವರಿಗಸಾಧ್ಯವಾಗಿರುವ ಗುಡ್ಡಗಾಡುವಲಯಗಳ ಮರ್ಮವರಿತುಕೊಂಡು ಒಳಧಾಳಿ ನಡಿಸುವುದರಲ್ಲಿ, ಅವರಿಗಿರುವ ಜಾಣ್ಮೆಯು ಅಸಾಧಾರಣದ್ದೆಂದು ಪ್ರಖ್ಯಾತಿಯಿದೆ. ಪ್ರಜಾರವಿಮುಖ ಆತ್ಮಸಿಂಗರ ಹೆಸರು ಇತ್ತೀಚೆಗಿನ ವರೆಗೂ ಕೇಳಬಂದಿರಲಿಲ್ಲ. ಆದರೆ ಕಳದ ನವೆಂಬರ್ ತಿಂಗಳಲ್ಲಿ ಕಾಶ್ಮೀರದ ಛಾಳಿಗಾರರನ್ನು ಹತ್ತಿಕ್ಕುಲು ಜಮ್ಮುವಿನ ಅತಿ ಭೀಕರ ಪ್ರಾಗೂ ಉನ್ನಂಗಸದರವಾಗಿರುವ ಪರ್ವತ ವಲಯದಲ್ಲಿ ಸುಮಾರು 45 ಮೈಲುಗಳ ಉದ್ದಕ್ಕೂ ವ್ಯಕ್ತಿಶಃ ತನ್ನ ಸೇನೆಯನ್ನು ನಡೆಯಿಸಿ ಪ್ರದರ್ಶಿಸಿದ ಸಾಹಸದಿಂದ ಅವರು ಒಮ್ಮೆಗೇ ಪ್ರಕಾಶಗೊಂಡರು. ಅವರಿಗೆ ಪತ್ನಿ, ಹೆನ್ನೆರಡು ವರುಷದ ಒರ್ವ ಪುತ್ರ ವಿಳು ಮತ್ತು ಎರಡು ವರುಷದ ಇಬ್ಬರು ಪುತ್ರಿಯರಿದ್ದಾರೆ. ಜಮ್ಮುವಿನಿಂದ ಬಂದ ವಿಮಾನದಿಂದ ನವಢಿಲ್ಲಿಯಲ್ಲಿ ಆತ್ಮಸಿಂಗರ ಶವವನ್ನು ಹೊಂತೆಗೆದಾಗ ಪತ್ನಿ, ನಾದಿನಿ, ವತ್ತು ಮತ್ತಳು ಗೋಳಾಡಿದ ದೃಶ್ಯವು ಹೃದ್ರಾವಕವಿದ್ದಿತು.

ಪ್ರಸಿದ್ಧ ಸೇನಾನಿಗಳು ರಣರಂಗಗಳಲ್ಲಿ ಅವಸರದ ಓಟ, ಮತ್ತು ಕಠಿಣ ರೀತಿಯ ಕಾದಾಟಗಳ ವೇಳೆ ಎಷ್ಟೋ ಅವಾಂತರಗಳನ್ನೆದಿರಿಸಬೇಕಾಗುತ್ತದೆ. ಇಂತಹ ಕಷ್ಟಸಹನೆಯ ತರಬೇತಿಯು ಅವನಿಗೆ ದೊರೆತಿರುತ್ತದೆ. ತಜ್ಞ ಕಮಾಂಡರರಿಲ್ಲದೆ ಅಪರೂಪ; ರಣರಂಗದಲ್ಲಿ ಕಮಾಂಡರರ ಮರಣವೆಂಬುದೂ ಅಕರಾಸನೇ; ಆದರೆಲ್ಲೂ ಬಸ್ ಅವಘಡದಂಥವುಗಳಿಗೆ ಅವರು ಬಲಿಬೀಳುವುದು ಅತ್ಯಪೂರ್ವವಾಗಿ. ಹೀಗಿದ್ದರೂ ಮೇಜರ್ ಜನರಲ್ ಆತ್ಮಸಿಂಗರಂತಹ ಅವಘಡ ಯುದ್ಧತಜ್ಞ ಸೇನಾನಿಯೊಬ್ಬನು ಅಪಘಾತಕ್ಕೀಡಾಗಿ ಮರಣಗೊಂಡುದು ಅದೃಷ್ಟದ ಆಟವೇ ಹೊರತು ಬೇರಲ್ಲ.

CHITRAKOT ASTHMA CURE

Registered

Widely renowned and a most Powerful highly effective remedy for curing Asthma by one dose to be taken on 16-10 49 full moon night

Apply atonce in English.

Shri Mahatma Yogi Baba

Ayurvedic Buti Bhandar,

P.O. Chitrakot (M.P.)

Retailers' Choice:

MILL CLOTH - Unlimited choice of Qualities and Varieties to suit every one's taste. All Varieties in Stock.

SILKS - Just unpacked— Wide range of selection— at reduced rates. Finest Products of the Famous Producers

FOREIGN CLOTH - Imported Varieties— Noted for their uniform and unvarying quality— Yet Prices within the reach of one and all.

All varieties are avaliable in many beautiful shades and designs

Visit will convince you—

VITHALJI & CO., LTD.

The Pioneer Cloth Dealers of the District.

MANGALORE.

ಚಂದಾದಾರರಲ್ಲಿ-

ಚಂದಾಹಣ ಬಾಕಿಇರುವ ಚಂದಾದಾರರಿಗೆಲ್ಲಾ ಕ್ರಮವಪ್ರಕಾರ ಈ ತಿಂಗಳ ಆರಂಭದಿಂದಲೇ ಪತ್ರಿಕೆಯನ್ನು ನಿಲ್ಲಿಸಿ ಮಾಡಿ ಕಳಿಸಲು ಪ್ರಾರಂಭಿಸಿರುತ್ತೇವೆ ಅವರೆಲ್ಲರೂ ದಯಮಾಡಿ ವಿ. ಪಿ. ಯನ್ನು ಸಕಾಲದಲ್ಲಿ ಸ್ವೀಕರಿಸಿಕೊಂಡು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು

ರಶ್ಯದ ಬಗಲೊಳಗೂ ಆಟಂ ಬೋಂಬು ಇದೆ!

ಜಾಗತಿಕ ರಂಗದ ಮೇಲೊಮ್ಮೆ ವಿಮಾನನೋಟ ಬೀರುವಾಗ ಆಟಂ ಗದ್ದಲ ಮತ್ತು ಆರ್ಥಿಕ ರಂಗದ ಗಲಿಬಿಲಿಗಳೇ ವಿಶೇಷ ರೀತಿಯಿಂದ ಕಂಡುಬರುತ್ತಿವೆ. ಅದೇ ರೀತಿ ರಾಜಕೀಯ ಕ್ಷೇತ್ರದಲ್ಲೂ ಗಣ್ಯಘಟನೆಗಳು ತೋರಿ ಬಂದಿವೆ. ಅಂತೂ ಕಳದ ದಿನಗಳ ಆಗು ಹೋಗುಗಳ ವೈಶಿಷ್ಟ್ಯವಾಗಿ 'ಜಾತುರ್ಯ ಪೈಜೋಟಿ' ಕಂಡುಬಂದಿದೆ.

ಲೋಕ ವಿಹಂವಾಟು

ಜೈನಾ ಸಮರವು ಯಥಾ ಪ್ರಕಾರವಾಗಿದೆ. ಕಮ್ಯೂನಿಸ್ಟ್ ಸೇನೆಗಳು ಅಮೋಯಿ ಮೊದಲಾದ ಪ್ರಾಮುಖ್ಯ ನಗರಗಳನ್ನು ಹಿಡಿದುಕೊಳ್ಳುತ್ತಾ, ಏಕಪ್ರಕಾರ ಮುಂದೊತ್ತುತ್ತಿವೆ. ಬ್ರಿಟಿಷರಾಧೀನದ, ಹಾಗೂ ಜೈನಾ ಹೋರಾಟದೊಂದು ಪ್ರಬಲ ಸಮಸ್ಯೆಯಾಗಿರುವ ಹೋಂಗ್‌ಕೊಂಗಿಗೆ ಕೆಂಪು ಸೇನೆಗಳು ಸಮೀಪವಾಗುತ್ತಿವೆ. ಕಮ್ಯೂನಿಸ್ಟರ ಹಸ್ತಗತವಾಗುವವೆಂಬ ಭೀತಿಯಿಂದ, ಎಚ್ಚೆ, ಮೋಟಾರು, ವಿಮಾನಗಳ ಭಾಗ, ಮುಂತಾದ ಉಪಕರಣಗಳನ್ನು ಜೈನಕ್ಕೆ ರವಾನಿಸಬಾರದೆಂದು ಇಂಗ್ಲಾಂಡು, ಅಮೆರಿಕಗಳು ನಿರ್ಬಂಧನೆಯನ್ನಿಲ್ಲದೆ, ಫ್ರಾನ್ಸ್, ಹಾಲ್ಲೆಂಡ್, ಬೆಲ್ಜಿಯಮ್, ಸಿಲಿಪ್ಪಾಯನ್ಸ್ ರಾಷ್ಟ್ರಗಳೂ ತಮ್ಮಂತೆಯೇ ಮಾಡಬೇಕೆಂದು ಆಗ್ರಹಪಡಿಸಿವೆ

ಇಂಡೋನೇಶಿಯದ ಭವಿಷ್ಯ ನಿರ್ಮಾಣಕ್ಕಾಗಿ ಹೇಗ್‌ಯೂವಿನಲ್ಲಿ ಸೇರಿದ್ದ ಡಚ್ ಮತ್ತು ಇಂಡೋನೇಶಿಯನ್ ಪಕ್ಷಗಳ ಪ್ರತಿನಿಧಿಗಳ ಮುಂಡೂನೇಜು ಸಮ್ಮೇಳನದಲ್ಲಿ ಸ್ಥೂಲ ರೂಪದ ಒಂದು ಒಪ್ಪಂದವಾಗಿದೆ. ಇನ್ನು ಮುಂದಿನ ಪರ್ಯಾಲೋಚನೆಗಾಗಿ ಮಾತಕತೆಗಳು ನಡೆಯಲಿವೆ.

ಬರ್ಮಾ ಹೋರಾಟ ಮತ್ತಿತರ ರಂಗಗಳ ಘರ್ಷಣೆಗಳು ಯಥಾ ಪ್ರಕಾರವಾಗಿವೆ.

ರಶ್ಯ ಮತ್ತು ಯುಗೊಸ್ಲೇವಿಯಾಗಳೊಳಗಿರುವ ವೈಷಮ್ಯವು ಹಾಗೆಯೇ ಉಳಿದಿರುವುದಾದರೂ ಸೋವಿಯೆಟ್ ಸರಕಾರವು ಮಾರ್ಶಲ್ ಟಿಟೋನ ಮೇಲೆ ಬೆದರಿಕೆ ಗುಂಡುಗಳಿಗಿಂತ ಹೆಚ್ಚಿನದನ್ನು ಕೂಡಲೇ ಪ್ರಯೋಗಿಸುವ ಸಂಭವವಿಲ್ಲವೆಂಬ ಊಹೆಗೆದ್ದೆ ದೊರೆತಿದೆ. ಎರಡು ಕಮ್ಯೂನಿಸ್ಟ್ ರಾಷ್ಟ್ರೀಯರೊಳಗೆ ವೈಮನಸ್ಸಿರುವುದು ಹಿತಕರವಲ್ಲವೆಂದು ಮಾರ್ಶಲ್ ಟಿಟೋ ಹೇಳಿದ್ದ. 'ಮಾರ್ಕ್ಸ್‌ಲೆನಿನ್‌ವಾದ'ವೇ ಮೋಸ್ಕೋವಿಗೆ ಬಂದು ತನ್ನ ಅಪರಾಧಗಳನ್ನು ಜಾಹೀರಾಗಿ ಒಪ್ಪಿಕೊಳ್ಳಬೇಕು ಮತ್ತು ನಾವು ಸೂಚಿಸುವ ರೀತಿಯಲ್ಲಿ ಕನ್ನಹಗೂ ತನ್ನ ಸರಕಾರದ ನೀತಿನೀತಿಗಳನ್ನು ಬದಲಾಯಿಸಿಕೊಳ್ಳಬೇಕು' ಎಂದು ಸ್ಟಾಲಿನರು ಟಿಟೋವಿಗೆ ಬರೆದಿದ್ದರು. ಹೀಗೆ ಲಜ್ಜಾವಹ ರೀತಿಯಿಂದ ಶರಣು ಹೋಗಲು ಅಭಿಮಾನಿ ಟಿಟೋ ತಯಾರಿಲ್ಲ.

ರಶ್ಯದಲ್ಲಿ ಇತ್ತೀಚೆಗೆ ಒಂದು ಆಟಂ ಸ್ಫೋಟವಾಯಿತೆಂಬ ವಾರ್ತೆಯು ಅಮೆರಿಕಾಂಗ್ಲ ಪಾಳಯದ ಜನತೆಯ ಮನಸ್ಸಿನ ಮೇಲೆ ಪರಿಣಾಮವನ್ನು ಉಂಟು ಮಾಡಿದೆ ಆ ಸ್ಫೋಟವು ರಶ್ಯದ ಇದಿರುವಾದಿ ರಾಷ್ಟ್ರಕರಿಲ್ಲದ ಹೃದಯಗಳಲ್ಲೂ ಸ್ಥಿತಿಧ್ವನಿ ಕೊಟ್ಟಿದೆ.

ರಶ್ಯದ ಆಟಂ.

ಇದೇ ತಾ. 23ರಲ್ಲಿ ಅಮೆರಿಕಾಧ್ಯಕ್ಷ ಟ್ರುಮೇನರು ಸ್ವತಃ ಜಾಹೀರು ಮಾಡಿದ್ದಾರೆ. "ಇತ್ತೀಚೆಗಿನ ವಾರಗಳಲ್ಲಿ ಒಂದು ಆಟಂ ಸ್ಫೋಟವು ರಶ್ಯದಲ್ಲಿ ನಡೆಯಿತೆಂಬ ದೃಢ ನಮಗೆ ರುಜುವಾತುಗಳು ದೊರೆತಿವೆ. ಮನುಷ್ಯನು ಆಟಂ ಶಕ್ತಿಯನ್ನು ಪ್ರಥಮತಃ ಕಂಡು ಹಿಡಿದಂದಿನಿಂದ, ಇತರ ರಾಷ್ಟ್ರಗಳಲ್ಲಿಯೂ ಈ ಹೊಸ ಶಕ್ತಿಯು ಕ್ರಮಕಃ ಅಭಿವೃದ್ಧಿಗೊಳ್ಳಬಹುದೆಂಬ ನಿರೀಕ್ಷೆಯಿದ್ದದ್ದೇ. ನಾವು ಸದಾಕಾಲ ಈ ಸಂಭವನ್ನು ದೃಷ್ಟಿಪಥದಲ್ಲಿಟ್ಟುಕೊಂಡೇ ಬಂದಿದ್ದೇವೆ. ವಾಷ್ಟ್ರಿಯ ರಕ್ಷಣೆಗೆ ಸಂಪೂರ್ಣವಾಗಿ ಹೊಂದಿಕೊಂಡಿರುವ ಅಮೆರಿಕನ್ ಜನತೆಯು ಆಟಂ ರಂಗದಲ್ಲಾಗುವ ಎಲ್ಲಾ ಆಗುಹೋಗುಗಳನ್ನರಿತುಕೊಳ್ಳಲು ಹೆರೆಂಬ ನಂಬಿಕೆಯಿಂದಲೇ ಇತ್ತೀಚೆಗಿನ ವಾರಗಳಲ್ಲಿ ರಶ್ಯದಲ್ಲಾದ ಆಟಂ ಸ್ಫೋಟ ವಾರ್ತೆಯನ್ನು ನಾನಿಲ್ಲಿ ಜಾಹೀರು ಮಾಡುತ್ತಿದ್ದೇನೆ" ಲಂಡನ್ ಮತ್ತು ಒಟ್ಟಾವಾಗಲ್ಲಿಯೂ ಇದೇ ಮಾದರಿಯ ಘೋಷಣೆಗಳಾಗಿವೆ. ಆದರೆ ರಶ್ಯದಲ್ಲಿದು ನಡೆದುದೆಲ್ಲಿ ಮತ್ತು ಯಾವ ದಿನವೆಂಬ ವಿವರವಾವುದೂ ಪ್ರಕಟವಾಗಿಲ್ಲ. ರಶ್ಯದ ಆಟಂ ಪರಿಶೋಧನಾ ಕಾರ್ಯಗಳು ಕಂಗಾವಳಿಯನ್ನು ಬಿಟ್ಟು ರವ ಎಸ್ಟೋನಿಯಾ ಮತ್ತು ಡಾಗೋ ಯಿ ದ್ವೀಪಗಳಲ್ಲಿ ನಡೆದಿರಬೇಕೆಂದು ಬಲ್ಲವರು ಊಹೆ. ಆ ದ್ವೀಪಗಳಲ್ಲಿದ್ದ ಜನರನ್ನು ಖಾಲಿ ಮಾಡಿಸಿ, ಕೆಲ ಕಾಲಕ್ಕೆ ಮೊದಲೇ ರಶ್ಯನರನ್ನು ಅಲ್ಲಿ ತುಂಬಿಸಿದ್ದರು. ಆದರೆ ಅಲ್ಲಿ ಯಾವುದೇ ಪರೀಕ್ಷಾರ್ಥ ಸ್ಫೋಟ ನಡೆಸುವುದು ಅಸಾಧ್ಯವೆಂದೂ ತೀರ ಒಳಗಡೆ ಪ್ರದೇಶಕ್ಕೆ ಆಟಂ ಬೋಂಬನ್ನು ಕೊಂಡು ಹೋಗಿರಬೇಕೆಂದೂ ನಂಬಲಾಗಿದೆ. ರಶ್ಯವೀರೀತಿ ತನ್ನಲ್ಲಿಯೂ ಆಟಂ ಬೋಂಬುಗಳಿವೆಯೆಂಬುದನ್ನು ಸದ್ದು ಮಾಡಿ ಪ್ರಪಂಚಕ್ಕೆ ತಿಳಿಸಿದೆ. ಈ ಕುರಿತೀವರೆಗೂ ಯಾವ ಸೂಚನೆ ಅಥವಾ ವಾಸನೆಯನ್ನೂ ರಶ್ಯವು ಹೊರಗೆ ಬಿಟ್ಟುಸಿದ್ದಿಲ್ಲ. ಅಮೆರಿಕವು ಬಿಕಿನಿಯಂತಹ ಸ್ಥಳದಲ್ಲಿ ಜಗಜ್ಜಾಹೀರಾಗಿ ಆಟಂ ಪ್ರಯೋಗ ನಡೆಸಿದ್ದಂತೆ ರಶ್ಯವು ಪ್ರದರ್ಶನ ಕ್ಕೆ ಹೋಗಿಲ್ಲ. ಆಟಂ ಬೋಂಬು ತಯಾರೀ ವಿಧಾನವುಯಾವ ರಾಷ್ಟ್ರದ ತಜ್ಞರಿಗಾದರೂ ತಿಳಿದಿರಬಹುದು; ಕೆಲವಕ್ಕೆ ಆದರ ಉಪಕರಣಗಳ ಸಂಪಾದನೆಯೂ ಸಾಧ್ಯವಿವೆ; ಅದರನಿರ್ಮಾಣವಾಗುವದೂ ಸಂಭವನೀಯ—ಎಂಬ ನೀರೀಕ್ಷೆಯಿದ್ದರೂ ಎಲ್ಲವೂ ಕೂಡಿಬಂದು ಆಟಂಬೋಂಬುಗಳನ್ನು ತಯಾರಿಸುತ್ತಿರುವ ರಾಷ್ಟ್ರವೆಂದರೆ ಅಮೆರಿಕ ಮಾತ್ರವೆಂಬ ಭಾವನೆ ಲೋಕವ್ಯಾಪಿಯಾಗಿದ್ದಿತು. ಪಾಶ್ಚಾತ್ಯ ರಾಷ್ಟ್ರಗಳು ಈ ಭರವಸೆಕಟ್ಟಿಕೊಂಡಿದ್ದುವು. ರಶ್ಯದ ಕೈಯಲ್ಲಿಆಯುಧವೇ ಇಲ್ಲವೆಂಬಂತೆ, ಸಂದರ್ಭ ಬಂದಾಗಲೆಲ್ಲಾ ಅಮೆರಿಕವು ಅಪ್ರತ್ಯಕ್ಷವಾಗಿ ಆಟಂಮುಷ್ಟಿಯನ್ನು ಜಡಿದು ಬೆದರಿಕೆ ಹಾಕಲು ನೋಡುತ್ತಿದ್ದಿತು. ರಶ್ಯದಲ್ಲಿ ಆಟಂ ಸ್ಫೋಟವಾಯಿತೆಂಬ ಸ.ದ್ವಿಯನ್ನು ಪ್ರಥಮತಃ ಕೇಳಿದಾಗ ಅಮೆರಿಕಾಂಗ್ಲರು ನಂಬಲಿಲ್ಲ. ಪರಿಹಾಸ್ಯ ಮಾಡಿದವರೂ ಇದ್ದಾರೆ. "ಹೌದೆ? ಹಾಕಿದ್ದು ಯಾರಂತೆ?" ಎಂದು ವಿನೋದವಾಡಿದವರಿದ್ದಾರೆ. ಆದರೆ ಅಧ್ಯಕ್ಷ ಟ್ರುಮೇನರ ಅಧಿಕೃತ ಘೋಷಣೆ ಕೇಳಿ ಬಂದೊಡನೆ ಇಂಥವರೊಮ್ಮೆ ದಂಗು ಬಡಿದರು. ಲೋಕ ಶಾಂತಿಪ್ರೇಮಿ ಸುವಿಚಾರಿಗಳು ಆಂತರ್ರಾಷ್ಟ್ರೀಯ ಸಂಬಂಧವನ್ನು ಇದು ಸುಗಮಗೊಳಿಸಬಹುದೆಂಬ ಅಭಿವ್ಯಾಯ ಸೂಚಿಸಿದ್ದಾರೆ. ತಮ್ಮಲ್ಲಿ ಮಾತ್ರ ಆಟಂ ವಜ್ರ ಮುಷ್ಟಿಯಿದೆಯೆಂಬ ಒಳ ಹೆಮ್ಮೆಯಿಂದಲೇ ಅಮೆರಿಕವು ಸೌಹಾರ್ದತೆಗೆ ಮಿಕ್ಕೆ ಅಹಂಭಾವವನ್ನೂ, ಶಾಂತಿ ಸಾಧನೆಯ ಬದಲಿಗೆ ಯುದ್ಧ ಸಜ್ಜಿತಿಯನ್ನೂ ತೋರಿಸುತ್ತಿದೆಯೆಂಬುದು ವಿಚಾರಿಗಳಿಗೆ ಮನಪರಿಕಯಾಗಿರುವ ವಿಷಯ ಆದೇ ಆಯುಧವು ರಶ್ಯದ ಕೈಯಲ್ಲೂ ಇದೆಯೆಂದಾದ ಮೇಲೆ ಈ ತೀಕ್ಷಾರದ ಸ್ಥಾನವನ್ನು ಭೀತಿಯಾಶ್ಚರ್ಯಿಸಿಕೊಳ್ಳಬೇಕಾದುದು ಸಹಜ. ಆಟಂಬೊಂಬುಗಳನ್ನು ಪರಸ್ಪರ ಎಸೆದಾಡಿಕೊಡಿಕೊಳ್ಳಬೇಕಾಗಿ ಬಂದರೆ, ವಿಸ್ತಾರ ಒಳಪ್ರದೇಶಗಳಿರುವ ರಶ್ಯಕ್ಕಿಂತಲೂ ಪೇಟೆಪಟ್ಟಣಗಳಿಂದಲೇ ತುಂಬಿಹೋಗಿರುವ ಅಮೆರಿಕಕ್ಕೆ ಹೆಚ್ಚಿನ ಹಾನಿಯೊದಗಬಹುದು. ಆದ್ದರಿಂದ ಅಮೇರಿಕವು ಆಟಂ ಆಟದ ಸ್ಫೂರ್ತಿಯ ಬದಲಿಗೆ ಭೀತಿಯನ್ನು ತಾಳಬೇಕಾದೀತು. ಇಂತಹ ಪ್ರಳಯ ಪ್ರತಾಪಕ್ಕಿಂದಿಗೂ ಅನಕಾಶವನ್ನು ಕೊಡದ ಶಾಂತಿನ್ಯಸ್ಥೆಯನ್ನೇ ಅಮೆರಿಕವಿನ್ನು ಬಯಸಬಹುದು. ಆದ್ದರಿಂದ ರಶ್ಯದ ಈ ಡಂಗುರವು ರಣಭೇರಿಯಾಗುವ ಬದಲಿಗೆ ಶಾಂತಿ ನಗಾರಿಯಾದೀತೆಂದೇ ವ್ಯಾವಂಕಿಕ ಸುವಿಚಾರಿಗಳ ನಿರೀಕ್ಷೆ. ರಶ್ಯದಲ್ಲಿ ಧಾರಾಳದ ರಾಯಭಾರಿಯಾಗಿ ನೇಮಕಗೊಂಡು ಆತ್ಮ ಹೊರಟು ಈಗ ವ್ಯಾಶಿಸಿನಲ್ಲಿರುವ ಡಾ। ಯಸ್ ರಾಧಾಕೃಷ್ಣನ್ ಈ ಕುರಿತು ಹೇಳಿದರು. "ಒಂದು ರಾಷ್ಟ್ರವು ಮಾಡಬಲ್ಲುದನ್ನು ಸಮಯಾನುಸಾರವಾಗಿ ಮತ್ತೊಂದು ರಾಷ್ಟ್ರವೂ ಮಾಡಬಲ್ಲುದು. ಆಧುನಿಕಾಯುಧಗಳ ಭೀಕರತೆಯು ಯಾವದೇ ಯುದ್ಧ ವಿಜಯವನ್ನ ಅಸಾಧ್ಯಗೊಳಿಸುತ್ತದೆ. ಇನ್ನೊಂದು ಯುದ್ಧವಾದರೆ, ಅದರಲ್ಲಿ ಗೆಲ್ಲುವವರಾಗಲೀ ಸೋಲುವವರಾಗಲೀ ಇರುವಂತಿಲ್ಲ."

ಆಟಂ ಪ್ರತಿಧ್ವನಿ

ಆದರೆ ಅಮೆರಿಕದ ಜನತೆಯಲ್ಲಿ ನಿಜಕ್ಕೂ ಈ ವಾರ್ತೆಯು ವಿಶೇಷ ಗಾಬರಿಯನ್ನು ನಿರ್ಮಿಸಿದೆ. ಜಗತ್ತಿನಲ್ಲಿ ಆಟಂ ಬೋಂಬಿನ ಏಕಾಕಾಲತೆಯಿರುವ ರಾಷ್ಟ್ರ ಅಮೆರಿಕವೊಂದೇ ಎಂದಿದ್ದ ನಂಬಿಕೆಯು ಈ ರೀತಿ ಒಮ್ಮೆಯೇ ಕುಸಿದು ಬಿದ್ದುದರಿಂದ ಇಡೀ ಅಮೆರಿಕದ ಹೃದಯದೊಳಗೆ ಹಾಹಾಕಾರವೆದ್ದಿದೆ. ಅಮೆರಿಕದ ರಕ್ಷಣಾ ವ್ಯವಸ್ಥೆಗಳನ್ನು ಬಲಗೊಳಿಸುವುದಕ್ಕಾಗಿಯೇ ಅಧ್ಯಕ್ಷ ಟ್ರುಮೇನರು ಈಗ ಅವಸರದಿಂದ ಅಗಾಧ ಯೋಜನೆಗಳನ್ನು ಕೈಗೊಳ್ಳಗಣಿಯಾಗಿದ್ದಾರೆ. ಆಟಂ ಉಪಯೋಗದಲ್ಲಿ ಬಲವಾದ ಪ್ರಯೋಗಗಳನ್ನು ನಡೆಸುವುದಕ್ಕಾಗಿ 20 ಮಿಲಿಯ ಡೋಲರುಗಳ ವೆಚ್ಚ ಜಾಹೀರಾಗಿದೆ. ಅಂತೆಯೇ ಆ ಸಂಬಂಧದ ಪ್ರತ್ಯಮುಖ ಹಾಗೂ ಅತಿ ಸೂಕ್ಷ್ಮ ವಿಚಾರಣೆಗಳನ್ನೆಲ್ಲ ಪಡಕೊಳ್ಳಲು 270 ಮಿಲಿಯ ಡೋಲರುಗಳನ್ನು ಮಂಜೂರು ಮಾಡಬೇಕೆಂದು ಅಧ್ಯಕ್ಷ ಟ್ರುಮೇನರು ಅಮೆರಿಕದ ಕಾಂಗ್ರೆಸ್ಸನ್ನು ಒತ್ತಾಯಪೂರ್ವಕ ಕೇಳಿಕೊಂಡಿ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಪ್ರಯತ್ನವಾದ
ನಾವು ಜನತಾಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾದಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S. K.

ನಾಣ್ಯದ ಬೆಲೆ ತಗ್ಗಿಸಿ, ಆದ ಪರಿಣಾಮವೇನು?

ದ್ದಾರೆ. ವಿಮಾನಪಡೆಗಳನ್ನು ಹೆಚ್ಚಿಸಿಕೊಳ್ಳಬೇಕು- ವಿರೋಧಿ ರಾಷ್ಟ್ರಗಳಿಗೆ 1952ರೊಳಗೆ ಸಾಕಷ್ಟು ಆಟಂ ಬೋಂಬುಗಳನ್ನು ತಯಾರಿಸಿಕೊಳ್ಳಲು ಅಸಾಧ್ಯವಾಗಬಹುದಾದ್ದರಿಂದ ಅಮೆರಿಕದ ಶಕ್ತಿ ರಕ್ಷಣಾ ವ್ಯವಸ್ಥೆಗಳೆಲ್ಲವೂ ಆ ಸೊದಲೇ ಆಜೇಯ ಮಟ್ಟಕ್ಕೇರಬೇಕು-- ಕಾರ್ಯಾನೆಗಳೇ ಮೊದಲಾದುವುಗಳನ್ನು ಆಟಂ ಧಾಳಿ ತಾಗದಷ್ಟು ದೂರಸ್ಥಳಗಳಿಗೆ ಸಾಗಿಸಬೇಕು-ಎಂಬ್ಲೋ ಅಮೆರಿಕಾನರು ಜತೆಗೂಡಿ ಕ್ಷಿಪ್ರಗತಿಯಿಂದ ಆಟಂ ಪರಿತೋಧನೆಗಳನ್ನು ಮುಂದೊತ್ತಬೇಕು. ಮುಂಕಂದ ಆತುರಗಳೇ ಇಂದು ಅಮೆರಿಕದಲ್ಲಿ ವ್ಯಾಪಿಸಿಕೊಂಡಿವೆ. ಇಪ್ಪೆಲ್ಲಾ ಗದ್ದಲವಾದ ಮೇಲೆಯೇ ರಶ್ಯದಅಧಿಕೃತ ವಾರ್ತಾ ಸಂಸ್ಥೆ 'ಟಾಸ್' ಬಾಯಿ ಬಿಟ್ಟಿತು. "ರಶ್ಯದೊಡನೊಂದು ಆಟಂ ಯುದ್ಧವಿದ್ದೇಇದೆ. ಇದು 1947ರಿಂದಲೂ ಗುಟ್ಟಾಗಿಯೇ ಇದ್ದಿತು. ಆದರೆ ಇದಕ್ಕಾಗಿ ಹೆದರಬೇಕಾದ ಅಂಶ ಎಳ್ಳಷ್ಟೂ ಇಲ್ಲ. ಆಟಂ ಬೋಂಬನ್ನು ಬಹಿಸ್ಕರಿಸಬೇಕೆಂಬುದನ್ನು ರಶ್ಯವು ಸಮರ್ಥಿಸಿದ್ದಿತು," ಎಂದು ಆ ವಾರ್ತಾಸಂಸ್ಥೆ ಪ್ರಕಟಿಸಿದೆ. ಈ ರೀತಿ ಹೊಸತಾಗಿ ಹೊರಬಿದ್ದ ವಾರ್ತಾ ಸಿಡಿಲು ಪ್ರಪಂಚದ ಎಲ್ಲಾ ರಾಜಧಾನಿಗಳಲ್ಲೂ ಭಾವನಾ ಪ್ರತಿಕ್ರಿಯೆಗಳನ್ನೆಬ್ಬಿಸಿರುವುದು ಗೋಚರಕ್ಕೆ ಬಂದಿದೆ. ತತ್ಪರಿಣಾಮವಾಗಿ ಇಕ್ಕಡೆಯ ಪ್ರಮುಖ ರಾಷ್ಟ್ರಗಳ ಭಾವನೆಗಳೂ, ಅದನ್ನನುಸರಿಸಿ ಪ್ರಾಪಂಚಿಕ ರಾಜಕೀಯದ ಬಣ್ಣವೂ ಬದಲಾವಣೆಗೊಳ್ಳಬಹುದು. ಏನಿದ್ದರೂ, ಆಟಂ ರಂಗದಲ್ಲಿ ಅಮೇರಿಕವು ಈಗ ಪಡೆದಿರುವ ಸ್ಥಾನದಮಟ್ಟ ಮುಂದೆ ಬರಲು ರಶ್ಯಕ್ಕೆ ಇನ್ನು ಕೆಲವು ವರುಷಗಳ ವರೆಗೆ ಸಾಧ್ಯವಾಗಲಾರದೆಂದೂ, ಈಗ ಇರುವ ಈ ದೂರವನ್ನು ಅಮೆರಿಕವು ಸದಾಕಾಲವೂ ಉಳಿಸಿಕೊಳ್ಳಬಲ್ಲುದೆಂದೂ ಅಮೆರಿಕದ ಅಧಿಕಾರಿ ಮಂಡಲಿಯು ವಿಶ್ವಾಸ ವ್ಯಕ್ತಪಡಿಸಿವೆ. ಆದರೆ ಈ ಆಯುಧ ಪ್ರಯೋಗದಿಂದಾಗುವ ಅನಾಹುತಗಳು ಶ್ರವಣಮಾತ್ರದಿಂದಲೇ ಸಾಮಾನ್ಯ ಜನತೆಗೆ ರೋಮಾಂಚನವನ್ನುಂಟುಮಾಡುವಷ್ಟು ಭೀಕರವಿವೆ, ಎಂಬುದನ್ನು ಯಾವ ಕಡೆಯೂ ಮರೆಯಲಾಗುವದಿಲ್ಲ. ಮೂರು ವರ್ಷಗಳ ಮೊದಲು ಒಂದು ಆಟಂ ಬೋಂಬು ಹಾಕಿದ್ದ ರಾಂತ ಸಮುದ್ರದ ಬಿಕ್ಕಿನ ವಲಯದಲ್ಲಿ ಈಗಲೂ ರೇಡಿಯೋ ಚಲನೆಗಳುಳಿದುಕೊಂಡಿತೆಯೆಂದೂ ಅಲ್ಲಿಗೆ ಹೋಗಿ ನಿಲ್ಲುವುದೀಗಲೂ ಅಪಾಯಕರವೆಂದೂ ಜಾಹೀರಾಗಿದೆ. ಇಂತಹ ಪ್ರಳಯ ಬೆಂಡಿನೊಂದಿಗೆ ಆಟವಾಡಲು ತಯಾರಾಗುವದು ಪ್ರಪಂಚಕ್ಕೆ ಎಷ್ಟಕ್ಕೂ ಹಿತಕರವಲ್ಲ. ಆದ್ದರಿಂದ ಆಟಂ ಶಸ್ತ್ರ ಪ್ರಯೋಗವನ್ನೇ ನಿಷೇಧಿಸಬೇಕೆಂದು ಮೊದಲಿನಿಂದಿರುವ ಸೂಚನೆಯನ್ನು ಇತ್ಯರ್ಥಯವರೂ ಅನುಮೋದಿಸಿ, ಈ ಮಹಾವ್ಯತ್ಯಯವನ್ನು ಪ್ರಪಂಚದಿಂದಲೇ ತೊಲಗಿಸುವುದು ವಿಹಿತ.

ಸಂಯುಕ್ತ ನಾಷ್ಟ್ರ ಸಂಘದ ನಾಲ್ಕನೇ ಮಹಾಧಿವೇಶನವು ಇದೇ ತಾ. 20ಂದ ಅಮೆರಿಕದ ಫ್ಲಷಿಂಗ್ ಮಿಡೋಸ್ ಎಂಬಲ್ಲಿ ಜರಗುತ್ತಿದೆ. ರಜಾವಧಿ ಮುಗಿದು ಶಾಲಾರಂಭದಲ್ಲಿ ಪ್ರಥಮಾಶ ಮನರ್ಮಿಲನಗೊಳ್ಳುವ ಹುಡುಗರು ಪರಸ್ಪರ ಪ್ರೇಮ ಸೌಹಾರ್ದತೆಗಳನ್ನು ಪ್ರದರ್ಶಿಸುವಂತೆ ರಾಷ್ಟ್ರ ಕೂಟದ ಜಾಹೀರು ಅಧಿವೇಶನದ ಆರಂಭವು ಮನಮೋಹಕವಿದ್ದಿತು.ಅಧ್ಯಕ್ಷ ಚುನಾವಣೆಯಲ್ಲಿ ಜನರಲ್ ರೋಮುಲೋ 53 ಮತಗಳನ್ನು ಪಡೆದು ಅಧ್ಯಕ್ಷ ಸ್ಥಾನಕ್ಕೆ ಆರಿಸಲ್ಪಟ್ಟಿದ್ದಾರೆ. ಅವರ ಪ್ರತಿ ಸ್ಪರ್ಧಿ ಉಮೇದ್ವಾರಿ ಝೆಕೊಸ್ಲೊವೇಕಿಯದ ವಿದೇಶ ಮಂತ್ರಿಗೆ ರಶ್ಯನ್ ಪಾಳಯದ ೫ ಮತಗಳು ಮಾತ್ರ ದೊರೆತಿವೆ. ಹಿಂದಿನ ಅಧಿವೇಶನದಂತೆ ವಿಶೇಷ ಬಿಕ್ಕಟ್ಟಿನ ಪ್ರತ್ಯೇಯಾವುದೂ ಈ ಬಾರಿಯ ಮಹಾಧಿವೇಶನದ ಮುಂದಿರದಿದ್ದರೂ ಹಲವು ವ್ಯಾಮುಖ್ಯ ಪ್ರಶ್ನೆಗಳನ್ನು ಅದು ಪರ್ಯಾಲೋಚಿಸಲಿಕ್ಕಿದೆ. ಭದ್ರತಾ ಕೌನ್ಸಿಲಿನ ಒಂದು ಸ್ಥಾನಕ್ಕೇಟಾರಿ ಭಾರತವು ಉಮೇದ್ವಾರಿಯಾಗಿದೆ

ಪಾಕಿಸ್ತಾನ್ ರೂಪಾಯಿ

ಅಮೆರಿಕದ ಡೋಲರಿಪೊಡನೆ ನಡೆಸುವ ವಹಿವಾಟು ರಂಗದಲ್ಲಿ ಬ್ರಿಟನ್ನು ತನ್ನ ಸ್ಟರ್ಲಿಂಗ್ ಧಾರಣೆಯನ್ನು ತಗ್ಗಿಸಿಕೊಂಡೊಡನೆಯೇ ಈ ಸರ್ವತ್ರಿಯವಿಚ್ಛೇದನಕ್ಕೆ ಸಂದರ್ಭವಸಿಕೊಳ್ಳಲು ಸ್ಟರ್ಲಿಂಗ್ ಕ್ಷೇತ್ರಕ್ಕೆ ದೊಳಗಿರುವ ಎಲ್ಲಾ ರಾಷ್ಟ್ರಗಳೂ ತಮ್ಮ ನಾಣ್ಯಗಳ ಮೌಲ್ಯ ತಗ್ಗಿಸಿಕೊಂಡಂತೆ ಭಾರತವೂ ಅದೇ ಪರಮಾಣಕ್ಕನುಸಾರವಾಗಿ ತನ್ನ ರೂಪಾಯಿಬೆಲೆಯನ್ನು ಇಳಿಸಿಕೊಂಡುದು ನಿಜವಷ್ಟೆ? ಆದರೆ ಪಾಕಿಸ್ತಾನವು ಮಾತ್ರ ತನ್ನ ರೂಪಾಯಿಯ ಬೆಲೆಯನ್ನಿಳಿಸಿಕೊಳ್ಳದೆ 'ಬೆಕ್ಕಿಗೆ ಬೇರೆ ಬೀಡಾ ಬಿಡಾರ' ವೆಂಬಂತೆ ವರ್ತಿಸಿದೆ. ಪಾಕಿಸ್ತಾನದಿಂದ ಭಾರತಕ್ಕೆ ಆಮದಾಗುತ್ತಿರುವ ನಾರು, ಹತ್ತಿ, ಮತ್ತು ಕೆಲವಂಶ ಆಹಾರ ಧಾನ್ಯಗಳ ಧಾರಣೆಯು ಭಾರತದ ಮಟ್ಟಿಗೆ ಅಸ್ವಂಶ ಹೆಚ್ಚಿದಂತಾಗಿ, ನಷ್ಟವಾಗುವದು. "ಆಮೇಕದಂತಹದ ಡೋಲರ್ ಕ್ಷೇತ್ರದ ೧ ಪ್ಪಗಳೊಡನೆ ಅಹಾವಟು ನಡಿಸುವಾಗ, ನಮ್ಮ ರೂಪಾಯಿಯು ಬೆಲೆತಗ್ಗಿದುದರಿಂದ ರಾಷ್ಟ್ರವು ಆ ಭಾಗಗಳಿಂದ ಪಡೆದುಕೊಳ್ಳುವ ಸಾಮಾನುಗಳ ಬೆಲೆಯು ೧೦ ರಿಂದ ೦ ಕಾಗುತ್ತದಾದರೂ, ಆ ಮೂಲಕ ಹೆಚ್ಚಿನ ನಷ್ಟವೊದಗುವ ಸಂದರ್ಭಗಳೇ ೫೦ ನಮಗಿಲ್ಲ. ರಷ್ಯದೊಳಗಿನ ವಹಿವಾಟುಗಳಲ್ಲಿ ಬದಲಾವಣೆಗಳಾಗಲು ಅಥವಾ ಜನ ಜೀವನವೆ ಚ್ಚಿನೇರುವದಕ್ಕೆ ಕಾರಣವೇನೂ ಇಲ್ಲ"ವೆಂದು ಪಂಡಿತ ನೆಹರುಗಳುಆಶ್ವಾಸನೆ ಕೊಟ್ಟಿದ್ದರು. ಆದರೆ ಭಾರತಕ್ಕೆ ಕಿತ್ತಾನಾರಿನಂತಹ ಕೆಲವು ನಾಮಾಗ್ರಿಗಳ ಆಮದಾಗುತ್ತಿರುವದು ಪಾಕಿಸ್ತಾನದಿಂದಲೇ. ಪಾಕಿಸ್ತಾನವೆ ತನ್ನ ರೂಪಾಯಿ ಬೆಲೆಯನ್ನು ಇಳಿಸಿಕೊಳ್ಳದಿರುವುದರಿಂದ ಆವರಿಂದಾಮದು ಪಡಿಸಿಕೊಳ್ಳುವ ಎಲ್ಲಾ ವಸ್ತುಗಳ ಮೇಲೂ ಭಾರತಕ್ಕೆ ನಷ್ಟವುಂಟಾಗುವುದು. ಒಂದೇ ಧಾರಣೆಯದ್ದ ಭಾರತ-ಪಾಕಿಸ್ತಾನ್ ರೂಪಾಯಿಗಳ ಪೈಕಿ ಈಗ ಒಂದರ ಬೆಲೆತಗ್ಗಿ ಮತ್ತೊಂದರ ಬೆಲೆ ಮಾತ್ರ ಇದ್ದಂತಿರುವುದರಿಂದ ಅದಕ್ಕಿಂತ ಇದು ಇದ್ದಲ್ಲೇ ಕಡಿಮೆ ದರ್ಜೆಗಿಳಿಯಿತು. ಹೊಸ ಧಾರಣೆಯಂತೆ ಪಾಕಿಸ್ತಾನದ 100 ರೂಪಾಯಿಗಳು ಭಾರತದ 144 ರೂಪಾಯಿಗಳಿಗೆ ಸಮಾನವಾಗುವವು. ಭಾರತದ 100 ರೂ. ಗಳಿಗೆ ಪಾಕಿಸ್ತಾನದ 69.50 ರೂಪಾಯಿಗಳೇ ಸರಿಸಮಾನವನ್ನಿಸುವವು. ಆದರೆ ಪಾಕಿಸ್ತಾನದ ಈ ಆರ್ಥಿಕ ಧೋರಣೆಯಲ್ಲ ದೂರದೃಷ್ಟಿಯಿಲ್ಲವೆಂದೂ, ಅದು ಅಲ್ಪಾವಧಿಯೊಳಗೆ ಪರಾಭವಗೊಳ್ಳಲು ಬದ್ಧವಿದೆಯೆಂದೂ ಅರ್ಥಶಜ್ಞರ ಅಭಿಮತವಿದೆ. ಸಾಮಾಗ್ರಿಗಳ ಧಾರಣೆಗೇರದಂತೆ ತಡೆಗಟ್ಟಲು ಅಗತ್ಯವುಳ್ಳ ಕಾರ್ಯಕ್ರಮಗಳನ್ನೆಲ್ಲಾ ಭಾರತ ಸರಕಾರವು ಕೂಡಲೇ ಕೈಕೊಂಡಿದೆ. ಭಾರತದಿಂದ ರಫ್ತಾಗುವ ವಿವಿಧ ಸಾಮಾಗ್ರಿಗಳ ಮೇಲೆ ರಫ್ತು ತೆರಿಗೆಯನ್ನು ವಿಧಿಸಿದೆ ಅಂತೆಯೇ ಭಾರತ ಸರಕಾರದ ನಿರ್ದೇಶದಂತೆ ಬಂಗಾಳದ ಕಿತ್ತಾನಾರು ವ್ಯಾಪಾರಗಳನ್ನು ಪಶ್ಚಿಮ ಬಂಗಾಳ ಸರಕಾರವು ಪ್ರತಿಬಂಧಿಸಿದೆ. ರೂಪಾಯಿ ಮೌಲ್ಯ ವ್ಯತ್ಯಾಸದ ಸಂಬಂಧವಾಗಿಯೂ ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೊಳಗೆ ವಿವಾದಗಳೆದ್ದಿವೆ. ಭಾರತವು ತನ್ನ ನಾಣ್ಯದ ಮೌಲ್ಯವಿಚ್ಛೇದನೆ ಮಾಡುವಾಗ ತನಗೆ ತಿಳಿಸಿಲ್ಲವೆಂದು ಪಾಕಿಸ್ತಾನದ ದೂರು. ಜಾನದಕ್ಕೆ ರಿಯಾದ ಸೂಚನೆ ಕೊಟ್ಟಿದ್ದೆನೆಂದೂ ಪಾಕಿಸ್ತಾನವೇ ತನ್ನೀ ಧೋರಣೆಯ ಕುರಿತು ತನಗೇನನ್ನೂ ತಿಳಿಸಿದ್ದಿಲ್ಲವೆಂದೂ, ಪಾಕಿಸ್ತಾನದ ರೂಪಾಯಿ ಧೋರಣೆಯು, ಅದು ಭಾರತದೊಡನೆ ಮಾಡಿ ಕೊಂಡಿರುವ ಸಂದಾಯ ಒಪ್ಪಂದಕ್ಕೆ ಬಡಿಕೆಗೆ ಬದ್ಧವಿರೋಧವೆಂದೂ ಭಾರತ ಸರಕಾರವು ಆಕ್ಷೇಪಿಸಿದೆ; ಪಾಕಿಸ್ತಾನಕ್ಕೆ ನಿಷೇಧಸೂಚನೆ ಕಳುಹಿಸಿದೆ. ಪಾಕಿಸ್ತಾನದಿಂದ ಪತ್ತಿ ಮತ್ತು ನಾರನ್ನು ಭಾರತ

(ಏನೇ ಪುಟ ನೋಡಿರಿ)

4 ಬೆಲೆ ಸುಲಭವಾದ ಚಹಾಗಳು

ಉತ್ತಮ ರೀತಿಯ

ಚಹಾ ತಯಾರಿಕೆಗಾರರಿಂದ

ಹೆಚ್ಚು ಬೆಲೆಯ ಚಹಾವನ್ನು ಕೊಳ್ಳಲಾಗದ ಜನಗಳು ಸ್ಟೇನ್ಸ್ ಅಗ್ಗವಾದ ಚಹಾವನ್ನು ಬಯಸುತ್ತಾರೆ. ಅವುಗಳು ಸ್ಪೈಟ್ ಎನ್'ಸ್ಪೈನ್ಸ್, ಪೀಕೊ ಡಸ್ಟ್, ಬೇಬಿ ಬ್ರಾಂಡ್ ಮತ್ತು ಲೀಫ್ ಟೀ; ಸುಪ್ರಸಿದ್ಧ ಸ್ಟೇನ್ಸ್‌ರವರ ಎಲ್ಲಾ ಅನುಭವವೂ ಅವುಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುತ್ತಿರುವುದಾಗಿ, ನೀವು ಯಾವುದನ್ನೆ ಜುನಾಯಿಸಿದರೂ, ನಿಮ್ಮ ಹಣದ ನೈಜ ಬೆಲೆಯನ್ನು ಕೊಡುತ್ತದೆ.



ಸ್ಟೇನ್ಸ್ ಪೀಕೋ ಸೂಪರ್‌ಗ್, ಬ್ರೋಕನ್ ಆರೆಂಜ್ ಪೀಕೊ, ಆರೆಂಜ್ ಪೀಕೊ, ಮತ್ತು ಡಸ್ಟ್ ಚಹಾಗಳನ್ನು 20& 40ರಾತಲು ಪೆಟ್ಟಿಗೆಗಳಲ್ಲೂ ಚಿಲ್ಲರೆಯಾಗಿಯೂ ಒದಗಿಸುತ್ತಾರೆ!

ದಕ್ಷಿಣದ ಆಯ್ಕೆ

Stanes ಸ್ಟೇನ್ಸ್ ಚಹಾಗಳು

ದಿ ಯುನೈಟೆಡ್ ಕೊಫಿ ಸಪ್ಲೈ ಕೊ., ಲಿಮಿಟೆಡ್.

ಕೊಯಮುತ್ತೂರು, ದಕ್ಷಿಣ ಇಂಡಿಯಾ.

ದಕ್ಷಿಣ ಕನ್ನಡದ ಏಜಂಟರು:

ಶ್ರೀ. ಎನ್. ಎಸ್. ವಿ. ಕಾಮತ್, ಮರ್ಚಂಟ್, ಬಂದರ್, ಮಂಗಳೂರು.

THE

PANGAL NAYAK BANK, LTD.

Head Office UDIPI

SAVE FOR THE FUTURE.

SEASON DEPOSITS terminable on or before 30—6—1950 are accepted from 1—10—1949 at the following rates:

For 3, 4 or 5 months at 3 % p. a
For 6, 7 or 8 months at 3½% p. a.

Invest in our 3 YEAR CASH CERTIFICATES yielding interest at over 4% p. a.

For particulars please contact any of our Branch offices.

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI. S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs	19,99,800.
Reserves	Rs.	8,91,000.

Banking business of every description transacted.

ನವಯುಗ
ಉಡುಪಿ, ಗುರುವಾರ, ೨೯-೯-'೪೯

ಗಾಂಧೀ ಜಯಂತಿ

ಮಹಾತ್ಮಗಾಂಧಿಯವರ ಜನ್ಮದಿ ನಾಚರಣೋತ್ಸವವು 'ಚರರಾಜಯಂತಿ' ತಿಸುವಿನಿಂದ ಕಳದ ತಾ. 19ರಿಂದಾರಂಭಿ ಬರುವ ತಾ 2ರ ವರೆಗೆ ದೇಶದಲ್ಲೆಲ್ಲಾ ಡೆಯುತ್ತಿದೆ. ಸೂತ್ರಯಜ್ಞ, ಖಾದೀ ಪ್ರಚಾರ, ಗ್ರಾಮ ಸಂಘಟನೆ, ಸಾಮಾಜಿ ಕರ್ತವ್ಯ ನಿರ್ವಹಣ ಮೊದಲಾದ ವಿ ಯಯಕ ಕಾರ್ಯಕ್ರಮಗಳೇ ಗಾಂಧಿಜೀ ರ್ಥಂತ್ಯೋತ್ಸವದ ಮುಖ್ಯ ಆಚರಣೆಗಳಾ ನೆ. ಹಿಂದೂಪದ್ಧತಿ ಪ್ರಕಾರ ಮಹಾ ತ್ಮಾಜೀಯ ಜನ್ಮದಿನವು ಸೆಪ್ಟೆಂಬರ್ ತಾ 9ರಲ್ಲಿ ಬಂದಿದ್ದರೆ, ನಮಗೆ ವಾಡಿಕೆಯೂ ರುವ ಇಂಗ್ಲಿಷ್ ಕ್ರಮಾನುಸಾರವಾಗಿ ದು ಒಕ್ಟೋಬರ್ ತಾ. 2ಕ್ಕೆ ಬೀಳುವು ು. ಇವೆರಡು ದಿನಗಳು ಬುಡ ಮತ್ತು ುದಿಯೂಗಿರುವ 14ದಿನಗಳು ರಾಷ್ಟ್ರಪಿತ ಪ್ರೀತಿಯ ಕಾರ್ಯಕ್ರಮಗಳ ಆಚರಣೆ ಾಗಿ—ಬಾಪೂಜೀ ಸ್ಮರಣೆಗಾಗಿ—ಮೀ ಲಿವೆ.

ಮೋಹನ್‌ದಾಸ್ ಗಾಂಧಿಗೆ ಜನ್ಮವಿತ್ತ ್ಟ ದೊಡ್ಡ ಸೌಭಾಗ್ಯವು ಭಾರತದ ಕ ದ ಒಂದು ಶತಮಾನದ ಚರಿತ್ರೆಯಲ್ಲೇ ್ರಯಶಃ ಬೇರೊಂದಿಲ್ಲ. ಪ್ರಧಾನಿ ಪಂ ತ ಜವಾಹರಲಾಲರು ತನ್ನ ಇತ್ತೀಚೆಗಿ ಭಾಷಣವೊಂದರಲ್ಲಿಯಂತೆ, ದೂರದ ಣ್ಣಿ ಪುಟ್ಟ ರಾಷ್ಟ್ರಗಳ ಜನತೆಗೆ 'ಗಾಂ ಯ' ಹೆಸರುಮಾತ್ರ ಗೊತ್ತು, ಹೊರತು ಾರತ ರಾಷ್ಟ್ರದ ಹೆಸರು ತಿಳಿದಿಲ್ಲ ಅಂಥ ರಿಗೆ ಈಗ ಕೂಡಾ 'ಗಾಂಧಿ ಹುಟ್ಟಿದ ಷ್ಟ್ರ'ವೆಂದೇ ನಮ್ಮೀ ದೇಶದ ಪರಿಚಯ ಾಡಿಕೊಡಬೇಕು. ಇದರ ಆರ್ಥವಿಷ್ಟೆ: ಗತ್ತಿನ ಒಂದು ಘನರಾಷ್ಟ್ರದಿಂದ ಸ್ವತಃ ಸಿಕೊಳ್ಳಲಾಗದಷ್ಟು ಕೀರ್ತಿಯನ್ನು ಆ ಷ್ಟ್ರದ ಓರ್ವ ವ್ಯಕ್ತಿ ಲೋಕದ ಮೂಲೆ ೂಲೆಯ ಒಬ್ಬೊಬ್ಬರಿಗೆಸಿಕೊಂಡಿದ್ದ. ಮಹಾ ್ಮಾಜೀಯ ಆಯುಷ್ಕಾಲದಲ್ಲಿ ಲೋಕವ್ಯಾ ಪಿ ಹೆಸರು ಗಳಿಸಿದ್ದ ಇತರ ಮಹಾ ಪು ಷರಿದ್ದಿಹುದು; ಆದರೆ, ಅವರ ಕೀರ್ತಿ ಂ ಮುಖ್ಯವಾಗಿ ಸ್ವಂತರಾಷ್ಟ್ರದ ಸ್ವಾ ಾತಂತ್ರ್ಯವನ್ನಾಧರಿಸಿಯೇ ಬೆಳೆದುಕೊಂಡ ು. ಮಹಾತ್ಮಾಜೀಯ ಯಶಸ್ಸಿಗೆ ಅ ದೇಶವು ತಳಕಟ್ಟಾಗಿರಲಿಲ್ಲ; ಸ್ವತಃ ರ ಹೃದಯ, ಧೋರಣೆ, ವಾದ, ವರ್ತ ನೆಗಳೇ ಕಾರಣವಾಗಿದ್ದುವು. ಮಾತ್ರವಲ್ಲ, ಅವು ಕೇವಲ 'ರಾಷ್ಟ್ರೀಯ'ವಾಗಿದೆ ಅಖಿಲ ಮಾನವ ಜನಾಂಗದ ಹಿತಸಾಧಕವಿದ್ದುವು' ಆದ್ದರಿಂದಲೇ ರಾಷ್ಟ್ರಕ್ಕಿಂತ ಹೆಚ್ಚಿನ ತೂಕ ಅವರದಾಯಿತು; ಗಾಂಧಿಜೀ ಜಗತ್ತಿನ ಅದರ್ಶಪುರುಷರಾದರು. ಇಂತಹ ಜಗದ್ವಂದ್ಯನಿಗೆ ಜನ್ಮಕೊಟ್ಟ ರಾಷ್ಟ್ರ ಭಾರತ; ಈ ಲೋಕವಿಭೂತಿ ಪುರುಷನ ತತ್ವ ಮತ್ತು ಶೋಧನೆಗಳ ಪ್ರಯೋಗಶಾ ಲೆಯಾಗಿದ್ದ ದೇಶ ಭಾರತ. ಆಧುನಿಕ ಭಾ ರತದ ಹೆಗ್ಗಳಿಕೆಗಳ ಪೈಕಿ ಇದಕ್ಕಿಂತ ದೊಡ್ಡದು ಬೇರೊಂದಿಲ್ಲ.

ಈ ಮಹಾಪುರುಷನನ್ನು ನಾವು ಕಳ ಕೊಂಡು ಈಗ ಸುಮಾರು ಇಪ್ಪತ್ತು ತಿಂ ಗಳುಗಳು ಸಂದಿವೆ ಮಾತ್ರ. ಭಾವೀ ಜ ನಾಂಗವು ಈಗಿನವರನ್ನು ಸ್ಮರಿಸಬೇಕಾಗಿ ಬರುವಾಗಲೆಲ್ಲಾ ಮುಖ್ಯವಾಗಿ 'ಗಾಂಧಿ ಜೀಯ ಸಮಕಾಲೀನರು' ಎಂದೇ ನೆನೆವು ವಾಡಿಕೊಳ್ಳಬಹುದು ಮಹಾತ್ಮಾಜೀಗೆ ಇಷ್ಟು ಸವಿ.ಪದವರಾದ ನಾವು, ನಮ್ಮೀ ಸ್ವಾತಂತ್ರ್ಯಾನಂತರ್ಯಗುಣವಾದ ರೀತಿಯಲ್ಲಿ ಈಗ ವರ್ಷಸುತ್ತಿರುವೆವೇ, ಎಂದು ಗಾಂ ಧೀಜಯಂತಿಯ ಈ ಸಂದರ್ಭದಲ್ಲಾದರೂ ಆತ್ಮವಿಮರ್ಶೆ ಮಾಡಿಕೊಳ್ಳಬೇಕಾ ದುದು ಅಗತ್ಯ. ವಸ್ತುಸ್ಥಿತಿಯನ್ನು ಒಪ್ಪಿ ಕೊಳ್ಳುವಷ್ಟಾದರೂ ಮನೋಬಲ ನಮ್ಮ ದಾದರೆ, ಕಳದ ಇಪ್ಪತ್ತು ತಿಂಗಳಲ್ಲಿ ನಾ ವು ಗಾಂಧೀತತ್ವ, ಧೋರಣೆಗಳಿಂದ ದೂ ರದೂರವಾಗುತ್ತಾ ಬಂದಿದ್ದೇವೆನ್ನದೆ ನಿ ರ್ವಾಹವಿಲ್ಲ ನಮ್ಮ ಇಂದಿನ ಸ್ವಾತಂತ್ರ್ಯ ದ ಮೂಲ ಶಿಲ್ಪಿ—ನಮ್ಮಲ್ಲಿ ದೇಶಾಭಿಮಾ ನ ಪಾತ್ರ, ಉಚ್ಚಮಾನವೀಯ ಗುಣಗಳ ನ್ನು ನೋಳೆಯಿಸಿದ ಪುಣ್ಯೋಪಿತ—ರಾಷ್ಟ್ರ ಪಿತ—ಇವ್ಯ ಅಲ್ಪಾವಧಿಯಲ್ಲೇ ನಮ್ಮ ರಾ ನ್ನು, ಕೃಷ್ಣರ ಪಂಗ್ತಿಗೆ ಸೇರಿ ದೂರವಾ ದಂತೆಕಾಣುತ್ತಾರೆ ಕಾರ್ಯ, ಧೋರಣೆ, ಭಾವನೆ, ಆಚರಣೆಗಳ ರೂಪದಿಂದ ಅವ ರ ನಮ್ಮ ನಡುವೆ ನಿಂತು ತೋರುತ್ತಿ ಲ್ಲ. ಸ್ಮರಣೆ, ಪೂಜೆ, ಸ್ಮಾರಕಗಳ ನ್ನಷ್ಟೇ ಪಡಕೊಳ್ಳುವ 'ದೇವಸಮಾನ' ನಾಗಿ ಜೋಗದ್ದಾರೆ. ಗಾಂಧಿಜೀ ಹುಟ್ಟಿ ದಂದು ಇತ್ಯಕ್ಕಾಗಿ ಅಲ್ಲ; ಅವರ ಬೋಧ ನೆಗಳಿಗೆ, ಇಷ್ಟು ಬೇಗನೇ ಮರೆತುಹೋ ಗವ ಅಲ್ಪಾಯುಷ್ಯವು ಎಂದಿಗೂ ಹೇಳ ಿಸಿದ್ದಲ್ಲ. ಮೇಲಾಗಿ ಅವರ ತತ್ವ, ವಿಧಾನ ಗಳು ಈಗ ಅನಗತ್ಯವೆನ್ನಲಾಗುವ ಸ್ಥಿತಿಗೆ ಭಾರತವಾಗಿಲೀ ಲೋಕವಾಗಿಲೀ ಬಂದಿ ಲ್ಲ. ಹೀಗಿದ್ದರೂ ಗಾಂಧಿಜೀಯ ತತ್ವ, ಕಾರ್ಯಕ್ರಮಗಳ ಮಟ್ಟಿಗೆ ನಾವಿಷ್ಟರಲ್ಲೇ ಹೀಗಾಗಿ ಹೋದುದು ಮಹತ್ತಾದ ದು ರ್ದೈವವೇ ಸರಿ. ಈ ಅಧೋಗತಿಯ ಕಾರ ಣಗಳನ್ನು ದೊಂಡಿಸಿ ತಿಳಿದುಕೊಂಡು, ಆ ವುಗಳ ಅನುಕರಣೆಗಾಗಿಸ್ಪರ್ಯತ್ನಿಸುವುದೇ ಗಾಂಧೀ ಜಯಂತಿ ಸಂದರ್ಭದಲ್ಲಿ ಪ್ರತಿ ಯೊಬ್ಬನೂ ಮಾಡಬೇಕಾದ ಮೊದಲ ಕ ರ್ತವ್ಯ. ಎಲ್ಲರೂ ಮಹಾತ್ಮಾ ಗಾಂಧಿಯಾ ಗಲಾರರು; ಅವರ ಸತ್ಯಾಹಿಂಸೆಗಳನ್ನು ಪೂರ್ಣಾಂಶವಾಗಿ, ಸರ್ವಡೆಗಲ್ಲಿ, ಸರ್ವ ಸನ್ನಿವೇಶಗಳಲ್ಲೂ ಆಚರಣೆಗೆ ತರುವುದು ಕೂಡಾ ವ್ಯವಹಾರ ಸಾಧ್ಯವಾಗಲಾರದು, ಆದರೂ ವ್ಯಾವಹಾರ್ತಾಜೀಯನ್ನು ಮಾರ್ಗದ ರ್ಶಕನಾಗಿ, ಅವರ ಸತ್ಯಾಹಿಂಸೆ, ಬಂಧು ತ್ವೈಕ್ಯ, ವಿಶಾಲ ಭಾವನೆಗಳನ್ನು ದೀವಿಗೆ ಯಾಗಿ ಇಟ್ಟುಕೊಂಡು ಶಕ್ತ್ಯಾನುಸಾರ ಮುನ್ನಡೆಯುವುದು ಎಲ್ಲರಿಗೂ ಸಾಧ್ಯವಿ ದ್ದದ್ದೇ ಈಗ ನಾವು ಬೇರೆ ಕಡೆಗೆ ಮುಖ ತಿರುಗಿಸಹತ್ತಿರುವಂತೆ ಕಾಣುತ್ತಿದೆ. ನ ಮ್ಮ ರಾಜಕೀಯ, ಸಾಮಾಜಿಕ ಹಾಗೂ ಜೀವನ ರಂಗದ ಎಲ್ಲಾ ವಿಭಾಗಗಳಲ್ಲೂ ಮಹಾತ್ಮಾಜೀಯ ತತ್ವ, ಧೋರಣೆಗಳ ಕಡೆಗೆ ನಾವು ವಿಮುಖರಾಗುತ್ತಿದ್ದೇವೆ ಗಾಂಧೀ ಜಯಂತಿಯ ದಿನಗಳಲ್ಲಾದರೂ ಅವುಗಳನ್ನು ಸಾಧ್ಯವಿದ್ದಷ್ಟು ಸಾಕ್ಷಾತ್ಕ ರಿಸಿಕೊಳ್ಳಲು ಪ್ರಯತ್ನಿಸುವುದು ವಿಹಿತ. ಗಾಂಧಿಜೀಯ ಸ್ಮೀತಿಯ ಕಾರ್ಯಕ್ರಮ ಗಳ ಆಚರಣೆಯೊಂದಿಗೆ.ಗಾಂಧೀತತ್ವಾನು ಕರಣೆಯನ್ನೂ ತಕ್ಕಮಿದ್ದಷ್ಟು ಮಾಡುವ ಮೂಲಕ ಗಾಂಧೀ ಜಯಂತಿಯ ಪುಣ್ಯದಿ ನವನ್ನು ಸಾರ್ಥಕಪಡಿಸಿಕೊಳ್ಳಬೇಕು

||| ಈ ವಾದವಿವಾದಗಳು. |||

ಸ್ವಾತಂತ್ರ್ಯ ಹೋರಾಟದ ಕಾಲ ಮುಗಿದು ಸ್ವಾತಂತ್ರ್ಯ ಅನುಭೋಗದ ಕಾಲ ಬಂದಂದಿನಿಂದ ಕಾಂಗ್ರೆಸಿಗರ ನಡು ವೆ ಮತ್ತು ದೇಶದಲ್ಲಿ ವಾದ ವಿವಾದ ಗಳೇ ತುಂಬಿಹೋಗಿವೆಯೆಂಬುದು ಸ್ಪಷ್ಟ ಸಿದ್ಧ. ಒಳ್ಳೆಯ ಆಥವಾ ಕೆಟ್ಟ ಸಂಗತಿ ಯೊಂದು ಕೇವಲ ಅಣು ರೂಪದಲ್ಲಿದ್ದರೂ ಅದನ್ನು ಮಹತ್ತಾಗಿ ಗಣಿಸುವ ಹಾಗೂ ವರ್ಣಿಸುವ ಅಭ್ಯಾಸವು ಜನ ಸಾಮಾ ನ್ಯರಲ್ಲಿದ್ದದ್ದೇ. ಅದಕ್ಕನುಸಾರವಾಗಿ ಇಂದು ಕಾಂಗ್ರೆಸ್ ಪ್ಲೇಟ್ಫಾರ್ಮಲ್ಲಿ ಇ ರುವ ಲೋಪ ದೋಷಗಳಿಗೆ ಅತಿಶಯೋ ಕ್ತಿ, ಅಸತ್ಯಾರೋಪಗಳ ಬಣ್ಣ ಕಂಡಿಗಿ ಅವು ಮತ್ತಷ್ಟು ದೊಡ್ಡವಾಗಿ ತೋರುತ್ತಿರಬ ಹುದು. ಈ ದೇಶದ ಆಡಳಿತ ಈ ನೊದಲು ಕಾಂ ಗ್ರೆಸಿಗರಿಂದಾಗಿದ್ದ ಸಣ್ಣ ಪುಟ್ಟ ಸಾಹಸ ಗಳಿಗೂ ದೊಡ್ಡ ಆಕಾರಗಳು ಬಂದಿದ್ದು ವೆಂಬುದನ್ನು ಮರೆಯಬಾರದು ಅಂದು ಆ ಹೊಗಳಿಕೆ 'ಆತಿಶಯ' ವಾಯಿತೆಂದು ಆಕ್ಷೇಪಿಸಿದವರಲ್ಲವಾದ್ದರಿಂದ್ಯಾಂದು ಈ ನಿಂದೆ ಹೆಚ್ಚಾಯಿತೆಂದೂ ದೂರುವುದು ಅನಗತ್ಯ. ಹದ ಮೀರಿ ಮೀರಿ ಟೀಕಿಸುವ ಅಪರಾಂಧ ಟೀಕಾಕಾರರದಿರಬಹುದು. ಆದರೆ ಟೀಕೆಗೆ ಅವಕಾಶ ಕಾಂಗ್ರೆಸ್ ರಂಗ ದಲ್ಲಿ ದೊರೆತಿದೆ.

× × ×

ಮಂತ್ರಿ ಮಂಡಲಿ ಸಂಬಂಧದ ವಿವಾದಗಳ ಮಟ್ಟಿಗೆ ಮದ್ರಾಸ್ ಮತ್ತು ಬಂಗಾಳ, ಇವೆರಡು ಪ್ರಾಂತ್ಯಗಳು ಸಮಾ ನಸ್ಥಾನ ಪಡೆದಿವೆ. ಮದ್ರಾಸಿನ ಕೆಲವು ಮಂತ್ರಿಗಳ ಮೇಲೆ ಶಾಸನ ಸಭಾ ಸದಸ್ಯ ರು ಕೆಲವರು ಮಾಡಿರುವ ಆಪಾದನೆಗಳ ತನಿಖೀ ಕಾರ್ಯವಿನ್ನೂ ಮುಗಿದಿಲ್ಲ. ಕಾಂ ಗ್ರೆಸ್ ಕಾರ್ಯಕಾರೀ ಸಮಿತಿಯು ನಿ ರ್ದೇಶಿಸಿದ್ದಂತೆ ಮದ್ರಾಸಿನ ಪ್ರಧಾನಿ ಶ್ರೀ ಕುಮಾರಸ್ವಾಮಿ ರಾಜ ಮತ್ತು ಇದಿರು ವಾದಿ ಶ್ರೀ ಟಿ. ಪ್ರಕಾಶಮರ ಜತೆ ಪರೀ ಲನೆ ಮುಗಿದು ಅಗೋಸ್ತು 10ರೊಳಗೆ ಅವರ ವರದಿ ಕಾರ್ಯಕಾರೀ ಸಮಿತಿಯ ಕೈಸೇರಬೇಕಿದ್ದಿತು. ಆದರೆ ಈ ವರೆಗೂ ಆ ಕೆಲಸ ಮುಗಿದಿಲ್ಲ ಇದೇ ರೀತಿ ಪಶ್ಚಿಮ ಬಂಗಾಳದ ಕಾಂಗ್ರೆಸ್ ಮಂಡಲಿಯ ಕೆಲವು ಮಂತ್ರಿಗಳ ಮೇಲೂ ಕಾಂಗ್ರೆಸ್ ಶಾಸನಸಭಾ ಸದಸ್ಯ ರು ಕೆಲವರ ಆರೋಪ ಹಟ್ಟಿಯು ಪ್ರಧಾನಿ ನುಂತ್ರಿ ಪಂಡಿತ ಜವಾಹರಲಾಲರಿಗೊಪ್ಪಿ ಸಲ್ಪಟ್ಟಿದ್ದಿತು. ಆದರಲ್ಲಿದ್ದ 17 ಆಪಾದನೆ ಗಳ ಪೈಕಿ 12 ಕ್ಕೆ ಆರ್ಥವೇ ಇಲ್ಲವೆಂದು ಪಂಡಿತ ನೆಹರುಗಳು ತೆಗೆದು ಹಾಕಿದ್ದರು. ಉಳಿದ ೨ ಆರೋಪಗಳು ಮುಂದಿನ ವಿಚಾ ರಣೆಗೆ ಯೋಗ್ಯವಿವೆಯೆಂದು ಸೂಚಿಸಿದ್ದರು. ಈ ತನಿಖೆಯು ಬೇಳೆ ಬಂಗಾಳದ ಪ್ರಧಾನಿ ಡಾ| ಬಿ. ಸಿ ರೋಯಿಗಳು ಯು ರೋಪಿನಲ್ಲಿದ್ದ ದರಿಂದ ತಾತ್ಕಾಲಿಕ ಪ್ರಧಾನಿ ಶ್ರೀ ಯಸ್. ಆರ್. ಸಕಾರ್‌ರೇ ಉದಾಹರಣೆಗಳನ್ನು ಮುಂದಿಟ್ಟಿದ್ದರು. ಈಗ ಡಾ|ರೋಯಿ ಗಳು ಕಲ್ಕತ್ತಕ್ಕೆ ಮರಳಿದ್ದು, ಆಪಾದನೆಗಳ ಕುರಿತು ತಾನು ಹೇಳು ವಂತಹ ವಿಷಯಗಳಿವೆಯೆಂದು ಪಂಡಿತ ನೆಹರುಗಳಿಗೆ ತಿಳಿಸಿದಂತೆ ಈಗ ಪಂಡಿತಜೀ ಅವರ ವಾದಗಳ ಪರೀಲನೆ ನಡೆಸುತ್ತಿ ದ್ದಾರೆ. ಅಂತೂ ಕಾಂಗ್ರೆಸ್ ಸಂಸ್ಥೆಯ ಸಾಮಾನ್ಯಾಧಿಕಾರಿಯಂತಾರಂಭಿಸಿ, ಮಂತ್ರಿಗಳಾಗಿರುವವರ ವರೆಗೂ ಈಗ ಪರ ಸ್ಪರ ದೋಷಾರೋಪಣಾ ಹುರುಪು ಮತ್ತು ಅಧಿಕಾರಲಾಲಸೆ ವ್ಯಾಪಿಸಿಹೋಗಿದೆ. ಇದು ರಾಷ್ಟ್ರದ, ಮತ್ತು ವಿಶೇಷವಾಗಿ ಕಾಂಗ್ರೆಸಿನ ದುರ್ದೈವವೆಂದಲ್ಲದೆ ಬೇರೆ ಹೇಳಲಿಕ್ಕಿಲ್ಲ.

× × ×

ಜಗತ್ತಿನ ಪ್ರಪಂಚದ ಇಂದಿನ ವಾ ದ ಪ್ರತಿವಾದಗಳ ವೈಕಿ ವಿಲಕ್ಷಣ ಹಾಗೂ ಆಭೇದ್ಯತೆಯ ಮಟ್ಟಿಗೆ ಎಲ್ಲಕ್ಕಿಂತ ಮೊ ದಲನೆಯದೆನ್ನಬೇಕು ಭಾರತ ಪಾಕಿಸ್ತಾ ನಗಳೊಳಗಿನ ವಿವಾದವನ್ನ. ಅಲ್ಪೇಪವ ನ್ನೇ ಆಸ್ತ್ರವಾಗಿ ಮಾಡಿ ಎದ್ದಿರಪ ಪಾಕಿಸ್ತಾನವು ಈಗ ಕೂಡಾ ಕೇವಲ ಆ ಕ್ಷೇಪಜೀವಿಯಾಗಿರುವಂತಿದೆ. ಈ ದೆಸೆ ಯಿಂದ ವಿಭಜನೋತ್ತರಹಣ, ಸೊತ್ತುಗಳ ಪಾಲುಗಾರಿಕೆ, ನಿರಾಶ್ರಿತರ ಆಸ್ತಿವ್ಯವಸ್ಥೆ, ಮತ್ತು ಕಾಶ್ಮೀರದ ಭವಿಷ್ಯದಂತಹ ವಿವಾದಗಳು ಎಂದಿಗೂ ಗೆರೆಮು ಟ್ಟಲೊಲ್ಲದ ಕೊಳೆಯು ತ್ತಿವೆ. ಈ ಗ ಹೊಸತಾಗಿ ಯಾವಾಯಿ ವೌಲ್ಯ ವಿಚ್ಛೇದನ ಸಂಬಂಧದ ತರ್ಕ ಮತ್ತು ಜಗಳಗಳು ಇವೆರಡು ರಾಷ್ಟ್ರಗಳೊಳಗೆದ್ದಿ ವೆ ಭಾರತದಿಂದ ಪಾಕಿಸ್ತಾನದೊಳಗೆ ಪ್ರ ವೇಶಿಸುವ ಯಾರೇ ಆದರೂ ಭಾರತದ 50 ರೂಪಾಯಿಗಳಿಗೆ ಹೆಚ್ಚನ್ನು ಹಿಡಿದು ಕೊಂಡು ಬರಕೂಡದೆಂದು ಪಾಕಿಸ್ತಾನ ವೀಗ ನಿಷೇಧಿಸಿದೆ. ಕಾಶ್ಮೀರ ಸಂಬಂಧದ ಕುತರ್ಕಗಳು ಅಸಹ್ಯವಾಗುವ ವರೆಗೂ

(೩ನೇ ಪುಟದಿಂದ ಮುಂದುವರಿದುದು)

ಕ್ಯಾಮದು ಪಡಿಸಿಕೊಳ್ಳುವ ವ್ಯಾಪಾರವ ಹಿವಾಟುಗಳಿಗೆ ಪೂರ್ಣ ನಿಂತುಹೋಗಿವೆ. ಪಾಕಿಸ್ತಾನದ ಅವ ಡುಗಳಿಗೆ ಸಂಬಂಧಿಸಿ ನಂ. 10 ನೇ ಜಾಹೀರು ಸಾಮೂಹಿಕ ಲೈಸನ್ಸನ್ನು ಭಾರತ ಸರಕಾರವು ಇದೇ ತಾ. 25 ರಿಂದ ಅಮಾನತು ಮನ್ನಾ ಮಾಡಿಕೊಂಡಿಯದೆ. ಸಾಂಪ್ರತ ವಿಚ್ಛೇದನದ ಪರಿಣಾಮಗಳ ಸಂಬಂಧಾದ ಆಂದಾಜುಕಟ್ಟುವದು ಆದಿಭಾಗದಲ್ಲಿ ಯಾರಿಂದಾದರೂ ಅಸಾಧ್ಯವೇ ಸಂ. ಎಂತಹ ಸೂಕ್ಷ್ಮ ಹಾಗೂ ದೂರದೃಷ್ಟಿಯಿಂದ ಕೈಕೊಂಡ ಅರ್ಥಸ್ಥಿತಿಯ ಬದಲಾವಣೆಯಾದರೂ ಅನಪೇಕ್ಷಿತ ಪರಿಣಾಮ ಗಳನ್ನೀಯಬಹುದು ಆದ್ದರಿಂದ ಅಂತಸ್ತು ಪ್ರಕಾರ ಕೈ ಕೊಳ್ಳುವ, ಕಾಲಾನುಗುಣವಾದ ಕಾರ್ಯ ಕ್ರಮಗಳಿಗೂ ಇಲ್ಲಿ ಹೆಚ್ಚಿನ ಪ್ರಾಮುಖ್ಯತೆಯಿದೆ. ಸ್ಟರ್ಲಿಂಗ್ ಮೌಲ್ಯವನ್ನು ಳಿಸಿಕೊಂಡ ಪರಿಣಾಮಗಳು ಇತ್ತೀಚೆಗಿನ ದಿನಗಳಲ್ಲಿ ಬ್ರಿಟನಿನಲ್ಲಿ ಸ್ಪಷ್ಟವಾಗಿ ಹತ್ತಿವೆಯೆಂದೂ ಗೋದಿಯ ಧಾರಣೆಯು ಅಲ್ಲಿ ಏರಹತ್ತಿದೆಯೆಂದೂ ತಿಳಿದು ಬರುತ್ತದೆ. ಅದೇ ರೀತಿ ಮೌಲ್ಯವಿಚ್ಛೇದನೆ ಮಾಡಿಕೊಂಡ ಎಲ್ಲಾ ರಾಷ್ಟ್ರಗಳ ಆರ್ಥಿಕ ಕ್ಷೇತ್ರಗಳಲ್ಲೂ ಒಂದಲ್ಲೊಂದು ವಿಧದ ಅಂದೋಲನಗಳಿದ್ದಿವೆ. ಮುಂದೇನಾಗುವ ದೆಂಬುವುದನ್ನು ನೋಡಲಿಕ್ಕಿದೆ.

ಕಾಶ್ಮೀರ ವಿವಾದ

ಕಾಶ್ಮೀರದ ವಿವಾದದಲ್ಲಿ ಶಾಂತ ಪೂರ್ಣ ತೀರ್ಮಾನವಾಗಿಯೇ ತೀರುವ ದೆಂಬ ತಮಗಿರುವ ಅಚಲ ವಿಶ್ವಾಸವನ್ನು ಈಗೊಮ್ಮೆ ಭಾರತವನ್ನು ಬಿಡುವ ಸಂದರ್ಭದಲ್ಲಿ ಕಾಶ್ಮೀರ ಕಮಿಶನಿನವರು ಜಾಹೀರು ಮಾಡಿದ್ದಾರೆ. ಇನ್ನು ತಮ್ಮ ವರದಿ ತಯಾರಿಸಿ ಭದ್ರತಾ ಕೌನ್ಸಿಲಿಗೊಪ್ಪಿಸುವ ಕೆಲಸ ಮಾಡುವುದಕ್ಕಾಗಿ ತಾವು ಈ ಭೂಭಾಗವನ್ನು ಬಿಟ್ಟು ಹೋಗುವೆವೆಂದು ಕಾಶ್ಮೀರ ಕಮಿಶನಿನವರು ಎರಡೂ ಸರಕಾರಗಳಿಗೆ ತಿಳಿಸಿದ್ದರು. ನಿರ್ಗಮನ ಕಾಲದ ತಮ್ಮ ಕೇಳಿಕೆಯಲ್ಲಿ ಕಾಶ್ಮೀರ ವಿವಾದಗಳ ಸ್ಥಿತಿಗತಿಕತೆಗೆ ನೋಟಬೀಂದ್ದರು. ಕೊನೆಯಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳುಳ್ಳ ವಿಷಯಗಳನ್ನು ಮಧ್ಯಸ್ಥಗಾರರ ತೀರ್ಮಾನಕ್ಕೆ ಬಿಡುವ ತಮ್ಮ ಸೂಚನೆಯನ್ನು ಪಾಕಿಸ್ತಾನ್ ಸರಕಾರವಂಗೀಕರಿಸಿಕೊಂಡಿತು. ಭಾರತಕ್ಕೆ ಅದನ್ನು ಸ್ವೀಕರಿಸಿಕೊಳ್ಳುವುದು ಅನಾಧ್ಯವಾಯಿತು, ಎಂದು ಉಲ್ಲೇಖಿಸಿ ಕಾಶ್ಮೀರ ವಿವಾದವನ್ನು ಬಗೆಹರಿಸುವ ಕುರಿತು ತಮಗಿರುವ ಸ್ಪಷ್ಟ ನಂಬಿಕೆಯನ್ನು ಜಾಹೀರು ಮಾಡಿ ಹೋಗಿದ್ದಾರೆ. ಕಾಶ್ಮೀರ ವಿವಾದದ ಸಂಬಂಧವಾಗಿ ಭಾರತ ಸರಕಾರದ ಸ್ಪಷ್ಟ ಧೋರಣೆ ಯಾವುದೆಂಬುದನ್ನು ಇದೇ ತಾ. 24 ರಲ್ಲಿ ಶ್ರೀನಗರದಲ್ಲಿ ನೆರೆದ ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ಮುಂದೆ ಮಾತಾಡುತ್ತಾ ಪ್ರಧಾನಿ ಪಂಡಿತ ಜವಾಹರಲಾಲರು ಈ ಕೆಳಗಿನ ಮಾತುಗಳ ಮೂಲಕ ಮಕ್ಕೊಮ್ಮೆ ವಂದಟ್ಟು ಮಾಡಿದ್ದಾರೆ: "ಕಾಶ್ಮೀರದ ಭವಿಷ್ಯವು ಅದರ ಸ್ವಂತ ಜನತೆಯಿಂದಲೇ ನಿರ್ಧರಿಸಲ್ಪಡುವದೆಂಬ ನಮ್ಮ ಆದಿಭಾಗದ ಘೋಷಣೆಗೆ ನಾವು ಕಟ್ಟುಬಿದ್ದಿದ್ದೇವೆ. ಆ ಪ್ರಶ್ನೆಯಲ್ಲಿ ಪಾಕಿಸ್ತಾನವು ಕೈಹಾಕದಿರುತ್ತಿದ್ದರೂ ನಾವು ಅದನ್ನೇ ಮಾಡುವವಂದ್ದೆವು. ಧಾಳಿಗಾರರು ನುಗ್ಗುವ ಎಷ್ಟೋ ಕಾಲಕ್ಕೆ ಮೊದಲು ಸ್ವತಃ ಕಾಶ್ಮೀರವೇ ತನ್ನ ಭವಿಷ್ಯವನ್ನು ನಿರ್ಧರಿಸಕೊಳ್ಳತಕ್ಕದ್ದೆಂದು ನಾವು ಸಾರಿದ್ದೆವು. ಭಾರತವನ್ನು ಕೂಡಿಕೊಳ್ಳುವುದರಿಂದ ಅವರಿಗಾಗುವ ಪ್ರಯೋಜನಗಳನ್ನು ನಾವು ವಿವರಿಸುತ್ತಿದ್ದೆವೇನೋ. ಆದರೆ ಈ ಪ್ರಶ್ನೆಯನ್ನು ನಮಗೆ ಅನುಕೂಲವಾಗುವಂತೆ ಮಾಡಿಕೊಳ್ಳುವುದಕ್ಕಾಗಿ ಯಾವುದೇ ವಿಧದ ಒತ್ತಾಯ ಬೀಳುವಿಕ್ಕೆಂದು ನಾನು ನೆನೆಸುವುದಿಲ್ಲ. ಭಾರತದೊಂದಿಗಿನ ಕಾಶ್ಮೀರದ ಜೋಡಣೆಯನ್ನು ಅಲ್ಲಿಯ ಜನಮತದ ಮೂಲಕ ನಿಷ್ಕರ್ಷಿಸಿ ತೋರಿಸುವ ಕೊಡುಗೆಯನ್ನು ನಾವು ಮುಂದಿಟ್ಟುದು ಕಾಶ್ಮೀರದ ಜನತೆಯ ಮುಂದೆ; ಪಾಕಿಸ್ತಾನದ ಜಥವಾ ಬೇರಾರ ಸಮ್ಮುಖದಲ್ಲಲ್ಲ. ಭಾರತದ ವಿಭಜನೆಗೊಪ್ಪಿಗೆಕೊಟ್ಟ ಮೇಲೆ ಜಿನ್ನರ ದ್ವಿರಾಷ್ಟ್ರ ತತ್ವಕ್ಕೊಪ್ಪಿಗೆ ಕೊಟ್ಟಂತೆಯೇ ಎಂಬ ಅಭಿಪ್ರಾಯಗಳು ವಿದೇಶೀ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಇದೊಂದು ಅಶ್ಚರ್ಯಕರ ವಾದಸರಣಿ. ದ್ವಿರಾಷ್ಟ್ರ ತತ್ವವನ್ನು ನಾವೆಂದಾದರೂ ಅಂಗೀಕರಿಸಿದ್ದುದಾಗಲೀ, ಅಂಗೀಕರಿಸುವುದಾಗಲೀ ಇಲ್ಲ. ಹಾಗಾದರೆ ನಾವು ರಾಷ್ಟ್ರ ವಿಭಜನೆಗೇಕೆ ಒಪ್ಪಿದೆವು? ದ್ವೇಷ, ಘರ್ಷಣೆ, ಗಲಭೆಗಳನ್ನು ಸ್ವರಾಜ್ಯ ಸ್ಥಾಪನೆಯು ಹಿಂದೆ ಬೀಳುವುದನ್ನೂ ತಪ್ಪಿಸುವುದಕ್ಕಾಗಿ. ಜನತಾ ಮತದಿಂದಲೇ ಈ ವಿಷಯದ ಗೊತ್ತುವಳಿಮಾಡುವುದು ಉತ್ತಮವಿದ್ದರೂ ನಾವಿದನ್ನು ಸಂಬಂಧಪಟ್ಟ ಎಸೆಂಬ್ಲಿಗಳ ಸದಸ್ಯರಾದ ಚುನಾಯಿತ ಪ್ರತಿನಿಧಿಗಳ ತೀರ್ಮಾನಕ್ಕೆ ಬಿಟ್ಟಿದ್ದೆವು. ನಾವಿಲ್ಲಿ ಅಂಗೀಕರಿಸಿಕೊಂಡಿರುವ ಈ ಜನ ಪ್ರತಿನಿಧಿಗಳ ತೀರ್ಮಾನವನ್ನೇ ಹೊರತು ದ್ವಿರಾಷ್ಟ್ರ ತತ್ವವನ್ನಲ್ಲ. ಈ ತತ್ವವನ್ನು ನಾವು ಸ್ವೀಕರಿಸುತ್ತಿದ್ದರೆ, ಇಲ್ಲಿರುವ ನಾಲ್ಕು ಕೋಟಿ ಮುಸಲ್ಮಾನರು ನಮಗೆ ಪರದೇಶಿಗಳಾಗುತ್ತಿದ್ದರು. ಕಾಶ್ಮೀರ ಕಮಿಶನಿನವರು ಈ ಕುರಿತು ಸಾಕಷ್ಟು ಪ್ರಯತ್ನ ಮಾಡಿದ್ದರು. ಈಗಲೂ ಮಾಡುತಿದ್ದಾರೆ. ಅದರಿಂದ ನಾವವರ ಮುಂದಿಟ್ಟಿರುವ ಏಕಮಾತ್ರ ಪ್ರಶ್ನೆಯ ಕಡೆಗೆ ಅವರೇಕೆ ಪ್ರಕಾಶಬೀಂದುವುದಿಲ್ಲ, ಮತ್ತು ಆ ಕುರಿತು ಅವರೇಕೆ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಿಲ್ಲ ವೆಂಬುದೇ ನನಗೆ ಆಶ್ಚರ್ಯವನ್ನು ನಿರ್ಮಿಸಿದೆ." ಪಂಡಿತ ನೆಹರುಗಳಂದ ಈ ಒಂದೇ ಒಂದು ಪ್ರಶ್ನೆಯೆಂದರೆ ಪಾಕಿಸ್ತಾನ್ ಹಸ್ತಕ ಆಝಾದ್ ಕಾಶ್ಮೀರದಳಗಳನ್ನು ಕಾಶ್ಮೀರ ಕಮಿಶನ ಭಾವೆಕೊಟ್ಟರುವಂತೆ ಬರ್ಖಾಸ್ತುಗೊಳಿಸಿಕೊಳ್ಳುವ ಸಂಬಂಧದ್ದಿದೆ. ಕಮಿಶನಿನವರ ಅಭ್ಯಾಸನಿದೊರೆತ ನಂತರ ಈ ಆಝಾದ್ ಕಾಶ್ಮೀರ ಸೈನ್ಯದ ಸಂಖ್ಯೆ ತಗ್ಗುವ ಬದಲಿಗೆ ಹೆಚ್ಚುತ್ತಾ ಹೋಗಿದೆ. ಕಾಶ್ಮೀರ ವಿವಾದದಲ್ಲಿ ಈಗ ಮುಖ್ಯ ಕಂಟಕವಾಗಿ ನಿಂತಿರುವುದೆಂದರೆ ಇದೇ. ಇನ್ನು ಮುಂದಕ್ಕಾದರೂ ಈ ಸಂಬಂಧದ ತೀರ್ಮಾನ ಹೇಗೆ ಸಾಧ್ಯವೋ ಹೊಳೆಯುವುದಿಲ್ಲ. ಎಷ್ಟು ರಕ್ತ ಹರಿಸಬೇಕಾಗಿ ಬಂದರೂ ಕಾಶ್ಮೀರವನ್ನು ತಾವು ಬಿಡುವಂತಿಲ್ಲವೆಂದು ಪಾಕಿಸ್ತಾನಿಗಳ ಅಭಿಪ್ರಾಯ ಕೇಳಿಬಂದಿದೆ. ಏನೇ ಬಂದರೂ, ತಾವು ಹಿಡಿದ ನ್ಯಾಯಬದ್ಧ ಮಾರ್ಗವನ್ನು ಬಿಟ್ಟು ಕೊಡಲಾರೆವೆಂದು ಭಾರತವು ಶಪಥ ಕೊಟ್ಟಿದೆ.

ಬೆಳೆದು ಹೋಗಿರುವುದರಿಂದ, ಜಾಗತಿಕ ಸಂಘದ ಮುಂದಿಟ್ಟಿರುವ ವ್ಯಾಜ್ಯವನ್ನು ಹಿಂದೆಗೆದುಕೊಂಡು ಕಾರ್ಯ ಮೂಲಕವೇ ಆದನ್ನು ಸಾಧಿಸಕ್ಕುದ್ದೆಂದು ಹಮ್ಮು ಕಾಶ್ಮೀರ ರಾಷ್ಟ್ರೀಯ ಸಮ್ಮೇಳನವು ನಿರ್ಧರಿಸಿದೆ.

× × ×

ತಾವು ರಾಷ್ಟ್ರೀಯವಾದಿಗಳು, ಎಂದೂ ಹಿಂಸಾ ವಿಧಾನವನ್ನು ಅಂಗೀಕರಿಸಿದವರಲ್ಲ, ಎಂಬ ಪ್ರಚಾರವೀಗ ಆರ್. ಯಸ್. ಯಸ್. ಸಂಸ್ಥೆಯವರಿಂದ ನಡೆಯುತ್ತಿದೆ. ಕೈದರಾಬಾದಿನ 'ಇವೆನ್ಸ್ ರಿವ್ಯೂ' ಪತ್ರಿಕಾ ಸಂಪಾದಕನನ್ನು ಕೊಲೆಮಾಡಿಸಿದ ಆಪಾದನೆಯ ಮೇಲೆ ರಿಯಾಕರ್ ನಾಯಕ ಕಾಸಿಮ್ ರಜ್ವಿಯ ವಿಚಾರಣೆಯೀಗ ನಡೆದಿರುವ ಪ್ಲೆ- ರಜ್ವಿ ಕೋರ್ಟಿನಲ್ಲಿತ್ತ ಸಾಗ್ಯಾಲದಲ್ಲಿ ಈ ಕಾಗದದ ಮಾತುಗಳು ಬಂದಿವೆ. "ಮುಸ್ಲಿಮರು ಕಪ್ಪುಮಾಡುವಂತೆ ಆಧಾರ ಹಿಂಸೆಗೆ ತೊಡಗುವಂತೆ ಪ್ರೇರೇಪಿಸುವಂತಹ ಅಮಾನುಷ, ಅಪ್ರಿಯ ಹಾಗೂ ಅನೈತಿಕವಾದುದೇನನ್ನೂ ನಾನು ನನ್ನ ಇಡೀ ಜೀವಮಾನದಲ್ಲಿ ಹೇಳಿದುದಿಲ್ಲ. ರಿಯಾಕರ್ ಎಂದರೆ, ಮಾನವೀಯ ಸೇವೆ ಸಲ್ಲಿಸುವ ಕರ್ತವ್ಯಕ್ಕೆ ಕಟ್ಟುಬಿದ್ದ ಸ್ವಯಂ ಸೇವಕ."

× × ×

ಕೇವಲ ಇಂದ ವಿವಾದಗಳನ್ನಷ್ಟೇ ಕಟ್ಟಿಕೊಳ್ಳುವದಾದರೆ ಲೋಕದಲ್ಲಿ ಯಾರು ಸರಿ,ಯಾರು ತಪ್ಪೆಂದು ಹೇಳಲು ಸಾಧ್ಯವಿಲ್ಲವೆನ್ನಿ!

ಉಡುಪಿ

ಚರಕಾ ಜಯಂತಿ—ಇಲ್ಲಿಯ ಚರಕಾ ಸಂಘದ ವತಿಯಿಂದ ಇದೇ ತಾ 19 ರಂದು ಸ್ವದೇಶಿ ಪ್ರದರ್ಶನ ಏರ್ಪಾಡು ಒಂದು ತಾಸು ಸೂತ್ರಯಜ್ಞ ನಡೆಯುತ್ತಿದೆ. ಬರುವ ತಾ 2 ರಂದು ಸಾಮೂಹಿಕ ಸೂತ್ರಯಜ್ಞ ಮತ್ತಿತರ ಕಾರ್ಯಕ್ರಮಗಳಿವೆ

ಚುನಾವಣಾ ಪ್ರಚಾರ—ಸಭೆಗಳು ಕಾಂಗ್ರೆಸ್ ವತಿಯಿಂದ ಇದೇ ತಾ 23 ರಂದು ಕನಕಕಾವು ಮತ್ತು ಪುಟ್ಟಿಗಳಲ್ಲಿ ಜರಗಿದವು. ಕನಕಕಾವಿನ ಸಭೆಯಲ್ಲಿ ಶ್ರೀ ಕೆ. ಆಜ್ಞಣ್ಣ ಸಿಪ್ಪರ ಅಧ್ಯಕ್ಷತೆಯಲ್ಲಿಯೂ, ಮಲ್ಪೆಯ ಸಭೆಯಲ್ಲಿ ಶ್ರೀ ಎಸ್. ಶಂಕರನಾರಾಯಣ ಸಾಮಗರ ಅಧ್ಯಕ್ಷತೆಯಲ್ಲಿಯೂ ಶ್ರೀಗಳಾದ ಎಸ್. ಎಸ್. ಕಿಲ್ಲೆ, ಎಚ್. ನಾರಾಯಣರಾವ್, ಬಿ. ಆರ್. ಕರ್ಕೇರ, ಪಿ. ಅಚ್ಯುತ್ಕೃಷ್ಣರಾಯಣ ನಾಯ್ಕರೇ ಮೊದಲಾದವರ ಭಾಷಣಗಳಾದುವು.

ಮುನಿಸಿಪಲ್ ಮೀಟಿಂಗು: ಇದೇ ತಾ 24 ರಲ್ಲು ಸಂಜೆ ಶ್ರೀ ಎಸ್. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಕಟ್ಟೋಣವನ್ನು ಎರಡ್ಮನರುಸಗಲೊಳಗಾಗಿ ಕಟ್ಟಿಸಿದ್ದರಿಕಟ್ಟಿಡ ಸ್ಥಳವನ್ನು ಸರಕಾರವು ಸ್ವಾಧೀನ ಪಡಿಸಿಕೊಳ್ಳುವುದು ಎಂದು ತಿಳಿಸಿದ ಬಳಿಕ್ಕ ಕಲೆಕ್ಟರರ ಸೂಚನೆಯಂತೆ ಪೌರಸಭೆಯ ಪ್ರತಿನಿಧಿಗಳ ತೀರ್ಮಾನಕ್ಕೆ ಬಿಟ್ಟಿದ್ದೆವು. ನಾವಿಲ್ಲಿ ಅಂಗೀಕರಿಸಿಕೊಂಡಿರುವ ಈ ಜನ ಪ್ರತಿನಿಧಿಗಳ ತೀರ್ಮಾನವನ್ನೇ ಹೊರತು ದ್ವಿರಾಷ್ಟ್ರ ತತ್ವವನ್ನಲ್ಲ. ಈ ತತ್ವವನ್ನು ನಾವು ಸ್ವೀಕರಿಸುತ್ತಿದ್ದರೆ, ಇಲ್ಲಿರುವ ನಾಲ್ಕು ಕೋಟಿ ಮುಸಲ್ಮಾನರು ನಮಗೆ ಪರದೇಶಿಗಳಾಗುತ್ತಿದ್ದರು. ಕಾಶ್ಮೀರ ಕಮಿಶನಿನವರು ಈ ಕುರಿತು ಸಾಕಷ್ಟು ಪ್ರಯತ್ನ ಮಾಡಿದ್ದರು. ಈಗಲೂ ಮಾಡುತಿದ್ದಾರೆ. ಅದರಿಂದ ನಾವವರ ಮುಂದಿಟ್ಟಿರುವ ಏಕಮಾತ್ರ ಪ್ರಶ್ನೆಯ ಕಡೆಗೆ ಅವರೇಕೆ ಪ್ರಕಾಶಬೀಂದುವುದಿಲ್ಲ, ಮತ್ತು ಆ ಕುರಿತು ಅವರೇಕೆ ತಮ್ಮ ಅಭಿಪ್ರಾಯವನ್ನು ಸೂಚಿಸುತ್ತಿಲ್ಲ ವೆಂಬುದೇ ನನಗೆ ಆಶ್ಚರ್ಯವನ್ನು ನಿರ್ಮಿಸಿದೆ." ಪಂಡಿತ ನೆಹರುಗಳಂದ ಈ ಒಂದೇ ಒಂದು ಪ್ರಶ್ನೆಯೆಂದರೆ ಪಾಕಿಸ್ತಾನ್ ಹಸ್ತಕ ಆಝಾದ್ ಕಾಶ್ಮೀರದಳಗಳನ್ನು ಕಾಶ್ಮೀರ ಕಮಿಶನ ಭಾವೆಕೊಟ್ಟರುವಂತೆ ಬರ್ಖಾಸ್ತುಗೊಳಿಸಿಕೊಳ್ಳುವ ಸಂಬಂಧದ್ದಿದೆ. ಕಮಿಶನಿನವರ ಅಭ್ಯಾಸನಿದೊರೆತ ನಂತರ ಈ ಆಝಾದ್ ಕಾಶ್ಮೀರ ಸೈನ್ಯದ ಸಂಖ್ಯೆ ತಗ್ಗುವ ಬದಲಿಗೆ ಹೆಚ್ಚುತ್ತಾ ಹೋಗಿದೆ. ಕಾಶ್ಮೀರ ವಿವಾದದಲ್ಲಿ ಈಗ ಮುಖ್ಯ ಕಂಟಕವಾಗಿ ನಿಂತಿರುವುದೆಂದರೆ ಇದೇ. ಇನ್ನು ಮುಂದಕ್ಕಾದರೂ ಈ ಸಂಬಂಧದ ತೀರ್ಮಾನ ಹೇಗೆ ಸಾಧ್ಯವೋ ಹೊಳೆಯುವುದಿಲ್ಲ. ಎಷ್ಟು ರಕ್ತ ಹರಿಸಬೇಕಾಗಿ ಬಂದರೂ ಕಾಶ್ಮೀರವನ್ನು ತಾವು ಬಿಡುವಂತಿಲ್ಲವೆಂದು ಪಾಕಿಸ್ತಾನಿಗಳ ಅಭಿಪ್ರಾಯ ಕೇಳಿಬಂದಿದೆ. ಏನೇ ಬಂದರೂ, ತಾವು ಹಿಡಿದ ನ್ಯಾಯಬದ್ಧ ಮಾರ್ಗವನ್ನು ಬಿಟ್ಟು ಕೊಡಲಾರೆವೆಂದು ಭಾರತವು ಶಪಥ ಕೊಟ್ಟಿದೆ.

ಅರ್. ಯಸ್ ಯಸ್.ದ ಕರ್ನಾಟಕ ರಾಜ್ಯಾಧ್ಯಕ್ಷರಾಜ ಶ್ರೀ ಯಾದವರಾವ್ ಜೋಶಿಯವರು ಇದೇ ತಾ 24 ರಲ್ಲು ಸಂಜೆ ಆಜ್ಞರಕಾಡು ಮೈದಾನದಲ್ಲಿ ಆರ್. ಎಸ್.ಎಸ್.ನ ಧ್ಯೇಯ, ಗೊತ್ತುಗುರಿಗಳ ಸ್ಥಿತಿ ಹಿಂದಿಯಲ್ಲಿ ಭಾಷಣವಿತ್ತರು.

ಡಿ. ಕ. ಜಿಲ್ಲಾ ಬೋರ್ಡು ಚುನಾವಣಾ ಫಲಿತಾಂಶ.

ಕಾಪುಕರ್ಕಳಿನ ಕಾಂಗ್ರೆಸ್ ಉಮೇದ್ವಾರಿ ಶ್ರೀ. ಬಿ. ಬಿ. ಶೆಟ್ಟರಿಗಿಂತ ಸ್ವತಂತ್ರ ಉಮೇದ್ವಾರ ಶ್ರೀ. ಕೆ. ಕೃಷ್ಣಮೂರ್ತಿರಾಯರು ಹೆಚ್ಚಿನ ಮತಗಳನ್ನು ಪಡೆದು ಶ್ರೀ ರಾಯರು ಗೆದ್ದಿದ್ದಾರೆ.

ಉಡುಪಿನ ಸರ್ಕಲಿನ ಕಾಂಗ್ರೆಸ್ ಉಮೇದ್ವಾರಿ ಶ್ರೀ ಪಿ. ಉಪೇಂದ್ರ ಶ್ರೀನಿವಾಸನಾಯ್ಕರು ಸಮಿತಾವಾದಿ ಪಕ್ಷದ ಉಮೇದ್ವಾರಿ ಶ್ರೀ.ಯೇಬು ಅಮ್ಮಣ್ಣಶಿಗಿಂತ ಅಧಿಕಾರಾಲ್ಪಸಂಖ್ಯಾಬಲದಿಂದ ಶ್ರೀನಾಯ್ಕರು ಜಯಿಸಿದ್ದಾರೆ.

ಕುಂದಾಪುರ ಸರ್ಕಲಿನ ಕಾಂಗ್ರೆಸ್ ಉಮೇದ್ವಾರಿ ಶ್ರೀ. ಸರ್ವೋತ್ತಮ ವೈಗಳಿಗಿಂತ ಸ್ವತಂತ್ರ ಉಮೇದ್ವಾರಿ ಮಿ. ಇನಾಸ್ ರವರು ಅಧಿಕ ಮತಗಳನ್ನು ಪಡೆದು ಮಿ ಇನಾಸ ರವರು ವಿಜಯಿಯಾಗಿದ್ದಾರೆ.

ಮೂಡಬಿದ್ರೆಯ ಕಾಂಗ್ರೆಸ್ ಉಮೇದ್ವಾರಿ ಸೋತುಹೋದ ಮತ್ತು ಕಾರ್ಕಳ, ಮುಂಗಾರು ಕೂಡುಗಳ ಕಾಂಗ್ರೆಸ್ ಉಮೇದ್ವಾರಿಗಳು ಗೆದ್ದಿರುವ ವಾರ್ತೆಗಳಿವೆ. ಉಳಿದ ಕಡೆಗಳ ಸರಿಯಾದ ಸ್ಥಿತಿತಾಪತ್ರ ಈ ತನಕ ನಮಗೆ ತಿಳಿದುಬಂದಿಲ್ಲ.

ನೋಟೀಸು.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧೀನದಲ್ಲಿರುವ ಶಾಲೆಗಳಿಗೆ ತರಬೇತಿ ಹೊಂದಿ ಸರ್ಟಿಫಿಕೇಟು ಪಡೆದ ಹಾಯರ್ ಮತ್ತು ಸೆಕೆಂದರಿ ಗ್ರೇಡ್ ಉಪಾಧ್ಯಾಯರೂ, ಉಪಾಧ್ಯಾಯಿನಿಯರೂ, 7.B ಮತ್ತು 2.B ಆಗಾಬಾದ ಪಿಯ್ಯಾನೋಗಳು, ಹಾರ್ಮೋನಿಯಮ್, ಬೇಕ್ ಬರ್ಡ್ ಹಿಂದೂ, ಮತ್ತು ಬ್ಯಾಂಜೋ ಇತರ ಹಿಂದೂ ವಗೈರದವರು ಬೇಕಾಗಿದ್ದಾರೆ. ಉದ್ಯೋಗಾರ್ಥಿಗಳು ಅರ್ಜಿಯನ್ನು ಈ ಕೆಳಗಿನ ವಿವರದೊಡನೆ ನಾಲ್ಕು ಆಣೆ ರಿಜಿಸ್ಟ್ರಿ ಕೃತಿಯ ಅಧೀನಿಗೆ ತಾರೀಖು ೩೦-೧೦-೪೯ ರ ಒಳಗೆ ತಲುಪುವಂತೆ ಕಳುಹಿಸಿಕೊಡಬೇಕು.

ವಿವರ:—1] ಹೆಸರು 2] ತಂದೆಯ ಹೆಸರು 3] ಮತ 4] ಜಾತಿ ಯಾ ವರ್ಗ 5] ಸಾಮಾನ್ಯ ವಿದ್ಯಾಭ್ಯಾಸ 6] ತರಬೇತಿ, ಗ್ರೇಡು, 7] ಜನನ ತಾರೀಕು 8] ಧಾರಣೆ 9] ವಿಳಾಸ.

ನಾಲ್ಕು ಆಣೆಯನ್ನು ಪಾವತಿಯಾದವರು ಮೂಲಕ ಕಳುಹಿಸಿಕೊಡಬಹುದು. ಮಿಕ್ಕ ಜಾತಿಯವರಿಂದಲೂ ಅರ್ಜಿಯನ್ನು ಸ್ವೀಕರಿಸಲ್ಪಡುವುದು

Syed Ahmod Sahib Bahadur
B. sc (Hons)
Special officer D. K. Dt. Board

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡೆಯುವ ಚಿತ್ರ:— ಫಿಲ್ಮಿಸ್ತಾನ್ ನವರ,

ನದಿಯಾಕೆ-ಪಾರ್

ದಿಲೀಪ್‌ಕುಮಾರ್, ಕಾಮಿನಿಕೌಶಲ್, ದಿಗ್ದರ್ಶಕ: ಶೋರ್ ಸಾಹು

ಬರುವ ಚಿತ್ರ— ಜಮುನಾ ಪ್ರೊಡಕ್ಷನ್ ನವರ,

ಸುರಯ್ಯ, ನೋಶಿಲಾಲ್, ಮತ್ತು ಕರನ್ ದಿವಾನ್, ಪಾತ್ರವಹಿಸಿದೆ.

ಡೂದಿಲ್

ಗ.ಹಸಿಯ ತಾರೀಕನ್ನು ವಿವರಿಸಿ ಪ್ರಕಟಿಸಲಾಗುವುದು

ಮಂಗಳೂರು

ರೈಲ್ವೆ ಸಮಯದಲ್ಲಿ ಬದಲಾವಣೆ

ಆಕ್ಟೋಬರ್ ತಾ 1 ರಿಂದ ಮಂಗಳೂರು ಎಕ್ಸ್‌ಪ್ರೆಸ್ ಎಂಬ ಹೊಸ ರೈಲು ಗಾಡಿಯು ಬೆಳಿಗ್ಗೆ 8½ ಗಂಟೆಗೆ ಮಂಗಳೂರಿನಿಂದ ಹೊರಟು ಸಂಜೆ 5 15 ತಾಸಿಗೆ ಇಲ್ಲಿಗೆ ತಲುಪುವುದು. ಶೋರ್ನೂರ್ ಪೆಸೆಂಜರ್ ಬೆಳಿಗ್ಗೆ 3. 38ಕ್ಕೆ ಹೊರಟು ರಾತ್ರಿ 10·10ಕ್ಕೆ ಇಲ್ಲಿಗೆ ತಲುಪುವುದು. ಕಲ್ಲಿಕೋಟೆ ಪೆಸೆಂಜರು ಮಧ್ಯಾಹ್ನ 12. 35ಕ್ಕೆ ಹೊರಟು ಅಪರಾಹ್ನ 3. 15ಕ್ಕೆ ಇಲ್ಲಿಗೆ ತಲುಪುವುದು. ಮಲಬಾರು ಎಕ್ಸ್‌ಪ್ರೆಸ್ ಸಂಜೆ 4.20ಕ್ಕೆ ಹೊರಟು ಬೆಳಿಗ್ಗೆ 9. 45 ಕ್ಕೆ ಇಲ್ಲಿಗೆ ತಲುಪುವುದು. ಬಾಲಾರ ಪೇಟೆ ಪೆಸೆಂಜರು ಸಾಯಂಕಾಲ 6ಕ್ಕೆ ಹೊರಟು ಬೆಳಿಗ್ಗೆ 6. 50ಕ್ಕೆ ತಲುಪುವುದು.

ಜಿಲ್ಲಾ ಆಹಾರ ಸಮಿತಿ ಸಭೆಯು

ಇದೇ ತಾ 23ರಲ್ಲು ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಸ್ಸನ್ಸಾದ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಸಪ್ಲೈ ಆಫೀಸರ್ ಜನಾಬ್ ಅಬ್ದುಲ್ ಗಫೂರ್ ಸಾಹೇಬರು ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ವರದಿ ಮಾಡಿದರು. ಬೆಳೆಯ್ಕಟಾವಿನ ವರೆಗೆ 3000 ಟನ್ನುಗಳಾದರೂ ಬೇಕಾಗಿರುವುದರಿಂದ ಅಷ್ಟು ಅಂಕವನ್ನು ಕೂಡಲೇ ಕಳುಹಿಸುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು. ಜಿಲ್ಲೆಗೆ ಸರಕಾರವು ಅವಲಂಬ್ಯವಾಗಿ ಪ್ರಕ್ಟೀಕಿಸಿದ 100 ಟನ್ ಬತ್ತವನ್ನು ಜಿಲ್ಲಾ ಸಂಯ್ಕೆಯ ಮೇರೆಗೆ ಆರು ತಾಲೂಕುಗಳಿಗೆ ಹಂಚಲಾಯಿತು. ಮಂಗಳೂರಿಗೆ 35 ಟನ್; ಪುತ್ತೂರು 12 ಟನ್; ಕಾಸರಗೋಡು 20 ಟನ್; ಉಡುಪಿ 15 ಟನ್; ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಿಗೆ ಒಟ್ಟಿಗೆ 9 ಟನ್‌ಗಳೆಂದು ನಿರ್ಧರಿಸಲಾಯಿತು. ಇದನ್ನು ರೇಶನ್ ಹೊರತು ತಲಾ ಒಂದರ್ಧ ಸೇರಿನಂತೆ ಬಿಲ್ಲರೆ ವ್ಯಾಪಾರಿಗಳಿಂದ ಮಾರಾಟಮಾಡುವ ವ್ಯವಸ್ಥೆಯಾಗುವುದು.

ಹೋಲೀಸ್ ನಿರ್ಬಂಧಕಾಜ್ಞೆ.—

ದೀಪಾವಳಿ ಸಮಯದಲ್ಲಿ ಕೆಲವಸ್ಥಾನ ಮೊದಲಾದ ಧಾರ್ಮಿಕಸಂಸ್ಥೆಗಳಿಂದ ಹೊರಡುವ ಮೆರವಣಿಗೆ ಕಾಲದಲ್ಲಿ ಹಾಕುವ ವೇಷಗಳಿತ್ಯಾದಿಗಳಿಂದ ನಗರದಲ್ಲಿ ನೆಮ್ಮದಿಭಂಗವಾಗಬಹುದೆಂಬವಾಗಿ ಸೂಲೀಸು ಅಧಿಕಾರಿಗಳ ಗಮನಕ್ಕೆ ಬಂದುದರಿಂದ ಇದೇ ತಾ 23 ರಿಂದ ಆ ಕ್ಟೋಬರ್ ತಾ.3ರ ವರೆಗೆ ಯಾವ ರೀತಿಯಮೆರವಣಿಗೆ, ಸಭೆ, ವೇಷಾದಿಗಳಾಗಬಾರದು, ಹಾಗೆ ಈ ಕಾರ್ಯಗಳನ್ನು ಮಾಡ ಬಯಸುವವರು 48 ತಾಸುಗಳ ಮೊದಲು ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರರಿಂದ ರೈಸೆನ್ಸು ಪಡೆಯಬೇಕಾಗಿದೆ. ಆದರೆ ಮದುವೆ ಮರಣಗಳಿಗೆ ಈ ನಿರ್ಬಂಧಕಾಜ್ಞೆ ಲಾಗವಾಗುವುದಿಲ್ಲ.

ಸಕ್ಕರೆ: ಕೇಂದ್ರ ಸರಕಾರದ ಆದೇಶದಂತೆ ಮುಖ್ಯಸಂ ಸರಕಾರವು ಸಕ್ಕರೆ ವಿಕ್ರಯದ ಬಗ್ಗೆ ಶಾಸನ ಒಂದನ್ನು ಜಾರಿಗೆ ತಂದಿದೆ. ಇದರಂತೆ ರಿಟೈಲ್ ವ್ಯಾಪಾರಿಯು ಆಯಾ ಜಿಲ್ಲಾ ಕಲೆಕ್ಟರರಿಂದ ವಿಕ್ರಯದ ಬಗ್ಗೆ ಲೈಸೆನ್ಸು ಒಂದನ್ನು ಪಡಕೊಳ್ಳಬೇಕು. ವ್ಯಾಪಾರ ನಡೆಸಿದ ಲೆಕ್ಕ ಪತ್ರಗಳನ್ನಿಟ್ಟು ಕೊಳ್ಳಬೇಕಲ್ಲದೆ, ಮಾಸಿಕ ಲೆಪ್ಪ ಪತ್ರಗಳನ್ನು ಕಲೆಕ್ಟರರಿಗೆ ಒಪ್ಪಿಸಬೇಕು.

ದುರ್ಮರಣ ಮಂಗಳೂರು ಪೆಂಟ್ಲೆಂಡ್ ಪೇಟೆಯಲ್ಲಿರುವ ಸಿಟಿಬ್ಯಾಂಕಿನ ಪ್ರೊಪ್ರೈಟರ್ ಶ್ರೀ ಆರ್. ಎಸ್. ಕಿಣಿಯವರ ಮನೆಯಲ್ಲಿ ತಾ 21 ರಲ್ಲು ಬೆಳಿಗ್ಗೆ ಸ್ಟೌ ಉರಿಸುವಾಗ ಬೆಂಕಿಹಿಡಿದು ಅಡಿಗೆಯವಳ ಬಟ್ಟೆಗೆ ಬೆಂಕಿಹಿಡಿಯಿತು. ಅದನ್ನು ನಂದಿಸಲು ಬಂದ ಕಿಣಿಯರ ಪತ್ನಿ ಶ್ರೀಮತಿ ಮನೋರಮಾ ಕಿಣಿಯವರ ಬಟ್ಟೆಗೆ ಬೆಂಕಿಹಿಡಿದು ಸ್ವಾಧೀನತಪ್ಪಿತಕವಾಗಲು ಅವರನ್ನು ಕೂಡಲೇ ಲೇಡಿಗೋಷನ್ ಆಸ್ಪತ್ರೆಗೊಯ್ಯಲಾಯಿತು. ಆಲ್ಲಿ ಅವರಿಬ್ಬರೂ ಚಿಕಿತ್ಸೆಪಡೆಯುತ್ತಿರುವಾಗ ಮನೋರಮಾಕಿಣಿಯವರುಆಂದೇ ಅಪರಾಹ್ನ ಕೀರಿಕೊಂಡರು. ಅವಿಗೆಯವಳ ಸ್ಥಿತಿಯು ಚಿಂತಾಜನಕವಿದೆ.

ಪ ಕ. ಜಿಲ್ಲಾ ರೈತಸಂಘ ಸಮ್ಮೇಳನ:—

ಸಮಾಜವಾದಿ ಪಕ್ಷದ ನೇತೃತ್ವದಲ್ಲಿ ಇದೇ ತಾ 17ರಲ್ಲು ದಕ್ಷಿಣಕನ್ನಡ ಜಿಲ್ಲಾ ರೈತರ ಸಮ್ಮೇಳನವು ಶ್ರೀ ದಿನಕರ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎನ್. ವಿಠಲಪೈ ಸ್ವಾಗತ ಭಾಷಣ, ಕರ್ನಾಟಕ ಹಿಂದ್ ಕಿಸಾನ್ ಪಂಚಾಯತದ ಅಧ್ಯಕ್ಷ ಶ್ರೀ ಕೆ. ರಾಘವೇಂದ್ರ ರಾಯರಿಂದ ಸಮ್ಮೇಳನ ಉದ್ಘಾಟನಾ ಕಾರ್ಯಕ್ರಮಗಳಾದ ನಂತರ ಅಧ್ಯಕ್ಷರ ಭಾಷಣವಾಯಿತು. ಬಳಿಕ ಗೇಣಿಯು ಭೂಕಂದಾಯದ ಎರಡರಷ್ಟಿರುವ ತತ್ವವನ್ನು ಒಳಗೊಂಡ ಒಕ್ಕಲುಹಿತ ಮಸೂದೆಯನ್ನು ತರಬೇಕು. ಜಿಲ್ಲೆಯಲ್ಲಿ ಒಕ್ಕಲು ಎಬ್ಬಿಸುವ ಕುರಿತು ಆಗುತ್ತಿರುವ ನಂಬ್ರಗಳನ್ನಿತ್ಯ ತಡವಿರಿಸಬೇಕು. ರೈತರಿಗೆ ಹೆಚ್ಚು ರೇಶನ್ನೂ ಸಾಗುವಳಿಗೆ ಧಾನ್ಯವೂ ಸಿಗುವಂತಾಗಬೇಕು. ಎಂಬೀ ನಿರ್ಣಯಗಳಾದುವು.

ಮಂಗಳೂರು-ಗಣಪತಿ ಹ್ಯಾಸ್ಕೂಲಿನ ಹಳೆ ವಿದ್ಯಾರ್ಥಿಗಳ ಸಂಘದ ವಾರ್ಷಿಕೋತ್ಸವವು ಇದೇ ತಾ 30ರಲ್ಲು ಜರಗುವುದು. ನರ್ಸರಿಪ್ರತಿ ಜರಗುವ ವಿಜಯ ದಶಮಿ ಸಮಾರಂಭವು ತಾ. 29ರಲ್ಲು ಪ್ರಾರಂಭವಾಗಿ 2ನೇ ತಾರೀಕಿನತನಕ ನಡೆಯಲಿರುವುದು.

ಮಿಲ್ ಬಟ್ಟೆ ವ್ಯಾಪಾರಿಗಳು ಲೈಸೆನ್ಸಿಗಾಗಿ ಇದೇ ತಾ 30ರೊಳಗಾಗಿ ಜಿಲ್ಲಾ ಕಲೆಕ್ಟರರ ಫಾರ್ಮಿನಲ್ಲಿ ಅರ್ಜಿಮಾಡಿಕೊಳ್ಳಬೇಕಾಗಿದೆ.

ಪ. ಕ ಜಿಲ್ಲಾ ಸಹಕಾರಿ ಜೇನು ವ್ಯವಸಾಯ ಸಂಘವು ಈ ಜಿಲ್ಲೆಯಲ್ಲಿ ಜೇನು ವ್ಯವಸಾಯದ ಅಭಿವೃದ್ಧಿಮಾಡುವ ಬಗ್ಗೆ ಮಂಗಳೂರು, ಬದಿಯಡ್ಕ, ಬೊಕ್ಕಾಡಿಯಲ್ಲಿ ಜೇನು ವ್ಯವಸಾಯ ಕೇಂದ್ರಾಗಳನ್ನು ತೆರೆಯುವ ವಿಚಾರದಲ್ಲಿ ಮಾಡುತ್ತಿದೆ. ಆ ಬಗ್ಗೆ ತಯಾರಿಸಿ ಕಳುಹಿಸಿದ ಯೋಜನೆಯನ್ನು ಸರಕಾರದವರು ಮಂಜೂರುಮಾಡಿರುತ್ತಾರೆ. ಆಲ್ಲದೆ ಜೇನು ವ್ಯವಸಾಯದ ಪ್ರಚಾರ ಕಾರ್ಯಕ್ಕಾಗಿ ಒಬ್ಬ ಫೀಲ್ಡ್‌ಮೇನ್‌ನನ್ನು ಒಂದು ವರ್ಷದ ಮಟ್ಟಿಗೆ ನೇಮಕ ಮಾಡಿರುತ್ತಾರೆ.

ಈ ಎಲ್ಲಾ ವಿಚಾರ ಆಲೋಚನೆಯು ಈ ಸಂಘದ ಮಹಾಸಭೆಯು ತಾರೀಕು 9-10-49ರಲ್ಲು ಪುತ್ತೂರು ತಾಲೂಕಿನ ಬೊಕ್ಕಾಡಿ ಕಟ್ಟೆಯಲ್ಲಿ ಜರಗಲಿದೆ ಎಲ್ಲಾ ಸೊಂದರೂ ಹಿತೈಷಿಗಳೂ ಬರಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಕುಲಾಲ ಸಮಾಜೋದ್ಧಾರ ಸಮಿತಿಯ ಪ್ರಚಾರ ಸಭೆ:— ತಾ. 18-9-49 ರಲ್ಲಿ ದ. ಕ. ಜಿಲ್ಲಾ ಕುಲಾಲ ಸಮಾಜೋದ್ಧಾರಕ ಸಮಿತಿಯ ಉಡುಪಿ ಶಾಖೆಯ ಪ್ರಚಾರ ಸಭೆಯು ಕುಂದಾಪುರ ತಾಲ್ಲೂ ಹುಸ್ಲೆಮಕ್ಕಿ ಟೋರ್ಡು ಎಲಿಮೆಂಟರಿ ಶಾಲಾ ವರಾಂದೆಲ್ಲಿ ನಡೆಯಿತು. ಸಭೆಗೆ 300ಕ್ಕಿಂತಲೂ ಹೆಚ್ಚಾಗಿ ಸಮಾಜ ಬಂಧುಗಳು ಬಂದಿದ್ದರು. ಸಭೆಯವರ ಅನುಮತಿ ಮೇರೆಗೆ ಶ್ರೀ ಮಂಜುಳುಲಾಲನ್ನು ಸಭಾಧ್ಯಕ್ಷನ್ನಾಗಿ ಆರಿಸಲಾಯಿತು. ನಂತರ ಶ್ರೀ ಕೊಳ್ಳಾಡು ಚಂದಪ್ಪ ಶ್ಯಾನುಭಾಗರು ಸಮಿತಿಯು ಕಳದ ಕೆಲವು ವರ್ಷಗಳಿಂದೀಚೆಗೆ ಕುಲಾಲ ಸಮಾಜದ ಏಳಿಗೆಗಾಗಿ ದುಡಿದ ವಿಷಯಗಳನ್ನೆಲ್ಲಾ ಸಂಕ್ಷಿಪ್ತವಾಗಿ ವಿವರಿಸಿದ್ದಲ್ಲದೆ, ಸಮಿತಿಯು ಸಮಾಜದ ಉನ್ನತಿಗಾಗಿ ಯತ್ನಿಸುವ ಮುಖ್ಯ ಲೋದ್ದೇಶಗಳನ್ನಿಟ್ಟುಕೊಂಡು ದುಡಿಯುತ್ತಲಿದೆ ಎಂಬುದನ್ನು ಕೂಡಾ ಸಭಿಕರಿಗೆ ತಿಳಿಸಿದರು. ಮತ್ತು ನಮ್ಮೀ ಕುಲಾಲ ಸಮಾಜವು ಸಹಸ್ರಾರು ವರ್ಷಗಳಿಂದಲೂ ನೆಲಿಸಿರುವ ಜನಾಂಗವಾಗಿದ್ದು, ಜೆಲ್ಲೆಯ ಜನಸಂಖ್ಯೆ ತೆಯಲ್ಲಿ ಮೂರನೆಯ ಸ್ಥಾನವನ್ನು ಗಳಿಸಿರುವದಾದರೂ, ಇನ್ನೂ ಜಗತ್ತಿನ ನಾಗರಿಕ ಪಂಗಡಗಳ ಮುಂದೆ ಬಹಳ ಹಿಂದುಳಿದುದರ ಕಾರಣವು ನಮ್ಮಲ್ಲಿರುವ ಅವಿದ್ಯೆಯ ದೆಸೆಯಿಂದಲೇ ಎಂಬುದಾಗಿಯೂ, ಇನ್ನು ಮುಂದಾದರೂ, ನಮ್ಮೀ ಬದಸಮಾಜವು ನಮ್ಮ ಸರ್ವ ಪ್ರಯತ್ನಗಳನ್ನು ಮುಂದಿನ ಜನಾಂಗವಾಗಿ ಬಾಳುವ ಮಕ್ಕಳ ವಿದ್ಯಾಭ್ಯಾಸಕ್ಕಾಗಿಯೇ ವಿನಿಯೋಗಿಸಬೇಕಾಗಿಯೂ, ಸುರಸ ಭಾಷಣ ಮಾಡಿದರು. ಶ್ರೀ ಕುಂಜಾಲು ರೀ ನಮಸ್ತ್ಕರವರು ಸಮಿತಿಯ ಮೂಲಕವಾಗಿ ಯಾದರೂ ನಾವು ದುಡಿದು, ನಮ್ಮೀ ಸಮಾಜವು ಪಡುತ್ತಿರುವ ಬದತನವನ್ನು ನೀಗಿಸುವಂತೆ ವಿಶ್ವಕ್ಕಯತ್ನ ಮಾಡಬೇಕಾಗಿ ಸಭೆಯಲ್ಲಿ ಕೇಳಿಕೊಂಡರು. ಶ್ರೀಯುತ ಸಿದ್ಧಯ್ಯನವರು ಒಕ್ಕೂಟದಿಂದಲೇ ನಾವು ಈ ಸಮಿತಿಯ ಮೂಲಕ ದುಡಿಯಬೇಕಾಗಿಯೂ ಮತ್ತು ಶ್ರೀಯುತ ಗೋವಿಂದ ಕುಂಬಾರ್ (ಕಾರವಾರ) ಯವರು ಸಭಾಜದ ಏಳಿಗೆಯ ಕುರಿತೂ ಭಾಷಣಮಾಡಿದಮೇಲೆ ಸಭಾಧ್ಯಕ್ಷರು ಸಮಿತಿಯ ಮೂಲಕ ನಾವು ದುಡಿಯಬೇಕಾದ ರೀತಿಗಳನ್ನು ಸ್ಪಷ್ಟವಾಗಿ ಸಭೆಯ ಮುಂದಿಟ್ಟು ಮೇಲೆ, ಧನ್ಯವಾದಾರ್ಪಣೆಯೊಂದಿಗೆ ಸಭೆಯಮುಕ್ತಾಯವಾಯಿತೆಂದು ಸಮಿತಿಯ ಕಾರ್ಯದರ್ಶಿಚಿಕ್ಕಯ್ಯನವರು ತಿಳಿಸುತ್ತಾರೆ.

ಮಂಜರಪಲ್ಕೆ—ಈಗ ಈ ಅನುಪಾನಿ ನವರ ಪಾಲಿನ ಪೋಸ್ಟಾಫೀಸು ಹಳ್ಳೀ ಅಲಯವಾಗಿದ್ದು, ರನ್ನರ್ ಮೂಲಕವೇ ಟಪ್ಪಾಲು ಹೋಗಬೇಕಾಗಿರುವ ನಂದಳಿಕೆಯಲ್ಲಿದೆ. ಅದನ್ನು ಬಸ್ಸು ಚಲಾವಣೆಯ ರಸ್ತೆ ಮತ್ತು ನಿಲ್ದಾಣವಿರುವ ಮಂಜರಪಲ್ಕೆಗೆ ವರ್ಗಾಯಿಸಿದರೆ ರನ್ನರನ ವೆಚ್ಚವುಳಿಯುವುದಷ್ಟೇ ಅಲ್ಲ; ಈ ಭಾಗದ ಜನರಿಗೆ ನಡೆಯುವ ಪ್ರಯಾಸ, ಕಾಲವಿಳಂಬ ಇತ್ಯಾದಿಗಳೂತಪ್ಪಿ ಅನುಕೂಲವಾಗುವದು. ಆದ್ದರಿಂದ ಹೋಲ್‌ಸೇಲ್ ರಿಟೈಲ್ ಸ್ಟೋರ್ಸ್, ಎಲಿಮೆಂಟರಿ ಶಾಲೆ, ಪಂಚಾಯತ ಬೋರ್ಡು ಮುಂತಾದುವುಗಳಿದ್ದು ಕೇಂದ್ರ ಸ್ಥಳವಾಗಿರುವ ಮಂಜರಪಲ್ಕೆಗೆ ಈಗ ನಂದಳಿಕೆಯಲ್ಲಿರುವ ಪೋಸ್ಟಾಫೀಸನ್ನು ಸ್ಥಳಾಂತರಿಸಬೇಕೆಂದು ಈ ಭಾಗದವರ ಅಪೇಕ್ಷೆಯಿದೆ.

Notice.

ಉಡುಪಿ ಪಿ. ಮು. ಕೋರ್ಟಿನಲ್ಲಿ.

O. S. No. 407/49.

S. ದೇವದಾಸ ಭಟ್ಟ-ಸ್ವತಹಾ ಮತ್ತು 1ನೇ ಪ್ರತಿವಾದಿಯ ಸಾಲಗಾರರ ಪರವಾಗಿ ಸಹಾ —ವಾದಿ

ಮತ್ತು

1) M. ಮರಿಯಪ್ಪಯ್ಯ. 2) ಗಾಬ್ರಿಯಲ್ ಡಿ. ಸೋಜ —ಪ್ರತಿವಾದಿಗಳಿಬ್ಬರಿಗೆ

ಈ ಮೂಲಕ ಎಲ್ಲರಿಗೂ ತಿಳಿಯಪಡಿಸುವುದೇನೆಂದರೆ:—

ಮೇಲ್ಕಂಡ ವ್ಯಾಜ್ಯದಲ್ಲಿ ವಾದಿಯು 1ನೇ ಪ್ರತಿವಾದಿಯ ಸಾಲಗಾರರ ಪರವಾಗಿಕೂಡಾ ಸದ್ರಿ ದಾವೆಯನ್ನು ಮಾಡಿರುತ್ತಾನೆ. ಆ ಬಗ್ಗೆ ಮೇಲ್ಕಂಡ ವ್ಯಾಜ್ಯದಲ್ಲಿ ಹುಕುಂ ಕೊಡಬೇಕಾಗಿ R. I A. No. 910/49ನೇ ಅರ್ಜಿಯನ್ನು ಕೂಡಾ ದಾಖಲುಮಾಡಿರುತ್ತಾನೆ. ಸದ್ರಿ ದಾವೆಯ ಅರ್ಜಿ ಸಹಾ ತಾ 12 10-1949ಕ್ಕೆ ಆಯ್ಕೆದೆ ಆದುದರಿಂದ ಈ ವಿಷಯದಲ್ಲಿ ಯಾರಿಗಾದರೂ ಆಕ್ಷೇಪ ಇದ್ದಲ್ಲಿ ಸದ್ರಿ ತಾ 12 10 49ನೇ ದಿವಸ ಬೆಳಿಗ್ಗೆ 10ಗಂಟೆಗೆ ಈ ಕೋರ್ಟುಮುಂದೆ ಸ್ವತಹಾ ಆ ವಕೀಲರ ಮುಖಾಂತರ ಹಾಜರಾಗಿ ಜ್ಞಾಪಿಸಿರು ಮಾಡಿಕೊಳ್ಳತಕ್ಕದ್ದು ತಪ್ಪಿದರೆ ಆಂಥವರ ಗೈರುಹಾಜರಿಯಲ್ಲಿ ಮೇಲ್ಕಂಡ ವ್ಯವಹಾರವನ್ನು ತೀರ್ಮಾನಿಸಲ್ಪಡುವುದು.

P. V. Acharya.
Vakil for Plaintiff.

ಉಡುಪಿ
ತಾ 23-9-49

ಮೃತಸ್ಯಾವ ನಿಂತಿತು

'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಹಡತಪ್ಪಿ ಮತಸ್ಯಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಕಪ್ಪುಯಿಲ್ಲ. ಸುವಿಚಾರು ಮಂದಿಗೆ ಖಾತ್ರಿ ಗುಣವಾಗಿದೆ—ಬೆಲೆ: ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 5-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs P. DEVEE, F DS (N I.)
Tolygunge CALCUTTA

ಸ್ವಾಕಸ್ಯರು ಶಕಾಕಂಪನ್ನ, ಮಂಗಳೂರು

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ-ಇದೇ ಅಶ್ವೀಜ ಶುದ್ಧ ದಶಮಿ ಭಾನುವಾರ ಲಾಗಾಯ್ತು ಅಶ್ವೀಜ ಬ. ೧ ಶನಿವಾರ (ತಾ- 1 10-49ಕ್ಕೆ) ಪ್ರಾರಂಭವಾಗಿ 8-10-49) ತನಕ ಏಳು ದಿನಗಳ ಅಹೋರಾತ್ರಿಭಜನಾಸಪ್ತಾಹವು ಶ್ರೀದೇವತಾನುಗ್ರಹದಿಂದಲೂ, ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿಉದಾರ ಹಸ್ತದಿಂದಮಾಡಿದ ದ್ರವ್ಯಸಹಾಯದಿಂದಲೂ, ಎಂದಿನಂತೆ ಸರ್ವ ವಿನಿಯೋಗಗಳಿಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು ಶ್ರೀ ದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಆಪೇಕ್ಷಿಸುತ್ತೇವೆ ಶ್ರೀಭಜನೆ ಸಪ್ತಾಹ ಸಮಾರಂಭದಲ್ಲಿ ನಡೆಯಬಹುದಾದ ಪದ್ಧತಿಯೋಗಗಳ ವಿವರ:- ರಾತ್ರಿ ಕಾಲದ ಹೂವಿನ ಪೂಜೆಗೆ ರೂ.10- ಹೂವಿನ ಪೂಜೆಗೆ ರೂ.5- ದೀಪಾರಾಧನೆ ರೂ. 2-ವಿಶ್ವ ಪಂಡಿ 0.8-0. ಕರ್ಪೂರಾರತಿ 0-2.3 ತುಳಸೀಹಾರ ರೂ0-1-3. ಅಹೋರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ. 25.

ಪಾಂಗಾಳ ಅಣ್ಣಪ್ಪ ನಾಯಕ್
ಪ್ರಕೃತ ಆಡಳ್ತೆದಾರ
ಕಟಪಾಡಿ 19—9—49.

ವಿವಿಧ ಪಾತ್ರೆಗಳು

ಯಾವತ್ತೂ ವಿಧವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾ ಅಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಮಂಗಳೂರು

ಅಕ್ಕಿ ಭತ್ತವನ್ನು ಸ್ಟೋರಿಗೊಪ್ಪಿಸುವ ಕೊನೆಯ ತಾರೀಕನ್ನು ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಭತ್ತ:—ಜೊಸದುರ್ಗ ಸಬ್ ತಾಲೂಕಿನಲ್ಲಿ ತವನ್ ಬೆಳೆ-ಒಂದೇ ಕಂತಿನಿಂದ ತಾ ೧೫-೧೦-೪೪. ಜಸಲ್ ಬೆಳೆ ಒಂದೇ ಕಂತಿನಿಂದ ತಾ. ೪೫-೧೮-೪೪

ಕುಂದಾಪುರ ತಾಲೂಕು, ಪುತ್ತೂರು ತಾಲೂಕಿನ ಸುಳ್ಯ ಮತ್ತು ಉಪ್ಪಿನಂಗಡಿ ಫಿರ್ಕಾ ಕಾರ್ಕಳದ ಅಜೆಕಾರು ಫಿರ್ಕ ಮತ್ತು ಉಡುಪಿಯ ಕೋಟ ಫಿರ್ಕವನ್ನು ಬಿಟ್ಟು ಜಿಲ್ಲೆಯ ಉಳಿದೆಲ್ಲ ಭಾಗಗಳಲ್ಲಿ ಅರ್ಧಾರ್ಂಶ ತಾರೀಕು ೧೫ ೧೧ ೪೪; ಉಳಿದರ್ಧ ತಾ. ೫೦-೧೧-೪೪.

ಹೆಬ್ಬಿಗೆ, ನಾಗೋಡಿ, ಕೋಟೆ ಶಿರೂರು ಗ್ರಾಮಗಳ ಹೊರತು ಉಳಿದ ಕುಂದಾಪುರ ತಾಲೂಕಿನಲ್ಲಿ ಅರ್ಧಾರ್ಂಶ ತಾ. ೫೦-೧೧-೪೪, ಉಳಿದರ್ಧ ತಾ. ೧೫-೧೨-೪೪.

ಹೆಬ್ಬಿಗೆ ನಾಗೋಡಿ ಕೋಟೆ ಶಿರೂರು ಗ್ರಾಮಗಳಲ್ಲಿ:-ಒಂದೇ ಕಂತಿನಿಂದ ತಾರೀಕು ೫೦ ೧-೫೦.

ಉಪ್ಪಿನಂಗಡಿ, ಸುಳ್ಯ, ಕೋಟಿ ಮತ್ತು ಅಜೆಕಾರು ಫಿರ್ಕಗಳಲ್ಲಿ ಅರ್ಧಾರ್ಂಶ ತಾರೀಕು ೧೫-೧೨-೪೪; ಉಳಿದರ್ಧ ೫೦-೧೨ ೪೪. ಅಕ್ಕಿ... ಉಪ್ಪಿನಂಗಡಿ. ಸುಳ್ಯ, ಕೋಟಿ, ಅಜೆಕಾರು ಫಿರ್ಕ ಮತ್ತು ಕುಂದಾಪುರ ತಾಲೂಕಿನ ಹೊರತು ಜಲ್ಲೆಯ ಉಳಿದೆಡೆಯಲ್ಲಿ ಕಂಟ್ರಡದಂತೆ ತಾ ೧೫ ೧೧.೪೪; ೫೦-೧೧-೪೪; ೧೫-೧೨-೪೪ ಮತ್ತು ೫೦-೧೨ ೪೪

ಹೆಬ್ಬಿಗೆ, ನಾಗೋಡಿ,ಕೋಟೆ, ಶಿರೂರುಗಳ ಹೊರತು ಕುಂದಾಪುರ ತಾಲೂಕಿನ ಇತರ ಕಡೆಗಳಲ್ಲಿ ನಾಲ್ಕು ಕಂತುಗಳಾಗಿ ತಾ ೫೦-೧೧-೪೪; ೧೫ ೧೨ ೪೪ ೫೦-೧೨-೪೪. ಮತ್ತು ೧೫-೧-೪೫

ಹೆಬ್ಬಿಗೆ,ನಾಗೋಡಿ,ಕೋಟೆ,ಶಿರೂರು ಗ್ರಾಮಗಳಲ್ಲಿ ಎರಡು ಕಂತುಗಳಲ್ಲಿ ತಾರೀಕು ೫೦ ೧-೫೦ ಮತ್ತು ೧೫-೨ ೪೫.

ಸುಳ್ಯ, ಉಪ್ಪಿನಂಗಡಿ, ಅಜೆಕಾರ್, ಕೋಟ ಫಿರ್ಕಗಳಲ್ಲಿ ನಾಲ್ಕು ಕಂತುಗಳಾಗಿ ತಾರೀಕು ೧೫-೧೨ ೪೪; ೫೦ ೧೨-೪೪; ೧೫ ೧ ೪೫ ಮತ್ತು ೫೦-೧ ೪೫

ವಾಯಿದೆಯೊಳಗೆ ಡಿಪೋವಿಗೆ ಹಾಕದಿರೆ ಸರಕಾರವು ನಿರ್ಧರಿಸಿದ ಬೆಲೆ ಕೊಡಲಾಗುವುದು. ವಾಯಿದೆ ದಾಟಿ ಒಂದು ವಾರ ವರೆಗೆ ಭತ್ತ ಮುಡಿಗೆ ಆಣೆ ಮೂರು ಮತ್ತು ಅಕ್ಕಿ ಮುಡಿಗೆ ಆಣೆ ನಾಲ್ಕರಂತೆಯೂ; ಅನಂತರ ಭತ್ತ ಮುಡಿಗೆ ಆರಣ, ಅಕ್ಕಿ ಮುಡಿಗೆ ಎಂಟಾಣೆಯಂತೆಯೂ ಕಡಿತ ಮಾಡಲಾಗುವುದು ಸ್ಟೋರಿಗೆ ಹಾಕದೆ ಅಧಿಕಾರಿಗಳಿಂದ ಸ್ವಾಧೀನಪಡಿಸಿಕೊಳ್ಳಲ್ಪಟ್ಟ ಭತ್ತ ಅಕ್ಕಿಗಳಿಗೂ ಅನುಕ್ರಮವಾಗಿ ಆರಾಣೆ ಮತ್ತು ಎಂಟಾಣೆ ಕಡಿತವಿಸಿಗಿಯೇ ಬೆಲೆ ಕೊಡಲಾಗುವುದು

ರಾಷ್ಟ್ರೀಯ ಉಳಿತಾಯ ಯೋಜನೆ—ಇದೇ ತಾ 20 ನೇ ಮಂಗಳವಾರ ಜಿಲ್ಲಾ ಕಲೆಕ್ಟರರ ಕಛೇರಿಯಲ್ಲಿ ಮಾನ್ಯ ಕಲೆಕ್ಟರರಾದ ಜನಾಬ್ ಸಯ್ಯದ್ ಸಾಹೇಬ್ ಬಹದೂರ್ B. sc. (Hons) ರವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಪ. ಕ. ಜಿಲ್ಲಾ ರಾಷ್ಟ್ರೀಯ ಉಳಿತಾಯ ಯೋಜನಾ ಸಮಿತಿಯ ಸಭೆಯೊಂದು ಜರಗಿತು.

ಸಮಿತಿಯ ಸಂಘಟಿಕರಾದ ಶ್ರೀ ಜಿ. ಎಸ್ ಪೈಲ್ ಇವರು ಯೋಜನೆಯ ನಿರ್ವಹಣದ ಕುರಿತು ವರದಿಯನ್ನು ಸಭೆಯ ಮುಂದಿಟ್ಟರು ನಂತರ ಮುಂದಿನ ಕಾರ್ಯಕ್ರಮ, ಪ್ರಚಾರ, ಸರ್ಟಿಫಿಕೇಟುಗಳ ಹೆಚ್ಚಿನ ಪೂರಾಟ ಇವುಗಳ ಕುರಿತು ಆಲೋಚಿಸಿ ಇದೇ ಬರುವ ಆಕ್ಟೋಬರ ತಾ 21 ಯಾ 23 ರಲ್ಲಿ ಮಂಗಳೂರಲ್ಲಿ ಜರಗಲಿರುವ Flower & Vegitable ಪ್ರದರ್ಶನದಲ್ಲಿ National Savings Certificateಗಳ ಪ್ರಚಾರ ಮಾಡುವ ಪ್ರಸ್ತಾಪವು ಬಂದಿರುವ ವದರಿಂದ ಈ ಸಭೆಯು ಇನ್ನೊಂದಾವರ್ತಿ ಕೂಡಿ ಬರುವದಾಗಿ ಪರ್ಯಾಲೋಚಿಸಿ ನಂತರ ಸಭೆ ಮುಕ್ತಾಯವಾಯಿತು.

ಉಡುಪಿಗೆ ಹೋಗಬೇಕು! ಅದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಂದಿರಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ತಿಂಡಿತಿನಸು, ಇವುಗಳ ರುಚಿಪುಚ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara

ಜೀವವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ, ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್ ಪಿಟಿ. ಎನ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ

ಆದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡ್,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟ್ರೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ಸ್ವಾಭಾವಿಕ ನೇಟಿಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡವಿದ್ದರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟಪೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ ಕೂಡಲೇ ಬಿಡರು ಕೂಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
(N-W-U-)
Lothian Road, Delhi

ESTD. 1926
KROWN RUBBER STAMP CO.
RUBBER STAMPS & ENGRAVERS
BALMATTA ROAD MANGALORE S.K.

Approved firm by the Govt of Mysore Certificated by theA gent of the Govt. of Gylone & Indian.

ಉ. ಕನ್ನಡ

ಹಾಲಾಡಿ-ತಾ 23-9-1944ರಲ್ಲಿ ಹಾಲಾಡಿ ಎಲಿಮೆಂಟರಿ ಶಾಲೆಯಲ್ಲಿ ಉ ಕನ್ನಡ ಜಿಲ್ಲೆಯ ಪೋಲಿಸ್ ಸುಪರಿಂಟೆಂಡಿಂಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿತು ಅವರ ಜೊತೆಯಲ್ಲಿ ಕುಂದಾಪುರ ಪೋಲಿಸ್ ಸಬ್ ಇನಸ್ಪೆಕ್ಟರರು; ಸರಾಹಾ ಜರಿದ್ದರು. ಸುಮಾರು 300ಕ್ಕೆ ಮಿಕ್ಕಿದ ಜನರು ಸದ್ರಿ ಸಭೆಗೆ ಆಗಮಿಸಿದ್ದರು. ಪೋಲಿಸ್ ಸುಪರಿಂಟೆಂಡೆಂಟರು ಸಾರ್ವಜನಿಕರನ್ನು ಕುರಿತು ಒಳ್ಳೆಗಂಭೀರವಾದ ಮತ್ತು ಇಂದಿನ ಸರಕಾರದ ಕುರಿತು ಭಾಷಣಮಾಡಿದರು ಸಭಾಂತ್ಯದಲ್ಲಿ ಹಾಲಾಡಿ ಕೇಂದ್ರ ಕೊಂಗ್ರೆಸ್ ಕಮಿಟಿಯ ಅಧ್ಯಕ್ಷರಾದ ಹಾಲಾಡಿ ಮಹಾಬಲ ಶೆಟ್ರು ಧನ್ಯವಾದಗಳನ್ನರ್ಪಿಸಿದರು

ಕುಂಬಳೆ—"ಪ್ರಕಾಶ ನಂದಿತ ವೇತಿ ವಿದ್ಯಾಲಯ ಮ್ಯೂಪಾಡಿ ಇಲ್ಲಿ ಜರಿಗಾ ಜಯಂತಿ ಕಾರ್ಯಕ್ರಮಗಳು ತಾ 19 ರಿಂದ ಪ್ರಾರಂಭವಾಯು. ತಾ 19ರಿಂದ 21 ರ ವರೆಗೆ ಈ ಮೂರು ದಿನಗಳಲ್ಲಿ ಧ್ವಜಾರೋಹಣವಾರೋಹಣ, ಪ್ರಭಾತ ಭೇರಿ, ಜರಿಕಾ ಜಯಂತಿಯ ಮಹತ್ವದ ಕುರಿತು ಭಾಷಣಗಳು, ಫಿರ್ಕಾಭಿವೃದ್ಧಿ ಅಭಿಕಾರಿ ಶ್ರೀ ಬಾಬು ಶಟ್ರಿಂದ ಫಿರ್ಕಾಭಿವೃದ್ಧಿಯ ಕುರಿತು ಭಾಷಣ, ಯಕ್ಷಗಾನ, ಭಜನೆ, ಇತ್ಯಾದಿ ಕಾರ್ಯಕ್ರಮಗಳಿದ್ದುವು.

ಬೈಲೂರು-ಶಿಲ್ಲಿಯ ಗ್ರಾಮ ಸಭೆಯ ಆರ್ತಯದಲ್ಲಿ ಇದೇ ತಾ. 18ರಲ್ಲಿ ಬೆಕೆ ಸದಾನಂದ ಹೆಗ್ಡೆ, ಪದ್ಮಳ್ ಸ್ಪೊಷಿಕ್ಕಿಂ ಓ, ಮಂಗಳೂರು, ಅವರ ಅಧ್ಯಕ್ಷತೆಯಲ್ಲಿ ಆಹಾರ ಉತ್ಪಾದನಾ ಸಮ್ಮೇಳನವು ನಡೆದಿತ್ತು. ಬ್ಯಾಂಡ್ ಬೋರ್ಡ್ ಶಾಲಾ ಕಟ್ಟಡದಲ್ಲಿ ಜರಗಿತು. ಶ್ರೀ ಜಿ. ಕೇಶವ ತಿಂಜರ ಸ್ವಾಗತ ಭಾಷಣಮಾಡಿದ ನಂತರ ಶ್ರೀ ಬಿ ಜಿ ಅರ್ಜಾಲರು ಸಮ್ಮೇಳನವನ್ನು ಮಂತ್ರಿ ಶ್ರೀ ಎ ಜಿ ಕೆಪ್ಪ, ಶ್ರೀಗಳವರ ತಿ. ಮಂಜಯ್ಯ ಹೆಗ್ಡೆ, ಸಾಂಪಳ್ಳಿ ಶಿವರಾವ ಮೊದಲಾದವರಿಂದ ಬಂದ ಸಂದೇಶಗಳನ್ನೊದಿದರು ಬಳಿಕ ನೆರೆದ ಜನರಲ್ಲಿ ಜೋನ್, ಸರ್ಟ್ ಕಲೆಕ್ಟರ್, ಗಣಪತಿ ಕೆದ್ಲಾಯ, ವಿಠಲ್ಲಾಲ್, ಎಂ. ಮುದ್ದಣ್ಣ ಶೆಟ್ಟಿ, ಎಸ್ಕಲ್ಲಾಲ್ ಜೆಮೊಸ್ ಸ್ಟೇಟರ್, ಎಚ್. ನಾರಾಯಣ ರಾವ್, ಕೆ. ಪಿ. ಮುಕುಂದ ಶ್ರಭು ಮೊದಲಾದವರು ಆಹಾರ ಉತ್ಪಾದನೆ ಬಗ್ಗೆ ಉಪಯುಕ್ತ ಸಲಹೆಗಳನ್ನು ಸೂಚಿಸಿ ಭಾಷಣಮಿತ್ತರು. ಸುತ್ತಲು ಮುತ್ತಲಿನ ಗ್ರಾಮಗಳಲ್ಲಿ ಆಧಿಕ ಆಹಾರ ಉತ್ಪಾದನೆ ಕಾರ್ಯಗಳನ್ನು ಮುಂದೊತ್ತಲು ಒಂದು ಸಮಿತಿಯು ನೇಮಕವಾಯಿತು.

ಪಡುಕೋಣೆ—ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯು ಇದೇ ತಾ. 23ರಿಂದ ಹಾ ಎಲಿಮೆಂಟರಿ ಶಾಲೆಯಾಗಿ ರೂಪಾಂತರ ಹೊಂದಿರುವುದರಿಂದ ಅದಕ್ಕೆ ತಕ್ಕಂತೆ ಬೆಳೆಯಲಾಗುವುದು. ಬಡವಿದ್ಯಾರ್ಥಿಗಳಿಗೆ ತುಂಬಾ ಉಪಕಾರವಾಗಬಹುದಾಗಿದೆ.

ನವಜೀವ. ಪು ಎಂಬ

ಸೂತಿಕಾ ರಸಾಯನ



ಆ ಡಿಸ್ಪನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೮ ದಿವಸಗಳಿಗೆ ಬರುವದು ಅಂದರೆ ಕೇವಲ ೪ ರೂಪಾಯಿಗಳ ಒಂದು ಬಾಳಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ ಶಾಸ್ತ್ರಿ, ಆಯುರ್ವೇದ ಭೂಷಣ ನಂ, 5 ಕೊರಿಯಾಲಬೈಲು, ದ ಕ

ಸ್ವಾಕಿಸ್ವರು. ಡಾ। ಐ. ಕೆ. ಶಿವರಾಮ ರಾವ್ ,ಕುಂಜಿಬೆಟ್ಟು, ಉಡುಪಿ.



ಹಳ್ಳಿಯ ರೈತ

ನವಯುಗ ಪತ್ರಿಕೆಯ ತಾ 14-7-'49, 4-8-'49 ಮತ್ತು 11-8-'49ರ ಸಂಚಿಕೆಗಳಲ್ಲಿ ಬರೆದ "ಹಳ್ಳಿಯುದ್ಧೆಯ" ಎಂಬ ಶಿರೋನಾಮೆಯ ಮೂರು ಪತ್ರಗಳಲ್ಲಿ ಹಳ್ಳಿಯ ಅಭ್ಯುದ್ಧಿಯ ಕುರಿತು ಬರೆದ ಕೆಲವು ಸೂಚನೆಗಳನ್ನು ಓದುಗರು ಓದಿರಬಹುದು. 142ಮೈಲು ಉದ್ದದ ನಮ್ಮ ಜಿಲ್ಲೆಯಲ್ಲಿ 20ಕ್ಕೆ ಮೇಲ್ಪಟ್ಟು ನದಿಗಳೂ, ಇವುಗಳಿಗೆ ಸಂಬಂಧಿಸಿದ ಉಪನದಿಗಳೂ ಇರುವುವು. ಮಳೆಗಾಲದಾ ಬೆದೊಡನೆ ಕಟ್ಟುಹಾಕಿ, ಹಂದುಹೋಗುವ ನೀರನ್ನು ತೋಟಬಿನಿ ಬೆಳೆಯನ್ನು ಬೆಳೆಸುವ ಕ್ರಮ ಅನೇಕ ಕಡೆ ಇದೆ. ಕಟ್ಟು ಕಟ್ಟುವ ಶ್ರಮ, ಕಷ್ಟಗಳಿಂದಾಗಿ ಕೆಲವೆಡೆ ಈಗ ಕಟ್ಟದಿರುವರು. ಕೆಲವೆಡೆಯಿಚ್ಚಿನಕಟ್ಟುಪಾಕಲು ಅನುಕೂಲವೂ ಸಾಧ್ಯವೂ ಇರುವುದು. ಒಂದುಎಕ್ರೆ ಬೆಳೆಯನ್ನು ಬೆಳೆಸಲು ಅನುಕೂಲವಾಗುವ ಬಾವಿಗೆ ರೂಪಾ 300/-ರ ಸಹಾಯಕೊಡುವದಾಗಿ ಸರಕಾರವು ಹೇಳುತ್ತಿದೆ. ಅಂದರೆ ಅಷ್ಟು ಹಣದ ಬಡ್ಡಿ ವರ್ಷಂಪ್ರತಿ ನಪ್ಪವಾಡಿಕೊಳ್ಳುತ್ತದೆ. ಕಂಡಾಪಲಿಯ ನಮ್ಮ ಈ ಜಿಲ್ಲೆಯಲ್ಲಿ ಬಾವಿಗಳಿಂದ ಭತ್ತದ ಪೈರು ಸಾಗುವಳಿಗೆ ಹೆಚ್ಚಿನ ಪ್ರಯೋಜನವಿಲ್ಲ. ನದಿ, ಉಪನದಿಗಳಲ್ಲಿ ರೈತರು ಹೊಸದಾಗಿ ಕಟ್ಟುಹಾಕಿ ಬೆಳೆಯನ್ನು ಬೆಳೆಸಲು ಅನುಕೂಲಿಸುವ ಪ್ರತೀ ಎಕ್ರೆಯ ಮೇಲೆ ನಷ್ಟವಾಗುವ ಬಡ್ಡಿಯ ಹಣವನ್ನು ಕಟ್ಟಕಟ್ಟುವ ಖರ್ಚಿಗೆ ಕೊಡಬೇಕೆಂಬ ಸೂಚನೆಯನ್ನು ನೀರಾವರಿಯ ಮಾನ್ಯ ಮಂತ್ರಿಯರು ನಮ್ಮ ಜಿಲ್ಲೆಯನ್ನು ಸಂದರ್ಶಿಸಿದಾಗ ತಾ 16ರಲ್ಲಿ ತಿಳಿವು ಸ್ನೇಹಿತರೊಡನೆ ಮಾತನಾಡಿಕೊಳ್ಳೋಣವಾಗಿತ್ತು. ಜಿಲ್ಲೆಯ ಎಲ್ಲಾ ತಹಶೀಲ್ದಾರರೂ ಡಿಸ್ಟ್ರಿಕ್ಟ್ ತಹಶೀಲ್ದಾರರೂ ಈ ಕುರಿತು ಸ್ವತಃ ತಿಳಿದು, ಒಂದುವಾರದೊಳಗೆ ರಿಪೋರ್ಟು ಕಳುಹಿಸಿಕೊಡತಕ್ಕದ್ದಾಗಿಯೂ, ಎಕ್ರೆ ಒಂದಕ್ಕೆ ರೂಪಾ 5/-ರಂತೆ ಒಟ್ಟು ಖರ್ಚಾ

ಮಾವಿನ ಕಸಿ

ಸಂಗ್ರಹ- ಯಮ್. ಡಿ' ಸೋಜರಿಂದ.

೧ ಕಾಂಡ ಕಸಿ.

ಕಸಿ ಮಾಡಬೇಕಾದ ಕಾಡುಸಸಿ ಮತ್ತು ಕಸಿ ಮರದ ರೆಂಬೆ (ಸಹಜೂರವಾದ ಒಂದು ಮೊಳ ಉದ್ದದ ಕೊಂಬೆ) ತೋರದಲ್ಲಿ ಸಾಧ್ಯರಣ ಒಂದೇ ಆಗಿದ್ದರೆ ಕಾಡು ಸಸಿಯನ್ನು ಅಡ್ಡಕ್ಕೆ ಇಳಿಜಾರಾಗಿ) ಕತ್ತರಿಸಬೇಕು. ಅನೇ ರೀತಿ ಕಸಿಮರದ ಕೊಂಬೆಯ ಬುಡವನ್ನು ಸಹ ಕತ್ತರಿಸಿ ಜೋಡಿಸಬೇಕು. ತರುವಾಯ ಈ ಜೋಡಣೆಯನ್ನು ಮಯಣದ

ದ ಹಣದ ಅರಿವಾಸಿ ಸಹಾಯ ಕೊಡಬಹುದಾಗಿಯೂ, ಎಂದು ಸೂಚನೆಗಳಿಂದ ಸರ್ಕಿಲಾರನ್ನು ತಾ 21-9-49ರಲ್ಲಿ ಜಿಲ್ಲಾ ಕಲೆಕ್ಟರರು ಕೊಟ್ಟಿರುತ್ತಾರೆ. ರೈತರಾದವರೆಲ್ಲರೂ ಎಚ್ಚರವಾಗತಕ್ಕ ಸಮಯವಲ್ಲವೇ? ಆಹಾರ ಕುಷ್ಟಿಯು ನಿವಾರಣೆಯಾಗುವುದೆಂದರೆ ಎಲ್ಲರಿಗೂ ಹಿತ. ರಿಕ್ವಿಜೀಶನ್, ರೇಶನ್ ಡಿಪಾರ್ಟುಮೆಂಟುಗಳ ವ್ಯರ್ಜಾಗಳು ಉಳಿದು ಊರ ಹಿತಕ್ಕಾಗಿ ಖರ್ಚಾಗುವುದೆಂದರೆ ಊರಿಗೆ ಹಿತ. ಪ್ರಕೃತ ಶ್ರಮ, ನಷ್ಟಪಟ್ಟು ತೋರಿದರೂ ಬಹು ಸಂಖ್ಯಾಕರಾದ ರೈತರು ಮಾಡಬೇಕಾದ ಕರ್ತವ್ಯ. ಈ ರೀತಿ ಗೃಹಿಸಿ ಅನೇಕ ಕಡೆಗಳಲ್ಲಿ ಕಟ್ಟಹಾಕಲು ಮುಂದೆ ಬಂದು ಸಹಾಯ ಪಡೆಯಲು ರೈತರು ಯತ್ನಿಸುವರೆಂಬ ಭರವಸೆಯಿಂದ ಈ ಪತ್ರ ಬರೆ ಕೊಂಡಿರುವೆನು ಸಮಯವನ್ನು ಕಳೆಯದೆ 2 ನೆ ಬೆಳೆಯ ಅನುಕೂಲತೆ ಮಾಡಿಕೊಳ್ಳುತ್ತಾ ಕಟ್ಟುಗಳನ್ನು ಹಾಕುವ ವರ್ಷಾದು ನೋಡುವರಾಗಿ ನಂಬುವ,

ಎಮ್. ಆರ್. ಹೂಂಜ.

ಕಾರ್ಯದರ್ಶಿ, ಗ್ರಾಮಾಭಿವೃದ್ಧಿ ಕಮಿಟಿ,
26 9 1949. ಮೂಲ್ಕಿ.

ಲಾದಿಯಿರಿದ ಸುತ್ತಿ ಕಸಿಮೇಣ ಅಥವಾ ಮಣ್ಣಿನಿಂದ ಸವಲಲ್ಪಡಬೇಕು.

ಕಸಿಮಾಡ ಬೇಕಾದ ಕಾಡು ಸಸಿಯು ಬಹು ತೋರವಾಗಿದ್ದರೆ (ಮುಷ್ಟಿ ಯಷ್ಟು) ಅದನ್ನು ಸರಿ ಅಡ್ಡಕ್ಕೆ [illegible] ಕತ್ತರಿಸ ಬೇಕು. ಇದನ್ನು ನೆಲದಿಂದ ಸ್ವಲ್ಪ ಮೇಲೆ(6" ಎತ್ತರ) ಕಸಿಮರದ ರೆಂಬೆಯು ಎಷ್ಟು ತೋರವಾಗಿದೆಯೊ ಅಷ್ಟೆ ಅಗಲದ ಉಳಿಯಿಂದ ಕಾಂಡದ ತೊಗಟೆಯನ್ನು ತೋಡಿ ಆದರಲ್ಲಿ ಈ ತೋಡಿದ ಹೊಂದಕ್ಕೆ ಸರಿಯಾಗಿ ಕಸಿ ಮರದ ರೆಂಬೆಯನ್ನು ಚಪ್ಪಟೆ ಮಾಡಿ ಸಿಕ್ಕಿಸಿ ಬಿಡಬೇಕು. ತರುವಾಯು ಮಣ್ಣಿನಿಂದ ಅಥವಾ ಕಸಿ ಮೇಣದಿಂದ ಈ ಸಂದನ್ನು ಮುಚ್ಚಿ ಹಗ್ಗದಿಂದ ಬಲವಾಗಿ ಸುತ್ತಿ ಬಿಡಬೇಕು

ಕಸಿ ಲಾಡಿ ಅಥವಾ ಪಟ್ಟಿ-ವಸ್ತ್ರವನ್ನು ½-೨ ಇಂಚು ಅಗಲದ ಲಾಡಿಗಳಾಗುವಂತೆ ಕತ್ತರಿಸಬೇಕು. ಇದನ್ನು 1 ಪಾಲು ಪರಫಿನ್ (Paraffin) ಮೇಣ, 2 ಪಾಲು ಜೇನುಮೇಣ ಮತ್ತು 3 ಪಾಲು ರೆಸಿನ್ (Resin) ಕರಗಿಸಿ ಅದರಲ್ಲಿ ಅದ್ದಬೇಕು.

ಕಸಿ ಮೇಣ—4 ಪಾಲು ಪುಡಿ ರೆಸಿನ್, 4 ಪಾಲು ಆಗಸಿಎಣ್ಣೆ (Linseed oil) ಮತ್ತು 1 ಪಾಲು ಕರಗಿದ ಜೇನುಮೇಣ ಕೂಡಿಸಿ ಮಾಡಬಹುದು. ಬಿಸಿನೀರಿನಿಂದ ಇದನ್ನು ಪೆಡೆ ಮಾಡಿ ಉಪಯೋಗಿಸಬಹುದು.

ಕಸಿ ಮಣ್ಣು - 1 ಪಾಲು ದನದ ಸೆಗಣಿ, 1 ಪಾಲು ಒಳ್ಳೆಯ ಹೊಯಿಗೆ ಕಲ್ಲು ಇಲ್ಲದ ಮಣ್ಣು ಬೆರಸಿ ಮಾಡಬಹುದು.

ಈ ವಿಧದ ಕಸಿಗಳನ್ನು ಜೂನ್, ಆಗೋಸ್ತು ತಿಂಗಳಲ್ಲಿ ಮಾಡುವಿದು ಉತ್ತಮ. ರೆಂಬೆಗಳನ್ನು (Scion) ಆರಿಸುವಾಗ ಒಳ್ಳೆಯ ಜಾತಿಯ, ಹೆಚ್ಚು ಫಲಕೊಡುವ ಮತ್ತು ಪ್ರತಿವರ್ಷ ಫಲ ಕೊಡುವಂತಹವುಗಳನ್ನು ಆರಿಸುವುದು ಮೇಲು.

೨ ಜೋಡಣೆ ಕಸಿ

ಮಾವಿನ ಕಸಿ ಮಾಡುವ ಹೊಸ ವಿಧಾನ-

(ಮದ್ರಾಸು ಸಮಾಚಾರದಿಂದ) ಯಾವ ಮಾವಿನ ಸುರದ ಕೊಂಬೆಯನ್ನು ಕಸಿಮಾಡಬೇಕೋ ಆ ಮರದಿಂದ 2½-3 ಅಡಿ ಉದ್ದವಾದ ಕೊಂಬೆಯನ್ನು ಆರಿಸಿ ತೆಗೆದು, ಅದರ ತುದಿಯ ಕೆಲವು ಎಲೆಗಳನ್ನು ಮಾತ್ರಬಿಟ್ಟು ಉಳಿದುವೆಲ್ಲವನ್ನೂ ಕತ್ತರಿಸಿ ತೆಗೆಯಬೇಕು. ಈ ಕೊಂಬೆಯನ್ನು ಹಾತ್ರಿಯಲ್ಲಿರುವ ಯಾವ ಮಾವಿನ ಸಸಿಗೆ ಕಸಿ ಕಟ್ಟಬೇಕೋ ಆ ಸಸಿಯ ಬೇರಿನಿಂದ ಸುಮಾರು 1-½ ಅಡಿ ಎತ್ತರದಲ್ಲಿ ಜಾಗ್ರತೆಯಿಂದ ಸಿಪ್ಪೆಯನ್ನೂ ಸ್ವಲ್ಪ ತಿರುಳನ್ನೂ ತೆಗೆಯಬೇಕು. ಅದೇ ಆಕಾರ ಅಳತೆಯಲ್ಲಿ ಈ ಕೊಂಬೆಯ ಸಿಪ್ಪೆಯನ್ನೂ ತಿರುಳನ್ನೂ ತೆಗೆದು, ಒಂದಕ್ಕೊಂದು ಹೊಂದಿಕೊಳ್ಳುವಂತೆ ಜೋಡಿಸಿಟ್ಟು, ಜೇಬುಮೇಣದಲ್ಲಿ ಅದ್ದಿದ ವಸ್ತ್ರದ ಪಟ್ಟಿಯಿಂದ ಸುತ್ತಿ ಮೇಲೆ ಯಾವುದಾದರೂ ಹಗ್ಗದಿಂದ ಗಟ್ಟಿಯಾಗಿ ಕಟ್ಟಬೇಕು ಅದರ ಮೇಲೆ ಆಧಾರಂಶದನದ ಸಗಣಿ ಮತ್ತು ಆಧಾರಂಶ ಕೆಸರಿನಿಂದ ಮಾಡಿದ ಸಿಮ್ಮಿಜವನ್ನು ಮೆತ್ತಬೇಕು ಕಸಿಮಾಡಿದ 1-½ ತಿಂಗಳೊಳಗೆ ಎಂದೂ ಚೆನ್ನಾಗಿ ಕೂಡಿಕೊಳ್ಳುತ್ತವೆ. ಆನಂತರ ಕೊಂಬೆಯನ್ನು ಕಸಿಮಾಡಿದ ಸ್ಥಳದಿಂದ ಮೇಲೆ ಮೂಲ ಸಸಿಯ ಮೇಲ್ಭಾಗವನ್ನು ಕತ್ತರಿಸಿ ತೆಗೆಯಬೇಕು. ಕೊಂಬೆ ಚೆನ್ನಾಗಿ ಹಿಡಿದುಕೊಂಡ ನಂತರ ಸಸಿಯನ್ನು ಪಾತ್ರೆಯಿಂದ ಜಾಗ್ರತೆಯಾಗಿ ತೆಗೆದು ಬೇರೆ ಸ್ಥಳದಲ್ಲಿ ನೆಡಬೇಕು. ಈ ರೀತಿ ಸುಲಭವಾಗಿ ಕಸಿಮಾಡುವ ಹೊಸ ಕ್ರಮವನ್ನು ಅನಕಲರ್ಕಿಯ ಕಬ್ಬು ಸಂಶೋಧನಾ ಕಂಬ್ರಿದಲ್ಲಿ ಯಶಸ್ವಿಯಾಗಿ ಯಶಸ್ವಿಯಾಗಿದೆ. ಈ ಕ್ರಮವಿಲ್ಲ ಎಡೆ ಅನುಕೂಲಗಳಿವೆ. ಮೊದಲನೆಯದಾಗಿ ಮೂಲ ಸಸಿಯ ಮೇಲ್ಭಾಗವನ್ನು ಕಸಿ ಮಾಡುವ ಸಸಿಯು ಇಲ್ಲವೇ ಮುಂಚೆ ಕತ್ತರಿಸಬಹುದು. ಎಡನೆಯದಾಗಿ ಯಾವ ಕಾಲದಲ್ಲಿಯೂ ಮಾಡಬಹುದು ಬೇಗ ಜೋಡಿಕೊಳ್ಳುವ ಅಪ್ಪಿದೆ ಕಸಿಗೆ ಪ್ರತ್ಯೇಕ ಗೂಟ ಪಾಗೂ ದಿನಸ್ಥಿತ್ಯ ಪಾತ್ರೆಗೆ ಕೈಯಿಂದ ನೀರು ಹಯ್ಯುವ ಅವಶ್ಯವಿಲ್ಲ.

ನಮ್ಮ ಜಿಲ್ಲೆಯಲ್ಲಿ ಪ್ರತಿಯೊಬ್ಬನ ಮನೆಯ ಸುತ್ತಲೂ ಕಾಡು ಮಾವಿನ ಮರಗಳೂ ಸಸಿಗಳೂ ಇವೆ ಈ ರೀತಿಗಳಲ್ಲಿ ನಾವು ಅದಸ್ಸು ಹೆಚ್ಚಿನ ಸಸಿಗಳನ್ನು ಕಸಿಮಾಡಿ ಐದಾರು ವರುಷಗಳ್ಲೇ ಫಲವನ್ನು ತಿನ್ನಬಹುದು. ಯಾಕೆ ಪ್ರಯತ್ನಿಸಬಾರದು?

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಲಶೀಗು, ವ್ಯದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ಹತ್ತೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಸೂಚನೆ:—ಹೆರವೀಕ್ಷಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮಾಲಕರು:—ಹಾಲಪ್ಪಾ ಶಿರೇಪಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ.

ಏಜಂಟರು:—ಹುಬ್ಬಳಿ ಭಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಪಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ
ಡಾವಣಗೇರಿ:—ಡಾನಾಕಗೇರಿ ಪ್ರೆಸ್ಸ್ ಇರ್ ಎಲ್ ಕವಲಾವಾ .ಕಮಿಸ್ಸ, ಹಾನೇರಿ ಬ್ಯಾಡಗಿ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವನ್ನೀಯುವ ಸ್ವಚ್ಛ ನಾಶಾವರಣದಲ್ಲಿ
ಹಿತವಾದ ಸೌಳರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ನೋಟೀಸು

ಕಾಪರಗೋಡು ಡಿ ಮು ಕೋರ್ಟಿನಲ್ಲಿ.

O. S. No 138/49.

ಮರಿಯಂಮ್ಮ, ಹಂಮದ ಕುಟ್ಟಿ ಮಗಳು ಉಪ್ಪಳ ಗ್ರಾಮಸ್ತಳು ..... ಪಾದಿಳು

1 ನೇ ಪ್ರತಿವಾದಿ ಮೈದಿಂಕುಟ್ಟಿಯಾನೆ ಆಂದುಂಞ ಬ್ಯಾರಿ, ಪಳ್ಳಿಕುಂಞ ಬ್ಯಾರಿ ಮಗ, ಉಪ್ಪಳ ಗ್ರಾಮಸ್ತ. 3ನೇ ಪ್ರತಿವಾದಿ ಬಪ್ಪಾ ಕುಂಞಾಬ್ಯಾರಿ 4ನೇ ಪ್ರತಿವಾದಿ. ಕುಂಞಾಲಿ ..... ಹಂಮದ ಕುಟ್ಟಿಬ್ಯಾರಿ ಮಕ್ಕಳು. 5ನೇ ಪ್ರತಿವಾದಿ ಬದಿಜುಂಮ. ಹಂಮದ ಕುಟ್ಟಿಯ 2ನೇ ಹೆಂಡ್ತಿ. 6ನೇ ಪ್ರತಿವಾದಿ ಮೂಸ್ತ 7ನೇ ಪ್ರತಿವಾದಿ ಅಸ್ಸೈನಾರ 8ನೇ ಪ್ರತಿವಾದಿ ಮಕ್ಕಳು. 8ನೇ ಪ್ರತಿವಾದಿ. ಅಸ್ಸೈಂಮ, ಹಂಮದ ಕುಟ್ಟಿಯ 3ನೇ ಹೆಂಡ್ತಿ. 3. 4. 8ನೇ ಯವರು. ಉಪ್ಪಳ ಗ್ರಾಮದಲ್ಲಿಯೂ 5. 6. 7ನೇ ಯವರು ಕಿರಿಯಗ್ರಾಮದಲ್ಲಿಯೂ ಯಿರುವವರು. 1. 3ರಿಂದ 8ನೇ ಪ್ರತಿವಾದಿರು.

ಯಿವರೋಗೆ

ಸದ್ರಿ ವ್ಯಕ್ತಿಯು ಈಡಿಯ ಕಯಿಂದ ಯಾ ಮೂಲ್ಕ ತಿಳ್ಸುವದೇನೆಂದ್ರೆ—

ಸದ್ರಿ ವ್ಯಾಜ್ಯದಲ್ಲಿ ಕಾಚ್ಚಿದ ದಾವಾ ಅಸ್ತಿಯು ನಾವಿಳ ಹಕ್ಕಿನದ್ದು ಯಂತ್ರ ವಗೈರೆ ಸ್ತಾಪಿಸುವ ಬಗ್ಗೆ ಪಾದಿಳು ದಾಕ್ಲು ಮಾಡಿದ ಸದ್ರಿ ವ್ಯಾಜ್ಯವು ತಾ 11-10-1949ಕ್ಕೆ ತನ್ನಿಗೆಯಿಟ್ಟ ಕಾರಣ ಆ ದಿವ್ಸ ಹನ್ನು 10 ಗಂಟೆಗೆ ಸದ್ರಿ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿರು ಹಾಜರಾಗಿ ಉದಪರಿಸತಕ್ಕದ್ದು ತಪ್ಪಿದ್ರೆ ಅವರನ್ನು ಎಕ್ಸ್‌ಪಾರ್ಟಿ ಮಾಡೋಣಾದೀತ್ತು ಯಂತ್ರ ಯಿ ಮೂಲ್ಕ ತಿಳ್ಸುವದಾಗಿಯಿದೆ.

B. Amrita Rao.
Vakil for Plaintiff.

ಕಾಸರಗೋಡು
ತಾ 9-9-49.

ನೋಟೀಸು.

ಉಡುಪಿ ಪ್ರ. ದ. ಸೋರ್ಟಿನಲ್ಲಿ.

ಕೃಷಂನಂಬ್ರ 330/1949.

೭. ಕೆ. ವೇಸಗಿರಿರಾವ್, ಪವರ್ ಆಫ್ ಎಟೋರ್ನಿದಾರ ಕಲ್ಯಾಣಿ ರಾಮರಾವ್ - ಪಾದಿ

ಮತ್ತು

1. ತುಂಗು ಅಚಾರ್ಕಿ-ರಾಮಪ್ಪಾಚಾರಿ ಮಗಳು 2. ಬಿಂಗಯಬಾರಿ. 1 ನೇ ಪ್ರತಿವಾದಿಗಳ ಮಗ, ಉಪ್ಪಿಪಾಲ್ಕು ಕೊಡಪ್ಪಾಯ ಗ್ರಾಮದ ಕಲ್ಯಾಡಿಯಲ್ಲಿರುವವರು. ಪ್ರತಿವಾದಿರು ಇವರೊಳಗೆ

ಪಾದಿಯೊಳಗೆ ಪ್ರತಿವಾದಿರು ಜೀಲಂಗೇಗೆ ಅನುಭವಿಸಿ ಬಂದ ದಾವಾ ಆಸ್ತಿಗಳ ಸ್ವಾಧೀನತೆಗೂ, ಹುಟ್ಟುವಳಿ ಮತ್ತು ಗೇಣಿಬಾಕಿ ಮತ್ತು ಬಡ್ಡಿಗೂ ಕೂಡಾ ಪಾದಿಯು ಪ್ರತಿವಾದಿರುಮೇಲೆ ಮಾಡಿರುವ ಈ ದಾವೆಯು ತಾರೀಕು 10 10-1949ಕ್ಕೆ 2ನೇ ಪ್ರತಿವಾದಿಗೆ ನೋಟೀಸು ಜಾರಿ ಯಿಟ್ಟಿರುತ್ತದೆ. ಸದ್ರಿ ತಾರೀಕು 10-10-1949ನೇ ದಿವ್ಸ ಬೆಳಿಗ್ಗೆ ಹತ್ತುಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ 2ನೇ ಪ್ರತಿವಾದಿಯು ಸ್ವತಹಾ ವಕೀಲ ಮುಖಾಂತ್ರ ಹಾಜ್ರಾಗಲಿಕ್ಕೆ ತಪ್ಪಿದ್ರೆ ಆತನ ಗೈರುಹಾಜ್ರಿಯಲ್ಲಿ ಈ ದಾವೆಯನ್ನು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯಿದೆ.

V K. Kidiyur
Advocate for Plaintiff.
ಉಡುಪಿ

ತಾರೀಕು 20ನೇ ಸೆಪ್ಟಂಬ್ರ 1949.

1 ಪ್ರೇಮಪೂರ್ಣ ಮಂದಿರ: ಲೇಖಕರು: ಯು. ನಾರಾಯಣ ಭಟ್ಟರು. ಪ್ರಾಣ ಗೋಡು, ಸಾಗರ. ಬೆಲೆ ಗೂ ೧-೦ ೦.

ಒಂದು ಕುಟುಂಬದ ಅವನತಿಗೆ ಇಲ್ಲವೆ ವಿರಸಕ್ಕೆ ವಿದ್ಯಾವಂತ ಹೆಣ್ಣು ಮಗಳೆಷ್ಟುಳು ಕಾರಣಳಾಗುತ್ತಾಳೆ. ಸುಶಿಕ್ಷಿತನೂ ಸರಳ ವ್ಯಕ್ತಿಯೂ ಆದ ವಿಕಾಸನಾಥನು ಹೆಣ್ಣು ಬೀಸಿದ ಬಲೆಗೆ ಸಿಕ್ಕಿ ತನ್ನ ಧ್ಯೇಯವನ್ನು ಮರೆಯುತ್ತಾನೆ. ಎಳೆಯ ವಯಸ್ಸಿನಲ್ಲಿ ಅನ್ನ ಹಾಕಿ, ವಿದ್ಯೆಕೊಟ್ಟು ಸಲಹಿದವರಿಗೆ ಕೊನೆಯತನಕವೂ ಕೃತಘ್ನನಾಗಿಯೇ ಉಳಿಯುತ್ತಾನೆ. ಕಥಾವಸ್ತು ಈತನಕ ಹಲವು ಬಾರಿ ಕಂಡದ್ದೆ. ಆಧರ ವಿಷಯಾಗಲೇ 'ಹೀಗೆಯೆ ಕೊನೆಗೊಳ್ಳುತ್ತದೆಂದು ಹೇಳಬಹುದಾಗಿದೆ. ಜಿಗುಪ್ಸಾನಯ ಸನ್ನಿವೇಶಗಳಿಂದಲೂ, ಅಪರಿಶುದ್ಧವಾದ ಮಾತಿನಿಂದಲೂ ಕತೆ ನೀರಸವಾಗಿ ಕಾಣುತ್ತದೆ. ಲೇಖಕರಲ್ಲಿ ಕಥನ ಶೈಲಿ ಚೆನ್ನಾಗಿರುವದರಿಂದ ಮುಂದೆ ಉತ್ತಮ ಬರವಣಿಗೆಯನ್ನು ನಿರೀಕ್ಷಿಸಲಡ್ಡಿಯಿಲ್ಲ.

ಸ್ವೀಕಾರ—ವಿಮರ್ಶೆ

[ಕನ್ನಡ, ಇಂಗ್ಲಿಷ್, ಹಿಂದಿ, ದಾವಣಿ, ತುಳು ಭಾಷೆಗಳ ಪುಸ್ತಕ, ಪತ್ರಿಕೆಗಳ ವಿಮರ್ಶೆಯನ್ನು ನವಯುಗದಲ್ಲಿ ಕ್ರಮವಾಗಿ ಕೊಡಲಾಗುವುದು. ಆ ಬಗ್ಗೆ ಪುಸ್ತಕ ಯಾ ಪತ್ರಿಕೆಗಳ ಎರಡೆಂಡು ಪ್ರತಿಗಳನ್ನು ಕಳುಹಿಸಿ ಕೊಡಬೇಕಾಗುವುದು. ಸಂ. ನ.]

2 ಸೈತಾನ್. ಲೇಖಕರು: ಅನಂತ ವೆಂಕಟರಾವ ಪೈ. ಪ್ರಕಾಶಕರು: ಬಿ. ಪಿ. ಕಾಳೆ ಶೇಷಾಚಲಪ್ರೆಸ್ ಧಾರವಾಡ.

ಮನಸ್ಸಿನ ಉಲ್ಲಾಸಕ್ಕಾಗಿ ಶೇಷಾಚಲ ಗ್ರಂಥ ಮಾಲೆಯ ಪತ್ರೆದಾರಿ ಕತೆಗಳನ್ನು ಓದುವ ರೂಢಿ ಇದೆ ನಮ್ಮದ್ದು! ಆದರೆ ಶ್ರೀ ಎ. ವಿ. ಪೈಯವರ 'ಸೈತಾನ್'ನಲ್ಲಿ ಯಾವ ತರಹದ ಬಾದ್ಧಿಕ ತಂತ್ರವೂ ಇಲ್ಲ, ವಿಜ್ಞಾನದ ಸುಳಿವೂ ಇಲ್ಲ! ಶ್ರೀ ಸಿ. ವಿ. ರಾಮಚಂದ್ರ ರಾಯರ ಚಿಕ್ಕ ಪ್ರಸ್ತಾವನೆ ಕಾದಂಬರಿಯ ಕುರಿತು ಯಾವ ಅಭಿಪ್ರಾಯವನ್ನು ಕೊಡುತ್ತದೆಂದು ಸುಲಭವಾಗಿ ಅರ್ಥವಾಗುವುದಿಲ್ಲ.

3 ಕವಿ ಕಾವ್ಯ ಪರಿಚಯ: ಲೇಖಕರು: ಶ್ರೀ ಆರ್. ಎಸ್. ರಾಮರಾವ್, ಎಂ. ಎ. ಸತ್ಯಶೋಧನ ಪ್ರಕಟನ ಮಂದಿರ, ಕೋಟೆ, ಬೆಂಗಳೂರು ೨.

ಕನ್ನಡದ ಆದಿಕವಿ ಸಂಪಕ್ಷಣಿಂದ ಹಿಡಿದು ಈವರೆಗಿನ ಪ್ರಖ್ಯಾತ ಕವಿಗಳ ಕಾಲ, ಸಾಹಿತ್ಯ ಹಾಗೂ ತೂಸ್ ವಿಮರ್ಶೆಯನ್ನು ಚಿಕ್ಕದಾಗಿ ಸಂಗ್ರಹಿಸಿ ಕೊಟ್ಟಿದಾರೆ ಲೇಖಕರು. ಕನ್ನಡದ ಪ್ರತಿಭಾನಂತ ಕವಿಗಳ ಪರಿಚಯವನ್ನೂ ಕನ್ನಡಿಗರು ಅವಶ್ಯವಾಗಿ ಮಾಡಿಕೊಳ್ಳಬೇಕು. ಹೀಗೆ ಆಭ್ಯಸಿಸುವವರಿಗೆ ಶ್ರೀ ರಾಮರಾಯರ ಈ ಹೊತ್ತಗೆ ತುಂಬ ಸಹಕಾರಿಯಾಗುವುದರಲ್ಲಿ ಸಂದೇಹ ವಿಲ್ಲ. ಕವಿಗಳ ಸಾಲಿನಲ್ಲಿ ಕನಕದಾಸರ ಹೆಸರು ಬಂದ ಬಳಿಕ ಪುರಂದರದಾಸರ ಹೆಸರು ಕಾಣುವುದಿಲ್ಲ. ದಾಸಸಾಹಿತ್ಯದಲ್ಲಿ ಪುರಂದರದಾಸರ ಸ್ಥಾನ ಹಿರಿದು. ಯಾವ ಕಾರಣದಿಂದ ಅವರ ಹೆಸರು ನಿರ್ದೇಶಿಸಲಿಲ್ಲವೋ ಹೇಳಬರುವಂತಿಲ್ಲ. ಎಂಬೂಹಿಯ ಈ ತೆರಿಯ ಹೊತ್ತಗೆ ಕವಿ-ಕಾವ್ಯಗಳ ಪರಿಚಯ ಕೈಪಿಡಿಯಂತಿದೆ.

4 ಕರ್ಣಾಪಿಶಾಚಿ: ಲೇಖಕರು ಮುವಲಿ ಪ್ರಕಾಶಕರು: ಬಿ. ಪಿ. ಕಾಳೆ, ಶೇಷಾಚಲಗ್ರಂಥಮಾಲೆ ಧಾರವಾಡ. ಬೆಲೆ ೩-೪-೦

'ಚಟ್ಟುಗಾರ ಸುಬ್ಬಿಣ್ಣ'ನೃತಕ ಕೈಬೆರಳು' ಬರೆದು ಪ್ರಖ್ಯಾತರಾದ ಶ್ರೀ 'ಮುರಲಿ'ಯವರೇ ಇದನ್ನು ಬರೆದಿದ್ದಾರೆ. ಕರ್ಣಾಪಿಶಾಚಿ ಎವೆಲ್ಲ ಕೈಂತ ಕುಸು ಭಿನ್ನವಾಗಿರುತ್ತದೆ. ಕಾದಂಬರಿ ರಾಜಕೀಯ 'ಟೆನ್ನಿಲೆಯಿಂದ ಕೂಡಿದ್ದು ತಾಂತ್ರಿಕವಾಗಿಯೂ ನೂರ್ಮಿಕವಾಗಿಯೂ ಓದುಗರಲ್ಲಿ ಕುತೂಹಲವನ್ನುಂಟು ಮಾಡುತ್ತದೆ.

5 ಸಾರಸ್ವತ ಸಮಾಜ: ಲೇಖಕರು ಶ್ರೀ ಕೇಶವಕೃಷ್ಣ ಕುಡ್ಪ, ಕಾರ್ಕಳ ಬಿ. ಎ. ಎಲ್. ಎಲ್. ಬಿ.

ಸಾರಸ್ವತ ಸಮಾಜ, ಕೊಂಕಣಿ ಸಮಾಜದ ಪ್ರಾಚೀನ ಹಾಗೂ ಈಗಿನ ಸಂಚಿತಿಯನ್ನು ಮಾಡಿಕೊಡುವ ಒಂದು ಕೈಪಿಡಿ. ದೆಕ್ಷಣಕನ್ನಡದಲ್ಲಿ ಕೊಂಕಣಿಗರು ಕಲಾಸಂಪನ್ನರೂ, ವ್ಯವಹಾರ ಕುಶಲಿಗಳೂ ಆಗಿ ಕಮ್ಮಿ ಖ್ಯಾತಿಯನ್ನು ಬೀರಿದ್ದಾರೆ. ಹಿಂದೆ ಅವರು ಬಂದು ನೆಲೆನಿಂತ ಕಾಲ ಪರಿಚಯವನ್ನೆಲ್ಲ ಕುದ್ದರವಮಾಡಿಕೊಟ್ಟಿದ್ದಾರೆ. ಕೆಲವುಕಡೆ ಕನ್ನಡದಲ್ಲಿ ಅವರು ಮಾಡಿರುವ ಸಾಮಾನ್ಯಸೇವೆಗೂ ಮಾಹಿತಿಯನ್ನು ಕೊಡಲಾಗಿದೆ. ಇದುವ ಸ್ಪಷ್ಟಿಕೆಯನ್ನು ಮೀರಿದ ಹೊಗಳಿಕೆಯಾಗಿ ಕಾಣುತ್ತದೆ. ದೆಕ್ಷಣ ಕನ್ನಡದಲ್ಲಿ ವ್ಯವಹಾರ ಉದ್ಯಮಗಳಲ್ಲಿ ಸಾರಸ್ವತ ಸಮಾಜದವರು ಮೇಲಾಗಿದಾರೆನ್ನುವುದು ಸಹಜವೇ. ಇನ್ನು ಕೆಲವರು ಸುಪ್ರಸಿದ್ಧ ಸಾಹಿತಿಗಳೂ ಆಗಿದಾರೆ. ಮಾನ್ಯ ಗೋವಿಂದ ಪೈಗಳು ರಾಜಕಿಯಾಗಿ ಗೌರವಿಸಲ್ಪಟ್ಟಿರಾರೆ. ಇಂಗ ಕೊಂಕಣಿಯಿಗಿಂತ ಹೆಚ್ಚಾಗಿ ಕನ್ನಡಕ್ಕೆ, ಎ ವ! ಸಾರಸ್ವತ ಸಮಾಜದ ಸಂಸ್ಕೃತಿಯ ಹಾಗೂ ವ್ಯಾಪಾರ ಸಹವಾಟನೊಂದಿಗೆ ನಿಂತ ನೆಲ ಕನ್ನಡದವೆಂಬುದನ್ನು ಅವರು ತಿಳಿಯಿ ಕನ್ನೆಡಕ್ಕೆ ಕೀರ್ತಿ ತರುವಂತಹದರಲ್ಲಿ ಹೆಚ್ಚಿನ ಶ್ರದ್ಧೆಯನ್ನಿಡಬೇಕಾಗಿದೆ. ಸಾರಸ್ವತ ಸಮಾಜ ದರ್ಶನದೊಂದಿಗೆ ಕನ್ನಡದ ದರ್ಶನವೂ ಆಗಲಿ!

—ಯಸ್ಸೆಲ್

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ.....

ನಾನು ಒಬ್ಬ ಸಾಧಾರಣ ಮನುಷ್ಯ-ದುರದೃಷ್ಟವಶಾತ್ ನನ್ನ ಮಿತಿಮೀರಿಂದ ಕಾಮುಳ ಜೀವನವು ಅತಿ ಬೇಗನೆ ನರಳಿ ದೌರ್ಬಲ್ಯಕ್ಕೆ ಳಿಯಿತು. ದಿನೇದಿನೇ ನಶಕ್ತನಾಗುತ್ತಿದ್ದುದಲ್ಲದೆ ಹೃದಯನಾಡಿಯೂ ಜಾಸ್ತಿಯಾಯಿತು. ಬಾಯುಳಿಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೆ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಅದರೆ ನಾನೆಂತು ಅದನ್ನು ತಿಳಿಸುವುದು? ಗುಟ್ಟಾಗಿ ಸಾವಿರಾರು ಪ್ರಖ್ಯಾತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯು ನೋರೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಅದೃಷ್ಟವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೆಷಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ಸಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣನೇನೆಂದು ಕೇಳಿದರು. ಕಪ್ಪದಿಂದ ಬಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಆವನ್ನು ತಿಳಿಸುವಂತೆ ಬಲಾತ್ಕರಿಸಿತು ಆಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಅಕ್ಷಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹಾತ್ಮರಿಯು ಕನಿಕರಗೊಂಡು, ಎಂದು ಔಷಧಿಗಳನ್ನು ದಯಿಶಾಲಿನಿದರು ಒಂದು ಸೇವಿಸುವುದಕ್ಕೆ ಮತ್ತೊಂದನ್ನು ಲೇಸಿಸುವುದಕ್ಕೆ. ಅವರು ಹೇಳಿದಂತೆ ನಿಡಮೂಲಿಕೆಗಳನ್ನು ಹುಡುಕಿ ತಂದು ಅವರೆಯೆಂದ ಲ್ಲಿ ೯ ಆ ಎಂದು ಔಷಧಿಗಳನ್ನು ತಯಾರಿಸಿದೆನು. ಆನಂತರ ಅದನ್ನು ಸೇವಿಸುವುದಕ್ಕೂ ಪ್ರಾರಂಭಿಸಿದೆನು. ಸ್ರಿಯ ವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹೆಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಅವರ ಅಪ್ಪಣೆಯಂತೆ ೫೦ ದಿವಸಗಳಲ್ಲಿ ಸಂಪೂರ್ಣವಾಗಿ ಪಡೆದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ಆ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳುಬಲ್ಲವನಾದೆನು. ಕಣ್ಣುಗಳ ಜೊಳಕು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಆಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು ಪುನಃ ನನ್ನ ಕ್ಷಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅವರಿಂದ ಪಾಡಿ

ಜನಮತ

೧

"ಅಧಿಕಾರಿಗಳ ಅಧಿಕಪ್ರಸಂಗ"

ಇಲ್ಲಿ ತಾ 26-9-1949ರಲ್ಲು ನಡೆಯಲಿದ್ದ ದ. ಕ. ಜಿಲ್ಲಾ ಬೋರ್ಡು ಮೆಂಬರಿಕೆಯ ಚುನಾವಣೆ ಬಗ್ಗೆ "ಪೋಲಿಂಗ್ ಆಫೀಸರು" ಗಳನ್ನು ಆರಿಸುವ ಹವ್ಯಾಸ ಹಲವಿನಗಳಿಂದ ನಡೆದಿತ್ತು. ದರ್ಖದ ಅಧಿಕಾರಿಗಳನ್ನೇ ಯೇ ನೈಕೆಂದು ನಂಬುತ್ತಿದ್ದ ಆ ಕಾಲದಲ್ಲೂ ಉಪಾಧ್ಯಾಯರು ಅವಿಶ್ವಾಸಿಗಳಾಗಿರಲಿಲ್ಲ. ಪೋಲಿಂಗ್ ಆಫೀಸರರಾಗಿ ಅವರನ್ನು ಹಿಂದಿನ ಕಾಲವೆಲ್ಲೂ ಆರಿಸಿಯೆಂಟು. ಆದರೆ ಈಗಿನದು ಅಂತಹ ದಬ್ಬಾಳಿಕೆಯ ಕಾಲವಲ್ಲ. ಸಮಾನತೆ, ಸಹೋದರತೆ—ಇತ್ಯಾದಿಗಳನ್ನೇ ತಳಹದಿಯಾಗಿಟ್ಟುಕೊಂಡಿದ್ದ ಕಾಂಗ್ರೆಸ್ಸಿನಂತಹ ಪ್ರಜಾಪಿತ, ಪ್ರಜಾವಿಶ್ವಾಸಿ, ಸರಕಾರ ಬಂದಿದ್ದರೂ ಅಧಿಕಾರಿಗಳ ಅಧಿಕಪ್ರಸಂಗ ಇನ್ನೂ ನಿಂತಿಲ್ಲ. ಇಲ್ಲವಾದರೆ ಸರಕಾರದ ಏಕಮೇವ ನಿಷ್ಠತೆಯಿಂದ ಜೂರಾದರೂ ಮಾಡಿನೆಯನ್ನರಿಯದ ಸಿವಿಲ್ ಅಧಿಕಾರಿಗಳು ಹಾಗೂ ಅದರ ಆದರ್ಶ ನಡತೆಯನ್ನೆ ಮಾದರಿಯಾಗಿಟ್ಟು ನಡೆವ ಸಿಬಂದಿವರ್ಗ ಸಾಕಷ್ಟು ಇರುವಾಗ ಪೋಲಿಂಗ್ ಅಧಿಕಾರಿಗಳಾಗಿ ಉಪಾಧ್ಯಾಯರುಗಳನ್ನು ಒಮ್ಮೆ ಯಾಕೆ ಆರಿಸ ಬೇಕಿತ್ತು? ನೊದಲಾಗಿ ಡಿಸ್ಟ್ರಿಕ್ಟ್ ಬರೆವೆನ್ಯೂ ಆಫೀಸರಿಂದ ಸ್ಥಳೀಯ ಪ್ರೌಢಶಾಲಾ ಮುಖ್ಯೋಪಾಧ್ಯಾಪಕರಿಗೆ 'ನಿಮ್ಮ ಶಾಲೆಯಲ್ಲಿ ಉಪಾಧ್ಯಾಯರುಗಳಾರಾರು? ಅವರ ಯೋಗ್ಯತೆಗಳೇನು? ತಲಬೆಸ್ಸು?' ಎಂಬ ಪ್ರಶ್ನೆಯುಳ್ಳ ಪತ್ರವೊಂದು ಬಂದದ್ದೇಕೆ? ಆ ಬಳಿಕ ಇಂತಿಂತಹ ಉಪಾಧ್ಯಾಯರುಗಳನ್ನು ಪೋಲಿಂಗ್ ಹಾಗೂ ಸಹಾಯಕ ಪೋಲಿಂಗ್ ಆಫೀಸರರಾಗಿ ಆರಿಸಿಯಿದೆ ಎಂಬ ಹುಕುಂ ಬಂದದ್ದೇಕೆ? ಆ ಬಳಿಕ ಆವರಿಗೆ ಹುಕುಂ ತಲಪಿರುವ ಬಗ್ಗೆ ರಿಪೀದಿ ಕಳುಹಿಸಬೇಕೆಂದು ಕೇಳಿದ್ದೇಕೆ? ಕತಾಗೆ 25-9-49ರಲ್ಲು ನಡೆಯಲಿರುವ ಸಲಹಾ ಸಭೆಗೆ (Instruction class) ಆರಿಸಲ್ಪಟ್ಟ ಪೋಲಿಂಗ್ ಹಾಗೂ ಸಹಾಯಕ ಪೋಲಿಂಗ್ ಆಫೀಸರರು ತಾವೇ ಬಂದೇಕೆಂದು ಹುಕುಂ ಆದದ್ದೇಕೆ? ಕಟ್ಟಕಡೆಗೆ ಅವರೆಲ್ಲರ ಹೆಸರನ್ನೂ ಕಾರಣ ವಿಲ್ಲದೇನೇ ರದ್ದುಗೊಳಿಸಿ ಹೊಸ ಅಧಿಕಾರಿಗಳನ್ನೇ ಆರಿಸಿರುತ್ತದೆ, ಎಂಬ ಹುಕುಂ ಬರಲು ಕಾರಣವೇನು? ಇಂತಹ ಹುಕುಂ ಕೊಡುವ ಅಧಿಕಾರಿ ವರ್ಗಕ್ಕೆ "ಮಹಮ್ಮದ್ ಬಿನ್ ತೊಗಲಕ್‌ನ ರಾಜ್ಯಭಾರದ ಅನೀತಿವಾದ ನಿಡೆಯೇ! ಊರಲ್ಲೆಲ್ಲಾ ಪ್ರಚಾರ ಆಗುವವರೆಗೆ ಕೆಲವು ದಿನಗಳ ಹಿಂದೆ ಕೆಲವರನ್ನು ಆರಿಸಿರುವುದಾಗಿ ಪ್ರಕಟಿಸಿದ ಅಧಿಕಾರಿ ವರ್ಗಕ್ಕೆ ಹೀಗೆ ಮಾಡುವುದರಿಂದ ಕೆಲವರನ್ನು ಅವಮಾನಗೊಳಿಸಿದಂತಾಗುತ್ತದೆ ಎಂಬ 'ತಲೆ' ಇರಬೇಡವೇ? ಉಪಾಧ್ಯಾಯ ವರ್ಗವು ಎಸ್ಸೇ ದಿನ್ನಿ ಪಟ್ಟಿಗಳಿಗೂ ತವ್ಮನ್ನು ವಿಶ್ವಾಸಿ ವರ್ಗವಲ್ಲ, ಲಂಚ ಬಡಕತನಕ್ಕೆ ಕಟ್ಟುಬಿದ್ದು ಅತ್ಯಾಘಾತವನ್ನು ತೊರೆದವರೆಂದು ಇವರಿಗೆಕೆ ಯೇ? ಈಗ ಊರಲ್ಲೆಲ್ಲಾ 'ಬೊಬ್ಬೆ' ತಿರಸ್ಕಾರ ಎದ್ದಿರುವುದು ಉಪಾಧ್ಯಾಯ ವರ್ಗದ ಅವಿಶ್ವಾಸ ಕಾರ್ಯಗಳಿಂದೆಂದು ಇವರ ಊಹೆಯೇ? ಯಾರೋ ಸ್ವಾರ್ಥಸಾಧಕರು ಏನೋ ಹೇಳಿದ್ದರೆ ಅವರನ್ನು ಮೆಚ್ಚಿಸಲಿಕ್ಕಾಗಿ ಕಾರ್ಯಾಚರಣೆ ಮಾಡುವಾಗ ಉಳಿದವರಿಗೂ ಬಂದಿಷ್ಟು ಅಭಿಮಾನವಿರಬಹುದೆಂಬ ಪರಿವೆ ಇರಬೇಡವೇ? ಸಂಬಂಧಪಟ್ಟ ಅಧಿಕಾರಿಗಳು ಈ ಪ್ರಶ್ನೆಗಳನ್ನು ಉತ್ತರಿಸಲಿ.

—ಸಂಬಂಧಪಟ್ಟ ಓರ್ವ ಅಧ್ಯಾಪಕ

ನೂಡಬಿದ್ರಿ 21-9-49

೨

ಬಳ್ಳಾರಿ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ನಡೆದ ಅವ್ಯವಸ್ಥೆ!

ಬಳ್ಳಾರಿ ಜಿಲ್ಲಾ ಹರ್ಪನಹಳ್ಳಿ ತಾಲೂಕು ಹಲವಾಗಲು ಸರ್ಕಲ್ ಕುರುಬತ್ತಿ ಪೋಲಿಂಗ್ ಸ್ಟೇಶನದಲ್ಲಿ ತಾರೀಕು ೯-೯-೪೯ನೆಯ ಶುಕ್ರವಾರ ದಿವಸ ಮತದಾರರು ಓಟುಹಾಕುವದು ನಡೆದಿತ್ತು. ಒಂದು ಜಾಗಿಗೆ ಎರಡುಜನ ಮುರಿಯೂಂಗಿ ನಿಂತಿದ್ದರು. ಪರದೆಯಲ್ಲಿ ಎರಡು ಬಣ್ಣದ ಪೆಟ್ಟಿಗೆಗಳು ಇಟ್ಟಿದ್ದರು. ಪರದೆಯ ಜಾಗಿಲಲ್ಲಿ ಒಬ್ಬ ಕೂತಿದ್ದ (ಅಸಿಸ್ಟೆಂಟ ಪೋಲಿಂಗ ಆಫೀಸರನಂತೆ) ನಾನು ಒಬ್ಬ ಮತದಾರನಿದ್ದ ಪರಿಂದ ಓಟುಹಾಕಲಿಕ್ಕೆ ಮುಖ್ಯ ಪೋಲಿಂಗ್ ಆಫೀಸರನಿಂದ ಮತಚೀಟ್ಟು ತಕ್ಕೊಂಡು ಹೋದೆ. ಸದರಿ ಅಸಿಸ್ಟಂಟ ಪೋಲಿಂಗ ಆಫೀಸರನಿಗೆ ನೀವು ಇಲ್ಲಿಯಾಕೆ ಕೂತಿರುವಿರಿ. ಮತಕೊಡುವದು ಯಾರಿಗೂ ತಿಳಿಯಬಾರದೆಂದು ಸರ್ಕಾರದವರು ಪರದೆಯಲ್ಲಿ ಪೆಟ್ಟಿಗೆ ಇಡಿಸಿ ವ್ಯವಸ್ಥೆ ಮಾಡಿರುವರು. ನೀವು ಇಲ್ಲಿ ಕೂತು ಮತದಾರರು ಯಾವ ಉಮೇದ್ವಾರನಿಗೆ ಚೀಟಹಾಕುವರೆಂದು ನೋಡುತ್ತಾತ್ತಾ ಕೂತಂತಾಗುವದಿಲ್ಲವೆ? ಎಂದು ಪ್ರಶ್ನೆಮಾಡಿದರೆ ಅವನು ಸರಿಯಾಗಿ ಉತ್ತರ ಕೊಡಲಿಲ್ಲ. ಸದರಿ ಚೀಟಿ ತಕ್ಕೊಂಡು ಮುಖ್ಯ ಪೋಲಿಂಗ ಆಫೀಸರನ ಕಡೆ ಬಂದು ಆ ಪ್ರಶ್ನೆ ಕೇಳಿದರೆ ಅತನು ರೂಲ್ಸುಪಿದಿಹೇಳಿ ಸದರಿ ಓಟು ಚೀಟಿಯನ್ನು ಪೆಟ್ಟಿಗೆಯಲ್ಲಿ ಹಾಕದೆ ಕಿಸೆಯಲ್ಲಿ ಹಾಕಿಕೊಂಡು ಬಂದರೆ ಅಥವಾ ಪರಿದುಹಾಕಬಾರದೆಂದು ನೋಡಲಿಕ್ಕೆ ವ್ಯವಸ್ಥೆ ಮಾಡಿರುವರು ವಗ್ಗೆರೆ ಹೇಳಿದ. ಗಾಸ್ತ ಮತದಾನ ಪದ್ಧತಿ ಏನು ಅಳವಿಯಿತು. ಬಾಗಿಲಲ್ಲಿ ಕೂತವನು ದೇವರಲ್ಲು. ತನಗೆಬೇಕಾದ ಯಾರಾದರೊಬ್ಬ ಉಮೇದ್ವಾರನು ಆರಿಸಿ ಬರಬೇಕೆಂದು ಇಚ್ಛೆಯಿರಬಹುದು. ಅಂಥವನ ಪೆಟ್ಟಿಗೆಯಲ್ಲಿ ಇಂತಿಷ್ಟು ಚೀಟುಗಳು ಬಿದ್ದವು. ಹಾಗು ಇಂಥವರು ನಿನಗೆ ಚೀಟ ಹಾಕಲಿಲ್ಲ. ಅಥವಾ ಹಾಕಿದರು ಇದನ್ನೆಲ್ಲಾ ಲಕ್ಷ್ಯದಲ್ಲಿಟ್ಟುಕೊಂಡು ಸದರಿ ಉಮೇದ್ವಾರನಿಗೆ ತಿಳಿಸಬಹುದು. ಅದನ್ನು ಕೇಳಿಕೊಂಡು ಆ ಉಮೇದ್ವಾರನು ತನಗೆ ಹೆಚ್ಚು ಮತದೊರಕಿಸಲಿಕ್ಕೆ ಆಯೋಗ್ಯ ಪ್ರಯತ್ನಗಳು ನೂರಾ ಬಯಬಹುದು ರೂಲ್ಸು ಈ ರೀತಿ ಯಿರಲಿಕ್ಕಿಲ್ಲ. ಒಂದು ವೇಳೆ ಇದ್ದುದಾದರೆ ರೂಲ್ಸು ಬರೆವವರು ಮತ್ತು ಆವುಗಳನ್ನು ಪಾಸುಮಾಡಿಸವರು ಆವೂರ್ಜ ವಿಚಾರದವರೆನ್ನಲಡ್ಡಿಯೇನು? ಮತದಾರರನ್ನು ಕಾಯಲಿಕ್ಕೆ (ಅವರು ಕಳ್ಳರೆಂದೇ ಭಾವಿಸಿ) ಒಬ್ಬ ಅಸಿಸ್ಟಂಟ ಪೋಲಿಂಗ ಆಫೀಸರೆಂದು ಹೆಸರಿಟ್ಟು ಪೋಲಿಸ ಕಾನಲಿಸಿದಂತಾಯಿತು. ಈ ಮತದಾರನು ಕಳ್ಳನೆಂದೇ ಭಾವಿಸೋಣ ಈ ಮತದಾರನ ಕೈಲಿ ಕೊಡುವದಾದರೂ ಏನು? ಯಾವಕೆಲಸಕ್ಕೂ ಬಾರದ ಮೂರು ಬೆರಳುದ್ದ ಎಷ್ಟು ಬೆರಳಗಲದ ಚೀಟಿ ಅಲ್ಲವೆ? ಈ ಪೋಲೀಸ ಕಾವಲಿದ್ದಿಲ್ಲೆಂದು ತಿಳಿದು ಮತದಾರನು ಓಟು ಚೀಟಿಯನ್ನು ಪರದುಹಾಕಿದ ಆಥವಾ ಕಿಸೆಯಲ್ಲಿಟ್ಟುಕೊಂಡು ಬಂದನೆಂದು (ಪೋಲಿಂಗ ಆಫೀಸರನ್ನುವಂತೆ) ತಿಳಿಯೋಣ. ಆದರಿಂದ ಸರ್ಕಾರಕ್ಕಾಗಲಿ ಅಥವಾ ಉಮೇದ್ವಾರನಿಗಾಗಲಿ ಅಂಥ ನುಹಾನಸ್ಟವೇನು? ಆವನು ಹಾಗೆ ಮಾಡುವದಕ್ಕಾಗಿಯೇ ಪೋಲಿಂಗ ಸ್ಟೇಶನ್ನಿಗೆ ಹೋಗಿ ಚೀಟಿತಕ್ಕೊಂಡು ಹಾಗೆ ಮಾಡಿದ್ದರಿಂದ ಅವನು ತನಗೇನು ಫಾಯದೆಮಾಡಿಕೊಂಡಂತಾಯಿತು. ತನಗೆ ಮತಕೊಡುವ ಇಚ್ಛಾಯಿಲ್ಲದಿದ್ದರೆ ಪೋಲಿಂಗ ಆಫೀಸಿಗೇ ಬರುತ್ತಿದ್ದಿಲ್ಲ. ಇದು ಸ್ವಾಭಾವಿಕವಾಗಿ ಅಲ್ಪ ಸ್ವಲ್ಪ ತಿಳಿಯುವಂಥಿರುವದು. ಹೀಗಿದ್ದು ರೂಲ್ಸು ಏದಾವ ಉದ್ದೇಶದಿಂದ ಮಾಡಿದರೋ ಅವರೇ ಹೇಳಬೇಕೆವಿನಹ ಇತರರಿಗೆ ತಿಳಿಯದು. ಇನ್ನು ಮುಂದೆ ಅನೇಕ ಚುನಾವಣೆಗಳು ನಡೆಯಲಿರುವವು. ಸಂಬಂಧಪಟ್ಟ ಕೌನ್ಸಿಲರುಗಳು ಮತ್ತು ಜಿಲ್ಲಾಧಿಕಾರಿಗಳು ಲಕ್ಷ್ಯದಲ್ಲಿಟ್ಟುಕೊಂಡು ಸರಿಪಡಿಸಿಕೊಳ್ಳಬೇಕಾಗಿ ಸೂಚನೆ ಇರಾ. ಅವಿಶ್ವಾಸದ ರೂಲ್ಸಿಗೆ ತಲೆಬಾಗಿ ಮಾತ ಕೂಡುವದು ಸರಿ ಅಲ್ಲವೆಂದು ಸದರಿ ಮುಖ್ಯ ಪೋಲಿಂಗ ಆಫೀಸರನಿಗೆ ಓಟುಚೀಟು ವಾಪಾಸುಕೊಟ್ಟು ಮನೆಗೆಬಂದೆ. ಇದನ್ನು ನೋಡಿ ಇನ್ನೊಬ್ಬ ಮತದಾರರು ಮತಕೂಡದೆ ವಾಪಸುಹೋದರು. ಇನ್ನು ಕೆಲವು ಮತದಾರರು ತಾವು ಮತಕೊಡುವದು ಮತ್ತೊಬ್ಬರಿಗೆ ಗೊತ್ತಾಗುತ್ತದೆಂದು ವಿನಾಕಾರಣ ಯಾಕೆ ನಿಷ್ಕಾರಣಗಬೇಕು ಅಂತಾ ಪೋಲಿಂಗಸ್ಟೇಶನಕ್ಕೇ ಹೋಗಲಿಲ್ಲೆಂತಲೂ ತಿಳಿಯಿತು.

ಇನ್ನೂ ಎಷ್ಟೋ ಅವ್ಯವಸ್ಥೆಗಳಿದ್ದವು. ಅವುಗಳು ಉಮೇದ್ವಾರರ ಅಲಕ್ಷ್ಯೆಯಿಂದ, ಅವುಗಳಾವುವೆಂದರೆ ಮುಖ್ಯ ಪೋಲಿಂಗಆಫೀಸರನ ಹತ್ತರ ಉಮೇದ್ವಾರರ ಯಾವ ಏಜಂಟರೂ ಇದ್ದಿಲ್ಲ. ಆಫೀಸರನು ಓಟುಕೊಡಲಿಕ್ಕೆ ಬಂದವರ ಹೆಸರು ವಗ್ಗೆರೆ ಕೇಳಿಕೊಂಡು ಲೀಸ್ಟದಲ್ಲಿದ್ದ ಹೆಸರಿಗೆ ಗುರಿಯಿದ್ದರೆ ಗುರುತುಹಾಕಿಕೊಂಡು ಚೀಟಿಕೊಡುತ್ತಿದ್ದ. ಅವರ ಸಹಿ ಮಾತ್ರ ಯಾವುದೂ ತಕ್ಕೊಳ್ಳುತ್ತಿದ್ದಿಲ್ಲ. ಈ ಪೋಲಿಂಗ ಆಫೀಸರರು ಕೇವಲ ಸ್ವಾಮಾನ ಕರೆಂತ ಹೇಳಬಹುದಿದ್ದಿಲ್ಲ. ಇನ್ನರ ವಿಷಯಕ್ಕೂ ಕುಳಿಲ್ಲನೆ ಮಾಮೂಲೀ. ಈ ಪೋಲಿಂಗ ಆಫೀಸರನು ಯಾವನಾದರೊಬ್ಬ ಉಮೇದವಾರನಿಂದ ಲಂಚತಕ್ಕಂಡು-ಮತದಾರರು ಪೋಲಿಂಗ ಸ್ಟೇಶನಕ್ಕೆ ಬಾರದಿದ್ದವರ ಹೆಸರಿಗೆ ಚೀಟಿಗಳನ್ನು ಹಂದು ಲೀಸ್ಟದಲ್ಲಿ ಮತದಾರರು ಹಾಜರಾದಂತೆ ಗುರುತುಹಾಕೊಂದು ಸದರ ಹಂದ ಚೀಟಿಗಳನ್ನು ಲಂಚಕೊಟ್ಟವನ ಪೆಟ್ಟಿಗೆಯಲ್ಲಿ ಹಾಕಲಿಕ್ಕೆ ಯಾಕಬಾರದಲ್ಲ. ಏನೂ ರೂಲ್ಸು ಗೊತ್ತಿಲ್ಲದ ಏಜಂಟರು ಪೋಲಿಂಗ ಆಫೀಸರನ ಹತ್ತರ ಕೂಡ್ರುವದು ಪಿಟ್ಟು ಓಟುರಾ ಹೆಸರಿನ ನಂಬರ ಹಚ್ಚಿ ಚೀಟ್ಟಕೊಡುತ್ತಾ ಹೊರಗೆ ಕೂತಿದ್ದವ್ಗ ಇಂಥಾ ಅವೀಮೇದ್ವಾರರಿಗೆ ಮತ ಕೊಡದಿರುವದೇ ಲೇಸೆಂದಿನಿಸಿತು. ಇಪ್ಪು ಅವ್ಯವಸ್ಥೆ ಪೋಲಿಂಗ ಸ್ಟೇಶನಿತ್ತು.

ಇಂಥಾ ಅನ್ಯಾಯ ನುತ್ತು ಅಪಮಾನಕರ ರೂಲ್ಸುಗಳು ಸರಿಪಡಿಸಿಕೊಳ್ಳುವಂತೆ ಮಾನ್ಯ ಅಧಿಕಾರಿಗಳು ಲಕ್ಷ್ಯಕೊಡುವರೆ?

ಬಸಪ್ಪ ಚ ಚೆಕ್ಕ ಕುರುವತ್ತಿ.

BUY INDIAN! ENCOURAGE INDIAN INDUSTRY!

ಅಮಲಕೇ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all, keeps hair black and relieves headache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O- Brahmavar, S. K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಕೊಲಿಕ್.ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಛೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅಧಿಕತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವೆ ಮಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ೩ನೆಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮೊಸರು, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟೆ ಚಾರ್ಜ ೮ ಆಣೆ

ಏಜೆಂಟರು:—ಗದಗ: ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಫಾರ್ಮಸಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ, ಎದೆನೋವು,ಫಾಯಿಗಳಿಗು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಪೊಡಿಸಿ ಪೊಪಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ ಮೆದ್ದುನಮ್ಮಲ್ಲಿಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

6—10—1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ

ನ ವ ಯು ಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 6 | NAVAYUGA WEEKLY Post Box No. 22 UDIPI, S. K. | Vol 30 No. 6

ಮದರಾಸು ಸೆರಕಾರದ ಎಗ್ರಿಕಲ್ಚರ್ ಮತ್ತು ವೆಟೆರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

ಚುನಾವಣಾ ಫಲಿತಾಂಶದ ಪಾಠ

ಮದ್ರಾಸ್ ಪ್ರಾಂತ್ಯದ ಪ್ರತಿಯೊಂದು ಜಿಲ್ಲೆಯಲ್ಲೂ ನಡೆದು ಮುಗಿದಿರುವ ಜಿಲ್ಲಾ ಬೋರ್ಡು ಚುನಾವಣೆಗಳಿಂದ ದೊರೆತ, ಸಾಮಾಜಿಕ ಸ್ವರೂಪದ ಕೆಲವು ಸಾರಗಳನ್ನು ಈ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುವದು ಅತ್ಯಾವಶ್ಯಕ.

ಬಹು ಬಲ್ಲವರಿಗೆಲ್ಲಾ ಮತದಾನದ ಹಕ್ಕಿತ್ತಿರುವ 1932ನೇ ಭಾರತ ಶಾಸನದನ್ವಯ, ಆಗ ರಚಿಸಲ್ಪಟ್ಟಿದ್ದ ಮತದಾರರಪಟ್ಟಿ, ಮತದಾರ ಕ್ಷೇತ್ರ ಮತ್ತಿತರ ವಿಧಾನಗಳಂತೆ ನಡೆದಿದ್ದ ಚುನಾವಣೆಯು ಸುಮಾರು ಹನ್ನೆರಡು ವರ್ಷಗಳಿಗೂ ಮಿಕ್ಕಿ ಕಳೆದ ಈ ಅವಧಿಯಲ್ಲಿ ಎಷ್ಟೋ ಮತದಾರರು ಮಡಿದಿರಬಹುದು; ಉಳಿದಿರುವವರು ತಮ್ಮ ಜೀವನದ ಒಂದಂಕದಿಂದ ಇನ್ನೊಂದು ಅಂಕಕ್ಕೆ ಬಂದಿರಬೇಕು.

ಈ ಹಳೇ ಶಾಸನದನ್ವಯ ಮದ್ರಾಸ್ ಪ್ರಾಂತ್ಯದಲ್ಲಾದ ಚುನಾವಣೆಗಳಲ್ಲಿ ಈ ಬಾರಿಯ ಬೋರ್ಡು ಚುನಾವಣೆಯೇ ಪ್ರಾಯಶಃ ಕೊನೆಯದು. ಇನ್ನು ಮುಂದಿನ ಶಾಸನಸಭೆ, ಜಿಲ್ಲಾ ಬೋರ್ಡು, ಪಟ್ಟಣಸಭೆ, ಗ್ರಾಮಪಂಚಾಯತ್ ಚುನಾವಣೆಗಳೆಲ್ಲವೂ 1951ನೇ ಜನವರಿ 26ರಲ್ಲಿ ಅಸ್ತಿತ್ವಕ್ಕೆ ಬರಲಿರುವ ರಿಪಬ್ಲಿಕ್ ಭಾರತದ ನವ ಶಾಸನದನ್ವಯ ಪ್ರಾಯಶ್ಚಿತ್ತಿಲ್ಲರ ಮತದಾನ ಪದ್ಧತಿಯ ನ್ಯಾಧಾರಿಸಿಯೇ ನಡೆಯಲಿವೆ.

ಪ್ರಚಲಿತ ಶಾಸನವನ್ನಾಧರಿಸಿ ನಡೆದ ಕೊನೆಯ ಚುನಾವಣೆಯಲ್ಲೂ ಪದ್ಧತಿ ಪ್ರಕಾರ ಕಾಂಗ್ರೆಸ್ ಪಕ್ಷವೇ ವಿಜಯಿಯಾಗಿದೆ. ಈ ಶಾಸನವು ಜಾರಿಗೆ ಬಂದಂದಿನಿಂದಲೇ ಕಾಂಗ್ರೆಸು ಪಾರ್ಲಿಮೆಂಟೇರಿಯನ್ ಕಾರ್ಯಕರ್ತರಂಗಕ್ಕಿಳಿದಿದ್ದಿತು; ಮದ್ರಾಸ್ ಪ್ರಾಂತ್ಯದಲ್ಲಿ ಅದನ್ನಾಧರಿಸಿ ನಡೆದ ಪ್ರತಿಯೊಂದು ಚುನಾವಣೆಯನ್ನೂ ಕಾಂಗ್ರೆಸ್ಸೇ ಗೆದ್ದುಕೊಂಡಿದ್ದಿತು; ಕೊನೆಯದಾದ ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಗಳಲ್ಲಿ ಮುಸ್ಲಿಂ ಧನ್ನತೆ ತೀರಾ ಕಡಿಮೆಯಾಗಿದ್ದಿತು.

ವಿಶ್ವ ಮತದಾನದೊಳಗಡೆ ಕಾದಿಟ್ಟ ಸ್ಥಾನಗಳಿರುವ ಹರಿಜನರು, ಕ್ರೈಸ್ತರೇ ಮೊದಲಾದವರಲ್ಲಿ ವಿಶೇಷ ಜನಪ್ರಿಯವಾಗಿರುವ ಪಕ್ಷಕ್ಕೆ ಸೇರಿದವರೇ ಆರಿಸಲ್ಪಡುವದು ಸಹಜ. ತದನುಸಾರ, ಕಾಂಗ್ರೆಸಿನ ಪರವಾಗಿ ನಿಂತವರೇ ಹೆಚ್ಚು ಕಡೆಗಳಲ್ಲಿ ಗೆದ್ದು ಬಂದಿದ್ದಾರೆ.

ಕಾಂಗ್ರೆಸಿಗೆ ಜನತಾ ಬೆಂಬಲವಿದೆಯೆಂಬುದು ಈ ಬಾರಿಯ ಚುನಾವಣೆಯಲ್ಲಿ ವ್ಯಕ್ತವಾಗಿದೆ. ಕಳೆದ ಹತ್ತು ಪೈಕಿ ಎರಡು ವರ್ಷಗಳಿಂದ ರಾಷ್ಟ್ರದ ಪ್ರತಿಯೊಂದು ಚುನಾವಣೆಯಲ್ಲೂ ವಿಜಯವು ಕಾಂಗ್ರೆಸಿನ ಸಾಲಿಗೆ ವೀಣೆಲಿಟ್ಟ ಸೊತ್ತಾಗಿ ನಿಂತುಕೊಂಡಿದೆ ಪ್ರಜಾಸತ್ತಾತ್ಮಕ ಜನಮತ ಕ್ಷೇತ್ರದಲ್ಲಿ ಒಂದು ರಾಜಕೀಯ ಪಕ್ಷವು ಇಷ್ಟು ದೀರ್ಘಾವಧಿ ಪ್ರಥಮಸ್ಥಾನದಲ್ಲಿ ರಾಜಿಸಿದ ನಿದರ್ಶನ ಲೋಕ ಚರಿತ್ರೆಯಲ್ಲೇ ವಿರಳ.

ಈ ಬಾರಿಯ ಬೋರ್ಡು ಚುನಾವಣೆಯ ಫಲಿತಾಂಶಗಳಲ್ಲಿ ಕಣ್ಣಾರೆ ಗೆತ್ತಿಕೊಂಡು ಸಂಯಾಗಿ ವರೀಕ್ಷಿಸಿ ನೋಡಬೇಕಾದ ಕೆಲವಂಶಗಳು ಕಂಡುಬಂದಿವೆ.

ಕೊಸತಾನಿ ಸ್ವಧಾರ್ಮರಂಗಕ್ಕಿಳಿದ ಕಮ್ಯೂನಿಸ್ಟ್ ಮತ್ತು ಸೋಶಿಯಲಿಸ್ಟ್ ಪಕ್ಷಗಳು ಕಾಂಗ್ರೆಸಿನಿಂದಿರಲ್ಲಿ ಸಂಪೂರ್ಣವಾಗಿ ಸೋತುಹೋಗಿವೆ. ಇಡೀ ಮದ್ರಾಸ್ ಪ್ರಾಂತ್ಯದ ಯಾವುದೇ ಒಂದು ಜಿಲ್ಲೆಯಲ್ಲಿ ಇವೆರಡು ಪಕ್ಷಗಳ ಒಬ್ಬನೇ ಒಬ್ಬ ಉಮೇದ್ವಾರಿಯಾದರೂ ಗೆದ್ದು ಬಂದುದು ತೋರುವುದಿಲ್ಲ. ಮಾತ್ರವಲ್ಲ, ಕಮ್ಯೂನಿಸ್ಟರು ಮತ್ತು ಸಮತಾವಾದಿಗಳು ತಮ್ಮ ಉಮೇದ್ವಾರಿಕೆಗಳನ್ನು ಇದಿರೊಡ್ಡಿದಲ್ಲೆಲ್ಲಾ ಟಿಲ್ಲಾ ಬೋರ್ಡಿನ ಸ್ಥಾನ ಸಂಪಾದನೆಯ ಬದಲಿಗೆ, ಕಟ್ಟಿದ ಧನ ಕಾಣದ ಮರು ಸಂಪಾದನೆಗಾಗಿಯೇ ಹೋರಾಡುವಷ್ಟು ಈ ಚುನಾವಣಾ ರಂಗದಲ್ಲಿ ಹಿಂದೆಬಿದ್ದಿದ್ದರು ಉಮೇದ್ವಾರಿಕೆ ಭದ್ರತಾ ಹಣವೇ ಇವರ ಪಾಲಿಗೆ ಜೂಜಿಗೆ ಕಟ್ಟಿದ ಹಣದಂತಾಗಿತ್ತು, ಅದನ್ನು ಮಂಳಿ ಪಡಕೊಳ್ಳುವುದರಲ್ಲಿ ಆರೆಮಾಸಿ ಮಂದಿ ಗೆದ್ದಿದ್ದರೆ ಉಳಿದರ್ಧ ಮಂದಿ ಸೋತು ಹೋಗಿದ್ದಾರೆ.

ಕಾಂಗ್ರೆಸ್ ಉಮೇದ್ವಾರಿಗಳು ಸೋತುಹೋದಲ್ಲೆಲ್ಲಾ ಗೆದ್ದು ಬಂದವರೆಂದರೆ ಯಾವಪಕ್ಷಕ್ಕೂ ಸೇರದ 'ಸ್ವತಂತ್ರ'ರು.

ಇವೆಲ್ಲಾ ವಿದ್ಯಮಾನಗಳ ಮೇಲಿಂದ ಇಂದಿನ ಪರಿಸ್ಥಿತಿ ಮತ್ತು ಮುಂದಿನ ಸಂಭವಗಳ ಪರಿಚಯ ಮಾಡಿಕೊಳ್ಳಲು ಸಾಧ್ಯವಿದೆ. ಪ್ರಜಾಸತ್ತಾ ಪದ್ಧತಿಯಲ್ಲಿ ವಯಸ್ಕರ ಚುನಾವಣೆಗಳ ಫಲಿತಾಂಶಗಳೇ ಜನಮತದ ಪ್ರತಿಬಿಂಬಗಳು.

ಕಾಂಗ್ರೆಸಿನಿಂದಿರಲ್ಲಿ ಕಮ್ಯೂನಿಸ್ಟರು ಮತ್ತು ಸೋಶಿಯಲಿಸ್ಟರು ಪಡೆದ ಅಪಜಯಗಳ ಮೇಲಿಂದ ಜನತೆಯು ಕಾಂಗ್ರೆಸನ್ನಲ್ಲದೆ ಬೇರಾವ ರಾಜಕೀಯ ಪಕ್ಷವನ್ನೂ ನೆಚ್ಚುವುದಿಲ್ಲವೆಂದಾಗುತ್ತದೆ. ಅಪರಾಭವಗಳ ಕಿನಿತ್ವ ತರಗಳು ಮೇಲಿಂಕಮ್ಯೂನಿಸ್ಟ್ ಮತ್ತು ಸೋಶಿಯಲಿಸ್ಟರು ಜನರಿಗೆ ತೀರಾ ಅಪ್ರಿಯ ಮತ್ತು ಅಪರಿಚಿತರಿದ್ದಾರೆ, ಎಂದಾಯಿತು.

ಬಲವಾದ ಸ್ಪರ್ಧೆಯಿದ್ದಲ್ಲೆಲ್ಲಾ ಕಾಂಗ್ರೆಸಿಗರನ್ನು ಸೋಲಿಸಿ, ಯಾವುದೇ ನಿಶ್ಚಿತ ಧ್ಯೇಯ, ಧೋರಣೆಗಳಿರದ ಸ್ವತಂತ್ರ ಉಮೇದ್ವಾರಿಗಳು ಗೆದ್ದಿರುವುದರ ಮೇಲಿಂದ ಕಾಂಗ್ರೆಸಿಗರ ಕಡೆಗೆ ಜನತೆ ಅತೃಪ್ತಿಗೊಂಡಿರುವ ಅಂಶ ಪ್ರಕಟವಾಯಿತೇ ಹೊರತು ಅನ್ಯ ಪಕ್ಷಕ್ಕೊಲಿದ ಭಾವನೆ ತೋರಿಬಂದಿಲ್ಲ.

ಎಲ್ಲಿ, ಯಾರು ಸೋತಿರುವರೋ, ಅವರು ಈ ಚುನಾವಣೆಯಲ್ಲಿ ಮಾಡಿರುವ ವೆಚ್ಚ ಕಡಿಮೆಯೆಂಬುದು ತಿಳಿದುಬರುತ್ತದೆ ಈ ಮಾತಿಗೆ ಅಪವಾದಗಳೆಂದರೆ ಅಧಿಕ ವೆಚ್ಚವಾಡಿಯೂ ಕೆಲವೆಡೆ ಜಯಗೊಂಡ 'ಸ್ವತಂತ್ರ'ರು ಮಾತ್ರ ಹೇಗಿದ್ದರೂ ಈ ಚುನಾವಣೆಯಲ್ಲಿ, 'ಹಣ'ವು 'ಕಾಂಗ್ರೆಸ್'ನಷ್ಟೆ' ಪ್ರಾಮುಖ್ಯವಾಗಿದ್ದಿತೆಂಬುದು ಸ್ಪಷ್ಟವಾಗಿದೆ.

ವಿಮೆಮಾಡಲಿಕ್ಕೆ ಯಾ ಪ್ರತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಮುಖ್ಯ ಕಾರ್ಯಾಲಯ:—ಧಾರವಾಡ,
THE UNITED KARNATAK INSURANCE COMPANY, LIMITED.

'ಹೆಣ' ಮತ್ತು 'ಕಾಂಗ್ರೆಸ್'ಗೆ ಸರಿಸಮಾನವಾಗಿ ತೋರಿಬಂದ ಮತ್ತೊಂದು ವಿಷಯವೆಂದರೆ 'ಜಾತಿ'. ಕಾಂಗ್ರೆಸಿನವರಾದರೇ ಯಾವ ಮತದಾರ ಕ್ಷೇತ್ರದಲ್ಲಿ ಯಾವ ಜಾತಿಯವರ ಪ್ರಭಾವ ಅಧಿಕವಿದೆಯೋ, ಅಲ್ಲಿಗೆ ಆ ಜಾತಿಯವರನ್ನೇ ಹುರಿಯಾಳಾಗಿ ಆರಿಸಿದ್ದು ದೂ, ಎಲ್ಲೆಲ್ಲೂ ಜಾತಿಪ್ರಭಾವವನ್ನಾಧರಿಸಿ ಜಯ ದೊರಕಿರುವುದೂ ಕಂಡುಬಂದಿದೆ ಉಮೇದ್ವಾರಿಗಳ ವ್ಯಕ್ತಿಗತ ಯೋಗ್ಯತೆಯಾಗಿದ್ದುದು ಕೂಡಾ ಈ ಮೂರು ಸ್ವಾಮ್ಯಗಳ ವಿಷಯಗಳೇ.

ಅಂಕಿಅಂಶ ಜನಾವಣಾ ವಿದ್ಯಮಾನಗಳನ್ನು ಸರಿಯಾಗಿ ಹಿಂದಿನೋಡುವಾಗ ಜನಿಸುವ ರಸಬಿಂದುಗಳಿವು:-

ತನ್ನ ಹಿಂದಿನ ಕೀರ್ತಿಭಂಡಾರದ ಬಲದಿಂದ ಜನಾವಣೆಯಲ್ಲಿ ಹೋರಾಡಿದ 'ಕಾಂಗ್ರೆಸ್'ನ ಸರಿಸಮಾನ ಪ್ರತಾಪವನ್ನೇ 'ಹೆಣ' ಮತ್ತು 'ಜಾತಿ'ಗಳೂ ಈ ಹೋರಾಟರಂಗದಲ್ಲಿ ಪ್ರದರ್ಶಿಸಿದ್ದುವು. ತತ್ವತಃ ಮುಂದಾಗಿ ಇವೆರಡು ದುಶ್ಯಕ್ತಿಗಳೊಡನೆ ಹೋರಾಡಿ ಗೆಲ್ಲಬೇಕಾಗಿದ್ದ ಕಾಂಗ್ರೆಸ್ಸು, ಹಾಗೇನೂ ಮಾಡದೆ ಅವುಗಳ ಮೈತ್ರಿ ಕಟ್ಟಿಕೊಂಡೇ ವಿಜಯಗಳಿಸಿಕೊಂಡಿತೆಂಬುದು ಅಸಮಾಧಾನಕರ.

ಕಾಂಗ್ರೆಸಿನಿಂದ ಅಲ್ಲಲ್ಲಿ ಜಯಶೀಲ ಇದಿರುವಾದಿಗಳಾದ 'ಸ್ವತಂತ್ರ' ರೆಂಬವರು ತಮಗೆ ಕಾಂಗ್ರೆಸ್‌ಬಿಲ್ಲೆ ದೊರಕುವುದಸಾಧ್ಯವಾಗಿ, ವಿಕ್ಯ ಪತ್ರಗಳನ್ನು ಕೂಡಿಕೊಳ್ಳುವುದು ಅಸಹ್ಯವಾಗಿ ಆ ಶ್ರಿತಂಕಃ ಸ್ಥಾನ ನೆಂದಿದವರೇ. ಇಂಥವರು ಹಣ,ಹೆಂಗು ಮತ್ತು ಜಾತೀಯತೆಯನ್ನು ಅವಲಂಬಿಸುವದರಲ್ಲಿ ಕಾಂಗ್ರೆಸಿಗರಿಗಿಂತ ಮೇಲ್ಗೈ ಯ್ಯಾಗಿಯೇ ಕಾಂಗ್ರೆಸ್ಸನ್ನು ಸೋಲಿಸಿದ್ದರಲ್ಲದೆ ಅನ್ಯಥಾ ಇಪ್ಪ ಕಾಂಗ್ರೆಸಿನ ಈ ಅತೃಪ್ತ ವರ್ಗವೆಂಬುದು, ಕಾಂಗ್ರೆಸಿಗರ ಕಡೆಗೆ ಈಗ ಬೆಳೆಯುತ್ತಿರುವ ಜನತಾ ಅತೃಪ್ತಿಯ ಪ್ರತಿನಿಧಿಗಳಾಗಿ ತೋರಿಬಂದರೆನ್ನಬಹುದು. ಈ ಮಾನದಿಂದ ಆಳಿಯುವಾಗ ಕಾಂಗ್ರೆಸಿಗರ ಕಡೆಗಿನ ಜನತಾ ಅತೃಪ್ತಿ ಬೆಳೆದಿದೆಯೆಂಬುದು ಸ್ಪಷ್ಟವಾದೆ.

ಕಾಂಗ್ರೆಸಿಗರು ಮತ್ತು ಸ್ವತಂತ್ರರು ಹಣ, ಹೆಂಗು ಮತ್ತು ಜಾತೀಯತಾ ಪ್ರಭಾವಗಳಿಂದ ಗೆದ್ದಿರುವಾಗ ಸಮತಾವಾದಿಗಳು ಮತ್ತು ಕಮ್ಯೂನಿಸ್ಟರು ಅಂತಹದಾವುದೂ ಇಲ್ಲದೆ ಸೋತುಹೋಗಿದ್ದಾರೆ. ಕೇವಲ ಆ ಪ್ರಭಾವಗಳ ಅಭಾವದಿಂದಾಗಿಯೇ ಈ ಪಕ್ಷಗಳು ಸೋತುದಾಗಿದ್ದರೆ, ಅವುಗಳಿಗೆ ಸ್ಥಾನ ದೊರಕದೆ ಹೋದರೂ ವಿಚಾರಗಳೆಲ್ಲರ ಸಹಾನುಭೂತಿ ದೊರಕುತಿತ್ತು. ವ್ಯವಹಾರಾರ್ಹ ಜನತಾ ಭೈಯ.ಭೋರ ಜೆಗಳನ್ನಿಟ್ಟುಕೊಂಡು, ತಾವು ಪ್ರಗತಿಸಾಧಕರೆಂಬ ವಿಶ್ವಾಸವು ಜನತೆಯುಲ್ಲಿ ಮೂಡಿಸುವಂತೆ ಮಾಡಲು ಈ ಪಕ್ಷಗಳವಂದಾಗುತ್ತಿದ್ದರೆ, ಈ ಕಾಲ ಮತ್ತು ಇಂದಿನ ಸ್ಥಿತಿಗತಿಗಳಲ್ಲಾದರೂ ನಿಜಕ್ಕೂ ಅವುಗಳಂತಹ ಲಜ್ಜಾವಹ ಅಪಜಯವನ್ನು ಪಡೆಯಬೇಕಿರಲಿಲ್ಲ.

ನಿರ್ಲಂಕ್ಷಿತ ಸಂಖ್ಯೆಯ ಶ್ರೀಮಂತ ಪಕ್ಷಪಾತಿ ಮತದಾರರಿರುವಲ್ಲಿ, ಹಣ ಮತ್ತು ದುರಭಿಮಾನಗಳನ್ನು ಪ್ರಯೋಗಿಸಲಾರದ ದೆಸೆಯಿಂದಲೇ ತಾವು ಸೋಲಬೇಕಾಯಿತೆಂದು ಕಮ್ಯೂನಿಸ್ಟ್, ಸೋಶಿಯಲಿಸ್ಟರನ್ನ ಬಹುದು. ಆದರೆ, ಅವರ ಉಮೇದ್ವಾರಿಗಳು ಕೂಡಾ ಈ ಮತದಾರ ವರ್ಗಕ್ಕೆ ಸೇರಿದವರೇ ಇರುವಾಗ-ಅಕ್ಷರಜ್ಞ ಜನತೆಯ ಒಂದಂಶವಾಗಿರುವ ಈ ವರ್ಗವೂ ಸಾರ್ವಜನಿಕರ ಒಂದು ಯಥಾರ್ಥ ಭಾಗವಾಗಿರುವಾಗ-ಈ ವರ್ಗವು ಮೂಡಿದುದನ್ನೇ, ಸಂದರ್ಭ ಪೊದಗುತಿದ್ದರೆ ಸಾರ್ವಜನಿಕರೆಲ್ಲರೂ ಮಾಡುತಿದ್ದರೆಂಬುದನ್ನು ಊಹಿಸಬೇಕು. ಕಸವೆಂದು ಗಣಿಸಲ್ಪಟ್ಟು ಒಂದು ಕೂಣೆಯಲ್ಲಿ ಝಾಡಿಸಲ್ಪಟ್ಟುದು, ಅನಕಾಶವೊದಗಿದರೆ ಇಡೀ ಮನೆಯಲ್ಲೂ ಕಸವಾಗಿ ಗುಡಿಸಲ್ಪಡಬಹುದೇ ಹೊರತು ಕಸ್ತೂರಿಯಾಗಿ ಗಣಿಸಲ್ಪಡಲಾರದು.

ಸ್ವತಂತ್ರವಾಗಿ ಕಾಂಗ್ರೆಸನ್ನೆದಿರ್ಪಧಿಸಿದ ಸಮರ್ಥರು ಸೋತುದಕ್ಕಿಂತ ಗೆದ್ದುದೇ ಹೆಚ್ಚಿಗೆ. ಕಾಂಗ್ರೆಸ್ ಹೋರಾಡಿ ಗೆದ್ದುದೆಂದರೆ ದುರ್ಬಲ ಪಕ್ಷವನ್ನು ಕಟ್ಟಿಕೊಂಡ ದೃಷ್ಟಿಯಿಂದಷ್ಟೇ ಅಲ್ಲ-ಎಲ್ಲಾ ದೃಷ್ಟಿಯಿಂದಲೂ ದುರ್ಬಲರನ್ನಿಸಿದ್ದ ಇದಿರುವಾದಿಗಳನ್ನು ಮಾಪ್ಯ ಕಾಂಗ್ರೆಸ್ ಉಮೇದ್ವಾರರನ್ನು ಇದಿರಿಸುವ ಕಾರಣಗಳು ಮತ್ತು ಮನಸ್ಸಿದ್ದರೂ ಗತಕಾಲದಕಾರ್ಯಗಳಿಂದ ಕಾಂಗ್ರೆಸ್ ಗಳಿಸಿಕೊಂಡಿದ್ದ ಸ್ಥಾನಮಾನಗಳಗಿದಿರು ಬೀಳುವ ಎದೆಗಾರಿಕೆಯಿಲ್ಲದೆ. ಅಥವಾ ದೂರದೃಷ್ಟಿಯಿಟ್ಟುಕೊಂಡು ತಟಸ್ಥರಾಗಿ ಸಹಿಸಿ ನಿಂತವರನ್ನು, ಕಾಂಗ್ರೆಸ್ ವಿಜಯದೊಂದು ವಸ್ತುಸ್ಥಿತಿ ಕಾರಣವೆಂದು ಗಣಿಸಬೇಕಾಗಿದೆ.

ಗ್ರಾಮವಾಸಿಗಳು ಕಾಂಗ್ರೆಸಿನ ಕಡೆಗೆ ತೋರಿಸಿದ್ದಂತಹ ನಿಷ್ಠೆಯನ್ನು ನಗರವಾಸಿಗಳು ಈ ಬಾರಿ ತೋರಿಸಿಲ್ಲವೆಂಬುದು ಈ ಜಿಲ್ಲಾ ಬೋರ್ಡು ಚುನಾವಣೆಯಲ್ಲೂ, ಅಲ್ಲಲ್ಲಿಯ ನಗರಸಭಾ ಚುನಾವಣೆಗಳಲ್ಲೂ ಸಿದ್ಧವಾಗಿದೆ. ಕಾಂಗ್ರೆಸ್ ಪ್ರಭಾವವು ಪಟ್ಟಣದಿಂದಾರಂಭಿಸಿ, ಆ ಮೇಲೆ ಹಳ್ಳಿಗಳಿಗೆ ವ್ಯಾಪಿಸಿಕೊಂಡಿದ್ದಿತೆಂಬುದನ್ನೂ, ಈಗ ಅದೇ ಕ್ರಮವನ್ನನುಸರಿಸಿ ಕಾಂಗ್ರೆಸ್ ಪ್ರತಿಷ್ಠೆ ಜಾರಹತ್ತಿರುವದನ್ನೂ ನೋಡುವಾಗ ಏರಿದ್ದ ಪತಾಕೆ ಇಳಿಯಹತ್ತಿರುವ ದೃಶ್ಯ ತೋರುತ್ತಿದೆ. ಕಾಂಗ್ರೆಸಿಗರೂ ಅತ್ತ ದೃಷ್ಟಿ ಹರಿಸಬೇಕಾದುದು ಅಗತ್ಯ.

ಅಕ್ಷರಜ್ಞರೆಲ್ಲರಿಗೆಂದಿರುವ ಪ್ರಜಾಲಿತ ಮತದಾರ ಪಟ್ಟಿಯು ಅಪೂರ್ಣವಾಗಿರುವಂತೆಯೇ, ಸರಿಯಾಗಿ ಕಾರ್ಯವಾಗದಿದ್ದರೆ ವ್ಯಾಯಸ್ಥರೆಲ್ಲರಿಗೆಂದಿರುವ ಮುಂದಿನ ಮತದಾರಪಟ್ಟಿಯೂ ಅಪೂರ್ಣವಾಗಿಯೇ ಉಳಿದಿತು. ಏನಿಲ್ಲಿಂದರೂ ಈಗಿರುವ ಮತದಾರ ಸಂಖ್ಯೆಗಿಂತ ಇಮ್ಮಡಿ ಅಥವಾ ಮೂರು ಪಾಲಷ್ಟುಮುಂದಿನ ಮತದಾರರ ಸಂಖ್ಯೆ ಬೆಳೆಯಬಹುದು. ಈ ವಿಸ್ತರಣೆಯಿಂದಾಗಿ ವ್ಯಕ್ತಿಪ್ರಭಾವಗಳು, ಹಣ-ಹೆಂಗು-ಜಾತಿ ವರ್ಚಸ್ಸುಗಳು ಸ್ವಾಭಾವಿಕವಾಗಿ ಕಡಿಮೆಯಾಗುವವೆಂದು ನಿರೀಕ್ಷಿಸಬಹುದು. ಆದರೆ ಎಸೆಂಬ್ಲಿ ಸ್ಥಾನಗಳ ಸಂಖ್ಯೆ ಹೆಚ್ಚಿ, ಮತದಾರ ಕ್ಷೇತ್ರದ ವಿಸ್ತಾರ ಕಡಿಮೆಯಾಗುವುದರಿಂದ ಸ್ಥಳೀಯ ವರ್ಚಸ್ಸು ಮತ್ತದಕ್ಕೆ ಹೊಂದಿಕೊಂಡಿರುವ ಎಲ್ಲಾ ದುಶ್ಯಕ್ತಿಗಳ ಪ್ರಭಾವ ತೋರಿ ಬರುವದುಅಗಲೂ ಸಂಭವನೀಯ ಆದ್ದರಿಂದ ಯಾವುದು ಯಾವ ಆಕಾರಕ್ಕೆ ತಿರುಗಿದರೂ ಜನತೆಯ ಬುದ್ಧಿ ಸಂಸ್ಕಾರಗೊಳ್ಳದೆ ಮತ್ತು ಜೀವನ ಮಟ್ಟವನ್ನೇರದೆ, ಮುಂದಕ್ಕಾದರೂ ಎಲ್ಲವೂ ಸುಗಮವಾದೀತು, ಸುಖಕರವಾದೀತು, ಪ್ರಗತಿಪರವಾದೀತು, ಎಂದು ನಿರೀಕ್ಷಿಸುವುದು ಅಸಾಧ್ಯ.

ಆದ್ದರಿಂದ ಜನಮತವನ್ನು ತಿದ್ದುವುದು ಮತ್ತು ಜಾಗ್ರತಿ ನಿರ್ಮಿಸುವುದೇ ಪ್ರಗತಿ ಚಿಂತಕರೆಲ್ಲ ಕರ್ತವ್ಯವಾಗಿರಬೇಕು. ಪ್ರಾಯಸ್ಥರೆಲ್ಲರ ಹೆಸರೂ ಮತದಾರ ಪಟ್ಟಿಯಲ್ಲಿ ಬೀಳುವಂತೆ ನೋಡುವುದರೊಂದಿಗೆ, ಅವರು ಪ್ರಾಯದಂತೆಯೇ ಬುದ್ಧಿಯಲ್ಲಿ ಪ್ರಬುದ್ಧರಾಗುವಂತೆಯೂ ಮಾಡಬೇಕು.

ಕಾಶ್ಮೀರ—

ಪಂಡಿತ ನೆಹರುಗಳಿಂದ ಉದ್ಘಾಟಿಸಲ್ಪಟ್ಟು ಶೇಕ್ ಅಬ್ದುಲ್ಲಾರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ ತಾ 24ರಿಂದ 28ರ ವರೆಗೆ ಶ್ರೀನಗರದಲ್ಲಿ ಜರುಗಿದ ಜಮ್ಮು ಮತ್ತು ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನದ ವಾರ್ಷಿಕಾಧಿವೇಶನವು ಕೆಲವು ಪ್ರಾಮುಖ್ಯ ಹಾಗೂ ಸ್ಪಷ್ಟ ನಿರ್ಧಾರಗಳನ್ನು ಮಾಡಿದೆ. ಅಮಂತ್ರಣಾನುಸಾರವಾಗಿ ಶ್ರೀನಗರಕ್ಕೆ ಹೋಗಿ ಆ ಸಮ್ಮೇಳನವನ್ನು ಉದ್ಘಾಟಿಸಿದ ಪಂಡಿತ ನೆಹರುಗಳು, ಕಾಶ್ಮೀರೀ ಜನತೆಗೆ ಭಾರತ ಸರಕಾರವು ಕೊಟ್ಟಿರುವ ಬೆಂಬಲವು ಅಚಲವಾದುದು ಮತ್ತು ಅಭೇದ್ಯವಾದುದೆಂಬುದನ್ನು ಮತ್ತೊಮ್ಮೆ ಒತ್ತಿ ಹೇಳಿ ಹಾಗೆಯೇ ಮಾಡಿದ್ದರು. ಆ ಮೇಲೆ ಸಮ್ಮೇಳನದಲ್ಲಾದ ಭಾಷಣಗಳೂ ನಿರ್ಧಾರಗಳೂ ಕೇವಲ ಕಾಶ್ಮೀರೀ ಜನತೆಯವುಗಳೇ. ಅಧ್ಯಕ್ಷ ಸ್ಥಾನದಿಂದ ಶೇಕ್ ಅಬ್ದುಲ್ಲಾರಂದಿದ್ದರು. "ಕಾಶ್ಮೀರ ವಿವಾದದ ಕುರಿತು ಸ್ವಂತ ನಿರ್ಧಾರವನ್ನು-ಕೇವಲ ಸ್ವನಿರ್ಧಾರವನ್ನೇ-ಅಧರಿಸಿರುವ ಯೋಗ್ಯ ಹಾಗೂ ನ್ಯಾಯವಾದ ತೀರ್ಮಾನಕ್ಕೆ ಬಂದೇ ಕೆಂಬುದೇ ಅಖಿಲ ಕಾಶ್ಮೀರೀ ಜನತೆಯ ಅಚಲ ನಿರ್ಧಾರ, ಅಧ್ಯಕ್ಷ ಟ್ರೂಮನ್ ಮತ್ತು ಪ್ರಧಾನಿ ಆಟ್ಲೀ ಎಂಬಿರು ಮಾಡಿದ 'ನಿವಾದ ವಿಷಯಗಳನ್ನು ಮಧ್ಯಸ್ಥಗಾರನ ತೀರ್ಮಾನಕ್ಕೆ 'ಬಿಡಬೇಕು' ಎಂಬ ಸೂಚನೆಯು ಅರ್ಥವೆಂದರೆ ಅಭ್ಯರ್ಥಿಗಳಿಂದ ಮನವೊಲಿಸುವದೆಂದೇ ನಮ್ಮ ಯಥಾರ್ಥ ಅಭಿಪ್ರಾಯ". ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನವು, ಭಾರತ ಸರಕಾರ ಮತ್ತು ಜನತೆಯು ಕಾಶ್ಮೀರಕ್ಕೆತ್ತ ಹಾರ್ದಿಕ ಹಾಗೂ ಸರ್ವವಿಧದ ಸಹಾಯಕ್ಕಾಗಿ, ತಾನು ಚಿರಋಣಿಯೆಂಬ ನಿರ್ಣಯ ಮಾಡಿದೆ. ಹಿಂದೀ ಸೇನೆಗಳ ನಾಜೂಕುಪರಾಕ್ರಮವನ್ನು ಮುಕ್ತಕಂಠದಿಂದ ಕೊಂಡಾಡಿದೆ. ಪ್ರಜಾಸತ್ತಾತ್ಮಕ ಕಾಶ್ಮೀರದ ಭವಿಷ್ಯವು ಸದಾ ಕಾಲ ಭಾರತದೊಂದಿಗೇನೇ ಜೋಡಣೆಗೊಂಡಿರಬೇಕಾವುದು ಅನಿವಾರ್ಯವೆಂದು ಖಚಿತಪಡಿಸಿದೆ. ಕಾಶ್ಮೀರ ಕ್ಷಮಿಶನು ಕೂನೆಗೆ ಮುಂದಿಟ್ಟಿದ್ದ ಸೂಚನೆಯನ್ನು ಕಂಠೋಕ್ತವಾಗಿ ಖಂಡಿಸಿ, "ಇದು ಜೀವನ ಮರಣದ ಪ್ರಶ್ನೆಯನ್ನು ನೋಡಿ, ತೆಗೆದು ತಳೆಯುವಂತಹ ಕುರುಡು ವಿಧಾನವೇ ಸರಿ" ಎಂದಿದೆ. ಪಾಕಿಸ್ತಾನ್ ಅಸ್ತಿತ್ವವಾದವಾದ ದ್ವಿರಾಷ್ಟ್ರ ತತ್ವದ ಮೂಲವನ್ನೇ ಹೀಗಳೆದಿದೆ. ಈ ರೀತಿ ಕಾಶ್ಮೀರ ಜನತೆಯ ಏಕಮಾತ್ರ ಪ್ರತಿನಿಧಿ ಸಂಸ್ಥೆಯಾದ ರಾಷ್ಟ್ರೀಯ ಸಮ್ಮೇಳನದಲ್ಲಾದ ನಿರ್ಧಾರಗಳೂ, ಅಲ್ಲಿ ಸ್ಪಷ್ಟ ಪ್ರಕಾಶ ಪಡೆದ ಕಾಶ್ಮೀರೀ ಭಾವನೆಗಳೂ ಭಾರತೀಯರಲ್ಲಿ ಭರವಸಯನ್ನು ಮೂಡಿಸುವಂತಹವು. ಕಾಶ್ಮೀರದ ಅಗ್ರಹದ ಕರೆಯನ್ನು ಮನ್ನಿಸಿ, ಯಾವ ಒತ್ತಡದಡಿಗೂ ಬೀಳದೆ ಅದು ತನ್ನ ಭವಿಷ್ಯವನ್ನು ತಾನೇ ನಿರ್ಧರಿಸಿಕೊಳ್ಳುವಂತೆ ಮಾಡಬೇಕಂಬ ಏಕಮಾತ್ರ ಧ್ಯೇಯದಿಂದ ಭಾರತ ಸರಕಾರವು ಅದಕ್ಕೆ ಸಹಾಯಕ್ಕೆ ಹೋಗಿದ್ದಿತು. ಅಂದಿನಿಂದ ವರೆಗೆ ಕಾಶ್ಮೀರರಂಗದಲ್ಲಿ ಹಿಂದೀ ಜನತೆ

Retailers' Choice:

MILL CLOTH - Unlimited choice of Qualities and Varieties to suit every one's taste. All Varieties in Stock.

SILKS - Just unpacked— Wide range of selection— at reduced rates Finest Products of the Famous Producers.

FOREIGN CLOTH - Imported Varieties— Noted for their uniform and unvarying quality— Yet Prices within the reach of one and all.

All varieties are avaliable in many beautiful shades and designs

Visit will convince you—

VITHALJI & CO., LTD.

The Pioneer Cloth Dealers of the District.

MANGALORE.

-ರಂಗದ ವಿಶೇಷ ಘಟನೆ.

ತ್ತು ಹಿಂದೀ ಶೆಂಗೆದಾರನಹೆಣ ಎಕಪ್ರಕಾರ ವ್ಯಯವಾಗುತ್ತಿವೆ. ಇಂತಹ ಮಹಾ ತ್ಯಾಗ ಕ್ಕೆ ಪ್ರತಿಫಲವಾಗಿ, ಕಾಶ್ಮೀರದ ಜನತೆಯು ಸ್ವಾತಂತ್ರ್ಯವೊಂದನ್ನಲ್ಲದೆ ಭಾರತವು ಬೇ ರಾವ ನೆಲ, ಉಪಕರಣಗಳ ಲಾಭವನ್ನೂ ಆಪೇಕ್ಷಿಸಿಲ್ಲ. ಬಹುಕಾಲದಿಂದ ಬಡಪಾ ಸ್ಥಾನವಾಗಿಯೇ ಇದ್ದು, ಇನ್ನು ಹೋ ರಾಟನಿಂತ ಹಲವು ವರುಷಗಳ್ವರೆಗೆ ಹೊ ರಗಿನ ಸಹಾಯದಿಂದಲೇ ಯಥಾಸ್ಥಿತಿ ನಿ ರ್ಮಾಣಮಾಡಬೇಕಾದಂತಹ ದುಸ್ಥಿತಿ ಯಲ್ಲಿರುವ ಕಾಶ್ಮೀರದಿಂದ, ಭಾರತವು ತಾನು ಕೊಟ್ಟುದರ ಹತ್ತರಲ್ಲಿಂದಂಶವ ನ್ನಾದರೂ ಯಾವುದೇ ರೂಪದಿಂದಎಂದಾ ದರೂ ನಿರೀಕ್ಷಿಸುವುದು ಅಸಾಧ್ಯ.ಹೀಗಿದ್ದ ರೂ ಕಾಶ್ಮೀರದ ಭವಿಷ್ಯದ ಶುಭಕ್ಕೂ, ಹಾ ಗೂ ಅಲ್ಲಿಯ ಜನತಾ ಭಾವನೆಯ ಶುಭ ತು ಸಂದೇಹ ನಿರ್ಮಿಸುವ ಅಪಸ್ವರಗಳು ಆಗಾಗ ಕೇಳಿಬಂದಿವೆ. ಈ ಸಂಶಯಗಳೆ ಲ್ಲವನ್ನೂ ಕಾಶ್ಮೀರದ ರಾಷ್ಟ್ರೀಯ ಸಮ್ಮೇ ಳನದ ನಿರ್ಣಯಗಳು ಒಮ್ಮೆಗೆ ನಿವಾರಿಸು ದುವೆಂಬುದು ಸಮಾಧಾನಕರ.

× × ×

ಲಿಜ್ಞಾನ, ಮತ್ತು ಅಪರಾಧಿಗೂ ನ್ಯಾ ಯ ಪಾ ದಿ ಗೂ ಸಮಾನಪೀಠ ಕೊ ಡುವ ಸಕ್ಷಪಾತತೆ, ಕಠಿಣ ವಿಷಯಗಳ ನ್ನೂ ಲ ಘು ವಾ ಗಿ ಕಾಣುವ ಹೆಗುರ ಬುದ್ಧಿ, ಇತ್ಯಾ ದಿ ದೌರ್ಬಲ್ಯಗಳನ್ನು ಪ್ರದರ್ಶಿಸಿ, ತಮ್ಮಿಂ ಆಟದಲ್ಲಿ ಪರಾಜಯಗೊಂಡಿರುವ ಕಾಶ್ಮೀರ ಕಮಿಶನಿನ ಅಧ್ಯ ಕ್ಷ ಎಮ್. ಕಾಲೊನಿಸ್ ಲೆಗುಯಿಝೂಮೆನ್ ಮತ್ತು ಸದಸ್ಯರಾದ ರೋಬರ್ಟ್ ಮೇರಾಡಿ, ಎಚ್. ಸಂಪರ್, ಡಬ್ಲ್ಯು ಯಸ್. ವಲ್ಲಿಯಮ್ಸ್, ಈ ನಾಲ್ವರು ಈ ಗ ಜಿನೆವಕ್ಕೆ ಮರಳಿದ್ದಾರೆ. ಕಾಶ್ಮೀರದಿಂ ದ ಮರಳುವಾಗ ಢಿಲ್ಲಿಗೆ ಬಂದು ಪಂಡಿತ ನೆಹರೂಗಳ ಚಹಾ ಪಡೆದು ಬೊಂಬಾಯಿ ಗೆ ಬಂದು ಅಲ್ಲಿಂದ ಭಾರತ ಬಿಟ್ಟಿದ್ದರು. "ಕಾಶ್ಮೀರ ಸಂಬಂಧವಾಗಿ ಭಾರತ ಮ ತ್ತು ಪಾಕಿಸ್ತಾನಗಳೊಳಗೊಂದು ಒಪ್ಪಂ ದ ಮಾಡುವುದು ಸಾಧ್ಯವೆಂಬ ಅಲೆ ನನ ಗಿನ್ನೂ ಇದೆ" ಎಂದು ಈ ಕಮಿಶನಿನವರ ಹೇಳಿಕೆ. ಜಿನೆವದಲ್ಲಿ ಮೂರು ವಾರ ನಿಂತು ಭದ್ರತಾ ಕೌನ್ಸಿಲಿಗವರ ತಮ್ಮ ವರದಿಯನ್ನೊಪ್ಪಿಸಲಿದ್ದಾರೆ. ಜಾ ಗ ತಿ ಕ ಸಂಘದಿಂದ ಕಳುಹಲ್ಪ ಟ್ಟಿರುವ 40 ಮಂದಿ ಸೇನಾ ನಿರೀಕ್ಷಕರು ಸ್ಥಿತಿಗತಿ ನಿರೀಕ್ಷಿಸಿಗಾಗಿ ಕಾಶ್ಮೀರದ ಲ್ಲೇ ಉಳಿದಿದ್ದಾರೆ.

ಕಾಶ್ಮೀರ ಕಮಿಶನು ಹೊಂಟು ಹೋ ದರೂ ಇದರ ಸೇನಾ ಸಲಹೆಗಾರನಾಗಿ ಬಂದಿದ್ದ ಲೆಫ್ಟನೆಂಟ್ ಜನರಲ್ ಡೆಲ್ಮೋ ಯಿಯು ದ್ವಿತೀಯ ಕಾಟನ್ನನಾಗಿ ಮಾ ರ್ಪಟ್ಟುದರಿಂದ, ಕಾಶ್ಮೀರ ಸರಕಾರವು ಆತನನ್ನು ದಿಗ್ಬಂಧನದಲ್ಲಿ ಇರಿಸಿಕೊಳ್ಳ ಬೇಕಾಯಿತೆಂಬುದು ಸ್ವಾರಸ್ಯದ ಮಾತೆ. ನಿಷ್ಪಕ್ಷಪಾತ ವಿಚಾರಣೆಯ ಕಾರ್ಯಭಾ ರ ಹೊತ್ತು ಬಂದಿದ್ದ, ನ್ಯಾಯಪಾಲನಾ ಬ ಲ್ಲೆತೆಯನ್ನವನೊಬ್ಬನೆಂದು ಒಳಸಂಚಿನಲ್ಲಿ ಸೇರಿಕೊಂಡಳತೆಕೇಳುವಂತಹುದಿದೆ. ಕಾಶ್ಮೀರ ಕಮಿಶನಿನವರ ಕೀರ್ಮಾನಯೋಗ್ಯತೆಗೆ ರಂತೆಯೇ ಅಕ್ಟೋಬರ ನಿಗ ಸಂಬಂಧಿಸಿದವರ ವ್ಯಕ್ತಿಗತ ಯೋಗ್ಯತೆಗಳ ಕಡೆಗೂ ಈ ಘ ಟನೆಯಿಂದಾಗಿ ಪ್ರಕಾಶ ಬೀಳುವಂತಾಗಿ ದೆ. ಕಥೆ ಹೀಗಿದೆ:-ಸರ್ದಾರ್ ಎಫೆಂ ಡಿ, ಎಂಬವನು ಕಾಶ್ಮೀರದ ಶ್ರೀಮಂತ ಭೂಮಾಲಿಕ. ಈತನೀಗ ಬಂಡಾಯಗಾರ 'ಆಝಾದ್ ಕಾಶ್ಮೀರ್' ಸರಕಾರದ ಓರ್ವ ಮಂತ್ರಿಯಾಗಿದ್ದಾನೆ. ಇವನ ಮಗನೂ ಆ ಪುಂಡುಗಾರ ಸೈನ್ಯದ ಒಂದು ಅಧಿಕಾ ರ ಸ್ಥಾನದಲ್ಲಿದ್ದಾನೆ. 1947ನೇ ಅಂತ್ಯ ಭಾಗದಲ್ಲಿ ಶ್ರೀನಗರದ ಮೇಲೆ ನಡೆದಿದ್ದ ಬಂಡಾಯಗಾರ ಧಾಳಿಯಲ್ಲಿ ಈ ತಂದೆ, ಮಗ, ಇಬ್ಬರೂ ಪ್ರಮುಖ ಭಾಗವಹಿಸಿ ದ್ದರು. ಈಗ ಇವರಿಬ್ಬರೂ ರಾವಲ್ಪಿಂಡಿ ಯಲ್ಲಿ ಬಂಡಾಯಗಾರ ಕೇಂದ್ರದಲ್ಲಿದ್ದಾ ರೆ. ಕಾಶ್ಮೀರ ಸರಕಾರವೀಗ ಇವರನ್ನು 'ದ್ರೋಹಿ'ಗಳಾಗಿ ಗಣಿಸಿ ಕಾಶ್ಮೀರದಲ್ಲಿರು ವ ಆವರ ಆಸ್ತಿಗಳಿಗೆ ಮುಟ್ಟುಗೋಲು ಹಾ ಕಿದೆ. ದ್ರೋಹಿ ಎಫೆಂಡಿಯು ಕಾಶ್ಮೀರ ಬಿಡಬೇಕಾಗಿ ಬಂದಾಗ, ಆತನು ಶ್ರೀ ನ ಗರದ ಲೈಡ್ಸ್ ಬೇಂಕಿನ ವಶದಲ್ಲಿ ಇಟ್ಟ ದ್ದ, ಧಂಗಾರ ಮುಂತಾದ ಅಮೂಲ್ಯ ಸಾ ಮಾನ್ಯಿಗಳು ಹಲವು ಪೆಟ್ಟಿಗೆಗಳ ತುಂ ಬಾ ಅಲ್ಲಿಯೇ ಉಳಿದಿದ್ದುವು. ಕಾಶ್ಮೀರ ಕಮಿಶನಿನ ಲೆಫ್ಟನೆಂಟ್ ಜನರಲ್ ಡೆ ಲ್ಮೋಯಿ ರಾವಲ್ಪಿಂಡಿಗೆ ಹೋಗಿದ್ದಾಗ ಎಫೆಂಡಿಯು ಆತನಿಗೆ ಭೇಟಿಯಾಗಿ ಶ್ರೀ ನಗರದ ಬೇಂಕಿನಲ್ಲಿದ್ದ ತನ್ನ ಮತ್ತು ತನ್ನ ಪತ್ನಿಯ ಸೊತ್ತುಗಳನ್ನು ತೆ ಗೆದು ವಿಮಾನ ಮೂಲಕ ರಾವಲ್ಪಿಂ ಡಿಗೆ ಸಾಗಿಸುವ ಅಧಿಕಾರ ಪತ್ರವ ನ್ನು ಆತನಿಗೆ ಕೊಟ್ಟಿರಬೇಕು. ಜನರಲ್ ಡೆಲ್ಮೋಯಿಯು ಶ್ರೀನಗರಕ್ಕೆ ಬಂದು ಲೈಡ್ಸ್ ಬೇಂಕಿಗೆ ಈ ಅಧಿಕಾರ ಪತ್ರವ ನ್ನು ಹಾಜರುಪಡಿಸಿ ಪೆಟ್ಟಿಗೆಗಳನ್ನೆಲ್ಲಾ ಪಡೆಕೊಂಡ. ಕಾಶ್ಮೀರ ಸರಕಾರಕ್ಕೆ ಈ ಸುದ್ದಿ ಸಿಕ್ಕಿದೊಡನೆಯೇ ಆದು ಜನರಲ್ ಡೆಲ್ಮೋಯಿಯ ಮೇಲೆ ನೋಟೀಸು ಜಾ ರಿಮಾಡಿ ತನ್ನ ಅನುಮತಿ ವಿನಹ ಭಂಗಾ ರದ ಆ ಪೆಟ್ಟಿಗೆಗಳನ್ನು ಅಲ್ಲಿಂದ ಕದಲಿಸ ಬಾರದೆಂದು ತಿಳಿಸಿತು. ಈ ಸೂಚನೆಯ ನ್ನು ಭಂಗಿಸಿ ಡೆಲ್ಮೋಯಿಯು ಪೆಟ್ಟಿಗೆ ಗಳನ್ನೊಡೆದು, ಅದರೊಳಗಿದ್ದ ಭಂಗಾರ ಗಳನ್ನು ಕಾಶ್ಮೀರ ಕಮಿಶನಿನ ವಿಮಾನ ಮೂಲಕ ರಾವಲ್ಪಿಂಡಿಗೆ ಸಾಗಿಸಿಬಿಟ್ಟ ನೆಂದು ತಿಳಿದುಬಂದಿದೆ. ಕಾಶ್ಮೀರ ಸರಕಾ ರವು ಕೂಡಲೇ ಜನರಲ್ ಡೆಲ್ಮೋಯಿ ಯನ್ನು ತೆರೆದಿಟ್ಟು ಆತನ ಈ ಕೃತ್ಯಕ್ಕಾಗಿ ಉದಾಹರಣೆ ಕೇಳತು. ಕಾಶ್ಮೀರದ ಉ ಪಪ್ರಧಾನಿ ಗು ಲಾ ವ್ ಮಹಮ್ಮದ್ ಭಕ್ಷಿಯವರು ಜ ನ ರ ಲ್ ಡೆಲ್ಮೋಯಿ ಗೆ ಬರೆದ ಪತ್ರದಲ್ಲಿ, ಆತನ ಅಚಾರಣೆಯಿಂ ದಾಗಿ ಕಾಶ್ಮೀರ ಜನತೆಯಲ್ಲಾಗಿರುವ ಸಪೇದಾರ್ಶ್ಚರ್ಯಗಳನ್ನು ನಮೂದಿಸಿದ್ದರು. "ಜಾಗತಿಕ ಸಂಘದ ಕಾಶ್ಮೀರ ಕಮಿ ಶನಿನಲ್ಲಿ ಉಚ್ಚ ಸ್ಥಾನಗಳಲ್ಲಿರುವವರೇ, ಕಾಶ್ಮೀರದ ವಿರೋಧಿ ಏಜಂಟರೆಂದು ಸಾ ರಲ್ಪಟ್ಟು ಪಾಕಿಸ್ತಾನದಲ್ಲಿರುವವರ ಪರ ವಾಗಿ, ಸಂಗತಿ ಗೊತ್ತಿದ್ದೂ ಇಂತಹ ಒಳ ಸಂಚು ನಡೆಸುವುದಾದರೆ, ಆ ಕಮಿಶನು ಇಲ್ಲಿ ಶಾಂತಿ ಸ್ಥಾಪನೆ ಮಾಡುವ ತನ್ನ ಕಾರ್ಯವನ್ನು ಹೂರೈಸಲಾರದೆಂದು ನೆನ ಸಲಿದ್ದಿಯಿಲ್ಲ" ಎಂದು ತಿಳಿಸಿದ್ದರು. ಅದ ಕ್ಕುತ್ತರವಾಗಿ ಜನರಲ್ ಡೆಲ್ಮೋಯಿ ಯು ಬರೆದ ಪತ್ರದಲ್ಲಿ ತಾನು ಭಂಗಾರದ ಏಳು ಪೆಟ್ಟಿಗೆಗಳು ಮತ್ತಿತರ ಅಮೂಲ್ಯ ವಸ್ತುಗಳನ್ನು ಸಾಗಿಸಿದುದು ಹೌದೆಂದು ಒಪ್ಪಿಕೊಂಡಿದ್ದಾನೆ. ತಾನು ಯಾರ ಪರವಾಗಿ ಆ ಕೆಲಸ ಮಾಡಿದೆನೋ ಆ ಎಫೆಂಡಿಯು ಕಾಶ್ಮೀರ ಬಿಟ್ಟು ಹೋದವನೆಂದೂ, ಕಾಶ್ಮೀರ ಸರಕಾರವೂ ತನಗೆ ಭಿನ್ನಾಭಿಪ್ರಾಯವಿರುವವನೆಂಬಾ ತನಿಗೆ ತಿಳಿದಿದೆಯಾದರೂ ಆತನನ್ನು ಸಂ ಸ್ಥಾನದ ವೈರಿಯಾಗಿ ಜಾಹೀರುಮಾಡಿರು ವ ಸಂಗತಿ ಗೊತ್ತಿಲ್ಲವೆಂದಿದ್ದಾನೆ. ಅ ವನ ಈ ಹೇಳಿಕೆಗೆ ಪ್ರತ್ಯುತ್ತರಕೊಡುತ್ತಾ ಗು ಲಾಮ್ ಮಹಮ್ಮದ್ ಭಕ್ಷಿಯವರು ಮತ್ತೊಮ್ಮೆ ಬರೆದರು: "ನೀನೇನೇ ಅಂ ದರೂ ನಮ್ಮೀ ವರ್ತನೆಯೆಂಬುದು ಜಾಗ ತಿಕ ಸಂಘದ ಕಾಶ್ಮೀರ ಕಮಿಶನಿನ ವಿಲಿ ಟರಿ ಸಲಹೆಗಾರನಾಗಿರುವ ನಿಮ್ಮ ಸ್ಥಾನ ಮಾನಗಳಿಗನುಚಿತವಾದುದು ಮತ್ತು ಕಾ ಶ್ಮೀರ ಸರಕಾರವು ನಿಮಗಿತ್ತ ಸತ್ಕಾರ ಹಾ ಗೂ ಸ್ವಾಗತಗಳನ್ನು ನೀವು ದುರುಪ ಯೋಗ ಮಾಡಿಕೊಂಡಿರುವಿರಿ, ಎಂಬು ದು ಸ್ಪಷ್ಟ. ನಿಮ್ಮ ಉದ್ದೇಶನೇನಿದ್ದರೂ ನಿಮ್ಮೀ ಕೃತ್ಯವು ನಿಮಗೂ ನೀವು ಪ್ರತಿನಿಧಿಯಾಗಿರುವ ಆ ಸಂಸ್ಥೆಗೂ ಹೇಳಿಸಿದ್ದಲ್ಲವೆಂದು ತಿರುಗಿ ಹೇಳಲು ನಮಗೆ ವಿಷಾದವಾಗುತ್ತಿದೆ".

ಅಂತೂ ಹೈದರಾಬಾದ್ ವಿವಾದದ ವೇಳೆ ವಿದೇಶೀ-ಸೈಮಾನಿಕ ಕಾಟನನಿದ್ದಂ ತೆ ಕಾಶ್ಮೀರ ವಿವಾದದಲ್ಲಿ ರಾಜೀ ಮಂಡ ಲಿಯಲ್ಲಿ ಸೇರಿಕೊಂಡಿದ್ದ ಭಾರತದ ಜನರ ಲ್ ಡೆಲ್ಮೋಯಿ ತೋರಿದ್ದಾನೆ. ಈ ಕಥೆ ಮತ್ತೀ ಸಂಬಂಧವಾಗಿ ಕಾಶ್ಮೀರ್ ಸರ ಕಾರವು ಕೈಕೊಳ್ಳಲಿರುವ ಕಾರ್ಯಾಚರ ಣೆಗಳನ್ನು ಭದ್ರತಾ ಕೌನ್ಸಿಲಿಗೆ ತಿಳಿಸ ಲಾಗುವದೆಂದು ತಿಳಿದು ಬಂದಿದೆ. ಮುಂ ದೇನಾಗುವದೆಂಬುದನ್ನು ನೋಡಲಿಕ್ಕಿದೆ. ಡೆಲ್ಮೋಯಿ ಸೇನಾ ಸಲಹೆಗಾರ ಸ್ಥಾನ ಳಕೊಳ್ಳುವನೆಂದು ತಿಳಿದುಬಂದಿದೆ. ಭಾರತ ಉಪ್ಪನ್ನವುಂಡು, ಅದನ್ನೆಅದಂತಾ ತ್ಯಗಳನ್ನು ಪಡಕೊಂಡು, ಉಂಡ ಮನೆಗೆ ಡು ಬಗೆದ ವಿದೇಶಿಯರ ನಿದರ್ಶನಗಳು ಭಾರತದ ಚರಿತ್ರೆಯಲ್ಲಿ ಬಹಳವಿವೆ. ಜನ ರಲ್ ಡೆಲ್ಮೋಯಿಯದು ಮತ್ತೊಂದು ದಾಖಲೆ!

The Canara Industrial & Banking Syndicate Ltd.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.
ಕುಟುಂಬದ ಯಜಮಾನನ ಜವಾಬ್ದಾರಿ
ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿಪ್ಪರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿ ಸಲು ಶಕ್ಯವಿವೆ. ನನ್ನುಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕನನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.
ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

THE
PANGAL NAYAK BANK, LTD.,
Head Office: UDIPI.
SAVE FOR THE FUTURE.
SEASON DEPOSITS terminable on or before 30—6—1950 are accepted from 1—10—1949 at the following rates:
For 3, 4 or 5 months at 3 % p. a
For 6, 7 or 8 months at 3½ % p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices

ಎಲ್ಲಾ ರಂಗಗಳಲ್ಲೂ ವಿವಾದ ಘರ್ಷಣೆಗಳು.

ಭವಿಷ್ಯದ ಪ್ರಗತಿ ಸಾಧನೆಗಾಗಿಯೋ, ಅವನತಿ ಸಾಧನೆಗೋ ಹೇಳುವುದಸಾಧ್ಯ– ಅಂತೂ ಲೋಕದ ಎಲ್ಲಾ ಘರ್ಷಣೆಗಳೂ ಈಗ ಹೊಸಜೀವನ ಪಡೆದಿರುವುದು ಕಾಣುತ್ತಿದೆ. 'ಕಮ್ಯೂನಿಸ್ಟ್ ಪ್ರತಿಪಾದಿಕ್ಯ' ವು ಕಳದ ದಿನಗಳಲ್ಲಿ ಎಲ್ಲಾ ರೀತಿಯಿಂದಲೂ ಜೋರಬಂದಿದೆ. ರಶ್ಯದೊಡನೆಯೂ ಆಟಂ ಬೋಂಬಿದೆ. ಎಂದು ಸ್ಪಷ್ಟವಾದಂದಿನಿಂದ ರಾಷ್ಟ್ರಗಳೊಳಗಿನ ಸಂಬಂಧರಂಗದಲ್ಲೊಂದು ಹೊಸಕ್ರಾಂತಿಯುಂಟಾಗಿ ತತ್ಪರಿಣಾಮವಾಗಿ ವಾತಾವರಣದ ಬಣ್ಣವೇ ಬದಲಾದಂತಿದೆ; ಚೈನದಲ್ಲಿ ಕಮ್ಯೂನಿಸ್ಟ್ ಸಂಘಟಿತ ಸರಕಾರ ಕಾಣಿಸಿಕೊಂಡಿದೆ ರಶ್ಯಾ-ಯುಗೊಸ್ಲೇವಿಯಾ ಜಗಳವು ಉಗ್ರರೂಪಕ್ಕೇರಿದ; ಭಾರತ-ಪಾಕಿಸ್ತಾನ್ ವಿವಾದವು ವ್ಯವಹಾರ ಸಂಬಂಧವೇ ನಿಂತುಹೋಗುವ ಗಡಿಗೆ ಮುಟ್ಟಿದೆ; ಎಲ್ಲೆಲ್ಲೂ ಕಮ್ಯೂನಿಸ್ಟರ ಕಡೆಗೆ ಜಯಭೇರಿ ಸೂಚನೆಗಳು ಬಿದ್ದಿವೆ. ಒಟ್ಟಿನ ಮೇಲೆ ಸ್ವಯಂಚಿದಲ್ಲಿ ಅಸ್ಥಿರ ಹಾಗೂ ಅನುಮಾನಕರ ವಾತಾವರಣ ಹರಡಿಕೊಂಡಿದೆ.

ಆಟಂ ಧ್ವನಿ

ರಶ್ಯದಲ್ಲೂ ಅಮೆರಿಕ ಆಟಂ ಸೆನ್ಸೇಟಿ ನಡೆದಿತ್ತೆಂಬ ಅಧಿಕೃತ ವರ್ತೆ ಹಂಡಿ, ರಶ್ಯವು ಆದನ್ನು ಸೃಷ್ಟಿಕೂಂಡಿರುವಿನಿಂದ ಲೋಕದಲ್ಲೆಲ್ಲಾ–ವಿಶೇಷವಾಗಿ ಆಟಂ ಬೋಂಬಿನ ಏಕಮಾತ್ರ ನಾಯಕನೆಂದು ಭೂವಿಖ್ಯಾತವಿದ್ದ ಅಮೆರಿಕದಲ್ಲಿ–ವಿಶೇಷ ಕೋಲಾಹಲವೆದ್ದಿದೆ. ಈಗ ನಡೆದಿರುವ ಸಂಯುಕ್ತ ರಾಷ್ಟ್ರಸಂಘದ ಜಾಹೀರು ಅಧಿವೇಶನದಲ್ಲಿ ಮಾತಾಡುತ್ತಾ ಬ್ರಿಟನಿನ ವಿದೇಶ ಸಂಬಂಧ ಕಾರ್ಯದರ್ಶಿ ಮಿ. ಆರ್ನೆಸ್ಟ್ ಬೆವಿನರು "ರಶ್ಯವು ತನ್ನ ಚೆಪ್ಪಿನೊಳಗಿಂದ ಹೊರಗೆ ಬಂದು, ಅಟಮ್ ಶಕ್ತಿಯನ್ನು ಶಾಂತಿಸುವ ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಭಾಗವಹಿಸಿದರೆ ಆಟಂ ಬೋಂಬಿನ ಮೇಲೆ ಒಪ್ಪಾರ ಹಾಕಲು ಸಾಧ್ಯವಿದೆ" ಎಂದಿದ್ದರು. ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿನಲ್ಲಿ ಅಮೆರಿಕ, ಬ್ರಿಟನ್ ಮತ್ತು ಕೆನಡಗಳ ಪ್ರತಿನಿಧಿಗಳು ಸೇರಿ ರಶ್ಯನ್ ಆಟಂ ಆಯುಧವನ್ನು ಕಣ್ಣು ಮುಂದಿಟ್ಟುಕೂಂಡು ತಾವು ಕೈಕೂಳ್ಳಬೇಕಾದ ಕರ್ತವ್ಯದ ಬಗ್ಗೆ ಚರ್ಚೆ ಎಸಿದ್ದಾರೆ. ಅಮೆರಿಕವು ಅತಿ ಹೆಚ್ಚು ಆಟಂ ಬೋಂಬುಗಳನ್ನು ತಯಾರಿಸುವ ಯೋಜನೆ ಕೈಕೂಳ್ಳುತ್ತಿದೆ. ಅಂತೆಯೇ ಆಟಂ ಸಿರೋಧಕ ತರಬೇತಿ ಕಾರ್ಯಕ್ರಮಗಳನ್ನು ಅಮೆರಿಕವು ದೊಡ್ಡ ಪರಿಮಾಣದಲ್ಲಿ ಕೈಕೂಳ್ಳಲಿದೆ. "ಆಟಂ ಶಕ್ತಿಗೆ ಅಂತರ್ರಾಷ್ಟ್ರೀಯ ನಿಯಂತ್ರಣ ಹೇರುವ ಸಂಬಂಧದ ಹೊಸ ಯೋಜನೆಯೊಂದನ್ನು ರಶ್ಯವು ಮುಂದಿಡಲಿ: ಅದನ್ನು ಲಕ್ಷ್ಯಪೂರ್ವಕ ಅಲೋಚಿಸಲಾಗುವದು" ಎಂದು ಅವೇಳಕವೀಗ ಆಶ್ವಾಸನಿಸಿದೆ. ಪಂಡಿತ ನೆಹರುಗಳು ಈ ಕುರಿತಾಡಿರುವ ಮಾತುಗಳಿವು: "ರಶ್ಯವು ಆಟಂ ಬೋಂಬನ್ನು ಕಂಡು ಹಿಡಿದುದಂದ ಯುದ್ಧ ಪ್ರತಿಬಂಧನೆಗನುಕೂಲವೇ ಆಗಬಹುದು. ಲೋಕವು ರಶ್ಯದ ಆಟಂ ಸಂಗ್ರಹದ ಕುರಿತು ಹೆದರುವುದಕ್ಕಿಂತ ಹೆಚ್ಚಾಗಿ, ಕುರುಡು ಭೀತಿಯನ್ನು ಕಟ್ಟಿಕೊಳ್ಳುವ ವ್ಯಾಪಂಚಿಕ ಸ್ವಭಾವಕ್ಕುಂಜ ಬೇಕಾಗಿದೆ. ಯ. ಡ್ಯಾ. ಖಾಯಗಳ ಭೀಕರತೆ ಹೆಚ್ಚಿದಾಗಲೆಲ್ಲಾ, ಜನ-ಹೆಚ್ಚಿಹೆಚ್ಚಾಗಿ ಯಾದ್ಧದ ನಿಷ್ಪ್ರಯೋಜಕತೆಯನ್ನು ಮನಗಾಣಬೇಕು, ಮತ್ತದು ಸಂಭವಿಸಿದಂತೆ ನೋಡಬೇಕು. ಆದರೆ ಜನತೆ ಯಾವಾಗಲೂ ನ್ಯಾಯೋಚಿತವಾಗಿ ವರ್ತಿಸಲಾರರೆಂಬುದು ನಿಜ. ನಾನು ಹೆದರುವ ವಿಕಪಾತ್ರ ವಿಷಯವೆಂದರೆ ಪ್ರಪಂಚದ ಎಲ್ಲೆಡೆಯಲ್ಲೂ ಜನತೆಯನ್ನು ಆಕ್ರಮಿಸಿ ಹಿಡಿದುಕೊಳ್ಳುತ್ತಿರುವ ಕುರುಡು ಭೀತಿಯ ಸ್ವಭಾವವೇ. ರಶ್ಯವೂ ಆಟಂ ಬೋಂಬನ್ನು ಕಂಡುಕೂಂಡಿದೆ ಯೆಂಬುದರಿಂದ, ಭೂವಿಸಂಭವಗಳ ಕುರಿತು ಜನತೆಯ ಗಾಢಯೋಚನೆ ಮಾಡಲೇ ಬೇಕಾಗಿ ಬಂದಿದೆ. ಈ ದೆಸೆಯಿಂದಾಗಿ ಅದು ಯುದ್ಧವನ್ನು ತಡೆಗಟ್ಟಲು ಸಹಾಯಕವಾಗಬಹುದು ರಶ್ಯದ ಈ ಸುದ್ದಿ ಬಂದಾಗ, ಅದು ಪ್ರಾಮುಖ್ಯದ್ವಿದ್ವರೂ ಅಧಿವಾರ್ಯನೆಂಬುದರಿಂದ ನನಗೇನೂ ವಿಶೇಷವೆಂದು ತೋರಲಿಲ್ಲ" ಈ ರೀತಿ ಲೋಕಶಾಂತಿ ಪ್ರೇಮಿಗಳಾರೂ ರಶ್ಯದ ಆಟಂ ಆಯುಧಕ್ಕೆ ಹೆದರುತ್ತಿಲ್ಲವಾದರೂ ಅದು ಕೇವಲ ತಮ್ಮ ಹಕ್ಕಿನದೆಂಬ ರೀತಿಯಿಂದ ಪ್ರಾಪಂಚಿಕ ವಾತಾವರಣವನ್ನು ಕೆಡಿಸುತ್ತಾ ಬಂದಿರುವ ಒಂದು ಪಂಗಡದವರು ಗೊಂದಲಗೊಂಡಿದ್ದಾರೆ.

ರಶ್ಯಾ-ಟಿಟೋ

ಸೋವಿಯೆಟ್ ರಶ್ಯಾ ಮತ್ತು ಟಿಟೋನ ಯುಗೋಸ್ಲೋವಿಯಾಗಳೊಳಗಿನ ವಿವಾದವೀಗ ಭಯಜನಕ ಮಟ್ಟಕ್ಕೇರಿದೆ ಸಂಯುಕ್ತ ರಾಷ್ಟ್ರಸಂಘದ ಜಾಹೀರು ಅಧಿವೇಶನದಲ್ಲಿ ಯುಗೋಸ್ಲೇವಿಯದ ವಿದೇಶ ಮಂತ್ರಿಗಳು ರಶ್ಯವು ಪ್ರಜಾಪ್ರಭುತ್ವದ ನಿಯಮಗಳಿಗೆ ವಿರುದ್ಧವಾದ ಟೀತಿ ನೀತಿಗಳಿಂದ ಯುಗೋಸ್ಲೇವಿಯದ ಮೇಲೆ ಜುಲುಮೆ ಹಾಕುತ್ತಿದೆಯೆಂದು ಅಕ್ಷೇಪಿಸಿದ್ದರು; ಗಡಿವಲಯಗಳಲ್ಲಿ ರಶ್ಯನ್ ಸೇನೆಗಳ ಚಲನವಲನಗಳಾಗುತ್ತಿರುವ ಕುರಿತು ದೂರಿದ್ದರು. ಇದಕ್ಕತ್ತರವಾಗಿ ರಶ್ಯದ ಉಕ್ರೈನ್ ಪ್ರತಿನಿಧಿಯು ಯುಗೋಸ್ಲೇವಿಯದಲ್ಲಿ ಫೇಸಿಸ್ಟ್ ಪದ್ಧತಿಯ ಸರಕಾರವಿದ್ದು, ಅದು ಸೋವಿಯೆಟ್ ಪ್ರಜೆಗಳನ್ನು ಬಂಧಿಸಿ, ಹಿಂಸಿಸುತ್ತಿದೆಯೆಂದು ಯುಗೋಸ್ಲೇವಿಯವನ್ನು ಕಠಿಣ ಮಾತುಗಳಿಂದ ಖಂಡಿಸಿದ್ದರು. ಈಗ ರಶ್ಯವು ತಾನು ಯುಗೊಸ್ಲೇವಿಯದೊಂದಿಗೆ 1945 ರಲ್ಲಿ ಮಾಡಿಕೊಂಡಿದ್ದ ಮೈತ್ರೀ ಒಪ್ಪಂದವನ್ನು ಮುರಿದುಕೊಂಡಿದೆ. "ಸದ್ಯದ ಯುಗೋಸ್ಲೇವಿಯ ಸರಕಾರವೇ ಆ ಒಪ್ಪಂದದ ವಿರುದ್ಧವಾಗಿ ಬರ್ಬರ ರೀತಿಯಿಂದ ವರ್ತಿಸಿ ಅದನ್ನು ನುಚ್ಚುನೂರು ಮಾಡಿಕೊಂಡಿದೆ. ವಿದೇಶೀ ಸಾಮ್ರಾಜ್ಯವಾದಿ ಸರಕಾರಗಳಪ್ರೇರಣಾನುಸಾರವಾಗಿ ಯುಗೋಸ್ಲೇವಿಯವು ರಶ್ಯದ ಪ್ರತಿಷ್ಟಟನೆಗೆದ್ದು ನಿಂತಿದೆ." ಎಂದು ಮುಂತಾಗಿ ರಶ್ಯದ ಆರೋಪವಿದೆ. ರಶ್ಯವನ್ನು ಅನುಸರಿಸಿ, ಅದರ ಹಿಂಬಾಲಕ ರಾಷ್ಟ್ರಗಳಾದ ಪೋಲೇಂಡ್, ಹಂಗೇರಿಗಳೂ ಯುಗೋಸ್ಲೇವಿಯದ ಮೇಲೆ ಇದೇ ಮಾದರಿಯ ಆಪಾದನೆಗಳನ್ನು ಹೊರಿಸಿ ತಮ್ಮ ಮೈತ್ರೀ ಸಂಬಂಧಗಳನ್ನು ಕಡಿದುಕೊಂಡಿವೆ. "ರಶ್ಯದ ಈ ಅತಿರೇಕ ವರ್ತನೆಯು ಪರಿಣಾಮಗಳಿಗೆಲ್ಲಾ ಸ್ವತಃ ರಶ್ಯವೇ ಜವಾಬ್ದಾರಿಯೆಂಬುದು ತಿಳಿದಿರಲಿ" ಎಂದು ಯುಗೊಸ್ಲೇವಿಯದ ನಾಯಕ ಮಾರ್ಶಲ್ ಟಿಟೋ ಎಚ್ಚರಿಸಿದ್ದಾರೆ. ಈ ಕುರಿತು ಯುಗೊಸ್ಲೇವಿಯ ಸರಕಾರವು ರಶ್ಯಕ್ಕೆನ್ನಿಪ್ಪಿಸಿದ ಉತ್ತರದಲ್ಲಿ ಖಂಡತುಂಡ ಮಾತುಗಳಿವೆ. "ರಶ್ಯವು ಆಕ್ರಮಣತೀಲ ಒತ್ತಡವನ್ನು ಯುಗೊಸ್ಲೇವಿಯದ ಮೇಲೆ ಹಾಕುತ್ತಿದೆ. ಆ ಮೂಲಕ ಲೋಕಶಾಂತಿಗವಾಯವನ್ನೂ, ಸಂಯುಕ್ತ ರಾಷ್ಟ್ರಸಂಘದ ಸೂತ್ರಗಳಗಾತಂಕವನ್ನೂ ಒಡ್ಡುತ್ತಿದೆ. ಯುಗೊಸ್ಲೇವಿಯದ ಕಡೆಗಿನ ರಶ್ಯದ ಈ ಧೋರಣೆಯೆಂಬುದು, 1941ರಲ್ಲಿ ನ್ಯಾಜಿಜರ್ಮನಿಯು "ಒಂದು ಸಣ್ಣ ರಾಷ್ಟ್ರದ ಆಂತರಿಕ ವಿಷಯಗಳೊಳಗೆ ನಾವು ಹೈ ಹಾಕುವದಿಲ್ಲ" ಎಂದಿದ್ದ ರಶ್ಯದ ವಿದೇಶ ಸಂಬಂಧ ಧೋರಣೆಗೇನೇ ವಿರುದ್ಧ. ಅದೀಗ ಕಡಿದು ಕೊಂಡ ಸಂಬಂಧದಿಂದಾಗಿ, ಯುದ್ಧಾಪೇಕ್ಷೆಗಳಿಂದ ತೀರಾ ಅಪ್ರಾಗತಿಕ ರಾಷ್ಟ್ರಗಳಿಗೆ ಮಾತ್ರ ಅನುಕೂಲವಾಗುವದು" ಎನ್ನುತ್ತಾ ಯುಗೊಸ್ಲೇವಿಯ ಸರಕಾರವು ತನ್ನ ಮೇಲೆ ರಶ್ಯವು ಮಾಡುತ್ತಾ ಬಂದಿರುವ ಆನ್ಯಾಯಗಳ ಪಟ್ಟಿಯನ್ನು ಮುಂದಿಟ್ಟಿದೆ. ಈಗ ಸೋವಿಯೆಟ್ ಸರಕಾರವು ಮುಂದು ಹುಚೆದ ಒಪ್ಪಂದದಲ್ಲಿ ಯುಗೊಸ್ಲೇವಿಯದ ಮೇಲೆ ಹೂಡಿರುವ ಧಾಳಿ ಅಥವಾ ಆಂತರಿಕ ಒಂಡಾಯವೆದ್ದರೆ ರಶ್ಯವದಕ್ಕೆ ಸಹಾಯವಾಗಬೇಕೆಂಬ ಶರ್ತವಿದ್ದಿತು. ಇನ್ನು ರಶ್ಯವೇ ಸ್ವತಃ ಧಾಳಿ ಮಾಡಬಹುದು, ಅಥವಾ ಯುಗೊಸ್ಲೇವಿಯದೊಳಗಡೆಯಲ್ಲಿ ಗೊರಿಲ್ಲಾ ಹೋರಾಟಗಳನ್ನು ಎಬ್ಬಿಸಿಹುದು, ಎಂಬ ಭೀತಿಯೆದ್ದಿದೆ. ಮಾರ್ಷಲ್ ಟಿಟೋರ ಪ್ರಾಣಾಪಹಾರ ಒಳಸಂಚೊಂದು ಕಮ್ಯೂನಿಸ್ಟರಿಂದ ನಡೆದಿದ್ದಿತೆಂದು ತಿಳಿದು ಬಂತ್ತದೆ. ಆ ಸಂಬಂಧವಾಗಿ ಯುಗೊಸ್ಲೇವಿಯದ ಕಲವು ಕಮ್ಯೂನಿಸ್ಟರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ.

ವಿವಿಧ ವಿಷಯ

ಚೈನದಲ್ಲಿ ಕಮ್ಯೂನಿಸ್ಟ್ ವಿಜಯವು ಗಣ್ಯ ತಡತೊಡಕುಗಳೇನೂ ಇಲ್ಲದೆ ಯಥಾಪ್ರಕಾರ ನಾಗಿದೆ ಇದೇ ಒಕ್ಟೋಬರ್ ತಾ 1ರಲ್ಲಿ ಕಮ್ಯೂನಿಸ್ಟರ ಸುಸಂಘಟಿತ ಚೈನಾ ಸರಕಾರ ಸ್ಥಾಪನೆಗೊಂಡಿತು. 'ಚೀನೀಯ ಜನತಾ ರಿಪಬ್ಲಿಕ್' ರಚನೆ ಮತ್ತು 'ಜನತಾ ಕೇಂದ್ರ ಸರಕಾರ' ಸ್ಥಾ

ಇಂದಿನ ಆವಶ್ಯಕತೆ

ಅಧಿಕ ಆಹಾರ-ಉತ್ಪತ್ತಿ

ಈ ಪ್ರಕಟನೆ, ಜನಾಂಗಕ್ಕೆ

ಕೆನರಾ ಬ್ಯಾಂಕ ಲಿಮಿಟೆಡ್,

ಇವರ ಅಳಿಲು ಸೇವೆ

SCENES OF LOVE

The Bed Room Scenes & other Private Things.....in the Real Camera Photos of European Beautiful Girls are so clear that everybody who sees, feels himself in the Heaven. English Make. Quality Guaranteed. Big Album (Special) Rs 5-4-0. Small Rs. 3-4-0. Postage As 12/- extra

FRENCH ART HOUSE, Halka No. 76, DELHI.

ಪೆರಿಸಿನ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರ ಗುಪ್ತ ಪೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿದೆ. ನೈಜಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ ಈ ಚಿತ್ರಗಳನ್ನು ನೀವು ನೋಡಿದ್ದಿರೆ ನೀವು ಏನೂ ನೋಡಿದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶ್ವಪ್ರವೇಶ) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ. ಕೂಡಲೇ ಬಿಡಿರು ಕೊಡಿರಿ. ಅಂಜೆವೆಚ್ಚ ಪ್ರತ್ಯೇಕ.

Moonlight Traders.'
(N-W-U)
Lothian Road, Delhi

ಆಟಂ ಬೋಂಬು ಸ್ಪರ್ಧೆ. ರಶ್ಯಾ ಟಿಟೋ ಜಗಳ.

ಪನೆಯ ಘೋಷಣೆಯನ್ನು ಈ ಹೊಸ ಕಮ್ಯೂನಿಸ್ಟ್ ಸರಕಾರದ ಅಧ್ಯಕ್ಷನಾಗಿ ಸರ್ವಾನುಮತದಿಂದ ಆರಿಸಲ್ಪಟ್ಟ ಚೈನೀ ಕಮ್ಯೂನಿಸ್ಟ್ ಯುದ್ಧ ನಾಯಕ ಮಾವೊ ಟ್ಸೆ ಟುಂಗನು ತಾ 1ರಲ್ಲಿ ಚೈನದಲ್ಲೆಲ್ಲಾ ಜಾ ಹೀ ರು ಪ ಡಿ ಸಿ ದ್ದಾ ನೆ. ರಿಪಬ್ಲಿಕ್ ಚೈನದ ಸ್ಥಾಪಕ ಸನ್ ಯೆಟ್‌ಸನನ ವಿಧವೆ ಮೇಡಮ್ ಸನರು ಆರು ಮಂದಿ ಉಪಾಧ್ಯಕ್ಷರಲ್ಲೊಬ್ಬರಾಗಿದ್ದಾರೆ. ಅಂತೆಯೇ ಎಲ್ಲಾ ವಿಭಾಗಗಳ ಮಂತ್ರಿಗಳ ಹಾಗೂ ನಾಯಕರುಗಳ ನೇಮಕವಾಗಿದೆ. ಚೈನವನ್ನು ಸ್ವಾಧೀನಕ್ಕೆ ತರುವ ಕಾರ್ಯವನ್ನು ಮುಗಿಸುತ್ತಾ ಬಂದ ಕಮ್ಯೂನಿಸ್ಟರು ಈಗ ಅಲ್ಲಿ ಸರಕಾರ ಕಟ್ಟಿಕೊಂಡು ಆಳಹತ್ತಿದ್ದಾರೆ.

ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಸ್ಟರ್ಲಿಂಗ್ ಧಾರಣೆಯಿಳಿಸಿದ ತನ್ನ ಧೋರಣೆಯು ಕುರಿತು ವಿಶ್ವಾಸ ಯಾಚನಾ ಸೂಚನೆಯನ್ನು ಸರಕಾರ ತಂದಾಗ ಆ ಸಂಬಂಧದ ಅಂದೋಲನಗನ್ನಾಧೆಸಿ, ಸರಕಾರಿ ಅಧಿಕ ಧೋರಣೆಯನ್ನು ಖಂಡಿಸಿ ಮಿ. ಚರ್ಚಿಲ್ಲರು ಕೊಲಿಗಾಂ ಸರಕಾರಿಂದ ಮೇಲೆ ಅವಿಶ್ವಾಸ ಸೂಚಕ ತಿದ್ದುಪಡಿಯನ್ನು ಮುಂತಂದು ಕಠಿಣವಾಗಿ ಟೀಕಿಸಿದ್ದರು. ಆಷ್ಟೇ ಕಠಿಣವಾಗಿ ಆರೋಗ್ಯ ಮಂತ್ರಿ ಅನುರಿನ್ ಬವನ್, ಪ್ರಧಾನ ಮಂತ್ರಿ ಅಟ್ಲಿಗಳು ಚರ್ಚಿಲ್ಲರ ವರ್ತನೆಗಳನ್ನು ಖಂಡಿಸಿದ್ದರು. ಚರ್ಚಿಲ್ಲರ ಅವಿಶ್ವಾಸ ಸೂಚನೆಯು 212 ಅನುಕೂಲ, 350 ಪ್ರತಿಕೂಲ ಮತಪಡೆದು ಬಿದ್ದುಹೋಯಿತು. ಸ್ಟರ್ಲಿಂಗ್ ಮೌಲ್ಯ ವಿಚ್ಛೇದನೆ ಮಂತ್ರಿತರ ಅರ್ಥಿಕ ಧೋರಣೆಗಳ ಕುರಿತು ಸರಕಾರದ ಮೇಲೆ ವಿಶ್ವಾಸ ಸೂಚಿಸುವ ಸೂಚನೆಯು 342 ಅನುಕೂಲ, 5ಪ್ರತಿಕೂಲ ಮತಗಳಿಂದ ಮಂಜೂರಾಯಿತು.

ಬ್ರಿಟನಿನಲ್ಲಿ ಸದ್ಯದಲ್ಲೇ ನಡಯಲಿರುವ ಮಹಾ ಚುನಾವಣೆಯ ಪೂರ್ವದಲ್ಲಿ ಬರುವ ತಿಂಗಳಲ್ಲಿ ಸೇರಲಿರುವ ಚರ್ಚಿಲ್ಲರ ಕನ್ಸರ್ವೇಟಿವ್ ಪಕ್ಷದ ಮಹಾಧಿವೇಶನದ ಮುಂದಿರುವ ಕಾರ್ಯಕ್ರಮಗಳ ಮೇಲಿಂದ ಇನ್ನೊಮ್ಮೆ ಚರ್ಚಿಲ್ಲರು ಅಧಿಕಾರಕ್ಕೆ ಬಂದರೆ ಭಾರತದ ಸಂಬಂಧ ಹೇಗಾಗಬಹುದೆಂಬುದನ್ನು ಊಹಿಸಲು ಸಾಧ್ಯವಿಲ್ಲ. ಬ್ರಿಟನು ಮತ್ತು ಕಾಮನ್‌ವೆಲ್ತ್ ರಾಷ್ಟ್ರಗಳ ಸಂಬಂಧವನ್ನು ಬಲಪಡಿಸಬೇಕು- ಸಾಮ್ರಾಜ್ಯದ ಆಯವ್ಯಯವನ್ನು ಸಂದೂಗಿಸಿಕೊಳ್ಳಲು ಭಾರತದ ಭಂಗಾರವನ್ನು ಉಪಯೋಗಿಸಬೇಕು- ಯಾವುದೇ ಧಾಳಿಯಿದಿರಲ್ಲಿ ಪಾಕಿಸ್ತಾನದ ಗಡಿಗಳನ್ನು ರಕ್ಷಿಸಿ ಕೊಡುವ ಅಭಯವನ್ನು ಕನ್ಸರ್ವೇಟಿವ್ ಸರಕಾರವು ಪಾಕಿಸ್ತಾನಕ್ಕೀಯಬೇಕು- ಮುಂತಾದ ರಠಾವುಗಳು ಟೋರಿ ಸಮ್ಮೇಳನದ ಕಾರ್ಯಕ್ರಮಪಟ್ಟಿಯಲ್ಲಿವೆ.

ಭಾರತದ ಬೇಸಾಯೋತ್ಪತ್ತಿಗಾಗಿ ಜಾಗತಿಕ ಬ್ಯಾಂಕು 10 ಮಿಲಿಯ ಡೋಲರುಗಳ ಸಾಲವನ್ನು ಮಂಜೂರು ಮಾಡಿದೆ. ಈ ಹಣವನ್ನು ಕಾಡು ಮತ್ತು ಕೆಳಗಳು ಬೆಳೆದಿರುವ ಪ್ರದೇಶಗಳನ್ನು ಸವರಿ ಸಾಗುವಳ್ಳೀ ಕ್ಷೇತ್ರಗಳಾಗಿ ಮಾರ್ಪಡಿಸುವ ಭಾರತ ಸರಕಾರದ ಕೆಲಸಗಳಿಗೆ ವಿನಿಯೋಗಿಸಲಾಗುವದು. ಶೇ 2½ ಸಲೆಯ ಬಡ್ಡಿ ಮತ್ತು ಶೇ. 1 ಸಲೆಯ ಕಮಿಶನಿನ ಮೇಲೆ ಎಳು ವರುಷಗಳ ವಾಯಿದೆಗೆ ಈ ಸಾಲ ಬಾರತಕ್ಕೆ ದೊರೆತಿದ. ಕಳದ ಅಗೋಸ್ತು 18ರಲ್ಲಿ ಭಾರತದ ಬೈಲ್ವೇ ಅಭಿವೃದ್ಧಿಗಾಗಿ ಜಾಗತಿಕ ಬ್ಯಾಂಕು 34ಮಿಲಿಯ ಡೋಲರುಗಳ ಸಾಲವನ್ನು ಮಂಜೂರುಮಾಡಿದ್ದಿತು. ಆದೇ ವಾರಗಳೊಳಗೆ ಭಾರತವು ಎರಡನೇ ಸಾಲವನ್ನು ಪಡದಂತಾಯಿತು.

ತಮ್ಮ ನಾಣ್ಯಗಳ ಮೌಲ್ಯ ವಿಚ್ಛೇದನೆ ಹಿಡಿಸಿಕೊಳ್ಳದ ಪಾಕಿಸ್ತಾನ ಮತ್ತು ಜಾವಾನಿಗೆ ಬರ್ಮಾವು ಉಕ್ಕಿ ರವಾನಿಸುವುದನ್ನು ನಿಲ್ಲಿಸಿಕೊಂಡಿದೆ.

ಭಾರತ-ಪಾಕಿಸ್ತಾನ್

ಭಾರತವು ತನ್ನ ರೂಪಾಯಿ ಮೌಲ್ಯವನ್ನು ತಗ್ಗಿಸಿಕೊಂಡು ಪಾಕಿಸ್ತಾನವು ಮಾತ್ರತಗ್ಗಿಸಿಕೊಳ್ಳದ ದೆಸೆಯಿಂದಾಗಿ, ಇವೆರಡುರಾಷ್ಟ್ರಗಳೊಳಗಿನ ವ್ಯಾಪಾರ ವಹಿವಾಟುಗಳೆಲ್ಲವೂ ಈಗ ಸಂಪೂರ್ಣವಾಗಿ ನಿಂತು ಹೋಗಿವೆ. ಮೌಲ್ಯವಿಚ್ಛೇದನೆ ಪಡಿಸಿಕೊಳ್ಳದೆ ತಾವು ಮಾಡಿದ ಸಾಹಸ ಪ್ರದರ್ಶಿಸಿದೆವೆಂಬ ಹೆಗ್ಗಳಿಕೆಯು ಪಾಕಿಸ್ತಾನ್ ಅಧಿಕಾರಿಗಳಿಂದಾರಂಭಿಸಿ, ಅಲ್ಲಿಯ ಸರ್ವರಲ್ಲೂ ತೋರಿ ಬರುತ್ತಿದೆ. ಆದರೆ ಪಾಕಿಸ್ತಾನ್ ಸರಕಾರೀ ಬೇಂಕಿನ ಗವರ್ನರ್ ಮಿ. ಝಾಹಾಯಿದ್ ಹುಸ್ಸೇನರೇ ಈ ಕುರಿತು ಎಚ್ಚರಿಕೆಯ ಮಾತುಗಳನ್ನಾಡಿದ್ದಾರೆ: "ಅರ್ಥಿಕ ಸಂಯೆಯ ಲೋಕದ ನಾಣ್ಯಗಳು ಮೌಲ್ಯ ವಿಚ್ಛೇದನೆಗೊಂಡಿರುವಾಗ ಅವುಗಳೊಡನೆ ವ್ಯವಹರಿಸಬೇಕಾಗಿರುವ ಪಾಕಿಸ್ತಾನದ ಎಳೆ ಅರ್ಥಿಕ ಸ್ಥಿತಿಯು ಮೇಲೆ ಉಂಟಾಗುವಕಂಪನಗಳದೆಸೆಯಿಂದಮುಂದೆ ಒದಗಬಹುದಾದ ಕಷ್ಟದ ದಿನಗಳನ್ನು ಇದಿರಿಸಲು ತಯಾರಾಬೇಕು" ಎಂದಿದ್ದಾರೆ. ಪಾಕಿಸ್ತಾನದ ಪ್ರಧಾನ ಮಂತ್ರಿ ಮಿಲಿಯಾಖತ್ ಅಲೀಖಾನರು ಮೊನ್ನೆ ತಾನೇ ಗಿಲ್ಡಿಟೆನಲ್ಲಿತ್ತ ಭಾಷಣದಲ್ಲಿಂದಿದ್ದರು: "ಮೌಲ್ಯ ವಿಚ್ಛೇದನವಿಲ್ಲವೆಂಬ ಕೊನೆಯ ಹಾಗೂ ಅಚಲ ನಿರ್ಧಾರವನ್ನು ನಾವು ಮಾಡಿಕೊಂಡಿದ್ದೇವೆ. ಸದ್ಯದಲ್ಲೇ ನಾವು ಮೌಲ್ಯ ವಿಚ್ಛೇದಿಸಿಕೊಳ್ಳುವಂತಾಗದೆವೆಂದು ಭವಿಷ್ಯ ಹೇಳುತ್ತಿರುವ ಅತ್ಯ ವಿಶ್ವಾಸಿಕರ ಹಾಗೂ ಅತ್ಯವಂಚಕರ ಮಾತುಗಳ ಕಡೆಗೆ ಲಕ್ಷ್ಯಕೊಡಬೇಕಾದ ಅಗತ್ಯವಿಲ್ಲ" ಭಾರತ ಮತ್ತು ಪಾಕಿಸ್ತಾನಗಳೊಳಗಿನ ವಿವಾದಗಳನ್ನು ಶಾಂತವಿಧಾನಗಳಿಂದಲೇ ತೀರ್ಮಾನಿಸಿಕೊಳ್ಳಬೇಕು, ಎಂದ ಪಂಡಿತ ನೆಹರುಗಳ ಮಾತಿಗೆ ಸುಸ್ವಾಗತ ಸೂಚಿಸಿ, ನೆಹರುಗಳಿಗೆ ಈ ಗಲಾದರೂ ಈ ವಿಷಯವು ಮಂದಟ್ಟಾದುದು ಸಂತೋಷಕರವೆನ್ನುತ್ತಾ ಆದರಿದು ಬಾಯಮಾತುಗಳ ಬದಲಿಗೆ ಕಾರ್ಯತಃ ತೋರಿಬರಬೇಕೆಂದರು. ಸಾಂಸ್ಕೃತಿಕವಾಗಿ, ಅರ್ಥಿಕವಾಗಿ, ಭೌಗೋಲಿಕವಾಗಿ ಪಾಕಿಸ್ತಾನ್ ಮತ್ತು ಕಾಶ್ಮೀರಗಳೊಳಗೆ ಅಭೇದ್ಯ ಸಂಬಂಧವಿದೆಯೆಂದೂ ಭಾರತವು ತಮ್ಮ ತಮ್ಮೀ ಸಹೋದರರನ್ನು ತಮ್ಮಿಂದ ಪ್ರತ್ಯೇಕಿಸಲು ಪ್ರಯತ್ನಿಸುತ್ತಿದೆಯೆಂದೂ ಮಿ. ಲಿಯಾಖತ್ ನುಡಿದಿದ್ದಾರೆ. ಅಝಾದ್ ಕಾಶ್ಮೀರಿಗೆ ನೈನ್ಯವನ್ನು ಬರ್ಮಾಸ್ತುಪಡಿಸುವ ಪ್ರಶ್ನೆಯೇ ಈ ಮೊದಲು ಹುಟ್ಟಿಕೊಂಡಿಲ್ಲವೆಂದು ಪಾಕಿಸ್ತಾನ್ ಪ್ರಧಾನಿಯು ವಾದ. ನಿರಾಶ್ರಿತಾಸ್ತಿಗಳ ಸಂಬಂಧದ ಒಪ್ಪಂದವನ್ನು ಕೂಡಾ ಭಾರತ ಸರಕಾರವೇ ಮುಂದಿತ್ತಿದ್ದು ಲಿಯಾಖತರ ಆರೋಪ "ಭಾರತ ಪಾಕಿಸ್ತಾನ್ ಸಂಬಂಧಗಳನ್ನೆನಃಸರಿಹುಟ್ಟಿರುವ ಪ್ರತಿಯೊಂದು ಜಗಳವನ್ನೂ ನಮ್ಮ ಮೇಲೆ ಹೇರಲಾಯತು ಹೊರತು ನಾವಾಗಿ ಸಿರ್ಮಿಸಿಕೊಂಡುದೊಂದೂ ಇಲ್ಲ" ಎಂದು ಮಿ ಲಿಯಾಖತ್ ಆಲೀಖಾನರಂದಿದ್ದಾರೆ. ತಾತ್ಕಾಲಿಕದ ಪ್ರಶ್ನೆ ಮಾತ್ರ ವಲ್ಲದೆ ಭಾರತದ ಸಂಜಾಬಿನಲ್ಲಿ ಹುಟ್ಟಿ ಪಾಕಿಸ್ತಾನ್ ಪಂಜಾಬಿಗೆ ಪ್ರವಹಿಸುತ್ತಿರುವ ಹೊಳೆಗಳ ಸಂಬಂಧದ ಜಗಳ ಪ್ರತ್ಯೇಕವಿದೆ. ರೂಪಾಯಿ ಮೌಲ್ಯ ವಿಚ್ಛೇದನದಿಂದೆದ್ದ ವಿಷಮ ಸರಿಸ್ಥಿತಿಯ ಸುಧಾರಣೆಗಾಗಿ ಭಾರತ ಸರಕಾರವೀಗ ಪಾಕಿಸ್ತಾನದಿಂದ ಯಾವ ಸಾಮಾನ್ಯಿಗಳೂ ಆಮದಾಗದಂತೆ ಕಠಿಣ ನಿರ್ಬಂಧ ಹಾಕಿಕೊಳ್ಳಲು ತಯಾರು ಮಾಡುತ್ತಿದೆ ಸರಕಾರದ ಈ ವ್ಯವಸ್ಥೆಗಳಿಗೆ ಹಿಂದೀ ವ್ಯಾಪಾರಿನರ್ದದ ಶೂರ್ಣ ಸಹಕಾರ ದೊರೆತಿದೆ ಇಷ್ಟರ ವರೆಗೆ ಪಾಕಿಸ್ತಾನದಿಂದ 106·7 ಕೋಟಿ ರೂಪಾಯಿ ಮೌಲ್ಯದ ಸಾಮಗ್ರಿಗಳನ್ನು ಭಾರತವು ಆಮದು ಮಡಿಸಿಕೊಳ್ಳುತ್ತಿದೆ. ಆ ಪೈಕೆ 70ಕೋಟಿ ರೂ. ಮೌಲ್ಯದ ಕಚ್ಚಾನಾರುಗಳೇ ಬರುತಿದ್ದುವು. ಪಾಕಿಸ್ತಾನದ ಪೂರ್ವ ಬಂಗಾಳದಲ್ಲಿ ಬೆಳೆಯುವ ಈ ಕಿತ್ತಾನಾರಿಗೆ ಭಾರತದ ನಾರುಗಿರಣಿಗಳೇ ಮಾರ್ಕೆಟ್ಟಿಗಳು. ಅಲ್ಲಿ ನಾರಿನ ಕೊಯ್ಲು ಒಕ್ಟೋಬರ್ ಮತ್ತು ನವಂಬರ್ ಅವಿಭಾಗದಲ್ಲೇ. ಈ ಅವಧಿಯೊಳಗೆ ಸಾಗಿಸದಿದ್ದರೆ ಮತ್ತೆ ನೆರೆಯ ದೆಸೆಯಿಂದ ನಾರು ಕ್ಷೇತ್ರಗಳಲ್ಲೇ ಕೊಳೆಯಬೇಕಾಗುವದು. ಹಸಿನಾರನ್ನು ಕೂಡಲೇ ಧಮ್ಮುಮಾಡದೆ ಜಮೆಯಿಟ್ಟುಕೊಳ್ಳುವ ಅನುಕೂಲತೆಗಳು ಪಾಕಿಸ್ತಾನದ ನಾರು ಸಾಗುವಳ್ಳೀಗಾರರಿಗಿಲ್ಲ. ತಮಗಿನ್ನು ಐದು ತಿಂಗಳುಗಳಿಗೆ ಪಾಕಾಗುವಷ್ಟು ನಾರು ದಾಸ್ತಾನಿರುವುದೆಂದು ಭಾರತದ ಗಿರಣಿಗಳವರಂದಿದ್ದಾರೆ. ಹಿಂಗಾಗಿ ನಾರು ಆಮದನ್ನು ಭಾರತ ಸರಕಾರವು ಕೂಡಲೇ ನಿಲ್ಲಿಸಿಕೊಂಡರೆ ಪಾಕಿಸ್ತಾನದ ಕಿತ್ತಾನಾರು ಬೇಸಾಯಗಾರರು ಹೆಚ್ಚಿನ ಕಷ್ಟನಷ್ಟಗಳಿಗೀಡಾಗಲಿದ್ದಾರೆ. ಅದ್ದೇ ರೀತಿ ಕೆಲವಂದೆ ಹೆತ್ತಿಯೂ ಈ ವರೆಗೆ ಪಾಕಿಸ್ತಾನದಿಂದ ಬರುತಿತ್ತು. ಮುಂದೆ ಭಾರತದ ಹೆತ್ತಿ ಕೈಸೇರುವ ವರೆಗೆ ಸಾಕಾಗುವಷ್ಟು ಹೆತ್ತಿ ಸಂಗ್ರಹವೂ ತಮ್ಮಲ್ಲಿದ್ದು ತಾವು ಪಾಕಿಸ್ತಾನದ ಹೆತ್ತಿಯನ್ನು ಅಲ್ಪಪರಿಮಾಣದಲ್ಲಿ ಮಾತ್ರ ಉಪಯೋಗಿಸುತ್ತಿರುವುದರಿಂದ ಅದನ್ನೂ ನಿಲ್ಲಿಸಿಕೊಳ್ಳಲಡ್ಡಿಯಿಲ್ಲವೆಂದು ಭಾರತದ ಗಿರಣಿಗಳವರು ಭರವಸೆ ಕೊಟ್ಟಿದ್ದಾರೆ. ಭಾರತದೊಂದಿಗಿರುವ ವ್ಯಾಪಾರವನ್ನು ಬಿಟ್ಟರೆ ಪಾಕಿಸ್ತಾನದ ವ್ಯಾಪಾರ ವಹಿವಾಟುಗಳೆಲ್ಲವೂ ನಷ್ಟದ ಬಾಬುಗಳೆಂದು ತಿಳಿದು ಬರುತ್ತದೆ. "ಭಾರತದೊಂದಿಗಿನ ಪಾಕಿಸ್ತಾನದ ವ್ಯಾಪಾರ ಮತ್ತು ಸಂದಾಯಗಳು ಇನ್ನೂ ಮಬ್ಬುಮಬ್ಬಾಗಿಯೇ ಇವೆ ಆದ್ದರಿಂದ ಭಾರತಕ್ಕೆ ನಾವು ಸಂದಾಯ ಸಲಿಸುವ ಮೊತ್ತದ ಕುರಿತು ಏನಾದರೂ ಅಭಿಪ್ರಾಯಕ್ಕೆ ಬರುವಾಗ ಇದನ್ನೂ ಆಲೋಚಿಸಿಕೊಳ್ಳಲಿಕ್ಕಿದೆ" ಎಂದು ಪಾಕಿಸ್ತಾನ್ ಬೇಂಕಿನ ಗವರ್ನರ್ ಮಿ. ಝಾಹಾಯಿದ್ ಹುಸ್ಸೇನರಂದಿದ್ದಾರೆ ಭಾರತ-ಪಾಕಿಸ್ತಾನಗಳೊಳಗಿನ ರಾಜಕೀಯ ಘರ್ಷಣೆಗಳಂತೆಯೇ ಈ ಆರ್ಥಿಕ ಘರ್ಷಣೆಯೂ ಯಾವ ರೀತಿ ಕೊನೆಗೆ ಹೊಂದುವುದೋ ನೋಡಲಿಕ್ಕಿದೆ.



Approved firm by the Govt. of Mysore
Certificated by theA gent of the Govt. of Cylone & Indian.

BANKING SERVICE

The Agricultural & Industrial Bank, Ltd.

Established 1934

A Machine has been invented for almost everything except one that will collect money. Do not ask me, if I have never seen a "slot Machine".

But it a Collection machine were invented it would be unsatisfactory, because it would not have that friendly and human appeal, which you are well aware gets results - A Gandhi, a Nehru or a Vallabhai.

What we want is a friendly account which would grow with the years and be a real prop.

A Madhava Pai, B A, B. L,
GENERAL MANAGER.

THE
Canara Banking Corporation Ltd.
(Incorporated in India)
Estd: 1906.
HEAD OFFICE. UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ನವಯುಗ

ಉಗ್ರ ಸ್ವರೂಪ ೪-೧೦-೧೯೪೪

ಕಮ್ಯೂನಿಸ್ಟರಿಗೆ ಪ್ರತಿಬಂಧ.

ಮದ್ರಾಸ್ ಪ್ರಾಂತ್ಯದಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಕಾನೂದೇಬಾಹಿರವೆಂದು ಸೆಪ್ಟೆಂಬರ್ ತಾ 26ನೇ ರಾತ್ರಿ ಹೊರಡಿಸಿದ ಒಂದ ಆಜ್ಞೆಯ ಮೂಲಕ ಮದ್ರಾಸ್ ಪ್ರಾಂತೀಯ ಸರಕಾರವು ಜಾಹೀರುಮಾಡಿದೆ. ಆದನ್ನನುಸರಿಸಿ, ಪ್ರಾಂತ್ಯದ ಹಲವೆಡೆಗಳಲ್ಲಿ ಕಮ್ಯೂನಿಸ್ಟ್ ಕಾರ್ಯಾಲಯಗಳಿಗೆ ಬೀಗಮುದ್ರೆ, ಜಪ್ತಿ ಮತ್ತು ದಸ್ತಗಿರಿಗಳಾಗಿವೆ. 'ಮದ್ರಾಸ್ ಸಾರ್ವಜನಿಕ ಸ್ಥಿತಿ ಸಂರಕ್ಷಣಾ ಶಾಸನ'ದನ್ವಯ ಮದ್ರಾಸ್ ಪ್ರಾಂತ್ಯದ ಎಲ್ಲೆಡೆಗಳಲ್ಲೂ ಈ ಮೊದಲೇ ಕಮ್ಯೂನಿಸ್ಟ್ ಕಾರ್ಯಕರ್ತರ ಬಂಧನ ಮತ್ತು ಶಿಕ್ಷೆಗಳು ನಡೆದಿದ್ದುವು; ಕೆಲವು ಕಮ್ಯೂನಿಸ್ಟರು ಈಗಲೂ ತಲೆಮರೆಸಿಕೊಂಡಿರುವುದು ಸಾರ್ವಜನಿಕರಿಗೆ ತಿಳಿದಿದೆ. ಈ ವರೆಗಿನ್ನ ಆಜ್ಞೆಗಳೆಲ್ಲವೂ ಸಾರ್ವಜನಿಕ ಶಾಂತಿಗೆ ಅಪಾಯವೊದ್ದುವವರೆಂಬ ಸಂದೇಹಕ್ಕೀಡಾದ ಕಮ್ಯೂನಿಸ್ಟರ ಮೇಲೆ ಮಾತ್ರ; ಈಗ ಕಮ್ಯೂನಿಸ್ಟ್ ಪಕ್ಷವೇ ಬಹಿಷ್ಕರಿಸಲ್ಪಟ್ಟಿರುವುದರಿಂದ, ಇನ್ನು ಕೇವಲ 'ಕಮ್ಯೂನಿಸ್ಟ್'ನಾಗಿರುವುದೂ ಕೂಡಾ ತಪ್ಪೆನಿಸಿಕೊಳ್ಳುವುದು. 'ಸಾರ್ವಜನಿಕ ಶಾಂತಿ ಸಂರಕ್ಷಣಾ ಶಾಸನ'ದನ್ವಯವೇ ಕಮ್ಯೂನಿಸ್ಟ್ ಚಟುವಟಿಕೆಗಳೆಲ್ಲಾ ಹೆಚ್ಚಿನಂಶ ಸಂತೋಷಿಗಿರುವ ದಕ್ಷಿಣ ಕನ್ನಡ ಂತಹ ಜಿಲ್ಲೆಗಳಲ್ಲಿ ಈ ಪ್ರತಿಬಂಧಕಾಜ್ಞೆಯ ಪರಿಣಾಮವು ವಿಶೇಷವಾಗಿ ತೀವ್ರವಾಗಿರುವಂತಿಲ್ಲ. ಆದರೆ ಈ ಕಮ್ಯೂನಿಸ್ಟ್ ವಿಷಯದ ದೆಸೆಯಿಂದಲೇ ಪ್ರಾಂತ್ಯದ ಇತರ ಕಡೆಗಳಂತೆ ದಕ್ಷಿಣಕನ್ನಡದಲ್ಲಿಯೂ ಜಲ್ಲಾ ಬೋರ್ಡಿನ ಒಂದೆರಡು ಸ್ಥಾನಗಳಿಗಿಂದಲೂ ಕಮ್ಯೂನಿಸ್ಟ್ ಕಕ್ಷಿಯ ಅಸ್ತಿತ್ವದ್ಯೋತಕರಿಗಳು ನಿಲ್ಲುವ ಅವಕಾಶವೊದಗಿದ್ದಿಶೆಂಟ ಸ್ಥಿತಿವ್ಯತ್ಯಾಸವನ್ನು ಗಮನಿಸಬೇಕಾಗಿದೆ. ದೈದರಾಬಾದಿಗೂ ತ್ರಿಗಿ ಇ ಸರ್ಕಾರ್ ಜೆಲ್ಲೆಗಳಲ್ಲಿಶೈದರಾಬಾದಿನ ಕಮ್ಯೂನಿಸ್ಟರೊಂದಿಗೆ ಸಂಬಂಧವಿಟ್ಟುಕೊಂಡು ಇಲ್ಲಿಯು ಕಮ್ಯೂನಿಸ್ಟರು ನಡೆಸುತ್ತಾಬಂದ ಅತ್ಯಾಚಾರಗಳು ಸ್ವೀಕರ ಸ್ವರೂಪದವುಗಳವೆ. ಕಾಂಗ್ರೆಸಿಗರನ್ನೂ ಪೋಲೀಸಧಿಕಾರಿಗಳನ್ನೂ ಕೊಲೆಮಾಡುವ ಕೃತ್ಯವು ಆ ಭಾಗದಲ್ಲಿ ಬಹಳವಾಗಿ ನಡೆದು ಬಂದಿದೆ. ಮಲಬಾರ್, ಕೃಷ್ಣಾ ಮತ್ತು ತಂಜಾವೂರು ಜಿಲ್ಲೆಗಳಲ್ಲೂ ಕಮ್ಯೂನಿಸ್ಟರ ಹಿಂಸಾತ್ಮಕ ಕೃತ್ಯಗಳು ಮಿತಿಮೀರಿ ಅಲ್ಲಲ್ಲಿಯ ಸಾರ್ವಜನಿಕ ಶಾಂತಿಗೆನಿಜಕ್ಕೂ ಭಂಗ ಬಂದಿದೆ; ಜನತೆ ದಿಗಿಲುಗೊಳ್ಳುವಂತಾಗಿದೆ. ಕೃಷಿಕ ವರ್ಗಗಳಲ್ಲಿ ಅವರು ಹಬ್ಬಿಸಿಬಿಟ್ಟ ಗೂಂಡಲ ವ್ಯವಸ್ಥೆಯು ದಸೆಯಿಂದ ಅಪಾರೋತ್ಪಾದನೆಗೆ ಕೆಲವೆಡೆ ಗಣ್ಯ ಅಡಂಗಗಳೊದಗಿದ್ದವು. ಗಿರಣಿ ಕೆಲಸಗಾರರ ನಡುವೆ ಕೈ ಆಡಿಸಿ ಅರಿವೆ ಉತ್ಪಾದನೆಗೂ ಇವರು ಪೆಡಿಗಳನ್ನೊಡ್ಡಿದ್ದರು. ಸರಕಾರೀ ಯಂತ್ರ ಚಲನೆಯನ್ನು ತಡೆಗಟ್ಟುವ ಪ್ರಯತ್ನ ಮಾಡಲಾಗುವ ಯಾವದೇ ಸಂದರ್ಭವನ್ನಾದರೂ ಈ ಕಮ್ಯೂನಿಸ್ಟರು ಉಪಯೋಗಿಸಿಕೊಳ್ಳದೆ ಬಿಟ್ಟುದಿಲ್ಲ. ಎಲ್ಲಿ ಗೋಂದಲಗಳೆದ್ದಿದ್ದವೋ ಆಲ್ಲೆಲ್ಲಾ ಕಮ್ಯೂನಿಸ್ಟ್ ಕೈ ಇದ್ದೇ ಇದ್ದಿತು. ಇವೆಲ್ಲಾ ಕಾರಣಗಳನ್ನು ನಮೂದಿಸಿ ಮದ್ರಾಸ್ ಸರಕಾರವು ತನ್ನ ಹೇಳಿಕೆಯಲ್ಲಂದಿದೆ: "ಕಮ್ಯೂನಿಸ್ಟರು ತಮ್ಮ ಹಿಂಸಾತ್ಮಕ ಹಂಚಿಕೆಗಳನ್ನು ಬಿಟ್ಟುಕೊಟ್ಟು, ಶಾಸನಬದ್ಧ ಹಾಗೂ ಶಾಂತ ವಿಧಾನಗಳನ್ನನುಸರಿಸಬಹುದೇ ಎಂಬ ನೀರೀಕ್ಷೆಯಿಂದ ಸುಮಾರು 18 ತಿಂಗಳುಗಳಿಂದಲೂ ಪ್ರಾಂತೀಯ ಸರಕಾರವು ವಿದ್ಯಮಾನಗಳನ್ನು ವಿಶೇಷ ಲಕ್ಷ್ಯ ಪೂರ್ವಕವಾಗಿ ಕಾದು ನೋಡುತ್ತಾ ಬಂತು. ಆದರೆ ಆವರ ಧೋರಣೆ ಬದಲಾಗುವ ಯಾವ ಚಿಹ್ನೆಯೂ ತೋರಿ ಬರುತ್ತಿಲ್ಲವೆನ್ನಲು ಸರಕಾರವು ವಿಷಾದಿಸುತ್ತದೆ. ಕಮ್ಯೂನಿಸ್ಟರ ಈ ಹಿಂಸಾತ್ಮಕ ಕಾರ್ಯಕ್ರಮಗಳು ತತ್ಕಾಲಿಕ ಘಟನೆಗಳೇನೂ ಅಲ್ಲ. ರಾಷ್ಟ್ರೀಯ ಹಿತಸಂಬಂಧಗಳನ್ನು ಸಂಪೂರ್ಣವಾಗಿ ಕಡೆಗಣಿಸಿ, ತಮ್ಮ ಉದ್ದೇಶ ಕೈಗೂಡಲು ಮಿತಿಯನ್ನಾಗಲೀ ಕಾರ್ಯವಿಧಾನಗಳಿಗೊಂದು ನಿಯಂತ್ರಣವನ್ನಾಗಲೀ ಇಟ್ಟುಕೊಳ್ಳದೆ ಏಕಪ್ರಕಾರ ಮುಂದೊತ್ತಬೇಕೆಂದು ಬಗೆದೇ ಕಮ್ಯೂನಿಸ್ಟರು ಕೈಕೊಂಡಿರುವ ಆಚರಣೆಗಳವು, ಎಂಬ ದಕ್ಕೆ ಸರಕಾರದ ವಶ ಸಾಕಷ್ಟು ಪುರಾವೆಗಳವೆ. ಇಂತಹ ಕಾರ್ಯಕ್ರಮವನ್ನು ಇನ್ನೂ ಸಹಿಸಿಕೊಂಡಿರಲು ಸಾಧ್ಯವಿಲ್ಲ." ಮದ್ರಾಸ್ ಸರಕಾರದ ಈ ಮಾತುಗಳನ್ನು ಅಕ್ಷರಶಃ ನಿಜವಿರಬೇಕು. ವಿಭಜನೋತ್ತರ ಭಾರತದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿರುವಷ್ಟು ಕಮ್ಯೂನಿಸ್ಟ್ ಹಾವಳಿಯು ಬೇರಾವ ಪ್ರಾಂತ್ಯದಲ್ಲಿಯೂ ಇಲ್ಲವೆನ್ನಬಹುದು. ಎರಡನೆಯ ದಾದ ಬಂಗಾಳ ಪ್ರಾಂತ್ಯವು ಈ ಮೊದಲೇ ತನ್ನಲ್ಲಿಯ ಕಮ್ಯೂನಿಸ್ಟ್ ಪಕ್ಷಕ್ಕೆ ಬಹಿಷ್ಕಾರ ಹಾಕಿಕೊಂಡಿದೆ. ಆದ್ದರಿಂದ ಮದ್ರಾಸ್ ಸರಕಾರವು ಈ ವರೆಗೂ ಸಹಿಸಿ ಪರೀಕ್ಷಿಸಿತೆಂಬ ಮಾತನ್ನು ಒಪ್ಪಬೇಕಾಗುತ್ತದೆ. ಕೇಂದ್ರ ಸರಕಾರದ ಗೃಹ ಖಾತೆಯವರು ಸೆಪ್ಟೆಂಬರ್ 30ರಲ್ಲಿ ಬಹಿರಂಗಪಡಿಸಿರುವ ಕಮ್ಯೂನಿಸ್ಟ್ ಸಂಬಂಧದ ಐದುಅಧ್ಯಾಯಗಳ ಪ್ರಕಟಣಾವಹಿಯಲ್ಲಿ ಭಾರತೀಯ ಕಮ್ಯೂನಿಸ್ಟರ ನಿಜರೂಪವು ಬಯಲಾಗಿದೆ. ಅಖಿಲ ರಾಷ್ಟ್ರದಲ್ಲಿ ಕಮ್ಯೂನಿಸ್ಟರು ಉದ್ದೇಶಪೂರ್ವಕವಾಗಿ ಮತ್ತೆ ಸಂಘಟಿತರಾಗಿ ನಡೆಸಿರುವ ಹಿಂಸಾತ್ಮಕ ಕೃತ್ಯಗಳ ಹರಿಚಯವನ್ನು ಆ ಪ್ರಕಟಣೆಯು ಯಥಾವತ್ತಾಗಿ ಮಾಡಿಕೊಟ್ಟಿದ್ದು; ರಾಜ್ಯಭಾರಂಗದ್ದಕ್ಕಿಯನ್ನು ಆಡಿಮೇಲು ಮಾಡಿ ಹಾಕುವುದೇ ಕಮ್ಯೂನಿಸ್ಟರ ಗುರಿಯೆಂಬುದನ್ನು ಸಂಧಾರವಾಗಿ ಚಿತ್ರಿಸಿದೆ. ಸಶಸ್ತ್ರ ಸೈನ್ಯಗಳನ್ನು ಸೋಲಿಸಿ— ಸಶಸ್ತ್ರ ಪಡೆಗಳನ್ನು ಸ್ವಾಧೀನಪಡಿಸಿಕೊಂಡು— ಸಂದರ್ಭವೊದಗಿದಾಗ ಸಶಸ್ತ್ರ ಜನತಾ ಬಂಡಾಯವನ್ನೆಬ್ಬಿಸಿ, ಎಲ್ಲವನ್ನೂ ತಲಮಗುಜಿಹಾಕುವ ಉದ್ದೇಶದಿಂದ 'ಗೋರಿಲ್ಲಾದಳ' ಮತ್ತು 'ದಿಗಿಲುಪಡೆ'ಗಳನ್ನು ನಿರ್ಮಿಸಿಕೊಳ್ಳುವ ಸಂಬಂಧದ ಕಮ್ಯೂನಿಸ್ಟ್ ನಿರ್ದೇಶ ಪತ್ರಗಳು ಸರಕಾರಕ್ಕೆ ದೊರೆತಿವೆ. ಇವೆಲ್ಲವುಗಳನ್ನು ಬೆಳಕಿಗೆ ಹಾಕಿ ಭಾರತ ಸಂರಕ್ಷಣಾ ತನ್ನ ಆ ಪ್ರಕಟಣೆಯಲ್ಲುಂದಿದೆ. "ಭಾರತದ ಕಮ್ಯೂನಿಸ್ಟರು ಕಮ್ಯೂನಿಸ್ಟ್ಯೆಕ್ಷಿಚರಣೆಗಳಂತೆಯೇ ಬಾಯ್ದೆರೆ ಮತ್ತು ಬರೆಹಸಿಕೆ ಪ್ರಚಾರಗಳ ಮೂಲಕವೂ ಸುಸ್ಪಷ್ಟ ಪಡಿಸಿರುವಂತೆ, ಅವರ ಅಭಿಮತಾನುಸಾರವಾಗಿ ಪ್ರಜಾಸತ್ತಾ ಹಕ್ಕು ಬಾಧ್ಯತೆ ಮತ್ತು ನಾಗರಿಕ ಸ್ವಾತಂತ್ರ್ಯಗಳಿಗೆ ಕೊಳಗೆ ಕೊಲೆ, ದರೋಡೆ, ಚಿತ್ರಹಿಂಸೆ ಮತ್ತು ದಗಾ ಕೃತ್ಯ ನಡೆಸುವ ಸ್ವಾತಂತ್ರ್ಯವೂ ನೇರವಾದ ವಸ್ತುವೇ ಅಲ್ಲ. ಅಂತಹ ಆಚರಣೆಗಳು ಸರಕಾರದ ಅಥವಾ ಸಾರ್ವಜನಿಕರ ವಿರೋಧಕ್ಕೂ ಹೊರಗಿನವುಗಳಾಗಿವೆ". ಇಂತಹ ಧೋರಣೆ ಮತ್ತು ಕಾರ್ಯಕ್ರಮಗಳನ್ನು ಕಟ್ಟಿಕೊಂಡಿರುವ ಕಮ್ಯೂನಿಸ್ಟರ ಮೇಲೆ ಮದ್ರಾಸ್ ಸರಕಾರವು ಬಹಿಷ್ಕಾರ ಹಾಕಿದುದಕ್ಕಾಗಿ ಶಾಂತಿ ಪ್ರೇಮಿಗಳೆಲ್ಲರೂ ಸಮಾಧಾನಪಡುವಂತೆ ಬಿಟ್ಟಿರು; ನಿಟ್ಟುಸಿರಿಡುವವರು ಅತ್ಯಪರೂಪ. ಇಲ್ಲಿ, ಒಂದು ನವೀನ ರಾಜಕೀಯ ಪಾರ್ಟಿಯನ್ನು ಸಾಮಾಜಿಕ ಪದ್ಧತಿಯನ್ನು ಸ್ಥಾಪಿಸುವ ಕಮ್ಯೂನಿಸ್ಟ್ ತತ್ವಗಳು ಬಹಿಷ್ಕರಿಸಲ್ಪಟ್ಟವೆಂಬ ತಪ್ಪುಭಾವನೆಯು ಯಾರಲ್ಲೂ ಮೂಡಬಾರದು. ಭಾರತೀಯ ಕಮ್ಯೂನಿಸ್ಟರ ಹಿಂಸಾತ್ಮಕ ಹಾಗೂ ರಾಷ್ಟ್ರದ್ರೋಹೀ ಆಚರಣೆಗಳಿಗೆ ಮಾತ್ರ ತಡೆಬಿದ್ದಿದೆ ಹೊರತು ಪಂಡಿತ್ ನೆಹರುಗಳಂಥವರಿಗೂ ಅಸಕ್ತಿಯಿರುವ ಸಮಾಜವಾದೀತತ್ವಗಳಿಗಲ್ಲ. ಹಿಂದೀಕಮ್ಯೂನಿಸ್ಟರ ಸ್ಫೂರ್ತಿಕೇಂದ್ರ-ಅಖಿಲ ಪ್ರಪಂಚದ ಕಮ್ಯೂನಿಸ್ಟರ ಸೂತ್ರಮೂಲಗಳಿರುವ ನೆಲೆ—ಸೋವಿಯೆಟ್ ರಶ್ಯಕ್ಕನೇ ಎಂತಹ ರಾಷ್ಟ್ರೀಯ ಸ್ವಾರ್ಥವಿದೆಯೆಂಬುದಕ್ಕೆ, ಸ್ವತಃ ಕಮ್ಯೂನಿಸ್ಟ್ ಆಗಿರುವ ಸಣ್ಣ ರಾಷ್ಟ್ರ ಯುಗೊಸ್ಲೇವಿಯದ ಮೇಲೆ ಅದೀಗ ಹಾಕುತ್ತಿರುವ ಬೆದರಿಕೆಯೇ ನಿದರ್ಶನ. ಇಂತಹ ಸ್ಥಿತಿಯಲ್ಲಿ ಯಾವ ಸರಹದ್ದು ನಿಬಂಧವೂ ಇಲ್ಲದ ಅಖಿಲ ಪ್ರಪಂಚವೇ ತಮ್ಮ ಕಾರ್ಯಕ್ಷೇತ್ರವೆಂದು ಭಾವಿಸಿರುವ ಹಿಂದೀ ಕಮ್ಯೂನಿಸ್ಟರ ಭ್ರಮೆಯು ನಿಜಕ್ಕೂ ಭಾರತಕ್ಕೊಂದು ಅಪಾಯ. ಇದನ್ನಾಧರಿಸಿ ಅವರು ಕೈಕೊಳ್ಳುತ್ತಿರುವ ಧ್ವಂಸಾತ್ಮಕ ಚಟುವಟಿಕೆಗಳನ್ನು ಗುರಿಮುಟ್ಟಲು ಬಿಟ್ಟರೆ ರಾಷ್ಟ್ರದ ಸರ್ವಸ್ವವೂ ಹಾಳಾಗಿ ಹೋಗುವುದು ಖಂಡಿತ. ಆದ್ದರಿಂದ ಕಮ್ಯೂನಿಸ್ಟರ ಕಠಿಣ ಪರಕಾರದಂತೆಯೇ ಸಾರ್ವಜನಿಕರೂ ವಿಶೇಷ ಜಾಗರೂಕತೆ ವಹಿಸಬೇಕಾದುದು ಆಗತ್ಯ. ಸಂಗತಿಯರಿಯದೆ ಆ ಪಕ್ಷಕ್ಕೆ ಸೇರಿದವರಿದ್ದರೆ—ಆಜ್ಞೆಯನ್ವಯಾತ್ ಅದರ ಕಡಗೇ ನಾದರೂ ಸಹಾನುಭೂತಿ ಇಟ್ಟುಕೊಂಡವರಿದ್ದರೆ— ಅಂಥವರೆಲ್ಲರೂ ಕೂಡಲೇ ತಮ್ಮನ್ನು ತಾವು ಸರಿಪಡಿಸಿಕೊಳ್ಳಬೇಕು. ಸರಕಾರದ ಬಹಿಷ್ಕಾರವೆಂಬುದು ಪರಿಸ್ಥಿತಿಯನ್ನನುಸರಿಸಿ ಬದ್ಧಂತೆಯೇ ರದ್ದಾಗುವಂತಹದೇ. ಚೈನದ ಕಮ್ಯೂನಿಸ್ಟರಿಗೆ ದೊರೆತಂತಹ ಜನತಾ ಬೆಂಬಲವು ತದ್ವಿರುದ್ಧ ಸ್ಥಿತಿಯಿರುವ ಭಾರತದಲ್ಲಿ ತಮಗಾವ ಯುಗಕ್ಕೂ ದೊರಕಲಾರದೆಂಬುದನ್ನು ವಾಸ್ತವರಿಕೆ ಮಾಡಿಕೊಂಡು ಭಾರತೀಯ ಕಮ್ಯೂನಿಸ್ಟರು ವಿಧಾಯಕ ವಿಧಾನಗಳಿಂದಲೇ ಮುಂದೊತ್ತುವ ನಿರ್ಧಾರಕ್ಕೆ ಬರುವುದು ಪ್ರಧಮತಃ ಅವರಿಗೂ, ಎರಡನೆಯದಾಗಿ ರಾಷ್ಟ್ರಕ್ಕೂ ಒಳಿತೆಂದನ್ನುತ್ತೇವೆ.

ವಿಶೇಷ—

ಪೌರಾನ ನಿರೋಧ, ಜಮೀನ್ದಾರೀ ರದ್ದತಿ ಮೊದಲಾದ ಸುಧಾರಣೆಗಳಲ್ಲಿ ರಾಷ್ಟ್ರದ ಮಿಕ್ಕ ಪ್ರಾಂತ್ಯಗಳಿಗೆ ಮೇಲ್ಪಂಕ್ತಿಯಾಗಿದ್ದ ಮದ್ರಾಸ್ ಪ್ರಾಂತ್ಯದ ಕಾಂಗ್ರೆಸ್ ಸರಕಾರವು ಮತ್ತೊಂದು ಅದರ್ಶವನ್ನು ಆಚರಿಸಿ ತೋರಿಸಿದೆ ಈ ತನಕ ಒಂದೇ ಕಡೆ ಸೇರಿದ್ದ ಕಾನೂನು ಜಾರಿಯ (Executive) ಅಧಿಕಾರ ಮತ್ತು ನ್ಯಾಯ ತೀರ್ಮಾನ (Judicial) ಅಧಿಕಾರಗಳನ್ನು ಬೇರೆಬೇರೆಯಾಗಿ ವಿಂಗಡಿಸಿಡುವ ಸುಧಾರಣೆಯನ್ನು ಶೀಘ್ರಮ ಪ್ರಯೋಗವಾಗಿ ಚಿಂಗಲ್‌ಪೇಟೆ ಮತ್ತು ಉತ್ತರ ಆರ್ಕಾಟ್ ಇವೆರಡು ಜಿಲ್ಲೆಗಳಲ್ಲಿ ಜಾರಿಗೆ ತಂದಿದೆ. ಇದರ ಉದ್ಘಾಟನಾ ಸಮಾರಂಭವು ಗಾಂಧೀ ಜಯಂತಿ ದಿನ ವೆಲ್ಲೂರಿನಲ್ಲಿ ಪ್ರಧಾನ ಮಂತ್ರಿ ಶ್ರೀ. ಕುಮಾರಸ್ವಾಮಿ ರಾಜರಿಂದಲೂ, ಚಿಂಗಲ್‌ಪೇಟೆಯಲ್ಲಿ ಚೀಫ್ ಜಸ್ಟೀಸ್ ಪಿ.ನಿ. ರಾಜಮನ್ನಾರರಿಂದಲೂ ನೆರವೇರಿಸಲ್ಪಟ್ಟಿತು. ಗವರ್ನರ್ ಜನರಲ್ ರಾಜಾಜಿ, ಪ್ರಧಾನ ಮಂತ್ರಿ ನೆಹರು, ಗೃಹ ಮಂತ್ರಿ ಪಟೇಲ್, ಘಟನಾ ಸಮಿತಿ ಅಧ್ಯಕ್ಷ ರಾಜೇಂದ್ರ ಪ್ರಸಾದ್ ಮೊದಲಾದವರು ಮದ್ರಾಸ್ ಸರಕಾರದ ಈ ಶ್ಲಾಘನೀಯ ಕಾರ್ಯವನ್ನು ಶ್ಲಾಘಿಸಿ ಸಂದೇಶ ರವಾನಿಸಿದ್ದರು. ಈ ಸುಧಾರಣೆಯ ಬೀಡಿಕೆಯು ಭಾರತ ಮತ್ತು ಯೂರೋಪಿನಲ್ಲಿ 18ನೇ ಶತಮಾನದಿಂದಲೂ ಇದ್ದದ್ದೇ. ಕಾಂಗ್ರೆಸು ಅದಿಕಾಲದಿಂದಲೂ ಕಾನೂನಾಧಿಕಾರ ಮತ್ತು ಕಾರ್ಯಾನಾಧಿಕಾರಗಳನ್ನು ವಿಂಗಡಿಸಬೇಕೆಂದು ಚಳವಳಿಸುತ್ತ ಬಂದಿದೆ. ಮದ್ರಾಸಿನ ಕಾಂಗ್ರೆಸ್ ಸರಕಾರವು ಎಲ್ಲಿಂ

ವಿದ್ಯಮಾನಗಳು

ಗಂತೆ ಮುಂದಾಗಿ ಈಗ ಈ ಸುಧಾರಣೆಯನ್ನಾರಂಭಿಸಿದೆ. ಈ ತನಕ ಕಾನೂನು ಜಾಲನಾಧಿಕಾರಿ ಜಿಲ್ಲಾ ಕಲೆಕ್ಟರರೇ ವಿಚಾರಣೆ ನಡಿಸಿ ತೀರ್ಮಾನ ಕೊಡುವ ಜಿಲ್ಲಾ ಮೆಜಿಸ್ಟ್ರೇಟರಾಗಿಯೂ ಇದ್ದರು. ಅಂತೆಯೇ ಡಿವಿಜನಲ್ ಆಫೀಸರ್ ಅಥವಾ ಸಬ್ ಕಲೆಕ್ಟರರು ಡಿವಿಜನಲ್ ಮೆಜಿಸ್ಟ್ರೇಟರುಗಳಾಗಿ ಮೊಕದ್ದಮೆಗಳು ಹಾಗೂ ವ್ಯಾಜ್ಯಗಳ ತೀರ್ಮಾನ ಕರ್ತರೂ ಆಗಿದ್ದರು. ಈ ತನಕ ಒಬ್ಬರ ಕೈಯ್ಯಲ್ಲಿದ್ದ ಈ ಎರಡು ಅಧಿಕಾರಗಳನ್ನು ಪ್ರತ್ಯೇಕಿಸಿ, ಪ್ರತಿಯೊಂದನ್ನೂ ಪ್ರತ್ಯ ಪ್ರತ್ಯೇಕ ಅಧಿಕಾರಿಯ ವಶಕ್ಕೊಪ್ಪಿಸಲಾಗುವದು. ಕಾನೂನನ್ನು ಜಾರಿಗೆ ತರುವವರು ಬೇರೆ, ಆ ಸಂಬಂಧವಾಗಿ ಎಳುವ ವಿವಾದಗಳನ್ನು ತೀರ್ಮಾನಿಸುವವರು ಬೇರೆ, ಆಗುವರು. ತನಬೀ ತೀರ್ಮಾನ ನಡೆಸುವ ಮೆಜಿಸ್ಟ್ರೇಟರುಗಳು ಈ ವರೆಗಿದ್ದಂತೆ ಜಿಲ್ಲಾ ಕಲೆಕ್ಟರರ ಕೈಕೆಳಗಿರುವ ಬದಲಿಗೆ, ನೇರವಾಗಿ ಹೈ ಕೋರ್ಟಿನ ಕೈಕೆಳಗಿನವರಾಗುವರು. ಈ ರೀತಿ ಕಾನೂನು ಕರ್ತರೂ ಕಾನೂನು ಸಂಬಂಧದ ತೀರ್ಮಾನಗಳ ಕರ್ತರೂ ಬೇರೆಬೇರೆ ಯಾಗುವುದರಿಂದ, ಒಂದು ಕಾರ್ಯಮಾಡಿದವರೇ ಅದರ ಸರತಪ್ಪುಗಳನ್ನು ತೀರ್ಮಾನಿಸಬಹುದು ಆಗಿ ನಿಷ್ಪಾಪವು ತಪ್ಪುವದು; ಸಂಬಂಧವಿಲ್ಲದ, ನಿರ್ಲಿಪ್ತ ಹೃದಯದ ನ್ಯಾಯಧೀಶರೇ ಸತ್ಯತೋಧನೆ ಮಾಡುವಂತಾಗುವುದು. ಆದ್ದರಿಂದ ಈ ಸುಧಾರಣೆಗೆ ನ್ಯಾಯ ಪಕ್ಷಪಾತಿಗಳ ಸುಸ್ವಾಗತ ದೊರೆತಿದೆ.

× × × ×

ಗಾಂಧೀ ಜಯಂತ್ಯುತ್ಸವವು ಇದೇ ತಾ ೭೦ಲ್ಲಿ ರಾಷ್ಟ್ರದಲ್ಲೆಲ್ಲಾ ಆಚರಿಸಲ್ಪಟ್ಟಿದೆ. ದಿಲ್ಲಿಯ ೦೦ಜಘೋಟನಲ್ಲಿರುವ ಗಾಂಧಿಜೀಯ ಸಮಾಧಿ ಬಳಿ ವಿಶೇಷ ಪ್ರಾರ್ಥನೆಗಳು ನಡೆದುವು. ಲಂಡನ್, ನ್ಯೂಯೋರ್ಕ್, ಪ್ಯಾರಿಸ್, ಸಿಂಗಾಪುರ, ಮೊದಲಾದ ವಿದೇಶೀ ಕೇಂದ್ರಗಳಲ್ಲೂ ಮಹಾತ್ಮಾಜೀಯ ಹುಟ್ಟು ದಿನಾಚರಣೆಯು ವಿಶೇಷ ರೀತಿಯಿಂದ ಜರಗಿತು. ಆ ದಿನ ದಿಲ್ಲಿಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ ಪಂಡಿತ ನೆಹರುಗಳು, ರಾಷ್ಟ್ರಕ್ಕೆಂದು ಸರ್ವರ ಒಮ್ಮತದ ಹಾಗೂ ವಿಕೇಶ್ಯತ ಕಾರ್ಯದ ಅವಶ್ಯವಿದೆಯೆಂದರು. "ಮಹಾತ್ಮಾ ಗಾಂಧಿಯವರ ಜೆಸರಿಂದಾಗಿಯೇ ಭಾರತವೀ ದಿನ ಲೋಕದಲ್ಲಿ ಗಣ್ಯವಾಗಿದೆ. ಗಾಂಧಿಜೀಯ ಸಂದೇಶಗಳು ನಾವು ನಮ್ಮ ರಾಜಕೀಯ ಸ್ವಾತಂತ್ರ್ಯಕ್ಕೆ ಜೋರಿಸಿಕೊಳ್ಳುವಂತೆ ಮಾಡಿದುದಷ್ಟೇ ಅಲ್ಲ; ಮಾನವೀಯ ಸೇವೆಗಾಗಿ ಸ್ವದೇಶೀಯರನ್ನೂ ಅಖಿಲ ಜಗತ್ತನ್ನೂ ಅಧಿಕಾರಿಸುವಂತೆ ಹುರಿದುಂಬಿಸುತ್ತಾ ಸಾಗಿವೆ" ಎಂದರು. "ಗಾಂಧಿಜೀಯ ತತ್ವದ ಮಾನದಿಂದ ಪ್ರತಿಯೊಬ್ಬನೂ ತನ್ನನ್ನು ತಾನು ಅಳೆದು ನೋಡಿಕೊಳ್ಳಬೇಕಾದ ಹೃದಯ-ಜಡ್ಡೀ ದಿನ ವಿದು" ಎಂದು ಬಾಬು ರಾಜೇಂದ್ರ ಪ್ರಸಾದರೆಂದರು. ದಿಲ್ಲಿಯಿಂದ ಆಕಾಶವಾಣಿ ಸಂದೇಶವೀಯುತ್ತಾ ಸರ್ದಾರ್ ಪಟೇಲರು ಸಾರಿದರು: "ಈ ದಿನ ಮಹಾತ್ಮಾ ಗಾಂಧಿಯವರ ಸಂದೇಶವನ್ನು ನಮ್ಮಲ್ಲಿ ಸಾಕ್ಷಾತ್ಕರಿಸಿಕೊಂಡು, ಭಾರತವನ್ನು ಬಲಗೊಳಿಸಬೇಕಾದುದು ಎಲ್ಲರ ಕರ್ತವ್ಯ. ಅಹಂಕಾರವನ್ನು ಸೇವೆಗೆ ಪ್ರಥಮ ಸ್ಥಾನ ಕೊಡಬೇಕು. ತಮಗೆ ಬೇಕಾದುದೆಲ್ಲವನ್ನೂ ತಾವೇ ಉತ್ಪಾದಿಸಿಕೊಳ್ಳುವುದಕ್ಕೂ, ತಾವು ನಿರ್ಮಿಸಲಾರದವುಗಳ ಉಪಯೋಗವನ್ನು ಶಕ್ತಿ ವಿದ್ದಷ್ಟು ಕಡಿಮೆಮಾಡಿಕೊಳ್ಳುವುದಕ್ಕೂ ಭಾರತೀಯರು ಸರ್ವ ಪ್ರಯತ್ನಮಾಡಬೇಕು. ಲೋಕಶಾಂತಿ ಸ್ಥಾಪಕರನ್ನಿಸಿಕೊಂಡಿರುವ ರಾಷ್ಟ್ರಗಳಿಗೆ ತನ್ಮೂಳಗಿನ ಜಗಳಗಳನ್ನು ತೀರ್ಮಾನಿಸಿಕೊಳ್ಳುವುದೇ ಅಸಾಧ್ಯವಾಗಿದೆ. ಕಮ್ಮನ್ನು ತಾವು ಸುಧಾರಿಸಲಾರದವರು ಅನ್ಯರನ್ನು ಸುಧಾರಿಸಲಾರರು. ಆದ್ದರಿಂದ ನಾವು ಗಾಂಧಿಜೀ ಸಂದೇಶಾನುಸಾರವಾಗಿ ಸ್ವಾವಲಂಬನೆಯಿಂದ ಸ್ವಶಕ್ತಿ ವರ್ಧಿಸಿಕೊಳ್ಳಬೇಕು."

× × × ×

ಪಂಡಿತ ನೆಹರುಗಳು ಅಮೆರಿಕಾಧ್ಯಕ್ಷ ಟ್ರುಮೇನರು ಆಮಂತ್ರಣಾನುಸಾರ ಅಮೆರಿಕದಲ್ಲಿ ಒಂದು ತಿಂಗಳ ವ್ಯಾಸ ಮಾಡುವರೆ ಇದೇ ತಾ ೭ಕ್ಕೆ ಇಲ್ಲಿಂದ ಹೊರಡುವರೆಂದು ತಿಳಿದುಬಂದಿದೆ. ಟ್ರುಮೇನರು, ನೆಹರುಗಳನ್ನು ಕರತರಲು ತನ್ನ ಖಾಸಗೀ ವಿಮಾನ 'ಇಂಡಿಪೆಂಡೆನ್ಸ್'ನ್ನು ಲಂಡನ್ನಿಗೆ ಕಳುಹಿಲಿರುವರು. ಪಂಡಿತಜೀ ತಾ 11ಕ್ಕೆ ವಾಷಿಂಗ್ಟನ್ನಿಗೆ ಮುಟ್ಟಿ ವಿವಿಧ ಕಾರ್ಯಕ್ರಮಗಳನ್ನು ನಿರ್ವಹಿಸಲಿದ್ದಾರೆ. ನ್ಯೂಯೋರ್ಕಿನಂತಹ ನಗರಗಳಲ್ಲಿ ಆತಿ ಸಂಭ್ರಮದ ಸ್ವಾಗತಗಳು ಆವರನ್ನು ಕಾದಿವೆ. ನವೆಂಬರ್ ತಾ. 15ಕ್ಕೆ ಬೀಳುವ ಪಂಡಿತರ 60ನೇ ಜನ್ಮದಿನೋತ್ಸವದಲ್ಲಿ ಹಾಜರಿರಬೇಕೆಂಬ ಇಚ್ಛೆಯವರು ಅಪೇಕ್ಷೆಗನುಸಾರವಾಗಿ ಪಂಡಿತಜೀ ಆ ಹೊತ್ತಿಗೆ ಭಾರತಕ್ಕೆ ಮರಳಲಿಯವರು. ಆವರೊಂದಿಗೆ ಶ್ರೀಮತಿ ಇಂದಿರಾ ಮತ್ತು ಕಾರ್ಯದರ್ಶಿಗಳೂ ಅಮೆರಿಕಕ್ಕೆ ಹೊರಡುವರು.

ಉಡುಪಿ 'ಕರ್ನಾಟಕ ಸಂಘ'ದ ಉತ್ಸವ.
ಶ್ರೀ ಕೊರಡ್ಕಲ್ ಸ್ಮಾರಕ ಸಭಾರಂಭ.

ಕರ್ನಾಟಕ ಸಂಘ—ಇದರ ವಾರ್ಷಿಕ ಸಮಾರಂಭಗಳು ಬೋರ್ಡು ಹ್ಯಾಸ್ಕೂಲಿನ 'ಸೀಪ್ಲ್ಸ್ ಹಾಲ್'ನಲ್ಲಿ, ತಾ 27-9-1949 ರ ತಾ. 1-10-49ರ ವರೆಗಿನ ಐದು ದಿನಗಳ ಪರ್ಯಂತ ಜಯಶೀಲವಾಗಿ ಜರಗಿದುವು. ಮೊದಲನೇ ದಿನ ಅಪರಾಹ್ನ ಪಂಡಿತ ವೆಂಕಟರಾಮಾಚಾರ್ಯ ಸ್ಮಾರಕ ಭಾಷಣ ಸ್ಪರ್ಧೆ ನಡೆಯಿತು. ಎರಡನೇ ದಿನ ಬೆಳಿಗ್ಗೆ ಕಾವ್ಯವಾಚನ ಸ್ಪರ್ಧೆ ಜರಗಿ ಅಪರಾಹ್ನ ಸಂಘದ ವಾರ್ಷಿಕ ವರ್ಧಂತಿ ಉತ್ಸವವು ಶ್ರೀ ಮುಗಳಿ ರಂಗನಾಥರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಬಾಲಕಿಯರ ಸ್ಪರ್ಧಾರ್ಥಿನಿ ಮತ್ತು ಸಂಘದ ಅಧ್ಯಕ್ಷ ಶ್ರೀ. ಯನ್. ರಾಜಗೋಪಾಲ ಕೃಷ್ಣರಾಯರ ಮುಮ್ಮಾತುಗಳಾಗಿ ಕುಭಶಂದೇಶಗಳ ಪಾಚನವಾಯಿತು. ಪ್ರಧಾನ ಕಾರ್ಯದರ್ಶಿ ಶ್ರೀ. ಕೆ. ಶಂಕರನಾರಾಯಣ ಉಪಾಧ್ಯಾಯರಿಂದ ವರದಿವಾಚನವಾದ ಮೇಲೆ ಅಧ್ಯಕ್ಷ ಶ್ರೀ.ರಾಯರು ರಾಷ್ಟ್ರಕವಿ ಶ್ರೀ ಮಂಜೇಶ್ವರ ಗೋವಿಂದಪೈಗಳಿಗೆ ಸಂಘದ ಮಾನಪತ್ರವನ್ನರ್ಪಿಸಿದರು. ಶ್ರೀ ಮೋ.ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳೂ ಸಭಾಧ್ಯಕ್ಷ ಶ್ರೀ ಮುಗಳಿಯವರೂ ರಾಷ್ಟ್ರಕವಿ ಶ್ರೀ ಪೈಗಳ ಕಾವ್ಯ, ಸಂಶೋಧನೆಗಳ ಕುರಿತು ಭಾಷಣವಿತ್ತರು. ಶ್ರೀ ಪೈಗಳು ಸವಿನಯ ವಾಣಿಯಿಂದ ಉತ್ತರವಿತ್ತರು. ಅಧ್ಯಕ್ಷರ ಸಮಾರೋಪ ಭಾಷಣ, ಸಾಹಿತ್ಯ ಕಾರ್ಯದರ್ಶಿ ಶ್ರೀ.ಯು. ಶ್ರೀಪತಿ ರಾಯರುಗಳು ಮತ್ತು ಕಲಾಕಾರ್ಯದರ್ಶಿ ಶ್ರೀ.ಕೆ.ಪದ್ಮನಾಭಾಚಾರ್ಯರಿಂದ ಧನ್ಯವಾದಗಳಿದ್ದುವು. ರಾತ್ರಿ ಉಸುಪಿಯ ಕ್ರಿಶ್ಚಿಯನ್ ಹ್ಯಾಸ್ಕೂಲು ವಿದ್ಯಾರ್ಥಿಗಳು ಯಕ್ಷಗಾನವನ್ನು ಮನೋರಂಜಕವಾಗಿ ಅಭಿನಯಿಸಿ ತೋರಿಸಿದರು. ಉಡುಪಿಯ 'ನಾಟ್ಯಕೂಟ' ದವರು 'ಬಯಕೆ' ನಾಟಕವನ್ನು ಸೊಗಸಾಗಿ ಅಭಿನಯಿಸಿದರು. ಮಾರನೆಯ ದಿನ ಪೂರ್ವಾಹ್ನ ಶ್ರೀ ಮುಗಳಿ ರಂಗನಾಥರಾಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ. ಸಿ. ಕೆ. ನಾಗರಾಜರಾಯರು ಕೈಲಾಸಂಕೃತ ನಾಟಕ ಪ್ರೊಂದನ್ನು ಸ್ವರಭಾವ ಯುಕ್ತವಾಗಿ ವಾಚನ ಮಾಡಿದರು. ಅಧ್ಯಕ್ಷ ಶ್ರೀ ಮುಗಳಿಯವರು 'ಕನ್ನಡ ತಾಯಿಯ ಕರೆ'ಯ ಕುರಿತು ಉಪನ್ಯಾಸವಿತ್ತರು. ಅಪರಾಹ್ನ ಶ್ರೀ ಮೋ. ಶಂ. ಸುಬ್ರಹ್ಮಣ್ಯ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ರಾಷ್ಟ್ರಕವಿ ಶ್ರೀ ಎಂ. ಗೋವಿಂದ ಪೈಗಳು ಸಾಹಿತ್ಯೋತ್ಸವನವನ್ನು ಉದ್ಘಾಟಿಸುತ್ತಾ ಅದಿಕವಿ ಗಳಿಂದಾರಂಭಿಸಿ, ಮುದ್ದಣನ ವರೆಗಿನ ಕನ್ನಡ ಸಾಹಿತ್ಯದ ಸಿಂಹಾವಲೋಕನ ಮಾಡಿ ಸಂಶೋಧನಾತ್ಮಕ ಭಾಷಣವಿತ್ತರು. ಶ್ರೀ ಮುಗಳಿಯವರ ಭಾಷಣ, ಕುಮಾರ ಜಯರಾಮ ನಿಂದ ಕಾವ್ಯವಾಚನ, ಅಧ್ಯಕ್ಷ ಭಾಷಣ ಧನ್ಯವಾದ, ಮಂಗಳಗಳಾದುವು. ರಾತ್ರಿ ಶ್ರೀ ಯಸ್ಕೆಲ್ ಮತ್ತು ನೆಲೆಯಂರಿಂದ 'ಬಯಕ್ಷಾರ್ಧ ಗಂದ' ನಾಟಕವು ಚಲೋದಾಗಿ ಅಭಿನಯಿಸಲ್ಪಟ್ಟಿತು. ನಾಲ್ಕನೆಯ ದಿನ ಪೂರ್ವಾಹ್ನ ನಾಸರ ಪದಗಳ ಗಾಯನ ಸ್ಪರ್ಧೆ ನಡೆಯಿತು. ಅಪರಾಹ್ನ ಶ್ರೀ ವಿ. ಎಸ್. ರಾಮಾಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಅಲ್ಲೇ ಶ್ರೀ. **ಕೊರಡ್ಕಲ್ ಸ್ಮಾರಕ** ಸಮಿತಿಯವರಿಂದ ದಿವಂಗತ ಕೊರಡ್ಕಲ್ಲಂ ಸ್ಮಾರಕ ಸಮಾರಂಭಗಳಾದುವು. ವಕೀಲ್ ಶ್ರೀ ವಿ. ವಾಸುದೇವರಾಯರ ಮುಮ್ಮಾತುಗಳಾಗಿ, ಸ್ಮಾರಕ ಸಮಿತಿಯಿಂದ ಪ್ರಕಟಿಸಲ್ಪಟ್ಟ 'ನೆನಪಿಗಾಗಿ' ಗ್ರಂಥದ ಸಾದ್ಯಂತನೆಯನ್ನು ರಾಷ್ಟ್ರಕವಿ ಶ್ರೀ. ಮು. ಗೋವಿಂದ ಪೈಗಳು ನೆರವೇರಿಸುತ್ತಾ ದಿವಂಗತ ಕೊರಡ್ಕಲ್ಲರ ಗುಣಕಥನ ಮಾಡಿದರು. ಜನರ್ ಯಚ್. ಯಸ್. ಹುಸ್ಕೇನ್ ಎಂ. ಎಲ್. ಎ., ಅವರು ಶ್ರೀ. ಕೊಗಡ್ಡಲ್ ಶ್ರೀನಿವಾಸರಾಯರ ಪ್ರಭಾ ಮತ್ತು ಕೃತಿಗಳ ಜ್ಞಾಪಕ ಮಾಡಿಕೊಟ್ಟು ಅವರ ನೆನಪು ಚಿರಸ್ಥಾಯಿಯಾಗಿಲೆಂದರು. ಶ್ರೀಗಳಾದ ಟಿ. ಆನಂತ ಪೈ ಮತ್ತು ಬಿ. ರ್ಯಾಮರಾಯ ಶೆಟ್ಟರು ತಮಗೆ ಶ್ರೀ. ಕೊರಡ್ಕಲ್ಲರೊಡನಿದ್ದ ಹೃದಯ ಸಂಬಂಧಗಳ ಸ್ಮರಣೆಯೊಂದಿಗೆ ದಿವಂಗತರ ಪ್ರತಿಭೆ ಮತ್ತು ಯೋಗ್ಯತೆಗಳನ್ನು ರ್ಣಾಭಿನಂದಿಸಿದರು. ಶ್ರೀ. ಬಿ. ವಾಸುದೇವ ರಾಯರು ಧನ್ಯವಾದಗಳಾದ ನೋಲೆ ಜನರ ಕರ್ನಾಟಕ ಸಂಘದ ಕಾರ್ಯಕ್ರಮಗಳಾರಂಭಿಸಿ ಶ್ರೀ. ಎಂ. ಎಸ್. ಆನಂತಪದ್ಮನಾಭರಾಯರು ಸ್ವಾಗತ್ಯವ್ಯವಾಗಿ ಕಾರ್ಯವಾಚನ ಮಾಡಿದರು. 'ಕನ್ನಡ ಸಾಹಿತ್ಯದಲ್ಲಿ ವಚನಗಳು' ಎಂಬ ಕುರಿತು ಶ್ರೀ. ಎಸ್. ಆರ್. ರಾಸ್ತಿಗಳು ಉಪನ್ಯಾಸವಾಯಿತು. ಕೈಲಾಸಂರ ಹುಚ್ಚೊಂದು ನಾಟಕವನ್ನು ಶ್ರೀ. ಸಿ. ಕೆ. ನಾಗರಾಜರಾಯರು ಸೊಗಸಾಗಿ ವಾಚನವಮಾಡಿದ ಮೇಲೆ 'ವಿಜ್ಞಾನ, ತತ್ವಜ್ಞಾನ, ಧರ್ಮ' ವಿಷಯಗಳನ್ನೆತ್ತಿಕೊಂಡು ಅಧ್ಯಕ್ಷರ ಭಾಷಣವಾಯಿತು. ರಾತ್ರಿ 'ಪುಷ್ಪ' ಕಾರ್ಯಾಲಯದವರು 'ಲಿತೋತ್ಸಾಹ' ನಾಟಕವನ್ನು ಅಭಿನಯಿಸಿದರು. ಐದನೇ ದಿನ ಪೂರ್ವಾಹ್ನ ಶ್ರೀ. ಸಿ. ಕೆ. ನಾಗರಾಜರಾಯರ ಅಧ್ಯಕ್ಷತೆಯಲ್ಲಿ ಸಭೆಸೇರಿ ಶ್ರೀ. ಪಿ. ಗೋಪಾಲಕೃಷ್ಣ, ಅವರ 'ಮಾತೆಯಲಾಗದ ಕನ್ನಡದ' ಕುರಿತು ಉಪನ್ಯಾಸ, ಶ್ರೀಮತಿ ಪ್ರಮೀಳಾ ದೇವಿಯರಿಂದ ಸಂಸ್ಕೃತ್ಯವ್ಯವಾಗಿ ಭಾರತವಾಚನ, ಶ್ರೀ. ಎಂ. ಎಸ್. ಆನಂತಪದ್ಮನಾಭರಾಯರಿಂದ 'ದೇವಮ್ಮಾಜಿಯ ಪುರಂತ'ದ ಕುರಿತು ಉಪನ್ಯಾಸ ಮತ್ತು ಅಧ್ಯಕ್ಷ ಭಾಷಣ, ಆಯಿತು. ಅಪರಾಹ್ನ ಶ್ರೀ. ಎ. ಸತ್ಯನಾರಾಯಣರಾಯರ ಅಧ್ಯಕ್ಷತೆಯ ಸಭೆಯಲ್ಲಿ ಶ್ರೀಯುತ ನಾಗರಾಜರಾಯರಿಂದ 'ಸಕಲವ್ಯನ್ಯಗುರುಭಕ್ತಿ'ಯ ಕುರಿತು ಉಪನ್ಯಾಸ ಮತ್ತು ಶ್ರೀಮತಿ ನಾಗರಾಜರಾಯರ ವಿಜ್ಞಾನಾದನವಾಯಿತು. 'ನಾವು ಬೀಗಿರುವುದೇಕೆ?' ಎಂಬ ಕುರಿತು ಅಧ್ಯಕ್ಷರ, ಉಪನ್ಯಾಸವಾಗಿ ಸಂಘದ ಅಧ್ಯಕ್ಷ, ಕಾರ್ಯದರ್ಶಿಗಳವರ ಸಮಾರೋಪ ಧನ್ಯವಾದಗಳಾದುವು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯಾಯಿತು. ರಾತ್ರಿ ಶ್ರೀಗಳಾದ ವೈ ಡಿ. ಸೆಟ್ಟಿ, ಮತ್ತು ಕೆ. ಎ. ಸೆಟ್ಟರ ವಿನೋದಾವಳಿ, ಶ್ರೀ ಯಚ್. ಜಿ. ನಾಯಕ್ ಮತ್ತು ಪಾರ್ಟಿಯ ಸ್ತ್ರೀವೇಷಗಳ ಜಾದು, ಉಡುಪಿ ಯಕ್ಷಗಾನ ಕಲಾಮಂಡಲದವರಿಂದ 'ಆಂಗದ ಸಂಧಾನ' ರಾತ್ರಿ ಮದ್ದಳೆಗಳಾದುವು.

ಚಿರಂಜೀವ ದಯಂತಿ—ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯು ವತಿಯಿಂದ ಗಾಂಧಿಜೀಯ ೮೦ನೇ ಜನ್ಮದಿನಾಚರಣೆಯು ಬೋರ್ಡು ಹ್ಯಾಸ್ಕೂಲಿನ 'ಸೀಪಲ್ಸ್ ಹಾಲ್'ನಲ್ಲಿ ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ತಾ. 2ನೇ ಸೋಮವಾರ ನೆರವೇರಿತು. ಪ್ರಥಮತಃ ಬೋರ್ಡು ಹಾಸ್ಕೂಲು ವಿದ್ಯಾರ್ಥಿಗಳು ಧ್ವಜಾರೋಹಣ ಜರಗಿಸಿದ್ದರು. ಸ್ವಯಂ ಸೇವಕ ಸೇವೆಯಿಂದ ನೂಲಿನ ಸ್ಪರ್ಧೆ ಮತ್ತು ಸೂತ್ರಯಜ್ಞ ೮ ಮಿ ನಿಟ್ಸ್ ೨ ವರೆಗೆ ನಡೆಯಿತು. ಗಾಂಧೀ ಗೀತೆಗಳು, ಭಗವದ್ಗೀತಾ ಪಠನ ಮತ್ತು ಭಜನೆಗಳಾದುವು. ಶ್ರೀಗಳಾದ ಕೆ. ಶಂಕರ ನಾರಾಯಣ ಉಪಾಧ್ಯಾಯ, ಎಂ. ವಿ. ಹೆಗ್ಡೆ ಮತ್ತು ಅಧ್ಯಕ್ಷರ ಭಾಷಣಗಳಾಗಿ ನೂಲುವ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಗಳೂ, ಶಿಕ್ಷಾರ್ಹಪತ್ರಗಳೂ ಕೊಡಲ್ಪಟ್ಟುವು. ಶ್ರೀ ಕೆ. ನರಸರಿ ಕಾಮತರು ಧನ್ಯವಾದಗಳನ್ನಿತ್ತರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು--7-10-49 ರಿಂದ,

ಎರಡು ಹೃದಯಗಳೊಂದಾದಾಗ ಮೂರನೆಯವನು ನೂಗು ತುರಿಸಿಕೊಳ್ಳುವನು.

ದೋದಿಲ್

ಸೂರಯ್ಯ, ಕರನಿವಾನ್, ಮೋತಿಲಾಲ್,

ತಾರೀಕು 13-10-49 ರಿಂದ,

ಗೃಹಸ್ಥರು ನೋಡಿ ಗೃಹಿಣಿಯರನ್ನು ಕರೆದುಕೊಂಡು ಬನ್ನಿ.

ಗೃಹಸ್ಥಿ

ಮುಸೂರ್, ಲಲಿತಪವರ್, ಕುಲದೀಪ್.

ಉಡುಪಿ

ಕ್ರೈಸ್ಟ್ ಹೈಸ್ಕೂಲಿನ ಕ್ರಿಕೆಟ್ ಟೀಮು ಕಳದ ತಾ 22ರಲ್ಲಿ ಮಂಗಳೂರಿನ ಕೆನರಾ ಹೈಸ್ಕೂಲಿನೊಡನೆ ಪಂದ್ಯಾವಳಿಯನ್ನು ನಡೆಸಿ 112 ಓಟುಗಳನ್ನು ಪೆಚ್ಚು ಪಡೆದು ವಿಜಯಶಾಲಿಯಾಯಿತು. ಅದೇ ದಿನ ಸಮಯವಿಟ್ಟು ಆಡಿದ ಪಂದ್ಯಾವಳಿಯಲ್ಲಿ ಒಂದು ಓಟಕ್ಕೆ ಕೆನರಾ ಹೈಸ್ಕೂಲು ಜಯಶಾಲಿಯಾಯಿತು.

ತಾ 23 ರಂ ಕೆನರಾ ಹೈಸ್ಕೂಲು ಉರ್ದೊಡನೆ ನಡೆದ ಪಂದ್ಯಾವಳಿಯಲ್ಲಿ 6 ಓಟುಗಳಿಗೆ ಕ್ರೈಸ್ತನ್ ಹೈಸ್ಕೂಲು ಆಸಜಯ ಹೊಂದಿತು.

ತಾ 24 ರಲ್ಲು ಸೆಂಟ್ರಲ್ ಮೈದಾನದಲ್ಲಿ ಸೈಂಟ್ ಎಲೋಸಿಯಸ್ ಕೋಲೇಜುಟೀಮು ನೊಡನೆ ನಡೆದ ಪಂದ್ಯಾವಳಿಯಲ್ಲಿ ಮೂರು ನಿಕೇಟುಹೋಗುವಾಗಲೇ ಕ್ರೈಸ್ತನ್ ಹೈಸ್ಕೂಲು ಜಯಶಾಲಿಯಾಯಿತು.

ಕ್ರೈಸ್ತನ್ ಹೈಸ್ಕೂಲ್ ಕ್ರಿಕೆಟ್ ಟೀಮಿನ ಪ್ರಯಾಸಕ್ಕೆ ಧನ್ಯವಾದಾರ್ಹವಿತ್ತು ಪ್ರೋತ್ಸಾಹಿಸಿದ ಉಡುಪಿಯ ನಾಗರಿಕರೆಲ್ಲರಿಗೂ ಸಂಬಂಧ ಪಟ್ಟವರು ಧನ್ಯವಾದಗಳನ್ನರ್ಪಿಸುತ್ತಾರೆ.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C No. 342/49

ವಾಸುದೇವ ಕಲ್ಯಾಣ-ವೀಕರಾಮು ಕಲ್ಯಾಣ ಮಗ - ಉಡ್ಪಿ ತಾಲೂಕು ಹೆಸೆಜೆಳ್ಳಿ ಗ್ರಾಮ—ವಾದಿ

ಆನಂದ ಜನ್ನ-ಸಾಮುವೇಲ ಜನ್ನರ ಮಗ - ಉಡ್ಪಿ ತಾಲ್ಲು ಉದಿಯಾವರ ಗ್ರಾಮ.—ಪ್ರತಿವಾದಿ.

ಸಮನ್ಸು

ವಾದಿಗೆ ಪ್ರತಿವಾದಿಯು ರೂ 61-0-0ಕ್ಕೆ ತಾರೀಕು 19-7-46ರಲ್ಲು ಬರೆಕೊಟ್ಟ ದಿಮೊಂಡು ನೋಟು ಪ್ರಕಾರ ಬಡತಕ್ಕ ಅಸಲು ಬಡ್ಡಿ ಮತ್ತು ರಿಜಿಸ್ಟ್ರಿ ನೋಟೀಸು ಖರ್ಚು ಕೂಡಾ ರೂ. 74-7-0ಕ್ಕೆ ವಾಪಸು ಮಾಡಿಸಿಕೊಡುವ ಮೇಲ್ಕಂಡ ದಾವೆಯು ಪ್ರತಿವಾದಿಯ ನೋಟೀಸಿನ ಬಗ್ಗೆ ತಾ. 10-10-49ಕ್ಕೆ ಇಟ್ಟಿದೆ. ಪ್ರತಿವಾದಿಯು ಸದರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ವ್ಯಾಜ್ಯದಲ್ಲಿ ಪೂರ್ವಾಹ್ನ ಘಂಟೆ 10ಕ್ಕೆ ಹಾಜರಾಗುವರೇ ತಪ್ಪಿದರೆ ಪ್ರತಿವಾದಿಯ ಗೈರುಹಾಜರಿಯಿಂದ ಸದ್ರಿ ವ್ಯಾಜ್ಯವನ್ನು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಉಡ್ಪಿ } **Gratian C. Rego,**
4-10-49 } Vakil for Plaintiff.

ಕುಂದಾಪುರದ ಡಿ ಮು. ಕೋರ್ಟಿನಲ್ಲಿ

R. E P. No. 90/49
S. C No. 469/47

ಬಿನಗಲ್ ರಾಗವೇಂದ್ರ ರಾವ್—ವಾದಿ ಅರ್ಜಿದಾರ.

ಅರ್ಜಿನದಾನ ಕಡೆಯಿಂದ ಈ ಮೂಲಕ ಜಾಹೀರುಮಾಡಿಕೊಳ್ಳುವದೇನೆಂದ್ರೆ—

ಶೇಷಯ್ಯ ಶೇರೆಗಾರ—ಪ್ರತಿವಾದಿ.ಎದ್ರಿ.

ಎದ್ರಿ ಶೇಷಯ್ಯ ಶೇರೆಗಾರ, ಬಗ್ಗೆ ಶೇರೆಗಾರನ ಮಗ, ಪಡುವರಿ ಗ್ರಾಮ.

ಸದ್ರಿ ಅಮ್ಲು ಜಾರಿಯಲ್ಲಿ ಎದ್ರಿಯು ಬಾಬ್ತು ಸ್ಥಿರಾಸ್ತಿ ಲೈಲಾಂ ಮಾಡಿಸುವಸೋಸ್ಕರ ಅರ್ಜಿದಾರನು ಹಾಜ್ರುಪತ್ತಿವ ಯಿಸ್ತಿಹಾನಿನ ತರ್ತು ನಿರ್ಣಯಿಸುವಸೋಸ್ಕರ ತಾ24-10-49 ಕ್ಕೆ ತನ್ನಿಗೆ ಯಿತೋಸಾಗಿಯಿದೆ. ಆ ಕುರಿತು ನಿಮ್ಮಹೇನಾದ್ರು ಆಕ್ಷೇಪವಿದ್ರೆ ಸದ್ರಿ ದಿನ್ನ ಹಗ್ಗು 11ಗಂಟೆಗೆ ಸ್ವತಹಾ ವಕೀಲರ ಮುಖಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂದು ಸಂಗ್ತಿ ಈ ಮೂಲಕ ತಿಳಿಯಪಡಿಸಿದೆ.

G Sanjiva Rao,
Vakil for Plaintiff

Kundapur }
Date: 27-9 49 }

ಕಲಾವ್ಯಂದದಲ್ಲಿ-ತಾ 29ರಲ್ಲು ರಾಷ್ಟ್ರ ಕವಿ ಶ್ರೀ. ನುಂಜೇಶ್ವರ ಗೋವಿಂದ ಪೈ ಗಳ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಶ್ರೀಗಳಾದ ಶ್ರೀ. ಮುಗಳಿ, ನೋ. ಶಂ. ಶಾಸ್ತ್ರಿ, ಸಿ. ಕೆ. ನಾಗರಾಜ, ವಿ. ಯಸ್. ರಾಮಕೃಷ್ಣ, ಎ. ಸತ್ಯನಾರಾಯಣ ಮೊದಲಾದವರ ಭಾಷಣಗಳಾದುವು. ಕುಮಾರ ಜಯರಾಮ, ಇವರ ಕಾವ್ಯವಾಚನ ನಡೆಯಿತು. ಸ್ಥಳೀಯ ಶ್ರೀ ವೆಂಕಟರಮಣ ಬೇನಾಸ್ಥಾನದಲ್ಲಿ ರಾಷ್ಟ್ರ ಕವಿಗಳಿಗೆ ಮಾನಪತ್ರಾರ್ಪಣೆಯಾಯಿತೆಂದು ತಿಳಿದುಬರುತ್ತದೆ.

ಪುತ್ತೂರು ಉಡ ಪಿ.ಎ ಪುತ್ತೂರು ಹರಿಜನ ಪಸಾಹತಿನಲ್ಲಿ ತಾ 30ರಲ್ಲಿ 'ಹರಿಜನ ದಿನಾಚರಣೆ' ನಡೆದು ಸಭೆ, ಭಾಷಣಗಳಾದುವು.

ಕಡಿಯಾಳಿ—ಶ್ಥೀಯ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ವರ್ಷಂಪ್ರತಿ ಪಾಡಿ ಕೆಯಂತೆ ಜರಗುವ ಶ್ರೀ ಶಾಂಬಾ ಪೂಜೆಯು ತಾ. 30-9-49ರಲ್ಲು ಪೂರ್ವಾಹ್ನ ಜರಗಿತು. ಸಾಜೆ ಹೆತ್ತವರ ಸಭೆಯೊಂದು ಶ್ರೀ ವೆಂಕಟ್ರಾಯ ಪಡಿಯಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ವಿ. ಶ್ರೀನಿವಾಸ ಭಟ್ಟರು ಮತ್ತು ಅಧ್ಯಕ್ಷರು ಮಾತನಾಡಿದರು. ಅನಂತರ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳ ಪ್ರದರ್ಶನ ನಡೆಯಿತು. ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಜಿಲ್ಲಾ ಬೋರ್ಡು ಚುನಾವಣೆಯು ಕಳದ ತಾ 26ರಲ್ಲಿ ನಡೆದು ಮರು ದಿನ ಮತಗಳ ಎಣಿಕೆಯಾಗಿ ಫಲಿತಾಂಶ ಪ್ರಕಟವಾಗಿದೆ. ಬೋರ್ಡಿನ 44 ಸ್ಥಾನಗಳಲ್ಲಿ 25ಕ್ಕೆ ಅವಿರೋಧ ಆಯ್ಕೆಯಾಗಿತ್ತು. 19ಕ್ಕೆ ಮಾತ್ರ ಚುನಾವಣೆ ನಡೆದಿದ್ದು ಇದರಲ್ಲಿ 15 ಸ್ಥಾನಗಳು ಕಾಂಗ್ರೆಸಿಗೂ 4 ಸ್ವತಂತ್ರರಿಗೂ ದೊರೆತಿವೆ. ಅಂತೂ ಕಾಂಗ್ರೆಸಿಗೆ ಒಟ್ಟು 38 ಸ್ಥಾನಗಳು ದೊರೆತು ಪ್ರಚಂಡ ವಿಜಯವೇ ಆಗಿದೆ.

ಕಾರ್ಕಳ-ಕೆ. ಪಿ. ಮುಕುಂದ ಸ್ವಾಮಿಗಳು [ಕೋ] ಕೆ. ಸುಂದರ [ಕೋ. ಹರಿಜನ] ಗೆದ್ದಿದ್ದಾರೆ. ಕೆ. ಶೇಷಪ್ಪ ಹೆಗ್ಡೆ [ಸ್ವ] ಪೆರ್ಡೂರ [ಸ್ವ. ಪರಿಜನ] ಸೋತಿದ್ದಾರೆ.

ಮೂಡಬಿದ್ರೆ-ಧರ್ಮ ಸಾಮ್ರಾಜ್ಯ [ಸ್ವ] ಗೆದ್ದಿದ್ದಾರೆ. ಕೆ. ಕೆ ಶೆಟ್ಟಿ [ಕೋ] ಸೋತಿದ್ದಾರೆ. [ಓಟಿನ ಪೆಟ್ಟಿಗೆ ಒಡೆದಿದೆ ಯೆಂಬುದರಿಂದ ತಕರಾರು ಇದೆ ಎಂದು ತಿಳಿದುಬರುತ್ತದೆ]

ಮಂಗಳೂರು—ಗಂಗಾಧರ ದಾಸ [ಕೋ] ಗೆಲುವು; ಬಾಲಪ್ಪ [ಸೋ]ಸೋಲು.

ಗುರುಪುರ-ಪದ್ಮನಾಭ ಆಳ್ವ [ಕೋ] ಗೆಲುವು; ಸೋಮಪ್ಪ [ಸೋ] ಸೋಲು.

ಸುರತ್ಕಲ್-ಭಾಸ್ಕರ ರೈ [ಕೋ] ಗೆಲುವು; ವೆಂಕಟೇಶ ಪೈ [ಸೋ] ಸೋಲು.

ಕೋಟೆಕಾರ್—ಬಿ. ಅನಂತ ರೈ [ಕೋ.] ಜಯ; ಕ್ಲೇವಿಯರ್ ಡಿ' ಸೋಜ [ಸೋ] ಗೋಪಾಲ ಸಾಲೆನ್ [ಸ್ವ] ಸೋಲು.

ಬಂಟ್ವಾಳ—ಬಿ. ಶೇಕವ ಬಾಳಿಗ [ಕೋ] ಜಯ ಆಮ್ಮ ಶೆಟ್ಟಿ [ಕ] ಸೋಲು.

ಕಾಸರಗೋಡು—ಉಮೇಶ ರಾವ್ [ಕೋ] ಜಯ. ಮಾಹೀನ್ ಚಿಮ್ಮಾಡಿ [ಸ್ವ. ಮುಸ್ಲಿಂ] ಎಚ್. ಎಚ್. ಚಿಮ್ಮಾಡಿ [ಸ್ವ. ಮು.] ಸೋಲು.

ಕುಂಬಳೆ-ಬಿ.ದೇವಪ್ಪ ಆಳ್ವ [ಕೋ] ಜಯ; ಜಿ. ಗಣಪತಿ ಕಾಮತ್ [ಸ್ವ] ಅಪಜಯ.

ಮುಳಿಯಾರ್-ಬಿ. ಎಸ್. ಕಕ್ಕಿಲ್ಲಾಯ [ಕೋ] ಜಯ; ನಾರಾಯಣ ನಾಯರ್ [ಕ] ಅಬ್ದುಲ್ ರಜಕ್ ಸಾಹೇಬ್ [ಸೋ] ಅಪಜಯ.

ವಿಟ್ಲ—ಕೆ. ವಿಟ್ಲಲದಾಸ ಶೆಟ್ಟಿ[ಕೋ] ಜಯ; ಐ. ರಾಮಣ್ಣ ರೈ [ಸ್ವ] ಅಪಜಯ.

ಚೆರುವತ್ತೂರು-ಟಿ. ಸಿ. ಂವಿವರ್ಮ ರಾಜಾ [ಕೋ] ಜಯ.

ಹೊಸದುರ್ಗ—ಎನ್. ಜಗನ್ನಿವಾಸ್ [ಕೋ] ಕೆ.ಕಣ್ಣನ್ [ಹರಿಜನ ಕೋ.]ಜಯ. [ಕಾಪು, ಉಡುಪಿ, ಕುಂದಾಪುರ ಸರ್ಕಲುಗಳ ಫಲಿತಾಂಶ ಕಳದ ವಾರವೇ ಪ್ರಕಟವಾಗಿದೆ.

ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು ಇದೇ ಬರುವ ತಾ. 21ಕ್ಕೆ ನಡೆಯಲಿರುವುದೆಂದೂ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷ ಜೊಳಗಡೆಯಲ್ಲಿ ಶ್ರೀಗಳಾದ ಬಿ. ಮಂಜಯ್ಯ ಹೆಗ್ಡೆ, ಎಡ್ಮೆಕೇಟ್, ಮಂಗಳೂರು ಡಾ। ನಾಗಪ್ಪ ಆಳ್ವ ಮಂಗಳೂರು ಇವರು ಉಮೇದ್ವಾರಿಗಳಾಗಿರುವರೆಂದೂ ತಿಳಿದು ಬರುತ್ತದೆ.

ಕುಂದಾಪುರ- ಕರ್ಣಾಟಕ ಸಂಘದ ನಾಡ ಹಬ್ಬದ ಕಾರ್ಯಕ್ರಮ ಈ ವರ್ಷ 1-10-49; 2-10-49 ಈ ಎರಡು ದಿನ ನಡೆಯಿತು. ಮೊದಲ ದಿನ ಶ್ರೀ. ವಕೀಲ್. ಎ. ವಿ. ಎನ್. ಹೆಬ್ಬಾರರು ಅಧ್ಯಕ್ಷರಾಗಿದ್ದರು. ಸಂಜೆ 3 ಘಂಟೆಗೆ 'ಉದಯ' ವಾಗಿರಿ ಎಂಬ ವ್ಯಾರ್ಥನೆಯಿಂದ ಆರಂಭವಾಗಿ ಬಹುಮಾನ ವಿತರಣ. ಕಾವ್ಯ ವಾಚನ, ಭಾಷಣ, ಸಂಗೀತ ಮೊದಲಾದ ಕಾರ್ಯ ಕ್ರಮಗಳು ಜರಗಿದವು. ಶ್ರೀ ಉಗ್ರಾಣ ಕೃಷ್ಣರಾವ್.ಬಿ. ಎ. ಎಲ್. ಟಿ. ಇವರು ಟಿ. ಪಿ. ಕೈಲಾಸಂ ನಾಟಕದ ವಿಷಯ— ಶ್ರೀ. ಕೆ. ಎ. ದೇವದಾಸ್, ಶಿರೋಮಣಿ, ಇವರು ನಾಡಹಬ್ಬದ ವಿಷಯ. ಶ್ರೀ. ಸೀತಾರಾಮಾಚಾರ್ಯ ವಿದ್ವಾನ್ ಇವರು ಸಾಹಿತ್ಯದ ವಿಷಯ ರಸವತ್ತಾಗಿ ಭಾಷಣಮಿತ್ತರು ಶ್ರೀ ವಾಸುದೇವ ನಾಯ್ಕರಿಂದ ಸುಗಿತ. ಗೋಷ್ಠಿನಡೆದು ರಾತ್ರಿ ಪ್ರಸಿದ್ಧ ವೇಷಧಾರಿಗಳಾದ ಶ್ರೀ ಹಾರಾಡಿ ರಾಮ, ಶ್ರೀ ವೀರಭದ್ರ ಮೊದಲಾದವರ ಸಮ್ಮಿಳನದಿಂದ ಯಕ್ಷಗಾನ ಬಯಲಾಟವು ಬೆಳಗ್ಗಿನ ತನಕ ಯಶಸ್ವಿಯಾಗಿ ಜರಗಿತು.

ಮರುದಿನ. ಶ್ರೀ.ಆಸ್ಥಾನ ವಿದ್ವಾನ್.ಮೊ. ಂಂ. ಸುಬ್ರಹ್ಮಣ್ಯ ಶಾಸ್ತ್ರಿಗಳು, ಬೆಂಗಳೂರು ಇವರು ಅಧ್ಯಕ್ಷರಾಗಿದ್ದರು. ಶ್ರೀಮತಿ ನಾಗರತ್ನ ಜಯಾಯರ ವೀಣಾವಾದನ, ಶ್ರೀ. ಸಿ. ಕೆ. ನಾಗರಾಜ ರಾಯರ ಭಾಷಣ ನಡೆಯಿತು. ಇವರು ಟಿ. ಪಿ ಕೈಲಾಸಂರ ಬಂಡ್ವಾಳ್ಗಿಲ್ಲದ ಬಡಾಯಿ ಎಂಬ ನಾಟಕವನ್ನು ಓದಿ ಹೇಳಿದರು. ಅಧ್ಯಕ್ಷರು ಸಹಜ ಸಾಹಿತ್ಯವೆಂಬ ವಿಷಯದ ಮೇಲೆ ಗಂಭೀರವಾದ ಭಾಷಣವಿತ್ತ ಮೇಲೆ ಕಾರ್ಯದರ್ಶಿ. ಡಿ. ವಿ. ಹೊಳ್ಳರು ವಿ ಎಲ್ಲರಿಗೂ ಧನ್ಯವಾದವಿತ್ತ ಮೇಲೆ ಸಭೆಯು ವಂದೇ ಮಾತರಂ ಗೀತೆಯೊಂದಿಗೆ ಮುಕ್ತಾಯವಾಯಿತು.

ಪಡುಬಿದ್ರಿ— ತಾ. 2ರಲ್ಲಿ ಮಹಾತ್ಮಾ ಗಾಂಧಿಯವರ ಜನ್ಮದಿನದ ನಿಮಿತ್ತ ಕೊಂಗ್ರೆಸ್ ಸೇವಾದಳದವರಿಂದ ಪ್ರಭಾತಫೇರಿ, ಶ್ರೀ ಕೆ, ಕಂಯಣ್ಣ ಶೆಟ್ರಿಂದ ಧ್ವಜವಂದನೆ, ಸೂತ್ರಯಜ್ಞ, ಸಂಜೆ ಶ್ರೀ ಬಿ. ಭಾಸ್ಕರ ರೈ ಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ರಾಮರಾವ್, ಕೆ.ಕೆ. ಶೆಟ್ಟಿ, M- M. ಸ್ವಭು, Y. ಕಾಳಪ್ಪ ಶೆಟ್ಟಿ, ಶಿವಣ್ಣ ಹೆಗ್ಡೆ ಮೊದಲಾದವರು ಭಾಷಣ ಮಾಡಿದರು. ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು.

ಮುಚ್ಚೂರು—ಮು.ಹ್ಚೂರು ಗ್ರಾಮವು ದ ಜನರ ಸೌಕರ್ಯಕ್ಕಾಗಿ ಕಳದ ತಾ. 18 ರಲ್ಲು ಮುಚ್ಚೂರಲ್ಲಿ ಒಂದು ಬ್ರಾಂಚ್ ಪೋಸ್ಟಾಫೀಸು ತೆರೆಯಲಾಗಿದೆ.

ಬಸ್ರೂರು—ಇಲ್ಲಿ ತಾ. 2ರಲ್ಲು ಗಾಂಧಿ ಜಯಂತಿ ನಿಮಿತ್ತ ಬೆಳಿಗ್ಗೆ ಧ್ವಜವಂದನೆ, ಸಂಜೆ ಸಾರ್ವಜನಿಕ ಸಭೆ, ಭಾಷಣ ಇತ್ಯಾದಿ ಕಾರ್ಯಕ್ರಮಗಳಿದ್ದುವು.

ಸೂಕ್ಟಣಿ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ದಕ್ಷಿಣ ಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಳಕುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು 1949ನೇ ಯಿಸ್ವಿ ನವಂಬರ್ ತಾರೀಕು 5 ರಿಂದ ನವಂಬರ್ ತಾ 20ರ ತನಕ ಜರಗುವುದು. ಆಂದರೆ ಸಂತೆಯು ಕಾರ್ತಿಕ ಪೂರ್ಣಿಮಿ ದಿನದ ಪ್ರಾರಂಭವಾಗಿ ಕಾರ್ತಿಕ ಅಮವಾಸ್ಯೆ ದಿವಸದ ಯಾ ಸುಬ್ರಮಣ್ಯ ದೀಪೋತ್ಸವದ ಪರ್ಯಂತ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆ ಬಂದ[೨-2-0] ಎರಡಾಣೆ ಮೇರೆಗೆ ಫೀಸು ವಸೂಲು ಮಾಡಲಾಗುವುದೀಸು. ಸಂದರ್ಭ ಬಂದಿದ್ದಲ್ಲಿ ಸದ್ರಿ ಫೀಸನ್ನು ವಿಸಲೂ ಬಹುದು ಯಾ ಅಧಿಕ ಫೀಸನ್ನು ವಸೂಲು ಮಾಡಲೂ ಬಹುದು.

ಪರಂತು, ರೆವಿನ್ಯು ಡಿವಿಜನಲ್ ಆಫೀಸರು ಅವಶ್ಯಬೆಂದು ತೋಯಿಸಿ ಯಾವುಕ್ತೂ ಜಾನುವಾರಗಳನ್ನು ಸದ್ರಿ ಫೀಸುಗಳಿಂದ ವಿರಹಿತ ಪಡಿಸಬಹುದು.

ಮೈಸೂರು ಪ್ರಾಂತ್ಯದಿಂದ ಜಾನುವಾರು ರಫ್ತು ಮಾಡುವರೆ ಚಾರಿಯಲ್ಲಿರುವ ನಿರ್ಬಂಧಗಳಿಗನುಸಾರವಾಗಿ ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರು ಕೊಡುವ ರಹದಾರಿಗಳ ಮೂಲಕ ಮಾತ್ರ ರಫ್ತು ಮಾಡುವರೆ ಸಾಧ್ಯವಿರುತ್ತದೆ. ಆದ ಪ್ರಯುಕ್ತ ಜಾಲ್ತಿ ಫಸಲಿಯಲ್ಲಿ ಜರಗುವ ಕುಳುಕುಂದ ಜಾನುವಾರು ಸಂತೆಗೆ ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ತಂದು ಮಾರಾಟ ಮಾಡಲು ಅಪೇಕ್ಷಿಸುವ ವ್ಯಾಪಾರಿಗಳು ಮೈಸೂರು ಸ್ವಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರಿಂದ ಅವಶ್ಯವಿಲ್ಲ ರಹದಾರಿಗಳನ್ನು ಮುಂಚಿತವಾಗಿಯೇ ಪಡಕೊಳ್ಳತಕ್ಕದ್ದು.

ಸಯ್ಯದ್ ಅಬ್ದುಲ್ ಕರೀಂ
ರೆವಿನ್ಯು ಡಿವಿಜನಲ್ ಆಫೀಸರು,
ರೆವಿನ್ಯು ಡಿವಿಜನಲ್ ಆಫೀಸು
ತಾರೀಕು 6-9-49 ಪುತ್ತೂರು

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ-ಸುಸುಲಭವಾಗಿರುವುದು.



ಒಟ್ಟಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವದು. ಅಂದರೆ ಕೇವಲ ೪ ರೂಪ್ಪಾಯಿಗೆ ಒಂದು ಬಾಳಂತಿನನಗೆ ಸಾಕಾಗುವುದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ. ನಂ, 5 ಕೊಡಿಯಾಲಬೈಲು, ದ ಕ
ಸ್ಥಾಪಿಸ್ಥರು. ಡಾ। ಐ. ಕೆ. ಶಿವರಾಮ ರಾವ್ ,ಕುಂಜಿಬೆಟ್ಟು, ಉಡುಪಿ.

English copies of
MADRAS ALIYASANTHANA ACT of 1949
are available.
NAVAYUGA PRESS, UDIPI

ಮಂಗಳೂರು

ನಗರಸಭೆಯ ಕುರಿತು ಜಿಲ್ಲಾ ಕಲೆಕ್ಟರರ ಅಭಿಪ್ರಾಯ—1948-49ನೆ ಸಂಪದ ಮಂಗಳೂರು ನಗರ ಸಭೆಯ ಆಡಳಿತ ವರದಿಯನ್ನು ವಿಮರ್ಶಿಸುತ್ತ ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಬ್ದುಲ್ ಸಾಹೇಬರು, ನಗರಸಭೆಯ ಆಂತರಿಕ ಪರಿಸ್ಥಿತಿಯ ವರ್ಗಗಳಲ್ಲಿ ಹೆಚ್ಚಿನವುಗಳಿಗೆ ಬಿಲ್ಲರೆ ರಿಪೇರಿಯಾಗಬೇಕೆಂದು ಸೂಚಿಸುರುತ್ತಾರೆ ಜಾಸ್ತಿ ಜಲಾವಸತಿಯಿರುವ ವರ್ಗಗಳಲ್ಲಿ ಹೆಚ್ಚಾಗಿರುವ ಚಾಂದಂತೆಕ್ಕನಿಗಾಕೂಡಲೇಕಾಗಿದೆ ಮತ್ತು ಸರಿಯಾಗಿ ನೀರನ್ನು ಪಾಕುವ ವರ್ಪಾಡು ಆಗಬೇಕಾಗಿದೆ.

ಆಸ್ಪತ್ರೆ ಮತ್ತು ಶಿಶುಅಭಿವೃದ್ಧಿ ಕೇಂದ್ರಗಳು ಸರಿಯಾಗಿವೆ. ನುಸಿಗಳ ಕಾಟವು ವಿಪರೀತ ವಿರುತ್ತದೆ. ಆನೆಕಾಲು ಹಬ್ಬುತ್ತಿದೆ ಈ ಕುರಿತು ನಗರಸಭೆಯು ಗಮನವಿತ್ತು ಜಾಗ್ರತೆ ಮಾಡಬೇಕಾಗಿದೆ ಸಂತೆ ಮತ್ತು ಕಸಾಯಿಖಾನೆಗಳನ್ನು ಇನ್ನಷ್ಟು ಶುಚಿಯಾಗಿಡಬೇಕು. ಸ್ಥಳಾಕ್ರಮಣಗಳುಪತ್ತೆಹಚ್ಚಲ್ಪಟ್ಟಿರೂ ಅವುಗಳ ಇತ್ಯರ್ಥ ಸರಿಯಾಗಿಆಗಲಿಲ್ಲ.

ಆರ್ಥಿಕ ಸ್ಥಿತಿಯು ಚೆನ್ನಾಗಿದೆ. ವಸೂಲಿ ಕೆಲಸವು ತೃಪ್ತಿಕರವಾಗಿದೆ ಒಂದು ಸಾರ್ವಜನಿಕ ರೇಡಿಯೋ ಮತ್ತು 2 ಮಾಡಿನಾಲಯಗಳು ಇದ್ದರೂ ಮಂಗಳೂರಿಂತಹ ದೊಡ್ಡ ಪರಿಗೆ ಇಂತಹ ಹೆಚ್ಚಿನ ಸೌಕರ್ಯಗಳ ಅವಶ್ಯವಿದೆ. ನಗರಸಭೆಯು ಆದೇತ ಸ್ಥಿತಿಯುಸಾಮಾನ್ಯವಿದೆ.

ರಜಾ ರಾಮಮೋಹನ ರೋಯಿ

ಇವರ 10ನೆ ಸ್ಮಾರಕ ದಿನವು ಕಳೆದ ತಾ 26 ರಲ್ಲು ಕೊಡಿಯಾಲ ಬೈಲಿನ ಬ್ರಹ್ಮಸಮಾಜ ಮಂದಿರದಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಸಿ. ಕೃಷ್ಣ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಕುಮಾರಿ ಎಸ್. ನಳಿನೀ ಸುನಂದ, ಜನಾಬ್ ಎ. ಮೂಸಬ್ಬ, ಶ್ರೀಗಳಾದ ಪಿ. ರಂಗನಾಥ ಪೂಂಜ ಎಂ. ದಯಾಸಾಗರ ಮತ್ತು ಡಾ। ಎಸ್. ಪಿ. ಪೈ ಮೊದಲಾದವರು ರೋಯಿಯವರ ಗುಣಾವಳಿಗಳನ್ನೆತ್ತಿ ಭಾಷಣವಿತ್ತರು.

ಜಿಲ್ಲಾ ಬೋರ್ಡು ಸಭೆ—ಕಲೆಕ್ಟರ್ ಸ್ಪೆಶಲ್ ಆಫೀಸರ್ ಜನಾಬ್ ಸಯ್ಯದ್ ಅಬ್ದುಲ್ ಸಾಹೇಬರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿದ ದ. ಕ. ಜಿಲ್ಲಾಬೋರ್ಡು ಸಭೆಯುತ್ತ ಉಡುಪಿ ತಾಲೂಕು ಎಲ್ಲಾಳು ಗ್ರಾಮದ ಅದಮಾರಿನಲ್ಲಿ, ಹ್ಯಾಸ್ಕೂಲು ಸಮಿತಿಯವರು ಕಟ್ಟಿರುವ ಮತ್ತು ಸಲಕರಣೆಗಳನ್ನು ಒದಗಿಸಿಕೊಟ್ಟು ರೂಪಾಯಿ 30 0/- ಕೇವ ಬಾಕಿಯಾಗಿಟ್ಟರೆ 1950-51ನೆ ವರುಷದಿಂದ ಹ್ಯಾಸ್ಕೂಲನ್ನು ಸ್ವಾತಂತ್ರಿಸುವುದೆಂದು ನಿರ್ಣಯಿಸಲಾಯಿತು.

ಮೈನರ್ ಹುಡುಗಿಯನ್ನು ಹಾರಿಸಿದ ಆರೋಪಕ್ಕೆ ಒಂದು ವರ್ಷ ಶಿಕ್ಷೆ

ಇಲ್ಲಿಯ ಅವಲಕ್ಕಿ ಕೇರಿಯ ಸಾಧಾರಣ ಪದವಿನಾರು ವರ್ಷ ಪ್ರಾಯದ ತುಂಗಮ್ಮ ಎಂಬ ಹುಡುಗಿಯನ್ನು ಕಳೆದ ಜನವರಿ ತಿಂಗಳ ತಾ 14ರಲ್ಲು ಆವಳ ತಾಯಿ ದೇವಕಿಯ ಗೈರು ಹಾಜರಿಯಲ್ಲಿ ಮಹಮ್ಮದ್ ಎಂಬಾತನು ಕೊಯಮುತ್ತೂರಿಗೆ ಹಾರಿಸಿಕೊಂಡು ಹೋದ ಎಂಬ ಆರೋಪದ ಮೊಕದ್ದಮೆಯಲ್ಲಿ ಪ್ರಿನ್ಸಿಪಾಲ್ ಆ। ಸೆಶನ್ ಜಡ್ಜರಾದ ಶ್ರೀ, ಕೆ. ಆರ್ ಕೃಷ್ಣಯ್ಯ ಚೆಟ್ಟಿಯವರು ಆರೋಪಿಗೆ ಒಂದು ವರ್ಷ ಸಶ್ರಮ ಶಿಕ್ಷೆ ವಿಧಿಸಿದರು.

ಹೊಸ ಸಂಗೀತ ಶಾಲೆ—ಶ್ರೀ ನಗರ್ತಿ ಸಂಗೀತ ಶಾಲೆಯ ಶಾಖೆಯನ್ನು ಕಳೆದ ತಾ. 23ರಲ್ಲು ಶ್ರೀ ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜೆಪ್ಪು ಮಾರಣಮಿ ಕಟ್ಟೆ ಜಿ ಸಿ ಕಟ್ಟೆಡದಲ್ಲಿ ವಿಜೃಂಭಣೆಯಿಂದ ಉದ್ಘಾಟನ ಆಯಿತು. ಶ್ರೀ ಎಚ್. ಸುಂದರರಾಯರು ಸಂಗೀತ ವಿದ್ಯೆಯ ಅವಶ್ಯಕತೆಯು ಕುರಿತು ಭಾಷಣವಿತ್ತರು.

ನಾಡಹಬ್ಬ—ಮಂಗಳೂರಲ್ಲಿ ನಾಡ ಹಬ್ಬವು ಈ ವರ್ಷ ದ. ಕ ಪಂಡಿತ ಸಂಘ ಮತ್ತು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಜಂಟಿ ವಿದ್ಯಾರ್ಥಿ ಸಂಘಗಳ ವಸಂತ ಪ್ರೇಮಿ ಮಂಡಲಿಯು ನೇತೃತ್ವದಲ್ಲಿ ಕಳೆದ ತಾ 28 ಮತ್ತು 29ರಲ್ಲು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರಗಿತು.

ಪ್ರಾರಂಭ ದಿನದ ಕಾರ್ಯಕ್ರಮವು ಮಂಗಳೂರ ಸಬ್ ಜಡ್ಜರಾದ ಶ್ರೀ ಟಿ. ಎಸ್. ಪದಾಶಿವಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಸೇಡಿಯಾಪು ಕೃಷ್ಣ ಭಟ್ಟರ ಸ್ವಾಗತ ಭಾಷಣವಾದ ಬಳಿಕ ಬೆಂಗಳೂರಿನ ಶ್ರೀ ಎಸ್. ರಾಮಚಂದ್ರಯರು 'ಸಾಹಿತ್ಯದಲ್ಲಿ ದೇಶಭಕ್ತಿ' ಎಂಬೀ ವಿಷಯದಲ್ಲಿ ಭಾಷಣವಿತ್ತರು. ಅಧ್ಯಕ್ಷರ ಭಾಷಣ, ಶ್ರೀ ಶ್ರೀನಿವಾಸ ಉಡುಪರಿಂದ ಧನ್ಯವಾದಾರ್ಪಣೆಯಾದ ಬಳಿಕ ಬೆಸೆಂಟ್ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರು 'ಪ್ರೇಮಬಲ' ಎಂಬ ನಾಟಕವನ್ನು, 'ಕೃಷ್ಣ-ಮಾರಾ' ಎಂಬ ನೃತ್ಯವನ್ನೂ ಅಭಿನಯಿಸಿದರು.

ಮರುದಿನದ ಹಬ್ಬದ ಕಾರ್ಯಕ್ರಮವು ಶ್ರೀ ಕೆ ಸೂರ್ಯನಾರಾಯಣ ಆಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಬೆಂಗಳೂರಿನ ಶ್ರೀ ಜಿ ಎಲ್. ನರಹರಿಶಾಸ್ತ್ರಿಯವರು 'ಭೂಮಿಯು ಪುಟ್ಟು' ಎಂಬ ವಿಜ್ಞಾನದ ವಿಚಾರದಲ್ಲಿ ಮಾತನಾಡಿದರು. ನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿಜ್ಞಾನ ವಿಚಾರಗಳ ಭಾಷಣ ಕೇಳುವ ಅವಶ್ಯಕತೆಯನ್ನು ಸೂಚಿಸಿದರು. ಶ್ರೀಗಳಾದ ಪುಳಲಿ ಶಂಕರನಾರಾಯಣ ರಾಸ್ತ್ರಿ. ಕೆ. ಗೋಪಾಲಕೃಷ್ಣರಾವ್, ಎಮ್ ಆರ್ ಪಾಸ್ತ್ರಿ, ಜಿ ಕೆ. ಭಟ್, ಮಹಾಬಲ ಸೋಂಠರ ಕೂಡುವಿಕೆಯು ಯಕ್ಷಗಾನ ಕಾಲಕ್ಷೇಪ ನಡೆಯಿತು

ಹರಿಕೀರ್ತನೆ—ಇಲ್ಲಿಯ ಶ್ರೀ ನರಸಿಂಹ ಯಜೀ ದೇವಸ್ಥಾನದಲ್ಲಿ ತಾ. 23 9-1949 ರ ಮೊದಲ್ಗೊಂಡು ಎಂಟು ದಿನಗಳ ವರೆಗೆ ಮ. ರಾಮದಾಸ ಸಾವಗ ಹರಿದಾಸರಿಂದ ಹರಿಕೀರ್ತನೆಯು ಶ್ರೀ ಪುತ್ತು ನೈಕುಂತ ಶೇಟರಿಂ ನಿರ್ದೇಶಕತ್ವದಲ್ಲಿ ಯಶಸ್ವಿಯಾಗಿ ಜರಗಿತು. ಮಹಾನಿಷಮಿಯಂದು ಶ್ರೀ ಉದ್ಯಾವರ ವಿಠಲ ಆಚಾರ್ಯರ ಗಾಯನವೂ ಸಾಂಗತ್ಯವಾಗಿತ್ತು.

ಪೆರ್ಡೂರು—ತಾ. 2-10-49ರಲ್ಲಿ

ಗಾಂಧಿಜಯಂತಿ ಪ್ರಯುಕ್ತ ಇಲ್ಲಿಯ B. E. M ಪೂ। ಎ। ಶಾಲೆಯಲ್ಲಿ ಬೆಳಿಗ್ಗೆ ಮಕ್ಕಳ ಮೆರವಣಿಗೆಯಾದನಂತರ ಆಲಂಗಾರು ರಂಗ್ಕೆ ಸೆಡ್ತಿಯವರಿಂದ ಗಾಂಧಿಜಿಯವರ ನೆನಪಿಗಾಗಿ ಕಟ್ಟಿಸಿಕೊಟ್ಟಿರುವ ತಾತ್ಕಾಲಿಕ ಧ್ವಜಸ್ತಂಭದ ಧ್ವಜಾರೋಹಣವು ಶ್ರೀ ಎ. ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ನಂತರ ಮಹಾತ್ಮಾ ಹಾಲಿನಲ್ಲಿ ಪರ್ಡೆಯ ವಿದ್ಯಾರ್ಥಿಗಳಿಂದ ಕೊಡಲ್ಪಟ್ಟ ಭಾವಚಿತ್ರವನ್ನು ಶ್ರೀ ರಘುನಾಥ ಹೆಗ್ಡೆ M. A. B T. ಯವರು ಅನಾವರಣ ಮಾಡಿದರು. ತರುವಾಯ ಶ್ರೀ ಮಂಜುನಾಥ ಆಚಾರ್ಯರ ಮನೆಯಲ್ಲಿ 10 ಗಂಟೆಯಿಂದ ಸಂಜೆ 6 ಗಂಟೆಯ ವರೆಗೆ ಬಾಲಕರ ಜರಿಯಾ ಸ್ಪರ್ಧೆಯೂ, ಅಯಂಡ ಸೂತ್ರಯಜ್ಞವು ಭಜನೆಯೂ ಜರಗಿದುವು. ರಾತ್ರೆ 9ಗಂಟೆಗೆ ಸದ್ರಿ ಶಾಲೆಯಲ್ಲಿ ಹಳೆಯ ವಿದ್ಯಾರ್ಥಿಗಳಿಂದ ವಿನೋದಾವಳಿಗಳೂ 'ಹೈದರಾಬಾದ್ ವಿಜಯ' ಎಂಬ ಯಕ್ಷಗಾನವು ಆದುವು. ಮತ್ತು ಆ ದಿನದ ಮಹತ್ವದ ಕುರಿತು ಶ್ರೀ ಬಿ. ಲಕ್ಷ್ಮೀನಾರಾಯಣ ನೆಲ್ಲಿಯನರೂ, ಬಾದಿಯ ಮಹತ್ವದ ಕುರಿತು ಶ್ರೀ ಲಕ್ಷ್ಮೀನಾರಾಯಣ ಬಲ್ಲಾಳರೂ ಭಾಷಣವಿತ್ತರು. ಇಂದೀ ಪ್ರೇಮೀ ಮಂಡಲದಿಂದ ಬಂದಯಾದಿ ವಸ್ತ್ರವನ್ನೂ, ಶ್ರೀ ರಾಮರಾಯ ಹಾಲಂಬಿಯವರು ಕೊಟ್ಟ ಬಹುಮಾನಗಳನ್ನೂ ಅಧ್ಯಕ್ಷರು ಜರಾಷ್ಟ್ರೀಯಲ್ಲಿ ಗೆದ್ದವರಿಗೂ ಯಕ್ಷಗಾನದಲ್ಲಿ ಉತ್ತಮ ಭೀತಿಯಲ್ಲಿ ಅಭಿನಯಿಸಿದವರಿಗೂ ಕೊಟ್ಟರು. ನಂತರ ಅಧ್ಯಕ್ಷರು ಗಾಂಧಿಜಯಂತಿ ಮಹತ್ವದ ಕುರಿತು ಭಾಷಣವಿತ್ತರು. ಶ್ರೀ ಎ. ಪಿ ಕಲ್ಯಾಣಿಯವರು ಸಭಿಕರಿಗೆ ಧನ್ಯವಾದಗಳನ್ನು ಅರ್ಪಿಸಿದ ಬಳಿಕ ಮಂಗಳಗೀತೆಯೊಡನೆ ಸಭೆಯು ಬಡಿಯಿತು.

ಕಾಸರಗೋಡು ಕ್ರಿಕೆಟ್ ಟೀಮು

ನವರು ಅಲ್ಲಿಯ ಡಿ। ಮುನ್ಸಿಫ್ ವಿ। ಡಿ. ಸೋಮಯ್ಯಾ ಅವರ ನಾಯಕತ್ವದಲ್ಲಿ ಮೈಸೂರು ಮತ್ತು ಬೆಂಗಳೂರು ಸ್ಟೇಟಿಗೆ ಸರ್ವಿಸ್ ಕಾರ್ಯಾರ್ಥ ಮನನ್ನು ಕೈಗೊಂಡಿದ್ದಾವೆ. ಮಹಾರಾಜಾಸ್ ಕಾಲೇಜು, ಲೊ ಕಾಲೇಜು, ಕೆಮೋಲಿಕ್ ಕಾಲೇಜು ಸೇರಿ ೧೮ ಟೋರ್ನಮೆಂಟ್ XI. ಈ ನಾಲ್ಕು ಟೀಮು ಗಳೊಡನೆ ಕ್ರಿಕೆಟ್ ಮೇಚ್ ಆಡಲಿರುವರು.

ನೋಟೀಸು.

ಕಂದಾಪುರ ಡಿ ಮುನ್ಸಿ ಕೋರ್ಟಿನಲ್ಲಿ.

S. C. 63/1949.

ಮಂಜಮ್ಮ ಬೆಟ್ಟಿಕೂಡಾ — ವಾದಿರು.

ಬಾಲಸದ್ದಿ ಕೂಡಾ — ಪ್ರತಿವಾದಿರು

ಪ್ರತಿವಾದಿ. ಅಂಣಪ್ಪ, ಅಳ್ವೆಗದ್ದೆ ಮಂಜಪನ್ನ ಮಗ, ಕುಂದಾಪುರ ತಾಲ್ಲೂಕು ಶಿರೂರು ಗ್ರಾಮ. Post Shirur ಇವರಿಗೆ.

ವಾದಿರು ಪ್ರತಿವಾದಿರ ಮೇಲೆ ಬಹಾ ಕಳೆದ ಪಾರ್ಥಿನ ಸಂಬಂಧದ ಲಾಗ್ಯಾತಿನ ಬಾಲಗೇನೆ ಬಾಕಿ ಬಗ್ಗೆ ವಾದಿರು ಬಿಂ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮಜೇನಾಪ್ಪು ಆ ಕ್ಷೇಪವಿದ್ದಲ್ಲಿ ತಾರೀಕು. 19-10-1949ನೇ ದಿವಸ ಹಗಲು 11 ಗಂಟೆಗೆ ಯೂ ಕೋರ್ಟು ಮುಂದೆ ಹಾಜ್ರುಆಗಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು ತಪ್ಪಿದಲ್ಲಿ ಯೇಕ ಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿನಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai
Pleader for Petitioners
Coondapoor
22—9—49

ವಿವಿಧ ಪಾತ್ರೆಗಳು

ಒಳ್ಳೆಯತ್ತಿ ವಿಧದ ಬೆಲ್ಲ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಕೂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವಿಯುವಂಥ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.
ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding
ROYAL MAHAL,
UDIPI, S. Kanara.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K

ಔಷಧ ಸ್ವಾವೆ ನಿಂತಿತು

'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಔಷಧಸ್ವಾವನವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಲು ಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಪ್ರಾತ್ರಿ ಗುಣವಾಗಿದೆ. ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.
ಸ್ವಾಕಿಸ್ವರು: ಶಂಕರಪೈ, ಮಂಗಳೂರು

ದ. ಕನ್ನಡ

ಕಲ್ಮಡ್ಕ—ಸ್ಥಳೀಯ ಪಂಚಾಯತು ಬೋರ್ಡಿನ ಶಾಲೆಯಲ್ಲಿ ತಾ. 28-9-49 ರಲ್ಲು ಶ್ರೀ ಶಾರದಾ ಪೂಜೆಯು ವಿಜೃಂಭಣೆಯಿಂದ ಜರಗಿತು. ಅಪರಾಹ್ನ ಯಕ್ಷಗಾನ ಕಾಲಕ್ಷೇಪವೂ ನಡೆಯಿತು.

ಪಂಚಾಯ್ತಿ ಸಹಕಾರಿ ಸಂಘದಆಶ್ರಯದಲ್ಲಿಇದರ ಅಂಗಸಂಸ್ಥೆಯಾಗಿ ಕಲ್ಮಡ್ಕವು ತ್ತು ಪಂಚಾಯ್ತಿ ಗ್ರಾಮಗಳ ಬಗ್ಗೆ ಒಂದು (ಅಟಾ ಪಾಟಿ ವಿನೋದಗಳ) ಗ್ರಾಮ ಸಂಘವನ್ನು ಸ್ಥಾಪಿಸಲಾಯಿತು.

ಬನ್ನಾಡಿ—ಸ್ಥಳೀಯ ಪರಮಹಂಸ ಹಾ। ಎ। ಶಾಲೆಯಲ್ಲಿ ತಾ 28-9-1949ರಲ್ಲಿ ಶ್ರೀ ಶಾರದಾ ಪೂಜಾ ಸಮಾರಂಭವು ಉಡುಪಿ ರೇಂಜ್ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರರಾದ ಶ್ರೀ ಎಚ್. ಸಂಜೀವಮಾವ್ ಬಿ. ಎ. ಎಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳೂ ಯಕ್ಷಗಾನ ವೈಗೆರೆ ಇತರ ಚಟುವಟಿಕೆಗಳೂ ಇದ್ದುವು.

ಮಣಿಪಾಲ— ಸ್ಥಳೀಯ ಹಾ। ಎ। ಶಾಲೆಯಲ್ಲಿ ಶಾರದಾ ಪೂಜೆಯು ತಾ 29. 9. 1949 ರಲ್ಲಿ ಶ್ರೀ. ಆನಂದ B ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮುಖ್ಯೋಪಾಧ್ಯಾಯರಾದ ಶ್ರೀ ಬಂಗ್ಲೆ ಸುಬ್ಬಣ್ಣಾಚಾರ್ಯರು ಶ್ರೀ ಶಾರದಾ ಪೂಜೆಯ ಮಹತ್ವಕ್ಕೆ ಯು ತಿತು ಮಾತಾಡಿದರು. ಪಾಗೂ ವಿದ್ಯಾಕ್ಷೇತ್ರದಲ್ಲಿ ಹೆತ್ತವರ ಕರ್ತವ್ಯವನ್ನು ಕೋದರು. ನಂತರ ಮಕ್ಕಳ ವಿವಿಧ ವಿನೋದಾವಳಿಗಳು ಪ್ರದರ್ಶಿಸಲ್ಪಟ್ಟವು.

ಬೆಳ್ಳಿಗೊಂದು ಹೊಸ ಟೆಪ್ಪಾಲು ಕಟ್ಟೆಯು ಕಳದ ತಾ. 25ರಲ್ಲು ಪೋಸ್ಟಲ್ ಇನ್ಸ್‌ಪೆಕ್ಟರರಿಂದ ತೆರೆಯಲ್ಪಟ್ಟಿತು. ಅಲ್ಲಾಡಿ ಮತ್ತು ಹೆಂಗಳಕೆ ಗ್ರಾಮ ನಿವಾಸಿಕರಿಗೆ ತುಂಬಾ ಉಪಕಾರವಾಯಿತು.

ಕೊಲ್ಲಾಪುರದಲ್ಲಿ ನಾಡಹಬ್ಬ ಮತ್ತು ಪ್ರಬಂಧ ಸ್ಪರ್ಧೆ-ನಾಡಹಬ್ಬದ ಪ್ರಥಮ ದಿವಸ ತಾ 22ರಲ್ಲು ಪ್ರಗತಿ ರಿಜಿಸ್ಟರ್ಡ್ ಕಾರ್ಯಾಲಯದಲ್ಲಿ ಧರ್ಮಾರ್ಥ ವಾಚನಾಲಯವು ಕೊಲ್ಲಾಪುರ ಬಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ರತ್ನಪ್ಪ ಕುಂಭಾರರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ಸಭಿಕರಲ್ಲಿ ಶ್ರೀಗಳಾದ ರಘುನಾಥರಾವ್, ತೊಂಡೂಳಕರ್, ಪರಂಜಪೆ, ಥಕ್ಕರ್ ಬ್ಯಾ ಮೊದಲಾದವರು ಕಾಲೋಚಿತ ನುಡಿಗಳನ್ನಾಡಿದರು.

ಸ್ವರ್ಗತ ಮಂಡಳದ ಸಾಮಾನ್ಯ ಸಭೆಯು ಈಚೆಗೆ ಶ್ರೀ ಎ. ಎಮ್. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮಂಡಳದ ವಾರ್ಷಿಕೋತ್ಸವನದ ನಿಮಿತ್ತ ಒಂದು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಯಿತು. ಆ ಬಗ್ಗೆ ಸಾಹಿತ್ಯ ಸಮಿತಿಯೊಂದು ನರ್ಪಡಿಸಲ್ಪಟ್ಟಿತು. (1) ಇಂದು ಗಾಂಧಿಜಿ ಬದುಕಿದ್ದರೆ (2) ಭಾಷಾವಾರು ಪ್ರಾಂತ ಮತ್ತು ಭಾರತದ ಐಕ್ಯ. ಈ ಎರಡು ವಿಷಯಗಳ ಮೇಲೆ ಕನ್ನಡ ಮಂಠಾರಿ, ಇಂಗ್ಲಿಷ್ ಭಾಷೆಗಳಲ್ಲಿ ಲೇಖನಗಳು ತಾ. 15-10-49ರ ತನಕ ಸ್ವೀಕರಿಸಲ್ಪಟ್ಟು ಉತ್ತಮ ವಾದವುಗಳಿಗೆ ಪದಕಗಳನ್ನೂ ಬಹುಮಾನಗಳನ್ನೂ ಕೊಡಬೇಕೆಂದು ನಿರ್ಧಾರವಾಯಿತು.

ಕೋಟೇಶ್ವರ— ಕಳದ ತಾ ೭೬ ರಂದು ಶ್ರೀ. ಗೋಪಾಡಿ ಕೃಷ್ಣ ಭಟ್ಟರವರು ತಮ್ಮ ೬೬ ನೇ ವಯಸ್ಸಿನಲ್ಲಿ ಕೀರ್ತಿಶೇಷರಾದರು. ಶ್ರೀಯುತರು ನೇದೇವೇದಾಂತ, ಧರ್ಮಶಾಸ್ತ್ರ, ಆಯುರ್ವೇದ, ಪೌರೋಹಿತ್ಯ, ಗಣಿತ, ಜ್ಯೋತಿಷಾದಿ ಶಾಸ್ತ್ರಗಳಲ್ಲಿ ಅಪ್ರತಿಮ ಪ್ರೌಢಿಮೆಯುಳ್ಳವರಾಗಿದ್ದು ನಿಸ್ವಾರ್ಥಿಗಳಾಗಿ ಹಲವಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿ, ಆರ್ಥಶಕಮಾನಗಳಿಂದ ಪಂಚಾಂಗ ಕರ್ತರಾಗಿದ್ದು ಅಖಿಲಕರ್ನಾಟಕಕ್ಕೆ ಜೋತಿಷ್ಯರಾಗಿದ್ದರು. ಶ್ರೀಯುತರ ನಿಧನದಿಂದ ಸ್ಥಳೀಯಜನರಿಗಲ್ಲದೆ ಆಪಾರ ನಷ್ಟ ಒದಗಿತು. ಶ್ರೀಯುತರ ಆತ್ಮಕ್ಕೆ ಶಾಂತಿ ದೊರಕಲಿ.

ಆಜೆಕಾರು:— ಹಲವಾರು ಸಂಘಸಂಸ್ಥೆ ನೃಪಹಾರಾದಿಗಳಲ್ಲಿ ಮುಂದೊತ್ತು ತ್ರಿರುವಚಿಕಾರುಕೇಂದ್ರದಲ್ಲೊಂದುಹಾಯರ್ ಎಲಿಮೆಂಟರಿ ಶಾಲೆಯು ಆವಶ್ಯಕತೆಯನ್ನು ನಮ್ಮ ಸರಕಾರದವರು ಮನಗಂದು ಸ್ಥಳೀಯ ಬೋರ್ಡು ಪ್ರಾಥಮಿಕ ಶಾಲೆಯಲ್ಲಿ ನೇಲ್ತರೆಗತಿಯ ಕ್ಲಾಸುಗಳನ್ನು ತೆರೆಯಲು ಆಪ್ಪಜೆಯನ್ನಿತ್ತ ಪ್ರಕಾರ ತಾ23-9-49ರಂದ ಪ್ರಥಮತಃ ಆರನೇತರಗತಿಯು ತೆರೆಯಲ್ಪಟ್ಟಿರುವುದು ಊರಪರವೂರ ಮಕ್ಕಳಿಗೆ ತುಂಬಾ ಪ್ರಯೋಜನಕಾರಿಯಾಗಿದೆ. ಈಗ ಮೇಲಿನ ತರಗತಿಗಳಿಗೆ ಅವಶ್ಯವಿರುವ ಕಟ್ಟೋಣ ಸಾಮಗ್ರಿಗಳನ್ನು ಒದಗಿಸಿ, ಹಾಯರ್ ಎಲಿಮೆಂಟರಿ ಶಾಲೆಯು ಯಶಸ್ವಿಯೂಗುವಂತೆ ಕೇಂದ್ರದ ವಿದ್ಯಾಭಿಮಾನಿಗಳು ಉದಾರ ಧನ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ಶಾಲಾ ವಸೂಲು ಸಮಿತಿಯವರು ಆಗ್ರಹ ಪೂರ್ವಕ ವಿನಂತಿಸುತ್ತಾರೆ.

ಉತ್ತಮ ಗ್ರಂಥಗಳಿಗೆ ಬಹುಮಾನ

ಮದ್ರಾಸು ಸರಕಾರದವರು ಕನ್ನಡದ ಉತ್ತಮಗ್ರಂಥಗಳಿಗೆ ಬಹುಮಾನ ಕೊಡಿಸುವ ಸಂದರ್ಭದಲ್ಲಿ ಸ್ಪರ್ಧೆಗೆ ಬರುವ ಪುಸ್ತಕಗಳನ್ನು ಸ್ವೀಕರಿಸುವ ಅವಧಿಯನ್ನು ದರ್ಘನೇ ಅಕ್ಟೋಬರ ೧೫ ದಿನಾಂಕ ವರೆಗೆ ಮುಂದು ವರಿಸಲಾಗಿದೆ. ಗ್ರಂಥಕರ್ತರೆಲ್ಲರೂನಮ್ಮೊಡನೆ ಸಹಕರಿಸುವರಾಗಿ ನಂಬುತ್ತೇವೆ. I ಸಣ್ಣ ಕಥೆ. 2. ಜೀವನಚರಿತ್ರೆ. 3. ನಾಟಕ. 4 ಸಂಶೋಧನೆ. 5. ವೈದ್ಯ ಮತ್ತು ಆರೋಗ್ಯ ಶಾಸ್ತ್ರ. 6 ಕೃಷಿ ಮತ್ತು ಪ್ರಕೃತಿಶಾಸ್ತ್ರ. ವಿಭಾಗದ ಪುಸ್ತಕಗಳಲ್ಲಿ ನಾಲ್ಕು ಪ್ರತಿಗಳಂತೆ "ಕಾರ್ಯದರ್ಶಿ ಕರ್ನಾಟಕ ಸಂಘ ೧೬ವೀರಸ್ವಾಮಿಪಿಳ್ಳೆ ಸ್ಟ್ರೀಟ್. ಮದ್ರಾಸ್, ೮. ಇವರಿಗೆ ಕಳುಹಬೇಕು.

ಕುಂಬಳೆ— ತಾ:30 ರಲ್ಲು ಹರಿಜನ ದಿನಾಚರಣೆಯು ಶ್ರೀ ಎಮ್. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಹರಿಜನರಲ್ಲಿರಬೇಕಾದ ಶುಚಿತ್ವ, ಅವರ ವಿದ್ಯಾಭ್ಯಾಸ, ಮಿತವ್ಯಯದ ಅಭ್ಯಾಸ ಮೊದಲಾದ ವಿಷಯಗಳನ್ನೆತ್ತಿ ಶ್ರೀಗಳಾದ ಮಿ. ಮಮ್ಮು, ನಾರಾಯಣ ಹವಿಲ್ದಾರ್. ಶ್ರೀನುತಿಕಲ್ಲಾಚೆ ಮೊದಲಾದವರ ಭಾಷಣಗಳಾದುವು.

ಬೇಳದಲ್ಲಿ ಹರಿಜನ ದಿನಾಚರಣೆಯು ಶ್ರೀ ಟಿ. ಎಲ್ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ರೀಜನಲ್ ಫಾರ್ಮ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಲಕ್ಷ್ಮೀ ರತನ್ ಭಾರತಿಯವರು ಬೇರೆ ಬೇರೆ ಕಡೆಗಳಲ್ಲಿ ಗ್ರಾಮೊಧ್ಧಾರ ಯೋಜನೆಯನ್ನು ಜಾರಿಗೆ ತರುವಬಗ್ಗೆ ಬಿಡಿಯಲ್ಲ ನುತ್ತು ಹೆರ್ಲ ಮೊದಲಾದ ಸಂಟರುಗಳನ್ನು ಸಂದರ್ಶಿಸಿದರು.

ಮಂಜೇಶ್ವರ— ಕಳದ ತಾ 30 ರಲ್ಲಿ ಮುಳ್ಳಿಯಲ್ಲಿ ಹರಿಜನ ದಿನಾಚರಣೆ, ಪಾನನಿರೋಧ ದ್ವಿತೀಯ ವರ್ಷಾಂತಿಕ, ಚರಕಾ ಜಯಂತಿಗಳೆಲ್ಲವೂ ಮೂಮಾಲು ಪ್ರಕಾರ ಮೆರವಣಿಗೆ, ಹರಿಜನ ಮಹಾಹತಿನ ಶುಚೀಕರಣ, ವಿಶ್ರ ಭೋಜನ, ದೇವಸ್ಥಾನ ಪ್ರವೇಶ, ನೂಲುವುದು ಇತ್ಯಾದಿ ಕಾರ್ಯಕ್ರಮಗಳಂದ ಸಾಂಗವಾಗಿ ಜರಗಿದವು. ಕೊಲೆಕಾಡಿನಲ್ಲಿ 16 ಎಕ್ರೆ ಜಮೀನನ್ನು 14 ಕೊರಗರ ಕುಟುಂಬದ ವಸತಿಗಾಗಿ ಕೊಲೆಕಾಡಿ ಪಟೇಲ್ ಶ್ರೀ ಪದ್ಮನಾಭ ಕಮ್ತಿಯವರು ದಾನವಿತ್ತುದನ್ನು ಮನ್ನಿಸಿ ಆ ಮಹಾಪತಿಗೆ 'ಸರ್ವೋತ್ತಮವಾದಿ' ಎಂಬ ನಾಮಕರಣವನ್ನಿಯಲಾಯಿತು. ಮಂಗಳೂರು ಡಿಸ್ಟಿಕ್ಟ್ ಶ್ರೀ ಪರಶುರಾಮ ನಾಯಕರು ಈ ಮಹಾಪತಿನಲ್ಲಿ ಕಟ್ಟಲಿರುವ, ಬಾಹುಜ ಪ್ರಾರ್ಥನಾ ಮಂದಿರದ ಅಡಿಗಲ್ಲನ್ನು ಹಾಕಿದರು. ಆಪರಾಹ್ನ ನೊಗವೀರ ಸಂಘದ ಕಟ್ಟಡದಲ್ಲಿ ಸಾರ್ವಜನಿಕ ಸಭೆ ಜರಗಿತು.

ಉಪ್ಪುಂದ—ಕಳದ ತಾ. 30ರಲ್ಲು ಉಪ್ಪುಂದ ಬೋರ್ಡು ಹಾ। ಎ। ಶಾಲೆಯಲ್ಲಿ ಹೆತ್ತವರ ದಿನಾಚರಣೆ ಮತ್ತು ಶಾರದಾ ಪೂಜಾ ಸಮಾರಂಭಗಳು ವಕೀಲ್ ಶ್ರೀ ಎನ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದುವು. ಶ್ರೀಗಳಾದ ಗಣಪಯ್ಯ ಹೆಬ್ಬಾರ್ ಮತ್ತು ಕೆ. ರಾಮಪ್ಪ ಕಾರಂತರು ಆನಾಕ್ರಮವಾಗಿ ಶಾರದಾಪೂಜಾಮಹಾತ್ಮೆ ಮತ್ತು ಹೆತ್ತವರ ಕರ್ತವ್ಯದಕುರಿತು ಭಾಷಣವಿತ್ತರು.

ಬ್ರಹ್ಮಾವರ—ಇಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಇದೇ ತಾ. 2ರಲ್ಲು ಗಾಂಧಿ ಜಯಂತಿಯು ಸಾಂಗವಾಗಿ ಜರಗಿತು. ಪೂರ್ವಾಹ್ನ ಪ್ರಭಾತಫೇರಿ, ಧ್ವಜ ವಂದನೆಗಳಾದುವು. ಸಂಜೆ ಪುರಮೆರವಣಿಗೆಯಾದ ಬಳಿಕ ಶ್ರೀಮತಿ ಕೃಷ್ಣಾಬಾಯಿಯವರ ನೇತೃತ್ವದಲ್ಲಿ ಸಭೆ ಜರಗಿ ನೂಲುವ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆಲ್ಲಾ ಯ ಥೋಚಿತ ಬಹುಮಾನವೀಯಲಾಯಿತು. ಸಭಿಕರ ಭಾಷಣ, ಧನ್ಯವಾದ ಸಮರ್ಪಣ, ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ಕಲ್ಯಾಣಪುರ— ಇದೇ ತಾ. 2ರಲ್ಲು ಚರಕಾ ಜಯಂತಿಯು ವಿವಿಧ ಕಾರ್ಯಕ್ರಮಗಳಿಂದ ಕಲ್ಯಾಣಪುರದಲ್ಲಿ ಆಚರಿಸಲಾಯಿತು. ಅಂದು ಬೆಳಿಗ್ಗೆ ಧ್ವಜಾರೋಹಣ, ಸೂತ್ರಯಜ್ಞ ವಿಧಿಗಳಾದುವು. ಸಂಜೆ ಶ್ರೀ ಕೆ. ಎಲ್. ಸಾಮಂಗದ ಅಧ್ಯಕ್ಷತೆಯಲ್ಲಿ ಮಹಾಜನ ಸಭೆ ಸೇರಿ ನೂಲು ವುದರಲ್ಲಿ ನೈಪುಣ್ಯವನ್ನು ಹೊಂದಿದ ಸಂಜೀವೋಜೆರಾವ್ ಮತ್ತು ಕು ಮಾರಿ ಬೇಬಿ ಇವರಿಬ್ಬರಿಗೆ ಇನಾಮು ಕೊಡಲಾಯಿತು. ಶ್ರೀ ವಾಮನ ಪಡಿಯಾರರು ಕಾಲೋಚಿತೋಪನ್ಯಾಸಗಳನ್ನಿತ್ತರು.

ತೀರ್ಥ—ಮಂಚಕಲ್ಲಿನಲ್ಲಿ ಒಂದು ಸಬ್ ಪೋಸ್ಟಾಫೀಸನ್ನು ತೆರೆಯುವ ನಿರ್ಧಾರವನ್ನು ಆಂಟೆ ಖಾತೆಯವರು ಮಾಡಿರುವುದು ಸ್ತುತ್ಯವಿದೆ. ಆಂತೆಯೇ ಇಲ್ಲಿ ಒಂದು ಟೆಲಿಗ್ರಾಂ ಆಫೀಸನ್ನೂ ಬೇಗನೇ ತೆರೆಯಬೇಕೆಂದು ಊರು, ನೆರೆಯೂರುಗಳವರ ವಿಜ್ಞಾಪನೆಯಿದೆ.

ಪರ್ಕಾಳೆ—ಪರ್ಕಾಳೆ 'ಪತ್ತಾರಸಮಿತಿ' ಯವರು ತಮ್ಮ ಮತದಾರ ಕ್ಷೇತ್ರ ಹಾಗೂ ಅಜೆಕಾರು ಮತದಾರ ಕ್ಷೇತ್ರಗಳಿಂದ ಅವಿರೋಧವಾಗಿ ಜಿಲ್ಲಾ ಬೋರ್ಡಿಗಾರಿಸಲ್ಪಟ್ಟ ದ್ದ ಕಾಂಗ್ರೆಸ್ ಪ್ರತಿನಿಧಿಗಳಾದ ಡಾ। ಕೆ. ಕೆ. ಹೆಗ್ಡೆ ಮತ್ತು ಶ್ರೀ ಮುದ್ರಾಡಿ ಕೃಷ್ಣಯ್ಯ ಸೆಟ್ಟರನ್ನು ಸನ್ಮಾನಿಸುವರೆ ಸೆಪ್ಟೆಂಬರ್ ತಾ. 25ರಲ್ಲು ಶ್ರೀ ವೈರ್ವಾಡಿ ಗೋವಿಂದರಾಜ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಒಂದು ಸಭಾರ ಕೂಟವನ್ನೇರ್ಪಡಿಸಿದರು.

ನೋಟೀಸು

ಪುತ್ತೂರು ಡಿ. ಮು. ಕೋರ್ಟ್‌ನಲ್ಲಿ.

O. S. No. 241/49

ಬಟಯಪ್ಪ ಸೆಟ್ಟಿ—ಪಾದಿ

ದೇವಕಿ ಸಹಾ—ಪ್ರತಿವಾದಿರು,

ಸದ್ರಿ ಪ್ರತಿವಾದಿರು 1) ದೇವಕಿ,ಪರುವಡಿ ಮುತ್ತು ಭಂಡಾರಿತಂಗಿ, ಭಾಗದ ಯಜಮಾನ್ತಿ 2) ಉಮಾವತಿ-ನೋಮಕ್ಕೆ ಮಗಳು. 3) ರಮ್ಮಪ್ಪ ರೈ.1ನೇ ಪ್ರ. ದೇವಕಿ ಮಗ. ಎಲ್ಲರೂ ಕಾಸರಗೋಡು ತಾಲ್ಲ್ಲ್

"ಹೆಚ್ಚಿಗೆ ಆಹಾರ ಬೆಳೆಸಿರಿ"

(ಶ್ರೀ. ಎಂ. ಎಸ್. ಭಿಡೆ, ಅಧ್ಯಕ್ಷ, ಮಲೆನಾಡು ಸುಧಾರಣಾ ಸಂಘ, ಇವರ ಲೇಖನದಿಂದ)

ಆಹಾರವನ್ನು ಹೆಚ್ಚಿಗೆ ಬೆಳೆಸಿರಿಂಬ ಕೂಗು ಇತ್ತೀಚೆಗೆ ಜೋರಾಗಿ ಕೇಳಿಸುತ್ತಿದೆ. ನೇಕೆ ಅನೇಕೆಗಳಲ್ಲಿಯೂ ಪ್ರತಿಯೊಬ್ಬರೂ ಇದನ್ನೇ ಹಾಡುವದರಿಂದ ಆದು ರಮ್ಯವಾಗುವ ಬದಲು ಕರ್ಕಶವಾಗಿಹತ್ತಿದೆ. ಬಾಯಿಯಿಂದ ಆಡಿದ ಮಾತನ್ನು ಕಾರ್ಯದಲ್ಲಿ ನೆರವೇರಿಸುವ ಯೋಗ್ಯತೆಯನ್ನು ಸಂಪಾದಿಸಲಿಕ್ಕೆ ನಮ್ಮ ಅಧಿಕಾರಿಗಳು ಪ್ರಯತ್ನಿಸಿದರೆ ಜನತೆಯು ಈ ಕರೆಗೆ ರಕ್ತಿ ವಿೂರಿ ಓ ಕೊಡುವದರಲ್ಲಿ ' ಸಂದೇಹವಿಲ್ಲ. ಆಹಾರವನ್ನು ಹೆಚ್ಚಾಗಿ ಬೆಳೆಸಬಾರದೆಂದು ಯಾರೂ ಹೇಳುವದಿಲ್ಲ, ಕೂಗಾಡುವದೂ ಇಲ್ಲ. ಆದರೆ, ಬೆಳೆಸುವದರಿಂದ ಉಂಟಾಗುವ ರಾಷ್ಟ್ರೀಯ ಪ್ರಯೋಜನವನ್ನು ತಿಳಿಯುವಷ್ಟು ವಿಕಾಲ ಬುದ್ಧಿಯು ಜನತೆಯಲ್ಲಿ ಇಲ್ಲವೆಂದು ಒಮ್ಮೆಗೆ ವಾದಿಸಿದರೂ ಸ್ವಂತಪ್ರಯೋಜನವನ್ನಾದರೂ ತಿಳಿಕೊಳ್ಳುವಷ್ಟು ಸ್ವಾರ್ಥವನ್ನು ಪ್ರತಿಯೊಬ್ಬನೂ ತಳೆದಿರುವನು. ಹೀಗಿದ್ದರೆ ಜಾಸ್ತಿ ಬೆಳೆಸುವದರಲ್ಲಿ ತೊಡಕುಗಳೇನಾದರೂ ಇದ್ದೇ ಇರಬೇಕೆಂದೂ ಇಂತಹ ತೊಡಕುಗಳು ನಿವಾರಣೆ ಮಾಡುವದೇ ಜಾಸ್ತಿ ಆಹಾರ ಬೆಳೆಸುವದರ ಸಕ್ರಿಯ ಉಪಾಯವೆಂದೂ ಚೆನ್ನಾಗಿ ಲಕ್ಷವಿಡಲ್ಲಿದಬೇಕು.

ನನುಸ್ಸ ಭಾರತದ ವಿಚಾರವನ್ನು ಸದ್ಯ ಬದಿಗಿರಿಸಿ ನಮ್ಮ ಒಂದು ಜಿಲ್ಲೆಯ ಕುರಿತು ಮಾತ್ರವಾಗಿ ವಿಚಾರಿಸುವದು ಯುಕ್ತವೆನಿಸುತ್ತದೆ. ದಕ್ಷಿಣ ಕನ್ನಡದಲ್ಲಿ ಸದ್ಯ ವಿತರದಾಕೃಮಕ್ಕೆ ಸುಮಾರು 10, 12 ಸಾವಿರ ಟನ್ನು ಅಂದರೆ ಸುಮಾರು ಮೂರು ಮೂರುವರೆ ಲಕ್ಷ ಮಂಡಿ ಅಕ್ಕಿಯು ಕಡಿಮೆಯಾಗುತ್ತಿರುವದೆಂದು 3, 4 ವರುಷಗಳ ಅನುಭವದಿಂದ ತಿಳಿದು ಒಂದಿರುವುದು. ಇದು ಒಂದು ಸಾವು ಪಡಿಯಕ್ಕಿ (ಬೇಸಾಯ ಮಾಡದ ಅಥವಾ ರೇಷನ್ ಅಂಗಡಿಗೆ ಹೋಗುವವನ ಮಟ್ಟಿಗೆ) ಯನ್ನಾಧರಿಸಿದ ಅನುಭವ. ಸದ್ಯಕ್ಕೆ ಇಷ್ಟು ಅಕ್ಕಿಯನ್ನಾದರೂ ನಮ್ಮ ಜಿಲ್ಲೆಯಲ್ಲಿ ಬೆಳೆಸಿಕೊಂಡು 1951ರ ಆವಧಿಯೊಳಗೆ ನಾವು ಸ್ವಸಂಪೂರ್ಣರಾಗುವ ಧ್ಯೇಯವನ್ನಿಟ್ಟು ಕೊಂಡರೆ ಸಾಕೆಂತ ಕಾಣುತ್ತದೆ. ಜಾಸ್ತಿ ಬೆಳೆಸಬಾರದೆಂಬ ಯಾವ ಆತಂಕವೂ ಇರಬಾರದು. ಆದರೆ, ಇದಿಷ್ಟು ನೆನಪೇರಲೇಬೇಕೆಂಬ ಸಂಕಲ್ಪವನ್ನು ಕೈಕೊಳ್ಳುವ ಸಾಹಸವನ್ನು ಅಧಿಕಾರಿಗಳು ಮಾಡಬಲ್ಲರೇನಿ

ಸಂಕಲ್ಪವನ್ನು ಮಾಡುವದರಿಂದ ಕಾರ್ಯವಾಗದಿದ್ದರೂ ಇಂತಹ ನಿಶ್ಚಯವೇ ಕಾರ್ಯಕ್ಕೆ ಮೂಲವಾಗಿರುತ್ತದೆ' ಒಂದು ಕಾರ್ಯವನ್ನು ನೆರವೇರಿಸಲೇಬೇಕೆಂಬ ನಿಶ್ಚಯವುಂಟಾದರೆ ಅದಕ್ಕೆ ಬೇಕಾದ ಉಪಾಯಗಳು ಕಾಣಿಸಿಕೊಳ್ಳುವವು. ಒಂದು ಎಕರೆಯಲ್ಲಿ ಒಂದು ಬೆಳೆಗೆ ಕೇವಲ 10,12ಮುಡಿ ಅಕ್ಕಿ ಮಾತ್ರ ದೊರಕುವದೆಂಬದನ್ನೇ ನಾವು ನಿಶ್ಚಯಿಸಿದರೆ, ಇದಕ್ಕೂ ಕಮ್ಮಿಯಾಗುವ ಅಂಶವನ್ನು ಒಂದಕ್ಕಿಂತ ಹೆಚ್ಚು ಬೆಳೆಸುವ ಬೆಳೆಯಿಂದಾಗಲೀ ಜಾಸ್ತಿ ಉತ್ಪತ್ತಿ ದೊರಕುವದರಿಂದಾಗಲೀ ನಮ್ಮ ಧ್ಯೇಯಸಿದ್ಧಿಯನ್ನು ಸಾಧಿಸಬಹುದು. ಅಂದರೆ, ಮೂರು ಮೂರುವರೆ ಲಕ್ಷ ಮುಡಿ ಅಕ್ಕಿಯು ಬೆಳೆಸಬೇಕಾದರೆ ಸುಮಾರು 30, 35 ಸಾವಿರ ಎಕ್ರೆಯಲ್ಲಿ ಜಾಸ್ತಿ ಬೇಸಾಯ ಕೈಕೊಳ್ಳಬೇಕಾಗಿದೆ.

ನಮ್ಮಲ್ಲಿ ಲಕ್ಷಾಂತರ ಎಕರೆ ಬಂಜರಿದೆ

ತೀರ್ಥ ತೆರುತ್ತಿರುವ ಸುಮಾರು ಅರ್ಧ ಲಕ್ಷ ಎಕರೆ ಭೂಮಿಯು-ಸಂಜ ಬಾಗಾಯ್ತು ಭೂಮಿಯು ಈ ಜಿಲ್ಲೆಯಲ್ಲಿ ಸಾಗುವಳ್ಳಿಯಿಲ್ಲದೆ ಬಂಜರಿದೆ. ಇದು ಇಡೀ ಜಿಲ್ಲೆಯ ಮಲೆನಾಡುಗಳಲ್ಲಿ ಹಸರಿಸಿಕೊಂಡಿರುವದು ನಿಜ. ಆದರೆ, ಇದರ ಹತ್ತರಷ್ಟು ಭೂಮಿಯು, ಆಂದರೆ ಸುಮಾರು 6 ಲಕ್ಷ ಎಕ್ರೆ ಸಾಗುವಳ್ಳಿಯೋಗ್ಯವೆಂತ ಸರಕಾರವೇ ನರ್ಧರಿಸಿದ ಸರಕಾರಿ ಭೂಮಿಯು ಪದಲು ಬಿದ್ದಿರುವದು. ಇದು ಕೂಡಾ ಇಡೀ ಜಿಲ್ಲೆಯ ಉದ್ದಗಲಕ್ಕೂ ವಿಸ್ತರಿಸಿಕೊಂಡಿದೆ. ಇದಕ್ಕಿಂತಲೂ ಹೆಚ್ಚಿಗೆ ವಿಸ್ತೀರ್ಣವುಳ್ಳ ಭೂಮಿಯು ಸಾಗುವಳ್ಳಿಗೆ ಯೋಗ್ಯವಾಗಿದ್ದೂ, ಭತ್ತದ ಒಂದು ಬೆಳೆಯನ್ನು ಸುಲಭವಾಗಿ ತೆಗೆಯಬಹುದಾಗಿರುವ ಭೂಮಿಯು ಸುರಕ್ಷಿತ ಕಾಡುಗಳಲ್ಲಿ ಸೇರಿಕೊಂಡಿರುವದು. ನಮ್ಮ ಜಿಲ್ಲೆಯ ಇಡೀ ವಿಸ್ತೀರ್ಣದಲ್ಲಿ ಇದರಲ್ಲಿ ಒಂದಂಶವೇ ಸುರಕ್ಷಿತ ಕಾಡೆಂಬುದನ್ನು ಮರೆಯಲಾಗುವದಿಲ್ಲ. ಇದರಲ್ಲಿ ಜನವಸತಿಗೆ ಕೇವಲ ದೂರವಾಗಿರುವ ಗೊಂಡಾರಣ್ಯಗಳನ್ನು ಬಿಟ್ಟರೂ ಕೂಡಾ ಇದರ ಒಂದಂಶವನ್ನು ಬೇಸಾಯ ಗೊಳಿಸುವದರಿಂದಲೇ ನಮ್ಮ ಅನ್ನ ತತ್ವಾರವನ್ನು ನೀಗಿಸಬಹುದು.

ಕುಮರಿ ಸಾಗುವಳ್ಳಿ

ಈ ಜಿಲ್ಲೆ ಹಾಗೂ ಉತ್ತರ ಕನ್ನಡದಲ್ಲಿ ಕಾಡುಗಳನ್ನು ಕ್ರಮವಾಗಿ ಕಡಿದು ಹಾಕಿ ಸುಟ್ಟು ಅಕ್ಕಿ, ಧಾನ್ಯ ಮುಂತಾದುವುಗಳನ್ನು ಬೆಳೆಸುತ್ತಿದ್ದ ಅನಾದಿ ಪರಂಪರೆಯನ್ನು ಬ್ರಿಟಿಷರು 1880ರ ಆಂದಾಜಿನಿಂದೆ ಕಾಡುಗಳನ್ನು ಸುರಕ್ಷಿತ ಪಡಿಸಿಕೊಂಡು ನಿಲ್ಲಿಸಿಬಿಟ್ಟರು. ಈಗ ಗೊಂಡಾರಣ್ಯಗಳಿರುವ ಪ್ರತಿಯೊಂದು ಪ್ರದೇಶದಲ್ಲಿಯೂ ಇಂತಪ ಕುಮರಿ ಬೇಸಾಯವು ನಡೆಯುತ್ತಿದ್ದೂ ಜನರು ಲಕ್ಷಾಂತರವಾಗಿ ವಾಸಿಸುತ್ತಿದ್ದರು. ಸಾಮ್ರಾಜ್ಯ ಸ್ಥಾಪನೆಯ ದೃಷ್ಟಿಯಿಂದ ಈ ಪ್ರದೇಶವನ್ನು ಜನವಸತಿಯಿಲ್ಲದಂತೆ ಮಾಡುವದು ಆವಶ್ಯಕವೆಂತ ಕಂಡಪ್ರಬೆಸರುಯೂವಪನ್ನು ಲೆಕ್ಕಿಸದೆ, ಈ ಸಮಗ್ರ ವ್ಯಾಪಕ್ಯವನ್ನು ಬಲಾತ್ಕಾರದಿಂದ ನಿರ್ಜನಗೊಳಿಸಿದರು. ಈ ಧೋರಣೆಯೇ ಇಂದಿನ ಕಷ್ಟಗಳಿಗೆ ಮುಖ್ಯ ಕಾರಣವಾಗಿದೆ.

ಕುಮರಿ ಸಾಗುವಳ್ಳಿಗೆ ನೆಲ ಸಮತಟ್ಟು ಮಾಡುವಮಾಗಲೀ, ಎತ್ತು ಕೋಣಗಳ ಆವಶ್ಯಕತೆಯಾಗಲೀ, ನೀರಿನ ಹುರವನೆಯಾಗಲೀ ಬೇಕಿಲ್ಲ. ಹೆಚ್ಚಿನ ಯಾವ ಭಂಡವಾಳವೂ ಇಲ್ಲದೆ, ತುಂಬಾ ಭತ್ತವನ್ನು ಬೆಳೆಯುವ ಉತ್ತಮ ಉಪಾಯವಾಗಿದೆ. ಈ ರೀತಿ ಕುಮರಿ ಸಾಗುವಳ್ಳಿ ಮಾಡುವದರಿಂದ ಕಾಡುಗಳು ಇಲ್ಲದಂತಾಗಿ ತೊಂದರೆ ಏನೂ ಆಗುವಂತಿಲ್ಲ. ಮಳೆ ಬೀಳುವದು ನಿಲ್ಲಲಾರದು. ಆದರ ಬದಲು, ವಿಪರೀತವಾಗಿ ಬರುವ ಮಳೆಯು ಕಡಿಮೆಯಾಗಿ ಆದು ಜೋಗ್ಯ ಪ್ರಮಾಣದಲ್ಲಿ ಬರುವಂತಾಗಬಹುದು. ಇಷ್ಟು ಮಾತ್ರವೇ ಅಲ್ಲ, ಈಗ ಆರಣ್ಯವಾಗಿರುವ ಪ್ರದೇಶದಲ್ಲಿ ತುಂಬಾ ಯೋಗ್ಯ ಸ್ಥಳಗಳು ಶಾಶ್ವತವಾದ ಸಾಗುವಳ್ಳಿಗೆ ಸುಲಭವಾಗಿ ಸರಿಯಾದ ಬಹುದಾಗಿದೆ. ಈ ಕಾಡುಗಳನ್ನು ಕಡಿದು ಅವುಗಳಿಂದ ಮೋಸಿನ ಮಾನಗಳನ್ನೆಲ್ಲ ಮಾರಾಟ ಮಾಡುವದರಿಂದ ಸರಕಾರಕ್ಕೆ ತುಂಬಾ ಆದಾಯವಿದೆ. ಹಾಗೂ ಉಳಿದ ಅಂಶವನ್ನು ರಾಷ್ಟ್ರೀಯ ಸಂಪತ್ತು ಕುಮರಿ ಸಾಗುವಳ್ಳಿ ನಾಡುವುದು ಸುಲಭ. ಇದೂ ಒಂದು ಉದಾಹರಣೆಯನ್ನು ಸೂಚ್ಯವಿದಹತ್ತಿರವೂ ಸುಬ್ರಮ್ಮಣ್ಯಕ್ಕೆ ಬೆಳ್ಳಾರೆಯಿಂದ ಮೋಗುವ ಮಾರ್ಗದ ಬದಿಯಲ್ಲಿಯೂ ಕಾಣಬಹುದು. ಆಲ್ಲಿ ಕುಮರಿ ಬೆಳೆಸಿದ್ದಾರೆ. ಈ ಕುಮರಿ ಬೇಸಾಯ ಹೊಸದಲ್ಲ. ಎಂಸರಿಗೋದು ತಾಲೂಕಿನ ಕೆಲವು ಗ್ರಾಮಗಳು ಮಲಬಾರಿನ ಹತ್ತಿರವಿದ್ದು, ಅಲ್ಲಿ ನದಿಯುತ್ತಿರುವಂತೆ ಇಲ್ಲಿಯೂ ಕುಮರಿ ಸಾಗುವಳ್ಳಿ ನಡೆಯುತ್ತದೆ. ಮುತ್ತೂರು ತಾಲೂಕಿನ ನೆರ್ಯ ಗ್ರಾಮದಲ್ಲಿಯೂ ಕುಮರಿ ಸಾಗುವಳ್ಳಿ ಅಲ್ಪಸ್ವಲ್ಪ ನಡೆಯುತ್ತಿದೆ. ಕುಮರ ಸಾಗುವಳ್ಳಿಯಿಂದ ಈಗ ನಡೆಯುತ್ತಿರುವ ಸಾಗುವಳ್ಳಿಗೆ ತುಂಬಾ ಪ್ರಯೋಜನವಿದೆ. ಕಾದುವ್ಯಗಳಿಗೆ ಖಾಲಿ, ಹಾಗೂ ಕೃಮಿ ಕೀಟಗಳ ನಾಶಕ್ಕೆ ಸಹಾಯಕವಾಗಿ, ಈ ಬೇಸಾಯವಾಗುತ್ತಿರುವಲ್ಲಿ ಜಾಸ್ತಿ ಬೆಳೆಯು ದೊರಕುವದರಲ್ಲಿ ಸಂದೇಹವಿಲ್ಲ.

ಬಂಜರು ಪಟ್ಟು ಸ್ಥಳಗಳ ಬೇಸಾಯ

ವರುಪಂಪ್ರತಿ ತೀರ್ಥ ತೆರುತ್ತಾ ತಮ್ಮ ವರ್ಗ ಸ್ಥಳವನ್ನು ಬಂಜರಿದಲಿಕ್ಕೆ ಬಲಿಪ್ಪಡಾದ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕೀಯಾವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ತಿಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಬು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ನೆಂದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೧ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಸತ್ಯವ್ರತಹರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

— ಮಕ್ಕಳನ್ನು ಹಡೆಯುವುದು ಸಾಕು —

ಆತಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಸೊನ್ನು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟ್ರಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗೂ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಟ್ಟೀರದಲ್ಲಿ ಸೇವಿಸಬೇಕು.

ಪತ್ಯೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧॥ ಆಣೆ.

ಮಾಲಕರು:—ಹಾಲಪ್ಪ ಭೀರಪ್ಪ ಡಾವಣಗೇರಿ

ಆಯುರ್ವೇದ ಔಷಧಾಲಯ. ಗದಗ-ಸಿಟಿ-

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೊಪ್ಪಸ್ಸ, ಹಾವೇರಿ ಬ್ಯಾಡಗಿ

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. No. 481/49.

ವಾದಿ— ಸುಬ್ಬಯ್ಯ ಸೆಟ್ಟಿ

ಪ್ರತಿವಾದಿರು: 1 ರಾಮಯ್ಯ ಸೆಟ್ಟಿ, 2 ಅಣ್ಣಪ್ಪ ಸೆಟ್ಟಿ, 3 ಮಂಜಯ್ಯ ಸೆಟ್ಟಿ, ಕುಳ್ಳ ಸೆಡ್ತಿರ ಮನೆ ಪೆಂಕಮ್ಮ ಸೆಡ್ತಿರ ಮಕ್ಕಳು.

ಕುಂದಾಪುರ ತಾಲ್ಲ್ಯ ಸಂಜ್ರಿ 1ನೇ ವಿರೂದ್ಧ ಗ್ರಾಮುಖ ಸಾರ್ವತೋಡಿಯಲ್ಲಿರುವವರು.

ಸದ್ರಿ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸುವದೇನೆಂದರೆ:

ನೀವು ವಾದಿಗೆ ಕಾ. 20-7-1946ರಲ್ಲಿ ರೂಪಾಯಿ 100ಕ್ಕೆ ಬರಕೊಟ್ಟ ಡಿಮಾಂದು ನೋಟಿನ ಪಣ ಒಡ್ಡಿ ಬಗ್ಗೆ ವಾದಿಯು ನಾಕಲು ಮಾಡಿದ ಮೇಲಿನ ದಾವೆಯು ತಾ. 7-10-1949ಕ್ಕೆ ತನ್ನಗೆ ಯಿಟ್ಟಿದೆ. ಆ ಕಾರಿತು ನಿಮ್ಮಲ್ಲಿನಾದರೂ ಆಕ್ಷೇಪಯಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಪೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿಯನ್ನು ತಿಳಿಸಿಯದೆ.

By order of the court

Y Tejappa Thetty

Advocate for Plff.

Coondapur
14—9—49.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 57/1949.

1. ರಾಮುಸೆಟ್ಟಿ-
2. ಸಂಪಸೆಟ್ಟಿ- } ಅರ್ಜಿದಾರರು.

1ನೇ ಅರ್ಜಿದಾರಳ ಮಗ, 2ನೆ ಅರ್ಜಿದಾರಳ ಸಹೋದರ, ತಾರೀಕು 7-5-1949ರಲ್ಲಿ ಕರ್ನಾರೆ ಗ್ರಾಮದಲ್ಲಿ ಮೃತವಾದ ರಾಮು ಅಂಚಪ್ಪಸೆಟ್ಟಿಯ ಜೆಸರಲ್ಲಿ ಇದ್ದ East and West Insurance Co., Ltd. Bombay ಇವರ Policy No.451/45ರ ಪ್ರಕಾರ ಬರತಕ್ಕ ಹಣವನ್ನು ವ್ಹಲು ಮಾಡುವರೆ 1ನೇ ಅರ್ಜಿದಾರಳ ಹೆಸರಿಗೆ ಸಕ್ಸೆಷನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಬರಕೊಂಡ ಸದ್ರಿ ಅರ್ಜಿಯು ತ್ಯು ಬಗ್ಗೆ ತಾರೀಕು 13-10-49ಕ್ಕೆ ಇಟ್ಟುವಾದ್ರಿಂದ ಆಕ್ಷೇಪ ಇದ್ದವರು ಸದ್ರಿ ದಿನ ಬೆಳಿಗ್ಗೆ 10 ಘಂಟೆಗೆ ಮೇಲ್ಕಂಡ ಕೋರ್ಟಿಗೆ ಮುಂದೆ ಖಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಯಂಬುದನ್ನು ಕೋರ್ಟು ಹುಕುಂ ಪ್ರಕಾರ ಈ ಮೂಲಕ ಪ್ರಕಟಿಸೋಣಾಗಿ ಯದೆ.

P. Ramachandra Rao.

Pleader for Plff.

ಕಾರ್ಕಳ.
ತಾರೀಕು 27-9-49

ಕಾರಣಗಳು ಇದ್ದೇ ತೀರಬೇಕು. ಇದರ ಬೇ ಸಾಯವು ಅಕ್ಕಿಯ ಮೂಲಕ ನಡಿಯುವದೆಂ ದು ತಿಳಿಯುವದು ಅವಾಸ್ತವಿಕ. ಮಲೆನಾಡಿ ನಲ್ಲಿ ಭೂಮಿ ಸಾಗುವಳ್ಳಯಾಗಬೇಕಾದರೆ ಒಂದು ವಕ್ಕಲು ತಲಾತಿನ್ನಾಡಿ, ಅವನಿಗೆ ಮದುವೆಮಾಡಿ, ಮನೆ ಕಟ್ಟಿಸಿಕೊಟ್ಟು, ಎ ತ್ತು, ಬೀಜ, ನೇಗಿಲು, ಕತ್ತಿ, ಹಾರೆ, ಮುಂ ಸಾದ ಎಲ್ಲಾ ಅನುಕೂಲತೆಗಳನ್ನು ಒದಗಿಸಿ ಕೊಟ್ಟು, ಅವನ ಎಲ್ಲಾ ಯೋಗಕ್ಷೇಮ ವ ಹಿಸಿದರೆ ಮಾತ್ರ ಸಾಧ್ಯವೆಂಬುದು ಮಲೆನಾಡಿ ನವರಿಗೆ ಗೊತ್ತು. ಅಂತಹ ವಕ್ಕಲಿಗೂ ಸು ಖವಿರುವದಿಲ್ಲ. ಅನುನಿತ್ಯ ಕಾಯಿಲೆ. ಬೆಳೆಗ ಳನ್ನು ಹೇಗಾದರೂ ಬೆಳೆಸಿ, ರಾತ್ರಿ ಹಗಲೆ ನ್ನದೆ ಕಾದುಕೊಂಡು, ಕೊನೆಗೆ ಸಿಕ್ಕಿದಷ್ಟ ನ್ನು ಸಂಗ್ರಹಿಸಿ, "ಧನಿಗೆ" ತನಗೆ ಊಟಕ್ಕೆ ಬೇಕಾದುದಕ್ಕಿಂತ ಮಿಕ್ಕಿರುವದನ್ನು ಕೊಡು ವ ಕ್ರಮದಿಂದಲೇ ಅತನು ಕೆಲವು ಕಾಲವಾ ದರೂ ನಿತ್ತು ಬೇಸಾಯ ನಡಿಸುತ್ತಿರುವನು. ಈ ಪರಿಸ್ಥಿತಿಯು ಸರಿಯಾದ ಅರಿವು ಅಧಿಕಾ ರಿಗಳಿಗಿರುವದು ಆಸಂಭವ. ಹೀಗಿರುವಾಗ ಇಂತಹ ಪ್ರದೇಶಗಳಲ್ಲಿ ಬೇಸಾಯ ಮಾಡಲಿ ಕ್ಕಿರುವ ಕಷ್ಟಗಳನ್ನು ನಿವಾರಿಸದೆ ಹೆಚ್ಚಿಗೆ ಆ ಹಾರ ಬೆಳೆಸುವದು ಅಸಾಧ್ಯವೆಂಬುದನ್ನು ಅ ವರು ತಿಳಿಯಬೇಕಾಗಿದೆ. ಜನಸಂಖ್ಯೆಯ ಆ ಭಾವವಿರುವ ಇಂತಹ ಪ್ರದೇಶಗಳಲ್ಲಿ ಅರಣ್ಯ ಗಳಿಂದುಂಟಾಗುವ ಸಂಕಷ್ಟಗಳನ್ನೆದುರಿಸಿ ಹೊಸ ಕೃಷಿಮಾಡುವ ಕುರಿತಾಗಿ ಯೋಗ್ಯ ಯೋಜನೆಗಳನ್ನು ಕೈಕೊಳ್ಳುವದು ಅವಶ್ಯ ವಾಗಿದೆ.

ಸರಕಾರಿ ಸ್ಥಳಗಳಲ್ಲಿ ಬೇಸಾಯ.

ಬೇಸಾಯ ಮಾಡಬಹುದಾದ ಅನೇಕ ಸ ರಕಾರೀ ಸ್ಥಳಗಳಿರುವದನ್ನು ಬೇಸಾಯಕ್ಕೆ ಪ ರುವ ಕುರಿತಾಗಿ ಪ್ರಯತ್ನಗಳನ್ನು ಮಾಡುವ ದು ಅಗತ್ಯ ಆದರೆ, ಇದನ್ನು ಹೇಗೆ ಮಾಡ ಬೇಕೆಂಬುದನ್ನು ಚೆನ್ನಾಗಿ ಯೋಚಿಸಬೇಕು. ಎಲ್ಲಿ ಬಾಸಣಿ ವ್ಯತ್ಯಸ್ಥಗಳು ಮುಂದೆ ಬರುವ ದೋ ಅಂತಹವರಿಗೆ ಅಗತ್ಯವಿರುವ ಸ್ಥಳಗ ಳು ಕೂಡಲೇ ದೊರಕುವ ವ್ಯವಸ್ಥೆಯಾಗ ಬೇಕು. ಪ್ರಕೃತ ನಡಿಯುವ ಕೃಷಿಗಳಲ್ಲಿ ದರ್ಖಾಸ್ತಿಗೆ ಮಾಡಿದ ಅರ್ಜಿಗಳು ಪರಿಪಡ ಟ್ಟಿಯಾದರೂ ತೀರ್ಮಾನವಾಗುವದಿಲ್ಲವೆಂತ ಕೇಳಿದ್ದೇನೆ. ಈ ಕ್ರಮವು ಬದಲಾಗಬೇಕು.

ಈಗ ಟ್ರಾಕ್ಟರುಗಳ ಮೂಲಕವಾಗಿ ದಿನ 1ಕ್ಕೆ 30, 40, ಎಕ್ರೆ ನೆಲವು ಸಿದ್ಧವಾಗುತ್ತಿದೆ. ಬುಲ್ ಜೋಡ್ಯಿಂಗ್ ಎಂಬ ಉಪಕರಣದಿಂ ದ ಸಣ್ಣ ಪೊದೆಬಳ್ಳಿಗಳನ್ನೆಲ್ಲಾ ಕತ್ತೊಗೆದು ನೆ ಲವು ಸಿದ್ಧವಾಗುತ್ತದೆ. ಮಲೆನಾಡಿನಲ್ಲಿ ನವಂ ಬರದಿಂದ ಎಪ್ರಿಲ್‌ವರೆಗೆ 6ತಿಂಗಳು ಕಾಲ ಟ್ರಾಕ್ಟರು ಕೆಲಸಮಾಡಬಹುದಾದಂತಹ ಸ್ಥಳ ಗಳಿವೆ. ತಿಂಗಳಿಗೆ ಸರಾಸರಿ 20ದಿನಗಳ ಕೆಲ ಸ ಸಿದರೆ ದಿನಕ್ಕೆ 25 ಎಕ್ರೆಯಂತಾದರೂ ಒಂದು ಟ್ರಿಕ್ಟರು 3000 ಎಕ್ರೆಯಷ್ಟು ಸ್ಥಳ ವನ್ನು ಸಿದ್ಧಪಡಿಸುವದು. ಮಲೆನಾಡು ಗುಡ್ಡ ಪ್ರಾಂತ್ಯವಾಗಿದ್ದು ನಿಶಾಲವಾದ ಸ್ಥಳಗಳು ದೊರಕಲಾರವೆಂದು ಊಹಿಸಿಕೊಂಡು ನಾವು 10, 12 ಟ್ರಿಕ್ಟರುಗಳು ಬೇಕಾಗುವಲ್ಲಿ 20 ಟ್ರಿಕ್ಟರುಗಳನ್ನು ಎಣಿಸಬೇಕಾಗುತ್ತದೆ ಕಳೆದ ವರುಷಲುಜ್ರಿಪ್ರಾಂತ್ಯದಲ್ಲಿ ಟ್ರಿಕ್ಟರ್‌ಕೆಲಸ ಮಾಡಿತ್ತು. ಜನರಿಗೆ ಇದರ ಕುರಿತು ಉತ್ಸಾಹವಿದೆ ಜನರ ಅಭಾವವಿರುವಲ್ಲಿ ಟ್ರಾಕ್ಟರು ಸಾಗುವಳ್ಳಿಯಿಂದ ಕೆಲಸ ಮುಂದುವರಿಸಬಹುದು.

ಅಧಿಕಾರಿಗಳ ಕರ್ತವ್ಯ.

ಮೋಟಾರು ವಾಹನಗಳ ಚಲಾವಣೆಯಿಲ್ಲದಿರುವಲ್ಲಿ ಮೇಲಧಿಕಾರಿಗಳು ನುಸುಳಿ ನೋಡುವದೇ ಇಲ್ಲ. ಬಸ್ಸು ಜೀಲಾವಣೆಯಿದ್ದಲ್ಲಿ ಅಧಿಕಾರಿಗಳು ಬಂದು ಹೋಗುವ ಕ್ರಮವು ಮಾಮೂಲಾಗಿದೆ. ಬಂದ ಬಸ್ಸಿನಲ್ಲಿಯೇ ಹಿಂತಿರುಗದಿದ್ದರೆ, ಸಂಜೆಯೊಳಗಾದರೂ ಸೇರಲೇಬೇಕು. ಆಪ್ಪರೊಳಗೆ ಗ್ರಾಮ ಪಟೇಲರು, ಶಾನುಭಾಗರು ರಿಕಾರ್ಡ್ ಸಮೇತ ಹಾಜರಿರಬೇಕು. ಈ ಅಧಿಕಾರಿಗಳು ಬರುವದು ಗ್ರಾಮಸ್ಥರಿಗೆ ತಿಳಿಯುವದೇ ಕ ಷ್ಟ. ಒಂದು ವೇಳೆ ತಿಳಿದರೂ ಕೂಡಾ ಅವ ರು 6, 7ಮೈಲು ದೂರದಿಂದ ಬರುವಷ್ಟರಲ್ಲಿ ಅಧಿಕಾರರು ಹಿಂದೆ ಹೋಗಿರುತ್ತಾರೆ. ಅಪ್ಪ ವಾ ಹೆಚ್ಚುಬಾರಿ ಬಂದಿರುವದೇ ಇಲ್ಲ. ಹಳ್ಳಿ ಗಳು ಕೆಳ ನೌಕರರ ವಿಹಾರ ಕ್ಷೇತ್ರಗಳಾಗಿ ಯೇ ಪರಿಣಮಿಸುವದಕ್ಕೂ ಹಳ್ಳಿಯ ಮೂಲ ಜನತೆಗೆ ಈ ಕೆಳ ನೌಕರರೇ "ಅಪರಿ ಮೇಶ್ವರ"ರಾಗಿದ್ದು ಇವರಿಗೆ ಶರಣು ಹೋ ಗುವ ಕ್ರಮವನ್ನು ಅವಲಂಬಿಸುವದಕ್ಕೂ ಮೇಲಾಧಿಕಾರಿಗಳ ಈವರ್ತನೆಯೇ ಮುಖ್ಯ ಕಾರಣವಾಗಿದೆ. ಜಿಲ್ಲಾಧಿಕಾರಿಗಳು ಬಂದರೆ ಬಂಗಲೆಗಳಲ್ಲಿ "ಮೊಕ್ಕಾಂವಷಾಸಿ" ಹೋಗು ವದು ಯಾರಿಗೆ ತಾನೇ ತಿಳಿಯುವುದು? ಹೀ ಗಾಗಿ, ಅಧಿಕಾರಿಗಳಿಗೂ ಸಾಮಾನ್ಯ ಜನತೆ ಗೂ ಸಂಬಂಧವೇ ಇಲ್ಲದಂತಾಗಿರುವುದರಿಂ ದಲೇ, ಅಧಿಕಾರಿಗಳ ಕೂಗು ಜನತೆಗೆ ಸೇ ರುವದಿಲ್ಲ. ಒಂದು ವೇಳೆ ಸೇರಿದರೂ ಅ ರ್ಥವಾಗುವದಿಲ್ಲ. ಅರ್ಥವಾದರೂ ತಮ್ಮ ಮನಸ್ಸಿನಲ್ಲಿರುವುದನ್ನು ತಿಳಿಸಲಾಗುವದಿಲ್ಲ. ಈ ಪರಿಸ್ಥಿತಿಯು ಪರಿವರ್ತನೆಗೊಂಡು ಯಾ ವಾಗ ಅಧಿಕಾರಿಗಳು ಸಾಮಾನ್ಯ ಜನತೆಯೊ ಡನೆ ಬೆರೆದುಕೊಂಡು, ತಮ್ಮ ಸಂದೇಶವನ್ನು ಸಾರಲು ಸಮರ್ಥರಾಗುವರೋ ಆ ವರೆಗೆ ಸರಕಾರದಲ್ಲಿ ಜನತೆಗೆ ಪ್ರೀತಿಯುಂಟಾಗು ವದು ಅಸಾಧ್ಯವಾಗುವದು. ಇಂತಹ ಪ್ರೀತಿ ಯುಂಟಾಗದ ಹೊರತು ಕಾರ್ಯವಾಗುವ ದೆಂತು?

ಯೋಜನೆಯ ಆವಶ್ಯಕತೆ

ಈ ಜಿಲ್ಲೆಯನ್ನು ಆಹಾರ ಪೃಷ್ಠಿಯಿಂದ ಪರಿಪೂರ್ಣವಾಗುವಂತೆ ಮಾಡಬೇಕಾದರೆ, ಒಂದು ಯೋಗ್ಯ ಯೋಜನೆಯನ್ನು ಸಿದ್ಧ ಪಡಿಸಿ, ಅದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆಯಾಗಬೇಕಾಗಿದೆ. ಸು ಮಾರು 50,000 ಎಕ್ರೆ ಬೇಸಾಯ ಯೋಗ್ಯವಾಗಿ ರುವ ಬಂಜರು ಭೂಮಿಯಿದ್ದು, ಸ್ಥಳೀಯ ಜನರ ಉತ್ಸಾಹ, ಸಹಕಾರವಿರುವ ಕ್ಷೇತ್ರ ವನ್ನು ಆರಿಸಿಕೊಳ್ಳಬೇಕಾಡದು ಪ್ರಥಮ ಕರ್ತವ್ಯ. ಇದು ಮೊದಲಿನ ಹೆಜ್ಜೆ. ನಮ್ಮ ಅಧಿಪತ್ಯದಲ್ಲಿ ಸುತ್ತೂರು ತಾಲೂಕಿನ ಸು ಳ್ಳ ಭೂರ್ಖಾದಲ್ಲಿ, ಇದಕ್ಕೆ ಅನುಕೂಲವೆಂತ ತೋರುತ್ತದೆ. ಇಲ್ಲಿ ಬೇಕು ಬೇಕಾದ ನೈಸ ರ್ಗಿಕ ಅನುಕೂಲತೆಗಳಿವೆ. ಯಥೇಚ್ಛವಾದ ಸೊಪ್ಪು, ನೀರು, ಸ್ಥಳ, ಸಾಕಷ್ಟು ಅಲ್ಲದಿದ್ದರೂ ಸಾಮಾನ್ಯ ಜನಸಂಖ್ಯೆ ಕೂಡಾ ಈ ಆಂಶದಲ್ಲಿ ಸಿಗಬಹುದು. ಮೇಲೆ ಹೇಳಿದ 50,000 ಎಕ್ರೆ ಪಡಭೂಮಿಗಳಿರುವ ಕೇಂದ್ರ ವೊಂದನ್ನು ಹುಟ್ಟುಹಾಕಿಕೊಂಡು, ಅದಕ್ಕೆ ಅಗ ತ್ಯವಿರುವ ರಸ್ತೆಗಳು, ಮಲೇರಿಯಾ ನಿವಾ ರಣಾ ಯೋಜನೆ, ಸೌಕರ್ಯ, ಆಸ್ಪತ್ರೆ ಮುಂ ತಾದ ಸಲಕರಣೆಗಳನ್ನು ಒದಗಿಸಿಕೊಳ್ಳಬೇ ಕಾದುದು ಪ್ರಥಮ ಕರ್ತವ್ಯ. ಇದರ ಜೊತೆಗೆ ಸ್ಥಳದ ನಿರೀಕ್ಷಣೆ ನಡಿಸಿ ಒಂದು ಸಾವಿರ ಎಕ ರೆಗೆ ಕಮ್ಮಿಯಿಲ್ಲದ ಬ್ಲೋಕುಗಳನ್ನು ವಿಭಜ ಡಿಸಿಕೊಂಡು, ಹೊಸ ಬೇಸಾಯದ ಉಪ ಕರಣಗಳನ್ನು ಒದಗಿಸಿಕೊಳ್ಳಬೇಕು. 25 ಟ್ರಕ್ಟರುಗಳು, ಅವುಗಳ ಸಲಕರಣೆಹಾಗೂ ಇದಕ್ಕೆ ಅಗತ್ಯವಿರುವ ಸಿಬ್ಬಂದಿಯನ್ನು ಸರ ಕಾರದವರು ಪೂರೈಸಿಕೊಡಬೇಕು. ಉಳಿದ ಬೇಸಾಯ ಕೆಲಸವನ್ನು ಯಾವ ರೂಪದಲ್ಲಿ ಕೈಕೊಳ್ಳಬೇಕೆಂಬುದನ್ನು ಪ್ರಾರಂಭದಲ್ಲಿ ನಿರ್ಣಯಿಸಿಕೊಂಡಿರಬೇಕು ಬಾಸಣಿ ಜನ ರು ಇದಕ್ಕಾಗಿ ಕೆಲವರು ಮುಂದೆಬರಬಹು ದು. ಆದರೆ, ಇಷ್ಟು ದೊಡ್ಡ ಕ್ಷೇತ್ರವು ಯಾವ ದಾದರೊಂದು ಸಂಘಟಿತ ಕ್ರಮದಲ್ಲಿಯೇ ಕೈಕೊಳ್ಳಬೇಕಾಗುವುದು. ಸಹಕಾರ ರೀತಿ ಯಲ್ಲಿ ಪ. ಕ. ಸೆಂಟ್ರಲ್ ಸ್ಟೋರ್ಸ್ ಏರ್ಪ ಟ್ಟಂತೆಯೇ, ಈ ಕಾರ್ಯವು ನಡೆಯಬಹು ದು. ಸರಕಾರವು ಅಗತ್ಯವುಳ್ಳ ಹಣವನ್ನು ಸಾಲ ರೂಪವಾಗಿಯಾಗಲೀ, ಗ್ರೇಂಟು ರೂಪ ವಾಗಿಯಾಗಲೀ ಕೊಡಬೇಕಾಗಿದೆ. ಅಗತ್ಯ ವುಳ್ಳ ಜನರನ್ನು ಸಂಪಾದಿಸಿಕೊಂಡು ಈ ಬೇ ಸಾಯವನ್ನು ನಡಿಸಿಕೊಂಡು, ಉತ್ಪತ್ತಿಯ ನ್ನು ಸಂಗ್ರಹಿಸಿ, ಸರಕಾರಕ್ಕೊಪ್ಪಿಸುವದು ಈ ಸಂಘದ ಮುಖ್ಯ ಕರ್ತವ್ಯ. ಇದರ ವಿವರ ಗಳನ್ನು ನುರಿತವರು ಸಿದ್ಧಪಡಿಸುವದಕ್ಕಿಂ ತಲೂ ಆದನ್ನು ನಡಿಸುವ ಯೋಗ್ಯತೆಯ ವರು ಮುಂದೆ ಬಂದರೆ ಮಾತ್ರ ಇಂತಹ ಯೋಜನೆಗಳು ಯಶಸ್ವಿಯಾಗಿ ಉದ್ದೇಶವು ಕೈಗೂಡುವನು.

ಆಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ, ಎದೆ ನೋವು,ಛಾಯಗಳು, ಜಾಪುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ,ಮೊಡಿನೆ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ.

REGD

ಮುಳುಕಡ್ಡಿ ಮದ್ದಾನಮ್ಮಲ್ಲಿ ಸಿಕ್ಕುತ್ತದೆ.

ಆಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತೆ.

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chairman: **Sri. M. C. T. M. Chidambarma Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OGE:FH
United India Life Building,
, MADRAS

ಕಾಂಗ್ರೆಸ್ ಸದಸ್ಯರಾಗಿ ಸೇರಲು ವಿನಂತಿ.

ಅಕ್ಟೋಬರ 31 ಕೊನೆಯ ತಾರೀಕು

ಕಾಂಗ್ರೆಸ್ಸಿನ ಹೊಸ ಘಟನೆಯ ಮೇರೆಗೆ ಪ್ರತಿ ಐದು ಸಾವಿರ ಜನಸಂಖ್ಯೆಯ ಕ್ಷೇತ್ರದ ಲ್ಲಿ ಒಂದೊಂದು ಕಾಂಗ್ರೆಸ್ ಪಂಚಾಯತು ಸ್ಥಾಪಿಸಲ್ಪಡಬೇಕಾಗಿದೆ. ಮತ್ತು ಕಡಮೆ ಯೆಂದರೆ ಶೇ. 8ರಷ್ಟರ ಪ್ರಾಯಸ್ಥ ಜನರು ಸದ್ರಿ ಕ್ಷೇತ್ರದಿಂದ ಕಾಂಗ್ರೆಸ್ ಸದಸ್ಯ ರಾಗಿ ಸೇರಬೇಕಾಗಿದೆ. ಹೀಗೆ ಸೇರಿಸಲ್ಪ ಟ್ಟ ಸದಸ್ಯರು ತಮ್ಮ ಪಂಚಾಯತನ್ನು ಆರಿಸ ಬೇಕಾಗಿದೆ. ಈ ಪಂಚಾಯತದಾರರೇ ಅಖಿ ಲ ಭಾರತ ಕಾಂಗ್ರೆಸಿನ ಪ್ರತಿನಿಧಿಗಳನ್ನು ಆರಿಸುವ ಮತದಾರರಾಗಿರುತ್ತಾರೆ. ಇ ದು ಹೊರತು ಅನುನಿತ್ಯ ಯಾವುದಾದರೊಂ ದು ರೀತಿಯ ವಿಧಾಯಕ ಕಾರ್ಯಕ್ರಮವ ನ್ನು ಮಾಡಿ ಪ್ರತಿಜ್ಞೆಗೆ ಸಹಿಹಾಕಿ, ಸಕ್ರಿಯ ಸದಸ್ಯರಾಗುವವರೂ ಕಾಂಗ್ರೆಸ್ ಪಂಚಾಯ ತದ ಸದಸ್ಯರಾಗುತ್ತಾರೆ. ಇಡೀ ಜಿಲ್ಲೆಯಲ್ಲಿ ಹ ಲವು ಕಡೆ ಕಾಂಗ್ರೆಸ್ ಪಂಚಾಯತುಗಳು ಇ ಷ್ಟರಲ್ಲೇ ಸ್ಥಾಪಿಸಲ್ಪಟ್ಟಿವೆ. ಈ ಪಂಚಾಯತು ಗಳೂ, ಸರ್ಕಲ್ ಕಾಂಗ್ರೆಸ್ ಕಮಿಟಿಯವ ರೂ, ಮತ್ತು ಇತರ ಕಾಂಗ್ರೆಸ್ ಕೆಲಸಗಾರ ರೂ ಜಿಲ್ಲೆಯಲ್ಲಿ ಈ ಸಲ ಅತೀ ಹೆಚ್ಚಿನ ಕಾಂ ಗ್ರೆಸ್ ಸದಸ್ಯರನ್ನು ಸೇರಿಸುವಂತೆ ಪ್ರಯತ್ನ ಮಾಡಬೇಕಾಗಿ ವಿನಂತಿ.

21 ವರ್ಷ ಪ್ರಾಯ ಬಂದ ಪ್ರತಿಯೊಬ್ಬ ಸ್ತ್ರೀ ಪುರುಷರೂ ಯಾವ ತರದ ಚಂದಾ ಹ ಣವನ್ನಾದರೂ ತೆರದೆ ಕಾಂಗ್ರೆಸ್ ಸದಸ್ಯರಾ ಗಬಹುದು. ಆದುದರಿಂದ ಜಿಲ್ಲೆಯ ಮಹಾ ಜನರು ಕಾಂಗ್ರೆಸ್ ಸದಸ್ಯರಾಗಿ ಸೇರಿ ಹ್ರೋ ತ್ಸಾಹಿಸಬೇಕಾಗಿ ವಿನಂತಿ. ಸದಸ್ಯತನದ ಪು ಸ್ತಕಗಳನ್ನು ಪ್ರತಿ ಸರ್ಕಲ್ ಕಾಂಗ್ರೆಸ್ ಕ ಮಿಟಿಯಿಂದ ಪಡಕೊಳ್ಳಬಹುದು.

ಕಾಂಗ್ರೆಸಿನ ನಾಲ್ಕಾಣೆ ಸದಸ್ಯತನವು ತೆಗೆ ದು ಹಾಕಲ್ಪಟ್ಟಿರುವುದರಿಂದ ಕಾಂಗ್ರೆಸ್ ಫಂ ಡಿಗಾಗಿ ರೂಪಾಯಿ 1/-ರ ಸಹಾಯಧನವ ನ್ನು ಪಡೆಯುವ ನಿರ್ಣಯವನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಮಾಡಿ ರುತ್ತದೆ. ಆದುದರಿಂದ ಕಾಂಗ್ರೆಸಿನ ಹಿತಚಿಂ ತಕರೂ ಮತ್ತು ಅನುಕೂಲವಿರುವ ಕಾಂ ಗ್ರೆಸ್ ಸದಸ್ಯರೂ ಆಧಿಕೃತ ರಶೀದಿ ಪ ಡೆದು ಈ ಸಹಾಯ ಹಣವನ್ನು ಕೂಡಾ ಕೊ ಟ್ಟು ನೆರವಾಗಬೇಕಾಗಿ ಪ. ಕ. ಜಿಲ್ಲಾ ಕಾಂ ಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ವಿನಂ ತಿಸುತ್ತಾರೆ.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ.

ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ಶುಭ್ರ ಮಾಡುತ್ತದೆ.

ವಿಳಾಸ:—

ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ್, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

13-10-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉದಯಿಸುವ ಹೊರಡುವ ಕನ್ನಡ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 2

NAVAYUGA WEEKLY Post Box No. 22 UDIPI, S. K.

Vol 30 No. 7

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮುಂಗಳೂರಲ್ಲಿ ಸ್ಥಾಪಿತವಾದದ್ದು

ಈ ಗಾಂಧೀ ಸ್ಮರಣೆ—

ಗಾಂಧೀಜಿಯ 81ನೇ ಜನ್ಮದಿನಾಚರಣೆಯು ದೇಶದ ಮೂಲೆ ಮೂಲೆಗಳಲ್ಲೂ, ವಿದೇಶಗಳ ದೊಡ್ಡ ದೊಡ್ಡ ಪಟ್ಟಣಗಳಲ್ಲೂ ನಡೆದ ದಿವಸ, ನಾಯಕನಿಂದಾರಂಭಿಸಿ, ಸಾಮಾನ್ಯನ ವರೆಗಿನವರೆಲ್ಲರ ಬಾಯಿಯಿಂದ ಹೊರಟಿದ್ದಿದ್ದ ಗಾಂಧೀ ಕತ್ಪ ಗಳು, ಅಂಶದಷ್ಟಾದರೂ ಕಾರ್ಯತಃ ಎಲ್ಲಿಯಾದರೂ ತೋರಿಬರುತ್ತಿವೆಯೆ? ಗಾಂಧೀ ವಚನೆಗಳನ್ನು ಪಠಿಸುವಷ್ಟು ಸುಲಭವಾಗಿ ಗಾಂಧೀ ವರ್ತನೆಗಳನ್ನು ಅನುಕರಿಸುವದಸಾಧ್ಯವಾದ್ದರಿಂದ, ತಮಗೆ ಸಾಧ್ಯವಿದ್ದುದನ್ನು ಮಾತ್ರ ಎಲ್ಲರೂ ಮಾಡಿದ್ದಾರೆಂದೇ ಇದರ ತಾತ್ಪರ್ಯ.

ಗಾಂಧೀಜೀ ಈಗ ನಮ್ಮ ನಡುವೆ ಪ್ರತ್ಯಕ್ಷ ಇಲ್ಲವಾದುದರಿಂದ ಪೂರ್ವ ಶಕ್ತಿಮದಸ್ಸು ಅಂತರವುಳ್ಳ ಭಿನ್ನ ಮನೋವೃತ್ತಿಗಳ ಕಾಂಗ್ರೆಸಿಗರಿಂದಾರಂಭಿಸಿ, ಕಮ್ಯೂನಿಸ್ಟರ ವರೆಗಿನ ಎಲ್ಲಾ ರಾಜಕೀಯ ಪಕ್ಷಗಳವರು ಮತ್ತು ಎಲ್ಲಾ ವರ್ಗದ ಜನರು ಇಂದು ತಮಗೆ ಬೇಕಾದಾಗಬಲ್ಲಾ ನಿರಾತಂಕವಾಗಿ ಗಾಂಧೀಜಿಯ ನಾಮಜಪನೆ ಮಾಡುತಿದ್ದಾರೆ. ಮಿಕ್ಕ ವಿಷಯಗಳ ಮಾತು ಹಾಗಿರಲಿ-ಇಂದು ಗಾಂಧೀಜೀಯಿರುತಿದ್ದರೆ ಜನತೆಯ ಈ 'ಘೋರ್ಜರ' ಅಭ್ಯಾಸವನ್ನು ನಿಲ್ಲಿಸಿ ಹೃದಯ ಶುದ್ಧೀಕರಣಗೊಳಿಸುವುದಕ್ಕಾಗಿಯೇ ಅವರುಪ್ರಾಣಾವಧಿಉಪವಾಸ ಕೈಕೊಳ್ಳುತ್ತಿರಲಿಲ್ಲವೆ? ಬಂಗಾಳ, ಮದ್ರಾಸ್, ಮತ್ತು ಅನುಕ್ರಮವಾಗಿ ಪ್ರತಿಯೊಂದು ಕಡೆಯಲ್ಲೂ ಒಂದೊಂದು ಬಾರಿ ಆಮರಣಾಂತ ಉಪವಾಸವ್ರತದ ಮೂಲಕ ಗಾಂಧೀಜೀ ತನ್ನ ಪ್ರಾಣವನ್ನೇ ಪಣವಾಗಿ ಇಡಬೇಕಾದಂತಹ ಸುಸ್ಥಿತಿಗಳು ಇಂದು ರಾಷ್ಟ್ರದಲ್ಲಿ ಹುಟ್ಟಿಲ್ಲವೆ?

ಜನತೆಯು ಕಾಂಗ್ರೆಸಿನಲ್ಲಿ ಅಧಿಕಾರ ಸ್ಥಾನದಲ್ಲಿರುವವರ ರೀತಿನೀತಿಗಳನ್ನೂ ಅಧಿಕಾರಗಳಲ್ಲಿರುವವರು ಜನತೆಯ ಮಾತುಕೃತಿಗಳನ್ನೂ ನಿಶಿತ ದೃಷ್ಟಿಯಿಟ್ಟು ನೋಡುವುದು ಕಾಣಿಸುತ್ತಿದೆ ಹೊರತು ಅಲ್ಲಿಯ ಅವರೂ ಇಲ್ಲಿಯ ಇವರೂ ಗಾಂಧೀಜೀ ಹೇಳುತ್ತಾ ಬಂದಿದ್ದ ಆತ್ಮವಿಮರ್ಶೆ ಮಾಡಿಕೊಳ್ಳುವುದು ತೋರುತ್ತಿಲ್ಲ. ತಪ್ಪುಗಾರರಾಗಿ ಬೇರೆಯವರನ್ನು ತೋರಿಸಿ, ತಾವು ಸೋಮಾರಿಸುಖಜೀವನ ಕಡೆಸಬೇಕೆಂಬ ಲಾಲಸೆಯೇ ಇಂದು ಎಲ್ಲರಲ್ಲೂ ಹೆಬ್ಬಿದೆಯೆಂಬುದೊಂದಲ್ಲದೆ, ಇದರಲ್ಲಿ ಬೇರಾವ ಅರ್ಥವಿದೆ? ಯಾವ ಗಾಂಧೀ ಅನುಯಾಯಿತ್ವವಿದೆ?

ಆಹಾರ, ಉಡುಗೆ, ಉದ್ಯೋಗ, ವೇತನ ವಿದ್ಯೆ, ಆರೋಗ್ಯ, ಮುಂತಾದ ಜೀವನದ ಪ್ರತಿಯೊಂದು ವಿಭಾಗದಲ್ಲೂ ಗಾಂಧೀಜೀ ಹಾಕಿಟ್ಟಿರುವ ಆದರ್ಶಗಳಿವೆ. ಇಂದು ರಾಷ್ಟ್ರದಲ್ಲಿ ಗಾಂಧೀ ಭಕ್ತರ ಆಡಳಿತವಿದೆಯೆಂದರೂ, ಎಲ್ಲರೂ ಗಾಂಧೀ ವಚನೆ ಮಾಡುತ್ತಿರುವರಾದರೂ ಗಾಂಧೀ ನಿರ್ದೇಶಗಳನ್ನೇ ಮುಂದಿಟ್ಟುಕೊಂಡು ಹೋಪ ವಿಭಾಗದ ಕಾರ್ಯವಾಗುತ್ತಿರುವುದು ಎಲ್ಲಿಯಾದರೂ ಕಾಣಿಸುತ್ತಿದೆಯೆ? ಗಾಂಧೀಜೀ ಇಲ್ಲದಿರುವ ದೆಸೆಯಿಂದ ಪರಿಸ್ಥಿತಿ ಹೀಗಾಯಿತೆ? ಅಥವಾ ಗಾಂಧೀ ತತ್ವಗಳನ್ನು ಈ ರೀತಿ ಬಲಿಗೊಳ್ಳಲಿರುವ ವಾತಾವರಣವು ಸ್ವಾಭಾವಿಕವಾಗಿ ಶುಭಮತಃ ಗಾಂಧೀಜಿಯನ್ನು ಬಲಿ ಪಡೆಯುತೆ?

'ಭಾರತದಲ್ಲಿ ನಿರ್ಮಲಚಿತ್ತಮತ್ತು ಭದ್ರತೆಯನ್ನು ಸ್ಥಾಪಿಸಿ, ಆ ಮೇಲೆ ವಾಕಿಸ್ತಾನದಲ್ಲಿರುವ ಮುಸ್ಲಿಮೇತರರ ರಕ್ಷಣೆಗಾಗಿ ಜೀವಾವಧಿ ಪಾಕಿಸ್ತಾನದಲ್ಲೇ ನೆಲಸಬೇಕು'ಎಂಬುದು ಗಾಂಧೀಜೀಯಲ್ಲಿ ಕೊನೆಗಾಲದಲ್ಲಿದ್ದ ಬಯಕೆ. ಅಂತಹ ಗಾಂಧೀಜೀಯನ್ನು ಆಕಸ್ಮಾತ್ತಾಗಿ ಇಹಲೋಕದಿಂದಲೇ ಬೇಕೊಡುವಷ್ಟೂ ಕಲ್ಮಷ ಭಾರತಲ್ಲಿದ್ದಾಗ-ಮಂತ್ರಿಗಳೂ ಅದು ಅವ್ಯಕ್ತವಾಗಿ ಹಾಗೂ ವಿಧಿಃಕಾರಗಳಿಂದ ಇರುವಾಗ-ಒಂದೊಮ್ಮೆಗೆ ಗಾಂಧೀಜೀಇರುತಿದ್ದರೂ ಅವರನ್ನು ಇಲ್ಲೇಗಿಡಿಸಿಟ್ಟು ನವೆಯಿಸುತ್ತಿದ್ದವೆಹೊರತು, ಅವರ ಹೊರೆಯಿಳಿಸಿ, ಎಂದಾದರೂ ವಿಮೋಚನೆ ಮಾಡುತಿದ್ದೆನೆ?

ಹಾಗಾದರೆ ಗಾಂಧೀಜೀ ಮಾನವಾತೀತ ಆದರ್ಶವಾದಿಯಾಗಿ, ವ್ಯವಹಾರಕ್ಕೆಟುಕದ ಹೊಟ್ಟೆ ದೂರದ ಮೇಲಂತಸ್ತಿನ ಭೂದೇವನಾಗಿದ್ದರೇ? ಅಥವಾ ನಾವು ನಮ್ಮ ಭಾವನೆ, ಆಚರಣೆಗಳಲ್ಲಿ ಕೆಳಗಿಳಿಯುತ್ತಾ ಹೋಗಿ ಗಾಂಧೀಜೀಯ ವ್ಯವಹಾರ್ಯಾದರ್ಶ ತತ್ವಗಳಿಂದ ದೂರವಾಗಿರುವೆವೋ? ಜೆಚ್ಚಿನೆಂದ ಎರಡನೆಯದೇ!

ಗಾಂಧೀಜೀ ಅಸಾಮಾನ್ಯ ಆದರ್ಶವಾದಿ-ಸ್ವತಃ ಆದರ್ಶಜೀವಿ-ಆಗಿದ್ದರು. ಆದರೆ ಸರ್ವಸಾಮಾನ್ಯರಿಗೂ ಅನುಕರಿಸಲಾಗುವ ಅಂಶಗಳು ಅವರ ಆದರ್ಶಗಳಲ್ಲಿ ಇರದಿದ್ದಲ್ಲಿ ಅವರೂ ಜನತೆಯ ಪಾಲಿಗೆ ಯಜ್ಞಿ, ಮುನಿಗಳಂತಾಗುತಿದ್ದರೇ ಹೊರತು ರಾಷ್ಟ್ರಪಿತ, ಜನನಾಯಕನಾಗುತಿದ್ದಿಲ್ಲ. ಎಲ್ಲರೂ ಮಹಾತ್ಮಾ ಗಾಂಧಿಯಾಗಲಾರದಿರೂ, ಎಲ್ಲರಿಗಾಗುವ ನಿರ್ದೇಶಗಳು ಮಹಾತ್ಮಾ ಗಾಂಧಿಯವರವಿವೆ. ಅವುಗಳನ್ನು ಹೇಳುವವರಿದ್ದಾರೆ ಹೊರತುಕೇಳುವವರಿಲ್ಲ ವೆಂದಾದುದರಿಂದಲೇ ಪರಿಸ್ಥಿತಿಹೀನವಾಗಿದೆ.

ಕಾಲಸ್ಥಿತಿ, ಆಚರಿಸುವವರ ಯೋಗ್ಯತೆ ಮತ್ತು ಪರಿಣಾಮಗಳನ್ನು ಯೋಚಿಸಿಕೊಳ್ಳದೆ, ಕೇವಲ ತನ್ನ ಆದರ್ಶಗಳಿಗನುಸಾರವಾಗಿ ಮಹಾತ್ಮಾಜೀ ಯಾವ ಸಂದರ್ಭದಲ್ಲೂ ಯಾವುದನ್ನೂ ನಿರ್ದೇಶಿಸಿದುದಿಲ್ಲ. ಇದನ್ನು ದೃಷ್ಟಿಪಥದಲ್ಲಿಟ್ಟುಕೊಂಡು, ಈ ಕಾಲದಲ್ಲಿ ಗಾಂಧೀಜೀಯಿರುತಿದ್ದರೆ ಇಂದಿನ ವಿವಿಧ ಸವಸ್ಯೆಗಳ ಕುರಿತು ಅವರೇ ನೇತನ್ನು ಮಾಡಿಸುತಿದ್ದರೆಂಬುದನ್ನು ಊಹಿಸಿಕೊಂಡು, ಅದರಂತೆ ವರ್ತಿಸುವುದು ಎಲ್ಲರಿಗೂ ಸಾಧ್ಯ.

ಎಂತಹ ಕಠಿಣ ಸನ್ನಿವೇಶ, ಆಪತ್ತಾಯವಿದ್ದರೂ ಸಾಧ್ಯವಾದಷ್ಟು ಇಲ್ಲನೇ ಅಪರಾಧ ಬಲಲ್ಲಾದರೂ ಗಾಂಧಿಜೀ, ತಾನು ತಪ್ಪಿಬಿದ್ದುದೆಲ್ಲಿ ಮತ್ತು ಮಾಡಬೇಕಾದುದೇನ್ನು ಎಂಬುದಿಂದರ ಕಡೆಗಲ್ಲದೆ ಬೇರೆಯವರ ಬೋಪಬೋಪಗಳಿಗೆ ಪ್ರಾಮುಖ್ಯತೆಯನ್ನು ಕೊಡುತ್ತಿರಲಿಲ್ಲ. ಇಂದು ಅಧಿಕಾರ ಸ್ಥಾನದಲ್ಲಿರುವವರಿಂದಾರಂಭಿಸಿ ಬೇಕಾಕಾರ ಸ್ಥಾನದಲ್ಲಿರುವವರ ವರೆಗಿನ ಎಲ್ಲರೂ ಈ ಗಾಂಧೀ ವಿಧಾನವೊಂದನ್ನಂಗೀಕರಿಸಿಕೊಂಡರೆ ಅಷ್ಟೇ ಸಾಕು-ವಾತಾವರಣ ಪೊಮ್ಮೆಗೇ ಶುಚಿಯಾದೀತು.

ಪ್ರಥಮತಃ ತನ್ನ ಮನಸ್ಸಾಕ್ಷಿಯನ್ನು ಶುದ್ಧವಾಗಿಟ್ಟುಕೊಂಡು, ಆ ಮೇಲೆ ಆ ಮನಸ್ಸಾಕ್ಷಿಯ ಪ್ರೇರಣೆ ವಿನಹಾ ಬೇರಾವುದನ್ನೂ ಗಣಿಸದೆ ಗಾಂಧೀಜೀ ವರ್ತಿಸಿದ್ದರು. ಇದ್ದೆ ಸ್ಥಿತಿಯಲ್ಲಿ, ಇಂದಿನ್ನು ಶಕ್ತಿಯಿಂದ, ಈ ಮಟ್ಟಿಗೆ ಗಾಂಧಿಜೀಯನ್ನು ಅನುಕರಿಸಲು ಸರ್ವರೂ ಪ್ರಯತ್ನಿಸಿದರೆ ಎಲ್ಲಾ ಗಲಿಬಲಿಗಳೂ ನಿಂತುಹೋದಾವು.

ತಾನೊಬ್ಬ ಸಾಧಕನೆಂದಲ್ಲದೆ ಸಂಪೂರ್ಣನೆಂದು ಗಾಂಧೀಜೀ ನೆನೆಸಿದ್ದಿಲ್ಲ. ಅಪ್ಪು ಅಗ್ರಗಾಮಿಯಾಗಿದ್ದ ಅವರೇ ಹಾಗಿದ್ದ ಮೇಲೆ ಇನ್ನೂ ಹಿಂದಿರುವ ನಾವು ಕಲಿಯಬೇಕಾದುದು ಮತ್ತು ಮಾಡಬೇಕಾದುದು ಬಹಳವಿವೆ ಎಂದು ನೆನಸಿಕೊಂಡು ಕಾರ್ಯಪ್ರವೃತ್ತರಾದೆವೆಂದರೆ ಭವಿಷ್ಯ ಭದ್ರವಾದೀತು.

ಶಿಸುಸಹಜ ಸರಳ ಹೃದಯ ಶುದ್ಧ ಹೃದಯವನ್ನು-ಯುವಕಸಹಜ ಧೈರ್ಯವನ್ನು-ಮುದುಕಸಹಜ ಅನುಭವವನ್ನು ಎಂದೆಂದಿಗೂ ಮತ್ತು ಪ್ರತಿಯೊಂದು ಸಂದರ್ಭದಲ್ಲೂ ಉಳಿಸಿಕೊಂಡುದೇ ಗಾಂಧೀಜೀಯ ವೈಶಿಷ್ಟ್ಯ. ಅವರ ಇಂತಹ ಇರಸ್ತ್ರಿಕ ಕೂಡಾ ಅತ್ಯಂತ ಮೇಲ್ಮಟ್ಟದ್ದಿದ್ದು, ನಾಮಾನ್ಯರು ಒಮ್ಮೆಗೇ ಹೆತ್ತಲಾಗುವಂತಹದಲ್ಲವಾದರೂ, ಪ್ರತಿಯೊಬ್ಬನೂ ತನ್ನ ಶಕ್ತ್ಯನುಸಾರವಾಗಿ ಈ ಮಾದರಿಯ ಇರಸ್ತ್ರಿಕೆಯಲ್ಲಿಸಿಕೊಳ್ಳಲು ಪ್ರಯತ್ನಿಸಿದರೆ ಎಲ್ಲಾದೌರ್ಬಲ್ಯಗಳೂನಿವಾರಣೆಗೊಂಡು ಜನತೆ ಸಶಕ್ತವಾಗುವದು.

ಗಾಂಧೀಜೀಯನ್ನು ಮಾರ್ತಿಯ ಮೂಲಕ, ಮೊತನ ಮೂಲಕ ಚಿತ್ರಿಸಿಕೊಳ್ಳುವ ಬದಲಿಗೆ, ಮೇಲಿನ ವಿಧಾನಾನುಸಾರವಾಗಿ ವ್ಯಕ್ತಿಯೊಬ್ಬರೂ ತಮ್ಮನ್ನು ತಾವು ತೀರಿಸಿಕೊಳ್ಳಲು ಶಕ್ತ್ಯಾನುಸಾರ ಪ್ರಯತ್ನಿಸಿದರೆ, ಅಷ್ಟರಿಂದಲೇ ಆಗಬೇಕಾದುದೆಲ್ಲವೂ ಆದಂತೆ!

ವಿಮೆಮಾಡಲಿಕ್ಕೆ ಯಾ ಕ್ಲಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಪಂಡಿತ ಜವಾಹರಲಾಲ ನೆಹರುಗಳು ಇದೇ ತಾ ೬ನೇ ಪೂರ್ವಾಹ್ನ ಢಿಲ್ಲಿಯಿಂದ ಹೊರಟು, ಪೂನೆಗೆ ಬಂದು, ಅಲ್ಲಿಂದ ಬೊಂಬಾಯಿಗಾಗಮಿಸಿ, ತಾ. 7ನೇ ಅಪರಾಹ್ನ 3.30ಕ್ಕೆ ಅಮೆರಿಕಕ್ಕಾಗಿ ವಿಮಾನಹತ್ತಿದರು. ಸ್ವತಃ ಪಂಡಿತಜೀ ಮತ್ತು ಸ್ವತಂತ್ರ ಭಾರತದ ಪ್ರಧಾನಮಂತ್ರಿ ಅಮೆರಿಕಕ್ಕೆ ಭೇಟಿಕೊಡುವುದು ಇದೀಗ ಪ್ರಥಮ್ಬಾರಿ. ಅಮೆರಿಕಾಧ್ಯಕ್ಷ ಟ್ರುಮೆನರ ಆಮಂತ್ರಣಾನುಸಾರವಾಗಿ ಭಾರತ ಪ್ರಧಾನಿ ಪಂಡಿತ ನೆಹರುಗಳ ಅಮೆರಿಕ ಸಂದರ್ಶನವೆಂಬುದು ಕೆಲವು ತಿಂಗಳ ಹಿಂದಲೇ ನಿಶ್ಚಿತವಾಗಲ್ಪಟ್ಟಿದ್ದ ವಿಷಯ; ಲೋಕದ ರಾಜಕಾರಣಗಳಲ್ಲಿ ಅಸಕ್ತಿ, ಮತ್ತು ಭಾರತೀಯರಲ್ಲಿ ನಿರೀಕ್ಷೆ, ಹೆಗ್ಗಳಿಕೆಗಳನ್ನು ನಿರ್ಮಿಸಿದ್ದ ಸಂಗತಿ. ಪ್ರಪಂಚದ ಮುತ್ಸದ್ದಿಗಳ, ಭಾಷಣಗಾರರ, ಕಲಾವಿದರ ಸ್ವಾಗತಕ್ಕೆ ಹೆಸರು ಪಡೆದ ಅಮೆರಿಕ ಶ್ರೀಗ ಸಹೃದಯೀ ನಾಗರಿಕಂಲ್ಲಿ ಲೋಕಾಗ್ರಗಣ್ಯನೆಂದು ಕೀರ್ತಿ ಪಡೆದಿರುವ ಪಂಡಿತ ನೆಹರುಗಳು ಹೊಂಟಿದ್ದಾರೆ. ಅಧಿಕಾರಿ ನೆಹರುಗಳಿಗಿಂತ ಸಂಚಾರಿ ನೆಹರುಗಳೇ ವಿಶೇಷಆಕರ್ಷಣೀಯ ವ್ಯಕ್ತಿ. ಅಂಧಾಚಾರ ನಿಷ್ಠೆ, ಅಜ್ಞಾನ ಮತ್ತು ಕಂಟಕ, ಕತ್ತಲೆ ವ್ಯಾಪಿಸಿರುವ ಹಿಂದೀ ವಾತಾವರಣದಲ್ಲಿ ಪಂಡಿತ ನೆಹರುಗಳಂತಹ ವಿಶಾಲ ಹೃದಯ, ಉಚ್ಚ ನಾಗರಿಕ ವರ್ತನೆಗಳ್ಳ ನಾಯಕನು ಅಗಾಗ ತಡೆ ತೊಡಕುಗಳಿಗೀಡಾಗಬೇಕಾಗುವುದು ಸ್ವಾಭಾವಿಕ; ಅವುಗಳೊಡನೆ ಹೋರಾಟ ಕೊಡುವುದರಲ್ಲೇ ತೊಡಗಿಂಬೇಕಾಗುವ ಅಮೂಲ್ಯ ಗುಣಗಳಿಗೆ, ಜಾಗತಿಕರಂಗದಲ್ಲಿ ಝಗ್ಗನೇ ಬೆಳಗಿ ತೋರುವ ಅವಕಾಶವಿರುವುದಿಲ್ಲ. ಆದರೆ ಪಂಡಿತಜೀ ಸಂಚಾರಕ್ಕೆ ಹೊರಟಕೋ– ಅಗ ಅವರ ಉಚ್ಚ ಗುಣ ನಡತೆಗಳೆಲ್ಲಾ ವ್ಯಕ್ತವಾಗಿ ಬೀರುತ್ತಾ ಎಲ್ಲೆಡೆಗೂ ತೋರಿಬರುವವು. ಇಂತಹ ಒಂದು ಸಂದರ್ಭ ಈ ವರೆಗೆ ದೊರೆತಿದ್ದ ಸಂದರ್ಭಗಳಿಗಿಂತ ಹೆಚ್ಚಿನ ಸುಯೋಗ– ಈಗ ಪಂಡಿತಜೀಗೊದಗಿದೆ. ಇಂತಹ ಕೀರ್ತಿ ಸಂಪಾದನೆಗಾಗಿ ಲೋಕದ ಯಾವ ಮೂಲೆಗಾದರೂ ದಿಗ್ವಿಜಯಕ್ಕಾಗಿ ಬೀಳ್ಕೊಡಲಾಗುವ ಓರ್ವ ನಾಯಕ ತನಗಿರುವಂತೆ ಪ್ರಪಂಚದ ಬೇರಾವ ರಾಷ್ಟ್ರಕ್ಕೂ ಇಲ್ಲವೆಂಬುದು ಭಾರತವು ವಿಶೇಷವಾಗಿ ಹೆಗ್ಗಳಿಕೆ ಪಡಬೇಕಾದ ವಿಷಯ. ಪಂಡಿತ ನೆಹರುಗಳ ಮೂಲಕ ಅಮೆರಿಕವು ಭಾರತವನ್ನು ಸಂಯಾಗಿ ತಿಳಿದುಕೊಳ್ಳುವುದು; ಜತೆಯಲ್ಲೇ ಘರ್ಷಣೆ, ಸ್ವಾರ್ಥಗಳಿಂದ ಕದಡಿ ಹೋಗಿರುವ ಇಂದಿನ ವಾತಾವರಣದಲ್ಲಿ ಅನ್ಯಾದೃಶವಾಗಿರುವ ಉಚ್ಚ ಮಾನವೀಯತೆಯೆಂದರೇನೆಂಬುದನ್ನೂ ಅಮೆರಿಕವು ಪಂಡಿತಜೀಯಿಂದ ಅರಿತುಕೊಳ್ಳಬಹುದು. ಇದು ಇನೆರಡು ರಾಷ್ಟ್ರಗಳೊಳಗಿನ ಸಂಬಂಧಕ್ಕೆ ಅನುಕೂಲ ಮಾತ್ರವಲ್ಲ; ವ್ಯಾಪಂಚಿಕ ಶಾಂತಿ ಸಾಧನೆಯ ಮಟ್ಟಿಗೂ ಒಂದಂಶ ಪ್ರಯೋಜನಕಾರಿ. ಭಾರತಕ್ಕಂತೂ, ಲೋಕವ್ಯಾಪೀ ಸುಯಶಸ್ಸು ಗಳಿಸುವ ಹೊಸ ಸುಯೋಗವಿದು; ಕನ್ನ ಲೋಕಾಮೂಲ್ಯ ವಸ್ತುವೊಂದನ್ನು ಪ್ರದರ್ಶಿಸಿ ತೋರಿಸುವ ಸನ್ನಿವೇಶವಿದು.

ವಿದಾಯ ಸಂದೇಶ

ಮರುದಿನ ಮುಂಜಾನೆ ಪೂನಾ, ಬೊಂಬಾಯಿ ಮಾರ್ಗವಾಗಿ ಹೊಂಡಲಿದ್ದ ಪಂಡಿತ ನೆಹರುಗಳು ತಾ. 5ನೇ ರಾತ್ರಿ ನವಢಿಲ್ಲಿಯಿಂದ ಆಯಿಲ ರಾಷ್ಟ್ರಕ್ಕೆ ಆಕಾಶವಾಣಿ ಮೂಲಕ ಬೀಳ್ಕೊಳ್ಳುವ ಸಂದೇಶ ಪತ್ತರು. "ವ್ಯಾಪಾರಿಗಳು ಮತ್ತು ಉದ್ದಿಮೇದಾರರು, ತಾವಾಗಿ ಮುಂದೆ ಬಂದು ಶ್ರಮಬದ್ಧವಾಗಿ ಅಥವಾ ಬೇಕಾಯದೇ ಶೀರವಾಗಿ ಕಾವು ಯುದ್ಧಾವಧಿಯಲ್ಲಿ ಗಳಿಸಿದ್ದ ಯುದ್ಧಲಾಭಗಳ ಸಂಗತಿ ಮತ್ತು ಸಂಪತ್ತಿಗಳನ್ನು ಸರಕಾರಕ್ಕೆ ಒಪ್ಪಿಸಿ, ಆ ಮೂಲಕ ತಮ್ಮ ತೆರಿಗೆರಹಿತ ಆದಾಯಗಳಿಗೆ ತೆರಿಗೆ ಹಾಕಲಾಗುವ ಅವಕಾಶವನ್ನೊದಗಿಸಿ ಕೊಡಬೇಕು. ಹೀಗೆ ಮಾಡುವವರ ಗತಾನುಗತಿಕ ಆಧಾರಗಳಿಗೆ ಶಿಕ್ಷೆಯ ಮಾತಿಲ್ಲ. ಬೇಕಾಯಿದೆಬೇರ ಮುನಾಫೆಗಳ ಸಂಬಂಧದ ಈ ಪ್ರಶ್ನೆಯನ್ನು ಇತ್ಯರ್ಥಿಸಿಕೊಳ್ಳಬಿದ್ದಲ್ಲಿ ವ್ಯಾಪಾರೀ ವರ್ಗಕ್ಕಾಗಲೀ ರಾಷ್ಟ್ರಕ್ಕಾಗಲೀ ಹಿತವಾಗದು" ಎಂದು ವಿಜ್ಞಾಪಿಸಿಕೊಂಡರು. "ಭಾರತ ಸರಕಾರದ 'ತೆರಿಗೆ ತೋಧನಾ ಕಮಿಶನ್'ನ ಅವಗಾಹನೆಗೆ ಸಿಲುಕದಿರುವ ಯುದ್ಧಲಾಭಗಳ ಕುರಿತು ಕರ ಹೇರಲಾಗುವಂತೆ ಸಂಬಂಧಪಟ್ಟವರು ಸ್ವತಃ ಸತ್ಯ ಸಂಗತಿಯನ್ನು ಪ್ರಕಟಪಡಿಸುವಂತಹ ಅವಕಾಶಗಳನ್ನೊದಗಿಸಿ ಕೊಡಲಾಗುವದು" ಎಂದು ಕೇಂದ್ರ ಸರಕಾರದ ಅರ್ಥ ಸಚಿವ ಮಿ. ಜೋನ್ ಮಥಾಯಿಗಳು ಪಾರ್ಲಿಮೆಂಟಿನ ಮುಂದಿಟ್ಟಿದ್ದ ಸೂಚನೆಯ ಪುಷ್ಟೀಕರಣಕ್ಕಾಗಿಯೇ ಪಂಡಿತಜೀ ಮೇಲಿನಂತೆ ಕೇಳಿಕೊಂಡಿದ್ದರು. ಅಂತೆಯೇ ಮೌಲ್ಯ ಭೇದನದ ಪರಿಣಾಮ ಮತ್ತು ಸದ್ಯದ ಸರ್ವಪ್ರಥಮ ಪ್ರಶ್ನೆಯಾಗಿರುವ ಅಧಿಕಾಧಾರೋತ್ಪನ್ನಗಳ ಕುರಿತೂ ಪಂಡಿತಜೀ ರಾಷ್ಟ್ರಕ್ಕೆ ಹಿತೋಪದೇಶ ಕೊಡುತ್ತಾ, ಎಲ್ಲರೂ ಪರಿಸ್ಥಿತಿಗನುಸಾರವಾಗಿ ಹೊಟ್ಟೆಯನ್ನು ಬಿಗಿಹಿಡಿದು ಆಹಾರ ಧಾನ್ಯಗಳ ಅಧಿಕಾಧಿಕೋತ್ಪನ್ನಕ್ಕೆ ದುಡಿಯಬೇಕೆಂದರು. ಆಹಾರ ಸಮಸ್ಯೆಯ ನಿವಾರಣೆಗಾಗಿ ಪ್ರಾಂತಿಕ ಸರಕಾರಗಳು ಕೈಕೊಂಡಿರುವ ಕಾರ್ಯಗಳಿಗಾಗಿ ಸಮಾಧಾನ ವ್ಯಕ್ತ ಪಡಿಸಿದರು. "ಬೇರಾವ ಸಾಮಾಗ್ರಿಯಿಲ್ಲದಿದ್ದರೂ ಬದುಕಬಹುದು; ಆಹಾರವಿಲ್ಲದೆ ಅಸಾಧ್ಯ. ಭಾರತದ ಮಿಲಿಯಾವಧಿ ಮಂದಿಗೆ ಕೊಸ ವಿಷಯವೇನೂ ಆಗಿರದ ಅಲ್ಪಾಹಾರ ನೇವನೆಯನ್ನು ಅಭ್ಯಾಸ ಮಾಡಬೇಕಾದ ಕಾಲವಿದು. ತಮ್ಮ 'ನೈತ್ಯಜೀವನ' ಸಾಗಿಸುವ ಕಾಲವಿದಲ್ಲವೆಂದು ಶ್ರೀಮಂತರು ಹಾಗೂ ಅನುಕೂಲ ಸ್ಥರು ತಿಳಿದುಕೊಳ್ಳಬೇಕು. ಸತ್ಯಾಗ್ರಹ ಸಂಭ್ರಮಗಳೆಲ್ಲವನ್ನೂ ನಿಲ್ಲಿಸಿಬಿಟ್ಟು ಆಹಾರವನ್ನು ಉಳಿಸಬೇಕು. ಆಹಾರದ ಒಂದೇ ಒಂದು ಅಗಳನ್ನು ಅನಾವ್ಯಯ ಮಾಡುವವರು ಕೂಡಾ ಈಗ ಅಪರಾಧಿಗಳಾಗುತ್ತಾರೆ. 1951ರಿಂದ ಹೊರಗಿನಿಂದಾವ ಆಹಾರ ಧಾನ್ಯಗಳನ್ನೂ ತರಿಸಿಕೊಳ್ಳಬಾರದೆಂದು ಸರಕಾರವು ನಿರ್ಧರಿಸಿದೆ. ಈ ಪಾಯಿದೆ ಕೂಡಾ ಒಂದು ವರುಷ ಹೆಚ್ಚಾಯಿತೆಂದು ನನಗನ್ನಿಸಿದೆ. ಜನರು ತಮ್ಮ ಅಭ್ಯಾಸಗಳಿಗೆ ನೆರೆ ಬಿದ್ದಿರಕೂಡದು. ರಾಷ್ಟ್ರದ ಹಿತ ದೃಷ್ಟಿಯಿಂದ ಅಭ್ಯಾಸಗಳನ್ನು ಬದಲಾಯಿಸಿಕೊಳ್ಳಬೇಕು" ಎಂದು ಒತ್ತಿ ಹೇಳಿ, ರಾರ್ಮಿನೆಗಳಲ್ಲಾ ಅಧಿಕೋತ್ಪನ್ನಗಳಾಗಬೇಕೆಂದರು.



ಪಂಡಿತಜೀಯು–

ಢಿಲ್ಲಿ ಬಿಡುವಾಗ—

ತಾ ೬ನೇ ಮುಂಜಾನೆ 6.30 ತಾಸಿಗೆ, ಅಮೆರಿಕಕ್ಕಾಗಿ ವಿಮಾನ ಹತ್ತಲು ಪಂಡಿತ ನೆಹರುಗಳು ನವಢಿಲ್ಲಿಯ ಪಾಲಾವ್ ವಿಮಾನ ನಿಲ್ದಾಣಕ್ಕೆ ಬರುವಾಗ ಅಲ್ಲಿ ಪರೇಲ್, ರಾಜೇಂದ್ರ ಪ್ರಸಾದ್, ಕೇಂದ್ರ ಮಂತ್ರಿಗಳು, ಆಸಫ್ ಅಲಿ, ಗೋವಿಂದ ವಲ್ಲಭ ಪಂತ್, ಬಿ. ಸಿ. ರೋಯಿ, ಭೀಮಸೇನ್ ಸಚ್ಚಾರ್, ಎಟ್ಟಳ್ಳಿ, ಠೇರ್ ಅಬ್ದುಲ್ಲಾ ಮತ್ತು ಫೆಟ್ನಾ ಸಮಿತಿ ಸದಸ್ಯರು, ವಿದೇಶಗಳ ರಾಯಭಾರಿ ಕಚೇರಿ ಪ್ರತಿನಿಧಿಗಳು, ಹಿಂದೀ ಸೇನಾ ವಿಭಾಗಗಳ ಅಧಿಕಾರಿಗಳು, ಗವರ್ನರ್ ಜನರಲರ ಸೇನಾ ಕಾರ್ಯದರ್ಶಿ ಮತ್ತಿತರರು ಹಾಜರಿದ್ದರು. ನಿಲ್ದಾಣಕ್ಕೆ ಬಂದೊಡನೆ ಪಂಡಿತಜೀಗೆ ಎಳನೇ ೨೫ ಕೂತ್ ದಳ ಮತ್ತು ಭಾರತ ವಿಮಾನ ದಳದ ಜತೆ 'ಗೌರವ ವಂದನೆ' ನಡೆಯಿತು. ಪಂಡಿತರು ಜೆನೆಕಲೆಟ್ ಬಣ್ಣದ ಉದ್ದ ನಿಲುವಂಗಿ ಮತ್ತು ಪದ್ಮಶಿಯ ಗಾಂಧೀ ಟೋಪಿ ತೊಟ್ಟಿದ್ದರು. ನಿಲುವಂಗಿ

Retailers' Choice:

MILL CLOTH - Unlimited choice of Qualities and Varieties to suit every one's taste. All Varieties in Stock.

SILKS - Just unpacked— Wide range of selection— at reduced rates Finest Products of the Famous Producers

FOREIGN CLOTH - Imported Varieties— Noted for their uniform and unvarying quality— Yet Prices within the reach of one and all.

All varieties are avaliable in many beautiful shades and designs

Visit will convince you—

VITHALJI & CO., LTD.

The Pioneer Cloth Dealers of the District

MANGALORE.

SCENES OF LOVE

The Bed Room Scenes & other Private Things.....in the Real Camera Photos of European Beautiful Girls are so clear that everybody who sees, feels himself in the Heaven. English Make. Quality Guaranteed. Big Album (Special) Rs 5-4-0. Small Rs. 3-4-0. Postage As. 12/- extra.

FRENCH ART HOUSE, Halka No. 76, DELHI.

ಅಮೆರಿಕ ಪ್ರಯಾಣ.

ಯ ಗುಂಡೀ ತೊತಿನಲ್ಲಿ ಕಾಶ್ಮೀರದ ಕೆಂಪು ಹುಪ್ಪಟ್ಟೊಂದನ್ನು ಸಿಕ್ಕಿಸಿಕೊಂಡಿದ್ದರು. ಪಂಡಿತರ ಹಣೆಯಲ್ಲಿ ಜಯಸೂಚಕ ತಿಲಕ ರಾಜಸುತಿಕ್ತು. ಅವರ ಜತೆಯಲ್ಲಿ ಅಳಿಯ ಶ್ರೀ ಫಿರೋಝ್ ಗಾಂಧಿ ಮತ್ತು ಇಬ್ಬರು ಮೊಮ್ಮಕ್ಕಳೂ ಬಂದಿದ್ದರು. ನೆರೆದಿದ್ದವರುಹಾಕಿದ ಹುಪ್ಪಹಾರಗಳಿಂದಲೂ ಚೆಲ್ಲಿದ ಹೂಗಳಿಂದಲೂ ಅವರ ನಗುಮೊಗಕ್ಕೆ ಹೂಪರದೆ ಬಿದ್ದಂತಾಗಿತ್ತು. ಎಲ್ಲರಿಗೂ ನಗುನೊಗದ ಹಸ್ತಲಾಘವ ಕೊಡುತ್ತಾ ಚಿಕಿತ ಪ್ರಶ್ನೆಗಳನ್ನು ಹಾಕಿ ಶೇರ್ ಅಬ್ದುಲ್ಲಾಂ ಕೈ ಕುಲುಕುವಾಗ "ನಾನು ಕಾಶ್ಮೀರಿಂದ ಕುಸುಮವನ್ನೂ ಯ್ಯತಿದ್ದೇನೆ, ನೋಡಿ" ಎಂದರು. ಕೊನೆಗೆ ವಿಮಾನ ಹತ್ತುವ ಹೊತ್ತು. ಆಗ ಪಂಡಿತ ಜವಾಹಿಂಲಾಲರು ಮತ್ತೊಮ್ಮೆ ಸರ್ದಾರ್ ಪಟೇಲರ ಬಳ ನಾರಿದರು. ಇಬ್ಬರು ನಾಯಕರೂ ಗಾಢಾಲಿಂಗನ ಮಾಡಿಕೊಂಡರು. ಆ ಮೇಲೆ, ವಿಮಾನ ಹತ್ತಿ ಸಾವಕಾಶ ಹಿಕ ವಂದನೆ ಕೊಟ್ಟಾಗ ಅವರ ಮೊಮ್ಮಕ್ಕಳಿಬ್ಬರು ವಿಮಾನದೇಣಿಯ ಬಾಡಕ್ಕ ಹೋಗಿ ಅಜ್ಜನಿಗೆ ವಂದನಾ ಕೈ ಗಳನ್ನೆತ್ತಿದರು. ಪಂಡಿತಜೀ ಉತ್ಸಾಹಗೊಂಡು ಪ್ರೇಮಪೂರ್ಣ ಮರು ವಂದನೆ ಕೊಟ್ಟರು. ಮುಂಜಾನೆ 7 ತಾಸಿಗೆ ಸರಿಯಾಗಿ ಢಿಲ್ಲಿಯ ವಾಲಮ್ ನಿಲ್ದಾಣದಿಂದ ಹೊರಟ ಪಂಡಿತಜೀಯ ವಿಮಾನವು ಪೂರ್ವಾಹ್ನ 11-30ಕ್ಕೆ ಪೂನದ ನಿಲ್ದಾಣದಲ್ಲಿಳಿಯಿತು. ಅಲ್ಲಿ ರಕ್ಷಣಾ ಮಂತ್ರಿ ಸರ್ದಾರ್ ಬಲದೇವಸಿಂಗ್, ಕೇಂದ್ರ ಸಂಪುಟದ ಕಾಮಗಾರಿ ಮಂತ್ರಿ ಗಾಡ್ಗಿಲ್, ಬೊಂಬಾಯಿ ಪ್ರಧಾನಿ ಬೇರೆ ಎತ್ತಿತರ ಮಂತ್ರಿಗಳು, ಕಾಂಗ್ರೆಸ್ ಪ್ರಮುಖರೇ ಮೊದಲಾದವರು ಸ್ವಾಗತಕ್ಕೆ ಕಾದಿದ್ದರು. ಪೂನೆಗೆ 10 ಮೈಲು ದೂರದಲ್ಲಿರುವ ಖಡಕಾ ಸ್ಥಾದಲ್ಲಿ ಕಟ್ಟಲ್ಪಡುವ 'ರಾಷ್ಟ್ರೀಯ ರಕ್ಷಣಾ ಯುದ್ಧವಿದ್ಯಾಶಾಲೆ'ಯ ಬುನಾದಿ ಕಲ್ಲನ್ನು ಪ್ರಧಾನಿ ನೆಹರುಗಳಿಂದ ಹಾಕಿಸುವ ಸಿದ್ಧತೆ ನಡೆದಿತ್ತು.

ಯುದ್ಧ ಶಾಲಾ ಶಂಕುಸ್ಥಾಪನೆ

ತಾ. ೮-10-49ನೇ ತಾರೀಕಿನ 12 ವರ್ತಮಾನ ಪತ್ರಿಕೆಗಳು ಮತ್ತು ಇದೇ ವರುಷದ ಕೆಲವು ಮಾರ್ಚೀ ನಾಣ್ಯಗಳು ತುಂಬಿದ್ದ ಗ್ಲಾಸೊಂದನ್ನು ಬುನಾದಿಯ ರಂಧ್ರದಲ್ಲಿಟ್ಟು ಇದನ್ನು ಮುಚ್ಚಿಸಿ, ಆ ಮೇಲ ಬುನಾದಿಕಲ್ಲನ್ನು ಹಾಕುವ ಮೂಲಕ ಪಂಡಿತ ನೆಹರುಗಳು ಖಡಕ್ವಾಸಲಾಯುದ್ಧ ವಿದ್ಯಾಶಾಲೆಯ ಕಂಕುಸ್ಥಾಪನೆ ಮಾಡಿದೊಡನೆ ಭಾರತ ವಿಮಾನನಡೆಯ ವಿಮಾನಗಳು ಆಡಿಮೊಗವಾಗಿ ಇಳಿದು ವಂದನೆಕೊಟ್ಟವು; ಫಿರಂಗಿಗಳು ಹೂಂದುವು.

ಭಾರತ ರಕ್ಷಣಾಮಂತ್ರಿ ಬಲದೇವ ಸಿಂಗ್, ಸರ್ವ ಸೇನಾನಿ ಜನರಲ್ ಕಂಯಪ್ಪ, ಬೊಂಬಾಯಿ ಗವರ್ನರ್ ಮತ್ತಿತರರು ಹಾಜರಿದ್ದರು. ಆಲ್ಲಿ ಭಾಷಣವೀಯುತ್ತಾ ಪಂಡಿತಜೀಯಂದರು: "ನಾವು ತಲೆವಾರುಗಳಿಂದಲೂ ಎಲ್ಲಕ್ಕೂ ಶಾಂತವಿಧಾನ ಮತ್ತು ಅಹಿಂಸೆಯನ್ನೇ ಅಂಗೀಕರಿಸುವ ಪ್ರಯತ್ನ ಮಾಡುತ್ತಾ ಬಂದವರು; ಮಾತಾಡುತ್ತಾ ಬಂದವರು ಇಂತಹ ನಾವೀಗ ಒಂದು ವಿಧದಿಂದ ನಮ್ಮ ಸೇನೆ, ನಾವೆ ಮತ್ತು ವಿಮಾನ ದಳಗಳನ್ನು ಹಿಗ್ಗಿಸುತಿದ್ದೇವೆ, ಎಂಬುದೊಂದು ದೊಡ್ಡ ಸಂಗತಿ. ಹಲವು ವಿದೇಶೀಯರು ಈ ಪ್ರಶ್ನೆಯನ್ನು ಕೇಳಿದ್ದಾರೆ. ಜೀವನವೆಂಬುದು ತಾರ್ಕಿಕವಾಗಿದ್ದರೂ, ಜನರು ಬಂದುದನ್ನೆಲ್ಲಾ ಅನುಭವಿಸಲು ತಯಾರಾರಬೇಕು; ಇಲ್ಲವಾದರೆ ಅವರು ಅಡಿಗೆ ಬೀಳುವರು. ನಾವು ಕಳಕೊಂಡ ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರಷ್ಟು ದೊಡ್ಡ ಶಾಂತಿರಾಜ ರಾಗೂ ಅಹಿಂಸಾವಾದಿ ಬೇರೊಬ್ಬನಿಲ್ಲ. ಆದರೆ ಅವರು ಕೂಡಾ 'ಶರಣಾಗುವದಕ್ಕಿಂತ, ಬೀಳುವದಕ್ಕಿಂತ ಅಥವಾ ಓಡಿಹೋಗುವದಕ್ಕಿಂತ ಶಸ್ತ್ರ ಧರಿಸುವುದೂ ವಾಸಿ" ಎಂದಿದ್ದರು. ಮಹಾತ್ಮಾಜೀಗೆ ನಂಬಿಕೆಯಿದ್ದಂತೆ ಮತ್ತು ನಾನು ಕೂಡಾ ನಂಬಿರುವಂತೆ, ಮಹಾತ್ಮಾ ಗಾಂಧಿಯವರು ಹಾಕಿಟ್ಟ ಪಥದಲ್ಲೇ ಮುಂದೊತ್ತುವ ಶಕ್ತಿಸೂರ್ಣತೆಯನ್ನು ನಾವು ಗಳಿಸಿಕೊಂಡರೆ ನಾವು ಗೆಲ್ಲುವೆವು. ನಾವು ಸುರಕ್ಷಿತರೆಂದು ಊಹಿಸಿಕೊಂಡು ನಿರ್ಲಕ್ಷ್ಯದಿಂದಿರಲು ಸಾಧ್ಯವಿಲ್ಲ. ಮನುಷ್ಯ ಸ್ವಭಾವವೇ ಹೀಗಿದೆ. ನಾವು ಅಪಾಯಗಳನ್ನು ಅಮಂತ್ರಿಸಿಕೊಳ್ಳಲಾರೆವು; ನಮ್ಮ ಕಷ್ಟಾರ್ಜಿತ ಸ್ವಾತಂತ್ರ್ಯಕ್ಕೆ ಅಪಾಯ ಸೋಂಕಲು ಬಿಡಲಾರೆವು. ಎಲ್ಲಾ ಆಧುನಿಕ ರಕ್ಷಣಾ ವಿಧಾನಗಳು ಮತ್ತು ಸುಸಜ್ಜಿತ ಸೇನೆ, ನಾವೆ, ವಿಮಾನದಳಗಳೊಡನೆ ನಾವು ತಯಾರಾರಬೇಕು." ಭಾರತವು ಅತ್ಯರ ರಕ್ಷಣೆಗಾಗಿ ಹೊಡತು ಆಕ್ರಮಣಕ್ಕಾಗಿ ಎಂದೂ ಸೇನಾಸಿದ್ಧತೆ ಮಾಡುತ್ತಿಲ್ಲವೆಂಬುದನ್ನು ಖಚಿತಪಡಿಸಿ, ಉತ್ಸಾಹವರ್ಧಕ ವಿದ್ದರೂ, ಒಳ್ಳೆ ತರಬೇತಿ, ಶಸ್ತ್ರೋಪಕರಣ ಮತ್ತು ಮರ್ಮಜ್ಞತೆಯಿಲ್ಲದ ಬರಿಯ ಉತ್ಸಾಹದಿಂದ ಕಾರ್ಯವಾಗುವಂತಿಲ್ಲವೆಂದರು. "ಭಾರತವನ್ನು ಅ-1ನೇ ರಾಷ್ಟ್ರವಾಗಿ ಮಾಡಬೇಕು, ಪ್ರತಿಯೊಂದು ವಿಭಾಗದಲ್ಲೂ ಪ್ರಥಮ ತರಗತಿಯರಾಷ್ಟ್ರವಾಗಿ ಇಡಬೇಕು, ಎಂಬುದೇ ನಮ್ಮ ಬಯಕೆ. ಯಾವ ಕ್ಷೇತ್ರದಲ್ಲಾದರೂ ಭಾರತವು ಎರಡನೆಯದಾಗಿರುವದನ್ನು ನಾನಿಚ್ಛಿಸುವದಿಲ್ಲ. ಇದೇನೂ ಸುಲಭದಲ್ಲಾಗದು. ಹೀಗಾಗಬೇಕಾದರೆ ನಾವು ಪ್ರತಿಯೊಂದರಲ್ಲೂ-ಮುಖ್ಯವಾಗಿ ಸೇನೆ, ನಾವೆ-ವಿಮಾನಪಡೆಗಳಲ್ಲಿ-ಅತ್ಯುನ್ನತದ ಹಾಗೂ ಅತ್ಯುತ್ತಮ ಗುರಿಯನ್ನಿಟ್ಟುಕೊಳ್ಳಬೇಕು." ಎನ್ನುತ್ತಾ, ಸೈನ್ಯತಂತ್ರ ಮತ್ತು ಶಸ್ತ್ರಗಳ ತಯಾರಿಯಲ್ಲೂ ಭಾರತವು ಸ್ವಾವಲಂಬಿಯಾಗಬೇಕಾದ ಅವಶ್ಯಕತೆಯನ್ನು ವಿವಿತಪಡಿಸಿದರು. ಸರಕಾರದ ಅಧಿಕಾರೀ ವರ್ಗಗಳವಲ್ಲಿರುವ ಇನ್ನೊಬ್ಬರ ಕೈಕಾಯುವ ಮನೋವೃತ್ತಿಯನ್ನು ಖಂಡಿಸುತ್ತಾ ಪಂಡಿತಜೀ ಅಂದರು. "ಏನಾದರೊಂದನ್ನು ಮುಂದಾಗಿ ಮಾಡಲೆಂದು ಒಂದು ಇಲಾಖೆಯು ಮತ್ತೊಂದು ಇಲಾಖೆಯನ್ನು, ಒಬ್ಬ ಅಧಿಕಾರಿ ಬೇರೊಬ್ಬ ಅಧಿಕಾರಿಯನ್ನು ಕಾಯುತ್ತಾ ನಿಲ್ಲುವ ಚಟ ನಮ್ಮಲ್ಲಿ ಹೆಬ್ಬಿದೆ. ಹಾಗಿರಕೂಡದು. ನಿಂತಲ್ಲೇ ಸ್ವಂತ ತೀರ್ಮಾನಕ್ಕೆ ಬರುವ ಯೋಗ್ಯತೆ ಮತ್ತು ಸ್ವನಿರ್ಧಾರದ ಮೇಲೆ ಭರವಸೆ ಅವರಲ್ಲಿರಬೇಕು. ಈ ರಾಷ್ಟ್ರದಲ್ಲಿರುವ ಕಾಯುವಿಕೆಯ ಮೊತ್ತವನ್ನು ಕಾಣುವಾಗ ನನಗೆ ದಿಗ್ಭ್ರಮೆ ಒದುತ್ತಿದೆ" ಎನ್ನುತ್ತಾ, ನಗೆಯನ್ನೆಬ್ಬಿಸಿದರು. "ನಾವು ಶಾಂತ ಮನುಷ್ಯರು; ನಮ್ಮದು ಶಾಂತಿಪ್ರೇಮಿರಾಷ್ಟ್ರ. ನಾವು ನಮ್ಮ ರಾಷ್ಟ್ರದಲ್ಲಿ ನಮ್ಮ ನೆರೆಯ ರಾಷ್ಟ್ರಗಳಲ್ಲಿ, ಇಡೀ ಜಗತ್ತಿನಲ್ಲಿ ಶಾಂತಿಸ್ಥಾಪಿಸಲು ನೋಡುತ್ತೇವೆ. ನಾವೊಂದು ಮಹಾ ಸಂಪ್ರದಾಯದ ವಿಶೇಷ ಬಾಧ್ಯಸ್ಥರಿದ್ದೇವೆ. ನಾವು ಮಹಾತ್ಮಾ ಗಾಂಧಿಯವರ ಅನುಯಾಯಿಗಳು. ಆದ್ದರಿಂದ ನಾವೇನೇ ಮಾಡಿದರೂ ನಮ್ಮ ಮತ್ತು ಜಗತ್ತಿನ ಮುಂದೊತ್ತಲು ನೋಡುತ್ತೇವೆ. ಆದರೆ ಪರಿಸ್ಥಿತಿಯು ಅನಿವಾರ್ಯವಾಗಿ, ಜೇರೆ ಹಾದಿಯೇ ನಮಗಿಲ್ಲವಂದಾದರೆ ಆಗಮಾತ್ರ ನಾವು ಶಸ್ತ್ರಧರಿಸುತ್ತೇವೆ" ಎಂದರು. ಆ ರಾತ್ರಿ ಬೊಂಬಾಯಿ ಶಾಸನ ಸಭಾ ಸದಸ್ಯರಿಗೆ ಭಾಷಣವೀಯುತ್ತಾ ಶಾಸನ ಸಭೆಗಳವರು ಯಾಂತ್ರಿಕವಾಗಿ ಚಾಲಾಗುವ ಬದಲಿಗೆ ಕಾಲಾನುಗುಣವಾದ ಸಾಮಾಜಿಕ ಮನೋವೃತ್ತಿ ವಹಿಸಬೇಕೆಂದು ಉಪದೇಶಿಸಿದರು. ಅಂದ. ಅಪರಾಹ್ನ ಪೂನೆಯ ಪ್ರಚಂಡ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯು. ತ್ತಾ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯದಲ್ಲಿ ಜನರು ಸರಕಾರದೊಡನೆ ಸಹಕರಿಸಬೇಕೆಂದೂ, ಆಹಾರದಂತಹ ಪ್ರಧಮಾವಶ್ಯಕತೆಗಳಿಗಾಗಿಯಾ ವಿದೇಶಗಳನ್ನು ಅವಲಂಬಿಸಬೇಕಾದ ಭಾರತವು ತನ್ನ ಆರ್ಥಿಕ ಸ್ಥಿತಿಯನ್ನು ಸಂಕಾಮಕಾರಿಯಾಗಿ ಸುಧಾರಿಸಿಕೊಳ್ಳಲಾರದೆಂದೂ ಎಲ್ಲರೂ ಶಕ್ತಿಮೀರಿ ದುಡಿಯಬೇಕೆಂದೂ ಕೇಳಿಕೊಂಡರು.

ಬೊಂಬಾಯಿಯಿಂದ—

ತಾ 7ನೇ ಪೂರ್ವಾಹ್ನ 9-45ಕ್ಕೆ ಪಂಡಿತ ನೆಹರುಗಳು ಸ್ಪೆಶಲ್ ವಿಮಾನದಲ್ಲಿ ಪೂನೆಯಿಂದ ಬೊಂಬಾಯಿಗೆ ಬಂದಿಳಿದಾಗ ಅಲ್ಲಿ ಬೊಂಬಾಯಿ ಮೇಯರರು ಮತ್ತಿತರ ಪ್ರಮುಖರು ಸ್ವಾಗತಕ್ಕೆ ಸಿದ್ಧರಿದ್ದರು. ಪೋಲಿಸು ಫೂಜನ ಗೌರವ ವಂದನೆ ಸ್ವೀಕರಿಸಿ, ತನ್ನನ್ನು ಮುತ್ತಿಗೆ ಹಾಕಿದ ಪತ್ರಿಕಾವಾಲರಿಗೆ "ನಾನೀಗ ಬಹಳ ದಣಿದು ಹೋಗಿದ್ದೇನೆ. ನನಗೆ ನಿದ್ರೆಮಾಡಬೇಕಾಗಿದೆ" ಎಂದು ಸರಕಾರೀ ಭವನಕ್ಕೆ ಧಾವಿಸಿದರು. ಮಧ್ಯಾಹ್ನ ಬೊಂಬಾಯಿಯ ಜುಹು ಸಮುದ್ರ ವಲಯದಲ್ಲಿ ಈಜಾಡಿ ಉಲ್ಲಾಸ ಗಳಿಸಿಕೊಂಡರು. ಅವರಾಹ್ನ ತಾಸು 3ಕ್ಕೆ ಸರಿಯಾಗಿ ಬೊಂಬಾಯಿಯ ಸಾಂತಾಕ್ರುಝ್ ವಿಮಾನ ನಿಲ್ದಾಣಕ್ಕೆ ಬರುವಾಗ ಸಂಕಿತ ಜೀವನ ಹೆರುಪಿನಿಂದಿದ್ದರು. ನಿಲ್ದಾಣದಲ್ಲಿ ಬೇರ್, ಆಸಫ್ ಆಲಿ, ಬಲದೇವಸಿಂಗ್ ಮೇಯರ್, ಶೆರಿಫ್, ಶಾಂತಾ ದಂಪತಿಗಳು, ಸೈನಿಕ ಹಾಗೂ ನಾಗರಿಕ ಅಧಿಕಾರಿಗಳು ಪ್ರಧಾನಿ ನೆಹರುಗಳನ್ನು ಬೀಳ್ಕೊಳ್ಳುವದಕ್ಕಾಗಿ ನೆರೆದಿದ್ದರು. ನಾವಿಕ ದಳದ ಗೌರವ ವಂದನೆ ಸ್ವೀಕರಿಸಿ, ಅಲ್ಲಿದ್ದವರಿಗೆಲ್ಲಾ ಹಸ್ತಲಾಘವ ಕೊಟ್ಟು ವಿಮಾನವೇರಲು ಹೊರಗುವಾಗ ಜನಸಂದಣಿಯು 'ಪಂಡಿತ ಜವಾಹಿರಲಾಲರಿಕೀ ಜೈ" ಘೋಷಣೆಬ್ಬಿಸಿತು; ಪಂಡಿತರು ಕಂಜೋಡಿಸಿ, ಪ್ರತಿವಂದನೆ ಕೊಟ್ಟು ವಿದಾಯ ಸೂಚಕ ಕೈ ಬೀಸಿ ವಿಮಾನದೊಳಗೆ ಕಾಲಿಟ್ಟರು. ತಾ. 7ನೇ ಅಪರಾಹ್ನ ತಾಸು 3-30ಕ್ಕೆ ಸರಿಯಾಗಿ ಪಂಡಿತರ ವಿಮಾನ ಬೊಂಬಾಯಿ ನಿಲ್ದಾಣ ಬಿಟ್ಟಿತು. ಹೊರಡುವ ಮುನ್ನ ಭಾರತದ ಜನತೆಗೆ ಪಂಡಿತಜೀ ಕೊಟ್ಟಿದ್ದ ವಿದಾಯ ಸಂದೇಶವನ್ನು ಭಾರತ ಸರಕಾರದ ಸುದ್ದಿ ಮತ್ತು ಪ್ರಕಾಶನಾಣಿ ಖಾತೆಯವರು 'ರೇಡಾರ್ಡ್' ಮಾಡಿದ್ದಾರೆ. ಅದರ ಅಂತ ಹೀಗಿದೆ. "ಕಳೆದ ಸಲ ನಾನು ಅಮೆರಿಕಕ್ಕೆ ಹೋಗಿದ್ದಾಗ ಅಲ್ಲಿನ ಜನರು ನನ್ನಲ್ಲಿ ತೋರಿಸಿದ ಪ್ರೀತಿ ಮತ್ತು ಆದರಗಳಿಂದ ನಾನು ಬಹಳ ಸಂತೋಷಗೊಂಡಿದ್ದೆ. ಈ ಸಲವೂ ಅವರು ಅದೇ ಪ್ರೀತಿ ಆದರಗಳನ್ನು ತೋರಿಸಿದರು. ಅವರ ಆತಿಥ್ಯವನ್ನು ಸ್ವೀಕರಿಸಿ ಅವರೊಡನೆ ಕಾಲ ಕಳೆಯಲು ನನಗೆ ಸಂತೋಷವಾಯಿತು. ಅಮೆರಿಕದ ಜನರಿಗೆ ಭಾರತದ ಬಗ್ಗೆ ಅಪಾರ ಆಸಕ್ತಿಯಿದೆ. ಅವರು ಭಾರತದ ಬಗ್ಗೆ ಬಹಳ ಕುತೂಹಲ ತಾಳಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಕೇಳಿದ್ದಾರೆ. ಅವರಿಗೆ ಭಾರತದ ಬಗ್ಗೆ ಬಹಳ ಗೊತ್ತಿದೆ. ಅವರು ಭಾರತದ ಬಗ್ಗೆ ಬಹಳ ಆಸಕ್ತಿ ತಾಳಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಸಹಾನುಭೂತಿ ತೋರಿಸಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಸ್ನೇಹ ತೋರಿಸಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಗೌರವ ತೋರಿಸಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಪ್ರೀತಿ ತೋರಿಸಿದ್ದಾರೆ. ಅವರು ಭಾರತದ ಬಗ್ಗೆ ಬಹಳ ಆದರ

ವು ವಾರಗಳ ವರೆಗೆ ಭಾರತದಿಂದ ದೂರ ಹೋಗುವ ಕಾಲವೀಗ ನನ್ನ ಪಾಲಿಗೊದಗಿದೆ. ಈ ಅವಧಿಯ ಮಟ್ಟಿಗೆ ನಿಮಗೆಲ್ಲರಿಗೂ ವಿದಾಯವಂದನೆಗಳು. ಇನ್ನು ಸುಮಾರು ಐದು ವಾರಗಳ ವರೆಗೆ ನನ್ನ ಭಾಷಣಗಳ ಮತ್ತು ಆಕಾಶವಾಣಿಗಳ ಉಪಕಾರ್ಯವು ನಿಮಗೆ ತಪ್ಪಿದುದು ಪ್ರಾಯಶಃ ಹಿತವಾಗಿರಬೇಕು. ಇದು ನಿಮಗೊಂದು ಬಿಡುಗಡೆಯಂತಾಗುವದು. ನಾನಾದರೋ, ನಿಮಗೆ ದೂರವಿರುವ ಈ ಕಾಲದಲ್ಲೆಲ್ಲಾ ನಿಮ್ಮನ್ನೇ ನೆನಸಲಿದ್ದೇನೆ; ನೀವು ಮತ್ತು ನಾನು ಇದಿರಿಸಬೇಕಾಗಿರುವ ಸಮಸ್ಯೆಗಳನ್ನೂ, ನೀವು, ನಾನು ಮತ್ತು ನಾವೆಲ್ಲರೂ ಮಾಡಬೇಕಾಗಿರುವ ಕೆಲಸಗಳನ್ನೂ ಯೋಚಿಸಲಿದ್ದೇನೆ. ಯಾಕಂದರೆ ನಾವು ಮಾಡಬೇಕಾಗಿರುವ ಕೆಲಸಗಳು ಬಹಳವಿದ್ದು, ನಾವೀ ಸಂಕಷ್ಟಗಳನ್ನೆಲ್ಲಾ ಕಡೆಹಾಯಬೇಕೆಂದು ದೃಢಸಂಕಲ್ಪ ಮಾಡಿದವರಿದ್ದೇವೆ. ಸರಿ, ನಿಮಗೆಲ್ಲರಿಗೂ ಕೆಲಕಾಲದ ಮಟ್ಟಿಗೆ ವಿದಾಯ ವಂದನೆಗಳರಲಿ; ಸುಯೋಗ ಸುಖವಿರಲಿ; ಜೈ ಹಿಂದ್!"

ಬೊಂಬಾಯಿಯಿಂದ ಹೊರಟ ಪಂಡಿತಜೀಯ ವಿಮಾನವು ತಾ.7ನೇ ರಾತ್ರಿ ನಿಶ್ಚಿತಾವಧಿಗೆ ಎರಡು ತಾಸು ಮೊದಲೇ ಕೈರೋದಲ್ಲಿ ಇಳಿದರೂ, ಆ ಮೇಲೆ ಕಳವೂರುವ ಜಿನೇವಾದ ಹಿಮಕರಗುವ ಹೊತ್ತಿನ ವರೆಗೆ ತಡಮಾಡಲು ಕೈರೋದಲ್ಲಿ ನಾಲ್ಕುತಾಸು ನಿಲ್ಲಬೇಕಾಯಿತು. ಅಲ್ಲಿ ಕೈರೋ ಮತ್ತು ಅಂಕಾರಗಳಲ್ಲಿ ಭಾರತ ರಾಯಭಾರಿಗಳಾಗಿರುವ ಮಿ ಎ ಎ. ಫಿಝೀ ಮತ್ತು ದಿವಾನ್ ಬೆಹಾದ್ದೂರ್ ಮೆನನರು ಪಂಡಿತಜೀಯವರ ಆತಿಥ್ಯದಲ್ಲಿದ್ದ ಪಂಡಿತಜೀಯ ತಂಗಿ ಶ್ರೀಮತಿ ಕೃಷ್ಣಾಹಠೀ ಸಿಂಗರು ಅಮೇರಿಕಕ್ಕೆ ಭಾಷಣಸಂಚಾರಕ್ಕಾಗಿ ಹೊರಡುವವರಿದ್ದುದರಿಂದ ಅಲ್ಲೇ ಮಾಳ್ಕೆಯೊಂದಿಗೆ ಅಣ್ಣನನ್ನು ಕೂಡಿಕೊಂಡು, ವಿಮಾನಹತ್ತಿದರು. ಅಲ್ಲಿಂದ ನೆಹರುಗಳನ್ನು ಹೊತ್ತುಕೊಂಡು ಹೊರಟ, 35 ಪ್ರಯಾಣಿಕರಿದ್ದ 'ಮಲಬಾರ್ ಪ್ರಿನ್ಸೆಸ್' ವಿಮಾನವು ಜಿನೆವಾದಲ್ಲಿ ಒಮ್ಮೆತಂಗಿ ಅಲ್ಲಿಂದ ನೇರಾ ಲಂಡನಿಗೆ ಹಾರಿತು.

ಲಂಡನಿನಲ್ಲಿ—

ತಾ. 8ನೇ ಸಂಜೆ 7-45ಕ್ಕೆ ಪಂಡಿತಜೀಯ ಆಕಾಶಯಾನ ಲಂಡನ್ ನಿಲ್ದಾಣಮುಟ್ಟುವಾಗ, ಅಲ್ಲಿ ಬ್ರಿಟಿಷ್ ವಸಾಹತು ಸಂಬಂಧ ಖಾತೆಯ ಉಪಕಾರ್ಯದರ್ಶಿ ಮಿ. ಕೋಡ್ನರ್‌ವಾರ್, ಭಾರತೀಯ ಹೈಕಮಿಷನರ್ ಶ್ರೀ. ಕೃಷ್ಣಮೆನನ್, ಫ್ರಾನ್ಸ್ ಮತ್ತು ಹೋಲ್ಲೆಂಡುಗಳಲ್ಲಿರುವ ಭಾರತದ ರಾಯಭಾರಿಗಳೇ ಮೊದಲಾದವರು ಸ್ವಾಗತ ಕೊಡಲು ನಿಂತಿದ್ದರು. ಲಂಡನಿನ ನೂರಾರು ಭಾರತೀಯರು ಭಾರತ ರಾಷ್ಟ್ರಧ್ವಜ ಹಾರಿಸುತ್ತಾ "ಜೈ ಹಿಂದ್" ಕೊಡುತ್ತಾ ವಿಮಾನದೆಡೆಗೆ ನುಗ್ಗಿ ಬಂದರು. ಲಂಡನಿನಲ್ಲೇ ಇದ್ದ ಪಂಡಿತಜೀಯ ಪುತ್ರಿ ಇಂದಿರಾ ಗಾಂಧಿ ತಂದೆಯನ್ನು ಕೂಡಿಕೊಳ್ಳಲು ಅಲ್ಲಿಗೆ ಬಂದಿದ್ದರು. ಎಲ್ಲರೊಡನೆ ಮಾತುಕತೆಯಾಗಿ ಚಹಾ ಆದಮೇಲೆ ಪಂಡಿತಜೀಯು, ಬಿ. ಬಿ. ಸಿ.ಯವರ ವಿಜ್ಞಾಪನೆಯನ್ನು ಮನ್ನಿಸಿ, ಅವರ ಆಕಾಶವಾಣಿ ಪ್ರಜಾವಾಕ್ಯಾಗಿ ಕೇಳಿದ ಪ್ರಶ್ನೆಗಳಿಗೆಲ್ಲ ಸರಣಿ ಉತ್ತರಗಳನ್ನು ಕೊಟ್ಟರು. ಈ ನಡುವೆ ಪಂಡಿತಜೀ ಹೆಜ್ಜೆಯಾರುವ ಹೊತ್ತಿಗೆ ಸರಿಯಾಗಿ ಲಂಡನ್ ನಿಲ್ದಾಣದಲ್ಲಿ ಒಂದು ವಿಶೇಷ ಘಟನೆ ನಡೆದಿದ್ದಿತು. ಸ್ವಲ್ಪ ಸಮಯಕ್ಕೆ ಮೊದಲು ಅಲ್ಲಿಂದ ಬ್ರುಸೆಲ್ಸ್‌ಗಾಗಿ ಹೊರಟಿದ್ದ ಅಮೇರಿಕನ್ ಸಮಾರೀ ವಿಮಾನವೊಂದು ಯಂತ್ರ ದೋಷಕ್ಕೀಡಾಗಿ ಹಿಂತಿರುಗಿ ಬಂತು; "ಮುಂದಾಗಿ ನಿಲ್ದಾಣದಲ್ಲಿಳಿಯುವೆನೆನ್ನುವೆಯಾ?" ಎಂದು ಲಂಡನ್ ನಿಲ್ದಾಣದವರು ಅ ವೈಮಾನಿಕನನ್ನು ಕೇಡಿಯೋ ಮೂಲಕ ಕೇಳಿದಾಗ "ಭಾರತದ ಪ್ರಧಾನಿ ಪಂಡ್ತಿಗಳೇ ಪ್ರಥಮತಃ ಇಳಿಯಲಿ" ಎಂದಾತ ಉತ್ತರ ಕೊಟ್ಟ. ಆದರೂ, ಸುಮಾರು 24 ಘಂಟೆಗಳ ಹಾರಾಟ ನಡೆಸಿ ಬಂದಿದ್ದ ಪಂಡಿತಜೀಯ ವಿಮಾನವು, ಅಮೆರಿಕನ್ ವಿಮಾನಕ್ಕೆ ಳಿಯುವ ಅನುಕೂಲತೆ ಮಾಡಿಕೊಡುವುದಕ್ಕಾಗಿ ನಿಲ್ದಾಣದ ಸುತ್ತಲೂ ಸುಮಾರು 35 ನಿಮಿಟುಗಳ ವರೆಗೆ ಸುತ್ತುತ್ತಿರಬೇಕಾಯಿತು. ನಿಲ್ದಾಣದಲ್ಲಳಿದು ಮಾತುಕತೆ ಚಹಾ ಮುಂತಾದುವು ಮುಗಿದ ಮೇಲೆ ಪತ್ರಿಕಾವಾಲರ ಪ್ರಶ್ನೆಗಳ ನಡುವೆ ಜನಸಂದಣಿಯೊಳಗೆ ಸಿಕ್ಕಿಕೊಂಡಿದ್ದ ನೆಹರುಗಳನ್ನು ಶ್ರೀ. ಕೃಷ್ಣ ಮೆನನರು ಅವಸರದಿಂದೆಳೆದು ದೊಡ್ಡ ಕಸ್ಟು ಕಾರೊಂದರಲ್ಲಿ ಹಾಕಿಕೊಂಡರು. 12 ಮಂದಿ ಮೋಟಾರ್ ಸೈಕಲ್ ಸವಾರರ ಸಹಾಯದಿಂದ ಆ ಕಾರು ಕ್ಲೇರಿಜಸ್ ಹೋಟೆಲಿಗೆ ಧಾವಿಸಿತು. ಅಂದು ರಾತ್ರಿ ಬ್ರಿಟನಿನ ಅರ್ಥ ಸಚಿವ ಸರ್. ಸ್ಟಾಫೋರ್ಡ್ ಕ್ರಿಪ್ಸ್ ಮತ್ತು ಪಂಡಿತ ನೆಹರುಗಳೊಳಗೆ ಮಾತುಕತೆಗಳು ನಡುವು. ಮರೆಯಲ್ಲಿ ವಿಚ್ಛೇದನಾ ಸಮೀಕ್ಷೆ ಹಲವು ಪ್ರಾಮುಖ್ಯ ವಿಷಯಗಳು ಚರ್ಚಿಸಲ್ಪಟ್ಟುವೆಂದು ತಿಳಿದುಬರುತ್ತದೆ. ಆ ಮೇಲೆ ಪಂಡಿತಜೀ ಲೇಡಿ ಮೌಂಟ್‌ಬೇಟನರ ಹಳ್ಳಿನಿವಾಸ ಬ್ರೋಡ್‌ಬೋಂಡ್ಸ್‌ಗೆ ಹೋಗಿ ಬಂದರು. ತಾ 10ರಲ್ಲಿ ಲಂಡನಿನ ಡಾನಿಂಗ್ ಸ್ಟ್ರೀಟ್ ನಂ. 10ರಲ್ಲಿ ಪ್ರಧಾನಿ ಅಟ್ಲಿಗಳು ಪಂಡಿತ ನೆಹರುಗಳಿಗೆ ಔತಣವಿತ್ತರು. ಅಲ್ಲಿ ಇಬ್ಬರು ಪ್ರಧಾನಿಗಳೊಳಗೆ ಕಾಶ್ಮೀರದ ಪ್ರಶ್ನೆ ಮತ್ತು ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳ ಕುರಿತು ಮನಬಿಚ್ಚಿ ಮಾತುಕತೆಗಳು ನಡೆದುವೆಂದು ತಿಳಿದುಬರುತ್ತದೆ.

ಅಮೇರಿಕದ ಸಿದ್ಧತೆ.

ಭಾರತ ಪ್ರಧಾನಿ ಪಂಡಿತ ಜವಾಹರಲಾಲರನ್ನು ಇದೇ ತಾ 11ನೇ ಮಂಗಳವಾರ ಪೂರ್ವಾಹ್ನ ಬ್ರಿಟನಿನ ರಾಜಧಾನಿ ಲಂಡನಿನಿಂದ ಅಮೆರಿಕದ ರಾಜಧಾನಿ ವಾಷಿಂಗ್ಟನ್ನಿಗೆ ಕರತರಲು ಅಮೆರಿಕಾಧ್ಯಕ್ಷ ಟ್ರುಮೇನರು ತನ್ನ ಖಾಸಗೀ ವಿಮಾನ 'ಇಂಡಿಪೆಂಡೆಂಟ್'ನ್ನು ಲಂಡನಿಗೆ ಕಳುಹಿಕೊಟ್ಟಿದ್ದಾರೆ. ಆದು ತಾ 8ನೇ ರಾತ್ರಿಯಲ್ಲೇ ಲಂಡನಿಗೆ ಬಂದು ಮುಟ್ಟಿದೆ. ವಾಷಿಂಗ್ಟನಿಗೆ ದಯವಾಡಿಸಿದಂತೆಯೇ ಅಪಿಲ ಅಮೆರಿಕ ಮತ್ತು ಕೆನಡಾಗಳ ಪಂಚಾರದಲ್ಲೂ ಪಂಡಿತ ನೆಹರುಗಳು ಇದೇ ವಿಮಾನವನ್ನು ಉಪಯೋಗಿಸಬಹುದೆಂದು ಅಧ್ಯಕ್ಷ ಟ್ರುಮೇನರು ಕೇಡಕೆಂಡಿದ್ದಾರೆ. ಈ ವಿಮಾನವಾಡರೋ ಗಾತ್ರದಲ್ಲಿ 30 ಪ್ರಯಾಣಿಕರನ್ನೊಯ್ಯಬಹುದಾದರೂ ಅನುಕೂಲಾಧ್ಯಕ್ಷರ ಖಾಸಗೀ ಯಾನವಾಗಿರುವುದರಿಂದ ಅವರ ಮತ್ತು ಅವರ ಪರಿವಾರದ ಅನುಕೂಲತೆಗಳನ್ನೇ ಒಳಗೊಂಡಿದೆ. ವಿಮಾನದೊಳ ವ್ಯವಸ್ಥೆಯು ಅತ್ಯಾದ್ಭುತ ರೀತಿಯದಿದೆ ಒಳಗೊಂದು ಮೇಜು ಸಮ್ಮೇಳನದ ವ್ಯವಸ್ಥೆಯಿದೆ. ಅಧ್ಯಕ್ಷ ಟ್ರುಮೇನರ ಮಿಲಿಟರಿ ಏಡ್ ಬ್ರಿಗೇಡಿಯರ್ ಜನರಲ್ ರೋಬರ್ಟ್ ಎಂಡ್ರೈ ಸ್ವತಃ ಈ ವಿಮಾನವನ್ನು ಅಟ್ಲಾಂಟಿಕ್ ಸಾಗರದ ಮೇಲಿಂದ ನಡೆಯಿಸಿ ತಂದು ಲಂಡನಿನಲ್ಲಿಳಿಸಿದ್ದರು. ವಾಷಿಂಗ್ಟನಿನಲ್ಲಿರುವ ಭಾರತದ ಸೇನಾ ವಿಮಾನಾಧಿಕಾರಿ ಬ್ರಿಗೇಡಿಯರ್ ಚೌಧರಿಯವರೂ ಈ ವಿಮಾನದಲ್ಲಿ ಬಂದಿದ್ದರು. ಅಮೆರಿಕದಸುರಕ್ಷಿತತಾವಾಲನಾಧಿಕಾರಿಗಳಿಬ್ಬರು ರಕ್ಷಣೆಗಾಗಿ ವಿಮಾನದಲ್ಲಿದ್ದರು. ಲಂಡನ್ ನಿಲ್ದಾಣದಲ್ಲಿ ವಿಮಾನವಿಳಿದಾಗ ಅದರೊಳ ಪ್ರವೇಶಕ್ಕಾಗಿ ಹತ್ತಲಿಚ್ಛೆಸಿದ ಲಂಡನಿನಲ್ಲಿದ್ದ ಅಮೆರಿಕನ್ ಸೇನಾಸಂಬಂಧಿಕನನ್ನು ಮತ್ತು ಲಂಡನಿನ ಕಸ್ಟಮ್ಸ್ ಆಫೀಸಿನವನನ್ನು ಕೂಡಾ ಒಳಗೆಬಿಡದಂತೆ ಆ ಮುಹೂರ್ತದಲ್ಲಿ ತಡೆಯಲಾಗಿತ್ತು. ಕೆಲ ಹೊತ್ತು ರಕ್ಷಣಾಧಿಕಾರಿಗಳಿಬ್ಬರೂ ದ್ವಾರದಲ್ಲೇ ಪಹರೆಗೆ ನಿಂತಿದ್ದರು. ಪಂಡಿತಜೀಯನ್ನು ಕರೆತರಿಸಿಕೊಳ್ಳುವ ವಿಮಾನದೊಳಗಿನ ರಕ್ಷಣಾ ವ್ಯವಸ್ಥೆಯು ಅಷ್ಟೂ ಕಟ್ಟುನಿಟ್ಟಿನದಾಗಿತ್ತು. ಇನ್ನು ಅಮೆರಿಕದ ರಾಜಧಾನಿ ವಾಷಿಂಗ್ಟನಿನಲ್ಲಿ ಮತ್ತು ನ್ಯೂಯೋರ್ಕ್ ಹಾಗೂ ರಾಷ್ಟ್ರದ ಇತರ ಕಡೆಗಳಲ್ಲಿ ಪಂಡಿತಜೀಗಾಗಿ ನಡೆದಿರುವ ಸ್ವಾಗತ ಸಂಭ್ರಮಗಳ ವಾರ್ತೆಯುಂತೂ ಭಾರತೀಯರನ್ನು ಹರ್ಷಾಶ್ಚರ್ಯಕರವನ್ನಾಗಿ ಮಾಡುವಂತಹದಿದೆ. ಅಮೆರಿಕದಲ್ಲಿರುವ ನೆಹರೂ ತಂಗಿ ಶ್ರೀಮತಿ ವಿಜಯಲಕ್ಷ್ಮಿಯವರ ಸಲಹೆಗಳನ್ನು ಕೇಳಿಕೊಂಡೇ ವಾಷಿಂಗ್ಟನಿನಲ್ಲಿ ನಿಲ್ದಾ ಸಿದ್ಧತೆಗಳೂ ಕೆಲವು ದಿನಗಳಿಂದ ನಡೆದಿದ್ದುವು. ಸ್ವಾಗತ ವೈಭವಗಳಿಗೆ ಇಡೀ ಪ್ರಪಂಚದಲ್ಲೇ ಪ್ರಥಮ ಸ್ಥಾನ ಗಳಿಸಿರುವ ಅಮೆರಿಕವು, ಈತನು ಈ ಮೊದಲು ಯಾವನೊಬ್ಬ ವಿದೇಶೀ ಮಹಾಮನುಷ್ಯನಿಗೂ ಕೊಡದಿದ್ದಷ್ಟು ಅಧಿಕ ಸಂಭ್ರಮದ ಸ್ವಾಗತವನ್ನು ಪಂಡಿತ ನೆಹರುಗಳಿಗೆ ಕೊಡಲು ತಯಾರಾಗಿದೆ. ಮಂಗಳವಾರ ವಾಷಿಂಗ್ಟನ್ ವಿಮಾನ ನಿಲ್ದಾಣಲ್ಲಿಳಿಯುವಾಗ ಅಧ್ಯಕ್ಷ ಟ್ರುಮೆನ್, ಗೃಹಕಾರ್ಯದರ್ಶಿ ಡೀನ್ ಆಚಿಸನ್, ಮತ್ತು ಮಂತ್ರಿಮಂಡಲೀ ಸದಸ್ಯರು ಪಂಡಿತ ನೆಹರುಗಳನ್ನು ದಿರುಗೊಳ್ಳುವರು. ಪೂರ್ಣ ಸೇನಾ ಗೌರವಗಳ ಸಮೇತ, ಅಮೆರಿಕದ ಅತ್ಯುಚ್ಚ ಸ್ವಾಗತವಲ್ಲದೆ ಅಂತೆಯೂ ಬಾಕಿಯಿರದೆ ಮಹಾಸ್ವಾಗತವು ಅಲ್ಲಿ ಪಂಡಿತಜೀಗೆ ದೊರೆಯಲಿದೆ. ಒಂದು ರಾಷ್ಟ್ರದ ಅಗ್ರಸೀಟಾ ರೋಹಿಗೆ ಮಾತ್ರ ಸಂಪೂರ್ಣ ಸೇನಾ ಗೌರವ ಸಲ್ಲಿಸುವುದು ಅಮೆರಿಕದ ಸಂಪ್ರದಾಯ. ಅಮೆರಿಕದ ಮಾಜೀ ಭಾರತದಲ್ಲಿ ಗವರ್ನರ್ ಜನರಲ್ ರಾಜಾಜಿ ಮಾತ್ರ ಈ ಗೌರವ ಹೊಂದಲರ್ಹರು. ಆದರೆ ಅಧ್ಯಕ್ಷ ಟ್ರುಮೇನರು ಪ್ರಧಾನಿ ನೆಹರುಗಳಿಗೆ ಈ ಪೂರ್ಣ ಮಾರ್ಯಾದೆ ಕೊಡಬೇಕೆಂದು ಆಜ್ಞಾಪಿಸಿದ್ದರು. ಫಲಿತಾಂಶದಲ್ಲಿ ನೆಹರುಗಳಿಗೆ ಅಮೆ

The
Agricultural & Industrial Bank Ltd.,
Estd: 1934
Head Office: Coondapoor

We take this opportunity to wish all our Shareholders, Customers and Patrons a HAPPY DIVALI and a more prosperous New Year.

A. Madhava Pai, B.A.,B.L.,
General Manager.

The
PANGAL NAYAK BANK, LTD.,
Head Office: UDIPI.

SAVE FOR THE FUTURE.
SEASON DEPOSITS terminable on or before 30—6—1950 are accepted from 1—10—1949 at the following rates:
For 3, 4 or 5 months at 3 % p. a.
For 6, 7 or 8 months at 3½ % p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices

ರಕದ ಸೇನೆ, ನಾವೆ, ವಿಮಾನದಳಗಳ ಗೌರವ ವಂದನೆಯಾಗಲಿದೆ. ಪಂಡಿತಜೀ ವಿಮಾನದಿಂದ ಹೊರಗೆ ಕಾಲಿಟ್ಟೊಡನೆ ಅಧ್ಯಕ್ಷ ಟ್ರುಮೇನ್ ಮತ್ತು ಅವರು ದೂರದ ಅಭಿವಂದನೆಗಳನ್ನು ಕೊಟ್ಟುಕೊಳ್ಳುವರು. ಆಗಲೇ ಗೌರವವಂದನೆ ಮತ್ತು 19ವಂದನಾ ಗನ್ನುಗಳ ಸಿಡಿತ; ಅಮೆರಿಕದ ಸೇನಾ ಬೇಂಡುದಳದಿಂದ ಭಾರತದ 'ಜನ-ಗಣ-ಮನ' ಮತ್ತು ಅಮೆರಿಕದ 'ಸ್ಟಾರ್ ಸ್ಪೇಂಗ್ಲ್ಡ್ ಬೇನರ್' ರಾಷ್ಟ್ರಗೀತೆಗಳ ವಾದನ, ನಡೆಯುವುದು. ವಿಮಾನದ ಪಕ್ಕದಲ್ಲಿ ನಡೆಸಲ್ಪಡುವ ಸಣ್ಣ ನಿಲ್ದಾಣದಲ್ಲಿ ಪ್ರಧಾನಿ ನೆಹರು ಮತ್ತು ಅಧ್ಯಕ್ಷ ಟ್ರುಮೇನ್ ನಿಂತುಕೊಂಡು ಸುತ್ತಲೂ ನೆರೆದಿರಬಹುದಾದ ಸಹಸ್ರಾರು ಜನರ ಸಮ್ಮುಖದಲ್ಲಿ ಕುಶಲ ಸಂವಾದವಮಾಡಿಕೊಳ್ಳುವರು. ಆ ಮೇಲೆ ವಿದ್ವತ್ತಿಯ ಗೌರವ ವಂದನಾ ತನಪು; ನಂತರ ನೆಹರೂ ಟ್ರುಮೇನರೊಟ್ಟಿಗೆ ಸಶಸ್ತ್ರ ಪಹರೇಗಾರರ ಆವರಣದಲ್ಲಿ ಅಧ್ಯಕ್ಷರ ಧನ್ಯ ಕಾರನ್ನು ಹತ್ತಿ ಟ್ರುಮೇನ್‌ನಿವಾಸ್‌ಟ್ಲಯರ್ ಹೌಸ್‌ಗೆ ಪ್ರಯಾಣ; ಹಿಂಗಡೆಯಿಂದ ಸಾಲುಗಟ್ಟಿ ಮಂತ್ರಿಗಳ ಆಗಮನ. ಆ ರಾತ್ರಿ ಟ್ರುಮೇನ್ ದಂಪತಿಗಳಿಂದ ರಾಜೋತಣ ಸತ್ಕಾರ. ಅಧ್ಯಕ್ಷ ಭವನ 'ವೈಟ್‌ಗ್ರಹ್'ವೀಗ ರಹೇರಿಯಲ್ಲಿರುವುದರಿಂದ ಟ್ರುಮೇನರು 'ಬ್ಲಯರ್ ಹೌಸ್'ನಲ್ಲೇ ಈ ಸಂಭ್ರಮವನ್ನು ನೆರವೇರಿಸಲಿದ್ದಾರೆ. ಮರುದಿನ ಅಲ್ಲಗೆ 18 ಮೈಲಿರುವ ಸ್ವತಂತ್ರ ಅಮೆರಿಕದ ಸ್ಥಾಪಕ ವಾಷಿಂಗ್ಟನ್ನನ ನೈನಿವಾಸವಾಗಿದ್ದ ವೌಂಟ್ ವರ್ನಂಗೆ ಪಂಡಿತಜಿಯವರು ಆ ಮೇಲೆ ಅನೆರಿಕದ ಉಚ್ಚ ಗೌರವದಾಯಕ ಯೋಧ ದಫನ ಭೂಮಿಯಾಗಿರುವ ಆರ್ಲಿಂಗ್ಟನ್ ಸಮಾಧಿ ಕ್ಷೇತ್ರವನ್ನು ಸಂದರ್ಶಿಸಿ, 'ಅಜ್ಞಾತ ಸೋಲ್ಜರ'ನ ಸಮಾಧಿಗೆ ಶಾಲು ಸಮರ್ಪಣೆ ಮಾಡುವರು. ಗುರುವಾರ ಸಂಪ್ರಸಿದ್ಧ ರಾಷ್ಟ್ರೀಯ ಕಲಾಅಂತಸ್ತ್'ನ್ನು ನೋಡಿ ಭಾಷಣವಿತ್ತು. ಸೆನೇಟರ್ ಟೋಮ್ ಕ್ಲೆನ್ನಿಲಿಯವರ ಔತಣ ಸತ್ಕಾರ ಪಡೆದು,ಶುಕ್ರವಾರೇಶನಲ್ ಪ್ರೆಸ್ ಕ್ಲಬ್ಬನ್ನು ಸಂದರ್ಶಿಸುವರು. ಅಲ್ಲಿಯೂ ಔತಣ ಕೂಟ ಮತ್ತು ಪಂಡಿತಜೀಯ ಭಾಷಣವಿದೆ ಆ ಮೇಲೆ ಭಾರತದ ರಾಯಭಾರ ಕಚೇರಿಯಲ್ಲಿ ತನ್ನ ತಂಗಿ ವಿಜಯ ಲಕ್ಷ್ಮಿ ಪಂಡಿತರು ವಿಸರ್ಡಿಸುವ ಮಹಾ ಔತಣ ಕೂಟದಲ್ಲಿ ಭಾಗಿಯಾಗುವರು. ಅಧ್ಯಕ್ಷ ಟ್ರುಮೇನರಿಗೆ ಉಡುಗೊರೆ ಕೊಡಲು ಆದೇ ದಂತದ ಅತ್ಯಮೂಲ್ಯ ಕರಡಿಗೆಯೊಂದನ್ನು ಪಂಡಿತಜಿ ಮೈಸೂರು ಮಹಾರಾಜರಿಂದ ತರಿಸಿಕೊಂಡಿದ್ದಿದೆ. ಶನಿವಾರವಾಶಿಂಗ್ಟನ್ ಬಿಟ್ಟು ನ್ಯೂಯೋರ್ಕಿಗೆ, ಆ ಮೇಲೆ ಅನುಕ್ರಮವಾಗಿ ಅಮೆರಿಕದ ಹಾಗೂ ಕೆನಡದ ನಗರಗಳ ಸಂಚಾರಾರಂಭ.

ನಾಗರಿಕ ಗುಣ ನಡತೆಗಳ ಪರಮಾವಧಿ ಉಚ್ಚತಿ ಮತ್ತು ಭಾರತದ ಹಿಗ್ಗುಣಗಳ ವಿಜಯ ಧ್ವಜ ಹಾರಿಸುತ್ತಾ ಪಂಡಿತ ನೆಹರುಗಳೀಗ ಅಮೆರಿಕದಲ್ಲಿದ್ದಾರೆ.

ನೆನಪಿರಲಿಕ್ಕಲಾಗಿ ಬೆಟ್ಟಿದ ಗಿಡ ಮೂಲಿಕೆಯ (ರಿಜಿಸ್ಟರ್ಡ್) ಒಂದು ಡೋಸ್ ಔಷಧವನ್ನು ತಾ. 5-11-49ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಎಂತಹ ಅಸ್ವಮ-ಗೂರುಬ್ಬಸವು ಕಡಿಮೆಯಾಗುವುದು

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Bramhachari G. Das.

Shri Sidh Bramhacharya,

Sewa Ashram,

P. O. Chitrakot (U. P)

ಅಂತರ್ರಾಷ್ಟ್ರೀಯ ಘಟನೆಗಳು

ಅಂತರ್ರಾಷ್ಟ್ರೀಯ ರಂಗದಲ್ಲಿ ನವೀನ ಘಟನೆಯೆಂದು ತೋರಿಬರುವಂತಹದೇನೂ ನಡೆದಿಲ್ಲವಾದರೂ ದೀರ್ಘಾವಧಿಯಿಂದ ಬೆಳೆಯುತ್ತಾ ಬಂದಿರುವ ಮತ್ತು ಕೊಳೆಯುತ್ತಿರುವ ಸಂಗತಿಗಳೆಲ್ಲವೂ ಹಾಗೆಯೇ ಇವೆ. ಲೋಕದ ಇದಿರುವಾದಿ ಪಾಳಯಗಳೆರಡೂ ತಂತಮ್ಮ ಸ್ಥಿತಿಗತಿಗಳನ್ನು ಭದ್ರಪಡಿಸಿಕೊಳ್ಳುವ ಹೆಂಚಿಕೆ ಮತ್ತು ಇದಿರಾಳಿಯನ್ನು ಮೀರಿ ಬೆಳೆಯುವ ಸ್ಪರ್ಧೆಯಲ್ಲಿರುವಾಗ ಭಾರತವು ಮುಖ್ಯವಾಗಿ ಆಹಾರ ಮತ್ತು ರಕ್ಷಣಾ ವ್ಯವಸ್ಥೆಯಲ್ಲಿ ಶೋಡಗಿಯನ್ನುವುದು ಕಾಣಿಸುತ್ತಿದೆ. ಅಂತೂ ಎಲ್ಲಾ ವಿದ್ಯಮಾನಗಳ ಮೇಲೆ ಚಿಕಿತ್ಸಾತ್ಮಕ ನೋಟವೋಡಿಸುವಾಗ್ಗ ಮೂರನೇ ಮಹಾಯುದ್ಧದ ಪೂರ್ವಸೂಚನೆಗಳು ಒರದು ಕಾಲದಲ್ಲಿ ತೋರಿಬರುತಿದ್ದಷ್ಟು ಈಗ ಕಾಣಿಸುತಿಲ್ಲ. ಶಾಂತಿಸಾಧ್ಯತೆಯ ಸಮೀಪ ಸಥವಾವುದೂ ಗೋಚರಿಸದೆ, ಆಟಂ ಬೋಂಬಿನಂತಹ ಪ್ರಳಯ ಚಿಂತಿನ ಆಟದ ಮಾತು ಬಹಳವಾಗಿ ಕೇಳಬರುತ್ತಿದ್ದ ಪರಸ್ಪರ ದ್ವೇಷಾಸೂಯೆಗಳು ವಿಶೇಷ ಬೆಳೆದಿನೆಯಾದರೂ, ಇದೇ ಕದಡು ವಾತಾವರಣ ಉದ್ದಕ್ಕೂ ಉಳಿದೀತು ಜೊರತು ಸಮೀಪಕಾಲದಲ್ಲಿ ಯುದ್ಧಸ್ಫೋಟವಾಗಲಾರದೆಂಬ ಭರವಸೆಮೂಡುತ್ತಿದೆ ಆದರೂ ಕಾಲಗರ್ಭದಲ್ಲಿ ಏನು ಅಡಗಿದೆಯೋ ಯಾರುಬಲ್ಲ!

ವಿದೇಶ ವಿದ್ಯಮಾನ

ಚೈನದಲ್ಲಿ ಕಮ್ಯೂನಿಸ್ಟ್ ಸೇನೆಗಳು ಚೀನೀ ರಾಷ್ಟ್ರೀಯ ಸರಕಾರದ ಪ್ರಚಲಿತ ರಾಜಧಾನಿ ಕೇಂಟೆನ್ ಕಡೆಗೆ ಭರದಿಂದ ಮುಂದೊತ್ತುತ್ತಿವೆ. ಚಿಯಾಂಗ್ ಸರಕಾರವು ಕೇಂಟನಿನಿಂದ ಚಂಗ್‌ಕಿಂಗಿಗೆ ಪಲಾಯನ ಮಾಡಲು ನಿರ್ಧರಿಸಿದೆ.ಹೋಂಗ್‌ಕೊಂಗಿನಿಂದ ವಿಮಾನಗಳು ಹೋಗಿ ಕೇಂಟನಿನ ರಾಷ್ಟ್ರೀಯ ಸರಕಾರದ ಅಧಿಕಾರಿಗಳನ್ನು ಕುಟುಂಬ ಸಮೇತ ಸಾಗಿಸುತ್ತಿವೆ. ಕಮ್ಯೂನಿಸ್ಟ್ ಸಹಾನುಭೂತಿಯುಳ್ಳ 85 ಮಂದಿ ಆಪರಾಧಿಗಳ ಪಟ್ಟಿಯನ್ನು ಚೈನದ ರಾಷ್ಟ್ರೀಯ ಸರಕಾರವು ತಯಾರಿಸಿದ್ದು, ಅದರಲ್ಲಿ ಈಗಿನ ಕಮ್ಯೂನಿಸ್ಟ್ ಸರಕಾರದ ಅಧ್ಯಕ್ಷ ಮಾವೊ ಟ್ಸೆಟುಂಗ್, ರಿಪಬ್ಲಿಕ್ ಚೈನದ ಸ್ಥಾಪಕರ ವಿಧವೆ ಮೇಡಮ್ ಸನ್-ಯೆಟ್-ಸೆನ್ ಸೊದಲಾದವರ ಹೆಸರುಗಳಿವೆ. ಮೇಡಮ್ ಸನ್‌ಯೆಟ್‌ಸೆನರ ದಸ್ಸಾಗರಿಗೆ ರಾಷ್ಟ್ರೀಯ ಸರಕಾರ ಆಜ್ಞೆ ಹೊರಡಿಸಿದೆ.

ಡಚ್-ಇಂಡೋನೇಶಿಯಾಗಳೊಳಗೆ ಹೇಗ್ಯೂನಲ್ಲಿ ಹಲವು ದಿನಗಳಿಂದ ನಡೆಯುತ್ತಿರುವ ದುಂಡು ಮೇಜು ಸಮ್ಮೇಳನವು ಮಂದ ಗತಿಯಿಂದ ಸಾಗುತ್ತಿದೆ.

ಝೆಕೊಸ್ಲೊವೇಕಿಯದ ಕಮ್ಯೂನಿಸ್ಟ್ ಸರಕಾರವು 'ಭಂಡವಾಳಿಗರ ಶೇಷಾಂಶ'ಗಳೆನ್ನುತ್ತಾ ಅಲ್ಲಿಯ ಧೂರಾರು ಮಂದಿಯನ್ನು ದಸ್ತಗಿರಿ ಮಾಡಿ ನಿರ್ಬಂಧ ಶಿಬಿರಗಳಲ್ಲಿ ಸೇರಿಸುತ್ತಿದೆ. ಕೆಥೋಲಿಕರ ಧರ್ಮಾಧಿಕಾರಿಗಳೇ ಸುಮಾರು 800ಮಂದಿ ದಸ್ತಗಿರಿಯಾಗಿರುವರೆಂದು ತಿಳಿದುಬರುತ್ತದೆ. ಝೆಕೊಸ್ಲೊವೇಕಿಯದ ಕಮ್ಯೂನಿಸ್ಟ್ ಪಕ್ಷ, ಜಡಿಕಾರರಂಗ ಮತ್ತು ಎಲ್ಲಾ ಕ್ಷೇತ್ರಗಳಲ್ಲೂ ಆಪಾಯ ಪ್ರವಾರಿಕ ಅದಲು ಬದಲಾವಣೆಗಳು ಮಿಂಚುವೇಗದಿಂದ ಜಡಿದಿವೆ.

ರಶ್ಯದ ನಾಲಿನ ಪೂರ್ವ ಜರ್ಮನಿ ಭಾಗಗಳಿಗಾಗಿ ರಶ್ಯದಿಂದ ನಿರ್ದೇಶಿಸಲ್ಪಟ್ಟಂತೆ ಅಲ್ಲಿಯ ಜನತೆಯ ಸರಕಾರ ಸ್ಥಾಪನೆಗೊಂಡಿದೆ. ಆ ಭಾಗದ ಜರ್ಮನ್ ಜನತಾ ಕೌನ್ಸಿಲಿಗೆ ಸ್ವಾಧಿಕಾರ ನಡೆದು ಶಾಸನ ನಿರ್ಮಾಪಕಾಧಿಕಾರವುಳ್ಳ 'ಕೆಳಮನೆ'ಯಾಗಿ ಮಾರ್ಪಟ್ಟಿದೆ. ಬರ್ಲಿನಿನಲ್ಲಿದ್ದ ರಶ್ಯನ್ ಸೇನೆಗಳೀಗ ಅಲ್ಲಿಂದ ಹೊರಟುಬರಲಾರಂಭಿಸಿವೆ. ಅಮೆರಿಕಾಂಗ್ಲರ ವಶವಿರುವ ಪಶ್ಚಿಮ ಬರ್ಲಿನ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ರಶ್ಯನ್ ಕ್ಷೇತ್ರದ ಈ ನವ ವ್ಯವಸ್ಥೆಯ ವಿರೋಧವಾಗಿ ಪ್ರದರ್ಶನಗಳಾಗುತ್ತಿವೆ

ಸಂಯುಕ್ತ ರಾಷ್ಟ್ರಸಂಘವಿರುವ ಲೇಕ್ ಸಕ್ಸೆಸ್ ವಲಯದಲ್ಲಿ ಆಟಂಬೋಂಬು ಸಂಬಂಧದ ವಿಶೇಷ ಮಾತುಕತೆಗಳು ಕೇಳಿಬರುತ್ತಿವೆ. ಅಲ್ಲಿ ಭಾರತ ಪ್ರತಿನಿಧಿ ನಾಯಕನಾಗಿರವ ಸರ್. ಬೆನಗಲ್ ನರಸಿಂಗರಾಯರು ಆಟಂ ಬೋಂಬನ್ನು ಬಹಿಷ್ಕರಿಸುವ ಕುರಿತು ತನ್ನ ಸ್ವಪ್ನ ಸೂಚನೆಗಳನ್ನು ಮುಂದಿಟ್ಟಿದ್ದಾರೆ "ಆಟಂ ಬೋಂಬನ್ನು ಬಹಿಷ್ಕರಿಸುವ ಮೂಲಕ ಅಂತರ್ರಾಷ್ಟ್ರೀಯ ನೈತಿಕ ಕಾಯಿದೆಯನ್ನಾ ತರಂಭಿಸಬೇಕು. ಸಂಯುಕ್ತ ರಾಷ್ಟ್ರಸಂಘದ 59 ಸದಸ್ಯ ರಾಷ್ಟ್ರಗಳೂ ಈ ಕುರಿತು ಸರ್ವಪ್ರಯತ್ನಗಳನ್ನು ಮಾಡಬೇಕು" ಎಂದು ವರಾ ಕೇಳಕೊಂಡಿದ್ದಾರೆ.

'ಒಂದು ರಾಷ್ಟ್ರವು ಇನ್ನೊಂದು ರಾಷ್ಟ್ರದ ಒಳ ವಹಿವಾಟುಗಳಲ್ಲಿ ಕೈಹಾಕುವುದನ್ನು ಪ್ರತಿಭಟಿಸಬೇಕು' ಎಂದು ಯುಗೊಸ್ಲೇವಿಯವು ಜಾಗತಿಕ ಸಂಘದ ಜಾಹೀರು ಎಸೆಂಬ್ಲಿಯ ಕಾಯದೇ ಸಮಿತಿಯ ಮುಂದೆ ಸೂಚನೆಯಿಟ್ಟಿದೆ. ರಶ್ಯವು ತನ್ನ ಒಳಾಡಳಿತೆಯಲ್ಲಿ ಕೈಹಾಕುತ್ತಿರುವ ಕುರಿತಾಗಿಯೇ ಯುಗೊಸ್ಲೇವಿಯದ ಈ ದೂರು. ಪೊಲೆಂಡು ಮತ್ತು ಝೆಕೊಸ್ಲೇವೇಕಿಯಾದಲ್ಲಿರುವ ಯುಗೊಸ್ಲೇವಿಯೆ ರಾಯಭಾರಿ ಕಚೇರಿಯ ಕೆಲವರನ್ನು ರಶ್ಯದ ಹಿಂಬಾಲಕ ರಾಷ್ಟ್ರಗಳಾದ ಅವೆರೆಡೂ ಸರಕಾರಗಳು ಹೊಂದಬ್ಬಿದುದಕ್ಕೆ ಪ್ರತೀಕಾರವಾಗಿ ಯುಗೊಸ್ಲೇವಿಯವು ತನ್ನಲ್ಲಿದ್ದ ಝೆಕೊಸೆಕ್ಲೋವೇಕಿಯ ರಾಯಭಾರಿ ಕಚೇರಿಯ ಏವಂಘ್ನೂ ಪೋಲೆಂಡ್ ರಾಯಭಾರಿ ಕಚೇರಿಯ ಎಂಟುಮಂದಿಯನ್ನೂ ಹೊರದೂಡಿದೆ ಕೆಂಪುಸೇನೆಯು ಧಾಳಿಯಿಟ್ಟಲ್ಲಿ ಯುಗೊಸ್ಲೇವಿಯಕ್ಕೆ ಸಂಪೂರ್ಣ ಶಸ್ತ್ರಸಹಾಯ ಕೊಡಬೇಕೆಂದೂ, ಅಲ್ಲಿಯ ಹೋರಾಟವು ಬಾಲ್ಕನಿನ ಸ್ವಳೀಯ ಘರ್ಷಣೆಯೆಂಬುದಕ್ಕಿಂತ ಹೆಚ್ಚಿಗೆ ಹಬ್ಬದಂತೆ ನೋಡಬೇಕೆಂದೂ ಅಮೆರಿಕವು ನಿರ್ಧರಿಸಿದಂತಿದೆ. ರಶ್ಯದ ಸೇನೆಬಾರದೆ, ಅವರ ಹಸ್ತಕಗಳಾದ ಹಂಗೇರಿಯ ಮೇನಿಯಾ, ಬಲ್ಗೇರಿಯಗಳ ಸೇನೆಗಳು ಮಾತ್ರ ನುಗ್ಗಿಬಂದಲ್ಲಿ, ರೆಲಪ್ಟ ಸಶಸ್ತ್ರ ಸೇನೆಯುಳ್ಳ ಯುಗೊಸ್ಲೇವಿಯವು ಅಮೆರಿಕದ ಶಸ್ತ್ರ ಸಹಾಯದಿಂದ ತಡೆದು ನಿಂತೀತೆಂದು ನಂಬಲಾಗಿದೆ.

ಭಾರತ-ಪಾಕಿಸ್ತಾನ

ಕಾಶ್ಮೀರದ ಜೇಂಕೆನಲ್ಲಿದ್ದ ಸಂಸ್ಥಾನದ ವೈರಿ ಶ್ರೀಮಂತನ ಆಭರಣಗಳನ್ನು ಜೀಕಾಯಿದೇಶೀರವಾಗಿ ರಾವಲ್ಪಿಂಡಿಗೆ ಸಾಗಿಸಿದ್ದ ಜನರಲ್ ಮ್ಯಾರಿಸ್ ಡೆಲ್ಪೋಯಿಯನ್ನು ಪೇರ್ಮನೆಯ ಕುರಿತು ಕಾಶ್ಮೀರ ಸರಕಾರದಂತೆಯೇ ಭಾರತ ಸರಕಾರವೂ ಗಂಭೀರ ಯೋಜನೆಮಾಡಿ ಕಾಶ್ಮೀರ ಕಮಿಶನಿಗೂ ಸಂಯುಕ್ತಸಂಘದ ಭದ್ರತಾ ಕೌನ್ಸಿಲಿಗೂ ಸಂಗತಿಯನ್ನು ನಿರೂಪಿಸಿದ್ದಿತು. ಈಗ ಕಾಶ್ಮೀರ ಕಮಿಶನಿನವರು, ಈ ಕುರಿತು ಉದಾಹರಣೆ ಕೊಡವಂತೆ ಜನೆವಾದಿಂದ ಡೆಲ್ಪೋಯಿಗೆ ಸಾಜನೆ ಕೊಟ್ಟಿದ್ದಾರೆ. ಜಾಗತಿಕ ಸಂಘದ ಕಾರ್ಯದರ್ಶಿ ಟ್ರಿಗ್ವಿಲೀಯವರು ಈ ಕುರಿತು ಭಾರತ ಪ್ರತಿನಿಧಿಗಳೊಡನೆ ವಯರ್ಲೆಸ್ ಮಾಡಿಸಿದ್ದಾರೆ. ಇತ್ತ ತಾನು ಕೆನಡದವನೆನ್ನುತ್ತ ಶ್ರೀ ವಿಂಗ್ ಕಮಾಂಡರ್ ಸ್ಮಿತ್ ಎಂಬವನು ಕ್ರಮಬದ್ಧ ಪರ್ಮಿಟ್ ಇಲ್ಲದೇನೇ ಅಮೇರಿಕದ ವಿಮಾನವೊಂದರಲ್ಲಿ ರಾವಲ್ಪಿಂಡಿಯಿಂದ ಶ್ರೀನಗರಕ್ಕೆ ಸೆಪ್ಟೆಂಬರ್ 17ರಲ್ಲಿ ಬಂದು ಕಾಶ್ಮೀರ ಕಮಿಶನಿನವರನ್ನು ಕೂಡಿಕೊಂಡಿದ್ದನ್ನು ಕುರಿತು ಕಾಶ್ಮೀರ ಸರಕಾರವು ಭಾರತ ಸರಕಾರಕ್ಕೆ ದೂರುಕೊಟ್ಟಿದೆ. ಈ ಕುರಿತಿಗೆ ತರ್ಕ ಮತ್ತು ವಿಚಾರಣೆಗಳು ನಡೆದಿವೆ ಭಾರತರಂಗದಲ್ಲಿ ವಿದೇಶಿಯರು ಕೆಲವರು ಇಂತಹ ಫೋರ್ಜರೀ ಆರೋಪಗಳನ್ನಾ ರಾಸ್ತ್ರೀಯವುದು. ನಿಜಕ್ಕೂ ಪೋಜಪ್ರೇಯ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಸ್ಥಳೀಯ ಏಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ರಾಜ್ಯ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತಿರುವಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಿಂದ
ನಾವು ಜನತಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ನವಯುಗ
ಉಡುಪಿ, ೧೩ರುವಾರ್ಯರಿಷ-೧೦-'೪೯

ಕಾಂಗ್ರೆಸ್ ಎತ್ತ?

ಕಾಂಗ್ರೆಸ್ ಸಂಸ್ಥೆಯು, ಫೇಸಿಸ್ಟ್ ಮನೋವೃತ್ತಿಯವರ ಹಾಗೂ ಅಪ್ರಾಗತಿಕರ ಕಡೆಗೆ ತೇಲಹತ್ತಿದೆ ಎಂಬ ಅಪವಾದವನ್ನು ಪುಷ್ಟೀಕರಿಸುವ ನಿದರ್ಶನಗಳು ಈ ಕಾಲದಲ್ಲಿ ಮೇಲಿಂದ ಮೇಲೆ ತೋರಿ ಬರುತ್ತಿರುವುದು ನಿಜಕ್ಕೂ ಶೋಚನೀಯ. ಆರ್. ಯಸ್. ಯಸ್. ಜನರನ್ನು ಕಾಂಗ್ರೆಸ್ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೆಂದು, ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇತ್ತೀಚೆಗೆ ಮಾಡಿರುವ ನಿರ್ಧಾರವು ಅಂತಹ ನಿದರ್ಶನಗಳಲ್ಲೊಂದು. ಈ ಬಾರಿ ತು ರಾಷ್ಟ್ರದ ಪ್ರಗತಿಶೀಲ ಚಿಂತಕರೆಲ್ಲರೂ ಶಂಕೆ, ಸಂದೇಹಗಳಿಗೀಡಾಗಿದ್ದಾರೆ. ಕಾಂಗ್ರೆಸ್ ಸಂಸ್ಥೆಯ ಮುಖ್ಯ ಕಾರ್ಯದರ್ಶಿ ಶ್ರೀ ಕಲಾ ವೆಂಕಟಂಕಾಯರು ಮಾಡಿರುವ ಸ್ಪಷ್ಟೀಕರಣವು, ಈ ಸಂದೇಹವನ್ನು ನಿವಾರಿಸುವ ಬದಲಿಗೆ ಹೆಚ್ಚಿಸುತ್ತಿದೆ. "ಆರ್. ಯಸ್. ಯಸ್. ಎಂಬುದು ಮುಸ್ಲಿಂಲೀಗ್, ಹಿಂದೂ ಮಹಾಸಭಾ, ಅಥವಾ ಕಮ್ಯೂನಿಸ್ಟ್ ಪಕ್ಷದಂತೆ ಪ್ರತ್ಯೇಕ ಸದಸ್ಯತ್ವ, ಫೀಸು ಮತ್ತು ಕಾರ್ಯಕ್ರಮಗಳುಳ್ಳ ಒಂದು ರಾಜಕೀಯ ಪಕ್ಷವೇನೂ ಅಲ್ಲ. ಆದ್ದರಿಂದ ಆರ್. ಯಸ್. ಯಸ್. ನ ಒಬ್ಬ ಸದಸ್ಯನಿಗೆ ಕಾಂಗ್ರೆಸ್ ಸದಸ್ಯನಾಗಿಯೂ ಸೇರಿಕೊಳ್ಳುವ ಹಕ್ಕು ಸಂಪೂರ್ಣವಿದೆ" ಎಂದು ಶ್ರೀ ಕಲಾವೆಂಕಟರಾಯರ ಸ್ಪಷ್ಟೀಕರಣ ಕಾಂಗ್ರೆಸಿನ ಘಟನೆಯ ಮೇಲೆ ಬರಹ ಮೂಲಕ ವಿಶ್ವಾಸ ವ್ಯಕ್ತಪಡಿಸಿ, ಪ್ರಾಯ 21 ಮತ್ತು ಹೆಚ್ಚಾದ ಯಾವನೇ ಒಬ್ಬನೂ ಕಾಂಗ್ರೆಸಿನ ಪ್ರಾಥಮಿಕ ಸದಸ್ಯನಾಗಬಹುದೆಂಬ ಅಂತಹ ಪ್ರಾಥಮಿಕ ಸದಸ್ಯನು ಪ್ರತ್ಯೇಕ ಸದಸ್ಯತ್ವ ಮತ್ತು ಫೀಟನೆಬದ್ಧ ಕಾರ್ಯಕ್ರಮವಿಂದ ಬೇರೊಂದು ರಾಜಕೀಯ, ಜಾತೀಯ ಪಕ್ಷಕ್ಕೆ ಸೇರಿದವನಲ್ಲವಾದರೆ, ಕಾಂಗ್ರೆಸಿನ ಹೊಣೆಗಾರ ಸದಸ್ಯನೂ ಆಗಬಹುದು- ಎಂದು ಕಾಂಗ್ರೆಸ್ ನಿಬಂಧನೆಗಳಲ್ಲಿರುವುದು ನಿಜ. ಕೇವಲ ಈ ಕ್ರಮ ನಿಯಮಗಳ ಬರೆಗಲ್ಲಿನಿಂದ ಪರೀಕ್ಷಿಸುವುದಾದರೂ ಕಾಂಗ್ರೆಸ್ ಕಾರ್ಯದರ್ಶಿಗಳನ್ನು ವಂತೆ ಆರ್. ಯಸ್. ಯಸ್. ಸಂಸ್ಥೆಯವರನ್ನು ನುಂಜೂರು ಮಾಡಿಕೊಳ್ಳಲು ಸಾಧ್ಯವೇ ಎಂಬುದು ನಿಜಕ್ಕೂ ಸಂಶಯಾಸ್ಪದ. ಇಲ್ಲಿ ಆ ಕುರಿತು ತರ್ಕ ಅನಗತ್ಯ. ಮನಸ್ಸಿದ್ದರೆಯಿತು- ಆ ಮೇಲೆ ವಾದಪ್ರತಿವಾದದಿಂದ ಕಾಂಗ್ರೆಸ್, ಆರ್. ಯಸ್. ಯಸ್. ಕಮ್ಯೂನಿಸ್ಟ್, ಇವುಗಳ ಸ್ಥಾನಗಳನ್ನು ಪರಸ್ಪರ ಬದಲಾಯಿಸಿ ತೋರಿಸುವುದು ಕೂಡಾ ಸಾಧ್ಯವಿದೆ. ಯಾವ ಸಂಸ್ಥೆಗೇನೇ ಆದರೂ ಬೇಕಾದ ಬಣ್ಣವಾಗಿ ಬಳಿಯಲಾಗುವಂತೆ ನಿಯಮ ನಿಬಂಧನೆಗಳನ್ನು ಎಳೆಯಬಹುದು. ಆದರೆ ಸತ್ಯಸ್ಥಿತಿಮತ್ತು ನ್ಯಾಯ ಮಾತ್ರ ಇಂತಹ ವರ್ಗಾವರ್ಗಿಗೆ ಒಳಗಾಗುವಂತಹವಲ್ಲ. ಇದ್ದರಿಂದ ಈ ಸಂದರ್ಭದಲ್ಲಿ ಜನತೆಗೆ ಅರ್ಥವಾಗುವ ಮಾತುಗಳನ್ನೇ ಆಡುವದು ವಿವೇಕ. ಕಾಂಗ್ರೆಸ್ ನಿಬಂಧನೆಗನುಸಾರವಾಗಿ ಕಾಂಗ್ರೆಸ್ ಸದಸ್ಯರನ್ನು ಸೇರಿಸುವೆನೆನ್ನುವವರು, "ಆರ್. ಯಸ್. ನವರನ್ನು ಕರೆದು ಕೊಳ್ಳುವೆವು." ಎಂದಿಲ್ಲ ನ್ಪಷ್ಟೀಕರಣ ಹೇಳಬೇಕೆಂದಿರಲಿಲ್ಲ. ಈ ಮೊದಲು ಮಾಡದಿದ್ದುದನ್ನು ಈಗ ಮಾಡಲು ಹೊರಟಿದ್ದಾರೆಂಬುದರಿಂದಲೇ ಹಾಗನ್ನುವ ಅಗತ್ಯ ಬಿದ್ದಿದೆ. ಈ ಬದಲಾವಣೆಗೆ ಕಾರಣವೇನು? ಈ ಮೊದಲು ಕಾಂಗ್ರೆಸಿನೊಳಗೆ ಆರ್. ಯಸ್. ಯಸ್. ನವರಿಗೆ ಪ್ರವೇಶ ಕೊಡದ್ದುದಿದ್ದರೆ ಅದು ಕಾಂಗ್ರೆಸ್ ನಿಬಂಧನೆಗಳಿಗೆ ವಿರುದ್ಧವಾಗಿಯೆ? ಅಥವಾ ಈಗ ತಾನೆ ಕಾಂಗ್ರೆಸ್ ನಿಬಂಧನೆಗಳಿಗೆ ಅನುಕೂಲವಾಗುವ ರೀತಿಯಲ್ಲಿ ಆರ್. ಯಸ್. ಯಸ್. ನವರ ಧ್ಯೇಯೋದ್ದೇಶಗಳು ಮಾರ್ಪಟ್ಟುವೆ? ನಿಷ್ಪಾಂಜನೆಯಿಂದ ಹೇಳುವುದಾದರೆ ಕಾಂಗ್ರೆಸ್-ಆರ್. ಯಸ್. ಯಸ್. ಗಳೊಳಗಿನ ಈ ವ್ಯವಹಾರಗಳಲ್ಲಿ ಕಾಂಗ್ರೆಸ್ಸೇ ಬುದ್ಧಿಬದಲಾಯಿಸುತ್ತಾ ಬಂದಿದ್ದು ಹೊರತು, ಆರ್. ಯಸ್ಸೆಸ್ ಅಲ್ಲ. ಕಾಂಗ್ರೆಸ್ ಸಂಕಾರದ ಅಡಚಣೆಗಳೇ, ಕಾಂಗ್ರೆಸ್ ಸಂಸ್ಥೆಯ ಆಚರಣೆಗಳಲ್ಲವಾದರೂ 'ಆರೆಸ್ಸೆಸ್' ಸಂಬಂಧದ ಸರಕಾರೀ ಧೋರಣೆಯು ಎಲ್ಲಾ ವಿರುದ್ಧಗಳಿಗೆ ಹಿನ್ನೆಲೆಯಾಗಿ ಕಾಂಗ್ರೆಸ್ ಅಧಿನುತವಿದ್ದೇ ಇದ್ದಿತು. ಆರೆಸ್ಸೆಸ್ ರಾಷ್ಟ್ರದ ಆಪಾಯಕಾರೀ ಸೇನಾ ಮರ್ಜಿಯ ಸಂಸ್ಥೆಯೆಂದೊಮ್ಮೆ ಬಹಿಷ್ಕಾರ ರಬಿತ್ತು-"ಅದು ಸಮಾಧಾನಕರ ಆಶ್ವಾಸನೆಕೊಟ್ಟಮೆಲೆ" ಎಂಬುದರಿಂದ ಆ ಬಹಿಷ್ಕಾರ ರದ್ದಾಯಿತು-ಈಗ ಕಾಂಗ್ರೆಸಿನೊಳಗೆ ಸೇರಿಕೊಳ್ಳುವ ಯೋಗ್ಯತೆ ಅದಕ್ಕೆದೆ, ಎಂದು ಕಾಂಗ್ರೆಸಿನ ಕಣ್ಣಿಗೇನೇ ತೋರಿಬಂದಿದೆ. ಈ ರೀತಿ ಅಂದಿನಿಂದೀವರೆಗೂ, ಆರೆಸ್ಸೆಸ್ಸನ್ನು ಕಾಲಡಿಗೆ ಹಾಕಿಕೊಳ್ಳುವುದರಿಂದಾರಂಭಿಸಿ, ತಲೆಯ ಮೇಲೆ ಹೊತ್ತುಕೊಳ್ಳುವ ವರೆಗಿನ ಎಲ್ಲಾ ವ್ಯಾಯಾಮಗಳನ್ನೂ ಕಾಂಗ್ರೆಸ್ಸೇ ಮಾಡಿದುದು ತೋರಿಬಂದಿದೆ ಹೊರತು ಆರೆಸ್ಸೆಸ್ ಅಲು ಗಾಡಿದುದಿಲ್ಲ. "ನಮ್ಮ ಧ್ಯೇಯ, ಧೋರಣೆ, ಕಾರ್ಯಕ್ರಮಗಳಲ್ಲಿ ಯಾವ ಬದಲಾವಣೆಯೂ ಇಲ್ಲ. ನಾನು ಬಂಧನಿಶಿ ಅಥವಾ ಬಾಯ್ದೆರೆಯಾಗಿ ಯಾವ ಹೊಸ ಆಶ್ವಾಸನೆಯನ್ನೂ ಕೊಟ್ಟಿದ್ದಿಲ್ಲ" ಎಂದು ಆರೆಸ್ಸೆಸ್ ಸರಸಂಘಚಾಲಕ ಶ್ರೀ ಗೊಲ್ವಾಲ್ಕರರು ಬಿಡಿಸಿ ಬಿಡಿಸಿ ಹೇಳಿದ್ದಾರೆ ಈಗ ಪ್ರಶ್ನಿಸಬೇಕಾದುದು 'ಕಾಂಗ್ರೆಸಿಗಾದುದೇನು?' ಎಂದಲ್ಲವೆ, ಬೇರೆಯವರನ್ನು ವಿಚಾರಿಸುವ ಅಂಶವಿಲ್ಲ. ಕಾಂಗ್ರೆಸಿಗೀಗ ಆಗಿರುವದೇನೆಂಬುದೂ ಅರ್ಥವಾಗುವ ವಿಷಯವೇ. ಅದರೊಳಗೆ ಗೈತಿಸ್ಟು ಶಿಥಿಲಗೊಂಡಿದೆ; ಸ್ವಾರ್ಥ, ಅಧಿಕಾರ ಲಾಲಸೆ ಬೆಳೆದು ಹೋಗಿದೆ; ಸಮಾನತೆ ಮತ್ತು ಪ್ರಗತಿಗಂಜುವ ಅಪ್ರಾಗತಿಕರ ಸಂಖ್ಯೆ ಹೆಚ್ಚಿದೆ; ಕಾಂಗ್ರೆಸಿನ ಜನತಾ ಸಂಪರ್ಕ ಕಾರ್ಯಕ್ಷೇತ್ರ ಹಿಡಿಲುಬಿದ್ದಿದೆ; ಇವೆಲ್ಲಾ ದೋಷಗಳ ಮೂಲಕ ತೋರಿ ಬಂದಿರುವ ಅಭಾವವನ್ನು ತಮಗನುಕೂಲವಾಗುವ ವಿಧಾನದಿಂದ ತುಂಬಿಸಿಕೊಳ್ಳದಿದ್ದರೆ ತಮ್ಮ ಭವಿಷ್ಯ ಭದ್ರವಾಗಲಾರದೆಂಬ ಕೆಲವರ ಆತುರವೇ ಆರೆಸ್ಸೆಸ್ಸಿಗೆ ಆಶ್ವಾಸನ ಕೊಟ್ಟತೆಂದು ಊಹಿಸಲಡ್ಡಿಯಿಲ್ಲ. ರಾಷ್ಟ್ರವ್ಯಾಪೀ ಸಂಸ್ಥೆ ಕಾಂಗ್ರೆಸಿನೊಳಗೆ ಸಮಕಾಲೀನ ಭಾವನೆಯವರಿಂದಾರಂಭಿಸಿ, ಫೇಸಿಸ್ಟ್ ಮನೋವೃತ್ತಿಯವರ ವರೆಗಿನ ಎಲ್ಲಾ ವರ್ಗಗಳವರೂ ಸೇರಿಕೊಂಡಿರುವುದು ಸ್ವಾಭಾವಿಕ. ದೇಶವಿಭಜನಾ ಕಾಲದ ಆಂದೋಲನಗಳ ಪ್ರತಿಕ್ರಿಯೆಯಾಗಿ ಕಾಂಗ್ರೆಸಿನೊಳಗೆ ಧಾರ್ಮಿಕ ಫೇಸಿಸ್ಟ್ ಭಾವನೆಯವರ ಸಂಖ್ಯೆ ಬೆಳೆದಿದೆ. ಇಂಥವರ ಪ್ರಭಾವವನ್ನು ಮುರಿದು ತಾವು ಮೇಲ್ಮೈಯಾಗಿ, ಕಾಂಗ್ರೆಸನ್ನು ಜನತಾ ಹಿತಸಾಧಕ ಉಪಕರಣವಾಗಿ ಮಾರ್ಪಡಿಸಬಹುದೆಂಬ ವಿಶ್ವಾಸವೊಂದರಿಂದಲೇ ಪ್ರಗತಿಶೀಲರೂ ಕಾಂಗ್ರೆಸಿಗರಾಗಿ ಉಳಿದಿದ್ದಾರೆ. ಈ ವರ್ಗದವರ ಬಯಕೆಯು ಎಂದೂ ಕೈಗೂಡದ ರೀತಿಯಲ್ಲಿ ತವ್ಮನ್ನೇ ತುಂಬಿಸಿಕೊಳ್ಳುವ ಮೂಲಕ ಕಾಂಗ್ರೆಸನ್ನು ಧನಿಕ ಧಾರ್ಮಿಕ ಲಾಲಸೆಗಳ ಆಶ್ರಯವಾಗಿಟ್ಟುಕೊಳ್ಳಬೇಕೆಂದು ಅಪ್ರಾಗತಿಕ ಪ್ರಯತ್ನವಿದೆಯೆ ಸಾಹಸದಲ್ಲಿ ಅವರಿಟ್ಟಿಂದು ದೊಡ್ಡ ಹೆಜ್ಜೆಯೇ ಆರೆಸ್ಸೆಸ್ಸಿನವರಿಗೆತ್ತ ಆಮಂತ್ರಣ. 'ಶಾಂತಮತ್ತು ನ್ಯಾಯಬದ್ಧ ವಿಧಾನಗಳಿಂದ ಸಹಕಾರೀಪದ್ಧತಿಯ ಆರ್ಥಿಕ, ಸಾಮಾಜಿಕ ಪ್ರಗತಿ ವತ್ತು ಸಮಾನತೆಯನ್ನು ಸ್ಥಾಪಿಸಿ, ಜಾತ್ಯಾತೀತ ಜನಕಾಂಜ್ಯವನ್ನು ಕಟ್ಟುವ ಗುರಿಯಟ್ಟುಕೊಂಡಿರುವ ಕಾಂಗ್ರೆಸು, 'ಆದರೋಳಗೆ ಪ್ರಭಾವ ಬೀರುವ ಸ್ಥಾನ ಗಳಿಸಿಕೊಂಡಿರುವ ಅಪ್ರಾಗತಿಕರ ದೆಸೆಯಿಂದಾಗಿ ಇಂತಹ ಅಡ್ಡಹಾದಿ ಹಿಡಿಯಹತ್ತಿರುವುದು ನಿಜಕ್ಕೂ ಶೋಚನೀಯ. ಕಾಂಗ್ರೆಸಿನೊಳಗೆ ನಿಸ್ವಾರ್ಥ ಸೇವಾ ಬದ್ಧಿ, ವಿಶಾಲ ಜನತಾ ಭಾವನೆ, ಕಾರ್ಯದಕ್ಷತೆ ಕಡಿಮೆಯಾಗಿರುವದೇ ಇಂದು ಎಲ್ಲರ ಕಣ್ಣಿಗೂ ಹೊಡೆಯುತ್ತಿರುವ ವಿಷಯ. ಇಂತಹ ಸ್ಥಿತಿಯಲ್ಲಿ ಆರೆಸ್ಸೆಸ್ಸಿನವರಂತಹ ಸಂಘಟನಾ ಶಕ್ತಿಯುಳ್ಳ, ಸಂಕುಚಿತ ಭಾವನೆಯವರನ್ನು ಕೂಡಿಕೊಳ್ಳುವುದೆಂದರೆ, ಮೇಲಿನ ದೋಷಗಳನ್ನೇ ಗುಣಗಳೆಂದು ಗಣಿಸಿ ಅಂಗೀಕರಿಸಿಕೊಂಡಂತೆಯೇ ಪರಿ. ಕಾಂಗ್ರೆಸ್ ಸರಕಾರಗಳಿಂದ ನಿರೀಕ್ಷಿಸಿದ್ದಷ್ಟು ಜನಹಿತ ಕಾರ್ಯಗಳಾಗಿಲ್ಲವೆಂಬ ಆಕ್ಷೇಪ ಇಂದಿದೆ— ಕಾಂಗ್ರೆಸಿನೊಳಗೆ ಸ್ವಾರ್ಥಿ ಶ್ರೀಮಂತರು, ತುಂಬಿಕೊಂಡಿದ್ದಾರೆಂಬ ಜಿಗುಪ್ಸೆ ಮತ್ತೊಂದೆಡೆ-ಹಬ್ಬಿಹೋಗಿರುವ ಕಾಲವಿದು; ಸಾಲದುದಕ್ಕೆ ರಾಷ್ಟ್ರವನ್ನು, ಭದ್ರಭವಿಷ್ಯದತ್ತ ಮುನ್ನಡೆಸುವ ಬದಲಿಗೆ, ಗತಯುಗದ ಕಡೆಗೆ ಹಿಂದೂಡಬೇಕೆನ್ನುವ ಆರೆಸ್ಸೆಸ್ಸಿನಂತಹ ಧರ್ಮಾಂಧರೊಡನಿನ್ನೆದರೊಳಗೆ ಸೇರಿಕೊಳ್ಳುವರೆಂಬಂಯಿತು. ಶಿಸ್ತು, ಸಂಘಟನೆಯ ಮಟ್ಟಿಗೆ ಇಂದಿನ ಕಾಂಗ್ರೆಸಿಗರಿಗಿಂತ ಹೆಚ್ಚಿನವರಿರುವ ಆರೆಸ್ಸೆಸ್ಸಿನವರೇ ಕಾಲಕ್ರಮೇಣ ಕಾಂಗ್ರೆಸನ್ನು ಆಕ್ರಮಿಸಿಕೊಳ್ಳುವುದು ಸಂಭವನೀಯ. ಪಂಡಿತ ನೆಹರೂಗಳಂತಹ ಸರ್ವಮಾನ್ಯ ಆದರ್ಶ ನಾಯಕರು ಶಪ್ತಿಹೋಗಿ, ಕಾಂಗ್ರೆಸಿಗರು ಸಮಾನ ಪಂಥಿಯಾಗಿ ತೋರಿಬರುವ ಕಾಲದಲ್ಲಂತೂ ಆರೆಸ್ಸೆಸ್ಸಿನಂತಹ ಸಂಘಟಿತ ದುಶ್ಶಕ್ತಿಗಳ ಕೈಮೇಲಾಗುವದು ಖಂಡಿತ. ಅಂತೂ-ಕಾಂಗ್ರೆಸಿನ ಈ ಹೆಜ್ಜೆ ಅಧೋಗತಿಯ ಕಡೆಗೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ ಆದರೂ ಈಗ ಮತ್ತು ಇನ್ನೂ ಕೆಲಕಾಲದ ವರೆಗೆ ಪರಿಸ್ಥಿತಿ ಕೈಮೀರಿ ಹೋಗುವಂತಿಲ್ಲ. ಪ್ರಗತಿ ಚಿಂತಕರೆಲ್ಲರೂ, ಈ ಅವಧಿಯಲ್ಲೇ ಕಾಂಗ್ರೆಸಿನ ಈ ಅಧೋಗತಿಯನ್ನು ತಪ್ಪಿಸಿ, ಅದನ್ನೆ ಜನಹಿತಸಾಧಕ ಶುದ್ಧ ಹಾಗೂ ಸಶಕ್ತ ಸಂಸ್ಥೆಯಾಗಿ ಮೇಲೆತ್ತುವ ಸರ್ವ ಪ್ರಯತ್ನಗಳನ್ನು ಮಾಡಬೇಕು. ಕಾಂಗ್ರೆಸಿನೊಳಗೆ ಹೊಸ ಕಲ್ಮಷಗಳು ಸೇರಿಕೊಳ್ಳದಂತೆ ಶಕ್ತವಿದ್ದ ಸಾಹಸಗಳೆಲ್ಲವನ್ನೂ ಮಾಡುವುದರಿಂದಿಗೆ, ಇಂಥ ಕಸ ಕಂಟಕಗಳನ್ನೂ ಪೂರ್ಣವಾಗಿ ಝಾಡಿಸಿಕೊಳ್ಳಬೇಕು. ಜನತಾ ಹಿತಚಿಂತಕರಿಂದ ಕಂತಹ ಪ್ರಯತ್ನವಾಗಿನೆ ಹೋದರೆ, ಅಥವಾ ಅವರೀಆರ್ಯದಲ್ಲಿ ಸೋಲಭವಗೊಂಡರೆ, ಕಾಂಗ್ರೆಸಿನ ಪತನ ಪೂರ್ಣಗೊಳ್ಳುವದಂತೂ ಖಂಡಿತ. ಜನತೆಗಾಗಿ ಸಂಸ್ಥೆ ಹೊರತು ಸಂಸ್ಥೆಗಾಗಿ ಜನತೆಯಲ್ಲ; ಜನತೆಯದಾಗಿರುವ ಮತ್ತು, ಆಗಿರಬೇಕಾದ ಕಾಂಗ್ರೆಸು ಜನತಾಭ್ಯುದಯಕ್ಕಾಗಿ ಮಾರ್ಪಡುವ ಕಾಲ ಬಂದರೆ, ಆಗಲೂ ಜನತೆಯು ಅದರ ಹಿಂದೆ ನಿಂತಿತೆಂಬ ಭರವೆ ಬೇಡ. ಆದ್ದರಿಂದ ಸರ್ವರೂ ಈ ವಿದ್ಯಮಾನಗಳ ಕಡೆಗೆ ಲಕ್ಷ್ಯ ಕೊಡಬೇಕಾದುದು ಅಗತ್ಯ.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.
S. C. No. 287/49
ಯು. ಕುಂಞಂಬು ನಂದಿಯಾರ, ಚಂದು ನಂಬ್ಯಾರ ಮಗ. ತೆಳಂಗ್ರೆಗ್ರಾಮ್ದ ಪಳ್ಳಿಕ್ಕಲ್ — ವಾದಿ
ಟಿ. ಅಬ್ದುಲ್ಲ. ಮೊದಿಂಕುಂಞ ಬ್ಯಾರಿ ಮಗ, ತೆಳಂಗ್ರೆ ಗ್ರಾಮ್ದ ತೆರುವತ್ತೆ — ಪ್ರತಿವಾದಿಯವರೊಳಗೆ
ವಾದಿಯು ಈ ಮೂಲ್ಕ ತಿಳ್ಪುವನೇನಂದ್ರೆ ಪ್ರತಿವಾದಿಯು ವಾದಿಯಿಂದ ಪಡೆದ ಕಬ್ಜಾದ ಆಡಗಳ ಕ್ರಯಜಿ ಅ್ಯನಜನಲ್ಲಿ ವ್ಯಲ ಬಂದದ್ದು ಕೆಲ್ದು ಬಾಕಿ ಬರತಕ್ಕ ಅ್ಸಲು ಬಡ್ಡಿ ರೂಪ್ಯಾ 80-0-0 ನ್ನು ಬಂಮಾಡಿಕೊಳ್ಳುವರೆ ವಾಕ್ಸು ಮಾಡಿದ ನೋಲ್ಟಂಡಜ್ಞಾಪ್ಯವು ತಾ 24-10-49ಕ್ಕೆ ತನ್ನಿಗೆ ಯಿಟ್ಟ್ರುವುದರಿಂದ ಆ ದಿವ್ಸ ಹಗ್ಗ್ಲು 10ಗಂಟೆಗೆ ರ ಕೋರ್ಟು ಮುಂದೆ ಹಾಜ್ರು ಆಗುವರೆ ತಪ್ಪಿದಲ್ಲಿ ಎಕ್ಸಪಾರ್ಟಿ ಮಾಡೋಗುವಾದೀತು ಎಂಬ ಸಮ್ಮತಿ ಈ ಮೂಲ್ಕ ತಿಳಿಸುತ್ತಾಗಿಯಜ.

B. Amrita Rao,
Vakil for Plaintiff.
Kasaragod 11—10—49

ಭಾರತ ಸರಕಾರದ ರಕ್ಷಣಾ ಮಂತ್ರಿಗಳ ನಿರ್ದೇಶಾನುಸಾರವಾಗಿ ರಾಷ್ಟ್ರದ ಪ್ರತಿಯೊಂದು ಪ್ರಾಂತ್ಯದಲ್ಲೂ 'ಪ್ರಾದೇಶಿಕ ಸೇನೆ' ಅಥವಾ 'ದ್ವಿತೀಯ ರಕ್ಷಣಾ ಸಂಗ್ರಹ'ಗಳ ರಚನೆಯಾಗುತ್ತಿದೆ. ಕಳದ ವಾರ ಮದ್ರಾಸಿನಲ್ಲಿ ಈ ಸೇನಾತಯಾರೀ ಕಾರ್ಯವು ಉದ್ಘಾಟನೆ ಮಾಡುತ್ತಾ ಪ್ರಧಾನ ಮಂತ್ರಿ ಶ್ರೀ. ಪಿ. ಯಸ್. ಕುಮಾರಸ್ವಾಮಿ ರಾಜರು ಮದ್ರಾಸಿನಿಂದ ಅರಾಶ ವಾಣಿ ಮೂಲಕವೂ, ಮದ್ರಾಸ್ ಗವರ್ನರರು ತಂಜಾವೂರಿನ ತನ್ನ ಭಾಷಣದಲ್ಲೂ ಯುವಕರೆಲ್ಲರೂ ಈ ಗೃಹ ಸೇನೆಗೆ ಸೇರಬೇಕೆಂದು ಕೇಳಿಕೊಂಡಿದ್ದಾರೆ. ಇದೇ ತಾ. 9ರಲ್ಲಿ ನವದೆಹಲಿಯಲ್ಲಿ ಗವರ್ನರ್ ಜನರಲ್ ರಾಜಾಜಿ ಪ್ರಾದೇಶಿಕ ಸೇನಾ ರಚನೋದ್ಘಾಟನೆ ನಡೆಸಿ ಅದೇ ಮಾದರಿಯ ವಿಜ್ಞಾಪನೆ ಮಾಡಿಕೊಂಡಿದ್ದಾರೆ. ಯುದ್ಧ ಕಾಲಗಳಲ್ಲಿ ಕ್ರಮ ಬದ್ಧ ಸೇನೆಗಳು ಹೋರಾಟರಂಗಗಳಲ್ಲಿರುವಾಗ, ಒಳಗಡೆಯ ವ್ಯವಸ್ಥಾವಾಲನೆ, ಕರಾವಳಿ ರಕ್ಷಣೆ ಮುಂತಾದ ಕಾರ್ಯನಿರ್ವಹಣಕ್ಕಾಗಿ ರಚಿಸಲ್ಪಡುವ ಗೃಹ ರಕ್ಷಕ ಸೇನೆಯಿದು. ಈಗ ರಾಷ್ಟ್ರದಲ್ಲೆಲ್ಲಾ ರಚಿಸಲ್ಪಟ್ಟಿರುವ 'ಹೋಮ್ ಗಾರ್ಡ್ಸ್' ಮೇಲೆ ಎಂತಹಜೋಲೀಸ್ ಕಾರ್ಯಭಾರ ಹೊಣೆಗಾರಿಕೆಯಿರುವುದೋ, ಹಾಗೆಯೇ ಪ್ರಾದೇಶಿಕ ಸೇನೆಗಳಿಗೆ ಸೇನಾ ಕಾರ್ಯಗಳ ಜವಾಬ್ದಾರಿಯಿದೆ. ಪ್ರಾಯ 18ರಿಂದ 35ರ ಒಳಗಿನ ಯಾವ ನಾಗರಿಕನೂ ಈ ದಳಕ್ಕೆ ಸೇರಬಹುದು. ಮಾಜಿ ಸೋಲ್ಜರರಿಗೆ ಈ ವಯೋ ನಿರ್ಬಂಧವಿಲ್ಲ. ಕ್ರಮಬದ್ಧ ದಳಗಳಂತೆಯೇ ಈ ಸ್ಥಳೀಯ ದಳಗಳಿಗೂ ಎಲ್ಲ ವಿಧದ ಶಸ್ತ್ರಗಳು ಕೊಡಲ್ಪಡುವವು. ಎಲ್ಲಾ ವರ್ಗದವರ್ತ ಅವಶ್ಯಕತೆಯೂ ಇದ್ದಿದೆ. ಪ್ರಥಮತಃ ತಿಂಗಳ ತರಬೇತಿ-ಆ ಮೇಲೆ ಹಳ್ಳೀ ದಳಗಳು ವರುಷಕ್ಕೆ ಕೇವಲ 1200ರಿಂದ 1400ತಾಸುಗಳ, ಪ್ರಾಂತೀಕ ದಳಗಳವರು ವರ್ಷಕ್ಕೆರಡು ತಿಂಗಳುಗಳ ತರಬೇತಿ-ಪಡೆದರಾಯಿತು. ತರಬೇತಿ ಸಮಯದಲ್ಲೂ ಕೆಲಸಕ್ಕೆ ಕರೆಯಲ್ಪಟ್ಟಾಗಲೂ ಈ ದಳಗಳವರಿಗೆ ಕ್ರಮವಾಗಿ ಸೈನಿಕರ ಸಂಬಳ ಮತ್ತು ಭತ್ತೆಗಳೇ ಕೊಡಲ್ಪಡುವವು. ಆದ್ದರಿಂದ ಯೋಗ್ಯರಾದವರೆಲ್ಲರೂ ಈ ರಾಷ್ಟ್ರ ರಕ್ಷಣಾ ದಳಗಳಿಗೆ ಸೇರಿಕೊಳ್ಳಲು ಉತ್ಸಾಹದಿಂದ ಮುಂದೆ ಬರಬೇಕೆಂದು ರಾಷ್ಟ್ರನಾಯರ ಕರೆಯಿದೆ.

× × × ×

ಪ್ರಾಂತ್ಯಗಳ, ಸಂಸ್ಥಾನಗಳ ಹಾಗೂ ಸಂಸ್ಥಾನೀಕೂಟಗಳ ಆಹಾರ ಮಂತ್ರಿಗಳ ಎರಡು ದಿನಗಳ ಸಮ್ಮೇಳನವು ಇದೇ ತಾ. 8ರಲ್ಲಿ ನವಢಿಲ್ಲಿಯಲ್ಲಾರಂಭಿಸಿತು. ಭಾರತ ಸರಕಾರದ ಆಹಾರ ಮಂತ್ರಿ ಶ್ರೀ. ಜೈ ರಾಮದಾಸ ದೌಲತರಾಮರು ಸಮ್ಮೇಳನವನ್ನು ತೆರೆಯುತ್ತಾ "ಮೌಲ್ಯವಿಚ್ಛೇದನದ ಪರಿಣಾಮವನ್ನೆಲ್ಲಗೊಂಡ ರಾಷ್ಟ್ರದ ಸದ್ಯದ ಆರ್ಥಿಕ ಸ್ಥಿತಿಯಲ್ಲಿ ಪ್ರಾಂತ್ಯಗಳು ಅಪೇಕ್ಷಿಸಿರುವಷ್ಟು ಆಹಾರ ಧಾನ್ಯಗಳನ್ನು ಹೊರಗಿನಿಂದ ಅಮದುಮಾಡಿಸಿಕೊಳ್ಳುವುದಸಾಧ್ಯವಾದ್ದರಿಂದ ಹೊರಗಿನ ಅಮದುಗಳನ್ನು ಬಹಳವಾಗಿ ಕಡಿಮೆ ಮಾಡಿಕೊಳ್ಳಲಾಗುವುದು. ಒಳಗಿನ ಧಾನ್ಯ ಸಂಗ್ರಹವನ್ನು ಪರಮಾವಧಿ ಹೆಚ್ಚಿಸಬೇಕಾಗುವುದು. ಪ್ರಾಂತೀಕ ಸರಕಾರಗಳು ಈ ಕಡಿತಕ್ಕನುಸಾರವಾಗಿ ಆಹಾರ ಧಾನ್ಯ ವ್ಯವಸ್ಥೆಗಳನ್ನು ಬಾಯಿಸೂಡಿಸಿಕೊಳ್ಳಬೇಕು" ಎಂದರು ಆಹಾರ ಧಾನ್ಯಗಳ ಮೌಲ್ಯ ತಗ್ಗಿಸುವ ಮಾತ್ರು ಸಾಗುವಳಿಗಾರರಿಗೆ ಉಪಕರಣಗಳನ್ನು ಸುಲಭ ಬೆಲೆಗೆ ಒದಗಿಸಿಕೊಡುವ ಯೋಚನೆಯನ್ನು ಹೊರ ಗೆಡಹಿದರು. ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ಈ ಕೆಳಗಿನ ನಿರ್ಧಾರವಾಗಿದೆ: "ರಾಷ್ಟ್ರದ ಸದ್ಯದ ಆರ್ಥಿಕ ಸ್ಥಿತಿಯಲ್ಲಿ ಮತ್ಸ್ಯವನ್ನು ಬಗೆಹರಿಸಬೇಕಾದ ಅತ್ಯಾವಶ್ಯ ಹಂಚಿಕೆಗಳ ಮೇಲಿಂದ, ಜೀವನಾವಶ್ಯ ಸಾಮಗ್ರಿಗಳ ಧಾರಣೆಯನ್ನು ತಗ್ಗಿಸುವುದು ಅಗತ್ಯವೆಂದು ಈ ಸಮ್ಮೇಳನದ ಅಭಿಪ್ರಾಯವಿದೆ. ಅದಕ್ಕಾಗಿ ಹೆಸುಗೇಬದ್ಧ ಆಹಾರ ಧಾನ್ಯಗಳ ಬೆಲೆಯನ್ನೂ ಸಾಗುವಳ್ಳಿದಾರನಿಗಗತ್ಯವಿರುವ ಸಾಮಗ್ರಿಗಳ ಬೆಲೆಯನ್ನೂ ಜತೆಯಲ್ಲಿ ಮತ್ತು ಏಕ ಕಾಲದಲ್ಲಿ ತಗ್ಗಿಸಬೇಕಾಗಿದೆ. ಸಾಗುವಳ್ಳೀ ಕಾರ್ಯಗಳಿಗೆನಿವಶ್ಯವುಳ್ಳ ಸಾಮಗ್ರಿಗಳು ಸಾಕಷ್ಟು ಪರಮಾಣದಲ್ಲಿ ಕಡಿಮೆ ಬೆಲೆಯಲ್ಲಿ, ತಕ್ಕ ಕಾಲಕ್ಕೆ ದೊರೆಯುವಂತೆ ಮಾಡುವ ವ್ಯವಸ್ಥೆಗಳಾಗಬೇಕು. ಈ ಒಟ್ಟು ಯೋಜನೆಯ ಒಂದು ಅಂಗವಾಗಿ, ಹೆಸುಗೇಬದ್ಧ ಧಾನ್ಯಗಳನ್ನು ಪಡಕೊಳ್ಳುವ ಧಾರಣೆ, ವಿತರಣಾ ವೆಚ್ಚ ಮುಕ್ತಿತರ ವೆಚ್ಚಗಳನ್ನು ತಗ್ಗಿಸಿಕೊಳ್ಳುವ ಮೂಲಕ ಹೆಸುಗೆ ಧಾನ್ಯಗಳ ಜಿಲ್ಲಾರೇ ಬೆಲೆಯನ್ನು ಒಟ್ಟಿಗೆ ಶೇಕಡಾ 10ರಷ್ಟು ತಗ್ಗಿಸಲು ಪ್ರಾಂತೀಕ ಸರಕಾರಗಳು ಸರ್ವ ಪ್ರಯತ್ನಗಳನ್ನು ಮಾಡಬೇಕು. ಕೇಂದ್ರ ಸರಕಾರವು ಪ್ರಾಂತೀಕ ಹಾಗೂ ಸಂಸ್ಥಾನಿಕ ಸರಕಾರಗಳ ಪ್ರತಿನಿಧಿಗಳ ಅಭಿಪ್ರಾಯಗಳನ್ನು ಕೇಳಿಕೊಂಡು ಧಾರಣೆಯ ಸಂಯುಕ್ತ ಕಡಿತದ ಹಾಗೂ ಹಳ್ಳೀ ವಲಯುಗಳಿಗೆ ಆವಶ್ಯಕೋಪಯೋಗಗಳನ್ನೊದಗಿಸುವ ಸಮಿತಿ ವ್ಯವಸ್ಥೆಯನ್ನು ಕೈಕೊಳ್ಳತಕ್ಕದ್ದು". ಈ ನಿರ್ಣಯವನ್ನು ಕೂಡಲೇ ಜಾರಿಗೆ ತರುವ ಸಮಿತಿ ವ್ಯವಸ್ಥೆ ಮಾಡಲು ರಾಷ್ಟ್ರದ ಎಲ್ಲಾ ಭಾಗದ ಆಹಾರ ಕಾರ್ಯದರ್ಶಿಗಳು ಇದೇ ತಾ 17ರಲ್ಲಿ ಪುನಃ ಢಿಲ್ಲಿಯಲ್ಲಿ ಒಟ್ಟಾಗಲಿದ್ದಾರೆ. ಈ ವರುಷ ತನ್ಮಧ್ಯೆ ಕ್ಕೆ ಭತ್ತಗಳಿಗೆ ಕಳದ ವರುಷಕ್ಕಿಂತ ಕಡಿಮೆ ಬೆಲೆ ದೊರೆಯಲಿದೆಯೆಂದು ಸಾಗುವಳ್ಳೀದಾರರು ತಿಳಿದುಕೊಳ್ಳಬೇಕು.

× × × ×

ಭಾರತದ ಘಟನಾ ಸಮಿತಿಯು ರಾಜ್ಯಾಂಗ ರಚನೆಯ ಕೊನೆಯ ಕಾರ್ಯವನ್ನು ಜರಗಿಸುತ್ತಿದೆ. ಈಗ ರಾಷ್ಟ್ರದ ಮುಂದಿರುವ ಭಾವೀ ಮಹಾ ಚುನಾವಣೆಯ ಕುರಿತು ಘಟನಾ ಸಮಿತಿ ಅಧ್ಯಕ್ಷ ಬಾಬೂ ರಾಜೇಂದ್ರ ಪ್ರಸಾದರು ಸಮೀಕ್ಷೆ ಮಾಡಿಕೊಳ್ಳುತ್ತಿದ್ದರು. "ಘಟನಾ ಸಮಿತಿಯ ಕಛೇರಿಗೆ ಪ್ರಾಂತ್ಯಗಳಿಂದ ಬಂದಿರುವ ಸುದ್ದಿಗಳ ಮೇಲಿಂದ ಮಹಾ ಚುನಾವಣೆಯನ್ನು 1950ನೇ ನವಂಬರದಿಂದ 1951ನೇ ಫೆಬ್ರವರಿ ಅಥವಾ ಮಾರ್ಚಿ ತಿಂಗಳುಗಳ ಒಳಗಿನ ಅವಧಿಯಲ್ಲಿ ಜರಗಿಸಬಹುದೆಂದು ನಾವು ಬರಿಸುವಂತಾಗಿದೆ. ಆನಿರೀಕ್ಷಿತ ತೊಂದರೆಗಳೇನಾದರೂ ಏಳದಿದ್ದರೆ ಮಾತ್ರ ಈ ಮಾತೆಂಬುದು ನಿಜ. ವಿಶೇಷ ಪರಿಸ್ಥಿತಿಯಲ್ಲಿ ಹೀಗೇನಾ ಮಾಡುವೆನೆಂಬುದು ಈಗ ನಮಗರಿಯದು. ನಾವೀಗ ಪ್ರಾಯಸ್ಥರಿಲ್ಲರ ಮತದಾನದ ಹಕ್ಕನ್ನು ಅಂಗೀಕರಿಸಿ ಕೊಂಡಿದ್ದೇವೆ. ಇದೊಂತಹ ಅಗಾಧ ಕಾರ್ಯವೆಂಬುದು ಮನವರಿಕೆಯಾಗುವ ವಿಷಯ. ಈ ವಿಧಾನವನ್ನು ಸಾರಾಸಗಿ ಸದ್ಯದ ಜನಸಂಖ್ಯೆಯ ಪ್ರಕಾರ ನಮ್ಮ ಮತದರರ ಯಾದಿಯಲ್ಲಿ 170 ಮಿಲಿಯದಿಂದ 180 ಮಿಲಿಯಗಳ ವರೆಗಿನ ಹೆಸರುಗಳಿರಬಹುದೆಂದು ತೋರಿಕ್ಕದೆ. ಇದರ ತಯಾರೀ ಕೆಲಸವೆಷ್ಟು ಆಗಾಧವೆಂದು ಹೆಂದರೆ ಇಷ್ಟು ದೊಡ್ಡ ಸುತದಾರ ಪಟ್ಟಿಯನ್ನು ಮುದ್ರಿಸಿ ಕೊಡುವ ಒಂದು ಭಾರಿ ಮುದ್ರಣಾಲಯವನ್ನು ಕಂಡು ಹಿಡಿಯುವುದೇ ಸರಕಾರಕ್ಕೀಗ ಕಷ್ಟವಾಗಿದೆ".

1950ನೇ ಜನವರಿ ತಾ. 30ಕ್ಕೆ ನವ ರಾಜ್ಯ ಶಾಸನ ಮತ್ತು ರಿಪಬ್ಲಿಕ್ ಭಾರತ ಪೂರ್ಣ ಅಸ್ತಿತ್ವಕ್ಕೆ ಬರುವಾಗಲೂ ಘಟನಾ ಸಮಿತಿಯಾಗಿರುವ ಈಗಿನ ಪಾರ್ಲಿಮೆಂಟೇ ಅಸ್ತಿತ್ವದಲ್ಲಿರಬೇಕು:- ಆದರೆ ಪ್ರಾಂತೀಕ ಶಾಸನಸಭೆಗಳ ಸದಸ್ಯರಾಗಿದ್ದೂ ಪಾರ್ಲಿಮೆಂಟು ಸದಸ್ಯರಾಗಿರುವವರು ಮಾತ್ರ ಆ ಪೈಕಿ ಯಾವುದಾದರೊಂದು ಶಾಸನಸಭೆಯ ಸದಸ್ಯರಾಗಿರಬೇಕಲ್ಲದೆ ಎರಡರಲ್ಲೂ ಇರಕೂಡದು. ಈ ನಿಯಮಾನುಸಾರವಾಗಿ ಘಟನಾ ಸಮಿತಿಯಲ್ಲಿ ತೆರವಾಗಬಹುದಾದ ನೂರಕ್ಕೂ ಮಿಕ್ಕಿದ ಸ್ಥಾನಗಳಿಗೆ ಹಿಂದಿನಂತೆ ಎಸೆಂಬ್ಲಿ ಸದಸ್ಯ ಕ್ಷೇತ್ರದಿಂದಲೇ, ಅದರೆ ಮುಖ್ಯೋಮರ ಸಮೇತ ಅಲ್ಪ ಸಂಖ್ಯಾಕರಿಗೆ ಸ್ಥಾನಗಳನ್ನು ಕಾದಿರಿಸಿದ ಸಂಯುಕ್ತ ಮತದಾನ ಪದ್ಧತಿಯಿಂದ ನಡೆಯಬೇಕು- ಎಂದು ಘಟನಾ ಸಮಿತಿಯ ಕಾಂಗ್ರೆಸ್ ಸದಸ್ಯ ಪಕ್ಷದಲ್ಲಿ ನಿರ್ಣಯಗಳಾಗಿವೆ.

× × × ×

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು, "ರಾಜಸನ ಸಭೆಗಳ ಕಾಂಗ್ರೆಸ್ ಪಕ್ಷಗಳ ನಾಯಕತ್ವವು ಶಾಸನ ಸಭೆಯ ಅವಧಿಯವರೆಗೂ ವರುಸಂಶ್ರಿತ ವಿಶ್ವಾಸ ಸೂಚಿಸುವಂತಹದಿರಬೇಕು" ಎಂದು ನಿರ್ದೇಶಿಸಿದೆ. ಈ ತನಕ ವರುಪಕ್ಕೊಮ್ಮೆ ನಾಯಕ ಚುನಾವಣೆ ನಡೆಯುವ ಕ್ರಮವಿರುವ ದಿಸೆಯಿಂದಲೇ ಮದ್ರಾಸಿನಂತಹ ಪ್ರಾಂತ್ಯಗಳಲ್ಲಿ ನಾಯಕ ಸ್ಥಾನಕ್ಕೆ ಸ್ಪರ್ಧೆಯ ಕೋಲಾಹಲಗಳೆದ್ದಿವೆ: ನಾಯಕ ಬದಲಾವಣೆಗಳಾಗಿವೆ. ಇನ್ನುಮುಂದಾಗಿ ಚುನಾಯಿಸುವ ಬದಲಿಗೊಂದು ಬಾರಿ ಆರಿಸಲ್ಪಟ್ಟ ನಾಯಕನ ಮೇಲೆ ಪ್ರತಿ ಬಾರಿ ವಿಶ್ವಾಸ ಸೂಚಿಸುವ ಕ್ರಮ ಜಾರಿಗೆ ಬರುವುದು.

ಪಂಡಿತ ನೆಹರೂಗಳಿಗೆ ಬರುವ ನವಂಬರ್ ತಾ. 13ಕ್ಕೆ 60 ವರುಷ ತುಂಬಿ ತಾ. 14ಕ್ಕೆ 61ನೇ ವರುಷ ಹುಟ್ಟಿಯಲಿದೆ. ಈ ಸಂದರ್ಭದಲ್ಲಿ ಇಂಗ್ಲಿಷ್ ಮತ್ತು ಹಿಂದಿಯ ಎರಡು ಸ್ಮಾರಕ ಮಹಾಗ್ರಂಥಗಳು ಪ್ರಕಟಿಸಲ್ಪಡುವವು. ಗ್ರಂಥಗಳ ರಚನೆಗಾಗಿರಾಜೇಂದ್ರ ಪ್ರಸಾದ್, ಮುನ್ಷಿ, ಮೊದಲಾದವರುಳ್ಳ ಸಮಿತಿಯೊಂದು ಮೊದಲೇ ರಚಿಸಲ್ಪಟ್ಟಿದೆ. ನವಂಬರ್ 14ರಲ್ಲಿ ಪಂಡಿತಜೀ ಜನ್ಮದಿನದಿಂದ ಮರಳುವುದಸಂಭವವಾದ್ದರಿಂದ, ಭಾರತ ರಿಪಬ್ಲಿಕ್ ಉದ್ಘಾಟನಾ ದಿನ ಜನವರಿ 26ರಲ್ಲೇ ಈ ಸಮಾರಂಭವೂ ಜರಗಬಹುದೆಂದು ತಿಳಿದ. ಬಂದಿದೆ.

ದರೋಡೆ ಕಳವಿಗೆ ದಂಡನೆ— ಕೋಲಾರ ಗ್ರಾಮದ ಬೆಂಗ್ರಿಯಲ್ಲಿರುವ ಕಾಶ್ಮೀರ ಮನೆಜರ ವಿಧವೆ ಲೇಕಸಿಯಾ ಅವರನ್ನು ಬಾಯಿ ಇವರ ತೋಟಕ್ಕೆ ಆಕ್ರಮ ಪ್ರವೇಶ ಮಾಡಿ ಸುಮಾರು ರೂ. 45 ಬೆಲೆಬಾಳುವ ತೆಂಗಿನಕಾಯಿ ಕೊಯ್ದರೆಂಬ ಅಪಾದನೆಗೊಳಗಾಗಿ ಉಪುಸಿ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟರ B. C. No 195/49 ರಂತೆ ಲೊರೆನ್ಸ್ ಅಂದ್ರಾದೆ ರೂ. 15 (ತಪ್ಪಿದರೆ 1½ ತಿಂಗಳ ಶಿಕ್ಷೆ) ಅವರ ಮಗ ಜೊಸೆಫ್ ಅಂದ್ರಾದೆ ರೂ 30 (ತಪ್ಪಿದರೆ 3 ತಿಂಗಳ ಶಿಕ್ಷೆ) ಅವರ ಮಗ ಫ್ಲವೋರ್ಡ್ ಅಂದ್ರಾದೆ ರೂ 15, (ತಪ್ಪಿದರೆ 1½ ತಿಂಗಳ ಶಿಕ್ಷೆ) ಇನ್ನಿಸಿಯಸ್ ಮಿನೇಜಸ್ ಮತ್ತು ಇತರ ಏಳು ಜನರಿಗೆ ರೂ 8ರಂತೆ (ತಪ್ಪಿದರೆ 1 ತಿಂಗಳ ಶಿಕ್ಷೆ) ದಂಡನೆ ವಿಧಿಸಲಾಗಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಕುಂದಾಪುರ ಡಿ. ಮುನ್ಸಿ. ಕೋರ್ಟಿನಲ್ಲಿ.

O. S. 417/49

ನರಸಿಂಹ ಜೆಬ್ಬಾರ — ವಾದಿ

ಲಕ್ಷ್ಮೀನಾರಾಯಣ ವರ್ಗಸಹಾ-ಪ್ರತಿವಾದಿರು

೧. ಲಕ್ಷ್ಮೀನಾರಾಯಣನರ್ಗ. ತಮ್ಮಯ್ಯವರ್ಗರ ಮಗ್ಗಕೋಟೇಶ್ವರ ಗ್ರಾಮ.

ಸದ್ರಿ ವಾದಿಯು ಜಾಹೀರುಮಾಡಿಕೊಳ್ಳುವದೇನೆಂದ್ರೆ—

ವಾದಿಗೆ ಪ್ರತಿವಾದಿರಿಂದ ಬರತಕ್ಕ ನ್ಯಾಯ, ಸರ್ವಜಿತು, ಸರ್ವಧಾರಿ ಸಂವತ್ಸರಗಳ ಬಾಬ್ತು ಸೂಲಗೇಣಿ ರೂ 12-10-3 ಬರವಾಡಿಕೊಳ್ಳುವರೆ ಮಾಡಿದ ದಾವೆಯು ತಾ 28-10-49ಕ್ಕೆ ಅಜ್ಜೆರೆ ತಪ್ಪಿಗೆ ಯಿಟ್ಟಿದೆ. ಆ ಕಾರಣ ನಿಮ್ಮದೇನಾದ್ರೂ, ಉದಾರಣೆಯಿದ್ದೆ ಸದ್ರಿ ದಿವ್ಸ ಹಗ್ಗುಗಂಟೆಗೆಸ್ವತಹಾ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಯೇಕಪಕ್ಷವಾಗಿ ಕೀರ್ಮಾನಿಸಲ್ಪಡುವದೆಂದು ಸಂಗ್ತಿ ಈ ಮೂಲಕ ತಿಳಿಯಪಡ್ಸಿದೆ

G. Sanijiva Rao
Pleader for Plff.

Kundapur
Date 8-10-49.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಗೃಹಸ್ಥಿ

ತಾರೀಕು—13-10-49 ನೇ ತಾರೀಕಿನಿಂದ

ಏನಾ ಪಿಕ್ಚರ್ಸ್‌ರವರ ಆತ್ಯುದ್ಭುತ ಚಿತ್ರ

ಪಾತ್ರವರ್ಗ:—ಸುಲೋಚನ ಚಟರ್ಜಿ, ಯೂಕೂಬ್, ಪ್ರಾಣ್, ಮಿರ್ಜಾ.

ಡೈರೆಕ್ಟರ್. **S. M.** ಯೂಸೂಫ್

ಬರುವ ಚಿತ್ರ:ಚೆಂದ್ರ ಆರ್ಟ್ಸ್ ಪ್ರೊಡಕ್ಷನ್‌ನವರ

ಸಾಹಸ ಚಿತ್ರ- ಕ್ರಿಮಿನಲ್-ಚಂದ್ರರಾವ್, ವಸ್ಪಂತರಾವ್, ಹಂಸ ಸುನೇತ್ರ

ತಾರೀಕು 29-10-49 ರಿಂದ ಆದಿತ್ಯನ ಕನವು

ಟಿ ಆರ್. ಮಹಲಿಂಗಂ, ಅಂಜಲೀದೇವಿ,

ಉಡುಪಿ

ಮುನ್ಸಿಪಲ್‌ಕೌನ್ಸಿಲಿನ ಸಭೆಯು ಇವೇ ತಾ. 8ರಲ್ಲು ಜೈಸ್ ಜಿಯರ್‌ಮೆನ್ ಶ್ರೀ ಎ. ಬಿ. ಕೃಷ್ಣರಂಜರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಬಸ್‌ಸ್ಟೇಂಡಿನಲ್ಲಿ ಮಲ್ಪೆ ಬಂದರಕ್ಕೆ ಬರುವ ಮತ್ತು ಹೋಗುವ ಸ್ವೀಮರು ಜಲಾವಣೆಯ ಸಮಯವನ್ನು ಸೂಚಿಸುವ ಬೋರ್ಡನ್ನು ಹಾಕುವರೆ ಬಾಡಿಗೆ ತರ್ಹದ ಮೇಲೆ ಅಗಬಹುದೆಂದು ಬೊಂಬಾಯಿ ಸ್ವೀಮ್ ನೆವಿಗೇಶನ್ ಕಂಪೆನಿಗೆ ತಿಳಿಸಲಾಯಿತು. ಚಾಲ್ತಿ ವರುಷದಲ್ಲಿ ಸ್ಕಾಕಲ್, ಗಾಡಿಗಳಿಗೆ ಬಿಲ್ಲೆಗಳನ್ನು ಹಚ್ಚಲು ರೂಪಾ 250 ವೆಚ್ಚತಾಡುವರೆ ಮಂಜೂರಾತಿ ದೊರೆಯಿತು.

ಎಸ್. ಎಸ್. ಎಲ್. ಸಿ. ಸಪ್ಲಿಮೆಂಟಲ್ ಪರೀಕ್ಷೆಯು ಇದೇ ತಾ. 5ರಲ್ಲು ಬೋರ್ಡು ಹೈಸ್ಕೂಲಿನ ಸೀಲ್ಸ್ ಹಾಲಿನಲ್ಲಿ ಪ್ರಾರಂಭವಾಗಿದೆ. ಮುಂದಿನ ಪಾರದಲ್ಲಿ ಕೊನೆಗೊಳ್ಳುವುದು. ಸಾಧಾರಣ 200 ಮಂದಿ ಪರೀಕ್ಷಾರ್ಥಿಗಳು ಈ ಸೆಂಟರಿನಲ್ಲಿ ಪರೀಕ್ಷೆಗೆ ಕುಳಿತಿರುವರೆಂದು ತಿಳಿದು ಬರುತ್ತದೆ.

ತಿದ್ದುಪಡಿ— ಕಳದ ವಾರ ಪ್ರಕಟವಾಗಿದ್ದ 'ಕೊರಡ್ಕಲ್ ಸ್ಮಾರಕ ಸಮಾರಂಭ'ದ ವರ್ತೆಯಲ್ಲಿ ದಿನಂಗತ ಶ್ರೀ ಕೊರಡ್ಕಲ್ಲರ ತೈಲಚಿತ್ರದ ಅನಾವರಣವಾದ ಭಾಗ ಬಿಟ್ಟುಹೋಗಿದೆ. 'ಕೊರಡ್ಕಲ್ ಸ್ಮಾರಕ ಸಮಿತಿ'ಯವರು ದಿ. ಕೊರಡ್ಕಲ್ಲರ ತೈಲಚಿತ್ರ ಅನಾವರಣ ಮತ್ತು ಸ್ಮಾರಕ ಗ್ರಂಥದ ಉದ್ಘಾಟನೆಯ ಮೂಲಕ ಸ್ಮಾರಕ ಸಮಾರಂಭ ಜರಗಿಸಿದ್ದರು ಜನಾಬ್ ಎಚ್. ಎಸ್. ಹುಸ್ಸೇನ್, ಎಂ. ಎಲ್. ಎ. ಇವರು ಆ ದಿನ ತೈಲ ಚಿತ್ರದ ಅನಾವರಣ ಮಾಡಿದ್ದರು.

ಕಾರ್ಕಳ ದ ಕ. ಜಿಲ್ಲಾ ಚತುರ್ಥ ಆಯುರ್ವೇದ ವೈದ್ಯ ಪರಿಷತ್ತಿನ ಪ್ರಥಮ ಸಭೆಯು ಇದೇ ತಾ 4ರಲ್ಲು ಜರಗಿತು. ದಕ್ಷಂಬರ ತಿಂಗಳಲ್ಲಿ ಕರೆಯಬೇಕೆಂದಿದ್ದ ಸಮ್ಮೇಳನವನ್ನು 1950ನೆ ಇಸವಿ ಎಪ್ರಿಲ್ ತಿಂಗಳಲ್ಲಿ ಜರಗಿಸಬೇಕೆಂದು ನಿಶ್ಚಯಿಸಿ ಅದಕ್ಕೆ ಕಾರ್ಯಕ್ರಮಗಳನ್ನು ನಿರ್ಣಯಿಸುವರೆ ಸ್ವಾಗತ ಸಮಿತಿಯಿಂದ ಶ್ರೀಗಳಾದ ಪಾಂಗಾಳ ಜನಾರ್ಧನ ನಾಯಕ್, ಪಂಡಿತ ಅದಿರಾಜ ಶಾಸ್ತ್ರಿ, ಕೆ. ನಾರಾಯಣ ಪ್ರಭು, ಡಾ। ಕೆ. ನಿ. ಕೆ. ಉಪಾಧ್ಯಾಯ, ಕೆ. ಆರ್. ಸುರಾಣಿಕರಿರುವ ಉಪಸಮಿತಿಯ ರಚನೆಯಾಯಿತು.

ಮೂಡಬಿದರೆ ಇಲ್ಲಿಯ ಶ್ರೀ ಪರಸ್ವತಿ ಸೇವಾ ಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವವು ಕಳದ ತಾ. 29ರಿಂದ ಇದೇ ತಾ. 1ರ ತನಕ ಜಯಂತೀಲವಾಗಿ ಜರಗಿತು. ಶ್ರೀಗಳಾದ ಕೆ. ಕಾಂತಪ್ಪ ರೈ, ಕೆ. ವಿಠಲ ಶೆಟ್ಟಿ, ಗೋಪಾಲಕೃಷ್ಣ ಭಟ್, ಡಾ। ಎಚ್. ಕೆ. ನಾಗಭೂಷಣರಾವ್, ಹನುಮಂತರಾಯ ಆರ್. ಎಮ್. ಆರ್. ಶಾಸ್ತ್ರಿ, ಕೆ. ಎಸ್. ಪುರ ನಕ ಮೊದಲಾದವರು ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ವಿಷಯಗಳ ಸ್ಪೆಶ್ಚಿ ಭಾಷಣವಿತ್ತರು. ರಾಷ್ಟ್ರಕವಿ ಶ್ರೀ ಎಮ್. ಗೋವಿಂದ ಪೈಗಳವರಿಗೆ ಸಂಘದ ಕಡೆಯಿಂದ ಮಾನಪತ್ರ ಕೊಡಲಾಯಿತು. ಶ್ರೀ ಪೈಗಳು ಆಭಾರವನ್ನಿತ್ತು ತನ್ನದೇ ಆದ 'ಬಿಡುಗಡೆ' ಮತ್ತು 'ಪಾಲುಗಾರಿಕೆ' ಎಂಬೆರಡು ಕವಿತೆಗಳನ್ನೋದಿದರು. ಕುವಾರಿ ವತ್ಸಲೆಯ ಗೀತಾವಾಚನ ಮತ್ತು ನೃತ್ಯ ಪ್ರದರ್ಶನ ವಿತ್ತು.

ಬಾರಕೂರು— ಇಲ್ಲಿಯ ಬಚ್ಚು ಭಂಡಾರಿ ಮತ್ತು ಲಚ್ಚಿ ಭಂಡಾರಿ ಎಂಬ ಕ್ಷೌರಿಕ ರಿಬ್ಬರು 'ಶಮಗಾರ' ಇತ್ಯಾದಿ ಹಿಂದುಳಿದ ಜಾತಿಯವರಿಗೆ ಕ್ಷೌರಮಾಡಲು ನಿರಾಕರಿಸಿದ ರೆಂಬ ಆಪಾದನೆಗಳಿಗೊಳಗಾಗಿ ಇದೇ ತಾ. 6ರಲ್ಲು ಉಡುಪಿ ಫರ್ಸ್ಟ್‌ಕ್ಲಾಸ್ ಬೆಂಚ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಅವರೀರ್ವರಿಗೂ ಕಲಾ ರೂಪಾಯಿ ಬದರಂತೆ ಜುಲ್ಮಾನೆ ವಿಧಿಸಲಾಯಿತೆಂದು ತಿಳಿದುಬರುತ್ತದೆ.

ಕಾಪುರಗೋಡು ಸ್ಕೌಟು ಸಪ್ತಾಹ ವು ಇದೇ ತಾ 3ರಲ್ಲು ಹೆಲ್ತ್ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಿಂದ ಆರಂಭವಾಯಿತು. ತಾ 4 ರಲ್ಲು ಜೂನಿಯರ್ ಇನ್ಸ್‌ಪೆಕ್ಟರ್ ಶ್ರಿ ಎ. ಸಂಜೀವನವರು ಧ್ವಜಾರೋಹಣ ಮಾಡಿದರು. ಸಂಜೆ ಶ್ರಿ ದೇಜು ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಪುಂಡೂರು ಲಕ್ಷ್ಮಿನಾರಾಯಣ ಪುಣಚಶ್ಶಾಯ, ಶಿವರಾಮ ಗೌಡ, ಕುಂಜಪ್ಪ ಗೌಡರರ ಭಾಷಣಗಳಾದುವು. ತಾ 5ರಲ್ಲು ಶ್ರೀ ಮತಿಲೂಸಿಡೋಕ್ಟ್ರ ಅವರಿಂದ ಧ್ವಜಾರೋಹಣ ನಡೆಯಿತು. ತಾ 6 ರಲ್ಲು ಶ್ರೀಮತಿ ಪಿ. ಎನ್. ಪೊದುವಾಳ್ ಅವರಿಂದ ಧ್ವಜಾರೋಹಣ ನಡೆಯಿತು. ತಾ 7ರಲ್ಲು ಡಾ। ಪಿ. ಎನ್. ಭಟ್ಟರು ಧ್ವಜಾರೋಹಣ ಮಾಡಿದರು. ಶಾಲಾ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ಸ್ಕಾಟ್ ಶಿಬಿರಾಗ್ನಿ ನಡೆಯಿತು ಅದೇ ದಿನ ಕಪ್ತಾನ್ ಕೆ. ಎ. ಸೆಟ್ಟರು ಮಹಾತ್ಮಾಜಿಯವರ ಭಾವಚಿತ್ರ ಅನಾವರಣ ಮಾಡಿದರು.

ದಿ ಬೊಂಬೆ ಸ್ವೀಮ್ ನೆವಿಗೇಶನ್ ಕಂಪೆನಿ, ಲಿಮಿಟೆಡ್.

24 ತಾಸುಗಳಲ್ಲೇ ಮಲ್ಪೆಯಿಂದ ಬೊಂಬಾಯಿಗೆ!

ಕೃಯಾಣಿಕರಿಗೆ ಸರ್ವ ಸೌಕರ್ಯಗಳಿರುವ

S. S. ಸಬರ್ಮತಿ

ಎಂಬ ನವೀನ ಹಡಗವು ಇದೇ ತಿಂಗಳ ತಾ. 19-10-1949ರಿಂದ ಮೊದಲ್ಗೊಂಡು ಪ್ರತಿ ಬುಧವಾರ ವಾರವಾರವೂ ಬೊಂಬಾಯಿಯಿಂದ ಹೊರಟು ಮರ್ಮಗೋವಾ, ಕಾರವಾರ, ಮಲ್ಪೆ, ಮಂಗಳೂರು ಬಂದರು ಮಾಡುತ್ತ ಶನಿವಾರ ಬೆಳಿಗ್ಗೆ 7 ಗಂಟೆಗೆ ಕಲ್ಲಿಕೋಟೆಗೂ ಅಲ್ಲಿಂದ ಹೊರಟು ಕ್ರಮವಾಗಿ ಮಂಗಳೂರು, ಮಲ್ಪೆ, ಕಾರವಾರ ಬಂದರು ಮಾಡುತ್ತ ಸೋಮವಾರ ಬೆಳಿಗ್ಗೆ 11 ಗಂಟೆಗೆ ಬೊಂಬಾಯಿಗೂ ತಲಪುವುದು.

ಇದಲ್ಲದೆ **M. V. ಸೋನಾವತಿ** ಎಂಬ ಹಡಗವು

ಪ್ರತಿ ಆದಿತ್ಯವಾರ ಬೊಂಬಾಯಿಂದ ಹೊರಟು ಮರ್ಮಗೋವಾ, ಕಾರವಾರ, ತದಡಿ, ಕುಮಟಾ, ಮಲ್ಪೆ ಬಂದರು ಮಾಡುತ್ತ ಮಂಗಳವಾರ ಬೆಳಿಗ್ಗೆ ಮಂಗಳೂರಿಗೆ ತಲಪುವುದು.

ಮಂಗಳೂರಿಂದ ಬುಧವಾರ ಬೆಳಿಗ್ಗೆ 9 ಗಂಟೆಗೆ ಹೊರಟು, ಮೇಲೆ ಕಾಣಿಸಿದ ಬಂದರುಗಳನ್ನು ಮಾಡಿಕೊಂಡು ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಬೊಂಬಾಯಿಗೆ ತಲಪುವುದು.

ಹೆಚ್ಚಿನ ಮಾಹಿತಿಗೆ ಮಲ್ಪೆ ಏಜಂಟರನ್ನು ವಿಚಾರಿಸಿರಿ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷ್ನರಿಗಳು

ದೊರೆಯುತ್ತವೆ.

ಬೆಲೆ. ರೂ. 4 8 0

ಸಿರಿಗನ್ನಡ ಅರ್ಥಕೋಶ 4 8 0

ನವಯುಗ ಪ್ರೆಸ್, ಉಡುಪಿ.

ಅಥವಾ

ನವಯುಗ ಆಫೀಸು, ಉಡುಪಿ.

ಇದೇ ಕಳದ ಎಪ್ರಿಲ್ ತಿಂಗಳಿಂದ ಜಾರಿಗೆ ಬಂದಿರುವ

ಮದ್ರಾಸು

ಅಳಿಯ ಸಂತಾನ ಕಾನೂನು

ಇದರ ಕನ್ನಡ ಪ್ರತಿಗಳೂ ಇಂಗ್ಲಿಷ್ ಪ್ರತಿಗಳೂ ದೊರೆಯುತ್ತವೆ

ಪ್ರಸ್ತಾವನೆ, ವಿವಾಹ ಮತ್ತು ಅದರ ಬಿಡುಗಡೆ, ಅಶನಾರ್ಥ ಮತ್ತು ರಕ್ಷಣೆ, ಮರಣ ಶಾಸನರಹಿತನ ವಾರಿಸ್ವಾರಿಕೆ, ಕುಟುಂಬ ಮತ್ತು ಅದರ ಆಡಳಿತೆ, ವಿಭಾಗ ಕ್ರಮ ಮೊದಲಾದ ವಿವರಗಳು ಮೂಲ ಪ್ರತಿಯಲ್ಲಿರುವಂತೆಯೇ ಚೆನ್ನಾಗಿ ವಿವರಿಸಲ್ಪಟ್ಟಿವೆ.

ಅಳಿಯ ಸಂತಾನಿಗರೆಲ್ಲರೂ ಇದನ್ನು ಓದಿ ತಿಳಿಯಲೇಬೇಕು.

ಕ್ರಯ ಪ್ರತಿ 1ಕ್ಕೆ 0—8—0

ಒಂಭತ್ತಾಣೆ ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿ ಕಳಿಸಲ್ಪಡುತ್ತ.

ನವಯುಗ ಪ್ರೆಸ್, ಉಡುಪಿ

ಮೂಲ್ಕಿ ಬೇಂಕ್.

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Moolky, S. K

ನೋಟೀಸು.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S- C. No. 403/49

ರಿಚೀವರ್ ಪಿ. ಸಂಜೀವರಾವ್ —ವಾದಿ.

ಮತ್ತು

ಶ್ಯಾನುಭಟ್ಟ —ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾರೀಕು 31-10-49ಕ್ಕೆ ಯಿಟ್ಟಿರುವದ್ರಿಂದ ಆ ದಿನಸ ಪ್ರತಿವಾದಿಯು ತನ್ನ ಆಕ್ಷೇಪಸುದ್ರಿ ಸ್ವತಹಾ ವಕೀಲರು ಮುಖಾಂತರ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ಯಿಲ್ಲವಾದ್ರೆ ಏಕ ಪಕ್ಷವಾಗಿ ತೀರ್ಪುನಿಸಲಾಗುವುದು.

P. Padmanabha Rao B.A B.L.
Vakil for Plaintiff.

ಉಡ್ಪಿ 11-10-49

ಸಾಗ್ವಳ್ಳಿದಾರರು ಕೊಡುವ ದೃಢಪತ್ರಿಕೆ

ಮಳ್ತು

ಮನೆವಾರ್ತೆ ಖರ್ಚಿಗೆ ಗೇಣಿ ಅಕ್ಕಿ ಪಡೆಯುವರೆ ರೈತನು ಕೊಡತಕ್ಕ ಅರ್ಜಿ ವಗೈರೆ ಫಾರ್ಮುಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ

ಜಪ್ತಿ

In the Court of the District Munsif of Mangalore.

R. I. A. No. 718 of 1949 in O. S. No. 353/1946.

Chennayya Pujari —Petitioner

and

Aishakathunbi & others. Respondents.

To

Respondents:—

39 Kareem Saheb, son of Addul Khader Soheb,
59 Abubaker Saheb, son of Yusuf Saheb,
62 Rahamath Bi-widow of Kareem Saheb,
63 Bibi, 64. Shareefabi, children of Kareem Saheb.

All residing in Mudu Perar village, Mangalore Taluk.

67 Kathib Ummer Saheb. } Children of Gulam
68 Kathib Isub Saheb, 69. Ammubi } Moidin Saheb.

70 Kathumbi.
71 Ismail Saheb,
72 Abidabi-minor by guardian adliten brother 71 st respondent. } Children of Meeran Saheb & 71st is a Revenue Inspector,

respondents 67 and 69 at Compounder's house, Baindoor, Kundapur Taluk, and respondents 68, 70 to 71 residing in Kundapur Kasba.

Is herby given that the above R. I. A 718/1949 filed by the petitioner praying therein for partition of the properties described in the preliminary decree separating the 1/9th share of the petitioner with reference to good and bad soil and the liability and quantum of such of the respondents for payment of mesne profits and that the said application will come on for hearing on 31-10-1949 at 11 A. M. before the said Court.

You are hereby required to appear either in person or by a pleader on the said date and hour and file your objeciions, if any; otherwise the same will be decided exparte.

(By order of court)

Mangalore 3—10—1949

G. Narayana Rao,
Vakil for Petitioner

ಮಂಗಳೂರು

ವಿದ್ಯಾ ಮಂತ್ರಿಗಳ ಸಂಚಾರ— ಮದ್ರಾಸು ಸರಕಾರದ ವಿದ್ಯಾಮಂತ್ರಿಗಳಾದ ಶ್ರೀ ಮಾಧವ ಮೆನೋನ್ ಅವರು ಇದೇ ತಾ. 12ರಿಂದ 15ರ ತನಕ ಜಿಲ್ಲೆಯಲ್ಲಿ ಸಂಚರಿಸಲಿರುವರು. ಮಂಗಳೂರಿನಿಂದ ತಾ 15 ರಲ್ಲು ಬೆಳಿಗ್ಗೆ ಹೊರಟು ಮಾಡಬಿದ್ರೆ ಮಾರ್ಗವಾಗಿ ಶಿರ್ವ, ಇನ್ನಂಜೆ, ಕಟ್ಟಾಡಿ ಹಾಗು ಸ್ಕೂಲುಗಳನ್ನು ಸಂದರ್ಶಿಸಿ ಮಧ್ಯಾಹ್ನ ಭೋಜನಕ್ಕೆ ಉಡುಪಿಗೆ ಬರುವರು. ಇಲ್ಲಿಯ ಶಿಕ್ಷಣ ಸಂಸ್ಥೆಗಳನ್ನು ಸಂದರ್ಶಿಸಿ, ಸಂಜೆ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ತೆರಳುವರು.

ಪ್ರಧಾನಮಂತ್ರಿ—ಶ್ರೀ ಕುಮಾರ ಸ್ವಾಮಿ ರಾಜಾರವರು ಕೃಷಿಇಲಾಖಾಮಂತ್ರಿ ಶ್ರೀ ಎ. ಬಿ. ಶೆಟ್ಟಿರೊಂದಿಗೆ ಇದೇ ತಾ. 22 ರಲ್ಲು ಮಂಗಳೂರಿಗೆ ವಿಜಯಂಗೈಯಿಸಿ 24ರ ತನಕ ಪ. ಕ. ಜಿಲ್ಲೆಯಲ್ಲಿ ಸಂಚರಿಸಲಿರುವರು. ತಾ. 23ರಲ್ಲು ನೂಲ್ಯಿಯಲ್ಲಿ ಜರಗುವ ಕೃಷಿಕರ ಪರಿಷತ್ತಿಗೆ ಭೇಟಿಯಿತ್ತು, ಉಡುಪಿಗೆ ಬಂದು ಅಂದೇ ಸಂಜೆ ಕಾರ್ಕಳ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗುವರು. ತಾ 24ರಲ್ಲು ಪಾಣೆಮಂಗಳೂರು ಕೃಷಿಕರ ಸಭೆಗೆ ಹೋಗಿ ಅಲ್ಲಿಂದ ಉಜ್ರೆಯಲ್ಲಿ ಮಲೆನಾಡಿನ ಪ್ರತಿನಿಧಿಗಳನ್ನು ಕಂಡು, ಬಂಟ್ವಾಳದಲ್ಲಿ ಭಾಷಣವಿತ್ತು ಹಿಂತಿರುಗಲಿರುವರು. ತಾ. 24ರಲ್ಲು ಮಂಗಳೂರಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸುವರೆಂದು ನೊತ್ತಾಗಿದೆ

ಜಿಲ್ಲಾ ಬೋರ್ಡಿನ ವಿಶೇಷ ಸಭೆ ಯು ಇದೇ ತಾ 24ರಲ್ಲು ಜರಗಿ, ಬೋರ್ಡಿನ ಅಧ್ಯಕ್ಷರ ಜುನಾವಣೆಯಾಗಲಿರುವುದು

ಗಣಪತಿ ಹಬ್ಬಸ್ಕೂಲಿನ ವರ್ಧಂತಿ ಉತ್ಸವವು ಇದೇ ತಾ. 2ರಲ್ಲು ಶ್ರೀ ಯು. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ 25 ವರುಷಗಳಿಂದ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಎಮ್. ಎಸ್. ವಿಠಲ ಬರಾಯರ ಭಾವಚಿತ್ರ ಅನಾವರಣವೂ ಈ ಸಂದರ್ಭದಲ್ಲಿ ಜರಗಿತು. ಹಳೆವಿದ್ಯಾರ್ಥಿ ಸಂಘದ ದಿನವು ಶ್ರೀ ವಿ. ವೆಂಕಟಪ್ಪಯ್ಯನವರ ಅಧ್ಯಕ್ಷತೆಯಲ್ಲೂ ಮಹಿಳೆಯರ ದಿನವು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲೂ ಜರಗಿತು.

ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ನಡೆದ ಪರೀಕ್ಷೆಯ ಪ್ರಮಾಣಪತ್ರ ವಿತರಣೋತ್ಸವ ಸಮಯದಲ್ಲಿ ಮೈಸೂರು ಮಹಾರಾಜಾ ಕಾಲೇಜಿನ ಹಿಂದೀ ಪ್ರಾಧ್ಯಾಪಕರಾದ ಶ್ರೀ ಎನ್. ನಾಗಪ್ಪನವರು ಹಿಂದೀ ಭಾಷೆಯ ಮಹತ್ವದ ಕುರಿತು ಭಾಷಣವಿತ್ತರು. ಶ್ರೀ ಧರ್ಮರಾಜ ಅಧಿಕಾರಿಯವರು ಅಧ್ಯಕ್ಷತೆ ವಹಿಸಿದ್ದರು.

ಬೆಸೆಂಟ್ ದಿನಾಚರಣೆಯು ತುಜೆಗೆ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ವರ್ಧಂತಿಯೊಂದಿಗೆ ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಹಿಳೆಯರ ದಿನವು ಶ್ರೀಮತಿ ಕೆ. ವಾರಿಜಾಬಾಯಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ವಸಂತಪ್ರೇಮಿ ಮಂಡಳಿಯ ವಾರ್ಷಿಕೋತ್ಸವವು ತಾ. 2ರಲ್ಲು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಕೌಟು ಸಪ್ತಾಹವು ನಗರದ ಎಲ್ಲಾ ಸ್ಕೌಟು, ಬಲ್‌ಬುಲ್ ಮತ್ತು ಕಬ್‌ಗಳ ಕೂಡುವಿಕೆಯಿಂದ ಈಗಿನ ವಾರದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು.

ಶ್ರೀ ರಾಮಕೃಷ್ಣ ನಿಧ್ಯಾರ್ಥಿ ಭವನ ದ ಮಾದರೀ ಪಾರ್ಲಿಮೆಂಟ್ ಶ್ರೀಗಳಾದ ಸಿ. ಎಸ್. ಇರ್ಮಾಡಿ, ಎಮ್ಮೆಕೇಟ್ (ಗವರ್ನರ್) ಎಂ. ಎಂ. ಶೆಟ್ಟಿ (ಸಲಹೆಗಾರ) ಜನಾರ್ಧನ ಭಂಡಾರಿ (ವಾಕ್ಪತಿ) ಎಚ್. ನರಸಿಂಹ ಶೆಟ್ಟಿ (ಪ್ರ. ಮಂತ್ರಿ) ಕೆ. ಜಗನ್ನಾಥ ಶೆಟ್ಟಿ (ವಿರುದ್ಧ ಸಾಯಕ) ಎಂ. ಎಸ್. ಶೆಟ್ಟಿ (ಕಾರ್ಯದರ್ಶಿ) ಜೆ. ಯಂ. ಬಡಗಬೆಟ್ಟು (ಜ. ಕಾರ್ಯದರ್ಶಿ) ಎಚ್. ವಿಟ್ಠಲ ಶೆಟ್ಟಿ (ಪಕ್ಷ ಮುಖಂಡ)ರಾಗಿ ಆಗಿನಲ್ಲಿಟ್ಟಿದ್ದಾರೆ.

ದ. ಕ. ಲೋಕಸೇವಾ ಸಂಘದ ಉದ್ಘಾಟನಾ ಸಮಾರಂಭವು ಇದೇ ತಾ 16 ರಲ್ಲು ಸೆಂಟ್ರಲ್ ಕೋಪರೇಟಿವ್ ಬೇಂಕಿನ ಹೊಸ ಕಟ್ಟಡದಲ್ಲಿ ಡಾ। ಯು. ಪಿ. ಮಲ್ಯ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಶ್ರೀ ಬಂಟ್ವಾಳ ಆಚ್ಯುತ ಬಾಳಿಗರಿಂದ ನೆರವೇರಿಸಲ್ಪಡುವುದು.

ಕುಂಬಳೆ ಫಿರ್ಕಾಭಿವೃದ್ಧಿ ಕೇಂದ್ರ ದಲ್ಲಿ ಸಪ್ಟಂಬರ ತಿಂಗಳಲ್ಲಿ ನಡೆದ ಕಾರ್ಯ ಕಲಾಪಗಳ ಸಾರಾಂಶ ಹೀಗಿದೆ. ಜಿಲ್ಲಾ ಆಸಿಸ್ಟಾಂಟ್ ಪೆಲ್ಲಿ ಆಫೀಸರರ ನಾಯಕತ್ವದಲ್ಲಿ ಸಾರ್ವಜನಿಕ ಮೆಡವಂಡೆಗೆ, ಮನೆಮನೆಗೆ ಸಂದರ್ಶನ, ಸಾರ್ವಜನಿಕ ಭಾಷಣ, ಬಸ್ತಿ ಕೇಂದ್ರಗಳ ದುರಸ್ತೀಕರಣ ಮೊದಲಾದುವು ಕಾರ್ಯಗಳಾಗಿ ನಡೆಸುವ ವರದಿತಿಗಳಲ್ಲಿ ಒಂದು ಮೈಲು ಉದ್ದದ ರಸ್ತೆ ಕಡಿಯಲಾಯಿತು. ಗ್ರಾಮಸ್ವರಾಜ್ಯ ಸಹಾಯದಿಂದ ಒಂದು ಕಾಲ್ವಾರಿಯನ್ನು ಪೂರ್ಣ ಮಾಡಲಾಯಿತು. ಪೆರ್ಲದಲ್ಲಿ ಒಂದು ಗ್ರಾಮಾಲಯವು ತೆರೆಯಲ್ಪಟ್ಟಿತು. ಎರಡು ಬೀಜದ ಹೋಲಿಗಳ ಸಪಬರಾಯಿಯೂ ನಡೆಯಿತು. ಸಾಧಾರಣ ಮೂರು ಎಕ್ರೆ ಸ್ಥಳವನ್ನು ಫಲವತ್ತಾದ ಭೂಮಿಯನ್ನಾಗಿ ರೂಪಾಂತರಿಸಲಾಯಿತು. ಮಲೇರಿಯಾ ನಿರೋಧ ಚಳವಳಿ ಬಗ್ಗೆ ವರಾಡ ನಂತಿಗೆ ಎತ್ತಲಾಯಿತು. ಪೆರ್ಲ, ಪ್ರೇಮಕೂಟ, ಬದಿಯಡ್ಕ ಗ್ರಾಮ ಸೇವಾ ಸಂಘಗಳ ಆಶ್ರಯದಲ್ಲಿ ದಕರಾ ಹಬ್ಬ ಆಚರಿಸಲ್ಪಟ್ಟಿತು.

ಕಾಸರಗೋಡು—ವೆಡಾಲ ಸಾಹಿತ್ಯ ಸಮಿತಿಯ ಆಶ್ರಯದಲ್ಲಿ ಈಚೆಗೆ ಕವಿ ಗೋಷ್ಠಿ ರಂಕಾ ಭಟ್ಟರ ಅಧ್ಯಕ್ಷತೆಯಲ್ಲಿ ಸಾಹಿತ್ಯೋತ್ಸವವು ಸಾಂಗವಾಗಿ ಜರಗಿತು.

ನೀಲೇಶ್ವರ—ತಾ. 29-9-1949ರಲ್ಲು ನೀಲೇಶ್ವರ ಶ್ರೀ ಮಹಿಷಮರ್ದಿನಿ ಎಲಿಮೆಂಟರಿ ಶಾಲೆಯಲ್ಲಿ ಹೆತ್ತವರ ಕೂಟ, ಮತ್ತು ವಾರ್ಷಿಕ ಪೂಜಾ ಸಮಾರಂಭಗಳು ಶ್ರೀ. ಯು. ವಾಸುದೇವ ಆಚಾರ್ಯರ ಅಧ್ಯಕ್ಷತೆಯಲ್ಲಿ ವಿವಿಧ ವಿನೋದಾವಳಿ, 'ಸ್ವರಾಜ್ಯ ವಿಜಯ' ಯಕ್ಷಗಾನಗಳಿಂದ ಜರಗಿತು. ಶ್ರೀ ಶ್ರೀನಿವಾಸ ಕಲ್ಕೂರರು, ಅಧ್ಯಕ್ಷರೂ ಹೆತ್ತವರ ಕರ್ತವ್ಯದ ಕುರಿತು ಭಾಷಣವಿತ್ತರು. ಲಘು ಫಲಾಹಾರದೊಂದಿಗೆ ಸಭೆಯು ಮುಕ್ತಾಯವಾಯಿತು.

ಕೊಕ್ಕಡ:—ಇಲ್ಲಿಯ ಬೋರ್ಡು ಶಾಲೆಯನ್ನು ಅದಷ್ಟು ಮೇಲ್ಮಟ್ಟಗತಿಗೆ ತರುವಂತೆ ಈಗೀಗ ಸರ್ವ ಮಹನೀಯರೂ, ಪ್ರಯತ್ನಿಸುತ್ತಿರುವದಲ್ಲದೆ ಇದೇ ತಾ. 15-10-49ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಕೊಕ್ಕಡ ಶಾಲೆಯಲ್ಲಿ ಜಂಗತಕ್ಕೆ ಸಭೆಗೆ ಸರ್ವರೂ ಬಂಸು ತಕ್ಕ ಪ್ರೋತ್ಸಾಹಗಳನ್ನು ಕೊಡಬೇಕಾಗಿಯೂ ಆಪೇಕ್ಷಿಸಲಾಗಿದೆ.

ಕಲ್ಯ—ಕಾರ್ಕಳ ತಾಲೂಕಿನ ಕಲ್ಯ ಗ್ರಾಮದ ಜನರ ಅನುಕೂಲತೆಗಾಗಿ ತಾ. 31-7-1949ರಿಂದ ಕಲ್ಯವನ್ನ ಒಂದು ಪ್ರಾಂಚ್ ಪೋಸ್ಟಾಫೀಸು ತೆರೆಯಲ್ಪಟ್ಟಿದೆ.

ಬೈಲೂರು—ತಾ 2-10-1949ರಲ್ಲು ಇಲ್ಲಿಯ ಗಾಂಧೀ ಕ್ಲಬ್ಬಿನ ಆಶ್ರಯದಲ್ಲಿ ಗಾಂಧೀ ಜಯಂತಿಯು ಬಹು ವಿಜೃಂಭಣೆಯಿಂದ ಜರಗಿಸಲಾಯ್ತು. ಈ ಸಂದರ್ಭದಲ್ಲಿ ಡಾಕ್ಟರ್ ಎ. ಕೆ. ಎಲ್. ರಾಯರು ಸಮಸ್ತರಿಗೆ ಸಿಹಿ ತಿಂಡಿಯನ್ನು ಪಂಚಿಸಿದರು

ಆರೂರು—ಕಳೆದ ತಾ. 29:ಲ್ಲು ಆರೂರು ಗ್ರಾಮೂಭಿವೃದ್ಧಿ ಸಂಘದ ಆಶ್ರಯ ಪ್ರೋತ್ಸಾಹದಿಂದ ಶ್ರೀ ವಿಷ್ಣುಮೂರ್ತಿ ಎಯಿಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ಆರೂರು ಪಟೇಲ್ ಮಹಾಬಲ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಎ. ಎಮ್. ಪಟ್ಟಾಭಿರಾಮರಾಯರು ಶಾಲೆಯ ಕಾರ್ಯಕಲಾಪಗಳ ಕುರಿತು ಮಾತನಾಡಿದರು. ಶಾಲಾ ಬಾಲಕ ಬಾಲಕಿಯರು 'ಧ್ರುವ ಚರಿತ್ರೆ' ಎಂಬ ನಾಟಕವನ್ನು ಸೊಗಸಾಗಿ ಅಭಿನಯಿಸಿದರು. ಬಳಿಕ ಗ್ರಾಮಾಭಿವೃದ್ಧಿ ಸಂಘದ ಚಟುವಟಿಕೆಗಳ ಕುರಿತು ಶ್ರೀ ಕೆ. ಸಿದ್ದು ಶೆಟ್ಟರು ಕಾಲೋಚಿತ ಮಾರ್ಗದರ್ಶನಗೈದು ಸಂಘದ ಆದಾಯ ವೆಚ್ಚಗಳ ವರದಿ ಮಾಡಿದರು. ಶ್ರೀ ಪಾರ್ವತಿ ಪೂಜೆ, ಪಾರಿತೋಷಕ ವಿತರಣೆ, ಪ್ರಸಾದ ಸಂತರ್ಪಣಾದಿ ಕಾರ್ಯಕ್ರಮಗಳಿಂದ ಸಭೆಯು ಮುಕ್ತಾಯವಾಯಿತು.

ಎಡನೀರು—ಇಲ್ಲಿಯ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ 29ರಲ್ಲು ಪೂರ್ವಾಹ್ನ ದಾರದಪೂಜಾ ಮಹೋತ್ಸವವು ಸಾಂಗವಾಗಿ ಜರಗಿತು. ಅಪರಾಹ್ನ ಹೆತ್ತವರ ಸಭೆಯು ಪಟೇಲ್ ಶ್ರೀ ಪದ್ಮನಾಭ ಜಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ವರದಿಯನ್ನು ಮೆನೇಜರ್ ಶ್ರೀ ಕೆ. ಸೋಮಯ್ಯ ಶೆಟ್ಟರು ಹೆತ್ತವರ ಮುಂದಿಟ್ಟರು. ಸಭ ನಂತರ ಶ್ರೀ ಪಿ. ಪದ್ಮಾನಂದ ಶೆಟ್ಟಿ, ಸುಬ್ರಹ್ಮಣ್ಯ ಅಡಿಗರ್, ಎ. ಭುಜಂಗರಾಯರ ಭಾಷಣಗಳಾದವು. ಶಾಲಾ ಮಕ್ಕಳ ವಿವಿಧ ವಿನೋದಾವಳಿಯೊಂದಿಗೆ ಸಭೆ ಕೊನೆಗೊಂಡಿತು.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತೆಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ.
ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ಶುಭ್ರ ಮಾಡುತ್ತವೆ.

ವಿಳಾಸ:—
ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ್, ಉಡುಪಿ.

ಶ್ರೀ ಕೊರಡ್ಡಯ್ಯ
ಶ್ರೀನಿವಾಸ
ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿಕುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊರಡ್ಡಯ್ಯ ವೆಂಕಟ್ರಾಯರ
'ಮನೆ ಮದ್ದು'
(HOME REMEDIES)
೨೦೦ ಕಾಹಿಲೆಗಳಿಗೆ ಮನೆಯಲ್ಲೇ ನೂರಿ ಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೩—
ಪ್ರತಿಗಳು ನಿಮ್ಮೂರ ಪುಸ್ತಕವ್ಯಾಪಾರಿಗಳಲ್ಲಿ

ನಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ
ನವಯುಗ ಪ್ರೆಸ್, ಉಡುಪಿ.

ಗೋಪಾಲ ಭೇಷಜಾಶ್ರಮ, ಕದಿರೆ-ಮಂಗಳೂರು.

ತಾ. 22—8—1949ನೇ ಸೋಮವಾರ ಸಾಯಂಕಾಲ ನನ್ನ ಪೂಜ್ಯ ತೀರ್ಥರೂಪ ಆಯುರ್ವೇದ ಭೂಷಣ ಯಂ ವಿ ಶಾಸ್ತ್ರಿಗಳು ಇವರು ಪರಿಂಧಾಮವನ್ನೈದಿದ ಸಂದರ್ಭದಲ್ಲಿ ಮುಖತಃ ಭೇಟಿಯಾಗಿಯೂ ಪತ್ರ ಮುಖಾಂತರವಾಗಿಯೂ ನಮ್ಮ ಕುಟುಂಬಕ್ಕೆ ಉಂಟಾದ ದುಃಖದಲ್ಲಿ ಸಹ ಸಂತಾಪವನ್ನು ಸೂಚಿಸಿ, ನಮ್ಮೆಜ್ಜರಿಗೂ ಉತ್ತೇಜನವನ್ನೂ ಸ್ಥೈರ್ಯವನ್ನೂ ಇತ್ತು, ಸಹಕರಿಸಿದ ಮಹನೀಯರೆಲ್ಲರಲ್ಲಿಯೂ ಈ ಮೂಲಕ ನಂದನಾಪೂರ್ವಕ ವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಅಲ್ಲದೆ, ಈ ವಿಷಯದಲ್ಲಿ ಪ್ರತಿಯೊಬ್ಬರಿಗೂ ಪ್ರತ್ಯೇಕವಾಗಿ ಧನ್ಯವಾದಗಳನ್ನು ಅರ್ಪಿಸಲಿಕ್ಕೆ ಅಸಾಧ್ಯವಾದುದಕ್ಕಾಗಿ ವಿಷಾದಿಸುತ್ತೇವೆ

ಇಂತು

ಡಾ। ಯಂ. ಸಿ. ಶಾಸ್ತ್ರಿ, ಯಲ್. ಐ. ಯಂ.

ಈಗತಾನೆ ಪ್ರಕಟವಾಗಿದೆ

ಕುಲವಿಲ್ಲದ ಹೆಣ್ಣು

ಸರಸ ಸಾಮಾಜಿಕ ಕಾದಂಬರಿ

ಬೆಲೆ ರೂ. 1—0—0

ವಿಳಾಸ:—

ಆಂತರಂಗ ಕಾರ್ಯಾಲಯ, ಉಡುಪಿ
ಅಥವಾ ನವಭಾರತ ಬುಕ್ ಡಿಪೊ, ಉಡುಪಿ

ESTD. 1926
CROWN RUBBER STAMP WORKS
MAKERS OF
RUBBER STAMPS
ENGRAVERS
BALMATTA ROAD :: MANGALORE-3.

Approved firm by the Govt. of Mysore Certificated by theA gent of the Govt. of Gylone & Indian.

ಜಿಲ್ಲಾ ಬೋರ್ಡಿನ ಸಲ್ವತ್ತೆರಡು ಸ್ಥಾನಗಳ ವ್ಯಕ್ತಿಕ ಮೂಲವತ್ತೆಂಟು ಸ್ಥಾನಗಳು ಕಾಂಗ್ರೆಸಿಗೆ ದೊರಕಿವೆಯೆಂಬುದು, ಅದರಲ್ಲೂ ಅನೇಕ ಸ್ಥಾನಗಳು ಅವಿರೋಧವಾಗಿ ದೊರಕಿವೆಯೆಂಬ ವಿಷಯವೇ ಈ ಜಿಲ್ಲೆಗೆ ಹೆಮ್ಮೆಯ ವಿಷಯ. ಜಿಲ್ಲಾ ಬೋರ್ಡು ಚುನಾವಣೆಯ ಈ ಫಲಿತಾಂಶ, ಜನತೆಗೆ ಕಾಂಗ್ರೆಸಿನಲ್ಲಿರುವ ಮನಮತೆ ಮತ್ತು ಕಾಂಗ್ರೆಸಿಗೆ ಜಿಲ್ಲೆಯ ಪ್ರಚಂಡ ಬೆಂಬಲವನ್ನು ವ್ಯಕ್ತಗೊಳಿಸುತ್ತದೆ. ಕಾಂಗ್ರೆಸು ಕೂಡಾ ಇಷ್ಟೇ ಉದ್ದೇಶವನ್ನು ಸಾಧಿಸುವರೆ ಮಾತ್ರ ಜಿಲ್ಲಾ ಬೋರ್ಡು ಚುನಾವಣೆಗೆ ಇಳಿದಿತ್ತೆ ಎಂದರೆ ತಪ್ಪಾಗದು. ಇದರಿಂದ ಕಾಂಗ್ರೆಸು, ಇತರ ಪಕ್ಷಗಳಿಗೆ ಜಿಲ್ಲೆಯಲ್ಲಿ ಎಡೆಯಿಲ್ಲ ಎಂಬುದನ್ನು ಪ್ರದರ್ಶಿಸಿ ತೋರಿಸಿರುತ್ತದೆ.

ಜಿಲ್ಲೆಯ ಅಧಿಕ ಸ್ಥಾನಗಳು ಈ ರೀತಿ ಕೊಂಗ್ರೆಸಿನ ಕೈ ಸೇರಿದ್ದರೂ, ಕೆಲವೇ ಕಡೆಗಳಲ್ಲಿ ಕೊಂಗ್ರೆಸಿಗೆ ವಿರೋಧ ಶಾಧಿಸಿ ಕೆಲ ವ್ಯಕ್ತಿಗಳು ಕಾಂಗ್ರೆಸ್ ಉಮೇದ್ವಾರಿಗಳನ್ನು ನೆದ್ದು ಬಂದಿದ್ದು ಕಾಂಗ್ರೆಸಿನ ಮೇಲೆ ಶ್ರದ್ಧೆಯಿದ್ದವರಿಗೆ ಸಂತೋಷದ ವಿಷಯವಲ್ಲ ಅಲ್ಲದೆ ಸರ್ವಜನಿಕ ಹಿತಾಹಿತ ದೃಷ್ಟಿಯಿಂದ ನೋಡಿದರೂ ಅಧಿಕ ಸಂಖ್ಯೆಯ ಪಕ್ಷವು ಬೇರೆಯಿರುತ್ತಾ ಆದಕ್ಕೆ ವಿರೋಧವಾಗಿ ಪ್ರತಿನಿಧಿಗಳನ್ನು ಕಳುಹಿಸಿದಲ್ಲಿ, ಹಾಗೆ ಕಳುಹಿಸಿದ ಸರ್ಕಾಲು ಬೋರ್ಡಿನಲ್ಲಿ ಪಾರ್ಟಿಯ ಬೆಂಬಲ ವಿಲ್ಲದ ಪ್ರತಿನಿಧಿಯನ್ನು ಕಳುಹಿಸಿ ತನಗೆ ಬೋರ್ಡಿನಿಂದ ದೊರಕಬಹುದಾದ ಪ್ರಯೋಜನದ ಹೆಚ್ಚಿನ ಅಂಶವನ್ನು ಕಳಕೊಂಡಂತಾಗುತ್ತದೆ ಎಂದು ಪ್ರತ್ಯೇಕ ಹೇಳಬೇಕಾಗಿಲ್ಲ

ಈಗಿನ ಚುನಾವಣೆಯ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಮತದಾರ ಪ್ರಭುಗೆ ಪೆಟ್ಟಿನ ನೆರವು ತಪುಗಿರುವ ರಾಷ್ಟ್ರೀಯ ಜವಾಬ್ದಾರಿಕೆಯನ್ನೂ ಅದರ ಬೆಲೆಯನ್ನೂ ಅರಿತಿಲ್ಲವೆಂಬಂತೆ ತೋರುತ್ತದೆ. ಚುನಾವಣೆಯಿಂದ ರಾಷ್ಟ್ರಕ್ಕೆ ನಿಜವಾದ ಲಾಭ ದೊರಕಬೇಕಾದರೆ ಮತದಾರರು ತಮ್ಮಲ್ಲಿ ನೆಲಸಿರುವ ಅಮೂಲ್ಯ ಜವಾಬ್ದಾರಿಕೆಯನ್ನು ತಿಳಿಕೊಳ್ಳುವ ಶಕ್ತಿಯನ್ನು ಎಂದು ಪಡೆಯುತ್ತಾರೋ ಅಂದು ಮಾತ್ರ. ಅಂದ ಮೇಲೆ ರಾಷ್ಟ್ರೀಯ ಜವಾಬ್ದಾರಿಕೆಯೆಂದರೇನು, ಚುನಾವಣೆಯು ಬೆಲೆಯೇನು, ನಮ್ಮ ಸರಕಾರವೆಂಬ ಯಂತ್ರವು ಯಾವ ರೀತಿಯಲ್ಲಿ ನಡೆಯುತ್ತದೆ ಎಂಬ ಯಾವುದನ್ನೂ ಅರಿಯದ ನಮ್ಮ ಜನರು ಈಗಿನ ಪರಿಸ್ಥಿತಿಯಲ್ಲಿ ಚುನಾವಣೆಯ ಮೂಲಕ ಪ್ರತಿನಿಧಿಗಳನ್ನು ಆರಿಸಿ ಸರಕಾರವನ್ನು ನಿರ್ಮಿಸಲು ಅರ್ಹರಿದ್ದಾರೆ ಎಂದು ಹೇಳಬರುವುದಿಲ್ಲ. ರಾಷ್ಟ್ರದ ಹಿತ ದೃಷ್ಟಿಯಿಂದ ಜನ ಸಾಮಾನ್ಯರಲ್ಲಿ ರಾಷ್ಟ್ರೀಯ ಜವಾಬ್ದಾರಿಕೆ, ತಮ್ಮ ಮತಗಳ ಜವಾಬ್ದಾರಿಕೆ ಬರುವವರೆಗೆ, ರಾಷ್ಟ್ರವು ಚುನಾವಣೆಗೆ ಇಳಿಯದೆ ಪ್ರತ್ಯೇಕ ರೀತಿಯಿಂದ ಉತ್ತಮ ವ್ಯಕ್ತಿಗಳನ್ನು ಎತ್ತಿ ತೆಗೆದು ಸರಕಾರವನ್ನು ನಡೆಸಿ ಬರುವುದು ಎಷ್ಟೋ ಉತ್ತಮ.

ಮುಂದಿನ ಚುನಾವಣೆಗಳು ಹೇಗಿರಬೇಕು?

ಬಿ. ಬಿ. ಶೆಟ್ಟಿ, ಬಿ.ಎ,ಬಿ ಎಲ್, ಎಡ್ವಕೇಟ್, ಮಂಗಳೂರು.

ನಮ್ಮ ಮುಂದಾಳುಗಳೂ, ಸಂಸ್ಥೆಗಳೂ ಚುನಾವಣೆಯ ಸಮಯ ಮಾತ್ರ ಮತದಾರರಲ್ಲಿ ಅಭಿಪ್ರಾಯ ತಿದ್ದುವಿಕೆಯ ಪ್ರಯತ್ನದ ಬದಲು, ನಿಮ್ಕ ಸಮಯ ಮತ್ತು ಸಂದರ್ಭಗಳಲ್ಲೂ ಮತದಾರರಲ್ಲಿ ರಾಷ್ಟ್ರೀಯ ಜವಾಬ್ದಾರಿಕೆ ಮೊಳೆತು, ಚುನಾವಣೆಯ ಸಮಯ ಅವರ ವರ್ತನೆಯು ನೀಲ್ಕಟ್ಟಿದಲ್ಲಿರುವಂತೆ ನೋಡುವುದು ಆತೀ ಅಗತ್ಯ. ಕಾಂಗ್ರೆಸು ಈ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳುವುದಾದರೆ, ಗ್ರಾಮ ಗ್ರಾಮಗಳಲ್ಲಿ ಈಗಲೇ ಯುಕ್ತ ಪ್ರಚಾರ ನಡಿಸಿ, ಜನರಲ್ಲಿರಬಹುದಾದ ತಪ್ಪು ಅಭಿಪ್ರಾಯಗಳನ್ನು ಕಿತ್ತಿ, ಹೊಸ ಘಟನೆಯು ನೀರೆಗೆ ಚುನಾವಣೆ ನಡೆವ ಸಮಯ ಮತದಾರರನ್ನು ಅದಪ್ಪು ಯೋಗ್ಯರನ್ನಾಗಿ ಮಾಡಿಡುವುದು ಅತೀ ಅಗತ್ಯ.

ನಮ್ಮ ಮತದಾರರು ಚುನಾವಣೆಯ ನೇಳಾವು ಮೊದಲು ಇಂಥವರಿಗೆ ವಾಗ್ದಾನ ಕೊಟ್ಟರುತ್ತೇವೆ ಎಂಬ ತಪ್ಪು ತಿಳಿಳಿಕೆಗೆ ಸುತ್ತಾಗುವುದುಂಟು. ಮತವನ್ನು ಕೊಡುವುದು ವಾಗ್ದಾನದ ಮೇಲೆ ಹೊಂದಿಲ್ಲ. ಮತದಾರನಿಗೆ ಉಮೇದ್ವಾರಿಗಳು ಯಾರೆಂದು ತಿಳಿದು ಬಂದು ಅವರ ಯೋಗ್ಯತಾಯೋಗ್ಯತೆಗಳು ತಿಳಿದು ಬರುವ ವರೆಗೆ ಯಾವ ಉಮೇದ್ವಾರನಿಗೂ ಮಾತುಕೊಡುವ ಅಧಿಕಾರವಿರುವು ದಿಲ್ಲವೆಂಬುದು ಪ್ರತಿಯೊಬ್ಬನೂ ತಿಳಿದಿರತಕ್ಕ ವಿಷಯ. ಅರ್ಹತೆ, ಅನರ್ಹತೆಯನ್ನು ತೋರಿಸಿ ತಮ್ಮ ಮತವನ್ನು ಕೊಡುವಲ್ಲಿ ಮತದಾರರಲ್ಲಿ ಅವನು ಮುಂದೆ ನಮ್ಮಲ್ಲಿ ಬಂದಿವ ಅಥವಾ ಅನೇಕ ಸಲ ಬಂದವ ಎಂಬ ತಪ್ಪು ಭಾವನೆಗೆ ಎಳ್ಳಷ್ಟೂ ಅಸ್ಪದವಿರಕೂಡದು. ಚುನಾವಣೆಯು ಪ್ರಯೋಜನಕಾರಿಯಾಗಿ ಬರಬೇಕಾದರೆ, ಇಂತಹ ಅಭಿಪ್ರಾಯವು ನಮ್ಮ ಮತದಾರರಿಂದ ತೊಲಗಲೇ ಬೇಕು.

ಅಂತೆಯೇ ಮತದಾರರಲ್ಲಿ ನೆಲೆಸಿರುವ ಓಟಿನ ಹಕ್ಕು ಒಂದು ವಿಶ್ವವಿಖ್ಯಾತವಾದ ವಿಷಯವೆಂಬ ತಪ್ಪು ಅಭಿಪ್ರಾಯವನ್ನು ಮತದಾರರು ಎಂದೆಂದೂ ಕಟ್ಟಿಕೊಳ್ಳಬಾರದು. ಇದರಿಂದ ನಮಗೆ ಕೊಟ್ಟ ಓಟಿನ ಹಕ್ಕನ್ನು ನಾವು ದುರುಪಯೋಗ ಮಾಡಿದಂತಾಗುತ್ತದೆ. ಚುನಾವಣೆಯನ್ನು ದಾಸ್ಯಕ್ಕೆ ಒಳಪಡಿಸಿದಂತಾಗುತ್ತದೆ. ಉಮೇದ್ವಾರಿಗಳನ್ನು ಕಪ್ಪು ಕ್ಕಿಳಿಸಿದಂತಾಗುತ್ತದೆ. ಯಾವುದೇ ಉಮೇದ್ವಾರಿಯಿರಲಿ, ಅತನು ಓಟುಗಳನ್ನು ಕ್ರಯಕ್ಕೆ ಪಡೆದನು ಎಂಬ ವಿಷಯವು ಮತದಾರರಿಗೆ, ಉಮೇದ್ವಾರರಿಗೆ, ಅಂತೆಯೇ ರಾಷ್ಟ್ರಕ್ಕೇನೇ ದೊಡ್ಡ ಕೊರತೆಯ ವಿಷಯ. ಇದರಿಂದಲೇ ನಮ್ಮ ಚುನಾವಣೆಗಳು ಅಧಿಕ ಪೆಚ್ಚಿದ ದಾರಿಯಾಗಿಯೂ, ಯೋಗ್ಯ ವ್ಯಕ್ತಿಗಳ ಮುಂದಾಳುತನಕ್ಕೆ ಎಡೆಕೊಡದ್ದಾಗಿಯೂ ಇರುತ್ತವೆ. ಉಮೇದ್ವಾರಿಯಿಂದ ದೇವಸ್ಥಾನ, ಭೂತಸ್ಥಾನ, ಕಟ್ಟೋಣ ಅಥವಾ ನೇತಾಜಿ ವಗೈರೆ ಕಟ್ಟುವ ಬಗ್ಗೆ ಧನ ಸಹಾಯದ ವಾಗ್ದಾನ ಪಡೆದು ಒಂದು ಜಾತಿಯ, ಒಂದು ಪಂಗಡದ ಅಥವಾ ಒಂದು ಕರೆಯ ಮತಗಳನ್ನೇ ಕೂಡಿಸಿ ಪಿಡುವುದು ಜವಾಬ್ದಾರಿ ಇಲ್ಲದ ಲಜ್ಜಾಸ್ಪದ ವಿಷಯ. ಮತದ ಹಕ್ಕನ್ನು ನಮಗೆ ಯಾವ ಬಗ್ಗೆ ಕೊಟ್ಟದ್ದು? ನಾವು ಅದನ್ನು ಯಾವ ಉಪಯೋಗಕ್ಕೆ ಹಾಕಾವುದು? ಮತವನ್ನು ವಿಕ್ರಯಿಸುವ ಅರಿಯು ತಿಳುವಳಿಕೆ ಇದ್ದ ಮನುಷ್ಯರಲ್ಲಿ ಯಾತಕ್ಕೆ ಬರಬೇಕು? ನ್ಯಾಯವಾಗಿ ಅರಿಬರಬೇಕೆಂದಿದ್ದ ವ್ಯಕ್ತಿಯಾದರೂ ಇಂತಹ ಅಯೋಗ್ಯ ವರ್ತನೆಗಳಿಗೆ ಏಕೆ ತುತ್ತಾಗಬೇಕು?

ಮತದಾರರಲ್ಲಿ ಉಮೇದ್ವಾರಿಗಳು ತಮ್ಮ ಬಳಿಗೆ ಬರುವಾಗ ತಮ್ಮ ಅಭಿಪ್ರಾಯವು ಈ ರೀತಿಯಲ್ಲಿದೆ ಎಂದು ಯಾವ ಸಂಕೋಚವೂ ಇಲ್ಲದೆ ಹೇಳುವ ಸಾಮರ್ಥ್ಯವು ಬೇಕು. ಇಂತಹ ಸಾಮರ್ಥ್ಯವು ಪೋಟರಲ್ಲಿ ಬಂದರೆ ಗುಪ್ತ ರೀತಿಯಲ್ಲಿ ಚುನಾವಣೆಯ ಕಾಲ ಮತವನ್ನು ಕೊಡಿಸುವ ಅವಶ್ಯವಿಲ್ಲ. ಗುಪ್ತ ರೀತಿಯ ಕೊಡುವಿಕೆಯು, ಅಂತಹ ಮನೋಮಟ್ಟವು ನಮ್ಮ ಮತದಾರರಲ್ಲಿ ಇನ್ನೂ ಬಂದಿಲ್ಲವೆಂಬುದನ್ನು ಸೂಚಿಸುತ್ತದೆ. ಅದು ರಾಷ್ಟ್ರಕ್ಕೆ ಶ್ರೇಯಸ್ಕರ ವ ಶ್ಲಾಘನೀಯವಾದ ವಿಷಯವಲ್ಲ. ಬಹಿರಂಗವಾಗಿ ನಮ್ಮ ಮತದಾರರು ತಮ್ಮ ಮತವನ್ನು ತೂಗಿನ ಸ್ಥಿತಿಯಲ್ಲಿ ಕೊಡುವುದು ಮತದಾರರ ವರ್ತನೆಯ ನ್ನೇ ಮೇಲ್ಕಟ್ಟಿಗೆ ವಿರಿಸುವರೆ ಅವಶ್ಯವಿರುತ್ತದೆ. ಒಂದು ಸಂಸ್ಥೆಯ ಪ್ರಸಿದ್ಧ ವ್ಯಕ್ತಿಗಳು ಅನ್ನಿಸಿ, ಅದಕ್ಕೆ ವಿರೋಧವಾಗಿ ಗುಸಿಸಿದಲ್ಲಿ ತಮ್ಮ ಮತವನ್ನು ತೆರುವುದೂ, ಚುನಾವಣೆ ದಿವಸ ಒಬ್ಬ ಉಮೇದ್ವಾರಿಯ ಕೇಂಸಿನಿಂದ, ಅತನಿಗೆ ಕೊಡುವವನೆಂದು ನಟಿಸಿ ಹೊರಟು ಜೋಗಿ, ಅದಕ್ಕೆ ವ್ಯತಿರಿಕ್ತವಾಗಿ ಮತದಾನ ಮಾಡುವುದೂ, ಒಬ್ಬ ಉಮೇದ್ವಾರಿಯ ಕಲಸಗಾರನು ಅಥವಾ ಪಕ್ಷದವನು ಎಂದು ನಟಿಸಿ, ಇನ್ನೊಬ್ಬ ಉಮೇದ್ವಾರಿಗೆ ಮತಗಳನ್ನು ಗಳಿಸಿ, ವಿಶ್ವಾಸಘಾತಕ ಮಾಡಿಕೊಡುವುದೂ ಒಂದು ಪಕ್ಷಕ್ಕೆ ಸೇರಿದವನು ಎಂದು ನಟಿಸಿ ಕೊನೆಗೆ ಕಾರ್ಯಗಳನ್ನು ಕಲ್ಪಿಸಿಕೊಂಡು ಇನ್ನೊಂದು ಪಕ್ಷಕ್ಕೆ ಸೇರಿವುದೂ, ಚುನಾವಣೆ ಸಮಯವು ಬಾಸಗಿ ದ್ವೇಷಗಳ ಸಾಧನೆಸಮಯವೆಂದು ತಿಳಿಯುವುದೂ ನಾವು ಎಷ್ಟರ ಮಟ್ಟಿಗೆ ಕೆಳಮಟ್ಟದಲ್ಲಿದ್ದೇವೆ ಎಂಬುದನ್ನು ತೋರಿಸುತ್ತವೆ, ಎಂಬುದನ್ನು ನಮ್ಮ ಜನರು ಇನ್ನೂ ಗ್ರಹಿಸಿಲ್ಲವೆಂಬಂತೆ ಕಾಣುತ್ತದೆ. ಅಲ್ಲದೆ ಈ ವರ್ತನೆಯು ನಮ್ಮಲ್ಲಿದ್ದರೆ ನಾವು ಎಷ್ಟರಮಟ್ಟಿಗೆ ಯೋಗ್ಯ ವ್ಯಕ್ತಿಗಳನ್ನು ಮುಂದಾಳುಗಳಾಗಿ ಕಳುಹಿಸಿಯೇವು? ಅಲ್ಲದೆ ಚುನಾವಣೆಯ ಪ್ರಯೋಜನವಾದರೂ ಈ ರೀತಿಯಲ್ಲಿ ವರ್ತಿಸಿದರೆ ನಮಗೆ ಹೇಗೆ ದೊರಕೀತು?

ಅಂತೆಯೇ ಒಂದು ಪಕ್ಷವು ಅಥವಾ ಒಂದು ವ್ಯಕ್ತಿಯು ಗೆದ್ದು ಬರಬೇಕೆಂಬ ಕುತೂಹಲದಿಂದ ಸತ್ತು ಹೋದ ವ್ಯಕ್ತಿಯ ಪರವಾಗಿ ಬಹಿರಂಗವಾಗಿ ಮತದಾನ ಮಾಡಲು ಮುಂದೆ ಬರುವುದೂ, ಅಂತೆಯೇ ಊರಲ್ಲಿ ಇಲ್ಲದವನ ಬದಲಿಗೆ ಯಾರಾದರೊಬ್ಬ ಊರಿನಲ್ಲಿದ್ದವ ಬಂದು ಮತದಾರನೆಂದು ನಟಿಸುವ ಪ್ರಯತ್ನಗಳೂ ಬಹಳ ಅಸಹ್ಯಕರವಿರುತ್ತವೆ. ಇವು ನಮ್ಮನ್ನು ಎಂದೂ ಯೋಗ್ಯ ವ್ಯಕ್ತಿಗಳೆಂದು ಹೇಳುವಂತಿಲ್ಲ. ಮೂಢ ಮತದಾರರಲ್ಲಿ ಉಮೇದ್ವಾರಿಯಿಂದ ಮಾಡಲಸಾಧ್ಯವಾದ, ಅಂತಹ ಮತದಾರರಿಗೆ ಅತಿ ಸುಲಭಸಲು ಸುಲಭವಿದ್ದ ವಿಷಯಗಳನ್ನು ಯಾವುದೇ ಉಮೇದ್ವಾರಿಯೂ, ಉಮೇದ್ವಾರಿಯ ಕರೆಯವರೂ ಮಾಡಿಸಿಕೊಡುವವೆಂಬ ಅಕೆಯನ್ನು ತೋರಿಸುವುದೂ ಶುದ್ಧ ತಪ್ಪಿರುತ್ತದೆ. ಅಲ್ಲದೆ ನುತವಾಗಿ ಮೂಢಶ್ರದ್ಧೆಯನ್ನು ಉಮೇದ್ವಾರಿಯು ದುರುಪಯೋಗಪಡಿಸಿಂತಾಗುತ್ತದೆ. ಆದಗ ಬದಲು ಉಮೇದ್ವಾರಿಯು ತಾನು ಚುನಾಯಿಸಿಬಂದಲ್ಲಿ ಇಂತಹ ಕೆಲಸಗಳನ್ನು ಮಾಡಿಸಿಕೊಂಡು ಬರಲು ನಿರ್ಧರಿಸಿರುತ್ತೇನೆ ಎಂದು ಯಾತಕ್ಕೆ ಪ್ರಚಾರಿಸ ಕೂಡದು?

ಈ ಮೇಲ್ಕಂಡ ರೀತಿಯ ಅಯೋಗ್ಯ ವರ್ತನೆಯನ್ನನುಸರಿಸಿಯೇ ಉತ್ತಮ ಉಮೇದ್ವಾರಿಯು ಅಥವಾ ಒಂದು ಸಂಸ್ಥೆಯ ಪ್ರತಿನಿಧಿಯು ಚುನಾವಣೆಯಲ್ಲಿ ಗೆಲ್ಲುವರೆಯಾಕೆ ಪ್ರಯತ್ನ ಮಾಡಬೇಕು?

(ಮುಂದುವರಿಯುವುದು)

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸಾಕಯಗಳಿಂದ ಕೂಡಿದ ನೇಲ್ಕರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಜೀವನವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೇಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ
ಅದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟುಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
೫, ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನಾಯಿಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ.

ಸ್ಮಾಲ ನಂಬ್ರ 350/1949.

ದಿ ಕೆನರಾ ಇಂಡಿಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ. ಯಿಪ್ರ ಕಛೇರಿಯಿಂದ ರಿಕವರಿ ಆಫೀಸರ್, ಎಮ್. ಎಸ್. ಭಂಡಾರಿ —ವಾದಿ,

ಮತ್ತು

೫. ಅಂಚ್ಣಯ್ಯ ಶೆಣ್ಯೈ-೬. ರಾಮಚಂದ್ರ ಶೆಣ್ಯೈ ಮಗ-ಕಛೇರಿಗಾಗ್ರಹಿಸಿ-ಪ್ರತಿವಾದಿ.

ಸಿದ್ರಿ ಪ್ರತಿನಾದಿಗೆ.

ಪ್ರತಿವಾದಿಯು-ವಾದಿ ಬೇಂಕಿಗೆ ತಾರೀಕು 2-9-1946ಕ್ಷಿ ರುಪ್ಪಾ 200-0-0ಕ್ಕೆ ಬರಕೊಟ್ಟ ಡಿಪಾಸಿಂಟ್ ನೋಟಿನ ಅಸಲು ಬಾಕಿ ಪಟ್ಟಿ ಕೂಡಾ ರುಪ್ಯಾ 124-3-11ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 28-10-1949 ಕ್ಕೆ ಪ್ರಕಟನ ತನಿಖೆ ಬಗ್ಗೆ ಯಿಡೋಣಾಗಿ ಯದೆ. ಆ ದಿವ್ಸ ಸದರಿ ಪ್ರತಿವಾದಿಯು ಸ್ವತ ಹಾ ಯಾ ವಕೀಲರ ಮೂಲಕ ಹಾಜರಾಗದಿದ್ದಲ್ಲಿ ಅತನ ಸೈರ್‌ಹಾಜರಿಯಲ್ಲಿ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂಬ ಸಂಗ್ತಿ ಯೂ ಮೂಲಕ ತಿಳಿಸೋಣಾಗಿಯದೆ.

M Damodara Kamath.
Advocate for Plaintiff.

ಉಡುಪಿ, ತಾ. 10-10-49.

ಸ್ವೀಕಾರ—ವಿಮರ್ಶೆ

(ಕನ್ನಡ, ಇಂಗ್ಲಿಷ್: ಹಿಂದಿ, ಮರಾಠಿ, ತುಳು ಭಾಷೆಗಳ ಪುಸ್ತಕ, ಪತ್ರಿಕೆಗಳ ವಿಮರ್ಶೆಯನ್ನು ನವಯುಗದಲ್ಲಿ ಕ್ರಮವಾಗಿ ಕೊಡಲಾಗುವುದು. ಆ ಬಗ್ಗೆ ಪುಸ್ತಕ ಯಾ ಪತ್ರಿಕೆಗಳ ಎರಡೆರಡು ಪ್ರತಿಗಳನ್ನು ಕಳುಹಿಸಿಕೊಡಬೇಕಾಗುವುದು. ಸಂ. ನ.)

೧ ಒಲವಿನ ಉಪವನ.

ಲೇಖಕರು:— ವಸುದೇವ್ ಭೂಪಾಲಂ. ನೂರಾಟಗಾರರು: ಎಚ್. ಎಸ್. ರಾವ್ ಬ್ರದರ್ಸ್, ಬೆಂಗಳೂರು. ಬೆಲೆ ೦-೮-೦

'ಒಲವಿನ ಉಪವನ' ರೂಪವತಿಯಾದ ವಿಧವೆಯ ಪುನರ್ವಿವಾಹದ ಕುರಿತಾದ ಕತೆ. ಜಾತೀಯ ಕೂಗೂ, ಸಂಪ್ರದಾಯದ ಕಟ್ಟೂ, ಪ್ರೇಮಿಗಳೀರ್ವರಿಗೆ ತಡೆಯಾಗಿ ನಿಂತರೂ ಅದನ್ನು ಪ್ರತಿಭಟಿಸಿಯೇ ತಮ್ಮ ಧ್ಯೇಯ ಸಾಧಿಸುತ್ತಾರೆ. ಕತೆಯ ಮೊದಲ ಭಾಗವಲ್ಲಿ ತೀರ ಸಪ್ಪೆಯಾಗಿದೆ. ಎರಡು ಪತ್ರಗಳೂ, ಅಣ್ಣತಮ್ಮಂದಿರ ಸಂವಾದವೂ ಚೆನ್ನಾಗಿದೆ.

೨ ಮಹಾಶ್ವೇತೆ

ಲೇಖಕರು—ಸಮೀತನಪಳ್ಳಿ ರಾಮರಾಯರು. ಮಾರಾಟಗಾರರು: ಎಚ್. ಎಸ್. ರಾವ್, ಬ್ರದರ್ಸ್, ಬೆಂಗಳೂರು ನಗರ. ಬೆಲೆ ೧೪ಆಣೆ.

'ಶ್ರೀ ಸಮೀತನಪಳ್ಳಿ ರಾಮರಾಯರು ತಮ್ಮ ಸ್ನಿಗ್ಧವಾದ, ಮನೋಹರವಾದ ಶೈಲಿಯಿಂದ ಮಹಾಶ್ವೇತೆಯ ವ್ಯಕ್ತಿತ್ವವನ್ನು ಬೆಳಗಿದ್ದಾರೆ. ನಾಟಕ ರಚನಾಕ್ರಮ ಗಾಂಭೀರ್ಯಕ್ಕೆ ತಕ್ಕಂತಿದೆ. ರಂಗದ ಮೇಲೆ ಪ್ರಯೋಗಕ್ಕೆ ತರುವ ವೇಳೆ ಕೆಲವು ದೃಶ್ಯಗಳ ಪ್ಲುಯ ಸಂಭಾಷಣೆಗಳು ತುಸು ದೀರ್ಘವೆನಿಸಿದರೂ ಮಾತು ಅವ್ಯಾಹತವಾಗಿ ಸಾಗುತ್ತದೆ. ಪ್ರತಿಯೊಂದು ಪಾತ್ರಗಳ ಮಾತು ಗಳೂ ಮನಸ್ಸನೀತ್ಯವಾಗಿದ್ದು ಒಂದು ಅಪರ್ಯವನ್ನು ತೋರಿಸುವಂತಹವಾಗಿವೆ.

೩ ಕನ್ನಡ ಗುಡಿ

ಸಂಪಾದಕರು ವರದರಾಜ ಅಪ್ಪ- ೩೬.

ನೋಟೀಸು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ O. P 107/49

ಅರ್ಜಿದಾರಳು, ಸುಬ್ಬಕ್ಕಸೆಟ್ಟಿ. ಕಾವೇರಿನೆಡ್ಡಿ ಮಗಳು. ಕುಂದಾಪುರ ತಾಲ್ಲೂಕು ಸಾಲಿಗ್ರಾಮದ ತೆಂಕಬೆಳ್ಳಲ್ಲಿದಾವಳು.

ವಿರುದ್ಧ ಯಿಲ್ಲ

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ.

ಅರ್ಜಿದಾರಳ ಮನ ಈಗ ವ್ಯತಪಟ್ಟಿರುವ ಆಂಶವು ಸೆಟ್ಟಿಗೆ ಬರತಕ್ಕ ಅರ್ಜಿಯಲ್ಲಿ ಕಾಣುವ ಸಣಗಳ ವಸೂಲಿ ಕುರಿತು ಅರ್ಜಿದಾರಳ ಹೆಸರಿಗೆ ವಾರಿಸು ಸರ್ಟಿಫಿಕೇಟು ಕೊಡಿಸಬೇಕೆಂತ ಬಾಕಲುಮಾಡಿದ ಮೇಲಿನ ಅರ್ಜಿ ತನ್ನಿಯು ತಾ17-10-49ಕ್ಕೆ ಯಿಟ್ಟಿದೆ. ಆ ಕುರಿತು ಯಾರವ್ವದರೂ ಆಕ್ಷೇಪಯಿದ್ದರೆ ಆ ದಿನ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗತಿ ತಿಳಿಸಿಯಿದೆ.

By otder of the court

Y. Tejappa Shetty

Advocate for Petitioner

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ಅಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಕುಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜುಬಿಲಿ ಹಾಲ್, ದೆಹಲಿ ಯುನಿವರ್ಸಿಟಿ, ದೆಹಲಿ. ೭

ಹೊರನಾಡ ಕನ್ನಡಿಗರ ವತಿಯಿಂದ ಪ್ರಕಟವಾಗುತ್ತಿರುವ 'ಕನ್ನಡ ಗುಡಿ'ಯ ಜುಲೈ ಮತ್ತು ಸಪ್ಟಂಬರ ತಿಂಗಳ ಸಂಯುಕ್ತ ಸಂಚಿಕೆ ವಿಷಯ ವೈವಿಧ್ಯತೆಗಳಿಂದಲೂ, ವಿಚಾರ ಪೂರ್ಣ ಬರಹಗಳಿಂದಲೂ ಕೂಡಿರುತ್ತದೆ. ಹೊರನಾಡ ಕನ್ನಡಿಗರು ಹಲವಾರು ಉದ್ದೇಶಗಳನ್ನಿಟ್ಟುಕೊಂಡು ಕೆಲಸಮಾಡುತ್ತಲಿದ್ದಾರೆ. ಕನ್ನಡಗುಡಿ ಆ ಉದ್ದೇಶಗಳಲ್ಲೊಂದಾಗಿ ಹೊರಟಿದೆ. ಕನ್ನಡಿಗರ ಸಹಕಾರ, ಬೆಂಬಲ ದಿಂದ ಈ ಸಂಸ್ಥೆಯು ಆಶಿ ಫಲಿಸಲೆಂದು ಆಶಿಸಬೇಕಾಗಿದೆ

೪ ಮಿತ್ರ

ರಾಷ್ಟ್ರೀಯ ಮಾಸಪತ್ರಿಕೆ. ಸಂಪಾದಕರು. ಕೆ. ಅಚ್ಚುತರಾವ್, ಗುಡ್ಡೆತೋಟ ಸುಬ್ಬರಾವ್, ಎಂ. ಎಸ್. ರಾಮರಾವ್, ಆರಳೀ ಕಟ್ಟೆ

ಮಲೆನಾಡಿನ ಸಂಪೇದವನ್ನು ಸಾರಿ, ಜನ ಜಾಗೃತಿಯನ್ನುಂಟುಮಾಡುವ ಸದುದ್ದೇಶ ದಿಂದ 'ಮಿತ್ರ' ಹೊರಟಿದಾನೆ. ಗಾಂಧೀಜಯ ರಚನಾತ್ಮಕ ಕಾರ್ಯವನ್ನು ಬೆಳಕಿಗೆ ತರುವ ಭರವಸೆಯನ್ನು ಸಂಪಾದಕರು ಕೊಟ್ಟಿದಾರೆ. ಮಾತು, ಭರವಸೆ ಕೃತಿಯಲ್ಲಿ ಮೂಡಿಬರಲಿ!

೫ ದಯಾನಂದ ದಿಗ್ವಿಜಯ

ಲೇಖಕರು: ಪಂಡಿತ ಮಂಜುನಾಥ ವಾ

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd-)

KUNJAL P. O. Brahmavar, S. K.

— ಮಕ್ಕಳನ್ನು ಹಡೆಯುವುದು ಸಾಕು —

ಅರಕ್ತ ಸ್ತ್ರೀಯರಿಗೆ **ಬರ್ಧ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಹಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜೆಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧರೆಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಲಜಾಲ ಕಮಸ್ಯ, ಹಾಕೇರಿ ಬ್ಯಾಡಗಿ

ಗೊನೋರಿಯಾ ಪೆರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೇವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕೆಂಪಾಗವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಬೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವವು ಸ್ತ್ರೀಯರ ಬಿಳಕಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟು ಗವಿಯಿಂದ ಗರ್ಭಕೋಶ ನಂಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು- ಈ ಔಷಧವನ್ನು ಜೀಸಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಈಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜು ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಹತ್ರೆಗ್ಯವಹಾರ ಮಾಡತಕ್ಕ ಸೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ಸ್ತ್ರೀ.ಪ್ರಕಾರಕರು: ಆರ್ಯಾವರ್ತ ಪ್ರಕಾಶನ, 992 ಶ್ರೀರಂಪುರ ಬೆಂಗಳೂರು 3.

ಆರ್ಯಸಮಾಜದ ಪ್ರಚಾರಜೀವ ಮುಖ್ಯವಾಗಿಟ್ಟುಕೊಂಡು, ಶ್ರೀ ದಯಾನಂದ ಸರಸ್ವತಿಯವರ ಜೀವನ ಚರಿತ್ರೆಯನ್ನು ಚಿತ್ರಿಸಲಾಗಿದೆ ಭರತ ದೇಶದ ಕೀರ್ತಿಗೆ ಕಾರಣರಾದ ಮಹಾತ್ಮಾ ಬುದ್ಧ ಹಾಗೂ ಶಂಕರಾಚಾರ್ಯರ ತತ್ವಗಳಿಂದ ದೇಶ ಪುನರ್ಬಲವಾಯಿತೆಂದೂ ಆ ರಾಜಕೀಯ ನಾಯಿತೆಂದೂ ವಾದಿಸಿದಾರೆ. ಅಕೋಕ ಚಕ್ರವರ್ತಿಯ ಕಾಲದಲ್ಲಿ ಸಂಘಟಿತವಾದ ಆ ಭಾರತ ಸಾಮ್ರಾಜ್ಯವು ಬಾಡ್ಡಧರ್ಮದ ಪ್ರಭಾವದಿಂದಲೇ ಕುಸಿದುಬಿತ್ತು ಎನ್ನುತ್ತಾರೆ ಲೇಖಕರು. ಶ್ರೀ ಶಂಕರಾಚಾರ್ಯರ ತತ್ವವು ಭಾರತೀಯರ ನಿರುತ್ಸಾಹಕ್ಕೆ ಕಾರಣವಾಗಿದೆಯಂತೆ. ಈ ಎಲ್ಲದರ ಫಲವಾಗಿ ಕ್ರೈಸ್ತನ ತತ್ವವನ್ನು ನಮ್ಮ ತರುಣರು ಅಭ್ಯಸಿಸಿ ಕ್ರೈಸ್ತಮತಾನುಯಾಯಿಗಳಾದರಂತೆ. ನಮ್ಮ ದೇಶ ಸ್ವಾತಂತ್ರ್ಯವನ್ನು ಗಳಿಸಿದ್ದು ಅಹಿಂಸಾಬಲದಿಂದಲೇ. ಮಹಾತ್ಮಾ ಗಾಂಧಿಯವರ ಈ ಅಸ್ಪದಿಂದಲ್ಲದೆ ಇನ್ನಾವನಾರ್ಗದಿಂದಲೂ ಭಾರತ ಸ್ವಾರಂತ್ರ್ಯ ಪಡೆಯಲು ಸಾಧ್ಯವಿರಲಿಲ್ಲ. ಗಾಂಧಿಯ ವರು ಸ್ವಾರ್ಥವೇ ಸಕಿಯಲ್ಲಿ ಕ್ರೈಸ್ತ, ಮಹಮ್ಮದ್, ಹಿಂದೂ ತತ್ವಗಳನ್ನು ಸಮನ್ವಯ ಮಾಡಿ ಉಪದೇಶಿಸಿದ್ದರಿಂದ ಜನ ತಪ್ಪು ಕಲ್ಪನೆಯನ್ನು ದೂರಮಾಡಿಕೊಂಡು ತಮ್ಮ ತಮ್ಮ ಮತಗಳಲ್ಲಿ ಶ್ರದ್ಧೆಯಿಟ್ಟುಕೊಂಡೇ ಸಿಕಮುಖವಾಗಿ ಬಾಳಿದರು' ಇದರಿಂದ ಸರಮತಾನುಕರಣ ನಿಂತಿತೇ ಹೊರತು ಹೆಜ್ಜಾಗಲಲ್ಲಿ ನಮ್ಮ ತರುಣರು ಅನ್ಯ ಮತವನ್ನು ನೋಡಿಸಿದ್ದರೆ ಅದು ಜಾತೀಯ ಭಾವನೆಯಿಂದ ಹೊರಬಿ ಅಪಪ್ರಚಾರದಿಂದಲೇ. ಶ್ರೀ ರಿಸ್ತಿಗಳು ಆರ್ಯಸಮಾಜದ ಪ್ರಚಾರ ದೃಷ್ಟಿಯಿಂದ ಸತ್ಯಕ್ಕೆ ವಿರೋಧವು, ಆಭಾಸವು ಆದ ಪಾಪ ಪರಿಹಾರವನ್ನು ಇಳಿಸಿಬಿದ್ದಾರೆ. ಬುದ್ಧ, ರಂಕರಾಚಾರ್ಯ, ಕ್ರಿಸ್ತನಿಗಿಂತ ಹೆಚ್ಚಿನ ಬುದ್ಧಿವಾಳಿಗಳೂ, ಕ್ರಯಾವಾಲಿಗಳೂ ಬಹುಸಂಖ್ಯಾತ ಸರಸ್ವತಿಯವರು ಎನ್ನುವುದು ತೀರ ಹುಚ್ಚು ಕಲ್ಪನೆ' ಆವರು ಭಾರತದಲ್ಲಿ ಬೆಳಗಿದ ಮಹಾ ವ್ಯಕ್ತಿಗಳೆನ್ನುವುದನ್ನು ಒಪ್ಪೋಣ. ದೇಶ ಸ್ವತಂತ್ರವಾಗಿ, ಜಾತೀಯಕಾಗಾವಣೆ ದೂರಾಗಿ, ಜನ ಒಂದಾಗುವ ಈ ಕಾಲಕ್ಕೆ ಇಂತಹ ಮತೀಯ ಮನೋಭಾವನೆ ಸ್ಫುರ ಮಾಡುವುದು ತುಂಬ ಶೋಚನೀಯ.'

೬ 'ತಾಯಿ'

ಪ್ರಕಾರಕರು. ವಿಕಾಸ ಸಾಂಸ್ಕೃ ಮಾಲೆ, ಶಿಗ್ಗಾಂವಿ. (ಧಾರವಾಡ ಜಿಲ್ಲಾ) (ವಿಮರ್ಶೆ ಮೊದಲೇ ಬಂದಿದೆ)

— ಎಸ್ಸೆಲ್.

ಮುಂಬಾಯಿ

ಶ್ರೀ ಜಗದೀಶ ನೈತ್ಯಕಲಾ ಮಂದಿರ, ಇವರು ಮುಂಬರುವ ಸಹಾಯಾರ್ಥವಾಗಿ ಶ್ರೀ. ಆರ್. ಡಿ. ಕಾನುತರಿಂದ ಬರೆಯಲ್ಪಟ್ಟ "ನಾರದ ವಿವಾಹ" ಎಂಬ ಹಾಸ್ಯ ರಸಭರಿತವಾದ ಅತ್ಯುತ್ತಮ ಪೌರಾಣಿಕ ಕನ್ನಡ ನಾಟಕವನ್ನು ಇದೇ ಒಕ್ಟೋಬರ ೨೦ಗಳ ತಾರೀಕು 28ನೇ ಶುಕ್ರವಾರ ರಾತ್ರಿ ಗಂಟೆ ೮.೩೦ ಕ್ಕೆ ಸರಿಯಾಗಿ ಮುಂಬಾಯಿಯ ಕಳ್ಳಾದೇವಿ ರೋಡಿನಲ್ಲಿರುವ ಭಾರ್ಗವಾದಿ ಥಿಯೇಟರಿನಲ್ಲಿ ಅಭಿನವಿಸುವರು ಕನ್ನಡಾಭಿಮಾನಿಗಳು ಪ್ರೋತ್ಸಾಹಿಸಬೇಕಾಗಿ ವಿನಂತಿಸಲಾಗಿದೆ.

ಮೂತ್ರಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹಠತಪ್ಪು ಮೂತ್ರಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀತ್ರ ಗುಣಹೊಂದಬಹುದು, ಯಾವ ಪಾಪಕವೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ.. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. ೫- [ವಿ. ಪ. ಹನ್ನೆರಡಾಣೆ ಪ್ರತ್ಯೇಕ.]

MRS P. DEVEE, P. DS (N. J.)
Tollygunge CALCUTTA

ಸ್ವಾಕಿಸ್ಕರು: ಶಕಾಕಂಪನಿ, ಮಂಗಳೂರು

—— ಮಹಾತ್ಮರೂ ಅಸ್ಪೃಶ್ಯತೆಯೂ ——

ಲೇ:-ಶ್ರೀ ಎ. ಲಕ್ಷ್ಮೀನಾರಾಯಣ ಆಳ್ವ.

ಸಮಾಜ ಮತ್ತು ವ್ಯಕ್ತಿಯ ಅಧಿಕಾರ ವೆಷ್ಟು? ಆದರ ಕೊನೆಯ ಸೀಮೆಯಾವುದು? ಈ ವಿಷಯದಲ್ಲಿ ಈ ಸೃಷ್ಟಿ ಉತ್ಪತ್ತಿಯಾದಂದಿನಿಂದಲೂ ವಾದ ವಿವಾದಗಳು, ಮತ ಭೇದಗಳು ನಡೆಯುತ್ತಾ ಬಂದಿವೆ. ಆದರೆ ಇಂದಿನ ವರೆಗೂ ಅದರ ನಿರ್ಣಯವಾಗಿಲ್ಲ; ನಿಶ್ಚಿತ ಉತ್ತರ ಸಿಕ್ಕಿಲ್ಲ. ಮುಂದಾದರೂ ಒಂದು ನಿಶ್ಚಿತ ನಿರ್ಣಯವಾಗಬಹುದೆಂಬ ಹೇಳಲು ರುವುದಿಲ್ಲ. ಹಾಗೆಂದ ಮಾತ್ರಕ್ಕೆ ಸಮಾಜ ಮತ್ತು ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಒಂದು ಮೇರೆ ಇದೆ ಎಂಬುದರಲ್ಲಿ ಯಾರಿಗೂ ಸಂಶಯವಿಲ್ಲ. ಆ ಮೇರೆಯನ್ನು ಮೀರುವ ಹಕ್ಕು ಸಮಾಜಕ್ಕೂ ಇಲ್ಲ, ವ್ಯಕ್ತಿಗೂ ಇಲ್ಲ ಸಮಾಜ ಆ ಗೆರೆಯನ್ನು ಪಾಟಿದರೆ ತನ್ನನ್ನೂ ನಾಶ ಮಾಡಿಕೊಳ್ಳುತ್ತದೆ. ವ್ಯಕ್ತಿಯನ್ನೂ ನಾಶಪಡಿಸುತ್ತದೆ.

ಸಮಾಜವು ಶತ್ರುವ ಸೀಮೆಯನ್ನು ಮೀರಿ, ಸೊಕ್ಕಿದ ಎತ್ತಿನಂತೆ ಕೆಂಡತ್ತ ನಾಗಲೋಟದಿಂದ ಧಾವಿಸುತ್ತಿರುವಾಗ ಅದಕ್ಕೆ ಏಟು ಹಾಕಲೇಬೇಕು. ಇಲ್ಲದಿದ್ದರೆ ಅದು ತನ್ನ ಸಭ್ಯತೆ ಸಂಸ್ಕೃತಿಗಳನ್ನು ಕಳಕೊಂಡು ಶೂನ್ಯವನ್ನು ಸ್ರವೇಶಿಸುವ ಸಂಭವವಿದೆ. ಆ ಏಟಿನಿಂದ ಸಮಾಜ ಸಾಯುವುದಿಲ್ಲ; ಅದರ ಮದಮತ್ತಿಕೆ ಇಳಿಯುತ್ತದೆ. ಅದಕ್ಕೆ ತನ್ನ ಆರಿವುಂಟಾಗಿ ತಪ್ಪನ್ನು ತಿಳಿದುಕೊಳ್ಳುತ್ತದೆ. ಹಾಗೆ ಮದೋನ್ಮತ್ತವಾಗಿ ಹಾದಿಬಿಟ್ಟು ಎತ್ತಲೋ ನೆಗೆಯುತ್ತಿರುವ ಸಮಾಜವನ್ನು ತಡೆ ಹಿಡಿದು ನೇರವಾದ ಮತ್ತು ನಿಜವಾದ ದಿಕ್ಕಿನಲ್ಲಿ ನಡೆಯುವಂತೆ ಮಾಡುವುದು ಸಾಮಾನ್ಯ ವ್ಯಕ್ತಿಗಿಂದ ನೆನೆಸಲಾದ ವಿಷಯ. ಅಂತಹ ಸಂಧಿಗ್ಧ ಸನ್ನಿವೇಶಗಳಲ್ಲಿ ಮಹಾ ವ್ಯಕ್ತಿಗಳು ಜನ್ಮ ತಳೆದು ಆ ಕೆಲಸವನ್ನು ಪೂರೈಸುತ್ತಾರೆ. ಹಿಂದೂ ಸಮಾಜವು ಶತ್ರುದ ಮೇರೆಯನ್ನು ಮೀರಿ ಅಸ್ಪೃಶ್ಯತೆಯ ಕಶ್ಮಲವನ್ನು ತನ್ನೊಳಗೆ ತುರುಕಿಸಿಕೊಂಡು ಅಜ್ಞಾನದ ಅಂಧಕಾರದಿಂದ ಅವೃತವಾಗಿ ದಾರಿ ಕಾಣದೆ ಅನತ್ಯದ ದೀರ್ಘಕಿಸುತ್ತಿದ್ದಾಗ ಭಾರತಿಯು ಶ್ರೇಷ್ಠ ಜೀವಿಯೊಬ್ಬನಿಗೆ ಜನ್ಮವಿತ್ತಳು. ಆ ಮಹಾ ವ್ಯಕ್ತಿಯು ಹಾದಿ ಬಿಟ್ಟು ನೆಗೆಯುತ್ತಿದ್ದ ಸಮಾಜವನ್ನು ಆಡಲ ಅತ್ಯವಿಶ್ವಾಸದಿಂದ ಎದುರಿಸಿ, ನಿಲ್ಲಿಸಿ, ಪ್ರೇಮದ ಕಡಿವಾಣವನ್ನು ಹಾಕಿ ಹಿಂದೆಳೆದು, ಅಹಿಂಸೆಯ ಬಾರುಕೋಲಿನಿಂದ ಬಡಿದು ಶತ್ರುದತ್ತ ಪ್ರವರ್ತಿಸಿತು. ಆ ಮಹಾ ವ್ಯಕ್ತಿಯೇ ಮಹಾತ್ಮಾ ಗಾಂಧಿ.

ಮಹಾತ್ಮರಿಗೆ ಚಿಕ್ಕ ವಯಸ್ಸಿನಲ್ಲಿಯೇ ಸತ್ಯದ ಬೆಳಕಿನಲ್ಲಿ ಅಸ್ಪೃಶ್ಯತೆಯ ಪೊಳ್ಳುತನವು ಕಂಡುಬರಲು ಆದರ ವಿರುದ್ಧ ಸಿಡಿದೆದ್ದು ಉಚ್ಚಾಟನೆಗಾಗಿ ಕ್ರಾಂತಿಯ ಕಹಳೆಯನ್ನೂದಿ ಸೊಂಟ ಕಟ್ಟಿ ರಣಕಣಕ್ಕಿಳಿದು ಅಹಿಂಸಾತ್ಮಕ ಬಂದು ಹೂಡಿದರು. ಅಸ್ಪೃಶ್ಯತೆಯ ನಿರ್ಮೂಲನಕ್ಕಾಗಿ ಇವರು ಹಗಲು ರಾತ್ರಿಗಳೆನ್ನದೆ ದುಡಿದು ದೇಶದಾದ್ಯಂತ ಸುತ್ತಿ ಅಜ್ಞಾನದ ಅಂಧಕಾರದಲ್ಲಿ ಮುಳುಗಿ ತನ್ನ ತಾನರಿಯದಿರುವ ಜನತೆಗೆ ಜ್ಞಾನ ಜ್ಯೋತಿಯನ್ನು ನೀಡಿ, ಆ ಬೆಳಕಿನಲ್ಲಿ ಅಸ್ಪೃಶ್ಯತೆಯ ನಿಜರೂಪವನ್ನು ಕಂಡುಕೊಳ್ಳಲು ಬಿನ್ನವಿಸಿದರು. ದೇಶ ಮತ್ತು ಧರ್ಮದಲ್ಲಿನ ಅಸ್ಪೃಶ್ಯತೆ ಎಂಬ ಹೆಸರೇ ನಾಶವಾಗಿ ಹೋಗುವಂತೆ ದುಡಿಯಬೇಕಾಗಿ ಜನತೆಗೆ ಕಳಕಳಿಯ ಕರೆಯನ್ನು ಕೊಟ್ಟರು. ಅಸ್ಪೃಶ್ಯರ ಕೇರಿ ಕೇರಿಗಳನ್ನು ಸುತ್ತಿ ಅವರ ಅಭ್ಯುದಯದ ವೇದನಾರೂಪೀ ಹಿಮಾಲಯವನ್ನು ಕಂಡು ಕಣ್ಣೀರು ಕರೆದು ಅವರ ಹೀನ ಕಾರ್ಯದಲ್ಲಿ ತಾನೂ ಭಾಗಿಯಾಗಿ ಭಂಗಿಯಾಗಿ ದುಡಿದರು. ಅವರು ಹೋದಲ್ಲೆಲ್ಲಾ ಅಸ್ಪೃಶ್ಯರಿಗಾಗಿ ಬೇಡಿಕಾಡಿ ನಿಧಿ ಕೂಡಿ ಇಡೀ ದೇಶದಲ್ಲಿ ಒಂದು ವ್ಯವಸ್ಥಿತ ಅಹಿಂಸಾತ್ಮಕ ಸೈನ್ಯವನ್ನು ಸಂಘಟಿಸಿ ಅಸ್ಪೃಶ್ಯತೆಯ ವಿರುದ್ಧ ಧಾಳಿ ಮಾಡಿದರು. ಹಲವಾರು ಬಾರಿ ತನ್ನ ಪ್ರಾಣವನ್ನು ಒತ್ತೆಯಿಟ್ಟು ಅಸ್ಪೃಶ್ಯತೆಯ ಆಹ್ವಾನವನ್ನು ಸ್ವೀಕರಿಸಿ ವಿಜಯಿಗಳಾದರು. ಈ ರೀತಿ ಅವರು ಅಸ್ಪೃಶ್ಯತೆಯ ನಿಜರೂಪವನ್ನು ತಾನು ತಿಳಿದು, ಜನತೆಗೆ ತಿಳುಹಿದ ದೇಶ ಮತ್ತು ಧರ್ಮದ ಅವನತಿಗೆ ಹೇತುವಾದ ಈ ಸಾನಾತನಿಕ ಅನ್ಯಾಯದ ವಿರುದ್ಧ ಅಜೀವ ಪರಿಯಂತ ಹೋರಾಡಿದರು.

ಈ ಸಾಮಾಜಿಕ ಅನ್ಯಾಯವನ್ನು ಕಂಡು ಅವರ ಮನಸ್ಸು ಎಂತುಕಳವಳ ಪಡುತ್ತಿತ್ತು? ಈ ಕಟ್ಟುಪಾಡನ್ನು ತೆತ್ತು ಬಿಸುಡುವುದಕ್ಕಾಗಿ ಅವರು ಎಂತು ಕಾರ್ಯಪ್ರವೃತ್ತರಾಗಿದ್ದರು? ಅವರ ಬಗೆ ಎಂತಿತ್ತು? ಎಂಬುದನ್ನು ಅವರ ಈ ಕೆಳಗಿನ ಮಾತುಗಳಿಂದ ನಾವು ಅರಿತುಕೊಳ್ಳಬಹುದಾಗಿದೆ:"ಈ ಹೊತ್ತು ಅಳುಕಿಸಲಾರದ ಒಂದು ಕಳಂಕವು ಹಿಂದು ಧರ್ಮಕ್ಕೆ ಅಂಟಿಕೊಂಡಿದೆ ಅದು ಅನಾದಿಕಾಲದಿಂದಲೂ ನಮ್ಮಲ್ಲಿ ಬರ್ಮದಲ್ಲಿದೆಯೆಂದು ನಾನು ನಂಬಿಲ್ಲ. ಆದೊಂದು ಶಾಪವು ಎಂದು ನನ್ನ ಮತ. ಈ ಶಾಪಕ್ಕೆ ಗುರಿಯಾಗಿರುವ ವರೆಗೆ ಈ ನಮ್ಮ ಪವಿತ್ರ ಭೂಮಿಯಲ್ಲಿ ನಮಗಾಗುತ್ತಿರುವ ಕಷ್ಟನಷ್ಟಗಳೆಲ್ಲಾ ಆ ನಮ್ಮ ಪಾಪದ ಪರಿಣಾಮಗಳು ಎಂದೆನ್ನುವುದು ತಪ್ಪಲ್ಲ. ನಾನು ಪುನಃ ಹುಟ್ಟಿ ಬರಲಿಚ್ಛಿಸುವುದಿಲ್ಲ. ಆದರೆ ಒಂದೊಪ್ಪತ್ತು ಯಿಟ್ಟು ಬಂದರೆ ನಾನು ಅಸ್ಪೃಶ್ಯರಲ್ಲಿ ಹುಟ್ಟಿ ಬರಲಿಚ್ಛಿಸುವೆ. ಅವರಿಗೆ ಆಗುತ್ತಿರುವ ಅನಮಾನಗಳನ್ನು ಅನುಭವಿಸಬೇಕು; ಆವರು ಪಡುತ್ತಿರುವ ಕಷ್ಟ ನಷ್ಟಗಳಿಂದ ಮುಕ್ತನಾಗಲು ಹಾಗೂ, ಅವರನ್ನು ಆದರಿಂದ ಮುಕ್ತಗೊಳಿಸಲು ಹೆಣಗಬೇಕು ಎಂಬುದೇ ನನ್ನ ಉದ್ದೇಶ. ಅದುದರಿಂದ ನಾನು ಇನ್ನೊಮ್ಮೆ ಹುಟ್ಟಿ ಬರುವುದೇ ಆದರೆ ಬಾಹ್ಮಣ, ಕ್ಷತ್ರಿಯ, ವೈಶ್ಯ ಅಥವಾ ಪೂರ್ತಿನಾಗಿ ಹುಟ್ಟಿ ಬರದೆ ಅತಿಶೂದ್ರನಾಗಿ ಹುಟ್ಟಿ ಬರಬೇಕೆಂದು ದೇವರೊಡನೆ ಪ್ರಾರ್ಥಿಸಿಕೊಂಡಿರುವೆ. ನಾನು ಅಸ್ಪೃಶ್ಯತಾ ನಿವಾರಣಾ ಕೆಲಸಗಳನ್ನು ಮುಂದುವರಿಸಬೇಕೋ ಸತ್ಯಾಗ್ರಹವನ್ನು ಸಂಸ್ಕಾರ ನಡಸಬೇಕೋ, ಎಂಬ ಸಮಸ್ಯೆ ನನ್ನ ಜೀವನದಲ್ಲಿ ನನಗೆ ಎರಡುಸಲ ಎದುರಾಯಿತು. ನಾನು ಮೊದಲನೆಯದನ್ನೇ ಆರಿಸಿದೆ. ಆದರೆ ನನ್ನ ಪೆಂಡತಿ ಬಳ್ಳೇ ಸಾಧ್ವಿ. ಆಕೆ ಸಂಸಾರ ನುಂಗಿಯುವ ಪ್ರಸಂಗಗೊಡಲಿಲ್ಲ. ಹಿಂದುಸ್ಥಾನದ ಒಂದೈದಂಶದಷ್ಟು ಜನರನ್ನು ದಾಸ್ಯದಲ್ಲಿಟ್ಟು ರಾಷ್ಟ್ರೀಯ ಸಂಸ್ಥತಿಯಿಂದ ಬುದ್ಧಿ ಪೂರ್ವಕವಾಗಿ ವಂಚಿಸಿದರೆ ಸ್ವರಾಜ್ಯವೆಂಬುದು ಒಂದು ನಿರರ್ಥಕ ಇಲ್ಲದೇ ಜೇಪ್ಪೆಯ ವಿಷಯವಾಗಿಬಿಡುವುದು. ಅಸ್ಪೃಶ್ಯತೆ ಎಂಬುದು ಬದುಕಲು ಉಳಿಯುವುದಕ್ಕಿಂತ ಹಿಂದುತ್ವವು ನಾಶವಾದರೆ ನನಗೆ ವಿಷಾದವಾಗಲಾರದು. ಅಸ್ಪೃಶ್ಯತೆಗು ವಿರುದ್ಧನಾನು ಘೋರಾಟಹೂಡಿರುವ ಈ ಕಾರ್ಯಕ್ಕೆ ನನ್ನನ್ನು ಬಹಿಸಿಕೊಂಡಿರುವೆ. ಮೇಲ್ಜಾತಿಯವರೆನ್ನಿಸಿಕೊಳ್ಳುವವರು ಕಾಯಾ ವಾಚಾ ಮನಸಾ ಭಂಗಿಯಾಗಬೇಕು. ಆಗ ಅಸ್ಪೃಶ್ಯರು ಒಂದೇ ಉಸುರಿಗೆ ಉದ್ಧಾರ ಹೊಂದುವರು. ಆಗಲೇ ಹಿಂದುತ್ವವು ಜಗತ್ತಿಗೊಂದು ಆದರ್ಶವಾದೀತು. ಹಿಂದೂ ದೇವಾಲಯಗಳಲ್ಲಿ ಪ್ರತಿಯೊಬ್ಬ ಹಿಂದುವಿಗೂ ಏನೇನೂ ಬೇಧವಿಲ್ಲದೆ ಆತ್ಯುಚ್ಚ ಜಾತಿಯವನ ಸರಿಕನಾಗಿ ಆರಾಧಿಸುವ[ಆಧಿಕಾರ ದೊರೆಯುವ ವರೆಗೂ ಆ ದೇವಸ್ಥಾನಗಳು ಪರಿಶುದ್ಧವೆನಿಸಲಾರವು. ನನ್ನ ಕಲ್ಪನೆಯ ಸ್ವರಾಜ್ಯದಲ್ಲಿ ಅಸ್ಪೃಶ್ಯರ ಸ್ಥಾನ ಎಲ್ಲ ಬಗೆಯಿಂದಲೂ ಸವರ್ಣ ಹಿಂದುಗಳಿಗೆನಿಸಿಕೊಳ್ಳುವವರಿಗೆ ಸಮಾನವಾದುದೇ ಇರುವುದು. ಭಂಗಿ, ಡಾಕ್ಟರ್, ಉಪಾಧ್ಯಾಯ, ಇಂಜಿನೀಯರ್, ವ್ಯಾಪಾರಿಗಳೆಲ್ಲರಿಗೂ ಸಮಾನ ಗೌರವ ದೊರೆತರೇನೆ ಹಿಂದೂಸ್ಥಾನ ಜಗತ್ತೆಲ್ಲ ಅಸೂಯೆಪಡತಕ್ಕ ಸ್ವಾತಂತ್ರ್ಯವನ್ನು ಅನುಭವಿಸಬಲ್ಲುದು ಕಾರ್ಯಾವಾಚಾ ಮನಸಾಭಂಗಿಯಾಗಿರುವ ನಾನು ಹರಿಜನರನ್ನು ಎಂದೂ ಮರೆತಿರುವುದು ಸಾಧ್ಯವಿಲ್ಲ. ಅಸ್ಪೃಶ್ಯತೆಯು ಆಳಿಯದೆ ಹೋದರೆ ಹಿಂದೂ ಧರ್ಮವು ನಾಶ ಹೊಂದುವುದೆಂದು ನಾನು ಭವಿಷ್ಯ ಹೇಳುವೆ." ಈ ಸಮಸ್ಯೆಯನ್ನು ಎಷ್ಟಾತು ಆಳವಾಗಿ ವಿಚಾರಿಸಿ ವಿಮರ್ಶಿಸಿ ನುಡಿದ ನುಡಿಗಳಿವು! ಹೃದಯಾಂತರಾಳದಿಂದಹೊಮ್ಮಿದು ಹೊರಬಂದ ಕಿಡಿಗಳಿವು!

ಹಾರ್ಯ! ದೀನರ, ದಲಿತರ, ಅಸ್ಪೃಶ್ಯರ ಕಸ್ಟಗಳನ್ನು ಕಂಡು ಕಣ್ಣೀರು ಕರೆದ ಕರುಣೆಯ ಕಣ್ಣು, ಪ್ರೇಮದ ನಿಧಿ, ಸತ್ಯದ ಜೀವಂತ ಮೂರ್ತಿ, ಅಹಿಂಸೆಯ ಶಿಕ್ಷ, ತಲೆತಿರುಕ ನೋರ್ವನ ಗುಂಡಿಗೆ ಆಹುತಿಯಾಯಿತು. ಕಂಟಕ ಸ್ವರೂಪೀ ಅಸ್ಪೃಶ್ಯತೆಯನ್ನು ಭೂಸ್ಥಾಪಿತ ಮಾಡಿಬಿಡುವವರೆಗೂದಲೇ ಸ್ಪೃಶ್ಯ ನೋರ್ವನ ರಾಕ್ಷಸೀ[ಆಕಾಂಕ್ಷೆಗೆ ತನ್ನ ಪ್ರಾಣವನ್ನು ಪ್ರೇಮದ ಬಟ್ಟಲಿನಲ್ಲಿ ಕಾಣಿಕೆಯಿತ್ತು ರಾಮನಾಮವೊಡನೆ ಅನಂತದೆಡೆಗೆ ಹಾರಿ ಹೋಯಿತು. ಅಹಿಂಸೆ ಹಿಂಸೆಯಿಂದ ಪರ್ಯವಸಾನ ಹೊಂದಿದೆಯೊಮ್ಮೆ ತೋರಿತು. ಕತ್ತಲೆಯಲ್ಲಿ ತತ್ತರಿಸುತ್ತಿದ್ದ ನಮಗೆದಾರಿ ತೋರಿದ ಪಂಜಿನ ಬೆರಕನ್ನು ನಮ್ಮ ಪಾಪವೀ ಕೈಗಳಿಂದನಾವೇ ನಂದಿಸಿಬಿಟ್ಟೆವು. ಬಿರುಗಾಳಿ ಬೀಸಿತು,ಜ್ಯೋತಿ ನಂದಿತು, ಕತ್ತಲೆ ಆವರಿಸಿತು.

ಆದರೆ ನಾವಿಂದು ವ್ಯಸನಾಕ್ರಾಂತರಾಗಿ ದಿಕ್ಕೆಟ್ಟು ಕೈಕಾಲು ಬಿಡುವುದರಲ್ಲಿ ಹುರುಳಿಲ್ಲ. ನಾವು ನಮ್ಮ ಹೃದಯವನ್ನು ಸೂಕ್ಷ್ಮವಾಗಿ ನಿರೀಕ್ಷಿಸಿಕೊಂಡರೆ ಅಲ್ಲಿ ಆ ಮಹಾ ಜೀವಿಯು ಹಚ್ಚಿದ ದೀಪ ಇನ್ನೂ ಸಜೀವನವಾಗಿ ಉರಿಯುತ್ತಿರುವುದು ನಮಗೆ ಭಾಸವಾಗುತ್ತದೆ. ನಾವು ಆ ಜ್ವಾಲೆಯನ್ನು ಬುದ್ಧಿಯಿಂದ ಉದ್ದೀಪಿಸಿ ಅದರ ಸಹಾಯದಿಂದ ಮಹಾತ್ಮರ ಕೊನೆಮುಟ್ಟಿದ ಆಕಿಗಳನ್ನು ಕೂಡ್ಯನ ಬೇಕಾಗಿದೆ. ಈ ಗುರುತರವಾದ ಹೊಣೆ ನಮ್ಮ ಮೇಲಿದೆ. ಆ ಪವಿತ್ರತ್ಮವು ತನ್ನ ಕಾರ್ಯದ ಪೂರ್ಣತೆಗಾಗಿ ನಮ್ಮೆಲ್ಲರ ಕಡೆ ಆಶಾ ದೃಷ್ಟಿಯಿಂದ ನೀಕ್ಷಿಸುತ್ತಿರಬಹುದು. ಅವರ್ಶ ಕೈಗೂಡದಿರುವಾಗ, ಆತ ನಿರಾತಂಕಯಾಗುವಾಗ, ಧ್ಯೇಯಸಾಧನೆ ಬರೇ ಮಾತಿನಲ್ಲೇ ಕೊನೆಗೊಳ್ಳುವಾಗ ಎದೆಗೆಟ್ಟು, ಕಾರ್ಯವಿಮುಖರಾಗುವುದಕ್ಕಿಂತ ಸಾವರಿಯನ್ನು ನಾವೇ ಆಜ್ಞಾಪಿಸಿಕೊಂಡಂತೆ, ನಾವೀಗ ಆತ್ಮವಿಶ್ವಾಸದ ಆಭಾವ, ನಿರಾಶಾಭಾವನೆ, ಹೃದಯದ ದೌರ್ಬಲ್ಯ ಅಹಂಭಾವನೆಗಳನ್ನು ಬದಿಗಿರಿಸಿ, ಅನ್ಯೈಕ್ಯ, ಅಸೂಯೆ, ಸ್ವಾರ್ಥ, ಹಿಂಸೆಗಳನ್ನು ತುಳಿದು, ಇದ್ದ ಬಿದ್ದ ಶಕ್ತಿಗಳನ್ನು ಒಂದುಗೂಡಿಸಿ ಆ ಮಹಾ ಜೀವಿಯು ತುಳಿದ ಹಾದಿಯಿಂದ ಮುಂದುವರಿದು, ಸ್ವಾವಲಂಬಿ, ಸ್ವಯಂಪೂರ್ಣ, ಸುಂದರ, ಸುವರ್ಣ, ಸುಮಮಯ ಭಾರತವನ್ನು ಕಟ್ಟುವುದಕ್ಕಾಗಿ ಕಾರ್ಯಪ್ರವೃತ್ತರಾಗೋಣ. ಅಲ್ಲಿ ಅಸ್ಪೃಶ್ಯತೆಯು ಹೇಳ ಹೆಸರಲ್ಲದೆ ಹೋಗಲಿ. ಆಗ ಮಹಾತ್ಮರ ಕನಸಿನ ರಾಮರಾಜ್ಯ ನೆನಸಾದೀತು. ಅಂದು ಭಾರತವು ಜಗತ್ತಿಗೆ ಮಾರ್ಗದರ್ಶಕವಾದೀತು!

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಲ್ಲು ವೇದನೆಗಳಿಗೂ, ಎದೆನೋವು,ಸ್ಥಾಯಗಳು, ಜಾತುಕೊಳ್ಳುವುದು, ಚೇಳಿವಿಷಮುಂತಾದವು, ಪಕ್ಷವಾತ,ಮೊಡಿಮೆ ಮೊದಲಾವ ಎಲ್ಲಾರೋಗಳಿಗೂ ಸಿದ್ಧೌಷಧ.

REGD

ಪುಳುಕದ್ದಿ ಮಾದ್ದುನಮ್ಮಲ್ಲಿಸಿಳ್ಕುತ್ತನೆ.

ಅಮೃತಾಂಜನ ಲಿಮಿಟೆಡ್

ಮುಭರಾಸು.

ಬಾಯಿ ಮತ್ತು ಕೆಳತ್ತ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya

ಉಡುಪಿಗೆ ಹೋಗಬೇಕೆಂ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಂಟಪಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ. ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ,ಕಿಂತಿನಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲಾ ತರದ ಶಾಸ್ತ್ರೀಯ

ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು

ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA

Regd. No. M. 3618

20—10—1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ 8

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ. ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 8

ಎಲಕ್ಕೂ ಮಿತಿಯಿದೆ!

ಪ್ರತಿಯೊಂದಕ್ಕೂ ಒಂದೊಂದು ಮಿತಿಯಿದೆ; ನಿತ್ಯಋಣಗೊಳಿಸುವ ಅಲ್ಪಾಹಾರದಂತೆಯೇ ಅಜೀರ್ಣಕ್ಕೀಡುಮಾಡುವ ಅಮಿತಾಹಾರವೂ ತ್ಯಾಜ್ಯ—ಇತಿಮಿತಿಯರಿಯದ ದುಂದುವೆಚ್ಚದಂತೆಯೇ ನೀತಿನಿಯಮವರಿಯದ ಕಳ್ಳಸಂತೆ ಆದಾಯವೂ ಹಾನಿಕರ, ಎಂಬ ನ್ಯಾಯವು ಎಲ್ಲಾ ಎಲ್ಲಾ ವಿಧದ ಮಾತುಕೃತಿಗಳಲ್ಲೂ ಮೂಡಿ ತೋರುತಿದ್ದರೆ ಇಂದಿನ ವ್ಯಾವಹಾರಣವು ಬದಲಾಗಿ ನಿಜಕ್ಕೂ ಸುಖಸಂತೋಷಗಳೇ ತೋರಿಬರುತಿದ್ದುವು. ಆದರೆ ಇಂದು ಹಾಗಿದೆಯೆ? ಎಲ್ಲಕ್ಕೂ ಎಲ್ಲೆಯಿದೆ, ಸಹನೆಗೂ ಮಿತಿಯಿದೆ, ಎಂಬುದು ಯಾವ ವರ್ಗದವರಿಗಾದರೂ ನೆನಪಿದೆಯೆ?

ಕಾಂಗ್ರೆಸ್ ಸರಕಾರಗಳ ಅಧಿಪತಿಗಳ ನ್ಯಾಗಲೀ, ಕಾಂಗ್ರೆಸ್ ಕಾರ್ಯಕರ್ತರನ್ನಾಗಲೀ ಟೀಕಿಸುವುದಕ್ಕೂ ಒಂದು ಮಿತಿಯಿರಬೇಕು. ಅವರೂ ಮನುಷ್ಯರು; ಎಲ್ಲಾ ಲೋಪದೋಷಗಳೂ ಆವಶ್ಯಕತೆಗಳೂ ಇರುವ ಸಾರ್ವಜನಿಕರ ಯಥಾಪ್ರತಿನಿಧಿಗಳು ಹಾಗೂ ಪ್ರತಿನಿಧಿಗಳು ಎಂಬಿಷ್ಟನ್ನಾದರೂ ಗಮನದಲ್ಲಿಟ್ಟುಕೊಂಡೇ ವಿಮರ್ಶೆ ನಡೆಸಬೇಕು. ಇಂದಿನಟೀಕೆ, ನಿಂದೆಗಳೆಲ್ಲವೂ ಈ ಮಿತಿಯೊಳಗಿರುವವೆ? ಹೊಣೆಗಾರ ಸ್ಥಾನಗಳಲ್ಲಿರುವವರನ್ನು ಗಡಿಮೀರಿ ವಿಮರ್ಶಿಸುವ ಚಟವು ಈಗ ಎಲ್ಲೆಲ್ಲೂ ಹೆಚ್ಚಿರುವಂತೆ ಈ ವಿಮರ್ಶಕರನ್ನೇ ವಿಮರ್ಶಿಸುವ ಕಡೆಗೆ ಎಲ್ಲರ ಲಕ್ಷ್ಯಬೀಳುವ ಕಾಲಬಂದಾಗ ಟೀಕಿಸಲಿಕ್ಕೆಸ್ಪಿಲ್ಲ!

ಸ್ವಾರ್ಥ, ದುರಭಿಮಾನ, ದುರ್ಬುದ್ಧಿಗಳೇ ಅಧಿಕಾಂಶವಿರುವ ಕಾಂಗ್ರೆಸ್ ಅಧಿಕಾರಿಗಳೂ, ಕಾರ್ಯಕರ್ತರೂ ಎಲ್ಲೆಲ್ಲೂ ಕಾಣಸಿಗುತಿದ್ದಾರೆಂಬುದು ನಿಜ. ಆದರೆ ಮಾನವೋಚಿತ ಸಾಧಾರ್ಯಗಳನ್ನು ಕಡೆಗಣಿಸಿ, ಅತಿ ಆವಶ್ಯಕತೆಗಳನ್ನು ನಿಯಂತ್ರಿಸಿಕೊಂಡು, ಪ್ರತಿಫಲವೇನೂ ಇಲ್ಲದೆ ಸೇವಾಬುದ್ಧಿಯಿಂದ ದುಡಿಯುತ್ತಿರುವ ಕಾರ್ಯಕರ್ತರು ಅಲ್ಲಿ ಇಲ್ಲವೇ ಇಲ್ಲವೇನು? ಆದರೂ ದುರ್ವಿಧಾನಗಳನ್ನು ಅಂಗೀಕರಿಸಿರುವವರನ್ನು ನಿಂದಿಸುತ್ತಿರುವ ಪರಿಮಾಣದಲ್ಲೇ ಸುವಿಧಾನೀ ಜನತಾ ಸೇವಕರನ್ನು ಶ್ಲಾಘಿಸುವುದು ಕಂಡುಬರುತ್ತಿದೆಯೆ? ಸಾಮೂಹಿಕವಾಗಿ ಎಲ್ಲರಿಗೂ ಒಂದೇ ಉಡುಗೊರೆಯೆಂಬಂತಾದ ಮೇಲೆ ಆ ಪೈಕಿ ಮನಸಿದ್ದ ಕೆಲವರಾದರೂ ವರಿಶುದ್ಧರಾಗಿರಲು ಅವಕಾಶವೆಲ್ಲಿದೆ?

ಮಿಕ್ಕವರ ಮಾತು ಹಾಗಿರಲಿ—ನೆಹರೂ, ವಲ್ಲಭಭಾಯಿಗಳಂತಹ, ನಾಯಕರಲ್ಲಿ ಆತ್ಮಬಲ ಮತ್ತು ಮಾನಸಿಕ ಶಕ್ತಿ ಅಧಿಕ ವಿರಬಹುದಾದರೂ ಅವರಿಗೆ ಈ ಪ್ರಾಯದಲ್ಲಿ ಓರ್ವಯುವಕನಿಗಿಂತ ಹೆಚ್ಚಿನ ದೈಹಿಕಬಲವಿರುವದು ಅಸಾಧ್ಯತಾನೆ? ಎಳೇ ರಕ್ತದ ಓರ್ವ ತರುಣನ ಮಟ್ಟದಿಂದಲೇ ಈ ಪ್ರಾಯಸ್ಥಧುರೀಣರ ದೈಹಿಕ ಪಂಪ್ರಮುಗಳನ್ನು ಅಳೆಯುವುದಾದರೆ, ಅವರು ರಾಷ್ಟ್ರಕ್ಕಾಗಿ ಈಗಮಾಡುತ್ತಿರುವ ಕೆಲಸ ಮಿತಿಮೀರಿದ್ದೆಂದು ತೋರುವುದಿಲ್ಲವೆ? ಅದೇ 'ಪರಮಾಣದಲ್ಲಿ ತಂತಮ್ಮ ಕ್ಷೇತ್ರದಲ್ಲಿ ತಂತಮ್ಮ ಪಾಲಿನ ಕರ್ತವ್ಯಗಳನ್ನು ಎಲ್ಲರೂ ಮಾಡುತ್ತಿದ್ದರೆ, ಇಂದು ನಾಯಕರು ಜನತೆಗೆ ಉಗಡದೆಶಿವ ಆಂದೋಲನಗಳೇ, ಜನತೆಯು ನಾಯಕರನ್ನು ದೂರುವ ಆಂದೋಲನಗಳೇ ಉಳಿಯುತಿತ್ತೆ?

ಎಲ್ಲರೂ ಹೇಳುವವರೇ ಆದರೆ—ಆದರಲ್ಲಿ ತಲೆಗೊಂದರಂತೆ ಸೂಚನೆಯೆಂದಾದರೆ— ಆಗ ಮಾಡತಕ್ಕವರಾರು, ಮತ್ತು ಮಾಡುವುದಾದರೂ ಯಾವ ವಿಧಾನಾನುಸಾರವಾಗಿ?

ಸಂಕಾರ ನಿರ್ವಹಣಸ್ಥಾನದಲ್ಲಿರುವವರ ಕಡೆಗೆ 'ಹೊಣೆಹೊತ್ತ ಅಧಿಕಾರಿಗಳು' ಮತ್ತು 'ನಮ್ಮವರೇಆಗಿರುವ ನಮ್ಮ ಪ್ರತಿನಿಧಿಗಳು'ಎಂಬ ಧೋರಣೆ, ಭಾವನೆಗಳೆರಡು ಸಮತೂಕದಲ್ಲಿ ಜನಮತವಲ್ಲಿರಬೇಕೆಂಬುದೇ ಪ್ರಜಾತಂತ್ರದ ತಿರುಳು. ಆದರೆ ಈ ಧೋರಣೆ-ಭಾವನೆಗಳ ಮಿಶ್ರಣವು ಹಿಂದೀ ಜನಮತದಲ್ಲಿ ಈಗಲಾದರೂ ಆಗಿದೆಯೇ? ಬ್ರಿಟಿಷರಾಜಳಿತೆಯಿದ್ದಾಗ "ಹೊಣೆಹೊತ್ತ ಅಧಿಕಾರಿಗಳು" ಎಂದವರ ಕಡೆಗೆ ಭೀತಿಮಾತ್ರವಿತ್ತು ಹೊರತು 'ನಮ್ಮವರು ಮತ್ತು ನಮ್ಮ ಪ್ರತಿನಿಧಿಗಳು' ಎಂಬ ಭಾವನೆ ಸಹಜವಾಗಿ ಇರಲಿಲ್ಲ. ಈಗ, ಸ್ವಕೀಯಾಡಳಿತೆಯಿರುವಾಗ ಆಡಳಿತೆಗಾರ್ಚ ಕಡೆಗೆ "ನಮ್ಮವರು; ನಮ್ಮ ಪ್ರತಿನಿಧಿಗಳು" ಎಂಬ ಸಲುಗೆ ಮಿತಿಮೀರಿ ಹೋಗಿನೆ ತೊರತು 'ಹೊಣೆ ಹೊತ್ತ ಅಧಿಕಾರಿಗಳು' ಎಂಬ ಗೌರವಯುಕ್ತ ವಿಧೇಯತೆಯುಳಿದಿಲ್ಲ. ಅಂದಿನ ಆ ಮನೋವೃತ್ತಿಯಂತೆಯೇ ಇಂದಿನ ಈ ಮನೋವೃತ್ತಿಯೂ ಅಸೂರ್ಣ.

ಜನತೆಯಲ್ಲರಿರುವ ಈ ಅಪೂರ್ಣತೆ ಮತ್ತು ಎಲ್ಲೆಮೀರಿದ ಮನೋವೃತ್ತಿಯೇ ಆಡಳಿತಗಾರ ವರ್ಗದಲ್ಲೂ ಕಂಡುಬರುತ್ತಿದೆ. ಘನತೆ, ಗೌರವ ಮತ್ತು ವಿಶ್ವಾಸ ಸಂಪಾದನೆಯ ಮಾತ್ರ ವರ್ತನೆಗಳ ಬದಲಿಗೆ ಸಲುಗೆ ನಿರ್ವಾಪಕ ಪಡಿಲು ಮಾತು ಕೃತಿಗಳೇ ಅಲ್ಲಿ ಕಂಡುಬರುತ್ತಿವೆ.

ಬ್ರಿಟಿಷರ ಕಾಲದ ಆಡಳಿತ ಯಂತ್ರ ಮತ್ತು ವಿಧಾನಗಳೇ ಈ ಪರಿಗೂ ಇನ್ನು; ಕಾಲನೆನ್ನೇ ಪ್ರತಿಕೂಲದ್ದಿದ್ದರೂ 'ಆದಿ ಭಾಗದ ಅವಶ್ಯಕತೆಗಳ ಮತ್ತು ಕೆಲವೊಂದು ಬದಲಾವಣೆಗಳ ಹೊರತಿನಿಂದ ಹೊಸ ಕರತೆರಿಗೆಗಳ ಮೂಲಕ ಜನತೆಗೆ ಕಷ್ಟಾನುಭವ ಮಾಡಿಕೊಟ್ಟುತೆಯೇ? ಸ್ವಾಧಿಕಾರದ ನವಿ ಅನುಭವಗಳು ಜನಸಾಮಾನ್ಯರ ದೈನ್ಯಜೀವನದಲ್ಲೂ ಆಗುವ ರೀತಿಯಲ್ಲಿ ಆಡಳಿತ ವಿಧಾನಗಳನ್ನು ಕಲವಂತವಾಗಿ ಬದಲಾಯಿಸಿಕೊಳ್ಳುವುದು ಅಸಾಧ್ಯವಿತ್ತೆ? ಕೆಲವು ಸಮಾರಂಭಗಳಿಂದ ಮತ್ತು ನಾಯಕರ ಮಾತುಗಳಿಂದಲೇ ಜನತ. ಬೇರಾವ ರೀತಿಯಿಂದಲಾದರೂ ಸ್ವಾಧಿಕಾರದ ಸುಖಾನುಭವ ಜನತೆಗಾಗುತ್ತಿದೆಯೆ? ಕಳ್ಳಸಂತೆ, ದುರ್ವ್ಯವಹಾರಗಳ ನಿರ್ಮೂಲನ— ಸರಕಾರೀ ನೌಕರರ ಧೋರಣೆ ವರ್ತನೆಗಳ ಮಾರ್ಪಾಟು—ಜನತೆಯು ತಾತ್ಕಾಲಿಕ ಅಡಚಣೆ, ಅನಾನುಕೂಲತೆಗಳ ನಿವಾರಣೆ-ಜನತೆ ಮತ್ತು ಸರಕಾರಗಳೊಳಗೆ ನೇರಾದ ಮತ್ತು ಸಮೀಪಸರ್ಪ ಸಂಬಂಧಪಕ್ಷ—ಮುಂತಾದುವುಗಳ ಎಟ್ಟಿಗೆ, ಈಗ ಇರುವದಕ್ಕಿಂತ ಎಷ್ಟೋ ಪಾಲು ಹೆಚ್ಚಿನ ಪರಿಣಾಮಕಾರಿ ವ್ಯವಸ್ಥೆಗಳನ್ನು ಇಷ್ಟರೊಳಗೇನೇ ಮಾಡಿ ಹಾಕುವುದು ಅಸಾಧ್ಯವಿತ್ತೆ?

ಇಂತಹ ಕಾರ್ಯರೂಪಿಸಿ ಸುಸಂಬಂಧ ನಿರ್ಮಿಸುವ ಬದಲಿಗೆ 'ನಮ್ಮ ಸರಕಾರ' ಎಂಬ ಸಲುಗೆಯಿಂದ ಜನರು ಲಗಾಮಾತುಕೃತಿಗಳಿಗೆ ತೊಡಗಿರುವಂತೆಯೆ 'ನಮ್ಮ ಜನರು' ಎಂಬ ತಾತ್ಸಾರದಿಂದ ಸರಕಾರೀ ನಾಯಕರುಗಳೂ ಎಗ್ಗು ವರ್ತನೆಗಳಿದಂತಿದೆ. ಎಂತೂ ಕಡೆಯವರ ಇಂತಹ ಮಿತಿಮೀರಿದ ಸಡಿಲು ವರ್ತನೆಗಳೇ ದರೆ ನೈಗತಿಸಥದಲ್ಲಿ ಸುದೃಢವಾಗಿ ಮುರಿದೊತ್ತಬೇಕಾದ ಆಡಳಿತ ಯಂತ್ರಕ್ರಿದ ಸಂದು ಕೀಲುಗಳೆಲ್ಲವೂ ಸಡಿಲು, ಗೊಂಡುಮೆಂದೇ ಅರ್ಥ. ಅನಿವಾರ್ಯ ಕಾರಣಗಳಿಂದಾಗಿ ಬ್ರಿಟಿಷ್ ಕಾಲದ ಆಡಳಿತ ರೀತಿನೀತಿಗಳೇ ಈಗಲೂ ಉಳಿದಿರಬೇಕಾಗಿದೆಯೆಂದಾದರೆ, ಆ ಕಾಲದ ಘನತೆ, ಬಿಗುತನವನ್ನು ನಾವಾದ್ಯ ಈಗ ಬಿಟ್ಟುದೇಕಾಗಿ?

ಅತಿಯಾದ ಸಲುಗೆ ಅಶಿಸ್ತಿಯಂತೆಯಾಗದ್ದು ಮಿತಿಮೀರಿದ ಸಡಿಲುವರ್ತನೆಯು ಅಂತಾಜನಕತೆಯು ಮೂಲ ಹೊಂತು ಅಭಿವೃದ್ಧಿಯ ಆರಂಭವನ್ನೆಸಗಲು ಇಂತಹ ಅಪಾಯಕರ ಜಿಜ್ಞೆಗಳು ತುದು ಎಲ್ಲೆಲ್ಲೂ ತೋರಿಬರುತ್ತಿಲ್ಲವೆ? ನಮ್ಮ ಮಾನಸಿಕ ಕಳವಳದಿಯಂಡಿಯ ಛಿದ್ರಂಗ ಪ್ರಜ್ಞಾತೆ, ನೈತಿಕ ಸ್ತೈರ್ಯಗಳಿಗೆ ಹುಳ ಹಿಡಿದಂತೆ ಕಾಣಿಸುತ್ತಿಲ್ಲವೆ?

ಎಂತಹ ದರು ದರ್ಶನಗಳಿದ್ದಿದ್ದರೂ 'ಕಾಂಗ್ರೆಸು ಮಾಡಿದ್ದೆಲ್ಲಾ ಮನ್ನಿಸಲ್ಪಡು

ವಿಮೆಮಾಡಲಿಕ್ಕೆ ಯಾ ಕ್ಲೈಮಿನಿತ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಳೀಯ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ತ್ರದೆ' ಎಂಬ ನಂಬಿಕೆಯಿಂದ ಬುಡದಿಂದ ತುದಿಯ ವರೆಗಿನ ಕಾಂಗ್ರೆಸ್ ಕಾರ್ಯಕರ್ತರೀಗ ಎಂತೆಂತಹ ಅದ್ಭುತಗಳನ್ನು ನಿರ್ಮಿಸುತಿದ್ದಾರೆ! ಒಂದು ನಿದರ್ಶನ:— ಆರ್. ಯಸ್. ಯಸ್. ನವಯನ್ನು ತನ್ನ ವೈಮೇಲೆ ಅವಾಹನೆ ಮಾಡಿಸಿಕೊಳ್ಳಲು ನಡುಬಿಗಿದಿರುವ ಕಾಂಗ್ರೆಸ್ ಕಾರ್ಯಕರ್ತರೀ ಸಮಿತಿಯೆಂಬುದು, ತಲೆಕೊದಲು ಬಿಚ್ಚಿಹುಚ್ಚೆ ಮಹಾಕಾಳಿಯ ಮೂರ್ತಿಯಿದಿರು ನಿಂತ 'ಪಾತ್ರಿ'ಯಂತೆ ಕಾಣುವದಿಲ್ಲವೆ? ಆ ಮಹಾತಾಯಿ ಪ್ರಸನ್ನಳಾಗಿ ವೈಮೇಲೆ ಬಂದುಬಿಟ್ಟರೆ, ಈ ಪಾತ್ರಿ ಆ ಮೇಲೆ ಮಹಂಕಾಳಿಯಾಗಿ ಅರ್ಭಟಿಸಿ ನುಡಿಕೊಟ್ಟಾನೇ ಹೊರತು ಮನುಷ್ಯನಾಗಿ ಮಾತಾಡಬಲ್ಲನೆ? ಅಂದಗೋಲೆ, ಮಾಡಿದ್ದೆಲ್ಲಾ ನಡೆಯುವುದೆಂಬ ನಂಬಿಕೆಯಿಂದ ಮಾಡುತ್ತಾ ಹೋಗುವುದಕ್ಕೂ ಒಂದು ಮಿತಿ ಬೇಡವೆ? ಜನರಾದರೋ ಟೀಕಿಸುವುದರಲ್ಲೋ, ನಿದ್ರಿಸುವುದರಲ್ಲೋ ಇದ್ದಾರೆ ಹೊರತು ಹೊಣೆ ಹೊತ್ತವರಿಂದ ನ್ಯಾಯವಾದ ಮತ್ತು ಅಗತ್ಯವುಳ್ಳ ಕೆಲಸಗಳನ್ನು ಮಾಡಿಸುವುದರಲ್ಲಿಲ್ಲ. ಇವೆಲ್ಲಾ ಅಸ್ತವ್ಯಸ್ತತೆಗಳು ನಿಲ್ಲಲೇಬೇಕಾದ ಅವಧಿ—ಮುಂದೊತ್ತದಂತಹ ಎಲ್ಲೆ--ಒಂದಿಲ್ಲವೇನೆ?

ಎಲ್ಲಕ್ಕೂ ಮಿತಿಯಿದೆ ಎಂಬುದನ್ನು ಎಲ್ಲರೂ ಅರಿತಿರಬೇಕು; ತಾನೆಲ್ಲಿ ಅಂತಹ ಮಿತಿಯನ್ನು ಮೀರಿರುವೆ ಮತ್ತು ಮೀರುತ್ತಿರುವೆ ಎಂಬುದನ್ನು ಪ್ರತಿಯೊಬ್ಬನೂ ಪ್ರತ್ಯಹ್ಯತ್ಯೇಕವಾಗಿ ತಿಳಿದುಕೊಳ್ಳಬೇಕು. ಅಧಿಕಾರಿಗಳ ಕಾರ್ಯಶಕ್ತಿಗೂ ಒಂದು ಮಿತಿಯಿದೆ—ಜನತೆಯ ಟೀಕೆ, ವಿಮರ್ಶೆಗಳೂ ಮಿತವಾಗಿರಬೇಕು ಜನತೆಯ ಸಹನೆಗೂ ಒಂದು ಎಲ್ಲೆಯಿದೆ— ಸರಕಾರದ ಮತ್ತು ಸಂಸ್ಥೆಯ ಅಧಿಕಾರಿಗಳು ಅದರೊಡನೆಆಡುವ ಆಟ್ಟಕೂಡಾ ಒಂದು ಗಡಿಮೀರಿ ಹೋಗಬಾರದು. ಪ್ರತಿಯೊಬ್ಬನೂ ಸ್ವವಿಮರ್ಶೆ ಮಾಡಿಕೊಳ್ಳಬೇಕು—ಆತ್ಮಶುದ್ಧೀಕರಣ ಹೊಂದಬೇಕು—ಎಂದ ಗಾಂಧೀಜಿಯು ಮಾತು ಇಂದು ಕಾನೂನಿನಿಂತೆ ಅಸ್ತಿತ್ವಕ್ಕೆ ಬಂದು ಎಲ್ಲರೂ ತಮ್ಮನ್ನು ತಾವರಿತುಕೊಂಡಲ್ಲಿ ಆಗ ಮಾತ್ರ ರಾಷ್ಟ್ರದ ವಾತಾವರಣ ಶುಭ್ರವಾದೀತು.

ನೋಟೀಸು

ಮಂಗಳೂರು ಡಿ. ಮು. ಕೋರ್ಟಿನಲ್ಲಿ
ಕ್ರಮ ನಂಬ್ರ 226/1949.
ದಿ ಕೊಮರ್ಷಿಯಲ್ ಟ್ರಸ್ಟ್ ಲಿಮಿಟೆಡ್
—ವಾದಿರು.
ಮತ್ತು
ಡಿ. ಆರ್. ಜೆ. ಆಂದ್ರಾದೆ ಕೂಡಾ
—ಪ್ರತಿವಾದಿರು.

1ನೇ ಪ್ರತಿವಾದಿ ಹಂಗಾಮಕಟ್ಟೆಯಲ್ಲಿರುವ ಲೋರೆನ್ಸ್ ಆಂದ್ರಾದೆಯವರ ಮಗ, ವ್ಯಾಪಾರ ಕಾರಣ ದಿ. ಆರ್. ಜೆ. ಆಂದ್ರಾದೆಯವರಿಗೆ ತಿಳಿಯು ಪಡಿಸುವುದೇನೆಂದ್ರೆ—

ಸದ್ರಿ ವಾದಿರು ರೂಪಾಯಿ 2352-13-6 ವನ್ನೇರೆ ಹಣಗಳ ವಸೂಲಾತಿ ಕುರಿತು ನಿಮ್ಮ ಮೇಲೆ ದಾಖಲು ಮಾಡಿದ ಸದ್ರಿ ದಾವೆಯು 16-11-1949 ಹಗಲು ಘಂಟೆ 11 ಕ್ಕೆ ತನ್ನಿಗೆ ಇಟ್ಟುರುತ್ತದೆ. ಸದ್ರಿ ದಿವಸ ನೀವು ಕೋರ್ಟಿಗೆ ಖುದ್ದು ಯಾ ಪಕೀಲರ ಮುಖಾಂತರ ಹಾಜರಾಗಿ ಉದಾಹರಣೆ ಇದ್ದರೆ ಹಾಜರುಪಡಿಸತಕ್ಕದ್ದು. ಇಲ್ಲವಾದರೆ ನಿಮ್ಮ ಗೈರಹಾಜರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

ಮಂಗಳೂರು } M. Keshava Pai,
15-10-1949 } ವಾದಿರ ಎಸ್ಸೊಕೇಟ್.

"ಭಾರತ ಸ್ವಾತಂತ್ರ್ಯಕಾಸನವನ್ನು ಜಾರಿಗೆ ತರುವ ಮುನ್ನ ಬ್ರಿಟಿಷ್ ಸರಕಾರ ಮತ್ತು ಭಾರತದ ರಾಜಕೀಯ ಪಕ್ಷಗಳೊಳಗೆ ಮಾತುಕತೆ ನಡೆದು ಈ ಅಧಿಕಾರೀ ವರ್ಗದ ಹಕ್ಕು ಭಾಧ್ಯತೆಗಳನ್ನು ರಕ್ಷಿಸಲಾಗುವದೆಂಬ ವಿಶ್ವಾಸನೆಯನ್ನು ಬ್ರಿಟಿಷ್ ಸರಕಾರಕ್ಕೆ ಕೊಡಲಾಗಿದ್ದಿತು. ನಮ್ಮ ಮಾತನ್ನು ಈಗ ನಾನೇ ಹಿಂದೆಗೆಯಬಾರದು. ಕಳದ ಎರಡು ಅಥವಾ ಮೂರು ವರುಷಗಳ ಕಠಿಣ ಸನ್ನಿವೇಶಗಳ ಅವಧಿಯಲ್ಲಿ ಈ ಅಧಿಕಾರಿಗಳು ಯಥಾರ್ಥತೆಯಿಂದ ಮತ್ತು ಶಕ್ತಿ ಪೂರ್ಣವಾಗಿ ಕೆಲಸಮಾಡಿದ್ದಾರೆ. ಅವರೀ ಬಿಕ್ಕಟ್ಟಿನ ವೇಳೆ ಅಹ್ವಾಂದ: ನಿಷ್ಠೆಯಿಂದ ಕಾರ್ಯನಿರ್ವಾಹಿಸದಿರುತಿದ್ದರೆ ಸಂಯುಕ್ತ ಭಾರತವೇ ತಳಮಗುಚಿ ಹೋಗುತಿತ್ತು"—ಅ. ಭಾ ಸ ವಿ ಕಾರಿಗಳಅಧಿಕಾರ ವರ್ಗದ ಹಕ್ಕು ಭಾಧ್ಯತೆಗಳನ್ನು ರಕ್ಷಿಸಿಕೊಡುವ ನಿಬಂಧನೆಯು ಘಟನಾ ಸಮಿತಿಯ ಮುಂದೆ ಚರ್ಚೆಗೆ ಬಂದಾಗ ಸರ್ದಾರ್ ಪಟೇಲ್.

"ಹೈದರಾಬಾದಿನ ಇಂದಿನ ಸರಕಾರ ವೆಂಬುದು ಭಾರತದ ಕೆಲವು ಪ್ರಾಂತ್ಯಗಳ ಮಂತ್ರಿಮಂಡಲೀ ಸರಕಾರಗಳಿಗಿಂತ ಹೆಚ್ಚು ನಾಗರಿಕವಾದುದು. ಸರಕಾರದ ಶಿರಸ್ಸಾಗಿ ಓರ್ವ ಮಿಲಿಟರಿ ಗವರ್ನರನಿರುವುದರಿಂದ ಅದು ಮಿಲಿಟರಿ ಸರಕಾರವೆಂಬ ಆಕ್ಷೇಪವು ಅಸಿಂಧುವಾದುದು. ಲೋರ್ಡ್ ವೇವೆಲರು ವೈಸರಾಯಿಯಿದ್ದಾಗಿನ ಭಾರತ ಸರಕಾರವು ಒಂದು ನಾಗರಿಕ ಸರಕಾರವಾಗಿದ್ದರೆ, ಜನರಲ್ ಚೌಧುರಿಯವರ ಸರಕಾರವನ್ನೂ ನಾಗರಿಕ ಸರಕಾರವೆಂದು ಪರಿಗಣಿಸಬಾರದೇಕೆ? ಈಗ ಪೈದರಾಬಾದಿಗೆ ಹೋಗುವವರು ಆಲ್ಲಿ ಮಿಲಿಟರಿ ಆಡಳಿತೆಯ ಯಾವ ಲಕ್ಷಣವನ್ನೂ ಕಾಣಲಾರರು. ಸದ್ಯಸ್ಥಿತಿಯಲ್ಲಿ, ಸಂಪೂರ್ಣ ಅನಿಶ್ಚಿತವಿಗಳಾದ ರಾಜಕಾರಣಿಗಳ ಕೈಗೆ ಸಂಸ್ಥಾನದ ಆಡಳಿತೆಯನ್ನು ಒಪ್ಪಿಸಿಕೊಡುವುದೆಂದರೆ, ಅದೊಂದು ಅತಿಕಳಕಳಿಯ ದುರಂತವೇ ಸರಿ. ಅವರೆಂತಹ ಯೋಗ್ಯರು ಮತ್ತು ಯಥಾರ್ಥವಾದಿಗಳಿದ್ದರೂ ಇಂತಹ ಜನರ ಬಗಲೊಳಗೆ ಹೈದರಾಬಾದಿನ ಅವೃಷ್ಟವನ್ನು ಜೆಲ್ಲಿಕೊಡಬೇಡಿ, ಎಂದು ನಾನು ಸಂಸ್ಥಾನಿಕ ಮಂತ್ರಿ ಪಾತಿಯನ್ನು ಅಗ್ರಹ ಪೂರ್ವಕ ಕೇಳಿಕೊಳ್ಳುತ್ತೇನೆ"— ಹೈದರಾಬಾದಿನ ಪೂರ್ಣ ಪರಿ

ಗುಣಗ್ರಾಹಿ ಮಾತುಗಳು-

ಚಯ, ನಿಜಾಮರ ನಿಕಟ ಸಂಬಂಧವಿದ್ದು ಭಾರತ ಸರಕಾರದೊಡನೊಮ್ಮೆ ಜಯಶೀಲ ಒಡಂಬಡಿಕೆಗೆ ಬಂದಿದ್ದ ನಿಜಾಮ್ ಪ್ರತಿನಿಧಿ ಮಂಡಲಿಯ ಸದಸ್ಯರಾಗಿದ್ದ ಸರ್. ಸುಲ್ತಾನ್ ಅಹಮ್ಮದ್.

"ಈ ದಿನ ಅಮೆರಿಕನ್ ಸೇನೆಯ ಸುಪ್ರಸಿದ್ಧ ಬೇಂಡ್'ಜನಗಣಮನ'ವನ್ನು ಬಾರಿಸಿದಾಗ, ಅಲ್ಲಿ ಹಾಜರಿದ್ದ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲೆದ್ದ ಹರ್ಷೋದ್ರೇಕದ ಅಲೆಗಳೆಂತಹವೆಂಬುದನ್ನು ಅರಿಯುವುದು ಇಲ್ಲಿಗೆ 10 ಸಾವಿರ ಮೈಲು ದೂರದಲ್ಲಿರುವ ಭಾರತೀಯರಿಗಸಾಧ್ಯವೇ ಸರಿ. ಅದು ನಿಜಕ್ಕೂ ನಮ್ಮಲ್ಲಿ ಪ್ರತಿಯೊಬ್ಬನ ಪಾಲಿಗೂ ವಿಶೇಷ ಹೆಗ್ಗಳಿಕೆಯ ಮಹೂರ್ತ. ನನ್ನೀ ರಾಷ್ಟ್ರಗೀತೆಯು ಇಂದಿನ ನಡೆದಷ್ಟು ಸೊಗಸಾಗಿ ಹಾಡಲ್ಪಟ್ಟುದನ್ನು ನಾನಿದುವರೆಗೂ ಕೇಳಿದ್ದಿಲ್ಲವೆನ್ನುವಾಗ ನಾನೇನೂ ಅತಿಶಯೋಕ್ತಿ ಆಡುತ್ತಿಲ್ಲ. ನಿಜವಾಗಿಯೂ ಒಂದು ಕೆಲಸವನ್ನು ನಾಜೋಕಾಗಿ ಮಾಡುವುದು ಹೇಗೆಂಬುದು ಈ ಅಮೆರಿಕಾನರಿಗೆ ಗೊತ್ತು"—ಪಂಡಿತ ನೆಹರುಗಳು ವಾಷಿಂಗ್ಟನ್ ವಿಮಾನ ನಿಲ್ದಾಣದಲ್ಲಳಿಯುವಾಗ ಆಲ್ಲಿ ಹಾಜರಿದ್ದ 'ಹಿಂದೂ' ಬಾತ್ಮೀದಾರ ಕೆ. ಬಲರಾಮನ್.

"ನಾನು ವಾಷಿಂಗ್ಟನಿಗೆ ಬಂದನಂತರ ನಿಮ್ಮೀ ರಾಷ್ಟ್ರದ ಮಹಾ ನಿರ್ಮಾಪಕರ ಸ್ಮಾರಕಗಳನ್ನು ಸಂದರ್ಶಿಸಿದ್ದೇನೆ. ಕೇವಲ ಒಂದು ಸಂಪ್ರದಾಯ ಪಾಲನೆಗಾಗಿ ಅಲ್ಲ; ಅವು ದೀರ್ಘಕಾಲದಿಂದ ನನ್ನ ಹೃದಯದಲ್ಲಿ ಪ್ರಕಾಶ ಬೀರುತ್ತಿದ್ದು, ಅವರ ಮಾದರಿಯು ನನ್ನ ಅಸಂಖ್ಯಾತ ದೇಶಬಂಧುಗಳಂತೆಯೇ ನನಗೂ ಸ್ಫೂರ್ತಿದಾಯಕವಾಗಿದ್ದುದರಿಂದಲೂ ನಾನವುಗಳನ್ನು ಕಂಡೆ. ಈ ಸ್ಮಾರಕಗಳೆಂದರೆ, ಪ್ರತಿಯೊಂದು ಜನಾಂಗ ಪರಂಪರೆಯ ವರೂಪೂಜೆ ಸಲ್ಲಿಸಲೆಂದೇ ನಿರ್ಮಿಸಲಾಗಿರುವ ನಿಜವಾದದೇವಾಲಯಗಳು; ಹಾಗೆ ಪೂಜಿಸುವವರು ಈ ರಾಷ್ಟ್ರದ್ದಷ್ಟೇ ಅಲ್ಲ, ಇಡೀಜಗತ್ತಿನ ಸ್ವಾತಂತ್ರ್ಯದೀಪವಿಗೆ ಧಾರಂಗಳಾಗಿದ್ದ ಆ ಮಹಾ ಮನುಷ್ಯರಹೃದಯದಲ್ಲಿ ಉರಿಯುತ್ತಿದ್ದ ಪ್ರಕಾಶದಿಂದ ಎಷ್ಟನ್ನಾದರೂ ತಮ್ಮದನ್ನಾಗಿ ಹಿಡಿದುಕೊಳ್ಳಬೇಕಾಗಿದೆ. ಯಾಕಂದರೆ, ಒಂದು ವಿಶಿಷ್ಟ ರಾಷ್ಟ್ರದ ಸೊತ್ತಾಗಿರದೆ, ನಿಜಕ್ಕೂ ಅಖಿಲ ಜಗತ್ಕಿನದಾಗಬೇಕಾಗಿರುವ ಒಂದು ಮಹಾ ಸಂದೇಶವು ಅವರದು. ಭಾರತದಲ್ಲಾದರೋ, ನಮ್ಮ ಮಾತು ವರ್ತನೆಗಳು ನೀತಿತತ್ವಗಳನ್ನೆಂದಿಗೂ ಬಿಟ್ಟೆರೆ ಕೂಡದೆಂಬುದನ್ನೂ ಮನುಷ್ಯನ ನಿಜವಾದ ಹಾದಿಯು ಸತ್ಯ ಮತ್ತು ಶಾಂತಿಯೆಂಬುದನ್ನೂ ಸದಾ ನೆನಪು ಮಾಡುತ್ತಾ, ನಮಗೆ ಮಹತ್ವಾಕಾಂಕ್ಷೆಗಳ ಸ್ಫೂರ್ತಿಯನ್ನಿತ್ತ ಮನುಷ್ಯ ನಮ್ಮ ಕಾಲದಲ್ಲೇ ಆಗಿಹೋದ. ನಾವು ಅವರನ್ನು ಗೌರವಾದರಗಳಿಂದ ಮತ್ತು ಆತ್ಮೀಯತೆಯಿಂದ ನಮ್ಮ 'ರಾಷ್ಟ್ರಪಿತ' ನೆಂದು ಕರೆಯುತಿದ್ದೇವೆ. ಆದರೂ ಅವರು ಯಾವುದಾದರೊಂದು ರಾಷ್ಟ್ರದ ಚೌಕಟ್ಟಿನೊಳಗೆ ಹಿಡಿಸಲಾರದಷ್ಟು ದೊಡ್ಡವರಾದ್ದಾರೆ. ಅವರು ಕೊಟ್ಟ ಸಂದೇಶವು ವಿಸ್ತೃತ ಜಗತ್ಕಿನ ಸಮಸ್ಯೆಗಳ ನಿವಾರಣೆಯಲ್ಲಿ ನಮಗೆ ಹೆಚ್ಚಿನ ಸಹಾಯಕಾರಿಯಾಗಬಲ್ಲುದು"—ಅಮೆರಿಕದ ಜನಪ್ರತಿನಿಧಿಸಭೆ ಮತ್ತು ಸಿನೆಟ್ಟಿನ ಸಂಯುಕ್ತಸಭೆಯಲ್ಲಿ ಭಾಷಣಮಾಡುತ್ತಾ ಪಂಡಿತ ನೆಹರು.

"ಅಮೆರಿಕದ ಕಾಂಗ್ರೆಸಿನಲ್ಲಿ ಹಲವು ದೊಡ್ಡ ಮನುಷ್ಯರು ಭಾಷಣವಿತ್ತದನ್ನು ನಾನು ಕೇಳಿದ್ದೇನೆ ಆದರೆ ಪಂಡಿತ ನೆಹರು ಅವರೆಲ್ಲರಿಗಿಂತ ದೊಡ್ಡವರು"—ಅಮೆರಿಕದೋರ್ವ ನ್ಯಾಯವಾದಿ ಪತ್ರಿಕೋದ್ಯಮಿ

"ತನ್ನ ತತ್ವಗಳ ಮಟ್ಟದಲ್ಲಿ ಜೀವಿಸುವ ಎದೆಗಾರಿಕೆಯುಳ್ಳವಮನುಷ್ಯ ನೆಹರು. ಲೋಕಕ್ಕೀಗ ನೆಹರುಗಳಂತಹ ಮನುಷ್ಯರು ಹೆಚ್ಚಿಗೆ ಬೇಕಾಗಿದ್ದಾರೆ"—ತಾನು ಪಂಡಿತಜಿಗತ್ತಿ ಬೆತಣಕೂಟದಲ್ಲಿ ಅಮೆರಿಕಾಧ್ಯಕ್ಷ ಟ್ರುಮೇನ್.

"ಪಂಡಿತ ನೆಹರುಗಳು ರಾಜಕಾರಣದಲ್ಲಿ ಪಂಡಿತರಿದ್ದು ಸರಕಾರೀ ಕಲೆಯನ್ನು ಅರಿತವರಿದ್ದಾರೆ. ಭಾರತದ ಇಡಿಯ ಜನಜೀವನ ವಿಧಾನವನ್ನೇ ಬದಲಾಯಿಸಿದವರಿವರು. ಅಧ್ಯಕ್ಷ ಟ್ರುಮೇನ್ ಮತ್ತು ಪಂಡಿತ ನೆಹರುಗಳೊಳಗಿನ ಸಂಭಾಷಣೆಯನ್ನು ಕೇಳಬೇಕೆಂಬ ಬಯಕೆ ನನಗಿದೆ. ಇದಕ್ಕೆಂತಲೂ ಹೆಚ್ಚಾಗಿ ಥೋಮಸ್ ಜೋಫರ್ಸನ್, ವುಡ್ರೋವ್ ವಿಲ್ಸನ್ (ಒಂದು ಶತಮಾನಕ್ಕೂ ಹಿಂದಿನ ಅಮೆರಿಕಾಧ್ಯಕ್ಷ) ಮತ್ತು ನನ್ನೀ ಸನ್ಮಾನ್ಯ ಅತಿಥಿಗಳೊಳಗಿನ ಸಂಭಾಷಣೆಯನ್ನು ಕೇಳಬೇಕಿದ್ದಿತೆಂದು ನನ್ನಾಸೆ. ಇನ್ನೆಲ್ಲಕ್ಕಿಂತಲೂ ಹೆಚ್ಚಿನದಾಗಿ ನನ್ನಲ್ಲಿ ಮೂಡುತ್ತಿರುವ ಬಯಕೆಯೆಂದರೆ ಅಬ್ರಾಹಿಮ್ ಲಿಂಕನ್ (ಅಮೆರಿಕ ವಿಭಜನೆಯನ್ನು ತಡೆಗಟ್ಟಿ ನೀಗ್ರೋಗಳಿಗೆ ಸ್ವಾತಂತ್ರ್ಯ ದಾನ ಮಾಡಿದ್ದ ಅಮೆರಿಕದ ಅತಿ ಪ್ರಸಿದ್ಧ ಅಧ್ಯಕ್ಷ) ಮತ್ತು ಪಂಡಿತ ನೆಹರುಗಳೊಳಗಿನ ಮಹಾತ್ಮತೆಗಳನ್ನು ಅಲಿಸಬೇಕೆಂಬುದೇ"-ತಾನಿತ್ತ ರಾಜಾತಿಥಿ ಕೂಟದಲ್ಲಿ ಅಮೆರಿಕದ ಗೃಹಸಚಿವ ಮಿ. ಡೀನ್ ಆಚೆಸನ್.

"ಪಂಡಿತ ನೆಹರುಗಳಲ್ಲಿ ಪ್ರದರ್ಶಿತ ಕಲೆಗಳ ಜ್ಞಾನ ಮತ್ತು ಅಭಿರುಚಿಯೆರಡೂ ಇರುವುದು ಕಂಡುಬಂತು. ಲೋಕದ ಮ

The
Agricultural & Industrial Bank Ltd.,
Estd: 1934
Head Office: **Coondapoor.**

We take this opportunity to wish all our Shareholders, Customers and Patrons a HAPPY DIVALI and a more prosperous New Year.

A. Madhava Pai, B.A.,B.L.,
General Manager.

ಸಂಸ್ಥಾನಗಳನ್ನು ಸಮಮಟ್ಟ ಮಾಡಿದ ರಕ್ತರಹಿತ ಕ್ರಾಂತಿ!

ಭಾರತದೊಳಗಿನ 500ಕ್ಕೂ ಮಿಕ್ಕಿದ ಸಂಸ್ಥಾನಗಳ ಭಿನ್ನ ವೈಶಿಷ್ಟ್ಯಗಳೆಲ್ಲವನ್ನೂ ವಜಾಮಾಡಿಸಿ, ಅವು ಎಲ್ಲಾ ವಿಧಾನಗಳಿಂದಲೂ ಪ್ರಾಂತ್ಯಗಳಂತೆಯೇ ಇರುವಂತೆ ಮಾಡುವ ನಿಬಂಧನೆಯನ್ನು ಘಟನಾ ಸಮಿತಿಯು ಮಂಜೂರು ಮಾಡಿಕೊಂಡಿದೆ. ಈ ಸಂದರ್ಭದಲ್ಲಿ ಶ್ರೀ ಕೆ. ಎಮ್. ಮುನ್ಷಿಗಳೊಂದಿದ ಸರ್ದಾರ್ ಪಟೇಲರ ಲಿಖಿತ ಭಾಷಣವು ಭಾರತ ಚರಿತ್ರೆಯ ಒಂದು ಅಮೂಲ್ಯ ಅಧ್ಯಾಯದಂತಿದೆ. ಸಂಸ್ಥಾನಗಳ ಪ್ರತಿನಿಧಿಗಳ ಆನಂದಮತಿ ಪಡೆದೇ ಘಟನಾ ಸಮಿತಿಯಲ್ಲಿ ಮಂಜೂರಾದ ಈ ನಿಬಂಧನೆಯು ಸದ್ದಿಲ್ಲದೆ ನಡೆದ ಚರಿತ್ರಾರ್ಹ ಘಟನೆ—ರಕ್ತರಹಿತಕ್ರಾಂತಿ—ಎಂಬುದು ನಿಜ. ಜನತಾ ಕ್ರಾಂತಿಯಿಂದ ಕೂಡಾ ಕಷ್ಟಸಾಧ್ಯವಾಗುವಂತಹ ಮಹಾ ಬದಲಾವಣೆಯೆಂದು ಸಂಸ್ಥಾನ ಖಾತೆಯ ಮಂತ್ರಿ-ಉಕ್ಕಿನ ಮನುಷ್ಯ-ಸರ್ದಾರ್ ಪಟೇಲರು, ಸುದೃಢ ಧೋರಣೆ, ದೂರ ಮತ್ತು ಸೂಕ್ಷ್ಮದೃಷ್ಟಿ, ವ್ಯವಹಾರ ಚಾತುರ್ಯಗಳಿಂದಾಗಿ ಹೋಗಿದೆ. ಸಂಸ್ಥಾನಗಳನ್ನು ಕ್ರಮಶಃ ಭಾರತ ಕೇಂದ್ರಾಧಿಕಾರದೊಂದಿಗೆ ಮುಖ್ಯ ಮೂರು ವಿಭಾಗಗಳಲ್ಲಿ ಜೋಡಣೆಗೊಳಿಸುವುದರಿಂದಾರಂಭಿಸಿ, ಸಣ್ಣ ಸಂಸ್ಥಾನಗಳನ್ನು ನೆರೆಯ ಪ್ರಾಂತ್ಯಗಳೊಂದಿಗೆ ವಿಲೀನಗೊಳಿಸುವ, ಮತ್ತು ಆಲ್ಲಲ್ಲಿಯ ಸಂಸ್ಥಾನಗಳನ್ನು ಒಂದೊಂದೇ ಸೂಡಿ ಕಟ್ಟಿ ಹಾಕುವ ವರೆಗಿನ ಕೆಲಸಗಳಲ್ಲಿ ಸಂಸ್ಥಾನ ಮಂತ್ರಿ ಖಾತೆಯು ತೋರಿಸಿದ್ದ ಸಾಮರ್ಥ್ಯ, ಚಾತುರ್ಯಗಳು ನಿಜಕ್ಕೂ ಅಸಾಧಾರಣವಿವೆ. ಆ ಮೇಲೂ ಪ್ರಾಂತ್ಯಗಳಿಗೂ ಸಂಸ್ಥಾನಗಳಿಗೂ ಕೆಲವಂಶ ವೈತ್ಯಾಸವಿದ್ದಂತೆ ತೋರಿ ಬಂದಿತ್ತು; ಆ ವ್ಯತ್ಯಾಸವೂ ಈಗ ಘಟನಾ ಸಮಿತಿಯ ಶಾಸನಾಂಗದ ನೋರೆಗೆ ಒಮ್ಮೆಗೇ ಮಾಯವಾಗಿದೆ. ಇನ್ನು, ಹೊಸ ರಾಜ್ಯಶಾಸನವು ಜಾರಿಗೆ ಬರುವಾಗ ಪ್ರಾಂತ್ಯಗಳ ಸ್ಥಾನಮಾನ ಬೇರೆ, ಸಂಸ್ಥಾನಗಳ ಸ್ಥಾನಮಾನ ಬೇರೆ ಆಗಿರುವುದಿಲ್ಲ. ಮದ್ರಾಸ್ ಪ್ರಾಂತ್ಯ ಹೇಗೋ ಮೈಸೂರುಸಂಸ್ಥಾನವೂ ಹಾಗೆಯೇ. ಹೊಸ ಘಟನೆಯಲ್ಲಿ 'ಪ್ರಾಂತ್ಯ' ಎಂಬ ಹೆಸರಿನ ಬದಲಿಗೆ 'ಸಂಸ್ಥಾನ' ಎಂಬ ಹೆಸರೇ ಇಡಲ್ಪಟ್ಟಿದೆ. ಹೀಗಾಗಿ ನವರಾಜ್ಯ ಶಾಸನದನ್ವಯ ಭಾರತದಲ್ಲಿ ಸಬಲ ಹಾಗೂ ಪೂರ್ಣ ಮೇಲಧಿಕಾರೀ ಕೇಂದ್ರದ ಅಡಿಯಲ್ಲಿ ಸರ್ವಸಮಾನ 'ಸಂಸ್ಥಾನ'ಗಳು ಮಾತ್ರ ಉಳಿಯುವವು. ಮೂಲಗೊಣಸುಗಳಿಲ್ಲವನ್ನೂ ಸಿಕ್ಕಿಸಿಕೊಂಡ ಕೇಂದ್ರಾಧಿಕಾರವೆಂಬ ಗೂಟದಡಿಯಲ್ಲಿ, ಸಂಸ್ಥಾನಗಳು ಸಮಮಟ್ಟದ ತಟ್ಟೆಯಾಗಿ ನಲ್ಲಲಿವೆ. ಇದೀಗ ಭಾವೀ ರಿಪಬ್ಲಿಕ್ ಭಾರತದ ಅಖಂಡ ಆಕಾರ.

ಏಕ ಭಾರತ—ಮಹತ್ಸಾಧನೆ

ಕೇವಲ ಎರಡು ವರುಷ ಐದು ತಿಂಗಳುಗಳ ಮೊದಲು ಈ ಹಿಂದೀ ಅಖಿತರಾಜ್ಯಗಳು ಯಾವ ರೀತಿಯಲ್ಲಿದ್ದುವು-1950ನೇ ಜನವರಿ 26ಕ್ಕೆ ಅವು ಯಾವ ಆಕಾರಕ್ಕೆ ಬರಲಿವೆ— ಎಂಬುದನ್ನು ತುಲನೆ ಮಾಡಿ ನೋಡಿದರೆ ಇದೆಂತಹ ಅದ್ಭುತ ಬದಲಾವಣೆಯೆಂಬುದು ಮನವರಿಕೆಯಾಗದಿದ್ದು. 1947ನೇ ಆಗೋಸ್ತು 15ರಲ್ಲಿ ಬ್ರಿಟಿಷರು ಭಾರತದ ಪಾಲಿಗೆ ಸ್ವಾತಂತ್ರ್ಯವನ್ನು ಬಿಟ್ಟುಕೊಟ್ಟು ಹೊರಟು ಹೋಗುವಾಗ ಒಳಗಡೆಯ 500ಕ್ಕೂ ಮಿಕ್ಕಿದ ಸಂಸ್ಥಾನಗಳಿಗೆ ನೇರವಾಗಿ ಬ್ರಿಟಿಷ್ ಸಿಂಹಾಸನದೊಡನಿದ್ದ ಸಂಬಂಧದ ಗೊಣಸನ್ನು ಅಲ್ಲಿಂದಲ್ಲಿಗೇ ತಪ್ಪಿಸಿ ಹೋಗಿದ್ದರು, ಹೊರತು ಆ ಸರಪಣಿಯನ್ನು ಭಾರತ ಕೇಂದ್ರಾಧಿಕಾರಕ್ಕೆ ಸಿಕ್ಕಿಸಿ ಹೋಗಿರಲಿಲ್ಲ. ಇದರ ಲಾಭ ಮವಾಗಿ "ಬ್ರಿಟಿಷ್ ಭಾರತ" ಎಂದು ಕರೆಯಲ್ಪಡುತ್ತಿದ್ದ ಭಾಗಗಳು ತಮ್ಮಿಚ್ಛೆಯ ಸ್ವಾತಂತ್ರ್ಯವನ್ನು ಹೇಗೆ ಅನುಭವಿಸಬಹುದಾಗಿದ್ದಿತೋ ಅದೇ ರೀತಿ "ಸಂಸ್ಥಾನೀ ಭಾರತ"ವೂ ತನ್ನಿಚ್ಛೆಯಂತೆ ವರ್ತಿಸಬಹುದಾಗಿದ್ದಿತು ತಮ್ಮ ರಿಂದ್ಯಗಳಲ್ಲಿ ನಾಮಮಾತ್ರ ಪ್ರಜಾಸ್ವಭುತ್ವವನ್ನೂ ಜಾರಿಗೆ ತಂದಿದೆ, ಪ್ರಜೆಗಳ ಹಣವನ್ನು ತಮ್ಮ ಸುಖಭೋಗಗಳಿಗೆ ವ್ಯಯಿಸುವಷ್ಟೇ 'ಸ್ವಜಾಸ್ವಭುತ್ವ'ವನ್ನು ಅರಿತಿದ್ದ ಹೆಚ್ಚಿನ ಆಶ್ರಿತ ರಾಜರಿಗೆ ಆ ಕಾಲದಲ್ಲಿ 'ರಾಷ್ಟ್ರಸ' ಮತ್ತು 'ದೇಶದ್ರೋಹ' ಎಂದೆರೆ ಎಂತಹ ಜಿಗುಪ್ಸೆಯುದ್ದಿದೆಂಬುದನ್ನು ನೆನಪು ಮಾಡಿಕೊಳ್ಳಬೇಕು. ಭಾರತದೊಳಗಡೆಯಲ್ಲಿ ಮಧ್ಯಕಾಲೀನ ಮನೋವೃತ್ತಿಯ ನಿರ್ಜೀವ ಅಂಗಗಳಂತೆ ಈ ಸಂಸ್ಥಾನಗಳು ಕಂಟಕಪ್ರಾಯವಾಗಿದ್ದುವು ಇಂತಹ ಅಸಾಧ್ಯ ಬಂಜರು ಕ್ಷೇತ್ರಗಳು ಇಷ್ಟು ಅಲ್ಪಾವಧಿಯೊಳಗೆ ವಿಕ್ಷಿಪ್ತವಾಗಿ ಸಮಮಟ್ಟದ ಸಾಗುವಳ್ಳೀ ಕ್ಷೇತ್ರಗಳಾಗಿ ಮಾರ್ಪಡಬಹುದೆಂದು ಆ ಕಾಲದಲ್ಲಿ ವ್ಯಷಾರಾಜ್ಞರು ಕನವರಿಸಿದುದು ಕೂಡಾ ಇಲ್ಲ! ಈ ಮಹಾ ಕಂಟಕವೇ ನಸುಗೆಂಪಿನ ಸ್ವತಂತ್ರ ಭಾರತ ಸರಕಾರವನ್ನು ಹಿಡಿದು ನುಂಗೀತೆಂದು ನಿರೀಕ್ಷಿಸಿದ್ದ ಬ್ರಿಟಿಷ್ ಮತ್ಸದ್ದಿಗಳಿದ್ದಾರೆ. ವಿಭಜನಾ ಪೂರ್ವದ ಭಾರತದಲ್ಲಿ ಮುಸ್ಲಿಂ ಬಹು ಸಂಖ್ಯಾಕ ಭಾಗಗಳೊಡ್ಡಿದ ಆಕರ್ಷಣೆಗಿಂತ ಹೆಚ್ಚಿನ ಆಕರ್ಷಣೆಯನ್ನು ವಿಭಜನೋತ್ತರ ಸ್ವತಂತ್ರ ಭಾರತಕ್ಕೊಡ್ಡಲು ನಿಜಕ್ಕೂ ಈ ಸಂಸ್ಥಾನಗಳಿಗೆ ಸಾಧ್ಯವಿಲ್ಲವಿತ್ತು. ಆದರೆ ಸ್ವತಂತ್ರ ಭಾರತದ ಪಾಲಿಗೆ ಸರ್ದಾರ್ ಪಟೇಲರಂತಹ ನಾಯಕನಿದ್ದರು; ಸಂಸ್ಥಾನಗಳಲ್ಲಿ ದೇಶಾಭಿಮಾನಿ ಜನರಿದ್ದರು; ಇವುಗಳಿದಿರಲ್ಲಿ ಸ್ವತಃ ಕಾಲ ಮಹಾತ್ಮೆಯನ್ನು ತಿಳಿದುಕೊಳ್ಳುವಷ್ಟು ಜ್ಞಾನವಿನ್ನು ಕೆಲ ಮಂದಿ ರಾಜರು ಕೂಡಾ ತೋರಿಸಿದರು. ಇವೆಲ್ಲವುಗಳ ಪರಿಣಾಮವಾಗಿ, ಸಂಸ್ಥಾನೀ ಮಕುಟಧಾರಿಗಳ ದುರಭಿಲಾಷೆ, ಅಪ್ರಾಗತಿಕ ಭಾವನೆಗಳೆಲ್ಲವೂ ತಲೆಮರೆಸಿಕೊಳ್ಳಬೇಕಾಯಿತು—ಬರಬರುತ್ತಾ ಪೂರ್ತಿ ಮಾಯವಾಗಬೆ

ಇಂದಿನ ಅವಶ್ಯಕತೆ

ಅಧಿಕ ಆಹಾರ-ಉತ್ಪತ್ತಿ

ಈ ಪ್ರಕಟನೆ, ಜನಾಂಗಕ್ಕೆ

ಕೆನರಾ ಬ್ಯಾಂಕ ಲಿಮಿಟೆಡ್,

ಇವರ ಅಳಿಲ ಸೇವೆ.

ಪ್ರಕಟಣೆ

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ.

O. S. No 368/1949

ದಿ. ಕೆನರಾ ಬ್ಯಾಂಕಿಂಗ್ ಕೋಪರೇಶನ್ Ltd.,

ಉಡುಪಿ ..... ವಾದಿ.

ಮತ್ತು

ರಾಮಸೂರಾಚಾರ್ಯ ಗಂಡಭಟ್ಟ ಮತ್ತು ಇತರರು, ಉಡುಪಿತಾಲೂಕು ಕೊಡವೂರು ಗ್ರಾಮದ ವಾಲ್ಪೆ — — ಪ್ರತಿವಾದಿ

ಇದರಲ್ಲಿ

ಸದ್ರಿ ಪ್ರತಿವಾದಿಗೆ ಜಾರಿ ಮಾಡಲ್ಪಟ್ಟ ತಕ್ರಾರು ಪಡಿಸುವದೇನಂದರೆ—

ವಾದಿಯು ಸ್ಥಳಗಳಲ್ಲಿ ವ್ಯವಹಾರಿಸಿಕೆಗೂ ನೇಮಕಾತಿ ಬಿದ್ದಿಗೆ ಕೂಡಾ ಸಂಪಾದಿಸಿದ್ದಲೆ ಮಾಕ್ಸಲು ಮಾಡಿದ ಮೇಲ್ಕಂಡ ಜವಾಬಿನ ತಾ 31-10-1949ಕ್ಕೆ ತನ್ನ ಬಗ್ಗೆ ಯಿಲ್ಲೂ ಆಗಿಯದೆ. ಆಕ್ಟೋಪ ಹೇತಕ್ಕದ್ದು ಯಾದ ಆ ದಿವ್ಸ 10ಗಂಟೆಗೆ ಮೇಲ್ಕಂಡ ಕೋರ್ಟಿಗೆ ಸುಮಂದೆ ಸ್ವತವಾ ಹಾಜ್ರಾಗಿ ಜವಾಬುದಾರಿಕೊಳ್ಳಲಿಕ್ಕೆ ತಪ್ಪಿದರೆ ನಿಮ್ಮ ಗೈರಹಾಜರಿಯಿಂದ ಸದ್ರಿ ನಂಬ್ರ ತೀರ್ಮಾನಿಸಲಾಗುವದು.

(By order of the Court)

ಉಡುಪಿ } N. V Kamath,
13-10-1949 } Advocate for Plff

ಕಾಯಿತು. ಕೃಷಿಕ ಜೋಡಣೆ, ಒಕ್ಕೂಟ ರಚನೆಗಳಾಗಿ, ಕೊನೆಗೆ ಈ ಸಂಸ್ಥಾನಗಳೀಗಪ್ರಾಂತ್ಯಗಳ ಗುಟ್ಟಿಕ್ಕೇನೇ ಬಂದು ನಿಂತವು.

ನವ ವಿಧಾನದ ರೂಪರೇಖೆ

ನವ ರಾಜ್ಯಶಾಸನದಲ್ಲಿ ಮೂಡಿಬರುವ ಸಂಸ್ಥಾನಗಳ ಸ್ಥಾನಮಾನ ನಿರೂಪಣೆಯ ಸ್ಥೂಲರೂಪ ಹೀಗಿದೆ: ಅರಮನೆ ಭವನಗಳನ್ನು ರಾಜ ಪ್ರಮುಖರು ಬಾಡಿಗೆ ವಿನಹ ಅನುಭೋಗಿಸಬಹುದು; ರಾಜ ವೇತನಗಳನ್ನೂ ಅವರ ಅಭಿಸ್ಥಿಗಳ ಪೆಚ್ಚಗಳನ್ನೂ ಅಧ್ಯಕ್ಷರೇ ನಿರ್ಧರಿಸುವರು; ರಾಜ ಪ್ರಮುಖರುಳ್ಳ ಒಂದು ಶಾಸನ ಸಭೆಯು— ಮೈಸೂರಿನಲ್ಲಿ ಎರಡು ಶಾಸನ ಸಭೆಗಳು— ಪ್ರತಿಯೊಂದು ಸಂಸ್ಥಾನಕ್ಕೆ ಪ್ರತಿನಿಧಿಗಳನ್ನು ಕಳುಹಿಸಿಕೊಡುವುದು; ಕೇಂದ್ರ ಸರಕಾರವು ಪ್ರಾಂತ್ಯಗಳಂತೆಯೇ ಸಂಸ್ಥಾನಗಳ ಮೇಲೂ ಸಮಾನಾಜ್ಞೆಗಳನ್ನು ಮತ್ತು ಸಮಾನಾಧಿಕಾರಗಳನ್ನು ಚಾಲು ಮಾಡತಕ್ಕದ್ದು; ಪ್ರಾಂತ್ಯಗಳಂತೆಯೇ ಸಂಸ್ಥಾನಗಳ ಒಳಗಡೆಯಲ್ಲೂ ಕೇಂದ್ರ ಸರಕಾರವು ತನ್ನ ಸ್ವಂತ ಆಡಳಿತವಿಭಾಗಗಳನ್ನಿಮೂಲಕ ತನ್ನ ಅಧಿಕಾರವನ್ನು ಚಾಲು ಮಾಡತಕ್ಕದ್ದು; ಕೇಂದ್ರ ಧಂಡಾರಕ್ಕೆ ಮಾಡಬೇಕಾದ ಸಂದಾಯಗಳ ಮಟ್ಟಿಗೆ ಪ್ರಾಂತ್ಯ ಮತ್ತು ಸಂಸ್ಥಾನಗಳೊಳಗೆ ಸಮಾನತೆ ಮತ್ತು ಏಕರೂಪವಿರತಕ್ಕದ್ದು; ಕೇಂದ್ರ ಸರಕಾರವು ಸಲಾಯಿಸುವ ಸಂಯುಕ್ತಾಡಳಿತ ತೆರಿಗೆಗಳ ಪಾಲು, ಸಹಾಯಕ ಗ್ರಾಂಟುಗಳು, ಬಹುಮಾನ ಧನ, ಮತ್ತಿತರ ಎಲ್ಲಾ ವಿಧದ ಆರ್ಥಿಕ ಹಾಗೂ ತಜ್ಞರ ಸಹಾಯಗಳೇ ಮುಂತಾದ ಎಲ್ಲಾ ವಿಧದ ಕೊಡುಗೆಗಳಾ ಪ್ರಾಂತ್ಯ ಮತ್ತು ಸಂಸ್ಥಾನಗಳಿಗೆ ಸರಿಸಮಾನವಾಗಿರಬೇಕು:— ಮೇಲಿನ ನಿಯಮಗಳಿಗನುಸಾರವಾಗಿ ಅಖಿತ ರಾಜ್ಯಗಳೆಲ್ಲವೂ ಎಲ್ಲಾ ಬಗೆಯಿಂದಲೂ ಪ್ರಾಂತ್ಯಗಳ ಪಂಗ್ತಿ ಹಿಡಿದಂತಾಗುವುದು. ಸಂಸ್ಥಾನೀ ವೈಶಿಷ್ಟ್ಯವಿಲ್ಲಿಗೆ ಮಾಯಮಾಯವಾಯಿತು; ಈಗ ಇರುವ ರಾಜ ಪ್ರಮುಖರು ಮತ್ತು ರಾಜರೆಂಬವರು ಬದುಕಿರುವ ವರೆಗೆ ಅಂಥವರಿಗೆ ಕೇವಲ ಪರ್ಷಾಸನ ಪಡೆದು ದಿನ ದೂಡುವ ಅಧಿಕಾರ ವಿನಹ ಬೇರೇನೂ ಉಳಿಯುವ ದಿಲ್ಲ. ಕೂಡಲೇ ಭಾಷಾನಾರು ಪ್ರಾಂತ್ಯ ರಚನೆಯಾಗಿದ್ದಿರೆ ಬಾಂಬೆ, ಮದ್ರಾಸ್ ಪ್ರಾಂತ್ಯಗಳೊಳಗಡೆ, ಮೈಸೂರು ಪ್ರಾಂತ್ಯವೆಬಬುದೊಂದು ಬೇರೆ ಸಿಡಿದು ನಿಂತಂತೆ ತೋರಬಹುದು. ಮಿಕ್ಕು ಕರ್ನಾಟಕ ಭಾಗಗಳೊಂದಾಗಿ, ಮೈಸೂರು ಮಾತ್ರ ಸ್ವತ್ಯೇಕವುಳಿಯುವುದಾದರೆ ವಿಶಾಕಾರಣ ಏಕಭಾಷಾ ಪ್ರಾಂತ್ಯಗಳು ಸಮಾನ ಮಟ್ಟದಲ್ಲೇ ಎಂಡು ತುಂಡುಗಳಾಗಿ ನಿಂತಂತಾಗುವುದು. ಇಂತಹ ಅಸ್ವಾಭಾವಿಕತೆ ತೋರಿಬರಕೂಡದು. ತನ್ನ ಸಂಸ್ಥಾನೀ ವೈಶಿಷ್ಟ್ಯತೆ ಕಳಕೊಂಡು ಪ್ರಾಂತ್ಯದ ಮಟ್ಟಕ್ಕೆ ಬಂದಿರುವ ಮೈಸೂರು ಕರ್ನಾಟಕದೊಂದಿಗೆ ಸೇರಿಕೊಳ್ಳವದು ವಿಹಿತ; ಈಗ ಆಗಿರುವ ಬದಲಾವಣೆಯಿಂದಾಗಿ ಇದು ಸುಲಭದ ಕೆಲಸವೂ ಹೌದು.

ಸಾನ್ವಳ್ಳಿದಾರರು ಕೊಡುವ
ದೃಢಪತ್ರಿಕೆ
ಮತ್ತು
ಮನೆವಾರ್ತೆ ಖರ್ಚಿಗೆ ಗೇಣಿ ಅಕ್ಕಿ
ಪಡೆಯುವರಿ ವೈತನು ಕೊಡತಕ್ಕ ಅರ್ಜಿ
ನಮೂನೆಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಅಮೆರಿಕದಲ್ಲಿ ನೆಹರು—

"ತನ್ನ ತತ್ವಾನುಗುಣವಾಗಿ ಜೀವಿಸುವ ಎದೆಗಾರ ನೆಹರುಗಳಂಥವರು ಪ್ರಪಂಚಕ್ಕಿನ್ನೂ ಬೇಕು"

—ಟ್ರೂಮೆನ್.

ಪಂಡಿತ ನೆಹರುಗಳೀಗ ಅಮೆರಿಕದಲ್ಲಿ ಮಹಾ ಸ್ವಾಗತ, ಸತ್ಕಾರ, ಮತ್ತು ಅಪೂರ್ವಾನುಭವಗಳನ್ನು ಪಡೆಯುತ್ತಿದ್ದಾರೆ; ಹೊಸ ದಾಖಲೆಗಳನ್ನೇ ನಿರ್ಮಿಸುತ್ತಿದ್ದಾರೆ. ಪಂಡಿತಜಿಯು ವ್ಯಕ್ತಿ ಶ್ರೇಷ್ಠ, ಮಾತು, ವರ್ತನೆಗಳಿಗೆ ಅಮೆರಿಕಾನರು ಕೊಡುತ್ತಿರುವ ಬೆಲೆ— ಪಂಡಿತಜಿಯನ್ನು ಆ ಅತಿಥೂರದ ಅತಿ ಶ್ರೀಮಂತ ರಾಷ್ಟ್ರವು ಗೌರವಿಸುತ್ತಿರುವ ರೀತಿ—ಮೊದಲಾದುವುಗಳ ಮೇಲಿಂದ, ಅಮೇರಿಕದ ಈ ಅತಿಥ್ಯ ಸರದಿಯೊಳಗಡೆ ಯಾವುದೋ ಆಲೋಚನೆ ಹುದುಗಿರಬೇಕು ಎಂದು ಊಹಿಸದೆ ನಿರ್ವಾಹವಿಲ್ಲ. ಭಾರತ ಮತ್ತು ಅಮೇರಿಕಗಳು ವಸ್ತುತಃ ರಾತ್ರಿಹಗಲಿನ ಅಂತರ ಮತ್ತು ಪರಸ್ಪರ 10 ಸಾವಿರ ಮೈಲು ದೂರವಿರುವ ರಾಷ್ಟ್ರಗಳು. ಪ್ರಪಂಚದ ಪ್ರತ್ಯೇಕ ಬಿಡಾರವೆಂಬಂತೆ ತನ್ನಷ್ಟಕ್ಕೆ ತಾ ನಿದ್ದ ಅಮೆರಿಕಕ್ಕೆ ಕಳದ ಮಹಾಯುದ್ಧವು ಲೋಕ ವ್ಯಾಮುಖ್ಯ ಸ್ಥಾನ ಸಂಪಾದಿಸಿಕೊಟ್ಟಿತು. ಅಂತೆಯೇ, ದೀರ್ಘಾವಧಿಯಿಂದಿದ್ದ ಬ್ರಿಟಿಷ್ ಅಡಳಿತೆ ಬರ್ಮಾಕ್ಕೂ ಹೊಂದಿದ ದೆಸೆಯಿಂದ ಸ್ವತಂತ್ರ ಭಾರತವು ಇತ್ತೀಚೆಗೆ ತಾನೇ ಲೋಕದ ಒಂದು ಗಣ್ಯ ರಾಷ್ಟ್ರವಾಯಿತು. ಈ ರೀತಿ ಇವೆರಡು ರಾಷ್ಟ್ರಗಳಲ್ಲೂ ಒಂದೊಂದು ವೈಶಿಷ್ಟ್ಯವಿದೆ. ಎರಡೂ ಒಂದೂಂದು ವಿಧಾವದಿಂದ ಲೋಕ ರಂಗದಲ್ಲಿ ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲು ಹೆಣಗಾಡುತ್ತಿವೆ. ಇಂತಹ ಸಾಮ್ಯತೆಯಿದ್ದರೂ ಪಂಡಿತ ನೆಹರುಗಳನ್ನು ಬರಮಾಡಿಕೊಂಡ ತೆಲವೇ ದಿನಗಳಲ್ಲಿ ಅಮೆರಿಕವು ಭಾರತವನ್ನು ಆರಿತಸ್ಟು ಈ ಮೊದಲು ತಿಳಿದುಕೊಂಡುದಿಲ್ಲ; ಇವೆರಡು ರಾಷ್ಟ್ರಗಳೊಳಗೆ, ಈ ಜಲ್ವಾವಧಿಯಲ್ಲಾಗಿ ಹೋದಂತಹ ನಿಕಟ ಪರಿಚಯ ಮತ್ತು ಸ್ನೇಹಭಾವನೆಗಳು ಹಿಂದೆಂದೂ ಆದುದಿಲ್ಲ. ಅಸ್ಯಾದೊಂದು ಮುಖ್ಯ ರಾಷ್ಟ್ರ,—ಲೋಕದಲ್ಲೇ ಅತ್ಯಧಿಕ ಜನಸಂಖ್ಯೆಯ ದೇಶ— ಚೈನವು ಕಮ್ಯೂನಿಸ್ಟ್ ಆಗಿದೆ; ಆ ಸ್ಯಾದ ಇತರ ರಾಷ್ಟ್ರಗಳಲ್ಲೂ, ಪ್ರಪಂಚದ ಎಲ್ಲೆಡೆಗಳಲ್ಲೂ ಕಮ್ಯೂನಿಸ್ಟರ ಆಂದೋಲನ ನಡೆದಿದೆ. ಇಂತಹ ಪರಿಸ್ಥಿತಿಯಲ್ಲಿ ಅಸ್ಯಾದ ಪ್ರಮುಖ ಸ್ವತಂತ್ರ ರಾಷ್ಟ್ರ ಭಾರತದ ಮನವೊಲಿಸಿಕೊಳ್ಳುವ ಅವಶ್ಯಕತೆಯು ಅಮೆರಿಕದ ಮನಸ್ಸಿಗೆ ನಾಟಿದೆ. ತನ್ನ ನಿಸ್ವಾರ್ಥ ಬುದ್ಧಿ ಮತ್ತು ಜೀವನ ಹಾಗೂ ನಿರ್ಮಲ ಮತ್ತು ವಿಶಾಲ ಭಾವನೆ ಧೋರಣೆಗಳಿಂದ ಅಖಿಲ ಭಾರತದ ಪರಿಪೂರ್ಣ ಗೌರವಾದರಗಳನ್ನು ಗಳಿಸಿರುವ ಪಂಡಿತ ನೆಹರುಗಳ ಶಿಶುಸಹಜ ಸರಳ ವರ್ತನೆಯು ಅಮೆರಿಕನರ ಇಚ್ಛಾಪೂರ್ತಿಗನುಕೂಲವಾಗಿ ತೋರಿದೆ. ಇತ್ತ, ಹೇರಳ ಜನಸಂಖ್ಯೆ ಮತ್ತು ಅಗಾಧ ಅಖಿಲ ಸಂಪತ್ತುಗಳಿರುವ ನವೊದಿತ ಸ್ವತಂತ್ರ ಭಾರತಕ್ಕೆ ಕಸ್ಟ ಆರ್ಥಿಕ ಯಾಂತ್ರಿಕ ಅಭಿವೃದ್ಧಿಗಳಿಗಾಗಿ ಅಮೆರಿಕದಂತಹ ಸಂಪನ್ನ ರಾಷ್ಟ್ರದ ಸಹಾಯವೂ ಪ್ರಕೃತ ಬೇಕಾಗಿದೆ; ಅದ್ದರಿಂದ ಭಾರತವು ಕೂಡಾ ಈ ಸಂಬಂಧಕ್ಕಾಗಿ ಸಂತೋಷಪಡಬೇಕೇ ಹೊರತು ಸಂದೇಹ ಕಟ್ಟಿಕೊಳ್ಳಲೆಡೆಯಿಲ್ಲ. 'ಫನ ಇರಸ್ತಿಕೆಯಿಂದಿದ್ದ ಲೋಕದ ವಾಳಯ ಕಲಹದಲ್ಲಿ ಭಾಗ ವಹಿಸದೆ ಜಾಗತಿಕ ಶಾಂತಿಗಾಗಿ ಪ್ರಯತ್ನಿಸುವ' ದೃಢ ಧೋರಣೆಯಿಟ್ಟುಕೊಂಡಿರುವ ಭಾರತವು ತನ್ನ ನೆಲೆಯಲ್ಲಿ ನಿಂತುಕೊಂಡೇ ವಿಶ್ವವಂಗೆ ಹಸ್ತಲಾಘವ ಕೊಟ್ಟೀತು, ಹೊರತು ಅನ್ಯರು ಕೈ ಹಿಡಿದೆಳೆದತ್ತ ಹೋಗುವಂತಿಲ್ಲ. ಆದ್ದರಿಂದ ಪಂಡಿತ ನೆಹರುಗಳನ್ನು ಎತ್ತಿ ತೇಲಿಸುತ್ತಿರುವಂತೆ ಕಾಣುತ್ತಿರುವ ಅಮೆರಿಕದ ಅಸಾಧಾರಣ ಉಪಚಾರಗಳು ಶಂಕೆ ಸಂದೇಹಗಳನ್ನು ಮೊಳೆಯಿಸಿದರೂ ನೆಹರು ಮತ್ತು ಭಾರತ ಸರಕಾರದ ಧ್ಯೇಯ ಧೋರಣೆಗಳು ತಂಗಾಳಿಗಲುಗಾಡುವಷ್ಟು ಚಂಚಲವಾದುವುಗಳಲ್ಲವೆಂದು ತಿಳಿದಿರಬೇಕು.

ಲಂಡನ್‌ನಿಂದ ವಾಷಿಂಗ್ಟನಿಗೆ—

ಕಳದ ವಾರ ಪ್ರಕಟಿಸಿದ್ದಂತೆ ಪಂಡಿತ ಜವಾಹರಲಾಲರು ಬ್ರಿಟನಿನ ಪ್ರಧಾನ ಮಂತ್ರಿ ಆಟ್ಲಿ ಮತ್ತು ಬ್ರಿಟಿಷ್ ಮಂತ್ರಿ ಮಂಡಲದ ಇತರ ಮುಖ್ಯ ಸಚಿವರೊಡನೆ ಪಾಸಗಿಯ, ಆದರೆ ಮಹತ್ವದ ಮಾತುಕತೆಗಳನ್ನು ತಾ. 10ರಲ್ಲಿ ಆಟ್ಲಿಯವರಿತ್ತಿದ್ದ ಔತಣ ಕೂಟವ ಸಂದರ್ಭದಲ್ಲಿ ನಡೆಸಬಹುದು. ಈ ಮಾತುಕತೆಗಳಲ್ಲಿ ಕಾ

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದೆಲ್ಲ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸವಃಸ್ಥಿಗೆಯಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

THE
PANGAL NAYAK BANK, LIMITED.
(Incorporated in 1920)

GREETINGS:

On the occasion of the ensuing **DEEPAVALI** we cordially wish all the constituents and other wellwishers of the Bank a happy

NEW YEAR

of peace and bright prospects.

Udipi, 14th October 1949. Secretary and Treasurer.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ.
ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ರುಬ್ಬಿ ಮಾಡುತ್ತವೆ.

ವಿಳಾಸ:—
ಪಾಥ್ರಿಸ್ (ಆಯುರ್) ಫೈಟೆಕ್ಟ್ಸ್,
ಉಡುಪಿ.

(Regd.)

ASTHMA (DAMA)

The Word-renowned remedy for Asthma "LACHHMANA BUTI" cures Asthma radically by one single dose, taken in the night of full-moon dated 5-11-49.

Correspondence in English please.

Mahatma Shri UDASI BABA
Sant Niwas
P. O. Chitrakot, U. P.

—ಅಭೂತಪೂರ್ವ ಸ್ವಾಗತ

"ಆರ್ಥಿಕ ಸಹಾಯಕ್ಕಾಗಿ ನಮ್ಮ ಕಷ್ಟಾರ್ಜಿತ ಸ್ವಾತಂತ್ರ್ಯವನ್ನು ಮಾರಲಾರೆವು" —ನೆಹರು.

ಶ್ರೀನಗರದ ವ್ಯಕ್ತಿಯೊಂದಾರಂಭಿಸಿ, ಸಂಬಂಧಪಟ್ಟ ಮುಖ್ಯ ವಿಷಯಗಳೆಲ್ಲವುಗಳ ಸರ್ವಾಲೋಚನೆ ನಡೆಯುತೆಂದು ತಿಳಿದು ಬಂದಿದೆ. ಅಲ್ಲಿರುವ ಭಾರತ ಕಚೇರಿಗೆ ಪಂಡಿತಜೀ ಹೋಗಿದ್ದಾಗ, "ನಿಜಾರನೆಯಿಲ್ಲದೆ ದಿಗ್ಬಂಧನದಲ್ಲಟ್ಟುರುವ ಸಹಸ್ರಾರು ಮಂದಿಯನ್ನು ಬಿಡುಗಡೆ ಮಾಡಿ!" "ಜನರ ಮೇಲೆ ಗುಂಡು ಹಾರಿಸುವದನ್ನೂ ಕಣ್ಣೀರ ಹೆಬ್ಬೆ ಬಿಡುವುದನ್ನೂ ನಿಲ್ಲಿಸಿರಿ" "ಪಂಡಿತ ನೆಹರೂ, ಅಮಾನುಷಭದ್ರ ಶಾಶನಗಳನ್ನ ರದ್ದುಪಡಿಸಿರಿ" ಎಂಬ ಕರಪತ್ರಗಳನ್ನು ತಾಗಿಸಿದ ಕಾರೊಂದರಲ್ಲಿ ನಾಲ್ಕು ಮಂದಿ ಭಾರತೀಯರ ನಿಷೇಧ ಪ್ರದರ್ಶನ ನಡೆದಿತ್ತು. ತಾ. 10ನೇ ರಾತ್ರಿ ಕರದೊಯ್ಯಲು ಬಂದಿದ್ದ ಅಧ್ಯಕ್ಷ ಟ್ರುಮೇನರ ವಿಮಾನ 'ಇಂಡಿಪೆಂಡೆನ್ಸ್'ನ್ನು ಹತ್ತಿದರು. ಅವರೊಂದಿಗೆ ಖಾಸಗೀ ಕಾರ್ಯದರ್ಶಿ ಎನ್. ಬಿ. ಮಿಥಾಯಿ, ಪುತ್ರಿ ಇಂದಿರ, ಸರ್. ಬಾಜ್ಪಾಯಿ, ಸರ್. ದೇಶಮುಖರಿದ್ದರು. ತಾ. 11ನೇ ಅಪರಾಹ್ನ ವಾಷಿಂಗ್ಟನ್ ನಿಲ್ದಾಣದಮೇಲೆ ಅಮೆರಿಕದನೆಲದಲ್ಲಿ ಪಂಡಿತಜೀ ಪ್ರಥಮ ಹೆಜ್ಜೆಯಿಟ್ಟಾಗ, ಮತ್ತಾಮೂಹೂರ್ತದಿಂದೀ ವರೆಗೆನ್ನಡೆದ ಮತ್ತು ನಡೆಯುತ್ತಿರುವ ಹಾಗೂ ನಡೆಯಲಿರುವ ಸ್ವಾಗತ ಸಂಭ್ರಮಗಳು ನಿಜಕ್ಕೂ ಅನ್ಯಾದೃಶವಿವೆ. ಅವರು ವಿಮಾನದಿಂದಿಳಿದೊಡನೆ ವಂದನಾ ಸ್ಫೋಟಿಕ 19 ಗನ್ನುಗಳು ಹಾರಿದುವು. ಅಮೇರಿಕದ ಸೇನಾ ವಿವಿಧಾಂಗಗಳ ಸಂಯುಕ್ತ ಹಾಗೂ ಅಕರ್ಷಣೀಯ ಗೌರವ ವಂದನೆಗಳಾದುವು. ಅಮೇರಿಕದ ಸೇನಾ ಬೇಂಡು ಭಾರತದ ರಾಷ್ಟ್ರಗೀತೆ 'ಜನಗಣಮನ'ವನ್ನು ಬಾರಿಸಿ ಆಮೇಲೆ ಅಮೆರಿಕದ ರಾಷ್ಟ್ರಗೀತೆ ಬಾರಿಸಿತು- ತನ್ನ ಮಂತ್ರಿ ಮಂಡಲಿಯೊಂದಿಗೆ ಅಲ್ಲಿ ಮೊದಲೇ ಹಾಜರಿದ್ದ ಅಧ್ಯಕ್ಷ ಟ್ರುಮೇನರು ತನ್ನ ವರಿಗೆ ನೆಹರೂಗಳ ಪರಿಚಯ ಮಾಡಿಸಿಕೊಟ್ಟರು. ವಿಮಾನ ನಿಂತ ಸ್ಥಳಕ್ಕೊತ್ತಾಗಿ ಈ ಉದ್ದೇಶಕ್ಕಾಗಿಯೇ ನಿಲ್ಲಿಸಲ್ಪಟ್ಟಿದ್ದ ಲಗ್ಗೇಜ್ ನಿಲ್ದಾಣವೊಂದರಲ್ಲಿ ನೆಹರು-ಟ್ರುಮೇನರು ನಿಂತುಕೊಂಡು, ಛಾಯಾಗ್ರಾಹಕರಿಗಾಗಿ ಪರಸ್ಪರ ಸಹಕಾರದಿಂದ ವರ್ತಿಸುವ ಭಾವಚಿತ್ರ ವಿನಿಮಯ ನಡೆಸಿದರು. ಹಿಂದಿನ ವಾರದ ರಂಡಿಯನ್ನು, 'ನೆಹರುಗಳು ಬರೆದಿದ್ದ 'ಭಾರತದ ಶೋಧ' ಗ್ರಂಥವನ್ನು ಓದುವುದರಲ್ಲೇ ಕಳೆದಿದ್ದ ಟ್ರುಮೇನರು ಭಾಷಣದಲ್ಲಿಯೂ ಅದರ ಪ್ರತಿ ಭಾಯೆ ಬಿದ್ದಿತ್ತು. ಪ್ರಧಾನಿ ನೆಹರುಗಳನ್ನು ಸ್ವಾಗತಿಸುತ್ತಾ, ಅಧ್ಯಕ್ಷ ಟ್ರುಮೇನರಂದರು: "ಶ್ರೀಮಾನ್ ಪ್ರಧಾನ ಮಂತ್ರಿಗಳೇ, ಸಂಯುಕ್ತ ಸಂಸ್ಥಾನಗಳ ಸರಕಾರದ ಮತ್ತು ಜನತೆಯ ಪರವಾಗಿ ತಮ್ಮನ್ನು ಸ್ವಾಗತಿಸಿಕೊಳ್ಳಲು ನನಗೆ ಅತ್ಯಾನಂದವಾಗುತ್ತಿದೆ. ತಾವು, ತಮ್ಮ ಸರಕಾರದ ಪ್ರಧಾನ ಮಂತ್ರಿಗಳೆಂಬುದಕ್ಕಾಗಿ ಮಾತ್ರವಷ್ಟೇ ಸ್ವತಂತ್ರ ಜನತೆಯ ಒಂದು ಮಹಾನ್ ರಾಷ್ಟ್ರದ ಪ್ರೇಮ ಗೌರವಗಳಿಗೆ ಪಾತ್ರರಾದ ನಾಯಕರೆಂಬುದಕ್ಕಾಗಿಯೂ ತಮಗೆ ನನ್ನ ಅಭಿವಂದನೆಗಳು. ಭಾರತಕ್ಕೊಂದು ಹೊಸ ಹಾದಿಯನ್ನು ಕಂಡುಕೊಳ್ಳುವ ಪ್ರಯತ್ನದಲ್ಲೇ ನಮ್ಮೀ ರಾಷ್ಟ್ರವು ಕಂಡು ಹಿಡಿಯಲ್ಪಡಬೇಕೆಂದು ಅದೃಷ್ಟದಲ್ಲಿತ್ತು. ತಮ್ಮೀ ಸಂದರ್ಶನ ಕೂಡಾ ಅದೊಂದು ರೀತಿಯಿಂದ ಅಮೇರಿಕದ ಶೋಧನೆಯೇ ಆಗುವದೆಂದು ನನ್ನಾತ್ಮೆಯಿದೆ. ತಾವು ನಮ್ಮೊಂದಿಗಿರುವ ಈ ಸಂದರ್ಶನವು ನಾವು ಸಖ್ಯಕ್ಕೂ ತಮ್ಮ ನಿಕಟ ಸಾನ್ನಿಧ್ಯರೆಂಬ ದೃಢಭಾವನೆಯನ್ನು ತಮ್ಮಲ್ಲಿ ಹುಟ್ಟಿಸುವುದೆಂಬ ಅಶೆಯೊಡನೆ, ಅಮೇರಿಕದ ಜನತೆಯ ಅತಿಥ್ಯ ಮತ್ತು ಸೌಹಾರ್ದತೆಗಳನ್ನು ನಾನು ತಮ್ಮ ಮುಂದೊಡ್ಡುತ್ತೇನೆ" ಇದಕ್ಕುತ್ತರವಾಗಿ ನೆಹರುಗಳಂದರು: "ನನ್ನೊಂದು ದೀರ್ಘಾವಧಿಯ ಬಯಕೆಯು ಈ ಮೂಲಕ ಈಡೇರುತ್ತಿರುವುದರಿಂದ, ನಾನು ಇದೀಗ ನೈಥಮ ಬಾರಿ ಈ ಮಹಾನ್ ರಾಷ್ಟ್ರದ ನೆಲದಲ್ಲಿ ಹೆಜ್ಜೆಯೂರುತ್ತಿರುವ ಈ ಮುಹೂರ್ತವೆಂಬುದು ಅತ್ಯಂತ ಪ್ರಾಮುಖ್ಯವಾದುದು. ನಿಯೋಜಕ ರಿಪಬ್ಲಿಕ್ ಭಾರತದ ನನ್ನ ಸರಕಾರ ಮತ್ತು ನನ್ನ ಜನತೆಯ ಹಾರ್ದಿಕ ಅಭಿವಂದನೆಗಳನ್ನು ನಾನು, ಶ್ರೀಮಾನ್ ಅಧ್ಯಕ್ಷರೇ, ತಮಗೂ ಈ ಮಹಾನ್ ರಿಪಬ್ಲಿಕಿಗೂ ತಂದೊಪ್ಪಿಸುತ್ತಿದ್ದೇನೆ; ಮತ್ತು ಪಾಶ್ಚಾತ್ಯ ಜಗತ್ತಿನ ಹಾಗೂ ಪೌರ್ವಾತ್ಯ ಜಗತ್ತಿನ ಇವೆರಡು ರಿಪಬ್ಲಿಕ್‌ಗಳನ್ನು, ಸರಸ್ಪರ ತಮ್ಮ ಹಿತ ಸಾಧನೆಗಾಗಿಯೂ ಮಾನವ ಜನಾಂಗದ ಕಲ್ಯಾಣಕ್ಕಾಗಿಯೂ ಮೈತ್ರಿ ಮತ್ತು ಫಲದಾಯೀ ಸಹಕಾರದ ಮೂಲಕ ಜತೆಗೂಡಿ ಕೆಲಸಮಾಡುವ ಹಲವು ದಾರಿಗಳನ್ನು ಕಂಡುಕೊಳ್ಳುವವೆಂದು ನಾನು ನಂಬುತ್ತೇನೆ."

ವಾಷಿಂಗ್ಟನಿನ ಘನಾತಿಥ್ಯ

ನಿಲ್ದಾಣದಲ್ಲಿ ತಮ್ಮ ಲಗ್ಗೇಜು ಅಧ್ಯಕ್ಷನ ಮೈ ಬಿಡದೆ ಚುರುಕಾಗಿ ಹೆಜ್ಜೆಯಿಡುತಿದ್ದ ಪಂಡಿತ ನೆಹರು ಗಳನ್ನು ಕಂಡ ಅಮೆರಿಕಾನರು 'ಇವರು ನಿಜಕ್ಕೂ 59 ವರುಷ ತುಂಬಿದವರೇ?' ಎಂದು ಸಂದೇಹಪಟ್ಟಿದ್ದರು. ವಿಮಾನ ನೆಲೆಯ ಸ್ವಾಗತ ಸಮಾರಂಭಗಳ ನಂತರ ಅಧ್ಯಕ್ಷ ಟ್ರುಮೇನರು, ತನ್ನ ಕಾರಿನಲ್ಲಿ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತ್, ಗೃಹ ಸಚಿವ ಡೀನ್ ಅಚ್‌ಸೆನ್ ರೊಂದಿಗೆ ಪಂಡಿತ ನೆಹರುಗಳನ್ನು ಕುಳ್ಳಿರಿಸಿ ತನ್ನ ನಿವಾಸ ಬ್ಲಯರ್‌ಹೌಸಿಗೊಯ್ದರು. ಆಮೆರಿಕದ ಹಿರಿಯಣ್ಣನ ಅಧ್ಯಕ್ಷ ಗೃಹ 'ವೈಟ್ ಹೌಸ್'ನ ದುರಸ್ತಿಯಗತ್ಯವೆಂದು ತೋರಿದ್ದುದರಿಂದ ಅದನ್ನು ಖಾಲಿ ಮಾಡಿ ಟ್ರುಮೇನ್ ಕುಟುಂಬವೀಗ ಬ್ಲಯರ್ ಹೌಸಿನಲ್ಲೇ ವಾಸಿಸುತ್ತಿದೆ. ನಾಲ್ಕು ಮಾಳಿಗೆಗಳಿದ್ದು, ಅಮೆರಿಕನ್ ವೈಶಿಷ್ಟ್ಯಗಳೆಲ್ಲವುಗಳಿಂದ ಅತಿ ನಾಜೂಕಾಗಿರುವ ಬ್ಲಯರ್ ಹೌಸು, ವೈಟ್ ಹೌಸಿಗಿಂತ ಭವ್ಯವಾದ ಹಾಗೂ ವಿಸ್ತಾರವಾದ ಭವನ. ಈ ಮೊದಲೂ ಸರಕಾರೀ ಮಹಾ ಅಧಿತಿಗಳ ಸತ್ಕಾರ ಸಮಾರಂಭಗಳನ್ನೂ ಚರಿತ್ರಾರ್ಹ ಸಮ್ಮೇಳನಗಳನ್ನೂ ಈ ಭವನದಲ್ಲೇ ಜರಗಿಸುವ ವಾಡಿಕೆಯಹತ್ತು. ಬ್ರಿಟನಿನ ರಾಜರಾಣಿಯರು ಅಮೆರಿಕ ಸಂದರ್ಶಿಸಿದಾಗ ಉಳಕೊಂಡಿದ್ದುದಿಲ್ಲಿಯೇ. ಇಲ್ಲಿ ಪಂಡಿತ ನೆಹರುಗಳು ಅಧ್ಯಕ್ಷಾಧಿತಿಯಾಗಿ ನಿಂತರು. ಬಂದ ರಾತ್ರಿ ಅಧ್ಯಕ್ಷರ ಔತಣ ಸತ್ಕಾರ ನಡೆಯಿತು. ಔತಣಾನಂತರ ನೆಹರು—ಟ್ರುಮೇನರೊಳಗೆ ಸುದೀರ್ಘ ಖಾಸಗೀ ಮಾತುಕತೆ ನಡೆಯಿತು. ಅದೊಂದು ಅಧಿಕೃತ ಸಮ್ಮೇಳನವಾಗಿರದೆ, ಗೃಹಸ್ಥನು ಅತಿಥಿಯೊಡನೆ ನಡೆಸಿದ ಭೋಜನಾನಂತರದ ಕಾಶಲ ಮಾತುಕತೆಯಾಗಿದ್ದರೂ, ಇಬ್ಬರು ರಾಷ್ಟ್ರ ಪ್ರಮುಖರೂ ತಮಗೊದಗಿದ ಅಪೂರ್ವ ಸಂದರ್ಭವನ್ನು ಸದುಪಯೋಗಿಸಿ ಕೊಂಡರೆನ್ನಲಡ್ಡಿಯಿಲ್ಲ. ಮಧುದಿನವಿಡೀ ವಾಷಿಂಗ್ಟನ್ನಿನ ಪ್ರೇಕ್ಷಣೀಯ ದೃಶ್ಯಗಳನ್ನು ಕಾಣುವದರಲ್ಲಿ ಕಳೆದರು. ಅಮೆರಿಕನ್ ಸ್ವಾತಂತ್ರ್ಯದ ಜನಕ ಜನರಲ್ ವಾಷಿಂಗ್ಟನನ ಮನೆಯಮ್ಮನ್ನು ನೋಡಲು ವೌಂಟ್ ವೆರ್ನಾನ್ ಪ್ರದೇಶಕ್ಕೆ ಹೋದರು. ನೆಹರುಗಳನ್ನು ಕಂಡಾಗ ಅಲ್ಲಿಯ ನೀಗ್ರೋ ಶಾಲಾವಿದ್ಯಾರ್ಥಿಗಳು ಮತ್ತು ಅಧ್ಯಾಪಕಿಯರು ಗಾದ ಆನಂದವು ವರ್ಣನಾತೀತ. ಓಡಿ ಬಂದು, 'ಕಪ್ಪು ಜನಾಂಗದ ಘನವಂಶ ಸ್ನೇಹಿತ' ಪಂಡಿತಜೀಯ ಕೈಕುಲುಕಿ ಕರೆದೊಯ್ದ ನೀಗ್ರೋ ಅಧ್ಯಾಪಕಿ ಕೊನೆಗೆ ತನ್ನ ಹೆಗ್ಗಳಿಕೆಯನ್ನು ಬಚ್ಚಿಡಲಾರದೆ "ಇದು ನನ್ನ ಜೀವಮಾನದ ವಿಶೇಷ ರೋಮಾಂಚಕಾರೀ ಹರ್ಷ ಮುಹೂರ್ತ. ನಾನಿದನ್ನು ಎಂದಿಗೂ ಮರೆಯಲಾರೆ" ಎಂದಳು. ಅಲ್ಲಿಯ ರೀಜೆಂಟ್ ಶ್ರೀಮತಿ ಬೋಲ್ಟನ್ ಅಂದ ಸ್ವಾಗತಿಸಲ್ಪಟ್ಟಿ, ಆಕೆ ಕಾಣಿಕೆ ಕೊಟ್ಟ ಜೋರ್ಜ್ ವಾಷಿಂಗ್ಟನರ ಸಂಬಂಧದ ಪುಸ್ತಕವನ್ನು ಪಡೆದು ವಾಷಿಂಗ್ಟನರಿಗೆ ಗೌರವ ಸಲ್ಲಿಸಿದರು. ತಂಗಿ ಮತ್ತು ಪುತ್ರಿಯೋದಿಗೆ ಸುಮಾರು ಎರಡು ಕಾಸುಗಳ ತನಕ 'ರಾಷ್ಟ್ರೀಯ ಸ್ಮಾರಕ'ಗಳನ್ನು ಸಂದರ್ಶಿಸಿ, ಅವರಾಹ್ನ ಹಿಂದೀ ರಾಯಭಾರೀ ಕಚೇರಿಗೆ ಮರಳಿದರು. ಅಲ್ಲಿ ಪಂಡಿತಜೀ ನಿಜಕ್ಕೂ ಹೊರಗಿನ ಸಂಚಾರದಿಂದ ಮನೆಗೆ ಮರಳಿಬಂದ ಮನೆಯೊಡೆಯನಂತೆ, ಗೃಹ ಸಲಗೆಯನ್ನನುಭವಿಸಿದರು; ಅಲ್ಲಿ ಎಲ್ಲರೊಡನೆ ನಗುತ್ತಾ, ಮಕ್ಕಳ ಗಲ್ಲ ಚಿವುಟ ಅಡುತ್ತಾ ಬೇರೆಯೇ ಮನುಷ್ಯನಾಗಿ ತೋರಿದರು. ತಾ. 12ನೇ ರಾತ್ರಿ 8 ಕಾಸಿನ ವರೆಗೆ ಬ್ಲಯರ್ ಹೌಸಿನಲ್ಲಿದ್ದ ತನ್ನ ನಿವಾಸ ವ್ಯವಸ್ಥೆಯನ್ನು, ಆ ಮೇಲೆ ಭಾರತದ ರಾಯಭಾರಿ ಕಚೇರಿಗೆ ವರ್ಗಾಯಿಸಿದರು.

ಚರಿತ್ರಾರ್ಹ ಭಾಷಣ

ತಾ. 13ನೇ ಮುಂಜಾನೆ ಅಮೆರಿಕದ ಶಾಸನ ಸಭೆ 'ಕಾಂಗ್ರೆಸ್'ನ ದೊಡ್ಡಸಣ್ಣ ಕವಲುಗಳಾಗಿರುವ 'ಪ್ರತಿನಿಧಿ ಭವನ'ಮತ್ತು 'ಸಿನೇಟ್'ಗಳಲ್ಲಿ ಪಂಡಿತಜೀಯತ್ತ ಎರಡು ಭಾಷಣಗಳು ಅತ್ಯಮೂಲ್ಯ ಪ್ರಾಪಲಿಗಳು. ಪ್ರತಿನಿಧಿಭವನದಲ್ಲಿ ನೆಹರೂ ಭಾಷಣದ ವೇಳೆ ಸದಸ್ಯರು ಆರು ಬಾರಿ ಉತ್ಸಾಹ ರವಗಳನ್ನೆಬ್ಬಿಸಿದ್ದರು. ಭಾಷಣಾಂತ್ಯದಲ್ಲಿ ಇಡೀ ಸಭೆಯೆದ್ದು ನಿಂತು ಕರತಾಡನ ಮಾಡಿತು. "ಭಾರತಕ್ಕೆ ಅಮೇ

[೭ನೇ ಪುಟ ನೋಡಿರಿ]

ಮುಂಬೈ--ಮಲ್ಪೆ-ಕಲ್ಲಿಕೋಟೆಗಳಿಗೆ ಪ್ರತಿ ವಾರ ಚಲಾವಣೆಗಳು

ಎಸ್. ಎಸ್. ಸಬರ್ಮತಿ

(ಸಾಕಷ್ಟು ಹಾಗೂ ವಿಲಾಸೋಪಕರಣಗಳಿಂದ ಕೂಡಿದ—ವೇಗವಾಗಿ ಪ್ರಯಾಣಿಸುವ ಆಧುನಿಕ ಹಡಗು)

ಇಜೇ ಅಕ್ಟೋಬರ ತಿಂಗಳ ತಾ. 19ನೇ ಬುಧವಾರ ದಿನ "ಎಸ್. ಎಸ್. ಸಬರ್ಮತಿ"ಯು ಮುಂಬೈಯಿಂದ ಸರಕುಗಳನ್ನೂ ಪ್ರಯಾಣಿಕರನ್ನೂ ತುಂಬಿಕೊಂಡು ಮರ್ಮಗೋವಾ, ಕಾರವಾರ ಮಾರ್ಗವಾಗಿ ಪ್ರತಿ ಗುರುವಾರ ರಾತ್ರಿ ಮಲ್ಪೆಗೆ ಆಗಮಿಸುವುದು. ಈ ಹಡಗವು ಪ್ರಯಾಣಿಕರನ್ನು ತುಂಬಿಕೊಂಡು ಮಲ್ಪೆಯಿಂದ ಆದಿತ್ಯವಾರ ಮಧ್ಯಾಹ್ನ ಹೊರಟು ಕಾರವಾರ ಮೂಲಕ ಗೋವ ವಾರ ಅಂದರೆ **24** ತಾಸುಗಳೊಳಗೆ ಬೊಂಬಾಯಿಗೆ ತಲಪುವುದು.

ಈ ಹಡಗವು ಹೊರಡುವ ಮತ್ತು ತಲಪುವ ಸರಿಯಾದ ಸಮಯುಗಳನ್ನು ಮುಂಬೈಯ ಫ್ಲೇಯರ್ ರೋಡಿನಲ್ಲಿರುವ (ಟೆಲಿಫೋನ್ ನಂಬ್ರ 25061) ನಮ್ಮ ಹೆಡ್ಡಾಫೀಸಿನಿಂದ ಅಥವಾ ಫಿನ್ಸೆಸ್ ಡಾಕಿನಲ್ಲಿರುವ ಆಫೀಸಿನಿಂದ (ಟೆಲಿಫೋನ್ ನಂಬ್ರ 24086) ಇಲ್ಲವೆ ಮಲ್ಪೆ ಆಫೀಸಿನಿಂದ (ಟೆಲಿಫೋನ್ ನಂಬ್ರ 31) ತಿಳಿಯಬಹುದು.

ಉಡುಪಿ,
12—10—1949. } ದಿ ಬೊಂಬೇ ಸ್ಟೀವ್ ನೆವಿಗೇಶನ್ ಕಂಪೆನಿ ಲಿಮಿಟೆಡ್

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

ಕ್ರಮಸಂಖ್ಯೆ 426/49

ವಾದಿ: ಗಣಪ್ಪಯ್ಯ ಮುಯ್ಯ

ಪ್ರತಿವಾದಿಯರು: ಅಬ್ಬಕ್ಕ ಹೆಂಗ್ಸು ಕೂಜಾಡಿ ಕುಂದಾಪುರ ತಾಲ್ಲೂ ಕೆರ್ಗಾಲಗ್ರಾಮದ ಸೂರಿ ಬೆಟ್ಟುನಲ್ಲಿರುವ ಶಿವಿ ಹೆಂಗ್ಸಿನ ಮಕ್ಕಳು 2ನೇ ಪ್ರತಿವಾದಿ ಈರಮ್ಮ ಹೆಂಗ್ಸು 14ನೇ ಪ್ರತಿವಾದಿ ಗೋವಿಂದು ದೊಣ್ಣ ಇ, ಮತ್ತು ಮೂವಿ ಹೆಂಗ್ಸಿನ ಮಗ 6ನೇ ಪ್ರತಿವಾದಿ ಮುಗ್ಗಪ್ಪ, ಕೂಡಾ 3ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ತಾ 8-20-1930ರ ರ. ನಿತಿ ಮಂಡಲಗೇದ ಎಗ್ರಿಮೆಂಟ್ ಪ್ರಕಾರ ವಾದಿಗೆ ಪ್ರತಿವಾದಿಯಿಂದ ಬಹಾ ಮೂಲಂಗೇಟು ಗೇಣಿಯನ್ನು ವಸೂಲಮಾಡಿಕೊಳ್ಳುವ ಬಗ್ಗೆ ವಾದಿ ಜಂಗಮಸಿನ ಮೇಲಿನ ದಾವೆ ತಾ 1-11-49ಕ್ಕೆ ತನ್ನಿಗೆ ಇಜೋಣಾಗಿದೆ. ಆ ಕಾರಣ ನಿಮ್ಮವೇನಾದರೂ ಆಕ್ಷೇಪವಿದ್ದಲ್ಲಿ ಸದ್ರಿ ತಾರೀಕಿನಲ್ಲಿ ಕೋರ್ಟು ಮುಂದೆ ಜ್ಞಾಪೀದು ಮಾಡಿಕೊಳ್ಳತಕ್ಕದ್ದು ಎಂಬ ಸಂಗತಿ ನಿಮಗೆ ಈ ಮೂಲಕ ತಿಳಿಸೋಣಾಗಿದೆ.

(By order of the Court)

A N. Rao

Advocate for Plaintiff.

Coondapoor }
15—10—49 }

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised .... Rs. 25,00,000.
Capital Issued & Subscribed .... Rs. 20,00,000.
Capital Paid Up. .... Rs. 19,99,800.
Reserves .... Rs. 8,91,000.

Banking business of every description transacted.

ನವಯುಗ
ಉಡುಪಿ, ಗುರುವಾರ, ೨೦-೧೦-೧೯೫೯

ಜನತಾ ಹೊಣೆಗಾರಿಕೆ

ಈಗ ಅಮೆರಿಕದಲ್ಲಿರುವ ಪ್ರಧಾನಿ ಪಂಡಿತ ಜವಾಹರಲಾಲರು, ಬರುವ ಜನವರಿ ತಾ. 26ಕ್ಕೆ ನೆರವೇರಲಿರುವ ರಜತ ಜ್ಯುಬ್ಲಿ ಭಾರತದ ಉದ್ಘಾಟನೋತ್ಸವಕ್ಕೆ ದಯಮಾಡಿಸಬೇಕೆಂದು ಆಮಂತ್ರಿಸಿರುವ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಮ್ಯಾನೇಜರನ್ನು ಅಮಂತ್ರಿಸಲಿರುವರೆಂದು ಗೊತ್ತಾಗಿದೆ; ಅಂತೆಯೇ ಪ್ರಪಂಚದ ಇತರ ರಾಷ್ಟ್ರ ಪ್ರಮುಖರಿಗೂ ಆಮಂತ್ರಣಗಳು ಹೋಗಲಿವೆ; ಇತ್ತ ರಜಬ್ಲಿಕ್ ಭಾರತದ ರಾಜ್ಯಾಂಗ ರಚನೆ ಮಾಡುತ್ತಿರುವ ಘಟನಾಸಮಿತಿಯು ತನ್ನ ಕಾರ್ಯರಂಗದಲ್ಲಿ ತುದಿಯ ಮೂಲೆಗೆ ಬರುತ್ತಿದೆ. ನವಂಬರ್ 26ರೊಳಗೆ ತೃತೀಯ ವಾಚನವನ್ನು ಮುಗಿಸಿಕೊಂಡು, ನವರಾಜ್ಯ ಶಾಸನದ ಬರವಣಿಗೆಯನ್ನು ಪೂರ್ಣಗೊಳಿಸಲಾಗುವುದು-- ಈ ತನಕ ಸರದಿ ಪ್ರಕಾರ ಘಟನಾಸಮಿತಿ ಮತ್ತು ಪಾರ್ಲಿಮೆಂಟು ಬಿಗಿರುವ ಆ ಸಭೆಯು, ಘಟನಾ ತಯಾರಿ ಕಾರ್ಯ ಮುಗಿದೊಡನೆ ಮತ್ತೆ ಕೇವಲ ಪಾರ್ಲಿಮೆಂಟಾಗಿ ಇರುವುದು-- ಪ್ರಾಂತಿಕ ಶಾಸನಸಭೆಗಳು ಮತ್ತು ಈ ಕೇಂದ್ರ ಶಾಸನ ಸಭೆಯೆಂದರೆ ಸದಸ್ಯತ್ವವನ್ನು ಇರುವ ಸುಮಾರು 109ಕ್ಕೂ ಮಿಕ್ಕಿದ ಸದಸ್ಯರ ಸ್ಥಾನಗಳಿಗೆ ಯಾವುದಾದರೊಂದರಲ್ಲಿ ಮಾತ್ರ ಸ್ಥಾನವಿಂಬೇಕೆಂಬ ನಿಯಮವನ್ನುಸಾರವಾಗಿ ಹೆಚ್ಚಿನಂಶ ಹಿಂದಿನ ವಿಧಾನಗಳಂತೆಯೇ ಉಪಚುನಾವಣೆಗಳಾಗುವವು--ಹೀಗೆ ಪುನರ್ಘಟನೆಗೊಳ್ಳುವ ಪಾರ್ಲಿಮೆಂಟೇ ರಿಪಬ್ಲಿಕ್ ಭಾರತದ ಪ್ರಥಮ ಪಾರ್ಲಿಮೆಂಟ್ ಆಗುವುದು--1950 ನೇ ಜನವರಿ ತಾ 26ಕ್ಕೆ ಈ ನವರಾಜ್ಯ ಶಾಸನದೊಂದಿಗೆ ರಿಪಬ್ಲಿಕ್ ಭಾರತದ ಉದ್ಘಾಟನೋತ್ಸವ ಜರಗುವುದು--ಆ ಮೇಲೆ ಈ ಶಾಸನದನ್ವಯ ಪ್ರಾಯಶ್ಚಿತ್ತರೆಲ್ಲರ ಮಹದಾಸನವನ್ನು ಅಧರಿಸಿ ಬಹುತೇಕವಾಗಿ 1951ನೇ ಮಾರ್ಚಿಯೊಳಗೆ ಪಾರ್ಲಿಮೆಂಟಿಗೂ ಪ್ರಾಂತಿಕ ಶಾಸನ ಸಭೆಗಳಿಗೂ ಮಹಾ ಚುನಾವಣೆಗಳಾಗುವವು; ಆ ವರ್ಷಾಲಕ್ಕವಬದ್ಧ ಜನತಾ ಸರಕಾರಗಳು ಅಸ್ತಿತ್ವಕ್ಕೆ ಬರುವವು. ಭಾರತವು ತನ್ನ ದೃಷ್ಟಿಪಥದಲ್ಲಿಟ್ಟುಕೊಂಡಿರುವ ನವಜೀವನ ವ್ಯವಸ್ಥೆಯ ಅಂತಸ್ಯಗಳಿವು.

ಇವೆಲ್ಲಾ ಮಹತ್ಕಾರ್ಯಗಳ ನಿರ್ವಹಣಕ್ಕೆ ಎಂತಹ ಚಾತುರ್ಯ, ಅನುಭವ, ದೂರದೃಷ್ಟಿ ಮತ್ತು ಸೂಕ್ಷ್ಮನೋಟ, ಶ್ರಮ, ಮತ್ತು ಕಾರ್ಯಶಕ್ತಿ ಬೇಕೆಂಬುದನ್ನು ವರ್ಣಿಸುವುದು ಅನಗತ್ಯ. ಇವುಗಳಲ್ಲಾವುದರ ಅಭಾವವೂ ನಮ್ಮ ರಾಷ್ಟ್ರದ ಅದೃಷ್ಟ ನಿರ್ಮಾಪಕ ವರ್ಗದಲ್ಲಿ ಕಂಡುಬರುತ್ತಿಲ್ಲವೆಂಬುದು ಹೆಗ್ಗಳಿಕೆಯ ವಿಷಯ. ಕೆಲಸವು ಪರಿಣಾಮಕಾರಿಯಾಗಿ ಸಾಗಿದೆ --ಜಯಶೀಲವಾಗಿ ಮುಂದೊತ್ತುತ್ತಿದೆ. ಆದರೆ ಅಷ್ಟೇ ಹರಮಾಣದಲ್ಲಿ ಜನತಾ ರಂಗದಲ್ಲಿ ಮಾತ್ರ ಪ್ರಗತಿ ಕಂಡುಬರುತ್ತಿಲ್ಲ ಎಂದು ಮತ್ತೊಮ್ಮೆ ಎಚ್ಚರಿಸಬೇಕಾಗಿದೆ. ರಾಜ್ಯಘಟನೆಯು ತಯಾರಾಯಿಂಬುದು ಕೇವಲ ಬುದ್ಧಿವಂತರ ಪಾಲಿನ ಕೆಲಸ; ಸ್ವತಂತ್ರ ಭಾರತ ರಾಜ್ಯಭಾರವೆಂಬ ಮಹಾಕಟ್ಟಡದ ಆಕಾರ, ರೂಪರೇಖೆಗಳ ನಕಾಶೆಯನ್ನವರು ಬರೆದಿಟ್ಟರೇ ಹೊರತು ಬೇರಲ್ಲ. ಅದಕ್ಕನುಸಾರವಾಗಿ ಇನ್ನು ಕಟ್ಟೋಣದ ಕೆಲಸ ಮಾಡತಕ್ಕವರು ಜನತೆಯೇ. ಜನರಲ್ಲೀಗ ಆ ಶಕ್ತಿಯೋಗ್ಯತೆಗಳು ಸಾಕಷ್ಟು ಕಂಡುಬರುತ್ತಿವೆಯೆ? ಅಲ್ಲಿ ಅಲೋಚಿಸುವವರು ನಡುನೆ ಇಂತಹ ನವಾಜೋಕೆನ ಕೆಲಸಗಳಾಗುತ್ತಾ ಬಂದಿರುವಾಗ, ಇಲ್ಲಿ ಅದನ್ನು ಕಾರ್ಯತಃ ಸಾಧಿಸುವವರು ನಡುವೆ ಅದಕ್ಕನುಗುಣವಾವುದೇನಾದರೂ ತೋರಬರುತ್ತಿದೆಯೆ? ನಿಜಕ್ಕೂ ಇಲ್ಲ. ರಾಜ್ಯಭಾರ ನಿರ್ವಹಣದ ಮೂಲ ಹೊಣೆಗಾರರಾಗುವ ಸಾರ್ವಜನಿಕರಲ್ಲಿ ಆ ಅಧಿಕಾರಕ್ಕನುಗುಣವಾದ ಯೋಗ್ಯತೆ ಮೂಡದಿದ್ದರೆಲ್ಲವೂ ಅಪೂರ್ಣ, ಎಲ್ಲವೂ ಅನಾವ್ಯಯವಾದೀತು. ಸದ್ಗುಣ ಸೂಚಕ ಹೆಸರಿರುವವರೆಲ್ಲಾ ಸುಗುಣಿಗಳಾಗಲಾರರು; ರಿಪಬ್ಲಿಕ್' 'ಪ್ರಜಾರಾಜ್ಯ'ದ ಹೆಸರನ್ನೊಂದಿಗೇನೇ ಅದರ ಎಲ್ಲಾ ಸಲ್ಲಕ್ಷಣಗಳೂ ಸೇರಿಬಂದು ತಳವೂರಿಬಿಡಲಾರವು. ಸ್ವತಂತ್ರತ್ವವನ್ನು ಸಂಪಾದಿಸಿಕೊಳ್ಳುವ ಹೋರಾಟ ಮತ್ತು ಸ್ವಾತಂತ್ರ್ಯವನ್ನು ಸಂರಕ್ಷಿಸಿಕೊಳ್ಳುವ ಹೊಣೆಗಾರಿಕೆಗಳೊಳಗೆ ವ್ಯತ್ಯಾಸವಿದೆ-- ಅದನ್ನು ಗಳಿಸಿಕೊಳ್ಳುವುದಕ್ಕಿಂತಲೂ ಉಳಿಸಿಕೊಳ್ಳುವದು ಕೆಲವಂಶ ಪ್ರಯಾಸಕರ-ಎಂಬ ಅನುಭವವು ಭಾರತೀಯರಿಗಿಷ್ಟರಲ್ಲೇ ಆಗಿದೆ. ಪ್ರೌಢ ಮತಾಧಿಕಾರವನ್ನಾ ಧರಿಸಿರುವ ಜನತಾ ರಾಜ್ಯಭಾರವನ್ನು ಸ್ಥಾಪಿಸಿಕೊಳ್ಳುವುದ ಕ್ಕಿಂತ ಅದನ್ನು ಸಾರ್ಥಕಪಡಿಸಿಕೊಳ್ಳುವುದು ಎಷ್ಟೋ ಪಾಲು ಹೆಚ್ಚಿನ ಕಷ್ಟದ್ದೆಂಬುದು ಸ್ವತಃ ಸಿದ್ಧ. ಜನತೆ ಅಜ್ಞಾನಿಗಳಾಗಿ, ಅಯೋಗ್ಯರಾಗಿ ಉಳಿದುಕೊಂಡರೆ ಜನತಾ ರಾಜ್ಯವೂ ಯಥಾಪ್ರಕಾರ ಅ

ವಿವಿಧ ವಿಷಯ

ಹಸುಗೇ ಧಾನ್ಯಗಳ ಬೆಲೆಯನ್ನು ಸಾರ್ವತ್ರಿಕವಾಗಿ 100ಕ್ಕೆ 10ರಷ್ಟು ತಗ್ಗಿಸಬೇಕೆಂದು ಹಿಂದಿನವಾರ ದಿಲ್ಲಿಯಲ್ಲಿ ಸೇರಿದ್ದ ಆಹಾರ ಮಂತ್ರಿಗಳ ಸಮ್ಮೇಳನದಲ್ಲಿ ನಿರ್ಧಾರವಾಗಿದ್ದರೂ, ಅದಕ್ಕಾಗಿ ಮದ್ರಾಸ್ ಪ್ರಾಂತ್ಯದಲ್ಲಿ ಸಾಗುವಳ್ಳೀ ಗಾರರಿಂದ ಪಡಕೊಳ್ಳುವ ಧಾನ್ಯಗಳ ಬೆಲೆಯನ್ನು ತಗ್ಗಿಸುವಂತಿಲ್ಲವೆಂದು ದಿಲ್ಲಿ ಸಮ್ಮೇಳನದಿಂದ ಮರಳಿದ ಮದ್ರಾಸಿನ ಆಹಾರ ಮಂತ್ರಿ ಎಂ. ರೋಜೆ ನಿಕ್ಕೋರಿಯಂ ಅವರು ಸ್ಪಷ್ಟ ಪಡಿಸಿದ್ದಾರೆ. "ಮದ್ರಾಸ್ ಸರಕಾರವು ಧಾನ್ಯ ಸಂಗ್ರಹದ ಮಟ್ಟಿಗೆ ಒಂದು ವಿಶಿಷ್ಟ ಧಾರಣಾ ಮಟ್ಟವನ್ನು ಅವಲಂಬಿಸಿದೆ; ಈಗ ಅದನ್ನು ಬಿಟ್ಟು ಹೆಜ್ಜೆ ಹಿಂದಿರುವುದು ನ್ಯಾಯವಲ್ಲ" ಎಂದು ಅವರಂದಿದ್ದಾರೆ. ಧಾನ್ಯಗಳ ವಿತರಣಾವೆಚ್ಚ, ನೌಕರ ವರ್ಗದ ವೆಚ್ಚ, ಇತ್ಯಾದಿಗಳಲ್ಲಿ ಕಡಿತಗಳನ್ನು ಮಾಡಿಯೇ, ಆಹಾರ ಧಾನ್ಯಗಳ ಮಾರಾಟ ಬೆಲೆಯನ್ನು ಮದ್ರಾಸ್ ಸರಕಾರವು ತಗ್ಗಿಸಲಿಕ್ಕಿದೆ. ಧಾನ್ಯಧಾರಣೆ ಸಂಬಂಧದ ಸವಿವರ ಚರ್ಚೆಗಾಗಿ ಇದೇ ತಾ 17ಕ್ಕೆ ಆಹಾರ ಶಾಖೆಯ ಕಾರ್ಯದರ್ಶಿಗಳ ಸಮ್ಮೇಳನವು ದಿಲ್ಲಿಯಲ್ಲಿ ಆರಂಭಿಸಿದೆ.

× × ×

ಗಾಂಧಿಜೀಯ ಕೊಲೆಯ ಆಪಾದಿತರಾದ ನಾಥೂರಾಮ್ ಗೋಡ್ಸೆ, ಮತ್ತು ನಾರಾಯಣ ಆಪ್ಟೆಗೆ ಘಾತಿ, ಹಾಗೂ ವಿಷ್ಣು ಕರ್. ಕರ್ಕರೆ, ಮದನಲಾಲ್ ಕೆ. ಪಾಹ್ವಾ, ಗೋಪಾಲ ಗೋಡ್ಸೆ (ಇವರಿಗೆ ದಯೆತೋರಬಹುದೆಂದು ಹೈಕೋರ್ಟಿನ ಶಿಫಾರಸಿದೆ) ಇವರಿಗೆ ಜೀವಾವಧಿ. ಸಜೆ ದ್ದರಿಂದ, ಸಾರ್ವಜನಿಕರ ಪಾಲಿನದಾಗುತ್ತಿರುವ ಹೊಣೆಗಾರಿಕೆಯೆಂತಹದು--ನವೀನ ರಾಜ್ಯಭಾರ ಪದ್ಧತಿಯ ರೂಪರೇಖೆ, ಗುರಿಧ್ಯೇಯಗಳೆ, ಹೆಜ್ಜೆಗಳಾವುವು--ಎಂಬೆಲ್ಲಾ ವಿಷಯಗಳ ಸರಿಯಾದ ಜ್ಞಾನವನ್ನು ಜನತೆಗೀಗ ಮಾಡಿಕೊಡಬೇಕು; ಹಿತಾಹಿತ, ಮೇಲುಕೀಲುಗಳನ್ನೆಂತುಕೊಳ್ಳುವ, ಸಂಗತಿ, ಸಂದರ್ಭ, ಸಂಭವಗಳ ಒಳಾರ್ಥಗಳನ್ನೂಹಿಸಬಲ್ಲ ಜ್ಞಾನ ಮತ್ತು ಯೋಗ್ಯತೆ ಮತದಾರರಲ್ಲಿ ಮೊಳೆಯುಬೇಕು;ಈ ನಿನ ನಿರೀಕ್ಷೆಯಂತೆ ಮತದಾರರ ಯೋಗ್ಯತೆಯನ್ನು ಪರೀಕ್ಷಿಸುವ ಕಾಲ ಇನ್ನು ಹೆಚ್ಚೆಂದರೆ ಹದಿನೆಂಟು ತಿಂಗಳೊಳಗೆ ಬರಲಿದೆ. ಆ ಪರೀಕ್ಷೆಗೆ ಸಂಬಂಧಪಟ್ಟ ಲಿಪಿಬದ್ಧ ಕಾರ್ಯಗಳನ್ನು ಪೂರೈಸುವುದಕ್ಕೇನೇ ಇನ್ನು ಅವಧಿ ಬೇಕಾಗಿದೆ; ಅಂದ ಮೇಲೆ ಸ್ವತಂತ್ರ ಹೊಣೆಗಾರಿಕೆಯ ಯಾವ ಶಿಕ್ಷಣವೂ ಈ ವರೆಗೆ ದೊರೆತಿರದ ಕೋಟ್ಯಾವಧಿ ಮತದಾರರನ್ನು ತರಬೇತಿಗೊಳಿಸುವದರಲ್ಲಿ ಈ ಅವಧಿಯ ಪ್ರತಿಯೊಂದು ದಿನ ಮತ್ತು ಸಂದರ್ಭವನ್ನೂ ಹೂರ್ಣೋಪಯೋಗ ಮಾಡಿಕೊಳ್ಳಬೇಕಾದುದು ಅಗತ್ಯ. ರಾಷ್ಟ್ರಹಿತ ಚಿಂತಕರೆಲ್ಲರ-- ಮುಖ್ಯವಾಗಿ ಕಾಂಗ್ರೆಸಿಗರ-- ಲಕ್ಷ್ಯವೂ ಈ ಕಡೆಗೆ ಬೀಳಲೇಬೇಕೆನ್ನುತ್ತೇನೆ.

(ಈಗ 14 ವರುಷಗಳ ಶಿಕ್ಷೆ ಮಾತ್ರ) ಎಂದಾಗಿದ್ದ ತೀರ್ಮಾನದ ವಿರುದ್ಧವಾಗಿ ಆಪಾದಿತರು ಮಾಡಿದ್ದ ಅಪ್ಪೀಲು ಅರ್ಜಿಯನ್ನು ಲಂಡನ್ನಿನ ಪ್ರಿವ್ಹಿ ಕೌನ್ಸಿಲು ಇದೇ ತಾ 12ರಂದು ತಿರಸ್ಕರಿಸಿದೆ. ಆವಾದಿತರ ವಕೀಲರ ವಾದಗಳನ್ನು 50 ಮಿನಿಟುಗಳ ವರೆಗೆ ಕೇಳಿದ ಕೌನ್ಸಿಲರರು ಸರಕಾರೀ ವಕೀಲರ ವಾದವನ್ನು ಕೇಳದೇನೇ ಆಪಾದಿತರ ಅರ್ಜಿಯನ್ನು ಡಿಸ್‌ಮಿಸ್ ಮಾಡಿದ್ದಾರೆ. ನಾತುರಾಮ ಗೋಡ್ಸೆಯು ಅದಿಯಿಂದ ಕೊನೆಯವರೆಗೂ ತಾನು ಕೊಲೆ ಮಾಡಿದ್ದನ್ನು ಒಪ್ಪಿಕೊಂಡವ. ಆದರೆ ಆ ಕೊಲೆಯಲ್ಲಿ ಬೇರೆಯವರ ಒಳಸಂಚಿರಲಿಲ್ಲವೆಂಬುದೇ ಅವನ ವಾದ ಮತ್ತು ಅಪ್ಪೀಲು.

× × ×

ಪೂರ್ವ ಪಂಜಾಬಿನ ಕಾಂಗ್ರೆಸ್ ಪ್ರಧಾನಮಂತ್ರಿ ಶ್ರೀ ಭೀಮಸೇನಸಾಚಾರ ಮೇಲೆ ವಿಶ್ವಾಸವಿಲ್ಲವೆಂದು ಹೆಚ್ಚಿನ ಕಾಂಗ್ರೆಸ್ ಸದಸ್ಯರ ಸಹಿಯೊಂದಿಗೆಸೂಚನೆ ಬಂದುದರಿಂದ ಕಾಂಗ್ರೆಸ್ ಪಾರ್ಲಿಮೆಂಟರೀ ಬೋರ್ಡು, ಶ್ರೀ. ಸಚಾರಿಗೆ ತನ್ನ ಪಕ್ಷದಿಂದ ವಿಶ್ವಾಸ ನಿರ್ಣಯ ಹೊಂದುವಂತೆ ನಿರ್ದೇಶಿಸಿದೆ. ಈ ನಡುವೆ ಶ್ರೀ. ಗೋಪೀ ಚಂದ ಭಾರ್ಗವ ಮೊದಲಾದ ತನ್ನ ಮಂಡಲಿಯ ಮೂವರು ಮಂತ್ರಿಗಳೇ ತನ್ನ ಮೇಲೆ ಸ್ಪಷ್ಟ ವಿಶ್ವಾಸದ ಸೂಚನೆ ಕೊಡದಿದ್ದುದರಿಂದ ಶ್ರೀ. ಸಚಾರಿಯು ಕೂಡಲೇ ಮಂತ್ರಿಪದಕ್ಕೆ ರಾಜೀ ಕೊಡುವಂತೆ ಅವರನ್ನು ಕೇಳಿಕೊಂಡಿದ್ದಾರೆ. ಶ್ರೀ. ಸಚಾರಿಯ ಮೇಲಿನ ಅವಿಶ್ವಾಸ ಸೂಚನೆಯ ಚರ್ಚೆಗಾಗಿ ತಾ. 17ನೇ ರಾತ್ರಿ ಪೂರ್ವ ಪಂಜಾಬ್ ಶಾಸನ ಸಭಾ ಕಾಂಗ್ರೆಸ್ ಸದಸ್ಯರ ಸಭೆ ಸೇರಿದ್ದಿತು. ಆ ಮೊದಲೇ ಸಚಾರಿಯು ರಾಜೀನಾಮೆ ಕೊಟ್ಟಿದ್ದರು. ಶ್ರೀ. ಗೋವಿಂದಾರ್ಥ ಭಾರ್ಗವರು ಸರ್ವಾನುಮತದಿಂದ ನಾಯಕರನಾಗಿ ಆರಿಸಲ್ಪಟ್ಟಿದ್ದಾರೆ.

ಸಂಯುಕ್ತ ಪ್ರಾಂತ್ಯದಲ್ಲಿರುವ ಕಾಶೀ ಸಂಸ್ಥಾನವು ಸಂಯುಕ್ತ ಪ್ರಾಂತ್ಯದೊಂದಿಗೆ ವಿಲೀನ ಹೊಂದಿದೆ. ಸಣ್ಣ ಸಂಸ್ಥಾನಗಳ ವಿಲೀನ ಸರಪಣಿಯಲ್ಲಿ ಇದು ಕೊನೆಯ ಗೊಣಸು.

೦೦ ೦೦ ೦೦

ಜಾಗತಿಕ ಸ್ಥಿತಿಗತಿಗಳೆಲ್ಲಿವೂ ಇದ್ದಂತೆ ವ. ಜೈನದಲ್ಲಿ ರಾಷ್ಟ್ರೀಯ ಸಂಸ್ಕಾರದ ರಾಜಧಾನಿ ಕೇಂಟಿನನ್ನು ಕಮ್ಯೂನಿಸ್ಟರು ಅನಾಯಾಸವಾಗಿ ವಶಪಡಿಸಿಕೊಂಡಿದ್ದಾರೆ. ಬ್ರಿಟಿಷಂಹೋಂಗ್‌ಕೋಂಗಿನ ಗಡಿಗೀಗ ಮುಟ್ಟಿದ್ದಾರೆ. ಹೋಂಗ್‌ಕೋಂಗಿನಲ್ಲಿ ಒಳಾಂದೋಲನಗಳೆದ್ದಿವೆ. ಗ್ರೀಸಿನಲ್ಲಿ ಆಂತರ್ಯುದ್ಧ ಕೊಡುತ್ತಿದ್ದ ಗೊಂಬಲ್ಲಾಗಳ ತಾತ್ಕಾಲಿಕವಾಗಿ ಶಸ್ತ್ರ ಕೆಳಗಿಟ್ಟು ಯುದ್ಧ ನಿಲ್ಲಿಸಿವೆ. ಜಾಗತಿಕ ಸಂಘರ್ಷದಲ್ಲಿ ರಷ್ಯ--ಯುಗೊಸ್ಲೇವಿಯಗಳ ಉಗ್ರ ವಿವಾದ ನಡೆದಿದೆ. ಇಷ್ಟೆಯಾ ಧಾತಿಯಿಡುವುದೇ ಬಹುಮಟ್ಟಿಗೆ ಸಂಭವನೀಯವಾಗಿ ಕಾಣುತ್ತಿದೆ.

ಅಮೆರಿಕದಲ್ಲಿ ನೆಹರು

[೫ನೇ ಪುಟದಿಂದ]

ರಿಕದ ಯಾಂತ್ರಿಕ, ಮಾರ್ಮಿಕ ಹಾಗೂ ಆರ್ಥಿಕ ಸಹಾಯಗಳ ಅವಶ್ಯಕತೆಯಿದೆ. ಆದರೆ ಅಂತಹ ಸಹಾಯಗಳನ್ನು ಪರಸ್ಪರ ಲಾಭದ ಶರತ್ತಿನ ಮೇಲೆ ಮಾತ್ರ ಭಾರತವು ಸ್ವಾಗತಿಸುತ್ತದೆ ಹೊರತು, ನಮ್ಮ ಕಷ್ಟಾರ್ಜಿತ ಸ್ವಾತಂತ್ರ್ಯದಾಯಾವುದೇ ಅಂಶವನ್ನು ಮಾರಿ ನಾವೀ ವಸ್ತುಲಾಭವನ್ನೆಂದಿಗೂ ಪಡೆಯಲಾರೆವು" "ಸ್ವಾತಂತ್ರ್ಯಕ್ಕೆ ಕಂಟಕವೊದಗಿದಾಗ, ಅಥವಾ ನ್ಯಾಯಕ್ಕೆ ಅಪಾಯ ಭೀತಿ ಬಡಿದಾಗ, ಇಲ್ಲವೇ ಆಕ್ರಮಣವಾರಂಭಿಸಿದಾಗ ಭಾರತವು ತಾಟಸ್ಥ್ಯ ವಹಿಸಲಾಗುವಂತಿಲ್ಲ– ವಹಿಸುವಂತಿಲ್ಲ" "ಗಾಂಧಿಜೀ ನಮಗೆ ಕಲಿಸಿ ಕೊಟ್ಟ ಶಾಂತ ವರ್ತನಾ ವಿಧಾನಗಳು ಒಳ್ಳೇ ಪರಿಣಾಮಕಾರಿಯಿದ್ದು, ನಾವು ಸ್ವಾತಂತ್ರ್ಯವನ್ನು ದೊರಕಿಸಿಕೊಳ್ಳುವಂತೆ ಮಾಡಿದುದಷ್ಟೇ ಅಲ್ಲ, ನಿನ್ನೆಯ ವರೆಗೆ ನಾವು ಜಗಳ ಕೊಂಡಿದ್ದವರೊಡನೆ ಮೈತ್ರಿ ಸಂಪಾದಿಸಿಕೊಳ್ಳುವಂತೆಯೂ ಮಾಡಿವೆ" ಎಂಬಂತಹ ಬಿಚ್ಚು ಹೃದಯದ ಮಾತುಗಳು ಪಂಡಿತ ಜೀಯ ಬಾಯಿಯಿಂದ ಬಂದಾಗಲೆಲ್ಲಾ ಸಭೆಯು ಬಲವಾಗಿ ಕರತಾಡನ ಮಾಡುತ್ತಿತ್ತು. ಅಂತೆಯೇ ನೆಹರೂ ಸಭೆಗೆ ಪಂಡಿತಜೀ ಪ್ರವೇಶಿಸುವಾಗ ಆ ಮಹಾ ಹೋಟೆಗಾರ ಸಭೆಯು ಎದ್ದು ನಿಂತು ಕೈಚಪ್ಪಾಳೆಯೊಡನೆ ಬರಮಾಡಿಕೊಂಡಿತು. ನೆಹರೂ ಮೂರ್ತಿಯನ್ನು ಕಂಡ– ಅವರ ಚಲನವಲನಗಳನ್ನು ನೋಡಿ ಪ್ರೇಸಿದ– ಜವರ ಮಾತುಗಳನ್ನು ಆಲಿಸಿದ– ಅಮೆರಿಕಾನರೆಲ್ಲರ ಹೃದಯದಲ್ಲೂ ಪಂಡಿತಜೀ ಒಂದು ಉನ್ನತ ಸ್ಥಾನ ಗಳಿಸಿಕೊಂಡರು. ಆ ಮೇಲೆ ವಾಷಿಂಗ್ಟನಿನ 'ರಾಷ್ಟ್ರೀಯ ಕಲಾ ಗೆಲರಿ'ಯಂತಹ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತರು. ತಾ. 14ರಲ್ಲಿ ವಾಷಿಂಗ್ಟನಿನಲ್ಲಿರುವ ರಾಷ್ಟ್ರೀಯ 'ಪ್ರೆಸ್ ಕ್ಲಬ್'ನ ಔತಣ ಸತ್ಕಾರ ಪಡೆದು 450 ಕ್ಕೂ ಮಿಕ್ಕಿದ ಅಮೆರಿಕನ್ ಪತ್ರಿಕೋದ್ಯಮಿಗಳ ಸಭೆಯಲ್ಲಿ ಪೂರ್ವ ತಯಾರಿಯಿಲ್ಲದೇನೇ ಮಾತಾಡಿ, ಭಾರತದ ಸ್ಥಾನ ಮಾನ ಮತ್ತು ಧ್ಯೇಯ ಧೋರಣೆಗಳನ್ನು ವಿವರಿಸಿ ಅವೂಘೆ ಭಾಷಣವಿತ್ತರು ಈ ಕ್ಲಬ್ಬಿನಲ್ಲಿ ಹಿಂದೊಮ್ಮೆ ಚರ್ಚಿಲ್ಲರಭಾಷಣ ಕೇಳಲು ಇಷ್ಟುಮಂದಿ ಕೂಡಿದ್ದಿದೆ.ಆ ಮೇಲೆತ್ತಲಬ್ಬನ ಚರ್ಚೆಯಲ್ಲಿ ನೆಹರೂ ಮಾತುಗಳನ್ನು ಕೇಳುವುದಕ್ಕಲ್ಲದೆ ಬೇರೆಯಾದೂ ಇಷ್ಟು ಜನ ಸೇರಿದ್ದಿಲ್ಲ. ತಾ.14ರಲ್ಲಿಭಾರತರಾಯಭಾರಿಕಚೇರಿಯಲ್ಲಿ ಔತಣ ಸತ್ಕಾರ ನಡೆದಿತ್ತು. ಟ್ರುಮೇನ್ ದಂಪತಿಗಳು ಅಹ್ವಾನಿತರಾಗಿ ಅಲ್ಲಿ ಹಾಜರಿದ್ದರು. ಹಳೇ ಸ್ನೇಹಿತರಿಂಬಂತೆ ಅತಿ ಸಲುಗೆಯಿಂದ ನೆಹರು– ಟ್ರುಮೇನರು ಅಲ್ಲಿ ವರ್ತಿಸಿದ್ದರು. ನೆಹರುಗಳೊಂದಿಗೆ ಮಾತಾಡುತ್ತಾ ಒಂದೂವರೆ ತಾಸಿಗೂ ಮಿಕ್ಕಿ ಅಲ್ಲಿದ್ದ ಟ್ರುಮೇನರು ಭೋಜನ ಸತ್ಕಾರ ಸಮಾರಂಭದಲ್ಲೂ ಅಷ್ಟು ಹೊತ್ತು ಆ ವರೆಗೆ ನಿಂತಿದಿಲ್ಲ ಅಮೇರಿಕದ 12500 ಮಂದಿ 'ಕ್ವೇಕರ್'ರ ಪ್ರತಿನಿಧಿ ಸಂಸ್ಥೆ 'ಮಿತ್ರ ಸೇವಾ ಸಮಿತಿ'ಯವರು ಸೌಹಾರ್ದ್ಯ ಮತ್ತು ಪಾಶ್ಚಾತ್ಯ ರಾಷ್ಟ್ರಗಳೊಳಗೆ ಏರ್ಪಡಿತ ನೆಹರುಗಳು ಸೌಹರ್ದತೆ ನಿರ್ಮಿಸಬೇಕೆಂದು ವ್ಯಾಖ್ಯಿಸಿಕೊಂಡಿದ್ದರು.

ನ್ಯೂಯೋರ್ಕಿಗೆ—

ಅಮೆರಿಕದ ರಾಜಧಾನಿ ವಾಷಿಂಗ್ಟನಿನಲ್ಲಿ ನಾಲ್ಕು ದಿನಗಳ ಚಿರಸ್ಮರ್ಹ ಕಾರ್ಯಕ್ರಮಗಳನ್ನು ಜರಗಿಸಿ, ತಾ. 15 ನೇ ಮುಂಜಾನೆ ಪಂಡಿತ ನೆಹರು ಅಲ್ಲಿಂದ ಅಮೆರಿಕದ ಅಗ್ರಗಣ್ಯ ನಗರ ನ್ಯೂಯೋರ್ಕಿಗೆ ಪ್ರಯಾಣ ಬೆಳೆಸಿದರು. ಭಾರತ ಪ್ರಧಾನಿಯನ್ನು ಬೀಳ್ಕೊಡಲು ಅಧ್ಯಕ್ಷ ಟ್ರುಮೇನರು ತನ್ನ ಅಧಿಕಾರಿ ಮಂಡಲಿಯೊಂದಿಗೆ ಬಂದಿದ್ದರು. ನ್ಯೂಯೋರ್ಕಿನ ನಿಲ್ದಾಣದಲ್ಲಿ ಅಲ್ಲಿಯ ಪ್ರಮುಖಾಧಿಕಾರಿಗಳೂ ಭಾರತೀಯ ಸ್ತ್ರೀಪುರುಷರೂ ಅತ್ಯುತ್ಸಾಹದಿಂದ ನೆರೆದಿದ್ದರು. ಅಲ್ಲಿಯೂ ಸೇನೆಗಳ ಗೌರವ ವಂದನೆ, ಸೇನಾ ಬೇಂಡಿನ 'ಜನಗಣಮನ'ಗಳಿದ್ದುವು. ಅಲ್ಲಿಂದ ಲೋಕ ಪ್ರಮುಖ್ಯ ನಗರ ನ್ಯೂಯೋರ್ಕಿನ ಆರು ದಿನಗಳ ಕಾರ್ಯಕ್ರಮ ಆರಂಭ. ಬಂದ ತಾಸು ಹೊತ್ತಿನಲ್ಲೇ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗುತ್ತರ ಕೊಟ್ಟರು. ಅಮೆರಿಕನರ ಪಾಲಿನ ಆಕರ್ಷಣದ ಸವಾಲುಗಳು ಕೇಳಲ್ಪಟ್ಟದ್ದುವು. "ರಶ್ಯದೊಡನೀಗ ನಡೆಯುತ್ತಿರುವ ಥಂಡಾ ಯುದ್ಧದಲ್ಲಿ ನೀವು ಭಾರತವನ್ನು ವಾಶಿಂಗ್ಟನ್ನಿನ ರಾಷ್ಟ್ರಗಳ ಪಂಗ್ತಿಯಲ್ಲಿ ನಿಲ್ಲಿಸುವ ವಿಶೇಷ ನಿರ್ಧಾರವನ್ನೇನಾದರೂ ವಾಷಿಂಗ್ಟನಿನಲ್ಲಿ ಸೂಚಿಸಿದುದಿದೆಯೇ?" ಎಂಬ ಪ್ರಶ್ನೆ ಬಂತು. "ಯಾವುದೇ ಹೊತ್ತಿನಲ್ಲಿ ಯಾರೊಬ್ಬರೊಂದಿಗೂ ಗಂಟು ಹಾಕಿ ಕೊಂಡು ನಿಲ್ಲುವ ಇಚ್ಛೆಯೇ ನಮಗಿಲ್ಲ" ಎನ್ನುತ್ತಾ ಪಂಡಿತಜೀ ಕೂಡಲೇ "ಈ ಪ್ರಶ್ನೆಗೆ ಎಡೆಯೇ ಇಲ್ಲ" ಎಂದರು. "ಭಾರತದ ಉತ್ತರ ಗಡಿಗೆ ರಶ್ಯದಿಂದೇನಾದರೂ ಅಪಾಯವಿದೆಯೆ?" ಎಂಬ ಸವಾಲು ಬಂದಾಗ "ಇಲ್ಲ; ನನಗೆ ಹಾಗನ್ನಿಸುವದಿಲ್ಲ" ಎಂದರು. "ರಶ್ಯವು ಆಟಂ ಬೋಂಬನ್ನು ಶೋಧಿಸಿದ್ದರಿಂದ ಭಾರತೀಯರು ಗಲಿಬಿಲಿಗೊಂಡಿದ್ದಾರೆಯೇ?" ಎಂದು ಕೇಳಲ್ಪಟ್ಟಾಗ "ಅವರೇನು ಅಮ್ಮಿಂದು ಗೊಂದಲಗೊಂಡಿರುವಂತೆ ನನಗನ್ನಿಸುವದಿಲ್ಲ" ಎಂದರು.

ಆ ಮೇಲೆ ಅವರ ನಿವಾಸ 'ಭಾರತ ಭವನ'ದಲ್ಲಿ ನ್ಯೂಯೋರ್ಕಿನ ಭಾರತೀಯರ ಮಾನಪತ್ರ ಸ್ವೀಕರಿಸಿ, ಹಿಂದಿಯಲ್ಲಿ ಭಾಷಣವಿತ್ತು ಹರ್ಷ ಮುಕಳವನ್ನು ಉಂಟುಮಾಡಿದರು. ಸ್ವತಂತ್ರ ಭಾರತದ ಗುಣಯೋಗ್ಯತೆಗಳನ್ನು ಮಂಡಿಟ್ಟು ಪಡಿಸಿ ಪ್ರಶ್ನೆಗಳಿಗುತ್ತರವಿತ್ತರು. ತಾ. 16ನೇ ಮುಂಜಾನೆ ಯುದ್ಧಾಲಕ ಅಮೆರಿಕಾಧ್ಯಕ್ಷ ದಿವಂಗತ ರುಸುವೆಲ್ಟರ ಗೋರಿ, ಮತ್ತು ಅಮೆರಿಕನ್ ದೇವಾಲಯದಂತಾಗಿರುವ ಅವರ ಸ್ವಂತ ಮನೆಯನ್ನು ಸಂದರ್ಶಿಸಲು ನ್ಯೂಯೋರ್ಕಿನಿಂದ 90 ಮೈಲು ದೂರದ ಹೈದ್ ಪಾರ್ಕಿಗೆ ರುಸುವೆಲ್ಟ್ ವಿಧವೆ ಮತ್ತು ತನ್ನ ತಂಗಿ ಪುತ್ರಿಯರೊಂದಿಗೆ ಹೋಗಿ ರುಸುವೆಲ್ಟ್ ಗೋರಿಗೆ ಶಾಲಾ ಸಮರ್ಪಣೆಮಾಡಿ, ಶ್ಲಾಘನೆ ಸಲ್ಲಿಸಿದರು. ಆ ಮೇಲೆ ಶ್ರೀಮತಿ ರುಸುವೆಲ್ಟರ ಔತಣ ಸತ್ಕಾರ ನಡೆಯಿತು. ನ್ಯೂಯೋರ್ಕಿನಲ್ಲಿ ಆರು ದಿನಗಳ ವರೆಗೆ ಪಂಡಿತಜೀಯನ್ನು ವಿವಿಧ ಕಾರ್ಯಕ್ರಮಗಳು ಕಾದಿವೆ. ಯುದ್ಧಾವಧಿಯ ವಿಶೇಷ ಸ್ಫೂರ್ತಿಯ ದಿನಗಳಲ್ಲಿ ಒಮ್ಮೆ ಭೇಟಿಯಿತ್ತಿದ್ದ ಚರ್ಚಿಲ್ಲರಿಗಲ್ಲದೆ, ಆ ಮೇಲೆ ಬೇರಾವ ವಿದೇಶೀ ಮುಖ್ಯಸ್ಥರಿಗೂ ಇಂತಹ ಪ್ರಾಮುಖ್ಯತೆಯನ್ನು ಅಮೆರಿಕಾನರು ಕೊಟ್ಟುದಿಲ್ಲ. ಪ್ರಥಮ ಪರಿಚಯದ ಕೆಲನೇ ದಿನಗಳಲ್ಲಿ ಪಂಡಿತ ನೆಹರು ಅಮೆರಿಕನರ ಅತಿಶಿಷ್ಟ ಗೌರವವನ್ನು ಮಾತ್ರವಲ್ಲ– ಆಕ್ಷೀಯತೆಯನ್ನೂ ಗಳಿಸಿಕೊಂಡಿದ್ದಾರೆ.

ತಾ. 24–10–49ಕ್ಕೆ ನಡೆಯಲಿರುವ ಜಿಲ್ಲಾ ಬೋರ್ಡು ಅಧ್ಯಕ್ಷ ಸ್ಥಾನದ ಉಮೇದ್ವಾರಿ

ಶ್ರೀ. ಬಿ. ಮಂಜಯ ಹೆಗ್ಡೆ, ಎಡ್ವೋಕೇಟ್.

ಘನವಂತ ಕುಟುಂಬದಲ್ಲಿ ಜನಿಸಿ, ಉಜ್ವಲ ಶಿಕ್ಷಣವನ್ನು ಪಡೆದ ಶ್ರೀ ಬಿ. ಮಂಜಯ ಸನ್ 1930ನೇ ಅಗೋಸ್ತಿನಲ್ಲಿ ಎಡ್ವೋಕೇಟ್ ಆಗಿ ಮಂಗಳೂರಿನಲ್ಲಿ ತನ್ನ ಉದ್ಯೋಗವನ್ನಾರಂಭಿಸಿದ್ದರು. ಅಂದಿನಿಂದೀವರೆಗೆ ಸರಳಶಾಂತ ಸೇವಾಬುದ್ಧಿ, ಕಾರ್ಯಪಟುತ್ವ ಮತ್ತು ವಿಶ್ವಾಸಾರ್ಹ ಗುಣಗಳಿಂದ ವಿವಿಧ ಕಾರ್ಯಂಗಗಳಲ್ಲಿ ದುಡಿದು ಜನರ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. 1931ರಲ್ಲಿ ವಿಜಯಬೀಂಕಿನ ಪ್ರಥಮ ಡೈರೆಕ್ಟರರಲ್ಲೊಬ್ಬರಾಗಿ ಆರಿಸಲ್ಪಟ್ಟಿದ್ದರು. ಆ ಮೇಲೆ ಮಾನ್ಯ ಶ್ರೀ. ಎ. ಬಿ. ಶೆಟ್ಟರಿಂದ ತೆರವಾದ, ವಿಜಯಾ ಬೀಂಕಿನ ಡೈರೆಕ್ಟರ್ ಮಂಡಲಿಯ ಅಧ್ಯಕ್ಷಸ್ಥಾನಕ್ಕೇರಿದರು. ಅಂದಿನಿಂದೀವರೆಗೂ ಆ ಹೊಣೆಯನ್ನು ಸಮರ್ಥರೀತಿಯಿಂದ ನಿರ್ವಹಿಸುತ್ತಿದ್ದಾರೆ. ಶ್ರೀಮಾನ್ ಹೆಗ್ಡೆಯವರು 1935ರಲ್ಲಿ ಕೋಟ ಸಕ್ಕರೆ ಲಿನಿಂದ ಜಿಲ್ಲಾ ಬೋರ್ಡಿಗಾರಿಸಲ್ಪಟ್ಟು, 1936ರಲ್ಲಿ ಜಿಲ್ಲಾ ಬೋರ್ಡಿನಿಂದ 'ಜಿಲ್ಲಾ ಎಜ್ಯುಕೇರನಲ್ ಕಾನ್ಸಿಲಿ'ಗಾರಿಸಲ್ಪಟ್ಟು ದುಡಿದಿದ್ದರು. ಮಂಗಳೂರು ಕೋಪರೇಟಿವ್ ಸ್ಟೋರ್ಸಿನ ಪ್ರಥಮ ಡೈರೆಕ್ಟರರಲ್ಲೊಬ್ಬರಾಗಿದ್ದು, ದ. ಕ. ಜಿಲ್ಲಾ ಹೋಲ್‌ಸೇಲ್ ಸ್ಟೋರ್ಸಿನ ವೈಸ್ ಡೈರೆಕ್ಟರರಾಗಿ ನೇಮಕಗೊಂಡವರು. ಮಂಗಳೂರು ಕೋಪರೇಟಿವ್ ಬಿಲ್ಡಿಂಗ್ ಸೊಸೈಟಿಯ ಪ್ರಥಮ ಡೈರೆಕ್ಟರರಲ್ಲೊಬ್ಬರು. ಅಂತೆಯೇ ಇತರ ಕೆಲವು ಜಾಯಿಂಟ್ ಸ್ಟೋರ್ಕ್ ಕಂಪೆನಿಗಳ ಡೈರೆಕ್ಟರರಾಗಿಯೂ ಇದ್ದಾರೆ. ಮಂಗಳೂರಿನ 'ಪ್ರಜ್ಞಾನಂದ ಸೇವಾ ಆಶ್ರಮ'ದ ಉಪಾಧ್ಯಕ್ಷರಿವರು. 20 ವರುಷಗಳ ಎಡ್ವೋಕೇಟ್ ವೃತ್ತಿಯ ಜತೆಯಲ್ಲಿ, ಜಿಲ್ಲೆಯ ಜನಹಿತಕಾರಿ ಹಾಗೂ ಜನಪ್ರತಿನಿಧಿ ಸಂಸ್ಥೆಗಳ ಸಾರ್ವಜನಿಕ ಹೊಣೆಗಾರ ಸ್ಥಾನಗಳನ್ನೂ ನಿರ್ವಹಿಸಿ ಪರಿಪಕ್ವ ಅನುಭವವುಳ್ಳ ಶ್ರೀ. ಬಿ. ಮಂಜಯ ಹೆಗ್ಡೆಯವರ ಸ್ಪಷ್ಟ ಪ್ರಾಮಾಣಿಕತೆ, ನಿಷ್ಪಕ್ಷಪಾತ ನ್ಯಾಯನಿಷ್ಠೆ ಮತ್ತು ಸೌಜನ್ಯತೆಯು ಸರ್ವರ ಮೆಚ್ಚುಗೆಗೂ ವಿಶ್ವಾಸಕ್ಕೂ ಪಾತ್ರವಾಗಿವೆ. ಜಲ್ಲೆಯು ತನ್ನ ಜವಾಬ್ದಾರೀ ಸೂತ್ರವನ್ನು ಭರವಸೆಯಿಂದ ಒಪ್ಪಿಸಿಕೊಡಲರ್ಹವಾದ ಭದ್ರ ಹಸ್ತವಿದು.

ಪ್ರಧಾನ ಮಂತ್ರಿ ಮತ್ತು ಕೃಷಿ ಮಂತ್ರಿಗಳ ಜಿಲ್ಲಾ ಪ್ರವಾಸ.ಪ್ರಧಾನ ಮಂತ್ರಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ ಮತ್ತು ಕೃಷಿಮಂತ್ರಿ ಶ್ರೀ ಎ. ಜಿ. ಶೆಟ್ಟರು ತಾ 20ನೆ ಸಂಜೆ ಮಂಗಳೂರಿಗೆ ಬಂದು ಮರುದಿನ ಬೆಳಿಗ್ಗೆ ಮುಂಜೇಶ್ವರಕ್ಕೆ ಹೋಗಿ ಬಂದು ತಾ 22ಲ್ಲು ಮಂಗಳೂರಲ್ಲಿ ಉಳಿದುಕೊಳ್ಳುವರು. ತಾ 23ನೆ ಬೆಳಿಗ್ಗೆ ಸುಬ್ರಹ್ಮಣ್ಯಕ್ಕೆ ಹೋಗಿ ಬಂದು ಸಂಜೆ ಮೂಡಬಿದಿರೆಗಾಗಿ ಕಾರ್ಕಳಕ್ಕೆ ಬಂದು ಉಳಿದುಕೊಳ್ಳುವರು. ತಾ 24ರಲ್ಲು ಬೆಳಿಗ್ಗೆ ಹೆದ್ರಿಗೆ ಹೋಗಿ ಸಾಯಂಕಾಲ ಕುಂದಾಪುರಕ್ಕೆ ತೆರಳಿ ರಾತ್ರಿ ಅಲ್ಲಿ ವಾಸ್ತವ್ಯ ಮಾಡುವರು. ತಾ 25ರಲ್ಲು ಬೆಳಿಗ್ಗೆ 11 ಗಂಟೆಗೆ ಉಡುಪಿಗೆ ಬಂದು 3½ ಗಂಟೆಗೆ ಹೊರಟು ಸಂಜೆ ಮೂಲ್ಕಿ ಮೂಲಕವಾಗಿ ಮಂಗಳೂರಿಗೆ ತೆರಳುವರು. ತಾ 26ರಲ್ಲು ಬೆಳಿಗ್ಗೆ ಉಪ್ಪಿನಂಗಡಿಗಾಗಿ ಕ್ಯೂಲಕ್ಕೆ ತೆರಳಿ ಧರ್ಮಸ್ಥಳಕ್ಕೆ ಬಂದು ಉಜ್ರೆ ಕಾರ್ಯಕ್ರಮ ಮುಗಿಸಿ ಮಂಗಳೂರಿಗೆ ಬರುವರು. ತಾ 27ನೆ ಬೆಳಿಗ್ಗೆ ಕುಂಬಳೆಗೆ ಹೋಗಿ ಮಂಗಳೂರಿಗೆ ಮರಳಿ ಬರುವರು.

ಈಗತಾನೆ ಪ್ರಕಟವಾಗಿದೆ

ಕುಲವಿಲ್ಲದ ಹೆಣ್ಣು

ಸರಸ ಸಾಮಾಜಿಕ ಕಾದಂಬರಿ

ಬೆಲೆ ರೂ. 1–0–0

ವಿಳಾಸ:—

ಅಂತರಂಗ ಕಾರ್ಯಾಲಯ, ಉಡುಪಿ

ಅಥವಾ ನವಭಾರತ ಬುಕ್ ಡಿಪೊ, ಉಡುಪಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಸಿ.

ತಾರೀಕು–20-10-49 ರಿಂದ

ದೀಪಾವಳಿಯಸಲುವಾಗಿ

ಮೋಡರ್ನ್ ಥಿಯೇಟರ್ಸ್‌ರವರ

ಆದಿತ್ಯನ ಕನಸು

(ತಮಿಳು)-ಪಾತ್ರವರ್ಗ: ಟಿ. ಆರ್. ಮಹಲಿಂಗಂ, ಅಂಜಲೀದೇವಿ, ಸರಸ್ವತಿ, ಚಕ್ರಪಾಣಿ,

ಚಂದಾವಾರರಲ್ಲಿ

ಇನ್ನೂ ತಮ್ಮ ಚಂದಾ ಹಣವನ್ನು ಕಳುಹಿಸಿ ಕೊಡದವರು ದಯವಿಟ್ಟು ಆದಷ್ಟು ತ್ವರ್ಯೆ ಕಳಿಸಿಕೊಡುವಂತೆಯೂ ಪತ್ರಿಕೆ ಬೇಡವಾದವರು ಹಾಗೆಯೇ ತಿಳಿಸುವಂತೆಯೂ ವಿನಂತಿಸುತ್ತೇವೆ

—ಮೆನೇಜರ.

ಉಡುಪಿ

ಮುಖ್ಯ ಮಂತ್ರಿಗಳಿಗೆ ಮಾನಪತ್ರ

ಇದೇ ತಾ 25ಕ್ಕೆ ಉಡುಪಿಗೆ ಆಗಮಿಸಲಿರುವ ಮದ್ರಾಸು ಸರಕಾರದ ಮುಖ್ಯ ಮಂತ್ರಿ ಮಾನ್ಯ ಶ್ರೀ ಕುಮಾರಸ್ವಾಮಿ ರಾಜಾರವರಿಗೆ ಮಾನಪತ್ರವೊಂದನ್ನು ಕೊಡಬೇಕೆನ್ನುವ ನಿರ್ಣಯವು ಇದೇ ತಾ 15ರಲ್ಲಿ ಕೂಡಿದ ಮುನ್ಸಿಪಲ್ ಕೌನ್ಸಿಲು ಮೀಟಿಂಗಿನಲ್ಲಿ ಪಾಸಾಯಿತು. ಜೆಯರ್‌ಮೇನ್ ಶ್ರೀ ಉಸೇಂ ಪ್ರಸಾಯ್ಯರು ಅಧ್ಯಕ್ಷತೆ ವಹಿಸಿದ್ದರು.

ಶಾಲಾ ಕಟ್ಟಡ ಸಮಿತಿ ಸಭೆ— ಮುನಿಸಿಪಲ್ ಸೌತ್ ಗರ್ಲ್ಸ್ ಹಾಗು ಎ ಶಾಲಾ ಕಟ್ಟಡ ನಿರ್ಮಾಣ ಸಮಿತಿಯ ಸಭೆಯು ತಾ 17ರಲ್ಲು ಸಂಜೆ ಮುನಿಸಿಪಲ್ ಆಫೀಸಿನಲ್ಲಿ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಸ್ಟಾನು, ಎಸ್ಟಿಮೇಟುಗಳ ಪರಿಶೀಲನೆಯಾಗಿ ಕಟ್ಟಡ ಕೆಲಸವನ್ನು ಪ್ರಾರಂಭಿಸಿ ಪೂರ್ಣಗೊಳಿಸುವರೆ ಶ್ರೀಗಳು ಎ

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 335/1949

ವಾದಿ: ನಾರಾಯಣ ಉಪಾಧ್ಯ.

ಪ್ರತಿವಾದಿ. ರಾಮಚಂದ್ರ ಅತಾಳ.

ಉಡ್ತಿತಾಲ್ಲು ಕೋಟ್ತಟ್ಟು ಗ್ರಾಮದ ಪಂಚಟ್ಟಿನಲ್ಲಿರುವ ಹಂದಟ್ಟು ನರಸಿಂಹ ಅತಾಳರ ಮಗ ರಾಮಚಂದ್ರ ಅತಾಳರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.

ಪ್ರತಿವಾದಿಯು ವಾದಿಗೆ ತಾ. 2-5-46ರಲ್ಲು ರೂ. 100ಕ್ಕೆ ಬರಕೊಟ್ಟ ದಿನಾಂಕು ನೋಟಿನ ಋಣ ಬಡ್ತಿ ಕೂಡಾ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿಯ ಮೇಲೆ ದಾಖಲುಮಾಡಿದ ಮೇಲಿನ ಪ್ರಾನಿಯು ತಾ. 26.10-1949ಕ್ಕೆ ಮೇಲಿನ ಕೋರ್ಟಿನಲ್ಲಿ ತಿಸ್ಕಿಗೆ ಇಟ್ಟರುತ್ತದೆ. ಆ ಕುರಿತು ವಿನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಗಲು 11ಗಂಟೆಗೆ ಹಾಜ್ರಾಗಿ ಜ್ಞಾಪೀರುವಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah

Advocate for Plff.

Date 9-10-49
Coondapoor

ವಿವಿಧ ಪಾತ್ರೆಗಳು

ಯಾವತ್ತೂ ವಿಧವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿ ಯಾಗಿ ಯೂಚೆಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಮ್. ವಿಠಲಕಾಮತ್, ಎ. ಬಿ. ಕೃಷ್ಣರಾಜ, ವಾಸುದೇವ ನಾಯಕರಿರುವ ಉಪಸಮಿತಿಯ ನೇಮಕವಾಯಿತು. ಬರುವ ಫೆಬ್ರವರಿ ತಿಂಗಳೊಳಗಾಗಿ ಕಟ್ಟಡವು ಪೂರ್ಣವಾಗುವಂತೆ ಮಹಾಜನರು ಸಹಕರಿಸಬೇಕಾಗಿ ವಿನಂತಿಸಾಡಲಾಯಿತು.

ರಾಷ್ಟ್ರಭಾಷಾ ಸಮಿತಿಯ ಆಶ್ರಯುದಲ್ಲಿ ಪ್ರತಿ ತಿಂಗಳ 2ನೇ ಮತ್ತು 4ನೆ ಆದಿತ್ಯವಾದಗಳಲ್ಲಿ ಸಂಜೆ 4-30ಕ್ಕೆ ಕನ್ನಡ ಮತ್ತು ಹಿಂದೀ ಭಾಷಾ ಸಾಹಿತ್ಯದ ಕುರಿತು ಸಭೆಗಳು ಜರಗಿಸಲ್ಪಡುವವು. ತಾ 23-10-49ರಲ್ಲಿ ಸರಸ್ವತೀ ಬಾಲಿಕಾ ಪಾಠಶಾಲೆಯಲ್ಲಿ ಜರಗಲಿರುವ ಸಭೆಯಲ್ಲಿ ಸಾಡನ, ಸಂಗೀತ, ಭಾಷಣಾದಿ ಕಾರ್ಯಕ್ರಮಗಳಿದ್ದು ಸರ್ವರಿಗೂ ಸ್ವಾಗತವಿದೆ.

ಹೆತ್ತವರೆ ಸಂಘಸ್ಥಾಪನೆ ಉಡುಪಿ

ಬೋರ್ಡ್ ಹೈಸ್ಕೂಲಿನ ನೀಪಲ್ಸ್ ಹಾಗೂ ಲ್ಲಿ ಇದೇ ತಾ 18ರಲ್ಲು ಸಂಜೆ ಡಾ। ಮಾಧವ ಪೈಗಳವರ ಅಧ್ಯಕ್ಷತೆಯಲ್ಲಿ ಹೆತ್ತವರ ಸಭೆಯೊಂದು ಜರಗಿ ಶಾಲೆ ಮತ್ತು ಹೆತ್ತವರೊಳಗೆ ಪರಸ್ಪರ ಸಹಕಾರ ಮತ್ತು ಸೌಹಾರ್ದ ಬೆಳೆಯುವಂತೆ ಹೆತ್ತವರ ಸಂಘವೊಂದು ಸ್ಥಾಪಿಸಲ್ಪಟ್ಟಿತು. ತತ್ಕೂರ್ವದಲ್ಲಿ ಹೆಡ್ಮಾಸ್ಟರ್ ಶ್ರೀ ಕೆ. ಸಂಜೀವಸೆಟ್ಟಿ, ಶಾಲಾ ಇನ್ಸ್‌ಪೆಕ್ಟರ್ ಶ್ರೀ ಸುಂದರರಾವ್, ಪಂಡಿತ ಕಂಪ್ಪಣ್ಣಾಚಾರ್ ಮೊದಲಾದವರು ಭಾಷಣಮಿತ್ತರು. ಶ್ರೀ ಕೆ. ವಿಠಲ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಹಿರಿಯಡ್ಕ— ಇಲ್ಲಿಯ ಬೋರ್ಡು ಹಾ। ಎ। ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಮಂಜಯ್ಯ ಶೆಟ್ಟಿರಿಗೆ ಕುಂದಾಪುರ ಪಡುಕೋಣೆ ಬೋರ್ಡು ಹಾ। ಎ। ಶಾಲೆಗೆ ವರ್ಗವಾದುದರಿಂದ ಅವರನ್ನು ಬೀಳ್ಕೊಡುವ ಸತ್ಕಾರಕೂಟವೊಂದು ಇದೇ ತಾ. 14ರಲ್ಲು ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವಿಜ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ. ಬಿ. ಗಣೇಶರಾಯರ ವಿವಾಹವು ಶ್ರೀಮತಿ ಸುಲಕ್ಷಣೀ ಬಾಯಿಯೊಂದಿಗೆ ಇದೇ ತಾ. 12-10-49ರಲ್ಲಿ ಹಿರಿಯಡ್ಕದಲ್ಲಿ ವಿಜೃಂಭಣೆಯಿಂದ ಜರಗಿತು.

ಬೆಳ್ಳಾರೆ— ಇದೇ ತಾ.22ನೆ ಶನಿವಾರ ರಾತ್ರಿ 9-30ಕ್ಕೆ ಬೆಳ್ಳಾರೆ ಶಾಲಾ ಜಳಿ ವಿದ್ಯಾರ್ಥಿ ಸಂಘದವರಿಂದ ಶ್ರೀಕೆ.ವಿ.ಪುಟ್ಟಪ್ಪನವರ 'ರಕ್ತಾಕ್ಷಿ'ನಾಟಿಕವು ಅಭಿನಯಿಸಲ್ಪಡುವುದು.

ಧಾರವಾಡ— ಇದೇ ದಿವಾಳಿಯಲ್ಲಿರುವ ಪಾಡ್ಯಕ್ಕೆ ಧಾರವಾಡದಿಂದ ಶ್ರೀ ಮಳಿಯ ಗೋವರ್ಧನ ರಾಯರ ಸಂಪಾದಕತ್ವದಲ್ಲಿ "ನಿರೀಕ್ಷಕ" ಎಂಬ ಕನ್ನಡ ವಾರಪತ್ರಿಕೆಯು ಹೊರಡುವುದು.

ದ. ಕ ಲೋಕಸೇವಾ ಸಂಘದ ಉದ್ಘಾಟನೆಯು ತಾ. 16-10-49 ರಲ್ಲಿ ಮಂಗಳೂರು ಸೆಂಟ್ರಲ್ ಕೋ-ಓಪರೇಟಿವ್ ಬೇಂಕಿನ ವರಾಂಡದಲ್ಲಿ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ನೈವಸ್ಥಾಪಕರಾದ ಶ್ರೀ ಹಿರಿಯಡ್ಕ ರಾಮರಾಯ ಮಲ್ಯರು ಸಂಘದ ಧ್ಯೇಯ,ಧೋರಣೆ, ಮತ್ತು ಕಾರ್ಯಕ್ರಮಗಳನ್ನು ವಿವರಿಸಿದರು. ಶ್ರೀ ಬಿ. ಅಚ್ಚುತ ಬಾಳಿಗರು ಸಂಘದ ಉದ್ಘಾಟನೆ ಮಾಡಿದರು. ಶ್ರೀ ಹಿ. ನಾರಾಯಣರಾಯರು ಶಾಲೆಯ ಮಹತ್ವವನ್ನು ವಿವರಿಸಿದರು. ಅಧ್ಯಕ್ಷ ಭಾಷಣವಾದ ನಂತರ ಸಂಘದ ನಿಯಮಾವಾದಿಗಳ ಕುರಿತು ಚರ್ಚೆ ನಡೆಯಿತು.

ಕೋಟೇಶ್ವರ— ಇದೇ ತಾ 10ರಲ್ಲು ಇಲ್ಲಿಯ ನೈದಿಕಧರ್ಮ ಪ್ರಕಾಶನಾ ಮಹಾ ಪಾಠಶಾಲೆಯಲ್ಲಿ ಕೋಟೇಶ್ವರ ಹೈಸ್ಕೂಲ್ ಹೆಡ್ಮಾಸ್ಟರ್ ಶ್ರೀ ಸುಬ್ರಾಯಾಳರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಗೋಪಾಡಿ ಕೃಷ್ಣ ಭಟ್ಟರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವಾಯಿತು. ಸಭಿಕರಲ್ಲಿ ಹಲವರು ದಿವಂಗತರ ಗುಣಗಾನ ಮಾಡಿದರು.

ಕಾಸರಗೋಡು ಇಲ್ಲಿಯ ಕ್ರಿಕೆಟ್ ಟೀಮಿನವರು ಈಚೆಗೆ ಮೈಸೂರು-ಬೆಂಗಳೂರು ಕಡೆಗೆ ಪ್ರಯಾಣ ಬೆಳೆಸಿ ಅಲ್ಲಿಯ ಟೀಮುಗಳೊಡನೆ ನಾಲ್ಕು ದಾರಿ ಕುಶಲ ಕ್ರಿಕೆಟ್ ಪಂದ್ಯಾಟಗಳನ್ನಾಡಿದರು. ಇವರು ನಾಲು ಸಲ ವಿಜಯಿಗಳಾದುದು ಸಂತೋಷಕರ.

ಕೊಡವೂರು ಇದರ ಸಮೀಪದ ಗರಡಿಮಜಲು ಮಾಡದ ಬಳಿ ಶ್ರೀ ಶಂಕರ ಪ್ರಸಾದಿಕ ವಿದ್ಯೋದಯ ಶಾಲೆ' ಎಂಬ ಉಚ್ಚ ಸ್ತರ ಶಿಕ್ಷಣ ಶಾಲೆಯೊಂದು ಇತ್ತೀಚೆಗೆ ಶ್ರೀ ಪಿ. ಶಂಕರರಾಯರ ನೇತೃತ್ವದಲ್ಲಿ ತೆರೆಯಲ್ಪಟ್ಟಿದೆ.

ಕಟಪಾಡಿ:—ಬ್ರಹ್ಮ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ 16ನೇ ವಾರ್ಷಿಕೋತ್ಸವವು ತಾ. 26.10.49ರಿಂದ ತಾ 1-11-49ರ ತನಕ ಎಂದಿನಂತೆ ವಿವಿಧ ಕಾರ್ಯಕ್ರಮಗಳಿಂದ ಯಥಾಸಾಂಗವಾಗಿ ಜರಗಲಿದೆ.

ಜನಮತ

ಒಂದು ಸ್ಪಷ್ಟೀಕರಣ

ಈ ಬಾರಿಯ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಹಿರಿಯಡ್ಕ ಸರ್ಕಲಿನ ಸ್ಥಾನಕ್ಕೆ ನಾನು ನಮತಾವಾದಿ ಪಕ್ಷದ ಕಡೆಯಿಂದ ನಾಮಪತ್ರ ದಾಖಲ್ಮಾಡಿ, ವಾಯಿದೆಯೊಳಗೆ ಅದನ್ನು ಏಂಜೆಗೆದುಕೊಂಡ ಕುರಿತು ಕೆಲವು ಬೇಜವಾಬ್ದಾರೀ ಪತ್ರಿಕೆಗಳಲ್ಲಿ ಟೀಕೆಗಳು ಬಂದಿವೆ. ಬೇರೆ ಆಪ್ತಪ್ರಚಾರಗಳೂ ನಡೆದ್ದಂತಿವೆ. ಕಾಂಗ್ರೆಸ್ ಕಾರ್ಯಕರ್ತರ ಕೆಲವೊಂದು ವಿಧಾನಗಳ ಕುರಿತು ಜನತೆಯಲ್ಲಿ ಹರಡಿದ ಅತೃಪ್ತಿಯನ್ನು ಮುಂದಿಟ್ಟು ನ್ಯಾಯ ಸಂಪಾದಿಸುವುದಕ್ಕಾಗಿ ನಾನು ಉಮೇದ್ವಾರಿಯಾಗಬೇಕೆಂದು ನನ್ನ ಸರ್ಕಲಿನ ಮಹನೀಯರು ಒತ್ತಾಯಿಸಿದ ಮೇರೆಗೆ, ನಾನು ನಾಮಪತ್ರ ಹಾಕಿದ್ದೆ. 'ಸಮಶಾವಾದಿಪಕ್ಷ' ವೆಂಬುದು ಆ ವರೆಗೂ ಉಡುಪಿ ತಾಲೂಕಿನಲ್ಲಿದ್ದುದಿಲ್ಲ. ಕೇವಲ ಜಿಲ್ಲಾ ಬೋರ್ಡು ಚುನಾವಣೆಗಾಗಿಯೇ ಎಂಬಂತೆ ಅದು ಆಗ ತಾನೇ ಇಲ್ಲಿ ಮೊಡಿದಾಗ, ಮೂಲಭೂತ ತತ್ವಗಳ ಮಟ್ಟಿಗೆ ಕಾಂಗ್ರೆಸಿಗೆ ವಿರೋಧವಿಲ್ಲದೆ, ಕೇವಲ ನಿಷೇಧ ಸೂಚನೆಗಾಗಿ ಇದ್ದಂತೆ ತೋರುತಿದ್ದ ಈ ಪಕ್ಷದ ಮೂಲಕ ನಮ್ಮ ಭಾಗದ ಜನತೆಯ ಭಾವನೆಯನ್ನು ಮುಂದಿಡುವುದು ಕಾಲೋಚಿತವೆಂಬುದರಿಂದ ನಾನು ಆ ಪಕ್ಷದ ಪರವಾಗಿಯೇ ನಾಮಪತ್ರ ಹಾಕಿದ್ದೆ. ಆದರೆ ಕಾಂಗ್ರೆಸ್ ಹಿತಚಿಂತಕರಾದ ಕೆಲವು ಆಪ್ತ ಮಹನೀಯರು ಕಾಂಗ್ರೆಸಿನ ಗೌರವಪಾಲನೆಗೆ ನೆರವಾಗುವಂತೆ ನಮ್ಮೆಲ್ಲರೊಡನೆ ಪರ್ಯಾಲೋಚನೆ ನಡೆಸಿದುವರ ಪರಿಣಾಮವಾಗಿ, ನನ್ನಲ್ಲಿ ಏಕಪ್ರಕಾರವಿರುವ ಕಾಂಗ್ರೆಸಿನ ಮೇಲಿನ ನಿಷ್ಠೆಯಿಂದ ನಮ್ಮ ಸರ್ಕಲಿನವರ ಅಭಿಮತಾನುಸಾರವಾಗಿಯೇ ನಾನು ನಿಶ್ಚಿತಾವಧಿಯೊಳಗೆ ನನ್ನ ಉಮೇದ್ವಾರಿಕೆಯನ್ನು ಏಂತೆಗೆದುಕೊಂಡಿದ್ದೆ. ಇದು ವಸ್ತುಸ್ಥಿತಿ. ಟೀಕಾ ಜೀವಿಗಳಾದ ಕೆಲವರು ಈ ಕುರಿತು ನಡೆಸಿರುವ ಅಪಪ್ರಚಾರಗಳಿಗೆ ಬೆಲೆಯಿಲ್ಲವೆಂಬುದನ್ನು ಸಾರ್ವಜನಿಕರು ತಿಳಿದಿರಬೇಕೆಂದು ವಿಜ್ಞಾಪನೆ.

—ಯು. ಭಾಸ್ಕರಸೆಟ್ಟಿ.

ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ × ಕನ್ನಡ

ಡಿಕ್ಷ್ನರಿಗಳು

ದೊರೆಯುತ್ತವೆ.

ಬೆಲೆ. ರೂ. ೫ ೦ ೦

ಸಿರಿಗನ್ನಡ ಅರ್ಥಕೋಶ ೪ ೮ ೦

ನವಯುಗ ಪ್ರೆಸ್, ಉಡುಪಿ.

ಅಥವಾ

ನವಯುಗ ಆಫೀಸು, ಉಡುಪಿ.

The most Powerful medicine for ASTHMA,
(Registered and Genuine)
CHITRAKOT
ASTHMA-SPECIFIC.

Hundred years fame to cure the dreaded disease permanently only by one dose to be taken on Sharadpurnima (full moon) dated 5—11—49.

Apply at once in English

Kr. Badri Nath Singh,
Shubh Chintak Karyalaya
CHITRAKOT, Distt. Banda, U. P.

Notification

Sealed quotations will be received up to 3.0 p. m. on 31-10-49 for the supply of Tree guards and Reinforced Concrete slabs of following sizes.

Name	Approximate No.
Tree guards of size 2'-9"x 2'-9"x 5'-0" with side strut 7' in concrete broken granite ½" ring in cement mortor 1:2:4 and ¼"diameter m.s.rounds for reinforcements.	20
Reinforced Concrete 6½" thick in concrete broken granite ½" ring in cement mortor 1:2:4 and reinforcements.	50
—do— of 7"	20
—do— of 7½"	20

Cement and iron will be supplied by the Municipality.

Plans and specifications of the above and any other particulars required may be obtained from the Municipal office during office hours on working days.

Municipal Office, Udipi.
Dated: 15—10—1949.

V. Balagangadharan,
Commissioner, U. M.

ದ. ಕ. ಜಿಲ್ಲೆಯಲ್ಲಿ ವಿದ್ಯಾ ಮಂತ್ರಿ ಶ್ರೀ ಕೆ. ಮಾಧವ ಮೆನೋನರು

ಮದ್ರಾಸು ಸರಕಾರದ ವಿದ್ಯಾಮಂತ್ರಿ ಮಾನ್ಯ ಶ್ರೀ ಕೆ. ಮಾಧವ ಮೆನೋನರು ತಮ್ಮ ಸಹಧರ್ಮಿಣಿ ಶ್ರೀಮತಿ ಕುಟ್ಟಿ ಮ್ಯಾಲು ಅಮ್ಮಾಳ್, ಎಮ್. ಎಲ್. ಎ. ಅವರನ್ನು ಕೂಡಿಕೊಂಡು ಇದೇ ತಾ 12ರಲ್ಲು ಅಪರಾಹ್ನ ಹೊಸದುರ್ಗಕ್ಕೆ ಬಂದು ಅಲ್ಲಿಯ ಮುನ್ಸಿಫ್ಕೋರ್ಟು ಮತ್ತು ತಾಲೂಕು ಕಚೇರಿಯಲ್ಲಿ ವಿಹಾರ್ತಾಜೀಯನರ್ಪಿಸಿ ಹೊಸದುರ್ಗ ಕಾಂಗ್ರೆಸ್ ಸಮಿತಿ ಕಾರ್ಯಾಲಯದಲ್ಲಿ ಪಂಡಿತ ನೆಹರುಗಳ ಭಾವಚಿತ್ರಗಳನ್ನು ಅನಾವರಣಮಾಡಿ ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಹೊಸದುರ್ಗ ಹೈಸ್ಕೂಲನ್ನು ಸಂದರ್ಶಿಸಿ, ಉಪ್ಪಿನಂಗಡಿ ಮತ್ತು ತಿಕ್ಕಲ್‌ಗಳಲ್ಲಿ ಸ್ವಾಗತಪತ್ರವನ್ನು ರಾತ್ರಿ ಕಾಸರಗೋಡಿಗೆ ತಲ್ಪಿದ ಶ್ರೀ ಉಮೇಶರಾಯರ ಅಧ್ಯಕ್ಷತೆಯಲ್ಲಿ ನೆರೆದ ಸಭೆಯಲ್ಲಿ ಭಾಷಣಮಾಡಿ ಕಾಂಗ್ರೆಸ್ಸನ್ನು ಬಲಪಡಿಸಬೇಕೆಂದರು.

ಮರುದಿನ ಬೆಳಿಗ್ಗೆ ಕಾಸರಗೋಡು ಉಪಾಧ್ಯಾಯ ವೃಂದದ ಮನನ, ಅದರ ಸತ್ಕಾರಗಳನ್ನು ಸ್ವೀಕರಿಸಿ, ಬದಿಯಡ್ಕದ ನವಜೀವನ ಪ್ರಾಥಮಿಕ ಶಾಲೆಯನ್ನು ಸಂದರ್ಶಿಸಿ, ಡಾ। ಪಿ. ಎಸ್. ಶಾಸ್ತ್ರಿಗಳೇ ಮೊದಲಾದವರಿಂದ ಸ್ವಾಗತ ಸ್ವೀಕರಿಸಲ್ಪಟ್ಟರು. ಶ್ರೀಮತಿ ಕುಟ್ಟಿಮ್ಮಾಳ್ ಧ್ವಜಾರೋಹಣ ಮಾಡಿದರು. ಶಾಲೆಯ ವಿದ್ಯಾರ್ಥಿಗಳ ಶಿಸ್ತನ್ನು ಮೆಚ್ಚಿ ಮುಂತಾನಾಡಿದರು.

ಅಲ್ಲಿಂದ ಮಂತ್ರಿಗಳು ಪೆರ್ಡಾಲ ಮಹಾಜನ ಸಂಸ್ಕೃತ ಕಾಲೇಜಿಗೆ ಭೇಟಿಯಿತ್ತು ಮಹಾತ್ಮಾಜೀ ಮತ್ತು ಪಂಡಿತ ನೆಹರುಗಳ ಭಾವಚಿತ್ರಗಳನ್ನು ಅನಾವರಣಮಾಡಿ ಭಾಷಣವಿತ್ತರು. ನಂತರ ಮಾಯಪಾಡಿ ಮೂಲಶಿಕ್ಷಣ ಶಾಲಾ ಕೇಂದ್ರವನ್ನು ಸಂದರ್ಶಿಸಿ, ಅಧ್ಯಾಹ್ನ ಊಟತೀರಿಸಿ ಕುಂಬಳೆಗೆಹೋದರು. ಸುತ್ತೂರು ಹೈಸ್ಕೂಲಲ್ಲಿ ಹುಡುಗಿಯರಿಗೂ ಪ್ರವೇಶ ನಿಗುವಂತಾಗಬೇಕೆಂದು ಶ್ರಿಗಳಾದ ಕೆ. ಶಿವರಾಮ ಕಾರಂತ, ವೆಂಕಪ್ಪಯ್ಯನವರೇ ಮೊದಲಾದವರು ಮನವಿಮೂಲಕ ತಿಳಿಸಿದರು. ಹರಿಜನ ಶ್ರೀ ಸುಂದರನವರು ಬೀಲದ ಟ್ಲೊಂದು ಲೇಬರ್‌ಶಾಲೆಯನ್ನು ತೆರೆಯುವ ಆವಶ್ಯಕತೆಯನ್ನು ಸೂಚಿಸಿದರು. ಬಳಿಕ ಮಂತ್ರಿಗಳು ಮಂಗಳೂರಿಗೆ ಬಂದು ಸುಸ್ವಾಗತವನ್ನು ಪಡೆದರು.

ಮಂಗಳೂರಲ್ಲಿ ತಾ 13ರಲ್ಲು ಸಂಜೆ ವಿದ್ಯಾಮಂತ್ರಿಗಳು ಸೈಂಟ್ ಎಲೋಸಿಯಸ್ ಕಾಲೇಜಿನ ಬಯಲಾವರಣ ವಿತರಣ ಸಮಾರಂಭದ ಅಧ್ಯಕ್ಷತೆ ವಹಿಸಿದರು. ಅವರ ಸಹಧರ್ಮಿಣಿಯು ಬಹುಮಾನಗಳನ್ನು ಹಂಚಿದರು. ಕಾಲೇಜಿಗೆ ಬಂದಾಗಿ ವಿದ್ಯಾರ್ಥಿ ಸಂಘದ ಅಧ್ಯಕ್ಷರ ಸ್ವಾಗತ ಲೋಯಲಾ ಸೌಟು ದಳದ ಗೌರವ ರಕ್ಷಣೆಯನ್ನು ಪಡೆದರು. ಕಾಲೇಜುರೆ ಕ್ಟರ್ ಮತ್ತು ಪ್ರಿನ್ಸಿಪಾಲರು ವರದಿಯನ್ನೋದಿದರು.

ಬಹುಮಾನ ಪದಾನವನ್ನು ಮಂತ್ರಿಗಳು ಅಭಿನಂದಿಸುತ್ತಾ ಕಾಲೇಜನ್ನು ಅದರ ಸಿಬ್ಬಂಗಿಗಾಗಿ ಕ್ಲಾಘಿಸಿದರು. ಎಲ್ಲಾ ಧರ್ಮಗಳನ್ನೆ ಗೌರವಿಸುವ ಪಾರವನ್ನು ಹಿಂದೂ ಧರ್ಮವು ಕಲಿಸಿಕೊಟ್ಟುವೆಂದೂ ಅದರಂತೆ ಕ್ರೈಸ್ತ ಮುಸ್ಲಿಂ ಧರ್ಮದವರು ಸೇವಾ ದೃಷ್ಟಿಯಿಂದ ಮಾಡಿದ ಸೇವೆಯು ಬಹಳಶ್ಲಾಘನೀಯವೆಂದೂ ಹೇಳಿದರು. ಬಳಿಕ ವಿವಿಧ ವಿನೋದಾವಳಿಗಳಾದುವು ಅಲ್ಲಿಂದ ಮಂತ್ರಿಗಳು ಬಂಗ್ಲೆಗೆ ಹೋಗಿ ತುಸು ವಿಶ್ರಮಿಸಿ ಸಹಕಾರಿ ಮಹಿಳಾ ಅಭಿವೃದ್ಧಿ ಕೇಂದ್ರವನ್ನು ಸಂದರ್ಶಿಸಿದರು.

ತಾ 14ರಲ್ಲು ವಿದ್ಯಾಮಂತ್ರಿಗಳು ಉಳ್ಳಾಲಕ್ಕೆ ಹೋಗಿ ಅಲ್ಲಿ ಜರಗಿದ ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿ ಭಾಷಣಮಾಡುತ್ತಾ ಜಾತಿ ಮತ ಭೇದಗಳನ್ನು ಒತ್ತಟ್ಟಿಗಿರಿಸಿ ಸರ್ವರೂ ಐಕ್ಯದಿಂದಿರಬೇಕೆಂದು ಉಪದೇಶವಿತ್ತರು. ಉಳ್ಳಾಲ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಯು. ವೆಂಕಟರಾಯರು ಮಂತ್ರಿಗಳನ್ನು ಸ್ವಾಗತಿಸಿದರು.

ನಂತರ ಮಂತ್ರಿಗಳು ಉಳ್ಳಾಲ ಹೈಸ್ಕೂಲನ್ನು ಸಂದರ್ಶಿಸಿ, ಕೋಟೆಕಾರು ಶಿಕ್ಷಣ ಸಮಿತಿಯ ಮನವಿಯನ್ನು ಸ್ವೀಕರಿಸಿ ಕೃಷಿ ಕ್ಲಾಸಿನ ಮಕ್ಕಳ ಚಟುವಟಿಕೆಗಳನ್ನು ಕಂಡು ಸಂತೋಷಪಟ್ಟರು. ಹಿಂತಿರುಗುವಾಗ ಉಳ್ಳಾಲದ ಮೋಗವೀರ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಿದರು

ಮಂತ್ರಿಗಳು ಮಂಗಳೂರಿಗೆ ಬಂದೊಡನೆ ಸ್ಕೌಟ್ ಆಗ್ಸ್ ಕಾಲೇಜು ಮತ್ತು ಹುಡುಗಿಯರ ತರಬೇತಿ ಶಾಲೆಯನ್ನು ಸಂದರ್ಶಿಸಿ ಕೊಂಡು ಬೆಸೆಂಟ್ ಬಾಲಿಕಾ ಪಾಠಶಾಲೆಗೂ ಭೇಟಿಯಿತ್ತರು.

ಮಧ್ಯಾಹ್ನ ಕಲೆಕ್ಟರರ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ ನಡೆಯಿತು. ಉಡ್ರೆಯ ಕರ್ನಾಟಕ ಗುರುಕುಲ ವಿದ್ಯಾವರ್ಧಕ ಸಂಘ, ಜಿಲ್ಲಾ ಅಧ್ಯಾಪಕ ಸಂಘ, ದ. ಕ. ಮುನ್ಸಿಂ ಬಾಲಕಿಯರ ಶಿಕ್ಷಣ ಸಮಿತಿ, ದ. ಕ. ಮೊಗವೀರ ಮಹಾಜನ ಸಂಘ, ವಿದ್ಯಾರ್ಥಿ ಸಂಘ ಮೊದಲಾದ ಸಂಘ ಸಂಸ್ಥೆಗಳ ಕಛೆಯಿಂದ ಮನವಿಗಳನ್ನು ಮಂತ್ರಿಗಳಿಗೆ ಒಪ್ಪಿಸಲಾಯಿತು. ಮನವಿಗಳಿಗೆ ಗಮನಕೊಡುವುದಾಗಿ ಉತ್ತರ ದೊರೆಯಿತು. ನಂತರ ಮಂತ್ರಿಗಳು ರಥಬೀದಿಯಲ್ಲಿಯ ಸರಕಾರಿ ಬಾಲಿಕಾ ಪಾಠಶಾಲೆಯನ್ನು ಸಂದರ್ಶಿಸಿ, ವಕೀಲ ಸಂಘಕ್ಕೆ ಭೇಟಿಯಿತ್ತು ಗವರ್ನಮೆಂಟ್ ಕಾಲೇಜು ವರ್ಧಂತ್ಯುತ್ಸವದ ಅಧ್ಯಕ್ಷಸ್ಥಾನ ವಹಿಸಿದರು.

ಪ್ರಿನ್ಸಿಪಾಲ್ ಜನಾಬ್ ಜಸೀಮಿಯವರು ಶಾಲಾ ವರದಿಯನ್ನೋದಿದರು, ರಾಷ್ಟ್ರಕವಿ ಗೋವಿಂದ ಪೈಗಳು ಸ್ವಸ್ತಿವಾಚನ ಮಾಡಿದರು.

ಸ್ವಸ್ತಿವಾಚನಕ್ಕೆ ಉತ್ತರವಿತ್ತನಂತರ ಮಂತ್ರಿಗಳು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ವಿನಯ ಸಂಪನ್ನರಾಗಬೇಕೆಂದೂ ಶಾಲೆಯಿಂದ ವಿದ್ಯಾಭ್ಯಾಸ ಮಾಡಬೇಕೆಂದೂ ಸಂಬಿಸಿ ಕೇಳಿಕೆ ಬೇಡಿಕೆಗಳು ಹೆಚ್ಚಾಗಿರುವ ಈ ಕಾಲದಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೇಳಿಕೊಂಡರು.

ನ್ಯೂಯೋರ್ಕಿನ ಸುಪ್ರಸಿದ್ಧ ಕೊಲಂಬಿಯಾ ವಿಶ್ವವಿದ್ಯಾಲಯವು ತಾನು ಕೊಡಬಲ್ಲ ಅತ್ಯುಚ್ಚ ಗೌರವವಾದ 'ಡಾಕ್ಟರ್ ಆಫ್ ಲಾ' ಪದವಿಯನ್ನು ಪಂಡಿತ ನೆಹರುಗಳಿಗೆ ತಾ. 17ರಲ್ಲಿತ್ತು ಸನ್ಮಾನಿಸಿತು. ಈ ಪದವೀದಾನ ಸಮಾರಂಭವು ಆಕರ್ಷಣೀಯವಿದ್ದಿತು. ಯುನಿವರ್ಸಿಟಿ ಅಧ್ಯಕ್ಷ ವಾಷಿನೆದಲ್ಲಿ ಪಂಡಿತಜೀಯನ್ನು "ಶಾಂತಿಪುರುಷ-- ಆಜೀಯ ನಾಯಕ- ಚತುರಂಚಿಂತಕ-- ಮಹಾ ಜನಾಂಗವೊಂದರ ಸುಪ್ರಸಿದ್ಧ ನಾಯಕ" ಎಂದು ಸಂಬೋಧಿಸಲಾಗಿದ್ದಿತು. ಕಳದ ಮಹಾಯುದ್ಧದ ವಿಜಯೀ ಸೇನಾನಿ ಈಸೆನೋವರರು ಆ ಗೌರವಪದ ದಾನ ನೂಡಿದ್ದರು. ಪಂಡಿತ ನೆಹರುಗಳು ಆ ಸಂದರ್ಭದಲ್ಲಿತ್ತ ಭಾಷಣದ ಪಾಂಡಿತ್ಯ, ಆದರೊಳಗೆ ಸೇರಿ ಬಂದಿದ್ದ ಅವರ ನಿರ್ಮಲಾಂತಃಕರಣ, ಮತ್ತು ವಿಜಾರ ಸರಣಿಯು ಅಖಿಲ್ಲಿಯ ಸುಸಂಸ್ಕೃತ ಹಾಗೂ ಸುಶಿಕ್ಷಿತ ಸಭಿಕರ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡಿತು; ಲೋಕಾದರ್ಶ ಸೂಚನೆಗಳಿದ್ದ ಆ ಮಹಾ ಭಾಷಣವನ್ನಾಲಿಸಿದವರು ಆದರಲ್ಲೇ ತಲ್ಲೀನತೆ ಹೊಂದುವಂತಾಗಿತ್ತು. "ಎರಡು ಯುದ್ಧಗಳಿಂದ ಕಲಿಯಬೇಕಾಗಿದ್ದ ವಾರವನ್ನು ರಾಷ್ಟ್ರಗಳು ಕಲಿತಿಲ್ಲವೆಂಬುದು ಶೋಚನೀಯ. ಲೋಕವನ್ನು ಎರಡು ಪಾಳಯಗಳಾಗಿ ವಿಂಗಡಿಸಿ ಹಾಕಲು ಮಾಡುತ್ತಿರುವ ಪ್ರಯತ್ನಗಳೇ ಯಾವ ಘರ್ಷಣೆಯನ್ನು ನಿಲ್ಲಿಸಬೇಕೆಂಬ ಸಂಕಲ್ಪವಿದೆಯೋ ಆ ಘರ್ಷಣೆಗೆ ನಿಜ ಪ್ರೇರಣೆಗಳಾಗಿವೆ ಯಾರಿಂದ ದೊರೆತ ಸ್ವಾರ್ಜಿ ಮತ್ತು ಯಾರ ಆಶ್ರಯದಲ್ಲಿ ನಾನು ಬೆಳೆದುಬಂದೆನೋ ಆ ಮಹಾತ್ಮಾ ಗಾಂಧಿಯವರು-- ನನ್ನ ರಾಷ್ಟ್ರದ ಮಹಾನಾಯಕನು-- ಕಾರ್ಯದ ಪರಿಣಾಮಕ್ಕೂ ವಿಧಾನಗಳಿಗೂ ಗಂಟು ಹಾಕಿ ಕೊಳ್ಳಬಾರದೆಂದು ನಮ್ಮನ್ನೆಚ್ಚರಿಸಿದ್ದರು; ನೈತಿಕ ಮೌಲ್ಯವನ್ನೇ ವಿಶೇಷತ. ಗಣಿಸಿದ್ದರು. ಲೋಕಶಾಂತಿ ಸಾಧನೆಗಾಗಿ ದೈಹಿಕ ಬಲಕ್ಕಿಂತ ಹೆಚ್ಚಿನದಾದ ಮಹಾತ್ಮಾ ಗಾಂಧಿಯವರ ನೈತಿಕ ಬಲವನ್ನೇ ಆಯುಧವಾಗಿ ಅಂಗೀಕರಿಸಿಕೊಳ್ಳಬೇಕೆಂದು ಲೋಕದ ಎಲ್ಲಾ ವಿಜಾರೀಷ್ಟ ಪುರುಷರನ್ನು ನಾನು ಕೇಳಿಕೊಳ್ಳುತ್ತೇನೆ ಎನಿದು-- ಹಳೇ ಯುಗದ ಪಾಶವಿಕತೆಯ ಬದಲಿಗೆ ಅತಿ ವಿಧ್ವಂಸಕ ಆಯುಧೋಪಕರಣಗಳನ್ನು ಅವಲಂಬಿಸುವ ಪ್ರಯತ್ನಕ್ಕೂ ಈ ಇಪ್ಪತ್ತನೇ ಶತಮಾನಕ್ಕೂ ವ್ಯತ್ಯಾಸವಿರಬೇಕಲ್ಲವೇ?" ಎಂದು ಕೇಳಿಕೊಂಡು, ಜಗತ್ತಿನಲ್ಲಿ ಎರಡು ವಿಂದ್ಧ ಪಾಳಯಗಳನ್ನು ನಿರ್ಮಿಸುವ ಮೂಲಕ ರಂಭ ಮತ್ತು ಅಮೆರಿಕಗಳು ನೇರಾಗಿ ಯದ್ಧದ ಕಡೆ ಧಾವಿಸುತ್ತಿವೆ, ಎಂದು ಸ್ಪಷ್ಟ ಎಚ್ಚರಿಕೆ ಕೊಟ್ಟರು. ಭಾರತದ ಶಾಂತತೆ ಮತ್ತು ತಾಟಸ್ಥ್ಯವೆಂದರೆ ಮಾನವ ಸ್ವಾತಂತ್ರ್ಯಕ್ಕೆ ಅಥವಾ ಶಾಂತಿಗೆ ಭಕ್ಕೆ ಬಿದ್ದಾಗಲೂ ಸುಮ್ಮಗಿರುವುದೆಂಬ ಅರ್ಥವಲ್ಲ ಎಂದು ವಿಶದೀಕರಿಸಿದರು ತಾ 18ರಲ್ಲಿ ಸಾರೋತ್ತರ ಪತ್ರಿಕಾ ಕ್ಲಬ್ಬಿನಲ್ಲಿ ಪತ್ರಿಕಾವಾಲರಿಗೆ ಭಾರತದ ಅವರ್ಯಕತೆಗಳನ್ನು ವಿವರಿಸಿ ಪ್ರಶ್ನೆಗಳಿಗುತ್ತರ ಕೊಟ್ಟರು. "ಗೋಧಿಯು ಬೆಲೆಗೆ ಹೊಂದಿಕೊಂಡೇ ಧಾರಣೆಯಿರಬೇಕಾದ ಆಹಾರ ಸಮಸ್ಯೆಯೇ ಭಾರತದ ಮುಖ್ಯ ಸಮಸ್ಯೆ ಅನೆಂಬಕವು ಸಾಕಷ್ಟು ಗೋಧಿಯನ್ನು ರವಾನಿಸಿ ಬಾರಕದ ಆಹಾರ ಧಾನ್ಯಗಳ ಬೆಲೆ ತಗ್ಗುವಂತೆ ಮಾಡಬಹುದು" ಎಂದರು ಭಾಂಡತದ ವಿದೇಶ ಧೋರಣೆ-ಆಸ್ಯಾ ರಾಷ್ಟ್ರಗಳ ಕೊಳಗಿನ ಸಹಕಾರ ಮತ್ತು ಪಾಶ್ಚಾತ್ಯ ರಿಂದಿನ್ನು ದಮನನಿಸಲಸದಳವಾದ ಆಸ್ಯಾ ಜಾಗ್ರತಿ-ಇತ್ಯಾದಿಗಳನ್ನು ವಿವರಿಸಿ, ಭಾರತದ ಅಭಿವೃದ್ಧಿಗಾಗಿ ಅಮೆರಿಕದ ಸಹಾಯದ ಪ್ರಬಲಾಪೇಕ್ಷೆಯನ್ನು ಮುಂದೊಡ್ಡಿದರು. ಕಮ್ಯೂನಿಸ್ಟ್ ವೈರಿಯಕ್ಕೆ ಭಾರತವು ಸೈದಲ್ಲೇ ತನ್ನ ಒಪ್ಪಿಗ ಕೊಡಬಹುದೆಂಬ ಭಾವನೆ ಸೂಸುತ್ತಾ, "ನಾವು ವಸ್ತು ಸ್ಥಿತಿಯನ್ನು ಅಲಕ್ಷ್ಯಿಸಲಾರೆವು" ಎಂದರು.

ಗಮನಾರ್ಹ ಉಪದೇಶ

ಲೇಕ್ ಸಕ್ಸೆಸ್‌ನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಪತ್ರಿಕೋದ್ಯಮಿ ಸಂಸ್ಥೆಯವರ ವಿಶೇಷ ಸ್ವಾಗತ ಸಭೆಯಲ್ಲಿ ತಾ. 19ರಲ್ಲಿ ಭಾಷಣವೀಯುತ್ತಾ, ಪತ್ರಿಕಾವಾಲರ ಪ್ರಶ್ನೆಗಳನ್ನು ಉತ್ತರಿಸಿತ್ತಾ ಪಂಡಿತಜೀಯಂದರು: "ಭಂಡವಾಳಶಾಹಿತ್ವ ಮತ್ತು ಕಮ್ಯೂನಿಸಮ್" ಎಂಬ ಎರಡು ತಾತ್ವಿಕ ವಿಧಾನಗಳು ಜತೆಯಾಗಿ ಅನಿಶ್ಚಿತಾವಧಿಯ ವರೆಗೂ ಮುಂದೊತ್ತು ತ್ತಾ ಹೋಗುವದು ಅಸಾಧ್ಯ ಕೂರ್ವ ಮತ್ತು ಪಶ್ಚಿಮಗಳೊಳಗಿನ ಈ ಘರ್ಷಣೆಯು ಒಂದು ಅದವಾ ಎರಡು ತಲೆ ಮಾರುಗಳ ತನಕ ಹೀಗೆಯೇ ಮುಂದುವರಿಯಬಹುದು. ಆದರೆ ಕೊನೆಗೆ ಎರಡರಲ್ಲೊಂದು ವಿಜಯ ಹೊಂದಲೇ ಬೇಕು. ಯಾವುದು ಪ್ರಯೋಜನ ಕೊಡಬಲ್ಲುದೋ- ಕೇವಲ ವಸ್ತುರೂಪೀ ಪ್ರಯೋಜನವನ್ನೇ ಅಲ್ಲ, ಮಾನವ ಜೀವನದ ಹಿತಕಾರೀ ಭೌತಿಕ ಪ್ರಯೋಜನಗಳನ್ನು ತರುವಂತಹದೋ- ಅದೇ ಕೊನೆಯ ವಿಜಯ' ಎಂದರು ಆ ಮೇಲೆ ಸಂಯುಕ್ತ ರಾಷ್ಟ್ರ ಸಂಘದ ಟ್ರಸ್ಟೀಷಿಪ್ ಸಮಿತಿಗೆ ಭಾಷಣವೀಯುತ್ತಾ, ಸಂಯುಕ್ತ ರಾಷ್ಟ್ರ ಸಂಘದ ಉಪಾಂಗಗಳಲ್ಲಿ ಮತ್ತು ಕಾರ್ಯಗಳಲ್ಲಿ ಭಾರತಕ್ಕೆ ವಿಶೇಷ ವಿಶ್ವಾಸವಿದೆಯೆಂಬ ಆಶ್ವಾಸನೆ ಕೊಟ್ಟರು.

ಆಂತರ್ರಾಷ್ಟ್ರೀಯ ವಹಿವಾಟುಗಳ ಸಂಬಂಧವುಳ್ಳ ಅಮೆರಿಕದ ನಾಲ್ಕು ಸಂಸ್ಥೆಗಳ ಪರವಾಗಿ ತಾ 20ರಲ್ಲಿ ಜರಗಿದ ಅತಿ ಭವ್ಯ ಗೌರವ ಕೂಟದಲ್ಲಿ ಪಂಡಿತಜೀ ಮತ್ತೊಂದು ಅಮೋಘ ಭಾಷಣವಿತ್ತರು. ಈ ಔತಣ ಸಮಾರಂಭವೆಂಬುದು, ಸಂಭ್ರಮ ಕೂಟಕ್ಕೆ ಹೆಸರಾದ 41 ಅಂತಸ್ತುಗಳ ಭವ್ಯ ಹೋಟೆಲ್ 'ವಾಲ್ಡೊರ್ಫ್-ಅಸ್ಟೋರಿಯಾ'ದ ನರ್ತನಗೃಹವನದ ಸಂಭ್ರಮದಾಖಲೆಗಳಲ್ಲಿ ಕಿಗಣ್ಣವಾದುದ. ನಮ್ಮ 60 ರೂಪಾಯಿಗಳಿಗೆ ಸಂದೂಗುವ ಟಿಕೇಟ್‌ನ್ನು ಪಡಕೊಂಡವರು ಆ ವಿಸ್ತಾರ ಭವನದ ಸಂದು ಮೂಲೆಗಳಲ್ಲೂ ಒತ್ತೊತ್ತಾಗಿ ತುಂಬಿದ್ದರು. ಅಲ್ಲಿ ಪಂಡಿತಜವಹಿರಲಾಲರು ಭಾಷಣವೀಯುತ್ತಾ ತವ ವಿತ್ತೀ ಭೇಟಿಯು ಭಾರತ ಅಮೆರಿಕಗಳ ನಿಕಟ ಬಾಂಧವ್ಯದ ಭರವಸೆಯನ್ನು ನಿವಿರಿಸುತ್ತಿದೆ ಎಂದು ಕಳದೆಂಟು ದಿನಗಳ ಅದಂತಾಧ್ಯಗಳು ತನ್ನ ಮನಸ್ಸಿನಲ್ಲಿ ಒಂದರೆ ನೀಲೊಂದರಂತೆ ಭಾವನಾಂದೋಲನಗಳನ್ನೆಬ್ಬಿಸಿ, ತಾನೀ ರಾಷ್ಟ್ರದಲ್ಲಿ ಚಿರಕಾಲವಿದ್ದ ವನೆಂಬಂತಹ ಆತ್ಮೀಯತೆಯನ್ನು ಮೂಡಿಸಿವೆ ಎಂದರು ಅಮೆರಿಕದ ಹೆಗ್ಗುಣಗಳನ್ನು ಬಿಚ್ಚಿಸಿದರು. "ಆಂತರ್ರಾಷ್ಟ್ರೀಯ ವಹಿವಾಟುಗಳನ್ನು ಇವ

[ಒನೇ ಪುಟ ನೋಡಿರಿ]

ಅವುಗಳು ಬಹಳ ಪ್ರಖ್ಯಾತಿ ಹೊಂದಿದವು



ಸ್ಟೇನ್ಸ್ ಈ 4 ಕರದಡದ ಮಿಶ್ರಣೆಯಿಂದ ಚಹಾವನ್ನು ಉಯಾರಿಸುತ್ತಾರೆ — ವೈಟ್ ಎಸ್ಟೇನ್ಸ್ ಪೀಕೊ ಡಸ್ಟ್, ಬೇಬಿ ಬ್ರಾಂಡ್ ಮತ್ತು ಲೀಫ್ ಟೀ,- ಇವುಗಳು ಪೆಚ್ಚಿನ ಬೆಲೆಯುಳ್ಳ ಇತರ ಚಹಾಗಳನ್ನು ಕೊಳ್ಳಲಾರದ ಜನರಿಗಾಗಿಯೇ ಈ ನಾಲ್ಕು ಉತ್ತಮ ಗುಣ ಮತ್ತು ಸಂಬಂಧಯುತವಾಗಿದ್ದು, ಸ್ಟೇನ್ಸ್ ಹೆಸರನ್ನು ಹಿಂದೂಸ್ತಾನದಲ್ಲೆಲ್ಲಾ ಪ್ರಖ್ಯಾತಿ ಪಡಿಸಿವೆ

THE PICK OF THE SOUTH

ದಕ್ಷಿಣದ ಜಯ್ಯ ಸ್ಟೇನ್ಸ್ ಪೀಕೊ ಕೂರ್ಗ್ ಬ್ರೋಕನ್ ಆರೆಂಜ್ ಪೀಕೊ, ಮತ್ತು ಡಸ್ಟ್ ಚಹಾಗಳನ್ನು 20 ಮತ್ತು 40 ರಾತಲು ಪೆಟ್ಟಿಗೆಗಳಲ್ಲೂ, ಚಿಲ್ಲರೆಯಾಗಿಯೂ, ಹೋಟಲು ನಾಲಕರಿಗೂ ಮಾರಾಟಗಾರರಿಗೂ, ಒದಗಿಸುತ್ತಾರೆ

Stanes

ಸ್ಟೇನ್ಸ್ ಚಹಾಗಳು

ಯುನೈಟೆಡ್ ಕೊಫಿ ಸಪ್ಲೈ ಕೊ., ಲಿಮಿಟೆಡ್.

ಕೊಯಮುತ್ತೂರು, ದಕ್ಷಿಣ ಇಂಡಿಯಾ.

ದಕ್ಷಿಣ ಕನ್ನಡದ ಏಜಂಟರು

ಎನ್ಸ್. ಎನ್ಸ್. ವಿ ಕಾಮತ್,

ವರ್ಚಂಟ್, ಬಂದರ್, ಮಂಗಳೂರು.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ನವಯುಗ
ಉಡುಪಿ, ಗುರುವಾರ, ೨೭–೧೦–'೪೯

ಭಾಷಾವಾರು ಗಡಿರಚನೆ

ಈಗ ಹೂರ್ಣಾಕಾರಕ್ಕೆ ಬಂದಿರುವ ಸ್ವತಂತ್ರ ಭಾರತದ ಸ್ವತಂತ್ರ ಘಟನೆಯಲ್ಲಿ ಭಾಷಾವಾರು ಪ್ರಾಂತ್ಯಗಳು ಮೂಡಿಲ್ಲ; ಹೊಸ ರಾಜ್ಯ ಘಟನೆಯೊಂದಿಗೇನೆ ಸ್ವಭಾಷಾ ಪ್ರಾಂತ್ಯಗಳು ಅಸ್ತಿತ್ವಕ್ಕೆ ಬರಬೇಕೆಂದಿದ್ದ ಭಾಷಾವಾರು ಭಾಗಗಳವರ ಬಯಕೆಯು ನಿಷ್ಫಲವಾಗಿದೆ. ಪ್ರಾಂತ್ಯಗಳನ್ನು ಪುನರ್ವಿಂಗಡಿಸುವ ಕುರಿತು ಕೇಂದ್ರ ನಾಯಕರು ಮುಂದಿಟ್ಟಿದ್ದ ಸೂಚನೆಗಳಂತೆ ವರ್ತಿಸಲು ಸಂಬಂಧಪಟ್ಟ ಭಾಷಾಭಾಗಗಳವರಿಂದ ಆಗದಿದ್ದುದೇ ಇದಕ್ಕೆ ಕಾರಣವೆನ್ನಬಹುದು. ಇನ್ನಾದರೂ ಸರಿಯೇ; ಅಂತಹ ವ್ಯವಸ್ಥೆಗಳಾದಲ್ಲಿ ಭಾಷಾನ್ವಯ ಸಂಸ್ಥಾನಗಳನ್ನು ರೂಪಿಸುವ ಅವಕಾಶವನ್ನು ಹೊಸ ಘಟನೆಯಲ್ಲಿ ಕಾದಿರಿಸಲಾಗಿದೆ. ನವರಾಜ್ಯ ಶಾಸನದ ರೂಪರೇಖೆ ಕೂಡಾ ಏಕ ಭಾಷಾಭಾಗಗಳ ಏಕೀಕರಣಕ್ಕೆ ವಿಶೇಷ ಅನುಕೂಲವಿದೆ. ಆದರಲ್ಲಿ ಎಲ್ಲಾ ವಿಧಾನಗಳಲ್ಲೂ ಪ್ರಾಂತ್ಯ ಮತ್ತು ಸಂಸ್ಥಾನಗಳನ್ನು ಸಮಾನ ಸ್ಥಾನದಲ್ಲಿಡಲಾಗಿದೆ. ಇದುವರೆಗಿನ 'ಸಂಸ್ಥಾನ'ಗಳ ಹೆಸರನ್ನೂ, ಇದುವರೆಗಿನ 'ಪ್ರಾಂತ್ಯ'ಗಳ ಸ್ಥಾನವನ್ನೂ ಇವೆರಡು ವರ್ಗಗಳಿಗೂ ಏಕಪ್ರಕಾರ ಕೊಟ್ಟು, ಎರಡನ್ನೂ ಒಂದೇ ಶಿಸ್ತಿನಲ್ಲಿ ನಿಲ್ಲಿಸಲಾಗಿದೆ. ಪ್ರಾಂತೀಕ– ಸಂಸ್ಥಾನಿಕ ಭಿನ್ನತೆಗಳೆಲ್ಲ ಈ ಮೂಲಕ ಮಾಯವಾಗಿ ವಾಗಲೂ ಮೈಸೂರು ಮತ್ತು ವಿ.ಕೃ ಕರ್ನಾಟಕ ಭಾಗಗಳು, ಅಂತೆಯೇ ಕೊಚ್ಚಿ, ತಿರುವಾಂಕೂರು ಮಲಬಾರು ಜಿಲ್ಲೆಯು, ಬೇರೆಬೇರೆಯಾಗಿ ಉಳಿದರೆ, ಆಗ ಒಂದೇ ಧಾಟಿ, ಸಮಾನ ಸ್ಥಾನಮಾನ,– ಏಕ ಪ್ರಾಂತ್ಯವಾಗುವಷ್ಟೇ ವಿಸ್ತಾರ ಮತ್ತು ಯೋಗ್ಯತೆಗಳುಳ್ಳ ಕ್ಷೇತ್ರಗಳು ಅನಗತ್ಯವಾಗಿ ಸಣ್ಣ ಸಣ್ಣ ಕುಂಡುಗಳಾಗಿ ಚದರಿದಂತಾಗುವುದು; ಈ ವರೆಗಿನ ಪ್ರಾಂತ್ಯ– ಸಂಸ್ಥಾನವೆಂಬ ಭಿನ್ನ ವೈಶಿಷ್ಟ್ಯಕೂಡಾ ಳ್ಳದಿರುವಾಗ ಮತ್ತೂ ಅವು ಬೇರೆಬೇರೆಯಾಗಿ ಯಾಕಿರಬೇಕು, ಎಂಬ ಪ್ರಶ್ನೆಗೆ ಸಮರ್ಪಕ ಉತ್ತರ ದೊರೆಯುವುದು ಅಸಾಧ್ಯ. ಸಾಕಷ್ಟು ಕ್ಷೇತ್ರ ವಿಸ್ತಾರ ಹೊಂದಿದ ಆರ್ಥಿಕೋತ್ಪನ್ನ; ಮಸ್ತಿಷ್ಕವಾಗಿಗನುಗುಣವಾದ ಆಡಳಿತೆ, ಘಟನೆಗಳಿಂದಲೇ ಕೇಂದ್ರ ಸರಕಾರವು ಸಣ್ಣ ಪುಟ್ಟ ಸಂಸ್ಥಾನಗಳ ಹಲವು ಜಂಜಾಟ್ಟಗಳನ್ನು ಕರಗಿಸಿ ಸಂಸ್ಥಾನೀ ಒಕ್ಕೂಟಗಳ ಉಕಾರಕ್ಕೆ ತಂದಿದ್ದಿತು. ಈ ರೀತಿ ಅಖಂಡ ಭಾರತದೊಳಗಡೆಯಲ್ಲಿ, ಸಮರ್ಥ ಹಾಗೂ ದೊಡ್ಡ ವಿಭಾಗಗಳೇ ಇರುವಂತೆ ಮಾಡುವ ಹೊಣೆಗಾರಿಕೆ ಮತ್ತು ಅಧಿಕಾರವು ಕೇಂದ್ರ ಸರಕಾರದ್ದಾಗಿದೆ. ಅಂದಮೇಲೆ ಇದೇ ದೃಷ್ಟಿಯಿಂದ ಮೈಸೂರು ಮತ್ತು ಕರ್ನಾಟಕದ ಇತರ ಭಾಗಗಳನ್ನು ಒಂದುಗೂಡಿಸಿ, ದೊಡ್ಡ ಕರ್ನಾಟಕ ಸಂಸ್ಥಾನವನ್ನು ಮೂಡಿಸುವ ಮೂಲಕ ಸಣ್ಣ ಮೈಸೂರು ಸಂಸ್ಥಾನವನ್ನ ಅಂತರ್ಧಾನಗೊಳಿಸುವುದು ಕೇಂದ್ರ ಸಂಕಲ್ಪದ ಕರ್ತವ್ಯವಲ್ಲವೆ? ಈ ಪುನರ್ರಚನೆಗನುಸಾರವಾಗಿ ಕೊಚ್ಚಿ ತಿರುವಾಂಕೂರು ಕೂಟ ಮತ್ತು ಕೈದರಾಬಾದು ಸಂಸ್ಥಾನವೂ ಅಂತರ್ಧಾನಗೊಳ್ಳಿಲಿವೆ. ಅದೇ ಕಾಲದಲ್ಲಿ ಮದ್ರಾಸ್ ಪ್ರಾಂತ್ಯವು ಒಡೆಯಲ್ಪಡುವುದೆಂಬುದೇನೋ ನಿಜ. ಆದರೆ ಅಡಳಿತೆಯ ಅನುಕೂಲತೆ ಮತ್ತು ಯೋಗ್ಯತೆಗಾಗಿ ದೊಡ್ಡ ವಿಭಾಗಗಳನ್ನು ರಚಿಸಲು ಹೊರಟ ಭಾರತ ನ್ಯಾಯಕಾರಾದರೂ, ಆಡಳಿತೆಗೆ ಅನಾನುಕೂಲತೆಗಳನ್ನೊಡ್ಡುವಂತಹ ಮದ್ರಾಸಿನಷ್ಟು ವಿಸ್ತಾರವಾದ ವ್ಯಾಪ್ತ್ಯಗಳಿರಬೇಕೆಂದು ಬಯಸಿಲ್ಲ. ಸಂಸ್ಥಾನೆಗಳ ಗಡಿರಚನೆಗೆ ಸಂಕೋಚ ಮಿತಿಯೊಂದಿರುವಂತೆಯೇ ವಿಸ್ತಾರಮಿತಿಯೂ ಇದೆ. ಭಾಷಾವಾರಾಗಿ ಬೊಂಬಾಯಿ ಮತ್ತು ಮದ್ರಾಸ್ ಪ್ರಾಂತ್ಯಗಳನ್ನು ವಿಂಗಡಿಸಿ, ಸಮೀಪದ ಸಂಸ್ಥಾನಗಳನ್ನು ಸೇರಿಸಿಕೊಂಡು ಕಟ್ಟುವ ಭಾಷಾನ್ವಯ ಸಂಸ್ಥಾನಗಳೆಲ್ಲವೂ ವಿಸ್ತೀರ್ಣ ಮತ್ತು ಯೋಗ್ಯತೆಗಳಲ್ಲಿ ಕೇಂದ್ರ ಸರಕಾರವಿಟ್ಟುಕೊಂಡಿರುವ ಅಂದಾಜಿಗನುಗುಣವಾಗಿಯೇ ಇರುವಂತಹವೆಂಬುದು ಖಂಡಿತ. ಆದ್ದರಿಂದ ಇನ್ನು ಭಾರತ ಸರಕಾರವೇ ಭಾಷಾವಾರು ಸಂಸ್ಥಾನ ರಚನೆಯು ಹೊಣೆ ಹೊರಬೇಕು ತನ್ನ ಪಾಲಿನಕರ್ತವ್ಯವಾಗಿಯೇ ಅದನ್ನು ಕೈಕೊಳ್ಳಬೇಕು; ಸಂಬಂಧಪಟ್ಟ ಭಾಷಾವಾರು ಭಾಗಗಳವರು ತಮ್ಮೊಳಗೊಂದಾಗಿ ಸರ್ವಸಮ್ಮತ ಯೋಜನೆಗಳನ್ನು ಮುಂದಿಡಬೇಕೆಂಬ ಈ ವರೆಗಿನ ಶರ್ತವನ್ನು ಅದಿನ್ನು ರದ್ದುಪಡಿಸಬೇಕು. ತಮ್ಮ ಹಿತಕ್ಷಯಕ್ಕೇ ಅಲ್ಲಿ– ಇರಸ್ತಿಕೆಗೇನೇ ಆಗತ್ಯವೆಂದು ಸ್ವಭಾಷಾ ಪ್ರಾಂತ್ಯಕ್ಕಾಗಿ ಅಗ್ರಹಪಡಿಸುತ್ತಿರುವ ಭಾಷಾವಾರು ಭಾಗಗಳವರಲ್ಲಿ ಅದಕ್ಕನುಗುಣವಾದ ಕೆಲಸಗಳನ್ನು ಮಾಡುವ

ಈ ವರ್ತನೆಯ ಅರ್ಥವೇನು?

ನವ್ಯ ಪ್ರಾಂತೀಕ ಮಂತ್ರಿಗಳ ಜಿಲ್ಲಾ ಸಂಚಾರಗಳು ಮಿತಿಮೀರಿನೆ–ಈ ಸಂಚಾರಗಳಲ್ಲಿ ಮೇಲು ವರ್ಗದವರೊಡನೆ ಹೊಕ್ಕು ಬಳಕೆ ಮತ್ತು ಅಪಹಂದು ರೀತಿಯ ನಿಶ್ಚಿತ ಕಾರ್ಯಕಲಾಪಗಳನ್ನಲ್ಲದೆ ಸಾಮಾನ್ಯ ಜನತೆಯ ಸಂಪರ್ಕವನ್ನು ಮಂತ್ರಿಗಳು ಬೆಳೆಸುತ್ತಿಲ್ಲ-ಎಂಬ ದೂರು ಈಗ ಸರ್ವಸಾಮಾನ್ಯವಾಗಿ ಮತ್ತು ಸಹಜವಾಗಿಹುಬ್ಬದೆ. ಮಾನ್ಯಮುಖ್ಯಮಂತ್ರಿಗಳು ಮತ್ತು ಮಾನ್ಯ ಕೃಷಿಇಲಾಖಾ ಮಂತ್ರಿಗಳು ಈಗ ತಾನೇ ದಕ್ಷಿಣಕನ್ನಡವನ್ನು ಸಂದರ್ಶಿಸಿದ ಸಂದರ್ಭದಲ್ಲಿ ಅವರ ಸಂಚಾರದ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳಿಂದಲೂ ದೂರು, ಆಕ್ಷೇಪಗಳು ಹೊರಬಿದ್ದಿವೆ. ಅದ್ದರಿಂ ಈ ವಿಷಯವು ವಿಚಾರಣೀಯವಿದೆ.

ಉತ್ಸವ ಮೂರ್ತಿಗಳಂತೆ ಬಂದ ಬಂದ ಮಂತ್ರಿಗಳೆಲ್ಲರೂ ಅದೊಂದು ನಿಶ್ಚಿತ ಗಡಿಕಟ್ಟೆಗಳಲ್ಲೇ ನಿಂತು ಹೊರಬರುಹೋಗುವ ಬದಲಿಗೆ ಸಾರ್ವಜನಿಕ ಸುಖದುಃಖಗಳನ್ನು ಅರಿತು ಕೊಳ್ಳುವ ಸಂಯೋಗಗಳನ್ನು ವರು ಸಂಪಾದಿಸಿಕೊಳ್ಳುವಂತಾಗಬೇಕೆಂಬುದು ನಿರ್ವಿವಾದ. ಇಂತಹ ಸಮುದ್ದೇಶ ಸಾಧನೆಗಾಗಿ ಮಂತ್ರಿಗಳು ತಿಂಗಳಿಗೆ ಸಾಲ್ವರಂತಲ್ಲ-ಆನುದಿನವೂ ಒಬ್ಬನಲ್ಲದಿರುವಾಗ ಇನ್ನೊಬ್ಬ ಜನತೆಯ ನಡುವೆ ಹಾಜರಿದ್ದರೂ ಸಂತೋಷವೇ. ಮಂತ್ರಿಸ್ಥಾನದಲ್ಲಿದ್ದವರು ಆಫೀಸು ಬಿಡದಿದ್ದ ಆ ಕಾಲದಲ್ಲಿ 'ಗೂಡಿನೊಳಗಿನ ಗೂಬೆಗಳು' ಎಂಬ ಟೀಕೆ-ಆಗಾಗಮುಖತೋರಿಸಿ ಮಂತ್ರಿತ್ವದ ಘನತೆ ತಗ್ಗಿಸುತ್ತಿರುವ ಉಂಡಾಡಿಗರೆಂದು ಈ ಕಾಲದಲ್ಲೂ ನಿಂದೆ–ಇದಕ್ಕರ್ಥವಿಲ್ಲ ಇದೆಯಾದರೆ, ಜನರಿಗೆ ಟೀಕೆಸುವುದೊಂದಲ್ಲದೆ ಬೇರಾವುದೂ ತಿಳಿದಿಲ್ಲವೆಂಬ ಒಂದೇ ಒಂದು ಅರ್ಥ ಹೊರತು ಬೇರಿಲ್ಲ.

ಜನತಾಸಂಪರ್ಕ ದೃಷ್ಟಿಯಿಂದ ನಮ್ಮ ಮಂತ್ರಿಗಳ ಇಡುಗಿರಿಗಿನ ಸಂಚಾರ ಕಾರ್ಯ ಕ್ರಮಗಳು ತೃಪ್ತಿಕರವಲ್ಲವೆಂಬುದನ್ನೊಪ್ಪಬೇಕು. ಆದರೆ ಈ ಅತೃಪ್ತಿಕರ ವಿಧಾನಗಳಿಗೆ ಹೊಣೆಯಾರು? ಮಂತ್ರಿಗಳೇ? ಮಂತ್ರಿಗಳ ಸ್ಥಳೀಯ ಕಾರ್ಯಕ್ರಮಗಳನ್ನು ನಿರ್ಮಿಸುವ ಇಲ್ಲಿಯವರಲ್ಲವೇನು? ಅಂದ ಮೇಲೆ ಮಂತ್ರಿಗಳ ಜಿಲ್ಲಾ ಸಂಚಾರ ಕಾರ್ಯಕ್ರಮಗಳ ಲೋಪ ದೋಷಗಳಿಗೆ ಹೊಣೆಗಾರರು ಯೋಗ್ಯತೆ ಮತ್ತು ಅನುಕೂಲತೆ ಇಲ್ಲವೆಂಬುದನ್ನು ಈಗಲಾದರೂ ಅಭಿಮಾನ ಬಿಟ್ಟು ಒಪ್ಪಿಕೊಳ್ಳಬಹುದು. ಆದರೂ ಅದೀಗ ಕೇಂದ್ರ ಸರಕಾರದ ಪಾಲಿನ ಕರ್ತವ್ಯವಾಗಿ ಪೂರ್ಪಟ್ಟಿರುವಾಗ ಭಾರತ ನ್ಯಾಯಿಕರು ಕೂಡಾ ತಾವೂ ಈ ಮಟ್ಟಿಗೆ ಸೋತೆವೆನ್ನಬಲ್ಲರೆ? ಸಾಧ್ಯವಿಲ್ಲ; ಹಾಗನ್ನಲು ಬೇಕಾದ ಕಾರಣವೂ ಇಲ್ಲ. ಪರ್ಯಾಲೋಚನೆಯಲಾದರೂ ಮನಸ್ಸು ಮಾಡಿದರೆ ಯಾವ ಮುಹೂರ್ತದಲ್ಲೂ ಈ ಕಾರ್ಯವಾಗಬಲ್ಲುದು. ಅವರೆಂದೂ ಕರ್ತವ್ಯ ಭ್ರಷ್ಟರಾಗಲಾರರೆಂದೂ, ಆದ್ದರಿಂದ್ದಸಕಾಲದಲ್ಲಿ ಭಾಷಾವಾರು ಸಂಸ್ಥಾನಗಳ ರಚನೆಯಾಗುವುದೆಂದೂ ನಂಬುತ್ತೇವೆ.

ಅವರುಗಳನ್ನು ರೂಪಿಸಿದ ಸ್ಥಳೀಯ ಕಾರ್ಯಕರ್ತರೇ ಹೊರತು ಮಂತ್ರಿಗಳಲ್ಲ. ಪ್ರಾಂತೀಕ ಮಂತ್ರಿಗಳನ್ನು ಮಾತ್ರವೆಂದೇನು– ಕೇಂದ್ರ ಮಂತ್ರಿ ಮಾನ್ಯ ಸಂತಾನಂ, ಸಮತಾವಾದಿ ನಾಯಕ ಜೈ ಪ್ರಕಾಶ ನಾರಾಯಣರಂಥವರು ಬಂದಿದ್ದಾಗಲೂ ಈ ಜಿಲ್ಲೆಯಲ್ಲಿ ಅಂತಹ ವರ್ಗದವರ ಸ್ವಾಗತಕ್ಕೆ ಮೀಸಲಿಟ್ಟಿರುವ ಈ 'ಮೇಲು ವರ್ಗ'ವೇ ಮುಂದಾಗಿದ್ದಿತು ಹೊರತು ಜನ ಸಾಮಾನ್ಯರಲ್ಲ.

ಆದರೂ, ಯಾವ ಕಾರಣದಿಂದಲೋ– ಈ ಬಾರಿ ಪ್ರಧಾನ ಮಂತ್ರಿ ಮತ್ತು ಬೇಸಾಯ ಮಂತ್ರಿಗಳ ಆಗಮನದ ವೇಳೆ ದ.ಕ. ಜಿಲ್ಲಾ ಕಾಂಗ್ರೆಸ್ ವಾತಾವರಣದಲ್ಲಿ ಗಲಿಬಿಲಿ ನಡೆದಿದ್ದಿತು. 'ಮಂತ್ರಿಗಳ ಕಾರ್ಯಕ್ರಮದಲ್ಲಿ ತಮ್ಮ ಸಹಾನುಭೂತಿಯಿಲ್ಲ ಅದು ತಮ್ಮದಲ್ಲ' ಎಂಬರ್ಥದ ಪ್ರಕಟಣೆ ಒಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಹೆಸರಿನಲ್ಲಿಶ್ರ. 'ಮಂತ್ರಿಗಳ ಕಾರ್ಯಕ್ರಮಗಳಿಗೆಸಹಕಾರ, ಸಹಾನುಭೂತಿ ಕೊಡಬೇಡಿ' ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರಿಂದ ಸ್ಥಳೀಯ ಸಮಿತಿಗಳಿಗೆ ಸೂಚನೆಗಳು ಬಂದುದು–ಕುರಿತು ಅಲ್ಲಲ್ಲಿ ಅಭಿಪ್ರಾಯ ಘರ್ಷಣೆಗಳೆದ್ದುದು–ಅಂತಹ ಸೂಚನೆಗಳನ್ನು ಕೊಟ್ಟ ಕಾಂಗ್ರೆಸ್ ಕಾರ್ಯಕರ್ತರೇ ಕೊನೆಗೆ ಮಂತ್ರಿಗಳ ಜತೆಯಲ್ಲಿ ಕಾಣಿಸಿಕೊಂಡುದು–ಮುಂತಾದ ಮಾತುಕೃತ್ಯತ್ಯಾಸ ಮತ್ತು ಗಲಿಬಿಲಿಗಳು ಕೇಳಿಬಂದಿವೆ; ತೋರಿಬಂದಿವೆ. 'ಮಾನ್ಯ ಮಂತ್ರಿಗಳ ಆಗಮನ ಸಂಬಂಧವಾದ ಎಲ್ಲಾ ಕಾಂಗ್ರೆಸ್ ಕಮಿಟಿಯ ಪರವಾಧಿಕೃತ ಕಾರ್ಯಕ್ರಮವನ್ನು ನಿಶ್ಚೆಪ್ರಕಟಿಸಲು ಕೆಲವೊಂದು ಕಾರಣಗಳಿದ್ದುದಾಗಿ ಅಸಾಧ್ಯ'ವೆಂದು ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳು ಪ್ರಕಟಿಸಿದ್ದರು.

ಇವೆಲ್ಲವುಗಳ ಅರ್ಥವೇನು? ನಮ್ಮ ಮಂತ್ರಿಗಳು ತಾವು ಇರಬೇಕಾದಂತಿಲ್ಲ ನಮ್ಮ ಕಾಂಗ್ರೆಸ್ ಕಾರ್ಯಕರ್ತರೂ ಇಲ್ಲಿ ಇರಬೇಕಾದಂತೆ ಇಲ್ಲ–ನಾವು, ಸಾರ್ವಜನಿಕರು ಕೂಡಾ ನಾವಿರಬೇಕಾದಂತೆ ಇಲ್ಲ—ಎಂಬುದು ಸತ್ಯ. ಇಂತಹ ಸ್ಥಿತಿಯಲ್ಲಿ ಎಲ್ಲರೂ ಮುಂದಾಗಿಹಮ್ಮನ್ನೆ ತಾವು ಸುಧಾರಿಸಿಕೊಳ್ಳಬೇಕಾದುದು ಅತ್ಯ. ಏನೋ ಅಸಹನೆ ಹಾಗೂ ಗೊಂದಲ ಮನೋವೃತ್ತಿಯನ್ನು ಪ್ರದರ್ಶಿಸಿದುದಾಗಿರುವ ಕಾಂಗ್ರೆಸ್ ಕಾರ್ಯಕರ್ತರಾದರೂ ಈ ಸಂದರ್ಭದ ಕರ್ತವ್ಯ ಪಾಲನೆ ಮಾಡಿರುವರೇ?

'ಸಾರ್ವಜನಿಕ ಸಂಪರ್ಕವಿಲ್ಲದ, ಮೇಲು ವರ್ಗದವರು ಕೂಡಾಟ'ವೆಂಬುದಕ್ಕೆ ಕಾಂಗ್ರೆಸ್ ಕಾರ್ಯಕರ್ತರಿಗೆ ಈ ಬಾರಿಯ ಮಂತ್ರಿಪ್ರವಾಸದಕಡೆಗಿದ್ದ ಅತೃಪ್ತಿಕಾರಣವೆಂದು ನಂಬುವುದು ಅಸಾಧ್ಯ. ಕಾರ್ಯಕರ್ತರ ಸಹಕಾರ, ಕೂಡಾಟವಿಂದಲೇ ನಿಶ್ಚೈಸಲ್ಪಟ್ಟಿದ್ದ ಈ ಮೊದಲಿನ ಮಂತ್ರೀ ಸಂಚಾರ ಕಾರ್ಯಕ್ರಮಗಳಾವುವೂ ಈ ಮಟ್ಟಿಗೆ ಇದಕ್ಕೆ ತಿ ಭಿನ್ನವಾಗಿದ್ದುದಿಲ್ಲ. ಅಂದಮೇಲೆ ಇದರ ಸಮಸ್ಥಿತಿಯೇನು?

ಮಂತ್ರಿಗಳು ಮಾತ್ರವಲ್ಲ, ನವ್ಯ ಕಾಂಗ್ರೆಸ್ ಕಾರ್ಯಕರ್ತರು ಕೂಡಾ ಜನತೆಯಿಂದ ದೂರ

ಜಾಗತಿಕ ರಂಗ

ಅಂತರಾಷ್ಟ್ರೀಯ ವಿದ್ಯಮಾನಗಳೆಲ್ಲವೂ ಹೆಚ್ಚು ನಂಶ ಯಥಾಪ್ರಕಾರ ಸಾಗಿವೆ.

ಚೈನದಲ್ಲಿ ಕಮ್ಯೂನಿಸ್ಟ್ ಸೇನೆಗಳು ಅತ್ಯಂತ ಕ್ಷಿಪ್ರ ಗತಿಯಿಂದ ಚೈನದ ಆಗ್ನೇಯ ಭಾಗಗಳನ್ನು ಆಕ್ರಮಿಸಿಕೊಳ್ಳುತ್ತಾ ಉತ್ತರಕ್ಕೆ ತಿರುಗಿ ಈಗ ರಾಷ್ಟ್ರೀಯ ಸರಕಾರದ ರಾಜಧಾನಿಯಾಗಿರುವ ಗುಡ್ಡಗಾಡು ವಲಯ ಚಂಗ್‌ಕಿಂಗಿನ ಮೇಲೆ ಬೀಳುವ ಸಿದ್ಧತೆಯಲ್ಲಿವೆ. ಎಲ್ಲಾ ದೇಶಗಳೂ ಕಮ್ಯೂನಿಸ್ಟ್ ಚೈನಕ್ಕೆ ಮನ್ನಣೆ ಕೊಡುವ ಸಂಭವ ಕಾಣುತ್ತಿದೆ. ಇತ್ತ ಚೈನೀ ರಾಷ್ಟ್ರೀಯ ಸರಕಾರವು ತನ್ನ ಆಪತ್ಸಾನಕಾಲದ ನಿಲ್ದಾಣವಾಗಿ ಮಾಡಿರುವ ಚೈನದ ನೈಋತ್ಯ ಮೂಲೆಗೂ ಬರ್ಮದ ಲಾಶಿಯೋವಿಗೂ ಸಂಬಂಧ ಸಂಪೂರ್ಣವಾಗುವಂತೆ, ಹಳೆಯ ಬರ್ಮಾ ರಸ್ತೆಯನ್ನು ತೆರೆಯುವ ತಯಾರೀ ಮಾಡುತ್ತಿದೆ- ರಾಷ್ಟ್ರೀಯಂನ್ನೋಡಿಸಿಕೊಂಡು ಕಮ್ಯೂನಿಸ್ಟರು ಈ ರಸ್ತೆ ಹಿಡಿದು ಬರ್ಮದೊಳಕ್ಕೂ ನುಗ್ಗುವಂತಾಗ ಬಹುದಾದ್ದರಿಂದ ಈ ಘಟನೆಯು ಹೊಸ ವಿದ್ಯಮಾನಗಳಿಗವಕಾಶಕೊಡಬಹುದು.

ಫ್ರಾನ್ಸಿನಲ್ಲಿ ಉರುಳಿಬಿದ್ದ ಸರಕಾರದ ಬದಲಿಗೆ ಹೊಸ ಮಂತ್ರಿಮಂಡಲ ರಚಿಸುವದೇ ಅಸಾಧ್ಯವಾಗುವ ಬಿಕ್ಕಟ್ಟಿದ್ದಿದೆ. ರಶ್ಯಾ-ಟೀಟೋವಿವಾದ, ಫ್ರೆಂಚ್ ವಸಾಹತಾದ ಇಂಡೋ ಚೈನದ ಅಂತರ್ಯುದ್ಧ, ಮತ್ತಿತರ ರಂಗಗಳ ಘರ್ಷಣೆಗಳು ಯಥಾ ಪ್ರಕಾರ ಮುಂದೊತ್ತುತ್ತವೆ "ಇಂಡೋ ಚೈನದಲ್ಲಿ ಶಾಂತಿಸ್ಥಾಪಿಸಲು ಪಂಡಿತ ಜವಹರಲಾಲರು ನಡೆಸುವ ಯಾವ ಪ್ರಯತ್ನ ಕ್ಕಾದರೂ ನಮ್ಮ ಸಂಪೂರ್ಣ ಸಹಾನುಭೂತಿಯಿದೆ" ಎಂದು ಇಂಡೋಚೈನಾ ಸರಕಾರದ ಹೇಳಿಕೆಯಿದೆ ಸಂಯುಕ್ತ ರಾಷ್ಟ್ರಸಂಘ ರಂಗದಲ್ಲಿ ನಿತ್ಯದ ತರ್ಕಗಳು ನಡೆದಿವೆ.

× × ×

ಭದ್ರತಾ ಕೌನ್ಸಿಲಿನಲ್ಲಿ ಕಿರವಾದ ವೀರು ಸ್ಥಾನಗಳ ಪೈಕಿ ಒಂದಕ್ಕೆ ಭಾರತವು ರಾಷ್ಟ್ರಕೂಟದ ಮಹಾಧಿವೇಶನದಲ್ಲಿ 58ರಲ್ಲಿ 56 ಮತಗಳನ್ನು ಪಡೆದು ಆರಿಸಲ್ಪಟ್ಟಿದೆ. ಉಳಿದ ಎರಡು ಸ್ಥಾನಗಳಿಗೆ ಎಕಾದರ್ ಮತ್ತು ಯೂಗೊಸ್ಲೇವಿಯಗಳು ಚುನಾವಣೆಗೊಂಡಿವೆ. ಕಾಶ್ಮೀರದಂತಹ ವಿವಾದಗಳಿರುವಾಗ ಭಾರತವು ಭದ್ರತಾ ಕೌನ್ಸಿಲಿಗಾರಿ ಸಲ್ಲತಕೂಡದೆಂದು ಅಲ್ಲಿ ಪಾಕಿಸ್ತಾನದ ಪ್ರತಿನಿಧಿಯಾಗಿರುವ ಸಾಕಿಸ್ತಾನ್ ವಿದೇಶಮಂತ್ರಿ ಸರ್. ಝುಫರುಲ್ಲಾಖಾನ್ ವಿಶೇಷ ಅಪಪ್ರಚಾರ ನಡಿಸಿದ್ದರಲ್ಲದೆ, ಎಲ್ಲಾ ಸದಸ್ಯರುಗಳಿಗೂ ಖಾಸಗಿಯಾಗಿ ಕಿವಿಯೂದಿದ್ದರೆಂದು ತಿಳಿದುಬರುತ್ತದೆ ಆದರೂ ಹೆಚ್ಚಿನಂಶ ಸರ್ವಸಮ್ಮತಿಯಿಂದೆ ಬಂತೆ ಭಾರತವು ಭದ್ರತಾ ಕೌನ್ಸಿಲಿಗಾರಿ ಸಲ್ಪಟ್ಟುದನ್ನು ಕಂಡು "ಇದು ನಮ್ಮನ್ನು ಪೇಚಿನಲ್ಲಿ ಸಿಕ್ಕಿಸಿ ಹಾಕಿದೆ" ಎಂದು ಉದ್ಗರಿಸಿದ್ದಾರೆ. ಮತ್ತೊಂದು ಸ್ಥಾನಕ್ಕೆ ರಶ್ಯದ ಪರವಾಗಿ ಲಿಮೇ ದ್ವಾರಿಯಾಗಿದ್ದ ಝುಕೊಸ್ಲೋವೇಕಿಯಕ್ಕೆ 20 ಮತ್ತು ರಶ್ಯದ ಪ್ರತಿವಾದಿ ಯುಗೊಸ್ಲೇವಿಯಕ್ಕೆ 37 ಮತಗಳು ದೊರೆತು ಯುಗೊಸ್ಲೇವಿಯವಾರಿ ಸಲ್ಪಟ್ಟುದು ರಶ್ಯವನ್ನು ವಿಶೇಷ ಕೆರಳಿಸಿದೆ. ಈ ಚುನಾವಣೆಯಾದೊಡನೆ ರಶ್ಯದ ವಿಶಿಸ್ಟ್ಕಿಯವರು ಯುಗೊಸ್ಲೇವಿಯವನ್ನು ಕಠಿಣ ಮಾತುಗಳಿಂದ ಟೀಕಿಸಿ, ಅಧ್ಯಕ್ಷರ ಎಚ್ಚರಿಕೆಯನ್ನೂ ಅಲಕ್ಷಿಸಿ ಮಾತಾಡಿ "ಯುಗೊಸ್ಲೇವಿಯವು ಪೂರ್ವ ಯುರೋಪು ರಾಷ್ಟ್ರಗಳ ಪ್ರತಿನಿಧಿಯಾಗಿಲ್ಲ; ಅಗ ಕೊಡದು; ಆಗುವಂತಿಲ್ಲ" ಎಂದಿದ್ದರು.

ಜಿಲ್ಲಾ ಬೋರ್ಡು ಅಧ್ಯಕ್ಷರ ಚುನಾವಣೆಯು— ಇದೇ ತಾ. 24ರಲ್ಲು ಜಿಲ್ಲಾಬೋರ್ಡಿನ ಸಭಾಭವನದಲ್ಲಿ ಸ್ಪೆಶಲ್ ಆಫೀಸರ್ ಜನಾಬ್ ಸೈಯದ್ ಅಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸದಸ್ಯರ ಪ್ರಮಾಣ ವಚನಗಳಾದ ಮೇಲೆ ಶ್ರೀ ಬಿ. ಮಂಜಯ್ಯ ಹೆಗ್ಡೆ, ಎದ್ದೇಟ್ ಇದರು ಶ್ರೀ ಉಮೇಶರಾಯರಿಂದ ಸೂಚಿಸಲ್ಪಟ್ಟು ಶ್ರೀ ಕೆ. ಸಿ. ಮುಕುಂದ ಪ್ರಭುಗಳಿಂದ ಅನುಮೋದಿಸಲ್ಪಟ್ಟು ಸರ್ವಾನುಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟು ಅಧ್ಯಕ್ಷಪೀಠನನ್ನೇರಿದರು. ಅನಂತರ ಶ್ರೀಗಳಾದ ಉಮೇಶರಾವ್, ಕೆ. ಸೂರಪ್ಪಶೆಟ್ಟಿ, ಡಾ। ಶೇಷರಾವ್, ಎಸ್. ಎಸ್. ಪರಮೇಶ್ವರಯ್ಯ, ಎಂ ಕೃಷ್ಣಯ್ಯ ಶೆಟ್ಟಿ, ಡಾ। ಚಂಪ, ಶ್ರೀ. ಸದಾಶಿವರಾವ್, ಶ್ರೀಮತಿ ಕಲ್ಯಾಣಿ ಡಿ. ಶೆಟ್ಟಿ ಮೊದಲಾದವರು ಅಭಿನಂದನ ಭಾಷಣಗಳಾದುವು. ಆರಂಭದಲ್ಲೂ, ಸಭಾಂತ್ಯದಲ್ಲೂ ಸ್ಪೆಶಲ್ ಆಫೀಸರರು ಭಾಷಣವಿತ್ತರು. ಶ್ರೀ ಬಿ. ಮಂಜಮ್ಮ ಹೆಗ್ಡೇರು ಧನ್ಯವಾದಗಳನ್ನರ್ಪಿಸಿ ಸಹಕಾರ ಕೋರಿದರು. ಟೀಪಾರ್ಟಿಯೊಂದಿಗೆ ಸಭಾಂತ್ಯವಾಯಿತು.

ಮುಂಚಿನ ದಿನ ಜರಗಿದ ಕಾಂಗ್ರೆಸ್ ಪಾರ್ಟಿ ಸಭೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಉಮೇದ್ವಾರರಾಗಿದ್ದ ಶ್ರೀ ಬಿ. ಮಂಜಯ್ಯ ಹೆಗ್ಡೆರಿಗೆ 28, ಶ್ರೀ ಉಮೇಶರಾಯರಿಗೆ 7 ಮತಗಳು ದೊರೆತಿದ್ದುವು.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
O. S. No. 209/1939
R. E. P. No. 158/1947
P. ಸಂಜೀವರಾವ್, P. ವೆಂಕಟ್ರಾಯರು
ನಂಗ. ಮಂಗಳೂರು ಸರ್ಬರ್ಕೋರ್ಟು O. S. 122/1934ನೇ ವ್ಯಾಜ್ಯದಲ್ಲಿ ನೇಮಕಪಟ್ಟ ರಿಸೀವರ್. ಮಂಗಳೂರು ತಾಲೂಕು ಮಂಗಳೂರು ಶಹರದಲ್ಲಿ .... ಆರ್ಜದಾರ.

ಪತ್ತು

ಪೆರೆಯಿಲ್ ಕೊರನ್ನಾಯರ, ಕುಂಞಂಣಿ ನ್ನಾಯರ ಆಳಿಯ, ನ ಉಚ್ಚಿಲೆ ಆದಮನ ಮಗ, ಜಾತಿ ಗ್ರಾವನದ ಪೋಲ್ಚಾರೆಯಲ್ಲಿ...
... ... ವೈಸಾಂಜಂಟ.

ಮೇಲ್ಕಂಡ ಅನ್ಯಜಾರಿಯಲ್ಲಿ ಆರ್ಜದಾರನ ಕಡೆಯಿಂದ ಹಾಜ್ರು ಪಡ್ಡಿದ ಏಲಂ ವಿಸ್ತಾರಿನ ರರ್ತ ನಿರ್ಜಾರಿಯಿಸುವರೆ ಸದ್ರಿ ಆಸ್ತಿಜಾರಿಯು ತಾರೀಕು 5-11-1949ಕ್ಕೆ ಯಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Kamalaksha Kamath,
Advocate for Petitioner.
Kasaragod 25-10-1949

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.
ತಾರೀಕು—28-10-49 ರಿಂದ
ಜೊಂಬೀ ಟೋಕಿಸ್‌ನವರ

ಮಿಲನ್ (ಟಾಗೂರರ ಕಥೆ)

ದಿಲೀಪ್‌ಕುಮಾರ್, ರಂಜನ್,
ತಾರೀಕು2-11-49 ರಿಂದ ಮಹಾಭಾರತದಿಂದ
ರಾಜಸೂಯಯಾಗ (ಕನ್ನಡದಲ್ಲಿ)
ತದನಂತರ
ಹೀರಾ
ಯಂ ಎಸ್. ಸುಬ್ಬುಲಕ್ಷ್ಮಿ, ಮತ್ತು ಇತರರು.



ಕಾರ್ಕಳ, ಕುಂದಾಪುರ, ಉಡುಪಿಯಲ್ಲಿ ಮಂತ್ರಿದ್ವಯರು.

ಮಾನ್ಯ ಪ್ರಧಾನಮಂತ್ರಿ ಪಿ. ಎಸ್. ಕುಮಾರಸ್ವಾಮಿ ರಾಜಾ ಮತ್ತು ಕೃಷಿ ಇಲಾಖೆಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಇದೇ ತಾ. 23ರಲ್ಲು ಸಂಜೆ ಶ್ರೀ ಗಳಾದ ವಯು, ಶ್ರೀನಿವಾಸ ಮಲ್ಯ, ವಿ.ಎಸ್. ಕುಡ್ವ, ಕೆ. ಸದಾನಂದ ಹೆಗ್ಡೆ ಮೊದಲಾದವರೊಂದಿಗೆ ಕಾರ್ಕಳಕ್ಕೆ ಆಗಮಿಸಿದರು. ಶ್ರೀ. H. S. ಹುಸ್ಸೆನ್, ಸಾಹೇಬ್, ಶ್ರೀ ವೆಂಕಟೇಶ ಭಟ್ಟ, ಶ್ರೀ. ಕೆ. ವೈ. ವೆಂಕಬಾಲ ಹೆಗ್ಡೆ, ಮೊದಲಾದವರು ಸ್ವಾಗತವಿತ್ತು ಹೂಮಾಲಿಕೆಗಳನ್ನು ಅರ್ಪಿಸಿದರು. ರಾತ್ರಿ ಭೋಜನ ತೀರಿಸಿ ಬಂಗ್ಲೆಯಲ್ಲಿ ಉಳಕೊಂಡರು.

ಮರುದಿನ ಬೆಳಿಗ್ಗೆ ಗೋಪಯೆಶ್ವರ ಚಿಟ್ಟುವನ್ನು ನೋಡಿಕೊಂಡು ಹರಿಜನ ಶಬರಿ ಆಶ್ರಮವನ್ನು ಸಾದರ್ಶಿಸಿದರು. ಆಶ್ರಮ ಅಭಿವೃದ್ಧಿ ಹಾಗೂ ಹರಿಜನೋದ್ಧಾರದ ಕುರಿತು ಕೆಲವು ಸೂಚನೆಗಳನ್ನು ಶ್ರೀಗಳಾದ ಎನ್ಎಸ್. ಅಧಿಕಾರಿ, ಕೆ. ಪೈ, ಮಹಾಬಲ ಹೆಗ್ಡೆ ನೆಮದಲಾದವರು ಮಂತ್ರಿಗಳ ಗಮನಕ್ಕೆ ತಂದರು. ಬಳಿಕ ಮಂತ್ರಿಗಳಿಬ್ಬರೂ ಜೈಹಿಂದ್ ಟಾಕೀಸಿನಲ್ಲಿ ಕೂಡಿದ ಸಾರ್ವಜನಿಕ ಸಭೆಗೆ ಆಗಮಿಸಿದಾಗ ಬೇಂಡ್‌ವಾಲಗಾದಿ ಬಿರುದಾವಳಿಗಳಿಂದ ಸ್ವಾಗತ ಪಡೆದರು. ಕಾರ್ಕಳ ಪಂಚಾಯತ ಬೋರ್ಡು ಮತ್ತು ಸಾರ್ವಜನಿಕರ ಪರವಾಗಿ ಮಾನಪತ್ರಗಳು ಮಂತ್ರಿಗಳಿಗೆ ಅರ್ಪಿಸಲಾದುವು. ಪ್ರಧಾನಮಂತ್ರಿಗಳು ಕೃಷಿ, ನೀರಾವರಿ ಯೋಜನೆ ಇತ್ಯಾದಿ ವಿಷಯಗಳು ಪಂಚಾಯತ ಬೋರ್ಡಿನ ಮಾನಪತ್ರದಲ್ಲಿ ತೀಳಲ್ಪಟ್ಟಿವೆಯಾದರೂ ಆ ವಿಷಯಗಳ ಸುಧಾರಣೆ ಯೋಜನೆಯೇ ಸರಕಾರದ ಮುಂದಿರುವುದೆಂದರು. ಆಹಾರವಸ್ತುಗಳನ್ನು ಹೆಚ್ಚು ಹೆಚ್ಚಾಗಿ ಬೆಳೆಯಿಸುವ ಕಾರ್ಯಕ್ರಮದ ಕುರಿತು ಮಾತನಾಡುತ್ತಾ, ಕಾರ್ಕಳದಂತಹ ಊರಿಗೆ ತೀರಾ ಅಸಾಯಕ್ಕೆ ಬೇಕಾದ ಕಾಡುಸಂಪತ್ತು ಇಷ್ಟಾನುಸಾರವಿದೆಯೆಂದರು. ರಾಮಸಮುದ್ರದಂತಹ ನೀರಾವರಿ ಯೋಜನೆಗಳ ಪ್ರಸ್ತಾಪವನ್ನೂ ಮಾಡಿದರು. ಆದರೆ ವರ್ಷದಲ್ಲಿ 170ಇಂಚುಗಳಷ್ಟು ಬಿದ್ದ ಮಳೆಗಾಲದ ಹೆಚ್ಚಿನಂಶವು ಸಮುದ್ರಪಾಲಾಗಿ ಹೋಗುತ್ತದೆ. ಚಿಕ್ಕ ನೀರಾವರಿ ಯೋಜನೆಗಳು ಕೈಕೊಳ್ಳತಕ್ಕಂತಹ ಯೋಜನೆಗಳೇ ಮಾನಪತ್ರದಲ್ಲಿ ಸೂಚಿಸಿದ ಹೆಚ್ಚಿನ ಕೆಲಸಗಳಿಗೆ ಸರಕಾರದ ಮನ್ನಣೆ ದೊರೆಯುವುದು ಎಂದರು. ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ದೋಷಗಳಿದ್ದಲ್ಲಿ ಅವನ್ನು ಸರಿಪಡಿಸಲು ಸರಕಾರವು ಸಿದ್ಧವಿದೆಯೆಂಬ ಭರವಸೆಯನ್ನು ಕೊಟ್ಟರು. ಜನತಾ ಸರಂಜಾಮಕ್ಕೆ ಎಲ್ಲರೂ ಕೊಡುತ್ತಿರುವ ಸಹಕಾರ ಬೆಂಬಲವನ್ನು ಇನ್ನೊಮ್ಮೆ ಸ್ಮರಿಸಿ ಮುಂದೆಯೂ ಆಂ

[ಕಡೇ ಪುಟದಿಂದ ಮುಂದುವರಿದುದು]

ಸುಧಾರ್ಹ ಸಾಧಾರಣ ಸೂಚಿ ತಾನಿಗೆ ಪ್ರಧಾನ ಮಂತ್ರಿಗಳು ಪೋಲೀಸ್ ಲ್ಯಾನಿನಲ್ಲಿ ಹೊಸತಾಗಿ ತೆರೆಯಲ್ಪಟ್ಟ ಮಹಿಳಾ ಕ್ಷೇಮಚಿಂತನ ಸಂಘದ ಕೇಂದ್ರವನ್ನು ಉದ್ಘಾಟಿಸಿದರು. ರಿಜರ್ವ್ ಪೋಲೀಸ್ ಪಡೆಯವರು ಗೌರವ ರಕ್ಷೆಯನ್ನು ಸಲ್ಲಿಸಿದರು. ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್‌ರು ಮಾನ್ಯ ಮಂತ್ರಿಗಳನ್ನು ಸ್ವಾಗತಿಸಿ, ಕೇಂದ್ರವನ್ನು ತೆರೆಯುವ ಅವಶ್ಯಕತೆಯನ್ನು ಸೂಚಿಸಿದರು. ಶ್ರೀಮತಿ ಪೂಂಜರು ಕಾಲೋಚಿತ ಮಾತುಗಳನ್ನಾಡಿದರು. ಮುಖ್ಯ ಮಂತ್ರಿಗಳು ಮಾತನಾಡುತ್ತಾ ಮಹಿಳಾ ಕ್ಷೇಮ ಚಿಂತನಾ ಅವಶ್ಯಕತೆಯನ್ನು ಸೂಚಿಸಿದರು. ಈ ಸ್ಥಳದಲ್ಲಿ ಗಾಂಧಿಜಿಯವರ ತೈಲಚಿತ್ರ ಅನಾವರಣ ಮಾಡುತ್ತಾ ಮಹಾತ್ಮಾಜೀಯವರ ಮಾದರಿಯನ್ನು ಪೋಲೀಸರೂ ಇತರ ಮಹಿಳೆಯರೂ ಅನುಸರಿಸಿ ಕಂತಮ್ಮ ಕರ್ತವ್ಯಗಳನ್ನು ನೆತೆಸುವಂತಾಗಲೆಂದು ಹೇಳಿದರು ಶ್ರೀ ಜೆಸ್; ಎಸ್- ಕಿಲ್ಲೆಯವರು ಮುಖ್ಯಮಂತ್ರಿಗಳ ಭಾಷಣವನ್ನು ಕನ್ನಡಿಸಿದರು. ಧನ್ಯವಾದಾರ್ಪಣೆಯಾದ ಬಳಿಕ ಮಾನ್ಯ ಮಂತ್ರಿಗಳು ಮೂಡಬಿದ್ರೆಗಾಗಿ ಕಾರ್ಕಳಕ್ಕೆ ಆಗಮಿಸಿದರು.

ಕೆಯೇ ಕೊಡಬೇಕಾಗಿ ವಿನಂತಿಸಿದರು. ಮಾನ್ಯ ಮಂತ್ರಿಗಳ ಇಂಗ್ಲಿಷ್ ಭಾಷಣವನ್ನು ಶ್ರೀ. ಎನ್. ಎಸ್. ಕಿಲ್ಲೆಯವರು ಭಾಷಾಂತರಿಸಿದರು. ಶ್ರೀ. ಎ. ಬಿ. ಶೆಟ್ಟರು ಮಾತನಾಡುತ್ತಾ, ಜಿಲ್ಲೆಗೆ ಹಲವು ಮಂತ್ರಿಗಳು ಆಗಾಗ್ಗೆ ಸಂದರ್ಶನ ಕೊಡುತ್ತಿರುವುದನ್ನು ಕೆಲವರು ಟೀಕೆಮಾಡುತ್ತಿರುವುದು ವಿಷಾದಕರ ವೆಂದರು. ಮದ್ರಾಸು ಪ್ರಾಂತದ ಒಂದು ಮೂಲೆಯಲ್ಲಿರುವ ದ. ಕ. ಜಿಲ್ಲೆಗೆ ಆಗಾಗ್ಗೆ ಮಂತ್ರಿಗಳು ಬಂದು ಇಲ್ಲಿಯ ಜನತೆಯು ಸಂಕಷ್ಟಗಳನ್ನು ಪರಿಶೀಲಿಸಿ ಅವುಗಳ ನಿವಾರಣೋಪಾಯಗಳ ಬಗ್ಗೆ ಗಮನ ಕೊಡುವಂತಾಗುವುದರಿಂದ ಅವರ ಸಂಚಾರವು ತುಂಬಾ ಪ್ರಯೋಜನಕಾರಿಯಾಗುವುದೆಂದರು.

ನೀರಾವರಿ ಯೋಜನೆ, ಕೆರೆಮದಗಗಳ ದುರಸ್ತಿ, ಸದಿಗಳಿಗೆ ಸೇತುವೆ, ಮಲೇರಿಯಾ ಜ್ವರದ ನಿವಾರಣೆ, ಕಾರ್ಕಳ ಆಸ್ಪತ್ರೆಯನ್ನು ಪ್ರಾತಿನಿಧಿಕರಣ ಮಾಡುವ ಯೋಜನೆ, ಸರಳರೀತಿ ಅರ್ಥಿಕ ಪರಿಸ್ಥಿತಿ ಮೊದಲಾದುವನ್ನು ಮಂದಟ್ಟಾಗುವಂತೆ ತೀರಿಸಿ ಜಿಲ್ಲೆಯು ಮಹಾಜನರು ಜನತಾ ಸರಕಾರಕ್ಕೆ ಮುಂದೆಯೂ ಹೆಚ್ಚಿನ ಬೆಂಬಲ, ಸಹಕಾರ ಕೊಡಬೇಕೆಂದರು.

ಕಾರ್ಕಳದಿಂದ ಮಂತ್ರಿಗಳು ಹೊರಟು ಹೆಬ್ರಿಗೆ ಬಂದಾಗ ಅವರನ್ನು ಬೇಂಡ್‌ವಾದ್ಯದಿಂದ ಸ್ವಾಗತಿಕರಿಸಲಾಯಿತು. ಸ್ಥಳೀಯ ಬೋರ್ಡುಶಾಲೆಯಲ್ಲಿ ನೆರೆದ ಮಹಾಜನ ಸಭೆಯ ಮುಂದೆ ಮಾನ್ಯ ಮಂತ್ರಿಗಳಿಬ್ಬರಿಗೂ ಮಾನಪತ್ರ ಅರ್ಪಿಸಲಾಯಿತು. ಹೆಬ್ರಿ ಅಸುಪಾಸಿನ ಜನತೆಯ ಸಂಕಷ್ಟ ನಿವಾರಣೋಪಾಯಗಳನ್ನು ಮಾನಪತ್ರದಲ್ಲಿ ಸೂಚಿಸಲಾಗಿತ್ತು. ಜಲ್ಲಿಜನರು ತಮಗಿತ್ತ ಸ್ವಾಗತಕ್ಕಾಗಿ ಆಭಾರ ವನ್ನಿತ್ತರು. ದುಷ್ಟ ಪ್ರಾಣಿಗಳು ಬೆಳೆಗೆ ಮಾಡುವ ಹಾವಳಿಯನ್ನು ತಡಗಟ್ಟುವರೆಗೆ ಈಗಾಗಲೇ ಜಿಲ್ಲಾ ಕೆಲೆಕ್ಟರರು ಹೆಚ್ಚಿನವರಿಗೆ ಲ್ಯಾಸೆನ್ಸು ಕೊಟ್ಟಿರುತ್ತಾರೆ. ಕಳ್ಳಕೋವಿಯುಳ್ಳವರು ಕೂಡಾ ಅವನ್ನು ಹಾಜರುಪಡಿಸಿ ಲ್ಯಾಸೆನ್ಸು ಪಡೆಯಬೇಕೆಂದರು. ಶ್ರೀ ಶೆಟ್ಟರು ನಂತರ ಮಾತನಾಡುತ್ತಾ ಹಳ್ಳಿಗಾಡಿನ ಜನರ ಸಂಕಷ್ಟಗಳನ್ನು ಪರಿಶೀಲಿಸುವ ಸಲ್ಲುವಾಗಿಯೇ ಪ್ರಧಾನಮಂತ್ರಿಗಳು ಈಬಾರಿ ಈ ಕಡೆ ಸಂಚಾರ ಮಾಡುವ ಕಾರ್ಯಕ್ರಮವನ್ನಿಟ್ಟುಕೊಂಡುದು ಎಂದು ತಿಳಿಸಿದರು. ಮಧ್ಯಾಹ್ನ ಭೋಜನ ತೀರಿಸಿ ಹಾಲಾಡಿ ಮಾರ್ಗವಾಗಿ ಮಾನ್ಯಮಂತ್ರಿಗಳವರು ಕುಂದಾಪುರಕ್ಕೆ ಚಿತ್ತೈಸಿದರು. ಅಲ್ಲಿಯೂ ಸಂಭ್ರಮದಸ್ವಾಗತ ಕಾರ್ಯಕ್ರಮಗಳಾದ ನಂತರ ಬಾರ್ ಎಸೋಸಿಯೇಶನಿನ ಕಡೆಯಿಂದ ಚಹಾಸತ್ಕಾರವಾಗಿ ಬಿಳಿಕ ಮನವಿಯೊಂದನ್ನು ಮಂತ್ರಿಗಳಿಗೆ ಕೊಡಲಾಯಿತು. ಸತ್ಕಾರಕ್ಕೆ ಆಭಾರ ಮನ್ನಿಸಿ ಮಂತ್ರಿಗಳು ಪಂಚಾಯತ ಬೋರ್ಡು ಅಧೀನಿಗೆ ಬಂದರು. ಆಗ ಅಲ್ಲಿಯ ಎಕ್ಸಿಕ್ಯೂಟಿವ್ ಆಫೀಸರರೇ ಮೊದಲಾದವರು ಮಂತ್ರಿಗಳಿಗೆ ಸ್ವಾಗತವಿತ್ತು ಮಾನಪತ್ರವನ್ನರ್ಪಿಸಿದರು. ಅಲ್ಲಿಂದ ಮಂತ್ರಿಗಳು ಬೇಂಡುವಾದ್ಯದೊಡನೆ ಸ್ಕಾಲರ್ ಸ್ವಯಂಸೇವಕ ದಳ ಮೊದಲಾದವರನ್ನು ಕೂಡಿಕೊಂಡು ಬೋರ್ಡು ಹೈಸ್ಕೂಲಿಗೆ ಬಂದು, ಅಲ್ಲಿ ನೆರೆದ ಜನಸಮುದಾಯದ ಮುಂದೆ ಕುಂದಾಪುರ ಕಾಂಗ್ರೆಸ್ ಕಮಿಟಿ, ಬೋರ್ಡುಹೈಸ್ಕೂಲ್ ವಿದ್ಯಾರ್ಥಿ ಸಂಘಗಳ ಪರವಾಗಿ ಮಂತ್ರಿಗಳಿಗೆ ಮಾನಪತ್ರ ಅರ್ಪಿಸಲಾಯಿತು. ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯ್ಕರು ಸಭಾಧ್ಯಕ್ಷತೆ ವಹಿಸಿದ್ದರು. ಮಂತ್ರಿಗಳು ಮಾನಪತ್ರ ಸ್ವೀಕರಿಸಿ ಉತ್ತರ ಕೊಡುತ್ತಾ ಸಂಚಾರ ಉದ್ದೇಶವನ್ನು ವಿವರಿಸಿ, ಮದ್ರಾಸು ಸರಕಾರವು ಜನತೆಯ ಏಳಿಗೆಗಾಗಿ ಕೈಕೊಂಡ ವಿವಿಧ ಕಾರ್ಯಕ್ರಮಗಳ ಪರಿಚಯವನ್ನು ಮಾಡಿಕೊಟ್ಟು, ಸರ್ವರೂ ಜನತಾ ಸರಕಾರದೊಂದಿಗೆ ಸಹಕರಿಸಬೇಕೆಂದು ಅಪೇಕ್ಷಿಸಿದರು. ರಾತ್ರಿ ಊಟ ತೀರಿಸಿ ಉಳಕೊಂಡು ತಾ. 25ರಲ್ಲು ಬೆಳಿಗ್ಗೆ ಕುಂದಾಪುರದಿಂದ ಹೊರಟು ಕೋಟೇಶ್ವರ ಹ್ಯಾಸ್ಕೂಲನ್ನು ಸಂದರ್ಶಿಸಿ, ಅಲ್ಲಿಯ ಪಂಚಾಯತ ಬೋರ್ಡು, ಕುಂದಾಪುರ ಜಿಲ್ಲಾ ಬೋರ್ಡು ಅಧ್ಯಾಪಕ ಯೂನಿಯನ್ ಮೊದಲಾದ ಸಂಸ್ಥೆಗಳ ಮನವಿಗಳನ್ನು ಸ್ವೀಕರಿಸಿ ಉಡುಪಿಗೆ ಬಂದರು.

ಉಡುಪಿಯಲ್ಲಿ ತಾ 25ರಲ್ಲು ಪೂರ್ವಾಹ್ನ ಮಲ್ಪೆ ಬಂದರವನ್ನು ಸಂದರ್ಶಿಸಿ ಉಡುಪಿಗೆ ಆಗಮಿಸಿ ಸಗ್ರಿ ಗುಡ್ಡೆಗೆ ಬಂದಾಗ ಬಿರುದಾವಳಿಗಳ ಸಂಭ್ರಮದ ಸ್ವಾಗತ ಪಡೆದರು. ನಗರ ಸಭೆಯ ಪರವಾಗಿ ಮಾನ್ಯ ಮಂತ್ರಿಗಳಿಗೆ ಮಾನಪತ್ರವೊಂದನ್ನು ನಗರ ಸಭಾಧ್ಯಕ್ಷ ಶ್ರೀ ಉಪೇಂದ್ರ ಶ್ರೀನಿವಾಸ ನಾಯ್ಕರು ಓದಿ ಅರ್ಪಿಸಿದರು. ಮಾನ್ಯ ಶ್ರೀ ಕುಮಾರಸ್ವಾಮಿ ರಾಜಾರವರು ತಮಗಿತ್ತ ಸ್ವಾಗತ, ಮಾನಪತ್ರಕ್ಕಾಗಿ ನಗರ ಸಭೆಯ ಆಭಾರವನ್ನು ಸೂಚಿಸಿ ಧಾರ್ಮಿಕ ಹಾಗೂ ಇತರ ದೃಷ್ಟಿಯಿಂದ ಪ್ರಸಿದ್ಧಿಗೆ ಬಂದಿರುವ ಉಡುಪಿಯ ಸ್ಥಳಮಹಾತ್ಮೆಯನ್ನು ಶ್ಲಾಘಿಸಿದರು. ಉಡುಪಿ ನಗರ ಸಭೆಯು ಅಚ್ಚುಕಟ್ಟಿನ ಆರ್ಥಿಕ ರಂಗದಲ್ಲಿದ್ದುಕೊಂಡು ಜನತೆಗೆ ಅಭಿವೃದ್ಧಿಕರ ಸೌಕರ್ಯಗಳನ್ನು ಒದಗಿಸುತ್ತಿರುವುದು ಅಭಿನಂದನೀಯವೆಂದರು. ಮಿಡ್ಲ್ ಸ್ಕೂಲ್ ಶಿಕ್ಷಣವನ್ನು ಜ್ಯಾರಿಗೆ ತಾರದೆನೇ ಸೇಳಡಾ 92ರಷ್ಟು ಮಕ್ಕಳು ಶಾಲೆಗಳಲ್ಲಿ ಓದುತ್ತಿರುವುದು ಎತ್ತಿ ಹೇಳತಕ್ಕ ವಿಷಯವೆಂದರು.

ಮಾನಪತ್ರದಲ್ಲಿ ಸರಕಾರದ ಧನಸಹಾಯದ ಪ್ರಸ್ತಾಪವಿಲ್ಲದಿರುವುದಕ್ಕಾಗಿ ಸಂತೋಷ ಸೂಚಿಸಿ ಸರಕಾರದ ಆರ್ಥಿಕ ಪರಿಸ್ಥಿತಿಯನ್ನು ನಗರ ಸಭೆಯು [ಮನನಗಂಡುದು ಪೆಮ್ಮೆಯ ವಿಷಯವೆಂದರು. ನಗರಾಂತರ್ಗತ ಸೂತ್ರಗಳಲ್ಲಿ ಆಗತ್ಯಕ್ಕ ತಿದ್ದುಪಡಿಗಳ ಸೂಚನೆಗಳನ್ನು ಹೊಸ ಮಸೂದೆ ಕಾನೂನಾಗುವ ಕಾಲದಲ್ಲಿ ತಿಳಿಸುವುದುತ್ತಮವೆಂದರು. ಕೊನೆಯದಾಗಿ ಉಡುಪಿಯ ಸ್ವಾಗತವನ್ನು ಎಂದೂ ಮರೆಯಲಾರೆನೆಂದರು. ಕೌನ್ಸಿಲರ್ ಶ್ರೀ. ಟಿ. ರಮೇಶ ಪೈಗಳು ಧನ್ಯವಾದವನ್ನಿತ್ತರು.

ಬಳಿಕ ಮಹಾತ್ಮಾಗಾಂಧಿ ಮೆಮೊರಿಯಲ್ ಕಾಲೇಜ್ ಟ್ರಸ್ಟಿನ ಅಧ್ಯಕ್ಷ ಶ್ರೀ ಕೊಚ್ಚಕಾರ್ ಪದ್ಮನಾಭಸ್ಥಳಗಳು ಸ್ಪಾರಂಕ್ಷದ ಒಂದು ಮೂಡಿಯಲ್ಲಿರುವ ಉಡುಪಿಗೆ ಶ್ರಮವಹಿಸಿ ಬಂದಿರುವ ಪ್ರಧಾನರಿಗೂ ಈ ಕೊಲೇಜಾಗಲು ವಿಶೇಷಾಸಕ್ತಿಯಿಂದ ನೆರವಾದ ಶ್ರೀ ಎ. ಬಿ. ಶೆಟ್ಟರಿಗೂ, ಸದಸ್ಯರಾದ ಮೇಲೆ ಪ್ರಥದು ಜಾರಿ ಉಡುಪಿಗೆ ಆಗಮಿಸಿದ ಘಟನಾ ಸಮಿತಿಯ ಸದಸ್ಯ ಶ್ರೀ ಯು. ಶ್ರೀನಿವಾಸ ಮಲ್ಯರಿಗೂ ಪ್ರೀತಿಪುರಸ್ಸರ ಹಾರ ತುರಾಯಿಗಳನ್ನರ್ಪಿಸಿ ಉತ್ಸಾಹಪರ ಸ್ವಾಗತ ಭಾಷಣ ಮಾಡಿ ಶಂಕುಸ್ಥಾಪನೆ ಮಾಡಲು ಕೇಳಿಕೊಂಡಂತೆ, ಪ್ರಧಾನಮಂತ್ರಿಗಳು ಕಾಲೇಜ್‌ಕಟ್ಟಡದ ಶಂಕುಸ್ಥಾಪನೆ ಮಾಡಿದರು. ಕಾಲೇಜ್ ಟ್ರಸ್ಟಿನ ಕಡೆಯಿಂದ ಮಾನಪತ್ರವೊಂದನ್ನು ಆದರ ಕಾರ್ಯದರ್ಶಿ ಶ್ರೀ ಎಚ್. ಸುಂದರರಾಯರು ಓದಿ ಅರ್ಪಿಸಿದ ಮೇಲೆ ಪ್ರಧಾನ ಮಂತ್ರಿಗಳು "ದ. ಕ. ಜಿಲ್ಲೆಯು ಉತ್ತರ ಭಾಗದ ವಿದ್ಯಾರ್ಥಿಗಳಿಗೆ ಕಾಲೇಜಿನ ಕೊರತೆಯಿದ್ದುದನ್ನು ಮನಗಂಡ ಮಹನೀಯರು ಕಾಲೇಜನ್ನು ಸ್ಥಾರಂಭಿಸಿರುವುದು ಎತ್ತಿ ಹೇಳತಕ್ಕವಿಷಯ. ಕಾಲೇಜಿಗೆ ಮಹಾತ್ಮಾಜೀಯವರ ನಾಮಕರಣವನ್ನು ಮಾಡಿದುದು ಅಭಿನಂದನೀಯವಿದ್ದು ಮಹಾತ್ಮರ ಧ್ಯೇಯಗಳನ್ನು ಈ ಕಾಲೇಜಿನ ವಿದ್ಯಾರ್ಥಿಗಳು ಅನುನಿತ್ಯದ ಜೀವನದಲ್ಲಿ ಪರಿಪಾಲಿಸಲು ಶಕ್ತರಾಗಬೇಕಾದುದು ಅತ್ಯಾವಶ್ಯಕ" ವೆಂದೂ ಈ ಕಾಲೇಜುಪಸ್ಟ್‌ಗ್ರೇಡ್ ಕಾಲೇಜು ಆಗಿ ಪರಿಣಮಿಸುವಂತಾಗಲೆಂದೂ ಹಾರೈಸಿದರು. ಕಾಲೇಜ್ ಟ್ರಸ್ಟಿನ ಕರಸ್ಪೊಂಡೆಂಟ್ ಮತ್ತು ಕೋಶಾಧಿಕಾರಿ ಡಾ! ಮಾಧವಪೈಗಳು ಧನ್ಯವಾದಗಳನ್ನರ್ಪಿಸಿ, ಜನತೆಯು ಸಹಕಾರವನ್ನು ಕೋರಿದರು.

ಅನಂತರ ಮಂತ್ರಿಗಳು ಮಧ್ಯಾಹ್ನ ಊಟತೀರಿಸಿ ಳಟಪಾಡಿಗಾಗಿ ಮೂಲ್ಕಿ ಕಾರ್ಯಕ್ರಮ ತೀರಿಸಿ, ಮಂಗಳೂರಿಗೆ ತೆರಳಿದರು. ಜಿಲ್ಲಾ ಕಾಂ. ಕಾರ್ಯದರ್ಶಿ, ಅಧ್ಯಕ್ಷ ಮಂತ್ರಿಗಳನ್ನು ಹಿಂಬಾಲಿಸಿಕೊಂಡು ಬಂದಿದ್ದು ಅಲ್ಲಲ್ಲಿ ಏರ್ಪಡಿಸಿದ್ದ ಆದರಬಲಯುಕ್ತ ಊಟೋಪಾಚಾರಗಳಲ್ಲಿ ಸಹಭಾಗಿ ಸಹಿಸಿದ್ದರು.

[ಕಡೇ ಪುಟದಿಂದ]

ದುಕೊಂಡಿರವ ಭಯ ಸಂದೇಹಗಳು ತೊಲಗಬೇಕು. ವಶಸ್ತ್ರ ಹೋರಾಟವೊಂದಿದ್ದರೆ ನಾವು ದುರ್ಬಲರಿದ್ದೇವೆ. ನಮ್ಮೊಡನೆ ಅಟಂ ಬೋಂಬು ಇಲ್ಲ; ಮತ್ತು ನಮ್ಮೊಡನೊಂದು ಅಟಂ ಬೋಂಬು ಇಲ್ಲ ವೆಂಬುದಕ್ಕಾಗಿ ನಾವು ಅಮಿತಾನಂದಪಡುತ್ತೇವೆ" ಎಂದು ಅಗತ್ಯನಿದ್ದಲ್ಲಿ ಆವೇಶಿಕವನ್ನು ಚುಟ್ಟಿ ಮಾತಾಡುವದಕ್ಕೂ ಹಿಂದರಿಯಲಿಲ್ಲ. ಮಹಾತ್ಮಾ ಗಾಂಧಿಯವರು ನಿರ್ದೇಶಿಸಿರುವ ನೈತಿಕ ಶಕ್ತಿ, ವಿಧಾನಗಳೇ ಲೋಕದ ದುಃಸ್ಥಿತಿ ನಿವಾರಣೆಯ ಏಕಮಾತ್ರ ಉಪಾಯಗಳೆಂಬುದನ್ನು ಅಲ್ಲಿಯೂ ಮುಂದಿಟ್ಟು ಮಾಡಿದರು. ತಾ. 20ನೇ ರಾತ್ರಿ ಅಮೆರಿಕದ ಉದ್ದಿನೇವಾಲತ್ಯ ಗೌರವ ಕೂಟದಲ್ಲಿ, ಅಮೆರಿಕದ ಉದ್ಯೋಗ, ವ್ಯಾಪಾರ ವೆಮವಾಟುಗಳವರೇ ತುಂಬಿದ್ದ ಸಭೆಯಲ್ಲಿ ಮಾತಾಡುತ್ತಾ ನವೀನ ಭಾರತದ ಉದ್ದಿಮೆ ಅಭಿವೃದ್ಧಿಗೆ ಅಮೆರಿಕವು ಸಹಾಯ ವೀಯುವುದು ಅಗತ್ಯವೆಂಬುದನ್ನು ಒತ್ತಿ ಹೇಳಿದರು. ಕೆನೆಡಾಕ್ಕಾಗಿ ಹೊರಟವರು ತಾ. 22ನೇ ರಾತ್ರಿ ಬೋಸ್ಟನಿನಲ್ಲಿಳಿದು, ತಾ 23ರಲ್ಲಿ ಕೆನಡಾಕ್ಕೆ ಹೋಗಿ ಕಾಲೂರಿದಲ್ಲಿಯೇ ಅಲ್ಲಿಯ ಪ್ರಧಾನ ಮಂತ್ರಿಗಳಿಂದ ಸ್ವಾಗತಿಸಲ್ಪಟ್ಟು ಈಗ ಕೆನಡಾದಲ್ಲಿ ಸಂಭ್ರಮದ ಹಾಗೂ ಪರಣಾಮಕಾರೀ ಸ್ವಾಗತ, ಸಭೆ, ಸಂದರ್ಶನಗಳಲ್ಲಿ ಭಾಗವಹಿಸುತ್ತಿದ್ದಾರೆ. "ಫ್ರೆಂಚರ ವೀಟ್‌ನಾಮ್ ಸರಕಾರ ಮತ್ತು ವಿರುದ್ಧ ಪಕ್ಷದ ನಾಯಕರುಗಳೆ ಸಂಧಾನ ಮಾಡುವಂತೆ ಫ್ರೆಂಚ್ ಸರಕಾರವು ಹಿಂದೆ ನೆಹರುಗಳನ್ನು ಕೇಳಿಕೊಳ್ಳಲಿದೆ" ಎಂದು ಫ್ರೆಂಚ್ ಪತ್ರಿಕೆಯೊಂದು ಬರೆದಿದ್ದಿತು. ಬೋಸ್ಟನಿನಲ್ಲಿ ಈ ಕುರಿತು ಪ್ರಶ್ನಿಸಲ್ಪಟ್ಟಾಗ "ಸಂಧಾನಕ್ಕಾಗಿ ಅವರು ನನ್ನನ್ನು ಅಪೇಕ್ಷಿಸುತ್ತಾರೆಯೆ? ಫ್ರೆಂಚ್ ಸರಕಾರ ಕೇಳಿಕೊಳ್ಳುವ ವರೆಗೆ ಏನೂ ಹೇಳಲಾರೆ. ನನಗೀಸಂಗತಿ ಏನೂ ಗೊತ್ತಿಲ್ಲ. ನನ್ನ ಕೆಲಪಗಳೇ ಬಹಳವಿವೆ. ಇನ್ನು ಹೆಚ್ಚಿಗೇನನ್ನೂ ಸೇರಿಸಿಕೊಳ್ಳದೇನೇ ನಾನು ನಾಡಲು ಉಳಿದಿರುವ ಕಾರ್ಯಗಳು ಅತಿರೇಕವಿವೆ" ಎಂದುಬಿಟ್ಟರು.

ಭಾರತ ನಾಯಕ ವಿನ್ವಿಜಯದಲ್ಲಿದ್ದಾರೆ!

ಮಾನ್ಯ ಪ್ರಧಾನ ಮಂತ್ರಿ ಮತ್ತು ಒಕ್ಕಲತನ ಮಂತ್ರಿಗಳ ಆಗಮನ

ಜಿಲ್ಲೆಯೆಲ್ಲೆಲ್ಲಾ ಸಂಭ್ರಮದ ಸ್ವಾಗತ

ವೆಂಬ್ರಾಸು ಸರಕಾರದ ಒಕ್ಕಲುತನ ಖಾತೆಯ ಮಂತ್ರಿ ಎ. ಬಿ. ಶೆಟ್ಟರು ತಾ. 20ರಲ್ಲು ಸಂಜೆಯೂ, ಮಾನ್ಯ ಪ್ರಧಾನ ಮಂತ್ರಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾ ಅವರು ತಾ. 22ನೆ ಸಂಜೆಯೂ ರೈಲ್ ಗಾಡಿಯಲ್ಲಿ ಮಂಗಳೂರಿಗೆ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಜಿಲ್ಲಾ ಕಲೆಕ್ಟರ್ ಜನಾಬ್ ಸಯದ್ ಅಹಮ್ಮದ್, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್, ತಹಶೀಲ್ದಾರ್ ಮೊದಲಾದ ಮೇಲಧಿಕಾರಿಗಳೂ ಇತರ ಗೃಹಸ್ಥರೂ ಅವರಿಗೆ ಸಾಮಾನ್ಯ ಸ್ವಾಗತವನ್ನಿತ್ತರು. ಜಿಲ್ಲಾ ಕಲೆಕ್ಟರರು ಮಾನ್ಯ ಮಂತ್ರಿಗಳಿಗೆ ನೆರೆದ ಮಹನೀಯರ ಪರಿಚಯ ಮಾಡಿಕೊಟ್ಟರು.

ಬಿಲ್ಲವರ ಶಿಷ್ಟಮಂಡಲ—ಮಾನ್ಯ ಪ್ರಧಾನಮಂತ್ರಿ ಶ್ರೀ ಕುಮಾರಸ್ವಾಮಿ ರಾಜರು ತಾ. 22ನೇ ಸಂಜೆ ಗೋಕರ್ಣನಾಥ ಕ್ಷೇತ್ರಕ್ಕೆ ಆಗಮಿಸಿ ಬಿಲ್ಲವ ಜಾತಿಯ ಸಂಕಷ್ಟಗಳನ್ನು ಕೇಳಿಕೊಂಡರು. ಬಿಲ್ಲವ ಯೂನಿಯನ್ ಅಧ್ಯಕ್ಷ ಶ್ರೀ ಬಿ. ಆರ್ ಕರ್ಕೇರರು ಬಿಲ್ಲವರ ಸಂಕಷ್ಟಗಳನ್ನು ಪ್ರಧಾನ ಮಂತ್ರಿಗಳ ಮುಂದಿಟ್ಟರು. ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಹೀಗೆಂದರು:

"ನಿಮ್ಮ ಸಂಕಷ್ಟಗಳನ್ನು ನಾನು ಕೇಳಿ ಕೊಂಚೆನಾದರೂ ಅವುಗಳೆಲ್ಲವನ್ನೂ ಯೋಗಲಾಡಿಸಲು ಯಾವ ಸರಕಾರಕ್ಕೂ ಸುಲಭ ಸಾಧ್ಯವಾದುದಲ್ಲ. ಸರಕಾರಿ ಹುದ್ದೆಗಳಿಗೆ ಜನ ಸಂಖ್ಯೆಯ ಮೇರೆಗೆ ಆಯಾ ಜಾತಿಗಳಿಂದ ಉಮೇದ್ವಾರರನ್ನು ಆರಿಸುತ್ತಿಲ್ಲ. ಆದರೆ ಅವರ ಶಿಕ್ಷಣದ ಯೋಗ್ಯತೆಯನ್ನು ನೋಡಿ ಆಯ್ದನ್ನು ಕೆಲಸಗಳಿಗೆ ನೇಮಿಸಲಾಗುತ್ತಿದೆ. ಕಾಂಗ್ರೆಸ್ ಸರಕಾರವು ಹಿಂದುಳಿದ ಜಾತಿಯವರೆಲ್ಲರನ್ನೂ ಮುಂದೆ ತರಲು ಪ್ರಯತ್ನಿಸುತ್ತಿದೆ".

ಅನಂತರ ಮುಖ್ಯಮಂತ್ರಿಗಳು ಕಡ್ರಿ ಹರಿಜನ ಶಾಸ್ಟೆಲ್ಲನ್ನು ಸಂದರ್ಶಿಸಿ, ಕೆಲವು ಬುದ್ಧಿವಾದಗಳನ್ನಿತ್ತರು. ಸಂಪೂರ್ಣ ಶಿಕ್ಷಣವನ್ನು ಪಡೆಯುವ ತನಕ ಇತರ ಚಿಕ್ಕ ಪುಟ್ಟ ಚಟುವಟಿಕೆಗಳಲ್ಲಿ ಕೈಹಾಕಬಾರದೆಂದರು.

ತಾ. 23ರಲ್ಲು ಮಾನ್ಯ ಕುಮಾರಸ್ವಾಮಿ ರಾಜರವರು ಮಂಗಳೂರು ನಗರ ಸಭೆಯ ಮಾನಪತ್ರ ಸ್ವೀಕರಿಸಿದರು. ನಗರಸಭಾಧ್ಯಕ್ಷ ಶ್ರೀ. ಎಲ್. ಪಿ ಪಾಯಸರು ಮುಖ್ಯಮಂತ್ರಿಗಳನ್ನೂ, ಒಕ್ಕಲುತನ ಮಂತ್ರಿಗಳನ್ನೂ ಸ್ವಾಗತಿಸಿ ಮಾನಪತ್ರವನ್ನು ಓದಿ ಹೇಳಿದರು. ಶುದ್ಧ ನೀರಿನ ಸರಬರಾಯಿ, ನೀರನ್ನು ಸೆಲಡಿಸಿಯಿಂದ ಸಾಗಿಸುವ ನಿರ್ಧಾರ ಇತ್ಯಾದಿ ಮಾನಪತ್ರದಲ್ಲಿ ಸೂಚಿಸಲ್ಪಟ್ಟಿತ್ತು.

ಮಾನ್ಯ ಕುಮಾರಸ್ವಾಮಿ ರಾಜರವರು ಉತ್ತರವೀಯುತ್ತಾ ಹೀಗೆಂದರು "ನೆಲದಡಿಯ ನೂಲಕ ಶುದ್ಧ ನೀರಿನ ಪೂರೈಕೆ, ಮಾರ್ಗಗಳಿಗೆ ದಾಮರು ಹಾಕುವುದು ಇವೆರಡು ಮುಖ್ಯ ಕೇಳಿಕೆಗಳಿದ್ದು ಮೊದಲಿನ ಕೇಳಿಕೆಯನ್ನು ಕಾರ್ಯರೂಪಕ್ಕೆ ತರಲು ಮದ್ರಾಸು ಸರಕಾರವು ತನ್ನ ಐದು ವರುಷಗಳ ಯೋಜನೆಯಲ್ಲಿ ಸೇರಿಸಿದೆ. ಮಾರ್ಗಗಳಿಗೆ ಡಾಮರು ಹಾಕುವುದರ ಕುರಿತು ಹೇಳುವುದಾದರೆ ನಿಮ್ಮ ಮುನಿಸಿಪಾಲಿಟಿಗೆ ಇದೇ ಜುಲಾಯಿ ತಿಂಗಳಲ್ಲಿ ರೂ. 27,159 ಮಂಜೂರಾಗಿರುವುದು. ವರ್ಷಂಪ್ರತಿ ಎಂಬೆಂಡು ಕಾರ್ಯಗಳನ್ನು ನಿರ್ವಹಿಸಬೇಕಾಗಿ ಸರಕಾರವು ಮುನಿಸಿಪಾಲಿಟಿಗಳಿಗೆ ಸಲಹೆ ಕೊಟ್ಟಿರುವುದು. ನಿಮ್ಮ ನಾಗರಿಕ ಗೃಹಸ್ಥರಲ್ಲೊಬ್ಬರಾದ ಶ್ರೀ. ಎ. ಬಿ. ಶೆಟ್ಟರು ಮಂತ್ರಿಮಂಡಲದ ಸದಸ್ಯರಾಗಿರುವುದು ನಿಮಗೊಂದು ಹೆಮ್ಮೆಯ ಮಾತಾಗಿರುವುದು. ಕಾರಣ ಅವರು ದಕ್ಷಿಣ ಕನ್ನಡದ ಅವಶ್ಯಕತೆಗಳ ಕುರಿತು ಯಾವಾಗಲೂ ಪ್ರತಿವಾದಿಸುವರು. ಆದುದರಿಂದ ನಿಮ್ಮ ಜಿಲ್ಲೆಯು ಪ್ರಾಂತೀಯ ಸರಕಾರದಿಂದ ಯೋಗ್ಯ ಗಮನವನ್ನು ಪಡೆಯುತ್ತಿದೆ." ಎಂದರು.

ಕ್ಷಯ-ರೋಗ ಆಸ್ಪತ್ರೆಯ ಶಂಕುಸ್ಥಾಪನೆ ತಾ ೨೪ನೇ ಆದಿತ್ಯವಾರ ಬೆಳಿಗ್ಗೆ 9-15 ಗಂಟೆಗೆ ಮೂಡು ಶೆಡ್ತಿಯಲ್ಲಿ ಕಟ್ಟಲಾಗುವ ಕ್ಷಯರೋಗ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ಮುಖ್ಯ ಮಂತ್ರಿ ಶ್ರೀ ಕುಮಾರಸ್ವಾಮಿ ರಾಜರು ನೆರವೇರಿಸಿದರು.

ಮಂಗಳೂರು ಗುರುಪುರ ರಸ್ತೆಯ ಏಳನೇ ಮೈಲುಕಲ್ಲಿನ ಬಳಿಯ ವಿಶಾಲವಾದ ಸ್ಥಳವನ್ನು ಸರಕಾರವು ಈ ಆಸ್ಪತ್ರೆಯ ಬಗ್ಗೆ ಕೊಟ್ಟಿದ್ದು 3,90,800 ರೂಪಾಯಿಗಳ ವೆಚ್ಚದಲ್ಲಿ ಕ್ಷಯರೋಗದ ಆಸ್ಪತ್ರೆಯನ್ನು ಕಟ್ಟಲಾಗುವುದು. ಈ ಆಸ್ಪತ್ರೆಯನ್ನು ಕಟ್ಟಬೇಕಾದರೆ 1,70,000 ರೂಪಾಯಿಗಳನ್ನು ಸಾರ್ವಜನಿಕರೇ ಇಡ್ಗಿಂದ ಸಂಗ್ರಹಿಸಬೇಕೆಂದೂ ಉಳಿದ ಹಣವನ್ನು ಸರಕಾರವು ಹಾಕುವುದೆಂದೂ ಆ ಮೇಲೆ ಆಸ್ಪತ್ರೆಯನ್ನು ನಡೆಸುವ ಜವಾಬ್ದಾರಿಯನ್ನು ಸರಕಾರವು ನೋಡುವುದೆಂದೂ ಗೊತ್ತಾಗಿದೆ.

ಜಿಲ್ಲಾ ಕ್ಷೇಮಚಿಂತನ ನಿಧಿಯ ಅಧ್ಯಕ್ಷ ಡಾ. ಯು. ಪಿ. ಮಲ್ಯರು ಮಾನ್ಯ ಮಂತ್ರಿಗಳನ್ನೂ, ಗೃಹಸ್ಥ, ಗೃಹಿಣಿಯರನ್ನೂ ಸ್ವಾಗತಿಸಿ, "ಈ ಆಸ್ಪತ್ರೆಯಬಗ್ಗೆ ಮಾನ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ಬಹಳವಾಗಿ ಪ್ರಯತ್ನಿಸಿದ್ದಾರೆ. ಮಾತೃವಲ್ಲದೆ ಜಿಲ್ಲೆಯಲ್ಲಿ ಇತರ ಸಾಧಾರಣಿಗಳನ್ನು ಸರಕಾರವು ಕೈಕೊಳ್ಳುವ ಬಗ್ಗೆ ಸತತ ದುಡಿಯುತ್ತಿದ್ದಾರೆ" ಎಂದರು.

ಮದ್ರಾಸ್ ಪ್ರಾಂತೀಯ ಕ್ಷೇಮಚಿಂತನಾ ನಿಧಿಯ ಮಂಗಳೂರು ಶಾಖೆಯ ಕಾರ್ಯದರ್ಶಿಯರಾದ ಶ್ರೀ ಡಿ. ಮೋಹನರಾವ್, ಎಡ್ವೊಕೇಟ್, ಅವರು ಆಸ್ಪತ್ರೆ ಕಟ್ಟುವ ಬಗ್ಗೆ ತಯಾರಿಸಿದ ಯೋಜನೆಯ ವರದಿಯನ್ನು ಓದುತ್ತಾ "ಮಾನವ ಸೇವೆಯೇ ದೇವರ ಸೇವೆ, ಕ್ಷಯರೋಗಿಗಳಿಗಾಗಿ ಕಟ್ಟಲಿರುವ ಈ ಆಸ್ಪತ್ರೆಗೆ ಇಲ್ಲಿನ ಸಾರ್ವಜನಿಕರೇ ಉದಾರ ಮನಸ್ಸಿನಿಂದ ಧನಸಹಾಯ ಮಾಡಬೇಕಾಗಿದೆ, ಎಂದರು.

ಒಕ್ಕಲತನ ಮಂತ್ರಿ ಶ್ರೀ ಶೆಟ್ಟರು ಶಂಕುಸ್ಥಾಪನೆಮಾಡಲು ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತಾ "ಪಶ್ಚಿಮ ಕರಾವಳಿಯಲ್ಲಿ ಕ್ಷಯರೋಗವು ಬಹಳವಾಗಿ ಹಬ್ಬಿರುತ್ತದೆ. ಅನೇಕ ರೋಗಿಗಳು ಕೊಯಮತ್ತೂರು, ತಿರುಚಿನಾಪಳ್ಳಿ ಮೊದಲಾದ ಕಡೆಗಳಿಗೆ ಅವರ ಹಣವೆಚ್ಚಮಾಡಿ ಯೋಗುತ್ತಿದ್ದಾರೆ ಈ ಹಣ ಇಲ್ಲಿಯೇ ಉಳಿಯುವ ಬಗ್ಗೆ ಒಂದು ಆಸ್ಪತ್ರೆಯನ್ನು ತೆರೆಯುವುದು ಅತ್ಯಗತ್ಯ ಈ ಬಗ್ಗೆ ಬೇಕಾದ ಡಾಕ್ಟರುಗಳ ತರಬೇತಿಯೂ ನಡೆಯುವ ಅಗತ್ಯವಿದೆ"ಯೆಂದರು.

ಮಾನ್ಯ ಪ್ರಧಾನ ಮಂತ್ರಿಗಳು ಶಂಕುಸ್ಥಾಪನಾ ಕಾರ್ಯವನ್ನು ನೆರವೇರಿಸುತ್ತಾ ಪ್ರತಿ ಜಿಲ್ಲೆಯಲ್ಲೂ ಇಂಥಾ ಕೇಂದ್ರವನ್ನು ರಚಿಸುವುದು ಅಗತ್ಯವೆದ್ದಾಗ್ಗೂ ಸರಕಾರವು ಸಧ್ಯಕ್ಕೆ ಕೆಲವೇ ಕೇಂದ್ರಗಳನ್ನು ಅರಿಸಿದೆ. ದಕ್ಷಿಣಕನ್ನಡ ಜಿಲ್ಲೆಯು ಈ ಕುರಿತು ಹೆಮ್ಮೆಪಡಬೇಕಾಗಿದೆ ಎಂದರು.

"ಮದ್ರಾಸು ಸಂಸ್ಥಾನದಲ್ಲಿ ಕ್ಷಯರೋಗವು ದೊಡ್ಡ ಸಮಸ್ಯೆಯಾಗಿ ನಿಂತಿದೆ. ಸಾರ್ವಜನಿಕ ಆರೋಗ್ಯ ಖಾತೆಯ ವರದಿ ಮೇರೆಗೆ ಈ ಪ್ರಾಂತದಲ್ಲಿ 5,25,000 ಜನರು ಕ್ಷಯರೋಗದಿಂದಲೇ ಸಾಯುತ್ತಿರುವರೆಂದು ಅಂದಾಜುಮಾಡಲಾಗಿದೆ.

ಕ್ಷಯರೋಗದ ನಿವಾರಣೆ ಬಗ್ಗೆ ಕೇವಲ ಶುಶ್ರೂಷಾ ಕೇಂದ್ರಗಳನ್ನು ನಡೆಸಿದರೆ ಸಾಲದು. ರೋಗವನ್ನು ಹುಟ್ಟಬಿಂತೆ ತಡೆಯುವುದೂ ಆತ್ಯಗತ್ಯವಿದೆ. ಈ ಬಗ್ಗೆ ಸರಕಾರವು ತಾಂಬರಂನಲ್ಲಿ ಒಂದು ಕೇಂದ್ರವನ್ನು ತೆರೆದಿದೆ.

ಇಲ್ಲಿನ ಕೇಂದ್ರವನ್ನು ಸ್ಥಾಪಿಸುವ ಕಾರ್ಯವನ್ನು ಮದ್ರಾಸು ಪ್ರಾಂತದ ಕ್ಷೇಮಚಿಂತನಾ ನಿಧಿಯ ದ. ಕ. ಜಿಲ್ಲಾ ಶಾಖೆಯವರು ಪ್ರಾರಂಭಿಸಿದುದು ಸಂತೋಷದ ವಿಷಯ. ಸದ್ಯಕ್ಕೆ ಇಲ್ಲಿ 25 ಜನರಿಗೆ ಶುಶ್ರೂಷೆ ನೀಡುವ ವಿಸ್ತಾರು ಮಾಡುವುತಿದ್ದು ಅದಕ್ಕೆ 3.09 ಲಕ್ಷ ರೂಪಾಯಿ ವೆಚ್ಚವಾಗುವುದೆಂದು ಅಂದಾಜು ಹಾಕಲಾಗಿದೆ. ದ. ಕ. ಜಿಲ್ಲೆಯಲ್ಲಿ ಧಾನ್ಯಸಂಗ್ರಹ ಣ ವ್ಯವಹಾರದಿಂದ ಬರುವ 1.23ಲಕ್ಷ ರೂಪಾಯಿಗಳನ್ನು ಈ ಆಸ್ಪತ್ರೆಯ ಬಗ್ಗೆ ವಿನಿಯೋಗಿಸಲಾಗುವುದು. ಅಂತೂ ಈ ಕಾರ್ಯವು ಯಶಸ್ವಿಯಾಗಬೇಕಾದರೆ ಸಾರ್ವಜನಿಕರ ಬೆಂಬಲಬೇಕು. ಆದುದರಿಂದ ಆಧ್ಯಮಹನೀಯರು ಶಕ್ತಿಮೀರಿ ಸಹಾಯ ನೀಡಬೇಕೆಂದು ವಿನಂತಿಸಿ ಈ ಆಸ್ಪತ್ರೆಯು ಜನತೆಯ ಸೇವೆಮಾಡಲಿ ಹಾಗೂ ದೇವರ ಆಶೀರ್ವಾದವಿರಲೆಂದರು. ಜಿಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್‌ರು ಧನ್ಯವಾದಗಳನ್ನರ್ಪಿಸಿದ ನಂತರ ರಾಷ್ಟ್ರಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಮೂಡುಶೆಡ್ತಿಯಿಂದ ಹಿಂತಿರುಗಿದ ಬಳಿಕ ಮಾನ್ಯ ಪ್ರಧಾನ ಮಂತ್ರಿಗಳು ಗವರ್ನಮೆಂಟ್ ಕಾಲೇಜಿಗೆ ತೆರಳಿದರು. ಅಲ್ಲಿ ಶ್ರೀ ಪಿ. ರಂಗನಾಥ ಪೂಂಜರು ಮುಖ್ಯ ಮಂತ್ರಿಗಳನ್ನೂ, ಶ್ರೀ ಎ. ಬಿ. ಶೆಟ್ಟರನ್ನೂ ಸ್ವಾಗತಿಸುತ್ತಾ ಒಕ್ಕಲುತನ ಪ್ರದರ್ಶನವನ್ನು ತೆರೆಯುವಂತೆ ಕೇಳಿಕೊಂಡರು, ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ "ಈಗ ಹೆಚ್ಚು ಆಹಾರ ಬೆಳೆಸುವ ಯೋಜನೆ ಮೇರೆಗೆ ರೈತರಿಗೆ ರಿಯಾಯಿತಿ ದರದಲ್ಲಿ ಗೊಬ್ಬರ ಪೂರೈಸುವುದು, ಬೀಜಗಳನ್ನು ಹಂಚುವುದು ಹಾಗೂ ಸಾಗುವಳಿಗಾಗಿ ಕಬ್ಬಿಣ ಮತ್ತು ಉಕ್ಕುಗಳನ್ನು ಪೂರೈಸಲಾಗುವುದು. ದ. ಕ. ಜಿಲ್ಲೆಯಲ್ಲಿ ನವೀನ ರೀತಿಯಲ್ಲಿ ಸಾಗುವಳಿಯನ್ನು ಬಳಸಿಕೊಂಡರೆ ಆಹಾರದ ಕುರಿತು ಸ್ವಾವಲಂಬಿಗಳೇಕೆ, ಉಳಿತಾಯದ ಪ್ರದೇಶವಾಗಲು ಶಕ್ಯವಿದೆ' ಎಂದರು.

(ಉಳಿದ ಭಾಗ ನೋಡಿರಿ)

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಕಲ್, ತಮ್ಮ ಜವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

RADIUM NEEDLES In CITY HOSPITALS

MADRAS, Oct. 7.

A Press Note issued to-day by the Government says:

The Government have gone very carefully into the case relating to the supply of defective radium needles to the Barnard Institute of Radiology, Government General Hospital, Madras, by an American firm, as it has given rise to a number of insinuations in certain sections of the Press. They find that there was no question of any part of the transaction having been improper, or having been sought to be hushed up by the officers concerned, but that the supplies made were not according to the specification and that every effort is being made to get the needles rectified.

The American firm, which supplied the needles, has agreed to rectify the defective needles and after the first lot has been rectified and tested, the other needles will be sent for rectification. Although clinically the use of some of the needles has not disclosed any ill-effects, the Government have directed the withdrawal of the needles from use, pending their rectification according to specifications.

THE HINDU, SATURDAY, OCT 8, 1949

ನಗರದ ಆಸ್ಪತ್ರೆಗಳಲ್ಲಿ ರೇಡಿಯಮ್ ಸೂಜಿಗಳು

ಮದರಾಸು, ಅಕ್ಟೋಬರ್ 7

ಇಂದು ಹೊರಬಿದ್ದ ಸರ್ಕಾರಿ ಪ್ರೆಸ್ ಹೇಳಿಕೆಯೊಂದು ಇಂತಿದೆ:-

ಪತ್ರಿಕಾ ಪ್ರಪಂಚದ ಒಂದು ವಿಭಾಗದಲ್ಲಿ ಆಸ್ಪತ್ರೆಯ ಅಪಪ್ರಚಾರವೆದ್ದ ನೆಸೆಯಿಂದಾಗಿ ಸರಕಾರವು ಅಮೇರಿಕನ್ ಸಂಸ್ಥೆಯೊಂದು ಮದರಾಸಿನ ಜನರಲ್ ಹೊಸ್ಪಿಟಲ್ಲಿನ ಬಾರ್ನರ್ಡ್ ಇನ್‌ಸ್ಟಿಟ್ಯೂಟ್ ಆಫ್ ರೇಡಿಯೋಲಜಿಗೆ ಸರಬರಾಯಿ ಮಾಡಿದ ದೋಷಪೂರಿತವಾದ ರೇಡಿಯಮ್ ಸೂಜಿಗಳ ವಿಚಾರವಾಗಿ ಪರಿಶೀಲನೆ ನಡೆಯಿಸಿಯಿದೆ. ಈ ಪರಿಶೀಲನೆಯ ಪರಿಣಾಮವಾಗಿ, ವ್ಯವಹಾರದಲ್ಲಿ ಏನೊಂದೂ ಅಯೋಗ್ಯ ಸಾಧನಗಳು ನಡೆಯಿಲ್ಲವೆಂದೂ, ಸಂಬಂಧಪಟ್ಟ ಅಧಿಕಾರಿಗಳು ಈ ಪ್ರಶ್ನೆಯನ್ನು ಮುಚ್ಚಿ ಬಚ್ಚಿಡುವುದಕ್ಕೆ ಯತ್ನಿಸಿಲ್ಲವೆಂದೂ ತಿಳಿದು ಬಂದಿತ್ತದೆ. ಜತೆಗೆ ಸರಬರಾಯಿ ಮಾಡಲ್ಪಟ್ಟ ಸೂಜಿಗಳು ನಿರ್ದಿಷ್ಟಗೊಳಿಸಿದವಲ್ಲವೆಂದೂ, ಆ ಸೂಜಿಗಳನ್ನು ಸರಿಪಡಿಸುವುದಕ್ಕೆ ಕೈರ್ಖಾಸ್ಯಯತ್ನ ನಡೆಯುತ್ತಿದೆಯೆಂದೂ ಹೇಳಬಹುದಾಗಿದೆ.

ಇವನ್ನು ಸರಬರಾಯಿಮಾಡಿದ ಅಮೇರಿಕನ್ ಸಂಸ್ಥೆ ಇವನ್ನೆ ಸರಿಪಡಿಸುವುದಕ್ಕೆ ಒಪ್ಪಿರುತ್ತದೆ. ಮೊದಲು ಕಳುಹಿಸುವ ಸೂಜಿಗಳನ್ನು ಸರಿಪಡಿಸಿ ಪರೀಕ್ಷಿಸಿ ನೋಡಿದ ಬಳಿಕ, ಉಳಿದ ಸೂಜಿಗಳನ್ನು ಸರಿಪಡಿಸಲು ಕಳಿಸಲಾಗುತ್ತದೆ. ಚಿಕಿತ್ಸಕ ದೃಷ್ಟಿಯಿಂದ ಇಂಥ ಕೆಲವು ಸೂಜಿಗಳ ಉಪಯೋಗದಿಂದ ಏನಾದರೂ ಕೇಡು ಸಂಭವಿಸಿದೆಯೆಂದು ಇಲ್ಲಿನವರೂ ಸಮಿತಿಯವರೂ ಪ್ರಕಾರದಲ್ಲಿ ಇವನ್ನು ಸರಿಗೊಳಿಸುವ ತನಕ, ಈ ಸೂಜಿಗಳನ್ನು ಬಳಸಬೇಡವೆಂದು ಸರಕಾರವು ಆಜ್ಞೆ ಕೊಟ್ಟಿರುತ್ತದೆ.

(ತಾ. 8-10-49ರ 'ಹಿಂದು')

ಮಂಗಳೂರು

ವಿಮಾನ ನಿಲ್ದಾಣ— ಕೇಂದ್ರ ಸರಕಾರದ ವಿಮಾನ ಖಾತೆಯ ಪ್ರಧಾನ ಇಂಜಿನಿಯರರು ಇತ್ತೀಚೆಗೆ ಉದಕಮಂಡಲಕ್ಕೆ ಬಂದಿದ್ದಾಗ, ಕೊಚ್ಚಿ-ಮುಂಬಯಿಗಳ ನಡುವೆ ಬೇಗನೇ ವಿಮಾನ ನಿಲ್ದಾಣವೊಂದು ಸ್ಥಾಪನೆಯಾಗಬೇಕಾಗಿದೆ. ಇದಕ್ಕಾಗಿ ಮಂಗಳೂರಲ್ಲಿ ಸ್ಥಳ ಪರಿಶೋಧನಾ ಕಾರ್ಯ ನಡೆಸಲಾಗುತ್ತಿದೆ. ಕಲ್ಲಿಕೋಟೆ, ಉದಕಮಂಡಲಗಳಲ್ಲಿಯೂ ವಿಮಾನ ನಿಲ್ದಾಣ ರಚಿಸಲು ಸರಕಾರ ನಿರ್ಧರಿಸಿದೆಯಾದರೂ ಸದ್ಯದ ಹಣದ ಅಡಚಣೆಯಿಂದ ಅದು ಹಿಂದೆ ಬೀಳಬಹುದು ಎಂದು ಹೇಳಿದರು.

ಅಖಿಲ ಕರ್ನಾಟಕ ಮಹಿಳಾ ಪರಿಷತ್ತಿನ ಜಿಲ್ಲಾ ಶಾಖೆಯಾದ-ಭಗಿನೀ ಸಮಾಜದವರ ಸಾರ್ವಜನಿಕ ಸಭೆಯು ಇದೇ ತಾ. 19ರಲ್ಲು ಮಂಗಳೂರಿನ ಬೆಸೆಂಟ್ ಮಂದಿರದಲ್ಲಿ ಶ್ರೀಮತಿ ಲೇಮಲತಾ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಶಾರದಾ ತಳವಾರರ ಸ್ವಾಗತ ಮಾತುಗಳಾದ ನಂತರ ಪೆಂಟ್‌ಬೆಂಡ್ ಪೇಟೆಯ ಭಗಿನೀ ಸಮಾಜ ಕೇಂದ್ರದ ಜತೆ ಕಾರ್ಯದರ್ಶಿ ಶ್ರೀಮತಿ ಮನೋರಮಾ ತಿಲಿಯರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು. ಬಳಿಕ ಬಳ್ಳಾರಿಯಲ್ಲಿ ಜರಗಲಿರುವ ಅಖಿಲ ಕರ್ನಾಟಕ ಮಹಿಳಾ ಪರಿಷತ್ತಿಗಾಗಿ ಕೆಲವು ನಿರ್ಣಯಗಳನ್ನು ಚರ್ಚಿಸಿ ಕಳುಹಿಸುವ ನಿರ್ಣಯ ಪಾಯಿತು. [1] ಆಹಾರದ ಕೊರತೆಯನ್ನು ಕಡಿಮೆ ಮಾಡುವುದಕ್ಕಾಗಿ ಮಿಶ್ರಿಳಿಯರು ಅಧಿಕ ಬೆಳೆಯುವ ಕಾರ್ಯದಲ್ಲಿ ಗಮನ ಹೆಚ್ಚಾಗಿ ಭಾಗವಹಿಸಬೇಕು. [2] ಸದ್ಯ ಡಾಕ್ಟರರೂ ನರ್ಸುಗಳೂ ಸಿಕ್ಕದಿರುವುದರಿಂದ ಮಹಿಳೆಯರು ಈ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಆಕರ್ಷಕವಾದ ರೀತಿಯಲ್ಲಿ ತಕ್ಕ ವಿದ್ಯಾರ್ಥಿ ವೇತನಗಳನ್ನಿತ್ತು ಪ್ರೋತ್ಸಾಹಿಸಬೇಕು. [3] ಹಿಂದೂ ಮುಸೂದೆಯನ್ನು ಬೇಗನೆ ಜಾರಿಗೆ ತಂದೇಕು. [4] ಗಿರಿಜನಗಳಲ್ಲಿ ಕಲಸ ಮಾಡುವ ಮಹಿಳೆಯರಿಗೆ ಜ್ಞಾನ ಸಿಕ್ಕುವಂತೆ ಚಲಚ್ಚಿತ್ರವೇ ಮೊದಲಾದ ದೃಶ್ಯ ರೂಪೀ ಶಿಕ್ಷಣಗಳನ್ನೀಯಬೇಕು. [5] ಅಖಿಲ ಭಾರತ ಮಹಿಳಾ ಪರಿಷತ್ತಿನ ಸಂಬಂಧನೆಗಳನ್ನು ಕಿತ್ತುವ ವಿಚಾರವನ್ನು ಈ ಸಭೆಯು ಸ್ವಾಗತೀಕರಿಸುತ್ತದೆ.

ರೈಲ್ವೆ ವ್ಯಾಪಾರಿಕರ ಸಂಘ— ರಾ. ಬಾ. ಎಸ್. ಗಿರಿಯಪ್ಪನವರ ಅಧ್ಯಕ್ಷತೆಯಲ್ಲಿ ಈಚೆಗೆ ಜಿಲ್ಲಾ ಟೌನ್ಹಾಲ್ ಕಚೇರಿಯಲ್ಲಿ ಜರಗಿದ ಸಭೆಯಲ್ಲಿ ದ. ಕ. ಜಿಲ್ಲಾ ರೈಲ್ವೆ ಪ್ರಯಾಣಿಕರ ಸಂಘವೊಂದನ್ನು ಸ್ಥಾಪಿಸುವ ನಿರ್ಧಾರವಾಯಿತು. ಸಂಘದ ಸದಸ್ಯರಿಂದ ನಾಲ್ಕಾಣೆ ದಂತೆಗೆ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಲಾಯಿತು. ಸಂಘವನ್ನು ರಿಜಿಸ್ಟ್ರಿ ಮಾಡುವರೆ ತಾತ್ಕಾಲಿಕ ಕಮಿಟಿಯೊಂದು ರಚಿಸಲಾಯಿತು. ರಾ. ಬಾ. ಗಿರಿಯಪ್ಪ, ಶ್ರೀಮತಿ ಶ್ರೀಸ್ಯ, ಶ್ರೀಗಳಾದ ಕೆ. ನರಸಿಂಹ ಪೈ, ಎಸ್. ಸುಂದರರಾವ್ ಮತ್ತು ಬಿ. ವಿ. ರಮಣ ಇವರು ಸಮಿತಿಯ ಸದಸ್ಯರು.

ದ ಕ. ಜಿಲ್ಲಾ ಆಹಾರ ಸಮಿತಿಯ ಸಭೆಯು— ಇದೇ ತಾ. 18ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಸಯ್ಯಿದ್ ಅದಮ್ಮದರ ಅಧ್ಯಕ್ಷತೆಯಲ್ಲಿ ಜರಗಿತು. ಈಗ ಇರುವ ಸ್ಟಾಕು ಮತ್ತು ಮುಲಬಾರಿನಿಂದ ಬರಲಿರುವ ಅಕ್ಕಿ ಕೂಡಾ ನಮ್ಮ ಜಿಲ್ಲೆಗೆ ಒಂದು ತಿಂಗಳಿಗೆ ಮಾತ್ರ ಸಾಕಾದೀತೆಂದು ಜಿಲ್ಲಾ ಸರಬರಾಯಿ ಅಧಿಕಾರಿಯು ಸೂಚಿಸಿದರು.

ಸಕ್ಕರೆಯ ಪರಿಸ್ಥಿತಿಯ ವಿಚಾರ ಕಲೆಕ್ಟರರು ಮಾತನಾಡುತ್ತಾ ಕಂಟ್ರೋಲ್ ಪುನಹ ಜಾರಿಯಾದೊಡನೆ ಈ ಜಿಲ್ಲೆಯಲ್ಲಿ 1650 ಟೀಲಗಳನ್ನು ಫ್ರೀಜ್ ಮಾಡಲಾಗಿತ್ತು. ಈಗ 450 ಟನ್ ಸಕ್ಕರೆ ಸರಕಾರದಿಂದ ಈ ಜಿಲ್ಲೆಗೆ ಮಂಜೂರಾಗಿದೆ ಎಂದರು.

ಡಾ। ಎಚ್. ವಿ ಅಡಪ್ಪರ ಸೂಚನೆಯ ಮೇರೆಗೆ, ಈಗಿರುವ ಪ್ರೊಕ್ಯೂರ್‌ಮೆಂಟ್ ದರಗಳನ್ನು ಇನ್ನೂ ಹೆಚ್ಚು ಕಡಿಮೆ ಮಾಡ ಕೂಡದೆಂಬುದಾಗಿ ಸರಕಾರವನ್ನು ಕೇಳಿಕೊಳ್ಳಲಾಯಿತು ಪ್ರೊಕ್ಯೂರ್‌ಮೆಂಟ್ ಅಡಮೇಲೆ ದರ ಬದಲಾಯಿಸುವುದು ರೈತರ ಹಿತದೃಷ್ಟಿಯಿಂದ ಒಳ್ಳಿತಲ್ಲವೆಂದು ಅಭಿಪ್ರಾಯ ವೀಯಲಾಯಿತು.

ಮೂಲ್ಕಿ— ಇಲ್ಲಿಯ ಬೋರ್ಡ್ ಹೈಸ್ಕೂಲಿನ ಉಪಾಧ್ಯಾಯರಾಗಿದ್ದ ಶ್ರೀ ಅಲೆಪ್ಪೂರು ಶ್ರೀನಿವಾಸಭಟ್, ಬಿ ಎ ಎಲ್. ಟಿ. ಇವರು ಇದೇ ತಾ. 10 ನೇ ಸೋಮವಾರ ಅಕಾಲ ಮೃತ್ಯುವಿಗೆ ತುತ್ತಾದುದು ಅತ್ಯಂತ ವಿಷಾದಕರವಿದೆ.

ಹಿರಿಯಡ್ಕ— ತಾ. 21ರಲ್ಲಿ ಆರ್ಯ ಸಮಾಜ ಮಂದಿರದಲ್ಲಿ ದೀಪಾವಳಿ ಮತ್ತು ಮಹರ್ಷಿ ದಯಾನಂದ ಸರಸ್ವತಿಯವರ ನಿರ್ವಾಣ ನುಹೋತ್ಸವವು ಶ್ರೀ ಕೆ ವಿಶ್ವನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಬಿ.ಲಕ್ಷ್ಮೀನಾರಾಯಣ ನೆಲ್ಲಿ, ಎಚ್. ಮಹಾಬಲ ಶೆಟ್ಟಿ, ಎಚ್. ಸಂಜೀವ ಹೆಗ್ಡೆ, ಎ ಜಗಜ್ಜೀವ ಹೆಗ್ಡೆ, ಎಚ್. ಕೆ. ಅನಂತಯ್ಯ ನೊದಲಾದವರ ಭಾಷಣಗಳಾದುವು.

ನಿಂಜೂರು ಚಿತ್ರಬೈಲು— ಇಲ್ಲಿಯ ಶ್ರೀ ಬ್ರಹ್ಮಲಿಂಗೇಶ್ವರ ಸ್ವಾಮಿಯ ಕ್ಷೇತ್ರದಲ್ಲೂ, ಅಂತೆಯೇ ಸಡಂಬೆಟ್ಟು ಆಚ್ಚಣ್ಣ ಸೆಟ್ಟಿ ಮತ್ತು ಸಹೋದರರು, ಮಹಾಬಲ ಸೆಟ್ಟಿ, ನಾರಾಯಣ ಸೆಟ್ಟಿ, ವಿಠಲ ಸೆಟ್ಟಿಯವರು ಕೂಡಿಕೊಂಡು ಹೊಸತಾಗಿ ಕಟ್ಟಿಸಿದ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿಯೂ ತಾ. 7-11-49ನೆ ಸೋಮವಾರ ದಿವಸ ದೀಪೋತ್ಸವ ಶ್ರೀ ಚಿತ್ರಬೈಲು ಜ್ಯೋತಿಷ ಅನಂತರಾಮ ಭಟ್ಟರ ಲೆಕ್ಕುದಿಂದ ಜರಗಲಿರುವುದು.

ಹೆಗ್ಗುಂಜೆ— ಸ್ಥಳೀಯ ಬಿ. ಟಿ. ಶಾಲೆಯಲ್ಲಿ ಹೆಗ್ಗುಂಜೆ ಪಟೇಲ್ ಶ್ರೀ ಎಚ್. ಕೆ. ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಇದೇ ತಾ. 15ರಲ್ಲು ಸದ್ರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯನ್ನಾಗಿ ಮೂರ್ಪಡಿಸುವಬಗ್ಗೆ ಬೇಕಾದ ಕಟ್ಟಿಣ ಕಟ್ಟಿಸುವ ಕಾರ್ಯಕ್ರಮವನ್ನು ನಿರ್ಧರಿಸುವರೆ ಅಸುಪಾಸಿನ ಗ್ರಾಮಸ್ಥರ ಸಭೆಯೊಂದು ಜರಗಿತು.

ಪುತ್ತೂರು— ಅತಿವೃಷ್ಟಿ ಮತ್ತು ಅನಾವೃಷ್ಟಿಯ ದೆಸೆಯಿಂದಾಗಿ ಈ ಬಾರಿ ಸಾಗುವಳಿಯು ಸಕಾಲದಲ್ಲಿ ಆಗದಿದ್ದುದರಿಂದ ಈ ವರ್ಷದ ಭತ್ತ ಉತ್ಪಾದನೆಯು ಸಾಕಷ್ಟು ತೃಪ್ತಿಕರವಾಗಿಲ್ಲವೆಂದೆನ್ನಲಾಗಿದೆ.

ಭದ್ರಗಿರಿ— ಬೈಕಾಡಿ ಎಲಿವೆಂಟರಿ ಶಾಲೆಯ ಹೆತ್ತವರ ಸಂಘದ ವಾರ್ಷಿಕ ಮಹಾಸಭೆಯು ತಾ. 18-10-49ರಲ್ಲು ಉಪ್ಪಿನೋರ್ತ್ ರೇಂಜ್ ಶಾಲಾ ಡಿಸ್ಟ್ರಿಕ್ಟ್ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಎಸ್. ಶೆಟ್ಟಿರು ಸ್ತ್ರೀವಿದ್ಯಾಭ್ಯಾಸದ ಮಹತ್ವದ ಕುರಿತು ಭಾಷಣ ಮಾಡಿದರು. ಮಕ್ಕಳ ವಿವಿಧ ವಿನೋದಾವಳಿ, ಶಾರಿತೋಷಕ ವಿತರಣೆ, ಅಧ್ಯಕ್ಷರ ಭಾಷಣವಾಗಿ ಸಮಾರಂಭವು ನುಕ್ತಾಯವಾಯಿತು.

ಹುಲಿ ಕಾಟ—ಕುಂದಾಪುರ ತಾಲೂಕಿನ ಹಾರ್ದಳ್ಳಿಯಲ್ಲಿ ತಾ. 22ನೇ ಬೆಳಿಗ್ಗೆ ಸುಮಾರು 10 ಗಂಟೆಗೆ ಸಾಡಿದ ಹತ್ತಿರ ಜಾನುವಾರುಗಳನ್ನು ಮೇಯಿಸಲಿಕ್ಕೆ ಹೋದ ಸುಮಾರು 14 ವರ್ಷದ ಹುಡುಗನೊಬ್ಬನನ್ನು ಹುಲಿಯೊಂದು ಹಿಡಿದುಕೊಂಡು ಹತ್ತಿರದ ಕೋಡಿಹರ ಎಂಬ ದಟ್ಟವಾದ ಕಾಡಿಗೆ ನುಗ್ಗಿ ತಿಂದಿರುವುದಾಗಿಯೂ ಗ್ರಾಮ ಪರೇಲರು ಈ ಕುರಿತು ರಿಪೋರ್ಟು ಮಾಡಿರುವರಾಗಿಯೂ ತಿಳಿದುಬರುತ್ತದೆ. ಸರಕಾರವು ಈ ಕಡೆಗೆ ಲಕ್ಷ್ಯ ಕೊಟ್ಟು ಮೂಡು ಪ್ರಾಂತ್ಯದ ಜನರಿಗೆ ಪದೇಪದೇ ಒದಗುತ್ತಿರುವ ಇಂಥಾ ಪಾಪಳಿಯನ್ನು ತಪ್ಪಿಸಲು ತಕ್ಕ ವ್ಯವಸ್ಥೆ ಕೈಕೊಳ್ಳುವುದೇ?

ಸಾಗ್ಸಳ್ಳಿದಾರರು ಕೊಡುವ
ದೃಢಪತ್ರಿಕೆ
ಮುಕ್ತ

ಮನೆವಾರ್ತೆ ಖರ್ಚಿಗೆ ಗೃಣಿ ಅಕ್ಕಿ ಸಡೆಯ ವರೆ ರೈತನು ಕೊಡತಕ್ಕ ಬಡ್ಡಿ ಇಸ್ಯೆರಿ ಧಾಮ್ಯಗಳು ದೊರೆಯತ್ತವೆ.

ನವಯುಗ ಪ್ರೆಸ್, ಉಡುಪಿ

Notice

ಉಡುಪಿ ಡಿ ಮು. ಕೋರ್ಟಿನಲ್ಲಿ.

Small Cause Suit No 416/1949.

ಕಲ್ಯಂಕ ವೆಂಕಟ್ರಾಯಪ್ಪ ಎಂಡ್ ಸನ್ಸ್ a Joint Hindu Family Firm ಇದರ ಮೆನೆಜರ್ ಕೆ. ಕಮಲಾಕ್ಷ ಪೈ - ವಾದಿ

ಮತ್ತು

1) ಅಮೀರ್ ಸಾಹೇಬ್ 2) ಅಜೀಜನ್ ಸಾಹೇಬ್ - ಪ್ರತಿವಾದಿರು.

ಇವರೊಳಗೆ

1) ಅಮೀರ್ ಸಾಹೇಬ್, ಮಹಮ್ಮದ್ ಸಿದ್ದಿಕ್ ಸಾಹೇಬರ ಮಗ 2) ಅಜೀಜನ್ ಸಾಹೇಬ್, 1ನೇ ಪ್ರತಿವಾದಿ ಮಗ- ಉಡುಪಿ ತಾಲೂಕು ಕೋಡಿಗ್ರಾಮದ ಬೇಂಗ್ರೆಯಲ್ಲಿ ವಾಸವಾದರು — ಪ್ರತಿವಾದಿರು.

ಪ್ರತಿವಾದಿರು ವಾದಿರ ಅಂಗಡಿಯಲ್ಲಿ ತಾ 1-6-1948ರಿಂದ ತಾ 21-3-1949ರ ವರೆಗೆ ನಡೆಸಿದ ಲೇವಾದೇವಿ ಬಾಬ್ತು ಪ್ರತಿವಾದಿರಿಂದ ವಾದಿಗೆ ಬರಬೇಕಾದ ಹಣ ಬರಮಾಡಿಕೊಳ್ಳುವರೆ ವಾದಿಯು ದಾವಿಲುನಾಡಿದ ಮೇಲ್ಕಂಡ ವ್ಯಾಜ್ಯವು ಆಪೈಂ ತನವಿ ಬಗ್ಗೆ ತಾ. 18-11-1949ಕ್ಕೆ ಇಜೋಡಾಗಿಯದ್ದೆ. ಆ ಕುರಿತು ಪ್ರತಿವಾದಿರ ಉದಾಹರಣೆ ಇದ್ದಲ್ಲಿ ಸದ್ರಿ ತನವಿ ದಿವಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಪ್ರತಿವಾದಿರು ಸ್ವತಹ ವ ವಕೀಲರ ಸ್ವಾರಾ ಹಾಜರಾಗಿ ವ್ಯಾಜ್ಯೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ವ್ಯಾಜ್ಯವನ್ನು ಪ್ರತಿವಾದಿರ ಗೈರಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಯಿತು, ಎಂತ ಈ ಮೂಲಕ ಕೋರ್ಟು ಪುಕುಂ ಪ್ರಕಾರ ತಿಳಿಸೋನಾಗಿಯದೆ.

K. Varadaraya Pai
Advocate for Plaintiff.
Udipi
Date 19-10-1949



Approved firm by the Govt. of Mysore Certificated by theA gent of the Govt. of Cylone & Indian.

ಜೀವವಿಮೆಗಾಗಿ
ವಿಚಾರಿಸಿರಿ
ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.
(ಸ್ಥಾಪನೆ: 1934)
ಚೆಯರ್‌ಮೆನ್: ಶ್ರೀ. ಎಮ್ ಟಿ. ಎಮ್. ಚಿದಂಬರಮ್ ಚೆಟ್ಟಿಯಾರ್
ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ
ಆದೊಂದು ಉತ್ತಮ ನಿಧಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.
ಮಂಗಳೂರು ರ ಚೆ: ಕೆ. ಎಸ್. ರಾವ್. ರೋಡು, ಹಂಪನಕಟ್ಟೆ, ಮಂಗಳೂರು.
ಕೇಂದ್ರ ಕಾರ್ಯಾಲಯ: "ಯುನಿಯಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್' ಪೋಸ್ಟು ಬಾಕ್ಸ್ ನಂಬ್ರ 142 ಮದ್ರಾಸು.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ವಿ. ಶಾಸ್ತ್ರೀ,
ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿವ ದೇಹಸ್ಥಿತಿಯನ್ನು ನಿರೀಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
ಹೆಚ್ಚಿನ ಮಾಹಿತಿಗೆ—ಡಾ। ಯಂ ವಿ. ಶಾಸ್ತ್ರೀ, ಎಲ್. ಐ. ಯಂ. ಕೊಡಿಯಾಲಬೈಲು ಪೋಸ್ಟು. (ಮಂಗಳೂರು)
ಸ್ವಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S K

ಸ್ವೀಕಾರ—ವಿಮರ್ಶೆ

೧ ಸುಲಭ ಚಿಕಿತ್ಸೆ

ಪ್ರೇಮ ಸಾಹಿತ್ಯಮಾಲೆ. ಮಣಿ ೧. ಲೇಖಕರು: ಪಂಡಿತ ತಾರಾನಾಥರು. ಪ್ರಕಾಶಕರು: ದಾ। ಆರ್. ಅಮೃತರಾವ್, ಪ್ರೇಮಸಾಹಿತ್ಯ ಗ್ರಂಥಮಾಲೆ ತುಂಗಭದ್ರಾ, ಎಂ. ಎಸ್., ಎರಿ. ತೈಲ್ಲೆ

ನಮ್ಮಲ್ಲಿ ಜನಸಂಖ್ಯೆ ಬೆಳೆಯುತ್ತ ಬಂಪ ಹಾಗೆಯೇ ರೋಗರುಜಿನಗಳೂ ಜೊತೆಯಲ್ಲಿ ಬೆಳೆಯುತ್ತ ಬಂದಿವೆ. ಡಾಕ್ಟರುಗಳ ಸಂಖ್ಯೆಗಳೂ ವೃದ್ಧಿಯಾಗಿದೇ ಇದ್ದು! ಆದರೆ ಜನದ ಆರೋಗ್ಯ ವಿಷಯದಲ್ಲಿ ಯಾವ ರೀತಿಯ ಪ್ರಗತಿಯನ್ನೂ ನಾವು ಕಾಣುತ್ತಿಲ್ಲ. ಜನರಿಗೂ ಕಾಹಿಲೆ ಕೂಡಲೇ ಗುಣವಾಗಬೇಕು. ವೈದ್ಯರಿಗೂ ಅಪ್ಪೇನೇ. ಅದಕಂತ ಲೋ ಏನೋ ಈಚೀಚೆ ಇಂಜಕ್ಷನ್ನಿನ ಬಳಕೆ ಹೆಚ್ಚು ಹೆಚ್ಚಾಗಿ ಜನ ಇನ್ನಷ್ಟು ಆರೋಗ್ಯದಿಂದ ಇರುವ ಅಲಕ್ಷವನ್ನು ತೋರಿಸುವುದಕ್ಕೆ ಮಾರ್ಗವಾಯಿತು. ಸುಲಭವೂ, ಆತ್ಮಮೂಲ್ಯವೂ, ತುಂಬ ಪರಿಣಾಮಕಾರಿಯೂ ಆದ ಗಿಡ ಮೂಲಿಕೆಗಳ-ಆಯುರ್ವೇದದ ಸದುಪಯೋಗವನ್ನು ಮಾಡಿಕೊಳ್ಳದೆ ಹೊರ ಮರೆಯುವಂತಾಯಿತು. ಆಯುರ್ವೇದದ ಮಹತ್ವವೆಂತಹದೆಂಬುದನ್ನು ಪಂಡಿತ ತಾರಾನಾಥರು ಸಮಾರು ಹದಿನೈದು ವರ್ಷಗಳ ಅನುಭವದಿಂದ-ಪ್ರಯೋಗದಿಂದ- ಈ ಚಿಕಿತ್ಸೆಗಳನ್ನು ಬರೆದಿರುತ್ತಾರೆ. ನಮ್ಮ ಸ್ನೇಹಿತರಲ್ಲೇ ಇದ್ದು ನಮ್ಮ ಆರೋಗ್ಯವನ್ನು ರಕ್ಷಿಸತಕ್ಕ ಗಿಡ ಮೂಲಿಕೆಗಳ ಪರಿಚಯವನ್ನೂ ಉಪಯೋಗವನ್ನೂ ತೋರಿಸಿ ಕೊಟ್ಟಿರುತ್ತಾರೆ ಸಮಾರು ೫೩ ವ್ಯಾಧಿಗಳ ಪರಿಹಾರವನ್ನು ಹೇಳಿರುತ್ತಾರೆ. ಇಂತಹ ಅಮೂಲ್ಯ ಕೃತಿ ಪ್ರತಿಯೊಬ್ಬ ಸಂಸಾರಿಯ ಮನೆಯಲ್ಲಿದ್ದರೆ ಒಬ್ಬ ವೈದ್ಯನಿದ್ದ ಹಾಗೆಯೇ. ಜನತಾಸೇವೆಯೇ ತನ್ನ ಧ್ಯೇಯವಾಗಿಟ್ಟುಕೊಂಡು, ತನಗೆ ಬಂದ ನೂರಾರು ತೊಡಕು ತೊಂದರೆಗಳಿಂದ ಪಾರಾಗಿ ಸೇವೆಯಲ್ಲಿಯೆ ತತ್ಪರರಾಗಿ-ಸಾವಿರಾರು ಮಂದಿ ಬಡ ಬಾಧಿಗಳ ಆರೋಗ್ಯ ಸಂಪತ್ತನ್ನು ದಯಪಾಲಿಸಿದ ದಿವಂಗತ ಪಂಡಿತ ತಾರಾನಾಥ ರಾಯರ ಈ ವೈದ್ಯಕೀಯ ಲೇಖನ ಸಂಗ್ರಹವು ಸಂಗ್ರಹಯೋಗ್ಯವಾಗಿರುತ್ತದೆ. ವೈದ್ಯಗುರು ಸ. ಕೃ. ಭಾಲಚಂದ್ರಾಜರ ವಿಪ್ಪತ್ಪೂರ್ಣವಾದ ಮುನ್ನುಡಿ ತಾರಾನಾಥ ರಾಯರ ಜೀವನ ಹೋರಾಟವನ್ನು ಚಿತ್ರಿಸುತ್ತದೆ, ಇಂತಹ ಅಮೂಲ್ಯ ಕೃತಿಗೆ ರೂ. ೨ ಹೆಚ್ಚಲ್ಲವಾದರೂ ಎಲ್ಲರ ಉಪಯೋಗಕ್ಕೂ ಅದರಲ್ಲೂ ಸಾಮಾನ್ಯ ಜನಕ್ಕೂ ಇದರ ಉಪಯೋಗ ದೊರೆಯಬೇಕಾದರೆ ರೂ. ೨ ತುಸು ಭಾರವೆನ್ನಿಸುತ್ತದೆ.

೨ ತಳಿರು ತೋರಣ

(ಸಣ್ಣ ಕತೆಗಳ ಸಂಕಲನ) ಸಂಪಾದಕರು: ಮ ವಿ. ನಾಯಕ, ಜಂಗ ಸಾಹಿತ್ಯಮಾಲಾ, ಲಾಲ್‌ಬಾಗ್, ಮುಂಬಯಿ ೧೨. ಪ್ರಕಾಶಕರು ಆರ್. ವಿ. ಪ್ರಭು, ಕರ್ನಾಟಕ ನ್ಯೂಸ್ ಏಜನ್ಸಿ 389 ಲಾಲ್‌ಬಾಗ್, ಮುಂಬಯಿ 12.

ತಳಿರು ತೋರಣದಲ್ಲಿ ಭಾಗವಹಿಸಿದ ಪತ್ತು ಜನರೂ 'ಹೊಸ ಹುರುಪಿನವರು' ಎಂದು ದಾರೆ ಸಂಪಾದಕರು. ಈಚೆಗೆ ಹೊಸ ಹುರುಪಿನಲ್ಲಿ ಹುಟ್ಟಿದ ಬರಹಗಳೂ, ಪತ್ರಿಕೆಗಳೂ ಜನರ ಒಂದು ರೀತಿಯ ಆವಶ್ಯಕತೆಗೆ ಕಾರಣವಾಗಿವೆ ಹೆಚ್ಚಾಗಿ 'ಕಾರ್ಮಿಕರು ಧನಿಗಳೊಳಗೆ ತಿಕ್ಕಾಟಿ'-'ಸರಕಾರ ಮತ್ತು ಪ್ರಜೆಗಳೊಡನೆ ಹೋರಾಟ' -'ರಕ್ತದ ಕಾಲುವೆ' -'ಕೆಂಪು ನಿಶಾನೆ' ಈ ರೀತಿಯ ಕ್ರಾಂತಿಕಾರೀ ಬರಹ ಹೊಸತನಾಗಿ ಬಂದ ಪೀಳಿಗೆಯಲ್ಲಿ ಕಾಣುತ್ತೇವೆ. ಆದರೆ ತಳಿರು ತೋರಣದಲ್ಲಿಯ ಪತ್ತು ಜನ ನಿತ್ರರೂ ಅನುಭವಿಕರು. ಸನ್ನಿವೇಶ, ಸಂದರ್ಭಗಳನ್ನು ಅರ್ಥಮಾಡಿಕೊಂಡು ಸಾಹಿತಿಕ ಭಾಷೆಯಿಂದ ಸರಿಯಾದ ಮಾರ್ಗದರ್ಶನ ಮಾಡಹೊರಟಿವರು. ಈ ಸಂಗ್ರಹದಲ್ಲಿಯ ಹತ್ತು ಕತೆಗಳೂ ಬೇರೆ ಬೇರೆ ದೃಷ್ಟಿಕೋನವನ್ನಿಟ್ಟುಕೊಂಡು ಬರೆದವು. 'ವಿಧಿತಂದ ವಧ' 'ಚಕ್ರಗತಿ' 'ಕಲಾಕಾಮ' ಈ ಮೂರು ಕತೆಗಳಲ್ಲಿ ಕಥಾವಸ್ತು ಹೊಸ ಕಲ್ಲು; ಹೇಳುವ ಬಗೆ ಹೊಸತು! ಕತೆಯ ಮುಕ್ತಾಯ ಹೀಗೆಯೆ ಅದೀತೆಂದು ನಾವು ಮೊದಲೇ ಊಹಿಸಲಾಯದಾವೂದರೂ ಕತೆಯನ್ನು ಹೇಳುವ ಬಗೆಯಲ್ಲಿ ಕೊನೆಯ ತನಕವೂ ಒಂದು ಸೆಳೆತವಿದೆ. 'ಆದು ಆವನ ತಪ್ಪೇನು?' 'ಬಂಧನದಲ್ಲಿ' ಈ ಎರಡು ಕತೆಗಳಲ್ಲಿ ನಾವಿನ್ನತೆಯಿದೆ. ಜಾಯಮಾನ ಸ್ಥಿತಿಗೆ ಸರಿಯಾಗಿ ಬರೆದಿವೆ. ಎರಡರಲ್ಲೂ ಬಡತನ, ದಾರಿದ್ರ್ಯ ಆವರಣ್ಣು ಕಟ್ಟಿ ಮಾರ್ಗಕ್ಕೆ ತಳ್ಳುತ್ತದೆ. ಅವರು ಜೀವನದಲ್ಲಿ ತಪ್ಪು ಹೆಜ್ಜೆಯನ್ಯಾಟ್ಟರೂ ನಮಗೆ ಅಂತಪ ವ್ಯಕ್ತಿಗಳನ್ನು ಕಂಡರೆ ತುಂಬ ಅನುಕಂಪ ಹುಟ್ಟುವುದು ಸ್ವಾಭಾವಿಕ. ಆದರಲ್ಲೂ 'ಬಂಧನದಲ್ಲಿ' ತುಂಬ ಸೊಗಸಾಗಿದೆ 'ವೀರಯ್ಯ ಸುತೀ' ಈ ಎರಡು ವ್ಯಕ್ತಿಗಳ ಚಿತ್ರಣ ಒಳ್ಳೆಯ ಪರಿಣಾಮಕಾರಿಯಾಗಿದೆ. ಇಡಿಯ ಸಂಗ್ರಹದಲ್ಲಿಯೆ ಇದು ಅತ್ಯುತ್ತಮವಾದ ಕತೆಯಾಗಿರುತ್ತದೆ. ಯಾವ ತರಹದ ಕಿರಿಕಾರವೆ ಮಾತಿಲ್ಲದೆ—ಅಸಹಾಯಕ ಪರಿಸ್ಥಿತಿಯಿಂದ ಹಡ್ಡಾದ ಒಂದು ಸಂಸಾರದ ಚಿತ್ರ ನಮ್ಮ ಕಣ್ಣ ಮುಂದೆ ನಿಂತು ಕಣ್ಣು ಹನಿಗೂಡುತ್ತದೆ! ಉಳಿದ ಆರು ಕತೆಗಳಲ್ಲಿ 'ಮನೆಗೆ ಮರಳು ವಿಯಾ?' 'ಮಲ್ಲಿ' ಸಾಮಾನ್ಯ ತರಹದ ಕತೆಗಳು. 'ಕೊನೆಯೆಂತು?' 'ವಿನಲ್ಲಿಯ ಭರ್ಷಣೆ' ನಮ್ಮ ಮನಸ್ಸನ್ನು ಆಸ್ಪಾಟಿ ಆಳಕ್ಕೆಸಿಳುವು ದಿಲ್ಲ. 'ಗೌರಿ' ಅಸ್ಪಷ್ಟವಾದ ಪತ್ರಗಳ ಒಂದು ಗುಂಪು. 'ಸೋಲಿನ ಸಾಲು' ತಾಂತ್ರಿಕವಾಗಿದ್ದರೂ ಹೇಳುವ ರೀತಿಯಲ್ಲಿ ಕಥನವೈಲಿಯಲ್ಲವೆ ಸಪ್ಪೆಯಾಗಿ ತೋರುತ್ತದೆ

ಈ ಹತ್ತು ಹೊಸ ಹುರುಪಿನ ಸಾಹಿತಿಗಳ 'ತಳಿರು ತೋರಣ' ವಿಕಸುವುವಾಗಿದೆ ಹತ್ತು ಮುಖದಲ್ಲಿ, ಕನ್ನಡ ಆಭಿವ್ಯಾಯವನ್ನು ಬೆಂಬಿಸುತ್ತದೆ. ಪ್ರತಿಯೊಬ್ಬ ತರುಣಮಿತ್ರರೂ ಸಾಹಿತ್ಯ ಮಾರ್ಗದಲ್ಲಿ ಸಾಕಷ್ಟು ಜ್ಞಾನವಿದ್ದವರೇ. 'ಯೊಹಕುರುಪಿನವರ' ಕಾವೇನೂ ಇದಂಲ್ಲಿ ಕಾಣದೆ ಸಂಗ್ರಹ ಸುಂದರವಾಗಿರುತ್ತದೆ. ಇದಕ್ಕಂತಲೂ ಮಿಗಿಲಾದ ಸಾಹಿತ್ಯರಚನಾ ಕಾರ್ಯದಲ್ಲಿ ಎಲ್ಲರೂ ಯತಗಳಿಸಬಲ್ಲರೆನ್ನುವುದಕ್ಕೆ ಅವರ ವೈಯಕ್ತಿಕ ಸಂಗ್ರಹವಾದ 'ತಳಿರು ತೋರಣ'ವೇ ಸಾಕ್ಷಿಯಾಗಿರುತ್ತದೆ.

೩ ಜನಮತ

(ಮಾಸಪತ್ರಿಕೆ) ಪ್ರಧಾನ ಸಂಪಾದಕರು. ಹಾಸ್ಯಗಾರ B. A. ಜನಮತ ಪ್ರಕಾಶನ ಸಮಿತಿ ಪಿ. ಬಿ. ೧೮೮, ಧಾರವಾಡ.

ಜನಮತ ದೀಪಾವಳಿ ಸಂಚಿಕೆಯಲ್ಲಿ ಹೆಸರೆತ್ತಿ ಹೇಳಬಹುದಾದ ಸಾರವತ್ತಾದ ಒಂದೇ ಒಂದು ಬರಹವಿಲ್ಲ. ಆಯಿಲ ಧಾರವ ಕಾಂಗ್ರೆಸಿನ ಅಧ್ಯಕ್ಷ ಪಟ್ಟಾಭಿ ಸೀತಾರಾಮಯ್ಯನವರ ಮತ್ತು ಮುಂಬಯಿ ಸರಕಾರದ ಅರಣ್ಯ ಖಾತೆಯ ಮಂತ್ರಿ ಖಾಟೀಲರ ಸಂದೇಶಗಳೆ ವೆ. ಅವರು ಹಾರೈಸುವಷ್ಟು ಸರ್ವಾಂಗೀಣ ಸುಂದರ ಪತ್ರಿಕೆ 'ಜನಮತ'ವಾಗಿಲ್ಲವೆಂದು ಹೇಳಲು ವಿಷಾದಿಸಬೇಕಾಗಿದೆ.

೪ ತಪೋಷ್

'ಎಂಟಿನೆಯ ನವರಾದ ದಸರಾ ಸಂಚಿಕೆ) ಸಂಪಾದಕರು: ಎಂ. ಎಸ್. ಮಾಧವರಾವ್. ಮುಖ್ಯ ಕಾರ್ಯಾಲಯ, ರಾಮಾನುಜ ರೋಡ್, ಮೈಸೂರು.

ದಸರಾ ವಿಶೇಷ ಸಂಚಿಕೆಯಲ್ಲಿ 'ಸಂಗೀತ ಮತ್ತು ಸಾಹಿತ್ಯ' 'ಹೃದಯದಾಹ' 'ಗ್ರಾಮಿಕಲೆ' ಕನ್ನಡ 'ರಂಗಭೂಮಿಯು ಸುಧಾರಣೆ' ಈ ನಾಲ್ಕು ಬರಹಗಳು ಮನನೀಯವಾಗಿರುತ್ತದೆ. ಪರಿಚಯ ವಿಭಾಗದಲ್ಲಿ ವ್ಯಕ್ತಿಗಳ ಜೊತೆಗಳೆಯು ಸತ್ಯಕ್ಕೆ ವಿರೋಧವಾದ್ದೂ, ಓದುಗರ ವಿಶ್ವಾಸಕ್ಕೆ ಅಪಾತ್ರವೂ ಆಗಿರುತ್ತದೆ.

೫ ಪ್ರಗತಿ

(ಗಾಂಧಿ ಜಯಂತಿಯ ವಿಶೇಷ ಸಂಚಿಕೆ) ಸಂಪಾದಕ: ಹುಬ್ಬಳ್ಳಿಗಾರ. ಪ್ರಕಾಶಕರು: ಯುವಕರುಂಟು, ದುಬ್ಬಳ್ಳಿ

ಪ್ರಗತಿಯ ಗಾಂಧೀ ಜಯಂತಿ ವಿಶೇಷ ಸಂಚಿಕೆ ವಿಚಾರಪೂರ್ಣ ಲೇಖನಗಳಿಂದಲೂ, ಕತೆಗಳಿಂದಲೂ ಕೂಡಿದ್ದು ಸಂಗ್ರಾಹ್ಯವಾಗಿದೆ.

೬ ಜ್ಯೋತಿಸ್ಮತ್ತ ವಿನೇಕ

ಲೇಖಕರು: ಶ್ರೀವಾದಕೃಷ್ಣ ಕಲ್ಯಾಣಪುರ, ಪ್ರಕಾಶಕರು: ಬಾಲಸಾಹಿತ್ಯ, ಮಂಡಲ, ಮಂಗಳೂರು. (Retired Dy. Asst. Engineer Telegraphs, Shirali S. K)

ಜ್ಯೋತಿಸ್ಮದ ಕುರಿತಾದ ಪುಸ್ತಕವಿದು. ಚಿತ್ರಗಳಿಂದಲೂ, ಜೋಪ್ಪಕ ಪದ್ಯಗಳಿಂದಲೂ, ಸರಳವಾದ ಶೈಲಿಯಿಂದಲೂ, ಜೋತಿಸ್ಮದ ಕುರಿತು ಸರಿಯಾದ ಜ್ಞಾನವನ್ನಿಡಿಯುವಂತೆ ಯತ್ನಮಾಡಿದಾರೆ ಲೇಖಕರು. ಎಲ್ಲರಿಗೂ ಓದಿ ಅರ್ಥಮಾಡಿಕೊಳ್ಳುವಷ್ಟು ಸರಳ ರೀತಿಯಲ್ಲಿ ವಿಮರ್ಶೆ ನಡೆಸಿದಾರೆ. ಜೋತಿಸ್ಮವನ್ನು ಅಭ್ಯಾಸ ಮಾಡುವವರಿಗಂತೂ ತುಂಬ ಪ್ರಯೋಜನವಾದೀತು!

- ಎಸ್ಸೆಲ್.

ಭಾರತ ಇನ್ಶೂರೆನ್ಸ್ ಕೊ. ಲಿಮಿಟೆಡ್; 53ನೆ ವಾರ್ಷಿಕ ವರದಿ.

ಈ ವಿಮಾ ಸಂಸ್ಥೆಯ 53 ನೆ ವಾರ್ಷಿಕ ವರದಿ ನೋಡಿಕೆ ವರದಿ ವರುಷದಲ್ಲಿ ರೂಪಾಯಿ 2,47,09,420ರ ನೊಲಬಿನ 4181 ಪೊಲಿಸಿಗಳನ್ನು ಕೊಡಲಾಗಿದ್ದು, ಗತ ವರುಷದ ಇದರ ದಾಖಲೆಗೆ ತುಸು ಕಡಿಮೆಯಾಗಿದೆ ಯೆಂದೂ 1948ನೆ ಇಸವಿಯ ಲಗ್ಗೆ ಸೇಕಡಾ 15ರಷ್ಟು ಡಿವಿಡೆಂಡನ್ನು ಶಿಫಾರಸು ಮಾಡಲಾಗಿದೆ ಎಂದೂ ಹೇಳಲಾಗಿದೆ.

ಈ ವಿಮಾ ಸಂಸ್ಥೆಯ ನಾಯಕ ಮಾಂಡಳಿಯ ಚಿಯರ್‌ಮೆನ್ ಸೇಟ್ ಆರ್. ದಾಲ್ಮಿಯ ಅವರು, ವಿಮಾ ಸಂಸ್ಥೆಗಳ ಮೇಲೆ ಪರಿಣಾಮ ಉಂಟುಮಾಡುವ ರಾಜಕೀಯ, ಆರ್ಥಿಕ ವಿಚಾರಗಳ ಕುರಿತು ಅಭಿಪ್ರಾಯ ಸೂಚಿಸುತ್ತ – ಕಾಶ್ಮೀರ ಸಮಸ್ಯೆ ಮತ್ತು ಶರಣಾರ್ಥಿಗಳ ಸೊತ್ತುಗಳ ವಿಚಾರದಲ್ಲಿ ಕೆಮ್ಮುತ್ತ ಬರುವ ಪರಿಸ್ಥಿತಿಯನ್ನು, ಭಾರತ ಪಾಕಿಸ್ತಾನಗಳವರು ಕೊಟ್ಟು – ತೆಗೆದುಕೊಳ್ಳುವ ಸ್ಪರ್ಧೆಯಿಂದ ಪರಿಹರಿಸಿಕೊಳ್ಳಬೇಕೆಂದು ಸೂಚಿಸಿ, ಮೌಲ್ಯ ವಿಚ್ಛೇದದಿಂದ ಧಾರಣೆ ವಾಸಿ ವರಬಯುದೆಂಬ ಸಂದೇಹವನ್ನು ಪ್ರಕಟಿಸಿ, ಬೆಲೆಗಳು ವರದಂತೆ, ಉತ್ಪಾದನೆ ಕಡಿಮೆಯಾಗದಂತೆ ಸರಕಾರವು ತನ್ನ ಕೈಗಾರಿಕೆಯ ಕಾರ್ಯನೀತಿಗಳನ್ನು ಹೇಗೆ ಹಿಡಿಪಟ್ಟಬೇಕೆಂದು ವಿಶದೀಕರಿಸಿದ್ದಾರೆ. ದೇಸೀಯ ವಿಮಾ ಸಂಸ್ಥೆಗಳಲ್ಲಿ ಪ್ರಾಚೀನವಾದ ಈ ವಿಮಾ ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸುವ.

Notice

In the Court of the Subordinate Judge S. K.

A. S. No. 151/1949

Beetween: -

Pilikur Ibrayi Beary-Appellant.

and

Santhappa Adyanthaya and others-Respondents.

To

Subbayya Bhandary. 2 and Respondent. grand nchew of Kunha Alva, residing in Talpady Village, Mangalore Taluk.

Please take notice that the cross appeal filed by 1st respondent in the above is posted to 4-11-1949 for final hearing and if you fail to appear on that date personally or by a duly appointed pleader the cross objections will be heard in your absence

By order of the court.

P. Shridhara Rao,

Advocate for 1st Respt.

Dated 18-10-1949 }

Mangalore }

ಮುತುಸ್ರಾವ ನಿಂತಿತು

'ಕುಮಾರ' ಬಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಮುತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ. ಸಾವಿರಾರು ಮಂದಿಗೆ ಹಾತ್ರಿ ಗುಣವಾಗಿದೆ-ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. ೫-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ.]

Mis. D. DEVEE, F. DS. (N. J.)

Tollygunge CALCUTTA

ಸ್ವಾತಿಸ್ವರು: ಶಹಾಕಂಪೌಂಡ್, ಮಂಗಳೂರು

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರೆಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಸಳವೀ ಡಾಗು ಹತ್ತುತ್ತಿದ್ದರೆ, ಕರ್ಪರದಿಂದ ಬಾವು. ಶರೀರದ ತೊಗಲು ಸಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಿತಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳದಿದ್ದರೆ, ಉಬ್ಬುಡು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕೊಟು ಗರ್ಭವಿಯಿಂದ ಗರ್ಭಕೋಶ ನಾಶಕೊಂಡಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರಿ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಸರೂ. ಪೋಸ್ಟ ಚಾರ್ಜ ೪ ಆಣೆ

ವಿಜಿಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ವಾರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ಕೇವಣಸಿದ್ಧಪ್ಪ ಹಾಲಪ್ಪ ಡಾವಣಗೆರಿ,

ಆಯುರ್ವೇದ ಔಷಧಾಲಯ. ಗದಗ-

ವಿವಿಧ ಪಾತ್ರೆಗಳು



ಯಾವಕ್ಕೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು, ನೊದಲಾದುವುಗಳ ವಿವಿಧ ಪಾತ್ರೆಗಳೂ ಪಾರ್ಸಾನುಗಳೂ ದಿಂ ಅಗ್ಗ ಯೂಚಿಲ್ವರೆಯಾಗಿಯೂದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,

೧೪ಬೀದಿ, ಉಡುಪಿ

ಆಹಾರದಲ್ಲಿ ಮೀನಿನ ಸ್ಥಾನ

ಸಂಗ್ರಾಹಕ:—ಶ್ರೀ. ಕೆ. ಎನ್. ಮಲ್ಯ.
(ಕಳದ ಸಂಚಿಕೆಯಿಂದ ಮುಂದುವರಿದುದು)

ಆದರಲ್ಲೂ 50 ಗ್ರೇಮುಗಳಷ್ಟು ಹಾಲು, ಕೋಳಿತತ್ತಿ, ಮೀನು ಮುಂತಾದ ಸ್ವಾಭಾವಿಕ ಆಹಾರಗಳಲ್ಲಿ ಸಿಕ್ಕುವ ಉತ್ತಮತರದ ಪ್ರೊಟೀನ್‌ಗಳಿಗೆ ಸಮವಾಗಿರಬೇಕು ಈ ಅನುಕೃತಿಗಳನ್ನು ಸರಿಯಾಗಿ ಒಬ್ಬನಿಗೆ ಒಂದು ವರ್ಷಕ್ಕೆ 23 ಸೇರುಗಳಷ್ಟು (1ಸೇರು = ಸುಮಾರು 2 ರಾತ್ತಲು) ಮೀನು ಬೇಕಾಗುತ್ತದೆಂದು ಆಹಾರ ತಜ್ಞರಿಂದ ಎಣಿಸಲಾಗಿದೆ. ಒಬ್ಬನಿಗೇ ಇಷ್ಟು ಬೇಕಾಗಿರುವಾಗ ಹಿಂದೂ ದೇಶದ ಅಸಂಖ್ಯಾತ ಜನರನ್ನು ಗಣಿಸುವುದಾದರೆ ಈಗ ಸಿಕ್ಕುತ್ತಿರುವ 2 ಕೋಟಿ ಪೌಂಡುಗಳಷ್ಟು ಮೀನು ಬಹಳ ಅಲ್ಪ ಎಂದೇ ಹೇಳಬೇಕಾಗುತ್ತದೆ. ಜನರ ಅನೈಕತೆಯ ಮೇರೆಗೆ ಮೀನಿನ ಉತ್ಪಾದನೆ ಈಗಿರುವುದಕ್ಕಿಂತ ಹತ್ತು ಹನ್ನೆರಡು ಮಡಿ ಹೆಚ್ಚಬೇಕಾಗಿರುವುದಾದರೂ ಸರಕಾರದವರು ಬರೇ ಮೂರು ಪಾಲಷ್ಟು ಉತ್ಪಾದನೆಯನ್ನು ಹೆಚ್ಚಿಸುವುದನ್ನು ಗುರಿಯಾಗಿಟ್ಟುಕೊಂಡಿದ್ದಾರೆ.

ಕಡಲಿನಿಂದ ಮತ್ತು ಒಳನಾಡಿನ ನೀರಾಶ್ರಯಗಳಿಂದ ದೊರಕುವ ಮೀನಿನ ಉತ್ಪತ್ತಿಯಲ್ಲಿ ಹಿಂದೂ ದೇಶವು ಸಮೃದ್ಧವಾಗಿರುವುದಾದರೂ ಬಡ ಜನರನ್ನು ಪೋಷಿಸುವುದರಲ್ಲಿ ಈ ಎರಡನೆಯ ಉತ್ಪತ್ತಿಯೇ ಪ್ರಮುಖವಾಗಿದೆ. ಈಗ ಇರುವಂತೆ ಕಡಲ ಮೀನು ಕರಾವಳಿಯಿಂದ 20 ರಿಂದ 30 ಮೈಲುಗಳಷ್ಟು ದೂರದ ಪ್ರದೇಶಗಳಿಗೆ ಮಾತ್ರವೇ ಹಸಿ ದೊರಕಲ್ಲಿ ಸಿಕ್ಕುತ್ತದೆ. ಹೆಚ್ಚಿನ ಮೀನು ಅಷ್ಟು ಮೇಲಲ್ಲದ ಕಾರಣ ಬಣಗಿಸಲ್ಪಟ್ಟು ಹೊರನಾಡುಗಳಿಗೆ ರಫ್ತಾಗುತ್ತದೆ ಆದ್ದರಿಂದ ಹಿಂದೂ ದೇಶದಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿಗೊಳಿಸುವಾಗ ಕರಾವಳಿಯಿಂದ ಬಹುದೂರದ ಪ್ರದೇಶಗಳಲ್ಲಿ ಪಾಸಿಸುವಪರೀಕ್ಷೆಯನ್ನು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು ಒಳನಾಡಿನಲ್ಲಿ ವ್ಯವಸಾಯಕ್ಕೆ ವಿಪುಲ ಆಶ್ರಯವಿದ್ದಾಗ ಹಸಿ ಉಷ್ಣವಾಗಿದೆ. ಜನ ಅತಿಕ್ಷೀಣರೂ ಆಜ್ಞರೂ ಇದ್ದಾರೆ. ಸಾರಿಗೆಯ ಅನುಕೂಲತೆಗಳ ಕೊರತೆ ತುಂಬಾ ಇದೆ ಜನ ತೀರ ಕೆಳವರ್ಗದಲ್ಲಿ ಜೀವಿಸುತ್ತಿದ್ದಾರೆ. ಪರಿಸ್ಥಿತಿ ಹೀಗಿರುವಾಗ ಒಳನಾಡಿನ ಜಲಾಶ್ರಯ ಇನ್ನು ಮೀನುಗಾರಿಕೆಗಾಗಿ ಹೆಚ್ಚಿಷ್ಟು ಉಪಯೋಗಿಸಬೇಕು. ಶೀಘ್ರದಲ್ಲೇ ಮೀನನ್ನು ಒದಗಿಸಿಕೊಡಬೇಕಾದ ಈ ಸಂದರ್ಭದಲ್ಲಿ ಇದೊಂದೇ ನಮ್ಮ ಮುಂದಿರುವ ಅಶಾಜನಕ ಮಾರ್ಗ. ಹಳ್ಳಿಗಳಲ್ಲಿನ ನೀರಾಶ್ರಯಗಳನ್ನು ಹೀಗೆ ಸದುಪಯೋಗಿಸುವುದರಿಂದ ಬಡವರಿಗೆ ಪೌಷ್ಟಿಕ ಆಹಾರವನ್ನು ಪೂರೈಸಿದಂತೆಯೂ ಆಗುತ್ತದೆ; ಆವರ ಜೀವನೋತ್ಕರ್ಷೆಯನ್ನು ಸಾಧಿಸಿದಂತೆಯೂ ಆಗುತ್ತದೆ. ಕ್ಷಾಮ ವಿಚಾರದಾ ಸಮಿತಿಯವರು ಸೂಚಿಸಿರುವ ಈ ಎರಡು ವಿಷಯಗಳನ್ನು ಸರಕಾರದವರು ತಮ್ಮ ಆಹಾರ ಧೋರಣೆಯಲ್ಲಿ ಗುರಿಯಾಗಿಟ್ಟುಕೊಳ್ಳಬೇಕು.

Numbiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

— ಮಕ್ಕಳನ್ನು ಹಡೆಯುವುದು ಸಾಕು —

ಆಕಸ್ಮಿಕ ಸ್ತ್ರೀಯರಿಂಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಒಳಶರೀರ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಸಂಜೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಬೆಲೆ:—ಹೆರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0 ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು.—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-
ಏಜಂಟರು:—ಹುಬ್ಬಳ್ಳಿ ಧಂಗಿಸ್, —ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—
ಮಾನಸ್ಯ ಸದ್ಗಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮಾರ್ತಂಡ ಡಾವಣಗೇರಿ
ಡಾನವರೇರು:—ಡಾವಣಗೇರಿ ಪ್ರೆಸ್ಸ್ ಆಲ್ ಎಲ್ ಕಮಲಾಪುರ ಕೆಮಿಸ್ಟ್ಸ್, ಹುಬ್ಬಳ್ಳಿ ಬ್ಯಾಂಡಿಗಿ

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD. TRADE MARK

Manufactured by:-
Swadeshi Oushadhi Bhandara (Regd.)
KUNJAL P. O. Brahmavar, S. K.

ಆಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಹಿಡಿವು ವೇದನೆಗಳಿಗೂ, ಎದೆ ನೋವು, ಹೃಯಗಳು, ಬಾವುಕೊಳ್ಳುವುದು, ಬೇಗವಹಮುಂತಾದವು, ಪಕ್ಷವಾತ, ನೊದಿಮಿ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧ.



REGD
ಹುಳುಕಡ್ಡಿ ಹುದ್ದುನಮ್ಮಲ್ಲಿಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಸೀತಾನದಿ ಜಾನುವಾರು ಜಾತ್ರೆ

ಪ. ಕ. ಜಿಲ್ಲೆಯ ರೈತರ ಅನುಕೂಲದ ಬಗ್ಗೆ, ಹೆಬ್ರಿ ಸೀತಾನದಿ-ಮಂಗಳೂರು ರಸ್ತೆಯು ಆಗುಂಬೆ ರಸ್ತೆಗೆ ಕೂಡುವಲ್ಲಿ ಆಂದರೆ ಸೋಮೇಶ್ವರ ಘಾಟಿಯ ಬುಡದಿಂದ ಮೂರು ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾರುವಾರು ಜಾತ್ರೆಯು ವರುಷಂಪ್ರತಿ ಜರಗುವಂತೆ ತಾರೀಕು 2-12-49ರಿಂದ 13-12-49ರ ವರೆಗೆ ಜರಗುವುದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನೂ ಕ್ರಮಪಂತೆ ಮಾಡಲಾಗುವುದು ಜಾತ್ರೆಯ ಸ್ಥಳವು ಸೀತಾನದಿ ಯೊಳೆಯಿಂದ 2 ಫರ್ಲಾಂಗುಗಳೊಳಗಿದ್ದು ಹತ್ತಿರವಿರುವ ರಿಜರ್ವ ಕಾಡಿನಲ್ಲಿ ತಂಬಾಹುಲ್ಲು ಗಾವಲು ಇದೆ. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಆತ್ಯಂತ ಉಪಯುಕ್ತವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಏರ್ಪಾಡು ಮಾಡಲಾಗಿಯಿದೆ.

ಸ್ಥಳೀಯ ಜಿಲ್ಲಾ ಮೆಜಿಸ್ಟ್ರೇಟರವರ ಪರ್ಮಿಟ್ಟು ಮುಂಚಿತವಾಗಿ ಪಡೆದು ನ್ಯಾಯಾರಸ್ಥರು ಮೈಸೂರು ಸ್ಟೇಟಿನಿಂದ ಜಾನುವಾರುಗಳನ್ನು ಇಲ್ಲಿಗೆ ತರಬಹುದು.

ಜಾತ್ರೆಯ ಸಮಯ ಈ ಕೆಳಗಣ ವಿನೋದಾವಳಿಗಳೂ, ಭಾಷಣ ಪ್ರದರ್ಶನಗಳೂ ಇವೆ (1) ಮಾಯಾಲಾಂಛ್ರ ಪ್ರದರ್ಶನಗಳು ಮತ್ತು ಭಾಷಣಗಳು. 12) ವ್ಯವಸಾಯ ಇಲಾಖೆಯ ಆಫೀಸರರಿಂದ ನಮ್ಮ ಜಿಲ್ಲೆಯ ವ್ಯವಸಾಯ ಉತ್ಪತ್ತಿಯ ಉನ್ನತಿಯ ಬಗ್ಗೆ ಆಗತ್ಯವಿರುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು. (3) ಪಾನುವಾರು ಇಲಾಖೆಯಂದರಿಂದ ಜಾನುವಾರುಗಳನ್ನು ಯೋಗ್ಯ ರೀತಿಯಲ್ಲಿ ಸಾಕಲು ಬೇಕಾಗುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು. (4) ವಿದ್ಯಾ ಇಲಾಖೆಯವರ ಭಾಷಣ ಮತ್ತು ಪ್ರದರ್ಶನ

ಮೈಸೂರು, ದಕ್ಷಿಣ ಕನ್ನಡ ಪ ಇತರ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ

Charles S John,
Revenue Divisional Officer.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ
'ಪಾಥ್ರಿಸ್ ನೀಮ್'
ಟೂತ್‌ಪೌಡರನ್ನೇ ಉಪಯೋಗಿಸಿರಿ
ಹಲ್ಲುಗಳು ಬೆಳ್ಳಗೆ ಹೂಳೆಯುವಂತೆ ಶುಭ್ರ ಮಾಡುತ್ತದೆ.
ವಿಳಾಸ:—
ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ್,
ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd No. M. 3618

3-11-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri A. B. Shetty
Minister for Agriculture & Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೧೦

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 10

ಹೀಗಾಗಲಿ:

ಪ್ರತಿಯೊಬ್ಬ ಸಾಮಾನ್ಯಜನ, ಸಾರ್ವಜನಿಕಮುಂದಾಳು, ಸೇವಕರೇ ನಾಯಕ-ತಂತಮ್ಮ ಮನಸ್ಸಾಕ್ಷಿಯ ಒರೆಗಲ್ಲಲ್ಲಿ ತಮ್ಮನ್ನು ತಾವೇ ಪರೀಕ್ಷಿಸಿಕೊಂಡು, ಆ ಪರೀಕ್ಷೆಯ ಫಲಿತಾಂಶಕ್ಕನುಸಾರವಾಗಿ ವರ್ತಿಸಿದರೆಯಿಕ; ಅಂದೇ ಸುವ್ಯವಸ್ಥೆ!

ಬ್ರಿಟಿಷರು, ಎರಡು ಶತಮಾನಾವಧಿಯ ತಮ್ಮ ಭಾರತ ಧಿಕಾರವನ್ನು ಬಿಟ್ಟು ಕೊಡುವಾಗ ಇಲ್ಲಿ ಸಾರ್ವತ್ರಿಕ ಮತ ಸಂಗ್ರಹವೇನನ್ನೂ ನಡಿಸಿರಲಿಲ್ಲ ಅವರಿಗೆ ಮನಸ್ಸಿದ್ದಿದ್ದರೆ, ಈ ಜನಮತ ಸಂಗ್ರಹದ ಕಟಿ ನಾಟಕವಾಡಿ, ದೇಶದ ಪ್ರಕಿಯಾಬ್ದನನ್ನೂ ಅಂತೆಯಲ್ಲಿಟ್ಟುಕೊಂಡಿದ್ದ ತಮ್ಮ ನೌಕರಶಾಹೀ ಯಂತ್ರದ ಮೂಲಕ ನಿಸ್ಸಹಾಯಕ ಮೂಕ ಮಿಲಿಯ ಮಂದಿಯನ್ನು ವಂಚಿಸಿ, ತಮಗನುಕೂಲವಾಗಿ ಮತಗಳನ್ನು ಪಡೆಯಲು ಸಾಧ್ಯವಿತ್ತು. ಆದರೆ ಭಾರತೀಯರ ಯಥಾರ್ಥ ಭಾವನೆ ಹೇಗಿದೆಎಂಬುದು ಜವರಿಗೆ ಸ್ಪಷ್ಟವಾ-ದುದರಿಂದ ಅವರು ಜೇಂಪ ಆಟವನ್ನು ಆಡದೆ ಅಧಿಕಾರ ಬಿಟ್ಟು ಹೋದರು.

ಮಹಾತ್ಮಾ ಗಾಂಧಿಯವರಾದರೂ ಕಾಲಸ್ಥಿತಿ, ದೇಶದ ಆವಶ್ಯಕತೆ, ನಿದ್ಯಮಾನಗಳ ರೂಪರೇಖೆಗಳನ್ನು ಗಮನಿಸಿ ತಮ್ಮ ಅಂತರ್ಮಾಣಿಯ ಕರಾಯಂತೆ ಸ್ವಾತಂತ್ರ್ಯೆ ಹೋರಾಟಗಳನ್ನು ಸಂಘರ್ಷಗಳನುಸಾರ ಹೊಡಿದ್ದರೇ ಹೊರತು, ಆದಕ್ಕಾಗಿ, ಎಲ್ಲಾ ಜನರ ಅಭಿಮತಗಳನ್ನು ಮುಂದಾಗಿ ಸಂಗ್ರಹಿಸಿಕೊಳ್ಳುವ ಶರ್ತವನ್ನವರು ಹಾಕಿಕೊಂಡಿರಲಿಲ್ಲ-

"ಗುಂಪಿನೊಡನೆ ಗೋವಿಂದಾ!" ಹಾಕುವಂಗಾಳ ಬೀಸಿದರೆ ಜಲೆದಾಡುವ-ಅನುಭವ, ಅಜ್ಞಾನಗಳೇ ಅಧಿಕಾಂಶ ವಿರುವ-ಜನಸಾಮಾನ್ಯರ ಪ್ರಗತಿ ಸಾಧನೆಯು ಶುದ್ಧ ಹೃದಯ, ಜ್ಞಾನ ಮತ್ತು ಶಕ್ತಿ ಸಾಮರ್ಥ್ಯವುಳ್ಳ ಕೆಲವರ ನಿರ್ಧಾರದಂತೆ ಆಗಬೇಕಲ್ಲದೆ, ಜನತೆಯ ಅಜ್ಞಾನ ಅಸಹಾಯಕತೆಯನ್ನು ಆಧರಿಸಿ ಅಲ್ಲವೇ ಅಲ್ಲ. ಸಾರ್ವಜನಿಕರ ಈ ದೌರ್ಬಲ್ಯಗಳನ್ನು ತಮ್ಮ ಸ್ವಂತಲಾಭೈಶ ಸಾಧನೆಗಾಗಿ ವಿನಿಯೋಗಿಸಿಕೊಳ್ಳುವರೆಂತೂ ಜನತಾದ್ರೋಹಿಗಳೇ.

ಈ ಮಾನದಿಂದ ಪ್ರತಿಯೊಂದರ ಮತ್ತು ಪ್ರತಿಯೊಬ್ಬನ ಅಳತೆ ಮಾಡಿದರೆ ಯೋಗ್ಯತಾಯೋಗ್ಯತೆ, ಸತ್ಯಾಸತ್ಯತೆ ತಾನಾಗಿ ಎಲ್ಲರಿಗೂ ಹೊಳೆಯಬಲ್ಲದು; ಆತ್ಮ ವಿಮರ್ಶೆ ನಡೆದು ಸವ್ಯವಸ್ಥೆ ಸ್ಥಾಪನೆಯಾಗಬಲ್ಲದು.

ಭಾರತದ ಇಂದಿನ ಕೇಂದ್ರಮಂತ್ರಿ ಮಂಡಲ-ನೆಹರೂ ಸರಕಾರ- ನೇರಿಂಗಿ ಜನಮತ ಪಡೆದು ಅರಿನಲ್ಬಟ್ಟಿರುವಂತಹದಲ್ಲ. ಆದರೆ ಅದರ ಮೇಲೆ ಜನತಾ ಸಾರ್ವಭೌಮತ್ವ ಶಾಸನವಿದೆಯೇ, ಇಲ್ಲವೇ ಎಂಬುದನ್ನು ಒಮ್ಮೆ ಪ್ರತ್ಯಕ್ಷ ಪರೀಕ್ಷೆಸುವಂತಾದರೆ ಪರಿಣಾಮ ಹೇಗಾದೀತೆಂಬ ಕುರಿತು ಒತ್ತಮಾತ್ರ ಅನುಮಾನವಿಂದರೂ ಇರಬೇಕೆ? 'ನೆಹರೂ ಮಂಡಲಿ ರಾಜೀನಾಮೆ ಕೊಡುವದು' ಎಂಬ ಸಾಧಾರಣ ಸುದ್ದಿ ಮಾತ್ರ ಹಬ್ಬಿದರೆ ಸಾಕ-ರಾಷ್ಟ್ರದಲ್ಲೊನ್ನೆ ಕ್ಷೋಭೆಯೆಳಲಾರದೆ?

ಆದರೆ, ಪ್ರತ್ಯಕ್ಷ ಜನವಕದಿಂದಾರಿಸಲ್ಪಟ್ಟರುವ ಇಂದಿನ ಪ್ರಾಂತಿಕ ಹಾಗೂ ಸಂಸ್ಥಾನಿಕ ಮಂಡಲಿಗಳಲ್ಲಿಯಂತಹವೊನ್ನೆಲೆಯಿರದ ಕೇಂದ್ರವ ಎಂದಲಿಯಷ್ಟೇ ಜನತಾ ವಿಶ್ವಾಸಕ್ಕರ್ಹವಾಗಿವೆ, ಎಂದು ಹೇಳಬಹುದೆ? ಜನತೆಗೆ ಹೊಣೆಗಾರಿಕೆ, ಜನತಾ ಪ್ರತಿನಿಧಿಗಳಿಗೆ, ಜವರ ತಾವು ಈದಿನ ಒಬ್ಬೊಬ್ಬರಾಗಿ ಜನಮತವಿದಿರು ಯೋಗ್ಯತಾ ಪರೀಕ್ಷೆ ಕೊಟ್ಟು ಪಾಸಾಗಬಲ್ಲೆನೆಂದು ನಮ್ಮೆಲ್ಲಾ ಪ್ರಾಂತ್ಯಗಳ ಎಲ್ಲಾ ಮಂತ್ರಿಗಳ ಮನಸ್ಸಾಕ್ಷಿ ಸ್ತುತಿಯುತ್ತಿದೆಯೆ?

ಅದೇ ರೀತಿ, ಮೂಲ ಸಂವಿಧಾನವಾ ರಂಭಿಸಿ, ಎಲ್ಲೇ ಸಮಿತಿಯು ಸರಿಗಿನ ಕಾಂಗ್ರೆಸ್ ಸಂಸ್ಥೆಯ ಅಧಿಕಾರಿಗಳು ತಾವು ಜನತಾ ವಿಶ್ವಾಸಕ್ಕರ್ಹರೋ ಅನರ್ಹರೋ ಎಂಬುದನ್ನೊಮ್ಮೆ ಪ್ರತ್ಯಕ್ಷ ಪರೀಕ್ಷೆಸಲಿಳಿದರೆ ಹೇಗಾಗಬಹುದು?

ಈಗ ಸ್ವತಃ ಈ ಪರೀಕ್ಷೆಯು ಒರೆಗಲ್ಲಾಗಿರುವ ಜನತೆಯ ನ್ನೇ ಒಮ್ಮೆ ಪರೀಕ್ಷೆಸೋಣ. ಆವರ ತೀರ್ಮಾನಗಳೆಲ್ಲವೂ ನಿರ್ದೋಷವಾಗಬಹುದೆಂಬ ಭರವಸೆಯಿವೆಯೆ? ಜನತೆಯಲ್ಲಿ ಅಜ್ಞಾನ, ಅಲಸ್ಯ, ಅನೈಕ್ಯ, ಅಸಹಾಯಕ ಸ್ಥಿತಿಯುಳಿದಿದೆ ಎಂದ ಮೇಲೆ, ಇವೆಲ್ಲವುಗಳೂ ಜನತೆ ಕೊಡುವ ತೀರ್ಮಾನಗಳಲ್ಲಿ ತೋರಬರಲೇಬೇಕು ತಾನೆ? ಅಂದ ಮೇಲೆ ನಾವು ಸರಿ-ತಪ್ಪುಗಳನ್ನು ಶೋಧಿಸಿ ತಿಳಿಯುವುದಾದರೂ ಹೇಗೆ? ಸರ್ವಶ್ರುತವಿಯ ಸತ್ಯ, ನ್ಯಾಯ, ಮತ್ತು ತತ್ವಗಳನ್ನು ಕಣ್ಣು ಮುಂದಿಟ್ಟುಕೊಂಡೇ!

ಅದರೆ ಈ ರೀತಿಯ ಶೋಧನೆಯು ತುಸು ಕಷ್ಟದ ಕೆಲಸ ಮತ್ತು ಅಂತಹ ಶೋಧನೆಯು ಸ್ವತಃ ಅವರವರಿಗೇನೇ ಪ್ರಿಯವಾದನ್ನು ನಿರ್ವಿಸುವಂತಹದು ಎಂಬುದರಿಂದ ಆಗ ಒಬ್ಬರು ಇನ್ನೊಬ್ಬರಿಗೆ ಶೋಧನೆ ಕೊಡುವವರಾಗಿರದೆ ಇದ್ದಾರೆ, ಪರಸ್ಪರ ನಿಂದಿಸಿಕೊಳ್ಳುವದಾಗಲೂ ಇದ್ದಾರೆ. ಇದು, ಪ್ರಗತಿ ಪಥಕ್ಕೆ ವಂಜುಕಿಯಿಸಿರವ ವಾತಾವರಣ: ಇಲ್ಲಿ ಮುನ್ನಡೆವ ಗುರಿಮಟ್ಟವುದು ಅಸಾಧ್ಯ.

ಆದ್ದರಿಂದ, ಎಲ್ಲಾ ಧರ್ಮ ದಾರ್ಶನಿಕರೂ ಸೃಷ್ಟಿ ಸಂಸ್ಥರಗಳೂ ಸಾರುತ್ತಿರುವ, ಗಾಂಧೀಜಿಯು ಮುಖ್ಯ ಶೋಧನೆಯಾಗಿ ಧರ್ಮತನ್ನನ್ನು ತಾನೇ ಅಂತರ್ಮುಖಿಳುವ ಕ್ರಮವೇ ಸರ್ವಶ್ರೇಷ್ಠವಾದರೆ ಸರ್ವಜನಿಕ ಪ್ರತಿನಿಧಿ ಸ್ಥಾನದಲ್ಲಿರುವವರು, ಒಮ್ಮೆ ಎಲ್ಲಾ ವಿಶ್ವಾಸಗಳನ್ನೂ ಮೂಡಿಸಿಕೊಂಡ ನಿರ್ಮಲ ಬುದ್ಧಿಜೀವಿಯೇ ಆಗಿ ತಾವು ಆ ಪ್ರಾತಿನಿಧ್ಯ ಸ್ಥಾನವನ್ನು ಕಳಕೊಂಡಿದ್ದೇವೆ ಎಂದು ಕಂಡುಕೊಂಡರೆ ಮತ್ತಾವ ಕಾರಣಕ್ಕಾಗಿಯೂ ಅಲ್ಲಿರಕೂಡದು. ಅಂತೆಯೇ ಸಾರ್ವಜನಿಕರಲ್ಲಿ ಯಾರ ನಿರ್ಮಲ ವ್ಯಕ್ತಿತ್ವವೆಯಾದರೂ ತಮಗೊಂದು ವಿಷಯದ ಜ್ಞಾನವಿಲ್ಲ, ಆ ಯೋಗ್ಯತೆಯಿಲ್ಲ ಎಂದು ಹೇಳುತ್ತಿದ್ದರೆ, ಅಂಧವರು ಅಂತಹ ವಿಷಯದಿಂದ ದೂರ ವಿರಬೇಕು.

ಭಾರತೀಯರಿಂದು ರಾಜಕೀಯ, ಅಧಿಕಾರ ಬಂದಿದೆ-ಅದಕ್ಕನುಗುಣವಾದ ಆಧ್ಯತೆ ಬಂದಿಲ್ಲ. ಆ ಅಧಿಕಾರವು ಪರಕೀಯರ ಕೈಯಿಂದ ಕಸಗೊಳ್ಳುವಂತಾಗದಿದ್ದರೆ, ಈ ಅಧ್ಯತೆಯು ಸ್ವತಃ ನಮ್ಮಲ್ಲಿ ನಾವೇ ತುಂಬಿಸಿಕೊಳ್ಳುವಂತಹದಿದೆ. ಇಷ್ಟರಲ್ಲೇ ಮೊದಲನೇ ಕೆಲಸವನ್ನು ಮಾಡಿತೊಂಡಂತೆ ಎರಡನೆಯದನ್ನಿನ್ನು ಮಾಡಿಕೊಳ್ಳಬೇಕು. ಆದಂದು ಸರಕಾರೀ ನಾಯಕರು, ಸಂಸ್ಥೆಯ ನಾಯಕರು, ಸಾಮಾನ್ಯ ಜನರೆಲ್ಲರನ್ನು ನೋಡಿದರೂ 'ಅಧಿಕಾರ ಬಂದಿರುವುದರಿಂದ ಅಧ್ಯತೆಯೂ ಬಂದಿದೆ' ಎಂಬ ತಪ್ಪು ಭಾವನೆಯಿಂದಲೇ ವರ್ತಿಸುತ್ತಿರುವುದು ಎಲ್ಲೆಲ್ಲೂ ಕಾಣಿಸುತ್ತಿದೆ. ಸಹಜವಾಗಿ ಇಂಪ ದೌರ್ಬಲ್ಯಗಳ ವೇಳಬ್ಬಗದಲ್ಲಿ ಹೊಸತಾಗಿ ಪಡೆದ ನಿಂತ ಇಂತಹ ಭಾವನೆಯು, ಅಯೋಗ್ಯತೆಗೆ ಅಹಂಭಾವದ ಪರದೆ ಬಿದ್ದಂತಾಗಿದೆ ಹೊರತು ಬೇರಿಲ್ಲ.

ಯಾಕೋ ಏನೋ ಇಂದಿನ ಮಾತಾವರಣದಲ್ಲಿ ಗತ್ತಲ ನಡೆದಿದೆ ಯುಗಾಂತರದ ಸಂಧಿಗ್ಧಾವಧಿಯಲ್ಲಿ ಪರಕೀಯರಾಡಳಿತ ಕೋಗಿ ಸ್ವಾಧಿಕಾರಸ್ಥಾಪನೆಯಾದ ಆದಿ ಭಾಗದಲ್ಲಿ- ಇಂತಹ ಗೊಂದಲವು ಅದೊಂದು ನಿತ್ಯ ವರೆಗೆ ಸ್ವಾಭಾವಿಕವೇ ಪರಕೀಯ ಸ್ವಕೀಯ ಪ್ರಶ್ನೆಗಳೆದ್ದು ಬಂದಾಗ ಎಳೆದಾಡಿಕೊಳ್ಳುತಿದ್ದಾಗ ಪರಕೀಯರು ಹಗ್ಗದ ತುದಿಯನ್ನು ಆಕಸ್ಮಾತ್ ಬಿಟ್ಟು ಬಿಟ್ಟರೆ ಈ ಕಡೆಯವರೆಮ್ಮೆ ಧಡ್ಡನೆ ಹಿಂದೆಸೆಯಲ್ಬಟ್ಟು, ಗಲಿಬಿಲಿಯುಂಟಾಗುವುದು ಸ್ವಾಭಾವಿಕ. ಆದರೆ ಹಾಗೆ ದೂಡಲ್ಪಟ್ಟವರು ಆ ದಸ್ಪಟ್ಟೇಗನೇ ಸುಧಾರಿಸಿಕೊಂಡ ಗೌಜಗದ್ದಲ ನಿಲ್ಲಿಸಿ, ಮೈಧಾಳು ಕೊಡವಿಕೊಂ

[೨ನೇ ಪುಟ ನೋಡಿರಿ]

THE UNITED KARNATAK INSURANCE COMPANY, LIMITED.
Estd: 1929.
H. O. DHARWAR.
WANTED
A few Organisers on attractive terms. For further particulars please apply to:
THE BRANCH OFFICE, UDIPI. S. K.

ನಾಯಕರ ನಡತೆ.

ಪ್ರಪಂಚದ ಬಡವರನ್ನು ಪರಿಸ್ಥಿತಿಯೇ ಪಾಪಿಗಳನ್ನಾಗಿ ಮಾಡುತ್ತದೆ ನಾಯಕ ಸ್ಥಾನಕ್ಕೇರಿದವರ ಪೂರ್ವಚರಿತ್ರೆಯ ಪರಿಚಯ ಮಾಡಿಕೊಂಡವರಿಗೆಲ್ಲಾ ಇದು ಮಂದಟ್ಟಾಗಿರುವ ವಿಷಯ.

೦೦ ೦೦ ೦೦

ಸಾಮಾಜಿಗಳ ನಾಮ ನಿರ್ನಾಮದ ಕಾರಣ ಸುರಾಪಾನ ಅಭೇದ್ಯ ಹೃದಯಿ-ಚರ್ಚಿಲ್ ಎಂದೊಡನೆ ಭಾರತೀಯರ ಕಣ್ಮುಂದೆ ಒಂದು ಪಾಷಾಣ ವಜ್ರಾಕೃತಿಯ ಚಿತ್ರ ಬರಬಹುದು. ಹಿಟ್ಲರನ ಪ್ರಾಬಲ್ಯವು ತುತ್ತ ತುದಿಗೇರಿ, ಬ್ರಿಟನಿನ ನಿಶ್ಚಿಕ್ತಿಯು ಸ್ಪಷ್ಟವಾಗಿ ಕಾಣಿಸುತ್ತಾ ಇಂಗ್ಲಾಂಡಿನ ಪತನ ಸನ್ನಿಹಿತವಾಯಿತೆಂಬ ನಂಬಿಕೆ ಹುಟ್ಟಿದ್ದ ಆ ಕಾಲದಲ್ಲಿ ಎದೆ ಕಳಕೊಳ್ಳದೆ ತನ್ನ ಕರೋ ನಿರ್ಧಾರದ ಬಲದಿಂದಲೇ ಬ್ರಿಟನಿನ ಕೈಗೆ ಜಯ ಧ್ವಜ ಕೊಟ್ಟ ನಾಯಕರಾದರು. ಬ್ರಿಟಿಷ್ ಸಾಮ್ರಾಜ್ಯದ ಆಧಾರ ಸ್ತಂಭದಂತಿದ್ದು ಸ್ವಾತಂತ್ರ್ಯಕ್ಕಾಸ್ಪದ ಭಾರತೀಯರ ಮೇಲೆ ಸದಾಕಾಲ ಕಿಡಿಗಾರುತ್ತಿದ್ದ ಸ್ವತಂತ್ರ ಭಾರತದ ಜನ್ಮ ವಿರೋಧಿ ಅವರು! ಇಂತಹ ಕಲು ಹೃದಯಿ ಕಣ್ಣೀರಿಳಿಸಬಹುದು-ಅದರಲ್ಲೂ ನೆಹರುಗಳಂತಹ ಬದ್ಧ ವೈರೋಧಿಯವ್ಯಕ್ತಿತ್ವಕ್ಕೆ ಮನಕರಗಿ ಕಣ್ಣೀರಿಡಬಹುದೆ:-ಎಂದು !ಊಹಿಸಲು ಸಾಧ್ಯವೆ? ಆದರೆಚರ್ಚಿಲ್ಲರಲ್ಲೂ ಅಂತಹ ಹೃದಯವಿದೆ ಎಂಬುದು ವಸ್ತುಸ್ಥಿತಿ. 'ನೋಂಟ್ರೇಯಲ್ ಡೈಲಿ ಸ್ಟಾರ್' ಎಂಬ ಇಂಗ್ಲಿಷ್ ಪತ್ರಿಕೆಯು ಚರ್ಚಿಲ್ಲರ ಕಣ್ಣೀರ ಕತೆಯೊಂದನ್ನು ಈ ಕೆಳಗಿನಂತೆ ಪ್ರಕಟಿಸಿದೆ 'ಭಾರತದ ಕಾಮನ್‌ವೆಲ್ತಿನಲ್ಲಿ ಉಳಿದು ಕೊಳ್ಳುವುದು ಎಂದು ನೆಹರುಗಳು ಜಾಹೀರು ಮಾಡಿದ ದಿನ ಇಬ್ಬರು ಕನ್ಸರ್ವೇಟಿವ್ ಸ್ನೇಹಿತರು ಈ ಸಂಗತಿಯನ್ನು ತಿಳಿಸುವುದಕ್ಕಾಗಿ ಚರ್ಚಿಲ್ಲರಿದ್ದಲ್ಲಿಗೆ ಹೋಗಿದ್ದರು. ಈ ಕುರಿತು ಮಾತಾಡುತ್ತಾ ಕುಳಿತಂತೆ ಸ್ವತಃ ಬ್ರಿಟಿಷರ ಕೈಯಿಂದ ಹಲವು ವರುಷಗಳ ವರೆಗೆ ಕಾರಾಗೃಹಕ್ಕೆ ದೂಡಲ್ಪಟ್ಟಿದ್ದ ನೆಹರುಗಳ ಗುಣ ನಡತೆಗಳ ವಿಮರ್ಶೆ ನಡೆಯಿತು, ಆಗ ತನ್ನೆರಡು ಕಣ್ಣುಗಳಿಂದಲೂ ಧಾರಾಕಾರವಾಗಿ ನೀರಿಳಿಯುತ್ತಿದ್ದಂತೆ "ನಾನು ಇಷ್ಟು ದೊಡ್ಡ ಮನುಷ್ಯನಾಗಬಲ್ಲೆ ಎಂದು ನನಗೆ ತೋರುವುದಿಲ್ಲ" ಎಂಬ ಉದ್ಗಾರ ಚರ್ಚಿಲ್ಲರ ಬಾಯಿಯಿಂದ ಹೊರಟಿತು ತನ್ನ ಅಮೂಲ್ಯ ಆಯುಷ್ಯದ ಹಲವು ವರುಷಗಳು ಜೈಲಲ್ಲಿ ಕೊಳೆತು ಹೋಗುವಂತಿ ಮಾಡಿದ್ದ ದ್ವೇಷಿಗಳ ಕಡೆಗೆ ಮೈತ್ರಿ ಪ್ರದರ್ಶಿಸುವ ನೆಹರೂ ಔದಾರ್ಯ ಚರ್ಚಿಲ್ಲರಲ್ಲಿ ಬರಲಾರದೆಂಬುದೇನೋ ನಿಜ. ಆದರೆ ಆಂತಹ ತೀವ್ರವಿಕಿಯ ಬಿಸಿಯಿಂದ ಕರಗುವಷ್ಟು ಕೋಮಲ ಬುದ್ಧಿ ಚರ್ಚಿಲ್ಲರಲ್ಲಿರುವುದು ಕೂಡಾ ಒಂದು ವಿಶೇಷ ಹೆಗ್ಗುಣವೇ. ತನ್ನಲ್ಲಿ ಅಂತಹ ಮಹಾ ಮಾನುಷ್ಯ ಬಂದುದು ಹೇಗೆ, ಎಂಬುದನ್ನು ಪಂಡಿತ ನೆಹರುಗಳು ಈ ಬಾರಿ ಅಮೆರಿಕದಲ್ಲಿ ತಿಳಿಸಿದ್ದಾರೆ. "ಯಾರ ಆಶ್ರಯದಲ್ಲಿ ನಾನು ಬೆಳೆದವನೋ ಆ ನಮ್ಮ ಮಹಾ ನಾಯಕ ಮಹಾತ್ಮಾ ಗಾಂಧಿಯು ನರು, ನಾವು ದೀರ್ಘಾವಧಿ ಹೋರಾಟ ಕೂಟ್ಟಿದ್ದರ ನಮ್ಮ ಇದಿರುವಾದಿಗಳೊಡನೆ ಕೂಡಾ ಸ್ನೇಹ ಕಟ್ಟಿಕೊಳ್ಳುವ ಸೌಹಾರ್ದತಾ ಪಂಥವನ್ನು ನಮಗೆ ಕಲಿಸಿದ್ದರು" ಎಂದಿದ್ದಾರೆ.

೦೦ ೦೦ ೦೦

ಪ್ರಜೀವನವನ್ನೇ ಮಾರ್ಪಡಿಸಿ, ಅನ್ಯಸಾಧ್ಯವಾದ ಮಹತ್ಕಾರ್ಯಗಳನ್ನು ಸಾಧಿಸಿದ ನಮ್ಮ ಪಾಲಿನ ಕ್ರಾಂತಿ ಪುರುಷರು, ಸ್ಫೂರ್ತಿದಾಯಕ ಮಾತು ಕೃತಿಗಳಂತೆಯೇ ಸರಸ ವರ್ತನೆಗಳಿಗೂ ಹೆಸರಾದವರು. ಗಾಂಧಿಜೀಯ ಮಗುವಿನಂತಹ ಬುದ್ಧಿ ಮತ್ತು ನಗೆಯಿಂದ ಆಕರ್ಷಿಸಲ್ಪಡದವರಾರೂ ಇರಲಿಲ್ಲ. ಆತ್ಯಂತ ಸರಳವಾದ ಲಕ್ಷಣಯತಾ ಭಾವನೆಯಿಂದಲೇ ಅವರು ತನ್ನನ್ನು ಪಾಸಗಿಯಾಗಿ ಸಂದರ್ಶಿಸಿದವರ ಮತ್ತು ತನ್ನೆಡೆಗೆ ಮುಖ ಮಾಡಿದ್ದ ವಿಲಿಯಾವಧಿ ಜನತೆಯ ಮನಸ್ಸಿಗೆ ಘನ ಗಂಭೀರ ವಿಷಯಗಳನ್ನು ಹೊಗಿಸಲು ಸಮರ್ಥರಾಗಿತ್ತಿದ್ದರು. ಯುದ್ಧ ಕಣದಲ್ಲಿ ನಗುತ್ತಲೇ ಸೇನೆಯನ್ನು ನಡೆಸಬಲ್ಲ ಅಹಿಂಸಾ ಸೇನಾನಿ ಅವರಾಗಿದ್ದರು. ತನ್ನ ಮುಂಭಾಗದವಂ ಶಂಕೆ ಸಂದೇಹಗಳಿಲ್ಲವನ್ನೂ, ಬೆನ್ನು ತಟ್ಟಿ, ಹೆಗಲಿಗೆ ಕೈಯಿಟ್ಟು, ಹಲ್ಲಿಲ್ಲದ ಬಾಯಿ ಬಿಟ್ಟು ಕೂಡಲೇ ತಿಳಿಗೊಳಿಸಬಲ್ಲ ಅಸಾಧಾರಣ ಆಕರ್ಷಣೆ ಗಾಂಧಿಜೀಯಲ್ಲಿತ್ತು. ಅವರ ಘನಾದರ್ಶ ಸಂದೇಶಗಳಂತೆ 'ಗಾಂಧೀ ಲಗು ಹಾಸ್ಯ'ಗಳ ಮಹಾ ಗ್ರಂಥವನ್ನೇ ಬರೆಯಲು ಸಾಧ್ಯವಿದೆ. ಸ್ವಾತಂತ್ರ್ಯಾರ್ಪಣ ಮಾಡಲು ಆ ಚಿರಸ್ಮರಣೀಯ ಐತಿಹಾಸಿಕ ಸಭೆಗೆ ಬರುವಾಗ "ಬಾಪೂಜೀ, ನೀವು ಈಗೀಗ ಗಡಿಯಾರದತ್ತ ಲಕ್ಷ್ಯ ಕೊಡುವುದೇ ಇಲ್ಲ" ಎಂದು ತನ್ನ ಮೊಮ್ಮಕ್ಕಳೆಲ್ಲಾ ಬೆಳಿಗ್ಗೆ ಆದರೆ ಅವಶ್ಯಕತೆ ನನಗೇನಿದೆ-ನೀವು ಸಜೀವ ಗಡಿಯಾರಗಳಿರುವಾಗ!" ಎಂದು ಅವರು ತನ್ನ ಕಿರಿಯರೊಂದಿಗೂ ವಿನೋದವಾಡಿದ್ದರು. ಅವರಿಗೆರಡನೆಯವಂದ ಪಂಡಿತ ನೆಹರುಗಳಾದಿಂಗ ಹಾಗೆಯೇ-ಅವರ ಅತ್ಯಮೋಘ ಸೆಲ್ಲಕ್ಷಣವೆಂದರೆ ಶಿಶು ಸಹಜ ಶುದ್ಧ, ಸರಳ ಮನಸ್ಸು. "ಪಾಶ್ಚಿಮಾತ್ಯ ಗುಂಪಿನ ನೊಗಕ್ಕೆ ಹೆಗಲೊಡ್ಡಿದವರು ನೀವಲ್ಲ" "ನಿಮ್ಮ ಆಟಂಶಕ್ಕೆ ಗೆ ಹೆದರಲು ನಾವು ಕಲಿತಿಲ್ಲ; ನಮ್ಮ ಬ್ಲಿರುವುದು ಆತ್ಮಶಕ್ತಿ" ಮುಂತಾದ ಮಾತುಗಳಿಂದ ಪಂಡಿತಜೀ ಅಮೆರಿಕಾನರನ್ನೆಲ್ಲ ಚುಚ್ಚಿದ್ದಾರೆ; ಅಮೆರಿಕಾನರ ಶ್ರೀಮಂತಿಕೆಯ ರೀತಿ ತುಂಬಿರುವ ಅಮೆರಿಕಾನರಿಗೆ ಮಾರ್ಥಾರ್ಯ ಸೂಚಿವಂತಹುದೇನೂ ಅಲ್ಲ. ಆದರೆ ನೆಹರುಗಳ ಸಂಳ ಶುದ್ಧ ಹೃದಯವು ಮಾತ್ರ ಅಮೆರಿಕಾನರನ್ನು ಪೂರ್ಣ ಆಕರ್ಷಿಸಿಬಿಟ್ಟಿದೆ ಯಾವ ಸ್ಥಾನ ಗಾಂಭೀರ್ಯವೂ ಇಲ್ಲದೆ ಚಿ ಪಾ ಚಿತ

ಓದು ರಾಷ್ಟ್ರದ ಹೊಣೆಹೊತ್ತ ನಾಯಕರುಗಳು ಸದಾ ಕಾಲ ಗಭೀರತೆಯಿಂದಲೇ ಇರುತ್ತಾರೆ.-ತಮ್ಮ ನಿತ್ಯ ಜೀವನದ ಲಗು ವಿನೋದಗಳನ್ನು ಅನುಭವಿಸುವ ಅಥವಾ ಸಣ್ಣಪುಟ್ಟ ವಿಷಯುಗಳ ಕಡೆಗೆ ಲಕ್ಷ್ಯ ಕೊಡುವ ಸಂದರ್ಭಗಳೇ ಅವರಿಗೊದಗುವಂತಿಲ್ಲ-ಎಂಬ ಭಾವನೆ ಸರ್ವ ಸಾಮಾನ್ಯವಾಗಿರುತ್ತದೆ. ಅಂತೆಯೇ ದುಷ್ಪಥಗಾಮೀ ಹಕ್ಷ ಪಂಗದುಗಳ ನಾಯಕರೂ ವ್ಯಕ್ತಿಶಃ ದುಷ್ಟರು, ಕರ್ಕಶ ಸ್ವಭಾವದವರಿಂಬೇಕೆಂದು ಜನ ಸಾಮಾನ್ಯರು ಚಿತ್ರಿಸಿಕೊಳ್ಳುವುದಿದೆ ಆದರೆ ಸತ್ಯಸ್ಥಿತಿ ತದ್ವಿರುದ್ಧವಿರುತ್ತದೆ. ರಾಷ್ಟ್ರ ನಾಯಕರ ಆಥವಾ ಜನ ನಾಯಕರ ಮುಂದಾಳುಗಳ ಹೊಣೆಗಾರಿಕೆ ಎಷ್ಟೇ ದೊಡ್ಡದಿದ್ದರೂ, ಮಾನವೀಯ ಹೃದಯ ಮತ್ತು ಸೌಮ್ಯತೆ ಗುಣನಡತೆಗಳಲ್ಲಿದೆ.ಅವರು ಅಗ್ರ ಸ್ಥಾನದಲ್ಲಿ ರಾಜಿಸುವಂತಿಲ್ಲ. ಸಲುಗೆಯ ಸರಳ ಬಾಂಧವ್ಯ ಅವರಲ್ಲಿ ಎಷ್ಟೆಷ್ಟು ಪರಿಮಾಣದಲ್ಲಿ ಅಧಿಕವಾಗಿರುತ್ತದೋ ಅವರು ಅಷ್ಟೂ ಜನಸ್ನೇಹಿತರಾಗುತ್ತಾರೆ. ಅಂತೆಯೇ ಆಧುನಿಕ ಕಾಲದಲ್ಲಿ ಎಂತಹ ಕಠೋರ ಕಾರ್ಯಕ್ರಮಗಳನ್ನಿಟ್ಟುಕೊಂಡ ಪ್ರಪ್ರದ ಪ್ರಮುಖನೇ ಇರಲಿ-ಆತ ಎಂದಿಗೂ ಹಿರಣ್ಮಯಕಶಿಪು,ವಿನಂತಿರಲಾರ. ಏನಿಲ್ಲೆಂದರೂ ಇದು ಮಾನವ ಯುಗ, ಹೊರತು ದಾನವಯುಗವಲ್ಲ. ಈ ಕಾಲದ ಮನುಷ್ಯರನ್ನು ಆಡ್ಡ ಹಾದಿ ಹಿಡಿಸುವ ಧುರ್ನಾಯಕನಲ್ಲಾದರೂ ಮಾನುಷತ್ವವು ತುಂಬಿಕೊಂಡಿರಲೇಬೇಕು. ಕ್ರೂರತ್ವ, ಬರಡು ಸ್ವಭಾವ, ಒಣ ಗಾಂಭೀರ್ಯವು ಸಂಸ್ಕಾರ ಮತ್ತು ಸ್ಥಿತಿಯಲ್ಲಿ ಕೆಳ ಮಟ್ಟದಲ್ಲಿರುವ ಸಾಮಾನ್ಯ ಜನರಲ್ಲೇ ನೆಲೆ ನಿಂತಿರುತ್ತವೆ ಹೊರತು ಯಾವುದೇ ರೀತಿಯಲ್ಲಿ ಮೇಲ್ಮಟ್ಟಕ್ಕೇರಿದವರಲ್ಲಲ್ಲ.

[೦ನೇ ಪುಟದಿಂದ]

ಡು ಯಥಾ ಸ್ಥಿತಿಗೆ ಬರಬೇಕೇ ಹೊರತು ಆ ತಾತ್ಕಾಲಿಕ ಗಲಿಬಿಲಿಯನ್ನೇ ಅಭ್ಯಾಸವಾಗಿ ಅಂಗೀಕರಿಸಿಕೊಂಡು ಮತ್ತೆ ಹೊರಳಾಡುತಿದ್ದಾರಾಗದು. ಸ್ವಾತಂತ್ರ್ಯ ದೊರೆತು ಎಂಡೂ ಕಾಲು ವರುಷ ಕಳೆದರೂ ಸ್ವಕರ್ತವ್ಯವನ್ನು ಮರೆತು ಪರಸ್ಪರ ದೋಧನೆ, ಅಪವಾದಗಳಲ್ಲೇ ಸ್ವಭಾವವನ್ನೇ ಹೆಚ್ಚಾಗಿ ಪ್ರದರ್ಶಿಸುತ್ತಿರುವ ಇಂದಿನ ಪರಿಸ್ಥಿತಿಯು ಅಂತಹ ಹೊರಳಾಟವೇ ಸರಿ.

ಆದ್ದರಿಂದಈಗ ಪ್ರಥಮತಃ ವಾತಾವರಣ ತಿಳಿಯಾಗಬೇಕು ಮತ್ತು ಸಹಜ ಸ್ಥಿತವಾಗಬೇಕು. ಆದಕ್ಕಾಗಿ ಪರಸ್ಪರ ದೂರು ದೂಷಣೆಗಳ ರಂಪಾಟ ನಿಂತು ಯಾವುದೇ ವಿಷಯದಲ್ಲಿ ತಂತಮ್ಮ ಪಾಲಿನ ಕರ್ತವ್ಯವಾವುದು ಮತ್ತು ಎಷ್ಟು ಎಂಬುದನ್ನು ಪ್ರತಿಯೊಬ್ಬನೂ ಯೋಚಿಸಿಕೊಂಡು ಅಷ್ಟನ್ನೇ ಮಾಡಬೇಕು; ಅಷ್ಟನ್ನು ಮಾಡಿಯೇ ತೀರಬೇಕು.

ಬರುವ ಜನವರಿ 26ಕ್ಕೆ ೧೩ಬ್ಲಿಕ್ ಭಾರತ ರಾಜ್ಯ ಘಟನೆ ಜಾರಿಗೆ ಬರುವ ವರೆಗಿನ ಅವಧಿಯಲ್ಲಿ ರಾಷ್ಟ್ರದಲ್ಲೆಲ್ಲಾ ಇಂತಹ 'ಆತ್ಮ ಶುದ್ಧಿ' ಯಜ್ಞ ನಡೆಯಲಿ. 'ರಿಪಬ್ಲಿಕ್ ಭಾರತ'ವು ಯಾವುದೇ ಅತಿರೇಕ, ಅನ್ಯಾಯ ಮತ್ತು ಅಧಿಕಪ್ರಸಂಗಗಳನ್ನು ಕಟ್ಟಿಕೊಳ್ಳದೇನೇ ಅಸ್ತಿತ್ವಕ್ಕೆ ಬರುವಂತಾಗಲಿ!

The Canara Industrial & Banking Syndicate Ltd.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

ಸ್ಥಾಪನೆ: 1925. ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಕುಟುಂಬದ ಯಜಮಾನನ ಜವಾಬ್ದಾರಿ

ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನರಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲೆ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ. ನಮ್ಮಲ್ಲಿ ಸೇವಿಂಗ್ಸ್ ಬ್ಯಾಂಕ್ ಲೆಕ್ಕವನ್ನು ತೆರೆಯಿರಿ. ಆಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿಯೂ ವಿಚಾರಿಸಿರಿ.

ಟಿ. ಎಂ. ಎ. ಪೈ.
ಚೇಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

ನೋಟೀಸು

ಉಡುಪಿ ಡಿ. ಮುನ್ಸೀಫ್ ಕೋರ್ಟಿನಲ್ಲಿ
O. S. 390 1949.

ಪರಮೇಶ್ವರ (ಮ್ಯಾನೇರ) ಕ್ಷೇಮವು ಚಿಂತಕ ರಾಮಭಟ್ಟ ಭಟ್ಟ ... — ವಾದಿ.
ಮತ್ತು
ಕೇಪಗಿರಿನ್ಯಾಕ ಕೂಡಾ ... ಪ್ರತಿವಾದಿರು ಇವರೊಳಗೆ

ಉಡುಪಿ ತಾಲ್ಲೂಕು ಪೆಜಮಂಗೂರು ಗ್ರಾಮದ ಕೊಕ್ಕರ್ಣಯಲ್ಲಿರುವ ಮಹಾಲಿಂಗ ನ್ಯಾಳರ ಆಳಿಯ 1ನೇ ಪ್ರತಿವಾದಿ ಶೇಷಗಿರಿ ನ್ಯಾಕ ಮತ್ತು ಇವರ ಸೊಸೆ 6ನೇ ಪ್ರತಿವಾದಿಯು ವಾರದಾ ಬ್ಯಾ ಕೂಡಾ 2 ಜನಂಗೆ:-

ಧಾವಾ A ಪೆಡ್ಯೂಲಿನ ಸ್ತಿರಾಸ್ತಿಗಳು inalinable ಆಸ್ತಿಗಳೆಂತಲೂ, ಅವುಗಳನ್ನು ಕೋರ್ಟುಯೇಲಮಿನಲ್ಲಿ ಪಡ್ದು ಸ್ವಾಧೀನಗಾರರಾದ ಪ್ರತಿವಾದಿರು, ಅಕ್ರಮ ಸ್ವಾಧೀನಗಾರರೆಂತಲೂ, ವಾವಾ ಆಸ್ತಿಗಳನ್ನು ಸದ್ರಿ ಯೇಲಮಿನ ಉಜ್ರು ಶಿಪ್ಯಾ, ಹುಟ್ಟುವಳಿ ಸನುತ್ತ ವಾದಿಗೆ ಸ್ವಾಧೀನ ಕೊಡಿಸಬೇಕಾಗಿ ವೈಗೈರೆ ನಿವೃತ್ತಿಗಳನ್ನು ಕೇಳಿ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 7-11-49ಕ್ಕೆ ತನ್ನಗೆ ಇಟ್ಟರುತ್ತದೆ. ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಪ್ರತಿವಾದಿರು ಉಪರಿಸಾವಂತಾದ್ದಿರಿ, ಸದ್ರಿ ದಿವ್ಸ ಹಗಲು ಗಂಟೆ 10ಕ್ಕೆ ಅವರು ಈ ಕೋರ್ಟ ಮುಂದೆ ಹಾಜ್ರಾಗಿ ಜ್ಯಾಬೀದಾನವಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ಅವರ ಗೈರು ಹಾಜ್ರಿಯಲ್ಲಿ ಸದ್ರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. Vasudeva Rao.
Gonnsel for Plff.

Camp: Udipi
29—10—49

ಧುರೀಣರ ಖಾಸಗೀ ವರ್ತನೆ

ನಂತೆ ಅತ್ಯಂತ ಸಲುಗೆಯಿಂದ ವರ್ತಿಸುವ ನೆಹರುಗಳು ಅಲ್ಲಿ ಜನ ಪ್ರೀತರಾಗಿದ್ದಾರೆ. ಅದೇರೀತಿಯಲ್ಲಿಗಳನ್ನು ಮಾತ್ರವಲ್ಲ, ಆ ಕ್ಷೇತ್ರಗಳನ್ನೇ ಗಳಿಸಿದ್ದಾರೆ. ಟ್ರಾವೆನ್ಕೂರು ತನ್ನ ಸಂಪ್ರದಾಯ ಮಂದಿರ ನೆಹರೂ ಜತೆಯಲ್ಲಿ ದೀರ್ಘ ಕಾಲ ಕಳೆಯಲು ಕಾರಣವೂ ಇದೇ. ನೆಹರುಗಳ ಮಟ್ಟದ ಪಂಡಿತ್ಯ, ಪ್ರತಿಭೆ ಮತ್ತು ಶಕ್ತಿ ಸಾಮರ್ಥ್ಯಗಳುಳ್ಳವರು ಪ್ರಪಂಚದಲ್ಲಿ ಹಲವರಿರಬಹುದು. ಆದರೆ ಇವೆಲ್ಲ ವಿದ್ದೂ ಶಿಶು ಸೌಶೀಲ್ಯ ಶೂದ್ರ ಮನಸ್ಸಿನವರು ಎಲ್ಲರೂ ಪಂಡಿತ ನೆಹರುಗಳು ಮಾತ್ರ ವಾದ್ದರಿಂದ ಅವರಿಂದು ಸರ್ವ ಮಾನ್ಯರು. ಅಮಿಂಡ ರಾಷ್ಟ್ರೀಯತೆಯ ಬಾಡಿಸಿ ಕೂಡಲಿಯಾದ- 'ಪಾಶ್ಚಿಮಿಕ ಹಿಂದೂ ಬಹುಮತದ' ಮೇಲೆ ಕೆಡಿಕಾರು ಕಿದ್ದ-ಮಿ. ಜಿನ್ನಾರವರ ಖಾಸಗೀ ಮಿತ್ರ ವರ್ಗದಲ್ಲಿ ಹಿಂದುಗಳ ಸಂಖ್ಯೆಯೇ ಅಧಿಕ ವಿತ್ತೆಂದರೆ ಆಶ್ಚರ್ಯವಾಗಬಹುದು. ಅವರೇ ಸಂಗತಿಯನ್ನು ತನ್ನೊಂದು ಸಂಭಾಷಣೆಯಲ್ಲಿ ಸ್ವತಃ ಒಪ್ಪಿಕೊಂಡಿದ್ದರು. ತನ್ನ ಖಾಸಗೀ ವರ್ತನೆಗಳಲ್ಲಿ ಪರಿಶುದ್ಧತೆಯಿತ್ತು ಸಮಾನತಾ ಭಾವನೆ ತುಂಬಿದ್ದ ನಾಯಕ ಮಿ ಜಿನ್ನಾ. ಅವರೊಡನೆ ಮುಖತಃ ಭೇಟಿ ಮಾಡಿದವರೆಲ್ಲರೂ ಅವರ ನಯ ವಿನಯಗಳಿಗೆ ಮೋಹಗೊಂಡಿದ್ದರೆ; ಮಾಧುರ್ಯಕ್ಕೆ ಮನ ಸೋತಿದ್ದಾರೆ. 'ಕರಾಳ ಮುಖ'ಯ ಅಕಾರವಾಗಿ ಹೆಚ್ಚಿನವರ ಮನೋಪಟಲದಲ್ಲಿ ಮೂಡಿರಬಹುದಾದ ರಯ್ಸಿಕಾರ್ ನಾಯಕ ಕಾಸಿಮ್ ರಜ್ವಿ ಕೂಡಾ ವ್ಯಕ್ತಿಶಃ ಉಚ್ಚ ಸಭ್ಯತೆ ಮತ್ತು ಸಂಯಮನಶೀಲ ಮನುಷ್ಯ ಆತ ಮುಖದ ಅವಾಚ್ಯ ಅಥವಾ ಕಠೋರ ಪದಗಳನ್ನು ಪ್ರಯೋಗಿಸಿದ ಸಂದರ್ಭವೇ ಇಲ್ಲವೆನ್ನುತ್ತಾರೆ. ನಾಳೆಯೇ ಅಂತ್ಯವನ್ನು ಕಾಣಬೇಕೆಂದು ತಾನು ಸಂಕಲ್ಪಿಸಿದ ತನ್ನ ಬದ್ಧ ವೈರಿಯೊಡನೆಯೂ ಸರಿಯೇ- ಈ ದಿನ ಮುಖಾಮುಖಿ ಮಾತಾಡಲು ಕುಳಿತರೆ ರಜ್ವಿಯ ಬಾಯಿಯಿಂದ ನಿರ್ವಿಕಾರ ಬುದ್ಧಿಯ ಸಭ್ಯ ಮಾತುಗಳ ಹೊರತು ಬೇರೇನೂ ಬರಲಾರವೆನ್ನುತ್ತಾರೆ. ಯಾವ ಪಕ್ಷಪಾತಗಳಿಗೆ ಆದವನೇ ಇರಲಿ-ಜನನಾಯಕನನ್ನಿಸಿದವನು ಹೀಗಿರಬೇಕು; ಸಭ್ಯತೆ, ಸಂಸ್ಕಾರ ಮನೋವೃತ್ತಿಯುಳ್ಳವನಿರಬೇಕು. ತದ್ವಿರುದ್ಧ ಸ್ವಭಾವ ತತ್ಪು ವರ್ತನೆಗಳು ಕಾವು ಇರುವ ನೆಲೆಯನ್ನೇ ಹುಡುಕುವಂತಹವಾದ್ದರಿಂದ ಅತ ನಾಯಕ ಸ್ಥಾನಕ್ಕೇರುವಂತಿಲ್ಲ. ಕ್ರೂರ ಗೋಡ್ಸೆ, ಆರ್. ಯಸ್. ಯಸ್. ನಾಯಕ ಶ್ರೀ ಗೋಳ್ವಾಲ್ಕರ್ ಇವರೂ ಈ ಮಾತಿಗಪವಾದವಾಗಿಲ್ಲ

೦೦ ೦೦ ೦೦ ..

ಕೀರ್ತಿವಂತರಾದವರು ಸ್ವಂತಾವಶ್ಯಕತೆ, ಕುಟುಂಬ ಮೋಹ ಮತ್ತು ಖಾಸಗೀ ನಿಯಮ ಸಂಪ್ರದಾಯಗಳನ್ನು ಗಣಿಸುವವರಲ್ಲ ಎಂಬ ನಂಬಿಕೆಯೂ ಸುಳ್ಳೇ. ಪಂಡಿತ ನೆಹರುಗಳು ಸಂಜಾರ ಹೊರಡುವಾಗಲೆಲ್ಲಾ, ಅವರ ಸಹೋದರಿಯರಲ್ಲಿ ಯಾರಾದರೊಬ್ಬಳು, ಅಥವಾ ಪುತ್ರಿ ಜತೆಯಲ್ಲಿರುವದಿದೆ. ಸಂಪ್ರದಾಯ ವಿರೋಧಿ ಕ್ರಾಂತಿ ಸುರುಷ ಪಂಡಿತಜೀ ತನ್ನ ಏಕ ಮಾತ್ರ ಪುತ್ರಿ ಇಂದಿರೆಗೆ ವಿವಾಹ ಮಾಡಿಸಿದಾಗ, ಮಗಳು ಮತ್ತು ಅಳಿಯನಿಂದ ಗಾಂಧಿಜೀಯ ಖಾದಿ ಮುಟ್ಟಿಸಿ ಅಶೀರ್ವಾದ ಸಂಪಾದಿಸಿ ಕೊಟ್ಟಿದ್ದರು; ಮೊನ್ನೆ ಅವರಿಕೆಗೆ, ಜಯ ಸೂಚಕ ಚಿಹ್ನೆಯಾಗಿ ಹಣೆಗೆ ತಿಲಕವನ್ನು ಹಚ್ಚಿ ಕೊಂಡೇ ನೆಹರು ಹೊಂಟಿದ್ದರು. ಬೆಳಗ್ಗೆ ಎದ್ದೊಡನೆ ಮುಖ ಕ್ಷಾರ ಮಾಡಿಕೊಳ್ಳುವ ತನ್ನ ಸಂಪ್ರದಾಯಕ್ಕೆಲ್ಲಿಯಾದರೂ ಭಂಗ ಬಂದೀತೆಂಬ ಸಂಕಟ-ಪಂಡಿತ ಜವಾಹರಲಾಲರು, ಆ ದಿನದ ಅರಂಭ ಕಟ್ಟು ದಾಯಿತೆಂದು ದಿನವಿಡೀ ಬಿಸಿ ಮನಸ್ಸಿನಿಂದಲೇ ಇರುತ್ತಾರೆ. ಇಂತಹ ಕೆಲವು ಆಚಾರನಿಷ್ಠೆಗಳು ಪಂಡಿತ ಜವಾಹರ ಲಾಲರಲ್ಲಿ ಕೂಡಾ ಇವೆ. ಇನ್ನು ತನ್ನ ಗಮನಕ್ಕೆ ಬಂದ ಯಾವ ಸಣ್ಣ ಪುಟ್ಟ ವಿಷಯವನ್ನೇ ಆದರೂ ತಾನು ದೊಡ್ಡ ಮನುಷ್ಯನಾದ್ದರಿಂದ ಅಂತಹ ದಕ್ಕೆ ಮನಸ್ಸು ಕೊಡಬಾರದೆಂದು ಸುಮ್ಮನಿರಲು ಪಂಡಿತಜೀಗಾರೆಯದು. ಥಿಲ್ಲಿಯಲ್ಲೊಮ್ಮೆ ರೇಶನ್ ಅಕ್ಕಿ ಕೊಡುವ ಸ್ಟೋರಿನವನು, ನಮ್ಮ ಸ್ಟೋರ್ ಸ್ವಭಾವಾನುಸಾರವಾಗಿ ಯಾವುದೋ ಬಂದ ಕಾರಣವನ್ನೇ ಮಹತ್ತಾಗಿ ಮಾಡಿ ಆ ದಿನ ಅಕ್ಕಿ ಕೊಟ್ಟಿಲ್ಲಿಲ್ಲ. ಹೃದಾನ ಮಂತ್ರಿ ನೆಹರುಗಳ ಮನೆಯಾಳು ಅಲ್ಲಿಗೆ ಹೋಗಿ ಬರಿಗೈಯಿಂದ ಮರಳಿದ; ಸುದ್ದಿ ಕೆವಿಗೆ ಬಿದ್ದೊಡನೆ ಪಂಡಿತಜೀ ಸ್ವತಃ ಸ್ಟೋರಿಗೆ ನಡೆದರು. 'ಒಳಗೆ ಆಕ್ಕಿ ದಾಸ್ತಾನಿರುವ ವರೆಗೆ ಕಾರ್ಡ ದಾರರಿಗೆಲ್ಲಾ ಅಕ್ಕಿ ಕೊಡಬೇಕು' ಎಂದು ಹೇಳಿ ಬಂದರು. ಇಡೀ ರಾಷ್ಟ್ರವ ತ್ತಿಹೊತ್ತ ಹೊತ್ತ ಪಂಡಿತ ನೆಹರುಗಳ ಲಕ್ಷ್ಯವು ಪ್ರತ್ಯೇಕನಾಗಿ ಏಳು ವರುಷ ಪ್ರಾಯದ ದುರ್ಬೀನ್ ಹುಡುಗಿಯೊಬ್ಬಳ ಮೇಲೆ ಬಿದ್ದು, ಆ ದೆಸೆಯಿಂದಲೇ ಅವಳು ಮನುಷ್ಯ ರೂಪಕ್ಕೆ ಬರುವಂತಾದ ಒಂದು ಘಟನೆ ಈಗ ತಾನೇ ಪ್ರಕಾಶಕ್ಕೆ ಬಂದಿದೆ. ಪಾಕಿಸ್ತಾನ್ ಕ್ಷೇತ್ರದಲ್ಲಿ ಭೀಕರ ಜಾತೀಯ ಗೊಂದಲ ನಡೆದಿದ್ದ ಕಾಲ; ಅಲ್ಲಿಯ ರಸ್ತೆಯಲ್ಲೊಂದು ಹುಡುಗಿ ವಿಷ್ಣು ಮುದ್ದೆಯಂತೆ ಬಿದ್ದುಕೊಂಡಿದ್ದುದನ್ನು ರಸ್ತೇ ಗುಡಿಸುವವನೊಬ್ಬ ಹೆಕ್ಕಿ ಕೊಂಡಿದ್ದ. ಈ ನಿರಾಶ್ರಿತ ಹುಡುಗಿಯ ಹೆಸರು ಕೌಸಲ್ಯ ಕೌಸಲ್ಯೆಯನ್ನು ಥಿಲ್ಲಿಯ ನಿರಾಶ್ರಿತ ಶಿಬಿರಕ್ಕೆ ತರುವಾಗ ಆಕೆ ಎಲುಬು ಮಾಂಸಗಳ ಮುದ್ದೆಯಾಗಿದ್ದಳೇ ಹೊರತು ಮನಷ್ಯಾಕಾರದಲ್ಲಿರಲಿಲ್ಲ; ನಡೆಯಲು ಅಥವಾ ಮಾತಾಡಲು ಹುಡುಗಿಗಾಗುತ್ತಿರಲಿಲ್ಲ; ಕಿವಿ ಕೂಡಾ ಕೇಳುತ್ತಿರಲಿಲ್ಲ. ಕೆಲ ಕಾಲ ನಿರಾಶ್ರಿತ ಶಿಬಿರದಲ್ಲಿದ್ದು ಅಲ್ಲಿಂದ ಆಕೆಯನ್ನು ಹೆಂಗಸರು ಮಕ್ಕಳಿಗಾಗಿ ಏರ್ಪಡಿಸಿದ್ದ ನಿವಾಸಕ್ಕೆ ಸಾಗಿಸಿದರು. ಪಂಡಿತಜೀ ಕೌಸಲ್ಯೆಯನ್ನು ಕಂಡರು. ಅವಳಿಗೆ ಪ್ರತಿ ತಿಂಗಳೂ 15 ರೂಪಾಯಿಯಂತೆ ಸ್ಪೆಶಲ್ ಸ್ಟೈಪೆಂಡ್ ಕೊಡುತ್ತಾ ಬಂದರು. ತತ್ಪರಿಣಾಮವಾಗಿ ಉತ್ತಮ ಆರೈಕೆ ಮತ್ತು ಆಹಾರ ದೊರೆತು ಕೌಸಲ್ಯೆಯ ಆರೋಗ್ಯ ಸ್ಥಿತಿಗೆ ಬಂದಿದ್ದಾಳೆ. ಮಾತಾಡುವುದಕ್ಕೂ ನಡೆಯುವುದಕ್ಕೂ ಕಲಿತಿದ್ದಾಳೆ. ಅಮೆರಿಕಾಧ್ಯಕ್ಷ ಟ್ರೂಮೇನರ ಸಂಸಾರಕ್ಕೆ ಸಲುಗೆಯ ಒಂದು ಕತೆ ಪ್ರಕಟವಾಗಿದೆ. ಇದೇ ಒಕ್ಟೋಬರ್ ತಾ. 25ರಲ್ಲಿ ಟ್ರೂಮೇನರು ಮತ್ತು ಅವರ ಕೆಲಮಂದಿ ಸ್ನೇಹಿತರು ಒಟ್ಟಿಗೆ ಕುಳಿತು ಗಹಗಹಿಸಿ ನಗುತ್ತಿದ್ದರು. ಕಾರಣವಿಷ್ಟೆ: ಟ್ರೂಮೇನರ ಪುತ್ರಿ ಮಾರ್ಗರೆಟ್ ಸಂಚಾರದಲ್ಲಿದ್ದಾಗ ಅವಳು ತನ್ನ ತಂದೆಗೊಂದು ಪತ್ರಿಕೆಯನ್ನೂ ಕಾಗದವನ್ನೂ ಕಳುಹಿಸಿದ್ದಳು. ಆ ಪತ್ರಿಕೆಯ ಒಂದು ಪುಟದಲ್ಲಿ 'ಸೇನಾ ಸಹಾಯ ಮಸೂದೆಗೆ ಸಹಿ ಮಾಡುವ ಅಧ್ಯಕ್ಷ ಟ್ರೂಮೇನರ ಭಾವಚಿತ್ರವೂ ಮತ್ತೊಂದು ಪುಟದಲ್ಲಿ ಹಾಡಿಹೊಗಳಿದ ಟ್ರೂಮೇನ್ ಪುತ್ರಿ ಮಾರ್ಗರೆಟಳ ಭಾವಚಿತ್ರವೂ ಬಂದಿತ್ತು- ಮಾರ್ಗರೆಟ್ ಕಣ್ಣು ಪತ್ರದಲ್ಲಿ ಬರೆದಿದ್ದಳು. 'ತಂದೆಯವರೇ, ಇಲ್ಲಿ ನೋಡಿ. ನಾನು 1ನೇ ಪುಟದಲ್ಲಿದ್ದೇನೆ; ನೀವು 18ನೇ ಪುಟದಲ್ಲಿದ್ದೀರಿ' ಇದನ್ನು ನೋಡಿ ಗೆಳೆಯರೆಲ್ಲಾ ವಿನೋದಗೊಂಡು ನಗುವಾಗ ಟ್ರೂಮೇನ್ ಪುತ್ರಿ ವಾತ್ಸಲ್ಯಮಿಶ್ರಿತ ಮನರಂಜನೆಯಿಂದ ಗಹಗಹಿಸಿ ನಕ್ಕು ಬಿಟ್ಟರು. ಇಂತಹ ಲಘು ವಿನೋದಗಳು ನಾಯಕರನ್ನಿಸಿದವರ ನಿತ್ಯ ಜೀವನದಲ್ಲಿ ದೊರೆಯುವಷ್ಟು ಜನ ಸಾಮಾನ್ಯರ ದೈನಂದಿನ ಆಚರಣೆಗಳಲ್ಲಿ ಕಾಣಸಿಗಲಾರವು.

೦೦ ೦೦ ೦೦

ಸಾಮಾನ್ಯ ಶಕ್ತಿ ಸಾಹಸಗಳಿದ್ದರೂ ವ್ಯಕ್ತಿ ಬಳ್ಳಿಯವನಲ್ಲವೆಂದಾದರೆ, ಆತ ನಾಯಕ ಸ್ಥಾನಕ್ಕೇರುವಂತಿಲ್ಲ. ನಿರ್ಮಲ ಗುಣ ನಡತೆಯವನಾಗಿರಬೇಕೆಂಬುದು ಧುರೀಣತ್ವದ ಮಟ್ಟಿಗಿರುವ ಮೊದಲನೇ ಶರತ್. ಬುದ್ಧಿ ಶಂತಿಕೆಯೇ ಬುದ್ಧಿಶಕ್ತಿಗಳೆಗೆ ತಳಗಟ್ಟು ಸಹನಾತೀತ ಕಷ್ಟ, ಯಾತನೆಗಳನ್ನು ಕ್ಷಣಕ್ಷಣವೂ ಅನುಭವಿಸುತ್ತಿರುವ ಬಡವನೊಬ್ಬ, ಶಾಂತ ಮನಸ್ಸಿನವನಾಗಿರಲು ಸಾಧ್ಯವೆ? ಜೀವನ ನಿರ್ವಹಣಕ್ಕೆಂತ ಹಿಟ್ಟಿನ ಬಯಕೆ ಅವನಿಗಿಲ್ಲದಿರಬಹುದು; ಬಾಳುನೆಯು ಸುಖ ಸಾಧನೆಯನ್ನು ಮಿಕ್ಕಿದ ಪಾಪ ತ್ವರಕಾರ್ಯ ಮನುಷ್ಯನಲ್ಲಿಲ್ಲದಿರಬಹುದು. ಒಬ್ಬನು ಮನುಷ್ಯ ನಶ್ಶಿಸಬೇಕಾದರೆ ಅನಿವಾರ್ಯವಾಗಿರುವ ಅವಶ್ಯಕತೆಯಿದು. ಆದರೆ ಬಡವರ ವರ್ಗವು ಮಾನವೋಚಿತ ಪ್ರಥಮಾವಶ್ಯಕತೆಗಳನ್ನೂ ಕಳಿಸಿಕೊಳ್ಳುವ ದಕ್ಕಾಗಿಯೇ ಶಕ್ತಿವಿಂ ಒದ್ದಾಡಬೇಕಾಗುತ್ತಿದೆ; ಹಾಗಿ ಒದ್ದಾಡಿಯೂ ಅವಶ್ಯಕತೆಗೆ ಕೂಡಾ ಪರಾಭವಗೊಳ್ಳುತ್ತಿದೆ. ಕೇವಲ ಮಾನವತ್ವದ ಮಟ್ಟು ಕೂಡಾ ಅವರಿಗೆ ಎಟಕದೆ, ಅವರು ನರ-ಮೃಗಗಳಾಗಿ ಉಳಿಯಬೇಕಾಗುತ್ತದೆ. ಸ್ಥಿತಿ ಇಂತಹ ದಿರುವಾಗ ಮತಿಯೂ ಆ ಮಟ್ಟದಲ್ಲೇ ನಿಲ್ಲುತ್ತದೆ. ಬಡವನ ಮನಸ್ಸು ಹಿಟ್ಟಿನ ಕಾಲು ಸಂತೋಷ, ಕ್ಕೋಧಗಳಿಂದ ಕೂಡಿಯಿರುತ್ತಲೇ ಇದ್ದ, ಈ ಬಿಸಿಯೇ ಬಡಜನ ಪೈದಮಾದ ನಿತ್ಯಶಾಖವೆಂಬಂತಿರುವಾಗ ಇಂತಹ ಪೈದಯುದಲ್ಲಿ ಶಾಂತಿಗೆ ಸ್ಥಾನವೆಲ್ಲಿ? ಅಲ್ಲಿ ವಿನೋದ, ಲಘುತ್ವಗಳು ಹುಟ್ಟಿದರೂ ಅಲ್ಲೇ ಅರ್ಧಮರ್ಧ ಕರಗಿ, ರೂಪಗೆಟ್ಟು ಹೊಂಬೇಳದಿರುವುದಾದರೂ ಹೇಗೆ? ಹೊಟ್ಟೆ ತುಂಬಿಸಿಕೊಳ್ಳಲಾರದಷ್ಟು ಅಸಮರ್ಥನಿರುವವನಲ್ಲಿ ಆಶ್ಚರ್ಯತೆ-ಸದಾಕಾಲ ಕಳವಳಿಸುತ್ತಿರುವವನಲ್ಲಿಯೂ ಸೌಹಾರ್ದತೆ-ಮೊಳೆಯುವುದೇಕೆಂದರೆ ಜೀಗದು? ಆದ್ದರಿಂದ ಸ್ವಾಭಾವಿಕವಾಗಿ ಬಡಗು ಮತ್ತು ಭೀಕರ ಸ್ವಭಾವಗಳು ಹೆಚ್ಚಾಗಿ ಹಿಂಧಾಗದಲ್ಲಿರುವ ಜನರಲ್ಲೇ ಗೋಚರಿಸುತ್ತವೆ ಹೊರತು ಮುಂಭಾಗದಲ್ಲಿಂವರಲ್ಲಲ್ಲ. ಆರ್ಥಿಕ, ಸಾಮಾಜಿಕ ಸ್ಥಗತಿ ಮತ್ತು ಸಮಾನತೆ ಸಾಧಿಸಲ್ಪಡದ ಈ ಸ್ಥಿತಿ ಸುಧಾರಿಸದು—ಪ್ರತಿಯೊಬ್ಬನ ಪುಟ್ಟು ಯೋಗ್ಯತೆಗಳಿಗೂ ಪ್ರಕಾಶ ಬೀಳದು. ಆ ಕಾಲ ಬರುವ ವರೆಗೂ ಸೌಭಾಗ್ಯಜನ್ಯ ಶಾಂತಚಿತ್ತವಿರುವವರೇ ಮುಂದಾಳುಗಳಾಗಿ ರಂಜಿಸುವವರು.

ಇಂದಿನ ಆವಶ್ಯಕತೆ

ಭಾರತದ ರಕ್ಷಣೆ.

ಇದಕ್ಕಾಗಿ

ಭಾರತೀಯ ಸಾಮ್ರಾಜ್ಯಿಕ ಸೈನ್ಯವನ್ನು ಸೇರಿರಿ.

ಈ ಪ್ರಕಟಣೆ, ಜನಾಂಗಕ್ಕೆ

ಕೆನರಾ ಬ್ಯಾಂಕ ಲಿಮಿಟೆಡ್

ಇವರ ಅಲ್ಪಸೇವೆ

ಖಿಮತುಸ್ರಾವ ನಿಂತಿತು

'ಆಮಾರ್' ಬಿಲ್ಲೆಗಳನು ಉಪಯೋಗಿಸಿದರೆ ಹಡೆತಪ್ಪಿ ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣವೊಂದಬಹುದು, ಯಾವ ಬಾಧೆಗಳೂಯಿಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ 3-; ಸ್ಪೆಶಲ್ ರೂ. 5-; ಅಧಿಕಾರಿಕ ಸ್ಪೆಶಲ್ ರೂ. 8-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs P. DEVEE, F. DS. (N. J.)
Tollygunge CALCUTTA.

ಸ್ವಾಕಕ್ಷರದ ಶಹಾಕಂಪಸಿ, ಮಂಗಳೂರು

ಒಟ್ಟಾವಾ ಚಿಕಾಗೋಗಳಲ್ಲಿ ಪ್ರಧಾನಿ ನೆಹರು.

ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುಗಳು, ಅಮೆರಿಕದ ರಾಜಧಾನಿ ವಾಷಿಂಗ್ಟನ್‌ನಲ್ಲಿ ಕೊಲೂರಿದ ವರೇ ಅಲ್ಲಿಯ ಕಾರ್ಯಕ್ರಮ ಮುಗಿಸಿ, ಆ ಮೇಲೆ ಅಮೆರಿಕದ ಅಗ್ರಗಣ್ಯ ನಗರ ನ್ಯೂಯೋರ್ಕಿನ ಕಾರ್ಯಕಲಾಪಗಳನ್ನು ತೀರಿಸಿ, ಅಲ್ಲಿಂದ ಕೆನಡಾಕ್ಕಾಗಮಿಸಿದರು. ಅಲ್ಲಿ ಮೂರು ದಿನಗಳ ಸತ್ಕಾರ ಸಮಾರಂಭಗಳಾದುವು. ಮರಳಿ ಅಮೆರಿಕಕ್ಕೆ ಬಂದು, ಅಮೆರಿಕದ ಎರಡನೇ ದೊಡ್ಡ ನಗರ ಚಿಕಾಗೋವಿನಿಂದ, ತನ್ನ ಅಮೆರಿಕಾ ಪ್ರವಾಸದ ದ್ವಿತೀಯ ಅಂಕವನ್ನಾರಂಭಿಸಿದ್ದಾರೆ. 'ಜನ ನೋಡ್ಡಿ ಮಣಿಯೆಡುವ' ತಾಂತವ್ಯವು ಪ್ರತಿಯೊಂದು ರಾಷ್ಟ್ರವು ಸಲ್ಲಿಸುವ ಗೌರವಾದರಗಳಲ್ಲೂ ಇದ್ದೇ ಇದೆ. ಭಾರತದ ಪ್ರಧಾನಿಗೆ ಅಮೆರಿಕಾ, ಕೆನಡಾಗಳಲ್ಲಿ ದೊರೆತಿರುವ ಸ್ವಾಗತಗಳೆಲ್ಲವೂ ಪರಮಾವಧಿ ಮೀರ್ಮಟ್ಟಿದವುಗಳೇ. ತಾವು ಕೊಡಲಿರುವ ಅತ್ಯುಚ್ಚ ಗೌರವಗಳಾವುವೋ ಅವುಗಳನ್ನೇ ಅಮೆರಿಕಾ, ಕೆನಡಾ ಸರಕಾರಗಳು ಪಂಡಿತ ನೆಹರುಗಳಿಗಿತ್ತಿವೆ. ಆಶ್ಚರ್ಯವಿಲ್ಲ–ಭಾರತ ಏಗ ತಾನೇ ಸ್ವತಂತ್ರನಾಗಿರುವ ದೊಡ್ಡ, ಘನ ರಾಷ್ಟ್ರ ಪ್ರಪಂಚದ ರಾಷ್ಟ್ರಗಳ ವಂಗ್ಡಿಯಲ್ಲಿ ಅದಕ್ಕೆ ಗಣ್ಯ ಸ್ಥಾನವಿದೆ. ಮಾತ್ರವಲ್ಲ, ಇಂದಿನ ದ್ವಿಪಾಳಿಯ ಘರ್ಷಣೆಯಲ್ಲಿ–ಅದರಲ್ಲೂ ಜೈನಾದಂತಹ ಅಸ್ಯಾ ಭಾಗವು ಕಮ್ಯೂನಿಸ್ಟ್ ಆಗಿರುವ ಈ ಕಷ್ಟ ಕಾಲದಲ್ಲಿ—ನವೋದಿತ ಸ್ವತಂತ್ರ ರಾಷ್ಟ್ರ ಭಾರತದ ಮನಸನ್ನೊಲಿಸುವ ಆತುರವು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಶೇಷವಿದೆ. ಆಧಿತ್ಯ ಸಲ್ಲಿಸುತ್ತಿರುವ ನಾಯಕರುಗಳ ಪಾಲಿಗೆ ಈ ಅವಶ್ಯಕತೆಯಿದ್ದರೆ, ಆಧಿತ್ಯ ಪಡೆಯುತ್ತಿರುವ ನೆಹರುಗಳಿಗೂ ಅಮೆರಿಕಾ, ಕೆನಡಾಗಳ ಇಂತಹ ಸೌಹಾರ್ದತೆ ಅಗತ್ಯವಾಗಿ ಬೇಕಾಗಿದೆ. ಹೊಸತಾಗಿ ಸ್ವತಂತ್ರಗೊಂಡ ಭಾರತವೀವರೆಗೆ ಆರ್ಥಿಕ ರಂಗದಲ್ಲಿ ಸಾಕಷ್ಟು ಪ್ರಗತಿ ಪಡೆದಿಲ್ಲ; ಅಂತೆಯೇ ಔಧ ಮುಂತಾದ ಆಹಾರ ಧಾನ್ಯಗಳ ಅಭಾವವೂ ಇದೆ. ಒಂದು ರಾಷ್ಟ್ರವನ್ನು ರಾಜಕೀಯ ಪರಾವಲಂಬನೆಯಂತೆಯೇ ಆರ್ಥಿಕ, ಆಹಾರ ಪರಾವಲಂಬನೆ ಕೂಡಾ ಗುಲಾಮಗಿರಿಗೆ ದೂಡಬಲ್ಲುದೆಂಬುದೇನೋ ನಿಜ. ಆಂತಹ ಆರ್ಥಿಕದಾಸ್ಯಕೂಪಕ್ಕೆ ತಾನು ಬೀಳಬಾರದೆಂದು ಭಾರತ ಸರಕಾರವು ಸ್ವಾವಲಂಬನಾ ಯೋಜನೆಗಳನ್ನು ಕಣ್ಣಮುಂದಿಟ್ಟುಕೊಂಡಿದೆ. ಆದರೆ ಆ ಕಾಲಾವಧಿ ಯೋಜನೆಗಳು ಫಲಿಸುವ ವರೆಗೆ ಕಾಯುತ್ತಾ ನಿಲ್ಲುವದಸಾಧ್ಯವಾಗಿರುವ ತಾತ್ಕಾಲಿಕ ಅಡಚಣಿಗಳ ಶಮನಗಳಿಗಾಗಿ–ಈ ದಿನದ ಆಹಾರಾಭಾವ ನಿವಾರಣೆ ಮತ್ತು ಕ್ಷಿಪ್ರ ಉದ್ಯಮೀಕರಣ ಪ್ರಗತಿಗಾಗಿ– ಭಾರತಕ್ಕೆ ಅಮೆರಿಕ, ಕೆನಡಾಗಳ ಸಹಾಯವು ಕಲವಂಶ ಬೇಕು. ಇಂತಹ ನೆರವು ಸಂಪಾದನೆಗೆ ಪಂಡಿತಜೀಯ ಈ ಬಾರಿಯ ಪ್ರವಾಸವು ತುಂಬಾ ಪ್ರಯೋಜನಕಾರಿಯಾಗಿದೆ. ಅಂತೆಯೇ ಲೋಕವಹಿವಾಟುಗಳ ಮುಖ್ಯಸೂತ್ರ ಚಾಲಕನಿರುವ ಅಮೆರಿಕದಂತಹ ರಾಷ್ಟ್ರದಲ್ಲಿ, ನವೋದಿತ ಸ್ವತಂತ್ರ ರಾಷ್ಟ್ರ ಭಾರತದ ಪ್ರಧಾನಿಯು ತನ್ನ ವರ್ಚಸ್ಸನ್ನೀರೀತಿ ಬೀರುವುದು ರಾಷ್ಟ್ರದ ಸ್ಥಾನಮಾನಗಳ ದೃಷ್ಟಿಯಿಂದಲೂ ಅಗತ್ಯ, ಆದ್ದರಿಂದ ಪ್ರಧಾನಿ ಪಂಡಿತಜೀಯು ಈ ವ್ಯವಸವನ್ನು ಸ್ವತಂತ್ರ ಭಾರತದ ಗಣ್ಯಸಾಧನೆಗಳಲ್ಲೊಂದೆಂದು ಗಣಿಸಬಹುದು.

ಕೆನಡಾದಲ್ಲಿ

ಅಮೆರಿಕದ ಪ್ರಧಾನ ನಗರ ನ್ಯೂಯೋರ್ಕಿನಿಂದ ಕೆನಡಾದ ರಾಜಧಾನಿ ಒಟ್ಟಾವಾಕ್ಕೆ ಹೊಂಟ ಪಂಡಿತ ನೆಹರುಗಳು ಹಾದಿಯಲ್ಲಿ ಲೋಕಪ್ರಸಿದ್ಧ ನಿಯಾಗರಾ ಜೋಗವನ್ನು ಅಲ್ಲಿಯ ಪರ್ವ ಹೌಸನ್ನೂ ಸಂದರ್ಶಿಸಿ ಅಲ್ಲಿಂದ ಹೊರಟು, ಟೋರೆಂಟೋದಲ್ಲಿ ಅಕರ್ಷಣೀಯ ಸ್ವಾಗತ ಪಡೆದು ಒಕ್ಟೋಬರ್ ೨೮ರಲ್ಲಿ ಒಟ್ಟಾವಕ್ಕೆ ಬಂದಿಳಿದರು. ನಿಲ್ದಾಣದಲ್ಲಿ ಕೆನಡಾದ ಪ್ರಧಾನ ಮಂತ್ರಿ ಲೂಯಿಸ್ ಸ್ಟೆಂಟ್‌ಲಾರೆಂಟ್ ಮತ್ತಿತರ ಮಂತ್ರಿಗಳು ಜಾಗೂ ಮಕೆಂಜೀ ಕಿಂಗ್ ಮುಂತಾದ ಪ್ರಮುಖರು, ಎಲ್ಲಾ ಪಕ್ಷಗಳ ನಾಯಕರು, ಒಟ್ಟಾವದಲ್ಲಿದ್ದ ಭಾಂತೀಯ ಸ್ತ್ರೀ ಪುರುಷರು ಮತ್ತು ವಿದೇಶೀ ರಯಭಾರಿಗಳವರು ಸ್ವಾಗತಕ್ಕೆ ಕಾದಿದ್ದರು. ಅಲ್ಲಿ ಅತ್ಯುತ್ಸಾಹದ ಸ್ವಾಗತ ಪಡೆದು, ೨೧ಗನ್ ಸೆಲ್ಯೂಟ್ ಮತ್ತು ಕೆನಡಾ ವಿಮಾನದಳದ ಗೌರವ ವಂದನೆಗಳನ್ನು ಸ್ವೀಕರಿಸಿ ಸರಕಾರೀ ಅತಿಥಿಯಾಗಿ ನಿಂತರು. ಕೆನಡಾದಲ್ಲಿ ಭಾರತ ರಾಯಭಾರಿಯಾಗಿರುವ ಶ್ರೀ. ಕೃಪಾಲಾನಿಯವರು ಸಂಭ್ರಮದ ಔತಣ ಕೂಟವೇರ್ಪಡಿಸಿದ್ದರು. ಅಂದೇ ರಾತ್ರಿ ಕೆನಡಾದ ಪ್ರಧಾನಿ ಲಾರೆಂಟಿಯ ಪಂಡಿತಜೀಗೆ ಅತಿದೊಡ್ಡ ಸರಕಾರೀ ಔತಣ ಕೂಟವೇರ್ಪಡಿಸಿದ್ದರು. 1939ರಲ್ಲಿ ಬ್ರಿಟಿಷ್ ರಾಜದಂಪತಿಗಳು ಭೇಟಿಯಿತ್ತಾಗಲೊಮ್ಮೆ ಹೊರತು ಕೆನಡಾ ಸರಕಾರವು ಇಷ್ಟು ದೊಡ್ಡ ಸತ್ಕಾರಕೂಟವನ್ನೇರ್ಪಡಿಸಿದ ದಾಖಲೆಯು ಕೆನಡಾದ ಚರಿತ್ರೆಯಲ್ಲೇ ಇಲ್ಲ. ಚರಿತ್ರಾರ್ಹವಾದ ಮತ್ತೊಂದು ವಿಶೇಷ ಘಟನೆಯೆಂದರೆ ಕೆನಡಾದ ಪಾರ್ಲಿಮೆಂಟಿನ ಎರಡು ಭವನಗಳ ಸಂಯುಕ್ತ ಸಭೆಯಲ್ಲಿ ಪಂಡಿತ ನೆಹರುಗಳತ್ತ ಭಾಷಣ. ಪಂಡಿತಜೀಯ ಭಾಷಣದ ವಾಗ್ಝರಿ ಮತ್ತು ವಿಷಯಗಾಂಭೀರ್ಯವು ಆ ಸಭೆಯ ವಿಶೇಷ ಮೆಚ್ಚುಗೆ ಗಳಿಸಿತು. ಕೆನಡಾ ಪಾರ್ಲಿಮೆಂಟಿನ ಸುವರ್ಣರಂಜಿತ ಭಾಷಣವೇದಿಕೆಯನ್ನು, ಪ್ರಥಮಬಾರಿ ಏರಿದ ಪೌರ್ವಾತ್ಯ ರಾಷ್ಟ್ರಗಳ ನಾಯಕನೆಂದರೆ ಪಂಡಿತ ನೆಹರುಗಳೇ. ಕೆನಡವು ಅಮೇರಿಕಾಧ್ಯಕ್ಷ ಟ್ರುಮೇನ್, ಬ್ರಿಟಿನಿನ ಪ್ರಧಾನ ಮಂತ್ರಿಯಾಗಿದ್ದಾಗ ಜರ್ಜಿಲ್, ಇವರಬ್ಬರಿಗೆ ಒದಗಿಸಿದ್ದ ಸುಯೋಗ ಮತ್ತು ಸ್ವಾಗತವನ್ನೇ ಭಾರತ ಪ್ರಧಾನಿ ಪಂಡಿತ ನೆಹರುಗಳಿಗಿತ್ತಿದ್ದಿತು. ಪರಿಚಯಮಾಡಿಕೊಡುತ್ತಾ ಕೆನಡದ ಪ್ರಧಾನಿ ಲಾರೆಂಟರು "ಭಾರತ ಪ್ರಧಾನ ಮಂತ್ರಿಗಳನ್ನು ಈ ಸಂದರ್ಭದಲ್ಲಿ ತನ್ನ ಅತಿಥಿಯನ್ನಾಗಿ ಸ್ವಾಗತಿಸಿಕೊಳ್ಳುವ ಸುಯೋಗವು ದೊರೆತುದರಿಂದ ನಮ್ಮ ರಾಷ್ಟ್ರವು ನಿಜಕ್ಕೂ ಗೌರವಿಸಲ್ಪಟ್ಟಿತು" ಎಂದು ಮುಕ್ತ ಕಂಠದಿಂದ ಹೊಗಳಿಕಾಮನ್‌ವೆಲ್ತ್ ಸಹೋದರ ರಾಷ್ಟ್ರಗಳಾಗಿರುವ ಭಾರತ-ಕೆನಡಾಗಳ ಬಾಂಧವ್ಯವನ್ನು ಮಂದಟ್ಟು ಪಡಿಸಿದರು. ಪಂಡಿತಜೀ ತನ್ನ ಭಾಷಣದಲ್ಲಿ ಲಂಡನ್ನಿನಲ್ಲಿ ಆ ದಿನ ನೆರೆದಿದ್ದ ಕಾಮನ್‌ವೆಲ್ತ್ ರಾಷ್ಟ್ರಗಳ ಪ್ರಧಾನ ಸಮ್ಮೇಳನದಲ್ಲಿ ಭಾರತ ಮತ್ತು ಕೆನಡಾಗಳ ಅಭಿಪ್ರಾಯಗಳು ಹೆಚ್ಚಿನಂತೆ ಒಂದೇ ಆಗಿದ್ದುದನ್ನು ಜ್ಞಾಪಿಸಿ, ಕೆನಡದೊಂದಿಗಿರುವ ಸಹಜ ಸೌಹಾರ್ದತೆಯನ್ನು ವ್ಯಕ್ತಪಡಿಸಿದರು. "ಭಾರತಕ್ಕೆ ನಾಯಕಸ್ಥಾನದ ಅಥವಾ ಅನ್ಯ ರಾಷ್ಟ್ರ ಕ್ರಮಣ ಇಲ್ಲವೇ ಇಲ್ಲ. ಅದರಿ ಅಸ್ಯಾದ ಕೆಲವು ಮೂಲ ಭೂತ ಸಮಸ್ಯೆಗಳು ನಿವಾರಣೆಗೊಳ್ಳದೆ ಲೋಕಶಾಂತಿಯು ಸಾಧ್ಯವೆಂದು ನಮಗೆ ಮನವರಿಕೆಯಾಗಿರುವುದರಿಂದ ಪರಿಸ್ಥಿತಿಗೆ ಕಳ್ಪುಬಿದ್ದು ಆಸ್ಯಾದಲ್ಲಿ ಅನಿವಾರ್ಯವಾಗಿ ನಾವು ನಮ್ಮ ಭಾಗವನ್ನು ನಿರ್ವಹಿಸಬೇಕಾಗಿ ಬಂದಿದೆ" ಎನ್ನುತ್ತಾ ಜಾಗತಿಕ ವಹಿವಾಟುಗಳಲ್ಲಿ ಅಸ್ಯಾದ ಪ್ರಾಮುಖ್ಯ ಸ್ಥಾನವನ್ನು ವಿವರಿಸಿದರು.

ತಾ 24ರಲ್ಲಿ ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ಪತ್ರಿಕೋದ್ಯಮಿಗಳಿಗೆ ಭಾಷಣ ವೀಯುತ್ತಾ, ಆ ವರೆಗೂ ಸಾಕಷ್ಟು ಪರಿಚಯವಿರದಿದ್ದ ರಾಶ್ಮೀರದ ಸಮಸ್ಯೆಯ ರೂಪರೇಖೆಗಳನ್ನು ಅವರಿಗೆ ಮಂದಟ್ಟಾಗುವಂತೆ ವಿವರಿಸಿದರು. "ಈಗ ಉಳಿದಿರುವ ಏಕಮಾತ್ರ ಹಾದಿಯೆಂದರೆ ಮಧ್ಯಸ್ಥಿಕೇ ಮೂಲಕ ರಾಶ್ಮೀರ ವಿವಾದವನ್ನು ತೀರ್ಮಾನಿಸಿಕೊಳ್ಳುವುದೇ. ಪಾಕಿಸ್ತಾನಕ್ಕೆ ರಾಶ್ಮೀರದಲ್ಲಿ ಕಾನೂನುಬದ್ಧ ಹಾಗೂ ಘಟನಾಬದ್ಧವಾದ ಯಾವಸ್ಥಾನವೂ ಇಲ್ಲ. ರಾಶ್ಮೀರ ವಿವಾದದ ಕುರಿತು ತಾನು ಇನ್ನೊಮ್ಮೆ ಶಸ್ತ್ರವೆತ್ತುವದಿಲ್ಲವೆಂದು ಪಾಕಿಸ್ತಾನವೀಗ ಕಂಠೆ-ಕ್ಕವಾಗಿ ಹೇಳಬೇಕು" ಎಂದು ಉಪಾನ್ಯಸಕೊಟ್ಟರು ತಾ. 25ರಲ್ಲಿ ಕೆನಡಾದ ಪ್ರಧಾನಿ ಲೂಯಿಸ್ ಸೈಂಟ್‌ಲಾರೆಂಟರೊಡನೆ ಎರಡುತಾಸುಗಳ ತನಕ ಮಾತಾಡಿ 'ಕೆನಡಾಕ್ಕೆ ಭಾರತೀಯರು ಪ್ರವೇತಿಸದಂತಿರುವ ಪ್ರತಿಬಂಧದ ಕುರಿತು ಚರ್ಚಿಸಿದರು, ಅದೇ ರೀತಿ ಭಾರತಕ್ಕೆ ಅಗತ್ಯವಿರುವ ಗೋಧಿಯನ್ನು ಕಳುಹಿಸುವ ಕುರಿತು ಅಮೆರಿಕದ ಆಲೋಚನೆಯನ್ನು ಎಬ್ಬಿಸಿದಂತೆಯೇ ಕೆನಡಾದ ಗೋಧಿ ಸಹಾಯ-ಕ್ಕಾಗಿಯೂ ಪ್ರೇರಣೆಕೊಟ್ಟರು. ತತ್ಪರಿಣಾಮವಾಗಿ ಅಮೆರಿಕದಲ್ಲೀಗ ಇರುವ ಭಾರತದ ಆರ್ಥಿಕ ರಾಯಭಾರಿ ಸರ್. ಚಿಂತಾಮಣಿ ಮತ್ತು ಅಮೇರಿಕನ್ ಅಧಿಕಾರಿಗಳೊಳಗೆ ವಿಚಾರವಿನಿಮಯ ನಡೆದಿದೆ. 80 ಮಿಲಿಯ ಡೋಲರ್ ಮೌಲ್ಯದ ಪರ್ವರ ಸಾಮಾಗ್ರಿವಿನಿಮಯ ಗಳು ಭಾರತ-ಅಮೆರಿಕಗಳೊಳಗೆಗೈನಡೆಯುವ ಒಪ್ಪಂದ ಮಾತುಕತೆ ನಡೆದಿದೆ. ಈ ಒಪ್ಪಂದದಲ್ಲಿ ಕೆಲವು ಕಚ್ಚಾ ವಸ್ತುಗಳನ್ನು ಭಾರತದಿಂದ ಪಡಕೊಂಡು, ಬದಲಾಗಿ ಅಮೆರಿಕವು 10ಲಕ್ಷ ಟನ್ ಗೋಧಿಯನ್ನು ಕೊಡುವ ವ್ಯವಸ್ಥೆಯಿದೆ.

ಚಿಕಾಗೋದಲ್ಲಿ

ನೂರಾದಿನಗಳ ವರೆಗೆ ಕೆನಡಾದ ಪ್ರಧಾನ ನಗರ ಒಟ್ಟಾವದಲ್ಲಿದ್ದು ತಾ. 26ನೇ ಅಪರಾಹ್ನ ಪಂಡಿತಜೀಯವರು ಅಮೇರಿಕದ ಚಿಕಾಗೋ ನಗರಕ್ಕೆ ಮರಳಿದ್ದಾರೆ. ಅಲ್ಲಿಂದ ಅಮೆರಿಕಾ ಪ್ರವಾಸದ ಎರಡನೇ ಸದಧಿಗಾರಂಭ. ಒಟ್ಟಾವದಿಂದ 700 ಮೈಲಿಯಿರುವ ಚಿಕಾಗೋದ ವರೆಗೆ ಪಂಡಿತ ನೆಹರುಗಳ ವಿಮಾನವು ೬ತಾಸುಗಳ ತನಕ ಫಲವತ್ತಾದ ಪ್ರದೇಶಗಳ ಮೇಲೆ ಹಾರಾಡಿಕೊಂಡು ವೀಚಿಗಾನ್ ಸರೋವರದಲ್ಲಿ ಅಲೆಗಳನ್ನೆಬ್ಬಿಸುತ್ತಾ ಅದರ ತೆಂಕು ಮೂಲೆಯಲ್ಲಿರುವ ಚಿಕಾಗೋ ನಿಲ್ದಾಣದಲ್ಲಿ ತಳಪೂರ್ವಾಗ ಅಲ್ಲಿಯೂ ಆಕರ್ಷಣೀಯ ಸ್ವಾಗತವು ಪಂಡಿತಜೀಯನ್ನು ಕಾದಿತ್ತು. ಪುತ್ರಿ ಇಂದಿರೆ ಮತ್ತು ಪರಿವಾರದೊಂದಿಗೆ ಚಿಕಾಗೋ ಮೇಯರ್ ಮಾರ್ಟಿನ್ ಎಚ್. ಕೆನ್ನೆಲಿಯವರು ನಗರ ಸಭಾಭವನದಲ್ಲಿ ಏರ್ಪಡಿಸಿದ್ದ ಸತ್ಕಾರ ಸಮಾರಂಭಾಧ್ಯಾಗವಿಸಿದರು. ಈ ಭವನದಲ್ಲಿ ಓರ್ವ ಭಾರತೀಯನಿಗೆ ಸ್ವಾಗತ ಸ

THE
PANGAL NAYAK BANK, LTD.,
Head Office: UDIPI.

SAVE FOR THE FUTURE.

SEASON DEPOSITS terminable on or before 30–6–1950 are accepted from 1–10–1949 at the following rates:

For 3, 4 or 5 months at 3 % p. a.
For 6, 7 or 8 months at 3½% p. a.

Invest in our 3 YEAR CASH CERTIFICATES yielding interest at over 4% p. a.

For particulars please contact any of our Branch offices.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ತನ್ನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ತ್ಯಾರ ದೊರೆತುದೆಂದರೆ ಇದೇ ಮೊದಲ ಬಾರಿ. ಆ ಮೇಲೆ ಇಡೀ ದಿನ ಅಮೆರಿಕದ ಪ್ರಾಮುಖ್ಯ ಉದ್ದಿಮೇ ವಲಯವಾದ ಚಿಕಾಗೋದ ಕಾರ್ಖಾನೆಗಳನ್ನು ಸಂದರ್ಶಿಸುವುದರಲ್ಲಿ ಕಳೆದರು. ಎಲ್ಲವನ್ನೂ ಸವಿವರವಾಗಿ ಪರಿಶೀಲಿಸಿದರು. ಭಾರತಕ್ಕಿಷ್ಟರಲ್ಲೇ 500 ಟ್ರೇಕ್ಟರು (ಉಳುವಯಂತ್ರ)ಗಳನ್ನು ರವಾನಿಸಿದ್ದು, ಇನ್ನೂ ರವಾನಿಸಲಿರುವ-ಟ್ರೇಕ್ಟರ್ ನಿರ್ಮಾಣದಲ್ಲಿ ಆತಿ ದೊಡ್ಡದಾದ-'ಇಂಟರ್ನೇಶನಲ್ ಹಾರ್ವೆಸ್ಟ್ ಕಂಪೆನೀ' ಕಾರ್ಖಾನೆಯನ್ನು ಅ ಸಕ್ತಿಯಿಂದ ಅವಲೋಕಿಸಿದರು. ಅಲ್ಲಿ ಪಂಗ್ತಿವಾರಾಗಿ ಜಾರುತ್ತಿದ್ದ ಟ್ರೇಕ್ಟರುಗಳ ದೃಶ್ಯವನ್ನು ಭಾವಪೂರ್ಣವಾಗಿ ನೋಡುತ್ತಾ ನಿಂತಿದ್ದ ನೆಹರೂಗಳನ್ನು ಕಾಣುವಾಗ ಆವರ ಮನಸ್ಸಿನಲ್ಲಿ; ಸಹಸ್ರಾರು ಟ್ರೇಕ್ಟರ್‌ಗಳು ಭಾರತದ ಬಂಜರು ಭೂಮಿಯನ್ನು ಹಸನುಗೊಳಿಸುತ್ತಿರುವ ಚಿತ್ರಮೂಡಿರಬೇಕೆಂಬುದು ಗೋಚರವಾಗುತ್ತಿತ್ತು. 'ವಾಯುಪುರಿ'ಎಂಬ ಹೆಸರಾಂತಿರುವ ಚಿಕಾಗೋ ನಗರವು ನೆಹರೂ ಸ್ವಾಗತಕ್ಕಾಗಿ ನಾಗರಿಕ ಸಮಿತಿಯೊಂದನ್ನು ರಚಿಸಿಕೊಂಡಿದ್ದಿತು. ಈ ಸಮಿತಿಯವರು ರೂ. 30 ಬೆಲೆಯ ಟಿಕೇಟಿಟ್ಟು ಚಿಕಾಗೋ ಕ್ಲಬ್ಬಿನಲ್ಲಿ ಔತಣಕೂಟವೊಂದನ್ನು ಏರ್ಪಡಿಸಿದ್ದರು. 10ಸಾವಿರ ಜನಕ್ಕೂ ಮಿಕ್ಕಿ ಟಿಕೇಟನ್ನು ಖರೀದಿಯಾದ ಬೇಡಿಕೆಯಿದ್ದರೂ ಕ್ಲಬ್ಬಿನ ಸ್ಥಳಾಭಾವದ ದೆಸೆಯಿಂದ, 1200 ಟಿಕೇಳುಗಳನ್ನಷ್ಟೇ ಮಾರಬೇಕಾಯಿತು. ಈ ಔತಣಕೂಟವನ್ನು ಪ್ರಸಿದ್ಧ ಕೇಸಿನೋ ಕ್ಲಬ್ಬಿನಲ್ಲಿ ಜರಗಿಸುವ ಯೋಚನೆ ಪ್ರಥಮತಃ ಇದ್ದಿತು. ಆ ಮೇಲೆ ಮತ್ತೊಂದು ಪ್ರಸಿದ್ಧ ಕ್ಲಬ್ 'ಟೂನೆರ್ಸ್ ಕ್ಲಬ್'ನಲ್ಲಿ ನಡೆಯುವ ಸೂಚನೆ ಮುಂದೆ ಬಂದಿತ್ತು. ಆದರೆ ಇವೆರಡು ಕ್ಲಬ್ಬುಗಳ ಹೆಸರುಗಳ ಮೇಲಿಂದ ಭಾರತೀಯರೇನು ಭಾವಿಸಿಕೊಳ್ಳುವರೋ ಎಂದು ಶಂಕಿಸಿ, ಎರಡನ್ನೂ ಬಿಟ್ಟು ಚಿಕಾಗೋ ಕ್ಲಬ್ಬನ್ನು ಆರಿಸಿಕೊಂಡಿದ್ದರು. ಹಿಂದೀಯರ ಮನಸ್ಸನ್ನು ನೋಯಿಸಬಾರದೆಂದು ಅಮೆರಿಕಾನರೆಷ್ಟು ಮುಂಜಾಗ್ರತೆ ವಹಿಸಿದ್ದಾರೆಂಬುದಕ್ಕೆ ಇದೊಂದೇ ನಿದರ್ಶನ ಸಾಕು. ತನ್ನ ಅಮೆರಿಕಾ ಸಂಚಾರದಲ್ಲಿ ಪ್ರಥಮ ಬಾರಿ, ಹಾಗೂ ತನ್ನ ನಿತ್ಯ ಜೀವನದಲ್ಲೇ ಅಪರೂಪವಾಗಿ ಪಂಡಿತ ನೆಹರೂಗಳು ಚಿಕಾಗೋ ಕ್ಲಬ್ಬಿನ ಭಾಷಣದಲ್ಲಿ ರಶ್ಯನ್ ಸದ್ಧತಿಯನ್ನು ಟೀಕಿಸಿದ್ದರು. "ಪ್ರಪ್ರಥಮ ಭವಿಷ್ಯದಲ್ಲೇ ಇನ್ನೊಂದು ಯುದ್ಧವಾಗಬಹುದೆಂದು ನಾನು ನೆನಸುವುದಿಲ್ಲ. ಶುದ್ಧ ಚಿಂತನೆ ಮತ್ತು ಜಾಗ್ರತ ವರ್ತನೆಗಳಿಂದಲೇ ಇನ್ನೊಂದು ಯುದ್ಧವನ್ನು ತಪ್ಪಿಸಬೇಕಲ್ಲದೆ ಯುದ್ಧದ ಅನಗತ್ಯ ಭೀತಿಯನ್ನು ಕಟ್ಟಿಕೊಂಡಲ್ಲ. ಸದ್ಯದ 'ಥಂಡಾ ಯುದ್ಧ'ದಲ್ಲಿ ಒಂದಲ್ಲೊಂದು ಪಕ್ಷವನ್ನು ಸೇರಿಕೊಳ್ಳಲು ನಾವೊಪ್ಪಲಾರೆವು. ಶಾಂತಿ ಸ್ಥಾಪನೆಯನ್ನು ಆಧಂಸಿಯೇ ಭಾರತದ ವಿದೇಶ ಸಂಬಂಧ ಧೋರಣೆಯಿದೆ. ನನ್ನ ರಾಷ್ಟ್ರವು ತಾನು ಇಚ್ಛಿಸದ ಕಡೆಗೆ ಎಂದಿಗೂ ದೂಡಲ್ಪಡುವಂತಿಲ್ಲ ಮಿತಿ ಮೀರಿದ ಕೇಂದ್ರೀಕರಣ ಪದ್ಧತಿಯು ಖಂಡನೀಯವೆಂದೆ. ಹೂರ್ಣ ಸ್ವೈನ್ಯೀಕರಣದ ಪರಿಣಾಮ ಕೊಡುವಷ್ಟು ಈ ದುರ್ವಿಧಾನವು ಪರಮಾವಧಿಗೆ ಮುಟ್ಟಿರುವ ನೆಲೆಯೆಂದರೆ ರಶ್ಯ–ಸೋವಿಯೆಟ್‌ನಲ್ಲಿ ವ್ಯಕ್ತಿ ಸ್ವಾತಂತ್ರ್ಯವು ಅಸ್ತಿತ್ವದಲ್ಲೇ ಇಲ್ಲ. ಯಾವ ಪ್ರಯೋಜನಕ್ಕಾಗಿಯಾದರೂ ನಾನು ನನ್ನ ವ್ಯಕ್ತಿ ಸ್ವಾತಂತ್ರ್ಯವನ್ನು ಬಿಟ್ಟು ಕೊಡಲಾರೆ". ಎಂದರು. ತಾ. 27ರಲ್ಲಿ ಚಿಕಾಗೋ ವ್ಯಾಪಾರೀ ಸಂಘ ಮತ್ತು ವಿದೇಶ ಸಂಬಂಧಗಳ ಚಿಕಾಗೋ ಕೌನ್ಸಿಲಿಗೆ ಭಾಷಣವಿಯಿತ್ತಾ ಪಂಡಿತ ನೆಹರೂಗಳು, "ಲೋಕೈಕ ಸರಕಾರ ರಚನೆ ಹೊಂದದೇಕು. ಹಾಗಾಗದೆ ಹೋದರೆ ಲೋಕಕ್ಕೆ ಅನಾಹುತವೇ ಗತಿ" ಎಂದರು. ಪರಿಣಾಮದ ಬದಲಿಗೆ ಸಾಧನೆಗಳ ಶುದ್ಧತೆಯ ಕಡೆಗೇನೇ. ಲಕ್ಷ್ಯವಿರಬೇಕೆಂಬ ಗಾಂಧೀಜೀ ಸೂತ್ರಗಳನ್ನು ಅಲ್ಲಿಯೂ ಒತ್ತಿ ಹೇಳಿದರು. "ಪ್ರತಿಯೊಂದಿ ಎನನ್ನೂ ಕೊಡದೆ ಅಮೆರಿಕದಿಂದ ಸಹಾಯ ಪಡೆಯುವ ಬಯಕೆ ನನ್ನದಲ್ಲ-ಅದು ಭಾರತ ಕ್ಕೊಳ್ಳೆಯದಲ್ಲ. ರಾಷ್ಟ್ರಗಳು ಪರಸ್ಪರ ಸಹಕರಿಸಿಕೊಳ್ಳಬೇಕೆಂಬುದೇ ನನ್ನಿಚ್ಛೆ. ಇಂದು ಪ್ರತಿಯೊಂದು ಸಂಗತಿಯೂ ಲೋಕವ್ಯಾಪ್ತನೆಯ ಗತಿಯಲ್ಲಿದೆ. ಇಂತಹ ಲೋಕೈಕತೆಯು ಒಂದಲ್ಲೊಂದು ದಿನ ಲೋಕೈಕ ಸರಕಾರ ನಿರ್ಮಾಣದಲ್ಲಿ ಪರಿಣಮಿಸಲು ಬದ್ಧವಿದೆ" ಎಂದರು ಚಿಕಾಗೋದಿಂದ 45 ಮೈಲು ದೂರವಿರುವ ವಿಶಿಷ್ಟ ರೀತಿಯ ಬೇಸಾಯ ಕ್ಷೇತ್ರ, ಫೈಲ್ಡ್ ಮ್ಯೂಸಿಯಂ ಕ್ಷೇತ್ರಗಳಿಗೆ ಕಾರಿನಲ್ಲಿ ಹೋಗಿ ಸರಿ ಕ್ಷೆಸಿ ಬಂದರು. ಆ ಮೇಲೆ ಚಿಕಾಗೋ ಯನಿವರ್ಸಿಟಿ ವಿದ್ಯಾರ್ಥಿಗಳಿಗೆ ಭಾಷಣ ವಿತ್ತು 'ಭಾರತ ರಾಜಕೀಯದ ಗಾಂಧೀಯುಗ'ವನ್ನು ವಿವರಿಸಿದರು. ನಂತರ ಅಂತರ್‌ರಾಷ್ಟ್ರೀಯ ಭವನದಲ್ಲಿ ಹಿಂದೀ ವಿದ್ಯಾರ್ಥಿಗಳ ಮಾನಪತ್ರ ಸ್ವೀಕರಿಸಿ, ಅವರಿಗೆ ಉಪದೇಶ ಕೊಟ್ಟರು.ಅಲ್ಲಿಂದ 'ಹೋಟ್ ಸ್ಪ್ರಿಂಗ್ಸ್'ಗೆ ಹೋಗಿ ಅಲ್ಲಿಯ ಪ್ರಮುಖ ಸರಕಾರೀ ಅಧಿಕಾರಿಗಳು ಹಾಗೂ ಉದ್ದಿಮೇದಾರರ ಸಭೆಯಲ್ಲಿ, ಭಾರತದ ಆರ್ಥಿಕಾಭಿವೃದ್ಧಿ ಯೋಜನೆಗೆ ಅಮೆರಿಕ ಸಹಾಯವನ್ನು ಕೇಳಿಕೊಂಡರು. ಹದಿನೈದು ದಿನಗಳ ಅವಿಶ್ರಾಂತ ಕಾರ್ಯಕ್ರಮಗಳ ದಣಿವಿನ ದೆಸೆಯಿಂದ ತನಗೆ ಅತ್ಯಗತ್ಯವಿದ್ದ ವಿಶ್ರಾಂತಿಗಾಗಿ ವಾರಾಂತ್ಯಕ್ಕೆ ಪರ್ವತವಲಯ "ವೈಟ್ ಸಲ್ಫರ್ ಸ್ಪ್ರಿಂಗ್"ಗೆ ಹೋಗಿದ್ದರು. ಅಲ್ಲಿಂದ ಅಮೆರಿಕದ ಇತರ ನಗರಗಳ ಸಂಚಾರ ಕೈಕೊಂಡಿದ್ದಾರೆ.

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 444/1949.

M. K. ಗೋಪಾಲಕೃಷ್ಣರಾವ್—ಪಾದಿ.

ಮತ್ತು

ಇಬ್ರಾಯಿಂ ಕುಂಞಿಬ್ಯಾರಿಕೂಡಾ—ಪ್ರತಿವಾದಿರು.

ಯಿವರೊಳಗೆ

D2. ಅಬ್ದುಲ್ಲ ಬ್ಯಾರಿ ಜೈನುದ್ದೀನ್ ಹಾಜಾಬ್ರ ಮಗ, ಕಾಸರಗೋಡು ಕ್ವಜಾ ಗ್ರಾಮದ ತುರ್ತಿಯಲ್ಲಿರುವವರು.

ಪಾದಿಯು ದಾಖ್ಲು ಮಾಡಿದ ಮೇಲ್ಕಂಡ ರಿಜಿಂಡರ್ ವ್ಯಾಜ್ಯವು ತಾರೀಕು 10-11-49ಕ್ಕೆ ಯಿಟ್ಟುಕೊಳ್ಳುತ್ತದೆ. ಆ ದಿನ ಸದ್ರಿ ಕೋರ್ಟ್ ಮುಂದೆ ಹಾಜ್ರಾಗುವರೆ ತಪ್ಪಿದ್ದಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂತ ಈ ಮೂಲಕ ತಿಳಿಸೋಣಾಗಿಯಿದೆ.

Kasargod 28-10-49 } B. S. Kakkilaya, Advocate for Pltff.

ಗೋಡ್ಸೆಗೆ ಏನು?

—ಮಶ್ರುವಾಲಾರ ಅಭಿಪ್ರಾಯ—

ಮಹಾತ್ಮಾಜೀಯ ಕೊಲೆಯ ಆಪಾದಿತರ ಪರವಾದ ಕೋರ್ಟುದ್ವಾರಾ ಪ್ರಯತ್ನಗಳೆಲ್ಲವೂ ನಿರರ್ಥಕವಾಗಿ, ಗೋಡ್ಸೆ ಮತ್ತು ಆಪ್ಟೆ ಇವರಿಬ್ಬರ ಪಾತೀ ಶಿಕ್ಷೆಯು ಈಗಕೊನೆಯ ಕಾಯಂ ತೀರ್ಮಾನವಾಗಿ ಹೊಂದಿದೆ. ಈ ನಡುವೆ ಕ್ಷಮಾಯಾಚನೆಯ ಸಂದರ್ಭವೊದಗಿಸಿದ್ದರೂ ನಾಥೂರಾಮ ಗೋಡ್ಸೆಯು ಪ್ರಾಣದಾನ ಯಾಚಿಸದೆ ತನ್ನನ್ನು ಕೂಡಲೇ ಗಲ್ಲಿಗೇರಿಸುವುದೇ ತನಗೀಗ ತೋರಿಸಬೇಕಾದ ರಿಯಾಯತಿ ಎಂದು ಬರೆದುಕೊಂಡಿದ್ದಾನೆಂದು ಪ್ರಕಟವಾಗಿದೆ. ಆಪ್ಟೆ ಮಾತ್ರ ಪ್ರಾಣದಾನ ಯಾಚಿಸಿದ್ದಾನೆ. ಗೋಡ್ಸೆಯ ಮುದಿ ತಂದೆತಾಯಿಗಳು ಮಗನ ಪ್ರಾಣದಾನ ಬೇಡಿದ್ದಾರೆ. ಇನ್ನೀ ಕುರಿತು ಯಾವುದೇ ರೀತಿಯ ರಿಯಾಯತಿ ಮಾಡುವ ವಿಶೇಷಾಧಿಕಾರವಿರುವವರು ಗವರ್ನರ್ ಜನರಲರೊಬ್ಬರೇ. ಅವರೇನು ಮಾಡಬಹುದು? ಮಾಡಬೇಕು? ಎಂಬ ಕುರಿತು ವಿವಿಧ ರೀತಿಯ ಅಭಿಪ್ರಾಯಗಳು ಜನತೆಯ ತಲೆಯಲ್ಲೀಗ ಸುಳಿದಾಡುತ್ತಿವೆ. ಗಾಂಧಿಜೀಯ ಸಮೀಪದ ಶಿಷ್ಯರಲ್ಲೊಬ್ಬರಿದ್ದು, ಗಾಂಧೀ ತತ್ವಗಳ ಒರೆಗಲ್ಲಲ್ಲಿ ಕಾಂಗ್ರೆಸ್ ಸರಕಾರಗಳ ಮತ್ತು ನಾಯಕರ ವರ್ತನೆಗಳನ್ನು ಕೂಡಾ ತಿಕ್ಕಿತಿಕ್ಕಿ ಪರೀಕ್ಷಿಸಿ, ಅವುಗಳ ಟೊಳ್ಳನ್ನು ಬಯಲಿಗೆಳೆದು ಪ್ರಸಿದ್ಧರಾಗಿರುವ, ಮತ್ತು ಗಾಂಧಿಜೀಯ ನಂತರ ಅವರ "ಹರಿಜನ" ಪತ್ರಿಕೆಯ ಸಂಪಾದಕರಾಗಿರುವ ಶ್ರೀ ಕೆ. ಜಿ. ಮಶ್ರುವಾಲಾರು ಇದೇ ಒಕ್ಟೋಬರ್ ತಾ. 30ರ 'ಹರಿಜನ' ಸಂಚಿಕೆಯಲ್ಲಿ "ಗಾಂಧಿಜೀಯ ಕೊಲೆಗಾರ" ಎಂಬ ತಿರೋನಾಮೆಯಡಿಯಲ್ಲಿ ಬರೆದಿರುವ ಅಭಿಪ್ರಾಯಗಳು ತೂಕವುಳ್ಳವುಗಳು. ಅದ್ದರಿಂದ ಅದರ ಸಾರವನ್ನು ಇಲ್ಲಿ ಕೊಡಲಾಗಿದೆ:

"ಕೇವಲ ತತ್ವವನ್ನಾಧರಿಸುವುದಾದರೆ, ಮಹಾತ್ಮಾ ಗಾಂಧಿಯವರ ಕೊಲೆಗಾರನನ್ನು ಪಾತಕಿಗೆ ಕೊಡುವುದರಿಂದ ಮಹಾತ್ಮರ ಚರಿತ್ರೆ ಮತ್ತು ಅವರ ರಾಷ್ಟ್ರದ ಘನತೆಯಿಂದ ಖಚಿತವಾಗಿ ಏನನ್ನೋ ಅಪಹರಿಸಿದಂತಾಗುವುದೆಂದು ನನಗೆ ಹೊಳೆಯುತ್ತಿದೆ. ತನ್ನ ಶತ್ರುಂತ ಪ್ರೀತಿಯ ಹಾಗೂ ಅತಿ ಗೌರವ ಪಾತ್ರ ನಾಯಕನ ಕೊಲೆ ಮಾಡಿದವನಿಗೆ, ಅವನು ತಾನಾಗಿ ಆಪೇಕ್ಷಿಸದಿರುವಾಗಲೂ ಪ್ರಾಣದಾನ ಮಾಡುವುದು ಪರಿಪೂರ್ಣ ಕೀರ್ತಿಯ ವರ್ತನೆಯಾಗುವುದು. ಅದರೆ ಈ ವರ್ತನೆಯೆಂಬುದು ಕೇವಲ ಗಾಂಧಿಜೀಯಿಂದ ತಿರಬೇತಿ ಪಡೆದ ಸರಕಾರಕ್ಕೆಮಾತ್ರವೇ ಕನವರಿಸಲು ಸಾಧ್ಯವಿರುವ ಕೃತ್ಯ. ಆದರೀ ವರ್ತನೆಗೆ ಮಿಕ್ಕವರು ಅನೇಕ ಮತ್ತು ಆಡಳಿತೆಯ ಅಸಾಮರ್ಥ್ಯವೆಂಬ ಆರ್ಥ ಕಟ್ಟುವುದು ಸಂಭವನೀಯ. "ವ್ಯವಹಾರಜ್ಞರು"-ರಾಜಕೀಯ ವಾದಿಗಳು ವ್ಯವಹಾರಜ್ಞರಾಗಿರದಿದ್ದರೆ ಮತ್ತು ವರು ಕೂನ್ಯರೇ ಸರಿ-ತೀರಾಸಾಮ್ಯೆಷ್ಟಿಸ್ಯಕ್ಕವನ್ನಾದರೂ ದೂರದೃಷ್ಟಿಯಿಂದ ಅಲೋಚಿಸುವ ಅಭ್ಯಾಸವುಳ್ಳವರಿದ್ದಾರೆ. ಅವರೇನೂ ಸುಲಭದಲ್ಲಿ ತಮ್ಮ ಉಪಕರಣ ವನ್ನು ಕವಚಿಹಾಕಿ, ಅಸಾಮಾನ್ಯ ವೇಲ್ಚಟ್ಟಿದ ನೈತಿಕ ತತ್ವವನ್ನವಲಂಬಿಸಿ ವರ್ತಿಸಲು– ಅದರಲ್ಲೂ ಆಂತಹ ವರ್ತನೆಯು ಅಪಾಯದಿಂದ ತುಂಬಿರುವಾಗ ಹಾಗೆ ಮಾಡಲು– ಎದೆಗೊಳ್ಳಲಾರರು. ಅವರೊಂದು ನೈತಿಕ ತತ್ವಕ್ಕೆ ನೈಗುಟ್ಟ ಬಲ್ಲರು; ಅದರದಕ್ಕೆ ಬಲಿಬಿದ್ದಂತಾಗುವ ದೆಂದು ತಾವು ನೆನಸುವ ಕಾರ್ಯವನ್ನು ಮಾತ್ರ ಮಾಡಲಾರರು. ಸದ್ಯದ ಶಿಕ್ಷೆಗೆ ರಿಯಾಯತಿ ಮಾಡುವುದರಲ್ಲಿರುವ ತರ್ಕಬದ್ಧ ಫಲಿತಾಂಶವೆಂದರೆ ಮರಣದಂಡನೆಯನ್ನೇ ಸಾರ್ವತ್ರಿಕವಾಗಿ ರದ್ದು ಪಡಿಸಿಕೊಳ್ಳುವುದು. ಹಾಗೆ ಮಾಡದಿದ್ದರೆ, ಭಾರತದಲ್ಲಿ ಮರಣ ಶಿಕ್ಷೆಗೊಳಗಾಗದ ಕೊಲೆಯೆಂದರೆ ಅಹಿಂಸಾವಾದಿ ಮಹಾತ್ಮನದು ಮಾತ್ರವೆಂಬ ಅರ್ಥವಾಗಬಹುದು. ಇದು, ಮ.ಹಾತ್ಮರಿರುವ ಗಾಂಧಿಜೀ ಮಾತ್ರ ಅಪರಾಧ ಮಾಡುವ ಎದೆಗಾರಿಕೆ ವಹಿಸಿಬಹುದೆಂಬಂತಹ ಅಪಾಯಕಾರಿ ಪರಿಸ್ಥಿತಿಯೇ ಸರಿ. ಇತರ ಕೊಲೆಗಾರರು ಪಾತಕಿಗಳೆನಿಸುವುದಕ್ಕೆ ತನ್ನ ಆಕ್ಷೇಪವಿಲ್ಲ– ಆದರೆ ಸ್ವತಃ ತನ್ನ ಅಥವಾ ಅಹಿಂಸಾವಾದಿ ಮಹಾತ್ಮನಕೊಲೆಗಾರರು ಮಾತ್ರ ಹಾಗಾಗಕೂಡದು-ಎಂದು ಅವರು ಹೇಳಬಲ್ಲರೆಂದಾಯಿತು. ಆದರೆ ಭಾರತ ಸರಕಾರವು ತಾನು "ಮಹಾತ್ಮಾ-ಸರಕಾರ"ವೆಂದು ವಾದಿಸುವಂತಹದಲ್ಲ. ಹೀಗಾಗಿ, ಗೋಡ್ಸೆಯ ಸಂಬಂಧದಲ್ಲಿ ಭಾರತ ಸರಕಾರವುರಾಜಕೀಯ ನೋಟ ಹಾಗೂದೂರದೃಷ್ಟಿಯನ್ನೇ ಅವಲಂಬಿಸಿ, ತನ್ನ ವಿಶೇಷಾಧಿಕಾರವನ್ನು ಉಪಯೋಗಿಸಲು ನಿರಾಕರಿಸುತ್ತವಾದರೆ, ಅದು ತಪ್ಪೆಂದು ಹೇಳುವುದುಕಷ್ಟ. ಆ ಅಪರಾಧವು ನಡೆದ ಹಾಗೂ ಸಾಗಿದ ರೀತಿ ನೀತಿಗಳಂತೂ, ದುರ್ದೈವವಶಾತ್ ಕೊಲೆಗಾರನ ಕುರಿತು ಸಾಮಾನ್ಯ ಲೌಕಿಕ ಕವಾದಿ ಮನುಷ್ಯನಿಗೆ ಸಹಾನುಭೂತಿ ಹುಟ್ಟುವಂತೆ ಮಾಡುವ ಸಂಗತಿಯಾವುದೂ ಇರದಷ್ಟು ಕ್ರೂರವಾದುವು ಮತ್ತು ಹೃದಯವಿಲ್ಲದವುಗಳಾಗಿದ್ದುವು.

ಆಪ್ಟೆಯನ್ನು ಗೋಡ್ಸೆಯ ಸಮಾನ ಮಟ್ಟದಲ್ಲಿ ಇಡಲಾಗದೆಂದು ನನಗನ್ನಿಸುತ್ತದೆ. ಗೋಡ್ಸೆಯನ್ನು ಧೀರ ನಾಯಕನ ಮತ್ತು ಆತ್ಮ ಬಲಿದಾನಿಯು ಸ್ಥಾನದಲ್ಲಿಡುವ ಒಂದು ವರ್ಗ ಇನ್ನೂ ಇದೆ. ಆದೊಂದು ಯದ್ವಾತದ್ವಾ ಮನೋವೃತ್ತಿ-ಆದರದು ಇದ್ದುಕೊಂಡಿದೆ. ಗೋಡ್ಸೆಯ ಪ್ರಾಮುಖ್ಯತೆಯನ್ನೇ ಆಪ್ಟೆಗೂ ಕೊಡುವದು ಸಂಯೆಂದು ತೋರುವುದಿಲ್ಲ. ಗಾಂಧಿಜೀಯ ಹೆಸರಿರುವಷ್ಟುಕಾಲ ಬಾಳಬಲ್ಲ ಒಂದು ಹೆಸರನ್ನು ಶಿಕ್ಷಿಸಲು ಮತ್ತು ರಾವಣನಂತೆಯೇ ಗೋಡ್ಸೆಯೂ, ಸಂಪಾದಿಸಿದ್ದಾನೆ. ಆಪ್ಟೆಯ ಹೆಸರನ್ನೂ ಅದರೊಂದಿಗೆ ಜತೆಗೊಡಿಸುವ ಅಗತ್ಯವಲ್ಲ. ಅವನು ತನ್ನ ಉಳಿದಿರುವ ಆಯುಷ್ಯದ ಸಹಜಾಂತ್ಯವನ್ನು ಬಾಳಿ ಮುಗಿಸಲಿ; ಅವನ ಗುಣಸಡತೆ ಮತ್ತು ಅಭಿವ್ಯಾಯಗಳನ್ನು ಮಾರ್ಪಡಿಸುವಂತೆ, ದೇವರ ಮೇಲೆ ನಂಬಿಕೆಯುಳ್ಳವರು ಪ್ರಾರ್ಥಿಸುವಂತಾಗಲಿ!

THE
Canara Banking Corporation Ltd.
(Incorporated in India)
Estd: 1906
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ಉಡುಪಿ, ಗುರುವಾರ, ೩-೧೧-'೪೮

ಆರ್. ಯಸ್. ಯಸ್.

ಕಳದ ಸೋಮವಾರ ಮಂಗಳೂರನ್ನು ಸಂದರ್ಶಿಸಿದ, ಆರ್. ಯಸ್. ಯಸ್. ಸರಸಂಘಚಾಲಕ ಶ್ರೀ. ಗೋಲ್ವಲ್ಕರರ ದೆಸೆಯಿಂದ ಮಂಗಳೂರು ಮತ್ತು ಇಡೀ ದ. ಕ. ಜಿಲ್ಲೆಯಲ್ಲಿ ಎದ್ದ ಆದೊಂದು ರೀತಿಯ ಉದ್ವೇಗವು ಗಣಿಸುವಂತಹದಿದೆ. 'ಭಾರತ ಭಾಗ್ಯವಿಧಾತೆ' 'ಏಕಮಾತ್ರ ಪ್ರ ಉದ್ಧಾರಕ' 'ಸೂರ್ಯ' 'ಪರಮೇಶ್ವರ' ಇತ್ಯಾದಿ ಇತ್ಯಾದಿ ಆಗಿರುವ ಪೂಜನೀಯ ಗುರುಜೀಯ ಭೇಟಿಯು ಪ್ರತ್ಯಕ್ಷ ದೇವಸಾನ್ನಿಧ್ಯಕ್ಕಿಂತ ಕಡಿಮೆಯದಲ್ಲವೆಂಬ ಆಸಕ್ತಿಯನ್ನು ನಿರ್ಮಿಸಲು ಜಿಲ್ಲೆಯ ಮೂಲೆಮೂಲೆಯಲ್ಲೂ ಸಾಧ್ಯವಿದ್ದ ಸರ್ವ ಪ್ರಯತ್ನಗಳನ್ನೂ ಮಾಡಿದ್ದ ಆರ್. ಯಸ್. ಯಸ್. ನವರ ಕಾರ್ಯಕ್ರಮ- ಆಯ ಪ್ರಗತಿಶೀಲರಅಸಮ್ಮತಿಯನ್ನೂ ರ ಹುಸಂಖ್ಯಾಕ ಜನರ ತಾಟಸ್ಥ್ಯವನ್ನೂ ಕೆರಳಿಸಿ ಪ್ರಬಲಾತ್ಪೇಷವಾಗಿ ಮಾರ್ಪಡಿಸಿದ ರೀತಿ- ಶ್ರೀ. ಗೋಲ್ವಲ್ಕರರ ಆಗಮನ, ಭಾಷಣದ ವೇಳೆ ಮಂಗಳೂರಲ್ಲಿ ನಡೆದ ಕೆಲವು ದುರ್ಘಟನೆಗಳು- ಇವೆಲ್ಲವುಗಳ ಸವಿವರ ವಿಮರ್ಶೆ ಇಲ್ಲಿ ಅನಗತ್ಯ. ಸಾರ್ವಜನಿಕರಿಗೆ ಸಂಬಂಧಿಸಿದ ಒಂದು ವಿಷಯ ಅಥವಾ ವ್ಯಕ್ತಿಯ ಕಡೆಗೆ, ಸ್ವಂತ ಅಭಿಮಾನಾನುಸಾರವಾಗಿ ಗೌರವ ಅಥವಾ ತಿರಸ್ಕಾರ ಪ್ರದರ್ಶಿಸುವ ಹಕ್ಕು ಪ್ರಜಾ ಪ್ರಭುತ್ವದಲ್ಲಿ ಪ್ರತಿಯೊಬ್ಬನಿಗೂ ಇರುವಂತಹದೇ. ಆದರೆ ಅದಕ್ಕೊಂದು ಮಿತಿ ಯಿರಬೇಕು. ವಾತಾವರಣ ಬಿಸಿಯೇರಿರುವಾಗ, ಅನುಕೂಲ ಹಾಗೂ ಪ್ರತಿಕೂಲ ಪ್ರದರ್ಶನಗಳು ನಿಯಂತ್ರಣ ತಪ್ಪಿಸಿಗಡಿ ಮೀರಿ ಹೋದರೆ, ಪ್ರಮಾದಗಳಾಗುವುದು ಅನಿವಾರ್ಯ; ಆಗಬೇಕಾದವುಗಳಾ ಜನತೆಯಲ್ಲಿ ಉಗಬಾರದವುಗಳೂ ನಡೆದು ಹೋಗುವವು. ಆ ನಂತರದ ಕರ್ತವ್ಯ ವೆಂದರೆ ಆವೆಲ್ಲವುಗಳಿಂದ ಕಲಿಯಬೇಕಾದುದನ್ನು ಕಲಿತುಕೊಳ್ಳುವುದೊಂದೇ. ತಾ. ೩೦ರ ಮಂಗಳೂರು ಘಟನೆಗಳಿಂದಲೂ, ಜನತೆಗೆ ಪಾಠವಾಗಬಲ್ಲ ಅಂಶಗಳನ್ನಷ್ಟೇ ಹೆಕ್ಕಿಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಆ ದಿನದ ಆರ್. ಯಸ್. ಯಸ್. ಸಮಾರಂಭ ಮತ್ತು ದರ ವಿರುದ್ಧ ಪ್ರದರ್ಶನಗಳು ದ. ಕ. ಜಿಲ್ಲೆಯ ಜನತಾ ಭಾವನೆಯ ನಿಜ್ಜ ರೂಪದ, ಆದರೆ ಸರಿಯಾದ ಪ್ರತಿಬಿಂಬಗಳೆನ್ನಬಹುದು. ಮದ್ರಾಸ್ ಪ್ರಾಂತ್ಯದಲ್ಲೇ ಆರ್. ಯಸ್. ಯಸ್. ನ ನ್ರನುಖಕೇಂದ್ರವಾಗಿರುವ ಜಿಲ್ಲೆಯೆಂದರೆ ಪ್ರಾಯಶಃ ದಕ್ಷಿಣ ಕನ್ನಡ. ತಮ್ಮ ಗುರುಜೀಯನ್ನು ಸ್ವಾಗತಿಸಿಕೊಳ್ಳುವುದಷ್ಟೇ ಅಲ್ಲ- ಗುರು ಜೀಗೊಂದು ಸ್ಥಾನ ಸಂಪಾದಿಸಿಕೊಡಲು ಮತ ಸಂಗ್ರಹಿಸುತ್ತಿರುವರೋ ಎಂಬಷ್ಟು ಉಲವಲವಿಕೆಯ ಪರಮಾವಧಿ ಸಾಹಸಗಳನ್ನೆಜಲ್ಲೆಯ ಸಂದುಮೂಲೆಗಳಲ್ಲೂ ಆರ್. ಯಸ್. ಯಸ್. ನವರು ನಡೆಸಿದ್ದರೂ ಮಂಗಳೂರಿನಲ್ಲಿ ಶ್ರೀ ಗೋಲ್ವಲ್ಕರರಿಗೆ ದೊರೆತ ಸ್ವಾಗತವು ಹೆಚ್ಚಿನವರು ನಿರೀಕ್ಷಿಸಿದಷ್ಟು ದೊಡ್ಡದಿರಲಿಲ್ಲ. ಈ ರೀತಿ ಸ್ಥಳೀಯ ಆರ್. ಯಸ್. ಯಸ್. ನ ಆಕರವು ಒಂದು ಬಾರಿ ಪೂರ್ಣ ರೂಪದಿಂದ ಪ್ರದರ್ಶನಕ್ಕೆ ಬಿದ್ದು ಅಂದಾಜು ದೊರೆತಿದೆ; ಆದರೆ ಶಕ್ತಿ ಪರಿಮಾಣವು ಪ್ರಗತಿಶೀಲರನ್ನು ಚಿಂತೆಗೀಡು ಮಾಡುವಂತಹ ಜೀನೂ ಇಲ್ಲವೆಂಬುದು ಖಚಿತವಾಗಿದೆ. ಜಿಲ್ಲೆಯಲ್ಲಿ ಆದಕ್ಕಿರುವ ವಿರೋಧ ಭಾವ ವೆಂತಹದೆಂಬುದೂ ಸಾಕಷ್ಟು ಸ್ಪಷ್ಟವಾಗಿ ಪ್ರದರ್ಶಿಸಲ್ಪಟ್ಟಿದೆ. ಆರ್. ಯ. ಸ್. ಯಸ್. ನವರ ಪಾಲಿಗೆ ಮಿಶ್ರಫಲಿದ್ದ ಸಂದರ್ಭವದು; ಆಗ ಮತ್ತು ಅಲ್ಲಿಯೇ ಆದಕ್ಕಿರುವ ಸ್ಪಬಲ ವಿರೋಧದ ಪ್ರತಿನಿಧಿ ರೂಪ ಜಯಶೀಲವಾಗಿ ಮುಂದೆ ಬಂತೆಂಬುದು ಗಣನೀಯ ವಿಷಯ. ಆರ್. ಯಸ್. ಯಸ್. ಚಟುವಟಿಕೆಯದ್ದಂತೆಯೇ ಆದ ಕೈ ಎರುದ್ಧವಾಗಿ ಪ್ರಬಲ ಜನಮತವಿದೆ ಎಂಬುದು ಗೊತ್ತಿದ್ದದ್ದೇ; ಆದರೆ ಈ ವಿರುದ್ಧ ಜನಮತ ಕೂಡಾ ಸಾಮೂಹಿಕ ಚಟುವಟಿಕೆಗೆ ರೂಪದಿಂದ ಇಲ್ಲಿ ಕಂಡು ಬಂದದು ಮೊನ್ನೆ ಮೊದಲ ಬಾರಿ. ತಮ್ಮ ಆಭಿಪ್ರಾಯವನ್ನು ಆಚರಣೆಯಲ್ಲಿಯೂ ತೋರಿಸುವ್ರದು ಆನಿವಾರ್ಯವೆಂಬ ಜಾಗ್ರತಿಯು ಜಾತೀಯತಾ ವಿರೋಧಿಗಳಲ್ಲಿ ಮೂಡಿದುದು ನಿಜಕ್ಕೂ ಒಳ್ಳೆತನಾಯಿತು. ಆರ್. ಯಸ್. ಯಸ್. ಸಂಸ್ಥೆಯನ್ನು ಬಲಗೊಳಿಸಿ, ಅದಕ್ಕನುಕೂಲವಾದ ವಾತಾವರಣ ನಿರ್ಮಿಸುವದೇ ಶ್ರೀ. ಗೋಲ್ವಲ್ಕರರ ಸಂಚಾರೋದ್ದೇಶವೆನಾಗಿರಬೇಕು. ಆದರೆ ದಕ್ಷಿಣ ಕನ್ನಡದಲ್ಲಿ ಕಡ್ಡಿ ಮುರಿದ ಫಲ ಸಿಕ್ಕಿದೆ; ಆವರು ಇಲ್ಲಿಯಆರ್. ಯಸ್. ಯಸ್. ವಿರೋಧೀ ಶಕ್ತಿಗಳನ್ನು ಹುಂದುಂಬಿಸಿ ಹೋದಂತಾಗಿದೆ ಎಂಬುದು ಸ್ಪಷ್ಟ. ಆದ್ದರಿಂದ ಕಳದ ಸೋಮವಾರದ ಆರ್. ಯಸ್. ಯಸ್. ಸಮಾರಂಭವು ಸತ್ಪರಿಣಾಮಕಾರಿಯೆನ್ನುತ್ತೇನೆ.

ಆರ್. ಯಸ್. ಯಸ್. ನ ಸ್ಥಾನ ಮತ್ತು ಧೋರಣೆಯು ಕಡೆಗೆ ಸಾರ್ವಜನಿಕರ, ವಿಶೇಷವಾಗಿ ಸರಕಾರದ ಲಕ್ಷ್ಯವನ್ನೆಳೆಯಬೇಕಾದ ಸಂದರ್ಭ ವೀಗ ಬಂದಿದೆ. 'ಜಾತೀಯತಾ ಸಂಸ್ಥೆಗಳು ರಾಜಕಾರಣ ಭಾಗಿಗಳಾಗ ವುದು ನಿಷಿದ್ಧ' ವೆಂಬುದು ಜಾತ್ಯಾತೀತ ಭಾರತದ ಮೂಲ ಸೂತ್ರಗಳಲ್ಲೊಂದು. ರಾಜಕೀಯಕ್ಕೆಳೆಯದೆ ಕೇವಲ ಹಿಂದೂ ಸಂಸ್ಕೃತಿ ರಂಗದಲ್ಲಿ ಕೆಲಸ ಮಾಡುವೆಲಂಬ ಸಮಾಧಾನಕರ ಆಶ್ವಾಸನೆ ದೊರೆಯಿತೆನ್ನುತ್ತಾ ಇದೂ ಯಥಾರ್ಥತೆಯನ್ನು ಪರೀಕ್ಷಿಸುವ ಸಂದರ್ಭವನ್ನು ದೊರಕಿಸಿಕೊಳ್ಳುವದಕ್ಕಾಗಿಯೇ ಸರಕಾರವು ಆರ್. ಯಸ್. ಯಸ್. ಮೇಲಿನ ಬಹಿಷ್ಕಾರವನ್ನು ರದ್ದು ಮಾಡಿದ್ದಿರಬಹುದು ಅಂದಿನಿಂದೀವರೆಗೆ ಈ ಸಂಸ್ಥೆಯ ಧ್ಯೇಯ, ಧೋರಣೆ, ರೀತಿ ನೀತಿಗಳೆಲ್ಲವೂ ಸಾಕಷ್ಟು ಸ್ಪಷ್ಟವಾಗುತ್ತಾ ಬಂದಿನೆ; ಪರಿಸ್ಥಿತಿಯಾಗಿದೆ. ಇದು, ರಾಷ್ಟ್ರ ಮತ್ತು ರಾಜ್ಯ ಭಾರದ ಮೇಲೆ ಕಣ್ಣಿಟ್ಟಿರುವ- ಧರ್ಮವನ್ನಾಧರಿಸಿ ಎಲ್ಲಾ ರಂಗಗಳಿಗೂ ಕಾಲು ಚಾಚಬಲ್ಲ—ಒಂದು ವಿಲಕ್ಷಣ ಹಾಗೂ ಅಪಾಯಕರ ಪಕ್ಷ ಜೊತೆ, ಹಿಂದೂ ಸಮಾಜದ ಶುದ್ಧೀಕರಣ ಹಾಗೂ ಹಿಂದೂ ಸಂಸ್ಕೃತಿಯ ಉದ್ಧಾರ ಧ್ಯೇಯ ಕ್ಷೇತ್ರದ ಮಿತಿಯೊಳಗಿನದಲ್ಲವೆಂಬುದು ಖಚಿತವಾಗಿದೆ. ಜಾತ್ಯಾತೀತ ಭಾರತದ ಯಥಾರ್ಥ ಇರಸ್ತಿಕೆಗೆ ಇದು 1ನೇ ವೈರಿಯೆಂಬುದು ಆ ಮೂಲಕ ಸಿದ್ಧವಾಗಿದೆ. ಜನತಾರಾಜ್ಯ ಭಾರತವು ಜಾತ್ಯಾತೀತವಿರಬೇಕಾದರೆ- ನಮ್ಮ ಸರಕಾರವು ರಾಷ್ಟ್ರದ ಈ ಸ್ಥಾನಮಾನವನ್ನು ನಿಜಕ್ಕೂ ರಕ್ಷಿಸಿಕೊಳ್ಳುವಂತಿರಬೇಕಾದರೆ ಫಿರ್. ಯಸ್. ಯಸ್. ನಂತಹ ಜಾತೀಯತಾ ಸಂಸ್ಥೆಯನ್ನು ಇನ್ನೂ ಬೆಳೆಯಲು ಬಿಟ್ಟು ಅಂದ ನೋಡುವುದರಲ್ಲಿ ಅರ್ಥವಿಲ್ಲ. ಇಂದು ಕಂಡು ಬರುವ 'ಆರೆಸ್ಸೆಸ್ ಪ್ರದರ್ಶನಗಳೇ ಹಿಂದೂ ಸಂಸ್ಕೃತಿಯ ಚಿಹ್ನೆಗಳೆಂದಾದರೆ- ಇಂತಹ ಸಂಸ್ಥೆಯ ಕೈಯಿಂದಲೇ ಹಿಂದೂತ್ವದ ರಕ್ಷಣೆಯಾಗಬೇಕೆಂದಾದರೆ- ರಾಷ್ಟ್ರವನ್ನಷ್ಟೇ ಅಲ್ಲ; ಸ್ವತಃ ಹಿಂದೂ ಸಂಸ್ಕೃತಿ ಮತ್ತು ಹಿಂದುತ್ವವನ್ನು ಕೂಡಾ "ದೇವರೇ ರಕ್ಷಿಸಬೇಕು!". ಧಾರ್ಮಿಕ ದೃಷ್ಟಿಯಿಂದ ಹೀಗಿದ್ದರೆ ಆಧಿಕಾರದ ದೃಷ್ಟಿಯಿಂದಲೂ ಹೀಗೆಯೇ ಸರಿ. ಪ್ರಜಾಸತ್ತಾ ಜನತಾ ರಾಜ್ಯ ಭಾರತದಲ್ಲಿ ಹಿಂದುಗಳೇ ಅತ್ಯಧಿಕ ಸಂಖ್ಯಾಕರು— ಪ್ರತ್ಯೇಕ ಮತದಾನ ವದ್ಧತಿ ರದ್ದಾಗಿದೆ— ಜನತೆ ಹೇಗಿದೆಯೋ, ಹಾಗೆಯೇ ಇಲ್ಲಿಯ ಜನತಾ ಸರಕಾರವಿರಬೇಕು; ಇಂತಹ ರಾಜ್ಯದಲ್ಲಿ ಹಿಂದುಗಳ ರಕ್ಷಣೆಗಾಗಿ 'ಆರೆಸ್ಸೆಸ್' ಬೇಕೇನು? ಜಾತೀಯತಾ ವಿರೋಧಿ, ಜನತಾ ಹಿತಚಿಂತಕ ಪ್ರಗತಿಶೀಲರನ್ನು ಪ್ರತಿಭಟಿಸಿ, ಜಾತ್ಯಾತೀತ ಭಾರತವನ್ನು ಧರ್ಮಾಂಧತಾ ಭಾರತವಾಗಿ ಮಾರ್ಪಡಿಸಿ, ಹಿಂದೂಸಿ.ವಾದಕ್ಕೆಲ್ಲದೆ ಬೇರಾವುದಕ್ಕಾಗಿಯೂ ಇನ್ನಿಲ್ಲಿ 'ಆರೆಸ್ಸೆಸ್' ಬೇಕಾಗಿಲ್ಲವೆಂಬುದು ಸ್ಪಷ್ಟ- ಇಂತಹದಿರಬೇಕೆಂದು ಇನ್ನೂ ಸಂಕಾರಕ್ಕೂ ಜನತೆಗೂ ತೋರುತ್ತದೆಯಾದರೆ ಅದರ ಅರ್ಥವೇನೆಂಬುದೂ ಆಷ್ಟೇ ಸ್ಪಷ್ಟ! ಆದ್ದರಿಂದ ಇನ್ನೀ ಕುರಿತು ಯಾವ ವಿಧದ ಚರ್ಚೆ ವಂಚನೆಯೂ ಸಲ್ಲದು. ರಿಪಬ್ಲಿಕ್ ಭಾರತದ ತಳಹದಿಯಲ್ಲೇ ಮೂಡಿ, ಅಗಲಗೊಳ್ಳುತ್ತಾ ಬರುತ್ತಿರುವ ಈ ಬಿರುಕನ್ನು ಸರಕಾರವು ಶಾಸನಬದ್ಧವಾಗಿ ಕೂಡಲೇ ಮುಚ್ಚಿಬಿಡಬೇಕು; ಇಲ್ಲವಾದರೆ ಜನತೆಯು ಸಾಹಸಪಟ್ಟು ಮುಚ್ಚಿಸಿಕೊಳ್ಳಬೇಕು. ಹೀಗಾಗದೆ ಹೋದರೆ ನಿಜಕ್ಕೂ ಅಪಾಯವಿದೆ.

ದ. ಕ. ಜಿಲ್ಲಾ-

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧಿಕಾರಿಗಳ ವರ್ತನೆಯಿಂದಾಗಿ ಜಿಲ್ಲೆಯ ಸ್ಪಜಲಿತ ವಾತಾವರಣವು ಪೂರ್ಣ ಗಲಿಬಿಲಿಗೊಂಡಿದೆ. ಅದು ತಿಳಿಗೊಳ್ಳಬೇಕಾದರೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ದುರ ಸ್ತಿಯಾಗಬೇಕಾದುದು ಅಗತ್ಯ- ಆದರ ಆಧಿಕಾರಿಗಳು ಸ್ಥಾನ ಬಿಟ್ಟು ಕಳಗಿಳಿಯ ಬೇಕಾದುದು ಅನಿವಾರ್ಯ.

ಇದು ಕೇವಲ ಸಾರ್ವಜನಿಕ ನ್ಯಾಯ ದೃಷ್ಟಿಗೆ ಹೊಳೆಯುವ ತೀರ್ಮಾನ- ಬೇರಾವ ಅಡ್ಡ ನೋಟವೂ ಇಲ್ಲಲ್ಲಿ. ಹೀಗಲ್ಲದೆ, ಬೇರಾವುದೇ ವಿಧಾನದಿಂದ ಜಿಲ್ಲೆಯ ವಾತಾವರಣವನ್ನು ಶುದ್ಧೀಕರಿಸುವುದು ಅಸಾಧ್ಯವೆಂಬುದೀಗ ಖಚಿತವಾಗಿದೆ.

ಕಾಂಗ್ರೆಸ್ ಅಧಿಕಾರಿಗಳನ್ನು ಬದಲಾಯಿಸಿಕೊಳ್ಳುವ ಕ್ರಮ ನಿಯಮಗಳು ಕಾಂಗ್ರೆಸ್ ಸಂಸ್ಥೆಯಲ್ಲಿವೆ; ಮತ್ತದು ಕೇವಲ ಕಾಂಗ್ರೆಸಿನದಾಗಿರುವ ಕರ್ತವ್ಯವೆಂಬುದು ನಿಜ. ಆ ಕರ್ತವ್ಯವೀಗ ಸರಿಯಾದ ರೀತಿಯಿಂದ ಜಾರಿಗೆ ಬರಲಿ-ಜನತೆಯ ಏಕಮಾತ್ರ ಪ್ರತಿನಿಧಿ ಸಂಸ್ಥೆಯವರು ನಾವೆನ್ನುತ್ತಾ ಸಾರ್ವಜನಿಕ ರಂಗದಲ್ಲಿ ಸಾಧ್ಯವಿದ್ದ ಎಲ್ಲಾ ಕಡೆಗಳಿಗೂ ಕೈ ಕಾಲು ಚಾಚುತ್ತಿರುವ ಕಾಂಗ್ರೆಸ್ ಆಧಿಕಾರಿಗಳು ಸಾರ್ವಜನಿಕರ ವಿಚಾರ ಪೂರ್ಣ ನಿರ್ಧಾರಕ್ಕೊಳಗಾಗಲು ಬದ್ಧರಾದ್ದಾರೆಂದ್ದರಿಂದ ಅವರೀ ಜನತಾ ತೀರ್ಮಾನವನ್ನು ಶಿರಸಾವಹಿಸಲಿ-ಎಂದೇ ಈ ಸೂಚನೆ.

—ಕಾಂಗ್ರೆಸ್ ಅಧಿಕಾರದಲ್ಲಲ್ಲದಿದ್ದಾಗ ಕಾಂಗ್ರೆಸಿನರ ಶಕ್ತಿಪೂರ್ಣ ಕಾರ್ಯಗಳು ಮಾತ್ರ ಸಾರ್ವಜನಿಕರಂಗದಲ್ಲಿ ಮೂಡುತಿದ್ದವು ಹೊರತು ಅವರ ಲೋಪ ದೋಷಗಳೂ ಇಲ್ಲಿ ಪ್ರತಿಬಿಂಬಿಸುವ ಅವಕಾಶವಿರಲಿಲ್ಲ. ಅದು ಅಧಿಕಾರಾರೂಢವಾಗಿರುವ ಈ ಕಾಲದಲ್ಲಿ ಕಾಂಗ್ರೆಸ್ ಸಂಸ್ಥೆಯ ಕಾರ್ಯಕರ್ತರ ಗುಣದೋಷಗಳೆರಡೂ ಸಾರ್ವಜನಿಕ ರಂಗದಲ್ಲಿ ಪ್ರತಿಬಿಂಬಿಸುತ್ತವೆ ಅವರಲ್ಲಿ ಗುಣಕ್ಕಿಂತ ಹೆಚ್ಚಿಗೆ ದೋಷವೇ ಇದ್ದರೆ ಸಾರ್ವಜನಿಕರಿಗೆ ಹಿತಕ್ಕಿಂತ ಹೆಚ್ಚಿಗೆ ಅಹಿತವಾಗುತ್ತಾ ಹೋಗುವದು ಸ್ವಾಭಾವಿಕ. ದಕ್ಷಿಣ ಕನ್ನಡದಲ್ಲಿ ಇಂದು ಹೀಗಾಗಿದೆ. ಇನ್ನು 'ಕಾಂಗ್ರೆಸ್ ಜನತಾಬ್ರೋಹಿ'ಯೆಂಬ ಸ್ಪಷ್ಟತೀರ್ಮಾನವಾಗುವುದೊಂದೇ ಬಾಕಿ. ಅದಾಗದಿರಲೀ-ಎಂದಿನ ದ. ಕ. ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಅಲ್ಲಿಲ್ಲವೆಂದಾಗಬೇಕು.

ಓರ್ವ ವ್ಯಕ್ತಿಯ ಹೃದಯ ಪರಿಚಯವಾದ ಮೇಲೆ, ಆತನು ವ್ಯಕ್ತಿಗತ ವ್ಯವಹಾರಗಳಲ್ಲೆಂತಹ ಯದ್ವಾತದ್ವಾ ಭಾವನೆ, ಧೋರಣೆ, ವರ್ತನೆ, ಪ್ರದರ್ಶಿಸಿದರೂ 'ಮನುಷ್ಯ ಇಂಥವ' ನೆಂಬುದರಿಂದ ಸಹಿಸಿ

—ಕಾಂಗ್ರೆಸ್ ಅಧಿಕಾರಿಗಳು ಕೆಳಗಿಳಿಯಲಿ!

ಕೊಳ್ಳಬಹುದು. ಆದರೆ ಸಾರ್ವಜನಿಕ ವ್ಯವಹಾರ ರಂಗವೂ ವ್ಯಕ್ತಿ ಸ್ವಭಾವಾನುಸಾರವಾಗಿ ಮೇಲೆಕೆಳಗಾಗುತ್ತಾ ಹೋಗ ಬೇಕಾಗಿ ಬಂದಿಗೆ ಅದು ಮಾತ್ರ ನಿಜ ಕ್ಕೂ ಅಸಹ್ಯ; ಅಕ್ಷಮ್ಯ; ಅಪಾಯಕರ.

ಜನತಾರಂಗದಲ್ಲಿ ಸಾಮೂಹಿಕ ಸ್ವರೂಪದ ಶಾಂತ ಸಮಾನತಾ ವಾತಾವರಣ-ಸುಳಿದ್ರ ಸಂಹಿದ್ದುಗಳು- ಪುರೋಗಾಮಿ ಪಥಗಳು ಮಾತ್ರ ತೋರಿಬರಬೇಕು. ವ್ಯಕ್ತಿಗಳು ತಮ್ಮ ಗೊಂದಲ ಮನೋವೃತ್ತಿಗೆ ಹೊಳೆದ ಪ್ರಕಾರ, ಮಾಡಿ ಹಾಕುತ್ತಾ ಹೋಗುವ ಕುಳಿದಿನ್ನೆಗಳು ಅಲ್ಲಿರಲೇ ಬಾರದು. ಹಾಗೆ ಹಾಳುಮಾಡುವ ವರನ್ನು ತಂಟಿಗಾರರೆಂದು ಗಣಿಸಿ ಹೊರಗಟ್ಟಬೇಕೇ ಹೊರತು ರಂಗನಾಯಕರಾಗಿ ಇಟ್ಟುಕೊಳ್ಳಕೂಡದು. ದ. ಕ. ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಅಲ್ಲಿಂದ ಹೊರಡಲಿ ಎನ್ನುವುದು ಇಷ್ಟಕ್ಕಾಗಿಯೇ:

ಜಿಲ್ಲಾ ಕಾಂಗ್ರೆಸಿನ ಪ್ರಚಲಿತಾಧಿಕಾರಿಗಳಲ್ಲಿ ತಮ್ಮನ್ನೇ ತಾವು ನೋಡಿಕೊಳ್ಳುವ ದೃಷ್ಟಿಯಿದ್ದಿದ್ದರೆ, ಸಾರ್ವಜನಿಕರು ಹರಿರುವ ದೂರದೂಷಣೆಗಳೆಷ್ಟೋ ತಮಗಂಟಿಕೊಂಡಿರುಪುದನ್ನು ಕಾಣುತ್ತಿದ್ದರು. ಅಥವಾ ಇಂಥೇ ಬೇಕಾಗಿರುವ ಸಾರ್ವಜನಿಕ ನೋಟ ವಾದರೂ ಅವರಲ್ಲಿರುತಿದ್ದರೆ, ತನುನ್ನು ಹಲವು ಕಠೋರ ಪ್ರಶ್ನೆಗಳು ಮುತ್ತಿಕೊಂಡಿರುವುದನ್ನವರು ಕಾಣುತಿದ್ದರು. ಆದರೆ ಅದೇಕೋ, ಕಾಂಗ್ರೆಸ್ ಅಧಿಕಾರಿಗಳು ಈ ಮಟ್ಟಿಗೆ ಅಂಧಂಧಾಗಿದ್ದಾರೆ. ಆದ್ದರಿಂದ ಅವರನ್ನು ಸುತ್ತುವರಿದಿರುವ ಪ್ರಶ್ನೆಗಳ ಕಡೆಗೆ ಕೈತೋರಿಸಿ, 'ಅಲ್ಲಿಂದೀಚೆಗೆ ಬಂದು ಬಿಡಿ!' ಎಂದೀಗ ಎಚ್ಚರಿಸಬೇಕಾಗಿದೆ.

ನಿಸ್ವಾರ್ಥತೆ ಮತ್ತು ನಿರ್ವಿಕಾರ ಬುದ್ಧಿಯಿಂದ, ಸಾರ್ವಜನಿಕ ಒತಸಂಬಂಧಗಳಾವುವೆಂಬುದನ್ನು ಗುರುತಿಸಿಟ್ಟುಕೊಂಡು ತಾವು ಸಾರ್ವಜನಿಕರಿಗೆ ಹೊಣೆಗಾರರೆಂಬುದನ್ನು ನೆನಪಿನಲ್ಲಟ್ಟುಕೊಂಡು ಕೇವಲ ಸಾರ್ವಜನಿಕ ಮನೋವೃತ್ತಿಯಿಂದಲೇ ಕಾರ್ಯ ನಿರ್ವಹಿಸಬೇಕಾದುದು ಕಾಂಗ್ರೆಸ್ ಕಾರ್ಯಕರ್ತರ ಪಾಲಿನದು. ಈ ಸೂತ್ರವನ್ನು ಮುರಿಯುವವರು ಅಧವಾ ಅದನ್ನು ದಾಟಿ ಮುಂದುವರಿಯುವವರು ಅಲ್ಲಿರಲಾ ಅನರ್ಹರು. ಜಿಲ್ಲೆಯ ಸಾರ್ವಜನಿಕರು ತಮ್ಮ ಕಾಂಗ್ರೆಸ್ ಅಧಿಕಾರಿಗಳಲ್ಲಿ "ಇನ್ನು ಸಹಿಸುವದಸಾಧ್ಯವೆನ್ನ"ವಷ್ಟೂ ಈ ಅಯೋಗ್ಯತೆಯನ್ನು ಹೆಲವು ಬಾರಿ, ಬಹಿ ವಿಧಾನಗಳಿಂದ ಕಾಣುವಂತಾಗಿಲ್ಲವೆ?

ಕಾಂಗ್ರೆಸ್ ಕಾರ್ಯಕರ್ತರ ಮೊದಲ ಕರ್ತವ್ಯವೆಂದರೆ ವಿಧಾಯಕ ಕಾರ್ಯಕ್ರಮಗಳ ಮೂಲಕ ಜನತಾ ಸಂಪರ್ಕವನ್ನಿಟ್ಟುಕೊಳ್ಳುವುದು. ಇಂತಹ ಕೆಲಸವನ್ನು ಇವು ಎಲ್ಲಿಯಾದರೂ ಎಷ್ಟಂಶವಾದರೂ ದ. ಕ ಕಾಂಗ್ರೆಸ್ ಅಧಿಕಾರಿಗಳು ಮಾಡಿದುದಿದೆಯೆ? ಹೊಸ ಘಟನೆಯು ಪ್ರಜಾರಾ-ಪ್ರೌಢ ಮತದಾರರಿಗೆ ಹೊಣೆಗಾರಿಕೆಯ ಶಿಕ್ಷಣ—ಅಹಾಂಭಾವ ಮತ್ತಿತರ ನಿತ್ಯ ಜೀವನದ ಅಡಚಣೆಗಳ ನಿವಾರಣೆ—ಅಸ್ಪರ್ಶತಾ ನಿವಾರಣೆ, ಕಳ್ಳ ಅಮಲಿನ ತಯಾರೀ ಪ್ರತಿಬಂಧ—ಮುಂತಾದ ಕಾಂಗ್ರೆಸಿನ ಮೂಲಭೂತ ಕರ್ತವ್ಯಗಳನ್ನು ಇವರು ನಿರ್ವಹಿಸಿದುದೆಷ್ಟು? ತಮ್ಮಾಟವನ್ನಾದಲು ಅನಕಾಶವೊದಗಿಸಿದ್ದ ಜಿಲ್ಲಾ ಬೋರ್ಡು ಚುನಾವಣೆಯಂತಹ ವಿಶೇಷ ಸಂದರ್ಭಗಳಲ್ಲಿ ಮಾತ್ರವೇ ಕಾಂಗ್ರೆಸ್ ಅಧಿಕಾರಿಗಳು ಸಾರ್ವಜನಿಕರ ಮುಂದೆ ಬಂದು ತೋರಿದ ಪ್ಪು, ಇತರ ಎಂತಹ ಸ್ಪಾಮುಖ್ಯ ಸಂದರ್ಭಗಳಲ್ಲಾದರೂ ಜನತೆಗೆ ಕೋರಿಬಂದು ದಿದೆಯೆ?

'ಕಾಂಗ್ರೆಸ್ ಸಂಸ್ಥೆಯು ಅಧಿಕಾರ ಸ್ಥಾನವಲ್ಲಿರುವವರಲ್ಲಿ ಕನಿಷ್ಠ ಪಕ್ಷ ಇಷ್ಟಂಶ ತಲಸಾತ್ಮಕ ಬುದ್ಧಿ, ಇಷ್ಟು ಪರಿಮಾಣದ ಸಹನೆ, ಇಂತಿಷ್ಟು ವಿಚಾರ ಬುದ್ಧಿ, ಈ ಪರಿಮಾಣದಷ್ಟು ಲೋಕಾನುಭವ ಇರಬೇಕು'ಎಂದು ಒಂದು ಅಳತೆ ನಿರ್ಧರಿಸಿ ಕಾಂಗ್ರೆಸ್ ಅಧಿನಾಯಕರು ಪರೀಕ್ಷೆಗಳನ್ನು ಏರ್ಪಡಿಸಿದರೆ, ನಮ್ಮ ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷೆ, ಕಾರ್ಯದರ್ಶಿಯರಿಗೆ ತಾವದರಲ್ಲಿ ಪಾಸಾದೇವೆಂಬ ಧೈರ್ಯವಿದೆಯೆ? ಬೇಡ-ತಮ್ಮ ಸ್ವಧಾವಾನುಸಾರವಾಗಿ, ತಮ್ಮ ಜೀವಮಾನಾವಧಿಯಲ್ಲಿ ಎಂದಾದರೂ ಆ ಸರ್ಟಿಫಿಕೇಟನ್ನು ಪಡೆದೇವೆಂಬ ಆತೆಯಾದರೂ ಸತ್ಯಕ್ಕೂ ಅವರಿಗಿದೆಯೆ?

ಕಾಂಗ್ರೆಸಿನ ಲೆಕ್ಕಪತ್ರಗಳ ಗತಿಯೇನು?

ಈ ರೀತಿ ದ. ಕ. ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಪ್ರಾಮುಖ್ಯವಾಗಿ ತೋರಿಬರಬೇಕಾಗಿದ್ದ ವಿಧಾಯಕ ಕಾರ್ಯರಂಗದಲ್ಲಿ ಕಂಡುಬರುತ್ತಿಲ್ಲ; ಕಾಂಗ್ರೆಸ್ ಕಾರ್ಯಕರ್ತರಲ್ಲಿ ತೋರಿಬರಬೇಕಾಗಿದ್ದ ಗುಣನಡತೆ ಮತ್ತು ಯೋಗ್ಯತೆಗಳೂ ಅವರಲ್ಲಿ ಕಂಡು ಬರುತ್ತಿಲ್ಲ; ಅವರ ವಂಶಾಕ ಬೆಳೆಗೆ ಬೀಳಬೇಕಾಗಿದ್ದ ಲೆಕ್ಕಪತ್ರಗಳೂ ಕಂಡು ಬರುತ್ತಿಲ್ಲ. ಬದಲಿಗೆ ಎಲ್ಲಿ ಅವರಿರಬಾರದಿತ್ತೋ ಅಲ್ಲಿಯೇ-ಯಾವ ಲೋನ ದೋಷಗಳು ಇವರಲ್ಲಿ ತೋರಿಬರಕೂಡದೋ ಅವೆಲ್ಲವೂ-ಎಂತಹ ಧಾಪತೆಯವರಾಗಿಬಾರದಿತ್ತೋ ಅಪವಾದ ದಾಖಲೆ-ಸಾರ್ವಜನಿಕರ ಕಣ್ಣಾ ಕುಕ್ಕುವಷ್ಟು ಕಾಣಿಸಿಕೊಂಡಾಯಿತು. ಇನ್ನೇ ಆಟ ಸಾಕೆನ್ನಬಹುದು!

ಸರಕಾರೀ ನೌಕರರ ನೈಸರ್ಗಿಕ ಕಾರ್ಯಗಳ ನಡುವೆ-ವ್ಯಕ್ತಿಶಃ ತವ.ಗಾಗಿ ದವರನ್ನು ಪಕ್ಷಕ್ಕು ವುದಕ್ಕಾಗಿ ಸರಕಾರೀ ಯಂತ್ರದ ಎಡೆಯೆ.ದೆಯಲ್ಲಿ-ತಮ್ಮ ಸ್ವೇಚ್ಛಾ ಪ್ರವೃತ್ತಿಗನುಕೂಲವಾಗುವ ಯಾವಂಗದಲ್ಲಾದರೂ-ಇವರು ಕಾಣಿಸಿಕೊಳ್ಳುತ್ತಿದ್ದಾರೆ. ಸಾರ್ವಜನಿಕ ಸೇವಕನ ಹಜಗುಣಯೋಗ್ಯತೆಗಳ ಒಡಲಿಗೆ ಸರ್ವಾಧಿಕಾರಿಯ ಲೇಂಕಾರ ಮತ್ತು ಬಾಲಕರ ಅನನುಭವ ಹಾಗೂ ಅಪಕ್ವ ಬುದ್ಧಿಯನ್ನೇ ತಾವಿರುಸುತಿದ್ದಾರೆ.ಅವರೆಂದಾಗಿ ದೊರೆಯುವ ಲೆಕ್ಕಪತ್ರಗಳೆಂದರೆ ಬಹು ಶಃ ಕಾಂಗ್ರೆಸಿನಗತಕಾಲದ ಕೀರ್ತಿಮೊತ್ತ ಜಮಾ ವಿಭಾಗದಲ್ಲೂ, ಇವರ ಅವನ್ನು ಬಹು ಮುಖದಿಂದ ಹೂರ್ಣ ಅನಾವ್ಯಯ ಮಾಡಿ ಬಿಟ್ಟಿರುವ ಖೊತ್ತವು ವ್ಯಯ ವಿಭಾಗದಲ್ಲೂ ಇರುವ ದಾಖಲೆ ಮಾತ್ರ!

ಹೀಗಿರುವುದು ಜಿಲ್ಲೆಗೆ ಹಿತಕಾರವಲ್ಲ; ಕಾಂಗ್ರೆಸಿಗೆ ಉದರ ಶೂಲೆಯಿದ್ದಂತೆ! ಸ್ವತಃ ಈ ಕಾಂಗ್ರೆಸ್ ಅಧಿಕಾರಿಗಳ ಪಾಲಿಗೆ, ಇವರು ತಮ್ಮ ಸಾರ್ವಜನಿಕ ಜೀವನದ ಹತ್ಯೆಮಾಡಿಕೊಂಡಂತೆ! ಆದ್ದರಿಂದ ಅವರಿನ್ನು ತಡಮಾಡದೆ ದಯವಿಟ್ಟು ಕೆಳಗಿಳಿಯಲಿ!

ಇದಿಂದು ರೂಢಿಸಿಕೊಳ್ಳಬೇಕಾದ ಕಂಟಕದ ರೂಪಕ್ಕೆ ಬಂದಿದೆ- ಅಲ್ಲಿಂದಲ್ಲಿಗೆ ಜೋಡಿಸಿ, ಸರಿಪಡಿಸಿಕೊಳ್ಳುವ ಮಧ್ಯಸ್ಥಿತಿಯಲ್ಲಿಲ್ಲ. 'ಓವರೇಶನ್' ಮಾಡಿಸಿಯೇ; ಜೀವವುಳಿಸಿಕೊಳ್ಳಬೇಕಾದಷ್ಟು ಕೊಳೆತಾಗಿದೆ- ಚಿಕಿತ್ಸೆಯು ಮೂಲಕ ಗುಣ ಪಡಿಸಿಕೊಳ್ಳಲಾಗುವ ಮಟ್ಟವನ್ನು ಮೀರಿಹೋಗಿದೆ ಆದ್ದರಿಂದ ಈಗ ನಿರ್ದಾಕ್ಷಿಣ್ಯ ಕರ್ತರೀ ಪ್ರಯೋಗವೊಂದೇ ಗತಿ.

ಸಂಗತಿ ದೊಡ್ಡದಲ್ಲ. ಆದರೆ ಜನತಾ ದೃಷ್ಟಿಯಿಂದ ಈ ಅವಾಯು ದೊಡ್ಡದೇ. ಕಾಂಗ್ರೆಸ್ ಅಧಿಕಾರಿಗಳಲ್ಲಿ ಇಲ್ಲಿಯವಾದವನ್ನು ಜಲ್ಲಗಳೆಯುವ ನೈತಿಕ ಬಲ ಯಾಗೂ ಅತ್ಯವಿಶ್ವಸವಿದ್ದರೆ, ತಾವು ಜನತಾ ಸ್ಫುತಿನಿಧಿಗಳನ್ನು ಕ್ಕಿರುವ ಅವರು ಸಾರ್ವಜನಿಕರಿಂದಿರು ವಿಶ್ವಾಸಯಾಚನೆಗೆ ನಿಂತು ನೋಡಲಿ. ಅದಲ್ಲವಾದರೆ ಜಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರು ಕಾರ್ಯಪ್ರವೃತ್ತರಾಗಲಿ; ಇದೂ ಆಗದಿದ್ದರೆ ಅನುಕ್ರಮವಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ- ಕಾಂಗ್ರೆಸ್ ಅಧಿನಾಯಕ ಮಂಡಲಿ-- ಇವುಗಳ ಲಕ್ಷ್ಯವಾದರೂ ಇತ್ತ ಬೀಳಲಿ. ಅಂತೂ ಜಿಲ್ಲೆಯ ಜನತೆಯ ಸಾಲಿಗೆ ಒಂದು ನ್ಯಾಯ ಸಾಧನೆ ಆಗಲೇ ಬೇಕಾಗಿದೆ; ಆಗಲಿ.

ಮಂಗಳೂರು

ಶ್ರೀ ಗೋಲ್‌ವಲ್ಕರರ ಆಗಮನ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರ ಸಂಘಚಾಲಕರಾದ ಶ್ರೀ. ಮಾಧವರಾವ್ ಗೋಲ್‌ವಲ್ಕರರು ಮಂಗಳೂರಿಗೆ ಕಳದ ತಾ. 31ರಲ್ಲು ಪೂರ್ವಾಹ್ನ ಆಗಮಿಸಿದರು. ರೈಲ್ವೆ ನಿಲ್ದಾಣದಲ್ಲಿ ಮಂಗಳೂರು ಸ್ವಾಗತ ಸಮಿತಿಯವರು ಅವರನ್ನು ಸ್ವಾಗತಿಸಿದರು. ಶ್ರೀ ಗೋಲ್‌ವಲ್ಕರರು ಬಂದರದ ಮಾರ್ಗವಾಗಿ ರಥದಲ್ಲಿ ಆಗಮಿಸಿ, ಶ್ರೀ ನೆಂಕಟರಮಣ ದೇವಸ್ಥಾನಕ್ಕೆ ಸಂದರ್ಶನವಿತ್ತರು.

ಸಾಯಂಕಾಲ ರಾಜಾಸೀಟ್ ಆವರಣದಲ್ಲಿ ಕೇಂದ್ರ ಮೈದಾನದಲ್ಲಿ ಸಾರ್ವಜನಿಕ ಸಭೆಯಲ್ಲಿ ವೀರಶಿವ ಕ್ಯಾಗಿ ಭಿನ್ನಾಭಿಪ್ರಾಯಗಳನ್ನು ಮರೆತು ಸಹಿಷ್ಣುತೆಯಿಂದ ಮುನ್ನಡೆಯಬೇಕು ಇತ್ಯಾದಿ ಭಾಷಣ ಮಾಡಿದರು. ಡಾ. ಗಿರಿಧರರಾಯರು ಧನ್ಯವಾದಗಳನ್ನರ್ಪಿಸಿದರು.

ಇವರ ಆಗಮನಸವನ್ನು ನಿರೋಧಿಸಿ ಇಲ್ಲಿಯ 'ಜಾತೀಯತೆ ವಿರೋಧಿ ಸಮಿತಿ'ಯ ಸದಸ್ಯರು ಘೋಷಣೆ ಕರಪತ್ರ ಇತ್ಯಾದಿಗಳ ಮೂಲಕ ವಿರೋಧಪ್ರದರ್ಶನ ಮಾಡಿದ್ದರು. ಬಂದನಕಟ್ಟೆಯಲ್ಲಿ ಶ್ರೀ ಗೋಲ್‌ವಲ್ಕರರ ಕಾರಿಗೆ ಕಲ್ಲು ಎಸೆಯಲ್ಪಟ್ಟು ಕನ್ನಡಿ ಪುಡಿಯಾಯಿತು. ಮೈದಾನದಲ್ಲಿ ಸಭೆ ಜರಗುವಾಗ ಕಲ್ಲು ಬೆತ್ತೆಂದು ವಿರೋಧ ಪ್ರದರ್ಶಕರನ್ನು ಪೋಲೀಸರು ಲಾಠಿ ಪ್ರಯೋಗ ಮಾಡಿ ಚದರಿಸಿದರು. ರಾತ್ರಿಯಲ್ಲೂ ಸ್ಫೋಟ ಘಟನೆಗಳು ನಡೆದಿದ್ದುವು. ಪೋಲೀಸರು ಸ್ವಸಂಸ್ಥಿತ ಮುಂಜಾಗ್ರತೆ ವಹಿಸಿ ರಾಂತತೆ ಕಾಪಾಡಿದ್ದರು.

ರಾತ್ರಿ ಭಾವನೇಂದ್ರ ಹಾಲಿನಲ್ಲಿ ಸತ್ಕಾರ ಕೂಟ ನಡೆಯಿತು. ಮರುದಿನ ಮೈಸೂರಿಗೆ ಪ್ರಯಾಣ ಬೆಳೆಸಿದರು.

ಉಡುಪಿ

ವಿದಾಯಸಭೆ: ತ್ಯಾರಿ ಶ್ರಿಶ್ಚಿಯನ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಎ. ಎಸ್. ಕಾರಟರು ತನ್ನ ಉದ್ಯೋಗದಿಂದ ನಿವೃತ್ತರಾದ ಕಾರಣ ಅವರಿಗೆ ಬಾಲಾ ಮುಳ್ಳು ಈಚೆಗೆ ವಿದಾಯ ಸತ್ಕಾರ ಕೂಟವೊಂದೆ ನ್ನೇರ್ಪಡಿಸಿ ಚಿನ್ನದ ಪದಲು ಮತ್ತು ನಿಧಿಗ ಳನ್ನತ್ತು ಗುರುಭಕ್ತಿಯನ್ನು ಪ್ರದರ್ಶಿಸಿದರು.

ಹಿಂದೂಸ್ಥಾನ್ ಸ್ಕೌಟ್ ಎಸೋಸಿಯೇಶನ್ ಉಡುಪಿ ಇದರ ಮಹಾಸಭೆಯು ಕಳದ ತಾ 31ರಲ್ಲು ಸಂಜೆ ಡಾ। ಎಸ್. ಆರ್. ನೈಗಳ ಲಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಿ. ವೈದ್ಯನವರು ವರದಿವಾಚನ ಮಾಡಿದ ನಂತರ ಕಾರ್ಯಕಾರೀ ಮಂಡಳಿಯ ಸದಸ್ಯರ ಚುನಾವಣೆ ನಡೆಯಿತು. ಡಾ। ಎಸ್. ಆರ್. ನೈ (ಅಧ್ಯಕ್ಷ), ಡಾ। ಟಿ. ಮಾಧವ ನೈ (ಉಪಾಧ್ಯಕ್ಷ) ಶ್ರೀಗಳಾದ ಕೆ. ವಿ. ಕೆಜ್ಯ ಮತ್ತು ಗೋಪಾಲ ಸೆಟ್ಟಿ (ಕಾರ್ಯದರ್ಶಿಗಳು), ಟಿ ಅನಂತ ನೈ (ಖಜಾಂಚಿ)ಗ ಳಾಗಿ ಆರಿಸಲ್ಪಟ್ಟರು.

ಮುನಿಸಿಪಲ್ ಕೌನ್ಸಿಲು ಮಿಂಟಿಂಗು: ಕಳದ ತಾ 29ರಲ್ಲು ಚೆಯರ್‌ಮೇನ್ ಶ್ರೀ ಪಿ. ಉಸೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮೂಡುಪೆಡ್ಡೆ ಕುಪ್ಪ ರೋಗೀ ಆಸ್ಪತ್ರೆ ಕಟ್ಟಡಕ್ಕೆ ಒಂದುನೂರು ಸಹಾಯಧನ ಕೊಡುವರೆ ನಿರ್ಧಾರವಾಯಿತು. ಉಡುಪಿ ಸ್ವಾತಂತ್ರ್ಯ ದಿನಾಚರಣೆ ಸಮಿತಿಯವರು ಅಜ್ಜರಕಾಡು ಮೈದಾನದಲ್ಲಿಯ ಆರೋಗ್ಯ ಸ್ತಂಭದ ಸುತ್ತಲು ರಸ್ತೆ ಮಾಡಲು ಕೌನ್ಸಿಲಿನ ಅಕ್ಷೇಪವಿಲ್ಲವೆಂದಾಯಿತು. ಶ್ರೀ ರಾಮಪ್ಪ ತಿಮ್ಮಪ್ಪನವರು ಸ್ಥಳೀಯ ಮಕ್ಕಳ ಕ್ಷೇಮಚಿಂತನಾ ಸೆಂಟರಿನಲ್ಲಿ ಮಕ್ಕಳಿಗೆ ಧನಸಾರ್ಥ ಹಾಲನ್ನು ಕೊಡುವರೆ ತಿಂಗಳೊಂದರ ಹತ್ತು ರೂಪಾಯಿಯಂತೆ ಸಹಾಯಧನ ಕೊಡುವೆನಾಗಿ ಬರೆದುದನ್ನು ಸ್ವೀಕರಿಸಲಾಯಿತು.

ಧ್ವಜಸ್ತಂಭ ನಲಯಕ್ಕೆ ನಿಧ್ಯುದ್ದೀಪದ ಅವಶ್ಯಕತೆ: ಉಡುಪಿಯ ಗಾಂಧೀ ಮೈದಾನದಲ್ಲಿ ಅಪೂರ್ವ ನಾಜೋಕಿನ ದಾಗಿ ರಚಿಸಲ್ಪಟ್ಟಿರುವ ಅರೋಕ ಸಿಂಹ ಮುದ್ರೆಯುವ ರಾಷ್ಟ್ರಧ್ವಜದ ಸ್ತಂಭಕಟ್ಟೆಯ ನುತ್ತೀಗ ತಾನೇ ಅದರ ಸಭಾಂಗಣದ ಸುತ್ತ ತಯಾರಾಗಿರುವ ಜಗಲಿಗಳು ಉಡುಪಿಗೆ ಭೂಷಣ ಪ್ರಾಯವಿವೆ. ರಾಷ್ಟ್ರ ಭಕ್ತಿಯನ್ನು ಪ್ರೇರೇಪಿಸುವ ಹಾಗೂ ಆತ್ಮಸಂತೋಷವಾದ ಸಭಾಸ್ಥಳವಿದು. ಅಲ್ಲಿಯ ಆಸನಗಳ ನಡನುಡುವೆ ಎಂಟು ವಿದ್ಯುದ್ದೀಪದ ಕಂಭಗಳನ್ನು ಹಾಕಿಸಿ, ಬೆಳಕಿನ ಅನುಕೂಲತೆಯನ್ನೊದಗಿಸಿದರೆ ಕತ್ತಲೆಯು ನರೆಗೂ ಸಭೆ ಸಮಾಂಂಭಗಳನ್ನು ಜರಗಿಸಲಾನುಕೂಲವಾಗುವದು. ನಿತ್ಯ ಪಾಯು ಸೇವನೆಗೆ ಬರುವವರಿಗೂ ಬೆಳಕನ್ನಿತ್ತಂತಾಗುವದು. 'ಉಡುಪಿಯ' ಈ ಅಮೂಲ್ಯ ಶೋಭೆಯು ಪೂರ್ಣಾಕಾರ ಗೊಂಡಂತಾಗುವದು. ಇಷ್ಟರಲ್ಲೇ ಅಂದಾಜು ರೂ 3ಸಾವಿರದ ವರೆಗೆ ವೆಚ್ಚವಾಗಿತಬಹುದಾದುದಾಗಿರುವ ಈ ಸಾರ್ವಜನಿಕ ಉಪಯೋಗಿಯ ಸೌಂದರ್ಯ ಸೌಕರ್ಯ ಪೂರ್ಣತೆಗಾಗಿ ಎಂಟು ದೀಪಕಂಭಗಳನ್ನು ನೆಡಲು ಇನ್ನು ಬೇಕಾಗುವದೆಂದರೆ ಸುಮಾರು ಒಂದುಸಾವಿರ ರೂಪಾಯಿ ಮಾತ್ರ. ಇಷ್ಟಕ್ಕೆ ಮಂಡಳಿಯವರು ಸತ್ಹಾಯ ಸಲ್ಲಿಸಿ, ಈ ಕೆಲಸವನ್ನು ನೆರವೇರಿಸಿ ಕೊಡುವರೆಂದು ನಿರೀಕ್ಷಿಸಬೇಕಾಗಿದೆ.

ಕಲಾವೃಂದದಲ್ಲಿ ತಾ 29ರಜ್ಜೆ ಶ್ರೀ. ವಾದಿರಾಜಾಚಾರ್ಯರ ಅಧ್ಯಕ್ಷತೆಯಲ್ಲಿ 'ಕವಿ ಮತ್ತು ಕಾವ್ಯ' ವಿಷಯದ ಮೇಲೆ ಉಪನ್ಯಾಸ ಸಭೆನಡೆಯಿತು. ಇದೇ ತಾ 5 ಮತ್ತು 6ರಲ್ಲಿ ಸಂಜೆ 4ರಿಂದ ಧಾರ್ಮಿಕಗೋಷ್ಠಿ ಮತ್ತು ಸಾಹಿತ್ಯಗೋಷ್ಠಿಗಳಿವೆ.

ವಿರೋಧ ಪ್ರದರ್ಶನ: -ಆರ್. ಎಸ್. ಎಸ್.-ನಾಯಕ ಶ್ರೀ ಎಂ. ಎಸ್. ಗೋಳ್ವಲ್ಕರರು ಮಂಗಳೂರಿಗೆ ಬಾಜಿವದನ್ನು ಪ್ರತಿಭಟಿಸಿ ಕೆಲವು ಪುರೋಗಾಮಿ ನಾಗರಿಕರೂ ವಿದ್ಯಾರ್ಥಿಗಳೂ ತಾ. 30ರಲ್ಲಿ ಪ್ರಜಾಪ ಸೈಕಲ್ ಜಾಥವರ್ಗೆಯನ್ನು ತೆಗೆದಿದ್ದರು.

ಮಂಗಳೂರು

ಹೊಳೆ ತೋಡುಗಳಿಗೆ ತಾತ್ಕಾಲಿಕ ಕಟ್ಟೆಗಳನ್ನು ಹಾಕಲು ರೈತರಿಗೆ ಸರಕಾರದ ಸಹಾಯ- ಚಿಕ್ಕವುಟ್ಟು ನೀರಾವರಿ ಹೊಳೆ ತೋಡುಗಳಿಗೆ ಕಟ್ಟೆ ಹಾಕಿ ಆ ನೀರನ್ನು ಎರಡನೆ ಮತ್ತು ಮೂರನೆ ಬೆಳೆಗಳಿಗೆ ರೈತರು ಉಪಯೋಗಿಸಿ ಜಾಸ್ತಿ ಭತ್ತ ಉತ್ಪತ್ತಿಯನ್ನು ಮಾಡಿದ ರೈತರಿಗೆ ಎಕ್ರೆ ಒಂದರ ರೂಪಾಯಿ ಐದರಂತೆ ಧನ ಸಹಾಯ ದೊರೆಯುವುದು. ಕಟ್ಟೆ ಹಾಕುವ ಬಗ್ಗೆ ಕೆಲವಂಶ ಸರಕಾರದಿಂದ ದೊರೆಯುವುದು. ಗ್ರಾಮ ಸಹಕಾರಿ ಸಂಘಗಳ ಮೂಲಕ ಬಡಬಿಹಾದಾದ ಹಳೆ ಕಟ್ಟೆಗಳ ಬಗ್ಗೆ ಪ್ರಥಮತಃ ನಿಗಾ ಕೊಡಲಾಗುವುದು. ಹೊಸತಾಗಿ ನಿರ್ಮಿಸುವ ಕಟ್ಟೆಗಳ ಬಗ್ಗೆ ಆ ಕ್ಷೇತ್ರಗಳಲ್ಲಿನ ಆಜ್ರಿಗಳು ಬಂದಲ್ಲಿ ಅವನ್ನು ಪರಿಂಬರಿಸಲಾಗುವುದೆಂದು ಜಿ. ಕೆ. ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಬಿದೆ.

ಸೈಂಟ್ ಎಲೋಸಿಯಸ್ ಕಾಲೇಜು ಯೂನಿಯನ್ ಸದಸ್ಯರು–ಕಳೆದ ತಾ. 29ರಲ್ಲಿ ಸಭೆ ಸೇರಿ, ನುಂಗಳೂರಿಗೆ ರಾಷ್ಟ್ರೀಯ ಸ್ವಯಂಸೇವಾ ಸಂಘದ ಮುಖಂಡ ಶ್ರೀ ಗೊಳ್ವಾಲ್‌ಕರ್ ಬರುವುದರಲ್ಲಿ ಅಸಂತೋಷವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಒಮ್ಮತದಿಂದ ಮಾಡಿರುವರು.

ಸಕ್ಕರೆ ಬೆಲೆಯನ್ನು ಈ ರೀತಿ ನಿರ್ಧರಿಸಿ ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ:- ಮಂಗಳೂರು ಸೌಂಡಿಗೆ 0-7-0; ಬಂಟ್ವಾಳ, ಕಾಸರಗೋಡು, ಸುಂಜೇಶ್ವರ, ಕುಂಬಳೆ, ಪುತ್ತೂರು, ಕಾರ್ಕಳ ಮತ್ತು ಮೂಡಬಿದ್ರೆ 0-7-2; ಹೊನ್ನಾವರ, ಬೆಳ್ತಂಗಡಿ, ಉಡುಪಿ 0-7-3; ಕುಂದಾಪುರ 0-7-4.

ಪಡುಬಿದ್ರೆ ಕಳೆದ ತಾ 30ರಲ್ಲು ಪಡುಬಿದ್ರೆ ಬೋರ್ಡುಶಾಲೆಯಲ್ಲಿ ಹರಿಜನ ದಿನಾಚರಣೆಯು ಸಾಂಗವಾಗಿ ಜರಗಿತು. ಹರಿಜನ ವನಾಹತುಗಳಲ್ಲಿಯೂ, ಪೇಟೆಯ ಪ್ರಮುಖ ರಸ್ತೆಗಳಲ್ಲೂ ಸಾರ್ವಜನಿಕ ಮೆರವಣಿಗೆಯಾದ ಬಳಿಕ ಶ್ರೀ ಎಸ್. ಸಂಜೀವಸೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀಗಳಾದ ಡೋಗು, ಎಮ್. ಎಮ್. ಪ್ರಭು, ಉಡ್ಡಿ ಸೌತ್ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ನೊಬಲಾದವರುಸಂದರ್ಭೋಚಿತ ಭಾಷಣಮಾಡಿದರು. ಶ್ರೀ ಎ. ಪಿ. ಸೆಟ್ಟಿರು ಧನ್ಯವಾದಗಳನ್ನರ್ಪಿಸಿದರು.

ತಿದ್ದುಪಡಿ

ತಾ. 22-9-49ನೇ ಸಂಚಿಕೆಯಲ್ಲಿ ಪ್ರಕಟವಾದ 'ಮಕ್ಕಳ ಅರ್ಜಿ' ಎಂಬ ಲೇಖನವು ಹೈದರಾಬಾದಿನ 'ಸಾಧನಾ' ಪತ್ರಿಕೆಯಿಂದ ಉದ್ಧೃತವಾದುದು.

ಉಡ್ಪಿ ಡಿ. ಮು ಕೋರ್ಟಿನಲ್ಲಿ

O. P. 51/1949.

1) ಶ್ರೀನಿವಾಸ ಭಟ್ಟ, (2) ಗುರುರಾಜ, 3) ಸುಬ್ರಾಯ, ಮೈನರರು, ರಕ್ಷಕಳು 4ನೆಯವಳು. ಲಕ್ಷ್ಮಿನಾರಾಯಣ ಯಾನೆ ಹರಿದಾಸ ಭಟ್ಟ ಮಗಂದಿಯರು.

4) ಶೇಷಮ್ಮ. ಸದರಿ ಲಕ್ಷ್ಮಿನಾರಾಯಣ ಯಾನೆ ಹರಿದಾಸ ಭಟ್ಟರ ವಿಧವೆ. ಉಡ್ಪಿ ತಾಲೂಕು ಮಲ್ಲಾರು ಗ್ರಾಮ.

—ಅರ್ಜಿದಾರರು.

1, 2, 3ನೆ ಅರ್ಜಿದಾರರ ತಂದೆ 4ನೆಯವಳೆಳ ಗಂಡ ತಾರೀಕು 2-9-1949ರಲ್ಲಿ ಮೃತ ಪಟ್ಟ ಲಕ್ಷ್ಮಿನಾರಾಯಣ ಯಾನೆ ಹರಿದಾಸ ಭಟ್ಟರಿಗೆ ಮಂಗಳೂರು ಪೊಲ್ಯಲರ್ ಯಿನ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಯಿದರ ಪೊಲಿಸಿ ನಂಬ್ರ 22670 ಪ್ರಕಾರ ಬಾತಕ್ಕ ರೂಪಾಯಿ 427-2-0 ಪಡಿಯುವ ಹಾಗೆ ವಾರಿಸ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಕ್ಷ ಮಾಡಿದ ಸದರಿ ಅರ್ಜಿಯು ತಾರೀಕು 16-11 49ಕ್ಕೆ ತನ್ನಿಗೆ ಯಿಟ್ಟಿದೆ. ಆಕ್ಷೇಪಣೆಯಿದ್ದವರು ಸದ್ರಿ ತಾರೀಕಿನ ಬೆಳಿಗ್ಗೆ 10ಗಂಟೆಗೆ ಸದರಿ ಕೋರ್ಟಿನಲ್ಲಿ ಜ್ಯಾಜೀರು ಮಾಡಿಕೊಳ್ಳಿಕ್ಕಡ್ಡ.

ಉಡ್ಪಿ 1-11-1949

K. L. Aithal,
Vakil for Petitioners.

ಏಡನೀರು— ಶಾಲೆಯ ಸರಸ್ವತಿಪೂಜೆಯಂದು ಶ್ರೀಗಳಾದ ಜಿ. ಹಿರಿಯಣ್ಣ ಶೆಟ್ಟಿ, ಸೈ. ಶ್ಯಾನು ಶೆಟ್ಟಿ ಇವರೂ ಸಭಿಕರ ಪರವಾಗಿ ಭಾಷಣ ಮಾಡಿದ್ದರು.

ಕಾಸರಗೋಡು— ಕೊಳ್ಳೂರು ರೇಶನ್ ಅಂಗಡಿಯ ವಹಿವಾಟಿನಲ್ಲಿ ಅಕ್ರಮಗಳಿಗೆ ತನ ಹರಿಜನೋದ್ಧಾರ ಸಹಕಾರ ಸಂಘದ ಮಹಾ ಸಭೆಯೊಂದು ಈಚೆಗೆ ಜರಗಿತು. ಸಂಘದ ಹರಿಜನ ಸದಸ್ಯರಿಗೆ ಕಡಿಮೆ ದರದಲ್ಲಿ ವಸ್ತ್ರಗಳನ್ನು ಒದಗಿಸುವ ವಿಷಾಡು ಮಾಡಬೇಕೆಂದಾಯಿತು.

ಕಾಸರಗೋಡಿನ ತಹಸಿಲ್ದಾರರಾದ ಶ್ರೀ ಬಿ. ನಾರಾಯಣರಾಯರು ತಾ. ೧೯ರಂದು ಸನ್ನಿಪಾತ ಜ್ವರ ನಿಮಿತ್ತ ಸ್ವರ್ಗಸ್ಥರಾಗಿರುವರೆಂಬುದು ವಿಷಾದಕರವಿದೆ.

ಕಳದ ತಾ 25ರಲ್ಲು ಕೊಳತ್ತೂರು ಗ್ರಾಮದಜನಿಯ ಮತ್ತು ಜೋಮು ಎಂಬ ಹರಿಜನರು ವಿಜಿಸ್ತ್ರಿ ವಿವಾಹ ಮಾಡಿಕೊಂಡರು. ಹರಿಜನರೊಳಗೆ ಈ ರೀತಿ ವಿಜಿಸ್ತ್ರಿವಾದುವೆಯು ಈ ಭಾಗದಲ್ಲಿ ನಡೆದುನು ಇದೀಗ ಪ್ರಥಮ ಸಲ.

ಬಂಟಕಲ್— ತಾ 22-10-49ರಲ್ಲಿ ವಿದ್ವಾನ್ ಶ್ರೀ ಬಿ. ಗೋವಿಂದ ನಾಯಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಸೇರಿ ಶ್ರೀ ಹಾಣೆ ವಾಚನಾಲಯ ಎಂಬ ವಾಚನ ಮಂದಿರವೊಂದು ತೆರೆಯಲ್ಪಟ್ಟಿದೆ.

ಕುಂದಾಪುರ— ತಾ 30-10-49ರಲ್ಲು ಹರಿಜನ ದಿನಾಚರಣೆಯು ಬಹು ವಿಜೃಂಭಣೆಯಿಂದ ಜರಗಿತು. ಬೆಳಿಗ್ಗೆ 7-30ಕ್ಕೆ ಸರಿಯಾಗಿ ಸ್ಥಳೀಯ ಸರಕಾರಿ ಉದ್ಯೋಗಸ್ಥರೂ ಕಾಂಗ್ರೆಸಿಗರೂ ಬರತಕಲ್ಲು ಹರಿಜನ ಕೊಲನಿಯನ್ನು ಸಂದರ್ಶಿಸಿ, ಸೌರ್ವಲ್ಮದ ವಿಷಯ ಪರಿಜನರಿಗೆ ತಿಳಿಯ ಹೇಳಿದರು. ಘಂ. 8-30ಕ್ಕೆ ಹರಿಜನ ಹಾಗು ಇತರ ಬಾಲಕರೊಳಗೆ ಪಂದ್ಯಾಟವೇರ್ಪಡಿಸಿ, ಆ ಮೇಲೆ ನೆರೆದವರಿಗೆಲ್ಲಾ ಸಿಹಿ ತಿಂಡಿ ಹಂಚಲಾಯಿತು. ಸಂಜೆ 4-30ಕ್ಕೆ ಸ್ಥಳೀಯ ಲೇಬರ್ ಶಾಲೆಯಲ್ಲಿ ನೆರೆದು ಭಜನೆಯನ್ನು ಆರಂಭಿಸಿ, ಅಲ್ಲಿಂದ ಮೆರವಣಿಗೆಯ ಮೇಲೆ ಗಾಂಧೀ ಮೈದಾನಕ್ಕೆ ಬಂದು ಅಲ್ಲಿ ಶ್ರೀ ಕೆ. ದೇವಣ್ಣ ಪೈಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಕೂಡಿತು. ಆಗ ಹರಿಜನ ದಿನಾಚರಣೆಯ ಗುರಿ, ಉದ್ದೇಶ ಇವುಗಳ ಕುರಿತು ಸ್ಥಳೀಯ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಎಂ. ಎಂ ಹೆಗ್ಡೆ, ಶ್ರೀ. ಬಿ. ಸಂಜೀವ ಆವರು ಮಾತನಾಡಿದರು. ಅಧ್ಯಕ್ಷರ ಭಾಷಣದ ತರುವಾಯ, ತಹಶೀಲ್ದಾರ್ ಶ್ರೀ ಕೆ. ದೇವೇಂದ್ರನವರ ವಂದನಾರ್ಪಣೆಯೊಂದಿಗೆ ಹರಿಜನರನ್ನು ಸ್ಥಳೀಯ ಕುಂದೇಶ್ವರ ದೇವಸ್ಥಾನಕ್ಕೆ ಕರದೊಯ್ದು ತೀರ್ಥಪ್ರಸಾದವನ್ನು ಸ್ವೀಕರಿಸಲಾಯಿತು.

ಭರಂಗಿಸೇಟಿ— ತಾ. ೨೦-10-49ರಲ್ಲಿ ಹರಿಜನೋದ್ಧಾರ ದಿನಾಚರಣೆಯು ಶ್ರೀ ರಾಮಾ ಹಾ ಎ ಶಾಲಾ ವಠಾರದಲ್ಲಿ ವಿಜೃಂಭಣೆಯಿಂದ ಶ್ರೀ ವೈ. ಗೋಪಾಲ್, ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್‌ವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳೊಳಗೆ ಆಟ ಪಂದ್ಯಾಟಗಳು, ಮೆರವಣಿಗೆಯಾದ ಬಳಿಕ ಶ್ರೀ ಕೆ. ಸಂಜೀವ ಕಂಬಳಿಗಳ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಮಾನ್ಯ ಡಿಪ್ಯುಟಿ ಕಲೆಕ್ಟರವರಿಂದ ಪಂದ್ಯಾಟಗಳಲ್ಲಿ ಗೆದ್ದವರಿಗೂ, ಹರಿಜನರಿಗೂ ಇನಾಮು ಹಂಚೋಣ, ಮುಂಗಳೂರು ತಾಲೂಕು ಕಹಶಿಲ್ದಾರರವರಿಂದ ಮತ್ತು ಊರ ಮಹನೀಯರಿಂದ ಭಾಷಣಗಳಾದುವು.

ಕಟಪಾಡಿ—ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯು 15ನೇ ವಾರ್ಷಿಕ ಮಹಾಸಭೆಯು ತಾ. 13-11-49ನೇ ಆದಿತ್ಯವಾರ ಮಧ್ಯಾಹ್ನ 2ಗಂಟೆಗೆ ಜರಗಲಿದೆ.

ಕುಂಬಳೆ— ಹೊಸತಾಗಿ ತೆರೆದ ಆರಿಕ್ಕಾಡಿ ಪಂಚಾಯ್ತ್ ಬೋರ್ಡಿಗೆ ಶ್ರೀ ಸೂರಪ್ಪನವರನ್ನೂ, ಬಾಡೂರು ಪಂಚಾಯಿತ್ ಬೋರ್ಡಿಗೆ ಶ್ರೀ ಬಿ. ರಾಮಯ್ಯ ಶೆಟ್ಟರನ್ನೂ ಆರಿಸಲಾಗಿದೆ.

ಬಾಡೂರಿನಲ್ಲಿ ತೆರೆದ ಗ್ರಾಮಸೇವಕ ಸಂಘದ ಅಧ್ಯಕ್ಷರಾಗಿ ಶ್ರೀ ಸುಬ್ರಾಯ ಮಯ್ಯರನ್ನೂ, ಕಾರ್ಯದರ್ಶಿಯನ್ನಾಗಿ ಶ್ರೀ ಎ. ರಾಮಕೃಷ್ಣ ಶೆಟ್ಟರನ್ನೂ ಆರಿಸಲಾಗಿದೆ.

ಬದಿಯಡ್ಕ ಎಂಬಲ್ಲಿಂದ ಕಳದ ವಾರ ಕಳ್ಳನೋಟು ಮಾಡುವ ಯಂತ್ರವನ್ನೂ, ಅ ಸಂಬಂಧವಾಗಿ ದೇಸಿಯಲ್ ಆರೋನ್, ಅನಂತಯ್ಯ, ಶಂಕರನಾರಾಯಣ ಶ್ಯಾನುಭಾಗ ಮುಂತಾದವರನ್ನೂ ದಸ್ತಗಿರಿಮಾಡಿರುವುದಾಗಿ ತಿಳಿದು ಬರುತ್ತದೆ. ಕೆಲವು ಕಳ್ಳ ನೋಟುಗಳು ಪೋಲೀಸಿನವರಿಗೆ ಸಿಕ್ಕಿರುವುದಾಗಿಯೂ ತಿಳಿಯುತ್ತದೆ.

ಕಾರ್ಕಳ ಸಾರ್ವಜನಿಕ ಸಭೆಯಲ್ಲಿ ಶ್ರೀ ಕೆ. ಕೆ. ಸೆಟ್ಟರ ವರ್ತನದ ಖಂಡನೆ.

ಮದ್ರಾಸು ಸರಕಾರದ ಮಾನ್ಯ ಮುಖ್ಯ ಮಂತ್ರಿ ಮತ್ತು ಒಕ್ಕಲುತನ ಮಂತ್ರಿಗಳ ಈ ಬಾರಿಯ ಜಿಲ್ಲಾ ಸಂದರ್ಶನದ ಕಾರ್ಯಕ್ರಮಗಳಲ್ಲಿ ಆವರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಲಹೆ ಸೂಚನೆಗಳನ್ನು ಪಡೆಯದಿರುವ ಕಾರಣ, ಆವರ ಸ್ವಾಗತೋಪಚಾರ ಇತ್ಯಾದಿ ಕಾರ್ಯಗಳಲ್ಲಿ ಯಾರೂ ಸಹಕರಿಸದೆ ಕಟಿಸ್ಥರಾಗಿ ತಮ್ಮ ನಿಷೇಧವನ್ನು ತೋರಿಸಬೇಕೆಂದು ಪ್ರಾಂತೀಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಮಾಗಡಿಯವರು ಇದ್ದ ಇಲ್ಲಿಯ ಕಾಂಗ್ರೆಸಿಗರ ಒಂದು ಸಭೆಯಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಾರ್ಯದರ್ಶಿ ಶ್ರೀ ಕೆ. ಕೆ. ಸೆಟ್ಟರು ಸ್ಪಷ್ಟವಾಗಿ ಹೇಳಿ ಸೂಚನೆಯನ್ನು ಕೊಟ್ಟು ಮಂತ್ರಿಗಳ ಕಾರ್ಯಕ್ರಮದ ಪ್ರಸಾಸ ಕಾರ್ಯಕ್ರಮದಲ್ಲಿ ಇಲ್ಲಿಯ ಸರ್ಕಲ್ ಕಾಂಗ್ರೆಸ್ ಕಮಿಟಿಯನ್ನೂ ಇತರ ಕಾಂಗ್ರೆಸ್ ಕೆಲಸಗಾರರನ್ನೂ ತಟಿಸ್ಥರನ್ನಾಗಿ ಮಾಡಿದ ನೀಲ ತಾಫ ನಮಾತ್ರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಇತರ ಪದಾಧಿಕಾರಿಗಳೊಂದಿಗೆ ಮಂತ್ರಿಗಳ ಕಾರ್ಯಕ್ರಮದಲ್ಲಿ ಹೇಳದೆ ಕೇಳದೆ ನೇರಿಕೊಂಡ ಶ್ರೀ ಕೆ. ಕೆ. ಸೆಟ್ಟರ ದ್ವಿಮುಖ ನೀತಿಯನ್ನು ನಿಷೇಧಿಸುವ ನಲುವಾಗಿ ಇದೇ ತಾ ೨೭ರಂದು ಶ್ರೀ. ಕೆ. ನರಸಿಂಹ ಪ್ರಭುಗಳ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿದ್ದಿತು. ಸಭೆಯಲ್ಲಿ ಡಾಕ್ಟರ್ ಕೆ. ಜಿ. ಕಾಮತ್, ಮತ್ತು ಶ್ರೀ ಆರ್. ದೇವರಾಯ ಶೆಣೈಯವರು ಶ್ರೀ ಸೆಟ್ಟರ ಮತ್ತು ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳ ವರ್ತನವನ್ನು ಟೀಕಿಸಿ ಮಾತನಾಡಿದ ಬಳಿಕ ಶ್ರೀ ಕೆ. ಕೆ. ಸೆಟ್ಟರ ವರ್ತನವನ್ನು ತೀವ್ರವಾಗಿ ಖಂಡಿಸುವ ಒಂದು ನಿರ್ಣಯವು ಸರ್ವಾನುಮತದಿಂದ ಮಂಜೂರಾಗಿ ಈ ಪ್ರಕರಣದಲ್ಲಿ ತಕ್ಕ ವಿಚಾರಣೆ ನಡಿಸಿ ಕಾಂಗ್ರೆಸ್ ಕಾರ್ಯಕರ್ತರಿಗೆ ನ್ಯಾಯಕೊಡಬೇಕೆಂದು ಪ್ರಾಂತೀಯ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಳ್ಳುವ ಒಂದು ಠರಾವು ಕೂಡ ಆದ ಮೇಲೆ "ವಂದೇ ಮಾತರಂ" ದಿಂದ ಸಭೆಮುಗಿಯಿತು. ಠರಾವಿನ ಪ್ರತಿಗಳನ್ನು ಅಖಿಲಭಾರತ ಕಾಂಗ್ರೆಸ್ ಕಮಿಟಿಯಿಂದಾರಂಭಿಸಿ ಸಂಬಂಧಪಟ್ಟ ಕಾಂಗ್ರೆಸ್ ಸಮಿತಿ ಮತ್ತು ಪದಾಧಿಕಾರಿಗಳಿಗೆ ಕಳುಹಿಸಿ ಕೊಡುವ ನಿರ್ಣಯ ಕೂಡ ಈ ಸಭೆಯಲ್ಲಾಗಿದೆ

(ನವಭಾರತ, ತಾ ೩೦-೧೦-೪೯)

ಉಡುಪಿ

ಶ್ರೀ ಆರ್- ಆರ್. ದಿವಾಕರರು:- ಕೇಂದ್ರ ಸಂಕಾರದ ಸುದ್ದಿ ಮತ್ತು ಬಾನುಲಿ ಕಾಖಾ ಮಂತ್ರಿಗಳಾದ ಮಾನ್ಯ ಶ್ರೀ ಆರ್. ಆರ್. ದಿವಾಕರರು ಇದೇ 3ನೇ ಗುರುವಾರ ಮಧ್ಯಾಹ್ನ ಉಡುಪಿಗೆ ಆಗಮಿಸಿ ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಅಪರಾಹ್ನ 2½ಗಂಟೆಗೆ ಸಾರ್ವಜನಿಕ ಭಾಷಣಮಾಡಲಿರುವರು.

ಹರಿಜನ ದಿನಾಚರಣೆಯು ಪುತ್ತೂರು ಟಪ್ಪಾಲುಕಟ್ಟೆ ಬಳಿ ತಾ 30ರಲ್ಲು ನಿವೃತ್ತ ಡಿಪ್ಯುಟಿ ಕಲೆಕ್ಟರ್ ಶ್ರೀ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ಗತಸಭೆಯ ವರದಿವಾಚನಗಳಾದ ನಂತರ ಶ್ರೀಗಳಾದ ಎಮ್. ವಿ. ಹೆಗ್ಡೆ, ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಸಂಜೀವರಾವ್, ಯು. ನಾಗಪ್ಪ ಕಾಮತ್, ವಾಮನ ಪೊಡಲಾದವರು ಹರಿಜನೋದ್ಧಾರ, ದೇವಸ್ಥಾನ ಪ್ರವೇಶ ಇತ್ಯಾದಿ ವಿಷಯಗಳನ್ನೆತ್ತಿ ಭಾಷಣಿತ್ತರು. ಅಧ್ಯಕ್ಷರು ಹರಿಜನ ಮಕ್ಕಳ ವಿದ್ಯಾಭ್ಯಾಸದ ಅವಶ್ಯಕತೆ, ಹರಿಜನರೊಳಗಿರುವ ಭೇದಭಾವನೆಯನ್ನು ನಿರ್ಮೂಲ ಮಾಡುವ ಅವಶ್ಯಕತೆ, ಇತ್ಯಾದಿ ವಿಷಯಗಳನ್ನು ವಿವರಿಸಿದರು. ಶ್ರೀ ಗೋವಿಂದನವರ ಧನ್ಯವಾದಾರ್ಪಣೆ, ಮಂಗಲಗೀತೆಯೊಂದಿಗೆ ಸಭಾಂತ್ಯವಾಯಿತು.

ಭಾಷಣ: ಶ್ರೀ ಕೆ. ಶಿವರಾವ್, ತಾರೀಕು ಕಳದ ತಾ 28ರಲ್ಲು ಮುಕುಂದ ನಿವಾಸದಲ್ಲಿ ಕರ್ನಾಟಕ ಪ್ರಾಂತ ರಜನೆಯ ಅವಶ್ಯಕತೆಯ ಕುರಿತು ವಿಚಾರಪರ ಭಾಷಣವಿತ್ತರೆಂದು ತಿಳಿದುಬರುತ್ತದೆ.

ತಾಲೂಕು ಆಹಾರ ಸಮಿತಿ ಸಭೆಯು ಇತ್ತೀಚೆಗೆ ಸಬ್ ಕಲೆಕ್ಟರ್ ಶ್ರೀ ಚಾರ್ಲ್ಸ್ ಜೋನ್, ಆವರ ಅಧ್ಯಕ್ಷತೆಯಲ್ಲಿ ಜರಗಿ ಸ್ಕೋರುಗಳಿಗೆ ರೈತರು ಒಪ್ಪಿಸಬಹುದಾದ ಭತ್ತವನ್ನು ಬಲವತ್ತರವಾದ ಕಾರಣಗಳಿಲ್ಲದೆ ನಿರಾಕರಿಸುವುದು ಸರಿಯಲ್ಲವೆಂದು ಸಮಿತಿಯ ಅಭಿಪ್ರಾಯವಾಯಿತು. ಉಡುಪಿ ತಾಲೂಕಿಗೆ ಅವಲಕ್ಕಿ ತಯಾರಿಕೆಗಾಗಿ ನಿಗದಿಸಲ್ಪಟ್ಟ ಭತ್ತವನ್ನು ಉಡುಪಿ ರೇಶನಿಂಗ್ ಕ್ಷೇತ್ರಕ್ಕೆ 5ಟನ್, ಉಡುಪಿ ರೇಶನ್ ಸರಪಡ್ಡಿನ ಸ್ಥಳಗಳಿಗೆ 2½ಬ್ರಹ್ಮಾವರ 2, ಕಾಪು 3 ಮತ್ತು ಕೋಟಿಕ್ಕೆ 2½ಟನ್‌ಗಳಂಕೆ ಹಂಚಲಾಯಿತು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ನಡೆಯುವ ಚಿತ್ರ ರಣಜಿತ್ ಚಿತ್ರದವರ

ಧನ್ನಾ ಭಗತ್

ಕಮಲ್ ಜಮೀನ್‌ದಾರ್, ಕಮಲ ಚಟರ್ಜಿ, ಯನ್ ಕಬೀರ್

ತಾರೀಕು 6—11—49ರಂದ

ವಿೂರಾ (ತಮಿಳು)

ಯಂ. ಯಸ್ ಸುಬ್ಬುಲಕ್ಷ್ಮಿ, ಚಿತ್ತೂರು ವಿ. ನಾಗಯ್ಯ

ತಾರೀಕು 12—11—49ರಂದ ಫಿಲ್ಮ್ ಸ್ಥಾನದವರ ಚಿತ್ರ

ಶಹೀದ್

ಕಾಮಿನಿ ಕೌಶಲ್ಯ ಮತ್ತು ದಿಲೀಪ್ ಕುಮಾರ್

ಬೊಂಬಾಯಿ-

ಕೆನರಾ ಸ್ವೀಮರು ಪ್ಯಾಸೆಂಜರ ಜನತೆಯ ಕ್ಷೇಮಚಿಂತನಾ ಕಮಿಟಿ ಯ ವತಿಯಿಂದ ತಾ. 13-11-49ನೆ ಆದಿತ್ಯವಾರ ಸಂಜೆ 3-30ಕ್ಕೆ ಕಾವಸಾಪಾಲ್, ಆಪೊಲೊ ಸ್ಟೀಟ್ಸ್‌ಫ್ಲೋರ್ಟಿನ್, ಬೊಂಬಾಯಿ ಈ ಸ್ಥಳದಲ್ಲಿ ಕೆನರಾ ಪ್ಯಾಸೆಂಜರರ ಸಾರ್ವಜನಿಕ ಸಭೆಯೊಂದು ಜರಗುವುದು. ಬೇರೆ ಬೇರೆ ಸ್ವೀಮರು ಕಂಪೆನಿಗಳು ಅನ್ಯಾಯವಾಗಿ ಲಾಭದೃಷ್ಟಿಯಿಂದ ಈ ಕರಾವಳಿಯ ಕನ್ನಡಿಗ ಪ್ರಯಾಣಿಕರಿಗೆ ಬಂದು ಹೋಗುವ ಸ್ವೀಮರು ಚಾರ್ಜನ್ನು ಯುದ್ಧಪೂರ್ವದಲ್ಲಿದ್ದುದಕ್ಕಿಂತ ಮೊದಲು ಬಾರಿ ಏರಿಸಿದ ವರ್ತನೆಯನ್ನು ನಿವೇದಿಸುವುದೂ, ಸ್ವೀಮರು ದರಗಳನ್ನು ನಿಯಂತ್ರಿಸುವ ಸಲಹೆಗಾರ ಮಂಡಲಿಯಲ್ಲಿ ಕನ್ನಡಿಗರಿಗೆ ಸ್ಥಾನ ಕೊಡಿಸುವ ಕೇಂದ್ರ ಸರಕಾರದ ಅಲಕ್ಷ್ಯದ ಬಗ್ಗೆ ಅಕ್ಕಪ್ಪಿಯನ್ನು ಸೂಚಿಸುವುದೂ ಈ ಸಭೆ ಕರೆದುದರ ಮುಖ್ಯೋದ್ದೇಶವಾಗಿದೆ.

ಮುಖ್ಯ ಮಂತ್ರಿ ಮಾನ್ಯ ಕುಮಾರಸ್ವಾಮಿರಾಜರು.

ಮದ್ರಾಸು ಸರಕಾರದ ಮುಖ್ಯ ಮಂತ್ರಿ ಮಾನ್ಯ ಶ್ರೀ ಸಿ. ಎಸ್. ಕುಮಾರ ಸ್ವಾಮಿ ರಾಜರೂ ಒಕ್ಕಲತನ ಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರೂ ಕಳೆದ ತಾ 25ರಲ್ಲಿ ಉಡುಪಿಯ ಕಾರ್ಯಕ್ರಮವನ್ನು ಮುಗಿಸಿ ಕೊಂಡು ಮೂಲ್ಕಿಗೆ ಆಗಮಿಸಿದಾಗ ಕಾಂಗ್ರೆಸ್ ಕೆಲಸಗಾರರೂ ಇತರ ಪ್ರಮುಖರೇ ಮೊದಲಾದವರು ಆವರ್ತೀರ್ವರನ್ನು ಸ್ವಾಗತಿಸಿ ಕರಿಸಿದರು. ಸರ್ಕಲ್ ಕಾಂಗ್ರೆಸ್ ಕಮಿಟಿಯವತಿಯಿಂದ ಮಾನ್ಯ ಮಂತ್ರಿಗಳಿಗೆ ಮನವಿಯೊಂದು ಕೊಡಲಾಯಿತು. ಮನವಿಯಲ್ಲಿ ಪ್ರಚಲಿತ ಹಲವಾರು ವಿಷಯಗಳೂ ಆ ಪ್ರಗಳ ನಿವಾರಣೆ ಬಗ್ಗೆ ಸಲಹೆಗಳೂ ಸೂಚಿಸಲಾಗಿತ್ತು. ಮಂತ್ರಿಗಳು ಅಲ್ಲಿಂದ ಹೊರಟು ಸಂಜೆ ಮಂಗಳೂರಿಗೆ ಬಂದರು.

ಮರುದಿನ ಬೆಳಿಗ್ಗೆ ಜಿಲ್ಲಾ ಎಜ್ಯುಕೇಷನಿಸ್ಟ್ಸ್ ಸೊಸೈಟಿಯ ಕಛೇರಿಯಿಂದ ಶ್ರೀಗಳಾದ ಎನ್. ಎಂ. ಅಡ್ಯಂತಾಯ, ಎಸ್. ಬಿ. ಪೆಂಕಟೇಶ ಪೈ ಮೊದಲಾದವರು ಮುಖ್ಯ ಮಂತ್ರಿಗಳನ್ನು ಭೇಟಿಯಾಗಿ ಜಿಲ್ಲೆಯ ಅಭಿವೃದ್ಧಿಗೆ ಬೇಕಾದ ಕೆಲವೊಂದು ಕೇಳಿಕೆಗಳನ್ನು ಮಂತ್ರಿಗಳ ಮುಂದಿಟ್ಟರು. ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಎಚ್. ನಾರಾಯಣರಾವ್ ಮೊದಲಾದವರಿಂದ ಕೂಡಿದ ಸಮಿತಿಯವರು ಜಿಲ್ಲೆಯ ನಾಗರಿಕರ ಪರವಾಗಿ ಒಂದು ಮನವಿಯನ್ನು ಅರ್ಪಿಸಿದರು. ಶ್ರೀಗಳಾದ ಎಸ್. ಎಸ್. ಸುವರ್ಣ, ಎಸ್. ಜಿ. ಸಾಲ್ಯೆನ್, ಎಸ್. ಎಸ್. ಕೆಲ್ಲೆ, ಮೊದಲಾದವರಿದ್ದ ಶಿಷ್ಟ ಮಂಡಲವು ಮುಖ್ಯ ಮಂತ್ರಿಗಳನ್ನು ಕಂಡು ಕಂಕನಾಡಿಯ ಕುಷ್ಠರೋಗಿಗಳ ಆಸ್ಪತ್ರೆಯ ವಿಸ್ತರಣೆ ಕುರಿತು ತಮ್ಮ ಅಕ್ಷೇಪಣೆಗಳನ್ನು ಮುಖ್ಯ ಮಂತ್ರಿಗಳ ಮುಂದಿಟ್ಟರು. ಶಿಷ್ಟಮಂಡಲಗಳ ಕೆಲ್ಲುವುಗಳ ಮನವಿಗಳನ್ನು ಪರಾಂಬರಿಸುವುದಾಗಿ ಪ್ರಧಾನಿಗಳು ಆಶ್ವಾಸನೆಯಿತ್ತರು. ಬಳಿಕ ಮಂತ್ರಿಗಳು ಕುಂಬಳೆ ಫಿರ್ಕಾಭಿವೃದ್ಧಿ ಕೇಂದ್ರವನ್ನು ಸಂದರ್ಶಿಸಿದರು.

ಫಿರ್ಕಾಭಿವೃದ್ಧಿ ಸಮಿತಿಯ ಅಧ್ಯಕ್ಷ ಜಿಲ್ಲಾ ಕಲೆಕ್ಟರರು ಮಂತ್ರಿಗಳನ್ನು ಸ್ವಾಗತಿಸಿ ರಸ್ತೆ, ಶಿಕ್ಷಣ, ಜಾನಿತೋಡುಪುದು. ಸಾರ್ವಜನಿಕ ಆರೋಗ್ಯ, ಆಹಾರ ಉತ್ಪತ್ತಿ, ವಿಮಾನಗಾರಿಕೆ, ಸಹಕಾರ ಚಟುವಟಿಕೆಗಳಲ್ಲಿ ಫಿರ್ಕಾಭಿವೃದ್ಧಿ ಸಮಿತಿಯು ಸಾಧಿಸಿದ ಕಾರ್ಯ ಕಲಾಪಗಳನ್ನು ವಿವರಿಸಿದರು. ಪ್ರಧಾನರು ಹಳ್ಳಿಗಳಲ್ಲಿ ಸ್ವಾವಲಂಬನ, ಸ್ವಯಂಪೂರ್ಣತೆ, ಹಾಗೂ ಸಾಮೂಹಿಕ ಜೀವನವು ನಡೆಯುವಂತೆ ಹಳ್ಳಿಗರನ್ನು ತರಬೇತು ಮಾಡುವುದು ಫಿರ್ಕಾಭಿವೃದ್ಧಿ ಕೇಂದ್ರದ ಉದ್ದೇಶ. ಮುಂದಿನ ವರ್ಷ ಪ್ರತಿ ಜಿಲ್ಲೆಯಲ್ಲೂ ಇಂಥ ಕೇಂದ್ರಗಳನ್ನು ತೆರೆಯಲಾಗುವುದು. ಜನರು ಇದು ಯಶಸ್ವಿಯಾಗುವಂತೆ ಸರಕಾರಕ್ಕೆ ಸಹಕಾರವನ್ನೀಯಬೇಕೆಂದರು. ಶ್ರೀ ಎಸ್. ಎಸ್ ಕೆಲ್ಲೆಯವರು ಇವರ ಭಾಷಣವನ್ನು ಕನ್ನಡಿಸಿದರು.

ಶ್ರೀ ಎ ಬಿ. ಶೆಟ್ಟರು ಫಿರ್ಕಾಭಿವೃದ್ಧಿ ಯೋಜನೆಯನ್ನು ಸರಕಾರವು ಕೈಕೊಳ್ಳಬೇಕೆಂದು ಸ್ಪಷ್ಟಯಿಸುವ ಮೊದಲೇ ಧನಿಕರೂ ಸೇವಾ ಭಾವವುಳ್ಳವರೂ ತಮ್ಮ ಸಹಾಯವನ್ನು ಕೊಡಲು ಮುಂದೆ ಬರಬೇಕೆಂದರು. ಕುಂಬಳೆ ಫಿರ್ಕಾಭಿವೃದ್ಧಿಗಾಗಿ ಶ್ರಮಿಸುತ್ತಿರುವ ಶ್ರೀ ಜಾಬುಸೆಟ್ಟರ ಕಾರ್ಯವನ್ನು ಕೊಂಡಾಡಿದರು. ಶ್ರೀ ಎ ವಿ. ಆರ್. ಪೂಂಜರು ಧನ್ಯವಾದಾರ್ಪಣೆಮಾಡಿದರು.

ಕುಂಬಳೆಯಿಂದ ಮಂತ್ರಿದ್ವಯರು ಬದಿಯಡ್ಕಕ್ಕೆ ಬಂದಾಗ ಶ್ರೀ ಎಸ್. ಈಶ್ವರ ಭಟ್ ನಟ್ಟನಿಕೆಯವರು ಕುಷ್ಠರೋಗ ನಿವಾರಣೆಯಕುರಿತು ಭಿನ್ನಹವೊಂದನ್ನರ್ಪಿಸಿದರು. ಆನಂತರ ಪಲಾರದಲ್ಲಿ ಮಹಾತ್ಮಾ ಗಾಂಧಿಸ್ಮಾರಕ ರೇಡಿಯೋವಿನ ಲೌಕು ಸ್ಥಾಪನೆಯನ್ನೂ ಕಾನಾಡು ಸದಾಶಿವರಾವ್ ಸ್ಮಾರಕ ವಾಚ್ಯ ನಾಲಯವ ಉದ್ಘಾಟನೆಯನ್ನೂ ಮಾಡಿ ಮಂತ್ರಿಗಳೀರ್ವರೂ ವಿರುಗಿ ಕುಂಬಳೆಗೆ ತೆರಳಿ ಊಟತೀರಿಸಿ ಪುಂಗಳೂರಿಗೆ ಬಂದರು.

ಅಪರಾಹ್ನ 3ಗಂಟೆಗೆ ಮುಖ್ಯ ಮಂತ್ರಿಗಳು ಜಿಲ್ಲಾ ಕಾಂಗ್ರೆಸ್ ಕೆಲಸಗಾರರನ್ನು ಕಾಂಗ್ರೆಸ್ ಕಛೇರಿಯಲ್ಲಿ ಕಂಡರು. ಡಾ। ಯು. ಪಿ. ಮಲ್ಯರು ಸ್ವಾಗತವಿತ್ತರು. 'ಕಾಂಗ್ರೆಸ್ ಸಮಿತಿಗಳು ಇನ್ನೂ ತಮ್ಮ ಹೋರಾಟದ ಕಾಲದ ಗುಣಗಳನ್ನು ಬಿಟ್ಟಿಂತೆ ಕಾಣುವುದಿಲ್ಲ. ನಮ್ಮ ಸರಕಾರ, ನಮ್ಮ ನೌಕರರು, ನಮ್ಮ ಪೋಲೀಸು ಎಂಬ ಭಾವನೆಯು ಅಭಿವೃದ್ಧಿ ಹೊಂದಬೇಕೆಂದು ಮುಖ್ಯ ಮಂತ್ರಿಗಳು ಸೂಚಿಸುತ್ತಾ ಸೌಹಾರ್ದ, ಸಹಕಾರಗಳಿಂದ ದೇಶದ ಅಭಿವೃದ್ಧಿ ಸಾಧಿಸಬೇಕೆಂದು ಅಪೇಕ್ಷಿಸಿದರು.

ತಾ. 27ರಲ್ಲಿ ಸಂಜೆ ಜಿಲ್ಲಾ ವಾಣಿಜ್ಯ ಸಂಘವು ಮುಖ್ಯ ಮಂತ್ರಿಗಳನ್ನೂ ಕೃಷಿ ಮಂತ್ರಿಗಳನ್ನೂ ತಮ್ಮ ಕಚೇರಿಗೆ ಸ್ವಾಗತಿಸಿ ಮನವಿಯೊಂದನ್ನು ಅರ್ಪಿಸಿತು. ನಿಯಂತ್ರಣದಿಂದುಂಟಾದ ಕಷ್ಟಗಳು ಅದಕ್ಕೆ ಕಾರಣ ವೆಂದೂ ಅದೀ ಸಮಾಜದ ಒಂದು ವಿಭಾಗವನ್ನು ಹಳಿಯುವುದು ಸರಿಯಲ್ಲವೆಂದೂ ಮನವಿಯಲ್ಲಿ ಹೇಳಲಾಗಿತ್ತು. ಮಾತ್ರವಲ್ಲದೆ ನುಂಗಳೂರನ್ನು ಪ್ರಬುದ್ಧ ಬಂದರಾಗಿ ಮಾಪಡಿಸಬೇಕೆಂದು ಕೇಳಿಕೊಳ್ಳಲಾಗಿತ್ತು. ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ವಾಣಿಜ್ಯ ಸಂಘದ ಚಟುವಟಿಕೆಗಾಗಿ ಅದನ್ನು ರಿಜಿಸ್ಟರ್ ಮಾಡಿಸಿದಲ್ಲದೆ ನಿಯಂತ್ರಣವಾದೊಡನೆ ಸಾಮಗ್ರಿಗಳೆಲ್ಲ ಭೂಗತವಾಗುವ ಪರಾಪಡಕ್ಕೆ ಬೇಸರ ವ್ಯಕ್ತಪಡಿಸಿದರು. ಇಂತಹ ಪರಿಸ್ಥಿತಿಯಲ್ಲಿ ವ್ಯಾಪಾರಸ್ಥರು ದೇಶಸೇವೆಯನ್ನೇ ಎದುರಿಟ್ಟುಕೊಂಡು ತ್ಯಾಗಬುದ್ಧಿಯಿಂದ ಮುಂದೆ ಬರಬೇಕೆಂದರು. ಕಾರ್ಯದರ್ಶಿ ಶ್ರೀ ವಿ. ಆರ್. ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಸಂಜೆ ಅರಂಗಡಿಯ ನಂತರ ಪ್ರಧಾನ ಮಂತ್ರಿಗಳು ಎಸ್. ಕೆ ಸಿ. ಪಿ. ಡಬ್ಲ್ಯು ಹೋಲ್‌ಸೇಲ್ ಸ್ಟೋರ್ಸ್‌ಗೆ ಭೇಟಿಕೊಟ್ಟಾಗ ಶ್ರೀ ಮೊಳಹಳ್ಳಿ ಶಿವರಾಯರೇ ಮೊದಲಾದವರು ಮಂತ್ರಿಗಳನ್ನು ಇದಿರ್ಗೊಂಡು ಸುಸ್ವಾಗತವಿತ್ತರು. ಪ್ರಧಾನಿಗಳು ಶ್ರೀ ಶಿವರಾಯರಿಗೊಂದು ಹೂಮಾಲೆಹಾಕಿ ಅವರ ದಕ್ಷತೆಯನ್ನು ಪ್ರಶಂಸಿಸಿ ಸಹಕಾರದ ಮಹತ್ವವನ್ನು ವಿವರಿಸಿದರು ಪ್ರಧಾನಿ ಕುಮಾರಸ್ವಾಮಿರಾಜರು ಕ್ಯೂಲ, ಉಜಿರೆ ಮಾರ್ಗವಾಗಿ ಧರ್ಮಸ್ಥಳವನ್ನು ಸಂದರ್ಶಿಸಿದರು. ಉಜಿರೆಯ ಕರ್ನಾಟಕ ವಿದ್ಯಾವಿಲಯದಲ್ಲಿ ಶ್ರೀ ಮಂಜಯ್ಯ ಹೆಗ್ಗಡೆಯವರೇ ಮೊದಲಾದ ಅಧಿಕಾರಿ ಪಾಜರಿದ್ದ ಸ್ವಾಗತ ಸಭೆಯಲ್ಲಿ ಕರ್ನಾಟಕ ಮಲೆನಾಡುಅಭಿವೃದ್ಧಿ ಸಂಘ ಹಾಗೂ ಬಲಾ ಪರ್ಗವಾರರ ಸಂಘಗಳ ಪರವಾಗಿ ಸಂಯುಕ್ತ ಮನವಿಯೊಂದನ್ನು ಶ್ರೀ ಎಸ್. ಎಸ್. ಭಿಡೆಯವರು ಒಪ್ಪಿಸಿದರು. ಜತೆಗೆ, ಮಲೆನಾಡಿನ ಸಮಗ್ರ ವಿವರಗಳನ್ನೊಳಗೊಂಡು ಅದನ್ನು ಸುಧಾರಿಸಿ, ಆಹಾರ ಹೆಚ್ಚುಳದ ನಾರ್ಗದಲ್ಲಿ ಎಷ್ಟರ ಮಟ್ಟಿಗೆ ಸುಧಾರಿಸಿಕೊಳ್ಳಬಹುದೆಂಬುದನ್ನು ಸಾಧಾರವಾಗಿ ನಿರೂಪಿಸಿದ್ದ ವರದಿಯನ್ನು ಅರ್ಪಿಸಲಾಯಿತು. ಶ್ರೀ ಜಿನರಾಜ ಹೆಗ್ಡೆರು ವರದಿಯನ್ನು ವಿವರಿಸಿ ಭಾಷಣವಿತ್ತರು. ಪ್ರಧಾನಿಗಳು ಉತ್ತರವೀಯುತ್ತಾ, ಶ್ರೀ ಕಾರಂತ ಹಾಗೂ ಶ್ರೀ ಜಿನರಾಜ ಹೆಗ್ಡೆಯವರಿಂದ ಇಲ್ಲಿನ ಪರಿಸ್ಥಿತಿಯನ್ನು ಮೊದಲೇ ತಿಳಿದಿದ್ದೇನೆ. ಈಗ ಸ್ವಾನುಭವವಾಯಿತು. ಮಲೆನಾಡು ಸುಧಾರಣೆಯ ಕುರಿತು ಏನುಮಾಡಲು ಸಾಧ್ಯವೋ ಅದನ್ನೆಲ್ಲಾ ಪರಿಶೀಲಿಸಲಾಗುವುದೆಂದರು."

ಕಂಕನಾಡಿಯಲ್ಲಿನ ಕುಷ್ಠರೋಗಿಗಳ ಆಸ್ಪತ್ರೆಯ ಕಟ್ಟಡದ ವಿಸ್ತರಣೆಯ ಶಂಕುಸ್ಥಾಪನೆಮಾಡುತ್ತಾ, ಕುಷ್ಠರೋಗ ಹಬ್ಬದಂತೆ ಸರಕಾರವು ಕೈಕೊಂಡ ಕಾರ್ಯವನ್ನು ತಿಳಿಸಿ ಕಂಕನಾಡಿಯ ಕೇಂದ್ರವನ್ನು ನಡೆಸುವವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಅವರನ್ನು ರೆ। ಫಾ। ಆರ್. ಪಿಂಟೋರವರು ಸ್ವಾಗತಿಸಿದರು. ಶ್ರೀ ಎಮ್. ಗಿರಿಯಪ್ಪನವರು ಅಭಿನಂದಿಸಿದರು.

ಮರುದಿವಸ ಬೆಳಿಗ್ಗೆ ಪ್ರಧಾನ ಮಂತ್ರಿಗಳು ಮೈಲುಗಾಡಿಯಲ್ಲಿ ಮಧುಗೆಯತ್ತ ಕಚೆ ತೆರಳಿದರು.

ಶ್ರೀ ಎ. ಬಿ. ಶೆಟ್ಟರು ತಾ 29ನೇ ಮಧ್ಯಾಹ್ನ ಕಾಸರಗೋಡಿಗೆ ಹೋಗಿ ಅಲ್ಲಿ ಶ್ರೀ ಪಕೇಲ್ ಶ್ಯಾಮಕೆಟ್ಟರ ತೈಲಚಿತ್ರ ಅನಾವರಣ ಸಮಾರಂಭ ನೆರವೇರಿಸಿಕೊಂಡು ಸಂಜೆ ಮಂಗಳೂರಿಗೆ ಬಂದರು. ಮರುದಿನ ಬೆಳಿಗ್ಗೆ ಮದ್ರಾಸಿಗೆ ತೆರಳಿದರು.

ಪುತ್ತೂರು— ಇಲ್ಲಿಯ ರೆ। ಫಾ। ಅಂತೋನಿ ಪತ್ತೋ ಅವರ ಮೇಲ್ವಿಚಾರಣೆಯಲ್ಲಿ ಪೊಸತಾಗಿ ಕಟ್ಟಿಸಿದ ಕಟ್ಟೋಣದಲ್ಲಿ ಕಳದ ತಾ. 24ರಲ್ಲಿ 'ಸೈಂಟ್ ಫಿಲೋಮಿನಾ' ಹುಡುಗರ ಹೈಸ್ಕೂಲು ಉದ್ಘಾಟನಾ ಸಮಾರಂಭವನ್ನು ಡಿ। ಮುನ್ಸಿಫ್, ವಿ। ಗೊನ್ಸಾಲ್ವಿಸ್ ಅವರು ಯಶಸ್ವಿಯಾಗಿ ನೆರವೇರಿಸಿದರು. ಈ ಸಂದರ್ಭದಲ್ಲಿ ಶ್ರೀಗಳಾದ ಕೆ. ಎನ್. ಮುಳ್ಳು, ಯು. ಮಂಗೇಶರಾವ್, ಮಾರ್ಟಿನ್ಸ್ ಮೊದಲಾದವರು ಹೈಸ್ಕೂಲಿನ ಶ್ರೇಯಸ್ಸನ್ನು ಕೋರಿ ಮಾತನಾಡಿದರು.

ಶೋಚನೀಯ ಮರಣ— ಇಲ್ಲಿಯ ಶ್ರೀ ಗಜಪತಿ ಕುದುವರ ಪುತ್ರ ಶ್ರೀಮತ ಸ್ವರ್ಣಲತಾ ಅವರು ತನ್ನ ಗಂಡನು ಬಂಟ್ವಾಳದಲ್ಲಿ ವಿಶೇಷ ಕಾಯಿಲೆಯಲ್ಲಿದ್ದುದನ್ನು ನೋಡಲು ಬಂಟ್ವಾಳಕ್ಕೆ ಕಳದ ತಾ 26ರಲ್ಲಿ ಹೋದವರು ಅಲ್ಲಿ ತನ್ನ ಗಂಡನು ಗುಣಮುಖರಾಗಲಾರರು ಎಂದು ತಿಳಿದು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರೆಂದೂ, ಈ ಘಟನೆ ನಡೆದು ಕೆಲವೇ ತಾಸುಗಳ ನಂತರ ಅವರ ಪತಿಯೂ ಮರಣಪಟ್ಟರೆಂದೂ ಖೇದ ಪೂರ್ವಕ ಸಾರ್ತೆಬಂದಿದೆ.

ನೋಟೀಸು.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. P No. 55/1949

1) ಗುಲಾಬಿ ಸಿದ್ದಿ

2) ನಾಥು (3)ಸೀತಾರಾಮ, ಮೈನರರು, —ಅರ್ಜಿದಾರರು.

ಮತ್ತು

1) ಲಕ್ಷ್ಮಿಸೆಟ್ಟಿ, (2) ನಾಸುಸೆಟ್ಟಿ, (3) ಸಿದ್ದು ಸದ್ದಿ, (4) ಕೋಗ ಸೆಟ್ಟಿ — ಯೆದ್ರಿರು.

ಸದ್ರಿ ಯೆದ್ರಿರಿಗೆ ಮತ್ತು ಇತರ ಸಮಸ್ತ ಜನರಿಗೆ ಕೂಡಾ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಉಡ್ಪಿ ತಾಲೂಕು ಎಲ್ಲೂರು ಗ್ರಾಮದ ಮಾಣ್ಕೂರು ಹಡುಮನೆ ಕೊಲ್ಲಾ ಸೆಡ್ತಿರ ವ 4ನೇ ಎದ್ರಿ ಮಗ ಕುದ್ದು ಸೆಟ್ಟಿಯು ಮೃತ ಪಟ್ಟಿರುತಿದ್ದು, ಸದ್ರಿ ಮೃತನ ಸ್ವಾರ್ಜಿತದ ವ ಸ್ವಂತಪ ಬಾಬ್ತು ಎಲ್ಲಾ ಸೊತ್ತುಗಳಿಗೆ ಅರ್ಜಿದಾರರೇ ವಾರಿಸುದಾರರು ಎಂಬ ಸಬದಿನ ಮೇಲೆ ಅರ್ಜಿದಾರರು. ಮೃತನ ಸೊತ್ತುಗಳ ಅಂದರೆ assetsಗಳ ವಸೂಲಾತಿ ಬಗ್ಗೆ ತಮ್ಮ ಹೆಸರಲ್ಲಿ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಮೇಲ್ಕಾಣಿಸಿದ ಅರ್ಜಿ ಬರಕೊಂಡಿದ್ದಾರೆ. ಆ ಪ್ರಯುದಿಂದ ಈ ಕುರಿತು ಯಾರಿಗಾದರೂ ಆಕ್ಷೇಪಣೆ ಹೇಳುವುದಿದ್ದರೆ ಅವರು ತಾ. 22-11-1949ನೇ ದಿನ ಹಗಲು 10 ಗಂಟೆಗೆ ಸದ್ರಿ ಕೋರ್ಟು ನುಂದೆ ಹಾಜ್ರಾಗಿ ಅವರ ಆಕ್ಷೇಪಣೆಗಳನ್ನು ಜ್ಯಾಹೀರು ಮಾಡಿ ರುಜು ಪಡಿಸಿಕೊಳ್ಳತಕ್ಕದ್ದು. ತಪ್ಪಿದರೆ ಸದ್ರಿ ಅರ್ಜಿಯು ಆರ್ಜಿದಾರರ ಗುಣಕ್ಕೆ ತೀರ್ಮಾನಿಸಲ್ಪಡುವುದು ಎಂದು ಸಂಗ್ತಿ ಈ ಮೂಲಕ ತಿಳಿಸೋಣವಾಗಿಯಿದೆ.

ಕಾರ್ಕಳ
25-10-49

K. M. Hegde,
ಆರ್ಜಿದಾರರ ವಕೀಲ.

ವಿವಿಧ ವಾರ್ತೆಗಳು

ಯಾವತ್ತೂ ವಿಧವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ವಾರ್ತೆಗಳೂ ನಾಮಾವಳಿಗಳೂ ರಮಣೀಯವಾಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಪಾರಿಯಾರ್ಯ,
ರಥಬೀದಿ, ಉಡುಪಿ.

ಪೆರಿಸಿನೆ ಸೌಂದರ್ಯ!

ಪೆರಿಸ್ ಮತ್ತು ಅಮೆರಿಕದ ಅತಿ ಸುಂದರ ತರುಣಿಯರೆ ಗುಪ್ತ ಪ್ರೋಸ್‌ನ ನವೀನ ನಗ್ನ ಚಿತ್ರಗಳ ಸಂಗ್ರಹವು ಈಗ ತಾನೆ ಬಂದಿವೆ. ಸ್ವಾಭಾವಿಕ ನೋಟಗಳು ಬಹು ಸ್ಪಷ್ಟವಾಗಿವೆ. ಹೆಚ್ಚಿನ ವಿವರವು ನಾಗರೀಕತೆಗೆ ವಿರುದ್ಧ. ಈ ಚಿತ್ರಗಳನ್ನು ನೀವು ನೋಡಿದ್ದಿರೆ ನೀವು ಏನೂ ನೋಡದಂತೆ. ಬೆಲೆ ಸಣ್ಣ ಸೆಟ್‌ಗೆ ರೂ. 2-8-0. ದೊಡ್ಡ ಸೆಟ್‌ಗೆ(ವಿಶಿಷ್ಟಪ್ರೋಸ್) ರೂ. 4-0-0 ಮಾತ್ರ. ಸಂಗ್ರಹ ಹೆಚ್ಚಿಲ್ಲ ಕೂಡಲೇ ಬಿರ್ದರು ಕೊಡಿರಿ. ಅಂಚೆವೆಚ್ಚ ಪ್ರತ್ಯೇಕ.

Moonlight Traders.
(N-W-U)
Lothian Road, Delhi

ಅಮೃತಾಂಜನ

ತಲೆನೋವಿನೆ, ಶಿರೋನೋವಿನೆ, ಉಳುಕು ಕುತ್ತಿಗೆ, ಭುಜಪಲ್ಲು ನೋವಿನೆಗಳಿಗೂ, ಎದೆನೋವು, ಹೊಟ್ಟೆಯಗಳು, ಬಾವುಕೊಳ್ಳುವುದು, ಚೇಳವಿಷಮುಂತಾದವು, ಸರ್ಪಘಾತ,ಹೊಡಿನೆ ಮೊದಲಾದ ಎಲ್ಲಾ ರೋಗಳಿಗೂ ಸಿದ್ಧೌಷಧ.

REGD
ಹುಳುಕಡ್ಡಿ ಮದ್ದುನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದ್ರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Notice.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. 391/1949

P. ವಾಸುದೇವರಾವ್ ... ... ವಾದಿ.

ಮತ್ತು

ಶೇಷಗಿರಿ ನ್ಯಾಕ ಕೂಡಾ ... ಪ್ರತಿವಾದಿರು.

ಇವರೊಳಗೆ

ಉಡ್ಪಿ ತಾಲ್ಲ್ಯ ಪೆಜಮಂಗೂರು ಗ್ರಾಮವ ಪೆ ಕೊಕ್ಕರ್ಡೆಯಲ್ಲಿರುವ ಮಹಾಲಿಂಗ ನಾಯಕರ ಆಳಿಯ। ನೇ ಪ್ರತಿವಾದಿ ಶೇಷಗಿರಿ ನ್ಯಾಕ ಮತ್ತು ಇವರ ಸೊಸೆ 6ನೇ ಪ್ರತಿವಾದಿಗಳಾದವರಾದ ಜ್ಯೂ ಕೂಡಾ 2ಜನರಿಗೆ —

ಪ್ರತಿವಾದಿರು encroach ಮಾಡಿದ ಸಾವಾ B ಮತ್ತು C ಪೆಡ್ಯೂಲಿನ ಸ್ಪಿರಾಸ್ತಿಗಳನ್ನು ಹುಟ್ಟುವಳ್ಳಿ ಸಮೇತ ಸ್ವಾಧೀನತೆ ಕೊಡಿಸಬೇಕಾಗಿ ವಗೈರೆ ನಿವೃತ್ತಿ. ಕೇಳಿ ವಾದಿಯು ದಾಕ್ಲು ಮಾಡಿದ ಮೇಲ್ಕಂಡ್ಯಾಜ್ಞಪ್ತಿ ತಾ. 7-11-49ಕ್ಕೆ ತನ್ನಿಗೆ ಇಟ್ಟುರುತ್ತದೆ. ಸದ್ರಿ ವ್ಯಾಜ್ಯದಲ್ಲಿ ಮೇಲ್ಕಂಡ ಪ್ರತಿವಾದಿರು ಉದಪರಿಸುವಂತಾದಿದ್ದರೆ ತಾ. 7-11-49ನೇ ದಿವ್ಸ ಹಗಲು ಗಂಟೆ 10ಕ್ಕೆ ಅವರು ಈ ಕೋರ್ಟ್ ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಅವರ ಗೈರು ಹಾಜ್ರಿಯಲ್ಲಿ ಸದ್ರಿ ವ್ಯಾಜ್ಯವೆ ತೀರ್ಮಾನಿಸಲ್ಪಡುವುದು.

B. Vasudeva Rao,
Advocate for Plff.
CAMP: Udipi 29-10-49

ಸ್ವೀಕಾರ—ವಿಮರ್ಶೆ

೧. ಪಂಪಭಾರತ ಸಾರ.

ಹೊಸಗನ್ನಡ ಗದ್ಯಾನುವಾದಕರು: ಶ್ರೀ. ಜೆ. ಪಿ ರಾಜರತ್ನಂ. ಆವೃ. ಪ್ರಕಾಶಕರು: ಹಿಂದ್ ಕಿತಾಬ್ಸ್ ಲಿಮಿಟೆಡ್ (ಬೊಂಬಾಯಿ) ೧೧, ಜವಾಹರಲಾಲ್ ರಸ್ತೆ, ಲೇಖಾದ್ರಿ ಪುರ ಬೆಂಗಳೂರು ೩.

ಕನ್ನಡದಲ್ಲಿಯ ಆದಿಗ್ರಂಥನಾದ ಪಂಪ ಮಹಾ ಕವಿಯ ಪಂಪಭಾರತವನ್ನು ಹಳೆಗನ್ನಡದಿಂದ ಹೊಸಗನ್ನಡಕ್ಕೆ ಪರಿವರ್ತಿಸಲಾಗಿದೆ. ಪುಸ್ತಕದ ಕುರಿತು ಲೇಖಕರು "ಪಂಪ ಭಾರತವನ್ನು ಪ್ರೌಢವಾದ ದೀರ್ಘವಾದ ಸಂಸ್ಕೃತ ಸಮಾಸಗಳೂ, ಈಗ ಬಳಕೆಯಲ್ಲಿಲ್ಲದ ಹಳಗನ್ನಡವೂ ತುಂಬಿವೆ. ಈ ಸಾರಂಶದಲ್ಲಿ ಆ ಸಮಾಸಗಳನ್ನು ಸುಲಭವಾಗುವಂತೆ ಬಿಡಿಸುಕೊಟ್ಟು, ಆ ಕಾಲದ ಹಳಗನ್ನಡ ಸಮವಾದ ಈ ಕಾಲದ ಹೊಸಗನ್ನಡಗಳನ್ನು ತಂದು, ಈ ಪುಸ್ತಕವನ್ನು ರಚಿಸಿದೆ..." ಎಂದಿದ್ದಾರೆ. ಸಂಸ್ಕೃತದ ಇಲ್ಲವೆ ಹಳೆಗನ್ನಡದ ಸುದೀರ್ಘವಾದ ಸಮಾಸಗಳನ್ನು ಒಡೆಯುವಾಗ ಭಾವಕ್ಕೆ ಭಂಗ ಬರಕೂಡದು! ಪದಲಾಲಿತ್ಯ-ಗಾಂಭೀರ್ಯ, ಸಂದರ್ಭಕ್ಕನುಗುಣವಾಗಿ ಇಂಪಿನತಹದು ಪದ್ಯಸಾಹಿತ್ಯಕ್ಕೆ ಒಂದು ಅಲಂಕಾರವೇ. ಮೂಲದ ಚೆನ್ನುಹಿನಿದು ಪದ ಪದಾನುವಾದ ಮಾಡುವದರಲ್ಲಿ ಕವಿಹೃದಯವಿನಅಭಿಪ್ರಾಯವಷ್ಟೆ ತಿಳಿಯಬಹುದು ಹೊರತು ಸಾಹಿತ್ಯದ ಸೊಗಸನ್ನಲ್ಲ! ಪಂಪ ಭಾರತ ಸಾರ (ಸೂರ್ಯಭಾಗ) ದಂತಹ ಸುಮಾರುಇನ್ನೂರು ಪುಟದಬೃಹದ್ಗ್ರಂಥದಲ್ಲಿನಾವು ಕಾಣುವುದು ಕೇವಲ ನೀರಸವಾದ ಅನುವಾದವನ್ನೇ. ಇದು ಕನ್ನಡದಲ್ಲಿ ಹೊಸ ಪ್ರಯೋಗವಾಪರೂ, ಹಳೆಗನ್ನಡದಪರಿಚಿತಿಯಾಗುವದೆಂದು ನೀರೀಕ್ಷಿಸಿದ್ದರೂ ಕಾವ್ಯಭಾಗದ ರಸಾಸ್ವಾದನೆಯನ್ನು ಈ ಗದ್ಯಾನುವಾದದಿಂದ ಪಡೆಯಲಾರೆವು. ಕತೆ ಎಲ್ಲರಿಗೂ ತಿಳಿದಿದೆ. ವೇಳಾವದರಲ್ಲಿ ನಾವೀನ್ಯತೆಯಿದ್ದರೆ ತಾನೆ ಮೆಚ್ಚಜೇಕು. ಇದನ್ನೋದಿ "ಪಂಪಭಾರತ ವೆಂದರೆ ಇಷ್ಟೆಯೇ?" ಎನ್ನುವುದು ಸ್ವಾಭಾವಿಕ. ಅಭ್ಯಾಸಿಗಳಿಗೆ, ವಿದ್ಯಾರ್ಥಿಗಳಿಗೆ, ಕೊಂಚಮಟ್ಟಿಗೆ ಹಳಗನ್ನಡಾಭ್ಯಾಸಿಗಳಿಗೆ ಸಹಾಯಕವಾಗಬಹುದು! ಮನವನ್ನು ಸೆಳೆಯುಬಲ್ಲ ಕಾವ್ಯ ಇಲ್ಲವಾದರೂ ಹಳಗನ್ನಡದ ನೇರಾದ ಅನುವಾದ (ಅಂದರೆ ಪದಗಳ ಅರ್ಥವನ್ನು) ತಿಳಿಯಬಹುದು. ಸಂಸ್ಕೃತ ಪಂಡಿತರು ಸಂಸ್ಕೃತ ಸಾಹಿತ್ಯವನ್ನು ಕನ್ನಡಕ್ಕೆ ಬಿಟ್ಟು ಇಳಿಸುವ ವೇಳೆ(ರಘುವಂಶದಲ್ಲಿ)"ಹೋಗಲ್ಬಟ್ಟು ಭತ್ತಭಾಪುರಾದಿ ಉಳ್ಳಂಥಾ ಶ್ರೀ ರಾಮಚಂದ್ರ ದೇವರು" ಎಂದು ಹೇಳಿದ ಸನ್ನಿವೇಶದ ಹಾಗೆಯೆ ಕೆಲವು ಸನ್ನಿವೇಶ ಪಂಪಭಾರತದಲ್ಲಿ ಸಿಗುತ್ತವೆ! ಅಂತೂ ಪಂಪಭಾರತಸಾರ ಜನಪ್ರೀತವಲ್ಲ; ಪಂಡಿತ ಮಾನ್ಯವೂ ಅಹುದು!

೨ ಕುಲವಿಲ್ಲದ ಹೆಣ್ಣು.

(ಸಾಮಾಜಿಕ ಕಾದಂಬರಿ) ಅನುವಾದಕರು: ಶ್ರೀ. ಪಿ. ಮೆಕೋಬ ಆಚಾರ್ಯ ಬಿ. ಎ. ಬಿ. ಟಿ. ಹುಬ್ಬಳ್ಳಿ, ಪ್ರಕಾಶಕರು: ಅರವಿಂದ ಕಾರ್ಯಾಲಯ, ಉಡುಪಿ.

ಕುಸುಮಾಳಳ ತಾಯಿ ನೇತ್ರಾಕುಲದವಳು. ತಂದೆ ಬ್ರಾಹ್ಮಣ. ಕುಸುಮಾ ಸ್ವಾಯಕ್ಕೆ ಬರುವ ಮುನ್ನ ತಾಯಿ ತೀರಿ ಕೊಂಡಿದ್ದಳು. ತಂದೆಯಾದ ಶ್ರೀಧರರಾಯರೂ ಮರಣವನ್ನು ಬೆಳೆಸಿ ದೊಡ್ಡವಳನ್ನಾಗಿ ಮಾಡಿದ! ಅವಳ ಭವಿಷ್ಯ ಜೀವನದ ಕುರಿತು ಯೋಚಿಸುತ್ತಿದ್ದ! ತನ್ನ ನಂತರ ಕುಸುಮಾಳ ಪಾಡೆಂತಹದೆಂದು ಯೋಚಿಸಿದಾಗಲೆಲ್ಲ ತುಂಬ ವೇದನೆಯಾನುಭವಿತ್ತ. ಒಂದು ದಿನ ತಾನು ಅಸ್ವಸ್ಥದ ಹೊನೆಯ ಪೆಟ್ಟಿಲಲ್ಲಿರುವಾಗ ತಮ್ಮ ನಾದ ಗೋಪಾಲರಾಯನಿಗೆ ಹೇಳಿಕಳಿಸಿ ತನ್ನ ನಂತರ ಕುಸುಮಾಳನ್ನು ಮಗಳಂತೆ ನೋಡಬೇಕೆಂದು ಕೇಳಿದ. ಗೋಪಾಲರಾಯ ನೋ ಬೆಂಕಿಯಂತಹ ಮನುಷ್ಯ! 'ಹೀನ ಜಾತಿಯವಳೊಡನೆ ಕೂಡಿಕೊಂಡು ನಾಯಿ ಬಾಳು ಮಾಡಿದ ಹಾಗೆ ಸಂಸಾರದ ಮತ್ತು ಸಮಾಜದ ವಿರೋಧವಾಗಿ ನಾನು ವರ್ತಿಸಲಾರೆ', ಎಂದು ಬಿಟ್ಟ. ಮುತ್ತೆ ಅಣ್ಣನ ಆಸ್ತಿ ಸಂಪತ್ತುಗಳು ಅತನನ್ನು ಮೋಹಿಸಿದವು. ಒಪ್ಪಿಕೊಂಡ. ಶ್ರೀಧರ ತೀರಿಕೊಂಡ. ಆಸ್ತಿ ಪಾಸ್ತಿಯೆಲ್ಲ ತಮ್ಮನ ಪಾಲಾಗುತ್ತದೆ. ಕುಸುಮಾ ಗೋಪಾಲರಾಯನೊಡನೆ ಅವನ ಮನೆಗೆ ಹೋಗುತ್ತಾಳೆ. ಅಲ್ಲಿ ಬ್ರಾಹ್ಮಣರ ನಡುವೆ ಆಕೆಯ ಬದುಕು ಮರಣಕಷ್ಟವಾಗಿ ಕಂಡಿತು. ಮುಟ್ಟಲಿಕ್ಕಿಲ್ಲ; ಅಚೀಜಿ ಮನೆ ಬಿಟ್ಟು ಹೊರಹೋಗಲಿಕ್ಕಿಲ್ಲ. ಹೆಜ್ಜೇಕೆ. ನೆರಮನೆಯ ಮಗುವನ್ನುಮುದ್ದಿಸಹೋಗಿ ಆಕೆಯು ಹೀನಾಯವಾದ ಮಾತನ್ನು ಕೇಳಬೇಕಾಯಿತು. ಈ ತರಹದ ನರಕಯಾತನೆಯಿಂದ ಆವಳು ಬಾರಾಗಿ ದೊಡ್ಡ ತಾಯಿಯಾದ ಅನುಸೂಯಳಲ್ಲಿಗೆ ಹೋಗುತ್ತಾಳೆ. ಅಲ್ಲಿ ಕುಸುಮಾಳಿಗೆ ಸ್ವಾತಂತ್ರ್ಯವಿತ್ತು. ಆದರಾತಿಥ್ಯಗಳಿಗೂ ಕಡಿಮೆಯಾಗಿರಲಿಲ್ಲ. ಮನೆಯ ಹಾಗೆಯೆ ಯಾವ ಕೊರತೆಯನ್ನೂ ಅನುಸೂಯ ತೋರಿಸುತ್ತಿರಲಿಲ್ಲ. ಅನುಸೂಯ ಬೀಸಿದ ಬಲೆ ಕುಸುಮಾಳಿಗೆ ತಿಳಿಯಲು ಹೆಚ್ಚು ದಿನ ಬೇಕಾಗಿರಲಿಲ್ಲ. ನಾಟಕ ಕಂಪನಿಯ ಮ್ಯಾನೆಜರ್ ಮುದುಕನಾದ ಸತ್ಯನಾರಾಯಣನಿಗೆ ಕುಸುಮಾಳನ್ನು ಧಾರೆಯೆರೆದು ಕೊಡುವ ಹಂಚಿಕೆಯನ್ನು ಸೂಡುವಳು. ಬೇಲಿಯೇ ಎದ್ದು ಹೊಲಮೇದರೆ ಮತ್ತೇನು ಳಿಯಿತು! ಕುಸುಮಾ ತತ್ತರಿಸಿದಳು. ಆಕೆ ನಟನಾದ ಪ್ರಭಾಕರನಲ್ಲಿ ಆನುರಕ್ತಳಾಗಿದ್ದಳು. ಅವನೂ ಕುಸುಮಳನ್ನು ತುಂಬ ಪ್ರೀತಿಸುತ್ತಿದ್ದ. ಇವರು ಅಭಿನಯಿಸುತ್ತಿದ್ದ ನಾಟಕದಲ್ಲೆಲ್ಲ ತುಂಬ ಹೆಣರುತ್ತಿತ್ತು. ಕಂಪೆನಿಯು ಬಲಗೊಳ್ಳುವ ಸ್ಥಿತಿಯಲ್ಲಿರುವಾಗ ಸತ್ಯನಾರಾಯಣ ರಾಯನಿಗೆ ಪ್ರಭಾಕರನು ಕುಸುಮಳನ್ನು ಪ್ರೀತಿಸುವುದೂ, ಪ್ರಭಾಕರರಿಗೆ ಕುಸುಮಾಳನ್ನು ರಾಯನು ಪ್ರೀತಿಸುವುದೂ ತಿಳಿದು ಘರ್ಷಣೆಯಾಗುತ್ತದೆ. ಪ್ರಭಾಕರ ಕಂಪೆನಿಬಿಟ್ಟು ದೂರಹೋಗುತ್ತಾನೆ ಕುಸುಮಾಳಲ್ಲಿ ತಪ್ಪು ಳಿಲ್ಲವೆ ಪಶ್ಚಾತ್ತಾಪ ಪಡಿಕೊಂಡು ಬೇರೆಯಾಗುತ್ತಾನೆ. ಕೊನೆಗೆ ಸತ್ಯ ಳಿಕೆಗೆ ಬಂದಾಗ ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು, ಬಾಳಿನ ಹೆಜ್ಜೆ ಯಿಡುತ್ತಾರೆ. ಇದು ಕುಲವಿಲ್ಲದ ಹೆಣ್ಣಿನ ಕಥೆ. ಸುಶೀಲೆಯಾದ ಹೆಣ್ಣು ಮಗಳೊಬ್ಬಳು ಊರಿನ ಜನದ ಬಾಯಿಯಲ್ಲಿ, ಬಂಧುಗಳೆಂದೆನಿಸಿಕೊಂಡವರ ಮಾತಿಲ್ಲಿ, ಹೇಗೆ ತನ್ನ ಬದುಕನ್ನು ನೂಕಿದಳೆಂದು ಕಾಣಬಹುದು. ಆಕೆ ಜಾತಿಹೀನೆಯೆಂದು ಎಲ್ಲರೂ 'ಇವಳು ನಮ್ಮ ಭೋಗವಸ್ತು'ವೆಂದು ಅಧಿಕಾರ ಚಾಲನ್ನು ನಾಡುವವರೇ. ಬ್ರಾಹ್ಮಣನೆಂದು, ಸತ್ಕುಲ ಪ್ರಸೂತನೆಂದು,|ಹೆಮ್ಮೆಕೊಚ್ಚಿಕೊಳ್ಳುವ ಗೋಪಾಲರಾಯನು ಅಬಲೆಯಾದ ಹೆಣ್ಣು ಮಗಳೊಬ್ಬಳನ್ನು ದಾರಿಗೆ ಹಾಕಿ, ಅವಳ ಆಸ್ತಿಯನ್ನು ನುಂಗುವುದಕ್ಕೆ ಒಂದಿಷ್ಟೂ ಹೇಸುವುದಿಲ್ಲ! ನಮ್ಮ ಜನಾಂಗದಲ್ಲಿರುವ ಪ್ರಬಲವಾದ ಜಾತೀಯತೆಯನ್ನು ಎತ್ತಿ ತೋರಿಸುತ್ತಿರುವ ಸುಂದರ ಕಥಾನಕ. ಅನುವಾದ ಕಾರ್ಯದಲ್ಲಿ ವೆಂಕೋಬಾಚಾರ್ಯರು ಪೂರ್ತಿ ಯಶಸ್ವಿಯಾಗದಿದ್ದರೂ ಹೃದಯಂಗವಾಗುವಂತೆ ಯತ್ನಮಾಡಿದಾರೆ.

—ಎಸ್ಸೆಲ್

In the Court of the Dt. Munsiff of Mangalore.

S. C. 534/1949

Between:

The Vijaya Bank Ltd — Plaintiff

and

M. B. Kunhi and — other Defendants.

To 1st deft. M. B. Kunhi S/o B. Achabba. Vessel owner.

2nd deft. Palliamma wife of. 1st Deft: both are residing at Bunder of Mangalore town.

Pleas take noticee that Plaintiff above named has filed the above suit for recovery of amount due under a hundi executed by you and the same is posted to 26-11 1949 You are hereby requesd to appear on that day in person or through a Vakil faling which the suit will be proceeded exparte.

(By order of Court)

(sd) **B M. Hegde**

Advocate for Plaintiff

Mangalore

Date 20-10-49



Approved firm by the Govt. of Mysore Certificated by the Agent of the Govt. of Cylone & Indian.

For Life Assurance

CONSULT

THE NEW GUARDIAN OF INDIA

LIFE ASSURANCE Co. LTD.

(Established: 1934)

Chairman: ri. M. C. T M Chida mbarma Chettyar.

A Policy in this progressive Life Office is a good investment; its Agency is a valuable business connection.

MANGALORE BRANCH: K. S. R. Road, Hampankatta, Mangalore.

HEAD OFFICE: United India Life Building, , MADRAS

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor, Manager.

Notice.

ಉಡ್ಪಿ ಡಿ ಮು ಕೋರ್ಟ್‌ನಲ್ಲಿ

R. E. P. No. 344/1949

O S. No 400/48

ಗೋಸಿ ಎಡ್ತಿ ... ... ಅರ್ಜಿದಾರರು.

ಮತ್ತು

ಮಾವಿಸ್ ಕೂಡಾ ... ... ಯೆದ್ರಿರು.

ಯಿವರೊಳಗೆ

1ನೇ ಯೆದ್ರಿ: ಮಾವೀಸ್. 2ನೇ ಯೆದ್ರಿ: ಟ್ರಿನರ್, ಜಾಕೋಬ ಫೆರ್ನಾಂಡಿಸರ ಮಕ್ಕಳು. ಉಡ್ಪಿ ತಾಲ್ಲೂ ಪಡುತೋನ್ಸೆ ಗ್ರಾಮದಲ್ಲಿರುವವರು.

ಮೇಲ್ಕಂಡ ಅನುಜ್ಞಾರ್ಥಿಯಲ್ಲಿ ಅರ್ಜಿದಾತಳು ಪ್ರಿಲಿಮಿನರಿ ಡಿಕ್ರಿಯಲ್ಲಿ ಜಪಾಬದಾರಿ ಇರುವ ಸ್ಥಿರಾಸ್ತಿ ಯೇಲಂ ಮಾರಾಟದ ಬಗ್ಗೆ ಹಾಜ್ರುಪಡ್ಸಿದ ಯಿಸ್ತಿಹಾರನ ಪರತಿನಿಣಯಿಸುವರೆ ತಾರೀಕು 17-11-49ಕ್ಕೆ ತಪ್ಪಿಗೆ ಯಿಯೋಣಾಗಿಯದೆ. ಆದುದರಿಂದ ಈ ಕುರಿತು ನಿಮ್ಮ ಆಕ್ಷೇಪಣೆಯಿದ್ರೆ ಮೇಲ್ಕಂಡ ತಾರೀಕು ಬೆಳಗ್ಗೆ 11 ಗಂಟೆಗೆ ಹಾಜರಾಗಲಿಕ್ಕೆ ತಪ್ಪಿದ ಸಂಗ್ತಿಯಲ್ಲಿ ಸದ್ರಿ ಅರ್ಜಿಯು ನಿಮ್ಮ ಯೆಕ್ಸಪಾರ್ಟಿಯಿಂದ ತೀರ್ಮಾನಿಸುವರೆಂಬ ಸಂಗ್ತಿ ಯೂ ಮೂಲ್ಕ ತಿಳಿಸೋಣಾಗಿಯದೆ.

K J Ballal,
Vakil for Petitioner.
Udipi
Date: 27-10-49

ನೋಟೀಸು.

ಕಾಸರಗೋಡು ಡಿ. ಮು. ಕೋರ್ಟ್‌ನಲ್ಲಿ

ಕ್ರಮ ನಂಬ್ರ 838/48

ಸಿ. ರಾಮ ಕಮ್ತಿ —ದಾವಿದಾರರು.

ಮತ್ತು

ಬಟ್ಟ ಬೆಳ್ಳಿಸ್ವಾಮಿ ಕೂಡಾ 13 ಜನ್ರು —ಪ್ರತಿವಾದಿರು.

ಸದ್ರಿ ನಂಬ್ರದ ಕಪ್ಲಿಮಂಟ್ 9ನೇ ಪ್ರತಿವಾದಿ, ತಳಂಗೈ ಗ್ರಾಮದ ಕಾಣನ ಅಳಿಯವ ಮೃತಪಟ್ಟ ಕಾರ್ಣವನ ಮಗ ಕೊರಗರಿಗೆ:

ಮೇಲ್ಕಂಡಕೋರ್ಟ್‌ನಲ್ಲಿ ವಾದಿಯು ಗೇಣಿ ಬಾಕಿ, ಮುಂದಿನ ಹುಟ್ಟುವಳಿ ಸಮೇತ ಆಸ್ತಿ ಸ್ವಾಧೀನತೆಗೆ ಕೂಡಾ ನಿಮ್ಮ ಮೇಲೆ ಸಹಾದಾಕ್ಕು ಮಾಡಿದ ಸದ್ರಿ ವ್ಯಾಜ್ಯವು ಇದೇ ಬರುವ ನವಂಬ್ರ ತಿಂಗಳ ತಾರೀಕು 8ನೇ ಮಂಗಳವಾರ ದಿನ ತಪ್ಪಿಗೆ ಇತ್ಯೋರ್ಣಾಗಿಯವೆಂದ ಈ ಮೂಲಕ ತಿಳಿಸೋಣಾಗುತ್ತದೆ.

C. M. Kamath, B. A. B. L.
Vakil for Plff.
Kasaragod
27-10-49

ತ್ರಸ್ಥ ದಾರಿಯಲ್ಲಿ ಇದ್ದ ಬಂದ ಎಲ್ಲ ಅಡೆತಡೆಗಳನ್ನು ಹೇಗೆ ದಾಟಿ ಪಾರಾಗಬೇಕೆಂಬುದನ್ನು ತಿಳಿದವನು ಮಾತ್ರ ಬದುಕಬಲ್ಲನು ಮತ್ತು ಸುಖದ, ತೃಪ್ತಿಯ ಹಾಗೂ ಉತ್ಕರ್ಷದ ಬಾಳನ್ನು ಬಾಳಬಲ್ಲನು. ಇದು ಪ್ರತಿ ವ್ಯಕ್ತಿಗೆ ಅನ್ವಯಿಸುವಂತೆ, ಲಕ್ಷೋಪಲಕ್ಷ ಜನರಿಂದ ತುಂಬಿದ ದೇಶಕ್ಕೂ ಸಂಬಂಧ ಪಡುವುದು. ಆದ್ದರಿಂದ ತನ್ನ ದಾರಿಯಲ್ಲಿ ಪ್ರತ್ಯಕ್ಷ, ಅಪ್ರತ್ಯಕ್ಷವಾಗಿ ಬಂದ ಎಲ್ಲ ತೊಂದರೆ ತೊಡಕುಗಳನ್ನು ಪಿಂಗಿ ನಿಲ್ಲಬಲ್ಲ ರೀತಿಗಳನ್ನು ಬಲ್ಲ ದೇಶವು ಮಾತ್ರ ಜೀರಂಜೀವಿಯಾಗಿಯೂ, ಸ್ವತಂತ್ರವಾಗಿಯೂ, ಉತ್ಕರ್ಷಪೂರ್ಣವಾಗಿಯೂ ಬಾಳಬಲ್ಲುದು.

ನಮ್ಮ ರೂಪಾಯಿಯ ಬೆಲೆ ಕಡಿತವು ಇಂದು, ನಮಗೆ ಅನೇಕ ತೊಂದರೆಗಳನ್ನೆ ದುರಿಸುವಂತೆ ಮಾಡಿದೆ. ಕೆಲವು ಅರ್ಥ ಶಾಸ್ತ್ರಜ್ಞರು, ಈ ರೂಪಾಯಿಯ ಬೆಲೆ ಕಡಿತದಿಂದ ಭಾರತವು ತೊಂದರೆಗೊಳಗಾವುದೆಂದು ಹೇಳುತ್ತಾರೆ; ಕೆಲವರು ಸ್ಟರ್ಲಿಂಗ್ ಕ್ಷೇತ್ರದೊಳಗಿನ ಉಳಿದ ಸರಕಾರಗಳೊಡನೆ ಸರಿಸಮ ಹೆಜ್ಜೆಯನ್ನಿಕ್ಕುವ ನಮ್ಮ ಸರಕಾರದ ಈ ಧೋರಣವನ್ನು ಹೊಗಳುತ್ತಾರೆ.

ಬೆಲೆ ಕಡಿತವನ್ನೂ ಅರಗಿಸಿಕೊಳ್ಳೋಣ

ಡಾ. ಹರ್ಡೀಕರ ಅವರಿಂದ

ಈ ಬೆಲೆ ಕಡಿತದಿಂದಾಗುವ ಲಾಭ ಹಾಗಿಗಳೇನೇ ಇರಲಿ, ನಾನು ಮಾತ್ರ ಇದು ನಮ್ಮ ಮತ್ತು ನಮ್ಮ ದೇಶದ ಬಳಿತಿಗಾಗಿಯೇ ಆಗಿದೆಯೆನ್ನುತ್ತೇನೆ. ನಮ್ಮ ಉಳಿದ ಕೊರತೆ ಬೇಕುಗಳೇನೇ ಇದ್ದರೂ ದುರ್ದೈವದಿಂದ, ದಿನದ ಅನ್ನಕ್ಕಾಗಿ ಕೂಡ, ನಾವು ಪರರನ್ನು ಅತಿಯಾಗಿ ಅವಲಂಬಿಸುವ ಚಟಕ್ಕೆ ಕೆದಿದ್ದೇವೆ. ಪರಾವಲಂಬನವು ಮನುಷ್ಯನನ್ನು ಸೋಮಾರಿ, ಕೈಕಾಲುಗೇಡಿ, ಪುಕ್ಕನನ್ನಾಗಿ ಮಾಡುತ್ತದೆ; ನಾವೂ ಅದೇ ಸ್ಥಿತಿಗಿಳಿದಿದ್ದೇವೆ. ಮಾನವ ಜೀವನಕ್ಕೆ ಅವಶ್ಯವಿರುವ ಆಹಾರ, ಮತ್ತು ಇನ್ನಿತರ ಸಾಮಾಗ್ರಿಗಳನ್ನು ಅವೇರಿಕೆಯು ನಮಗಾಗಿ ಮಾಡುತ್ತಿದೆ. ಮುಂದೆಯೂ ಹೀಗೆಯೇ ಆಗುವುದಾದಲ್ಲಿ ಹಾಗೂ ನಮ್ಮ ಬೇಕುಗಳಿಗಾಗಿ ಇಂಗ್ಲಂದದಂತಹದೇರಗಳನ್ನ ನಾವು ಅವಲಂಬಿಸಬೇಕಾದಲ್ಲಿ- ದೇವರು ಕಾಯಲಿ—ಭಾರತವು ಪುನಃ, ರಾಜಕೀಯವಾಗಿ ಅಲ್ಲದಿದ್ದರೂ ಆರ್ಥಿಕವಾಗಿ ದಾಸ್ಯ ರಾಷ್ಟ್ರವಾಗುವುದರಲ್ಲಿ ಸಂಶಯವಿಲ್ಲ. ಈ ಪರಿಸ್ಥಿತಿಯನ್ನು ತಡೆಯುವುದು ಅವಶ್ಯವಿದೆ.

ಈ ರೂಪಾಯಿಯ ಬೆಲೆಕಡಿತದಲ್ಲಿಯು ಕಾಣದ ಕೈಯೊಂದರ ಕೃತಿ, ನನಗೆ ಕಂಡು ಬರುತ್ತಲಿದೆ. ಇದರಿಂದ ಇನ್ನೇನಲ್ಲದಿದ್ದರೂ ನಾವು ಚಟುವಟಿಕೆಯುಳ್ಳವರೂ ಉತ್ಸಾಹಿಗಳೂ, ಧೈರ್ಯಶಾಲಿಗಳೂ ಆಗಿ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯವನ್ನು ಪಡೆಯಬೇಕು. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಹೆಚ್ಚು ಹೆಚ್ಚಾಗಿ ಉತ್ಪಾದನೆಯನ್ನು ಮಾಡಬೇಕು; ಮತ್ತು ನಾವು ಸ್ವತಂತ್ರವಾಗಿ, ಸಬಲವಾಗಿ, ತೃಪ್ತಿಯಿಂದ ಬೀಮಿಸಲು ಬರುವಂತೆ ಆದನ್ನು ಬಳಸಬೇಕು. ನಾವು ನಮಗೆ ಅವಶ್ಯವಿರುವ ಕಾಳು, ಹಪ್ತಿ, ಸಣಬು ಮತ್ತು ಉಳಿದ ಪದಾರ್ಥಗಳನ್ನು ಹೆಚ್ಚುಹೆಚ್ಚಾಗಿ ಉತ್ಪಾದಿಸಿದಂತೆ ಶೀಘ್ರವಾಗಿ ನಾವು ಈ ಬೆಲೆ ಕಡಿತದಿಂದಾದ ಪರಿಸ್ಥಿತಿಯನ್ನು ಎದುರಿಸಿ ಪಾರಾಗಬಲ್ಲೆವು. ಈ ಕಾರ್ಯದಲ್ಲಿ ಮೂಲ ಧನವಂತರು, ಉದ್ದಿಮೆದಾರರು, ವ್ಯಾಪಾರಿಗಳು, ಕೂಲಿಕಾರರು, ಕೆಲಸಗಾರರು, ಹಾಗೂ ಉಳಿದವರೆಲ್ಲರು ಪರಸ್ಪರ ಸಹಕಾರಿ, ಒಪ್ಪುರಿಯಿಂದ ಕೆಲಸಮಾಡಿ, ಭಾರತದ ಇಂದಿನ ಹೆಸರು ಕೀರ್ತಿಗಳಿಗೆ ಕಳಂಕ ತಟ್ಟದಂತೆ ನೋಡಿಕೊಳ್ಳಬೇಕು.

ಕೆಲಸಗಾರರು ಮತ್ತು ಒಡೆಯರು ಈ ವರ್ಷ ಕುಂಬಿಯ ನೋಲೆ ಕುಳಿತು ಚಿಕ್ಕ ಪುಟ್ಟ ಲಾಭದ ಕಲುವಾಗಿ ಪರಸ್ಪರ ವಾದಿಸುವುದನ್ನು ಮತ್ತು ಜಗಳಾಡುವುದನ್ನು ತೊರೆದುಬಿಡಬೇಕು. ತಮ್ಮ ತಮ್ಮೊಳಗಿನ ಕೆಲಸಗಳನ್ನು ಭದ್ರಪಡಿಸಿಕೊಂಡು, ಹಗಲು ರಾತ್ರಿ ಕೆಲಸ ಸಾಗಿಸಿ, ದೇಶದೊಳಗಿನ ಬಳಕೆಗೂ, ದೇಶದ ಹೊರಗಿನ ವ್ಯಾಪಾರಕ್ಕೂ ಸಾಕಷ್ಟು ಸಾಮಗ್ರಿಗಳನ್ನು ಉತ್ಪಾದಿಸಲು ದುಡಿಯಬೇಕು.

Publication

In the Court of the Subordinate Judge of S. K.

O. S. No. 21/1949.

Between:

Thejappa shetty & others ... Plaintiffs

and

Srinivas Shetty & others ... Defendants.

Notice to defts:

1. Srinivas Shetty, son of Nagamma Shedthy. 4 Mahabala Hegde 5 Meenakka Heggadthy Children of Sheshi Shedthy. 6. Krishnaya shetty. 7 Kollamma Shedthy, children of Thungamma shedthy 15 Raghuram Shetty. 16 Nagamma Shedthy. 18 Shivarama Shetty, children of Sarvesri Shedthy. 24 Kaveri Shedthy. 25 Rajiva Shetty. 26 Vittal Shetty children of Meenakka Heggadthy No. 1 residing at Malady Hadimane of Thekkatte village, Coondapur Taluk. Nos. 4, 5, 25 & 26 are residing at Halthoor of Ulthoor village, Coondapur Taluk. No. 6 residing at Kumrugodu village Udipi Taluk No. 7 residing at Vaddarse village, Udipi Taluk. Nos. 15, 16 and 18 residing at Heggunje Village, Udipi Taluk. No. 24 residing at Handady Village, Udipi Taluk.

Please take notice that the above suit filed by the Plaintiffs stands posted to 8-11-'49 for hearing. If you fail to appear either in person or through a pleader on that date before the above Court at 10-30 A. M. you will be declared exparte and the above suit will be decreed in your absence.

(By order of Court)

sd. **K. S Hegde**

Adv. for Plaintiffs.

Mangalore
Date 27-10-49

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮೆಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಕ್ಕಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಬೆಲೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮಾಲಕರು:—ಹಾಲಪ್ಪ ಭಕೇರಪ್ಪ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸದ್ರಿ ಎಂಗಸ್ಟ್ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್, ಆರ್ ಎಲ್ ಕಮಲಾಪುರ ಕಮಿಸ್ಸ, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುಕ್ಕು, ಛಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಬ್ಬುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲೆ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಕೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಟೆ ಪ್ರಮಾಣ ಔಷಧ ಅರ್ಧಾಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕಂಟಬಳಕಾಯಿ, ಬಿಳೆಜಿಣ್ಣೆ ಬಿಡಬೇಕು.

ಡಾಬ್ಲ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ನೂಡತಕ್ಕ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ನೋಟೀಸು.

ಕುಂದಾಪುರ ಡಿ. ಮಟ್ಟು ಕೋರ್ಟಿನಲ್ಲಿ.

O. S. No 614/1948

ಐ. ಎಸ್. ಲೂವಿಸ್.....ಪಾದಿ,

ಗಿರಿಯಪ್ಪ A. ಮೆಂಡನ್.....ಪ್ರತಿವಾದಿ.

ಸಪ್ಲಮೆಂಟಲ್ 2ನೇ ಪ್ರತಿವಾದಿ. ದಿ ಸಾರಾಯಣ ಗುರು ಬ್ಯಾಂಕ್ ಲಿಮಿಟೆಡ್ ಮಂಗಳೂರು. ಬ್ರಾಂಚ್ಸ್ ಸೆಕ್ರೆಟರಿ. ಎ. ಎಸ್. ದಿನ್. ನುಂಗೆಳೂರು ಟಿವನ್ಸಿಲ್ಲರುವವರು ಇವರೀಗೆ—

ಸದ್ರಿ ದಾವೆಯಲ್ಲಿ ನಿಮ್ಮನ್ನು ಸಪ್ಲಮೆಂಟಲ್ 2ನೇ ಪ್ರತಿವಾದಿಯಾಗಿ ಕಕ್ಷಿಯಲ್ಲಿ ಜೇರಿಸಿಕೊಂಡು ದಾವಾ ಪ್ರಶ್ನೆಗಳನ್ನು ಬೇಲೂ ಡಿಕ್ರಿ ಆಗಬೇಕಾಗಿ ವಾದಿಯು ಅರ್ಜಿ ಕೊಟ್ಟಿರುವುದರಿಂದ ಸದ್ರಿ ಅರ್ಜಿ ತನ್ನ ವಿ ಪಾವಯ ತನ್ನನ್ನು ತಾ 12-11 1949ಕ್ಕೆ ಇಜೋ ನಾಗಿಯಿದೆ. ಆದ್ದರಿಂದ ಸದ್ರಿ ಅರ್ಜಿಗೆ ಆ ಕ್ಷೇಪ ವ ದಾವೆಗೆ ಉದಾಹರಣೆ ಇರುವ ಪಕ್ಷದಲ್ಲಿ ತನ್ನ ವಿಪ್ರ ಪೂರ್ವಾಹ್ನ 11ಘಂಟೆಗೆ ಈ ಕೋರ್ಟುಮುಂದೆ ಹಾಜರಾಗಿ ಜ್ಞಾಪೀಡರು ಮಾಡಿಕೆಳ್ಳತಕ್ಕದ್ದು ಎಂಬ ಸಂಗ್ತಿ ಕೋಟು ಹ್ಯುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸೋಣವಾಗಿಯದೆ.

V. Srinivasa Shetty
Advocate for Plff.

ಕುಂದಾಪುರ
ತಾ 24-10-49

Notice

In the Court of the Subordinate Judge of South Kanara.

O. S. No. 61/1949.

Between:

Charles D'souza ... ... Plaintiff.

and

Gregory D'souza and others ... Defendants.

To 23rd defendant: Seshu hengsu, daughter of Monti hengsu and wife of Thyampa pujary, residing in Thokur Village, Mangalore Taluk

Take notice that the above suit filed for administration of the estate of the deceased Mercina Viegas Bai and other reliefs stands posted to 16-11 1949 for your appearance. If you wish you may appear in person or by pleader at 11 A. M. on the said date and contest the suit failing which the same will be proceeded with and decided in your absence.

(By order)

sd H. Vasudeva Kamath
Vakil for Plff.

Mangalore
19-10-1949

ದ. ಕ. ಲೋಕಸೇವಾ ಸಂಘದ ಉದ್ಘಾಟನಾ ಸಮಾರಂಭವು ತಾ 16-10-49ನೇ ದಿನ ಸಂಜೆಗಳ ಕೊ ಒಪರೇಟಿವ್ ಬೇಂಕಿನ ವರಾಂದದಲ್ಲಿ ಡಾಕ್ಟರ್ ಯು ಪಿ ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತೆಸ್ಟೆ.

ಸಂಘದ ವ್ಯವಸ್ಥಾಪಕರಾದ ಶ್ರೀ ಹಿ. ರಾಮರಾಯ ಮಲ್ಯರು ಸಂಘದ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಿಸುತ್ತಾ ಈ ರೀತಿ ಹೇಳಿದರು:- ಈ ಸಂಘವು ನಿಜವಾಗಿ ಒಂದು ಕೈರಾಟೆಯ ಸ್ವಯಂಸೇವಕ ದಳ. ಕೈರಾಟೆಯೇ ಕೇಂದ್ರವಾಗಿ ಉಳ್ಳ ಕಾಂಗ್ರೆಸ್ ವಿಧಾಯಕ ಕಾರ್ಯವನ್ನು ಸಂಪೂರ್ಣತೆಯಿಂದ ಕಾರ್ಯರೂಪಕ್ಕೆ ತರುವುದು ಈ ಸಂಘದ ಏಕಮಾತ್ರ ಉದ್ದೇಶ. ಇದೊಂದೇ ಉದ್ದೇಶವಾಗಿಟ್ಟುಕೊಂಡು ಬುದಿಯಲಿಚ್ಚಿಸುವ ಕೆಲಸಗಾರರು ತಮ್ಮ ಸಂಘಟನೆ ಮಾಡಿಕೊಳ್ಳಲು ಇದೀಗ ಸಮಯವು ಬಂದಿರುತ್ತದೆ ರಾಜ್ಯೀಯ ಸ್ವಾತಂತ್ರ್ಯ ಮೊರೆಯುವ ತನಕ ಎಲ್ಲಾ ಕೆಲಸಗಾರರೂ ರಾಜಕೀಯ ಕಾರ್ಯಕ್ಷೇತ್ರದಲ್ಲಿಯೇ ದುಡಿಯುವುದು ಆವಶ್ಯಕವಿತ್ತು. ಈಗ ರಾಜಕೀಯ ಸ್ವಾತಂತ್ರ್ಯ ಸಿಕ್ಕಿರುವುದರಿಂದ ಕೆಲಸಗಾರರು ತಮ್ಮ ಅಭಿವೃದ್ಧಿಗೆ ತಕ್ಕಂತಹ ಕಾರ್ಯವನ್ನು ಅರಿಸಿ ಪ್ರಮ ವಿಭಾಗ ಕ್ರಮದಿಂದ ಮುಂದುವರಿಸಿದರೆ ಮೋಸವಿಲ್ಲ. ಮಾತ್ರವಲ್ಲ, ಅದೇ ಸರಿಯಾದುದು. ವಿಧಾಯಕ ಕಾರ್ಯಕರ್ತರೂ ತಮ್ಮ ಸ್ವತಂತ್ರ ಸಂಸ್ಥೆಯನ್ನು ರಚಿಸಿಕೊಂಡರೆ ಇದರ ಆರ್ಥವೇನೆಂದರೆ ರಾಜಕೀಯ ಕೆಲಸಗಳ ಮಟ್ಟಿಗೆ ಇವರು ಕಾಂಗ್ರೆಸ್ ಸಂಸ್ಥೆಯ ಮೇಲೆ ಪೂರ್ಣ ವಿಶ್ವಾಸ ಇಟ್ಟು ಆ ಕಾರ್ಯವನ್ನು ಕಾಂಗ್ರೆಸಿನವರು ನುಂದುವರಿಸುರೆಂದು ನಂಬುವರೆಂದೇ ತಿಳಿಯಬೇಕು. ಪಾತ್ರವಲ್ಲ, ತಮ್ಮ ವಿಧಾಯಕ ಕಾರ್ಯಕ್ಕೆ ಕೂಡಾ ಕಾಂಗ್ರೆಸ್ ಕೆಲಸಗಾರರೆಲ್ಲರೂ ತಮ್ಮ ರಾಜಕೀಯ ಜಟುವಟಿಕೆಗಳ ಜೊತೆಯಲ್ಲಿ ಸಾಧ್ಯವಿದ್ದ ಸಹಾಯ ಸಹಕಾರಗಳನ್ನು ಕೊಡುವರೆಂದೂ ಇವರು ನಿರೀಕ್ಷಿಸುತ್ತಾರೆ. ಯಾಕೆಂದರೆ ಕಾಂಗ್ರೆಸಿನ ಈಗಿನ ಘಟನೆಯಂತೆ ಪ್ರತಿಯೊಬ್ಬ ಕಾಂಗ್ರೆಸ್ ಕಾರ್ಯಕರ್ತರೂ ತನ್ನ ಸ್ವಲ್ಪ ಸಮಯವನ್ನಾದರೂ ವಿಧಾಯಕ ಕಾರ್ಯಕ್ಕೆ ಕೊಡಬೇಕೆಂದು ಕಡ್ಡಾಯವಾದ ನಿಯಮವೇ ಇರುತ್ತದೆ.

ವಿಧಾಯಕ ಕಾರ್ಯಕ್ರಮದ ಉದ್ದೇಶ ಜನಸಾಮಾನ್ಯರ ಜೀವನವನ್ನು ಸುಖಕರವನ್ನಾಗಿ ಮಾಡುವುದು. ಈ ದಿಶೆಯಲ್ಲಿ ಈಗ ಸಭೆಯುವ ಕೆಲಸಗಳೆಂದರೆ ಸರಕಾರದ ಆಭಿವೃದ್ಧಿ ಇಲಾಖೆಯವರು ಮಾಡುವ ಕೆಲಸ, ಕಾಂಗ್ರೆಸಿನ ಆಶ್ರಯದಲ್ಲಿಯೇ ನಡೆಯುವ ಗ್ರಾಮಉದ್ಯೋಗ ಸಂಘ, ಹರಿಜನ ಸೇವಾ ಸಂಘ, ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಕಾರ್ಯ ಮತ್ತು ಗ್ರಾಮೋನ್ನತಿ ಬಗ್ಗೆ ಮೂಲ್ಕಿ ಕನಿಯೂರುಗಳಲ್ಲಿ ಹಾಗೂ ಸರಕಾರದ ಆಶ್ರಯದಲ್ಲಿ ಕುಂಬಳೆ ಫಿರ್ಕಾದಲ್ಲಿ ನಡೆಯುವ ಕಾರ್ಯ. ಇದರಂತೆಯೇ ಜಿಲ್ಲಾ ಅಭಿವೃದ್ಧಿ ಸಂಘ, ಭಗೀರಥ ಸಮಾಜ, ಸರ್ವೀಸ್ ಗಿಲ್ಡ್ ಮೊದಲಾದವರ ಕಾರ್ಯಗಳನ್ನು ಇವಕ್ಕೆ ಸೇರಿಸಬಹುದು. ಇನ್ನೂ ಹಲವು ಬಗೆಯ ಕಾರ್ಯಗಳೂ ಇವೆ. ಆದರೆ ಇವರೆಲ್ಲರೂ ಒಟ್ಟು ಸಾಧಿಸಿದ ಪ್ರಗತಿ ನಮ್ಮ ಮುಂದೆ ಇರುವ ಕೆಲಸದ ರಾಶಿಯ ಪೈಸಿಯಿಂದ ಅತ್ಯಲ್ಪವೇ ಇದೆ. ಈ ದಿಶೆಯಲ್ಲಿ ಕೆಲಸ ಮಾಡಿದವರೆಲ್ಲರ ಅನುಭವವೆಂದರೆ ಸರಿಯಾದ ಕೆಲಸಗಾರರ ಆಭಾವ.

ಜನಜೀವನ ಸುಖಕರವಾಗಿ ಮಾಡಲು ಕೈಕೊಳ್ಳುವ ಕಾರ್ಯಕ್ರಮಗಳ ಮೂಲ ಸೂತ್ರ ಜನರಲ್ಲಿ ತಮ್ಮ ಪರಿಸ್ಥಿತಿಯ ಅರಿವನ್ನುಂಟು ಮಾಡಿ ಸ್ವಾವಲಂಬನಧಿಂದ ತಮ್ಮ ಸ್ಥಿತಿ ಸುಧಾರಿಸಿಕೊಳ್ಳಬಹುದೆಂಬ ಆತ್ಮವಿಶ್ವಾಸ ಅವರಲ್ಲಿ ಉಂಟುಮಾಡಿ ಈ ಬಗೆಯ ಅವರು ದುಡಿಯುವಂತೆ ಮಾಡಬೇಕಾದುದು ಇದನ್ನು ಸಾಧಿಸಬಲ್ಲ ಕೆಲಸಗಾರರ ಆವಶ್ಯಕತೆ ತುಂಬಾ ಇರುವುದರಿಂದ ಅಂಥ ಕೆಲಸಗಾರರನ್ನು ತರಬೇತಿ ಗೊಳಿಸುವುದೇ ಲೋಕಸೇವಾ ಸಂಘದ ಮೊದಲ ಕೆಲಸ. ಈ ಬಗೆಯ ಶಿಕ್ಷಣವನ್ನು ಅವರನ್ನು ಕೆಲಸಕ್ಕೆ ಹಚ್ಚಿ ಕೆಲಸ ಮಾಡುವಾಗಲೇ ಅವರಿಗೆ ಒದಗಿಸುವುದು ಅತ್ಯುತ್ತಮ ದಾರಿ. ಇಂಥ ಕೆಲಸಗಾರರಲ್ಲಿ ಅವಶ್ಯವುಳ್ಳ ಶಿಸ್ತು, ಸಂಯಮಗಳನ್ನು ಸಾಧಿಸಲು ಕೈರಾಟೆಯೇ ನುಮ್ಮ ಸಾಧನ. ಈ ಜಿಲ್ಲೆಯಲ್ಲಿ ಅನೇಕ ಮಂದಿ ರಾಜಕೀಯ ನಂತ್ರಸ್ತರೂ ಸೇವೆ ಸಲ್ಲಿಸುವ ಆತುರವುಳ್ಳ ಅನೇಕ ತರುಣ ಉತ್ಸಾಹಿಗಳೂ ಇದ್ದಾರೆ.

ಇವರಲ್ಲಿ ಈ ಕಾರ್ಯಕ್ರಮಕ್ಕಾಗಿ ದುಡಿಯಲು ಆತುರವುಳ್ಳವರನ್ನು ಸಂಘಟಿಸುವ ಯತ್ನ ಈ ಸೇವಾಸಂಘ ಕೈಕೊಳ್ಳುವುದು.

ಲೋಕಸೇವಾ ಸಂಘ ಅಂದರೇನು?

ಕನ್ನಡ ಸಾಹಿತ್ಯ ಸಮ್ಮೇಲನದ

೪೭ನೇ ಅಧಿವೇಶನವು ಬರುವ ಡಿಸೆಂಬರ 30, 31 ಮತ್ತು ಜನವರಿ 1ನೆ ತಾರೀಕುಗಳಲ್ಲಿ ಸೊಲ್ಲಾಪುರದಲ್ಲಿ ಜರಗಲಿದೆ.

ರಾವ ಬಹದ್ದೂರ ಎಸ್ ಎ. ಅಬ್ದುಲ್ ಪುರಕರು ಸಮ್ಮೇಲನದ ಸ್ವಾಗತಾಧ್ಯಕ್ಷರಾಗಿಯೂ, ಶ್ರೀ ಸಿ. ಯಂ ಪಾಂಡರು ಕಾರ್ಯಾಧ್ಯಕ್ಷರಾಗಿಯೂ, ಪಂಡಿತ ವರ್ಧಮಾನ ಶಾಸ್ತ್ರಿಗಳು ಪ್ರಧಾನ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿದ್ದಾರೆ.

ಬೇರೆ ಬೇರೆ ಉಪ ಸಮಿತಿಗಳೂ ನಿರ್ಮಿಸಲ್ಪಟ್ಟಿವೆ. ಶ್ರೀ ಕೆ. ಕೃಷ್ಣಕಾಮತರು ಹುಕಾಸಿನ ಸಮಿತಿಯ ಅಧ್ಯಕ್ಷ; ಶ್ರೀ ಆರ್. ಎಸ್. ಕಲ್ಯಾಣ ಶೆಟ್ಟಿ, ಎಸ್. ಎಂ ಇವರು ಪ್ರಚಾರಕ ಸಮಿತಿಯ ಅಧ್ಯಕ್ಷ; ಬ್ಯಾರಿಸ್ಟರ್ ಸರದಾರ, ಎಂ. ಎಸ್. ಇವರು ಕಾರ್ಯಕ್ರಮ ಸಮಿತಿಯ ಅಧ್ಯಕ್ಷ, ಶ್ರೀ ಗಿ. ಸಿ. ಬೋರಾಮಣಿಯವರು ಮನೋರಂಜನ ಸಮಿತಿಯ ಅಧ್ಯಕ್ಷ, ಡಾ ಎ. ಬಿ. ಪಾಟೀಲರು ಸ್ವಯಂಸೇವಕ ಸಮಿತಿಯ ಅಧ್ಯಕ್ಷ, ಶ್ರೀ ರಾಜಮಾನ್ಯೆ(ಇಂಜಿನೀಯರ್)ಇವರು ಮಂಟಪ ಸಮಿತಿಯ ಅಧ್ಯಕ್ಷ, ಶ್ರೀ ವಿ. ಎಜ್ ತಿಂಡಗಿಯವರು ಭೋಜನ, ವಸತಿಗೃಹ ಮತ್ತು ಸತ್ಕಾರ ಸಮಿತಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಶಾ. ೧೭-೧೦-೧೯೪೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಶ್ರೀ ಸಿದ್ಧವ್ವನಹಳ್ಳಿ ಕೃಷ್ಣಶರ್ಮರ ಸಮ್ಮುಖದಲ್ಲಿ ಇಲ್ಲಿಯ ಆಥಿವೇಶನದ ಕಾರ್ಯಕಾರಿ ಮಂಡಳದ ಸಭೆಯು ಕೂಡಿ ಸಮ್ಮೇಲನವು ಸಫಲತೋಸ್ಕರ ವಿವಿಧ ವಿಚಾರಗಳಾಗಿ ಸಮ್ಮೇಲನದ ಸಮಯದಲ್ಲಿ (೧) ಕವಿಗೋಷ್ಠಿ (೨) ಮಹಿಳಾ ಗೋಷ್ಠಿ (೩) ಕಲಾಗೋಷ್ಠಿ (೪) ವಿಜ್ಞಾನ ಗೋಷ್ಠಿ (೫ ನಾಟ್ಯಗೋಷ್ಠಿ ಇವುಗಳನ್ನು ಜರಗಿಸಬೇಕೆಂದೂ, ಕಲಾ ಪ್ರದರ್ಶನದ ವ್ಯವಸ್ಥೆಯನ್ನು ಮಾಡಬೇಕೆಂದೂ ನಿರ್ಧರಿಸಲಾಗಿದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಶುಧ್ಧರಸ್ವರ್ಣ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ

ನವಜೀವಾತು

ಎಂಬ

ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ! ಯಂ. ಸಿ. ಶಾಸ್ತ್ರೀ, ಯಲ್.ಐ.ಯಂ.

ಕೊಡಿಯಾಲಬೈಲು ಪೋಸ್ಟ್, (ಮಂಗಳೂರು)

ಸ್ಥಾನಿಕರು.—ಡಾ! ಐ ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು

ವಿಚಾರಿಸಿರಿ.

ಪ್ರಕಟಣೆ

ಉಡುಪಿ ಡಿ. ಮುನ್ಸಿ. ಕೋರ್ಟಿನಲ್ಲಿ.

O. S. No. 228/1949.

ಯಂ. ರಾಮಕೃಷ್ಣ ಭಟ್ಟ—ವಾದಿ.

ಜನ್ಸಾಲ್ ಏಜಂಟ್ ಕೆ. ಗೋಪಾಲಕೃಷ್ಣ ಭಟ್ಟ ಮತ್ತು ಅನಂತ ಭಟ್ಟ ಕೂಡಾ —ಪ್ರತಿವಾದಿರು.

ಇವರೊಳಗೆ

2ನೆ ಪ್ರತಿವಾದಿಯು ಸರಸ್ವತಿ ಅಂಮ, ಸಗ್ರಿ ನಾರಾಯಣ ಭಟ್ರ ಮಗಳು. ಉಡ್ಪಿ ಕ್ಸಬಾ ಭಂಡಾರಶೇಜಿ, ಯವರಿಗೆ ತಿಳಿಸುವುದೇನಂದರೆ—

ವಾದಿಯು ನಿಮ್ಮ ಮೇಲೆ ಕೂಡಾ ಯಿಡಿನ ಆಸಲು ಬಡ್ಡಿಗೆ ಬಾಕ್ಲು ಮಾಡಿದ ಸದ್ರಿ ದಾವೆಯು ತಾ- 11-11-1949ಕ್ಕೆ ತನ್ನಿ ಬಸ್ಯೆಯಾಜೋಡಾಗಿಯದೆ. ಆಕ್ಷೇಪ ಹೇಳತಕ್ಕದ್ದು ಯಿದ್ರೆ ಆ ದಿನ್ಸ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪದೆ ನಿಂ ನು ಗೈರಹಾಜ್ರಿಯಿಂದ ಸದ್ರಿ ನಂಬ್ರ ತೀರ್ಮಾನಿಸಲ್ಪಡುವದು.

By order of the Court.

ಉಡ್ಪಿ 24-10-1949 } M D Usman, Pleader for Plff.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇ ಉಪಯೋಗಿಸಿರಿ. ಹಲ್ಲುಗಳು ಬೆಳ್ಳಗೆ ಹೊಳೆಯುವಂತೆ ಶುಭ್ರ ಮಾಡುತ್ತದೆ.

ವಿಳಾಸ:-

ಪಾಥ್ರಿಸ್ (ಆಯ್ಯರ್) ಪ್ರೊಡಕ್ಟ್ಸ್, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M 3618

10-11-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಸ್ವಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೧೦

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ನುಂಗಲೂರಲ್ಲಿ ಸ್ಥಾಪಿತವಾದದ್ದು

Vol 30
No. 11

ಮರೆತು ಹೋದ ಪಾಠಗಳು-

ಅಗತ್ಯವುಳ್ಳ ಗುಣಗಳ ಸಂಪಾದನೆ ಮತ್ತು ಅನಗತ್ಯವಿರುವ ದೋಷಗಳ ನಿವಾರಣೆ, ಇವೆರಡರಲ್ಲೂ ಹಿಂದೀ ಜನತೆಯು ಆತ್ಯರೇಕ ನಿಧಾನಿ. ಈ ಕಾರಣದಿಂದಾಗಿಯೇ ಭಾರತೀಯ ಜನಜೀವನದ ಕುಂದುಕೊಂತೆಗಳ ನಿರ್ಮೂಲನ ಮತ್ತು ಸ್ವಗತಿಸಾಧನಾ ಕಾರ್ಯಗಳು ಮಿತಿಮೀರಿ ಹಿಂದೆ ಬೀಳುತ್ತಾ ಹೋಗಿವೆ.

ಬ್ರಿಟಿಷರ ಆಡಳಿತೆಯು ಆರಂಭಾವಧಿಯಲ್ಲೇ 'ಸಿವಾಯಿ ದಂಗೆ' ನಾಮಾಂಕಿತ ಸ್ವಾತಂತ್ರ್ಯಾಂದೋಲನವು ಇಡೀ ರಾಷ್ಟ್ರದಲ್ಲೊವ್ಯೆ ವ್ಯಾಪಿಸಿದ್ದಿತು. ಆದರೆ ಅದು ನಿರ್ಧಾರಕವಾದುದರಿಂದ ಆ ಮೇಲೆ ಒಂದೂವರೆ ಶತಮಾನಗಳಿಗೂ ಮಿಕ್ಕಿ ಜನತೆಯು ದಾಸ್ಯ ನೆಮ್ಮದಿಯನ್ನನುಭವಿಸತೇ ಹೊರತು, ಆ ಸ್ವಾತಂತ್ರ್ಯಸಂಗ್ರಾಮದ ನೆನಪು ಸ್ಫೂರ್ತಿಯನ್ನು ಪಡಕೊಂಡು ದಿಲ್ಲ.

ಇಂತಹ ಮಂಕುತನವಿದ್ದಲ್ಲಿಯೂ ತನ್ನ ಅಸಾಮಾನ್ಯ ಕಾರ್ಯನೀತಿಗಳಿಂದ ಜಾಗ್ರತಿಯನ್ನು ನಿರ್ಮಿಸಿದವರು ಮಹಾತ್ಮಾ ಗಾಂಧಿ. ಆದರೆ ಅವರು ಮುಂದಿಟ್ಟದ್ದ ನೀತಿನೀತಿಗಳನ್ನಾದರೂ ಜನರು ಆಗಾಗ ಮರೆಯುತ್ತಿದ್ದ ದೆಸೆಯಿಂದಲೇ ಗಾಂಧಿಜೀ ನಡೆಸಿದುವೆ ತನ್ನ ಸ್ವಾತಂತ್ರ್ಯ ಹೋರಾಟವನ್ನು ಸಿಲ್ಲಿಸಿಕೊಳ್ಳಬೇಕಾಗಿ ಬಂದಿತ್ತು; ಆ ಸ್ವಮಾದಗಳನ್ನು ನಿವಾರಿಸಿ, ಜನತೆಯನ್ನು ಸರಿದಾರಿ ಹಿಡಿಸುವುದಕ್ಕಾಗಿ ಮಹಾತ್ಮರು ಆಗಾಗ ಅನಶನವ್ರತ ಕೈಕೊಳ್ಳಬೇಕಾಗುತಿತ್ತು.

ಈಗ ಸ್ವಾತಂತ್ರ್ಯ ದೊರೆತು ಇನ್ನೂ ಎರಡೂಕಾಲು ವರುಷ ಪೂರ್ಣವಾಗಿಲ್ಲ. ಈ ಅಲ್ಪಾವಧಿಯೊಳಗೇನೇ ಸ್ವಾತಂತ್ರ್ಯ ಹೋರಾಟದ ಆ ಕಾಲದಲ್ಲಿ ತೋರಿಬಿದ್ದ ಸಲ್ಲಕ್ಷಣಗಳನ್ನು ಜನರು ಮರೆತು ಬಿಡಹತ್ತಿದ್ದಾರೆಂಬುದು ಬಹುವಿಧದಿಂದ ಸ್ಪಷ್ಟವಾಗಿದೆ.

ಜನಸಾಮಾನ್ಯರ ಜೀವನ ಸಂಕಷ್ಟ, ಆರ್ಥಿಕ ಸಾಮಾಜಿಕ ಅಸಮಾನತೆ, ಎಲ್ಲಾ ರೀತಿಯ ಸೂಪಿಸುಲಿಗೆಗಳು, ಮೇಲು ಕೀಳು ಭಾವನೆಗಳು, ಪರಾವಲಂಬನ ಸ್ಥಿತಿಮತಿ—ಇವುಗಳ ನಿವಾರಣೆಯೇ ಸ್ವಾತಂತ್ರ್ಯದ ಮುಖ್ಯೋದ್ದೇಶವೆಂಬ ವಿಷಯವು ಈಗ ಬಹುತೇಕವಾಗಿ ಎಲ್ಲರಿಗೂ ಮರೆತುಹೋದಂತಿದೆ.

ಗಾಂಧೀ ಟೋಪಿಯಿಟ್ಟ ಮೇಲೆ ಶಕ್ತ್ಯಾನುಸಾರ ಸತ್ಯ ಮತ್ತು ನ್ಯಾಯದ ಆರಾಧಕರಾಗಿರಬೇಕು, ಎಂಬ ನಿಯಮವೀಗ ಪೂರ್ಣ ಮರೆತುಹೋಗಿ, ತಮ್ಮ ದುರ್ವರ್ತನೆ, ಕಳ್ಳ ವ್ಯಾಪಾರಗಳನ್ನು ಬಚ್ಚಿಟ್ಟುಕೊಳ್ಳುವುದಕ್ಕಾಗಿಯೇ ಗಾಂಧೀ ಟೋಪಿಯಿಡಬೇಕೆಂಬ ಭಾವನೆ ವ್ಯಾಪಿಸಿದಂತಿದೆ.

ಕಾಂಗ್ರೆಸಿಗರು ರಾಷ್ಟ್ರಾಧಿಪತ್ಯಾಸಿಗಳು—ಜನತಾಸೇವಕರು ಎಂದಿದ್ದ ನಂಬಿಕೆ ಕಳೆದು ಹೋಗಿ ಕಾಂಗ್ರೆಸಿಗರು ರಾಷ್ಟ್ರಾಧಿಕಾರಿಗಳು— ಜನತಾಸೇವೆ ಕೈಕೊಳ್ಳವವರು ಎಂಬ ಭಾವನೆಯೇಗ ಬೆಳೆದು ಬಂದಿದೆ.

ಸಾಮೂಹಿಕ ಚಳವಳಿ, ಜನತಾ ಸಂಘಟನೆಗಳ ಮೂಲಕವೇ ಸಾರ್ವಜನಿಕ ಹಿತ ಸಾಧಿಸಿಕೊಳ್ಳಬೇಕೆಂದಿದ್ದ ರೀತಿ ಈಗ ಹೆಚ್ಚಿನಂಶ ಕಡೆಗಣಿಸಲ್ಪಟ್ಟು, ಜನತೆಯ ಹಿಸರಿನಿಂದ ಕೆಲವು ವ್ಯಕ್ತಿಗಳೇ ತಮ್ಮಿಚ್ಛೆಯಂತೆ ಆಡುತ್ತಾ ಮಾಡುತ್ತಾ ಹೋಗುವ ಹೆನ್ಯಾಸ ವ್ಯಾಪಿಸಿದೆ. ಸಾರ್ವಜನಿಕ ಆಂದೋಲನಗಳಿಗೆ ಈಗ ಮೊದಲಿನಂತಹ ಗೌರವ ದೊರಯದೆ, ಅವುಗಳು ತಂಟೆ ಬೋರ ಪ್ರವೃತಿಯನ್ನಿಸಿವೆ.

ರೈತ, ಕೂಲಿಗಾರ, ಯುವಕ ಸಂಘಟನೆಯೇಗ ಅತ್ಯಗತ್ಯವೆಂಬುದು ಯಾರ ಲಕ್ಷ್ಯಕ್ಕೂ ಸಾಕಷ್ಟು ಬಂದಿಲ್ಲ. ಕಮ್ಯೂನಿಸ್ಟರಂಥವರು ಅನ್ಯೋದ್ದೇಶ, ದುರುದ್ದೇಶಗಳಿಂದ ಸ್ಥಾಪಿಸುವ ಸಂಘ, ಯೂನಿಯನುಗಳ ಕಡೆಗೆ ಎಚ್ಚರಿಕೆಯ ನೋಟವಿರಬೇಕಾದುದು-ಈಗ ಮಾಡಿರುವಂತೆ ಅವುಗಳನ್ನು ಚದರಿಸಬೇಕಾದುದು.—ಅಗತ್ಯವಿರಬಹುದು. ಆದರೆ ಅಂತಹ ಸಂಘಟನೆಗಳನ್ನು ತಡೆಗಟ್ಟಿದ ಮೇಲೆ ಆ ಕ್ಷೇತ್ರವನ್ನು ಬಂಜರು ಬೀಳಲು ಬಿಡಬಾರದೆಂಬುದೂ ಶ್ರಮಜೀವಿಗಳನ್ನು ನ್ಯಾಯಬದ್ಧ ರೀತಿಯಿಂದ ಸಂಘಟನೆಗೊಳಿಸಿ ಸದ್ದಾರಿ ಹಿಡಿಸುವುದು ಅತ್ಯಗತ್ಯವೆಂಬುದೂ ಯಾರ ಲಕ್ಷ್ಯಕ್ಕೂ ಬಂದಂತೆ ಕಾಣುವದಿಲ್ಲ. 'ಜನತೆಯನ್ನು ಸಂಘಟಿಸಿ, ಸಜ್ಜುಗೊಳಿಸಿ ಕಾರ್ಯಸಾಧನೆ' ಎಂಬ ಹಿಂದಿನ ರೀತಿಯೇ ಈಗ ಪೂರ್ಣ ಮರೆಯಾಗಿದೆ.

ರಾಷ್ಟ್ರದ ಗುಲಾಮಗಿರಿಯಲ್ಲಿ ಆಂದೋಲನಕಾರರಾಗಿದ್ದವರು ಈಗ ಆಡಳಿತಗಾರರಾಗಿದ್ದಾರೆ. ಆಂಥವರು ತಮ್ಮ ಕಣ್ಮುಂದೆ ಆ ಕಾಲದಲ್ಲಿಟ್ಟುಕೊಂಡಿದ್ದ ಗುರಿಯನ್ನೂ ತಾವು ಆಗ ಆರಿಸಿದ್ದ ಮಾರ್ಗಗಳನ್ನೂ ಈಗ ಹೆಚ್ಚಿನಂಶ ಮರೆತಂತಿದೆ. ಅದೇ ರೀತಿ ಆ ಕಾಲದಲ್ಲಿ ಕಾಂಗ್ರೆಸಿಗರ ಸ್ವಾತಂತ್ರ್ಯ ಚಳವಳಿಗಳನ್ನು ಅಪಹಾಸ್ಯ ಮಾಡುತಿದ್ದವರು—ಸಾಧ್ಯವಿದ್ದಷ್ಟು ಅಡಗಾಲಿಡುತಿದ್ದವರು—ಇಂದು ಗತಕಾಲದ ತಮ್ಮನ್ನೇ ತಾವು ಮರೆತು ಕಾಂಗ್ರೆಸಿಗರಾಗಿದ್ದಾರೆ.

ಬ್ರಿಟಿಷ್ ಆಡಳಿತೆಯಿದ್ದಾಗ ಸರಕಾರೀ ನೌಕರರ ಆಗಮನ ನಿರ್ಗಮನಗಳ ವೇಳೆ ತಾವೆಷ್ಟು ದೂರದಲ್ಲಿರಬೇಕಿದ್ದಿತು-ಆವರ ಭೇಟಿ ಹಾಗೂ ಸೌಹಾರ್ದ ವಹಿವಾಟುಗಳು ಎಷ್ಟು ಅಪೂರ್ವವಾಗಿದ್ದುವು—ಎಂಬುದನ್ನು ಸ್ವಾಡಳಿತೆಯ ಈ ಕಾಲದಲ್ಲಿ ಸಾರ್ವಜನಿಕರು ಮರೆತಿದ್ದಾರೆ. ರಾಷ್ಟ್ರನಾಯಕರನ್ನು, ಅಕಾಲದ ಸಂಗ್ರಾಮಯೋಧತ್ವಕ್ಕೂ ಈ ಕಾಲದ ಸರಕಾರೀ ಮಂತ್ರಿತ್ವಕ್ಕೂ ಇರುವ ತಾರತಮ್ಯಾನುಸಾರವಾಗಿ ಭಿನ್ನ ರೀತಿಯಿಂದ ಕಾಣಬೇಕೆಂಬುದನ್ನು ಕೂಡಾ ಜನತೆ ಮರೆತಿದೆ.

ಗುಲಾಮರಾಗಿದ್ದ ಕಾಲದಲ್ಲಿ, ರಾಷ್ಟ್ರನಾಯಕರು ಎಚ್ಚರಿಸಿದಾಗ ಹೊರತು ಮಿಕ್ಕ ಸಮಯಗಳಲ್ಲಿ ತಾವು ನಿದ್ರಮನುಷ್ಯರಾಗಿಲ್ಲವೆಂಬುದನ್ನು ಸಾರ್ವಜನಿಕರು ಚೆನ್ನಾಗಿ ಸಿದ್ದಿಪಡಿಸಿದ್ದುದಿಲ್ಲ; ಸ್ವತಂತ್ರರಾಗಿರುವ ಈ ಕಾಲದಲ್ಲೂ ರಾಷ್ಟ್ರನಾಯಕರು ಜ್ಞಾಪಕ ಕೊಡದ ಸಂದರ್ಭಗಳಲ್ಲಿ [ತಮ್ಮ ಸ್ವಾತಂತ್ರ್ಯ ಜವಾಬ್ದಾರಿಯ ನೆನಪು ಜನತೆಗೆ ಆಗುತ್ತಿಲ್ಲ.

ಸೆರೆಮನೆ ಸೇರಿದಾಗ ಅಣ್ಣನೆ ಹೊಸ ಜೈಲಿಗೆ ಗಾಂಧೀ ಟೋಪಿಯಿಟ್ಟರೆ ಕೊಂಟುವಟ್ಟಂತೆ-ಜೈರಕಾ ಹೊತ್ತು ತಿರುಗಿದರೆ ರಾಷ್ಟ್ರದ ಹೊರೆ ಹೊತ್ತುಕೊಂಡಂತೆ, ಎಂದು ಅದೊಂದು ಕಾಲದಲ್ಲಿದ್ದ ಅಭಿಮಾನ ಈಗ ಪೂರ್ತಿ ಕಳೆದುಹೋಗಿದೆ. ಇಂದು ಜೈಲು ಸೇರುವವರು ರಾಷ್ಟ್ರದ್ರೋಹಿಗಳು; ಬಿಳಿ ಟೋಪಿಯಿಡುವವರು ಕಾಳಸಂತೆಯವರು; ಜೈರಕಾ ಹೊರುವುದು ವ್ಯರ್ಥ ಶಕ್ತಿವ್ಯಯ ಕಟ್ಟೆಗೆಯ ಬದಲಿಗೆ-ಎಂದಾಗಿದೆ.

"ಕಳ್ಳಸಂತೇ ವ್ಯಾಪಾರಿಗಳು ರಾಷ್ಟ್ರದ ನಂಬ್ರ 1ನೇ ವೈರಿಗಳು; ಅವರನ್ನು ಪೀಠಿಗೆ ಕೊಟ್ಟರೂ ಹೆಚ್ಚಲ್ಲ" ಎಂದು ಜವಾಬ್ದಾರೀ ಮಂಡಿಂದರ ಬಾಯಿಯಿಂದ ಬಂದಿದ್ದಗತಕಾಲದ ಮಾತುಗಳು ಮಸಕಾಗಿ ಹೋಗಿ, ವರ್ತಮಾನ ಕಾಲದಲ್ಲಿ ಅಂತಹ ಮಹಾವರಾಧಿಗಳು ಅಗಣ್ಯ ಹಾಗೂ ಸರ್ವಸಾಮಾನ್ಯ ಅಪರಾಧಿಗಳಾಗಿ ಬಿಟ್ಟಿಲ್ಲೂ ಉಳಿದುಕೊಂಡಿದ್ದಾರೆ.

ಸ್ವತಂತ್ರ ಪ್ರಜಾಧಿಕಾರವು ಪ್ರಜೆಗಳಿಬ್ಬರ ಸರಿಸಮಾನ ಹಕ್ಕನದು ಎಂಬುದು ಮರೆತು ಹೋಗಿ, ಅದು ಅಧಿಕಾರ ನಿರ್ವಹಿಸುತ್ತಿರುವವರದೇಎಂಬ ಭಾವನೆಯಿಂದ ಅದರ ಗುಣದೋಷಗಳಿಗೆ ಆ ಅಧಿಕಾರೀವರ್ಗವನ್ನೇ ಪೂರ್ಣವಾಗಿ ಹೊಣೆಮಾಡುವ ಚಟ ವ್ಯಾಪಿಸಿಕೊಂಡಿದೆ.

ರಾಷ್ಟ್ರದ ರಕ್ಷಣೆ ಮತ್ತು ಭದ್ರತೆಗೆ ಬಾಧೆ ಕಟ್ಟಿದಂತೆ ನೋಡಕೊಂಡು, ಮಾಡಬಹುದಾಗಿದ್ದ ಆರ್ಥಿಕ ಸಾಮಾಜಿಕ ಸುಧಾರಣಾ ಕಾರ್ಯಗಳಲ್ಲಿ ತಾವು ಮಾಡ

(೨ನೇ ಪುಟ ನೋಡಿ)

The CRESCENT
INSURANCE COMPANY LTD.
H. O. BOMBAY.
(Incorporated in India in 1949)

ಈ ಮೊವಲು ಎಂಪಯರ್ ಒಫ್ ಇಂಡಿಯಾ ಲ್ಯಾಫ್ ಇನ್ಶೂರೆನ್ಸ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ಎಸ್. ರಾಮದಾಸ್, ಬಿ.ಎ.,ಬಿ.ಎಲ್. ಅವರು ತಾ. 1—11—1949ರಿಂದ ನಮ್ಮ ಕಂಪೆನಿಯ ಜನರಲ್ ಮೆನೇಜರ್ ಆಗಿ ನೇಮಕಗೊಂಡು ತೀರಿಸಲು ನಾವು ಪುಣಾ ಸಂತೋಷಪಡುತ್ತೇವೆ.

M. SUNDERRAM SHETTY,
Managing Director.



ಮುದುಕರಾದ ನೆಹರು ಪಠೇಲ್

ಸರ್ದಾರರಿಗೆ 75 ಹಿಡಿದು 10 ದಿನ! ಪಂಡಿತಜೀಗೆ 61ಕ್ಕೆ ಇನ್ನು 4 ದಿನ!

●

ಸ್ವತಂತ್ರ ಭಾರತದ ಇಂದಿನ ಏಂತಾ ವರಣಕ್ಕೆ ಆದರ ನಾಯಕರಾದ ನೆಹರೂ, ಪಠೇಲರು ಸೂರ್ಯಚಂದ್ರರಂತಿದ್ದಾರೆ. ಒಬ್ಬರು ಸ್ವಯಂ ದಿನೆಪತಿಯಾಗಿ ಪ್ರಕಾಶ ಬೀರುತಿದ್ದಾರೆ, ಮತೊಬ್ಬರು ಕತ್ತಲೆ ಯಾವರಿಸಿದಾಗ ಆದನ್ನು ಭೇದಿಸಿ ಬೆಳಕು ಚೆಲ್ಲುವುಲ್ಲ ಅಧ್ಯತೆಯುಳ್ಳವರಿದ್ದಾರೆ ಸ್ವಾತಂತ್ರ್ಯರಥದ ಎರಡು ಸಶಕ್ತ ಶ್ವೇತಾಶ್ವಗಳಾಗಿ, ಈ ಜತೆಗಾರರದನ್ನು ಪ್ರಗತಿ ಪಥದಲ್ಲಿ ಮುಂದೊಯ್ಯುತಿದ್ದಾರೆ ಆದರೀಗ ಇಬ್ಬರೂ ಹೆಳಬರಾಗುತ್ತಾ ಬಂಸಿದ್ದಾರೆಂಬುದನ್ನು ಅನುಯಾಯೀ ರಾಷ್ಟ್ರ ಕ್ಕೆ ನೆನಪು ಮಾಡಿಕೊಡುವ, ಇವರಿಬ್ಬರ ಪಾಲಿನ ಎರಡು ದಿನಗಳು ಈ ಪಕ್ಷದ ಒಂಡ ಮತ್ತು ತುದಿಯಾಗಿವೆ ಕಳದ ಒಕ್ಟೋಬರ್ 31ರಲ್ಲಿ ಸರ್ದಾರ್ ವಲ್ಲಭಾಯಿಗಳಿಗೆ 71 ವರುಷ ತುಂಬಿ 75ನೇ ವರುಷ ಹಿಡಿಯುತ್ತು, ಇದೇ ನವಂಬರ್ 14ರಲ್ಲಿ ಪಂಡಿತ ನೆಹರುಗಳಿಗೆ 60 ವರುಷ ತಂಬಿ 61ನೇ ವರುಷ ಹಿಡಿಯುವುದು. ಭಾರತೀಯರ ಸರಾಸರಿ ಆಯುಷ್ಯ ಮಟ್ಟದ ಮೇಲಿಂದ ರಾಷ್ಟ್ರದ ಅತಿ ಪ್ರೀತಿಯ ಹಾಗೂ ಪೂರ್ಣ ವಿಶ್ವಾಸಪಾತ್ರ ನಾಯಕರಿಬ್ಬರೂ ತಮ್ಮ ಜೀವಮಾನದ ಉತ್ಕರಾರ್ಧಕ್ಕೆ ಬಂದಿದ್ದಾರೆ, ಮುದಕರಾಗಿದ್ದಾರ ಸರ್ದಾರ್ ಪಠೇಲರ 74 ನೇ ಹುಟ್ಟು ವರ್ಧಂತಿಯು ಹೃದಯ ಸ್ಪರ್ಶೀ ಮಾತುಕೃತಿಗಳ ಮೂಲಕ

(೧ನೇ ಪುಟದಿಂದ)

ದಿರುವ್ದೆ ಅಂಶಗಳಿವೆ ಎಂಬುದು ಹೊಸೆ ಹೊಸ್ಪವರ ಜ್ಞಾಪಕದಲ್ಲಿಲ್ಲ ರಾಷ್ಟ್ರದ ಸಾಲಿನ ಯ.ಗಾಂತರದ ಅವಧಿಯಲ್ಲಿ ರೂಪುಗೊಳ್ಳಬಹುದಾಗಿದ್ದ ಕೆಲವು ಭೀಕರ ಗಂಡಾಂತರಗಳು ಹೊಸೆಹೊತ್ತವರ ಶಕ್ತಿ ಚಾತುರ್ಯಗಳಿಂದಾಗಿಯೇ ತಪ್ಪಿಹೋಗಿವೆಂಬ ನೆನಪು ಸಾರ್ವಜನಿಕರಿಗೂ ಇಲ್ಲ ಇನ್ನು ಮುಂದಕ್ಕೂ ಪ್ರಚಲಿತ ಅರ್ಥಿಕ ಸಾಮಾಜಿಕ ರೀತಿ ನೀತಿಗಳನ್ನೇ ಊರ್ಜಿತದಲ್ಲಿಡುವುದು ಅಪಾಯಕರವೆಂಬ ದಾಷ್ಟ್ರನಾಯಕರಿಗೆ ಮುಂದಟ್ಟಾಗಬೇಕಾದಷ್ಟು ಆಗಿಲ್ಲ, ವಂದಿನ ರಾಜ್ಯಭಾರ ನಿರ್ವಹಣದ ಮೂಲ ಹೊಣೆಗಾರರು ತಾವಾಗುವೆನೆಂಬುದು ಸಾರ್ವಜನಿಕರಿಗೂ ನಂಕಷ್ಟು ವಂದಟ್ಟಾಗಿಲ್ಲ

ಅಂತೂ ಲಕ್ಷ್ಯದಲ್ಲಿರಬೇಕಾದವು ಅಪೇಕ್ಷಿಸಲ್ಪಟ್ಟವೆ, ನೆನಪಿರಲೇ ಬೇಕಾದ ವಿಷಯಗಳು ನೆನಪಿನಲ್ಲಿಲ್ಲ

ಕಳದ 31ರಲ್ಲಿ ನಡೆದು ಹೋಯಿತು ಪಂಡಿತ ನೆಹರುಗಳ 60ನೇ ವರ್ಧಂತಿಯು ಇದೇ ತಾ 14ರಲ್ಲಿ ರಾಷ್ಟ್ರದ ಲ್ಲೆಲ್ಲಾ ವಿಶೇಷ ನಿಜ್ಯಂಭಣೆಯಿಂದ ಆಚರಿಸಲ್ಪಡಲಿವೆ. ಷಷ್ಟ್ಯಬ್ದ ಮೂರ್ತಿ ಯೆಂಬುದು ಪ್ರತಿಯೊಬ್ಬನ ಜೀವನಾನಾದ ಒಂದು ಎತ್ತರ ಕಟ್ಟೆ. ಅಂವತ್ಸರ ಅಂತಸ್ಸನ್ನು ದಾಟಿ ಆಚೆ ಕಾಲಿಡುವನು ಆಯುಷ್ಯದ ಮುಖ್ಯ ಭಾಗೂ ಗಣ್ಯ ಭಾಗವನ್ನು ವಿನಿಯೋಗಿಸಿಕೊಂಡ ಸಾರ್ಥಕ ಜೀವಿಯೆಂದರ್ಥ ಅವಕಾಶವುಳ್ಳವರು ಆ ಮೇಲೆ ವಿರಮಿಸಿ ಜೀವಿಗಳಾದರೆ, ಆದಕ್ಕೆ ಸೋಮಾರಿತನವೆಂಬ ಅಪವಾದ ಕಟ್ಟಿವಂತಿಲ್ಲ ಆದರೆ ಪಂಡಿತಜೀ ಮತ್ತು ಸರ್ದಾರ್‌ಜೀ ಈ ಮಟ್ಟಿಗೆ ಸುದೈವಿಗಳಲ್ಲವೆಂಬಂದನ್ನು ಒಪ್ಪಬೇಕು ಅವರು ವಿರಾಮ ಸುಖವನುಭವಿಸಲು ರಾಷ್ಟ್ರ ಬಿಡುವಂತಿಲ್ಲ ಬದಲಿಗೆ ನೆಹರುಗಳ ಷಷ್ಟ್ಯಬ್ದ ಪೂರ್ತಿ ಸ್ಮರಣೆಯನ್ನು ದೇಶವು ವಿಶೇಷ ರೀತಿಯಿಂದ ಜರಗಿಸಿ "ನಮಗಾಗಿ ನೀವು ಇನ್ನಷ್ಟ ಕಾಲ ದುಡಿಯುತ್ತಿರಬೇಕು" ಎಂಬುದನ್ನು ಪಂಡಿತಜೀಗೆ ಮತ್ತೊಮ್ಮೆ ಮನವರಿಕೆ ಮಾಡಿಕೊಡಲಿದೆ ಆ ವಿಶೇಷ ಸಂದರ್ಭಕ್ಕುಚಿತವಾಗಿ ಪಂಡಿತಜೀಗೆ ವಜ್ರೋತ್ಸವ ಗ್ರಂಥಕಾಣಿಕೆ ಸಮರ್ಪಣೆಯಾಗಲಿದೆ ನಿಧಿಕಾಣಿಕೆಯ ಸಂಗ್ರಹ ಕಾರ್ಯಗಳೂ ಬೊಂಬಾಯಿ ಮೊದಲಾದ ಕಡೆಗಳಲ್ಲಿ ನಡೆದಿವೆ 60ತುಂಬಿದನಾಯಕನು ಇನ್ನೂ ರಾಷ್ಟ್ರದ ಆಶ್ರಯುಷಾತನಾಗಿ ನಿಲ್ಲುವಂತೆ ವಿನಾಡುವ ಹೊಸ ಪ್ರೇರಣೆಗಳಿಗೆ ಇದಿನ ದೊರಕಲಿವೆ

ದಣಿದ ಜೀವಗಳು

ಈ ಸಂದರ್ಭದಲ್ಲಿ ನೆಹರು-ವಲ್ಲಭಾಯಿ ಜೋಡಿಯನ್ನೊವ್ಮೆ ಜನತೆಯು ಲಕ್ಷ್ಯ ಗೊಟ್ಟು, ವಿವೇಚನಾ ದೃಷ್ಟಿಯಿಂದ ನೋಡಬೇಕಾದುದು ಅಗತ್ಯ ಗಾಂಧೀಜೀ ಹೊರಟು ಹೋದುದರಿಂದ ಸಾರಥಿ ಕಪ್ಪಿಹೋದಂತಾಗಿರುವ ಶ್ವೇತಾಶ್ವ ಜೋಡಿಯಿದು. ಮಹಾತ್ಮಾ ಗಾಂಧಿಯವರಿಂದ ಪ್ರೇರಣೆಗೊಂಡು, ದೇಶಸೇವಕರಾಗಿ ಮಾರ್ಪಟ್ಟ ಹಲವು ರಾಷ್ಟ್ರ ಪ್ರಮುಖರಲ್ಲಿ ಇವರಿಬ್ಬರು ಗಾಂಧಿಜೀ ಏನಾಡಿ ಹಾಕಿದ್ದ ಧೀರ ಣಾರ ಪೈಕಿ, ಸಿ ಆರ್. ದಾಸ್, ಮೋತಿಲಾಲ್, ಲಜಪತರೈ, ಸುಭಾಸ್ (?) ಅನ್ಸಾರಿ, ಸರಿಮೆನ್, ಸರೋಜಿನಿ ಮೊದಲಾದ ಕೆಲವರು ಈ ಮೊದಲೇ ಇಹಯಾತ್ರೆ ಮುಗಿಸಿಕೊಂಡಿದ್ದಾರೆ. ರಾಜೇಂದ್ರಪ್ರಸಾದ್, ಆಜಾದ್, ರಾಜಾಜಿ ಮುಂತಾದವರು ಇದ್ದಾರೆ ಇವರೆಲ್ಲರ ಪೈಕಿ ಅಂದಿನ ಸ್ವಾತಂತ್ರ್ಯಾಂಜೋಲನ ಕಾಲದಿಂದ ಇಂದಿನ ಸ್ವಾತಂತ್ರ್ಯಾಚರಣೆಯ ಕಾಲದವರೆಗೂ ಏಕಪ್ರಕಾರ. ಏಕಮಟ್ಟಿದಲ್ಲಿ ರಾಜಿಸುತ್ತಾ ಒಂದವರು ನೆಹರು ಪಠೇಲರು ಇಬ್ಬರ ವ್ಯಕ್ತಿತ್ವ ಮತ್ತು ಮನೋವೃತ್ತಿಗಳು ಪರಸ್ಪರ ಭಿನ್ನವಾದವುಗಳು ಕೆಲವಂಶಗಳಲ್ಲಿ ಪೂರ್ವ-ಪಶ್ಚಿಮದಂತಹ ಅಂತರ ಇವರಿಬ್ಬರೊಳಗಿರಬಹುದು ಆದರೆ ತಂತಮ್ಮ ಶಕ್ತಿ ಸ್ವಭಾವಗಳಿಗನುಸಾರವಾಗಿ ಇಬ್ಬರೂ ಗಾಂಧೀಜೀ ತೋರಿಸಿದ ಹಾದಿಯಲ್ಲಿ ಅಂದಿನಿಂದೀ ವರೆಗೂ ಜತೆ ಹೆಜ್ಜೆಗಳನ್ನಿಡುತ್ತಾ ಬಂದಿದ್ದಾರೆ. ಅಧಿಕಾರ ವಹಿಸಿದ ನಂತರ ಇವರೊಳಗೆ ಮನಸ್ತಾಪವೆದ್ದ ವಾರ್ತೆಗಳೇನೂ ಕೆಲವು ಬಾರಿ ಸುಳಿದಾಡಿದ್ದುವು. ಆದರೆ ಇವರಿಬ್ಬರ ಜತೆ ನಾಯಕತ್ವವು ರಾಷ್ಟ್ರಕ್ಕಿಗತ್ಯವಿರುವ ವರೆಗೆ ಇವರನ್ನು ಪರಸ್ಪರ ಬೇರ್ಪಡಿಸುವ ಶಕ್ತಿಯು ಖಂತಹದು ಸ್ವಸಂಚದಲ್ಲೇ ಇಲ್ಲ. ಕಳದ ಮುವ್ವತ್ತು ವರುಷಗಳಂಪ ನೆಹರೂ ಪಠೇಲರು ಏಳರಂಗದಲ್ಲಿ ದುಡಿಯುತ್ತಾ ಬಂದವರು ಇವರಿಬ್ಬರೊಳಗೆ ಪರಸ್ಪರ ಹೃದಯ ಪರಿಚಯವಿರುವಷ್ಟು, ಅವಿಭಕ್ತ ಕುಟುಂಬ ಜೀವನದ ಇಬ್ಬರು ಸಹೋದರರೊಳಗೆ ಕೂಡಾ ಇರುವದಸಾಧ್ಯ ಯಾವ ಕಾಲದಲ್ಲಿ ರಾಷ್ಟ್ರಕ್ಕೇನ ಬೇಕೆಂಬುದನ್ನು ಇವರಿಬ್ಬರೂ ಬಲ್ಲವರೇ,

ಈ ಕಾಲದಲ್ಲಿ ವಿಶೇಷತಃ ತಾವಿಬ್ಬರು ರಾಷ್ಟ್ರಕ್ಕೆ ಬೇಕಾಗಿದ್ದೇವೆಂಬುದನ್ನಂತೂ ಅವರು ಜೆನ್ನಾಗಿ ಅರಿತಿದ್ದಾರೆ ಆದ್ದರಿಂದ ಯಾವ ಕಾರಣಕ್ಕಾಗಿಯೂ ತಾವು ಪರಸ್ಪರ ದೂರವಾಗಿ ರಾಷ್ಟ್ರಕ್ಕೆ ದ್ರೋಹ ಬಗೆವವರು ಅವರಲ್ಲ ರಾಷ್ಟ್ರ ಸ್ವಾತಂತ್ರ್ಯದ ಸಾಧನೆ ಮತ್ತು ರಕ್ಷಣೆಗಾಗಿ ಅವಿಶ್ರಾಂತವಾಗಿ ದುಡಿಯುವುದೊಂದೇ ಇವರಿಬ್ಬರ ಪಾಲಿಗೆ ಮೀಸಲಿರುವ ಭಾಗ್ಯ ಸ್ವಾತಂತ್ರ್ಯ ಪ್ರಾಪ್ತಿಯು ಸುಪ್ಪತ್ತಿಗೆದಿಂಬನ್ನು ಒದಗಿಸುವ ಮಾತಂತರಲಿ-ಅತಿ ಹೆಚ್ಚಿನ ಹಾಗೂ ಅಸಹ್ಯ ಕಾರ್ಯಭಾರವನ್ನು ಹೇಂಟಿಟ್ಟೆ ಎರಡು ತಲೆಗಳೆಂದರೆ ನೆಹರು ವಲ್ಲಭಾಯಿಗಳದು. ಸ್ವಾತಂತ್ರ್ಯ ಜಳವಳಗಳ ವೇಳೆ ಇವರಿಗೆ ವಿಶ್ರಾಂತಿಕೊಡಲು "ಸೆರೆಮನೇಕಷ್ಟ"ಗಳೆಂದು ಪ್ರಸಿದ್ಧವಾಗಿರುವ, ಮತ್ತು ಕೀರ್ತಿ ದೊರಕಿಸಿ ಕೊಟ್ಟರುವ ಜೈಲುವಾಸವಾದರೂ ದೂರಕಿದ್ದಿತು. ಆದರೀಗ "ಅತಿ ದೊಡ್ಡ ಅಧಿಕಾರ"ವೆಂಬ ರಮ್ಯ ಹೆಸರಿನ ಉದ್ಯೋಗದಲ್ಲಿ ಸಿಕ್ಕಿಹಾಕಿರುವ ರಾತ್ರಿ ಹಗಲು ದುಡಿಯುತ್ತಾ ಇರಬೇಕಾಗಿದ್ದ ಸರಕೀಯರೊಡನೆ ಹೋರಾಡುತಿದ್ದಾಗ ತಾವು ಪಡುವ ಕಷ್ಟದ ಒಂದಕ್ಕೆ ಎಂಟು ಪಾಲಷ್ಟು ಗೌರವಾದರಗಳು ದೇಶಬಂಧುಗಳಿಂದ ಇವರಿಗೆ ದೊರಕುತಿದ್ದವು; ಆದರೆ ಸ್ವಕೀಯ ಆಪತ್ತು ಆಡಚಣೆಗಳೊಂದಿಗೆ ಹೋರಾಡುತ್ತಿರುವ ಈ ಕಾಲದಲ್ಲಿ ಇವರು ಪಡತ್ತಿರುವ ಪರಿಶ್ರಮದ ಎಂಟನೇ ಒಂದಂಶ ಸಂತೃಪ್ತಿಯಾದರೂ ಜನಕೆಯಲ್ಲಿ ವಾಡಿಲ್ಲವೆನ್ನಬಹುದು. ನೆಹರೂ ವಲ್ಲಭಾಯಿಗಳು ಅಪಂ ವಯಸ್ಸಿನಲ್ಲಿ ಅವರಿಗೆ ಹೇಳಿಸಿದ ನೆಮ್ಮದಿಯನ್ನು ಪಡೆದಿಲ್ಲ ಆದರೆ ತಮ್ಮ ಕರ್ತವ್ಯವನ್ನು ತಾವು ನಿರ್ವಹಿಸುತ್ತಿದ್ದೇವೆಂಬ ಆತ್ಮ ಸಮಾಧಾನ ಅವರಿಗಿದೆ ಆದ್ದರಿಂದಲೇ ತಮ್ಮ ಶುದ್ಧ ಮನಸ್ಸಾತ್ಮಾಧಿಸಿ, ಶಕ್ತಿ ಮತ್ತು ಸಮಯದ ಎಲ್ಲಾ ಅಂಶಗಳನ್ನೂ ಸದ್ವಿನಿಯೋಗಿಸಿ ರಾಷ್ಟ್ರದ ಪಾಲಿನ ತಮ್ಮ ಕರ್ತವ್ಯ ನಿರ್ವಹಿಸುವುದೊಂದನ್ನೇ ತಮ್ಮ ಜೀವನ ಜೀವಾಳವಾಗಿ ಮಾಡಿಕೊಂಡಿರುವ ಇವರಿಬ್ಬರೂ ಇಂದು ನಿರಾಶರಾಗಿಲ್ಲ, ಆಯಾಸಗೊಂಡಿಲ್ಲ; ಇಮ್ಮಡಿ ಹುರುಪಿನಿಂದ ಕರ್ತವ್ಯ ಜೀವಿಗಳಾಗಿದ್ದಾರೆ

ಸರ್ದಾರರ ಸಂದೇಶ

ತನ್ನ 74ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸರ್ದಾರ್ ಪಠೇಲರು ರಾಷ್ಟ್ರಕ್ಕೆ ಕೊಟ್ಟ ಅಂತ ಕರಣ ಪೂರ್ವಕವಾದ ಸಂದೇಶವು ಅಕ್ಷರಂಶ: ಮನ್ನಿಸಲ್ಪಡುವ ಅರ್ಹತೆಯುಳ್ಳದ್ದು ಆಧುನಿಕ ಭಾರತದ ಅತ್ಯಾವಶ್ಯ ಸೂತ್ರಗಳಾದ ಈ ಕೆಳಗಿನ ಮಾತ್ರ

The Canara Industrial & Banking Syndicate Ltd.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್.
ಸ್ಥಾಪನೆ 1925 ಪ್ರಧಾನ ಕಾರ್ಯಾಲಯ ಉಡುಪಿ, ದ ಭಾರತ.
ಕುಟುಂಬದ ಯಜಮಾನನ ಜವಾಬ್ದಾರಿ
ಈಗಿನ ನಿಮ್ಮ ಸಂಪಾದನೆಯು ಎಷ್ಟೇ ಉತ್ತಮವಿರಲಿ, ನೀವು ಕುಟುಂಬದ ಯಜಮಾನನಾಗಿದ್ದಲ್ಲಿ, ನಾಳಿನ ಕುಟುಂಬದ ಪೋಷಣೆಯ ಚಿಂತೆಯು ನಿಮಗೆ ಇದ್ದೇ ಇರಬಹುದಷ್ಟೆ. ಆದರೆ ಈಗಿನ ನಿಮ್ಮ ಸಂಪಾದನೆ ಸಮಯದಲ್ಲಿ ಉಳಿತಾಯದ ಪ್ರಶ್ನೆಯೂ ನಿಮ್ಮಲ್ಲಿದ್ದರೆ ನಾಳಿನ ಸಮಸ್ಯೆಗಳೆಲ್ಲವನ್ನೂ ಬಗೆಹರಿಸಲು ಶಕ್ಯವಿದೆ ನಮ್ಮಲ್ಲಿ ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ತೆರೆಯಿರಿ. ಅಂತೆಯೇ ನಮ್ಮ ರಜತ ಮಹೋತ್ಸವದ ಕ್ಯಾಷ್ ಸರ್ಟಿಫಿಕೇಟುಗಳಿಗಾಗಿ ವಿಚಾರಿಸಿರಿ
ಟಿ ಎಂ ಎ. ಪೈ
ಜೆಯರ್‌ಮೆನ್ ಮತ್ತು ಮೆನೇಜಿಂಗ್ ಡೈರೆಕ್ಟರ್.

ಗಳನ್ನು ಭಾರತೀಯರು ಕಾನೂನಾಗಿ ಗಣಿಸಿ ಪಾಲಿಸಬೇಕಾದುದು ಅಗತ್ಯ: "ಭಾರತವು ಸಾಕಷ್ಟು ಬಲಶಾಲಿಯಾಗುವ ವರೆಗೆ ಮತ್ತು ಅದರ ನೆರನಾಡಿಗಳಲ್ಲಿ ಸಶಕ್ತ ಹಾಗೂ ಆರೋಗ್ಯಕರ ರಕ್ತ ಸಂಚಲನೆ ಯಾಗುವ ವರೆಗೆ ನಾವು ಪರಸ್ಪರ ಕಡೆ ತೊಡಕುಗಳನ್ನು ಹಾಕಿಕೊಳ್ಳಬಾರದು. ಇಂದು ನಾವು ಗೊಂದಲಗೊಳ್ಳುವ ಅಥವಾ ಕಳವಳಿಸಬೇಕಾದ ಕಾರಣವೇನೂ ಇಲ್ಲ. ನಾವು ಸುಸ್ಥಿರ ಮತ್ತು ಸರಿಯಾದ ಬುದ್ಧಿಜೌಕಟ್ಟಿನಿಂದ ನಮ್ಮನಾಲಿನ ಸಮಸ್ಯೆಗಳನ್ನು-ಇದರಿಸಿದರಾಯಿತು ಸಮಸ್ಯೆಗಳ ನಿವಾರಣೆಗಾಗಿ ಜನತೆಯು ಶುದ್ಧ ಸಹಕಾರ ಸ್ಫೂರಣೆಯಿಂದ ವಿಶೇಷ ಶ್ರಮಿಸಿ ಅಧಿಕೋತ್ಪನ್ನ ಮಾಡಬೇಕು. "ಹಚ್ಚಿಗೆ ಬೆಳೆಸುವೆವು; ಕಡಿಮೆ ವ್ಯಯಿಸುವೆವು; ಯಾವುದನ್ನೂ ಹಾಳುಮಾಡಲಾರೆವು" ಎಂಬುದೇ ನಮ್ಮ ಇಂದಿನ ಪಲ್ಲವಿಯಾಗಿರಲಿ". 74 ತುಂಬಿದ ತನ್ನ ಕುರಿತೇ ತನ್ನ ಹುಟ್ಟುದಿನದ ಸಂದರ್ಭದಲ್ಲಿ ಸರ್ದಾರ್ ಪಟೇಲರಾಡಿಕೊಂಡ ಈ ಕಳಕಿನ ಮಾತಗಳೂ ವಿಚಾರಣೀಯವಿವೆ: "ನನ್ನ ಜೀವಿನದಾಗಿರುವ ಕರ್ತವ್ಯ ವೆಂದರೆ ಈಗ ಹೊರದೇಶಗಳಲ್ಲಿ ನಮ್ಮೀ ರಾಷ್ಟ್ರದ ಭಾರವನ್ನು ಹೊತ್ತು ತಿರುಗುತ್ತಿರುವ ನಮ್ಮ ನಾಯಕನ ಕೈ ಗಳನ್ನು ಬಲಪಡಿಸುವದೂಂದೇ. ನನ್ನಲ್ಲಿ ಶ್ವಾಸವಿರುವ ವರೆಗೆ ಮತ್ತು ನನ್ನಲ್ಲಿ ಜೀ ತನವುಳಿದಿರುವ ತನಕ ನಾನೀ ಕೆಲಸ ಮಾಡುವೆ. ಅವರೀಗ ವಿದೇಶ..ಳಲ್ಲಿ ತನ್ನ ಸರ್ವರಕ್ಕೆಯಿಂದ ನಮ್ಮೀ ರಾಷ್ಟ್ರದ ಯಶಸ್ಸನ್ನು ವಿಸ್ತಾರಗೊಳಿಸುತಿದ್ದಾರೆ. ಅದರೂ ಕಟ್ಟಕಡೆಗೆ, ನಮ್ಮ ಸ್ವಂತ ಮನೆ ಸುವ್ಯವಸ್ಥೆಯಲ್ಲಿದ್ದರೇನೇ ನಮ್ಮ ಗೌರವ ಮತ್ತು ಘನತೆಯುಳಿಯಬೇಕು. ನಮ್ಮ ಮೇಲೆ ಕಸರೆರಚುವ ಹಾಗೂ ವಿಷಕಿಸುವ ಅವಮಾತ್ರ ಅಂಶವನ್ನೂ ಬಾಕಿ ಮಾಡದವರು ನಮ್ಮ ಮಧ್ಯದಲ್ಲಿ ದ್ದಾರೆ. ಅವರಲ್ಲಿ ಕೆಲವರಂತೂ ಬ್ರಿಟಿಷ್ ರಾಜ್ಯವೇ ನಮಗೆ ಒಳ್ಳೆಯದಿದ್ದಿತು ಎಂದು ಕೂಡಾ ಹೇಳುತಿದ್ದಾರೆ. ಇಂತಹ ಜನರೂ ನಮ್ಮಲ್ಲಿದ್ದಾರೆಂಬುದು ನಮ್ಮ ದುರ್ದೈವವೇ ಸರಿ. ಈ ಭಾವನೆಯು ನಮ್ಮ ಹೃದಯ ಮತ್ತು ಮೆದುಳನ್ನು ವ್ಯಾಪಿಸಿಕೊಂಡಿತೆಂದರೆ ಗುಲಾಮಗಿರಿಯೇ ಉತ್ತಮವೆಂದು ಅರ್ಥವಾಗುವದು. ಶತ ಮಾನಗಳ ತನಕ ಮೂಳೆ ಮುರಿಯುವ ದಾಸ್ಯಕಾರದಡಿಯಲ್ಲಿ ನಾವು ಉಸಿರೆಳೆಯಲಾದೆ ಬಿದ್ದಿದ್ದೆವೆಂಬುದನ್ನು ಜ್ಞಾಪಿಸಿಕೊಳ್ಳಬೇಕು ಸ್ವಾತಂತ್ರ್ಯದ ದೆಸೆಯಿಂದ ನಮ್ಮಲ್ಲೀಗ ಶಕ್ತಿ ಶ್ವಾಸಬಂದಂತಾಗಿದೆ. ನಡೆಯುವದಕ್ಕೆ ನಾವಿನ್ನು ತಾನೇ ಕಲಿಯಬೇಕು. ಅಂದ ಮೇಲೆ ನಾನೀಗಲೇ ಓಡಲಿಕ್ಕಾರಂಭಿಸಿದೆವೆಂದರೆ ಬೀಳುವುದಂತೂ ಖಂಡಿತ ನಾವು ಕಾಲು ಮತ್ತು ಕೈಗಳ ಮೇಲೆ ನಡೆಯಬೇಕಾಗಿದೆ. ಖಡ್ಗಧಾರೆಯ ಮೇಲೆ ನಡೆಯುವವರಂತೆ ಅತ್ಯಂತ ಜಾಗರೂಕತೆಯ ಹೆಜ್ಜೆಯಿಡಬೇಕಾಗಿದೆ. ಎಲ್ಲಿಯಾದರೂ ಹೆಜ್ಜೆ ತಪ್ಪಿತೆಂದರೆ ಅನಾಹುತವೇ ಗತಿ. ನನಗಿನ್ನು ಉಳಿದಿರುವುದು ಅಲ್ಪಾವಧಿ ಮಾತ್ರ. ಭಾರತದಲ್ಲಿರುವವನಿಗೆ ಎಪ್ಪತ್ತೆನಾಲ್ಕು ವರುಷಗಳೆಂದರೆ ದೀರ್ಘಾವಧಿಯಾಯಿತು; ಹಳೆಯ ಪಕ್ವ ವಯಸ್ಸಾಯಿತು. ನಿಮ್ಮನ್ನೆ ಕಡೆಗೆನಿಮ್ಮ ಸದ್ಭಾವನೆ, ಔದಭಸ್ಯಾಯಗಳು ಈತಿ ಪ್ರಬಲವಿರುವಾಗ ನನಗವು ಇನ್ನೂ ಬಾಳಬೇಕೆಂಬ ಪ್ರೇರಣೆಗಳಾಗುತ್ತಿವೆ. ಆದರೆ ನಿಮ್ಮ ಪ್ರೇಮ, ವಿಶ್ವಾಸ ಮತ್ತು ನಂಬಿಕೆಗೆ ಅರ್ಹನಾಗುವ ಯೋಗ್ಯತೆ ನನ್ನಲ್ಲಿರಲಿ ಎಂಬುದೇ ನನ್ನ ಪ್ರಾರ್ಥನೆ. ನನ್ನ ಅತಿ ಮುಂಜಾನೆಯ ಸಂಚಾರದ ವೇಳೆ ನೆರೆಂರು ಜನರನ್ನು ನಾನು ಕಾಣುತಿದ್ದ ಕಾಲವೊಂದಿತ್ತು. ಆದರೀಗ ನನ್ನ ಶಕ್ತಿ ಮಿತಗೊಂಡಿದೆ; ನನ್ನ ಸಮಯವೂ ಹಾಗೆಯೇ. ಆದ್ದರಿಂದ ಪ್ರತಿಯೊಬ್ಬರ ಭೇಟಿಯು ಅಪೇಕ್ಷೆಯನ್ನು ನಾನು ಈಡೇರಿಸಲಾರೆನಾದರೆ ಅದಕ್ಕಾಗಿ ಯಾರೂ ತಪ್ಪುಭಿಪ್ರಾಯ ಕಟ್ಟಿಕೊಳ್ಳ ಬಾರದು. ನಾನು ಪರದೆಯೊಳಗಡೆ ಜೀವಿಸುವವರ ಪಂಗಡದವನೇನೂ ಅಲ್ಲ. ನನ್ನಲ್ಲೆಂತಹ ವಿತನಾದ ಶಕ್ತಿಯುಳಿದಿರೆಯೋ ಅದೆಲ್ಲವೂ ನಿಮ್ಮ ಸೇವೆಗೆ ಮೀಸಲಿದೆ. ನಾನೇನನ್ನೇ ಮಾಡುತ್ತಿರಲಿ; ನಾನೆಂಥವನೇ ಇರಲಿ—ನಾನು ಮಾಡುವುದೆಲ್ಲವೂ ನಿಮ್ಮೆಲ್ಲರಿಗಾಗಿ ಮತ್ತು ನಾನು ರಾಷ್ಟ್ರದ ಹಿತಕ್ಕಾಗಿ ದೆಡೆಯುತಿದ್ದೇನೆಂಬ ನೀವು ಖಚಿತವಾಗಿ ಕಟ್ಟಿಕೊಳ್ಳಬಹುದು. ನಿನ್ನೊಡನೆ ನನ್ನ ವಿಶೇಷವಾತ್ರ ವಿಜ್ಞಾಪನೆಯೆಂದರೆ, ನಾನೇನಾದರೂ ಅಲ್ಪ ಸ್ವಲ್ಪ ಹೇಳಿದರೆ, ಅದನ್ನು ಅರ್ಥ ಮಾಡಿಕೊಂಡು ಅದರಂತೆ ವರ್ತಿಸಬೇಕೆಂಬುದೇ. ನಾವು ತ್ಯಾಗಿಗಳಾಗಿ, ಒಟ್ಟಾಗಿ ಮುಂದೊತ್ತಲಾರೆವಾದರೆ, ಪುನರ್ವ್ಯವಸ್ಥೆ ಹೊಂದಲು ನಮಗಸಾಧ್ಯವಾದೀತೆಂದು ನಾನೀಗ ಸ್ಪಷ್ಟವಾಗಿ ಹೇಳುತ್ತೇನೆ".

ಅಲ್ಲಿ ವಿದೇಶೀಯರಿಗೆ ಲೋಕ ಕಲ್ಯಾಣಕ್ಕಾಗಿ ಹಾಗೂ ನಮ್ಮ ಪರವಾಗಿ ವಂದಿತ ನೆಹರುಗಳ ಹೃದಯ ಸ್ಪರ್ಶಿ ಬೋಧನೆಗಳಾಗಿವೆ; ಇಲ್ಲಿ ನಮಗೆ, ನಮ್ಮೆಲ್ಲರ ಶ್ರೇಯಸ್ಸಾಕ್ಕಾಗಿ ಸರ್ದಾರ್ ಪಟೇಲರು ಮನೆಮುಟ್ಟುವ ಮಾತುಗಳನ್ನಾಡಿದ್ದಾರೆ. ಯಾರ ಕೈಗಳಲ್ಲಿ ನಮ್ಮ ರಾಷ್ಟ್ರದ ಭದ್ರತೆ ಮತ್ತು ಪ್ರಗತಿ ಜೋಪಾನವಿಯಲ್ಲಿದೆಯೋ ಆ [ಇಬ್ಬರು ಹಿರಿಯರ ಮಾತುಗಳನ್ನ ಸರ್ವರೂ ಶಿರಸಾವಹಿಸಲಿ!

ಆಹಾರ ನಿಯಂತ್ರಣ ಕೂಡಲೇ ರದ್ದಾಗಬೇಕು

—ಮದ್ರಾಸಿನ ಮಾಜಿ ಪ್ರಧಾನ ಮಂತ್ರಿ ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರ ಅಭಿಪ್ರಾಯ.

ಗಾಂಧೀಜಿಯ ಸರ್ಕಾರಣ ಸೂಚನೆಗಳಂತೆ ಆಹಾರ ಧಾನ್ಯಗಳ ವ್ಯೇಪಿನ ನಿಯಂತ್ರಣವು ಮಧ್ಯದಲ್ಲೊಮ್ಮೆ ಅಂಶತೆ ರದ್ದುಗೊಳಿಸಲ್ಪಟ್ಟಿದ್ದರೂ ಆ ಪ್ರಯೋಗವು ಪರಾಭವಗೊಂಡಿತೆನ್ನುತ್ತಾ ಸರಕಾರವು ಪುನಃ ನಿಯಂತ್ರಣ ಹಾಕಿದ್ದಿತು. 'ಆಹಾರದ ವಿತರಣೆ ಸರಿಯಾಗುವಂತೆ—ಆಹಾರ ಅನಾವ್ಯಯವಾಗದಂತೆ—ಅಭಾವ ಕಾಲದಲ್ಲಿ ನಿಯಂತ್ರಣ ಅಗತ್ಯ'ನೆಂದು ಸರಕಾರಗಳ ಅನುಭವದ ಮಾತು ಕೇಳಿ ಬಂದಿದೆ. ಆದರೆ ಅತಿ ದೊಡ್ಡ ಮದ್ರಾಸ್ ಪ್ರಾಂತ್ಯದ ಮುಖ್ಯ ಮಂತ್ರಿಯಾಗಿದ್ದು ಮೇಲಿನ ಅಭಿಪ್ರಾಯಾನುಸಾರ ಆಹಾರ ನಿಯಂತ್ರಣವನ್ನು ಚಾಲು ಮಾಡಿಬಲ್ಲ, ಶ್ರೀ ಓ. ಪಿ. ರಾಮಸ್ವಾಮಿ ರೆಡ್ಡಿಯಾರರು ಇತ್ತೀಚೆಗೊಂದು ವಿಜ್ಞಾಪನಾಪತ್ರ ಹೊರಡಿಸಿ "ಆಹಾರ ನಿಯಂತ್ರಣವು ಅನಗತ್ಯ. ಅದನ್ನು ರದ್ದು ಪಡಿಸಿಕೊಳ್ಳುವುದು ಅತ್ಯಗತ್ಯ" ಎಂದು ವಾದಿಸಿದ್ದಾರೆ. ಶ್ರೀ ರೆಡ್ಡಿಯಾರರ ವಾದವು ಸ್ವತಃ ಆಹಾರ ಬಾತೆಯನ್ನು ನಿರ್ವಹಿಸಿದ್ದ ದಾಜೀ ಪ್ರಧಾನ ಮಂತ್ರಿಯ ಪ್ರತ್ಯಕ್ಷಾನುಭವದ್ದಿದೆ. ಮತ್ತು ವಿಚಾರಾರ್ಹ ಅಂಶಗಳನ್ನು ಒಳಗೊಂಡಿರುವಂತಹದಿದೆ. ಆದ್ದರಿಂದ ಅದರ ಸಾರವನ್ನು ಇಲ್ಲಿ ಕೊಡಲಾಗಿದೆ:-

"ಆಹಾರ ಧಾನ್ಯಗಳ ಉತ್ಪತ್ತಿ, ಸಂಗ್ರಹ, ವಿತರಣೆ ಮತ್ತು ಅವಶ್ಯಕತೆಗಳ ಸಂಬಂಧದ ಎಲ್ಲಾ ಅಂಕೆ ಸಂಖ್ಯೆಗಳನ್ನೂ ಲಕ್ಷ್ಯಪೂರ್ವಕವಾಗಿ ಪರೀಕ್ಷಿಸಿದ ನಂತರವೇ ನಾನೀ ದೇಶದಲ್ಲಿ ಆಹಾರ ನಿಯಂತ್ರಣ ಮತ್ತು ಹಸುಗೇ ಪದ್ಧತಿಯ ಅವಶ್ಯಕತೆಯಿಲ್ಲವೆಂಬ ಅಭಿಪ್ರಾಯವು ನನ್ನಲ್ಲಿ ಬಲಗೊಂಡಿದೆ. ಆಹಾರ ನಿಯಂತ್ರಣವನ್ನು ಇನ್ನೂ ಊರ್ಜಿತದಲ್ಲಿಡುವದರಲ್ಲಿ ಆರ್ಥವಾ ಅದನ್ನು ಇನ್ನಷ್ಟು ಬಿಗುಗೊಳಿಸುವುದರಲ್ಲಿ ಯಾವ ನ್ಯಾಯ ಪೂ ಇಲ್ಲ. ನಿಯಂತ್ರಣ ರದ್ದತಿ ಮತ್ತು ಹಸುಗೇ ರದ್ದತಿಗಳು ಈ ದಿನ ಅವಶ್ಯವಿರುವ ಅತಿ ಮುಖ್ಯ ಕಾರ್ಯಗಳು. ಸರಕಾರದ ಕಡೆಗಿನ ಸಾರ್ವಜನಿಕ ಸಹಾನುಭೂತಿ ಮತ್ತು ವಿಶ್ವಾಸವನ್ನು ಕುಗ್ಗಿಸಿದಂತಹದೇನಾದರೂ ಇದೆಯಾವರೆ ಅದು ಆಹಾರ ನಿಯಂತ್ರಣ. ನಿಯಂತ್ರಣಕ್ರಮವನ್ನು ಮುಂದೊತ್ತುತ್ತಾ ಹೋಗುವುದಕ್ಕೆಯೂ ಕಾರಣ ದೊರಕಿಸುವುದಕ್ಕಾಗಿ ರಾಷ್ಟ್ರದ ಅವಶ್ಯಕತೆಗಳ ಮಿತಿಮೀರಿದ ಅಂದಾಜನ್ನು ಕಟ್ಟುವ ಬಲವಾದ ಲಾಲಸೆಯೊಂದು ಇತ್ತೀಚೆಗೆ ಕಂಡುಬರುತ್ತಿದೆ. ಜನಸಂಖ್ಯೆಯಲ್ಲಿ ವ್ಯಾಯಸ್ಥರು ಮತ್ತು ಮಕ್ಕಳನ್ನು ತರಗತಿವಾರಾಗಿ ವಿಂಗಡಿಸುವಾಗ 1944-45 ರಿಂದ ಈ ವರೆಗಿನ ಸರಕಾರೀ ವರದಿಗಳಲ್ಲಿ ನಮೂದಿಸಿರುವ ಅಂಕೆಸಂಖ್ಯೆಗಳಲ್ಲಿ ವ್ಯಾಯಸ್ಥರ ಸಂಖ್ಯಾಮಾನ ಮಾತ್ರವೇ ಬೆಳೆದಿರುವದು ಖಚಿತವಾಗಿ ತೋರಿಸಲ್ಪಡುತ್ತಿದ್ದು, ಅಂಕೆ ಸಂಖ್ಯೆಗಳಲ್ಲಾಗಿರುವ ತಪ್ಪು ತುಲನೆಗಳು ಆ ಮೂಲಕ ವೇದ್ಯವಾಗುವಂತಿವೆ. 1944-45ರಲ್ಲಿ ಹೆಚ್ಚಿದ ವ್ಯಾಯಸ್ಥರ ಸಂಖ್ಯೆ ಸುಮಾರು ೫೯. 70ರಷ್ಟು ಎಂಬುದರಿಂದಾರಂಭಿಸಿ, ಕೊನೆಗೀ ಸಂಖ್ಯೆಯನ್ನು ೫೯ರಿಂದ 84ಂದ 85ರ ವರೆಗೂ ವಿಂಗಿಸಿಕೊಳ್ಳಲಾಗಿತ್ತು. ಭಾರತ ವನಾಹತಿನ ಜನ ಸಂಖ್ಯೆ 330 ಮಿಲಿಯ ಎಂದು ಕಟ್ಟಿಕೊಂಡರೆ, ಆ ಸೈಕೆ ೫೯ನೇ ಅಂಶ ವ್ಯಾಯಸ್ಥರೆಂದೂ ಉಳಿದ ೪೧ನೇ ಅಂಶ ಮಕ್ಕಳೆಂದೂ ಲೆಕ್ಕಿಸಿದರೆ, ಸರಾಸರಿ ವ್ಯಾಯಸ್ಥರಿಗೆ 16 ಔನ್ಸು ವೀತ್ತಿಲ್ಲಾ ವ್ಯಾಯದ ಮಕ್ಕಳಿಗೆ 8 ಔನ್ಸಿನಂತೆ ಧಾನ್ಯಗಳನ್ನು ಹಂಚಲು ವರುಷಕ್ಕೆ ಬೇಕಾಗುವದೆಂದರೆ ಸುಮಾರು 44.8ಮಿಲಿಯ ಟನ್ನುಗಳಷ್ಟು ಅಕ್ಕಿ ಬದು ವರುಷಗಳ ಅಂದಾಜನ್ನಾಧರಿಸಿ, ಜನ ಸಂಖ್ಯೆಯ ಹೆಚ್ಚಳ ಮುಂತಾದುವನ್ನು ಲೆಕ್ಕಿಸಿಯೇ ಮದ್ರಾಸ್ ಪ್ರಾಂತ್ಯಕ್ಕೆ ಬೇಕಾಗುವ ಅಕ್ಕಿಯೆಂದರೆ ಸುಮಾರು 4.96 ಮಿಲಿಯ ಟನ್ನುಗಳಷ್ಟು. ಇಲ್ಲಿಯ ಸಾಮಾನ್ಯ ವಾರ್ಷಿಕ ಅಕ್ಕಿ ಉತ್ಪನ್ನ 4.86 ಮಿಲಿಯ ಟನ್ನುಗಳಷ್ಟು. ಹೀಗಾಗಿ ಇಲ್ಲಿ ಕಡಿಮೆ ಬೀಳುವ ಅಂಶವೆಂದರೆ ಕೇವಲ 1ಲಕ್ಷ ಟನ್ ಅಕ್ಕಿ ಮಾತ್ರ. ಸಾವೆ ಸಜ್ಜೆಗಳಲ್ಲಿ ಕಡಿಮೆ ಬೀಳುವದೆಂದರೆ 2.4 ಲಕ್ಷ ಟನ್ನುಗಳಷ್ಟು. ೫೪ ಮಿಲಿಯ

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಛೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.
ಕಳೆದ ಮುವತ್ತೈಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದಿವವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಿಲಿಕ್ಕಾಗಲೀ, ಪ್ರಾತಿನಿಧ್ಯ ಹಡೆಯಲಿಕ್ಕಾಗಲೀ
ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ
1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತ ಸಾಧನೆಯನ್ನು ಮಾಡುತ್ತಿರುವುದು.
The Moolky Bank Ltd.,
Moolky, S. K.

ಜನಸಂಖ್ಯೆಯಿರುವಲ್ಲಿ ವರುಷಕ್ಕೆ 3. 24 ಲಕ್ಷ ಟನ್ನುಗಳಷ್ಟು ಅಕ್ಕಿ ಮತ್ತಿತರ ಧಾನ್ಯಗಳ ಕೊರತೆಯೆಂಬುದು ಗಣ್ಯವೇ ಅಲ್ಲ. ಈ ಕಡಿಮೆ ಬೀಳುವ ಅಂಶವೆಂದರೆ ದಿನಕ್ಕೆ ತಲಾ ಒಂದರ್ಧ ನೇ ಔನ್ಸಿನಷ್ಟೆ.

ಉತ್ಪನ್ನ ಸಂಖ್ಯೆ ಸರಿಯಲ್ಲ.

ಸರ್ವಸಮ್ಮತ ದುಷ್ಕಾಲವಾಗಿದ್ದ 1947–48ರಲ್ಲಿ ಒಳಗಡೆ ಬೆಳೆದ ಮುಖ್ಯ ಆಹಾರ ಧಾನ್ಯಗಳ ಜುಮ್ಲಾ ಉತ್ಪನ್ನವು 42 6 ಮಿಲಿಯ ಟನ್ನುಗಳು. ಈ ಪೈಕಿ ಶೇ. 10ರಷ್ಟನ್ನು ಬೀಜ ಮತ್ತು ಹಾಳಾಗುವ ಅಂಶಗಳಿಗಾಗಿ ತೆಗೆದಿಟ್ಟರೆ 38. 34 ಮಿಲಿಯ ಟನ್ನುಗಳಷ್ಟು ಧಾನ್ಯಗಳು ಸಂಗ್ರಹಕ್ಕೆ ದೊರೆಯುವಂಶಹೆನೆಂದಾಯಿತು. ಉಪಧಾನ್ಯಗಳಲ್ಲಬಿ ಈ ಲೆಕ್ಕಕ್ಕೆ ಕಟ್ಟಿಕೊಳ್ಳದ ಇತರ ಧಾನ್ಯಗಳೂ ಇವೆ. ಮುಖ್ಯ ಧಾನ್ಯಗಳ ಈ ನೊತ್ತವೇ ದಿನವೊಂದಕ್ಕೆ ಪ್ರತ್ಯಸ್ಥನೊಬ್ಬನಿಗೆ ಸರಾಸರಿ 14 ಔನ್ಸುಗಳಂತೆಯೂ ಮಕ್ಕಳಿಗೆ ತಲಾ 7 ಔನ್ಸುಗಳಂತೆಯೂ ವಿತರಣೆಮಾಡಲು ಸಾಕಾಗುತ್ತದೆ. ಉತ್ಪನ್ನ ಮೊತ್ತದ ಈ ಸಂಖ್ಯೆ ಸರಿಯೆಂಬುದನ್ನು ಆಧರಿಸಿಕೊಂಡೇ ಈ ಮಾತು. ಆದರೆ, ರಾಷ್ಟ್ರದ ಆವಶ್ಯಕತೆಯನ್ನು ಹೆಚ್ಚಿನ ಪರಿಮಾಣದಲ್ಲೇ ಲೆಕ್ಕಿಸುವ ಹವ್ಯಾಸವು ಸದಾ ಕಾಲಪುರುವಂತೆಯೇ, ಉತ್ಪನ್ನದ ಕಡಿಮೆ ಅಂದಾಜು ಕಟ್ಟುವ ಆಡಿಯೊಂದು ಹವ್ಯಾಸವೂ ಎದ್ದು ತೋರುತ್ತಿದೆ.

ದಾಸ್ತಾನು–ಸಾಗೋಣಗಳಿಂದಾಗುವ ಪಷ್ಟ

ಕೇಂದ್ರ ಸರಕಾರದ ಆಹಾರ ಮತ್ತು ಬೇಸಾಯ ಖಾತೆಗಳ ಸಚಿವರು 1949 ನೇ ಎಪ್ರಿಲ್ 4ರಲ್ಲಿ ಪಾರ್ಲಿಮೆಂಟಿನಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಈ ವಿಧಾನದಿಂದಾದ ನಷ್ಟವು 1946ರಲ್ಲಿ .0028 ಸಲೆಯಾಗಿತ್ತು; ಅದು 1947 ರಲ್ಲಿ .0| ಮತ್ತು 1948ರಲ್ಲಿ .22 ಎಂದಿದ್ದರು. ಆಹಾರಧಾನ್ಯಗಳನ್ನು ಉತ್ತಮ ವ್ಯವಸ್ಥೆಯಲ್ಲಿ ದಾಸ್ತಾನಿಡುವ ಹೊಣೆ ಹೊತ್ತ ಇಲಾಖೆಯಿಂದ ಮುಂದೆ ಬಂದ ಸಂಖ್ಯೆಯಿದು. ಈ ಲೆಕ್ಕ ಪ್ರಕಾರವೇ ಆಹಾರ ಧಾನ್ಯವು 1946ರಲ್ಲಿ ಹಾಳಾದುದಕ್ಕಿಂತ 1948ರಲ್ಲಿ 20 ಪಾಲು ಹೆಚ್ಚಿಗೆ ಹಾಳಾಗಿದೆ ಎಂದಾಯಿತು. ಹಾಗೆ ಹಾಳಾದ ಅಂಶವು ಇದಕ್ಕಿಂತ ಹೆಚ್ಚಿಗಿರಬೇಕೆಂಬುದನ್ನು ಸುಲಭವಾಗಿ ಊಹಿಸಬಹುದು. ಅದು ಹಾಗಿರಲಿ; ಹೀಗೆ ಮುಂದೆ ಬಂದ ಲೆಕ್ಕಿಸಾರ ಪ್ರಕಾರವೇ ಹಾಳಾದ ಧಾನ್ಯಗಳ ಮೌಲ್ಯವು ಮಿಲಿಯಾವಧಿ ರೂಪಾಯಿಗಳಾಗಬಹುದಾದ್ದರಿಂದ ಇದು ದಿಗಿಲುಗೊಳಿಸುವಂತಹ ಸಂಗತಿ.ಅಮದು ಪಡಿಸಿಕೊಂಡ ಧಾನ್ಯಗಳ ಸಂಬಂಧದಲ್ಲಿ ಹೀಗಾಯಿತು. ಸ್ಥಳೀಯ ಉತ್ಪತ್ತಿ ಧಾನ್ಯಗಳು ಪ್ರತ್ಯೇಕವಿವೆ. ಇವುಗಳ ಮಟ್ಟಿಗೂ ಇದೇ ಗತಿಯೆಂದು ತಿಳಿಯಬೇಕು. ಹೀಗಾಗುವುದು ಏತಂದಿಂದ? ಆಹಾರ ಧಾನ್ಯಗಳ ಅಮದು ರವ್ವುಗಳಾಗುವುದು ನರ್ಮಿಟುಗಳ ಮೂಲಕವೇ. ಮತ್ತವು ಹೆಚ್ಚಿನಂಶ ರೈಲ್ವೆಯ ಮುಖಾಂತರವೇ ಉಳತಾಯದ ಜಿಲ್ಲೆಗಳಿಂದ ಅಭಾವದ ಜಿಲ್ಲೆಗಳಿಗೆ ರವಾನೆಯಾಗುತ್ತಿವೆ ಧಾನ್ಯದಾಸ್ತಾನು ಮತ್ತು ಮಾರಾಟದ ಅಧಿಕೃತ ವ್ಯಾಪಾರಿಗಳ ಸಂಖ್ಯೆ ಬಹಳ ಕಡಿಮೆ–ಇಡೀ ಮದ್ರಾಸ್ ಪ್ರಾಂತ್ಯದಲ್ಲಿ ಹೋಲ್‌ಸೇಲ್ ಮತ್ತು ಚಿಲ್ಲರೆಯೆಂದು ಒಟ್ಟಿಗೆ 20,000 ಮಾತ್ರ. 1942ನೆ ಮೊದಲು ಈ ಪ್ರಾಂತ್ಯದಲ್ಲಿ ಸುಮಾರು 24 ಲಕ್ಷ ಮಂದಿ ಈ ವ್ಯಾಪಾರ ಮಾಡುತಿದ್ದರೆಂಬುದನ್ನು ಈ ಸಂದರ್ಭದಲ್ಲಿ ನೆನಸಿಡಬೇಕು. ಧಾರಣೆ ನಿಶ್ಚಯವು ಇಡೀ ವರ ಷದಲ್ಲಿ ಒಂದೇ ರೀತಿ. ವಿತರಣೆ, ಧಾನ್ಯ ನಿರ್ಣಯ ಮತ್ತು ಧಾನ್ಯಗಳ ರವಾನೆ ಮುಂತಾದುವುಗಳಲ್ಲಿ ಕಡಿ ತೊಡಕುಗಳೂ ಇದ್ದೇ ಇವೆ.

ಉತ್ಪನ್ನ ನುತ್ತು ಸಂಗ್ರಹಕ್ಕೆ ಉತ್ತೇಜನವಿಲ್ಲ

ಪರ್ಮಿಟು ಮೂಲಕ ಧಾನ್ಯಗಳ ಚಲಾವಣೆಯಾಗುವಾಗ ವಿಳಂಬಗಳಾಗುತ್ತವೆ. ಅಂತೆಯೇ ಧಾನ್ಯಗಳನ್ನು ತುಂಬಿ ಸಾಗಿಸುವುದಕ್ಕಾಗಿ ರೈಲ್ವೆಯಲ್ಲಿರುವ ಅನುಕೂಲ ತೆಗಳೂ ಒಂದು ಮಿತಿಯೊಳಗಿನವು. ಲೈಸೆನ್ಸುದಾರ ವ್ಯಾಪಾರಿಗಳ ಸಂಖ್ಯೆ ಕಡಿಮೆಯಿರುವುದರಿಂದ, ದೊರಕಬಲ್ಲ ದಾಸ್ತಾನುಗಳೆಲ್ಲವನ್ನೂ ಸರಕಾರದಲ್ಲಿ ಪಡೆಕೊಳ್ಳುವ ಮತ್ತು ಸಂಗ್ರಹಿಸುವ ಅನುಕೂಲತೆಯೂ ಅಲ್ಲಿ ತೀರಾ ಮಿತವಾದ ಪರಿಮಾಣದ್ದು. ಅಗತ್ಯವುಳ್ಳ ಹಣ ಕಾಸು ಮತ್ತು ಗೋಡೌನುಗಳು ಅವುಗಳ ವಶವಿರುವುದಿಲ್ಲ. ಧಾರಣೆಯು ಇಡೀ ವರುಷದಲ್ಲಿ ಒಂದೇ ಸ್ರಕಾರವಿರುವುದರಿಂದ ಧಾನ್ಯವನ್ನು ಒಣಗಿಸಿ ದಾಸ್ತಾನಿಟ್ಟು ವರುಷಾಂತ್ಯ ಭಾಗದಲ್ಲಿ ಮಾರುವ ವ್ಯೇಮತೆಯೇ ಹುಟ್ಟುವದಿಲ್ಲ. ಕಟಾವಾದ ಕೂಡಲೇ, ಅರ್ಧಮರ್ಧ ಒದ್ದೆ ಧಾನ್ಯವನ್ನು ಮಾರಿಬಿಡಲು ಧಾನ್ಯೋತ್ಪಾದನಾ ಅತಿಂಸಕ್ತಾನೆ. ಸರ್ವ ಸಾಮಾನ್ಯ ಪರಿಸ್ಥಿತಿಯಲ್ಲಿ ಧಾನ್ಯವು ಸರಿಯಾಗಿ ಒಣಗಿಸಲ್ಪಟ್ಟಿದ್ದು ಅದಂಲ್ಲಿ ಹೊಟ್ಟು ಕಸಗಳಿಲ್ಲದಂತೆ ನೋಡುವಕಲಸ ಮತ್ತಹೊಣೆಗಾರಿಕೆ ಅದನ್ನು ಕೊಂಡುಕೊಳ್ಳುವವನದೇ ಆಗಿದ್ದಿತು; ಮತ್ತು ಹಾಗಿರಬೇಕಾದುದೇ. ಮಾತ್ರವಲ್ಲ, ವ್ಯಾಪಾರಿ ಮಹಿವಾಟುಗಳಲ್ಲಿರುವಂತೆ ಉತ್ಪಾದಕನಿಗೆ ದಾಸ್ತಾನಿಟ್ಟುದಕ್ಕೆ ಮತ್ತು ಒಣಗಿಸಿಕೊಟ್ಟುದಕ್ಕೆ ಭತ್ತೆಯೇನೂ ಸಿಗುವುದಿಲ್ಲವೆಂಬುದನ್ನು ಕೂಡಾ ಈ ಸಂದರ್ಭದಲ್ಲಿ ಗಣಿಸಬೇಕಾಗಿದೆ. ಉತ್ಪಾದಕನಾದರೋ ಭೂತೆರಿಗೆ, ಗೃಹಕೃತ್ಯ ಮತ್ತಿತರ ಅನಿವಾರ್ಯತೆಗಳೇ ಮುಂತಾದ ಗರ್ಜಿ ವೆಚ್ಚಗಳಿಗಾಗಿ ಕಟಾವಾದ ಕೂಡಲೇ ತನ್ನ ಧಾನ್ಯವನ್ನು ಮಾರಬೇಕಾಗಿ ಬರುತ್ತದೆ ಉಳತಾಯದ ಜಿಲ್ಲೆಗಳಲ್ಲಿ ಸಂಗ್ರಹಿತ ದಾಸ್ತಾನುಗಳೆಲ್ಲವನ್ನೂ ಪಡಕೊಳ್ಳಲು ಲೈಸನ್ಸು ಪಡೆದಂತ ಹೋಲ್‌ಸೇಲ್ ಏಜಂಟರುಗಳು ಅಸಮರ್ಥರಾಗಿದ್ದಾರೆ. ನಿದರ್ಶನಕ್ಕಾಗಿ ಮದ್ರಾಸ್ ಪ್ರಾಂತ್ಯದ ತಂಜಾವೂರು ಜಿಲ್ಲೆಯನ್ನು ತೆಗೆದುಕೊಳ್ಳಬಹುದು. ಪ್ರಚಲಿತ ವರುಷದಲ್ಲಿ ತಂಜಾವೂರು ಜಿಲ್ಲೆಯಿಂದ ಸಂಗ್ರಹಿಸಬೇಕೆಂದು ನಿಶ್ಚೈಸಿದ್ದ ಗುರಿಯೆಂದರೆ ಕುರುವಾಯಿ ಸಮೇತ ಸುಮಾರು 2,50,000 ಟನ್ನುಗಳಷ್ಟು ಅಕ್ಕಿ. ಅಷ್ಟನ್ನೂ ಸಂಗ್ರಹಿಸಿ ಕೊಳ್ಳಲಾಯಿತು. ಸರಕಾರವು ಸುನಃ 30,000 ಟನ್ನುಗಳಷ್ಟನ್ನು ಪಡೆಕೊಂಡಿತು. ಆ ಜಿಲ್ಲೆಯಲ್ಲಿ ಇನ್ನೂ 100,000 ಟನ್ನುಗಳಷ್ಟು ಅಕ್ಕಿ ದೊರೆಯಬಹುದೆಂದು ಸಾಧಾರಣವಾಗಿ ತಿಳಿದು ಬರುತ್ತಿದೆ. ಅಲ್ಲಿಂದ ರೈಲು ಮೂಲಕ ದಿನಕ್ಕೆ 1,000 ಟನ್ನು ಅಕ್ಕಿಯನ್ನು ಮಾತ್ರ ಸಾಗಿಸಲು ಸಾಧ್ಯ.ಈರೀತಿ ದಿನಂ ಪ್ರತಿ 1,000 ಟನ್ನುಗಳ ಪ್ರಕಾರ ಆ ಜಿಲ್ಲೆಯ 2,30,000ಟನ್ನುಗಳನ್ನ ಸಾಗಿಸಲು ಸುಮಾರು ೨೫ದಿಂಗಳುಗಳು ಹಿಡಿಯುತ್ತವೆ. ಇಷ್ಟು ಹೊತ್ತಿಗೆ ಆ ದಾಸ್ತಾನು ಹಾಳಾಗಿಹೋಗಬಹುದು. ತಂಜಾವೂರು ಮತ್ತಿತರ ಉಳತಾಯದ ಜಿಲ್ಲೆಗಳನ್ನು ಸಂದರ್ಶಿಸುವಂತರೇ ಆದರೂ ಅಲ್ಲಿಯ ಹಲವು ರೈಲ್ವೇ ಸ್ಟೇಶನ್‌ಗಳಲ್ಲಿ ಬಟ್ಟಬಯಲಾಗಿ ಮಳೆಬಿಸಿಲಿಗೆ ರಾಶಿಹಾಕಿಡಲ್ಪಟ್ಟಿರುವ ಸಾವಿರಾರು ಅಕ್ಕಿಗೋಣಿಗಳನ್ನೂ ಅವುಗಳ ಕೆಲವಂಶವು ಹುಳ ಬಿದ್ದಿರುವುದನ್ನು ಹಾಗೂ ಕೊಳೆಯುಹತ್ತಿರುವುದನ್ನೂ ಕಾಣಬಲ್ಲರು ದಾಸ್ತಾನುಗಳನ್ನು ರವಾನಿಸಿದ ನಂತರ ಕೂಡಾ ಮಾಂಟ್‌ಫಾರ್ಟಣೆಯು ನಿರ್ಣಯವಾಗಬೇಕಾದರೆ ಮತ್ತೂ ಕೆಲವು ತಿಂಗಳುಗಳು ಹೋಗಬೇಕು; ಆ ಮೇಲಾದರೂ ಅವುಗಳ ಮಾರಾಟ ನಡೆಯುವಂತಿಲ್ಲ; ಅವುಗಳಲ್ಲಿ ಹೆಚ್ಚಿನವುಗಳು ವಿನಿಯೋಗಕ್ಕೆ ಅಯೋಗ್ಯವಾದ ಸ್ಥಿತಿಗೆ ಬಂದಿರಂತರವೇ ಮಾರಲ್ಪಡುತ್ತವೆ. ವಿದೇಶಗಳಿಂದ ಅಮದುಮಾಡಿಸಿಕೊಂಡ ಗೋಧಿ, ಸೆಮೊಲಿನಾ ಮುಂತಾದುವುಗಳು ಹಾಳಾದ ಮೇಲೆಯೇ ಮಾರಾಟಕ್ಕೆ ಬೀಳುವ ಸಂಪ್ರದಾಯ. ಅವುಗಳನ್ನ ಕಡ್ಡಾಯವಾಗಿ ಪಡಕೊಳ್ಳಲೇ ಬೇಕಾಗಿರುವ ಕಾರ್ಡುದಾರರು ಸ್ವಂತಾಹಾರಾವಗಿ ಅವನ್ನು ಉಪಯೋಗಿಸುವುದು ಅಸಾಧ್ಯವಾಗಿ, ಒಂದೋ ಬಿಸಾಡುತ್ತಾರೆ, ಇಲ್ಲವೇ ತಮ್ಮ ಜಾನುವಾರುಗಳಿಗೆ ಹಾಕಿ ಬಡಿಶಕ್ತಾಗಿ. ಪ್ರಚಲಿತ ವರುಷದಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಗೋಧಿಯ ಒಂದು ದೊಡ್ಡ ಮಾತ್ರವು ಮಾಂಟವಾಗದೆ ಹಾಗೆಯೇ ಬಿದ್ದುಕೊಂಡಿದೆ.

ಧಾರಣೆಯ ಸ್ಥಿತಿಗತಿ

ಉತ್ಪಾದಕನಿಂದ ಒಂದು ರೂಪಾಯಿಗೆ ಪಡಕೊಂಡ ಧಾನ್ಯವು ಗಿರಾಕಿಗೆ ಮಾರಾಟವಾಗುವಾಗ ಒಂದೂವರೆ ರೂಪಾಯಿ, ಕೆಲವು ಸಂದರ್ಭಗಳಲ್ಲಿ ಇದಕ್ಕಿಂತಲೂ ಹೆಚ್ಚಿನ ಬೆಲೆ ನಿಲ್ಲುತ್ತದೆ. ಇವೆರಡು ಧಾಂಣೆಗಳೊಳಗಿನ ಈ ಮಹದಂತರವೇ ರೈತನು ಅನಿವಾರ್ಯವಾಗಿ ತನ್ನಿಂದ ಸಾಧ್ಯವಿದ್ದಷ್ಟು ಧಾನ್ಯವನ್ನು ಅಡಗಿಸಿಡುವಂತೆ ಮಾಡುತ್ತದೆ. ಇದು ಹೃದಯ ಭಗ್ನತೆಗೆ ಕಾರಣವಾಗಿದೆ. ಇತರ ವ್ಯಾಪಾರ್ಯಗಳೊಡನೆ ಹೋಲಿಸಿ ನೋಡುವಾಗ ಸಾಗುವಳ್ಳೀ ವೆಚ್ಚತ್ತ ಮದ್ರಾಸ್ ಪ್ರಾಂತ್ಯದಲ್ಲಿಮಿಕ್ಕಿ ಭಾಗಗಳಿಗಿಂತ ಹೆಚ್ಚಾಗಿದ್ದರೂ ಇಲ್ಲಿ ಧಾನ್ಯೋತ್ಪಾದಕನಿಗೆ ಕೊಡುವ ಧಾರಣೆಯು ತುಲನಾತ್ಮಕವಾಗಿ ಕಡಿಮೆ. ಮೂಲತ: ಎರಡು ಮೂಣಗಳ ಒಂದುಗೋಣಿ ಅಕ್ಕಿಯು ಧಾನ್ಯಸಂಗ್ರಹದ ಕನಿಷ್ಠ ಪರಿಮಾಣವೆಂದು ನಿಶ್ಚೈಸಲಾಗಿದ್ದಿತು. ಇದನ್ನಾಧರಿಸಿಯೆ ಗೋಣಿಯ ಹಾಗೂ ತುಂಬಿಸಿ ಹೊಲಿಯುವ ವೆಚ್ಚ ಮುಂತಾದುವುಗಳನ್ನು ನಿರ್ಧರಿಸಲಾಗುತಿತ್ತು. ಈಗ ಈ ಕನಿಷ್ಠ ಪರಿಮಾಣವನ್ನು ಒಂದುಮಣ ಅಕ್ಕಿಯೆಂದು ಅರ್ಧಮರ್ಧ ತಗ್ಗಿಸಲಾಗಿದೆ. ಇದರ ಪರಿಣಾಮವಾಗಿ, ಇದೊಂದೇ ದೆಸೆಯಿಂದ ಮೇಲ್ಗಡೆ ನಮೂದಿಸಿದ ಸಣ್ಣಪುಟ್ಟ ವೆಚ್ಚವೇ ನೂರಕ್ಕೆ ನೂರರಷ್ಟು ಏರಿದೆ.

ಧಾನ್ಯಸಂಗ್ರಹದ ಕಷ್ಟಗಳು

ಧಾನ್ಯಸಂಗ್ರಹದ ಇಂದಿನ ಪದ್ಧತಿಯು ಅತಿರೇಕ ಕಷ್ಟನಷ್ಟಗಳಿಗೆ ಕಾರಣವಾಗಿದೆ. ಇಂದಿನ ಒತ್ತಡದ ಸಂಗ್ರಹ ಕ್ರಮವೇ ಇನ್ನೂ ಕೆಲಕಾಲ ಮುಂದುವರಿದರೆ, ಕೆಲವೇ ತಿಂಗಳುಗಳಲ್ಲಿ ಹಳ್ಳಿಗೆ ಪ್ರವೇಶಿಸುವುದೇ ಅಸಾಧ್ಯವಾಗುವಷ್ಟು ಹೆಚ್ಚಿನ ಜತೃಷ್ಟಿಯನ್ನು ನೇ. 85ರಷ್ಟು ಹಳ್ಳಿಗರಲ್ಲಿ ಅದು ನಿರ್ಮಿಸಬಹುದೆಬುದು ಖಂಡಿತ. ಇಂತಹ ಅಮಾಲಾಗ್ರ ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬದಲಿಗೆ ಬರಬೇಕಾದ ಕ್ರಮವು ಎಂದರೆ ಪಾಲು ನಿಶ್ಚೈಸಿ ಹಾಕುವುದು(ಲೆವಿ ಸಿಸ್ಟಮ್) ಒಬ್ಬನ ಸಾಗುವಳ್ಳೀ ಭೂಮಿಯೆಷ್ಟೆಂಬುದನ್ನು ಆಧರಿಸಿ, ಆತನು ಇಂತಿಷ್ಟೇ ಧಾನ್ಯವನ್ನು ಸಂಗ್ರಹಾಧಿಕಾರಿಗೆ ಒಪ್ಪಿಸಬೇಕೆಂದು ನಿರ್ಬೈಸಬಹುದು. ಈ ಕ್ರಮವಾದರೋ ಸಣ್ಣಪುಟ್ಟ ಅಧಿಕಾರಿಗಳ ದಬ್ಬಾಳಿಕೆಗಳಿಗೆ ಅವಕಾಶ ಕೊಡುವಂತಿರಬಾರದು. ಮತ್ತದರಿಂದ ಯಾವ ಕಷ್ಟನಷ್ಟಗಳೂ ಇಲ್ಲವೆಂದಾಗಬೇಕು. ಈಗ ಸಂಗ್ರಹಿಸಲ್ಪಡುತ್ತಿರುವಷ್ಟು ಮೊತ್ತವನ್ನು ಸದ್ಯದ ಅಸಮಾಧಾನಗಳಲ್ಲದೇ ಈ ಪದ್ಧತಿಯು ಮೂಲಕ ಸಂಗ್ರಹವಾಗಬಲ್ಲುದು. ಪ್ರೊಕ್ಯೂರ್‌ಮೆಂಟ್ ಸುಗಮವಾಗುವಂತೆ, ಕೊಡುಗೇ ಧಾರಣೆಯನ್ನು ಹೆಚ್ಚಿಸಬೇಕು. ಈ ಪ್ರಾಂತ್ಯದಲ್ಲಿ ಸುಮಾರು 10 ಕೋಟಿ ರೂಪಾಯಿಗೆ ಷ್ಟಾಗುವ ತೆರಿಗೆಗಳ ಸಮೇತ ಭೂತೆರಿಗೆಯನ್ನು ಸಾಗುವಳ್ಳೀ ಭೂಮಿದಾರರಿಂದ ಧಾನ್ಯಗಳ ರೂಪದಿಂದಲೇ ಗ್ರಾಮ ಉದ್ಯೋಗಸ್ಥನ ಮುಖಾಂತರ ಸಂಗ್ರಹಿಸಬಹುದು. ರೈತನಿಗೆ ಭತ್ತದ ಬದಲು ಅಕ್ಕಿಯನ್ನೊಪ್ಪಿಸವ ಪರಿವಾಗಿ ದೊರೆತರೆ, ತನ್ನ ಜಾನುವಾರುಗಳಿಗೆ ತಾಡು ಸಿಕ್ಕಿದ ಹೆಚ್ಚಿನ ಲಾಭವು ಅವನಿಗಾಗುವು

THE
PANGAL NAYAK BANK, LTD.
Head Office: UDIPI.
SAVE FOR THE FUTURE.
SEASON DEPOSITS terminable on or before 30–6–1950 are accepted from 1–10–1949 at the following rates:
For 3, 4 or 5 months at 3 % p. a.
For 6, 7 or 8 months at 3½% p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices.

ನೆಹರುಗಳ ವಿಜಯೀ ಸಂಚಾರ ಮುಗಿಯಿತು!

ಭಾರತ ಪ್ರಧಾನಿ ಪಂಡಿತ ಜವಾಹರಲಾಲ ನೆಹರುಗಳು ಅಮೆರಿಕ ಮತ್ತು ಕೆನಡಾಗಳ ಮೂರು ವಾರಗಳ ಪ್ರವಾಸವನ್ನು ಇದೇ ನವಂಬರ್ ತಾ. 4ರಲ್ಲಿ ಮುಗಿಸಿಕೊಂಡರು; ತಾ. 7ರಲ್ಲಿ ನ್ಯೂಯೋರ್ಕಿನಿಂದ ಹೊರಟು, ಲಂಡನ್ನಿಗಾಗಿ ಮಿಸಿದ್ದಾರೆ. ಅಲ್ಲಿ ಅವರೊಡನೆ ಕೆಲವು ಪ್ರಾಮುಖ್ಯ ವಿಷಯಗಳ ಕುರಿತು ವಿಚಾರ ವಿನಿಮಯ ನಡಿಸಲು ಬ್ರಿಟಿಷ್ ಮಂತ್ರಿ ಮಂಡಲದವರು ಸಿದ್ಧತೆ ನಡೆಸಿದ್ದಾರೆ. ಲಂಡನ್ನಿನಿಂದ ಹೊರಟವರು ಇದೇ ತಾ. 14ಕ್ಕೆ ದೊಂಬಾಯಿಗಾಗಮಿಸಿ, ತಾ. 14ರಲ್ಲಿ ಜರಗುವ ಅವರ ಷಷ್ಟ್ಯಬ್ದ ಪೂರ್ತಿ ಸಮಾರಂಭದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯಲಿದ್ದಾರೆಂದು ತಿಳಿದು ಬರುತ್ತದೆ. ಬೊಂಬಾಯಿ ನಾಗರಿಕರ ಪರವಾಗಿ ಬೊಂಬಾಯಿ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ರಚಿಸಿದ್ದ ಸ್ವಾಗತ ಸಮಿತಿಯವರು ವಜ್ರ ಕೆತ್ತಿದ ಆಕರ್ಷಕ ಸ್ಮಂಭವೊಂದನ್ನು ಈ ಸಂದರ್ಭದಲ್ಲಿ ಪಂಡಿತಜೀಗೆ ಉಡುಗೊರೆ ಮಾಡಲಿದ್ದಾರೆ.

ಅಂತೂ ಆಧುನಿಕ ಯುಗದ ಅತ್ಯಾಕರ್ಷಣೀಯ ವಿಜಯಯಾತ್ರೆ ಮಾಡಿದ ಕೀರ್ತಿ ಪಂಡಿತ ನೆಹರುಗಳಿಗೆ. 'ಅನ್ಯಾದ ಜೀವಂತ ವ್ಯಕ್ತಿಗಳ ವೈಕೆ ದೊಡ್ಡ ಮನುಷ್ಯ" ಎಂದು ಇವರನ್ನು ಸ್ವಾಗತಿಸಿಕೊಂಡಿದ್ದ ಅಮೆರಿಕವು "ಇಡೀ ಜಗತ್ತಿನ ಅಗ್ರಗಣ್ಯ ನಾಯಕರಲ್ಲೊಬ್ಬ' ಎಂಬ ಪ್ರಶಂಸೆಯನ್ನಿತ್ತು ಇವರನ್ನು ಬೀಳ್ಕೊಂಡಿದೆ. ಇಷ್ಟು ನಿರ್ದೋಷವಾದ—ಇಂತಹ ಕೀರ್ತಿದಾಯಕವಾದ—ಈ ಮಾದರಿಯಲ್ಲಿ ಹೃದಯಸ್ಪರ್ಶಿಯಾಗಬಲ್ಲ—ಇನ್ನೊಂದು ಸಂಚಾರವು ಇನ್ನೊಬ್ಬನಿಂದಾಗಲು ಸಾಧ್ಯವೇ, ಎಂಬ ಸಂದೇಹ ಬರುವಷ್ಟು ಪಂಡಿತಜೀಯ ಅಮೆರಿಕಾ ಸಂಚಾರವು ಎಲ್ಲಾ ವಿಧಾನಗಳಿಂದಲೂ ಪೂರ್ಣ ಯಶಸ್ವಿಯಾಗಿದೆ.

ಸಂಚಾರದ ಕೊನೆ

ಹಿಂದಿನ ವಾರಾಂತ್ಯದ ವಿಶ್ರಾಂತಿಯನ್ನು ವೈಟ್ ಸಲ್ಫರ್ ಸ್ಪ್ರಿಂಗ್ಸ್ ವಲಯದಲ್ಲಿ ಕಳೆದು, ಸಂತಿಷ್ಟ ನೆಹರುಗಳು ಸಾನ್‌ಫ್ರಾನ್ಸಿಸ್ಕೋ ನಗರಕ್ಕೆ ಆಗಮಿಸಿದಾಗ ಅಲ್ಲಿಯ ಗವರ್ನರ್, ಮೇಯರ್ ಮತ್ತಿತರ ಅಧಿಕಾರಿಗಳು ಹೃತ್ಪೂರ್ವಕ ಸ್ವಾಗತವಿತ್ತರು. ಅಲ್ಲಿದ್ದ ಭಾರತೀಯರ ಉತ್ಸಾಹವಂತೂ ವರ್ಣನಾತೀತವಿದ್ದಿತು. ಕೆಲಿಫೋರ್ನಿಯಾ ವಿಶ್ವವಿದ್ಯಾಲಯದಲ್ಲಿ ಮತ್ತೊಂದು ಪ್ರಾಮುಖ್ಯ ರಾಜಕೀಯ ಭಾಷಣವೀಯುತ್ತಾ "ಲೋಕರಂಗದಲ್ಲಿ ಮುಖ್ಯ ದೈತ್ಯವಾಗಿ ಮೂಡಿರುವ ಅನ್ಯಾದ ಪುನರುತ್ಥಾನದ ವರ್ಣನೆ ಮಾಡಿದರು. ಸಾನ್‌ಫ್ರಾನ್ಸಿಸ್ಕೋದ ಭಾಂತೀಯರು ತಮ್ಮ ದೇಶದ ಅದ್ವಿತೀಯ ನಾಯಕರಿಗೆ ಅಪೂರ್ವ ಸಂಭ್ರಮದ ಸ್ವಾಗತ ಸತ್ಕಾರ ವಿತ್ತರು. ಅಲ್ಲಿಯ ವ್ಯಾಪಾರೀ ಸಂಘದ ವರೇರ್ಪಡಿಸಿದ್ದ ಔತಣ ಸಮಾರಂಭದಲ್ಲಿ ಸಾರ್ವತಾಡುತ್ತಾ ಅಂತರ್ರಾಷ್ಟ್ರೀಯ ಸಮಸ್ಯೆಗಳನ್ನು ಸ್ನೇಹ ಸೌಹಾರ್ದತಾ ಮೂಲಕ ಬಗೆಹರಿಸಬೇಕೆಂದು ಅಗ್ರಹಪೂರ್ವಕ ವಿಜ್ಞಾಪಿಸಿಕೊಂಡರು. ಅಮೆರಿಕದ ಪಶ್ಚಿಮ ತೀರ.ವಳಯಲ್ಲಿನಿವ ಭಾರತೀಯರ ಪರವಾಗಿ ವಿಶೇಷಾಡಾಗಿದ್ದ ಸತ್ಕಾರ ಕೂಟದಲ್ಲಿ ಮಾತಾಡುತ್ತಾ ಗಾಂಧಿಜೀಯ ಮಹಾತ್ಮೆಯನ್ನು ಮಂದಟ್ಟು ಮಾಡಿ "ನನ್ನ ಕಡೆಗೆ ಭಾರತದ ಸಾಮಾನ್ಯ ಜನರು ತೋರಿಸುತ್ತಿರುವ ಪ್ರೇಮ ವಿಶ್ವಾಸಾದರಗಳು ಎಷ್ಟು ಹೆಚ್ಚಿನವೆಂದರೆ, ಒಂದು ನೂರು ಬಾರಿ ಜನ್ಮವೆತ್ತಿದರೂ ಅವುಗಳ ಗರ್ಹನ್ನಿಸಲು ನನ್ನಿಂದಾಗದೆಂದು ನನಗನ್ನಿಸುತ್ತದೆ" ಎಂದು ಉದ್ಗರಿಸಿದರು. ಪತ್ರಿಕಾ ಕೂಟದಲ್ಲಿಯೂ ಭಾಗ ವಹಿಸಿ, ಪೂರ್ವ-ಪಶ್ಚಿಮ ಘರ್ಷಣೆಯ ಮಧ್ಯ ಸ್ಥಗಾರ ತಾನಾಗುವೆನೆಂದು ಹೆಬ್ಬಿದ ಸುದ್ದಿ ಸುಳ್ಳೆಂದರು. ಅಲ್ಲಿಂದ ಹಿಮಾವರಿತ ಸುಂದರ ನಗರ ವಾಂಕೋವರಿಗೆ ಬಂದಾಗ ಅಲ್ಲಿಯೂ ನೆಹರುಗಳಿಗೆ ಸರಮಾವಧಿ ಸಂಭ್ರಮ ಮತ್ತು ಆಕರ್ಷಣೀಯ ಸ್ವಾಗತ ಸತ್ಕಾರಗಳಿದ್ದುವು. ಅಲ್ಲಿ ಅಧಿಕ ಸಂಖ್ಯೆಯಲ್ಲಿರುವ ಭಾರತೀಯರು ವಿಮಾನ ನಿಲ್ದಾಣದಿಂದ ಕಾಂನಲ್ಲಿ ಹೊಂಟಿದ್ದ ನೆಹರೂ ಮಾರ್ಗದಲ್ಲಿ ಸಾಲು ನಿಟ್ಟು ನಿಂತು 'ಗಾಂಧಿಕೀ ಜೈ' 'ನೆಹರೂ ಕೀ ಜೈ' ಘೋಷಗಳನ್ನೆಬ್ಬಿಸಿ, ಪಂಡಿತಜೀಗೆ ಅಲ್ಲಿಯೇ ಸ್ವದೇಶೀ ವಾತಾವರಣನಿರ್ಮಿಸಿದ್ದರು. ವಾಂಕೋವರಿನಲ್ಲಿರುವ ಹಿಂದೀಯರಲ್ಲಿ ಹೆಚ್ಚಿನವರು ಸಿಖ್ಖರು; ಅಲ್ಲಿ ಅವರಿಗೆ ತಮ್ಮ ದೇಶದಲ್ಲಿರುವ ಕುಟುಂಬವನ್ನು ತಂದು ಹಿಂದೀ ಬಾಳುವೆಯನ್ನೇ ನಡೆಸುವ ಅನುಕೂಲತೆಗಳಿವೆ. ಪುತ್ರಿ ಸಮೇತ ಅಲ್ಲಿಯ ಸಿಖ್ ಗುರುದ್ವಾರ ಪ್ರವೇಶಿಸುವಾಗ ಗಡ್ಡಧಾರಿಗಳಾದ ಸಿಖ್ಖ ಪುರುಷರ ಮತ್ತು ಸ್ತ್ರೀಯರ ವರ್ಣರಂಜಿತ ಗುಂಪು ನೆರೆದು ತಮ್ಮ ಸುಸ್ಪಷ್ಟಿದ್ದ ರೀತಿಯಲ್ಲಿ ತಮ್ಮ ಪಂಡಿತಜೀಯನ್ನು ಸ್ವಾಗತಿಸಿತು. ಬೂಟುಗಳನ್ನು ಕಳಚಿ ಹಾಕಿ ಗುರುದ್ವಾರದೊಳಗೆ ಪ್ರವೇಶಿಸಿದ ನೆಹರುಗಳಿಗೆ ಇಂದಿರಾ ಗಾಂಧಿಗೂ ಸಿಖ್ಖರ ಧಾರ್ಮಿಕ 'ಸಿರೋಪಾ' ಗೌರವ ಮತ್ತು ಅಲಂಕಾರಗಳು ಕೊಡಲ್ಪಟ್ಟವು. "ಗ್ರಂಥ್ ಸಾಹೇಬ" ಪಠನೆಗಳಾದುವು. ಪಂಡಿತಜೀ ಅಲ್ಲಿ ದೇಶೀಯ ಬಂಧು ಭಗಿನಿಯರಿಗೆ ಆತ್ಮೀಯತಾ ಭಾವನೆಯಿಂದ ಉಪದೇಶಗಳನ್ನಾಡಿದರು. ವಾಂಕೋವರಿನ ನಗರಸಭಾ ಔತಣ ಸತ್ಕಾರ ಕೂಟದಲ್ಲಿ ಭಾರತದ ಕಾಮನ್‌ವೆಲ್ತ್ ಸಂಬಂಧಗಳನ್ನು ವಿಷದೀಕರಿಸಿದರು. ಅಲ್ಲಿಂದ ಮೇಡಿಸನಿಗೆ ಬಂದು ಅಲ್ಲಿಯೂ ಅಪೂರ್ವ ಸಂಭ್ರಮದ ಸ್ವಾಗತೋಪಚಾರಗಳನ್ನು ಪಡೆದು ಅಲ್ಲಿಯ ವಿಸ್ಕೋನ್ಸಿನ್ ವಿಶ್ವವಿದ್ಯಾಲಯದಲ್ಲಿ ಮತ್ತೊಂದು ಸ್ಮಾಮುಖ್ಯ ಭಾಷಣವಿತ್ತರು. ತನ್ನ ವ್ಯಕ್ತಿತ್ವವು ಸರದೇಶಗಳಿಂದ ಅಪಹರಿಸಲ್ಪಡಲು ಭಾರತವೆಂದಿಗೂ ಬಿಡುವಂತಿಲ್ಲವೆಂದು ಸ್ಪಷ್ಟ ಪಡಿಸಿದರು. ಅಲ್ಲಿಗೆ ಅವರ ಅಮೇರಿಕಾ ಸಂಚಾರ ಕಾರ್ಯಕ್ರಮದ ಮುಕ್ತಾಯ. ಇದೇ ತಾ. 4ರಲ್ಲಿ ಮೇಡಿಸನ್ನಿನಿಂದ ನ್ಯೂಯೋರ್ಕಿಗೆ ಮರಳಿ ಪ್ರವಾಸ ನಿವೃತ್ತಿಯ ನೆಮ್ಮದಿಯಿಂದ, ಅಂದು ರಾತ್ರಿ ನ್ಯೂಯೋರ್ಕ್ ಧಿಯೇಟರಿಗೆಂದು ಶ್ರೀಮತಿ ವಿಜಯಲಕ್ಷ್ಮಿ ಪುತ್ರಿ ಇಂದಿರೆಯೊಂದಿಗೆ ಹೋಗಿ "ಲೇಸ್ಟ್ ಇನ್ ದಿ ಸ್ಪ್ಯಾರ್" ಸಿನೆಮ ನೋಡಿದರು. ಮರುದಿನ ಮತ್ತೊಂದು ಥಿಯೇಟರಿನಲ್ಲಿ 'ಸೌತು ಫೇಸಿಫಿಕ್' ಸಿನೆಮ ನೋಡಿದರು, ನೀಗ್ರೋಗಳ ಅಭಿವೃದ್ಧಿ ಸಂಘದವರು ತಾ. 5ರಲ್ಲಿ "ಮಾನುಷತ್ವವೆಳ್ಳ ನಾಗರಿಕ, ನೈತಿಕವಾದಿ ಮತ್ತು ವ್ಯವಹಾರ್ಯ ಕಶ್ವನೇತ್ರ" ಪಂಡಿತ ನೆಹರುಗಳಿಗೆ ತಮ್ಮ ಸಂಸ್ಥೆಯ ಅಜೀವ ಸದಸ್ಯತ್ವವನ್ನಿತ್ತು ನೀಗ್ರೋಗಳ ಪರವಾಗಿ ಸುವರ್ಣಫಲಕವೊಂದನ್ನು ಅರ್ಪಿಸಿದರು. ನೀಗ್ರೋ ಪತ್ರಿಕೆಯೊಂದರ ಪ್ರಕಾಶಕಿ ಶ್ರೀಮತಿ ರೋಬರ್ಟ್ ವಾನರು ಈ ಮೆಡಲನ್ನು ಅರ್ಪಿಸಿ, ದಳಿತೋದ್ಧಾರಕ ನೆಹರುಗಳನ್ನು ಶ್ಲಾಘಿಸಿದರು. ಈ ಶಬ್ದ ವರ್ಣದವರನ್ನು, ಅದರಲ್ಲೂ ರಶ್ಯದ ಕಡೆಗೆ ಆಗಾಗ ಒಲವು ಸ್ಪುದರ್ಶಿಸಿರುವ ನೀಗ್ರೋ ನಾಯಕ ಪಾಳೆಲ್‌ರೊಬ್ಸನ್‌ನರನ್ನು ಕಾಣಬಾರದೆಂದು ಅಮೆರಿಕಾ ಸರಕಾರವು ನೆಹರುಗಳನ್ನು ಒತ್ತಾಯಿಸಿದ್ದಿತೆಂದು ನ್ಯೂಯೋರ್ಕಿನ ಒಂದು ಪತ್ರಿಕೆ ಪ್ರಕಟಿಸಿದ್ದಿತು. ಪಂಡಿತ ನೆಹರುಗಳೇ ಕುರಿತು ಪ್ರಶ್ನಿಸಲ್ಪಟ್ಟಾಗ ಏನನ್ನೂ ಹೇಳಲಿಚ್ಛಿಸಲಿಲ್ಲ.

ಚರಿತ್ರಾರ್ಹ ಪ್ರವಾಸ

ಸುಮಾರು 26 ದಿನಗಳ ಪರಿಪೂರ್ಣ ಅಮೆರಿಕ ಮತ್ತು ಕೆನಡದಲ್ಲಿ ಹೆಚ್ಚು ಕಡಿಮೆ 10 ಸಾವಿರ ಮೈಲಿಷ್ಟು ಸಂಚರಿಸಿ ಸುಮಾರು 100 ಭಾಷಣಗಳನ್ನು ಕೊಟ್ಟು, 8 ಯುನಿವರ್ಸಿಟಿ ಉಪನ್ಯಾಸಗಳನ್ನಿತ್ತು, ಹತ್ತಿಪ್ಪತ್ತು ಔತಣ ಸಮಾರಂಭಗಳನ್ನು ಪಡೆದು, ಬಹುತೇಕವಾಗಿ ಎಲ್ಲವುಗಳ ದಾಖಲೆಗಳನ್ನೂ ವರಿದು ಪಂಡಿತ ಜವಾಹರಲಾಲರು ಅಲ್ಲಿಂದ ಹಿಂತಿರುಗಿದ್ದಾರೆ. ನೆಹರೂ ರಚಿತ ಗ್ರಂಥಗಳ ಮೂಲಕ ಅಮೆರಿಕಾನರು ನೆಹರುಗಳನ್ನು ಗುರುತಿಸಿಟ್ಟುಕೊಂಡ ಎಲ್ಲೆಡೆಗಳನ್ನೂ ತನ್ನ ಪ್ರತ್ಯಕ್ಷ ಪರಿಚಯದಿಂದ ಮೀರಿ ತೋರಿದ್ದಾರೆ. ಲೋಕದ ಅಗ್ರಗಣ್ಯ ನಾಯಕರಲ್ಲೊಬ್ಬನೆಂಬ ಸ್ಥಾನ ಸಂಪಾದಿಸಿದ್ದಾರೆ. ಈ ಸಂಚಾರದ ಪರಿಣಾಮವಾಗಿ ಭಾರತ-ಅಮೆರಿಕ ರಾಷ್ಟ್ರಗಳ ಹೃದಯ ಸಂಬಂಧವು ನೆರೆಕೆರೆಯ ದೇಶಗಳವು, ಎಂಬಷ್ಟು ಸಮೀಪಕ್ಕೆ ಬಂದಿದೆ. ಇನ್ನು ನೆಹರುಗಳ ಪ್ರಸ್ತಾಪ ಬಂದೊಡನೆಯೇ ಅಮೆರಿಕಾನರ ದೃಷ್ಟಿಪಥದ ಮುಂದೆ ಅತ್ಯುಜ್ವಲ ನಾಗರಿಕ ನಾಯಕನ ಪೂಜನೀಯ ವ್ಯ

(೨ನೇ ಪುಟ ನೋಡಿರಿ)

ಭ್ರು. ಉತ್ಪಾದನಾ ವೆಚ್ಚವು ಒಂದು ಕ್ಷೇತ್ರದಷ್ಟೇ ಮತ್ತೊಂದು ಕ್ಷೇತ್ರದಲ್ಲೂ ಇರುವುದಿಲ್ಲ.ನೀರಾವರಿ ಅನುಕೂಲತೆಗಳು, ಒಳ್ಳೇ ಬಾವಿಗಳು ಮತ್ತು ತೊರೆ, ವಿಶೇಷ ಮಳೆ ಹಾಗೂ ಗೊಬ್ಬರ ಹಾಕುವದು ಅನಿವಾರ್ಯವಿರುವ ಮತ್ತು ಅನಾಯಾಸವಾಗಿ ವರುಷಕ್ಕೆರಡು ಬೆಳೆಬರುತ್ತಿರುವ ಪಂಜಾಬು, ಸಂಯುಕ್ತ ಪ್ರಾಂತ್ಯ, ಬಿಹಾರು ಮತ್ತು ಬಂಗಾಳಗಳಲ್ಲಿ ಅಕ್ಕಿಯ ಧಾರಣೆಯು ಮದ್ರಾಸಿಗಿಂತ ಹೆಚ್ಚಿಗಿದೆ. ಇಲ್ಲಿಯ ನಿಶ್ಚಿತ ಧಾರಣೆಯಲ್ಲಿ ಸಾಕಷ್ಟು ಮುನಾಫೆಯಂಶವನ್ನು ಇಟ್ಟಲ್ಲದೆ ಮತ್ತದು ಉತ್ಪಾದನಾ ವೆಚ್ಚವನ್ನು ಅಧರಿಸಿ ನಿರ್ಣಯಿಸಲ್ಪಟ್ಟಲ್ಲ. ನಿಯಂತ್ರಣವೆಂಬುದಿರುವ ವರೆಗೂ ರಾಷ್ಟ್ರದ ಭಂಡಾವಳಕ್ಕೆ ಬಿದ್ದಿರುವ ತೂತು ಬೆಳೆಯುತ್ತಾ ಹೋಗುವಂತಹದೇ. ಆ ತನಕ ಸ್ಟೂ: ಕೋಟಗಟ್ಟಿ ರೂಪಾಯಿಗಳಾಗುವ ಆಹಾರ ಖಾತೆಯ ವ್ಯವಸ್ಥಾ ವೆಚ್ಚ ಮತ್ತು ಸಹಾಯ ಧನ ಸಂದಾಯಗಳನ್ನು ನಿಲ್ಲಿಸಿಕೊಳ್ಳುವುದು ಅಸಾಧ್ಯ. ನಿಯಂತ್ರಣಗಳ ದೆಸೆಯಿಂದ ರಾಷ್ಟ್ರದ ನೈತಿಕ ಮಟ್ಟವು ಕೆಳಜಾರುತ್ತಾ ಹೋಗಿದೆ. ಲೈಸನ್ಸು ಹೊಂದಿದ ವ್ಯಾಪಾರೀ ಸಂಸ್ಥೆಗಳಿಗೂ ಕರೋರ ಬುದ್ಧಿಯ ಅಧಿಕಾರಿಗಳಿಗೂ ಇದರಿಂದ ಲಾಭವಾಗುತ್ತಿದೆ. ಇವೆಲ್ಲಾ ಸಂಗತಿಗಳೂ, ಕೆಲವು ಲಕ್ಷ ಜನರಿಗೆ ಅನಗತ್ಯವಾದ ಉದ್ಯೋಗಗಳನ್ನು ದೊರಕಿಸಿ ಕೊಡುವ ಪ್ರಯತ್ನಗಳ ಸಮರ್ಥನೆಗಾಗಿಯೇ ಇರುವಂತೆ ಕಾಣುತ್ತಿವೆ.

ಪೂರ್ಣ ನಿಯಂತ್ರಣವೊಂದೇ ದಾರಿ

ವಸ್ತುಸ್ಥಿತಿಯನ್ನು ಇದಿರಿಸುವ ಏಕೈಕ ಗಾಂಕೆಯೊಂದೇ ಈ ಕಾಲದಲ್ಲಿ ಬೇಕಾದುದು. 1938ರಲ್ಲಾಮ್ಮೆ ಯತ್ನಿಸಿದ್ದ ಅಂಶಾಂಶವಾಗಿ ನಿಯಂತ್ರಣ ಹಾರವಾಡುವ ಪ್ರಯತ್ನವು ನಿಯಂತ್ರಣಕ್ಕಿಂತಲೂ ಕಳಕಶೆಯುದಿದೆ. ಎಲ್ಲಾ ಆಹಾರ ಧಾನ್ಯಗಳ ವ್ಯೇಲಿನ ನಿಯಂತ್ರಣಗಳನ್ನು ಅತಿ ಬೇಗನೇ ಸಂಪೂರ್ಣವಾಗಿ ರದ್ದು ಪಡಿಸಿಕೊಳ್ಳುವುದೂ, ಹೇರಳೋತ್ಪತ್ತಿ ಮಾಡಲು ಅಗತ್ಯವಿಲ್ಲ ಗೊಬ್ಬರ, ಕಬ್ಬಿಣ, ಉಕ್ಕು ಉಪಕರಣಗಳು ಮತ್ತು ಯಂತ್ರಗಳ ಅನುಕೂಲತೆ ಹಾಗೂ ಸರಬರಾಯಿ ಮಾಡುವುದೂ ಅತ್ಯಗತ್ಯವಿದೆ. ಇದಕ್ಕನುಗುಣವಾಗಿ ಮತ್ತಿದರ ಬೆನ್ನಲ್ಲೇ ಧಾನ್ಯಗಳ ಸ್ವತಂತ್ರ ವ್ಯಾಪಾರಕ್ಕೆ ಸರಕಾರವು ಅವಕಾಶವೊದಗಿಸಿಕೊಡಬೇಕು. ಪಟ್ಟಣಿಗರಿಗೆ ವಿತರಣೆ ಮಾಡುವುದಕ್ಕಾಗಿ ಸರಕಾರವು ಸ್ವಯಃ ಧಾನ್ಯ ಪಡಕೊಳ್ಳಬೇಕು. ಬೇಸಾಯ ವೆಚ್ಚವನ್ನಾಧರಿಸಿ ಧಾನ್ಯದ ಕನಿಷ್ಠ ಹಾಗೂ ಪರಮಾವಧಿ ಧಾರಣೇ ಮಿತಿಗಳನ್ನು ಈ ವಿಧಾನದಿಂದ ಸುಲಭವಾಗಿ ಮತ್ತು ನ್ಯಾಯಬದ್ಧವಾಗಿ ನಿರ್ಧರಿಸಲು ಸಾಧ್ಯವಿದೆ."



Approved firm by the Govt. of Mysore
Certificated by theA gent of the Govt.of
Gylone & Indian.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI. S. I.

Capital Authorised	Rs.	25,00,000.
Capital Issued & Subscribed	Rs.	20,00,000
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ಉಡುಪಿ, ಗುರುವಾರ, ೧೦-೧೧-'೪೪

ತಯಾರೀ ಸಂದರ್ಭ

ಭಾರತದ ಸ್ವಚರಿತ್ರ ಹಾಗೂ ಸಮೀಪದ ಕಾಲ ಮತ್ತು ವಿದ್ಯಮಾನಗಳತ್ಕ ದೃಷ್ಟಿ ಬೀರುವಾಗ ಇಂದಿನ ಪ್ರಾಮುಖ್ಯವಶ್ಯಕತೆಯಾಗಿ ಕಾಣುತ್ತಿರುವ ವಿಷಯವೆಂದರೆ, ಸಾರ್ವಜನಿಕರು ತಮ್ಮ ಅಭ್ಯಸ್ಥವನ್ನು ತಾವೇ ನಿರ್ಮಿಸಿಕೊಳ್ಳುವ ಮಹತ್ತಾದ ಹೊಣೆಗಾರಿಕೆಗೆ ತಕ್ಕುತಹ ಯೋಗ್ಯತೆಯನ್ನು ಸಂಪಾದಿಸಿಕೊಳ್ಳಬೇಕೆಂಬುದೊಂದೇ. ರಿಪಬ್ಲಿಕ್ ಭಾರತದ ಸ್ವತಂತ್ರ ರಾಜ್ಯ ಘಟನೆ ತಯಾರಾಗಿ ಪೂರ್ಣಗೊಳ್ಳುತ್ತಿದೆ-ಅದು ಬರುವ ಜನವರಿ 26 ರಲ್ಲಿ, ಅವರೆಗಿರುವ ಹಳೇ ಶಾಸನಗಳನ್ನು ಕಿತ್ತು ಹಾಕಿ ಅಸ್ತಿತ್ವಕ್ಕೆ ಬರಲಿದೆ-ಆ ಮೇಲೆ ಹೆಚ್ಚೆಂದರೆ ಒಂದೂ ತಾಲು ವರುಷದೊಳಗೆ ಈ ಘಟನೆಯನ್ನನುಸರಿಸಿ ವ್ಯಾಪ್ತ ಮತದಾನದ ಮೂಲಕ ಸಂಸ್ಥಾನಿಕ ಶಾಸನ ಸಭೆಗಳಿಗೂ ಕೇಂದ್ರ ಪಾರ್ಲಿಮೆಂಟಿಗೂ ಮಹಾಚುನಾವಣೆಗಳಾಗಲಿವೆ. ಸ್ವಕೃತ, ರಾಷ್ಟ್ರದ ಆಹಾರಾಭಾವ ನಿವಾರಣೆ ಮತ್ತು ಬೆದ್ಯೋಗಿಕಾಭಿವೃದ್ಧಿ ಸಾಧನೆಯಂತಹ ಪುನರ್ರಚನಾ ಕಾರ್ಯಗಳಸ್ಥೇ ಸರ್ವ ಶಕ್ತಿ ಮತ್ತು ಲಕ್ಷ್ಯವನ್ನೆಳೆಯುವ ಸಮಸ್ಯೆಗಳಾಗಿ ನಿಂತಿವೆ ಹೊರತು ದೇಶದೊಳಗಿಡೆ ಬೇರಾವ ಗಣ್ಯ ಕಂಟಕವೂ ಕಾಣುತ್ತಿಲ್ಲ. ಈ ಮಾದರಿಯ ಒಂದೆರ್ಲ್ಲೊಂದು ಸಮಸ್ಯೆಗಳು ಈ ದಿನ ಪ್ರಪಂಚದ ಯಾವ ರಾಷ್ಟ್ರವನ್ನೂ ಬಿಟ್ಟಿಲ್ಲ. ಅಂದ ಮೇಲೆ ಭಾರತವು ಸ್ವತಂತ್ರ ಗೊಂಡ ಎರಡೇ ವರುಷಗಳೊಳಗೆ, ಆದಿ ಭಾಗದ ಎಲ್ಲಾಗಲಿ ಬಿರಿಗಳನ್ನೆಲ್ಲ ಅಡಗಿಸಿಕೊಂಡು ಚಿರಕಾಲದಿಂದ ಸ್ವತಂತ್ರವಿರುವ ರಾಷ್ಟ್ರಗಳಷ್ಟೇ ಶಾಂತಿ ಮತ್ತು ದೈರ್ಯತೆಗೀಗ ಬಂತು ಎನ್ನಲಡ್ಡಿಯಿಲ್ಲ. ಭಾರತದ ಪ್ರಧಾನ ಮಂತ್ರಿಗಳು ಸರದೇಶಗಳಲ್ಲಿ ಕೀರ್ತಿಧ್ವಜ ಹಾರಿಸುತ್ತಾದ್ದಾರೆ; ಅವರು ಒತ್ತಿನವರಾದ ಗೃಹಮಂತ್ರಿಗಳು ರಾಷ್ಟ್ರದೊಳಗಿನ ವ್ಯವಸ್ಥಾಸೂತ್ರಗಳನ್ನು ಮುಂದಿಟ್ಟು ಕರ್ತವ್ಯ ಪ್ರೇರಣೆ ಕೊಡುತಿದ್ದಾರೆ. ಆ ಕಡೆಗೆ ಲಕ್ಷ್ಯಕೊಟ್ಟು, ಚಿಂತನೆ ನಡಿಸಲಾಗುವಷ್ಟಾದರೂ ಶಾಂತತೆ ಈಗ ರಾಷ್ಟ್ರದಲ್ಲಿ ವ್ಯಾಪಿಸಿದೆ. ಕರ್ನಾಟಕದಂತಹ ಭಾಗಗಳವರ ಸಾಲಿನ ಭಾಷಾವಾರು ಸ್ವಾಂತ್ಯ ರಚನೆಯಂತಹ ಪ್ರಮುಖ ಕಾರ್ಯವಿನ್ನೂ ಬಾಕಿ ಬಿದ್ದಿರಬಹುದು ಆ ಸಂಬಂಧದ ಒಳಾಂದೋಲನಗಳು ಮತ್ತು ಪರ್ಯಾಲೋಚನೆಗಳು ಈಗ ನಡೆದಿವೆ. ಎಷ್ಟೆಂದರೂ ಇದು ದುರಾಗ್ರಹಕ್ಕೀಡು ಮಾಡುವ ಪ್ರಶ್ನೆಯಲ್ಲ; ಆಗುವದಂತೂ ಖಂಡಿತವೆಂದಿರುವ ಈ ಹೊಸ ವ್ಯವಸ್ಥೆಗಾಗಿ, ಆಗುವ ವಿಳಂಬವನ್ನು ಸಹಿಷ್ಣುತಾಂಶವನ್ನುವಂತಹ ಗರ್ಜಿ ಈ ಮಟ್ಟಿಗಿಲ್ಲ. ಈ ಮೊದಲಿನ ಆಗುಹೋಗುಗಳೊಡನೆ ತುಲನೆ ಮಾಡಿದರೆ, ಸದ್ಯ ನಮ್ಮ ಮುಂದಿರುವುದು ಶಾಂತಚಿತ್ತದ ಪರಿಶೀಲನೆಯನ್ನು ಸಾಧ್ಯಗೊಳಿಸಿಯುವ ಸಾಮಾನ್ಯ ವಾತಾವರಣವೆಂಬುದು ಸ್ಪಷ್ಟ. ಆದರೂ ಕೆಲಸ ಮುಗಿದಿಲ್ಲ; ಗುರಿ ಸಿದ್ಧಿಸಿಲ್ಲ. ಈ ವಿಷಯವನ್ನ ಮುಂದಟ್ಟಿ ಪಡಿಯುವ ಪ್ರಯಾಸ ಕೊಡಾ ಈಗ ಇಲ್ಲ. ರಾಜಕೀಯ ಸ್ವಾತಂತ್ರ್ಯ ಬಂದರೂ, ಯಾವುದೋ ಮಹತ್ತಿನ ಬಾಕಿಯುದೆ, ಎಂಬ ಅನುಭವ ಜನಸಾಮಾನ್ಯರ ನಿತ್ಯ ಜೀವನದಲ್ಲಿ ಆಗುತ್ತಿದೆ. ಅಂದೆಂದರೆ ಆರ್ಥಿಕ ಸಾಮಾಜಿಕ ಅಸ್ತವ್ಯಸ್ತತೆಗಳನ್ನು ನಿವಾರಿಸಿ, ಜನಜೀವನ ಮಟ್ಟವನ್ನು ಮೇಲೆತ್ತುವಕಾರ್ಯ. ಈ ಕಾರ್ಯಾದ ಹೆಸರು ಹೇಳಿ ದುರಾಗ್ರಹ, ಕೃತಕಾವೇಶಗಳು ಪ್ರದರ್ಶಿಸಲ್ಪಡುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ ಈ ದಿನ ಅಂತಹದೇನೂ ಬೇಕಾಗಿಲ್ಲ. ಇನ್ನು ಸುಮಾರು ಎರಡು ತಿಂಗಳುಗಳಲ್ಲಿ ಚುನಾಗೆ ಬರುವ ನವರಾಜ್ಯ ಶಾಸನದಲ್ಲಿ ಎಂತಹ ಕೆಂದುಕೋರತೆಗಳಿದ್ದರೂ ಪ್ರಾಯಸ್ಥರೆಲ್ಲರಿಗೂ ಮತದಾಧಿಕಾರವಿರುವ ಆ ಶಾಸನದನ್ವಯ, ಜನಮತವನ್ನಾಧರಿಸಿರುವ ಜನತೆಗಾಗಿ ಇರುವ ಮತ್ತು ಜನತೆಯುದಾಗುವ, ಜನತಾ ಸಂಸ್ಕಾರಗಳನ್ನು ಕಟ್ಟಲು ಸಾಧ್ಯವಿದೆ, ಎಂಬುದನ್ನು ನೆನೆಯಬಾರದು. ಜನತೆಯ ಬಯಕೆ, ಬೇಡಿಕೆಗಳೇನಿದ್ದರೂ ಈ ವಿಧಾನವನ್ನನುಸರಿಸಿಯೇ ಅವುಗಳನ್ನು ಸಾಧಿಸಿಕೊಳ್ಳಲು ನೋಡಬಹುದು. ಇಂತಹ ರಾಜ್ಯಭಾರದಲ್ಲಿ ಜನಮತಕ್ಕೊಗ್ಗದ ಯಾವ ಸ್ಥಿತ್ಯಂತರ ವಿಷಯವೂ ಮತ್ತಿಲ್ಲಿ ಬಾಳುವಂತಿಲ್ಲವೆಂಬುದನ್ನು ಪುನ್ರುಚ್ಚರಿಸಿ ಹೇಳಬೇಕಾಗಿಲ್ಲ. ಅಂದ ಮೇಲೆ ಯಾವ ವಿಧದ ಬದಲಾವಣೆಯನ್ನಪೇಕ್ಷಿಸುವವರೇ ಇರಲಿ-ಜನಮತವನ್ನು ಒಲಿಸಿಕೊಳ್ಳುವುದೊಂದೇ ಈಗ ಅಂಧವರು ಮುಂದಿರುವ ಹಾದಿ. ಗುರಿ ಸಾಧನೆಗೆ. ಇದಕ್ಕಿಂತ ಸುಲಭ ಮತ್ತು ಸುಗಮವಾದ ಬೇರ ಪಥ ಸದ್ಯಕ್ಕಿಲ್ಲ. ಆದ್ದರಿಂದ ಎಲ್ಲರ ಲಕ್ಷ್ಯವೂ ಈ ಕಡೆಗೆ ಬೀಳಬೇಕಾದ ಸಂದರ್ಭವಿದು. ಕಾಲ ಸಮೀಪಿಸುತ್ತಿದ್ದಂತೆ ಹಿಂದೀ ಜನತೆಯ ತಲೆಗೇರಿಸಿ ಬಿಡಲು, ರಾಜ್ಯಭಾರ ಹೊರೆ

ಗಣನೀಯ ಘಟನೆಗಳು

ಜಿನೀವಾದಲ್ಲಿ ನಡೆಯುತ್ತಿರುವ ಮಟ್ಟಿಗೆ ದೀರ್ಘಾವಧಿಯಿಂದ ಜ್ಯಾಮುಖ್ಯತೆ ಪಡೆದಿರುವ ಜೈನರ ಅಂತರ್ಜಾತೀಯ ಸ್ಥಿತಿಯಾಕಾರಕ್ಕೆ ಬಂದಂತಾಗಿದೆ. ಅದು ಖಚಿತವಾಗಿ ಕಮ್ಯೂನಿಸ್ಟ್ ರಾಷ್ಟ್ರವಾಗಿ ಮಾರ್ಪಟ್ಟಿದೆ. ಈಗಲೂ ಅಲ್ಲಿ ನಡೆದಿರುವ ಹೋರಾಟವನ್ನು 'ಸ್ಪೇತ್ರ ಶುದ್ಧೀಕರಣ'ವೆಂದಲ್ಲದೆ 'ಜಯಾಪಜಯ ನಿರ್ಣಯಿಸುವ ಸಮರ'ವೆಂದು ಕಟ್ಟಕೊಳ್ಳಲಾಗದಿಲ್ಲ. ಚೈನೀಯ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡುವ ಯೋಚನೆ ಮತ್ತು ವಿಚಾರ ವಿನಿಮಯಗಳೀಗ ಅಂತರ್ರಾಷ್ಟ್ರೀಯ ರಂಗದಲ್ಲಿ ನಡೆದಿವೆ. ಚೈನೀ ಕಮ್ಯೂನಿಸ್ಟ್ ಸೇನೆಗಳು ಅತ್ತ ಬ್ರಿಟಿಷರ ಹೋಂಗ್‌ಕೊಂಗಿಗೂ ಇತ್ತ ಭಾರತದ ಸರಹದ್ದಿಗೂ ಸಮೀಪವಾಗಿರುವುದು ಗಣನೀಯ ಘಟನೆ.

ಇಂಡೋನೇಶಿಯದ ಭವಿಷ್ಯ ನಿರ್ಣಯಿಸಲು ಕಳೆದ ಕಲವು ವಾರಗಳಿಂದ ಹೇಗ್‌ನಲ್ಲಿ ನಡೆದಿರುವ ದುಂಡು ಮೇಜು ಸಮ್ಮೇಳನದಲ್ಲಿ 'ಇಂಡೋನೇಶಿಯಾ ಸಂಯುಕ್ತ ಸಂಸ್ಥಾನಗಳ' ರೂಪರೇಷೆ ನಿರ್ಧರಿಸಲ್ಪಟ್ಟಿದೆ. ಈ ಸ್ವತಂತ್ರರಾಜ್ಯ ಭಾರದ ಉದ್ಘಾಟನಾ ಸಿದ್ಧತೆಗಳಾಗುತ್ತಿವೆ.

ಬರ್ಮಾ ಯುದ್ಧವು ಯಥಾ ಸ್ಥಿತಿಯಲ್ಲಿದ್ದು, ಚಿರಕಾಲದ ಕಾಶ್ಮೀರಯಂತಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಆಧ್ಯಕ್ಷ ಕಾರ್ಯಾಸ್ ರೋಮುಲೋರವರು ಪಾಶ್ಚಿಮಾತ್ಯ ರಾಷ್ಟ್ರಗಳು ಮತ್ತು ರಶ್ಯಾ ಮಿತ್ರಯಗಳೊಳಗಿನ ಭಿನ್ನಾಭಿಪ್ರಾಯಗಳನ್ನು ಅಲ್ಲಿ ಗಟ್ಟಯಾಗಿ ಕಟ್ಟುತ್ತಿರುವ ದೃಶ್ಯ ಕಾಣಿಸುತ್ತಿದೆ. ಅದನ್ನು ಹೊರುವ ಶಕ್ತಿ ಮತ್ತು ಜಾತ್ಯರ್ಯವೀಗ ಜನತೆಯಲ್ಲಿ ಹುಟ್ಟಬೇಕು. ಇಲ್ಲವಾದರೆ ಆ ಹೊರೆಯನ್ನು ಜನತೆಯ ತಲೆಯ ಮೇಲೆ ಇಟ್ಟೆವೆಂದು ನೆವಮಾತ್ರಕ್ಕಾಗಿ ತೋರಿಸಿ, ವಸ್ತುತಃ ಕೆಲವೇ ಸಶಕ್ತಿ ಹಸ್ತಗಳು ಅದನ್ನು ಮತ್ತೂ ಹಿಡಿದುಕೊಂಡು ನಿಲ್ಲಬಹುದು; ಇಂದಿನ ಪರಿಸ್ಥಿತಿಯೇ ಮುಂದಕ್ಕೂ ಉಳಿಯಬಹುದು ಅದ್ದರಿಂದ ಈಗ ತಮ್ಮ ಮೇಲಿನ ಕರ್ತವ್ಯ ನಿರ್ವಹಣಕ್ಕಾಗತ್ಯವಿರುವ ತಿಳುವಳಿಕೆ ಮತ್ತು ಉದ್ಯತ ಹಿಂದೀ ಜನತೆಯಲ್ಲಿ ತೋರಿಬಂದಂತಾಗಲು—ಬೇರೆನೇ ಆಗದಿದ್ದರೂ ಆ ಕೊರತೆಯು ಕೇವಲ ತಾತ್ಕಾಲಿಕವಾದೀತು. ಸಾರ್ವಜನಿಕರ ಪಾಲಿಗೆ ಅವರ ತಲೆಯ ಮೇಲೆ ಅವರದೇ ಕೈ ಆಗುವ ಕಾಲ ಬರುತ್ತಿದೆ. ಅದು ಅಮೃತಹಸ್ತವಾಗಿದ್ದರೆ ಉದ್ಧಾರ ಅದರಿಂದಲೇ; ಭಸ್ಮಾಸುರನ ಹಸ್ತವಾಗಿ ಮಾರ್ಪಟ್ಟರೆ ನಾಶ ಕೂಡಾ ಅದು ಮೂಲಕವೇ. ಇಂದಿನಂತೆ ಹೆಚ್ಚಿನಂಶ ನಿರ್ಜೀವ ಕೊರಡಾಗಿಯೇ ಅದು ಉಳಿದುಕೊಂಡರೆ ಇಂದಿನ ಸ್ಥಿತಿಯೇ ಮುಂದಕ್ಕೂ! ಇಷ್ಟನ್ನು ಸ್ಪಷ್ಟವಾಗಿ ಅರಿತುಕೊಳ್ಳಬೇಕು.—ಮುಂದಿನ ಹೊಣೆ ನಿರ್ವಹಣಕ್ಕೆ ತಯಾರಾಗಬೇಕಾದ ಅವಧಿಯಿದೇ ಎಂದು ತಿಳಿದಿರಬೇಕು. ಇದೀಗ ಎಲ್ಲರ ಹಾಲಿನ ಕರ್ತವ್ಯ.

ವನ್ನು ನಿಲ್ಲಿಸಿ, ಶಾಶ್ವತವಾಗಿ ಅಲ್ಲಮಾದರ ತಾತ್ಕಾಲಿಕ ಒಪ್ಪಂದ ಮಾಡಬೇಕೆಂಬ ಲವಲವಿಕೆಯಿಂದ ಇಕ್ಕಡೆಯ ಪ್ರತಿನಿಧಿಗಳೊಡನೆ ಪರ್ಯಾಲೋಚನೆ ನಡಿಸಿದ್ದಾರೆ ಲಿಬ್ಯ, ಸೋಮಾಲಿಲೇಂಡ್, ಎರಿಟ್ರಿಯಾ ಮೊದಲಾದ ಇಟಲಿ ವಸಾಹತುಗಳ ಭಾವೀ ಸ್ವತಂತ್ರ ರಾಜ್ಯಭಾರ ವ್ಯವಸ್ಥೆಯ ಚರ್ಚೆಗಳು ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಡೆದಿವೆ.

ಅಂತೂ ವ್ಯಾಪಾರಿಕ ಆಗುಹೋಗುಗಳ ಕಡೆಗೊಮ್ಮೆ ಮೇಲ್ಮೋಟ ಬೀರುವಾಗ ಸ್ವಾರ್ಥ, ದುರ್ಬುದ್ಧಿ, ದುಳ್ಳಭಿಕ್ಷೆಗಳೊಡನೆ, ನ್ಯಾಯಾಸಕ್ಕೆ, ಸಹೃದಯ ಸಹೃೇರಣೆಗಳು ಘರ್ಷಣೆಕೊಡುತ್ತಿರುವ ದೃಶ್ಯ ಕಾಣುತ್ತಿದೆ.

೦೦೦

ಭಾರತದ ಮಟ್ಟಿಗೆ ಒಳಗಿನ ದುಃಕ್ಕೆ ಮತ್ತು ದುರ್ಘಟನೆಗಳನ್ನು ಹಿಂತಳ್ಳಿ ಸುಬುದ್ಧಿ, ಸುವ್ಯವಸ್ಥೆ ಮುಂದಾಗಿದೆಯೆಂಬಹುದು.

ಗಾಂಧಿಜೀಯ ಕೊಲೆಗಾರರ ಮೇಲಿನ ತೀರ್ಮಾನಗಳ ಗತಿಯೇನಾಗಬಹುದೆಂಬುದು ಎಂದಿನಿಂದಿನವರೆಗೂ ಸಾಮಾನ್ಯ ಹಿಂದೀಯಂ ತಲೆಯಲ್ಲಿ ಕೊಡಾ ಸುಳಿದಾಡುತ್ತಿರುವ ಪ್ರಶ್ನೆ. ಆಪಾದಿತರ ಪರವಾಗಿ ಪ್ರಿನ್ಸಿಕೌನ್ಸಿಲ್‌ವರೆಗೂ ನಡೆದ ಪ್ರಯತ್ನಗಳು ನಿಷ್ಫಲವಾದ ಮೇಲೆ ಎಲ್ಲಿ ಶಿಕ್ಷೆ ವಿಧಿಸಲ್ಪಟ್ಟಿದ್ದವ ನಾತೂರಾಮ ಗೋಡ್ಸೆ ಮತ್ತು ನಾರಾಯಣ ಆಪ್ಟೆಗೆ ಜೀವದಾನ ಮಾಡುವ ವಿಶೇಷಾಧಿಕಾರವುಳ್ಳ ಗವರ್ನರ್ ಜನರಲರೇನು ಮಾಡುವರು ಎಂಬ ಕಡೆಗೆ ಎಲ್ಲರ ಲಕ್ಷ್ಯ ಕೇಂದ್ರೀಕೃತವಾಗಿದ್ದಿತು. ಅಹಿಂಸಾ ಪ್ರವಾದಿ ಗಾಂಧಿಜೀಯ ಕೂಲಿಗಾರರನ್ನು ನೇತಾಡಿಸಿ ತೀರಿಸಿ ಬಿಡಬಹುದೇ?—ಗಾಂಧಿಜೀಯ ಪರಮಾಪ್ತ ರಾಜಾಜಿ ಗವರ್ನರ್ ಜನರಲರಾಗಿರುವಾಗ, ಮತ್ತವರೂ ಗಾಂಧೀಜೀಯ ನಿಕಟವಾಸಿಯಾಗಿಯೇ ನ್ಯಾಯಕರ ಸಲಹೆಗಳನ್ನಿತ್ತವಾಗ ಗೋಡ್ಸೆ ಮತ್ತು ಆಪ್ಟೆಯ ಮೇಲಿನ ಮರಣ ದಂಡನೆ ಜಾರಿಯಾದೀತೇ?- ಎಂದು ಮುಂತಾಗಿ ನಾನಾ ವಿಧದ ಊಹಾಪೋಹಗಳೆದ್ದಿದ್ದವು. ಇಂತಹ ಸಂದೇಹಗಳೆಲ್ಲವನ್ನೂ ಇದೇ ತಾ. 7ರಲ್ಲಿ ನಿವಾರಿಸಿ ಬಿಡಲಾಗಿದೆ. ಈ ಮೊದಲೇ ಅಜ್ಞಾಪಿಸಲ್ಪಟ್ಟಂತೆ, ಇದೇ ತಿಂಗಳ 15ನೇ ಮಂಗಳವಾರ ಗೋಡ್ಸೆ ಮತ್ತು ಆಪ್ಟೆಯನ್ನು ಅಂಬಾಲಾ ಜೈಲಿನಲ್ಲಿ ಗಲ್ಲಿಗೇರಿಸುವುದು ಖಂಡಿತವೆಂದಾಗಿದೆ. ಇದೇ ತಾ. 7ರಲ್ಲಿ ಮಧ್ಯಾಹ್ನ 1 30 ತಾಸಿಗೆ ಭಾರತ ಸರಕಾರದ ವಕ್ತಾರರು ಜಾಹೀರು ಮಾಡಿದರು: "ಮರಣ ದಂಡನೆಗೊಳಗಾಗಿ ಅಂಬಾಲ ಜೈಲಲ್ಲಿರುವ ಗೋಡ್ಸೆ ಮತ್ತು ಆಪ್ಟೆಯರ ಸಂಬಂಧದಲ್ಲಿ ಕೈಗೊಳ್ಳಲಾಗಿರುವ ನಿರ್ಣಯಗಳನ್ನು ಗವರ್ನರ್ ಜನರಲರು ನಿರಾಕರಿಸಿದ್ದಾರೆ. ಅವರ ಕಡೆಯಿಂದ ದಯೆಯಾಚನೆ ಮಾಡಲ್ಪಟ್ಟಿದ್ದ ದಯೆಯಾಚನಾ ಅರ್ಜಿಗಳನ್ನು ತಿರಸ್ಕರಿಸಲಾಗಿದೆ. ಆದರು ನವಂಬರ್ ತಾ 15ಕ್ಕೆ ಅಂಬಾಲಾ ಜೈಲಲ್ಲಿ ಗಲ್ಲಿಗೇರಿಸಲ್ಪಡುವರು". ಗೋಡ್ಸೆಯ ಪರವಾಗಿ ಅವನ ತಂದೆತಾಯಿಗಳಿಂದಲೂ ಆಪ್ಟೆಯ ಪರವಾಗಿ ಸ್ವತಃ ಆತನಿಂದ ಮತ್ತವನ ಪತ್ನಿಯಿಂದ

ಲೂ ದಯೆಯಾಚನೆಯು ಅರ್ಜಿಗಳು ಬಂದಿದ್ದುವು. ಈ ಸಂಬಂಧದ ಮೊಕದ್ದಮೆಯಲ್ಲಿ ಮೂಲತಃ 8 ಮಂದಿ ಆರೋಪಿಗಳಿದ್ದು, ತನಿಖೆ ನಡೆಸಿದ ಸ್ಪೆಶಲ್ ಜಡ್ಜ್ ಶ್ರೀ ಆತ್ಮಚರಣರು ಆ ಪೈಕಿ ಶ್ರೀ ನಾರಾಯಣರಾಯರನ್ನು ಬಿಡುಗಡೆ ಮಾಡಿದ್ದರು. ಗೋಡ್ಸೆ ಮತ್ತು ಆಪ್ಟೆಗೆ ಪಾಠಕ್-ಕರ್ಕರೆ, ಮದನ್‌ಲಾಲ್, ಗೋಪಾಲ್ ಗೋಡ್ಸೆ, ಪರಚುರೆ, ಶಂಕರ ಕಿಷ್ಟಯ್ಯ, ಇವರಿಗೆ ಜೀವಾವಧಿ ಸಜೆ-ಎಂದು ತೀರ್ಮಾನಿಸಿ ಶಂಕರ ಕಿಷ್ಟಯ್ಯನ ಸಜೆಯ ಮಟ್ಟಿಗೆ ದಯೆ ತೋರಬಹುದೆಂದು ಬರೆದಿದ್ದರು. ನಾತೂರಾಮ ಗೋಡ್ಸೆ ತಾ ನೊ ಬ್ಬನೇ ಕೊಲೆಗಾರನೆಂದು ಒಪ್ಪಿಕೊಂಡದ್ದರಿಂದ ಇದರಲ್ಲಿ ಒಳಸಂಚಿರಲಿಲ್ಲವೆಂಬ ವಾದವನ್ನಾಧರಿಸಿ ಈ ತೀರ್ಮಾನದ ಕುರಿತು ಸಂಜ್ಯಾ ಹೈಕೋರ್ಟಿಗೆ ಅಪ್ಪೀಲು ಯಿತು. ಅಲ್ಲಿ ಪರಚುರೆ ಮತ್ತು ಕಿಷ್ಟಯ್ಯನ ಬಿಡುಗಡೆಯಾಯಿತು. ಗೋಪಾಲ ಗೋಡ್ಸೆ ಮತ್ತು ಮದನ್‌ಲಾಲರ ಶಿಕ್ಷೆಯನ್ನು ತಗ್ಗಿಸಬಹುದೆಂದು ಶಿಫಾರಸಾಯಿತು; ಉಳಿದವರ ಶಿಕ್ಷೆ ಕಾಯಮಾಯಿತು. ಆ ಮೇಲೆ ಆಪಾದಿತರು ಪರವಾಗಿ ಪ್ರಿವ್ಹಿ ಕೌನ್ಸಿಲಿಗೆ ಅಪ್ಪೀಲು ಅರ್ಜಿಹೋದಾಗ ಒಕ್ಟೋಬರ್ 12ರಲ್ಲಿ ಒದು ತರ ಸ್ಥಿರಪಲ್ಪಟ್ಟತು. ಈ ಅರ್ಜಿಗೆ ಸಂಬಂಧಪಟ್ಟ ರಿಕಾರ್ಡುಗಳು ದೊರೆತ ನಂತರ, ಶ್ರೀ. ಆತ್ಮಚರಣ ಸ್ಥಾನಕ್ಕೆ ಸ್ಪೆಶಲ್ ಜಡ್ಜ್‌ರಾಗಿ ಬಂದಿದ್ದ ಶ್ರೀ. ಯಸ್. ಯ ಸ್. ದಾಲತರು ನವಂಬರ್ ತಾ. 15ರಲ್ಲಿ ನಾತೂರಾಮ್ ಗೋಡ್ಸೆ ಮತ್ತು ನಾರಾಯಣ ಆಪ್ಟೆಯನ್ನು ಅಂಬಾಲಾ ಜೈಲಿನಲ್ಲಿ ಪಾಶಿಗರಿಸಬೇಕೆಂಬ ಹುಕುಮನ್ನು ಒಕ್ಕೂರ್ 2ರಲ್ಲಿ ಹೊರಡಿಸಿದರು. ಈ ನಡುವೆ ಜೀವದಾನದವ್ಯರ್ಥನಾ ರ್ಜಿಗಳು ವಿಶೇಷಾಧಿಕಾರಿಯಲ್ಲಿ ಗವರ್ನರ್ ಜನರಲರಿಗೆ ಹೋದುವು. ಅವರೀಗ ಈ ವಿಷಯದಲ್ಲಿ ಕೈಹಾಕಲು ನಿರಾಕರಿಸಿರುವುದರಿಂದ ಗೋಡ್ಸೆ ಮತ್ತು ಆಪ್ಟೆ ಬಿಡುವ ಮಂಗಳವಾರ ಪಾಶಿಗೇರಲಿದ್ದಾರೆ.

೦೦೦

ಕೆಳದ ತಾ. 28, 29, 30ರಲ್ಲಿ ಮದ್ರಾಸ್ ಪ್ರಾಂತ್ಯದ ಮೂಡು ಕರಾವಳಿಯ ಆಂಧ್ರನಾಡಿನ ಸರ್ಕಾರ್ . ಜಿಲ್ಲೆಗಳಲ್ಲಿ ಬೀಸಿದ ಭೀಕರ ಬಿರುಗಾಳಿಯಿಂದ ಆಗಿರುವ ಜನ, ಜಾನುವಾರು, ಬೆಳೆ, ಮನೆ, ಸೊತ್ತು ಹಾನಿಗಳು ಹೃದ್ರಾವಕವಿವೆ. ಬಿರುಗಾಳಿಗೀಡಾದ ಆ ದುರ್ದೈವೀ ಪ್ರದೇಶದಲ್ಲಿ ಒಟ್ಟು ಸತ್ತವರ ಸಂಖ್ಯೆಯು ಸುಮಾರು ಮೂರು ಸಾವಿರ ಮೀರಿರಬಹುದೆಂದು ಅಂದಾಜು ಮಾಡಲಾಗಿದೆ. ಸಾವಿರಾರು ಜಾನುವಾರುಗಳೂ ಮೃತ್ಯುವಶವಾಗಿವೆ. ನಮ್ಮದ್ರ ಮತ್ತು ನದಿಗಳು ಉಕ್ಕಿ ಬಂದು ಜಲ ಪ್ರಳಯವೇ ಆಗಿದೆ. ಆಗಣಿತ ವ.ನೆ ಗುಡಿಸಲುಗಳು, ಸಿಮೆಮಾಗೃಹ, ಧಾನ್ಯ ಗೋದಾಮು ಮತ್ತಿತರ ಸಾರ್ವಜನಿಕ ಕಟ್ಟಡಗಳು ಬಿದ್ದು ಹೋದ ವರ್ತೆಗಳಿವೆ. ಜನ ಜಾನುವಾರುಗಳ ಶವಗಳು ನೀರಲ್ಲಿ ತೇಲುತ್ತಿರುವ ಹೃದ್ರಾವಕ ದೃಶ್ಯಗಳು ಒಲ್ಲಲ್ಲಿ ಗೋಚರಿಸುತ್ತಿವೆ.

ಮದ್ರಾಸ್ ಎಸೆಂಬ್ಲಿ ಅಧಿವೇಶನವು ಇದೇ ತಾ. 7ರಲ್ಲಿ ಆರಂಭಿಸಿದೆ. ಸರಕಾರದ ಹಣಕಾಸಿನ ಸ್ಥಿತಿಗತಿ ಮತ್ತು ಭೋರಣೆಯನ್ನು ಆ ಸಂಬಂಧದ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಅರ್ಥಮಂತ್ರಿ ಶ್ರೀ. ಬಿ. ಗೋಪಾಲ ರೆಡ್ಡಿಗಳು ವಿವರಿಸಿದರು. ನೆಲಗಡಲೆ ಹಿಂಡಿ ವಿನಹ ಜೀರಾವ ಹಿಂಡಿಗಳಿಗೂ ನಿಯಂತ್ರಣವಿಲ್ಲವೆಂದು ಬೇಸಾಯ ಮಂತ್ರಿ ಶ್ರೀ. ಎ. ಬಿ. ಸೆಟ್ಟಿ ಸ್ಪಷ್ಟೀಕರಿಸಿದರು. ನೆಲಗಡಲೆ ಹಿಂಡಿಗೆ ಸರಕಾರದ ಧೋರಣೆ ನಿಯಂತ್ರಣವಿಲ್ಲದಿದ್ದರೂ ನಿಶ್ಚಿತ ಪರಿಸ್ಥಿತಿ ಎಂದರು.

ಧಾರ್ಮಿಕ ಪ್ರಾಂತ್ಯ ರಚನೆಯ ಕುರಿತು ಕರ್ನಾಟಕ, ಆಂಧ್ರ, ಕೇರಳ ಮತ್ತು ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿಗಳ ವಿಶೇಷ ರೀತಿಯ ಜಾಟಿವಟಿಕೆಗಳು ನಡೆದಿವೆ. ಅಗತ್ಯವುಳ್ಳ ತೀರ್ಮಾನಕ್ಕೆ ಬರಲು ಪ್ರತಿಯೊಂದು ಕಡೆಯವರು ಪ್ರತ್ಯೇಕವಾಗಿಯೂ ಸಂಯುಕ್ತವಾಗಿಯೂ ಪ್ರಯತ್ನ ನಡೆಸುತ್ತಿದ್ದಾರೆ. ಪಾಲ್ಘಾಟ್‌ನಲ್ಲಿ ಈಗ ತಾನೇ ಸೇರಿ ಮುಗಿದಿರುವ ಐಕ್ಯ ಕೇರಳ ಸಮ್ಮೇಳನದಲ್ಲಿ ದಕ್ಷಿಣಕನ್ನಡವನ್ನು ಕೇರಳಕ್ಕೆ ಸೇರಿಸಬೇಕೆಂಬ ನಿರ್ಣಯವಾಗಿದೆ.

(ಜನೇ ಪುಟದಿಂದ ಮುಂದುವರಿದುದು)

ಕ್ರಿಶ್ಚ ಮೂಡಿ ತೋರುವಂತಾಗಿದೆ; ಭಾರತದ ಪ್ರಸ್ತಾಪ ಬಂದಾಗಲೆಲ್ಲಾ ಘನವಂತ ಹಾಗೂ ರಕ್ತಶಾಲಿರಾಷ್ಟ್ರವೊಂದರ ಸುಸ್ಮರಣೆ ಬರುವಂತಾಗಿದೆ.

ನೆಹರುಗಳ ಇಂತಹ ಅಸಾಮಾನ್ಯ ವಿಜಯಕ್ಕೆ ಮುಖ್ಯ ಕಾರಣಗಳು:—ಸ್ವತಂತ್ರ ಭಾರತದ ಸರ್ವಮಾನ್ಯ ಮತ್ತು ಪ್ರಾಮುಖ್ಯ ಸ್ಥಾನಮಾನ; ನೆಹರುಗಳ ಶುದ್ಧ ಹೃದಯ, ಸಲುಗೆಗೆ ವರ್ತನೆ, ಪ್ರತಿಭೆ, ಪಾಂಡಿತ್ಯ, ಪಾಶ್ಚಾತ್ಯಿನೆ ತುಂಬದ ಅಸಾಮಾನ್ಯ ವ್ಯಕ್ತಿತ್ವ; ಯುದ್ಧಾನಂತರ ಅಮೆರಿಕಕ್ಕೆ ಎಂದಿದ್ದ ವಿಕ್ಯ ವಿದೇಶೀ ನಾಯಕರಂತೆ ಅವರು ಅಮೆರಿಕದಿಂದ ಏನನ್ನೂ ಬೇಡದೆ ಪರಸ್ಪರ ವಿಹವಾಟನ್ನಷ್ಟೇ ಏರಾಚಿಸಿದುದು; ಲೋಕ ಶಾಂತಿ ಮಂಜಿನಯ ಭಾರತದ ದೃಷ್ಟಿಧೋರಣೆಯನ್ನು ಅಕ್ಷರಯೂ ನಿಸ್ಸಂಕೋಚವಾಗಿ ಸಾರಿ ಹೇಳಿದುದು; ಮತ್ತು ಆಧುನಿಕ ಜಗತ್ತಿನ ಏಕಮಾತ್ರ ಒಲಿದಾನಿ ಮಹಾತ್ಮಾ ಗಾಂಧಿಯವರ ಸುಯೋಗ್ಯ ವಂಶೀ ಸ್ಥಿರಿನಾಗಿ ಅವರು ತೋರಿಬಂದುದು.

ನೆಹರೂ ಸಂಚಾರದ ಸತ್ಫಲಗಳಲ್ಲಿ: ಭಾರತಕ್ಕೆ ಔದ್ಯೋಗಿಕೋಪಕರಣಗಳ ಮತ್ತು ಆಹಾರ ಧಾನ್ಯಗಳ ಕೊಡಕೊಂಡ ಸಹಾಯ ಕೊಡಲು ಅಮೆರಿಕಕ್ಕೆ ವಿಶೇಷ ಪ್ರೇರಣೆ ದೊರೆಯಿತು: ನೆಹರು ಮತ್ತು ಭಾರತದ ಚಿರಸ್ಮರಣೀಯ ಪಟಜಿಯವು ಅಮೆರಿಕಾನರಿಗಾಗಿ ಇದು ವರೆಗೀ ಸಂಬಂಧದಲ್ಲಿದ್ದ ತಪ್ಪು ಭಿಪ್ರಾಯಗಳೆಲ್ಲಾ ಸದಾ ಕಾಲಕ್ಕಾಗಿ ಸೂರ್ಯನಿಬಿರಿನ ಮಂಜಿನಂತೆ ಕರಗಿ ಹೋದುವು. ಕಾಶ್ಮೀರ ಜಗಳದಲ್ಲಿ ಪಾಕಿಸ್ತಾನಕ್ಕಿಂತ ಭಾರತವೇ ಆಕಾರಾಧಿಯೆಂದು ಇ ವರೆಗೂ ಅಮೆರಿಕಾನರಲ್ಲಿ ಕರಡಿದ್ದ ನಂಬಿಕೆ ಮಾಯವಾಗಿ ಅಲ್ಲಿಯ ಜನಮತವು ಭಾರತದ ಪಕ್ಷ ಹಿಡಿಯುವಂತಾಯಿತು. ಲೋಕರಾಂತಿಯ ಕರ್ತೋರ ಮಂತ್ರವು ಡೋಲರ್ ಮತ್ತು ಆಟಂ ಬೆಮ್ಮೆಯು ಅಮೆರಿಕಾನರ ಸಮ್ಮುಖದಲ್ಲೇ ಇದೀಗ ನಿರ್ದಾಕ್ಷಿಣ್ಯವಾಗಿ ಖರಿಸಲ್ಪಟ್ಟತು. ಅಂತರಾಷ್ಟ್ರೀಯ ಸಂಗದಲ್ಲಿ ಭಾರತದ ಘನತೆಯು ಬೇರಾವುದೇ ಒಂದು ಘಟನೆಯಿಂದ ಹೆಚ್ಚಲಾರದಷ್ಟು ಈ ಸಂಚಾರದಿಂದ ಏರಿತು.

ಪಂಡಿತ ನೆಹರುಗಳ ಸಂಚಾರವೆ ಎಲ್ಲಾ ವಿಧಗಳಿಂದಲೂ ಸುಸ್ಪಷ್ಟ ಸಾರ್ಥಕವೇ ಆಸ್ಪಷ್ಟ ಸಾರ್ಥಕನಾಯಿತು!

ಜನರಲ್ ಹೊಸ್ಪಿಟಲ್ ಆಡಳಿತ.

ಟೀಕೆಗಳಿಗೆ ಸರಕಾರದ ಉತ್ತರ.

ಮದರಾಸು, ಫೆಬ್ರವರಿ ೧೬

ತಿಳುವಳಿಕೆಯುಂಡೊದಗೂಡಿದ ಸಾರ್ವಜನಿಕ ಸುರಾಮರ್ಜಯ ಮುಂಬಾಕರ ಸರ್ವಜನಕ್ಕೂ ಉಚಿತವಾದ ವೈದ್ಯಕೀಯ ಸಹಾಯದ ವ್ಯವಸ್ಥೆ ನಡೆಯುವಂತೆ ಅಧಿಕಾರಿಗಳಲ್ಲದ ಸಂದರ್ಶಕರನ್ನು ನೇಮಕಮಾಡಬೇಕೆಂದು ಮದರಾಸು ಸರಕಾರವು ಯೋಚಿಸುತ್ತಿದೆ.

ಈ ಘೋಷಣೆ ಇರುವ ಪ್ರೆಸ್ ಹೇಳಿಕೆಯೊಂದು ಈ ಕೆಳಗಿನಂತೆ ನಿರೂಪಿಸುತ್ತದೆ:

"ಮದರಾಸಿನ ಜನರಲ್ ಹೊಸ್ಪಿಟಲ್ ಮತ್ತು ಬಾರ್ನಾರ್ಡ್ ಇನ್‌ಸ್ಟಿಟ್ಯೂಟ್ ಒಳ್ ರೇಡಿಯೊಲಜಿ ಬಗ್ಗೆ ವೃತ್ತಪತ್ರಿಕೆಗಳಲ್ಲಿ ಬಂದ ಕೆಲವೊಂದು ಟೀಕೆಗಳ ವರದಿ ಸರಕಾರದ ತಿವಿಮುಟ್ಟಿಯಿದೆ. ಇದೇ ಕಳದ ಯುದ್ಧದ ದೆಸೆಯಿಂದ ಕಾರ್ಯಾಧಿಕರ ಅಧಿಕವಾಗಿದ್ದರೂ ಮಾಹಿತಿಯುಳ್ಳ ಕೆಲಸಗಾರರ ಸಂಖ್ಯೆ ಕಡಮೆಯಾದುದರಿಂದ ಈ ಸಂಸ್ಥೆಗಳ ಆಡಳಿತಕ್ಕೆ ಉಂಟಾದ ಧಕ್ಕೆಯನ್ನು ಸರಕಾರವು ಲೋಧಿಸಿ ಸರಿಪಡಿಸುವ ಯತ್ನಕ್ಕೆ ಈ ಟೀಕೆಗಳು ಸಂಬಂಧಿಸಿರುತ್ತವೆ.

ಜನರಲ್ ಹೊಸ್ಪಿಟಲ್ ವಿಷಯದಲ್ಲಿ ಅ ಕೌಂಟೆಂಟ್ ಜನರಲ್ಲರು ಲೆಕ್ಕಪತ್ರ ಹಣಕಾಸಿನ ವಿಚಾರದಲ್ಲಿ ಸೇರಿದ ಅವ್ಯವಸ್ಥೆಯನ್ನು ಎತ್ತಿ ತೋರಿಸಿರುವರು. ಸರಕಾರದ ಆಜ್ಞೆಯ ಪ್ರಕಾರ ಈ ಆಕ್ಷೇಪಗಳನ್ನು ಪರಿಶೋಧಿಸಲು ಸರ್ವ ನಿಯುಕ್ತ ಅಸಿಸ್ಟಂಟ್ ಅಕೌಂಟ್ಸ್ ಅಧಿಕಾರಿಯನ್ನು ನೇಮಿಸಿ ಅವರ ಅನುಭವಪೂರ್ಣವಾದ ವಂದಿಯ ಮೇಲಿಂದ ಸರ್ಜನ-ಜನರಲ್ಲರು ಬೇಕುಬೇಕಾದ ತಿದ್ದುಪಡಿಗಳನ್ನೂ, ಉಚಿತವಾದ ಕಾರ್ಯನಿರ್ವಹಣಾ ಪದ್ಧತಿಯನ್ನೂ ಅನುಸರಿಸಬೇಕೆಂಬ ಸರಕಾರದ ಆದೇಶವಾಯಿತು. ನಗರದ ಇತರ ಆಸ್ಪತ್ರೆಗಳಲ್ಲಿಯೂ ಇದೇ ಬಗೆಯ ಅವ್ಯವಸ್ಥೆ ಇರುವುದಾರಿಂದ ಅದನ್ನೂ ಸರಿಪಡಿಸುವುದಕ್ಕೋಸ್ಕರ ಸರಕಾರವು ಆ ಆಸ್ಪತ್ರೆಗಳಲ್ಲಿ ಯೂ ಪರಿಶೀಲನೆ ನಡೆಯತಕ್ಕದ್ದೆಂದು ನಿರ್ದೇಶಿಸಿಯಿದೆ.

ಸಾಮಾನ್ಯ ಆಡಳಿತೆಯ ಪರಿಶೀಲನೆಗಾಗಿ ಮಾನ್ಯ ಆಹಾರಮಂತ್ರಿ ರಾಜಾಜಿರವರು ೧೫ನೆಯ ಮೇ ಮಾಸದಲ್ಲಿ ಭಿನ್ನಭಿನ್ನ ವಿಭಾಗಗಳಿಗೆ ಪರೀಕ್ಷೆಯ ಭೇಟಿಯನ್ನಿತ್ತರು. ಅವರು ಕಂಡುಹಿಡಿದ ಗಾಳಿಬೆಳಕಿನ ಕೊರತೆ, ರೋಗಿಗಳ ಆರಾಮ ವಿರಾಮದ ವ್ಯವಸ್ಥೆ, ಕೆಲಸಗಾರರ ಕೊರತೆ ಮುಂತಾದ ಆದಾರಿಗೆ ಕಕ್ಕೆಪ್ಪು ಸ್ಥಳವಲ್ಲದಿರುವುದು ಮುಂತಾದ ಅವ್ಯವಸ್ಥೆಗಳು ಹಲವು ವರ್ಷಗಳಲ್ಲಿ ಶ್ರಮದ ಜಮೆಯಾಗಿರುವಂಥವು. ಜಾ। ರಾಜಾಜಿರವರು ತೂಬಡಿಸಿದ ತಿದ್ದುಪಡಿಯ ವಿಷಯವಾಗಿ ಈಗಾಗಲೇ ಕಾರ್ಯಪ್ರವೃತ್ತಿ ನಡೆದು ಅನೇಕ ವಿಷಯಗಳು ಈಗಾಗಲೇ ನೆರವೇರಿವೆ. ತಿಳುವಳಿಕೆಯುಂಡೊದಗೂಡಿದ ಸಾರ್ವಜನಿಕ ಪರಾಮರ್ಶೆಯು ಮುಂಬಾಕರ ಸರ್ವಜನಕ್ಕೂ ಉಚಿತವಾದ ವೈದ್ಯಕೀಯ ಸಹಾಯದ ವ್ಯವಸ್ಥೆ ನಡೆಯುವಂತೆ, ಅಧಿಕಾರಿಗಳಲ್ಲದ ಸಂದರ್ಶಕರನ್ನು ನೇಮಕ ಮಾಡಬೇಕೆಂದು ಸರಕಾರವು ಯೋಚಿಸುತ್ತಿದೆ.

ಬಾರ್ನಾರ್ಡ್ ಇನ್‌ಸ್ಟಿಟ್ಯೂಟ್:-

ಜಾ। ರಾಜನರು ಬಾರ್ನಾರ್ಡ್ ಇನ್‌ಸ್ಟಿಟ್ಯೂಟನ್ನೂ ಸಂದರ್ಶಿಸಿದರು. ಸಾಮಾನ್ಯವಾಗಿ ಶೈಕ್ಷಣೋಟಿಯ ಉದ್ಯೋಗದ ದೆಸೆಯಿಂದ ಜನಿಸುವ ಮಕ್ಕಳಿರವೇ ಈ ಇನ್‌ಸ್ಟಿಟ್ಯೂಟ್ ಕುರಿತಾದ ಟೀಕೆಗಳಿಗೆ ಕಾರಣನೆಂಬುದನ್ನವರು ಮನಗಂಡಿದ್ದಾರೆ. ಅವರು ಕೊಟ್ಟ ಟಿಪ್ಪಣಿಕಲ್ ವಿಷಯದ ಸಲಹೆಗಳನ್ನು ಜೇಗೆ ಕಾರ್ಯಕ್ಕೆ ತರಬಹುದೆಂದು ಯೋಚಿಸಲಾಗುತ್ತಿದೆ. ಸ್ಥಳಾವಕಾಶವನ್ನು ಹೆಚ್ಚಿಸುವ ಮತ್ತು ರೋಗಿಗಳ ಆರಾಮಕ್ಕನುಕೂಲಿಸುವ ವ್ಯವಸ್ಥೆಯ ಕುರಿತಾಗಿ ಹೆಚ್ಚಿನ ಆಲೋಚನೆ ನಡೆಯುತ್ತಿದೆ. ಪ್ರಪಂಚದ ಇತರ ಇಂಥಾ ಸಂಸ್ಥೆಗಳ ಮಾದರಿಯಲ್ಲೇ ನಡೆಯುತ್ತಿರುವ ಈ ಇನ್‌ಸ್ಟಿಟ್ಯೂಟ್ ಉತ್ಪನ್ನದ ವಿಷಯದಲ್ಲಾಗಲೀ, ವೈದ್ಯಕೀಯ ಸಹಾಯದ ಪೂರೈಕೆಯ ವಿಷಯದಲ್ಲಾಗಲೀ, ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಲಿದೆ. ಆದರ ಲೆಕ್ಕಪತ್ರವನ್ನು ಆ ಅಸಿಸ್ಟಂಟ್ ಅಕೌಂಟ್ಸ್ ಅಧಿಕಾರಿಗಳು ಪೋಧಿಸಿ ತೃಪ್ತಿಕರವೆಂದು ತೀರ್ಮಾನ ಕೊಟ್ಟಿದ್ದಾರೆ. ರೇಡಿಯಮ್ ಸೂಜಿಗಳ ಉಪಯೋಗದ ಟೀಕೆಯನ್ನು ನೋಡಿದರೆ, ಈ ಸೂಜಿಗಳನ್ನು ಉಚಿತ ಪರೀಕ್ಷೆಗೆ ಗುರಿಪಡಿಸಿರುವುದು ತಿಳಿದು ಬಂದಿದೆ. ನಿರ್ದಿಷ್ಟ ಗುಣಕ್ಕೆ ಬಾದ ಸೂಜಿಗಳ ಕುರಿತು ಅವನ್ನು ಕಳಿಸಿದ ನ್ಯೂಯೊರ್ಕ ಫರ್ಮಿಗೆ ಬರೆದುಕೊಳ್ಳಲಾಗಿದೆ. ಆರೂಸೂಜಿಗಳ ಫೋಟೊಗ್ರಾಫನ್ನು ನೋಡಿ ಆ ಫರ್ಮು ಸೂಜಿಗಳನ್ನು ಪುನಃ ಪರೀಕ್ಷಿಸಲು ಒಪ್ಪಿಕೊಂಡಿದೆ. ಎಲ್ಲವೂ ಕಂಟ್ರಾಕ್ಟ್ ಶರತ್ತಿನ ನಡೆಯುವುದೇನಾಗಿರುವುದರಿಂದ, ಉಂಟಾಗಿರಬಹುದಾದ ತಪ್ಪಿಗೂ, ತಪ್ಪಿಗೂ, ಸಂಬಂಧಪಟ್ಟ ಅಧಿಕಾರಿಗಳು ಜವಾಬುದಾರರಾಗಿಲ್ಲ."

—ಹಿಂದು (18-2-49)

ಉಡುಪಿ

ಕ್ರಿಕೆಟ್ ಪಂದ್ಯಾಟ ಕಳದ ಆದಿತ್ಯವಾರ ಗಾಂಧಿ ಮೈದಾನದಲ್ಲಿ ಉಡುಪಿ ಟೀಮಿನವರೂ ಮಣಿಪಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜು ಟೀಮಿಗೂ ಕ್ರಿಕೆಟ್ ಸ್ಪರ್ಧೆ ನಡೆದು ಮೊದಲಿನವರು ಜಯಶೀಲರಾದರು. ಉಡುಪಿ ಟೀಮಿನ ಶ್ರೀ ವಿಜಕರೂ ಕಾಲೇಜು ಟೀಮಿನ ಶ್ರೀ ಮೋಹನದಾಸ ಶೆಟ್ಟಿರೂ ಚೆಂದಸೆಕದಲ್ಲಿ ನಿಪುಣತೆಯನ್ನೂ ಪ್ರದರ್ಶಿಸಿದ್ದರು.

ಕುಂದಾಪುರ— ಇಲ್ಲಿಯ ಡಿ। ಮುನ್ಸಿಫ್ ಶ್ರೀ ಯು. ನಾರಾಯಣರಾಯರವರು ಗುಂಟೂರಿಗೆ ವರ್ಗಾಯಿಸಲ್ಪಟ್ಟಿದ್ದಾರೆ. ಇವರ ಸ್ಥಾನಕ್ಕೆ ಡಿ ಕೆ ಜಿಲ್ಲೆಯ ಒಕ್ಕಲಿಯಲ್ ರಿಸೀವರ್ ಶ್ರೀ ಎ. ಎಸ್. ವೇಸಾರವರು ನೇಮಕ ಹೊಂದಿದ್ದಾರೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶನಿವಾರ 12—11—49 ರಿಂದ

ಶಿಂದೆ (ಫಿಲ್ಮ್ ಸ್ಟಾನ್)

ಫಿಲ್ಮ್ ಸ್ಟಾನ್ ಚಿತ್ರ ನೋಡುವುದೆಂದರೆ ಇಡ್ಲಿಗೆ ಚಿಟ್ನಿ ಬರಸಿ ತಿಂದಂತೆ

ಕಾಮಿನಿ ಕೌಶಲ್ಯ. ದಿಲೀಪ್ ಕುಮಾರ್, ಚಂದ್ರಮೋಹನ್, ಲೀಲಾಚಿಟ್ನಿಸ್.

ಬರುವ ಚಿತ್ರ ಬಹದೂರ್ ಕಿಸಾನ್—ಭಗವಾನ್.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S. C. 245 of 1949

ಬಪ್ಪದಿ ಅಬ್ದುಲ್ಲ ರಹಿಮಾನ ಬ್ಯಾರಿ, ವ್ಯಾನೆ ಅಬ್ದುಲ್ಲ ಕಾದ್ರಿ ಮಗ, ಕಾಸರಗೋಡು ಹುಸ್ಬೆಯಲ್ಲಿರುವವ —ದಾವಿದಾರ

ಮತ್ತು

ಪೈಂದಿ ಕುಂಞಾ ಬ್ಯಾರಿ, ಕನ್ನಾಡಿ ಪದ್ತುಂಞ ಕಾದ್ರಿ ಮೈದಿನ್ ಸಾಬರ ಮಗ, ಕಾಸರಗೋಡು ಕ್ಸಬಾ ಗ್ರಾಮದಲ್ಲಿರುವವ —ಪ್ರತಿವಾದಿ.

ಇವರೊಳಗೆ.

ಪ್ರತಿವಾದಿಯು ಪಾದಿಗಿ ತಾರೀಕು 24-6-46ರಲ್ಲಿ ದೂಪ್ಯ 290-ಕ್ಕೆ ಬರಕೊಟ್ಟ ಪ್ರೊ-ನೋಟು ಪ್ರಕಾರ ಬಹಾಲ್ಯವಳಿಗೆ ದಾಕ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾರೀಕು 10-11-49ಕ್ಕೆ ಇತ್ಯರ್ಥವಾಗುತ್ತದೆ. ಆ ದಿವ್ಸ ನೀವು ಹಾಜರಾಗದಿದ್ರೆ ನಿಮ್ಮನ್ನು ಯೆಕ್ಪಾರ್ಟೆ ಮಾಡಲಾಗುತ್ತದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. NARAYANA NAYAK.
Advocate for plff.
Kasaragod. 3-11-49.

ಕಾಂಗ್ರೆಸ್ ಕಾರ್ಯದರ್ಶಿಗಳ ವರ್ತನದ ಫಲಶ್ರುತಿ

ಕಾರ್ಕಳ:-ನಮ್ಮ ಮದ್ರಾಸು ಸರಕಾರದ ಮುಖ್ಯ ಮಂತ್ರಿ ಮತ್ತು ಒಕ್ಕಲು ತನ ಮಂತ್ರಿಗಳ ಮೊನ್ನೆಯ ಜಿಲ್ಲಾ ಸಂದರ್ಶನ ಕಾಲದಲ್ಲಿ ದಕ್ಷಿಣ ಕನ್ನಡ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರು ಇಟ್ಟು ಕೊಂಡ ಕಾರ್ಯ ನೀತಿ ಮತ್ತು ವರ್ತನೆಯು ಈ ಮೊದಲು ಪತ್ರಿಕೆಗಳಲ್ಲಿ ಪ್ರಕಟವಾದ ಪ್ರಕಾರ ಕಾಂಗ್ರೆಸ್ ಸಂಸ್ಥೆಗಳನ್ನೂ ಕಾಂಗ್ರೆಸ್ ಕಾರ್ಯಕರ್ತರನ್ನೂ ಅನಹೇಳನಕ್ಕೆ ಗುರಿಮಾಡಿ, ಮಹಾಜನರ ದೃಷ್ಟಿಯಲ್ಲಿ ಈ ಸಂಸ್ಥೆಯ ಗೌರವ ಮತ್ತು ಪ್ರೇಮಾದರ ಭಾವಗಳನ್ನು ಕುಂದಿಸಿತು. ಜನರು ಕಾಂಗ್ರೆಸ್ ಕಾರ್ಯಕರ್ತರನ್ನು ನಿಷ್ಕಾರಣವಾಗಿ ನಿಂದಿಸುವಂತಾಯಿತು. ಜವಾಬುದಾರಿ ಸ್ಥಾನದಲ್ಲಿದ್ದ ಶ್ರೀ ಶೆಟ್ಟರು ಈ ಬೇಜವಾಬುದಾರಿ ವರ್ತನೆಯ ನಿಷೇಧಾರ್ಥವಾಗಿ ಕಾಂಗ್ರೆಸ್ ಸೇವಾದಳದ ಜಿಲ್ಲಾ ಸಂಘಟಕರಾದ ಇದ್ದಿಯ ಶ್ರೀ ಆರ್. ದೇವರಾಯ ಶೆಣೈಯವರು ತಮ್ಮ ಪದವಿಗೆ ನೂತ್ರವಲ್ಲದೆ, ಕಾಂಗ್ರೆಸಿಗೆ ಸಂಬಂಧಿಸಿದ ತಮ್ಮ ಇನ್ನಿತರ ಅಧಿಕಾರ ಸ್ಥಾನಗಳಿಗೂ ರಾಜೀನಾಮೆಯನ್ನು ಕಳುಹಿಸಿಕೊಟ್ಟಿರುವರು. ಮಾತ್ರವಲ್ಲದೆ ಸಂದರ್ಭೋಚಿತವಾದ ವಿಚಾರಣೆಯನ್ನು ನಡಿಸಿ, ನೊಂದ ಕಾರ್ಯಕರ್ತರಿಗೆ ನ್ಯಾಯವನ್ನು ಕೊಟ್ಟು ಸ್ಥಳೀಯ ಕಾಂಗ್ರೆಸ್ ಸಂಸ್ಥೆಗಳ ಕಳೆದುಹೋದ ಗೌರವ ಮತ್ತು ಚನಾದರಗಳು ಅವುಗಳಿಗೆ ಪುನಃ ದೊರೆಯುವಂತೆ ತಕ್ಕ ಕಾರ್ಯಕ್ರಮವನ್ನು ಕೈಕೊಳ್ಳಬೇಕೆಂದು ಅವರು ಅಖಿಲ ಭಾರತ ಮತ್ತು ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಕಮಿಟಿಗಳನ್ನು ಕೇಳಿಕೊಂಡಿದ್ದಾರೆ.

(ನವಭಾರತ, ಮಂಗಳೂರು ತಾ 4-11-49)

ಮಂತ್ರಿಗಳ ಕಾರ್ಯಕ್ರಮಗಳು ಮತ್ತು ಕಾಂಗ್ರೆಸ್ ಕಮಿಟಿಗಳು

ಸರಕಾರದ ಮಂತ್ರಿಗಳ ಸ್ವವಾಸ ಕಾರ್ಯಕ್ರಮಗಳನ್ನು ಕಾಂಗ್ರೆಸ್ ಕಮಿಟಿಯವರು ಹೇಳಿದಂತೆ ಏರ್ಪಡಿಸಬೇಕೆಂಬ ಒಂದು ಭಾವನೆ ಇಲ್ಲಿ ಕೆಲವರಿಗೆ ಇದ್ದಂತೆ ಕಾಣುತ್ತದೆ. ಇದು ಸರಿಯಾದ ಅಭಿಪ್ರಾಯವಲ್ಲ.

ಸರಕಾರ ನಡೆಸುವವರು ಯಾವುದಾದರೊಂದು ನಿರ್ದಿಷ್ಟ ರಾಜಕೀಯ ಪಂಗಡಕ್ಕೆ ಸೇರಿದವರೆಂಬುದರಿಂದ ಅವರು ಸಾರ್ವಜನಿಕ ಪ್ರಜೆಗಳ ಮಂತ್ರಿಗಳೆಂಬುದನ್ನು ಮರೆತರೆ ಅನ್ಯಾಯವಾದೀತು.

ಆ ಪಂಗಡದ ಘೋಷಣೆಯನ್ನು ಅವರು ನಡಿಸಲು ಬದ್ಧರಷ್ಟೆ ಅಲ್ಲದೆ ಅವರ ದಿನನಿತ್ಯದ ಕಾರ್ಯಗಳಲ್ಲಿ ಪಂಗಡದ ಸಂಸ್ಥೆಯವರು ಕೈಹಾಕುವ ಪದ್ಧತಿ ಎಲ್ಲಿಯೂ ಜಾರಿಯಲ್ಲಿಲ್ಲ. ಮಾತ್ರವಲ್ಲ, ಹಾಗೆ ಕೈಹಾಕಿದರೆ ಮಂತ್ರಿಗಳು ಸರಿಯಾಗಿ ಕೆಲಸಮಾಡಲಿಕ್ಕೂ ಸಾಧ್ಯವಾಗಲಿಕ್ಕಿಲ್ಲ.

ಪ್ರಜಾಸತ್ತೆಯ ಕೃಪೆಗಳನ್ನು ನಮ್ಮಲ್ಲಿ ಇನ್ನೂ ಸರಿಯಾಗಿ ತಿಳಿದುಕೊಂಡಿಲ್ಲವೆಂಬುದರಿಂದಲೇ ಈ ಬಗೆಯ ತಪ್ಪು ಅಭಿಪ್ರಾಯಗಳಿಗೆ ಕಾರಣವಾಗಿರುತ್ತದೆಂದರೆ ಸಾಕು.

(ಸ್ವದೇಶಾಭಿಮಾನಿ, ಮಂಗಳೂರು 28-10-49)

ಪಾರ್ಟಿಫಂಡು-ಅದಕ್ಕೂ ನಮಗೂ ದಾಣಬೇಕು!

'ಜಿಲ್ಲಾ ಬೋರ್ಡು ಚುನಾವಣೆಯ ಸಂಬಂಧ, ಕೆಲವೊಂದು ಕರಪತ್ರಗಳು ಹೊರ ಬಂದಿವೆ; ಕೆಲವದರಲ್ಲಿ ನಮ್ಮ ಜಿಲ್ಲಾ ಕಾಂಗ್ರೆಸ್ ಸಮಿತಿ, ಅದರ ಪ್ರಧಾನ ಕಾರ್ಯದರ್ಶಿ, ಕೆಲವು ಕಾಂಗ್ರೆಸಿನ ನೆಂಬರರು.ಇವರ ಮೇಲಿನ ಕೆಲವು ಆರೋಪಗಳೂ ಇವೆ: ಇದು ಜಿಲ್ಲಾ ಕಾಂಗ್ರೆಸ್ ಸಮಿತಿಯವರು ತಮ್ಮ ಉಮೇದುವಾರಿಕೆಗಾಗಿ ಉಮೇದುವಾರರನ್ನು ನಿಲ್ಲಿಸಿದ ಪರಿಣಾಮವಾದರೂ, ಆ ಅರೋಪ, ಆದೂರು, ಆ ದೂಷಣೆಗಳ ಸತ್ಯಾಂಶವನ್ನು ತರ್ಕಿಸಲು ಬಯಸುವುದಿಲ್ಲ.** ಇಲ್ಲಿ ಪ್ರಸ್ತಾಪಿಸಲು ಬಯಸುವ ಒಂದು ಮುಖ್ಯ ವಿಷಯವೆಂದರೆ- ಪಾರ್ಟಿಫಂಡು; ಅದರ ಸಂಗ್ರಹ; ಅದರ ಸದ್ವಿನಿಯೋಗ. ಕಾಂಗ್ರೆಸ್ ಸಂಸ್ಥೆಗಳ ಕೈಸೇರುವ "ಆ ಹತ್ತು ಜನರ ಪುಡ್ಡಿನ ಲೆಬ್ಬಾಚಾರದ ತನಿಬಿ" ಅದರ "ಸದ್ವಿನಿಯೋಗ" ** ಕಾಂಗ್ರೆಸ್ ಅಧಿಕಾರ ಯಾ ವಿಸರ್ಜನೆಯ ಪೂರ್ವದಲ್ಲಿ ಯಾಕೆ ಸುಮ್ಮನೆ ಕಾಳಿತಿದೆ?** ಕಾಂಗ್ರೆಸ್ ಸಾರ್ವಜನಿಕ ಸಂಸ್ಥೆಯಾದರೆ, ಅದಕ್ಕೆ ಸೇರುವ ದುಡ್ಡು "ಸಾರ್ವಜನಿಕ"ರದಲ್ಲವೇ? ಅಲ್ಲಿ ಸೇರುವ ದುಡ್ಡು ದುರುಪಯೋಗವಾಗುವುದಿಲ್ಲ ಎಂಬುದಕ್ಕೆ ಆಧಾರವೇನು? ದುರುಪಯೋಗವಾದರೂ, ಸದ್ವಿನಿಯೋಗವಾಗದಿದ್ದರೂ, ಮೇಲ್ಕ ನಿಯೆಯನ್ನು ಪ್ರಾಂ॥ ಕಾಂ॥ ಸಮಿತಿ ಸರಿಯಾಗಿ ನೋಡಿಕೊಳ್ಳದಿದ್ದರೆ ಗತಿಯೇನು? ಈ ಚುನಾವಣೆಯ ನಾಮಕರಣದ ಪ್ರಹಸನ ಅಥವ ಪ್ರಕರಣದ ಸಂಬಂಧ ಕಾಂಗ್ರೆಸ್ ಉಮೇದ್ವಾರರಿಂದ ಚುನಾವಣೆ ಕಾಣಿಕೆಯಾಗಿ ಸಾವಿರಾರು ರೂಪಾಯಿಗಳು ಜಮೆಯಾಗಿವೆ; ಅದರ ಖರ್ಚೆನ್ನು? ಈ ದುಡ್ಡು ಸಂಚಾರಕ್ಕೆ ಹೋಯಿತೇ? ಇದರಲ್ಲಿ ನ್ಯಾಯವಾಗಿ ಖರ್ಚಾದುದೆಷ್ಟು? ದುಂದುವೆಚ್ಚಕ್ಕೆ ಹೋದದ್ದೆಷ್ಟು? ಕಿಲ್ಲು ಉಳಿದದ್ದೆಷ್ಟು? ಎಂಬುದನ್ನು ಸಾರ್ವಜನಿಕರು ಎದುರಿಗಿಡುವಂಥ ಒತ್ತಾಯವೇನೂ ಯಾರದೂ ಇಲ್ಲದಿರುವಲ್ಲಿ, ಅದರ ಪ್ರಕಟಣೆಯ ಅಭಾವದಿಂದ "ಸಿಕ್ಕಿದವರು ಸಿಕ್ಕಿದಷ್ಟು ತಿಂದು ಹಾಕರಬಹುದು" ಎಂದು ತಪ್ಪಾಗಿಯೋ ಸರಿಯಾಗಿಯೋ ಜನತೆ ಸಂಶಯ ಪಡಲು ಅವಕಾಶನಾಗದೆ. ** ಯಾವ ರಾಜಕೀಯ ಪಾರ್ಟಿಯೇ ಆಗಲಿ, ಹತ್ತು ಜನರ ದುಡ್ಡಿಗೆ ಕೈಯೊಡ್ಡಿ, ಮೆಂಬರರಿಂದ ಫೀಸ್ ವಸೂಲ್ಮಾಡಿ, ನಾಟಕಆಡಿಸಿ ದುಡ್ಡು ಸಂಪಾದಿಸಿದ್ದು ಬದುಕುವವು ಆವುಗಳ ಲೆಬ್ಬಾಚಾರವನ್ನು ಸಾರ್ವಜನಿಕರ ಮುಂದಿಡಲು ಬದ್ಧವಾಗಿವೆ.**

ದೇಶದ ದೊಡ್ಡ ರಾಜಕೀಯ ಸಂಸ್ಥೆಯೆಂದರೆ ಕಾಂಗ್ರೆಸ್. ಆ ಸಂಸ್ಥೆಗಳ ಲೆಬ್ಬಪತ್ರಗಳು ಸರಿಯಾಗ ಬೇಕೆಂಬುದು ನಿರ್ವಿವಾದ. ಆದರೆ ಅವು ಹಾಗಿಲ್ಲವೆಂಬ ಕಾರಣ ಜನತೆಯಲ್ಲಿ ಬಹಳ ಅಸಮಾಧಾನವುಂಟು. ಕಾಂಗ್ರೆಸ್ ಮಂಡಲಗಳ ಸಭೆ ಸೇರಿ, ಕಣ್ಣು ಮುಚ್ಚಿ ಅವನ್ನು ಮಂಜೂರು ಮಾಡುವು ದೂ, ಪ್ರಾಂ॥ ಕಾಂ॥ ಸಮಿತಿಯ ಕರೆಯಿಂದ ಅವುಗಳ "ಪರಿಶೋಧನೆ"ಯ "ಶಾಸ್ತ್ರ" ನಡೆಯುವದೂ ಇಲ್ಲವೆಂದಲ್ಲ; ಆದರೆ ಅವು ತೃಪ್ತಿಕರವಾಗಿಲ್ಲ. ಎಲ್ಲ ಕಣ್ಣಾ ಮುಚ್ಚಾಲೆಯ ಆಟ. ಜಿಲ್ಲಾ ಕಾಂಗ್ರೆಸ್ ಸಮಿತಿಯವರಲ್ಲಿ ದುಡ್ಡು ಹೊಡಾಡಿಸುವ ವೃತ್ತಗಳ ಚರಿತ್ರೆ, ಜವಾಬುದಾರಿ, ಯೋಗ್ಯತೆ ಏನು? ಯಾವ ಸಂಸ್ಥೆಯಲ್ಲಿಯೂ ದುಡ್ಡು ಹಿಡಿಯುವಾತ ನಗದಿ ಕೇವಣಾತಿ ಕೊಡಬೇಕು. ಕಾಂಗ್ರೆಸ್ ಸಂಸ್ಥೆಗಳಲ್ಲಿ ಅಂಥ ವರ್ಷಾಡು ಉಂಟೆ? ಕಾಂಗ್ರೆಸ್ ಸಂಸ್ಥೆಗಳ ಹತ್ತು ಜನರ ದುಡ್ಡು ಸಂಸ್ಥೆಯ ಕೆಲವರ ಸಂಪಾದನೆಗೆ, ಸ್ವೇಚ್ಛಾಚಾರದ ಖರ್ಚಿಗೆ ಮಾರ್ಗ ಮಾಡಿಕೊಡಬಾರದು; ಕಾಂಗ್ರೆಸ್ ಸಂಸ್ಥೆಗಳ ಚೀರ್ಜೋದ್ಧಾರನೆಂಬ ಉಪದೇಶ ಬಾಯಲ್ಲಿ ಮತ್ತ ಕೇಳುತ್ತಿದೆಯೇ ವಿನಾ ಕೃತಿಯಲ್ಲಿ ತೋರುವುದಿಲ್ಲ. ಇದರಲ್ಲಿ ಒಂದು ಸುಧಾರಣೆ ದುಡ್ಡಿನ ಆಡಳಿತ, ಆ ಕುರಿತು ಬಿಗಿಯಾದ ಕಾನೂನು ಆಗದಿದ್ದರೆ ಈ ದುಡ್ಡು ಆಯೋಗ್ಯರ ಕೈಸೇರಿ ಅವರ ಮರ್ಜಿಯಂತೆ ವಿಚಾರಿಗಿ, ಕಾಂಗ್ರೆಸ್ ಸಂಸ್ಥೆಗಳು ಇನ್ನೂ ದುರ್ಬಲವಾಗುವಲ್ಲಿ ಸಂದೇಹವಿಲ್ಲ. ಆದುದರಿಂದ ಇದಕ್ಕಾಗಿ ತಕ್ಕ ಶಾಸನಗಳ ಏರ್ಪಾಡು ಕೂಡಲೇ ಜಾರಿಯಲ್ಲಿ ಬರಬೇಕು.

(ಕಂತೀರವ, ಮಂಗಳೂರು. ತಾ.27-9-49ರ ಪತ್ರವ್ಯವಹಾರದಿಂದ ಆಯ್ದುದು.)

ಉಡುಪಿ

ಕಲಾವ್ಯಂದದ ಆಶ್ರಯನಲ್ಲಿ ಇದೇ

ತಾ 5ಮತ್ತು 6ರಲ್ಲು ಧಾರ್ಮಿಕ ಗೋಷ್ಠಿಗಳು ಜಂದ್ರವಾಶೀಶ್ವರ ದೇವಾಲಯದ ಮಹಡಿಯಲ್ಲಿ ಜರಗಿದವು. ಮೊದಲ ದಿನದ ಸಭೆಯ ಅಧ್ಯಕ್ಷಸ್ಥಾನವನ್ನು ಶ್ರೀ ಧಂಡಾರಿಕೆರೆ ಮಠದ ಸ್ವಾಮಿಗಳವರು ವಹಿಸಿದ್ದರು. ಶ್ರೀ ಪೇಜಾವರ ಮಠದ ಸ್ವಾಮಿಗಳವರು ಉದ್ಘಾಟನೆಯನ್ನು ಮಾಡಿದ ಬಳಿಕ ಶ್ರೀಗಳಾದ ಎ. ಸೀತಾರಾಮಾಚಾರ್, ಎ. ಸುಬ್ರಾಯಾಚಾರ್ ಮೊದಲಾದವರು ಭಾಷಣಮಾಡಿದ್ದರು. ಎರಡನೆ ದಿವಸದ ಅಧ್ಯಕ್ಷರು ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ. ಎ ಚಾ. ಸುಂದರರಾಯರು. ಶ್ರೀಗಳಾದ ಕು. ಶಿ. ಹರಿಪಾಳಭಟ್, ವಿದ್ವಾನ್, ಪಿ. ನಾರಾಯಣ ಐಯ್ಯಂಗಾರ್ ಇವರುಗಳು ಪ್ರಮುಖ ಉಪನ್ಯಾಸಕಗಳಿದ್ದರು. ಎರಡು ದಿವಸಗಳಲ್ಲೂ ಕಾವ್ಯವಾಚನ, ನಾಟಕವಾಚನ ನೊದಲಾದ ಇತರ ಕಾರ್ಯಕ್ರಮಗಳೂ ಇದ್ದುವು.

ನೆಲಗಡಲೆ ಹಿಂಡಿಯ ಅಭಾವ—

ಒಂದನೆ ಬೆಳೆ ಮುಗಿದು ಎರಡನೆ ಸುಗ್ಗಿ ಬೆಳೆ ಪ್ರಾರಂಭವಾಗಿದೆ. ಆದರೆ ನೆಲಗಡಲೆ ಹಿಂಡಿಯ ಅಭಾವ ಮಾತ್ರ ರೈತರನ್ನು ತುಂಬಾ ಅಪ್ಪಕ್ಕೀಡುಮಾಡಿದೆ. ಸಂಬಂಧಪಟ್ಟ ಇಲಾಖಾ ಅಧಿಕಾರಿಗಳು ತೀವ್ರ ನಿಗಾಕೊಟ್ಟರೆ 'ಹೆಚ್ಚು ಆಹಾರ ಬೆಳೆಸಿರಿ' ಘೋಷಣೆಗೆ ಬಲಬರಲು ಸಾಧ್ಯವಿದೆ.

ಸರಕಾರದವರು ಅರಂಭದಲ್ಲಿ ನೆಲಗಡಲೆ ಹಿಂಡಿಯನ್ನು ಗದ್ದೆಗಳಿಗೆ ಹಾಕಿ ಅಧಿಕ ಬೆಳೆಸುವ ವಿಧಾನವನ್ನು ರೈತರಿಗೆ ಭೋಧಿಸಿದರು. ಆ ಬಗ್ಗೆ ಸಾವಿರಗಟ್ಟಿ ರೂಪಾಯಿಗಳನ್ನು ವ್ಯಯಿಸಿ ಅದನ್ನು ರಿಯಾಯಿತಿ ದರದಲ್ಲಿ ರೈತರಿಗೆ ಕೊಟ್ಟು ಅದನ್ನು ಪ್ರಚಾರ ಮಾಡಿದ್ದರು. ಆದರೆ ಅದನ್ನೇ ಬಳಿಕೆಗೆ ಹಾಕಬೇಕೆಂಬ ಅಭಿಪ್ರಾಯದಿಂದ ಜೋನಿನ್ಸಿನ ಬಗ್ಗೆ ಹಿಂಡಿ ಕೂಪನುಗಳನ್ನು ಕೊಟ್ಟಿದ್ದರು. ಆದರೆ ಅದರ ಪ್ರಯೋಜನವನ್ನು ತಿಳಿದ ರೈತರು ಈಗ ಹಿಂಡಿಯ ಅಭಾವದಿಂದ ತುಂಬಾ ಕಷ್ಟಕ್ಕೀಡಾಗಿದ್ದಾರೆ. ಈಗ ಸುಗ್ಗಿ ಬೆಳೆಯ ಸಮಯ. ಸರಕಾಲದಲ್ಲಿ ಇಂತಹ ಗೊಬ್ಬರ ಸಿಕ್ಕದಿದ್ದರೆ ಆಹಾರವನ್ನು ಹೆಚ್ಚು ಬೆಳೆಯುವ ಬಗೆ ಹೇಗೆ? ಅದೂ ಅಲ್ಲದೆ ಈಗ Phospate & Super phospate ಗೊಬ್ಬರವನ್ನೂ ಕೂಡಾ ಈ ಸಂದರ್ಭದಲ್ಲಿ ಕೊಡಕೂಡದೆಂತ ಮೇಲಿನ ತಂಡ ಬಂದಿರುವುದಾಗಿ ತಿಳಿದು ಬರುತ್ತದೆ. ಹೀಗಾದರೆ ಹೆಚ್ಚು ಆಹಾರ ಉತ್ಪಾದನೆಗೆ ಪ್ರೋತ್ಸಾಹವೆಲ್ಲಿ?

ದ. ಕ. ಕಾಂಗ್ರೆಸ್ ಅಧಿಕಾರಿಗಳ ಮೇಲೆ ಸಾರ್ವಜನಿಕ ಅಸಮಾಧಾನ.

ಪ್ರಕಟಣೆ

ಮದ್ರಾಸು ರಿವಿನ್ಯೂ ಬೋರ್ಡಿನವರ ತಾರೀಕು 7-10-49ರ ರಿಸೊಲ್ಯೂಷನ್ ರೂಟಿನ್ ನಂ. 123/49ನೇ ಪ್ಯಾಂನ ಮುಖ್ಯ ತಾತ್ಪರ್ಯವೇನೆಂದರೆ

ನೆಮ್ಮ ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ 2ನೇ ಮತ್ತು 3ನೇ ಬೆಳೆ ಅಡಿಕ್ಕು ಪೆಟ್ಟಿಗೆ ಬೆಳಸುವರೆ ಉತ್ತೇಜನ ಕೊಡುವ ಉದ್ದೇಶದಿಂದ ಸರಕಾರದವರು ಸಬ್ಸಿಡಿ (ಧನಸಹಾಯ) ಸ್ಕೀಮನ್ನು ಮಂಜೂರು ಮಾಡಿರುತ್ತಾರೆ.

ಪ್ರಾಕೃತಿಕವಲ್ಲಿ ರೈತರು ಸಣ್ಣ ಪುಟ್ಟ ಹೊಳಗಳಿಗೂ ತೋಡುಗಳಿಗೂ ಕಟ್ಟುಗಳನ್ನುಕಟ್ಟಿ, ಹಾಗೆ ಸಂಗ್ರಹವಾದ ನೀರಿನ್ನು ಉಪಯೋಗದಿಂದ ಹೆಚ್ಚಿನ ಬೆಳೆಗಳನ್ನು ಬೆಳೆಸುತ್ತಿದ್ದರಷ್ಟೆ. ಆದೇ ಪ್ರಕಾರ ಆಯಾಯ ಗ್ರಾಮದಲ್ಲಿ ಗ್ರಾಮಸ್ಥರು ಒಟ್ಟು ಕೂಡಿ ಸೊಸ್ಯಾಟಿಗಳನ್ನು ಏರ್ಪಡಿಸಿ ಅಂಥಾ ಸೊಸ್ಯಾಟಿಗಳು ಮೇಲೆ ಹೇಳಿದ ಹೊಳೆಗಳಿಗೂ ತೋಡುಗಳಿಗೂ ಕಟ್ಟಗಳನ್ನು ಕಟ್ಟಿಸಿ, ಸಂಗ್ರಹವಾದ ನೀರಿನ ಉಪಯೋಗದಿಂದ 2ನೇ ಮತ್ತು 3ನೇ ಬೆಳೆಗಳನ್ನು ಬೆಳೆಸಿದ ಸಂಗ್ತಿಯಲ್ಲಿ ಸದ್ರಿ ಕಟ್ಟಗಳನ್ನು ಕಟ್ಟಿಸಲಿಕ್ಕೆ ತಗಲಿಪ ಖರ್ಚಿನ ಅರ್ಧಾಂಶವನ್ನು ಸರಕಾರದವರು ತೆರಲಿರುವರು. ಮತ್ತು ಸದ್ರಿ ನೀರಿನ ಉಪಯೋಗದಿಂದ ಹೆಚ್ಚಿಗೆಯಾಗಿ ವಿಸ್ತೀರ್ಣ 2ನೇ ಮತ್ತು 3ನೇ ಬೆಳೆ ಸಾಗ್ತುಳ್ಳಿಗೆ ತಂದಲ್ಲಿ ಅಂಥಾ ಪ್ರತಿ ಒಂದು ಎಕ್ಕೆ ಮೇಲೆ ರೂ. 5-ಅಧಿಕರಂತೆ ಧನಸಹಾಯ ಎಣಿಸಿ, ಜುನ್ಮಾ ತಗಲಿದ ಖರ್ಚಿನ ಸೇಕಡಾ 50ಕ್ಕೆ ಮಿಕ್ಕದಷ್ಟು ಸಹಾಯ ಕೊಡಲಾಗುವುದು. ಈ ವರೆಗೆ ಮಾಮೂಲು ಪದ್ಧತಿಯಿಂದ ಪ್ರಯೋಜನ ಹೊಂದುವ ನೀಲಗೆ ಅತಂಕ ಬಂದು ಅಕ್ಷೇಪಗಳು ಬರಬಹುದು. ಅಂಥಾ ಸಂಗ್ತಿಯಲ್ಲಿ ಅನೇಕ ವರ್ಷಗಳ ಲಾಗ್ಯಾತು ಕಟ್ಟಿ ಕಟ್ಟಿಸಲ್ಪಡುವ ಸ್ಥಳಗಳನ್ನು ಚುನಾಯಿಸಬೇಕಾಗಿಯಿತ್ತದೆ. ಮತ್ತು ಅನಾಕ್ಷೇಪಕರವಾದ ಹೊಸ ಸ್ಥಳಗಳನ್ನು ಮಾತ್ರ ಮಂಜೂರು ಮಾಡಬೇಕಾಗುವುದು.

(Sd) P. Sitharama Shetty,
Tahasildar of Udipi Taluk.

DR. OSBORNE'S
Famous
REMEDY-REJUVENATOR
"SUPER D'SELIPHOSE"
with atomised GOLD. Now availadle in India. A boon to the happy & suffering humanity. Contains Vitamins, A. B C. D.- Valuable literaturt on REJUVENATION & brilliant appreciative letters from Doctors & gentlemen sent free on request. Apply early or ask your chemist Price Rs. 6/- only. (Full course)- Distributors.
R. A. SIMONS Esqr. & M. C.
UDIPI, SOUTH KANARA.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಂಗಡಿಯಾಗಿಯೂ ಮೊದಲಿಯಾರಿಯೂ ಕಲ್ಯಾಣಿ ವ್ಯಾಸಾಚಾರ್ಯ, ರಥಬೀದಿ. ಉಡುಪಿ.

ರಾಷ್ಟ್ರಕವಿ ಎವಜ. ಗೋವಿಂದ ಪೈಗಳವರಿಂದ ಉದ್ಘಾಟಿಸಲ್ಪಟ್ಟು
ಕೊರಡ್ಕಲ್ ಸ್ಮಾರಕ ಸಮಿತಿಯವರಿಂದ
(ದಿವಂಗತ ಕೊರಡ್ಕಲ್ ಶ್ರೀನಿವಾಸರಾಯರ ನೆನೆಪಿಗಾಗಿ) ಪ್ರಕಟಿಸಲ್ಪಟ್ಟ
ನೆನಪಿಗಾಗಿ
ಕರ್ನಾಟಕದ ಹೆಸರಾಂತ ಲೇಖಕರನೇಕರ ವಿವಿಧ ಬರೆಹಗಳಿಂದ ಕೂಡಿದೆ.
ಬೆಲೆ ರೂ. 2—0—0 ಮಾತ್ರ. ರೂ. 2—6—0 ಕಳುಹಿಸಿದರೆ
ಒಂದು ಪ್ರತಿಯನ್ನು ಟಪ್ಪಾಲಿನ ದ್ವಾರಾ ಕಳುಹಿಸಬಹುದು.
ಕೊರಡ್ಕಲ್ಲರ ಶಿಷ್ಯವೃಂದವೂ, ಮಿತ್ರಮಂಡಳಿಯೂ ಈ ಗ್ರಂಥವನ್ನು ಕೊಂಡು ಕೊಂಡು ಸ್ಮಾರಕ ಸಮಿತಿಗೆ ನೆರವು ನೀಡಬೇಕಾಗಿ ವಿಶೇಷತಃ ಕೋರಲಾಗಿದೆ
ಪ್ರತಿಗಳು ಸಿಗುವ ಸ್ಥಳಗಳು:-(1) ನವಯುಗ ಪ್ರೆಸ್, ಉಡುಪಿ. (2) ಪ್ರಭಾಕರ ಪ್ರೆಸ್, ಉಡುಪಿ. (3) ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.
(4) ಕೊರಡ್ಕಲ್ ಸ್ಮಾರಕ ಸಮಿತಿ, ಉಡುಪಿ.

ದ. ಕನ್ನಡ

ಕುಂಭಾಶಿ— ಶ್ರೀ ಆನೆಗುಡ್ಡೆ ಮಹಾಗಣಪತಿ ದೇವರ ಬ್ರಹ್ಮರಥೋತ್ಸವವು ತಾ. 23-11-49ನೇ ದಿನ ಜರಗಲಿರುವುದು.

ಶಿವಪುರ:— ತಾ. 31-10-49ನೇ ರಾತ್ರಿ ಎಳಗೋಳಿ ಎಂಬಲ್ಲಿರುವ ಪದೇಶಿ ಪೂಜಾರಿ ಎಂಬವನು ಕನ್ನ ಮನೆಯಲ್ಲಿ ಮಲಗಿದ್ದಾಗ ಒಂದು ನಂಧಕ್ಷಕ ಹುಲಿಯು ಬಂದು ಕುತ್ತಿಗೆಗೆ ಕಚ್ಚಿ ಕೊಂದು ಅಲ್ಲಿಯೇ ಅವನ ರಕ್ತವನ್ನು ಹೀರಿರುತ್ತದೆ. ಆ ದಿನವೇ ನೆರಮನೆಯಲ್ಲಿ ಎರಡು ಜಾನುವಾರುಗಳನ್ನು ಕೊಂದಿರುತ್ತದೆ. ಕೆಲವು ದಿನಗಳ ಬಳಿಕ ಇನ್ನೂ ಎರಡು ಜಾನುವಾರುಗಳನ್ನು ಹಿಡಿದಿರುತ್ತದೆ ಇದರಿಂದ ಈ ಊರಿನವರು ಬಹಳ ಗಾಬರಿಗೊಂಡಿರುತ್ತಿದೆ.

ಅಜೆಕಾರು— ಸ್ಥಳೀಯ ಬೋ. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಜರಗಿದ ಅಧ್ಯಾಪಕರ ಕೇಂದ್ರ ಸಭೆಯಲ್ಲಿ ಡಿ. ಬೋ. ಮೆಂಬರ್ ಶ್ರೀ. ಎಸ್. ಕೃಷ್ಣಶೆಟ್ಟಿ ಎಲ್ಲಾ ಶಾಲೆಗಳ ಪರಿಚಯಮಾಡಿಕೊಂಡು, ಅವುಗಳ ನಿಲೆಗೆ ಬಗ್ಗೆ ಅಧ್ಯಾಪಕರು ತಮ್ಮ ಕರ್ತವ್ಯವನ್ನರಿತು ದುಡಿಯಬೇಕಾಗಿಯೂ, ತಾನೂ ಕೂಡಾ ನಿಗಲಿರುವ ಸಲವತ್ತುಗಳನ್ನು ಪದೆಯಲು ಸದಾ ಪ್ರಯತ್ನದಲ್ಲಿರುವೆನಾಗಿಯೂ ಭರವಸೆಪೂರ್ಣ ಭಾಷಣವನ್ನಿತ್ತರು.

ನೋಟೀಸು

ಕಾರ್ಕಳ ಡಿ ಮು. ಕೋರ್ಟ್‌ನಲ್ಲಿ.

O. P. No 59/1949

1 ಹರಿವಾಸ (ಮ್ಯಾನರ್) S. ರಾಮಚಂದ್ರಯ್ಯನವರ ಮಗ, ಯೀತನ ಕ್ಷೇಮಚಿಂತಕ ಬಾಳೆ ಶಂಕಣ ಶ್ರೀನಿವಾಸಯ್ಯ, ಬಾಳೆ ಶಂಕಣ ರಾಮಾಸ್ವಯ್ಯನವರ ಮಗ,ಸ್ಯೂನವಸ ಅಜ್ಜ, ಉಡ್ಪಿ ತಾಲ್ಲೂ ನಡ್ಸಾಲು ಗ್ರಾಮದ ಬೇಂಗ್ರೆಯಲ್ಲಿ ಯಿರುವವ— 2. ಸಾಕೀ ಆಪಾಯಿ S. ರಾಮಚಂದ್ರಯ್ಯನವರ ವಿಧವೆಸ ತಮ್ಮಂಣ ಯಾನೆ ಶ್ರೀನಿವಾಸಯ್ಯನವರ ಮಗಳು, ಉಡ್ಪಿ ತಾಲೂಕು ಯಿನ್ನಂಜೆ ಗ್ರಾಮದ ಯಂಡಾಲು ಯಂಬಲ್ಲಿರುವವಳು— ಆರ್ಜಿದಾರರು.

1ನೇ ಆರ್ಜಿದಾರನ ತಂದೆ ವ 2ನೇ ಆರ್ಜಿದಾರಳ ನಂದ, ಬಾಳೆ ಶಂಕಂಣ ಶ್ರೀನಿವಾಸಯ್ಯನವರ ಮಗ S. ರಾಮಚಂದ್ರಯ್ಯ ಯಾ ಬಾಳೆ ಶಂಕಂಣ ರಾಮಚಂದ್ರಯ್ಯನವರು, ಉಡ್ಪಿ ತಾಲ್ಲೂ ನಡ್ಸಾಲು ಗ್ರಾಮದ ಬೇಂಗ್ರೆಯಲ್ಲಿ ಆತನ ಕುಟುಂಬದ ಮನೆಯಲ್ಲಿ ಕಳೆದ ತಾರೀಕು 10-11-1945ರಲ್ಲು ವ್ಯತಪಟ್ಟ ಸಂದ, ಸದ್ರಿಯವರೀಗೆ ದಿ. ಕೆನರಾ ಮ್ಯೂಚುವಲ್ ಲೈಫ್ ಯಿನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಉಡ್ಪಿ ಯವರ ನಂಬ್ರ 1638ನೇ ಪೋಲಿಸಿಯ ಮತ್ತು ದಿ. ಯುನ್ಯಾಟೆಡ್ ಇಂಡಿಯಾ ಲೈಫ್ ಯಿನ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಮದ್ರಾಸ್ ಯಿವರ 5082ನೇ ಪೋಲಿಸಿಯ ಪ್ರಕಾರ ಬಹಾ ಆಯಿವಜಗಳ ಮೊತ್ತಗಳು ಯೊಂದುವರೆ ಆರ್ಜಿದಾರರು ಹಕ್ಕುದಾರರಾಗಿದ್ದು ಸದರಿ ಆಯಿವಜಗಳ ವಸೂಲಾತಿಗೆ ತಮಗೆ ವಾರೀಸು ಸರ್ಟಿಫಿಕೇಟು ಪಡೆಯಬೇಕಾಗಿ ಸದರಿ ಆರ್ಜಿದಾರರು ನೋಟೀಸು ಜಾರಿಯಾದ ಕೋರ್ಟ್‌ನಲ್ಲಿ ದಾಕಲುಮಾಡಿದ ಮೇರೆಗೆ ಆರ್ಡರ್‌ಯು ಸದರಿ ಕೋರ್ಟ್‌ಮುಂದೆ ತಾರೀಕು 22-11-1949ನೇ ದಿವಸ ಬೆಳಿಗ್ಗೆ 10 ಗಂಟೆಯ ಸಮಯಕ್ಕೆ ತನ್ನಿಗೆ ಯಿಟ್ಟಿರುವದಾದ ಆ ವಿಷಯದಲ್ಲಿ ಆಕ್ಷೇಪಣೆ ಉಳ್ಳವರು ಸದರಿ ತಾರೀಕಿನಲ್ಲು ಸದರಿ ಕೋರ್ಟ್ ಮುಂದೆ ಸ್ವತಹಆಥವಾ ವಕೀಲರ ಮುಕಾಂತರ ಹಾಜ್ರಾ ಆಗಿ ಜ್ಯಾಹೀರುಮಾಡಿಕೊಳ್ಳಬಹುದು ಯಿಂಬ ಸಂಗತಿ ಕೋರ್ಟು ಹುಕುಮು ಮೇರೆಗೆ ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸೋಣಾಗುತ್ತದೆ.

A N S Achar
Pleader for Petitioners.

ಕಾರ್ಕಳ
ತಾರೀಕು 3-11-1949

ಕುಂಬಳೆ-ಹರಿಜನ ದಿನಾಚರಣೆಯು ಕಳದ ತಾ. 30ರಲ್ಲು ಶ್ರೀ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಹರಿಜನೋದ್ಧಾರ, ಅದಕ್ಕಾಗಿ ಮಾಡಬೇಕಾದ ಜನತೆಯ ಕರ್ತವ್ಯಗಳ ಮೇಲೆ ಭಾಷಣಗಳಾದುವು.

ಬೇಳೂರು— ಹಲಿಯ ಹಾವಳಿ ಈ ಪ್ರಾಂತದಲ್ಲಿ ದಿನೇ ದಿನೇ ಜಾಸ್ತಿಯಾಗುತ್ತಲಿದೆ. ಜನರ ಮತ್ತು ದನಕರುಗಳ ಜೀವನವು ಕಷ್ಟಕ್ಕೆ ಸಿಲುಕಿಯಿದೆ. ಪೂರ್ವ ಸರಕಾರವು ಈ ಕಡೆ ನಿಗಾ ಕೊಡಬೇಕಾಗಿದೆ ಎಂದು ಶ್ರೀ ಸೀತಾರಾಮ ಪುರಾಣಿಕರು ತಿಳಿಸುತ್ತಾರೆ.

ನಿಟ್ಟೆ: ಶೋಚನೀಯ ನಿಧನ— ಶ್ರೇಷ್ಠ ಬಂಟಮನೆತನಗಳಲ್ಲಿ ಒಂದಾದ ನಿಟ್ಟೆಗುತ್ತಿನ ಶ್ರೀ ವೆಂಕಪ್ಪ ಆಡ್ಯಂತಾಯರು ಇದೇ ತಾ. 12ಲ್ಲು ರಾತ್ರಿ ತನ್ನ 85ನೆ ವರುಷ ಪ್ರಾಯದಲ್ಲಿ ಪರಲೋಕವಾಸಿಗಳಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಬಡವ, ನಿರಾಶ್ರಿತ ವರ್ಗದವರಿಗೆ ನೆರಳನ್ನೀಯುತ್ತಿದ್ದ ದಿವಂಗತರ ಅತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ಕುಟುಂಬದವರ ಆಪಾರ ಶೋಕದಲ್ಲಿ ಸಹಸಂತಾಪವನ್ನು ಸೂಚಿಸುವೆವು.

ಕುರುಕಾಲು— ಈಚೆಗೆ ಉಡುಪಿಯ ಮಹಾತ್ಮಾ ಗಾಂಧಿ ಮೆಮೊರಿಯಲ್ ಕಾಲೇಜಿನ ಪ್ರಿನ್ಸಿಪಾಲರೂ, ಪ್ರೊಫೆಸರರೂ ತಮ್ಮ ಕಾಲೇಜಿನ ಎಲ್ಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ ಕುರುಕಾಲು ಗ್ರಾಮದ ವಿವಾನಗಿರಿಯ ಸಂಪರ್ಕನಾರ್ಥವಾಗಿ ತಮ್ಮ ಕಾಲೇಜಿನ ಪ್ರಥಮ ವಿಹಾರಕ್ಕಾಗಿ ಬಂದಿದ್ದರು. ಶ್ರೀ ಕುರುಕಾಲು ಗಣಪಯ್ಯ ಸೆಟ್ಟಿರು ಕನ್ನಶಾಲಾ ಸಿಬಂದಿಯೊಡನೆ ಅವರೆಲ್ಲರನ್ನು ಸ್ವಾಗತಿಸಿ ಕುಂಜಾರುಗಿರಿಗೆ ಕರೆದುಕೊಂಡು ಹೋಗಿ ಸ್ಥಳ ಮಹಾತ್ಮೆಯನ್ನು ವಿವರಿಸಿ, ದೇವಿಯದರ್ಶನ, ಪ್ರಸಾದವಿಗಳ ವ್ಯವಸ್ಥೆ ಮಾಡಿಸಿ, ಮರಳಿ ಕುಂಜಾರು ಶಾಲೆಗೆ ಕರೆತಂದು ಚಾಹಾದಿಗಳನ್ನಿತ್ತು ಸತ್ಕರಿಸಿದರು. ಆಮೇಲೆ ಶ್ರೀ ಗಣಪಯ್ಯ ಸೆಟ್ಟರು ಔದಾರ್ಯವನ್ನು ಸ್ಮರಿಸುತ್ತಾ ಉಡುಪಿಗೆ ಹೊರಟರು.

ಮಂಗಳೂರು

ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೆ ಸತ್ಕಾರ— ಮಂಗಳೂರು ಸತ್ಕಾರ ಕಟ್ಟೆದ ಸಂಘದ ಕಾರ್ಯದರ್ಶಿ ಹಾಗೂ ಇತರ ನಾಯಕ ಮಂಡಳಿಯವರು ತಮ್ಮ ಸಂಘದ ಅಧ್ಯಕ್ಷರಾದ ಶ್ರೀ. ಬಿ. ಮಂಜಯ್ಯ ಬೆಸ್ಟ್ಯರವರು ದ. ಕ. ಜಿಲ್ಲಾ ಬೋರ್ಡಿನ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟ ಬಗ್ಗೆ ಅವರನ್ನು ಗೌರವಿಸುವರೆ ಈದ ತಾ 30ರಲ್ಲು ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪೊಳಲಿ ಶಿನರಾಯರು ವಹಿಸಿದ್ದು ಶ್ರೀಗಳಾದ ಎಸ್. ಎಮ್. ಪಿ. ಕಾಮತ್, ಜೆ. ಎ. ಹುಸ್ಸನ್, ಸರ್ವಾಡಿ ನರಸಿಪ್ಪಯ್ಯ ಮತ್ತು ಎಮ್. ರಂಗ ನವರು ಕಾಲೋಚಿತ ಮಾತುಗಳನ್ನಾಡಿದರು.

ದ. ಕೆ. ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ಇದೇ 15ನೇ ಪೂರ್ವಾಹ್ನ 11ಗಂಟೆಗೆ ಸೇರಿ ಉಜಾರ್ಧಕ್ಷರ ಅಯ್ಕೆಯಾಗಲಿರುವುದು. ಅಂದೇ ಅಪರಾಹ್ನ 2½ಕ್ಕಾಸಿಗೆ ಸಾಮಾನ್ಯ ಸಭೆಯು ಜರಗುವುದು. ಈ ಸಭೆಯಲ್ಲಿ ಬೋರ್ಡಿನ ನಾಲ್ಕು ಉಪಸಮಿತಿಗಳಿಗೆ ಸದಸ್ಯರನ್ನು ಆರಿಸಲಾಗುವುದು.

ದ. ಕನ್ನಡ ಕೊಡಗು ಜನರಸಂಪರ್ಕ-ದ ಸಭೆಯು ಕಳದ ತಾ 30ರಂದು ಪುಲಾಗ್ರಿಸ್ ಕೃಷ್ಯಾಲಯಲ್ಲಿ ಶ್ರೀ. ಬಿ. ಎಂ ಮುತ್ತಣ್ಣ ಕೊಂಡು ಬಂದರು. ಅಲ್ಲಿ ನಿರ್ಪಡಿಸಲ್ಪಟ್ಟ ಅಚ್ಚುಕಟ್ಟಾದ ಚಲೋ ಊಟವನ್ನು ಕೀರಿಸಿದ ಬಳಿಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಲವು ವಿನೋದಾವಳಿಗಳನ್ನು ಸಭೆಯಲ್ಲಿ ಪ್ರದರ್ಶಿಸಿ ಭಾಷಣಗಳನ್ನು ಮಾಡಿ, ಸಂಜೆ ಲಘುಉಸಾಹಾರ ತೀರಿಸಿ ಶ್ರೀ ಕೆ. ಗಣಪಯ್ಯ ಸೆಟ್ಟರ ಔದಾರ್ಯವನ್ನು ಸ್ಮರಿಸುತ್ತಾ ಉಡುಪಿಗೆ ಹೊರಟರು.

ಸೈಂಟ್ ಎಲೋಸಿಯಸ್ ಕಾಲೇಜಿನಲ್ಲಿ ಭಾಷಣ— ಕಳದ ತಾ 29ರಲ್ಲು ಮಂಗಳೂರ ಎಡ್ವೋಕೇಟ್ ಶ್ರೀ ಬಿ. ಶಿ ಟ್ಟರು ಸೈಂಟ್ ಎಲೋಸಿಯಸ್ ಕಾಲೇಜ್ ವಿದ್ಯಾರ್ಥಿ ಯೂನಿಯನ್ನಿನಲ್ಲಿ 'On the shape of things to come' ಎಂಬ ವಿಷಯದಲ್ಲಿ ಭಾಷಣವಿತ್ತರು. ಸಭಾ ಶಿಸ್ತಿನ ಕುರಿತು ವಿವರಿಸಿ ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದೆಸೆಯಲ್ಲೇ ಅದನ್ನು ಪಾಲಿಸ ಹತ್ತಿದರೆ ಭಾವೀಜನಾಂಗವು ಸುವ್ಯವಸ್ಥಿತ ಶಿಸ್ತನ್ನು ಪಾಲಿಸಲು ಶಕ್ತವಾಗುವುದು, ಮುಷ್ಯರಾದಿಅನ ಪೇಕ್ಷಿತ ವರ್ತನೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಕೂಡದು, ವಯಸ್ಕರ ಮತದಾನದ ನೆಲೆಯಲ್ಲಿ ಬೇಗನೆ ಜರಗಲಿರುವ ನ್ಯಾಯ ವಿಧಾಯಕ ಸಭೆಗಳ ಚುನಾವಣೆಗಳಲ್ಲಿ ಜಾತಿ ಮತ, ಪಂಥಗಳನ್ನು ದೂರಕ್ಕಟ್ಟಿ ಯೋಗ್ಯರಾದವರನ್ನು ಮಾತ್ರ ಆರಿಸಿದರೆ ಮುಂದಿನ ರಾಜ್ಯಭಾರವು ಸುಗಮವಾಗೀತು. ಮತ ದಾನ ಜನತೆಯಲ್ಲಿ ವಿದ್ಯಾರ್ಥಿಗಳು ಈಗಾಗಲೇ ಈ ಕುರಿತು ಪ್ರಚಾರಕ್ಕೆ ಕಾರ್ಯವನ್ನು ಕೈಕೊಳ್ಳುವ ಜರೂರಾತಿಯಿದೆ. ಅನ್ನ ಬಟ್ಟೆ, ನಿರಾಶ್ರಿತ ಸಮಸ್ಯೆಗಳೇ ಮೊದಲಾದ ಪ್ರಶ್ನೆಗಳು ಭಾರತೀಯರ ಮುಂದಿರುವಾಗ, ಪಟ್ಟಣ, ಪ್ರಾಂತ, ಭಾಷೆಗಳ ಬಗ್ಗೆ ಪರಸ್ಪರ ವೈಷಮ್ಯದಿಂದ ಜಳವಳಗಳುದು ಸಂದರ್ಭೋಚಿತವಲ್ಲ ಸ್ವತಂತ್ರ ಭಾರತದಲ್ಲಿ ಮುಷ್ಯರಾದಿ ವಿಪ್ಲವಗಳು ತಲೆಯೆತ್ತುವುದು ಸರಿಯಲ್ಲ. ವಿದ್ಯಾರ್ಥಿಗಳು ತಮ್ಮ ವಿದ್ಯಾರ್ಥಿ ದೆಸೆಯಲ್ಲೆ ತಮ್ಮ ಗುಣನಡತೆಗಳನ್ನು ತಿದ್ದಿಕೊಂಡು ಶಿಸ್ತಿನ ಏಕತೆಯನ್ನು ಪಾಲಿಸ ತೊಡಗಿದರೆ ಭಾವೀ ಜನಾಂಗವು ಇತರ ರಾಷ್ಟ್ರಗಳ ಮುಂದೆ ಸರಿಸಮಾನತ್ವವನ್ನು ಖಂಡಿತ ಪಡೆಯುವುದು" ಎಂದರು.

ಅಂತರ್ರಾಷ್ಟ್ರೀಯ ಸಹಕಾರ ದಿನಾಚರಣೆಯು ಇದೇ ತಾ. 5ರಲ್ಲು ಶ್ರೀ ಪಿ. ಆರ್. ಮಂಗಳೂರ ಪೂಜಾರಿ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೃಷ್ಣಸಪ್ಪ, ಕೆ. ಎಲ್. ಎನ್. ರಾವ್, ಡಿ. ರಾಮಚಂದ್ರ ಮೊದಲಾದವರು ಸಹಕಾರೀ ತತ್ವದ ಕುರಿತು ಮಾತನಾಡಿದರು. ಶ್ರೀ ಹಿ. ರಾ. ಮಲ್ಯರು ಧನ್ಯವಾದಗಳನ್ನರ್ಪಿಸಿದರು.

ಜಾತೀಯತಾ ನಿಷೇಧ ಸಭೆ— ವಿದ್ಯಾರ್ಥಿ ಕಾಂಗ್ರೆಸಿನ ಆಶ್ರಯದಲ್ಲಿ ಜಾತೀಯತಾ ನಿಷೇಧ ಸಭೆಯು ತಾ. 6ರಲ್ಲು ಡಾ। ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಜರಗಿತು. ಬಹುಮಂದಿ ವಿದ್ಯಾರ್ಥಿಗಳು ಜಾತೀಯ ಪಾವಿತ್ರವನ್ನು ಖಂಡಿಸಿ ಮಾತನಾಡಿದರು.

— ಮುಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟೆಬ್ರೋಲ್** ರೋಗ ಗೃಹಸ್ತ ಜೀವ್ಯ ನುಕ್ಕಳಿಗೆ

ನಿಳು ವಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆರಗು, ಸ್ವರದರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:— ಹೆರವೀಜಲ್ಲೆ ಬಿಡಬೇಕು. ೬ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ನೋಪ್ಪ ಚಾರ್ಜು ೧೫ ಆಣೆ.

ಮಾಲಿಕರು:—ಹಾಲಪ್ಪ ಶಿಕೇರಪ್ಪ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಳಿ ಭಾರ್ಮಸಿ,—ಹುಬ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—ಬಾನಸ್ಥ ಸಿದ್ಧಲಿಂಗಪ್ಪ ಧಾರವಾಡಕರ ನಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರಿಸ್ಸ್ ಆರ್ ಎಲ್ ಕರಮಚಾರಿ ಪಿಮಿಸ್ಸ್, ಡಾವಣಗೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು-ಆಯುರ್ವೇದ ಭೂಷಣ ಎಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರವ್ಯವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯ.ಂ. ಸಿ. ಶಾಸ್ತ್ರೀ, ಯಲ್.ಐ.ಯಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಥಾನಿಕಸ್ಥರು:—ಡಾ। ಐ. ಕೆ. ಶಿವರಾಮಾಚಾರ್, ಕುಂಜಿಬೆಟ್ಟು, ಉಡುಪಿ.

ಅನ್ಯತಾಂಜನ

ತಲೆನೋವನ್ನು, ಕಿರೋವೇದನೆ, ಉಳುಕು ಕುತ್ತಿಗೆ, ಭುಜಪಲ್ಲು ನೋವುಗಳಿಗೂ, ಎದೆ ನೋವು, ಭಯಂಕರ ಗಳು, ಬಾತುಕೊಳ್ಳುವುದು, ಬೇಳಿಷಮುಂತಾದವು ಸ್ವಸ್ಥವಾಗಿ, ನೊವಿನಿಂದ ನೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷಧ



REGD
ಹುಳುಕಡ್ಡಿ ಮದ್ದಿನವ್ಮಲ್ಲಿಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದ. ಕ. ಜಿಲ್ಲೆಯಲ್ಲಿ ಮಾನ್ಯ ದಿವಾಕರರ ಸಂಚಾರ

ಉಡುಪಿಯಲ್ಲಿ ಪ್ರಥಮತಃ ಮಹಾತ್ಮಾಗಾಂಧಿ ವೆ.ಹೋಲಿಯಲ್ ಕಾಲೇಜಿಗೆ ಸಂದರ್ಶನ ವಿತ್ತರು. ಕಾಲೇಜು ಟ್ರಸ್ಟಿನ ಕಡೆಯಿಂದ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈ, ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾವ್ ಮೊದಲಾದವರಿಂದ ಸ್ವಾಗತಿಸಲ್ಪಟ್ಟು, ವಿದ್ಯಾರ್ಥಿಗಳು ಭಾವೀ ಜನಾಂಗದವರಿರುವುದರಿಂದ ವಿದ್ಯಾರ್ಥಿದೆಸೆಯಲ್ಲೆ ತಮ್ಮ ಗುಣಗಳನ್ನು, ಪಕ್ಕಾ ಮನೋವೃತ್ತಿಯನ್ನು ಬೆಳೆಸಿಕೊಂಡು ಮಹಾತ್ಮಾಜೀಯವರ ಆದರ್ಶ ಜೀವನ, ತತ್ವಗಳನ್ನು ಪರಿಪಾಲಿಸಲು ಶಕ್ತರಾಗಬೇಕೆಂದರು. ಶ್ರೀ ಟಿ. ಅನಂತ ಪೈಗಳು ಧನ್ಯವಾದಗಳನ್ನರ್ಪಿಸಿದರು.

ಬಳಿಕ ಮಾನ್ಯ ದಿವಾಕರರು ಪ್ರಬುದ್ಧ ಬಂದರವಾಗಲು ಸೃಷ್ಟಿ ಸೌಕರ್ಯ ಆರ್ಹತೆಯುಳ್ಳ ಮಲ್ಪೆ ಬಂದರ ಪ್ರದೇಶವನ್ನು ಪರಿಶೀಲಿಸಿಕೊಂಡುಬಂದು ಕೊಚ್ಚಿಕಾರ್ ಸಹೋದರರ ಆಥಿತ್ಯವನ್ನು ಸ್ವೀಕರಿಸಿದರು. ಅಪರಾಹ್ನ ಸ್ಥಳೀಯ ಬಾರ್ ಎಸೋಸಿಯೇಶನಿಗೂ ಭೇಟಿಯಿತ್ತಾಗ ವಕೀಲ್ ಶ್ರೀ ಕೆ. ಜೆ. ಬಲ್ಲಾಳರು, ಡಿ। ಮುನ್ಸಿಫ್. ಶ್ರೀ ಕುಲಾಸೊ।ನೊದಲಾದವರು ಮಾನ್ಯ ಮಂತ್ರಿಗಳನ್ನು ಸ್ವಾಗತಿಸಿದರು. ।ನ್ಯಾಯನೀತಿ ಪರಿಪಾಲನಾ ಕಾರ್ಯದಲ್ಲಿ ನ್ಯಾಯಾಧೀಶರೂ ವಕೀಲರೂ ಆಚರಿಸಬೇಕಾದ ಸೂಕ್ತ ಸೂಚನೆಗಳನ್ನಿತ್ತು ಸರಕಾರದೊಡನೆ ವಕೀಲ ಬಂಧುಗಳ ಸಹಕಾರ ಬೆಂಬಲವನ್ನು ಅಪೇಕ್ಷಿಸಿದರು.

ನಂತರ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಕಾಂಗ್ರೆಸ್ ಕಮಿಟಿಯ ಮಾನಪತ್ರವನ್ನು ಅಧ್ಯಕ್ಷ ಶ್ರೀ ಬಾಳ್ಕಟ್ಟಿಬೀಡು ಕೃಷ್ಣಯ್ಯ ಹೆಗ್ಡೆಯವ್ರೂ ಮಲ್ಪೆ ಬಂದರವು ಪ್ರಬುದ್ಧ ಬಂದರವಾಗಲು ಅದಕ್ಕರುವ ಯೋಗ್ಯತೆಗಳನ್ನು ಸಾದರಪೂರ್ವಕವಾಗಿ।ರಾಪುಗೊಳಿಸಲ್ಪಟ್ಟ, ಬಿನ್ನವತ್ತಳಿಯನ್ನು ಶ್ರೀ ಟಿ. ಅನಂತ ಪೈಗಳೂ ಮಂತ್ರಿಗಳಿಗೊಪ್ಪಿಸಿದರು.

ಮಾನ್ಯ ದಿವಾಕರರು ಮೈಸೂರು ಸಹಿತ ಕರ್ನಾಟಕ ಪ್ರಾಂತ ರಚನೆಯಾಗಬೇಕೆಂಬ ಹಿರಿಯಾಸೆ ತನ್ನದೂ ಆಗಿದೆ ಎಂದರು. ಕೇಂದ್ರ ಸರಕಾರವು ತಜ್ಞರ ಅಭಿಮತವನ್ನಾಧರಿಸಿಯೇ ಪಶ್ಚಿಮ ಕರಾವಳಿಯಲ್ಲಿ ಪ್ರಬುದ್ಧ ಬಂದರನ ಆಯ್ಕೆಯನ್ನು ಮಾಡುವುದಾಗಿ ತಿಳಿಸಿ, ಮಲ್ಪೆ ಬಂದರದ ಆಯ್ಕೆಯಲ್ಲಿ ತನ್ನ ಸಹಾನುಭೂತಿಯಿದೆ ಎಂದರು. ಸದ್ಯದ ದೇಶದ ಪರಿಸ್ಥಿತಿಯ ಕುರಿತು ಕೆಲವು ಮಾತುಗಳನ್ನಾಡುತ್ತಾ, ಜನತೆಯು ಸಂಘಟಿತರಾಗಿ ಜನತಾ ಸರಕಾರದೊಡನೆ ಸಹಕರಿಸಬೇಕೆಂದರು.

ಕಟಪಾಡಿಗೆ ಬಂದಾಗ ಮಾನ್ಯ ದಿವಾಕರರು ಶ್ರೀ ಜನಾರ್ಧನ ನಾಯಕ್ ಮೊದಲಾದವರಿಂದ ಸ್ವಾಗತೀಕರಿಸಲ್ಪಟ್ಟರು. ಶ್ರೀ ಪೆಂಕಟರಮಣಸ್ವಾಮಿ ಹ್ಯಾಸ್ಕೂಲಿನ ಪಟಾರದಲ್ಲಿ ನೆರೆದ ಸಾರ್ವಜನಿಕ ಸಭೆಯಲ್ಲಿ ಕಟ್ಟಾದಿ ವಿದ್ಯಾವರ್ಧಕ ಸಂಘದ ಕಡೆಯಿಂದ ಹ್ಯಾಸ್ಕೂಲ್ ಮುಖ್ಯೋಪಾಧ್ಯಾಯ ಶ್ರೀ ಪಿ. ರಾಮದಾಸನಾಯ್ಕರು ಮಾನ್ಯ ಮಂತ್ರಿಗಳಿಗೆ ಬಿನ್ನವತ್ತಳಿಯೊಂದನ್ನು ಅರ್ಪಿಸಿದರು.

ಮಾನ್ಯ ಮಂತ್ರಿಗಳು ಉತ್ತರವಿಯುತ್ತಾ ಆಕಾಶವಾಣಿ, ರೇಡಿಯೋ, ವಿದ್ಯುತ್ ಸ್ಫೂರ್ತಿಗಳ ಸ್ಥಿತಿಗತಿಗಳನ್ನು ಸೂಕ್ಷ್ಮರೀತಿಯಲ್ಲಿ ಹೇಳಿ ವಿದ್ಯಾರ್ಥಿಗಳಿಗೆ ನಾಲ್ಕು ಹಿತವಾಕ್ಯಗಳನ್ನಾಡಿದರು. ಭುವನೇಂದ್ರ ಕಾಲೇಜಿನ ವಿಶಾಲಭವನದಲ್ಲಿಯ ಉಪಾಹಾರವನ್ನು ಸ್ವೀಕರಿಸಿ, ಕಾಪು, ಉಚ್ಚಿಲ ಮಾರ್ಗವಾಗಿ ಪಡುಬಿದ್ರಿಗೆ ತೆರಳಿದರು.

ಪಡುಬಿದ್ರೆಯಲ್ಲಿ ಮಾನ್ಯ ಮಂತ್ರಿಗಳು ಊರ ಮಹಾ ಜನರಿಂದ ಸ್ವಾಗತೀಕರಿಸಲ್ಪಟ್ಟು ಮೆರವಣಿಗೆಯಲ್ಲಿ ಆಜಾದ್ ಮೈದಾನಕ್ಕೆ ಬಂದವು. ಶ್ರೀ ಕರಿಯಣ್ಣ ಸೆಟ್ಟಿಯು ಸ್ವಾಗತ ಭಾಷಣ ಮಾಡಿದನಂತರ ಮಾನ್ಯ ಮಂತ್ರಿಗಳು ಸದ್ಯದ ರಾಜಕೀಯ ವಿಷಯಗಳನ್ನೆತ್ತಿ ಮಾತಾಡಿ ಮಂಗಳೂರಿಗೆ ಪ್ರಯಾಣ ಬೆಳೆಸಿದರು. ಅಲ್ಲಿ ಟೆಸೆಂಟ್ ಬಾಲಿಕಾ ಪಾಠಶಾಲೆಗೆ ಭೇಟಿಯಿತ್ತಾಗ ರೇಡಿಯೋ ಪ್ರಸಾರ ಕೇಂದ್ರದ ಅವಶ್ಯಕತೆ ಇತ್ಯಾದಿ ವಿಷಯಗಳನ್ನೊಳಗೊಂಡ ಬಿನ್ನವತ್ತಳಿಯೊಂದನ್ನು ಶ್ರೀ ಎ. ನ್. ಎಂ.ಅಡ್ಯಂತಾಯರು ಓದಿದರು. ಮಂತ್ರಿಗಳ್ಳಿಉತ್ತರವಾದ್ಯಬಳಿಕ ಶ್ರೀ. ಅಡ್ಯಂತಾಯರು ತಾವೇ ರಚಿಸಿದ ಹೊಸರಾಗದಲ್ಲಿ ವೀಣಾ ಹಿಮ್ಮೇಳದೊಡನೆ ಹಾಡಿದರು.

ತಾ 4ರಲ್ಲು ಮುಸ್ಲಿಂ ಶಿಕ್ಷಣ ಸಂಘದವರು ಮಾನ್ಯ ಮಂತ್ರಿಗಳಿಗೆ ಮಾನಪತ್ರಕೊಟ್ಟರು. ಮಂತ್ರಿಗಳು ರಾಜಕೀಯದಲ್ಲಿ ಧರ್ಮಕ್ಕೆಡೆಯಿಲ್ಲವೆಂಬ ವಿಚಾರವನ್ನು ತಿಳಿಸಿದರು. ನಂತರ ಸೈಂಟ್ ಎಲೋಸಿಯಸ್ ಕಾಲೇಜನ್ನು ಸಂದರ್ಶಿಸಿದಾಗ ರೆಕ್ಟರ್ ಪ್ರಿನ್ಸಿಪಾಲ್ ಮೊದಲಾದವರು ಸ್ವಾಗತಿಸಿತ್ತರು ಗಾಂಧಿಜೀಯವರ ಜೀವನ ತತ್ವಗಳನ್ನೆತ್ತಿ ವಿದ್ಯಾರ್ಥಿಸಮುದಾಯದ ಮುಂದೆ ನಾಲ್ಕು ಮಾತುಗಳನ್ನಾಡಿದರು.

ದ. ಕ. ಜಿಲ್ಲಾ ವಾಣಿಜ್ಯ ಸಂಘದವರು ಮಂತ್ರಿಗಳನ್ನು ಸ್ವಾಗತಿಸಿ ಮನವಿಯೊಂದನ್ನರ್ಪಿಸಿದ ವಿಚಾರದಲ್ಲಿ ಕರ್ನಾಟಕ ಪ್ರಾಂತೀಕರಣದ ಕುರಿತು ತನ್ನ ಅಭಿಪ್ರಾಯವನ್ನು ತಿಳಿಸುತ್ತಾ ಸಮಯ ವಿಳಂಬವಾದರೂ ಮೈಸೂರು ಸೇರಿಯಾಗುವ ಕರ್ನಾಟಕ ಪ್ರಾಂತವೇ ಆಗಬೇಕೆಂದರು. ಕೇಂದ್ರ ಮೈದಾನಿನ್ನಲ್ಲಿಯ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಮಂತ್ರಿಗಳು ಭಾಷಣಮಾಡುತ್ತಾ ಜಗತ್ತು ಕಳಕಳಿಯಿಂದ ನಮ್ಮ ಕಡೆಗೆ ದೃಷ್ಟಿ ಬೀರಿರುವ ಈ ಸಮಯದಲ್ಲಿ ಜಗತ್ತು ನೆಚ್ಚುವಂತಹ ರೀತಿಯಲ್ಲಿ ನಾವು ವರ್ತಿಸಬೇಕೆಂದರು.

ಕರ್ನಾಟಕ ಏಕೀಕರಣ ಸಂಘಕ್ಕೆ ಭೇಟ್ಟಿಯಿತ್ತಾಗ ಶ್ರೀ ಜನರಾಜ ಹೆಗ್ಡೆಯವರು ಸ್ವಾಗತವಿತ್ತರು. ಕರ್ನಾಟಕ ಪ್ರಾಂತರಚನೆಯ ವಿಚಾರದಲ್ಲಿ ಮಾತು ಕಥೆಗಳಾದುವು ತಾ 5ರಲ್ಲು ಮಾನ್ಯ ದಿವಾಕರರು ಕಡೂರು ಕಡೆ ತೆರಳಿದರು.

ಜೀವವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿ. ಎಸ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ

ಉದ್ದೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟೆಡ್ ಇಂಡಿಯಾ ಲ್ಯಾಫ್ ಬಿಲ್ಡಿಂಗ್ ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ—

O. P. No. 64/1949

ಸರಸ್ವತಿ ಬ್ಯಾ- B. ರಾಗವ ಸುಬ್ರಾಯ ನ್ಯಾಕ್ರ ವಿಧವ, ಉಡ್ಪಿ ತಾಲ್ಲು ಸಿಲಾರು ಗ್ರಾಮದ ಪೊಸರ್ವಾದಲ್ಲಿ. -ಅರ್ಜದಾರಳು

ಮತ್ತು

ನಾರಾಯಣ ನ್ಯಾಕ- ಸುಬ್ರಾಯ ನ್ಯಾಕ್ರ ಸುಗ, ಕಾರ್ಗಳ ತಾಲ್ಲು ಬೆಳ್ಮಣ್ಣು ಗ್ರಾಮದ ಪುನಾವಲ್ಲಿಯವಳ. —ಎದ್ರಿ.

ಈ ಮೂಲಕ ತಿಳಿಸುವದೇನಂದ್ರೆ

ಅರ್ಜದಾರಳು ಅವಳ ಗಂಡ ಮೃತ B. ರಾಗವ ಸುಬ್ರಾಯ ನ್ಯಾಕ್ರಂಗೆ ಬಾಕಿ ಸೊತ್ತುಗಳಿಗೆ ವಾರಿಸ ಸರ್ಟಿಫಿಕೇಟು ಕೇಳಿಕೊಟ್ಟ ಮೇಲ್ಕಂಡ ಅರ್ಜಿಯು ಸದ್ರಿ ಕೋರ್ಟಿನಲ್ಲಿ ತಾರೀಕು 30-11-1949ಕ್ಕೆ ತನ್ನಿಗೆ ಇಟ್ಟಿದೆ. ಆಕ್ಷೇಪವುಳ್ಳವರು ಸದ್ರಿ ದಿನ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು.

By order of the court.

N Mohandas Adyanthaya,
Advocate for petitioner.
Camp:-Karkala
Dated 3-11-1949.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 60/1949

ಬಿಜುಲು ಪೂಜಾರ್ತಿ—ಅರ್ಜಿದಾರಳು,

1. ಮಹಾಲಿಂಗ ಪೂಜಾರಿ, ಬಿಜುಲು ಪೂಜಾರ್ತಿ ಮಗ. 2 ಉಮ್ಮಕ್ಕ ಪೂಜಾರ್ತಿ. 3 ಬಾಬು ಪೂಜಾರಿ. 4 ಪದ್ದು ಪೂಜಾರ್ತಿ, ಸದ್ರಿ ಬಿಜುಲು ಪೂಜಾರ್ತಿ ಮೈನರ ಮಕ್ಕಳು. ಯೀವರ ಗಾರ್ಡಿಯನ್ನ ಆದಂ 1ನೇ ಎದ್ರಿ.

ಉಡ್ಪಿತಾಲ್ಕು ಯೆಲ್ಲೂರು ಗ್ರಾಮದ ಕೊಳಚೂರು ಉಳ್ಳೂರು ಬೀಕರಿದಗುತ್ತು ಮನೆಯಲ್ಲಿರುವವರು —ಎದ್ರಿರು

ಅರ್ಜದಾರಳ ಮಗ ಎದ್ರಿರ ಸಹೋದರ ಹಾಲಿ ವ್ಯತಪಟ್ಟಿರುವ ಗಿರಿಯಪ್ಪ ಅತಪ್ಪ ಪೂಜಾರಿಗೆ Orienati Government Security Life Assurance Co Ltd. Bombay. ಯಿಪ್ಪ, Policy No 973440ನೇಗೆ ಬಡತಕ್ಕ ರೂಪ್ಯಾ1008-0-0 ನ್ನು ಸ್ವಲು ಮಾಡುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಕ್ಲು ಮಾಡಿದ ಅರ್ಜಿಯು ತಾ. 19-11-1949ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಯಿಜೋಣಾಗಿಯದೆ. ಆ ಕುರಿತು ಆಕ್ಷೇಪ ಯಿದ್ದವರು ಸದ್ರಿ ತಾ. 19-11-1949ಕ್ಕೆ ಬೆಳಿಗ್ಗೆ 10ಗಂಟೆಗೆ ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಆಕ್ಷೇಪಣೆ ಕೊಡತಕ್ಕದ್ದು. ಎಂತ ಕೋರ್ಟು ಹ್ಕುಂ ಪ್ರಕಾರ ತಿಳಿಸಿದೆ.

I S Rao
Advocate for Petitioner
ಕಾರ್ಕಳ.
ತಾ. 31-10-1949

ದಕ್ಷಿಣ ಕನ್ನಡದ ಜಾನುವಾರು ಪರಿಸ್ಥಿತಿ ಮತ್ತು ಅದರಿಂದಾಗುವ ಆರ್ಥಿಕ ದುಃಸ್ಥಿತಿ.

ಲೇಖಕರು:—ಶ್ರೀ. ವಿ. ರವಿನರ್ಮ ಪೆಗ್ಡೆ, B. V. Sc ಪುತ್ತೂರು.

[ಲೇಖಕರು ನಮ್ಮ ಜಿಲ್ಲೆಯಲ್ಲಿ ಕಳೆದ ಆರೇಳು ವರ್ಷಗಳಿಂದ ಕೆಲಸ ಮಾಡುತ್ತಿದ್ದು ಜಿಲ್ಲೆಯ ಎಲ್ಲಾ ಭಾಗಗಳಲ್ಲಿಯೂ ಸಂಚರಿಸಿ ನಮ್ಮ ನಾಡಿನ ಜಾನುವಾರು ಪರಿಸ್ಥಿತಿಯನ್ನು ಪರಿಶೀಲಿಸಿದವರಾದ್ದರಿಂದ ಆದರಲ್ಲಿ ತೋರಿಬಂದ ಕೆಲವು ಕೊರತೆಗಳನ್ನು ತೋರಿಸಿ ತಕ್ಕ ಸಲಹೆಗಳನ್ನು ಕೊಟ್ಟಿದ್ದಾರೆ. ಇವನ್ನು ನಮ್ಮೂರವರು ತಿಳಿದು ಪಶುಪಾಲನೆಯಲ್ಲಿ ಸ್ವಲ್ಪ ಆಸಕ್ತಿ ತೋರಿ ಅದಕ್ಕೆ ಬೇಕಾದ ಪ್ರೋತ್ಸಾಹವನ್ನು ಕೊಟ್ಟರೆ ತನ್ನ ಪ್ರಯತ್ನ ಫಲಿಸಬೇಕೆಂಬ ಹಿರಿದಾದ ಆಶೆಯಿಂದಿದ್ದಾರೆ—ನಮ್ಮ ಹಿಡುಗರು ಇದರಲ್ಲಿ ಕುತೂಹಲವುಳ್ಳವರಾದರೆ ಮುಂದೆ ಜಾನುವಾರು ಉಳಾಯಿಪಲಾನೆ ವಿಶಯವಾಗಿ ಕರುಗಳ ಪೋಷಣೆ, ಪಶು ಸಂರಕ್ಷಣೆ ಎಂಬೀ ವಿಶಯಗಳನ್ನೆತ್ತಿ ಬರೆಯಬೇಕೆಂದಿರುವರು. ಸಂ.ನ.]

ನಮ್ಮ ಜಿಲ್ಲೆಯು ಮುಖ್ಯವಾಗಿ ಬೇಸಾಯವನ್ನು ಅವಲಂಬಿಸಿಯದೆ. ಯಾಕೆಂದರೆ ನಮ್ಮ ನಾಡಿನ ಭೂಪ್ರದೇಶವೂ ಜನರ ವರ್ಚಸ್ಸೂ ಕೃಷಿಗೆ ಅನುಕೂಲವಾಗಿದೆ ಮತ್ತು ಬೇರೆ ಯಾವತರದ ದೊಡ್ಡ ಕೈಗಾರಿಕೆಗಳು ಕೆಲಸಕ್ಕೆ ತಕ್ಕುದಾಗಿಲ್ಲ. ಕೃಷಿಕರಿಗೆ ಜಾನುವಾರುಗಳು ಅತ್ಯಮಪಯುಕ್ತವಾದ ಸಾಧನಗಳಾಗಿವೆ ಎಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆಂದರೆ ಇವೆರಡೂ ಒಂದನ್ನೊಂದು ಹೊಂದಿಕೊಂಡು ಒಂದರಲ್ಲೊಂದು ಅಡಕವಾದಂತಿರಬೇಕು. ಇದಕ್ಕೆ ನಿಜವಾದ "Mixed Farming" ಅನ್ನುತ್ತಾರೆ. ಇದನ್ನು ಕೃಷಿಯಲ್ಲಿ ಪ್ರಥಮಸ್ಥಾನ ಪಡೆದಿರುವ ಅಮೆರಿಕಾ, ಒಸ್ಟ್ರೇಲಿಯಾ ಮುಂತಾದೆ ಪರರಾಷ್ಟ್ರಗಳು ಮನಗಂಡು ನಡೆಸಿಕೊಂಡು ಬಂದಿವೆ. ಮತ್ತು ಆದರಿಂದಾಗಿ ಉನ್ನತಸ್ಥಾನವನ್ನು ಪಡೆದಿವೆ. ಈ ತಂದ್ರಕ್ರಮವನ್ನು ನಮ್ಮಲ್ಲಿ ಯಾರೂ ಸಾಧಿಸುವಂತೆ ಕಂಡುಬರುವುದಿಲ್ಲ. ಆದರೆ ಈ ಕ್ರಮವನ್ನು ನಮ್ಮವರು ತಿಳಿದು ಮಾಡಲೆತ್ನಿಸಿದರೆ ನಮ್ಮ ಆರ್ಥಿಕ ಸ್ಥಿತಿಯನ್ನು ಆದೆಷ್ಟೋ ಮೇಲೆ ತರಬಹುದು. ಅಲ್ಲದೆ ಪರದೇಶಗಳಿಗೆ ಆಹಾರ ಸಾಮಗ್ರಿಗಳಿಗೂ, ಪಶುಪ್ರಾಣಿಗಳಿಗೂ ವೆಚ್ಚಮಾಡುತ್ತಿರುವ ಅಪಾರ ಹಣವನ್ನೂ ಉಳಿಸಬಹುದು.

ಆ ಸಂಬಂಧವಾಗಿ ಕಳದ ಒಕ್ಟೋಬರ್ 30ರ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆಯಲ್ಲಿ ಅಗಿರುವ ತೀರಾವಿಷ ಉದ್ವೇಶವತ್ತು ಅರ್ಥವೇನೆಂಬುದನ್ನು ಸ್ಪಷ್ಟೀಕರಿಸಬಹುದೆ? ಈ ಬಂಯು ಪ್ರಧಾನ ಮಂತ್ರಿ ಮತ್ತು ಬೇಸಾಯ ಮಂತ್ರಿಗಳ ಸಂಚಾರದಿಂದ ಜಿಲ್ಲೆಗೆ ವಿಶೇಷ ಪ್ರಯೋಜನವಾಯಿತೆ' ಎಂಬ ಒಂದು ತೀರಾವನ್ನು ಮಾಡುವುದೂ ಕಾಂಗ್ರೆಸ್ ಸಮಿತಿಯ ಕಾರ್ಯ ರೀತಿಗಳಿಗೆ ಸಂಬಂಧಿಸಿದ್ದೆ? ವಿಕ್ಷ ಮಂತ್ರಿಗಳು ಏಂಬು ಹೋಗಿದ್ದಾಗ ಜಿಲ್ಲಾ ಕಾಂಗ್ರೆಸ್ ಇಂತಹ ನಿರ್ಣಯವನ್ನು ಮಾಡಿಯಿಲ್ಲವಾದ್ದರಿಂದ ಆ ಸಂಚಾರ ಯಶಸ್ವಿಯಾಗಿ ಯಲ್ಲಿ ಸೇಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ವಿಶೇಷ ಸಭೆಯಲ್ಲಿ 'ಸೂಸ ರಾಜ್ಯ ಘಟನೆಯಲ್ಲೇ ಕರ್ನಾಟಕ ಪ್ರಾಂತ್ಯವನ್ನು ಸೇರಿಸಿಕೊಳ್ಳಬೇಕು. ಆಂಧ್ರ ಪ್ರಾಂತ್ಯವನ್ನು ತಿರಿ ಭಾಷಾವಾರು ಪ್ರಾಂತ್ಯಗಳೊಂದಿಗೇನೇ ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕು—ಗಡಿ ವಿವಾದಗಳನ್ನು ಡಾ। ರಾಜೇಂದ್ರ ಪ್ರಸಾದರ ತೀರ್ಮಾನಕ್ಕೊಪ್ಪಿಸಬಹುದು — ಈ ವರ್ಷಾಂತ್ಯದೊಳಗೆ ಪ್ರತ್ಯೇಕ ಪ್ರಾಂತ್ಯ ರಚನೆಯಾಗದಿದ್ದರೆ ಆ ಗುರಿ ಸಾಧನೆಗಾಗಿ ಚಳವಳಿ ಹೂಡಬೇಕಾದೀತು' ಎಂದು ತೀರ್ಮಾನ ಸರಕಾರವನ್ನೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನೂ ಕೇಳಿಕೊಳ್ಳುವ ನಿರ್ಣಯವಾಗಿದೆ. ಮೈಸೂರು ಮಲಬಾರ್ ಜಿಲ್ಲೆಯನ್ನು ಘಟನಾತ್ಮಕ ಶಿಸ್ತಿಗಾಗಿ ಮಾಡಿ ವೈಸೂರು ಸಮೇತ ಅಖಂಡ ಕರ್ನಾಟಕ ರಚಿಸಬೇಕೆಂಬ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರವನ್ನು ಅದರಲ್ಲಿ ಸ್ವಾಗತಿಸಲಾಗಿದೆ ಆದರೆ ಇದು ಕೂಡಾ ಕನ್ನಡಿಗರ ಅಭಿಮತ ಮಾತ್ರ; ಆಂಧ್ರದವರ ನಿರ್ಣಯದಂತೆ ನವ ರಚನೆಯು ಅಸ್ತಿತ್ವಕ್ಕಾಗುವಂತಹದಲ್ಲ. ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷವೇಯಾ ಸಭೆಯಲ್ಲಿ 'ಕರ್ನಾಟಕದ ಭಾಗಗಳು ಮತ್ತು ವೈಸೂರು ಒಂದಾಗುವ ಪ್ರಶ್ನೆಯ ಪರ್ಯಾಲೋಚನೆಗೆ ಕಾಲ ಬಂದಿಲ್ಲ' ಎಂಬ ಅಭಿಪ್ರಾಯ ಸೂಚಿಸಿದೆ. ಕ. ಸಾ. ಕಾಂ. ಸಮಿತಿಯ ನಿರ್ಣಯದ ಹಿಂದ ಆಂ. ಪ್ರಾಂ. ಕಾಂ. ಸಮಿತಿ ನಿರ್ಣಯದಂತೆಯೆ ಅಖಂಡ ಜನಮತವಿರುವದು ಕಂಡು ಬರುತ್ತಿಲ್ಲ. ಆಂಧ್ರದ ಕುರಿತು ವ ದ್ರಾಸ್ ಸರಕಾರ ಮಾಡಿದಂತಹ ವಿಸ್ತಾರಸನ್ನು ಕರ್ನಾಟಕದ ಕುರಿತು, ಸಂಬಂಧಪಟ್ಟ ಮದ್ರಾಸ್, ಮೈಸೂರು, ಜೋಬಾಯಿ ಸರಕಾರಗಳು ಮಾಡಿಯಿಲ್ಲ. ಹೀಗಾಗಿ ಹೊಸ ಘಟನೆಯೊಂದಿಗೇನೇ ಕರ್ನಾಟಕ ಪ್ರಾಂತ್ಯವು ಅಸ್ತಿತ್ವಕ್ಕೆ ಒರುವ ಸಂಭವ ಕನ್ನಡಸಾಧ್ಯವಾಗಿ ಕಾಣತ್ತಿದೆ. ಈಗ ನಿಶ್ಚಿತವಧಿ ಮೀರಿಯೇಗಿದ್ದ ಅದರೂ ಕನ್ನಡಿಗರು ಸಂತೋಷಿಂಗಬೇಕಂದಿಲ್ಲ ಎಲ್ಲಕ್ಕಿಂತ ಮೊದಲು ಆಂಧ್ರ ಪ್ರಾಂತ್ಯ ರಚನೆಯಾಗಬಹುದೆಂಬ ಅಭಿಪ್ರಾಯವನ್ನು ತ್ರಿಮೂರ್ತಿ ಸಮಿತಿ ಪ್ರಕಟಿಸಿದ್ದರೂ, ಒಂದು ಭಾಷಾವಾರು ಭಾಗವನ್ನು ವಿಂಗಡಿಸುವುದರೊಂದಿಗೇನೇ ಅದರ ಒತ್ತಿನ ಭಾಗಗಳನ್ನೂ ಭಾಷಾವಾರು ವಿಂಗಡಿಸುವುದು ಕ್ರಮಪ್ರಾಪ್ತವಾಗುವದು. ಆದ್ದರಿಂದ ಆಂಧ್ರರಿಗೆಂದಾರುವ ಈ ಸುಸಂದರ್ಭವು ಕೆಲವಂಶ ತವರೂ ಅನುಕೂಲವೇ ಎಂದು ಕನ್ನಡಿಗರು ಭಾವಿಸಿಕೊಳ್ಳಬೇಕು; ಈ ಸಂದರ್ಭವನ್ನು ಸದುಪಯೋಗಿಸಿಕೊಂಡು ಆಂಧ್ರದೊಂದಿಗೇನೇ ಕರ್ನಾಟಕ ಪ್ರಾಂತ್ಯವೂ ರೂಪುಗೊಳ್ಳುವಂತೆ ಸರ್ವ ಪ್ರಯತ್ನ ಮಾಡಬೇಕು. ಅದಕ್ಕಾಗಿಯೇ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ರಚಿಸಿಕೊಂಡಿರುವ ಸಮಿತಿಯು ಈ ಕೆಲಸ ಮಾಡೀತೆಂದು ನೀರೀಕ್ಷಿಸಬಹುದೆ?

ರಗಳೆಲ್ಲವೂ ಅನಸ್ಯಯೋಜಕನೆಂದೇ ಸಮಿತಿಯಅಭಿಸ್ರಾಯ ವೆಂದುಕಟ್ಟಿಕೊಳ್ಳಬೇಕೆ? ಪ್ರಧಾನಿಗಳ ಸಂಚಾರದ ಮಟ್ಟಿಗೆ ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳ ಅಸಹಕಾರದ ಸೂಚನೆಯು ಸರ್ಕಲ್ ಕಾಂಗ್ರೆಸ್ ಸಮಿತಿಗಳಿಗೆ ಹೋಗಿದ್ದು, ಆ ಸಂಬಂಧದ ಯದ್ವಾತದ್ವಾ ವರ್ತನೆಗಳಿಂದ ವಾತಾವರಣ ಕದಡಿಹೋದುದರಿಂದ ಅದನ್ನು ಅಲ್ಲಿಂದ ಬ್ಲಯೇ ಮರೆಮಾಡುವದಕ್ಕಾಗಿ ಇಂತಹ ಶರಾವಾಗಿರಬೇಕೆಂಬುದು ಸ್ಪಷ್ಟವಲ್ಲವೆ? ಕಾಂಗ್ರೆಸ್ ಅಧಿಕಾರಿಗಳು ಕೊಟ್ಟಿದ್ದ 'ಮಂತ್ರೀ ಸಂಚಾರದೊಂದಿಗೆ ಅಹಯೋಗ' ಮಾಡುವ ಆ ಸೂಚನೆಯು ಕಾಂಗ್ರೆಸ್ ಸಮಿತಿಯದಲ್ಲವೆಂಬುದನ್ನು ತೋರಿಸುವುದೇ ಈ ನಿರ್ಣಯದ ತಿರುಳಾಗಿದ್ದರೆ, ಆ ಅಧಿಕಾರಿಗಳ ಇಂತಹ ಜಬ್ಬದ ಬ್ಬಾರೀ ವರ್ತನೆಗೆ ಈ ಕಾಂಗ್ರೆಸ್ ಸಮಿತಿ ಮಾಡಿರುವ ಪ್ರಾಯಶ್ಚಿತ್ತವೇನು? 'ಪ್ರಧಾನ ಮಂತ್ರಿಗಳ ಸಂಚಾರಕ್ಕೆ ಸಂಬಂಧವಿಲ್ಲ' ಎಂಬ ಕಾರ್ಯದರ್ಶಿಗಳ ಕುರಿತು ಕೆಲವೆಡೆಗಳಲ್ಲಿ ತೋರಿಬಂದಿರುವ ಭಾವನೆಗಳ ಸಂಬಂಧವಾಗಿ ಸದ್ಯಕಾರ್ಯದರ್ಶಿಗಳು ಕೊಟ್ಟ ಹೇಳಿಕೆಯನ್ನು ಪಡೆದು ಅದನ್ನು ಅಂಗೀಕರಿಸಿಕೊಳ್ಳಲಾಯಿತು' ಎಂಬ ಕಾಂಗ್ರೆಸ್ ಸಮಿತೀ ನಿರ್ಣಯವೇ ಅಂತಪ ಪ್ರಾಮಾಣ್ಯವನ್ನಿತ್ತೆನೇ?

'ಪ್ರಧಾನಿಗಳ ಸಂಚಾರ ಕಾರ್ಯಕ್ರಮಗಳಲ್ಲಿ ಸಹಭಾಗಿಗಳಾಗಬಾರದು' ಎಂಬ ನಿರ್ದೇಶವು ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಗಳಿಂದ ಬಂದಿದ್ದುದು ಸ್ಥಳೀಯ ಕಾಂಗ್ರೆಸ್ ಸಮಿತಿಗಳಿಗೆ ಮತ್ತು ಕಾಂಗ್ರೆಸ್ ಕಾರ್ಯಕರ್ತರಿಗೆ. ತಮ್ಮಷ್ಟಿಗೇತಿ ತಡೆಗಟ್ಟಿದವರೇ, ಮಂತ್ರಿಗಳ ಬೆನ್ನಹಿಡಿದು ಬಂದಿದ್ದುದನ್ನು ಕಂಡು ಸ್ವಭಾವಿಕವಾಗಿ ಜಿಗುಪ್ಸೆಗೊಂಡು ನಿಷೇಧ ಸಭೆ ಜರಗಿಸಿ, ದೂರುಕೊಟ್ಟವರು ಮತ್ತು ಕಾಂಗ್ರೆಸ್ ಸ್ಥಾನಗಳಿಗೆ ರಾಜೀನಾಮೆ ಕೊಟ್ಟವರು ಕೂಡ ಆ ಕಾಂಗ್ರೆಸಿಗರೇ. ಬಹುಸಂಖ್ಯಾತರಾಗಿದ್ದ ಈ ಅಬಗಳ ಅರ್ಥವಿನ್ನೂ ಸಾರ್ವಜನಿಕರಿಗೆ ಮಂದಟ್ಟಾಗಿಲ್ಲ. ತನ್ನ ಕಾರ್ಯದರ್ಶಿಗಳ ಅಧಿಕಾರ ಕಾರ್ಯಕರ್ತರಿಂದ ಏನಾದರೂ ಪ್ರಮಾದಗಳಾಗಿದ್ದರೆ ಅದನ್ನು ಸಾರ್ವಜನಿಕರಿದಿರು ಮುಚ್ಚು ಮರೆಯಲ್ಲದೆ ಒಪ್ಪಿಕೊಂಡು, ಭವಿಷ್ಯತ್ ನಿರ್ಮಾಣವನ್ನು ಕಾಂಗ್ರೆಸ್ ಸಮಿತಿಯು ಕರ್ತವ್ಯವಿದ್ದಿತು. ಅಂತಹದೇನೂ ಆಗದ್ದು ನಿರಾಧಾರವಾದ ದೂರು ದೂಷಣೆಗಳ ಪ್ಟೇ ಎದ್ದುದಾಗಿದ್ದರೆ ಅದನ್ನು ಸುಲಭವಾಗಿ ಮಂಡಟ್ಟಪಡಿಸಿ, ಸಾರ್ವಜನಿಕರಲ್ಲಿ ಹರಡಿದ್ದ ಒಂದು ತಪ್ಪುಭಿಪ್ರಾಯವನ್ನು ನಿವಾರಿಸಬಹುದಿದ್ದಿತು. ಹೀಗಿದ್ದರೂ ಬಯಲಿಗೆ ಬಿದ್ದ ಒಂದು ಸಣ-ಸೈಜುನ್ನು ಬಯಲಲ್ಲಿಯೇ ಬಿಡಿಸಿಕೊಳ್ಳಬೇಕಿತ್ತಲ್ಲದೆ, ಅಲ್ಲಿಯ ಕೊಳೆಯನ್ನು ಅಫೀಸು ಕೋಣೆಯಲ್ಲಿ ಕುಳಿತು ತೊಳೆದುಕೊಂಡಂತೆ ನಟಿಸುವ ಜಿಲ್ಲಾ ಕಾಂಗ್ರೆಸ್ ಸಮಿತಿಯ ಈ ವರ್ತನೆಗೆ ಅರ್ಥವಿದೆಯೆ?

ಆದುದಾಗಿ ತೋಯಿಶ್ಯುಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿಯು ಜಿಲ್ಲಾ ಕಾಂಗ್ರೆಸ್ ಸಮಿತಿಯ ಮುಂದೆ ಈ ಸಂಬಂಧವಾಗಿ ಕೂಟ್ಟ ಹೇಳಿಕೆಯೇನೆಂಬುದನ್ನು ಇನ್ನಾದರೂ ಸಾರ್ವಜನಿಕರು ತಿಳಿಯಬಹುದೆ? ಎನೋ ಒಂದು ಬೊಬ್ಬೆಯಾ ಕಾಂಗ್ರೆಸ್ ವರ್ಗದಲ್ಲಿ ಎದ್ದಿದೆನ್ನಿಸಿ ಸಾರ್ವಜನಿಕರು ಕೇಳಿ ಆಗಿದೆ. ಅಲ್ಲಿ ಅದರ ನಿಜ ಎಂಬುದನ್ನು ತಿಳಿಯುವ ಅವಕಾಶವನ್ನೇ ಜನತೆಗೆ ಕೊಡದೆ, ತಮ್ಮೊಳಗೆ ಕೆವಿಮಾತಾಡಿಕೊಂಡು, ಜನತೆಯಿದಿರು ಗುಟ್ಟುಮಾಡುವ ಕಾಂಗ್ರೆಸ್ ಸಮಿತಿಯನರು ಜನಪ್ರತಿನಿಧಿಗಳನ್ನಿಸಿಬಾರರೆ? ಸಾರ್ವಜನಿಕರಿಗೆ ಸಂಬಂಧಿಸಿದ ಒಂದು ಪ್ರಶ್ನೆಯನ್ನು ಈ ರೀತಿ ರಹಸ್ಯತೆಯಿಂದ ಬಚ್ಚಿಡುವವರೂ ಜನತೆಗೆ ಸ್ವಕೀಯರಾಗಬಲ್ಲರೆ?

ಈ ರೀತಿ ಸಾರ್ವಜನಿಕ ಸ್ವಾಸ್ಥ್ಯೀಕರಣ ಬೇಕಾದಲ್ಲಿ ಖಾಸಗಿ ರೀತಿಯ ಗುಪ್ತ ಶಮನ—ಎಲ್ಲಸಲ್ಲದ ಸಣ್ಣಸುಟ್ಟ ವಿಷಯಗಳನ್ನೆತ್ತಿಕೊಂಡು ಜಾಹೀರು ಡಂಗುರ—ಹೊರಗೆ ಹಾಕಬೇಕಾದುದು ಒಳಗೆ, ಒಳಗಣದ್ದೇ ಇಡಬೇಕಾದುದು ಒಟ್ಟಬಯಲು—ಇಂತಹ ಯದ್ವಾತದ್ವಾ ವರ್ತನೆಗಳನ್ನು ಶುದ್ಧೀಕರಿಸುತ್ತಿರುವ ಜಿಲ್ಲಾ ಕಾಂಗ್ರೆಸ್ ಅಧಿಕಾರಿಗಳು ಯಾರಿರಬೇಕು, ಎಂದು ಮತ್ತೊಮ್ಮೆ ಕೇಳಿದರೆ ತಪ್ಪೇನು?

ಹೊಣೆ ಹೊತ್ತು ಸಾರ್ವಜನಿಕ ಕಾರ್ಯ ನಿರ್ವಹಿಸುತ್ತಿರುವವರಿರುವ ಅಡ್ಡಿ ಆತಂಕಗಳಿಂದಕವೆಂಬುದನ್ನು ನಾವು ಬಲ್ಲೆವು. ಸಾರ್ವಜನಿಕ ಜೀವನದಲ್ಲಿ ನುಸುಳುವಾಗಿ ದೊರೆಯುವ ಅಡಚಣೆಯಂಥ ಕೀಳೆಯೊಂದೇ ಎಂಬುದೂ ನಿಜವೇ. ಆದರೆ ಪರಿಸ್ಥಿತಿ ಹೀಗೆ ಹಾಳಾಗಿರುವಾಗ, ಅವನ್ನು ತಾವು ಇನ್ನಷ್ಟು ಕೆಡಿಸಿದರೂ ಪ್ಪೆನ್ನುವಂಥ ವ ನೋವೃತ್ತಿಯು ಹೊಣೆಗಾರರದಾದಲ್ಲಿ ಮತ್ತೆ ಶುದ್ಧವೊಂದೇ ಗತಿ! ಸಾರ್ವಜನಿಕ ಹಿತಕ್ಕಿಂತ ಪಟ್ಟಿನ ಅಂತ ಸಾಧಿಸುವವರ ಯಾವ ಕಾರಣಕ್ಕಾಗಿಯಾದರೂ ಆ ಅವಕಾಶವನ್ನು ಸ್ವಾಸ್ಥಗೆಳಲ್ಲಿರಕೂಡದು ಎಂದು ಮಾತ್ರ ನಿರ್ದಾಕ್ಷಿಣ್ಯವಾಗಿ ಹೇಳಬೇಕಾಗಿದೆ.

Notice.

IN THE COURT OF THE SUBORDINATE JUDGE OF SOUTH KANARA.

O. S. No. 124/1949.

Between:—

The Canara Industrial & Banking Syndicate Ltd., Udipi.
—Plaintiff.

and

Nidambur Ramachandra Rao.
—Defendant.

To.

Defendant Nidambur Ramachandra Rao, son of Nidambur Reghavendra Rao alias Venkappayya, Proprietor, Shashiara Corporation, Gandhi Nagar, Bangalore City and a permanent resident of Kadekar Village, Udipi Taluk.

Please take notice that the above suit filed by plaintiff against you for recovery of Rs. 5600—1—0 with future interest, and costs of suit with interest, from you personally and also by sale of plaint properties, is posted for hearing at 11 a. m. on 26-11-1949 in the above court. You may appear in person or by pleader on or before the said date and contest the suit, failing which the same will be heard and determined in your absence.

B. Vaikunta Baliga,
Vakil for Plaintiff.

Mangalore, 10-11-1949.

ನೆಹರೂ ಆಗಮನ ಮತ್ತು ೬೦ನೇ ಜಯಂತಿ.

ಇದೇ ತಾ 14ನೇ ಸೋಮವಾರ ಪೂರ್ವಾಹ್ನದಿಂದ ತಾ 15ನೇ ಮಂಗಳವಾರ ಪೂರ್ವಾಹ್ನದ ವರೆಗಿನ 24 ತಾಸುಗಳ ಅವಧಿಯು ಆಧುನಿಕ ಭಾರತದ ಚಿಂತ್ಯರಾಜ್ಯೇಯ ದಿನ. ಈ ದಿನದ ಆದಿ-ಮಧ್ಯ-ಅಂತ್ಯಭಾಗದಲ್ಲಿ ಮೂರು ಗಣ್ಯ ಘಟನೆಗಳು ನಡೆದು ಹೋಗಿವೆ. ಮೊದಲನೆಯದು ನವರಾಜ್ಯ ಶಾಸನದ ಕೊನೆಯ ಮಂಜೂರಾತಿಗಾಗಿ ಘಟನಾ ಸಮಿತಿಯ ಅದಿವೇಶನವು ಆರಂಭ; ಎರಡನೆಯದು ಆ ಮೇರೆಗೆ ವಿಜಯೀ ಪ್ರಧಾನಿ ಮುಗಿಸಿ ಕೊಂಡು ನಿಕರುಗಳ ಪುನರಾವಾನ; ಮೂರನೆಯದು ಗಾಂಧಿಜಿಯು ಕೊಲೆಗೀಡಾದ ಗೋಡ್ಸೆ ಪತ್ರ ಅಪ್ಪೆಯರಿಗಾದ ಪಾತಿ. ಮೇಲಾಗಿ ತಾ 14 ಪಂಡಿತಜೀಗೆ 60ತುಂಬಿ 61ಹುಡಿದದಿನ.

× × ×

ನವರಾಜ್ಯ ಘಟನೆಯ ತೃತೀಯ ವಾರ್ಷಿಕ ಸಭೆಯು ತಾ 11ನೇ ಸೋಮವಾರ 11 ತಾಸಿಗೆ ಘಟನಾ ಸಮಿತಿ ಸದನದಲ್ಲಿ ಅಧ್ಯಕ್ಷರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಆ ವೇಳೆಗಿನ ಪ್ರತಿ ದಿನವೂ ಮುಂಜಾನೆ 10ರಿಂದ 12 ವರೆಗೂ ಅಪರಾಹ್ನ 3ರಿಂದ 5ರ ವರೆಗೂ ಸಮಿತೀ ಸಭೆ ಜರುಗುತ್ತಿದ್ದಿತು. ಘಟನಾ ಕರಡಿಗೆ ಸುಮಾರು 500 ಉಪಸೂಚನೆಗಳು ಮುಂದೆ ಬಂದಿದ್ದು, ಅವೆಲ್ಲವುಗಳನ್ನೂ ತಾ16ನೇ ಮಧ್ಯಾಹ್ನದ ಅಧಿವೇಶನದೊಳಗೆ ಇತ್ಯರ್ಥಿಸಿಕೊಳ್ಳಬೇಕೆಂದು ಅಧ್ಯಕ್ಷರು ನಿರ್ಧರಿಸಿದ್ದಾರೆ. ನವರಾಜ್ಯ ಶಾಸನವೀಗ ತೃತೀಯ ವಾಚನವನ್ನು ಮೇವೇ ದಿವಸಗಳಲ್ಲಿ ಕೊನೆಯ ಮಂಜೂರಾತಿ ಪಡೆದು ಆ ಸಂಬಂಧದ ಕಾರ್ಯ ಮಂಗಳವಾಗಲಿದೆ.

× × ×

ಪಂಡಿತ ಜವಾಹರಲಾಲರು ತಾ. 14ನೇ ಆಸರಾಹ್ನ 4-20 ತಾಸಿಗೆ ವಿಮಾನದಲ್ಲಿ ಬೊಂಬಾಯಿಯ ಸಾಂತಾಕ್ರುಜ್ ವಿಮಾನ ನಿಲ್ದಾಣದಲ್ಲಿ ಇಳಿಯುವರು. ಅಂದಿಗೆ ಕೆಲದಿವಸಗಳ ಮೊದಲು ಅದೇ ನಿಲ್ದಾಣದಲ್ಲಿ ವಿಮಾನಪಕ್ಷಿದನು ಮೊನ್ನೆ ಇಳಿಯುವಾಗ ಅಮೆರಿಕಾ ಮತ್ತು ಕೆನಡಾಗಳಲ್ಲಿ ಸುಮಾರು 10000ಮೈಲಿಷ್ಟ ಸಂಚರಿಸಿ ಬಂದಿದ್ದರು. ತನ್ನ ಅರುವತ್ತನೇ ಜಯಂತಿ ದಿನದಲ್ಲೇ ಸ್ವದೇಶದ ನಂದು ಮೂಲೆ ಮಾರ್ದನಿಗೊಡುವ ಕೀರ್ತಿಭೋರಿರವಿಂದಿಗೆ ಪಂಡಿತಜೀ ನಾಡಿನ ಜನತೆಯಿಂದ ಸ್ವಾಗತಸ್ವೀಕಾರವನ್ನು ಪಡೆಯುವರು. ಅಂದಿಗೆ ಬೆಳಿಗ್ಗೆ ಅವರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡುವರು. ಅಂದಿನ ಮಧ್ಯಾಹ್ನ ಅವರು ಬೊಂಬಾಯಿ ಪ್ರಾಂತ ಕಾಂಗ್ರೆಸ್ ಸಮಿತಿಯ ಸಾಂತಾಕ್ರುಜ್ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಅಲ್ಲಿ ನೆರೆದಿದ್ದ ದೊಡ್ಡ ಜನಸಂದಣಿಯು ಪ್ರಚಂಡ ಜಯಕಾರಗಳನ್ನೆಬ್ಬಿಸಿತು. ಅಲ್ಲಿ ಬೊಂಬಾಯಿ ಪ್ರಧಾನಿ, ಮೇಯರ್ ಮತ್ತು ವಿವಿಧ ಇಲಾಖಾಧಿಕಾರಿಗಳಿಂದ ಸ್ವಾಗತಿಸಲ್ಪಟ್ಟು, ಹಲವಂ ಹಾರಪರ್ಪಣೆಗಳನ್ನು ಸ್ವೀಕರಿಸಿದರು. ರವ್ಯಗೀತೆಯಾದ ಮೇಲೆ 17ನೇ ಸಲ್ಯೂಟಿನ ಮಂದರ ಗೌರವವನ್ನು ಪಡೆದರು. ತುಸು ವಿಶ್ರಾಂತಿ ಪಡೆದ, ತನ್ನ ಸಹೋದ್ಯೋಗಿ ಸಂಬಂಧವಾಗಿ ಚೌಪಾತಿಯಲ್ಲಿ ನೆರೆದ ಪ್ರಚಂಡ ಸಾರ್ವಜನಿಕ ಸಭೆಗೆ ಬರಳಿದರು. ಅಲ್ಲಿಯ ಉತ್ಸಾಹ, ಸಂಭ್ರಮಗಳಂತೂ ವರ್ಣನಾತೀತವಿದ್ದುವು. ಬೊಂಬಾಯಿ ನಾಗರಿಕರ ಪರವಾಗಿ, ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಸಮಿತಿಯವರ ಅಧ್ಯಕ್ಷತ್ವದಲ್ಲಿ ಕಯಾರಿಸಲ್ಪಟ್ಟ್ಟು, ಸಾರ್ವಜನಿಕ ಸಭೆಯಲ್ಲಿ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಮತ್ತು ಮೇಯರ್ ಶ್ರೀ. ಯು ಸ್ ಕೆ. ಪಾಟೀಲರಿಂದ ಪಂಡಿತಜೀಗರ್ಪಿಸಲ್ಪಟ್ಟ ವಜ್ರ ಕೆತ್ತಿದ ಸುವರ್ಣ ಆಕೋಕಿಸ್ಮರಣೆಯು, ಅಗ್ರಗಣ್ಯನಿಗೊಪ್ಪಿಸಲ್ಪಟ್ಟ ಅತ್ಯಮೂಲ್ಯ ಉಡುಗರೆಯಾಗಿದ್ದಿತು. ಆಭರಣ ಕಲೆಯ ಪಟ್ಟಿಗೆ ಅನ್ಯಾದೃಶ ವಸ್ತುವಿದು. ಇದು 12 ಇಂಚು (ಬೇರೊಂದೆಡೆ ಬಿದ್ದಂತೆ 60 ಇಂಚಿಲ್ಲ) ಉದ್ದವಿದೆ 2854 ತೊಲೆ ಭಂಗಾರವನ್ನು 124 ತೊಲೆ ಪ್ಲೇಟಿನ ವಸ್ತು ಇದರಲ್ಲಿದೆ. ಬುಡದ ಆಶೋಕ ಚಕ್ರಗಳನ್ನು ವಜ್ರಗಳಿಂದಲೇ ಕೆತ್ತಲಾಗಿದೆ. ಅಸ್ಥೈಕ ಕೇಂದ್ರದ ದೊಡ್ಡ ವಜ್ರವು 1161 ಕ್ಯಾರೆಟ್‌ಗಳಷ್ಟಿದ್ದು ಉಳಿದ 306 ಸಣ್ಣ ವಜ್ರಗಳು ಒಟ್ಟಿಗೆ 1340 ಕ್ಯಾರೆಟ್‌ಗಳಷ್ಟಿದ್ದು ಸ್ವಚ್ಛದ ಸತ್ವವೂ ಕೆತ್ತಲ್ಪಟ್ಟಿವೆ. ಈ ಅನೋಘ ಅಭರಣದ ಒಟ್ಟು ಮೌಲ್ಯವು 60000ರೂಪಾಯಿಗಳಿಂದ 65000ರೂ. ಗಳಷ್ಟಿರಬಹುದು. ಇದರೊಂದಿಗೆ ಬಂಡಿಪಲ್ಲಿನ ಚಲ್ಲಾಣ ಸಿಲುಬಿನಂಗಿ ಮತ್ತು ಶಾಲು ಪಂಡಿತಜೀಗೆ ಉಡುಗೊರೆಯಾಗಿ ಕೊಡಲ್ಪಟ್ಟವು ಅಂತೆಯೆ. ಬರಿಹಕಲೆಯ ಅನನ್ಯ ದೃಶ ದಾಖಲಿಯೊಂದು ಪಂಡಿತಜೀಗೆ ಜನ್ಮದಿನದ ಕಾಣಿಕೆಯಾಗಿ ಕೊಡಲ್ಪಟ್ಟಿದೆ. ಟಪ್ಪಾಲು ಕಾರ್ಡಿಗಿಂತ ಸ್ವಲ್ಪಮಾತ್ರ ದೊಡ್ಡದಾದ ಒಂದು ಕಾಗದವು ನೆಹರುಗಳಿಗರ್ಪಿಸಲ್ಪಟ್ಟಿದೆ. ಈ ಕುಂಡು ಪತ್ರದ [illegible] ಅಕ್ಷರಗಳಲ್ಲಿ ಪಂಡಿತಜೀಯ ಜೀವನಚರಿತ್ರೆಯು ಬರೆಯಲ್ಪಟ್ಟಿದೆ. ಇದನ್ನು ಬರೆದವರು ಬೊಂಬಾಯಿಯ ತರುಣ ಕಲಾವಿದ ಶ್ರೀ ಆನಂತ ಭಟ್ಟರು. (ದಕ್ಷಿಣಕನ್ನಡದವರಬಹುದೆ) ಶ್ರೀಯುತ ಭಟ್ಟರು 1942ರಲ್ಲಿ ಒಂದು ಟಪ್ಪಾಲು ಕಾರ್ಡಿನಲ್ಲೇ 82ಸಾವಿರ ಅಕ್ಷರಗಳಲ್ಲಿ ಗಾಂಧಿಜೀಯ ಚರಿತ್ರೆಯನ್ನು ಬರೆದಿದ್ದರು. ಒಂದು ಪೋಸ್ಟ್‌ಕಾರ್ಡಿನಲ್ಲಿ ಒಂದೇ ದಿನದಲ್ಲಿ ದೇವನಾಗರಿ ಲಿಪಿಯಲ್ಲಿ ಇಡೀ ಭಗವದ್ಗೀತೆಯನ್ನು ತಾನು ಬರೆಯಬಲ್ಲೆನೆಂದು ಶ್ರೀ ಆನಂತ ಭಟ್ಟರನ್ನು ತ್ತಾರೆ.

× × ×

ಮಹಾತ್ಮಾ ಗಾಂಧಿ ಕೊಲೆಯ ಸಂಬಂಧವಾಗಿ ಮರಣ ಶಿಕ್ಷೆಗೊಳಗಾಗಿದ್ದ ಗೋಡ್ಸೆ ಮತ್ತು ಅಪ್ಟೆಯನ್ನು ನಿಶ್ಚಿತ ದಿನ ಇದೇ ತಾ 15ನೇ ಮಂಗಳವಾರ ಮುಂಜಾನೆ [illegible] ಅಂಬಾಲಾ ನೆಲೆಮನೆಯಲ್ಲಿ ವಿದ್ಯುಚ್ಛಕ್ತಿಯಿಂದ ಮುಗಿಸಿದ 1948ನೇ ಜನವರಿ 30ರಿಂದ ಧಾರತೀಯರ ವಾಲಿಗೆ ಅಪರಾ ನೇರಿದ್ದಾಗಿದ್ದ ಅಧ್ಯಾಯವೊಂದು ಮುಕ್ತಾಯಗೊಂಡಿತು.

ಮಂಗಳೂರು

ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರು ಮಾನಾನಡೆಯು ತಾ. 15ರಲ್ಲು ನವಿಮು ಶ್ರೀ. ಎಸ್. ಎಸ್. ಪಿ ಸಿಂಟೋರವರು ಅರಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ. ಮುಂದಿನ ದಿನ ನವಿಮೆ ಪಾರ್ಟಿ ವಿಮರ್ಶಿಗನ್ನಲ್ಲಿ ಶ್ರೀ ಪಿಂಟೋರವರಿಗೆ 20, ಶ್ರೀ. ಡಿ. ಪುಟ್ಟುಸ್ವಾಮಿ ಆಪಿಗೆ 13 ಓಟುಗಳು ದೊರಕಿದ್ದುವು.

ಉಡುಪಿ

ಬೇಗನೆ ಟಿಫ್ಫಾಲು ಬಸ್ಟ್ಯಾಡೆ- ಇದೇ ತಾ. 15ರಿಂದ ಮದ್ರಾಸು, ಮಂಗಳೂರು ಕಡೆಯ ಟಿಫ್ಫಾಲುಗಳು ಪ್ರತಿದಿನ ಬೆಳಿಗ್ಗೆ 7½ ಗಂಟೆಗೆ ಕಟ್ಟೆಯ ಮೂಲಕವೂ ಬಸ್ಟ್ಯಾಡೆಯೊಳಗಲು ಪ್ರಾರಂಭವಾಗಿಯಿದೆ. ಇದೇ ತಾರೀಕಿನಿಂದ ಪ್ರತಿದಿನ ಸಂಜೆ 5 ತಾಸಿಗೆ ಮುಂಗಳೂರು ಮದ್ರಾಸು ಕಡೆಗೆಗೆ ಮಾತ್ರ ಸ್ಪೆಶಲ್ ಟಿಫ್ಫಾಲು ಹೋಗಲು ಪ್ರಾರಂಭವಾಗಿಯಿದೆ. ಪುಷ್ಕಳ ರಿಜಿಸ್ಟ್ರೇಷನ್ನಾಡಲ್ಪಟ್ಟ ಪಾರ್ಸೆಲುಗಳು ಕೂಡಾ ಅದೇ ಟಿಫ್ಫಾಲಿನಲ್ಲಿ ಆ ಕಡೆಗೆಗೆ ಮಾತ್ರ ಕಳುಹಿಸಲ್ಪಡುವವು. ದಿನಂಪ್ರತಿಯೂ ಸಂಜೆ 5 ಗಂಟೆಯೊಳಗಾಗಿ ಟಿಫ್ಫಾಲು ಕಟ್ಟೆಯಲ್ಲಿ ಕಾಗದ ಪತ್ರಗಳನ್ನು ಹಾಕಿದರೆ ಅಂದೇ ಅವು ಮಂಗಳೂರಿಗೆ ತಲ್ಪಿ ಮರು ದಿವಸದ ಮೈಲ್ ಗಾಡಿಯಲ್ಲಿ ಮುಂದಿನ ಸ್ಟೇಶನುಗಳಿಗೆ ಹೊಯ್ಕಲಾಗುವುವು.

ನಗರ ಸಭೆಯು ಇದೇ ತಾ. 12 ಲ್ಲು ಅಧ್ಯಕ್ಷ ಶ್ರೀ ಎ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರುಗಿತು. ಕೆಲವು ಸರಕಾರಿ ಡಿ. ಬಿ.ಗಳು ರಿಕಾರ್ಡುಮೂಡಲಾದುವು. ಮುನಿಸಿಪಲ್ ಬಾಗ್ಲೆಯ ನೌಕರ್ಯ ಹೆಚ್ಚಳದ ಬಗ್ಗೆ ಕಮಿಶನರರು ಅಪೇಕ್ಷಿಸಿದ ಹಣದ ವಿಚಾರದಲ್ಲಿ ತುಂಬಾ ಚರ್ಚೆ ನಡೆದು ಕೊನೆಗೆ ಚಿಕ್ಕ ಅಂಕೆಯ ಕಡಿತದಿಂದ ಹಣ ಮಂಜೂರಾಯಿತು. ಪಾಸುವರ್ಣ ಅಪೀಲು ಅರ್ಜಿಯ ಕುರಿತು ಚರ್ಚೆಯಾಗಿ ತೀರ್ಮಾನದ ಬಗ್ಗೆ ಮುಂದಿನ ಸಭೆಗೆ ಬಾಕಿಯಿಡಲಾಯಿತು. ಅದಿಉದುಪಿ ಶಾಲೆಗೆ ಒಂದು ಎಕ್ರೆ ಸ್ಥಳವನ್ನು ಕೊಡಬಹುದೋ ಎಂದು ಉಡುಪಿ ತಹಶೀಲ್ದಾರರು ಕೇಳಿದುದಕ್ಕೆ ಕೌನ್ಸಿಲು ತನ್ನ ಅಭ್ಯೇಪವನ್ನು ಸೂಚಿಸಿತು. ಜನವರಿ ತಿಂಗಳಲ್ಲಿ ನಡೆಯುವ ಶ್ರೀ ಕಾಣಿಯೂರು ಸ್ವಾಮಿಯವರ ಪರ್ಯಾಯ ಜಾತ್ರೆ ವೇಳೆ ಟೌನ ಸ್ವಚ್ಛತೆ ಬಗ್ಗೆ ದೊಡ್ಡಾಯಿ 1800 ಸೆಕ್ಷನ್ ಮಾಡಲಾಯಿತು. ಇವರಲ್ಲಿ ಅರ್ಧಾಂಶ ಹಣ ಮತದವರು ತೆರಬೇಕಾದುದು.

ಸಂಸ್ಕೃತ ಪ್ರಶಸ್ತಿ ಅಯೋಜ್ಯೆಯ ಅಮಿಲ ಭಾರತ ವಿದ್ವನ್ಮಾನ್ಯ ಸಂಸ್ಕೃತ ಪರಿಷತ್ತಿನ ಕಡೆಯಿಂದ ಕಳಿದ ವಿಜಯ ದಶಮಿ ದಿನ ಜರಗಿದ ಮುಷಾಸಭೆಯಲ್ಲಿ ಉಡುಪಿ ಬೋರ್ಡು ಹೈಸ್ಕೂಲಿನ ಸಂಸ್ಕೃತ ಪಂಡಿತ ಶ್ರೀ. ಕೆ. ಎ. ದೇವನಾಸ್ ಅವರಿಗೆ 'ಸಾಹಿತ್ಯ ಪ್ರಭಾಕರ'ಎಂಬ ಪ್ರದಸ್ತಿಯನ್ನು ಉನ್ಮೋಷಿಸಿರುವರು. ಶ್ರೀಯುತರು ಜಿಲ್ಲೆಯ ಬ್ರಾಹ್ಮಣೇತರರಲ್ಲಿ ಸರ್ವ ಪ್ರಥಮ ಸಂಸ್ಕೃತ ವಿದ್ವಾಂಸರು.

ಜಿಲ್ಲಾ ಬೋರ್ಡ್ ಅಧ್ಯಕ್ಷರಿಗೆ ಸತ್ಕಾರ— ದ ಕ. ಜಿಲ್ಲಾ ಬೋರ್ಡ್ ಪ್ರೆಸಿಡೆಂಟ್ ಶ್ರೀ. ಬಿ. ಮಂಜಪ್ಪ ಹೆಗ್ಡೆಯವರಿಗೆ ಇದೇ ತಾ. 13ನೇ ಆದಿತ್ಯವಾರ ಬೆಳಿಗ್ಗೆ ಇಲ್ಲಿಯ ಬೋರ್ಡು ಹೈಸ್ಕೂಲ್ ಅಧ್ಯಾಪಕ ವೃಂದದವರು ಉಪಾಹಾರವನ್ನಿತ್ತು ಗೌರವಿಸಿದರು. ಮುನ್ಸೋಪಾಧ್ಯಾಯರಾದ ಶ್ರೀ ಕೆ. ಸಂಜೀವ ಸಟ್ಟಿರು ಸ್ವಾಗತ ಪೀಟಿಕೆಯನ್ನು ಸ್ವಾಗತಿಸಿ ಉಡುಪಿ ಬೋರ್ಡು ಹೈಸ್ಕೂಲಿನ ಐತ್ಯಾವಶ್ಯಕತೆಗಳನ್ನು ಸೂಚಿಸಿದರು. ಅಧ್ಯಕ್ಷರು ತನಗಿತ್ತ ಸತ್ಕಾರಕ್ಕಾಗಿ ಅಭಾರ ಸೂಚಿಸಿ ಈ ಹೈಸ್ಕೂಲಿನ ತೀವ್ರ ಅವಶ್ಯಕತೆಗಳನ್ನು ಪರಿಶೀಲಿಸಲಾಗುವುದೆಂದರು. ಅನಂತರ ಅಧ್ಯಕ್ಷರು ಕೊಡಮಾಂಗಿಸಿದ ಫೋಳಿ ಆಲ್ಬಿಯಂ ಬೋರ್ಡು ಹಾ. ಎಲಿಮೆಂಟರಿ ಶಾಲೆಗೆ ಆಕ್ಸಾಸರಿಕವಾಗಿ ಕಟ್ಟೋಣ ಕೆಲಸದ ಕುರಿತು ವಿಚಾರ ವಿನಿಮಯ ಮಾಡಿ ಸಂಜೆ ಮಂಗಳೂರಿಗೆ ಹೋದರು

ನೆಪರೂ ಜಯಂತ್ಯುತ್ಸವವು— ಇದೇ ತಾ. 14ರಲ್ಲು ಬೋರ್ಡು ಹೈಸ್ಕೂಲ್ ಮೊನೆಲಾದಸ್ಥಳಗಳಲ್ಲಿ ಆಚರಿಸಲ್ಪಟ್ಟಿತು.

ಮಂಗಳೂರು

ಜಿಲ್ಲಾ ಆಹಾರ ಸಮಿತಿಯ ಸಭೆ ಯು ಜಿಲ್ಲಾ ಎಮ್. ಎಲ್. ಎ.ಗಳ ಅನುಕೂಲತೆಗಾಗಿ ತಾ. 25-11-49ನೆ ಶುಕ್ರವಾರ 4 ತಾಸಿಗೆ ಜರಗಲಿರುವುದು. ಈ ಸಭೆಯು ಮುನಿಸಿಪಲ್ ಹಾಲಿನಲ್ಲಿ ಜಿಲ್ಲಾ ಆಹಾರ ಉತ್ಪಾದನಾ ಸಮಿತಿಯ ಸಭೆಯು ಜರಗುವುದು.

ಬಾವಿ ತೋಡಿಸುವ ಸರಕಾರೀ ಯೋಜನೆಯಂತೆ, ಕೆಲಸವನ್ನು ಆಲತ್ಯಗೊಳಿಸುವ ಅವಧಿಯನ್ನು ತಾ. 30-6-1950ರ ವರೆಗೆ ಮುಂದರಿಸಲಾಗಿದೆ. ಭದ್ರತೆ ಕೊಡದಿದ್ದಲ್ಲಿಯೂ ತಾ. 31-12-49ರ ಒಳಗೆ ಕೆಲಸವನ್ನು ಆರಂಭಿಸುವಂತೆ ವಿನಂತಿಸಿಕೊಳ್ಳಲಾಗಿದೆ.

ಪತ್ರಿಕೋದ್ಯೋಗಿ ಸಂಘ ಉಡುಪಿ ನಿಧಾವಸ್ಥೆಯಲ್ಲಿದ್ದ ದ. ಕ ಜಿಲ್ಲಾ ಪತ್ರಿಕೋದ್ಯೋಗಿ ಸಂಘವನ್ನು ಪುನರುತ್ಥಾನಗೊಳಿಸುವುದಕ್ಕಾಗಿ ಮಂಗಳೂರು ಪತ್ರಿಕೋದ್ಯೋಗಿಗಳ ಸಭೆಯೊಂದು ಇದೇ ತಾ. 9ರಲ್ಲು ಸಂಜೆ ಶ್ರೀ ಪಿ. ಪುಟ್ಟುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ತಾತ್ಕಾಲಿಕ ಸ್ಥಿತಿಯನ್ನು ಕರಡು ಪರಿಶೀಲನೆಯಾಗಿ ಕಾರ್ಯಾಲಿಕ ಕಾರ್ಯನಿರ್ವಾಹಕ ಸಮಿತಿಯೊಂದು ರಚಿಸಲ್ಪಟ್ಟಿತು. ಶ್ರೀಗಳಾದ ಪಿ. ಪುಟ್ಟುಸ್ವಾಮಿ (ಅಧ್ಯಕ್ಷ) ಕಡಂಗೋಡ್ಲು ಶಂಕರ ಭಟ್ (ಉಪಾಧ್ಯಕ್ಷ). ಯು. ನರಸಿಂಹ ರಾವ್ (ಕಾರ್ಯದರ್ಶಿ), ಎಸ್. ಮುಕುಂದರಾವ್, ಎಚ್. ಆರ್. ರುಬ್ಯರು ಸಮಿತಿಯಲ್ಲಿರುವರು

ಶ್ರೀ ಬಿ-ಗ್ಲೋಡಿ ದೇವರಾಜ್: ಇವರು ಐ ಎ. ಎಸ್. ಪರೀಕ್ಷೆಯಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆಹೊಂದಿ ಸರಕಾರದ ಕಡೆಯಿಂದ ವಿಶೇಷ ಭಾತೆಯ ವಿಚಾರ ಪೆಟ್ಟಿನಮೂಹಿತಿ ಪಡೆಯುವ ಬಗ್ಗೆ ಕೇಂದ್ರ ಜಿಗೆ ಪಿಪೂಸ ಮೂಲಕ ತ್ರರಿಯರುವರು.

ಅವಘಡದಿಂದ ಮರಣ ಕಂಕನಾಡಿಯ ಪಟೀಲಲ್ಲಿ ಇದೇ ತಾ 10ನೆ ಬೆಳಿಗ್ಗೆ ಸುಮಾರು 10ಗಂಟೆಗೆ ಸಿ. ಪಿ. ಸಿ. ಯ ನಂಬ್ರ 11ನೆ ಸಿಟಬಸ್ಸಿನ ಅಡಿಗೆ ಸುಮಾರು ಎಂಟು ವರ್ಷ ಪ್ರಾಯದ ಕಥೋಲಿಕ್ ಹುಡುಗಿಯೊಬ್ಬಳು ಅಕಸ್ಮಾತ್ತಾಗಿ ಬಿದ್ದು ಕೊಲ್ಲಲ್ಪಟ್ಟಿರುವಳೆಂದು ತಿಳಿದು ಬರುತ್ತದೆ.

ನೆಯ್ಗೆಗಾರರ ಕೂಲಿಯಲ್ಲಿ ಕಡಿತ ಮಂಗಳೂರಿನ ಕೈನೆಯ್ಗೆಗಳ ಮ್ಯೂಲಿಕರ ಸಂಘದವರು ತಮ್ಮ ಕೈಕೆಳಗಿನ ನೇಕಾರರ ಮಜೂರಿಯಲ್ಲಿ ಸ್ವಲ್ಪ ಕಡಿತವನ್ನು ಮಾಡಬೇಕೆಂದು ನಿಶ್ಚಯಿಸಿದುದನ್ನು ಖಂಡಿಸುವ ನಿರ್ಣಯವು ಇದೇ ತಾ. 6ರಲ್ಲು ಜರಿಗಿದ ದ. ಕ. ಜಿಲ್ಲಾ ಟ್ರೇಡ್ ಯೂನಿಯನ್ ಸಭೆಯಲ್ಲಿ ಒಮ್ಮತದಿಂದ ಮಂಜೂರಾಯಿತು. ಯೂನಿಯನ್ ಅಧ್ಯಕ್ಷ ಶ್ರೀ ಯು. ಕಣ್ಣಪ್ಪ ನವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಎನ್. ಸಾಲ್ಯಾನರು ಧನ್ಯವಾದಗಳನ್ನರ್ಪಿಸಿದರು.

ದ ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆಯು ತಳಪ ತಾ 30ರಲ್ಲು ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಜರುಗಿತು. ಮೈಸೂರು, ಹೈದರಾಬಾದು ಮತ್ತು ಉಳಿದ ಎಲ್ಲಾ ಕನ್ನಡ ಭಾಗಗಳು ಸೇರಿಕೊಂಡೇ ಕರ್ನಾಟಕ ಪ್ರಾಂತರಚನೆಯಾಗಬೇಕೆಂದೂ ಕರ್ನಾಟಕದ ಯಾವುದಾದರೊಂದು ಅಂಶವನ್ನು ಬಿಟ್ಟು ಶ್ರಾಂತ ರಚಿಸುವುದಾದರೆ ಅದಕ್ಕೆ ಈ ಮಹಾಸಭೆಯು ಸಮ್ಮತಿಸಲಾರದೆಂದೂ ನಿಶ್ಚಯಿಸಿರುತ್ತದೆ. ಈ ರೀತಿಯ ಪ್ರಾಂತ ರಚನೆಗೆ ತೊಡಕು ಬರುವುದಾದರೆ ಆ ಸಂಬಂಧವಾಗಿ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕೆಂದು ಈ ಮಹಾ ಸಭೆಯು ಪ್ರಾಂತಿಕ ಕಾಂಗ್ರೆಸ್ ಕಮಿಟಿಯನ್ನು ಕೇಳಿಕೊಳ್ಳುತ್ತದೆ." ಈ ನಿರ್ಣಯವನ್ನು ಕೆನಾರ್ಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗೂ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೂ, ಮದ್ರಾಸು ಸರಕಾರಕ್ಕೂ ಕಳುಹಿಸತಕ್ಕುದ್ದೆಂದೂ ತೀರ್ಮಾನಿಸಲಾಯಿತು. ನಿರ್ಣಯವನ್ನು ಮಂಡಿಸಿದವರು ಡಾ। ಯು. ಪಿ. ಮಲ್ಯರು ಶ್ರೀಗಳಾದ ಕೆ. ಈಶ್ವರ, ಕೆ. ಆರ್. ಕಾರಂತ, ಕೆ. ಕೆ. ಸೆಟ್ಟಿ, ಎಸ್. ಎಸ್, ಕಲ್ಲೆ, ಎಚ್. ನಾರಾಯಣರಾವ್, ಪಿ. ಶ್ರೀನಿವಾಸ ಮಲ್ಯ, ಬಿ. ದಾಮೋದರ ಬಾಳಿಗ ಮೊದಲಾದವರು. ನಿರ್ಣಯ ಚರ್ಚೆಯಲ್ಲಿ ಭಾಗವಹಿಸಿದ್ದರು. ದ. ಕ. ಜಿಲ್ಲೆಯಲ್ಲಿ ಇತ್ತೀಚೆಗೆ ಮುಖ್ಯ ಮಂತ್ರಿಗಳು ಮತ್ತು ವ್ಯವಸಾಯ ಇಲಾಖಾ ಮಂತ್ರಿಗಳು ಕೈಕೊಂಡ ಪ್ರವಾಸವು ಅತಿ ಯಶಸ್ವಿಯಾಗಿ ನಡೆಯಿತೆಂದೂ ನಿರ್ಣಯಿಸಿ, ಮಂತ್ರಿಗಳ ಈಪ್ರವಾಸದ ಕುರಿತು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಗಳವರ ಮೇಲೆ ಕೆಲವು ಕಡೆಗಳಲ್ಲಿ ಇದ್ದ ಅರೋಪಣೆಗಳು ನಿರಾಧಾರವೆಂದೂ ಕಾರ್ಯದರ್ಶಿಯವರು ಸಮಿತಿಗೆ ತಿಳಿಸಿದ್ದನ್ನು ಸಮಿತಿಯು ಅಂಗೀಕರಿಸಿತು.

ಸರಕಾರ ಮತ್ತು ಸರಕಾರಿ ಅಧಿಕಾರಿಗಳಿಗೂ ಕಾಂಗ್ರೆಸ್ ಕಮಿಟಿಗಳಿಗೂ ಇರಬೇಕಾದ ಸಂಬಂಧ ಮತ್ತು ನಿತ್ಯ ನೈಪಹಾರದ ಕುರಿತು ಉತ್ಪನ್ನವಾಗುವ ಯಃಕಶ್ಚಿತ್ತಾ ಪ್ರಶ್ನೆಗಳಲ್ಲಿ ಆವು ಸಂಪರ್ಕ ಬೆಳಿಸಿ,ಜನರ ಕಷ್ಟನಿವಾರಣೆಯ ಕುರಿತು ನಿಳಂಬವಿಲ್ಲದೆ ಕಾರ್ಯಕೈಕೊಂಡು ನೈಸರ್ಗಿಕವಾದಲಂ ಮತ್ತು ಜಿಲ್ಲೆಯನ್ನು ಆಗಾಗ ಸಂದರ್ಶಿಸುವ ಮಂತ್ರಿಗಳ ಮತ್ತು ಇತರ ಸರಕಾರಿ ಅಧಿಕಾರಿಗಳ ಪ್ರವಾಸ ಕಾರ್ಯಕ್ರಮ ಇತ್ಯಾದಿಗಳನ್ನು ವ್ಯವಸ್ಥೆಗೊಳಿಸಲಿಕ್ಕಾಗಿ ಒಂದು ಸಮಿತಿಯನ್ನು ನೇಮಿಸಿ ಸಮಿತಿಗೆ ಆ ಸಂಬಂಧವಾದ ಸಂಪೂರ್ಣ ಅಧಿಕಾರ ಕೊಡಲಾಯಿತು. ಇದೇ ರೀತಿ ಬೇರೆಬೇರೆ ಸಮಿತಿಗಳು ರಚಿಸಲ್ಪಟ್ಟವು.

ಮುಂಬಯಿ.

ಭಗವತಿ ನೃತ್ಯಕಲಾ ಮಂದಿರದಲ್ಲಿ ತಾ 6-11-49ರಲ್ಲು ಮುಂದಿರದ ಸ್ಥಾಪಕರಾದ ಶ್ರೀ ಇತಪ್ಪ ಭಂಡಾರಿ ಮನೆಯವರು ಬಜಾಪುಂದ ದಾಸಿ ನಾಗೂರ ಬನವರಾಜರ ಅಧ್ಯಕ್ಷತೆಯಲ್ಲಿ 'ನಾರದ ವಿವಾಹ' ನಾಟಕದ ಕರ್ತ ಶ್ರೀ ಆರ್. ಡಿ. ಕಾವಾಡಿಯವರನ್ನೂ ಮತ್ತು ಅದರಲ್ಲಿ ಪಾತ್ರವಹಿಸಿದ ಕಲಾವಂತರನ್ನೂ ಸನ್ಮಾನಿಸುವುದಕ್ಕಾಗಿ ಒಂದು ಸತ್ಕಾರಕೂಟವನ್ನು ನಿರ್ಪಡಿಸಿದ್ದರು. ಕೆಲವರ ಸಂದರ್ಭೋಚಿತ ಭಾಷಣಗಳಿದ್ದುವು.

ರಾಜಕೀಯ ಸಂತ್ರಸ್ತರ ಸಭೆ— ಕಳೆದ ತಾ. 30ರಲ್ಲು ಮುಂಬಯಿ ಕನ್ನಡಿಗ ರಾಜಕೀಯ ಸಂತ್ರಸ್ತರ ಒಂದು ಸಭೆಯು ಕೋಟೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಶ್ರೀ ಕೆ. ಎಸ್. ಗ್ಯಾತೊಂಡೆಯವರ ಅಧ್ಯಕ್ಷತೆಯಲ್ಲಿ ಮದ್ರಾಸು ಸರಕಾರವು ರಾಜಕೀಯ ಸಂತ್ರಸ್ತರಿಗೆ ಪಾಗ್ದಾನ ಮಾಡಿದ ಭೂದಾನದ ಕುರಿತು ವಿಚಾರಿಸುವುದಕ್ಕಾಗಿ ಜರಿಗಿತು.

ವಿಚಾರವಿನಿಮಯವಾದ ನಂತರ ಈ ಕೆಳಗಿನ ನಿರ್ಣಯವು ಪಾಸಾಯಿತು. 'ಈ ಸಭೆಯು ರಾಜಕೀಯ ಸಂತ್ರಸ್ತರಿಗೆ ಧನಾರ್ಥ ಭೂಮಿಯನ್ನು ಕೊಡುವ ಕುರಿತಾಗಿ ಕೊಟ್ಟ ವಾಗ್ದಾನವನ್ನು ಪೂರ್ತಿಗೊಳಿಸುವುದರಲ್ಲಿ ಸಾವಧಾನತೆ ತೋರಿಸುತ್ತಿರುವುದು ವಿಶಾದಕರ. ಪ್ರಕಟಣೆಯನ್ನು ಹೊರತರುವ ಸಮಯದಲ್ಲಿ ಯಾವ ಉತ್ಸಾಹವಿದ್ದಿತ್ತೋ, ಅದೇ ಉತ್ಸಾಹವನ್ನು ಶೀಘ್ರದಲ್ಲಿ ಈ ಗುರಿಯೆಡೆಗೆ ತರುವುದರಲ್ಲಿಯೂ ತೋರಿಬರಿಕೆಂದು ಈ ಸಭೆಯು ಕೋರುತ್ತದೆ. ಎರಡನೆಯದಾಗಿ ಮದ್ರಾಸು ಸರಕಾರದ ಪ್ರಕಟಣೆಯಲ್ಲಿರುವ ನಿಯಮದ ಕುರಿತಾದ ನಿಬಂಧನೆಯೂ ಆದರ ಧ್ಯೇಯಕ್ಕೆ ವಿರುದ್ಧವಾಗಿರುವುದೆಂದೂ ಈ ಸಭೆಯು ಅಭಿಪ್ರಾಯವಿರುವುದರಿಂದ ಭೂಮಿ ಗೋಸುಗ ಮಾಡುವ ಅರ್ಜಿಗಳ ಕೊನೆಯ ತಾರೀಖನ್ನು ಮುಂದುವರಿಸಬೇಕೆಂದೂ ಈ ಸಭೆಯು ಮದ್ರಾಸು ಸರಕಾರವನ್ನು ಕೇಳಿಕೊಳ್ಳುತ್ತದೆ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕ್ಕಿಂಗ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಬರೆದರೆ ಹಿಗೊದುವ ನೌಕರರ ವರ್ಗ!

ನೀವಾಗಿ ಉಡುಪಿ ಬ್ರಾಹ್ಮಣರ ಆಡಿಗೆ,ತಿಂಡಿತಿನಸು, ಇವುಗಳ ರುಚಿಶುಚಿ ಬೇಳಬೇಕ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ಪತನರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kunjoor,
Manager.

ಹಲ್ಲುಗಳ ಸ್ವಚ್ಛತೆಗೂ, ವಸಡಿನ ನಿರ್ಮಲತ್ವಕ್ಕೂ, ಮತ್ತು ಆರೋಗ್ಯಕ್ಕೂ ಕೂಡಾ

'ಪಾಥ್ರಿಸ್ ನೀಮ್'

ಟೂತ್‌ಪೌಡರನ್ನೇಉಪಯೋಗಿಸಿರಿ
ಹಲ್ಲುಗಳು ಬೆಳ್ಳಿಗೆ ಹೊಳೆಯುವಂತೆ
ಶುಭ್ರ ಮಾಡುತ್ತದೆ.

ವಿಳಾಸ:—
ಪಾಥ್ರಿಸ್ (ಆಯುರ್) ಪ್ರೊಡಕ್ಟ್ಸ್,
ಉಡುಪಿ.

ದ. ಕನ್ನಡ

"ಭಯಂಕರ ಹುಲಿಬೇಟೆ"

ಶಿವಪುರ:–ದ. ಕ ಜಿಲ್ಲಾ ಕಾರ್ಕಳ ತಾ ಲೂಕು ಶಿವಪುರ ಗ್ರಾಮದ ಎಳಗೋಳಿ ಎಂ ಬಲ್ಲಿ ಏಳೆಂಟು ದಿನಗಳ ಹಿಂದೆ ರಾತ್ರಿ ಮನೆ ಹೊಕ್ಕುಒಂದು ಹುಲಿ ಒಬ್ಬ ಮುದುಕನನ್ನು ಕೊಂದು ಹೊತ್ತುಕೊಂಡು ಹೋಗುವಷ್ಟರ ಲ್ಲಿ ಜನರ ಗಲಾಟೆಯಿಂದ ಹುಲಿ ಹೆಣಬಿಟ್ಟು ಓಡಿಹೋಯಿತು. ಮರುದಿನದಿಂದ ಹುಲಿಗಳ ಉಪದ್ರ ಹೇಳಿತೀರದು. ಹಗಲಲ್ಲೇ ಆದೆ ನ್ನೊ ದನಕರುಗಳನ್ನು ಕೊಂದವು. ಪಳ್ಳಿಯ ಪಂಕು ಮನೆಯ ಬಡಪರೆಲ್ಲಾ ಇಡೀ ರಾತ್ರಿ ಅಗ್ನಿಪ್ರತಿಷ್ಠೆ ಹಾಕಿ ಕಾವಲುಮಾಡುತ್ತಾ ಜಾಗ ರಣ ಮಾಡುವಂತಾಯ್ತು. ಊರಿಂದ ಊರೇ ಭಯದಿಂದ ತತ್ತರಿಸಿತು. ನುದ್ರಾಡಿಯಲ್ಲಿ ಮೊದಲಹೆಣ್ಣೇ ಹುಲಿಗಳನ್ನು ಕೊಂದ ವೀರ ರಿಗೆ ಬಹುಮಾನದ ಬೇಡಿಕೆ ಬಂತು. ಮುದ್ರಾ ಡಿ ಮತ್ತು ಶಿವಪುರ ಗ್ರಾಮದ ಕೆಲವರಿಂದ ಮೇಲೆ ಹೇಳಿದ ಸ್ಥಳದಲ್ಲಿ ಈ ದಿನ ಹುಲಿಬೇ ಟೆ ನಡೆಯಿತು. ಭಯಂಕರ ಮೂರು ಹುಲಿ ಗಳಲ್ಲಿ ಒಂದನ್ನು ನುದ್ರಾಡಿ ತೆಂಕೋಡು ಶೇಷಪ್ಪ ಹೆಗ್ಡೇರೂ ಮತ್ತೊಂದನ್ನು ಎಚ್ಡೆ ಹಿಂಯಂಣ ಜೆಗ್ಡೆರೂ ಇನ್ನೊಂದನ್ನು ಮು ದ್ರಾಡಿ ತುಕ್ರಸೂಡಾಯರೂ ಗುಂಡಿನಿಂದ ಕೊಂದರು. ಭಯಂಕರ ಮೂರು ನರಭಕ್ಷ ಕ ಹುಲಿಗಳನ್ನು ಬೇಟೆಯಲ್ಲಿ ಒಂದೇ ಸಮ ಯದಲ್ಲಿ ಕೊಂದ ಈ ಧೀರ ಸಾಹಸಕಾರ್ಯ ಕೊಂಡಾಡತಕ್ಕುದು. ಇವಕ್ಕೆ ಗ್ರಾಮಸ್ಥರು ಚಿರಕೃತಜ್ಞರು ಆಗತಕ್ಕಿಬ್ಬಲ್ಲಿ ನೋಗಿ ಹು ಲಿಗಳನ್ನು ಕೊಲ್ಲುವಂತೆ (ಸಂತಾಂಧಪಟ್ಟ ಇಲಾಖೆಯವರು) ಈ ಸಾಹಸಿಗಳಿಗೆ ಜಿಲ್ಲಾ ಕೋರ್ಟಿಲ್ಸ್ಸನ್ನು ಕೊಟ್ಟು ಸನ್ಮಾನಿಸುವ ರೆಂದು ಊರಿನವರು ಹಾರೈಸುತ್ತಾರೆ.

ಮುದ್ರಾಡಿ ಕೃಷ್ಣಯ್ಯ ಸೆಟ್ಟಿ.

ಪಂಜಿನಡ್ಕ:—ಇಲ್ಲಿಯ ವಿದ್ಯಾಭಿಮಾ ನಿಗಳ ಮತ್ತು ಊರವರ ಕೂಡುನಿಕೆಯಿಂದ ಕೆಳದ ತಿಂಗಳಲ್ಲಿ ಪಂಜಿನಡ್ಕ ಶೋಷ್ಣು ಆಫೀ ಸಿನ ಪೂರ್ಣಗೆಯಲ್ಲಿ "ಶ್ರೀ ಸರಸ್ವತಿ ಪಾಜ ನಾಲಯ"ವು ತೆರೆಯಲ್ಪಟ್ಟಿರುವುದು. ಸದರಿ ಪಂಜಿನಡ್ಕದ ಊರಿನ ಪರಊರಲ್ಲಿರುವ ಮ ಹನೀಯರೂ, ವಿದ್ಯಾಭಿಮಾನಿಗಳೂ ಈ ಪಾ ಠನಾಲಯಕ್ಕೆ ಉದಾರ ಧನಸಹಾಯವಿತ್ತು ಪ್ರೋತ್ಸಾಹಿಸಬೇಕಾಗಿ ಕಾರ್ಯದರ್ಶಿ ಟಿ. ಬಾಲಕೃಷ್ಣ ಸೆಟ್ಟಿ ವಿನಂತಿಯಿದೆ.

ಜೇನು ವ್ಯವಸಾಯಗಾರರ ಪರಿಷತ್ತು— ಅಖಿಲಭಾರತ ಜೇನು ವ್ಯವ ಸಾಯಗಾರರ ಹನ್ನೊಂದನೇ ಪರಿಷತ್ತು ಮತ್ತು ಜೇನು ವ್ಯವಸಾಯ, ಕೃಷಿ ಕೈಗಾರಿಕೆ ಪ್ರದರ್ಶನವು ದಶಂಬ್ರ (ಮುಂದಿನ ತಿಂಗಳ) ತಾರೀಕು 2ರಿಂದ 4ರ ವರೆಗೆ ಬೆಳಗಾಂ ಸ ಮೀಪದ ನಂದಗಡ ಎಂಬ ಊರಲ್ಲಿ ಜರಗ ಲಿರುವುದು. ಪರಿಷತ್ತಿಗೆ ಬೊಂಬ್ಬಾ, ಇತರ ಪ್ರಾಂತ್ಯದ ಮಂತ್ರಿಗಳೂ, ಅನೇಕ ಇತರ ಮಹನೀಯರೂ ಬರಲಿರುವರು. ಜೇನು ವ್ಯ ವಸಾಯದ ವಿಷಯ ಸಿನೆಮಾ ಪ್ರದರ್ಶನ ಗಳೂ ಇರುವುದು. ಪರಿಷತ್ತಿಗೆ ಹೋಗಲಿಚ್ಚಿ ಸುವ ಮಹನೀಯರು ಕಾರ್ಯದರ್ಶಿ, ಸ್ವಾಗ ತಸಮಿತಿ, ಜೇನು ವ್ಯವಸಾಯ ಪರಿಷತ್ತು, ಗಾಂಧಿಗ್ರಾಮ ಪೋಸ್ಟ್, ನಂದಗಡ, ಬೆಳಗಾಂ ಜಿಲ್ಲಾ ಇವರಿಗೆ ಬರೆದು ಬೇಕಾದ ಮಾಹಿತಿ ಪಡಕೊಳ್ಳಬಹುದು.

ಧರ್ಮಸ್ಥಳಕ್ಕೆ ಮೈಸೂರು ಮಹಾರಾಜರ ಆಗಮನ:—ತಾ. 7-11-49 ನೇ ಮೂರ್ವಾಹ್ನ ಗಂಟೆ 11ಕ್ಕೆ ಶ್ರೀಮಾನ್ ಮೈಸೂರು ಮಹಾರಾಜರು ತಮ್ಮ ಮಾತು ಶ್ರೀಯವರು, ಕುಟುಂಬ ಪರಿವಾರ ಸಮೇತ ರಾಗಿ ಬಂದು ಶ್ರೀ ಮಂಜುನಾಥೇಶ್ವರನ ದರ್ಶನ ಮಾಡಿಕೊಂಡು ಸಾಯಂಕಾಲ 4 ಗಂಟೆಗೆ ಧರ್ಮಸ್ಥಳದಿಂದ ಹೊರಟು ಹೋಗಿರುವರು.

ಬೇಕಾಗಿದ್ದಾರೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಆಫೀಸಿನಲ್ಲಿರುವ ಶಿಲೆಗೆಳಲ್ಲಿ ಹಂಗಾ ಮಿ ಉಪಾಧ್ಯಾಯರು ಕಲಸಕ್ಕೆ ಹದಿನೇ ಳು ವರ್ಷ ಪ್ರಾಯಕ್ಕಿಂತ ಕಮ್ಮಿ ಇರದ ಎಂಟನೆ ದರ್ಜೆ ಸರ್ಟಿಫಿಕೇಟು ಪಡೆದ ತಲ್ಲವೇ 111 ಫಾರ್ಮ್ ಅದಕ್ಕಿಂತ ಹೆ ಚ್ಚಿನ ವಿದ್ಯಾಯೋಗ್ಯತೆ ಇರುವ ಹರಿಜನ ಚೇಕ್‌ವರ್ಡ್ ಹಿಂದೂ ಮತ್ತು ಬ್ಯಾಕ್ವ ರ್ಡೇತರ ಹಿಂದೂ ವರ್ಗದ ಉಮೇದ್ವಾರ ರು ಬೇಕಾಗಿದ್ದಾರೆ. ಉಮೇದ್ವಾರರು ಈ ಕೆಳಗೆ ಹೇಳಿರುವ ವಿವರದಿಂದ ಕೂಡಿದ ಅರ್ಜಿಯನ್ನು ನಾಲ್ಕು ಆಣೆ ಮಸಿಯಾರ್ದರು ಮಾಡಿ ಪಡೆದ ರಹೀದಿ ಸರ್ಟಿಫಿಕೇಟಿ ನಕಲಿನೊಡನೆ ಲಗ್ತೀಕರಿಸಿ ಈ ಆಫೀಸಿಗೆ 25-11-49ರ ಒಳಗೆ ತಲಪುವಂತೆ ಕಳುಹಿಸಿಕೊಡತಕ್ಕದ್ದು. ವೂಸ್ತೇಜು ಸ್ಯಾಂಪು ಕಳುಹಿಸಿಕೊಡ ಕೂಡದು ವಿವರ:

1. ಪೆಸರು, 2 ತಂದೆಯ ಹೆಸರು, 3. ವಾಸಸ್ಥಳ ಮತ್ತು ವೃತ್ತಿ, 4. ಜನನ ತಾರೀಕ, 5. ಭಾಷೆ, 6. ಮತ ಮತ್ತು ಜಾತಿ, 7. ಸಾಮಾನ್ಯ ವಿದ್ಯಾ ಯೋಗ್ಯ ತೆ, 8. ವಿಳಾಸ, 9. ಹಿಂದೆ ಉಪಾ ಧ್ಯಾಯ ವೃತ್ತಿಯಲ್ಲಿದ್ದರೆ ವಿವರ.

(Sd) **B. Manjayya Hegde,**
B.A.B.L.
President, District Board, S. K.



Approved firm by the Govt. of Mysore Certificated by the Agent of the Govt. of Cylone & Indian.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರವು ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಥಾಯವಾಗಿದ್ದರೆ,.... ಚಟ್ಟೆ ದಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಗು ಅಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಇಂಥಾ ರೋಗವಿದ್ದು ಸ್ತ್ರೀಯರ ಬಿಳಿಕೆಂವು ಸೆರಗು ಹೋಗುತ್ತಿದ್ದರೆ, ಹೊಲಿಕ ಟು ಗರ್ಭಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಕ್ಷಯರೋಗಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸೀಖಾರ್ಯ, ಕಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ದಾಖ್ಲು ೦೫೪ ಹರೂ. ಪೋಸ್ಟ ಚಾರ್ಜ ೦ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:–ಬಾಗಲಕೋಟೆ ಫಾರ್ಮಸಿ, ಧಾರವಾಡ:–ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ.
ಆಯುರ್ವೇದ ಔಷಧಾಲಯ. ಗದಗ-

Life Assurance

CONSULT

THE NEW GUARDIAN OF INDIA
LIFE ASSURANCE Co. LTD.
(Established. 1934)

Chairman: **Sri. M. C. T M. Chidambarma Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building,
, MADRAS

ಹೆಗ್ಗುಂಜೆ:—ಇಲ್ಲಿಯ ವಸಂತ ಗಿರಿ ಯಲ್ಲಿರುವ ಪಿ. ಟಿ. ಶಾಲೆಯನ್ನು "ಗಾಂಧಿ ಮೆಮೊರಿಯಲ್" ಹಾಯರ್, ಎಲಿಮೆಂಟರಿ ಶಾಲೆಯಾಗಿ ಮೂರ್ಪಡಿಸಲು ಶ್ರೀಗಳಾದ ಬಿಲ್ಲಾಡಿ ಪಟೇಲ್ ಮಂಜಯ್ಯ ಹೆಗ್ಡೇರು, ವಂಡಾರು ಪಟೇಲ್ ಮುತ್ತಯ್ಯ ಹೆಗ್ಡೇರು ಶೀರೂರು ಪಟೇಲ್ ಶೀನಪ್ಪ ಸೆಟ್ಟಿ ಹಾಗೂ ಹೆಗ್ಗುಂಜೆ ಪಟೇಲ್ ಗಣಪಯ್ಯ ಸೆಟ್ಟಿ ಮೊ ದಲಾದ ಮಹನೀಯರ ಬೆಂಬಲದಿಂದ ಶ್ರೀ ಹೆಬ್ಬಾಡಿ ಕೃಷ್ಣಪ್ಪ ಸೇರ್ವೆಗಾರರು ಖಾಲಾಕ ಟ್ಟಡದ ಕೆಲಸವನ್ನು ಭರದಿಂದ ಸಾಗಿಸುತ್ತಿ ರುವರು.

ಬೆಳಪುಪಜೆಯಾರು:—ಇಲ್ಲಿಯ ಬೆ ರ್ಗಾದೇವಿ ಎಯಿಡೆಡ್ ಎಲಿಮೆಂಟರಿ ಶಾಲೆ ಯಲ್ಲಿ ಇದೇ ತಾ 9ರಲ್ಲು ವಯಸ್ಕರ ಶಿಕ್ಷ ಣ ರಾತ್ರಿ ಶಾಲೆಯೊಂದು ಶ್ರೀ. ಬಿ. ಸಂಜೀ ವ ಸೆಟ್ಟರ ನೇತೃತ್ವದಲ್ಲಿ ತೆರೆಯಲ್ಪಟ್ಟಿದೆ.

ಉಚ್ಚಿಲ-ಶ್ರೀ ಸರಸ್ವತಿ ಮಂದಿರ ಶಾ ಲೆಯಲ್ಲಿ ಇದೇ ತಾ 9ರಲ್ಲು ವಯಸ್ಕರ ಶಿಕ್ಷ ಣ ರಾತ್ರಿ ಶಾಲೆಯೊಂದು ಶ್ರೀ ವೈ. ನಾರಾ ಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ತೆರೆಯ ಲಾಯಿತು.

ಕುಂಬಳೆ ಈ ಕ್ಷೇತ್ರದ ಉಪಾಧ್ಯಾಯ ರ ಸಭೆಯು ತಾ 12ರಲ್ಲು ಶಾಲಾ ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಶ್ರೀ ವಿ. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ನೇರಿ ವಿದ್ಯಾ ಸಂಬಂಧವಾದ ವಸಾತುಕಥೆಗಳಾದುವು.

ಬಂಬ್ರಾಣಿ ಶಾಲೆಯ ರಕ್ಷಕರ ಸಭೆ ಯು ತಾ 12ರಲ್ಲು ಶ್ರೀ ಬಿ. ಗುಡ್ಡಪ್ಪ ರೈಗ ಳವರ ಅಧ್ಯಕ್ಷತೆಯಲ್ಲಿ ಜರಗಿತು.

ಪೆರಾರ ಸಹಕಾರಿ ಸಂಘದ ಉಗ್ರಾಣದ ತಂಕು ಸ್ಥಾಪನೆಯು ತಾ 4ರಲ್ಲು ರಾ ಜಾ ಎ ಮ್. ಗಿರಿಯಪ್ಪನವರಿಂದ ನೆರವೇರಿತು. ಉ ಗ್ರಾಣವು ಸಾಧಾರಣ ಆರೂವರೆ ಸಾವಿರ ರೂ ಪಾಯಿಗಳ ವೆಚ್ಚದಿಂದ ಕಟ್ಟಲಾಗುವುದು. ಇ ದರಲ್ಲಿ ಅರ್ಧಾಂಶ ಸರಕಾರದ ಗ್ರಾಂಟುದೊ ರೆಯಾಗುವುದು.

ಆರ್ಯಸಮಾಜ ಪ್ರಚಾರ ಸಭೆ ಗಳು— ಮಂಗಳೂರಿನ ಆರ್ಯಸಮಾಜ ಪ್ರಚಾರಕರಾದ ಶ್ರೀ ಪಿ. ಲಕ್ಷ್ಮಣದೇವ ವಿ ದ್ಯಾರ್ಥಿಗಳು ತಮ್ಮ ಸಮಾಜ ಪ್ರಚಾರ ಸಭೆ ಗಳನ್ನೂ ಹರಿಕಥೆಗಳನ್ನೂ ತಾ. 5ರ ಕನಕ ಕುಂದಾಪುರದಲ್ಲೂ ನಂತರ ಭಟ್ಕಳದಲ್ಲೂ ಸಾಂಗಗೊಳಿಸಿದರು.

ಕೇಳಂಜೆ— ತಾ. 1-11-49ರಿಂದ ಶ್ರೀ ಕೆ. ರಾಮಕೃಷ್ಣ ಭಟ್ಟರಿಂದ ಶ್ರೀ ಸ ರ್ವೋದಯ ಪ್ರೈಮರಿ ಶಿಕ್ಷಣ ಕ್ಲಬ್ ಎಂಬ ವಯಸ್ಕರ ಶಾಲೆಯೊಂದು ತೆರೆಯಲ್ಪಟ್ಟಿದೆ.

ಕಾರ್ಕಳ:—ಶ್ರೀ ಕೃಷ್ಣ ಫಾರ್ಮಸಿ ಯಲ್ಲಿ ತಾ 17ನೇ ಸಂಜೆ 5-30ಕ್ಕೆ ಧನ್ವಂತರಿ ಜಯಂತಿಯು ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸೀಫ ರಾದ ಶ್ರೀ. ಕೆ. ಸೀತಾರಾಮರಾಯರ ಅಧ್ಯ ಕ್ಷತೆಯಲ್ಲಿ ಜರಗುವುದು.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
S. C. 480/49.

ವಾದಿ. ಕಾರೆಕಟ್ಟೆ ಭದ್ರಸೆಟ್ಟಿ.

ಪ್ರತಿವಾದಿ- ರಾಮಯ್ಯ ಪರಮೇಶ್ವರಯ್ಯ ಸ್ಮಗಗ ನೋಲಳ್ ಜಮಾದಾರ ಶಿವಮೊಗ್ಗ ಡಿಸ್ಟ್ರಿಕ್ಟ್ಸ್ ಹೊನ್ನಳ್ಳಿ ತಾಲ್ಲೂ ಹೊನ್ನಳ್ಳಿ ಯಲ್ಲಿರುವವ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸಿದ್ದು

ವಾದಿಯು ಪ್ರತಿವಾದಿಯಿಂದ ಬಹ ಮೂಲಗೇನು ಗೇಣಿ ವಿನೇಜು, ರೂಪಾಯಿ 10 - 5 - 2ನ್ನು ಬರ ಮಾಡಿಕೊಳ್ಳುವರೇ ದಾಖ್ಲು ಮಾಡಿದ ನೋಟಿಸ ವಾಪ್ತಿ ತಾರೀಕು 26-11-49ಕ್ಕೆ ಇದ್ದುದೆ. ಆ ಕುರಿತು ನಿಮ್ಮ ಉಪಾಹನಡೆಯಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟಿಗೆ ಮುಂ ಜೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjaya Shetty,
Advocate for plff.

ತಾ. 6-11-49, ಮುಕಾಂ ಕುಂದಾಪುರ

ಹೊಸ ಘಟನೆಯು ಸ್ವಲ್ಪ ಸಮಯದ ಲ್ಲೇ ಜ್ಞಾನಿಗೆ ಬರಲಿರುತ್ತಾ, ಪ್ರಾಯಭಂತ ರಾಗುವ ಪ್ರತಿಯೊಬ್ಬ ತರುಣ ತರುಣಿಯರಿಗೂ ಮತದಾನಮಾಡುವ ಅಧಿಕಾರವು ದೊರಕುವ ಈ ವೇಳೆ ರಾಷ್ಟ್ರದ ಉನ್ನತಿಯಲ್ಲಿ ಶ್ರದ್ಧೆಯುಳ್ಳ ಪ್ರತಿಯೊಬ್ಬ ನ್ಯಕ್ತಿಯೂ ಆ ರಿತೆಯೇ ಪತ್ರಿಕೆಗಳೂ ಈಗಲೇ, ರಾಷ್ಟ್ರೀಯ ಜ್ಞಾನವನ್ನು ಹೊಂದದೆ ಜನತಾ ಸರಕಾರದ ವಿಷಯ ತಪ್ಪು ಅಭಿಪ್ರಾಯಉಳ್ಳ ನಮ್ಮ ಜನಸಾಮಾನ್ಯರಲ್ಲಿ ಉತ್ತಮ ರಾಷ್ಟ್ರೀಯ ಜವಾಬ್ದಾರಿಕೆಯನ್ನು ಪುಟ್ಟಿಸುವುದು ಅತೀ ಆವಶ್ಯಕವಿರುತ್ತದೆ.

ಉತ್ತಮ ಸರಕಾರವು ನಾವು ಕಳುಹಿಸುವ ಪ್ರತಿನಿಧಿಗಳ ನಿಸುಣತೆ, ಶ್ರೇಯಸ್ಸಿನಿಷ್ಠೆಗಳನ್ನು ಜನುಸರಿಸುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಜನತೆಯ ಪ್ರತಿನಿಧಿಗಳು ಮೇಧಾವಿಗಳೂ, ವಾಕ್ಚಾತುರ್ಯವಂತರೂ, ಕಾರ್ಯಸಾಧಿಸಿ ಬರುವ ಸಮರ್ಥರೂ, ದೇಶವಿದೇಶೀಯ ನಿಣಾರಗಳಲ್ಲಿ ಪರಿಪಕ್ವ ಜ್ಞಾನವುಳ್ಳ

ಓದುಗರ ಓಲೆಗಳು

ಮುಂದಿನ ಪ್ರತಿನಿಧಿಗಳು ಎಂಥವರಿರಬೇಕು?

ಶ್ರೀ.ಬಿ.ಬಿ ಶೆಟ್ಟಿ, ಎಡ್ವಕೇಟ್ ಮಂಗಳೂರು.

ನರೂ, ಅನುಭವಶಾಲಿಗಳೂ, ಗುಣಶೀಲ ಸಂಪನ್ನರೂ ಆಗಿದ್ದು, ತಮ್ಮ ಘನತೆಯನ್ನು ಟ್ಟುಕೊಂಡು ಫ್ಲೈರ್ಯದಿಂದಲೂ, ನಿಸ್ವಾರ್ಥ ದಿಂದಲೂ ಕೆಲಸ ಮಾಡುವವರೂ ಇರಬೇಕು. ಈ ರೀತಿಯ ಸಿದ್ಧತೆಯುಳ್ಳ ಅ ನ್ಯಕ್ತಿಗಳನ್ನೇ ಪ್ರತಿಯೊಬ್ಬ ಮತದಾರನೂ ಸಮರ್ಥಾನಸಟ್ಟು ಅರಿಸುವವರೆಗೆ ಉತ್ತಮ ಸರಕಾರದ ಪ್ರಯತ್ನ ಜನವು ಜನತೆಗೆ ದೊರೆಯಲಾರದು. ಜನತೆಯನ್ನು ಈ ರೀತಿಯ ಸಿದ್ಧತೆಗೆ ಹಿಂದು ಸ್ಥಾನದ ಇಂದಿನ ಸ್ಥಿತಿಯಲ್ಲಿ ಒಮ್ಮೆಗೇ ತರಲು ಬಹು ಪ್ರಯಾಸ. ಅದರಲ್ಲೂ ನಮ್ಮ ಪತ್ರಿಕೆಗಳೂ ಮತ್ತು ಮುಂದಾಳುಗಳೂ ತಮಗೆ ದೊರೆಯುವ ಎಲ್ಲಾ ಸಂದರ್ಭಗಳನ್ನು ಹೊಸ ಚುನಾವಣೆಯ ಮೊದಲು ಜನರ ಅಭಿಪ್ರಾಯ ತಿದ್ದಲು ಉಪಯೋಗಿಸಿ ತಿದ್ದದಿದ್ದಲ್ಲಿ ಇಂದಿನ ಪರಿಸ್ಥಿತಿಯಲ್ಲಿ ಯಾವ ರೂಪದ ಸಿದ್ಧತೆಯೂ ಇಲ್ಲದ, ರೀತಿ ನೀತಿ ನಿಯಮಗಳಲ್ಲಿ ನಿಷ್ಠೆಯಿಲ್ಲದ ನ್ಯಕ್ತಿಯು ಪ್ರತಿನಿಧಿಯಾಗಿ ಬಂದು, ಅಂತಹವರಿಂದಲೇ ನಿರ್ಮಿಸಲ್ಪಟ್ಟ ಸರಕಾರವು ಬರುವ ಅಪಾಯವೂ ಬಂದೇ ಬರಬಹುದು: ಉತ್ತಮ ಸರಕಾರವನ್ನು ರಚಿಸುವ ಭಾರವು ನಮ್ಮದೇ ಇರುತ್ತಾ, ಚುನಾವಣೆಯ ಕಾಲ ನಮ್ಮ ಜವಾಬ್ದಾರಿಕೆಯನ್ನು ಮರೆತು ವರ್ತಿಸಿ, ನಂತರ ಸರಕಾರವು ನಮ್ಮ ಕಡೆಗೆ ಸಾಳಸ್ಪು ಗಮನಿಸಲಿಲ್ಲ, ಹಿತದೃಷ್ಟಿಯಿಂದ ಕೆಲಸಮಾಡಿಲ್ಲ ಎಂದು ಶಿಕ್ಷಿತ್ತಾಪ ಪಡುವುದರಿಂದೇನು ಪ್ರಯೋಜನ?

ಮುಂದಿನ ಪ್ರತಿನಿಧಿಯನ್ನು ಆರಿಸುವುದರಲ್ಲಿ ಜನರಲ್ಲಿ ಆನನು ತಮ್ಮವನು, ತಮ್ಮ ಪ್ರಾಂತದವನೆಂಬ ಸಂಕೋಚ ಭಾವನೆಗಳು ಎಂದೆಂದಿಗೂ ಪ್ರವೇಶವಾಗಕೂಡದು. ಇವು ಹಿಂದೊಸ್ಥಾನದ ಐಕ್ಯತೆಗೆ ಕೇವಲ ವಿರೋಧ ಭಾವನೆಗಳು. ವ್ಯಕ್ತಿಯ ಪ್ರವೀಣತೆ, ಶ್ರೇಷ್ಠತೆ ಮಾತ್ರ ಜನರ ಮುಂದಿದ್ದು ಆ ವ್ಯಕ್ತಿಯು ಆರಿಸಿಕಳುಹಿಸತಕ್ಕ ಸ್ಥಾನಕ್ಕೆ ಯುಕ್ತವಿದ್ದ ತೆಯುಳ್ಳವನೇ ಎಾಬ ಒಂದೇ ವಿಷಯವನ್ನು ಮಾತ್ರ ಜನರು ತಮ್ಮ ಮುಂದಿಟ್ಟುಕೊಳ್ಳತಕ್ಕದ್ದು.

ಅನೇಕ ಉಮೇದ್ವಾರಿಗಳಿದ್ದಲ್ಲಿ ಉಮೇದ್ವಾರಿಗಳ ಯೋಗ್ಯತಾಯೋಗ್ಯತೆಯನ್ನು ಅವರ ಶೀಲ, ಸ್ಥಿತಿಗತಿ, ಅವರ ಹಿಂದಿನ ಚರಿತ್ರೆ, ಕೆಲಸ ಇತ್ಯಾದಿಗಳಿಂದ ತೋಧಿಸಿ ಯಾನಾತನು ಉತ್ತಮನೆಂದು ನಿರ್ಧರಿಸಿ ತಮ್ಮ ಮತದಾನ ಮಾಡತಕ್ಕದ್ದಿರುತ್ತದೆ.

"ನಾನು ನಿಮ್ಮ ಮುಂದಾಳು, ನನ್ನನ್ನು ನಿಮ್ಮ ಪ್ರತಿನಿಧಿಯನ್ನಾಗಿ ಆರಿಸಿರಿ" ಎಂಬವನನ್ನು ಬಿಟ್ಟು- ಯೋಗ್ಯನಿದ್ದು ಪ್ರತಿನಿಧಿಯಾಗಿ ಬರಲು ಸರ್ವಸಿದ್ಧತೆಯುಳ್ಳವನಾವನಿರುತ್ತಾನೋ ಅಂಥವನನ್ನು ಜನರು ಒತ್ತಾಯ ಪಡಿಸಿ ನಿಲ್ಲಿಸಿ, ತಮ್ಮ ಪ್ರತಿನಿಧಿಯಾಗಿ ಆರಿಸಿ, ಅವನಲ್ಲಿ ಹೆಚ್ಚಿನ ಜವಾಬ್ದಾರಿ ಹೊರಿಸುವುದು ನಿಜವಾದ ಪ್ರಜಾ ಪ್ರಭುತ್ವದ ಲಕ್ಷಣ ವೆಂದು ನುರಿತ ವಾಸ್ತ್ರಿಕ ಬಾಹಗಾರ (ಬರ್ನಡ್ ಶಹದು) ಹೇಳುತ್ತಾರೆ. ಆ ಮಾತಿನಲ್ಲಿ ತುಂಬಾ ತಿರುಳಿರುತ್ತದೆ. ತಾನು ಮುಂದಾಳಾಗಬೇಕೆಂದು ಬರುವಾತನು ಕೇವಲ ತನ್ನ ಗೌರವಕ್ಕಾಗಿಯೂ, ತನ್ನ ಸ್ವಾರ್ಥಕ್ಕಾಗಿಯೂ, ಬರುವವನಿದ್ದು, ಪ್ರತಿನಿಧಿಯಾಗಿ ಆರಿಸಿ ಬರುತ್ತಲೇ ಜನತೆಯ ಕಡಗಿರುವ ಕರ್ತವ್ಯವನ್ನು ಕಾರ್ಯರೂಪದಲ್ಲಿ ಮರೆತುಬಿಡುವುದು ನಮಗೆ ಪ್ರಧಾನವಾಗಿ ತೋರಿಬರುವ ವಿಷಯ.

ಪ್ರಾತಿನಿಧ್ಯವನ್ನು ಆ ರೀತಿಯ ಮೇಲ್ಪಟ್ಟಕ್ಕೆ ತಂದಿಡಬೇಕಾದರೆ ಮುಂದಿನ ಚುನಾವಣೆಗಳಲ್ಲಿ ನ್ಯಕ್ತಿಗಳ ಸುತ್ತ ಸಂಪತ್ತಿನ ಶಕ್ತಿಪ್ರದರ್ಶನಕ್ಕೆ ಎಡೆಯಿರದಾರದು. ಇವುಗಳ ಹಂಗಿಗೆ ಬಲಿಬೀಳದೆ ಪ್ರತಿಯೊಬ್ಬ ನ್ಯಕ್ತಿಗೂ ರಾಷ್ಟ್ರೀಯ ಹಿತಕ್ಕೆ ಏನು ಆಗತ್ಯ ಎಂಬುದನ್ನು ಅರಿತು ಆದಕ್ಕೆ ನುಗುಣವಾಗಿ ನರ್ಧರಿಸುವ ಸ್ವಬುದ್ಧಿಯೂ ಧೈರ್ಯವೂ ಬರಬೇಕು.

ಪ್ರತಿನಿಧ್ಯಕ್ಕೆ ಉತ್ತಮ ನ್ಯಕ್ತಿಯನ್ನಾರಿಸಾವಾಗ ಆತನು ಚುನಾವಣಾ ರಂಗಕ್ಕೆ ಇಳಿದ ಉತ್ತಮ ಮತ್ತು ಹಿತಕಾರಿಯಾದ ರಾಷ್ಟ್ರೀಯ ಸಂಸ್ಥೆಗೆ ಸೇರಿದವನೋ ಎಂಬುದನ್ನು ಸಾಕಸ್ಪು ಗಮನಿಸಿ ನೋಡತಕ್ಕ ಭಾರವೂ ಜನತೆಯಲ್ಲಿರುತ್ತದೆ. ಅಂತಹ ರಾಷ್ಟ್ರೀಯ ಸಂಸ್ಥೆಗಳು ಕೂಡಾ ತಮ್ಮ ಉಮೇದ್ವಾರಿಗಳನ್ನು ಆರಿಸುವಾಗ ಆವರಲ್ಲಿ ಮೇಲೆ ಹೇಳಿದ ಸಿದ್ಧತೆಗಳು ಇವೆಯೋ ಎಂದು ನರ್ಧರಿಸಿ ಜನತೆಯ ಮುಂದೆ ತಮ್ಮ ಉಮೇದ್ವಾರಿಗಳನ್ನಿಡತಕ್ಕದ್ದು.

ಮುಂದಿನ ಸರಕಾರವು ಉತ್ತಮ ವಿವೇಕ ಪ್ರತಿನಿಧಿಗಳಿಂದ ಕಟ್ಟಲ್ಪಟ್ಟು ಜನತೆಯ ಇಂಗಿತಕೆಯ ರೂಪವನ್ನು ಒಮ್ಮೆಗೇನೇ ಮಾರ್ಪಡಿಸದೆ, ಜಾಗರೂಕತೆಯಿಂದ ಮುಂದೆರಿಸುವಂತಾದ್ದಾಗಿ ಜನರ ಶ್ರೇಷ್ಠ ನಿಧಿಯಾಗಿ ಪರಿಣಮಿಸಲಿ. ಈ ಕುರಿತು ನಮ್ಮ ಸಮಾಜದ ಮುಖಂಡರು, ನಮ್ಮ ಪತ್ರಿಕೆಗಳು, ಇನ್ನಿತರ ಶಕ್ತಿಗಳು ಎಡೆಬಿಡದೆ ಜನತೆಯ ಅಭಿವ್ಯಾಯವನ್ನು ತಿದ್ದಿ ಉತ್ತಮ ಸರಕಾರವನ್ನು ಕಟ್ಟುವ ಕೆಲಸದಲ್ಲಿ ನೆರವಾಗಲಿ.

ಈ ಪ್ರಕಟನೆಯನ್ನು ನೀವು ಅತ್ಯವಶ್ಯಕವಾಗಿ ಓದಲೇಬೇಕು

ಲಕ್ಷಾಂತರ ಜನಗಳಿಗೆ ಸಹಾಯವಾಗುವುದು

ಪ್ರಿಯವಾಚಕರೇ.....

ನಾನು ಒಬ್ಬ ಸಾಧಾರಣ ಮನುಷ್ಯ-ದುರದೃಷ್ಟವಶಾತ್ ನನ್ನ ಮಿತಿಮೀರಿದ ಕಾಮುಕ ಜೀವನವು ಆತಿ ಬೇಗನೆ ನರಗಳ ದೌರ್ಬಲ್ಯಕ್ಕೆಳೆಯಿತು. ದಿನೇದಿನೇ ನಿಶ್ಶಕ್ತನಾಗುತ್ತಿದ್ದುದಲ್ಲದೆ ಸೃದಯನಾಡಿಯೂ ಜಾಸ್ತಿಯಾಯಿತು. ಬಾಯಿಲೆಗಳ ಸೂಚನೆಗಳುಂಟಾದುದಲ್ಲದೆ, ಜೀವಿತದಿಂದಿರುವುದಕ್ಕೇ ಬೇಜಾರೆನಿಸಿತು. ನನ್ನ ದುಃಖಕರವಾದ ಪರಿಸ್ಥಿತಿಯ ಕಾರಣವನ್ನು ನನ್ನ ಮಿತ್ರರು ಪದೇಪದೇ ವಿಚಾರಮಾಡತೊಡಗಿದರು—ಆದರೆ ನಾನೆಂತು ಅವನ್ನು ತಿಳಿಸುವುದು? ಗುಟ್ಟಾಗಿ ಸಾಲಿರಾರು ಪ್ರಯತ್ನಿತ ಡಾಕ್ಟರುಗಳನ್ನೂ ಮತ್ತು ಹಕೀಮರನ್ನೂ ಅವರ ಜಾಹೀರಾತಿನ ನಂಬಿಕೆಯ ಮೇಲೆ ಸಂದರ್ಶಿಸಿದೆನು. ಅವರು ಕೊಟ್ಟ ಎಲ್ಲಾ ವಿಧವಾದ ಔಷಧಿಗಳನ್ನೂ ಸೇವಿಸಿ ಕೊನೆಗೆ ಏನೂ ಪ್ರಯೋಜನವಿಲ್ಲ ದಂತಾಯಿತು. ಇಂತು ಈ ಜೀವಿತ ನರಕದಲ್ಲಿರುವುದಕ್ಕಿಂತ ಸಾಯುವುದೇ ಮೇಲೆನಿಸಿತು. ಆಪ್ಪವಶಾತ್ ನನ್ನ ಕೆಲಸದ ನಿಮಿತ್ತವಾಗಿ ಪೆಷಾವರ್‌ಗೆ ಹೋಗಬೇಕಾಗಿ ಬಂದು ಅಲ್ಲಿ ಒಬ್ಬ ಮಹಾತ್ಮರನ್ನು [ಸನ್ಯಾಸಿ] ನಂದರ್ಶಿಸಿದೆನು. ಅವರು ನನ್ನ ಮುಖವನ್ನು ನೋಡಿದೊಡನೆಯೇ ನನ್ನ ಹೀನವಾದ ಚರ್ಯೆಗೆ ಕಾರಣವೇನೆಂದು ಕೇಳಿದರು. ಕಪ್ಪದಿಂದ ಮಿಡಿಯುತ್ತಿದ್ದ ಹೃದಯ ನನ್ನನ್ನು ಆ ಮಹಾತ್ಮರಿಗೆ ಅದನ್ನು ತಿಳಿಸುವಂತೆ ಬಲಾತ್ಕರಿಸಿತು ಅಂತೆಯೇ ನಾನು ಎಲ್ಲವನ್ನೂ ಅವರಿಗೆ ತಿಳಿಸಿದುದಲ್ಲದೆ ನಾನು ಅತ್ಮಹತ್ಯೆ ಮಾಡಿಕೊಳ್ಳಬೇಕೆಂದಿರುವುದನ್ನೂ ತಿಳಿಸಿದೆನು. ಈ ನನ್ನ ಹೃದಯ ವಿದ್ರಾವಕ ಕಥೆಯನ್ನು ಕೇಳಿದ ಆ ಮಹರ್ಷಿಯು ಕನಿಕರಗೊಂಡು, ಎಂದು ಔಷಧಿಗಳನ್ನು ದಯಪಾಲಿಸಿ ದರು: ಒಂದು ಸೇವಿಸುವುದಕ್ಕೆ ಮುಂತ್ತೊಂದನ್ನು ಲೇಪಿಸುವುದಕ್ಕೆ. ಆವರು ಹೇಳಿದಂತೆ ಗಿಡವೂಲಿಕೆಗಳನ್ನುಯಿಂದುಕ ಕಂದು ಅವರೆದೆರಿನ ಲ್ಲಿಯೇ ಆ ಎರಡು ಔಷಧಿಗಳನ್ನೂ ತಯಾರಿಸಿದೆನು. ಅನಂತರ ಅದನ್ನು ಸೇವಿಸುವುದಕ್ಕೂ, ಪ್ರಾರಂಭಿಸಿದೆನು. ಪ್ರಿಯ ವಾಚಕರೆ! ನಾನು ಸತ್ಯವಾಗಿ ಹೇಳುವುದಾದರೆ ನಾನು ಒಂದು ವಾರದೊಳಗೇ ಪುನರುಜ್ಜೀವನ ಪಡೆಯಲು ಆರಂಭವಾಯಿತು. ಅಲ್ಲದೆ ಈಗ ನನ್ನ ಪುರುಷತ್ವ ನನಗೆ ಹಿಮ್ಮೆಯನ್ನುಂಟುಮಾಡಿದೆ. ನನಗೆ ಆ ಶಕ್ತಿಯನ್ನು ಕೆಲವೇ ದಿನಗಳಲ್ಲಿ ಪಡೆಯಲಾಗದಿದ್ದರೂ ಆವರ ಆಪ್ಪಣೆಯಂತೆ ೨೧ ದಿವಸಗಳಲ್ಲಿ ಸುಧಾರಿಸಿದೆನು. ಮತ್ತು ನಾನು ಈಗ ಪೂರಾ ಮಾನವನಾಗಿದ್ದೇನೆ. ನಾನು ಪ್ರತಿ ದಿನವೂ ಳ ಸೇರು ಹಾಲನ್ನು ಸುಲಭವಾಗಿ ಜೀರ್ಣಿಸಿಕೊಳ್ಳಬಲ್ಲವನಾದೆನು. ಕಣ್ಣುಗಳ ಜೊಳಪು ಬಂತು. ಒಂದು ತರಹ ಕಾಂತಿಯು ನನ್ನ ಕೆನ್ನೆಗಳನ್ನಾವರಿಸಿತು. ಅಲ್ಲದೆ ಶರೀರವು ಪೂರ್ಣ ಶಕ್ತಿಯನ್ನು ಪಡೆಯಿತು. ಪುನಃ ನನ್ನ ಸ್ಥಳಕ್ಕೆ ಹಿಂದಿರುಗಿದ ಮೇಲೆ ಮಿಕ್ಕ ಔಷಧಿಯನ್ನು ಕೆಲವು ಹೀನ ಸ್ಥಿತಿಯಲ್ಲಿದ್ದ ಪುರುಷತ್ವವಿಲ್ಲದವರ ಮೇಲೆ ಪ್ರಯೋಗಿಸಿ ಅದರಿಂದ ಮಹತ್ವ ಗುಣವನ್ನು ಕಂಡುದಲ್ಲದೆ ಅದಕ್ಕಿಂತ ಬೇರೆ ಸರಿಸಮಾನವಾದ ಔಷಧಿಯೇ ಇಲ್ಲವೆಂದೆನಿಸಿತು—ನನ್ನ ಸ್ನೇಹಿತರುಗಳ ಸಲಹೆ ಮೇರೆಗೂ ಮತ್ತು ನನ್ನಂತೆಯೇ ನಾನಾ ಕಾರಣಗಳಿಂದ ನರಳುತ್ತಿರುವ ಮಾನವರಿಗೂ ಸಹಾಯವಾಗಲೆಂದು ಇದನ್ನು ಪ್ರಚುರಪಡಿಸುತ್ತಿದ್ದೇನೆ. ಈಗಾಗಲೇ ಹಲವಾರು ಔಷಧಿಗಳನ್ನುಪಯೋಗಿಸಿ ನಿರಾಶರಾಗಿರುವವರು ಇದನ್ನು ಅತಿ ಸುಲಭದಲ್ಲಿ ಉಪಯೋಗಿಸಿ ತಮ್ಮ ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳಬಹುದು. ಈ ಬೆಲೆಯನ್ನು ಹಾಕಿರುವುದು ಕೇವಲ ಆದರ ಜಾಹೀರಾತಿನ ಮತ್ತು ಔಷಧಿಯ ಬೆಲೆಯನ್ನು ಸಹಾ ದೊರಕಿಸಿಕೊಡುವುದಿಲ್ಲ.

ಪರದೇಶಗಳಿಂದ ಔಷಧಿಯ ಬೆಲೆಯನ್ನು ಮುಂಗಡವಾಗಿ ಕಳುಹಿಸಬೇಕು.

ಶಕ್ತಿದಾಯಕ ಮಾತ್ರೆಗಳು:— ೨೧ ದಿವಸಕ್ಕೆ ರೂ. ೨-೦-೦

ಹೊರಗೆ ಲೇಪಿಸುವ ತೈಲಕ್ಕೆ:— ೨೧ ದಿವಸಕ್ಕೆ ರೂ. ೨-೪-೦

ಈ ಔಷಧಿಗಳು ಹುಟ್ಟಿನಿಂದ ಉಂಟಾಗಿರುವ ದೌರ್ಬಲ್ಯವನ್ನು ಬಿಟ್ಟು ಉಳಿದ ಎಲ್ಲಾ ವಿಧವಾದ ನರಗಳ ದೌರ್ಬಲ್ಯವನ್ನೂ ಗುಣಪಡಿಸುವವು.

ಈ ಔಷಧಿಯು "ಕುಷ್ಠ"ವನ್ನು ಹೊಂದಿರುವುದಿಲ್ಲವಾದ್ದರಿಂದ ಎಲ್ಲಾ ಕಾಲದಲ್ಲಿಯೂ ಯುವಕರೂ ವೃದ್ಧರೂ ಸೇವಿಸಬಹುದು. [ಕೈಲವು ಚರ್ಮದ ಸೊಕ್ಕನ್ನು ಪುಟ್ಟಿಸುವುದಿಲ್ಲ.]

ಒಂದೇ ಸಮನಾಗಿ ಆರ್ಡರುಗಳೊಂದಿಗೆ ಬರುತ್ತಿರುವ ಯೋಗ್ಯತಾ ಪತ್ರಗಳನ್ನು ಗಮನಿಸಿ:—

[೧] ಡಾ. ಕೆ. ಜೆ. ಪುಟ್ಟಶ್ವಾಲ್, ಕೊಚಿನವರು ಬರೆಯುತ್ತಾರೆ— ನಾನು ಅನೇಕ ರೋಗಿಗಳ ಮೇಲೆ, ಯುವಕರಿಗೆ, ವೃದ್ಧರಿಗೂ ಪ್ರಯೋಗಿಸಿ ಅದರ ಶಕ್ತಿದಾಯಕ ಕೆಲಸವನ್ನು ಮೆಚ್ಚಿದ್ದೇನೆ.

[೨] ಡಾ. ಜೀವಿಯರ್ ಕುರುಪ ಸೇರಿ, ಕುಂಬಲಾಂಗಿಯವರು ಬರೆಯುತ್ತಾರೆ:— ಸಾಧಾರಣ ನಿಶ್ಶಕ್ತಿ, ನಪುಂಸಕತ್ವ ಮತ್ತು ಇತರ ಅಕಾಲ ರೋಗಗಳಿಗೆ ನೀವು ಜಾಹೀರಾತು ಮಾಡಿರುವ ಔಷಧಿಗಳು ನಾನು ಪ್ರಯೋಗಿಸಿದ ರೋಗಿಗಳ ಮೇಲೆ ಅತ್ಯಾಶ್ಚರ್ಯಕರವಾದ ಸರಿಣಾಮವನ್ನುಂಟುಮಾಡಿವೆ.

[೩] ಮ್ಯಾನೇಜರ್,"ಮೈ ಮ್ಯಾಗಜೈನ್" ಮದ್ರಾಸು ಬರೆಯುತ್ತಾರೆ:—ನಾನು ದಾರ್-ಉಲ್-ಶಫಾ-ಗೋಲಿಯಾನ, ಬಟಾಲರವರ ಕಾರ್ಯಾಲಯಕ್ಕೆ ಭೇಟಿಯಿತ್ತಿದ್ದೆನು, ಮತ್ತು ನೊನವನಿಗಾಗಿ ಅಲ್ಲಿ ನಡೆಯುತ್ತಿರುವ ಸಂಶೋಧನೆಗಳು ಬಹಳ ಉಪಯೋಗಕಾರಿಯಾಗಿವೆ. ಲೆಕ್ಕವಿಲ್ಲದಷ್ಟು ಸಾಲಿರಾರು ಯೋಗ್ಯತಾಪತ್ರಗಳನ್ನೂ ಸಹ ನಾನು ಗಮನಿಸಿದೆನು.

ಟಾಪ್ಪಿ:- ಈ ಔಷಧಿಗಳು ಯಾವ ತೊಂದರೆಯನ್ನು ಮಾಡುವ ಪದಾರ್ಥಗಳನ್ನೂ ಹೊಂದಿಲ್ಲ. ಮತ್ತು ಇದನ್ನು ಎಲ್ಲಾ ಋತುಗಳಲ್ಲಿಯೂ ಸೇವಿಸಬಹುದು. ಪ್ರಯೋಜನವಾಗದಿದ್ದಲ್ಲಿ ಹಣ ಪಾಸಸ್ಸು ಮಾಡಲಾಗುವದು.

ನಿಮ್ಮ ಆರ್ಡರನ್ನು ಇನರಿಗೆ ಕಳುಹಿಸಿರಿ.—

The Manager,

DAR-UL-SHAFA GOLIAN (Regd.) (N.V.U.) BATALA (Punjab)

ದಿ ಮ್ಯಾನೇಜರ್,

ದಾರ್-ಉಲ್-ಷಫಾ-ಗೋಲಿಯಾನ (ರಿಜಿಸ್ಟರ್ಡ್) (N.V.U.) ಬಟಾಲ (ಪಂಜಾಬ್)

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಮೀನು ವ್ಯವಸಾಯದ ಅಭಿವೃದ್ಧಿ ಹೇಗೆ ಸಾಧ್ಯ?

ಸಂಗ್ರಾಹಕ:—ಶ್ರೀ. ಕೆ ಎನ್. ನುಲ್ಕಿ,

ಹಿಂದೂದೇಶದಲ್ಲಿ ಆರ್ಧದಷ್ಟು ಜನ ಮೀನು ಸೇವಿಸುತ್ತಾರೆ. ಆದರೆ ಮೀನಿನ ಉತ್ಪಾದನೆ ಬಹಳ ಕಡಿಮೆಯಾಗಿರುವುದ ರಿಂದ ಒಂದು ವಾರಕ್ಕೆ ತಲಾ ಒಂದರ 2 ಔನ್ಸುಗಳಷ್ಟು ಮಾತ್ರವೇ ಮೀನು ಸಿಗುತ್ತಿದೆ. ಆದೂ ಕೂಡ ಅವುಗಳ ಕ್ರಯ ನೋಡಿದರೆ ಜನಸಾಮಾನ್ಯರು ಕೊಂಡುಕೊಳ್ಳುವಂತಿಲ್ಲ. ಆತೀ ಅವಶ್ಯವಿರುವ ಈ ಆಹಾರ ವಸ್ತು ಎಲ್ಲರಿಗೂ ಪೂರೈಕೆಯಾಗಬೇಕಾದರೆ ಈಗ 6,40,000 ಟನ್ನುಗಳಷ್ಟಿರುವ ಮೀನಿನ ಉತ್ಪತ್ತಿ 10-11 ಪಾಲಿಗಳಷ್ಟಾದರೂ ಹೆಚ್ಚಬೇಕಾಗುತ್ತದೆ. ಪ್ರಾಚೀನರ್ಮ, ಜಲಧರ್ಮ ಮತ್ತು ಯಂತ್ರತಂತ್ರ ರಾಷ್ಟ್ರಗಳಲ್ಲಿ ಸಂಶೋಧನೆಗಳನ್ನು ನಡೆಸಿಕೊಂಡು ಮೀನುಗಾರಿಕೆಗೆ ಸೌಲಭ್ಯಕರವಾದ ಹಡಗು ಗಳನ್ನೂ ಇತರ ಉಪಕರಣಗಳನ್ನೂ ನಿರ್ಮಿಸಿ ನಮ್ಮ ದೇಶದ ಮೂರು ಕಡೆಗಳಲ್ಲೂ ಹಬ್ಬಿರುವ ವಿಶಾಲವಾದ ಸಮುದ್ರಗಳಲ್ಲಿ ಎಲ್ಲ ಕಡೆಗಳಲ್ಲಿಯೂ ಈ ವ್ಯವಸಾಯ ಆರಂಭಿಸಿದರೆ ನಮ್ಮ ಗುರಿಯನ್ನು ಮುಟ್ಟುವುದು ನಮಗೇನೂ ಕಷ್ಟವಾಗಲಾರದು. ಮೀನು ಹಿಡಿಯುವುದರಲ್ಲಿ ಸೌಲಭ್ಯತೆ, ಆದಕ್ಕೆ ಬೇಕಾದ ಯಂತ್ರೋಪಕರಣಗಳು, ಮೀನನ್ನು ದಾಸ್ತಾನು ಇಡುವ ಕ್ರಮ, ಮುಂತಾದುವುಗಳನ್ನು ಒದಗಿಸಿಕೊಟ್ಟು ಬೆಸ್ತರ ಸಾಮಾಜಿಕ ಹಾಗೂ ಸಾಂಪತ್ತಿಕ ಸ್ಥಿತಿಯ ಉನ್ನತಿಗೆ ಪ್ರಯತ್ನ ಪಡಬೇಕು. ಇಷ್ಟೆಲ್ಲ ಕೆಲಸಗಳು ನಡೆಯದಿದ್ದರೆ ಈ ವ್ಯವಸಾಯ ಬಹು ಬೇಗನೇ ಅಭಿವೃದ್ಧಿ ಹೊಂದುವುದೆಂದು ನಿರೀಕ್ಷಿಸಲಾರೆವು.

ಈ ವ್ಯವಸಾಯವನ್ನು ಎಷ್ಟು ಅಭಿವೃದ್ಧಿಗೊಳಿಸುವುದಾದರೂ ಬೇಕಷ್ಟು ಸಮುದ್ರ ಸಂಪತ್ತು ನಷ್ಟವಿಲ್ಲದೆ. ಸಮುದ್ರದಲ್ಲಿ ನಾವಿಕ ಪರಿಶೋಧನೆಗಳನ್ನು ನಡೆಸಿಕೊಂಡು ಯಾವ ಯಾವ ಕಡೆ ಎಂಥಯಾನಗಳ ಅವಶ್ಯಕತೆಯಿದೆ ಎಂದು ತಿಳಿದುಕೊಳ್ಳಬೇಕು. ಮತ್ತು ಅಂಥ ಸಲಕರಣೆಗಳನ್ನು ಒದಗಿಸಿಕೊಡಬೇಕು. ಮೀನು ಬಹು ಬೇಗನೇ ಹಾಳಾಗುವ ವಸ್ತು. ಆದುದರಿಂದ ಹಿಡಿದ ಮೀನು ಹಾಳಾಗದಂತೆ ಇಡಬಹುದಾದ ಕೆಲವು ರಾಸ್ತ್ರೀಯ ರೀತಿಗಳನ್ನು ಅರಿತುಕೊಳ್ಳಬೇಕು. ಪ್ರಚಲಿತ ಮೀನುಗಾರಿಕೆಯ ರೀತಿಗಳು ತುಂಬ ದೋಷಕರವಾಗಿವೆ. ಆದರಿಂದಾಗಿ ಸಿಕ್ಕುತ್ತಿರುವ ಬಹು ಸ್ವಲ್ಪ ಮೀನಿನ ಪೈಕಿಯೂ ಕೂಡ ಎಷ್ಟೋ ಪಾಲು ಹಾಳಾಗಿ ಹೋಗುತ್ತಿದೆ. ಪರಿಶ್ರಮಪೂರ್ಣವಾದ ಪ್ರಾಯೋಗಿಕ ಸಂಶೋಧನೆಗಳನ್ನು ನಡೆಸದೆ ಈ ಸಮಸ್ಯೆಗಳೆಲ್ಲ ಪರಿಹಾರೋಪಾಯಗಳನ್ನು ಕಂಡುಹಿಡಿಯಲಾಗುವುದಿಲ್ಲ. ಈ ಎಲ್ಲ ತಿಳುವಳಿಕೆಗಳ ಅಭಾವದಿಂದಲೇ ಈ ನವ್ಯ ವ್ಯವಸಾಯ ಈ ವರೆಗೂ ಅಭಿವೃದ್ಧಿ ಹೊಂದುವುದು ಶಕ್ಯವಾಗಿಲ್ಲ.

ಈಚೆಯ 40 ವರ್ಷಗಳಲ್ಲಿ ಹಲವು ಸಂಸ್ಥಾನಗಳಲ್ಲೂ ಪ್ರಾಂತಗಳಲ್ಲೂ ಮೀನು ವ್ಯವಸಾಯದ ಇಲಾಖೆಗಳು ತೆರೆಯಲ್ಪಟ್ಟಿವೆ. ಈ ವ್ಯವಸಾಯದಲ್ಲಿ ನುರಿತ ಅಧಿಕಾರಿಗಳ ಅಭಾವದಿಂದಲೂ ಪ್ರಾಯೋಗಿಕ ಸಂಶೋಧನೆಗಳನ್ನು ನಡೆಸಲು ಅನುಕೂಲ್ಯಗಳು ಇಲ್ಲದಿದ್ದುದರಿಂದಲೂ ಈ ಸಂಸ್ಥೆಗಳು ಏನೂ ಅಭಿವೃದ್ಧಿಯನ್ನು ಸಾಧಿಸಲಾರದವಾಗಿವೆ. ಮೀನನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಸಾರಿಗೆಯ ಅನುಕೂಲತೆಗಳಿಲ್ಲದೆಯೂ ಹಸಿರೂಪದಲ್ಲೇ ಮೀನನ್ನು ಇತರ ಕಡೆಗಳಿಗೆ ಒದಗಿಸಿಕೊಡಲು ರಾಸ್ತ್ರೀಯ ರೀತಿಯಲ್ಲಿ ದಾಸ್ತಾನು ಇಡುವ ಕ್ರಮಗಳ ಪರಿಚಯವಿಲ್ಲದೆಯೂ ಈ ವ್ಯವಸಾಯದ ಅಭಿವೃದ್ಧಿ ಆಗಿಲ್ಲೂ ಮಾತ್ರವಲ್ಲ, ಸಿಕ್ಕುತ್ತಿರುವ ಮೀನಾದರೂ ಸರಿಯಾಗಿ ಏನಿಯೋಗವಾಗುತ್ತಿಲ್ಲ. 1944ರಲ್ಲಿ ಕೇಂದ್ರ ಸರಕಾರದ ಸಹಾಯದಿಂದ ಮೀನಿನ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕಾಗಿ ಹಲವು ಪ್ರಾಂತಗಳಲ್ಲೂ ಸಂಸ್ಥಾನಗಳಲ್ಲೂ ಕೆಲವು ಸಂಸ್ಥೆಗಳು ಜನ್ಮ ತೆತ್ತಿವೆ. ಈ ಸಂಸ್ಥೆಗಳ ಗತಿಯೂ ಮೇಲಿನ ಸಂಸ್ಥೆಗಳ ಗತಿಯೇ ಆಯಿತು. ಯೂರೋಪು ಮತ್ತು ಅಮೇರಿಕಾ ದೇಶಗಳಲ್ಲಿ ಸರಕಾರಗಳು ಶಾಸ್ತ್ರಯೋಗಿಕ ಸಂಶೋಧನೆಗಳಿಗೆ ಬೇಕಾದ ಯಂತ್ರೋಪಕರಣಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಿದುದರಿಂದಲೇ ಆಲ್ಲಿನ ಮೀನು ವ್ಯವಸಾಯ ಅಷ್ಟು ಅಭಿವೃದ್ಧಿ ಹೊಂದಲು ಕಾರಣವಾಯ್ತು.

ಸಮುದ್ರದಲ್ಲಿ ಮೀನುಗಳು ಯಾವಾಗಲೂ ಒಂದೇ ಕಡೆ ಇರುವುದಿಲ್ಲವಾದುದರಿಂದ ಯಾ ಋತುಕಾಲಗಳಿಗನುಸರಿಸಿ ಅವುಗಳು ಒಮ್ಮೊಮ್ಮೆ ಒಂದೊಂದು ಕಡೆಗೆ ಸಂಚರಿಸುವುದರಿಂದಲೂ ಶ್ರಯೋಗಗಳನ್ನು ನಡಿಸುವುದು ಪ್ರಯಾಸವಾಗಿದೆ. ಉಷ್ಣತೆಯ ಮಾನ, ಪ್ರವಾಹಗಳ ಗತಿ, ಯಾವ ಯಾವ ಕಡೆಗಳಿಂದ ಎಷ್ಟೆಷ್ಟು ನೀರು ಎಷ್ಟು ಹತ್ತಿರದಿಂದ ಅಥವಾ ದೂರದಿಂದ ಹರಿದುಕೊಂಡು ಬರುತ್ತಿದೆ ಎಂಬುವುಗಳನ್ನು ತಿಳಿಯುವುದರಿಂದ ಯಾವ ಜಾತಿಯ ಮೀನು ಯಾವ ಕಾಲದಲ್ಲಿ ಸಿಕ್ಕುತ್ತದೆ ಎಂಬುದನ್ನು ತಿಳಿಯಬಹುದು. ಹಲವು ಸಲ ಮೀನುಗಳು ಮೊದಮೊದಲು ಗಾಳಿಯ ದಿಕ್ಕನ್ನನುಸರಿಸಿಕೊಂಡೋ ಆಲೆಗಳ ಗತಿಯನ್ನು ಹಿಡಿದುಕೊಂಡೋ ತಮ್ಮ ಆಹಾರಕ್ಕಾಗಿ ಸಂಚರಿಸುತ್ತಿರುತ್ತವೆ. ಕಡಲಿನಲ್ಲಿರುವ ಸೂಕ್ಷ್ಮವಾದ ಸಸ್ಯಗಳು ಮತ್ತು ಕೆಲವು ಪ್ರಾಣಿಗಳ ಇರವನ್ನು ಕೂಡಾ ನಾವು ಚೆನ್ನಾಗಿ ಪರೀಕ್ಷಿಸಿಕೊಂಡಿರಬೇಕಾಗುತ್ತದೆ. ಏಕೆಂದರೆ ಆ ಸಸ್ಯಗಳು ಆಥವಾ ಪ್ರಾಣಿಗಳು ಮೀನುಗಳನ್ನು ಪೋಷಿಸುತ್ತವೆ ಇಲ್ಲವೆ ಮೀನುಗಳ ಆಹಾರವಾದ ಕೆಲವು ಜೀವಿಗಳಿಗೆ ಆಹಾರವಾಗಿರುತ್ತವೆ. ಈ ಸಸ್ಯಗಳಾಗಲಿ ಪ್ರಾಣಿಗಳಾಗಲಿ ಎಲ್ಲೆಡೆಯೂ ಇರುವುದಿಲ್ಲ. ಮಾತ್ರವಲ್ಲ ಇವುಗಳ ಸ್ಥಾನಗಳನ್ನನುಸರಿಸಿಯೇ ಮೀನುಗಳೂ ಕೂಡ ವಾಸಿಸುತ್ತವೆ. ಮೀನಿನ ಈ ಆಹಾರ ಎಲ್ಲೆಲ್ಲಿ ಎಷ್ಟೆಷ್ಟಿದೆ, ನೀರು ಯಾವ ಯಾವ ಕಡೆಗಳಲ್ಲಿ ಎಷ್ಟೆಷ್ಟು ಆಳವಾಗಿದೆ ಎಂಬುದನ್ನು ಅರಿಯುವುದರಿಂದ ಮೀನು ಎಲ್ಲಿ ಅಧಿಕ ಸಂಖ್ಯೆಯಲ್ಲಿ ದೊರೆಯತ್ತದೆಯೆಂಬುದನ್ನು ತಿಳಿಯಬಹುದು. ಯಾವ ಮೀನು ಯಾವ ಆಹಾರವನ್ನು ತಿಂದು ಬದುಕುತ್ತದೆ; ಅಂಥ ಆಹಾರ ಯಾವ ಯಾವ ಕಡೆಗಳಲ್ಲಿ ಎಷ್ಟೆಷ್ಟಿದೆ ಮತ್ತು ಯಾವ ಕಾಲಗಳಲ್ಲಿ ಹೆಚ್ಚುಗಿರುತ್ತದೆ. ಆದರಿಂದಾಗಿ ನಾವು ಯಾವ ಮೀನುಗಳನ್ನು ಯಾವ ಕಾಲದಲ್ಲಿ ಅಧಿಕ ಸಂಖ್ಯೆಯಲ್ಲಿ ಪಡೆಯಬಹುದು-ಮುಂತಾದುವುಗಳನ್ನು ತಿಳಿದುಕೊಳ್ಳಲು ಸಮುದ್ರದಲ್ಲಿಯೂ ನೆಲದಲ್ಲಿಯೂ ಪ್ರಾಯೋಗಿಕ ಸಂಶೋಧನೆಗಳು ನಡೆಯಬೇಕು. ಪ್ರತಿಯೊಂದು ಕಡೆಗಳಲ್ಲಿಯೂ ದೊರೆತ ಮೀನುಗಳನ್ನು ಪರೀಕ್ಷಿಸಿ ಅವುಗಳ ಜಾತಿ, ಸಂಖ್ಯೆ, ತೂಕ, ಲೈಂಗಿಕ ಪ್ರಬುದ್ಧಾವಸ್ಥೆ, ಪ್ರಾಯ, ಪರಿಮಾಣಗಳನ್ನು ಕೂಡಾ ತಿಳಿಯುವುದು ಅಗತ್ಯವಿದೆ. ಇವುಗಳ ಸಂಪೂರ್ಣ ಜ್ಞಾನ ಪಡೆಯಬೇಕಾದರೆ ಈ ವಿಷಯದಲ್ಲಿ ತರಬೇತಿಯುಳ್ಳವರು ಸಣ್ಣ ಸಣ್ಣ ದೋಣಿಗಳಲ್ಲೋ ದೊಡ್ಡ ಹಡಗುಗಳಲ್ಲೋ ಹಲವು ಕಡೆ ಸಂಚಾರ ಬೆಳೆಸಬೇಕಾಗುತ್ತದೆ.

ಒಳನಾಡಿನ ಜಲಾಶ್ರಯಗಳನ್ನು ನಾವು ಸಂಪೂರ್ಣ ನಿರ್ಲಕ್ಷಿಸಿಯೇ ಇದ್ದುದೆಂದರೆ ತಪ್ಪಾಗಲಾರದು. ಆವೇರಿಕೆಯ ಸಂಯುಕ್ತ ರಾಷ್ಟ್ರಗಳಲ್ಲಿ ಇಂಥ 30 ಸಾವಿರ ನೀರಾಶ್ರಯಗಳಿವೆ. ಇವುಗಳ ವಿಸ್ತಾರ 360 ಸಾವಿರ ಎಕ್ರೆಗಳು ಆಷ್ಟೇ ಅಲ್ಲದೆ ಇತ್ತೀಚೆಗೆ 23 ಸಾವಿರದಷ್ಟು ಹೊಸ ಹಳ್ಳಗಳನ್ನು ನಿರ್ಮಿಸಿ ಆಹಾರದ ಮೀನುಗಳನ್ನೂ ಕೂಡ ಹಾಕಿದ್ದಾರೆ. ಅಲ್ಲಿನ ಹಳ್ಳಗಳ ಉತ್ಪತ್ತಿ ಎಕ್ರೆಗೆ 150 ರಾತ್ಲ್ ಇದೆ. ಕೆಲವು ಕೃತಕ ಸಾರ ಭೂಮಿಕೆಗಳನ್ನು ನಿರ್ಮಿಸಿ ಈ ಉತ್ಪತ್ತಿಯನ್ನವರು ಸುಮಾರು 400 ರಾತ್ಲ್ ಗಳಿಗೆ ಏರಿಸಿದ್ದಾರೆ. ಕೆಲವು ಹಳ್ಳಗಳಲ್ಲಿ 1000 ರಾತ್ಲ್ ಗಳವರೆಗೂ ಉತ್ಪತ್ತಿಯನ್ನು ಪಡೆದಿದ್ದಾರೆ. ಹಿಂದೂದೇಶದಲ್ಲಿ ಬಹು ಹಿಂದಿನಿಂದಲೂ ಹಲವು ಪ್ರಾಂತಗಳಲ್ಲಿ ಮುಖ್ಯವಾಗಿ ಬಂಗಾಲ ಮತ್ತು ಬಿಹಾರುಗಳಲ್ಲಿ ಈ ವ್ಯವಸಾಯ ಸಾಗುತ್ತಿರುವುದಾದರೂ ಆವುಗಳ ಉತ್ಪತ್ತಿ ಬಹಳ ಅಲ್ಪವಾಗಿದೆ. ಈ ಉತ್ಪತ್ತಿಯನ್ನು ಹೆಚ್ಚಿಸಲಿಕ್ಕೆ ದೊಡ್ಡ ಪ್ರಮಾಣದಲ್ಲಿ ಸಂಶೋಧನೆಗಳೂ ಪ್ರಾಯೋಗಿಕ ಪರಿಶೋಧನೆಗಳೂ ನಡೆಯಬೇಕು. ಒಳನಾಡಿನ ಇನ್ನಿತರ ಹೊಳೆ, ಕೆರೆ, ಕಾಲುವೆಗಳ ಮೀನು ವ್ಯವಸಾಯವೂ ಕೂಡ ಇದೇ ರೀತಿಯಲ್ಲಿ ಅಭಿವೃದ್ಧಿ ಹೊಂದಬೇಕು.

ಯಾನಗಳನ್ನು ತಯಾರಿಸಲು ಯಾಂತ್ರಿಕ ಸಂಶೋಧನೆ ನಡೆಯಬೇಕು. ಮೀನನ್ನು ಹಿಡಿಯುವುದರಲ್ಲಿ ಹೊಸಕ್ರಮಗಳು ಬಳಕೆಯಲ್ಲಿ ಬರಬೇಕು. ಮೀನನ್ನು ಹಸಿರೂಪದಲ್ಲೇ ಸಾಗಿಸಲು ಸಾರಿಗೆಯ ಅನುಕೂಲತೆ ಗಳೆರಬೇಕು. ಎಷ್ಟು ಕಾಲಕ್ಕೂ ಹಾಳಾಗದಂತೆ ಮೀನನ್ನು ದಾಸ್ತಾನು ಇಡುವ ರಾಸ್ತ್ರೀಯ ವಿಧಾನಗಳು ಪ್ರಚಾರಕ್ಕೆ ಬರಬೇಕು. ರುಚಿಕರವಾದ ಮೀನಿನ ಊಟಗಳನ್ನು ತಯಾರಿಸುವುದು ಪ್ರತಿಯೊಬ್ಬರಿಗೂ ತಿಳಿಯಬೇಕು. ಮೀನಿನಿಂದ, ಮೀನು ಎಣ್ಣೆ, ಮೀನು ಗೊಬ್ಬರ, ಮೀನಿನ ಅಂಟು ಇತ್ಯಾದಿ ಉಪ ಉತ್ಪತ್ತಿಗಳನ್ನು ಪಡೆಯಬೇಕು. ಯಾವ ಒಂದು ಪ್ರಾಂತವಾಗಲಿ ಸಂಸ್ಥಾನವಾಗಲಿ ಒಂಟಿಯಾಗಿಯೇ ಈ ಕೆಲಸಗಳನ್ನು ಸಾಗಿಸಲಾರದು. ಇದಕ್ಕೊಂದು ಕೇಂದ್ರ ಸಂಸ್ಥೆ ಸ್ಥಾಪಿಸುವ ಆಗತ್ಯವಿದೆ. ಪ್ರತಿಯೊಂದು ಪ್ರಾಂತಪಡ್ಡಿನ ಸಂಸ್ಥೆಯು ಈ ಕೇಂದ್ರ ಸಂಸ್ಥೆಗೆ ಒಳಪಟ್ಟಿರಬೇಕು. ಸ್ಥಾನಿಕ ಕೆಲಸಗಳನ್ನು ಪ್ರಾಂತಿಕ ಸಂಸ್ಥೆಗಳು ನಡೆಸುತ್ತಿರಬೇಕು. ಎಲ್ಲ ಪ್ರಾಂತಗಳೂ ನಡೆಸಬೇಕಾಗಿರುವ ಮೂಲಭೂತ ಸಂಶೋಧನಾ ಕಾರ್ಯವನ್ನು ಈ ಕೇಂದ್ರ ಸಂಸ್ಥೆ ವಹಿಸಬೇಕು. ಹೀಗೆ ಮಾಡುವುದರಿಂದ ಮರುಕ ಯೋಗವಾಗುವ ಹೇರಳ ಹಣದ ಉಳಿತಾಯವಾಗುತ್ತದೆ. ಮಾತ್ರವಲ್ಲ; ಇಂತಹ ಪರಸ್ಪರ ಸಹಕಾರದಿಂದ ಅಲ್ಪವೆಚ್ಚದಲ್ಲೇ ಮಹಾ ಕಾರ್ಯಗಳನ್ನು ಸಾಧಿಸಬಹುದು. ಉತ್ತರ ಸಮುದ್ರಪ ಕರೂವಳಿಯುದ್ದಕ್ಕೂ ಇರುವ 15 ರಾಷ್ಟ್ರಗಳು ಒಂದುಗೂಡಿ ಸಮುದ್ರದಲ್ಲಿ ಸಾಹಸ ಕಾರ್ಯಗಳನ್ನು ಮಾಡುವುದಕ್ಕಾಗಿ 1902ರಲ್ಲಿ 'ಆಂತರ್ ರಾಷ್ಟ್ರೀಯ ಸಂಸ್ಥೆ' ಯೊಂದನ್ನು ತೆರೆದಿದ್ದಾರೆ. Copenhagen ಎಂಬಲ್ಲಿ ಇದರ ಮುಖ್ಯ ಕಾರ್ಯಾಲಯವಿದೆ. ಈ ಎಲ್ಲ ರಾಷ್ಟ್ರಗಳಿಗೆ ಸಂಬಂಧಪಟ್ಟ ಸಂಶೋಧನಾ ಕಾರ್ಯವನ್ನು ಈ ಸಂಸ್ಥೆ ನಡೆಸುತ್ತಿದೆ. ಪ್ರತಿಯೊಂದು ರಾಷ್ಟ್ರವೂ ನಗದಣಿಯಾಗಿ ಹಣವನ್ನು ತೆತ್ತು ಈ ಸಂಘವನ್ನು ಬಲಪಡಿಸಿದೆ. ಕೆನಡಾದಲ್ಲೂ ಕೂಡ ಇಂಥದೇ ಯೋಜನೆಯನ್ನು ಕೈಗೊಂಡಿದ್ದಾರೆ.

ಹೀಗೆಯೇ, ಸಮಗ್ರ 'ಸಂಯುಕ್ತ ರಾಷ್ಟ್ರ'ಗಳ ಮೀನುಗಾರಿಕೆಯ ಅಭಿವೃದ್ಧಿಯನ್ನು ಸಾಧಿಸುವುದಕ್ಕೆ "Federal Fish and wild-life Service" ಎಂಬ ಸಂಸ್ಥೆ ಇದೆ. ಈ ಸಂಸ್ಥೆಗೆ ಒಳಪಟ್ಟು ಪ್ರತಿಯೊಂದು ರಾಷ್ಟ್ರದಲ್ಲಿಯೂ ಬೇರೆ ಬೇರೆ ವಿಭಾಗಗಳಿವೆ. ಇದಲ್ಲದೆ ಸಂಯುಕ್ತ ರಾಷ್ಟ್ರಗಳು, ಕೆನಡಾ, ಪ್ರಾನ್ಸ್ ಮತ್ತು ನ್ಯೂ ಫೌಂಡ್‌ಲೇಂಡ್‌ಗಳು ಜಂಟಿಯಾಗಿ 'ಉತ್ತರ ಆಮೇರಿಕಾ ಸಂಘ' ಎಂಬ ಸಂಸ್ಥೆಯನ್ನು ರಚಿಸಿದ್ದಾರೆ. ಉತ್ತರ ಪೆಸಿಫಿಕ್ ಸಾಗರದಲ್ಲಿ ಹೆಲಿಬೆಟ್ ಮತ್ತು ಸಾಮನ್ ಎಂಬ ಮೀನು ವ್ಯವಸಾಯ ಪೂಡುವುದಕ್ಕಾಗಿ ಕೆನಡಾ ಮತ್ತು ಸಂ ಯು ಕ್ತ ರಾಷ್ಟ್ರಗಳು ಕೂಡಿ ರಚಿಸಿರುವ 'The Internation Commission' ಎಂಬ ಸಂಸ್ಥೆಯು ಸಾಧಿಸಿರುವ ಕಾರ್ಯಗಳನ್ನು ನೋಡಿದರೆ ಇಂಥ ಯೋಜನೆಗಳು ಹೇಗೆ ಜಯಪ್ರದವಾಗುತ್ತವೆ ಎಂಬುದನ್ನು ಮನಗಾಣಬಹುದು.

ಸಾಮಾನ್ಯವಾಗಿ ನಾವು ನಂಬಿಕೊಂಡಿರುವಂತೆ ಎಲ್ಲ ಕಡಲುಗಳಲ್ಲೂ ಮೀನು ಸಮೃದ್ಧವಾಗಿರುವುದಿಲ್ಲ. ಉಷ್ಣತೆ, ನೀರಿನ ಆಳ, ಪ್ರವಾಹಗಳ ಸ್ಥಿತಿ, ಕಡಲ ತಳದ ಗುಣಧರ್ಮ, ಆಹಾರ ಜೀವಿಗಳ ಸಂಖ್ಯೆ, ಇವುಗಳ ಆಧಾರದಿಂದ ಮೀನುಗಾರಿಕೆಯ ಸಂಪತ್ತನ್ನು . . . ಕಾಗುತ್ತದೆ. ಭೂ ಮಿ ಯ ಉತ್ತರಾರ್ಧದವರು ತುಂಬ ಸಂಶೋಧನೆಗಳನ್ನು ನಡಿಸಿಕೊಂಡು ಕಡಲನ್ನು ಪರಿಶೋಧಿಸಿ, ನಿಜ್ಞಾನದ ಸಹಾಯದಿಂದ ಯಂತ್ರೋಪಕರಣಗಳನ್ನು ನಿರ್ಮಿಸಿ, ಮೀನಿನಿಂದ ಸಾಧ್ಯವಿದ್ದಷ್ಟೂ ಹೆಚ್ಚಿಗೆ ಉಪ ಉತ್ಪತ್ತಿಗಳನ್ನು ತಯಾರಿಸಿ ಮೀನು ವ್ಯವಸಾಯವನ್ನು ಬಹಳ ವೃದ್ಧಿಗೊಳಿಸಿ ಕಡಲ ಈ ಸಂಪತ್ತೆಲ್ಲವನ್ನೂ ಸೂರೆ ಮಾಡಿದ್ದಾರೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

REGD

Highly perfumed and medicated, worth using daily by one and all keeps hair black and relieves head-ache etc.

TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

Notice.

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

S. C. 535/49

ಪಾಡಿ. — ಕಾಡೀರನಾಮೇಣ.

ಪ್ರತಿವಾದಿರು — ನಾರಾಯಣ ಕೂಡಾ.

ಸದ್ರಿ ಪಾವೆಯ 1ನೆಯ 2ನೇ ಪ್ರತಿವಾದಿಗೆ ತಿಳ್ವಿಸ್ಸು. 1ನೇ ಪ್ರತಿವಾದಿ ನಾರಾಯಣ, ಕೋಟಿ ಮನೆ ನೋಮನ ಮಗ.

2ನೇ ಶಾಂತಿ ಕೀಟ್ಯೆನಾರಾಯಣ ಜುಗೆನೆ ಮಗ, ನಾಮಧಾರಿ ಜಾತಿ. ಉತ್ತರ ಕನ್ನಡ ಜಿಲ್ಲಾ ಹೊನ್ನಾವರೆತಾಲ್ಲು ಭಟ್ಕಳ ಪೇಟೆ ಟೌ ವೇಳ್ಕೆಗ್ರಾಮ.

ನಾದಿಗೆ ಪ್ರತಿವಾ ರು ಬಂಕೊಟ್ಟ ದಿವಸಂದು ನೋಟಿಸೆ ಜಾಬ್ತು ಆ್ಸಲಆ್ಟಮೆಜು ರೂ ಪ್ಯಾ 150 0 0ನ್ನು ಬರಸಾವಿಕೊಳ್ಳುವರೇ ನಾವಿ ದಾಕ್ಲು ನಾಡಿದ ಮೇಲಿನ ವಾವೆ ತಾ ವೀಕು. 21 11 49ಕ್ಕೆ ಮಟ್ಟಿವೆ. ಆ ಕುರಿತು ನಿನ್ನೆ ಉದಾಪರಣೆಯಿಟ್ಟಿರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ತಿಳಿಸಕ್ಕೆಮ್ಮೆ.

Y Manjaya Shetty.

Advocate for Plffs.

ತಾ. 6—11—49.

ಸೊಕ್ಕಾಲ್ಕಂ, ಕುಂದಾಪ್ರರೆ.

ಸ್ವೀಕಾರ—ನಿಮರ್ಶೆ

೧ ಬಾಪೂದರ್ಶನ ರವ್ಯಪಿತ ಬಾಪೂಜಿಯವರ ೭೯ನೇ ಜಯಂತಿ ಉತ್ಸವದ ಸಂದರ್ಭದಲ್ಲಿ ಅಕಾಶವಾಣಿಯಿಂದ ಪ್ರಸಾರ ಮಾಡಿದ ಭಾಷಣ, ಕವನ, ನಾಟಕಗಳ ಸಂಗ್ರಹ) ಪ್ರಕಾಶಕರು: ಆಕಾಶವಾಣಿ ಮೈಸೂರು.

ಭಾರತದ ಭಾಗ್ಯನಿಧಾತರೂ ಜಗತ್ತಿನ ಮಾನವಿಭೂತಿ ಪುರುಷರೂ ಆದ ಮಹಾತ್ಮಾ ಗಾಂಧೀಜಿಯ ೭೯ನೇ ಜಯಂತ್ಯುತ್ಸವ ಸಂದರ್ಭದಲ್ಲಿ ಮೈಸೂರು ಆಕಾಶವಾಣಿಯಲ್ಲಿ ಪ್ರಸಾರಮಾಡಿದ ಶ್ರೀಗಳಾದ, ಕೆ. ವಿ. ಪುಟ್ಟಪ್ಪ, ಸಿ. ಕೆ ವೆಂಕಟರಾಮಯ್ಯ, ವಿ. ಸೀತಾ ಜೆ. ಸಿ. ರಾಜರತ್ನಂ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಸಿ. ಕೃಷ್ಣಶರ್ಮ ಮುಂತಾದವರ ಭಾಷಣ, ಕವನ, ನಾಟಕಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಕೆಲವರು ಗಾಂಧೀಜಿಯವರ ವ್ಯಕ್ತಿತ್ವದ ಕುರಿತೂ, ಕೆಲವರು ಸಾಹಿತ್ಯದ ಕುರಿತೂ, ವಿಧಾಯಕ ಕಾರ್ಯಗಳ ಕುರಿತೂ, ಬರೆದಿದ್ದಾರೆ. ಮಹಾತ್ಮಾಜಿಯವರ ನಿಕಟ ಸಂಬಂಧವನ್ನು ಬೆಳೆಸಿಕೊಂಡು ಅಲ್ಲಿಯೆ ಅಶ್ರಮವಾಸಿಗಳಾಗಿದ್ದವರು ತಮ್ಮ ಅನುಭವವನ್ನು ಬಹು ಸೊಗಸಾಗಿ ಹೇಳಿದ್ದಾರೆ. ಗಾಂಧೀಜಿಯವರ ನಾನಾ ಮುಖ ಪ್ರತಿಭೆಗಳನ್ನೂ ಪರಿಪೂರ್ಣವಾಗಿ ವರ್ಣಿಸಲಾಗಿದೆ. ಈ ಇಡಿಯ ಪುಸ್ತಕವಾಲೋಕನವನ್ನು ಮಾಡಿದರೆ ತಿರುಗೂಮ್ಮೆ ನಾವು ಗಾಂಧೀಜಿಯವರ ತೀರ ಹತ್ತಿರಕ್ಕೆ ಬರುತ್ತೇವೆ. ನಮ್ಮ ಕಾರ್ಯ ಪರಾಜ್ಞುಖತೆಯ ಅರಿವು ಮಾಡಿಕೊಳ್ಳುತ್ತೇವೆ. ಗೂರೂರು ರಾಮಸ್ವಾಮಿ ಅಯ್ಯಂಗಾರ್ಯರ 'ಗಾಂಧಿಯವರೂ ಗತ್ರಮೋದ್ಧಾರವು' ಎನ್ನುವ ಲೇಖನದಲ್ಲಿ ಕಾಂಗ್ರೆಸು ಬಲಗೊಳ್ಳಬೇಕಾದರೆ ಮುಖ್ಯ ಅಗಬೇಕಾದ ಕಾರ್ಯ ಏನೆಂದು? ನಾವು ಮಾಡಬಹುದಾದ ಭಾಗ ಯಾವುದು? ಎನ್ನುವ ಅಂಶದ ಸ್ಪಷ್ಟೀಕರಣವಿದೆ. ಗಾಂಧೀಜಿಯವರ ಸಮೀಪ ವರ್ತಿಗಳಾಗಿದ್ದು ಅವರ ತತ್ವಗಳನ್ನೂ, ಮನೋಗತವನ್ನೂ ಅರ್ಥಮಾಡಿಕೊಂಡ ಹಿರಿಯರೊಬ್ಬರು "ಈಗ ಕಾಂಗ್ರೆಸಿನಹೆಸರಿನಲ್ಲಿ ನಡೆಯುವ ಘೋರಣೆ ಗಾಂಧೀ ಆಸುಯಾಯಿಗಳಿಗೆ ಶೋಭಿಸುವುದಿಲ್ಲ" ಎಂದು ಬರೆದಿದಾರೆ. ಗಾಂಧೀಜಿಯ ತಪೋಬಲದಿಂದಲೇ, ಅಹಿಂಸಾ ರತ್ನದಿಂದಲೇ ದೇಶ ಸ್ವತಂತ್ರವಾಯಿತೆಂಬುದನ್ನು ಸ್ವಾತಂತ್ರ್ಯ ಸಿಕ್ಕ ಈ ಎರಡು ವರ್ಷದಲ್ಲೇ ನಾವು ಮರೆಯುತ್ತಿದೇವೆ. ಕಾಂಗ್ರೆಸಿನ ವೇಷ ಹಾಕಿಕೊಂಡು ಗಾಂಧಿತತ್ವದ ಪುರುಷರೋಗ ಮಾಡಿದುದರ ಫಲಿತಾಂಶವಾಗಿ ಅಲ್ಲಿ ಇಲ್ಲಿ ಅರಾಜಕತೆಯ ನಿದರ್ಶನ ಕಾಣುತ್ತಿರುವುದು ನಮ್ಮ ದುರ್ದೈವ! ಈ ರೀತಿಯ ತತ್ವವಿಹೀನವಾದ ಕಾರ್ಯಗಳಿಂದ ಕರ್ತವ್ಯಭ್ರಷ್ಟರಾಗಿ ಮುನ್ನಡೆಯುವವರಿಂದ ಕಾಂಗ್ರೆಸ್ಸು ಜನತೆಯ ವಿಶ್ವಾಸವನ್ನು ಪೂರ್ಣ ಕಳೆದುಕೊಳ್ಳುವದರಲ್ಲಿ ಸಂದೇಹವಿಲ್ಲ. ಆದರ್ಶದಲ್ಲಿ ಪೂರ್ಣವಾದ ಸಾಧಕರೂ ಬೇಕು ನಾವು! ಈ ಕಾರ್ಯದಲ್ಲಿ "ಬಾಪೂದರ್ಶನ" ಮಾರ್ಗದರ್ಶನ ಮಾಡಬಲ್ಲುದು. ಲಕ್ಷಣವಾದ ನಾಲ್ಕು ಚಿತ್ರಗಳಿಂದ ಶೋಭಿಸುವ, ಸುಮಾರು ೧೫೦ ಪುಟದ ಈ ಸಂಗ್ರಹವು ಮನನೀಯವೂ ಪ್ರೇರಣಾದಾಯಕವೂ ಆಗಿರುತ್ತದೆ. ಈ ಸುಂದರ ಕೃತಿಗೆ ಬೆಲೆ ಕೇವಲ ೧ ೪-೦ ಇಟ್ಟು ಇನ್ನಷ್ಟು ಉಪಕಾರ ಮಾಡಿದಾರೆ. "ಆಕಾಶವಾಣಿ ಪಬ್ಲಿಕೇಶನ್"ವರು ಇಂತಹ ಅಮೂಲ್ಯ ಕೃತಿಯನ್ನು ಒಡಗಿಸಿಕೊಟ್ಟು ಜನಜಾಗೃತಿಯನ್ನುಂಟು ಮಾಡಲೆಂದು ಹಾರೈಸುತ್ತೇವೆ.

೨ ನಿರೀಕ್ಷಕ

(ವಾರಪತ್ರಿಕೆ) ಸಂ ೧, ಸಂಪುಟ ೧. ಸಂಪಾದಕರು: ಮಳಿಯೆ ಗೋವರ್ಧನರಾಯರು. ನಿರೀಕ್ಷಕ ಕಾರ್ಯಾಲಯ, ಧಾರವಾಡ.

ಪತ್ರಿಕೆಯ ಧ್ಯೇಯ ಧೋರಣೆಯ ಕುರಿತಾಗಿ ಹಿರಿಯರಾದ ಶ್ರೀಮಾನ್ ಆಲೂರ ವೆಂಕಟರಾಯರು ತಾವಾತ್ತ ಸಂದೇಶದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದಾರೆ. ಸಂಪಾದಕೀಯದಲ್ಲಿ ನಿರೀಕ್ಷಕನು ಸಾಧಿಸಬೇಕಾದ ಅಂಶವನ್ನು ತಿಳಿಸಿರುತ್ತಾರೆ. ಇವರ್ಯಾರ ಭರವಸೆಯಂತೆ ಮೊದಲ ಪತ್ರಿಕೆಯನ್ನೇ ಮಾದರಿಯನ್ನಾಗಿ ತೆಗೆದುಕೊಂಡರೆ ತಮ್ಮ ಧ್ಯೇಯಸಾಧನಾ ಮಾರ್ಗದಲ್ಲಿ ನುಗ್ಗಿದುವರಿದಿಹರೆಂದು ಹೇಳಬಹುದು. ಪ್ರತಿಯೊಂದು ಬರಹವೂ ಆತ್ಮಪೂರ್ಣವಾಗಿರುತ್ತದೆ. ಜಾಗುಬ್ಬಾವಹ ಬರಹಗಳಲ್ಲಿ ದೂರಾಗಿ, ಸಾಂಸ್ಕೃತಿಕವಾದ ಬರಹಗಳನ್ನು ಕನ್ನಡ ಜನಕ್ಕೆ ಒದಗಿಸಿಕೊಡುವ ಕಾರ್ಯವನ್ನು ಮುಂದೆ ಬರುವ ಪತ್ರಿಕೆಗಳು ನಡೆಸಬೇಕಾಗಿದೆ. ಜಾತ್ಯತೀತವಾಗಿದ್ದು, ಸತ್ಯವನ್ನು ನಿರ್ಭೀಕದಿಂದ ವಾದಿಸತಕ್ಕ ಇಲ್ಲವೆ ಸಾಧಿಸತಕ್ಕ 'ನಿರೀಕ್ಷಕನ' ಕುರುಹು ನಾವೂ ನಿರೀಕ್ಷಿಸಲ್ಲಿರಬಹುದು.

೩ ಮನೆಮದ್ದು

(ಸುಮಾರು ೨೦೦ ವ್ಯಾಧಿಗಳ ಪರಿಹಾರ ಸೂಚಕ ವೈದ್ಯಕೀಯ ಸಲಹೆಯ ಸಂಗ್ರಹ.) ಬರೆದವರು: ಡಾಕ್ಟರ್ ಕೊರಡ್ಡಲ್ ಪೆಂಕ ಟ್ರಾವನ್, ಎಲ್. ಐ. ಎಮ್. ಪ್ರಕಾರಕರು: ನವಭಾರತ ಪುಸ್ತಕ ಭಂಡಾರ, ಉಡುಪಿ. ಬೆಲೆ ೩-೦-೦.

ಮನೆಮನೆಯಲ್ಲೂ ಇರಲೇ ಬೇಕಾದ ಈ ಪುಸ್ತಕದಲಿ ಸುಮಾರು ೨೦೦ ಕಾಹಿಲೆಯ ವಿಚಾರದಲ್ಲಿ ಪರಿಹಾರ ರೂಪವಾದ ಮನೆ ಮದ್ದುಗಳನ್ನು ಸೂಚಿಸಲಾಗಿದೆ. "ಮಕ್ಕಳ ಕಾಹಿಲೆ ಮತ್ತು ಆರೈಕೆ" "ಹೆಂಗಸರ ಕಾಹಿಲೆ ಮತ್ತು ಗರ್ಭಿಣಿ, ಪ್ರಸವ ಬಾಣಂತಿತನದ ಆರೈಕೆ" "ಎಲ್ಲ ಸಾಮಾನ್ಯ ಕಾಹಿಲೆಗಳು ಅವುಗಳ ಲಕ್ಷಣಗಳು ಮತ್ತು ಚಿಕಿತ್ಸೆಗಳು" ಹೀಗೆ ಮೂರು ವಿಭಾಗಗಳನ್ನಾಗಿ ಮಾಡಲಾಗಿದೆ. ಈ ಪುಸ್ತಕದಲ್ಲಿ ಸೂಚಿಸಲಾದ ಪ್ರತಿಯೊಂದು ಚಿಕಿತ್ಸೆಯೂ ಅತಿ ಸರಳವೂ ಸುಸ್ಪಷ್ಟವೂ ಆಗಿದ್ದು, ಯಾವುದೇ ರೀತಿಯಲ್ಲಿ ಶಂಕೆ ಮೂಡದಹಾಗೆ ನಿರ್ದಿಷ್ಟ ರೂಪದಲ್ಲಿ-ಭರವಸೆಯ ಮೂಲಕ ಸ್ಪಷ್ಟೀಕರಿಸಲಾಗಿದೆ. "ಔಷಧವನ್ನು ವಿಚಾರದ ಅಳುಕಿನಿಂದ ತೆಗೆದುಕೊಳ್ಳುವುದಕ್ಕಿಂತ – ವಿಶ್ವಾಸದಿಂದ ಕೆಗೆದುಕೊಳ್ಳುವುದೇ ತುಂಬ ಪರಿಣಾಮಕಾರಿ" ಎಂದು ಡಾಕ್ಟರರು ಹೇಳಿದ ಮಾತಿನಲ್ಲಿ ತಥ್ಯಾಂಶವಿಲ್ಲದಿಲ್ಲ. ಈ ಚೀಟಿ ಅಯುರ್ವೇದದ ಇಲ್ಲವೆ ಮನೆಮದ್ದಿನ ಕುರಿತು ಅಶ್ರದ್ಧೆ ಹೆಚ್ಚಿಸಿದೆ. ತೀನ್ನ ಪರಿಣಾಮಕಾರಿಯಾಗಬೇಕೆಂದು ಪ್ರಾಜ್ಞತೆ ಔಷಧಿಗಳಿಗೆ ಮೊರೆ ಹೋಗುತ್ತಲಿದ್ದಾರೆ. ನುನೆಯ ಹಿರಿಯರು ತಮ್ಮ ಕಾಲದಲ್ಲಿ ಬಳಕೆಯಲ್ಲಿದ್ದ ಸೈಸರ್ಗಿಕ ಘಾಪ ಮನೆಮದ್ದನ್ನು ಹೇಳಿದರೆ ಈಗಿನವರು ಆದರಲ್ಲಿ ವಿಶ್ವಾಸ ಕಾಳುಪುದಿಲ್ಲ. ಭರವಸೆಯನ್ನು ಇಡುವುದಿಲ್ಲ. ಹೀಗೆ ಮನೆಮದ್ದಿನ ಕುರಿತು ತೋರಿದ ಅನಾದರದಿಂದ ವಿಶೇಷವಾಗಿ ಹಳ್ಳಿಯವರು ತುಂಬ ಕಷ್ಟಕ್ಕೀಡಾಗಿದ್ದಾರೆ. ಸಾಮಾನ್ಯ ಕಾಹಿಲೆಗೂ ಪೇಸೆ ಹಿಡಿದುಕೊಂಡು ಮೂರೋ-ನಾಲ್ಕೋ ಸೈಲಿಸ ಪೇಟೆಗೆ ಓಡಿಬರುತ್ತಾರೆ. ಹಿಂತಿರುಗುವ ವೇಳೆ ಅನಾಹುತಗಳಾದ ನಿದರ್ಶನ ವನ್ನೆಷ್ಟೋ ನಾವು ಕಾಣುತ್ತಿದ್ದೇವೆ. ಇವೆಲ್ಲ 'ಮನೆಮದ್ದಿನ' ಮರೆಯುವಿಕೆಯಿಂದುಂಟಾದ ಪರಿಣಾಮ. ದೇಶ ಸ್ವತಂತ್ರವಾಗಿ ಸರಕಾರ ಜನರ ಆರೋಗ್ಯ ರಕ್ಷಣೆಯ ಕುರಿತು ಹೆಚ್ಚು ಗಮನವನ್ನು ತೆಗೆದುಕೊಳ್ಳುವ ಕಾಲಕ್ಕೆ ಡಾ. ಕೊರಡ್ಡಲ್ಲರ ರಾಷ್ಟ್ರೀಯವಾದ ಮತ್ತು ಅಮೂಲ್ಯವಾದ ಮನೆ ಮದ್ದುಗಳನ್ನು ಸಂಗ್ರಹಿಸಿಕೊಟ್ಟು ಮಾರ್ಗದರ್ಶನ ಮಾಡಿರುತ್ತಾರೆ. ಮನೆ ಮದ್ದಿನ ವಿಶೇಷ ವೈಶಿಷ್ಟ್ಯಗಳೆಂದರೆ:- 1- ಕ್ರಮಬದ್ಧವಾಗಿ ಪರಿಹಾರ ಸೂಚಕವನ್ನು ಲಲಿತವಾದ ರೀತಿಯಲ್ಲಿ ಸ್ಪಷ್ಟೀಕರಿಸಿ ಸ್ವಲ್ಪವೂ ಸಂದೇಹ ಬಾರದ ಹಾಗೆ ಮಾಡಿದ್ದು. 2. ಸೇವನೆಯಿಂದ ಮಾತ್ರ ಗುಣಕಾರಿಯೆಂದು ಒಬ್ಬ ಡಾಕ್ಟರನೇ ಭರವಸೆಯ ಮೂಲಕ ಜನದ ಜಲವನ್ನು ಜೀತೀಯ ಔಷಧದ ಕಡೆಗೆ ಎಳೆದದ್ದು. ಈ ಎರಡು ಕಾರಣಕ್ಕಾಗಿಯೋ ಏನೋ ಧಾರವಾರದ ಕರ್ನಾಟಕ ವಿದ್ಯಾವರ್ಧಕ ಸಂಘದವರೂ, ಮಪ್ರಾಸಿನ "ಸ್ಕೂಲ್ ಬುಕ್ ಎಂಡ್ ಲಿಟರೇಚರ್ ಸೊಸ್ಯಾಟಿ" ಯವರೂ ಬಹುಮಾನವಿತ್ತು ಗೌರವಿಸಿದಾರೆ. ಪ್ರಕಟವಾಗಿ ಅಲ್ಪ ಕಾಲದಲ್ಲಿಯೇ ಸ್ವತಿಗಳು ತೀರಿ, ತಿರುಗೊಮ್ಮೆ ಎರಡನೇ ಆವೃತ್ತಿಯಾಗಿ ಪ್ರಕಟಗೊಂಡುದು 'ಮನೆಮದ್ದು'ಗಿರುವ ಜನಪ್ರೀತಿಯ ನುತ್ತು ಮಹತಿಯ ದ್ಯೋತಕವಾಗಿದೆ.

ಶ್ರೀಗಾಂಧಿ ಅಸ್ಪೋತ್ತರ ಶತನಾಮಾವಳಿ-ರಚಿಸಿದವರು: ಶ್ರೀ. ಕೆ. ಎ. ವೇದವ್ಯಾಸ, ಕಿರೋಮಣಿ ಪುಸ್ತಕ ಮೊರೆಯುವ ಸ್ಥಳ, ದಿ ಆಕ್ಸೋಕಾ ಟ್ರೇಸ್ಟ್ಸ್‌ಟ್ಸ್‌ಲ್ ಕಂಪೆನಿ, ಮೂರ್ಕೆಟ್ ರೋಡ್, ಮಂಗಳೂರು, ಪು. ಕ. ಬೆಲೆ. 0-3-0.

ಪೂಜ್ಯ ಬಾಪೂಜಿಯವರು ಜೀವಿತ ಕಾಲದಲ್ಲಿ ಸಾಧಿಸಿದ ಮಹತ್ಕಾರ್ಯಗಳ ಕುರಿತೂ ವ್ಯಕ್ತಿ ಮಹಿಮೆಯು ಕುರಿತೂ, ಸಂಸ್ಕೃತದಿಂದ ಮಹಾಭಕ್ತಿಪೂರ್ವಕ ಅರ್ಪಿಸಿದ ಸುಂದರ ಅಸ್ಪೋತ್ತರ ಶತನಾಮಾವಳಿ ಇದು.

ಯಸ್ಸೆಲ್ಲೆ.

— ಮಕ್ಕಳನ್ನು ಹಡೆಯುವುದು ಸಾಕು —

ಆಕಳ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ್ ಚಾರ್ಜು ೧೫ ಆಣೆ.

ಮಾಲಕರು:—ಹಾಲಪ್ಪಾ ಶಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಭಾರ್ಮಸಿ,—ಹುಬ್ಬಳ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ— ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜಾಡೇಸ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಇರ್ ಎಲ್ ಕವಲಂದಾ ,ಕೆಮಿಸ್ಟ್, ಹಾಮೇರಿ ಬ್ಯಾಡಗಿ

"ಗೋಪಾಲ ಭೇಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ ಸಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮಾಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರೀ, ಯಲ್.ಐ.ಯಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾಪಕರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನು ಉಪಯೋಗಿಸಿದರೆ ಹದಿವಯಸ್ಸಿನ ಋತುಸ್ರಾವವಾಗುವುದು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ- ಬೆಲೆ: ರೂ 3-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. 8-| ಪಿ. ವಿ. ಹನ್ನೆರಡಾಣೆ ಪ್ರತ್ಯೇಕ.]

Mrs. P. DEVEE, F. DS. (N. J.)
Tollygunge CALCUTTA.

ಸ್ಥಾಪಿಕರು: ಶಂಕರಾಂಪೆಸಿ, ಮಂಗಳೂರು

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಸಣ್ಣದಿಮೆ ದರದ ಬಡ್ಡಿಯಿಂದಲೂ ಜನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ವಿವಿಧ ಪಾತ್ರೆಗಳು



ಯಾವಶ್ಕ್ಕೂ ವಿಧವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ನೊದಲಾದುವುಗಳ ನಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿ

ಯೂಚಿಲ್ಲರೆಯಾಗಿಯೂದೊರೆಯುತ್ತವೆ
ಕಲ್ಯಾಣಿ ಸ್ಟೋರ್ಸಾಚಾರ್ಯ,
ಸಥಬೀದಿ, ಉಡುಪಿ

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

24—11—1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೧೩

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 13

ಒಂದು ಗಣ್ಯ ಕೊರತೆ-ತುಲನಾತ್ಮಕ ಬುದ್ಧಿಯದು!

ಯಾವುದಾದರೊಂದು ವಿಷಯವನ್ನು, ಅಥವಾ ಯಾವನಾದರೊಬ್ಬ ವ್ಯಕ್ತಿಯನ್ನು ಹೊಗಳಲಾರಂಭಿಸಿದರೆ ಅಣು, ಅಂಶ ಬಿಡದೆ ಹೊಗಳುತ್ತಾ ಹೋಗುವುದು:—ನಿಂದಿಸಲಾರಂಭಿಸಿದರೆ ಅಮೂಲಾಗ್ರವಾಗಿ ದೂರುತ್ತಾ ಹೋಗುವುದು—ಭಾರತೀಯ ಜನಸಾಮಾನ್ಯರ ಸ್ವಭಾವವಾಗಿದೆ. ಗುಣದೋಷಗಳನ್ನು ವಿವರ್ತಿಸಿ ಹೇಗೂ ವಿಂಗಡಿಸಿ ತಿಳಿಯಲಿಚ್ಛಿಸುವ ತುಲನಾತ್ಮಕ ಬುದ್ಧಿಯ ಅಭಾವವು ಹಿಂದೀ ಜನಜೀವನದ ಮಾಮ್ಯ ದೋಷಗಳಲ್ಲೊಂದಾಗಿದೆ.

ಇಂತಹ ವಾತಾವರಣವಿರುವಲ್ಲಿ ಹುಟ್ಟು—ಬೂದಿ, ಸುಣ್ಣ—ಬೆಣ್ಣೆಗಳೊಳಗೆ ತಾರತಮ್ಯವುಳಿಯುವುದಿಲ್ಲ. ವಿಡಿಯೂಗಿದ್ದುದು ಹಣ್ಣಾದ್ದು ಹಣ್ಣಾಗಿದ್ದುದು ಕೊಳೆತು ಹೋದ ಸ್ಥಿತಿ ಮಾರ್ಪಾಟಗಳೂ ಗಮನಕ್ಕೆ ಬರುವುದಿಲ್ಲ. ಹೀಗಾಗಿ ಪ್ರಮಾದಗಳು ತಿದ್ದಲ್ಪಡುವ, ತಪ್ಪುಗಾರಂ ಸರಿದಾರಿ ಹಿಡಿಯುವ ಸಂದರ್ಭಗಳೇ ಕಡಿಮೆ. ಇಂತಹ ಪರಿಸ್ಥಿತಿಯಲ್ಲಿ ಕಾಲಸ್ಥಿತಿಯಿಂದಾಗಿ ಹುಟ್ಟುವ ಅನಿವಾರ್ಯ ಘಟನೆಗಳಿಂದಲ್ಲದೆ, ಮನುಷ್ಯ ಪ್ರಯತ್ನದಿಂದ ಕ್ರಾಂತಿಕಾರೀ ಸಾಧ್ಯತೆಗಳಾಗುವುದು ಅಪೂರ್ವ.

ನಿದರ್ಶನಕ್ಕಾಗಿ ಸದ್ಯ ಜನತಾಧಾವನೆಯಲ್ಲಿ ಕೇವಲ ಒಂದೇ ತಕ್ಕಡಿಯಲ್ಲಿ ಬದ್ಧಂತಿರುವ ಕೆಲವು ವಿಷಯಗಳನ್ನು ಸರಿಸಮ ತೂಕಕ್ಕಿಟ್ಟ ಅವುಗಳ ಏರುತಗ್ಗುಗಳನ್ನು ಇಲ್ಲಿ ತೋರಿಸಲಾಗಿದೆ:—

ಪಂಡಿತ ನೆಹರುಗಳ ಅವಿರತ ಸಂಚಾರವು ಯಶಸ್ವಿಯಾಯಿತೆಂಬುದೂ ಪಂಡಿತಜೀಯ ಈ ಸಂಚಾರಿಂದ ಪರಾಮರ್ಶವಾಗಿ ಭಾರತದ ಸ್ವಚ್ಛಮಾನ ಜೇಲೇರಿತೆಂಬುದೂ ನಿಸ್ಸಂದೇಹ. ಆದರೆ ನೆಹರುಗಳು ಅಡಿ ತೋರಿಸಿರುವ ತತ್ವಗಳನ್ನು ಮತ್ತು ಅವರು ಅಲ್ಲಿ ಪ್ರದರ್ಶಿಸಿರುವ 'ಲೋಕ ಶಾಂತಿ ಸ್ಥಾಪನೆ' 'ಏಷೀಯಕ ಸರಕಾರ'ವಂತಹ 'ಮಹತ್ವಾಕಾಂಕ್ಷೆಗಳನ್ನು ಕಾರ್ಯತಃ ಅಸ್ತಿತ್ವಕ್ಕೆ ತರಲಾಗುವ ಸ್ಥಿತಿಯಲ್ಲಿಗ ಎಳೆಯ ಸ್ವತಂತ್ರ ರಾಷ್ಟ್ರ ಭಾರತವಿಲ್ಲವೆಂಬುದು ಅಮೆರಿಕಾನರಿಗೆ ಗೊತ್ತಿದೆ ಎಂಬುದನ್ನು ಮರೆಯಬಾರದು. ಸದ್ಯದ ಲೋಕ ಸ್ಥಿತಿಯಲ್ಲಿ ಸ್ವಕಾರ್ಯದೃಷ್ಟಿಯಿಂದಲೂ ಸ್ನೇಹಿತನಾಗಿ ಕಟ್ಟಿಕೊಳ್ಳಬೇಕಾಗಿರುವ ಮತ್ತು ತಮ್ಮಲ್ಲಿಗೆ ಅಧಿತಿಯಾಗಿ ಬಂದಿರುವ ನೆಹರುಗಳ ಕುರಿತು ಅಮೆರಿಕಾನರು ವಿಶೇಷ ಆದರೋಪಚಾರಗಳನ್ನು ತೋರಿಸಿದ್ದರೂ ಇವರು "ಸ್ಥಿತವೀರ ಮಾತು ಹಾರಿಸುವ ಮನುಷ್ಯ" ಎಂದು ಅವೆರಿಕಾನರ ಅಂತರಂಗ ನುಡಿಯು ತ್ತಿರಬಹುದೆಂಬುದನ್ನು ಊಹಿಸಬೇಕು.

'ಅಹಿಂಸಾಚಾರ್ಯ ಗಾಂಧಿಜೀಯು ಉತ್ತರಾಧಿಕಾರಿ ಮತ್ತು ನಿಕಟಾನುಯಾಯಿ' ಎಂದು ಪಂಡಿತ ನೆಹರುಗಳನ್ನು ಕಟ್ಟಿ ಕೊಂಡಿರುವ ನಾವು, ಅಮೆರಿಕಾನರೂ ನಮ್ಮಂತೆಯೇ ಗಣಿಸಿ ನೆಹರುಗಳನ್ನು ಗೌರವಿಸಿದರೆಂದು ಹಿಗ್ಗುವಾಗ, ಭಾರತದಲ್ಲಿ ಇಷ್ಟು ವರ್ಷಗಳಲ್ಲಿ ಯಾವನೊಬ್ಬನೂ ಪಂಡಿತಜೀಗೆಹಾಕಿರದ ಒಂದು ಸವಾಲನ್ನು ಅಮೆರಿಕೆಯ ಪತ್ರಿಕಾವಾಲರು ಹಾಕಿದ್ದುದನ್ನು ನೆನಪುಮಾಡಿಕೊಳ್ಳಬೇಕು—"ಅದರೆ ಸ್ವತಃ ನಿಮ್ಮನುಡಿ ನುಡತೆಗಳು ಅಹಿಂಸಾತ್ಮಕವಾಗಿರುವಂತೆ ಕಾಣುತ್ತಿಲ್ಲ" ಎಂದು ಎಲ್ಲಿಯವರು ಕೇಳಿದ್ದರು. ಸುಳ್ಳಿನ ಅಭಿಮಾನ ಬಿಟ್ಟು ಹೇಳುತ್ತದಾದರೆ 'ಆದರೂ ನಾನಿಸ್ಸರ ನವಿಗೆ ಯಾರ ಮೇಲೂ ಕೈಯೆತ್ತಿದವನಲ್ಲ' ಎಂದ ಪಂಡಿತಜೀಯ ಉತ್ತರವು ಸಮರ್ಪಕವಲ್ಲ

ಪಂಡಿತ ನೆಹರುಗಳನ್ನು ರಾಷ್ಟ್ರದ ಅಶ್ರಯದಾತ ಮತ್ತು ಅಕಾಜ್ಯೋತಿಯಂದು ಅಂಗೀಕರಿಸಿಕೊಳ್ಳುವಾಗಲೇ ಅವರು ಕೆಳಗೆ ಕಾಲಿಡಿ ನೋಡುವುದಕ್ಕೆಂತ ಮೇಲೆ ಅಕಾಶ ನೋಡುವುದು ಹೆಚ್ಚಾಯಿತೆಂದೂ, ಗೃಹ ರಂಗದ ವ್ಯವಸ್ಥೆಗಿಂತ ಲೋಕ ರಂಗದ ಕೀರ್ತಿ ಸಾಧನೆಗೆ ಲಕ್ಷ್ಯ ಕೊಡುವುದು ಅಧಿಕವಾಯಿತೆಂದೂ ಒಪ್ಪಿಕೊಳ್ಳಬೇಕು

ಅದೇ ರೀತಿ ಸರ್ದಾರ್ ವಲ್ಲಭಾಯಿಗಳು ಗೃಹ ಶುದ್ಧೀಕರಣ ಸುವ್ಯವಸ್ಥೆ ಮತ್ತು ಭದ್ರತೆಯ ಮೂಲಾಧಾರ ನಾಯಕನೆಂಬುದೂ ನಿಜ; ಅದರೆ ಅವರು ಪ್ರಚಲಿತ ಸ್ಥಿತಿಗತಿಗಳ ತಾತ್ಕಾಲಿಕ ಲೋಪದೋಷಗಳನ್ನು ನಿವಾರಿಸಿ ವಜ್ರ ಮುಷ್ಟಿಯವರಾಗಿನಂತೆಯೇ, ಪ್ರಚಲಿತ ಸ್ಥಿತಿಯ ಸುಭದ್ರ ಕಾವಲುಗಾರನಿದ್ದು ಕ್ರಾಂತಿಕಾರೀ ಆರ್ಥಿಕ ಸಾಮಾಜಿಕ ಸುಧಾರಣೆಗಳಿಗೆ ಪ್ರಜಾ ಪ್ರತಿಬಂಧಕವಾಗಿರುವರೆಂದೂ ಸರ್ದಾರ್ ಪಕ್ಷೀಯರು ಇರುವ ವರೆಗೆ, ಸದ್ಯಸ್ಥಿತಿಯು ಮೂಲತಃ ಬದಲಾಯಿಸುವದಸಾಧ್ಯವೆಂದೂ ತಿಳಿದಿರಬೇಕು.

ಇಂದಿನ ಆಹಾರಾಭಾವ ಮತ್ತು ಆಹಾರ ನಿಯಂತ್ರಣಗಳಿಗಾಗಿ ಎಕ ಪ್ರಕಾರ ಅಸಮಾಧಾನ ಪ್ರದರ್ಶಿಸುತ್ತಾ ಎಲ್ಲಾ ರೀತಿಯ ಕೊರತೆಗಳಿಗೂ ಇದನ್ನೇ ಕಾರಣವಾಗಿ ತೋರಿಸಿ, ಬೊಗುಳುವವರು ಆಹಾರ ನಿಯಂತ್ರಣ ವಿಲ್ಲದ ಕಾಲಗಳಲ್ಲಿ ಬಡತನದ ದೆಸೆಯಿಂದಾಗಿ ಅಧಿಕ ಸಂಖ್ಯಾಕ ದರಿದ್ರರು ಇಂದಿಗಿಂತಲೂ ಹೆಚ್ಚಿನ ಆಹಾರಾಭಾವಗಳಿಗೀಡಾಗಿದ್ದರೆಂಬುದನ್ನು ನೆನಪುಮಾಡಿಕೊಳ್ಳಬೇಕು.

ಆರ್ಥಿಕ ಅಸ್ವಸ್ಥತೆ, ಧನಿಕ-ದಾರಿದ್ರ್ಯದ ಪರಮಾವಧಿಯ ಏರುತಗ್ಗು ನಿವಾರಣೆಯಾಗಲೇ ಬೇಕೆಂಬುದು ಖಂಡಿತ; ಆದರೆ ಸದ್ಯಸ್ಥಿತಿಯಲ್ಲಿ ಧನಲಾಲಸೆಯಿಲ್ಲದವರಿಲ್ಲವೆಂದ ಮೇಲೆ, ಕೆಲವರಾದರೂ ಧನಿಕರಾಗಿರುವುದು ಅವರ ವ್ಯಕ್ತಿಗತ ಅಪರಾಧವಲ್ಲವೆಂದೂ, ಈ ದೋಷಗಳಿಗೆ ಕಾರಣವಾದ ಪ್ರಚಲಿತ ಪರಿಸ್ಥಿತಿಯನ್ನು ಮಾರ್ಪಡಿಸಲು ಪ್ರಯತ್ನಿಸಬೇಕಲ್ಲದೆ ವ್ಯಕ್ತಿಶಃ ಧನಿಕರನ್ನು ದ್ವೇಷಿಸುವುದು ತಪ್ಪೆಂದೂ ತಿಳಿದಿರಬೇಕು.

ರಾಷ್ಟ್ರಕ್ಕೆ ರಾಜಕೀಯ ಸ್ವಾತಂತ್ರ್ಯ ಬಂದಿದ್ದರೂ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆ ಬಂದಿಲ್ಲವೆಂಬುದರಿಂದ ಅತಿರೇಕ ಹೆಜ್ಜೆಗಳಿಕೆ ಪಡುವುದನ್ನು ಬಿಡಬೇಕು; ಅಂತೆಯೇ ಈ ಅಲ್ಪಾವಧಿಯೊಳಗೆ ಆರ್ಥಿಕ ಸ್ವಾತಂತ್ರ್ಯ ಸಮಾನತೆ ಸಾಧಿಸಲ್ಪಡಬಿಡಲ್ಪಡುವಂತೆ ಸಾಧನೆ ಮಾಡಬಹುದಾದ ಅಧಿಕಾರ ಸ್ವಾತಂತ್ರ್ಯವಿದೆಯಾದ್ದರಿಂದ ನಿರಾಶೆಗೊಳ್ಳುವುದನ್ನೂ ಬಿಟ್ಟುಬಿಡಬೇಕು. ಈ ಸಂಕಲ್ಪ ಸಿದ್ಧಿ-ಸಾಧನೆಗಳನ್ನು ಸರಿ ತಕ್ಕಡಿಯಲ್ಲಿಟ್ಟುಕೊಂಡು ಕಾಲ, ವಿದ್ಯಮಾನಗಳಿಗನುಸರಿಸಿ ಕಾರ್ಯಕ್ಕೆ ಹೆಚ್ಚಲು ಕಲಿತಿರಬೇಕು.

ಸ್ವಾತಂತ್ರ್ಯದ ಅಲ್ಪಾವಧಿಯಲ್ಲಿ ರಾಜಕೀಯ ಹಾಗೂ ಜನಜೀವನ ರಂಗದಲ್ಲಿ ಇಂಗ್ಲೀಷ್ ಆಸ್ಥತ್ತುಗಳನ್ನು ನಿವಾರಿಸಿಕೊಂಡುದೆಷ್ಟು, ಮತ್ತು ಅಪಸ್ತುಗಳು ಮೂಡದಂತೆ ಮೂಲದಲ್ಲೇ ಕೆತ್ತು ಹಾಕಿಕೊಂಡುದೆಷ್ಟು ಎಂಬುದನ್ನೂ, ಆರ್ಥಿಕ ಸಾಮಾಜಿಕ ರಂಗದಲ್ಲಿ ಈಗ ಆಗುತ್ತಿರುವ ಪಾಪಗೂ ಮಾಡಲು ಸಾಧ್ಯವಿದ್ದೂ ಮಾಡದಿರುವ ಜಾಕಿ ಬಿದ್ದಿರುವುದೆಷ್ಟು ಎಂಬುದನ್ನೂ ತುಲನೆಮಾಡಿ ನೋಡಿ, ಪೊದಲನೆಯದಕ್ಕಾಗಿ ರಾಷ್ಟ್ರ ನಾಯಕರನ್ನು ಶ್ಲಾಘಿಸುವದಕ್ಕೂ ಎರಡನೆಯದಕ್ಕಾಗಿ ಅವರನ್ನು ಟೀಕಿಸುವುದಕ್ಕೂ ತಿಳಿದಿರಬೇಕು. ನಾಯಕರು ಮಾಡಿರುವ ಸತ್ಕಾರ್ಯಗಳಿಗೆ ಅಧಾರವಾಗಿ ನಿ

[೨ನೇ ಪುಟ ನೋಡಿರಿ]

UDIPI PARYAYAM EXHIBITION, 1950.

Sponsored by the South Kanara District Council,
All India Manufacturers' Organisation

From 1—1—1950 to 22—1—1950

Call to Manufacturers—

Book your stalls immediately:

Advertisers for the Souvenir kindly apply:

(Surplus to go to the Mahatma Gandhi Memorial College, UDIPI)

For further information write to

Secretary, Exhibition Committee,
UDIPI

Inserted by:

The Canara Industrial & Banking Syndicate Limited, UDIPI.

ಸ್ವತಂತ್ರ ಭಾರತದ—

ಘಟನಾ ಸಮಿತಿಯಲ್ಲಿ ಸದಸ್ಯರ ಅಭಿಪ್ರಾಯ.

ಇದೇ ತಾ. 14ರಲ್ಲಿ ನವರಾಜ್ಯ ಶಾಸನದ ಕೊನೆಯ ಮಂಜೂರಾತಿಗಾಗಿ ಸೇರಿದ ಘಟನಾ ಸಮಿತಿಯ ಸಭೆಯಲ್ಲಿ ಪೀಠಿಕಾ ಕಾರ್ಯಗಳಾಗಿ ತಾ 17ರಿಂದ ಘಟನೆಯು ಸರ್ವಸಾಮಾನ್ಯ ಪರಿಶೀಲನೆಯ ಯಾರಂಭಿಸಿತು. ಭಾರತ ಸರಕಾರದ ಕಾನೂನು ಮಂತ್ರಿ ಮಹಾ. 'ಘಟನಾ ಕರಡು ತಯಾರಿ ಸಮಿತಿ'ಯ ಅಧ್ಯಕ್ಷ ಡಾ। ಅಂಬೇಡಕರರು "ಎನೆಂಬ್ಲಿಯಿಂದ ನಿರ್ಮಿಸಲ್ಪಟ್ಟಿರುವ ರಾಜ್ಯ ಘಟನೆಯು ಸಂಜೂರಾಗಬೇಕು" ಎಂಬ ಸೂಚನೆ ತಂದಾಗ ನಿಶ್ಚಿತ ನವರಾಜ್ಯ ಶಾಸನದ ಗುಣದೋಷಗಳನ್ನು ವಿವರಿಸಿ ನುಮಾರು 80 ಸದಸ್ಯರು ಭಾಷಣಗಳನ್ನಿತ್ತಿದ್ದರು. ಬರುವ ಜನವರಿ 26ರಲ್ಲಿ ಅಸ್ತಿತ್ವಕ್ಕೆ ಬಂದು ಭಾರತೀಯ ಜೀವನದ ಪ್ರತಿಯೊಂದು ವಿಭಾಗಗಳ್ಗೂ ಲಗಾವಾಗಲಿರುವ-ಸ್ವತಂತ್ರ ಭಾರತದ ಪೆಡೆಬರಹವಾಗಿರುವ-ನವರಾಜ್ಯ ಶಾಸನದ ಪ್ರತಿಯೊಂದು ವಿಭಾಗವನ್ನೂ ಸವಿವರವಾಗಿ ಚರ್ಚಿಸಿ ಅನುಭವವುಳ್ಳ ಘಟನಾ ಸಮಿತಿ ಸದಸ್ಯರ ಅಭಿಪ್ರಾಯಗಳ ಮೇಲಿಂದ ಆದರ ಸಾಮಾನ್ಯ ಆಕಾರ ಮತ್ತು ಗುಣದೋಷಗಳ ಸಾಮಾನ್ಯ ಪರಿಚಯ ಮಾಡಿಕೊಳ್ಳಬಹುದು.

[ಒನೇ ಪುಟದಿಂದ]

ಲ್ಲಿಲು ಮತ್ತು ಮಾಡಲುಳಿದಿರುವ ಕಾರ್ಯಗಳನ್ನು ಅಗ್ರಹಪಟ್ಟು ಅವರಿಂದ ಮಾಡಿಸಲು ಜನತೆ ತಲಿಬಿರಬೇಕು.

ಮಂತ್ರಿಗಳನ್ನು, ರಾಜಕೀಯ ಪಕ್ಷಗಳನ್ನ, ಅಥವಾ ಸರಕಾರದ ಇಲ್ಲವೇ ಸಾರ್ವಜನಿಕ ಸಂಸ್ಥೆಯ ಅಧಿಕಾರಿಗಳನ್ನು ಜಾತಿವಾರು, ಪಂಗಡಸಂಬಂಧ, ವ್ಯಕ್ತಿಗತ ಒಲವು ದ್ವೇಷಗಳನ್ನಾಧರಿಸಿ ಕೇವಲ ಶ್ಲಾಘನೆ ಅಥವಾ ಕೇವಲ ಖಂಡನೆ ಮಾಡುವ ಬದಲಿಗೆ ಗುಣದೋಷಗಳನ್ನ ನೋಡಿ, ಕಾರ್ಯಕ್ಕವಶ್ಯವುಳ್ಳಷ್ಟೇ ಸ್ತುತಿ ನಿಂದೆಗಳಾಗಬೇಕು.

ತನ್ನ ಯೋಗ್ಯತೆ ಮತ್ತು ಎಲ್ಲೆಯೊಳಗಿನ ಮಾತು, ಕೃತಿ, ಸ್ಥಾನ, ಮಾನ, ಪ್ರತಿಫಲ ಸಂಪಾದನೆಯ ಮಟ್ಟಿಗೆ ಯಾವನೊಬ್ಬನೂ ಯಾವ ಅಂಶವನ್ನೂ ಬಾಕಿ ಬಿಡಬಾರದು: ಅಂತೆಯೇ ಈ ವಿಷಯಗಳಲ್ಲಿ ತನ್ನ ಪಾಲಿನ ಗಡಿಮೀರಿ ಅನ್ಯರ ಕ್ಷೇತ್ರಗಳೊಳಗೆ ಯಾವ ಕಾರಣಕ್ಕಾಗಿಯೂ ಪ್ರವೇಶಿಸಬಾರದು.

ಮಿತಿಮೀರಿದ ಮಹತ್ವಾಕಾಂಕ್ಷೆಯು ಇರಬೇಕಾದುದೇ. ಆದರೆ ಯಾವುದೇ ನಿಷಯ, ಅಥವಾ ಯಾವುದೇ ವಿಭಾಗ, ವಿಭಾಸದಲ್ಲಾದರೂ ಸರಿಯೇ—ಸಂಬಂಧಪಟ್ಟ ಜ್ಞಾನ, ಲಕ್ಷಣಗಳನ್ನು ತನ್ನಲ್ಲಿ ತುಂಬಿಸಿಕೊಳ್ಳುವ ಮೂಲಕ ಸ್ವಾಭಾವಿಕವಾಗಿ ಅಂತಹ ಗುರಿ ಮುಟ್ಟಬೇಕೇ ಹೊರತು, ಕೇವಲ ಪ್ರದರ್ಶನ ಮತ್ತು ಕೃತಕ ವೇಗಗಳ ಮೂಲಕ ಮುಂಭಾಗದಲ್ಲಿ ತೋರಿಸಿಕೊಳ್ಳಲು ನೋಡಬಾರದು.

ನಮ್ಮ ಜನತೆಯ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ನೈತ್ಯಜೀವನದಲ್ಲಿ ಎಲ್ಲೆಲ್ಲೂ ಕಡಿಮೆ ಬಿದ್ದಿರುವ ತುಲನಾತ್ಮಕ ಬುದ್ಧಿಯು ಸಾಕಷ್ಟು ಮೂಡಿ ಒಂದರೆ, ಆಗ ಕಾನೇ ರಾಷ್ಟ್ರದ ಹಾಗೂ ಸಾರ್ವಜನಿಕರ ಕಲ್ಯಾಣಸಾಧನೆಯ ಪ್ರಥಮಾವಶ್ಯತೆ ಪೂರೈಸಿತೆನ್ನಬಹುದು.

ದು. ಅಂತಹ ಅಭಿಪ್ರಾಯಗಳ ಕೆಲವಂಶ ಇಲ್ಲಿದೆ:-

"ಹರಿಜನರಲ್ಲಿ ಪ್ರತಿಯೊಬ್ಬನೂ ಈ ಘಟನೆಯನ್ನು ಆಧರಿಸಿ ಹಿಡಿಯಲಿದ್ದಾರೆ. ಸಭಾಕಾರ್ಯಗಳನ್ನು ಅತ್ಯವಶ್ಯಕ ರೀತಿಯಿಂದ ನಿರ್ವಹಿಸಿದ ಅಧ್ಯಕ್ಷ ಡಾ। ರಾಜೇಂದ್ರ ಪ್ರಸಾದರಿಗೆ, ಎಂತಹಗಲು ದುಡಿದು ಕಷ್ಟದಾಯಕ ಸಮಸ್ಯೆಗಳನ್ನು ಬಿಡಿಸಿಕೊಂಡ ಕರಡು ತಯಾರಿ ಸಮಿತಿಯ ಎಲ್ಲರೂ ಕೊಂಡಾಟಕ್ಕರ್ಹರಿದ್ದಾರೆ. ಪೂರ್ವ ನಂದನಾರನನ್ನು ವಿ-ಕ್ರೊ-ರ್ವತಿಯವಲ್ಲುವಾನನ್ನು ಪಡೆದ ಹೊಜನ ಸಮಾಜವು ಪೂರ್ಣ ಡಾ। ಅಂಬೇಡ್ಕರರನ್ನೂ ಹೆತ್ತಿನೆ; ನಾವಿದಕ್ಕಾಗಿ ಹೆಗ್ಗಳಿಕೆ ಪಡುತ್ತೇನೆ"—ಮುನಿಸ್ವಾಮಿ ಪಿಳ್ಳೆ (ಮದ್ರಾಸ್. ಹರಿಜನ ವಿಂಡ.)

"ಈ ಘಟನಾ ತಯಾರಿ ಕಾರ್ಯಭಾಗಗಳಾಗಿದ್ದ ಡಾ। ಅಂಬೇಡ್ಕರ್, ಪಂಡಿತ ನೆಹರು, ಸರ್ದಾರ್ ಪಟೇಲರು ಅಭಿನಂದನಾರ್ಹರು. ಆದರೆ ಈ ಘಟನೆಯು ಹಿಂದಿಯಲ್ಲಿ ತಯಾರಿಸಲ್ಪಡದೆ ಇಂಗ್ಲೀಷಿನಲ್ಲೇ ತಯಾರಿಸಲ್ಪಟ್ಟಿದುದು ಅಸಮ್ಮತವಿದೆ. ಹಿಂದಿಯಲ್ಲೇ ತಯಾರಿಸುವುದಕ್ಕಾಗಿ ಘಟನಾ ಸಮಿತಿಯು ಇನ್ನೊಂದು ವರುಷ ನಡೆಯುವಂತಾಗುತಿದ್ದರೂ ಯಾರಿಗೂ ನಷ್ಟ ವಿರಲ್ಲಿವೆಂದು ನನ್ನ ಅಭಿಪ್ರಾಯ. ಭಾರತದ ಭಾವೀ ಚರಿತ್ರೆಯಲ್ಲಿ ಈ ಅಂಶವು ಗುಲಾಮಗಿರಿಯ ಚಿಹ್ನೆಯಾಗಿ ಉಳಿದು ಕೊಳ್ಳಲಿದೆ. ಹೊಸ ಪಾರ್ಲಿಮೆಂಟು ಅಸ್ತಿತ್ವಕ್ಕೆ ಬಂದಾಗ ಅದೀ ಘಟನೆಯನ್ನು ಅಜಿಗೆಸೆದು ಹಿಂದಿಯಲ್ಲೇ ಮತ್ತೊಂದನ್ನು ರಚಿಸಿಕೊಳ್ಳುವದೆಂಬ ಕನಸನ್ನು ನಾನು ಕಾಣುತಿದ್ದೇನೆ." — ಸೆಟ್ ಗೋವಿಂದದಾಸ್ (ಮಧ್ಯಪ್ರಾಂತ್ಯ)

"ಈ ಘಟನೆ ತಯಾರಾದ ವಿಧಾನವು ತೀರಾ ನಿರಾಶಾದಾಯಕವಿದೆ; ಇದು ಅಯೋಗ್ಯ ಘಟನೆ. ಕರಡು ತಯಾರೀ ಸಮಿತಿ ಮತ್ತು ಪಂಡಿತ ನೆಹರುಗಳಂತಹ ಕಾಂಗ್ರೆಸ್ ನಾಯಕರು ಈ ಸಭೆಯ ಮುಂದಿಟ್ಟಿದ್ದ 'ಸಾರ್ವಭೌಮಾಧಿಕಾರೀ ಸ್ವತಂತ್ರ ಜನತಾ ರಾಜ್ಯ'ವೆಂಬ ಗುರಿಯನ್ನು ಬಿಟ್ಟು ಅನ್ಯಹಾದಿ ಹಿಡಿದಿದ್ದಾರೆ ಈ ಘಟನೆಯಲ್ಲಿ ಪ್ರಾಂತ್ಯಗಳು ಮುನ್ಸಾಲಿಟಗಳ ಸ್ಥಾನಕ್ಕೆ ಳಿದಿವೆ. ಕಾಮನ್ ವೆಲ್ತಿನಲ್ಲಿ ಭಾರತವುಳಿದುಕೊಳ್ಳುವುದು ಕ್ಷೇಪಣೀಯ. ರಾಷ್ಟ್ರಧ್ವಜದಲ್ಲಿ ಚರಕದ ಬದಲಿಗೆ ಚಕ್ರವನ್ನೇಕೆ ಹಾಕಿದ್ದೆಂಬುದೇ ನನಗರ್ಥವಾಗುವದಿಲ್ಲ. ಭವಿಷತ್ಕಾಲದಲ್ಲಿ ಈ ಘಟನೆಯು ಕಾರ್ಯಕಾರಿಯಾದೀತೇ ಎಂಬ ಕುಂಠ ನನಗೆ ಅನುಮಾನವಿದೆ"—ಲಕ್ಷ್ಮಣರಾವ್ ಸಾಹು (ಒರಿಸ್ಸಾ)

"ಕರಡು ತಯಾರೀ ಸಮಿತಿಯ ಸದಸ್ಯರನ್ನು ನೋಡಿದರೆ ಅವರಲ್ಲಿ ಹಲವರು ನುರಿತವರು ಮತ್ತು ಸ್ವಾತಂತ್ರ್ಯ ಚಳವಳದಲ್ಲಿ ಸಹಾನುಭೂತಿ ಕೂಡಾ ಇದ್ದವರು. ಆದರೆ ಒಟ್ಟಿನ ನೋಟ, ಇವರೆಲ್ಲರೂ ನವ ನಾಯಕರಂತೆ ಸ್ವಾತಂತ್ರ್ಯ ಚಳವಳದಲ್ಲಿ ಇದ್ದ ಜನರಲ್ಲ. ಆದ್ದರಿಂದಲೇ ಆಗಿರಬೇಕು-ಕರಡು ತಯಾರೀ ಸಮಿತಿಯು ವೀಣೆ ಮತ್ತು ಸಿತಾರದ ನಾದಗಳ ಬದಲಿಗೆ 'ಇಂಗ್ಲಿಷ್ ಸಂಗೀತ'ವನ್ನು ನಮಗಿತ್ತಿದೆ. ಮಹಾತ್ಮಾಜೀಯವರು ಅನುಮೋದಿಸಿದ್ದ ವಿಕೇಂದ್ರೀಕರಣವನ್ನು ಘಟನಾ ನಿರ್ಮಾಪಕರು ಕಡೆಗಣಿಸಿದ್ದಾರೆ. ಹಿಂದುಗಳ ಧಾರ್ಮಿಕ ಪಾವಿತ್ರ್ಯವು ಗಾಂಧಿಯಲ್ಲಿ ಕೇಂದ್ರೀಕೃತವಾಗಿರುವಂತೆ ಪ್ರಜಾಪ್ರಭುತ್ವವು ಢಿಲ್ಲಿಯಲ್ಲಿ ಕೇಂದ್ರೀಕರಣಗೊಂಡಿದೆ. ಪ್ರಾಂತ್ಯಗಳನ್ನೂ ಸಂಸ್ಥಾನಗಳನ್ನೂ ಸಂಬೇಹಪೃಷ್ಟಿಯಿಂದ ಕಾಣಲಾಗಿದೆ. ಸಂಸ್ಥಾನಗಳ ಸ್ವಾಭಿಮಾನವುಳಿಯದ ರೀತಿಯಲ್ಲಿ 871 ನೇ ಪರಿಚ್ಛೇದದನ್ವಯ ಅವುಗಳ ಮಟ್ಟಿನನ್ನು ತಗ್ಗಿಸಲಾಗಿದೆ. ಮೇಲ್ಮಡೆಯಲ್ಲಿ ಒಬ್ಬ ರಾಜ ಮತ್ತು ಕೆಳಗಡೆಯಲ್ಲಿ ರಾಜ ಪ್ರಮುಖನನ್ನಿಟ್ಟುಕೊಂಡೇ 'ರಿಪಬ್ಲಿಕ್' ಎಂಬುದು ಈ ಘಟನೆಯಲ್ಲಿರುವ ಪರಸ್ಪರ ವಿರುದ್ಧವಾದ ವಿಷಯಗಳಲ್ಲೊಂದು"

-ಕೆ. ಹನುಮಂತಯ್ಯ (ಮೈಸೂರು)

"ದಾಸ್ಯ ಸಂಕೋಲೆಯನ್ನು ಕಡಿದುಕೊಂಡ ಮೇಲೆ ಭಾರತದ ಪ್ರತಿನಿಧಿಗಳು ಒಂದು ಹೊಸ ರಾಜ್ಯಾಂಗ ಶಾಸನ ತಯಾರಿಸಿಕೊಂಡುದನ್ನು ಕಾಣ ವಾಗ ಸಂತೋಷವಾಗುತ್ತದಾದರೂ ಅದರಲ್ಲಿ 'ಭಾರತೀಯತೆ'ಯ ಯಾವ ಲಕ್ಷಣವೂ ನನಗೆಕಂಡುಬರುತ್ತಿಲ್ಲ. ಹೀಗಾಗಿ ಈ ಘಟನೆಯು ಢಿಲ್ಲಿಯಲ್ಲಿ ತಯಾರಾಯಿತೋ ಅಥವಾ ಲಂಡನಿನಲ್ಲಿಯೋ ಎಂಬುದನ್ನು ತಿಳಿಯಲು ಭಾವೀ ಜನಾಂಗಕ್ಕೆ ಸಾಧ್ಯವಾಗಲಾರದು. ಸದಸ್ಯರ ಮನಸ್ಸನ್ನೀಗಲೂ ಬ್ರಿಟಿಷ್ ಮನೋವೈತ್ಯಿಯೇ ಆವರಿಸಿಕೊಂಡಿದೆ. ಈ ಘಟನೆಯೆಂಬುದು ಲೋಕದ ರಾಜ್ಯ ಶಾಸನಗಳ ವಿಲಕ್ಷಣ ಕಲಸುಮೇಲೋಗರವಾಗಿದ್ದು. ಇದರಡಿಯಲ್ಲಿ ಕೆಲಸಮಾಡುವ ಸರಕಾರಕ್ಕೆ ಜನಸೇವೆ ಸಾಧ್ಯವಾಗುವುದು ಅಸಾಧ್ಯವಾಗುವುದು. ಸರಕಾರಿ ನೌಕರರಿಗೆ ಕೆಲವರಿಗೆ ರೂ. 5000 ವರೆಗೂ ಹೆಚ್ಚಿಗೆ ಕೂಡಾ ನಿಶ್ಚಯವಾಗಿರುವ ಸಂಬಳ ಧಾರಣೆಯು ಆಕ್ಷೇಪಣೀಯವಿದೆ. ಸರಕಾರೀ ನೌಕರರಿಗೆ ಅತ್ಯಧಿಕವೆಂದರೆ 500 ರೂ. ಸಂಬಳವೆಂದಾಗಿರುವ ಕಾಂಗ್ರೆಸಿನ ನಿರ್ಣಯವನ್ನು ನೆನಪಿಗೆ ತರುತ್ತೇನೆ. ಹೊಸ ಶಾಸನದನ್ವಯ ಸರಕಾರೀ ನೌಕರರು ಜನತಾ ಸೇವಕರಾಗಿರದೆ ಜನತಾ ಯಜಮಾನರಾಗುತ್ತಾರೆ. ಇಂಹೆ ಧೋರಣೆಯು ಕಮ್ಯೂನಿಸ್ಟ್ ಪಕ್ಷಕ್ಕೆಂದು ಬಹಿರಂಗ ಆಮಂತ್ರಣವಾಗಿರುವುದು. ಕಮ್ಯೂನಿಸ್ಟರನ್ನು ಜೈಲಿಗೆ ಕಳಿಹಿದ ಮಾತ್ರಕ್ಕೆ ಕಮ್ಯೂನಿಸಂ ಜಳವಳವನ್ನು ಮುರಿದಂತಲ್ಲ. ಜನ ಸೇವೆ ಮಾಡುವ ಹಾಗೂ ಸಾಮಾನ್ಯ ಜನರ ಜೀವನ ಮಟ್ಟವನ್ನು ಮೇಲೆರಿಸುವ ಮೂಲಕವೇ ಅದರ ಅವಕಾಶ ತಪ್ಪಿಸಬೇಕು. ಸದ್ಯದ ಪ್ರಜಾಪ್ರಭುತ್ವಾನುಸಾರವಾಗಿ ಶ್ರೀಮಂತರು ಬಡವರ ವೋಟುಗಳನ್ನು ಪಡೆದು. ಅವನ್ನು ಮುದಕ್ಕೂ ಆಳುತ್ತಾ ಹೋಗಬಲ್ಲರು. ಇದು ಪ್ರಜಾಪ್ರಭುತ್ವವಲ್ಲ. ಸ್ವಾತಂತ್ರ್ಯಪೈಗಾಶಸ್ತ್ರ ಧರಿಸುವ ಹಕ್ಕು ಪ್ರತಿಯೊಬ್ಬ ಭಾರತೀಯನಿಗೂ ಇರಬೇಕು. ಗೋಹತ್ಯೆಗೆ ಪ್ರತಿಬಂಧ ಹಾಕಬೇಕು'-ಬಾಬು ರಾಮನಾರಾಯಣ ಸಿಂಹ (ಬಿಹಾರ್)

"ಶಾಸನಾಕರಡು ಅಧ್ಯರ್ಯಕರವಿದೆ. ಸದ್ಯ ಸ್ಥಿತಿಯಲ್ಲಿ ಈ ಸಭೆಯು ಇದಕ್ಕಿಂತ ಉತ್ತಮವಾದ ಪರೋಂದನ್ನು ತಯಾರಿಸುವುದು ಅಸಾಧ್ಯವೇ ಸರಿ. ಅಸಮಿನ ಕೆಲವು ವಿಲಕ್ಷಣಾವಶ್ಯಕತೆಗಳಿಗನುಸಾರವಾಗಿ 'ನಾಗರಿಕತನ'ದ ಕೆಲವೊಂದು ವಿಧಾನಗಳನ್ನು ಅಸ್ಸಾಮಿಗಳ ಮಟ್ಟಿಗೆ ಮಾತ್ರ ಪ್ರತ್ಯೇಕಗೊಳಿಸುವುದು ಅವಶ್ಯ'-ಕುಲಧರ್ ಚಲಿಹ (ಅಸ್ಸಾಮ್)

"ಈ ಘಟನೆಯು ಪ್ರಜಾಪ್ರಭುತ್ವ ಅತ್ಯಂತ ಸುಂದರವಾದ ಅತಿ ಮಾನುಷ

ಅಮೃತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಕುತ್ತಿಗೆ, ಭುಜಜಕ್ಕುಗಳ ವೇದನೆಗಳಿಗೂ, ಎಲ್ಲ ನೋವು, ಘಾಯಗಳು, ಬಾತುಕೊಳ್ಳುವುದ ಚೇಳವಿಷಮುಂತಾದವು, ಪಕ್ಷವಾತ, ಮೊಡಿ ಮೊದಲಾದ ಎಲ್ಲಾರೋಗಗಳಿಗೂ ಸಿದ್ಧೌಷ

REGD

ಹುಳುಕಡ್ಡಿ ಮದ್ದು ಸಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

THE VIJAYA BANK, Ltd.,

H. O., MANGALORE.

A. With a net work of Branches through out the District and one each at Mercara and Bombay.

B. With a standing of 18 years service.

C. With total resources of over 40 Lakhs.

Fixed deposits are now accepted at the following rates of interest.

3 months ... 3% P. A. 6 months ... 3½% P. A.

12 months ... 3¾% P. A. 24 months ... 4% P. A.

All kinds of banking business transacted.

Sri B. M. Hegde,

Advocate & President District Board, South Kanara.

(CHAIRMAN OF THE BOARD OF DIRECTORS)

—ನವರಾಜ್ಯ ಶಾಸನ

ಲೋಪದೋಷಗಳಿದ್ದರೂ ಸ್ವೀಕಾರಾರ್ಹ ಘಟನೆ

ದ ಒಂದು ಮಾದರಿ. ಅದರಲ್ಲಡಕವಾಗಿರುವ ಸ್ವಾತಂತ್ರ್ಯತ್ವ, ಸಮಾನತೆ ಮತ್ತು ಆಶ್ರಯದಾತೃತ್ವಗಳು ಮಂಗಳಿಗೊಳಿಸುವಷ್ಟು ಮೇರುಕವಾಗಿ ನಮ್ಮ ಕರ್ತವ್ಯಗಳಲ್ಲಿ ನಿಷ್ಠೆಯಿಸುತ್ತಿವೆ. ಇದು ಕಾಲದ ಹೊರೆ ಮತ್ತು ಒತ್ತಡಗಳನ್ನು ಸಹಿಸಿ ನಿಲ್ಲಲಿಲ್ಲ ಒಂದು ಮಾದರೀ ಘಟನೆ. ಭಾರತವು ಮಾಡಿದಂತೆ ವಾರೀ ವರುಷಗಳೊಳಗೆ ಒಂದು ಘಟನೆಯನ್ನು ತಯಾರಿಸಿಕೊಂಡ ದೇಶಗಳು ಲೋಕದಲ್ಲಿ ಅತ್ಯಲ್ಪ. ನಿದರ್ಶನಕ್ಕಾಗಿ ಅಮೆರಿಕವು ತನ್ನ ಘಟನೆ ತಯಾರಿಗೆ 11 ವರುಷಗಳನ್ನು ವ್ಯಯಿಸಿದ್ದಿತು ಕೆನಡಾ ಮತ್ತು ಆಸ್ಟ್ರೇಲಿಯಗಳ ಘಟನೆಗಳು ತಯಾರಿಗೂ ಭಾರತದ ಘಟನೆ ಸಿದ್ಧತೆಗಿಂತ ಹೆಚ್ಚು ಕಾಲ ಹಿಡಿದಿದ್ದಿತು. ನಮ್ಮ ನವ್ಯ ರಾಷ್ಟ್ರ ಮತ್ತು ನವ್ಯ ಜನತೆಯ ಪಾಲಿನ ನವ್ಯ ಕರ್ತವ್ಯವನ್ನು ನಿರ್ದೇಶಿಸಿದೆಂಬ ಅತ್ಯ ಸಮಾಧಾನದಿಂದ ಮನೆಗೆ ಹೋಗೋಣ" —ಮಿಸ್ ಅನ್ನಿ ಮಸ್ಕರೇನ್ಹಸ್(ಕೊಚ್ಚಿ ತಿರುವಾಂಕೂರು ಕೇಂದ್ರ)

"ಘಟನೆಯನ್ನು ಹೊಗಳುವ ಅಥವಾ ತೆಗಳುವ ಕಾಲ ಇದಲ್ಲ. ಅದರ ಮೂಲಕ ಕೆಲಸವಾಗುವವನ್ನು ಕಾಣುವ ವರೆಗೆ ಕಾಯಬೇಕಾಗಿದೆ. ಮಹಾತ್ಮಾ ಗಾಂಧಿ ಮತ್ತಿತರ ಹುತಾತ್ಮರು ಹೆಸರುಗಳು ಈ ಘಟನೆಯಲ್ಲಿ ಪಡಿಮೂಡಬೇಕಿದ್ದಿತು. ಯಾಕೆಂದರೆ ಭಾರತಕ್ಕೋಸ್ಕರ ಹೊಸ ರಾಜ್ಯ ಶಾಸನ ತಯಾರಿಸಿಕೊಳ್ಳಲು ಸಾಧ್ಯವಾದದು ಅವರ ತ್ಯಾಗಗಳಿಂದಾಗಿಯೇ"—ಗೋಕುಲಭಾಯಿ ಭಟ್ (ರಾಜಸ್ತಾನ)

"ಈ ಘಟನೆಯು ಫೆಬಿಸ್ಟ್ ರಿಗೆ ಧಾವಿಸುವಂತಹದನ್ನು ವಿರೋಧಕಾರರು ಅದರ ವಿಭಾಗಗಳನ್ನು ಲಕ್ಷ್ಯಪೂರ್ವಕ ಪರಿಶೀಲಿಸಿಕೊಳ್ಳಲೆಂದು ಕೇಳಿಕೊಳ್ಳುತ್ತೇನೆ. ಜನತಾ ಬಂಬಲವನ್ನು ಪಡಿಕೊಳ್ಳಲು ಸಾಧ್ಯವಿದ್ದರೆ ಮೂಂನೇ ಎರಡುಶದಸ್ಯ ಮತ ಹಡೆದು ಇವನ್ನು ವಾಪಸ್ಸಿಸಿಕೊಳ್ಳುವ ಅವಕಾಶವಿದೆ. ಹೀಗಾಗಿ ಇವೇಕ್ಷಪಟ್ಟರಿ ಇಡೀ ಘಟನೆಯನ್ನೇ ಉರುಳಿಸಿಕೊಳ್ಳುವುದು ಸಾಧ್ಯ. ಈ ಘಟನೆಯಲ್ಲಿ ಉತ್ಪನ್ನಗಳ ಮೇಲೆ ನಾವಾಜಿಕ ಒಡೆತನ, ನಿಯಂತ್ರಣ ಮತ್ತು ಕ್ರಮಜಾರಿಗಳನ್ನು ನಿರೂಪಿಸಿಲಾಗಿದೆ. ಸಮಾಜದೀಜಒಡೆತನವೆಂಬುದು ಕೆಲವೊಂದು ಜನರು ಅಧಿಕಾರದಲ್ಲಿದ್ದರೆ ಕ್ರಮಶಃ ಜಾರಿಗೆ ಬರಬಹುದು; ಜೀರೆ ಕೆಲವರು ಅಧಿಕಾರಕ್ಕೆ ಬಂದಲ್ಲಿ ಫ್ಲೆಸ್ರಿವ್ಗೆ ಬರಬಹುದು. ಅಂತೂ ಬಾಂದೆ ನಿರ್ಮಾಹವಿಲ್ಲ"—ಕೇಂದ್ರ ಸರಕಾರದ ಕಾವ ಗಾರಿ ಮಂತ್ರಿ ಮತ್ತು ಮಹಾರಾಷ್ಟ್ರದ ನಾಯಕ ಎನ್. ವಿ. ಗದ್ಗಿಲ್.

"ಈ ಘಟನೆಯ ರಚನೆಯ ವೇಳೆ ಇದ್ದ ಸ್ಫೂರ್ತಿಯಿಂದಲೇ ಇದನ್ನು ಕಾರ್ಯಕ್ಕೆ ಹೆಚ್ಚುವುದಾದರೆ ಶಾಂತಿ ಮತ್ತು ಸೌಹಾರ್ದತೆಯು ಇಲ್ಲಿ ನೆಲೆ ನಿಲ್ಲುವುದು; ಭಾರತವು ಲೋಕದ ಅಗ್ರಗಣ್ಯ ರಾಷ್ಟ್ರಗಳಲ್ಲೊಂದಾಗಿ ರಾಜಿಸುವುದು. ಭಾರತದ ಏಕರೂಪ ಮತ್ತು ಸಂಸ್ಥಾಗಳ ಸಮೀಕರಣ—ಅಲ್ಪಸಂಖ್ಯಾಕ ಸಮಾಜಗಳ ಪ್ರಶ್ನೆಯ ಇತ್ಯರ್ಥ ಮತ್ತು ಪ್ರತ್ಯೇಕ ಮತದಾನ ಪದ್ಧತಿ ಹಾಗೂ ಸ್ಥಾನಕಾದಿಡುವ ಸಂಪ್ರದಾಯರದ್ದತಿ-ಕೇಂದ್ರ ಮತ್ತು ಉಪಘಟಕಗಳೊಳಗಿನ ಅಧಿಕಾರ ವಿತರಣೆ-ಕೇಂದ್ರ ಮತ್ತು ಸಂಸ್ಥಾನಗಳೊಳಗಿನ ಹಣಕಾಸು ಸಂಬಂಧದ ವ್ಯವಸ್ಥೆ-ಅಸ್ತಿಸ್ವಾಧೀನತೆಗೆ ಪರಿಹಾರ-ರಾಷ್ಟ್ರಭಾಷೆ ಮೊದಲಾದವುಗಳನ್ನು ನಾವು ಯೋಗ್ಯ ರೀತಿಯಿಂದ ತೀರ್ಮಾನಿಸಿಕೊಂಡಿದ್ದೇವೆ. ಅಗತ್ಯವೆಲ್ಲ ಎಲ್ಲಾ ಕಡೆ ಪ್ರತ್ಯ ತೂಕಗಳನ್ನು ಒಳಗೊಂಡಿರುವ ಪೂರ್ಣ ಪ್ರಜಾಸತ್ತಾತ್ಮಕವಾದ ಘಟನೆಯಿದು, ಎಂದು ನಾನು ಸಾರಿಹೇಳುತ್ತೇನೆ"—ಭಾರತ ಪಾರ್ಲಿಮೆಂಟಿನ ಉಪಾಧ್ಯಕ್ಷ ಅನಂತ ಶಯನವ್ ಅಯ್ಯಂಗಾರ್.

"ಸರ್ವಸಾಮಾನ್ಯವಾಗಿ ಮೂರು ದಶಮಾನಗಳಿಗಾಗವಷ್ಟಿದ್ದ ವಿವಿಧ ವಿಷಯಗಳನ್ನು ಈ ಸಭೆಯು ಮೂರು ವರುಷಗಳಲ್ಲಿ ನಿರ್ವಹಿಸಿಕೊಂಡಿತು. ಸ್ವಾತಂತ್ರ್ಯ ಸಂಪಾದನೆಯು ಅಸಾಮಾನ್ಯವಾಗಿದ್ದಂತೆಯೇ, ಈ ಘಟನೆ ತಯಾರಿ ಕೂಡಾ ಹೊರಿನ ನಿರ್ದೇಶವಾವ್ಯದೂ ಇಲ್ಲದೆ ಅಸಾಮಾನ್ಯ ರೀತಿಯಿಂದ ನಡೆದುಹೋಯಿತ. ರುವ್ಯದ ದೊಡ್ಡ ಸಂಖ್ಯೆಯ ಜನತೆಯ ಆರೋಗ್ಯ ಮತ್ತು ಆನಂದ ಸಾಧನೆಗಾಗಿ ನಿರ್ದೇಶಕ ತತ್ವಗಳಲ್ಲಿ ಪಾನನ ಪೇಧೆನನ್ನು ಸೇರಿಸುವುದು ವಿಶೇಷ ಅನುಮೋದನೀಯವಿದ್ದಿತು" —ಬೊಂಬಾಯಿ ಪ್ರಧಾನ ಮಂತ್ರಿ ಬೇರ್.

"ಈ ರಾಜ್ಯಶಾಸನವು ಸರಿಪೂರ್ಣವಲ್ಲ ವಾದರೂ ಸಮಾಧಾನಕರ ವಿದೆ; ಯೋಗ್ಯ ರೀತಿಯಿಂದ ಕೆಲಸಕ್ಕೆಳಿಸಿದರೆ, ಸಮಾಧಾನಕರ ರೀತಿಯಿಂದ ಕಾರ್ಯ ನಾಗಲನುಕೂಲವಿದೆ. ಸಂಸ್ಥಾಗಳಲ್ಲಿ ನಡೆಯುತ್ತಿರುವುದನ್ನು ಕಾಣ.ವಾಗ ಈ ಶಾಸನದನ್ವಯ ಕೇಂದ್ರಕ್ಕೆ ವಿಶೇಷಾಧಿಕಾರಗಳನ್ನು ಕೊಟ್ಟದು ಸರಿಯೆಂದೇ ಹೊಳೆಯ.ದಿಂದು. ಕಾಂಗ್ರೆಸಿಗರೊಳಗಿರುವ ಒಳ ಜಗಳಗಳು ಖಂಡಿತೀಯ. ಸರಕಾರವನ್ನು ಸಮರ್ಥಿಸಬೇಕಾಗಿದ್ದವರೇ ಅದರ ಅತಿ ದೊಡ್ಡ ನಿಂದಕರಾಗಿದ್ದಾರೆ. ಬಹುಶೇಕವಾಗಿ ಎಲ್ಲಾ ಪ್ರಾಂತ್ಯಗಳಲ್ಲೂ ಕಾಂಗ್ರೆಸ್ ಪಾಗಡಗಳು ಪರಸ್ಪರ ಹೊಟ್ಟೆಕಿಚ್ಚು ತೀರಿ ಹೋರಾಡಿಕೊಳ್ಳುತ್ತಿವೆ. ಈ ಹೀಯುಸ್ಥಿತಿ ಫಲ್ಲಿಲೇಬೇಕು. ಆದರೆ ಹೆಚ್ಚಿನಪ್ರಾಂತ್ಯಗಳಲ್ಲಿತಾಂತಕ ದುರಂತಕ ಧೆಯು ಸುನೂರಾವರ್ತನೆಗೊಳ್ಳುತ್ತಿರುವದೇ ಕಂಡು ಬುಂತ್ತಿದೆಯಾದ್ದರಿಂದ ಆ ಸಂಭವ ಕಾಣುವದಿಲ್ಲ" ಸ್ಯಭುದಯಾಳ್ ಹಿಮ್ಮತ್ ಸಿಂಗ್ (ಪಶ್ಚಿಮ ಪಂಜಾಬ್)

"ಈ ಘಟನೆಯ ಏಕಮಾತ್ರ ಪಥ್ಯ ಕಾರಕ ವಿಭಾಗವೆಂದರೆ ಘಟನೆಯನ್ನೇ ತಿದ್ದಲವಕಾಶ ನೀಮೂಲಿಸಿರುವ ಪರಿಚ್ಛೇದ. 1946ರಲ್ಲಿ ನಾವೀ ಕಾರ್ಯವಾರಂಭಿಸಿದಾಗ, ಶೇಷಾಧಿಕಾರಗಳ ಸಮೇತ ಸ್ವತಂತ್ರಾಧಿಕಾರವುಳ್ಳ ಒಕ್ಕೂಭಾಗಗಳ ಫೆಡರಲ್ ಸರಕಾರ ರಚನೆಯನ್ನು ಕಣ್ಣು ಮುಂದಿಟ್ಟುಕೊಂಡಿದ್ದೆವು. ಆದರೆ ರಾಷ್ಟ್ರ ವಿಭಜನೆ ಮತ್ತು ತನ್ಮಂತರದ ದುರಂತಗಳು ನಮ್ಮಲ್ಲಿ ಭೀತಿ ಭಾವನೆಯನ್ನು ಹುಟ್ಟಿಸಿದುವು ಕೇಂದ್ರವನ್ನು ಬಲಗೊಳಿಸಬೇಕೆಂಬ ಮಟ್ಟಿಗೆ ನಾನಾರಿಗೂ ಹಿಂದಿಲ್ಲ. ಆದರೆ ಉಪಾಂಗಗಳನ್ನು ಬಲಗೊಳಿಸಿ.ನ ಮೂಲಕವೇ ಅದು ಸಾಧಿಸಲ್ಪಡಬೇಕು. ಭವಿಷತ್ಕಾಲದಲ್ಲಿ ತಿದ್ದುಪಡಿ ಕಲಮನ್ನು ಉಪಯೋಗಿಸಿಕೊಂಡು ತಮಗಿಚ್ಛೆ ತೋರಿದಂತೆ, ಪರಿಸ್ಥಿತಿಗನುಸಾರವಾಗಿ ಬೇಕು ಬೇಕಾದ ಬದಲಾವಣೆಯನ್ನು ಈ ಘಟನೆಯಲ್ಲಿ ಮಾಡುವಂಕಾಗುವುದೆಂದು ನಾನು ಆಶಿಸುತ್ತೇನೆ". ಎಚ್. ವಿ. ಪಟಾಸ್ಕರ್ (ಬೊಂಬಾಯಿ)

"ಈ ಘಟನೆಯನ್ನು ಸರಿಯಾದ ವಿಧಾನಗಳಿಂದ ವಿನಿಯೋಗಿಸಿಕೊಂಡರೆ ಭಾರತವು ಅಭಿವೃದ್ಧಿಗೊಳ್ಳುವದು ಖಂಡಿತ. ನನ್ನ ಏಕಮಾತ್ರ ಆಕ್ಷೇಪವೆಂದರೆ ಅಧಿಕಾರಿಗಳಿಗೆ ನಿಶ್ಚಿತ್ವ ಸಿದ ಸಂಬಳ ಹೆಚ್ಚಾಯಿತೆಂಬುದು. ಹೀಗಿದ್ದರೂ ಹೊಸ ಪಾರ್ಲಿಮೆಂಟು ಸಂಬಳ ಧಾರಣೆಯನ್ನು ಜನತೆಯು ತೆರಿಗೆ ಸಂದಾಯ ಶಕ್ತಿಗೆ ಹೊಂದಿಕೆಯಾಗುವಂತೆ ತಗ್ಗಿಸಿಕೊಳ್ಳುವುದೆಂದು ಆಶಿಸುತ್ತೇನೆ" —ಎಚ್. ಎ. ಮಾಂಡ್ ಲೋಯಿ (ಮಧ್ಯ ಪ್ರಾಂತ್ಯ)

"ಮೂಲಭೂತ ಹಕ್ಕು ಬಾಧ್ಯತೆಗಳ ಜತೆಯಲ್ಲಿ ನಾಗರಿಕತನದ ಮೂಲಭೂತ ಕರ್ತವ್ಯಗಳನ್ನೂ ಸೇರಿಸಿಕೊಳ್ಳಬೇಕಾದುದು ಅವಶ್ಯ. ಈ ಘಟನೆಯನ್ವಯ ಭಾರತದ ನ್ಯಾಯ ಶೋಧನಾ ಖಾತೆಯು ಅಮೆರಿಕದ ನ್ಯಾಯ.ಖಾತೆಗಿಂತ ಹೆಚ್ಚು ಸ್ವತಂತ್ರವಾಗುತ್ತದೆ"—ಕೃಷ್ಣಚಂದ್ರ ಶರ್ಮ (ಸಂಯುಕ್ತ ಪ್ರಾಂತ್ಯ)

"ಈ ಘಟನೆಯು ಒಮ್ಮುಖ ಧಿಕಾರಿಯೂ ಅಲ್ಲ; ಸಂಯುಕ್ತಾಧಿಕಾರಿಯೂ ಅಗಿಲ್ಲ. ರಾಷ್ಟ್ರದ ಆವಶ್ಯಕತೆಗಳನ್ನು ಪೂರೈಸಿರುವ ಒಂದು ರ ಜ್ಯಾಂಗ ಶಾಸನವಿದು. ಇಷ್ಟು ಪ್ರಜಾಸತ್ತಾತ್ಮಕವಾಗಿ ಹಾಗೂ ಶಾಂತವಿನ್ಯಾನದಿಂದ ಘಟನೆ ತಯಾರಿಸಿ ಕೊಳ್ಳಲು ಸಮರ್ಥವಾದುದಕ್ಕಾಗಿ ಈ ಸಭೆಯು ಹೆಗ್ಗಳಿಕೆಪಡಬೇಕು. ಅದರೂ ಮೇಲಧಿಕಾರಿಗಳ ನೇತನ ನಿರ್ಣಯದ ಮಟ್ಟಿಗೆ ವ್ಯವಹಾರ್ಯ ದೃಷ್ಟಿಯಿಟ್ಟುಕೊಂಡು ತನ್ನ ಕರ್ತವ್ಯ ಪಾಲಿಸುವುದರಲ್ಲಿ ಈ ಸಭೆಯು ತಪ್ಪು ಬಿದ್ದಿರುವುದು ನನ್ನ ಮನಸ್ಸಿಗೆ [illegible] ನೂರು ತಿಂಗಳಿಗೆ ರೂ. 1500ಕ್ಕಿಂತ ಹೆಚ್ಚಿಗೆ ಪಡೆಯಬಾರದೆಂದು ನಿಶ್ಚಯಿಸುತ್ತಿದ್ದರೆ ಪ್ರತಿಯೊಬ್ಬನೂ ಸಮಾಧಾನಪಡುವಂತಾಗುತ್ತಿತ್ತು. ವೇತನಗಳನ್ನು ಮತ್ತು ರಾಷ್ಟ್ರದ ವ್ಯಕ್ತಿಗತ ಸಂಪಾದನೆಗಳನ್ನು ಕ್ರಮಬದ್ಧಗೊಳಿಸುವ ಸಂದರ್ಭವನ್ನೇ ಈ ಸಭೆ ಕಳಕೊಂಡಿದೆ"—ಖಂಡುಭಾಯಿ ದೇಸಾಯಿ (ಗುಜರಾತ್)

"ಘಟನಾ ಸಮಿತಿಯ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು, ಮತ್ತೊಂದು ಕಾಲದಲ್ಲಿ ಉಚ್ಚಾಧ್ಯಕ್ಷನಾಗಿದ್ದ ಡಾ. ಯು.ಜಿ. ಮುಖರ್ಜಿಗಳು ಅಭಿವಂದನಾರ್ಹರು. ನಮ್ಮ ಹೃದಯಗಳಲ್ಲಿಂದು ಸ್ಥಾನ ಗಳಿಸಿರುವ ಕರಡು ತಯಾರಿ ಸಮಿತಿ ಅಧ್ಯಕ್ಷ ಡಾ. ಅಂಬೇಡ್ಕರರು ಕಾಂಗ್ರೆಸಿಗೆ ಸೇರಿ ಇಡೀ ರಾಷ್ಟ್ರದ ನಾಯಕನಾಗಬೇಕೆಂದು ಕೇಳಿಕೊಳ್ಳುತ್ತೇನೆ. ಘಟನೆಯು ಅತ್ಯದಂತರಿವು ಮೂಲಭೂತ ಹಕ್ಕುಗಳು ಮತ್ತು ನಿರ್ದೇಶಕತತ್ವಗಳು ಕಾರ್ಯತಃ ಜಾರಿಗೆ ಬಂದರೆ ಅವು ಗಾಂಧಿಜೀಯ ರಾಮರಾಜ್ಯವನ್ನು ಸ್ಥಾಪಿಸಬಲ್ಲವು. 1950ನೇ ಜನವರಿ 26ರಲ್ಲಿ ಈ ರಾಜ್ಯಶಾಸನಕ್ಕೆ ಸಚಿ ಜಾಕುವ ಎಲ್ಲ ಸದಸ್ಯರೂ, ಭಾರತದಲ್ಲಿ ಶಾಂತಿ ಮತ್ತು ಸಮೃದ್ಧಿ ನೆಲೆಗೊಳ್ಳುವಂತೆಯೂ ದಲಿತ ವರ್ಗದವರು ವಿಶ್ವ ಸಮಾಜಗಳ ಮಟ್ಟಕ್ಕೇರುವಂತೆಯೂ ಸರ್ವಶಕ್ತಿಯಿಂದ ಬಡಿಯುವೆನೆಂದು ಪ್ರಮಾಣಬದ್ಧರಾಗಬೇಕು"—ಪಂ ಠಾಕೂರ್‌ದಾಸ ಭಾರ್ಗವ (ಪೂರ್ವ ಪಂಜಾಬ್)

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಎಜೆಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಚೇರಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿವವರಾದ
ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನವ್ಯ ಸೇವೆಯನ್ನು
ಸಲ್ಲಿಸಬಯಸ್ತೇವೆಂಬುದೇ ನಮ್ಮ ನಿಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಒರೆಯಿರಿ.

ನೋಟಿಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
O. P. No. 179/1949

ಜಾರ್ವತಿ ಅಮ್ಮ ಕೂಡಾ ... ಅರ್ಜಿದಾರರು
ಮತ್ತು
ಕಂಚ್ಚೇರಿ ಚಂದುನಾಯರ್ - ೨೬ ಜಂತೆಂಟರು
ಇವರೊಳಗೆ

ನೀಲ್ಲಂಡ ವ್ಯವಹಾರದಲ್ಲಿ ಅರ್ಜಿದಾರರಿಗೆ ೨೬ ಜಾಂಟೆಂಟಿನಿಂದ ಸಲುವ ಅನಜುನ್ನಲು ಪಗಿಯುವರೆ ಸಿದ್ರಿ ಅರ್ಜಿದಾರರಿಗೆ ಸತ್ಯವಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಮಾಳ್ಳು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 14-12-1949ಕ್ಕೆ ಯಿಟ್ಟುರುವದ್ರಿಂದ ಆದಿವ್ಸ ಹಾಜ್ರಾಗುವರೆ ತಪ್ಪದಲ್ಲಿ ಎಕ್ಸ ಪಾರ್ಟಯಾಗಿ ತೀರ್ಮಾನಿಸಲಾದೀತೆಂದು ಸಂಗ್ತಿ ಈ ಮೂಲಕ ತಿಳಿಸೋಡಾಗಿರುವುದೆ.

K. P. V. B. Ejaman

Advocate for Petitioners-
Kasaragod)
(6-11-1949)

"ಈ ಘಟನೆಯು ಏಕರೂಪೀ ವಿಧಾನಗಳು ಭಾರತವನ್ನು 'ಫೇಸಿಸ್ಟ್' ಸರ್ವಾಧಿಕಾರೀ ರಾಷ್ಟ್ರವಾಗಿ ಮಾರ್ಪಡಿಸುವಂತಹ ವಿವೆ. ಶ್ರೀ ಶಂಕರರಾವ್ ದೇವ್‌ರೋರೊವ್ಯೆ ಈ ಸಭೆಯಲ್ಲಿ ಕೇಳಿದ್ದಂತೆ, ಈ ಘಟನೆಯೊಂದೊವ್ಯೆಗೆ ಮಂಜೂರಾದರೂ ಭಾರತೀಯ ಜನತೆಯಿಂದಿಗೂ ಇದನ್ನು ಅಂಗೀಕರಿಸಿ ಕೊಳ್ಳುವಂತಿಲ್ಲ. ಜನಮತ ಸಂಗ್ರಹ ನಡೆದಲ್ಲಿ ಜನರು ಈ ಘಟನೆಯನ್ನು ಮೂಲೆಗೆಸೆದು ಬಿಡುತ್ತಾರೆ. ಕೆಲಸಕ್ಕೊಂದು ಭರವಸೆ ಈ ಘಟನೆಯಲ್ಲಿ ಕೊಡಲ್ಪಟ್ಟಿಲ್ಲ. ಕೆಲಸಗಾರರಿಗೆ ಜೀವನಯೋಗ್ಯ ವೇತನವನ್ನು ಉಲ್ಲೇಖಿಸುವ ನಿಬಂಧನೆಯೇ ಇದರಲ್ಲಿಲ್ಲ. ಬಡವರಿಗೆ, ಮಧ್ಯಮವರ್ಗಿಗೆ, ಹಸಿವು ಪೀಡಿತರಿಗಾಗುವಂತಹದಾವುದೂ ಈ ರಾಜ್ಯಶಾಸನದಲ್ಲಿಲ್ಲ. ಅವರ ಮಟ್ಟಿಗಿದುಕೇವಲ ಪೊಳ್ಳೀ ಕಾಗದ. ಈ ಘಟನೆಯನ್ನು ತಯಾರಿಸಿದವರು ಜನ ಸಾಮಾನ್ಯರ ಪ್ರತಿನಿಧಿಗಳಲ್ಲ. ಇದ್ದರಿಂದಲೇ ಇದು ಘಟನಾ ಪಾಡಿಗಳ ಮತ್ತು ಭಂಡವಾಳಗಾರರ ಸ್ವರ್ಗವಾಗಿ ಸರಿಣಮಿಸಿದೆ. ಅದರಲ್ಲಿ ನಮೂದನೆಗೊಂಡಿರುವ ಮೂಲ ಭೂತಹಕ್ಕುಗಳೆಂಬವು ಜನತೆಯ ಕಣ್ಣಿಗೆ ಮಣ್ಣೆರಚುವ ಕಪಟನಾಟಕಮಾತ್ರ. ಆದ್ದರಿಂದಲೇ ತಾವು ಅಧಿಕಾರಕ್ಕೆ ಬಂದರೆ, ಹೊಸ ಘಟನೆಯೊಂದನ್ನು ತಯಾರಿಸಲು ಅಥವಾ ಉಗಿನಡೆದನ್ನು ಸರಿಯಾಗಿ ಬದಲಾಯಿಸಿಕೊಳ್ಳಲು ಪ್ರಯತ್ನಿಸೆಲ್ಲರೂ ಮತವನ್ನಾಧರಿಸಿದ ಹೊಸಘಟನಾ ಸಮಿತಿಯನ್ನು ರಚಿಸಿಕೊಳ್ಳುವೆವೆಂದು ಭಾರತದ ಸಮತಾವಾದಿ ಪಕ್ಷ ಜಾಹೀರುಮಾಡಿದೆ"–ಸಮಷ್ಟವಾದಿ ಪಕ್ಷನಾಯಕ ದಾಮೋದರ ಸ್ವರೂಪ್ ಸೇಟ್.

"ಈ ಘಟನೆಯು ನಾನು ನಿರೀಕ್ಷಿಸಿದಂತಹದಲ್ಲ. ಮಹಾತ್ಮಾ ಗಾಂಧಿಯವರಿಂದ ನಿಯೋಜಿಸಲ್ಪಟ್ಟಿದ್ದ ಪಂಚಾಯತ್ ರಾಜ್ಯವನ್ನಾಧರಿಸಿದ ಘಟನೆಯನ್ನು ನಾನು ನಿರೀಕ್ಷಿಸಿದ್ದೆ. ಅಂತಹ ಘಟನೆ ಮಾತ್ರವೆ, ಬ್ರಿಟಿಷರಿಂದ ಕಪಿಗಣಿಸಲ್ಪಟ್ಟದ್ದು ಈಗಲೂ ಹಾಗೆಯೇ ಇರುವ ಮಿಲಿಯಾವಧಿ ಜನರಿಗೆ ಅನ್ನ ವಸ್ತ್ರಗಳನ್ನೊದಗಿಸಬಲ್ಲುದು"–ಮದ್ರಾಸಿನ ಮಾಜಿ ಪ್ರಧಾನಿ ಟಿ. ಪ್ರಕಾಶಮ್.

FREE !! FREE !!
Dr. OSBORNE'S Famous
REMEDY-REJUVENATOR
"SUPER D' SELIPHOSE" with Atomised GOLD. A boon to the suffering humanity, the lean, debilitated youths, women, brain-workers, aging & the old. Excellant in oldage ailments.
Valuable literature on REJUVENATION & brilliant testimonials from doctors & benefited users posted FREE on request.
The world renowned "OBSTETRIC CONTRIVANCE" invented by the famous American Doctor to know even many months before-hand the exact date of ones delivery, is given as a FREE GIFT with order.
Full particulars sent with literature. An invaluable & indispensable & lasting asset to every family & the married. Price per full course bottle Rs.6 only. Wanted sub-distributors in unrepresented areas.
Available at all chemists.
Distributors:–
NORTHEND NEWSTREET & Co.
(Medical Dept: Post Box No 96
MATTANCHERRY, **COCHIN**

"ಈ ಚರಿತ್ರಾರ್ಹ ಸಂದರ್ಭದಲ್ಲಿ ನಾವು ಸ್ವತಂತ್ರಭ್ಯಕ್ಕೆ ಬೆಲೆತೆತ್ತ ರಾಷ್ಟ್ರವಿಭಜನೆಯನ್ನು ಮರೆಯಬಾರದು. ವಿಭಜನೆಯೆಂಬುದಿರುವ ವರೆಗೆಭಾರತನಾಗರೀಕ ಪಾಕಿಸ್ತಾನವಾಗಲೀ ಶಾಂತಿಯಲ್ಲಿರುವುದು ಅಸಾಧ್ಯವೆಂದು ನನಗೆ ಮನವರಿಕೆಯಾಗಿದೆ. ಭಾರತದ ಎರಡು ಹೋಳುಗಳು ಏಕಮಾತ್ರ ಸಾರ್ವಭೌಮಾಧಿಕಾರೀ ಪ್ರಜಾಸತ್ತಾ ರಿಪಬ್ಲಿಕ್ ಆಗಿ ಒಂದುಗೂಡಿದಾಗಲೇ ಇವೆರಡೂ ಭಾಗಗಳ ವಿಮೋಚನೆ" –ಶಿಬನ್‌ಲಾಲ್ ಸಕ್ಸೇನಾ (ಸಂಯುಕ್ತ ಪ್ರಾಂತ್ಯ)

"ಘಟನೆಯಲ್ಲಿ ಭಾರತೀಯ ಸಂಸ್ಕೃತಿ ಮತ್ತು ಸಂಪ್ರದಾಯಗಳಿಗೆ ಸ್ಥಾನಕೊಡದಿದ್ದುದು ಅತ್ಯಂತ ಶೋಚನೀಯ. ಭಾರತೀಯ ಸಂಪ್ರದಾಯ ಮತ್ತು ಭಾರತೀಯ ಜೀವನ ಕ್ರಮಗಳಿಗೆ ಹೊಂದಿಕೆಯಾಗುವಂತೆ ಇನ್ನು ಎರಡು ಮೂರು ವರುಷಗಳೊಳಗೆ ಈ ಘಟನೆಯ ತಿದ್ದುಪಡಿಯಾಗುವದೆಂದು ನಂಬುತ್ತೇನೆ. ಆರ್ಥಗರ್ಭಿತ 'ಧರ್ಮ' ಪದವೇ ಈ ಘಟನೆಯೊಳಗೆ ಲೋಪವಾಗಿರುವುದು ದೊಡ್ಡತಪ್ಪು"–ರಘುವೀರ (ಮಧ್ಯ ಪ್ರಾಂತ್ಯ)

"ಘಟನೆಯಲ್ಲಿ ರೋಚನೀಯ ಲೋಪದೋಷಗಳಿದ್ದರೂ, ಅವುಗಳನ್ನು ಮುಂದೆ ತಿದ್ದಿಕೊಳ್ಳಬಹುದಾದ್ದರಿಂದ ನಿರಾತಂಕೆಡೆಯಿಲ್ಲ. ರಾಷ್ಟ್ರದಲ್ಲಿ 'ಗಾಂಧೀ ಸಮತಾವಾದ'ವನ್ನು ಸರಕಾರದಲ್ಲಿ ನಿರ್ಮಿಸಲು ಸಾಧ್ಯವಾಗುವದೆಂದು ಹಾರೈಸುತ್ತೇನೆ"–ಶ್ರೀಮತಿ ರೇಣುಕಾ ರೈ (ಪಶ್ಚಿಮಬಂಗಾಳ)

"ಜನತಾ ಸಂಕಲ್ಪವು ಮೂಡಿತೋರ ಬೇಕೆಂಬುದೇ ಈ ಘಟನೆಯ ತಿರುಳಾಗಿದೆ. ಈ ಮೂಲಕ ಒಂದು ರಾಜ್ಯಶಾಸನಕ್ಕೆ ಷ್ಟು ಸಾಧ್ಯವೋ ಅಷ್ಟು ಸಂಪೂರ್ಣವಾದ ಪ್ರಜಾಪ್ರಭುತ್ವವನ್ನು ಕೊಡಲಾಗಿದೆ. ಆದರೀ ಪ್ರಜಾಸತ್ತೆಯು ಯಾವಾರೀತಿ ಕಾರ್ಯಕಾರಿಯಾಗುವುದು – ರಾಜಕೀಯ ಪ್ರಜಾಪ್ರಭುತ್ವವನ್ನಷ್ಟೇ ಅಲ್ಲ, ಉದ್ದಿಮೇ ಪ್ರಜಾಸತ್ತೆ ಹಾಗು ಸಾಮಾಜಿಕ ಪ್ರಜಾಸತ್ತೆಗಳನ್ನೂ ಅದು ಹೇಗೆ ರೂಪಿಸುವುದು– ಎಂಬುದು ಜನತೆಯ ಹಾಗೂ ಅವರಿಂದ ಮುಂದೂಡಲ್ಪಡುವ ನಾಯಕರ ಸಂಕಲ್ಪವನ್ನೇ ಅವಲಂಬಿಸಿಕೊಂಡಿದೆ. ಪೂರ್ಣ ಸಮತಾವಾದಿ ರಿಪಬ್ಲಿಕ್ ರಾಜ್ಯಸ್ಥಾಪನೆ ಎಂದಿದಂತೆ ಜನತೆಯನ್ನು ತಡೆಗಟ್ಟುವಂತಹ ದಾವುದೂ ಈ ಘಟನೆಯಲ್ಲಿಲ್ಲ. ರಾಷ್ಟ್ರವೀ ರಾಜ್ಯಶಾಸನವನ್ನು ಸವಿಶ್ರಿ ನೋಟದಿಂದ ಕಾಣಬೇಕು"–ಭಾರತ ಸಂಕಾರದ ಮಂತ್ರಿ ಕೆ. ಸಂತಾನಮ್.

ಸಾರ್ವಜನಿಕ ರಂಗದ—

ತೋರೀವಿಕೆಯ ಮಟ್ಟಗೆ ಸಂಧಾನಿತರು, ಹಾಗೂ ಕ್ರಮಬದ್ಧರಾಗಿದ್ದು ಒಳಗಿಂದೊಳಗೆ ಆಡ್ಡ ಹಾದಿ ಹಿಡಿದು ತಮ್ಮಿಚ್ಛಾಸೂರ್ತಿ ಮಾಡಿಕೊಳ್ಳುತ್ತಿರುವ ಉದಾರಶೂಲೆಗಳಂತಹ ಗುಪ್ತಗಾಮೀ ಕುಹಕಿಗಳು ವ್ಯಕ್ತಿಗತ ಜೀವನ, ಕುಟುಂಬ ಜೀವನಗಳಂತೆಯೇ ರಾಷ್ಟ್ರಜೀವನದಲ್ಲೂ ಬೇಕಾದಷ್ಟು ಮಂದಿ ದೊರಕುತ್ತಾರೆ. ಕೆಲವಿನಿತು ಬಹಿರಂಗ ಪ್ರತಿಭಟನೆ ಕೊಡುವ ಸ್ವಾಘಾವಿಕ ಪ್ರತಿಧ್ವನಿಗೂ ಅವಕಾಶಕೊಡದೆ, ಒಳಗಿಂದೊಳಗೆ ಯಾತನೆಯನ್ನನುಭವಿಸುತ್ತಾ, ಅಲ್ಲಿಂದಲ್ಲಿಯೇ ಶಮನಿಸಿಕೊಳ್ಳಬೇಕಾಗಿ ಬರುವಂತಹ ಸಮಸ್ಯೆಗಳನ್ನು ನಮ್ಮ ರಾಷ್ಟ್ರಜೀವನದಲ್ಲಿ ಮೂಡಿ ತೋರಿರುವ ಇಂತಹ 'ಒಳಗೋಗ'ಗಳಲ್ಲಿ ಕೆಲವನ್ನು ಇಲ್ಲಿ ಉದಾಹರಿಸಲಾಗಿದೆ.

೦೦೦

ಕಳೆದ ಮೂರು ವರುಷಾವಧಿಯ ಘಟನಾ ಸಮಿತಿ ಅಧಿವೇಶನಗಳಲ್ಲಿ ವಿಶೇಷ ಬಾಯಿ ಹಾಸುವವರೆಂದು, ಹೆಚ್ಚಿನವರ ಅಂತರಿಕ ಜಿಗುಪ್ಸೆ ಮತ್ತು ವಿನೋದಕ್ಕೆ ಪಾತ್ರರಾದ ಸದಸ್ಯರೆಂದರೆ ಶ್ರೀಗಳದ ಎಚ್. ವಿ. ಕಾಮತ್, ಆರ್.ಕೆ. ಸಿಧ್ವ, ನಾಯಿರುದ್ದೀನ್ ಅಹಮ್ಮದ್, ಶಿಬನ್‌ಲಾಲ್ ಸಕ್ಸೇನಾ ಮತ್ತು ಬ್ರಜೇಶ್ವರ ನ್ಯಾಸಾದ್. ಈ ಬಾರಿ ಘಟನೆಯ ತೃತೀಯ ವಾಚನ ನಡೆದಿದ್ದಾಗ ರಾಜಸ್ಥಾನದ ಪ್ರತಿನಿಧಿ ಶ್ರೀ ಗೋಕುಲಭಾಯಿ ಭಟ್ಟರು ತನ್ನ ಭಾಷಣದಲ್ಲಿ 'ಪಂಡಿತ ಕಾಮತ್' 'ಪಂಡಿತ ನಾಯಿರುದ್ದೀನ್ ಅಹಮ್ಮದ್' ಎಂದು ಸಂಬೋಧಿಸಿದ್ದರು. ತನ್ನನ್ನು "ಪಂಡಿತ ಕಾಮತ್" ಎಂದು ಕರೆದುದಕ್ಕಾಗಿ ಶ್ರೀ ಎಚ್. ವಿ ಕಾಮತರು ನಿಷೇಧ ಸೂಚಿಸಿದಾಗ 'ಶ್ರೀ ಕಾಮತರಿಗೆ ಗೀತೆಯು ಚಲೋದಾಗಿ ಬಾಯಿಪಾಠ ಬರುತ್ತಿದೆ. ಮತ್ತವರಿಗೆ ದೇವರ ಮೇಲೆ ದೃಢ ವಿಶ್ವಾಸವಿದೆ. ಆದ್ದರಿಂದ ಅವರನ್ನು ಪಂಡಿತರೆಂದು ಕರೆಯಬಹುದು." ಎಂದು ಗೋಕುಲಭಾಯಿ ಭಟ್ಟರ ಉತ್ತರ ಬಂತು. ಈ ಮಾದರಿಯ ತರ್ಕಗಳನ್ನು ಅಧ್ಯಕ್ಷರಾದರೂ ತೀರ್ಮಾನಿಸುವುದೆಂದರೆ ಹೇಗೆ? ಕಾಲದ ಬೆಲೆ, ವಿಷಯಾನುಗುಣ ಗಾಂಭೀರ್ಯ, ಸಭ್ಯವರ್ತನೆಗಳು ನಮ್ಮ ಪ್ರತಿನಿಧಿ ಸದಸ್ಯರಲ್ಲಿ ಇನ್ನೂ ಸಾಕಷ್ಟು ಮೈಗೂಡಿಲ್ಲವೆಂಬುದಕ್ಕೆ ನಿದರ್ಶನಗಳು ನವ್ಯ ಸ್ವತೀಯ ಸಂಸ್ಥೆಗಳಿಂದಾರಂಭಿಸಿ, ಘಟನಾ ಸಮಿತಿಯ ವರೆಗಿನ ಎಲ್ಲಾ ಸಭೆಗಳಲ್ಲೂ ಕಂಡು ಬರುತ್ತಿವೆ. ತಾ. 18 ರಲ್ಲಿ ಘಟನಾ ಸಮಿತಿ ಸಭೆ ಸಾಗಿತ್ತು; ಶ್ರೀ ರಾಮನಾರಾಯಣ ಸಿಂಹರು ಅಧ್ಯಕ್ಷರ ಬಳಿಗೆ ಹೋಗಿ ಕಿವಿಯಲ್ಲಿ ಏನೋ ಪಿಸುಗುಟ್ಟಿದರು. ಸಭೆಯಲ್ಲಿ ಸದಸ್ಯರು ಖಾಲಿಯಾಗ ಹತ್ತಿರುವುದನ್ನು ಅವರು ಮೆಲ್ಲಗೆ ಅಧ್ಯಕ್ಷರ ಗಮನಕ್ಕೆ ತಂದಿದ್ದರು. ಆಗ ಅಧ್ಯಕ್ಷೆ ಡಾ. ರಾಜೇಂದ್ರ ಪ್ರಸಾದರು ಸಭೆಯನ್ನು ಉದ್ದೇಶಿಸಿ ಹೇಳಬೇಕಾಯಿತು—"ಸದಸ್ಯರು ತಮ್ಮ ಸ್ವಂತ ಭಾಷಣಗಳಿಗಿಂತ ಹೆಚ್ಚಿಗೆ ಇತರರ ಭಾಷಣಗಳನ್ನು ಕೇಳಲು ಅಸಕ್ತಿವಹಿಸುವಂತೆ ನಿರೀಕ್ಷಿಸುತ್ತೇನೆ. ಕೊನೆಯ ಪಕ್ಷ, ಬೇರೆಯವರ ಭಾಷಣಗಳನ್ನೇ ಕೇಳಬೇಕಾಗಿದ್ದು, ಎಂದೂ ಭಾಷಣಮಾಡುವ ಧಾರ್ಷ್ಯವೇ ಇರದ ನನ್ನೊಡನಾದರೂ ಅವರು ಸಹಾನುಭೂತಿ ತೋರಿಸಬೇಕಾಗಿದೆ" ಎಂದು ವ್ಯಂಗ್ಯವಾಗಿ ಹೇಳಿ ಸಭೆಯಲ್ಲಿ ನಗೆಯನ್ನೆಬ್ಬಿಸಿದರು.

೦೦೦

ಶ್ರೀಂ. ಯಸ್. ಯಸ್. ನವರನ್ನು ಕಾಂಗ್ರೆಸಿನ ಸದಸ್ಯರನ್ನಾಗಿ ಸೇರಿಸಿಕೊಳ್ಳಬಹುದೆಂದು ಪಂಡಿತ ನೆಹರುಗಳು ಅಮೆರಿಕಕ್ಕೆ ಹೊರಟ ಸಂದರ್ಭದಲ್ಲೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮಾಡಿಕೊಂಡ ನಿರ್ಣಯ.-ಈ ನಿರ್ಧಾರವನ್ನು ಮನರಾಲೋಚಿಸಬೇಕೆಂದು ಕೆಲವು ಪ್ರಾಂತಿಕ ಕಾಂಗ್ರೆಸ್ ಸಮಿತಿಗಳು ಕೇಳಿಕೊಂಡುದು ಮತ್ತು ದೇಶದಲ್ಲಿ ಭಾವನಾಕ್ಷೋಭೆಯೆದ್ದುದು—ಮುಂತಾದ ಆಗು ಹೋಗುಗಳು ಜನಜನಿತವಿವೆ. ಈಗ ಪಂಡಿತಜೀ ಅಮೆರಿಕೆಯಿಂದ ಮರಳಿ ದೊಡನೆ ಈ ಪ್ರಶ್ನೆಯೊಳಗೆ ತಲೆ ಹಾಕಿ ಪರಿಸ್ಥಿತಿಯನ್ನು ಸುಧಾರಿಸಿದ್ದಾರೆ. ಆರ್. ಯಸ್. ಮತ್ತು ಕಾಂಗ್ರೆಸಿನ ಕುರಿತು ಊಹಕಲ್ಪಟ್ಟ ಪ್ರಶ್ನೆಗೆ ಪಂಡಿತ ನೆಹರುಗಳು ಕೊಟ್ಟ ಸ್ಪಷ್ಟ ಉತ್ತರ ಮತ್ತೀಗ ಅದನ್ನನುಸರಿಸಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಹೊರಡಿಸಿರುವ ಸ್ಪಷ್ಟೀಕರಣಗಳು ಈ ಸಂಬಂಧದ ಭಾವನಾಗೊಂದಲಗಳನ್ನು ನಿವಾರಿಸಿವೆ. "ತಾವು ಅಮೆರಿಕಕ್ಕೆ ಹೊರಡುವ ಮೊದಲು ತಮ್ಮ ಅಭಿಪ್ರಾಯ ಕೇಳಿಕೊಂಡೇ ಆರ್. ಯಸ್. ಯಸ್. ಸದಸ್ಯರನ್ನು ಕಾಂಗ್ರೆಸ್ ಸದಸ್ಯರಾಗಿ ಸೇರಿಸಿಕೊಳ್ಳುವ ನಿರ್ಣಯವನ್ನು ವರ್ಕಿಂಗ್ ಕಮಿಟಿ ಮಾಡಿದುದೆ?" ಎಂದು ಪ್ರಶ್ನಿಸಲ್ಪಟ್ಟಾಗ ಪಂಡಿತ ಜವಾಹರ್‌ಲಾಲರಂದರು: "ಆ ಪ್ರಸ್ತಾಪವನ್ನೇ ನನ್ನೊಡನೆತ್ತಿದುದಿಲ್ಲ. ಆ ಪ್ರಶ್ನೆ ಮುಂದೆ ಬಂದಿದ್ದುದೂ ಇಲ್ಲ. ಆದರೆ ನಾನು ಮರಳಿ ಬಂದೊಡನೆಯೇ ಆದುದೇನು ಎಂಬುದನ್ನು ತಿಳಿಯಲು ಸಹಜವಾಗಿ ಆತುರಗೊಂಡೆ ತಿಳಿದು ಬಂದುದಿಷ್ಟೆ:–ಕಾಂಗ್ರೆಸಿನ ಘಟನೆಗನುಸಾರವಾಗಿ ಆರ್. ಯಸ್. ಯಸ್. ಮೆಂಬರುಗಳನ್ನು ಕಾಂಗ್ರೆಸ್ ಮೆಂಬರುಗಳಾಗಿ ಸೇರಿಸಿಕೊಳ್ಳಬಹುದೇ, ಎಂದು ಬಿಹಾರಿನ ಯಾರೋ ಒಬ್ಬರು ವಿಚಾರಿಸಿದ್ದರು. ಸೇರಿಸಿಕೊಳ್ಳಬಹುದೆಂಬ ಉತ್ತರವೊಂದನ್ನು ಕೊಡಲಾಯಿತು. ನಮ್ಮ ನಿಯಮಾವಳಿಗಳಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವ ಕೆಲವು ಸಂಸ್ಥೆ

THE
PANGAL NAYAK BANK, LTD.,
Head Office: UDIPI.
SAVE FOR THE FUTURE.
SEASON DEPOSITS terminable on or before 30–6—1950 are accepted from 1—10—1949 at the following rates:
For 3, 4 or 5 months at 3 % p. a.
For 6, 7 or 8 months at 3½% p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices

—ಶಕುನೀ ತಂತ್ರಗಳು.

ಗಳ ಕೆಲವು ಸದಸ್ಯರ ವಿನಹ ಬೇರೆ ಪ್ರತಿಯೊಬ್ಬನೂ ಕಾಂಗ್ರೆಸಿಗೆ ಸೇರಬಹುದಾದ್ದರಿಂದ ಆ ಉತ್ತರವು ಸಂಪೂರ್ಣ ಸರಿ. ಆದರೀ ವಿಷಯದೊಳಗೆ ಇದಕ್ಕಿಂತ ಹೆಚ್ಚಿನದು ಅಡಕವಾಗಿದೆ. ಬಹುಶಃ ಇನ್ನೊಂದೆರಡು ದಿನಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರು ಅಥವಾ ಅವರ ವರವಾಗಿ ಬೇರೆಯಾರಾದರೂ ಇದನ್ನು ಸ್ಪಷ್ಟೀಕರಿಸಬಹುದು. ಆರ್. ಯಸ್. ಯಸ್. ಘಟನೆಯತ್ತ ನೋಡಿದರೆ ಇದರಲ್ಲಿ ಆಕ್ಷೇಪಕರವಾದುದೇನೂ ಇಲ್ಲ. ಕಾಂಗ್ರೆಸ್ ಘಟನೆಯತ್ತ ನೋಡಿದರೆ, ಒಳಗೆ ಪ್ರವೇಶಿಸುವ ಮತ್ತದರ ಘಟನೆಯನ್ನು ಒಪ್ಪಿಕೊಳ್ಳುವ ಯಾರನ್ನೇ ಆದರೂ ವಹಿಸಿಕೊಳ್ಳಬೇಕೆಂದೇ ಇದೆ. ಆದರೆ ಅಲ್ಲಿ ಬೇರೆ ಎರಡು ಅಥವಾ ಮೂರು ವಿಷಯಗಳಿವೆ. ಆರ್. ಯಸ್. ಯಸ್. ಎಂಬುದು ಒಂದು ಸ್ವಯಂಸೇವಕ ಸಂಘವೆಂಬುದು ಸ್ವಯಂ ಸಿದ್ಧ; ಸ್ವತಃ ಅದರ ಹೆಸರೇ 'ಸ್ವಯಂ ಸೇವಕ ಸಂಘ'. ಕಾಂಗ್ರೆಸಿನ ಇತರ ನಿಯಮಗಳ ಪ್ರಕಾರ ಕಾಂಗ್ರೆಸಿಗನಾದವನು ಕಾಂಗ್ರೆಸಿನ ಸೇವಾದಳದ ಹೊರತು ಬೇರೊಂದು ಸ್ವಯಂ ಸೇವಕ ದಳಕ್ಕೆ ಸೇರಲು ಸಾಧ್ಯವಿಲ್ಲ. ಆದ್ದರಿಂದ, ಇಚ್ಛೆಯಿದ್ದರೆ ಓರ್ವ ಆರ್. ಯಸ್. ಯ.ಸ್.ನವನು ಕಾಂಗ್ರೆಸಿಗೆ ಸೇರಬಲ್ಲನಾದ್ದರಿಂದ ಹಾಗೆ ಮಾಡಿದೊಡನೆಯೇ, ಆತನು ಕಾಂಗ್ರೆಸಿನದಲ್ಲವಾದ ಒಂದು ಸ್ವಯಂಸೇವಕ ದಳಕ್ಕೆ ಸೇರಿದವನಿರುವುದರಿಂದ ಆತ ಆರ್. ಯಸ್. ಯಸ್.ನಲ್ಲಿ ಇರಬಹುದೋ ಕೂಡದೋ ಎಂಬ ಪ್ರಶ್ನೆಯೇಳುತ್ತದೆ. ಹೀಗಾಗಿ, ಆತನು ಆ ಮತ್ತೊಂದರಿಂದ ಹೊರಗೆ ಬಾರದೆ ಇದನ್ನು ಸೇರಲಾರ. ಇದಾದರೋ ಒಂದು ರೀತಿಯ ಘಟನಾತ್ಮಕ ಗೊಂದಲ ಮಾತ್ರ. ರಾಷ್ಟ್ರೀಯ ಹಾಗೂ ಇತರ ಸಮಸ್ಯೆಗಳ ಕಡೆಗಿನ ಆರ್. ಯಸ್.ಯಸ್. ಧೋರಣೆ ಹೇಗೆಂಬ ಮೂಲಭೂತ ವಿಷಯವೇ ಇಲ್ಲಿಯ ಮುಖ್ಯಸಾರ. ರಾಷ್ಟ್ರೀಯತೆ. ಲೌಕಿಕತೆ. ಜಾತ್ಯತೀತತೆಯೆಂದು ಸ್ಥೂಲ ರೂಪದಿಂದ ಕಟ್ಟಿಕೊಳ್ಳಬಹುದಾದ ಕಾಂಗ್ರೆಸ್ ವಿಧಾನಗಳು ನಿಮಗೆ ಸಾಕಷ್ಟು ಪರಿಚಿತವಿವೆ. ಆರ್. ಯಸ್. ಯಸ್. ನವರದು ಸುಸ್ಪಷ್ಟವಾದ ಜಾತೀಯತಾ ವಿಧಾನವೆಂದು ನಾನನ್ನುತ್ತೇನೆ. ಹೀಗಾಗಿ ಅದು ಕಾಂಗ್ರೆಸ್ ಮನೋವೈತ್ತಿಗೆ ಹೊಂದಿಕೆಯೇ ಆಗುವದಿಲ್ಲ. "ಪಂಡಿತ ಜವಾಹರಲಾಲರು ಎತ್ತಿ ತೋರಿಸಿದ ಈ ಪ್ರಶ್ನೆಯನ್ನು ಅನುಸರಿಸಿ ಇದೇ ತಾ. 17ರಲ್ಲಿ ಸೇರಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು "ಕಾಂಗ್ರೆಸ್ ಸದಸ್ಯರಾಗಿ ಸೇರಿದ ಮೇಲೆ ಯಾವನೊಬ್ಬನೂ ಆರ್. ಯಸ್.ಯಸ್. ಸದಸ್ಯನಾಗಿರಕೂಡದು" ಎಂಬ ಸ್ಪಷ್ಟೀಕರಣ ಕೊಟ್ಟಿದೆ. ಕಾಂಗ್ರೆಸ್ ಘಟನೆಯ IVನೇ ನಿಬಂಧನೆಯಲ್ಲಿ ಅದರ ಗುರಿ ನಿರೂಪಿಸುವ Iನೇ ನಿಬಂಧನೆಗೊಪ್ಪಿ ಸಹಿ ಹಾಕುವ, ಪ್ರಾಯ 21 ಮಿಕ್ಕಿದ ಯಾವನಾದರೂ ಕಾಂಗ್ರೆಸ್ ಸದಸ್ಯನಾಗಬಹುದೆಂದಿದೆ. ಆ ಪ್ರಕಾರ ಆರ್. ಯಸ್. ಯಸ್.ನವರು ಕಾಂಗ್ರೆಸಿಗೊಮ್ಮೆ ಸೇರಿಬಿಡಬಹುದು. ಆದರೆ ಕಾಂಗ್ರೆಸ್ ನಿಬಂಧನೆಯಲ್ಲಿರುವ ತಿಸ್ತು ನಿಯಮಾವಳಿಯಲ್ಲಿ ಈ ಕೆಳಗಿನ ಸ್ಪಷ್ಟ ನಿಯಮವೊಂದಿದೆ:"ಕಾಂಗ್ರೆಸ್ ಸೇವಾದಳದವಿನಹ ಬೇರಾವುದೇ ಸ್ವಯಂಸೇವಕ ದಳವನ್ನು ಕಾಂಗ್ರೆಸಿಗರು ಸೇರಿಕೊಳ್ಳುವದಾಗಲೀ ಸಂಘಟಿಸುವದಾಗಲೀ ಕೂಡದು" ಈ ಪ್ರಕಾರ ಯಾವನಾದರೊಬ್ಬನು ಕಾಂಗ್ರೆಸ್ ಸದಸ್ಯನಾಗಿರೆ ಆ ಮೇಲೆಂದೂ ಆರ್. ಯಸ್. ಯಸ್. ನಲ್ಲಿರ ಕೂಡದು. ಇದೀಗ ಸ್ಪಷ್ಟನಾಗಿರುವ ಸಂಗತಿ. ಒಂದೋ ಕಾಂಗ್ರೆಸ್, ಇಲ್ಲವೇ ಆರ್. ಯಸ್. ಯಸ್. ಹೊರತು, ಈ ಪೂರ್ವ ಪಶ್ಚಿಮವೆರಡರಲ್ಲೂ ತೋರಿಬರುವ ಮಹೇಂದ್ರ ಜಾಲ ಅಸಾಧ್ಯ ಈ ರೀತಿ ವಾತಾವರಣವೀಗ ತಿಳಿಗೊಂಡುದಕ್ಕಾಗಿ ಸಂತೋಷಿಸುವಾಗಲೇ ಕಾಂಗ್ರೆಸಿನ ಅಧ್ಯಕ್ಷರು, ಕಾರ್ಯದರ್ಶಿಗಳಂತಹ ಜವಾಬ್ದಾರೀ ವ್ಯಕ್ತಿಗಳು ಆ ದನ್ನು ಹಾಗೇಕೆ ಕದಡಿದ್ದರೆಂಬ ಸೋಜಿಗವೇಳುತ್ತಿದೆ. ಬಿಹಾರ್ ಕಾಂಗ್ರೆಸಿಗರು ಸ್ಪಷ್ಟೀಕರಣ ಕೇಳಿದಾಗ ಕಾರ್ಯದರ್ಶಿ ಕಲಾ ವೆಂಕಟರಂಯರಾಗಲೀ, ಅಧ್ಯಕ್ಷ ಪಟ್ಟಾಭಿಗಳಾಗಲೀ ಸ್ಥಾನ ಬಲದಿಂದ ತಾವಾಗಿ ಉತ್ತರ ಕೊಡಬಹುದಿದ್ದರು 'ಆರ್. ಯಸ್. ಯುಸ್.ಗೆ ಸಭ್ಯಗೆ ತಕ್ಕೋರುವಂತಹ ಒದ್ದು ರಂಪನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ಮಾಡಿಸುವ ಅಗತ್ಯವೇನಿತ್ತು? ಹಾಗೆ ನಿರ್ಣಯ ಮಾಡಿದಾಗ 'ಸೇರಬಹುದು'ಎಂಬ ನಿಬಂಧನೆಯನ್ನಷ್ಟೇ ಎತ್ತಿ ತೋರಿಸಿದ್ದರಲ್ಲದೆ 'ಸೇರಿದವರು ಬೇರೆ ಸ್ವಯಂ ಸೇವಕ ದಳದಲ್ಲಿರಬಾರದು' ಎಂಬ ತಿಸ್ತು ನಿಯಮದ ಪ್ರಸ್ತಾಪವನ್ನೇ ಎತ್ತದಿರಲು ಕಾರಣವೇನು? ಪಂಡಿತ ನೆಹರೂಗಳಾ ತದರ ಜ್ಞಾಪಕಕೊಡಿಸುವ ವರೆಗೂ ಯಾರೂ ಬ್ಬರಿಗೂ ಅದು ನೆನಪೇ ಇರಲಿಲ್ಲ ವೆಂದರೇನು? ಕಾಂಗ್ರೆಸ್ ಅಧ್ಯಕ್ಷರಿಗೆ, ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯರಿಗೆ ಎಲ್ಲರಿಗಿಂತ ಹೆಚ್ಚಾಗಿ ಕಾಂಗ್ರೆಸ್ ಕಾರ್ಯದರ್ಶಿ ಶ್ರೀಕಲಾ ವೆಂಕಟರಂಯರಿಗೆ-ಒಂದೋ ಕಾಂಗ್ರೆಸ್ ಘಟನೆಯು ಸರಿಯಾದ ಜ್ಞಾನವಿಲ್ಲದಿರಬೇಕು, ಇಲ್ಲವೇ ಆರೆಸ್ಸೆಸ್ ನಂತಹ ಜಾತೀಯತಾ ಸಂಸ್ಥೆಯವರನ್ನು ಅಲಂಗಿಸಿಕೊಳ್ಳುವ ದುರ್ಬುದ್ಧಿಯಿರಬೇಕು, ಎಂಬುದು ಸ್ಪಷ್ಟವಲ್ಲವೆ? ಆ ಪೈಕಿ ಯಾವುದೇ ಇದ್ದರೂ ಅದು ತೋಜನೀಯ ಮತ್ತು ಖಂಡನೀಯವೆನ್ನದೆ ನಿರ್ವಾಹವಿಲ್ಲ.

೦೦೦

ಸಹಕಾರ ಬುದ್ಧಿಯ ಗಣ್ಯ ಕಿರುಕುಳಗಳು ವಿಪರೀತ ಕಂಡುಬರುತ್ತಿರುವ ಒಂದು ರಂಗವೆಂದರೆ ಭಾಷಾವಾರು ಪ್ರಾಂತ್ಯ ರಚನಾ ವಾತಾವರಣ. ಪ್ರಶ್ನಾತೀತವಾದ ಶುದ್ಧ ತೆಲುಗು ಭಾಗಗಳನ್ನು 'ಆಂಧ್ರ ಪ್ರಾಂತ್ಯ'ವಾಗಿ ಪ್ರತ್ಯೇಕ ಸಜೀವ ಕೆಂಬ ಆಂಧ್ರರ ಬೇಡಿಕೆಗೆ ತಮಿಳು ಸಮ್ಮತಿ ಮತ್ತು ಮದ್ರಾಸ್ ಸರಕಾರದ ಅನುಮೋದನೆ ದೊರೆತು, ಆದೀಗ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಿಂದ ಶಿಫಾರಸು ಮಾಡಲ್ಪಟ್ಟು ಸರಕಾರದ ಆವಗಾಹನೆಯಲ್ಲಿದೆ. ಹೊಸ ಘಟನೆಯು ಜಾರಿಯೊಂದಿಗೆ ಆಂಧ್ರ ಪ್ರಾಂತ್ಯಕ್ಕೆ ಅಸ್ತಿತ್ವ ದೊರೆತು ಮುಂದಿನ ಮಹಾ ಚುನಾವಣೆಯ ಮೊದಲು ಆದು ರೂಪುಗೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ಮದ್ರಾಸ್ ನಗರದ ಪ್ರಸ್ತಾಪವೆತ್ತದೆ, ಆಕ್ಯಪಕ್ಕದ ತಮಿಳು, ಕನ್ನಡ, ಭಾಗಗಳವರ ಯಾವುದೇ ವಿಧದ ಆಕ್ಷೇಪಗಳಿಗೆಡೆಯಿಲ್ಲದ ಭಾಗಗಳನ್ನಷ್ಟೇ ಪ್ರಕೃತ ಆಂಧ್ರ ಪ್ರಾಂತ್ಯವಾಗಿ ಸೇರಿಸಬಹುದೆಂಬುದು ಶ್ರೀಮೂರ್ತಿ ಸಮಿತಿಯು ಹಾಕಿರುವ ಸ್ಪಷ್ಟ ಶರ್ತ. ಹೀಗಿದ್ದರೂ ಈಗ ಮುಂದೊಡ್ಡಿರುವ 'ಆಂಧ್ರ ಪ್ರಾಂತ್ಯ'ದ ಗಡಿಯೊಳಗೆ ಕನ್ನಡ ಜಿಲ್ಲೆಯಾದ ಬಳ್ಳಾರಿಯ ೨ ತಾಲೂಕುಗಳ ವೈಕೆ ಆಲೂರು, ಆದೋನಿ ಮತ್ತು ರಾಯದುರ್ಗ, ಈ ಮೂರು ತಾಲೂಕುಗಳನ್ನು ತೆಲುಗರು ಸೇರಿಸಿಕೊಂಡಿದ್ದಾರೆ. ಉಳಿದ ಆರು ತಾಲೂಕುಗಳ ಕುರಿತೂ ಮುಂದೆ ಕಾಲ ಬಂದಾಗ ತೆಲುಗರ ಬೇಡಿಕೆ ಬಂದೇ ಬರಲಿದೆ. ಈಗ ಸೇರಿಸಕೂಳ್ಳುವ ಭಾಗಗಳು ಸಂದೇಹಾತೀತವಿರಬೇಕೆಂಬ ನಿಯಮಾನುಸಾರವಾಗಿ ಒಮ್ಮೆ ಸೇರಿ ಹೋದ ಭಾಗಗಳ ಕುರಿತು ಇನ್ನೆಂದಾದರೂ ಪ್ರಶ್ನೆಯೆತ್ತುವ ಸಂದರ್ಭವೇ ಬರುವಂತಿಲ್ಲ. ಬಳ್ಳಾರಿಯ ಆಲೂರು, ಆದೋನಿ, ರಾಯದುರ್ಗ ತಾಲೂಕುಗಳು ಆಂದಿನಿಂದೀವರೆಗೂ ಕರ್ನಾಟಕದ ಅಂಗವಾಗಿಯೇ ಇವೆಯೆಂದು ಕನ್ನಡಿಗರ ಸರಕಾರಣ, ಸಾಧಾರ ವಾದವಿದೆ. ಹೀಗಿದ್ದರೂ ಆದು ವಿಚಾರಾತೀತವಾಗಿಸಬೇಕಾದ ವಿವಾದದ ವಿಷಯ. ಎಂತಹ ವಿವಾದಕ್ಕೂ ಆವಕಾಶವೇ ಇರದ ಭಾಗಗಳನ್ನು ಮಾತ್ರ ಪ್ರಕೃತ ಸೇರಿಸಿಕೊಳ್ಳತಕ್ಕದ್ದೆಂಬ ಸ್ಪಷ್ಟ ಶರ್ತವಿರುವಂಗ್ಗ, ಆ ತ್ರಿಮೂರ್ತಿ ಸಮಿತಿ ಸದಸ್ಯರಲ್ಲೊಬ್ಬರಾದ ಕಾಂಗ್ರೆಸ್ ಅಧ್ಯಕ್ಷರು! ಪಟ್ಟಾಭಿಗಳ ಅಭಿಮತವನು ಸಾರ್ವಾಗಿಯೇ ಆಂಧ್ರರು ಆ ಭಾಗಗಳನ್ನು ಕೇಳಿರುವುದು ಸರಿಯೆ? ಕನ್ನಡಿಗರ ಮೇಲೆ ಮತ್ತೊಂದೆಡೆಯಿಂದ ಕವಿದು ಬಿದ್ದಿರುವ ಆಕ್ರಮಣವೆಂದರೆ ಮಲೆಯಾಳಿಗಳದು. ಅವರು ದಕ್ಷಿಣ ಕನ್ನಡದ ಕಾಸರಗೋಡು ತಾಲೂಕಷ್ಟೇ ಅಲ್ಲ; ಇಡೀ ದಕ್ಷಿಣಕನ್ನಡವೇ ಕೇರಳನೆಂದು ಕನವರಿಸಹತ್ತಿದ್ದಾರೆ. 'ಕೇವಲ ಭಾಷೆಯೊಂದನ್ನೇ ಗಡಿಸದೆ ಪಶ್ಚಿಮಕರಾವಳಿಯ ಬಿಲ್ಲೆಗಳನ್ನೊಂದುಗೂಡಿಸಿ ಒಂದು ಪ್ರಾಂತ್ಯವಾಗಿ ಕಟ್ಟಬೇಕು" ಎಂಬ ಸ್ವರವು ಕೇರಳದ ಪ್ರಮುಖರಿಂದ ಗಟ್ಟಿಗಟ್ಟಿಯಾಗಿ ಹೊರಡಹತ್ತಿದೆ. ಇತ್ತ ಕೇವಲ ಕನ್ನಡಿಗರನ್ನು ಕಂಡರೂ ಅವರೊಳಗಡೆಯಲ್ಲೂ ಅನಗತ್ಯವಾದ ಹಾಗೂ ಅಲ್ಪಾಫಲಾಪೇಕ್ಷೆಯ ಕಾಹಕ ಮೇಲಾಟಗಳೇ! ಮೈಸೂರನ್ನು ಮಿಕ್ಕ ಕರ್ನಾಟಕ ಭಾಗಗಳೊಂದಿಗೆ ಏಕೀಕರಣಗೊಳಿಸುವದರಿಂದ ತನ್ನ ಸ್ವಾತಂತ್ರಕ್ಕೆ ಹಾನಿಯಿದೆ ಎಂದು ನೆನೆಸಿರುವ ಮೈಸೂರಿನ ಕೆಲವು ಪ್ರಮುಖರಿಗಲ್ಲದೆ ಜೈ ಕರ್ನಾಟಕ ಗೂ ಇಂದು ಮೈಸೂರನ್ನೊಳಗೊಂಡು ಅಖಂಡ ಕರ್ನಾಟಕ ಆಗುವದು ಬೇಡವಾಗಿಲ್ಲ. ಆದರೂ ಅಧುನಿಕ ಭಾರತದಲ್ಲಿ ಬೇರಾವ ರಾಜ್ಯಗಳೂ ಇರದ ಸ್ವಾತಂತ್ರ್ಯ ಸೌಭಾಗ್ಯಗಳನ್ನು ಮೈಸೂರರಸರಿಗೆ ದೊರಕಿಸಿಕೊಡಲು ವೃಥಾ ಒದ್ದಾಟ ನಡೆಸಿರುವರಿದ್ದಾರೆ.

ತಾಲವು ಮಿಂಚುವೇಗಗೊಡಿಸಿ; ಸ್ವತಃ ವೃಗತಿಶೀಲವಾಗಿದೆ. ಸ್ವಾರ್ಥ, ಕುಹಕ ಬುದ್ಧಿಗಳು ತಾತ್ಕಾಲಿಕ ವಿಜಯಗೊಂಡರೂ ಅದರ ಫಲವನ್ನನುಭವಿಸುವ ಮೊದಲೇ [illegible] ಕಿಮುಂಧಾವಿಸುತ್ತಿದೆ. ಹೀಗಿದ್ದರೂ ಈ ಕ್ರಾಂತಿಯುಗದಲ್ಲಿ ಕೂಡಾ ಶಕುನೀತಂತ್ರಗಳನ್ನು ಹೂಡುವವರಿಗೆ ಕೊರತೆಯಿಲ್ಲ' ಇದೀಗ ಸೋಜಿಗ!

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

R. E. P. No 550/1949

ಶಂಕರನ್ ನಂಬೂದ್ರಿ ... ಅರ್ಜಿದಾರ

ಮತ್ತು

ಗೋವಿಂದನ್ ತಿರ್ನಂಬು ... ಪ್ರತಿವಾದಿಗಳು

ಇವರೊಳಗೆ.

ಸದ್ರಿ ಅರ್ಜಿದಾರನ ಕಡೆ ನೋಟೀಸು.

ನೋಲ್ಟಂದ ವ್ಯವಹರಣೆಯಲ್ಲಾದ ದಿಕ್ಕ್ರಿಕಾರಿ ಬರತಕ್ಕ ಅಭಿಜು ವ್ಯಲು ಕುರಿತು ಅರ್ಜಿದಾರನು ದಾಕ್ಲು ಮಾಡಿದ ಅನ್ಲಜ್ಯಾರ್ಥಿ ಅರ್ಜಿಯು ತಾರೀಕು 8-12-1949ಕ್ಕೆ ತನ್ನಿಗೆ ಯಿಟ್ಟಿರುವ ಸಂಗ್ತಿ ಈ ಮೂಲಕ ತಿಳಿಸೋ ಣಾಗಿಯಿದೆ.

K. P. V. B Ejaman
Advocate for Petitioners

Kasaragod
21-11-1949

ಪ್ರಕಟಣೆ.

ಕುಂದಾಪುರ ತಾಲ್ಲೂ ಚಿತ್ತೂರು ಗ್ರಾಮದ ಶ್ರೀ ಪಾರ್ವತಿಪರಮೇಶ್ವರಿ ದೇವಸ್ಥಾನದ ದಶಾವತಾರ ಸೇವೆಯ ಆಟವು ಇದೇ ನೈಷ್ಕಿಕವಾಗಿ 9ಕಲುವ ತಾ 25-11-49ನೆ ಶುಕ್ರವಾರದಿನ ಸಾಯಂಕಾಲ ವೆಂತಲೂ ಸದ್ರಿ ಸೇವೆಯನ್ನು ಲಾಭ ವ, ಲುಳ್ಳವನಿಗೆ ವಹಿಸಿಕೊಳ್ಳುವ ವಾಸಸ್ಸುಳ್ಳವರು ತಾ 30-11-49ಕ್ಕೆ ಸದ್ರಿದೇವಸ್ಥಾನಕ್ಕೆ ಅಪರಾಹ್ನಘಂಟೆ 2ಕ್ಕೆ ಹಾಜ್ರಾಗಬೇಕು. ಅಹಿರಂಗವಾದ ದರ್ಖಾಸ್ತು ಮೂಲಕ ಲಾಭನಷ್ಟಕ್ಕೆ ಕೊಡುತ್ತಾರೆ. ಮತ್ತು ಸದ್ರಿ ಸೇವೆಕ್ಕೆ ಬಯವ ಪಾತ್ರಧಾರಿಗಳು ಜಾಗನತರು ಕೂಡಾ ತಾ 25-11-49ಕ್ಕೆ ಶ್ರೀ ದೇವಸ್ಥಾನದಲ್ಲಿ ಸೇರಬೇಕಾಗಿ ಆಡಳ್ತೆದಾರರು ತಿಳಿಸುತ್ತಾರೆ.

ಪರೇಲ್ ಸೂರಪ್ಪಶೆಟ್ಟಿ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 504/49

ವಾದಿಯು- ಶ್ರೀಂಗಾರ ಪೆಗ್ಡ್ತಿ ಕೂಡಾ

ಪ್ರತಿವಾದಿಯು- ಚನ್ನಯ್ಯಶೆಟ್ಟಿ ಕೂಡಾ-

ಪ್ರತಿವಾದಿಯು. 1 ಚನ್ನಯ್ಯಶೆಟ್ಟಿ, ನಾಗಮ್ಮ ಶೆಟ್ತಿ ಮಗ- 5 ನಂಜಪ್ಪಶೆಟ್ಟಿ- 7 ಲಕ್ಕಮ್ಮ ಶೆಟ್ತಿ- 8 ಹೆಂಯಣ್ಣ ಶೆಟ್ಟಿ-ಸೂರಮ್ಮ ಶೆಟ್ತಿ ಮಕ್ಕಳು. 13 ಅಕ್ಕಯ್ಯಯಾನೆ ಪ್ರೀದೇವಿ ಶೆಟ್ತಿ- ಕಾವೇರಿ ಶೆಟ್ತಿ- ಮಗಳು, ಕುಂದಾಪುರ ತಾಲ್ಲೂ ವಂದ್ಸೆಗ್ರಾಮದ ಅತ್ಯಾನಿಯಲ್ಲಿರುವವರು.

ಸದ್ರಿ ಪ್ರತಿವಾದಿಂಗೆ ತಿಳಿಯಪಡಿಸುವುದೇನೆಂದ್ರೆ

ನಾದಿಯು ತಾ 25-8-47ರಂದ ನಮಗೆ ಬರತಕ್ಕ ಅಶನಾಧ್ಯದ ಬಗ್ಗೆ ಮೇಲಿನ ಪಾವೆಯನ್ನು ದಾಕಲುಮಾಡಿದ್ದಾರೆ. ಸದ್ರಿ ಪಾವೆಯು ತಾರೀಕು 29-11-49ಕ್ಕೆ ತನ್ನಿಗೆ ಯಿಟ್ಟಿದೆ. ಆ ಕುರಿತು ನಮ್ಮ ಆಕ್ಷೇಪ ಏನಿದ್ದರೆ ಆ ದಿನ ಹಗಲು 11ಘಂಟೆಗೆ ಹಾಜರಾಗಿ ಮೇಲಿನ ಕೋರ್ಟಿನಲ್ಲಿ ಜ್ಞಾಪೀಸು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ತಿಳಿಸಿದೆ.

By order of the court
K. Venkappa Shetty
Pleader for Plaintiff.

Coondapoor
15—11—49

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted

ನವಯುಗ
ಉಡುಪಿ ಗುರುವಾರ ತಾರೀಕು ೨೬-೧೧-೧೯೪೮

ನಿರೀಕ್ಷೆ—ನಿರಾಶೆ!

"ಮಲ್ಪೆಯನ್ನು ಪ್ರಬುದ್ಧ ಬಂದರಾಗಿ ನಿರ್ಮಿಸಲು ಶಿಫಾರಸು ಮಾಡಿರುವ, 'ಪಶ್ಚಿಮ ಕರಾವಳಿ ಪ್ರಬುದ್ಧ ಬಂದರಾಭಿವೃದ್ಧಿ ಸಮಿತಿ'ಯ ವರದಿಯ ಕುರಿತು ಯಾವುದೇ ಕಾರ್ಯಚರಣೆ ಕೈಕೊಳ್ಳಲು ಭಾರತ ಸರಕಾರವಿಗ ತಯಾರಿಲ್ಲ" ಎಂಬ ವಾರ್ತೆಯು ದಿಲ್ಲಿಯಿಂದ ಬಂದಿದೆ. ಸಮಿತೀ ಶಿಫಾರಸುಗಳಂತೆ ವರ್ತಿಸದಂತೆ ಪ್ರಕೃತ ಸರಕಾರಕ್ಕೆ ತಡೆಯೊಗಿರುವ ಮುಖ್ಯ ಕಾರಣಗಳಲ್ಲಿ ಹಣದ ಅಭಾವ ಒಂದೆಂದು ತಿಳಿದು ಬಂದಿದೆ. ಮರ್ಮಗೋವಾ ಮತ್ತು ಕೊಚ್ಚಿಗಳ ನಡುವೆ ಒಂದು ಪ್ರಬುದ್ಧ ಬಂದರ ರಚನೆಯಾಗ ಬೇಕಾದುದು ಅಗತ್ಯವೆಂಬುದು ಬ್ರಿಟಿಷ್ ಆಡಳಿತೆಯ ಕಾಲದಲ್ಲೆ ಮನವರಿಕೆಯಾಗಿದ್ದ ವಿಷಯ. ಉದ್ಯಮಗಳ ಅಭಿವೃದ್ಧಿ ಮತ್ತು ವ್ಯಾಪಾರ ವಹಿವಾಟುಗಳ ಹೆಚ್ಚಳದ ಮೂಲಕ್ಕೂಪಕ್ಷದ ಆರ್ಥಿಕ ಸ್ಥಿತಿಯನ್ನು ಬಲಪಡಿಸ ಬೆಯನ್ನು ತನ್ನ ಪ್ರಥಮಾವಶ್ಯಕತೆಗಳಲ್ಲೊಂದಾಗಿ ಗಣಿಸಿರುವ ಸ್ವತಂತ್ರ ಭಾರತ ಸರಕಾವು, ಪಶ್ಚಿಮ ಕರಾವಳಿಯಲ್ಲೊಂದು ಮಹಾಬಂದರವನ್ನು ಕಂಡುಹಿಡಿಯಲು ಸಮಿತಿಯೊಂದನ್ನು ನೇಮಿಸಿಕೊಂಡಿತು; ಅದು ಅಗತ್ಯವಿಲ್ಲ ಪ್ರತ್ಯಕ್ಷ ಪರೀಕ್ಷೆಗಳನ್ನು ನಡೆಸಿ, ಸುದೀರ್ಘ ಹಾಗೂ ಸವಿವರ ವಿಚಾರ ವಿಮರ್ಶೆಗಳ ನಂತರವೇ ಮಲ್ಪೆಯನ್ನು ಶಿಫಾರಸು ಮಾಡಿತು. ಮಂಗಳೂರು, ಭಟ್ಕಳ ಮತ್ತು ಕಾರವಾರಗಳೂ ಈ ಸ್ಥಾನಕ್ಕಾಗಿ ದೀರ್ಘಕಾಲದಿಂದ ವಿಶೇಷ ರೀತಿಯಿಂದ ಸ್ಪರ್ಧಿಸಿದ್ದುದನ್ನೂ, ಈ ಕಾರಣದಿಂದ ಸಂಬಂಧಪಟ್ಟ ಭಾಗಗಳ ಜನತೆಯಲ್ಲಿ ಎದ್ದಿದ್ದ ಅಭಿವ್ಯಾಯಾಂಶೋಲನಗಳನ್ನೂ ನೆನಪುಮಾಡಿ, ಇಂತಹ ವ್ಯರ್ಥಸ್ಪರ್ಧೆ ಯಾಕೆ ಬೇಕಿದ್ದಿತು, ಎಂದೀಗ ಪ್ರಶ್ನಿಸಬೇಕಾಗುತ್ತದೆ. ಅದನ್ನು ಉತ್ತರಿಸಬೇಕಾದವರು ಕೇಂದ್ರ ಸರಕಾರದವರೇ. ಬಂದರದ ಅವಶ್ಯಕತೆಯನ್ನು ಮನಗಂಡು ತಜ್ಞರ ಸಮಿತಿಗಾಗಿಯೂ ಇತರ ರೀತಿಯಿಂದಲೂ ಹಣ ಮತ್ತು ಸಮಯ ವ್ಯಯವಾಗಿ, ಒಂದು ಬಂದರ ಸ್ಥಾಪನೆಯನ್ನು ಗೊತ್ತುಪಡಿಸಿ ಕೊಂಡ ಭಾರತ ಸರಕಾರವು, ಈಗ ಫಕ್ಕನೆ ಆ ನಿರ್ಧಾರವನ್ನು ಅನಿಶ್ಚಿತಾವಧಿಯವರೆಗೆ ಹಿಂದೆ ಹಾಕಿದುದೇಕಾಗಿ ಎಂಬುದು ವಿವರವಾಗಿ ತಿಳಿದುಬಂದಿಲ್ಲ; ಆದರೆ ನಿಜಕ್ಕೂ ಬಲವಾದಕಾರಣವಿರಲೇಬೇಕು. ಅದು ಸ್ಪಷ್ಟವಾಗಿ ಪ್ರಕಟವಾಗುವವರೆಗೆ ಆ ಕುರಿತು ವಿಮತಿಸಲಾಗುವದಿಲ್ಲವಾದರೂ ಒಂದು ಪ್ರಶ್ನೆ ಸಹಜವಾಗಿ ಮೂಡುತ್ತಿದೆ ಇಷ್ಟೆಂದು ಆಸಕ್ತಿಯಿಂದ ಪ್ರಥಮ ಪ್ರಯತ್ನಗಳನ್ನು ಮಾಡಿದ್ದ ಒಂದು ಕಾರ್ಯವನ್ನು ಮುಂದುವರಿಸುವಂತೆ ಮಾಡಿದ ಆ ಅಡಚಣೆಯೇನು? ಆಂತಾತ್ಮಿಗಾಗಿ ಮೂಡಿಸಿ ಅಂತಹ ಆತಂಕಗಳು ಸರಕಾರದ ಊಹೆಗೆ ಈ ಮೊದಲು ನಿಲುಕಿರಲಿಲ್ಲವೆ? ಪ್ರಬುದ್ಧ ಬಂದರ ರಚನೆಗಾಗಿ, ಇಷ್ಟು ದೀರ್ಘಾವಧಿಯಿಂದ ಇಷ್ಟೆಲ್ಲಾ ಕೆಲಸಗಳನ್ನು ನಿರ್ವಹಿಸಿ, ಸಂಬಂಧಪಟ್ಟ ಭಾಗಗಳ ಜನರಲ್ಲಿ ವಿಶೇಷ ರೀತಿಯ ಆತ್ಮ, ನಿರೀಕ್ಷೆಗಳನ್ನು ನಿರ್ಮಿಸಿದ ಮೇಲೆ; ಅದನ್ನು ಇಂತಿಷ್ಟು ವರುಷಗಳೊಳಗೆ ಆರಂಭಿಸಲೆಂಬ ಅವಧಿಯನ್ನಾದರೂ ಪೇಳಿ ಆರ್ಥ ವಿರಾಮ ಕೊಡದುದು ನ್ಯಾಯವಿದ್ದಿತು; ಬದಲಿಗೆ 'ಬಂದರ ಸಮಿತಿ'ಯ ಶಿಫಾರಸು ದೊರೆತೊಡನೆಯೇ "ಆದರಂತೆ ವರ್ತಿಸಲಾಗುವದಿಲ್ಲ" ಎಂಬ ಭಾವನೆಯನ್ನು, ಮಾತ್ರಕೊರಗೆಡಹಿ ಸುಮ್ಮನಾಗಿದುದು ಹಲವು ವಿಧದ ಸಂದೇಹಗಳಿಗಾಸ್ಪದ ಕೊಟ್ಟಿದೆ. ಸರಕಾರದ ಅಧಿಕೃತ ಹಾಗೂ ಸ್ಪಷ್ಟ ಹೇಳಿಕೆಯ ನಿರೀಕ್ಷೆಯಿರುವಾಗ ಈ ಕುರಿತು ಹೆಚ್ಚಿಗೇನನ್ನೂ ಹೇಳುವುದಸಾಧ್ಯ. 'ಮಲ್ಪೆ ಮಹಾಬಂದರಾಗುವುದು; ಸದ್ಯ ಕ್ಕೇನೇ ಆಗುವುದು' ಎಂಬ ನಿರೀಕ್ಷೆಯಲ್ಲಿರುವ ಸಾರ್ವಜನಿಕರು ತಮ್ಮ ಆತುರಾವೇಗಗಳನ್ನು ತಾವಾಗಿ ತಮ್ಮನಿಸಿಕೊಳ್ಳಲಿ, ಎಂದಿನ್ನೇ ಪ್ರಕೃತ ಹೇಳಬೇಕಾಗಿದೆ. ಮಹಾಬಂದರ ಯೋಜ್ಯತಾ ಸ್ಪರ್ಧೆಯಲ್ಲಿ ಮಲ್ಪೆ ಜಯಿಸಿತು; ಪರೀಕ್ಷೆಯಲ್ಲಿ ತೇರ್ಗಡೆಹೊಂದಿ 'ಸರ್ಟಿಫಿಕೇಟು' ಪಡೆಯಿತು; ಆದರೆ ಈ ಯೋಗ್ಯತೆಗನ್ನ ಗಣನಾದ ಸ್ಥಾನ ದೊರೆಯುವುದೆಂದಿಗೆ, ಎಂಬ ನಿಶ್ಚಯವಿಲ್ಲ; ಆ ಕಾಲ ಬರುವಾಗಲೂ ಈ ತೀರ್ಮಾನದ ಮೌಲ್ಯ ತಗ್ಗದಾದರೂ ಆಗ ಯಾವ ಯಾವ ಹೊಸ ವಿದ್ಯಮಾನಗಳು ಮುಂದೆ ಬರುವವೋ ಎಂಬುದನ್ನು ಈಗ ಊಹಿಸುವುದಸಾಧ್ಯ. ಸರಕಾರವನ್ನು ವಿಜ್ಞಾಪಿಸಿಕೊಳ್ಳಲಾಗುವ, ಅಥವಾ ಒತ್ತಾಯಿಸಲಾಗುವ ರೂಪದಲ್ಲಿ ಪ್ರಕೃತ ಈ ಪ್ರಶ್ನೆಯುಳಿದಿಲ್ಲ. ಆದ್ದರಿಂದ ಸದ್ಯ ಈ ವಿಷಯವೇ ತಮ್ಮ ಕೈಬಿಟ್ಟಿತೆಂದು ಗಣಿಸಿ, ಈ ಸಂಬಂಧವಾಗಿ ಸರಕಾರದ ವಿಶೇಷ ಹೇಳಿಕೆಯೇನಾದರೂ ಇರಬಹುದೇ ಎಂಬುದನ್ನಷ್ಟೇ ಈಗ ನಿರೀಕ್ಷಿಸಬೇಕಲ್ಲದೆ ಆನ್ಯಥಾ ಇಷ್ಟಿ. ಹಿಗ್ಗಾದುದು ಸಮಂಜಸವಲ್ಲ, ಎನ್ನುತ್ತೇವೆ.

ಜನಜೀವನ ರಂಗದಲ್ಲಿ—

ಭಾರತದ ನಿತ್ಯ ಜೀವನ ಹಾಗೂ ಆರ್ಥಿಕರಂಗದಲ್ಲಿ ಸಾರ್ವಜನಿಕರು ಸರಕಾರವನ್ನು ದೂರಲಾಗುವ ಲೋಪದೋಷಗಳು ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತಾ ಬಂದಿವೆ. ಆವುಗಳ ಪೈಕಿ ಸದ್ಯದ ಅಭಾವ ಯುಗದಲ್ಲಿ ಅನಿವಾರ್ಯವಾದವುಗಳಾವುವು—ಸರಕಾರದ ರೀತಿನೀತಿಗಳ ದೋಷಗಳ ದೆಸೆಯಿಂದ ಹುಟ್ಟಿದವುಗಳಾವುವು—ಎಂಬುದನ್ನು ವಿಂಗಡಿಸಲು ಜನಸಾಮಾನ್ಯರಿಗೆ ತಿಳಿದಿಲ್ಲವೆಂಬುದು ನಿಜ. ಆದರೆ 'ನಮ್ಮ ಸರಕಾರ' ಎಂಬ ಅಭಿಮಾನದಿಂದ ಜನತೆಯು ವಿಶೇಷ ಸಹನೆ ವಹಿಸಿದೆ, ಎಂಬುದನ್ನು ಮರೆಯಬಾರದು. ಬ್ರಿಟಿಷರ ಕಾಲದ್ದೇ ಆಗಿರುವ ನೌಕರ ಯಂತ್ರದ ಸ್ವಭಾವಬದ್ಧ ದೋಷ-ಸರಕಾರಿಂದ ಸೂಕ್ಷ್ಮಧಾರಿಗಳಲ್ಲಿರುವ ಆಡಳಿತೆಯ ಅನಾನುಭವ-ಮುಂತಾದುವುಗಳಿಂದಾಗಿ ಸಾರ್ವಜನಿಕರ ನಿತ್ಯ ಜೀವನದಲ್ಲಿ ಕಷ್ಟನಷ್ಟಗಳ ನ್ನೊಡ್ಡಿರುವ ಪ್ರಮಾದಗಳಾಗುತ್ತಿವೆ, ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಇಂತಹ ತಾತ್ಕಾಲಿಕ ಆಡಚಣೆಗಳ ನಿವಾರಣೆಗಾಗಿಯೂ, ಆಹಾರ ಸ್ವಾವಲಂಬನದಂತಹ ನಿಶ್ಚಿತ ಯೋಜನೆಗಳ ಜಯಶೀಲತೆಗಾಗಿಯೂ ತಮ್ಮ ನೌಕರ ಯಂತ್ರದ ಗತಿಯನ್ನೂ, ರೀತಿನೀತಿಗಳನ್ನೂ ಕೇಂದ್ರ ಹಾಗೂ ಪ್ರಾಂತೀಕ ಸರಕಾರಗಳು ಕ್ಷಿಪ್ರಗತಿಯಿಂದ ಸುಧಾರಿಸಿಕೊಳ್ಳಬೇಕಾದುದು ಅಗತ್ಯ. ಇಲ್ಲವಾದರೆ ಜನಸಾಮಾನ್ಯರ ಅಶ್ವಷ್ಟ ಮತ್ತು ನಿರಾಶೆಗಳು ಬೆಳೆಯುತ್ತಾ ಹೋಗಿ, ಅನಾಹುತ ಸನ್ನಿವೇಶಗಳು ಉಂಟಾಗಬಹುದು.

ನಿದರ್ಶನಕ್ಕಾಗಿ ಇಡೀ ರಂಗ್ಯದಲ್ಲಿ ಇಂದು ಕಂಡುಬರುತ್ತಿರುವ ಸಕ್ಕರೆಯ ಅಭಾವವನ್ನು ಎತ್ತಿಕೊಳ್ಳಬಹುದು. ಈ ಅಭಾವಕ್ಕೆ ನ್ಯಾಯವಾದ ಕಾರಣವಾವುದೂ ತೋರುವುದಿಲ್ಲ; ಇದು ಲಾಭಖೋರರಿಂದ ನಿರ್ಮಾಣಗೊಂಡ ಅನಿರೀಕ್ಷಿತ ಆಪತ್ತು ಎಂಬುದು ಖಚಿತವಾಗಿದೆ. ಹಿಂದಿನ ವರುಷದ ಉಳಿತಾಯ ಮತ್ತು ಪ್ರಚಲಿತ ವರುಷದ ಉತ್ಪನ್ನ ಕೂಡಿ ಸಾಕಷ್ಟು ಸಕ್ಕರೆಯು ಕಾರ್ಖಾನೆಗಳಲ್ಲಿ ಇದ್ದೇ ಇದೆ. ಆದರೆ "ಸಕ್ಕರೆ ಸಿಂಡಿಕೇಟ್"ನವರಿಂದ ಅದರ ಬೆಲೆ ಹುಟ್ಟದಂತೆ ನಿಯಂತ್ರಿಸುವುದಸಾಧ್ಯವಾಯಿತೆಂದು ಸರಕಾರವು ಸಕ್ಕರೆಯ ದಾಸ್ತಾನುಗಳನ್ನು ವಶಪಡಿಸಿಕೊಂಡು ಮೌಲ್ಯ ಕಟ್ಟಲು ಗೈಹಾಕಿತು, ಕೂಡಲೇ ಹೆಚ್ಚಿನಂಶ ಸಕ್ಕರೆ ಸರಕಾರದ ಕೈಗೆ ದೊರೆಯದೆ ಅತಿಗಿರಾಂಡಿತು—ಇಂದಿನ ಅಭಾವಕ್ಕೆ ಮತ್ತು ಧಾರಣೇಹೆಚ್ಚಳಕ್ಕೆ ಕಾರಣವಿದು. ನವ್ಯಲ್ಲಿಯ ಕಳ್ಳಸಂತೆವ್ಯಾಪಾರಸ್ಥರನ್ನು ಗೆಲ್ಲಲು ಸರಕಾರಕ್ಕೆ ಸಾಧ್ಯವಾಗಿಲ್ಲ; ಅಥವಾ ಅವರನ್ನು ಕಠೋರ ರೀತಿಯಿಂದ ಬಗ್ಗು ಬಡಿಯಲು ಸರಕಾ ಕ್ಕೆ ದಾಕ್ಷಿಣ್ಯ ಬಡಿಲಿಲ್ಲ, ಎಂದು ಇದಕ್ಕರ್ಥವಾಗುವದಲ್ಲವೆ?

'ಸಾರ್ವಜನಿಕ ಕೂಲಿಗಾರರಂತಿರುವ ಕಳ್ಳಸಂತೆವ್ಯಾಪಾರಸ್ಥರನ್ನು ವಾಶಿಗೆ ಕೊಡಬಹುದು' ಎಂದ ಪಂಡಿತ ನೆಹರುಗಳ ಆ ಕಾಲದ ಉದ್ಗಾರವನ್ನು ಈಗ ಸ್ಮರಿಸುವುದಕ್ಕೆ ಕೂಡಾ ಲಜ್ಜೆಯನ್ನಿಸುವದಿಲ್ಲವೆ? ಮೈಮೇಲೆ ಬಂದು ಬಿದ್ದ ಭೀಕರಕಾರದ ಎಷ್ಟೋ ಆಪತ್ತುಗಳನ್ನು ಜಯಿಸಿಕೊಂಡ ನಮ್ಮ ಸರಕಾರಕ್ಕೆ ಒಳಗಡೆಯ ಈ ಕಂಟಕವನ್ನು ಆಷ್ಟೇ ನಿರ್ದಾಕ್ಷಿಣ್ಯವಾಗಿ ನಿವಾರಿಸಿಕೊಳ್ಳುವಸಾಧ್ಯವಾಗಿದೆ ಎಂದ ದೇನು?

ಈ ಕಾಲದಲ್ಲಿ ವಿಶೇಷವಾಗಿ ಮಧ್ಯಮ ವರ್ಗದವರು ಮತ್ತು ಕೆಳ ಮಧ್ಯಮವರ್ಗದ ಜನರಪ್ಪು ಆರ್ಥಿಕ ದುಸ್ಥಿತಿಗೆ ಈಡಾಗಿರುವವರು ಬೇರಿಲ್ಲವೆಂಬುದು ಖಂಡಿತ. ಈ ವರ್ಗದ ಜನರು ಅನುಭವಿಸುತ್ತಿರುವ ಕಷ್ಟನಷ್ಟಗಳು ಅಸಹ್ಯವಿವೆ; ಆದರೂ ಆಸರು ತೋರಿಸುತ್ತಿರುವ ಸಹನೆಯು ಅನ್ಯಾದೃಶ್ಯವಿದೆ. ಭಾರತೀಯ ವ್ಯಾಪಾರೀ ಸಂಸ್ಥೆಯ ಸದಸ್ಯ ಮತ್ತು 'ಈಸ್ಟ್ ಇಂಡಿಯಾ ಕಾಟನ್' ಎಸೋಸಿಯೇಶನ್'ನ ಅಧ್ಯಕ್ಷ ಸರ್ ಹುರುಷೋತ್ತಮದಾಸ್ ಠಾಕೂರ್‌ದಾಸ್‌ರಂತಹ ಶ್ರೀಮಂತರ ಮನಸ್ಸನ್ನು ಕೂಡಾ ಕರಗಿಸುವಷ್ಟು ಹೀನಸ್ಥಿತಿ ಮಧ್ಯಮ ವರ್ಗದವರದ್ದಾಗಿದೆ. "ಸದ್ಯದ ಆರ್ಥಿಕ ದುಸ್ಥಿತಿಯು ವಿಶೇಷ ರೀತಿಯಿಂದ ಒಡಿದಿರುವುದೆಂದರೆ ಮಧ್ಯಮ ವರ್ಗದ ಹಾಗೂ ಕೆಳಮಧ್ಯಮ ವರ್ಗದ ಜನತೆಗೆ. ದುರ್ದೈವವಶಾತ್ ಈ ವರ್ಗದವರನ್ನೂ ನೆಲಕ್ಕೊತ್ತಲ್ಪಡುತ್ತಲೇ ಇದ್ದಾರೆ. ವ್ಯಜೆಲಿತ ಜನರಿಂದ ಈ ವಿಭಾಗವಾವ ರೀತಿ ಕೆಳಗಪ್ಪಳಿಸಲ್ಪಡುತ್ತಿದೆಯೆಂದರೆ, ಇಂದಿನ ಮಗುವೇ ಮುಂದಿನ ಶ್ರಮಜೆಯಾಗುವ ಗತಿ ಇದರ ದುಷ್ಪರಿಣಾಮವು ಕ್ಷಿಪ್ರವಾಗಿಯೂ ಮತ್ತು ಭವಿಷತ್ಕುಲದಲ್ಲಿಯೂ ತೋರುವುದಲಿದೆ" ಎಂದು ಮೊನ್ನೆ ತಾನೇ ಬೊಂಬಾಯಿಯಲ್ಲಿ ಸರ್ ಹುರುಷೋತ್ತಮದಾಸರಂದಿದ್ದಾರೆ. ಈ ಮೊದಲು ದಿಲ್ಲಿಯಲ್ಲಿ ನಡೆದಿದ್ದ 'ಚೇಂಬರ್ ಆಫ್ ಕಾಮರ್ಸ್'ನ ವಾರ್ಷಿಕಾಧಿವೇಶನದಲ್ಲಿ ಭಾಷಣಮಾಡಿತ್ತ ಪಂಡಿತ ಜವಾಹರಲಾಲರಿಗೆ ಕೊನೆಯ ಧನ್ಯವಾದವರ್ಪಣವನ್ನಿತ್ತ ಸರ್. ಪುರುಷೋತ್ತಮದಾಸರು ನೆಹರುಗಳ ಮುಖನೋಡುತ್ತಾ "ಪ್ರಧಾನಿಯವ್ಯಕ್ತಿ ವಿಶೇಷ ಲಕ್ಷ್ಯಕೊಟ್ಟು ಆರ್ಥಿಕ ನೀತಿಯಿಂದ ಮನುಷ್ಯನೆಂದರೆ, ತಮ್ಮ ಸರಕಾರಿಂದ ಕಡೆಗೆ ಅಧಿಕ ಸಹನೆ ಮತ್ತು ವಿಶ್ವಾಸವನ್ನಿಟ್ಟ ರೊಂತು ಅತ್ಯಂತ ಶೋಚನೀಯ ಜೀವನವನ್ನು ಸಾಗಿಸುತ್ತಿರುವ ಬಡ ಮಧ್ಯಮವರ್ಗದ ಮನುಷ್ಯನೆಂಬುದನ್ನು ನೀನು ನಿವೇದಿಸಿಕೊಳ್ಳಲಾ ಜನಸಾಮಾನ್ಯರ ಅಭಿವೃದ್ಧಿಯ ಕಡೆಗೆ ಲಕ್ಷ್ಯಕೊಡುವಾಗ ಈ ವರ್ಗದ ಮನುಷ್ಯನನ್ನು ತಾತ್ಸಾರಮಾಡಿಬಾರದೆಂದು ತವ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈ ದಿನ ಇಂತಿದ ಅಧಿಕಾಧಿಕ ಮನುಷ್ಯಸಂಕಲ ಮಧ್ಯಮ ವರ್ಗದ ಮನುಷ್ಯಕಳೆತೆಯ ಸ್ಥಿತಿಯಲ್ಲಿದ್ದಾನೆ" ಎಂದು ಹೇಳಿದಾಗ "ನಾನಿದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇನೆ" ಎಂದು ನೆಹರುಗಳಂ

ದಿದ್ದರು ಸರ್. ದಾಸರು ಮುಂದಿಟ್ಟಿದ್ದರು: "ನಿಜಕ್ಕೂ ಪಂಡಿತ ನೆಹರೂಗಳೊಪ್ಪಿದರೆ, ಆದರೆ ಮಧ್ಯಮ ವರ್ಗದವರಿಗಾಗಿ ಭಾರತ ಸರಕಾರವಾಗಲೀ ಸ್ವಾಂತಿಕ ಸರಕಾರಗಳಾಗಲೀ ಏನನ್ನೇ ಆದರೂ ಮಾಡಿದುದನ್ನು ಇತ್ತೀಚೆ ವರೆಗೂ ನಾನರಿಯೆ, ಬದಲಿಗೆ ಅಂದಿನಿಂದಿತನಕ ಪರಿಸ್ಥಿತಿ ಮತ್ತಷ್ಟು ಹಾಳಾಗಿದೆ" ಈ ವಾದವನ್ನು ಅಲ್ಲಗಳೆಯಲು ಪಂಡಿತ ನೆಹರೂ ಗಳಿಗಾದರೂ ಸಾಧ್ಯವೇ? ತಮಗೆ ಸಾಧ್ಯವಿಲ್ಲದ ಎಲ್ಲಾ ವಿಧಾನಗಳಲ್ಲೂ ಉಪಯೋಗಿಸಿ, ಮಧ್ಯಮ ವರ್ಗದ ಹಾಗೂ ಬಡ ಜನಸಾಮಾನ್ಯರೆಲ್ಲರ ಜೀವನ ಸ್ಥಿತಿ ಸುಧಾರಿಸುವ ತಮ್ಮ ಪಾಲಿನ ಕರ್ತವ್ಯವನ್ನು ಪೂರ್ಣವಾಗಿ ಪಾಲಿಸಿಕೊಂಡಿರುವೆವೆಂದು ಮಂತ್ರಿಗಳು ಮನಸ್ಸಾಕ್ಷಿಪೂರ್ವಕ ಹೇಳಬಲ್ಲರೆ?

ಫುಟಾಲಾ ಸಮಿತಿಯಲ್ಲಿ ನಡೆದ ನವಶಾಸನದ ತೃತೀಯ ವಾಚನದ ವೇಳೆ ಬಹು ತೀಕ್ಷ್ಣವಾಗಿ ಎಲ್ಲಾ ವರ್ಗದ ಸದಸ್ಯರಲ್ಲೂ ಒಮ್ಮತವಿದ್ದಂತೆ ಕಂಡುಬಂದ ಒಂದು ಲಕ್ಷಣವೆಂದರೆ ಅದರಲ್ಲಿ ನಿಶ್ಚೈಸಲ್ಪಟ್ಟಿರುವ ಸರಕಾರೀ ಆಫೀಸರರ ಸಂಬಳ ಮಟ್ಟ: ಬ್ರಿಟಿಷ್ ಆಳ್ವಿಕೆಯ ಕಾಲದ ರೂ. 5000 ಮತ್ತದಕ್ಕೂ ಹೆಚ್ಚಿನ ವಿದಾಯಿಗಳ ವೇತನಾಕ್ರಮ ಮಟ್ಟವೇ ಈಗಲೂ ಸ್ವತಂತ್ರ ಭಾರತ ಸರಕಾರದಲ್ಲಿದೆ. ಇದೇ ಸಮರ್ಥನವನ್ನು ನವಶಾಸನದಲ್ಲೂ ನಮೂದಿಸಲಾಗಿದೆ. ಸ್ವಾತಂತ್ರ್ಯ ಸಂಗ್ರಾಮಕಾಲದಲ್ಲಿ ಬ್ರಿಟಿಷ್ ಆಡಳಿತ ಮೇಲೆ ಹೊರಿಸಿದ್ದ ಆರೋಪಗಳಲ್ಲೊಂದಾದ 'ನೌಕರಿಯ ಮಿತಿ ೧೦೦ ಸಂಬಳ' ನ್ನು ಈ ಸ್ವಾತಂತ್ರ್ಯ ಯುಗದಲ್ಲಿಯೂ ಇದ್ದಂತೆ ಉಳಿದಿರುವುದಲ್ಲದೆ, ಮುಂದಿನ ದಿನಗಳಲ್ಲಿ ಭಾರತದಲ್ಲೂ ಹೀಗೇಯೇ ಇರುವುದೆಂದಾಗಿದೆ. 'ತಿಂಗಳಿಗೆ ರೂ. 500 ಶ್ರೀಮಂತ ಹೆಚ್ಚಿಗೆ ಯಾರಿಗೂ ಸಂಬಳವಿರಬಾರದು' ಎಂಬ ನಿರ್ಣಯವನ್ನು ಕರಾಚಿ ಕಾಂಗ್ರೆಸ್ ಒಪ್ಪಿದ್ದರೂ, ಜನಸಾಮಾನ್ಯರ ಉಪ್ಪನ್ನ ಮತ್ತು ತರಿಗೆದಾರರ ಕರತೆರುವ ಸಾಮರ್ಥ್ಯಕ್ಕಿ ಹೊಂದಿಕೆಯಾಗುವಂತೆ ಸರಕಾರೀ ನೌಕರರ ಸಂಬಳದ ಮಟ್ಟವಿಂದು ಬೇಕಾದುದು ಯಾವ ರಾಷ್ಟ್ರಕ್ಕಾದರೂ ತಿಳಿಸಿದ ನ್ಯಾಯ. ಭಾರತದ ಜನತೆಯ ಸರಾಸರಿ ವಮಾನವನ್ನು ತೀರಾ ಕೆಳಮಟ್ಟದಲ್ಲಿರುವಾಗ ಸರಕಾರೀ ನೌಕರರ ಸಂಬಳವನ್ನು ಇಷ್ಟು ಮೇಲ್ಮಟ್ಟದಲ್ಲಿರಿಸಿರುವುದು ನ್ಯಾಯ್ರ ಸ್ಥಿತಿಗೆ ಚಿರಂಯುಷ್ಯ ದಾನಮಾಡುವುದು ನ್ಯಾಯವೇ? ರಾಷ್ಟ್ರದ ಇಂದಿನ ಆರ್ಥಿಕ ಸ್ಥಿತಿ ಸುಧಾರಣೆಗಾಗಿ ನೌಕರಿ ಸಂಬಳಗಳಲ್ಲಿ ಕಡಿತ ಮಾಡಿಕೊಳ್ಳುವ ಯೋಜನೆಯನ್ನು ಭಾರತ ಸರಕಾರವೀಗ ಕೈಗೊಂಡಿದೆ; ಆ ಯೋಜನೆಯಂತೆ ಕೇಂದ್ರ ಸರಕಾರದ ನೌಕರರ ಸಂಬಳಗಳನ್ನು ತಗ್ಗಿಸಲಾಗಿದೆಯೆಲ್ಲದೆ ಪ್ರಾಂತಿಕ ಸರಕಾರಗಳೂ ಈ ಮಾದರಿಯನ್ನನುಸರಿಸಬೇಕೆಂದು ನಿರ್ದೇಶಿಸಿದೆ; ಅದೇಕ್ಕನುಸಾರವಾಗಿ ಪ್ರಾಂತ್ಯಗಳಲ್ಲೂ ಸಂಬಳ ಕಡಿತ ಮತ್ತು ಕಡ್ಡಾಯವಿ ಉಳಿತಾಯವಿಧಾನಗಳು ಜಾರಿಗೆ ಬರುತ್ತಿವೆ. ಕೇಂದ್ರ ಸರಕಾರದ ಈ ಯೋಜನೆಯಂತೆ ರೂ 3000 ಮತ್ತು ಹೆಚ್ಚಿಗೆ ಮಾಸಿಕವೇತನ ಪಡೆಯುವವರ ಸಂಬಳದಲ್ಲಿ ಸೇಕಡಾ 10ರಂತೆ ಕಡಿತ ಮಾಡಲಾಗುವುದು. ರೂ. 250 ಮತ್ತು ಹೆಚ್ಚಿಗಿಂತ ಹೆಚ್ಚಿಗೆ ಸಂಬಳ ಪಡೆಯುವವರು ರೂಪಾಯಿಯಲ್ಲಿ 1½ ಆಣೆ, ರೂ. 501ರಿಂದ 1000ದ ವರೆಗಿನವರು 2 ಆಣೆ, ರೂ 1001ರಿಂದ 2000ದ ವರೆಗಿನವರು 2½ ಆಣೆ, ರೂ. 2001ರಿಂದ 3000ದವರೆಗಿನವರು 3 ಆಣೆ, ರೂ. 3001 ಮತ್ತು ಅದಕ್ಕೂ ಹೆಚ್ಚಿನವರು 3½ ಆಣೆಗಳಂತೆ ಪೆಸ್ರವಿಡೆಂಟ್ ಫಂಡಿಗೆ ಕಡ್ಡಾಯವಾಗಿ ಜವೆ. ತೆರುತ್ತಾ ಹೋಗಬೇಕು ಪರಿಸ್ಥಿತಿಯೇ ಈ ರೀತಿ ಸಂಬಳ ಕಡಿತಗಳನ್ನು ಅನಿವಾರ್ಯಗೊಳಿಸಿರುವಾಗ, ನೌಕರರ ವೇತನ ಮಟ್ಟವನ್ನೂ ಉದ್ಯಮೆಗಳ ಪೂರಕೀ ಲಾಭಾಂಶವನ್ನೂ ಜನಸಾಮಾನ್ಯರ ಉತ್ಪನ್ನಗಳಿಗನುಗುಣವಾಗುವಂತೆ ತಗ್ಗಿಸಿಕೊಳ್ಳುವದೂ ನಿಯಂತ್ರಿಸಿಕೊಳ್ಳುವದೂ ಅಗತ್ಯವಲ್ಲವೆ? ಈ ಅವಶ್ಯಕತೆಯು ರಾಜ್ಯಭಾರ ನಿರ್ವಹಿಸುವವರೆಗೂ ಹಾಗೂ ರಾಜ್ಯ ಶಾಸನ ತಯಾರಿಸುವವರಿಂ ಮನಸ್ಸಿಗೆ ನಾಟದಿರಲು ಕಾರಣವೇನು?

ಪ್ರತಿಯೊಂದಕ ಸ್ಥಿತಿಗತಿಗಳೆಲ್ಲವೂ ಕೆಲವು ದಿನಗಳಲ್ಲಿ ತುಲನಾತ್ಮಕವಾಗಿ ಶಾಂತ ರೂಪಾಂತರವಿವೆ. ಚೈನಾಯುದ್ಧ, ಬರ್ಮಾ ಹೋರಾಟ, ಮಲಯದ ಗೊಂದಲಗಳಂತಹ ಬಿಸಿಬಿಸಿಗಳು ಕೊನೆಯ ಅಂಕಕ್ಕೆ ಬಂದಿದ್ದು, ಅಥವಾ ಅಲ್ಲೇ ಕೊಳೆಯಹತ್ತಿದಂತಾಗಿ ಅಕರ್ಷಣೆಯನ್ನು ಹಾಗೂ ಹುಟ್ಟಿನ ಆವಾಯಗಳ ಲಕ್ಷಣಗಳನ್ನು ಕಳಕೊಂಡಿವೆ ಹೊಸಘರ್ಷಣೆಗಳೇಳದಂತೆ ಶಾಂತ ವ್ಯವಹಾರ್ಯ ವಿಧಾನಗಳನ್ನೇ ಸಂಬಂಧಪಟ್ಟವರು ಅಂಗೀಕರಿಸಿಹತ್ತಿರುವುದು ಕಂಡುಬರುತ್ತಿದೆ. ಹೀಗಾಗಿ ಲೋಕಯುದ್ಧಕ್ಕಿಂತ, ಲೋಕಶಾಂತಿಯ ತಕ್ಕಡಿ ತಗ್ಗಿದೆ.

೦೦ ೦೦ ೦೦

ಜಾಗತಿಕ ಸಂಸ್ಥೆಯ ಚರ್ಚೆ ಮತ್ತು ಕಾರ್ಯಕಲಾಪಗಳಲ್ಲಿಯೂ ಉಗ್ರತೆ ಗಿಂತ ಹೆಚ್ಚಿಗೆ ಶಾಂತತೆಯೇ ತೋರಿಬಂದಿದೆ. ಆಫ್ರಿಯಾದ ಸಂಬಂಧವಾಗಿ ಚರ್ಚೆ ಮತ್ತು ಸಾಶ್ಚಾತ್ಯ ರಾಷ್ಟ್ರಗಳೊಳಗಿರುವ ವಿವಾದಗಳನ್ನು ಬಗೆಹರಿಸಿಕೊಂಡು ಅಲ್ಲಿ ಶಾಂತಿಸ್ಥಾಪಿಸುವ ಸಂಬಂಧವಾಗಿ ನ್ಯಾಯೋಕ್ತಿನಲ್ಲಿ ಅಮೆರಿಕ, ಬ್ರಿಟನ್, ಫ್ರಾನ್ಸ್ ಮತ್ತು ರಶ್ಯಾ ಪ್ರತಿನಿಧಿಗಳ ಸಮ್ಮೇಳನವು ನಡೆದಿದ್ದು ಅಲ್ಲಿಯ ಮಾತುಕತೆಗಳು ಸೂರ್ಣ ಸಮಾಧಾನಕರ ರೀತಿಯಿಂದ ಸಾಗಿಸುವುವೆಂದು ತಿಳಿದು ಬಂದಿದೆ.

ಇಟೆಲಿಯ ಹಿಂದಿನ ವಸಾಹತುಗಳ ಆಡಳಿತೆ ವ್ಯವಸ್ಥೆಗಾಗಿ ರಾಜಕೀಯ ಸಮಿತಿ' ಯು ಸಮಾಧಾನಕರ ಸೂಚನಾವಳಿಗಳನ್ನು ತಯಾರಿಸಿದ್ದು, ಜಾಗತಿಕ ಸಂಸ್ಥೆಯ ಜಾಹೀರು ಅಧಿವೇಶನದಲ್ಲಿ ಅವುಗಳ ಚರ್ಚೆನಡೆದಿದೆ.

ಪೂರ್ವ ಬಾಲ್ಕಾದಲ್ಲಿ ಅಲ್ಲಿಯ ರಿಪಬ್ಲಿಕ್ ಸೇನೆಗಳಿಗೂ ಅಕ್ಕಮ ಸೇನಾ ಗುಂಪುಗಳಿಗೂ ಹೋರಾಟ ಸ್ಫೋಟಗೊಂಡ ವಾರ್ತೆಯಿದೆ. ಜಾಗತಿಕ ಸಂಘದ ಪರಿಶೀಲಕರು ಗಲಭೆ ಸ್ಥಳಗಳಿಗೆ ಧಾವಿಸಿದ್ದಾರೆ.

ಕಾಮನ್‌ವೆಲ್ತ್ ರಾಷ್ಟ್ರಗಳ ವಿದೇಶ ಮಂತ್ರಿಗಳ ಸಮ್ಮೇಳನವು 1950ರ ಆದಿ ಭಾಗದಲ್ಲಿ ಸಿಲೋನಿನ ರಾಜಧಾನಿ ಕೊಲಂಬೋದಲ್ಲಿ ಜರಗಲಿದ್ದು, ಆ ಸಂಬಂಧದ ಆಮಂತ್ರಣವು ಭಾರತ ಸರಕಾರಕ್ಕೆ ಬಂದಿದೆ ಸಮಯಾನುಕೂಲವಾದರೆ ಪಂಡಿತ ನೆಹರೂಗಳು ಈ ಸಮ್ಮೇಳನಕ್ಕೆ ಹೋಗಲಿದ್ದಾರೆ.

ಲೋಕದ ಆಹಾರ ಉಳಿತಾಯಗಳ ವಿತರಣಾ ವ್ಯವಸ್ಥೆಗಾಗಿ 58 ರಾಷ್ಟ್ರಗಳ ಸಮ್ಮೇಳನವೊಂದು ಇದೇ ತಿಂಗಳ 21ರಲ್ಲಿ ಆಮೇರಿಕದ ವಾಷಿಂಗ್ಟನಿನಲ್ಲಿ ಆರಂಭಿಸಿದೆ. ಆಹಾರ ಉಳಿತಾಯಗಳ ಸರಿಯಾದ ವಿತರಣೆಗಾಗಿ 'ಜಾಗತಿಕ ವಿತರಣಾಲಯ' ವೊಂದನ್ನು ಸ್ಥಾಪಿಸಿಕೊಳ್ಳುವ ಸೂಚನೆಯು ಈ ಸಮ್ಮೇಳನದ ಮುಂದಿದೆ.

ಗೋಧಿಯ ಆಮದು ಸಂಬಂಧವಾಗಿ ಮಾತಾಡಲು ಅಮೆರಿಕಕ್ಕೆ ಹೋಗಿದ್ದ ಭಾರತದ ರಾಯಭಾರಿ ಸರ್. ದೇಶಮುಖರು ಲಂಡನ್ನಿಗಾಗಿ ಭಾರತಕ್ಕೆ ಮರಳಿದ್ದಾರೆ. ಈ ಸಂಬಂಧದ ವಾಷಿಂಗ್ಟನ್ ಮಾತುಕತೆಗಳು ವಿಶೇಷ ಪ್ರಗತಿಗೊಳ್ಳಿಲ್ಲವೆಂದು ತಿಳಿದು ಬಂದಿದೆ.

೦೦ ೦೦ ೦೦

ಪಂಡಿತ ನೆಹರುಗಳು ಪ್ರವಾಸದಿಂದ ಮರಳಿದ ನಂತರ ಪತ್ರಿಕಾ ಸಮ್ಮೇಳನ ಹಾಗೂ ಸಾರ್ವಜನಿಕ ಭಾಷಣಗಳ ಮೂಲಕ ಭಾರತದ ಮತ್ತು ಲೋಕದ ಮುಂದಿರುವ ಸಮಸ್ಯೆಗಳ ಕುರಿತು ಕೆಲವು ಅಮೂಲ್ಯ ಅಭಿಪ್ರಾಯಗಳನ್ನು ಹೊರಗೆಡಹಿದ್ದಾರೆ. ಇದೇ ತಾ. 20ರಲ್ಲಿ ಧಿಲ್ಲಿಯ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ, ಪಂಡಿತಜೀಯಂದರು: "ಇಂದು ಲೋಕವನ್ನು ಇದಿರಿಸಿರುವ ಸಮಸ್ಯೆಗಳು ಶಾಂತ ವಿಧಾನಗಳಿಂದ ಮತ್ತು ಸಂಧಾನಗಳಿಂದಲೇ ಹೊರತು ಯುದ್ಧದಿಂದ ಎಂದಿಗೂ ಬಿಡಿಸಲ್ಪಡುವಂತಿಲ್ಲ. ಈ ತತ್ವವನ್ನೊಮ್ಮೆ ಒಪ್ಪಿಕೊಂಡಲ್ಲಿ ಜನತೆಯ ತಲೆಯೊಳಗೆ ಹುಗಿದ ಹೋಗಿರುವ ಮಹತ್ತಾದ ಆಲೋಚನಾಕ್ರಮಗಳನ್ನು ನಿವಾರಿಸಬಹುದು: ಆಗ ಭಾರತ ಮತ್ತು ಪಾಕಿಸ್ತಾನಗಳೊಳಗೆ ಆಥವಾ, ಲೋಕದ ರಾಷ್ಟ್ರಗಳೊಳಗೆ ಇರುವ ವ್ಯತ್ಯಾಸಗಳೆಂತ ಹವೇ ಇರಲಿ, ಅವೆಲ್ಲವೂ ಶಾಂತ ವಿಧಾನಗಳಿಂದಲೇ ಒಂದುಗೂಡಬಲ್ಲುವು." ಸದ್ಯದ ಆವಶ್ಯಕತೆಗಳ ಕುರಿತು ಮಾತಾಡುತ್ತಾ ಪಂಡಿತಜೀಯಂದರು: "ಪ್ರಸ್ಥಕ್ತ ವಿವಿಧ 'ಇಸಮ್'ಗಳ ಮಾತು ಬಹಳವಾಗಿ ಕೇಳಿಬರುತ್ತಿದೆ. ತಮಗೆ ಯಾವುದು ಹೇಳಿಸಿದುದೋ ಅದೇ ಇಸಮನ್ನು ಜನತೆಯಂತೂ ಕೊನೆಯಲ್ಲೊಪ್ಪಿಕೊಳ್ಳುವುದು. ಈ ಇಸಮುಗಳಲ್ಲಿ ಪರಸ್ಪರ ಒಬ್ಬರ ಹಾದಿಗಿನ್ನೊಬ್ಬರು ಅತಂಕಗಳನ್ನೊಡ್ಡುವುದು ತಪ್ಪು. ಎಲ್ಲಾ ಇಸಮುಗಳೂ ಎಲ್ಲಾ ರಾಷ್ಟ್ರಗಳಿಗೆ ಪತ್ಯು ಎಲ್ಲಾ ಕಾಲಗಳಿಗೆ ಏಕಪ್ರಕಾರ ಹೊಂದಿಕೆಯಾಗುವಂತಿಲ್ಲ ಜನರು ಒಗ್ಗಟ್ಟಾಗಿ ವ್ಯವಹಾರ್ಯವಾಗಿ ತಮ್ಮ ಆರ್ಥಿಕ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬೇಕಾದುದೇ ಮೂಲಭೂತ ವಿಷಯ. ಸದ್ಯ ಭಾರತದ ಇಡೀ ಆರ್ಥಿಕ ಸ್ಥಿತಿಯು ಆಹಾರ ಸಮಸ್ಯೆಯನ್ನು ಆಧರಿಸಿಕೊಂಡಿದೆ. ಆಹಾರ ಸಮಸ್ಯೆಯನ್ನು ಜಯಶೀಲವಾಗಿ ನಿರ್ವಹಿಸಿಕೊಳ್ಳುವುದನ್ನೇ ಮುಖ್ಯ ಆರ್ಥಿಕ ಸಮಸ್ಯೆಗಳ ನಿವಾರಣೆಯೂ ಹೆಚ್ಚಿನಂಶ ಹೊಂದಿಕೊಂಡಿದೆ. ಮುಂದಿನ ಎರಡು ವರುಷಗಳೊಳಗೆ ಬೇಕಾದಷ್ಟು ಆಹಾರ ಪೂರೈಸುವ ನಿರ್ಧಾರವನ್ನು [illegible]

ಬನಾರಸ್ ಹಿಂದೂ ಯುನಿವರ್ಸಿಟಿಯ ಪದವೀದಾನ ಭಾಷಣವೀಯುತ್ತಾ ಶ್ರೀ ಕೆ. ಎಮ್. ಮುನ್ಷಿಗಳು "ಭಾರತ ವಿದಿನ ಸಂಸ್ಕೃತೀ ಬಿಕ್ಕಿಟ್ಟಿಗಿಡಾಗಿದೆ. ಸಂಸ್ಕೃತಿಯ ಸಾರ ನೆಲೆಗೊಂಡ ವಿಶ್ವ ವಿದ್ಯಾಲಯಗಳು ಈ ಧ್ಯೇಯವಿಶ್ವವನ್ನು ಸ್ವೀಕರಿಸಿ ಬಿಕ್ಕಟ್ಟು ನಿವಾರಿಸಬೇಕು. ಸ್ವಾತಂತ್ರ್ಯ ದೊರೆತಂದಿನಿಂದ ಭಾರತವು ನವ್ಯ ಪೈಕಿ ಕತ್ಯುತ್ಕಮಗಳಿಂದಲೇ ಅಳಲ್ಪಡುತ್ತಿದೆ. ಆ ಮೂಲಕ ಗುಸ್ಸರುಗಳ ಕಾಲದ ವರ್ಚಸ್ಸೇ ಭಾರತಕ್ಕೆಗ ದೊರೆತಿದೆ. ಎಲ್ಲಿ ಸಾಧ್ಯವೋ ಅಲ್ಲಿ ನವ್ಯ ಪ್ರತಿಭಾನಾರವನ್ನು ಪೂರ್ತಿ ಶೋಷಿಸಲು, ಎಷ್ಟು ಅಗತ್ಯವೋ ಅಷ್ಟೇ ವಿದೇಶೀ ವರ್ಚಸ್ಸನ್ನು ಇರಗೊಡಿಸಲು ನಾವೀಗ ಸ್ವತಂತ್ರರಾದ್ದೇವೆ" ಎಂದರು.

ಧಾನ್ಯದ ಮೌಲ್ಯ ಕಡಿತ.

ಕೇಂದ್ರ ಸರಕಾರದ ನಿರ್ದೇಶದಂತೆ, ಜೀವನಾಯಗಾರರಿಂದ ಪದಕೊಳ್ಳುವ ಧಾನ್ಯದ ಧಾರಣೆಯನ್ನು ಪ್ರಥಮ ವರ್ಗದ ಭತ್ತ ಮಣ 1ಕ್ಕೆ 0-3-0 ಮತ್ತು ದ್ವಿತೀಯ ವರ್ಗದ ಭತ್ತ ಮಣ 1ಕ್ಕೆ 0-4-0ಯಂತೆ ಬರುವ ಡಿಸೆಂಬರ್ 4ನೇ ತಾರೀಕಿನಿಂದ ತಗ್ಗಿಸಬೇಕೆಂದು ಮದ್ರಾಸ್ ಸರಕಾರವು ನಿರ್ಧರಿಸಿದೆ. ಇದನ್ನು ಗಮನಿಸಿ, ಕ್ಷಿಪ್ರಾವಧಿಯ ಧಾನ್ಯಪ್ರಳ್ಳ ರೈತರು ಈ ಅವಧಿಯೊಳಗೆ ಈಗಿನ ಬೆಲೆಗೇನೇ ಅಕ್ಕಿ ಭತ್ತಗಳನ್ನೊಪ್ಪಿಸಬಹುದೆಂದು ಸರಕಾರವು ಪ್ರಕಟಿಸಿದೆ.

ಶ್ರೀ ರಾಮ ಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಫೈರ್ಸ್ ಆರ್ಟ್ ಪ್ರೊಡಕ್ಷನ್‌ರವರು,

ಶಾಂತಿ

ಪ್ರೇಕ್ಷಕರಿಗೆ ಶಾಂತಿದಾಯಕ

ಆಫ್ ಜಾಲಾ, ಲತಿಕಾ, ಸುನಾಲಿನಿ ದೇವಿ, ಜೀವನ್.

28—11—49ಗಜಪತಿ ಪಿಕ್ಚರ್ಸ್‌ರವರ ಸುಲೋಚನ

T. R. Sundaram. B. A BSC. (LEEDS)

ತಾರೀಕು 9—12—49 ರಿಂದ

ಅಪ್ನಾ ದೇಶ್ (ಹಿಂದಿ)

ಪುಷ್ಪಹಾಸ, ಮತ್ತು ಇನ್ನಿತರರು.

ಉಡುಪಿ

ರನ್ನಮಹಾಕವಿಯ ಸಪ್ತಸ್ವರ ವಾರ್ಷಿಕೋತ್ಸವವು ದಶಂಬರ ತಾ 18ರಲ್ಲು ಉಡುಪಿಯ ಕಲಾಮಂದಿರದಲ್ಲಿ ಜರಗಲಿರುವುದು. ಈ ಸಂದರ್ಭದಲ್ಲಿ ರನ್ನಕವಿಯ ಸ್ಮಾರಕವಾಗಿ ಒಂದು ಲೇಖನ ಸ್ಪರ್ಧೆ ನಡೆಯುವುದೆಂದೂ ಸ್ಪರ್ಧಿಸುವವರು ಸದಸ್ಯರಾಗಿ ರಬೇಕು, ಇಲ್ಲವೇ ಲೇಖನದೊಂದಿಗೆ ಸದಸ್ಯತನದ ಬಗ್ಗೆ ಒಂದು ರೂಪಾಯಿಯನ್ನೂ ತಾ 12-12-49ರೊಳಗಾಗಿ ಸ್ವಂದದ ಕಾರ್ಯಾಲಯಕ್ಕೆ ಕಳುಹಿಸಬೇಕೆಂದೂ ಕಲಾಮಂದಿರದ ಕಾರ್ಯದರ್ಶಿಯರ ವಿನಂತಿಯಿದೆ.

ರಥೋತ್ಸವ ಶ್ರೀಮದನಂತೇಶ್ವರ ಚಂದ್ರೇಶ್ವರ ದೇವಸ್ಥಾನಗಳ ಕಾಲಾವಧಿ ರಥೋತ್ಸವವು ಇದೇ ತಾ 22ರಲ್ಲು ಸಾಂಗವಾಗಿ ಜರಗಿತು.

ಹೆತ್ತವರ ದಿನಾಚರಣೆ ಕೊಡವೂರು ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯು ಹೆತ್ತವರ ದಿನಾಚರಣೆಯು ಇದೇ ತಾ 22ರಲ್ಲು ಉಡುಪಿ ಉತ್ತರ ಭಾಗದ ಶಾಲೆಗಳ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿ ವಂದೇಮಾತರ, ಸಭೆಕರ ಭಾಷಣ, ವಿವಿಧ ವಿನೋದಾವಳಿ ಹಾಗೂ ನಾಟಕ ಪ್ರದರ್ಶನ, ಬಹುಮಾನ ವಿತರಣ ಮುಂತಾದ ಕಾರ್ಯಕ್ರಮಗಳಾದುವು

ನಿಧನ- ಉಡುಪಿ ಸರ್ಗಿಯಲ್ಲಿದ್ದ ಪಡಿಗಾರ್ ಕುಸ್ಟಣ್ಣಾಚಾರ್ಯರು ಇದೇ ತಾ 20ರಲ್ಲು ನೈಷ್ಠಾಪೂರ್ವಕ ದಿನಸಿಯಂದ ಸ್ವಗೃಹದಲ್ಲಿ ನೈಕುಂಠವಾಸಿಗಳಾದರು. ಶ್ರೀ ಆಚಾರ್ಯರ ಆಗಲುವಿಕೆಯಂದ ಅವರ ಏಕಮಾತ್ರ ಪುತ್ರ ಶ್ರೀಪತಿ ಆಚಾರ್ಯರಿಗೂ ಇನ್ನಿತರ ಬಾಂಧವರಿಗೂ ಉಂಟಾದ ಅಪಾರ ದುಃಖದಲ್ಲಿ ಸಹ ಸಂತಾಪವನ್ನು ಸೂಚಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಮಂಗಳೂರು

ಶಾಲೆಗಳ ಸಹಕಾರಿ ಸೊಸ್ಯಾಟಿ ಈ ಸಂಸ್ಥೆಯನ್ನು ಸ್ಥಾಪಿಸಬೇಕೆನ್ನುವ ಉದ್ದೇಶದಿಂದ ತಾ. 20ರಲ್ಲು ಜಿಲ್ಲೆಯ ಎಲ್ಲ ನೆಕೆಂಡರಿ ಮತ್ತು ಟ್ರೈನಿಂಗ್ ಶಾಲೆಗಳ ಪ್ರತಿನಿಧಿಗಳ ಸಭೆಯೊಂದು ಡಿ. ಕ. ಜಿಲ್ಲಾ ಸೆಂಟ್ರಲ್ ಕೊಪರೇಟಿವ್ ಬ್ಯಾಂಕಿನ ಸಭಾಭವನದಲ್ಲಿ ಕೂಡಿತು. ಸರಕಾರಿ ಟ್ರೈನಿಂಗ್ ಶಾಲೆಯ ನಿವೃತ್ತ ಹೆಡ್‌ಮಾಸ್ಟರ್ ಶ್ರೀ ಗೋಪಾಲ ರಾಯರು ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ ಮೊದಲಾದವರು ಹಾಜರಿದ್ದರು. ಶ್ರೀ ಏಕಾಂಬರರಾಯರು ಹಾಜರಿದ್ದವರನ್ನು ಸ್ವಾಗತಿಸುತ್ತ, ಮಂಗಳೂರಲ್ಲಿ ಬಿ.ಟಿ. ಕಾಲೇಜನ್ನು ಸ್ಥಾಪಿಸುವಂತೆ ಸರಕಾರವನ್ನು ಕೇಳಿಕೊಳ್ಳುವುದಕ್ಕಾಗಿಯೂ ಎಲ್ಲಾ ಶಾಲೆಗಳ ಸಹಕಾರಿ ಸೊಸ್ಯಾಟಿಯನ್ನು ರಚಿಸುವ ಕುರಿತು ವಿಚಾರ ವಿನಿಮಯ ಮಾಡುವುದೇ ಸಭೆಯ ಉದ್ದೇಶವೆಂದು ತಿಳಿಸಿದರು.

ಶ್ರೀ ಎಮ್. ಶಿವರಾಯರು ಈ ಸಂಸ್ಥೆಯ ಧ್ಯೇಯಗಳನ್ನು ವಿವರಿಸುತ್ತ, ವಿದ್ಯೆಯಲ್ಲಿ ಆಭಿರುಚಿಯಿದ್ದು, ಜಿಲ್ಲೆಯಲ್ಲಿ ವಿದ್ಯಾವಂತರು ಹೆಚ್ಚು, ಆದುರಿಂದ ಅಪ್ರತ್ಯಕ್ಷವಾಗಿ ಆಭಿರುಚಿಯಬೇಕೆನ್ನುವ ಎಲ್ಲಾ ವಸ್ತುಗಳು, ಶಾಲೆಗಳ ಸಹಕಾರಿ ಸೊಸ್ಯಾಟಿಯಲ್ಲಿ ಪಾಲುಗಳನ್ನು ಪಡೆದು, ಆ ಹಣದಿಂದ ಬಿ.ಟಿ. ಕಲಿಯುವ ವಿದ್ಯಾರ್ಥಿಗಳಿಗೆ ಧನ ಸಹಾಯವನ್ನು ಸುಲಭವಾಗಿ ಕೊಡಬಹುದೆಂದೂ, ಇನ್ನಿತರ ಪ್ರಯೋಜಕ ಕಾರ್ಯಗಳನ್ನು ನಡೆಸಬಹುದೆಂದೂ ತಿಳಿಸಿದರು. ಈ ಯೋಜನೆಗೆ ಸಾಮಾನ್ಯವಾಗಿ ಶಾಲೆಗಳಿಂದ ಸಮ್ಮತಿಯನ್ನು ಪಡೆಯುವ ನಿಮಿತ್ತ, ಇನ್ನೊಂದು ಸಭೆಯನ್ನು ಬೇಗನೇ ಜರಗಿಸಬೇಕೆಂದೂ, ಆ ತನಕ ಕಾರ್ಯಭಾರ ನಡಿಸಲು ಶ್ರೀಗಳಾದ ಎಮ್. ಶಿವರಾವ್, ಕೆ. ಬಿ ಜನಾರ್ದನ ಹೆಗ್ಡೆ, ಬಿ. ಸುಂಜಯ್ಯ ಹೆಗ್ಡೆ, ಎಸ್. ನರ್ಸಪ್ಪಯ್ಯ, ಎಮ್. ವೆಂಕಟೇಶ ಪೈ, ಎಸ್. ಮುಕುಂದರಾವ್, ಎಮ್. ಎಸ್. ಏಕಾಂಬರರಾವ್ ಮತ್ತು ಶ್ರೀಮತಿ ರಾಧಾ ಎಲ್. ಎಸ್. ರಾವ್ ಇವರಿಂದ ಕೂಡಿದ ಸಮಿತಿಗೆ ಸಂಪೂರ್ಣ ಅಧಿಕಾರ ಕೊಡಲಾಯಿತು.

ಅನಲಕ್ಕೆ ನಿಯಂತ್ರಣ ರದ್ದು. ಕಳದ ತಾ 15ರಿಂದ ಅನಲಕ್ಕೆ ತಯಾರಿ ಮತ್ತು ಮಾರಾಟ ನಿಯಂತ್ರಣವು ರದ್ದಾಗಿದೆ. ಅಲ್ಪ ಪ್ರಮಾಣದಲ್ಲಿ ಈ ಆಹಾರ ಉಪಸಸ್ತುವು ಮಾರಾಟಕ್ಕೆ ಬರುತ್ತಿದೆಯೆಂದೂ ಆದರೆ ಇನ್ನೂ ಸರಾಗವಾಗಿ ಸಿಗುವಂತಾಗಲು ಒಂದೆರಡು ತಿಂಗಳು ಹೋಗಬಹುದೆಂದೂ ಹೇಳಲಾಗಿದೆ. ಅನಲಕ್ಕೆ ಪ್ರತಿಬಂಧದಿಂದ ಆದೆನ್ನೊ ಅನಲಕ್ಕೆ ತಯಾರಿಸುವ ಸಂಸ್ಥಾನಗಳು ಉದ್ಯೋಗರಹಿತವಾಗಿದ್ದು ನಿಕೃಷ್ಟ ಸ್ಥಿತಿಯಲ್ಲಿದ್ದುವು.

ನೆಹರೂ ಜಯಂತಿ ಸಮಾರಂಭಗಳು

ಪಾಣೆಮಂಗಳೂರಲ್ಲಿ ನೆಹರೂ ಜಯಂತಿಯು ತಾ 14ರಲ್ಲು ಶಾಲಾ ಬಾಲಕರೂ ಊರವರೂ ಕೂಡಿದ ಮೆರವಣಿಗೆ, ಶ್ರೀ ಅನಂತರಾಮ ಸೋಮಯಾಜಿಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಶಾಲಾ ಮಕ್ಕಳಿಗೆ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಿಂದ ಆಚರಿಸಲಾಯಿತು.

ಕಬಕದಲ್ಲಿ ಪಂಡಿತ ನೆಹರೂವರ ಹುಟ್ಟುಹಬ್ಬವು ತಾ. 14ರಲ್ಲು ಬಿಷ್ಟಾಲು ಕಟ್ಟೆ ವಟಾರದಲ್ಲಿ [illegible] ಕೆ. ನಾರಾಯಣಾಚಾರಿಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಾದಿಗಳಿಂದ ಯಥೋಚಿತ ರೀತಿಯಲ್ಲಿ ಆಚರಿಸಲ್ಪಟ್ಟಿತು.

ಕೋಡಪದವಿನಲ್ಲಿ ಶ್ರೀ 'ಸೌಭಾ' ಪುತ್ತೂರು ಅವರ ಅಧ್ಯಕ್ಷತೆಯಲ್ಲಿ ತಾ. 14ರಲ್ಲಿ ಕೋಡಪದವಿನ 'ಆಕಾಕೂಟ'ದವರ ನೇತೃತ್ವದಲ್ಲಿ ವಿಟ್ಲಪಡ್ನೂರು ಪಂಚಾಯತ ಬೋರ್ಡು ಶಾಲೆಯಲ್ಲಿ ಸಾಂಗವಾಗಿ ಜರಗಿತು.

ಬೈಂದೂರಲ್ಲಿ ನೆಹರೂ ಜಯಂತಿಯು ತಾ 14ರಲ್ಲು ಸಂಜೆ ಊರವರು ಮತ್ತು ವಿದ್ಯಾರ್ಥಿಗಳಿಂದ ಕೂಡಿದ ಮೆರವಣಿಗೆ, ನಂತರ ಶಾಲಾ ಮೈದಾನದಲ್ಲಿ ಶ್ರೀ ಟಿ. ಶಂಕರರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ಪಡುವರಿ ಸಂಬ್ಬಣ್ಣ ಸೆಟ್ಟಿ, ಚೇಣಿಸ್ ಪಾಯಸ್, ಕೃಷ್ಣ ಮಯ್ಯ, ಬಿ. ರಾಜೀವ ಸೆಟ್ಟಿ ಮೊದಲಾದವರ ಭಾಷಣಾದಿಗಳಿಂದ ಯಶಸ್ವಿಯಾಗಿ ಜರಗಿತು.

ಮಂಗಳೂರಲ್ಲಿ ನೆಹರು ಜಯಂತಿಯು ತಾ. 14ರಲ್ಲು ಶಾಲಾ ಕಾಲೇಜುಗಳಲ್ಲಿ ಧ್ವಜವಂದನೆ, ಸಭೆ ಭಾಷಣಗಳ ಮೂಲಕ ಜರಗಿತು. ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಎಮ್. ಉಮೇಶರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ, ಶ್ರೀಗಳಾದ ಎಮ್. ಕೃಷ್ಣಯ್ಯ ಸೆಟ್ಟಿ, ಕೆ ದೇವಪ್ಪ ಅಲ್ವ, ಎಚ್. ನಾರಾಯಣರಾವ್. ಬಿ, ಎಮ್. ಇದಿನಬ್ಬ, ಬಿ. ಜನಾರ್ದನ ಬಾಳಿಗ ಮೊದಲಾದವರ ಭಾಷಣಗಳಾದುವು.

ಕಾಸರಗೋಡು ಹೆಲ್ತ್‌ದಲ್ಲಿ ಸತ್ಯನಾರಾಯಣ ಹೈಸ್ಕೂಲಿನ ವಿದ್ಯಾರ್ಥಿಗಳು ಹಾಗೂ ಸ್ಕೌಟರು ನೆಹರೂರವರ ಜನ್ಮದಿನವನ್ನು ಶ್ರೀ ಪಿ. ವೆಂಕಟ್ರಮಣ ಭಟ್ಟರ ಅಧ್ಯಕ್ಷತೆಯಲ್ಲಿ ಆಚರಿಸಿದರು.

ಕುಂದಾಪುರದಲ್ಲಿ ನೆಹರೂ ಜಯಂತಿಯು ತಾ 14ರಲ್ಲು ಬೆಳಿಗ್ಗೆ ವಿದ್ಯಾರ್ಥಿಗಳ ಸ್ಕೌಟ್ಸ್ ಮೆರವಣಿಗೆ, ಪ್ರಭಾತಫೇರಿ, ಹೈಸ್ಕೂಲು ವಟಾರದಲ್ಲಿ ಶ್ರೀ ಬಿ. ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ ಸಂಜೆ ಶ್ರೀ ಎಮ್. ಎಮ್. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಶ್ರೀಗಳಾದ ನಾರಾಯಣಮಯ್ಯ, ಬಿ. ಸದಾಶಿವರಾವ್, ಮೊದಲಾದವರ ಭಾಷಣ, ಹೈಸ್ಕೂಲು ವಿದ್ಯಾರ್ಥಿಗಳಿಂದ 'ಸ್ವರಾಜ್ಯವಿಜಯ' ಯಕ್ಷಗಾನ ಕಾಲಕ್ಷೇಪದಿಗಳಿಂದ ಯಶಸ್ವಿಯಾಗಿ ಜರಗಿತು.

The Canara Banking Corporation Ltd.

ದಿ ಕೆನರಾ ಬೇಂಕಿಂಗ್ ಕೋಪ್ಪೊರೇಶನ್ ಲಿಮಿಟೆಡ್.

ನೋಟೀಸು

ಈ ಕೆಳಗೆ ಕಾಣಿಸಿದವರು ಸದ್ರಿ ಬೇಂಕಿನಿಂದ ನಗದಳ ಈಡಿನ ಮೇಲೆ ಪಡದ ಸಾಲದ ಮೊಬಲಗನ್ನಾಗಲೀ ಅದರ ಮೇಲಣ ಬಡ್ಡಿಯನ್ನಾಗಲೀ ಪಾವತಿಗೆ ಕೊಡದೆ ಇದ್ದುದರಿಂದಲೂ ಆ ಬಗ್ಗೆ ಅವರಿಗೆ ದಿಟ್ಟಿ ರಿಜಿಸ್ಟ್ರಿ ನೋಟೀಸುಗಳು ಪಾವತಿ ಆಗದೆ ವಾಪಾಸು ಬಂದಿರುವದರಿಂದ್ದೂ, ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

ಸದ್ರಿಯವರು ಈಡಿಟ್ಟ ನಗದಳನ್ನು ತಾರೀಕು 12-12-1949ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾ. 17-12-1949ನೇ ಶನಿವಾರ ಆಪರಾಹ್ನ ಘಂಟೆ 1ಕ್ಕೆ ಯಾ. ಬೇಂಕಿನವರಿಗೆ ಯುಕ್ತ ತೋರುವ ಬೇರೆ ತಾರೀಕಿನಲ್ಲಿ ಪುನಹಾ ನೋಟೀಸು ಕೊಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಪ್ರೇತು. ತಿಳಿದಿರುವುದು.

ಸಾಲದ ನಂಬ್ರ	ಸಾಲಗಾರರ ಹೆಸರು, ವಿಳಾಸ.	ಸಾಲದ ಮೊಬಲಗು ರೂಪ್ಯಾ
J. L. 238/47	B. Narasimha Kamath, son of Annappa Kamath. C/o Kedar mills Company Barkur.	130 0 0
J. L. 307/47	— do —	20 0 0
J. L. 312/47	— do —	60 0 0
J. L. 328/47	— do —	30 0 0
J. L. 2[illegible]/47	N. Seetharama Shet, son of Venkatramana Shet, Jeweller Shiribeedu, Udipi.	91 0 0

ಬೇಂಕಿನ ಆಫೀಸು. ಉಡುಪಿ. ತಾ. 21-11-1949

(Sd) **K. Nagesh Kamath,** Agent

ಜೀವವಿಮೆಗಾಗಿ

ವಿಚಾರಿಸಿರಿ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೂ. ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಮ್. ಸಿಟಿ. ಎಮ್. ಚಿದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅಜೊಂದು ಉತ್ತಮ ವಿನಿಯೋಗ. ಅಂತೆಯೇ ಅದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಪೆಡ್ ಇಂಡಿಯಾ ಅಪ್ಪಾರ್ಟ್ ಬಿಲ್ಡಿಂಗ್ ಫೋಸ್ಟ್ ಬಾಕ್ಸ್ ನಂಬ್ರ 142
ಮದ್ರಸ್ಸು.

ಕು. ಶಿ-ಲಿಲಿಯೆಂಥಾಲ್-ನೆಹರೂ.

ಕನ್ನಡನಾಡಿನ ಪ್ರಸಿದ್ಧಲೇಖಕರಾದ ಶ್ರೀಕು. ಶಿ. ಹರದಾಸಭಟ್ಟರಂ ತಾವು ಟೆನಸಿ ಕಣಿವೆಯ ಕುರಿತು ಬರೆಯುವ ಒಂದು ಪುಸ್ತಕಕ್ಕೆ, ಆ ದೋಜನೆಯ ಮಾಜಿ ಅಧ್ಯಕ್ಷರೂ ಸದ್ಯ ಆಮೇರಿಕದ ಸಂಯುಕ್ತರಾಷ್ಟ್ರದ ಎಟೋಮಿಕ್ ಎನರ್ಜಿ ಕಮಿಶ್ಶನಿನ ಅಧ್ಯಕ್ಷರೂ ಆಗಿರುವ ಮಿ. ಡೇವಿಡ್. ಇ. ಲಿಲಿಯೆಂಥಾಲ್ ಎಂಬವರನ್ನು ಮುನ್ನುಡಿಯ ರೂಪವಾಗಿ ಒಂದೆರಡು ಮಾತು ಬರೆಯಬೇಕೆಂದು ಪ್ರಾರ್ಥಿಸಿಕೊಂಡಾಗ, ಸಿ. ಲಿಲಿಯೆಂಥಾಲ್ ಬರೆದ ಪತ್ರವನ್ನಿಲ್ಲಿ ಕೊಡಲಾಗಿದೆ:-

ನವೆಂಬರ ೧೦, ೧೯೪೯

ಪ್ರಿಯಭಟ್ಟರೇ,

ನಿಮ್ಮ ಪತ್ರವನ್ನು ನೋಡಿ ಅತ್ಯಂತ ಹರ್ಷವಾಯಿತು. ನೀವು ಹೇಳಿರುವಂತೆ ಟೇವೀ-[illegible]ನಸಿ ಕಂದರದ ಯೋಜನೆ] ನನ್ನ ಹೃದಯಕ್ಕೆ ಅತಿ ಸಮೀಪವಾಗಿರುವುದು ನಿಜ. ಇದನ್ನಂತೆ ನೀವು ಸೂಕ್ಷ್ಮಗ್ರಾಹಿಗಳೆಂದು ನಾನು ಭಾವಿಸುತ್ತೇನೆ. ಆದರೆ ನನ್ನ ಮಹತ್ತರ ಕಾರ್ಯಭಾರದ ದೆಸೆಯಿಂದ, ಇದರ ಕುರಿತು ಒಂದೆರಡು ಆಲೋಚನೆಗಳನ್ನು ಬರೆಯಲು ನಾನು ಅಸಮರ್ಥನಾಗಿದ್ದೇನೆ.

ನಿಮ್ಮ ಮಹಾ ಪ್ರಧಾನ ಮಂತ್ರಿಗಳು ಈ ದೇಶಕ್ಕೆ ಬಂದುದು ಬಹಳ ಜಯಶೀಲವಾಯಿತು. ಮುಖ್ಯವಾಗಿ ಮಾನವರೊಳಗಿನ ಪರಸ್ಪರ ಸಂಪರ್ಕದ ಅರ್ಥದಲ್ಲಿ. ಆವರೊಡನೆ ನನಗೆ ಮಾತನಾಡುವ ಸೌಭಾಗ್ಯ ದೊರೆತಾಗ ಪ್ರಪಂಚದಲ್ಲಿ ಮಹಾತ್ಮರಿನ್ನೂ ಇದ್ದಾರೆ ಎಂಬ ನನ್ನ ನಂಬುಗೆ ಮಂಳಿ ದೃಢವಾಯಿತು

ಇತಿ

ಡೇವಿಡ್. ಇ. ಲಿಲಿಯೆಂಥಾಲ್.

ಸಾಗ್ವಳ್ಳಿದಾರರು ಕೊಡುವ
ದೃಢಪತ್ರಿಕೆ ಮತ್ತು
ಮನೆವಾರ್ತೆ ಒಟ್ಟಿಗೆ ಗೇಣಿ ಅಕ್ಕಿ
ಪಡೆಯುವರೆ ರೈತನು ಕೊಡಪತ್ಯ
ಅರ್ಜಿ ವಗೈರೆ ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಮಂಗಳೂರು

ರೈತಸಂಘದ ಮಹಾಸಭೆಯು ಇದೇ ತಾ 13ರಲ್ಲು ಕಂಕನಾಡಿ ಪೇಟೆಯಲ್ಲಿ ಶ್ರೀ ಬಿ. ಗಂಗಾಧರದಾಸ್ ಆವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಮೋಹನರಾಯರು ರೈತ ಪಂಚಾಯತದ ಚಟುವಟಿಕೆಗಳನ್ನು ವ್ಯಾಪಿಸಿ, ಸರಕಾರವು ತರಲಿರುವ, ಎಗ್ರಿಕಲ್ಚರಲ್ ಬಿಲ್ಲಿನ ವಿಷಯ ವಿವರಿಸಿ, ಈ ಬಿಲ್ಲಿನಿಂದ ಸಾಧಕಗಳಿಗಿಂತ ಬಾಧಕಗಳೇ ಹೆಚ್ಚಾಗುವುದರಿಂದ ಬಿಲ್ಲನ್ನು ಆಮಲ್ಲಿನಲ್ಲಿ ತರದ ಹಾಗೆ ಪ್ರಯತ್ನಿಸಬೇಕೆಂದರು. ರೈತರು ತಮ್ಮ ಸಂಘಟನೆಯನ್ನು ಬಲಿಸಿ ತನ್ಮೂಲಕ ನ್ಯಾಯವಾದ ಕೀಳಿಕೆಗಳಿಗಾಗಿ ಹೋರಾಡಬೇಕೆಂದು ಶ್ರೀ. ಕೆ. ಕೆ. ರೈ ಗಳು ಹೇಳಿದರು. ಆಹಾರ ಸಂಗ್ರಹಣ ಧೋರಣೆಯಿಂದ ರೈತರಿಗಾಗುತ್ತಿರುವ ಕಷ್ಟಗಳನ್ನು ವಿವರಿಸಿ ಡಾ। ಖಂಜೀವನಾಥರು ಮಾತನಾಡಿದರು. ಧಾನ್ಯ ಎತ್ತುವಳಿಯ ರೀತಿ ನೀತಿಯ ಕುರಿತು ಚರ್ಚಿಸಲಿದು ಕೊನೆಗೆ 'ಲೆವಿ' ಪದ್ಧತಿಯನ್ನು ಜಾರಿಗೆ ತರುವ ಹಾಗೆ ಪ್ರಯತ್ನಿಸಬೇಕೆಂಬ ನಿರ್ಣಯವು ಪಾಸಾಯಿತು. ರೈತಪಂಚಾಯತ ಸಂಘವನ್ನು ಬಲಗೊಳಿಸುವರೆ ರೂಪಾಯಿ 5000/- ನಿಧಿಯನ್ನು ಒಟ್ಟುಗೂಡಿಸಬೇಕೆಂದು ನಿಶ್ಚಯಿಸಲಾಯಿತು. ವಾರ್ಷಿಕ ಸಮ್ಮೇಳನವನ್ನು ಜನವರಿ ೩೧ಗಳಲ್ಲಿ ಕರೆಯಬೇಕೆಂದು ತೀರ್ಮಾನವಾಯಿತು.

ಜಿಲ್ಲಾ ಬೋರ್ಡಿನ ವಿಶೇಷ ಸಭೆ ಯು ಇದೇ ತಾ 15ರಲ್ಲು ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಫ್. ಎಕ್ಸ್. ಜೆನಿಸ್ ಪಿಂಟೋ ಆವರು ಸರ್ವಾನುಮತದಿಂದ ಬೋರ್ಡಿನ ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು ಜಿಲ್ಲೆಯ ಆಡಳಿತೆಯ ಸೌಲಭ್ಯಕ್ಕಾಗಿ ವಿದ್ಯೆ, ಗ್ರಾಮಾಭಿವೃದ್ಧಿ, ಮಾರ್ಗಾನುಕೂಲತೆ, ಗ್ರಾಮ ಕೈಗಾರಿಕೆ ಮತ್ತು ಸಾರ್ವಜನಿಕ ಆರೋಗ್ಯ ಖಾತೆಗಳಿಗೆ ಆರಾರು ಸದಸ್ಯರುಗಳಿಂದ ಕೂಡಿದ ಕಮಿಟಿಗಳನ್ನು ರಚಿಸಲಾಯಿತು.

ಗ್ರಾಮಾಭಿವೃದ್ಧಿ ಸಮಿತಿ:- ಶ್ರೀಗಳಾದ ಟಿ ಕೃಷ್ಣಾನ್, ಯು. ಅಬ್ದುಲ್ ಖಾದರ್, ಎಮ್. ಕೃಷ್ಣಯ್ಯಶೆಟ್ಟಿ, ಅನಂತರೆಡ್ಡಿ (ಸದಸ್ಯರು) ಮತ್ತು ಶ್ರೀಗಳಾದ ಶಿರ್ವ ಅಣ್ಣಯ್ಯ ಹೆಗ್ಡೆ ಮತ್ತು ಡಿ. ವೆಂಕಟೇಶಭಟ್ (ಸದಸ್ಯೇತರರು)

ಮಾರ್ಗಾನುಕೂಲತೆ ಹಾಗೂ ಕಾಮಗಾರಿಕೆ ಸಮಿತಿ: ಶ್ರೀಗಳಾದ ಎ ಎಸ್. ಉಮೇಶರಾವ್, ಯು. ಎಸ್. ನಾಯಕ್, ಡಿ. ಪುಟ್ಟುಸ್ವಾಮಿ ಮತ್ತು ಕೆ. ಸದಾಶಿವಶೆಟ್ಟಿ (ಸದಸ್ಯರು) ಮತ್ತು ಶ್ರೀಗಳಾದ ತಿರುನಲೇಶ್ವರ ಭಟ್, ಬಸ್ತಿ ಕರೀಮ್ ಸಾಹೇಬ್ (ಸದಸ್ಯೇತರರು)

ಸಾರ್ವಜನಿಕ ಆರೋಗ್ಯ ಸಮಿತಿ ಶ್ರೀಗಳಾದ ಡಾ। ಶೇಷರಾವ್, ಡಾ। ಕೆ. ಬಿ. ಶೆಟ್ಟಿ, ಡಾ। ನಾಗಪ್ಪ ಆಳ್ವ, ಶ್ರೀಮತಿ ಪ್ರಸನ್ನ ಹೆಗ್ಡೆ [ಸದಸ್ಯರು] ಮತ್ತು ಶ್ರೀಪತಿ ಮೇರಿ ಡ್ರಿಟೋ ಡಾಗೂ ಶ್ರೀ ಕಾರ್ಕಳ ವಾಸುದೇವರಾವ್ [ಸದಸ್ಯೇತರರು]

ಸಾರ್ವಜನಿಕ ಆರೋಗ್ಯ ಹಾಗೂ ಮಾರ್ಗಾನುಕೂಲತೆ ಮತ್ತು ಕಾಮಗಾರಿಕೆ ಸಮಿತಿಗಳ ಸಭೆಗಳು ದಶಂಬರ 5ರಲ್ಲು ಸೇರಬೇಕಾಗಿಯೂ ನಿಶ್ಚಯಿಸಲಾಯಿತು. ಈ ಸಮಿತಿಗಳು ಸೇರಿ ಮುಂಗಡ ಪತ್ರಕ್ಕಾಗಿ ಸೂಚನೆಗಳನ್ನು ಕೊಡಬೇಕೆಂದೂ ಅಧ್ಯಕ್ಷರು ಸೂಚಿಸಿದರು.

ಶ್ರೀ ಸುಂದರರಾಯರು ಸ್ಪೆರಲ್ ಆಫೀಸರರ ಪರ್ಸನಲ್ ಅಸಿಸ್ಟಾಂಟರಾಗಿ ಪದವಿಯು ತ್ತಿರುವ ಯಾವತ್ತೂ ಸಂಬಳ, ಭತ್ತೆಗಳನ್ನು ಶಾ 25-10-49ರಿಂದ ಎರಡು ತಿಂಗಳುಗಳ ತನಕ ಸರಕಾರದ ಒಪ್ಪಿಗೆ ಮೇರೆಗೆ ಪಡೆಯುತ್ತಿರಬೇಕೆಂದೂ, ಆನಂತರದ ಸಬ್ಬಯ ಮುಂದಿನ ಕುರಿತು ತೀರ್ಮಾನಿಸಬೇಕೆಂದೂ ಶ್ರೀ ಉಮೇಶರಾಯರು ತಂದ ನಿರ್ಣಯವು ಒಮ್ಮತದಿಂದ ಮಂಜೂರಾಯಿತು.

ಇತರ ಕಾರ್ಯಕಲಾಪಗಳು.

ಬ್ರಹ್ಮಾವರ ಸೆಕ್ಷನ್ ಆಫೀಸಿನ ಕಟ್ಟೋಣದ ದುರಸ್ತಿ ಬಗ್ಗೆ ರೂ. 960, ಬೈಂದೂರು ಮುಸಾಫರ ಬಂಗ್ಲೆಯ ವಿಶೇಷ ದುರಸ್ತಿಗೆ ರೂ 1275, ಬ್ರಹ್ಮಾವರ ಸೆಕ್ಷನಿನ ಜಿಲ್ಲಾ ಬೋರ್ಡು ಕಡವುಗಳ ಕಟ್ಟೋಣ ದುರಸ್ತಿಗೆ ರೂ 22, ಕಂಡಡ್ಕ ಗ್ರಾಮದ ಮುಸಾಫರ ಬಂಗ್ಲೆ ದುರಸ್ತಿಗೆ ರೂ. 50, ಕಲ್ಯಾಣಪುರ-ಕಮ್ಮಟ್ಟು ಮಾರ್ಗದ ರಿಪೇರಿ ಬಗ್ಗೆ ರೂ 1500, ಜಿಲ್ಲಾ ಬೋರ್ಡು ಕಚೇರಿಯಲ್ಲಿಯ ದಫ್ತರು ಕೋಣೆಯ ಕಟ್ಟಡ ಬಗ್ಗೆ ರೂ 20,000 ಮಂಜೂರುಮಾಡಿ, ಈ ಮೊದಲು ಜಿಲ್ಲಾ ಬೋರ್ಡಿನೊದನಿರುವ ರೂ.18,000 ವನ್ನು ಪೂರ ವೆಚ್ಚಮಾಡಬೇಕೆಂದು ನಿರ್ಣಯವಾಯಿತು.

ಸೆಕೆಂಡರಿ ಶಿಕ್ಷಣ ಪ್ರತಿ ತರಗತಿಯಲ್ಲಿ 20ಕ್ಕಿಂತ ಕಡಿಮೆ ಮಕ್ಕಳ ಸಂಖ್ಯೆಯಿರುವ ಹೈಸ್ಕೂಲುಗಳನ್ನು ಮುಚ್ಚಬೇಕಾಗಿ ಸೂಚಿಸಿದ ಸರಕಾರೀ ಆಜ್ಞೆಯನ್ನು ಪರಿಶೀಲನೆಗಾಗಿ ಕಾದಿಡಲಾಯಿತು. ಜಿಲ್ಲಾ ಬೋರ್ಡು ಶಾಲೆಗಳಲ್ಲಿ ಸಂಬಳ ವಿಯಾಯಿತಿಮಾಡುವ ಅಧಿಕಾರವನ್ನು ವಹಿಸಿಕೊಂಡಿರುವ ಸಲಹಾ ಸಮಿತಿಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರು, ಪದವೀಧರರಲ್ಲದ ಸಹಾಯಕ ಉಪಾಧ್ಯಾಯರು, ಪದವೀಧರರಾದ ಸಹಾಯಕ ಉಪಾಧ್ಯಾಯರು ಮತ್ತು ಹತ್ತವರ ಪರವಾಗಿ ನಾಲ್ಕು ಪ್ರತಿನಿಧಿಗಳು ಹೀಗೆ ಏಳು ಮಂದಿ ಇರಬೇಕಾಗಿ ಬಂದಿರುವ ಸೂಚನೆಯನ್ನು ಮನ್ನಿಸಲಾಯಿತು.

ಬಡವಿದ್ಯಾರ್ಥಿಗಳು ಮಾಧ್ಯಮಿಕ ಶಿಕ್ಷಣ ಪಡೆಯಲು ಹೆಚ್ಚು ಹೆಚ್ಚಾಗಿ ಸೇರುವಂತೆ, ಜಿಲ್ಲಾ ಬೋರ್ಡ್ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳಿಗೆ ತೋರಿಸಲಾಗುವ ಸೇಕಡಾ 40 ಹಣ್ಣು ರಿಯಾಯಿತಿಯನ್ನು ಸೇಕಡಾ 10ಕ್ಕೆ ಏರಿಸಲಾಯಿತು.

ಹರಿಜನ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಒದಗಿಸುವ ಸಲುವಾಗಿ ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ರೂ 80-ವಂತಿಗೆ ಕೊಡಲಾಯಿತು. ಕುಂದಾಪುರ ಬೋರ್ಡುಹೈಸ್ಕೂಲಿನಲ್ಲಿ ವ್ಯಾಯಾಮ ಶಿಕ್ಷಕನಿಯೊಬ್ಬಳನ್ನು ನೇಮಿಸಬೇಕೆಂದಾಯಿತು.

ಪ್ರಾಥಮಿಕ ಶಾಲೆಗಳಲ್ಲಿ ಕೆಲವಕ್ಕೆ ಸೇರಿದ ಬಿ ಮತ್ತು ಹಾ ಎ ಸ್ಕೀಮಿನ ಇಸಮುಗಳನ್ನು ಸೆಂಕ್ಷನ್ ಮಾಡಿದುದಲ್ಲದೆ, ಕೆಲವು ಶಾಲಾ ಕಟ್ಟಡಗಳ ದುರಸ್ತಿ ಬಗ್ಗೆ ಋಣ ಮಂಜೂರು ಮಾಡಲಾಯಿತು.

ಜಿಲ್ಲಾ ಬೋರ್ಡು ಕಾಂಗ್ರೆಸ್ ಪಕ್ಷದ ನಾಯಕರ ಆಯ್ಕೆ

ಇದೇ ತಾ 14ರಲ್ಲು ಜಿಲ್ಲಾ ಬೋರ್ಡಿನ ಕಾಂಗ್ರೆಸ್ ಪಕ್ಷದ ಸಭೆಯು ಜರಗಿ ಶ್ರೀಗಳಾದ ಉಮೇಶರಾಯರು ಕಾಂಗ್ರೆಸ್ ಪಕ್ಷದ ನಾಯಕರಾಗಿಯೂ 'ಡಾ। ನಾಗಪ್ಪ ಆಳ್ವರು ಉಪನಾಯಕರಾಗಿಯೂ ಭಾಸ್ಕರ ರೈಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು. ಜಿಲ್ಲಾ ಬೋರ್ಡಿನಿಂದ ಶ್ರೀ ಕೆ. ವಿ. ಗೌಡರನ್ನು ಸೆನೆಟ್ ಪ್ರತಿನಿಧಿಯಾಗಿ ಆರಿಸಲಾಯಿತು.

ನೋಟೀಸು
ಉಡುಪಿ ಡಿ ಮು. ಕೋರ್ಟಿನಲ್ಲಿ

S. C. No. 406/1949

ಪರಿಶ್ಚಂದ್ರ ಶ್ಯಾನುಭೋಗ್, ಯಿವರ ಪವರ್ ಆಫ್ ಎಟೋರ್ನಿ ಹೋಲ್ಡರ್ ಭಾಗೀರತಿ ಅಮ್ಮ. —ವಾದಿ.

ಮತ್ತು

ನರ್ಸಿ ಶೆಟ್ಟಿ ಕೂಡಾ 14 ಜನರು —ಪ್ರತಿವಾದಿರು.

ಇವರೊಳಗೆ

1. ನರ್ಸಿ ಶೆಟ್ಟಿ, ನೊಕ್ಕೆ ಶೆಟ್ಟಿ ಮಗಳು, ಉಡುಪಿ ತಾಲ್ಲೂ ಶಿರ್ವ ಗ್ರಾಮದ ನ್ಯಾರ್ಮರ್ ಪಲ್ಲಿಯವಳು.

4. ಹೊಂನಯ ಶೆಟ್ಟಿ, 5. ಕಾಡ್ಯಶೆಟ್ಟಿ, 6. ಬಾಜು ಶೆಟ್ಟಿ, 7. ತಿಂಪಾ ಶೆಟ್ಟಿ,-ಪಿಲ್ಲು ಶೆಟ್ಟಿ ಮಕ್ಕಳು. 11. ಕಾಳುಶೆಟ್ಟಿ, ಬಿಜಿಲು ಶೆಟ್ಟಿ ಮಗ, 12. ಚಂದು ಶೆಟ್ಟಿ, 13. ತಿಂಥು ಶೆಟ್ಟಿ, 14. ಸುಕ್ಕು ಶೆಟ್ಟಿ,-ಕೂಸು ಶೆಟ್ಟಿ ಮಕ್ಕಳು, ಉಡುಪಿ ತಾಲ್ಲೂ ಇಂನಂಜೆ ಗ್ರಾಮದ ಮಂಡ್ಯಾಡಿಯಲ್ಲಿ ದ್ದವರು. ಇವರೇಗೆ—

ವಾದಿಗೆ ಪ್ರತಿವಾದಿರಿಂದ ವ ಅವರ ಕುಟುಂಬಾರ್ಥದಿಂದ ಕೂಡಾ ಬರತಕ್ಕ ಕಳದನ್ಯಯ, ಸರ್ವಜಿತ. ಮತ್ತು ಸರ್ವಧಾರಿ ಈ ನೂರು ಸಂಖ್ಯಾಂಗಳ ಮೂಲಗೇಣ ಗೇಣಿ ಬಾಕಿ ಬಡ್ಡಿ ಕೂಡಾ ರೂಪ್ಯಾ 218-3-10ಕ್ಕೆ ವಾದಿಯು ಪ್ರತಿವಾದಿರ ಮೇರೆ ವ ಅವರ ಕುಟುಂಬದ ಸೊತ್ತುಗಳ ಮೇಲೆ ಕೂಡಾ ನಾಡಿರುವ ಈ ದಾವೆಯು ತಾರೀಕು 12-12-1949ಕ್ಕೆ 1-4-5-6-7-11-12-13-14ನೇ ಸ್ಥಿತಿವಾದಿರಿಗೆ ನೋಟೀಸು ಬಗ್ಗೆ ಮುಟ್ಟುತ್ತದೆ. ಸದ್ರಿ ತಾರೀಕು 12-12-49ನೇ ದಿವ್ಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸದ್ರಿ ಪ್ರತಿವಾದಿರು ಸ್ವತಹಾ ವ ವಕೀಲರ ಮುಖಾಂತ್ರ ಹಾಜ್ರಾಗಲಿಕ್ಕೆ ತಪ್ಪಿದ್ರೆ ಸದ್ರಿ ದಾವೆಯಂತೆ ಅವರ ಗೈರು ಹಾಜ್ರಿಯಲ್ಲಿ ತೀರ್ಮಾನಿಸಲಾಗುವುದು ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

V. R. Kidyur,
Advocate for Plaintiff
ಉಡುಪಿ
ಕಾರ್ತೀಕ 20 ನವಂಬ್ರ 1949

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಉಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao, Kanjoor,
Manager.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ನುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರಕೃತಿಕಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆ ಗು, ಪ್ರಸಂಗೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟವ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಟ್ಟುನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಳಿ ಧಾರವಾಡ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪೂರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪೂರ ನಂಜುಂಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ೯೮ ಎಲ್ ಕಮಲಾಪುರ ,ಕಿಮಿಸ್ಟ್, ಹಾವೇರಿ ಬ್ಯಾಡಗಿ

ನೋಟೀಸು
ಉಡುಪಿ ಡಿ ಮು. ಕೋರ್ಟಿನಲ್ಲಿ

O. P. No. 58/1949

1) ನೊಕ್ಕೆ ಮರಕಾಲ್ತಿ, ಪುಟ್ಟಿ ಮರಕಾಲ್ತಿ ಮಗಳು.

2) ತೋವ ಮರಕಾಲ್ತಿ, ಕುಪ್ಪ ಮರಕಾಲನೆ ಮಗಳು.

3) ಆನಂದ, (4, ಕರಿಯ, (5) ಬಾಸು, 6) ಬಾಬು, ಬಸಪ್ಪ ಮರಕಾಲ ವ 2ನೇ ಅರ್ಜದಾರಳ ಮ್ಯಾನೆರ ಮಕ್ಕಳು.

ಯಿವರ ರಕ್ತಕಳು 2ನೇ ಅರ್ಜದಾರಳು, ಉಡುಪಿ ತಾಲ್ಲೂಳು ಕುತ್ಪಾಡಿ ಗ್ರಾಮ.

1ನೇ ಅರ್ಜದಾರಳ ಮಗ ವ 2ನೇ ಅರ್ಜದಾರಳ ಗಂದ ವ 3 ರಿಂದ 6ನೇ ವರೆಗಿನ ಅರ್ಜದಾರ್ರ ತಂದೆ ಮೃತ ಬಸಪ್ಪ ಮರಕಾಲನು ದಿ ಕೆನರಾ ಮ್ಯೂಚುವಲ್ ಲ್ಯಾಫ್ ಎ ಷೂರೆನ್ಸ್ ಕಂಪೆನಿ ಲಿಮಿಟೆಡ್ ಯಿದ್ರಲ್ಲಿ ಪಡದ ನಂಬ್ರ 1,೨೪೭೭ನೇ ಪೂಲಿಸಿಯ ಬಾಬ್ತು ಸದರಿ ಕಂಪೆನಿಯಿಂದ ಬಹಾ ಕುಪ್ಯಾ 1020-0-0 ಪಡಿಯುವರೆ ತಾವು ಹಕ್ಕುದಾರರಿಂತಲೂ ಆ ಕುರಿತು ತಮ್ಮೆಲ್ಲರ ಪರವಾಗಿ 1ನೇ ಅರ್ಜದಾರಳ ಹೆಸರಿಗೆ ಸಕ್ಷೆಶನ್ ಸರ್ಟಿಫಿಕೇಟು ಕೊಡ್ಸಬೇಕಾಗಿಯೂ ಸಹಾ ಅರ್ಜದಾರ್ರು ಬರಕೊಂಡ ಸದರಿ ಅರ್ಜಿಯು ತಾರೀಕು7-12-1949ಕ್ಕೆ ಯಿಜೋಡಾಗಿಯದೆ. ಯಿ ಕುರಿತು ಯಾರಾದ್ರೂ ಆಕ್ಷೇಪ ಹೇಳುವವರು ಯಿದ್ರೆ ಸದರಿ ಕಾರೀಕನ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕ ದ್ದೆಂತ ಯಿ ಸೂಲಕ ಸಮಸ್ತರಿಗೆ ತಿಳಿಯಪಡಿಸೋಣಾಗಿಯದೆ

M Damodar Kamath,
Advocate for Petitioners.
ಉಡುಪಿ
ತಾ. 16-11-1949

ಮೂಲ್ಕಿ ಬ್ಯಾಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಸ್ವೀಕಾರ—ನಿರ್ಮೆ

೧ ಆವರು ಯುದ್ಧಕ್ಕೆ ಹೋಗಲಿಲ್ಲ (ಕತಾ ಸಂಗ್ರಹ) ಶ್ರೀ. ಕು. ಶಿ. ಹರಿದಾಸ ಭಟ್ಟರು. ಬಿ ಎ, (ಆನರ್ಸ್) ಪ್ರಕಾಶಕರು: ಸರ್ವೋದಯ ಸಾಹಿತ್ಯ ಮಾಲೆ, ಪುಲ್ಲಳ್ಳಿ ಬೆಲೆ ರೂ. ೧.

'ಆವರು ಯುದ್ಧಕ್ಕೆ ಹೋಗಲಿಲ್ಲ' ಏಳು ಸಣ್ಣ ಕತೆಗಳ ಸಂಗ್ರಹ ಇವುಗಳಲ್ಲಿ 'ಬಂಟ್ವಿನದ ಕಂಬಳ' 'ಪಣಂಬೂರಿನ ಪಾರಿಯಗಾರ' 'ಗ್ಲಾಕೋಮಾ' ಉತ್ತಮವಾದುವುಗಳು. 'ಆವರು ಯುದ್ಧಕ್ಕೆ ಹೋಗಲಿಲ್ಲ' 'ಆದದ ಬಯಲೆ' ಸಾಮಾನ್ಯವಾಗಿವೆ. ಶೈಲಿಯೊಂದು ಕತೆಗಳಲ್ಲೂ ವಿಷಯವೈವಿಧ್ಯತೆಯಿದೆ ಹಳ್ಳಿಯ, ಅದರಲ್ಲೂ ದಕ್ಷಿಣ ಕನ್ನಡದ ಜನಜೀವನವನ್ನೇ ಇಲ್ಲಿ ಹೆಚ್ಚಾಗಿ ಕಾಣುತ್ತೇವೆ. ಪ್ರತಿಯೊಂದು ಕಥಾವಸ್ತುವೂ ಜೀವಂತವಾಗಿದೆ. ನಮ್ಮ ಜನರಲ್ಲಿ ಬೆರೆತು ಕೊಂಡಿರುವ ಅರಾಜಕೀಯ, ಹಳ್ಳಿಯಲ್ಲಿ ಅನುಕೂಲವಿದ್ದ ಒಂದು ಪಂಗಡದವರು ಸಾಮಾನ್ಯರ ಜೀವಹಿಂಡುವ ವಿಧಾನ, ಮೊದಲಾದವುಗಳನ್ನು ಚೆನ್ನಾಗಿ ಚಿತ್ರಿಸಲಾಗಿದೆ. ಕೆಲವು ಕತೆಗಳಲ್ಲಿ ಪೇಶೀಯ ಭಾಷೆಯನ್ನು ಪ್ರಯೋಗಮಾಡಿದ್ದಾರೆ. ಕೆಲವು ಮಾತುಗಳೂ, ಸನ್ನಿವೇಶಗಳೂ ಒಮ್ಮೊಮ್ಮೆಗೆದಲೆನಲ್ಲಿ ತೇಲಾಡಿಸಿದರೆ ಮಂಗಮೊಮ್ಮೆ ಕಣ್ಣು ಹಣ್ಣಾಗುವಂತೆ ಮಾಡುತ್ತವೆ. ಶ್ರೀಮಾನ್ ಶು ಶಿ.ಹರಿದಾಸಭಟ್ಟರಿಂ ತಿಳಿನಗೆಯಿಂದ ಕೂಡಿದ ಮಾತುಗಳೂ, ನೈಜವಕ್ತಿ ಚಿತ್ರಣಪ್ರೌಢಿಯೂ ವಾದ ನಿವರ್ಮೆಯೂ ಶ್ರೀಮಾನ್ ಕಾರಂತರ ವಿಡಂಬನ ಶೈಲಿಯ ನೆನಪನ್ನು ತಂದು ಕೊಡುತ್ತವೆ ಎಲ್ಲ ಕತೆಯಲ್ಲೂ ನಾವಿನ್ಯತೆ ಬಿ. ಬೆ. ಅನವಶ್ಯಕವಾದ ಸಂಭಾಷಣೆಗಳಾಗಲೀ, ಸನ್ನಿವೇಶಗಳಾಗಲೀ ತಲೆಹಾಕುವುದಿಲ್ಲ ಆದರೆ ವಿಷಯದ ಒಟದಿಂದಲೋ ಏನೋ ಕೆಲವು ಕತೆಗಳಲ್ಲಿ 'ಇನ್ನೂ ಸ್ವಲ್ಪ ಸ್ವಪ್ನೀಕರಣ ಅವಶ್ಯವಿತ್ತು' ಎಂದು ತೋರುತ್ತದೆ. ಕೆಲವೊಮ್ಮೆ ಉತ್ತಮವಾದ ಭಾವನೆಯಿಂದ ಒಳ್ಳೆಯ ಕಾವಿನಿಂದ ಸಾಗಿ ಒಮ್ಮೆಯೆ ಮುಕ್ತಾಯಗೊಳ್ಳುತ್ತದೆ. ನಮ್ಮ ಹಳ್ಳಿಯಲ್ಲಿ ಇಲ್ಲವೆ ನಗರದಲ್ಲಿ ಈ ಪ್ರಜಾಪ್ರಭುತ್ವಕಾಲದಲ್ಲೂ ನಡೆಯುವ ಅರಾಜಕತೆಯನ್ನೂ, ಅನ್ಯಾಯವನ್ನೂ, ವಿಮರ್ಶಾರೀತಿಯಲ್ಲಿ ಚಿತ್ರಿಸಿ, ವಿವೇಕವನ್ನುಂಟುಮಾಡುವ ಬರಹಗಳು ಹೆಚ್ಚುಹೆಚ್ಚಾಗಿ ಬರಬೇಕು. ಈ ಉದ್ದೇಶದಲ್ಲಿ ಶ್ರೀ ಭಟ್ಟರು ಯಶಸ್ವಿಯಾಗುವರೆನ್ನುವುದಕ್ಕೆ ಈ ಕತಾಸಂಗ್ರಹ ಸಾಕ್ಷಿಯಾಗಿದೆ. ಶ್ರೀಮಾನ್ ಭಟ್ಟರ ನೋಟದಲ್ಲಿ ಸೈ ಜತೆಯಿದೆ. ವೈವಿಧ್ಯತೆಯಿದೆ, ಉತ್ತಮವಾದ ಭಾವನೆಯಿದೆ. ಆದರೆ ಅದನ್ನು ನಿರೂಪಿಸಬಲ್ಲ ಶಕ್ತಿ ಶೈಲಿಯಲ್ಲಿ ಇನ್ನೂ ವೃದ್ಧಿಯಾಗಬೇಕಾಗಿದೆ.

೨ ಬೆಳಕು (ಮಾಸಪತ್ರಿಕೆ) ಸಂಪಾದಕರು: ಕೆ ಆರ್. ಲಿಂಗಪ್ಪ ಬಿ ಎ. ಬಿ. ಎಲ್. ಪ್ರಕಾಶಕರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಬೆಳಕು ದೀಪಾವಳಿ ಸಂಚಿಕೆಯಲ್ಲಿ 'ನಮಗೆಬೇಕಾದ ಬಡಲಾವಣೆ' 'ನಮ್ಮ ಹಣಕಾಸಿನ ಏಳಿಗೆ' 'ಏಜೆಯೋ ದೊಡ್ಡದು' ಮುಂತಾದ ಉತ್ತಮ ಬರಹಗಳಿವೆ ಸರಳವಾಗಿ ರಾಜಕೀಯ ಮತ್ತು ಔದ್ಯೋಗಿಕ ಜ್ಞಾನವನ್ನು ನಿರಕ್ಷರರಾದ ವಯಸ್ಕರಿಗೆ ಒದಗಿಸಿಕೊಡಲಾಗಿದೆ. ಸಂಚಿಕೆ ಸಂಗ್ರಾಹ್ಯವಾಗಿದೆ.

೩ ನವಜ್ಯೋತಿ (ರಾಷ್ಟ್ರೀಯ ಕನ್ನಡ ಪಕ್ಷ ಪತ್ರಿಕೆ) ಸಂಪಾದಕರು: ಬ್ರಹ್ಮಾವರ ಅಂತಯ್ಯ ಸೆಟ್ಟಿ ಮತ್ತು ವಸುದೇವ ಭೂಪಾಲಂ ಎಂ. ಎ. ಆವರು. ಪ್ರಕಾಶಕರು ಬಿ. ಅಂತಯ್ಯ ಸೆಟ್ಟಿ, ನವಜ್ಯೋತಿ ಕಾರ್ಯಾಲಯ, ಶಿವಮೊಗ್ಗ.

ಕೃಷ್ಣಸೂಕ್ತಿಯ ಸಂಚಾಲಕರಾಗಿಯೂ, ಸ್ವರಾಜ್ಯದ ಸಂಪಾದಕರಾಗಿಯೂ ಅನುಭವವನ್ನು ಪಡೆದ ಶ್ರೀ ಅಂತಯ್ಯ ಸೆಟ್ಟರು 'ನವಜ್ಯೋತಿ'ಯನ್ನು ಶಿವಮೊಗ್ಗದಿಂದ ಹೊರಡಿಸಿದ್ದಾರೆ. ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಕುರಿತು ಸಂಪಾದಕರು ಪ್ರಕಾಶನದ ಸಮಸ್ಯೆಯಲ್ಲಿ ಮಂಡಿಸಿದ ವಿಷಯವೇನೋ ದೊಡ್ಡದು. ಹೊಸತಾಗಿ ಬರುವ ಪತ್ರಿಕೆಗಳಲ್ಲೆಲ್ಲ ಈ ತರಹದ ಧೋರಣೆಗಳೂ, ಘೋಷಣೆಗಳೂ, ಬರುವದು ರೂಢಿಯಾಗಿ ಬಿಟ್ಟಿದೆ. ಆದರೆ ಅದನ್ನು ಸಾಧಿಸಬೇಕಾದರೆ ವಿಚಾರಪೂರ್ಣವಾದ ಇಲ್ಲವೆ ಅನುಭವಪೂರ್ಣವಾದ ಬರಹಗಳು ಬೇಕು. ಬರಿಯ ವಾಗಾಡಂಬರದಿಂದ ಪತ್ರಿಕೆಗಳು ಹೆಚ್ಚುಕಾಲ ಉಸಿರಾಡಿದುದಿಲ್ಲವಾವು. ನವಜ್ಯೋತಿಯ ಪ್ರಥಮ ಸಂಚಿಕೆಯಲ್ಲಿ ವಿಶೇಷ ನೈಪಿಣ್ಯವನ್ನು ನಾವು ಕಾಣುವಂತಿಲ್ಲ! ಉತ್ಸಾಹಿಗಳಾದ ಅಂತಯ್ಯ ಸೆಟ್ಟರು ಮುಂದೆ ಉತ್ತಮ ಬರಹಗಳನ್ನು ಒದಗಿಸಿಕೊಟ್ಟು ನವಜ್ಯೋತಿಯನ್ನು ಕನ್ನಡ ದೇಶದಲ್ಲಿ ಪ್ರಕಾಶಿಸುವಂತಾಗಲಿ.

೪ 'ಶ್ರೀಕೃಷ್ಣ ಪಂಚಾಂಗ' (ವಿಕೃತಿ ಸಂವತ್ಸರ) ಉಡುಪಿ. ಪ್ರಕಾಶಕರು ಮತ್ತು ಮುದ್ರಕರು ಮಣಿಪಾಲ್ ಪ್ರೆಸ್, ಉಡುಪಿ. ಅಪಾಯ, ಬೆಲೆ ೬ ಅಣ.

ಎಂಬ ಏಕವರ್ಷಗಳಿಂದಲೂ ತನ್ನ ಮೃತ್ಯುವಿಂದ ಜನಪ್ರೀತಿಯನ್ನು ಗಳಿಸಿದ 'ಶ್ರೀಕೃಷ್ಣ ಪಂಚಾಂಗ'ದ ವಿಕೃತಿ ಸಂವತ್ಸರದ ಪಂಚಾಂಗವಿದು. 'ಮುಹೂರ್ತ ನಕ್ಷತ್ರಗಳು, 'ಶಕುನಫಲ' 'ವರ್ಷದ ರಾಶಿಭವಿಷ್ಯ' ಮುಂತಾದವುಗಳಿಂದ ಪಂಚಾಂಗ ಪರಿಪೂರ್ಣವಾಗಿರುತ್ತದೆ. 'ಟಪ್ಪಾಲಿನದಲೆ' 'ತಂತೀ ಟಪ್ಪಾಲು' ಮುಂತಾದ ವಿಶಿಷ್ಟ ಲೇಖನಗಳು ಅತ್ಯಂತ ಉಪಯುಕ್ತವೂ, ಕ್ಷಾಘನೀಯವೂ ಆಗಿರುತ್ತವೆ. ಇಂತಹ ಸುಂದರ ಮುದ್ರಣದ ಶ್ರೀಕೃಷ್ಣ ಪಂಚಾಂಗಕ್ಕೆ ಇಟ್ಟಿರುವ ಬೆಲೆ ೬ ಆಣೆ ಕಡಿಮೆಯೆಂದೇ ಹೇಳಬೇಕು.

೫ ಸಂಜೀವನ (ಮುಂಬಯಿ ಸರಕಾರದ ಪಾನಪ್ರತಿಬಂಧ ಸಮಿತಿಯ ಪ್ರಕಟಣೆ) ಸಂಜೀವನ ಕಾರ್ಯಾಲಯ, ಸಾಂಗಲಿ, ಬ್ಯಾಂಕ್ ಬಿಲ್ಡಿಂಗ್, ೨೫೬ ಬಜಾರಗೇಟ್ ಸ್ಟ್ರೀಟ್, ಮುಂಬಯಿ.

ಮುಂಬಯಿ ಸರಕಾರದ ಪಾನಪ್ರತಿಬಂಧ ಸಮಿತಿಯಿಂದ ಪ್ರಕಟವಾಗುವ ಮಾಸಪತ್ರಿಕೆಯು ದೀಪಾವಳಿ ವಿಶೇಷ ಸಂಚಿಕೆಯಿದು. ಈ ಸಂಚಿಕೆಯಲ್ಲಿ ಶ್ರೀರಂಗರ 'ಸತ್ಯಸಂಧಸರದಾರ' ರಂ. ಶ್ರೀಯವರ 'ಮನೆಯ ಮೋಹಿನಿ' ಆರ್. ಕೆ. ಯವರ 'ನಮ್ಮ ಬಾಪು' ಮತ್ತು 'ಅಮೆರಿಕಾ ಪ್ರವಾಸ' 'ನಾಳಿನ ಬಾಲಿನ ತಳಪದಿ' ಮುಂತಾದ ಬರಹಗಳು ಆಮೂಲ್ಯವಾದವುಗಳಾಗಿರುತ್ತವೆ. ಸುಂದರವಾದ ಮುಖಪೃಷ್ಠ, ಮುದ್ರಣಗಳಿಂದ ಸಂಚಿಕೆ ಕಂಗೊಳಿಸುತ್ತದೆ. ಬರಹಗಾರರಿಗೆ ಪ್ರತಿಫಲವನ್ನು ಕೊಟ್ಟು ಪತ್ರಿಕೆಯ ಆದರ್ಶವನ್ನು ಕಾಯ್ದುಕೊಂಡಿರುವ ಮುಂಬಯಿ ಸರಕಾರದ ಈ ಉದ್ಯಮವನ್ನು ನಾವು ಸ್ವಾಗತಿಸುತ್ತೇವೆ.

—ಎಸ್ಸೆಲ್

Notice

In the matter of the Indian Companies Act and of the Canara Forests and Farms Ltd (In Liquidation).

Notice under Sec. 209 H. of the Indian Companies Act:—

Take notice that there will be a general meeting of the Company as contemplated under Sec. 209 H. of the Indian Companies Act on Sunday the 8th day of January 1950 at 10 A. M. at the Office of the Liquidator, Karkal, South Kanara District. All the Share holders and Creditors of the Company are required to attend the same.

N. M. Adyanthaya
Liquidator

Karkal
17-11-1949

ಪ್ರಕಟಣೆ

ನಾನು ತಾರೀಕು 3-3-1949ರಲ್ಲಿ ನವಯುಗ ಪತ್ರಿಕೆಯಲ್ಲಿ ನನ್ನ ಮನೆ ವಾರ್ತೆ ಸಂಬಂಧದಲ್ಲಿ ಪ್ರಕಟಿಸಿದ ನೋಟಿಸನ್ನು ನಾನು ವಾಪಾಸು ತೆಗೆದುಕೊಂಡಿರುತ್ತೇನೆ. ನನ್ನ ಮತ್ತು ನನ್ನ ತಂದೆ ನಂಜಿಂಡ ಮಲ್ಯರ ಒಳಗಿನ ವಾತಭೇದ ಮತ್ತು ವೈಮನಸ್ಸು ನಿವಾರಣೆ ಹೊಂದಿ ನಾವಿಬ್ಬರು ಈಗ ಏಕಸ್ವರಾಗಿರುವದರಿಂದ ನೋಟಿಸು ಪತ್ರಿಕೆ ಪ್ರಕಟಣೆ ಬಗ್ಗೆ ಕೊಟ್ಟು ಮುಂಚಿನ ಪ್ರಕಟಣೆ ರದ್ದುಪಡಿಸಿರುತ್ತೇನೆ.

K. Ramakrishna Malya
19—11—49.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ವೈರಕ್, ಶಯನ ಇವಕ್ಕೆಲ್ಲ ಅತ್ಯುತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಖಂಡಿತವಾಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:- ಕೆ ವೆಂಕಟ್ರಮಣಭಟ್

For up-to-date Lodging & Boarding

ROYAL MAHAL,

UDIPI, S. Kanara.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೆಲವು ಬರುತ್ತಿದ್ದರೆ, ಧೋತರಕ್ಕೆ ಹೆಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಡುಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ ವದಾ ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿಕೆಟ್ಟು ಗರ್ಮಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಪೊಲೆ ಕುಪ್ಪದಷ್ಟು ತಕ್ಕೊಳ್ಳಬೇಕು ಮೇದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಜೇನಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಈಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಜರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೆರೆ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರೆ.

ಪತ್ರವ್ಯವಹಾರ ಮಾಡತಕ್ಕವರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ-

ವಿವಿಧ ಪಾತ್ರೆಗಳು

ಯಾ ತಾಮ್ರ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಾಜಮಾನ್ಯರಿಗೆ ಯೂಜೆಲ್ಲರಿಯಾಗಿಯೂ ಮದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಅಮೆರಿಕೆಯು ಹಿಂದುಸ್ಥಾನಕ್ಕೆತ್ತ ಸ್ವಾಗತ

ಅಂದು—ಇಂದು.

ಡಾ. ಹರ್ಡೀಕರ ಅವರಿಂದ

"ನೀವು ನನಗೆ ಕೊಟ್ಟ ಸೂಚಿತ ಸೊತ್ತುವಳಿಯ ವಿಷಯದಲ್ಲಿ ನಾನು ಏನನ್ನೂ ಮಾಡಲಿಚ್ಛಿಸುವುದಿಲ್ಲ. ಪರದೇಶದಲ್ಲಿ ನಡೆದಿರುವ ಎಲ್ಲ ಪ್ರಚಾರ ಕಾರ್ಯವನ್ನು ಮತ್ತು ಅದರ ಮೇಲೆ ಆಗುತ್ತಿರುವ ಸರ್ವ ವೆಚ್ಚವನ್ನು ನಿಲ್ಲಿಸಬೇಕೆಂದು ನಾನು ಇಚ್ಛಿಸುತ್ತೇನೆ. ನನ್ನ ಗುಣವಿಶೇಷದಿಂದ ನಾವು ಪ್ರಕಾಶಿಸಬೇಕು, ನಮ್ಮ ಕೃತಿಗಳಿಂದಲೇ ನಾವು ಜಗತ್ತಿಗೆ ಪರಿಚಿತರಾಗಬೇಕು. ನಾವು ನಮ್ಮ ಕಾಲ ಮೇಲೆಯೇ ನಿಲ್ಲೋಣ ಮತ್ತು ನಮಗೂ ಕೆಲಮಟ್ಟಿಗೆ ಬೆಲೆಯುಂಟೆ ಎಂಬುದನ್ನು ಜಗತ್ತಿಗೆ ತೋರಿಸೋಣ" ಎಂದು ಮಹಾತ್ಮಾ ಗಾಂಧಿಯವರು, ೧೯೨೦ನೇ ಇಸ್ವಿಯಲ್ಲಿ ಅಸಹನ್ಮಾದಾಬಾದ ಕಾಂಗ್ರೆಸ್ ಅಧಿವೇಶನದ ಕಾಲಕ್ಕೆ ಸ್ವೀಕೃತಿ ಅಧಿವೇಶನದಲ್ಲಿ ನುಡಿದ ತರಬೇಕೆಂದಿದ್ದ, ಪರದೇಶದಲ್ಲಿಯ ಪ್ರಚಾರದ ವಿಷಯದ ಗೊತ್ತುವಳಿಯನ್ನು ಅವರ ಕೈಗೆ ಕೊಟ್ಟಾಗ್ಗೆ, ಹೇಳಿದರು.

ಅಮೇರಿಕೆಯಲ್ಲಿಯು ನನ್ನ ಎಂಟು ವರ್ಷಗಳ ವಾಸ್ತವ್ಯದ ನಂತರ ನಾನು ಆಗಲೇ ಹಿಂದುಸ್ಥಾನಕ್ಕೆ ತಿರುಗಿ ಬಂದಿದ್ದೆನು. ಮತ್ತು ನನ್ನ ರಾಜಕೀಯ ಆಚಾರ್ಯರಾದ ಲಾಲಾಲಜಪತರಾಯರು ಮಹಾತ್ಮಾಜಿಯವರ ಗುರುತನ್ನು ನನಗೆ ಮಾಡಿಕೊಟ್ಟರು. ಲಾಲಾ ಲಜಪತರಾಯರು ಮತ್ತು ಶ್ರೀ. ಎನ್. ಸಿ. ಕೇಳಕರ ಇವರ ಅಭಿಪ್ರಾಯದ ಮೇರೆಗೆ ನಾನು ಆ ಗೊತ್ತುವಳಿಯನ್ನು ಬರೆದಿದ್ದೆನು. ಅದನ್ನು ಮಹಾತ್ಮಾಜಿಯವರ ಕೈಗೆ ಕೊಟ್ಟಾಗ ಅವರು ನನ್ನ ಮೇಲೆ ಹೇಳಿದಂತೆ ನನ್ನನ್ನು ಆ ಕಾರ್ಯದಲ್ಲಿ ತಡೆದರು, ಮತ್ತು ಹಾಗೆ ಮಾಡುವಾಗ "ಪರದೇಶದಲ್ಲಿಯ ಪ್ರಚಾರದ ಬಗ್ಗೆ ಆಲೋಚಿಸಬೇಡ. ದೇಶದಲ್ಲಿಯೇ ಪಂಥ್ರನಾಪೂರ್ವಕವಾಗಿ ಮುಂದಿದು ಹಿಂದೀ ಜನತೆಯ ಮನಸ್ಸಿನಲ್ಲಿ ಸಾಕಷ್ಟು ತೇಜವನ್ನು ಹುಟ್ಟು ಸು ಅದರಿಂದ ಹೊಂಟ ತೇಜದ ಬಿಸಿಯು ನಮ್ಮ ವಿಚಾರಗಳಿಗಾಗಿ ನಾವು ಪ್ರಚಾರ ನಡೆಸಬೇಕಿರುವ ದೇಶಗಳಿಗೆ ತಾನಾಗಿಯೇ ಹತ್ತುವುದು" ಎಂದು ಹೇಳಿದರು.

ಹಿಂದಿನ ನೆನಪು

ಪಂ. ಜವಾಹರಲಾಲರಿಗೆ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಮತ್ತು ಕಾನಡಾದಲ್ಲಿ ಜೊತೆ ಸ್ವಾಗತದ ವರದಿಗಳನ್ನು ಓದುವಾಗ ನನಗೆ, ೧೯೨೦ನೇ ಇಸ್ವಿಯಲ್ಲಿ ಮಹಾತ್ಮಾ ಗಾಂಧಿಯವರು ಹೇಳಿದ ಆ ಉಪದೇಶದ ನೆನಪು ಆಯಿತು. ನಾವು ನಮ್ಮ ಕಾಲ ಮೇಲೆ ನಿಲ್ಲುವ ವರೆಗೆ ನಮಗೆ ಸಲ್ಲಬೇಕಾದ ಮಾನವನ್ನು ನಮಗೆ ಯಾರೂ ಕೊಡುವುದಿಲ್ಲ ಎಂಬ ಮಾತು ಆದೆಷ್ಟು ಸತ್ಯಪೂರ್ಣವಾಗಿತ್ತು! ಮಹಾತ್ಮಾ ಗಾಂಧಿಯವರ ಕಾರ್ಯಗಳು-ಪ್ರತಿಯೊಂದೂ-ನಿಜವಾಗಿಯೂ ಭವಿಷ್ಯಸೂಚಕವಾಗಿದ್ದವು. ಆದರೆಲ್ಲಿಯೂ, "ಯಾವನೊಬ್ಬನು ತನ್ನ ಸಾಮರ್ಥ್ಯವನ್ನು ತೋರಿಸಲು ಶಕ್ತನಾಗದಿದ್ದರೆ ಅವನು ಈ ಜಗದಲ್ಲಿ ಪ್ರಕಾಶಿಸಲಾರನು" ಎಂಬ ಅವರ ಮಾತು ಈಗ ಪ್ರತ್ಯಕ್ಷ ನಿದರ್ಶನಕ್ಕೆ ಬಂದಿರುವುದು.

ಹಿಂದೀ ರಾಷ್ಟ್ರೀಯ ಮಹಾಸಭೆಯ ಧನ ಸಹಾಯದಿಂದ ಲಂಡನ್ನಿನಲ್ಲಿ ಒಂದು ಮಂಡಲದಿಂದ ನಡೆಸುತ್ತಿದ್ದ 'ಇಂಡಿಯಾ' ಎಂಬ ವಾರಪತ್ರಿಕೆಯನ್ನು ಮಹಾತ್ಮಾಜಿಯವರು ನಿಲ್ಲಿಸಿದರು. ಹಿಂದುಸ್ಥಾನದ ಹೊರಗೆ, ಕಾಂಗ್ರೆಸಿನ ಹೆಸರಿನಿಂದ ನಡೆಯುತ್ತಿದ್ದ ಪ್ರಚಾರ ಕಾರ್ಯಕ್ಕೆ ಅವರು ಒಂದುಪೈಸಹ ಕೊಡಲಿಲ್ಲ ಮತ್ತು ಆ ಕೆಲಸವನ್ನು ಮಾಡಲು ಯಾರಿಗೂ ಪ್ರೋತ್ಸಾಹವನ್ನೀಯಲಿಲ್ಲ.

೧೯೨೦ನೇ ಇಸ್ವಿಯಲ್ಲಿ ಲೋಕಮಾನ್ಯ ಟಿಳಕರು, ಚರೋಲ ಖಟ್ಲೆಯ ಸಲುವಾಗಿ ಲಂಡನ್ನಿಗೆ ಹೋದಾಗ, ಅಲ್ಲಿ ಬ್ರಿಟಿಶ ಲೇಬರ ಪಕ್ಷದವರು ನಡೆಸುತ್ತಿದ್ದ ದಿನ ಪತ್ರಿಕೆಗೆ, ಹಿಂದುಸ್ಥಾನದ ಪ್ರಚಾರವನ್ನು ನಡೆಸುವುದಕ್ಕಾಗಿ ೫೦ ಸಾವಿರ ರೂಪಾಯಿಗಳನ್ನು ಕೊಟ್ಟರು ಮತ್ತು ಆ ಬಗ್ಗೆ ಮುಂದೆ ಸಹಾಯಮಾಡುವ ಆಶ್ವಾಸನೆಯನ್ನೂ ಇತ್ತರು. ಇವರಿದರೂ ಸಹ ಆ ಬ್ರಿಟಿಷ ಪತ್ರವಲ್ಲಿ ಅಪ್ಪಿತಪ್ಪಿ ಒಂದೆರಡು ಸುದ್ದಿಗಳು ಹಿಂದುಸ್ಥಾನದ ಸಲುವಾಗಿ ಪ್ರಸಿದ್ಧವಾಗುತ್ತಿದ್ದವು. ಬೆಲೆಯುಳ್ಳ ಲೇಖನಗಳು ಎಂದೂ ಅದರಲ್ಲಿ ಪ್ರಕಟವಾಗಲಿಲ್ಲ. ಇದರಿಂದ ಲೋಕಮಾನ್ಯರು ಹಿಂದುಸ್ಥಾನದ ಸಲುವಾಗಿ ಕೆಲವು ಸ್ನೇಹಿತರನ್ನು ಹುಟ್ಟಿಸಿರಬಹುದು. ಆದರೆ ಈ ವೆಚ್ಚದಿಂದ ಯಾವ ಹೇಳಿಕೊಳ್ಳುವ ಕಾರ್ಯವೂ ಆಗಲಿಲ್ಲ. ಬ್ರಿಟಿಷರು ಹಿಂದುಸ್ಥಾನದ ಬಗ್ಗೆ ಇದ್ದ ತಮ್ಮ ಅಭಿಪ್ರಾಯವನ್ನು ತಿದ್ದಿಕೊಳ್ಳಲಿಲ್ಲ; ಅವರ ಮತ್ತು ಹಿಂದೀಯರ ನಡುವಿನ ಸಂಬಂಧವು ಹಿಂದಿನಂತೆಯೇ ನಡೆದು ಬಂದಿತು.

ಅಮೇರಿಕೆಯ ಸಂಯುಕ್ತ ಸಂಸ್ಥಾನಗಳಲ್ಲಿ ಲಾಲಾ ಲಜಪತರಾಯರೊಡನೆ ನಾನು ನಾಲ್ಕು ವರ್ಷ ಇದ್ದೆ. ಅವರ ಕಾರ್ಯದರ್ಶಿಯಾಗಿ ನಮ್ಮತು 'ಇಂಡಿಯನ್ ಹೋಮರೂಲ ಲೀಗ್ ಆಫ್ ಅಮೇರಿಕಾ' ಈ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯಾಗಿ ನಾನು ಕಾರ್ಯ ಮಾಡಿದೆ. ಅವರು ನನ್ನನ್ನು ತಮ್ಮ ಮಗನಂತೆ ನಡೆಸಿಕೊಂಡರು. ಶ್ರೇಷ್ಠ ವಿಚಾರಿ, ಲೋಕಪ್ರಿಯ ಮುಖಂಡ, ಉತ್ತಮ ಬದ್ಧಿಶಕ್ತಿಯ ನಿಷ್ಕಳಂಕ ದೇಶಪ್ರೇಮಿಯಾದ ಲಾಲಾ ಲಜಪತರಾಯರನ್ನು ಅಮೇರಿಕೆಯವರು ಹೇಗೆ ಕಾಣುತ್ತಿದ್ದರೆಂಬುದನ್ನು ನಾನುಬಲ್ಲೆ. ಲೇಖನಗಳನ್ನು ಬರೆದು, ಪುಸ್ತಕಗಳನ್ನು ವಿಮರ್ಶಮಾಡಿ, ತಮ್ಮ ಪುಸ್ತಕಗಳನ್ನೇ ಪ್ರಕಟಿಸಿ ಮತ್ತು ಭಾಷಣಗಳನ್ನು ಮಾಡಿ ಅವರು ಜೊಪ್ಪೆ ತುಂಬಿಕೊಳ್ಳಬೇಕಾಗುತ್ತಿತ್ತು. ಅಮೇರಿಕೆಯವರು ಅವರನ್ನು ಮೆಚ್ಚುತ್ತಿದ್ದರೇ? ಇಲ್ಲ. ಅವರು ಹಿಂದುಸ್ಥಾನ ಮತ್ತು ಹಿಂದೀಯರ ಬಗ್ಗೆ ಆಸ್ಥೆ ವಹಿಸುತ್ತಿದ್ದದ್ದಿಲ್ಲ. ಆದ್ದರಿಂದ, ನಮಗಿಂತ ಪೂರ್ವದಲ್ಲಿ ಮತ್ತು ನಾವುತಿರುಗಿ ಬಂದಮೇಲೆ ೧೯೪೨ರ ವರೆಗೆ ಅಲ್ಲಿಗೆ ಹೋದ ಇತರ ಹಿಂದೀಯರಂತೆ ನಾವು ನಮ್ಮ ಹಾದಿಯನ್ನು ಅಲ್ಲಿ ನಾವೇ ಕಂಡುಕೊಳ್ಳಬೇಕಾಗಿತ್ತು. ಅಲ್ಲಿಯ ಆಯರ್ಲ್ಯಾಂಡ್ ಜನರು, ತಮ್ಮ ಸ್ವಾತ್ಯಗಳಿಗಾಗಿ, ಥಿಯಾಸಫಿಕಲ್ ಸೊಸ್ಯಾಟಿಯವರು ತಮ್ಮ ಸಭಾಸದರಿಗಾಗಿ, ಮತ್ತು ಟಾಗೋರ ಕ್ಲಬ್ಬಿನವರು ತಮ್ಮ ಕಲಾವಿದರಿಗಾಗಿ, ಹಿಂದುಸ್ಥಾನದ ವಿಷಯದಲ್ಲಿ ಭಾಷಣಮಾಡಬೇಕೆಂದು ಲಾಲಾಜಿಯವರಿಗೆ ಕೇಳುತ್ತಿದ್ದರು. ಆದರೆ ಕಾನೇ ತಾವಾಗಿ ಇದ್ದ ಅಮೇರಿಕನ್ನರಿಗೆ ಹಿಂದುಸ್ಥಾನದ ಬಗ್ಗೆ ಆದರವು ಎಳ್ಳಷ್ಟು ಇದ್ದಿಲ್ಲ. ಮತ್ತು ಬ್ರಿಟಿಷರ ಹಿಡಿತದೊಳಗಿಂದ ಪಾರಾಗಿ ಸ್ವತಂತ್ರವಾಗಲು ಹಿಂದುಸ್ಥಾನವು ನಡೆಸಿದ್ದ ಹೋರಾಟದ ವಿಷಯದಲ್ಲಿ ಅದರಿಗೆ ಏನೂ ಎನಿಸುತ್ತಿದ್ದಿಲ್ಲ.

೧೯೧೯ರಲ್ಲಿ ನಾನು ಅಮೇರಿಕೆಯ ಒಂದು ಸ್ಥಾನ ಆಸೋಶಿಯೇಶನ್ನಿನ (ಸಂಯುಕ್ತ ಸಂಸ್ಥಾನದಲ್ಲಿಯ ಹಿಂದೀ ವಿದ್ಯಾರ್ಥಿಗಳ ಸಂಸ್ಥೆ) ಅಧ್ಯಕ್ಷನಾಗಿದ್ದಾಗ, ನನಗೂ ಇದೇ ಮಾದರಿಯ ಅನುಭವವು ಬಂದಿತು. ಸಂಯುಕ್ತ ಸಂಸ್ಥಾನದಲ್ಲಿ ಹಿಂದೀಯರ ಪ್ರವೇಶವನ್ನು ಪ್ರತಿಬಂಧಿಸುವ ಸಾಜಿನೆಯು ಅಮೇರಿಕೆಯ ಕಾಂಗ್ರೆಸಿನ ಮುಂದಿಬರಲಿದ್ದ ವಿಷಯವನ್ನು ವರ್ತಮಾನ ಪತ್ರಗಳಲ್ಲಿ ಓದಿದ ಆ ಸಂಸ್ಥೆಯ ಎಲ್ಲ ಸಭಾಸದರು ತಾಳ್ಮೆಗೆಟ್ಟರು. ಹಿಂದುಸ್ಥಾನವನ್ನು ಮೂರವಿಡುವ ವಿಷಯದಲ್ಲಿ ಆ ದೇಶವು ಆಗ ಆಸ್ಥೆಯಿಂದು ಸಿದ್ಧವಾಗಿತ್ತು. ಮೂವತ್ತು ವರ್ಷಗಳ ಹಿಂದೆ ಅಮೇರಿಕೆಯವರು ಹಿಂದುಸ್ಥಾನವನ್ನು ಯಾವ ದೃಷ್ಟಿಯಿಂದ ನೋಡುತ್ತಿದ್ದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಸರ್ ರವೀಂದ್ರನಾಥ ಟಾಗೋರರನ್ನು ಅವರು ಸ್ವಾಗತಿಸಿ ಮನ್ನಣೆಯಿತ್ತುದೇನೋ ನಿಜ. ಅದಕ್ಕೆ ಟಾಗೋರರ ಕವಿತ್ವ, ಬಹು ವಿಧ ಸಾಹಿತ್ಯ ಮತ್ತು ವ್ಯಕ್ತಿತ್ವವು ಕಾರಣವಾಗಿದ್ದವು' "ಓಹೋ ನೀವು ಇವರು ಏಸುಕ್ರಿಸ್ತನಂತೆ ಕಾಣುತ್ತಿದ್ದಾರೆ. ಹಿಮದಂತೆ ಬೆಳ್ಳಗಿನ ಮತ್ತು ಹೊಳೆಯುವ ಅವರ ಗಡ್ಡವು ಎಸ್ಪು ಸುಂದರ." ಎಂದು ಅವರನ್ನು ನೋಡಿದ ಮತ್ತು ಅವರ ಮಾತುಗಳನ್ನು ಕೇಳಿದ ಅಮೇರಿಕನ್ನರು ಉದ್ಗಾರ ತೆಗೆದರು. ಕೇವಲ ಅವರ ದರ್ಶನಕ್ಕಾಗಿಯೇ ಜನರುಮುಕುರುತ್ತಿದ್ದರು. ಇದಕ್ಕ್ಯೂ ಹೆಚ್ಚಾಗಿ ಆ ಜನರು ಹಿಂದುಸ್ಥಾನದ ಬಗ್ಗೆ ಏನನ್ನೂ ಮಾಡಲಿಲ್ಲ. ಹೋಪರ ತಮಾನದ ಅಂತ್ಯದಲ್ಲಿ ಸ್ವಾಮಿ ವಿವೇಕಾನಂದರೂ, ಶಿಕಾಗೋದಲ್ಲಿಯ ಜಾಗತಿಕ ಸರ್ವಧರ್ಮ ಪರಿಷತ್ತಿನ ಕಾಲಕ್ಕೆ ಸ್ವಾಗತವನ್ನು ಹೊಂದಿದ್ದರು. ಆದರೆ ಆದು ಸ್ವಾಮಿಯವರ ಆಧ್ಯಾತ್ಮಿಕ ವ್ಯಕ್ತಿತ್ವ ಮತ್ತು ಹಿಂದೀ ವೇದಾಂತದ ಬಗ್ಗೆ ಅವರು ಕೊಟ್ಟ ಚಿತ್ರಗಳ ಮೂಲಕ ನನೆಯಿತ್ತು. ಅಮೇರಿಕನ್ನರು ಹಿಂದುಸ್ಥಾನದ ರಾಜಕೀಯ ಕಥೆಯನ್ನು ಕೇಳಲು ನಿರಾಕರಿಸುತ್ತಿದ್ದರು ಮತ್ತು ಹಿಂದುಸ್ಥಾನದಲ್ಲಿ ನಡೆದ ಬ್ರಿಟಿಶರ ಪೊಡೆಗೆಟ್ಟ ಆಳ್ವಿಕೆಯ ಬಗ್ಗೆ ಅವರು ಕಣ್ಣು ತೆರೆಯುತ್ತಿದ್ದಿಲ್ಲ.

ಕಾನೆಡಾದ ಅಯೋಗ್ಯ ವರ್ತನೆ

ಹಿಂದಕ್ಕೆ ಹಿಂದೀಯರು ಅಮೇರಿಕೆಯಲ್ಲಿ ಅಲ್ಪಸಂಖ್ಯವರಿದ ಹೇಗೆ ನಡಿಸಿಕೊಳ್ಳಲ್ಪಡುತ್ತಿದ್ದರು. ಮತ್ತು ಯಾವ ರೀತಿಯ ಅವರ ಶ್ರೇಷ್ಠಗಳನ್ನು ಅವರಿಂದ ಹೊಂದುತ್ತಿದ್ದರು ಎಂಬ ಮಾತನ್ನು, ಅಲ್ಲಿ ಅನೇಕ ವರ್ಷಗಳ ವರೆಗೆ ಕಾಲ ಕಳೆದವರಷ್ಟೆ, ನಿಸ್ಸಂತಹ ಕೆಲವರು ಪದಮಿಹಿಡಿದ್ದಾರೆ. ಅಮೇರಿಕೆಯವರಾಗಲಿ ಕಾನಡಾದವರಾಗಲಿ ನನ್ನಂಟ ಸ್ಥಿಗೆ ಲಕ್ಷ್ಯಪೂರ್ವಕವಾಗಿ ಅಪಕಾರವೆಸಗಿದವರಲ್ಲ. ಆ ಕಾಲಕ್ಕೆ ನನಗೆ ಎಳ್ಳಷ್ಟು ಇದ್ದಿಲ್ಲ ಕಾನಡಾದಲ್ಲಿದ್ದ ಹಿಂದೀಯರು ಲಜಪತರಾಯರನ್ನು ಅಮಂತ್ರಿಸಿದಾಗ್ಗೆ, ಸರ ರವೀಂದ್ರನಾಥ ಟಾಗೋರರು ನಿರಾಕರಿಸಿದಂತೆ, ಕಾನಡಾವನ್ನು ಪ್ರವೇಶಿಸಲು ಅವರೂ ನಿರಾಕರಿಸಿದರು. ಕಾನಡಾದವರು ತನ್ನಲ್ಲಿರುವ ಹಿಂದೀಯರನ್ನು ನಡೆಸಿಕೊಳ್ಳುವ ರೀತಿಯು ಈ ಮಾತಿಗೆ ಕಾರಣವಾಗಿತ್ತು. ೧೯೧೦ನೇ ಇಸ್ವಿಯ "ಕೋಮಾಗಾಟಾಮಾರು" ಪ್ರಕರಣದ ನೆನಪು ಹಿಂದೀಯರ ಮತ್ತು ಈ ನಮ್ಮಿಬ್ಬರ ಮನಸ್ಸಿನಲ್ಲಿ ಇನ್ನೂ ಅಚ್ಚಳಿಯದೆ ಇತ್ತು. ಅದ್ದರಿಂದ ಈ ಈರ್ವರೂ ಮುಖಂಡರು, ಕಾನಡಾ ಸರಕಾರವು ತನ್ನ ರೀತಿನೀತಿಗಳನ್ನು ಹಿಂದೀಯರ ವಿಷಯದಲ್ಲಿ ತಿದ್ದಿಕೊಳ್ಳುವ ವರೆಗೆ ಆ ದೇಶದಲ್ಲಿ ಕಾಲಿಡಲು ಹಿಂತೆಗೆದರು. ಆದರೂ ಲಾಲಾ ಲಜಪತರಾಯರು ನೆಸುಗೆ ಫಲ್ಲಗೆ ಹೋಗಲು ಮತ್ತು ಅಲ್ಲಿಯ ಹಿಂದೀ ಜನರ ಸ್ಥಿತಿಗತಿಗಳನ್ನು ಪ್ರತ್ಯಕ್ಷವಾಗಿ ಕಂಡು ಬರಲು ಮೇರೆ ದರು. ನಾನು ಅಲ್ಲಿಗೆ ಹೋದೆ ಮತ್ತು ಕೆಲವು ಕಟು ಅನುಭವಗಳನ್ನು ಪಡೆದೆ.

ಇದೆಲ್ಲವೂ ಮೂವತ್ತು ವರ್ಷಗಳ ಹಿಂದೆ ನಡೆದ ಮಾತು. ೧೯೧೯ರಿಂದ ೧೯೩೦ರ ವರೆಗೆ ಅಮೇರಿಕೆಯಲ್ಲಿ ಲಾಲಾ ಲಜಪತರಾಯರು ಕಷ್ಟಪಟ್ಟುದು ಅಸ್ಪಷ್ಟವಲ್ಲ. ಈಗಿದ್ದರೂ ಅಯರ್ಲಾಂಡದ ಈಮನ್ ಡಿವೆಲೆರಾ ಇವರಿಗೆ ನಾವು ಅಲ್ಲಿ ಇದ್ದಾಗಲೇ ದೊರೆತ ಸ್ವಾತಂತ್ರ್ಯೋದ್ಧನೆಂಬ ಮನ್ನಣೆಯು ಹಿಂದುಸ್ಥಾನದ ಲಾಲಾಜಿಗೆ ದೊರೆಯಲಿಲ್ಲ. ಇಂದು ೧೯೪೪ನೇ ಇಸ್ವಿಯಲ್ಲಿ ನಾವು ಮಹಡಂತರವನ್ನು ನೋಡುತ್ತಿದ್ದೇವೆ. ಮೂವತ್ತು ವರ್ಷಗಳಲ್ಲಿ ಜಗತ್ತು ಅಚಾರವಾಗಿ ಮತ್ತು ತೀರ ಹೊಸ ಸ್ವರೂಪದ್ದಾಗಿ ಮಾರ್ಪಾಡು ಹೊಂದಿದೆ. ಆ ಅಮೇರಿಕನ್ನರು ನಮ್ಮ ವಿಷಯದಲ್ಲಿ ತಮ್ಮ ಹಿಂದಿನ ವರ್ತನೆಯೆಲ್ಲವನ್ನೂ ಮರೆತು ಈಗ ಪಂಡಿತ ಜವಾಹರ ಲಾಲ ನೆಹರೂರವರ ಸ್ವಾಗತದ ರೂಪದಲ್ಲಿ ತಮ್ಮಲ್ಲಾದ ಪರಿವರ್ತನೆಯನ್ನು ವ್ಯಕ್ತಗೊಳಿಸಿದ್ದಾರೆ.

ಇದೇ ಕಾರಣವೇನು? ಅವರ ಇಂಗಿತವು ಎಲ್ಲಿದೆ?

ಅಮೇರಿಕನ್ನರ ಅಭೀಷ್ಟ.

ಕಾರಣವು ಸ್ಪಷ್ಟವಾದೆ. ಮಹಾತ್ಮಾ ಗಾಂಧೀಯವರು ನಮಗೆ ನಮ್ಮ ಕಾಲಮೇಲು ನಿಲ್ಲಹಚ್ಚಿದರು. ನಮ್ಮ ಯೋಗ್ಯತೆಯಿಂದಲೇ ಪ್ರಕಾಶಿಸಲುನಮಗೆ ಕಲಿಸಿದರು. ಎದುರಾಳಿಯ ಒಂದು ಹನಿ ರಕ್ತವನ್ನು ಕೂಡ ತೆಗೆದು ಕೊಳ್ಳದೆ ನಾವು ಗಳಿಸಿದ ಸ್ವಾತಂತ್ರ್ಯವು ಅಮೇರಿಕನ್ನರಿಗೆ ಈ ಕರತಲದ ಆಮಲದ ಮಾನ ಮರ್ಯಾದೆಗಳನ್ನು ನಮಗೆ ಕೊಡಲು ಹಚ್ಚಿದೆ. ಇಷ್ಟೇ ಅಲ್ಲ. ಜಾಗತಿಕ ವಾತಾವರಣದಲ್ಲಿ ನೈತ್ಯಾಸವಾದ ಕಾಲವು ಇದಾಗಿದೆ ಮತ್ತು ಅಮೇರಿಕೆಯ ಬಲಾಢ್ಯ ವೈರಿಯಾದ ರಶಿಯಾ ಅದರ ಬಾಗಿಲನ್ನು ತಟ್ಟುತ್ತಿದೆ. ಅಮೇರಿಕೆಯು ಇಂದು ಜಗತ್ತಿನಲ್ಲಿ ಸ್ನೇಹಿತರನ್ನು ಹುಟ್ಟಿಸಿಕೊಳ್ಳಬೇಕಾಗಿದೆ ಮತ್ತು ತನ್ನವ್ಯು ಉಳಿಸಿಕೊಳ್ಳುವುದಕ್ಕಾಗಿ ಎಲ್ಲ ಕಡೆಗೆ ತನಗಾಗಿ ಸಹಾನುಭೂತಿಯನ್ನು ಪೊರಕಿಸಿಕೊಳ್ಳಬೇಕಾಗಿದೆ ಹಿಂದಕ್ಕೆ ಪೌರ್ವಾತ್ಯ ಭಾಗದಲ್ಲಿ ಅವರು ನಾಜಿಕೊಂಡಿದ್ದ ಬಿಯಸ್ಸಾಗ ಕೈಕೆಳಗಳು ಇಂದಿನ ರಂಗಭೂಮಿಯಿಂದ ಅಪ್ಯಶ್ಯರಾಗಿವ್ವಾರೆ. ಪೂರ್ವಾಭಾಗದಲ್ಲಿ ಮೈತ್ರಿಯಾತ್ಮಕತೆಯನ್ನು ಉಳಿಸುವ ಕಾರ್ಯವು ಚೀನಸ್ವಾತಂತ್ರದಿಂದಲೇ ಅಗಬಲ್ಲುದಾಗಿದೆ. ಅದ್ದರಿಂದ್ಲೆ ಅಮೇರಿಕನ್ನರು ಈಗ ಹಿಂದೀಯರ ಗಲ್ಲಗಳನ್ನು ಹಿಡಿಯಹತ್ತಿದ್ದಾರೆ. ಹಿಂದುಸ್ಥಾನದ ಮುಖ್ಯ ಮಂತ್ರಿ, ಹಿಂದೀಯರ ಪ್ರೇಮ ಪುತ್ಥಳಿ, ಶ್ರೇಷ್ಠ ಸಹಿತಿ ಜಾಗೂ ಮಹಾ ಕ್ಯಾಟಿಯವರ ಉತ್ತರಾಧಿಕಾರಿಯಾದ ಪಂಡಿತ ಜವಾಹರಲಾಲರು ಇಡೀ ಅಮೇರಿಕೆಯನ್ನೇ ಆಕರ್ಷಿಸಿದ್ದಾರೆ. ಕಾಂತ ಸಮುದ್ರದ ನಿಟ್ಟಿನಲ್ಲಿಯ ತಮ್ಮ ಸ್ವಾರ್ಥವನ್ನು ರಕ್ಷಿಸಲು ಬೇಕಾದ ಸಂಭವನೀಯ ಸಹಾನುಭೂತಿ ಮತ್ತು ಸಹಾಯವನ್ನು ಅಮೇರಿಕನ್ನರು ಇವರ ಮುಖಾಂತರವೇ ದೊರಕಿಸಲು ಇಚ್ಛಿಸುತ್ತಿದ್ದಾರೆ; ಎಂದೇ ಹಿಂದುಸ್ಥಾನಕ್ಕೆ ಈ ರೀತಿಯ ಅಭೂತಪೂರ್ವ ಸ್ವಾಗತ.

ಈ ಲೇಖನದ ಪ್ರಾರಂಭದಲ್ಲಿ ಕೊಡಲ್ಪಟ್ಟ ಮಹಾತ್ಮಾ ಗಾಂಧೀಯವರ ಭವಿಷ್ಯಸೂಚಕ ಉಪದೇಶವು ಕ್ರಿಕಾಲಾಬಾಧಿತವಾಗಿದೆ.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, *Vaidya.*



Approved firm by the Govt. of Mysore Certificated by the Agent of the Govt. of Cylone & Indian.

ಹಿಂದುಸ್ಥಾನದ ಯಾಚಕ ಸಮಸ್ಯೆ

(ಮಲಯಾಳದ ಪ್ರಸಿದ್ಧ ಲೇಖಕ ಶ್ರೀ. ಬಿ ಕೆ ಕೋಮತ್ ಇವರ ಲೇಖನದ ಅನುವಾದ)

—ಕೆ. ಎ ದೇವದಾಸ ಶಿರೋಮಣಿ

ಹಿಂದುಸ್ಥಾನದಲ್ಲಿ ಇಂದು ಬಗೆಹರಿಸಲಾಗದ ಸಮಸ್ಯೆಯೆಂದರೆ-ಅದು ಯಾಚಕರ ದೈನಂದಿನವಾದ ಜೀವಜೆಗೆ. ಹಳ್ಳಿಹಳ್ಳಿಗಳಲ್ಲೂ, ಪೇಟೆಪಟ್ಟಣಗಳಲ್ಲೂ, ಪೇಟೆಯ ದುರ್ಗಂಧ ಪಾಪಿಸಿಯಾದ ಜರಂಡಿಗಳ ಪಕ್ಕಗಳಲ್ಲೂ, ಮಾರ್ಗಗಳಲ್ಲೂ ರೈಲು ಬಸ್ಸು ಟ್ರೀಂಗಳಲ್ಲೂ-ಹೆಚ್ಚೇಕೆ-ಎಲ್ಲೆಯೆಲ್ಲೂ ಅವರ ಯಾಚನಾ ಹಸ್ತಗಳು ನಮ್ಮನ್ನು ಸ್ವಾಗತಿಸುವುದನ್ನು ನಾವು ಕಾಣಬಹುದು. ಹಿಂದುಸ್ಥಾನದ ಭಿಕ್ಷಾಟಂಗವು ಅಷ್ಟೊಂದು ವ್ಯಾಪಕವಾಗಿದೆ.

1931ರ ಜನಗಣನೆ ಪ್ರಕಾರ ಎಲ್ಲಾ ರಾಜ್ಯಗಳ ಪೈಕಿ ಹಿಂದುಸ್ಥಾನವು ಸುಮಾರು 14ಲಕ್ಷ ಜನರನ್ನು ಸ್ವೀಟ್ಜಾ ಸಂಚಾರಿಗಳನ್ನಾಗಿ ಮಾಡಿರುತ್ತದೆಂದು ತಿಳಿದು ಬಂದಿತ್ತದೆ. ಬ್ರಿಟಿಷರ 200ವರ್ಷದ ಭರಣದ ಪರಿಣಾಮವಾಗಿ ಇಂದು ಸ್ವತಂತ್ರ ಭಾರತವು ಆ 14ಲಕ್ಷ ಯಾಚಕರ ಸಮಸ್ಯೆಯನ್ನು ಬಗೆಹರಿಸಬೇಕಾಗಿ ಬಂತು. ಅನರ ಪೈಕಿ 7ಲಕ್ಷ ಜನರು ಸರಿಯಾದ ಆರೋಗ್ಯವುಳ್ಳವರೆಂದು ಗಣಿಸಲ್ಪಟ್ಟಿದೆ.

ಬಹುಸಂಖ್ಯಾಕರು ಶಾರೀರಿಕ ಇಲ್ಲವೆ ಮಾನಸಿಕ ಶಕ್ತಿಯನ್ನು ಕಳೆದುಕೊಂಡಿರುವರು. ಹಿಂದುಸ್ಥಾನದಲ್ಲಿ 6ಲಕ್ಷ ಜನರು ಕುರುಡರಾಗಿಯೂ, ಒಂದು ಲಕ್ಷ ಜನರು ಬುದ್ಧಿಭ್ರಮೆಯುಳ್ಳವರಾಗಿಯೂ, 2½ಲಕ್ಷ ಜನರು ಕೆಲವು ಪೂರ್ಣರೂ ಆಗಿಯೂ, 1, 47, 911 ಮಂದಿ ಕುಷ್ಠರೋಗಿಗಳಾಗಿಯೂ ಇದ್ದು ಅವರೆಲ್ಲರೂ ತ್ಯಾಜ್ಯ ಕೋಟಿಯಲ್ಲಿ ಸೇರಿರುತ್ತಾರೆ ಈ ಲೆಕ್ಕವು ನಮ್ಮನ್ನು ಆತಿಶಯಗೊಳಿಸುವದೇನೋ ನಿಜ; ಆದರೆ ಇದಕ್ಕಿಂತಲೂ ಹೆಚ್ಚು ಮಂದಿಯನ್ನು ನಾವು ಸರಿಯಾಗಿ ಲೆಕ್ಕ ತೆಗೆದರೆ ಸಿಗಲೆಜೆಯಿದೆ. ಕಾರಣವೇನೆಂದರೆ-ಸಾರುದ್ಯೋಗವೂ, ಆಗತ್ಯವಾದ ವಸ್ತುಗಳಗ ಧಾರಣೆಯೇರಿದುದೂ ಭಿಕ್ಷಾಕ ಸಂಖ್ಯೆಯ ಅಧಿಕ್ಯಕ್ಕೆ ಕಾರಣವಾಗುತ್ತದೆ.

ಯಾಚಕರ ವಿಭಾಗಗಳು.

ಹಿಂದುಸ್ಥಾನದಲ್ಲಿರುವ ಯಾಚಕತೆಯಿಂಬುದು ಇಷ್ಟಿಯು ಒಂದು ಕಲೆಯೆಂದು ವಿದೇಶಿಗಳು ಅಭಿಪ್ರಾಯ ಪಟ್ಟಿರುವುದು ನೋಡಿದರೆ ಇಷ್ಟಿಯು ಯಾಚಕ ಸಮಸ್ಯೆಯು ಎಷ್ಟು ವೈವಿಧ್ಯದಿಂದ ಬೆಳೆದಿದೆಯೆಂದು ಊಹಿಸಬಹುದು. ಯಾಚಕರಂಪಂಗಡಗಳು ಕೆಳಗೆ ಕಾಣಿಸಿದಂತಿವೆ:-

1) ಯಾಚಕರಾದ ಪುಡುಗರು, 2) ಅಂಗಹೀನರು, 3) ಮಾನಸಿಕ ಅಸ್ವಾಸ್ಥ್ಯ ಯೂ ಮಾನಸಿಕ ರೋಗವುಳ್ಳವರು, 4) ರೋಗಿಗಳು, 5) ಶರೀರಾರೋಗ್ಯವುಳ್ಳವರು 6) ಮತಸಂಚಾರಿಗಳೆಂದು ನಟಿಸುವವರು, 7) ಮತಸಂಚಾರಿಗಳು, 8) ಯಾಚನೆಯನ್ನೇ ಪರಂಪರಾವೃತ್ತಿಯಾಗಿಟ್ಟು ಕೊಂಡವರು, 9) ಯಾಚನೆಯನ್ನೇ ಉದ್ಯೋಗವಾಗಿ ಕೈಕೊಂಡವರು, 10. ಯಾಚನೆಯನ್ನು ಉಪವೃತ್ತಿಯಾಗಿಟ್ಟುಕೊಂಡವರು, 11) ಕೆಲಸಮಾಡಲು ಅರ್ಹರಾಗಿದ್ದು ತತ್ಕಾಲ ಉದ್ಯೋಗ ದೊರಕದವರು, 12) ಕೆಲಸಕ್ಕೆ ಯೋಗ್ಯತೆಯಿಲ್ಲದ ನಿತ್ಯನಿರುದ್ಯೋಗಿಗಳು, 13) ಅಲಸ್ಯದಿಂದಲೂ ಸ್ವೇಚ್ಛಾವರ್ತನದಿಂದಲೂ ಸ್ಥಿರವಾದ ಉದ್ಯೋಗ ಮೊದಲದವರು.

ಇವರಲ್ಲಿ ಹೆಚ್ಚು ಮಂದಿಯು ಕೃಷಿಯ ಅಧಃಪತನದಿಂದ ಯಾಚಕ ವೃತ್ತಿಯನ್ನು ಸ್ವೀಕರಿಸಬೇಕಾಗಿ ಬಂದವರು. ಯಾಕೆಂದರೆ ಬ್ರಿಟಿಷರ ಆಧಿಪತ್ಯವು ಅಂಂಭಿಸಿದಾಗಲೇ ಗ್ರಾಮಪಾಲಿಸಿಗಳಾದ ಕರ್ಷಕರ ಜೀವಿತ ರೀತಿಯು ಅಧಃಪತನ ಹೊಂದಿತು. ಅವರು ಭರಣ ಸ್ವಾತಂತ್ರ್ಯಕ್ಕೂ, ಲಾಭಕ್ಕೂ ಬೇಕಾಗಿ ಭೂಮಾಲಿಕರನ್ನು ಬೆಳೆಸತೊಡಗಿದರು. ಆದ್ದರಿಂದ ಎಷ್ಟೋ ಲಕ್ಷಮಂದಿ ರೈತರು ತಮ್ಮ ಬೆಳೆಯ ಬಹು ದೊಡ್ಡ ಭಾಗವನ್ನು ಗೇಣಿಯಾಗಿ ಕೊಡಬೇಕಾಗಿಬಂತು. ಹಾಗೆ ಅವರು ಕೃಷಿಯನ್ನು ಕೈಬಿಟ್ಟು, ಕಡೆಯಿಂ ಕೂಲಿಗೆ ಕೆಲಸಮಾಡತೊಡಗಿದರು. ಅಂತೂ ಉಪವಾಸಪೂರ ದಾರಿದ್ರ್ಯವು ಅವರಿಬ್ಬನ್ನು ಪತ್ತಿತು. ಹೀಗೆ ಗತ್ಯಂತರವಿಲ್ಲದ ರೈತರು ಅಲ್ಲಿಂದ ಬೀದಿಗಿಳಿಯತೊಡಗಿದರು. ಅವರೇ ಇಂದು ನಮ್ಮೆದುರು ಮುಂಬಿಕಾಣುವ ಯಾಚಕರು.

ಯಾಚಕ ಸಮೂಹದಿಂದ ಹಬ್ಬುವ ಅಪತ್ತುಗಳಲ್ಲಿ ಅತ್ಯಂತ ದೋಷಕರವಾದುದು ಅಂಟುರೋಗವೆಂದು ಹೇಳಿದರೆ ತಪ್ಪಾಗದು. ಬಹುಸಂಖ್ಯಾಕ ಭಿಕ್ಷುಕರು ಕ್ಷಯ, ಮೈಲಿಗೆ, ಕುಷ್ಠವೇ ಮೊದಲಾದ ಮಹಾರೋಗಗಳಿಗೆ ತುತ್ತಾಗಿರಬಹುದೆಂದು ಬೇರೆ ಹೇಳಬೇಕಾಗಿಲ್ಲ. ಇಂತಹ ವ್ಯಕ್ತಿಗಳೇ ಪಟ್ಟಣಗಳಲ್ಲೂ, ರೈಲು ಬಂಡಿಗಳಲ್ಲೂ ತುಂಬಿ ದೊಡ್ಡ ದೊಡ್ಡ ನಗರಗಳ ಮೂಗ್ರದ ಬದಿಗಳಲ್ಲಿ ಸ್ಥಳಪಡಿದು ರೋಗಗಳನ್ನು ಪಬ್ಬಿಸುತ್ತಾರೆ.

ಸರಕಾರದ ಅಧಿಕಾರಿಗಳೂ ಸಮಾಜ ಸುಧಾಕರೂ ಅನೇಕ ವರ್ಷಗಳಿಂದಲೂ ಈ ಯಾಚಕ ಸಮಸ್ಯೆಯನ್ನು ಬಗೆಹರಿಸಲು ಯತ್ನಿಸಿದ್ದರೂ ಕೂಡಾ ಇಂದಿನವರೆಗೂ ಅದು ಕಾರ್ಯರೂಪಪದಲ್ಲಿ ಬಗೆಹರಿಯಲಿಲ್ಲವೆಂಬುದು ಸೂರ್ಯಪ್ರಕಾಶದಂತೆ ಸುಸ್ಪಷ್ಟವಾಗಿರುತ್ತದೆ. ಯಾಕೆಂದರೆ ಆ ವಿಷಯದ ಮೂಲಾಗ್ರ ಅನುಭವವು ಅವರಿಗಿಲ್ಲ. ಇಂದು ಪತ್ರಿಕೆಗಳಲ್ಲೂ ಭಾಷಣ ನೇದಿಕೆಗಳಲ್ಲೂ ರಾಷ್ಟ್ರೀಯ ಪಾರ್ಟಿಯ ಜನರು ಅನ್ನೋನ್ಯ ಹೊಗಳುವುದನ್ನೂ ತೆಗಳುವುದನ್ನೂ ಹೆಚ್ಚಾಗಿ ಕಾಣುತ್ತೇವೆಯೇ ಹೊರತು, ಪೇಲ್ಯಾನಿನ ದಂತಹ ಸಮಸ್ಯೆಗಳ ಪರಿಹಾರಕ್ಕಾಗಿ ತಕ್ಕ ವ್ಯವಸ್ಥೆಯನ್ನು ಮಾಡಲು ಯಾವ ಕಾರ್ಯಕ್ರಮವನ್ನು ಕೈಗೊಂದಿದ್ದಾರೆಂದು ಕೇಳಿದರೆ ಅದಕ್ಕೆ ಉತ್ತರವಿಲ್ಲ. ಇಂದು ನಮ್ಮ ಮುಂದಾಳುಗಳಿಗೆ ಇದು ಮಹತ್ವದ ಪ್ರಶ್ನೆಯೆಂದು ತೋರಲಿಲ್ಲ ಒಂದು ಜನವಿಭಾಗದ ಜೀವವು ಳಿಸುವ ಪ್ರಶ್ನೆಗಿಂತಲೂ ಸಂಸ್ಥಾನ ಹಾಗೂ ಆಧಿಕಾರಗಳ ಸ್ಥಾಪನೆಯು ಪ್ರಶ್ನೆಯೇ ಮಹತ್ವದ್ದಾಗಿದೆ ಅವರಿಗೆ.

ಇಂತಿಯದಲ್ಲಿ ಯಾಚಕರ ಸಂಖ್ಯೆಯು ವಿಪರೀತವಾಗಿರಲಿಕ್ಕೆ ಸಮಾಜಕವಾದ ಕೆಲವು ತಪ್ಪು ಭಾವನೆಗಳೂ ಕಾರಣಗಳಾಗಿವೆ. ಜಳೆಯ ಸಂಪ್ರದಾಯದವರೂ ಮತಪ ಅಭಿಮಾನಿಗಳೂ ಆದವರಿಗೆ ಧರ್ಮಾರ್ಥಿ ಕೆಲವರನ್ನು ಪ್ರೀತಿಗೊಳಿಸುವದೂ, ಆದಂದಿಂದ ಪುಣ್ಯಸಿಗುತ್ತದೆಂದು ನಂಬುತ್ತಾ, ದೈವಗಳ ಪೂತರೆಂಬ ವೇಶದ ಯಾಚಕರನ್ನು ಹುರಿದುಂಬಿಸುತ್ತಾರೆ. ಆದರೆ ಇದು ದೈವವನ್ನು ವಂಚಿಸುವ ಕಾರ್ಯವೆಂದು ಆ ಮತಾಭಿಮಾನಿಗಳು ತಿಳಿಯುವದಿಲ್ಲ. ಒಂದು ವೇಳೆ ಆಂತಹ ಯಾಚಕರಿಂದ ಒಬ್ಬಿಬ್ಬರನ್ನಾದರೂ ಸಾಧ್ಯವಿದ್ದರೆ ಆ ಭಿಕ್ಷಾಕವೃತ್ತಿಯಿಂದ ನಿವೃತ್ತಿಗೊಳಿಸಿದರೆ ಅದು ನಿಜವಾದ ಧರ್ಮವೆನ್ನಬಹುದು. ಅದರಿಂದ ದೈವ ಪ್ರಸಾದವೂ ಲಭಿಸುವದು. ಆದು ಮನುಷ್ಯತ್ವದ ಹಿರಿಮೆ. ಹೀಗೆ ಶಕ್ತಿಯುಳ್ಳ ಬ್ಬೊಬ್ಬನೂ, ಸಂಘ ಸಂಸ್ಥೆಗಳೂ ಒಬ್ಬಿಬ್ಬರ ಕಾರ್ಯವನ್ನು ಆಲೋಚಿಸಿ ನಡೆಸಿಕೊಟ್ಟರೆ, ಅಲ್ಪಾವಧಿಯಲ್ಲಿಯೇ ಯಾಚಕ ಸಮಸ್ಯೆಯು ಬಗೆಹರಿದೀತು.

ಯಾಚನೆಯೂ ದಾರಿದ್ರ್ಯವೂ.

ಯಾಚನೆಯೂ ದಾರಿದ್ರ್ಯವೂ ಎರಡೂ ಒಂದೇ ಅಲ್ಲ, ಎಲ್ಲಾ ಯಾಚಕರೂ ದರಿದ್ರರಲ್ಲ. ಎಲ್ಲಾ ಬಡವರೂ ಯಾಚಕರೂ ಅಲ್ಲ. ಬಡತನವೆಂಬುದು ಒಂದು ದೈವವಿಧಿಯೆಂದು ಸಮಾಧಾನ ಪಡಬಹುದಾದರೆ ಯಾಚನೆಯೆಂಬುದು ಶಿಕ್ಷಾರ್ಹವೆಂದೂ ತಿಳಿಯಿತ್ತಿದ್ದು. ಯಾಕೆಂದರೆ ತಕ್ಕ ಆರೋಗ್ಯವಿದ್ದೂ ಸೋಮಾರಿಗಳಾಗಿ ಜೀವಿಸಿ, ಜನಸಂಖ್ಯಾವನ್ನು ಮಾಡಲಿಕ್ಕೆ ಯಾಚನೆಯನ್ನೊಂದು ಉದ್ಯೋಗವಾಗಿ ಸ್ವೀಕರಿಸಿದ ಅಸಂಖ್ಯಾತ ಸ್ತ್ರೀಪುರುಷರನ್ನು ನಾವು ನಾನಾ ಕಡೆಗಳಲ್ಲೂ ಕಾಣುತ್ತೇವೆ. ನನ್ನ ಒಂದು ಸಣ್ಣ ಅನುಭವವನ್ನು ಈ ಕೆಳಗೆ ಉದಾಹರಿಸುವೆನು. ಒಂದು ದಿನ ಒಲಪಕ್ಕೋಡು ರೈಲ್ವೆ ಸ್ಟೇಶನಿನಲ್ಲಿ ಬಂಡಿಯ ಬರುವಿಕೆಯನ್ನು ಕಾಯುತ್ತಾ ನಾನು ನಿಂತಿರುವಾಗ ಎದುರಾಗಿ ಎರಡು ಮೂರು ಮಂದಿ ತರುಣಿಯರು ವೇಗವೇಗನೇ ಹಾದು ಹೋದರು. ಅವರು ಸುಂದರಿಯರಾಗಿದ್ದರೂ ಅಂದವಾದ ಉಡುಗೆಗಳನ್ನೂ ಧರಿಸಿದ್ದರು. ಆ ಭರಣಗಳನ್ನೂ ತೊಟ್ಟಿದ್ದರು. ಅವರ ನಡೆಯಿಂದ ಏನೋ ನಾವೀನ್ಯವು ಕಂಡುಬಂತು. ಆದ್ದರಿಂದ ನಾನು ಅವರನ್ನೇ ದಿಟ್ಟಿಸುತ್ತಿದ್ದೆನು ಅವರು ಆಗತಾನೇ ಬಂದ ಬಂಡಿಯ ಕಡೆಗೆ ನಡೆದರು. ಅದೂ ಅವರು ಬಂಡಿಯು ನಿಲ್ಲುವದರ ಮೊದಲೇ ನಿಂತಿರುವುದನ್ನು ಕಂಡೆನು. ಕಡೆಗೆ ಆ ಸೋದರಿಯರು ರೈಲುಗಾಡಿಯಲ್ಲಿ ಕುಳಿತವರ ಕಡೆಗೆ ಕೈನೀಡಿ ಭಿಕ್ಷಾಸ್ತ್ರವನ್ನು ಯಾಚಿಸುತ್ತಿರುವದನ್ನು ಕಂಡೊದನೆಯೇ ನಾನು ಸ್ತಂಭಿತನಾದೆನು. "ಅಯ್ಯೋ ವಿಧಿಯೇ, ಸ್ವತಂತ್ರ ಭಾರತದ ಈ ಮುದ್ದು ಕುವರಿಯರು ಬಡತನದ ಈ ನಗ್ನವಾದ ನರ್ತನದಿಂದಲಾಗಿ ನಾಚಿಕೆ ಮಾನಗಳನ್ನೂ ತೊರೆದು ನರಕಯಾತನೆಯನ್ನು ಅನುಭವಿಸುತ್ತಾರಲ್ಲಾ! ಹೀಗೆ ಎಸ್ಟುಮಂದಿ ಸೋದರಿಯರು ನಮ್ಮಿಂ ಮಾತ್ರಭೂಮಿಯಲ್ಲಿ ಜೀವಿಸುವದಿಲ್ಲ! ಸ್ವಾತಂತ್ರ್ಯಕ್ಕಾಗಿ ನಾವು ಹೋರಾಡಿದ್ದೂ, ನೆತ್ತರು ಸುರಿಸಿದ್ದೂ, ಈ ಅವಸ್ಥೆಯನ್ನು ನೀಗಿಸಲಿಕ್ಕಲ್ಲವೇ? ಆಲ್ಲದಿದ್ದರೆ ಎತ್ತಕ್ಕೇ ಈ ಸ್ವಾತಂತ್ರ್ಯ?" ಹೀಗೆ ನಾನು ನನ್ನ ಸ್ವಯಕ್ಕೆ ಕೇಳಿಕೊಂಡೆನು. ಅನಂತರ ತಿರುಗಿ ಯೋಚಿಸಿದೆನು-ಏಕೆ ಈ ತಾರುಣ್ಯ ಭರಿತರು ಯಾಚಕವೃತ್ತಿಗೆ ಇಳಿಯಬೇಕು? ಇಕೆ ಕೂಲಿಕೆಲಸವನ್ನು ಹುಡುಕಕ್ಕೆ, ಅದರಲ್ಲಿ ದ್ದು ಮಾನವನ್ನು ಕಾಯುವಾರದು? ಆದಕ್ಕೆ ತಕ್ಕ ದೇಹದಾರ್ಢ್ಯವೂ ಅವರಿಗೆ ಇದೆ. ಇದೆ ನಿಜ. ಎಲ್ಲವೂ ಇದೆ. ಆದರೆ ಈ ವೃತ್ತಿಸ್ಯೆಯಾಚನೆಗೆ ಪರಿಪೂರ್ಣ ಸ್ವಾತಂತ್ರ್ಯವನ್ನು ಇಂದಿನವರೆಗೆ ಇಂದಿನ ಭರಣಾಧಿಕಾರಿಗಳುಕೊಟ್ಟಿರುತ್ತಾರೆ. ಆದ್ದರಿಂದ ಅವರ ತಪ್ಪಲ್ಲ ಯಾಚನೆಯು ಒಂದು ಅಪರಾಧವೆಂದು ಪರಿಗಣಿಸಲ್ಪಟ್ಟು ಪ್ರಶ್ನಿಸಿಸುವ ಒಂದು ಪರಿಸ್ಥಿತಿಯನ್ನು ಈ ವರೆಗೆ ನಿರ್ಮಿಸದ ಸರಕಾರದ ತಪ್ಪು ಅದು. ನಿಜವಾದ ನಾಗರಿಕರಾಗಿ ಜೀವಿಸಬೇಕಾದ ಇಂತಹ ಮನುಷ್ಯ ಸಮೂಹವನ್ನು ಕಾರ್ಮಿಕ ಶಾಲೆಗಳಗೋ ಮತ್ತೋ ಕಳುಹಿಸಿ, ಕಡ್ಡಾಯವಾಗಿ ಕೆಲಸಮಾಡಿಸುವ ಆನುಕೂಲತೆಗಳನ್ನು ಮಾಡಬೇಕಾದ್ದು ಇಂದು ನಮ್ಮ ಸರಕಾರದ ಆದ್ಯಕರ್ತವ್ಯವಾಗಿದೆ. ಯಾಚನೆಯನ್ನು ಒಂದು ಅಪರಾಧವೆಂದು ಗಣಿಸಿ, ಇತರ ಅಪರಾಧಿಗಳಂತೆ ಅವರಿಗೂ ಶಿಕ್ಷೆಯನ್ನು ವಿಧಿಸಿಯೂ ಕಾನೂನು ತಯಾರಾಗಬೇಕು. ಅವರಿಗೆ ಜೈಲುವಾಸವನ್ನು ಕಲ್ಪಿಸಿ ಅಲ್ಲಿಯೂ ತಕ್ಕಸವನ್ನು ಕೊಡುವಂತಾಗಬೇಕು. ಅವರನ್ನು ಆಲ್ಲಿ ನಾಗರಿಕರನ್ನಾಗಿ ಮಾಡಿಬಿಡಬೇಕು. ಹೀಗೆ ಯಾಚಕ ಸಮಸ್ಯೆಯನ್ನು ಬಗೆಹರಿಸಲು ತೊಡಗುವದು ಕಾಣುವಂತಾಗಲಿಕ್ಕಾಗಿ ಜನತೆಯ ಸಾಮೂಹಿಕ ಚಳವಳಿಯು ಬೆಳಗುವಂತಾಗಲಿ.

ಡಿ. ಎನ್. ಪುಡಿತರ ಶ್ರೇಷ್ಠವಾದ

ಪಾಧಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಯಾಕೆಸ್ಟೆರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವಂಗೂ, ಭಾಗ್ಯವಂತರಿಗೂ ಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಹೆಚ್ಚಿನ ಸೂಚನೆಗೆ.—ಡಾ। ಯಂ. ಸಿ. ಶಾಸ್ತ್ರೀ, ಯಲ್.ಐ.ಯಂ.
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಯಾಕೆಸ್ಟರು:—ಡಾ। ಐ ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

ಭಯತೊಸ್ರಾವ ನಿಂತಿತು

'ಕುಮಾರಿ' ದಿಲ್ಲೆಗಳನು ಉಪಯೋಗಿಸಿದರೆ ಹದಿವಪ್ಪಿ ಭಯತೊಸ್ರಾವವಾಗುವುದು. ಹದೋಬಿಗ್ಗೆ ಬರುವುದು, ಈ ಔಷಧ ಸೇವನೆಯಿಂದ ಶೀಘ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ. ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ-ಬೆಲೆ: ರೂ 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 5-[ಖಿ. ಸಿ. ಪಸ್ಟೆರಡಾಣೆ ಪ್ರತ್ಯೇಕ.]

Mrs. P. DEVEE, F. DB (N. J.)
Tollygunge CALCUTTA
ಸ್ಯಾಕೆಸ್ಟರು: ಶಶಾಕಂಪೆನಿ, ಮಂಗಳೂರು

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SURTTY AT THE NAVAYUGA PRESS UDIPI, S. INDIA.

Regd. No. M 3618 | 1-12-1949 | 30ನೇ ವರ್ಷ Estd: 1921 ಸ್ಥಾಪನೆ

LICENCE No. 31
Licensed to Post without Prepayment

FOUNDER:
Sri. A. B. Shetty
Minister for Agriculture & Veterinary

ನವಯುಗ ಚಂದಾ ವಿವರ: (ಮುಂಗಡ)
ವರ್ಷಕ್ಕೆ ರೂ. 5-4-0
೬ ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 ವಾರ ೧೪

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30 No. 14

ಪಾಠಗಳಿವೆ-ಕಲಿಯುವವರಿಲ್ಲ!

ನಮ್ಮಿಂದಾಗುವ ಸತ್ಕಾರ್ಯ-ದುಷ್ಕಾರ್ಯಗಳಿಗೆ, ಮತ್ತು ನಮ್ಮಲ್ಲಿರುವ ಗುಣ-ದೋಷಗಳಿಗೆ ಪ್ರತಿಫಲವಾಗಿ ದೊರೆಯುವ ಸತ್ಪರಿಣಾಮ-ದುಷ್ಪರಿಣಾಮಗಳು ಇಂತಹವೇ ಎಂಬುದನ್ನು ತಿಳಿಸುವ ಪಾಠಗಳು ನಮ್ಮ ಕಣ್ಣು ಮುಂದೆಯೇ ಬೇಕಾದಷ್ಟಿವೆ. ಆಕಸ್ಮಿಕವಾಗಿ ಕೂಡಾ ಕೆಲವನ್ನು ಸಾಕಾಗದೆ ಹೋದ ಚಿಲ್ಲರೆಗೇಯ ವಾಕ್ಯ ದೊರೆತಿದೆಯಾದರೂ ತಮ್ಮ ಶಕ್ತಿ, ಪ್ರತಾಪಗಳ ಮೇಲೆ ಬಿರಿ ವಿಶ್ವಾಸ ಕಟ್ಟಿಕೊಂಡು ಸರ್ವಾಧಿಕಾರಿ ತೋರಿಸುವವರು ಮತ್ತು ಮನಸೋಚ್ಛೆ ವರ್ತಿಸುವವರು ಈಗಲೂ ಎಲ್ಲೆಲ್ಲೂ ದೊರೆಯುತ್ತಿದ್ದಾರೆ.

ಪ್ರಥಮ ಜಾಗತಿಕ ಯುದ್ಧಾನಂತರ ಸ್ಥಾಪನೆಗೊಂಡಿದ್ದ 'ಲೀಗ್ ಆಫ್ ನೇಶನ್ಸ್'ದಿಂದ ಲೋಕ ಶಾಂತಿ ಸ್ಥಾಪನೆ ಅಸಾಧ್ಯವಾದುದು ಮಾತ್ರವಲ್ಲ, ಅದರ ಕಾರ್ಯಕಲಾಪಗಳೇ ಎರಡನೇ ಮಹಾಯುದ್ಧಕ್ಕೆ ಅಪ್ರತ್ಯಕ್ಷ ಪ್ರೇರಣೆಯಾಗಿದ್ದವೆಂಬುದನ್ನು ಅನುಭವಿಸಿ ಬಲ್ಲವರೇ ದ್ವಿತೀಯ ಮಹಾಯುದ್ಧದ ನಂತರದಲ್ಲೇ ನಾವಿರುವ 'ಯುನೈಟೆಡ್ ನೇಶನ್ಸ್'ನ್ನು ಸ್ಥಾಪಿಸಿಕೊಂಡಿದ್ದಾರೆಲ್ಲಪ್ಪ, ಅದೇ ರೀತಿಯ ಕಾರ್ಯಕ್ರಮಗಳನ್ನೂ ಜರಗಿಸುತ್ತಿದ್ದಾರೆ.

ಪ್ರಜಾಸ್ವಭುತ್ವದ ಹೆಸರಿನಿಂದ ಲಗಾಮು ಬಿದ್ದಿ ಮತ್ತು ಸಡಿಲು ವ್ಯವಸ್ಥೆಗಳುಳ್ಳದು ಕೊಂಡರೆ ಗತಿ ಹೇಗಾದೀತೆಂಬುದಕ್ಕೆ ದೃಷ್ಟಾಂತವಾಗಿ, ಆ ಕಾಲದಲ್ಲಿ ನಾಜಿಗಳಿಗೆ ಕೆಲವೇ ದಿನಗಳೊಳಗೆ ಆಹುತಿಯಾದ ಮಂತ್ರಿವರೆಗೂ ಸರ್ವಾಧಿಕಾರ ಸಾಮ್ರಾಜ್ಯವು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಹೆಸರಾಗಿದ್ದ ಲೋಕಾಗ್ರಣ್ಯ ಬ್ರಿಟಿಷ್ ಸಾಮ್ರಾಜ್ಯವು ಸೂರ್ಯ ಮುಳುಗದ ಸಾಮ್ರಾಜ್ಯವಾಗಿತ್ತು. ಅಂತಹ ಬ್ರಿಟನು ಈ ದಿನ ಎಂತಹ ಆರ್ಥಿಕ ದುರವಸ್ಥೆಗೀಡಾಗಿದೆ ಎಂಬ ದಪ್ಪಕ್ಷರದ ಸೋಲ್ಮಂಗಿ ಹೊಸತಾಗಿ ಮಾಡಿ ತೋರಿಸಿದೆಯಾದರೂ ಪರರಾಜ್ಯಾಕ್ರಮಣ, ಪರಕೀಯ ಸ್ಥಳಾಕ್ರಮಣ ಮಾಡಿದವುಗಳನ್ನೂ ನಡೆದೇ ಇವೆ.

ಸ್ವಶಕ್ತಿ, ಸಾಹಸ ಮತ್ತು ಸಂಘಟನೆಯಿಂದ ಲೋಕವನ್ನೇ ಒಮ್ಮೆ ನಡುಗಿಸಿಬಿಟ್ಟಿದ್ದ ಹಿಟ್ಲರನ ಸಾವರ್ಥ್ಯ, ಜಾತುರ್ಯ ಕೂಡಾ ಕೆಲಸಕ್ಕೆ ಸಾಕಾಗದೆ ಹೋದ ಚಿಲ್ಲರೆಗೇಯ ವಾಕ್ಯ ದೊರೆತಿದೆಯಾದರೂ ತಮ್ಮ ಶಕ್ತಿ, ಪ್ರತಾಪಗಳ ಮೇಲೆ ಬಿರಿ ವಿಶ್ವಾಸ ಕಟ್ಟಿಕೊಂಡು ಸರ್ವಾಧಿಕಾರಿ ತೋರಿಸುವವರು ಮತ್ತು ಮನಸೋಚ್ಛೆ ವರ್ತಿಸುವವರು ಈಗಲೂ ಎಲ್ಲೆಲ್ಲೂ ದೊರೆಯುತ್ತಿದ್ದಾರೆ.

ಜಾಸಾನರೊಡನೆ ದೀರ್ಘಾವಧಿಯಿಂದ ಜಯಶೀಲ ಹೋರಾಟ ನಡೆಸಿ, ಚೈನ ಎನ್ನ ಉಳಿಸಿಕೊಂಡ ಮಹಾ ನಾಯಕ ಚಿಯಾಂಗ್-ಕೈ-ಶೇಕರೆಂಬುದು ನಿರ್ವಿವಾದವಿದ್ದರೂ ಅದೊಂದರಿಂದಲೇ ಕೃತಾರ್ಥತೆಗೊಂಡು, ದೇಶದೊಳಗಿನ ಆರ್ಥಿಕ ಸಾಮಾಜಿಕ ದುರವಸ್ಥೆಗಳನ್ನು ಅಲಕ್ಷಿಸಿಬಿಟ್ಟರಾಗಿ ಪರಸ್ವಕೀಯ ಮಕ್ಕಳ ಅವರಿಗೆ ಬಲಿ ಬಿದ್ದಿದ್ದಾರೆ ಚಿಯಾಂಗ್ ಕೈಶೇಕರ ಈ ಸ್ಥಿತಿ ಚಿತ್ರ ಪೂರ್ವಾಭಿಮುಖರಾಗಿ ವರ್ತಿಸುವವರೆಲ್ಲರಿಗೂ ಕಾಣಿಸುತ್ತಿದೆಯಾದರೂ, ತಾವೀಗ ಅವರಂತೆಯೇ ಸ್ವಾತಂತ್ರ್ಯ ಸಂಪಾದಿಸಿಕೊಂಡು-ಮತ್ತಿದನ್ನ ಮಹಾಪತ್ಕಾಲದಲ್ಲಿ ರಕ್ಷಿಸಿಕೊಂಡು- ಬೆಗ್ಗಳಕೆಯೊಂದನ್ನೇ ಪ್ರದರ್ಶಿಸುತ್ತಾ ರಾಷ್ಟ್ರಜೀವಿಗಳಿಗೆ ಆರ್ಥಿಕ ಸಾಮಾಜಿಕ ಅವ್ಯವಸ್ಥೆಗಳ ಕಡಿಗೆ ಜನರಂತೆಯೇ ಆಪತ್ಸಮಯದಲ್ಲಿ ಪ್ರದರ್ಶಿಸುತ್ತಿಲ್ಲವೇ ಎಂಬ ಕುರಿತು ಭಾರತದ ಅಧಿಪತಿಗಳು ತಮ್ಮನ್ನು ತಾವೇ ಪ್ರಶ್ನಿಸಿಕೊಳ್ಳುವ ದಿನವೂ ಕೋರಿಬರುತ್ತಿಲ್ಲ.

ತಮಗಿರುವ ನಾಯಕತ್ವವು ಅತ್ಯಾಚ್ಚವಾದುದು ಮತ್ತು ನಿರ್ದೋಷಿಯಾದುದು ಎಂಬ ವಿಶ್ವಾಸದಿಂದ ನಾಜೀ ಸರಕಾರದ ಕಡೆಗೆ ಪ್ರಶ್ನಾತೀತ ಹಾಗೂ ಸಂದೇಹಾತೀತ ವಿಶ್ವಾಸವನ್ನಿಟ್ಟುದರ ಪರಿಣಾಮವಾಗಿ ಜರ್ಮನಿ ಜನತೆಯ ದಿನ ಎಂತಹ ದುರವಸ್ಥೆಗೀಡಾಗಿದೆ, ಎಂಬ ಸ್ಪಷ್ಟ ನಿದರ್ಶನವಿರುವಾಗಲೂ ಭಾರತೀಯರು ಅದರಿಂದ ಕಲಿತುಕೊಳ್ಳಬೇಕಾದ ಅಂಶವನ್ನು ಕಲಿತಂತೆ ಕಂಡುಬರುವುದಿಲ್ಲ.

ಕತ್ತಿಮಾನಗಳಿಂದ ವಂಶಪಾರಂಪರ್ಯವಾಗಿ ಸಂಕ್ರಮಿತವಾಧಿಕಾರವನ್ನು, ಅನ್ಯಾದೃಶ ವಿಲಾಸೀ ಜೀವನವನ್ನು, ಅತಿ ದೊಡ್ಡ ಸ್ಥಾನಮಾನಗಳನ್ನು ಅನುಭವಿಸಿಕೊಂಡು ಬಂದಿದ್ದ ಹಿಂದೀ ಅಧ್ಯಕ್ಷತ ರಾಜರುಗಳು ಈ ದಿನ ಸಾಮಾನ್ಯರ ದರ್ಜೆಗಿಳಿಸಲ್ಪಟ್ಟಿರುವಾಗ, ಅವರನ್ನೇ ಕಂಡಾದರೂ ನಮ್ಮವೆಲ್ಲಿಯ. ಪುಂಪರಂಗತ, ಅಸ್ತವ್ಯವಲರು ಮತ್ತು ಸಾಂಪ್ರದಾಯಿಕ ಮಾನಸಸ್ಥಾನಾಪನ್ನರುಹಾಗೂ ಹುಟ್ಟು ಶ್ರೀಮಂತರು ಇನ್ನೂ ಕಣ್ಣು ಹೆರೆದಿಲ್ಲ.

ಇಂಗ್ಲಿಂಡಿನ 'ಅವಸಾನ ಸಮೀಪಿಸಿತು' ಎಂಬಲ್ಲಿಗೆ ಬಂದಿದ್ದ ಯುದ್ಧಗತಿಯನ್ನು ಪ್ರಸಾಮರ್ಥ್ಯದಿಂದ ಬದಲಾಯಿಸಿ, ವಿಜಯ ಸಂಪಾದಿಸಿಕೊಟ್ಟ ಪ್ರಶಸ್ತಿಗೆ ಚರ್ಚಿಲ್ಲರನ್ನು ಯಜ್ಞ ಮುಗಿದ ಬೆನ್ನಲ್ಲಿ ನಡೆದ ಜನರಾಣೆಯಲ್ಲಿ ಬ್ರಿಟಿಷ್ ಮತದಾರರು, 'ಇವರು ಯುದ್ಧಕಾಲಕ್ಕೆ ಮಾತ್ರ ಜೀಕಿಸಿದ ನಾಯಕ—ಶಾಂತಿಗೆ ಲಿಕ್ಕಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಅಧಿಕಾರದಿಂದಿಳಿಸಿ ಕೂಲಿಗಾರ ಪಕ್ಷವನ್ನು ಏರಿಸಿಕೊಂಡಿದ್ದರು. ಇಂತಹ ಕಾಲಾನುಗುಣ ವರ್ತನೆಯು ಮೂದರಿ ಅಲ್ಲಿದ್ದರೂ ಮತ್ತಿದರ ಪರಿಣಾಮವಾಗಿಯೇ ಭಾರತದಂದ ಬ್ರಿಟಿಷರನ್ನು ಕಾಲ್ತೆಗೆಯಿಸಿದ ಕೂಲಿಕಾರ ಸರಕಾರ ಅಧಿಕಾರಕ್ಕೆ ಬಂದುದೆಂದು ಗೊತ್ತಿದ್ದರೂ ಭಾರತೀಯರು ಇಂತಹ ಸದ್ವ್ಯವಹಾರವನ್ನು ಇನ್ನೂ ಕಲಿತಿಲ್ಲ. ಒಮ್ಮೆ ಒಂದು ಸಂದರ್ಭದಲ್ಲಿ, ದೇಶವನ್ನು ಉದ್ಧರಿಸಿದವರೆಂದಾದರೆ ಸಾಕು ಆ ಕಾರಕ್ಕಾಗಿ ಈ ಉಡುಗೆರೆಯೆಂಬಂತೆ, ಎಂದೆಂದಿಗೂ ಎಂತೆಂತಹ ಸಂದರ್ಭದಲ್ಲೂ ಅಂಥವರ ನಾಯಕತ್ವವನ್ನು ಮನ್ನಿಸಿಬಿಟ್ಟಕೊಳ್ಳುವುದೊಂದಲ್ಲದೆ ಹಿಂದೀಯರು ಬೇರೆ ತಿಳಿದಂತಿಲ್ಲ.

ಹಿಟ್ಲರ್, ಮುಸಲಿನಿ, ಸ್ಟಾಲಿನರಂತಹ ಲೋಕಾಗ್ರಗಣ್ಯ ಪ್ರತಾಪಿಗಳು ಸಾಮಾನ್ಯರಾಗಿ ಹುಟ್ಟಿ, ಸಾಮಾನ್ಯರಂತೆಯೇ ದುಡಿದು ಬಾಳುತಿದ್ದವರು ಕೊನೆಗೆ ಸ್ವಪ್ರಯತ್ನ ಮತ್ತು ಆತ್ಮವಿಶ್ವಾಸದಿಂದಲೇ ಆ ಸ್ಥಾನಗಳಿಗೇರಿದ್ದು-ವಾಸ್ತವ ಸಹಜ ಪರಿಣಾಮಕಾರಿತ್ವಕ್ಕೆ, ವಿಷಯಲಾಲಸೆಗಳಿದ್ದ ಗಾಂಧಿಯವರು ಸಂಯಮ ಮತ್ತು ಆತ್ಮಬಲವರ್ಧನೆಯ ಮೂಲಕವೇ ಮಹಾತ್ಮನಾದ—ನಿದರ್ಶನಗಳಿದ್ದರೂ ಜನಸಾಮಾನ್ಯರು ತಮ್ಮಲ್ಲಿರುವ ಆಜ್ಞಾನ್ಯ, ಅಲಸ್ಯ, ದೌರ್ಬಲ್ಯ ಮತ್ತು ಪರಾವಲಂಬನಾ ಬುದ್ಧಿಯನ್ನು ಬಿಡುವ ಪ್ರಯತ್ನವನ್ನು ಮಾಡುತ್ತಿಲ್ಲ.

ಇನ್ನು ಮೇಲ್ಪಂಗ್ತಿ, ನಿದರ್ಶನಗಳಿಂದ ಕಲಿಯಬೇಕಾದ ದನ್ನು ಕಲಿತುಕೊಳ್ಳಲೇ ಬೇಕಾದವನು ಕಲಿಯುತ್ತಿಲ್ಲ!

THE UNITED KARNATAK INSURANCE COMPANY, LIMITED.
Estd: 1929.
H. O. DHARWAR.
WANTED
A few Organisers on attractive terms. For further particulars please apply to:
THE BRANCH OFFICE, UDIPI. S K.

ಹೈದರಾಬಾದ್ ಇಂದೇನು?

ಭಾರತ ಕೇಂದ್ರದೊಂದಿಗೆ ಜೋಡಣೆ ಗೊಳ್ಳುವ ಕಾರು ಪತ್ರಕ್ಕೆ ಸಹಿಹಾಕಿ, ಭಾರತ ಘಟನಾ ಸಮಿತಿಯಿಂದ ತಯಾರಿಸಲ್ಪಟ್ಟ ರಾಜ್ಯಾಂಗ ಸನದನ್ನು ಹೈದರಾಬಾದಿಗೂ ಲಗತ್ತು ಪಡಿಸಿಕೊಂಡ 'ಫರ್ಮಾನ್' ಒಂದನ್ನು ನಿಜಾಮರು ಇದೇ ತಾ. 24ರಲ್ಲಿ ಹೊಂದಿಸಿದ್ದಾರೆ. ಮಿಕ್ಕ ಸಂಸ್ಥಾನಗಳಂತೆಯೇ ಹೈದರಾಬಾದೂ ಭಾರತದೊಂದಿಗೆ ಕ್ರಮಬದ್ಧವಾಗಿ ಪೂರ್ಣ ಮಿಲನಗೊಂಡಂತಾಯಿತು. ಯಾವುದೇ ಸಂಸ್ಥಾನದ ಅರಸರ ಅಭಿಪ್ರಾಯಕ್ಕೆಲ್ಲ—ಅಲ್ಲಿಯ ವ್ಯಜೆಗಳ ಭಿಧಮತಕ್ಕೇನೇ ಮಾನ್ಯತೆಯೆಂಬ ಪ್ರಜಾಸತ್ತಾತತ್ವದಂತೆ, ಹೈದರಾಬಾದ್ ಘಟನಾ ಸಮಿತಿಯೊಂದು ಚರ್ಚಾಯಿ ಸಲ್ಪಟ್ಟು ಆ ಸಮಿತಿಯು ಇದಕ್ಕೆ ತನ್ನ ಒಪ್ಪಿಗೆ ಕೊಡುವ ಅಂಶ ಬಾಕಿಯಿದೆ. ಈ ಕೆಲಸವೂ ಸಕಾಲದಲ್ಲಿ ನಡೆಯಲಿದೆ. ಭಾರತ ಸರಕಾರದ ಪೋಲೀಸ್ ಅಧಿಕಾರಿಯ ನಾಮಾಂಕಿತವಾಗಿ ಹೈದರಾಬಾದಿನ ಅರಾಜಕತೆ ನಿರ್ಮೂಲಗೊಂಡು ಅಲ್ಲಿ ಜನರಲ್ ಚೌಧರಿಯವರ ಮಿಲಿಟರಿ ಸರಕಾರವು ಶಾಸ್ತ್ರೀಯವಾಗಿ ಸುವ್ಯವಸ್ಥೆ ಸ್ಥಾಪಿಸಿದರೂ ಶಾಸನಬದ್ಧವಾಗಿ ಹೈದರಾಬಾದು ಭಾರತ ಕೇಂದ್ರದೊಂದಿಗೆ ಸೇರಿಕೊಂಡು ಉಳಿದ ಸಂಸ್ಥಾನಗಳ ಹಂಗ್ತಿ ಹಿಡಿದುದು ಮೊನ್ನೆಯೇ. ಇನ್ನೂ ಈ ಸಂಬಂಧದ ಕೆಲಸ ಬಾಕಿಯಿರುವ ಏಕಮಾತ್ರ ಸಂಸ್ಥಾನವೆಂದರೆ ಕಾಶ್ಮೀರ. ಭಾರತದ ನವರಾಜ್ಯ ಶಾಸನವು ಜನವರಿ ತಾ. 26ರಿಂದ ರಾಷ್ಟ್ರಪತಿ ಇತರ ಭಾಗಗಳಂತೆಯೇ ಹೈದರಾಬಾದಿನಲ್ಲೂ ಆಸ್ತಿತ್ವಕ್ಕೆ ಬರಲಿದೆ; ಹೈದರಾಬಾದ್‌ಘಟನಾ ಸಮಿತಿ ರಚಿಸಲ್ಪಟ್ಟು ಈ ಸಂಬಂಧವನ್ನು ಅನುಮೋದಿಸಿಕೊಳ್ಳುವ ಮತ್ತು ಸಂಸ್ಥಾನದ ಒಳಾಡಳಿತೆಯ ವ್ಯವಸ್ಥೆಯನ್ನು ಆದಷ್ಟಾನುಗುಣವಾಗಿ ರೂಪಿಸಿಕೊಳ್ಳುವ, ಕಾರ್ಯ ಮಾಡಲಿದೆ.

ಇಂದು ಹೇಗಿದೆ?

ಭಾರತದ ಅತಿ ದೊಡ್ಡ ಸಂಸ್ಥಾನವಾದ ಹೈದರಾಬಾದು ಇಂದು ಯಾವ ಸ್ಥಿತಿಯಲ್ಲಿದೆ, ಎಂಬುದರ ಕಡೆಗೆ ಈ ಸಂದರ್ಭದಲ್ಲೊಮ್ಮೆ ನೋಟ ಬೀರುವುದು ಅಗತ್ಯ. ಅಲ್ಲಿಯ ಪರಿಸ್ಥಿತಿ ನಿಯಂತ್ರಣವತ್ತು ಸ್ಥಿರತೆಗೆ ಬಂದಿದೆಯೂ ದರೂ ಎಲ್ಲವೂ ಇರಬೇಕಾದಂತಿಲ್ಲವೆಂಬುದು ಸ್ಪಷ್ಟ. ಸೇನಾಚಣಿ ಮೂಲಕ ಹೈದರಾಬಾದನ್ನು ಗೆದ್ದುಕೊಂಡ ಅಂದಿನಿಂದೀ ವರೆಗಿನ ಸಮಾಂ ಒಂದೂಕಾಲು ವರ್ಷದಿಂದ ಸೇನಾ ಗವರ್ನರ್ ಜನರಲ್ ಚೌಧರಿಯವರ ಆಡಳಿತೆ ಅಲ್ಲಿದೆ. ಈ ಅಲ್ಪಾವಧಿಯೊಳಗೆ, ಆ ಸಂಸ್ಥಾನದ ದೀರ್ಘಾವಧಿಯ ಕಠಿಣ ಕಾಯಿಲೆಯನ್ನು ಜನರಲ್ ಚೌಧರಿಗಳು ಪಡಿಸಿದ್ದಾರೆ—ಆತ್ಯಂತ ಜಯಶೀಲವಾಗಿ ಕಾರ್ಯವನ್ನು ನಡೆಸಿದ್ದಾರೆ—ಎಂಬುದು ನಿರ್ವಿವಾದ ಆದರೆ ಇನ್ನು ಅಲ್ಪತ್ವಗಳ ನಿವಾರಣೆ ಮತ್ತು ರಾಜ್ಯಭಾರ ನಿರ್ವಹಣೆಯು ಕಠಿಣತಾದ ಮಾತು. ಪ್ರಜಾಸ್ವಭುತ್ವದ ತಿರುಳೆಂದರೆ ಜನಮತ. ಅದನ್ನಾಧರಿಸಿ ಚುನಾಯಿಸಲ್ಪಡುವ ಸರಕಾರವೇ ಪ್ರಜಾ ಪ್ರಭುತ್ವಿಕವಲುಗಾರ ಹೀಗಿದ್ದಾಗ ಮನೆಯೊಡೆಯನಾಗಲಾರದು ಜೋಪಾನಸನಾ ಸರಕಾರವು ಶಾಶ್ವತತಾಧಿಕಾರಿಯಾಗಲಾರದು. ಆದರೂ ಅಪತ್ತು ಇನ್ನಿಲ್ಲವೆಂದಾಗದೆ—ಮನೆಯವರಲ್ಲಿ ಆಡಳಿತೆಯ ಅಭ್ಯತ್ತೆ ತೋರಬಾರದೆಂಕೇವಲ ಹಕ್ಕುಬಾಧ್ಯತೆಗಳನ್ನು ಧರಿಸಿ ಜೋಪಾನಸನಾಧಿಕಾರವನ್ನು ಬರ್ಖಾಸ್ತು ಪಡಿಸಿಕೊಳ್ಳುವುದು ಅವಾಯಕರ. ಆದ್ದರಿಂದಲೇ ಹೈದರಾಬಾದಿನಲ್ಲಿ ಜನರಲ್ ಚೌಧರಿಯವರ ಆಡಳಿತೆ ಅಂತ್ಯಗೊಳ್ಳುವುದು ಅಸಾಧ್ಯವಾಯಿತು. ಅಪಾಯಗಳು ಮುಗಿದುವೆನ್ನಾಣನೇ? ಅಲ್ಲಿ ಕಮ್ಯೂನಿಸ್ಟ್ ಹಾವಳಿಯೂ ಸಾಕಷ್ಟಿದೆ, ರಝಾಕರ್ ಹಾವಳಿಯ ಕಾಲದಲ್ಲಿ ಹಾಳುಬಿದ್ದ ಸರಕಾರೀ ಯಂತ್ರ ಇನ್ನೂ ಪೂರ್ಣ ಗರಸ್ತಿಯಾಗಿಲ್ಲ. ಈ ಕಂಟಕಗಳನ್ನು ಹೆಚ್ಚಿನಂಶ ತಾನಿಸ್ಪರಲ್ಪಗೊಳಿಸಿ ಬಿಟ್ಟು ಎವುದರಿಂದ ಉಳಿದ ಅಲ್ಪಾಂಶಗಳನ್ನಷ್ಟೇ ನಿವಾರಿಸಿಕೊಳ್ಳಲ್ಲಿ ಸಶಕ್ತ ಪ್ರಜಾ ಸರಕಾರದ ಕೈಗೆ ಸೇನಾ ಸಂಕಲ್ಪ ವು ರಾಜ್ಯಭಾರವನ್ನು ವರ್ಗಾಯಿಸಬಹುದಿದ್ದಿತು. ಆದರೆ ಅಂತಹ ಪ್ರಜಾ ಸರಕಾರವನ್ನಾದರೂ ಕಟ್ಟಿಕೊಳ್ಳುವ ಸ್ಥಿತಿಯಲ್ಲಿ ಇಂದಿನ ಹೈದರಾಬಾದ್ ಜನರಿಲ್ಲ ಅಲ್ಲಿಯ ಮುಖ್ಯ ರಾಜಕೀಯ ಪಕ್ಷವಾದ ಕಾಂಗ್ರೆಸಿಗರೊಳಗೆ ಪ್ರಬಲ ಭಿನ್ನಾಭಿಪ್ರಾಯಗಳಿವೆ; ಎರಡು ತಂಡಗಳಾಗಿವೆ. ಅತ್ಯಧಿಕ ಸಂಖ್ಯಾಕರು ಹಿಂದೂಗಳಿದ್ದು, ರಝಾಕರರು ಕೇವಲ ಅಲ್ಪಸಂಖ್ಯಾಕ ಮುಸ್ಲಿಮರನ್ನೆಲ್ಲ ಸಂಘಟಿಸಿದ್ದರೂ, ಆ ಕಾಲದಲ್ಲಿ ಒಹಿಸಂಖ್ಯಾಕರನ್ನು ಸಂಘಟಿಸಿ ಯಾವ ಪರಿಣಾಮಕಾರೀ ಚಳವಳಿ ಹೂಡಲಾಗದೆ ಕ್ಷೋಭೆಯಲ್ಲಿ ಮುಳುಗಿದ್ದಿತು. ಹೀಗಾಗಿ ಹೈದರಾಬಾದ್ ಸರಕಾರ ಪಾಲಿಗೆ ರಝಾಕಾರಿಯಹಗಲು ದರೋಡೆಗಾರರಾಗಿದ್ದರೆ ಕಮ್ಯೂನಿಸ್ಟರು ರಾತ್ರಿ ದರೋಡೆ ಪೇಕ್ಷರಾಗಿದ್ದರು. ನೇರ ಮತದ್ವೇಷಿ ರಝಾಕಾರಿಗೆ ಸಾಕಷ್ಟು ಆಶ್ರಯವಿದ್ದರೆ, ಭಂಡವಾಳಶಾಹಿಯ ರೋಧಿ ಕಮ್ಯೂನಿಸ್ಟರಿಗೆ ಸಾಮಾನ್ಯ ನರ ಆಶ್ರಯವಿದ್ದಿತು. ಭಾರತದ ಯು ಹೈದರಾಬಾದಿನೊಳಗೆ ನುಗ್ಗಿದಾದರೂ ಒಂದನೆಯದಾಗಿ ರಝಾಕಾರನ್ನು, ಎರಡನೆಯದಾಗಿ ಕಮ್ಯೂನಿಹಾವಳಿಯನ್ನು ನಿರ್ಮೂಲಿಸುವ ಧ್ಯೇವಸ್ಸಿಟ್ಟುಕೊಂಡೇ. ಇದು ವರೆಗಿನ ತಾತ್ಕಾಲಿಕಗಳ ಮೇಲಿಂದ ಹೇಳುವುದಾ ಅಲ್ಲಿಯ ಸೇನಾ ಸರಕಾರವು ಪೂರ್ಣ ಕಾರ್ಯದಲ್ಲಿ ಜಯ ಗಳಿಸಿದ ಪರಿಮ ದಲ್ಲೇ ಎರಡನೇ ಕಾರ್ಯದಲ್ಲಿ ಜಯಿ ರಝಾಕಾರರ ಪ್ರಾಯ ನಾಟಕಕ್ಕೆ ಮು ಯ ಪರದೆ ಬಿದ್ದಿದೆ; ಕಮ್ಯೂ ಸ್ಟರ ಮಹೇಂದ್ರಜಾಲವನ್ನೂ ಪೂ ಮಾಡಿದಿಲ್ಲ. ಬಡಜನ ವರ್ಗದ ಇಂದಿನ ಧಿಕದುಸ್ಥಿತಿ ಮತ್ತು ಅಜ್ಞಾನವನ್ನೇ ರಿಸಿರುವ ಕಮ್ಯೂನಿಸ್ಟ್ ಹಾವಳಿಯು ಜಾಶ್ಯಯ ಮತ್ತು ಧರ್ಮಾಂಧತೆ ನ್ನಾಧರಿಸಿದ್ದ ರಝಾಕಾರರ ಕಂ ದಷ್ಟ ಸುಲಭದಲ್ಲಿ ನಿರ್ನಾಮ ಳ್ಳುವಂತಹದಲ್ಲ. ಈ ಕಾಲನೆಂತಹ ಬುದಕ್ಕೆ ಇದು ಮತ್ತೊಂದು ನಿದರ್ಶ ಶತಮಾನಗಳಿಂದಲೂ ಹೈದರಾಬಾದಿ ರಕ್ತಗತವಾಗಿ ಇಳಿದು ಬಂದಿದ್ದ ವ ಯುಗದ ಮೊಗಲ್ ಮನೋವೃತ್ತಿ ವೆಡೆ ಸ್ವಂತ ಕೋಟ್ಯು ಮತ್ತು ರಕ್ಷ ಶಿಬ್ಬಂದಿಕೂಡಾ ಇದ್ದ ಜಾಗೀರುದಾ ಮತ್ತು ಪ್ರದೇಶವು ವಿಶಾಂತಹ ಜಮೀನ ರ ಸರ್ವಾಧಿಕಾರಿತ್ವ ವುಗಳಡಿಯಲ್ಲಿ ಜನಸಾಮಾನ್ಯರು ಹಾಯಕರಾಗಿ, ನಿಸ್ತೇಜಗೊಂಡು ಪ ದ್ದ ಕಪ್ಪನವ್ಯಗಳು-ಕಮ್ಯೂನಿಸ್ಟ್ ಹಾವಳಿ

ಕಮ್ಯೂನಿಸ್ಟ್ ಹಾವಳಿ

ಹೈದರಾಬಾದಿನಲ್ಲಿ ರಝಾಕಾರ್ ಒಳ್ಳವಿದ್ದಾಗಲೇ ಕಮ್ಯೂನಿಸ್ಟ್ ಪ್ರ ಬಹಳ ಬೆಳೆದು ಹೋಗಿದ್ದಿತು. ಪ್ರ ತಃ ಅವರ ವೇಲೆ ಹಾಕಿದ್ದ ಒಹಿಷ್ಕಾ ನ್ನು ಕೂಡಾ ಆಗಿನ ಹೈದರಾಬಾದ್ ಕಾರವು ಕೊನೆಗೆ ರದ್ದು ಪಡಿಸಿಕೊ ಕಮ್ಯೂನಿಸ್ಟರ ಬಟ್ಟೆಕ್ಕೆ ಪೂರ್ಣ ಅ ಕವನ್ನೊದಗಿಸಿ ಕೊಟ್ಟಿದ್ದಿತೆಂ. ಅಂ ಆಡಳಿತೆಯಲ್ಲಿ ರಝಾಕಾರಿಗೆ ಅನು ಲತೆಗಳು ವತ್ತು ಬೆಂಬಲ ಹೆಚ್ಚಿಗೆ ದೆ ಯುತ್ತಿದ್ದರೂ ಅವಾಶತ ಮಟ್ಟಿಗೆ ಮ್ಯೂನಿಸ್ಟರಿಗೂ ಅವಕಾಶ ದೊರೆಯದೆ ಸಮಾ ಯಿದ್ದಿತು. ಹೀಗಾಗಿ ಹೈದರಾಬಾದ್ ರ ಪಾಲಿಗೆ ರಝಾಕಾರಿಯಹಗಲು ದರೆ ಡೆಗಾರರಾಗಿದ್ದರೆ ಕಮ್ಯೂನಿಸ್ಟರು ರಾ ದರೋಡೆ ಪೇಕ್ಷರಾಗಿದ್ದರು. ನೇರ ಮತದ್ವೇಷಿ ರಝಾಕಾರಿಗೆ ಸಾಕಷ್ಟು ಆಶ್ರಯವಿದ್ದರೆ, ಭಂಡವಾಳಶಾಹಿಯ ರೋಧಿ ಕಮ್ಯೂನಿಸ್ಟರಿಗೆ ಸಾಮಾನ್ಯ ನರ ಆಶ್ರಯವಿದ್ದಿತು. ಭಾರತದ ಯು ಹೈದರಾಬಾದಿನೊಳಗೆ ನುಗ್ಗಿದಾದರೂ ಒಂದನೆಯದಾಗಿ ರಝಾಕಾರನ್ನು, ಎರಡನೆಯದಾಗಿ ಕಮ್ಯೂನಿಹಾವಳಿಯನ್ನು ನಿರ್ಮೂಲಿಸುವ ಧ್ಯೇವಸ್ಸಿಟ್ಟುಕೊಂಡೇ. ಇದು ವರೆಗಿನ ತಾತ್ಕಾಲಿಕಗಳ ಮೇಲಿಂದ ಹೇಳುವುದಾ ಅಲ್ಲಿಯ ಸೇನಾ ಸರಕಾರವು ಪೂರ್ಣ ಕಾರ್ಯದಲ್ಲಿ ಜಯ ಗಳಿಸಿದ ಪರಿಮ ದಲ್ಲೇ ಎರಡನೇ ಕಾರ್ಯದಲ್ಲಿ ಜಯಿ ರಝಾಕಾರರ ಪ್ರಾಯ ನಾಟಕಕ್ಕೆ ಮು ಯ ಪರದೆ ಬಿದ್ದಿದೆ; ಕಮ್ಯೂ ಸ್ಟರ ಮಹೇಂದ್ರಜಾಲವನ್ನೂ ಪೂ ಮಾಡಿದಿಲ್ಲ. ಬಡಜನ ವರ್ಗದ ಇಂದಿನ ಧಿಕದುಸ್ಥಿತಿ ಮತ್ತು ಅಜ್ಞಾನವನ್ನೇ ರಿಸಿರುವ ಕಮ್ಯೂನಿಸ್ಟ್ ಹಾವಳಿಯು ಜಾಶ್ಯಯ ಮತ್ತು ಧರ್ಮಾಂಧತೆ ನ್ನಾಧರಿಸಿದ್ದ ರಝಾಕಾರರ ಕಂ ದಷ್ಟ ಸುಲಭದಲ್ಲಿ ನಿರ್ನಾಮ ಳ್ಳುವಂತಹದಲ್ಲ. ಈ ಕಾಲನೆಂತಹ ಬುದಕ್ಕೆ ಇದು ಮತ್ತೊಂದು ನಿದರ್ಶ ಶತಮಾನಗಳಿಂದಲೂ ಹೈದರಾಬಾದಿ ರಕ್ತಗತವಾಗಿ ಇಳಿದು ಬಂದಿದ್ದ ವ ಯುಗದ ಮೊಗಲ್ ಮನೋವೃತ್ತಿ ವೆಡೆ ಸ್ವಂತ ಕೋಟ್ಯು ಮತ್ತು ರಕ್ಷ ಶಿಬ್ಬಂದಿಕೂಡಾ ಇದ್ದ ಜಾಗೀರುದಾ ಮತ್ತು ಪ್ರದೇಶವು ವಿಶಾಂತಹ ಜಮೀನ ರ ಸರ್ವಾಧಿಕಾರಿತ್ವ ವುಗಳಡಿಯಲ್ಲಿ ಜನಸಾಮಾನ್ಯರು ಹಾಯಕರಾಗಿ, ನಿಸ್ತೇಜಗೊಂಡು ಪ ದ್ದ ಕಪ್ಪನವ್ಯಗಳು-ಕಮ್ಯೂನಿಸ್ಟ್ ಹಾ

ಉಡುಪಿ ಸರ್ಯಾಯ ವಸ್ತು ಪ್ರದರ್ಶನ, 1950.

ತಾರೀಕು 1-1-1950ರಿಂದ 22-1-1950ರ ವರೆಗೆ ಉಡುಪಿಯಲ್ಲಿ ಕೈಗಾರಿಕೆ "ವಸ್ತು ಪ್ರದರ್ಶನ" ನಡಿಯಲಿದೆ. ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುಸಂಧಿ. ಕೆಲವೇ ನ್ವಾಲುಗಳು ಉಳಿದಿವೆ.

ಈ ಕುರಿತು ಯೋಗ್ಯ "ಸುವರ್ಣ ಸಂಚಿಕೆ"ಯೊಂದನ್ನು ಪ್ರಕಾಶಗೊಳಿಸಲಿದೆ. ಅದರಲ್ಲಿ ಕೊಡುವ ಜಾಹೀರಾತು ಮಹತ್ವಯೋಜನಕಾರಿಯಾದುದು.

ಪ್ರದರ್ಶನದ ಸಂಪೂರ್ಣ ಉಳಿತಾಯವನ್ನು
"ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ"ಗೆ
ದಾನವಾಗಿ ಕೊಡಲಾಗುವುದು.

ವಿವರಕ್ಕೆ ಇಂದೇ ಬರೆಯಿರಿ

Inserted by:-
The Canara Industrial & Banking Syndicate Ltd, UIDPI.

ಕಾರ್ಯದರ್ಶಿ
ಉಡುಪಿ ಸರ್ಯಾಯ
ವಸ್ತು ಪ್ರದರ್ಶನ 1950
ಉಡುಪಿ.

ಡಿ. ಎನ್. ಹೊಡಿತರ ಶ್ರೇಷ್ಠವಾದ

ಪಾಥಿಸ್ ನೀಮರ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ವಾಕಿಸ್ವರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

ಭೂಮಿಯ ಆಳದಲ್ಲಿ ಹುಟ್ಟಿ ಬೆಳೆದ ಅಪೂರ್ವ ಔಷಧಿ



REGD

ಹುಳುಕಡ್ಡಿ ಮದ್ದನ್ನಮ್ಮಲ್ಲಿಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಆನ್ಮುಕಾಂಜನ
ತಲೆವೇದನೆ, ಶಿರೋವೇದನೆ, ಉಳುಕು ಳುಕ್ತಿಗೆ, ಭುಜಹಲ್ಲು ವೇದನೆಗಳಿಗೂ, ಎದೆ ನೋವು,ಥಾಯಗಳು,' ಬಾತುಕೊಳ್ಳುವುದು, ಜೀಳವಿಷನುಂತಾದವು, ಪ್ಪನಾತ,ಮೊದಲಿನ ಮೊದಲಾದ ಎಲ್ಲಾರೋಗಗಳಿಗೂ ನಿಷ್ಠೌಷಧ

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿ

'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನು
ವಿಚಾರಿಸಿರಿ.

-ಮುಂದೆ ಹೇಗಾಗಬಹುದು?

ಶತ್ರು ತತ್ವಗಳಿಗೆ ಬೀಸೊರಿನಿಲ್ಲುವ ಹುಲು ಕ್ಷತ್ರಿಯನನ್ನಲ್ಲಿ ನಿರ್ಮಿಸಿದ್ದುವು. ಹಿಂದಲ್ಲಾ ಭಾರತದ ಗಡಿಗೆ ಕಾಗಿಕೊಂಡೇ ಹೈದರಾಬಾದಿನ ಪೂರ್ವಮೂಲೆಯಾಗಿರುವ ಫಲ್ಗೊಂಡ ಮತ್ತು ವಾರಂಗಲ್ ಜಿಲ್ಲೆಗಳಲ್ಲಿ ಈ ದುಸ್ಥಿತಿ ಅತಿ ಭೀಕರವಾಗಿತ್ತು. ಕಮ್ಯೂನಿಸ್ಟರ ಮುಖ್ಯ ಕ್ಷೇತ್ರಗಳಿದ್ದು, ಅವರ ಪೂರ್ಣ ಪ್ರಭಾವಕ್ಕೊಳಗಾಗಿದ್ದ ಜಿಲ್ಲೆಗಳೆಂದರೆ ಇವೇ. ಅಲ್ಲದಲ್ಲಿ ಝಮೀನ್ದಾರರು ಕೂಡಾ ಇವರ ಹಿಡಿತದಲ್ಲಿ ಜಿಲ್ಲೆಗಳನ್ನ ಕಮ್ಯೂನಿಸ್ಟರ ಪಾಲಿಗೆ ಬಿಟ್ಟು, ಉಳಿದ ಭಾಗಗಳಲ್ಲೇ ತಮ್ಮಾಟವನ್ನಾಡಿಕೊಂಡಿದ್ದರು. ಸಂಖ್ಯಾಸಬಲರಾಗಿದ್ದಲ್ಲೂ ಭೂತದ ಡಿಯಲ್ಲಿಗೆ ನಿರ್ಗತಿಕರಾಗಿ ಅಲೆಯುತ್ತಿದ್ದ ಅಲ್ಲಿನ ಕೃಷಿಕರನ್ನು ಹೆಣ, ಭಂಗಾರ, ವಸ್ತ್ರ ಒಡವೆಗಳಿಂದ ಅಲಂಕರಿಸಿ ಮೆರವಣಿಗೆ ಮಾಡಿಸಿದ್ದು—ಅತ್ತ ಕಡೆಯಲ್ಲಿ ಕ್ಷತ್ರಿಯ ವಂಶವನ್ನು ಬಡವರಿಗೆ ಹಂಚಿ ಹಾಕಿದ ಅಟವಾಡವುದು—ವಿರೋಧಿಗಳವರ ತೂಲಿ ಮತ್ತು ಬೆಳೆಗಳಿಗೆ ಬಂಕಿ—ಇತ್ಯಾದಿ ಘೋರ ಕೃತ್ಯಗಳನ್ನು ಕಮ್ಯೂನಿಸ್ಟರು ತಮ್ಮ ತಮ್ಮ ಪಾಲಿನ ಜಿಲ್ಲೆಗಳಲ್ಲಿ ನಿರಂತಂಕವಾಗಿ ನಡೆಯಿಸಿಕೊಂಡು ಬಂದರು. ಕರಣಕೆ ಗೆಗಳನ್ನು ಕೂಡಾ ವಶಮಾಡಿಕೊಳ್ಳುವ ಅವರು ಅಲ್ಲಿ ಸಶಸ್ತ್ರ ಸಂಘರ್ಷಣೆಗೆ ಹಡೆದಿದ್ದರು. ಭಾರತ ಸೇನೆ ನುಗ್ಗಿ ಬಂದಾಗ ಸಾಧ್ಯವಿದ್ದಷ್ಟು ಅಕ್ಕಿ ಅಕ್ಕಪಕ್ಕಳನ್ನೊಡ್ಡಿ, ಕೆಲವಡೆ ಗೆರಿಲ್ಲಾ ಟ್ಯಾಕ್ಟಿಕ್ಸ್‌ನ್ನೂ ಕೆಂಟ್ಟು ಕಮ್ಯೂನಿಸ್ಟರು ತಮ್ಮ ತಮ್ಮ ಪಾಲಿನ ಕೆಲಸ ಮಾಡಿದೆವೆಂದು ಲಿಪ್ಪಿ. ಆದರೆ ಹಿಂದೀ ಸೇನೆಯು ಕಾರ್ಯಕ್ಷೇತ್ರ ಅವರ ಅಟ ನಡೆಯಲಿಲ್ಲಿ ಹಲವು ಪ್ರಾಣಹಾನಿಗಳಾದರು ಹೊರತಾದರು; 2000 ಕ್ಕಿಂತ ಅಸ್ತ್ರ ಕೆಳೆದವರು ಪ್ರಾಣಗಳಿಯಾದರು ಎಂದೂ ಸೈನ್ಯಾಬಾದ್ ಸೇನಾಚರಣೆ ನಂತರ ಈ ವರೆಗೆ ಕಮ್ಯೂನಿಸ್ಟರಿಂದ ಕೊಲೆಯಾದ ಕಾಂಗ್ರೆಸಿಗರ ಸಂಖ್ಯೆಯನ್ನು ಕಂಡರೆ ದಿಗಿಲೇಳ್ತಿದೆ. ಭಾರತ ಸೇನೆಯು ಎಲ್ಲ ತಮ್ಮಾಟ ಮುಗಿಯತೆಂದು ತಿಳಿದುಂಡಾಗ ಸ್ಥಳಿಯರು ಇನ್ನೂ ಮುಂದಕ್ಕೆ ತಮ್ಮ ಪಾಲಿನ ಕೆಲಸವೂ ಇವರಿಂದಲೇ ಆಗಲಿ, ಎಂದು ತಮ್ಮ ಶಸ್ತ್ರಾಸ್ತ್ರಗಳನ್ನು ಕಮ್ಯೂನಿಸ್ಟರಿಗೆ ಒಪ್ಪಿಸಿದ್ದರೆಂದು ತಿಳಿದು ಬಂದಿತ್ತು. ಈಗ ಕೆಲವು ಕಮ್ಯೂನಿಸ್ಟರು ಹೈದರಾಬಾದ್ ಕಾಂಗ್ರೆಸಿನೊಳಗೆ ಸೇರಿಕೊಂಡು ಪೋಲಿಸರ ದಸ್ತಗಿರಿಯಿಂದ ತಪ್ಪಿಸಿಕೊಂಡಂತೆಯೇ ಕಾಂಗ್ರೆಸ್ ಕಾರ್ಯವನ್ನೂ ಅಡ್ಡಹಾದಿಗೆ ತಿಯುವ ಪ್ರಯತ್ನ ನಡೆಸುತಿದ್ದಾರೆಂದು ಕಂಡುಬಂದಿದೆ. ಎಷ್ಟೋ ಮಂದಿ ತಲೆತಪ್ಪಿಸಿಕೊಂಡು ಅಂತರ್ಗಾಮೀ ಉಪಟಳಗಳನ್ನೆಬ್ಬಿಸುತ್ತಿದ್ದಾರೆ. ಜನರಿಂದ ಸುಲಿದುದನ್ನು ಗಂಟುಕಟ್ಟಿಕೊಂಡು ಸೇನಾ ಶಕ್ತಿಯಿಂದ ಕಣ್ಣಾತಪ್ಪಿಸಿಕೊಂಡು ಭಾರತದ ಮೂಲೆಮೂಲೆಗಳಿಗೆ ಓಡಿಬಂದು ಸ್ವಸ್ಥಸೌಭಾಗ್ಯ ಜೀವನ ನಡೆಸಲು ಪ್ರಯತ್ನಿಸಿದ ಬಡಿಜನ ಪಕ್ಷಪಾತೀ ಕಮ್ಯೂನಿಸ್ಟ್ ನಾಯಕರೂ ಇದ್ದಾರೆ. ಹೈದರಾಬಾದಿನ ಇಂತಹ ಒರ್ವ ಕಮ್ಯೂನಿಸ್ಟ್ ಮುಂದಾಳು ಸುಮಾರು ಏಳುಲಕ್ಷ ರೂಪಾಯಿಯನ್ನು ಕೂಡಿಟ್ಟುಕೊಂಡು, ಅದನ್ನು ಕಟ್ಟಿಕೊಂಡು ವ್ಯಾಪಾರಿಗೆ ಬಂದು ಅಲ್ಲೊಂದು ನರ್ಸರಿ ಸೋಮಿನಲ್ಲಿದ್ದ ಶ್ರೀಮಂತಿಕೇ ನಿರ್ವಹಿಸಲನದ ಮಂಥಕೊಟ್ಟು ಗಳಿಸಿದ ಈ ಶ್ರೀಮಂತಿಕೆಯಂದ ಮುಂದೆ ಶ್ರೀಮಂತಸಜೀವನ ನಡೆಸುವ ಮಾರ್ಗೋಪಾಯವನ್ನಲ್ಲಿ ಯೋಚಿಸಿದ್ದರೂ ಕೂಡಾ, ಎಂದಿನ ಪೋಲೀಸಬಂಧನಕ್ಕೆ ಕಮ್ಯೂನಿಸ್ಟ್ ಸಹಜ ಮಡಿಗೆರಿಯನ್ನೇ ಕೊಟ್ಟಿದ್ದಾರೆ; ದಸ್ತಗಿರಿ ಮಾಡಿದ್ದಾರೆ. ಸೇನಾಚರಣೆಯು ಈ ಅವಾಯಕರ ಕ್ಷೇತ್ರಗಳಲ್ಲಿ ವಿಶೇಷರೀತಿಯ ಬಂದೋಬಸ್ತನ್ನಿಟ್ಟಿದೆ. ಫಲ್ಗೊಂಡ ಜಿಲ್ಲೆಯಲ್ಲಿ ೨೦೦ಕ್ಕೂ ಮಿಕ್ಕಿ ಪೋಲೀಸ್ ರಾಜ್ಯಗೆಳನ್ನು ತೆರೆದಿದ್ದಾರೆ; ಆಯಕಟ್ಟಿನ ಸ್ಥಳಗಳಲ್ಲಿ ಈಗಲೂ ಸೇನಾಗಸ್ತು ನಡೆದಿದೆ; ಅರ್ಧಲಕ್ಷ ಮಾಪಾಯಿಗಳಿಗೂ ಮಿಕ್ಕಿದ ಅಭ್ಯರ್ಥನೆಗಳನ್ನು ಪತೆಪೆಟ್ಟಿಜಾಸುವಾರಾಗಿ ಪಡೆದಿದ್ದಾರೆ. ಹೊಗೆ ಭೂಪೊಂಗಳನ್ನು ಸುಟ್ಟುಸ್ವಾಧೀನಪಡಿಸಿಕೊಂಡು ಅವುಗಳ ಮೂಲ ಮಾಲಿಕರಿಗೆ ಒಪ್ಪಿಸಲಾಗಿದೆ. ಸರಿಯಾದ ರೈತ್ವಾರಿ ಜೋಡಣೆ ಮತ್ತು ಸ್ಥಳೀಯ ಸಾಕುರ್ಯಗಳಿಲ್ಲದೆ ಸುಂಡಾಟ ಹಾಗೂ ಜೀವನಾವಶ್ಯಕ ಸಾಮಗ್ರಿಗಳ ಉಳಿವನೆರೆಗಳಾದ್ದು ಈ ಕ್ಷೇತ್ರಗಳಲ್ಲೀಗ ದಸ್ತೇದುರಸ್ತಿ, ಬಸ್ಸು ಲೋರಿಗಳ ಮೂಲಕ ಸರಬರಾಯಿಗಳು ಸರಾಗವಾಗಿ ನಡೆದಿವೆ. ಈ ರೀತಿ ಕಮ್ಯೂನಿಸ್ಟರು ಬಹಿರಂಗ ಹಾವಳಿಯನ್ನು ನಿರ್ಮೂಲಿಸಿ,ಅದಕ್ಕಿದ್ದ ಆಶ್ರಯಗಳನ್ನು ತಪ್ಪಿಸಲಾಗಿದೆಯಾದರೂ ಇನ್ನೂ ಆಗಬೇಕಾದ ಕೆಲಸಗಳಿವೆ; ಗುಪ್ತಗಾಮಿ ಕಮ್ಯೂನಿಸ್ಟರ ಉಪಟಳಗಳಂತೂ ಈಗಲೂ ಅಂಕಿತ ಉಳಿದಿವೆ.

ಮುಂದಕ್ಕೇನು?

ಹೈದರಾಬಾದಿನ ಪ್ರಚಲಿತ ಸ್ಥಿತಿ ಹೀಗಿದ್ದರೆ, ಅದರ ಭವಿಷ್ಯ ನಿರ್ಮಾಣ ಪ್ರೇಕ್ಷಕರಲ್ಲೂ ಗಣನೀಯ ಸಂಖ್ಯೆಗಳು ತಲೆಯೆತ್ತಿ ತೋರುತ್ತಿವೆ ಉರ್ದೂವಲ್ಲೇ ಸರಕಾರೀ ಭಾಷೆಯಾಗಿ ಇಟ್ಟುಕೊಂಡು ದರಿಂದಾರಂಭಿಸಿ ರಾಷ್ಟ್ರಜೀವನದ ಪ್ರತಿಯೊಂದು ವಿಭಾಗದಲ್ಲೂ ಮೊಗಲ್ ರಾಜರ ಕಾಲದ ಪರಿಸ್ಥಿತಿಗನ್ನೇ ಅನುಕರಿಸುತ್ತಾ ಬಂದು, ಸೇಕಡಾ 87ರಷ್ಟಿರುವ ಮುಸ್ಲಿಮೇತರರಿಗಿಂತ ಸೇ. 13ರಷ್ಟಿರುವ ಮುಸ್ಲಿಮರಿಗೇನೇ ಹೆಚ್ಚಿನ ಪ್ರಾತಿನಿಧ್ಯ, ಸ್ಥಾನಮಾನಗಳನ್ನು ಕೊಡುವ ಸಂಪ್ರದಾಯವನ್ನು ತಿನಸರಿಸಿರುವ ಹೈದರಾಬಾದಿನ ಸರಕಾರೀ ವಿಧಾನ ಹಾಗೂ ಜನಜೀವನವನ್ನು ಪ್ರಜಾಸತ್ತಾತ್ಮಕವಾಗಿ ಮಾರ್ಪಡಿಸುವ ಅತ್ಯಂತ ಕಷ್ಟದಾಯೀ ಕೆಲಸದ ಭಾರವೀಗ ಬಿದ್ದಿದೆ. ಅಂತೆಯೇ ಹೈದರಾಬಾದಿನ ರಾಜ್ಯಭಿಪ್ಲವನೆ ತಯಾರಿಸಲು ಭೂಸ್ವಾಮಿ ಪಕ್ಷಿತಿಗಳನ್ನು ಇನ್ನು ಚುನಾಯಿಸಲ್ಪಡಬೇಕು- ಆವೇಲೆ ಕೆಲಸವಾರಂಭಿಸಿ ಹೋಗಬೇಕು. ಇದನ್ನು ನಿರ್ವಹಿಸಲು ನಡುಗಾಲಾವಧಿಯ ಜನಪ್ರತಿನಿಧಿ ಸರಕಾರ ಅತ್ಯವಶ್ಯಕವಾದುದು ಜಾಗತ್ಯ. ಈ ನಡುವೆ ಹೈದರಾಬಾದಿನ ಇಂದಿನ ಅಸಿತ್ವಕ್ಕನೇ ಕಂಟಕ ಪ್ರಾಯವಾದ ಅದರ ಸಂಧಾನವ ಮುಖ್ಯ ಪ್ರಶ್ನೆಯೊಂದು ಪ್ರತ್ಯಕ್ಷೀಕರಿಸಿದೆ. ಹೈದರಾಬಾದ್ ಸಂಸ್ಥಾನವನ್ನೆ ಭಾಷಾವಾರಿಂಗಿ ವಿಂಗಡಿಸಿ, ಆಯಾಯ ಭಾಷಾವಾರು ಪ್ರಾಂತ್ಯದೆಂದಿಗೆ ಸೇರಿಸಿಬಿಡಬೇಕೆಂಬ ವಾದವುಳುತ್ರಣಿಂದಲೂ ಹೈದರಾಬಾದಿಗೆ ಮೆತ್ತಿಗೆ ಹಾಕಿದೆ. ಈಗ ರಚನಾಪೂರ್ವ ಸ್ಥಿತಿಯಲ್ಲಿರುವ ದಕ್ಷಿಣ ಭಾರತದಭಾವಾವರುಭಾಗಗಳೆಲ್ಲ ಪೂರ್ತಿಮ್ಮ ಪಾಲಿನ ಹೈದರಾಬಾದ್ ಭಾಗವನ್ನು ದೃಷ್ಟಿಪಥದಲ್ಲಿಟ್ಟುಕೊಂಡೇ ಕಾರ್ಯನಿರತವಾಗಿವೆ. ಹಾಗೆ ಹೈದರಾಬಾದನ್ನು ಭಾಷಾವಾರಿಂಗಿ ಹಂಚಿಹಾಕುವ ಕಾಲಬಂದರೆ, ಮತ್ತೆ ಭಾರತ ನಂತರತಿಯಿಂದಲೇ ಇಂದಿನ ಹೈದರಾಬಾದ್ ಅದೃಶ್ಯವಾಗುವುದು. ಅದು ಆಂಧ್ರಮ್ಮಾತ್ಯ, ಕರ್ನಾಟಕ ಪ್ರಾಂತ್ಯ ಮಹಾರಾಷ್ಟ್ರ ಪ್ರಾಂತ್ಯಗಳಿಗೆ ಅಗಲಿಸಲ್ಪಡವುದು. ಈ ಭಾಷಾವಾರು ಪ್ರಾಂತ್ಯಗಳ ಸಂಹೆದ್ದು ಗಡಿಗಳು ಈಗಿನ ಹೈದರಾಬಾದಿನೊಳಗೆ ಮೂಡಲಿವೆ. ಹೈದರಾಬಾದ್ ಘಟನಾ ಸಮಿತಿಯು ಅಲೋಚಿಸಲಿರುವ ಮೂಲ ಪ್ರಶ್ನೆಗಳಲ್ಲಿ ಇದು ಸರ್ವ ಪ್ರಥಮದ್ದಾಗಬಹುದು. ಆದರೆ ಆದಷ್ಟೆ ಹೈದರಾಬಾದ್ ಘಟನಾ ಸಮಿತಿಯ ಒಪ್ಪಿಗೆ ದೊರೆಯುವುದು ಅಸಂಭವ. ಎಂತಹ ಪರಿಸ್ಥಿತಿಯಿದ್ದರೂ ಭೂ ವಿಚ್ಛೇದನೆಯೆಂಬುದು ಭೂಮಾಲ್ಕರಿಗೆ ಅತ್ಯಂತ ಅಪ್ರಿಯವಾಗುವ ವಿಷಯ. ಯಾವ ಭೂಪೆಯನ್ನಾಡುವ ಹೈದರಾಬಾದಿಯೇ ಇರಲಿ—ತಾನು 'ಹೈದರಾಬಾದಿನವ'ನೆಂಬ ಭಾವನೆಯನ್ನು ಬಿಡಲಾರ. ಹೈದರಾಬಾದಿನ ಭಾಷಾವಾರು ವಿಂಗಡನೆಯಾದರೂ ಅದರ ಭೂಮಾಲ್ಕರ ಸಂಘಟನೆ ಮಾತ್ರ ಅಖಂಡವಾಗಿಯೇ ಉಳಿಯುವುದು. ಅಂತೆಯೇ ಹೈದರಾಬಾದಿನ ಕಾಂಗ್ರೆಸ್ ಸಂಘಟನೆಯೂ ಅಖಂಡವಾಗಿಯೇ ಉಳಿಯುವುದು. ಹೈದರಾಬಾದಿನ ಕಾಂಗ್ರೆಸ್ ಸಂಘಟನೆಯಲ್ಲಿ ಭೂಮಾಲ್ಕರ ಪ್ರಭಾವ ಅತ್ಯಧಿಕವಾಗಿರುವುದು ಸಹಜವೇ. ಆದರೆ ಈ ಭೂಮಾಲ್ಕರ ಪ್ರಭಾವವು ಕಾಂಗ್ರೆಸಿನ ಸಂಘಟನೆಯ ಮೇಲೆ ಮಾತ್ರ ಇರುವುದು. ಕಾಂಗ್ರೆಸ್ ಸರಕಾರದ ಮೇಲೆ ಅವರ ಪ್ರಭಾವ ಅಷ್ಟಾಗಿ ಇರಲಾರದು. ಹೈದರಾಬಾದಿನ ಕಾಂಗ್ರೆಸ್ ಸರಕಾರವು ಭೂಮಾಲ್ಕರ ಪ್ರಭಾವದಿಂದ ಸಾಧ್ಯವಾದಷ್ಟು ಮುಕ್ತವಾಗಿರಲು ಪ್ರಯತ್ನಿಸ

ಭಾರತ ಜನತಾ ರಾಜ್ಯ-

32 ಕೋಟಿ ಜನರ ಭವಿಷ್ಯ ರಚನೆ!

ತಾ॥ 26-11-49ನೇ ಶನಿವಾರ ಪೂರ್ವಾಹ್ನ 11-10 ಕಾಸಿಗೆ ನವಢಿಲ್ಲಿಯ ಘಟನಾ ಸಮಿತಿ ಸಭೆಯಲ್ಲಿ ರಿಪಬ್ಲಿಕ್ ಭಾರತದ ನವರಾಜ್ಯ ಶಾಸನವು ಮಂಜೂರಾಯಿತು. ಈ ಶಾಸನಾನುಸಾರ ರಿಪಬ್ಲಿಕ್ ಭಾರತದ ಉದ್ಘಾಟನೆಯು 1950ನೇ ಜನವರಿ ತಾ. 26ರಲ್ಲಿ ಜರಗಲಿದೆ.

ನವಶಾಸನದ ಕೆಲವಂಶಗಳನ್ನು ಇದು ಮಂಜೂರಿಂದ ಎರಡು ವಿಷಯಗಳಲ್ಲೇ ಘಟನಾ ಸಮಿತಿ ಅಧ್ಯಕ್ಷ ರಾಜೇಂದ್ರ ಪ್ರಸಾದರು ಸಿದ್ಧಾಂತೀಕರಿಸಿದರು. ಆ ಮೂಲಕ ಈಗಲೇ ಉತ್ಸುತ್ವಕ್ಕೆ ಬಂದಿರುವವುಗಳೆಂದರೆ ನಾಗರಿಕಪನ, ಪ್ರಚಲಿತ ಪಾರ್ಲಿಮೆಂಟ್ ಹಾಗೂ ತಾತ್ಕಾಲಿಕ ಮತ್ತು ಬದಲಾವಣೆ ಕಾಲಕ್ಕೆ ಸಂಬಂಧಿಸಿದ ಕೆಲವು ನಿಬಂಧನೆಗಳು.

ನವರಾಜ್ಯ ಶಾಸನವು ಈ ಮೊದಲಿನ ಎಲ್ಲಾ ಶಾಸನಗಳನ್ನೂ ಸ್ಥಾನಭ್ರಷ್ಟಗೊಳಿಸಿ ಪೂರ್ಣಾಧಿಕಾರ ಮತ್ತು ಪೂರ್ಣಾಧಿಕಾರದಿಂದ ಪ್ರತಿಷ್ಠಿಸಲ್ಪಡುವ 1950ನೇ ಜನವರಿ ತಾ. 26ನೇ ಗುರುವಾರವು ಭಾರತದ ಚರಿತ್ರೆಯಲ್ಲಿ ಒಂದು ಸರಹದ್ದೂ ಸಂಭ್ರಮದ ದಿನವಾಗಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಡುವ ಸಂಭವವಿದೆ

1929ನೇ ಲಾಹೋರು ಕಾಂಗ್ರೆಸಿನಲ್ಲಿ 'ಪೂರ್ಣ ಸ್ವಾತಂತ್ರ್ಯವೇ ಗುರಿ'ಯೆಂಬ ನಿರ್ಣಯವಾಗಿದ್ದಿತು; ಆ ವರೆಗೂ 'ಬ್ರಿಟಿಷ್' ಸಂಬಂಧ ಕಡಿದುಕೊಂಡ ಪೂರ್ಣ ಸ್ವಾತಂತ್ರ್ಯ'ವೇ ತನ್ನ ಗುರಿಯೆಂಬ ಕಾಂಗ್ರೆಸ್ ಸ್ಪಷ್ಟಪಡಿಸಿಕೊಂಡಿರಲಿಲ್ಲ. ಈ ಪೂರ್ಣ ಸ್ವಾತಂತ್ರ್ಯದ ನಿರ್ಧಾರವಾದ ಮೇಲೆ ಪ್ರತೀ ವರುಷ ಜನವರಿ ತಾ 26ನ್ನು 'ಸ್ವಾತಂತ್ರ್ಯ ಪ್ರತಿಜ್ಞಾ ದಿನ'ವಾಗಿ ರಾಷ್ಟ್ರವುಪಚರಿಸುತ್ತಾ ಬಂದಿದ್ದಿತು. 1947ನೇ ಆಗೋಸ್ತು 15ರಲ್ಲಿ ಭಾರತದಲ್ಲಿ ಸ್ವರಾಜ್ಯಸ್ಥಾಪನೆಯಲ್ಪಟ್ಟಿತು. ಬ್ರಿಟಿಷ್ ಸಂಬಂಧ ವಿಚ್ಛೇದನಾ ಸಮೀಕ್ಷೆ ಭಾರತಕ್ಕಿಚ್ಛೆಯಿಂದಂತೆ ಈ ಸ್ವರಾಜ್ಯವನ್ನು ಬದಲಾಯಿಸಿಕೊಳ್ಳುವ ಅಧಿಕಾರವು ಆಗಲೇ ದೊರೆತಿದ್ದರೂ ಒಪ್ಪಿಗೆ ಪುರಸ್ಕಾರವೇ ಈ ವರೆಗೆ ಭಾರತದಲ್ಲಿರುವುದು 'ವಸಾಹತು ಸ್ವರಾಜ್ಯ'. ಬ್ರಿಟಿಷ್ ರಾಜರ ಜನ್ಮದಿನ'ದಂತಹ ಅಚಂಡೆಗಳು ಸ್ವರಾಜ್ಯನಿಂತೂ ಇಲ್ಲ ನಡೆಯುತ್ತಾ ಬಂದುದೂ, ಕೆಲವು ಸಂದರ್ಭಗಳಲ್ಲಿ ಭಾರತ ಧ್ವಜದೊಂದಿಗೆ 'ಯೂನಿಯನ್ ಜೇಕ್'ನ್ನು ಹಾರಿಸುತ್ತಿರುವುದೂ ಈ ಕಾರಣದಿಂದಲೇ. ಆದರೆ ಈಗ ತಯಾರಾಗಿರುವ ಸ್ವತಂತ್ರ ಶಾಸನದಿಂದಾಗಿ, ಬರುವ ಜನವರಿ ತಾ 26ರಲ್ಲಿ ಜಾರಿಗೆಬರುವ 'ಪೂರ್ಣ ಸ್ವತಂತ್ರ ಜನತಾರಾಜ್ಯ'ವು ಬ್ರಿಟಿಷ್ ರಾಜರುಗಳಿಂದ ಈ ಸಂಬಂಧವನ್ನು ಕೂಡಾ ಕಡಿದುಕೊಳ್ಳಲಿದೆ. ಈ ತನಕ ಬ್ರಿಟಿಷ್ ಸಿಂಹಾಸನಕ್ಕೆ ಸಲ್ಲುತ್ತಿರುವ ಎಲ್ಲಾ ಗೌರವಗಳು ರಿಪಬ್ಲಿಕ್ ಭಾರತದಲ್ಲಿ ಕೇಂದ್ರಾಧ್ಯಕ್ಷರಿಗೇನೇ ಸಲ್ಲಲಿವೆ; ಬ್ರಿಟಿಷ್ ರಾಜರ ಸಹಿಯಿಂದ ಹೊರಡುತ್ತಿರುವ ಎಲ್ಲಾ ಜಾಹೀರಾತಾನಾಮೆ ಮತ್ತು ಆಜ್ಞೆಗಳೂ ಇನ್ನು ಮುಂದೆ ರಿಪಬ್ಲಿಕ್ ಅಧ್ಯಕ್ಷರ ಸಹಿಯಿಂದಲೇ ಹೊರಡಲಿವೆ. ಬ್ರಿಟನಿನ ಸಿಂಹಾಸನಕ್ಕೆ ಸಂಬಂಧಿಸಿದ ಯಾವುದೇ ವಿಚಾರಣೆಯಾಗಲೀ, ಬ್ರಿಟಿಷ್ ಧ್ವಜಕ್ಕೆ ಯಾವ ಸಂದರ್ಭದಲ್ಲಾದರೂ ಸ್ಥಾನವಾಗಲೀ ಇನ್ನಿಲ್ಲ. ಪ್ರಮಾಣವಾಕ್ಯ, ವಿಧೇಯತಾ ಪ್ರತಿಜ್ಞೆ ಮುಂತಾದುವುಗಳೆಲ್ಲವೂ ಅಧ್ಯಕ್ಷೆ ಹಾಗೂ ರಿಪಬ್ಲಿಕ್ಕಿನ್ನೇ ಸಂಬೋಧಿಸಿ ನಡೆಯಲಿವೆ ಬಿಟಿಷ್ ಚಿಹ್ನೆಯೆಂಬುದು ಭಾರತ ರಾಷ್ಟ್ರ ಜೀವನದಲ್ಲಿ ಎಲ್ಲಿಯೂ ಇನ್ನು ಮುಂದೆ ಲವಮಾತ್ರವುಳಿಯದೆ ಉಜ್ಜಿ ಹೋಗಲಿದೆ. ಆದರೂ ಭಾರತವು 'ಕಾಮನ್‌ವೆಲ್ತ್' ಕೂಟದ ಸದಸ್ಯನಾಗಿ ಉಳಿದುಕೊಳ್ಳುವುದು. ಆ ಕೂಟದ ಮುಖ್ಯಸ್ಥಗೆ ಮಾತ್ರ ಬ್ರಿಟಿಷ್ ರಾಜರು ಶಿರಸ್ಸಾಗಿ ಉಳಿದುಕೊಳ್ಳುವರು. ದೇಶದ ತೂರಿನ ರಂಗದಲ್ಲಿ ಸಲಾಯಿಸುವ ಈ ಗೌರವವನ್ನು ಕೂಡಾ ನಿಲ್ಲಿಸಿಕೊಳ್ಳಬೇಕೆಂಬ ಬಯಕೆ ಭಾರತಕ್ಕೆ ಮೂಡಿದರೆ ಯಾವ ಕಾಲದಲ್ಲೂ ಹಾಗೆ ಮಾಡಿಕೊಳ್ಳುವ ಸ್ವತಂತ್ರತೆವಿದೆ. ಈ ರೀತಿ ಕಳದ ಎರಡು ದಶಮಾನಗಳಿಂದ ಪ್ರತೀ ಜನವರಿ 26ನೇ ತಾರೀಕಿನಂದು, ಓಟ್ಟಿಗೆ 20 ಬಾರಿ ಅಖಿಲ ರಾಷ್ಟ್ರವು ಸಂಘಿಸಂಸ 'ಸಂಪೂರ್ಣ ಸ್ವಾತಂತ್ರ್ಯ' ಮಂತ್ರವು 21ನೇ ಸಲ ಜನವರಿ 26 ಬರುವಾಗ ವಸ್ತುಸ್ಥಿತಿಯಾಗಿ ಸಾಕಾರಗೊಳ್ಳಲಿದೆ. ಭಾರತದ ದೀರ್ಘಾವಧಿಯ ಸ್ವಾತಂತ್ರ್ಯ ಹೋರಾಟವು 1947ನೇ ಆಗೋಸ್ತು 15ರಲ್ಲಿ ಸಾಫಲ್ಯಗೊಂಡಿದ್ದರೆ, ಆ ಸ್ವಾತಂತ್ರ್ಯದ ರೂಪರಚನೆಯು 1949ನೇ ನವಂಬರ್ 26ರಲ್ಲಿ ಪೂರ್ಣಗೊಂಡಿತು. ಹೀಗೆ ಸಾಧಿಸಲ್ಪಟ್ಟ ಮತ್ತು ಸಾಕಾರಗೊಂಡ ಸ್ವಾತಂತ್ರ್ಯವು 1950ನೇ ಜನವರಿ 26ಂದು ಅಸ್ತಿತ್ವಕ್ಕೆ ಬಂದು ಚಾಲಾಗ ಹತ್ತುವುದು. ರಾಜಕೀಯ ಸ್ವಾತಂತ್ರ್ಯದ ಕೆಲಸ ಅಲ್ಲಿಗೆ ಸಂಪೂರ್ಣ; ಈ ಸ್ವಾತಂತ್ರ್ಯದ ರಕ್ಷಣೆ ಮತ್ತು ಆರ್ಥಿಕ ಸಾಮಾಜಿಕ ಸಮಾನತೆ ಮತ್ತು ಅಭಿವೃದ್ಧಿ ಸಾಧನೆಯೇ ಆ ಮೇಲಿನ ಕರ್ತವ್ಯ. ಅಂತೂ ಬರುವ ಜನವರಿ ತಾ. 26 ರಿಂದ ಭಾರತದ ಚರಿತ್ರೆಯಲ್ಲಿ ಶೋಸಾಧ್ಯಾಯ ಪ್ರಾರಂಭ. ಸ್ವಾತಂತ್ರ್ಯದ ನಕಾಶೇ ಗೆಗೆಯೆಳೆಯುವುದು ಆಲ್ಲಿಗೆ ಮುಗಿದು, ಆದಕ್ಕೆ ಬಣ್ಣ ಬಳಿಯುವ ಕೆಲಸ ಆಲ್ಲಿಂದ

> "ಪ್ರಥಮತಃ ರಕ್ತಮಯೀ ಕ್ರಾಂತಿ ಪಥಾನಗಳನ್ನು ಬಿಟ್ಟು, ಉದ್ದೇಶ ಸಾಧನೆಗಾಗಿ ಶಾಸನಬದ್ಧವಾಗಿಯೇ ಹೋರಾಡಬೇಕು. ಎರಡನೆಯದಾಗಿ 'ಭಕ್ತಿ' ಮತ್ತು ನಾಯಕ ಪೂಜೆ ಬಿಡಬೇಕು. ಮೂರನೆಯದಾಗಿ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ನಿವಾರಿಸಿಕೊಳ್ಳಬೇಕು"
> —ಡಾ। ಅಂಬೇಡ್ಕರ್.

ಈ ಘಟನಾ ಸಮಿತಿ

ಸ್ವತಂತ್ರ ಭಾರತದ, ಸ್ವತಂತ್ರ ರಾಜ್ಯ ಶಾಸನ ತಯಾರಿಸಲು—ಸುಮಾರು 32 ಕೋಟಿ ಜನರ ಅದೃಷ್ಟ ನಿರೂಪಿಸಲು—ರಾಷ್ಟ್ರದ ಜನಸಂಖ್ಯೆಯ ಮಿಲಿಯ ಮಂದಿಗೊಬ್ಬನಂತೆ ಪ್ರಾಂತಿಕ ಶಾಸನ ಸಭಾ ಸದಸ್ಯರೇ ಮತದಾರರಾಗಿ, ಆರಿಸಿಕೊಂಡಿದ್ದ ಸುಮಾರು 320ಮಂದಿ ಸದಸ್ಯರುಳ್ಳ ಸಮಿತಿಯ ಮುಂ ಈ ಘಟನಾ ಸಮಿತಿಯ ಸ್ಥಾಪನೆ. ಸಭೆಯು 1946ನೇ ದಶಂಬರ 9ರಲ್ಲಿ ನೇರವಿದ್ದಿತು. ಅದು ತನ್ನ ಕಾರ್ಯ ಮುಗಿಸಿಕೊಂಡುದು 1949ನೇ ನವಂಬರ್ ತಾ 26ರಲ್ಲಿ. ಇದರ ಅಯವ್ಯ 2ವರುಷ 11ತಿಂಗಳು 17ದಿನಗಳು. ಈ ಅವಧಿಯಲ್ಲಿ ಘಟನಾ ಸಮಿತಿಯು 11 ಅಧಿವೇಶನಗಳು ಸೇರಿ 163ದಿವಸ ಸಭೆಗಳನ್ನು ಜರುಗಿಸಿದ್ದಿತು. 1947ನೇ ಆಗೋಸ್ತು 29ರಲ್ಲಿ ಘಟನಾ ಸಮಿತಿಯು, ಡಾ। ಅಂಬೇಡ್ಕರರ ಅಧ್ಯಕ್ಷತೆಯ ಘಟನಾ ಕರಡು ತಯಾರೀ ಸಮಿತಿಯನ್ನು ನೇಮಿಸಿಕೊಡಿದ್ದಿತು; ಈ ಕರಡು ತಯಾರೀ ಸಮಿತಿಯವರು ರಾಜ್ಯಶಾಸನದ ಪರಿಚ್ಛೇದ, ನಿಬಂಧನೆ, ವಾಕ್ಯಾಕ್ಷರಗಳ ಜೋಡಣೆಗಾಗಿ 147ದಿನ ಸಭೆ ಸೇರಿದ್ದರು. ಘಟನಾ ಸಮಿತಿಯ 114ದಿನಗಳು ಕಾಂಡಿನ ಚರ್ಚೆ ಮತ್ತು ಪರ್ಯಾಲೋಚನೆಗೆ ವ್ಯಯವಾಗಿದ್ದುವು. ವ್ಯರ್ಥವಾಗಿ ತಯಾರಾಗಿ ಮುಂದೆ ಬಂದಾಗ ಈ ಮಹಾ ಶಾಸನದಲ್ಲಿ 13ಪರಿಚ್ಛೇದಗಳೂ 24ಪರಿಶಿಷ್ಟಗಳೂ ಅಡಕವಾಗಿರುದ್ದುವು. ಘಟನಾ ಸಮಿತಿಯಲ್ಲಾದ್ವಿತೀಯ ವಾಚನದ ವೇಳೆ ನಡೆದ ಸವಿವರ ವಿವರ್ಶೆ ಮತ್ತು ಸೂಚನೆಗಳ ಪರಿಣಾಮವಾಗಿ, ಪೂರ್ಣ ಹಾಗೂ ಕೊನೆಯ ಮಂಜೂರಾತಿಯು ನೇಳೆ ಅದು 3ಪರಿಚ್ಛೇದಗಳ, 395ನಿಬಂಧನೆಗಳ ದಂತಲೆಯಾಗಿದ್ದಿತು. ಚರ್ಚೆಯು ನೇಳೆ ಮೂಲ ಪ್ರತಿಗೆ 763ಉಪ ಸೂಚನೆಗಳ ನೋಟೀಸುಗಳು ಬಂದಿದ್ದು, ಆ ಪೈಕಿ 2473 ಸಭೆಯಲ್ಲಿ ಚರ್ಚೆಗೆ ಬಂದಿದ್ದವೆಂದು ತಿಳಿದುಬರುತ್ತದೆ. ಘಟನಾ ಸಮಿತಿಯ ಮೂರು ವರ್ಷಾವಧಿಯ ಒಟ್ಟು ವೆಚ್ಚವು 63,96,729. ರೂ. 320 ಮಿಲಿಯ ಜನರುಳ್ಳ ಭಾರತದಂತಹ ಮಹಾನ್ ರಾಷ್ಟ್ರದ ಶಾಶ್ವತ ರಾಜ್ಯಾಂಗ ವಿಧಾನಗಳನ್ನು ತಯಾರಿಸಲು ಇಷ್ಟು ಸಮಯ, ಶ್ರಮ, ಹಣ ವೆಚ್ಚವಾದುದು ಹಚ್ಚಳವೇ ಇದೇ ರೀತಿಯ ಶಾಸನ ತಯಾರಾಗಲೋರದ ಇತರ ರಾಷ್ಟ್ರಗಳಿಗೆ ತಾಗಿದ್ದ ಕಾಲ, ದುಡಿತ, ಧನವೆಂಬುದನ್ನು ಇದನ್ನು ಹೋಲಿಸಿ ನೋಡುವಾಗ 'ಅವರೆಲ್ಲರಿಗಿಂತ ನಾನೇ ಎಸಿ' ಎಂಬ ಸಮಾಧಾನವೇನು ತ್ತಿದೆ. ಆ ಸೈಕಿ ಕೇವಲ 7 ನಿಬಂಧನೆಗಳು ಮಾತ್ರವಿದ್ದ ಆಮೆರಿಕದ 'ರಾಜಿನ ಪತ್ರ'ವು ನಾಲ್ಕು ತಿಂಗಳುಗಳಲ್ಲಿ ತಯಾರಾಗಿದ್ದಿತು. 147 ನಿಬಂಧನೆಗಳ ಕೆನಡಾದ ರಾಜ್ಯ ಶಾಸನ ತಯಾರಿಗೆ 2 ವರುಷ, 5 ತಿಂಗಳಗಳು ಹಿಡಿದಿದ್ದುವು, 153 ನಿಬಂಧನೆಗಳುಳ್ಳ ದಕ್ಷಿಣಾಫ್ರಿಕದ ರಾಜ್ಯಶಾಸನ 1 ವರುಷದಲ್ಲಿ, 128 ನಿಬಂಧನೆಗಳ ಆಸ್ಟ್ರೇಲಿಯದ್ದು 9 ವರುಷಗಳಲ್ಲಿ ತಯಾರಾಸಲ್ಪಟ್ಟಿದ್ದುವು. ಮೇಲಿನಂ ಅವುಗಳಲ್ಲಾವುದಕ್ಕಿಂತ ಇಷ್ಟೆಯಷ್ಟು ತಿದ್ದುಪಡಿ ಸೂಚನೆಗಳಿಗಿಲೀ, ಅತ್ಯಂತ ಕಷ್ಟದಾಯೇ ಸವಿವರ್ಶೆಗಳಿಗಲೀ ಇದಿರಾಗಿದುದಿಲ್ಲ. ಆದ್ದರಿಂದ ತುಲನಾತ್ಮಕವಾಗಿ ಹೇಳುವುದ ದರೆ ಭಾರತದ ರಾಜ್ಯಶಾಸನ ತಯಾರೀ ಕಾರ್ಯ ಎಲ್ಲಾ ದೃಷ್ಟಿಯಿಂದಲೂ ಸಮಾಧಾನಕಾವನ್ನೆ ಲಡ್ಡಿಯಲ್ಲ.

ಅಂಬೇಡ್ಕರರ ಬೋಧನೆ

ರಾಜ್ಯಶಾಸನದ ಕೊನೆಯ ಮಂಜೂರಾತಿಗಾಗಿ ನವಂಬರ್ 14ಲ್ಲಿ ಸೇರಿದ್ದ ಘಟನಾ ಸಮಿತಿಯಲ್ಲಿ ಸದಸ್ಯ ಅಳಿವ್ರಾಯ ನಿವೇದನೆಗಳು ತಾ 17ಂದಾಂಬಿಸಿ ತಾ.25ರ ವರೆಗೆ ನಡೆದಿದ್ದುವು;(ಇದರ ವಿವರಗಳಿಗೆ ಎಂತನ ಸಂಚಿಕೆ ನೋಡಿರಿ) ಸುಮಾರು 80ಸದಸ್ಯರು ಮಾತಾಡಿದ್ದರು. 'ಘಟನಾ ಸಮಿತಿಯಿಂದ ನಿರ್ಧರಿಸಲ್ಪಟ್ಟಿರುವ ಘಟನೆಯು ಅಂಗೀಕಾರವಾಗಿಬೇಕು' ಎಂಬ ನಿರ್ಣಯವನ್ನು ತಂದು ತೃತೀಯ ವಾಚನವನ್ನು ಆರಂಭಿಸಿದ್ದ ಕರಡು ತಯಾರೀ ಸಮಿತಿ ಅಧ್ಯಕ್ಷ ಡಾ। ಅಂಬೇಡ್ಕರರು ಸಭೆಯ ನಿರೀಕ್ಷೆಗೆ ವಿರುದ್ಧವಾಗಿ ಆ ದಿಭಾಗದಲ್ಲಿ ಯಾವ ಭಾಷಣವನ್ನೂ ಮಾಡಿರಲಿಲ್ಲ. ಎಲ್ಲಾ ವಿವರ್ಶೆಗಳೂ ಮುಗಿದ ಮೇಲೆ ತಾ 25ರಲ್ಲಿ ಅವರು ಉತ್ತರರೂಪವಾಗಿ ಕೊಟ್ಟ ಭಾಷಣವು ಅತ್ಯಮೋಘವಿದ್ದಿತು. ಈ ಹರಿಜನ ಮುಖಂ

THE VIJAYA BANK, Ltd.,
H. O, MANGALORE.

A. With a net work of Branches through out the District and one each at Mercara and Bombay.
B. With a standing of 18 years service.
C. With total resources of over 40 Lakhs.

Fixed deposits are now accepted at the following rates of interest.

3 months ... 3% P. A. 6 months ... 3½% P. A.
12 months ... 3¾% P. A. 24 months ... 4% P. A.

All kinds of banking business transacted.

Sri B. M. Heade,
Advocate & President District Board, South Kanara.
(CHAIRMAN OF THE BOARD OF DIRECTORS)

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

-ಘಟನೆಯು ಮಂಜೂರಾತಿ.

ಅಂಬೇಡ್ಕರ್, ಪ್ರಸಾದರ ಅಮೋಘ ಮಾತು.

ಹಳ್ಳಿಗಳಲ್ಲಿ ಉಂಟಾಗತಕ್ಕ ಅನೈಕ್ಯಗಳಿಗೆಲ್ಲಾ ಮುಖ್ಯ ಕಾರಣ ಅಸ್ಪೃಶ್ಯತೆ ಹೆಚ್ಚು ಕಡಿಮೆಯಾಗಿರುವುದು. ಯಾವ ಸಾಮಾಜಿಕ ಪದ್ಧತಿಯೂ ಅಸ್ಪೃಶ್ಯತೆಯಷ್ಟು ಅಪಾಯಕಾರಿಯಾಗಿಲ್ಲ. ಯಾವ ನ್ಯಾಯಗಳಾದರೂ ಕೋರ್ಟಿಗೆ ಹೋಗದಂತೆ ಸೋದಿಕೊಳ್ಳಬೇಕು. ಇದರಲ್ಲಿ ಸರಕಾರದ ಗಮನ ಅಗತ್ಯ.

ಹಳ್ಳಿಗಳ ಕೃಷಿಯನ್ನು ಆಧುನಿಕ ಪದ್ಧತಿಯ ಉಪಕರಣ, ಉತ್ತಮ ಬೀಜ ಮತ್ತು ಗೊಬ್ಬರ ಇವುಗಳಿಂದ ಅಭಿವೃದ್ಧಿಯಲ್ಲಿ ನಡೆಸತಕ್ಕದ್ದು.

ಸರಿಯಾದ ಆಸುಪಾಸುಲತೆ ಇಲ್ಲದ ಕಡೆ ಉತ್ತಮ ಜನರಿಗೆ ಹಣದ ಸೌಕರ್ಯ ಒದಗಿಸಿ, ಬಡಕೆರೆ, ಮಾಡಿಸುವ ಸರಕಾರದ ಉದ್ಯಮವು ಆದು ಅನೇಕ ಕಡೆ ಸಾಧಿಯಾಗಿ ನಡೆಯದಿರುವುದು ತಿಳಿದಿಂಟಾಹುದು ಆದುದರಿಂದ ಸರಬರಾಜನ್ನು ಸರಕಾರವೇ ಮಾಡಿಸುವುದು ಉತ್ತಮ.

ಹಳ್ಳಿಯಲ್ಲಿ ಬೆಳೆದ ಪದಾರ್ಥಗಳನ್ನು ಪಟ್ಟಣದ ಸಾಮಾನುಗಳಿಗೆ ಕಮ್ಮಿ ಬೆಲೆಗೆ ಮಾರಿ ಪಂತೆ ಜಾಗರೂಕರಿರಬೇಕು. ಅಲ್ಲದೆ ಉತ್ತಮ ಬೆಲೆ ದೊರೆಯುವ ವಿಚಾರಿಸುಗಳಿರಬೇಕು.

ದೇಶದ ಜೀವಾಳವಂತಿರುವ ರೈತರಲ್ಲಿ ಚ್ಚು ಭಾಗ ಜನರು ಇಂದು ಸಾಲದಲ್ಲಿರುವುದು ತುಂಬಾ ಸಂಕಟದ ವಿಷಯ. ಈ ಲೇವಾದೇವಿಯನ್ನು ಸಾಯಕಾರ ರೈತರು ನಿಲ್ಲಿಸುವಂತೆ ಮಾಡಿ, ಅಗತ್ಯಬೀಳುವ ಹಣವನ್ನು ಸೊಸೈಟಿ ಇತ್ಯಾದಿ ಸಂಘಗಳಿಂದ ಸರಕಾರದಿಂದಾಗಲೀ ಒದಗಿಸತಕ್ಕದ್ದು.

ಹಳ್ಳಿಯೆಂದರೆ ಕೇವಲ ಕೃಷಿಗೆ ಮಾತ್ರ ಅಲ್ಲವೆಂದುತಿಳಿದು,ಅಲ್ಲಿನವಾಸ ತರದ ಕೈಕಾರ್ಯವ್ಯವಸ್ಥೆಗಳನ್ನು ಉಂಟುಮಾಡಿ, ಯಾರೊಬ್ಬನೂ ನಿರುದ್ಯೋಗಿ ಇರಬಾರದೆಂಬ ಕಲ್ಪನೆಯಿರಬೇಕು

ಅನೇಕ ದೊಡ್ಡ ಅಧಿಕಾರಿಗಳು ಇಂದಿನ ಸ್ಥಿತಿಯಿಂದ ಮೂರವಿದ್ದು ನಾವಾಸಗಳು ಹಳ್ಳಿಗಳಿಗಾಗಿ ಹಳ್ಳಿಗಳಿಗೆ ಕಾಲಿಟ್ಟು ನೋಡುವುದು ಅಪರೂಪವೆಂಬುದು ತುಂಬಾ ಬೇಸರವಾಗಿದೆ. ಇಂಥವರನ್ನು ಕೈತರು ಯಿದಿಷ್ಟವರೂ ಕರೆಂದು, ಅಲ್ಲಿಯ ತೊಂದರೆಗಳನ್ನು ಅಧಿಕಾರಿಗಳ ಕಣ್ಣಿಗೆ ಬೀಳುವಂತೆ ಮಾಡಬೇಕು.

ಪ್ರತಿಯೊಂದು ಕಡೆಯಲ್ಲಿಯೂ ಉಚಿತ ರೀತಿಯ ವೈದ್ಯಾಲಯ, ಶಾಲೆ, ನಾವಾಸಯ ಇತ್ಯಾದಿಗಳಿರಬೇಕು.

ಆರೋಗ್ಯ, ವ್ಯಾಯಾಮ, ವಿದ್ಯೆ, ಮತ್ತು ವಿಸ್ತ ಇತ್ಯಾದಿಗಳ ಬಗ್ಗೆ ಪ್ರತಿದು ಹಳ್ಳಿಯಲ್ಲಡ ಆಗಾಗ ಉಪನ್ಯಾಸ ನಡೆಯುವ ಏರ್ಪಾಡಿರಬೇಕು

ದೇವೆಗಳಲ್ಲಿ ನವೀಕರಣ ದೊಡ್ಡ ಸಭೆಗಳನ್ನೂ ಕಲ್ಪಿಸಬಾದೂ ಹಳ್ಳಿಗಳಲ್ಲಿ ದೇವಸ್ಥಾನ ವಿಶೇಷವಾದ ಪ್ರಾಮುಖ್ಯತೆಯಿರಬೇಕು. ಹಳ್ಳಿಯಲ್ಲಿ ಒಟ್ಟಿಗೆ ನೂರಾರು ಜನ ಸೇರುವ ಹಳ್ಳಿಯ ಒಳಗಡೆಯಲ್ಲಾ ಸಂಬಂಧವಿದೆ.

ನೀಲೆ ನಮೂದಿಸಿರುವ ವಿಷಯಗಳು ಮುಂದಿನ ನಡೆಯುತ್ತಾ ಬಂದಲ್ಲಿ ಹಳ್ಳಿ ಭ್ಯುದ್ಧಿಯಾಗಬಹುದು. ಆದರೆ ಈ ಕೆಲಸವನ್ನು ಅಷ್ಟೊಮ್ಮಿಂತರಾದ ಪಳ್ಳಿಗರೇ ಬಿಡದೆ, ಪ್ರತಿಯೊಂದನ್ನೂ ಕಡ್ಡಾಯವಾಗಿ ನಿರ್ವಹಿಸಲೇ ಬೇಕು ಎಂಬ ಸಲಹೆ ಸಂಕಲ್ಪಮಾಡಿದ ಬದ್ಧರಾಗಿರಬೇಕಾಗಿದೆ. ಈ ಕೆಲಸವನ್ನು ಸರಕಾರವು ಕ್ರಮವಾಗಿ ಕಾರ್ಯಗತಕ್ಕೆ ತರುವಲ್ಲಿ ಜನಾನ್ಯಕ ಕಾರ್ಯವು ಉತ್ತಮವಾಗಿ ಹಳ್ಳಿಗಳ ಅಭಿವೃದ್ಧಿಗೂಗ ಬಹುದೆಂಬುದು ನಮ್ಮ ವಿಶ್ವಾಸವಿದೆ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.



Highly perfumed and medicated, worth using daily by one and all, keeps hair black and relieves headache etc.

LEGD TRADE MARK

Manufactured by:

Swadeshi Oushadhi Bhandara (Regd.)

KUNJAL P. O. Brahmavar, S. K.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೬ ದಿವಸಗಳಲ್ಲಿ ಈ ರೋಗ ಗುಣ ಮೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋಡರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಜಾಸ್ತಿ. ಎರೀದಿ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಾಯವಾಗಿದ್ದರೆ,....ಚಟ್ಟಿ ಬದ್ದಿದ್ದರೆ, ಉಷ್ಣದಿಂದ ಜೀರು ತಿಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ಸಡುನೋಯ ವದು ಸ್ತ್ರೀಯರು ಬಿಳಿಯಂಪು ಸೆರಗು ಹೋಗುತ್ತಿದ್ದರೆ, ಹೊಲಿಕ ಟು ಗರ್ಭಿಯಂದ ಗರ್ಭ ಕೋಶ ನಾಶವಾಗಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳ್ಳಿಗ್ಗೆ ೧ ಗಿಂಜಿ ಪ್ರಮಾಣ ಔಷಧ ಅರ್ಧಾಪೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕಾ ಮೆದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದಂ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಜೀರ್ಣಿಸಿಕೊಳ್ಳಲಿ ತುಪ್ಪದಲ್ಲ, ಥಂಡಿ ಮಳೆಗಾಲದಲ್ಲಿ ಜೀರ್ಣವಾಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳೆ, ಕಾಂಬಳಸೌತೆ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಸರೂ. ಪೋಸ್ಟೆ ಚಾರ್ಜು ೮ ಆಣೆ

ಪುಡಿಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:- ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾಂಡಾಡ ಫಾರ್ಮಸಿ, ಡಾವಣಗೇರಿ: ಡಾವಣಗೆ ೦ ಪ್ರೆಸ್. ನಂದುಡೇಶ್ವರ ಮೂರ್ತ ಡಾವಣಗೇರಿ.

ಹತ್ತ್ಯವಹಾರ ಮಾಡತಕ್ಕ ಮೂಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ-

ಮೂಲ್ಕಿ ಬ್ಯಾಂಕ್,

ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತ ಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,

Mooiky, S. K.

PRINTED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M 3618

8-12-1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER
Sri A. B. Shetty
Minister for Agriculture
& Veterinary

ನವಯುಗ
ಚಂದಾ ನಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ 08

NAVAYUGA WEEKLY UDIPI, S. K.
Post Box No. 22
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No 15

ತನ್ನ ಹಾಗೆ ಅನ್ಯರೂ ಎಂದು ನೆನೆದರೆ-

'ತನ್ನಂತೆಯೇ ಪರರನ್ನು ಭಾವಿಸಬೇಕು' ಎಂಬುದು ಎಲ್ಲಾ ಧರ್ಮ ಶಾಸ್ತ್ರಗಳ ಹೂಗೂ ಆದರ್ಶ ಸೂಚಕರ ಭೋದೆ. ಆದರೆ ಈ ಭಾವನೆಯು ಸಂಪೂರ್ಣವಾಗಿ ಯಾರಲ್ಲಿಯೂ ಇಲ್ಲದಿರುವುದರಿಂದ ಮತ್ತು ಅತೀ ಕಡಿಮೆ ಮಂದಿಯಲ್ಲಿ ಅತ್ಯಲ್ಪ ಪರಿಮಾಣದಲ್ಲಿ ಮಾತ್ರವಿರುವುದರಿಂದ ಇಂದು ಶಾಂತಿ ಸಮಾನತೆಯೆಂಬುದು ಕೇವಲ ರೋದನವಾಗಿ ಉಳಿದುಕೊಂಡಿದೆ. ಸಾಮಾಜಿಕ, ಆರ್ಥಿಕ ಸಮಾನತೆಯ ಚಳವಳಿಗಳೇಳಬೇಕಾಗಿ ಬಂದಿದೆ. ದ್ವೇಷಾಸೂಯೆ, ಮೇಲಾಟಗಳ ತಾಂಡವ ನಡೆದಿದೆ 'ತನ್ನಂತೆ ಅವರೂ' ಎಂಬ ಶಕ್ತಿಯ ಉಸಯೋಗ ಸರಿಯಾದ ರೀತಿಯಿಂದ ನಡೆಯುತ್ತಿದ್ದರೆ ಪ್ರತಿಯೊಂದು ವ್ಯಕ್ತಿ, ವಿಷಯ, ಕಾರ್ಯಗಳ ನಿಜವಾದ ತೂಕ ತಿಳಿದು ಬರುತಿತ್ತು; ಆಗ ಎಲ್ಲವನ್ನೂ ಇರಬೇಕಾದ ಸ್ಥಾನದಲ್ಲೇ ಇರಗೊಡಿಸುವ ಬುದ್ಧಿ ನಲೆ ನಿಂತು ಯಾವ ಅಸಮಾನತೆಗೂ ಎಡೆಯಿರದಂತಾಗುತಿತ್ತು.

ಯಾವುದೇ ವಿಧದ ಅಂಗಹೀನತೆ ಮತ್ತ ಕಾಹಿಲೆ ಕಸುರಿಕೆಗಳು ಯಾವ ಕಾಲದಲ್ಲಾದರೂ ಯಾರಿಗೂ ಒದಗ ಬಹುದು. ಆದರೂ ದುರ್ದೈವವಶಾತ್ ಅಂತಹ ಅಸಮರ್ಥರಾದವರ ಕಡೆಗೆ ಸಮರ್ಥರಾದವರು 'ತಾವು ಹೀಗಾಗುತಿದ್ದರೆ?' ಎಂಬುದನ್ನು ದೃಷ್ಟಿಪಥದಲ್ಲಿಟ್ಟು ಕೊಂಡು ಕನಿಕರ ಪಡುವದಾಗಲೀ, ಸಹಾಯ ನೀಡುವದಾಗಲೀ ಇದೆಯೆ?

ಅದೇ ವ್ಯಾಯದ ತನ್ನ ಮಕ್ಕಳೆನ್ನು ಲಾಲನೆ ಪಾಲನೆ ಮಾಡುತ್ತಾ ಕಾಲೆಳೆಗೆ ಕಳುಹುತ್ತಾ ಇರುವಾಗ ಬಡವರ ಹುಡುಗರು ಹೊಲಗದ್ದೆಗಳಲ್ಲಿ ಹೊಟೆಲುಗಳಲ್ಲಿ, ಕಾರ್ಖಾನೆಗಳಲ್ಲಿ ರಾತ್ರಿ ಹಗಲು ನಡಿಯುತ್ತಿರುವುದನ್ನು ಕಂಡು ಇಂತಹ ಕನಿಕರಾರ್ಹ ಸ್ಥಿತಿಯ ನಿವಾರಣೆಗಾಗಿ ಸ್ವೇಚ್ಛೆಯಿಂದ ಮುಂದಾಗುವ ಶ್ರೀಮಂತರಿದ್ದಾರೆಯೆ?

ಎಂದಾದರೊಂದು ದಿನ ವೃತದ ಹಸರಿನಿಂದಾದರೂ ಉಪವಾಸಮಾಡಿ ಉದರಾಗ್ನಿಯೆಂಬುದೆಷ್ಟು ಬಿಸಿಯೆಂಬ ಪರಿಚಯವಾದರೂ ಇರುವ ಶ್ರೀಮಂತರು ನಿತ್ಯ ಬರಿ ಹೊಟ್ಟೆಯಲ್ಲಿ ಇರಬೇಕಾಗಿರುವ ಆಬಾಲ ವೃದ್ಧ ಬಡವರಿಗೆ ಹೇಗಾದೀತು ಎಂದು ಮನಸ್ಸಿಗೆ ಹಚ್ಚಿಕೊಳ್ಳುವದಿದೆಯೆ?

ಎಷ್ಟೋ ವರುಷಗಳಿಂದಿದ್ದು ತನಗಿಂತ ಬಲಶಾಲಿಯಾಗಿ ಬೆಳೆದಿದ್ದ ಓರ್ವ ಒಕ್ಕಲನ್ನು ಎಬ್ಬಿಸಬೇಕಾದರೆ ಬಡಮಾಲಕನಿಗೆ ಎಷ್ಟು ಕಷ್ಟವಿದೆಯೆಂಬುದನ್ನರಿತವರು (ಮನಸೇಚ್ಛೆ ಒಕ್ಕಲೆಬ್ಬಿಸಬಲ್ಲವರ ಮಾತಲ್ಲ) ಎಂತು ದಶಮಾನಗಳಿಂದ ಇಲ್ಲಿ ಒಕ್ಕಲುಬಟ್ಟು ಅಸ್ಮಿಯನ್ನನುಭೋಗಿಸಿದ್ದ ಬ್ರಿಟಿಷನ್ನೆಬ್ಬಿಸಿ ಬಿಟ್ಟಾದು ಎಂತಹ ಮಹತ್ಕಾರ್ಯವೆಂಬುದನ್ನು ಅರಿಯಬಹುದು. ಹಾಗೆ ಮರು ಸ್ವಾಧೀನ ಪಡಿಸಿಕೊಂಡ ಭೂಮಿಯನ್ನು ಹೊಸತಾಗಿ ಸ್ವಂತ ಸಾಗುವಳಿಗೆಮಾಡಿ ಸರಿಯಾದ ಬೆಳೆ ಪಡೆಯಬೇಕಾದರೆ ಎರಡು ಮೂರು ವರುಷ ಹಿಡಿಯುತ್ತದೆಂಬುದನ್ನರಿತವರು ಸ್ವತಂತ್ರ ಭಾರತದಲ್ಲಿ ಇಷ್ಟರೊಳಗೇನೇ ಆಗಬೇಕಾದದೆಲ್ಲವೂ ಆಗಿಲ್ಲವೆಂದು ದೂರಿಯಾರೆ?

ತಮ್ಮ ಮನಸ್ಸು ಅಧವಾ ಹೊಟ್ಟೆಗೆ ಯಾವುದಾದರೊಂದು ಅಸಮಾನ ಅಧವಾ ಅಡಚಣೆಯ ಮೂಲಕ ಪೆಟ್ಟಾಯಿತೆಂದಾದರೆ, ಆಪ್ತರಕ್ತವೇನೇ ತಲ್ಲಣಿಸಿ, ಘೀರ್ಜಿಸಿ, ಸಿಕ್ಕಾಬಟ್ಟೆ ವರ್ತಿಸುವ ಶ್ರೀಮಂತರು ಅಂತಹ ನಿತ್ಯಾಪವಾನ ಮತ್ತ ನಿತ್ಯ ಹಸಿವು ಪೀಡೆಗೂರಗಾಗಿರುವ ಬಡವರ ಅನಾಗರಿಕ ವರ್ತನೆ, ಒಟ್ಟು ಗುಣ ನಡತೆ, ಮುಷ್ಕರ ಸ್ವಭಾವಗಳನ್ನ 'ಸ್ವಾಭಾವಿಕ'ವೆಂದು ಸ್ವೀಮಿಸದಿರಬಲ್ಲರೆ?

ಬೈಗಳನ್ನು ಕೇಳಬೇಕಾಗುವದು-ಹೊಡತ ತಿನ್ನಬೇಕಾಗುವದು-ಕಸ್ವವನ್ನು ಭವಿಸಬೇಕಾಗುವುದು ಎಂದಾದಲ್ಲಿ ಸ್ವಕಾರ್ಯಕ್ಕಾದರೂ ಹಿಂದಿರಿದು ನಿಲ್ಲುವವರೇ ಅಧಿಕ ಮಂದಿ. ಇದೇ ಮಾತಿನಿಂದ ದೇಶಕಾರ್ಯಕ್ಕಾಗಿ ಲಾಠೀ ಹೊಡೆತ, ಜೈಲು ವಾಸ, ಅಜ್ಞಾತವಾಸ, ಪಾರಿಪಡಾಗುವವರಾ ಯೋಗ್ಯತೆಯನ್ನು ಆಳೆಯುವಾಗ ಹೇಗೆ ತಾಡುತ್ತದೆ?

ತಮ್ಮ ಬಡಿಕ ಸನ್ನಿವೇಶದಲ್ಲಿರುವರೂ ಅಗಹರಿಸಿದೆ, ತಮ್ಮ ಬಂಧುಗಳಲ್ಲಾದರೂ ಸ್ವಾಭಾವಿಕ ವರ್ತನೆಯೇ ಹೊಡಾರದೆ ತಮ್ಮಲ್ಲಿಂತಹ ದ್ವೇಷ, ದಳುಗ್ನಿಯೇಳುವುದೆಂಬ ಕಟು ಅನುಭವದೊಡನೆ ಪಾಂಬು, ಬಂಗಾಳಗಳಂತಹ ಕಡೆಗಳಲ್ಲಿ ಜಾತೀಯ ಗೊಂದಲಗಳಿಗೀಡಾಗಿ ತಮ್ಮ ಕಣ್ಣೆದುರಲ್ಲೇ ಬಂಧು ಸಂಬಂಧಿಕರನ್ನೂ ತಲೆಮಾರುಗಳಿಂದಿದ್ದ ಆಸ್ತಿ ಸೊತ್ತುಗಳನ್ನೂ ಕಳಕೊಂಡು ನಿರ್ಗತಿಕರಾದವರ ಆಕ್ರಂದನವನ್ನು ಹೋಲಿಸುವಾಗ ಹೇಗೆ ಕಾಣುತ್ತದೆ?

ಸಣ್ಣ ಪುಟ್ಟ ವಿಷಯಗಳಲ್ಲಾದರೂ ಜಾತ್ಯಭಿನಾನ ಬಿಡಲಾರದ 'ದೇಶಭಕ್ತ'ರ ಮನೋವೃತಿಯೊಡನೆ ಹಿಂದೂ ಮುಸ್ಲಿಮ್ ಮಹಾ ಗೊಂದಲದ ವೇಳೆಯಲ್ಲೂ ಬಂಧುತ್ವೋಮವನ್ನು ಭೋದಿಸಿದ ಮಹಾತ್ಮರ ಮನಸ್ಸನ್ನು ತುಲನೆ ಮಾಡುವಾಗ?

ಅಭವಿಲ್ಲದ ಜನದ ಮುಖ ನೋಡುವುದಕ್ಕಾಗಲೀ, ಲಾಭತಂದ ಕ್ಷಣದ ಸುಖವನುಭವಿಸುವುದಕ್ಕಾಗಲೀ ತಯಾರಿಲ್ಲದವರು 'ನಮ್ಮಂತೆಯೇ ಅವರೂ' ಎಂಬ ದೃಷ್ಟಿಯಿಂದ, ತಮ್ಮ ಸ್ವಂತ ಕೆಲಸ ಬಿಟ್ಟು ಸಾರ್ವಜನಿಕ ಕಾರ್ಯ ಮಾಡುವವರ ಕಡೆಗೆ ನೋಡಿದರೆ ಹೇಗೆ ಕಂಡೀತು?

ಅಜೀ ಹಳ್ಳಿಯವನೊಬ್ಬನು ಬಸ್ಸು ಹತ್ತಿ ಈಜೇ ಪೇಟೆಗೆ ಬಂದು ಬಿದ್ದಾನಾದರೆ, ಧರ್ಮರಾಯನ ರಾಜಸೂಯಯಾಗದ ಜಾವಡಿಗೆ ಬಂದ ದುರ್ಯೋಧನನಂತೆಯೇ ತಬ್ಬಿಬ್ಬಾಗುವುದನ್ನು ಕಾಣುತಿದ್ದೇವೆ. ಭಾರತದ ಜವಹರಲಾಲರೂ ಅಮೆರಿಕದಂತಹ ಪುದೇಶಕ್ಕೆ ಹೋಗಿ ಅಲ್ಲಿ ತನ್ನ ಗಣನತತೆ,ನರ್ತನೆಗಳಿಂದ 'ಶಹಭಾಸ್' ಪಡೆಯಬೇಕಾದರೆ ಅವರ ಅರ್ಹತೆಯೆಂತಹದಿರಬೇಕು! ಅಂತೆಯೇ ಹಳ್ಳಿಯಲ್ಲಿಯೇ ಸುಟ್ಟು ಹಳ್ಳಿಗನಾಗಿ ಬೆಳೆದವನು ಹೊಟ್ಟೇ ಪಾಡಿಗಾಗಿ ನಾಲ್ಕು ತಿಂಗಳು ದೂಡ್ಡ ಪಟ್ಟಣದಲ್ಲಿ ದುಡಿದು ಬಂದರಂತಿತ-ಮತ್ತವನಿಗೆ ತನ್ನ ಹಳ್ಳಿಯವರ ಮತ್ತು ಮನೆಯವರ ಮರ್ಜಿಯೇ ಕಡತೆಯದಾಗಿ ತೋರಿ ಅವರ ಸಂಪರ್ಕವೇ ತ್ಯಾಜ್ಯವನ್ನಿಸುತ್ತದೆ. ವಿದೇಶೀ ನಗರಗಳಲ್ಲಿದ್ದು, ಸಕಲ ಸಂಭ್ರಮದಲ್ಲಿ ತಲ್ಲೀನರಾಗಿ ಬಂದ ಮಹಾ ನಾಯಕರು ಕೂಡಾ ಜನಸಾಮಾನ್ಯರ ಸಂಪರ್ಕವೇ ಎಲ್ಲಕ್ಕಿಂತ ಹೆಚ್ಚಿನದೆಂದು ಅದನ್ನು ಬಯಸಬೇಕಾದರೆ ಅವರ ಮನಸ್ಸೆಷ್ಟು ಪಕ್ವವಾಗಿರಬೇಕು.

ಅಜೀ ಮನೆಯವನ ಕೈಗೊಂದಿಷ್ಟು ಪೆಟ್ಟಾದ ಸುದ್ದಿ ಈಜೀ ಮನೆಗೆ ಮುಟ್ಟುವಾಗ 'ಅವ ಕುತ್ತಿಗೆ ಕಡಿಯಲ್ಪಟ್ಟಿಲ್ಲ ಸತ್ತ ಮೋದ ಎಂದಾಗುತ್ತದೆ. ಅಂದ ಮೇಲೆ ದೂರದ ಊರುಗಳ, ಪ್ರದೇಶಗಳ ವಾರ್ತೆಗಳೆಲ್ಲವೂ ಅಕ್ಷರಶಃ ಸತ್ಯವೆಂದು ಒಬ್ಬೆಗೇ ನಂಬುವುದಾದರೂ ಹೇಗೆ?

ನಮ್ಮಲ್ಲಿಯ ಶುಂಡು ಅಧಿಕಾರಿಗಳು ಮತ್ತು ಊರ ಶ್ರೀಮಂತರು ಜನಸಾಮಾನ್ಯರ ಕಡೆಗೆ ಪ್ರದರ್ಶಿಸುವ ರೇಂಕಾರ್, ತಿರಸ್ಕಾರಗಳ ಮೇಲಿಂದ-ಅಥವಾ ಯಾವನೇ ಆದರೂ ಸ್ಥಾನ ಮತ್ತು ಸ್ಥಿತಿಯಲ್ಲಿ ತನಗಿಂತ ಕೆಳಗಿರುವವನ ಕುರಿತು ತೋರಿಸುವ ಭಾವನೆಗಳ ನೋಲಿಂದ-ಮಂತ್ರಿಗಳಂಥವರು ಮತ್ತು ಅತ್ಯುಚ್ಚ ವರ್ಗದ ಶ್ರೀಮಂತರು ಸಾಮಾನ್ಯರ ಕಡೆಗೆ ಎಂತಹ ಮರ್ಜಿ ತೋರಿಸಬೇಕಾದೀತ?

"ಹಣವೇ ಸಂಪತ್ತು" ಎಂದು ಭಾವಿಸುವವರು ಅತ್ಯಧಿಕ ಸಂಖ್ಯಾಕರಾದರೂ "ಸೇವೆಯೇ ಸಂಪತ್ತು" "ಕಲೆಯೇ ಸಂಪತ್ತು" "ಪ್ರತಿಜ್ಞೆಯೇ ಸಂಪತ್ತು" ಎಂದು ನೆನಸುವವರು ಕೆಲವರಾದರೂ ಇದ್ದಾರೆ ಇವರೆಲ್ಲರೂ ಸ್ವಂತಾಭಿರುಚಿಗನುಸಾರವಾಗಿ ಆನಂದವನ್ನನುಭವಿಸುವವರೇ; ಈ ಸ್ವಸುಖ ಸಾಧನೆಯಲ್ಲಿ ಜಯಾಪಜಯಗಳು ಕೂಡಾ ಇವೆಲ್ಲಾ ವರ್ಗದವರಿಗೂ ಇರುವಂಶಹವೇ. ಅಂದಮೇಲೆ ಇಂಥವರು 'ನನ್ನಂತೆಯೇ ಅವನೂ' ಎಂಬ ದೃಷ್ಟಿಯಿಂದ ಪರಸ್ಪರರನ್ನು ನೋಡಿಕೊಂಡರೆ ಹೇಗೆ?

ಶ್ರೀಮಂತಿಕೆಯಲ್ಲಾಗಲೀ, ಬೇರಾವುದೇ ವಿಧದ ವಾಂಡಿತ್ಯ, ಪ್ರತಿಭೆ, ಯೋಗ್ಯತೆಯಲ್ಲಾಗಲೀ ಒಬ್ಬರಿಗಿಂತ ಮೇಲಾಗಿ ಇನ್ನೊಬ್ಬರಿದ್ದೇ ಇದ್ದಾರೆ. ಈಗಿನಂತೆ, ಈ ತರಗತಿಗಳವರಲ್ಲಿ ತಮಗಿಂತ ಹಿಂದಿರುವವರತ್ತ ನೋಡುವಾಗ ತಾನು ಮೇಲೆಂಬ ಅಹಂಭಾವವೂ, ಮುಂದಿರುವವರ ಕುರಿತು ತಾನು ಹಾಗಾಗಲಿಲ್ಲವಲ್ಲಾ ಎಂಬ ಮಾತ್ಸರ್ಯವೂ ಇರುವ ಬದಲಿಗೆ,ಹಿಂದುಳಿದಿನವರು ತಮ್ಮಂತೆಯೇ ಎಂಬ ಭಾವನೆಯಿದ್ದರೆ?

ಸ್ಥಿತಿ, ಗತಿ, ಬುದ್ಧಿ ಮತ್ತು ಭಾವನೆಯಲ್ಲಿ ಲವ ಮಾತ್ರ ವ್ಯತ್ಯಾಸವೂ ಇಲ್ಲದ ಏಕಾಕಾರವಿರಬೇಕು-ಬರಬೇಕು--ಎಂದು ಹಾರ್ದಿಸುವವರಂತೂ ಇರಲಾರರು. ಜೀವನವಿರುವಲ್ಲೆಲ್ಲ ಸ್ವಾಭಾವಿಕ ಭಿನ್ನತೆಗಳಿದ್ದೇ ಇವೆ. ಆದರೆ ಈ ಸ್ವಾಭಾವಿಕ ತಾರತಮ್ಯಗಳ ಮೇಲೀಗ ಕೃತಕ ಭಿನ್ನತೆಗಳ ಗುಡ್ಡೆ ಬಿದ್ದಿರುವುದರಿಂದಾಗಿಯೇ ಎಲ್ಲವೂ ವಿಕಾರವಾಗಿವೆ ಆರ್ಥಿಕ, ಸಾಮಾಜಿಕ ಹಾಗೂ ನಿತ್ಯ ಜೀವನ ರಂಗಗಳ ಈ ಅಸಹಜ ತಾರತಮ್ಯಗಳ ನಿವಾರಣೆಯು ರಾಂತ ರೀತಿಯಿಂದಾಗಬೇಕಾದರೆ, 'ತನ್ನಂತೆ ಪರರನ್ನು ಕಾಣುವ' ಬಗೆಯಿಂದ ಭಾವನಾ ವೈಪರೀತ್ಯಗಳನ್ನು ಪ್ರಧಮತಃ ತೊಲಗಿಸಿಕೊಳ್ಳಬೇಕು.

ರೂ. 10, ಹೆಚ್ಚು ಕಂದಾಯವಿರುವವರು—

ಮದ್ರಾಸ್ ಸರಕಾರದ ದೃಷ್ಟಿಪಥದಲ್ಲಿರುವ ಯೋಜನೆ!

ರೂ.ವಾಯಿ 10 ಮತ್ತು ಹೆಚ್ಚಿಗೆ ಭೂಕಂದಾಯ ತೆರುವವರಿಂದ, ತೀರ್ವೆಯಷ್ಟೇ ಮೊತ್ತವನ್ನು ಸಾಲದ ರೂಪದಿಂದ ಕಡ್ಡಾಯವಾಗಿ ಸಂಗ್ರಹಿಸುವ ಆಲೋಚನೆಯನ್ನೀಗ ಮದ್ರಾಸ್ ಮಂತ್ರಿ ಮಂಡಲವು ಮಾಡುತ್ತಿದೆ. ಮದ್ರಾಸಿನ ಅರ್ಥ ಮಂತ್ರಿಗಳು ಈ ಯೋಜನೆಯನ್ನು ತಯಾರಿಸಿ, ಆ ಕುರಿತು ಕೇಂದ್ರ ಸರಕಾರದ ಅಭಿಮತ ಕೇಳಿದ್ದರೆಂದೂ ತಮ್ಮ ಆಕ್ಷೇಪವಿಲ್ಲವೆಂದು ಭಾರತ ಸರಕಾರ ಸೂಚಿಸಿದೆಯೆಂದೂ ತಿಳಿದು ಬರುತ್ತದೆ. ತಮ್ಮ ಖಜಾನಾ ಸಚಿವನ ಈ ಹಣಗಳಿಸುವ ಉಪಾಯವೀಗ ಮಂತ್ರಿ ಕೂಟದಲ್ಲಿ ಪರ್ಯಾಲೋಚಿಸಲ್ಪಡುತ್ತಿದೆ. ಸಾರ್ವಜನಿಕ ಕಾಮಗಾರಿಕೆ ಮತ್ತಿತರ ಉಪಯುಕ್ತ ಯೋಜನೆಗಳಿಗಾಗಿ ಮದ್ರಾಸ್ ಸರಕಾರಕ್ಕೀಗ ಹಣದ ಅಡಚಣೆಯಿದೆ—ಅದಕ್ಕಾಗಿ ರೂ. 10 ಮತ್ತು ಹೆಚ್ಚಿಗೆ ಭೂತೀರ್ವೆ ಕೊಡುವವರಿಂದ ಅಷ್ಟೇ ಹಣವನ್ನು ಸಾಲವಾಗಿ ಕಡ್ಡಾಯವಾಗಿ ಸಂಗ್ರಹಿಸಿಕೊಂಡರೆ ರೂ. 6 ಕೋಟಿ ಜಮೆಯಾಗುತ್ತದೆ—ಈ ಹಣವನ್ನಿಷ್ಟಲಿಡೋಂದು ನಿಶ್ಚಿತ ಧಾರಣೆಯ ಬಡ್ಡಿ ಸಮೇತ ಕಂತಿನಿಂದ 7 ವರುಷಗಳ ನಂತರ ಕೊಟ್ಟುವರಿಗೆ ಮರುಪಾವತಿ ಮಾಡಲಾಗುವುದು- 10 ರೂ.ಗಳಿಗಿಂತ ಕಡಿಮೆ ಕಂದಾಯ ಕೊಡುವವರೂ ಐಚ್ಛಿಕವಾಗಿ ಸರಕಾರಕ್ಕೆಂತಹ ಸಾಲ ಕೊಡಬಹುದು ಅಥವಾ ಕೊಡದಿರಬಹುದು-ಪಡಕೊಂಡ ಹಣಕ್ಕಾಗಿ ಸರಕಾರವು ಕೊಡುವ 'ಬೋಂಡು'ಗಳು ಟ್ರಾನ್ಸ್‌ಫರ್ ಮಾಡುವಂಥವುಗಳಲ್ಲ; ಸಂದರ್ಭ ನೋಡಿ, ಕೊಟ್ಟ ಹಣದ ಜವಾಬ್ದಾರಿ ಮೇಲೆ, ಅವಧಿಯೊಳಗೇನೇ ಸರಕಾರವು ಸಂಬಂಧಪಟ್ಟ ಹಟ್ಟುದಾರನಿಗೆ ಸಾಲಕೊಡಬಹುದು-ಬಿರುಗಾಳಿ ಮತ್ತಿತರ ಅನಾಹುತಗಳಿಗೀಡಾಗಿ ವಿಶೇಷ ನಷ್ಟಗೊಂಡಿರುವ ಸಾಗುವಳ್ಳಿದಾರನನ್ನು ಈ ಯೋಜನೆಯಿಂದ ವಿನಾಯಿತಿಗೊಳಿಸುವ ಅಧಿಕಾರವು ಕಲೆಕ್ಟರ್ ಮತ್ತಿತರ ಸ್ಥಳೀಯ ಅಧಿಕಾರಿಗಳಿಗಿದೆ—ಎಂಬುದೇ ಈ ನವೀನ ಭೂಭಾರ ಯೋಜನೆಯ ರೂಪ ರೇಖೆ!

ಇದೆಂತಹ ನ್ಯಾಯ?

ಈ ಸಾಲರೂಪೀ ಭೂಕಂದಾಯವನ್ನು ಮದ್ರಾಸ್ ಸರಕಾರವು ಜಾರಿಗೆ ತಂದಲ್ಲಿ ಪ್ರಾಂತ್ಯದ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನತೆಯ ಜೀವನವನ್ನೇ ಹಿಂಡಿದಂತಾಗುವುದೆಂಬುದು ಖಂಡಿತ! ಈಗಿನ ತುಟ್ಟಿಯುಗದಲ್ಲಿ ಆತಿ ಹೆಚ್ಚಿನ ಜೀವನ ಸಂಕಷ್ಟಗಳಿಗೀಡಾಗಿರುವವರೆಂದರೆ, ಈ ವರ್ಗದವರೇ-ಅವರೆ ಮೇಲೆಯೇ ಹೊಸ ಕರಭಾರವೆನ್ನುವಾಗ, ಮೊದಲೇ ಕುಸಿದು ಹೋಗಿರುವ ಈ ಭಾಗವು ಹೂತು ಹೋಗಲೆಂದೇ ಸರಕಾರದ ಇಚ್ಛೆಯೇ? ಎಂದು ಪ್ರಶ್ನಿಸಬೇಕಾಗುತ್ತದೆ. ಸಾರ್ವಜನಿಕರ ಗಣ್ಯ ಭಾಗವನ್ನು ಗಾಣಕ್ಕೆ ಕೊಟ್ಟೇ ಸಾರ್ವಜನಿಕ ಕಾರ್ಯ ಯೋಜನೆಗಳಿಗೆ ಬೇಕಾಗುವ ತೈಲದೊರೆ ಸೆಸಿಕೊಳ್ಳುವುದೆಂದರೆ, ಇದೊಂದು ಕಾಲಕ್ಕೆ ಟೀಯಿಸುವ ಹಂಚಿಕೆಯೇ ಸರಿ! ಮಧ್ಯಯುಗದ ಆಡಳಿತೆಯಲ್ಲಿದ್ದ 'ತಲೆ ತೆರಿಗೆ' ಯಂತಹವುಗಳು ಸುಲಿಗೆಯ ಗಾದೇ ಮಾತ ಗಳಾಗಿ ಈಗಲೂ ಸ್ಮರಣೀಯವಿನೆ; ಯುದ್ಧಾವಧಿಯಲ್ಲಿ ಬ್ರಿಟಿಷ್ ಸರಕಾರವು ಕಡ್ಡಾಯವಾಗಿ ಅಲ್ಲವಾದರೂ ಒತ್ತಾಯದಿಂದ ಹುದ್ದ ಸಾಲಗಳನ್ನು ಸಂಗ್ರಹಿಸುತ್ತಿದ್ದ ರೀತಿಯು ಆ ಕಾಲದಲ್ಲಿ ಕಠಿಣವಾಗಿ ಖಂಡಿಸಲ್ಪಟ್ಟಿದ್ದಿತು. ಮದ್ರಾಸ್ ಸರಕಾರದ ತಲೆಯಲ್ಲೀಗ ಸುತ್ತುತ್ತಿರುವ ಈ 'ಮಸಿ ತೆಂಗಿ'ಯು ಕಠೋರತೆಯ ಮಟ್ಟಿಗೆ ಅವುಗಳಿಗಿಂತ ಕಡಿಮೆಯೆ? ಸರಕಾರಕ್ಕೆ-ಉದರಲ್ಲೂ ಜನ ಪ್ರತಿನಿಧಿ ಸರಕಾರಕ್ಕೆ-ಸಾಲಬೇಕಾಗಿದೆಯೆಂದರೆ ಜನತೆಯ ಕಾರ್ಯಕ್ಷಾಗಿಯೇ ಅದು ಬೇಕಾಗಿದೆ ಎಂಬುದು ನಿರ್ವಿವಾದ. 'ನಮಗಾಗಿಯೇ ನಮ್ಮದು'ಎಂಬ ತತ್ವಇಲ್ಲಿದೆಯೆಂಬುದು ನಿಜ. ಆದರೆ ನಮಗಾಗಿ ನಾವು ಮಾಡುವಂತಹದು ಕೂಡಾ ನಮ್ಮ ಸ್ಥಿತಿಗತಿಗನುಸಾರವಾಗಿಯೇ ಇರಬೇಕು. ಹೊಟ್ಟೆಯ ಹಿಟ್ಟಿಗೆ ಗತಿಯಿಲ್ಲದವರಿಂದ ಊಟ ಉತ್ಸವಕ್ಕೆ ವಂತಿಗೆಯೆತ್ತಿದರಾಗದು; ಎಲ್ಲಿಗೂ ಸಂಬಂಧಿಸಿರುವವರಿಂದಲೇ ಸಾಲ ಕೇಳುವದಲ್ಲ. ಮದ್ರಾಸ್ ಸರಕಾರವು ಬಹಿರಂಗ ಹಡಿಸಿರುವ ಈ ವಂತಿಗೇ ಯೋಜನೆಯು ಸತ್ಯಕ್ಕೂ ಜನತೆಯನ್ನು ದಿಗಿಲುಗೊಳಿಸಿದೆ. ಅಹಾರ ಸ್ವಾವಲಂಬನೆಗೆ ಅವಧಿ ಹಾಕಿರುವ ಈ ಸಮಯದಲ್ಲಿ ಆಹಾರೋತ್ಪಾದಕ ವರ್ಗದ ವರನ್ನೀರೀತಿ ಬೆದರಿಸಿ ಬಿಟ್ಟುದು ಎಂದಿಗೂ ಹಿತಕರವಲ್ಲ. ರೈತನು ರಾಷ್ಟ್ರದ ಜೀವಾಳವೆನ್ನುವಾಗಲೇ, ಆ ಜೀವಾಳವನ್ನು ಈ ರೀತಿ ಚುಚ್ಚಬಹುದೆಂಬ ಧೈರ್ಯ ಸರಕಾರಕ್ಕೆ ಹೇಗೆ ಮೂಡಿತೋ ಅರ್ಥವಾಗುವದಿಲ್ಲ ಜೀವನಾವಶ್ಯ ಸಾಮಗ್ರಿಗಳ ನಿರಂತರ ಧಾರಣೆ ವೃದ್ಧಿ ಆಭಾವ, ಸಾಲದುದಕ್ಕೆ ಇಷ್ಟರಲ್ಲೇ ಬಿದ್ದಿರುವ ವಿವಿಧ ಕರ ತೆರಿಗೆಗಳ ಭಾರ, ಇತ್ಯಾದಿಗಳಿಂದಾಗಿ ಜೀವನವು ಅತ್ಯಂತ ಕಷ್ಟದಾಯಕವಾಗಿರುವಾಗ, ಅವನ್ನು ತೀರಾ ಅಸಹ್ಯಗೊಳಿಸುವ ಈ ವಂತಿಗೇ ವಸೂಲಿಗೆ ಜನತಾ ವಿಶ್ವಾಸ ಸಂಪಾದನೆಯ ಇಚ್ಛೆಯುಳ್ಳ ಯಾವ ಸರಕಾರವೂ ಮನಸ್ಸು ಮಾಡಬಾರದೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ.

ಈ ಪಟ್ಟಾದಾರರೆಂಥವರು?

ಮೂರಾಟದ ಹೆಚ್ಚು ಹುಟ್ಟುವಳಿಯಿರುವ ಸಹಸ್ರಾರು ರೂ. ತೀರ್ವೆ ತೆರುವವರಿಂದಾರಂಭಿಸಿ ಹೊಟ್ಟೆಬಟ್ಟೆಗೂ-ಸಾಕಾಗದಿರುವ ರೂ.10 ತೀರ್ವೆ ತೆರುವವರ ವರೆಗಿನ ಎಲ್ಲರನ್ನೂ 'ಪಟ್ಟಾದಾರ'ರೆಂದು ಗಣಿಸಿ ಏಳ ದರ್ಜೆಯಲ್ಲಿ ಇಡುವ ಕ್ರಮವೇ ತಪ್ಪು. ಏರಿದ ತೀರ್ವೆಯ ಪ್ರಕಾರ ಸರಾಸರಿ ಪರಿಮಾಣವು ಹೆಚ್ಚಾಗುತ್ತಾದರೂ ಒಂದಿಕ್ಕೆ ಸಾಗುವಳ್ಳೀ ಭೂವಿಯಿರುವವನು ಕನಿಷ್ಠವಪ್ಪ 10 ರೂ ತೀರ್ವೆ ತೆರುತ್ತಾನೆ. ಆ ಒಂದಿಕ್ಕೆಯಲ್ಲಿ ಬೇರೇನೂ ತೊಂದರೆಯೊದಗದೆ ಸುಗಮವಾಗಿ ಬೆಳೆಬಂತೆಂದು ಕಟ್ಟಿಕೊಂಡರೆ ಸರಾಸರಿ 10 ಮುಡಿ ಆಕ್ಕಿ ಉತ್ಪನ್ನವಾಗುತ್ತದೆಂದು ಲೆಕ್ಕಿಸಬಹುದು. ಈಗಿನ ಧಾರಣೆಯಂತೆ ಈ ಹತ್ತು ಮುಡಿಗೆ ರೂ. 100 ಅಥವಾ 120ರ ವರೆಗೆ ಕ್ರಯ ಬರುತ್ತದೆನ್ನೋಣ. ಆ 100 ರೂಪಾಯಿಯಲ್ಲಿ ಸರಕಾರೀ ತೀರ್ವೆ 10, ಸರಕಾರೀ ಸಾಲ 10, ಹೀಗೆ 20 ರೂಪಾಯಿಗಳನ್ನು ಆತಸರಕಾರಕ್ಕೇನೇ ತೆಗೆದಿಡಬೇಕೆ? ಸಾಗುವಳ್ಳೀ ವೆಚ್ಚ, ಕುಟುಂಬ ಪೋಷಣೆ, ಮತ್ತು ಅವನೀ ಕಾಲದಲ್ಲೂ ಜೀವ ಹಿಡಿದು ನಿಲ್ಲಲಾಗುವಂತೆ ಮಾಡುವ ಉಳಿದ ಎಲ್ಲಾ ಖರ್ಚು ವೆಚ್ಚಗಳಿಗೆ ಉಳಿಯುವ 80 ರೂಪಾಯಿಗಳೇ? ಇದು 10 ರೂ. ತೀರ್ವೆಯ ಸಂಬಂಧದ ಮಾತಾಯಿತು. ಮದ್ರಾಸ್ ಪ್ರಾಂತ್ಯದಲ್ಲಿ ನೂರು ಸಂಖ್ಯೆಯ ತೀರ್ವೆ ತೆರುವ ಮನೆಗಳು ಬಯಲ ವಿರಬಹುದು. ಆದರೆ ಅಂತಹ ಮನೆಗಳ ಜನರ ಸಂಖ್ಯೆಯಿಂದ ಆ ವುಗಳ ತೀರ್ವೆಯ ಮೊತ್ತಗಳನ್ನು ಭಾಗಿಸಿದರೆ 10ರೂ.ತೀರ್ವೆಯಿರುವ ಭೂಮಿಯಷ್ಟನ್ನು ಒಂದೊಂದು ಸಣ್ಣ ಕುಟುಂಬವೇ ಆಧರಿಸಿರುವ ಸಂಗತಿ ಮಂದಬ್ಬಾಗದಿರದು. ಅವರೆ ಸಾಗುವಳ್ಳೀ ಶ್ರಮ ಮತ್ತು ಜೀವನ ವೆಚ್ಚಗಳನ್ನು ಅಂಶಾಂಶವಾಗಿ ಲೆಕ್ಕ ಹಾಕುವ ಅಗತ್ಯ ಇಲ್ಲಿಲ್ಲ. ಕಾರಣ--ಅಂತಹ ವೆಚ್ಚಗಳ ಒಂದೆರಡು ವಿಧಾನಗಳಿಂದಲೇ ಅವರ ಆಸ್ತೀ ಉತ್ಪನ್ನ ವಜಾ ಹೊಂದಬಹುದು. ಇಂತಹ ವರ್ಗದವರಿಂದ ಸಾಲ ಪಡೆಯುವ ಮನಸ್ಸು ಸರಕಾರಕ್ಕಾಗಿದೆ! ಸರಕಾರದ ಹಣಕಾಸಿನ ಮಂತ್ರಿಗಳ್ಳ-ತಲೆಯಲ್ಲಿಳಿಯಲು ಬುದ್ಧಿ ವಿನಾಕಾರಣ ಮೂಡಿಲಾರದೆಂಬುದೇನೋ ನಿಜ. ಸರಕಾರಕ್ಕೆ ಹಣದ ಅಡಚಣೆಯಿರುವುದು ಒಂದನೇ ಕಾರಣ. ಮಿಕ್ಕ ವರ್ಗದವರ ಮೇಲೆ ತಾವು ಹಾಕಿರುವ ಹೊಸಹೊಸ ತೆರಿಗೆಗಳಂತ ಹದೇನನ್ನೂ ಪ್ರತ್ಯಕ್ಷವಾಗಿ ವರ್ಗದಾರರ ಮೇಲೆ ಈ ತನಕ ಹಾಕಿದ್ದಿಲ್ಲವೆಂಬುದು ಎರಡನೇ ಕಾರಣ; ಕಳದ ಕೆಲವು ವರುಷಗಳಲ್ಲಿ ಸಾಗುವಳ್ಳೀ ಧಾನ್ಯಗಳಿಗೆ ತುಸು ಹಿಟ್ಟಿಗೆ ಧಾರಣೆ ಕೂಡುತ್ತಾ ಬಂದಿರುವುದರಿಂದ ಸಾಗುವಳ್ಳಿದಾರರ ಸ್ಥಿತಿ ಸ.ಧಾರಿಸಿ, ಅವರ ಕೈಯಲ್ಲಿ ಕಾಸು ಓಡಾಡುತ್ತಿರಬೇಕೆಂದು ಸರಕಾರವು ನೆನಸಿರುವುದು ಮೂರನೇ ಕಾರಣ. ಏಂತೂ ಹಣ ಬಳೆಯುವಷ್ಟೇ ತ್ವರಿತವಾಗುವುದು, ಎಂಬ ಶೋಧನೆಯಲ್ಲೇ ಇರುವ ಸಂಕಾರವು, ಅಂತಹ ರಂಗಿನಲ್ಲಲ್ಲವನ್ನೂ ಪತ್ತೆಹಚ್ಚಿ ಮುಗಿಸಿ, ಈಗ ದೊಡ್ಡ ಬಂಜರು ಸ್ಥಳದ ಮೇಲೇನೇ ಕಣ್ಣಿಟ್ಟಿರುವಂತಿದೆ! ಸರಕಾರಕ್ಕಹಣದ ಅಡಚಣೆಯಂಬಹುದು-ಇದ್ದೇ ಇದೆ. ಯುದ್ಧೋತ್ತರ ಕಷ್ಟ ಕಾಲದಲ್ಲೇ ಪಾನನಿಷೇಧವನ್ನೂ ಅಮಲಾಗ್ರ ಜಾರಿಗೆ ತಂದು ಮದ್ರಾಸ್ ಸರಕಾರವು ಆರ್ಥಿಕ ಬಿಕ್ಕಟ್ಟಿಗೀಡಾಗಿದ 'ಸೇಲ್ಸ್ ಟೇಕ್ಸ್'ನ್ನು ಸಾಧ್ಯವಿದ್ದಷ್ಟು ವಿಸ್ತರಿಸಿಕೊಂಡೂ ಈ ಕೊರತೆ ತುಂಬಿಬರಲೊಲ್ಲದು. ಅದ್ದರಿಂದ ಇಷ್ಟರವರೆಗೆ ಕೈಸೀಡದ ಬಟ್ಟೆ ಕಡೆಗೆ ಕೈಚಾಚೋಣವೆಂದು ಸರಕಾರದ ಭಾವನೆಯಿರಬೇಕು. ಆದರೆ ತಾನೀಗ ಕೈಯೊಡ್ಡಿರುವುದು ಸ್ವತಃ ಹಣ ಬಡಕಾಳ್ಳಿರುವವರ ಕಡೆಗೆಂಬುದು ಸರಕಾರಕ್ಕೆ ಗೊತ್ತಿಲ್ಲದ ವಿಷಯವೆ? ಕಳದ ಕೆಲವು ವರುಷಗಳಲ್ಲೆ ಅಕ್ಕೀ ಭತ್ತಗಳ ಧಾರಣೆಯೇರಿರುವುದು ನಿಜ. ಆದರ ಇತರ ಅವಶ್ಯಕ ಸಾಮಾನ್ಯಿಗಳ ಬೆಲೆಯ ಪರಿಮಾಣದಲ್ಲೇ ಇದನ್ನು ಹೆಚ್ಚಿಸಿದುದಿಲ್ಲ. ಆಹಾರ ಧಾನ್ಯ ಬಟ್ಟೆಗಿರುವ ಅಖಿಲ ಭಾರತೀಯ ಧೋರಣೆಯನ್ನು ನೆನಪಿಸಿಯೇ. ವಿಕ್ಟ ಪ್ರಾಂತ್ಯಗಳಂತೆ ಸಾಗುವಳ್ಳೀ ವೆಚ್ಚ ಅಧಿಕವಿರುವ ಮದ್ರಾಸ್ ಪ್ರಾಂತ್ಯದಲ್ಲಯೂ ಧಾನ್ಯದ ಬೆಲೆಯನ್ನೇರಿಸಿದ್ದುದಷ್ಟೆ; ಶ್ರಥಮಾವಶ್ಯಕತೆಯಾಗಿರುವ ಆಹಾರ ಧಾನ್ಯವೆ ಜನತೆಗೆ ಸಾಧ್ಯವಿದ್ದಷ್ಟು ಕಡಿಮೆ ಬೆಲೆಗೆ ದೊರೆಯುವಂತಾಗಬೇಕೆಂಬ ತತ್ವವನ್ನೇ ಧರಿಸಿ ಕನಿಷ್ಠ ಧಾರಣೆಯನ್ನೇ ಸಾಗುವಳ್ಳೀ ಧಾನ್ಯಗಳಿಗೆ ಕಟ್ಟಲಾಗಿತ್ತು. ಹೀಗೆ ರೈತನಿಂದ ಪಡಕೊಳ್ಳುವ ಧಾನ್ಯ ಕೈಮಾಲ್ಯವನ್ನು ಕಟ್ಟಿದಂತೆಯೇ, ಕೃಷಿಗೆ

ಉಡುಪಿ ಪರ್ಯಾಯ ವಸ್ತು ಪ್ರದರ್ಶನ, 1950.

ತಾರೀಕು 1-1-1950ರಿಂದ 22-1-1950ರ ವರೆಗೆ ಉಡುಪಿಯಲ್ಲಿ ಕೈಗಾರಿಕೆ "ವಸ್ತು ಪ್ರದರ್ಶನ" ನಡಿಯಲಿದೆ. ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುಸಂಧಿ. ಕೆಲವೇ ನ್ಯಾಲುಗಳು ಉಳಿದಿವೆ.

ಈ ಕುರಿತು ಯೋಗ್ಯ "ಸುವರ್ಣ ಸಂಚಿಕೆ"ಯೊಂದನ್ನು ಪ್ರಕಾಶಗೊಳಿಸಲಿದೆ. ಅದರಲ್ಲಿ ಕೊಡುವ ಜಾಹೀರಾತು ಮಹತ್ವಯೋಜನಕಾರಿಯಾದುದು.

ಪ್ರದರ್ಶನದ ಸಂಪೂರ್ಣ ಉಳಿಕಾಯವನ್ನು
"ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ"ಗೆ
ದಾನವಾಗಿ ಕೊಡಲಾಗುವುದು.

ಏವರಕ್ಕೆ ಇಂದೇ ಬರೆಯಿರಿ

Inserted by:—
The Canara Industrial & Banking Syndicate Ltd, UIDPI.

ಕಾರ್ಯದರ್ಶಿ
ಉಡುಪಿ ಪರ್ಯಾಯ ವಸ್ತುಪ್ರದರ್ಶನ 1950
ಉಡುಪಿ.

-ಅಷ್ಟೇ ಹಣವನ್ನು ಸಾಲ ಕೊಡಬೇಕೆ?

ಮಧ್ಯಮ ವರ್ಗದವರ ಜೀವ ಹಿಂಡುವಂಥಾ ಹಂಚಿಕೆ!

ವಶ್ಯವುಳ್ಳ ಉಪಕರಣಗಳನ್ನು ಅತನಿಗೆ ನಿಯಂತ್ರಿತ ಬೆಲೆಗೇನೇ ಒದಗಿಸಬೇಕೆಂಬ ಸಂಕಲ್ಪವು ಸರಕಾರದ್ದಿದೆಯಾದರೂ ಅದು ಕಾರ್ಯತಃ ಈ ವರೆಗೂ ಸರಿಯಾಗಿ ಜಾರಿಗೆ ಬಂದಿಲ್ಲ. ಹೀಗಾಗಿ ತಮ್ಮ ಉತ್ಪತ್ತಿಗಳಿಗೆ ನಿಶ್ಚಿತ ಬೆಲೆಯನ್ನೇ ಪಡೆಯುವಾಗ, ತಮ್ಮ ವೈಕಾಸವಶ್ಯಕತೆಗಳಿಗಾಗಿ ಮಿತಿಮೀರಿದ ಬೆಲೆ ತೆತ್ತೇ ಸಾಗುವಳ್ಳೀದಾರರು ದಿನದೂಡುತ್ತಾ ಬಂದಿದ್ದಾರೆ. ಈ ರೀತಿ ಕಳದ ಕೆಲವು ವರುಷಗಳಲ್ಲಿ ಬೇಸಾಯಗಾರರಿಗೆ ದೊರೆತಿದ್ದ ಹೆಚ್ಚು ಲಾಭಗಳಿಗಿಂತ, ಅವರು ಅನುಭವಿಸಿದ್ದ ಹೆಚ್ಚು ನಷ್ಟಗಳೇ ಅಧಿಕ. ಅಂದ ಮೇಲೆ ಗತಕಾಲದಲ್ಲಿ ಅವರು ಹಣಕೂಡಿಸಿಟ್ಟಿರಬಹುದೆಂದು ಊಹಿಸುವುದು ಶುದ್ಧ ತಪ್ಪು. ವೆಚ್ಚದ ಅಂಶಗಳಿಗಿಂತ ಹೆಚ್ಚಿಗೆ ಪೂರ್ಣಾಪೆಯ ಅಂಶಗಳಿದ್ದವರೆಂದರೆ ಸಾವಿರ ಸಂಖ್ಯೆಯ ತೀರ್ವೆಕೆರುವ ದೊಡ್ಡ ವರ್ಗದವರು ಮಾತ್ರ. ಇಂಥವರು ಹುಟ್ಟುವಳಿ ದೊಡ್ಡದಿರುವುದರಿಂದ ಅವುಗಳಿಗೆ ದೊರೆಯುವ ಏರಿದ ಧಾರಣೆಯಿದಿರಲ್ಲಿಕವರಿಗಿರುವ ವೆಚ್ಚದಬಾಬುಗಳ ಧಾರಣೆಯೆಷ್ಟೇ ಏರಿದ್ದರೂ ಸಾಲಭಧದಲ್ಲಿ ವಜಾ ಹೊಂದುತ್ತಿಲ್ಲ; ಖರ್ಚು ಅಲ್ಪ ಪರಿಮಾಣದ್ದಾಗಿ ಬಳೆದು ಹೋಗಿ ಉಳಿತಾಯಗಳು ಅವರ ವಶ ಹೇರಳ ಉಳಿಯುತ್ತವೆ. ಇದು ಸಾರಾಸಟದ ಅಕ್ಕೇ ಹುಟ್ಟುವಳ್ಳಿಯಿಂವ ದೊಡ್ಡ ವರ್ಗದಾರರ ಮಾತಾಯಿತು. ಹಿಂದಿನ ಕಾಲದಲ್ಲಾದ್ದರೂ ಊಟ ಮತ್ತು ಖರ್ಚು ವೆಚ್ಚಗಳಿಗೆ ಅಲ್ಲಿಂದಲ್ಲಿಗಾಗುತ್ತಿದ್ದ ಮತ್ತು ಆದಕ್ಕೂ ಕಡಿಮೆ ಬೀಳುತ್ತಿದ್ದ ವರ್ಗಗಳವರ ಆಯ-ವ್ಯಯ ಪಟ್ಟಿಗಳ ಕೊಂತೆಯ ದಶವು ಮೇಲಿನ ಕಾರಣಗಳಿಂದಾಗಿ ಆ ಕಾಲಕ್ಕಿಂತ ಈಗ ಹೆಚ್ಚಿದೆಯೆಂಬುದು ಸ್ವತಃಸಿದ್ಧ. ಇಂತಹ ಕೊಂತೇಗಾರ ವರ್ಗದಲ್ಲಿ ಸರಕಾರವು ಈಗ ಕಣ್ಣಿಟ್ಟಿರುವ ರೂ. 10 ಭೂಕಂದಾಯ ಕೊಡುವವರಿಂದಾರಂಭಿಸಿ ರೂ. ೨೦೦೦ ವರೆಗೆ ತೀರ್ವೆ ತೆರುವ ಎಲ್ಲರನ್ನೂ ಸೇರಿಸಬಹುದು. ಕುಟುಂಬ ಸಂಖ್ಯೆಯ ಹೆಚ್ಚು ಕಡಿಮೆಗಳನ್ನಾಧರಿಸಿ, ಈ ವರ್ಗದವರಲ್ಲೂ ಉಳಿತಾಯವಾಗುವವರಿರಬಹುದಾದರೆ, ಸುಮಾರು 1000 ರೂ. ತೀರ್ವೆ ತೆರುವವರಲ್ಲಿಯೂ ಉಳಿತಾಯವಿಲ್ಲದವರೂ ಇರಬಹುದು. ಅಂತೂ ಸರಕಾರವೀಗ ಕಡ್ಡಾಯವಾಗಿ ಸಾಲ ವಸೂಲು ಮಾಡಲು ನಿಶ್ಚೈಸಿರುವ 'ವರ್ಗದಾರ' ರೆಂದವರಲ್ಲಿ ನೇಕಡಾ ೨೦ಕ್ಕೂ ಮಿಕ್ಕಿದವರು ಜೀವನ ವೆಚ್ಚಕ್ಕೂ ಕೊರತೆಯುಳ್ಳವರೇ; ಮಧ್ಯಮ ಮತ್ತು ಬಡ ವರ್ಗದವರನ್ನಂತೂ ನಿಯಂತ್ರಣ ಯುಗಾರಂಭವಾದಂದಿನಿಂದ, ಹೊಲಿಗೆ ಅಕ್ಕೇ ಸಾಲ ತರುವ ಅನುಕೂಲತೆ ತಪ್ಪಿ, ಆ ಸಂಬಂಧದ ಸಾಲಗಳು ಸಣ್ಣ ವರ್ಗದಾರಾಂಗಿಗೆ ಇಲ್ಲದಿರಬಹುದೇ. ಆದರೆ ಅದರ ಬದಲಿಗೆ ಕಾಲೋಚಿತವಾದ ಹಣ ಸಾಲ ಅಥವಾ ಬೇರೆ ಸಂಪಾದನೆಗಳಿಂದಲ್ಲದೆ ಈ ವರ್ಗದವರೇ ತನಕ ದಿನದೂಡಿದ್ದೆಲ್ಲ ಈ ದಿನ ತಾ ಭಾಗದ್ದು ಇಡೀ ಪ್ರಾಂತದ ಜನ ಸಂಖ್ಯೆಯ ಅಧಿಕ ಸಂಖ್ಯಾತ ಜನತೆಯಾಗಿದೆ. ಪ್ರಾಂತ್ಯದ ಜನಜೀವನವನ್ನು ಸುಧಾರಿಸುವುದನ್ನೇ ಗುರಿಯಾಗಿಟ್ಟುಕೊಂಡಿರುವ ಸರಕಾರವು ಇಂಥವರಿಗಿರುವ ಸಾಲ, ತಡೆ ತೊಡಕುಗಳನ್ನು ನಿವಾರಿಸಲು ಎಂದಾಗಬೇಕಾದುದು ಅಗತ್ಯ ಆದರೆ ನಮ್ಮ ಸರಕಾರಕ್ಕೆ ಇವರಿಂದಲೇ ಸಾಲ ಬೇಕಾಗಿದೆಯೇನು?

ಸರಕಾರವೇನು ಮಾಡಿದೆ?

ಈಗ "ಸಾಲ ಕೊಡಲೇ ಬೇಕು." ಎಂದು ಕಡ್ಡಾಯವಾಗಿ ಕೇಳುತ್ತಿರುವ ಸರಕಾರವು ಬಡ ತುಂಡು ವರ್ಗದಾರರು ಮತ್ತು ರೈತರೆಲ್ಲರ ಸಂಕಷ್ಟ ನಿವಾರಣೆಗಾಗಿ ಮತ್ತು ಸಾಗುವಳ್ಳೀ ಪ್ರೋತ್ಸಾಹಕ್ಕಾಗಿ ಇಷ್ಟವರೆಗೇನಾದರೂ ಮಾಡಿದ್ದಿದೆಯೆ? ತಾತ್ಕಾಲಿಕ ಶಮನಕ್ಕಾಗಿ ರೈತರ ಧಾನ್ಯಗಳನ್ನಾಕರ್ಷಿಸಿಕೊಳ್ಳುವ ಉದ್ದೇಶದಿಂದ "ಬೋನಸ್ ವಿತರಣೆ", ಮತ್ತದರ ಬೆನ್ನಲ್ಲೇ ಮೂಲ ಮೌಲ್ಯದಲ್ಲೂ ಕಡಿತಗಳಂತಹ ಧಾರಣೇ ಸರ್ಕಸನ್ನು ನಡೆಸಿರುವುದನ್ನು ಬಿಟ್ಟರೆ, ರೈತನ ಸ್ಥಿತಿ ಸುಧಾರಣೆಗಾಗಿ ಸರಕಾರವೇನು ಮಾಡಿದೆ? ರಾಜಾಜೀ ಸರಕಾರವು 'ಬೇಸಾಯಗಾರರ ಸಾಲ ನಿವಾರಣಾ ಶಾಸನ'ವನ್ನು ತಂದಿದ್ದರೆ, ಈಗಿನ ಸರಕಾರವು 'ಬೇಸಾಯಗಾರರಿಂದ ಸಾಲಾಹರಣಾ ಶಾಸನ ತರುವ ಮನಸ್ಸು ಮಾಡಿದೆಯೆಂಬ ಮಾತು ಹಾಗಿರಲಿ-ಆ ಸಾಲ ನಿವಾರಣಾ ಶಾಸನವು ಜಾರಿಯಲ್ಲಿ ಬಂದು ಒಂದು ದಶಮಾನ ಕಳೆದಿರುವ ಈ ಕಾಲದಲ್ಲಿ ಬೇಸಾಯಗಾರರ ಸಾಲವು ಹಿಂದೆಂದೂ ಇರದಷ್ಟು ಹೆಚ್ಚಾಗಿದೆ ಎಂದು ಡಾ| ಬಿ. ವಿ. ನಾರಾಯಣಸ್ವಾಮಿ ನಾಯಿಡುಗಳಂತಹ ತಜ್ಞರು ಸಾಧಾರವಾಗಿ ಕಂಡು ಹಿಡಿದಿದ್ದಾರೆ ಸ್ವತಃ ಸಾಲದಲ್ಲಿ ಮುಳುಗಿರುವವರಿಂದಲೇ ಕಡ್ಡಾಯವಾಗಿ ಸಾಲವೆತ್ತುವ ಮನಸ್ಸು ಸರಕಾರಕ್ಕೆ ಮಾಡುವದೆಂದರೆ, ಇದರ್ಥಾರ್ಥವಿದೆಯೆ? ಇಂತಹ ಯೋಜನೆಯೊಂದನ್ನು ತಯಾರಿಸುವಾಗ ಪ್ರಾಂತ್ಯದ ಅರ್ಥಮಂತ್ರಿಗಳು ತನ್ನೀಗಳುವಾರ್‌ಗಳ ಸ್ಥಿತಿಗತಿ ಹೇಗಿದೆಯೆಂಬುದನ್ನು ಸರಿಯಾಗಿ ಮಂದಟ್ಟು ಮಾಡಿಕೊಂಡಿರುವರೇ? ಸಾಗ ವಳ್ಳೀದಾರರ ಅಕ್ಕೇ ಮುಡಿಗೆ ಕಳದ ವರ್ಷ ಕೊಟ್ಟಿದ್ದ ಧಾರಣೆಯನ್ನು ಈ ವರ್ಷ ಮದ್ರಾಸ್ ಸರಕಾರವು ಕೇಂದ್ರ ಸರಕಾರದ ನಿರ್ದೇಶನ ಸಾರ ತಗ್ಗಿಸಿಕೊಂಡಿದೆ; ರೈತರು ತಮ್ಮ ಅನಿವಾರ್ಯ ಆಡಚಣೆಗಳ ಭಾರ ತಗ್ಗಿಸಿಕೊಂಡುದೇನಾದರೂ ಇದ್ದಿಗೆ, ಅದು ಪ್ರಾಯಶ್ಚ-ಅಪ್ರಾಯಶ್ಚರೆಂದು ನೋಡದೆ ತಮ್ಮ ಮಕ್ಕಳು ಮರಿಗಳನ್ನು ಪರ ಊರುಗಳಿಗೆ ಕಳುಹಿಸಿ, ಬೇರೆ ಪ್ರೋತ್ಸಗಳಲ್ಲಿ ದುಡಿಯಿಸಿಯೇ; ನಿಜಕ್ಕೂ ಭೂಮ್ಯುತ್ಪನ್ನದಿಂದಲ್ಲ. ತೀರ್ವೆಯ ಹಣ ಪರ ಊರುಗಳಿಂದ ಬರುವ ಸಂಪ್ರದಾಯ ಹೆಚ್ಚು ಕಡೆಗಳಲ್ಲಿದೆ. ತೀರ್ವೆ ವಸೂಲಿಗಾಗಿಯೇ ಸರಕಾರವು ಅಸ್ತಿ ವಿಲುಮಿಡಿಸಿದ ನಿದರ್ಶನವಳಕ ಕೂಡಾ ದೇಶದಟ್ಟಿದೆ. ಇಂತಹ ಸ್ಥಿತಿಯಿರುವಾಗಲೇ ಈ ವರುಷ ಇಮ್ಮಡಿ ತೀರ್ವೆ ತೆರಬೇಕಾಗಿಬಂದರೆ, ತುಂಡುವರ್ಗದಾರರ ಸಂಸಾರ್ವನ್ನು ಗದ್ದೇಸಾಗುವಳ್ಳಿಗಿಂತ ಕಷ್ಟಾಗಿ ಬೊಂಬಾಯಿ ಶಹರದ ಕಡೆಗೆ ಮಾಲುವದು ಸ್ವಾಭಾವಿಕ; ಸಾಗುವಳ್ಳೀ ಹೊರುಪಿನ ಬದಲು ಸಂಪಾದನಾ ಹೊರುಪು ಹುಟ್ಟುವುದು ಸಹಜ. ದೊಡ್ಡ ವರ್ಗದಾರರಂತೂ ತಮ್ಮ ಮೇಲೆ ಹೇರುಬಹುದಾದ ಈ ಇಮ್ಮಡಿ ತೀರ್ವೆಗಿಂತ ಸಾಲದ ಹೊರೆಯಷ್ಟು ಏರಿದ ತೀರ್ವೆ'ಯೆಂದು ಹೆಸರಿನಿಂದ ತಮ್ಮ ಒಕ್ಕಲಿಗರ ಮೇಲೆ ಹೇರಬಹುದು. ನಿಶ್ಚಿತ ವಸೂಲಿಗೊಪ್ಪಿಸಿದ್ದಕ್ಕಾಗಿ ಅಕ್ಕೇ ಮುಡಿಗೆ ದೊರೆತಿದ್ದ 'ಬೋನಸ್'ನ್ನು ಇಂತಹ ವರ್ಗದಾರರು ವಳ್ಳಿಲುಗಳಿಂದ ಕಸಗೊಂಡಿದ್ದ ನಿದರ್ಶನಗಳು ಬೇಕಾದಷ್ಟಿವೆ. 'ಮೂಲ ತೀರ್ವೆಯಷ್ಟೇ ಹೊಸ ತೀರ್ವೆ'ಯೆಂಬ ಕ್ರಿಮ ಬಂದರೆ, ದೊಡ್ಡ ವರ್ಗದಾರರೆಲ್ಲರೂ, ತಮ್ಮ ಒಕ್ಕಲುಗಳಿಂದದನ್ನ ಪಡಕೊಂಡು ಸರಕಾರಕ್ಕೆಕೊಡುವ ಮಾಧ್ಯಮವಾಗಿ ಮಾತ್ರ ನಿಂತಾರು ಆದರೆ ಸಂಕಷ್ಟಗಳಿಲ್ಲವೂ ಬಡ ಚಾಲಗೇನೇದಾ ರರ ಮೇಲೆಯೇ ಬಿದ್ದೀತು.--ಎಂಬುದನ್ನು ಲಕ್ಷ್ಯದಲ್ಲಿಡಬೇಕು. 1951ರೊಳಗೆ ರಾಷ್ಟ್ರೀಯ ಆಹಾರ ಸ್ವಾವಲಂಬಿಯಾಗಬೇಕೆಂಬ ಗುರಿಯಿಟ್ಟುಕೊಂಡು, ಅಂತಹ ಅಧಿಕಾಹಾರೋತ್ಪತ್ತಿಗಾಗಿ ರೈತರನ್ನು ಪ್ರೋತ್ಸಾಹಿಸುವ ಕರ್ತವ್ಯಕ್ಕೆ ಕಟ್ಟುಬಿದ್ದಿರುವ ಸರಕಾರವು ಈ ಕಾಲದಲ್ಲಿ ಕೈಕೊಳ್ಳಬಹುದಾದ ವಿಧಾನವೇನಿದು? ನಿಯೋಜಿತ ತೆರಿಗೇ ಸಾಲವು ಜಾರಿಗೆ ಬರುವಂತಾದರೆ ಅದು ರೈತರಲ್ಲೆಂತಹ ನಿರಾಶೆ ಮತ್ತು ಸಂಕಟವನ್ನು ನಿರ್ಮಿಸೀತು—ಅಧಿಕಾಹಾರ ಉತ್ಪನ್ನಕ್ಕೆ ಅದರಿಂದ ಎಂತಹ ಧಕ್ಕೆಯೊದಗೀತು — ಎಂಬುದನ್ನು ಮದ್ರಾಸಿನ ಅರ್ಥ ಸಚಿವರು ಊಹಿಸಿದ್ದಿರಬಹುದೆ? ಇಡೀ ಮಂತ್ರಿಮಂಡಲವಾದರೂ ಎಲ್ಲವನ್ನೂ ಸರಿಯಾಗಿ ಪರ್ಯಾಲೋಚಿಸಿ ಈ ಅಲೋಚನೆಯನ್ನೇ ಬಿಟ್ಟುಬಿಡುವ ದೆಂದು ನಂಬಬಹುದೆ?

ಸರಕಾರಕ್ಕಿರುವ ಹಾದಿ

ಸರ್ವಸಾಮಾನ್ಯವಾಗಿ ರೂ. 500ವರೆಗೆ ತೀರ್ವೆತೆರುವ ಪಟ್ಟಾದಾರರು ಸರಕಾರಕ್ಕೆ ಸಾಲಕೊಡುವ ಗಿರಾಕಿಗಳಾಗಿಲ್ಲವೆಂಬುದು ಸ್ವತಃ ಸಿದ್ಧ. ಅಂತೆಯೇ ಈ ಕಷ್ಟಕಾಲದ ಸ್ವಾಧೀನವಿರತಜಣಿಗಳು ಮತ್ತು ಪಾವನಸೀಧದಂತಹ ಮದ್ರಾಸ್ ಸರಕಾರದ ಸ್ವಯಂನಿರ್ಮಿತ ಸಂಕಷ್ಟಗಳು ಮದ್ರಾಸ್ ಸರಕಾರವನ್ನು ಅರ್ಧಕಾಧಾವ ಕ್ಕೇಡುಮಾಡಿವೆಯೆಂಬುದೂ, ಹಣಸಂಗ್ರಹದ ಮಿಕ್ಕುವಿಧಾನಗಳನ್ನು ಇಷ್ಟರಲ್ಲೇ ಕೈಕೊಂಡು ಮುಗಿಸಲಾಗಿದೆ ಎಂಬುದೂ ನಿಜವೇ. ಇಂತಹ ಸ್ಥಿತಿ ಸುಧಾರಣೆಗಾಗಿ ಸರಕಾರವು ರೂ. 500ಕ್ಕಿಂತ ಹೆಚ್ಚಿಗೆ ತೀರ್ವೆ ತೆರುವ (ಸ್ವಾಧೀನವಿರ ವರ್ಗದ ವೆಚ್ಚಗಳ ತುಲನೆ ನೋಡಿಕೊಂಡೇ) ದೊಡ್ಡ ವರ್ಗದಾರರಿಂದ ಮಾತ್ರ ಕಡ್ಡಾಯವಾಗಿ ಸಾಲ ಕೇಳಬಹುದು; ನಿಜಕ್ಕೂ ವಾರ್ಷಿಕ ಉಳಿತಾಯವಿದ್ದು, ಅದನ್ನು ಯಾವುದಾದರೊಂದು ಲಾಭಕಾರಕ ಭದ್ರ ವ್ಯವಸ್ಥೆಯಲ್ಲಿಡಬೇಕಾಗಿರುವ ಇಂತಹ ಶ್ರೀಮಂತಿಕೆಯಿಂದ ಭೂಕಂದಾಯವನ್ನೇ ಏಕೆಂದೇನು-ಅದರ ಇಮ್ಮಡಿ ಪೂರ್ತಿವನ್ನು ಕಡ್ಡಾಯದ ಸಾಲವಾಗಿ ಕೇಳಬಹುದು.

(4ನೇ ಪುಟ ನೋಡಿರಿ)

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭದಶ್ಚೀಯವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲಿನ್ನೊಂದು
ಪ್ರಧಾನ ಏಜಂಟರು:
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.
ಇವರ ಶಾಖಾ ಕಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಹುಬ್ಬಳ್ಳಿ, ತ್ರಿವೇಂದ್ರಮ್, ಕಲ್ಲಿಕೋಟಿ ಮತ್ತು ಮಂಗಳೂರು
ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನರಿಗೆದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ನಲ್ಲಿಸಿದುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ನೋಟೀಸು.

ದಕ್ಷಿಣಕನ್ನಡ ಜಿಲ್ಲಾ ಜಾನುವಾರು ಅಭಿವೃದ್ಧಿ ಮಾಡುವ ಉದ್ದೇಶ್ಯ ಕೆಲವು ಸಂಸ್ಥೀ ಜಾತಿಯ ಬೀಜದ ಹೋರಿಗಳು ಮಂಗಳೂರು ಜಾನುವಾರು ಆಸ್ಪತ್ರೆಯಲ್ಲಿ ಕೊಡಲ್ಪಡುವವು.

ಇವುಗಳನ್ನು ಉಚಿತವಾಗಿ ಕೊಡಲ್ಪಡುವುದು. 3ವರ್ಷಗಳು ಮತ್ತು 180 ದಿನಗಳಿಗೆ ಉಪಯೋಗವಾದ ನಂತರ ಹೋರಿಯು ಸಾಕಿದವರಿಗೆ ವರ್ಗಾಯಿಸಲ್ಪಡುವುದು.

ಮೇಲಿನ ಶರ್ತವು ತೀರಿದನಂತರ ಹೋರಿಯನ್ನು ದನಗಳಿಗೆ ಉಪಯೋಗಿಸಿದರೆ ಸರ್ಕಾರಿ ಗ್ಯಾರಂಟಿ ಕೊಡಲ್ಪಡುವದು. ಇದರ ಹೆಚ್ಚಿನ ವಿಷಯ ತಿಳಿಯಬೇಕಾದರೆ ಮತ್ತು ಬೀಜದ ಹೋರಿ ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಡಾಕ್ಟರ್ ಎಸ್. ವಿ. ಕಾಸ್ತ್ರಿ
ಜಿಲ್ಲಾ ವೆಟರಿನರಿ ಆಫೀಸರ್,
ಮಂಗಳೂರು.

ಜಾಗತಿಕ ರಂಗದ ವಾದವಿವಾದಗಳು.

ಉತ್ತರ ಅಟ್ಲಾಂಟಿಕ್ ಆಧಿನ ಪಶ್ಚಿಮ ಯುರೋಪಿನ 12 ರಾಷ್ಟ್ರಗಳ ರಕ್ಷಣಾಮಂತ್ರಿಗಳ ಸಮ್ಮೇಲನವು ಇದೇ ತಿಂಗಳ ತಾ. 1ರಲ್ಲಿ ಪೇರಿಸಿನಲ್ಲಿ ಸೇರಿ ರಕ್ಷಣಾ ಸಂಬಂಧದ ಒಮ್ಮತದ ವ್ಯವಸ್ಥೆಗಳನ್ನು ಮಾಡಿಕೊಂಡರೆಂದು ಪ್ರಕಟವಾಗಿದೆ. ಇವೆಲ್ಲಾ ರಾಷ್ಟ್ರಗಳ ಸಮ್ಮಿಳಿತ ರಕ್ಷಣಾ ವ್ಯವಸ್ಥೆಗಳು ರೂಪಿಸಲ್ಪಟ್ಟುವೆಂದು ತಿಳಿದು ಬಂದಿದೆ.

ಚೈನದ ಮಟ್ಟಿಗೆ ಬ್ರಿಟನ್ ಮತ್ತಿತರ ಹಂಗ್ರಿಯ ಇತರ ರಾಷ್ಟ್ರಗಳು, ಅಲ್ಲಿಗೆ ವಸ್ತುಸ್ಥಿತಿಯಾಗಿರುವ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡುವ ಪ್ರಶ್ನೆಯೇ ಈಗ ಮುಖ್ಯವಾಗಿದೆ. ಈ ಸಂಬಂಧವಾಗಿ ಭಾರತ ಮೊದಲಾದ ಏಷಿಯಾನ್‌ವೆಲ್ಫ್ ರಾಷ್ಟ್ರಗಳೊಡನೆ ಸಂಯುಕ್ತ ರಾಷ್ಟ್ರಗಳೂ ಸಹ ಪರ್ಯಾಲೋಚಿಸಿಕೊಳ್ಳಿದೆ ಯಾವ ನಿರ್ಧಾರವನ್ನೂ ಇಂಗ್ಲಾಂಡು ಮಾಡುವಂತಿಲ್ಲ. ಚೈನಾದ ಕಮ್ಯೂನಿಸ್ಟ್ ಸೇನೆಗಳು ಶಮ್ಮ ವಿರೋಧಿಗಳ ತಾತ್ಕಾಲಿಕ ರಾಜಧಾನಿಯಾಗಿದ್ದ ಚಂಗ್ ಕಿಂಗ್‌ನ್ನು ಹೋರಾಟ ವಿನಹ ಸ್ವಾಧೀನ ಪಡಿಸಿಕೊಂಡು ರಾಷ್ಟ್ರೀಯ ಸೇನೆಗಳನ್ನು ಬೆನ್ನಟ್ಟುತ್ತಾ ಹೋಗುತ್ತಿವೆ.

ಭದ್ರತಾ ಕೌನ್ಸಿಲಿನಿಂದ ನೇಮಿಸಲ್ಪಟ್ಟ ಸ್ವತಃ ಕಾಶ್ಮೀರಕ್ಕೆ ಬಂದು ಇಲ್ಲಿ ಹಲವು ತಿಂಗಳು ಪ್ರತ್ಯಕ್ಷ ಪರಿಶೀಲನೆ ನಡೆಸಿ, ಮರಳಿ ಹೋಗಿದ್ದ ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಕಮಿಶನಿನವರು ಈ ವಿಚಾರಗಳ ತಮ್ಮ ವರದಿಯನ್ನು ಭದ್ರತಾ ಕೌನ್ಸಿಲಿಗೊಪ್ಪಿಸಿಲ್ಲ. ಎರಡು ತಿಂಗಳುಗಳಿಗೂ ಮಿಕ್ಕಿ ಅವರಾ ಸಂಬಂಧ ಚರ್ಚೆ ಮತ್ತು ಕಾರ್ಯಗಳಲ್ಲಿ ಉದ್ಯುಕ್ತರಾಗಿದ್ದರೂ ಸದಸ್ಯರಿಗೆ ಭಿನ್ನಾಭಿಪ್ರಾಯಗಳೆದ್ದು ದಂದ ವರದಿ ತಯಾರಿ ಹಿಂದೆ ಬಿತ್ತೆಂದು ತಿಳಿದು ಬಂದಿದೆ. ಕೊನೆಯ ವಾರ್ತೆಯಂತೆ ಇದೇ ತಾ. 12ಕ್ಕೆ ಅವರು ವರದಿಯೊಪ್ಪಿಸಲಿದ್ದಾರೆಂದೂ ಭದ್ರತಾ ಕೌನ್ಸಿಲು ತಾ. 17ರಲ್ಲಿ ಅದನ್ನು ಪರ್ಯಾಲೋಚಿಸಲಿರುವುದೆಂದೂ ತಿಳಿದು ಬಂದಿದೆ. ಈ ಚರ್ಚೆಯು ವೇಳೆ ಹಾಜರಾಗಲು ಕಾಶ್ಮೀರ ಪ್ರಧಾನಿ ಶೇಕ್ ಅಬ್ದುಲ್ಲಾ ಮತ್ತು ಭಾರತದ ಪ್ರತಿನಿಧಿ ಸರ್. ಗಿರಿಜಾಶಂಕರ್ ಬಾಜ್‌ಪಾಯಿಯವರು ನ್ಯೂಯೋರ್ಕಿಗೆ ಹೋಗಬಹುದು.

ಅಂತರರಾಷ್ಟ್ರೀಯ

ದೀರ್ಘಾವಧಿಯಿಂದಿದ್ದ ಇಂಡೋನೇಶಿಯಾ ಸ್ವಾತಂತ್ರ್ಯ ಹೋರಾಟದ ಪರಿಣಾಮವಾಗಿ ಡಚ್ ಮತ್ತು ಇಂಡೋನೇಶಿಯದ ವಿವಿಧ ಕ್ಷೇತ್ರೀಯರೊಳಗೆ ಹೇಗ್ಗೂ ನಲ್ಲಿ ನಡೆದ ಭಾವೀವ್ಯವಸ್ಥಾ ಮಾತುಕತೆಗಳು ಸಫಲಗೊಂಡು ಇಂಡೋನೇಶಿಯದಲ್ಲಿ ಪೂರ್ಣ ಸ್ವಾತಂತ್ರ್ಯ ಸ್ಥಾಪಿಸುವ ಸವಿವರ ವ್ಯವಸ್ಥೆಗಳು ನಡೆದಿದ್ದುವು. ಅಂತೆಯೇ ಇದೇ ತಿಂಗಳ ತಾ. 27ಕ್ಕೆ ಇಂಡೋನೇಶಿಯಾದ ಸ್ವಾತಂತ್ರ್ಯ ಉದ್ಘಾಟಿಸಲ್ಪಡುವುದು. ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯಲ್ಲಿ ಭಾರತ ಪ್ರತಿನಿಧಿಗಳು ತಂದ ಈ ವ್ಯವಸ್ಥೆಯನ್ನು ಸ್ವಾಗತಿಸುವ ನಿರ್ಣಯವು ರಶ್ಯದ ಬಲವಾದ ಅಕ್ಷೇಪವಿದ್ದರೂ ಮಂಜೂರಾಗಿದೆ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಲೋಕ ಪ್ರಾಮುಖ್ಯ ವಿವಾದಗಳ ಕುರಿತು ಚರ್ಚೆ, ನಿರ್ಣಯಗಳಾಗುತ್ತಿವೆ. ಮುಖ್ಯ ಪಂಚ ರಾಷ್ಟ್ರಗಳೊಳಗೊಂದು ಶಾಂತಿ ಕರಾರು ನಡೆಯಬೇಕೆಂದು ರಶ್ಯದ ಪರವಾಗಿ ಬಂದ ಸೂಚನೆಯು ಬಿದ್ದು ಹೋಗಿ ಸಂಯುಕ್ತ ರಾಷ್ಟ್ರ ಸಂಘದ ಘೋಷಣೆಯಲ್ಲದಡಕವಾಗಿರುವ ಶಾಂತಿ ತತ್ವಗಳಿಗೆ ಎಲ್ಲಾ ಸದಸ್ಯ ರಾಷ್ಟ್ರಗಳೂ ವಿಧೇಯರಾಗಿ ನಡಕೊಳ್ಳಬೇಕು" ಎಂದು ಕೇಳಿಕೊಳ್ಳುವ ಪಂಗ್ಲೋ ಅಮೆರಿಕನ್ ಸೂಚನೆಯು ಅಲ್ಲಿ ಮಂಜೂರಾಯಿತು. ಆ ಸ್ವತಂತ್ರ ಪ್ರದೇಶಗಳ ಸುದ್ದಿ ಪರಿಶೀಲನೆಗಾಗಿ ಜಾಗತಿಕ ಸಂಘವು ನಿಯಮಿಸಿರುವ ಸ್ಪೆಶ್ಯಲ್ ಸಮಿತಿಯು ಇನ್ನೂ ಮೂರು ವರುಷವಿರಬೇಕೆಂಬ ನಿರ್ಣಯವಾಗಿದೆ ಈ ಸೂಚನೆಯನ್ನು ಬ್ರಿಟಿಷ್ ಮಂತ್ರಿತರ ಮೇಲಧಿಕಾರೀ ರಾಷ್ಟ್ರಗಳು ಬಲವಾಗಿ ವಿರೋಧಿಸಿದ್ದವು.

ಆಗ್ನೇಯ ಏಸ್ಯಾದ ರಕ್ಷಣಾವ್ಯವಸ್ಥೆಗಳನ್ನು ಚರ್ಚಿಸಲು ಭಾರತ, ಪಾಕಿಸ್ತಾನ್, ಬರ್ಮಾ, ಸಯಾಮ್, ಆಸ್ಟ್ರೇಲಿಯ, ಇಂಡೋನೇಶಿಯ ಫಿಲಿಪ್ಪಾಯನ್ಸ್-ಈ ಏಳು ರಾಷ್ಟ್ರಗಳ ಆಗ್ನೇಯ ಏಸ್ಯಾ ಸಮ್ಮೇಳನವೊಂದು ಫೆಬ್ರವರಿ ತಿಂಗಳಲ್ಲಿ ಜರಗುವುದೆಂದು ತಿಳಿದು ಬಂದಿದೆ. ಭಾರತಕ್ಕೆ ನಾಯಕತನವನ್ನು ಒಪ್ಪಿಸಿಕೊಡುವ ಸಂಭವವಿದೆ.

ನೆಹರೂ ಸಂದೇಶ

ರಾಷ್ಟ್ರದ ಆಹಾರ ಸ್ವಾವಲಂಬನೆ, ಆರ್ಥಿಕ ಸ್ಥಿತಿ ಸುಧಾರಣೆ ಮತ್ತು ಒಳಗಣ ಶಾಂತಿಯ ಭದ್ರತೆ ಮತ್ತು ಪುಷ್ಟಿಯೇ ಇದು ಭಾರತದ ಲಕ್ಷ್ಯವನ್ನೆಳೆದಿರುವ ವಿಷಯಗಳು. ಇದೇ ತಾ. 3ರಲ್ಲಿ ಭಾರತ ಪ್ರಧಾನಿ ಪಂಡಿತ ಜವಾಹರ್‌ಲಾಲರು ರಾಷ್ಟ್ರಕ್ಕೆತ್ತ ಆಕಾಶವಾಣೀ ಭಾಷಣದಲ್ಲಿ ಹೀಗಂದಿದ್ದಾರೆ: "ಈ ದಿನ ಆರ್ಥಿಕ ಪ್ರಶ್ನೆಯೇ ವಿಶೇಷ ಪ್ರಾಮುಖ್ಯತೆಯದಿದೆ. ಪ್ರಕೃತಿ ಸಹಜ ಉತ್ಪನ್ನಗಳ ಮಟ್ಟಿಗೆ ಭಾರತವು ಅತಿ ಶ್ರೀಮಂತ ರಾಷ್ಟ್ರ. ಅಪಾರ ಜನಬಲ ಮತ್ತು ಬೆಳೆಸುವ ಯಾವುದಕ್ಕೂ ಅಭಿವೃದ್ಧಿ ಪಡಿಸುವ ಶಕ್ತಿ ಸಾಮರ್ಥ್ಯವೂ ಅದಕ್ಕೆದೆ. ಕ್ಷಿಪ್ರ ಭವಿಷ್ಯದಲ್ಲೆ ಭಾರತವು ಆರ್ಥಿಕ ಪ್ರಗತಿ ಹೊಂದುವುದೆಂಬ ಕುರುಡು ನನಗನುಮಾನವಿಲ್ಲ. ಆದರೆ, ಎಷ್ಟೋ ಜನರು ಸರಕಾರದ ಧೋರಣೆಗಳ ಕಡೆಗಿಟ್ಟಿರುವ ಅಲ್ಪದೃಷ್ಟಿ ವಿಧಾನಗಳು ಮಾತ್ರ ನನ್ನನ್ನು ಸೋಜಿಗಗೊಳಿಸಿವೆ. ಸರಕಾರವೇನೋ ತಪ್ಪುಗಳನ್ನು ಮಾಡಿದ್ದಿದೆ. ಆದರೆ ಯಾವ ಸರಕಾರವಾದರೂ ಜನತೆಯ ಪೂರ್ಣ ಸಹಕಾರ ವಿನಹ ಜಯ ಗಳಿಸುವಂತಿಲ್ಲ. ಕೆಲವರಿಗ ಥವಿಸಿರುವಂತೆ ಪ್ರತಿಯೊಂದು ಕಾರ್ಯವೂ ಸರಕಾರದಿಂದಲೇ ಆಗಬೇಕೆಂದು ಜನತೆಯು ನೆನೆಸಹತ್ತಿದರೆ, ಪ್ರಗತಿಯಾಗಲು ಸಾಧ್ಯವಿಲ್ಲ. ಯುದ್ಧ ಪ್ರತೀಕಾರ ಮತ್ತು ಅಸಜಯದ ಪರಿಣಾಮಗಳಿಗಾಗಿ ಕಷ್ಟನಷ್ಟಗಳನ್ನ ನುಭವಿಸುವ ಜಾಪಾನ್ ಮತ್ತು ಜರ್ಮನಿ ಜನತೆಯ ಕಡೆಗೊಮ್ಮೆ ನೋಡಿರೆಂದು ನಾನು ಕೇಳಿಕೊಳ್ಳುತ್ತೇನೆ ಅದರೂ ಜನತೆಯು ಕಠಿಣ ಪರಿಶ್ರಮದ ಫಲವಾಗಿ ಅವರು ಕ್ಷಿಪ್ರವಾಗಿ ಸುಧಾರಿಸಿದ್ದಾರೆ ಭಾರತದಲ್ಲಾದರೋ ಜನತೆಯು ಪಕ್ಷ ರಾಜಕೀಯದ ಗೊಂದಲಗಳಲ್ಲಿ ಹದ ಮಿತಿಮೀರಿ ಸಿಕ್ಕಿಕೊಂಡಿದ್ದಾರೆ. ಕಾಂಗ್ರೆಸಿನಲ್ಲೂ ಕೂಡಾ ವಿವಿಧ ಪಂಗಡಗಳಾಗಿವೆ. ಪರಸ್ಪರ ದೋಷಾರೋಪಣೆಗಳಲ್ಲೇ ಬಹಳ ಶಕ್ತಿವ್ಯಯಗೊಂಡು ಯಾರಿಗೂ ಪ್ರಯೋಜನ ಕೊಡದ ರೀತಿಯಿಂದ ಹರಿಹಂಚಾಗಿ ಹೋಗಿದೆ. ಭಾರತವು ಆರ್ಥಿಕ ಪ್ರಗತಿ ಹೊಂದಬೇಕೋ—ಹಾಗಾದರಿಲ್ಲಿ ಅಂತರಿಕ ಶಾಂತಿ ನೆಲೆ ನಿಲ್ಲಬೇಕು. ಆದ್ದರಿಂದ ಸರ್ವಶಕ್ತಿಯಿಂದ ಶಾಂತಿರಕ್ಷಣೆ ಮಾಡಬೇಕಾದುದು ಜನತೆಯ ಆದ್ಯ ಕರ್ತವ್ಯ. ಹಿಂಸಾತ್ಮಕ ಕ್ರಾಂತಿಯಲ್ಲಿ ವಿಶ್ವಾಸವಿರುವವರೆಲ್ಲವೂ ಪಂಗಡಗಳು ಸರಕಾರದ ಮೇಲೆ ಒತ್ತಡ ಹಾಕಲು ಸ್ಪರ್ಧಿಸಿವೆ. ಇಂತಹ ಪಂಗಡಗಳನ್ನು ಕೇವಲ ಪೋಲೀಸಂದರೇ ಅಲ್ಲ- ಜನತೆಯ ಬೆಂಬಲದಿಂದ ದಮನಿಸಿಡಬೇಕಾಗಿದೆ ಮಹಾತ್ಮಾ ಗಾಂಧಿಯವರು ಕಲಿಸಿದ್ದ ಅಹಿಂಸಾ ವಾತಾವರಣವನ್ನು ಆಖಿಲ ರಾಷ್ಟ್ರದಲ್ಲಿ ನಿರ್ಮಿಸಬೇಕಾಗಿದೆ. 1951ರ ನಂತರ ಯಾವ ಆಹಾರ ಧಾನ್ಯಗಳನ್ನೂ ಹೊರಗಿನಿಂದಾಮದು ಮಾಡಿಸಿಕೊಳ್ಳಬಾರದೆಂಬ ನಿರ್ಧಾರಕ್ಕೆ ಸರ

(3ನೇ ಪುಟದಿಂದ ಮುಂದುವರಿದುದು)

ಅಂತೆಯೇ ಬೇಂಕುಗಳಲ್ಲಿ ಮತ್ತಿತರ ವಹಿವಾಟುಗಳಲ್ಲಿ ನಿಶ್ಚಿತಾವಧಿಗಳಿಗೆ ಹಣವಿಟ್ಟವರ ಮತ್ತು ಇಡುವವರ ಸಂಖ್ಯೆಯೇನೂ ವ್ಯಾಂತ್ಯದಲ್ಲಿ ಕಡಿಮೆಯಿಲ್ಲ; ಆ ಹಣಗಳ ವೊತ್ತವೂ ಬಹಳ ದೊಡ್ಡದಿರಬಹುದು. ಭದ್ರತಾ ನೆಲೆಯಾಗಿ ತಾನೇ ನಿಂತು ಸರಕಾರವು ಅಂತಹ ನಿಧಿಗಳನ್ನು ಸಂಗ್ರಹಿಸಿಕೊಂಡರೆ ಸಂಬಂಧಪಟ್ಟವರ ಉಳಿತಾಯಾಶದೊಡನೆ ಮಾತ್ರ ವ್ಯವಹರಿಸಿದಂತಾಗುವುದು ಹೊರತು ಆವರ ನಿತ್ಯ ಜೀವನರಂಗದಲ್ಲಿ ಕಾಲುಚಾಚಿದಂತಾಗದು. ಇಂತಹ ಧನಿಕ ವರ್ಗದಲ್ಲಿ ಒಂದು ಸಂದೇಹವು ಸಹಜವಾಗಿ ಮೂಡಬಹುದು:— ಮದ್ರಾಸ್ ಸರಕಾರವು ಜಮೀನ್ದಾರಿಗಳನ್ನು ಈಗ ತಾನೇ ಬರ್ಖಾಸ್ತುಪಡಿಸಿಕೊಂಡು ಅವುಗಳ ಪ್ರತಿಫಲ ಹಣವನ್ನು ಕಂತು ಪ್ರಕಾರ ಸಲಾಯಿಸುವ ವ್ಯವಸ್ಥೆ ಮಾಡಿಕೊಂಡಿದೆ. ಇನ್ನು ಆರೇಳು ವರುಷಗಳಿಗೆ ಮಿಕ್ಕಿಯೂ ಆ ಕಂತುಗಳುಳಿಯುವವು. ಈ ನಡುವೆ ಅದೇ ರಾಯಿದೆಯೊಳಗೆ ಬೀಳುವ ಸಾಲಗಳನ್ನು ತಮ್ಮಿಂದಲೂ ಎತ್ತಿಕೊಂಡರೆ, ಅವುಗಳನ್ನೂ ಇವುಗಳನ್ನೂ ಏಕ ಕಾಲದಲ್ಲಿ ಸಲಾಯಿಸುವಷ್ಟು ಇನ್ನು ಐದೇಳು ವರುಷಗಳಲ್ಲಿ ಸರಕಾರದ ವಾರ್ಷಿಕೋತ್ಪನ್ನ ಹೆಚ್ಚುವಂತಿದೆಯೇ, ಎಂದವರು ಯೋಚನೆಗಿಡಾಗಬಹುದು. ಅದಕ್ಕೆ ಸಮಾಧಾನ ಕೊಡುವ ಜವಾಬ್ದಾರಿಯು ಸರಕಾರದ್ದಿದೆ. ಒಂದೊನ್ಮೆಗೆ ಅಂತಹ ಮಾರಾಪಾಯ ಸಂಭವವು ತಪ್ಪಿ ಹೋದರೆ ಆಥವಾ ಸಂಕೋಚಗೊಂಡರೆ ವ್ಯಾಂತ್ಯದ ಸಾಮಾನ್ಯ ಜನಜೀವನದ ಲಾವಾ ಕ್ಷೋಭೆಯೂ ಏಳುವಂತಿಲ್ಲ. ಆದರೆ ಈಗಿನ ಯೋಜನೆಯಂತೆ ಮಧ್ಯಮ ಮತ್ತು ಒಡ ವರ್ಗದ ಜನತೆಯಿಂದ ಕಡ್ಡಾಯವಾದ ಸಾಲವೆತ್ತುವಾಗಲೂ ಹಾಗಾಗಾದರೆ-ಮುಂದಿದರ ಮಾರಾಪಾಯತೀವ್ರತೆಗಿನಾದರೂ ಅಕಂಕಗಳೊಂದಿದಿರೆ ಜಗಂತೂ ಎಲ್ಲರ ಬೊಬ್ಬೆ! ಆದ್ದರಿಂದ ಸರಕಾರವು ಆರ್ಥ ವಂತರಿಗೆಲ್ಲಾ ಮುಂದಿಟ್ಟ ಈ ಆಲೋಚನೆಯನ್ನೇ ಬಿಟ್ಟು, ಶ್ರೀಮಂತ ವರ್ಗದವರ ಮಟ್ಟಿಗೆ ಮಾತ್ರವೇ ಅದನ್ನು ಜಾರಿಗೆ ತರುವ ಹೊಸ ವಿಧಾನವನ್ನು ಕೈಕೊಳ್ಳಲಿ, ಎಂದು ಅಗ್ರಹಪೂರ್ವಕ ವಿಜ್ಞಾಪನೆ.

THE
PANGAL NAYAK BANK, LTD.,
Head Office: UDIPI.
SAVE FOR THE FUTURE.
SEASON DEPOSITS terminable on or before 30—6—1950 are accepted from 1—10—1949 at the following rates:
For 3, 4 or 5 months at 3 % p. a.
For 6, 7 or 8 months at 3½% p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices.

ಶಾಂತಿನಿಕೇತನದ ಶಾಂತಿವಾದೀ ಕೂಟ.

ಕಾರವು ಕಟ್ಟುಬಿದ್ದಿದೆ. ಆಹಾರಾಮದನ್ನು ಜವಲಂಬಿಸಿರುವ ವರೆಗೆ ಭಾರತವು ನಿಜಕ್ಕೂ ಪರದೇಶಗಳ ಒತ್ತಡದಿಂದ ಬಿಡುಗಡೆ ಹೊಂದುವಂತಿಲ್ಲ. 1951ರ ನಂತರವೂ ದೇಶದಲ್ಲಿ ಆಹಾರಾಭಾವವುಳಿದುಕೊಂಡರೆ, ಅದನ್ನು ಜನತೆಯೇ ಸಹಿಸಿಕೊಳ್ಳಬೇಕಾಗುತ್ತದಲ್ಲದೆ ಬೇರೆ ಗತಿಯಿಲ್ಲ. ಆಹಾರ ಕ್ಷೇತ್ರದಲ್ಲಿ ಭಾರತವು ಇಷ್ಟರಲ್ಲೇ ಸುಗಮನೆಲೆಗೆ ಬಂದಿದೆಯೆಂದು ನಾನು ಹೇಳಲಾರೆನಾದರೂ, ರಾಷ್ಟ್ರವನ್ನು ಆಹಾರ ಸ್ವಾವಲಂಬಿಗೊಳಿಸಲು ನಡೆದಿರುವ ಕಾರ್ಯಗಳಿಗಾಗಿ ಸಂತೋಷಿಸುತ್ತೇನೆ. ಅಮೆರಿಕಾ ಪ್ರವಾಸದಲ್ಲಿದ್ದಾಗ ನನಗೆ, ಭಾರತವನ್ನು ಇದಿರಿಸಿರುವ ಸಮಸ್ಯೆಗಳನ್ನು ಭಿನ್ನದೃಷ್ಟಿಯಿಂದ ಹಾಗೂ ವಿಶಾಲ ನೋಟದಿಂದ ನೋಡುವ ಸಂದರ್ಭವೊದಗಿದ್ದಿತು. ಮಾರ್ಪಟ್ಟಿತ ಜಗತ್ತಿನಲ್ಲಿ ಭಾರತವು ಪೂರ್ಣ ಸ್ಥಾನಮಾನಗಳೊಡನೆ ರಾಜಿಸುವ ಪ್ರಶ್ನೆಯನ್ನು ನಾನಲ್ಲಿಂದ ಈಕ್ಷಿಸಿದೆ. ರಾಷ್ಟ್ರಗಳ ಎರಡು ಖಂಡಗಳಲ್ಲಿ ಪೈಕಿ ಭಾರತವು ಯಾವ ಖಂಡಕ್ಕೂ ಸೇರಿಕೊಳ್ಳುವಂತಿಲ್ಲವೆಂದು ನಾನು ಅಮೆರಿಕನ್ ಜನತೆಗೆ ತಿಳಿಸಿದ. ಇನ್ನೊಂದು ಯುದ್ಧವನ್ನು ತಪ್ಪಿಸಲು ಭಾರತವು ತನಗೆ ಸಾಧ್ಯವಿರುವ ಎಲ್ಲಾ ವಿಧಾನಗಳಿಂದಲೂ ನೋಡುವುದು ಯಾಕೆಂದರೆ ಒಂದು ಯುದ್ಧವು ನಗರಗಳನ್ನು ಮತ್ತು ಜನರನ್ನಷ್ಟೇ ಅಲ್ಲ-ಕಳದ 1000 ವರುಷಗಳಿಂದ ನಿರ್ಮಾಣ ಹೊಂದಿರುವ ಮಾನವೀಯ ಸಂಸ್ಕೃತಿಯ ಅಮೂಲ್ಯತೆಗಳನ್ನೂ ನಾಶಮಾಡುವುದು. ಭಾರತವು ಇನ್ನೊಂದು ರಾಷ್ಟ್ರದ ಸ್ವಂತ ವಿಷಯಗಳೊಳಗೆ ತಲೆಹೊಗಿಸುವಂತೆಯೂ ಇಲ್ಲ; ತನ್ನ ಸ್ವವಿಷಯಗಳ ಕಡೆಗೆ ಇನ್ನೊಂದು ರಾಷ್ಟ್ರವನ್ನು ತಲೆಹಾಕಲು ಬಿಡುವಂತೆಯೂ ಇಲ್ಲ. ಕೆಲವೇ ವರುಷಗಳ ಹಿಂದೆ, ಭಾರತವು ಅಸ್ವಾತಂತ್ರ್ಯವಿದ್ದಾಗಲೇ ಜನತೋದ್ಧಾರಕ್ಕಾಗಿ ಗಾಂಧಿಜೀ ಮುಂದಿಟ್ಟಿದ್ದ ತತ್ವಗಳನ್ನು ಜನರು ಮರೆಯಬಾರದ. ಪರದೇಶಗಳ ಜನರು ಎಲ್ಲಾ ವಿಷಯಗಳಲ್ಲೂ ಗಾಂಧಿಜೀಯ ವಿಧಾನಗಳನ್ನೊಪ್ಪದಿದ್ದರೂ, ಅವರೊಬ್ಬ ಮಹಾನಾಯಕನೆಂಬುದನ್ನು ಪ್ರತಿಯೊಬ್ಬನೂ ಒಪ್ಪುತ್ತಾರೆ. ಭಾರತದಲ್ಲಿ ಜನರು ಗಾಂಧಿಜೀಯನ್ನು ಗೌರವಿಸುತ್ತಾರಾದರೂ ವ್ಯವಹಾರದಲ್ಲಿ ಅವರನ್ನು ಸಂಪೂರ್ಣವಾಗಿ ಅನುಸರಿಸುತ್ತಿಲ್ಲ. ಜನರು ಮಹಾತ್ಮಾಜೀ ನಿರ್ದೇಶಿಸಿದ್ದ ಹಾದಿಗಳನ್ನು ಬಿಟ್ಟು, ಸಣ್ಣ ಪುಟ್ಟ ವಿಷಯಗಳಿಗಾಗಿ ಸರ್ಕಾರ ಜಗಳಾಡಿಕೊಳ್ಳುತ್ತಿರುವುದನ್ನು ಕಾಣುವಾಗ ನನಗೆ ವೇದನೆಯಾಗುತ್ತಿದೆ ಇನ್ನು ಏಳು ವಾರಗಳೊಳಗೆ ಸ್ಥಾಪನೆಗೊಳ್ಳಲಿರುವ ನವಿನ ಜನತಾ ರಾಜ್ಯಭಾರ ಶೈಹರನ್ನಿಸುವಂತೆ ಅಲ್ಪಮತ್ತಿಯ ಒಳ ಜಗಳಗಳನ್ನು ಬದಿಗೊತ್ತಿ, ಭಾರತದ ಉತ್ಪನ್ನಾಧಿಕ್ಯಕ್ಕಾಗಿ ಕರಿಣ ಶ್ರಮವಹಿಸಿ ದುಡಿಯೋಣ.ಮೂಲತಃ ಭಾರತದ ಆರ್ಥಿಕ ಸ್ಥಿತಿಯು ಸುಭದ್ರವಿದೆ..ಅದರ ಅಭಿವೃದ್ಧಿ ಮತ್ತು ಸಮಸ್ಯಾ ನಿವಾರಣೆಗಾಗಿ ಈಗಬೇಕಾಗಿರುವುದೆಂದರೆ ವಿಶೇಷ ದುಡಿಮೆ ಮಾತ್ರ. ಸುಂಕುಚಿತ ಸ್ವಾರ್ಥಗಳ ಸಾಧನೆಯಲ್ಲೇ ಈಗ ಕಳೆದು ಹೋಗಿರುವ ಅ ಸ್ಫೂರ್ತಿಯನ್ನು ಮರು ಸಂಪಾದಿಸಿಕೊಂಡು, ಜನತೆ ಮತ್ತು ಸರಕಾರವು ಪರಸ್ಪರ ಸಹಕರಿಸಿಕೊಂಡು ಬಡತನದೊಡನೆ ಹೋರಾಡುವ ಮೂಲಕ ರಾಷ್ಟ್ರದ ಐಶ್ವರ್ಯಾಭಿವೃದ್ಧಿ ಪಡಿಸಬೇಕಾಗಿದೆ. ಇನ್ನೊಂದು ಏಳೇ ವಾರಗಳಲ್ಲಿ ಭಾರತವು ರಿಪಬ್ಲಿಕ್ ಆಗುವುದು. ತಮ್ಮ ಚರಿತ್ರೆಯಲ್ಲೊಂದು ಹೊಸ ಅಧ್ಯಾಯವನ್ನು ಬರೆಯಲು ಈಗ ಉಳಿದಿರುವ ಅವಧಿಯೊಳಗೆ ತಯಾರಾಗಿ ನಿಲ್ಲುವುದು ಜನತೆಯನ್ನೇ ಹೊಂದಿಕೊಂಡಿದೆ. ಜನತೆಯ ಅಭಿವೃದ್ಧಿಗಾಗಿ ಸರಕಾರದ ಮುಂದೆ ಹಲವು ಯೋಜನೆಗಳೇನೋ ಇವೆ. ಆದರೆ ಸದ್ಯ ಸ್ಥಿತಿಯಲ್ಲಿ ಅವೆಲ್ಲವನ್ನೂ ಜಾರಿಗೆ ತರುವುದು ಅಸಾಧ್ಯ. ಅವುಗಳೊಳಗಿನ ತಾರತಮ್ಯ ನೋಡಿ ಹಿಂದುಮುಂದಿನ ಸ್ಥಾನ ಕೊಡಬೇಕಾದುದು ಅಗತ್ಯ. ಕೇವಲ ಶರಾವುಗಳನ್ನು ಪಾಸು ಮಾಡಿಕೊಂಡ ಮಾತ್ರಕ್ಕೆ ರಾಷ್ಟ್ರದ ಸಂಪತ್ತು ಬೆಳೆಯಲಾಗದು. ಕರಿಣವಾದ ಹಾಗೂ ದೃಢವಾದ ಕೆಲಸದ ಮೂಲಕ ರಾಷ್ಟ್ರಸಂಪತ್ತು ಅಭಿವೃದ್ಧಿಗೊಳ್ಳಬೇಕ "

ಶಾಂತಿವಾದಿಗಳ ಕೂಟ

ಗಾಂಧಿಜೀಯ ತತ್ವಗಳಾದ ಸತ್ಯ, ಅಹಿಂಸೆ, ಜಾತಿಮತ ಸಮಾನತೆ ಮತ್ತು ಸ್ವಯಂಪ್ರೇರಿತ ಆರ್ಥಿಕ ಸಹಕಾರಗಳ ಮೂಲಕ ಸುದೃಢ ಲೋಕಶಾಂತಿ ಸ್ಥಾಪಿಸುವ ವಿಶ್ವಾಸಿಗಳ ಸಮ್ಮೇಳನವು ರವೀಂದ್ರನಾಥ ಠಾಗೋರರ ಶಾಂತಿನಿಕೇತನದಲ್ಲಿ ಇದೇ ತಿಂಗಳ ತಾ. 1ರಿಂದಾರಂಭಿಸಿ ತಾ. 8ರ ವರೆಗೆ ನಡೆದಿದೆ. 31 ರಾಷ್ಟ್ರಗಳ 83 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಜಾಗತಿಕ ಶಾಂತಿವಾದಿಗಳ ಈ ಸಮ್ಮೇಳನವೇಬುದು ಕೆಲವು ವ್ಯಾಮುಖ್ಯ ಶಾಂತಿಪ್ರೇಮಿಗಳ ಹಲವು ವರುಷಗಳ ಪ್ರಯತ್ನದ ಫಲ. 1945ರಲ್ಲೇ ಇಂತಹ ಕೂಟ ಸೂಚನೆ ಮುಂದೆ ಬಂದಿದ್ದಾಗ ಗಾಂಧಿಜೀ ಅದಕ್ಕೆ ತನ್ನ ಅನುಮೋದನೆ ಕೊಟ್ಟಿದ್ದರಾದರೂ "ಭಾರತದ ಶಾಂತಿಯು ವಿದೇಶೀ ಬೆಯನೆಟ್‌ಗಳ ಮೇಲೆ ನಿಂತಿದೆ" ಯಾದ್ದರಿಂದ ಶಾಂತಿವಾದಿಗಳ ಸಮ್ಮೇಳನವನ್ನು ಕರೆಯಲು ಆ ಕಾಲದಲ್ಲಿ ಸಿರಾಕರಿಸಿದ್ದರು. ಶಾಂತಿನಿಕೇತನದ ಸಮ್ಮೇಳನವನ್ನು ಉದ್ಘಾಟಿಸಿದ ಪಶ್ಚಿಮ ಬಂಗಾಳದ ಗವರ್ನರ್ ಡಾ.ಕೆ.ಎನ್. ಕಟ್ಜುಗಳು ಬಂಗಾಳ ಸರಕಾರ ಮತ್ತು ಜನತೆಯ ಪರವಾಗಿ ಪ್ರತಿನಿಧಿಗಳನ್ನು ಸ್ವಾಗತಿಸಿದ್ದರು. ಶಾಂತಿನಿಕೇತನದ ಪರವಾಗಿ ಶ್ರೀ ರತೀಂದ್ರನಾಥ ಠಾಗೋರರು ಸ್ವಾಗತ ಭಾಷಣವಿತ್ತಿದ್ದರು. ಸಮ್ಮೇಳನದ ಏಶೋಜಿತಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರಿಗೆ ಕಾಹಿಲೇ ನಿಮಿತ್ತ ದಿಲ್ಲಿ ಬಿಡಲಾಗಿರಲಿಲ್ಲ ದಶಂಬರ್ ತಾ. 5ರಲ್ಲಿ ತನ್ನ 65ನೇ ಜನ್ಮ ದಿನದ ಅಭಿವಂದನೆಗಳನ್ನು ಡಾ ಪ್ರಸಾದರು ನವದಿಲ್ಲಿಯ ಮನೆಯಲ್ಲೇ ಪಡೆಯಬೇಕಾಯಿತು. ಅವರ ಅನಿವಾರ್ಯ ಗೈರುಹಾಜರಿಯ ದೆಸೆಯಿಂದ ಭಾರತ ಸರಕಾರದ ಆರೋಗ್ಯ ಖಾತೆಯ ಮಂತ್ರಿ ಶ್ರೀಮತಿ ಅಮೃತಕೌರರು ಶಾಂತಿ ವಾದಿಗಳ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಸಮ್ಮೇಳನಕ್ಕೆ ದೇಶ, ವಿದೇಶಗಳ ಹಲವು ಪ್ರಮುಖರು ಮತ್ತು ಸಂಘ, ಸಂಸ್ಥೆಗಳಿಂದ ಶುಭಸಂದೇಶಗಳು ಬಂದಿದ್ದುವು. ಗವರ್ನರ್ ಜನರಲ್ ರಾಜಾಜಿ ತನ್ನ ಸಂದೇಶದಲ್ಲಿಂದಿದ್ದರು:- "ಯುದ್ಧವು ಮತ್ತು ಯುದ್ಧ ಕ್ಕಿಂತಲೂ ಹಾನಿಕರವಾದ ಯುದ್ಧಭೀತಿಯು ಮಾನವೀಯ ವ್ಯಗತಿಯನ್ನು ತಡೆಗಟ್ಟಿ ನಿಲ್ಲಿಸಿವೆ. ಭಾರತವು ತನ್ನ ಶಕ್ತ್ಯಾನುಸಾರ ಸೇನೆ ಮತ್ತಿತರ ಸೇನಾ ಹಂಚಿಕೆಗಳನ್ನು ಇಟ್ಟುಕೊಂಡಿದೆ. ಆದ್ದರಿಂದ ಆದು, ತಾನು ಶಾಂತಿವಾದಕ್ಕೇನೇ ಪೂರ್ಣ ಕಟ್ಟುಬಿದ್ದ ರಾಷ್ಟ್ರವೆಂದರದು ಕಪಟವಾದೀತು. ಹೀಗಿದ್ದರೂ ಭಾರತದ ಒಳ ಸಂಸ್ಥಾ ಮತ್ತು ಅದರ ಪುರಾತನ ಪರಾಗೂ ಸ್ಪಚಲಿತ ತತ್ವಗಳು ಶಾಂತಿಪ್ರೇಮದಿಂದಲೇ ಪ್ರೇರಣೆಗೊಂಡಿವೆ. ಮಹಿಂತ್ಮಾಜಿಯವರ ನಾಯಕತ್ವವನ್ನೆ, ಲೋಕದ ಎಲ್ಲಾ ಶಾಂತಿಪ್ರೇಮಿಗಳಿಗೆ ಮತ್ತು ಯುದ್ಧ ವಿರೋಧಿಗಳಿಗೆ ಭಾರತವು ಒಂದು ಯಾತ್ರಾ ಸ್ಥಳವಾಗುವಂತೆ ಮಾಡಿತು. ಶಾಂತಿನಿಕೇತನದ ಅಂತರ್ರಾಷ್ಟ್ರೀಯ ಗುಂಪಿನ ನ್ರಯತ್ನಗಳು ಜಯಶೀಲವಾಗುವಂತೆ ಸರ್ವಶಕ್ತನ ಆಶೀರ್ವಾದಗಳಿರಲಿ".

ರಾಜಕುಮಾರಿ ಅಮೃತಕೌರರು ತನ್ನ ಅಧ್ಯಕ್ಷ ಭಾಷಣದಲ್ಲಿ "ನಮ್ಮ ಸಮಸ್ಯೆಗಳ ನಿವಾರಣೆಯು ಶಸ್ತ್ರ ವಿನಹ ಸಾಧ್ಯವಿಲ್ಲವೆಂಬ ನಂಬಿಕೆಯು ಈಗ ಕೂಡಾ ಅತ್ಯಧಿಕ ಸಂಖ್ಯಾಕಲ್ಲಿದೆ" ಎನ್ನುತ್ತಾ "ಯುದ್ಧಾವಧಿಯಲ್ಲಿಯೂ, ಆದರ ಹಿಂದೆ ಮುಂದೆಯೂ ಎತ್ತಿದ್ದ ಬಿರುಗಾಳಿಯು ಎಲ್ಲವನ್ನೂ ನೆಲಸಮಮಾಡುತ್ತಿದ್ದಾಗ ಒಂದಿಷ್ಟು ಅಲುಗದೆ, ಜಪಾನಿಗೊಳ್ಳದೆ ನೇರಾಗಿ ನಿಂತಿದ್ದ ಏಕಮಾತ್ರ ದೀಪಸ್ತಂಭವಾದ ಗಾಂಧಿಜೀಯ ತತ್ವ ಮತ್ತು ವಿಧಾನಗಳನ್ನು ವಿವರಿಸಿದ್ದರು. ಗದ್ದಲರಹಿತ ಶಾಂತನಿರ್ಧಾರಗಳಿಗೆ ಬರಲಾಗುವಂತೆ ಶಾಂತಿನಿಕೇತನದ ಶಾಂತಿವಾದೀ ಸಮ್ಮೇಳನದ ಪರ್ಯಾಲೋಚನೆಗಳು ಗಾಸ್ವವಾಗಿ ನಡೆದಿವೆ.

ಇತರ ಘಟನೆಗಳು

ಇದೇ ದಶಂಬರ್ ತಾ. 1 ರಿಂದ ಹೈದರಾಬಾದಿನ ಆಡಳಿತೆಯು ಮೇಜರ್ ಜನರಲ್ ಚೌಧರಿಯವರ ಕೈಯಿಂದ ಶ್ರೀ. ವೆಲ್ಲೋಡಿಯವರ ಕೈಗೆ ಬಂದಿದೆ. ಸೇನಾ ಸರಕಾರದ ಅವಧಿ ಮುಗಿದು ನಾಗರಿಕಾಧಿಕಾರ ಸ್ಥಾಪನೆಯಾಗಿದೆ. ಶ್ರೀ. ವೆಲ್ಲೋಡಿಯವರು ಜನರಲ್ ಚೌಧರಿಯವರ ಆಡಳಿತೆಯಲ್ಲಿರುವ ಸಿವಿಲ್ ಜಾತಿಯ ಪಿರಸ್ಸಾಗಿ ಅಧಿಕಾರ ನಿರ್ವಹಿಸಿದವರು. ಅವರೀಗ ಜನ ಮುಂದಾಳುಗಳ ಮಂತ್ರಿಮಂಡಲವೊಂದನ್ನು ನೇಮಿಸಿಕೊಂಡಿದ್ದಾರೆ. ಅಗತ್ಯವಿಲ್ಲದೆ ಹೊಂದೇ ಒಂದು ದಿನವಾದರೂ ಹೈದರಾಬಾದಿನಲ್ಲಿ ಮಿಲಿಟರಿ ಸರಕಾರವನ್ನು ಉಳಿಯಗೊಡಿಸುವದಿಲ್ಲವೆಂದು ಭಾರತ ಸರಕಾರವು ಆದಿಯಲ್ಲೇ ಏತ್ಪಾಸನೆ ಕೊಟ್ಟಿದ್ದಂತೆ ಈಗ ತನ್ನ ಸೇನಾ ಸರಕಾರವನ್ನು ರದ್ದು ಪಡಿಸಿಕೊಂಡಿದೆ. ಅದು ಪ್ರಜಾಪ್ರತಿನಿಧಿ ಸರಕಾರಕ್ಕೆ ತನ್ನ ಸ್ಥಾನ ಬಿಟ್ಟುಕೊಡ ಬೇಕಾಗಿದ್ದಿತು. ಆದರೆ ಅಂತಹ ಸುಸ್ಥಿತಿಗೆ ಬರಲು ಹೈದರಾಬಾದಿನ ಪುಜೆಗಳಿಂದ -ಮುಮ್ಮಾವಾಗಿ ಹೈದರಾಬಾದ್ ಕಾಂಗ್ರೆಸಿಗರಿಂದ-ಇನ್ನೂ ಆಗಿಲ್ಲ. ಆದ್ದರಿಂದ ಅಲ್ಲೀಗ ಸೇನಾ ಸರಕಾರ ಮುಂದುವರಿದಿದೆ.

(2ನೇ ಪುಟ ನೋಡಿರಿ)

THE VIJAYA BANK, Ltd.,

H. O, MANGALORE.

A. With a net work of Branches throughout the District and one each at Mercara and Bombay.

B With a standing of 18 years service.

C. With total resources of over 40 Lakhs.

Fixed deposits are now accepted at the following rates of interest.

3 months 3% P A 6 months .. 3½% P A.

12 months .... 3½% P A. 24 months .. 4% P. A.

All kinds of banking business transacted.

Sd/- B. H. Hegde,

Advocate & President District Board South Kanara.

(CHAIRMAN OF THE BOARD OF DIRECTORS)

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No 396/1949

ದಿ ಕೆನರಾ ಯಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ-ಯ ಪ್ರ ಕಡೆಯಿಂದ ಜನರಲ್ ಮೆನೇಜರ್ ಟಿ. ಅನಂತ ಪೈ —ವಾದಿ.

ಮತ್ತು

ಗುಜ್ಜಾಡಿ ನರಸಿಂಹನಾಯಕ-ವೈಕುಂಠ ನಾಯಕರ ಮಗ-ಉಡ್ಪಿ ಕಸಬಾ —ಪ್ರತಿವಾದಿ.

ಸದರಿ ಪ್ರತಿವಾದೀಗೆ

ಪ್ರತಿವಾದಿಯು ವಾದಿ ಬೇಂಕಿಗೆ ತಾರೀಕು 17-10-47ರಲ್ಲಿ ರುಪಾಯಿ 500/-ಕ್ಕೆ ಬರ ಕೊಟ್ಟ ಡಿಮಾಂಡ್ ನೋಟು ಪ್ರಕಾರ ವಾದಿ ಬೇಂಕಿನಲ್ಲಿ ತೆರದ ಖಾತರ್‌ದ್ವಾಫ್ತ್ ಎಕೌಂಟಿನಲ್ಲಿ ಪ್ರತಿವಾದಿಯು ಬಾಕಿ ಮಾಡಿಕೊಂಡ ಬಾಬ್ತು ಪ್ರತಿವಾದಿಯಿಂದ ವಾದಿಗೆ ಬಹಾ ಲ್ಲಲು ಬಾಕಿ ವ ಬಡ್ಡಿ ಕೂಡಾ ರೂಪ್ಯಾ 547-12-1 ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 19-12-1949ಕ್ಕೆ ಪ್ರಥಮ ತನ್ನ ಬಗ್ಗೆ ಯಿದೋನಾಗಿಯದೆ. ಆ ದಿವ್ಸ ಪ್ರತಿವಾದಿಯು ಸ್ವತಹಾ ಯಾ ವಕೀಲರ ಮುಖಾಂತ್ರ ಸದರಿ ಕೋರ್ಟು ಮುಂದೆ ಹಾಜರಾಗದಿದ್ದಲ್ಲಿ ಆತನ ಗೈರುಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವ ದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸೋಣಾಗಿಯದೆ.

M Damodar Kamath,
Advocate for Plaintiff.

ಉಡುಪಿ
ತಾರೀಕು 5-12-1949

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid-Up	Rs.	19,99,800.
Reserves	Rs.	8,91,000.

Banking business of every description transacted

ಪ್ರಗುರುವಾರ ಉಡುಪಿ ೯-೧೨-೧೯೪೪

ಈ ಅವಸರವೇಕೆ?

ಕರ್ನಾಟಕ ಪ್ರಾಂತ್ಯರಚನೆಯ ಕಡೆಗೆ ಕೇಂದ್ರ ಕಾಂಗ್ರೆಸ್ ಸಮಿತಿ ನಿಹಾಗೂ ಸರಕಾರವು ವಹಿಸಿರುವ ವರ್ತನೆಯು ಅತೃಪ್ತಿಕರವಾದ್ದರಿಂದ ಕೇಂದ್ರ ಮತ್ತು ಪ್ರಾಂತಿಕ ಶಾಸನಸಭೆಗಳಲ್ಲಿರುವ ಕನ್ನಡಿಗ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆಕೊಡಬೇಕಾದ ಕಾಲಬಂದಿದೆ, ಎಂದು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ಣಯಿಸಿತು-ಬೆನ್ನಲ್ಲೇ ಪಾರ್ಲಿಮೆಂಟಿನ ಮತ್ತು ಬೊಂಬಾಯಿ, ಮದ್ರಾಸ್ ನ್ಯಾಯ ವಿಧಾಯಕ ಸಭೆಗಳ 12 ಮಂದಿ ಸದಸ್ಯರ ರಾಜೀನಾಮೆ ಕ. ಪ್ರಾಂ. ಕಾಂ. ಅಧ್ಯಕ್ಷರ ಕೈಸೇರಿತು. ಈ ರಾಜೀನಾಮೆಗಳ ಅಂಗೀಕಾರ ಸಂಬಂಧದ ಕ್ರಮಬದ್ಧ ಕೆಲಸಗಳವೆಯಾದರೂ ಇಲ್ಲಿ ಮುಖ್ಯತಃ ಗಣ್ಯವಾದುದು ಸಂಬಂಧಪಟ್ಟ ಸದಸ್ಯರ ಬಯಕೆ ಮತ್ತು [illegible] ಸ್ವಭಾಷಾ ಪ್ರಾಂತ್ಯರಚನೆಯ ಕುರಿತು ಆಗುತ್ತಿರುವ ವಿಳಂಬವು ಕನ್ನಡಿಗರ ಸಹನೆ ತಪ್ಪಿಸಿದೆ—ಬೇಡಿಕೆ, ವಾದಗಳನ್ನು ಮುಂದಿಟ್ಟು ನಿರಾತೆಗೆಂಡ ಅವರು ಈಗ ನಿಷೇಧಕೃತಿಗಿಳಿದಿದ್ದಾರೆ — ಎಂಬುದೇ ಮೂಲಕ ತೋರಿಬಂದಿದೆ. ಕರ್ನಾಟಕ ಪ್ರಾಂತ್ಯರಚನೆಗಾಗಿ ಈ ವರೆಗೆ ನಡೆದಿದ್ದ ಪ್ರಯತ್ನಗಳ ಫಲಿಕ ಇದು ಮೊನೆಯುಳ್ಳದ್ದು ಇಂತಹ ನಿರ್ಧಾರಕ್ಕೆಬರುವ ಮೊದಲು ಕ. ಪ್ರಾಂ. ಕಾಂ. ಕೌನ್ಸಿಲಿನಲ್ಲಿ 10 ತಾಸುಗಳ ವರೆಗೆ ಬಿರುಸಾದ ಚರ್ಚೆ ನಡೆದಿತ್ತೆಂದು ತಿಳಿದುಬಂದಿದೆ; ವಿವರ ಗೊತ್ತಾಗಿಲ್ಲವಾದರೂ ಸಮಿತೀ ಸದಸ್ಯರೊಳಗೆ ಈ ಕುರಿತು ಒಮ್ಮತವಿರಲಿಲ್ಲವೆಂದೂ, ಅಭಿಪ್ರಾಯಗಳ ಅಂತರವು ಪೂರ್ವ-ಪಶ್ಚಿಮ ದಷ್ಟಿದ್ದುದರಿಂದ ಎಳೆದಾಟ ಬಲವಾಗಿತ್ತೆಂದೂ ಊಹಿಸಲಡ್ಡಿಯಿಲ್ಲ. ಕೊನೆಗೆ ರೂಪುಗೊಂಡ ನಿರ್ಣಯವು ಒಂದು ಅಸಹಕಾರವನ್ನು ನಿರ್ದೇಶಿಸುವಂತಹದಾದ್ದರಿಂದ, ಅದರ ಕಾವಿಗೆ ಮಾತಿನ ಬಿಸಿಯೂ ಸೇರಬಾರದೆಂದು, ಸೌಮ್ಯ ಪದಗಳನ್ನೂ ಬಲವಾದ ಕಾರಣಗಳನ್ನೂ ಆದರಲ್ಲಿ ಪೋಣಿಸಲಾಗಿದೆ; ಪಿಶ್ನವನ್ನು ಒರೆಯೊಳಗೆ ತುಂಬಿಸಿಟ್ಟೇ ಎತ್ತಿ ಹಿಡಿಯಲಾಗಿದೆ. ನಿರ್ಣಯದಲ್ಲಿ ನಮೂದಿಸಲ್ಪಟ್ಟಿರುವ ಅಸಡ್ಡೆ, ಅನ್ಯಾಯಗಳಿಗೆ ಕನ್ನಡಿಗರಡಾಡಾಗಿರುವುದು ನಿಜ; ಅವರ ತಾಳ್ಮೆ ಸಾಮಾನ್ಯ ತರಗತಿಯದಿದ್ದರೆ, ಅದು ಕಟ್ಟು ಹೋಗುವಂತಹ ಸನ್ನಿವೇಶಗಳೊದಗಿರುವುದೂ ನಿಜವೇ. ಆದರೆ ಕನ್ನಡಿಗರು ಮತ್ತು ಅವರ ಹೊರಗಿನ ಸಂಬಂಧಗಳ ಮಟ್ಟಿಗೆ ಈ ಮಾತಾದರೆ, ಕನ್ನಡಿಗರೊಳಗಿನ ಸ್ಥಿತಿಗತಿಗಳೇನೂ ಇದಕ್ಕಿಂತ ಉತ್ತಮವಾಗಿಲ್ಲ. ಅನ್ಯರ ವರ್ತನೆಗಳಿಗಾಗಿ ಈ ರೀತಿ ಕರಳುವ ಕನ್ನಡಿಗರು ತಮ್ಮಲ್ಲಿ ಕುರಿತೇ ಚಿಂತಿಸಬೇಕಾದ ಅಂಶಗಳು ಉಳಿದಿವೆ; ಅದಕ್ಕಿಂತ ಮುಂದಾಗಿ ಇದನ್ನು ಮಾಡಿಕೊಳ್ಳುತಿದ್ದರೆ, ಪರಿಸ್ಥಿತಿ ಹೀಗಾಗುತ್ತಿರಲಿಲ್ಲವೇನೋ! ನಮಗಗತ್ಯವಿರುವ ಕೆಲಸ ಮಾಡಲೊಲ್ಲದ ವರೊಡನೆ ನಾವು ಅಸಹಕರಿಸಬಹುದು-ಆದರೆ ಅದಕ್ಕಿಂತ ಮುಂದಾಗಿ ಮತ್ತು ಮಖ್ಯವಾಗಿ ನಾವು ನಮ್ಮೊಳಗೇನೇ ಸಹಕರಿಸಿಕೊಳ್ಳುವ ಅಂಶವಿದೆ. ಈ ಒಳ ಸಹಕಾರ ಸಾಕಷ್ಟು ಬಲಶಾಲಿಯಿದ್ದರೆ ಅದು ಹೊರಗಿನಿಂದಲೂ ಸಹಕಾರವನ್ನೇ ಆಕರ್ಷಿಸೀತು; ಆ ಮೂಲಕ ಕೆಲಸ ಸುಲಭವಾದೀತು. ಆದರೆ ಕನ್ನಡಿಗರ ಇಂದಿನ ನಿರ್ಧಾರವು, ಒಳಗಡೆಯ ಅಸಹಕಾರ ಸ್ವಭಾವಕ್ಕೇನೇ ಒಂದು ಅಕಾರ ಕೊಟ್ಟು ಹೊರ ವ್ಯವಹಾರಕ್ಕೂ ಅದನ್ನು ಚೆಲ್ಲಿದಂತಿದೆ. ಈ ಕಾಲದಲ್ಲಿ, ಮತ್ತೀ ಸಂದರ್ಭದಲ್ಲಿ ಹೀಗಾದುದು ಸರಿಯೆ?

ಭಾಷಾನ್ವಯ ಪ್ರಾಂತ್ಯಗಳ ವಿರ್ಮಾಣದ ಮಟ್ಟಿಗೆ ಕೇಂದ್ರ ನಾಯಕರು ವಹಿಸಿರುವ ಅಸಕ್ತಿ ಸಾಲದು-ಅವರಿದನ್ನೊಂದು ಅನಿವಾರ್ಯ ಆಪತ್ತೆಂದೇ ಗ್ರಹಿಸಿಕೊಂಡು, ಅದರಿಂದಲೇ ತಪ್ಪಿಸಿಕೊಳ್ಳಲಾಗದಿದ್ದರೂ ಅದರ ತಂಟೆ ತಕರಾರುಗಳಿಂದಾದರೂ ತಪ್ಪಿಸಿಕೊಳ್ಳಲು ಹವಣಿಸುತಿದ್ದಾರೆ-ಇದು ತಪ್ಪು ಭಾವನೆಗಳನ್ನಾಧರಿಸಿರುವ ಕರ್ತವ್ಯ ಪರಾಙ್ಮುಖತೆ-ಎಂದು ನಾವು ಹಲವು ಬಾರಿ ಹೇಳಿದ್ದೆವು. ಇಂತಹಪ್ರಮಾದವನ್ನು ಶಾಸನ ಸಭಾ ಸದ.ಸ್ಯರ ರಾಜೀನಾಮೆಗಳು ನಿಜಕ್ಕೂ ತಿದ್ದಬಲ್ಲುವೆಂದಾದರೆ, ಬೇರೆ ಯಾವ ಕಾರಣಕ್ಕಾಗಿಯಾದರೂ ಇಂತಹ ಕೃತ್ಯಗಳಿಗಾಗಿ ಪಶ್ಚತ್ತಾಪಪಡಬೇಕೆಂದಿಲ್ಲ.ಆದರೆ,ಇದೊಂದು ಚಿಕಿತ್ಸೆಯಾಗುವುದಾದರೂ ಹೇಗೆಎಂಬುದೇ ಅರ್ಥವಾಗಲೊಲ್ಲದು. ಭಾಷಾನ್ವಯ ಪ್ರಾಂತ್ಯರಚನಾ ತತ್ವವು ಕಾಂಗ್ರೆಸಿನಿಂದ ಎಂಎೋ ಅಂಗೀಕರಿಸಲ್ಪಟ್ಟಿದ್ದು, ಇಂದಿನ ಸ್ವತಂತ್ರ ಸರಕಾರದಿಂದ ಒಪ್ಪಲ್ಪಟ್ಟು ಸಂದರ್ಭ ಕಾಯುತ್ತಿರುವ ಪ್ರಶ್ನೆ. ಯಾವಾಗ ಮತ್ತು ಹೇಗೆ? ಎಂಬ ಹೊರತು ಬೇರೆ ಅನುಮಾನವೇ ಕರ್ನಾಟಕ ಪ್ರಾಂತ್ಯ ರಚನೆಯ ಮಟ್ಟಿಗಿಲ್ಲ. ಇಂದು ನಡೆದಿರುವ ಎಲ್ಲಾ ವಿವಾದ ವಸ್ತು ಘಟನೆಗಳೂ ಕೇವಲ 'ಯಾವಾಗ ಮತ್ತು ಹೇಗೆ?' ಎಂಬ ಈ ಪ್ರಶ್ನೆಯ ಗಡಿಯೊಳಗಿನವು. ಕೂಡಲೇ ಆಗದಂತೆ ತಡೆಗಟ್ಟಿ ನಿಂತಿರುವ ಅಡ್ಡಿ ಆತಂಕಗಳಿವೆ ಹೊರತು, ಅಧಿಕಾರ ಮತ್ತು ವ್ಯಕ್ತಿಗಳು ಇಲ್ಲುನೇ ಇಲ್ಲ. ನಿಷೇಧ ಸೂಚನೆ. ಅಸಹಕಾರಗಳಂತಹ ಆಯುಧಗಳ ಪ್ರಯೋಗವಾಗಬೇಕಾದುದು ಅಧಿಕಾರದ ಮೇಲೆ ಮತ್ತು ವ್ಯಕ್ತಿಗಳ ಕಡೆಗಲ್ಲದೆ ವಿಷಯಗಳ ಮೇಲಲ್ಲ. ಈ ದೃಷ್ಟಿಯಿಂದ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಲು ಮುಂದಾಗಿರುವ ಕನ್ನಡಿಗ ಸದಸ್ಯರ ವರ್ತನೆಯು ಪುಸಂಗೋಚಿತವಾದುದೆ? ಅಂಥ ಪ್ರಾಂತ್ಯ ನಿರ್ಮಾಣದ ಪೀಠಿಕೆಯಾರಂಭಿಸಿದೆ— ಕರ್ನಾಟಕದ್ದಿಲ್ಲ; ಗತಿ ನಿರ್ಣಯದ ಮಟ್ಟಿಗೆ ಮಿಕ್ಕವರ ಅಭಿಪ್ರಾಯಗಳನ್ನು ಕೇಳಿದ್ದರೂ ಕನ್ನಡಿಗರನ್ನು ಕೇಳಿಲ್ಲ. ಕೇಂದ್ರ ಸರಕಾರವು ಬೇಕೆಂದೇ ಕಾಲಹರಣ ಮಾಡುತ್ತಿದೆ-ಮುಂಕಾದ ಕಾರಣಗಳಿಗಾಗಿ ಕನ್ನಡಿಗರು ಕೆರಳಿ ಮುಷ್ಕರ ಹೂಡುವುದಾದರೂ ಯಾರೊಡನೆ?-ಭಾಷಾವಾರು ಪ್ರಾಂತ್ಯ ರಚನೆಗಾಗಿ ಸಂಬಂಧ ಪಟ್ಟವರು ಮುಂದೆ ಶರ್ತಗಳನ್ನಿಟ್ಟದ್ದೇನೆ;ಆ ಶರ್ತಗಳಂತೆ ವರ್ತಿಸಿದ ಆಂಧ್ರರಿಗೆ ಪ್ರತ್ಯೇಕ ಪ್ರಾಂತ್ಯವೀಯುತ್ತೇನೆ; ಅವುಗಳನ್ನು ಪೂರೈಸಿಕೊಳ್ಳದ ಮಿಕ್ಕವರ ಕುರಿತು ನಾವು ಮಾಡಲಿಕ್ಕೇನಿದೆ?-ಎಂದು ಮೊದಲೇ ಮುಷ್ಕರ ಹಿಡಿದು ಕುಳಿತಂತಿರುವ ಕೇಂದ್ರ ನಾಯಕರೊಡನೆ ತಂನೆ? ಅಂದರಿದು 'ಮುಷ್ಕರಗಾರರಿದಿರಲ್ಲಿ ಮುಷ್ಕರ' ಎನ್ನುವ ಹೊಸ ರೀತಿಯ ಆಂದೋಲನ! ಇಕ್ಕಡೆಯವರೂ,ಸ್ಥಿತಿವಾದ ಕೇಳಿದಂತೆ ಆ ಕಡೆಯವರು ವರ್ತಿಸಿಲ್ಲ ಎಂಬ ಕಾರಣದಿಂದ ದೂರವಾದಲ್ಲಿ ಇಚ್ಛಿತ ಕಾರ್ಯವೂ ಸಹಜವಾಗಿ ದೂರ ಹೋಗಬೇಕೇ ಹೊರತು ಹತ್ತಿರವಾಗುವಂತಿಲ್ಲ. 'ಸ್ವಕರ್ತವ್ಯವನ್ನು ಮಾಡುವವನಿಗೆ ಅನ್ಯರನ್ನು ಬೋಧಿಸುವ ಹಕ್ಕಿಲ್ಲ'ವೆಂಬ ನಿಯಮದ ಮಟ್ಟಿಗೂ ತಮ್ಮನ್ನು ವಿಮರ್ಶಿಸಿಕೊಳ್ಳಬೇಕೆಂದು ಕನ್ನಡಿಗರು ಹೇಳಲಾರದೆಷ್ಟೆ? ಅಂದಮೇಲೆ ಆಂಧ್ರರಂತೆಯೇ ಕನ್ನಡಿಗರೂ ಒಮ್ಮತದಿಂದ, ಅಖಂಡ ಕರ್ನಾಟಕಾಕಾರವೊಂದನ್ನು ಕೇಂದ್ರಾಧಿಕಾರಿಗಳ ಮುಂದೆ ಹಾಜರು ಪಡಿಸಿರುವರೆ? ಮೈಸೂರು ಮತ್ತಿತರ ಕರ್ನಾಟಕ ಭಾಗಗಳ ಏಕೀಕರಣ ವ್ಯವಸ್ಥೆಯಾಗಿರುವುದೆ? ಕರ್ನಾಟಕದ ವಿವಿಧ ಭಾಗಗಳ ಜನತೆಯ ಕಣ್ಣಮುಂದೆ ಭಾವೀ ಅಖಂಡ ಕರ್ನಾಟಕದ ಏಕಮಾತ್ರ ನಕಾಶೆಯೀಗ ಇದೆಯೆ? ಈ ಕೆಲಸಗಳನ್ನು ಕೂಡಾ ಕೇಂದ್ರ ಸರಕಾರವೇ ವಹಿಸಿಕೊಳ್ಳಬೇಕಿದ್ದರಾಗುತ್ತಿತ್ತು—ಹಾಗೆ ಮಾಡಿದಲ್ಲಿ, ಕರ್ನಾಟಕ ಪ್ರಾಂತ್ಯವನ್ನಿಲೇ ಬೇಕಾಗಿದ್ದು, ಕನ್ನಡಿಗರ ಬುದ್ಧಿ ಭಿನ್ನತೆಯಿಂದಾಗಿ ಅದಿನ್ನೂ ಸಾಧ್ಯವಾಗಿಲಲ್ಲವಲ್ಲಾ, ಎಂದು ಸಂತಾಪ ಪಡುತ್ತಿರುವ ಜನತೆಗೆ ನಿಜಕ್ಕೂ ಸಂತೋಷವಾಗುತಿತ್ತು. ಆದರೆ ಭಾಷಾಭಿಮಾನ, ಭಾಷಾನ್ವಯ ಪ್ರಾಂತ್ಯಾತುರಗಳನ್ನೂ ಕೆಲಮಟ್ಟಿಗೆ ಜಾತ್ಯಾಭಿಮಾನಗಳ ಪಂಗ್ತಿಗೇನೇ ಸೇರಿಸಿ, ಸಂದೇಹ ದೃಷ್ಟಿಯಿಂದ ಕಾಣುತ್ತಿರುವ ಕೇಂದ್ರ ನಾಯಕರೂ, ಅಂಥ ಪ್ರಾಂತ್ಯರಚನೆಗಾಗಿ ಯೂ ಸ್ವತಃತಾನೇ ಈ ಕಾರ್ಯನಿರ್ವಹಿಸದಿದ್ದಲ್ಲ; ಕರ್ನಾಟಕಪ್ರಾಂತ್ಯದ ವಷ್ಟಿಗೆ ಅ[illegible]ರು ಮುಂದಾಗಲೇಬೇಕೆಂದು ಹಠ ಹಿಡಿಯುವುದಾದರೂ ಹೇಗೆ? ಒಳಗಡೆ ಇಂತಹ ದೌರ್ಬಲ್ಯಗಳನ್ನು ತುಂಬಿಸಿಟ್ಟುಕೊಂಡು ಹೊರ ಪ್ರದರ್ಶನಕ್ಕೆ ಕೇಂಕಾರವನ್ನೊಡ್ಡಿದರೆ ಸತ್ಪರಿಣಾಮವಾಗುವಂತಿಲ್ಲ ಪ್ರತ್ಯೇಕ ಪ್ರಾಂತ್ಯಹೊಂದಲು ಕನ್ನಡಿಗರಲ್ಲರೂ ಆತುರವೆಷ್ಟು ದೊಡ್ಡದೆಂಬುದನ್ನು ಕೇಂದ್ರ ಸರಕಾರಕ್ಕೂ ಜನತೆಗೂ ಸರಿಯಾಗಿ ಮನದಟ್ಟು ಪಡಿಸುವುದೇ ಕನ್ನಡಿಗ ಸದಸ್ಯ ಸ್ಥಾನತ್ಯಾಗದ ಉದ್ದೇಶವೆನ್ನೋಣವೆ? ಒಂದನೆಯದಾಗಿ ಇಂತಹ ವಿಧಾನದ ಮೂಲಕವೇ ಜನಮತವನ್ನರಿಯುವುದೇ? ಪೂರ್ವ ಪರಕೀಯವಾದ ಸರಕಾರ ಇಂದಿಲ್ಲ; ಎರಡನೆಯದಾಗಿ ಕನ್ನಡಿಗರಲ್ಲಿ ಕಾರ್ಯಾಸಕ್ತಿ ಕಡಿಮೆಯಿದ್ದು, ಆಶೆ ಮಾಬಹಳವಿದೆಯೆಂಬುದು ಯಾವ ವಿಧದಿಂದ ಪ್ರದರ್ಶಿಸಲ್ಪಟ್ಟರೂ ಅದಕ್ಕೆ ಹೆಚ್ಚಿನ ತೌಲ್ಯ ಬರುವಂತಿಲ್ಲ; ಮೂರನೆಯದಾಗಿ ಅಖಿಲ ಕನ್ನಡಿಗರ ಅಭಿಮತ ಪ್ರದರ್ಶನಕ್ಕೆಂದು, ಪಾರ್ಲಿಮೆಂಟ್ ಮತ್ತು ಬೊಂಬಾಯಿ, ಮದ್ರಾಸ್ ಶಾಸನ ಸಭೆಗಳ ಒಟ್ಟು ಕನ್ನಡಿಗ ಸದಸ್ಯರ ಪೈಕಿ ರಾಜೀ ನಾಮೆ ಕೊಟ್ಟವರು ಕ್ಕಿಂತ ಹೆಚ್ಚಿನ್ನೆರಡೇ ಮಂದಿಯಾದ್ದರಿಂದ, ಈವರೆಗಿನ ಅಲ್ಪ ಸಂಖ್ಯಾಕರ ಅಭಿಪ್ರಾಯ ವನ್ನೇ ತೃಪ್ತಿಪಡಿಸಿ, ಉದ್ದೇಶ ಪರಾಭವಗೊಂಡಿದ್ದರಿಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಾರ್ಯ ಸಮಿತೀ ನಿರ್ಣಯವನ್ನು ಈ ರಾಜೀನಾಮೆಗಳು ಅಜಾತುಯಾಯಿಂದಾದುವು, ಅವಸರದಿಂದಾದುವು, ಎಂಬ ಬೇಕಾಗಿದೆ. ಯಾವುದೇ ವಧದ ಅಸಹಕಾರ ಹೂಡಲು ಮುಂದಾಗುವ ಕನ್ನಡಿಗ ನಾಯಕರು, ತಮ್ಮ ಕಾರ್ಯಸಾಧ್ಯದ ದೃಷ್ಟಿಯಿಂದಾದೂ ತಮ್ಮ ಜನತೆಯ ನಡುವೆ ತಮಗೆ, ಮತ್ತೀ ಪ್ರಶ್ನೆಯ ತಮ್ಮ ಇದಿರುವಾದಿಗಳಾಗಿರುವ ಕೇಂದ್ರ ನಾಯಕರಿಗೆ ಇರುವ ಸ್ಥಾನಮಾನ ವ್ಯತ್ಯಾಸವೆಷ್ಟು ಎಂಬುದನ್ನೂ ತುಲನೆ ಮಾಡಿಕೊಳ್ಳಬೇಕಾದುದು ಅಗತ್ಯ. ಈ ರೀತಿ ಎಲ್ಲಾ ದೃಷ್ಟಿಯಿಂದಲೂ ಪ್ರಾಪ್ತವಾಗಿರುವ ಹೆಚ್ಚಿಯದು. ಇನ್ನೂ ಈ ಪ್ರಮಾದವನ್ನು ಸಾಧ್ಯವುಳ್ಳ ಧಾನಗಳಿಂದ ತಿದ್ದಿಕೊಳ್ಳಬೇಕೆಂದೆಷ್ಟೇ ಸಹನೆ ಬೇಕಾಗಿದ್ದರೂ ಅದನ್ನು ಸಂಪಾದಿಸಿಕೊಂಡು, ಕೇಂದ್ರ ನಾಯಕರಿಂದ ಅವೇಶಾಗ್ರಹಗಳನ್ನು ಮುಂದೊವ ಬದಲಿಗೆ,ಕನ್ನಡಿಗರ ಒಮ್ಮತದ ಬಡಿಕೆ ಮತ್ತು ಯೋಜನೆಗಳನ್ನು ತರಿಸಿ ಮುಂದಿಡುವ ಕಡೆಗೇನೇ ಎಲ್ಲಪ್ರಯತ್ನ ಹರಿಯಲಿ-ಆ ಮೂಲಕ ಕರ್ನಾಟಕ ಪ್ರಾಂತ್ಯ ರಚನೆಯಾಗಲಿ, ಸೂಚಿಸುತ್ತೇವೆ.

ಉಡುಪಿ

ಸಂಪೂರ್ಣ ರಾಮಾಯಣ-ಈ ಕಾಲಕ್ಷೇಪವು ಆನಂತೇಶ್ವರ ದೇವಸ್ಥಾನದಲ್ಲಿ ಶ್ರೀ. ಕೆ. ಅನಂತ ಪದ್ಮನಾಭಾಚಾರ್ಯರಿಂದ ಇದೇ ತಾ ೬ರಂದ ಪ್ರಾರಂಭವಾಗಿ

ನಾಗಮಂಡಲ-ಶ್ರೀ. ಕೃಷ್ಣ ಭಟ್ಟ ಪರ್ಯಾಯ ಶ್ರೀ ಸೋದೆ ಸ್ವಾಮಿಗಳವರ ನೇತೃತ್ವದಲ್ಲಿ ನಾಗಮಂಡಲ ಸೇವೆಯು ತಾ 6 ರಲ್ಲಿ ಜರಗಿತು.

ಶಾಸನಸಭಾ ಕನ್ನಡಿಗ ಸದಸ್ಯರ ರಾಜೀನಾಮೆ—ಇದು ಸರಿಯೆ?

ಕರ್ನಾಟಕ ಪ್ರಾಂತ್ಯ ರಚನೆ ಮಾಡಲು ಅಸಮರ್ಥವಾಗಿರುವ ಕಾಂಗ್ರೆಸ್ ಕಾರ್ಯಸಮಿತಿಗೆ ಪ್ರತಿಭಟನೆ ಸೂಚಿಸುವುದಕ್ಕಾಗಿ ಕೇಂದ್ರ ಹಾಗೂ ಪ್ರಾಂತಿಕ ಶಾಸನಸಭೆಗಳ ಕನ್ನಡಿಗ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಇಟ್ಟಿಸಿದಂತೆ ಕೂಡಲೇ ತಮ್ಮ ರಾಜೀನಾಮೆಗಳನ್ನು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಿಗೊಪ್ಪಿಸಿದ ಸದಸ್ಯರೆಂದರೆ:— ಪಾರ್ಲಿಮೆಂಟ್ ಸದಸ್ಯ ಮತ್ತು ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಯಸ್. ನಿಜಲಿಂಗಪ್ಪ, ಮದ್ರಾಸ್ ಎಸೆಂಬ್ಲಿ ಸದಸ್ಯ ಹಾಗೂ ಮಾಜೀಮಂತ್ರಿ ಶ್ರೀ ಕೆ. ಆರ್. ಕಾರಂತ, ಶ್ರೀಗಳಾದ ಬಿ. ಅನಂತಾಚಾರ್ಯ, ಕೆ. ಎಫ್. ಪಾಟೀಲ (ಬೊಂಬಾಯಿ ಉಪಮಂತ್ರಿ) ಬಿ. ಡಿ. ಜತ್ತಿ (ಬೊಂಬಾಯಿ ಉಪಮಂತ್ರಿ) ಬೆನ್ನೆಬಸಪ್ಪ ಅಂಬಳಿ, ಅಂದಾನಪ್ಪ ದೊಡ್ಡಮೇಟಿ, ಎಮ್. ಎಚ್. ಶಹಾ, ಪಿ. ಯಸ್. ಗಾಂವ್ಕರ್, ಟಿ. ಆರ್. ನೆಪ್ತಿ, ವೀರನಗೌಡ ಪಾಟೀಲ, ಇವರು. ಆ ಮೇಲೆ ಬೆಳಗಾಂವಿ ಜಿಲ್ಲೆಯ ಶ್ರೀಗಳಾದ ಎನ್. ಬಿ. ದಳವಾಯಿ, ಯಸ್. ಬಿ. ಕುಟ್ರೆ, ವೆಂಕರೆಡ್ಡಿ ಹೂಲಿ, ಈ ಮೂವರು ಬೊಂಬಾಯಿ ಶಾಸನ ಸಭೆಯ ತಮ್ಮ ಸ್ಥಾನಗಳಿಗೆ ಆದೇ ಕಾರಣಕ್ಕಾಗಿ ರಾಜೀನಾಮೆ ಕೊಟ್ಟ ವಾರ್ತೆ ಬಂದಿದೆ. ಅಂತೂ ಅಖಿಲ ಕರ್ನಾಟಕದಿಂದ ವಿವಿಧ ಶಾಸನ ಸಭೆಗಳಲ್ಲಿರುವ ಸುಮಾರು 60 ಸದಸ್ಯರ ಪೈಕಿ ಈ ವರೆಗೆ 15 ಮಂದಿ ಕರ್ನಾಟಕ ಕಾಂಗ್ರೆಸಿನ ನಿರ್ದೇಶಾನುಸಾರವಾಗಿ ರಾಜೀನಾಮೆ ಕೊಟ್ಟಂತಾಯಿತು. ಆ ಪೈಕಿ ಕೇಂದ್ರ ಶಾಸನ ಸಭೆಗೆ ಹೋದ ರಾಜೀನಾಮೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ. ನಿಜಲಿಂಗಪ್ಪನವರದೊಂದೇ. 12 ರಾಜೀನಾಮೆಗಳು ಬೊಂಬಾಯಿ ಎಸೆಂಬ್ಲಿ ಸ್ಥಾನಕ್ಕೆ ಸಂಬಂಧಿಸಿರುವ ಈ ಮಹತ್ವದ ತೀರ್ಮಾನವನ್ನು ಕೊಡುವ ಮೊದಲು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಂಬಂಧಪಟ್ಟ ಸದಸ್ಯರ ಅಭಿಪ್ರಾಯಗಳನ್ನು ಕೇಳಿರುವುದೇ? ಮುಂತಾದ ಪ್ರಶ್ನೆಗಳು ಈ ಸಂಬಂಧವಾಗಿ ಎದ್ದಿವೆ.

ಪ್ರತಿಕ್ರಿಯೆ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಾಂಗ್ರೆಸ್ ಶಾಸನ ಸಭಾಸದಸ್ಯರುಗಳು ರಾಜೀನಾಮೆ ಕೊಡತಕ್ಕದ್ದೆಂದು ತಾನೇ ತಾನಾಗಿ ಅಜ್ಞಾಪಿಸುವ ಅಧಿಕಾರವಿಲ್ಲ. ಕಾಂಗ್ರೆಸಿನ ಶಿಸ್ತುನಿಯಮಗಳ ಮಟ್ಟಿಗೆ ಈ ಅಧಿಕಾರವಿರುವುದು ಕಾಂಗ್ರೆಸಿನ ಕೇಂದ್ರ ಪಾರ್ಲಿಮೆಂಟರೀ ಬೋರ್ಡಿಗೆ ಮಾತ್ರ. ಕಾಂಗ್ರೆಸ್ ಸದಸ್ಯರ ಶಾಸನ ಸಭಾಕಾರ್ಯಗಳ ನಿತ್ಯ ಕಾರ್ಯಕಲಾಪಗಳ ನಿಯಂತ್ರಣಾಧಿಕಾರವು ಆಯಾ ಶಾಸನ ಸಭಾ ಕಾಂಗ್ರೆಸ್ ಪಕ್ಷದ್ದೇ. ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಪ್ರಾಂತಿಕ ಕಾಂಗ್ರೆಸ್ ಪಕ್ಷಗಳೊಳಗೆ ಸಂಬಂಧ ತಿಕ್ಕಾಟಗಳೆಷ್ಟೇ ಬಾಗಿ ಬಂದಿವೆ. ಈ ಸಂಬಂಧವಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಇತ್ತೀಚೆಗೆ ಒಂದು ನಿರ್ಣಯವನ್ನು ಕೂಡಾ ಮಾಡಿಕೊಂಡಿದೆ. ಅಂತೂ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಪ್ರಾಂತಿಕ ಶಾಸನ ಸಭಾ ಕಾಂಗ್ರೆಸ್ ಸದಸ್ಯರೊಳಗೆ ಸಹಕಾರ ಸಂಬಂಧ ಹೊಂತು ಅಧಿಕಾರ — ಅಧೀನತೆಯೆಂಬುದಿಲ್ಲ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯಾದರೂ ಸ್ಥಾನತ್ಯಾಗದ ನಿರ್ಣಯದ ಮೂಲಕ ತನ್ನ ಅಭಿಪ್ರಾಯವನ್ನು ಪ್ರಕಟಿಸಿದ ಹೊಂತು ಶಾಸನಸಭಾ ಸದಸ್ಯರಿಗೆ ಆಜ್ಞೆ ಹೊರಡಿಸಿದ್ದಲ್ಲ ರಾಜೀನಾಮೆಯಿತ್ತ ಸದಸ್ಯರ ಅಭಿಪ್ರಾಯವೂ ಕರ್ನಾಟಕ ಕಾಂಗ್ರೆಸಿನ ಅಭಿಪ್ರಾಯವೂ ಈ ಮಟ್ಟಿಗೆ ಒಂದುಗೂಡಿದ್ದರಿಂದಲೇ ಅವರು ಹಾಗೆ ಮಾಡಿದ್ದಾರೆ. ಇದೊಂದು ಐಚ್ಛಿಕ ವಿಷಯವಾದ್ದರಿಂದ ಉಳಿದ ಸದಸ್ಯರನ್ನು ಯಾವ್ದದೇ ರೀತಿಯಿಂದ ಒತ್ತಾಯಿಸಲಾಗುವದಿಲ್ಲ. ಮೇಲಾಗಿ ಇದು ಕಾಂಗ್ರೆಸ್ ಸಂಸ್ಥೆಯ ಉಪಾಂಗವೊಂದು, ಅದರ ಶಿರಸ್ಸಿನೊಡನೆ ಭಿನ್ನಾಭಿಪ್ರಾಯಗೊಂಡ ಘಟನೆ ಇಲ್ಲಿ ಸ್ಥಳಾಭಿಮಾನದ ಪ್ರಶ್ನೆಯಿದೆ ಹೊರತು, ಕಾಂಗ್ರೆಸ್ ಅಭಿಮಾನದ ಅಥವಾ ಶಿಸ್ತಿನ ಪ್ರಶ್ನೆಯಿಲ್ಲ. ಕರ್ನಾಟಕ ಪ್ರಾಂತ್ಯಾಭಿಮಾನದಿಂದ,ಆ ಸಂಬಂಧವಾಗಿ ವಿಶೇಷಾಗ್ರಹಗೊಂಡು ಕೆಲವು ಸದಸ್ಯರು ಇಚ್ಛಾಪೂರ್ವಕ ಶಾಸನ ಸಭಾ ಸ್ಥಾನಗಳಿಗೆ ರಾಜಿನಾಮೆಗಳನ್ನು ಕೊಟ್ಟಿರುವುದು ಅಭಿನಂದನೀಯವೇ. ಆದರೆ ಈ ವಿಶೇಷಾಚರಣೆಯಲ್ಲಿ ಕೀರ್ತಿ ಅಥವಾ ಅಪಕೀರ್ತಿಯೆಷ್ಟೋ ಅಷ್ಟೇ ಅವರಿಗೆ ಸಲ್ಲಬೇಕು ಹೊರತು ಹೆಚ್ಚಿಗಿಲ್ಲ. ಈ ರಾಜೀನಾಮೆಗಳ ಕುರಿತು ಪ್ರಶ್ನಿಸಲ್ಪಟ್ಟಾಗ "ತ್ರಿಮೂರ್ತೀ ವರದಿಗನುಸಾರವಾದ ವಾತಾವರಣ ಅಲ್ಲಿ ನಿರ್ಮಾಣಗೊಳ್ಳಲಿ; 'ನಾವು ಕೂಡಲೇ ಕಾರ್ಯ ಕೈಕೊಳ್ಳುವೆವು. ಇಲ್ಲವಾದರೆ ಯಾವುದಾದರೊಂದೆಡೆಯ ಒತ್ತಾಯಕ್ಕಾಗಿ ನಾವು ಯಾರನ್ನೂ ಬಲಾತ್ಕರಿಸುವಂತಿಲ್ಲ. ಒಮ್ಮತವಾದ ಹೊರತು ಪ್ರಾಂತ್ಯ ರಚನೆ ಆಸಾಧ್ಯ" ಎಂದು ಪಂಡಿತ ನೆಹರುಗಳಂದಿದ್ದಾರೆ. ಜೊಂಬಾಯಿ ಪ್ರಧಾನಿ ಶ್ರೀ ಬೇರೆಯೂ ಈ ರಾಜೀನಾಮೆಗಳಿಗಾಗಿ ದುಃಖ ಸೂಚಿಸಿದ್ದಾರೆ. ಅಂತೂ ಕರ್ನಾಟಕ ಕಾಂಗ್ರೆಸಿನ ಈ ನಿರ್ಧಾರವು ಅಪೂರ್ಣ ಮತ್ತು ಅವಸರದ್ದಾಗಿ ಕೋದುಬಿಟ್ಟಿದೆ

(ಹಿನೇ ಪುಟದಿಂದ ಮುಂದುವರಿದುದು)

ನಾಗರಿಕಾಧಿಕಾರಿಗಳ ಸರಕಾರ ಖಂಡಿದೆ. 1948ನೇ ಸೆಪ್ಟೆಂಬರ್ 17ರಲ್ಲಿ ಹೈದರಾಬಾದಿನೊಳಗೆ ಹಿಂದೀ ಸೇನೆ ನುಗ್ಗಿದಂದಿನಿಂದ 1949ನೇ ನವಂಬರ್ 30ರ ತನಕ ಅಲ್ಲಿ ಜನರಲ್ ಚೌಧರಿಯವರು ಮಾಡಿದ್ದ ಕಾರ್ಯಗಳು ಕೊಂಡಾಟಕ್ಕರ್ಹವಿವೆ. ಸುಸಂಘಟಿತ ರಝಾಕಾರರನ್ನು ಸದೆಬಡಿದು, ಹೈದರಾಬಾದ್ ಸೇನೆಯನ್ನು ಸೋಲಿಸಿ,ಹೈದರಾಬಾದಿನ ಅರಾಜಕತೆಯನ್ನು ನಿವಾರಿಸುವುದರೀದಾರುಣಿ ರಝಾಕಾರ್ ಅವಶೇಷಗಳನ್ನು ಹೆಕ್ಕಿ ತೆಗೆದು ಝಾಡಿಸಿ ಕೊಳ್ಳುವ ವತ್ತು ಕಮ್ಯೂನಿಸ್ಟ್ ಹಾವಳಿಯನ್ನು ನಿವಾರಿಸಿಕೊಳ್ಳುವ ವರೆಗಿನ ಎಲ್ಲಾ ಶುದ್ಧೀಕರಣ ಕಾರ್ಯಗಳನ್ನೂ ವೀರ ಜಾಧಿರಿಯವರು ಜಯಪೂರ್ವಕವಾಗಿ ನೆರವೇರಿಸಿದ್ದರು. ಅವರಿಗೆ ಧನ್ಯವಾದಗಳು ಸಲ್ಲಬೇಕು.

ಆಂಧ್ರ ಪ್ರಾಂತ್ಯವನ್ನು ಏಂಗಡಿಸುವ ಕುರಿತು ಕೇಂದ್ರ ಸರಕಾರವು ಒಪ್ಪಿ, ಆ ಸಂಬಂಧದ ಸವಿವರ ವ್ಯವಸ್ಥೆಗಳನ್ನು ರೂಪಿಸುವಂತೆ ಮದ್ರಾಸ್ ಸರಕಾರಕ್ಕೆ ಸೂಚನೆ ಕಳುಹಿದೆ. ಆ ಕುರಿತಾಗಿ ಆ ಲೋಚಿಸುವುದಕ್ಕಾಗಿಯೇ ಮದ್ರಾಸ್ ಮಂತ್ರಿಮಂಡಲವು ಇದೇ ತಾ. 6ರಲ್ಲಿ ಸಭೆ ಸೇರಿ ಎಲ್ಲವನ್ನೂ ಸರಿಯಾಗಿ ಪರ್ಯಾಲೋಚಿಸಿರುವುದೆಂದು ತಿಳಿದು ಬರುತ್ತದೆ. ಪ್ರಕೃತ ಮದ್ರಾಸ್ ನಗರದಲ್ಲೇ ಆಂಧ್ರದ ರಾಜಧಾನೀ ಕಚೇರಿಗಳನ್ನು ಇರಗೊಡಿಸಬೇಕೆಂಬ ಆಂಧ್ರರ ಸೂಚನೆಗೆ ತಮಿಳರ ವಿರೋಧವಿದೆ. ಕೇರಳ ಮತ್ತು ಕರ್ನಾಟಕದ ಭಾಗಗಳವರು ಈ ಸಂದರ್ಭದಲ್ಲಿ ತಂತಮ್ಮ ಭಾಷಾವಾರು ಪ್ರಾಂತ್ಯರಚನೆಗಾಗಿ ವಿಶೇಷ ರೀತಿಯಿಂದ ಚಳವಳಿಸುತಿದ್ದಾರೆ. ಕೇರಳದವರ ನಿಷ್ಟಮಂಡಲಿಯೊಂದು ನವದೆಹಲಿಗೆ ಹೋಗಿ ಪಂಡಿತ ನೆಹರು ಮೊದಲಾದ ನಾಯಕರೊಂದಿಗೆ ತಮ್ಮ ಆಗ್ರಹದ ಬೇಡಿಕೆಗಳನ್ನು ಮುಂದಿಟ್ಟಿದ್ದಿತು. "ಭಾಷಾವಾರು ಪ್ರಾಂತ್ಯರಚನೆ ಸುಲಭಸಾಧ್ಯವಿದೆ. ಆದರೆ ಇನ್ನೂ ಸ್ವಲ್ಪ ಕಾಯಬೇಕು" ಎಂದು ಪಂಡಿತ ನೆಹರುಗಳಂದಿದ್ದರು. ಕೇಂದ್ರ ಸರಕಾರ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಕರ್ನಾಟಕ್ಯಾಂತ್ಯರಚನೆಯ ಕಡೆಗೆ ಸಾಕಷ್ಟು ಗಮನಕೊಡುವುದಿಲ್ಲವೆಂಬುದರ ನಿವೇದನಾರ್ಥವಾಗಿ ಕೇಂದ್ರ ಹಾಗೂ ಪ್ರಾಂತಿಕ ಶಾಸನ ಸಭೆಗಳಲ್ಲಿರುವ ಕರ್ನಾಟಕ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಬೇಕೆಂಬ ನಿರ್ಣಯವು ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನ ಕಾರ್ಯಕಾರೀ ಸಮಿತಿಯಲ್ಲಾಗಿದೆ. ಆದಕ್ಕೆ ಸಮಾರವಾಗಿ 12 ಮಂದಿ ಸದಸ್ಯರು ಇಷ್ಟರಲ್ಲೇ ರಾಜೀನಾಮೆಯೊಪ್ಪಿಸಿವೆ.

NOTICE.

In the Court of the District Munsiff, Mangalore.

O. S. No. 290/1948
R. I. A. 1191/1949

Between

Moiden Kunhi Beary
— Petitioner.

Palliamma and others
—Respondents

To,

1 Paliamma 2 Alimamma 3 Aisamma 4 Khatijamma 5 Abdul Kadri -Ist is the widow and 2 to 5 are the children of Pokare Beary- All of Kotekar village, Mangalore Taluq.

The above-named petitioner has filed the above application praying for a final decree for the sale of the charged property and that the said application is posted to 13-12-1949 for your appearence and that you are hereby directed to appear on that day, failing which the same will be heard exparte.

V. Balakrishna Rao,
Advocate for *Petr.*

Mangalore
30-11-'49.

ಸೀತಾನದಿ ಜಾನುವಾರು ಜಾತ್ರೆ

ಸೀತಾನದಿಯಲ್ಲಿ ನಡೆಯುವ ವರುಷಾವಧಿ ಜಾನುವಾರು ಜಾತ್ರೆಯು ತಾ.11.12.49 ರಲ್ಲಿ ಶಾಕ್ಷಕಿಳ ಫೋರೆಸ್ಟ್ ರೇಂಜರ್ ಅಧಿಕಾರಿ ನಿ. ಪಾಯಸರ ಹಸ್ತದಿಂದ ಉದ್ಘಾಟಿಸಲ್ಪಟ್ಟು ತಾ 13ರ ವರೆಗೆ ಜರಗುತ್ತಿದೆ ಇದೇ ತಾ. 10-12-49ನೇ ಆದಾರಾಹ್ನ 3½ ಕಾಸಿಗೆ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ. ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಬಹುಮಾನ ವಿತರಣಾ ಸಮಾರಂಭ ಜರಗಲಿದೆ ಸರ್ವರಿಗೂ ಸುಸ್ವಾಗತವೆಂದು, ಸೀತಾನದಿ ಜಾನುವಾರು ಜಾತ್ರೆಯ ಸ್ವಾಗತ ಸಮಿತಿಯವರು ಆಹ್ವಾನಿಸಾತ್ತಾರೆ.

ಶಿರ್ವ-ತಾ 11ನೇ ಪೂರ್ವಾಹ್ನ ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀಮಾನ್ ಬಿ. ಮಂಜಯ್ಯಹೆಗ್ಡೆಯವರಿಗೆ ಶಿರ್ವ ನಾಗರಿಕರ ಪರವಾಗಿ ಮಾನಪತ್ರಾರ್ಪಣೆಯೂ ಅಂದೇ ಅಪರಾಹ್ನ 5ಕಾಸಿಗೆ ಜಿಲ್ಲಾ ಬೋರ್ಡು ಅಧ್ಯಕ್ಷರ ಅಧ್ಯಕ್ಷತೆಯಲ್ಲಿ "ಬೋಸ್ಟೆಲ್‌ಡೇ" ಸಮಾರಂಭವೂ ಜರಗಲಿವೆ. ವ್ಯವಸ್ಥಾಪಕರು ಸರ್ವರಿಗೂ ಸುಸ್ವಾಗತ ಕೋರುತ್ತಾರೆ.

ಪ್ರಕಟಣೆ

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 420/1949

ಕಾಳಪ್ಪ ಶೆಟ್ಟಿ —ವಾದಿ.

ಮತ್ತು

ಶಾಂತಾರಾಮರಾವ್-ಸಾಲ್ಯೂರು ನಾರಾಯಣರಾಯರ ಮಗ, ಕಾರ್ಕಳ ತಾಲ್ಲೂಕ ಡ್ಯಾಲ ಗ್ರಾಮದ ಅಜ್ಜಾಜಿ ಚಿಟ್ಟಿನಲ್ಲಿ.
—ಪ್ರತಿವಾದಿ.

ಇವರೊಳಗೆ

ನೀವು ತಾರೀಕು 29-12-1942ರಲ್ಲಿ ರೂ ಸ್ಯಾ 1500-0-0ಕ್ಕೆ ಬರಕೊಟ್ಟ ರಿಜಿಸ್ಟ್ರಿ ತೋರಡವಿನ ಅಲ್ಲು ಬಡ್ಡಿ ಅವೇಜುಗಳನ್ನು ಬರ ಮಾಡಿಕೊಳ್ಳುವ ಬಗ್ಗೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲಿನ ದಾವಾ ನಿಮ್ಮ ಹಾಜರಾತಿ ಬಗ್ಗೆ ತಾರೀಕು30-12-1949ಕ್ಕಿಟ್ಟಿದೆ. ನೀವು ಸದ್ರಿ ದಿನ ಬೆಳಿಗ್ಗೆ 10 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರು ದ್ವಾರಾ ಹಾಜರಾಗಿ ಉದೆಪರಿಸತಕ್ಕದ್ದು. ತಪ್ಪಿದಲ್ಲಿನಿಮ್ಮನ್ನು ಶಿವ್ಯ ಪಡಿಸಿ ದಾವಾ ತೀರ್ಮಾನಿಸಲಾಗುವುದೆಂಬ ಎಂತ ಈ ಮೂಲಕ ತಿಳಿಸೋಣವಾಗುತ್ತದೆ.

(By order of the Court)

N. Mohandas Adyanthaya,
Advocate for Plaintiff.

Camp-Karkala
Dated 2-12-1949

ಭರತಖಂಡವು ಹಳ್ಳಿಗಳ ಮತ್ತು ವ್ಯವಸಾಯಗಾರರ ದೇಶ. ಆದರೂ ಇಲ್ಲಿರುವಷ್ಟು ಅನ್ನಾಭಾವ ಬೇರಾವ ದೇಶದಲ್ಲಿಯೂ ಇಲ್ಲ. ಇಲ್ಲಿ ಸಾಕಾದಷ್ಟು ಭೂಮಿ ಇದೆ. ಸಾಕಾದಷ್ಟು ಜನಗಳಿದ್ದಾರೆ. ಆದರೂ ಸಂಕಲ್ಪದಷ್ಟು ಬೆಳೆಯಿಲ್ಲವೆಂದರೆ ಶೋಚನೀಯವಾದ ವಿಷಯವೇ ಸರಿ.

ಮುಂದೆರಡು ವರ್ಷಗಳಲ್ಲಿ ಹೊರ ರಾಷ್ಟ್ರಗಳಿಂದ ಬರುವ ಆಹಾರ ಸರಬರಾಯಿ ನಿಂತು ಹೋಗಿ, ನಾವು ನಮ್ಮ ದೇಶದೊಳಗಣ ಉತ್ಪತ್ತಿಯಿಂದಲೇ ಸಂತುಷ್ಟರಾಗಬೇಕಾಗಿದೆ. ಈ ಹಿರಿಯ ಸಮಸ್ಯೆಯನ್ನು ಹೋಗಲಾಡಿಸಲು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳು ಈಗೀಗ ಶ್ರದ್ಧೆ ವಹಿಸುತ್ತಿವೆ. ಈ ನಿಯತವಾದ ಅವಧಿಯಲ್ಲಿ ಭರತ ಖಂಡವನ್ನು ಸ್ವಯಂಪೂರ್ಣ ರಾಷ್ಟ್ರವನ್ನಾಗಿ ಮಾಡಬೇಕೆಂಬ ಆಲೋಚನೆಯಲ್ಲಿ ರಾಷ್ಟ್ರ ನಾಯಕರೆಲ್ಲಾ ಮಗ್ನರಾಗಿದ್ದಾರೆ. ಇಷ್ಟು ವಿಸ್ತಾರವಾದ, ಸಸ್ಯ ಶ್ಯಾಮಲೆಯಾದ, ಜಲ ಸಮೃದ್ಧಿಯಿಂದ ಕೂಡಿದ, ಪ್ರಪಂಚದ ಅತ್ಯುನ್ನತವಾದ ಶರ್ವತ ಶ್ರೇಣಿಗಳಿಂದ ಪರಿಪೋಷಿತವಾದ, ನದಿಗಳಿಂದ ತುಂಬಿದ ಈ ದೇಶದಲ್ಲಿ ಅನ್ನಾಭಾವ! ಈ ಸಮಸ್ಯೆ ಸಂಪೂರ್ಣವಾಗಿ ಪ್ರಕೃತಿ ಜನ್ಯವಾದುದಲ್ಲವೆಂಬುದು ಸತ್ಯ. ಇದುದರಿಂದ ಲೋಪದೋಷಗಳು ಎಲ್ಲಿವೆ? ಎಷ್ಟು ಪ್ರಮಾಣದಲ್ಲಿವೆ? ಎಂಬುದನ್ನರಿತುಕೊಂಡು ಸರಿಯಾದ ಚಿಕಿತ್ಸೆ ನಡೆಸಿದಲ್ಲಿ ನಾವು ನಮ್ಮ ಗುರಿಯನ್ನು ತಲಪುವುದು ಅಸಾಧ್ಯವಾಗಲಾರದು.

ರೈತನಿಗೆ ವಿದ್ಯೆ ಮತ್ತು ತಿಳಿವಳಿಕೆ

ಎಲ್ಲಾ ಉತ್ಪತ್ತಿಗೂ ಮುಖ್ಯವಾದುದು ವಿದ್ಯೆ ಅಥವಾ ಜನಸಾಮಾನ್ಯರಲ್ಲಿ ಇರಬೇಕಾದ ತಿಳಿವಳಿಕೆ. ಆವಿದ್ಯಾವಂತರ ದೇಶದಲ್ಲಿ ವ್ಯವಸಾಯವು ಅಭಿವೃದ್ಧಿಯಾಗಬೇಕೆಂದರೆ ಅದು ಕೇವಲ ಭ್ರಾಂತಿ ಅಥವಾ ಕನಸು ಕ್ರಾಂತಿದಾಯಕವಾದ ರೀತಿಯಲ್ಲಿ ಕಾರ್ಯಕ್ರಮಗಳನ್ನು ಅನುಸರಿಸಿ ಅತ್ಯಲ್ಪ ಕಾಲದಲ್ಲಿಯೇ ಹೆಚ್ಚು ಮಂದಿಗೆ ಅನಕ್ಷರತಾ ಜಾಡ್ಯವನ್ನು ಹೋಗಲಾಡಿಸಿ ತಿಳಿವಳಿಕೆಯ ಮಟ್ಟವು ಹೆಚ್ಚುವುದರಿಂದ ದೇಶದ ಕೈಗಾರಿಕೆ ಮತ್ತು ವ್ಯವಸಾಯಾಭಿವೃದ್ಧಿಯು ವಿಶೇಷವಾಗಿ ಹೆಚ್ಚಿ ದೇಶದ ಸುಖ ಸಂಪತ್ತಿಗೆ ಅವಕಾಶವಾಗುವುದೆಂಬುದನ್ನು ಸಹ ಪರದೇಶಗಳು ಉದಾಹರಣೆಯಾಗಿ ತೋರಿಸಿಕೊಟ್ಟಿವೆ.

ಈ ಮಧ್ಯೆ ಪಟ್ಟಣದವರಿಗೂ, ಹಳ್ಳಿಯವರಿಗೂ, ವಿದ್ಯೆಯಲ್ಲಿಯೂ, ತಿಳುವಳಿಕೆಯಲ್ಲಿಯೂ, ಜೀವನ ಸೌಕರ್ಯಗಳಲ್ಲಿಯೂ, ಐಶ್ವರ್ಯದಲ್ಲಿಯೂ, ಹೆಚ್ಚು ಹೆಚ್ಚು ತಾರತಮ್ಯವೇ ಬೆಳೆದು "ಹಳ್ಳಿಯವನೂ ಒಬ್ಬ ಮನುಷ್ಯನೆ" ಎಂಬ ತಾತ್ಸಾರ ಬುದ್ಧಿಯಿಂದ ಪಟ್ಟಣಿಗರು ಹಳ್ಳಿಯವನನ್ನು ನೋಡಲು ಪ್ರಾರಂಭಿಸಿ ಅದರ ಪರಿಣಾಮವಾಗಿ ಹಳ್ಳಿಯವನು ಅವನ ಜೀವನ್ಮರಣಗಳಲ್ಲಿ ಅಲಕ್ಷಿತನಾಗಿ ಅವನ ಸಂಸ್ಕೃತಿ ಇವುಗಳೆಲ್ಲಾ ತಲೆಕೆಳಗಾಗಿ ಪಟ್ಟಣವನ್ನು ಸೇರುತ್ತಿದ್ದಾನೆ. ಇದರಿಂದ ಹಳ್ಳಿಗಳು ಮಂಕು ಬಡಿದು ಹಾಳೂರುಗಳಾಗಿ, ಪಟ್ಟಣಗಳು ಕಲ್ಪನಾತೀತವಾಗಿ ಬೆಳೆದು ಕಡೆಗೆ ಜೀವನಕ್ಕೆ ಮುಖ್ಯವಾದ ಆಹಾರ ವಸ್ತುವಿಗೆ ಧಕ್ಕೆಯುಂಟಾಗುವುದಕ್ಕೆ ಪ್ರಾರಂಭವಾಯಿತು.

ರೈತನಿಗೆ ಸಾಲದ ಹೊರೆ.

ರೈತನು ನಿರಾಶೆಯಿಂದ ನಿರ್ವೀರ್ಯನಾಗುವುದಕ್ಕೆ ಮತ್ತೊಂದು ಬಲವಾದ ಕಾರಣವಿದೆ. ಅದು ಅವನ ಮೇಲೆ ಬಿದ್ದಿರುವ ಸಾಲದ ಹೊರೆ. ಸಾಹುಕಾರನ ಹಿಡಿತದಿಂದ ತಪ್ಪಿಸಿಕೊಳ್ಳುವ ಹೆದ್ದಾರಿಯೇ ಅವರಿಗೆ ಕಾಣದಾಗಿದೆ. ಸರ್ಕಾರದವರು ಕೊಡುವ ತಕಾವಿ ಮುಂತಾದ ಸಾಲ ಯಾವುದೋ ಲೋಪ ದೋಷಗಳಿಂದ ಅವನಿಗೆ ಉಪಯೋಗವಾಗುತ್ತಿಲ್ಲ. ಅಂಡಮಾನದ ಬ್ಯಾಂಕುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ. ಭಾವಿಯ ಸಬ್ಸಿಡಿ ಸಿಕ್ಕುವುದೇ ಕಷ್ಟವಾಗಿದೆ. ವ್ಯವಸಾಯಗಾರರ ಕಾನೂನು, ಸಾಲತೀರ್ವೆಯ ಕಾನೂನು, ಇವುಗಳಿಂದ ಜನರು ಯೋಚಿಸಿದ್ದ ರೀತಿಯಲ್ಲಿ ರೈತನಿಗೆ ಸಹಾಯವಾಗದೆ ಇರುವುದರಿಂದ ವಿಷಾದಕರವಾಗಿದೆ. ರೈತನ ಸಾಲದ ಹೊರೆಯನ್ನು ಒಂದೇ ಸಲ ನಿರ್ನಾಮಮಾಡಿಸಿ ಮತ್ತೊಂದು ಸಲ ಆವನು ಸಾಲ ಮಾಡದಂತೆ ತಕ್ಕ ಕಾರ್ಯಕ್ರಮಗಳಿಂದ ಅಡ್ಡಗಟ್ಟಿ ಹಾಕುವ ಯೋಜನೆಯೊಂದನ್ನು ಧೈರ್ಯದಿಂದ ಸರ್ಕಾರದವರು ಮುನ್ನುಗ್ಗಿ ಎಸಾಡುವ ವರೆಗೂ ಬೇರೆ ಗತ್ಯಂತರವೇ ಇಲ್ಲವೆಂದು ನನಗೆ ತೋರುತ್ತದೆ.

ರೈತನಿಗೆ ತಕ್ಕಷ್ಟು ಪ್ರತಿಫಲ ಅಗತ್ಯ.

ಮತ್ತೊಂದು ವಿಚಾರ ಬಹು ಮುಖ್ಯವಾದುದು. ಅದು ರೈತನ ಕಷ್ಟಕ್ಕೆ ತಕ್ಕಷ್ಟು ನ್ಯಾಯಸಲ ದೊರೆಯದೇ ಇರುವ ವಿಚಾರ. ಪ್ರತಿಯೊಂದು ವೃತ್ತಿಯಲ್ಲೂ ಕೆಲಸ ಮಾಡುವವರು ತಮ್ಮ ಕೆಲಸ ಕಾರ್ಯಗಳಿಗೆ ತಕ್ಕ ವೃತಿಫಲವನ್ನು ಪಡೆಯಲು ಹೋರಾಡುತ್ತಾರೆ, ಮುಷ್ಕರಗಳನ್ನು ಹೂಡುತ್ತಾರೆ, ಕ್ರಾಂತಿಯನ್ನು ಬೇಕಾದರೂ ಎಬ್ಬಿಸುತ್ತಾರೆ. ರೈತನಿಗೆ ಆ ಜೈತನ್ಯವಿಲ್ಲ. ರೈತ ತನ್ನ ಮನೆಯವರೊಂದಿಗೆ ಹಗಲಿನಲ್ಲೂ, ಮಳೆಯಲ್ಲೂ ಚಳಿ ಬಿಸಿಲಿನಲ್ಲೂ ಕೆಲಸ ಮಾಡುತ್ತಾನೆ. ಸುಖವಾಗಿ ನೆರಳಲ್ಲಿ ಕುಳಿತು ಕ್ಲುಪ್ತ ಕಾಲ ಮಾತ್ರ ಕೆಲಸ ಮಾಡುವ ಇತರ ಕಸುಬಿನವರ ಸಂಪಾದನೆಯೊಡನೆ ರೈತನ ಸಂಪಾದನೆಯನ್ನು ಹೋಲಿಕೆ ಮಾಡಿದರೆ ಅದು ಬಹು ಕಡಿಮೆ ಎಂಬಂಶವನ್ನು ಯಾರೂ ಮರೆಯಬಾರದು. ತಾನು ಕೊಳ್ಳುವ ಪದಾರ್ಥಗಳಿಗೆ ಒಂದಕ್ಕೆ ಒಂಭತ್ತು ಬೆಲೆ ಏರಿದೆ. ಅವನ ದಿನಸಿಗೆ ಆದೇ ಪ್ರಮಾಣದಲ್ಲಿ ಬೆಯನ್ನು ಪಡೆಯುವ ಅದೃಷ್ಟ ರೈತನಿಗಿಲ್ಲ. ಇದರಿಂದ ರೈತನನ್ನು ಸೋಮಾರಿ, ಅಪ್ರಮಾಣಿಕನನ್ನಾಗಿ ಮಾಡಿಬಿಟ್ಟಿದೆ. ರೈತನನ್ನು ನೇಗಿಲ ಯೋಗಿ ಮತ್ತು ಅನ್ನದಾತ ಎಂದು ಕವಿಗಳು ವರ್ಣಿಸಿರುವುದರಿಂದಲೇ ರೈತ ತ್ಯಾಗಿಯಾಗಬೇಕಾಗಿದೆ. ಸರ್ಕಾರವೂ ಮಹಾಜನರೂ "ರೈತನೂ ಒಬ್ಬ ಮನುಷ್ಯ. ಅವನನ್ನು ಉಳಿಸಿಕೊಂಡರೇನೇ ನಾವು ಉಳಿಯುವುದು. ಅವನ ಮನುಷ್ಯತ್ವಕ್ಕೆ ಬೆಲೆ ಕೊಡಬೇಕು" ಎಂದು ಎಲ್ಲಿಯ ವರೆಗೆ ಮನವರಿಕೆ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯ ವರೆಗೆ ನಾವು ಆಹಾರ ಪದಾರ್ಥಗಳಿಗೆ ಹಂಬಲಿಸಿ ಪರದೇಶದವರ ಮುಂದೆ ಕೈಹಚಾಚಿ ಆಹಾರ ಪದಾರ್ಥವನ್ನು ಯಾಚಿಸುವ ನಿಕೃಷ್ಟ ಸ್ಥಿತಿಯಿಂದ ಪಾರಾಗಲಾರೆವು. ಆದ್ದರಿಂದ ರೈತನಿಗೆ ಹಣ ರುಪು ಮತ್ತು ಹೊಸ ಚೈತನ್ಯವನ್ನುಂಟುಮಾಡಲು ಅವನ ಕಷ್ಟಕ್ಕೆ ತಕ್ಕಷ್ಟು ಪ್ರತಿಫಲವನ್ನು ದೊರಕಿಸಿಕೊಡಬೇಕೆಂಬ ವಿಚಾರದಲ್ಲಿ ಯಾರೂ ಹಿಂದು ಮುಂದು ನೋಡಬಾರದೆಂದು ನನ್ನ ವಿನಂತಿ.

ಅವ್ಯವಸ್ಥಿತ ಮಹಲ್ ಕಾವಲುಗಳು, ಗೋಮಾಳಗಳು, ಫಾರೆಸ್ಟುಗಳು ಕರಗಿ ಹೋಗುತ್ತಿವೆ. ನಮ್ಮ ದೇಶದ ಪ್ರಖ್ಯಾತವಾದ ದನಗಳ ತಳಿಗಳನ್ನು ಉಳ್ಳಲ್ಲಿಕೇಂದ್ರ ಗಳನ್ನು ಏರ್ಪಡಿಸಿ ಉತ್ತಮಪಡಿಸಿ ರೈತರಿಗೆ ಹಂಚುವ ಯೋಜನೆಯನ್ನು ಸರ್ಕಾರದರು ಆತಿ ತ್ವರಿತವಾಗಿ ಕೈಗೊಳ್ಳಬೇಕಾಗಿದೆ. ಈಗ ಉಳಿದಿರುವಷ್ಟು ಗೋಮಾಳ ಪನ್ನಾದರೂ ಭದ್ರವಪಡಿಸಿಕೊಂಡು ಅದನ್ನು ಉತ್ತಮಪಡಿಸಿ ಮೂಕಪ್ರಾಣಿಗಳ್ಳಭಿವೃದ್ಧಿಗೆ ನೆರವಾಗಬೇಕಾಗಿದೆ

ಜಮೀನು ಹೆಚ್ಚುವುದಲ್ಲ; ಫಸಲು ಹೆಚ್ಚಾಗಬೇಕು

ದೇವರ ಅನುಗ್ರಹದಿಂದ ನಮಗೆ ಉತ್ತಮವಾದ ಭೂಮಿ ಇದೆ. ಆದರೆ ಇರುವ ಭೂಮಿಯಲ್ಲಿಯೇ ಹೆಚ್ಚು ಬೆಳೆಯನ್ನು ಪಡೆಯುವುದರ ಬದಲು ಹೆಚ್ಚು ವಿಸ್ತೀರ್ಣದಲ್ಲಿ ಬೆಳೆ ಮಾಡಬೇಕೆಂದು ನಮ್ಮ ಜನರಲ್ಲಿ ಉಂಟಾಗಿರುವ ಮನೋಭಾವವು ತೀರಾ ವಿಚಿತ್ರವಾದುದು ಹೆಚ್ಚು ಜಮೀನಿದ್ದರೆ ಹೆಚ್ಚು ಫಸಲು ಬೆಳೆಯುವುದೆಂದು ಗೋಮಾಳ, ಕಾಡುಮೇಡು, ಅರಣ್ಯಗಳನ್ನೆಲ್ಲಾ ದರಖಾಸ್ತಿನಲ್ಲಿ ವಿನಿಯೋಗಮಾಡಿದುದರ ಫಲವಾಗಿ ದೇಶದಲ್ಲಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಬದಲಾಗಿ ಕಡಿಮೆ ಬೆಳೆ ಬೆಳೆಯುವಂತಾಯಿತು ಮೊದಲೇ ಲಕ್ಷಾಂತರ ಎಕರೆಗಳು ಪಾಳುಬಿದ್ದಿದ್ದ ಹಿಡುವಳಿಗಳ ಜೊತೆಗೆ ಇನ್ನೂ ಹೆಚ್ಚು ಜಮೀನುಗಳು ಪಾಳುಬೀಳುವುದಕ್ಕೆ ಅವಕಾಶವಾಯಿತು.

ಗೊಬ್ಬರ

ವ್ಯವಸಾಯದ ಇಲಾಖೆಯವರು ಕೊಂಚ ಚ್ಚಾಮಟ್ಟಿಗೆ ತಮ್ಮ ಮೂಲಕ ಉತ್ತಮ ಬೀಜಗಳನ್ನು ದೊರಕಿಸಬಹುದು:—ಆದರೂ ರೈತರೇ ಸ್ವಾವಲಂಬಿಗಳಾಗಿ ತಮ್ಮ ತಮ್ಮ ಜಮೀನಿಗೆ ಬೇಕಾಗುವ ಉತ್ತಮ ಬೀಜಗಳನ್ನೇ ಆಯ್ಕೆಮಾಡಿಕೊಳ್ಳುವಂತೆ ಮನಸ್ಸು ಮಾಡಬೇಕಾದುದು ಅವಶ್ಯಕ. ವ್ಯವಸಾಯಕ್ಕೆ ಬೇಕಾಗುವ ಗೊಬ್ಬರವನ್ನು ಒದಗಿಸುವ ವಿಚಾರದಲ್ಲಿ ಇನ್ನೂ ಉತ್ತಮವಾದ ಯೋಜನೆಗಳನ್ನು ತಯಾರಿಸುವುದು ಅವಶ್ಯಕ. ಭೂಮಿಗೆ ಹೆಚ್ಚಾಗಿ ಉಸಯೋಗಿಸಬೇಕಾದುದು ಕೊಟ್ಟಿಗೆ ಗೊಬ್ಬರ, ಹಸಿರು ಗೊಬ್ಬರ, ಗೋಡು ಗೊಬ್ಬರ ಮತ್ತು ಕಾಂಪೋಸ್ಟ್ ಗೊಬ್ಬರ ಕೊಟ್ಟಿಗೆ ಗೊಬ್ಬರವನ್ನು ಗಂಡಳದ ಸಹಿತ ಶೇಖರಿಸುವ ವಿಧಾನದಲ್ಲಿ ನಮ್ಮ ರೈತರು ಇನ್ನೂ ಬಹುಮಂದಿ ಹಿಂದಿದ್ದಾರೆ ಸರಿಯಾದ ಕೊಟ್ಟಿಗೆಗಳನ್ನು ಏರ್ಪಡಿಸಿಕೊಳ್ಳುವಂತೆ ಮಾಡುವುದಕ್ಕಾಗಿ ಒಂದು ಕ್ರಾಂತಿಯುತವಾದ ಯೋಜನೆಯನ್ನೇ ವ್ಯವಸಾಯದ ಇಲಾಖೆಯವರು ಮತ್ತು ಪಶುಪಾಲನಾ ಇಲಾಖೆಯವರು ಸಹಕರಿಸಿ ನಡೆಸಬೇಕಾದುದು ಅವಶ್ಯಕ. ಕೃಷಕ ಗೊಬ್ಬರವನ್ನು ಹೆಚ್ಚು ಉಪಯೋಗಿಸದರೆ ಜಮೀನಿನ ಸಾರ ಕಡಿಮೆಯಾಗುವುದು ಇದನ್ನು ಔಷಧದಂತೆ ಉಪಯೋಗಿಸಬಹುದು.

ಗ್ರಾಮಾಂತರ ಪ್ರದೇಶಗಳ ಗುಂಡು ತೋಪುಗಳು, ಕಾಡಿನ ಮರಗಳು ನಿರ್ನಾಮವಾಗಿ, ಫಲವೃಕ್ಷಗಳನ್ನು ಬೆಳೆಸುವ ವಿಚಾರದಲ್ಲಿ, ನಮ್ಮ ರೈತರು ಶ್ರದ್ಧೆಯನ್ನು ತೋರಿಸದ ಪರಿಣಾಮವಾಗಿ ಪಕ್ಷಿಸಂಕುಲಗಳು ಹೀಳಾಗಿ ಅವುಗಳಿಂದ ಭೂಮಿಗೆ ದೊರೆಯುತ್ತಿದ್ದ ಅಮೂಲ್ಯವಾದ ಗೊಬ್ಬರ ಹೂಳಾಯಿತು ಮತ್ತು ಪೈರು ಪಟ್ಟಿಗಳಿಗೆ, ಬೀಳುವ ಹುಳುಹುಪ್ಪಟೆ ಕ್ರಿಮಿಕೀಟಗಳನ್ನು ಹಕ್ಕಿಗಳು ಆರಸಿಕೊಳ್ಳುವುದು ನಿಂತುಹೋಗಿ ಪೈರುಗಳು ಸವ್ಯದ್ಧಿಯಾಗಿ ಬೆಳೆಯುವುದಕ್ಕೆ ಆಡಚಣೆಯುಂಟಾಗಿದೆ

ಸರ್ಕಾರದಿಂದಲೇ ಇಪ್ಪೆಲ್ಲಾ ಸೌಲಭ್ಯ ಸೌಕರ್ಯಗಳನ್ನು ನಿರೀಕ್ಷಿಸುವುದು ತಪ್ಪು ಸರ್ಕಾರ ಕೇವಲ ಮಾರ್ಗದರ್ಶಿ ಮಾತ್ರ ಎಂಬುದನ್ನು ಮರೆಯಬಾರದು ಉತ್ತಮವಾದ ಬೆಳೆ ಬೆಳೆಯಲು ರೋಗ ನಿವಾರಿಸಲು ಉಚಿತವಾದ ಯೋಜನೆಗಳನ್ನು ನಿರೂಪಿಸಿ, ಅನುಕೂಲ ವಾತಾವರಣವನ್ನು ಸರ್ಕಾರದವರು ಕಲ್ಪಿಸಬಹುದು ಆದರೆ ದೇಶದ ಪ್ರತಿಯೊಬ್ಬ ಪ್ರಜೆಯೂ ಸೇವಕನಿಂದ ಹಿಡಿದು ಮಂತ್ರಿಯ ತನಕ, ಬಡವನಿಂದ ಹಿಡಿದು ಶ್ರೀಮಂತನ ತನಕ, ಏಕವಾನಸ್ಸಿನಿಂದ ಹುರುಪು ಹುಮ್ಮಸ್ಸಾಗಿ ಈ ಕಾರ್ಯದಲ್ಲಿ ಸಹಕರಿಸಿದರೆ ದೇಶದ ಮುಂದಿರುವ ಸಮಸ್ಯೆಗಳು ಸುಲಭವಾಗಿ ಪರಿಹಾರವಾಗಿ, ಪ್ರಪಂಚದ ಇತರ ರಾಷ್ಟ್ರಗಳೊಡನೆ ತಲೆ ಎತ್ತಿ ನಿಲ್ಲುವ ಯೋಗ್ಯತೆಯನ್ನು ಸಂಪಾದಿಸಬಹುದು. ಮುಖ್ಯವಾಗಿ ಸರ್ಕಾರದ ಗಮನ ರೈತನ ಮತ್ತು ಹಳ್ಳಿಯ ಕಡೆಗಿರಬೇಕು. ಪ್ರತಿಯೊಬ್ಬ ನಾಗರೀಕನೂ, ಹಳ್ಳಿಯವರನ್ನು ಗೌರವದಿಂದ ಕಂಡು, ಅವರನ್ನು ಪ್ರೋತ್ಸಾಹಿಸುತ್ತಿರಬೇಕು. ಹಳ್ಳಿಯವ್ವರಿ ದಿಲ್ಲಿ, ಹಳ್ಳಿಗೆ ಇದ್ದರೆ ದಿಲ್ಲಿಗ ಎಂಬುದನ್ನು ಯಾರೂ ಮರೆಯಬಾರದು ಈಗಿನ ವಿಷಮ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬರೂ ತನ್ನ ಸಕಲ ಸೇವೆಯನ್ನು ಸಮರ್ಪಿಸಬೇಕು. ಆಗ ಮಾತ್ರ ನಾವು ಮಹಾತ್ಮ ಗಾಂಧಿಯವರ, ಲೋಕೈಕವೀರ ಜವಾಹರಲಾಲರ ಆಶಾಲತೆಯಲ್ಲಿ ಬದುಕಿರೆವೆ ಸಾರ್ಥಕವಾಗುತ್ತದೆ.

(ತಾಯಿನಾಡು)

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ
ಸ್ಮಾಲನಂಬ್ರ 178/49
ಆಬ್ದುಲ ಕಾದರ —ವಾದಿ.
ಆಮು ಬ್ಯಾರಿ —ಪ್ರತಿವಾದಿ.
ಪ್ರತಿವಾದಿ ಆಮುಬ್ಯಾರಿ, ಅಂದು ಬ್ಯಾರಿ ಮಗ, ಕೆಳನಾಡ ಗ್ರಾಮದ ಕಟ್ಟಳೆಕಲ್ ಎಂಬಲ್ಲಿರುವನ. ಯಿವರೀಗೆ—
ವಾದಿಗೆ ಪ್ರತಿವಾದಿಯು ರೂಪ್ಯಾ 100-0-0ಕ್ಕೆ ಬರೆಕೊಟ್ಟ ದಿನಾಂಕದ ನೋಟಿನ ಅಸ್ಸಲು ಬಡ್ಡಿ ಹಣಗಳಿಗಾಗಿ ಬರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲಿನ ನಂಬ್ರದ ತಾರೀಕು 17-12-1949 ಕ್ಕೆ ತನ್ನಿಗೆ ನಿಶ್ಚಯಿಸಿಯಿರುತ್ತದೆ.
ಸದ್ರಿ ವ್ಯಾದಿಗೆ ಪ್ರತಿವಾದಿಯು ಕೋರ್ಟಿಗೆ ಹಾಜ್ರು ಆಗುವರೆ ತಪ್ಪಿದಲ್ಲಿ ಅವರಿಗೆ ಯಕ್ಪಪಾರ್ಟಿ ಡಿಕ್ರೀರ ಮಾಡಿ ಸದ್ರಿ ವ್ಯಾಜ್ಯವು ವಾದಿ ಗುಣಕ್ಕೆ ತೀರ್ಮಾನಿಸಲಾದೀತು.
Abdul Kadar,
Advocate for Plaintiff-
ಕಾಸರಗೋಡು ತಾ 30-11-49

ಮಂಗಳೂರು

ಇಲ್ಲಿನ ಕಾರ್ಪೊರೇಷನ್‌ನಿಗೆ ಕೆಲವು ಗಾವರಿಗೆ ಅವರು ಸಲ್ಲಿಸಿದ ಕಂದಾಯ ಪಾವತಿಯ ಮೊತ್ತದಲ್ಲಿ 25% ಕಡಿತ ಮಾಡಿ ಕೊಡುವುದೆಂದು ಸರ್ಕಾರವು ಆದೇಶ ಹೊರಡಿಸಿದೆ. ಈ ಆದೇಶದಿಂದ ಕಾರ್ಪೊರೇಷನ್‌ಗೆ ಸುಮಾರು ರೂ. 5000ದಷ್ಟು ನಷ್ಟವಾಗಲಿದೆಯೆಂದು ಅಂದಾಜು ಮಾಡಲಾಗಿದೆ.

ದ. ಕ. ಒಟ್ಟೋಮೊಬ್ಯಾಲ್ ಕೆಲಸಗಾರರ ಯೂನಿಯನ್ ಸಭೆಯೊಂದು ಈಚೆಗೆ ಜರಗಿ ಪಾಸುಮಾಡಿದ ನಿರ್ಣಯವೊಂದನ್ನು ಇಲ್ಲಿ ಹೀಗಿದೆ: 'ಸದ್ಯದ ಪರಿಸ್ಥಿತಿಯಲ್ಲಿ ಸರಕಾರಕ್ಕೆ ಯಾವ ವಿಧದಲ್ಲಿ ಕರಣು ಹೊರೆಯೂ ಸರಕಾರವು ವಿವಾದಿಸುವ ತೆಗೆಸಿಕೊಡುವ ಕ್ರಮವನ್ನು ಕೈಕೊಳ್ಳುವುದಿಲ್ಲ. ಅದುದರಿಂದ ದ. ಕ. ಜಿಲ್ಲೆಯ ಎಲ್ಲಾ ಮೋಟಾರು ಕಲಸಗಾರರ ಸಮ್ಮೇಳನವನ್ನು ತೀವ್ರವಲ್ಲಿ ಕರೆದು ಆ ಸಭೆಯಲ್ಲಿ ಮುಷ್ಕರ ಹೂಡುವ ಬಗ್ಗೆ ಮತಗಣನೆಯನ್ನು ನಂಗ್ರಹಿಸುವ ನಿರ್ಣಯವನ್ನು ಅಂಗೀಕರಿಸಬೇಕು.'

ಗೋಧಿ ಖಿಡ್ಡಾಯ ರೇಶನ್ ಅಂಗಡಿಗಳಲ್ಲಿ ಈಗ ಪ್ರತಿಯೊಬ್ಬ ನಾಗರಿಕನೂ ಕ್ಷನಕೆ ಸಿಗುವ ಎಂಟು ಔನ್ಸು ಅಕ್ಕಿ ಮತ್ತು ಎರಡು ಔನ್ಸು ಗೋಧಿಯಲ್ಲಿ ಒಂದು ಔನ್ಸು ಗೋಧಿ ಖಡ್ಡಾಯವಾಗಿ ತೆಗೆದುಕೊಳ್ಳಬೇಕಾಗಿ ವಿಧಿಸಲಾಗಿದೆ.

ರೈಲ್ವೆನೇಲೆಯಲ್ಲಿ ತುಸು ಬದಲಾವಣೆ ಯಾಗಬೇಕಾಗಿ ಮಂಗಳೂರಿನ ಕೆನರಾ ವಾಣಿಜ್ಯಸಂಘದವರು ವಿನಂತಿಸಿಕೊಂಡಂತೆ ಈ ಕೆಳಗಿನ ಎರಡು ರೈಲುಗಳು ಮಂಗಳೂರಿಗೆ ಬರುವ ಸಮಯವನ್ನು ಬದಲಾಯಿಸಲಾಗುವುದು. ಮೊದಲು ಬೆಳಿಗ್ಗೆ 6 ಗಂಟೆಗೆ ಬರುತ್ತಿದ್ದ ರೈಲು ಇನ್ನು ಮುಂದೆ 7.50 ಕ್ಕೂ 9-45 ತಾಸಿಗೆ ಬರುತ್ತಿದ್ದ ರೈಲು 9-25 ಕ್ಕೂ ರಾತ್ರಿ 10-10 ಗಂಟೆಗೆ ಬರುತ್ತಿದ್ದ ರೈಲು 8-55 ಕ್ಕೂ ಬರುವುದು. ಮಂಗಳೂರಿನಿಂದ ಹೋಗುವ ರೈಲುಗಳಲ್ಲಿ ಮಧ್ಯಾಹ್ನ 12-30 ಕ್ಕೆ ಹೋಗುವ ರೈಲು ಬೆಳಿಗ್ಗೆ 10-45 ಕ್ಕೆ ಹೋಗುವುದು

ಗ್ರಾಮಗಳ ನೀರಿನ ಸರಬರಾಯಿ ಯೋಜನೆ ಬಗ್ಗೆ ಚರ್ಚಿಸಲು ಒಂದು ಸಭೆಯು ಈಚೆಗೆ ಜಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದ್ ಅವರ ಅಧ್ಯಕ್ಷತೆಯಲ್ಲಿ ಜರಗಿತಾಗ, ಹ್ಯಾಮೇ ದಿವಿಜನರ್ ಇಂಜಿನಿಯರ್ ಶ್ರೀ. ಎಮ್. ಎಸ್. ಕಾಮತ್‌ರವರು ಈ ಜಲ್ಲೆಯಲ್ಲಿ ಈ ಯೋಜನೆಯ ಮುನ್ನೆಚ್ಚರಿಯನ್ನು ವಿವರಿಸಿದರು. 1949-50ನೇ ವರ್ಷಕ್ಕೆ ಒಟ್ಟಿಗೆ ಮಂಜೂರಾದ ರೂಪಾ

ನೋಟೀಸು

ಕೂರ್ಗಿನ ಡಿ. ಸಬ್. ಕೋರ್ಟಿನಲ್ಲಿ

ಶ್ರೀ O. P. No 71/19 9

೧. ಲಕ್ಷ್ಮಮ್ಮ – ಮ್ಯಾನೆಜರ್ ವಿಧವೆ. 2. ಪುಟ್ಟಸ್ವಾಮಿಜ್ಜಾರಿ 3. ಅವಮ್ಮ 4. ಬಿ ಪಾಪಮ್ಮ 5. ಊಮಮ್ಮಾಜ 6. ಅರಿಮಮ್ಮ ಎಲ್ಲರೂ ನೇಯವಳ ಮಕ್ಕಳು. ಅರ್ಜಿದಾರರು.

ಮಂಗಳೂರು ತಾಲ್ಲೂ ಹೆಜ್ಜಾಡಿ ಗ್ರಾಮದ ನಿವಾಸದವರು.

1ನೇ ಅರ್ಜಿದಾರಳ ಮಗ ಹಾಲಿ ಮೃತಪಟ್ಟಿರುವ Hಅಬ್ದುಲ್ಲಜ್ಜಾರಿಗೆ ಬಹ ಇನ್ಶೂರೆನ್ಸ್ ಪಾಲಿಸಿಯ ವೆಚ್ಚು ವಸೂಲಿ ಬಗ್ಗೆ 1ನೇ ಅರ್ಜಿದಾರಳ ಹಸರಿಗೆ ವಾರಿಸು ಸರ್ಟಿಫಿಕೇಟು ಕೇಳಿ ಪಾಕ್ಟು ಮಾಡಿದ ಮೇಲಿನ ಅರ್ಜಿಯು ತಾರೀಕು 30-12-1949ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಇಟ್ಟೋಣಾಗಿದೆ. ಈ ಕುರಿತು ಯಾರಿಗಾದೂ ಆಕ್ಷೇಪಣೆಯಿಲ್ಲಿಕ್ಕೆ ಇದ್ದರೆ ಆ ದಿವ್ಸ ಬೆಳಿಗ್ಗೆ ಘಂಟೆ 11ಕ್ಕೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು.

(ಕೋರ್ಟು ಹುಕುಂ ಪ್ರಕಾರ)

ಬೈಕಾಡಿ ವಾಸುದೇವರಾವ್
ಅರ್ಜಿದಾರರ ಕಡೆ ಎಡ್ವೊಕೇಟ್.

ಕಾರ್ಕಳ
ತಾರೀಕು 3-12-1949

ಕೋವಿಲ್ಯಾಸೆನ್ಸ್ ಪಡೆಯುವಕ್ರಮ

ಕೋವಿಲ್ಯಾಸೆನ್ಸುಗಳನ್ನು ಬರುವ ವರ್ಷಕ್ಕೆ ಹೊಸದಾಗಿ ಪಡೆಯುವ ಬಗ್ಗೆ ಅರ್ಜಿ ಮಾಡುವಲ್ಲಿ ಹಲವರು ತಪ್ಪುಗಳು ಕಂಡು ಬಂದು, ಹೆಚ್ಚಿನ ಅರ್ಜಿಗಳನ್ನು ಹಿಂದಕ್ಕೆ ಕಳುಹಿಸಬೇಕಾಗಿ ಬಂತು ಎಂಬ ವಿಷಯವು ಜಲ್ಲಾ ಕಲೆಕ್ಟರರಿಂದ ತಿಳಿಯ ಬರುತ್ತದೆ.

ಕಳೆದ ವರುಷ ಅರ್ಜಿಗಳು ತಕ್ಕ ಕಾಲದಲ್ಲಿ ಹುಜೂರು ಕಚೇರಿಯಲ್ಲಿ ಕಲ್ಪದೆಯೂ ಹಲವು ಅರ್ಜಿಗಳು ಯಾಲಿ ಕಾಗದಗಳಲ್ಲಿ ಬರೆಯಲ್ಪಟ್ಟು ತಕ್ಕ ಕೋರ್ಟು ಸ್ಟಾಂಪು ಇಲ್ಲದಿದ್ದುದರಿಂದಲೂ ಹಲವು ರೈತರಿಗೆ ಲ್ಯಾಸೆನ್ಸುಗಳ ಅವಧಿ ಮುಗಿದೊಡನೆ ತಮ್ಮ ಕೋವಿಗಳನ್ನು ಪೋಲೀಸು ಕಚೇರಿಗಳಲ್ಲಿ ಇಡಬೇಕಾಗಿ ಬಂತು.

ಈ ವರ್ಷದಲ್ಲೂ ನವಂಬರ 30ಕ್ಕೆ ಅರ್ಜಿಗಳನ್ನು ಕೊಡುವ ಕಡೇ ದಿನವಾದರೂ ಹಲವರು ಇನ್ನೂ ಕೊಡುತ್ತಲಿದ್ದಾರೆ. ಆದಕ್ಕಾಗಿ

ಸರ್ವಿಸ್, ಪೋಸ್ಟ್‌ಮಾಸ್ಟರ್‌ಗಳೂ ಪಂದ್ಯಾಟದಲ್ಲಿ ಭಾಗವಹಿಸಿದ್ದರು. ಅತಿಥಿಗಳ ಪಂದ್ಯಾಟವೂ ಇತ್ತು. ಚ್ಯಾಂಪಿಯನ್‌ಶಿಪ್ ಕಪ್ ಮತ್ತು ಮೆಡಲ್‌ನ್ನು ಮಂಗಳೂರು ಟೌನ್ ಸರ್ಕಲ್ ಪೋಲೀಸರು ಜೆಟ್ಟು ಆಟಗಳನ್ನು ಗೆದ್ದು ಪಡೆದರು.

ಜಲ್ಲಾ ಕಲೆಕ್ಟರ್ ಜನಾಬ್ ಸಯ್ಯದ್ ಅಹಮ್ಮದರು ಬಹುಮಾನಗಳ ವಿತರಣೆಮಾಡಿದರು. ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ. ವಿ. ಸತ್ಯವಾಗೀಶ್ವರರು ಧನ್ಯವಾದಗಳನ್ನರ್ಪಿಸಿದರು. ಪ್ರೆಸಿಡೆನ್ಸಿ ಪೋಲೀಸ್ ಬೇಂಡಿನವರು ಸಂಪ್ರತಿಗಳಲ್ಲಿ ಭಾಗವಹಿಸಿದವರಿಗೆ ಹುರಿದುಂಬಿಸಿದ್ದರು.

THE

Dangal Nayak Bank Ltd.

NOTICE

It is hereby notified that in exercise of the Bank's first charge and paramount lien upon all the Shares of the Bank under Article 44 of the Articles of Association of the Bank the right, title and interest of Sri D. Vittal Annappa Pai, Dongerkeri, Mangalore in the ten fully paid up shares numbered 1968 to 1977 of Rs 100/- each standing in his name in the Books of the Bank inclusive of the right to dividends and bonuses for the period commencing from the 1st January 1947 will be disposed of at a public auction sale at the Registered Office of the Bank at Court Road, Udipi at 12 Noon on Saturday the 24th inst. subject to the following conditions:

(a) The upset price for each share will be such as will be fixed by the undersigned at the sale.

(b) If and when any doubts or discussion regarding the mode of sale of any item should arise each such item will be put up for sale once again.

(c) The successful bidders shall tender the entire purchase value in cash as soon as the sale is decaired by the undersigned as closed and final.

(d) The purchaser shall have no recourse against the Bank.

(e) The Bank reserves to itself the right to adjourn the auction sale to be held on the 24th inst. if it should not fetch fair values.

(f) The cost of conveyance and registration of transfer of shares in the Books of the Bank shall be borne by the successful purchasers.

Office of the Bank, Udipi,
5th December 1949.

D. Lakshman Nayak,
Secretary & Treasurer.

ಶ್ರೀ ರಾಮ ಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾರೀಕು 7—12—49 ರಿಂದ ಶ್ಯಾಮಳಾದವರ

ಇನ್ನವಲ್ಲಿ (ತಮಿಳು)

ಪಾತ್ರವರ್ಗ:– ಟಿ. ಆರ್. ಮಹಾಲಿಂಗಂ. ಬಿ ಯಸ್ ಸರೋಜ ಪಿ. ಕೆ. ಸರಸ್ವತಿ, ಕೃಷ್ಣನ್. ಮುಂಬರುವ

ಆನಂತರ. 16—12—49 ರಿಂದ ರಾಜಕಮಲ್

ಅಪ್ನಾ ದೇಶ್ (ಹಿಂದಿ)

ಪುಷ್ಪ ಹಂಸ್, ಉಮೇಶ್ ಶರ್ಮ
ರಾಂತಾರಾಮರ ಅಮೋಘ ಕೃತಿ.

ಲ್ಯಾಸೆನ್ಸು ಪಡೆಯಬೇಕೆಂದಿದ್ದವರು ಆದಷ್ಟು ಬೇಗನೆ ಅರ್ಜಿಗಳನ್ನು ಕಲೆಕ್ಟರರ ಕಛೇರಿಗೆ ಕಳುಹಿಸಬೇಕು. ದಶಂಬರ 31ರೊಳಗೆ ಲ್ಯಾಸೆನ್ಸು ಪಡಕೊಳ್ಳದಿದ್ದಲ್ಲಿ ಹಿಂದಿನಂತೆ ತಮ್ಮ ಕೋವಿಗಳನ್ನು ಪೋಲೀಸು ಸ್ಟೇಷನುಗಳಲ್ಲಿ ಇಡಬೇಕಾದೀತು. ಈಗಾಗಲೆ ಹಲವಾರು ಅರ್ಜಿಗಳು ಬಂದಿವೆ ಆದರೆ ಕೆಲವು ಕ್ರಮಪ್ರಕಾರ ಎರಡು ಆಣೆ ಕೋರ್ಟು ಫೀ ಸ್ಟಾಂಪು ಅಂಟಿಸದೆ ಇದ್ದುದಕ್ಕಾಗಿ ಅರ್ಜಿಗಳನ್ನು ವಾಪಾಸು ಮಾಡಲಾಗಿದೆ. ಅರ್ಜಿಮಾಡುವಾಗ ಅರ್ಜಿಕಾಗದಕ್ಕೆ ಎರಡು ಆಣೆ ಕೋರ್ಟು ಫೀ ಸ್ಟಾಂಪು ಹಚ್ಚುವುದು ಅತ್ಯಗತ್ಯ. ಬೆಳೆರಕ್ಷಣೆಗಾಗಿ ಕೋವಿ ಇಟ್ಟುಕೊಳ್ಳುವಲ್ಲಿ ಅರ್ಜಿಯೊಡನೆ ಅರ್ಜಿಯೊಂದಿಗೆ ಎರಡಾಣೆ ಕೋರ್ಟು ಫೀ ಸ್ಟಾಂಪು ಹಚ್ಚುವುದು ಅತ್ಯಗತ್ಯ. ಬೆಳೆರಕ್ಷಣೆಗಾಗಿ ಕೋವಿ ಇಟ್ಟುಕೊಳ್ಳುವಲ್ಲಿ ಅರ್ಜಿಯೊಡನೆ ಅರ್ಜಿಯೊಂದಿಗೆ ಎರಡಾಣೆ ಸ್ಟಾಂಪಲ್ಲದೆ ಬೇರೆ ಹಣ ಕಟ್ಟುವ ಅಗತ್ಯವಿಲ್ಲ.

ಅರ್ಜಿದಾರರಿಗೆ ಲ್ಯಾಸೆನ್ಸುಗಳನ್ನು ತಹಶಿಲ್ದಾರರ ಮೂಲಕ ಅಥವಾ ಗ್ರಾಮ ಪಟೇಲರ ಮೂಲಕ ಕೊಡುವ ವಿಷಯದು ಎಂದಿನಂತೆ ಮಾಡಲಾಗಿದೆ. ವಿಳಂಬ ಮತ್ತು ತೊಂದರೆಗಳಿಲ್ಲದೆ ಬೇಗನೆ ಲ್ಯಾಸೆನ್ಸುಗಳನ್ನು ಪಡೆಯಬೇಕೆಂದಿದ್ದಲ್ಲಿ ಅರ್ಜಿದಾರರು ಮೇಲೆ ಹೇಳಿದ ಕ್ರಮಪ್ರಕಾರ ಅರ್ಜಿಗಳನ್ನೂ ಚಲನಾಗಳನ್ನೂ ಲ್ಯಾಸೆನ್ಸುಗಳನ್ನೂ ರಿಜಿಸ್ಟ್ರಿ ಮಾಡಿ ಕಳುಹಿಸಿ ಕೊಡಲು ಬೇಕಾಗುವ ಟಪ್ಪಾಲು ಸ್ಟಾಂಪುಗಳನ್ನೂ ರಿಜಿಸ್ಟ್ರಿ ಮಾಡಿ ಕಲೆಕ್ಟರರ ಕಛೇರಿಗೆ ಸೀದಾ ಕಳುಹಿಸಿದ್ದಲ್ಲಿ ಲ್ಯಾಸೆನ್ಸುಗಳನ್ನು ಅರ್ಜಿದಾರರಿಗೆ ಕಲೆಕ್ಟರರ ಅಭಿಪ್ರಾಯದಲೇ ಸೀದಾ ಕಳುಹಿಸುವ ವಿಸ್ತಾರವನ್ನು ಮಾಡಲಾಗಿದೆ.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. S. No. 428/49
R. I. A No. 1219/49

ಶ್ರೀ ಕೆ. ನಾರಾಯಣರಾವ್ (as receiver)
—ವಾದಿ.

ಮತ್ತು

1) ಬಿಕ್ಕಯ್ಯ ಪೂಜಾರಿ, ತೋಮು ಪೆಂಗ್ಸಿನ ಮಗ 2) ಕಾಡಿಯ ಪೂಜಾರಿ, ಗಂಗೆ ಪೆಂಗ್ಸಿನ ಮಗ, ಮೂಡು ತೋನ್ಸೆ ಗ್ರಾಮ ದಲ್ಲಿರುವವರು. ಉಡ್ಪಿ ತಾಲ್ಲೂ.
—ಪ್ರತಿವಾದಿರು.

ಯಿವರೊಳಗೆ

ವಾದಿಯು ಪ್ಲೇಂಟು ನಿವೃತ್ತಿ ಬಗ್ಗೆ ದಾಕಲು ಮಾಡಿದ ಮೇಲ್ಕಂಡ ನಂಬ್ರವು ತಾ. 19-12-49ಕ್ಕೆ ತನ್ನಿಗೆ ಯಿಜೋಣಾಗಿಯಿದೆ. ಅದುದರಿಂದ ಈ ಬಾಬಿನಲ್ಲಿ ನೀವು ಯೇನಾದರೂ ಆಕ್ಷೇಪ ಹೇಳುವಂತಾದ್ದು ಯಿದ್ದರೆ ಸದ್ರಿ ತಾ. 19-12-49ನೇ ದಿವ್ಸ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಜ್ಞಾಪೀರು ಮಾಡಿಕೊಳ್ಳಲಿಕ್ಕೆ ತಪ್ಪಿದರೆ ಸದ್ರಿ ನಂಬ್ರದಲ್ಲಿ ನಿಮ್ಮನ್ನು ಯೆಕ್ಪಾರ್ಟೆ ಮಾಡಿ ತನ್ನಿಯಿಂದ ತೀರ್ಮಾನಿಸಲ್ಪಡುವದೆಂಬ ಸಂಗತ್ತಿಯಾ ಮೂಲಕ್ಕೆ ತಿಳಿಸೋಣಾಗಿಯಿದೆ.

Udipi
Date 29-11-49

K. J. Ballal,
Vakil for Plff.

ಸಾಸ್ತಳ್ಳಿದಾರರು ತೊಡುವ ದೃಢಪತ್ರಿಕೆ ಮತ್ತು ಮನೆವಾರ್ತೆ ಖರ್ಚಿಗೆ ಗೇಣಿ ಅಕ್ಕಿ ಪಡೆಯುವರೆ ರೈತನು ಕೊಡತಕ್ಕ ಅರ್ಜಿ ವಗೈರೆ ಫಾರ್ಮುಗಳು ದೊರೆಯತ್ತವೆ.

ನವಯುಗ ಸ್ಟೋರ್ಸ್, ಉಡುಪಿ.

ಗೀತೆ ಮತ್ತು ಗಾಂಧೀ ತತ್ತ್ವ

೧೪—೧೧—೪೯ರಲ್ಲಿ ಪ್ಯೂಸಿಂಡಿಯಾದಲ್ಲಿ ಬಂದಿರುವ ಲೇಖನದ ಸಂಕ್ಷಿಪ್ತ ಅನುವಾದಕರು — ಶ್ರೀ. ಯನ್. ಬಿ. ಸಿ. ಆಚಾರ್ಯರು.

ಸರ್. ಎಸ್. ರಾಧಾಕೃಷ್ಣನರು ಮಾಸ್ಕೋಕ್ಕೆ ನಮ್ಮ ರಾಯಭಾರಿಗಳಾಗಿ ಹೋಗಿರುವರೆಂಬ ಸುದ್ದಿಯನ್ನು ಕೇಳಿದವನ ಮನಸ್ಸಿನಲ್ಲಿ ಅವರ ಹಿಂದಿನ ಜೀವನದ ಚಿತ್ರಗಳು ಒಂದರ ಹಿಂದೆ ಒಂದು ಬರಲಾರಂಭಿಸುವುವು. ಅವರು ಮೊದಲು ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಪ್ರೊಫೆಸರರಾಗಿದ್ದಾಗ ಅವರ ಪಾಂಡಿತ್ಯವನ್ನು ಕುರಿತು ಅಲ್ಲಿಯ ವಿದ್ಯಾರ್ಥಿಗಳು ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಗೆ ಬೀಳುವುವು. ಅವರು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಪ್ರೊಫೆಸರರಾಗಿದ್ದಾಗ ಅವರ ಉಪನ್ಯಾಸಗಳನ್ನು ಕೇಳಿ ಆನಂದಿಸಿದ ವಿದ್ಯಾರ್ಥಿಗಳ ಹೊಗಳಿಕೆಯ ಮಾತುಗಳು ಕಿವಿಗೆ ಬೀಳುವುವು. ಅವರು ಕಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಅವರ ಆಡಳಿತ ಸಾಮರ್ಥ್ಯವನ್ನು ಕುರಿತು ಅಲ್ಲಿಯ ಜನರು ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಗೆ ಬೀಳುವುವು. ಅವರು ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಅವರ ಆಡಳಿತ ಸಾಮರ್ಥ್ಯವನ್ನು ಕುರಿತು ಅಲ್ಲಿಯ ಜನರು ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಗೆ ಬೀಳುವುವು. ಅವರು ಕಾಶಿ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದಾಗ ಅವರ ಆಡಳಿತ ಸಾಮರ್ಥ್ಯವನ್ನು ಕುರಿತು ಅಲ್ಲಿಯ ಜನರು ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಗೆ ಬೀಳುವುವು. ಅವರು ಯುನೆಸ್ಕೋ ಸಂಸ್ಥೆಯ ಕಾರ್ಯಕಾರಿ ಮಂಡಲಿಯ ಸದಸ್ಯರಾಗಿದ್ದಾಗ ಅವರ ಅಭಿಪ್ರಾಯಗಳನ್ನು ಕುರಿತು ಅಲ್ಲಿಯ ಸದಸ್ಯರು ಆಡಿಕೊಳ್ಳುತ್ತಿದ್ದ ಮಾತುಗಳು ಕಿವಿಗೆ ಬೀಳುವುವು. ಅವರು ಯುನೆಸ್ಕೋ ಸಂಸ್ಥೆಯ ಅಧ್ಯಕ್ಷರಾಗಿದ್ದಾಗ ಅವರ ಅಧ್ಯಕ್ಷೀಯ ಭಾಷಣಗಳನ್ನು ಕುರಿತು ಅಲ್ಲಿಯ ಸದಸ್ಯ

ತಿನಲಿಂ ರಷ್ಟಿಯನ್ನೆಸಿಜ್ಞನನ್ನು ಸೋಪಿಜಿ ನೆ ನ್ನ ಬಾಮನ್ನಿಗಾಗಿ ತೆಂ ನಾಳ ಹೇ ಳುವುದೀಗ ನಿಜಗಿಗಿಯೂ ಬಿಸ್ಮಯಂಪಡಿಪು. ಸೈನಿಕ-ರಾಜಕೀಯ ಗೀತಾ ಬೋಧೆಗಿಂತಲೂ ಸ್ಮಿಪ ಎಲಾ ಶ್ರೀಕೃಷ್ಣನಾದುದು ವೈಯ್ಯಕ್ತಿಕ ಕಾರಣಗಳಿಗಾಗಿ ರಾಷ್ಟ್ರಗಳ ಏಕ್ಯಜಿವನದಲ್ಲಿ ಗಾಂಧೀ ಸೂತ್ರವನ್ನು ಉಪಯೋಗಕ್ಕೆ ತರುವುದು ಅಸಾಧ್ಯವಲ್ಲದಿದ್ದರೂ ಬಹಳ ಕಷ್ಟವೆಂಬುದು ನಿಜವೇ; ಆದರೆ ಅದರಿಂದ ಗಾಂಧೀ ಧರ್ಮದ ಮೇಲ್ಮೆಗೆ ಕಳಂಕ ಬರುವುದಿಲ್ಲ.

ನಾಸ್ತಿಕನಾದ ಸ್ಟಾಲಿನ್, ಗಾಂಧೀ ಧರ್ಮದಿಂದ ಭಿನ್ನವಾಗಿ ಪ್ರಾಪಂಚಿಕ ಪೇದಾಂತದಿಂದ ಕೂಡಿರುವ ಈ ಗೀತಾ ತತ್ವವನ್ನು ತಿಳಿಯುದಿರುವನೇ! ಸರ್. ರಾಧಾಕೃಷ್ಣನರು ಸ್ಟಾಲಿನ್ನರನ್ನು ಇನ್ನೂ ಭೇಟಿ ಮಾಡಿಲ್ಲ; ಇವರ ಹಿಂದಿನ ರಾಯಭಾರಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಂತೆ ಇವರಾದರೂ ಸ್ಟಾಲಿನ್ನರನ್ನು ನೋಡದೆಯೇ ರಾಯಭಾರ ಅವಧಿಯನ್ನು ಮುಗಿಸುವುದೂ ಸಾಧ್ಯವಿದೆ. ಆದರೆ ನಮ್ಮ ಹಿಂದೂ ನೇವಂತಿಯ ಈ ಎರಡು ವಿಷಯಗಳ ಬಗ್ಗೆ ಸ್ಟಾಲಿನ್ನರ ಪ್ರತಿಕ್ರಿಯೆಯೇನೆಂಬುದನ್ನು ಸುಲಭವಾಗಿ ಯೋಚಿಸಬಹುದಾಗಿದೆ. ಪ್ರಪಂಚದ ರೋಗಗಳಿಗೆಲ್ಲಾ ಸಮತಾವಾದವೇ ಮದ್ದು ಎಂದು ನಂಬಿರುವ ಸ್ಟಾಲಿನ್ನರು ತಮ್ಮ ಕಚೆಯೇ ಧರ್ಮವಿದೆಯೆಂದೂ, ನುತ್ತು ತನ್ನ ಕಟ್ಟು ಬಂದವಾಳಾಳಿಯಿಂದ ಕೂಡಿರುವಅಮೆರಿಕನ್ ದುರ್ಯೋಧನನೇ ನಾಶಕದಿಂದ ಸ್ವರ್ಗಕ್ಕೆ ಹೋಗುವ ಪಾದಿಯಲ್ಲಿ ಏಕಪಾತ್ರ ಪ್ರತಿಬಂಧಕನೆಂದೂ ಸಾದಿಸುವರು. ಆಮೆರಿಕನ್ ಕಾಪಿಟಲಿಸ್ಟರೊಡನೆ ತಾನು ಮಾಡುವ ಯುದ್ಧವು ಸರಿಯೆನ್ನಲು ಸ್ಟಾಲಿನ್ನರು ಗೀತೆಯು ತನ್ನ ಕಚೆಯಿಡೆಯೆ ನ್ನಬಹುದು. ಪಾಷಿಂಗ್ವನಿನಿರ್ಜರುವ ದುರ್ಯೋಧನನ ನಾನಪಾತನೆಯ ಪ್ರಶ್ನೆಯೇ ಇಲ್ಲ; ಇವುದು ಅವರೊಡನೆ ಬೋಧಾದಿ ನಿರ್ಣಯಿಸುವುದೊಂದೇ ಮಾರ್ಗ. ಗೀತೆ ಮಂದಿರಿಂದಲೂ ಹಳೆಯ ಅರ್ಜುನನು ತನ್ನ ಯುದ್ಧವನ್ನು ಗೆಲ್ಲಲಿಲ್ಲವೆಂಪರೆ, ಸ್ಟಾಲಿನ್ನರು ತನ್ನ ಗೀತೆಯ ಸಹಾಯಕ್ಕೆ ಅಟಂಬಾಂಬನ್ನು ಇಟ್ಟಿರುವುದು ಉತ್ತರ ಹೇಳುವರು.

ಈ ರೀತಿ ಟ್ರೂಮನ್ನರೂ ಸಹ ಇದೇ ಧಾಟಿಯಲ್ಲಿ ಮಾಸ್ಕೋದಲ್ಲಿರುವ ಈ ನವೀನ ದುರ್ಯೋಧನನನ್ನೂ ಅವನ ಸಮತಾವಾದಿ ಸಚಿವರನ್ನೂ ಸೋಲಿಸಿ ಸಾಯಿಸಿದಲ್ಲದೆ ಬೇರೆ ಮಾರ್ಗವಿಲ್ಲವೆಂದು ಪಾದಿಸುವರು. ಇದಕ್ಕಾಗಿ ಅರ್ಜುನನಿಗಿದ್ದಂತೆ ತಮ್ಮ ಕೈಯಲ್ಲೂ ನೀತಿ, ಆಟಂಬಾಂಬು ಎಂಬೂ ಇವೆಯೆಂಬುದು ಸರಿ. ಅದ್ದರಿಂದ ಸ್ಟಾಲಿನ್ ಮತ್ತು ಟ್ರೂಮನ್ ಇಬ್ಬರೂ ಸರ್. ರಾಧಾಕೃಷ್ಣನ್‌ರನ್ನು ಕುರಿತು ತಮ್ಮ ತಮ್ಮ ಪಕ್ಷವೇ ಧರ್ಮಯುಕ್ತವಾಗಿದೆ, ಕೃಷ್ಣನು ಬಹಳ ಬಂದೆಯೇ ಬೋಧಿಸಿದಂತೆ ಯುದ್ಧಮಾಡಿ ಒಬ್ಬರನ್ನೊಬ್ಬರು ಹತಮಾಡುವುದೇ ತೆರೆದ ಮಾರ್ಗವೆಂದು ಹೇಳುವುದರಲ್ಲಿ ಏನೂ ಸಂಶಯವಿಲ್ಲ.

ಹಾಗಾದರೆ ದುರ್ಯೋಧನನ್ನಾರು?

ಈ ಆಧುನಿಕ ಗೀತಾ ವ್ಯಾಖ್ಯಾನದಲ್ಲಿ ಪ್ರಪಂಚವನ್ನು ಕಾತುಕಗೊಳಿಸಿರುವ ಪ್ರಶ್ನೆಯಿಂದರೆ ಆ ದುರ್ಯೋಧನನ್ನಾರು? ಸ್ಟಾಲಿನರೇ ಅಥವಾ ಟ್ರೂಮನ್‌ರೇ? ಸ್ಟಾಲಿನ್‌ರಿಗೂ ಆವರ ಮಿತ್ರರಿಗೂ ಟ್ರೂಮನ್-ದುರ್ಯೋಧನನ ಮುಂದಾಳುತನದಲ್ಲಿರುವ ಬಂಡ ಜಾಳಶಾಹಿಯು ದುಷ್ಟ ಶಕ್ತಿ. ಟ್ರೂಮನ್ನರಿಗೂ ಆವರ ಅನುಯಾಯಿಗಳಿಗೂ ಸ್ಟಾಲಿನ್-ದುರ್ಯೋಧನನ ಮುಂದಾಳುತನದಲ್ಲಿರುವ ಬಂಡ ಜಾಳಶಾಹಿಯು ದುಷ್ಟ ಶಕ್ತಿ. ಟ್ರೂಮನ್ನರಿಗೂ ಆವರ ಅನುಯಾಯಿಗಳಿಗೂ ಸ್ಟಾಲಿನ್-ದುರ್ಯೋಧನನ ಮುಖಂಡತ್ವದಲ್ಲಿರುವ ಸಮತಾವಾದವು ದುಷ್ಟಶಕ್ತಿ. ನವಮಹಾಭಾರತವನ್ನು ಬರೆಯುವ ಇತಿಹಾಸಕಾರ ವ್ಯಾಸನು ಇನ್ನೂ ಹುಟ್ಟಲ್ಲ. ಮುಂದಿನ ಕುರುಕ್ಷೇತ್ರಕ್ಕೆ ಕಾರಣವಾಗುವ ಸಂಗತಿಗಳು, ನವ ದುರ್ಯೋಧನನ್ನಾರು ಎಂಬ ತೀರ್ಮಾನ, ಮೂರನೇ ಮಹಾಯುದ್ಧವು ಮುಗಿದ ಮೇಲೆಯೇ ಗೊತ್ತಾಗಬಲ್ಲುದು. ಅದು ವರೆಗೆ ಪ್ರಪಂಚವು ಶೆಟ್ಟಿನವನಾರೆಂದು ಆಶ್ಚರ್ಯಪಡುತ್ತಾ ಕುಳಿತಿರಬೇಕು.

ಕಳೆದ ಯುದ್ಧದಲ್ಲಿ ನಾಜೀ ಸೈನ್ಯಗಳು ಮಾಸ್ಕೋವಿಗೆ 30 ಮೈಲಿಯಷ್ಟು ಹತ್ತಿರಕ್ಕೆ ಬಂದು ಸೋವಿಯೆಟ್ ರಷ್ಯಾಕ್ಕೆ ಕಪ್ಪವನ್ನಿಸಿದಾಗ, ನಾಸ್ತಿಕವಾದಿ ರಷ್ಯಾಕ್ಕೆ ಇದಕ್ಕಿಂತ ಉತ್ತಮ ಗತಿ ಎಲ್ಲಿ ದೊರಕೀತೆಂದು ಏಂದೂಸ್ಥಾನದಲ್ಲಿನ ಮಂದಿ ಕ್ರೋತ್ರಿಯರೆಂದಿದ್ದರೆ ಆಶ್ಚರ್ಯವಲ್ಲ. ಸ್ಟಾಲಿನ್ನರೇ ದುರ್ಯೋಧನನೆನಿಸಿತ್ತು ಆವರಿಗೆ. ಸಮತಾವಾದಿ ರಾಕ್ಷಸ ಸಂಹಾರಕ್ಕೆ ಭೂಮಿಯಲ್ಲವತರಿಸಿದ ವಿಷ್ಣುವಿನ ಪನ್ನೊಂದನೆ ಅವತಾರನೇ ಹಿಟ್ಲರನಾಗಿದ್ದನವರಿಗೆ. ಒಂದು ವೇಳೆ ಹಿಟ್ಲರೇನಿ ಹಿಂದಿನ ಯುದ್ಧದಲ್ಲಿ ಗೆದ್ದಿದ್ದರೆ ವೈದಿಕ ಹಿಂದೂಗಳು ಅವನನ್ನು ಸೊಗಳಿ ವಿಷ್ಣುವಿನ ಪನ್ನೊಂದನೇ ಅವತಾರವೆಂದು ಪೂಜಿಸುತ್ತಿದ್ದುದರಲ್ಲಿ ಏನೂ ಸಂಶಯವಿಲ್ಲ.ಕೃಷ್ಣನಂತೆಯೇ ಹಿಟ್ಲರನೂ ದುಷ್ಟ್ಯತಂತ್ರನ್ನು ನಾಶ ಮಾಡಿ, ಜರ್ಮನ್ನಾಡ್ಯರ ಆಶ್ರಯದಲ್ಲಿ ಭೂಮಿಯಲ್ಲಿ ಧರ್ಮಸಂಸ್ಥಾಪನೆ ನಾಡುವುದಕ್ಕೋಸ್ಕರ ಅವತರಿಸಿದ ದೇವರೇ ನಾನೆಂದು ಸಾರಿದನು. ಬರ್ಚಿಸ್‌ಗೆಡನ್ನಿನ ಅವನ ಪರ್ವತಾಶ್ರಯದಲ್ಲಿ ಅವನು [ಬಾಂಬಿನ ಉಪಹತಿಯಿಂದ ಪಾರಾದುದು, ಸ್ಟಾಲಿನ್ ಚರ್ಚಿಲ್ ರೂಸವೆಲ್ಟ್ ಹೊರತಾಗಿ, ಅವನ ಮತ್ತು ಅವನ ವಂದಿಮಾಗಧರ ಈ ನಂಬಿಕೆಯನ್ನು ದೃಢಪಡಿಸಿತು. ಆದರೆ ಮಾಸ್ಕೊ ದುರ್ಯೋಧನನ ವಿಜಯಪರಂಪರೆಯು ಈ ನೀಚ್ಚಕರ ನೀಚ್ಚೇಷ್ಟೆಯನ್ನು ವಿಫಲಗೊಳಿಸಿ ಗಿಳಿಕೊಳಗೆ ಮಾಸ್ಕೊ ಪೆಸ್ಟನ್ನು ಸಾಜನ ಅರ್ಜುನನಾದನು. ವಿಜಯವನ್ನು ಜಯದಿಂದಲೇ ನಿರ್ಧರಿಸಬೇಕಾಗಿದೆಯಾಗಿ, ಮೂರನೇ ಮಹಾಯುದ್ಧದ ಅರ್ಜುನನ್ಯಾರೆಂಬುದನ್ನು ಅದು ಮುಗಿದ ಮೇಲೆಯೇ ಪ್ರಪಂಚವು ಕಾಣಲು ಸಾಧ್ಯ. ಅ ನುಹಾದಿನವು ಬರುವವರೆಗೂ —ಈ ನಮ್ಮ ಗಾಂಧೀ ತತ್ವಕ್ಕೆ ಅವಕಾಶವೇ ಇಲ್ಲವೆ ನ್ನೋಣ—ಸ್ಟಾಲಿನ್ ಮತ್ತು ಟ್ರೂರ್ಮನ್‌ರಿಬ್ಬರೂ ಸರ್. ರಾಧಾಕೃಷ್ಣನ್‌ರನ್ನು ಆವರ ಬುದ್ಧಿವಾದಕ್ಕಾಗಿ ವಂದಿಸಿ, 'ಸ್ವಾಮಿ, ನಮ್ಮ ಗಾಂಧೀ ಧರ್ಮದ ಮೇಲ್ಮೆಯನ್ನೂ ಉಪಯುಕ್ತತೆಯನ್ನೂ ಕಾಶ್ಮೀರದಲ್ಲಿ ಪ್ರಯೋಗಿಸಿ ನೋಡಬಾರದೆ?' ಎಂದು ಕೇಳಿಕೊಳ್ಳಬಹುದು.

ಇಂಥ ಗಾಂಧೀ ಧರ್ಮವನ್ನು ಸ್ಥಾಪಿಸಿದ ಗಾಂಧಿಜಿಯೇ, ಗೀತೆಯನ್ನು ಪಾಕಿಸ್ತಾನದ ಮೇಲೂ ಜೆರ್ಸಿಯಮುಸಲ್ಮಾನರಮೇಲೂ ಪ್ರಯೋಗಿಸಲು ತಕಸ್ಮರಿಸಿದುದಕ್ಕಾಗಿ ಜನರಾದುದು ತುಂಬಾ ಶೋಚನೀಯ. ಧರ್ಮಾಂಧ ಹಿಂದುವಿಗೆ ಜಿನ್ನನು ದುರ್ಯೋಧನನಾಗಿದ್ದನು. ಗೀತೆಯು ರಾವನಿಯು ಆಚೆಗಿದ್ದ ದುರ್ಯೋಧನನ ಮನಃಪರಿವರ್ತನೆಯನ್ನು ಮಾಡಲು ಬೇರೆ ಮಾರ್ಗವಿಲ್ಲವೆಂದು ಕೌರವ-ಪಾಕಿಸ್ಥಾನದ ಮೇಲೆ ಧರ್ಮಯುದ್ಧ ನಡೆಸಲು ಹೇಳಿತು. ಪಾಕಿಸ್ಥಾನ ಮಕ್ತ ಜೆಲ್ಲಿ ಮುಸ್ಲಿಮರ ಮೇಲೆ ಉಪಯೋಗಿಸಲ್ಪಟ್ಟ ಗೀತಾಶಾಸ್ತ್ರವು ಹೆಚ್ಚಿನ ಸೈನಿಕ ಶಕ್ತಿಯಿಂದ ಬಲವತ್ತರವಾಗಿದ್ದುದರಿಂದ ಮತ್ತಷ್ಟು ಧರ್ಮಲಿಪ್ತವಾಗಿತ್ತು. ಆದರೆ ಗಾಂಧಿಯು ತನ್ನ ಆಧ್ಯಾತ್ಮಿಕ ಮಹಾತ್ಮ್ಯದಲ್ಲಿಯೂ, ನೈತಿಕ ನಿಲುವಿನಲ್ಲಿಯೂ, ಸತ್ಯದಿವ್ಯ ಸ್ವಭಾವದಲ್ಲಿಯೂ ಗೀತೆಯನ್ನು ಉಪಯೋಗಿಸಲು ತಿರಸ್ಕರಿಸಿದನಷ್ಟೆ ಅಲ್ಲ, ದ್ವೇಷವನ್ನು ಪ್ರೇಮದಿಂದ ಎದುರಿಸಲು ಗಾಂಧೀ ತತ್ವವನ್ನು ಪ್ರಯೋಗಿಸುವ ಧೈರ್ಯವನ್ನೇ ಮಾಡಿದನು. ಮಾನವೀಯ ಗೀತೆಯ ಆಶ್ರಯದಲ್ಲಿ ಬೆಳೆದ ಹಿಂದೂ ಧರ್ಮವು, ಗಾಂಧೀ ಧರ್ಮದಲ್ಲಿ ಒಂದೇ ಒಂದು ಪ್ರಯೋಗವನ್ನಾದರೂ ನಡೆಸಲು ಎಡೆಗೊಡಲಿಲ್ಲ, ತನ್ನ ತರ್ಕಕ್ಕನುಸಾರವಾಗಿ ಅವನನ್ನೇ ಕೊಂದಿತು. ಗೀತೆಯನ್ನು ಧಿಕ್ಕರಿಸಲು ಧೈರ್ಯಮಾಡಿದುದರಿಂದ ಗಾಂಧಿಯನ್ನು ಇಂಡಿಯಾದ ರಾಜಧಾನಿಯಲ್ಲೇ, ಬಿಳ್ಳಂಬೆಳಗಿನಲ್ಲೇ ಕೊಲ್ಲಲಾಯಿತು.

"ಧರ್ಮ

('ವಿಶ್ವಕರ್ಮದಿಂದ')

ನೋಟೀಸು.

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

ಸ್ಮಾಲ ನಂಬ್ರ 110/1948

R. E. P. No. 266/1949

ವಾದಿ ಕುಸ್ಟಣ್ಣ ಶೆರೆಗಾರ.ಅರ್ಜಿದಾರ.

ಪ್ರತಿವಾದಿರು ಗೋವಿಂದ ಸೆರೆಗಾರ ಸೊತ್ತಿ ಕೂಡಾ. —ಎದ್ರಿರು.

2ನೆ ಪ್ರತಿವಾದಿ ಸುಬ್ರಾಯ ಶರೆಗಾರ, ಅ ಪ್ಪಯ್ಯ ಶೆರೆಗಾರನ ಮಗ, ಕುಂದಾಪುರ ತಾಲ್ಯ ಬೈಂದೂರು ಗ್ರಾಮದಲ್ಲಿರುವವಾ. ರಹಿತ್ತ, Post Byndoor·

ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ ಕೂಡಾ ಪಡದ ಮೇಲಿನ ದಿಕ್ರಿ ಸಮಾಧಾನದ ಬಗ್ಗೆ ನಡ್ಡಿದ ಮೇಲಿನ ಅಮಲಜಾರಿಯಲ್ಲಿ ಪ್ರತಿವಾದಿರ ಮೂಲಗೇಣ ಹಕ್ಕಿನ ಆಸ್ತಿ ಯೆಲಮ್ಮಿಗೆ ಆಸೇಕ್ಟಿಸಿರುತ್ತಾನೆ. ಸದ್ರಿಯೆಲಮ್ಮಿ ನಕುರಿತು ಯಿನ್ಸ್ಟ್ರೂಮಿನ ದರ್ಕಾರ್ಣಯದೆ ಬಗ್ಗೆ ತಾ 17-12-49ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಯಿಡೊಣವಾಗಿರುತ್ತದೆ. ಆ ಕುರಿತು ಆ ಕ್ಷೇಪಣ ಯೇನಾದರೂ ಯಿದ್ದರೆ ಸದ್ರಿ ದಿನ್ನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹ ಯಾ ವಕೀಲರ ಮುಕಾಂತ್ರ ಹಾಜ್ರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಎಕ್ಸಪಾರ್ಟಮಾಡಿ ನಿಮಗೈರಹಾಜರಿಯಲ್ಲಿ ಸದ್ರಿ ಅಮಲಜಾರಿಯನ್ನು ತಿರ್ಮಾನಿಸೋದಾದೀತೆಂದು ಈ ನೂಲ್ಯ ತಿಳುಹಿಸೋಣಾಗುತ್ತದೆ.

ಮೊಕ್ಕಾಂ ಕುಂದಾಪುರ }
ತಾರಿಕು 26—11—49 }

M. M. Hebbar
Advocate for Petitioner

ವಿವಿಧ ಪಾತ್ರೆಗಳು

ಯಾವಕ್ಕೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚಿನ ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಪೇರಿಗಾಗಿಯೂ ಮಾರಲಿಕ್ಕಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

ಡಿ ಎನ್. ಪುಡಿತರ ಶ್ರೇಷ್ಠವಾದ

ಪಾಥಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

Nambiar's

ARYA VAIDYA SALA

UDIPI

Ideal House for Ayurvedic Treatment.

K. M. Kelu Nambiar,
Vaidya

ಜೀವವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡೀಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕೂ, ಲಿಮಿಟೆಡ್.

(ಸ್ಥಾಪನೆ: 1934)

ಜೆಯರ್‌ಮೆನ್: ಶ್ರೀ. ಎಮ್. ಟಿ ಎಸ್. ಚಿದಂಬರನ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಜವರ ವಿಮೆಸ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ವ್ಯವಹಾರವಾಗಿದೆ.

ಸಂಗಳೂರು ಶಾಖೆ:
ಕೆ. ಎಸ್. ಆರ್. ಟಿ ಸಿ ಪಕ್ಕ,
ಹಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನ್ಯಾಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸ್ ನಂಬ್ರ 142
ಮದ್ರಾಸು.

ಬಿಳಿ ಕಾಗದ! ನಾಟೂಕಿನ ಬೈಂಡು!

1950ನೇ ಇಸವಿಯ

ಪಾಕೆಟ್ ಡೈರಿಗಳು

ದೊಡ್ಡದು	(ಕೆಲಿಕೊ ಬೈಂಡ್)	1-12 0
,,	(ಸಾದಾ ಬೈಂಡ್)	1-8-0
ಹದ ನೈಜು	(ಕೆಲಿಕೊ)	1-4-0
,,	(ಸಾದಾ)	1-0-0
ಸಣ್ಣದು	(ಕೆಲಿಕೊ)	1-0-0
,,	(ಸಾದಾ)	0-12-0

(ಟಪ್ಪಾಲು ಖರ್ಚು ಪ್ರತ್ಯೇಕ.)

ಸಿಗುವ ಸ್ಥಳಗಳು:—

ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ESTD. 1926

KARNATAK RUBBER STAMP CO.

MFRS OF RUBBER STAMPS & ENGRAVERS

BALMATTA ROAD, UDUPI (S. K.)

Approved firm by the Govt. of Mysore Certificated by the Agent of the Govt of Gylone & Indian.

ಕಾಂಗ್ರೆಸಿನ ಹೊಸ ಘಟನೆಯು ಮೇರೆಗೆ ಈ ವರ್ಷ ಕಾಂಗ್ರೆಸು ಸಂಘಟಿಸಲ್ಪಡುವುದು ಮತ್ತು ವರ್ಷಕ್ಕೊಮ್ಮೆ ನಡೆವ ಚುನಾವಣೆಯು ಹೋಗಿ ಇನ್ನು ಮುಂದೆ ಮೂರು ವರ್ಷಕ್ಕೊಮ್ಮೆ ಮಾತ್ರ ಚುನಾವಣೆ ನಡೆಯುವುದು.

ಹೊಸ ಘಟನೆಯಲ್ಲಿ ಹಿಂದಿನ ನಾಲ್ಕಾಣೆ ಸದಸ್ಯತನ ಮತ್ತು ಆ ಮೂಲಕ ನೆಟ್ಟಿಗೆ ಕಾಂಗ್ರೆಸ್ ಪ್ರತಿನಿಧಿಗಳ ಚುನಾವಣೆಯು ರದ್ದಾಗಿ ಮೂರು ವಿಧದ ಸದಸ್ಯತನವು ಜಾರಿಗೆ ತರಲ್ಪಟ್ಟಿದೆ.

ಪ್ರಾಥಮಿಕ ಸದಸ್ಯರು—'ಹಿಂದುಸ್ಥಾನವ ಜನತೆಯ ಸುಖ ಹಾಗೂ ಪ್ರಗತಿಯನ್ನು ಸಾಧಿಸುವ ಮತ್ತು ವಿಶ್ವಬಾಂಧವ್ಯ ಹಾಗೂ ಶಾಂತಿಯ ಗುರಿಯುಳ್ಳ, ರಾಜಕೀಯ, ಆರ್ಥಿಕ, ಸಾಂಘಿಕ ಸಮತೆಯ ತಳಹದಿಯ ಮೇಲೆ ಹಿಂದುಸ್ಥಾನದಲ್ಲಿ ಯೋಗ್ಯ ಮತ್ತು ಶಾಂತ ಉಪಾಯಗಳಿಂದ ಸಹಕಾರೀ ರಾಜ್ಯಪದ್ಧತಿಯನ್ನು ಸ್ಥಾಪಿಸುವ' ಕಾಂಗ್ರೆಸಿನ ಧ್ಯೇಯದ ಮೇಲೆ ವಿಶ್ವಾಸವಿದ್ದು 21 ವರ್ಷ ಪ್ರಾಯಕ್ಕೆ ಬಂದಿರುವ ಸ್ತ್ರೀಪುರುಷರೆಲ್ಲರೂ, ಯಾವ ರೀತಿಯ ವರ್ಗವನೆಯೂ ಇಲ್ಲದೆ ಈ ವರ್ಗದ ಸದಸ್ಯರಾಗಿ ಸೇರಬಹುದು. ಸಾಮಾನ್ಯವಾಗಿ ಪ್ರತೀ 5000 ಜನಸಂಖ್ಯೆಯಿರುವ ಪ್ರದೇಶದಲ್ಲಿ, ಆವರ ಪ್ರಾಯಸ್ಥ ಜನಸಂಖ್ಯೆಯಾದ ಸುಮಾರು 2,500 ಮಂದಿಯಲ್ಲಿ ಅತಿ ಕಡಿಮೆಯೆಂದರೆ ಶೇಕಡಾ 8 ಅಂದರೆ 200 ಪ್ರಾಥಮಿಕ ಸದಸ್ಯರು ಕಾಂಗ್ರೆಸ್ ಮೆಂಬರರಾಗಿ ಸೇರಿದಲ್ಲಿ ಒಂದು ಕಾಂಗ್ರೆಸ್ ಪಂಚಾಯತನ್ನು ಸ್ಥಾಪಿಸಲಾಗುವುದು. ಇಡೀ ಜಿಲ್ಲೆಯ 14 ಕಾಂಗ್ರೆಸ್ ಸರ್ಕಲ್‌ಗಳಲ್ಲಿಯೂ ಈಗ ಕಾಂಗ್ರೆಸ್ ಪಂಚಾಯತಗಳು ಸ್ಥಾಪಿಸಲ್ಪಟ್ಟು ಪ್ರಾಥಮಿಕ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಕೆಲಸವು ಕಳೆದ ತಾ. 15ರಲ್ಲಿ ಕೊನೆಗೊಂಡಿದೆ ಮತ್ತು ಸೇರಿಸಲ್ಪಟ್ಟ ಸದಸ್ಯರ ಪಟ್ಟಿಗಳು ಆಯಾ ಪಂಚಾಯತ ಪ್ರದೇಶದಲ್ಲಿ ಪ್ರಕಟಿಸುವ ವ್ಯವಸ್ಥೆ ನಡೆದಿದೆ. ಇಡೀ ಜಿಲ್ಲೆಯಲ್ಲಿ ಸುಮಾರು 2 ಲಕ್ಷ ಕಾಂಗ್ರೆಸ್ ಸದಸ್ಯತನದ ಫೋರ್ಮ್ ಹಂಚಲ್ಪಟ್ಟು ಸಾಮಾನ್ಯ 1 ಲಕ್ಷ ಪ್ರಾಥಮಿಕ ಸದಸ್ಯರು ಸೇರಿಸಲ್ಪಡುವರೆಂದು ಅಂದಾಜು ಮಾಡಲಾಗಿದೆ. ಕಾಯಮಾದ ಕಾಂಗ್ರೆಸ್ ಪಂಚಾಯತಗಳ ಚುನಾವಣೆಯು ಬರುವ ಜನವರಿ ತಿಂಗಳಲ್ಲಿ ನಡೆಯಲಿರುವುದು. ಪ್ರಾಥಮಿಕ ಸದಸ್ಯರ ಸಂಖ್ಯೆಯು 200 ಆದಲ್ಲಿ 3 ಮಂದಿ ಮತ್ತು ಆದಕ್ಕಿಂತ ಹೆಚ್ಚಾದಲ್ಲಿ ಪ್ರತಿ ಮಾವಧಿ 10 ಮಂದಿಯ ವರೆಗೆ ಕಾಂಗ್ರೆಸ್ ಪಂಚಾಯತರನ್ನು ಆರಿಸುವ ಹಕ್ಕು ಈ ಪ್ರಾಥಮಿಕ ಸದಸ್ಯರದ್ದಾಗಿದೆ. ಆ ಮೇಲೆ ಕಾಂಗ್ರೆಸಿನ ಎಲ್ಲಾ ಸ್ಥಾನಗಳಿಗೂ ಪಟಕೊಟ್ಟು ಚುನಾವಣೆ ಮಾಡುವ ಜನರಾದರೆ ಈ ಪಂಚಾಯತ ಸದಸ್ಯರು.

ಅಧಿಕೃತ ಸದಸ್ಯರು—ರೂಪಾಯಿ ಒಂದರಂತೆ ವರ್ಗಣಿ ತೆತ್ತು ಕಾಂಗ್ರೆಸಿನ ಧ್ಯೇಯಕ್ಕೊಪ್ಪುವ, ಇನ್ನು ನುಡಾದಾವೂ ಸತತ ಬಾಧಿ ಧರಿಸುವ, ಮಾದಕ ಪೇಯಗಳನ್ನು ತ್ಯಜಿಸುವ, ಯಾವುದೇ ರೀತಿಯ ಅಸ್ಪೃಶ್ಯತೆಯನ್ನು ಮನ್ನಿಸದೆ ಮತ್ತು ಪಾಲಿಸದೆ, ಅಂತರ್ಜಾತೀಯ ಒಕ್ಕೂಟವನ್ನು ದೃಢ ವಿಶ್ವಾಸ ಮತ್ತು ಅನ್ಯಧರ್ಮ ಸಹಿಷ್ಣುತೆ ಇರುವ, ಜಾತಿ ವರ್ಣ ಲಿಂಗಭೇದವಿಲ್ಲದೆ ಸರಿಸಮಾನ ಸ್ಥಾನಮಾನ ಮತ್ತು ಹಕ್ಕುಗಳು ಎಲ್ಲರಿಗೂ ದೊರೆಯುವೆಂಬ ಮನಸಾ ನಂಬುವ ಮತ್ತು ಪ್ರತ್ಯೇಕ ಸದಸ್ಯತ್ವ ಮತ್ತು ಘಟನೆ ಇರುವ ಯಾವುದೇ ಜಾತೀಯ ಅಥವಾ ರಾಜಕೀಯ ಪಕ್ಷದ ಸದಸ್ಯರಾದವರು ಈ ವರ್ಗದ ಸದಸ್ಯರಾಗಿ ಸೇರಬಹುದು ಇವರಿಗೆ ಮಾತ್ರ ಕಾಂಗ್ರೆಸ್ ಪಂಚಾಯತ ಚುನಾವಣೆಗೆ ನಿಲ್ಲುವ ಹಕ್ಕಿರುವುದು. ಈ ಸದಸ್ಯರಾಗಿ ಸೇರುವ ಆಸಕ್ತರು ಇಲ್ಲಿನ ತಿಂಗಳ ತಾ. 15ರ ಒಳಗಾಗಿ ತಮ್ಮ ಹೆಸರು ಮತ್ತು ವಿಳಾಸವನ್ನು ಕಾಂಗ್ರೆಸ್ ಪಂಚಾಯತ ಕಾರ್ಯದರ್ಶಿಗೆ ಕಳುಹಿಸಿಕೊಡಬೇಕಾಗಿ ವಿನಂತಿ.

ಸಕ್ರಿಯ ಸದಸ್ಯತನ: ಕಾಂಗ್ರೆಸಿನ ಧ್ಯೇಯದಲ್ಲಿ ವಿಶ್ವಾಸವಿಡ್ಡು ಸತತ ಬಾಧಿ ಧರಿಸುವುದೇ ಮೊದಲಾದ ಅಧಿಕೃತ ಸದಸ್ಯತನದ ಯೋಗ್ಯತೆಯುಳ್ಳವರಿರಬೇಕಲ್ಲದೆ, ಜಾತೀಯ ಏಕ್ಯ, ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿರೋಧ, ಬಾಡಿಪ್ರಚಾರ, ಗ್ರಾಮೋದ್ಯೋಗ ಪ್ರೋತ್ಸಾಹ, ಗ್ರಾಮದ ಶುಚಿತ್ವಕ್ಕಾಗಿ ಯತ್ನ, ಮೂಲ ಶಿಕ್ಷಣ ಪ್ರಚಾರ, ಮಹಿಳೋದ್ಧಾರ ಕಾರ್ಯ, ರಾಷ್ಟ್ರಭಾಷೆ ಮತ್ತು ಪ್ರಾಂತ ಭಾಷಾ ಪ್ರಚಾರ, ಆರ್ಥಿಕ ಸಮಾನತೆಯ ಬಗ್ಗೆ ಕೆಲಸ, ರೈತ ಮತ್ತು ಕೂಲಿಕಾರ ಸಂಘಟನೆ, ವಿದ್ಯಾರ್ಥಿ ಸಂಘಟನೆ, ಅದಿವಾಸಿಗಳ ಸೇವೆ, ಪರಿಹಾರ ಕಾರ್ಯ, ಖಾರ್ಖಿಮೆಂಟರಿ ಕೆಲಸ, ಕಾಂಗ್ರೆಸ್ ಸಂಘಟನೆ ಮತ್ತು ಆಹಾರಧಾನ್ಯ ಉತ್ಪತ್ತಿ ಪ್ರಚಾರವೇ ಮೊದಲಾದ ವಿಧಾಯಕ ಕಾರ್ಯಗಳಲ್ಲಿ ಯಾವುದಾದರೊಂದನ್ನು ಅಥವಾ ಕೆಲವನ್ನು ಅನುನಿತ್ಯ ಕೆಲವು ವೇಳೆ ಮಾಡುತ್ತಿರುವವರು ಈ ಸದಸ್ಯತನಕ್ಕೆ ಅರ್ಹರಾಗುವರು. ಇದಕ್ಕೇನೂ ವರ್ಗಣಿ ತೆರಬೇಕಾಗಿಲ್ಲ. ಈ ವರ್ಗಕ್ಕೆ ಸೇರಿದ ಸದಸ್ಯರು ಮಾತ್ರ ಆಯಾ ಪ್ರದೇಶದ ಗ್ರಾಮ ಪಂಚಾಯತದ ಮೇಲಿನ ಕಾಂಗ್ರೆಸ್ ಕಮಿಟಿಗಳ ಚುನಾವಣೆಗೆ ನಿಲ್ಲಲು ಅರ್ಹರಿರುತ್ತಾರೆ. 1950ರ ಜನವರಿ 15ರ ವರೆಗೆ ಈ ವರ್ಗದ ಸದಸ್ಯರಾಗಲು ಅವಧಿಯಿದೆ. ಸದಸ್ಯತನದ ಫೋರ್ಮನ್ನು ಆಯಾ ಸರ್ಕ್ಲ್ ಕಾಂಗ್ರೆಸ್ ಕಮಿಟಿಗಳಿಂದ ಪಡೆದು ತುಂಬಿಸಿ ನಮಗೆ ಕಳುಹಿಸತಕ್ಕದ್ದು.

ಇದೀ ಜಿಲ್ಲೆಯಲ್ಲಿ ಎಷ್ಟು ಮಂದಿ ಪ್ರಾಥಮಿಕ ಕಾಂಗ್ರೆಸ್ ಸದಸ್ಯರಾಗಿರುವರೆಂಬ ಸಂಖ್ಯೆಯನ್ನು ನಾವು ತಾ. 7ರೊಳಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಕಳುಹಿಸಬೇಕಾಗಿರುವುದರಿಂದ ಜಿಲ್ಲೆಯ ಎಲ್ಲಾ ಸರ್ಕ್ಲ್ ಕಾಂಗ್ರೆಸ್ ಕಮಿಟಿಯವರು, ತಮ್ಮ ಪ್ರದೇಶದಲ್ಲಿ ಆಗಿರುವ ಒಟ್ಟು ಪ್ರಾಥಮಿಕ ಸದಸ್ಯರ ಸಂಖ್ಯೆಯನ್ನು ತಾ. 5ರೊಳಗೆ ಟೆಲ್ಫೋನು ಮುಖಾಲೆ ಇಲ್ಲವೆ ತಂತಿ ಮೂಲಕ ತಿಳಿಸಬೇಕಾಗಿ ವಿನಂತಿ.

ಇದೇ ಬರುವ ತಾ. 15ರೊಳಗೆ ಜಿಲ್ಲೆಯ ಎಲ್ಲಾ ಪ್ರಾಥಮಿಕ ಸದಸ್ಯರ ಪಟ್ಟಿಯು ಪರಿಶೀಲನೆ ನಡೆದು ಕೊನೆಯ ಅಧಿಕೃತ ಪಟ್ಟಿಯು ತಯಾರಾಗಲಿರುವುದರಿಂದ ಪ್ರತಿ ಪಂಚಾಯತು ಯಾ ಸರ್ಕ್ಲ್ ಕಾಂಗ್ರೆಸ್ ಕಮಿಟಿಗಳಿಂದ ಸಾರ್ವಜನಿಕರು ಈಪಟ್ಟಿಯನ್ನು ಕಂಡುಕೊಂಡುತನ್ಮೂಲಕ ಸೇರ್ಪಡೆಸುವ ವಿಷಯದಲ್ಲಿ ಆಗಿರುವ ಲೋಪದೋಷಗಳೇನಾದರೂ ಇದ್ದಲ್ಲಿ ಆವನ್ನು ಸರಿಪಡಿಸಿಕೊಳ್ಳಬಹುದು. ಇದಕ್ಕೆ ಸಕಲ ಸೌಕರ್ಯವನ್ನೂ ಎಡೆಪೋರ್ಟ್ ಕಾಂಗ್ರೆಸ್ ಪಂಚಾಯತುಗಳೂ ಸರ್ಕ್ಲ್ ಕಾಂಗ್ರೆಸ್ ಕಮಿಟಿಗಳೂ ಜನತೆಗೆಒದಗಿಸಿಕೊಡತಕ್ಕದ್ದು.

[ಸಹಿ] ಕೆ. ಶೆಟ್ಟಿ,
1-12-49 ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ತೀ ತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves head-ache etc.

REGD TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಹಿಂದಿನಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಗೊನೋರಿಯಾ ಪರಮಾಪೋಗ ಉಳ್ಳ ರೋಗಕ್ಕೆ ಔಷಧ

೭ ದಿವಸಗಳೆಲ್ಲರು ರೋಗ ಗುಣ ಹೊಂದುವದು ಗ್ಯಾರಂಟಿ

ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ಕೊಗಲು ಹಿಂದಕ್ಕೆ ಸರಯದಿದ್ದರೆ, ಶರೀರದ ಸುತ್ತು, ಫಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ್ವುದು- ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನನ್ನ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಪೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೋಡಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಮೀನ್, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

ಅಮೃತಾಂಜನ

ತಲೆನೋವನ್ನೆ, ಶಿರೋನೋವನ್ನೆ, ಉಳುಕು ಕುತ್ತಿಗೆ, ಭುಜ ಹಲ್ಲು ನೋವನ್ನೆಗೂ, ಎದೆನೋವು, ಫಾಯಗಳು, ಬಾತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ನಿಶ್ಚಿತ ಔಷಧ.

REGD

ಹುಳುಕಡ್ಡಿ ನಂದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S INDIA.

ನೋಂದಣಿ No. M 3618 | 15—12—1949 | 30ನೇ ವರ್ಷ Estd: 1921 ಸ್ಥಾಪನೆ

LICENCE No. 31
Licensed to Post without Prepayment

ನವಯುಗಕ್ಕೆ ಚಂದಾ ವಿವರ: (ಮುಂಗಡ)
ವರ್ಷಕ್ಕೆ ರೂ. 5-4-0
ತಿಂಗಳಿಗೆ ರೂ. 3-0-0
ಪ್ರತಿ ಪ್ರತಿಗೆ ರೂ. 0-2-0

FOUNDER:
Sri A. B. Shetty
Minister for Agriculture & Veterinary

ಪ್ರತಿ ಗುರುವಾರ ಉಡುಪಿಯಿಂದ ಹೊರಡುವ ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ

ವರ್ಷ 30 | NAVAYUGA WEEKLY UDIPI, S. K. | Vol 30
ವಾರ ೧೬ | Post Box No. 22 | No. 16
ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

ಕರ್ನಾಟಕದ ರಾಜಿನಾಮೆಗಳ ಕುರಿತು— ವಿಚಾರಿಸಬೇಕಾದ ಅಂಶ.

ಕರ್ನಾಟಕ ಪ್ರಾಂತ್ಯ ರಚನೆಯ ಕುರಿತು ತಮ್ಮಲ್ಲಿರುವ ಅತುರಾಗ್ರಹವನ್ನೂ, ಕೇಂದ್ರ ನಾಯಕರು ಆ ಸಂಬಂಧವಾಗಿ ಪ್ರದರ್ಶಿಸುತ್ತಿರುವ ಅಸಡ್ಡೆಗೆ ನಿಷೇಧವನ್ನೂ ಪ್ರದರ್ಶಿಸುವುದಕ್ಕಾಗಿ ಶಾಸನ ಭೆಗಳ ಕನ್ನಡಿಗ ಸದಸ್ಯರು ರಾಜೀನಾಮೆ ಕೊಡಹತ್ತಿದುದರಿಂದ ಕನ್ನಡಿಗರೆಲ್ಲರ ಭಿಮಾನವನ್ನುಕ್ಕಿಬಂದಿದೆ; ಅಖಿಲ ರಾಷ್ಟ್ರದ ಕ್ಷೆಯು ಈ ಕಡೆಗೆ ಬಿದ್ದಿದೆ; ಕೇಂದ್ರ ನಾಯಕರು ಗಂಭೀರ ಚಿಂತನೆಗೊಳಗಾಗಿದ್ದಾರೆ.

ಒಂದು ಪಮರರೂಪದ ಪ್ರದರ್ಶನವು, ದೊಕಡದೇ ಇರಲಿ, ಅದರಲ್ಲಿ ಕಾರ್ಯ ನಿರತ ಮಾನಸನ್ನಾಕರ್ಷಿಸುವ ಛಂದ ಅಭಿವ್ಯಕ್ತಿ-ವಿಲಾಸಗಳಿಗೆ ಅವಕಾಶ ಅತ್ಯಲ್ಪ. ಲಾಬಲದ ಕೂಗೇ ಹೆಚ್ಚಿನ-ನ್ಯಾಯಾನ್ಯಾಯ ವಿವೇಕ ಕಡಿಮೆ. ಅಭಿಪ್ರಾಯ ಭಿನ್ನತೆಗಳಿದ್ದರೂ ನವ್ಯವಾದ ಐಕ್ಯ ಕರ್ನಾಟಕ ನಿರ್ಮಾಣವಾದ ಮೇಲೆ ಜಯ ಸಂಭ್ರಮದನಂತರ ಮುನ್ನುಗ್ಗುವುದೊಂದೇ ಎಲ್ಲರ ಮುಂದಿನ ಕರ್ತವ್ಯವೆಂಬುದಕ್ಕೆ ಹೊರತು ನ್ಯಾಯ ಕೆಲಸಕ್ಕೆಗಾಗಿ ತಡೆದು ನಿಲ್ಲುವುದು ಎಂಬ ಭಾವನೆ ಸರ್ವ ಸಾಮಾನ್ಯವಾಗಿದೆ. ಆದರೆ ಯಾವ ವಿಷಯದಲ್ಲೇ ಆದರೂ, ಶಾಂತ ವಿಧಾನಗಳೆಲ್ಲವನ್ನೂ ಸಂಪೂರ್ಣವಾಗಿ ಪ್ರಯೋಗಿಸಿಕೊಂಡನಂತರ ಅಂತಿಮ ಶಸ್ತ್ರಾಸ್ತ್ರವಾಗಿ ಸತ್ಯಾಗ್ರಹವನ್ನು ಪ್ರಯೋಗಿಸುವುದು ನ್ಯಾಯವೆಂಬ ತತ್ವವನ್ನು ಒಪ್ಪಿಕೊಳ್ಳಬೇಕು. ಇಂತಹ ನ್ಯಾಯವಿರದ ಒಂದು ಚಳವಳಿಯನ್ನು ಯಶಸ್ವಿಯಾದರೂ ಕೊಡಾ ಶಕ್ತ ಸಾಮರ್ಥ್ಯಗಳಲ್ಲಂದರೆ; ಅದ್ದರಿಂದ ನ್ಯಾಯ ಬಾಹಿರ ವಿಧಾನವೊಂದನ್ನು ಜಲ್ಲಿ ಕೆಯಲು ಬೇರೆ ಯಾವುದೇ ಕಾರಣಕ್ಕಾಗಿ

ಕ್ಷೇಪ್ಯ ಪಡುವುದು ಸರಿಯಲ್ಲ

ಈ ದೃಷ್ಟಿಯಿಂದ ಕನ್ನಡಿಗ ಸದಸ್ಯರ ಇಂದಿನ ಪ್ರತಿಭಟನಾಪ್ರದರ್ಶನವನ್ನು ಸಮರ್ಥಿಸಬೇಕಾಗಿದೆ.

ಕರ್ನಾಟಕ ಪ್ರಾಂತ್ಯ ರಚನೆಯೆಂಬುದು ಕಾಂಗ್ರೆಸ್ಸಿನಿಂದ ಎಂದೋ ಒಪ್ಪಿಗೆ ಪಡೆದಿರುವ ವಿಷಯ; ಸಶಕ್ತ ಭಾರತದ ಇಂದಿನ ಕೇಂದ್ರ ನಾಯಕರು ಸ್ಪಷ್ಟವಾಗಿ ಒಪ್ಪಿಕೊಂಡಿರುವ ಸಂಗತಿ. ಆದರೆ, ಕೇವಲ ಪ್ರಾಂತ್ಯ ರಚನೆಯ ಸಮಸ್ಯೆಯನ್ನು ಕೈಗೆತ್ತಿಕೊಂಡು ಅದಕ್ಕೆ ಪ್ರಾಶಸ್ತ್ಯವನ್ನೇ ಕೊಡದಿರುವುದು ಅತಿ ದೊಡ್ಡ ಅನ್ಯಾಯ. ಈ ದೆಸೆಯಿಂದಾಗಿ ತಿಲುಗರ ಐಕ್ಯಾಸನ ನಡೆದಿರುವ ಬಳ್ಳಾರಿ ಜಿಲ್ಲೆಯಂತಹ ಕಡೆಗಳಲ್ಲಿ ನೆನ್ನೆ ಮೊನ್ನೆ ಸರ್ವನಾಶವಾಗಲಿದೆ-ಮುಂತಾದ ಒಲವಾದ ಕಾರಣಗಳಿವೆ. ಸಂಬಂಧ ಪಟ್ಟವರಿಂದ ಇಂತಹ ಅಸಡ್ಡೆ ಮತ್ತು ಅಸಮಾನ ನಡವಳಿಕೆಗಳಾಗಿಯೂ ಕನ್ನಡಿಗರು ತಮ್ಮ ಸ್ವಾಭಿಮಾನವನ್ನು ಕಾರ್ಯ ಮೂಲಕ ಪ್ರದರ್ಶಿಸದಿದ್ದರೆ, ಅವರು ನಿರ್ಜೀವಿಗಳನ್ನಿಸಿಕೊಂಡವರಾದ್ದರಿಂದ ಅನಿವಾರ್ಯವಾದ ಜಿಜ್ಞೆಯಿದು-ಎಂದು ಮೇಲ್ನೋಟೆ ಮಾತ್ರಕ್ಕೂಮ್ಮೆ ಹೊಳೆಯಬಹುದು.

ಆದರೆ ಅಖಿಲ ರಾಷ್ಟ್ರದಂತೆಯೇ ಮಿಕ್ಕೆಲ್ಲಾ ಪ್ರಶ್ನೆಗಳ ವಿಷಯಕ್ಕೆ ಅಖಿಲ ಕರ್ನಾಟಕದ ವಿಶ್ವಾಸಕ್ಕೂ ಪಾತ್ರರಾಗಿರುವ ಕೇಂದ್ರ ನಾಯಕರಿಂದ ಇಂತಹ ಅನ್ಯಾಯಗಳ ನಡೆಯುವುದೆಂದರೇನು? ಎಂಬ ಪ್ರಶ್ನೆ ಸಹಜವಾಗಿ ಹುಟ್ಟುತ್ತದೆ. ಈ ಸಂಬಂಧವಾಗಿ ಸರಕಾರದ ಹಾಗೂ ಕಾಂಗ್ರೆಸಿನ ಅಧಿನಾಯಕರು ಮುಂದಿಡುವ ಕಾರಣಗಳೂ ಇವೆ

"ಭಾಷಾವಾರು ಪ್ರಾಂತ್ಯ ರಚನೆ ಆಗಬೇಕು; ಆಗಲಿದೆ. ಆದರೆ ರಾಷ್ಟ್ರಹಿತ ಘಾತಕ ಸಂಕುಚಿತ ಪ್ರಾಂತ್ಯಭಿಮಾನವು ಹಾನಿಕರ. ಇಂತಹ ದುರಭಿಮಾನವೊಂದಕ್ಕೇನೇ ಕಟ್ಟು ಬೀಳದೆ, ಯಾವ ರೀತಿಯಿಂದಲೂ ದುಡುಕದೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ತೂಗಿ ನೋಡಿ, ಅಗತ್ಯವೆನ್ನಿಸಿ, ಅವಕಾಶ ದೊರಕಿಸಿಕೊಂಡೇ ಪ್ರಾಂತ್ಯಗಳ ಪುನರ್ರಚನೆಯಾಗಬೇಕು. ಇಂತಹ ವ್ಯವಸ್ಥೆಗೆ ತ್ರಿಮೂರ್ತೀ ಸಮಿತಿಯ ವರದಿಯಲ್ಲಿಮೇಲ್ಪಂಕ್ತಿ ಹಾಕಲಾಗಿದೆ. ಆ ಸೂತ್ರಗಳಿಗನುಸಾರವಾಗಿ ಸಂಬಂಧಪಟ್ಟ ಸರ್ವರ ಒಮ್ಮತದ ಜೋಡಣೆಗಳನ್ನು ಆಯಾಯಾ ಭಾಗಗಳವರು ನಮ್ಮ ಮುಂದಿಟ್ಟಲ್ಲಿ, ಅಂಥವುಗಳನ್ನು ಒಡ್ಡಿ ವಿನಹ ಸ್ವೀಕರಿಸಿ ಕಾರ್ಯಪ್ರವೃತ್ತರಾಗಲೆವೆ"— ಎಂಬುದೇ ಕೇಂದ್ರ ನಾಯಕರ ಮಾತು. ಸ್ವತಂತ್ರ ಭಾರತ ನಿರ್ಮಾಣಕಾರ್ಯದಲ್ಲಿ ಭಾಷಾನ್ವಯ ಪ್ರಾಂತ್ಯಗಳು ಮೂಡುವುದು ತಮಗೆ ಸಮ್ಮತವಾದರೂ, ಈ ಸಂಬಂಧದಲ್ಲೇಳುವ ಹಲವು ವಿಧದ ತಂಟೆ ತಕರಾರುಗಳನ್ನು ತಾವು ಹುಟ್ಟಕೊಳ್ಳಲ್ಕುತಯಾರಿಲ್ಲವಾದ್ದರಿಂದ ಸಂಬಂಧಪಟ್ಟ ಭಾಗಗಳವರೇ ಆವುಗಳನ್ನು ನಿವಾರಿಸಿಕೊಂಡು ಕೆಲಸ ಮಾಡಿ ಕೊಡಲಿ-ತಾವು ಒಪ್ಪಿಕೊಂಡರಾಯಿತು, ಎಂಬೇ ಅವರ ಭಾವನೆ.

ಅವರ ಕರ್ತಗಳಂತೆ ಇಪ್ಪತ್ತರಲ್ಲೇ ನಿರ್ಣಯಿಸಿದವರೆಂದರೆ ಆಂಧ್ರರು ತೆಲುಗ, ಕನ್ನಡಿಗ, ಮಲೆಯಾಳಿ, ಮಂತ್ರಿ, ಎಲ್ಲರಿಗೂ ಹಾಕಿದ್ದ ಪ್ರಶ್ನೆ ಮಾಲಿಕೆಗೆ ಸರಿಯಾದಉತ್ತರವೊಪ್ಪಿಸಿದವರೆಂದರೆ-ತೆಲುಗರು ಮಾತ್ರ. ಆದ್ದರಿಂದಲೊಂದುಪರೀಕ್ಷೆಯು ಪಾಸು-ನಾಪಾಸು ಶ್ರಮಕ್ಕನುಸರಿಸಿ ಆಂಧ್ರ ಪ್ರಾಂತ್ಯವನ್ನು ಪಾಸುಮಾಡಿ ಮಿಕ್ಕವರನ್ನು ಇದ್ದ ದರ್ಜೆಯಲ್ಲೇ ಇರಗೊಡಿಸಿದ ಕೇಂದ್ರ ನಾಯಕರಿಗೆ ಪಕ್ಷಪಾತದ ಆರೋಪ ತಟ್ಟುವಂತಿಲ್ಲ

"ಮದ್ರಾಸ್ ನಗರವು ನಮ್ಮದು. ಅದಿಲ್ಲದ ಆಂಧ್ರ ಪ್ರಾಂತ್ಯವೆಂದರೆ ರುಂಡವಿಲ್ಲದ ಮುಂಡ. ಮದ್ರಾಸ್‌ರಹಿತ ಆಂಧ್ರ ಪ್ರಾಂತ್ಯವನ್ನು ಈಗಲೇ ರಚಿಸಿಕೊಳ್ಳುವುದಕ್ಕಿಂತ ಮದ್ರಾಸ್ ಸಹಿತವಾದ ಆಂಧ್ರ ರಚನೆಗೆ ಇನ್ನೂ ಕೆಲಕಾಲ ಕಾಯುವುದು ವಾಸಿ" ಎನ್ನುತ್ತಿದ್ದ ತೆಲುಗರು ಕೊನೆಯ ಘಳಿಗೆಯಲ್ಲಿ ಬುದ್ಧಿ ಬದಲಾಯಿಸಿ ತ್ರಿಮೂರ್ತೀ ಸಮಿತಿಯ ನಿರ್ಣಯಗಳು ಗೊಪ್ಪಿಗೆ ಕೊಡಿಸಿ ಕೃತಕೃತ್ಯರಾಗಿದ್ದರು; ಕನ್ನಡಿಗರಂತೆಯೇ ತೆಲುಗರೂ ಇನ್ನೂ ಕಾಯುತ್ತಾ ನಿಲ್ಲಬೇಕಾಗುತಿತ್ತು.

THE UNITED KARNATAK INSURANCE COMPANY, LIMITED.

WANTED

A Branch Manager for Udupi Branch, bondy capable, hard working men with previous experience need aply to:—

Camp: Udipi.
10—12—'49

N S Kini.
Director-Secretary.

ಆದರೂ ಒಂದು ಮಾದಾಗ್ರಹ ಸಹಜ ವಾದುದೇ- ದೀರ್ಘಾವಧಿಯಿಂದ ಏಕಪ್ರಕಾರ ಸ್ವಭಾಷಾಪ್ರಾಂತ್ಯ ಯಾಚಿಸುತ್ತಾ ಬಂದಿರುವ ವಿಷಯದಲ್ಲಿ ಒಬ್ಬರಿಗೆ ಕ್ರಮಪ್ರಕಾರ ಅದನ್ನು ದಾನ ಮಾಡಬೇಕಾಗಿ ಬರುವಾಗಲೇ, ಮಿಕ್ಕವರಿಗೂ ಅವರವರ ಪಾಲನ್ನು ಕೊಟ್ಟು ಬಿಡುವುದು ಎಲ್ಲಕ್ಕೂ ಹಿತಕರವಾದ್ದರಿಂದ ಕೇಂದ್ರ ನಾಯಕರು ಈ ಹಿಂದೆ ಬಿದ್ದವರ ಸಂಬಂಧದ ಕಾರ್ಯಗಳನ್ನು ಸ್ವತಃ ನಿರ್ವಹಿಸಿಯಾದರೂ ಇದೊಂದು ವರ್ಗದ ಕೆಲಸವನ್ನು ಸಂಪೂರ್ಣವಾಗಿ ಮುಗಿಸಿ ಕೊಳ್ಳುವುದು ಅಗತ್ಯವಿತ್ತು; ಆದರೆ ಅವರೀಗಲೂ ಮೊದಲಿನ ಆಸಡ್ಡೆಯನ್ನೇ ಪ್ರದರ್ಶಿಸುತಿದ್ದಾರೆ. ಹೀಗೇಕೆ, ಎಂಬ ಪ್ರಶ್ನೆಗೂ ಕೇಂದ್ರ ನಾಯಕರ ಕಡೆಯಿಂದ ಸಕಾರಣ ದೊರೆಯುತ್ತಿಲ್ಲ.

ಭಾಷಾನ್ವಯ ಪ್ರಾಂತ್ಯಗಳ ರಚನೆಯೆಂಬುದು ಕೇಂದ್ರ ನಾಯಕರ ಪಾಲಿಗೆ ಅಗತ್ಯವನ್ನಿಸಿರುವುದು ಸಂಬಂಧಪಟ್ಟ ಜನತೆಯ ಬೇಡಿಕೆಯ ಮೇಲಿಂದ ಮಾತ್ರ. ಸ್ವಭಾಷಾಭಿಮಾನವು ಅಖಂಡ ಜನತಾರಾಜ್ಯ ಭಾತತದಲ್ಲಿ ಹಲವು ವಿಧದ ಕೆರುಕುಳಗಳಿಗೆ ಆಸ್ಪದ ಕೊಡುವಂತಹದೆಂದು ಕೇಂದ್ರ ನಾಯಕರು ಅನಗತ್ಯವಾಗಿ ಆಳುಕುತ್ತಿರುವಂತಿದೆ. ಆದ್ದರಿಂದ ಅವರು ಮಟ್ಟಿಗಿದು ಅನಿವಾರ್ಯವಾದಾಗ ಮಾತ್ರ ಕೈಕೊಳ್ಳುವ ಕಾರ್ಯ. ತೆಲುಗರು ಅವರ ಶರ್ತಗಳನ್ನು ಪೂರೈಸಿ ಕೊಟ್ಟು ಈ ಕಾರ್ಯವನ್ನೀಗ ಅನಿವಾರ್ಯಗೊಳಿಸಿದ್ದಾರೆ-ಕೇಂದ್ರ ನಾಯಕರದನ್ನು ಮಾಡಲಿದ್ದಾರೆ. ಮಿಕ್ಕವರೂ ಇದೇ ರೀತಿ ಮಾಡುವ ವರೆಗೆ ಮಿಕ್ಕ ಪ್ರಾಂತ್ಯಗಳ ರಚನಾ ಕಾರ್ಯಗಳು ಅವಯಂದಾಗುವಂತಿಲ್ಲ. ಭಾಷಾ ಪ್ರಾಂತ್ಯ ರಚನೆಯ ಮಟ್ಟಿಗೆ ಹೀಗಿರುವ ಬದಲಿಗೆ ಇಲ್ಲಿಯವರೆಗೆಲ್ಲಾ ಆಸಕ್ತಿಯನ್ನು ತಿಳ್ಳಿಯವರೂ ವಹಿಸಿ ಸಂಘಟಿಗಳಾಗಿ ಕೆಲಸ ನಿರ್ವಹಿಸುವುದು ಅಗತ್ಯವಿತ್ತೆನೋ ನಿಜ ಆದರೆ, ಸಕಾರಣವಾಗಿಯೋ ಅಕಾರಣವಾಗಿಯೋ ಅವರೊಂದು ಮನೋವೃತ್ತಿ ಕಟ್ಟಿಕೊಂಡಿದ್ದಾರೆ. ಈ ಬುದ್ಧಿಯು ತಪ್ಪೆಂಬುದನ್ನು ಸಿದ್ಧಪಡಿಸಿ, ಅದನ್ನು ಬದಲಾಯಿಸುವ ಕರ್ತವ್ಯ ಭಾಷಾವಾರು ಭಾಗಗಳವರದಿದೆ ಹೊರತು, ಇತ್ಪಕ್ಕಾಗಿ ಅವರ ವಿರುದ್ಧ ಮುಷ್ಕಿ ಜಡಿಯುವುದು ನ್ಯಾಯವಲ್ಲ ಪ್ರಾಂತ್ಯಗಳ ಪುನರ್ರಚನಾ ಸಂಬಂಧವಾಗಿ ಈ ಭಾಗಗಳ ಜನತೆಯು ತನ್ನ ಧೋರಣೆ ಬದಲಾಯಿಸಬೇಕೆಂದು ಸರಕಾರೀ ನಾಯಕರು ಅಜ್ಞಾಪಿಸಿದರದು ಹೇಗೆ ಅವ್ಯವಹಾರ್ಯವನ್ನಿಸುವುದೋ ಹಾಗೆಯೇ ಸರಕಾರೀ ನಾಯಕರು ಈ ಸಂಬಂಧದ ತಮ್ಮ ಬುದ್ಧಿ ಬದಲಾಯಿಸಬೇಕೆಂದು ಜನತೆಯು ಉಗ್ರ ಹಂಚಿಕೆ ಕೈಕೊಳ್ಳುವುದೂ ಅಸ್ವಾಭಾವಿಕ. ಆದ್ದರಿಂದ ಕೇವಲ ಕೇಂದ್ರಾಧಿಕಾರಿಗಳ ಮನೋವೃತ್ತಿಯ ನಿಷೇಧಾರ್ಥವಾಗಿ ಈ ರಾಜೀನಾಮೆಗಳು ನಡೆಯುವುದು ಸಾಯಿಸ್ಸಿ-ನಡೆದಿಲ್ಲ.

ಇಕ್ಕಡೆಯವರಲ್ಲಿಯೂ ಅವರವರ ವಿಶಿಷ್ಟ ಮನೋವೃತ್ತಿಯವರಲ್ಲಿ ಇದ್ದಿರಲಿ. ಹೀಗಿದ್ದುಕೊಂಡೇ ತಂತಮ್ಮ ಪಾಲಿನ ನಿಶ್ಚಿತ ಕಾರ್ಯಗಳನ್ನು ಇಕ್ಕಡೆಯವರೂ ಮಾಡಿದ್ದಾರೆಯೇ, ಎಂಬುದೊಂದೇ ಇಲ್ಲಿ ವಿಚಾರಸಬೇಕಾದ ಅಂಶ. ಅಧಿನಾಯಕರು ಈ ಮಟ್ಟಿಗೆ ತಮ್ಮ ಪಾಲಿನ ಕರ್ತವ್ಯಗಳನ್ನು ಮಾಡದೆ ಅಲಕ್ಷ್ಯ ವಾಡಿದ್ದಾರೆಂಬ ಕಾರಣದಿಂದಲೇ ಕನ್ನಡಿಗರ ಇಂದಿನ ರಾಜೀನಾಮೆಗಳು.

ಚಿಸಿಕೊಂಡಿತೆ ಆ ಸಂಬಂಧವಲ್ಲಿ ಪಡೆದ ಆಪರಾಧಕ್ಕೆ ಮುಖ್ಯತಃ ಬಿಜ್ಞಿಸ್ ಸರಕಾರವೇ ಹೊಣೆಗಾರ ಹೊರತು ಕೇಂದ್ರ ಸರಕಾರವಲ್ಲ ಕನ್ನಡಿಗರ ರಾಜೀನಾಮೆಯ ಪ್ರಯೋಜನವು ಕೇವಲ ಈ ಪ್ರಾಂತೀಕ ಕ್ಷೇತ್ರದಲ್ಲೇ ನಡೆದಿರದೆ ಎಲ್ಲೆಲ್ಲಿಗೂ ವ್ಯಾಪಿಸಿಕೊಂಡಿದೆ. ಅದರ ಪ್ರಭಾವವು ಅಧಿಕವಾಗಿರುವುದು ಬೊಂಬಾಯಿ ಪ್ರಾಂತ್ಯದಲ್ಲೇ. ಅಂದಮೇಲೆ ವಿಭಜನಾ ಸಮಿತಿಯ ಸ್ಥಾನದ ಪ್ರಶ್ನೆಯು ಕನ್ನಡಿಗರ ರಾಜೀನಾಮೆಯ ಕಾರಣಗಳಲ್ಲಿ ಮುಖ್ಯ ಪಾದುದಲ್ಲವೆಂಬುದು ಸುಸ್ಪಷ್ಟ. ಕನ್ನಡಿಗರಿಗಾಗಿರುವ ಈ ಅನ್ಯಾಯವಾದರೋ, ಶಾಸನ ಸಭೆಗಳಿಗೆ ರಾಜೀನಾಮೆ ಕೊಟ್ಟೇ ನಿವಾರಿಸಬೇಕಾದ ರೂಸದಲ್ಲಿಲ್ಲ.

"ಎವಾದಕ್ಕೆಡೆಯಿರದ ಪ್ರಶ್ನೀತ ಭಾಗಗಳನ್ನಷ್ಟೇ ಸೇರಿಸಿಕೊಂಡು ಪ್ರಕೃತ ಭಾಷಾವಾರು ಪ್ರಾಂತ್ಯ ಕಟ್ಟಬೇಕು-ಕೊನೆಯ ಸ್ಪಷ್ಟ ತೀರ್ಮಾನವನ್ನು ಅನುಕೂಲ ಕಾಲವೊದಗಿದಾಗ ಮಾಡಿಕೊಳ್ಳಬೇಕಷ್ಟೆ ಈಗಲ್ಲ" ಎಂಬ ಸ್ವಷ್ಟಾಭಿಪ್ರಾಯವು ತ್ರಿಮೂರ್ತಿ ಸಮಿತಿಯ ವರದಿಯಲ್ಲಿದೆ. ಈ ವರದಿಯ ಶರ್ತಗಳನ್ನೇ, ಅಸ್ವೀಕಾರ ಮಾಡಿ ಕಟ್ಟಲ್ಪಡುವ ಆಂಧ್ರದಲ್ಲಿ, ಕನ್ನಡಿಗರ ಆಕ್ಷೇಪಾರ್ಹವಿರುವ ಬಳ್ಳಾರಿಯಂತಹ ಸ್ಥಳಗಳನ್ನು ಸೇರಿಸಿಕೊಳ್ಳುವುದು ಮೂಲ ನಿಯಮಕ್ಕೇನೇ ವಿರುದ್ಧ. ತಮ್ಮೀ ಆಕ್ಷೇಪವನ್ನು ಸರಿಯಾದ ರೀತಿಯಿಂದ ವಿಭಜನಾ ಸಮಿತಿ'ಯ ಮತ್ತು ಕೇಂದ್ರಾಧಿಕಾರಿಗಳ ಅವಗಾಹನೆಗೆ ತರುವುದೇ ಈ ಮಟ್ಟಿಗೆ ಕನ್ನಡಿಗರ ಪಾಲಿಗಿರುವ ಕರ್ತವ್ಯ ಹೊರತು, ಯಾವುದೇ ಸಮಿತಿಯಲ್ಲಿ ಸ್ಥಾನ ಸಂಪಾದಿಸಿಕೊಳ್ಳುವುದು ಇಲ್ಲಿ ಮುಖ್ಯವಲ್ಲ. ಒಂದು ಪ್ರತ್ಯೇಕ ಆಂಧ್ರ ನಲ್ಲಿರುವ ಈ ಪ್ರಶ್ನೆಗಾಗಿ ಶಾಸನ ಸಭೆಗಳ ಸ್ಥಾನಗಳಿಗೆ ರಾಜೀನಾಮೆ ಕೊಡುವುದೆಂದರೆ, ಇವು ಹಸ್ಪರ ಸಂಬಂಧವೇ ಇಲ್ಲದ ಸಂಗತಿಗಳು.

ಈ ರೀತಿ ನಿರ್ವಿಕಾರ ಬುದ್ಧಿಯಿಂದ ಸೂಚಿಸಿದಂತೆ ಮದ್ರಾಸ್ ಸರಕಾರವು ರ

ದುಡಿಯದೆ, ದುಡುಕುವುದೆ?

ಈ ಕರ್ತವ್ಯಬಾಹಿರತ್ವಗಳ ಪೈಕಿ 'ಆಂಧ್ರದೊಂದಿಗೇನೇ ಕರ್ನಾಟಕ ಪ್ರಾಂತ್ಯ ರಚನೆಗೂ ಮುಂದಾಗದೆ ಇದ್ದ' ಕಾರಣದ ಮೇಲಿಂದ ಪ್ರತಿಭಟನೆಗೀಡಾಗುವಷ್ಟು ದೊಡ್ಡ ಅಪರಾಧಿಗಳು ಕೇಂದ್ರ ನಾಯಕರಾಗುವದಿಲ್ಲವೆಂಬುದು ಮೇಲ್ನೋಡಿಕೊಟ್ಟ ಕಾರಣಗಳಿಂದ ಖಚಿತವಿದೆ. ಇದನ್ನು ಕಳೆದರೆ ಮತ್ತೆ ಉಳಿಯುವ ಅಪರಾಧಾಂಶವೆಂದರೆ 'ಆಂಧ್ರ ಪ್ರಾಂತ್ಯರಚನೆಯ ಗಡಿ ನಿರ್ಣಯಕ್ಕಾಗಿ ರಚಿಸಲ್ಪಟ್ಟಿರುವ ವಿಭಜನಾ ಸಮಿತಿಯಲ್ಲಿ ಕನ್ನಡಿಗರಿಗೆ ಸ್ಥಾನ ಕೊಡದಿರುವುದು' ಮಾತ್ರ.

ಇದು ಕನ್ನಡಿಗರಿಗಾದ ಮಹದನ್ಯಾಯ ಮತ್ತು ಕನ್ನಡಿಗರ ಕಡೆಗೆ ತೋರಿಸಿರುವ ಖಂಡನಾರ್ಹ ತಾತ್ಸಾರವೆಂಬುದನ್ನು ಎಲ್ಲರೂ ಒಪ್ಪಲೇಬೇಕು. ಆದರೆ ಈ ವಿಭಜನಾಸಮಿತಿಯನ್ನು 'ಆಂಧ್ರ ಪ್ರಾಂತ್ಯ ರಚನೆಗೆ ಅಗತ್ಯವಿಲ್ಲ ಕಾರ್ಯಕ್ರಮಗಳನ್ನು ಕೈ ಕೊಳ್ಳಬೇಕು' ಎಂದು ಕೇಂದ್ರ ಸರಕಾರವು

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತ ಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

ಉಡುಪಿ ಪರ್ಯಾಯ ವಸ್ತು ಪ್ರದರ್ಶನ, 1950.

ತಾರೀಕು 1-1-1950ರಿಂದ 22-1-1950ರ ವರೆಗೆ ಉಡುಪಿಯಲ್ಲಿ ಕೈಗಾರಿಕೆ "ವಸ್ತು ಪ್ರದರ್ಶನ" ನಡಿಯಲಿವೆ. ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುಸಂಧಿ. ಕೆಲವೇ ಸ್ಟಾಲುಗಳು ಉಳಿದಿವೆ.

ಈ ಕುರಿತು ಯೋಗ್ಯ "ಸುವರ್ಣ ಸಂಚಿಕೆ"ಯೊಂದನ್ನು ಪ್ರಕಾರಗೊಳಿಸಲಿದೆ. ಅದರಲ್ಲಿ ಕೊಡುವ ಜಾಹೀರಾತು ಮಹತ್ಪ್ರಯೋಜನಕಾರಿಯಾದುದು.

ಪ್ರದರ್ಶನದ ಸಂಪೂರ್ಣ ಉಳಿತಾಯವನ್ನು
"ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ"ಗೆ
ದಾನವಾಗಿ ಕೊಡಲಾಗುವುದು.

ಎವರಕ್ಕೆ ಇಂದೇ ಬರೆಯಿರಿ

Inserted by:-
The Canara Industrial & Banking Syndicate Ltd, UIDPI.

ಕಾರ್ಯದರ್ಶಿ
ಉಡುಪಿ ಪರ್ಯಾಯ
ವಸ್ತುಪ್ರದರ್ಶನ 1950
ಉಡುಪಿ.

ಬಗ್ಗೆ ಮೈಸೂರು ಮಿತ್ತರ ಕ್ಷಮೆಯಲ್ಲಿ ಭಾಗಗಳನ್ನು ಇಂತಹ ದೊಡ್ಡ ವಿಧಾನದಿಂದ ಒಂದುಗೂಡಿಸಿ ಕೊಳ್ಳಬೇಕು ಎಂದು ಸಂಬಂಧಪಟ್ಟ ಕನ್ನಡಿಗರೆಲ್ಲರ ಒನ್ಮತದ ಯೋಜನೆಯಾವುದಾದರೂ ಕೇಂದ್ರ ನಾಯಕರಿಂದಿಡಲ್ಪಟ್ಟಿರುವುದೆ? ಇಲ್ಲ. ಫಜಲ್ ಅಲಿ ಸಮಿತಿ ಹಾಕಿರುವ ಶರ್ತಗಳಂತೆ ಈ ರೀತಿಯ ಮಾಡಬೇಕೆಂದ ಕನ್ನಡಿಗರು ಈ ವರೆಗೂ ಅದನ್ನು ಮಾಡಿಲ್ಲ

ಈ ಕಾರಿಣಗಳೂ ಇರುವ ವಿವಿಧಾಭಿಪ್ರಾಯಗಳ ನೈಕೆ, 'ಮೈಸೂರು ಮಹಾರಾಜರನ್ನು ಘಟನಾತ್ಮಕ ಶಿರಸ್ಸಾಗಿ ಇಟ್ಟುಕೊಳ್ಳುವ ಕರ್ನಾಟಕ ಪ್ರಾಂತ್ಯವಾಗಲಿ' ಎನ್ನುವ ಸೂಚನೆಗೆ ಮಿಕ್ಕವುಗಳಿಗಿಂತ ಒಹುಮತವಿರಬಹುದೇನೋ ಇದು 'ಆ ಶ್ರೀಕರಾಜ್ಯದ ನೊಗಕ್ಕೆ ಮಿಕ್ಕಿಭಾಗ ಹೆಗಲೊಡ್ಡಿ ಏಕೀಕರಣವಾಗಕೂಡದು' ಎಂಬ ಶ್ರೀಮಾರ್ತೀಸಮಿತಿ ಶರ್ತಕ್ಕೆ ವಿರುದ್ಧವಲ್ಲವೆ, ಎಂಬ ಪ್ರಶ್ನೆ ಹಾಗಿಂಲಿ-ಇದರ್ಥಾದರೂ ಆಗ್ಯವುಳ್ಳ ಸರ್ವರ ಒಪ್ಪಿಗೆಯದು ಮಾಡಿ, ಎಂಬ ಸವಾಲಿದು. ಮೈಸೂರುಮಹಾರಾಜ್ಯ ಕಾ ಕರ್ನಾಟಕ ಭಾಗಗಳೊಳಗಿನವಿಚಾರವು ಎಲ್ಲಿಂದಾದರೂ ಪಕ್ಷವಾಗಿರುವ ಮೈಸೂರಿನ, ಕರ್ನಾಟಕ ಪ್ರಾಂತ್ಯಾಧಿಕಾರಿಯ ಕುರಿತು ಇನ್ನೊಂದು ಸಕ್ಷೆದವರ ಸ್ಪಷ್ಟ ಆತುರ ಪ್ರದರ್ಶಿಸುತ್ತಿಲ್ಲ ಎಂದ ಮೇಲೆ ಮಿಕ್ಕವರೇನು ಮಾಡಬೇಕು?

ಮೈಸೂರಿನ ಅಖಂಡ ಕರ್ನಾಟಕದ ಮಾತು ಹಾಗಿರಲಿ, ಇಂದಿನ ಮೈಸೂರಿನ ವಿಷ್ಟಿಗಾದರೂ ಸವಘಟನೆಯನ್ವಯ ಮೈಸೂರರಸರು 'ಘಟನಾತ್ಮಕ ಶಿರಸ್ಸಾಗಿ' ಇರಲು ಒಳಿಯಿ ತಾತ್ಕಾಲ್ಲದು, ನಿರಂಕುಶ ಪ್ರಭುವಾಗಿ ಇರುವಂತಿಲ್ಲ. ಅಂತಹ ಸ್ಥಾನವು ಮುಂದಿನ ಅಖಂಡ ಕರ್ನಾಟಕದ ಪಟ್ಟಿಗೂ ಮೈಸೂರಿಡೆಯ ಭಾಗ ಬೊರೆಯುವಾಗ ಆವರ ಸ್ಥಾನಮಾನ ಕ್ಷೀಣಿಸಿ ಅಂತಾಗುವುದೇ ಹೊರತು ಕಡಿಮೆಯಾಗುವಂತಿಲ್ಲ. ಇಂತಹ ಕೊಡುಗೆಗೆ ಮೈಸೂರೇತರ ಕನ್ನಡಿಗರು ಮುಂದಾಗಿರುವಾಗ ಮೈಸೂರವರೇ ಹಿಂಜರಿಯಬೇಕಾದ್ದು 'ಆಳುವ ಮಹಾಪ್ರಭುಗಳ ಸ್ಥಾನಮಾನಗಳಿಗಾಗಿಅಲ್ಲವೆಂಬುದೂ, ಪ್ರತ್ಯೇಕ ಕಾರಣಗಳೇ ಇರಬಹುದೆಂಬುದೂ ಸ್ವಯಂ ಸಿದ್ಧ. ಇಂತಹ ಪರಿಸ್ಥಿತಿಯಲ್ಲಿ ಸ್ವತಂ ಕನ್ನಡಿಗರಿಂದಾಗದ ಯಾವ ಕಾರ್ಯವನ್ನು ಕೇಂದ್ರಾಧಿಕಾರಿಗಳು ನಿರ್ವಹಿಸಬಹುದೆಂಬ ನೆಹರು, ವಲ್ಲಭಾಯಿಗಳು ಏನು ಮಾಡಬೇಕೆಂದಿತ್ತು?

ಜನತಾಂತ್ರಾಜ್ಯದ ಶಾಸನಾಧೀನ ಆಶ್ರಿತ ಒಡಂಬಡಿಕೆಗಳ ಸ್ಥಾನವೆಂಬುದು ಭಾಷಾನ್ವಯ ಪ್ರಾಂತ್ಯ ನಿರ್ಮಾಣದಂತಹ ಯಾವ ರಚನೆಗೂ ಅತಂಕವಾಗದಮ್ಮ ಸಂಕೋಚಗೊಂಡಿದೆ ಆದ್ದರಿಂದ "ಕರ್ನಾಟಕ ಪ್ರಾಂತ್ಯರಚನೆಗಾಗಿ ಮೈಸೂರರಸರಂಗೊಂದು ಗತಿ ತೋರಿರಿ" ಎಂದು ಸರ್ದಾರ್ ಪರೇಲರನ್ನು ಕೇಳಿಕೊಳ್ಳುವ ಪ್ರಶ್ನೆಯೇ ಇಲ್ಲ ಆದೇ ರೀತಿ ಜನತಾರಾಜ್ಯ ತತ್ವಕ್ಕನುಸಾರವಾಗಿಯೇ "ಮೈಸೂರಿನ ಜನತೆಯನ್ನು ಈ ಕಡೆಗೆ ದೂಡಿರಿ" ಎಂದು ಸರ್ದಾರರನ್ನು ಕೇಳಿಕೊಳ್ಳುವುದಕ್ಕೂ ಆಗುವದಿಲ್ಲ. ಕರ್ನಾಟಕದ ಒಂದು ಭಾಗದವರ ಅಪೇಕ್ಷೆಗನುಸಾರವಾಗಿ ಇನ್ನೊಂದು ಭಾಗದವರನ್ನು ಒತ್ತಾಯಿಸುವ ಪ್ರೇರಣೆಯು ಈ ಪ್ರಜಾಪ್ರಭುತ್ವ ಪ್ರದರ್ಶಿತ ಜನಮತಕ್ಕೆ ವಿರೋಧವಾಗಿ ನಿರ್ಣಯಮಾಡಿದುದಿಲ್ಲ. ಆಖಿಲ ಕರ್ನಾಟಕದ ಅಭಿವಾಸಿಯಷ್ಟಿರುವ ಮೈಸೂರಿನ ಜನತೆಗೆ ಅವರು ವಿಚಾರ ಜಾಗೃತಿ ಹೊಂದಿರುವ ಕಾಲದಲ್ಲೇ, ವಲ್ಲಭಾಯಿಗಳು ಅವರಿಗೆ ಮಾಗುದಾಣ ಹಾಕಿ ಎಳಕಂದು ಮಿಕ್ಕ ಕನ್ನಡ ಭಾಗಗಳ ಜೊತೆಗೆ ಕಟ್ಟೆಹಾಕಬೇಕಿತ್ತೆ? ಅಂತಹ ನಿರಂಕುಶಾಧಿಕಾರ ಪ್ರಯೋಗಬೇಡವೆಂದಾದರೆ, ಕರ್ನಾಟಕ ಏಕೀಕರಣಕ್ಕಾಗಿ ಮೈಸೂರವರ ಮನವೊಲಿಸಲು ಸರ್ದಾರರೇನು ಪ್ರಚಾರಕ್ಕೆ ಹೊರಡಬೇಕಿತ್ತೆ?

ಮನಸಿದ್ದೇ? ನಟನೆಯೊ?

ದಲ್ಲೂ ಸರ್ದಾರರಲ್ಲಿಹುಟ್ಟಬೇಕಿದ್ದಿತೆಂದು ಬಯಸುವುದಾದರೂ ಹೇಗೆ? ಇಂತಹ ಪರಿಸ್ಥಿತಿಯಲ್ಲಿ ಅವರು ಬೇರೇನು ಮಾಡಬೇಕಿದ್ದಿತು?

ಸಣ್ಣವುಟ್ಟ ಸಂಸ್ಥಾನಗಳನ್ನು ನೂಡಿ ಕಟ್ಟುವಾಗ ಅಥವಾ ನರೆಯ ಪ್ರಾಂತ್ಯಗಳೊಂದಿಗೆ ಸೇರಿಸಿಕೊಳ್ಳುವಾಗ, ಮುಂದಾಗಿ ಆ ಭಾಗಗಳ ಜನತೆಯ ಮತಸಂಗ್ರಹಿಸಿಕೊಂಡು ವಲ್ಲಭಾಯಿಗಳು ಕಲಸ ಮಾಡಿದ್ದಲ್ಲವೇನೋ ನಿಜ ಆದರೆ, ಇದೇ ಈ ಕಾಲದಲ್ಲಿ 'ಬೇರೆ ಬಿಡಾರೆ'ವೆನ್ನಿಸುವ ಯೋಗ್ಯತೆಯೇ ಇಲ್ಲದ ಸಣ್ಣ ಸಂಸ್ಥಾನಗಳ ಮಾತು. ಮಾತ್ರವಲ್ಲ, ಅಲ್ಲೆಲ್ಲೂಯೂ ನೆವರಾಜ್ಯ ಶಾಸನದನ್ವಯ ಸಂಸ್ಥಾನಗಳೂ ಪ್ರಾಂತ್ಯಗಳ ಮಟ್ಟಕ್ಕೇನೆ ಬಲವಾಗಿ ಹೀಗೆ ಸಮಾನ ದರ್ಜೆಗೆ ಬರುವ ನೈಸೂರು– ಮೈಸೂರೇತರ ಕನ್ನಡಿಗರಿಗೆ ತಮಗಿಕ್ಕಡೆಯವರಿಗೂ ಹಿತಕರವಾಗುವ ಏಕೀಕರಣಕ್ಕಾಗಿ ಒಂದು ಸ್ಪಷ್ಟ ಒಮ್ಮತಕ್ಕೆ ಬರಲು ಇನ್ನೂ ಆಗಿಲ್ಲವಂತೆ, ವಿಳಂಬವನ್ನು ದೂರುವುದಾದರೂ ಏಕಾಗಿ ಮತ್ತು ಏನೆಂದು?

ಇವೆಲ್ಲಾ ಕಾರಣಗಳ ಮೇಲಿಂದ 'ಕೇಂದ್ರ ನಾಯಕರ ತಪ್ಪಿಗಳ ಸ್ಮರಣೆಗಾಗಿ–' ಎಂದು ಆರಿಸಿಸಲ್ಪಟ್ಟಿರುವ ಕನ್ನಡಿಗರ ಬಿಂಜಿನಾಮೆಗಳ ಅರ್ಥವೇ ಒಗುವ ಹಿಲ್ಲ ರಮ್ಮೊಡನೆ ಆಟಕ್ಕೆ ಬರಲಿಲ್ಲವೆಂಬ ಕಾರಣಕ್ಕಾಗಿ ಹಿರಿಯರಿರಿಯ ಚಂಡಿ ಹಿಡಿಯುವ ಮಕ್ಕಳ ಮುಷ್ಕರಕ್ಕಿಂತ ಹೆಚ್ಚಿನ ಸೊಗಸಾವುದೂ ಇದರಲ್ಲಿ ತೋರುವುದಿಲ್ಲ.

ಇನ್ನು ಈ ರಾಜೀನಾಮೆಗಳ ಇದುವರೆಗಿನ ಪರಿಣಾಮವು ಕನ್ನಡಿಗರೆಲ್ಲರನ್ನೂ ವೇಹಿಸುವಂತಹದಿದ ಅಖಿಲ ಕರ್ನಾಟಕದಲ್ಲಿ ಕನ್ನಡ ಪ್ರಾಂತಿಕ ಜಾಗೃತಿ ಬಲಗೊಂಡಿದೆ– ಕೇಂದ್ರ ನಾಯಕರು ಗಂಭೀರ ಯೋಜನೆಗೀಡಾಗಿದ್ದಾರೆ– ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಅವಸರದ ಸಭೆ ಕರೆಯಲ್ಪಟ್ಟಿದೆ—ಅಖಿಲ ಭಾರತದ ಅತಿ ರಮ್ಯ ಲಕ್ಷ್ಯವು ಕರ್ನಾಟಕದ ಕಡೆಗೆ ಹರಿದಿದೆ—ಈ ವರೆಗೂ ಕರ್ನಾಟಕ ಪ್ರಾಂತ್ಯರಚನಾ ಚಳವಳಿಯನ್ನ ಅಲಕ್ಷಿಸಿ, ಆ ಸಂಬಂಧದ ಸದ್ದಿಗಳಿಗೆ 'ಕಾರು ಅವಘಡ'ದಂತಹ ವಾರ್ತೆಗಳಷ್ಟೇ ಪ್ರಾಮುಖ್ಯತೆ ಕೊಡುತಿದ್ದ ಇಂಗ್ಲಿಷ್ ದೈನಿಕಗಳಿಗೂ ದೊಡ್ಡ ದೊಡ್ಡ ತಲೆಬರೆಹಕೊಟ್ಟು, ಸಂವಾದಕೀಯ ಬರದು ಪ್ರಕಟಿಸುವ ಬಿಸಿಬಿಸಿಯಾದ ಹಾಗೂ ಸ್ವಾಮಿಭಕ್ತಿಯ ವಾರ್ತೆಗಳು ಕರ್ನಾಟಕದಿಂದ ಸಿಕ್ಕಿವೆ— ಒಟ್ಟಿನ ಮೇಲೆ ಕನ್ನಡಿಗರ ಪ್ರಭಾವ, ಪ್ರತಾಪಗಳು ಒಟ್ಟಿಗೇ ಸರಿಯಾಗಿ ಪ್ರಕಾಶಗೊಂಡಿವೆ ಇಷ್ಟೇ ಪ್ರಯೋಜನ ಸಾಕೆಂದಾದರೆ ಈ ರಾಜೀನಾಮೆಗಳ ನಿಜಕ್ಕೂ ಸಫಲವಾಗಿವೆ!

ಆದರೆ ನ್ಯಾಯವನ್ನಾಧರಿಸಿರುವ ಈ ಪಂಥ ಸರಿಯೇ, ಎಂಬ ಪ್ರಶ್ನೆಯೊಂದಿಗೆ ಇಷ್ಟೇ ಪ್ರತಿಫಲ ಸಾಕೇ, ಎಂಬ ಸಮಾಲೂ ಜತೆಗೂಡುತ್ತದೆ. ಎಂಡನೆಯದಾಗಿ ಈ ರಾಜೀನಾಮೆಗಳಾದರೂ ಪೂರ್ಣ ಯಥಾರ್ಥವಾದವುಗಳೇ ಎಂದು ವಿಚಾರಿಸಲಿಕ್ಕೆದೆ ಶಾಸನಸಭೆಗಳ ಸ್ಥಾನಗಳಿಗೆ ಸಂಬಂಧಪಟ್ಟ ಸದಸ್ಯರ ರಾಜೀನಾಮೆಗಳು ಈಗ ಹೋಗಿರುವುದು ಕರ್ನಾಟಕ ಪ್ರಾಂತ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ನಿಜಲಿಂಗಪ್ಪನವರ ಕೈಗೇನೇ. ತನ್ನ ಸ್ಥಾನಬಲದಿಂದ "ಈ ರಾಜೀನಾಮೆಯಂತೆ ವರ್ತಿಸಬಹುದು."ಎಂದು ಅನುಮತಿ ಕೊಡಲು ಕರ್ನಾಟಕದ ಕಾಂಗ್ರೆಸ್ ಅಧ್ಯಕ್ಷರಿಗೆ ಅಧಿಕಾರವಿಲ್ಲ. ಅಂತಹ ಅಧಿಕೃತ ಸಮ್ಮತಿಯು ಕೇಂದ್ರ ವಾರ್ಲಿಮೆಂಟರೀ ಬೋರ್ಡಿನಿಂದ– ಯಾರ ಮನಸ್ಸಿಗೆ ಬಿಸಿ ವಿಷ್ಟಸಬೇಕಂದು ಈ ರಾಜೀನಾಮೆಗಳು ಹೋಗಿರುವವೋ ಆ ನಾಯಕರೇ ಇರವ

ಇಂದಿನ ಅವಶ್ಯಕತೆ

ಭಾರತದ ರಕ್ಷಣೆ.

ಇದಕ್ಕಾಗಿ

ಭಾರತೀಯ ಪ್ರಾದೇಶಿಕ ಸೈನ್ಯವನ್ನು ಸೇರಿರಿ.

ಈ ಪ್ರಕಟಣೆ, ಜನಾಂಗಕ್ಕೆ

ಕೆನರಾ ಬ್ಯಾಂಕ ಲಿಮಿಟೆಡ್

ಇವರ ಅಖಿಲಸೇವೆ

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!

ಮನಸ್ಸಿಗೆ ಅಲುಲ್ಲಾಸವೀಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ನೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Sadananda Rao Kunjoor
Manager.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿಯಲ್ಲಿಯಾಗಿಯೂ ಡೊರೆಯುತ್ತವೆ

ಕಲ್ಕಿಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ನೋಟೀಸು

ಉಡ್ಪಿ ಡಿ. ಮು ಕೋರ್ಟಿನಲ್ಲಿ
O S No 190 49
ಪಂಕ್ಕನಾಯಣ ಜಟ್ಟಿ ಕೂಡ
—ಪ ದಿಯ

ಮತ್ತು

1 ರಗುನಾಥಪಟ್ಟಿಯರ
2 ರಾಮಪ್ಪಪೆಟ್ಟಿಯರ
3 ವೆಂಕಪ್ಪಪೆಟ್ಟಿಯರ
4 ಶ್ರೀನಿವಾಸ ಪೆಟ್ಟಿಯರ
—ಪ್ರತಿವಾದಿಯ

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ ನಿನೆ ಪ್ರತಿವಾದಿ ರಘುನಾಥ ಪೆಟ್ಟಿಯರಿಗೆ ಆಗತ್ಯ ವ್ಯಾಜ್ಯದ ನೋಟೀಸು ತಾ 23-12-1949ನ್ನ ತಪ್ಪಿಗೆ ಯಿಟ್ಟಿರುವದ್ರಿಂದ ಆ ತೇದಿಯಿರುವ ಒಳ್ಳಿಯಲ್ಲಿ ಸದ್ರಿ ಪ್ರತಿವಾದಿಯು ಆ ದಿವಸ ಹಗಲು 10 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರ್ರಾಗಿ ಜವಾಬರುವಾಡಿಕೊಳ್ಳತಕ್ಕದ್ದು

P. Padmanabha Rao
Vakil for Plaintiff
Udipi
10-12-49

ಮಂತ್ರಾಲಯಿಂದ– ಬರಬೇಕು. ಹಾಗೆ ಬಂದನಂತರವೇ ಈ ರಾಜೀನಾಮೆಗಳು ಅಲ್ಲಿಂದ ಶಾಸನ ಸಭೆಗಳತ್ತ ಸವಾರಿ ಬಿಡಬೇಕು. ತಮ್ಮ ರಾಜೀನಾಮೆಗಳು ಈ ಕೊನೆಯ ಗುರಿಗೂ ಮುಟ್ಟಬೇಕು, ಮುಟ್ಟಬಹುದು, ಎಂಬ ಯಥಾರ್ಥ ಆಶೆ, ನಿರೀಕ್ಷೆಗಳಿಂದ ರಾಜೀನಪತ್ರಕ್ಕೆ ಸಹಿಯಿಕ್ಕಿದವರೆಷ್ಟು ಮಂದಿ? ಶಾಸನ ಸಭಾರಂಗದ ಗೋಡೆಗೆ ಎಂದಿಗೂ ಹೋಗದೆ, ಕೇಂದ್ರ ವಾರ್ಲಿಮೆಂಟರೀ ಬೋರ್ಡಿನ ವರೆಗೆ ಹೋಗಿ ಅಲ್ಲಿಂದ ಹುಸಿ ತಮ್ಮಲ್ಲಿಗೇನೇ ಬರಲಿವೆ, ಎಂಬ ನಿರೀಕ್ಷೆಯಿಂದಲೇ ಈ ರಾಜೀನಾಮೆಗಳನ್ನು ತವರುಮನೆಗೆ ಬೀಳ್ಕೊಟ್ಟವರೆಷ್ಟು ಜನ?

ತಮ್ಮೀ ರಾಜೀನಾಮೆ, ಮತ್ತಿನಂತರದ ಪ್ರತ್ಯಕ್ಷ ಕಾರ್ಯಾಚರಣೆಯಿಂದಲ್ಲ– ತಾವು ಸುಮ್ಮಗೆ ಕೂತಿದ್ದರೂ ಕರ್ನಾಟಕ ಪ್ರಾಂತ್ಯವಂತೂ ಒಂದಲ್ಲೊಂದು ದಿನ ಆಗುವಂತಿಹದಿರುವುದರಿಂದ ಈಗ ಸುಮ್ಮನಿದ್ದರೆ ನಾಳೆಯ ಕರ್ನಾಟಕ ಪ್ರಾಂತ್ಯದಲ್ಲಿ ತಮಗಾಗ ಸ್ಥಾನ? ಸ್ವಬುದ್ಧಿಯಿಂದ ಆಗಮಿಸುತ್ತಿರುವ ಅಧಿತಿಯನ್ನಾದರೂ ಬರಮಾಡಿಕೊಳ್ಳುವ ಗೃಹಸ್ಥಧರ್ಮವನ್ನು ಈ ಸಂದರ್ಭದಲ್ಲಿ ಪ್ರದರ್ಶಿಸದೆ ಬಿಟ್ಟರೆ, ಬಂದ ಮಹಾನುಭಾವ ಏನೆನ್ನುವನೋ— ಎಂಬ ದೂರಾಲೋಚನೆಯಿಂದ, ಭಾವೀ ಸ್ವಾಗತಸಂವಾದನೆಗಾಗಿ ಇಂದಿನ ಸ್ಥಾನತ್ಯಾಗದ ಒಟ್ಟಾದ್ದವರಲ್ಲವೆ? ಆಜೆಕುಜೆಯವರೆಲ್ಲಾ ಪಂಗ್ತಿ ಬಿಟ್ಟು ನಿಳುಕ್ಕಿರುವಾಗ ತಾವಿನ್ನೂ ಉಣ್ಣುತ್ತಾ ಕುಳಿತುಕೊಂಡರೆ ಜೊಟ್ಟೆಗಬಾಕನೆನ್ನಲಾರರೇ, ಎಂಬ ಸಂಕೋಚ ಬುದ್ಧಿಯಿಂದ ಲೈತೊಳೆಯಲೆದ್ದವರೆಲ್ಲರಲ್ಲರೇ? ಇವೆಲ್ಲಾ ಸನಲುಗಳನ್ನು ಸಂಬಂಧಪಟ್ಟ ಸದಸ್ಯರು ತಮ್ಮ ಮನಸ್ಸಾಕ್ಷಿಗೇನೇ ಹಾಕಿಕೊಂಡರಾಯಿತು.

ಒಳಗಿಂದ ನೋಟದಿಂದ ದೃಷ್ಟಿಯನ್ನು ಹಿಂದಕ್ಕೆಳೆದುಈರಾಜೀನಾಮೆಗಳ್ಳಪಂಣಾಮ ಕಾರ್ಯತಃ ಹೇಗಾಗಬಹುದು, ಎಂಬುದರ ಕಡೆಗೆ ಹೊರಳಿಸೋಣ. ಕರ್ನಾಟಕ ಪ್ರಾಂತ್ಯರಚನೆಯ ಸಂಬಂಧದಲ್ಲಿ ಕೇಂದ್ರ ನಾಯಕರು ನಿಜಕ್ಕೂ ಅಪರಾಧಿಗಳೇ ಎಂಬ ಪರೀಕ್ಷೆಯು ಈ ರಾಜೀನಾಮೆ ಸಂಬಂಧದ ಅವರವರ್ತನೆಗಳಿಂದಲೇ ಆಗಲಿದೆಯೆಂದು ನಮ್ಮ ನಿರೀಕ್ಷೆ. ಒಂದು ಹೋರಾಟ ಚರಿತ್ರೆಯ ಪೀಠಿಕೆಯಾಗಿ ಈ ರಾಜೀನಾಮೆಗಳು ಬರೆಯಲ್ಪಟ್ಟಂತೆ ಕಂಡು ಬಂದರೂ ಇದು ಕುಟುಂಬದೊಳಗಿನ ವಿವಾದ ಮಾತ್ರ; ಯಜಮಾನನಿಗೆ ಕಿರಿ ಮೆಂಬರ್‌ನೊಬ್ಬನು ಇದಿರು ಮಾತಾಡಿದ ಒಂದು ನಿದರ್ಶನ. ಶಾಸನವ ಅನ್ಯಾಯವನ್ನೂ ಮಾಡದಿದ್ದರೂ ಗೃಹಕಲಹವೊಳೆಯದಲ್ಲವೇ ಬುದಕ್ಕಾಗಿ "ನೀನು ಹೇಳಿದ ಪ್ರಕಾರ" ಎನ್ನುತ್ತಾ ಯಜಮಾನನು ಕಿರಿಯನನ್ನು ಸಮಜಾಯಿಸಲು ಪ್ರಯತ್ನಿಸುವುದು ತಪ್ಪಲ್ಲ; ಅಂತೆಯೇ, ಕೇಂದ್ರಾಧಿನಾಯಕರುಕನ್ನಡಿಗರ ಹೇಳಿಕೆಯಂತೆ ವರ್ತಿಸಲು ಮುಂದಾಗ ಬಾರದೆಂದಿಲ್ಲ. ಆದರೆ ಇಷ್ಟಕ್ಕಾಗಿ ಅವರು ತಮ್ಮ ನಿಶ್ಚಿತ ಧೋರಣೆಯನ್ನು ಅವಸರದಿಂ ಬದಲಾಯಿಸಿಕೊಳ್ಳುತ್ತಾರಾದರೆ, ಕರ್ನಾಟಕ ಪ್ರಾಂತ್ಯರಚನೆಯನ್ನು ಹಿಂದೆ ಹಾಕಲು ಈ ವರೆಗವರು ಕೊಟ್ಟಿದ್ದ ಕಾರಣಗಳೆಲ್ಲವೂ ಹುಸಿಯೆಂದಾಗುವುವು; ಇಷ್ಟರ ವರೆಗೆ ಅವರು ವಿಳಂಬಮಾಡಿದುದು ಅನಿವಾರ್ಯವಾಗಿ ಮತ್ತು ಹುಸಿ ನೆವನಗಳನ್ನು ಮುಂದೊಡ್ಡಿಯೇ ಎಂದಾಗುವುದು. ಹಾಗಿರದೆ, ಕೇವಲ ಕನ್ನಡಿಗರ ವಟಹುರೂಪೀ ಅಂತಃಕಲಹಕ್ಕೆ ನಿವಾರಣೆಗಾಗಿ ನ್ಯಾಯ - ಪ್ರಕಾರ ಮಾಡಬಾರದುದನ್ನು ಅನಿವಾರ್ಯವಾಗಿ ಮಾಡುತ್ತಾರೆಂದಾದರೆ? ಇಂತಹ ಅವಸರದ ಕೆಲಸದ ದುಷ್ಪರಿಣಾಮವು ಒಂದಲ್ಲೊಂದು ರೀತಿಯಿಂದ ಅಗಿಯೇ ತೀರುವುದು. ಈ ರೀತಿ ಬೆಳಕಿಗೆ ಬೀಳಬಲ್ಲ ಕಪಟವಾಗಲೀ, ಅವಸರವಾದಿಗಳು ಆಗ್ರಹಪಡಿಸಿದರೆಂದು ಹಾಸಿಕರ ಕೆಲಸ ಕೈಕೊಳ್ಳುವ ಚಾಂಚಲ್ಯವಾಗಲೀ ನಮ್ಮ ಕೇಂದ್ರ ನಾಯಕರಲ್ಲಿ ಇದ್ದಿರಬಹುದೆ? ಇರಲಾರದೆಂದು ನನ್ನ ನಂಬಿಕೆ.

ಬದಲಿಗೆ, 'ಮಿತಿಮೀರಿದ ಪ್ರಾಂತ್ಯಾಭಿಮಾನವೆಂಬುದು ಅತಿರೇಕಾಚಾರಣೆಗಳಿಗೆ ಅಸ್ಪದವೀಯುವ ಸಂಕುಚಿತ ಸ್ವಾರ್ಥ ಬುದ್ಧಿಯಾದ್ದರಿಂದ ಅಪಾಯಕರ' ಎಂಬ ತಮ್ಮ ಭಾವನೆಗೆ ದೊರೆತ ಪ್ರತ್ಯಕ್ಷ ನಿದರ್ಶನಗಳವು, ಎಂದೇ ಆನರೀ ರಾಜೀನಾಮೆಗಳನ್ನು ಕಟ್ಟಿಕೊಳ್ಳಬಹುದು. ಕರ್ನಾಟಕ ಪ್ರಾಂತ್ಯರಚನೆಯ ಕುರಿತು ಕೇಂದ್ರ ನಾಯಕರಲ್ಲಿ ಹೊಸ ಅಸಕ್ತಿ ಹುಟ್ಟುವ ಬದಲಿಗೆ ಆ ಕುರಿತು ಅವರಲ್ಲಿರುವ ಶಂಕೆ, ಸಂದೇಹಗಳೇ ಮತ್ತಷ್ಟು ಬಲಗೊಳ್ಳಬಹುದು. ಈ ದೃಷ್ಟಿಯಿಂದ ಈ ರಾಜೀನಾಮೆಗಳು ನಿರ್ಮಿಸಿದುದು ಪ್ರಾಂತ್ಯ ರಚನೆಗೆ ಪ್ರತಿಕೂಲ ವಾತಾವರಣವನ್ನೇ ಹೊರತು ಅನುಕೂಲ ವಿದ್ಯಮಾನಗಳನ್ನಲ್ಲ. ಕೇಂದ್ರ ನಾಯಕರ ಮನಸ್ಸನ್ನೂ ಇನ್ನಷ್ಟು ಹಾಳುಮಾಡಿದುವು ಹೊರತು ಉತ್ತೇಜಿಸಿಲ್ಲ.

'ಕನ್ನಡಿಗರ ಜಾವನಿಗೆ ಕೇಂದ್ರ ನಾಯಕರು' ಎನ್ನುವುದಿಲ್ಲ' ಎಂಬ ಆಪವಾದವು ಈ ರಾಜೀನಾಮೆಗಳ ಸಂಬಂಧವಾಗಿಯೂ ತಪ್ಪಿಗೆ ತಪ್ಪುವುದು ಬೇಡವೆಂದು ಖಂಡಿತವಾದಿ ಇಲ್ಲಭಾಯಿಗಳ ನೇತೃತ್ವದಲ್ಲಿ ಕೇಂದ್ರ ವಾರ್ಲಿಮೆಂಟೇರೀ ಬೋರ್ಡು ಎಲ್ಲಾ ರಾಜೀನಾಮೆಗಳಿಗೂ ಸಮ್ಮತಿಕೊಟ್ಟು, ಈ ಮೂಲಕ ತೆರವಾದ ಸ್ಥಾನಗಳಿಗೆಲ್ಲಾ ಹೊಸ ಉಮೇದ್ವಾರಿಗಳನ್ನು ನಿಲ್ಲಿಸುವ ನಿರ್ಣಯಮಾಡಿ ಕೆಂದು ಭಾವಿಸೋಣ ಆಗಲೂ, ಈ ರಾಜೀನಾಮೇ ಯೋಧರು ಎದೆಕಳಕೊಳ್ಳದೆ ತಮ್ಮ ಯೋಧಪಥದಲ್ಲೇ ಮುಂದೊತ್ತುವರೆಂದು ನಿರೀಕ್ಷಿಸಬಹುದೆ?

ತಾವು ಈ ವರೆಗೆ ಹೇಳಿದ್ದುದನ್ನೇ ಮತ್ತೊಮ್ಮೆ ಧರಿಸಿ "ಈ ರಾಜೀನಾಮೆಗಳ ಕುರಿತು ಸಂಬಂಧಪಟ್ಟ ಸದಸ್ಯರು ಪುನರಾಲೋಚನೆ ಮಾಡಿ ಇಂತಿಷ್ಟು ವಾಯಿದೆಯೊಳಗೆ ಹಿಂತೆಗೆದುಕೊಳ್ಳಬೇಕು– ಇಲ್ಲವಾದರೆ ಆ ಮರುದಿನವೇ ಅವುಗಳನ್ನು ಅಂಗೀಕರಿಸಿಕೊಳ್ಳುವೆವು" ಎಂದು ಕೇಂದ್ರ ವಾರ್ಲಿಮೆಂಟರಿ ಬೋರ್ಡಿನ ಸ್ಪಷ್ಟ ಸೂಚನೆ ಬಂದರೆ ಆಗಲೂ ಜೆಜ್ಜೆ ಹಿಂದಿಡದೆ ಗಟ್ಟಿ ನಿಲ್ಲುವವರೆಷ್ಟು ಮಂದಿಯೊ?

ಕೇಂದ್ರ ನಾಯಕರಿಂದ ಅಥವಾ ಸರಕಾರದಿಂದ ಪ್ರಾಂತ್ಯರಚನೆಯ ಕುರಿತು ಯಾವ ಹೊಸಾಶ್ವಾಸನೆಯೂ ಬಾರದೆ, ವಾರ್ಲಿಮೆಂಟರೀ ಬೋರ್ಡಿನಿಂದ ಈ ರಾಜೀನಾಮೆಗಳ ಅಂಗೀಕಾರವೂ ಆಗದೆ ಉಳಿದು ಹೋದರೆ, ರಾಜೀನಪತ್ರವೊಪ್ಪಿಸಿದ್ದನ್ನಸದಸ್ಯರು ಕಾಂಗ್ರೆಸಿನ ಮತ್ತು ಶಾಸನಸಭೆಯ ಸದಸ್ಯತ್ವಗಳನ್ನು ಒಟ್ಟೊಟ್ಟಿಗೆ ಬಿಟ್ಟು ಹೊರಗೆ ಬರಲು ತಯಾರಿರುವರೆ?

ಈ ರಾಜೀನಾಮೆಗಳನ್ನೂ, ಕೂಡಲೇಕರ್ನಾಟಕ ಪ್ರಾಂತ್ಯ ರಚನೆಸಿಕೊಳ್ಳಲುನಿರ್ದಕ್ಷಿಣ ಹೋರಾಟಕೊಡಬೇಕೆಂಬುದನ್ನೂ ಸಮರ್ಥಿಸಿ ಈಗ ಖಂಡತುಂಡ ಮಾತುಗಳನ್ನಾಡುತ್ತಿರುವ ದಕ್ಷಿಣ ಕನ್ನಡದ ಕೆಲವು ಮುಂದಾಳುಗಳು ಮತ್ತು ಕಾಂಗ್ರೆಸ್ ಅಧಿಕಾರಿಗಳು ಜಾರ್ಜ್‌ಫರ್ನಾಂಡಿಸರಿಗಾಗಿದ್ದ ದ. ಕ. ಜಿಲ್ಲಾ ಕಾಂಗ್ರೆಸ್ ಸಭೆಯು ಪೆಟ್ಟು ಸೂರು ಮಾತ್ರವಲ್ಲ, "ಹೈದರಾಬಾದಿನ ಭಾಗವನ್ನೂ ಸೇರಿಸಿಕೊಂಡಲ್ಲದೆ ಕರ್ನಾಟಕ ಪ್ರಾಂತ್ಯವಾಗಕೂಡದು" ಎಂದು ಧಾವಣಗೆರೆಯ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಸಭೆಗೆ ಶಿಫಾರಸು ಮಾಡಿದ್ದಿತು. ಇದೇ ರೀತಿ ತಮ್ಮ ಇಂದಿನ ಪ್ರತಿಭಟನಾ ಚಳವಳಕ್ಕೆ ವ್ಯತಿರಿಕ್ತವಾದ ನಿರ್ಣಯಗಳನ್ನೇ ಕೆ. ಪಿ. ಸಿ. ಸಿ. ಮತ್ತದರ ಅಂಗಸಮಿತಿಗಳು ಈ ಹಿಂದೆ ಮಾಡಿವೆ!!

ಸ್ವತಂತ್ರಪೂರ್ವದಲ್ಲಿ ಕಾಂಗ್ರೆಸ್ ಧ್ಯೇಯಾದರ್ಶಗಳಿಗೆ ವಿರುದ್ಧವಾಗಿ ಸ್ವಾಂತ್ಯಪರ್ಯಂತವೆನೆಸಿ ಅಲ್ಪ ಸನಿಷ್ಠಸ್ಥಾನಗಳಿಗೆ ಕೊಪ್ಪೆಬಿದ್ದುದಲ್ಲದೆ– ಸ್ವತಂತ್ರ್ಯವೆಂದರೆ ಬಡ ಶ್ರಮಜೀವಿಗಳಿಗೆ, ಜನಸಾಮಾನ್ಯಂ ಉದ್ಧಾರಕ್ಕಾಗಿ ಗಳಿಸಿಕೊಳ್ಳುವ ಅಧಿಕಾರವೆಂದು ಸ್ಪಷ್ಟವಾಗಿ ಜಾಹೀರುಮಾಡಿದ್ದಿತು. ಸ್ವತಂತ್ರ್ಯ ದೊರೆತು ಈಗ ಎರಡೂ ವರೆವರುಷ ಸವೆದಿಪತ್ತಿದೆಯಾದರೂಜನಸಾಮಾನ್ಯರ ಜೀವನ ವಿಷ್ಟ ಉತ್ತೇಜಕಗುಣ್ಣದೆ ಏರಿದುದಿಲ್ಲ. ದುಡುಕು ಬುದ್ಧಿಯ ಈ ಕರ್ನಾಟಕಾಭಿಮಾನಿಗಳ ಮರ್ಮವಿಂತಾದರೆ, ಸ್ವಾತಂತ್ರ್ಯ ನಿರರ್ಥಕವಾಯಿತು ಎನ್ನತ್ತಾ ಶ್ರಮಜೀವಿ ಜನಸಾಮಾನ್ಯಂ ಪರವಾಗಿ ಸರಕಾರದ ವಿರುದ್ಧ ಕಠೋರ ಚಳವಳವನ್ನಾರಂಭಿಸುವುದು ಕೂಡಾ ನ್ಯಾಯ ಮತ್ತು ಅಗತ್ಯವಿದ್ದಿಸುವುದಿಲ್ಲವೆ? ಆದರೂ 'ಕಮ್ಯೂನಿಸ್ಟ್'ರಂತಹ ಚಳವಳಗಾರರನ್ನು ಸರಕಾರವೂ ಜನತೆಯೂ ಕೂಡಿಯೇ ದಮನಿಸುತ್ತಿರುವುದೇಕೆ? ರಾಷ್ಟ್ರದ ಜನತೆಯ ಆಶ್ಯಧಿಕ ಸಂಪತ್ಯಾಕರ ನಿತ್ಯ ಜೀವನ ಸ್ಥಿತಿ ಸುಧಾರಣೆಗಾಗಿ ನವ್ಯ ಸರಕಾರದಿಂದ ನಾವು ಪ್ರತಿಭಟನೆ ಕಾರಬಾರದು–ನವ ಪ್ರಾಂತ್ಯ ರಚನೆಯಂತಹ ತೊಗಲ ಪ್ರಶ್ನೆಗಾಗಿ ಮಾತ್ರ ನಾವು ನವ್ಯ ಸರಕಾರಕ್ಕಾದಿರು ಬೇಳಬಹುದು. ಎಂದು ಇದರ ಅರ್ಥವೆ?

ಎಲ್ಲಕ್ಕಿಂತ ಮೊದಲು ಆರ್ಥಿಕ, ಮೂಜಿರ ಆಡಳಿತದ ಮತ್ತು ಅನ್ಯಸ್ಥೈರ್ಯವನ್ನಿಸಿಕೊಳ್ಳಬೇಕು– ಇದಕ್ಕಾಗಿಯೇ ಪ್ರಾಂತಿಕ ಅಸ್ತಿತ್ವಸ್ಥಿತಿಗಳ ಮಾಯವಾಗಿ ಭಾಷಾನ್ವಯ ಪ್ರಾಂತ್ಯ ರಚನೆಯಾಗಬೇಕು–ಇಂತಹ 'ಬೇಕು'ಗಳು ಹಲವಿವೆ. ಆದರೆ ಈ ಕಾಲದಲ್ಲಿ ಎಲ್ಲವೂ ಶ್ರಮ ಮತ್ತು ಸಹನೆಯಿಂದಲೇ ಆಗಬೇಕಲ್ಲದೆ ಅಹಂಕಾರ ಮತ್ತು ಅವಸರದ ಮೂಲಕ ನಡೆಯಲಾರದು. ಜನವರಿ 26ರಲ್ಲಿ ನವರಾಜ್ಯ ಶಾಸನ ಜಾರಿಗೆ ಬಂದಾಗ ಸಂಸ್ಥಾನ-ಪ್ರಾಂತ್ಯಗಳ ಮಧ್ಯೆ ಒಂದೇ ಆಗಿ ನೈಸರ್ಗಿಕ—ನೈಸರ್ಗಿಕ ಕನ್ನಡ ಭಾಗಗಳು ವಿಕೀರ್ಣವಾಗಿ ಸುಗಮ ಸಂಚಾರವಿದೆ. ಈ ಒಲ್ಲಪ್ರಥಿಯೊಂಗೆ ಈ ಗದ್ದಲ ಬೇಕೆ?

ಗದ್ದಲ ಕೇಳಿ ಒಂದಷ್ಟು ಮನಸ್ಸು ಹಿಡುವುದಿದೆ. ಕನ್ನಡಿಗರು ರಾಜೀನಾಮೆಯ ಗದ್ದಲದ ಕಡೆಗೆ ಎಲ್ಲರ ಕಿವಿ ಮತ್ತು ಲಕ್ಷ್ಯ ಬಿದ್ದಿದೆ. ಆದರೆ ಇಷ್ಟರಿಂದಲೇ ಕೆಲಸವಾಗುತ್ತದೆ–ಇಷ್ಟೇ ನಮ್ಮ ಕೆಲಸ–ಎಂಬ ಭ್ರಾಂತಿಯಿಂದ ಯಾವ ಪ್ರಮಾದವೂ ಆಗಬಾರದು. ನಾಯ ಮತ್ತು ಆವಶ್ಯಕತೆಗೆ ನಿಮ್ಮಿದ ದುಡುಕು ಕೆಲಸಕ್ಕೆ ಬೀಳಂತಹವಕ್ಷ ಕನ್ನಡಿಗರ ಈ ರಾಜೀನಾಮೆಗಳು ದಿಯಲಾರದವು ದುಡುಕುತನವೇ ಸರಿ!

ಬೇಕಾಗಿದ್ದಾರೆ

ಈ ಕೆಳಗೆ ರಚಿಸಿದ ಎಡ್ರೆಸಿನವರಿಗೆ ಬಿ. ಎ. ಕಲಿತ ಯೋಗ್ಯ ಹಾಗೂ ನಂಬಿಗೆಯ ಜನಬೇಕು. ಮನೆಯಲ್ಲೇ ವಿದ್ಯೆ ಹೇಳಿಕೊಡಲು ಮತ್ತು ಇವರಲ್ಲಿ ಗುಮಾಸ್ತೆ ಕೆಲ್ಸ ಮಾಡುವವರಾಗಿರಬೇಕು. ಹಿಂದುಗಳು ಯಾ ಬ್ರಾಹ್ಮಣರಾಗಬೇಕು. ಊಟ ಕಾಫಿ ಸಮೇತ ತಿಂಗಳೊಂದಕ್ಕೆ 50 ಯಾ 60 ರೂ ಸಂಬಳ ಕೊಡಲಾಗುತ್ತೆ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ್ನ ಎಡ್ರೆಸಿಗೆ ಬರೆಯಿರಿ. ಭೇಟ್ಟಿಯಾದರೆ ಉತ್ತಮ. ಕೂಡಲೇ ಬರೆಯಿರಿ.

M. K. Subba Rao,
General Merchant, Mani, & President, Panchayat Court, Nagody, Kollur Post, S. K.

THE
PANGAL NAYAK BANK, LTD.,
Head Office: UDIPI.
SAVE FOR THE FUTURE.
SEASON DEPOSITS terminable on or before 30–6—1950 are accepted from 1—10—1949 at the following rates:
For 3, 4 or 5 months at 3 % p. a.
For 6, 7 or 8 months at 3% p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices.

ಸಾಗ್ವಳ್ಳಿದಾರರು ಕೊಡುವ
ದೃಢಪತ್ರಿಕೆ ಮತ್ತು
ಮನೆವಾರ್ತೆ ಖರ್ಚಿಗೆ ಗೇಣಿ ಲಕ್ಷ್ಮಿ
ಪಡೆಯುವರಿ ರೈತನು ಕೊಡತಕ್ಕೆ
ಅರ್ಜಿ ವಗೈರೆ ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ

ಬ್ರಿಟಿಷರಿಂದ ರಾಜಕೀಯ ರಂಗದಲ್ಲಿ ಮಾತ್ರವೆ ಗಣ್ಯ ಮರ್ಯಾದೆಯೂ ಕಳದ ದಿನಗಳಲ್ಲಿ ತೆಂಡುಲ್ಕರ್ ಮತ್ತು ಮಂಜ್ರೇಕರ್ ಸ್ವಾತಂತ್ರ್ಯಾನಂತರದ ಅನಿಶ್ಚಿತ ಸ್ಥಿತಿಯೇ ಪ್ರಯೋಜನಕ್ಕೆ ಬಂದ ಮಾರಿಗೆ ಶಾಶ್ವತವೇನೋ ಎಂಬಂತೆ ಕಾಣುತ್ತಿದೆ

ಆಂತರರಾಷ್ಟ್ರೀಯ ರಂಗ

ಸಂಯುಕ್ತ ರಾಷ್ಟ್ರ ಸಂಘದ ತಾಲ್ಲುನೇ ಜಾನೀರು ಅಧಿವೇಶನವು ಹಲವು ಪ್ರಾಮುಖ್ಯ ಕಾರ್ಯಕಲಾಪಗಳನಂತರ ದಶಂಬರ್ ತಾ. 10ಕ್ಕೆ ಫ್ಲಷಿಂಗ್ ಮಿಡೋವಿನಲ್ಲಿ ಮುಕ್ತಾಯಗೊಂಡಿವೆ ಈ ಅಧಿವೇಶನದ ಸಮಾರೋಪ ಭಾಷಣದಲ್ಲಿ ಸಂಘದ ಮುಖ್ಯ ಕಾರ್ಯದರ್ಶಿ ಟ್ರಗ್ವಿ ಲೀಯನರು ಈ ಬಾರಿಯ ಅಧಿವೇಶನದ ಯಶಸ್ವೀ ಕಾರ್ಯಕಲಾಪಗಳಿಗಾಗಿ ಅಭಿವಂದನೆ ಸಲ್ಲಿಸಿದ್ದಾರೆ, "ಜನತೆಯ ಜೀವನಾಭಿವೃದ್ಧಿಗಾಗಿ ವಿಧಾಯಕ ಕಾರ್ಯಸೌಕರ್ಯವನ್ನು ಒದಗಿಸುವ ಯೋಗ್ಯತೆಯು ಸಂಯುಕ್ತರಾಷ್ಟ್ರ ಸಂಘಕ್ಕೆದೆ ಎಂಬುದನ್ನು ಈ ಸಲದ ಅಧಿವೇಶನವು ಮುಂಚಿಗಿಂತ ಹೆಚ್ಚಾಗಿ ಪ್ರದರ್ಶಿಸಿತ." ಎಂದು ಲೀಯವರಂದಿದ್ದಾರೆ. ಭಾರತದ ವರ್ಚಸ್ಸಿನಂತೂ ಸಂಯುಕ್ತ ರಾಷ್ಟ್ರಸಂಘದಲ್ಲಿ ವಿಶೇಷವಾಗಿ ಬೆಳೆದಿದೆ. ಅದೀಗಾಗಿ ಪ್ರಬಲ ಬಹುಮತದಿಂದ ಭದ್ರತಾ ಕೌನ್ಸಿಲಿಗೆ ರಿಪ್ರೆಸೆಂಟೇಟಿವ್ ಸಂಘದ ಹಲವು ಉಪ ಸಂಸ್ಥೆಗಳ ಸದಸ್ಯತ್ವವನ್ನು ಗಳಿಸಿಕೊಂಡಿದೆ. ಸಂಘದ ವಿವಿಧ ಕಾರ್ಯಕಲಾಪಗಳಲ್ಲಿ ಭಾರತದ ಪ್ರತಿನಿಧಿಗಳು ಕೆಲಸಮಾಡುತ್ತಿರುವ ರೀತಿಯಿಂದ ಕಾರ್ಯಧುರೀಣರಾಗಿದ್ದಾರೆ.

ಜೈನದಲ್ಲಿ ಕಮ್ಯೂನಿಸ್ಟರು ಹೋರಾಟ ಮುಕ್ತಾಯದ ಕೂಗಿನ ಧಾಳಿಯನ್ನು ತೊಡಗಿದ್ದಾರೆ ರಾಷ್ಟ್ರೀಯವು ಕಟ್ಟಕಡೆಗೆ ತಪ್ಪಿ ರಾಜಧಾನಿಯಾಗಿ ಮಾಡಿಕೊಂಡಿದ್ದ ಚುಂಗ್ಯಾವಿಗ ಕಮ್ಯೂನಿಸ್ಟ್ ಸೇನಾಪ್ರವಾಹ ನುಗ್ಗಿ ಬಂದಾಗ ಅವರು ಅಲ್ಲಿಂದಲೂ ಹಿಂದೆಗೆದು ಫೋರ್ಮೋಸಾ ದ್ವೀಪದಲ್ಲಿ ತಳವೂರುವ ನಿರ್ಧಾರ ಮಾಡಿದ್ದಾರೆ. ಆ ದ್ವೀಪವನ್ನು ಸಶಸ್ತ್ರ ಪಾಳಯವಾಗಿ ಪರಿವರ್ತಿಸಿ ಅಲ್ಲಿ ಹೋರಾಟ ಕೊಡಬೇಕೆಂದು ಚಿಯಾಂಗ್ ಕೈ ಶೇಕ್ ನೇತೃತ್ವದ ರಾಷ್ಟ್ರೀಯರು

ಲೋಕ ವಾತಾವರಣ

ನಿರ್ಧರಿಸಿದಂತಿದೆ ಜೈನದ ಮೂಲ ನೆಲದಿಂದ ರಿಪ್ಬ್ಲೀಯರು ಸಂಗೂರ್ಣವಾಗಿ ಹಿಂದೆಗೆದಂತಾಯಿತು ಈಗ ಅಲ್ಲಿ ರಾಷ್ಟ್ರೀಯ ಸೈನಿಕರ ಗೊರಿಲ್ಲಾ ಹೋರಾಟಗಳು ಮಾತ್ರ ಉಳಿದಿವೆ ಬರ್ಮಾ ಥೈಮತ್ತು ಇಂಡೋಚೈನಾದೊಳಗಡೆಯಷ್ಟಾದರೂ ಜೈನೀ ಕಮ್ಯೂನಿಸ್ಟರಿಗನುಕೂಲತೆಯೊದಗಿದೆ. ಜೈನದ ಮತ್ತೀಭಾಗಗಳ ಕಮ್ಯೂನಿಸ್ಟರೊಳಗೆ ಈ ಮೂಲಕ ಸಂಬಂಧನಿರ್ಮಾಣಗೊಳ್ಳಬಹುದಾದರೂ ಜೈನದ ಕೆಂಪು ದಳ ಪ್ರತ್ಯೇಕ ಗಡಿ ದಾಟಿ ನುಗ್ಗಿ ಬರುವುದಸಂಭವನೆಂದು ತಿಳಿಯಲಾಗಿದೆ

ಆಸ್ಟ್ರೇಲಿಯದಲ್ಲಿ ನಡೆದ ಮಹಾ ಚುನಾವಣೆಯ ಪರಿಣಾಮವಾಗಿ ಅಲ್ಲಿ ಕಳದ ಎಂಟು ವರ್ಷಗಳಿಂದ ಅಧಿಕಾರದಲ್ಲಿದ್ದ ಕೂಲಿಗಾರ ಸರ್ಕಾರ ಸೋತು ಹೋಗಿ, ಸಮಾಜೈಕ್ಯ ಮಂದಗತಿಗೆ ಹೊರೂ ವೇಶ ಪ್ರಶ್ನೆಗಳ ವಿರುದ್ಧ ಪಕ್ಷ ಜಲ್ಪ ಬಹುಮತ ಸಡೆದು ಗದ್ದುಬಂದಿ ಕೂಲಿಗಾರ ಪಕ್ಷವನ್ನು ಇತ್ತೀಚೆಗೆ ಮಂಜೂರು ಮಾಡಿಕೊಂಡ ರಾಷ್ಟ್ರಗಳೆಂದರೆ ಒಂದು ನ್ಯೂಜೀಲೆಂಡ್, ಮತ್ತೊಂದು ಅಸ್ಟ್ರೇಲಿಯ

ಇಪಿಪ್ರನಾದ ಬೆಂಜಲ್ಮನನ್ನು ತಾತ್ಕಾಲಿಕವಾಗಿ ಅಂತರ್ರಾಷ್ಟ್ರೀಯ ಅದಲತೆಯೂ ಳಗಿದಬೇಕೆಂದು ಸಂಯುಕ್ತ ರಾಷ್ಟ್ರಸಂಘವು ನಿರ್ಧರಿಸಿದೆ. ಈ ನಿರ್ಧಾರಕ್ಕೆ ಅಲ್ಲಿಯ ಅರಬರು ಮತ್ತು ಯೆಹೂದಿಗಳಿಬ್ಬರೂ ಅಸಮ್ಮತಿಸಿದ್ದಾರೆ. ಬ್ರಿಟನಿನ ಪ್ರತಿನಿಧಿಗಳೂ ಜೆರುಸಲೇಮಿನ ಈ ಆಂತರ್ರಾಷ್ಟ್ರೀಯ ಅಡಳತೆಯಲ್ಲಿ ತಾವಾವ ಭಾಗವನ್ನೂ ವಹಿಸುವಂತಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಭಾರತದಲ್ಲಿರುವ ಫ್ರೆಂಚ್ ವಸಾಹತುಗಳು ಭಾರತದೊಂದಿಗೆ ವಿಲೀನಗೊಳ್ಳಬೇಕೋ ಇಂದಿನಂತಿತಬೇಕೋ ಎಂಬ ಕುರಿತು ಅಲ್ಲಿಯ ಜನಮತ ಸಂಗ್ರಹವು ಬರುವ ಫೆಬ್ರವರಿ ಆಂತ್ಯ ಅಥವಾ ಮಾರ್ಚಿ ಆದಿಭಾಗದಲ್ಲಿ ನಡೆಯಬೇಕೆಂದೂ ಗೊತ್ತಾಗಿದೆ ಪೂರ್ವ ನಿಶ್ಚಯದಂತೆ ಇದೇ ದಶಂಬರ್ ತಾ. 11ರಲ್ಲಿ ಆ ಮತ ಸಂಗ್ರಹವಾಗಬೇಕಿದ್ದಿತಾದರೂ ಅದು ಹಿಂದೆ ಬಿದ್ದಿತ್ತು. ಪಾಂಡಿಚೇರಿ ವಾಣಿಜ್ಯವಸ್ತುಗಳ ಸಂಬಂಧವಾಗಿ ಭಾರತ ಮತ್ತು ಫ್ರೆಂಚ್ ಸರಕಾರಗಳೊಳಗೆ ಮಾತುಕತೆಗಳು ನಡೆದಿವೆ

ಭಾರತ — ಪಾಕಿಸ್ತಾನ

ಭಾರತ ಪಾಕಿಸ್ತಾನಗಳೊಳಗೆ ಆರ್ಥಿಕ ಸಹಿವಾಟು ಮತ್ತು ರಾಜಕೀಯ ಸಂಬಂಧಗಳಲ್ಲಿ ಒಂದು ಒಡಂಬಡಿಕೆಯಾಗುವುದು ಎಂದಿಂದಿಗೂ ಸಾಧ್ಯವೇ ಎಂಬ ಸಂದೇಹ ಮೂಡಿಸುವಂತಹ ಹೊಸ ಹೊಸ ಘಟನೆಗಳು ನಡೆಯುತ್ತಿವೆ. ನಾಣ್ಯದ ಮೌಲ್ಯ ವಿಚ್ಛೇದನವಾಗುವ ಮೊದಲೇ ಕಂಟ್ರಾಕ್ಟಿಗಾಗಿ, ಬೆಲೆ ಕೂಡಾ ಧಾರಕದಿಂದ ಆಗಲೇ ಸಂದಾಯವಾಗಿದ್ದು, ಭಾರತಕ್ಕೆ ಸಾಗಿಸಲು ಮಂಜಿ ಮೊದಲಾದುವುಗಳಲ್ಲಿ ತುಂಬಿಸಿದ್ದ ಸುಮಾರು ೬ ಲಕ್ಷ ಬೇಲುಗಳಷ್ಟು ನಾರನ್ನು ಪಾಕಿಸ್ತಾನವು ತಡೆದಿಟ್ಟಿದೆ ಕೆಳದ ವಾರ ಭಾರತ ನಾರು ನಿಗಮ ಸಂಸ್ಥೆಯ ಪ್ರತಿನಿಧಿಗಳು ಈ ಸಂಬಂಧವಾಗಿ ಧಾಕ್ಕೆಗೆ ಹೋಗಿ ಪಾಕಿಸ್ತಾನ್ ಕೆತ್ತಾನರು ಬೋರ್ಡಿನವರೊಂದಿಗೆ ಪರ್ಯಾಲೋಚನೆ ನಡೆಸಿದ್ದರು. ಈ ನಾರುಗಳ ಬೆಲೆಯನ್ನು ಮುಂದಾಗಿ ಕೊಟ್ಟಿದ್ದು, ಇದು ಮೌಲ್ಯವಿಚ್ಛೇದನಕ್ಕೆ ಮೊದಲೇ ಆಗಿರುವ ಕಂಟ್ರಾಕ್ಟಿರುವುದರಿಂದ, ಈಗ ಇವುಗಳನ್ನು ಕಳುಹಿಸಿಕೊಡದಿರುವುದು ಅನ್ಯಾಯವೆಂದು ಎಷ್ಟೇ ವಾದಿಸಿದರೂ, ಭಾರತ ಪಾಕಿಸ್ತಾನಗಳೊಳಗಿನ ಮೌಲ್ಯವಿಚ್ಛೇದನಾನಂತರದ ವಿವಾದ ತೀವ್ರಾನಸಹೊಂದುವ ವರೆಗೆ ಪಾಕಿಸ್ತಾನದ ಯಾವ ನಾರನ್ನೂ ಯಾವ ಕಾರಣ ಕ್ಕಾಗಿಯೂ ರಫ್ತು ಮಾಡುವಂತಿಲ್ಲವೆಂದು ಪಾಕಿಸ್ತಾನ್ ಬೋರ್ಡ್ ಹಠ ಹಿಡಿದಿದೆ ಇತ್ತ ಕಾಶ್ಮೀರ ಸಂಬಂಧದಲ್ಲಿ ತಾನು ನ್ಯಾಯವಾದ ಎಂದು ತೋರಿಸಿಕೊಳ್ಳಲು ಪಾಕಿಸ್ತಾನವು ವಸ್ತುಸ್ಥಿತಿಯನ್ನು ತಿರುಚಿಮಾಡಿ ವಿವಿಧ ರೀತಿಯಿಂದ ಕ್ಷುದ್ರ ರೀತಿಯ ಆಪಪ್ರಚಾರಗಳಿಗೆ ತೊಡಗಿದೆ. ಪಾಕಿಸ್ತಾನ್ ಸರಕಾರದಲ್ಲಿ ಕಾಶ್ಮೀರ ಸಂಬಂಧದ ಮಂತ್ರಿಯಾಗಿದ್ದು, ಈಗ ಪಾಕಿಸ್ತಾನದ ರಾಯಭಾರಿಯಾಗಿರುವ ಮಿ. ಮುಸ್ತಾಕ್ ಅಹಮ್ಮದ್ ಗುರಮನಿಯವರು ಕೈರೋದ ಪತ್ರಿಕಾಪ್ರತಿನಿಧಿ ಕೂಟದಲ್ಲಿ ಪ್ರಕಾಶಪಡಿಸಿದ ಕಾಶ್ಮೀರ ಸಂಬಂಧದ ಒಂದು ಹಸ್ತಪ್ರತಿಯು ಇಂತಹ ಅಸತ್ಯ ವಂಚನೆಗಳಿಂದಲೇ ತುಂಬಿರುವ ದಾಖಲೆಯಾಗಿದೆ. ತಪ್ಪು ಮೇಲೆ ಅಧೋಪತಿಸುವ ನಿಜಸ್ಥಿತಿ ಸ್ಥಿಯಾವ್ಯವನ್ನೂ ಪಾಕಿಸ್ತಾನವು ಆ ಪ್ರಕಟಣೆಯಲ್ಲಿ ಕಾಣಿಸದೆ, ವಿಷಯ ಮತ್ತು ಘಟನೆಗಳನ್ನು ತನಗೆ ಬೇಕಾದಂತೆ ವಿಪರ್ಯಾಸಗೊಳಿಸಿ ತೋರಿಸಿದೆ. ಈ ಅಪಪ್ರಚಾರದ ಹುರುಳನ್ನು ಬಯಲಿಗೆಳೆದು, ಸತ್ಯ ಸಂಗತಿಗಳನ್ನು

[೭ನೇ ಪುಟ ನೋಡಿರಿ]

THE VIJAYA BANK, Ltd,

H. O, MANGALORE.

A With a net work of Branches through out the District and one each at Mercara and Bombay

B With a standing of 18 years service

C. With total resources of over 40 Lakhs

Fixed deposits are now accepted at the following rates of interest

3 months	3% P. A.	6 months	3½% P A.
12 months	3½% P. A.	24 months	1% P A.

All kinds of banking business transacted.

Sri B. M. Hegde,

Advocate & President District Board South Kanara.

(CHAIRMAN OF THE BOARD OF DIRECTORS)



THE
Canara Banking Corporation Ltd.
(Incorparated in India)
Fstd: 1906
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted

ನವಯುಗ
ಗುರುವಾರ ಉಡುಪಿ ೧೯೫೬-೦೨-೦೯

ಈಗ ಹೇಗೆ?

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಇಚ್ಛೆಯಂತೆ, ಕರ್ನಾಟಕ ಪ್ರಾಂತ್ಯರಚನೆಯ ಪ್ರಶ್ನೆಯನ್ನೆತ್ತಿ ಹಿಡಿದು, ಶಾಸನ ಸಭೆಗಳ ಕನ್ನಡಿಗ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಡಲು ಸಿದ್ಧರಾದ ಕುರಿತು ಈ ಸಂಚಿಕೆಯಲ್ಲಿ ಸವಿವರ ವಿಮರ್ಶೆ ಬಂದಿದೆ; ತುಲನಾತ್ಮಕ ಬುದ್ಧಿ ಸಾಕಷ್ಟತೋರಿಬಾರದ ಅತಿರೇಕಾಚರಣೆಯೆಂದೇ ಆ ರಾಜೀನಾಮೆಗಳನ್ನಿಲ್ಲಿ ಖಂಡಿಸಲಾಗಿದೆ. ಆದರೀ ಖಂಡನೆಯಂಬುದು ಕನ್ನಡಿಗರು ತಮ್ಮ ಪಾಲಿನ ಕರ್ತವ್ಯವನ್ನು ಮಾಡಿ ಮುಗಿಸಿಕೊಳ್ಳದೆ, ರಾಜೀನಾಮೆಯಂತಹ ದುಡುಕುತನಕ್ಕೆ ಮುಂದಾದರೆಂಬ ಮಟ್ಟಿಗೆ ಮಾತ್ರ. ಸ್ವಾಯುಬಲವರ್ಧನೆಗಾಗಿ - ಅನ್ಯರೊಡನೆ ಉರುಡಾಡುವುದಕ್ಕಿಂತ, ತಮ್ಮ ಅಟದ ಕಣದಲ್ಲೇ ವ್ಯಾಯಾಮ ಮಾಡುವುದು ಉತ್ತಮ- ಕಸಗೊಂಡು ಗಳಸುವುದಕ್ಕಿಂತ ಕಾಯಕಕ್ಕ ಮಾಡಿ ಸಂಪಾದಿಸುವುದು ಲೇಸು- ಥಿಲ್ಲಿಯವರಿದಿರು ಪ್ರತಿಭಟನೆ ಹೂಡಿ ಕರ್ನಾಟಕ ಪ್ರಾಂತ್ಯ ರಚಿಸಿಕೊಳ್ಳಲು ನೋಡುವುದಕ್ಕಿಂತ, ಕನ್ನಡಿಗರು ಆ ಸಂಬಂಧದ ತಮ್ಮ ಕರ್ತವ್ಯಗಳನ್ನೆತ್ತ ನಿರ್ವಹಿಸಿಕೊಳ್ಳುವುದು ಅಗತ್ಯ- ಎಂಬೊಂದೇ ನೀತಿ ಇಲ್ಲಿದೆ. ಕರ್ನಾಟಕ ಪ್ರಾಂತ್ಯವಾಗುವಂತಹದ್ದು;ಅದೆಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಆಗಲೇಬೇಕು. ಈ ಕುರಿತು ಪ್ರತಿಮಾತಿಲ್ಲ ಹಾಗಾಗುವಂತೆ ಮಾಡುವುದಕ್ಕಗತ್ಯವುಳ್ಳ ಕೆಲಸಗಳೆಲ್ಲವೂ ಆಗಬೇಕಾದಂತೆಯೇ ಆಗತ್ಯವಿದ್ದ ಯಾವ ಕಾರ್ಯವೂ ನಡೆಯಕೂಡದು; ಎಂದಿಷ್ಟೇ ಇಲ್ಲಿ ನಮ್ಮ ವಾದ ಆಗಬಾರದವುಗಳ ವರ್ಗಕ್ಕೆ ಸೇರುವ 'ರಾಜೀನಾಮೆ'ಗಳಂತಹ ಕಾರ್ಯಗಳು ಕನ್ನಡಿಗರ ಕಡೆಯಿಂದಾಗಿನ್ನೆ. ಆಗಬೇಕಾದವುಗಳ ಪಂಗ್ತಿಗೆ ಸೇರುವ ಉತ್ಸಾಹ, ಪ್ರೋತ್ಸಾಹ ಹಗಳು ಕೇಂದ್ರ ನಾಯಕರ ಕಡೆಯಿಂದ ತೋರಿಬರುತ್ತಿಲ್ಲ. ಇದೀಗಿನ ಶೋಚನೀಯ ಸ್ಥಿತಿ. ಇಕ್ಕಡೆಯ ಇವೆಂಡು ದೋಷಗಳ ಕಡೆಗೂ ಬೇರೊಂದೆಡೆಯಲ್ಲಿ ಸಾಕಷ್ಟು ಬೆಳಕು ಚೆಲ್ಲಿರುವುದರಿಂದ ಇನ್ನು ಮುಂದೇನು ಎಂಬುದನ್ನಷ್ಟೇ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. ಕೇಂದ್ರ ನಾಯಕರು ಮತ್ತು ಕನ್ನಡಿಗರು ಪರಸ್ಪರ ನಿಂದಿಸಿಕೊಳ್ಳಲಾಗುವ ಘಟನೆಗಳು ಇಕ್ಕಡೆಗಳಿಂದಲೂ ನಡೆದುಹೋಗಿವೆ. ಆದರೀ ಇಂತಹ ದೋಷಾರೋಪಣಾ ಸಂದರ್ಭದೊರೆತುದೇ ಒಂದು ಲಾಭವೆಂದು ಯಾವ ಕಡೆಯವರೂ ನೆನಸುವಂತಿಲ್ಲ; ಕೆಲಸವೇ ಆಗಬೇಕಾಗಿದೆ; ಇಂದಿನ ವಿವಾದ, ಪ್ರತಿಭಟನೆಗಳು ಕೆಲಸಕ್ಕೆ ಸಹಕಾರಿಯಾಗುವಂತಹವಲ್ಲ. ಅವು, ಕಾರ್ಯರಂಗದಲ್ಲಿರುವ ಲೋವ, ದೋಷಗಳ ದೆಸೆಯಿಂದ ಹುಟ್ಟಿದವುಗಳಿವೆ ಆ ಕುಂದುಕೊರತೆಗಳನ್ನೂ, ತತ್ಸಂಬಂಧದ ತರ್ಕ, ವಿರೋಧಗಳನ್ನೂ ಒಟ್ಟೊಟ್ಟಿಗೆ ನಿವಾರಿಸಿಕೊಂಡು, ಕಾರ್ಯರಂಗದಲ್ಲಿ ಪ್ರಾಂತ್ಯರಚನೆಗಗತ್ಯವುಳ್ಳ ಕೆಲಸವಷ್ಟೇ ನಿಖ್ಖುವಂತೆ ಮಾಡಬೇಕಾದದು ಈಗ ಎಲ್ಲರ ಕರ್ತವ್ಯ. ಆಂಧ್ರ ಪ್ರಾಂತ್ಯರಚನಾ ಕಾರ್ಯವಾರಂಭಿಸಿದೆ- ಅದರೊಂದಿಗೇನೇ ಕರ್ನಾಟಕ ಮತ್ತು ಕೇರಳ ಪ್ರಾಂತ್ಯಗಳು ನಿರ್ಮಾಣಗೊಳ್ಳದಿದ್ದರೆ ಆಂಧ್ರರನ್ನು ಕಳೆದುಳಿಯುವ ತಮಿಳು ಪ್ರಾಂತ್ಯದಲ್ಲಿ ಕನ್ನಡಿಗರೂ ಮಲೆಯಾಳಿಗರೂ ಅಲ್ಪಸಂಖ್ಯಾಕರಾಗಿ ಉಳಿದು, ತೀರಾ ಕಡೆಗಣಿಸಲ್ಪಡುವ ಅವಾಯವಿದೆ- ಜನವರಿ 26ರೊಳಗೆ ಕರ್ನಾಟಕ ಪ್ರಾಂತ್ಯಕ್ಕಸ್ತಿವಾರ ಬೀಳದಿದ್ದಲ್ಲಿ, ಅಂದು ಜಾರಿಯಲ್ಲಿ ಬರುವ ಸ್ವರಾಜ್ಯ ಶಾಸನದ ನಿಯಮಾನುಸಾರವಾಗಿ ಸಂಬಂಧಪಟ್ಟ ಶಾಸನಸಭೆಗಳ ಮೂಲಕನೇ ಎಲ್ಲಹಂಶ ಬಹುಮಟ ಸಂಪಾದಿಸಿಕೊಂಡು ಪ್ರತ್ಯೇಕ ಪ್ರಾಂತ್ಯ ದೊರಕಿಸಿಕೊಳ್ಳುವ ಕೆಲಸವು, ಪ್ರತಿಯೊಂದು ಶಾಸನ ಸಭೆಯಲ್ಲಿಯೂ ಅಲ್ಪ ಸಂಖ್ಯಾಕರೆನಿಸುವ ಕನ್ನಡಿಗರಿಗೆ ಅತಿ-ಪ್ರಯಾಸದ್ದಾಗುವುದು-ಮುಂತಾದ ಕಾರಣಗಳಿಂದಾಗಿ ಕನ್ನಡಿಗರು' ಈ ಸಮುಹೂರ್ತದಲ್ಲೇ ಸರ್ವ ಶಕ್ತಿಯಿಂದ ಸಾಧ್ಯವಿರುವ ಎಲ್ಲಾ ಪ್ರಯತ್ನ ಮಾಡಬೇಕಾದುದು ಅಗತ್ಯವೇ. ಕನ್ನಡಿಗರ ಈ ಪ್ರಯತ್ನಗಳಿಗೆ ಪೂರ್ಣ ಮನಸ್ಸಿನಿಂದ ನೆರವಾಗಬೇಕಾದುದು ಕೇಂದ್ರ ನಾಯಕರ ಕರ್ತವ್ಯವೂ ಇದೆ. ಏಕೀಕರಣದ ಮಟ್ಟಿಗೆ ಕರ್ನಾಟಕದ ಅರ್ಧ ಜಡ ಭಾಗದಂತಿರುವ ಮೈಸೂರಿಗೂ ಇಂದಿನ ವಾತಾವರಣದ ಕಾವು ತಾಗಿ, ಅಲ್ಲಿಯೂ ಚಟುವಟಿಕೆ ಯಾರಂಭವಾದಂತಿದೆ. ಸೂಕ್ಷ್ಮ ವಿವರ್ಶೆ, ನ್ಯಾಯಾನ್ಯಾಯಗಳ ತುಲನೆಯ ಮೇಲಿಂದ, ಯಾರಲ್ಲಿಂತಹ ಗುಣದೋಷಗಳು ಕಂಡುಬಂದರೂಕರ್ನಾಟಕ ಪ್ರಾಂತ್ಯ ರಚನೆಯ ದೃಷ್ಟಿಯಿಂದ ಈಗ ಎಲ್ಲವೂ ಅನುಕೂಲವಾಗಹತ್ತಿರುವುದು ಸ್ವಸ್ಥವಿದೆ. ಹರಿಹಂಚಾಗಿರುವ ಕನ್ನಡ ಭಾಗಗಳನ್ನು ವಿಕಾಕಾರವಾಗಿ ಎರಕ ಹೊಯ್ಯಲು ಗುಂತೆ ಕರಗಬೇಕಾದುದೆಲ್ಲವೂ ಶಾಂತಿನೆಲೆ ವಿದ್ಯಮಾನಗಳ ಬಿಸಿಯಲ್ಲಿ ಶತಪಥಹಾಕ್ತಿರುವುದು ಕಾಣಿಸುತ್ತಿದೆ. ಈ ಸಂದರ್ಭದಲ್ಲೇ ಕೇಂದ್ರ ನಾಯಕರು ಕೈಯ್ಯಾಡಿಸಿ ಕೆಲಸ ಮಾಡಿಸಿ ಹೊಸಚ್ಚೇಕೆಂದು ಆಗ್ರಹದ ವಿಜ್ಞಾಪನೆ. ಕರ್ನಾಟಕ ಪ್ರಾಂತ್ಯ ರಚನೆ ಕ್ರಿಪ್ರದಲ್ಲಾಗಬೇಕು, ಎಂಬುದಕ್ಕೆ ಮೈಸೂರೇತರರಂತೆ ಮೈಸೂರವರ ಒಪ್ಪಿಗೆಯೂ ಬಂದಿದೆ ಎಂಬ ವಾರ್ತೆಯಿದೆ. ಆ ಮೇಲೂ ಉಳಿಯುವ ತೊಡಕುಗಳೆಂದರೆ, ಈ ಮಿಲನ ವ್ಯವಸ್ಥೆಗಳ ಕುರಿತು ಇರಬಹುದಾದ ಭಿನ್ನಾಭಿಪ್ರಾಯಗಳು ಮಾತ್ರ. ಬೆಳೆಯಲು ಬಿಟ್ಟರೆ, ಅಥವಾ ಅವುಗಳಗೇನೇ ಅನಗತ್ಯ ಪ್ರಾಮುಖ್ಯತೆ ಕೊಟ್ಟರೆ, ಈ ಭಿನ್ನ ಮತಗಳೇ ಏಕೀಕರಣವನ್ನು ಅನಿಶ್ಚಿತಾವಧಿಯವರೆಗೆ ಹಿಂದೆ ಹಾಕಬಲ್ಲವು. ಹಾಗಾಗದಂತೆ ನೋಡುವ ಜವಾಬ್ದಾರಿಯನ್ನು ಕೇಂದ್ರ ನಾಯಕರು ವಹಿಸಬೇಕು— ಅವರೇ ಮಧ್ಯಸ್ಥಗಾರರಾಗಿ ನಿಂತು ವಿವಾದ ವಿಷಯಗಳಿಗೆ ತ್ವರ್ಮಾನಕೊಡಬೇಕು. ಎಲ್ಲಾ ವಿಷಯಗಳೂ ಸಂಬಂಧಪಟ್ಟ ಸರ್ವರಿಗೂ ಮಂದಟ್ಟಾಗುವಂತೆ ಇನ್ನೊರೆಳಗೇನೇ ಸಾಕಷ್ಟು ಚರ್ಚಿಸಲ್ಪಟ್ಟವುಗಳೇ; ಆದ್ದರಿಂದ ಅಂತಹ ತ್ವರ್ಮಾನವನ್ನು ಈಗಿಂದೀಗಲೇ ಕೊಡಲು ಸಾಧ್ಯವಿದೆ. ಇದು ವರೆಗಿನ ಯಾವ ಸಂಗತಿ ಹೇಗಿದ್ದರೂ, ಈಗ ಕೇಂದ್ರ ನಾಯಕರು ಕೈಕೊಳ್ಳಲೇಬೇಕಾದ ಕಾರ್ಯವಿದು. ಇಕ್ಕೀಚೆಗಿನ ದಿನಗಳಲ್ಲಿ ಕನ್ನಡಿಗರನ್ನು ವಿಶೇಷವಾಗಿ ಹಾಗೂ ಸಹಜವಾಗಿ ಕೆರಳಿಸಿರುವ, ಮದ್ರಾಸ್ ಮಂತ್ರಿಮಂಡಲದ 'ವಿಭಜನಾ ಸಮಿತಿ' ರಚನೆಯಲ್ಲಾಗಿರುವ ಅನ್ಯಾಯದ ಕಡೆಗೆ ಈ ಸಂದರ್ಭದಲ್ಲಿ ಸರಿಯಾದ ಲಕ್ಷ್ಯ ಬೀಳಲಿ. ಕೇಂದ್ರ ಸರಕಾರದ ಸೂಚನೆಯಂತೆ, ಪ್ರತ್ಯೇಕಾಂಧ್ರ ಪ್ರಾಂತ್ಯದ ಪಾಲಿನದಾಗುವ ಹೆಣ ಕಾಸ್ಟು, ಆಯ ವ್ಯಯ, ನಾಕರ ವರ್ಗ, ಹೈಕೋರ್ಟು, ಸರ್ವಿಸ್ ಕಮಿಶನ್, ಇತ್ಯಾದಿಗಳನ್ನು ಸವಿವರವಾಗಿ ನಿರ್ಣಯಿಸಿಕೊಳ್ಳುವುದಕ್ಕಾಗಿ ಮದ್ರಾಸ್ ಮಂತ್ರಿಮಂಡಲವು ರಚಿಸಿಕೊಂಡಿರುವ ಸಮಿತಿಯದು. ಮದ್ರಾಸ್ ಮಂತ್ರಿಗಳಾದ ಕುಮಾರಸ್ವಾಮಿ ರಾಜಾ, ಭಕ್ತವತ್ಸಲಮ್, ಸಂಜೀವ ರೆಡ್ಡಿ, ಗೋಪಾಲ ರೆಡ್ಡಿ, ಮಾಧವ ಮೆನನ್, ಮತ್ತು ಶ್ರೀಗಳಾದ ಟಿ. ಪ್ರಕಾಶಂ, ಟಿ. ಟಿ. ಕೃಷ್ಣಮಾಚಾರಿ; ಕಲಾ ವೆಂಕಟರಾವ್- ಈ ಎಂಟು ಮಂದಿ ವಿಭಜನಾ ಸಮಿತಿಯ ಸದ್ಯರಿದ್ದಾರೆ. ಈ ಪೈಕೆ ಮಿಕ್ಕೆಲ್ಲರೂ ತಮಿಳು ಮತ್ತು ಆಂಧ್ರದವರಾದರೆ ಶ್ರೀ ಮಾಧವ ಮೆನನರು ಕೇರಳದವರು. ಕರ್ನಾಟದ್ದಸದ ಸ್ಯರಾರನ್ನೂ ಅದರಲ್ಲಿ ಸೇರಿಸಿಕೊಂಡಿಲ್ಲ. ಇಂತಹ ತೀರಸ್ಕಾರಕ್ಕೆಡೆಯಾದಾಗಲೂ ಸುಮ್ಮನಿರುವಷ್ಟು ಸ್ವಾಭಿಮಾನ ಶೂನ್ಯರೂ ಕನ್ನಡಿಗರಲ್ಲ; ನೇಲಾಗಿ ಆಂಧ್ರ ಪ್ರಾಂತ್ಯಕ್ಕೆ ಸಲ್ಲಬೇಕಾದ ಭೂಮಿ, ಸೊತ್ತು, ಸಲಕರಣೆಗಳ ಪಾಲುಪಟ್ಟೆ ತಯಾರಿಸುವ ಈ ಸಮಿತಿಯಲ್ಲಿಯೇ ಕನ್ನಡಿಗರಿಗೆ ಸ್ಥಾನವಿಲ್ಲದಿರುವುದರಿಂದ ಕರ್ನಾಟಕಕ್ಕೆ ಅನ್ಯಾಯಗಳಾಗುವುದೂ ಸಂಭವನೀಯ. ಆದರಿದುಒಳವಿಭಾಗ ರಚನೆಗಾಗಿ ಮಾತ್ರವೇ ನಿರ್ಮಾಣಗೊಂಡಿರುವ ಸಮಿತಿ ಹೊರತು ಮೂಲ ಅಸ್ತಿವಾರವನ್ನು ಬದಲಾಯಿಸುವ ಅಧಿಕಾರಿಯಲ್ಲ. 'ಅಪ್ಪೇ ಪಾತೇತ ಭಾಗಗಳನ್ನಷ್ಟೇ ಸೇರಿಸಿ ಕಟ್ಟಬೇಕಾಗಿ ಆಂಧ್ರಪ್ರಾಂತ್ಯ'ದೊಳಗೆ ಕನ್ನಡಿಗರ ನ್ಯಾಯಬದ್ಧ ಹಾಗೂ ಸಾಧಾರ ಅಕ್ಷೇಪವಿರುವ ಬಳ್ಳಾರಿಯ ಭಾಗಗಳನ್ನು ಸೇರಿಸಿಕೊಳ್ಳುವ ಮತ್ತು ಸೇರಿಸಿಕೊಡುವ ಹಕ್ಕು ಯಾರೊಬ್ಬರಿಗೂ ಇಲ್ಲ. ಇಲ್ಲಿಯೂ ತಾವು ಮುಂದಿಟ್ಟಿರುವ ಸೂತ್ರಗಳ ಪಾಲನೆ ನೋಡುವ ಸ್ವಾಭಾವಿಕ ಜವಾಬ್ದಾರಿ ರಾಷ್ಟ್ರ ನಾಯಕರದ್ದೇ ಇದೆ. ಕರ್ನಾಟಕ ಪ್ರಾಂತ್ಯ ರಚನೆಗೆ ಸಂಬಂಧಿಸಿದ್ದು, ಇದುವರೆಗೆ ಮಲಗಿಕೊಂಡಿದ್ದ ಸುಶಕ್ತಿ ದುಶ್ಯಕ್ತಿಗಳೆಲ್ಲವೂ ಈ ರೀತಿ ಈಗ ಎದ್ದು ನಿಂತಿರುವಾಗ, ಕೇಂದ್ರ ನಾಯಕರು ಕೂಡಾ ತಮ್ಮ ಈ ವರೆಗಿನ ತಾಟಸ್ಥ್ಯ ಧೋರಣೆಯನ್ನು ಬಿಟ್ಟು ಮುಂದೆ ಬರಲಿ— ತತ್ವತಃ ಸರ್ವರಿಂದಲೂ ಒಪ್ಪಲ್ಪಟ್ಟರುವ ಕರ್ನಾಟಕ ಪ್ರಾಂತ್ಯವು ಕಾರ್ಯತಃ ಕೈಗೂಡುವಂತಾಗಲು ಮಾಡಬೇಕಾದುದೇನಿದೆಯೋ ಅದೆಲ್ಲವನ್ನೂ ಈ ಸುಸಂದರ್ಭದಲ್ಲೇ ಮಾಡಲಿ— ಆ ಮೂಲಕ ಆಂಧ್ರದೊಂದಿಗೇನೇ ಕರ್ನಾಟಕ ಪ್ರಾಂತ್ಯವೂನಿರ್ಮಾಣಗೊಳ್ಳುವಂತಾಗಲಿ--ಎಂದು ಹಾರೈಸುತ್ತೇವೆ.

ಹಿಂದೂ ಕೋಡು ಮಸೂದೆ

ರೈಲ್ವೆನಿಲ್ದಾಣದ ಕೇಂದ್ರ ಪಾರ್ಲಿಮೆಂಟ್ ಸಭೆಗೆ ತಾ. 13ರಂದ 'ಹಿಂದೂ ಕೋಡು' ಮಸೂದೆಯ ಪ್ರಭಾವ ವಾಜನ ಸಂಬಂಧದ ಚರ್ಚೆಯಾರಂಭವಿದೆ ಈ ಬಾರಿಯ ಅಧಿವೇಶನಾರಂಭದಲ್ಲೇ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲರು "ಹಿಂದೂ ಕೋಡು ಮಸೂದೆಯಲ್ಲಿ ಅಗತ್ಯವುಳ್ಳ ತಿದ್ದುಪಡಿಗಳಾಗಬಹುದಾದರೂ ಮಸೂದೆಯನ್ನೇ ಹಿಂದೆ ಪಡೆಕದರೆ ಅದು ನನ್ನ ಸರಕಾರದ ಮೇಲಿನ ಅವಿಶ್ವಾಸ ಪ್ರದರ್ಶನವೆಂದೇ ಕಟ್ಟಕೊಳ್ಳುವೆವು" ಎಂಬ ಅಭಿಪ್ರಾಯ ಸೂಚಿಸಿದ್ದರು. ಪಾರ್ಲಿಮೆಂಟಿನಲ್ಲಿ ತೀವ್ರಚರ್ಚೆ ನಡೆದಿದೆ. ಈಗ ರೂಪುರೇಷ್ಟುರುವಂತೆ ಮಸೂದೆಯಲ್ಲಿ ಅಖಿಲ ಭಾರತದ ಎಲ್ಲಾ ಹಿಂದುಗಳ ಕ್ರಮನಿಯಮಗಳನ್ನು ಏಕಪ್ರಕಾರ ಕ್ರಾಂತಿರೀತಿಯಿಂದ ಸುಧಾರಿಸುವ ಸೂಚನೆಗಳಿವೆ. ಆದ್ದರಿಂದ ಈ ಮಸೂದೆಯ ಕುರಿತು ರಾಷ್ಟ್ರದಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿವೆ. ಡಾ| ಅಂಬೇಡ್ಕರ್, ಪಂಡಿತ ನೆಹರುಗಳು ಹಿಂದೂ ಕೋಡು ಮಸೂದೆಯ ಪ್ರಬಲ ಪುರಸ್ಕರ್ತರಿದ್ದರೆ, ಈಗಿನ ಪಾರ್ಲಿಮೆಂಟು ಇಂತಹ ಶಾಸನ ತರುವುದು ಸರಿಯಲ್ಲವೆಂದು ಬಾಬು ರಾಜೇಂದ್ರ ಪ್ರಸಾದರ ಅಭಿಪ್ರಾಯವಿದೆ. ಮುಖ್ಯವಾಗಿ ಮಕ್ಕಳ ಸಂತಾನದ ಸ್ತ್ರೀಯರಿಗೂ ಪುರುಷರಿಗೂ ಸಮಾನ ಹಕ್ಕನ್ನೀಯುವ ಈ ಮಸೂದೆಗೆ ಸ್ತ್ರೀವರ್ಗದ ಪೂರ್ಣ ಬೆಂಬಲ ದೊರೆತಿದೆ. ಅಳಿಯಸಂತಾನಿಗೆ ಸ್ತ್ರೀಪುರುಷರೂ ಇದೇಮಾದರಿಯಲ್ಲಿ ಸವಾನಾಧಿಕಾರಿಗಳಾಗುತ್ತಾರೆ ಹಿಂದೂ ವೈಶಿಷ್ಟ್ಯವೇ ನಾಶವಾಗುವದೆಂದು ಇದಕ್ಕೆ ಹಿಂದೂ ಮಹಾಸಭಾವಾದಿಗಳಂಥವರಿಂದ ಪ್ರಬಲ ವಿರೋಧ ಮುಂದೆ ಬಂದಿದೆ. ಇತ್ತೀಚಿಗಾ. 12ರಲ್ಲಿ ಒಳಗಡೆ ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡು ಮಸೂದೆಯ ಚರ್ಚೆ ಪ್ರಾರಂಭವಾದಾಗ ಹೊರಗೆ, ಸುಮಾರು 500 ಜನರು ಆದಕ್ಕೆ ವಿರುದ್ಧ ಘೋಷಣೆಗಳನ್ನೆಬ್ಬಿಸುತ್ತಾ, ಪೋಲೀಸು ಬಂದೋಬಸ್ತನ್ನು ಮುರಿದು ಒಳನುಗ್ಗಲು ಪ್ರಯತ್ನಿಸಿದಾಗ ಪೋಲೀಸರು ಲಾಠೀ ಚಾರ್ಜು ಮಾಡಿ ಮೂರು ಮುಂದಿ ಜಖಂಗೊಂಡರು.

[ಗತಸಂಚಿಕೆಯಿಂದ ಮುಂದುವರಿದುದು]

ಪ್ರಾಸಿಕ್ಯೂಷನ್ ಉತ್ತರವೊಂದು ನವಶಕ್ತಿ ಪ್ರಿಂಟಿಂಗ್ ಪ್ರೆಸ್ಸಿನಿಂದ ಪ್ರಕಟಣೆಗಾಗಿದೆ. ಆತ್ಮ ಕಾಶ್ಮೀರ ಕಮಿಶನ್ನಿನವರ ವರದಿಯು ಭದ್ರತಾ ಕೌನ್ಸಿಲಿನ ಕೈಸೇರಿದೆ. ಕೌನ್ಸಿಲಿನಲ್ಲಿ ಆದರ ಚರ್ಚೆ ನಡೆಯುವ ವೇಳೆ ಭಾರತದ ಪರವಾಗಿ ಸರ್. ಬಿ. ಎನ್. ರಾಯರು ವಾದಿಸಲಿದ್ದಾರೆ. ಅವರಿಗೆ ಸಹಾಯಕರಾಗಿ ಸರ್. ಬಾಜ್‌ಪಾಯಿ, ಕಾಶ್ಮೀರದ ಪ್ರಧಾನಿ ಷೇ.ತ್ತು ಉಪಗೃಹ ಸಚಿವಾದ ಶೇಕ್ ಅಬ್ದುಲ್ಲಾ ಮತ್ತು ಡಿ. ಪಿ. ದಾರಿದ್ದಾರೆ. ಈ ವೈಕಿ ಶೇಕ್ ಅಬ್ದುಲ್ಲಾರನ್ನು ಬಿಟ್ಟು ಉಳಿದಿಬ್ಬರು ಇಷ್ಟರಲ್ಲೇ ನ್ಯೂಯೋರ್ಕಿಗೆ ಹೋಗಿದ್ದಾರೆ.

ನೆಹರೂ ಸಂದೇಶ

ಫರೂಕಾಬಾದ್ ನಗರ ಸಭೆಯ ಮಾನ ಪತ್ರಕ್ಕುತ್ತರ ಕೊಡುತ್ತಾ, ಕಳೆದ ತಾ. ೨೮ರಲ್ಲಿ ಪಂಡಿತ ನೆಹರುಗಳು ಜನತೆಯ ಸದ್ಯದ ಕರ್ತವ್ಯದ ಕುರಿತು ಹೇಳಿದರು: "ಇಡೀ ಜಗತ್ತಿನ ದೃಷ್ಟಿಯು ಈಗ ನಮ್ಮ ಮೇಲೆ ಬಿದ್ದಿದೆ. ನಾವು ತಿಂಬುವ ತುಂಬುವ ಸಜೀವ ಜನತೆಯೇ ಆಥವಾ ವೃತ್ತ ರಾಷ್ಟ್ರವೇ ಎಂಬುದನ್ನು ಸಿದ್ಧಪಡಿಸಿ ತೋರಿಸಬೇಕಾದವರೀದ ನಾವೇ. ಜನತೆಯೀಗ ಮಾತುಗಳನ್ನು ಕೃತಿಗಿಳಿಸಿಕೊಳ್ಳಬೇಕು. ವ್ಯಗತಿ ಮತ್ತು ಅಭ್ಯುದಯ ಪಥದಲ್ಲಿ ಭಾರತವು ಮುನ್ನಡೆಯಬೇಕೆಂದಿದ್ದರೆ ಕಠಿಣವಾಗಿ ಪರಿಶ್ರಮಿಸಬೇಕು...."

ಸಂಯುಕ್ತ ಪ್ರಾಂತ್ಯದ ೩೪ನೇ ರಾಜಕೀಯ ಸಮ್ಮೇಳನವನ್ನು ತಾ. ೧೦ರಲ್ಲಿ ಫರೂಕಾಬಾದಿನಲ್ಲಿ ಉದ್ಘಾಟಿಸುತ್ತಾ ಪ್ರಧಾನಿ ನೆಹರುಗಳು ಇದೇ ಅಭಿಪ್ರಾಯವನ್ನು ಪುನಃ ಜನತೆಯ ಮುಂದಿಟ್ಟರು: "ಭಾರತದ ನವಘಟನೆಯೆಂಬುದು ಸರ್ವರೂ ಹೆಗ್ಗಳಿಕೆಪಡಬಹುದಾದಂತಹ ಒಂದು ಮಹತ್ಸಾಧನೆ. ಆದರೆ ಈ ಘಟನೆಯು ಉಚಿತ ಹುರುಪಿನಿಂದ ಕಾರ್ಯಕ್ಕೆ ಹಚ್ಚಲ್ಪಡದಿದ್ದರೆ, ಕೇವಲ ಕಾಗದದ ಮೇಲಿನ ಘಟನೆಯಾಗಿಯೇ ಉಳಿದುಬಿಡುವುದು. ನಮ್ಮ ಕನಸು ನನಸಾಗಬೇಕಾದರೆ ಜನತೆಯು ಕಠಿಣ ರೀತಿಯಿಂದ ದುಡಿಯಬೇಕು. ಜೀವನ ಮಟ್ಟವನ್ನು ಮೇಲಕ್ಕೇರಿಸಬೇಕೆಂಬ ಈ ಸ್ವಪ್ನವು ಕೇವಲ ಭಾರತದ್ದೇ ಅಲ್ಲ, ಅಖಿಲ ಪ್ರಪಂಚದ್ದಿದೆ. ಅವನ ತಿಯಂತೆಯೇ ಅಭಿವೃದ್ಧಿಯನ್ನೂ ಸ್ವೈಕ್ಯೇಕವಾಗಿ ಹೊಂದಲು ಸಾಧ್ಯವಿಲ್ಲ ಇಂದಿನ ಏಕಜಗತ್ತಿನಲ್ಲಿ ಏಕಾಕಿಯಾಗಿ ಬಾಳುವ ಯೋಚನೆಯನ್ನು ಯಾರೂ ಮಾಡಲಾರರು. ಸ್ವತಂತ್ರಭಾರತವೀದಿನ ಲೋಕದಲ್ಲಿ ಮಹಾ ವರ್ಚಸ್ಸನ್ನು ಗಳಿಸಿಕೊಂಡಿದೆ. ವಿಶೇಷ ಕೆಲಸ ಮಾಡಿ ಅಧಿಕ ಸಂಪತ್ತನ್ನು ಗಳಿಸಿದರೆ ರಾಷ್ಟ್ರದ ಇಂದಿನ ವಿವಿಧ ಸಮಸ್ಯೆಗಳು ನಿವಾರಣೆಗೊಂಡಾವು. ಕಳ್ಳ ಸಂತೆ ವ್ಯಾಪಾರ ಮತ್ತು ಲಂಚಾಗಳಿಕೆನಗಳು ಕೇವಲ ಸರಕಾರದಿಂದಲೇ ನಿರ್ಮೂಲಗೊಳ್ಳುವಂತಿಲ್ಲ. ಈ ಪಾಪಚರಣೆಗಳನ್ನು ಸಮೂಲವಾಗಿ ನಾಶ ಮಾಡಲು ಜನತೆಯು ಸಹಕರಿಸಬೇಕಾದುದು ಅಗತ್ಯ. ಶುದ್ಧ ಸಂಕಲ್ಪ ಮತ್ತು ಕಠಿಣ ಪರಿಶ್ರಮ, ಎಂಬ ಎರಡು ಸಂಗತಿಗಳ ಮೂಲಕವೇ ಭಾರತದ ಪ್ರಗತಿ ಸಾಧ್ಯವೆಂಬುದನ್ನು ನೀವು ಸದಾ ಮನಸ್ಸಿನಲ್ಲಿಟ್ಟುಕೊಳ್ಳಬೇಕು."

ಉಡುಪಿ

ಸ್ಥಳೀಯ ಮಹಾತ್ಮಾ ಗಾಂಧಿ ಸ್ಮಾರಕ ಕಾಲೇಜು ಕಟ್ಟಡ ನಿಧಿಗೆ ಮೂಲ್ಕಿ ಶ್ರೀ ವೆಂಕಟರಮಣ ದೇವಳದ ಕಡೆಯಿಂದ 10,001/- ರೂ ಪಾಯಿಗಳ ಸಹಾಯಧನ ದೊರೆತಿರುವುದು

'ದಿ ಮೋಡರ್ನ್ ಸ್ಕೂಲ್ ಆಫ್ ಕಾಮರ್ಸ್', ಉಡುಪಿ.

ಇದರ ವಿದ್ಯಾರ್ಥಿಗಳ ಸಭೆಯು ಇದೇ ತಾ. 11ರಲ್ಲಿ, ಬೊಂಬಾಯಿಯ 'ಫ್ರೀ ಪ್ರೆಸ್ ಬುಲ್ಲೆಟಿನ್'ನ ಸಹಾಯಕ ಸಂಪಾದಕ ಶ್ರೀ ಎಂ. ವಿ. ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಧ್ಯಾಪಕ ಶ್ರೀ ಟಿ. ವಿ. ವಾಸುದೇವನರು ಪ್ರಗತಿಪರ ಶಾಲಾ ವರದಿಯನ್ನೊಪ್ಪಿಸಿದರು. ಸಂಘದ ಕಾರ್ಯದರ್ಶಿ ಶ್ರೀ ಯು. ಗೋಪಾಲ ಕೃಷ್ಣ ಶೆಣೈಯವರು ಅಧ್ಯಕ್ಷರ ಪರಿಚಯ ಭಾಷಣ ವಿತ್ತರು. ಅಧ್ಯಕ್ಷರು ತಾಲಿಯ ಕೆಲಸಗಳನ್ನು ಶ್ಲಾಘಿಸಿ, ಪತ್ರಿಕೋದ್ಯಮ ಹಾಗೂ ಇಂಗ್ಲಿಷಿನ ಸ್ಥಾನದ ಕುರಿತು ಭಾಷಣವಿತ್ತರು. ಶ್ರೀ ಯು. ಜಿ. ತೆಣೈಯವರಿಂದ ಧನ್ಯವಾದ ಗೈಯಾಯಿತು.

ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳು ಸಾಹಿತ್ಯ ಮತ್ತು ವಿವಿಧ ಕಲೆಗಳ ಅಭ್ಯಾಸ, ಹಾಗೂ ಪ್ರದರ್ಶನಕ್ಕಾಗಿ 'ಬಾಲ ಸಾಹಿತ್ಯ ಸಮಿತಿ'ಯೊಂದನ್ನು ತಾ. 10ರಲ್ಲಿ ಸ್ಥಾಪಿಸಿಕೊಂಡಿದ್ದಾರೆ.

ಕಲಾವೃಂದದಲ್ಲಿ—ತಾ. 3ರಲ್ಲಿ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ, ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ 'ಗೀತಾ ಜಯಂತಿ' ಜರಗಿ ಶ್ರೀ ಬಿ. ಶ್ರೀನಿವಾಸಭಟ್ಟರಿಂದ ಉಪನ್ಯಾಸ, ಮತ್ತು ಶ್ರೀ ಪಿ. ವೆಂಕಟರಮಣ ಐತಾಳರಿಂದ ಗೀತಾವಾಚನ ವಾಯಿತು.

ಮುನ್ಸಿಪಲ್ ಕೌನ್ಸಿಲ್ ಎಲೆಕ್ಟಿಂಗ್

ಇದೇ ತಾ. 10ರಲ್ಲಿ ನಂಜೆ ಜರಗಿದಾಗ ಹಿಂದಿನ ಸಭೆಯಲ್ಲಿ ಇತ್ಯರ್ಥಕ್ಕೆ ಬಾಕಿಯಿದ್ದ ಪಾಯಿಂಟ್ ಒಫ್ ಆರ್ಡರಿನ ಮೇಲೆ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರು ರೂಲಿಂಗ್ ಕೊಟ್ಟರು. ನಂತರ ಶ್ರೀ ಆರ್.ಎ.ಸ್ಯಾಮುಯೆಲ್ಸರ ಪ್ರಶ್ನೆಗಳಿಗೆ ಉತ್ತರ ಕೊಡಲ್ಪಟ್ಟಿತು. ಕೆಲವು ಸರಕಾರಿ ಜಿ.ಒ.ಗಳು ರಿಕಾರ್ಡು ಮಾಡಲ್ಪಟ್ಟುವು. ಮುನಿಸಿಪಲ್ ವ್ಯವಹಾರ ಕ್ಷೇತ್ರದ ಗಡಿಯನ್ನು ವಿಸ್ತರಿಸಬೇಕೆಂದು ಮೇಲಧಿಕಾರಿಗಳಿಂದ ಬಂದ ಸೂಚನೆ ಪರ್ಯಾಲೋಚಿಸಲ್ಪಟ್ಟು, ಪ್ರಕೃತ ಅದು ಅಸಾಧ್ಯವೆಂದು ನಿರ್ಧರಿಸಲಾಯಿತು. ಮುನಿಸಿಪಲ್ ಲೋರಿ ಡ್ರೈವರರನ್ನು ಪ್ರೊವಿಡೆಂಟ್ ಫಂಡಿಗೆ ಸೇರಿಸಲು ಕೌನ್ಸಿಲಿನ ಒಪ್ಪಿಗೆ ದೊರೆಯಿತು. ಮುನ್ಸಿಪಲ್ ಕ್ಷೇತ್ರದಲ್ಲಿ ಪರು ಆಸ್ಪತ್ರೆಯನ್ನು ತ್ವರ್ಯಾ ಸ್ಥಾಪಿಸುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು. ಮಾತ್ರ ವಲ್ಲದೆ ಇದಕ್ಕೆ ಸ್ಥಾರಂಭ ಕಾಲದಲ್ಲಿ ತಗಲುವ ಖರ್ಚನಲ್ಲಿ ಕೆಲವಂಶ ಕೌನ್ಸಿಲು ಕೊಡಲು ತಯಾರಾದೆ ಎಂದು ಜಿಲ್ಲಾ ವೆಟರ್ನರಿ ಆಫೀಸರರಿಗೆ ತಿಳಿಸಲಾಯಿತು. ರಸ್ತೆಗಳ ಪಕ್ಕಗಳಲ್ಲಿ ಮರಗಿಡಗಳನ್ನು ನೆಡುವ ಮತ್ತು ಅವನ್ನು ಪೋಷಿಸುವ ಬಗ್ಗೆ ಬೇಕಾಗುವ ಖರ್ಚನ್ನು ಪುಂಜೂರು ಮಾಡಬೇಕಾಗಿ ಸೂಚಿಸಿದ ಕನಿಶರನರ ವಿನಂತಿಯನ್ನು ಮುನ್ಸಿಸಲು ಬಾಲಿಜಾಗದ ಮೇಲಿನ ಟೇಕ್ಸ್ ಹಣವನ್ನು ಸರಕಾರವು ಕೊಡುವ ತನಕ ಆಸಾಧ್ಯವೆನ್ನಲಾಯಿತು. 1949-50 ಮತ್ತು 50-51ರ ಬಜೆಟ್ ಮಂಜೂರು ಮಾಡುವ ಮೊದಲು ಆದುತ್ಪಾನೆನ್ಸ್ ಕಮಿಟಿಯಲ್ಲಿ ಚರ್ಚಿಸಿಯಾಗತಕ್ಕದ್ದೆಂದು ನಿರ್ಧರಿಸಲಾಯಿತು. ಮುನ್ಸಿಸಲ್ ಸರ್ಚ್‌ಕಮಿಟಿಗಳ ಪ್ರೊವಿಡಿಂಗ್ಸುಗಳನ್ನು ರಿಕಾರ್ಡು ಮಾಡುವಾಗ ಅವನ್ನು ಐದಾರು ತಿಂಗಳ ನಂತರ ಭಯ ಮುಂದೆ ತರುವುದು ಸರಿಯಲ್ಲವೆಂದು ಸೂಚಿಸಲಾಯಿತು.

ಮಿಲನ್ ಆಸ್ಪತ್ರೆ ರಸ್ತೆಯನ್ನು ಮುನ್ಸಿಪಲ್ ತೆಂಕು ಗಡಿಯವರೆಗೆ ಮುಂದರಿಸಬೇಕೆಂದು ಸಭೆಯ ಮುಂದೆ ಶ್ರೀ ಆರ್. ಸ್ಯಾಮುಸ್ಸರು ತಂದ ನಿರ್ಣಯವನ್ನು ಪರಿಶೀಲನೆಗಾಗಿ ಫೈನೆನ್ಸ್ ಕಮಿಟಿಗೆ ಒಪ್ಪಿಸಲಾಯಿತು.

ಖಾಸಗಿ ಜಾಗೂರು ಕೆಲಸದ ಪವಿತ್ರ ಸಭೆಯ ಮಧ್ಯಕಾಲದಲ್ಲಿ ಜೆಯರ್‌ಮೆನರು ಹೊರಟುಹೋದುದರಿಂದ ಅವರ ಸ್ಥಾನವನ್ನು ವೈಸ್‌ಚೆಯರ್‌ಮೆನ್ ಕಾರ್ಯ ಶ್ರೀ ಎ. ಬಿ. ಕೃಷ್ಣ ರಾಜರು ವಹಿಸಿ ಕಾರ್ಯಕಲಾಪಗಳನ್ನು ಪೂರ್ಣಗೊಳಿಸಿದರು.

ಮಂಗಳೂರು

ರನ್ನ ಕವಿ ಸಹಸ್ರ ಮಾನೋತ್ಸವವು

ಮಂಗಳೂರಿನ ಹಾಯರ್ ಸ್ಪೇಡ್ ಟ್ರೈನಿಂಗ್ ಶಾಲೆಯ ಸಾಹಿತ್ಯ ಸಂಘದ ನೇತೃತ್ವದಲ್ಲಿ ಇದೇ ತಾ. 8ರಲ್ಲು ಶ್ರೀ ಪಿ. ಕೆ. ನಾರಾಯಣ, ಅವರ ಅಧ್ಯಕ್ಷತೆಯಲಿ ಜರಗಿತು. ಶ್ರೀ ವೈ. ಶಂಭಟ್ಟರು ರನ್ನನ ಕಾವ್ಯಗಳ ಕುರಿತು ಭಾಷಣವಿತ್ತರು. ಶ್ರೀ ಕೆ.ವಿ. ಹರಿದಾಸರು ಗದಾ ಯುದ್ಧದ ಕೆಲವೊಂದು ಭಾಗಗಳನ್ನು ಓದಿದರು. ಶ್ರೀ ಕೆ. ಜಿ. ಮಾಸ್ಟೈಯವರು ಸಹ ಕೆಲವು ಪದ್ಯಗಳನ್ನು ವಾಚನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರನ್ನನ ಕಾಲದ ಪರಿಸ್ಥಿತಿ, ಅದರಿಂದ ಪ್ರಭೋದಿತವಾದ ಕಾವ್ಯದ ರೀತಿ ಇತ್ಯಾದಿಗಳನ್ನು ಹೇಳುತ್ತಾ ಹುಹಾಕವಿ ರನ್ನನನ್ನು ನಾಡಿಗಿತ್ತ ಭಾಗ್ಯ ಚಾವುಂಡರಾಯನಿಗೆ ಸಲ್ಲುತ್ತದ್ದೆಂದೂ ತಿಳಿಸಿ, ಗದಾಯುದ್ಧದ ಕೆಲವು ಮಾತುಗಳನ್ನು ರಸವತ್ತಾಗಿ ಓದಿ ಹೇಳಿದರು.

ವಿದ್ಯಾದಾಯಿನಿ ಹೈಸ್ಕೂಲಿನ ವಿದ್ಯಾರ್ಥಿ ಮಂದಿರದಲ್ಲಿ ಇದೇ ತಾ. 7ರಲ್ಲು ಜರಗಿದ ವಿದ್ಯಾರ್ಥಿಗಳ ಸಭೆಯಲ್ಲಿ ನವಹ ಕವಿರನ್ನನ ಸಹಸ್ರ ವರ್ಷದ ಸ್ಮಾರಕ ಮಹೋತ್ಸವವು ಜಿಲ್ಲಾ ಎಜ್ಯುಕೇಶನಲ್ ಆಫೀಸರ್ ಶ್ರೀ ಎಚ್. ನಾರಾಯಣರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು ಮುಖ್ಯೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಸೇಲ್ಸ್ ಟೇಕ್ಸ್ ನಿಬಂಧನೆಯಂತೆ ಶ್ರೀ ಉದ್ಯಾವರ ಸದಿಯಮರಕಾಲ ಅವರಿಗೆ ಕೆಳಕೋರ್ಟು ರೂಪಾಯಿ 300- ದಂಡನೆ ವಿಧಿಸಿತ್ತು. ಆಪೀಲಿನಲ್ಲಿ ಜಡ್ಜರು ಆಪಾನೆಯನ್ನು ಕಿತ್ತು ಹಾಕಿ ದಂಡನೆಯನ್ನು ಹಿಂದೆ ಕೊಡುವಂತೆ ವಿಧಿಸಿದ್ದಾರೆ.

ರೈಲ್ವೆ ಸಮಯ ಬದಲಾವಣೆ ಇದೇ ತಾ. 1ರಿಂದ ಬದಲಾವಣೆಯಾದ ರೈಲೆ ಸಮಯವು ಹೀಗಿದೆ:—ಮಂಗಳೂರು ಎಕ್ಸ್‌ಪ್ರೆಸ್ ಮಂಗಳೂರಿನಿಂದ ಹೊರಡುವುದು 8-55. ತಲುಪುವುದು ಸಂಜೆ 5-15ಕ್ಕೆ- ಈ ರೈಲು, ಕುಂದಬಳ, ಕಾರ್ಕಳಗೋಡುಗಳಲ್ಲಿ ಅಲ್ಲದೆ ನೀಲೇಶ್ವರದಲ್ಲಿಯೂ ನಿಲ್ಲುವುದು. ಮಲಬಾರ್ ಎಕ್ಸ್‌ಪ್ರೆಸ್ ಹೊರಡುವುದು ಸಂಜೆ 4-30. ತಲುಪುವುದು ಬೆಳಿಗ್ಗೆ 6-25 ಕ್ಕೆ ಇತರ ಜೆಸೆಂಜರುಗಳು ಹೊರಡುವ ಗಂಟೆ ರಾತ್ರಿ 3-18; ಬೆಳಿಗ್ಗೆ 10-43 ಮತ್ತು ಸಂಜೆ 6 ಗಂಟೆಗೆ. ತಲಪುವ ಗಂಟೆ ಬೆಳಿಗ್ಗೆ 7-50; ಸಂಜೆ 3-5 ಮತ್ತು ರಾತ್ರಿ 8-55.

ಕೆ ಪಿ.ಸಿ ಸಿ. ಗೊತ್ತುವಳಿಗೆ ಬೆಂಬಲ.

ಇದೇ ತಾ-6ರಲ್ಲು ಮಂಗಳೂರಿನಲ್ಲಿ ಕರ್ನಾಟಕ ಏಕೀಕರಣ ಸಂಘದ ನೇತೃತ್ವದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಸ್ವೀಕರಿಸಿದ ತದಿಂದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಮಾಡಿದ ಗೊತ್ತುವಳಿಯನ್ನು ಒಪ್ಪಿ ಅದಕ್ಕೆ ಬೆಂಬಲವೀಯುವ ನಿರ್ಣಯ ವಾಯಿತು. ಠರಾವು ಹೀಗಿದೆ:—ಕರ್ನಾಟಕ ಪ್ರಾಂತ ರಚನೆಯ ಘೋಷಣೆಯನ್ನು ವಿರೋಧಿಸುವುದಕ್ಕಾಗಿ ಕರ್ನಾಟಕದ ಶಾಸನಸಭಾ ಪ್ರತಿನಿಧಿಗಳು ರಾಜೀನಾಮೆಯಾಯಬೇಕೆಂದು ಕರ್ನಾಟಕಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಕೌನ್ಸಿಲು ಸಲಹೆಯಿತ್ತುದಕ್ಕಾಗಿ ಮಂಗಳೂರಿನ ನಾಗರಿಕರ ಈ ಸಭೆಯಲ್ಲಿ ಅವರನ್ನು ಅಭಿನಂದಿಸುತ್ತದೆ; ಅಲ್ಲದೆ ಅವರ ಆ ಕೆಲಸವನ್ನು ಶ್ಲಾಘಿಸುತ್ತದೆ.

ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ಆರ್. ಕಾರಂತರು ಮಾತನಾಡುತ್ತಾ ಹೊಸ ಘಟನೆಯು ಬರುವ ಕಾಲಕ್ಕೆ ಸರಿಯಾಗಿ ಕರ್ನಾಟಕ ಪ್ರಾಂತ ರಚನೆಯಾದರೆ ಮಾತ್ರ ಕರ್ನಾಟಕ ಪ್ರಾಂತವಾದೀತು. ಕರ್ನಾಟಕ ಉಳಿದೀತು. ಇಲ್ಲವಾದರೆ ಕರ್ನಾಟಕೆದ ಅವಸ್ಥೆಯನ್ನು ಹೇಳುವಂತಿಲ್ಲ ಎಂದು ಮುಂತಾಗಿ ಹೇಳಿ ಈಗ ಮಾಡಿರುವ ನಿರ್ಣಯವು ಈಗಿನ ಪರಿಸ್ಥಿತಿಯಲ್ಲಿ ತಕ್ಕುದಾಗಿದೆ ಎಂದರು. ಬಳಿಕ ಶ್ರೀಗಳಾದ ಎಮ್. ಕೃಷ್ಣಯ್ಯ ಶೆಟ್ಟಿ, ಕೆ. ಜಾಲಕೃಷ್ಣರಾವ್, ಕೆ. ಆರ್. ಆಚಾರ್, ಕೆ. ಕೆ. ಶೆಟ್ಟಿ ಎನ್. ಎಸ್. ಕಿಲ್ಲೆ ಮೊದಲಾದವರು ಮೈಸೂರು ಸಹಿತವಾದ ಕರ್ನಾಟಕವಾಗಬೇಕೆಂದೂ, ಆ ಕುರಿತು ಮುಂದಾಳುಗಳು ಕೈಕೊಂಡ ಈ ಕಾರ್ಯವು ತಕ್ಕುದಾಗಿದೆಯೆಂದೂ ಅದಕ್ಕೆ ಬೆಂಬಲ ವಿತ್ತರು.

ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆ, ಡಾ. ಯ. ಪಿ ಮಲ್ಯ ಮೊದಲಾದವರು ಸಭೆಗೆ ಬಿತ್ತ್ಯೈಸಿದ್ದರು.

ಆರೋಗ್ಯ ಮತ್ತು ಶಿಶು ಸಪ್ತಾಹ ಹಾಚರಣೆಯ ಬಹುಮಾನ ವಿತರ

ಜೋತ್ಸವವು ನಗರ ಸಭೆಯ ಆವ್ರಣದಲ್ಲಿ ಇದೇ ತಾ 6ರಲ್ಲು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಯಶಸ್ವಿಯಾಗಿ ಜರಗಿತು.

ದಿ ಕೆಥೊಲಿಕ್ ಬ್ಯಾಂಕ್ ಲಿಮಿಟೆಡ್
ಕುಂದಾಪುರ

ನೋಟಿಸು

ಈ ಕೆಳಗೆ ಹೆಸರು ಕಾಣಿಸಿದವರ ನಗದಗಳನ್ನು ಬ್ಯಾಂಕಿನ ಆಫೀಸಿನಲ್ಲಿ ತಾ. 24-12-1949ನೇ ಶನಿವಾರ ಗಂಟೆ 11ಕ್ಕೆ ಬಹಿರಂಗವಾಗಿ ಯೇಲಂ ಮಾಡೋಜಾದೀತು.

ಸಾಲ ಪಡೆದ ತಾರೀಕು	ಸಾಲದ ನಂಬ್ರ	ಸಾಲ ಪಡೆದವನ ಹೆಸರು	ನಗದಗ ವಿವರ
22-10-1947	22/35-4.	H- ಜಗನ್ನಾಥ ಶೆಟ್ಟಿ, ಹಾಲಾಡಿ.	ಚಿನ್ನದ ಕಂಚಮಣಿ ಸರ 1 ತೂಕ 15/16 ತೊಲೆ
22-4-1948	23/7-33	B- M- ರಾಮಕೃಷ್ಣ ಮಾಸ್ತಿ ಕಟ್ಟೆ, ಕುಂದಾಪುರ	ಬಿನ್ನದಲಂಗುರ 1 ಬೈಸು ಒಟ್ಟು ತೂಕ 15/16ತೊಲೆ

Office of The Catholic Bank Ltd. Coondapoor, 7—12—1949. } **I. Minazes.** Agent

ಶ್ರೀ ರಾಮ ಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
16—12—49 ರಿಂದ ರಾಜಕಮಲ್ ಚಿತ್ರ ಪವರ,
ಅಪ್ನಾ ದೇಶ್ (ಹಿಂದಿ)
ಪುಷ್ಪ ಹಂಸ್, ಮನನೋಹನ್ ಕೃಷ್ಣ, ಉಮೇಶ್ ಶರ್ಮ, ಕೇಕವ ರಾವ್ ದಾತೆ.—ದಿರ್ದೆಶನ:-ವಿ. ಶಾಂತಾರಾಮ್.
ಬರುತ್ತದೆ—ಫೆಲ್ಮ್ ಸ್ಥಾನದವರ, ರೆಹನಾ. ಸ್ರೇಮಾದೀಖ್, ಮತ್ತು ಎನಾ.

ದಿ ಉಡುಪಿ ಬೇಂಕ್ ಲಿಮಿಟೆಡ್ ಮುಂಡ್ಕೂರು (ದ- ಕ.)

ನೋಟಿಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಈಡಿನಲ್ಲಿ ಪಡೆದ ಲೋನಿನ ಮೊಬಲಗನ್ನಾಗಲೀ, ಅವುಗಳ ಬಡ್ಡಿಯನ್ನಾಗಲೀ ವ್ಯಾದೆಗೆ ಕೊಡದಿರುವದರಿಂದ ಸದ್ರಿಯವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳಲ್ಲಿ ಕೆಲವರಿಗೆ ಜಾರಿಯಾಗಿಯೂ ಕೆಲವರಿಗೆ ಜಾರಿಯಾಗದೆಯೂ ವಾಪಾಸು ಬಂದಿರುತ್ತದೆ. ಆದ್ದರಿಂದ ಈ ಮೂಲಕ ತಿಳಿಯಪಡಿಸುವುದೇನಂದರೆ ಸದ್ರಿ ಲೋನುಗಳ ಬಾಬ್ತು, ಈಡಿಟ್ಟ ನಗಗಳನ್ನು ಇದೇ ಬರುವ ತಾ. 22-12-49 ನೇ ಗುರುವಾರ ದಿವಸ ಮಧ್ಯಾಹ್ನ ಘಂಟೆ 1ಕ್ಕೆ ಸದ್ರಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಯಾವದೇ ಕಾರಣದಿಂದಲಾದರೂ ಏಲಂ ಅದೇ ದಿವಸ ಮಾಡಲು ಆನುಕೂಲವಾಗದಿದ್ದರೆ, ಬೇಂಕಿಗೆ ಯುಕ್ತಕಂಡ ದಿವಸಕ್ಕೆ ಪುನಃ ನೋಟೀಸು ಕೊಡದೇನೇ ಮುಂದುವರಿಸಲಾಗುವುದು. ತಿಳಿದಿರಲಿ.

ಜಂಜ್ರ ನಂಬ್ರ	ಸಾಲದ ನಂಬ್ರ ಮತ್ತು ತಾರೀಕು	ಹೆಸರು ಮತ್ತು ವಿಳಾಸ	ಅಸಲು ರೂಪ್ಯಾ
1	148/47 28-5-47	ಮಗ್ದೆಲಿನ್ ಡಿಸೋಜ, ಸೇದ್ದು {ಬರ್ಜರ ಹೆಂಡತಿ, ಮುಲ್ಲಡ್ಕ ಗ್ರಾಮ, ಮುಂಡ್ಕೂರು ಪೋಸ್ಟು-	100-0 0
2	212/47 7-7-47	ಚಂದುಸೆಟ್ಟಿ, ಲೋಕುಸೆಡ್ತಿರ ಮಗ, ಕಡಂದಲೆಗ್ರಾಮ, ಕಡಂದಲೆಪೋಸ್ಟು-	40-0-0
3	315/47 3-10-47	ಎ- ದಾಸಪ್ಪಸೆಟ್ಟಿ, ನಾರಾಯಣಸೆಟ್ಟಿರ ಅಳಿಯ, ಕಲ್ಲಮುಂಡ್ಕೂರು ಪೋಸ್ಟು- ಕಲ್ಲಮುಂಡ್ಕೂರು ಗ್ರಾಮ.	32-0-0

ಬೇಂಕಿನ ಆಫೀಸು
ಮುಂಡ್ಕೂರು 12-12-49

B. Krishnaraya Kamath,
Agent.

ದ- ಕನ್ನಡ

ಸುರತ್ಕಲ್: ವಿದ್ಯಾದಾಯಿನಿ ಹೈಸ್ಕೂಲಿನಲ್ಲಿ ತಾ. 7-12-49ರಲ್ಲಿ ಮಹಾಕವಿ ರಸ್ಕಿನ್‌ಕವಿಯ ಸಹಸ್ರ ವರ್ಷದ ಸ್ಮಾರಕ ಮಹೋತ್ಸವವು ಜಲ್ಲೆಯ ವಿದ್ಯಾಧಿಕಾರಿ ವಿದ್ವಾನ್ ಯಜ್ಞ. ರಾಮರಾವ್, ಎಂ. ಎ. ಯಲ್. ಟಿ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಸೂಕ್ತ ಭಾಷಣಗಳೂ ಗಣಾಯಂತ್ರ್ಯ ಕಾವ್ಯವಾಚನವೂ ನಡೆದುವು. ಅಧ್ಯಕ್ಷರಂದ್ದನ ಕಾವ್ಯ ಎಂಬ ವಿಚಾರವಾಗಿ ವಿಮರ್ಶಾತ್ಮಕ ಭಾಷಣವಾದ ಬಳಿಕ ಮುಖ್ಯೋಪಾಧ್ಯಾಯರು ಧನ್ಯವಾದವನ್ನರ್ಪಿಸಲು ಸಮಾರಂಭ ಮುಕ್ತಾಯವಾಯಿತು.

ದಿವಂಗತ ಸುಬ್ಬರಾಯ ಸ್ಮಾರಕ ಅಖಿಲ ಕರ್ನಾಟಕ ಭಾಷಣ ಸ್ಪರ್ಧೆ

ದಿನಾಂಕ 5-12-49ರಂದು ಮೈಸೂರು ಮಹಾರಾಜಾ ಕಾಲೇಜಿನ ಸಭಾಂಗಣದಲ್ಲಿ ಈ ಭಾಷಣ ಸ್ಪರ್ಧೆ ನಡೆಯಿತು. ಕರ್ನಾಟಕದ ಹಲವಾರು ಕಾಲೇಜುಗಳ ಸುಮಾರು 40 ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಫಲಿತಾಂಶ ಹೊರಬಿದ್ದು ಮೊದಲನೆ ಬಹುಮಾನ ಮೈಸೂರು ಮಹಾರಾಜಾ ಕಾಲೇಜಿನ ಪ್ರತಿನಿಧಿ ಶ್ರೀ. ಸಿದ್ದಪ್ಪನವರಿಗೂ, ಎರಡನೆಯ ಬಹುಮಾನ ಬೆಳಗಾವಿ ಲಾ ಕಾಲೇಜಿನ ಪ್ರತಿನಿಧಿ ಶ್ರೀ. ಮಹಾಬಲ ಭಂಡಾರಿಯವರಿಗೂ, ಮೂರನೆ ಬಹುಮಾನ ಮೈಸೂರು ಇಂಜಿನಿಯರಿಂಗ್ ಕಾಲೇಜಿನ ಶ್ರೀ. ಚಂದ್ರಶೇಖರರವರಿಗೂ, ನಾಲ್ಕನೆ ಬಹುಮಾನ ಬೆಂಗಳೂರು ಸೆಂಟ್ರಲ್ ಕಾಲೇಜಿನ ಶ್ರೀ. ಕೃಷ್ಣಮೂರ್ತಿಯವರಿಗೂ, ಐದನೆ ಬಹುಮಾನ ಮೈಸೂರು ಮಹಾರಾಣಿ ಕಾಲೇಜಿನ ಶ್ರೀಮತಿ ಪಂಕಜ ಅವರಿಗೂ ದೊರೆಯಿತು.

ದಿನಾಂಕ ೬ರ ಸಂಜೆ ಮೈಸೂರಿನ ಸ್ಪರ್ಧೆಯಲ್ಲಿ ಭಾಗವಹಿಸಲು ಬಂದ ಕರ್ನಾಟಕದ ಪ್ರತಿನಿಧಿಗಳ ಸತ್ಕಾರಕೂಟ ಶ್ರೀ. ಮಹಾಬಲ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಬನ್ನಾಡಿ: ಇದೇ ತಾ. 4ರಲ್ಲು ಸಂಜೆ ಉಡುಪಿ ಟ್ರೈನಿಂಗ್ ಶಾಲೆಯ ವಿದ್ಯಾರ್ಥಿಗಳು ತಮ್ಮ ಉಪಾಧ್ಯಾಯರನ್ನೊಡಗೂಡಿ ಕೊಂಡು ಬನ್ನಾಡಿ ಶ್ರೀ. ಪದ್ಮನಾಭನ ಪ್ರಾಥ ಪ್ರಾಥಮಿಕ ಶಾಲೆಯಲ್ಲಿ ವಿಶ್ರಮಿಸಲು ಬಂದಾಗ ಅವರೆಲ್ಲರನ್ನೂ ಸದ್ರಿ ಶಾಲಾ ಮೆನೇಜರ್ ಶ್ರೀ. ಬಿ. ಸುಬ್ಬಣ್ಣ ಹೆಗ್ಡೆಯವರು ಊಟೋಪಚಾರಗಳನ್ನಿತ್ತು ಮರುದಿನ ಬೆಳಿಗ್ಗೆ ಬೀಳ್ಕೊಟ್ಟರು.

ಆದರ ಆತಿಥ್ಯಗಳಿಂದ ಸಂತುಷ್ಟರಾದ ವಿದ್ಯಾರ್ಥಿಗಳ ಪರವಾಗಿ ಟ್ರೈನಿಂಗ್ ಶಾಲಾ ಸಹಾಯಕ ಉಪಾಧ್ಯಾಯರಾದ ಶ್ರೀ. ಯು. ಕೃಷ್ಣರಾಯರು ಆಭಾರ ಮನ್ನಿಸುತ್ತಾ ಈ ಶಾಲೆಯು ಸರಕಾರದ ಬೆಂಬಲದಿಂದ ಬೇಗನೇ ಹೈಸ್ಕೂಲು ಆಗಲೆಂದು ಹರಸಿದರು.

ವರ್ಣಾಳು: ವರ್ಷಾವಧಿ ಜರಗುವ ಕಂಬಳವು ಈ ಬಾರಿ ಇದೇ ತಾ. 14ನೆ ಬುಧವಾರ ಯಶಸ್ವಿಯಾಗಿ ಜರಗಿತು.

ಕುಂಬಳೆ- ಈ ಫಿರ್ಕಾದಲ್ಲಿ ನವೆಂಬರ ತಿಂಗಳಲ್ಲಿ ನಡೆದ ಮುಖ್ಯ ಕೆಲಸಗಳಾವುವೆಂದರೆ ಉಬ್ರಂಗಳ ಗ್ರಾಮವದಲ್ಲಿ ಗ್ರಾಮ ಸೇವಾ ಸಂಘ ಒಂದು ಸಾರ್ವಜನಿಕ ವಾಚನಾಲಯವನ್ನು ತೆರೆದುದು; ಅಂಗಡಿ ಮೊಗರು, ಕಂದೇಲು, ಪೆರ್ಡಾಲು ಹೀಗೆ ಮೂರು ಸ್ಥಳಗಳಲ್ಲಿ ವಯಸ್ಕರ ಶಿಕ್ಷಣ ಶಾಲೆಗಳ ತೆರೆಯೋಣ; ಎರಡು ಸಾರ್ವಜನಿಕ ರೇಡಿಯೋ ಸೆಟ್ಟುಗಳ ಇಡೋಣ. ಕಾಟುಕುಕ್ಕೆಯ ಜಾತ್ರೆಯ ವೇಳೆಯಲ್ಲಿ ಕೃಷಿ ಪ್ರದರ್ಶನ ಜರಗಿಸೋಣ ಇತ್ಯಾದಿ.

ಕುಂಬಳೆ- ಹರಿಜನ ದಿನಾಚರಣೆಯಂ ಬಂಧವಾಗಿ ಬೇಳದಲ್ಲಿ ಕೋನ್‌ವೆಂಟ್ ಶಾಲೆಯ ಮುಖ್ಯೋಪಾಧ್ಯಾಯನ ಅಧ್ಯಕ್ಷರಾಗಿ ಜರಗಿಸಿದ ಸಭೆಯಲ್ಲಿ ಬಿ. ಪೂಥವ ಪೈಯವರು ಭಾಷಣಮಾಡಿದ್ದರು. ಕುಂಬಳೆ ಆರ್. ಏ. ಶ್ರೀ. ದಿಸೋಜರೂ ಹಾಜರಿದ್ದರು. ಬೇಳ ಶಾಲೆಯ ಶ್ರೀ. ಕೇಶವ ಭಟ್ಟರು ಹರಿಜನರಿಗೆ ತಿಂಡಿ ಹಂಚಿದರು.

ಕುಂಬಳೆ ಹರಿಜನ್ ವೆಲ್ಫೇರ್ ಶಾಲಾ ಮುಖ್ಯೋಪಾಧ್ಯಾಯರೂ ಮೆರವಣಿಗೆಯಾಗಿ ನೀರೊಳಕೊಲ್ಲನಿಗೆ ಹೋಗಿ ಅಲ್ಲಿ ಶ್ರೀಯುತ ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ಸಭೆ ನೇಂತು. ಫಿರ್ಕಾಧಿವೈದ್ದಿ ಆಫೀಸರ್ ಶ್ರೀ ಬಾಬು ಶೆಟ್ಟರೂ ಕಾರ್ಯಭಾಗಿಗಳಾಗಿದ್ದರು. ಭಜನೆ, ತಿಂಡಿ ಹಂಚೋಣ ಕೂಡಾ ನಡೆಯಿತ್ತು.

ಫಲಿಮಾರು- ಕಳೆದ ತಾ. 30ರಲ್ಲು ಉಡುಪಿ ಸೌತ್ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರಾ ಎಲ್. ಡಿ. ಸೋಜರ ನೇತೃತ್ವದಲ್ಲಿ ಫಲಿಮಾರು ಬೋರ್ಡು ಹಾ. ಎ. ಶಾಲಾ ಉಪಾಧ್ಯಾಯರ, ವಿದ್ಯಾರ್ಥಿಗಳ ಹಾಗೂ ಊರವರ ಮೆರವಣಿಗೆ ಸಮಾರಂಭವು ಹರಿಜನ ದಿನಾಚರಣೆ ಸಲುವಾಗಿ ಜರಗಿತು. ಮಹಾಜನ ಸಭೆಯು ಶ್ರೀ ಪಿ. ನರಸಿಂಹ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಪಿ. ರಾಮರಾಯ, ಎಮ್. ಭೋಜಸೆಟ್ಟಿ, ಹರಿ ಉಪಾಧ್ಯಾಯ, ಸೀನಸೆಟ್ಟಿ ಮೊದಲಾದವರ ಕಾಲೋಚಿತ ಮಾತುಗಳಾದುವು.

ಕಲ್ಲೂರು- ಈ ಗ್ರಾಮದಲ್ಲಿರುವ ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವ ಬಗ್ಗೆ ಈ ಗ್ರಾಮಸ್ಥರ ಹಾಗೂ ನೆರೆಕೆರೆಯ ಗ್ರಾಮಸ್ಥರಿಂದ ಕೂಡಿದ ಸಭೆಯು ತಾ. 7-12-49ರಂದು ಸದ್ರಿ ಶಾಲೆಯಲ್ಲಿ ಶ್ರೀ ಕೊಳ್ಕೆಬೈಲು ಸೂರಪ್ಪಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು- ಈಗಿನ ಶಾಲೆಯನ್ನು ಹೈಯರ್ ಎಲಿಮೆಂಟರಿ ಶಾಲೆಯಾಗಿ ಮಾಡುವ ಅವಶ್ಯಕತೆ ಮತ್ತು ಇದರಿಂದ 10-15 ಗ್ರಾಮಗಳವರಿಗಾಗುವ ಪ್ರಯೋಜನ ಇವನ್ನು ಆಲೋಚಿಸಿ ಹೈಯರ್ ಎಲಿಮೆಂಟರಿ ಶಾಲೆಗೆ ಬೇಕಾಗುವ ಕಟ್ಟೋಣಗಳು ಹಾಗೂ ಅವಶ್ಯವುಳ್ಳ ಫರ್ನಿಚರ್ ಕೂಡಾ ಗ್ರಾಮಸ್ಥರು ಎಂತಿಗೆ ಪರಾಡ ಎತ್ತಿ ಅವರು ಮಾಡಿಸಿ, ಬೋರ್ಡಿಗೆ ಬಿಟ್ಟು ಕೊಡಬೇಕಾಗಿ ಸರ್ವಸಮ್ಮತಿಯಿಂದ ತೀರ್ಮಾನಿಸಲಾಯಿತು. ಆ ನಂತರ ಇಲ್ಲಿ ಈ ಬೋಧನೆಯ ರಚನೆಯಾಗಿರುವ ಸ್ಥಾಬಲು ಕೆಮಿಟಿಯು ಸ್ಥಳನಿರೀಕ್ಷಣೆ ಗ್ರಾಮಸ್ಥರ ಕೆಲಸವನ್ನು ಮುಂಜೂರು ಮಾಡಿದೆ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ
ಸ್ಮಾಲ್ ನಂಬ್ರ 675/1949

ವಾದಿ — ನಾರಾಯಣ ಭಟ್ಟ.
ಪ್ರತಿವಾದಿರು— ಮಂಜಯ್ಯ ಮೇಣ್ಕ ಕೂಡಾ.

2ನೆ ಪ್ರತಿವಾದಿ ಗಣಪ ಮೇಣ್ಕ, ಪುಟ್ಟಯ್ಯ ಮೇಣ್ಕನ ಮಗ, ಕುಂದಾಪುರ ತಾಲ್ಲೂ ಕಟ್ಟು ಬಲ್ಟಾರು ಗ್ರಾಮದಲ್ಲಿ ರುವವನು.

ಸದ್ರಿ ವಾದಿಯು ಸದ್ರಿ ಪ್ರತಿವಾದಿರ ಮೇಲೆ ಕೂಡಾ ದಿನಾಂಡಾ ನೋಟಿನ ಹಣ ಬಡ್ಡಿ ಕೂಡಾ ರೂಪ್ಯಾ 171-0-0ನ್ನು ಬರ ಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಕಲು ಮಾಡಿದ ಮೇಲಿನ ದಾವೆಯು ತಾ 29-12-1949ಕ್ಕೆ ತನ್ನಿಗೆ ಇಡೋಣಾಗಿರುತ್ತದೆ. ಸದ್ರಿ ದಾವೆಯಲ್ಲಿ ಪ್ರತಿವಾದಿ ಅಕ್ಷೇಪಣೆಯಿದ್ದರೆ ಸದ್ರಿ ದಿವ್ಸ ಪೂರ್ವಾನ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹೀರು ಮಾಡತಕ್ಕದ್ದು. ತಪ್ಪಿದರೆ ಸದ್ರಿ ಪ್ರತಿವಾದಿರನ್ನು ಎಕ್ಸ್‌ಪಾರ್ಟೆ ಮಾಡಿ ಸದ್ರಿಯವರ ಗೈರಹಾಜ್ರಿಯಲ್ಲಿ ಸದ್ರಿ ದಾವೆತೀರ್ಮಾನಿಸೋಣಾಡೀತೆಂತ ಈ ಮೂಲಕ ತಿಳಿಸಿರುತ್ತೆದೆ.

M. M. Hebbar,
Advocate for pliantiff
ಕೊಕ್ಕಾಂ ಕುಂದಾಪುರ, 10-12-1949.

ಕಾರ್ಕಳ ಗೋಡು ಡಿ. ಮು. ಕೋರ್ಟಿನಲ್ಲಿ

O. S. 500/1949

ಆನಂದಿ ಯಾನೆ ಸತ್ಯಭಾಮಬ್ಬಾ, ರಾಳ್ಳ ವೇಂದ್ರ ಕಮ್ತಿಯವರ ಪತ್ನಿ, ವ ನರಸಿಂಹ ಭಟ್ಟರ ಮಗಳು. ಕಾಸರಗೋಡು ತಾಲೂಕು ಬಂಗ್ರಮಂಜೇಶ್ವರ ಗ್ರಾಮದಲ್ಲಿರುವವಳು ... ... ವಾದಿಳು.

ಮತ್ತು

1 ಮಾಧವ ನ್ಯಾಕ್, ಸೀಸು ನ್ಯಾಕರ ಮಗ, ಬಂಗ್ರ ಮಂಜೇಶ್ವರ ಗ್ರಾಮದಲ್ಲಿ.

2 ಮಂಜಕ್ಕ ಹೆಂಗ್ಸು, ಅಚ್ಚಾಡಿ ಮೈಲಾಕ್ಕೆ ಹೆಂಗ್ಸಿನ ಮಗಳು, ಕತಂಬಾರು ಗ್ರಾಮದಲ್ಲಿ ... ... ಪ್ರತಿವಾದಿರು.

ಮೇಲ್ಕಂಡ ವಾದಿಳು ಪ್ರತಿವಾದಿರ ಮೇಲೆ ದಾಕ್ಲು ಮಾಡಿದ ಸದ್ರಿ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಳ ಹಾಜ್ರಾತ್ತಿ ಬಗ್ಗೆ ತಾರೀಕು 21-2-1949ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಬಿಟ್ಟರುವ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

Sd. K. Kamalaksha Kamath,
Advocate for Plaintiff.

Kasaragod, 12-12-1949.

"ಗೋಪಾಲ ಭೋಷಜಾಶ್ರಮ" ಮಂಗಳೂರು.

(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರಿ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರೆಸಾಯನ. ಆಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ
ನವಜೀವಾಮೃತ
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ। ಯಂ. ಸಿ. ಶಾಸ್ತ್ರಿ, ಯಲ್.ಐ.ಯಂ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)

ಸ್ಥಾಕಿಸ್ಟರು:—ಡಾ। ಏ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established: 1934)

Chairman: **Sri. M. C. T. M. Chidambarma Chettyar.**

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R. Road,
Hampankatta, Mangalore.

HEAD OFFICE:
United India Life Building
, MADRAS

ಶೀತಾನದಿ ಜಾನುವಾರು ಜಾತ್ರೆಯ ಬಹುಮಾನ ವಿತರಣಾ ಸಮಾರಂಭ-

ಚಿಕ್ಕಪ್ಪ ತನ್ನಿಡಯಲ್ಲಿ ಕುಳುಕುಂದ ಜಾತ್ರೆ ನಿರಡನೆಯದಾಗಿರುವ ಮತ್ತು ಕುಂದಾಪುರ ಉಡುಪಿ, ಕಾರ್ಕಳ ತಾಲೂಕುಗಳವರ ಅನುಕೂಲತೆಗಾಗಿ ಅರುಪತ್ತೀತಾನದಿ ಜಾನುವಾರು ಜಾತ್ರೆಯ ಬಹುಮಾನ ವಿತರಣಾ ಸಮಾರಂಭವು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀಮಾನ್ ಜಿ. ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ 10ನೇ ಅಪರಾಹ್ನ ಜರಗಿತು. ಪ್ರತಮವಾಗಿ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ. ಯಬ್ ಬುಜಂಗ ಬಲ್ಲಾಳರು ಅಧ್ಯಕ್ಷ ಶ್ರೀ. ಮಂಜಯ ಹೆಗ್ಡೆಯವರ ಗುಣ ಕಥನಮಾಡಿ, ಜಾತ್ರೆಯ ವರದಿಯನ್ನೊಪ್ಪಿಸಿದರು ವರುಷದಿಂದ ವರುಷಕ್ಕೆ ಸರುತ್ತಾ ಬಂದಿರುವ ಜಾನುವಾರುಗಳ ಸಂಖ್ಯೆ ಮತ್ತಿತರ ಸಂಗತಿಗಳು ವರದಿಯಲ್ಲಡಕವಾಗಿದ್ದುವು. ಇದರ ಒವಿಯ ರಚನೆ ಬಾಸಗೀ ಪಕ್ಕೆ ನದಾಗಿರುವ ರಸ್ತೇ ಬದಿಯ ಅಂಗಡೀ ಸ್ಥಳವನ್ನು ಸಾರ್ವಜನಿಕ ಉಪಯೋಗಾರ್ಥವಾಗಿ ಸ್ವಾಧೀನ ಪಡಿಸಿಕೊಳ್ಳುವ ಕಾರ್ಯ— ಪರಿಶೂರವರಿಗಾಗಿ ನಿವಾಸಿಕ ನಿಲಯ ನಿರ್ಮಾಣ— ಮುಂತಾದ ಅವಶ್ಯಕ ಸೂಚನೆಗಳು ವರದಿಯಲ್ಲಿ ಬಂದಿದ್ದವು ಆ ಮೇಲೆ ವಿವಿಧ ತರಗತಿಯ ಉತ್ತಮ ಜಾನುವಾರುಗಳಿಗೆ ಅಧ್ಯಕ್ಷರ ಹಸ್ತದಿಂದ ಬಹುಮಾನ ವಿತರಣೆಯಾಯಿತು ಜಾನುವಾರು ಜಾತ್ರೆಯ ಮಹತ್ವ ಮತ್ತು ಜನರ ಹಾಗೂ ಆಧಿಕಾರಿಗಳ ಕರ್ತವ್ಯಗಳ ಕುರಿತು ಶ್ರೀ ಎಂ ವಿ ಹೆಗ್ಡೆ, ಡಿ ಬೋ. ಸದಸ್ಯ ಶ್ರೀ ಮುದ್ರಾಡಿ ಕೃಷ್ಣಯ ಸೆಟ್ಟಿ, ಡಾ। ಕೃಷ್ಣ ಮತ್ತು ಜಿಲ್ಲಾ ಜೆಲ್ತ್ ಆಫೀಸರ ಶ್ರೀ ಎ.ರಾಮಚಂದ್ರರಾಯರು ಭಾಷಣಗೈದರು ಅಧ್ಯಕ್ಷರು ಸೀತಾನದಿ ಜಾತ್ರೆಯ ಪ್ರಯೋ ಜನಗಳನ್ನು ವರ್ಣಿಸಿ ಈ ಕಾಲದಲ್ಲಿ ರೈತರ ಕರ್ತವ್ಯಗಳೇನೆಂಬುದನ್ನು ಮಂದಟ್ಟಾಗುವಂತೆ ತಿಳಿಸಿ ಇಂತಹ ಜನೋಪಯುಕ್ತ ಕಾರ್ಯಕ್ಕೆ ಸಾಥ್ ವ್ಯಳ್ಳ ನೆರವು ನೀಡುವುದಾಗಿ ಆಶ್ವಾಸನೆಯಿತ್ತರು. ಸರಕಾರವು ತೆರಿಗೇ ಸಮಾನ ಸಾಲ ಪಸೂಲಿಯಂತಹ ಯೋಜನೆ ಮಾಡುತ್ತಿರುವಾಗ ಹಳ್ಳಿಗರು ಸಿಂಘ ಸಂಸಥೆನೆ ಮಂತ್ರು ಒಕ್ಕಟ್ಟಿನಿಂದ ತನ್ನು ಆಫಲ್ಯಾಯ ಮುಂದಿದಲು ಸಿದ್ಧರಾಗಬೇಕೆಂದೂ ನಿರ್ಧಿಷ್ಟ ಕಾಲಕ್ಕೆ ನುಗುಣವಾಗಿ ಕಾರ್ಯತತ್ಪರರಾಗಬೇಕೆಂದೂ ಬೋಧಿಸಿದರು, ಶ್ರೀ. ಎಂ. ಭುಜಂಗ ಬಲ್ಲಾಳರು ಧನ್ಯವಾದಗಳನ್ನರ್ಪಿಸುತ್ತಾ, ಈ ವರೆಗೆ ಈ ಜಾತ್ರೆಯು ಸಂಬಂಧದಲ್ಲಿ ರೆವಿನ್ಯೂ ಇಲಾಖೆಯವರು ವಹಿಸಿದಷ್ಟು ಮುತವರ್ಜಿಯನ್ನು ಜಿಲ್ಲಾ ಬೋರ್ಡಿನವರು ವಹಿಸಿಲ್ಲವೆಂದೂ ಈಗ ಜಿಲ್ಲಾ ಬೋರ್ಡಿನ ಅಧ್ಯಕ್ಷತೆ ನಿರ್ವಹಿಸುತ್ತಿರುವ ಜನಪ್ರತಿನಿಧಿ ಹಾಗೂ ವಿಶ್ವಾಸಪಾತ್ರ ಅಧ್ಯಕ್ಷರು ಈ ಕೊರತೆಯನ್ನು ನಿವಾರಿಸಬೇಕೆಂದೂ ಆಗ್ರಹಪೂರ್ವಕ ವಿಜ್ಞಾಪಿಸಿಕೊಂಡರು ಜಿಲ್ಲಾ ಬೋರ್ಡು ಅಧ್ಯಕ್ಷರು ಸ್ಥಳೀಯ ಅಸ್ಪತ್ರೆ, ಶಾಲೆ ಮೊದಲಾದುವುಗಳನ್ನು ಸಂದರ್ಶಿಸಿ ರಾತ್ರಿ

ನೋಟೀಸು

ಕುಂದಾಪುರ ತಾಲೂಕು ನಂಬ್ರ 65ನೇ ಬಳ್ಳೂರು ಗ್ರಾಮದಲ್ಲಿರುವ ದಾರಾಚಾರಿಯ ಮಗ ರಾಮಾಚಾರಿಯು ಕೊಡುವ ನೋಟೀಸು-

ನಾನು ಕಳೆದ ವಾರದ ನವಯುಗ ಪತ್ರಿಕೆಯಲ್ಲಿ ಒಂದು ನೋಟೀಸು ಕೊಟ್ಟಿದ್ದೆ. ಅದರಲ್ಲಿ ಹೇಂಡ್ ಮಿಸ್ಟೇಕಿನಿಂದ ಇಸ್ತಿ ತಪ್ಪಾಗಿದ್ದ ಕಾರಣ ಈಗ ಈ ನೋಟೀಸು ಮೂಲಕ ಸರ್ವರಿಗೂ ತಿಳಿಯಪಡಿಸುವದೇನಂದರೆ; ನನಗೆ ಕುಂದಾಪುರ ತಾಲೂಕು ಗುಳುಸಾಡಿ ಗ್ರಾಮದ ಸಾಕೂರಲ್ಲಿರುವ ಸುಂಜಯ್ಯ ಶೇರ್ವೆಗಾರ್ತರವರ ಅಳಿಯಂದಿರಾದ ರಾಮಣ್ಣ ಶೆಟ್ಟರು] ಮತ್ತು ಯಿನರ ತಮ್ಮ ಲಕ್ಷ್ಮಣ ಶೆಟ್ಟರು] ಕೂಡಾ ಯರ್ಡುಜನರು ರೂಪ್ಯಾ 500-೦ ೦ ಅ್ಕರು ನೂರು ರೂಪಾಯಿಗಳೀಗೆ ಶೇಕಡಾ ರೂ. 5-೦-೦ ರಸಲೆ ಬಡ್ಡಿಯಿಂದಾ ತಾ. 16-9-1948ರಲ್ಲಿ ಬರೆಕೊಟ್ಟ ಪ್ರಾಮಿಸರಿ ನೋಟು ಇತ್ತಲಾಗಿ ನನ್ನ ರಿಕಾರ್ಡು ಹುಡುಕಿ ನೋಡುವಾಗ ನೋಟು ಗೈರುನಿಲೆ ಆಗಿಯಿದೆ ಸದ್ರಿ ನೋಟು ಯಾರಿಗಾದರೂ ಸಿಕ್ಕಿದವರು ಈ ತಾರೀಕಿನಿಂದ 15 ದಿವಸಗಳೊಳಗೆ ನನಗೆ ತಂದು ಕೊಟ್ಟವರೀಗೆ ನಾನು ತಪ್ಪದೆ ಪದಿನೈದು ರೂಪಾಯಿಗಳನ್ನು ಬಹುಮಾನವಾಗಿ ಕೊಡುತ್ತೇನೆ ಸದ್ರಿ ನೋಟು ಈ ವರೆಗೂ ಯಾವ ತರಹದ ಪರಾಧೀನಕ್ಕೂ ಒಳಪಡದೆ ಪಟ್ಟಿದ್ದಾದ ಕಾರಣ ಸದ್ರಿ ನೋಟು ಸಿಕ್ಕಿದವರು ಯಾರಾದರೂ ದುರುಪಯೋಗ ಪಡಿಸಿ ಅದರಿಂದ ಯಾವ ತರಹದ ಲಂಭ ಹೊಂದಲಿಕ್ಕೂ ಸಾಧ್ಯವಿಲ್ಲವೆಂತ ಈ ಮೂಲ್ಕ ಸರ್ವೇ ಪಿ ಜನರಿಗೂ ತಿಳಿಯ ಪಡಿಸಿರುತ್ತೇನೆ.

Left Thumb Mark of
Rama Achary.

Camp Balkur
Datd 5-12-1949

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರೆಂಟೀ

ಶರೀರದಿಂದ ಚೀವು ಬರುತ್ತಿದ್ದರೆ, ಧೋತರಕ್ಕೆ ಸಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಿಯಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಬೇರು ಇರಿದಿದ್ದರೆ, ಉರುಬು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಉರ್ಧಾಂಗ ವಾಯು ನಡುನೋಯುವದು ಸ್ತ್ರೀಯರಿಂ ಬಿಳಕಂಬು ಸೆರಗು ಹೋಗುತ್ತಿದ್ದರೆ, ಹೊಲಿಕ್ಕುಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸದಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಎಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಜೇಷ್ಠಗೆಯಲ್ಲಿ ತಪ್ಪದೆ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೇಪಾಕ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲು ೧ಕ್ಕೆ ಸರೂ ಪೋಸ್ಟ ಚಾರ್ಜು ೪ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ.—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ರಾಣಬೆನ್ನೂರ:-ರಾಣಬೆನ್ನೂರ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಪ್ರೆಸ್. ನಂಜುಡೇಶ್ವರ ಮತ್ತು ಡಾವಣಗೇರಿ

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ಕೀವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

The Canara Industrial & Banking Syndicate Ltd.,
ಕಿಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ನೋಟೀಸು

ಈ ಕೆಳಗೆ ಕಾಣಿಸಿದವರು ಸದ್ರಿ ಬೇಂಕಿನಿಂದ ನಗದಳ ಈದಿನ ಮೀರೆ ಪದದ ಸಾಲದ ಮೊಬಲಗನ್ನಾಗಲೀ, ಅದರ ಮೇಲಣ ಬಡ್ಡಿಯನ್ನಾಗಲೀ, ವ್ಯಾದೆಗೆ ಕೊಡದೆ ಇದ್ದುದರಿಂದಲೂ, ಆ ಬಗ್ಗೆ ಅವರಿಗೆ ಬಟ್ಟೆ ರಿಜಿಸ್ಟ್ರಿ ನೋಟೀಸು, ಅವರು ಮೃತಪಟ್ಟಿರುವರೆಂಬ ಸದ್ರಿ ನೋಟೀಸು ಹಾಪಸು ಆಗದೆ ಬಂದಿರುವುದರಿಂದ ಸದ್ರಿಯವರ ವಾರೀಸುದಾರರಿಗಾಗಿ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಸದ್ರಿಯವರು ಈಡಿಟ್ಟ ನಗದಳನ್ನು ಸದ್ರಿಯವಂತಾರೀಸುದಾರರು ಇದೇ ತಾರೀಕು 29-12-49ರ ಒಳಗೆ ಬಿಡಿಸಿಕೊಂಡು ಹೋಗದಿದ್ದ ಪಕ್ಷದಲ್ಲಿ ತಾರೀಕು 18-1-1950 ಬುಧವಾರ ಅಪರಾಹ್ನ ಗಂಟೆ 1ಕ್ಕೆ ಯಾ ಬೇಂಕಿನವರಿಗೆ ಯುಕ್ತತೋಪುವ ಬೇರೆ ತಾರೀಕಿನಲ್ಲಿ ಪುನಹ ನೋಟೀಸು ಕೂಡದೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದೆಂತು ತಿಳಿದಿರುವುದು

ಸಾಲದ ನಂಬ್ರ	ಸಾಲಗಾರರ ಹೆಸರು ವಿಳಾಸ	ಸಾಲದ ಮೊಬಲಗು ರೂಪ್ಯಾ
53/48	ಅಣ್ಣಯ್ಯ ಪೂಜಾರಿ, ಚಂದಯ್ಯ ಪೂಜಾರಿಯರು ಆಳಿಯ, ಬೇಂಗ್ರೆ ಹಂಗಾರಕಟ್ಟೆ	30/-
292/48	— ,, —	150/-
296/48	— ,, —	350/-
396/48	— ,, —	100/-

ಬೇಂಕಿನ ಆಫೀಸು ಹಂಗಾರಕಟ್ಟೆ
ತಾ. 7-12-49

(Sd) **K Govind Baliga,**
Agent

ಹೆಬ್ರಿ ಬೋರ್ಡು ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಕ್ರಿಸ್ತ ದಯದ 'ವಿಮರ್ಶಾಗ್ನಿ' ನೆರವೇರಿಸಿ ವಿಂಬಭೂರಿಗೆ ಹಿಂತಿರುಗಿಸಿಗಳನ್ನಾತಿದರು ನೀತಾನದಿ ಜಾನುವಾರು ಜಾತ್ರೆಯಸ್ವಾಗತ ಸಮಿತಿಯಧ್ಯಕ್ಷರಾದ ಶ್ರೀಭುಜಂಗ ಬಲ್ಲಾಳರೆ, ಶ್ರೀ ಬೇಳಂಜೆ ವಿರಲಮೆಗೆಯ ರುಅಧ್ಯಕ್ಷರೀಗೆ ಸತ್ಕಾರಕೂಟವಿತ್ತರು ತಾ 11ರಲ್ಲಿ ಜಿಲ್ಲಾ ಬೋರ್ಡು ಅಧ್ಯಕ್ಷರಿಗೆ ಕಾರ್ಕಳದಲ್ಲಿ ವಿವಿಧ ಕಾರ್ಯಕ್ರಮಗಳಿದ್ದುವು.

ಶಿವ ವಿದ್ಯಾರ್ಥಿಭವನದ ದಿನಾಚರಣೆ

ಶಿವ ಹಿಂದೂ ಹೈಸ್ಕೂಲಿನ ವಿದ್ಯಾರ್ಥಿಭವನದ ಪ್ರಥಮ ವರ್ಷಾರಂಭ ಸಮಾರಂಭವು ತಾ 11ನೇ ಅಪರಾಹ್ನ ಬೆಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ ಮಂಜಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರದಮವಾಗಿ ಊರಿನ ಸಾರ್ವಜನಿಕರ ಪರವಾಗಿ ಹಿಂದೂ ಹೈಸ್ಕೂಲು ಮುಖ್ಯೋಪಾಧ್ಯಾಯ ಶ್ರೀ. ಯು. ಶಿವರಾಯರು ಅಧ್ಯಕ್ಷರಿಗೆ ಮಾನಪತ್ರವನ್ನರ್ಪಿಸಿದರು. ಮಾನಪತ್ರದಲ್ಲಿ ಸ್ಥಳೀಯ ಲೋಕಲ್ ಸಂಡ್ ಆಸ್ಪತ್ರೆಯನ್ನು ಆಧುನಿಕ ಉಪಕರಣಗಳಿಂದ ಸುಸ್ಥವಸ್ಥೆಗೊಳಿಸಬೇಕಾಗಿಯೂ ಏಯೋಚಿತ ಕಾರ್ಮಿಕ ನಿವಾರಣಾ ಕೇಂದ್ರಕ್ಕೆ ಸಹಾನುಭೂತಿಯೇಯಬೇಕಾಗಿಯೂ ಕೇಳಿಕೊಳ್ಳಲಾಗಿತ್ತು. ಅಧ್ಯಕ್ಷರು ಸಹಾನುಭೂತಿಪೂರ್ಣ ಉತ್ತರಕೊಟ್ಟರು ರಸ್ತೆ ಮತ್ತಿತರ ನೈಸರ್ಗಿಕ ನಿರ್ಮಾಣವು ಊರವರಿಂದಾದರೆ ಅದರ ರಕ್ಷಣಾಜವಾಬ್ದಾರಿಯನ್ನು ಜಿಲ್ಲಾ ಬೋರ್ಡು ವಹಿಸಿಕೊಳ್ಳುವುದೆಂದರು ಶ್ರೀ ಯು. ಶಿವರಾಯರ ನ್ನು ಮಾತ್ರುಗುಣಚಿಂತಕಿ ವಿದ್ಯಾರ್ಥಿಭವನದ ನಾರ್ದನ್ ಶ್ರೀ ಕೆ ಗೋಪಾಲಸೆಟ್ಟಿರು ವರದಿಯನ್ನೂ ಮಾನ್ಯಮಂತ್ರಿ ಶ್ರೀ ಎ ಬಿ ಸೆಟ್ಟಿ ಮೊದಲಾದವರಿಂದ ಬಂದಿದ್ದ ಸಂದೇಶಗಳನ್ನೂ ಒದಿದರು ವಿದ್ಯಾರ್ಥಿಭವನದ ಮೂಲಕ ಶ್ರೀ ಸೀತಾರಾಮ ಭಟ್ಟರು ನಿರ್ವಾಹಿ ಭವನಕ್ಕೊಸ್ಕರ ದೊಡ್ಡ ಮೊತ್ತವನ್ನೇ ಯಾರವು ಅಧ್ಯಕ್ಷರ ಹಸ್ತದಿಂದ ಭವನಸ್ಥಾಯಿ ಲ್ಯವಿತ್ತು : ಶ್ರೀ ಎಮ್. ಸೈಸೆಟ್ಟಿ ಭಾಷಣಾನಂತ ಮೇಲೆ ಅಧ್ಯಕ್ಷರು ತನ್ನ ಧಾಪಿಟ್ಟಲ್ಲಿ ಜುಬ್ಬುಯುಕ್ತ ಸೂಚನೆಗಳನ್ನು ಕೊಟ್ಟರು. ಆ ಮೇಲೆ ಶಾಲಾ ಮಕ್ಕಳಿಂದ ಸ್ವಾಗತ್ಯ ತುಳುಲಾವಣಿ ಇತ್ತೆದ ಮೆರೆ ತುಳುನಾಡಿಕ, ಇತ್ತೆಯತಾಯಿಲೂ ಕನ್ನಡ ನಾಡಿಕ, ಮತ್ತಿತರ ವಿವಿಧ ಚಟುವಟಿಕೆಗಳು ಪ್ರದರ್ಶಿಸಲ್ಪಟ್ಟುವು; ಪಾತ್ರಧಾರಿಗಳಿಗೆ ಡಿ. ಬೋ. ಸದಸ್ಯ ಡಾ। ಕೇಶವರಾ ರ ಹಸ್ತದಿಂದ ಬಹುಮಾನವಿತರಣೆಯ ಮೇಲೆ ಶ್ರೀ ಕೆ.ಗೋಪಾಲ ಸೆಟ್ಟಿರು ಧನ್ಯವಾ ಗಳನ್ನರ್ಪಿಸಿದರು ರಾತ್ರಿ ವಿರಣ ಕೂಟ ನಡೆಯಿ ಜಿಲ್ಲಾ ಬೋರ್ಡು ಅಧ್ಯಕ್ಷರು ಸ್ಥಳೀಯ ಶಾ ತ್ರೆ, ಹಿಂದೂ ಹೈಸ್ಕೂಲ್ ಕಟ್ಟಡ ದ ನೊದಲಾದವುಗಳನ್ನು ಸಂದರ್ಶಿಸಿದ್ದರು

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

S. C. S. No. 256/1949

ಪೆಕೆ ಯಾನೆ ಉಷಾ ಬ್ಯಾರಿ, ಗೆರಂ ಹಾಜಿ ಅಬ್ದುಲ್ ಕಾದ್ರಿ ಬ್ಯಾರಿಗ ಮಗ. ಕಾರ್ಕಳ ತಾಲ್ಲು ಕಾಶಿ ಪಟ್ಣ ಗ್ರಾಮವರುವವ —ವಾದಿ

ಮತ್ತು

H. ಅಬ್ದುಲ್ಲಾ ಬ್ಯಾರಿ, ಹೊಸಂಗಡಿ ಬ್ಬುಬಕ್ಕರ ಬ್ಯಾರಿಗಳ ಮಗ. ಮಂಗಳೂರು ತಾಲ್ಲು ಬಪ್ಪನಾಡು ಗ್ರಾಮದ ಮೂಲ್ಕಿಯಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಪಡುವದೇನಂದರೆ- ನೀವು ದಿ. ಜೋಡೆ ರ್ಡನ ಇನ್ಯೂರೆನ್ಸ್ ಕಂಪೆನಿಯ ಪಜಂಟರಾದಿಯನ್ನು ರೂಪಾಯಿ 1000ಕ್ಕೆ ಕಂಪೆನಿಯಲ್ಲಿ ಇನ್ಯೂರೆನ್ಸು ಪೊಲಿಸಿಗೆ ಸೆ ವದೆಂತ ಹೇಳಿದ ವಾದಿ ಪದದ ರೂಪಾಯಿ 51-8-0 ಮತ್ತು ಮೇಲಣ ಬಡ್ಡಿ ವಿಚಿತ್ರ ನೋಟ್ಸು ಪ ಕೂಡಾ ರೂಪ್ಯಾ 59-14 0 ಬರವಾ ರೆ ವಾದಿಯು ನಿಮ್ಮ ಮೇಲೆ ಹಾಕ್ದು ವ ದ ಮೇಲ್ಕಂಡ ವಾದಿಯು ನಿಮ್ಮ ಉ ರಡ ಬಗ್ಗೆ ತಾ 21-12-49ಕ್ಕೆ ಯಿಟ್ಟು ರ್ಪಿಂದ ಸದ್ರಿ ದಿವ್ಸ ಹಗಲು 10 ಘಂಟೆಗೆ ವು ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ನು ಉದಾಪರಣ ಹಾಕ್ದ ಮಾಡದೆ ಹೋ ರೆ ಸದ್ರಿ ದಿವ್ಸ ಸದ್ರಿ ವ್ಯಾಜ್ಯವು ಏಕಾದಿಗು ತೀರ್ಮಾನಿಸಲ್ಪಡುವದು ಕೋರ್ಟು ಕುಂ ಪ್ರಕಾರ ಪ್ರಕಟಿಸಿದ್ದು.

K. V. Kamath
Advocate for Plaintiff

ಕಾರ್ಕಳ ತಾ 26 11-1949.

ಹಣ್ಣು — ತರಕಾರಿ

ನಮ್ಮ ಆಹಾರದ ಸಮಸ್ಯೆಯನ್ನು ಭಾಗಶಹರಿಸುವ ಪ್ರಾಮುಖ್ಯ ಸಾಧನ

ಹಣ್ಣು ಮತ್ತು ತರಕಾರಿಗಳನ್ನು ಅನೇಕ ದಿನಗಳವರೆಗೆ ಹಾಳಾಗದಂತೆ ಇರಿಸುವುದು ಇಂದಿನ ಪರಿಸ್ಥಿತಿಯಲ್ಲಿ ಅತ್ಯಂತ ಲಾಭದಾಯಕವಾಗಿದೆ. ಪೂಷಕ ವಸ್ತುಗಳ ಕೊರತೆ ಸಂಶೋಧನೆ ನಡೆಸಿದಾಗ ಹಣ್ಣೂ ತರಕಾರಿಗಳೂ ಆರೋಗ್ಯದಿಂದ ದೃಢಕಾಯರಾಗಿ ಬಾಳಬೇಕಾದರೆ ಇವುಗಳ ಅವಶ್ಯಕತೆಯಿದೆಯೆಂದು ತಿಳಿಯಲಾಗಿದೆ. ಇವುಗಳಲ್ಲಿ ಖನಿಜ ಸತ್ವಗಳು ತುಂಬಿರುತ್ತವೆ. ಅನ್ನಸತ್ವಗಳೂ ಸೇರಿರುತ್ತವೆ. ಆದುದರಿಂದ ಉತ್ತಮವಾದ ಪೌಷ್ಟಿಕ ಆಹಾರದಲ್ಲಿ ಇವುಗಳನ್ನು ಸೇರಿಸಿಕೊಳ್ಳಲೇಬೇಕು. ಹಾಗೆಂದು ಹಣ್ಣುಗಳಾಗಲಿ ತರಕಾರಿಗಳಾಗಲಿ ಎಲ್ಲಾ ಕಾಲಗಳಲ್ಲಿ ದೊರೆಯುವುದಿಲ್ಲ ಆದುದರಿಂದ ಇವುಗಳನ್ನು ಹಾಳಾಗದಂತೆ ಭದ್ರವಾಗಿರಿಸಿದರೆ ಬೇಕಾದಾಗ ಉಪಯೋಗಿಸಬಹುದು ಅಲ್ಲದೆ ಕೆಲವು ಕಡೆ ಹಣ್ಣುಗಳು ಯಥೇಚ್ಛವಾಗಿ ದೊರೆತು ಉಪಯೋಗಿಸುವವರಿಲ್ಲದೆ ಹಾಳಾಗುವುದುಂಟು. ಈ ರೀತಿ ಹಾಳಾಗುವುದನ್ನು ತಡೆಯಲು ಹಣ್ಣುಗಳನ್ನು ಗಾಳಿಯಾಡದ ಡಬ್ಬಿಗಳಲ್ಲಿ ತುಂಬಿ ಮುಚ್ಚುವುದು, ರಸ ತೆಗೆದು ಇಲ್ಲವೇ ರಸಾಯನ ತಯಾರಿಸಿ ಭದ್ರವಾಗಿರಿಸುವುದೂ ಜಗತ್ತಿನಲ್ಲೆಲ್ಲಾ ತಿಳಿದ ರೀತಿಯಾಗಿತ್ತು. ಹೀಗೆ ಹಣ್ಣು-ತರಕಾರಿಗಳನ್ನು ಹಾಳಾಗದಂತೆ ಇರಿಸಲಾಗುತ್ತಿತ್ತು. ಹಣ್ಣು ತರಕಾರಿಗಳಲ್ಲದೆ ಮೀನು, ಮಾಂಸ, ಹಾಲು, ಬೆಣ್ಣೆ ಇತ್ಯಾದಿಗಳನ್ನೂ ಡಬ್ಬಿಯಲ್ಲಿ ತುಂಬುವುದು ರೂಢಿಯಲ್ಲಿದೆ ಡಬ್ಬಿಯಲ್ಲಿ ತುಂಬುವ ವಿಧಾನವೇ ಹಾಳಾಗುವ ವಸ್ತುಗಳನ್ನು ಭದ್ರವಾಗಿರಿಸಲು ಬಳಕೆಯಲ್ಲಿದ್ದುದಾಗಿದೆ. ಅಮೇರಿಕ, ಆಸ್ಟ್ರೇಲಿಯ, ಇಂಗ್ಲೆಂಡ್ ಮೊದಲಾದೆಡೆಗಳಲ್ಲಿ ಈ ಕೈಗಾರಿಕೆಯು ಯಶಸ್ವಿಯಾಗಿ ನಡೆಯುತ್ತಿದೆ ಇಲ್ಲಿಯ ಜನರ ಜೀವನ ಮಟ್ಟವು ಅತ್ಯಂತ ಸುಧಾರಿಸಿರುವುದರಿಂದ ಭದ್ರವಾಗಿರಿಸಿದ ಹಣ್ಣುಗಳೇ ಆಹಾರದಲ್ಲಿ ಪ್ರಾಮುಖ್ಯ ಸ್ಥಾನ ಪಡೆಯುತ್ತವೆ

ನಮ್ಮ ದೇಶದಲ್ಲಿ ಈ ಕೈಗಾರಿಕೆಯು ಇತ್ತೀಚೆಗೆ ಆರಂಭವಾಯಿತಷ್ಟೆ ಆದರಲ್ಲೂ ಮದರಾಸು ಪ್ರಾಂತದಲ್ಲಿ ಇದು ಇನ್ನೂ ಬಾಲ್ಯಾವಸ್ಥೆಯಲ್ಲಿದೆ ಇಡೀ ಪ್ರಾಂತದಲ್ಲಿ ಹಿಂದಿದ್ದ ಸುಮಾರು ಎರಡು ಕಾರ್ಖಾನೆಗಳ ಮಾತ್ರ ಹಣ್ಣುಗಳನ್ನು ಡಬ್ಬಿಯಲ್ಲಿ ತುಂಬಿಸಿಡುವ ಡಾಗೂ ಜೆಲ್ಲಿ ಸ್ಕ್ವೇಶ್, ಜಾಮ್ ಇತ್ಯಾದಿಗಳನ್ನು ತಯಾರಿಸುತ್ತಿವೆ ಇದು ನಿಜವಾಗಿಯೂ ಶೋಚನೀಯ ವಿಷಯವಾಗಿದೆ ಏಕೆಂದರೆ ಮದರಾಸು ಪ್ರಾಂತದಲ್ಲಿ ಬೆಳೆಯುವಷ್ಟು ವಿಸ್ತಾರದಲ್ಲಿ ಮಾವು, ಮುಸುಂಬಿ, ಕಿತ್ತಳೆ, ಲಿಂಬೆ ಹಣ್ಣುಗಳು ಹಿಂದುಸ್ಥಾನದಲ್ಲಿ ಬೇರಾವ ಪ್ರಾಂತದಲ್ಲೂ ಬೆಳೆಯುವುದಿಲ್ಲ. ಆದುದರಿಂದ ಇಲ್ಲಿ ಈ ಕೈಗಾರಿಕೆಯು ಅಭಿವೃದ್ಧಿ ಹೊಂದುವುದು ಅತ್ಯಾವಶ್ಯಕವಾಗಿದೆ. ಕಳೆದ ಆರು ವರುಷಗಳಿಂದ ಸ್ವದೇಶಾಭಿಮಾನ ಸರಕಾರವು ಸೆಜ್ಜುಕೃಷಿಯುವ ಹಣ್ಣುಗಳನ್ನು ಹಾಳಾಗದಂತೆ ಉಳಿಸುವ ರೀತಿಯನ್ನು ಕಂಡು ಹಿಡಿಯಲು ಪ್ರಯತ್ನಿಸುತ್ತಿದೆ ಕೆಲವು ತಿಂಗಳ ಹಿಂದೆ ಕೊಡೂರಿನ ಸರಕಾರಿ 'ಫಲೋತ್ಪತ್ತಿ ಸಂಶೋಧನಾಗಾರ' [ಫ್ರುಟ್ ಪ್ರೊಡಕ್ಟ್ಸ್ ರಿಸರ್ಚ್ ಲೇಬೊರೇಟರೀ] ವು ಕೃಷಿ ಇಲಾಖೆಯ ಕೈಕೆಳಗೆ ಪ್ರಾಂತದ ಮುಖ್ಯ ಹಣ್ಣುಗಳ ಸ್ವೆಲ್ಲಾ ಭದ್ರವಾಗಿರಿಸಲು ಪ್ರಯತ್ನಿಸುತ್ತಿದೆ.

ನಮ್ಮ ಪ್ರಾಂತದಲ್ಲಿ ಹೆಚ್ಚಾಗಿ ದೊರೆಯುವ ಹಣ್ಣುಗಳೆಂದರೆ ಮಾವು, ಬಾಳೆ ಹಣ್ಣು, ಕಿತ್ತಳೆ ಜಾತಿಗೆ ಸೇರಿದ ಹಣ್ಣು ಇವೇ ಆಗಿವೆ. ಇತರ ಹಣ್ಣುಗಳಲ್ಲಿ ಜಲಸಿನ ಹಣ್ಣು, ಅನಾನಸು, ಪಪ್ಪಾಯಿ, ಮೆಲನ್, ದ್ರಾಕ್ಷಿ ಇವೆಲ್ಲಾ ಡಬ್ಬಿಯಲ್ಲಿ ತುಂಬಿಸಿದರೆ ಹೆಚ್ಚು ಸಮಯ ಉಳಿದು ನಮ್ಮ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಅನುಕೂಲವಾಗಬಹುದು

The United Karnatak Insurance Company, Ltd.
DHARWAR

NOTICE

The share-holders, policy-holders and the public are hereby informed that Mr. A. S. Kini is not connected with this Company either as a Managing-Director or as a Director.

Company's Office
Dharwar
3—12—49

A. S. Kini,
Director-Secretary

A. V. Baliga,
Chairman

ಗೆಲ್ಲಿರಿ ರೂ. ೫,೦೦೦

ನರಗಳ ದೌರ್ಬಲ್ಯತೆ, ಶಕ್ತಿವಿಹೀನತೆ, ಕ್ಷೀಣತೆ, ಅಯಾಸಯುತರಾಗಿ, ಕುಂದಿ ತರಾಗಿ, ಮುಂಗೋಪಿಗಳಾಗಿರುವಿರಾ? ನೀವು ಯೌವನವಂತ ಯುವಕರಾಗಿ ಕಾಣಿಸಲಾತಿಸುವಿರಾ? ಯೌವನದ ಕಾಂತಿಯು ನಿಮ್ಮ ಕಣ್ಣುಗಳಲ್ಲಿ ಮತ್ತು ಮುಖ ವರ್ಚಸ್ಸಿನಲ್ಲಿ ತೋರ್ಪಡಿಸಿಕೊಳ್ಳುವ ಮಹದಾಸೆಯು ನಿಮ್ಮ ಅಂತರಂಗದ ಹೆಬ್ಬಯಕೆಯಲ್ಲವೇ? ಈ ಆಸೆಯು ನೆರವೇರಲು ಸಾಧ್ಯವೆಂದು ಖಚ್ಚಿತ್ಯವೆನ್ನು ಹೊರದೂಡಿ ಇಂದೇ ಪುನರ್ ಯೌವನ ಮಾತ್ರೆಗಳು ಮತ್ತು ಎಣ್ಣೆಯನ್ನು ಉಪಯೋಗಿಸಿರಿ

ಈ 'ಪುನರ್‌ಯೌವನ ಮಾತ್ರೆ ಮತ್ತು ಎಣ್ಣೆ'ಯು ನರಗಳಿಗೆ ಅದ್ಭುತ ಶಕ್ತಿಯನ್ನು ಕೊಟ್ಟು ಜೀರ್ಣಶಕ್ತಿಯನ್ನು ಹೆಚ್ಚಿಸಿ ನರಗಳನ್ನು ಶಕ್ತಿಯುತರನ್ನಾಗಿ ಮಾಡುವುದಲ್ಲದೆ, ಯೌವನದ ಯವ್ವನ ವೇಷದಲ್ಲಿ ಉಳ್ಳವುವು ಈ ಮಾತ್ರೆಗಳು ಯೌವನ ಪುನರಾಗಮನಕ್ಕೆ ಉತ್ತಮ ಔಷಧಿಯಲ್ಲವೇ ದೇಹಾರೋಗ್ಯ, ಮನಶ್ಶಕ್ತಿ ಇವುಗಳಿಗೆ ನೆರವಾಗಿ ತೇಜೋವಂತರನ್ನಾಗಿ ಮಾಡುವುದು. ಈ ಶಕ್ತಿವರ್ಧಕ ಮಾತ್ರೆಗಳು ಭಾರತದ ಅನೇಕ ಪ್ರದರ್ಶನಗಳಲ್ಲೂ ಮತ್ತು ಇಟಲಿ ದೇಶದಲ್ಲಿ ನಡೆದ ಅಂತರಾಷ್ಟ್ರೀಯ ವಸ್ತು ಪ್ರದರ್ಶನದಲ್ಲಿಯೂ, ಪ್ರದರ್ಶಿತವಾಗಿ, ಶ್ರೇಷ್ಠತೆಯ ಬಗ್ಗೆ ಬಹುಮಾನ ಪತ್ರಗಳನ್ನು ಪಡೆದಿವೆ ಅನೇಕ ವೈದ್ಯ ಪ್ರವೀಣರು ಈ ಅಮೂಲ್ಯ ಪರಿಶೋಧನೆಯನ್ನು ಪರೀಕ್ಷಿಸಿ ಮೆಚ್ಚಿದ್ದಾರೆ. ಈ ಔಷಧಿಯ ವ್ಯಾಪಕ ಮತ್ತು ಪರಿಣಾಮದ ಬಗ್ಗೆ ಈ ವರೆಗೂ ನಮಗೆ ಬಂದಿರುವ ಮೆಚ್ಚುಗೆಯ ಒಟೆಗಳು ಸುಳ್ಳಂದು ಸಾಬೀತು ಮಾಡುವವರಿಗೆ ನಗದು ೫೦೦ ರೂಪಾಯಿ ಬಹುಮಾನ ಕೊಡಲಾಗುತ್ತೆ.

ಪುನರ್ ತಾರುಣ್ಯ ಮಾತ್ರೆಗಳು:—ಬೆಲೆ ರೂ. ೫—೦—೦
ಪುನರ್ ತಾರುಣ್ಯ ತೈಲ ಬೆಲೆ ರೂ. ೫—೮—೦

ನಿಸ್ಸಂಶಯೋಜಕವೆಂದು ಸಾಬೀತಾದರೆ ಹಣ ವಾಪಸ್

ನಮ್ಮ ಲಂಡನ್ ನಗರದ ಪ್ರತಿನಿಧಿ.—

ಮೆಸರ್ಸ್ ಯಂಗ್ ಅಂಡ್ ಹೊವರ್ಡ್, ಲಿಮಿಟೆಡ್, ಲಂಡನ್ ಇ. ಸಿ. ೨

ನಿಮ್ಮ ಅವಶ್ಯಕತೆಗಾಗಿ

ದಾರುಲ್-ಷಫಾ ಗೋಲಿಯನ್ (ರಿಜಿಸ್ಟರ್ಡ್)

N.U ಬಟಾಲ, ಈಸ್ಟ್ ಪಂಜಾಬ್, [ಇಂಡಿಯಾ]

DAR-UL-SHAFA GOLIAN [Regd]

N. U. BATALA, E Punjab (India)

ಸ್ಥಳೀಯ ಮಾರಾಟಗಾರರು:

ಶ್ರೀ ಗಿರಿಜಾ ಮೆಡಿಕಲ್ ಸ್ಟೋರ್ಸ್

ಆರ್ಕಾಟ್ ಶ್ರೀನಿವಾಸಾಚಾರ್ಯರ ಬೀದಿ, ಬೆಂಗಳೂರು ಸಿಟಿ

Notice

ಕುಂದಾಪುರ ಡಿ.ಮು ಕೋರ್ಟಿನಲ್ಲಿ

ಕೃ.ನಂಬ್ರ 468/49

ವಾದಿಳು — ನಾಗಮ್ಮ

ಪ್ರತಿವಾದಿರು—ಶಿವರಾಮ ಹೊಳ್ಳ ಕೂಡಾ

ಮೈಸೂರು ಪ್ರೊವಿನ್ಸ್ ಶಿವಮೊಗ್ಗ ಡಿಸ್ಟ್ರಿಕ್ಟ್ ಶಿವಮೊಗ್ಗ ಟಾನಿನಲ್ಲಿರುವ ಜಯಲಕ್ಷ್ಮಿ ವಿಲಾಸ ಕಾಫಿಕ್ಲೆಲ್ಟಿನಲ್ಲಿರುವ ಸಣ್ಣಯ್ಯ ಜೋಯ್ಸರ ಮಗ ಶಿವರಾಮ ಹೊಳ್ಳ 1, (1ನೇ ಪ್ರತಿವಾದಿ) ಸದ್ರಿ ಶಿವರಾಮ ಹೊಳ್ಳರ ಮಗ ನೆಂಕಟ್ರಮಣ ಹೊಳ್ಳ 1, (2ನೇ ಪ್ರತಿವಾದಿ) ನಾಗಪ್ಪ ಹೊಳ್ಳರ ಮಗ ರಾಘವೇಂದ್ರ ಹೊಳ್ಳ 1, (3ನೇ ಪ್ರತಿವಾದಿ) ಕೂಡಾ ತ್ರಿ ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ಕುಟುಂಬದ ಪತ್ನಿಸ ಕೈಪತ್ತಿನಲ್ಲಿ ಕಾಸ್ಟು ದಸ್ಥಿರಂಸ್ತಿ ಪ್ರಥಮಜಪವಾಬ್ದಾರಿಯಿಂದ ತನಗೆ ಬಹಾ ಗತಕಾಲದ ಅಶನಾರ್ಥ ಬರಮಾಡಿಕೊಳ್ಳುವ ಬಗ್ಗೂ ಚಾಲ್ತಿ ವಿರೋದಿ ಸಂವತ್ಸರದ ಆದಿಲಕ್ಷ್ಯಾಯ ವಾದಿಳ ಬೇಪಾಂತ್ಯದ ನರೇಗಿನ ಅರನಾರ್ಥದ ಕುರಿತು ಡಿಕ್ಲೆರೇಸ್ ಬಗ್ಗೂ ಕೂಡಾ ಪಾದಿಳು ಜರಗಿಸಿದೆನೇಲಿನ ದಾನೆ ತಾರೀಕು 23-12-49ಕ್ಕೆ ತಪ್ಪಿ ಬಗ್ಗೆ ಇಮೋಣಾಗಿದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ದಲ್ಲಿ ಆ ದಿನಸ ಕೋರ್ಟುಮುಂದೆ ಜ್ಯಾಹೀರು ಮಾಡತಕ್ಕದ್ದು ತಪ್ಪಿದರ ನಿಮ್ಮನ್ನು ಎಕ್ಸಪಾರ್ಟಿ ಮಾಡಿ, ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ನಂಬ್ರ ತೀರ್ಮಾನಿಸಲಾಗುತ್ತದೆಂಬ ಸಂಗತಿ ನಿಮಗೆ ಈ ಮೂಲಕ ತಿಳುಹಿಸೋಣಾಗುತ್ತದೆ

(By order of the Court)

A. N Rao,
Advocate for Plaintiff.

Coondapoor
6-12-49

ಹಣ್ಣಿಡಿದರೆ ಸ್ವರ್ಗವು ಕಿವಿಸೆಗಾರಮು

ಶ್ರೀ ಹರೀಕೇಶರ ಅಭಿಪ್ರಾಯ

ಭಾರತವು ಬಹಳ ಸಂಕಟ ಕಾಲಗಳಿಂದ ಪಾರಾಗುತ್ತಿರುವುದು. ಜಗತ್ತಿನ ಶಕ್ತಿಗಳು, ಭಿನ್ನತೆಯನ್ನು ತನ್ನ ಆ ಸ್ವಿತ್ವ ಬಗ್ಗೆಯೇ ಚಿಂತಿಸುವಂತೆ ಮಾಡುಪಟ್ಟಿರತ್ತವೆ ಇಂತಹ ಸಮಯದಲ್ಲಿ, ನಮ್ಮ ಆತ್ಮವನ್ನು ಮಾರ್ಗದಲ್ಲಿ ಕೂಡಿಕೊಂಡು ನಡೆಯದಿದ್ದರೆ, ಸಹಕಾರವಿಲ್ಲದಿದ್ದರೆ, ನಮ್ಮೊಳಗೆ ಸಂಸಮಾನತೆಯಿಂದ ಕಾಣಮಾಡದಿದ್ದರೆ, ಕೀನ್ಯಕನ ಶ್ರಗತಿಯನ್ನು ಸಾಧಿಸುತ್ತಲಿರುವ ಉಳಿದ ದೇಶಗಳಿಗಿಂತ ನಾವು ಬಹಳ ಹಿಂದೆ ಬೀಳುವೆವು ನಮ್ಮ ಸೇರಲಿ, ಸೇರದಿರಲಿ, ವಿದ್ಯೋಗೀಕರಣವು ಬಂದೇ ಬರುವುದು. ನಾವು ಒಂದು ರಾಷ್ಟ್ರವಾಗಿ ಬಾಳಬೇಕಿದ್ದರೆ ಅದಕ್ಕೆ ಹೊಂದಿಕೊಂಡೇ ಹೋಗಬೇಕಾಗುವುದು. ಹಾಗಾಗಬೇಕಾದರೆ, ನಾವು ಹಿಂದೆ ಆಡಿದುದನ್ನು ಮಾಡಿದುದನ್ನು ಮರೆಯಂಲಕ್ಕೆಬೇಕು ಮತ್ತು ವರ್ತಮಾನದ ಬಗ್ಗೆ ಗಂಭೀರವಾಗಿ ವರ್ತಿಸಬೇಕು, ಎದುರಾಗಲಿರುವ ಭವಿಷ್ಯದ ಬಗ್ಗೆ ಯೋಚಿಸಬೇಕು.

ನಾವು ಹಳೆ ಪದ್ಧತಿ ಕಂದಾಚಾರಗಳ ಪರಂಗಬಾರದು ಮತ್ತು ಅನವಶ್ಯಕವಾದ ಛಾವನಾಶರಾಗಬಾರದು ನಮ್ಮ ಪ್ರಗತಿದಾರಿಯಲ್ಲಿ ಅಡ್ಡ ಬರುವದನ್ನೆಲ್ಲ ನಾವು ದಾಟಲು ಯತ್ನಿಸಬೇಕು. ವಿದ್ಯೋಗೀಕರಣದಿಂದ ನಮ್ಮ ಸಂರಕ್ಷಣೆಯಾಗುವಂತಿದ್ದರೆ ಒಮ್ಮನದಿಂದ ನಾವದನ್ನು ಸ್ವಾಗತಿಸಬೇಕು ಹಾಗೂ ನಮಗೆ ಬೇಕಾದಷ್ಟೆನ್ನಲ್ಲ ಕಾರ್ಖಾನೆಯಿಂದಲೂ ಚಾತುರ್ಯದಿಂದಲೂ ನಾವು ಉತ್ಪಾದಿಸಿಕೊಳ್ಳಲು ಮುಂದಾಗಬೇಕು.

ಹೀಗೆ ಮಾಡುವುದರಿಂದ ದೊಡ್ಡ ಸಂಖ್ಯೆಯಲ್ಲಿ ತಂತ್ರಜ್ಞರನ್ನೂ ಚಾತುರ್ಯ ಶಿಲ್ಪಿಗಳನ್ನು ಮತ್ತು ಕಾರ್ಯಕ್ಷಮ ಕೆಲಸಗಾರರನ್ನೂ ನಾವು ನಿರ್ಮಾಣ ಮಾಡಿದಂತಾಗುವುದು ಕಾರ್ಯವು, ಜನತೆ ಮತ್ತು ಸರಕಾರ ಇವರಿಂದಲೂ ಕೈಕೊಳ್ಳಲ್ಪಡಬೇಕು

ದೇಶದಲ್ಲಿಯ ಹಣವುಳ್ಳವರು ಉದ್ಯೋಗದಲ್ಲಿ ಆ ಹಣವನ್ನು ತೊಡಗಿಸಬೇಕು, ತತ್ತು ಕೆಲಸಗಾರರಿಗೆ ಹೆಚ್ಚು ಉತ್ಪಾದಿಸಶಿಕ್ಷಣ ಕೊಡಬೇಕು ಕೆಲಸಗಾರರು ತ್ಪಾದಿಸುವ ಕಲೆಯನ್ನು ಕಲಿಯಬೇಕು ತ್ತು ತಾವು ಪಡಿಯುತ್ತಿರುವ ಉದ್ಯೋಗಸಂಸ್ಥೆಗಳ ಅಭಿವೃದ್ಧಿಗಾಗಿ ಪಡಿಯಬೇಕು ಹೀಗೆ ಹಣವುಳ್ಳವರು ಮತ್ತು ಕೆಲಸಗಾರರು ಒಂದಾಗಿ ಕೂಡಿಕೊಂಡು ಕೆಲಸಮಾಡಿಕೊಂತೆ, ವಿದೇಯ ಬೆಲೆ, ಪೊಸ್ಕಾಲ್ಕ, ವೂ ಮಾಯವಾಗುವುದು ನಮ್ಮ ಅವಶ್ಯಕತೆಗಳ ಬಗ್ಗೆ ನಾವು ಪರದೇಶೀಯರಂತೆ ಅವಲಂಬಿಸುವುದು ತಪ್ಪುವುದು ಹೀಗಾದರೇನೇ ಭಾರತವು ಬದುಕಿ ಉಳಿಯಬಲ್ಲದು

ಉದ್ಯೋಗ ವ್ಯವಸಾಯಗಳಲ್ಲಿ ತೊಡಗಿದವರೆಲ್ಲರೂ, ಅಂದರೆ ಕೆಲಸಮಾಡಿಸುವವರು ಹಾಗೂ ಕೆಲಸ ಮಾಡುವವರು ಬೆರೆಯುವ ಕಾಲವು ಭಯಾನಕ ಕಾಲ್ಪಯಿಂದ ಕೂಡಿದೆಯೆಂಬುದನ್ನು ನೆನಪಿನಲ್ಲಿಡಬೇಕು ಮತ್ತು ಆದಷ್ಟು ಬೇಗಿಂದ ಪಾರಾದರೆಯೇ ಸಾಮರಸ್ಯೋದಯವಾಗಲಿಕ್ಕನ್ನು ನಾವು ಕಾಣಬಲ್ಲೆವೆಂಬ ಮಾತನ್ನು ಪದರಿಗೆ ಗಂಟು ಸೊಡೆದುಕೊಳ್ಳಿರಿ.

ಮುತ್ತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿತಪ್ಪಿ ಮುತ್ತುಸ್ರಾವವಾಗುವುದು, ಹತೋಟಿಗೆ ಬರುವುದು, ಈ ಔಷಧಿಯ ಸೇವನೆಯಿಂದ ತೀವ್ರ ಗುಣಹೊಂದುವುದು, ಯಾವ ಬಾಧಕವೂಯಿಲ್ಲ. ಸಾರಾರು ಮಂದಿಗೆ ಜಾತ್ರಿ ಗುಣವಾಗಿದೆ ಬೆಲೆ; ರೂ 3-; ಸ್ಪೆಶಲ್ ರೂ. ೫ ಅಧಿಕಾಧಿಕ ಸ್ಪೆಶಲ್ ರೂ. 8-[ವಿ. ಹನ್ನೆರಡಾಣೆ ಪ್ರತ್ಯೇಕ.]

Mrs. P DEVEE, F DS (N.
Tollygunge CALCUTTA

ಸ್ವಾತಿಸ್ಥರು: ಶಹಾಕಂಪೆನಿ, ಮಂಗಳೂರು

ಕೆಲವು ಕಾಲಕ್ಕೆ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ನುಡಾಪುರುಷರು ಅವತರಿಸಿ ಅನ್ಯಾಯದಿಂದ ನ್ಯಾಯದ ಕಡೆಗೆ, ಕತ್ತಲೆಯಿಂದ ಬೆಳಕಿನ ಕಡೆಗೆ, ಸಾವಿನಿಂದ ಅಮೃತತ್ವಕ್ಕೆ ಜನತೆಯನ್ನು ತಿರುಗಿಸಲು ಯತ್ನಿಸಿದ್ದಾರೆ. ಧರ್ಮ ಬಿಲವಾದಾಗ ತಾನೇ ಅವತರಿಸಿ ಧರ್ಮೋದ್ಧಾರ ಮಾಡುವುದಾಗಿ ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಕೊಟ್ಟ ಆಶ್ವಾಸನ ಸಾರ್ವಕಾಲಿಕವಾಗುತ್ತ ಬಂದಿದೆ. ಧರ್ಮದ ವಾಣಿ ಮೊಳಗಿದಲ್ಲೆಲ್ಲಾ ಒಂದೇ ನಾದ, ಒಂದೇ ಶ್ರುತಿ ಕೇಳಿಬಂದಿದೆ.

ಹೀಗೆ ಅವತರಿಸಿದ ಮಹಾಪುರುಷರು ಎಲ್ಲಿಂದಲೋ ಆಮಾನುಷವಾದ ಆಧ್ಯಾತ್ಮಿಕ ಸಂಪತ್ತನ್ನು ಕಟ್ಟಿಕೊಂಡು ಬಂದು ಮಾನವ ಲೋಕಕ್ಕೆ ಅದನ್ನೆಲ್ಲ ಹಂಚಿಕೊಟ್ಟು ಹೋದವರಲ್ಲ. ಮಾನವರಲ್ಲಿ ಹುಟ್ಟಿದರೆಯೂ ಅವರು ಎಲ್ಲ ಅರ್ಥ ನಿಃಶೇಷ, ಈರ್ಷೆ ಈಷ್ಟುತೆಗಳನ್ನು ಅನುಭವಿಸಿ, ಅವುಗಳ ನಿಸ್ಸಾರ್ಥಕತೆಯನ್ನು ಕಂಡುಕೊಂಡರು ಅವಿನಾಶಿಯೂ, ಅಮರವೂ ಆದ ಜೀವನದ ಕಡೆಗೆ ಮಾನವರನ್ನು ಎಳೆದೊಯ್ದ ಹಿರಿಮೆ ಅವರದು. ಸಾಮಾನ್ಯ ಮಾನವನಂತೆ ಮಹಾಪುರುಷನೂ ಲೋಕವ್ಯಾಪಾರವನ್ನು ಬಲ್ಲವನೆಯೂ; ಅದರ ಇಂದ್ರಜಾಲದ ಪ್ರಭಾವವನ್ನು ಅರ್ಥ ಮಾಡಿಕೊಂಡವನು. ಸಾಮಾನ್ಯ ಮಾನವ ಲೋಕವ್ಯಾಪಾರದಲ್ಲಿಯೇ ಮುಳುಗಿ ತನ್ಮಯತೆಯನ್ನು ಮರೆತಂತೆ ಮಹಾಪುರುಷ ಮರೆಯುವುದಿಲ್ಲ. ಅವನ ಮನಸ್ಸು ಅಲ್ಪತೃಪ್ತಿಗೊಳಗಾಗಿ ಜೀವನದ ಕ್ಷಣ ಭಂಗುರವಾದ ಭೋಗದಲ್ಲಿ ಲೀನವಾಗುವುದಿಲ್ಲ. ಜೀವನ ಸಾಗಬೇಕಾದರೆ ಭೋಗ ಬೇಕು. ತಾನಿರುವ ಪ್ರಪಂಚದ ನಡವಳಿಕೆಯಲ್ಲಿ ಮನುಷ್ಯ ಅಸಕ್ತನಾಗದಿದ್ದರೆ ಅವನು ಅದರಲ್ಲಿ ಒಂದು ಓನಪೂ ಬಾಳಲಾರ. ಆದರೆ ಈ ಆಸಕ್ತಿಯ ಮೇರೆಯೇನು? ಮನುಷ್ಯನ ಮನಸ್ಸು ಪಂಚ ಬಯಕೆಗಳ ಕ್ಷೇತ್ರವಾಗಿರುವಾಗ ಯಾವ ಒಂಬಕೆಗೆ ಅವನು ಪ್ರಾಧಾನ್ಯ ಕೊಡಬೇಕು?

ಮನುಷ್ಯನ ಬಯಕೆ ಎಂದು ಕವಲೊಡದು ಬೆಳೆಯುತ್ತದೆ. ನನಗೆ ಮನೆಬೇಕು, ಸುಂದರ ಬೇಕು, ಸಂಪತ್ತು ಬೇಕು, ಪದವಿ ಪ್ರತಿಷ್ಠೆ ಬೇಕು ಎನ್ನುವ ಬಯಕೆ ಒಂದೆಡೆ; ನನಗೆ ಜ್ಞಾನಬೇಕು, ಆತ್ಮಶಕ್ತಿ ಬೇಕು, ಶಾಂತಿ ಬೇಕು ಎನ್ನುವ ಬಯಕೆ ಇನ್ನೊಂದೆಡೆ ಈ ಬಯಕೆಗಳ ಹೋರಾಟವನ್ನೇ ಪುರಾಣಗಳು ದೇವಾಸುರ ಸಂಗ್ರಾಮವೆಂದು ಕರೆದಿರುವುದು. ಲೋಕದ ವ್ಯಾಪಾರದಲ್ಲಿ ನಿಸ್ಸೀಮನಾಗಿ ಅದು ನೀಡಬಹುದಾದ ಸಕಲ ಭೋಗ ಭಾಗ್ಯಗಳನ್ನನುಭವಿಸಿ ಮಾನವ ತೃಪ್ತನಾಗಬಹುದು; ಅವುಗಳನ್ನು ನಿರಾಕರಿಸಿ ಲೋಕಾತೀತನಾಗಿ ಅಕ್ಷಯವಾದ ದಿವ್ಯಜ್ಞಾನದ ಕಡೆಗೂ ಅವನು ಹೋಗಬಹುದು.

ಶಾಂತಿಯನ್ನರಸಲು ಭಗವಾನ್ ಬುದ್ಧ ಸಂಸಾರವನ್ನು ತೊರೆದು ಸಂನ್ಯಾಸಿಯಾಗಬೇಕಾಯಿತು. ಬುದ್ಧನಿಗೂ ಹಿಂದಿನವರಾದ ಆರ್ಯ ಋಷಿಗಳು ಸಂಸಾರದ ನಿರರ್ಥಕತೆಯನ್ನು ಸಾರಿದ್ದಾರೆ. ಸಂಸಾರ ನಿರಸನಕ್ಕೆ ಭಾರತೀಯ ಗ್ರಂಥಗಳಲ್ಲಿ ದೊರೆತಿರುವ ಪ್ರಾಧಾನ್ಯದಿಂದ ಸಂಸಾರ, ದಿವ್ಯಜ್ಞಾನ ಎರಡೂ ಪರಸ್ಪರ ವಿರುದ್ಧವಾದ ತತ್ವಗಳೆಂಬ ಅಭಿಪ್ರಾಯ ರೂಢಿಯಲ್ಲಿ ಬಂದಿದೆ.

ಎಲ್ಲರೂ ಸನ್ಯಾಸಿಗಳಾದರೆ ಲೋಕ ನಡೆಯುವುದೆಂತು? ಎಲ್ಲರೂ ಸ್ಥಿತಪ್ರಜ್ಞರಾಗಿ ವಿಷಯಸುಖದಲ್ಲಿ ಮಗ್ನರಾದರೆ ದಿವ್ಯಜ್ಞಾನ ಪಸರಿಸುವುದೆಂತು? ಈ ಸಮಸ್ಯೆಯನ್ನು ಉಪನಿಷತ್ತು, ಜನಕ ಮಹರ್ಷಿಯ ಆದರ್ಶದಿಂದ ಬಿಡಿಸಿದೆ. ಕೊಳಚೆಯಲ್ಲಿ ಬೆಳೆದರೂ ತಲೆಯೆತ್ತಿ ಶುಭ್ರವಾಗಿ ನಿಲ್ಲುವ ಪದ್ಮಪುಷ್ಪದಂತೆ ಮನುಷ್ಯನ ಬಾಳುವೆ ನಿರ್ಯೋಜಿತವಾಗಬೇಕೆಂದು ಸಾರಿ ಹೇಳಿದೆ. ಜನಕ, ಶ್ರೀರಾಮ, ಶ್ರೀಕೃಷ್ಣ, ಅಶೋಕ, ಬಾಹುಬಲಿ ಮೊದಲಾದ ಮಹಾನುಭಾವರು ಸಂಸಾರದಲ್ಲಿದ್ದೂ ಸರ್ವಸಂಗ ಪರಿತ್ಯಾಗ ಮಾಡುವ ಮಾರ್ಗವನ್ನು ತಮ್ಮ ಜೀವಿತಾದರ್ಶದಿಂದ ತೋರಿಸಿಕೊಟ್ಟಿದ್ದಾರೆ.

ಬಾಪೂ ಈ ವರ್ಗಕ್ಕೆ ಸೇರಿದ ಮಹಾಪುರುಷರು. ಅವರ ದಿವ್ಯ ಜೀವನ ಒಂದು ದೃಷ್ಟಿಯಲ್ಲಿ ಬಿಡಿಸಲಾಗದ ಗಂಟು. ಇನ್ನೊಂದು ದೃಷ್ಟಿಯಲ್ಲಿ ಸುಲಲಿತ ವಿಶ್ವತೋಮುಖವಾದ ಅವರ ಜೀವನ ಒಂದು ಶುಭ್ರ ಕನ್ನಡಿ, ರಾಜಕಾರಣ, ಧರ್ಮ, ಸಾಹಿತ್ಯ, ಕಲೆ, ವಿಜ್ಞಾನ, ವೈದ್ಯ ಎಲ್ಲ ಅದರಲ್ಲಿ ಪ್ರತಿಬಿಂಬಿಸಿವೆ. ಅದರೆ ಬಾಪೂ ಯಾವ ಒಂದು ವಿಷಯಕ್ಕೂ ತಮ್ಮ ಬಾಳಿನ್ನು ಅಡಕ ಮಾಡಿಕೊಂಡು ಉಳಿದವುಗಳನ್ನು ಗೌಣವೆಂದು ಭಾವಿಸಲಿಲ್ಲ. ತಮ್ಮ ನಾಡಿನ ೩೫ ಕೋಟಿ ಜನರ ಭವಿಷ್ಯ ಆವರಿಗೆಷ್ಟು ಪ್ರಾಧಾನ್ಯವೋ ಅಷ್ಟೇ ಆಶ್ರಮದ ಒಬ್ಬ ರೋಗಿಯ ಆರೋಗ್ಯವೂ ಪ್ರಧಾನ.

ಬಾಪೂ ಕಟ್ಟಿಕೊಂಡಿದ್ದ ಸಂಸಾರ ಅಸಂಖ್ಯಾತ. ಆ ಸಂಸಾರದಲ್ಲಿ ಜೊತೆಗೆ ಬೇನೆಯಾಗಲಿ ಬೇಸರವಾಗಲಿ ಬಾಪು ಅವರ ಬಳಿ ತಾಯಿಯಂತೆ ನಿಲ್ಲುತ್ತಿದ್ದರು. ಅದರೆ ಇಂತಹ ಬೃಹತ್-ಸಂಸಾರದಲ್ಲಿದ್ದೂ ಅದರ ಗೋಜಿಗೆ ಸಿಕ್ಕದಿದ್ದ ಜಾಣ್ಮೆ ಬಾಪೂ ಅವರಲ್ಲಿತ್ತು.

ಇದರ ರಹಸ್ಯವನ್ನು ಬಾಪೂ ಸ್ವಪ್ನವಾಗಿ ಬಿಡಿಸಿ ಹೇಳಿದ್ದಾರೆ. "ನಾನು – ನನ್ನದು ಎನ್ನುವ ಅಭಿಮಾನ ಬಿಡಿ. ಕರ್ತವ್ಯದ ದೃಷ್ಟಿಯಿಂದ ಮಾಡಬೇಕಾದುದನ್ನು ಶ್ರದ್ಧೆಯಿಂದ ಅಚ್ಚುಗಟ್ಟಾಗಿ ಮಾಡಿ. ಆದರ ಫಲಾಫಲಗಳ ಕಡೆ ಲಕ್ಷ ಬೇಡ" ಗೀತೆಯ ಈ ಅಮರವಾಣಿ ಬಾಪೂ ಜೀವನದ ನಂದಾದೀಪ. ನಮ್ಮ ಜನ್ಮಕ್ಕೆ ಅರ್ಥವಾಗುವಂತೆ ಗೀತೆಯನ್ನು ಅರ್ಥಮಾಡಿ ಹೇಳಿದರು ಬಾಪೂ. ಆದಕ್ಕೂ ಹೆಚ್ಚಾಗಿ ಅದರ ಉಪದೇಶವನ್ನು ಅನುಷ್ಠಾನಕ್ಕೆ ತಂದು ತಾವೇ ಗೀತೆಯಾದರು. ಬಾಪೂ ಜಗತ್ತಿನ ಮುಂದಿಟ್ಟ ಆದರ್ಶ ಕೇವಲ ಉಪದೇಶವಲ್ಲ; ನಮ್ಮ ಜೀವನ.

ಬಾಪೂ ಲೋಕಕ್ಕೆ ಮಾಡಿದ ಉಪಕಾರ ಏನು? ಭಾರತಕ್ಕೆ ಅವರಿಂದಾದ ಉಪಕಾರ ಎಂಥಹದು? ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಬಾಪೂ ಕೆಥೆ ಆ ಪ್ರಶ್ನೆಗೆ ಸದುತ್ತರವನ್ನು ನೀಡುತ್ತದೆ. ಬಾಪು ಜಗತ್ತಿನ ಮೇಲೆ ಉಪಕಾರದ ಹೊರೆಯನ್ನು ಹೊರಿಸಿರುವುದು ಮಾತ್ರವಲ್ಲ; ಅಷ್ಟೆ ತೂಕವಾದ ಉತ್ತರವಾದಿತನವನ್ನು ಹೊರಿಸಿದ್ದಾರೆ. ಬಾಪೂ ಕನಸನ್ನು ಸಾರ್ಥಕಗೊಳಿಸುವ ಉತ್ತರವಾದಿತನ ಎಲ್ಲರ ಬುಡದ ಮೇಲೆ ನಿಂತಿದೆ. ಆಸೆ, ದ್ವೇಷ, ರೋಷಗಳಿಂದ ತಪ್ತವಾಗಿರುವ ಜಗತ್ತಿಗೆ ಸನ್ಮಾರ್ಗ ದರ್ಶನವಾಡಿಸಲು ಬಾಪೂವಿಗಿಂತ ಗುರುವೇಕೆ? ಎಂದು ಬಾಪೂ ಜೀವನ, ಉಪದೇಶ ಜಗತ್ತಿನ ಎಲ್ಲ ಜೀವಿಗಳ ಚರ್ತಗತವಾಗುತ್ತದೆಯೋ ಅಂದೇ ಬಾಪೂ ಚಿತ್ರಿಸಿದ 'ರಾಮರಾಜ್ಯ'ದ ಸ್ಥಾಪನೆಯಾಗುತ್ತದೆ. ತಮ್ಮ ರಾಮ ರಾಜ್ಯದ ಚಿತ್ರವನ್ನು ಬಾಪೂ ಬಿಡಿಸಿದ್ದಾರೆ. 'ರಾಮರಾಜ್ಯ' ವೆಂದರೆ ಹಿಂದೂ ರಾಜ್ಯವಲ್ಲ, ರಾಮ ರಾಜ್ಯ ವೆಂದರೆ ನಾನು ಅರ್ಥ ಮಾಡುವುದು ದೇವರಾಜ್ಯವೆಂದು. ನನಗೆ ರಾಮ-ರಹೀಮ ಇಬ್ಬರೂ ಒಂದೇ-ಒಬ್ಬನೇ ದೇವರ ಎರಡು ಹೆಸರುಗಳು. ಸತ್ಯ ಸನ್ಮಾರ್ಗದ ದೇವರನ್ನು ಬಿಟ್ಟು ನಾನು ಬೇರೆ ಯಾವ ದೇವರನ್ನೂ ಮಾನಿಸುವುದಿಲ್ಲ.'

ಈ ರಾಮ ರಾಜ್ಯ ಸ್ಥಾಪನೆಗೆ ಭಾರತ ಮುನ್ನುಗ್ಗಬೇಕೆಂದು ಬಾಪೂ ಬಯಸಿದರು. ಭಾರತ ಚಕ್ರವರ್ತಿಗಳ, ಯೋಧರ, ಸರ್ವಾಧಿಕಾರಿಗಳ ರಾಜ್ಯವಲ್ಲ ಭಾರತ ಯಾಜ್ಞವಲ್ಕ್ಯ, ಬುದ್ಧ, ಶಂಕರ, ಕಬೀರ್ ಚಿಟ್ಟಿನ ರಾಜ್ಯ. ಲೋಕ ಅಂಧಕಾರದಲ್ಲಿದ್ದಾಗ ಅದಕ್ಕೆ ಬೆಳಕನ್ನಿತ್ತುದು ಭಾರತ ಲೋಕ ರಾಕ್ಷಸೀಲಾಲಸೆಗಳಲ್ಲಿ ಮೈಮರೆತು ಮಾನವತ್ವದ ವಿಧ್ವಂಸನಕ್ಕೆ ಹೊರಟಿದ್ದಾಗ ಅದಕ್ಕೆ ವಿವೇಕ, ವಿವೇಚನೆಯನ್ನು ತಂದುಕೊಟ್ಟದ್ದು ಭಾರತ. ಮಹರ್ಷಿಗಳು ಬೆಳಗಿ ಆಧ್ಯಾತ್ಮ ಜೀವನದ ನಿತ್ಯ ಮಾರ್ಗವನ್ನು ನಿರ್ದೇಶಿಸಿದ ಪುಣ್ಯ ಭೂಮಿ ನಮ್ಮ ಭಾರತ. ಆಧುನಿಕ ವಿಜ್ಞಾನದ ವಿಲೋಭನಿಗೆ ಸಿಕ್ಕು ಆತ್ಮಹತ್ಯೆಯ ಮಾರ್ಗವನ್ನು ಹಿಡಿಯುತ್ತಿರುವ ಪಾಶ್ಚಾತ್ಯ ನಾಗರಿಕತೆಗೆ ಜ್ಞಾನದ ಬೆಳಕನ್ನು ನೀಡಬಲ್ಲದು ಭಾರತ ಒಂದೇ! ಈ ಭಾರತ ದಿಂದ ಹಿಂದೆ ಜ್ಞಾನದ ಬೆಳಕು ಹೊರಟು ಸಪ್ತ ಸಮುದ್ರಗಳಾಚೆ, ಜಗತ್ತಿನ ಎಂಟು ದಂಡೆಗೂ ಪಸರಿಸಿತು. ಇಂದು ಆ ಮಹಾ ಕಾರ್ಯ ಭಾರತ ಪುನಃ ಮಾಡಬೇಕಾಗಿದೆ. ಲೋಕೋದ್ಧಾರಕ್ಕೆ ಭಾರತ ಟೊಂಕ ಕಟ್ಟಿ ನಿಲ್ಲದಿದ್ದರೆ ಪ್ರಳಯ ಅನಿವಾರ್ಯವಾಗುತ್ತದೆ ಎಂದು ಬಾಪೂ ಬಿತ್ತಿಯಿತ್ತಿ ಹೇಳಿದರು.

ಆಧುನಿಕ ಭಾರತವನ್ನು ಲೋಕ ಗುರುವನ್ನಾಗಿ ಮಾಡಲು ಬಾಪು ತಮ್ಮ ತ್ರಿಕರಣವನ್ನರ್ಪಿಸಿದರು. ಬಾಳನ್ನು ಎಡುರಿಸಿದ ಆತ ವಿಶ್ವಾಸದಿಂದಲೇ ಸಾವನ್ನೂ ಎದುರಿಸಿದರು. ತ್ಯಾಗ, ಪ್ರೇಮ, ಶಾಂತಿ ಇದೇ ಜಗತ್ತಿನ ಕ್ರಿಯಾ ಶಕ್ತಿಗಳೆಂದು ಬಾಪೂ ಬದುಕಿದ್ದಾಗ ಕೋರಿದರು. ಅವರ ಬದುಕು ಮುಗಿದರೂ ಅದೇ ದುಂದುಭಿ ಮೊಳಗುತ್ತಿದೆ.

ಪ್ರೇಮ-ತ್ಯಾಗ-ಶಾಂತಿ!

(—ಪ್ರಗತ)

ಅವತಾರಿ ಮಹಾಪುರುಷ ಭಾರತದ ಬಾಪೂ

ಬಾಪೂ ಕೋರಿದ ಸನ್ಮಾರ್ಗದಲ್ಲಿ

ಲೋಕೋದ್ಧಾರಕ್ಕೆ ಭಾರತ ಟೊಂಕ ಕಟ್ಟಿ ನಿಲ್ಲದಿದ್ದರೆ ಪ್ರಳಯ ಅನಿವಾರ್ಯ!

ಶ್ರೀ. ಅ. ನ. ಕೃಷ್ಣರಾಯರಿಂದ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಕೀಗ್ರು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೆಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಜಾಲಕರು—ಹಾಲಪ್ಪಾ ಭಕೇರಪ್ಪಾ ಹಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಸಿಯು:—ಹುಬ್ಬಳಿ ಧಾರವಾಡ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಪಾನಸ್ಪ ಸಿದ್ಧಲಿಂಗಸ್ವ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಹಾವಣಗೇರಿ ಹಾವಣಗೇರಿ:—ಹಾವಣಗೇರಿ ಪ್ರಿಸ್ಟ್ ಆದ್ ಎಲ್ ಕೆಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಗಿ

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar, *Vaidya.*

ನೋಟೀಸು

ಕುಂದಾಪುರ ಡಿ.ಮು ಕೋರ್ಟಿನಲ್ಲಿ

S. C. 629/45

E. P. 689/49

ವಾದಿ"- — ಶೀನಪ್ಪ ಶೆಟ್ಟಿ ಕೊಡಾ

ಪ್ರತಿವಾದಿ. —ರಾಮಣ್ಣ ಶೆಟ್ಟ, ವೆಂಕಮ್ಮ ಶೆಡ್ತಿ ಮಗ, ಕಾರ್ಕಳ ತಾಲ್ಲೂ ಹೆಬ್ರಿಗ್ರಾಮದ ಶೀರ್ತಾನಬೆಯಲ್ಲಿರುವನ.

ಗಾರ್ನಿಶಿ 2 ಮಮ್ಮು ಯಾನೆ ಅಂಣಪ್ಪ ಶೆಟ್ಟ, ಮೇಲ್ಮನೆ ವೀರಣ್ಣ ಶೆಟ್ರ ಆಳಿಯ. ಉಡ್ಪಿ ತಾಲ್ಲು ಶಿರಿಯಾರ ಗ್ರಾಮ.

ಪ್ರತಿವಾದಿ ಮತ್ತು 2ನೇ ಗಾರ್ನಿಶಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಪ್ರತಿವಾದಿಗೆ 2ನೇ ಗಾರ್ನಿಶಿಯಿಂದ ಇದೇ ವಿರೋಧಿ ಸಂಬಂಧಕ್ಕೆ ಬರತಕ್ಕ ಗೇಣ ವ್ಯಲಿ ಪತ್ರನ್ನು ಜಪ್ತಮಾಡಿಸಿ ಯೆಲಂಬ್ಮಿಸಿಂದ ಪುಟ್ಟಿಬರುವ ಅ್ಯವೇಜು ವಾದಿರಿಗೆ ಕೊಡಿಸ ಬೇಕಾಗಿ ವಾದಿರು ದಾವಲು ಮಾಡಿದ ಮೇರಿನ ಅರ್ಜಿ ತನ್ಯೆಯನ್ನು ತಾ. 23-12-44ಕ್ಕೆ ತನ್ಮಗೆಯಿಟ್ಟಿದೆ. ಆ ಕಾರಿತು ನಿಮ್ಮ ಅಕ್ಷೇಪ ಯಿದ್ದರೆ ಆ ದಿನ ಹಗಲು 11 ಗಂಟೆಗೆ ಮೇರಿಸ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ನೂಲ್ಕ ತಿಳಿಸಿಯದೆ.

By order of the Court.

Y. Tejappa Shetty,

Advocate for Plaintiffs.

Coondapoor 9-12-49

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

S- C. 684/49.

ತಿಮ್ಮಪ್ಪ ಶೆಟ್ಟಿ —ವಾದಿ

ಮೊಗೇರಿ ನಾಗ —ಪ್ರತಿವಾದಿ.

ಸದ್ರಿ ವಾದಿಯು ಈ ಮೂಲ್ಕ ತಿಳಿಸುವ ದೇನೆಂದ್ರೆ:—

ಪ್ರತಿವಾದಿ ಮೊಗೇರ ನಾಗ-ಆಬ್ಬಕ್ಕ ಹೆಂಗ್ಸಿನ ಮಗ. ಕುಂದಾಪುರ ತಾಲ್ಲು ಬಳ್ಕೂರು ಗ್ರಾಮದ ಕೆಳ ಹಿತ್ತಲ್ಲಿರುವನ.

ವಾದಿಗೆ ಪ್ರತಿವಾದಿಯು ತಾ. 19-4-47ರಲ್ಲು ಬರಕೊಟ್ಟ ದಿನಾಂದ ನೋಟನ ಆಸ್ಲು ಬಡ್ಡಿ ರೂ. 113-12-6ನ್ನು ಬರನಾಡಿಕೊಳ್ಳುವರೆ ಮಾದಿದ ದಾವೆಯು ತಾ. 22-12-49ಕ್ಕೆ ಅಬ್ಬೆರೆ ತನ್ಯಗೆ ಯಿದೋ ಣಾಗಿಯದೆ. ಆ ಕಾರಿತು ನಿಮ್ಮ ವೈಕ್ಷೇಪಣಾದ್ರೂ ಉದಾಹರಣೆಯಿದ್ರೆ ಸದ್ರಿ ದಿವ್ಸ ಹಗ್ಲು 11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಬಂದಂದ ಸ್ವತಹಾ ವಕೀಲರ ದ್ವಾರಾ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಪಾಗಿಸಲ್ಪಡುವದೆಂಬ ಸಂಗ್ತಿ ಈ ನೂಲ್ಕ ನಾದಿ ಕಡೆಯಿಂದ ತಿಳಿಯಪಡಿಸಿದೆ.

M. Anthaya Shetty,

Advocate for Plff.

Kundapur

Date 6-12-49

ಸ್ತ್ರೀಯರಿಗೆ ಆಭರಣಗಳು ಅತ್ಯಗತ್ಯವೇ? ಸೌಂದರ್ಯಕ್ಕೆ ಒಪ್ಪಲು ಕೆಲವು ಇರುವುದರಲ್ಲಿ ಅಡ್ಡಿಯಿಲ್ಲ. ಆದರೆ ಮತಿಗೂರಿ ಧರಿಸುವುದು ಅಗತ್ಯವಿಲ್ಲ. ಮೈಮೇಲೆ ಧರಿಸಿದ ಒಡವೆಗಳಿಂದ ತುಂಬಾ ಅನಾಹುತಗಳು ನಡೆಯುವ ಸಂಭವಗಳಿವೆ. ಬೆಲೆಬಾಳುವ ಡಾಗೀನಗಳು ಮೈಯಲ್ಲಿರುವಾಗ ಭಯವು ತಾನಾಗಿ ತಲೆದೋರುತ್ತದೆ. ನಿರ್ಭಯವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಧೈರ್ಯ ಸಾಕಾಗುವುದಿಲ್ಲ.

ಕನ್ಯೆಗೆ ವರಪಕ್ಷಿಣೆ ಕೊಡಲು ಶಕ್ತಿಯಿಲ್ಲದ ಮಾತಾಪಿತೃಗಳು ಸಾಲಮಾಡಿಯಾದರೂ ಒಡವೆಗಳನ್ನು ಮಾಡಿಸಿಕೊಟ್ಟು ಮದುವೆ ಮಾಡುವ ಸಂದರ್ಭ ಬಂದು ಎಲ್ಲ ಕಳಕೊಂಡು ಪಾಪರಾಯಾಗುವವರೂ ಇದ್ದಾರೆ ಅಂತಹ ಸನ್ನಿವೇಶಗಳಲ್ಲಿ ಒಡವೆಗಳಿಂದ ಏನು ತಾನೆ ಪ್ರಯೋಜನ? ದಾರಿದ್ರ್ಯದ ಮನೋರೋಗವು ವೈಪರೀತ್ಯಕ್ಕೇರಿ ಆತ್ಮಹತ್ಯೆ ಕೈಕೊಂಡವರೂ ಇದ್ದಾರೆ

ಗಾಂಧೀಜಿಯವರ ಅಭಿಪ್ರಾಯ

ಆಭರಣಗಳ ಕುರಿತು ಭಾರತದ ಪೂಜ್ಯನೀಯ ಮಹಾತ್ಮಾ ಗಾಂಧೀಜಿಯವರ ಅಭಿಪ್ರಾಯವೇನಿತ್ತು? ಅವರು ಆಭರಣಗಳನ್ನು ಅತಿಯಾಗಿ ವಿರೋಧಿಸುತ್ತಿದ್ದರು. ಪ್ರತಿಯೊಬ್ಬ ಮಹಿಳೆಗೆ ಅವರು ಆಭರಣಗಳನ್ನು ದ್ವೇಷಿಸಿರೆಂದೇ ಉಪದೇಶಿಸುತ್ತಿದ್ದರು. ಗಾಂಧೀಜಿಯವರ ಪತ್ನಿ ಕಸ್ತೂರಿಬಾರವರಿಗೆ ಮೊದಮೊದಲು ಆಭರಣಗಳ ಕಡೆಗೆ ತುಂಬಾ ಆಕರ್ಷಣೆಯಿತ್ತು. ಆದರೆ ಮಹಾತ್ಮರ ಉಪದೇಶವು ಎದೆಗೆ ನಾಟಿದ ಮೇಲೆ ಆ ಮಮತೆ ಮೆಲ್ಲಗೆ ಕರಗಿತು. ಕೊನೆಗೆ ಒಂದೇ ಒಂದು ಆಭರಣವನ್ನು ಮೈಮೇಲೆ ಇಟ್ಟುಕೊಳ್ಳದಷ್ಟು ವೈರಾಗ್ಯವನ್ನೂ ಅವರು ತಾಳಿದರು.

ಒಂದು ಘಟನೆಯ ನೆನಪು

ದಕ್ಷಿಣಆಫ್ರಿಕದಲ್ಲಿ ಮಹತ್ತರವಾದ ಜನಸೇವೆ ನಡೆಸಿ ಮಹಾತ್ಮಾ ಗಾಂಧಿಯವರು ಅಲ್ಲಿಯ ಜನರ ಮೆಚ್ಚುಗೆಗೆ ಮತ್ತು ಪ್ರಶಂಸೆಗೆ ಪಾತ್ರರಾಗಿದ್ದರು. ಆಫ್ರಿಕದಿಂದ ಗಾಂಧೀಜಿಯವರು ಭಾರತಕ್ಕೆ ಮರಳುವ ಸಿದ್ಧತೆ ಮಾಡುವಾಗ ಊರಿಗೆ ಊರೇ ಕಣ್ಣೀರಿಟ್ಟಿತು

ಹಲವು ಕಡೆಗಳಲ್ಲಿ ವಿದಾಯ ಕೂಟಗಳು ಮತ್ತು ಔತಣಗಳ ನಿರ್ಧಾರವಾಯಿತು. ಗಾಂಧೀಜಿಯವರನ್ನು ಪ್ರತಿಯೊಬ್ಬರೂ ಮನಃಪೂರ್ವಕ ಕೊಂಡಾಡುತ್ತಿದ್ದರು ಯಾವದೋ ಒಂದು ಕಡೆ ನಿರ್ಧರಿಸಿದ ಸತ್ಕಾರ ಕೂಟದಲ್ಲಿ ಬಹಳ ವೈಭವದಿಂದ ಊಟ ಉಪಚಾರಗಳು ನಡೆದುವು. ಈ ಸಮಾರಂಭಕ್ಕೆ ಜಾಸ್ತಿ ಸಂಖ್ಯೆಯಲ್ಲಿ ಗಾಂಧೀಜಿಯವರ ಮಕ್ಕಳು ಹಾಜರಾಗಿದ್ದರು. ಬಹಳ ಬೆಲೆಬಾಳುವ ಆಭರಣಗಳು ಮತ್ತು ವಸ್ತ್ರಗಳು ಉಡುಗೊರೆಯಾಗಿ ಬಂದುವು ಗಾಂಧೀಜಿಯವರಿಗೆ ಒಂದು ಪದ್ಧತಿಯುಂಟು, ಕಸ್ತೂರಿಬಾರವರಿಗೆ ಒಂದು ಬಂಗಾರದ ಹಾರ, ಮಕ್ಕಳಿಗೆ ಒಡವೆಗಳು ಹೀಗೆ ಸಾವಿರಾರು ರೂಪಾಯಿ ಮೌಲ್ಯದ ಉಡುಗೊರೆ ಬಂದಿತ್ತು.

ಸತ್ಕಾರಕೂಟ ಮುಗಿದು ಮನೆಗೆಬಂದ ಗಾಂಧೀಜಿಯವರ ಮನಸ್ಸು ಅವೇಕೊ ಚಂಚಲವಾಗಿತ್ತು ಅವರಿಗೆ ನಿದ್ರೆ ಬಾಂದು. ಏನೋ ಕಳಕೊಂಡವರಂತೆ ಅತ್ತಿತ್ತ ತಿರುಗಿ ರಾತ್ರೆ ಹಗಲು ಮಾಡಿದರು ಮರುದಿನ ಬೆಳಿಗ್ಗೆ ಎದ್ದವರೇ ಮಕ್ಕಳನ್ನು ಹತ್ತಿರಕ್ಕೆ ಕರೆದು, "ನೋಡಿ ಮಕ್ಕಳೇ, ಈ ಬಂಗಾರದ ಒಡವೆಗಳು ನಮ್ಮದಲ್ಲ, ಉಡುಗೊರೆಯಾಗಿ ಬಂದುವು, ಇದನ್ನು ನಾವು ಜನರಿಗೆ ಹಿಂದೆ ಕೊಡಬೇಕು, ಆವರು ಕೊಟ್ಟರೆಂದು ಆದರ ಉಪಯೋಗ ನಾವು ಪಡೆಯುವುದು ಧರ್ಮವಲ್ಲ" ಎಂದು ಭೋಧಿಸಿದಾಕ್ಷಣ ಆ ಮುದ್ದು ಮಕ್ಕಳು ಮರುಮಾತಾಡದೆ ಒಪ್ಪಿದರು

ಕಸ್ತೂರಿ ಬಾ ಒಲ್ಲೆನೆಂದರು

ಆದರೆ ಕಸ್ತೂರಿಬಾ ಎಷ್ಟಾದರೂ ಆಭರಣದ ಕಡೆಗೆ ಆಕರ್ಷಣೆಇರುವ ಮಹಿಳೆಯಲ್ಲವೇ? ಉಡುಗೊರೆಯಾಗಿ ಬಂದ ವಸ್ತ್ರಗಳನ್ನು ಪರಿಶೀಲಿಸಲು ಅವರ ಮನಸ್ಸು ಒಡಂಬಡಲಿಲ್ಲ "ಮನೆಗೆ ಬಂದ ಲಕ್ಷ್ಮಿಯನ್ನು ಹೊರಗೆ ಹಾಕುವುದೇ? ನಾಳೆ ಮಕ್ಕಳಿಗೆ ಮದುವೆಯಾಗಿ ಸೊಸೆಯರು ಮನೆಗೆ ಬರುವಾಗ ಅವರಿಗೆ ನಾವು ಒಡವೆಗಳನ್ನು ಮಾಡಿಸುವುದು ಬೇಡವೇನು? ಚಿಕ್ಕ ಪ್ರಾಯದಲ್ಲೇ ಈ ಮಕ್ಕಳನ್ನು ವೈರಾಗಿಗಳನ್ನಾಗಿ ಮಾಡಲು ಹೊರಟಿರುವಿರಾ?" ಎಂದು ಬಾ ಸಿಡಿದರು.

ಗಾಂಧೀಜಿ ಆಧೀರರಾಗಲಿಲ್ಲ. "ಆಭರಣಗಳಿಗೆ ಆಸೆಪಡುವ ಸೊಸೆಯರು ಈ ಮನೆಗೆ ಬೇಡ. ಒಂದು ವೇಳೆ ಆಭರಣಗಳನ್ನು ಮಾಡಿಸಲೇ ಬೇಕೆಂದರೆ ನಾನಿಲ್ಲವೇ?" ಎಂದರು.

ಆದರೆ ಕಸ್ತೂರಿಬಾರವರು ಮತ್ತೂ ಒಪ್ಪದಾದರು "ನನ್ನ ಹಾರವನ್ನು ನಾನು ಏನಾದರೂ ಮಾಡುತ್ತೇನೆ ಆದರ ಮೇಲೆ ನನಗೆ ಪೂರ್ಣ ಹಕ್ಕಿದೆ' ಎಂದು ಹಠಹಿಡಿದರು.

ಆಗ ಗಾಂಧೀಜಿ ಒಂದು ಕ್ಷಣ ತಡಮಾಡದೆ, "ಈ ಸರನ್ನಿನ್ನ ಸೇವೆಗಾಗಿ ಕೊಟ್ಟುಬಿಡೋ ನನ್ನ ಸೇವೆಗಾಗಿ?" ಎಂದು ಕೇಳಿದರು

ತರ್ಕದಲ್ಲಿ ಸಿಪುಣಾದ ಕಸ್ತೂರಿಬಾವರು, "ನೀವು ಮಾಡಿದರೇನು? ನಾನು ಮಾಡಿದರೇನು? ನಾವಿಬ್ಬರೂ ಒಂದೇ ಅಲ್ಲವೇ?" ಎಂದಾಗ ಗಾಂಧೀಜಿಯವರು, "ಹಾಗಾದರೆ ನೀನು ಮೊದಲು ನಿನ್ನ ಆಭರಣಗಳನ್ನು ಬಿಡಬೇಕಾಗುತ್ತದೆ" ಎಂದರು. ಕಸ್ತೂರಿಬಾರವರು ಸಂತೋಷದಿಂದಲೇ ಒಪ್ಪಿ ತಮಗಿಲ್ಲದ ಆಭರಣಗಳು ನಾವಿಬ್ಬರೂ ಒಂದೇ ಅಲ್ಲವೇನೋ?" ಎಂದಾಗ ಗಾಂಧೀಜಿಯವರಿಗೆ ಕೊಂಚ ನಾಚಿಕೆಯಾದರೂ ಆಭರಣಗಳನ್ನು ಪರಿತ್ಯಜಿಸಲೇಬೇಕೆಂಬ ನಿರ್ಧಾರಕ್ಕೆ ಬಂದಿದ್ದರು. ಗಾಂಧೀಜಿಯವರು ಹತಾಶರಾಗಲಿಲ್ಲ ಬದಲಾಗಿ ಸ್ತ್ರೀಯರು ಸಾರ್ವಜನಿಕ ಸೇವೆಯು ಮುಖ್ಯವಾಗಿ ಆಭರಣಗಳನ್ನು ಮನಸ್ಸಿಗೆ ನಾಟಿಬಂತೆ ಪತ್ನಿಗೆ ತಿಳಿಸಿ ಅವರನ್ನು ಒಡಂಬಡಿಸಿದರು

ಮುಂದಿನದೆಲ್ಲ ಒಡವೆಗಳನ್ನು ಬೇಡವೆನ್ನಲಿಲ್ಲ, ಸಾರ್ವಜನಿಕ ಸೇವಾಕಾರ್ಯಕ್ರಮಗಳಿಗೆ ಆಭರಣವಿಸರ್ಜನೆಯೋಗವಾಗಬೇಕೆಂದು ಉಡುಗೊರೆಯಾಗಿ ಬರೆದಿಟ್ಟರು.

ಆಭರಣಗಳ ಕುರಿತು ಗಾಂಧೀಜಿಯವರ ಉಪದೇಶವೇನು?

ಆಭರಣ ತ್ಯಾಗದ ಕುರಿತು ಗಾಂಧೀಜಿಯವರ ಉಪದೇಶ ಈ ರೀತಿಯಾಗಿದೆ:"ಸ್ತ್ರೀಯರಿಗೆ ನಿಜವಾದ ಆಭರಣಗಳೆಂದರೆ ಆತ್ಮಶೀಲ ಮತ್ತು ಪರಿಶುದ್ಧತೆ. ಲೋಹದ ಕಲ್ಲುಗಳು ಇವುಗಳನ್ನು ಧರಿಸುವುದರಿಂದ ಏನು ತಾನೆ ಪ್ರಯೋಜನ? ಸೀತಾ, ದಮಯಂತಿ, ತಾರಾ, ದ್ರೌಪದಿಯರ ಹೆಸರುಗಳು ಇಂದು ಪವಿತ್ರವಾದ ಪೆಸರಾಗಿರುವುದು ಅವರ ನಿಷ್ಕಳಂಕ ಚಾರಿತ್ರ್ಯದಿಂದ. ಹೊರಗಿನ ಅಲಂಕಾರಕ್ಕಿಂತ ಆಂತರಿಕ ಪರಿಶುದ್ಧತೆಯು ಸೌಂದರ್ಯವನ್ನು ಇನ್ನಷ್ಟು ಹೆಚ್ಚಿಸುವುದು. ಪ್ರಪಂಚದ ಸಮಸ್ಯೆಗಳೆಲ್ಲವೂ ಭಾಗವಹಿಸಿ ಪ್ರಭಾವಿಸಬೇಕೆಂಬ ಮನಸ್ಸಿದ್ದವರಿಗೆ ಸ್ತ್ರೀಯರಿಂದಿರುವ ಒಲಿಸಿಕೊಳ್ಳಲು ಅಭರಣಗಳನ್ನು ತ್ಯಜಿಸಬೇಕು. ಒಡವೆಗಳನ್ನು ಸಿದ ಮಾತ್ರಕ್ಕೆ ಸ್ತ್ರೀಯರಲಾನಬ್ಬಕುಂದು ಬರುವುದೆನ್ನುವುದು ತಪ್ಪು. ಪ್ರಾಯ ನನ್ನ ದೃಷ್ಟಿಯಿಂದ ಆಭರಣಗಳನ್ನು ತ್ಯಾಗ ಮಾಡುವುದರಿಂದ ಇನ್ನಷ್ಟು ಶೋಭಾಯಮಾನವಾಗಿ ಕಾಣಿಕೊಳ್ಳುವಳು."

ಮಹಾತ್ಮಾ ಗಾಂಧೀಜಿಯವರ ಉಪದೇಶಾಮೃತವನ್ನು ಶೀಘ್ರ ಕಾರ್ಯರೂಪಕ್ಕೆ ತರುವುದರ ಕಡೆಗೆ ನಮ್ಮ ಸೋದರಿಯರ ಮನಸ್ಸು ಮಾಡಬೇಕು. ಹಿಂದುಗಳಲ್ಲಿ ಒಡವೆಗಳಿಲ್ಲದಿದ್ದರೆ ಅವಲಕ್ಷಣವೆಂಬ ಮೌಢ್ಯ ಭಾವನೆಯಿದೆ. ಇದು ಸಂಪೂರ್ಣ ಹೋಗುವ ರೀತಿಗೆ ಆಭರಣಗಳ ತ್ಯಾಗ ಸಾರ್ವತ್ರಿಕವಾಗದು. ಆಭರಣಗಳು ಇರಲೇ ಬೇಕೆಂಬ ಕೆಲವೇ ಇರಲಿ, ಮೈಮೇಲೆ ಹೇರಿಕೊಳ್ಳುವುದು ಬೇಡ. ವಜ್ರದ ಬೆಂಡೋಲೆ ಬೇಕು ಎಂಬ ಹಟಬೇಡ ಸೊಸೆಗೆ ತುಂಬಾಒಡವೆ ಮಾಡಿಸಲೇಬೇಕೆಂಬ ಗ್ರಹಬೇಡ. 'ಮದುವೆಯಾಗುವ ಮಗಳಿಗೆ ಒಂದು ಭಂಗಾರದ ದಾನಿನುಗವನ್ನು ಮಾಡಿಸದಿದ್ದರೆ ಮದುವೆ ಬೇಡ' ಎನ್ನುವ ಹಟಬುದ್ಧಿಯನ್ನು ಶಿಕ್ಷಿತ ತರುಣರು ಬಿಡಲಿ. ಭಂಡತನದಲ್ಲಿ ಕೋಟಿಗಟ್ಟಲೆ ಜನ ಹೊಟ್ಟೆಗೆ ಸಾಕಷ್ಟು ಅನ್ನವಿಲ್ಲದೆ ತತ್ತರಿಸುವಾಗ ಲಕ್ಷಗಟ್ಟಲೆ ರೂಪಾಯಿ ಬೆಲೆಯನ್ನು ಆಭರಣಗಳಿಗಾಗಿ ವ್ಯಯಿಸುವುದು ಯಾವ ನ್ಯಾಯ?

—(ಸುವಾಸಿನಿ)

ಡಿ ಎನ್. ಪೂಡಿತರ ಶ್ರೇಷ್ಠವಾದ

ಪೌಡಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಲಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD TRADE MARK

Manufactured by:-

Swadeshi Oushadhi Bhandara (Regd)

KUNJAL P. O. Brahmavar, S. K.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈರ್‌ಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ದ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಅಮೃತಾಂಜನ

ತಲೆನೋವು, ಶಿರೋನೋವು, ಉಳುಕು ಉತ್ತಿಗೆ, ಭುಜ ಹಲ್ಲು ನೋವುಗಳಿಗೂ, ಎದೆನೋವು, ಭಾಯಗಳು, ಒತ್ತುಕೊಳ್ಳುವುದು, ಚೇಳವಿಷಮುಂತಾದವು, ಪಕ್ಷವಾತ, ಮೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ.



REGD

ಹುಳುಕಡ್ಡಿ ಮದ್ದು ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Regd. No. M. 3618

22–12–1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER:
Sri A B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೧೭

NAVAYUGA WEEKLY Post Box No. 22 UDIPI, S. K.

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 17

ಜನವರಿ ತಾ. 26ರಲ್ಲಿ ಸರ್ವ ಸ್ವತಂತ್ರ ಜನತಾ ರಾಜ್ಯವು ಜಾರಿಯಾಗಿ, ನವ ರಾಜ್ಯಭಾರ ಶಾಸನಗಳು ಅಸ್ತಿತ್ವಕ್ಕೆ ಬರಲಿವೆ ಅಂದಿನಿಂದ ಪೂರ್ಣ 'ಭಾರತೀಯ' ವಿುನ್ನೆ, ಭಾರತೀಯನಿರ್ಮಿತ ಕ್ರಮ ವಿಧಾನಗಳೇ ಭಾರತದ್ದಾಗುವವು. ಇದು ವರೆಗೆ ಕಲವಂಶ ಭಾವನೆ, ಧೋರಣೆಗಳಲ್ಲಿ ಮಾತ್ರವಿರುವ ಭಾರತದ 'ತನ್ನತನ'ವು ಅಂದು ಪ್ರತ್ಯಕ್ಷ ರೂಪದಿಂದ ವ್ಯವಹಾರ ರಂಗದಲ್ಲೇ ತೋರಿ ಬರಲಿದೆ. ಸ್ವತಂತ್ರ ಭಾರತದ ಆಕಾರ ನಿರ್ಮಾಣ ಕೆಲಸವು ಆಗ ಪೂರ್ಣಗೊಂಡಂತಾಗುವದು.

ಆದರೆ, ಅಷ್ಟರಿಂದಲೇ ಭಾರತಕ್ಕೆ ಆಗ ಬೇಕಾದದ್ದೆಲ್ಲವೂ ಆದಂತಾಗುವುದೇ? ನಿಜಕ್ಕೂ ಇಲ್ಲ. ಹಿಂದೀ ಜನಸಾಮಾನ್ಯರಲ್ಲಿ ಸ್ವಾಡಳಿತೆಯ ಹೊಣೆಗಾರಿಕೆ, ಜ್ಞಾನ, ವಿಜಾ. ಬುದ್ಧಿ, ಮತ್ತು ಜಾಗೃತಿ ಸಾಕಷ್ಟು ತೋರಿಬಾರದೆ ಇರುವ ಕಾರಣ ಬೇರಾವುದೇ ವಿಧಾನದಲ್ಲಿ ಎಂತಹ ಪ್ರಗತಿಯಾದರೂ ರಾಷ್ಟ್ರದಲ್ಲಿ ಸಾಮೂಹಿಕ ಅಭಿವೃದ್ಧಿ ಮತ್ತು ಪ್ರಗತಿಯಾಗುವುದು ಅಸಾಧ್ಯವೇ ಸರಿ. ಎಂತಹ ಆಡಳಿತ ವ್ಯವಸ್ಥೆ ಬಂದರೂ ಜನತೆಯದರ ಸಹಿ ಕೆಂಗಳನ್ನು ಸರಿಯಾಗಿ ತಿಳಿದುಕೊಳ್ಳುವ ವರೆಗೂ ಜನತೆಯು ಪಾಲಿಗದ್ದು, ಯಾವ ರಾಜಕೀಯವನ್ನೂ ನಾಲಿಗೆಗೆ ತಾಗಿಸದ ವಸ್ತುವಾಗಿಯೇ ಉಳಿದುಕೊಳ್ಳುವುದು. ಇತ್ತ ಸಾರ್ವಜನಿಕರು ಮಂಕಾಗಿಯೇ ಇರುವಾಗ, ಅತ್ತ ಸ್ವರಾಜ್ಯ ಸಂಸ್ಥಾಪನೆ, ನವರಾಜ್ಯ ಶಾಸನ ತಯಾರಿಗಳು ಎಷ್ಟು ಜಯಶೀಲವಾಗಿ ನಡೆದಿದ್ದರೂ, ಅವು ಮನೆಯವರೆಲ್ಲಾ ಸದ್ಯವೊಗ್ಗಿದ ರೋಗಿಗಳಾಗಿ ಮಂಚ ಹಿಡಿದಿರುವಾಗ ಪಾಕಗೃಹದಲ್ಲಿ ಭಕ್ಷ್ಯ ಭೋಜ್ಯಗಳ ತಯಾರಿ ನಡೆದಂತೆಯೇ ಸರಿ!

ಜನತಾ ಬುದ್ಧಿ ಪಕ್ವಗೊಳ್ಳುವ ವರೆಗೂ ಜನತಾ ರಾಜ್ಯ ಫಲಬಿಡುವಂತಿಲ್ಲ!

ಸರ್ವರ ಅಪೇಕ್ಷೆಯಂತೆ, ದೇಶದಲ್ಲಿದ್ದ ಪರಾವಸ್ಯ ತೊಲಗಿ ಸ್ವರಾಜ್ಯ ಬಂತು. ಆದರೆ ಆ ಸ್ವರಾಜ್ಯದಿಂದ ಏನೇನೆಲ್ಲಾ ಆಗಬೇಕೆಂದು ಬಯಸಲಾಗಿದ್ದಿತೋ ಅವೆಲ್ಲವೂ ಆಗಿರುವವೆ? "ಸ್ವರಾಜ್ಯವೆಂದರೆ ಬಿಳಿ ಜನರ ಕೈಯಲ್ಲಿರುವ ಅಧಿಕಾರವನ್ನು ನಮ್ಮ ಪೈಕಿ ಕಲವಂ ಕೈಗೆ ಎಳೆದುಕೊಳ್ಳುವುದಷ್ಟೇ ಅಲ್ಲ—ಜನ ಸಾಮಾನ್ಯರ ಕೈಗದನ್ನು ಕೊಡುವುದು. ಜನ ಸಾಮಾನ್ಯರ ಸ್ಥಿತಿ ಸುಧಾರಿಸುವುದು!" ಎಂದು ಆ ಕಾಲದಲ್ಲಿ ಹೇಳುತ್ತಾ ಬಂದಿದ್ದಂತೆ ಈಗ ಆಗಿರುವುದೇ? ಇಲ್ಲ ಇದುವರೆಗಿನ ನಮ್ಮ "ಸ್ವರಾಜ್ಯ"ವೆಂದರೆ ಬಿಳಿಯರ ಸ್ಥಾನಗಳಲ್ಲಿ ನಮ್ಮವರೇ ಆದ ಕಲವರನ್ನು ಏರಿಸಿಕೊಂಡಿರುವುದು ಮಾತ್ರ.

ಈಗಿನ ಕೆಲಸ-ಜನತಾ ತರಬೇತಿ

ಹೀಗೆ ಅಧಿಕಾರ ಸ್ಥಾನಗಳಿಗೇರಿರುವ ನಮ್ಮವರೆಲ್ಲರಲ್ಲಿಯೂ ಈ ಸ್ವರಾಜ್ಯಾಧಿಕಾರ ಸ್ಥಾನಗಳನ್ನು ಸಾರ್ಥಕಗೊಳಿಸುವ ಯೋಗ್ಯತೆಗಳಿರುತ್ತಿದ್ದರೆ, ನಾವೀ ದಿನ ಇಷ್ಟು ಹತಭಾಗಿಗಳಾಗಬೇಕೆಂದಿರಲಿಲ್ಲ. ಆದರೆ ಆ ಪೈಕಿ ಹೆಚ್ಚಿನವರಲ್ಲಿ. ಆವರಾರ ಪರವಾಗಿ ಅಧಿಕಾರ ನಿರ್ವಹಿಸುತ್ತಿರುವ ರೋ ಆ ಜನಸಾಮಾನ್ಯರಲ್ಲಿರುವ ಸಂಕುಚಿತ ಸ್ವಭಾವಗಳೇ ತುಂಬಿ ಕೊಂಡಿವೆ. ಸ್ವತಃ ಅಯೋಗ್ಯರಾಗಿರುವವರಿಗೆ ಎಂತಹ ಅಧಿಕಾರ ದೊರೆತರೂ ಅದೂ ಅಯೋಗ್ಯ ವಟ್ಟಕ್ಕೆನೇ ಇಳಿಜಾರ ಹತ್ತುವದೆಂಬುದಕ್ಕೆ ನಮ್ಮ ಇಂದಿನ ಸ್ಥಿತಿಜನ್ಯೇ ನಿದರ್ಶನವಾಗಿ ಕೆಗೆದುಕೊಳ್ಳಬಹುದು–ಇದೀಗ ಸೃದ್ಯಾವಕ ಪರಿಸ್ಥಿತಿ!

ಪ್ರತಿಯೊಂದು ಪ್ರಾಂತೀಕ ಸರಕಾರದ ಕಡೆಗೂ ಕ್ರಮೇಣ ನೋಟ ಬೀರುತ್ತಾ ಹೋಗೋಣ. ಒಳ ಜಗಳ, ಪಕ್ಷಪಾತ, ದುರಾಡಳಿತೆ, ದುರ್ಬಲಾಡಳಿತೆಗಳ ದೂರುತಾಗಿರದ ಆಡಳಿತೆಯೊಂದು ಕಂಡು ಬರುವುದಿಲ್ಲ. ಸಾರ್ವಜನಿಕರ ನಿತ್ಯಜೀವನದಲ್ಲಿ ಅಧಿಕಾರ ಚಾಲುಮಾಡುವ ಸಾಕಾರ ವರ್ಗಗಳ ಕಡೆಗೆ ನೋಡಿದರೆ, ಅಲ್ಲಿ ಮೊದಲಿಗಿಂತ ಹೆಚ್ಚಿನ ಸಡಿಲು ವರ್ತನೆ, ಸ್ವೇಚ್ಛಾಚಾರ, ಲಂಚ ಸಂಚುಗಳ ದರ್ಬಾರುಗಳು ಬೇಕಾದಷ್ಟು ಕಂಡು ಬರುತ್ತಿವೆ ಸಾರ್ವಜನಿಕ ವ್ಯವಹಾರ ವಂಗದತ್ತ ಕಾಣ-ವಾಗ ಕಳ್ಳ ವ್ಯಾಪಾರ ಮತ್ತು ಕಾನೂನು ವಂಚನೆಗಳು ಸ್ವಾಭಾವಿಕ ವರ್ತನೆಗಳನ್ನಿಸು-ಹ್ಹು ಸರ್ವ ಸಾಮಾನ್ಯ ಹಾಗೂ ಸರ್ವಮಾನ್ಯವನ್ನಿಸಿವೆ. ಇದು ನಮ್ಮ ಪ್ರಗತಿಯೋ ಅಧೋಗತಿಯೊ?

ಇಂತಹ ಅನನತೀನ್ನು ಕಾರಣ? ಒಂದನೇ ಕಾರಣ ಕಾಲಸ್ಥಿತಿ; ಎರಡನೇ ಕಾರಣ. ಅಧಿಕಾರ ನಿರ್ವಹಿಸುತ್ತಿರುವವರಲ್ಲಿ ಮತ್ತು ಜನ ಮುಖ್ಯಸ್ಥರಲ್ಲಿರುವ ಸ್ವಾರ್ಥ, ಸಂಕುಚಿತ ಸ್ವಭಾವ, ಅಜ್ಞಾನ, ಅನನುಭವ, ದೌರ್ಬಲ್ಯಗಳು; ಮೂರನೇ ಕಾರಣ ಈಗ ಇರುವುದು ಸ್ವಾಡಳಿತೆಯೆಂಬುದರಿಂದ ಹುಟ್ಟಿರುವ ಸಲುಗೆ ಮತ್ತು ತಾತ್ಸಾರ; ನಾಲ್ಕನೆಯ, ಹಾಗೂ ಇವೆಲ್ಲಕ್ಕೂ ಮೂಲ ಕಾರಣ ಜನಸಾಮಾನ್ಯರ ಶೋಚನೀಯ ಸ್ಥಿತಿಮತಿ.

ಜನತೆ ಜಡ್ಡಾಗಿದೆ ಮತ್ತು ಜಾಗೃತಿಗೊಂಡಿದೆ, ಎಂಬೊಂದು ಸಂಗತಿ ವೆಂದಟ್ಟಾಗುತಿದ್ದರೆ ಅಧಿಕಾರಿಗಳು, ನೌಕರರು ಹಾಗೂ ಜನ ಮುಖಂಡರು ಸ್ವಾರ್ಥ, ವಂಚನೆಗಳನ್ನು ಮಾಡಲು ಹೆದರುತಿದ್ದರು; ತಪ್ಪುಗಳಾಗದಂತೆ ನೋಡಿಕೊಳ್ಳುತಿದ್ದರು. ಆದರಂದು, ಗೂನುಬೆನ್ನಿನವನ ಮಾತ್ರಧರಿಸುವವನೂ ಬೆನ್ನು ಬಗ್ಗಿಸಿಕೊಳ್ಳಬೇಕೆಂಬ ಗಾದೆಯಂತೆ, ಸಣ್ಣ ಮನಸ್ಸಿನ ಜನತೆಯು ಅಧಿಕಾರ ಪ್ರತಿನಿಧ್ಯ ವಹಿಸಿರುವವರೂ ಸಂಕುಚಿತ ಧೋರಣೆ ವರ್ತನೆಗಳನ್ನೇ ಸ್ಪಷ್ಟವಾಗಿ ಪ್ರದರ್ಶಿಸುತಿದ್ದಾರೆ.

ಬ್ರಿಟಿಷ್ ಆಡಳಿತೆಯಿದ್ದಾಗ, ಈ ಅಧಿಕಾರೀವರ್ಗ ಮತ್ತು ಜನತೆಯು ಶ್ರೀಮಂತ ಭಂಗ ಮುಖ್ಯವಾಗಿ ಬ್ರಿಟಿಷ್ ಮರ್ಜಿಯ ಕಡೆಗೇನೇ ಲಕ್ಷ್ಯಕೊಡಬೇಕಾಗಿದ್ದಿತು. ಏನಿಲ್ಲಿಂದರೂ ಬ್ರಿಟಿಷ್ ವಿಧಾನಗಳಲ್ಲಿ ಪ್ರಪಂಚವನ್ನೇ ಆಳಿದ ಅನುಭವ ಮತ್ತು ಶಿಕ್ಷಣ ಘನತೆಗಳಿದ್ದುದರಿಂದ ಆ ಮೇಲ್ಪಂಗ್ತಿಯನ್ನನುಸರಿಸಿದ್ದ ಇಚ್ಛೆಯವರೂ ವಿಶೇಷ ಜಾಗರೂಕತೆ ಮತ್ತು ಬಿಗುತನ ವಹಿಸಿದ್ದರು ಅಂತಹ ಬ್ರಿಟಿಷ್ ಹೊಣೆಗಾರಿಕೆಯನ್ನು ಸ್ಥಾನಕ್ಕೆ ಹಿಂದೀ ಜನತಾ ಹೊಣೆಗಾರಿಕೆ ಬಂದಾಗ್ಗ ಭಾರತೀಯ ಜನಸಾಮಾನ್ಯರ ಜಡಬುದ್ಧಿ ಗನುಗುಣವಾದ ಅಸಡ್ಡೆ ಮತ್ತು ಲಗುತ್ವವೇ ಇಂದು ಕಂಡುಬರುತ್ತಿದೆ. ಅಂದಮೇಲೆ ಜನಜಾಗ್ರತಿಯಂಟಾಗದೆ ಜನತಾರಾಜ್ಯದ ಪ್ರಗತಿ ಅಸಾಧ್ಯವೆಂಬುದು ಸ್ಪಷ್ಟ.

ರಷ್ಯಾಲ್ಲಿ ಭಾರತದ ವಿಚ್ಛಿಗೂ ಇದೇ ಮಾತು- ಇನ್ನಷ್ಟು ಖಚಿತವಾಗಿ ಇದೇ ಮಾತು. 1947ನೇ ಆಗೋಸ್ತು 15 ರಿಂದ 1950ನೇ ಜನವರಿ 26ರ ವರೆಗಿನ 'ವಸಾಹತು ಭಾರತ'ವು ಸ್ವಾಧಿಕಾರಿಯಾದರೂ ಬ್ರಿಟಿಷ್ ನಿರ್ಮಿತ ಆಡಳಿತ ಯಂತ್ರ ವಿಧಾನಗಳೇ ಇಚ್ಛೆಯ ಆಡಳಿತ ನಿರ್ವಹಿಸುವ ಆ ಮೇಲ್ಪಂಗ್ತಿಯವನು ಕೂಡಾ ವೈಧ ಮತದಾರರಿಂದ ನೇರಾಗಿ ಆರಿಸಲ್ಪಟ್ಟವರಿಂದ ಜನತಾ ವಿಶ್ವಾಸ, ಪಕ್ಷ

ಉಡುಪಿ ಪರ್ಯಾಯ ವಸ್ತು ಪ್ರದರ್ಶನ, 1950.

ತಾರೀಕು 1–1–1950ರಿಂದ 22–1–1950ರ ವರೆಗೆ ಉಡುಪಿಯಲ್ಲಿ ಕೈಗಾರಿಕೆ "ವಸ್ತು ಪ್ರದರ್ಶನ" ನಡೆಯಲಿದೆ. ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುವರ್ಣ ಸಂಧಿ. ಕೆಲವೇ ಸ್ಥಾಲುಗಳು ಉಳಿದಿವೆ

ಈ ಕುರಿತು ಯೋಗ್ಯ "ಸುವರ್ಣ ಸಂಜಿಕೆ"ಯೊಂದನ್ನು ಪ್ರಕಾಶಗೊಳಿಸಲಿದೆ. ಅದರಲ್ಲಿ ಕೊಡುವ ಜಾಹೀರಾತು ಮಹತ್ವಯೋಜನಕಾರಿಯಾಗುವುದು

ಪ್ರದರ್ಶನದ ಸಂಪೂರ್ಣ ಉಳಿತಾಯವನ್ನು
"ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ"ಗೆ
ದಾನವಾಗಿ ಕೊಡಲಾಗುವುದು.

ವಿವರಕ್ಕೆ ಇಂದೇ ಬರೆಯಿರಿ

Inserted by:-
The Canara Industrial & Banking Syndicate Ltd.
UDIPI.

ಕಾರ್ಯನಿರ್ವಹಕ
ಉಡುಪಿ ಪರ್ಯಾಯ
ವಸ್ತು ಪ್ರದರ್ಶನ 1950
ಉಡುಪಿ.

ರೆಂಬ ತಂದಾಜನ್ನಾಧರಿಸಿಯೇ ಅಲ್ಲಿರು ವವರು ಈ ನಡುಗಾಲಾವಧಿಯಲ್ಲಿ ಅಂತ ಹ ವಿಧಾನಗಳಿಂದ ಮತ್ತಿಂತಹ ಜನರಿಂದ ಆಗ ಬೇಕಾದ ಕೆಲವು ಕೆಲಸಗಳಾಗಿವೆ ಯಾದರೆ, 'ಬ್ರಿಟಿಷ್ ಅಂಶ' ಇಲ್ಲಿ ರುವುದೂ ಒಂದು ಕಾರಣ. ನಾಳೆಯ 'ರಿಪಬ್ಲಿಕ್ ಭಾರತ'ದಲ್ಲಿ ಈ ಪರಕೀ ಯಾಂಶವೂ ತೊಲಗಿ ಪೂರ್ಣ 'ಭಾರತೀ ಯ' ವಿಧಾನಗಳೇ ಮೂಡುವಾಗ ಈ ಮು ಥ್ಯಾಧಿಯ ಜನ ಭವದಿಂದ ಹೇಗಾವು ಬಾದರೆ ಮೇಲ್ಕಂಡ ಅಸಡ್ಡೆ ಮತ್ತು ಲಗು ವರ್ತನೆಗಳೇ ಮತ್ತಷ್ಟು ಬಲಗೊಳ್ಳುವ ಅಪಾಯ ವಿದೆ.

ಆದ್ದರಿಂದ ನಿನ್ನೆ ಸ್ವರಾಜ್ಯ ಬಂದೊಡ ನೆ, ಆ ದೆಸೆಯಿಂದಲೇ ಹೇಗೆ ಪೂರ್ಣತೆ ಬರಲಿಲ್ಲವೋ ಹಾಗೆಯೇ ನಾಳೆ ರಿಪಬ್ಲಿಕ್ ಭಾರತದಲ್ಲಾದರೂ ಆದೊಂದೇ ಕಾರಣ ದಿಂದ ಆಗಬೇಕಾದುದುದೆಲ್ಲವೂ ಆಗುವಂ ತಿಲ್ಲ. ಸ್ವರಾಜ್ಯಾನಂತರದಲ್ಲಿಯ ಲೋಪ ದೋಷಗಳಿಗೆ ಕಾರಣವಾಗಿರುವ ಹಿಂದೀ ಜನಸಾಮಾನ್ಯರ ದುಸ್ಥಿತಿ, ದುರ್ಮತಿ ಗಳು ಹೀಗೆಯೇ ಉಳಿದುಕೊಂಡಲ್ಲಿ ಅವು ರಿಪಬ್ಲಿಕ್ ಭಾರತದ ಆವನತಿಗೇನೇ ಹೇತುವಾಗುವ ಅಪಾಯಗಳಾಗಲಿವೆ.

ಆದ್ದರಿಂದ ಜನತಾರಾಜ್ಯ ಭಾರತದ ಘಟನಾ ತಯಾರಿ ಮತ್ತು ಉದ್ಘಾಟನೆಗಳ ಗಾಗಿ ಆನಂದ, ಹೆಗ್ಗಳಿಕೆಪಡುವ ಬದಲಿಗೆ ಆ ಜನತಾರಾಜ್ಯವು ಯಾರ ಹೆಗಲ ಭಾರ ವಾಗುವುದೋ ಆ ಜನತೆಯ ಹೆಗಲು ಅದಕ್ಕನುಗುಣವಾಗುವಷ್ಟು ಇನ್ನೂ ಬಲ ಗೊಂಡಿಲ್ಲವಲ್ಲಾ, ಎಂಬ ಆತುರಾಸಕ್ತಿ ವಹಿಸಬೇಕು.

ಈ ಸಂದರ್ಭದಲ್ಲಿ ಎಲ್ಲವನ್ನೂ ತಿಳಿದಿರ ಬೇಕಾದ ಜನತೆಗೀಗ ಎಷ್ಟು ಮತ್ತು ಏನು ತಿಳಿದಿದೆ?

ಆಸ್ಪ ವಸ್ತ್ರ ಮತ್ತು ಜೀವನಾವಶ್ಯ ಸಾ ಮಾಗ್ರಿಗಳ ಅಧಾವವಿದೆ– ಕರತೆರಿಗೆಗಳ ಭಾರ ಬಿದ್ದಿದೆ– ಸ್ವರಾಜ್ಯವು ಸಾಕಷ್ಟು ಸಾರ್ಥಕವಾಗಿಲ್ಲ— ಎಂಬುದು ನಿತ್ಯಾನು ಭವದಿಂದ ತಿಳಿದಿದೆ. ಆದರೆ ಇದಕ್ಕಿರುವ ಕಾರಣಗಳಾವುವೆಂಬುದು ಸರಿಯಾಗಿ ತಿಳಿ ದಿಲ್ಲ; ಇವೆಲ್ಲವುಗಳ ವಟ್ಟಗೂ ತಪ್ಪಭಿ ಪ್ರಾಯಗಳೇ ಹೆಚ್ಚಾಗಿ ಹೆರಡಿಕೊಂಡಿವೆ.

ಕಾಂಗ್ರೆಸ್, ಸೋಷಿಯಲಿಸ್ಟ್, ಕಮ್ಯೂನಿಸ್ಟ್, ಹಿಂದು ಮಹಾಸಭಾ, ಆರೆಸ್ಸೆಸ್ ನಂತಹ ಪಕ್ಷಪಂಗ ಡಗಳಿವೆ ಎಂದು ತಿಳಿದಿದೆ. ಆದರೆ ಇವು ಗಳ ಧ್ಯೇಯ, ಧೋರಣೆ, ಕಾರ್ಯಕ್ರಮ ಗಳೇನು–ಗುರಿಯಾವುದು, ಗಮನ ಜೇಗಿ ಯಾವುದು ಮೇಲಾದರೆ ರಾಷ್ಟ್ರದಲ್ಲೆಂತಹ ವ್ಯವಸ್ಥೆ ಬಂದೀತು, ಎಂಬ ಕುರಿತು ಸೂಕ್ಷ್ಮ ಪರಿಚಯ ಜನತೆಗಿಲ್ಲ.

ಎಲ್ಲಕ್ಕೆಂತ ಮುಂದುಗಿ ಜನತಾ ರಾಜ್ಯವೆಂದರೇನು–ತಮಗೆ ಬಂದಿರುವ 'ವೋಟಿ'ನ ಹಕ್ಕು ಮತ್ತದರ ಹಿರಿಣಾವ ಧಿ–ಎಂಬ ಕುರಿತು ಸಂಯಾದ ಜ್ಞಾನ ವೇ ಜನತೆಗಿಲ್ಲ.

ಪ್ರಪಂಚವನ್ನಳಿ ಅನುಭವವಿದ್ದ ಬ್ರಿ ಟಿಷರ ಯೋಗ್ಯತೆ ಕೂಡಾ ಕಲವು ಸಂ ದರ್ಭಗಳಲ್ಲಿ ಕಡಿಮೆಯಾಯಿತೆಂದು ತೋ ರಿದ್ದ ಅಧಿಕಾರ ನಿರ್ವಹಣದಂತಹ ಅಗಾ ಧ ಕಾರ್ಯಭಾರವನ್ನು ಹೊರಬೇಕಾಗಿ ರುವ ಭಾರತೀಯ ಜನಸಾಮಾನ್ಯರು ಪಕ್ಷ ಬುದ್ಧಿಯಲ್ಲಿದ್ದಾರೆ ಈ ತರಹದ ಸ್ವಾ ಧರಿಸಿ ರಿಪಬ್ಲಿಕ್ ಕಟ್ಟಡವನ್ನು ಭದ್ರ ಪಡಿಸಲು ಪ್ರಯತ್ನ ರೂ ಹೇಗೆ? ಪಾತ್ರ ಮೇಲೇಳುತ್ತಾ ಡೇ ಗುವುದಾದರೂ ಹೇಗೆ? ಈ ಕುರಿತು ಸ್ವಲ್ಪ ಅಗತ್ಯವಾಗಿ, ಹಾಗೂ ಮುಖ್ಯವಾಗಿ ಆಗ ಬೇಕಾದ ಕೆಲಸವೆಂದರೆ ಜನತಾ ವಾಸ್ತವ ರನ್ನು ತರಬೇತಿಗೊಳಿಸುವುದೊಂದೇ

ಈ ಜನತಾ ಶಿಕ್ಷಣಕ್ಕಾಗಿ 'ಪ್ರೌಢ ಮತದಾರ ತರಬೇತಿ ಕೇಂದ್ರ'ಗಳು ಸರ್ವಜಿಗಳಲ್ಲೂ ಸ್ಥಾಪನೆಯಾಗಿ ಕನಿಷ್ಟ ಪಕ್ಷ ದಶಂಬರ್ 26ರಿಂದ ಜನವರಿ 25 ರವರೆಗಿನ ಒಂದು ತಿಂಗಳ ತರಬೇತಿಯಾ ದರೂ ಎಲ್ಲಾ ಮತದಾರರಿಗೂ ದೊರೆ ಯುವ ವ್ಯವಸ್ಥೆ ಬಾಜೇಕಿದ್ದಿತು ಇಂತ ಹ ಶಿಕ್ಷಣವ್ಯವಸಾಯವಾದೇ ಪಕ್ಷ ಬಂಗಡದ ಪರಿಣಾಮ ದೊರಕದೆ, ಕೇವಲ ಜ್ಞಾನ, ಯೋಗ್ಯತೆ ಸಂಪಾದನೆಗಾಗಿ ಮಾತ್ರ ನಡೆ ಯುವಂತೆ ನಿಷ್ಪಕ್ಷಪಾತಿ ತಜ್ಞರ ಮೇಲ್ವಿ ಚಾರಣೆಯಲ್ಲೇ 'ತರಬೇತಿ ಕೇಂದ್ರ'ಗಳ ನ್ನು ನಡೆಸಬಹುದಿದ್ದಿತು. ಅದಕ್ಕಾಗಿ ನವ ಘಟನೆಯಲ್ಲಿಯೇ, ನವಂಬರ್ 26 ರಿಂದ ಜನವರಿ 25ರ ವರೆಗೆ ಬಾಳುವ ತಾ ತ್ಕಾಲಿಕ ಅಲಮೊಂದನ್ನು ಸೇರಿಸಿಕೊಳ್ಳ ಬಹುದಿತ್ತು. ಆದರೆ ನವ್ಯ ನಾಯಕರಿಗೆ ಹಾಗೂ ಪ್ರತಿನಿಧಿಗಳಿಗೆ ಘಟನೆಯ ಒಕ್ಕ ಣೆ ತಯಾರಿಯೊಂದೇ ಮುಖ್ಯವನ್ನಿಸಿತು, ಹೊರತು ಮತದಾರರ ಬುದ್ಧಿಪಿದ್ಧತೆ ಯು ಅಗತ್ಯವಾಗಿ ತೋರಲಿಲ್ಲ.

ಭಾವೀ ಜನಾಂಗವಿರುವ ಮಕ್ಕಳ ಶಿ ಕ್ಷಣವು ರಾಷ್ಟ್ರದ ಪ್ರಾಮುಖ್ಯ ವ್ಯವಸ್ಥೆಗ ಳಲ್ಲೊಂದಾಗಿದೆ; ಪ್ರಾಯಸ್ಥರಿಗೂ ಓದು ಬರಹ ಕಲಿಸುವ ಪ್ರೌಢ ಶಿಕ್ಷಣ ವ್ಯವಸ್ಥೆ ಗಳನ್ನೆ, ಸ್ಕೌಟು ಲೆಬರ್ಕ್ ಟ್ರೈನಿಂಗ್ ಶಾಲೆಗಳಿಗಾಗಿ ವಿಭಾಗಗಳಲ್ಲೂ ಪ್ರಧಮಾ ವಧಿ ಪ್ರಯೋಗ ಶಿಕ್ಷಣ–ಮುಂತಾದ ವಿವಿಧ ರೀತಿಯ ಶಿಕ್ಷಣಾಳ ವ್ಯವಸ್ಥೆ ಗಳನ್ನೆ ನಾಳೆ ಜಾರಿಗೆ ಬರಲಿರುವ ಜನ ತಾ ರಾಜ್ಯಭಾರ ನಿರ್ವಹಣಕ್ಕಾಗಿ ಪ್ರೌಢ ಮತದಾರರಿಗೆ ತರಬೇತಿ ಕೇಂದ್ರಗಳಲ್ಲಾ ಯಾದರೂ ಅಲ್ಲಲ್ಲಿಗೆಳೆಸ್ಟೆ– ಈ ಪ್ರೌಢ ಅಭ್ಯರ್ಥಿಗಳಾಗಲಿ ಹೊಸ್ಸಾಗಿ– ಜನಕ್ಕೆ ಏನು ಕೆಪ್ಪಗಾಜ್ಞಿ ಇಲ್ಲವೆ?

ಇನ್ನು, ಜನತಾಪ್ರತಿನಿಧಿಗಳಾಗಿ ಶಾಸ ನ ಸಭೆಗಳಾರಿಸಲ್ಪಡವ ಸದಸ್ಯರು, ಮತ್ತು ಅವರಿಂದಲೇ ಮಂತ್ರಿಗಳಾಗಿ ಆ ರಿಸಲ್ಪಡುವವರ ಆಯೋಗ್ಯತೆಗಳು ಹಲ ವು ವಿಧಾನಗಳಿಂದ ಸಲವು ಬಾರಿ ಮುಂದ ಟ್ಟಾಗಿವೆ; ಇಂಥವರು ಒಂದು ಮಟ್ಟಿನ ತರಬೇತಿ ಮತ್ತು ಆ ಸಂಬಂಧದ ಶಿಕ್ಷಣ ರನು ಪಡೆದವರೇ ಇರಬೇಕೆಂಬ ನಿಯ ಮವಿರಬೇಕಾದುದಗತ್ಯವನ್ನಿಸುವುದಿಲ್ಲವೆ? ಅಸಹಾಯಕ, ಅಜ್ಞಾನಿಗಳಿರುವ ಮತದಾರರ ನಡುವೆ, ಅವರ ದು ಸ್ಥಿತಿಗನುಗುಣವಾದ ದುರುಪಾಯಗಳಿಂ ದ ವರ್ಚಸ್ಸು ಗಳಿಸಿರುವ ಬಲ ದಿಂದಲೇ ಎಂತಹ ಅಶುಬ್ಧನಾದರೂ ಶಾಸನ ಸಭೆಗಳಿಗಾರಿಸಲ್ಪಡುವ ಬದಲಿಗೆ, ಶಾಸನ ಸಭೆಗೆ ಸಂಬಂಧಿಸಿದ ಕಾರ್ಯವಿಧಾನಗಳ ವಿತಾನುಭವವಾದರೂ ಇರುವವನೇ ಆರಿಸಲ್ಪಡಬೇಕೆಂಬ ನಿಯಂತ್ರಣವಾದ ರೂ ಇರುವುದಗತ್ಯವಲ್ಲವೆ? ಇಂತಹ ಯಾ ವ ಸಿದ್ಧತೆಯಾದರೂ ಜನತಾರಂಗದಲ್ಲಿ ಯಾಕಿಲ್ಲ? ಇನ್ನಾದರೂ ಈ ವಿಧಾನಗಳೇ ಕೆ ಬರಬಾರದು?

1950ನೇ ಜನವರಿ 26ರಲ್ಲಿ 'ರಿಪ ಬ್ಲಿಕ್ ಭಾರತ'ದ ನವಘಟನೆ ಜಾರಿಗೆ ಬಂದರೂ ಆ ಘಟನೆಯನ್ವಯ ಹೊಸ ಚುನಾವಣೆಗಳಾಗುವುದು ಪ್ರಾಯಶಃ 1950ರ ಅಂತ್ಯಭಾಗ, ಅಥವಾ 1951 ರ ಆದಿಭಾಗದಲ್ಲೇ. ಮತದಾರರು ತ ಮ್ಮ ಹೊಣೆಗಾರಿಕೆಯನ್ನು ಪ್ರತ್ಯಕ್ಷ ನಿರ್ವ ಹಿಸುವುದಕ್ಕೂ, ಜನತಾ ಪ್ರತಿನಿಧಿಗಳು ಹೊಸತಾಗಿ ಆರಿಸಲ್ಪಡುವುದಕ್ಕೂ ಇಷ್ಟು ಅವಧಿಯುಳಿದಿದೆ ಜನವರಿ 26ರಲ್ಲಿ ಅ ಸ್ತಿತ್ವಕ್ಕೆ ಬರುವ 'ರಿಪಬ್ಲಿಕ್ ಭಾರತ'ದ ಅಧ್ಯಕ್ಷರಾದರೂ 'ಪ್ರೌಢ ಮತದಾರ ತರ ಬೇತಿ' ವ್ಯವಸ್ಥೆಗಳನ್ನು ಜಾರಿಗೆ ತರುವ

ದಿ ಭಾರತ ಇನ್ಶೂರೆನ್ಸ್ ಕೊ. ಲಿಮಿಟೆಡ್.

ನಸೌಂಪೇರೋಡು, ಮದ್ರಾಸು.

ಸುಹನೀಯರೆ,

ವಿಷಯ. ಮೃತ ಶ್ರೀ ಎಸ್ ಜೊರಿಸ್ವಾಮಿಯವರ
ನಂಬ್ರ 82471 ಮತ್ತು 147845ನೆ ಪಾಲಿಸಿಗಳ
ಕ್ಲೈಮಿನ ವಿಚಾರದಲ್ಲಿ—

ಮೇಲೆ ಸೂಚಿಸಿದ ಎರಡು ಪಾಲಿಸಿಗಳ ಕ್ಲೈಮಿನ ವಾವತಿ ಬಾಬ್ತು ರೂಪಾಯಿ 25,988-2-0ರ ಚೆಕ್ಕನ್ನು ಲಗ್ಗೀರಿಸಿದ ನಿಮ್ಮ ತಾ. 10-10-1949ರ ನಂಬ್ರ 33065ನೆ ಪತ್ರಕ್ಕಾಗಿ ನನ್ನ ಧನ್ಯವಾದಗಳು

ನಿಮ್ಮ ಪ್ರಧಾನ ಕಛೇರಿಯು ದೆಹಲಿ ನಗರದಲ್ಲಿದ್ದು ಸಂಪ್ರದಾಯಬದ್ಧ ಪತ್ರ ವ್ಯವಹಾರಾದಿಗಳು ನಡೆಯತಕ್ಕದ್ದಿರುವುದರಿಂದಲೂ ಕ್ಲೈಮಿನ ಏಪಜು ಜೊಡ್ಡ ಸಂಖ್ಯೆಯಲ್ಲಿರುವುದರಿಂದಲೂ ಹಣ ನನಗೆ ಸಿಗುವಾಗ ತುಸು ವಿಳಂಬ ವಾಗಬಹುದೆಂದು ನಾನು ನಿರೀಕ್ಷಿಸಿದ್ದೆ ಆದರೆ ನೀವು ಕಾಲವಿಳಂಬನಿಲ್ಲದೆ ಪ್ರಯತ್ನದಲ್ಲೇ ಕ್ಲೈಮಿನ ಹಣವನ್ನು ಸಂದಾಯ ಮಾಡಿದುದು ಮೆಚ್ಚತಕ್ಕುದಾ ಗಿದೆ ನಿಮ್ಮ ಸಮಯಕ್ಲಪ್ತತೆ, ಸಹೃದಯತೆ, ಇವು ವಿಮಾ ಇಳಿಸುವವರಿಂದ ಕೊಂಡಾಡತಕ್ಕುದಾಗಿದ್ದು, ಪೂಲಿಸಿದಾರರಿಗೆ ಯೋಗ್ಯ ಪಾಮಲೆಯಾಗಿದೆ

45, ಬರ್ಜ್‌ಲುಲ್ಲಾ ರೋಡು,
ತ್ಯಾಗರಾಯನಗರ
ಮದ್ರಾಸು 11-10-'49

ನಿಮ್ಮ ನಂಬುಗೆ ಪಾತ್ರಳಾದ
(ಸಹಿ) ಶ್ರೀಮತಿ ಜಯಲಕ್ಷ್ಮಿ.

ಋತುಸ್ರಾವ ನಿಂತಿತೆ

'ಕುಮಾರಿ' ಬಿಲ್ಲೆಗಳನು ಉಪ
ಗಿಸಿದರೆ ಹದಿವಸ್ಸು ಋತುಸ್ರಾವವ
ದು ಹತೋಟಿಗೆ ಬರುವುದು, ಈ
ಸೇವನೆಯಿಂದ ತೀವ್ರ ಗುಣಹೊ
ಹುದು, ಯಾವ ಬಾಧಕವೂ ಯಿಲ್ಲ.
ರಾರು ಮುಂದಿಗೆ ಖಾತ್ರಿ ಗುಣವ
ಬೆಲೆ; ರೂ 3, ಸ್ಪೆಶ್ಯಲ್ ರ
ಅಧಿಕಾಧಿಕ ಸ್ಪೆಶಲ್ ರೂ. 8-[
ಹನ್ನೆರಡಾಜೆ ಪ್ರತ್ಯೇಕ.

Mrs. P. DEVEE, F. DS. (
Tolygunge CALCUTTA

ಭಾರತ-ಪಾಕಿಸ್ತಾನ್

ಸ್ಥಳದ ವಾರ ಪ್ರಸ್ತಾಪಿಸಿದ್ದಂತೆ, ಕಾಶ್ಮೀರದ ಸಂಬಂಧವಾಗಿ ಭಾರತ-ಪಾಕಿಸ್ತಾನಗಳೊಳಗಿನ ವಿವಾದವನ್ನು ಶಾಂತಿಯುತವಾಗಿ ಬಗೆಹರಿಸಲು ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡಿದ್ದು, ದಿಢೀರ್ನವಧಿಯಿಂದ ಕೃತ್ಯಕ್ಕೆ ಬಂದಿದ್ದ ಕಾಶ್ಮೀರ ಕಮಿಶನ್ನಿನ ವಂದಿಯು ಈಗ ಭದ್ರತಾ ಕೌನ್ಸಿಲಿನಲ್ಲಿ ಚರ್ಚೆಗೊಳಗಾಗಿದೆ. ಈ ಕಾಶ್ಮೀರ ಕಮಿಶನ್ನಿನ ಕಾರ್ಯ ಮತ್ತು ವಂದಿಯಿಂದರೆ ಆಧುನಿಕ ಕಾಲದ ಪರ್ವತ ಪ್ರಸವವೇ ಸರಿ. ಇನ್ನಿಬ್ಬ ದೀರ್ಘ ಕಾಲದಿಂದ, ಇಪ್ಪೊಂದು ಅಡಂಬಂಯುಕ್ತವಾಗಿ ಕಾಶ್ಮೀರ ವಿವಾದದ ಮಧ್ಯಸ್ಥಗಾರಂತಾಗಿ ತೋರಿಸಿಕೊಂಡಿದ್ದ ಈ ಕಮಿಶನಿನವರಿಂದಾದುದು 'ಏನಿಲ್ಲ'ವೆಂಬುದೇ ಲೊನೆಯ ಫಲಿತಾಂಶ. ಕಮಿಶನು ಒಪ್ಪಿಸಿರುವ ವಂದಿಯ ಒಟ್ಟು ಸಾರವಿಷ್ಟೆ "ಭಾರತ ಮತ್ತು ಪಾಕಿಸ್ತಾನಗಳೊಗೆ ನಮ್ಮಿಂದ ಬಗೆಹರಿಸಲಾಗದಷ್ಟು ಬಲವಾದ ಭಿನ್ನಾಭಿಪ್ರಾಯಗಳಿವೆ. ಅವುಗಳಲ್ಲಿ ಮುಖ್ಯವಾದ ಮೂರು ಸಮಸ್ಯೆಗಳೆಂದರೆ 1. ಪಾಕಿಸ್ತಾನದ ಹಸ್ತಕವಾಗಿ ಕಾಶ್ಮೀರದಲ್ಲಿರುವ 'ಆಜಾದ್ ಕಾಶ್ಮೀರ್' ಸೈನ್ಯದ ಭವಿಷ್ಯ. 2. ಕಾಶ್ಮೀರದಿಂದ ಭಾರತ ಮತ್ತು ಪಾಕಿಸ್ತಾನ್ ಕ್ರಮವಾಗಿ ಹಿಂದೆಗೆಯುವ ಸೇನೆಗಳನ್ನು ಏಕಕಾಲದಲ್ಲಿ ಹಿಂದೆಗೆಯುವ ಪ್ರಶ್ನೆ. 3. ಪಾಕಿಸ್ತಾನದ ಸರಹದ್ದಿನಲ್ಲಿರುವ ಕಾಶ್ಮೀರದ ಉತ್ತರಗಡೆಯ ಜನವಿರಳ ಪ್ರಾಂತ ಗುಡ್ಡಗಾಡು ಪ್ರದೇಶಗಳ ಆಡಳಿತೆಯ ಪ್ರಶ್ನೆ. ಆದ್ದರಿಂದ ಭದ್ರತಾ ಕೌನ್ಸಿಲು ಭಾರತ ಮತ್ತು ಪಾಕಿಸ್ತಾನಗಳೊಗಿರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ನಿವಾರಿಸಿ, ಇವುಗಳನ್ನು ಒಂದುಗೂಡಿಸುವ ವಿಶಾಲಾಧಿಕಾರವನ್ನು ಕೊಟ್ಟು ಮಧ್ಯಸ್ಥಗಾರನಾಗಿ ಓರ್ವ ವ್ಯಕ್ತಿಯನ್ನು ನೇಮಿಸುವುದು ಮಂಸಿ".

ಪರಾಭವದ ಕಾರಣ

ಅಂತೂ ಕಾಶ್ಮೀರ ಕಮಿಶನು ತನ್ನ ಕಾರ್ಯದಲ್ಲಿ ಪೂರ್ಣ ಪರಾಭವಗೊಂಡಿತೆಂಬುದು ಸುಸ್ಪಷ್ಟ. ಈ ಪರಾಭವಕ್ಕೆ ಮುಖ್ಯ ಕಾರಣ ಪಾಕಿಸ್ತಾನವು ನಿರ್ಮಿಸಿದ್ದ ಹೊಸ ವಾತಾವರಣವೆಂಬುದೂ ಅಷ್ಟೇ ಸ್ಪಷ್ಟ. ಯಾವ ವಿವಾದಗಳ ಶಮನಾರ್ಥಕ್ಕೆಂದು ಕಾಶ್ಮೀರ ಕಮಿಶನು ಆ ಕಾಲದಲ್ಲಿ ನೇಮಕಗೊಂಡಿದ್ದಿತೋ, ಆ ವಿವಾದಗಳ ರೂಪವೇ ಕ್ರಮಶಃ ಕಾಶ್ಮೀರ ಕಮಿಶನಿನ ಕಣ್ಮುಂದೆ ಬದಲಾಗುತ್ತಾ ಹೋಗಿದ್ದಿತು. ಇಂತಹ ಐಂದ್ರಜಾಲ ನಡೆಯುತ್ತಾ ಬಂದಿದ್ದುದು ಪಾಕಿಸ್ತಾನದ ಕಡೆಯಿಂದ ಮಾತ್ರ ಹಿಡಿಯಲು ಹೋದಂತೆ, ರೂಪ ಬದಲಾಯಿಸುತ್ತಾ ಬಂದ ಪಾಕಿಸ್ತಾನ್ ವಾದವೆಂಬ ಮಾಯಾವ್ಯಗವನ್ನು ಗೆದ್ದುಕೊಳ್ಳಲಾಗದೆ, ಕಾಶ್ಮೀರ ಕಮಿಶನು ತಬ್ಬಿಬ್ಬಾಯಿತು; ತನ್ನ ಕೆಲಸದಲ್ಲಿ ಸೋತು ಹೋಯಿತು. ಆದರೆ ಇಂತಹ ಚಂಚಲಬುದ್ಧಿಯ ಬದಲಿಗೆ ನ್ಯಾಯನಿಷ್ಠುರತೆಯು ಈ ಕಮಿಶನಿನವರಲ್ಲಿರುತಿದ್ದರೆ, ಒಂದು ಸ್ಪಷ್ಟ ತೀರ್ಮಾನಕ್ಕೆ ಬರಲು ಯಾವ ಕಷ್ಟವೂ ಇರುತಿರಲಿಲ್ಲ. ಕಾಶ್ಮೀರ ಸಂಬಂಧದ ಪಾಕಿಸ್ತಾನದ ಮಾತು ಮತ್ತು ನೈತಿಯೊಳಗೆ ಪೂರ್ವಪಶ್ಚಿಮದಷ್ಟು ಅಂತರವಿದೆ, ಎಂದು ಭಾರತವು ಆದಿಯಿಂದಲೂ ಸಕಾರಣವಾಗಿ ವಾದಿಸುತ್ತಾ ಬಂದಿದೆ; ಈ ವಾದಕ್ಕೆ ಸಾಕ್ಷ್ಯಪುರಾವೆಗಳನ್ನು ಅದು ಕೊಟ್ಟಿದ್ದಿತು. ಭಾರತವು ಪಾಕಿಸ್ತಾನದ ಮೇಲೆ ಮಾಡಿರುವ ಆರೋಪಗಳೆಲ್ಲವೂ ನಿಜವಾದವುಗಳೆಂಬುದನ್ನು ಕಾಶ್ಮೀರ ಕಮಿಶನು ಈಗತನ್ನ ವರದಿಯಲ್ಲೇ ಒಪ್ಪಿಕೊಂಡಿದೆ.ಆದರೆ ಅಂತಹ ವಂಚನೆಗಳನ್ನು ಮಾಡುತ್ತಾ ಬಂದ ಪಾಕಿಸ್ತಾನವು ಅಪರಾಧಿಯೆಂಬ ಅಂಶವನ್ನು ಮಾತ್ರ ಒಪ್ಪಿಕೊಳ್ಳದೆ, ಆ ಅಪರಾಧಿಗೂ, ನ್ಯಾಯವಾದಿ ಭಾರತಕ್ಕೂ ಸಮಾನ ಸ್ಥಾನ ಕೊಟ್ಟು ವ್ಯವಹರಿಸಲು ಪ್ರಯತ್ನಿಸಿದ್ದರಿಂದ ಪರಾಭವಗೊಂಡಿದೆ. ಇನ್ನೀ ಭಿನ್ನಾಭಿಪ್ರಾಯಗಳ ನಿವಾರಣೆಗಾಗಿ ಓರ್ವ ಮಧ್ಯಸ್ಥಗಾರನನ್ನು ನೇಮಿಸಬೇಕೆಂಬ ಅದರ ಸೂಚನೆ ಕೂಡಾ ಪಾಕಿಸ್ತಾನದ ಕಪಟಾಚಾರಗಳನ್ನು ಬೆಲೆ ಬಾಳುವ ವಾವಗಳೆಂದೇ ಗ್ರಹಿಸಿ ವಿಚಾರಿಸತಕ್ಕದ್ದೆಂಬ ಅರ್ಥವಿರುವಂತಹದೇ. ಇಂತಹ ಸೂಚನೆಯೂ ಆಟ್ಲೀ-ಟ್ರುಮೇನರಿಂದ ಮೊದಲೇ ಬಂದಿದ್ದು ಭಾರತದಿಂದ ನಿರಾಕರಿಸಲ್ಪಟ್ಟಿದ್ದಿದೆ ಇನ್ನು ಭದ್ರತಾ ಕೌನ್ಸಿಲಿನ ಚರ್ಚೆಯು ವೇಳೆಯಲ್ಲಾದರೂ ಭಾರತವಿಂತಹ ಕುರುಡು ಸೂಚನೆಗೆ ಒಪ್ಪಿಗೆ ಕೊಡುವುದು ಅಸಾಧ್ಯ.

ಭದ್ರತಾ ಕೌನ್ಸಿಲಿನಲ್ಲೇನು?

ಇದೇ ತಾ 17ರಲ್ಲಿ ನ್ಯೂಯೋರ್ಕಿನಲ್ಲಿ ಭದ್ರತಾ ಕೌನ್ಸಿಲು ಸೇರಿ ಕಾಶ್ಮೀರ ಕಮಿಶನಿನ ವರದಿ ಮತ್ತಾ ಸಂಬಂಧವಾಗಿ ಕಮಿಶನ್ ಅಧ್ಯಕ್ಷರ ಹೇಳಿಕೆಯನ್ನು ಕೇಳಿಕೊಂಡಿತೆಂದೂ ಮುಂದಿನ ಪರ್ಯಾಲೋಚನೆಯು ಈ ವಾರದಲ್ಲಿ ನಡೆಯಲಿರುವುದೆಂದೂ ತಿಳಿದುಬಂದಿತ್ತದೆ. ಈ ಚರ್ಚೆಯಲ್ಲಿ ಭಾಗವಹಿಸಲು ಭಾರತಮತ್ತು ಕಾಶ್ಮೀರದ ಪ್ರತಿನಿಧಿ ಮಂಡಲಿಗೆ ನಾಯಕನಾಗಿ ಹಿಂದೀ ವಿದೇಶ ಸಂಬಂಧ ಖಾತೆಯ ಮುಖ್ಯ ಕಾರ್ಯದರ್ಶಿ ಸರ್ ಗಿರಿಜಾ ಶಂಕರ ಬಾಜ್ಪಾಯಿಯವರು ಹೋಗಿದ್ದಾರೆ. ಅವರಿಗೆ ಸಹಾಯಕರಾಗಿ ಸಂಯುಕ್ತ ರಾಷ್ಟ್ರ ಸಂಘದ ಕಾಯಂ ಹಿಂದೀ ಪ್ರತಿನಿಧಿ ಸರ್ ಬಿ. ಎನ್. ರಾವ್ ಮತ್ತು ಕಾಶ್ಮೀರದ ಪ್ರಧಾನ ಮಂತ್ರಿ ಶೇಖ್ ಅಬ್ದುಲ್ಲಾ, ಕಾಶ್ಮೀರದ ಉಪ ವಿದೇಶ ಮಂತ್ರಿ ಶ್ರೀ ಡಿ. ದಾರರು ಇದ್ದಾರೆ. ಪಾಕಿಸ್ತಾನ್ ಪ್ರತಿನಿಧಿಗಳ ನಾಯಕರಾಗಿ ಕ.ರ್ತರ ಪ್ರಸಿದ್ಧಿಯ ಸರ್ ಝುಫರುಲ್ಲಾ ಖಾನರಿದ್ದಾರೆ. ಕಾಶ್ಮೀರ ಕಮಿಶನಿನ ವಂದಿ ಕಾಶ್ಮೀರದ ನೂತನ ಪರಿಸ್ಥಿತಿ ಮತ್ತು ಸಂಧಾನಾತೀತ ಭಿನ್ನಾಭಿಮತಗಳ ಕುರಿತು ಸರ್ವ ಸಂಗತಿಗಳನ್ನೂ ಪರಿಶೀಲಿಸಿದ ನಂತರ ಭದ್ರತಾ ಕೌನ್ಸಿಲು ಯಾವ ತೀರ್ಮಾನಕ್ಕೆ ಬರಬಹುದೆಂಬುದನ್ನು ಈಗ ಊಹಿಸುವುದು ತಪ್ಪು. ಆದರೆ ಒಂದು ಸಂಗತಿ ಸ್ಪಷ್ಟವಿದೆ. ಭದ್ರತಾ ಕೌನ್ಸಿಲು ಕಾಶ್ಮೀರ ವಿವಾದ ಸಂಬಂಧದಲ್ಲಿ ಒಂದು ನಿರ್ಣಯವನ್ನು ಮಾಡಿ 'ಕಮಿಶನ್'ನ್ನು ನೇಮಿಸುವ ಹೊತ್ತಿನಲ್ಲಿ ಪಾಕಿಸ್ತಾನವು ಬಚ್ಚಿಟ್ಟುಕೊಂಡಿದ್ದ ವರ್ತನೆಗಳೇ ಈಗ ಮುಂದೆ ಬಂದು ಆತಂಕಗಳಾಗಿ ನಿಂತಿವೆ ಹೊರತು ಬೇರಲ್ಲ; ಅದಿಭಾಗದಲ್ಲಿ ತಾವಾವ ವಿದ್ಯಮಾನವನ್ನಾಧರಿಸಿ, ತೀರ್ಮಾನಕ್ಕೆ ಬಂದಿದ್ದೆವೋ ಆ ವಿದ್ಯಮಾನವೇ ಹಪ್ಪಾಗಿತ್ತೆಂದು ಈಗ ಪ್ರತ್ಯಕ್ಷ ಪ್ರಮಾಣಗಳಿಂದ ಸಿದ್ಧವಾಗಿರುವಾಗ ಭದ್ರತಾ ಕೌನ್ಸಿಲು ಸತ್ಯಶ್ರುತಿಗನುಸಾರವಾಗಿ ಎಲ್ಲವನ್ನೂ ಹೊಸತಾಗಿ ಪರ್ಯಾಲೋಚಿಸುವ ಅಗತ್ಯಬೀಳಬಹುದು. ಭಾರತದಿಂದಾಗಿ ಜೋಡಣೆ ಹೊಂದಿರುವ ಕಾಶ್ಮೀರದಲ್ಲಿ ಆಕ್ರಮಣ ಪ್ರವೇಶಮಾಡಿರುವ ಪಾಕಿಸ್ತಾನವು ಇಲ್ಲಿ ಆಕ್ರಮಣಶೀಲ ಅಪರಾಧಿ. ಆ ದನ್ನು ಹಾಗೆಯೇ ಗಡಿಸಿ ವಿಚಾರಿಸಬೇಕೆಲ್ಲದೆ ಅನ್ಯಥಾ ಕೂಡದು—ಎಂದು ಭಾರತದ ಮತ್ತು ಕಾಶ್ಮೀರದ ದೃಢ ಭಾವ್ರಾಯ. ತನ್ನೀ ತನ್ನವನ್ನು ಮುಚ್ಚಿಕೊಳ್ಳುವುದಕ್ಕಾಗಿಯೇ ಪಾಕಿಸ್ತಾನವು, 'ಕಾಶ್ಮೀರದಲ್ಲಿ ನಮ್ಮ ಕ್ರಮಬದ್ಧ ಸೇನೆಗಳಿಲ್ಲ'ವೆಂದು ಆದಿ ಭಾಗದಲ್ಲಿ ವಾದಿಸಿದ್ದಿತು; 'ಜಝುಫರ್ ಕಾಶ್ಮೀರ್' ಸೇನೆಯು ಸೂತ್ರಧಾರಿ ತಾನೇಂಬುದನ್ನೂ ಅಲ್ಲಗಳೆದಿದ್ದಿತು ಈ ನಕಾರಗಳೆಲ್ಲವೂ ಸುಳ್ಳಿನ ಕಂತೆಗಳೆಂಬುವೀಗ ಖಚಿತವಾಗಿದೆ; ಬಣ್ಣ ಬದಲಾಗಿದೆ. ಇಂತಹ ಸಂದರ್ಭದಲ್ಲಿ ತಾವು ಆಕ್ರಮಣ ಪ್ರವೇಶಗಾರರನ್ನು ಸಬಾರದೆಂಬುದಕ್ಕಾಗಿ ಹಿಂದೊಂದು ಕಾಲದಲ್ಲಿ ಕಾಶ್ಮೀರದೊಡನೆ ಪಾಕಿಸ್ತಾನವು ಮಾಡಿಕೊಂಡಿದ್ದ 'ಪ್ರಚಲಿತಾವಧಿ ಒಪ್ಪಂದ'ವನ್ನು ಮುಂದೊಡ್ಡಲು ಸರ್. ಝುಫರುಲ್ಲಾ ಖಾನರು ಪ್ರಯತ್ನಿಸುತ್ತಾರೆಂಬ ವಾರ್ತೆಯಿದೆ. ಅಂತೂ ಕಾಶ್ಮೀರ ವಿವಾದದ ಕುರಿತು ಸತ್ಯ ಮತ್ತು ನ್ಯಾಯವನ್ನು ಪ್ರೇಕ್ಷೆ ಅಲ್ಲ-ಸಭ್ಯತೆಯನ್ನೂ ಮರೆತು ಮನಸೋಚ್ಛೆ ಆಟವಾಡಿದರಂಯಿಕೆಂದು ಪಾಕಿಸ್ತಾನವು ಬಗೆದಂತಿದೆ. ಈ ಆಟ ತಪ್ಪೆಂಬುದನ್ನು ಮಂದಾಗಿ ತೀರ್ಮಾನಿಸಿ, ಆದಕ್ಕೆ ತಕ್ಕ ಪರಿಹಾರಗಳನ್ನು ಮಾಡಿದ ನಂತರವೇ ಕಾಶ್ಮೀರ ಸಂಬಂಧದ ಮೂಲ ವಿವಾದಗಳ ತೀರ್ಮಾನಕ್ಕೆ ಭದ್ರತಾ ಕೌನ್ಸಿಲು ಕೈ ಹಾಕಿದರೆ, ಶಾಂತಿ ಸಾಧನೆ ಸಾಧ್ಯವಾಗಬಹುದು. ಇಲ್ಲವಾದರೆ ಇಂದಿನ ಕಪಟ ಮಿಶ್ರಿತ ವಾತಾವರಣದಲ್ಲಿ ಒಂದು ಸುಭದ್ರ ವ್ಯವಸ್ಥೆಯನ್ನು ಕಂಡುಕೊಳ್ಳುವುದು ಅಸಾಧ್ಯವೇ ಸರಿ.

ಇತರ ವಿವಾದಗಳು

ಭಾರತ ಮತ್ತು ಪಾಕಿಸ್ತಾನಗಳೊಳಗಿನ ಕಾಶ್ಮೀರ ವಿವಾದದ ಗತಿ ಹೀಗಾದರೆ ಇವೆರಡು ರಾಷ್ಟ್ರಗಳ ಸಂಬಂಧ ಕೆಡಿಸುವ ಇತರ ಅತೀರೇಕಾಚರಣೆಗಳೂ ಪಾಕಿಸ್ತಾನವಿಂದ ನಡೆದಿವೆ. ಸಿಂಧ್ ಪ್ರಾಂತ್ಯದಲ್ಲಿ ಉಳಿದಿರುವ ಹಿಂದುಗಳನ್ನು ಬಲಾತ್ಕಾರದಿಂದ ಓಡಿಸಲು ಪಾಕಿಸ್ತಾನವು ಕಟಿಬದ್ಧವಾದ ದುರ್ವರ್ತೆಗಳು ಬಂದಿವೆ. ಪಾಕಿಸ್ತಾನ್ ಅಧಿಕಾರಿವರ್ಗದ ಅಸಹ್ಯ ಅತ್ಯಾಚಾರಗಳಿಂದ ಪಾರಾಗುವುದಕ್ಕಾಗಿ ಸಿಂಧಿನ ಹಿಂಬುಗಳು ಮುಸ್ಲಿಮರಾಗಿ ಮತಾಂತರಗೊಂಡ—ಹಿಂದುಗಳ ದೇವಾಲಯಗಳು ಮುಂತಾದ ಧಾರ್ಮಿಕ ನೆಲೆಗಳು ಮಸೀದಿಗಳಾಗಿ ಮಾರ್ಪಟ್ಟಿರುವ ನಿದರ್ಶನಗಳೂ ಬೇಕಾದಷ್ಟಿವೆ. ಅಲ್ಲಿದ್ದ 'ಹೈದರಾಬಾದ್ ಬ್ರಹ್ಮ ಸಮಾಜ ಮಂದಿರ' 'ಸಾಧು ಹಿರಾನಂದ ಸಮಾಧಿ ಸ್ಥಳ' ಮುಂತಾದವುಗಳು ಈ ದುರ್ವಿಧಿಗೊಳಗಾಗಿವೆ. ಇಂತಹ ಅತ್ಯಾಚಾರಕ್ಕಾಗಿ ಭಾರತ ಸರಕಾರವು ಪಾಕಿಸ್ತಾನಕ್ಕೆ ನಿವೇದಿಸಿರುವ ಚಿನೆ ಕಳಾಹಿದೆ. ಇದೇ ರೀತಿ, ನಾಲ್ಕೈದು ವಿಚ್ಛೇದನಕ್ಕೆ ಮೊದಲೇ ಕಂಟ್ರಾಕ್ಟಾಗಿದ್ದ ಭಾರತದಿಂದ ಬೆಲೆ ಸಂದಾಯವಾಗಿದ್ದ, 500000 ಪೌಂಡುಗಳಷ್ಟು ಹಸಿನಾರನ್ನು, ವೈಮಾಲ್ಯವಿಚ್ಛೇದನಾ ಸಂಬಂಧದ ವಿವಾದಗಳ ನೆವ ಹೇಳಿ ಪಾಕಿಸ್ತಾನವು ತಡೆದಿಟ್ಟುಕೊಂಡಿರುವ ಅಕ್ರಮಾಚರಣೆಯು ಭಾರತ-ಪಾಕಿಸ್ತಾನಗಳೊಳಗಿನ ವ್ಯಾಪಾರ ಸಂಬಂಧವೇ ಕೆಡಿದು ಹೋಗುವ ಪರಿಣಾಮ ಬಿಡುವ ಲಕ್ಷಣಗಳು ಕಂಡು ಬರುತ್ತಿವೆ. ಈ ಕುರಿತು ಭಾರತ ಮತ್ತು ಪಾಕಿಸ್ತಾನಗಳೊಳಗೆ ಮೇಲಿಂದ ಮೇಲೆ ತಂತೀವ್ಯವಹಾರಗಳು ನಡೆದಿದ್ದುವು. ಒಂದರ ನಂತರ ಇನ್ನೊಂದರಂತೆ—ಒಂದಕ್ಕಿಂತ ಮಿಗಿಲಾಗಿ ಮತ್ತೊಂದರಂತೆ—ನೆರೆಯ ರಾಷ್ಟ್ರವು ಅತೀರೇಕ ವರ್ತನೆಗಳನ್ನೇ ಕೈಕೊಳ್ಳುತ್ತಿರುವಾಗ ಭಾರತವು ಹೇಗೆ ತಾನೆತ್ತು, ಕಾಲ ಸಹಿಸಿ ನಿಲ್ಲಬಹುದೋ! ಉದ್ವೇಶಪೂರ್ಣಕವಾಗಿ ನೋಯಿಸಿ ತಾ ಹೋಗುವವರನ್ನು ಸನುಜಾಯಿಸುವುದಾದರೂ ಹೇಗೆ ಸಾಧ್ಯವೋ!

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಉಡುಪಿ.

ಇವರ ಶಾಖಾ ಕಛೇರಿಗಳು:-

ಬೊಂಬಾಯಿ, ನುಪ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದಿವಸವರಾದ
ನಾವು ಜನರಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರಾತಿನಿಧ್ಯ ಪಡೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised	Rs.	25,00,000.
Capital Issued & Subscribed	Rs.	20,00,000.
Capital Paid Up.	Rs.	19,99,800.
Reserves	Rs.	8,91,000.

Banking business of every description transacted.

ನವಯುಗ
ಗುರುವಾರ ಉಡುಪಿ೨೨-೧೨-೧೯೫೧

ಅಧಿಕಾಹಾರ/ನಿರ್ಮೂಲನ

1951ರೊಳಗೆ ಭಾರತವು ಆಹಾರ ಸ್ವಾವಲಂಬಿಯಾಗಬೇಕು–ಆ ಮೇಲೆ ವಿದೇಶಗಳಿಂದ ಯಾವ ಆಹಾರ ಧಾನ್ಯಗಳನ್ನೂ ಆಮದು ಪಡಿಸಿಕೊಳ್ಳುವಂತಿಲ್ಲ–ಎಂಬ ಶಪಥ ತೊಟ್ಟು, ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ವಿಶೇಷ ರೀತಿಯ ಕಾರ್ಯಗಳನ್ನು ಕೈಕೊಂಡಿರುವುದು ಕಂಡು ಬರುತ್ತಿದೆ; ಕೇಳಿ ಬರುತ್ತಿದೆ. ನಮ್ಮ ಸರಕಾರವು ಒಂದು ಅವಧಿ ನಿಶ್ಚಯಿಸಿ, ಸಂಘ ಗೆಲ್ಲುವ ಸಾಹಸಕ್ಕೆ ಳಿದಿರುವುದು ಇದೊಂದೇ ರಂಗದಲ್ಲಿ. ಈ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿಕೊಳ್ಳಬೇಕೆಂಬ ಉದ್ದೇಶದಿಂದ ಸರಕಾರವು ಪ್ರದರ್ಶಿಸುತ್ತಿರುವ ಆತುರ, ಮಾಡುತ್ತಿರುವ ಪ್ರಚಾರ, ಕೊಡುತ್ತಿರುವ ಪ್ರೇರಣೆ ಬಹಳವಿವೆ. ನಿಶ್ಚಿತ ಗುರಿ ಮುಟ್ಟಲು ಇನ್ನು ಉಳಿದಿರುವುದು ಎರಡು ವರುಷ ಮಾತ್ರ. ಬರುವ ವರುಷ, ಮತ್ತಾಮೇಲಿನ ವರುಷ–ಈ ಎರಡೇ ಅಂತಸ್ತುಗಳೊಳಗೆ ಭಾರತಕ್ಕೆ ಹ್ಯು ಆಹಾರ ಧಾನ್ಯಗಳು ಅಗತ್ಯವೋ ಅವ್ಯಾ ಇಲ್ಲೇ ಉತ್ಪತ್ತಿಯಾಗಬೇಕು. ಆಗಲಾರದೆ? "ಒಂದೂವ್ವೆಗೆ ಆಗದೆ ಹೋದರೂ 1951ರ ನಂತರ ಎಷ್ಟರಲ್ಲಿವುದೋ ಅಷ್ಟನ್ನೇ ನಾವು ಉಂಡು ಉಳಿಯಬೇಕಲ್ಲದೆ ಹೊರಗಿನಿಂದ ತರಿಸಿಕೊಳ್ಳುವಂತಿಲ್ಲ" ಎಂದೀಗಲೇ ಪಂಡಿತ ನೆಹರುಗಳು ತಿಳಿಸಿದ್ದಾರೆ. ವಂದಿನ ಎಂಡು ಕಂತುಗಳಲ್ಲಿ ಪೂರ್ಣಗೊಳ್ಳಬೇಕಾದ ಆಹಾರ ಸ್ವಾವಲಂಬನಾ ವ್ಯವಸ್ಥೆಯು ಈಗ ಯಾವ ಮಟ್ಟದಲ್ಲಿದೆ ಎಂಬುದನ್ನು ಅವಲೋಕಿಸುವಾಗ, ಪೂರ್ಣ ಸನ್ನಾಹಗಳು ಕರವಾಗಿ ಕಾರ್ಯವಾಗುತ್ತಿಲ್ಲ ಎಂದು ಕೋಲಾಹಲವಿದೆ. ಅಧಿಕಾಹಾರೋತ್ಪತ್ತಿಯನ್ನು ಆಂದೋಲನವು ಪ್ರಚಾರರಂಗದಲ್ಲಿರುವ ನಾಲ್ಕನೇ ಒಂದುಂಶದಷ್ಟಾದರೂ ಈ ವರೆಗೆ ಬೇಸಾಯ ರಂಗಕ್ಕೆಳೆದಂತೆ ಕಾಣುವದಿಲ್ಲ. 'ಗದ್ದಲವೆಬ್ಬಿಸಿದ ಮಾತ್ರಕ್ಕೆ ಗದ್ದೆ ಹಸನಾದೀತೆ?' ಎಂಬ ಪ್ರಶ್ನೆಯೊಂದನ್ನಲ್ಲದೆ, ಬೇರಾವುದನ್ನೂ ನಿರ್ಮಿಸದೆ, ಕಳದ ಹಲವು ವರುಷಗಳ "ಅಧಿಕಾಹಾರ ಬೆಳೆಸಿರಿ" ಚಳವಳಿಯು ನಿರರ್ಥಕವಾದ ಪ್ರದರ್ಶನ ಕಣ್ಣು ಮುಂದಿದೆ. ಆದ್ದರಿಂದ ಆಹಾರ ಸ್ವಾವಲಂಬನಾ ಪ್ರಯತ್ನವು ಎಲ್ಲಿ ವರೆಗೆ ಬಂತೆಂಬುದನ್ನು ಸಾಗುವಳ್ಳೀ ಕ್ಷೇತ್ರಗಳನ್ನು ಕಂಡೇ ಗೊತ್ತುಹಚ್ಚಬೇಕಲ್ಲದೆ ವೇದಿಕೆಗಳ ಕಡೆಗೆ ನೋಡಿ ಅಲ್ಲ. ಆದರೆ, ಈ ಸಂಬಂಧದ ಪ್ರಚಾರರಂಗವನ್ನು ಹೆಲುಸಾಗಿ ಬೆಳೆಯಿಸುವುದಕ್ಕಾಗಿ ನಮ್ಮ ನಾಯಕರು ಸರ್ವಾನುಕೂಲತೆಗಳನ್ನೂ ವಿಶೇಷ ಹುರಿ-ಪನ್ನೂ ಬಳಸಿ-ತ್ತಿರುವುದು ಕಂಡು-ಬರುವಂತೆ, ಪ್ರತ್ಯಕ್ಷ ಸಾಗುವಳ್ಳೀಗಾರ ರೈತರಲ್ಲಿ ಅಂತಹ ಆಸಾನುಕೂಲತೆಗಳಾಗಲೀ ಉತ್ಸಾಹವಾಗಲೀ ಇದ್ದಂತೆ ಕಾಣುವದಿಲ್ಲ. ಬೇಸಾಯಾಭಿವೃದ್ಧಿಯ ಮಟ್ಟಿಗೆ ರೈತರಿಗಿರುವ ಕೊರತೆಯೆಂದರೆ ಜ್ಞೋಧನ, ಪ್ರೇರಣೆಗಳು ಮಾತ್ರವೆಂಬಂತೆ, ನಮ್ಮ ರಾಷ್ಟ್ರನಾಯಕರೀಗ ಅವುಗಳನ್ನಷ್ಟೇ ಸರಬರಿಯು ಮಾಡುತ್ತಿರುವುದು ಕಾಣಿಸುತ್ತಿದೆ! ಇದೇ ತಾ. 17ರಲ್ಲಿ, ನವಢಿಲ್ಲಿಯಲ್ಲಿ ಸೇರಿದ್ದ 'ಅಖಿಲ ಭಾರತ ಕೆಸಾನ್' ಕಾಂಗ್ರೆಸಿ"ಗೆ ಭಾಷಣವೀಯುತ್ತಾ, ಪ್ರಧಾನಮಂತ್ರಿ ಪಂಡಿತ ಜವಾಹಿಂಲಾಲರು ಮನಃ ಹೇಳಿದ್ದಾರೆ: "ಅಧಿಕಾಹಾರ ಉತ್ಪನ್ನ ಮಾಡಿ ರಾಷ್ಟ್ರವನ್ನು ಶಕ್ತಿಶಾಲಿ ಮಾಡಿರಿ; ಅಭಿವೃದ್ಧಿಗೊಳಿಸಿರಿ. ಈ ದಿನ ಆಹಾರಮೇ ನಂ. 1ನೇ ಸಮಸ್ಯೆಯಾಗಿದೆ. ರಾಷ್ಟ್ರವು ಆಹಾರ ಸ್ವಾವಲಂಬಿಯಾಗುವಂತೆ ಮಾಡುವ ಹೊಣೆಗಾರಿಕೆಯು ಮುಖ್ಯತಃ ಕೆಸಾನರಿದೆ. ರಾಷ್ಟ್ರದ ವಿಸ್ತಾರ ವಲಯವು ಬೇಸಾಯ ಭೂವಿಯಾಗಿದ್ದರೂ ಭಾರತವು ತನ್ನ ಖರ್ಚಿಗೆ ಬೇಕಾದಷ್ಟು ಧಾನ್ಯಗಳನ್ನು ತಾನೇ ಉತ್ಪಾದಿಸಿಕೊಳ್ಳಲಾರದೆ ವಿಶೇಷ ಬೆಲೆ ತೆತ್ತು ಹೊರಗಿನಿಂದು-ಮದು ಪಡಿಸಿಕೊಳ್ಳಬೇಕಾಗಿ ಒಂದಿ-ವುದು ನಿಜಕ್ಕೂ ವಿಲಕ್ಷಣ ಸಂಗತಿ. ಈ ವಿಧಾನದಿಂದ ಭಾರತದ ಸಂಸತ್ತು ಬರಿದಾಗಬೇಕಾಗಿದೆ; ತತ್ಪರಿಣಾಮವಾಗಿ ಜನ ಸಾಮಾನ್ಯರು ಬಡವರಾಗಿಯೇ ಉಳಿಯಬೇಕಾಗಿದೆ". ರೈತರು ತಮ್ಮ ಬೇಸಾಯ ಶ್ರಮ, ಬೀಜ, ಗೊಬ್ಬರ, ಉಪಕರಣ, ಇತ್ಯಾದಿಗಳನ್ನು ಸುಧಾರಿಸಿಕೊಂಡು ಎತ್ತೆವಾರು ಉತ್ಪನ್ನದ ಮಟ್ಟವನ್ನು ವಿರಿಸಬೇಕೆಂದು ಪಂಡಿತ ನೆಹರುಗಳು ಒತ್ತಿ ಬೋಧಿಸಿದ್ದಾರೆ. ತಪ್ಪಲ್ಲ. ಆದರೊಂದು ಮಾತು. ನಮ್ಮ ದೇಶದ ಆಹಾರಾಭಾವಕ್ಕೆ ಸಾಗುವಳ್ಳೀದಾರರ ಅನಾಸಕ್ತಿ ಮಟ್ಟು ಅಸಡ್ಡೆಯೇ ಕಾರಣವೆ? ರಾಷ್ಟ್ರದ ಆಹಾರ ಸ್ವಾವಲಂಬನೆಗಾಗಿ ಪ್ರತಿಯೊಂದೆಕ್ರೆ ನೆಲವೂ ಇವ್ವಷ್ಟಿ ಬೆಳೆ ಕೊಡುತಿದ್ದರಾಗುತಿತ್ತೆಂಬ ಅತಿಶಯವು ಸರಕಾರೀ ನಾಯಕರಿಗೆ ಈಗ ತಾನೇ ಮೂಡಿದ್ದರೆ, ತನ್ನ ಭೂವಿಯು ಪ್ರತಿಯೊಂದಿಂಚು ನೆಲವೂ ಮೂರು ಪಾಲು ಬೆಳೆಕೊಟ್ಟು ತನ್ನ ಉಟುಂಬ ಉದ್ಧಾರವಾಗಲಿ, ಎಂಬ ಅಶೆಯು ಪ್ರತಿಯೊಬ್ಬ ರೈತನಲ್ಲಿಯೂ ಜನ್ಮತಃ ಇರುವಂತಹುದೇ. ಹೀಗಿದ್ದೂ ಆತನ ಬೇಸಾಯಕ್ರಮ ಸಮಾಧಾನಕರವಲ್ಲವೆಂದಾದರೆ, ಆದಕ್ಕಾತ ನಿರುವ ಅನಾನುಕೂಲತೆಗಳೇ ಕಾರಣ ಶೋತು ಅಸಕ್ತಿಯ ಅಭಾವವಲ್ಲ. ಇಂಥ ವರ ಮೂಲಕ ಅಧಿಕ ಬೆಳೆ ಜೊಂದಬೇಕಾದರೆ ಸಂಕಾರವು ಇವಂಗಿರುವ ಆನಾನುಕೂಲತೆಗಳನ್ನು ನಿವಾರಿಸಬೇಕೇ ಹೊರತು, ಕೇವಲ ಉಪದೇಶ ಕೊಟ್ಟರಾಗದು. ಬೀಜ, ಗೊಬ್ಬರ, ಉಕ್ಕು, ಕಬ್ಬಿಣ ಮುಂತಾದ ಸಾಗುವಳ್ಳೀ ಉಪಕರಣಗಳು ರೈತರಿಗೆ ಸಾಕಷ್ಟು ದೊರೆಯುತ್ತಿಲ್ಲ; ಅನ್ನದಾತ ರೈತರೇ ಮಿಕ್ಕೆಲ್ಲರಿಗಿಂತ ಹೆಚ್ಚಾಗಿ ಅನ್ನಾಭಾವ ಪೀಡೆಗೊಳಗಾಗಿದ್ದಾರೆ; ಧಾನ್ಯ ನಿಯಂತ್ರಣದ ಪರಿಣಾಮವಾಗಿ, ಸ್ವೋಲ್ಪ ಲಾಭಗಳಿಗೆ ಓಡಾಡುವುದರಲ್ಲೇ ರೈತರ ಗೆಂತಹ ಸಮಯ ಮತ್ತು ಹಣ ನಷ್ಟವಾಗುತ್ತಿದೆಯೆಂಬುದನ್ನು ಪ್ರತ್ಯಕ್ಷ ಪರಿಶೀಲಿಸಿದರೆ ತಿಳಿಯಬಹುದು; ಕೇವಲ ಸಾಗುವಳ್ಳೀ ವೆಚ್ಚ ಹೆಂಲಾರದೆ ಒದ್ದಾಡುತ್ತಿರುವ ಬೇಸಾಯಗಾರರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇಂತಹ ಸ್ಥಿತಿಯಲ್ಲಿರುವವರ ಕೈಯಿಂದಲೂ 'ತೀರ್ವ ಸಮಾನ ಕಡ್ಡಾಯಿದ ಸಾಲ'ವೆತ್ತುವಂತಹ ಬಯಕಗಳೇ ನಮ್ಮ ಸರಕಾರಿಗಳಿಗೆ ಮೂಡಿ-ತ್ತಿವೆ ಹೊಂತು, ಇವರ ದುಸ್ಥಿತಿಯನ್ನು ನಿವಾರಿಸುವ ಕಡೆಗೆ ಲಕ್ಷ್ಯ ಹರಿದಿಲ್ಲ. ರಾಷ್ಟ್ರವೆಂದು ಲಕ್ಷಿಕ ದುಸ್ಥಿತಿಯಲ್ಲದೆ—ಜನತೆಯ ನೈತ್ಯಜೀವನ ಪ್ರಯಾಸದಿಂದ ಸಾಗುತ್ತಿದೆ—ಎಂಬುದು ಎಲ್ಲರೂ ಒಪ್ಪಿಕೊಂಡಿರುವ ಸಂಗತಿ. ಇಂತಹ ಕಿಷ್ಟ ರಾಷ್ಟ್ರ ನೋಂಕಿಯಿರುವ ದೇಶದ ಜನಕೆಯಲ್ಲಿ ಸೇಕಡಾ 70ಕ್ಕೂ ಮಿಕ್ಕಿದವರು ರೈತರೇ; ಆದರಲ್ಲೂ ಕನಿಷ್ಠ ವರ್ಗದಿಂದ ಮಧ್ಯಮ ವರ್ಗದ ವರಗಿನ ವಿಭಾಗವೇ ಈ ರೈತ ಜನತೆ. ಅಂದಮೇಲೆ ಇಂದಿನ ಸಂಕಷ್ಟಗಳ ಹೆಚ್ಚಿನಂಶ ಬಿದ್ದಿರುವುದು ಸಾಗುವಳ್ಳಿದಾರರ ಮೇಲೆ ಎಂಬುದು ನಿರ್ವಿವಾದ. ಈಗ ರಾಷ್ಟ್ರದ ಸಂಕಷ್ಟ ವಿಮೋಚನೆಯಾಗಬೇಕಾಗಿರುವುದು ಕೂಡಾ ಈ ವರ್ಗದವರಿಂದಲೇ. ಅಂದಮೇಲೆ ಇಲ್ಲಿಯ ಲೋಪ, ದೋಷ, ಅನಾನುಕೂಲತೆ, ಅಶಂಕಗಳನ್ನು ನಿವಾರಿಸಬೇಕಾದುದೊಂದೇ ಈಗ ಸರಕಾರಿದ ಮುಖ್ಯ ಯಾಗೂ ಪ್ರಥಮ ಕರ್ತವ್ಯವಲ್ಲವೆ? ದೂರ ನಿಂತು ಡಂಗುರ ಬಾರಿಸಿದ ಮಾತ್ರಕ್ಕೆ ಈ ಕೆಲಸವಾಗದು. ರೈತರ ಹೃದಯವನ್ನು ಕುಗ್ಗಿಸುವ, ಕೈಯನ್ನು ಕಟ್ಟುವ, ಎಲ್ಲಾ ಕಷ್ಟ ನಷ್ಟಗಳನ್ನೂ ಶಮನಗಳಲು ಸರಕಾರವು ಮುಂದಾಗಬೇಕು. ಹಳ್ಳೀ ಶೋಧನೆಯ ಮೂಲಕ, ರೈತರನ್ನು 'ಆಹಾರೋತ್ಪಾದನೆವಾಣಿ ಯುದ್ಧದ' ನಿಜ ಯೋಧರನ್ನಾಗಿ ಮಾಡಲು ಯಾವ ಯಾವ ವ್ಯವಸ್ಥೆಗಳಾಗಬೇಕೆಂಬುದನ್ನು ಕಂಡುಕೊಂಡು, ಕೂಡಲೇ ಆವುಗಳನ್ನು ಜಾರಿಯಲ್ಲಿ ತಂದಬೇಕು. ಹಾಗಾಗುವದೆಂದು ನಿರೀಕ್ಷಿಸಬಹುದೆ?

ಉಡುಪಿ

ಉಡುಪಿಯಲ್ಲಿ ಮೈಲಿಗೆ ಬೇನೆಯು ಪ್ರಾರಂಭವಾಗಿರುವುದರಿಂದ ಊರವರೂ ಉಡುಪಿ ಜಂತ್ರೆಗೆ ಬರತಕ್ಕವರೂ ಮೈಲಿಗೆ ಪ್ರತಿಬಂಧಕ ದಾಕಲು ಹಾಕಿಸಿಕೊಳ್ಳಬೇಕೆಂದು ನಗರಾಭಯ ಆರೋಗ್ಯ ಅಧಿಕಾರಿಗಳ ಪ್ರಕಟಣೆಯೊಂದು ಹೊರಟಿದೆ.

ಕಾಂಗ್ರೆಸ್ ಕಾರ್ಯಕಾರೀ ಸಮಿತಿ

ಕರ್ನಾಟಕದ ರಾಜೀನಾಮೆಗಳ ದುಃಖದಿಂದ ಎದ್ದಿರುವ ವಿಶೇಷ ವಿದ್ಯಮಾನಗಳ ಪರಿಶೀಲನೆಗಾಗಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ನವಢಿಲ್ಲಿಯಲ್ಲಿ ಇದೇ ತಾ. 20ರಲ್ಲಿ ಕೂಡಿದ್ದು ತಾ. 19ರಲ್ಲಿ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ಸಭೆಯು ಸರ್ದಾರ್ ವಲ್ಲಭಾಯಿಗಳ ಭವನದಲ್ಲಿ ಸೇರಿದ್ದರೂ ಕಾಂಗ್ರೆಸ್ ಕಾರ್ಯಸಮಿತಿಯು ನಿರ್ಧಾರದ ನಿರೀಕ್ಷೆಯಿಂದ ಕರ್ನಾಟಕದ ರಾಜೀನಾಮೆಗಳ ಪ್ರಶ್ನೆಯನ್ನಷ್ಟು ಚರ್ಚಿಸಿರಲಿಲ್ಲ. ಕಾರ್ಯಕಾರೀ ಸಮಿತಿಯ ನಿರ್ಣಯವೇ ನೆಂಬುದು ಈ ತನಕ ತಿಳಿದುಬಂದಿಲ್ಲವಾದರೂ ಕಾಂಗ್ರೆಸ್ ನಾಯಕರ ಅಭಿಮತ ಹೇಗಿದೆ ಎಂಬ ಕಡೆಗೆ ಸಾರ್ವತ್ರ ಪ್ರಕಾರ ಬಿದ್ದಿದೆ. ತ್ರಿಮೂರ್ತೀ ಸಮಿತಿಯ ವರದಿಯಲ್ಲಡಕವಾಗಿರುವ ಶರ್ತಗಳನ್ನು ಪೂರೈಸಿಕೊಡದೆ ಭಾಷಾವಾರು ಪ್ರಾಂತ್ಯ ರಚನೆಗೆ ಅನಾಧ್ಯ; ಈಗ ಕನ್ನಡಿಗ ಸದಸ್ಯರು ರಾಜೀನಾಮೆ ಕೊಡಲು ಅನುಮತಿ ಕೇಳಿದ್ದಾರಲ್ಲದೆ, ರಾಜೀನಾಮೆಗಳನ್ನೇ ಕಳುಹಿಸಿಲ್ಲ; ಈ ಅನುಮತಿಯನ್ನು ಕೊಡದೆ ರಾಜೀನಾಮೆಗಳನ್ನು ಹಿಂತೆಗೆದುಕೊಳ್ಳುವಂತೆ ಕೇಳಿಕೊಳ್ಳಲಾಗುವುದು; ಒಪ್ಪದಿದ್ದರೆ ರಾಜೀನಾಮೆಗಳನ್ನು ಅಂಗೀಕರಿಸಿಕೊಳ್ಳಲಾಗುವುದು; ಧಾರವಾಡಗೆರೆಯಲ್ಲಿ ಸೇರಿದ್ದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿ ಸಭೆಯು ಮಾಡಿದ್ದ ನಿರ್ಣಯಕ್ಕೆ ನೈತಿಕತೆಯ್ಕಾದ ನಿರ್ಣಯವು ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಕಾಸ್ಟಿಟ್ಯೂಲಿನಪ್ರಾಂತ್ಯರಿಂದ, ಅದು ಶಿಸ್ತಿಗೆ ವಿರುದ್ಧವಿದೆ—ಎಂದೇ ಕಾಂಗ್ರೆಸ್ ಶ್ರೇಷ್ಠಿಯ ಅಭಿಪ್ರಾಯವಿರುವಂತಿದೆ. ವಸ್ತುಸ್ಥಿತಿಯು ಹೀಗಿರುವದರಿಂದಲೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯವು ಕುತೂಹಲವನ್ನು ಕೆರಳಿಸಿದೆ.

ಕಲಾನ್ಯಾಯದಲ್ಲಿ ದಿನ ೧೫-೧೨-೫೧ರಂದು ರನ್ನ ಕವಿ ಸಹಸ್ರ ವಾರ್ಷಿಕೋತ್ಸವವು ಶ್ರೀ. ಕೆ. ಎಲ್. ಎನ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಎಸ್. ಕೆ. ಭಾವಿಕಟ್ಟಿ ಅಣಾರ್ಯರು ರನ್ನನ ಗದಾಯುದ್ಧದ ಕುರಿತು ಭಾಷಣವನ್ನಿತ್ತರು. ಗದಾಯುದ್ಧ ವಾಚನವನ್ನು ಶ್ರೀ ನಾರಾಯಣಾಚಾರ್ಯರಿಂದಲೂ, ಸ್ವತಃ ರಚಿಸಿ ಮಾಡಿದ 'ರನ್ನ ಪ್ರಶಸ್ತಿ' ಎಂಬ ಕವಿ ಕಾವ್ಯವನ್ನು ಶ್ರೀ. ಪಿ. ರಾಮು ತಂತ್ರಿಗಳೂ ಓದಿದರು. ರನ್ನನ ವಿಷಯವಾಗಿ ಸ್ಪರ್ಧೆಯು ಲೇಖನಗಳು ಸಕಾಲಕ್ಕೆ ಬಾರದ ಕಾರಣ ಆದನ್ನು ಮುಂದುವರಿಸಲಾಯಿತು. ನಂತರ ಅಧ್ಯಕ್ಷರ ಭಾಷಣದೊಂದಿಗೆ ಸಭೆ ಮುಕ್ತಾಯಗೊಂಡಿತು.

ಭಾಷಣ-ಆವೆ (ರಿಕದಲ್ಲಿ ಹುಟ್ಟಿ ಬೆಂದೀಯಳಾಗಿರುವ ನೃತ್ಯ ಶಿಲ್ಪಿ ಮಂಗಳೂರಿನ ಶ್ರೀಮತಿ ರಾಗಿಣಿ ದೇವಿಯವರು ಇದೇ ತಾ. 13ರಲ್ಲಿ ಇಲ್ಲಿಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಲೈಬ್ರರಿಯಲ್ಲಿ ನೃತ್ಯ ಕಲೆಯ ಕುರಿತು ಭಾಷಣ ಮಾಡಿ, ನೃತ್ಯಗಳ ಸ್ಥಾಂಪಲುಗಳನ್ನು ತೋರಿಸಿದರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ವಂದನೆಗಳನ್ನರ್ಪಿಸಿದರು.

ಮಹಾತ್ಮಾಗಾಂಧಿ ಮೆಮೊರಿಯಲ್ ಕಾಲೇಜು ಸ್ಥಾಪಿತವಾಗಿ ಐದು ತಿಂಗಳು ಕಳೆದು ಆರ್ಥಿಕ ವರ್ಷದ ಪರೀಕ್ಷೆ ಮುಗಿಸಿದುದರ ಸಂತೋಷ ಸೂಚನಾರ್ಥವಾಗಿ ಸಮಾರಂಭವು ಇದೇ ತಾ. 18ರಲ್ಲಾ ಸಂಜೆ ಮುಕುಂದ ನಿವಾಸದ ಸಂಡಿಕೇಟ್ ಚೇಂಬರಿನ ಹೊಸ ಕಟ್ಟಡದಲ್ಲಿ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳವರ ಅಧ್ಯಕ್ಷತೆಯಲ್ಲಿ ಜರಗಿ, ವಿವಿಧವಿನೋದಾವಳಿಗಳ ಕಾರ್ಯಕ್ರಮಗಳಾದುವು.

(ಶನೇ ಹುಟದಿಂದ ಮುಂದುವರಿದುದು)

ವಂತಾಗಬಾರದೆಂಬುದು ನನ್ನೀ ಸಮರ್ಥನೆಗಿರುವ ಕಾರಣಗಳಲ್ಲೊಂದು. ಇದಕ್ಕಿಂತ ಮುಖ್ಯವಾದ, ರಾಜಕೀಯ ಹಾಗೂ ಆರ್ಥಿಕ ವಿಷಯಗಳಿಗಾಗಿ ಅದು ರಾಜಕೊಡಬೇಕೆಂದೇ ನನ್ನಿಚ್ಛೆ. ಹೆಚ್ಚು ಪ್ರಜಾಸತ್ತಾತ್ಮಕವಾದ ಒಂದು ಸರಕಾರವು ರಾಜೀನಾಮೆ ಕೊಡಬಹುದಾಗಿದ್ದ ಸಕ್ಕರೇ ಗೊಂದಲದಂತಹ ಪ್ರಶ್ನೆಗಾಗಿ— ಎಳೇ ಮಕ್ಕಳಿಗೆ ಸಕ್ಕರೆ ಸಿಕ್ಕದಿರ.ವಾಗ ಕೃತಕ ಧಾರಣೆ ಕೊಡಬಲ್ಲವರಿಗೆ ಟನ್ನು ಗಟ್ಟಿಲೆ ಸಕ್ಕರೆ ಸಿಕ್ಕುತ್ತಿರುವ ಈ ದುಸ್ಥಿತಿಗಾಗಿ— ಈಗಿನ ಸರಕಾರವು ರಾಜೀ ಕೊಡಬೇಕೆಂದು ನಾನಿಚ್ಛೆಗುತ್ತೇನೆ. ("ಕೇಳಿ ಕೇಳಿರಿ" ಸದ್ದು). ಇಂತಹ ಪ್ರಶ್ನೆಗಳಿಗಾಗಿ ಈ ಸರಕಾರ ಹೋಗುತ್ತದಾದರೆ ಏನೂ ದುಃಖವಿಲ್ಲ. ಆದರೆ ಹಿಂದೂಕೋಡಿನಂತಹ ಉಪಪ್ರಶ್ನೆಯೊಂದಕ್ಕಾಗಿ ಸರಕಾರವು ರಾಜೀನಾಮೆ ಕೊಡುವುದು ನನಗಿಷ್ಟವಿಲ್ಲ. ಹೀಗಿದ್ದರೂ ಕೂಡಾ, ನನ್ನ ಹೆಂಡತಿಯ ಒತ್ತಾಯಕ್ಕೆ ನಾನು ಬಲಿಬೀಳುವುದಲ್ಲವಾಗಿದ್ದರೆ, ನಾನೀ ಹಿಂದೂಕೋಡು ಸುಸೂಯೆಯನ್ನು ಸಮರ್ಥಿಸುತ್ತಿದ್ದಿಲ್ಲ. (ದೊಡ್ಡ ನಗೆ) ನನ್ನ ಮಟ್ಟಿಗೆ ಧರ್ಮಕ್ಕಿಂತಲೂ ಮಿಗಿಲಾಗಿ ಗಂಡಾಂತರವೂ ಬಡಿದಿಲ್ಲ; ಆದರೆ ನನ್ನ ಮನೆ ಗಂಡಾಂತರಕ್ಕೆ ಗುರಿಯಾಗಿದೆ(ದೊಡ್ಡ ನಗೆ). ಹಿಂದೂ ಧರ್ಮಕ್ಕೆ ಗಂಡಾಂತರವೆಲ್ಲಿ, ಎಂಬುದೇ ನನಗೆ ಕಂಡಿಸುವದಿಲ್ಲ. ಹಿಂದುಗಳ ಕಳ್ಳರು, ದಗಾಖೋರರು, ಬಚ್ಚಾಳಗಳು, ಕಳ್ಳಸಂತೇವಾಲರು, ಲಂಚಪಡಕೊಳ್ಳುವವರು ಆಗಿರುವುದರಿಂದ ಹಿಂದೂ ಧರ್ಮಕ್ಕಾವ ಅಪಾಯವೂ ಬಡಿದಿಲ್ಲ. ಅಂದಮೇಲೆ, ಅದೊಂದು ಶಾಸನ ಸಾಧಾರಣೆ ಕೈಕೊಂಡ ಜನರಿಂದಾಗಿ ಹಿಂದೂಧರ್ಮಕ್ಕೆ ಗಂಡಾಂತರ ತಟ್ಟದು. ಅವರೇನೋ ಮತಿಮೀರಿದ ಹುರುಪು ತೋರಿಸಿರಬಹುದು. ಆದರೆ ವಾಸ್ತವಿಕ ಸಂಗತಿಗಳ ಕುರಿತು ನೀಚ ವರ್ತನೆಯನುಸರಿಸುವುದಕ್ಕಿಂತ ಶಾಸ್ತ್ರೀಕ ವಿಷಯಗಳಲ್ಲಿ ಅತಿರೇಕ ಹುರುಪಿನ ವರ್ತನೆಯುದು ಉತ್ತಮ, ರಾಷ್ಟ್ರಪತಿಯ ಕೊಲೆಯಾದುದು ಇಂತಹ ನಮ್ಮ ಮನೋವೃತ್ತಿಯಿಂದಾಗಿಯೇ. ಗೀತೆ ಮತ್ತು ಉಪನಿಷತ್ತುಗಳು ಬೋಧಿಸಿರುವ ಅತ್ಯುತ್ತಮ ತತ್ವಗಳಿಗನುಗುಣವಾಗಿ ಜೀವಿಸಿದ್ದವನಿಗಿಂತ ಒಬ್ಬ ಕೊಲೆಗಾರನು ಉತ್ತಮ ಹಿಂದುವೆಂದು ಊಹಿಸಲ್ಪಟ್ಟಿದ್ದಾನೆ. ಹಿಂದೂ ಸಮಾಜಿಕರು ತಮ್ಮ ಧರ್ಮದ ಕುರಿತು ಕಟ್ಟಕೊಂಡಿರುವ ಇಂತಹ ಹುಸಿಭಾವನೆಗಳನ್ನು ಸ್ವತಃ ತಾವೇ ಅರಿತುಕೊಳ್ಳಬೇಕೆಂಬ ನನ್ನ ಆಶೆ ಸ್ವಲ್ಪ ನಮ್ಮ ಧರ್ಮವು ಕೊಲೆಗಾರರಿಂದ ಮತ್ತು ಕಳ್ಳರಿಂದ ನಿರ್ಮಾಣಗೊಂಡಿಲ್ಲ. ಅದು ಸಾಧುಗಳಿಂದ, ಸನ್ಯಾಸಿಗಳಿಂದ ಮತ್ತು ಮಹಾತ್ಮರಿಂದ ರಚಿಸಲ್ಪಟ್ಟಿದೆ. ಮಸೂದೆಯನ್ನು ನಾನು ಸಮರ್ಥಿಸಲು ಮತ್ತೊಂದು ಕಾರಣ, 'ಅಪ್ರಾಗತಿಕ' ನೆಂದು ಕರೆಯಿಸಿಕೊಳ್ಳಲು ನನ್ನಿಷ್ಟವಿಲ್ಲ ದಿರುವುದೇ. ನಾನೋರ್ವ ಅಹಿಂದುವಾಗಿರಬಹುದು. ಆದರೆ ಓರ್ವ ಆಧುನಿಕ ಮನುಷ್ಯನು ಆಧುನಿಕನಾಗಿರದಿದ್ದರೆ, ಅಂಥವನ ಸ್ಥಾನವು ಆರ್ಥಾರ್ಮಿಕನಾಗಿರುವುದಕ್ಕಿಂತಲೂ ಅವಾಂತರದ್ದಾಗುವದು. ನಾನು ದೇವರನ್ನು ನಂಬದಿರಬಹುದು; ಆದರೆ ವಾಸ್ತವ್ಯ ರಾಷ್ಟ್ರಗಳಲ್ಲಿರುವಂತಹ ಪ್ರಗತಿ ದೇವನೆನ್ನು ನಾನು ನಂಬದಿರುವುದಾದರೂ ಹೇಗೆ? (ನಗೆ). ನಾನೊಂದು ಬಾರಿ 'ಅಪ್ರಾಗತಿಕ'ನೆಂದು ಕರೆಯಲ್ಪಟ್ಟಿದ್ದೆ. ಅದು, ನಾನು ಅಧ್ಯಕ್ಷನಾಗಿದ್ದ 'ಮೂಲಭೂತ ಹಕ್ಕುಗಳ ಸಮಿತಿ'ಯ ಮುಂದೆ ಪರ್ಯಾಪದ್ಧತಿಯು ಬರ್ಖಾಸ್ತಾಗಬೇಕೆಂಬ ಸೂಚನೆ ಬಂದಿದ್ದಾಗ. ಎಲ್ಲಾ ಪರ್ದೆಗಳೂ ತೊಲಗಬೇಕೆಂಬ ಶರ್ತದ ಮೇಲೆ ನಾನು ಕೊನೆಗೊಪ್ಪಿದ್ದೆ. ಸ್ತ್ರೀ ಜೈಯಿಂದ ಪುರಾತನ ಪರ್ದೆಯನ್ನುಚ್ಚಾಟಿಗೆದೊಗೆಯಬಹುದು. ಆದರೆ ಇತ್ತೀಚೆಗೆ ನಾನು ಥಿಲ್ಲಿಯಲ್ಲಿ ಸುತ್ತಾಡಿದಾಗ ಸದಾಕಾಲ ಮಸುಕು ಮುಚ್ಚಿಕೊಂಡೇ ಇದ್ದ ಓರ್ವ ಹೆಂಗಸಿನ ಮುಖ ನೋಡಲು ನನಗೆ ಬಹಳ ಕಷ್ಟವಾಯಿತು. ಆ ಮುಸುಕನ್ನು ಕಳಚಬೇಕಾದರೆ ಯಾವುದಾದರೊಂದು ಎಸಿಡನ್ನೇ ಚೆಲ್ಲಬೇಕಾದೀತು (ದೊಡ್ಡ ನಗೆ). 'ಮಾನುಷತ್ವ' ಸಮಾನತೆಯ ಮೇಲೆ ಎಂಥಾ ವಿಶ್ವಾಸವಿರುವವ ನಾನು; ನನ್ನ 'ಮಾನುಷತ್ವ"ದಲ್ಲಿ 'ಮಹಿಳತ್ವ'ವೂ ಅಡಕವಾಗಿದೆ. ಮಹಿಳೆಯರೊಂದಿಗೆ ತುಲನೆ ಮಾಡಿದರೆ ಪುರುಷರೇ ಹಲವು ವಿಧದ ಅಡ್ಡಿ ಆತಂಕಗಳಿಗೀಡಾಗಿದ್ದಾರೆ. ಸ್ವತಂತ್ರ ಭಾರತದಲ್ಲಿ ಮಹಿಳೆಯರು ಇಪ್ಪತ್ತರಲ್ಲೇ ಪುರುಷರ ಸರಿಸಮಾನ ದರ್ಜೆಗೆ ಬಂದಿದ್ದಾರೆ. ನನಗೆ ತಿಳಿದಿರುವ ಮಟ್ಟಿಗೆ ಅಮೆರಿಕದಲ್ಲಿ ಈ ವರೆಗೂ ಓರ್ವ ಸ್ತ್ರೀ ಗವರ್ನರ್ ಅಥವಾ ಓರ್ವ ಸ್ತ್ರೀ ಫೆಡರಲ್ ಮಂತ್ರಿ ಆಗಿಲ್ಲ. ಇಂಗ್ಲಾಂಡಿನಂತಹ ರಾಷ್ಟ್ರದಲ್ಲಿ ಕೂಡಾ ಮಹಿಳಾ ಮಂತ್ರಿಯಿಲ್ಲ. ಆಮೆರಿಕವಾಗಲೀ, ಇಂಗ್ಲೆಂಡಾಗಲೀ, ಓರ್ವ ಮಹಿಳೆಯನ್ನು ರಾಯಭಾರಿಯಾಗಿ ನೇಮಿಸಿಕೊಂಡುದಿಲ್ಲ. ಆದರೆ ನಮ್ಮ 'ರಾಯಭಾರಿನಕ್ಷತ್ರ'ಗಳಲ್ಲಿ ಒಬ್ಬರು ಮಹಿಳೆ. ಪುರುಷರೇ ಮಹಿಳೆಯರ ಸಮಾನತೆಗೆ ಬಂದಿಲ್ಲ. ಓರ್ವ ಹುಡುಗಿ ಒಳಗೆ ಕಾಲಿಟ್ಟಿಳಾದರೆ ನಾನು ಕೂಡಲೇ ಎದ್ದುನಿಲ್ಲುತ್ತೇನೆ. ಆದರೆ ಪ್ರಧಾನ ಮಂತ್ರಿಗಳು ಅಥವಾ ಕಾಂಗ್ರೆಸ್ ಅಧ್ಯಕ್ಷರು ಕೋಣೆಯೊಳಗೆ ಪ್ರವೇಶಿಸಿದರೂ ಸ್ತ್ರೀಯರೆದ್ದು ನಿಲ್ಲುವದಿಲ್ಲ. ಸಾಮಾಜಿಕ ಅಸ್ತಿಗಳು ಖಾಸಗೀ ಹಸ್ತಗಳಲ್ಲಿರುವುದನ್ನು ನಿರ್ಮೂಲಿಸುವ ವೃತ್ತಿಜ್ಞೆಯನ್ನು ಕಾಂಗ್ರೆಸು ತೊಟ್ಟಿರುವಾಗ ಅಸ್ತಿಯ ಸಂಬಂಧವಾಗಿ ಈ ಚಳವಳಿಯೇ ಕೋ ನನಗರ್ಥವಾಗುವದಿಲ್ಲ. ಮಹಿಳೆಗೊಂದು ಪಾಲುಕೊಡುವ ತತ್ವವನ್ನು ನಾನು ಹೃತ್ಪೂರ್ವಕ ಸಮರ್ಥಿಸುತ್ತೇನೆ. ಹುಡುಗಿಯರ ದತ್ತ ಸ್ವೀಕಾರಕ್ಕೆ ಈ ಮಸೂದೆಯೇಕೆ ಒಪ್ಪಿಗೆ ಕೊಟ್ಟಿಲ್ಲವೋ ನನಗರಿಯದು. ಮಕ್ಕಳನ್ನು ಪಡೆಯಲಾರದ ದಂಪತಿಗಳಿಗೆ ನಾನು. ನಾನು ಹೆಮ್ಮಕ್ಕಳಾಜತೆಯೊಂದನ್ನು ದತ್ತ ಸ್ವೀಕಾರ ಮಾಡಿದ್ದೆ; ಅವರಬ್ಬರೂ ತಮ್ಮ ಗಂಡಂದಿರನ್ನು ಕಟ್ಟಿಕೊಂಡು ಓಡಿಬಿಟ್ಟರು (ನಗೆ). ಇನ್ನೊಂದು ಹುಡುಗಿಯನ್ನು ದತ್ತಸ್ವೀಕಾರ ಮಾಡುವ ಇಚ್ಛೆ ಇನ್ನೂ ನನಗಿದೆ- ನನ್ನ ಮದುವೆಯು 'ಸಿವಿಲ್' ಆಗಿತ್ತು ಹೊರತು 'ಕ್ರೈಮಿನಲ್' ಆಗಿರಲಿಲ್ಲವಾದ್ದರಿಂದ ವಿನಾಹವಿಚ್ಛೇದನದ ಸಂಬಂಧವಾಗಿ ವ್ಯಕ್ತಿಶಃ ನನಗಾವ ಆಸಕ್ತಿಯೂ ಇಲ್ಲ. (ನಗೆ). ನನ್ನ ಹೆಂಡತಿಗೆ ತನಗಿಚ್ಛೆತೋರಿದಾಗ ನನ್ನನ್ನು ಬಿಟ್ಟುಬಿಡುವ ಸ್ವಾತಂತ್ರ್ಯವಿದೆ. ಈ ಮಟ್ಟಿಗೆ ಈ ಮಸೂದೆಯೂ ವಾಡಿಕೆಗಿಂತ ಹೆಚ್ಚು ಪೊಗ್ಗವಾಗಿದೆ. ಎಲ್ಲಾ ಮದುವೆಗಳೂ ಕೇವಲ ಐದು ವರುಷಗಳ ಮಟ್ಟಿಗೆ ಮಾತ್ರವಿರಬೇಕೆಂದೂ, ಐದು ವರುಷ ಅವಧಿ ಮುಗಿದೊಡನೆ ಮತ್ತೊಂದು ಐದು ವರುಷಗಳ ವರೆಗೆ ವಾಯಿದೆ ಮುಂದುವರಿಸಬೇಕೆಂದೂ ನನ್ನ ಸೂಚನೆ. (ನಗು) ಈ ಪುನರಾವರ್ತನೆಯು ಗ್ರಾಮ ಅಥವಾ ನಗರದ ಅಧಿಕಾರಿಯ ಮುಂದೊಂದು ಡಿಕ್ಲರೇಶನ್ ಕೊಡುವ ಮೂಲಕ ನಡೆದರಾಯಿತು. ಹೀಗೆ ಮಾಡಿಬಿಟ್ಟರೆ ವ್ಯಾಜ್ಯ ಅಥವಾ ಚಾಡಿ ತರಲಿಗಳಿಗೆ ಅವಕಾಶವೇ ಇರದು. ಮತ್ತಿದು ಅತ್ಯಂತ ಆಧುನಿಕ ಮರ್ಜಿಯದಾಗಿ, ಪ್ರಗತಿ ಮತ್ತು ಮುಂಗತಿಯ ಹೊಸ ಧರ್ಮಾದ ಎಲ್ಲ ಅವಶ್ಯಕತೆಗಳನ್ನೂ ಪೂರೈಸಿಕೊಡುವಂತಹದಾಗುವದು"(ನಗೆ)

ಮಸೂದೆಯನ್ನು ಖಂಡಿಸಿಯೂ, ಸಮರ್ಥಿಸಿಯೂ ಬೇರೆ ಹಲವು ಸದಸ್ಯರು ವ್ಯಾಮುಮ್ಯ ಭಾಷಣಗಳನ್ನಿತ್ತಿದ್ದರು. ಮಸೂದೆಯ ಚರ್ಚೆಯನ್ನು ವರುಷಾಂತ್ಯದ ವರೆಗೆ ಮುಂದುವರಿಸಬೇಕೆಂದು, ಮತ್ತು ಈ ಮಸೂದೆಯ ಪುನರಾಲೋಚನೆಗಾಗಿ ಆದಿಯ ಸಿಲೆಕ್ಟ್ ಕಮಿಟಿಗೇನೆ ಮರಳಿ ಒಪ್ಪಿಸಬೇಕೆಂದು ಬಂದಿದ್ದ ಎರಡೂ ಉಪಸೂಚನೆಗಳೂ ಬಿದ್ದುಹೋದುವು. ಕೊನೆಯಲ್ಲಿ ಖಂಡಿತ ನಿಶ್ಚಿತಾರ್ಥ ಗೊಳ್ಳುವ ಈ ಸಂಬಂಧಿತ ನಿರ್ಣಯವನ್ನು ಸ್ವೀಕರಿಸಿ ಸಭೆಯು ಕಲಾಪ ಮುಂದೂಡಿತು. ಜಂಕ್ಷನ್ ಸಭೆಯಲ್ಲೇ ಆದರ ಪ್ರಥಮ ಪರ್ಯಾಲೋಚನೆ ಮುಗಿಯಬೇಕೆಂದು ನಮ್ಮ ಬಯಕೆಯಲ್ಲವೆ? ಇಂತಹ ಸ್ಮಾಮುಖ್ಯ ಮಸೂದೆಯ ಪರವಾರ ಚರ್ಚೆ ಮತ್ತು ತಿದ್ದುಪಡಿಗಳಿಗೆ ಬೇಕಾದಷ್ಟು ಅವಕಾಶ ಕೊಡುವುದೂ ತಮ್ಮ ಉದ್ದೇಶವೆಂದರು. ಕೊನೆಗೆ ಡಾ। ಅಂಬೇಡ್ಕರ್ ಅಕ್ಷೇಪಗಳಿಗೆಲ್ಲಾ ಸಮರ್ಪಕ ಉತ್ತರವಿತ್ತರು. ಆ ವೆ ಸೂಚನೆಯು ಮತಕ್ಕೆ ಬಿದ್ದು 11 ಮಂದಿ ವಿರುದ್ಧ ಮತ ಕೊಟ್ಟರೂ, ಹಲವರು ತಟಸ್ಥರಾಗಿದ್ದರೂ, ಬಹುಮತದಿಂದ ಮಂಜೂರಾಯಿತು. ಹಿಂದೂ ಕೋಡು ಮಸೂದೆಯ ಪ್ರಥಮ ವಾಚನವು ಈ ರೀತಿ ತಾ. 19ರಲ್ಲಿ ಮುಗಿದಿದೆ.

ಹಿಂದೂ ಕೋಡು ಮಸೂದೆಯ ಚರ್ಚೆ.

ದಿ ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡಕೊಂಡ ಸಾಲವನ್ನು ನೋಟೀಸು ಕೊಟ್ಟಾಗ್ಯೂ ಮರುಪಾವತಿ ಮಾಡದೆ, ಅಸಲು ವಡ್ಡಿ ಬಾಕಿ ಮಾಡಿಕೊಂಡಿರುತ್ತಾರೆ. ಸದ್ರಿ ನಗದುಗಳನ್ನು ತಾ. 5-1-1950ನೇ ಗುರುವಾರ ಪೂರ್ವಾಹ್ನ ಗಂಟೆ 12ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂ ಆದೇ ದಿವಸ ಸಂಪೂರ್ಣವಾಗದಿದ್ದಲ್ಲಿ, ಬ್ಯಾಂಕಿಗೆ ಯುಕ್ತಕಂಡ ದಿನಕ್ಕೆ ಮುಂದುವರಿಸಲಾಗುವುದು ತಿಳಿದಿರುವುದು.

ಲೋನು ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು
77/40	ಕೆ. ಆನಂತರಾಮಯ್ಯ, ಅಚ್ಚುಕಟ್ಟು ಜ್ಞಾನುಭವಿಗಳ ಮಗ, ಕಟೀಲು.	ರೂ. 18-0-0
22/45	ಪಿ. ಶಿವರಾವ್, ಪಿ. ಸುಬ್ಬರಾಯರ ಮಗ, ಪೊಳಲಿ, ಬೆಳ್ಳಾರು.	ರೂ. 4-0-0

Office of the Bank
Mulki
Date 16-12-1949

ಯಂ ಆರ್ ಯಚ್ ಪೂಂಜ.
ಸೆಕ್ರೆಟರಿ
ಮುಲ್ಕಿ ಬೇಂಕ್, ಲಿಮಿಟೆಡ್.

ಉಡುಪಿ
ಯಕ್ಷಗಾನ ಕಲಾವಿದರ ಸ್ಪರ್ಧೆ

ಉಡುಪಿಯಲ್ಲಿ ಜರಗಲಿರುವ "ಉಡುಪಿ ಪರ್ಯಾಯ ವಸ್ತು ಪ್ರದರ್ಶನ" ಕಾಲದಲ್ಲಿ ನಮ್ಮ ಜಿಲ್ಲೆಯ ಯಕ್ಷಗಾನ ಕಲೆಗೆ ಗ್ರೋವ ಮತ್ತು ಪ್ರೋತ್ಸಾಹಗಳನ್ನು ಕೊಡುವ ಸಲುವಾಗಿ, ಈ ಸಪ್ತಾಹವನ್ನು ಮಾಡಲಾಗಿದೆ. ಈ ಸ್ಪರ್ಧೆಯು ತಾ. 10ರಿಂದ 13ರ ವರೆಗೆ ನಡೆಯುವುದು. ಸ್ಪರ್ಧೆಗಳು ಹೆಚ್ಚಿದಷ್ಟೂ, ಇನ್ನೂ ಹೆಚ್ಚಿನ ಅವಕಾಶ ಕೊಡಬಹುದು. ಪ್ರದರ್ಶನದ ಕೊನೆಯ ದಿನ ದಕ್ಷಿಣ ಕನ್ನಡ ಜಿಲ್ಲೆಯ ಗಣ್ಯ ಮಂಜನೇಯರೊಬ್ಬರ ಹಸ್ತದಿಂದ, ಈ ಬಹುಮಾನವನ್ನು ಪ್ರದರ್ಶನ ಸಮಿತಿಯ ಸಲುವಾಗಿ ಆರ್ಪಿಸಲಾಗುವುದು.

ಸ್ಪರ್ಧೆಯ ವಿವರಗಳು

ಮೇಳಗಳ ಸ್ಪರ್ಧೆ:- ಸಮಾನಾದ ಹಿಮ್ಮೇಳನದೊಡನೆ ಸಾಮಾನ್ಯ ಖಾಲ್ಯಮಂದಿ ವೇಷಧಾರಿಗಳಿಂದ ಕೂಡಿದ್ದು, ದುಃಖ ಮತ್ತು ರೌದ್ರ ರಸ ಪ್ರಧಾನವಾದ ಯಾವುದೇ ಪ್ರಸಂಗವನ್ನು, ತಮಗೆ ಯುಕ್ತ ಕಂಡಂತೆ ಆರಿಸಿ, ಗರಿಂದ ೧॥ ಘಂಟೆಯ ಒಳಗೆ ತೋರಿಸಬಹುದು. ಇದು ಒಟ್ಟು ಮೇಳಕ್ಕೆ ಸಲ್ಲುವ ಬಹುಮಾನ. ಹಿಮ್ಮೇಳ, ಅರ್ಥಗಾರಿಕೆ, ವೇಷ, ಕುಣಿತ- ಈ ನಾಲ್ಕು ಅಂಶಗಳನ್ನು ಗಣನೆಗೆ [illegible] ಅಲ್ಲದೆ ಸಂಘಾಪಚಿತಗಳು ಮಿತವಾಗಿರಬೇಕು.

ವ್ಯಕ್ತಿ ಸ್ಪರ್ಧೆ:- ತಮ್ಮದೇ ಆದ ಹಿಮ್ಮೇಳ ಹೊಂದಿಸಿಕೊಂಡು ಸ್ತ್ರೀವೇಷದಲ್ಲಾಗಲೀ, ಪುರುಷ ವೇಷದಲ್ಲಾಗಲೀ, ರಾಕ್ಷಸ ವೇಷವಲ್ಲಾಗಲೀ 30 ನಿಮಿಷದ ಅವಧಿಗೆ ವಿಸ್ತಾರವಾಗಿ ಪ್ರದರ್ಶಿಸುವುದು.

ಆರಿಸುವ ಅಂಶ:- ಪಾತ್ರ, ಅವರವರಿಗೆ ದಿಟ್ಟವಾದ್ದು. ಪರಾಕ್ರಮ ಮತ್ತು ಕೋಕರಸ ಪ್ರಧಾನ ಪಾತ್ರಗಳನ್ನು ವಹಿಸುವುದು. ಉದಾ:-ಕರ್ಣನು ಮಗನ ವೃತಿಗಾಗಿ ಮಾಡಿಸಿ ಕದನಕ್ಕೆ ಹೊರಡುವುದು. ಕುಣಿತ, ಭಾವ, ಅರ್ಥ, ವೇಷ-ಈ ನಾಲ್ಕು ಅಂಶಗಳನ್ನು ಗಣನೆಗಳಾಗುವುದು.

ಬಹುಮಾನ:-ಚಿಷ್ಟದ ಬಲಿ

ವಿನಂತಿ:- ನಮ್ಮ ಜಿಲ್ಲೆಯ ಯಾವತ್ತು ಮೇಳದವರು, ವ್ಯಕ್ತಿಗಳು ಪ್ರವೇಶ ಧನವಿಲ್ಲದೆ ಸ್ಪರ್ಧಿಸಬಹುದು. ಮೇಳಕ್ಕೆ ಸೇರಿದ ಪಾತ್ರಗೇ ಪಂಗಡಗಳಾಗಲೀ, ವ್ಯಕ್ತಿಗಳಾಗಲಿ ಸ್ಪರ್ಧಿಸಲು ಬಯಸುವಲ್ಲಿ ಸ್ವೀಕರಿಸಿ ತೊಡನೆವ ಎರಡು ದಿನಗಳ ಮುಂಚೆ, ಪರೀಕ್ಷಕರ ಮುಂದೆ ಪಾತ್ರಗಳಿಂದ ಅಡಿ ತೋರಿಸಿ ಸ್ಪರ್ಧೆಗೆ ಅನುಮತಿಗಳಿಸಲೇ ಬೇಕಾಗುತ್ತದೆ. ನ್ಯೂನತೆಗಳಿಗೆ ಈ ಸಿಯಮವಿಲ್ಲ.

ಸ್ಪರ್ಧೆಗೆ ಉತ್ತುಳರಾದವರು ತಮ್ಮ ಸಂಬಂಧದ ವಿಳಾಸವನ್ನು ಜನವರಿ ತಾ. 5ರೊಳಗೆ ತಿಳಿಸಿದಲ್ಲಿ, ಅವರಿಗೆ ಗೊತ್ತು ಪಡಿಸುವ ಸ್ಪರ್ಧೆಯ ಕಾಲ, ದಿನಗಳನ್ನು ಕೂಡಲೇ ತಿಳಿಸಲಾಗುವುದು.ಎಂದು ಉಡುಪಿ ಪರ್ಯಾಯ ವಸ್ತು ಪ್ರದರ್ಶನದ ಜನರಲ್ ಕಾರ್ಯದರ್ಶಿಯರು ಬರೆಯುತ್ತಾರೆ.

ಮುಂಗಳೂರು

ಮುನಿಸಿಪಲ್ ಕೌನ್ಸಿಲ್ ಮೊಕ್ತೇಸರ ಹುದ್ದೆ ರದ್ದು

ಸಿ. ಪಿ. ಪಾಮಿಸರ ಅಧ್ಯಕ್ಷತೆಯಲ್ಲಿ ಜರಗಿತು. ಪದವ್ತು ಲಾಟಾನುಗಳಿಗೆ ರೂ. 1175/- ವೆಚ್ಚ ಮಾಡಬಹುದೆಂದಾಯಿತು. ಜೋಗಿನಿಂದ ವಿದ್ಯುತ್ ಬೇಗನೆ ಬರುವಂತಾಗಬೇಕೆಂದು ಸರಕಾರವನ್ನು ಕೇಳಿಕೊಳ್ಳಲಾಯಿತು. ನಗರಸಭೆಯ ಆರೋಗ್ಯ ಅಧಿಕಾರಿಗಳ ಅಪ್ಪಣೆ ಮೇರೆಗೆ ಪಾಯಿಖಾನೆ ಕಟ್ಟುವವರಿಗಾಗಿ ಸಿಮೆಂಟು ದಾಸ್ತಾನು ಮಾಡುವುದಕ್ಕೂ ಅದನ್ನು ತಕ್ಕ ಗಿರಾಕಿಗಳಿಗೆ ಮಾರಾಟ ಮಾಡುವುದಕ್ಕೂ ಲೈಸೆನ್ಸು ಕೊಡಬೇಕೇಂಬ ಸರಕಾರವನ್ನು ಕೇಳಿಕೊಳ್ಳಲಾಯಿತು. ಸಾರ್ವಜನಿಕ ಕೆಳಸ್ತರದ ನೌಕರರ ಕೇಳಿಕೆಗಳನ್ನು ಪರಿಶೀಲಿಸಲು ಒಂದು ಸಮಿತಿಯ ನೇಮಕವಾಯಿತು.

ವರ್ಗಾವರ್ಗಿ—ಮಂಗಳೂರಿನ ಸಬ್ ಡಿವಿಜನಲ್ ಆಫೀಸರರಾದ ಜನಾಬ್ ಎಸ್. ಅಬ್ದುಲ್ ರಹಿಮಾನ್ ಸಾಹೇಬರು ಕುಂದಾಪುರಕ್ಕೆ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನಕ್ಕೆ ಪುತ್ತೂರಿನಿಂದ ಶ್ರೀ. ಪರಶುರಾಮ ನಾಯ್ಕರು ನೇಮಕ ಹೊಂದಿ ಚಾರ್ಜು ವಹಿಸಿರುವರು. ಪುತ್ತೂರಿಗೆ ಶ್ರೀ. ಎಚ್. ನರಸಿಂಹರವರ ನೇಮಕವಾಗಿದೆ.

ಎರಡು ತಿಂಗಳ ಬೋನಸ್—ದ. ಕ. ಜಿಲ್ಲೆಯ ಸೆಂಟ್ರಲ್ ಕೊಪರೇಟಿವ್

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

S C. No. 315/1949

ಬಾಪಕುಂಞಿ ಬ್ಯಾರಿ —ವಾದಿ

ಮತ್ತು

ಆದಂಮೂನ್ ಬ್ಯಾರಿ, ಮಹಮ್ಮದ ಬ್ಯಾರಿ ಮಗ, ಕಾಸರಗೋಡು ತಾಲೂಕು ಅರಿಕ್ಕಾಡಿ ಗ್ರಾಮದ ಕೋಪ್ಪಳದಲ್ಲಿರುವವ—ಪ್ರತಿವಾದಿ.

ಪ್ರೊಮಿಸರಿ ನೋಟಿನ ಅನ್ವಲ ಬಡ್ಡಿಯ ರೂಪಾಯಿ 234-5-8ರ ವಸೂಲಿ ಕುರಿತು ವಾದಿಯು ದಾಖಲು ಮಾಡಿದ ಸದರಿ ವ್ಯಾಜ್ಯವು ತಾ. 7-1-50ರಲ್ಲಿ ನೇಲ್ತಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿದೆ. ಪ್ರತಿವಾದಿರು ಆ ಕ್ಷೇಸ ಇತ್ತಲ್ಲಿ ಸದರಿ ತಾರೀಕಿನ ವರಗೆ ದಾಖಲು ಮಾಡದಿದ್ದಲ್ಲಿ ಎಕ್ಸಪಾರ್ಟೆ ತೀರ್ಪು ಆಗುವ ಸಂಗ್ತಿ ಈ ಮೂಲಕ ತಿಳಿಸೋಣಾಗುತ್ತದೆ.

K. Ganesh Rao,
ವಾದಿಕರೆ ವಕೀಲರ್.

ಕಾಸರಗೋಡು
ತಾ. 19-12-49



ಶ್ರೀ ಕೊಂಡ್ಲರ್
ಶ್ರೀನಿವಾಸ
ರಾಯರ

'ಸುಲಭದಲ್ಲಿ ಇಂಗ್ಲಿಷ್'
(ENGLISH MADE EASY)
ಮನೆಯಲ್ಲಿ ನೀವಾಗಿ ಇಂಗ್ಲಿಷ್ ಕಲಿತುಕೊಳ್ಳಲಿಕ್ಕಾಗುವ ಪುಸ್ತಕ.
ಬೆಲೆ: ೧—೮—೦

ಡಾಕ್ಟರ್ ಕೊಂಡ್ಲರ್ ವೆಂಕಟ್ರಾಯರ
'ಮನೆ ಮದ್ದು'
(HOME REMEDIES)
೩೦೦ ಕಾಹಿಲೆಗಳಿಗೆ ಮನೆಯಲ್ಲೇ ಮಾಡಿಕೊಳ್ಳಬಹುದಾದ ೧೦೦೦ ಮದ್ದುಗಳ ವಿವರ ವಿರುವ ಪುಸ್ತಕ. ಬೆಲೆ: ರೂ. ೨—
ಪ್ರತಿಗಳು ನವ್ಯೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ಬರೆಯಿರಿ—
ನವಭಾರತ ಪುಸ್ತಕ ಭಂಡಾರ,
ಉಡುಪಿ.
ನವಯುಗ ಪ್ರೆಸ್, ಉಡುಪಿ.

ಭೈಂಕಿನ ಪರ್ಯಾಯದಿ ನಮಾ ಸಭೆಯು ಶ್ರೀಂಕಿನ ಹೊಸ ಬಿಟ್ಟಿದದಲ್ಲಿ ಶ್ರೀ ಮೊಳಹಳ್ಳಿ ಶಿವರಾಯರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿ ಬೇಂಕಿನ ಶಿಬಂದಿಗೆ ಎಜಮಾನಿಗಳ ಸಂಬಳಸವ್ತು ಜೋನಸ್ಸನ್ನು ಪರಿಚಯಿಸಲಾಯಿತು.

ದ. ಕ. ಜಿಲ್ಲಾ ಖಾದಿ ಸಮಿತಿ ಸಭೆಯು ದ. ಕ. ಜಿಲ್ಲಾ ಗ್ರಾಮೋದ್ಯೋಗ ಸಂಘದ ಆಶ್ರಯದಲ್ಲಿ ಮಂಗಳೂರು ಕೋರ್ಟಿ ಕಾಲೆಯಲ್ಲಿ ಶ್ರೀ ಬಿ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಗೆ ಶ್ರೀಗಳಾದ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಜಿ. ಮುಕುಂದ ಪ್ರಭು, ಎಚ್ ನಾರಾಯಣ ರಾವ್, ಕೆ. ಕರಿಯಣ್ಣ ಸೆಟ್ಟಿ, ಉಪೇಂದ್ರ ನಾಯಕ್, ಬಿ ನಾರಾಯಣ ರಾವ್ ಮತ್ತು ಕೊಚ್ಚಿಕಾರ್ ಪಾಂಡುರಂಗಯ್ಯ ಇವರುಗಳು ಹಾಜರಿದ್ದರು. ಜಿಲ್ಲೆಯಲ್ಲಿ ಖಾದಿ ಉತ್ಪನ್ನದ ವಸ್ತ್ರಗಳ ಮಾರಾಟದ ಯೋಜನೆಯ ವಿಷಯ ಚರ್ಚೆ ನಡೆದು, ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಸೂಲುಪ ಉಪಾಧ್ಯಾಯರಿಗೆ ಪತ್ರಿಯ ಬತ್ತಿಗಳನ್ನು ಹಂಚಬೇಕೆಂದು ನಿರ್ಧಾರವಾಯಿತು. ಜರಕಾ ಸಂಘದ ಹೊಸ ಯೋಜನೆಯಂತೆ ದ. ಕ. ಜಿಲ್ಲೆಯಲ್ಲಿ ಯೂ ನೂಲುವವರ ಕ್ಲಬ್ಬುಗಳನ್ನು ತೆರೆಯಬೇಕೆಂದಾಯಿತು.

ಬಿರುಗಾಳಿ ಪೀಡಿತರಿಗೆ ಸಹಾಯ—ನೀಡುವ ಸಲುವಾಗಿ ಮದ್ರಾಸು ಗವರ್ನರರು ಒಂದು ನಿಧಿಯನ್ನೇರ್ಪಡಿಸಲು ಸಮಿತಿ ರಚಿಸಿದ್ದಾರಲ್ಲದೆ ಎಲ್ಲರೂ ಧನಸಹಾಯವೀಯಬೇಕೆಂದೂ ವಿನಂತಿಸಿದ್ದಾರೆ. ಅದರಂತೆ ದಕ್ಷಿಣಕನ್ನಡ ಜಿಲ್ಲೆಗೂ ಒಂದು ಅಂಥ್ರ ಸಂಕಷ್ಟ ನಿವಾರಣಾ ಸಮಿತಿಯು ರಚನೆಯು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಆಗಿದೆ. ತಾಲೂಕು ಕಮಿಟಿಗಳ ರಚನೆ ಸದ್ಯದೇ ಆಗಲಿರುವುದು.

ಮಹಾಮಹಿಮೆ ಶಾರದಾಮಣಿ ದೇವಿ ದಿನಾಚರಣೆ—ಶ್ರೀರಾಮಕೃಷ್ಣ ಪರಮಹಂಸರ ಧರ್ಮಪತ್ನಿಯವರೂ ಶ್ರೀರಾಮಕೃಷ್ಣ ವಿಶ್ವಸಿನಲ್ಲಿ ಮಹಾಮಾತೆಯೆಂದು ಪ್ರಸಿದ್ಧರಾದವರೂ ಆದ ಶಾರದಾಮಣಿ ದೇವಿಯವರ 97ನೆ ಜನ್ಮದಿನೋತ್ಸವವು ಸ್ಥಳೀಯ ಶ್ರೀರಾಮಕೃಷ್ಣ ಮಠದಲ್ಲಿ ಇನೇ ತಾ. 12 ರಲ್ಲಿ ಶ್ರೀಮತಿ ಎಚ್. ಸರ್ವಮಂಗಳಮ್ಮನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಯಾರಾದ ಕೆ. ಗಿರಿಜಾಬಾಯಿ ಮತ್ತು ಎಮ್. ನಿನ್. ಕಸ್ತೂರಿಯವರು ಭಾಷಣ ಮಾಡಿದರು. ಪೂಜೆ, ಪ್ರಸಾದ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಘಾತನವಾದ ಮರಿಯ ಮ್ಮನ ಯಾತ್ರಿಕ ವಿಗ್ರಹವು ಇದೇ ತಾ. 15 ರಲ್ಲಿ ಮಂಗಳೂರಿಗೆ ಬಂದಾಗ ಸ್ಥಳೀಯ ಕೈಸ್ತ ಸಮಾಜದವರು ಸಾಸ್ವಾಗತವನ್ನಿತ್ತು ಮಂದಬೆಗೆಯಲ್ಲಿ ಎ ಲೋ ಸಿಯಸ್ ಕಾಲೇಜಿಗೊಯ್ದು ಅಲ್ಲಿ ಪೂಜಿಸಿದರು. ಮರು ದಿನವೂ ವಿಗ್ರಹದ ಮೆರವಣಿಗೆ ನಡೆಯಿತು. ಸಂಜೆ ಕೇಂದ್ರ ಮೈದಾನಿಗೆ ಮೆರವಣಿಗೆಯಿಂದ ಮರಿಯಮ್ಮನ ಮೂರ್ತಿಯನ್ನು ತಂದು ವಿದ್ಯುತ್ ದೀಪಗಳಿಂದ ಬೆಳಗುವ ಗುಂಟಪದಲ್ಲಿರಿಸಲಾಯಿತು. ಅಲ್ಲಿಂದ ಮೂರ್ತಿಯನ್ನು ರಾಜಾರಿಯೋ ಇಗರ್ಜಿಗೊಯ್ದು ಇರಿಸಲಾಯಿತು.

ತಾ. 17ರಲ್ಲೂ ಕೆಥೋಲಿಕ್ ಸಂಸ್ಥೆಗಳ ಇದಿರಿನಿಂದ ಮೆರವಣಿಗೆಯಾಗಿ ಸಂಜೆ ಮಿಲಾಗ್ರಿಸ್ ಇಗರ್ಜಿಯಲ್ಲಿರಿಸಲಾಯಿತು. ತಾ. 18ರಲ್ಲಿ ಬೆಳಿಗ್ಗೆ ಮಹಾಪೂಜೆಯಾಗಿ ಯಾತ್ರಿಕ ವಿಗ್ರಹವನ್ನು ಕಲ್ಲಿಕೋಟೆಗೊಯ್ಯಲಾಯಿತು. ಜಾಗತಿಕ ಶಾಂತಿಯ ಪ್ರಾರ್ಥನೆಗಾಗಿ ಘಾತಿಮದ ಮರಿಯಮ್ಮನವರು ಯಾತ್ರೆ ಹೊರಟುದೆಂದು ಹೇಳಲಾಗಿದೆ.

ರನ್ನಕವಿಯ ಸಹಸ್ರಮಾನೋತ್ಸವವು ಇದೇ ತಾ. 18ರಲ್ಲಿ ಥಿಯಾಸಾಫಿಕಲ್ ಲಾಜಿನಲ್ಲಿ ಶ್ರೀ ಟಿ. ಎಚ್. ಎಮ್. ಸಶಾಶಿವಯ್ಯ (ಸಬ್ ಜಡ್ಜ್) ಅವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಕಡೆಂಗೋಡ್ಲು ಶಂಕರಭಟ್ಟ, ಎಮ್. ಆರ್. ಶಾಸ್ತ್ರಿ ಮೊದಲಾದವರ ಭಾಷಣಗಳೂ ಶ್ರೀಗಳಾದ ಶ್ರೀನಿವಾಸ ಉಡುಪ, ಕೆ. ವಿ. ಹರಿದಾಸ್ ಅವರುಗಳ ವಾಚನದ ಮೊದಲಾದ ಕಾರ್ಯಕ್ರಮಗಳೂ ಆದುವು.

ದ. ಕ. ಜಿಲ್ಲಾ ಪತ್ರಿಕೋದ್ಯೋಗಿ ಸಂಘ

ಪತ್ರಿಕೋದ್ಯೋಗ ಹಾಗೂ ಪತ್ರಿಕೋದ್ಯೋಗಿಗಳ ಅಭ್ಯುದಯದ ಉದ್ದೇಶದಿಂದ ಈ ಸಂಘವನ್ನು ಪುನರುಜ್ಜೀವನಗೊಳಿಸಿ ನವೀಕರಿಸಿ ನಿರ್ಣಯಿಸಿರುವದರಿಂದ ಜಿಲ್ಲೆಯಲ್ಲಿರುವ ಎಲ್ಲಾ ಪತ್ರಿಕೋದ್ಯೋಗಿಗಳು ಸಂಘದ ಸದಸ್ಯರಾಗಬೇಕಾಗಿ ಈ ಮೂಲಕ ಕೇಳಿಕೊಳ್ಳೋಣಾಗುತ್ತದೆ.

ಪತ್ರಿಕೋದ್ಯೋಗದ ಅಭಿವೃದ್ಧಿಯಲ್ಲಿ ಪ್ರಭುದ್ಧತೆಯಿದ್ದು ಸ್ವತಃ ಪತ್ರಿಕೋದ್ಯೋಗಿಗಳಲ್ಲದವರನ್ನು ಕೂಡಾ ಸಂಘಕ್ಕೆ ಸಹಾಯಕ ಸದಸ್ಯರನ್ನಾಗಿ ನೇರಿಸಲು ನಿರ್ಧರಿಸಲಾಗಿದೆ. ಸಂಘದವರೆಲ್ಲರೂ ಸಹಾಯಕ ಸದಸ್ಯರಾಗಬೇಕಾಗಿ ಕೇಳಿಕೊಳ್ಳೋಣಾಗುತ್ತದೆ.

ಸಂಘಕ್ಕೆ ಸದಸ್ಯರಾಗಲಿಚ್ಛಿಸುವ ಪ್ರತಿ ಪತ್ರಿಕೋದ್ಯೋಗಿಗಳು ವರ್ಷಕ್ಕೆ ಒಂದರ ಬಾಬಾಯಿ ಮೂರರಂತೆಯೂ ಸಹಾಯಕ ಸದಸ್ಯರಾಗುವವರು ವರ್ಷಕ್ಕೆ ಒಂದರ ರೂಪಾಯಿ ಆರಂತೆಯೂ ವಂತಿಗೆ ಕೊಡಬೇಕಾಗಿ ವಿನಂತಿಸಿಕೊಳ್ಳಲಾಗುತ್ತದೆ.

ಸಂಘದ ಘಟನೆ ನಿಯಮಗಳನ್ನು ತಿಳಿಯಲಪೇಕ್ಷಿಸುವವರು ಕೊಡಿಯಾಲಬೈಲಲ್ಲಿರುವ ಸಂಘದ ಕಛೇರಿಗೆ ಸ್ವತಃ ಬಂದು ಅಥವಾ ಪತ್ರಮುಖೇನ ತಿಳಿದುಕೊಳ್ಳಬಹುದು ಎಂದು ಸಂಚಾಲಕರು ತಿಳಿಸುತ್ತಾರೆ.

"ಮಿನಾನು ವ್ಯವಸಾಯ"

ಮಿನಾನು ವ್ಯವಸಾಯ ತುಂಬಾ ಲಾಭದಾಯಕ ಮತ್ತು ಸುಲಭ ಪರಿಸ್ಥಿತಿಯಲ್ಲಿ ಮಾಡಲು ಸಾಧ್ಯ. ಕೆರೆ, ಕೊಳ, ಹಳ್ಳ, ಗದ್ದೆ ಮೊದಲಾದ ಪ್ರದೇಶಗಳಲ್ಲಿ ಸುಲಭದಲ್ಲಿ ಮಿನಾನು ವ್ಯವಸಾಯ ಮಾಡಲು ಪ್ರೋತ್ಸಾಹ ಮತ್ತು ಅದಕ್ಕೆ ಬೇಕಾದ ಸಲಕರಣೆಗಳನ್ನು ಒದಗಿಸಿ ಕೊಡುವರೆ ಗವರ್ನ್‌ಮೆಂಟ್ ಫಿಶರೀಸ್ ಡಿಪಾರ್ಟ್‌ಮೆಂಟು, ಮಂಗಳೂರು ಕಾಸರಗೋಡು ಪುತ್ತೂರು, ಕಾರ್ಕಳ, ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ ಫಿಶರೀಸ್ ಬಾತಿಯ ಇನ್ಸ್‌ಪೈರಿಂಗ್ ಡೆಮೊನ್‌ಸ್ಟ್ರೇಟರು ಅಲ್ಲದೆ ಅಸಿಸ್ಟೆಂಟು ಡೆಮೊನ್‌ಸ್ಟ್ರೇಟರು ಮತ್ತು ಸಬ್ ಇನ್ಸ್‌ಪೈರರನ್ನು ಇತ್ತೀಚೆ ನೇಮಿಸಿರುತ್ತಾರೆ. ಜಾವಾ, ಜರ್ಮನಿ, ಪ್ರಸ್ಯಾ ಮುಂತಾದ ಪರದೇಶಗಳಿಂದ ಬಯಸಿ ಬರಿಸಿದ ಬಲೆ ಪಿಡುವಂತಾ ಗೂ ರಾಮಿನ ಮಿರಾತ್ ಕಾರ್ಪ್ ಗೋಲ್ಡನ್ ಸಾರ್ ಇತ್ಯಾದಿ ಮಿನುಗಳಲ್ಲದೆ ಹೊರದೇಶಗಳಲ್ಲಿ ಸಾಕಲಾಗುವ ಗಂಗಾ, ಕೃಷ್ಣಾ, ಕಾವೇರಿ, ಗೋದಾವರಿ ನದಿಗಳಿಂದ ಬರಿಸಲ್ಪಟ್ಟ ರೋಹು, ಮೃಗಾಲ, ಕಟ್ಲಾ ಮುಂತಾದ ಮಿನುಗಳು ಮಿನು ವ್ಯವಸಾಯಗಾರರಿಗೆ ಪೂರೈ ಹೇಳದ ಫಿಶರೀಸ್ ಆಫೀಸರವರಿಂಗಳಿಂದ ಅತಿಸುಲಭ ಕ್ರಯಕ್ಕೆ ವ್ಯವಸಾಯ ಮಾಡುವರೆ ಜೊರೆಯಿಸುವುದು. ಜನಸಾಮಾನ್ಯರೆಲ್ಲರೂ ತಮ್ಮ ತಮ್ಮ ಪ್ರದೇಶಗಳಲ್ಲಿ ಮಿನು ವ್ಯವಸಾಯ ಆದಷ್ಟು ಬೇಗನೆ ನಡಿಸಿ ಈಗಿನ ಆಹಾರ ಸಮಸ್ಯೆಯನ್ನು ದೂರ ಪಡಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿರುತ್ತದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡೆಯುತ್ತಿರುವ ಚಿತ್ರ

ಫಿಲ್ಮ್‌ಸ್ಥಾನದವರ **ಆಕಸ್ಮಿಕ** (ಹಿಂದಿ)

ತಾರಾಗಣ: ರೆಹನಾ, ಪ್ರೇಮಅದೀಬ್, ಮತ್ತು ಮಿನಾ.

ಬರುವ ಚಿತ್ರ: "ಸೆಲ್ವಂ" ಫಿಲ್ಮನವರ **ವಾರಿಯಮ್ಮನ್** (ತಮಿಳು)
L. S. ರಾಮಚಂದ್ರನ್—ದಿಗ್ದರ್ಶಕ.

ಪರ್ಯಾಯ ಸ್ಪೆಶಲ್—
ನಾಗಕನ್ನಿಕಾ (ಕನ್ನಡ ಚಿತ್ರ)

ಉಡುಪಿಯ ಬಹುದಿನಗಳ ಕೊರತೆಯೊಂದು ನೀಗಿತು!
ಮನಸ್ಸಿಗೆ ಉಲ್ಲಾಸದಿಯುವ ಸ್ವಚ್ಛ ವಾತಾವರಣದಲ್ಲಿ
ಹಿತವಾದ ಸೌಕರ್ಯಗಳಿಂದ ಕೂಡಿದ ಮೇಲ್ತರಗತಿಯ
ಬ್ರಾಹ್ಮಣರ ಊಟ ಮತ್ತು ವಸತಿ ಗೃಹ.

ವುಡ್‌ಲ್ಯಾಂಡ್ಸ್, ಉಡುಪಿ

WOODLANDS, UDIPI.

Brahmins Boarding & Lodging

Padananda Rao, Kunjoor,
Manager.

Notice.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. P. No. 132/49

ಅರ್ಜದಾರಳು— ಗಿರಿಯಮ್ಮ ಸೆಡ್ತಿ, ತಂ. ಗಮ್ಮ ಸೆಡ್ತೀರ ವಾಗಳು, ಉಡ್ಪಿತಾಲ್ಕು ಹೊಸಾಳ ಗ್ರಾಮದ ಹೊಸಿಮನೆ.

ಎದ್ರಿಳು— ವಾರಮ್ಮ ಸೆಡ್ತಿ, ತಂಗಮ್ಮ ಸೆಡ್ತೀರ ಮಗಳು, ಉಡ್ಪಿ ತಾಲ್ಕು ಹೊಸಾಳ ಗ್ರಾಮದ ಹೊಸಿಮನೆ.

ಸದ್ರಿ ಎದ್ರಿಳಿಗೆ ತಿಳಿಯಪಡಿಸ್ದುದ್ದು—

ಅರ್ಜದಾರಳು ಮತ್ತು ಎದ್ರಿಳ ಕೂಡ ಮಾವ ಮೃತ ಜಗನ್ನಾಥ ಸಟ್ಟಿಯು ಸನ ಲ್ಯಾಸ್ಸ್ ಎಶ್ಯೂರೆನ್ಸ್ ಕಂಪೆನಿ ಆಫ್ ಕೆನಡ (ಮದ್ರಾಸ್ ಬ್ರಾಂಚ್) ಜೀವವಿಮಾ ಪಂಪಿಯಲ್ಲಿ ನಂಬ್ರ 3440881ನೇಗೆ ಪಡೆದ ಪೂರ್ತಿ ಮೊತ್ತ ಬಾಬ್ತು ಆ್ಯವೇಜು ರೂ. 3000-0-0ನ್ನು ಪಡಕೊಳ್ಳುವಂತೆ ಅರ್ಜದಾರಳು ಮತ್ತು ಎದ್ರಿಳ ಕೂಡಾ ಹೆಸರಲ್ಲಿ ವಾರೀಸು ಸರ್ಟಿಫೀಟು ಕೊಡಿಸಬೇಕೆಂತ ಅರ್ಜದಾರಳು ದಾಕ್ಲು ಮಾಡಿದ ಸದ್ರಿ ಅರ್ಜ ತಾ. 4-1-1950ಕ್ಕೆ ಯಿಟ್ಟಿದೆ. ಆ ಕಾರಣ ಆಕ್ಷೇಪಯಿದ್ದಲ್ಲಿ ಸದ್ರಿ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಸರ್ಟಿಫೀಟು ಕೋರ್ಟ್ ಮುಂದೆ ಹಾಜ್ರಾಗಿ ತಿಳಿಸತಕ್ಕದ್ದು.

Y. Manjayya Shetty,
Advocate for Peter.

ತಾರೀಕು 18-12-49
ಸ್ಥಳ: ಕುಂದಾಪುರ

ದ. ಕನ್ನಡ

ತೊಟ್ಟಂಗರಡಿ ಪುಜಲು-ಇಲ್ಲಿ ಯ ವಯುಸ್ಕರ ಶಿಕ್ಷಣ ರಾತ್ರಿಶಾಲೆಯಲ್ಲಿ ಹಿಂದೀ ಕಲಿಸುವ ಏರ್ಪಾಡು ಸಹ ಮಾಡಿ ರಾಗಿದ್ದು ಮಹಾಜನರು ತನುಮನಧನದಿಂದ ಸಹಾಯ ನೀಡಬೇಕಾಗಿ ಶಾಲಾ ಮು ಖ್ಯೋಪಾಧ್ಯಾಯರು ವಿನಂತಿಸುತ್ತಾರೆ.

ಮಣಿಪುರ ಕಲ್ಯಂಜೆ ಉದಿಯಾ ವರ ನಾಯಕಾರ್ ಶ್ರೀ ಸದಿಯ ಮರಕಾಲ ರವರು ಮಣಿಪುರ ಗ್ರಾಮದ ಸರ್ವೆ ನಂಬ್ರ 239ನೇ ಪುಂಜ ಸ್ಥಳದಲ್ಲಿ ಅರು ಎಕ್ರೆ ಹದಿ ನಾರು ಸೆಂಟ್ಸ್‌ನ್ನು ಗೋಧರ್ಮ ಮತ್ತು ಶಾಲಾ ಹುಡುಗರ ಆಟದ ಬಯಲಿಗಾಗಿ ಧ ರ್ಮಸಾಧನ ಮಾಡಿರುವರೆಂದೂ ಆ ಬಗೆ ಊರವರೂ ಶಾಲಾ ಉಸಾಧ್ಯಾಯ ಮತ್ತು ವಿದ್ಯಾರ್ಥಿವೃಂದದವರೂ ಚಿರಯಣಿಗಳಾಗಿ ರುವರೆಂದೂ ಮಣಿಪುರ ಪಟೇಲ್ ಶ್ರೀ ಪದ್ಮ ನಾಭ ಆಚಾರ್ಯರು ತಿಳಿಸುತ್ತಾರೆ.

ಧರ್ಮಸ್ಥಳ: ಶ್ರೀ. ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರಿಗೆ ಆರವತ್ತು ವ ರುಷ ತುಂಬುವ ಇದೇ ತಾ. 11ರಲ್ಲಿ ಊರವ ರೂ ನಾಕರರೂ ಸೇರಿ, ಬಸ್ತಿಯಲ್ಲಿ-ದೇವಾ ಲಯದಲ್ಲಿ ಸೇವನೆಯಿಸಿ, ದೀರ್ಘಾಯುಸ್ಸು ನ್ನು ಕೋರಿ ಫಲಪುಷ್ಪ ಕಾಣಿಕೆಗಳನ್ನರ್ಪಿಸಿ ದರು. ಉಜ್ರೆ ಕರ್ನಾಟಕ ವಿದ್ಯಾಲಯದವ ರೂ ಧರ್ಮಸ್ಥಳ ಶಾಲಾ ಬಾಲಕರೂ ಶ್ರೀ. ಹೆಗ್ಡೆಯವರಿಗೆ ಫಲವಸ್ತ್ರಗಳನ್ನರ್ಪಿಸಿ ಅವ ರ ಶ್ರೇಯಃ ಪ್ರಾರ್ಥನೆಮಾಡಿದರು.

ಕುಂಬಳೆ: ಈ ಕೇಂದ್ರದ ಉಪಾ ಧ್ಯಾಯರ ಸಭೆಯು ಇದೇ ತಾ. 10ರಲ್ಲು ಶಾ ಲಾ ಡಿಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ. ಶಿವರಾಮ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಜ್ಞಾನೋ ದಯ ಶಾಲೆಯಲ್ಲಿ ವಯುಸ್ಕರ ಶಿಕ್ಷಣ ರಾತ್ರಿ ಶಾಲೆಯನ್ನು ಶ್ರೀ. ದೇವಪ್ಪ ಅಳ್ವರು ತಾ. 10ರಲ್ಲು ತೆರೆದರು.

ಕಳತ್ಮೂರು ಇಲ್ಲಿ ಇದೇ ತಾ. 15 ರಲ್ಲು ಗ್ರಾಮ ಸೇವಾಸಂಘವೊಂದು ಸ್ಥಾಪಿಸ ಲ್ಪಟ್ಟಿತು. ಶ್ರೀಗಳಾದ ಇಚ್ಲಂಪಾಡಿ ಕೋಟ್ಯ ಣ್ಣಾಳ್ವರು ಅಧ್ಯಕ್ಷರಾಗಿಯೂ ಶಿವಪ್ಪ ರೈಗ ಳು ಉಪಾಧ್ಯಕ್ಷರಾಗಿಯೂ ಗುಡ್ಡಪ್ಪ ಭಂ ಡಾರಿ ಮತ್ತು ನಾರಾಯಣ ಆಳ್ವರು ಜತೆ ಕಾ ರ್ಯದರ್ಶಿಗಳಾಗಿಯೂ ಜನಾಬ್ ಮಹಮ್ಮ ದ್ ಸಾಹೇಬರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು.

ಮಡಿಮಾಕ್ಕೆ ಬೋರ್ಡು ಶಾಲೆಯ ನ್ನು ಶ್ರೀ. ಮಾಂಡಿ ಅನಂತಯ್ಯ ಮಂಜರ ಪ ಡು ಚಾವಡಿಯಲ್ಲಿ ಹೊಸತಾಗಿ ತೆರೆಯುವ ಸಮಾರಂಭವು ಇದೇ ತಾ. 15ರಲ್ಲು ಬೆಳಿಗ್ಗೆ ಕುಂದಾಪುರ ರೇಂಜ್ ಶಾಲಾ ಜ್ಯೂನಿಯರ್ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಟಿ. ಪಾಸಪ್ಪ ಯ್ಯನವರ ನೇತೃತ್ವದಲ್ಲಿ ಜರಗಿತು.

ಕೆಮ್ಮಣ್ಣು ಬೆಲ್ಲೆಯ ಹಾಗೂ ಎಲಿಮೆಂ ಟರಿ ಶಾಲಾ ಆದಿತ ಅಧ್ಯಾಪಕರಾಗಿದ್ದ ಶ್ರೀ. ಟಿ. ಕೆ. ಶೇಷಪ್ಪಯ್ಯನವರು ಕೆಲಸದಿಂದ ನಿ ವೃತ್ತರಾದ ನಿಮಿತ್ತ ಅವರನ್ನು ಬೀಳ್ಕೊಡು ವ ಸಮಾರಂಭವು ಇದೇ ತಾ. 2ರಲ್ಲು ಉಡ್ಪಿ ರೇಂಜ್ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪೆತ್ತವರ ಸಂಘದ ಕಡೆಯಿಂದ ಲೂ ತಿಮ್ಮಣ್ಣು ಕುದ್ರು ಇನ್ಸ್‌ಟಿಟ್ಯೂಷನ್ ಸಂಘ ದ ಪರವಾಗಿಯೂ ಮಾನಪತ್ರ, ನಿಧಿ ಸಮ ರ್ಪಿಸಲಾಯ್ತು. ಶ್ರೀ. ಬಿ. ಪೆಂಕಪ್ಪ ಹೆಗ್ಡೆ ಮೊದಲಾದವರ ಭಾಷಣ, ನಾಟಕಾಭಿನಯ, ಪಾಠೋಪ ಹಿತರಾದಿಗಳಿಂದ ಸಮಾರಂ ಭ ಕೊನೆಗೊಂಡಿತು.

ಬಾರ್ಕೂರು ಸ್ಥಳೀಯ ಬೋರ್ಡು ಹಾಗೂ ಎಲಿಮೆಂಟರಿ ಶಾಲಾ ಮಕ್ಕಳಿಗೂ ಬ್ರ ಹ್ಮಾವರ ಕೊಸ್ಮೊಪೊಲಿಟನ್ ಹಾಗೂ ಶಾ ಲಾ ಮಕ್ಕಳಿಗೂ ನಡೆದ ಕ್ರಿಕೆಟ್ ಪಂದ್ಯಾಟ ದಲ್ಲಿ ಬಾರ್ಕೂರು ಶಾಲೆಯವರು ವಿಜಯಿ ಗಳಾಗಿರುತ್ತಾರೆ. ತಾ|12ರಲ್ಲು ಬಾರ್ಕೂರು ಮತ್ತು ಸೆರೆಕೆರೆಯ ಮೂಲಾ ಜಾಲಕ ಮಾಲಕಿ ಯರ ಆಟದ ಪಟ್ಟುಗ ಶ್ರೀ ಕೆ. ರಾ ಜೀವಸೆಟ್ಟಿರ ಅಧ್ಯಕ್ಷತೆಯಲ್ಲಿ ಸಾರಂಗವಾಗಿ ಜರಗಿತು.

ಪೆಡು ಪೆಣ್ಣಂಬೂರು ಈ ಕೇಂದ್ರದ ಶಾರದಾ ಪೂಜೋತ್ಸವವು ಇದೇ ತಾ. 10ರಲ್ಲು ಶ್ರೀ ಪಿ. ಸಂಜೀವ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ರಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ. ವೈ. ಗೋಪಾಲ್, ಶ್ರೀ ಎಮ್. ಆರ್. ಪೂಂಜ ಮೊದಲಾದವರು ಪಬ್ಬದಲ್ಲಿ ಭಾಗವಹಿಸಿದ್ದರು.

ಕುಂದಾಪುರ ಇದೇ ತಾ. 11ರಲ್ಲು ಕುಂದಾಪುರ ತಾಲೂಕಿನ ಉಪ್ಪುಂದ, ಕೆರ್ಗಾ ಲ್, ಬಿಜೂರು, ಖಂಬದ ಕೋಣೆ ಮತ್ತು ಕಿರಿಮಂಜೇಶ್ವರ ಗ್ರಾಮಗಳ ಹರಿಜನರ ಸ ಭೆಯು ನಾಗೂರು ಲೇಬರ್ ಶಾಲೆಯಲ್ಲಿ ಹರಿಜನ ಸಹಕಾರಿ ಸಂಘಗಳ ಇನ್ಸ್‌ಪೆಕ್ಟರಂ ಆಧ್ಯಕ್ಷತೆಯಲ್ಲಿ ಜರಗಿತು. ಭಾಷಣಗಳಾದ ನಂತರ ಮೆರವಣಿಗೆಯೊಂದಿಗೆ ಸಭಿಕರು ಕಿ ರಿಮಂಜೇಶ್ವರದ ಕೆರೆಯಲ್ಲಿ ಸ್ನಾನಮಾಡಿ ದೇವಸ್ಥಾನ ಪ್ರವೇಶಮಾಡಿ ದೇವರ ದರ್ಶನ ಲಾಭ ಪಡೆದು ತೀರ್ಥಪ್ರಸಾದಗಳನ್ನು ಸ್ವೀಕ ರಿಸಿದರು.

ಬೊನ್ಮುರ್ಬೆಟ್ಟು ಶಾಲೆಯ ಹೆತ್ತವರ ಕೂಟದ ಸಮಾರಂಭವು ಇದೇ ತಾ. 12ರಲ್ಲು ಉಡುಪಿ ರೇಂಜ್ ಶಾಲಾ ಡಿ. ಇ ನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರ್ಥನೆ, ವ ರದಿ, ಸ್ವಾಗತ, ಶಾಲಾ ಬಾಲಬಾಲಕಿಯರಿಂದ ವಿವಿಧ ವಿನೋದಾವಳಿಗಳು, ನಾಟಕ ಪ್ರದ ರ್ಶನ, ಅಧ್ಯಕ್ಷರ ಭಾಷಣ, ಧನ್ಯವಾದಾರ್ಪ ಣೆ ಮೊದಲಾದ ಕಾರ್ಯಕ್ರಮಗಳು ಸಾಂಗ ವಾಗಿ ಜರಗಿದವು.

ಕೊಲ್ಲಾಪುರ ಇಲ್ಲಿಯ ಶ್ರೀಗಣಿ ಮಂಡಲದ ಆಶ್ರಯದಲ್ಲಿ ಇದೇ ತಾ. 13ರಲ್ಲು ಕವಿ ಸಾರ್ವಭೌಮ ರನ್ನನ ಸಹಸ್ರ ವಾರ್ಷಿ ಕೋತ್ಸವವು ಶ್ರೀ. ಎಸ್. ಎಸ್. ಸೈದ್ಧರ ಅ ಧ್ಯಕ್ಷತೆಯಲ್ಲಿ ಜರಗಿತು. ಲಾ ಕಾಲೇಜಿನ ಪ್ರೊಫೆಸರ್ ಶ್ರೀ ನಾಯ್ಕ ರಘುನಾಥರಾ ಯರು ಕಾವ್ಯೋಚಿತ ಭಾಷಣ ಮಾಡಿ "ಗದಾ ಯುದ್ಧ"ದ ಕೆಲವು ಭಾಗಗಳನ್ನು ಸಮಯ ರೀತಿಯಿಂದ ವಾಚನ ಮಾಡಿದರು. ಅಧ್ಯಕ್ಷರು ಸಮಾರೋಪ ಭಾಷಣ ಮಾಡುತ್ತಾ ಕ ರ್ನಾಟಕದ ಹೊನ್ನುರತ್ನಗಳಂತಿರುವ ರನ್ನ- ಪಂಪ, ಲಕ್ಷ್ಮೀಶ ಮುಂತಾದ ಕವಿಶ್ರೇಷ್ಠರ ಅಸಾರ ಸೇವೆ, ಕನ್ನಡ ಭಾಷೆಯಲ್ಲಿ ಅವರ ಸ್ಥಾನಮಾನಗಳು ಇತ್ಯಾದಿ ವಿಷಯಗಳನ್ನು ವಿಮರ್ಶಿಸಿದರು. 'ವಂದೇ ಮಾತರಂ" ಗೀತೆ ಯೊಂದಿಗೆ ಸಭಾಂತ್ಯವಾಯಿತು.

ಮ್ಯಾಪಾಡಿ ಇದೇ ತಾ. 5ರಿಂದ 10 ರ ವರೆಗೆ ಮ್ಯಾಪಾಡಿ ಬುನಾದಿ ಶಿಕ್ಷಣ ತರ ಬೇತಿ ಶಾಲೆಯ ಉಪಾಧ್ಯಾಯ ಮತ್ತು ವಿ ದ್ಯಾರ್ಥಿಗಳ ಉಪಯೋಗಾರ್ಥವಾಗಿ ಸ್ಕೌಟ್ ಕಬ್ ನಾಸ್ತರದ ತರಬೇತಿ ಶಿಬಿರವನ್ನು ಅಂ ಬ್ಲಡ್ಡಿದಲ್ಲಿ ಜರುಗಿಸಲಾಯಿತು. ಮದ್ರಾಸ್ ಪ್ರಾಂತಿಕ ಸ್ಕೌಟ್ ಅಧಿಕಾರಿ ಶ್ರೀ. ವಿ. ಸು ಬ್ರಹ್ಮಣ್ಯಮ್, ಜಿಲ್ಲಾ ಸ್ಕೌಟ್ ಮಂಡಳಿಯ ಕಾರ್ಯದರ್ಶಿ ಡಾ| ಕೆ. ಗಿರಿಧರ ರಾವ್, ರಾ ಲಾ ಸ್ಕೌಟ್ ಉಪಾಧ್ಯಾಯ ಶ್ರೀ. ಕೆ. ನಾರಾ ಯಣ ರೈ ಮೊದಲಾದವರು ಭಾಗ ವಹಿಸಿ ದ್ದರು.

ಕಾರ್ಕಾಡು ಇದೇ ತಾ. 15ರಲ್ಲು ಕಾರ್ಕಾಡು ಕೃಷಿಕ ಸಂಘದ ಆಶ್ರಯದಲ್ಲಿ ಮುಲ್ಕಿಯ ಬಿಲ್ಲವ ಸಮಾಜದ ಸಭಾಮಂಟಿ ರಿದಲ್ಲಿ ಮೂಲ್ಕಿ ಫಿಕಾರ್ಡ ಕೃಷಿಕ ಮಹಿಳೆ ಪರಿಸತ್ತು ಮಂಗಳೂರಿನ ಶ್ರೀಮತಿ ವಿ. ಕ ಲ್ಯಾಣಿ ಸೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರ ಗಿತು. ಹಿಂದೂ ಕೋಡಿಗೆ ಬೆಂಬಲವೀಯುವ ಒಕ್ಕಲುತನ ಮಸೂದೆ ಬೇಗನೆ ಬರಬೇಕೆನ್ನು ವ, ಕರ್ನಾಟಕ ಪ್ರಾಂತಕ್ಕಾಗಿ ಬೇಗನೆ ಆಗ ಬೇಕೆನ್ನುವ ನಿರ್ಣಯಗಳಾದುವು.

ನೋಟೀಸು

ಕಾರ್ಕಳ ಡಿ ಮು. ಕೋರ್ಟಿನಲ್ಲಿ

O. P. No. 72/1949

ಜಲಜಾಕ್ಷಿ ಅಮ್ಮ, ಶೀರ ಹೆಬ್ಬಾರನ ಮಗ ಳು, ಕಾರ್ಕಳ ತಾಲ್ಲು ನಾಡ್ಪಾಲ ಗ್ರಾಮದ ಸೋಮೇಶ್ವರದಲ್ಲಿರುವವಳು.

—ಅರ್ಜಿದಾರಳು.

ಮತ್ತು

1 ಅಪ್ಪಿಬಾಯಿ, ಅರ್ಜಿದಾರಳ ಮ್ಯಾನರ ಮಗಳು, ಯಿವಳ ಗಾರ್ಡಿಯನ ಯಿವಳ ಸೋದರಮಾವ 2ನೇ ಎದ್ರಿ ನಾರಾಯಣ ಹೆಬ್ಬಾರ.

2 ನಾರಾಯಣ ಹೆಬ್ಬಾರ,

3 ಮಂಜುನಾತ ಹೆಬ್ಬಾರ

ಶೀರಹೆಬ್ಬಾರರ ಮಕ್ಕಳು,

ಕಾರ್ಕಳ ತಾಲ್ಲು ಕಬ್ಬಿನಾಲೆ ಗ್ರಾಮದಲ್ಲಿ ರುವವರು.—ಎದ್ರಿರು.

ಸದ್ರಿ ಯದ್ರಿರಿಗೆ ಮ ಯಿತರ ಸಮಸ್ತ ಜನ ರಿಗೆ ಈ ಮೂಲಕ ತಿಳಿಯಪಡಿಸುವದೇ ನಂದರೆ—

ಅರ್ಜಿದಾರಳ ಮಗ ಕಳದ ತಾರೀಕು 12-9-1949ರಲ್ಲು ಮೃತಪಟ್ಟ ಕೃಷ್ಣ ಹೆಬ್ಬಾರ ನು The Kaiser I Hindu Insurance Co, Ltd Bombay ಯಿದ್ರಲ್ಲಿ ಪೊಲಿಸಿ ನಂಬ್ರ 9277ನೇಗೆ ರೂಪಾಯಿ 1000ಕ್ಕೆ ಇ ನ್ಯೂರ ಮಾಡಿದ ಬಾಬ್ತು ನಿಕ್ಕತಕ್ಕ ಅಸಲು ಐನೇಜು ರೂಪಾಯಿ 1000ಕ್ಕೆ ಇನ್ಯೂರು ಮಾಡಿದ ಬಾಬ್ತು ನಿಕ್ಕತಕ್ಕ ಅಸಲು ಅಯೇ ಜು ರೂಪಾಯಿ 1000ವನ್ನು ಪಡೆಯು ವರೆ ಅರ್ಜಿದಾರಳು ಸಕ್ಷೇಶನ್ ಸರ್ಟಿಫಿಕೇಟು ಕೊಡಬೇಕಂತ ತಾಲ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 7-1-1950ಕ್ಕೆ ತನ್ನಿಗೆ ಯಿತ್ತುರವದ್ರಿಂದ ಆ ಕುರಿತು ಯಾರಾದಾ ರೂ ಆಕ್ಷೇಪ ಇರುವದಾದರೆ ಸದ್ರಿ ದಿವ್ಸ ಪ ಗಲು 10 ಘಂಟೆಗೆ ಬೋಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಞಾಪೀರು ಮಾಡತಕ್ಕದ್ದು. ತ ಪ್ಪಿದ್ರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು.

ಕೋರ್ಟು ಹುಕ್ಕುಂ ಪ್ರಕಾರ

K. V. Kamath,
Advocate for Petitioner.

ಕಾರ್ಕಳ
13-12-1949

ನೋಟೀಸು

ದಿ ಕೆನರಾ ಬೇಂಕಿಂಗ್ ಕೋರ್ಪರೇಶನ್ ಲಿಮಿಟೆಡ್,

ಶಿರ್ವ, ಜಿ. ಕನ್ನಡ.

ಈ ಕೆಳಗೆ ಹೆಸರು ಕಾಣ್ಸಿದವರು ಈ ಬೇಂಕಿನಲ್ಲಿ ನಗದಗಳನ್ನು ಅಡವಿಟ್ಟು, ಪಡ ಕೊಂಡ ಸಾಲಗಳ, ಕೆಳಗೆ ನಮೂದಿಸಿರುವ ಅಸ್ಲು ಬಡ್ಡಿ ಖನೇಜುಗಳನ್ನು ತೆರಬೆ ಬಾಕಿ ಯಿಟ್ರುರುವದರಿಂದಲೂ, ಆ ಬಗ್ಗೆ ಸದ್ರಿಯವರೀಗೆ ಬಿಟ್ಟ ರಿಜಿಸ್ಟ್ರೋಟೀಸು ವಗೈರೆಗಳು, ಸದ್ರಿಯವರೀಗೆ ಖಾತಿಯೊಗದೆ ವಾಪ್ಸು ಬಂದಿರುವದರಿಂದಲೂ, ಸದ್ರಿ ಸಾಲಗಳ ಬಾಬ್ತು ಅಡವಿಟ್ಟ ನಗದಗಳನ್ನು ಸಮ್ಮಂಧಪಟ್ಟವರು ತಾ. 30-12-49ರ ಒಳಗೆ ಬಿಡ್ಸಿಕೊಂಡು ಹೋಗದೆಯಿದ್ದಲ್ಲಿ, ಸದ್ರಿ ನಗದಗಳನ್ನು ತಾ. 7-1-1950ನೇ ಶನಿವಾರ ಅಪರಾಹ್ನ ಗಂಟೆ 1ಕ್ಕೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು ಎಂತ ಈ ಮೂಲಕ ತಿಳಿಸೋಣಾಗಿಯಿದೆ. ಸಾಲಗಳ ವಿವರ

ಪುಂಜ ನಂಬ್ರ	ಸಾಲದ ನಂಬ್ರ	ಹೆಸರು ಮತ್ತು ವಿಳಾಸ.	ಸಾಲವ ಬಾಬ್ತು ಬಾಕಿ ಯಿರುವ ಮೊಬಲಗು
1	458/45	Piad Mendosa Bai wife of Thomas D'Soza Kudribettu Sooda.	9-0-0
2	8/46	Rama Shettigara S/o Govinda Shettigara Kuthyar Pilar P. O.	10-0-0
3	972/47	Mohammed Adam Saheb S/o Abbubaker Saheb Nyarma Shirva	11-0-0
4	1006/47	SrinivasBhat S/o Nagappa Naik, Bantakal Shirva	20-0-0
5	1013/47	Deva Rao S/o Annappaya Hotel Keeper Shirva.	10-0-0
6	1100/47	B. Sunder Bhatta, S/o Padmanabha Bhat Bellibettu Yellore P. O.	25-0-0

ಬೇಂಕಿನ ಆಫೀಸು
ಶಿರ್ವ ತಾ. 17-12-49

U. A. Prabhu,
Agent.

ಜೀವವಿಮೆಗಾಗಿ

ವಿಚಾರಿಸಿರಿ

ದಿನ್ಯೂ ಗಾರ್ಡಿಯನ್ ಒಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೂ., ಲಿಮಿಟೆಡ್.

(ಸ್ಥಾಪನೆ: 1934)

ಚೆಯರ್‌ಮೆನ್: ಶ್ರೀ. ಎಚ್ ಟಿ ಎಸ್. ಚೆದಂಬರಮ್ ಚೆಟ್ಟಿಯಾರ್

ಪ್ರಗತಿ ಪಥದಲ್ಲಿರುವ ಈ ವಿಮಾ ಸಂಸ್ಥೆಯ ಪೊಲಿಸಿ ಪಡೆಯುವುದೆಂದರೆ ಅದೊಂದು ಉತ್ತಮ ವಿನಿಯೋಗ. ಅಂತೆಯೇ ಇದರ ಏಜನ್ಸಿ ಸಂಪರ್ಕವನ್ನಿಟ್ಟು ಕೊಳ್ಳುವುದೂ ಅಮೂಲ್ಯ ನೃಪಾರನಾಗಿದೆ.

ಮಂಗಳೂರು ಶಾಖೆ:
ಕೆ. ಎಸ್. ರಾವ್. ರೋಡು,
ಹೆಂಪನಕಟ್ಟೆ, ಮಂಗಳೂರು.

ಕೇಂದ್ರ ಕಾರ್ಯಾಲಯ:
"ಯುನೈಟೆಡ್ ಇಂಡಿಯಾ ಲೈಫ್ ಬಿಲ್ಡಿಂಗ್" ಪೋಸ್ಟು ಬಾಕ್ಸು ನಂಬ್ರ 142
ಮದ್ರಾಸು.

ಸ್ವೀಕೃತ ಪುಸ್ತಕಗಳು

ಕೀಚಕ—ಕನ್ನಡಿಸಿದವರು: ಪ್ರೊ. ಟಿ. ಎ. ರಾಜರತ್ನಂ. ಪ್ರಕಾಶಕರು: ಹಿಂದೆ ಕರ್ನಾಟಕ ಪಬ್ಲಿಷರ್ಸ್, ಟಿ. ಜವಾಹರಲಾಲ್ ಪ್ರಿಂಟರ್ಸ್ ಮುಲ್ಲೇಶ್ವರಂ, ಬೆಂಗಳೂರು. ಬೆಲೆ: ರೂ. ೧—೮—೦.

ರಿಸಂಗತ ಟಿ. ಪಿ. ಕೈಲಾಸಂರವರು ಇಂಗ್ಲಿಷ್‌ನಲ್ಲಿ ಬರೆಯಬೇಕಾಗಿದ್ದ 'ಕೀಚಕ' ನಾಟಕವನ್ನು ಶ್ರೀ. ರಾಜರತ್ನಂ ಅವರು ಕನ್ನಡದಲ್ಲಿ ಕೈಲಾಸಂರವರ ಕಲ್ಪನೆಯಂತೆಯೇ ಚಿತ್ರಿಸಿದ್ದಾರೆ. ಕೈಲಾಸಂರವರ ಮನಃಪ್ರೇರಿಸಿ, ಉಪರಿಸಿದ ಪಾತ್ರಗಳ ಭಾವಭಂಗಿಗಳನ್ನು ತಿಳಿದುಕೊಂಡು ಶ್ರೀ ಬಿ. ಎಸ್. ರಾಮಾರಾಯರ ಜ್ಞಾಪಕದ ಆಧಾರದ ಮೇಲೆ ಬರೆದಿರುವುದಾಗಿದೆ ಕೀಚಕ. ಕೈಲಾಸಂ ಬರೆಯುತ್ತಿದ್ದರೆ ಯಾವ ಬಣ್ಣ ಬರುತ್ತಿತ್ತೋ ಹೇಳಲಾಗುವ ತಲ್ಲ! ಆದರೂ ಒಂದು ರೀತಿಯ ಸಮಾಧಾನಕರವಾಗಿದೆ. ಪ್ರತಿಯೊಂದು ಪಾತ್ರಸೃಷ್ಟಿಯೂ, ಗಂಭೀರ ಪ್ರಸಂಗವೂ ಕೀಚಕ, ಸುದೀಷ್ಣಾ, ಸೈರಂಧ್ರಿ ಈ ಮೂರು ಪಾತ್ರಗಳಲ್ಲಂತೂ ತುಂಬ ಪರಿಣಾಮಕಾರಿಯಾಗಿದೆ. ಮಹಾಭಾರತದಲ್ಲಿ ಕೀಚಕ, ಸುದೀಷ್ಣೆಯರನ್ನು ಕಂಡು ಕೆದಕಾರುತ್ತೇವೆ; ಕೊನೆಯ ಕ್ಷಣದಲ್ಲಿ ನಮ್ಮ ರೋಷವನ್ನು ತಡೆಸಿಕೊಳ್ಳುತ್ತೇವೆ. ಇಲ್ಲಿಯ ಕೀಚಕ, ಸುದೀಷ್ಣೆಯಂಥ ಸಹೃದಯಿಗಳು. ಮಹಾಧೈರ್ಯವಾದಿಗಳು. ಮೊದಲಿಂದ ಕೊನೆಯ ತನಕವೂ ಅವರ ಮೇಲೆ ಒಂದು ರೀತಿಯ ಅನುತಾಪ, ಗೌರವಗಳು ತೋರಿಬರುವುದು ಸ್ವಾಭಾವಿಕ. ಮಹಾಭಾರತದಲ್ಲಿ ಕೀಚಕ ಕೀರ ಕಾಮುಕ. ಸುದೀಷ್ಣೆ ಅವನ ಕಾಮಾಗ್ನಿಗೆ ಕುಪ್ಪವನ್ನೆರೆದು ಅವನ ನಾಶಕ್ಕೆ ಕಾರಣಳಾಗುತ್ತಾಳೆ. ಕೀಚಕನೂ ಅಷ್ಟೆ; ಹೆಣ್ಣಿನ ಒಲವು ತನ್ನೆಡೆಗಿಲ್ಲದಿದ್ದರೂ ಅಹಂಕಾರ, ಬಲಾತ್ಕಾರಗಳಿಂದ ಅವಳನ್ನು (ಸೈರಂಧ್ರಿ)ಯನ್ನು ಪೀಡಿಸುತ್ತಾನೆ. ಕೈಲಾಸಂರವರ ಕೀಚಕ ತುಂಬ ಒಳ್ಳೆಯವನು. ದ್ರೌಪದಿಯ ಸ್ವಯಂವರ ಶಾಲೆಯಲ್ಲಿ ತಂಗಿಯ ರೂಪರಾಶಿಯನ್ನು ಕಂಡಾಗ ಅಲಾಕಿಕವಾದ ಸೋಟಕ್ಕೆ ಬಲಿಬಿದ್ದು "ಮದುಚಿಯಾದರೆ ಈ ಹೆಣ್ಣನ್ನೇ ಮದುವೆಯಾಗಬೇಕು" ಎಂದು ಕೂನೆಯ ತನಕವೂ ಕಾದು ನಿಲ್ಲುತ್ತಾನೆ. ಅವಳು ಅವರ ಪತ್ನಿಯಾದ ಮೇಲೆಯೂ "ದ್ರೌಪದಿ ನಾನೆಂಬ ಚಿತ್ತದ ಕನ್ನಿ!" ಎಂದು ಹೃದಯಿಕವಾಗಿ ಆಕೆಯನ್ನು ನೆನಸುತ್ತಾನೆ. ಈ ಅಂತರದಲ್ಲಿ ಬೇರಾವ ಕನ್ಯೆಯನ್ನೂ ಅತ ಕಣ್ಣೆತ್ತಿ ನೋಡಿದವನಲ್ಲ. ಬೇರೆಯವರನ್ನು ಕಂಡಾಗಲೆಲ್ಲ ಅತನ ಒಲವು ಹರಿಯುತ್ತಿದ್ದುದು ದ್ರೌಪದಿಯ ಕಡೆಗೆಯೆ. ಅಣ್ಣನ ಸುಖಕ್ಕಾಗಿ, ಇಲ್ಲವೆ ಮನಃಶಾಂತಿಗಾಗಿ ಸುದೀಷ್ಣೆ ಬಹು ರೀತಿಯಲ್ಲಿ ಅತನಕ್ಕು ಮದುವೆಯಾಗುವಂತೆ ಬೇಡುತ್ತಾಳೆ. ನೈಷ್ಕ್ರಿ ಕುದಿತಗಳಿಂದ ಅತನನ್ನು ಪರಿಪರಿಯಿಂದ ಕೀಚಕ ಬದಲಾಗುವುದಿಲ್ಲ. ಸೈರಂಧ್ರಿಯೊಡನೆ ಮಧ್ಯವನ್ನು ಳಿಯಹಿಸಿ ಕೊಡುತ್ತಾಳೆ ಸುದೀಷ್ಣೆ ಆಗ ಅವಳನ್ನು ಕಂಡಾಗ ಹಿಂದೆ ಕಂಡ ದ್ರೌಪದಿಯ ರೂಪವೆ ಕಣ್ಣ ಮುಂದೆ ನಿಂತಂತಾಗುತ್ತದೆ. "...ಅವಳ ರೂಪಿನಲೆ ಗೋಚರಿಸುತಿದೆ! ನನಗೆ-ನನ್ನ ದ್ರೌಪದಿಯು ಪ್ರತಿರೂಪ... (ಅವಳಲ್ಲವೆಂಬಂತೆ ತಿಳಿದುನಕ್ಕು) ...ದ್ರುಪದೆಯ ಬಯಸಿದೀ ಕೀಚಕನಿಗೆ ರಾಣಿವಾಸದ ಚೀಟಿ..ಹಸೆ ಮಣೆಯ ಹೆಣ್ಣು ಇದುವೆ ಪರಮ ವಿನೋದ! (ಮಾತುಬೆಳೆದು) ಅ, ಅದುವೆ ನೋಡಿದೆಯೆ! ನಿನ್ನ ಕಂದರೆ ನನಗೆ ದ್ರೌಪದಿಯ ನೆನಸೇ ಬರುವುದೇಕೆ? ಏನು ವಿಚಿತ್ರ ಈ ನಿಕಟ ಸಾರೂಪ! ಆದರಿನೀನೇ, ನಿನಗೂ ಅವಳಿಗೂ ಭಿನ್ನತೆ: ಹತಿಗಳೈವರ ಪಡೆದ ದ್ರೌಪದಿ ರಾಜಕುಮಾರಿ- ನಿನಗಿಂತ ಅವಳು ಕಿರಿಯೆ. ನೀನವಳ ಹಿರಿಯೆ- ಆದೊ ಅಲ್ಲೆ ಕಬರಯಲಿ ಒಂದೆರಡು ಎಳೆಯನರೆ. ಮಡಿವೆಯಾಗದೆ ನಿಂತ ಮತ್ತಕನ್ನಿಕೆಯಂತೆ ಕಂಗೊಳಿಸುತಿವೆ ಕಾಣೆ! ಆನುರೂಪನಾದವನ ಪಡೆದು, ಮದುವೆಯಾಗಲು ನಿನಗೆ ಒಪ್ಪಿಗೆಯೇ!?" ಹೀಗೆ ಕೀಚಕನು ಸೈರಂಧ್ರಿಯಲ್ಲಿ ಅನುರಕ್ತನಾಗುತ್ತಾನೆ, ದ್ರೌಪದಿಯ ಹಿಂದಿನ ನೆನಹಿನ ಮೇಲೆ. ಸೈರಂಧ್ರಿಯನ್ನು ಸಂತೈಸುವ ವೇಳೆ ಅವನು ದ್ರೌಪದಿಯ ಕುರಿತು ಆಡಿದ ಮಾತುಗಳು ಅವನನ್ನು ಸ್ಮೃತಪಡಿಬಡಿದನ್ನು ವ್ಯಕ್ತಪಡಿಸುತ್ತದೆ. "ದ್ರೌಪದಿಯ ಕತೆಯ ನೀ ಕೇಳಿ ಬಲ್ಲೆಯಾ? ವೀರರವಳಿಗೆ ಪತಿಗಳಾ ಪಂಚ ಪಾಂಡವರು. ಅಂಧವಳಿಗೇನು ಗತಿ ಬಂತು, ನೆನೆಯಾ, ಆ ಸುಯೋಧನನ ಸಭೆಯೊಳಾ ಧೂರ್ತ ದುಶ್ಶಾಸನನ ಕೆಲ! ಕತೆಯನದೆ ಕೇಳಿದಾದಿವಸ, ಕುತಕುತನೆ ಕುದಿಯಿತು ರಕ್ತ ನನಗೆ. ನಾನಂದಿನಾ ಸಭೆಯೊಳಿರುವೆನೆ- ಪಾಪದರ್ಶನನವನ ಕಣ್ಣುಳಿಕೆ ಕಿತ್ತು, ತೋಳ್ಗಳನೆ ಸಿಗಿದು ಪಜ್ರದೀಪುಷ್ಟಿಯಿಂದವನ ತಲೆಯನೆ ಕುಟ್ಟಿ ಶತಚೂರ್ಣ ಮಾಡುತ್ತಿದ್ದೆ. ಓ ಆ ಮಾತು ಬಿಡು. ಕಳೆದುದಾಕಾಲ. ... ನೋಡಿದೆಯ, ಆ ಅಂಧವಳಿಗೇ ಅದ ಗತಿಯ! ನೀನು ದ್ರೌಪದಿಯು ಅಲ್ಲ, ಪಂಥಪತಿಗಳು ನಿನಗೆ ಇಲ್ಲ. ಇದುವೆ ಕಾರಣ್ಯಕೇಳು, ಲೇಸು ನೀ ವರಿಸುವುದು ಹಿರಿಯ ಸಮರ್ಥ ವರನ-ನನ್ನಂಥ ಪುರುಷಪರನ". ಕೊನೆಯಲ್ಲಿ ಭೀಮನು (ವಲಲ) ನಮ್ಮ ಅಯರ ಪರಿಚಯವನ್ನು ಹೇಳುತ್ತಾನೆ. ಧರ್ಮರಾಯನ ಪರಿಚಯ ಮಾಡಿಕೊಟ್ಟಾಗಲೇ ಕೀಚಕ "ಅಹಾ! ಅದಕೆ ಕಾಣಾ, ಪಾಂಡವ ಜ್ಯೇಷ್ಠನನೆ ನೆನಪು ಕುದ್ದು ಕ್ತಿತ್ತು ಅವನ ಆರ್ಯಜರ್ಯೆ!" ಎಂದು ಗೌರವವನ್ನು ತೋರಿಸುತ್ತಾನೆ ಭೀಮನು ಅತನನ್ನು ಬಿಗಿಹಿಡಿದು ಮೈಕೈಯನ್ನೆಲ್ಲ ಮುರಿಯುವಾಗ ಕೀಚಕನು ತನ್ನ ಹೃದಯದ ಇಂಗಿತಗಳನ್ನು ಅರುಹುತ್ತಾನೆ- ಆಗ ಅತನ ಮನೋಬಯಕೆಗಳು ಕಂಡುಬರುವುದು ಎರಡು ರೀತಿಯಲ್ಲಿ. ಒಂದು ತಾ ಮೆಚ್ಚಿದ ದ್ರೌಪದಿಯ ಸುಬ; ಇನ್ನೊಂದು ತನ್ನ ಗಾಂಭೀರ್ಯಕ್ಕೆ ತಕ್ಕ ಹಾಗೆ ಅಂತಿಮ ಕೊನೆ. ಇದೇ ಅತನ ಜೀವನದ ಇಪ್ಸಾರ್ಥ, ಅತನ ಕೊನೆಯ ಉದ್ಗಾರದಲ್ಲಿ ನಾವು ಇದನ್ನು ಕಾಣಬಹುದು. "... ನಿನಗಾಗಿ ಆಲ್ಲವೋ ನನ್ನ ಈ ಕ, ಆ ಆಕೆಗಾಗಿ. ಅದಿಯಿಂದಲೂ ನಿನದೆಲ್ಲಲ್ಲು ಪುಡುಕು. ನಿನ್ನ ಕೈಹಿಡಿದ ಆವಗೂ ಅದೇ ನಿನ್ನಂದೇ ಬದುಕು-ನಿನ್ನ ದುಷ್ಟನದ ಬದುಕು. ಆ ಆಕೆಗಾಗೀ ನನ್ನ ತವಆಕೆ ಪಟ್ಟುದೆ ಸಾಕು ವನವಾಸ ಇನಿತುಕಾಮತ್ತೆ ಅಡಸುವುದು ಬೇಡವಾ ಅಟವಿಯ ಭಾಗ್ಯ-ಎಂದು ಈ ತವಕ...ಈ! ಏನು ದಂದಿದೋ ನೀವು! ನಿನ್ನಾನೆ ನಂಬಿ, ನಾಪಾಂಚಾಲಿ ತಾಪಡೆದ ಪಾಡುಂಟೆ?...ಪಾಂಚಾಲಿಯ ವೈಕೋದಂ? ನಿನ್ನ ಸುಕ್ಕೆತಗಳರಕ್ಷಿಸುವೆಯಾ?...ಜೋಕಳವೇತಕೆ ಇದಕ್ಕೆ? ನಿರೆನಬರನಾನು, ದಿಗ್ವಿಜಯ ಕಾಲದಲಿ, ಕುಡೆಹಿಹಿಲ್ಲ? ಅವಂ ಗತಿ, ಆವರ ಅಆದನೆನೆದು ಕಂಗದವರಿಗೆ, ನನಗಾಗಿ, ಈ ಗತಿಗಾಗಿ ಮುಸ್ಸಹ ದುಃಖ! ಅಹುದಲ ಇದೆಕಣಾ, ಮದುವೆ ಮಮಕಾರ!... ಆಗಲಿ ನಮ್ಮವರೋ ಹೊರೋ, ಏನು ತೆ ಆವರ ನಡುನೆ? ಇಂದು ಆ ಅವರು, ನಾ ಈ ಇವರು! ಎಂದು ದಿನ ಹಿಂಚುಮುಂಚಾ ಉದ್ವೇಗವೇತಕೆ ಇಷ್ಟು ಮಾತ್ರಕ್ಕೆ, ಬಾಕೊಳಿ, ಕಣ್ಣುನೀರೊರಸಿಕೊಳಿ... ಕೈತಕನಾದವನು ನಾನು, ಆಮೊಂದು ಅಭಿಲಾಹೊರತು...ಮುಗಿದು ಮುಂಚಿನ ಮಬಣ್ಣಿ- ಈ ಬಳಿಬನ್ನಿ...ಕುಗ್ಗುತಿದೆ ಮಾತಾಬನ್ನಿ, ಹತ್ತಿರಬನ್ನಿ, ಬಾ, ಭೀಮು...ಬಾಪಾಂಚಾಲಿ...ಬಂಧುಬಾಂಧವ್ಯಿಯಲಿ, ಭಿನ್ನಗುವ ಭಾಗ್ಯ - ಇದುವೆ ಸೌಭಾಗ್ಯ ...

ಭೀಮ! ಬಿಗಿದ ಬಂಧವ ಮತ್ತೆ ಬಿಗಿಗೊಮುಗಿಸಾ ಜಾ! ಸಾಯ ಬಯಸುವೆ! ತೋಳಬಿಗಿತದಲೇ! ಬಾ ಭೀಮು! ಬಿಗಿಮುರಿದೀದಾದು ಈ ವೇಣ ಪೂಜಾರವ! ಗಡಿಯ ಪಯಿಲಿ ಜೀವಪಕ್ಷ! ... ಆಕಣಾ, ದಾ ನ್ಯತ್ಯಾಬಂಧ! ಇದುವೆಕೀಚಕ ಮುಂತಿಬಂಧ!" ಇಲ್ಲಿ ಭೀಮ'ಕಟುಕನೇ ನಾನು?' 'ಕೊಚ್ಚಿಲಿಂತಕಳ್ಳ ಚಕ ನನ್ನ?' ಎನ್ನುತ್ತಾನೆ. ದ್ರೌಪದಿ ಕನ ಪಾಡಿಗೆ ಕಚ್ಚಿಲ್ಲಿಯ ಸುರಿಸುತ್ತಾಳೆ! ಕೈಲಾಸಂರವರ ಕಲ್ಪನಾ ರಾಜ್ಯದ ಕೀಶ್ರೀ ರಾಜರತ್ನಂರವರ ಜೀವಂತ ಪಾತ್ರಸೃಮೊದಲಿಂದ ತುದಿಯ ತನಕವೂ ಗಂವಾಗಿ ನಿರ್ಗಳವಾಗಿ ಹರಿಯುವ ಮಹಿಳ ನನ್ನುದೆಯನ್ನು ಸೂರೆಗೊಳ್ಳುತ್ತಕೀಚಕನಂತಹ ವ್ಯಕ್ತಿಯಲ್ಲಿ ಅದರಂಭಿಗಳು ಉಕ್ಕಿಉಕ್ಕಿ ಬರುತ್ತವೆ! ರಾವಣಸೀತೆಯ ಮೋಹಕ್ಕೆ ತುತ್ತಾಗಿಸಿದ ಪ್ರನಖಿಯ ಹಾಗೆ, ಇಲ್ಲವೆ (ಭಾರತದಂತೆ) ಕನನ್ನು ಉನ್ಮತ್ತಗೆಗಿಳಿಸಿದ ಸುದೀಷ್ಣೆಯಗೆ ಇದ್ದಿಯ ಸುದೀಷ್ಣೆಯಲ್ಲ! ಅಣ್ಣನ ಶಿನ್ನು ಮನಮುಟ್ಟಿ ಚಿಂತಿಸುವ ಮಾನವಯಾಕೆ! ಇಂತಹ ಸುಂದರವಾದ ಕೃತಿಯವೆನ್ನು ಕೈಲಾಸಂ ಕಲ್ಪನೆಯಂತೆ ರಸಿದು, ತನ್ನ ಪ್ರತಿಭಾಸಂಪನ್ನವಾದ ಶೈಲಿಯಿಂದ ಕನ್ನಡ ಜನ ಮನಸ್ಸಂತೃಗೊಳಿಸುವ ಕಾರ್ಯವನ್ನು ಶ್ರೀ ರಾಜರತ್ನಂ ಮಾಡಿರುತ್ತಾರೆ. ಪ್ರತಿಯೊಬ್ಬ ಕನ್ನಡಿಗರು ಇವರ ಲಾಘವನ್ನು ಪಡೆಯಬೇಕು.

—ಎಸ್ಸೆ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಲೆಗಳ ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯ ಗಳೂ ರಖಂ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಣ್ಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ESTD. 1926
MADRAS RUBBER FACTORY LTD.
RUBBER STAMPS ENGRAVERS
BALMATTA ROAD MANGALORE-SN

Approved firm by the Govt. of Mysore Certificated by the Agent of the Govt. of Gylone & Indian.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)

ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ



ಪೆಟ್ಟಿನ ಮೂಹಿತಿಗೆ—ಡಾ। ಯಂ ಸಿ ಶಾಸ್ತ್ರೀ, ಯಲ್.ವಿ
ಕೊಡಿಯಾಲಬೈಲು ಪೋಸ್ಟು, (ನಂಗಳೂರು)

ಸ್ಥಾಕಿಸ್ಟರು:—ಡಾ। ಐ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಟ್ಟಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹೆರವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಸ್ಟೆ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಧಾರವಾಡ, —ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—
ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ
ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ ,ಕೆಮಿಸ್ಟ್, ಜನರಲ್ ಬ್ಯಾಂಕಿಗ

ಮೂಲ್ಕಿ ಬೇಂಕ್
ಲಿಮಿಟೆಡ್, ಮೂಲ್ಕಿ.

1921ರಲ್ಲಿ ಸ್ಥಾಪಿತವಾಗಿ 2 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನಿಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಆತೀ ಕಡಿಮೆ ದರ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd
Moolky, S. K.

1951ನೇ ವರ್ಷದ ಅಂತ್ಯದಿಂದ ಹಿಂದು ಸ್ಥಾನಕ್ಕೆ ಪರದೇಶಗಳಿಂದ ಆಹಾರ ಧಾನ್ಯಗಳನ್ನು ಆಮದು ಮಾಡಕೂಡದೆಂದು ಕೇಂದ್ರ ಸರಕಾರವು ಕಳದ ಮಾರ್ಚ ತಿಂಗಳಲ್ಲಿ ನಿರ್ಣಯಿಸಿರುತ್ತದೆ. ಆಹಾರದಲ್ಲಿ ಸ್ವಯಂಪೂರ್ಣ ನಾಗುವಂತೆ ಪ್ರಾಂತಿಕ ಸರಕಾರಗಳು ತಮ್ಮ ತಮ್ಮ ಆದಾರೋತ್ಪತ್ತಿ ಯೋಜನೆಗಳನ್ನು ತೀವ್ರಗೊಳಿಸಬೇಕೆಂದು ಕೇಳಲಾಗಿದೆ ಈ ಧೋರಣೆಯನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ನಮ್ಮ ಸರಕಾರವು 1949—50 ಮತ್ತು 1950-51ನೇ ವರ್ಷಗಳಿಗೋಸ್ಕರ ಎರಡು ವರ್ಷಗಳ ತೀವ್ರ ಸಾಗುವಳಿ ಕಾರ್ಯಕ್ರಮವೊಂದನ್ನು ತಯಾರಿಸಿದೆ.

ಈ ಕಾರ್ಯಕ್ರಮಕ್ಕೆ ಒಟ್ಟು 3½ ಕೋಟಿ ರೂಪಾಯಿ ವೆಚ್ಚ ತಗಲುವುದು. ಇದರಲ್ಲಿ

ತೀವ್ರ ಸಾಗುವಳಿ ಯೋಜನೆ

ಆಹಾರದಲ್ಲಿ ಸ್ವಾವಲಂಬಿಯಾಗಲು

ಎರಡು ವರ್ಷಗಳ ಕಾರ್ಯಕ್ರಮ.

ಕೇಂದ್ರ ಸರಕಾರವು ರೂ 1.4 ಕೋಟಿಗಳನ್ನು ತೆರಲಿದೆ ಉಳಿದ ರೂ. 2.4 ಕೋಟಿಗಳನ್ನು ಪ್ರಾಂತಿಕ ಸರಕಾರವು ವಹಿಸುವುದು. ಈ ಯೋಜನೆಗಳ ಫಲವಾಗಿ ಹಪಾಪೂರ್ವ ಇತ್ಯಾದಿಗಳು ಎಂದಿನಂತಿದ್ದರೆ 1949—50ರ ಅಂತ್ಯದಲ್ಲಿ 471 ಲಕ್ಷ ಟನ್ನುಗಳಷ್ಟೂ, 1950—51ರ ಅಂತ್ಯದೊಳಗೆ 5.87 ಲಕ್ಷ ಟನ್ನುಗಳಷ್ಟೂ ಹೆಚ್ಚಿಗೆ ಆಹಾರ ಧಾನ್ಯ ದೊರೆಯಬಹುದೆಂದು ಅಂದಾಜು ಮಾಡಲಾಗಿದೆ.

ಈ ಕಾರ್ಯಕ್ರಮದಲ್ಲಿ ಅಡಕವಾಗಿರುವ ವಿವಿಧ ಯೋಜನೆಗಳನ್ನು ಈ ಕೆಳಗೆ ಕೊಡಲಾಗಿದೆ:—

1. ಯಂತ್ರಗಳ ಸಹಾಯದಿಂದ ಸಾಗುವಳಿ ಮಾಡಿ ಭೂಮಿಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಪಂಪು ಸೆಟ್‌ಗಳನ್ನು ಸ್ಥಾಪಿಸುವುದು.
2. ಯಂತ್ರಗಳ ಸಹಾಯದಿಂದ ಸಾಗುವಳಿ ಮಾಡಿ ಭೂಮಿಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಇಲೆಕ್ಟ್ರಿಕ್ ಮೋಟರ್ ಪಂಪು ಸೆಟ್ ಇತ್ಯಾದಿಗಳನ್ನು ಒದಗಿಸುವುದು.
3. ರೈತರ ಪ್ರಯೋಜನಕ್ಕಾಗಿ ಸೆಂಟ್ರಲ್ ಎಗ್ರಿಕಲ್ಚರಲ್ ಇಂಜಿನಿಯರಿಂಗ್ ಸ್ಕ್ವೋರು ಗಳನ್ನೂ ಸಬ್ಸ್ಟೂ ಕೇಂದ್ರಗಳನ್ನೂ ತೆರೆಯುವುದು.
4. ಯಂತ್ರಗಳ ಸಹಾಯದಿಂದ ಸಾಗುವಳಿ ಮಾಡಿ ಭೂಮಿಯನ್ನು ಅಭಿವೃದ್ಧಿಗೊಳಿಸುವುದು ಮತ್ತು ಟ್ರಾಕ್ಟರ್, ಬುಲ್ಡೋಸರ್ ಗಳ ಸಹಾಯದಿಂದ ನೆಲವನ್ನು ಕೃಷಿ ಯೋಗ್ಯವನ್ನಾಗಿ ಮಾಡುವದು.
5. ದತ್ತಮಂಡಲ ಜಿಲ್ಲೆಗಳಲ್ಲಿಯೂ ನಿರಾಶ್ರಿತ ಜಿಲ್ಲೆಯಲ್ಲಿಯೂ ನಮ್ಜು ಸಬೆಯ ದಂತೆ ಮಾಡುವದು ಮತ್ತು ಜನಿವಾಸನ ಎಲ್ಲೆ ಕಟ್ಟು ಏರಿಸುವುದು.
6. ಸಾಗುವಳಿ ಉದ್ದೇಶಗಳಿಗೋಸ್ಕರ ಉಕ್ಕು ಮತ್ತು ಕಬ್ಬಿಣ ಹಂಚುವುದು.
7. ಹಳ್ಳಿಗಳಲ್ಲಿ ಮಿಶ್ರಗೊಬ್ಬರ ತಯಾರಿಸುವುದಕ್ಕೋಸ್ಕರ ಧನಸಹಾಯ ತೆರುವ ಯೋಜನೆ.
8. ರೈತರುಗಳಿಗೆ ತಗಲುವ ಕೃಷಿಕೀಟಾದಿ ರೋಗಗಳನ್ನು ತಡೆಯುವುದು.
9. ಆಮದುಕೋಷ್ಟಕ್ಕಿಯನ್ನು ಹೆಚ್ಚಿಸುವುದಕ್ಕೋಸ್ಕರ ಫ್ಲೋಸ್ಪೇಟೆಕ್ ಸೊಪ್ಪರಗಳನ್ನು ಹಂಚುವ ಯೋಜನೆ.
10. ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಅಮೋನಿಯಂ ಸಲ್ಫೇಟನ್ನು ಹಂಚುವ ಯೋಜನೆ.
11. ಉತ್ತಮ ತಳದ ಭತ್ತ ಬೀಜಗಳನ್ನು ತ್ವರೆಯಲ್ಲಿ ಹೆಚ್ಚಿಸುವ ಹಾಗೂ ಹಂಚುವ ಯೋಜನೆ.
12. ಆಹಾರ ಬೆಳೆಗಳಿಗೆ ಸೊಪ್ಪುಗೊಬ್ಬರ ವನ್ನು ಹೆಚ್ಚಾಗಿ ಉಪಯೋಗಿಸುವುದಕ್ಕೋಸ್ಕರ ಯೋಜನೆ.
13. ಉತ್ತಮ ತಳದ ಧಾನ್ಯ ಬೀಜಗಳನ್ನು ತ್ವರೆಯಲ್ಲಿ ಹೆಚ್ಚಿಸುವ ಹಾಗೂ ಹಂಚುವ ಯೋಜನೆ

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S, No. 350/1949

ಕವಡೂರು ಮಹಾಲಿಂಗೇಶ್ವರ ಟೆಂಪಲ್, ಇದರ ಟ್ರಸ್ಟಿ ರಂಗಭಟ್ಟ ... ವಾದಿ. ಮತ್ತು

ಮುತ್ತು ಕಂಡಂಬೇತಿ ಕೂಡಾ ... ಪ್ರತಿವಾದಿಯ

ಸದ್ರಿ ದಾವೆಯ 4ನೇ ಪ್ರತಿವಾದಿಯು ಗಿರಿಯಮ್ಮ ಸೆಟ್ಟಿ.

5ನೇ ಪ್ರತಿವಾದಿಯು ತೇಶಮ್ಮ
6ನೇ ಪ್ರತಿವಾದಿಯು ಮಾಣಿಕ್ಯ ಸೆಟ್ಟಿ,
7ನೇ ಪ್ರತಿವಾದಿಯು ಬಿಜಲು ಸೆಟ್ಟಿ,
9ನೇ ಪ್ರತಿವಾದಿ ಬೂದ ಪೂಜಾರಿ,
14ನೇ ಪ್ರತಿವಾದಿಯು ಧನಾಪತಿ,
17ನೇ ಪ್ರತಿವಾದಿಯು ಅನಂತನುತ್ತಿ,
19ನೇ ಪ್ರತಿವಾದಿಯು ಶೇಶಿ ಪೂಜಾರ್ತಿ

ಕೂಡಾ ಇವರಿಗೆ ಈ ನ್ಯಾಯಲಕ ತಿಳಿಯ ಪಡಿಸುವದೇನಂದರೆ, ವಾದಿಯು ನಿಮ್ಮ ಮೇಲೆ ಕೂಡಾ ಕಸ್ಟೀಕಿನ ಅ್ಯಪೆಜು ಬರಮಾಡುವ ರೀ ದಾಕ್ಷ ಮಾಡಿದ ಮೇಲ್ಕಂಡ ದಾವೆಯು ತಾ. 30-12-1949ಕ್ಕೆ ತನ್ನಗೆ ಯಿಟ್ಟರಾನದ ರಿಂದ ಸದ್ರಿ ನಿವಸ ಹಗಲು 10 ಘಂಟೆಗೆ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ನಿಮ್ಮ ಉದಾಹರಣೆಯನ್ನು ದಾಕ್ಲು ಮಾಡದೆ ಹೋದರೆ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ದಾವೆಯನ್ನು ಏಕಪಕ್ಷವಾಗಿ ತೀರ್ಮಾನಿಸಲ್ಪಡುವದು. ಕೋರ್ಟು ಸುಕುಂ ಪ್ರಕಾರ ಪ್ರಕಟಿಸಿದ್ದು.

K. V Kamath,
Advocate for Plaintiff.

ಕಾರ್ಕಳ, ತಾ. 8-12-1949.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S No. 287/1948.
R. E. P. No. 528/1949.

ವಾದಿ ಆರ್ಜಿದಾರ ಆನಂತಯ್ಯ ಕನಾಕ, ಮೂವನ ಮನೆ ಶಕಯ್ಯ ಕನಾತನ ಮಗನಾ. ಕುಂದಾಪುರ ತ.ಲ್ಲು ಹಳ್ಳಿ ಹೊಳೆ ಗ್ರಾಮ ವಲ್ಲಿರುವವನಾ. Post Shankernarayana.

ಪ್ರತಿವಾದಿ ಎದ್ರಿ ಅರಿಗೆ ಕೃಷ್ಣಪ್ಪ ಯಾನೆ ಕೃಷ್ಣ ಬ್ಯಾರಿ, ತೆಕ್ಕಬ್ಯಾರಿ ಮಗ್ಗಾ, ಧಾರವಾಡ ಡಿಸ್ಟ್ರಿಕ್ಟ್ ಹಾನಗಲ್ಲು ತಾಲ್ಲೂ ಹಾನಗಲ್ಲು ಕ್ಸಬ್ಬಾ, ಮೆಲಗುದ್ದಿ ಸರಸ್ವತಿನ ಮನೆಯಲ್ಲಿ ರುವವಾ Post Hangal.

ಸದ್ರಿ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವದೇನಂದ್ರೆ:—

ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ ಮೇಲಿನ ಡಿಕ್ರಿ ಸವಾಧಾನದ ಬಗ್ಗೆ ನಡ್ಡಿದ ಮೇಲಿನ ವ್ಯವಹರಣೆಯಲ್ಲಿ ಯಿಸ್ಟ್ರೀನ ಶರ್ತ ನಿರ್ಣಯವ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾ. 5-1-1950ಕ್ಕೆ ತನ್ನಗೆ ಯಿಷೋ ಡಾಗಿರುತ್ತದೆ. ಆ ಕುರಿತು ನಿಮ್ಮವೇನಾದರೂ ಆಕ್ಷೇಪಜಿಯಿದ್ದರೆ ಸದ್ರಿ ದಿವ್ಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹ ಯಾ ವಕೀಲರ ಮುಖಾಂತ್ರ ಹಾಜರು ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನೂ ಎಕ್ಪವಾರ್ಟಿ ಮಾಡಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ ವ್ಯವಹರಣೆಯನ್ನು ತೀರ್ಮಾನ [illegible]ಾದೀತೆಂತ ಈ ಮೂಲ್ಕ ತಿಳುಪಿಸಿರುತ್ತದೆ.

(Sd) M. M. Hebbar.
Advocate for Petitioner.

ಕೊಕ್ಕಾಂ: ಕುಂದಾಪುರ
ತಾರೀಕು 14-12-1949

ಗೊನೋರಿಯಾ ಹರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೆವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಭಿಯಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಕಂಪು ಸೆರಗು ಹೋಗುತ್ತಿದ್ದರೆ, ಕೊಲಿಕ್ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಾಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ೪ ಗುಂಜಿ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾಲಾ, ಕೂಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರುಃ—ಗದಗ: ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಪಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ, ಗದಗ.



ಸರಿಯಾದ ಪತ್ರವ್ಯವಹಾರ:—ಡಿ. ಜೆ. ಪಿ. ಮೆನಾಸಿಸಂಕರ ಸೆಟ್ಟಿ, ಡಿವಿಜನಲ್ ಮೆನೇಜರ್, ಜಯಂತ್ ಬಿಲ್ಡಿಂಗ್, ಮೆ.ದಾನ್ ರೋಡು, ಮಂಗಳೂರು.

ಆಹಾರೋತ್ಪಾದನೆಯಲ್ಲಿ ಸ್ತ್ರೀಯರ ಪಾತ್ರ

ಬರೆಯವರ: ಎಫ್. ಎಲ್ ಬ್ಯಾನೇ.

ಧನಾ ಸಹಕಾರಿ ಸಂಘಗಳಲ್ಲಿ ಆನರಿಗೆ ಮನೆಯನ್ನು ನಡೆಸುವ ಬಗ್ಗೆ ಪರಿಜಯ ಜ್ಞಾನ ವಂತು ಆಭ್ಯಾಸಕಟ್ಟಾಗಿ ಇಟ್ಟುಕೊಳ್ಳುವಂತ ನೋಡಿಕೊಳ್ಳಬೇಕಾಗುವಬಲ್ಲದೆ ಸರಿಯಾದ ಆಹಾರ ಸಿದ್ಧತೆ ಮತ್ತು ಬಟ್ಟೆಬರೆಗಳ ವ್ಯವಸ್ಥೆ, ಇತ್ಯಾದಿ ಇಂತಹ ನೂರಾರು ಸಂಗತಿಗಳನ್ನು ಕಲಿತಿರಬೇಕಾಗುವದು

ಒಕ್ಕಲತನ ಕ್ಷೇತ್ರಗಳನ್ನು ಹೇಗೆ ಸಾಗಿಸ ಬೇಕು ಮತ್ತು ಧನಗಳನ್ನು ಹೇಗೆ ಸಂರಕ್ಷಿಸಿ ಟ್ಟುಕೊಳ್ಳಬೇಕು. ಎಂಬ ಬಗ್ಗೆ ಗಂಡಸರಿಗೆ ಕಲಿಸಲು ಎಷ್ಟೋ ದೊಡ್ಡ ದೊಡ್ಡ ಪಾಠಗಳಿರುವವು. ಆದರಂತೆ ಹೆಣ್ಣು ಮಕ್ಕಳಿಗಾದರೂ ಈ ರೀತಿ ಜ್ಞಾನ ಮೂಡಿ ಶಿಕ್ಷಣ ಕೊಡುವ ಸಂಸ್ಥೆಗಳಿರಬೇಕು.

ಹೆಣ್ಣು ಮಕ್ಕಳಿಗೆ ಈ ತರದ ಜ್ಞಾನ ಸಂಪಾದನೆಯಾದರೆ ಅವರು ತಮ್ಮ ಮನೆಗಳಾ ನಲಿನಂತೆ ಮಾಡಲು ಸಹಸಪಡುವರು. ಮತ್ತು ಬಬ್ಬರಿಗೊಬ್ಬರು ಉತ್ಸಾಹದಿಂದ ಸ್ಪರ್ಧೆಯಿಂದ ಮುಂದರಿಯುವರು. ಆದರೆ ಅವರು ತಾವು ಸಂಪಾದಿಸುವ ವಸ್ತು ಪದವೆಗಳ ಹೆಚ್ಚಳಕ್ಕಾಗಿಯೇ ಸ್ಪರ್ಧಿಸುವದಲ್ಲದೆ ತಮ್ಮ ಮನೆತನಗಳ ಚೊಕ್ಕಟಿಕ್ಕಾಗಿ ಹಾಗೂ ಸುಖ ಸಂತೋಷಗಳಿಗಾಗಿ ಸ್ಪರ್ಧಿಸುವರು.

ಹಾಗೆಯೇ ಹೆಣ್ಣು ಮಗಳು ತಮ್ಮ ಮನೆಯಲ್ಲಿಯ ಗಂಡುಮಕ್ಕಳಿಗೆ ಹೆಚ್ಚು ಶ್ರೇಷ್ಠ ಆಹಾರ ಬೆಳೆಯುವಂತೆ ಉತ್ತೇಜನ ಕೊಡುವಳು. ಯಾತ ಎಂದರೆ ತಮಗೆ ಮತ್ತೆ ಹೆಚ್ಚಿನ ಬಂಗಾರದ ಸಾಮಾನು ಬೇಕು. ಇಲ್ಲವೆ ಮನೆಯಲ್ಲಿ ಹೆಚ್ಚಿನ ಹೊಸ ಸಾಮಾನು ಬೇಕು, ಇಲ್ಲವೆ ಜೊಲಿಗೆ ಯಂತ್ರ ಬೇಕು ಎಂಬ ದಕ್ಕಾಗಿ ಅವರು ಪ್ರಯತ್ನ ಸಾಹಸ ಪಡುವರು. ಒಂದು ಹೊಸ ಪದಾರ್ಥವಾದರೆ ಮತ್ತೊಂದು ಬೇಕೆಂದು ಅವರು ಪ್ರಯತ್ನಿಸುವರು. ಹೀಗಾಗಿ ಜೀವನ ಮಟ್ಟವು ತಂತಾನೆ ಏರುತ್ತ ಸುಖ ಸಮೃದ್ಧ ಜೀವನ ಸಾಗಿಸಲನು ವಾಗುವದು. ಆದರಿಂದ ರೈತನು ಹೆಚ್ಚು ಸಂತೋಷದಿಂದ ದುಡಿಯಲು ಹುರುಪುಳ್ಳವನಾಗುವನು ಮತ್ತು ಕಾರ್ಯ ಸಾಧಿಸಲಡೆಯಾಗುವನು.

ಮನೆಯಲ್ಲಿಯ ಗೃಹಿಣಿಯು ಯೋಗ್ಯವಾದ ಕಾಯಿಪಲ್ಲೆ, ಹಣ್ಣು ಹಂಪಲಿಗಾಗಿ ಆ ತುರಪಡುವಳು. ಮತ್ತು ಮನೆಗೆ ಬೇಕಾಗುವ ಉತ್ತಮ ಆಹಾರ ಧಾನ್ಯಕ್ಕಾಗಿ ಪ್ರಯತ್ನ ಮಾಡುವಳು ಮನೆಯಲ್ಲಿ ತನ್ನ ಯಜಮಾನನು ಆರೋಗ್ಯವಾಗಿರುವಂತೆ ನೋಡಿಕೊಳ್ಳುವಳು. ಹೊಲದಿಂದ ಹೆಕ್ಕಿ ತಂದು ಕೊಟ್ಟ ಧಾನ್ಯಗಳನ್ನು ನುಸಿಯಲ್ಲಿ ಜೋಪಾನವಾಗಿಟ್ಟುಕೊಳ್ಳುವಳು ಇಲಿ, ಹುಳ, ಸುಸ್ಪದಿಗಳಿಂದ ಆವುಗಳನ್ನು ರಕ್ಷಿಸಿಕೊಳ್ಳುವಳು ಆ ಹಾರದಲ್ಲಿಯ ಸಂಪೂರ್ಣ ಸಾರ ಸತ್ವಗಳು ಬರುವಂತೆ ಸಿದ್ಧ ಗೊಳಿಸಿ ಪ್ರೀತಿಯಿಂದ ನೀಡುವಳು. ಮತ್ತು ಎಷ್ಟೂ ಹಾಳುಮಾಡಗೊಡುವದಿಲ್ಲ.

ಮನೆಯೆಂದರೆ ಅಬಿವೃದ್ಧಿಯ ಪಡೆಯೂಗುವದು. ಈಗ ಅದು ಅಜ್ಞಾನ, ಅಸನಂಬಗೆ, ಮೂಢತನದಿಂದ ತುಂಬಿಹೋಗಿದೆ ಅನಾರೋಗ್ಯಕರವಾದ ಆಭ್ಯಾನ ಅನಾರ್ಥಿಕರವಾದ ಪದ್ಧತಿ ಬಿಟ್ಟು ಬದಲು ಮಾಡಿಕೊಳ್ಳಬೇಕೆಂದು ಹೇಳಿದರೆ ಅವನು ತನ್ನ ಮನೆಯ ಯಜಮಾನಿಯು ನಿರಾಕರಿಸುವಳೆಂದು ಹೇಳುವನು. ಆದ್ದರಿಂದ ಮನೆಯ ಯಜಮಾನಿಯನ್ನು ಶಿಕ್ಷಣ ಪಡೆಯುವಂತೆ ಮಾಡಿದರೆ ಅವಳಿಂದ ಈ ತರದ ಹೊಸ ಪದಾರ್ಥಗಳ ಪ್ರಯೋಗ ಮಾಡಲು ಪ್ರೋತ್ಸಾಹಿಸುವಳು. ತಾನು ಮಾಡಿದ ಮಕ್ಕಳ ಬಟ್ಟೆಬರೆಗಳ ಚೊಕ್ಕಟಿತನ ತೋರಿಸಿ ಅವನಿಗೂ ಹಾಗೆ ಮಾಡುವಂತೆ ಪ್ರಯತ್ನಿಸುವಳು.

ಹೊಸ ಪದ್ಧತಿಗನುಸರಿಸಿ ಪಕೆಯವುಗಳನ್ನು ಬಿಟ್ಟು ಕೊಡಲು ಮನಪ್ಪೊಲಿಸಬೇಕಾದರೆ ಅತ್ಯಂತ ಕಠಿಣವಾಗಿದೆ. ಸ್ತ್ರೀಯರಿಗೆ ಶಿಕ್ಷಣವಿಲ್ಲದೆ ಅವರು ಅಜ್ಞಾನಿಗಳಾಗಿದ್ದಾರೆ. ಮನ ಪರಿವರ್ತಿಸುವದು ಅಸಾಧ್ಯವೇ ಸರಿ. ಆ ಹಾರೋತ್ಪಾದನ ಕಾರ್ಯವು ಯಶಸ್ವಿಯಾಗಬೇಕಾದರೆ ಉಚ್ಚ ಜೀವನ ಆದರ್ಶನ ಜೀವನ ಮಟ್ಟದ ವಿಚಾರವನ್ನು ಮುಂದಿಟ್ಟುಕೊಂಡು ನಡೆಯುವದು ಮುಖ್ಯ ಸಾಧನೆಯಾಗುವದು. ಪ್ರತಿಯೊಂದು ಮನೆಗೂ ಈ ನಿಚಾರ ಮುಟ್ಟಿಬೇಕು. ಅಂದರೆ ಪೂತ್ರ ಕಾರ್ಯ ಸಾಧನೆಯಾಗುವದು. ಆದರಂತೆ ಶಾಲೆ-ಕಾಲೇಜುಗಳಲ್ಲಿ ಗಂಡು ಹೆಣ್ಣು ಮಕ್ಕಳಿಗೂ ಶಿಕ್ಷಣ ಕೊಡಬೇಕು.

ಡಿ ಎನ್. ಪುಡಿತರ ಶ್ರೇಷ್ಠವಾದ

ಪಾಥಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರಿದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

BUY INDIAN! ENCOURAGE INDIAN INDUSTRY!

ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥ್ಯಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all, keeps hair black and relieves headache etc.

REGD. TRADE MARK

Manufactured by:-

Swadeshi Oushadhi Bhandara (Regd.)

KUNJAL P. O. Brahmavar, S K.

ಆತ್ಯೆತಾಂಜನ

ತಲೆವೇದನೆ, ಶಿರೋವೇದನೆ, ಉಳುಕು ಉತ್ತಿಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು,ಜ್ವಾಯಗಳು, ಬಾತುಕೊಳ್ಳುವುದು, ಚೇಳಜಿಷಮುಂತಾದವು, ಪಕ್ಷವಾತ,ನೊಡಿನು ನೊದಲಾದ ಎಲ್ಲಾರೋಗಳಿಗೂ ಸಿದ್ಧೌಷಧ.



REGD

ಪುಳುಕದ್ದಿ ಮಂದ್ದು ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ನೋಟೀಸು

ಕಾಸರಗೋಡು ಡಿ ಮು ಕೋರ್ಟಿನಲ್ಲಿ

O. S. No. 626/1949.

R 1. A. 2896/1949.

ಬೀಪಾತುಮ್ಮ, ನಾದಿಳು, ಅರ್ಜಿದಾರಳು

ಮತ್ತು

1 ಆಮಿನೆಬ್ಬಾಕಿ, ಮಂಮ್ಮುಂಞ ಬ್ಯಾಪ ಮಗ, 2 ಬೀಪಾತುಮ್ಮ, ಕಡವತ್ತ ದೊಡ್ಡ ಆಮದೆ ಬ್ಯಾರಿ ಮಗಳು ವ 1ನೇ ಪ್ರತಿವಾದಿ ಆಮದೆಬ್ಯಾರಿ ಹೆಂಡ್ತಿ. ಕಾಸರಗೋಡು ತಾಲ್ಲ್ಯ ಕಳನಾಡ ಗ್ರಾಮದ ಕಡವತ್ತಲ್ಲಿರುವವರು ಪ್ರತಿವಾದಿರು ರೈಪಾಂಚೆರಿಟ್ಟು

ನಾದಿ ಅರ್ಜಿದಾರಳು ತಿಳಿಸುವದೇನಂದ್ರೆ 1ನೇ ಪ್ರತಿವಾದಿಯು ಇತರ ಸಾಲಗಾರರ ಕಡೆಯಿಂದ ಕೂಡಾ ಈ ವ್ಯಾಜ್ಯವನ್ನು ನಡಿಸುವರೆ ತನಗೆ ಸರ್ಮಿಶನ್ ಕೊಡಿಸಬೇಕಾಗಿ ವಾದಿಳು ವಾಕ್ಲು ಮಾಡಿದ ಸದ್ರಿ ಆರ್ಜಿಯು ವ್ಯಾಜ್ಯವು ಕೂಡಾ ತಾ.29-12-1949ಕ್ಕೆ ತಗ್ಗಿಗಿಟ್ಟಿರುವ ಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

(Sd) P. Ahmad.

Advocate for plaintiff

Kasaragod, 9-12-1949

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

29—12—1949

30ನೇ ವರ್ಷ
Estd: 1921 ಸ್ಥಾಪನೆ

LICENCE No. 31
Licensed to Post
without Prepayment

FOUNDER:
Sri. A. B. Shetty
Minister for Agriculture
& Veterinary

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
ಆರು ತಿಂಗಳಿಗೆ ರೂ. 3-0-0
ಬಿಡಿ ಪ್ರತಿಗೆ ರೂ. 0-2-0

ಪ್ರತಿ ಗುರುವಾರ
ಉಡುಪಿಯಿಂದ
ಹೊರಡುವ ಪ್ರಮುಖ
ರಾಷ್ಟ್ರೀಯ ವಾರಪತ್ರಿಕೆ

ವರ್ಷ 30
ವಾರ ೧೮

NAVAYUGA WEEKLY UDIPI, S. K.

Post Box No. 22

ಮದರಾಸು ಸರಕಾರದ ಎಗ್ರಿಕಲ್ಚರ್ ಮತ್ತು ವೆಟರ್ನರಿ ಮಂತ್ರಿ ಶ್ರೀ ಎ. ಬಿ. ಶೆಟ್ಟರಿಂದ ಮಂಗಳೂರಲ್ಲಿ ಸ್ಥಾಪಿತವಾದದ್ದು

Vol 30
No. 18

ಭಾರತ ಚರಿತ್ರೆಯ ಇಂದು ಅಮೂಲ್ಯ ಪುಟವಾಗಿ ರಾಜಸೆಬಲ್ಲ 1949ನೇ ಇಸವಿ ಕಳೆಯುತ್ತಿದೆ. ವಿಶೇಷ ಮಹತ್ವದ ಒಂದು ವರುಷವೀಗ ಪೂರ್ಣಗೊಳ್ಳುತ್ತಿದೆ.

ಅಪಾರ ಕಾಲ ಶರಧಿಯಲ್ಲಿ, 1949ನೇ ಇಸವಿಯೆಂಬುದು ಒಂದುದೊಡ್ಡತೆರೆಯಾಗಿ ಎದ್ದುದೀಗ ಬೀಳುತ್ತಿದೆ. 1947 ಮತ್ತು 1948ನೇ ಇಸವಿಗಳು ನಿಜಕ್ಕೂ ಅತಿ ಪ್ರಚಂಡ ತೆರೆಗಳಾಗಿದ್ದವು; ಪ್ರಕಾಪೀಪ್ರಾಣ ಪ್ರಳಯ ತರೆಗಳೇ ಆಗಿದ್ದುವು ಎಂದರೆ ತಪ್ಪಿಲ್ಲ. ಅವುಗಳು ಎತ್ತಿ ಕೈಯಲ್ಲಿ ಹಿಡಿದಿದ್ದ ಭಾರತೀಯರನ್ನು ಎತ್ತರಕ್ಕೆ

ಪ್ರಾಂತ್ಯಗಳಲ್ಲಿ ಜಹಿಜ್ಞಾಪನೆ ಬರ್ಖಾಸ್ತು, ಪ್ರಾಪಂಚಿಕ ಸಂಸ್ಥಾನಗಳಲ್ಲಿ ಗಣ್ಯ ಸ್ಥಾನ ಪ್ರಾಪ್ತಿ, ಸೈನಿಕ ಸಂಸ್ಥಾನಗಳಲ್ಲಿ ಪ್ರಾಬಲ್ಯ ಪ್ರಾಪ್ತಿ ಮೊದಲಾದ ಅಸಮಾನತೆಗಳ ನಿವಾರಣೆಯ ಕಡೆಗೇನೇ ನ್ಯಾಯಸಮ್ಮತ ಸರಕಾರಗಳ ಜೆಟ್ಟನ ಲಕ್ಷ್ಯವಿರಬೇಕಾಗಿ ಬಂದಿದ್ದರೂ, ಈ ನಡುವೆ ಸಾಧ್ಯವಿದ್ದಷ್ಟು ಅನುಕೂಲತೆಗಳನ್ನೊದಗಿಸುವ ಕಾರ್ಯಗಳು ಪ್ರಾಂತಿಕ ಸರಕಾರಗಳಿಂದ ಈ ವರುಷದಲ್ಲಾಗಿವೆ.

1949ರಲ್ಲಾಗಿರುವ ಸರ್ವಪ್ರಥಮ, ಅತಿ ಮುಖ್ಯ ಹಾಗೂ ಚಿರಸ್ಥಾಯೀ ಮಹತ್ಕಾರ್ಯವೆಂದರೆ ಜನತಾ ರಾಜ್ಯ ಭಾರತದ ನವರಾಜ್ಯ ಶಾಸನ ರಚನೆ. ಹಿಂದಿನ ಎರಡು ವರುಷಗಳಲ್ಲಿ ಮಾಡುತ್ತಾ ಬಂದ ಈ ಅಗಾಧ ಕಾರ್ಯವನ್ನು ಈ ವರುಷ ಭಾದ್ರಪದದಿಂದ ಸಾಗಿಸಿ, ನವಂಬರ್ 26ರಲ್ಲಿ ಪೂರ್ಣಗೊಳಿಸಲಾಯಿತು. 1950 ನೇ ಜನವರಿ ತಾ. 26ರಲ್ಲಿ ಅಸ್ತಿತ್ವಕ್ಕೆ ಬರಲಾಗುವಂತೆ ಭಾರತ ಜನತಾರಾಜ್ಯ. ಶಾಸನದ ಆಂಗೋಪಾಂಗಗಳು ರೂಪುಗೊಂಡುವು. ಈ ಶಾಸನವೆಂಬುದು, ಸ್ವತಂತ್ರ ಭಾರತವು ಬಾಳುವೇ ಪ್ರಯಾಣ ಕೈಕೊಳ್ಳುವಂತೆ ಅದಕ್ಕೆ ತೊಡಿಸಿರುವ ಕವಚ, ಭೂಷಣ ಮತ್ತು ಉಪಕರಣಗಳೇ. ಈ ರೀತಿ ತಯಾರೀ ಕಾರ್ಯ ಎಲ್ಲಾ ವಿಧಾನಗಳಿಂದಲೂ ನಡೆದು ಒಂದು ಪೂರ್ಣತೆಗೆ ಬಂದ ವರುಷ. 1949

1947 ಸ್ವರಾಜ್ಯವನ್ನೂ ಅದರೊಂದಿಗೆ ದೇಶವಿಭಜನೆ ಮತ್ತು ಅತಿಭಯಂಕರ ಜಾತೀಯ ಗೊಂದಲ ಹಾಗೂ ಅಶ್ರಿತ ರಾಜ್ಯಗಳ ಸಮಸ್ಯೆ ಮೊದಲಾದ ಕಂಟಕಗಳನ್ನೂ ಒಟ್ಟಿಟ್ಟಿಗೆ ತಂದಿತು. 1948 ರಾಷ್ಟ್ರಪಿತನ ಜೀವಹರಿದಾನ, ಹೈದರಾಬಾದ್ ಕಾರ್ಯಾಚರಣೆಯಂತಹ ಘಟನೆಗಳ ಮೂಲಕ ಜಾತೀಯ ಗೊಂದಲ, ಸಂಸ್ಥಾನೀ ಕಂಟಕಗಳಂತೆಹೆ ಸಮಸ್ಯೆಗಳನ್ನು ಮುಕ್ತಾಯಗೊಳಿಸಿತು. ಹೊಸ ಸತ್ತುಗಳನ್ನು ನಿರ್ಮಿಸಿ, ನಿರ್ಮೂಲಿಸಿದ ಆವೇಷದ ವರುಷಗಳು ಬಿಟ್ಟ ರಂಗದಲ್ಲಿ ಭವಿಷ್ಯದ ಅಸ್ತಿವಾರವನ್ನು 1949 ಹಾಕಿಕೊಂಡಿದೆ. ಬಂಡತ್ತಿನ 1950 ಇನ್ನೀ ತಳಕಟ್ಟಿನಲ್ಲಿ ಭದ್ರ ಭವ್ಯ ಕಟ್ಟಡನೇರಿಸಿಕೊಂಡರಾಯಿತು.

ಈ ರೀತಿ ಸ್ವತಂತ್ರ ಭಾರತದಲ್ಲಿ ಈ ವರುಷ ಪೂರ್ಣಗೊಳ್ಳುವ ವರೆಗೂ ಕ್ರಮಶಃ ಆಗುತ್ತಾ ಬಂದ ಕಾರ್ಯಗಳೆಲ್ಲವೂ ಹೆಚ್ಚಿನಂಶ ಮುಂಧಾಗದವುಗಳೇ ಹೊರತು ಒಳಗಡೆಯವುಗಳಲ್ಲ; ರಾಷ್ಟ್ರ ಪುರುಷನ ಆಂಗೋಪಾಂಗ ಮತ್ತು ವೇಷ ಭೂಷಣಗಳಿಗೆ ಸಂಬಂಧಿಸಿದವುಗಳವು ಹೊರತು ಅನ್ನ ಕ್ಕೋಶಕ್ಕನ್ವ್ವಯಿಸಿದವುಗಳಲ್ಲ. ರಾಜಕೀಯತಃ ಸ್ವಗೃಹ ಮತ್ತು ಹೊರ ಸಂಬಂಧಗಳ ಮಟ್ಟಿಗೆ ನಡೆದಂತಹ ಪ್ರಗತಿಯು ರಾಷ್ಟ್ರದೊಳಗಿನ ಆರ್ಥಿಕ, ಸಾಮಾಜಿಕ ರಂಗದಲ್ಲಿ ಆಗಿಲ್ಲ.

ಲೋಕನಾಯಿಕೀ ಕೀರ್ತಿ ಗಳಿಸಿದುದು:– ಜಯಶೀಲ ರಾಜ್ಯ ಘಟನೆ ತಯಾರಿಸಿಕೊಂಡುದು:–ಸಂಸ್ಥಾನೀ ಏರು ತಗ್ಗುಗಳನ್ನು ಸಮ ಮಟ್ಟಕ್ಕೆ ತಂದುದು–ಈ ಆಕಾರಾಡಂಬರಗಳಗಾಗಿ ಹಿಗ್ಗುವಾಗ ಒಳಗಡೆಯ ದಾರಿದ್ರ್ಯ, ಹಸಿವು ಪೀಡೆ ಮತ್ತು ಜೀವನಾವಶ್ಯಕತೆಗಳ ಅಸ್ತವ್ಯಸ್ತತೆ, ಹಾಗೂ ಸಮಾನತೆ, ಅಭ್ಯಂಕರಗಳೀಪರೆಗೂ ಜಾಗೆಯೇ ಉಳಿದುಕೊಂಡಿವೆಯೆಂದು ತಿಳಿಸಬೇಕಾಗಿದೆ. ಈ ವರುಷದೊಂದಿಗೆ ಅಂತ್ಯಗೊಳ್ಳುವ ಈ ವರೆಗಿನ ಅವಧಿಯು, ಹೊಸಾಶಯಗಳನ್ನು ನಿವಾರಿಸಿಗೊಂಡು ಸಾಕಾರ ಮತ್ತು ಯಶಸ್ವಿಸ್ಥನೆಗೇನೇ ಮೀಸಲಿಟ್ಟುವೆಂದು ಭಾವಿಸಿ, ಬರುವ ವರುಷದಿಂದ ಒಳಗಡೆಯ ವ್ಯವಸ್ಥೆಯ ಅವಧಿಯಾರಂಭವೆಂದು ನೆನಸಿ ಕಾರ್ಯಕ್ಕೆ ತೊಡಗಿದರೆ ಮಾತ್ರ ಎಲ್ಲವೂ ಸಾರ್ಥಕ.

1950ರಲ್ಲಿ ಏನೇನೆಲ್ಲಾ ಆಗಬಹುದು? ಆಗಬೇಕು?

ಜನವರಿ 26ರಲ್ಲಿ ಹೊಸ ರಾಜ್ಯ ಘಟನೆ ಜಾರಿಯಲ್ಲಿ ಬರುವ ಮಹೋತ್ಸವ ನಡೆಯಲಿದೆ. 1950ನೇ ಜನವರಿಯಿಂದಲೂ ರಾಷ್ಟ್ರಪತಿ ಪ್ರಸಿನ ಒಂದು ಪ್ರಾಮುಖ್ಯ ದಿನವಾಗಿ ಆಚರಿಸಲ್ಪಡುತ್ತಾ ಬಂದಿರುವ 26ನೇ ಜನವರಿಗೆ 1950ರಿಂದ ಹೊಸ ಮಹತ್ವ ಬರಲಿದೆ. ಜನ ಸಾಮಾನ್ಯರ ನಿತ್ಯಜೀವನದಲ್ಲಿ ಅನುಭವಕ್ಕೆ ಬರುವಂತಹ ಅದ್ಭುತ ಮಾರ್ಪಟವಾವುದೂ 1950ನೇ ಜನವರಿ 26ರಿಂದ ತೋರಬರಲಾರದೆಂದೂ, ಅದು ವರೆಗಿನ ಶಾಸನಗಳ ಸ್ಥಾನದಲ್ಲಿ ಅಂದು ಹೊಸ ಶಾಸನಗಳು ನಿಲ್ಲಲಿವೆ. ಬದಲಾವಣೆಯ ವಿಶೇಷ ಪರಿಚಯವು ಜನ ಸಾಮಾನ್ಯರಿಗಾಗಬೇಕು ಹೊಸ ಶಾಸನದ್ವಯ ಹೊಸ ರೀತಿಯಿಂದ, ಪ್ರಾಥ ಮತದಾರರೆಲ್ಲರಿಂದ ಮಹಾ ಚುನಾವಣೆಗಳಾಗುವಾಗಲೇ.

ಈಗಿನ ಅಂದಾಜಿನಂತೆ 1950ನೇ ಅಂತ್ಯಭಾಗ ಅಥವಾ 1951ನೇ ಆದಿಭಾಗದಲ್ಲಿ ಹೊಸ ಮಹಾ ಚುನಾವಣೆಗಳು ನಡೆಯಲಿವೆ. ಈರಡು ಸಮೀಪವೆಂದರೆ 1951ರಲ್ಲೇ ನಡೆಯಬಹುದು. ಆಸಿದೀಪ್ತಿತ ವಿಶೇಷ ವಿದ್ಯಮಾನಗಳೊದಗಿದರೆ ಮತ್ತೂ ಹಿಂದೆ ಹೋಗಬಹುದು. ಆದರೆ ಸದ್ಯಸ್ಥಿತಿಯಲ್ಲಿ ಅಂತಹದೇನೂ ನಡೆಯುವ ಸಂಭವವಿಲ್ಲವೆಂದು ತೋರುತ್ತಿರುವುದರಿಂದ 1951ನೇ ವರ್ಷಾಧ್ಯವಧಿಯೊಳಗೆ ಮಹಾ ಚುನಾವಣೆಗಳಾಗುವವೆಂದು ಕಟ್ಟಿಕೊಳ್ಳಬಹುದು.

ಹೀಗಿದ್ದರೂ 1950ರ ಉತ್ತರಾರ್ಧವು ಚುನಾವಣಾ ಪ್ರಚಾರ ಮತ್ತು ಅಂದೋಲನಗಳ ಅವಧಿಯಾಗಲಿದೆ. ಆಗಲೇ ಚುನಾವಣಾಡಂಗುರ ಸ್ವರ ಕೇಳಿಬರಲಿದ್ದು ಮೇದಾರಿಕೇ ಹುರುಪುನೋಟ ಕಂಡುಬರಲಿದೆ.

1950ರ ಆದಿಯಿಂದ ಮಧ್ಯಾವಧಿಯ ವರೆಗೆ ಬಹುಶಃ ಕಾಶ್ಮೀರದ ಪ್ರಶ್ನೆ ಮತ್ತು ಭಾರತ ಪಾಕಿಸ್ತಾನಗಳೊಳಗಿನ ವಿವಾದಗಳು ಅಖಿಲ ರಾಷ್ಟ್ರದ ಲಕ್ಷ್ಯವನ್ನು ವಿಶೇಷ ರೀತಿಯಿಂದ ಆಕರ್ಷಿಸುವಷ್ಟು ಬೆಳೆಯಬಹುದು. ಕಾಶ್ಮೀರದ ಮಟ್ಟಿಗೆ ಹತ್ತರಲ್ಲಿ ಆರಂಶದಷ್ಟು ಸಂಧಾನದಾಶೆಯಿದೆಯಾದರೂ, ಗುಂಡು ಹಾರಾಟ ಪುನಃ ಆರಂಭಿಸುವ ಸಂಭವವೂ ನಾಲ್ಕಂಶ ದಷ್ಟಿದೆ.

ಇತರ ಸಂಸ್ಥಾನೀ ಪ್ರಶ್ನೆಗಳೊಂದಿಗೇನೇ ಆರಂಭಿಸಿದ್ದರೂ, ಅವುಗಳಿಂದಿಗೆ ಮತ್ತು ಅವುಗಳಂತೆ ಮುಗಿಯಲೊಪ್ಪದೆ, ಬೆಳೆದು ಬಂದಿರುವ ಸಮಸ್ಯೆಯೆಂದರೆ ಕಾಶ್ಮೀರವೊಂದೇ. ಅದಿನ್ನಾದರೂ ಸುಗಮವಾಗಿ ಸಾಗಿ, ಸಖಿತ್ಯಗೊಂಡೀತೆಂಬ ಸ್ಪಷ್ಟ ಭರವಸೆ ಕಾಣುವದಿಲ್ಲವಾದ್ದರಿಂದ ಭಾರತದ ಗೌರವ ಪರೀಕ್ಷೆಯ ಒಂದು ಸಂದರ್ಭ ಮುಂದಿದೆ ಎಂಬುದು ಜ್ಞಾಪಕದಲ್ಲಿರಬೇಕು. 1949, ಜನವರಿ 1ರಲ್ಲೇ ಕಾಶ್ಮೀರದಲ್ಲಿ ಗುಂಡು ಹಾರಾಟ ನಿಂತಿದ್ದು, ವರ್ಷಾಂತ್ಯದ ವರೆಗೂ ಈ ತಾತ್ಕಾಲಿಕ ಶಾಂತಿ ನೆಲೆನಿಂತಿತೆಂಬುದು ಇಸವಿ ಪ್ರಭಾವದ ದ್ಯೋತಕ. 1950 ಮಿಕ್ಕೆಲ್ಲಾ ತಾತ್ಕಾಲಿಕ ವ್ಯವಸ್ಥೆಗಳಿಗೆ ಶಾಶ್ವತ ಸ್ಥಾನ ಕೊಡುವಂತೆಯೇ ಕಾಶ್ಮೀರದ ಪ್ರಜಲಿತ ಶಾಂತಿಯನ್ನೂ ಚಿರಂಜೀವಿ ಮಾಡೀತೇ ಎಂಬ ಪ್ರಶ್ನೆಯಿದೆ; ಅದು ಪ್ರಶ್ನೆಯಾಗಿಯೇ ಉಳಿದುಕೊಂಡಿದೆ

ಕಮ್ಯೂನಿಸ್ಟ್ ಚೈನದ ಪ್ರತ್ಯಕ್ಷ ಒತ್ತಡವಾವುದೇ ರೀತಿಯಿಂದ 1950ರಲ್ಲಾದರೂ ಭಾರತದ ಮೇಲೆ ಬೀಳುವುದು ಅಸಂಭವ. ಆದರೆ ನೆರೆಯ ದಡಕ್ಕೆ ಬಡಿಯುತ್ತಿರುವ ಈ ಕೆಂಪು ಪ್ರವಾಹದ ದೆಸೆಯಿಂದ ಭಾರತದ ಒಳಗಡೆಯು ರಿಮ್ಯೂನಿಸ್ಟ್ ಅಂತರ್ಗಾವಿ ಬುಗ್ಗೆಗಳಿಗೆ ಭರತ ಬಂದು, ಅವು ಮೇಲಕ್ಕೆ ಉಕ್ಕಿ ತೋರಬಹುದೆಂದು ನಿರೀಕ್ಷಿಸಬಹುದು. ಬರುವ ವರುಷ ಈ ಕಡೆಗೆ ಸರಕಾರಗಳೂ ಜನತೆಯೂ ವಿಶೇಷ ಲಕ್ಷ್ಯ ಕೊಡಬೇಕಾದೀತು.

ಆಂತೂ 1950ರಲ್ಲೂ ಚಿಕಿತ್ಸೆ ಮಾಡಿಸಿಕೊಳ್ಳಬೇಕಾದ ನೋಲ್ಕೈಯ್ಯ ಜೊಕ್ಕೆಗಳು ಕೆಲವಿರಬಹುದು. ಆಂತೆಯೇ ಚುನಾವಣೆಯಂತಹ ಆಕರ್ಷಣೆಗಳೂ ಬಹುದು. ಸ್ವತಂತ್ರ ಭಾರತದಲ್ಲಿ, ಒಂಲ್ಲೊಂದು ವಿಧಾನದಿಂದ ಹೃದಯೋತ್ಸಾಹ ಅಥವಾ ಹೃದ್ಬೇಧೀ ಆಕರ್ಷಣೆಗಳು 1947 ಮತ್ತು 1948ರಂತೆಯೇ 1950 ಕೂಡಾ ಒಂದು ರೀತಿಯಿಂದ ಆಕರ್ಷಣೀಯವೇ ಆಗಲಿದೆ. ಆಂತಹ ಹೊಸ ಆಕರ್ಷಣೆಯಿಲ್ಲದೆ ಕಳೆದು ಹೋದುದೆಂದೂ ಇವುಗಳಿಂದೆಯ 1949 ಮಾತ್ರ.

ಆದರೂ 1950ರಲ್ಲಿ ಪಾಕಿಸ್ತಾನಿಗಳ, ಕಾಶ್ಮೀರ ಸಮಸ್ಯೆ, ಚಿನಾಣಿಯ ತಹ ತ್ರಾಣಕ್ಕೆ ಸಂಬಂಧಿಸಿದ ಪ್ರಶ್ನೆಗಿಂತಆರ್ಥಿಕದುಸ್ಥಿತಿ,ನಿತ್ಯಜೀವನಾಂದೋಲನದಂತಹ ವ್ಯಾಪಕ ಪ್ರಶ್ನೆಗಳೇ ಪ್ರಮುಖ್ಯವನ್ನುಸಬಹುದು. ಈ ತನಕ ಬಂದ ಬೀಳುತ್ತಾ ಒಂದ ಈ ಮೂಲ ವಿಷಯಗಳ ಕಡೆಗೆ 1950ರಲ್ಲೂ ಸರ್ವಪ್ರಥಮ ಲಕ್ಷ್ಯ ಬೀಳದಿದ್ದರೆ ಜನತಾ ಅತೃಪ್ತಿ, ಅಸಮಾಧಿಗೆ ಮುಟ್ಟಬಹುದು. ಕಾಂಗ್ರೆಸ್ ಒಡಳಿತೆಯೇ ಅಗ್ನಿ ಪರೀಕ್ಷೆಗೊಳಗಾಗಬಹುದು.

ಒಳಗಿನ ಆಕಾರ ವ್ಯವಸ್ಥೆಯ ಮಾಗೆ, ಜಿಡುಮುಳ್ಳು ಹಾಗೂ ಕಾವು ಉಳ್ಳ ಶ್ನೆಯಾಗಿ 1950ರಲ್ಲಿ ಕಾಣಿಸಿಕೊಳ್ಳುತಹದು ಭಾಷಾವಾರು ಪ್ರಾಂತ್ಯಗಳ ನೆ ಈ ಸಂಬಂಧದಲ್ಲೆಂತಹ ಬಿಸಿಯೂ ಅದೆಲ್ಲಿಯೂ ಹದ್ದು ಮೀರದೆ ವರುಷದಲ್ಲೇ ಒಂದು ಸರ್ವಸಮಶಾಂತಸ್ಥಿತಿ ನಿರ್ಮಾಣಗೊಳ್ಳುವುದು ಡತನವನ್ನ ಬಹುದು.

1950ರಲ್ಲಿ ಮುಖ್ಯವಾಗಿ ಆಗಬೇದುದು ಜನತಾ ತಯಾರೀ ಶಿಕ್ಷಣ. ಥರೆಲ್ಲರಿಗೂ ಮತಾಧಿಕಾರ ಬಂದಿರುದರಿಂದ ಅವರಿಗೆ ಜ್ಞಾನದಾನ ಮಾಡಹಾಗೂ ಸಂಘಟಿಸುವ ಕೆಲಸ ನಡೆಬೇಕಾದಿ ಜನತಾರಾಜ್ಯದ ಜಯಾಪಯ, ಸಾರ್ಥಕತೆ ನಿರರ್ಥಕತೆಗಳು ಈಯಾರಿಯನ್ನೇ ಅಧರಿಸಿಕೊಂಡಿವ.

ಹೊಸ ಚುನಾವಣೆಯನ್ನು ನಿಮಿತ್ತ ಮಾತ್ರವಾಗಿ ಮತದಾರರ ಮನಸ್ಸು ಮಾತ್ರ ಳೆಯದೇ ಆಗದ್ದರೆ, ಬೇರೆಯುದು ಯತ್ತಾದೂ ಹೊಸ ಸ್ಥಿತಿ ಮೂಡುವಂತೆ ಆದ್ದರಿಂದ ಎಂತಹ ಮಾರ್ಪಟ್ಟು ಬಂಕೆಂದಿದ್ದರೂ ಎಲ್ಲಾಲಸ್ಯವೂ ಬೀಳಬೇದುದು. ಈ ಜನತೆಯ ಕಡೆಗೇನೇ.

1950 ಜನತಾ ಶಿಕ್ಷಣ ಯವಾಗಿ ಆರಂಭಿಸಲಿ– ಎಂದರೇ 1950ರಲ್ಲಿ ಅಸ್ತಿತ್ವಕ್ಕೆ ಬರುವ ನತಾ ರಾಜ್ಯವೂ ಸಾರ್ಥಕವಾಗುವದು ಭಾರತೀಯ ಜನಸಾಮಾನ್ಯರ ಬಾಗೀದಾರಿಕೆಯ ಅಂಧಶ್ರದ್ಧೆ, ಅಜ್ಞಾನ, ಕ್ವತೆಯ ಆಂಧಕಾರ ಕವಿದಿದೆ. ಇವರೆಗಿದರ ಮುಂಧಾಗಕ್ಕೆ ಮಾತ್ರ ಪ್ರಕಾಶ ಬಿದ್ದಿದೆ ಹೊರತು, ಒಳಗಡೆಗೆ ಬಿದ್ದಿಲ್ಲ. ಈಗ ಮುಂದೀಗ ಈ ಕತ್ತಲೇ ಭಾಗವನ್ನು ಬೆಳಗಿಸಿಕೊಳ್ಳಬೇಕು.

ಎಚ್ಚೆತ್ತ ಹಾಗೂ ತುಂಬಿದ ಬುದ್ಧಿ ಹೃದಯಗಳಿಂದ ಜನತೆಯು 1950ನ್ನು ಪ್ರವೇಶಿಸಿದರೆ ಜನತಾರಾಜ್ಯ ಸಫಲವಾಗಬಹುದು. ಜನ ತಪ್ಪಿ ಬೀಳದಿದ್ದರೆ ಕಾಪ್ಪು ಮಾಡದು. ಸದ್ವಿನಿಯೋಗವಾಗಿಸಿದರೆ 1950 ಶುಭವರುಷ.

1950 ಜಯಪ್ರದವಾಗಲಿ. 1949ರಲ್ಲಿ ಬಿದ್ದ ಅಸ್ತಿವಾರದ ಮೇಲೆ 1950 ಭದ್ರ ಭವ್ಯ ಕಟ್ಟಡವನ್ನೇರಿಸಲಿ. ಈ ವರುಷವು ಮಾಡದೆ ಬಾಕಿಬಿಟ್ಟ ಸತ್ಕಾರ್ಯಗಳನ್ನು ಬರುವ ವರುಷವು ನೆರವೇರಿಸಿಕೊಡಲಿ.

ಉಡುಪಿ ಪರ್ಯಾಯ ವಸ್ತು ಪ್ರದರ್ಶನ, 1950.

ತಾರೀಖು 1-1-1950ರಿಂದ 22-1-1950ರ ವರೆಗೆ ಉಡುಪಿಯಲ್ಲಿ ಕೈಗಾರಿಕೆ "ವಸ್ತು ಪ್ರದರ್ಶನ" ನಡಿಯಲಿದೆ. ತಯಾರಿಕರಿಗೆ ತಮ್ಮ ಕೈಗಾರಿಕೆಯ ವಸ್ತು ಪ್ರದರ್ಶನಕ್ಕೆ ಇದೊಂದು ಸುಸಂಧಿ. ಕೆಲವೇ ಸ್ಟಾಲುಗಳು ಉಳಿದಿವೆ.

ಈ ಕುರಿತು ಯೋಗ್ಯ "ಸುವರ್ಣ ಸಂಚಿಕೆ"ಯೊಂದನ್ನು ಪ್ರಕಾಶಗೊಳಿಸಲಿದೆ. ಅದರಲ್ಲಿ ಕೊಡುವ ಜಾಹೀರಾತು ಮಹತ್ವಯೋಜನಕಾರಿಯಾದುದು.

ಪ್ರದರ್ಶನದ ಸಂಪೂರ್ಣ ಉಳಿಕಾಯವನ್ನು
"ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿ"ಗೆ
ದಾನವಾಗಿ ಕೊಡಲಾಗುವುದು.

ವಿವರಕ್ಕೆ ಇಂದೇ ಬರೆಯಿರಿ

Inserted by:-
The Canara Industrial & Banking Syndicate Ltd, UDIPI.

ಕಾರ್ಯದರ್ಶಿ
ಉಡುಪಿ ಪರ್ಯಾಯ ವಸ್ತು ಪ್ರದರ್ಶನ 1950
ಉಡುಪಿ.

ಪ್ರಾಯ 70ಕ್ಕೆ ಬಂದಿರುವ-ಮಹಾ ಮನುಷ್ಯ ಸ್ಟಾಲಿನ್

ಹಿದ್ದ ಸಾಮಾಗ್ರಿಗಳು ಮಿಲಿಯಾವಧಿ ಪೌಂಡುಗಳ ಬೆಲೆ ಬಾಳುವವಿದ್ದುದ್ದುವೆಂದು ತಿಳಿದುಬಂದಿದೆ. ಪೂರ್ವ ಯೂರೋಪಿನ ಎಲ್ಲಾ ಕಡೆಗಳಿಂದಲೂ ಕೆಲವು ದಿನಗಳ ವರೆಗೂ ರೈಲ್ವೆಯಲ್ಲಿ, ಮೋಟಾರುಗಳಲ್ಲಿ ಬಳುವಳಿಗಳ ರಾಶಿರಾಶಿಯೇ ಸ್ಟಾಲಿನ್ ನಿವಾಸವಾದ ಕ್ರೆಮ್ಲಿನಿನತ್ತ ಸಾಗಿ ಬಂದಿದ್ದಿತು ಮೋಸ್ಕೋ ನಗರದ ಅಕಾಶದಲ್ಲಿ ಸಾವಿರ ಆಡಿ ಎತ್ತರದಲ್ಲಿ ಮಾರ್ಶಲ್ ಪೋಸ್ಪಾಕಿನಿಂದ ಝಗಝಗಿಸುತಿದ್ದ ಸ್ಟಾಲಿನರ ಭೇತಾಳ ಪ್ರತಿಮೆಯೊಂದನ್ನು ಇಡೀ ನಗರದ ಎಲ್ಲಾ ಮೂಲೆಗಳಿಗೂ ತೋರುವಂತೆ 'ಜೆಲೂನು'ಗಳು ಎತ್ತಿ ಪ್ರದರ್ಶಿಸಿದ ತಾ. ೨೧ನೇ ರಾತ್ರಿಯ ದೃಶ್ಯವು ಜನ್ಯಾದೃಶವಾದುದು. "ಮಹಾ ಸ್ಟಾಲಿನ್ ಜಯ ವಿಜಯೋಭವ" ಎಂದು ರಶ್ಯನ್ ಭಾಷೆಯಲ್ಲಿ ಬರೆದಿದ್ದ ಕೆಂಪು ಧ್ವಜಗಳು ಆ ದಿನ ಎಲ್ಲೆಲ್ಲೂ ಹಾರಾಡಿದ್ದುವು. ಮನೆಮನೆಗಳಲ್ಲಿ ಸ್ಟಾಲಿನರ ಭಾವಚಿತ್ರಕ್ಕೆ ಶೃಂಗಾರ, ಆರಾಧನೆಗಳು ನಡೆದಿದ್ದುವು. ಸೋವಿಯೆಟ್ ಸರಕಾರದ ಸ್ಮಮುಖ ಅಧಿಕಾರೀ ಮಂಡಲಿ 'ಸುಪ್ರೀಮ್ ಸೋವಿಯೆಟ್' ಈ ಜಯಂತಿ ಸಂಬಂಧ ಹೊರಡಿಸಿದ ಶ್ಲಾಘನಾ ಪ್ರಕಟಣೆಯು ಲೆನಿನರ ಸುರಣಾ ನಂತರ ರಶ್ಯದಲ್ಲಿ ನಡೆದ ಎಲ್ಲಾ ಪ್ರಗತಿಯ ಕೀರ್ತಿಯನ್ನೂ ಕಾಮ್ರೆಡ್ ಸ್ಟಾಲಿನರಿಗಿತ್ತಿದೆ; ಲೆನಿನರ ಜೀವನದಲ್ಲಿ ನಡೆದ ಮಹತ್ಸಾಧನೆಗಳಲ್ಲಿ ಕೂಡಾ ಸ್ಟಾಲಿನರ ಕೈಯಿಕ್ಕಿಂದು ಅದರಲ್ಲಿ ಸಮೂಹದಿಸಲಾಗಿದ. ಸ್ಟಾಲಿನರ ಜನ್ಮ ದಿನದಲ್ಲಿ ಪ್ರತಿ ವರುಷವೂ ೨೦ರಿಂದ 10ರವರೆಗೆ 'ಲೋಕ ಶಾಂತಿ ಬಹುಮಾನ'ವನ್ನು, ರಾಜಕೀಯ ಅಥವಾ ಜಾತಿ ಮತಭೇದ ಭೇದ ನೋಡದೆ ಲೋಕದ ಎಲ್ಲಾ ಜನರ ನಡುವೆ ಬಾಂಧವ್ಯವನ್ನು ಬೆಸೆಯಲು ಹೆಚ್ಚಿನ ಕೃಷಿ ಮಾಡಿದವರಿಗೆ ಕೊಡಲಾಗುವುದು.

ರಶ್ಯದ ಸ್ಟಾಲಿನರಿಗೆ ಇದೇ ದಶಂಬರ ತಾ. 21ಕ್ಕೆ 70ನೇ ವರುಷ ಹಿಡಿದಿದೆ. ಮಾರ್ಶಲ್ ಜೋಸೆಫ್ ಸ್ಟಾಲಿನರಿಂದು ಎಬ್ಬಿತ್ತರ ಮಂದುಕ ಲೋಕದ ಏದನೇ ಒಂದಂಶ ಜನತೆಯ ಸರ್ವಾಧಿಕಾರಿ ಸ್ಥಾನದಲ್ಲಿ ಕಳದಳಿಪ್ಪತ್ತೈದು ವರುಷಗಳಿಂದ ಏಕ ಪ್ರಕಾರ ರಾಜಿಸುತ್ತಿರುವ ಮಾರ್ಶಲ್ ಸ್ಟಾಲಿನರಂತೆ, ಪ್ರಶ್ನಾತೀತವಾದ ನಿರಂಕುಶ ಅಧಿಕಾರವನ್ನು ಅನುಭೋಗಿಸುತ್ತಿರುವ ಮತ್ತೊಬ್ಬ ಮನುಷ್ಯ ಇಡೀ ಬ್ರಹ್ಮಂಡದಲ್ಲೇ ಇಲ್ಲ ರಶ್ಯದ ಸ್ಟಾಲಿನರ ಅಧಿಕಾರಕ್ಕೆ ಸಮಾನವಾದ ಮತ್ತೊಂದು ಅಧಿಕಾರವು ಜಗತ್ತಿನ ಬೇರೆಲ್ಲಿಯೂ ಕಂಡು ಬರುತ್ತಿಲ್ಲ ಇಷ್ಟು ದೀರ್ಘಾವಧಿ ಇಷ್ಟು ದೂರ ಅಧಿಕ ರವನ್ನು ಅನುಬೋಗಿಸಿದವರು ಆಧುನಿಕ ಜಗತ್ತಿನ ಚರಿತ್ರೆಯಲ್ಲೇ ಇಲ್ಲ. ದಶಂಬರ್ ತಾ. 21 ರಲ್ಲಿ ರಶ್ಯಾ ಮತ್ತಿತರ ಕಮ್ಯೂನಿಸ್ಟ್ ರಾಷ್ಟ್ರಗಳಲ್ಲಿ ನಡೆದ ಸ್ಟಾಲಿನ್ 70ನೇ ಜಯಂತಿಯ ಸಂಭ್ರಮ ಮತ್ತು ವೈಶಿಷ್ಟ್ಯಗಳ ಮೇಲಿಂದ ಕಮ್ಯೂನಿಸ್ಟ್ ಜನರ ಪಾಲಿಗೆ ಸ್ಟಾಲಿನರೆಂತಹ ಅದ್ಭುತ ವ್ಯಕ್ತಿ, ಸ್ಫೂರ್ತಿಯ ನಲೆ ಆಗಿದ್ದಾರೆಂಬುದನ್ನು ಅರಿಯಬಹುದು.

ಜನ್ಮದಿನೋತ್ಸವ

ರಶ್ಯದಲ್ಲಂತೂ ದಶಂಬರ್ ತಾ. 21ರ ಉತ್ಸವಾಚರಣೆಯ ಸಿದ್ಧತೆಗಳು ಕೆಲವು ವಾರಗಳಿಂದ ನಡೆದಿದ್ದುವು ಆದರೆ ಹೊಂದಿಕೆಯಾಗಿ ರಶ್ಯದ ಒಂಬಲಕ ರಾಷ್ಟ್ರಗಳಿಂದ ಪೂರ್ವಯುರೋಪು ದೇಶಗಳಲ್ಲೂ ಹಾಗೂ ಪ್ರಾಗ್ ಕೆಂಬಣ್ಣ ಒಳಿದುಕೊಂಡ ಏಷ್ಯಾದಲ್ಲೂ ಈ ಸಂಬಂಧ ಜನ್ಮದಿನ ವಿಶೇಷ ರೀತಿಯಿಂದ ಸರ್ವರಿದ್ದಿತ. ಅಂತೆಯೇ ಲೋಕದ ಇತರ ರಾಷ್ಟ್ರಗಳ ಕಮ್ಯೂನಿಸ್ಟರೂ ಸ್ಟಾಲಿನ್ ಜನ್ಮದಿನಾಚರಣೆ ಮಾಡಿದ್ದರು. ರಶ್ಯದ ರಾಜಧಾನೀ ಮೋಸ್ಕೋ ನಗರದ ಆ ದಿನದ ದೃಶ್ಯವಂತೂ ಅತ್ಯಂತ ಪ್ರೇಕ್ಷಣೀಯವಿದ್ದಿತು. 21ರಂದಿಯವ ಪತ್ರಿಕೆ 'ಸುಪ್ರೀಮ್ ಸೋವಿಯೆಟ್' ಕಾನ್ಸಿಲು ತಮ್ಮ ನಾಯಕನಿಗೆ ರಶ್ಯದ ಅತ್ಯುಚ್ಚ ಉಡುಗೊರೆಯಾದ 'ಆರ್ಡರ್ ಆಫ್ ಲೆನಿನ್'ನ್ನು ಜಾಹೀರುಮಾಡಿತು. ಪಾಲಿಲೆ ಮಾರಿಯುವಷ್ಟು ತ್ಪಾದನೆ ಮಾಡಿ ವೆಂಬ ಮಾಗ್ದಾನವೇ ರಶ್ಯದ ಜನತೆಯು ತಮ್ಮ ನಾಯಕನಿಗೆ, ಆತನ ಜನ್ಮದಿನದಂದು ಕೊಟ್ಟ ಮುಖ್ಯ ಉಡುಗೊರೆ. ಆದರೆ ನಾಯಕರಾರಾಧನೆಗೆ ಪ್ರಾಮುಖ್ಯತೆ ಕೊಡದಿರುವ ಕಮ್ಯೂನಿಸ್ಟರಾದರೂ, ತಮ್ಮ ಮಾರ್ಗದರ್ಶಿ ವ್ಯಕ್ತಿಗೆ ಹುಟ್ಟು ಹಬ್ಬದ ಉಡುಗೂರೆಯಾಗಿ ಕೆಲವು ದೆಂದು ಮೋಸ್ಕೋ ರೇಡಿಯೋ ಘೋಷಿಸಿದೆ ಸ್ಟಾಲಿನ್ ಚಕ್ರವರ್ತಿ ಸುವರ್ಣ ಪದಕ ಮತ್ತು 100,000 ರಬ್ಲ್ಗಳನ್ನು ನಗದಿ ಹಣವಾಗಿ ಈ ಬಹುಮಾನಗಳಲ್ಲಿದೆ "ಕೆಲಸಗಾರರ ಜನಕ" "ಶಾಂತಿ ನಾಯಕ" ಎಂದು ರಶ್ಯಾ ಮತ್ತಿತರ ಕಮ್ಯೂನಿಸ್ಟ್ ದೇಶಗಳಲ್ಲಿ ಸ್ಟಾಲಿನರ ಜಯ ಜಯಕಾರ ನಡೆದಿದ್ದಿತು ಬಲ್ಗೇರಿ, ಹಂಗೇರಿ, ರುಮೇನಿಯ, ಝೆಕೊಸ್ಲೊವೇಕಿಯ, ಜೈನಾ, ಜರ್ಮನಿ, ಫ್ರಾನ್ಸ್, ಸ್ವಿಸ್ಲೇಂಡು, ಅವೆರಿಕಾ ಮೊದಲಾದ ರಾಷ್ಟ್ರಗಳಲ್ಲಿ ಅಧವಾ ಕಮ್ಯೂನಿಸ್ಟ್ ಪಕ್ಷಗಳಿಂದ, ಇಲ್ಲವೇ ರಶ್ಯನ್ ರಾಯಭಾರಿ ಕಚೇರಿಗಳಲ್ಲಿ ಸ್ಟಾಲಿನ್ ಜಯಂತಿ ಸಂಬಂಧದ ವಿಶೇಷ ಸಮಾರಂಭಗಳಿದ್ದುವು. ಬ್ರಿಟಿಷ್ ಪ್ರಧಾನಿ ಆಟ್ಲಿ, ಭಾರತ ಪ್ರಧಾನಿ ನೆಹರು ಮತ್ತಿತರು ವಿವಿಧ ರಾಷ್ಟ್ರ ನಾಯಕರುಗಳಿಂದ ಸ್ಟಾಲಿನರಿಗೆ ಶುಭ ಸಂದೇಶಗಳು ಹೋಗಿದ್ದುವು ಸಮತಾವಾದಿ ರಾಷ್ಟ್ರವಾಗಿದ್ದೂ ಸ್ಟಾಲಿನ್ ಜನ್ಮ ದಿನವನ್ನು ಸಂಪೂರ್ಣ ಕಡೆಗಣಿಸಿಟ್ಟು ಏಕಮಾತ್ರ ರಾಷ್ಟ್ರವೆಂದರೆ ಯೂಗೊಸ್ಲೇವಿಯ. ಮಾರ್ಶಲ್ ಟಿಟೋನ ಯುಗೊಸ್ಲೇವಿಯ. ಮಾರ್ಶಲ್ ಟಿಟೋ ಆಮುಹೊರ್ತದಲ್ಲೇ ತನ್ನ ಸೇನೆಗಳಿಗೆ ಹೊರಡಿಸಿದ ವೀಕ್ಷಣಾಜ್ಞಾಪತ್ರದಲ್ಲಿ "ಕ್ರಾಂತಿ ಪ್ರತಿಕೂಲ ಹಾಗೂ ವೈರ" ವಹಿಸಿರುವ ರಶ್ಯದ ಧೋರಣೆಯನ್ನು ಕಟುವಾಗಿ ಟೀಕಿಸಿದ್ದಾರೆ ಹೆಬ್ಬದ ಸಂಭ್ರಮದಲ್ಲಾದರೂ ಹೆಗೆತನ ಮರೆಯಲಾರದಷ್ಟು ಮನೋಮಾಲಿನ್ಯತೆಯು ರಶ್ಯಾ ಮತ್ತು ಯುಗೊಸ್ಲೇವಿಯಗಳೊಳಗಿರುವುದನ್ನು ಕಾಣುವಾಗ ಮುಂದೇನು, ಎಂಬ ಆತುರನೇಳುವುದು ಸ್ವಾಭಾವಿಕ.

ಈ ಉಕ್ಕಿನ ಮನುಷ್ಯ

ರಶ್ಯದ ಸ್ಟಾಲಿನ್ ಪ್ರಪಂಚದಲ್ಲೇ 'ಉಕ್ಕಿನ ಮನುಷ್ಯ'ನೆಂದು ಗಣಿಸಲ್ಪಟ್ಟಿರುವ ಅಭೇದ್ಯ ಹೃದಯ. ಯಾರ ಎಂತಹ ದವಡೆಗೂ ಜಗಿಯಲಾಗದ ಕಬ್ಬಿಣದ ಕಡಲೆಯಾಗಿಯೇ ಈತ ಉಳಿದುಕೊಂಡಿದ್ದಾನೆ. ಮೆಟ್ಟು ಹೊಲಿಯುವವನೊಬ್ಬನ ಮಗನಾಗಿ ಹುಟ್ಟಿ, ಬಾಲ್ಯದಲ್ಲಿ ಪಾದ್ರಿಯಾಗುವಂತಹ ಶಿಕ್ಷಣಕ್ಕೆ ಸೇರಿದ್ದ ತೀರಾ ಸಾಮಾನ್ಯವಾದ ಹುಟ್ಟು ಮತ್ತು ಬೆಳವಣಿಗೆಯ ಮನುಷ್ಯ ಸ್ಟಾಲಿನ್. ಒಬ್ಬ ಸಂಭ್ರಮ ಕಮ್ಯುನಿಸ್ಟ್ ಕ್ರಾಂತಿಕಾರಿಯಾಗಿ ಬೆಳೆದ ಸ್ಟಾಲಿನರು ಲೆನಿನರ ನಾಯಕತ್ವದಲ್ಲಿ ನಡೆದ ಕ್ರಾಂತಿಯಲ್ಲಿ ಮನುಷ್ಯ ಭಾಗವಹಿಸಿ, ಸ್ವಸಾಮರ್ಥ್ಯದಿಂದಲೇ ರಶ್ಯದ ಕ್ರಾಂತಿ ಚೇವರ ಮತ್ತು ಬೋಲ್ಶೆವಿಕ್ ಸರಕಾರದ ಮುಂದಾಳುಗಳಲ್ಲೊಬ್ಬರಾದರು. ಲೆನಿನರ ಮರಣಾನಂತರ ಬೊಲ್ಶೆವಿಕ್ ರಶ್ಯದ ನಾಯಕ ಸ್ಥಾನಕ್ಕೆನೇ ಬಂದರು. ಈ ಸ್ಥಾನವಾದರೂ ಇದಿರಾಳಿಗಳಿಲ್ಲದೇ ಸ್ಟಾಲಿನರಿಗೆ ದೊರೆತಿರಲಿಲ್ಲ. ಆ ಇದಿರುವಾದಿತ್ವಗಳನ್ನು ಇವರು ಗೆದ್ದುಕೊಂಡ ರೀತಿ ನೀತಿಗಳಲ್ಲಿ ಕಠೋರ ಕ್ರಾಂತಿಯು ಹಾಗೂ ವಿಶೇಷ ಮುತ್ಸದ್ದಿತನದ ಅಂಶಗಳಿದ್ದುವು. ಯಾವ ವೈಚಿತ್ರ ಅಧವಾ ನಾಗರಿಕವಿಧಿನಿಯಮಗಳನ್ನೂ ಗಣಿಸದೆ ಸ್ಟಾಲಿನರು ತನ್ನ ಕೆಲಸವೊಂದನ್ನೇ ಸಾಧಿಸಿಕೊಂಡಿದ್ದರು ಬೊಲ್ಶೆವಿಕ್ ಆಗ್ರಗಣ್ಯಾಧಿಕಾರಿಯಾದಂದಿನಿಂದ ಅವರು ಅಂತರ್ರಾಷ್ಟ್ರೀಯ ರಂಗದಲ್ಲಿ ಕಮ್ಯೂನಿಸಮನ್ನು ಹರಡುವುದರಲ್ಲೂ, ಸೋವಿಯೆಟ್ ರಶ್ಯ ಮತ್ತಿತರ ಗಣ್ಯ ರಾಷ್ಟ್ರಗಳ ಸಂಬಂಧ ವಿಹಿವಾಟುಗಳಲ್ಲೂ ತೋರಿಸುತ್ತ ಬಂದಿರುವ ಚಾತುರ್ಯ, ಗುಪ್ತಗಾಮೀ ಪ್ರತಿಭೆ ಮತ್ತು ಶಕ್ತಿ ಸಾಹಸಗಳು ಅಸಾಮಾನ್ಯವಿವೆ. ಇದಿರಾಳಿಗಳ ಬುದ್ಧಿ ಮಂಕಾಗಿಸುವ, ಎದೆ ನಡುಗಿಸುವ ಅನ್ಯಾದೃಶ ಪ್ರಯೋಗಗಳೇ ಆವಾಗಿನೆ ಕಳದ ಮಹಾಯುದ್ಧದ ಅದ ಭಾಗದಲ್ಲಿ ಅತ್ಯ ಜರ್ಮನಿ, ಇತ್ತ ಬ್ರಿಟನ್, ಅವೆರಿಕಗಳೊಡನೆ ಅಡಿದ್ದ ಆಟಗಳು—ಸಂದರ್ಭೋಚಿತವಾದ ಅಸ್ತ್ರಕ್ಕ ಮತ್ತು ಪ್ರತ್ಯಕ್ಷಾಚರಣೆಗಳು — ಕೊನೆಗೆ ನಾಜೀ ಜರ್ಮನಿಗೆ ಅಂತಿಮ ಸಂಭವನೆಯನ್ನೊಡ್ಡಿದ ರೀತಿ — ಇವೆಲ್ಲವೂ ಸ್ಟಾಲಿನ ವೈಶಿಷ್ಟ್ಯಗಳು. ಲೋಕದ ಭವಿಷ್ಯ ರೂಪಿಸುವುದರಲ್ಲಿ ಸ್ಟಾಲಿನರ ಕೈ ವಾಡಕ್ಕೆದ್ದ ಪ್ರಾಮುಖ್ಯತೆ ಬೇರೊಂದು ಕೈಗಿರಲಿಲ್ಲ. ಈಗಲಾದರೂ ಸರಿಯೇ, ಸ್ಟಾಲಿನರ ಕೈಯೆತ್ತ ಸುಳಿದಾಡುವದೆಂಬುದನ್ನು ನೋಡಿತಿಳಿಯಬೆ ಯಾವ ನಿಶ್ಚಿತ ಗೆರೆಯನ್ನೆಳೆಯುವದಕ್ಕೂ ಮಿಕ್ಕವರಿಂದ ಆಗುವಂತಿಲ್ಲ. ಇಂತಹ ಲೋಕ ಪ್ರಾಮುಖ್ಯ ವ್ಯಕ್ತಿ ಸ್ಟಾಲಿನ್ ಸ್ವತಃ ಅಂಕಿಪುರವಿಸಿಯಂತಿದ್ದಾರೆ; ಎಲ್ಲವುಗಳಿದಿರು ಅಜೇಯನಂತಿರುವವರು ಪ್ರದರ್ಶನಕ್ಕಂಜುತ್ತಾರೆ. ದಶಂಬರ್ ತಾ. 21ರಲ್ಲಿ ಮೋಸ್ಕೋದ ಬೋಲ್ಶೋಯಿ ಥಿಯೇಟರಿನಲ್ಲಿ ಜರಗಿದ್ದ ತನ್ನ ಜಯಂತೀ ಸಮಾರಂಭಕ್ಕೆ ಸ್ಟಾಲಿನ್ ಹಾಜರಾಗಿದ್ದರು. ಆ ಮೊದಲವರು ಸಾರ್ವಜನಿಕರಿಗೆ ಮುಖ ತೋರಿಸಿದ್ದುದು ಕಳದ ಜುಲೈಯಿ 17ರಲ್ಲಿ ಮೋಸ್ಕೋದಲ್ಲಿ ನಡೆದಿದ್ದ ಸೋವಿಯೆಟ್ ದಿನಾಚರಣೆಯೊಂದರ ಸಂದರ್ಭದಲ್ಲಿ ಮಾತ್ರವಂತೆ. ಇೀ ಪ್ರಪಂಚದಲ್ಲಿ ಕೆಲವರ ಪಾಲಿಗೆ ಅರ್ಥವಾಗದ ಸಮಸ್ಯೆ ಮತ್ತು ಕೆಲವರ ಪಾಲಿಗೆ ಆದರ್ಶ ನಾಯಕ ನಾಗಿರುವ ನಿಗೂಢ ಹಾಗೂ ಮಹಾವ್ಯಕ್ತಿ ಈಗ 70ಕ್ಕೆ ಬಂದಿದ್ದಾರೆ.

THE VIJAYA BANK, Ltd.,

H O, MANGALORE.

A With a net work of Branches through out the District and one each at Mercara and Bombay

B With a standing of 18 years service

C. With total resources of over 40 Lakhs

Fixed deposits are now accepted at the following rates of interest

3 months	3% P A.	6 months	3½% P A
12 months	3½% P. A	24 months	4% P A

All kinds of banking business transacted

Sri B M Hegde,

Advocate & President District Board

South Kanara

(CHAIRMAN OF THE BOARD OF DIRECTORS)

ಪ್ರಶ್ನೆ ಕ್ರಿಸ್‌ಮಸ್ ಅವಧಿಯಲ್ಲಿ ಕ್ರೈಸ್ತರ ಜೊತೆ ಆಗುಹೋಗುಗಳ ಚರ್ಚೆಗೆ ಬೇಗನೆ ಜಾಗ, ಮುಖ್ಯವಾಗಿ ಕ್ರೈಸ್ತಾನುಯಾಯಿಗಳಿಗೆ ನಿರ್ಬಂಧಾತ್ಮಕವಿರುವ ಯುರೋಪಿನ ದೇಶಗಳಲ್ಲಿ, ಇತರ ಬಾಗಗಳಲ್ಲಾಗಲೀ ಕ್ರೈಸ್ತ ಸಂದೇಶ ಸಾರವಾದ ಶಾಂತಿ, ಸಹನೆಯ ಸ್ಪಂದಾವ ಸಾಕಷ್ಟು ಕಂಡು ಬರುತ್ತಿಲ್ಲ. ಲೋಕಾಂದೋಲನಗಳೆಲ್ಲವೂ ಒಹಮಟ್ಟಿಗೆ ಇದ್ದಂತಿವೆ.

ಅಂತರಾಷ್ಟ್ರೀಯ ರಂಗ

ಅನೇಕಾಧ್ಯಕ್ಷ ಟ್ರುಮೇನರು ಈದಿನ ಜಾಗತಿಕ ಯುದ್ಧದಲ್ಲಿ ಮಡಿದವರ ಸ್ಮರಣಾರ್ಥವಾಗಿ ಕೊಟ್ಟ ಭಾಷಣವೊಂದರಲ್ಲಿ "ಲೋಕವು ಸರ್ವಾಧಿಕಾರತ್ವವನ್ನು ಧಿಕ್ಕರಿಸಿ, ದೇವರತ್ತ ತಿರುಗಿದರೆ ಪೂರ್ಣ ಶಾಂತಿಯ ನೆಲೆಗೊಳ್ಳುವುದು. ಲೋಕದಲ್ಲಿಲ್ಲಾ ಜನರಲ್ಲಿ ಸ್ವಾರ್ಥಿಕರ ಮತ್ತು ಮೈತ್ರಿ ಸ್ಥಾಪನೆಗೊಂಡಲ್ಲಿ ಭೀಕರ ಯುದ್ಧಭೀತಿಯಿಂದಾಗಿ ಶಾಂತಿಯು ಸದಾ ಕಂಪಿಸುವಂತಾಗಿದು. ಘರ್ಷಣೆಗಳ ಕ್ರೂರ ಹಣ್ಣಿಗೆಗೊಳಗಾಗಿ ಮಾನವ ಜನಾಂಗವೇ ಈಗ ಬರಿದಾಗಿದೆ. ಲೋಕಕ್ಕೆ ಯುದ್ಧ ಜಿಗುಪ್ಸೆ ಹಿಡಿದಿದೆ"ಎಂದಿದ್ದರು. ಆಂತೆಯೇ ಕ್ರಿಸ್‌ಮಸ್ ದಿನದಲ್ಲಿ ಪೋಪ್ ಜಗದ್ಗುರು ಮತ್ತು ಅಧ್ಯಕ್ಷ ಟ್ರುಮೇನರು ಪರಸ್ಪರ ಕೊಟ್ಟುಪಡೆದ ಸಂದೇಶಗಳಲ್ಲಿ "ಕೊನೆಯ ಣಾಗಿ ಶಾಶ್ವತ ಶಾಂತಿಯೇ ಇಂದು ಮಾನವ ಜನಾಂಗಕ್ಕೆ ಕ್ರೈಸ್ತರ ಪಾಲಿನ ಅತಿ ದೊಡ್ಡ ಆಹ್ವಾನ" ಎಂಬ ಸಾರ ತುಂಬಿದೆ. ಪೋಪ್ ಗುರು ಮತ್ತು ಅಮೆರಿಕಾಧ್ಯಕ್ಷರು ರಶ್ಯದ ಹೆಸರೆತ್ತಿಲ್ಲವಾದರೂ ಈ ಶಾಶ್ವತ ಶಾಂತಿಗೆ ರಶ್ಯದ ಜತುವಟಿಕೆಗಳೇ ಕಂಟಕಗಳಾಗಿವೆಯೆಂಬ ಒಳಾರ್ಥವು ಅವರ ಸಂದೇಶಗಳಲ್ಲಿ ಸೂಸಿದೆ.

ಇತ್ತ ಮಾರ್ಶಲ್ ಟಿಟೋನ ಯುಗೊಸ್ಲೇವಿಯ ಮತ್ತು ರಶ್ಯಜೊಳಗಿನ ಮೈತ್ರವ್ಯವಹಾರವು ಯಥಾ ಕಾಲದಲ್ಲೂ ಯುದ್ಧಸ್ಫೋಟಕ್ಕೆ ಭೂಮಿಕೆಯೆದ್ದಿದೆ. ಯುಗೊಸ್ಲೇವಿಯ ಮತ್ತು ಅಮೆರಿಕಗಳೊಳಗೆ ವಿಮಾನ ಸಂಚಾರ ಸಂಬಂಧದ ಒಂದು ಒಡಂಬಡಿಕೆಯಾಗಿದೆ. ರಶ್ಯವು ಯಾವ ಮಹತ್ವಾರ್ಥದಲ್ಲಾದರೂ ಯುಗೊಸ್ಲೇವಿಯದ ಮೇಲೆ ಬೀಳಬಹುದೆಂಬುದನ್ನು ಇತ್ತೀಚೆಗೆ ಜಗತ್ತಿನ ರಕ್ಷಣೆ ವಕ್ತಾರಿಕೆಗಳನ್ನು ಮಿಂಚಿಸುತ್ತಿರುವ ದರಿಂದಲೂ ಹೊಡಾಟವು ದೊಡ್ಡ ಪರಮಾಣುಜ್ವಾಲೆಯನುದೆಂದೂ ಯುಗೊಸ್ಲೇವಿಯದ ಓರ್ವ ಸೇನಾನಿಯು ಎಂದಿದ್ದಾನೆ.

ರಶ್ಯದ ವಶ ಸಿಕ್ಕಿದ್ದ 70000 ಜಪಾನ್ ಯುದ್ಧ ಖೈದಿಗಳ ಗತಿಯೇನಾಯಿತೆಂಬುದೇ ಈ ತನಕ ಸ್ಪಷ್ಟವಾಗಿಲ್ಲ. ಜಪಾನಿನಲ್ಲೀಗ ಅಮೆರಿಕನ್ ಮೇಲಧಿಕಾರಿಯಾಗಿರುವ ಜನರಲ್ ಮೇಕರ್ಥರರು ಜಪಾನಿನ ಮಿತ್ರ ರಾಷ್ಟ್ರೀಯ ಕೌನ್ಸಿಲಿನಲ್ಲಿ ಈ ಪ್ರಶ್ನೆಯನ್ನು ಎತ್ತಿದ್ದರು ಆದರ ನಿಘೆ೯ರ್ಥವಾಗಿ ಆ ಕೌನ್ಸಿಲಿನ ರಶ್ಯನ್ ಸದಸ್ಯರು ಹೊರ ನಡೆದಿದ್ದರು. ಈ ಜಪಾನೀ ಕೈದಿಗಳ ಆದ್ಯಷ್ಟ ವೇನಾಯಿತೆಂಬ ಕುರಿತು ಪಟ್ಟಸ್ಥ ರಾಷ್ಟ್ರವೊಂದರ ಮೂಲಕ ಶೋಧನೆ ನಡೆಸಲಾಗಿದೆ ಎಂದು ಅಮೆರಿಕಾ ಸರಕಾರವನ್ನು ಈಗಿಕೊಂಡಿದ್ದಾಗಿದೆಂದು ಜನರಲ್ ಮೇಕರ್ಥರರಂದಿದ್ದಾರೆ. ಸೈಬೇರಿಯ ಮತ್ತು ಮಂಚೂರಿಯಗಳಲ್ಲಿ ರಶ್ಯನರಿಗೆ ಸರೆ ಸಿಕ್ಕಿದ್ದ ಜಪಾನರ ಹೆಂಡತಿ ಮಕ್ಕಳೇ ಇದ್ದ 400 ಜನರ ಗುಂಪೊಂದ ಟೋಕಿಯೋದಲ್ಲಿದ್ದ ರಶ್ಯ ರಾಯಭಾರಿ ಕಚೇರಿಯಿದಿಯು, ತಮ್ಮ ವರ ಗತಿಯೇನಾಯಿತೆಂದು ಜೊಬ್ಬೆ ಹಾಕುತ್ತಾ ಮುತ್ತಿದಾಗ ಅಲ್ಲಿದ್ದ ರಶ್ಯನ್ ಅಧಿಕಾರಿಗಳು ರಶ್ಯದಿಂದ ಸುದ್ದಿ ತರಿಸಿ ತಿಳಿಸುವೆವೆಂದು ಆಶ್ವಾಸನೆ ಕೊಟ್ಟಿದ್ದಾರೆ.

ಖೈದಿಯದಲ್ಲಿ ಕಮ್ಯೂನಿಸ್ಟ್ ಸೇನೆ ಕೊನೆಯ ಗಡಿ ಮುಟ್ಟಿಲು ವಿರಕ್ತಿಕಾಂ ಮುಂಧಾವಿಸುತಿದ್ದು ಈಗ ಜೆಂಗ್ಟು ನಗರ ನುಗ್ಗುವುದಷ್ಟಿಲ್ಲದೆ. ಖೈದಿಯದ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡುವ ಪ್ರಶ್ನೆಯೀಗ ನಿಶ್ಚಯ ಗಡಿಗೆ ಬಂದಿದೆ. ಭಾಂತ ಸರಕಾರವು ಕ್ರಿಸ್‌ಮಸ್ ದಿನಗಳೊಳಗ ಖೈದಿಯ ಕೆಂಪು ಸರಕಾರವನ್ನು ಒಪ್ಪಿಕೊಳ್ಳಬಹುದೆಂದು ನಿರೀಕ್ಷಿಸಲಾಗಿದೆ. ವಸ್ತು ಸ್ಥಿತಿಯಾಗಿರುವ ಕಮ್ಯೂನಿಸ್ಟ್ ಸರಕಾರಕ್ಕೆ ಮನ್ನಣೆ ಕೊಡಬೇಕೆಂದು ಬ್ರಿಟಿಷ್ ಮಂತ್ರಿಮಂಡಲದ ನಿರ್ಧಾರವಾಗಿದೆಯಾದರೂ ವಿದೇಶ ಮಂತ್ರಿ ಬೆವಿನರು ಈ ಮಟ್ಟಿಗೆ ಕಾಲಹರಣ ಮಾಡುವ ಧೋರಣೆ ವಹಿಸಿದಂದಿದೆ ಖೈದಿಯ ರಶ್ಯದ ವಾಲಿಗೆ ನುಂಗಲಾರದ ತುತ್ತಾಗುವುದೆಂದೂ ಅಮೆರಿಕಾ ಜಗತ್ತಿನ ರಶ್ಯದ ಈ ಅತಿರೇಕ ವರ್ತನೆಗಳನ್ನು ಖಂಡಿಸುತ್ತಿರುವ ದರಿಂದಲೂ ಈ ಹೊಡಾಟವು ದೊಡ್ಡ ಪರಮಾಣುಜ್ವಾಲೆಯನುದೆಂದೂ ಯುಗೊಸ್ಲೇವಿಯದ ಓರ್ವ ಸೇನಾನಿಯು ಎಂದಿದ್ದಾನೆ.

ಭಾರತ-ಪಾಕಿಸ್ತಾನ್, ವ್ಯಾಪಾರ ಬಿಕ್ಕಟ್ಟು!

ಅದು ಕಮ್ಯೂನಿಸ್ಟ್ ಜಗತ್ತಿಗೊಂದು ಕೊರಳದನಿಣ್ಣೆ ಹೊರಕು ಉಪಕರಣವಾಗಲಾರದೆಂದೂ, ಆ ಸಮಸ್ಯೆಯನ್ನು ಬಗೆಹರಿಸಲು ಹಲವು ವರುಷ ಹಿಡಿಯಬಹುದಾದ್ದರಿಂದ ಕಮ್ಯೂನಿಸ್ಟ್ ಸಂಕಾರಕ್ಕೆ ಮನ್ನಣೆಕೊಡಲು ತಾವು ಅವಸರ ಪಡಬೇಕೆಂದಿಲ್ಲವೆಂದು ಅಮೆರಿಕಾನು ವತ. ಸಿಂಹಳದ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಾನಂತರವೇ ನಿರ್ಧರಿಸಿದರೆಯಿಕಿಂದು ಕೆನಡ ಕಾಯುತ್ತಿದೆ.

ಇಂಡೋನೇಶಿಯಾಕ್ಕೆ ಪೂರ್ಣ ಸ್ವಾತಂತ್ರ್ಯ ದಾನಮಾಡುವ ಮಸೂದೆಯು ಡಚ್ ಪಾರ್ಲಿಮೆಂಟಿನಲ್ಲಿ ಮಂಜೂರಾಗಿರಂಬೆ ಜೂಲಿಯಾನಳ ಸಹಿ ಬಿತ್ತು. ಇಂಡೋನೇಶಿಯಾ ರಂಪಬ್ಲಿಕ್‌ಗೆ, ತನ್ನ ಪ್ರಥಮ ರಾಯಭಾರಿಯಾಗಿ ಮದ್ರಾಸಿನ ಮಾಜೀ ಮಂತ್ರಿ ಡಾ| ಸುಬ್ಬರಾಯನನ್ನು ಭಾರತ ಸಂಕಾರವು ನೇಮಿಸಿದೆ. ಡಾ. ಸುಬ್ಬರಾಯನ್ ಬಟೇವಿಯಕ್ಕೆ ಹೋಗಿದ್ದಾರೆ.

ಭಾರತ — ಪಾಕಿಸ್ತಾನ

ಭಾರತದ ಪಾಲಿಗೀಗ ಕಾಶ್ಮೀರ ಸಂಬಂಧವಾಗಿ ಮತ್ತು ವ್ಯಾಪಾರ ವಹಿವಾಟುಗಳ ಕುರಿತು ಪಾಕಿಸ್ತಾನದೊಡನೆದ್ದಿರುವ ಭಿನ್ನಾಭಿಪ್ರಾಯಗಳೇ ಪ್ರಮುಖ್ಯ ಪ್ರಶ್ನೆಗಳಾಗಿ ನಿಂತಿವೆ. ಕಾಶ್ಮೀರ ಕಮಿಕನ ವರದಿ ಕೈ ಸೇರಿದ ಮೇಲೆ ನ್ಯೂಯೋರ್ಕಿನಲ್ಲಿ ನೆರೆದಿರುವ ಭದ್ರತಾ ಕೌನ್ಸಿಲಿನ ಅಧ್ಯಕ್ಷ ಜನರಲ್ ನೋಟನ್ ಅವರು ಭಾರತ ಮತ್ತು ಪಾಕಿಸ್ತಾನ್ ಪ್ರತಿನಿಧಿಗಳೊಡನೆ ಈ ಸಂಬಂಧವಾಗಿ ಸವಿವರವಾದ ಮಿ.ಸಗೀ ಮಾತುಕತೆಗಳನ್ನು ನಡೆಸಿದ್ದರು. ಅದರ ಪರಿಣಾಮವಾಗಿ ಕಾಶ್ಮೀರ ಬಿಕ್ಕಟ್ಟಿನ ನಿವಾರಣೆಗೆ ಬುಡವಾಗಿಬಲ್ಲ ಕೇವು ಮಧ್ಯವರ್ತಿ ಸೂಚನೆಗಳನ್ನು ಅವರು ತಯಾರಿಸಿ, ಭಾರತ ಮತ್ತು ಪಾಕಿಸ್ತಾನ್ ಪ್ರತಿನಿಧಿಗಳಿಗೊಪ್ಪಿಸಿರುವರೆಂದೂ ಇತ್ಯರ್ಥದ ಪ್ರತಿನಿಧಿಗಳೂ ತಮ್ಮ ಸರಕಾರಗಳಿಗವುಗಳನ್ನು ಕಳುಹಿಸಿಕೊಟ್ಟು, ಅಭಿಪ್ರಾಯ ಕೇಳಲಾಗಿರೆಂದೂ ತಿಳಿದು ಬರುತ್ತದೆ. ಇದೇ ತಾ. 27ರಲ್ಲಿ ಭದ್ರತಾ ಕೌನ್ಸಿಲಿನ ಸಭೆ ಸೇರಿದೆ. ಈ ಮೊದಲೇ ಖಾಸಗೀ ವಿಚಾರವಿನಿಮಯಗಳ ಮೂಲಕ ಭಾರತ-ಪಾಕಿಸ್ತಾನಗಳೊಂದು ಒಡಂಬಡಿಕೆ ಸಾಧಿಸಬಹುದೊ ಎಂದು ಭದ್ರತಾ ಕೌನ್ಸಿಲಿನ ಅಧ್ಯಕ್ಷರು ಪ್ರಯತ್ನ ನಡೆಸಿದ್ದಾರೆ. ಇತ್ತ ಭಾರತ ಮತ್ತು ಪಾಕಿಸ್ತಾನಗಳೊಳಗಿನ ವ್ಯಾಪಾರ ಸಂಬಂಧ ಕೂಡಾ ಕಟ್ಟುಹೋಗಿ ಬಿಕ್ಕಟ್ಟೆದ್ದಿದೆ. ವಾಲ್ಯೆ ಏಜ್ಞೇದನೆಯಾಗಿ ಮೊದಲೇ ಭಾರತವು ಕುಟ್ರಾಕ್ಟೆಗೆ ಹಿಸುಕೊಂಡು ಮೌಲ್ಯವನ್ನು ಕೂಡಾ ಕಟ್ಟಿದ್ದ ಹಸಿ ನಾರನ್ನು ಪಾಕಿಸ್ತಾನವು ನ್ಯಾಯವಾಗಿ ತಡೆದಿಟ್ಟುಕೊಂಡುದರ ಫಲಿತಾಂಶವಾಗಿ, ಪಾಕಿಸ್ತಾನಕ್ಕೆ ಕಳುಹಿಸಲು ಸರಬರಾಯಿ ಮಾಡಿದ್ದವುದನ್ನು ಭಾರತ ಸರಕಾರವು ನಿಲ್ಲಿಸಿಬಿಟ್ಟಿದೆ. ಇದೇತಾ. 24ರಲ್ಲಿ ಈ ಕುರಿತು ಬಂದ ಪ್ರಶ್ನೆಯೊಂದಕ್ಕುತ್ತರ ಕೊಡುತ್ತಾ ವ್ಯಾಪಾರ ಮಂತ್ರಿ ಶ್ರೀ. ಕೆ. ಸಿ. ನಿಯೋಗಿಯವರು ಈ ಸಂಗತಿಯನ್ನು ಪಾರ್ಲಿಮೆಂಟಿನಲ್ಲಿ ಜಾಹೀರು ಮಾಡುತ್ತಾ, ಪಾಕಿಸ್ತಾನವು ಭಾರತದ ಸಿನಿಮಾಗಳನ್ನು ಸರಬರಾಯಿ ಮಾಡಿಸ್ಥಿತಿಸುವುದನ್ನು ನಿರಾಕರಿಸಿದೊಡನೆ ತಾವೀ ಸರಬರಾಯಿಯನ್ನು ಪುನಃ ಆರಂಭಿಸುವೆವೆಂದು ಪಾಕಿಸ್ತಾನಕ್ಕೆ ತಿಳಿಸಲಾಗಿದೆ, ಎಂದರು. ಭಾರತ ರಕಾರದ ಈ ಕೃತ್ಯಕ್ಕೆ ಪ್ರತಿಕಾರೋಪಾಯಗಳನ್ನು ಕೈಗೊಳ್ಳುವ ತೀವ್ರ ಯೋಚನೆಯು ಪಾಕಿಸ್ತಾನ ಸರಕಾರಕ್ಕಿದೆ, ಎಂದು ತಿಳಿದುಬಂದಿದೆ. ಭಾರತೀಯರು ಮಾಡುತ್ತಿರುವ ಅನ್ಯಾಯಗಳಿಗಾಗಿ ದ್ರವ್ಯಾಪ್ಕರದ ವ್ಯಾಪಾರ ವಹಿವಾಟುಗಳನ್ನು ಭಾರತವು 1946ರಲ್ಲೇ ನಿಲ್ಲಿಸಿಕೊಂಡಿದ್ದಾತು. 1947ರಲ್ಲಿ ಪಾಕಿಸ್ತಾನ ಪ್ರತ್ಯೇಕಗೊಂಡರೂ ದ್ರವ್ಯಾಪ್ಕರದಲ್ಲಿ ಅನ್ಯಯಕ್ಕೆಡೆಗಿದುವವಲ್ಲಿ ಭಾರತೀಯರಂತೆಯೇ ಪಾಕಿಸ್ತಾನಿಗರೂ ಇರುವುದರಿಂದ ಭಾರತ ಮತ್ತು ಪಾಕಿಸ್ತಾನವೆರಡೂ ದ್ರ

ಶರೀರದಲ್ಲಿಯ
ಅನಪೇ ಉಷ್ಣತೆಯನ್ನು
ಇದರಿಂದಲೇ ತೆಗೆದು
ಪಾರಿ
PEARL'S
Kadha
PURE HERBAL TONIC
ವೀರ್ಯಾಣು ಶರೀರದ ಒಳಗಿನ ಮತ್ತು ಹೊರಗಿನ ಉಷ್ಣವನ್ನು ತೆಗೆದು ಹಾಕಿ ಪ್ರತಿಕ್ರಿಯೆಯನ್ನು ತಂದಾಗಿರುವುದು, ಅದರಿಂದ ಲಜ್ಜಾಗ್ರಂಥಿಯನ್ನು ಸರಿಪಡಿಸುವುದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವುದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಸೂದುವದು
ನಮ್ಮ ಹತ್ತಿರದ ಕಮಿಸ್ಸರ ಪತ್ರೆಯಿಂದ ಇಂದಿನ ಒಂದು ಬಾಟಲಿಯನ್ನು ತಂದು ನೋಡಲು ಪ್ರಾರಂಭಿಸಿರಿ
PACKED
ಪರ್ಲ ಎಂಡ್ ಕಂಪನಿ
ಮುಂಬಯಿ ೨೬

ಶರೀರದಲ್ಲಿಯ
ಅನಪೇ ಉಷ್ಣತೆಯನ್ನು
ಇದರಿಂದಲೇ ತೆಗೆದು
ಪಾರಿ
PEARL'S
Kadha
PURE HERBAL TONIC
ವೀರ್ಯಾಣು ಶರೀರದ ಒಳಗಿನ ಮತ್ತು ಹೊರಗಿನ ಉಷ್ಣವನ್ನು ತೆಗೆದು ಹಾಕಿ ಪ್ರತಿಕ್ರಿಯೆಯನ್ನು ತಂದಾಗಿರುವುದು, ಅದರಿಂದ ಲಜ್ಜಾಗ್ರಂಥಿಯನ್ನು ಸರಿಪಡಿಸುವುದು, ಶಾರೀರಿಕ ಮತ್ತು ಮಾನಸಿಕ ಶಕ್ತಿಯನ್ನು ಬೆಳೆಸುವುದು, ಧಾತು ಸ್ಥಾನದಲ್ಲಿಯ ಉಷ್ಣತೆಯನ್ನು ಹೋಗಲಾಡಿಸಿ ಪುಷ್ಟಿಕರ ಸೂದುವದು
ನಮ್ಮ ಹತ್ತಿರದ ಕಮಿಸ್ಸರ ಪತ್ರೆಯಿಂದ ಇಂದಿನ ಒಂದು ಬಾಟಲಿಯನ್ನು ತಂದು ನೋಡಲು ಪ್ರಾರಂಭಿಸಿರಿ
PACKED
ಪರ್ಲ ಎಂಡ್ ಕಂಪನಿ
ಮುಂಬಯಿ ೨೬

ಕೆನರಾ ಬ್ಯಾಂಕ್, ಲಿಮಿಟೆಡ್

(ಸ್ಥಾಪನೆ ೧೯೦೬)

(ಪೊಡೆಗಾರಿಕೆ ಪರಿಮಿತಿಸಲ್ಪಟ್ಟು ಭಾರತಪಲ್ಲಿ ಸಾಂಘೀಕರಿಸಿದ್ದು)

ಮುಖ್ಯ ಕಛೇರಿಗಳು

ರೂ. ೧೧,೦೦೦ ಯಾ ಅದಕ್ಕೆ ಮೇಲ್ಪಟ್ಟು ೧,೦೦೦ ಗುಣಕಗಳಲ್ಲಿ ೩೦ನೇ ಸಪ್ಟೆಂಬರ ೧೯೫೦ಕ್ಕೆ ಮುಗಿಯುವ ಅವಧಿಗಾಗಿ ಕೆಳಗಿನ ದರಹಂತೆ ಇದೀಗ ಸ್ವೀಕರಿಸಲಾಗುತ್ತದೆ.

೩ ತಿಂಗಳು ... ... ಸೂರಕ್ಕೆ ವರ್ಷಕ್ಕೆ ೨।
೪ ರಿಂದ ೫ ತಿಂಗಳು ... ... ,, ,, ೨॥
೬ ರಿಂದ ೯ ತಿಂಗಳು ... ... ,, ,, ೩।
ರೂ. ೧,೦೦೦ಕ್ಕೆ ಕಡಿಮೆಯಿಲ್ಲದ ರೂ. ೧೦,೦೦೦ ಕೆಳಗೆ ರೂ. ೫೦೦೮ ಗುಣಕದ ರೇವಣಾತಿಗರ ಮೇಲಿನ ಬಡ್ಡಿಯ ದರಗಳನ್ನು ನಿಮಗೆ ಸವಿವರವಿರುವ ಶಾಖೆಗೆ ಬರೆದು ತಿಳಿದು ಕೊಳ್ಳಬಹುದು.

ಮುಂಗಳೂರು ಶಾಖೆಗಳು

(1) ಬಂದರ ರೋಡ್; (2) ಡೊಂಗರಕೇರಿ,

ಇತರ ಶಾಖೆಗಳು: ಕಾರ್ಕಳ, ಬಂಟವಾಳ, ಮುಲ್ಕಿ, ಕುಂದಾಪುರ, ಉಡುಪಿ, ಗಂಗೊಳ್ಳಿ, ಪುತ್ತೂರು, ಕಾಸರಗೋಡು, ಬೊಂಬಾಯಿ, ಇತ್ಯಾದಿ ಇತ್ಯಾದಿ.

CANARA BANK, LIMITED

(Estd 1906)

ಪ್ರಕಟಣೆ

ಉಡುಪಿ ಶ್ರೀ ಫಲಿಮಾರು ಮಠದ ಪಟ್ಟದ ಫಲಿಮಾರು ಗ್ರಾಮದ ಫಲಿಮಾರು ಮಠದಲ್ಲಿ ಇರುವ ಕೆಲವು ಅತ್ಯಮೂಲ್ಯ ಜಾತಿಯ ಜಾನುವಾರುಗಳನ್ನು ತಾ. 1-1-1950ನೇ ರವಿವಾರ ದಿವಸ ಅಪರಾಹ್ನ ಘಂಟೆ 3ಕ್ಕೆ ಫಲಿಮಾರಿನ ಫಲಿಮಾರು ಮಠದಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಯೋಚನೆಯುಳ್ಳವರು ಬಂದಿದ್ದಲ್ಲಿ ಏಲಮನ್ನು ಮಂದೂಡಲಾಗುವುದೆಂದು ತಿಳಿಸಲಾಗಿದೆ.

R. V. Manjithaya
Interim Trustee, Sri Palimar Mutt, Udipi, S.K.
Office of the Interim Trustee, Sri Palimar Mutt, Udipi, S.K.
Date 26-12-49.

ದೇಶದ ಒಳಗಡೆಯ ಸಮಸ್ಯೆ, ವಿವಾದ.

ಣಾಫ್ರಿಕದ ಮೇಲಿನ ವ್ಯಾಪಾರ ಬಹಿಷ್ಕಾರವನ್ನು ಜಾರಿಯಲ್ಲಿಟ್ಟವೆ. ಆದರೀಗ ಭಾರತವು ಇದ್ದಲಿನ ರವಾನೆಯನ್ನು ನಿಲ್ಲಿಸಿ ಬಿಟ್ಟುದರಿಂದ ಪಾಕಿಸ್ತಾನವು ದಕ್ಷಿಣಾಫ್ರಿಕಕ್ಕೆ ಶರಣಾಹೊಕ್ಕು ಆದರೊಡನೆ ಪುನಃ ವ್ಯಾಪಾರಾರಂಭಿಸುವದೆಂದು ತಿಳಿದುಬಂದಿದೆ. ಅಂತೆಯೇ ಭಾರತಕ್ಕೆ ಪ್ರತಿ ಹೂಡೆತವಾಗಿ, ಪಾಕಿಸ್ತಾನವು ಕರಾಚಿ ಮತ್ತು ಲಾಹೋರು ಮಾರ್ಗವಾಗಿ ಭಾರತದ ಪೂರ್ವ ಪಂಜಾಬಿಗಾಗುತ್ತಿರುವ ಪೆಟ್ರೋಲಿಯಮ್ ಸರಬರಾಯಿಗೆ ತಡೆ ಹಾಕುವದೆಂದೂ, ಪಾಕಿಸ್ತಾನದೊಳಗಡೆಯಿಂದ ಸಾಗುತ್ತಿರುವ ಅಸ್ಸಾಮ್-ಪಶ್ಚಿಮ ಬಂಗಾಳಗಳೊಳಗಿನ ಸಾಮಾನ್ಯ ಪಥವನ್ನೂ ತಡೆಗಟ್ಟುವದೆಂದೂ ವರದಿಯಾಗಿದೆ. ಹೀಗಾದಲ್ಲಿ ಹಕ್ಕುಬದ್ಧ ಭೂ ಸಂಬಂಧಗಳ ಮಟ್ಟಿಗೂ ಪಾಕಿಸ್ತಾನವು ಅತೀಕ್ಷ್ಣಕಾರಣಕ್ಕೆ ಕೈಕೊಂಡಂತಾಗುವದರಿಂದ ಪರಿಸ್ಥಿತಿ ಮತ್ತಷ್ಟು ವಿಷಮಗೊಳ್ಳಬಹುದು. ಪಾಕಿಸ್ತಾನವು ತನ್ನ ನ್ಯಾಯ್ಯದ ಪ್ರೌಲ್ಯವಿಚ್ಛೇದನ ಮಾಡಿಕೊಳ್ಳದ, ಮತ್ತು ಭಾರತ ಸರಕಾರವ್ಯಕ್ತಿಸಂಬಂಧದ "ಎಕ್ಸ್‌ಚೇಂಜ್" ಧಾರಣೆಯನ್ನು ಒಪ್ಪಿಕೊಳ್ಳದ ದೆಸೆಯಿಂದ ಪಾಕಿಸ್ತಾನ್ ಬಂಗಾಳದ ನಾರು ಬೇಸಾಯಗಾರರಿಗೊದಗಿರುವ ಕಷ್ಟನಷ್ಟಗಳನ್ನು ಜಾರ್ಜ್‌ಸುವ್ವಾದಕ್ಕಾಗಿ ಪಾಕಿಸ್ತಾನ್ ಘಟನಾಸಮಿತಿಯಲ್ಲಿ ವಿರುದ್ಧ ಪಕ್ಷದ ಶ್ರೀ ಧೀರೇಂದ್ರನಾಥ ದತ್ತರೊಂದು ನಿಲುವಳಿ ಸೂಚನೆ ತಂದು ಆ ಸಂಬಂಧದ ಸ್ಥಿತಿಗತಿಗಳ ಕಡೆಗೆ ಪ್ರಕಾಶ ಚೆಲ್ಲಿದ್ದಾರೆ. "ಸರಕಾರದ ಅಸಡ್ಡೆಯ ದೆಸೆಯಿಂದಾಗಿ ಪೂರ್ವ ಬಂಗಾಳದ ನಾರು ಉತ್ಪಾದಕರು ಅತ್ಯಂತ ಶೋಚನೀಯ ಸ್ಥಿತಿಗೀಡಾಗಿದ್ದಾರೆ. ಪೂರ್ವ ಪಾಕಿಸ್ತಾನದಲ್ಲಿ ಒಂದೇ ಒಂದು ನಾರು ಗಿರಣಿಯನ್ನಾದರೂ ಸ್ಥಾಪಿಸಲು ಸರಕಾರದಿಂದಾಗಿಲ್ಲ. ಪಾಕಿಸ್ತಾನದ ಪ್ರೌಲ್ಯ ವಿಚ್ಛೇದನಾ ವಿರೋಧ ನಿರ್ಣಯವಾಗುವ ಮೊದಲು ಮಣಕ್ಕೆ ರೂ. 27 ರಿಂದ ೩೭೮ ವರೆಗೆ ಬೆಲೆಬರುತ್ತಿತ್ತು. ಆದರೆ ದಶಂಬರ್ ತಾ. 15ರಿಂದ ಅದು ರೂ 15ಕ್ಕಿಳಿದಿದೆ. ಪೂರ್ವ ಬಂಗಾಳದಲ್ಲಿ ಬೆಳೆಯುವ ಸರಾಸರಿ ನಾರು ಸುಮಾರು 4 ಕೋಟಿ ಮಣ. ಆ ಪೈಕಿ ಕಡಿಮೆಯೆಂದರೂ 2 ಕೋಟಿ ಮಣಗಳಷ್ಟು ರೂ. 15ರ ಧಾರಣೆಯಲ್ಲಿ ವ್ಯವಹಾರವಾಯಿತು. ಆ ಮೂಲಕ ಪೂರ್ವ ಬಂಗಾಳದ ನಾರು ಉತ್ಪಾದಕರಿಗೆ ೬೦ ಕೋಟಿ ರೂಪಾಯಿಗಳಷ್ಟು ನಷ್ಟವಾಯಿತು" ಎಂದು ಶ್ರೀ ದತ್ತರು ಸ್ಥಿತಿಚಿತ್ರವನ್ನು ಮುಂದಿಟ್ಟರು. ಎಳೆ ಪಾಕಿಸ್ತಾನದ ಆರ್ಥಿಕ ಮೊಗ್ಗೆಯನ್ನು ಮುರುಟಿಸಿಬಿಡುವ ಬಿಕ್ಕಟ್ಟಾಗಿದ್ದಿದ್ದರೂ ಅನು ಹತೋಟ್ಟು ಭಾರತದ ಸಂಬಂಧವನ್ನು ಇನ್ನಷ್ಟು ಕಡಿಮಿಕೊಳ್ಳುವುದರಲ್ಲೇ ಇದೆ

ವಿವಿಧ ವಿಷಯ

ಗವರ್ನರ್ ಜನರಲ್ ರಾಜಾಜಿಯವರು ಕಳೆದ ವಾರ ಮದ್ರಾಸ್, ತಿರುಚಿರಾಪಳ್ಳಿಗಳಲ್ಲಿ ಯುನಿವರ್ಸಿಟಿ, ಸಂಘಸಂಸ್ಥೆಗಳ ವಿವಿಧ ಕಾರ್ಯಕ್ರಮಗಳನ್ನು ಪೂರೈಸಿ, ಹಲವು ಮಾನಪತ್ರ ಪ್ರಾಗೂ ಗೌರವಗಳನ್ನು ಪಡೆದು, ವಿದ್ಯಾರ್ಥಿಗಳಿಗೂ ಸಾರ್ವಜನಿಕರಿಗೂ ಸಂಬಂಧಿಸಿದ ಬೋಧನೆಗಳನ್ನಿತ್ತು ಹೈದರಾಬಾದಿಗಾಗಮಿಸಿ, ನಿಜಾಮರಿಂದಲೂ ಮಂತ್ರಿಗಳಿಂದಲೂ, ಸಂಘ ಸಂಸ್ಥೆಗಳಿಂದಲೂ ವಿಶೇಷ ರೀತಿಯ ಸ್ವಾಗತೋಪಚಾರಗಳನ್ನು ಪಡೆದು ದಿಲ್ಲಿಗೆ ಮರಳಿದ್ದಾರೆ. ಹೈದರಾಬಾದಿನ ಸರಕಾರೀ ಗೌರವ ಕೂಟದಲ್ಲಿ ನಿಜಾಮರಂತ್ಯ ಸ್ವಾಗತ ಭಾಷಣಕ್ಕುತ್ತರ ಕೊಡುತ್ತಾ, "ಹೈದರಾಬಾದನ್ನು ಭಾರತರಿಪಬ್ಲಿಕಿನೊಂದಿಗೆ ಸೇರಿಸಿಕೊಳ್ಳಿಸಿದ ನಿರ್ಣಯವು ನಿಜಾಮರ ಪರಿಪಕ್ವ ಸುವಿಚಾರೀ ತೀರ್ಮಾನವೆಂದು ಬುದ್ಧಿಯ ದ್ಯೋತಕ"ವೆಂದು ರಾಜಾಜಿ ಶ್ಲಾಘಿಸಿದ್ದರು.

ಭಾರತದ ಪಾರ್ಲಿಮೆಂಟಿನ ಅಧಿವೇಶನವು ಇದೇ ತಾ. 24ರ ವರೆಗೆ ನಡೆದು ಮುಗಿದಿದೆ. ಇನ್ನಿದು ಹೊಸ ಶಾಸನಕ್ಕೆ ಜಾರಿಗೆ ಬಂದನಂತರವೇ ಸೇರಲಿದೆ. ಹಾಗೆ ಸೇರುವಾಗ ಈ ವರೆಗೆ ಪಾರ್ಲಿಮೆಂಟು ಮತ್ತು ಪ್ರಾಂತಿಕ ಶಾಸನ ಸಭೆಗಳ ಎರಡೂ ಸದಸ್ಯತ್ವಗಳುಳ್ಳ 100ಕ್ಕೂ ಮಿಕ್ಕಿದ ಸದಸ್ಯರ ಸ್ಥಾನಗಳಿಗೆ ಜೇರೆ ಸದಸ್ಯರು ಬರಲಿದ್ದಾರೆ. ಈ ಬಾರಿಯ ಪಾರ್ಲಿಮೆಂಟಿನಲ್ಲಿ ಹಿಂದೂ ಕೋಡು ಮಸೂದೆಯಂತೆಯೇ ಇತರ ಹಲವು ಪ್ರಾಮುಖ್ಯ ವಿಷಯಗಳು ಪರ್ಯಾಲೋಚಿಸಲ್ಪಟ್ಟದ್ದವು ಕೊನೆಯ ದಿನ, ಸಕ್ಕರೆಯ ಅಭಾವದ ಕುರಿತು ಬಿಸಿಬಿಸಿ ಚರ್ಚೆ ನಡೆದಿದ್ದಿತು. ಸಕ್ಕರೆಯ ಅಭಾವ ಮತ್ತು ಧಾರಣೆ ಹೆಚ್ಚಳದ ದುಸ್ಥಿತಿಯ ಕುರಿತು ಹಲವು ಸದಸ್ಯರು ಸಿಟ್ಟಿಗೆದ್ದು ಜರೆದು ಗುಡಾಡಿದ್ದರು. ಆಹಾರ ಮತ್ತು ಬೇಸಾಯ ಮಂತ್ರಿ ಶ್ರೀ ಬೈರಾಮದಾಸ್ ದೌಲತ ರಾಮರು ಸಕ್ಕರೆಯ ಇತ್ತೀಚೆಗಿನ ಪರಿಸ್ಥಿತಿಯ ಕುರಿತು ಪೂರ್ಣ ವಿಚಾರಣೆ ನಡಿಸಲಾಗುವುದೆಂದೂ, ಇನ್ನು ಎರಡು ಮೂರು ವಾರಗಳೊಳಗೆ ಕೈಗೇರಲಿರುವ ಟ್ಟೇಫ್ ಬೋರ್ಡಿನ ವ ದಿಯನ್ನು ಕಂಬೊಡನೆ ಕಾರ್ಯ ಕೈಕೊಳ್ಳಲಾಗುವ ದೆಂದೂ ಆಶ್ವಾಸನೆಯಿತ್ತರು.

ಅಖಿಲ ಭಾರತ ಹಿಂದೂ ಮಹಾಸಭೆಯು 28ನೇ ಮಾಜಾಧಿವೇಶನವು ಇದೇ ತಾ. 24ರಲ್ಲಿ ಕಲ್ಕತ್ತದಲ್ಲಿ ಆರಂಭಿಸಿದೆ. ಹಿಂದೊಮ್ಮೆ ಪ್ರಾಂತ್ಯ ಪ್ರಾಂತ್ಯ ಮತ್ತು ಬಿರಾನಿನ ಕಾಂಗ್ರೆಸ್ ಮುಖ್ಯ ಮಂತ್ರಿಯಾಗಿದ್ದು ಶಿಸ್ತು ಜಾರಿಗೊಳಗಾಗಿ ಹೊರಗಾಗಿದ್ದ ಡಾ| ಎನ್. ಬಿ. ಖರೆಯವರು ಅಧ್ಯಕ್ಷತೆ ವಹಿಸಿದ್ದಾರೆ. ಶ್ರೀ ಸಾವರ್ಕರರು ಮಹಾ ಸಭಾಧಿವೇಶನದ ಉದ್ಘಾಟನೆ ಮಾಡುತ್ತಾ ಹೇಳಿದರು. "ಎಂತಹ ತೊಂದರೆಗಳಿದ್ದರೂ ಈಗ ಗಳಿಸಿಕೊಂಡಿರುವ ಸ್ವಾತಂತ್ರ್ಯವೆಂಬುದು ಭಾರತದ ತಲೆಮಾರುಗಳ ಪಾಲಿನ ಅತಿ ದೊಡ್ಡ ಸಂಪತ್ತು. ಸದ್ಯದ ಸ್ವಾತಂತ್ರ್ಯವೆಂಬುದು ಚರಿತ್ರಾರ್ಹ ಸಾಧನೆ. ನಿರ್ವಿವಾದವಾಗಿ ನಮ್ಮ ಅತಿ ಕ್ರೂರೋದ್ಯೋಗಿಗಳಾಗಿದ್ದ ಬ್ರಿಟಿಷರು ಇಲ್ಲಿಂದೋಡಿಸಲ್ಪಟ್ಟರೂ. ನಮ್ಮೀ ಭೂಮಿಯಲ್ಲಿ ಈ ದಿನ ಒಬ್ಬನೇ ಒಬ್ಬ ಬ್ರಿಟಿಷ್ ಸೋಲ್ಜರ್‌ನುಳಿದಿಲ್ಲ. ಈ ಸ್ವಾತಂತ್ರ್ಯವೆಂಬುದು, ಕೇವಲ ಕಾಂಗ್ರೆಸಿನ ಅಥವಾ ಕೇವಲ ಹಿಂದೂಮಹಾಸಭೆಯ, ಇಲ್ಲವೇ ಕೇವಲ ಘಾತಿಗೇಂದವರ ಸಂಪಾದನೆಯಾಗಿರದೆ ಸಮಷ್ಠಿಯ ಸಾಧನೆಯಾಗಿದೆ. ಜನತೆಯಲ್ಲಿ ಸೇಕಡಾ 85ರಷ್ಟಿರುವವರು ಹಿಂದುಗಳೇ. ಈಗ ಸರಕಾರ ಚಾಲು ಮಾಡುತ್ತಿರುವವರು ಹಿಂದುಗಳೇ. ಸ್ವತಂತ್ರ ಭಾರತದ ರಾಜಧಾನಿಯಲ್ಲಿ ಹಾರಾಡುತ್ತಿರುವ ಧ್ವಜವು ಹಿಂದೂ ಧ್ವಜ. ಯಾವ ಹೆಸರಿನಿಂದ ಕರೆಯಲ್ಪಟ್ಟರೂ ಇದು ಹಿಂದೂ ರಾಜ್ಯವಾಗಿಯೇ ಇರುವುದು. ಯಾವ ಹೆಸರಿದ್ದರೂ ನಮ್ಮ ರಾಷ್ಟ್ರಧ್ವಜವು ಹಿಂದೂ ಧ್ವಜವಾಗಿಯೇ ಇದೆ. ಅದರಲ್ಲಿರುವ ಚಕ್ರವು ಶಾಂತಿದ್ಯೋತಕವಾಗಿರುವ ಅಶೋಕ ಚಕ್ರವರ್ತಿಯ ಧರ್ಮಚಕ್ರ; ಭಾರತವು ಶಾಂತಿ ಮತ್ತು ಅನಾಕ್ರಮಣವನ್ನು ವಲಂಬಿಸಿದೆ ಆದರೆ ಯಾವುದೇ ಕಡೆಯಿಂದ ಜರಿದ ಮೇಲೆ ಚಕ್ರಮಣ ಮಾಡುವದರಿದ್ದರೆ, ಆ ಚಕ್ರವು ವಿಶ್ವ ಕಲ್ಯಾಣಕ್ಕಾಗಿ ಸುದರ್ಶನ ಚಕ್ರವಾಗಿ ಮಾರ್ಪಡುವುದು" ಆಧ್ಯಕ್ಷ ಡಾ| ಖರೆಯವರು ತನ್ನ ಅಧ್ಯಕ್ಷ ಭಾಷಣದಲ್ಲಿ "ತಾತ್ಕಾಲಿಕವಾಗಿ ತನ್ನ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಿಕೊಂಡಿದ್ದ ಹಿಂದೂ ಮಹಾಸಭೆಯೀಗ 'ಹಿಂದೂ ರಾಷ್ಟ್ರ'ವೆಂಬ ಸಾಂಪ್ರತಿಕ ರಾಜ್ಯದ ತತ್ವವನ್ನು ಕಣ್ಣ ಮುಂದಿಟ್ಟುಕೊಂಡು ಮುನ್ನಡಿ ರಾಜಕೀಯ ರಂಗ ಪ್ರವೇಶಿಸಿದೆ. ಯಾವ ಜಾತಿ ಮತಗಳವರಿಗಾದರೂ ಕಾನೂನುಬದ್ಧ ಸಮಾನತೆ, ಮತ್ತು ಸಮಾನ ಸಂದರ್ಭಗಳನ್ನೊದಗಿಸುವ ಜಾತ್ಯತೀತ ಸರಕಾರ ಸ್ಥಾಪನೋದ್ದೇಶವೇ ಹಿಂದೂ ಮಹಾಸಭೆಯಾಗಿದ್ದಿದೆ. ಆದರೆ ಅಖಂಡ ಭಾರತದಲ್ಲಿ ಹಿಂದೂ ಮಹಾಸಭೆಯ ಗುರಿಯಾಗಿರುವುದರಿಂದ, ಆದು ಪಾಕಿಸ್ತಾನದ ಅಸ್ತಿತ್ವಕ್ಕೆಧಕ್ಕೆಯಾಗಿಲ್ಲ ಹೊಂದಿಕೊಂಡು ಹೋಗಲಾರದೆ." ಎಂದರು. ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಜನಪಾಯವಾದೀ ಕಾರ್ಯಕ್ರಮಗಳನ್ನೇ ಮಹಾಸಭೆಯು ಅಂಗೀಕರಿಸಿಕೊಂಡಿದೆ ನಂದರು.

ಕರ್ನಾಟಕ ಪ್ರಾಂತ್ಯ

ಕರ್ನಾಟಕ ಪ್ರಾಂತ್ಯ ರಚನೆಯ ಸಂಬಂಧವಾಗಿ, ಶಾಸನ ಸಭೆಗಳ ಕನ್ನಡಿಗ ಸದಸ್ಯರ ರಾಜೀನಾಮೆಗಳನ್ನು ಅಪೇಕ್ಷಿಸಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನ ಕೌನ್ಸಿಲ್ ನಿರ್ಣಯ ಮತ್ತಾನಂತರದ ಘಟನೆಗಳ ಕುರಿತು ಧಿಲ್ಲಿಯಲ್ಲಿ ಎರಡು ದಿನ ವಿಚಾರ-ವಿಮರ್ಶೆ ನಡೆಸಿದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ದಶಂಬರ್ ತಾ. 21ರಲ್ಲಿ, ಕರ್ನಾಟಕ ಕಾಂಗ್ರೆಸ್ ಸಮಿತಿಯ ವರ್ತನೆಯನ್ನು ಕಟುವಾಗಿ ಖಂಡಿಸುವ ನಿರ್ಣಯವೊಂದನ್ನು ಮಾಡಿದೆ. ಆ ನಿರ್ಣಯದ ಸಾರ ಹೀಗಿದೆ:- "ಕರ್ನಾಟಕ ಪ್ರಾಂತ್ಯ ರಚನೆಯ ಕುರಿತು ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತದರ ಕೌನ್ಸಿಲು ಮಾಡಿರುವ ನಿರ್ಣಯಗಳನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಪರ್ಯಾಲೋಚಿಸಿತು. ಪ್ರಚಲಿತ ಪ್ರಾಂತ್ಯಗಳ ವಿಭಜನೆ ಅಥವಾ ಹೊಸ ಪ್ರಾಂತ್ಯಗಳ ರಚನೆಗೆ ಮಾರ್ಗದರ್ಶಿಯಾಗುವ ತನ್ನ ಅಭಿಪ್ರಾಯಗಳನ್ನು ಈ ಸಮಿತಿಯು ಈ ಹಿಂದೆ ಸ್ಪಷ್ಟವಾಗಿ ಜಾಹೀರು ಮಾಡಿದೆ. ತಮ್ಮ ಸ್ವಂತ ಪ್ರಾಂತ್ಯ ರಚಿಸಿಕೊಳ್ಳಬೇಕೆಂದು ಕರ್ನಾಟಕದ ಜನತೆಯಲ್ಲಿ ಸಾರ್ವತ್ರಿಕವಾಗಿ ಹೆಬ್ಬುರುವ ಭಾವನೆಯನ್ನೂ, ಆ ಸೂಚನೆಯ ಕ್ರಮಬದ್ಧತೆಯನ್ನೂ ಈ ಸಮಿತಿಯು ಈ ನೆಲೆಯಲ್ಲೇ ಒಪ್ಪಿಕೊಂಡಿದೆಯಾದರೂ ಆ ಸಂಬಂಧವಾಗಿ ಈ ಮೊದಲೇ ಸೂಚಿಸಿರುವ ಅಭಿಪ್ರಾಯಗಳನ್ನು ಪೂರೈಸಿಕೊಡದೆ ಅಂತಹ ಪ್ರಾಂತ್ಯ ರಚನೆಯಾಗಲು ಸಾಧ್ಯವಿಲ್ಲ. ವಿಶೇಷತಃ ಕರ್ನಾಟಕ ಪ್ರಾಂತ್ಯ ರಚನೆಯ ಸೂಚನೆಯೆಂಬುದೀಗ, ಮೈಸೂರಿನ ಭವಿಷ್ಯದೊಂದಿಗೆ ನಿಕಟವಾಗಿ ಹೊಂದಿಕೊಂಡಿದೆ. ಮತ್ತಿದರಲ್ಲಿ ಶಾಸನತಾನುಗುಣವಾದ ಮತ್ತಿತರ ಪ್ರಾಮುಖ್ಯ ಹಾಗೂ ಗೊಂದಲಮಯೀ ಪ್ರಶ್ನೆಗಳು ಉದ್ಭವಿಸುತ್ತವೆ. ಇಂತಹದು, ಸಂಬಂಧಪಟ್ಟ ಜನತೆಯ ಅಕ್ಯಧಿಕ ಸಂಖ್ಯಾಕಡೆ ಪೂರ್ಣ ಅಲೋಚನೆ ಮತ್ತು ಅನುಮೋದನೆ ವಿನಹ ನೆರವೇರುವಂತಿಲ್ಲ. ಇನ್ನು, ಭಾರತದ ಸ್ಥಿತಿಗತಿಗಳ ವ್ಯಾಮುಖ್ಯ ಬದಲಾವಣೆಯು ಮತ್ತು ಇಂದಿಗೆ ಐದು ವಾರಗಳಿಗೂ ಮೊದಲೇ ಜಾರಿಗೆ ಬರಲಿರುವ ವೈರಾಜ್ಯ ಘಟನೆಯ ದೃಷ್ಟಿಯಿಂದ, ಈ ಅವಧಿಯಲ್ಲಿ ಇಷ್ಟೊಂದು ಉಗಾಧವಾದ ಘಟನಾ ಕ್ರಮಬದಲಾವಣೆಯನ್ನು ಪರ್ಯಾಲೋಚಿಸುವುದು ಸಾಧ್ಯತೆಯ ಮತ್ತು ಔಚಿತ್ಯದ ಮೇರೆ ಮೀರಿದ ವಿಷಯವಾಗಿದೆ ಪ್ರಾಂತಿಕ ಶಾಸನ ಸಭೆಗಳಿಗೆ ರಾಜೀ ಕೊಡಬೇಕೆಂದು ಸೂಚಿಸಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸಿನ ಕೌನ್ಸಿಲಿನ ವರ್ತನೆಗಾಗಿ ಮತ್ತದನ್ನನುಸರಿಸಿ, ಅಂತಹ

(ಒನೇ ಪುಟ ನೋಡಿರಿ)

The
PANGAL NAYAK BANK, LTD.,
Head Office. UDIPI.
SAVE FOR THE FUTURE.
SEASON DEPOSITS terminable on or before 30-6-1950 are accepted from 1-10-1949 at the following rates:
For 3, 4 or 5 months at 3 % p. a.
For 6, 7 or 8 months at 3% p. a.
Invest in our 3 YEAR CASH CERTIFICATES yielding interest at over 4% p. a.
For particulars please contact any of our Branch offices

THE
Canara Banking Corporation Ltd.
(Incorporated in India)
Estd: 1906.
HEAD OFFICE: UDIPI, S. I.

Capital Authorised .... Rs. 25,00,000.
Capital Issued & Subscribed .... Rs. 20,00,000.
Capital Paid Up. .... Rs. 19,99,800.
Reserves .... Rs. 8,91,000.

Banking business of every description transacted.



ಗುರುವಾರ ಉಡುಪಿಯಲ್ಲಿ-೦೨-೧೨-೪೪

ಪ್ರಾಂತ್ಯರಚನೆಗಾಗಿ—

ಕರ್ನಾಟಕ ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ರಾಷ್ಟ್ರ ನಾಯಕರ ಮನಸ್ಸಿನಲ್ಲಾಗಲೀ ನಾಟಿಸಬೇಕೆಂಬ ಉದ್ದೇಶದಿಂದ, ಶಾಸನ ಸಭೆಗಳ ಕನ್ನಡಿಗ ಸದಸ್ಯರನ್ನು ರಾಜೀನಾಮೆ ಕೊಡಲು ಪ್ರೇರೇಪಿಸಿದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಾನ್ಫರೆನ್ಸಿನ ನಿರ್ಣಯ:— ಅದನ್ನನುಸರಿಸಿ ನಡೆದ ರಾಜೀನಾಮೆಗಳ ಸೂಚನೆ— ಈ ಬೆಸೆಯಿಂದ ನಿರ್ಮಾಣಗೊಂಡ ವಾತಾವರಣ—ಇವೆಲ್ಲವುಗಳ ನ್ಯಾಯಾನ್ಯಾಯಗಳನ್ನು ನಾವು ಈ ಮೊದಲೇ ಸಾಕಷ್ಟು ವಿವರವಾಗಿ ವಿಮರ್ಶಿಸಿದ್ದೆವು. ಈ ಸಂಬಂಧವಾಗಿ ಕಾಂಗ್ರೆಸ್ ಅಧಿನಾಯಕ ಮಂಡಲಿಯು ಮಾಡಿದ ನಿರ್ಣಯದ ಸಾರಾಂಶವು ಈ ಸಂಚಿಕೆಯ ಇನ್ನೊಂದೆಡೆಯಲ್ಲಿ ಬಂದಿದೆ. ಕನ್ನಡಿಗರ ಈ ಹೆಜ್ಜೆಯ ಕುರಿತು, ನಾವು ಮಾಡಿದ್ದ ವಿಮರ್ಶೆಯಲ್ಲದ್ದ ಅಂಶಗಳೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯದ ತಿರುಳಾಗಿ ಬಂದಿವೆ; ಈ ಸಂಬಂಧದ ಸಮಸ್ಯಾತ್ಮಕ ವಿವಾದವನ್ನು ಒಡೆದು ಒಳಭಾಗವನ್ನು ಹರೀಕ್ಷಿಸಬಲ್ಲವರಿಗೆಲ್ಲಿ ಸುಲಭದಲ್ಲಿ ಮಂದಟ್ಟಾಗುವ ಕಾರಣಗಳವು; ಆದ್ದರಿಂದ ಹೀಗಾದುದರಲ್ಲಿ ಸೋಜಿಗವೇನೂ ಇಲ್ಲ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ನಿರ್ಣಯವಲ್ಲಿ ನಮೂದಿಸಲ್ಪಟ್ಟಿರುವ ಕಾರಣಗಳೆಲ್ಲವೂ ಸ್ವಯಂವೇದ್ಯ ಮತ್ತು ಸುಯೋಪವುಗಳೆನ್ನುವಾಗಲೇ, ಆ ನಿರ್ಣಯದ ಸ್ವರೂಪ ಸದ್ಯಸ್ಥಿತಿಯಲ್ಲಿ ಕನ್ನಡಿಗರಲ್ಲಿ ನಿರಾಶೆಯನ್ನೂ ನಿರ್ಮಿಸುವಂತಹದೆಂದು ವಿಷಾದಪೂರ್ವಕ ಹೇಳಬೇಕಾಗಿದೆ. ಪುರಾಣಗ್ರಹಗೊಂಡ ಕೆಲವು ನಿಧಿಯು, ಪಕ್ಷಬುದ್ಧಿಯ ಹಿರಿಯನು ಪ್ರದರ್ಶಿಸಬೇಕಾದ ಕ್ಷಮೆ, ಔದಾರ್ಯಗಳು, ಕರ್ನಾಟಕದ ಕಾಂಗ್ರೆಸ್ ನಿರ್ಣಯಗಳು ಬೈದಿರಾಗಿ ಕಾಂಗ್ರೆಸ್ ಅಧಿನಾಯಕ ಮಂಡಲಿ ಮಾಡಿಕೊಂಡ ನಿರ್ಧಾರದಲ್ಲಿ ತೋರಬಂದಿಲ್ಲ. ಕನ್ನಡಿಗರ ರಾಜೀನಾಮೆ ನಿರ್ಣಯವು ಅನಸರದ್ದು ಮತ್ತು ಅಚಾತುರ್ಯದ್ದೆಂಬುದು ನಿಜ; ; ಕಾಂಗ್ರೆಸ್ ಅಧಿನಾಯಕ ಮಂಡಲಿಯಂತೆ ಭಾವೋದ್ರೇಕಕ್ಕೊಳಗಾಗಿ ಅವಿವೇಕ ತಪ್ಪು ಹೆಜ್ಜೆಯಿಟ್ಟೆಂದು ಒಪ್ಪಿಕೊಳ್ಳಲಡ್ಡಿಯಿಲ್ಲ.ಆದರೆ ನಾಯಕರಾದವರು,ತಮ್ಮನುಯಾಯಿಗಳ ಈ 'ಬುದ್ಧಿ ಶೂನ್ಯತೆಯ'ನ್ನೇ ತಮ್ಮಿದಿರು ತೊಡೆ ಚಪ್ಪರಿಸಿದಂತೆ ಎಂದು ಕಟ್ಟಿಕೊಂಡು, ಪ್ರತಿಯಾಗಿ ಸಡ್ಡು ಹೊಡೆದು ನಿಂತುದು ಅವರ ಘನತೆಗೇನೇ ಕುಂದು! ಪೂರ್ಣ ನಿಸ್ಸಹಾಯಕ ಸ್ಥಿತಿ ಮತ್ತು ಬ್ರಿಟಿಷ್ಯಾಳಿಗರಿಂದಲ್ಲಿಯೂ ಉಳಿದ್ರೇಕಗೊಂಡು ತಪ್ಪು ಮಾಡದಿರಬೇಕಾದರೆ ಅಸಾಮಾನ್ಯ ಸಹನೆ ಬೇಕು. ಕರ್ನಾಟಕದ ಕಾಂಗ್ರೆಸಿಗರಲ್ಲಿ ಅದಿಲ್ಲದ ದೆಸೆಯಿಂದ ಅವರು ತಪ್ಪಿಬಿದ್ದಿದ್ದಾರೆ. ಆದರೆ ಕಾಂಗ್ರೆಸ್ ಅಧಿನಾಯಕರ ಸ್ಥಾನ ಮತ್ತು ಸ್ಥಿತಿ ಹೀಗಿಲ್ಲ ಅವರುಕಿರಿಯರ ಉದ್ರೇಕಕ್ಕೆ ಪ್ರತ್ಯಪ್ರೇರಿಗೊಳ್ಳಬಾರದಾದ ಹಿರಿಯ ಸ್ಥಾನದಲ್ಲಿದ್ದಾರೆ; ತೀರ್ಮಾನ ಕರ್ತರಾಗಿದ್ದಾರೆ; ತಪ್ಪನ್ನು ತಿದ್ದಿ ಸರಿದಾರಿಗೆ ಹಚ್ಚುವ ಮಾರ್ಗದರ್ಶಕರಾಗಿದ್ದಾರೆ. ಹೀಗಿದ್ದೂ ಕನ್ನಡಿಗರ ತಪ್ಪು ನಿರ್ಧಾರವನ್ನು ತಮಗಿತ್ತ ಧುರ ವೀರ್ಯವೆಂದೇ ಕಟ್ಟಿಕೊಂಡು, ಅದಕ್ಕೆ ಪ್ರತಿಯಾಗಿ ಕರ್ನಾಟಕ ಕಾಂಗ್ರೆಸನ್ನು ಹಂಗಿಸಿ, ಧಿಕ್ಕರಿಸಿ, ಸುಮ್ಮಗಿದ್ದು ಬಿಡಲು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮನಸ್ಸು ಮಾಡಿದುದು ಉಚಿತ ವರ್ತನೆಯಾಗಿ ತೋರುವುದಿಲ್ಲ. ಕರ್ನಾಟಕ ಕಾಂಗ್ರೆಸ್ ಸಮಿತಿಯು ಕೇಂದ್ರ ಕಾಂಗ್ರೆಸ್ ಸಮಿತಿಯ ವೈರಿಯಾಗಿ ನಿಲ್ಲುವ ಸ್ಥಾನದಲ್ಲಲ್ಲ-ನಿಂತಿಲ್ಲ. ಹೆಜ್ಜೆಂದರೆ, ಅದು ತಾನೇ ಹಕ್ಕೆಕೊಳ್ಳಬೇಕಾ ಬ್ಬರೂ ಕನ್ನಿಂದಾಗಲಿಲ್ಲವಾದ್ದರಿಂದ, ತನಗಗತ್ಯವಾಗಿ ಬೇಕಾಗಿರುವ ಆವಸ್ತುವನ್ನೆತ್ತಿಕೊಡಬೇಕೆಂದು ಹಿರಿಯರಿದಿರು ಮುಸ್ಯರ ಹೂಡುವ, ಆಥವಾ ತಾಡನೆಕೊಟ್ಟು ದೂಡಿಬಿಡುವ ಮರ್ಜಿವಹಿಸುತ್ತಾನಾದರೆ, ಈ ವರ್ತನೆಯ ಅರ್ಥವೈಪರೀತ್ಯಗಳಿಗೆ ಅಗುತ್ತಾದೆ-ತನ್ನ ಕಿರಿಯನ ಕೈಗೆ ಆ ವಸ್ತು ಬರುವುದಕ್ಕೇನೇ ಈ ಹಿರಿಯ ವಿರುದ್ಧವೇನೋ ಎಂಬ ಸಂದೇಹ ಮೂಡುತ್ತದೆ. ಕರ್ನಾಟಕ ಪ್ರಾಂತ್ಯರಚನೆಯ ಪ್ರಶ್ನೆಯು ಕಾಂಗ್ರೆಸ್ ಅಧಿನಾಯಕರ ಪಾಲಿಗೆ ಹೀಗೇಕೆರಬೇಕು? ರಾಜೀನಾಮೆಕೊಡಲು ದುಡುಕಿದವರ ತಪ್ಪಿಗೊಂದು ಪ್ರಾಯಶ್ಚಿತ್ತವಾಗಿ ಸರ್ವ ಸಮ್ಮತ ವಿಷಯವಾಗಿರುವ 'ಕರ್ನಾಟಕ ಪ್ರಾಂತ್ಯ ರಚನೆ'ಯ ಅದ್ಯಪ್ಪವನ್ನು ಕೆಡಿಸಲು ಸಾಧ್ಯವಿಲ್ಲ. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಪ್ರತ್ಯಕ್ಷವಾಗಿ ಅಂತಹ ಅನ್ಯಾಯ ವೇನನ್ನೂ ಮಾಡದೆ, ತನ್ನ ಈ ಬಾರಿಯ ನಿರ್ಣಯದಲ್ಲೂ ಪೂರ್ವ ನಿಶ್ಚಿತ ಸ್ಪಷ್ಟ ಧೋರಣೆಯನ್ನೇ ಪುನಃ ಮುಂದಿಟ್ಟಿದೆ ಎಂಬುದು ನಿಜವಾದರೂ ವಿಕೇಂದ್ರೀಕರಣಕ್ಕೆ ಅನುಮತಿಸುವ ವೈಸೂರಿನ ಕೆಲವರ ಕೃತಕಾಕ್ಷೇಪಗಳಿಗೆ ಒಂದು ತಿರುಳನ್ನು ತುಂಬಿಸಿ ಕೊಟ್ಟಂತಿದೆ. ಅಸ್ತವ್ಯಸ್ತತೆಯಿಂ ನಿರ್ಮಾಣದಲ್ಲೊಂದು ಪಾಲು ಕೇಂದ್ರ ನಾಯಕರದಾಗಿದೆ ಎಂಬುದು ಕರ್ನಾಟಕ ಪ್ರಾಂತ್ಯ ರಚನೆಯ ಕಾರ್ಯಕ್ಕೆ ಹೋಗೋ, ಹಾಗೆಯೇ ರಾಷ್ಟ್ರದ ನಾಯಕ ವರ್ಗದ ಘನತೆಗೂ ಹಾನಿಕರವಿದೆ.

ಆದರಿಲ್ಲಿ ಕೇಂದ್ರ ನಾಯಕರು, ಕರ್ನಾಟಕ ಪ್ರಾಂತ್ಯ ರಚನೆಯ ಕುರಿತು ವಿಶೇಷ ಆಸಕ್ತಿಯನ್ನು ವಹಿಸುತ್ತಿಲ್ಲವೆಂದು ಬೇಸರಪಟ್ಟುಹೋದ ಜೋಶಿಯವರ ಕೃಮ ತಪ್ಪಿದ್ದಾದರೆಂದಾಗಲೀ, ಮಾತು ಮುಂದುಕೊಂಡಿದ್ದರೆಂದಾಗಲೀ ದೂರಲವಕಾಶವಿಲ್ಲ. ಕೆ. ಪಿ. ಸಿ. ಸಿ. ಸಮಿತಿ ಮತ್ತು ರಾಜೀನಾಮೆಯಿತ್ತ ಕರ್ನಾಟಕದ ಮುಂದಾಳುಗಳು ಈಗ ನಿಜಕ್ಕೂ ಒಂದು ಕಠಿಣ ಪರೀಕ್ಷೆಗೊಳಗಾಗಿದ್ದಾರೆ. ರಾಜೀನಾಮೆ ನಿರ್ಣಯವನ್ನು ನ್ಯಾಯಾನ್ಯಾಯ ತುಲನೆಯ ತಕ್ಕಡಿಯಲ್ಲಿಟ್ಟು, ಅದು ಹುರುಳಿಲ್ಲದ್ದೆಂಬುದನ್ನು ಈ ಮೊದಲೇ ನಾವು ತೋರಿಸಿಕೊಟ್ಟಿರುವೆವಾದ್ದರಿಂದ, ಇಲ್ಲಿ ಪುನರುಕ್ತಿಗೆ ಅನಗತ್ಯ. ಸತ್ಪರಿಣಾಮವೀಯಬಲ್ಲ ದುಸ್ಸಾಧನೆಯೂ ಮಾನ್ಯವೆಂಬ ದೃಷ್ಟಿಯಿಂದೀಗ ನೋಡುವುದಾದರೂ ಕನ್ನಡಿಗರ ರಾಜೀನಾಮೆಯು ದುಸ್ಪರಿಣಾಮಗಳನ್ನೇ ಮಾಡಿದೆ ಎಂಬುದು ಸ್ಪಷ್ಟ. ಅದರ ಪ್ರತಿಕ್ರಿಯೆಯಾಗಿ ಕೇಂದ್ರ ನಾಯಕರ ಮನಸ್ಸು ಕರಗುವ ಬದಲಿಗೆ ಕೆರಳಿದ್ದು ವೈಸೂರಿನವರಲ್ಲಿ ನೋಗಕ್ಕೆ ಹೆಗಲೊಡ್ಡಿನ ಒಲವು ಹುಟ್ಟುವ ಬದಲಿಗೆ ಜತೆಗೆ ಹಾಯುವ ದುಸ್ಸೂಚಿ ಬೆಳೆದಿದೆ. ಮೇಲ್ಮಡೆಯಲ್ಲಿರುವವರೆ ಮತ್ತು ಪಕ್ಕದಲ್ಲಿರುವವರ ಮೇಲೆ ಇಂತಹ ಪ್ರತಿಕೂಲ ಪರಿಣಾಮವೇ ಆಗಿರುವಾಗ, ರಾಜೀನಾಮೆಯಪೇಕ್ಷಿಸಿದವರ ಮತ್ತದನ್ನು ಕೊಟ್ಟವರ ಮುಂದಿನ ಹೆಜ್ಜೆಯೇನೆಂಬುದೇ ಹೊಳೆಯದಂತಹ ಕ್ರಿಶಂಕು ಸ್ಥಿತಿ ಈ ಸ್ವಯಂ ಯೋಧರಿಗೊದಗಿದೆ. ಅಧಿನಾಯಕ ಮಂಡಲಿಯ ನಿರ್ಧಾರದಲ್ಲಿ, 'ರಾಜೀನಾಮೆಯಿಂದಾರಂಭಿಸಿದ ಅಸಹಕಾರ ಹೆಜ್ಜೆಯಂತಹ ಇನ್ನೊಂದೇ ಒಂದನ್ನಾದರೂ ಕಾಂಗ್ರೆಸ್ ಕ್ಷೇತ್ರದಲ್ಲಿ ಮುಂದಿಡುವುದು ಅಕ್ಷಮ್ಯ'ಎಂಬ ಎಚ್ಚರಿಕೆಯು ಗೂಢವಾಗಿ ಬಂದಿರುವುದನ್ನು ಗಮನಿಸಬೇಕು. ಕಾಂಗ್ರೆಸಿಗರಾಗಿದ್ದುಕೊಂಡೇ ಇನ್ನೇ ಹಾದಿಯಲ್ಲಿ ಮುಂದೊತ್ತಲಾಗುವುದು ಅಸಾಧ್ಯ; ಆಂದಮೇಲೆ ರಾಜೀನಾಮೆಯಿತ್ತ ನಾಯಕರು ಕರ್ನಾಟಕ ಪ್ರಾಂತ್ಯರಚನಾ ಹೋರಾಟವನ್ನು ಕಾಂಗ್ರೆಸ್ಸಿನೇ ಬಿಟ್ಟು ಹೊರಗೆಬರಲು ಸಿದ್ಧರಿರುವರೆ? ಅವರು ರಾಜೀನಾಮೆ ಯಿತ್ತಿರುವುದು ಕೆ. ಪಿ. ಸಿ. ಸಿ. ಕಾನ್ಸ್ಟಿಟ್ಯೂಷನಿನ ನಿರ್ದೇಶನಾನುಸಾರವಾಗಿ; ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ, ತನ್ನ ಮೇಲಿನ ಮೂಲ ಸಮಿತಿಯ ಆಜ್ಞೋಲ್ಲಂಘನೆ ನಾಡುವ ಅಧಿಕಾರವಿಲ್ಲ ರಾಜೀನಾಮೆಗಳನ್ನು ಮುಂದೊಡ್ಡಿರೆಂದು ಕೇಳಿಕೊಂಡ ಕರ್ನಾಟಕದ ಕಾಂಗ್ರೆಸಿನ ಬಾಯಿಯಿಂದಲೇ ಅದನ್ನು ಹಿಂತೆಗೆದುಕೊಳ್ಳಿರೆಂದು ಹೇಳಿಸುವಂತಹ ಜಾಟಿಯೇಟನ್ನಿಂದಿ ಅಧಿನಾಯಕ ಮಂಡಲಿಯು ತಿರ್ಮಾನಿಸಿದ್ದೂ ಕರ್ನಾಟಕ ಪ್ರಾಂತ್ಯ ರಚನೆಗಾಗಿಯೇ ಇಂತಹ ತ್ಯಾಗಕ್ಕೆ ಸಿದ್ಧರಾಗಿರುವ ಕರ್ನಾಟಕದ ನಾಯಕರ ಕುರಿತು ನಿಜಕ್ಕೂ ಸಹಾನುಭೂತಿ ಮೂಡಿಯುತ್ತಿವೆ. ಕನ್ನಡಿಗರ ದೂರದೃಷ್ಟಿ ಮತ್ತು ಯೋಗ್ಯತೆಯ ಪರೀಕ್ಷೆಯೊಗಬೇಕು ಇಂತಹ ಬಿಕ್ಕಟ್ಟಿನ ಸಂದರ್ಭದಲ್ಲೇ. ಅವರಿಷ್ಟರಿಂದಲೇ ನಿರಾಶೆ, ಆಥವಾ ಗೊಂದಲಕ್ಕೆ ಬಲಿಬೀಳದೆ ಶಾಂತ ದೃಢಚಿತ್ತದಿಂದ ಕೆಲಸ ಸಾಧಿಸಲು ಪ್ರಯತ್ನ ಮಾಡಬೇಕು. ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯದ ಹಿಂದಣ ಮುಂದನ್ನು ಲಕ್ಷ್ಯದಲ್ಲಿಟ್ಟುಕೊಂಡು, ತಮ್ಮ ರಾಜೀನಾಮೆಗೆನ್ನು ಹಿಂತೆಗೆದುಕೊಂಡು, ರಾಷ್ಟ್ರ ನಾಯಕರ ಮನಸ್ಸೊಪ್ಪಿಸಿಕೊಂಡೇ ಪ್ರಾಂತ್ಯ ರಚನೆಯ ಮಟ್ಟಿಗೆ ಅವರ ಪಾಲಿನದ-ಗುರುತರ ಭಾರವೂ ತಮ್ಮದಾಗದ ಕೆಲಸಗಳನ್ನು ಸ್ವತಃ ಅವರೇ ಮಾಡಿಸಿಕೊಳ್ಳುವ ಪ್ರಯತ್ನ ಕರ್ನಾಟಕದ ನಾಯಕರಿಂದಾಗಬೇಕಾದುದು ನ್ಯಾಯವೇ. ಇದಕ್ಕೆಂತ ಕ್ಷೇಸ್ರ ಫಲಕಾರಿಯಾಗಬಲ್ಲ ಬೇರಾವ ವಿಧಾನವೂ ಕಾಣಿಸಿಕೊಳ್ಳಲಾರದು. ಈ ಸಂಬಂಧದ ಇದುವರೆಗಿನ ವಿವಾದವು ಕಾಂಗ್ರೆಸಿನ ಹಿರಿ-ಕಿರಿಯರೊಳಗಿನ ಕುಟುಂಬ ಕಲಹ ಮಾತ್ರ; ಕನ್ನಡಿಗರು ಪ್ರಾಪ್ತ ಭುತನೆಯನ್ನು ಹಿಂತೆಗೆದು ಅನುಶಾಯಿತ್ವ ವಹಿಸುವುದರಿಂದ ಕುಟುಂಬ ವಾತಾವರಣ ಪ್ರದರ್ಶಿಸಿದಂತಾಗುವುದೇ ಹೊರತು ಆಭಿಮಾನ ಬಿಟ್ಟಂತಾಗದು. ಬಲಿಗೆ, ದುಡುಕುತನವನ್ನೇ ಮುಂದೆತ್ತಿ, ಕನ್ನಡಿಗರ ಕಾಂಗ್ರೆಸ್ ನಿಷ್ಠೆಗಿದಿರಾಗಿ ಕರ್ನಾಟಕಾಭಿಮಾನವನ್ನು ಹೋರೀ ಕಾಳಗಕ್ಕೆ ಬಿಡಲು ಕರ್ನಾಟಕದ ನಾಯಕರಾರಾದರೂ ಮನಸ್ಸುಮಾಡಿದರೆ, ಅವರು ಸ್ವತಃ ಮೂಲೆಗುಂಪಾಗುವುದರೊಂದಿಗೆ ಕೆಲಸವೂ ಹಾಳಾಗಿತೆಂಬ ಎಚ್ಚರಿಕೆಯಿರಲಿ. ತ್ರಿವಳಿತ ಸಮಿತಿಯಲ್ಲಿ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಾ. 21ರ ನಿರ್ಣಯದಲ್ಲಿ ಅಡಕವಾಗಿರುವ ಶರ್ತಗಳಂತೆ ಕನ್ನಡಿಗರಿಂದವರ್ತಿಸಲಾಗದುದೇ?ಸದ್ಯದ ತೊಡರೆಯ ಮೂಲವೆಂಬ ವಸ್ತುಸ್ಥಿತಿಯನ್ನು ಬಚ್ಚಿಟ್ಟು, ಹಳೇ ಪುರಾಣಗಳನ್ನೆತ್ತೇ ಚ್ಚುತ್ತಿರುವ ಕರ್ನಾಟಕದ ಮುಂದಾಳುಗಳು, ಅಂತಹಪ್ರಜ್ಞಾರ ಸ್ಫೂರ್ತಿಗಿಂತಹೆಚ್ಚಿಗೆಕಾರ್ಯಾಸಕ್ತಿ ವಹಿಸಿ, ಸರಿದಾರಿಗೆ ಬರಲಿ-ಅವರ ಅವಸರಂತೀಶಗಳಿಂದ ಆಗಿದ್ದ ವ್ಯಎಂದಿಗೂ ಭರಿಸಲಾಗಲೊಲ್ಲದ ಪ್ರಾಂತ್ಯ ಅವರ ದೂರದೃಷ್ಟಿ ಮತ್ತು ಶಾಂತ ಗಂಭೀರ ಕಾರ್ಯಾಚರಣೆಗಳಿಂದಲೇ ಸಿದ್ಧಿಸಲಿ—ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇವೆ.

ಭಾರತದ ಒಳ ವ್ಯವಸ್ಥೆಗಳು.

(ಜನೇ ಪುಟದಿಂದ ಮುಂದುವರಿದುದು)

ಕೆಲವು ಸದಸ್ಯರು, ರಾಜೀನಾಮೆಕೊಡಲು ಅನುಮತಿ ಕೇಳಿರುವುದಕ್ಕಾಗಿ ಮತ್ತು ಕುರಿತು ಮಾಡಿರುವ ಪ್ರಚಾರಕ್ಕಾಗಿ ಕಾರ್ಯಕಾರೀ ಸಮಿತಿಯು ಸಂತಾಪಪಡುತ್ತದೆ. ಪ್ರಾಂತಿಕ ಕಾಂಗ್ರೆಸ್ ಲೆಜಿಸ್ಲಿನ ಈ ವರ್ತನೆಯೆಂಬುದು ವಿದ್ಯಮಾನಗಳ ಮೇಲಿಂದ ಅನುಚಿತವಾದುದು ಮತ್ತು ಕಾಂಗ್ರೆಸಿನ ವಿಚ್ಛೇದನಕ್ಕೆ ಕೇತು ವಾಗುವಂತಹದು ಎಂದು ಈ ಸಮಿತಿಯು ಅಭಿಪ್ರಾಯಪಡುತ್ತದೆ. ಒಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಅಧವಾ ಅದರ ಕಾರ್ಯವಾಹಕ ಸಮಿತಿಗೆ ತನ್ನ ಅಭಿಪ್ರಾಯಗಳನ್ನು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಮುಂದಿಡುವ ಅವಕಾಶವು ಯಾವ ಕಾಲದಲ್ಲಾದರೂ ಇದ್ದೇ ಇದೆ. ಆದರೆ ಅಂತಹ ನಿವೇದನೆಗಳ ಜತೆಯಲ್ಲಿ ಕಾಂಗ್ರೆಸ್ ಶಿಸ್ತು ಭಂಗವನ್ನುಸಬಹುದಾದ ಮತ್ತು ರಾಷ್ಟ್ರೀಯ ಹಿತಸಂಬಂಧಗಳಿಗೆ ಘಾತಕವಾದ ಮತ್ತು ಸಂಬಂಧಪಟ್ಟ ಸದಸ್ಯರನ್ನು ಕೃತಕ ಹಾಗೂ ಗೊಂದಲ ಮಯೀ ಸ್ಥಾನದಲ್ಲಿರಿಸುವ ಇಂತಹ ಜಾಲುವೆಯ ಕೃತ್ಯಗಳನ್ನು ಮುಂದೂಡುವದು ಅನುಚಿತವಿದೆ. ಒಂದು ಬೆದರಿಕೆಯೆಂದೇ ಅರ್ಥಕಟ್ಟಬಹುದಾದ ಅಧವಾ ಕಾರ್ಯಕಾರೀ ಸಮಿತಿಯು ನಿರ್ಣಯಗಳ ಕಡೆಗಿನ ಅತೃಪ್ತಿಸೂಚಕವನ್ನಬಹುದಾದ, ಈ ಮಾದರಿಯ ಯಾವುದೇ ರಾಜೀನಾಮೆ ವಿಚ್ಛಾಪನೆಗಳನ್ನು ಪರಿಶೀಲಿಸಲು ಈ ಸಮಿತಿಯು ತಯಾರಿಲ್ಲ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಾಕ್ಸಿನ ನಿರ್ಣಯ ಮತ್ತು ಅದನ್ನನುಸರಿಸಿ, ಮುಂದೆ ಬಂದಿರುವ ರಾಜೀನಾಮೇ ಸಿದ್ಧತೆಗಳು ವಿಶೇಷ ಭಾವೋದ್ರೇಕದೊತ್ತಡಕ್ಕೊಳಗಾಗಿ ಆ ಜಾತಿಯದ್ದಾದ ಮತ್ತು ಆಲೋಚನೆಯಿಲ್ಲದೆ ವಿಷಯ ಪರಿಶೀಲನೆ ನಡೆಸಿದುದರ ಪರಿಣಾಮವಾಗಿಂದು ಈ ಸಮಿತಿಯು ನೆನಸುತ್ತದೆ. ಇಂತ ಪರ್ಯಾಲೋಚನೆ ನಡೆಸಿದ್ದಾದರೆ, ಈ ನಿರ್ಧಾರಗಳ ಕುರಿತು ನಿಸ್ಸಂದೇಹವಾಗಿಯೂ ಪಶ್ಚಾತ್ತಾಪ ಪಡುವಂತಾದೀತು. ಆದ್ದರಿಂದ ಈ ವಿಷಯದ ಕುರಿತು ಮುಂದಾವುದೇ ಕಾರ್ಯಾಚರಣೆ ಕೈಕೊಳ್ಳುವುದಗತ್ಯವೆಂದು ಈ ಸಮಿತಿ ಯೋಚಿಸುವುದಿಲ್ಲ."

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಈ ಖಂಡತುಂಡ ನಿರ್ಣಯದಿಂದಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯು ಎಲ್ಲವನ್ನೂ ಗಾಢವಾಗಿ ಪುನರಾಲೋಚಿಸಿಕೊಳ್ಳಬೇಕಾಗಿ ಬಂದಿದೆ. ಇಡೀ ಬಳ್ಳಾರಿ ಜಿಲ್ಲೆಯನ್ನೇ "ತಾತ್ಕಾಲಿಕ" ವೆಂಬ ನೆವನದಿಂದ ಆಂಧ್ರ ಪ್ರಾಂತ್ಯದೊಳಗೆ ಸೇರಿಸಿಕೊಳ್ಳಬೇಕೆಂಬ ತೆಲುಗರ ವ್ಯಯತ್ನವು "ಪ್ರಶ್ನಾತೀತ ಭಾಗಗಳನ್ನು ಮಾತ್ರ ಸೇರಿಸಿ ಕೊಳ್ಳತಕ್ಕದ್ದು" ಎಂಬ ತ್ರಿಮೂರ್ತಿ ಸಮಿತಿ ವರದಿಯ ಶರ್ತಗಳಿಗೆ ವಿರುದ್ಧವಾದ್ದರಿಂದ ಫಲಿಸುವಂತಿಲ್ಲ. ಕೇಂದ್ರ ಸರಕಾರದ ನಿರ್ದೇಶನಾನುಸಾರವಾಗಿ ಒಳ್ಳಾರಿ ಜಿಲ್ಲೆಯ ಉರು ಪ್ರಶ್ನಾತೀತ ಕನ್ನಡ ತಾಲೂಕುಗಳ ಜನಾಭಿಪ್ರಾಯವನ್ನು ತಿಳಿಯಲು ಮದ್ರಾಸ್ ಸರಕಾರದ ಮಂತ್ರಿಗಳಾದ ಶ್ರೀ ಗೋಪಾಲ ರೆಡ್ಡಿ, ಮತ್ತು ಶ್ರೀ ಭಕ್ತವತ್ಸಲಮ್ ಬಳ್ಳಾರಿಗೆ ಹೋಗಿದ್ದರು. ಇಡೀ ಬಳ್ಳಾರಿಜಿಲ್ಲೆಯು, ನ್ಯಾಯೆ.ಪ್ರಕಾರ ಕರ್ನಾಟಕದ್ದಾದರೂ, ಅದರ 9 ತಾಲೂಕುಗಳ ಜೈಕಿತಾಲೂಕುಗಳು ಹಿಂದಿನ ಒಂದುನಿರ್ಣಯದಮೂಲಕ ಆ ಕಾಲದ ಮಟ್ಟಿಗೆ ಆಂಧ್ರಕ್ಕೆಂದು ಗೊತ್ತು ಮಾಡಲ್ಪಟ್ಟಿದ್ದವು. ತೆಲುಗರು ತಮ್ಮ ನವೋದಿತ ಪ್ರಾಂತ್ಯದಲ್ಲಿ ಇಡೀ ಒಳ್ಳಾರಿ ಜಿಲ್ಲೆಯನ್ನೇ ಒಟ್ಟಿ ಸೇರಿಸಿಕೊಂಡು ಬಿಡಬೇಕೆಂದು ಹವಣಿಸಿದ್ದರು ಆದರೀಗ ಆ ಪ್ರಶ್ನೋಪಾತೀತ ಭಾಗಗಳಾವುದೆಂಬುದನ್ನು ನಿರ್ಣಯಿಸಿಯೇ ಆಂಧ್ರ ಪ್ರಾಂತ್ಯ ರಚನೆಯಾಗುವದೆಂದು ತಿಳಿದ ಬಂದಿದೆ.

ಆಂಧ್ರ ಪ್ರಾಂತ್ಯ ರಚನೆಗಾಗಿ ಮದ್ರಾಸ್ ಮಂತ್ರಿಮಂಡಲವು ನೇಮಿಸಿಕೊಂಡಿರುವ 'ವಿಭಜನಾ ಸಮಿತಿ'ಯು ಭರವಿಂದ ತನ್ನ ಕಾರ್ಯ ನಿರ್ವಹಿಸುತ್ತಿದೆ. ಜನವರಿ 26ರಲ್ಲಿ ಅಸ್ತಿತ್ವಕ್ಕೆ ಬರುವ ನವರಾಜ್ಯ ಶಾಸನಸಭ್ಯೇ ಆಂಧ್ರ ಪ್ರಾಂತ್ಯವು ನಮೂದನೆಗೊಳ್ಳುವಂತೆ ಪಾಲು ಪಟ್ಟೇ ವ್ಯವಸ್ಥೆಗಳನ್ನು ಕ್ಷಿಪ್ರಗತಿಯಿಂದ ಮಾಡಿಕೊಳ್ಳಲಾರಂಭಿಸಿದ್ದಾರೆ. ಪ್ರಥಮತಃ ಎಸ್ಸಿಲಿನ ಮೊದಲು ಈ ವ್ಯವಸ್ಥೆ ಪೂರ್ಣಗೊಳ್ಳುವಂತಿಲ್ಲವೆಂದು ಪ್ರಕಟವಾಗಿದ್ದರೂ ಈಗ ಜನವರಿ 26ನ್ನು ನಿಗದಿಗೊಳಿಸಲಾಗಿ ಮುಂಗಿಸಿಕೊಳ್ಳಲು ಸಾಧ್ಯವೆಂದು ಜಾಹೀರಾಗಿದೆ. ಒಮ್ಮೆ ನವೋದಿತ ಆಂಧ್ರವು 6 ಕೋಟಿ ರೂಪಾಯಿಗಳ ಕೊರತೆಯ ಪ್ರಾಂತ್ಯವಾಗುವದೆಂದು ಜಾಹೀರಾಗಿದ್ದರೂ, ಅದು ಆರ್ಥಿಕ ಸ್ವಾವಲಂಬಿ ಪ್ರಾಂತ್ಯವಹುದೆಂದು ಈಗ ಕಂಠೋಕ್ತವಾಗಿ ಸಾರಲಾಗಿದೆ. ಇವೆಲ್ಲಾ ವಿವರಗಳಲ್ಲಿ ತಮಿಳರು ಮತ್ತು ಆಂಧ್ರರೊಳಗೆ ಒಮ್ಮತವಿದೆಯೆಂದೂ, ಪ್ರಥಮತಃ ಅಭಿಪ್ರಾಯ ಭೇದಗಳು ಮುಂಡಿದರೂ ಕೊನೆಗಾವುಗಳನ್ನವರು ಹೊಂದಿಸಿಕೊಂಡು ಹೋಗುತ್ತಿದ್ದಾರೆಂದೂ ಊಹಿಸಬಹುದು. ಆದರೆ ಆಂಧ್ರದ ರಾಜಧಾನಿಯೆಲ್ಲಿ ಎಂಬ ಕುರಿತು ಇವರೊಳಗೊಂದು ಒಡಂಬಡಿಕೆಯಾಗಲು ಕಷ್ಟವಾಗಿದೆ. ಶ್ರೀನಿರ್ಣಯವನ್ನು ಮಾಡಲಾಗದೆ, ವಿಭಜನಾ ಸಮಿತಿಯು ಸಭೆ ಮುಂದುವರಿದಿದೆ. ಮದರಾಸ್ ನಗರವಲ್ಲಿರುವ ಆಂಧ್ರ ಪ್ರಾಂತ್ಯ ರಚನೆಗೊವ್ವಲು ಸಾಧ್ಯವೇ ಇಲ್ಲವೆಂದು ವಾದಿಸುತ್ತಾ ಬಂದಿದ್ದ ತೆಲುಗರು, ಕೊನೆಯಲ್ಲಿ ತಾವೇ ಹಠ ಬಿಡದಿದ್ದರಿ, ಜನವರಿ 26 ರೊಳಗೆ ಪ್ರಾಂತ್ಯವಾಗುವುದಾಗ್ಯವೆಂಬುದರಿಂದ ಸದ್ಯಕ್ಕಾ ಪ್ರಶ್ನೆಯನ್ನು ಬಿಟ್ಟು ಕೊಡಲೊಪ್ಪಿದ್ದರು. ಆದರೆ ತಾತ್ಕಾಲಿಕವಾಗಿ ಮದ್ರಾಸಿನಲ್ಲೇ ತಮ್ಮ ರಾಜಧಾನಿ ಗವಕಾಶ ಕೊಡಬೇಕೆಂಬ ಬೇಡಿಕೆ ಅವರದಿದ್ದಿತು. ಬೇರೆ ಪ್ರಾಂತ್ಯ ಕಟ್ಟಿಕೊಳ್ಳುವವರು, ಈ ಸಂದರ್ಭದಲ್ಲೇ ಬೇರೆ ರಾಜಧಾನಿಗೂ ಹೋಗದೆ ಮದ್ರಾಸಿನಲ್ಲೇ ತಳವೂರಿ ಬಿಟ್ಟುಕೊಂಡು, ಮೊದಲೇ ಆ ನಗರದ ಮೇಲೆ ಕಣ್ಣಿರುವ ತೆಲುಗರನ್ನು ಮತ್ತೆ ಒಕ್ಕಲೆಬ್ಬಿಸುವುದು ಕಷ್ಟವೆಂದು ದೂರದೃಷ್ಟಿಯಿಂದಿರಬಹುದು— ತಮಿಳರು ಇದಕೊಪ್ಪಿಗೆ ಕೊಟ್ಟಲ್ಲಾ ಹೊಸತಾಗಿ ರಾಜಧಾನಿಯನ್ನು ರಚಿಸಿಕೊಳ್ಳಬೇಕಾಗಿ ಬಂದರೆ, ತೆಲುಗರು ಆದಿಭಾಗದಲ್ಲೇ ವಿಶೇಷ ಕಷ್ಟನಷ್ಟಗಳಿಗೀಡಾಗಲಿದ್ದಾರೆ.

ಭಾರತಾಧ್ಯಕ್ಷರಾರು?

ಜನವರಿ ತಾ. ತಾ. 26ರಲ್ಲಿ ರಿಪಬ್ಲಿಕ್ ಭಾರತದ ನವರಾಜ್ಯ ಶಾಸನವು ಜಾರಿಗೆ ಬರುವಾಗ ಗವರ್ನರ್ ಜನರಲ್ ಹುದ್ದೆ ರದ್ದಾಗಿ ವಾಲ್ಟಿಮೆಂಟ್ ಅಧ್ಯಕ್ಷಗಾದಿಯೇ ಅಗ್ರಗಣ್ಯಾಧಿಕಾರವಾಗಲಿದೆ. ರಿಪಬ್ಲಿಕ್ ಭಾರತದ ಈ ಪ್ರಥಮಾಧ್ಯಕ್ಷನಾರು, ಎಂಬ ಕುರಿತು ಈಗ ಊಹಾಪೋಹ ಗಳಿದ್ದಿವೆ. ಬರುವ ಚುನಾವಣೆಯ ವರೆಗಿನ ಅವಧಿಯು ತನಕ ಮಾತ್ರವಿರುವ ಮಧ್ಯಂತರಾಧಿ ಅಧ್ಯಕ್ಷತನವಿದಾದ್ದರಿಂದ ಆ ವರೆಗಿನ ಕಾಲಕ್ಕಾಗಿ ಈಗಿನ ಗವರ್ನರ್ ಜನರಲ್ ರಾಜಾಜಿಯ ಕಡೆಗಾಗಲೀ, ಫೆಟನಾ ಸಮಿತಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರ ಮೇಲಾಗಲೀ ದೃಷ್ಟಿ ಬೀಳುವುದು ಸ್ವಾಭಾವಿಕ. ಆದರೆ ರಾಜಾಜೀ ತನ್ನ ಇತ್ತೀಚೆಗಿನ ಸಂಚಾರ ಭಾಷಣಗಳಲ್ಲಿ ತನಗೆ ವಿಶ್ರಾಂತಿ ಬೇಕೆಂದೂ ಭಾರತಾಧ್ಯಕ್ಷತನವನ್ನು ತಾನು ಪಡಿಸಿಕೊಳ್ಳುವಂತಿಲ್ಲವೆಂದೂ ಬಹಿರಂಗಪಡಿಸಿದ್ದಾರೆ. ದಿಲ್ಲಿಯ ನಾಯಕವರ್ಗವು ಬಾಬು ರಾಜೇಂದ್ರ ಪ್ರಸಾದರನ್ನೇ ನಿರ್ಣಯಿಸಿಟ್ಟುಕೊಂಡಿದೆ ಎಂಬ ಸುದ್ದಿಯಿದೆ.

ಬುಡ್ಡಾರು—ಶ್ರೀ ಪೆಡ್ಡೂರು ಅಡೆಸಾಡಿ ವೆಂಕಪ್ಪಶೆಟ್ಟಿಯು ಇದೇ ತಾ. 24ರಲ್ಲಿ 60ನೇ ವಯಸ್ಸಿನಲ್ಲಿ ತನ್ನ ಬುಡ್ಡಾರು ನಿವಾಸದಲ್ಲಿ ನಿಧನಗೊಂಡರೆನ್ನಲು ವಿಷಾದಿಸುತ್ತೇವೆ.

ಮದ್ರಾಸು
ಕವಿ ರನ್ನನ ಸಹಸ್ರವಾರ್ಷಿಕ ಮಹೋತ್ಸವ

ಕರ್ನಾಟಕ ಸಂಘದ ಆಶ್ರಯದಲ್ಲಿ ೧೮-೧೨-೪೯ನೇ ಭಾನುವಾರ ಪಂಡಿತ ಶ್ರೀ ಬಿ. ನಂಜುಂಡ ಸ್ವಾಮಿ ಅವರ ಅಧ್ಯಕ್ಷತೆಯಲ್ಲಿ "ಕವಿ ರನ್ನನ ಸಹಸ್ರ ವಾರ್ಷಿಕ ಮಹೋತ್ಸವ" ವನ್ನು ಸಂಪೇರಿಸಲಾಯಿತು. ಶ್ರೀ ಶಂಕರ ಭಟ್ ಜೋಶಿ, ಅವರು ಕರ್ನಾಟಕಗೀತೆಯನ್ನು ಹಾಡಿದರು. ಬಳಿಕ ಇಂದಿನ ಕಾರ್ಯಕ್ರಮವ ಕುರಿತು ಎರಡು ಮಾತುಗಳನ್ನು ಹೇಳಿ ಮುಂದಿನ ಕಾರ್ಯ ಕಲಾಪಗಳನ್ನಾರಂಭಿಸಿದರು.

ಶ್ರೀ ಸಿ. ಕೆ. ತಿರುಮಲೇಶ್ ಬಿ. ಓ.ಎಲ್. ಅವರು ತನ್ನ ಕೃತಿಯಾದ "ರನ್ನ ಲಾವಣಿ"ಯಿಂದ ಕೆಲಭಾಗಗಳನ್ನಾಯ್ದುಕೊಂಡು ಓದಿದರು. ಬಳಿಕ "ರನ್ನನ ಕವಿತಾ ಸೌಂದರ್ಯ"ದ ಕುರಿತಾಗಿ ಸ್ವಾರಸ್ಯವಾದ ಭಾಷಣವಿತ್ತರು. 'ರನ್ನನ ಸಮಾಜ' ಎಂಬ ವಿಷಯವಾಗಿ ವಿದ್ವಾನ್ ಶ್ರೀ ಎಂ. ವೆಂಕಟಾಚಲ ಭಟ್ಟರು ಅವರು ಅರ್ಥಗರ್ಭಿತವಾದ ಭಾಷಣವಿತ್ತರು. ಶ್ರೀ ಎಂ ಗೋವಿಂದರಾವ್ ಎಂ. ಎ. ಅವರು 'ರನ್ನನ ಜೋಡಿಸಿದ ನೀತಿ'ಯನ್ನು ವಿಮರ್ಶಾತ್ಮಕವಾಗಿ ಭಾಷಣವಿತ್ತ ಬಳಿಕ 'ರನ್ನನ ವೈಲಿಯ ಕುರಿತು ಶ್ರೀ ಎಸ್. ಬಾಬು ರೆಟ್ಟಿ ಅವರು ಮಾತನಾಡಿದ ನಂತರ ಪಂಡಿತರು ಸಿತಾರಾಮಾಚಾರ್ಯ ಅವರು 'ರನ್ನನ ರಚಿಸಿದ ಗದಾಯುದ್ಧದ ಕಾವನ ಪಾಂಡವ ಪಾಗವು ನೀತಿಯ ಕುರಿತು ರಸವತ್ತಾಗಿ ವಿವರಿಸಿದರು. ಅಧ್ಯಕ್ಷರು ಎಲ್ಲರ ಭಾಷಣಗಳನ್ನು ಮುಕ್ತ ಕಂಠದಿಂದ ಹೊಗಳಿ ರನ್ನನು ರಚಿಸಿದ ಕೃತಿಗಳಿಂದ ವಿಷಯಗಳನ್ನಾಯ್ದು ಇಂದಿನ ಈ ಸ್ವಾರಸ್ಯವಾದ ಭಾಷಣಗಳನ್ನು ಸೂಡಿದಂತೆ ಇತರ ಗ್ರಂಥ ಸಾಮಗ್ರಿಗಳ ಸಾಂಗತ್ಯಗಳನ್ನೆಂಟು ಕ್ರೋಢೀಕರಿಸಿ ರನ್ನನು ನ್ರಂಥ ರಚಿಸಿದ್ದರೆ ಆ ಜಾಮ್ಜೆ-ಸಾಮರ್ಥ್ಯಗಳಿಗೆ ನಾವಿಲ್ಲರೂ ತಲೆದೂಗಿ ಬಿಡ್ಡೇ ಬೇಕೆಂದರು. ಅಲ್ಲದೆ ಇಂದಿಗೆ ಸಾವಿರ ವರುಷಗಳು ದಾಟಿದ ಬಳಿಕವೂ ಅತನನ್ನು ನೆನಪು, ಆತನ ಕೃತಿಗಳನ್ನು ಪಾವು ಅಧಿಪಾಜನತೆಯು ಸ್ಮರಿಸುವುದು ಹಾಗೂ ಕೊಂಡಾಡುವುದು ಅತನಲ್ಲಿಯ ಶ್ರೇಷ್ಠತೆಯನ್ನು ತೋರಿಸುವುದೆಂದರು. ಇಂದಿನ ಭಾಷಣಗಳ ಸಂಗ್ರಹವನ್ನು ಕೈಬರಹದ 'ನೇಪಣ' ವಿಶೇಷ ಸಂಚಿಕೆಯಾಗಿ ಪ್ರಕಟಿಸಲಾಗುವ ದೆಂದು ಹೇಳಿ ಕಾರ್ಯದರ್ಶಿಗಳು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ, ಹುಬ್ಬಳ್ಳಿ.
ಪರಿಪತ್ರ

ಕಾಂಗ್ರೆಸ ಅಧಿಕೃತ ಸದಸ್ಯರ ಯಾದಿಗಳು:—

ಕಾಂಗ್ರೆಸ ಅಧಿಕೃತ ಸದಸ್ಯರಾಗುವ ಅವಧಿಯನ್ನು ಈ ತಿಂಗಳ ಕೊನೆಯವರೆಗೆ ಅಂದರೆ ತಾ. 31-12-49ರ ವರೆಗೆ, ಕಾಂಗ್ರೆಸ ಅಧ್ಯಕ್ಷರು ಬೆಳಿಸಿದ್ದು ಪ್ರಕಟಣೆಯ ದ್ವಾರಾ ಪ್ರಸಿದ್ಧ ಮಾಡಿರುವರು. ಹಿಂದಿನಿಂದ ಅವರಂತೆ ನಮ್ಮ ಸಮಿತಿಗೆ ಬಂದ ಮೇರೆಗೆ ಎಲ್ಲ ಜಿಲ್ಲಾ ಸಮಿತಿಗಳಿಗೂ ತಿಳಿಸಲಾಗಿದೆ. ಈ ಬದಲಾವಣೆಯನ್ನು ಸಲಕ್ಷಿಸಿ ಕೆಳಗಿನಂತೆ ಅಧಿಕೃತ ಸದಸ್ಯರ ಯಾದಿಗಳನ್ನು ತಯಾರಿಸುವ ಬಗ್ಗೆ ವೇಳಾ ಪತ್ರಿಕೆಯನ್ನು ಗೊತ್ತುಮಾಡಲಾಗಿದೆ. ಅದರಂತೆ ಎಲ್ಲ ಸಮಿತಿಗಳು ನಡೆಯತಕ್ಕದ್ದು ಮತ್ತು ಈ ವರ್ಗದ ಸದಸ್ಯರ ಯಾದಿಯನ್ನು ಪಂಚಾಯತವಾರ ಹಾಗೂ ತಾಲೂಕ ವಾರ ತಯಾರಿಸಿ ಕಳಿಸಲು ಜಿಲ್ಲಾ ಸಮಿತಿಯವರಿಗೆ ನಮ್ಮ ಸೂಚನೆಯಿದೆ.

I. ಅಧಿಕೃತ ಸದಸ್ಯ ಪತ್ರಿಕೆಗಳನ್ನು ಸ್ವೀಕರಿಸುವ ಕೊನೆಯ ತಾರೀಕು [ಹಿಂದಿನಿಂದ ಬಂದವುಗಳು ಮತದಾರ ಯಾದಿಯಲ್ಲಿ ಬರುವದಿಲ್ಲ] 31-12-49. 2. ಅಧಿಕೃತ ಸದಸ್ಯರ ಯಾದಿಗಳನ್ನು ಪ್ರಾಂತ ಸಮಿತಿಗೆ ಕಳಿಸುವ ಕೊನೆಯ ತಾರೀಕು 8-1-1950. ೩. ಈ ಯಾದಿ ಬಗ್ಗೆ ಜಿಲ್ಲಾ ಕ್ರೈಡೆಸ್ಸಿಯಲ್ ಸಮಿತಿಗೆ ತಕರಾರು ಮಾಡುವ ಕೊನೆಯ ತಾರೀಕು 15-1-1950. 4. ಜಿಲ್ಲಾ ಕ್ರೈಡೆಸ್ಸಿಯಲ್ ಸಮಿತಿಯವರು ತಕರಾರುಗಳನ್ನು ತೀರಿಸುವ ಕೊನೆಯ ತಾರೀಖು 23-1-50 5. ಈ ಬಗ್ಗೆ ಪ್ರಾಂತಿಕ ಕ್ರೈಡೆಸ್ಸಿಯಲ್ ಸಮಿತಿಗೆ ಅಪೀಲು ಮಾಡುವ ಕೊನೆಯ ತಾರೀಕು 7-2-50. 6. ಪ್ರಾಂತಿಕ ಕ್ರೈಡೆಸ್ಸಿಯಲ್ ಸಮಿತಿಯವರು ಅಪೀಲು ತೀರಿಸುವ ಕೊನೆಯ ತಾರೀಕು 15-2-50. 7. ಅಧಿಕೃತ ಸದಸ್ಯರ ಪಕ್ಕಾ ಯಾದಿ ತಯಾರಿಸುವ ಕೊನೆಯ ತಾರೀಕು 20-2-50.

ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ × ಕನ್ನಡ
ಡಿಕ್ಷನರಿಗಳು
ದೊರೆಯುತ್ತವೆ.
ಬೆಲೆ. ರೂ. 5 0 0
ಸಿರಿಗನ್ನಡ ಅಭಿಧಾನಕೋಶ 4 8 0
ನವಯುಗ ಪ್ರೆಸ್, ಉಡುಪಿ.
ಅಥವಾ
ನವಯುಗ ಆಫೀಸು, ಉಡುಪಿ.

ಸಾಗ್ವಳ್ಳಿದಾರರು ಕೊಡುವ
ವೈಭವಪತ್ರಿಕೆ ಮತ್ತು
ಮನೆಮಾರ್ತೆ ಖರ್ಚಿಗೆ ಗೇಣಿ ಅಕ್ಕಿ
ಪದೆಯುವರೆಗೆ ರೈತನು ಕೊಡತಕ್ಕ
ಲೆಜ್ಜೆ ವಸೈರಿ ಫಾರ್ಮುಗಳು
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಹೊಸಕಾಮಗಾರು

ಸಾಹಸಕೃತ್ಯಗಳ ಸಲಕೃಷ್ಣಯ್ಯನವರಿಗೆ ಭೇಷಿ

ಸೇಂಟ್-ಮಿಗೆಯೆಲ್ ಬಗ್ಗೆ ನಿಮಿಸಲ್ಪಟ್ಟ ಸಲಹಾ ಸಮಿತಿಯ ಸಭೆಯು ಈಗಿನ ಜಿಲ್ಲಾ ಕಲೆಕ್ಟರ್ ಜನಾರ್ ಸಯ್ಯದ್ ಅಹಮ್ಮದರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಸೂಚನೆಗಳನ್ನು ಸರಕಾರಿಗೆ ಭೂಮಿ ಕೊಯುವರೆ ವಿಹಾರಸು ನೂದಲಾಯಿತು. ; ಶ್ರೀಗಳಾದ ಕೆ. ವಿರ ಲಿಟ್ಟಿ, ವಾಕ್ಕಾಡಿ ಗ್ರಾಮ, ಕುಂದಾ ಪುರ ತಾಲೂಕು, 10 ಎಕ್ರೆ; ನೇಳಂತ ರಾ ಘವೇಂದ್ರ ರಾವ್, ; ಉಪ್ಪೂರು ಗ್ರಾಮ, ಉಡುಪಿ ತಾಲೂಕು, 1.32 ಎಕ್ರೆ; ಬೀಂಕ್ರ ರಾಮಣ್ಣ ಶೆಟ್ಟಿ, ಬಳಪೂರು ಗ್ರಾಮ, ಉಡುಪಿ ತಾಲೂಕು, 5 ಎಕ್ರೆ; ಕೆ. ವಿಶ್ವ ನಾಥ ಹೆಗ್ಡೆ, ನಂದಳಿಕೆ ಗ್ರಾಮ, ಉಡುಪಿ ತಾಲೂಕು 10 ಎಕ್ರೆ; ಎಮ್. ಕೃಷ್ಣಯ್ಯ ಶೆಟ್ಟಿ, ಮುದ್ರಾಡಿ ಗ್ರಾಮ, ಕಾರ್ಕಳ ತಾಲೂಕು 9.08 ಎಕ್ರೆ; ಹೈದರ್ ಶಾಬೂದಾ ಸಾಹೇಬ್, ಪ್ರಾಂತ್ಯ ಗ್ರಾಮ, ಕಾರ್ಕಳ ತಾಲೂಕು, 9.41 ಎಕ್ರೆ; ಪಿ. ಶ್ರೀನಿವಾಸ ಶೆಣೈ, ಸರ್ಪಾಡಿ ಗ್ರಾಮ, ಮಂಗಳೂರು ತಾಲೂಕು 7.30 ಎಕ್ರೆ. ಬಸವಪತ್ರ, ತಾಳಿಪಾಡಿ ಗ್ರಾಮ, ಮಂಗಳೂರು ತಾಲೂಕು, 5.70 ಎಕ್ರೆ. ಬಿ. ಪಸ್ಸನಾಭ ಕೊಳಂಜೆ, ಪಡು ಪರಾರು ಗ್ರಾಮ, ಮಂಗಳೂರು ತಾಲೂಕು 6.54 ಎಕ್ರೆ; ಬಿ. ದೇವಪ್ಪ ಕರ್ಕೇರ, ಉಳ್ಳಾಲ ಗ್ರಾಮ, 2-13 ಎಕ್ರೆ; ಕೆ. ದೇವಪ್ಪ ಹೆಗ್ಡ, ಬೊಳ್ಳಾರು ಗ್ರಾಮ, ಮಂಗಳೂರು ತಾಲೂಕು, 2.11 ಎಕ್ರೆ; ಸಿ. ರಾಮನಾಯ್ಕ, ಕುಮ್ಮಿರಿಜೆ ಗ್ರಾಮ, ಪುತ್ತೂರು ತಾಲೂಕು, 7.57 ಎಕ್ರೆ; ಕೆ. ಎನ್. ಕುಂಜುರಾಮನ್ ನಾಯರ್, ದಕ್ಷಿಣ ಶ್ರೀಕಾರ್ಪಾಡ ಗ್ರಾಮ, ಕಾಸರಗೋಡು ತಾಲೂಕು, 7.29 ಏಕ್ರೆ; ಎನ್. ಕುಂಞಂಬು ನಾಯರ್, ಪಣತಡಿ ಗ್ರಾಮ, ಕಾಸರಗೋಡು ತಾಲೂಕು, 10 ಎಕ್ರೆ; (ಸರಕಾರಕ್ಕೆ ಶಿಫಾರಸು); ರಾಜಕೀಯ ಸಂತ್ರಸ್ತರಾಗಿದ್ದು ಮೃತ ಪಟ್ಟರುವ ಶ್ರೀ ಬಿ. ಪಿ. ಚಾಮಕುಟ್ಟು ನಾಯನರ್, ನೀಲೇಶ್ವರ, ಇವರ ಅಣ್ಣ ಶ್ರೀ ಎ. ವೈ. ನಾರಾಯಣನ್ ನಾನಾನಾರ್ ನೀಲೇಶ್ವರ ಗ್ರಾಮ. 5.01 ಎಕ್ರೆ; ಮೃತ್ಯುಹೊಂದಿದ ಸಂಪ್ರತ್ಯರಾದ ಶ್ರೀನಾಕ್ ಕುಂಞಂಬು, ಇವರ ಹಕ್ಕುದಾರ್ತಿಯಾದ ತಾಯಿ ಶ್ರೀನತಿ ಪಾತ್ ಪೂಯಾನ್ ಅಮ್ಮ, ಪಶ್ಚಿಮ ಎಳೇರಿ ಗ್ರಾಮ, ಕಾಸರಗೋಡು ತಾಲೂಕು, 9.18 ಎಕ್ರೆ; ಶ್ರೀ ಪಿ. ಪಯವದನ ರಾವ್, ಪಾಡಿಬೆಟ್ಟು ಗ್ರಾಮ, ಉಡುಪಿ ತಾಲೂಕು, 10 ಎಕ್ರೆ.

ಸಿಡುಬು— ಮಂಗಳೂರು ಮುನಿಸಿಪಾಲಿಟಿಯೊಳಗೆ ಸಿಡುಬು ರೋಗವು ತಲೆಯೆತ್ತಿ ಎಂಡು ಮರಣಗಳಾಗಿವೆ. ಮುನಿಸಿಪಲ್ ಆರೋಗ್ಯ ಅಧಿಕಾರಿಗಳು ದಾಕುಹಾಕುವ ಕೆಲಸದಲ್ಲಿ ನಿರತರಾಗಿದ್ದಾರೆ.

ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆರು ಇದೇ ತಾ. 18ರಲ್ಲಿ ಬಂಟ್ವಾಳಕ್ಕೆ ಹೋಗಿದ್ದು ಅಲ್ಲಿ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರನ್ನು ಕಂಡು, ಎಲ್ಲಾ ಎಸ್ಟೇಟ್ಸ್‌ಗಳಲ್ಲಿ ಅಫೀನು ಬೆಳೆಯುವ ಬಗ್ಗೆ ಸಾರ್ವಜನಿಕರಿಂದ ಸಲಹಾಸಂಗ್ರಹವನ್ನು ಮಾಡಬಹುದೆಂದು ಕಂಡುಬಂತು. ಅನಂತರದಲ್ಲಿ ಶ್ರೀಮಂಜಕಟ್ಟ ಮಣ ಮೂಡ್ಯಮಿಳ ಶಾಲೆಯಲ್ಲಿ ವಿದ್ಯಾಪ್ರಸಾರದ ಸುತ್ತು ನಿರಕ್ಷರರಾ ಫಿಸಾರಡೆಯು ಕುರಿತು ಭಾಷಣವಿತ್ತರು. ಪೇವಸ್ಥಾನದ ಕಡೆಯಿಂದ ಸ್ವಲ್ಪ ಸಹಾಯವನ್ನು ಈ ಶಾಲೆಗಾಗಿ ನಿಸಿಯೋಗಿ ಸುತ್ತಿರುವುದು ಅಭಿನಂದನೀಯನೆಂದರು.

ರಾಜೀನಾಮೆ— ಪ.ರಪೇಟೆಯಾಲಯಗಳ ಪಾಸೂದೆಯ ಪರೀಕ್ಷಲನೆಗಾಗಿ ಮದ್ರಾಸು ಸರಕಾರವು ನೇಮಿಸಿದ ಸಿಲೆಕ್ಟ್ ಸಮಿತಿಯ ಮೆಂಬರರಲ್ಲೊಬ್ಬರಾದ ಶ್ರೀ ಡಿ. ಸುಂಜಯ್ಯ ಹೆಗ್ಡೆಯವರು, ಪಾಸೂದೆಯ ಕೆಲವಂಶಗಳಿಗೆ ಆಕ್ಷೇಪವೆತ್ತಿ ತಮ್ಮ ಸದಸ್ಯತನಕ್ಕೆ ರಾಜೀನಾಮೆ ಕೊಟ್ಟರುವರು.

ನಗರ ಸಭೆಯ ಬಜೆಟ್ ಚರ್ಚೆಯು ಸಭೆಯು ತಾ. 19ರಲ್ಲಿ ನಡೆಯಬೇಕಾದುದು ಕೋರಂ ಇಲ್ಲದೆ ಮುಂದುವರಿಸಬೇಕಾಗಿ ಬಂತು.

ಜಿಲ್ಲಾ ಬೋರ್ಡಿನ ಬಜೆಟ್ ಚರ್ಚೆಯು ಇದೇ ತಾ. 23ರಲ್ಲಾ ಪೂರ್ವಾಹ್ನ, ಅಧ್ಯಕ್ಷ, ಉಪಾಧ್ಯಕ್ಷರ ಗೈರುಹಾಜರಿಯಲ್ಲಿ ಶ್ರೀ ಎಸ್. ನರ್ಸಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಹ್ಯಾವೇಲಿ ಹೋದಂದಿನಿಂದ ರಸೆಗಳೆಲ್ಲ ಹಾಳಾಗಿವೆಯೆಂದು ಸದಸ್ಯರು ದೂರು ಕೊಟ್ಟರು. ಉಪಾಧ್ಯಾಯರ ವರ್ಗಾವರ್ಗಗಳಲ್ಲೂ ನಿಶ್ಚಿತ ಧೋರಣೆಯಿರಬೇಕೆಂದು ತಿಳಿಸಿದರು.

ಸರ್ಕಲ್ ರೈತ ಪಂಚಾಯತ ಮಂಗಳೂರು ರೇಶನಿಂಗ್ ವಲಯದ ಹಾಗೂ ಸುತ್ತು ಮುತ್ತಲಿನ ಗ್ರಾಮಗಳ ರೈತರು ತಾ. 19ರಲ್ಲು ಕಂಕನಾಡಿಯಿಂದ ಪೇರಜವೆಗೆ ಯಲ್ಲಿ ಹೊರಟು ಮೂರುಗಂಟೆಯ ವೇಳೆಗೆ ಹಜೂರು ಕಚೇರಿಗೆ ಬಂದರು. ಕಲೆಕ್ಟರರು ಕಾಯಿನಿಲ್ಲಿದ್ದ ಕಾರಣ ಜಿಲ್ಲಾ ಸರಬರಾಯಿ ಆಫೀಸರರು, ಸರಕಾರದಿಂದಿಗಿನ ಒತ್ತಾಯದ ಧಾನ್ಯಸಂಗ್ರಹಣ ಧೋರಣೆಯಿಂದ ರೈತರಿಗಾಗುವ ಕಷ್ಟಪರಂಪರೆಗಳ ಕುರಿತು ರೈತರು ಕೊಟ್ಟ ಮನವಿಯನ್ನು ಕೂಲಂಕುಶವಾಗಿ ಪಿಡಿಸೋಡ್ಡಿತಾವು ಈ ವಿಷಯ ತಕ್ಕ ಉಪರಮನ ಮಾಡಲು ಸರಕಾರಕ್ಕೆ ಬರೆದು ಸಾಧ್ಯವಿದ್ದಷ್ಟು ಮಟ್ಟಿಗೆ ಪ್ರಯತ್ನಿಸುವೆನೆಂದು ಅಶ್ವಾಸನೆಯನ್ನಿತ್ತರು.

ಉಡುಪಿ

ಕರ್ನಾಟಕ ಪ್ರಾಂತ್ಯ ರಚನೆ ಮತ್ತು ಸಂಬಂಧದ ಸ್ಥಿತಿಗತಿಗಳ ಅಭಿಪ್ರಾಯ ವಿನಿಮಯಕ್ಕಾಗಿ ಸಾರ್ವಜನಿಕ ಸಭೆಯೊಂದು ಇದೇ ತಾ. 26ನೇ ಆದಿತ್ಯವಾರ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ಬೈ ಲೂರುವಾಸು ದೇವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಕಾರಂತ ಎಂ. ಎಲ್. ಎ., ಕೆ. ಬಿ. ಜಿನರಾಜ ಹೆಗ್ಡೆ, ಕೆ. ಕೆ. ಶೆಟ್ಟಿ, ಮೊದಲಾದವರು ಆಗಮಿಸಿದ್ದರು. ಪ್ರಥಮತಃ ಶ್ರೀ ಜಿನರಾಜ ಹೆಗ್ಡೆಯವರು, ಭಾಷಣನೀಯುತ್ತಾ ಕರ್ನಾಟಕ್ಕ್ಯಪ್ರಾಂತ್ಯ ರಚನಾ ಚಳವಳಿ ಮತ್ತು ಸಂಬಂಧದ ಆಗು ಹೋಗುಗಳ ಚರಿತ್ರೆಯನ್ನು ಮನಮುಟ್ಟುವಂತೆ ಅನುಕ್ರಮವಾಗಿ ವರ್ಣಿಸಿ, ಕರ್ನಾಟಕದ ರಾಜೀನಾಮೆಗಳ ಕಾರಣಗಳನ್ನು ತಿಳಿಸಿ, ಇಂದಿನ ಸ್ಥಿತಿ ಚಿತ್ರವನ್ನು ಮುಂದಿಟ್ಟು, ಕೂಡಲೇ ಪ್ರಾಂತ್ಯ ರಚನೆಯಾಗಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ಶ್ರೀ ಎಸ್. ಯಸ್. ಪರಮೇಶ್ವರಯ್ಯನವರು ರಾಜೀನಾಮೆಗಳನ್ನು ಸಮರ್ಥಿಸಿ ಸ್ಫೂರ್ತಿಯಿಂದ ಮಾತನಾಡಿದರು. ಶ್ರೀ ಯು. ನಾಗಪ್ಪ ಕಾಮತರು ಕೇಂದ್ರ ನಾಯಕರ ವಾದಗಳ ಕಡೆಗೆ ಲಕ್ಷ್ಯವೆಳೆದರು. ಶ್ರೀ ಎಮ್. ಎಸ್. ಅಧಿಕಾರಿಗಳು ಕೇಂದ್ರ ನಾಯಕರೀಗ ಪ್ರಾಮುಖ್ಯ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ತೊಡಗಿರುವಾಗ, ಅವರ ಸಕಾರಣ ವಾದಗಳನ್ನು ಮನ್ನಿಸಿ, ಸಹನೆಯಿಂದ ಮುಂದುವರಿಯಬೇಕಲ್ಲದೆ ಪ್ರಾಂತ್ಯರಚನೆಗಾಗಿ ಬೇಜವಾಬ್ದಾರಿಯಿಂದ ದುಡುಕಬಾರದೆಂದು ಆಗ್ರಹ ಪೂರ್ವಕ ವಾದಿಸಿದರು. ಶ್ರೀ ಕೆ. ಆರ್. ಕಾರಂತರು ಉತ್ತರಕೊಡುತ್ತಾ ಕೇವಲ ನಾಯಕ ನಿಷ್ಠಾಂಧರಾಗಿ ಅಂಧಾನುಕರಣೆ ಮಾಡುವುದರಲ್ಲಿ ಮಾನಹತ್ತವಿಲ್ಲವೆಂದರು. ಕನ್ನಡಿಗರನ್ನು ಮಾನಹೋಚಿತಗೌರವ ದೈಷ್ಟಿಯಿಂದಲೂ, ಕರ್ನಾಟಕ ಪ್ರಾಂತ್ಯದ ಪ್ರಶ್ನೆಯನ್ನು ಕಾಲೋಚಿತ ನ್ಯಾಯದೃಷ್ಟಿಯಿಂದಲೂ ಕೇಂದ್ರಾಧಿಕಾರಿಗಳು ಕಾಣುತ್ತಿಲ್ಲವೆಂದರು. ರಾಷ್ಟ್ರ ನಾಯಕರು ಈ ಮೊದಲು ಕೊಟ್ಟಿದ್ದ ಆಶಾಸನೆಗಳನ್ನಾಧರಿಸಿಯೇ ತಾವಿಂದು ಕರ್ನಾಟಕ ಪ್ರಾಂತ್ಯ ಯಾಚಿಸುತ್ತಿರುವೆವೆಂಬುದನ್ನು ವಿವಿಧ ತಪಡಿಸಿ, ಕನ್ನಡಿಗರೆಲ್ಲರ ಒಮ್ಮತದ ಬೇಡಿಕೆ ಯಾದ ರಾಜೀನಾಮೆಗಳ ಕಾರಣಗಳನ್ನು ತಿಳಿಸಿ, ಇಂದಿನ ಸ್ಥಿತಿ ಚಿತ್ರವನ್ನು ಮುಂದಿಟ್ಟು, ಕೂಡಲೇ ಪ್ರಾಂತ್ಯ ರಚನೆಯಾಗಬೇಕಾದ ಅನಿವಾರ್ಯತೆಯನ್ನು ಒತ್ತಿ ಹೇಳಿದರು. ಶ್ರೀ ಎಸ್. ಯಸ್. ಪರಮೇಶ್ವರಯ್ಯನವರು ರಾಜೀನಾಮೆಗಳನ್ನು ಸಮರ್ಥಿಸಿ ಸ್ಫೂರ್ತಿಯಿಂದ ಮಾತನಾಡಿದರು. ಶ್ರೀ ಯು. ನಾಗಪ್ಪ ಕಾಮತರು ಕೇಂದ್ರ ನಾಯಕರ ವಾದಗಳ ಕಡೆಗೆ ಲಕ್ಷ್ಯವೆಳೆದರು. ಶ್ರೀ ಎಮ್. ಎಸ್. ಅಧಿಕಾರಿಗಳು ಕೇಂದ್ರ ನಾಯಕರೀಗ ಪ್ರಾಮುಖ್ಯ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ತೊಡಗಿರುವಾಗ, ಅವರ ಸಕಾರಣ ವಾದಗಳನ್ನು ಮನ್ನಿಸಿ, ಸಹನೆಯಿಂದ ಮುಂದುವರಿಯಬೇಕಲ್ಲದೆ ಪ್ರಾಂತ್ಯರಚನೆಗಾಗಿ ಬೇಜವಾಬ್ದಾರಿಯಿಂದ ದುಡುಕಬಾರದೆಂದು ಆಗ್ರಹ ಪೂರ್ವಕ ವಾದಿಸಿದರು. ಶ್ರೀ ಕೆ. ಆರ್. ಕಾರಂತರು ಉತ್ತರಕೊಡುತ್ತಾ ಕೇವಲ ನಾಯಕ ನಿಷ್ಠಾಂಧರಾಗಿ ಅಂಧಾನುಕರಣೆ ಮಾಡುವುದರಲ್ಲಿ ಮಾನಹತ್ತವಿಲ್ಲವೆಂದರು. ಕನ್ನಡಿಗರನ್ನು ಮಾನಹೋಚಿತಗೌರವ ದೈಷ್ಟಿಯಿಂದಲೂ, ಕರ್ನಾಟಕ ಪ್ರಾಂತ್ಯದ ಪ್ರಶ್ನೆಯನ್ನು ಕಾಲೋಚಿತ ನ್ಯಾಯದೃಷ್ಟಿಯಿಂದಲೂ ಕೇಂದ್ರಾಧಿಕಾರಿಗಳು ಕಾಣುತ್ತಿಲ್ಲವೆಂದರು. ರಾಷ್ಟ್ರ ನಾಯಕರು ಈ ಮೊದಲು ಕೊಟ್ಟಿದ್ದ ಆಶಾಸನೆಗಳನ್ನಾಧರಿಸಿಯೇ ತಾವಿಂದು ಕರ್ನಾಟಕ ಪ್ರಾಂತ್ಯ ಯಾಚಿಸುತ್ತಿರುವೆವೆಂಬುದನ್ನು ವಿವಿಧ ತಪಡಿಸಿ, ಕನ್ನಡಿಗರೆಲ್ಲರ ಒಮ್ಮತದ ಬೇಡಿಕೆ

ದ. ಕ. ಜಿಲ್ಲೆಯ ಕೃಷಿಕರ ಜಿಲ್ಲಾ ಸಂಘಟನೆಯನ್ನು ಸ್ಥಾಪಿಸಿ, ಇಡೀ ಜಿಲ್ಲೆಯ ಕೃಷಿಕರನ್ನೆಲ್ಲಾ ಸಂಘಟಿಸುವ ಬಗ್ಗೆ ಜಿಲ್ಲೆಯ ಕೃಷಿಕರ ಮತ್ತು ಕೃಷಿಕ ಹಿತ ಚಿಂತಕರ ಮಹಾಸಭೆಯು ಇದೇ ಕಳೆದ ತಾ. ೧೮ನೇ ಆದಿತ್ಯವಾರ ಅಪರಾಹ್ನ ಘಂಟೆ ೭ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಛೇರಿಯಲ್ಲಿ ನಡೆಯಿತು. ಜಿಲ್ಲೆಯ ಬೇರೆ ಬೇರೆ ಭಾಗಗಳಿಂದ ಮುಖ್ಯವಾಗಿ ಮುಲ್ಕಿ ಭಿರ್ಕದ ಕೃಷಿಕ ಸಂಘಗಳಿಂದ ಹಲವು ಮಂದಿ ಕೃಷಿಕರು ನೆರೆದು ಬಂದಿದ್ದರು. ಶ್ರೀ ಎಂ. ಉಮೇಶ ರಾವ್ ವಕೀಲ ಇವರು ಈ ಮಹಾ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸದ್ಯದ ಸ್ಥಿತಿಗತಿಗಳನ್ನು ವಿವರಿಸಿ ಭಾಷಣವಿತ್ತರು.

ಶ್ರೀ ಕೆ. ಕೆ. ಶೆಟ್ಟರು ಪಾಣೆಮಂಗಳೂರಿನ ಜಿಲ್ಲಾ ಕೃಷಿಕ ಪರಿಷತ್ತಿನ ನಂತರ ನಡೆದ ಕೆಲಸಗಳನ್ನು ವಿವರಿಸಿ, "ಇಂದು ಕೃಷಿಕರಲ್ಲಿ ನಿರಾಶೆಯೇ ತುಂಬಿದೆ. ಪ್ರತಿಯೊಂದು ವಿಷಯದಲ್ಲಿಯೂ ಕೃಷಿಕರ ಹಿತದ ಕಡೆಗೆ ಸರಕಾರವು ಗಮನ ಕೊಡುವುದು ತೀರಾ ಕ್ಷೀಣವಾಗಿದೆ. ಬದಲಿಗೆ, ಕೃಷಿಕರ ನಾನಾ ವಿಧದ ಶೋಷಣೆ ಮತ್ತು ಪೀಡೆಯೇ ಹೆಚ್ಚಾಗುತ್ತಿದೆ. ಉತ್ಪತ್ತಿಯನ್ನು ಹೆಚ್ಚಿಸುವ ವಿಷಯದಲ್ಲಿ ಬರೇ ಮಾತುಗಳೇ ಕಳೆದು ಬರುವಷ್ಟೇ ಪೊರತ, ಆದರ ಮುಖ್ಯ ಕರ್ತವ್ಯಾದಿ ಕೃಷಿಕನ್ನಲ್ಲಿ ಅಳಿಯಿತು ಹುಲಾಪನ್ನುಂಟು ಮಾಡಲು ಯಾವ ತರದ ಪ್ರಯತ್ನವೂ ನಡೆದಿಲ್ಲ. ನಕ್ಕಲು ಹಿತ ಮಸೂದೆಯನ್ನು ಜ್ಯಾರಿಗೆ ತರುವುದಂತಿರಲಿ, ವಕ್ಕಲೆಬ್ಬಿಸದಂತೆ ತಡೆಗಟ್ಟುವ ಸ್ವಂಥನ ಪಸಾದೆ ತರಬೇಕೆಂದು ಜನಜನಿತವಾದ ಕೂಗು ಕೂಡಾ ಕೇವಲ ಅರಣ್ಯ ರೋದನವಾಗಿದೆ" ಎಂದರು. ಕಾರ್ನಾಡು ಮತ್ತು ಹಳೆಯಂಗಡಿ ಕೃಷಿಕರಂತೆ ಜಿಲ್ಲೆಯ ಕೃಷಿಕರು ಸಂಘಟಿತರಾಗಬೇಕೆಂದರು.

ಭಾಷಣಗಳಾದ ಮೇಲೆ ಕೃಷಿಕರ ಜಿಲ್ಲಾ ಸಂಘಟನೆಗೆ ಯಾವ ಹೆಸರನ್ನೀಯಬೇಕೆಂಬ ಕುರಿತು ಚರ್ಚೆ ನಡೆದು, "ದಕ್ಷಿಣ ಕನ್ನಡ ಜಿಲ್ಲಾ ಕೆಸಾನ್ ಕಾಂಗ್ರೆಸ್" ಎಂದು ಹೆಸರಿಡಬೇಕೆಂದು ನಿರ್ಧರಿಸಲಾಯಿತು. ಗ್ರಾಮ ಕೂಟಗಳ ಬಗ್ಗೆ ಗ್ರಾಮ ಕೆಸಾನ್ ಕಾಂಗ್ರೆಸನ್ನೂ, ಆ ಮೇಲೆ ತಾಲೂಕು ಕೆಸಾನ್ ಕಾಂಗ್ರೆಸನ್ನೂ ಸಂಘಟಿಸಬೇಕೆಂದು ನಿಶ್ಚಯವಾಯಿತು. ಈ ಮೊದಲೇ ಕೃಷಿಕ ಸಂಘಗಳು ಸ್ಥಾಪಿಸಲ್ಪಟ್ಟಿರುವಷ್ಟು ಅಂತಹ ಸಂಸ್ಥೆಗಳು ಆಯಾಕ್ಷೆ ಪಟ್ಟಿಲ್ಲಿ ಆವುಗಳನ್ನು ಅಧೀನ ಸಂಸ್ಥೆಗಳಾಗಿ ಅಂಗೀಕರಿಸಬೇಕೆಂದು ನಿರ್ಧರಿಸಲಾಯಿತು.

ಶ್ರೀ ಎಂ. ಉಮೇಶರಾಯರು ಜಿಲ್ಲಾ ಕೆಸಾನ್ ಕಾಂಗ್ರೆಸಿನ ಅಧ್ಯಕ್ಷರಾಗಿಯೂ, ಶ್ರೀ ಬಿ. ಆರ್. ಕರ್ಕೇರರು ಉಪಾಧ್ಯಕ್ಷ ಮತ್ತು ಕೋಶಾಧಿಕಾರಿಯಾಗಿಯೂ ಆರಿಸಲ್ಪಟ್ಟರು. ಶ್ರೀ ಕೆ. ಕೆ. ಶೆಟ್ಟರು ಕಾರ್ಯದರ್ಶಿಯಾಗಿಯೂ ಶ್ರೀ ಬಿ. ಎಸ್. ಭಾಸ್ಕರ ರೈಗಳು ಜತೆ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟ ಮೇಲೆ ಏಳು ಮಂದಿ ಸದಸ್ಯರುಳ್ಳ ಕಾರ್ಯಕಾರಿ ಸಮಿತಿಯನ್ನು ಆರಿಸಲಾಯಿತು.

ಕೆಸಾನ್ ಕಾಂಗ್ರೆಸಿನ ಉದ್ದೇಶ, ಸದಸ್ಯತನ, ವರ್ಗಣಿ ಮೊದಲಾದುವು ನಿಶ್ಚಯಿಸಲ್ಪಟ್ಟ ಮೇಲೆ ಈ ಕೆಳಗಿನ ನಿರ್ಣಯಗಳು ಸರ್ವ ಸಮ್ಮತಿಯಿಂದ ಮಂಜೂರಾದುವು.

೧. ಶ್ರೀಭ್ರವಾಗಿ ವಕ್ಕಲುಚಿತ ಮಸೂದೆಯನ್ನು ಸರಕಾರವು ತರುವಂತೆ ಈ ಸಭೆಯು ಒತ್ತಾಯ ಪಡಿಸುವುದಲ್ಲದೆ, ಅದು ಬರುವ ವರೆಗೆ ಭೂಮಿಗಳು ಇಚ್ಛಾನುಸಾರ ಒಕ್ಕಲೆಬ್ಬಿಸದಂತೆ ತಡೆಗಟ್ಟುವ 'ಸ್ವಂಥನ' ಮಸೂದೆಯನ್ನು ಕೂಡಲೆ ಮದ್ರಾಸು ಸರಕಾರವು ಜಾರಿಗೆ ತರಬೇಕೆಂದೂ, ಹಾಗೆ ಮಾಡದಿದ್ದಲ್ಲಿ ಜಿಲ್ಲೆಯ ಕೃಷಿಕರು ತಮ್ಮ ಉದ್ದೇಶ ಸಾಧನೆಗಾಗಿ ತೀವ್ರ ಕಾರ್ಯಕ್ರಮವನ್ನು ಕೈಕೊಳ್ಳಬೇಕಾದೀತೆಂದೂ ನಿರ್ಧರಿಸಲಾಯಿತು. ೨. ಒಕ್ಕಲುಗಳಿಂದ ಪೂರಾ ನೇಯನ್ನು ಉಳಿತಾಯವಾಗಿ ಪರಿಗಣಿಸಿ ರಿಕ್ವಿಜಿಷನ್ ಮಾಡುವ ಈ ಜಿಲ್ಲೆಯ ವಿಶಿಷ್ಟ ಕ್ರಮವನ್ನು ಕೂಡಲೇ ರದ್ದುಗೊಳಿಸಕಕ್ಕ ದ್ದೆಂದು ತೀರ್ಮಾನವಾಯಿತು. ೩. ನರ್ಗ ದಾರರಿಂದ ಒಂದು ವರ್ಷ ತೀರ್ವೆಯನ್ನು ಮುಂಗಡವಾಗಿ ವಸೂಲು ಮಾಡುವ ಸರಕಾರದ ಯೋಜನೆಯು ತೀರ ಅವಿವೇಕ ದ್ದೆಂದು ತೀರ್ಮಾನಿಸಲಾಯಿತು. ಫೆಬ್ರವರಿ ಮಧ್ಯದಲ್ಲಿ ಮೂಲ್ಕಿಯ ಕಾರ್ನಾಡಿನಲ್ಲಿ ಇಡೀ ಜಿಲ್ಲೆಯ ಕೃಷಿಕರ ಜಿಲ್ಲಾ ಪರಿಷತ್ತನ್ನು ನಡಗಿಸಬೇಕೆಂದು ತೀರ್ಮಾನಿಸಲಾಯಿತು.

ಶ್ರೀ ಬಿ. ಆರ್. ಕರ್ಕೇರರು, ಧನ್ಯವಾದಗಳನ್ನರ್ಪಿಸಿದರು ಜಿಲ್ಲಾ ಕೆಸಾನ್ ಕಾಂಗ್ರೆಸಿನೊಂದಿಗೆ ಸೇರಿಲಿರುವ ಜಿಲ್ಲೆಯ ಕೃಷಿಕ ಸಂಘಗಳೂ, ಆದರ ಕೆಳಗೆ ಕೆಲಸಮಾಡಲಿರುವ ಕಾಂಗ್ರೆಸ್ ಹಾಗೂ ಕೃಷಿಕ ಹಿತಸಾಧಕ ಕೆಲಸಗಾರರೂ, ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಛೇರಿ, ಮಂಗಳೂರು ಇದಕ್ಕೆ ಬರೆದು ತಿಳಿಸಬೇಕಾಗಿ ವಿನಂತಿಸಲಾಗಿದೆ.

ದ· ಕ· ಜಿಲ್ಲಾ ಕೆಸಾನ್ ಕಾಂಗ್ರೆಸ್ ಸ್ಥಾಪನೆ·

ಫೆಬ್ರವರಿ ಮಧ್ಯಭಾಗದಲ್ಲಿ ಜಿಲ್ಲಾ ಕೃಷಿಕ ಪರಿಷತ್ತನ್ನು ಕಾರ್ನಾಡಿನಲ್ಲಿ ಜರಗಿಸುವ ನಿರ್ಧಾರ

ಜಾತೀವಾದಿ ನಿರೋಧಕ ತಕ್ಷಾಲಿಕ ಸಮಿತಿಯ ಹೋಳಿಕೆ.

ದೇಶದ ಸ್ವಾತಂತ್ರ್ಯಜೊಂದಿಗೇ ಸ್ವಾತಂತ್ರ್ಯಕ್ಕೆ ಘಾತುಕವಾದ ಫ್ಯಾಸಿಸ್ಟ್ ಶಕ್ತಿ ತಲೆಯೆತ್ತಿ ಜನಾಭಿಪ್ರಾಯವನ್ನು ಅಸಹ್ಯಗೊಳಿಸಲು ಯತ್ನಿಸುತ್ತಿರುವುದು ಸಜ್ಜನರಿಗೂ ತಿಳಿದ ವಿಷಯ. ಒಂದೇ ದೇಶದ ಅಕ್ಕಪಕ್ಕದ ಜಾತಿಗಳೇ ದೇಶವನ್ನಾಳುವ ಹಕ್ಕನ್ನು ಇತರರಿಗೆ ಇಲ್ಲವೆಂದು ಸಾರಿ, ದೇಶದ ಜನಜಂಗುಳಿಯನ್ನು ಗುಲಾಮಗಿರಿಯಲ್ಲಿರಿಸುವುದೇ ಫ್ಯಾಸಿಸವಿನ್ನ ಧ್ಯೇಯ. ಜಾತಿವಾದ, ವರ್ಗವಾದಗಳ ಮೂಲಕ ಈ ದುಷ್ಟ ಶಕ್ತಿ ಹರಡುತ್ತಿದೆ ಜಾತಿವಾದವೆಂಬುದು ಜನಜೀವನಸ್ಥಾತುಕವಾದ ಒಂದು ಘೋರ ಅಂಟುರೋಗ. ಇಂದು ಸಂಸ್ಕೃತಿ, ಧರ್ಮಗಳ ಹೆಸರಲ್ಲಿ ತಲೆಯೆತ್ತಿರುವ ದುಷ್ಟ ಶಕ್ತಿಗಳನ್ನು ಹತ್ತಿಕ್ಕುವುದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ಆರ್. ಎಸ್. ಎಸ್. ಸರ ಸಂಘ ಚಾಲಕರಾದ ಶ್ರೀ. ಗೊಳ್ವಲ್ಕರರು ಮಂಗಳೂರಿಗೆ ಬಂದಾಗ ಅವರ ಆಗಮನವನ್ನೂ ಅವರ ಘೋರನೆಯಾದ ಜಾತೀವಾದವನ್ನೂ ವಿರೋಧಿಸಲಿಕ್ಕಾಗಿ ತಾತ್ಕಾಲಿಕವಾಗಿ 'ಜಾತೀಯವಾದೀ ವಿರೋಧೀ ಐಕ್ಯರಂಗ' (Anti Communalist United Front) ಪೊಂದು ಸ್ಥಾಪಿತವಾಗಿತ್ತಷ್ಟೆ. ಈ ತಾತ್ಕಾಲಿಕ ಸಮಿತಿಯನ್ನು ತಾ. 18-12-49ರಂದು ವಿಸರ್ಜಿಸಿ ಮುಂಜೆಕ್ಕೆ ಜಾತೀಯವಾದೀ ವಿರೋಧಿಗಳಾದ ಪ್ರಗತಿಪರ ಫ್ಯಾಸಿಸಂ ವಿರೋಧಿ ಐಕ್ಯ ಸಮಿತಿ (Anti Fascists United League)ಯನ್ನು ಕಟ್ಟಲು ನಾಲ್ಕು ಮಂದಿ ಸದಸ್ಯರ ಒಂದು ತಾತ್ಕಾಲಿಕ ಸಮಿತಿಯನ್ನು (Conveners) ರಚಿಸಲಾಗಿದೆ.

ದೇಶದಾದ್ಯಂತ ತಲೆಯೆತ್ತುತ್ತಿರುವ ಫ್ಯಾಸಿಸ್ಟ್ ಮನೋವೃತ್ತಿಯ ವಿರುದ್ಧ ಘೋರಾತಿಘೋರವಾದುದು ಇಂದಿನ ಪುರೋಗಾಮಿ ಜನತೆಯ ಕರ್ತವ್ಯವಾದುದರಿಂದ ಪ್ರಗತಿಗಾಮಿ ಗಳಾದ ಎಲ್ಲಾ ಪಕ್ಷಸಂಗಡಗಳ ಒಂದು ವಿಕ್ಯರಂಗದ ಅವಶ್ಯಕತೆಯಿದೆ. ಅಂತಹ ಒಂದು ಸಂಘಟನೆಯನ್ನು ಮಾಡಲೋಸುಗ ಸದ್ಯದಲ್ಲೇ ಜಿಲ್ಲೆಯ ಎಲ್ಲಾ ಪ್ರಗತಿಗಾಮಿಗಳಿಗೆ ಒಂದು ಸಭೆಯನ್ನು ಕರೆಯಲಿರುವೆವು. ಆದುದರಿಂದ ಫ್ಯಾಸಿಸ್ಟ್ ವಿರೋಧಿ ಮನೋವೃತ್ತಿಯ ಜನ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕಾಗಿ ಕೇಳಿಕೊಳ್ಳುತ್ತೇವೆ.

ಬಿ. ಶಂಕರಭಟ್ಟ, ಎಂ. ರಾಮಪ್ಪ,
ಡಿ ಎಂ.ಎ ರಫೀಕ್, ಕೆ.ಎಂ. ಆರ್ ಶೆಟ್ಟಿ,
-ಕನ್ವೀನರ್ಸ್

ಎಂಟಿ ಫ್ಯಾಸಿಸ್ಟ್‌ಯುನೈಟೆಡ್ ಲೀಗ್
ಹಂಪನಕಟ್ಟೆ, ಮಂಗಳೂರು, ದ. ಕ.

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ
S. C. 311/1949
ಕಾವೇರಿಕಾನ ಮಹಾಲಿಂಗ ಭಟ್ಟ - ವಾದಿ
ಮತ್ತು
ಸುಬ್ರಾಯ ಭಟ್ಟ, ಕೋಡ್ಲಾಡು ಸುಬ್ಬಣ್ಣ ಭಟ್ಟರ ಮಗ, ಕಾಸ್ರಗೋಡು ತಾಲ್ಲೂಕು ಇಚ್ಲಂಪಾಡಿ ಗ್ರಾಮದ ಕಾಂಜಿಲೆ ಎಂಬಲ್ಲಿರುವವರು. —ಪ್ರತಿವಾದಿ.

ನೋಟೀಸು

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ:—

ನೀವು ವಾದಿಗೆ ತಾ. 3-12-1948ರಲ್ಲಿ ರೂ-100ಕ್ಕೆ ಬರೆಕೊಟ್ಟ ಪ್ರೊ-ನೋಟಿನ ಆಸು ಬಡ್ಡಿ ವಸೂಲಾತಿ ಕುರಿತು ವಾದಿಯು ನಿಮ್ಮನ್ನೇ ಸದ್ರಿ ದಾವಾ ದಾಕಲು ಮಾಡಿರುತ್ತಾರೆ. ಮತ್ತ ಸದ್ರಿ ವ್ಯಾಜ್ಯವು ತಾ. 16-1-1950ಕ್ಕೆ ತನಿಬಿಗೆ ಇಟ್ಟಿರುತ್ತದೆ. ಆ ದಿವ್ಸ ಪೂರ್ವಾಹ್ನ 11 ಗಂಟೆಗೆ ನೀವು ಸ್ವತಃ ಯಾ ವಕೀಲರ ಮುಖಾಂತ್ರ ಸದ್ರಿ ಕೋರ್ಟಿನಲ್ಲಿ ಹಾಜ್ರಾಗಿ ಆಕ್ಷೇಪಣೆಗಳೇನಾದ್ರೂ ಇದ್ದರೆ ಜ್ಯಾಬೀರು ಮಾಡಿಕೊಳ್ಳಬಹುದು. ತಪ್ಪಿದ್ದೆ ಸದ್ರಿ ವ್ಯಾಜ್ಯವು ನಿಮ್ಮ ಗೈರು ಹಾಜ್ರಿಯಲ್ಲಿ ತೀರ್ಮಾನವಾಗುವುದು.

K Shankar Rao,
Advocate for Plaintiff.
Kasaragod }
19-12-1949 }

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ

1921ರಲ್ಲಿ ಸ್ಥಾಪಿತವಾಗಿ 29 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

The Moolky Bank Ltd.,
Moolky, S. K.

For Life Assurance
CONSULT
THE NEW GUARDIAN OF INDIA
LIFE ASSURANCE Co. LTD.
(Established: 1934)

Chairman: Sri. M C. T M. Chidambarma Chettyar.

A Policy in this progressive Life Office is a good investment; its Agency is a valuable business connection.

MANGALORE BRANCH:
K. S. R Road,
Hampankatta, Mangalore

HEAD OFFICE:
United India Life Building,
, MADRAS

BUY INDIAN! ENCOURAGE INDIAN INDUSTRY!
ಅಮಲಕೀ ತೈಲ AMALAKI HAIR OIL

ಕೂದಲುಗಳಿಗೂ ನೇತ್ರ ಸ್ವಾಸ್ಥಕ್ಕೂ ಅತ್ಯಂತ ಹಿತಾವಹವಾದುದೆಂದು ಸರ್ವರಿಂದಲೂ ಅಂಗೀಕರಿಸಲ್ಪಟ್ಟ ಪುಷ್ಪ ಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ.

Highly perfumed and medicated, worth using daily by one and all keeps hair black and relieves headache etc.

REGD. TRADE MARK

Manufactured by:-
Swadeshi Oushadhi Bhandara (Regd)
KUNJAL P. O. Brahmavar, S. K.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ
O. S. 543/1949
ರಾಮಮಣಿಗ ಕೂಡಾ— ವಾದಿರು.
ಮತ್ತು
ಸುಬ್ಬಣ್ಣ ಭಂಡಾರಿ ಕೂಡಾ
—ಪ್ರತಿವಾದಿರು.

2ನೇ ಪ್ರತಿವಾದಿ-ರಾಮಚಂದ್ರ ಗೋಟಾ, ಕೃಷ್ಣಯ್ಯ ಗೋಟರ ಮಗ, ಕೋಟೇಶ್ವರ ಗ್ರಾಮ.

15ನೇ ಪ್ರತಿವಾದಿ-ಲಕ್ಷ್ಮಿ ಅಮ್ಮ, ಮಂಜುನಾಥ ಗೋಟರ ಹೆಂಡ್ತಿ, ತೆಕ್ಕಟ್ಟೆ ಗ್ರಾಮ.

ವಾದಿರು ಕೈಪೇತಿನಲ್ಲಿ ಕಾಣಿಸಿದ ಸ್ಥಳಗಳ ಸ್ವಾಧೀನತೆ ಬಗ್ಗೆ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ. 12-1-50ಕ್ಕೆ ತನ್ನಿಗೆ ಇಟ್ಟಿದ್ದುತ್ತದೆ. ಆ ದಿವ್ಸ ಜಗಲು 10 ಘಂಟೆಗೆ ನೀವು ಸ್ವತಹಾ ಯಾ ವಕೀಲರ ದ್ವಾರಾ ಹಾಜ್ರಾಗಲಿಕ್ಕೆ ತಪ್ಪಿದ್ದೆ ನಿಮ್ಮ ಗೈರಹಾಜ್ರಿಯಲ್ಲಿ ಮುಂದಿನ ತನ್ನ ನಡಿಯುವುದು ಎಂತ ಈ ಸೂಲ್ಕ ಸದ್ರಿ 2-15ನೇ ಪ್ರತಿವಾದಿರಿಗೆ ತಿಳಿಸೋಣಾಗುತ್ತದೆ.

G. Sanjiva Rao,
Pleader for Plff.
ಕುಂದಾಪ್ರ }
26-12-49 }

ಇದು ಸಮಗ್ರ ಚೇತನವಿಜ್ಞಾನ ಆಧಾರಿತ ವ್ಯಾಪಕ ಪ್ರಮಾಣದಲ್ಲಿ ಜೊತೆಯುತ್ಪನ್ನಗಳಿಗೆ ಕಚ್ಚಾ ಪದಾರ್ಥಗಳಿಂದ ಪ್ರಯೋಜನಕಾರಿ ಉದ್ಯಮಗಳಿಗೆ ಬೆಲೆಕೊಡಬೇಕಾಗಿದೆ. ಇದೊಂದು ಅತಿ ಮಹತ್ವದ ಸಮಸ್ಯೆಯಾಗಿದೆ. ನಮ್ಮ ಆರ್ಥಿಕ ಪರಿಸ್ಥಿತಿಯು ಹದ ತಪ್ಪಲು ಅಹಂರದ ಸಮಸ್ಯೆಯೇ ಮುಖ್ಯ ಕಾರಣವಾಗಿದೆ. ಎರಡನೆಯ ಜಾಗತಿಕ ಯುದ್ಧ ದೊಡನೆಯೇ ನಮ್ಮ ಆಹಾರದ ಕಸ್ಟಗಳೂ ಪ್ರಾರಂಭವಾದುವು 1717ರಲ್ಲಿ ಸಿಂದು ಸ್ಥಾನದ ವಿಭಜನೆಯಾದ ಮೇಲೆ ನಮ್ಮ ಕಸ್ಟಗಳು ಇನ್ನಷ್ಟು ಹೆಚ್ಚಿದುವು ನೀರಾವರಿಯು ಕೃಷಿಯಿಂದ ಹಾಲು ಭೂಮಿಯೂ ಪಾಕಿಸ್ತಾನದಲ್ಲಿ ಸೇರಿ ಹೋಯಿತು. ಆಹಾರ ಧಾನ್ಯಗಳು ಬೆಳೆಯುವ ಪ್ರದೇಶವೂ ಕಮ್ಮಿ ಯಾಯಿತು. ಆಹಾರದ ಕೊರತೆಗೆ ಇದೂ ಒಂದು ಕಾರಣವಾಗಿದೆ. ಇತ್ತೀಚೆಗೆ ನಾಣ್ಯಗಳ ಬೆಲೆಯನ್ನು ರಗ್ಗಿಸಲಾಯಿತು. ಆಂಧ್ರ ದೇಶದಲ್ಲಿ ಸುಳಿಗಾಳಿಯು ಅನಾಯತವು ಸಂಭವಿಸಿತು ಈ ಎರಡು ಘಟನೆಗಳಿಂದ ನಮ್ಮ ಪ್ರಾಂತದ ಆಹಾರ ಪರಿಸ್ಥಿತಿಗೆ ಇನ್ನಷ್ಟು ಕೆಡುಕಾಯಿತು ನಾಣ್ಯಗಳ ಬೆಲೆ ಕಡಮೆ ಯಾದುದರಿಂದ ಪರದೇಶದ ಆಹಾರ ಸಾಮಗ್ರಿಗಳ ಬೆಲೆ ಏರಿತು. ಇದರಿಂದ ಪರದೇಶದಿಂದ ಆಹಾರ ಸಾಮಗ್ರಿಗಳನ್ನು ತರಿಸಲು ತೊಂದರೆಯಾಯಿತು. ಸುಳಿಗಾಳಿಯ ಅನಾಹುತದಿಂದ ಸಂಗ್ರಹವಾಗತಕ್ಕ ಆಕ್ಕಿಯಲ್ಲಿ ಮೂರು ಲಕ್ಷ ಟನ್ನುಗಳಷ್ಟು ಕಮ್ಮಿಯಾಗಿ ಬಹುದು ಕೇಂದ್ರ ಸರಕಾರವು ಕಳದ ವರುಷ ಪರದೇಶಗಳಿಂದ ಆಹಾರ ಸಾಮಗ್ರಿಗಳನ್ನು ತರಿಸಲು 130 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದೆ. ಈ ವರ್ಷವೂ ಇದಕ್ಕಾಗಿ ಇನ್ನಷ್ಟು ಹೆಚ್ಚು ವೆಚ್ಚ ಮಾಡಬೇಕಾಗಬಹುದು ಪರದೇಶಗಳಿಂದ ಯಂತ್ರ ಸಾಮಗ್ರಿಗಳನ್ನು ತರಿಸಲು ಉಪಯೋಗಿಸ ಬಹುದಾಗಿದ್ದ ವಿದೇಶೀ ನಾಣ್ಯಗಳನ್ನು ಆಹಾರ ಸಾಮಗ್ರಿಗಳಿಗಾಗಿ ಹೆಚ್ಚಿ ಮಾಡಬೇಕಾಗಿದೆ. ಇದರಿಂದ ನಮ್ಮ ದೇಶದ ಕೈಗಾರಿಕೆಗಳ ಅಭಿವೃದ್ಧಿಗೆ ಅಡ್ಡಿಯಾಯಿತು ಕೇಂದ್ರ ಸರಕಾರವು ತರಿಸಿದ ಆಹಾರ ಧಾನ್ಯ ಇತ್ಯಾದಿಗಳನ್ನು ಕಮ್ಮಿ ಬೆಲೆಗೆ ಮಾರುವಂತೆ ಮಾಡಲು ಅನೇಕ ಕೋಟಿ ರೂಪಾಯಿಗಳನ್ನು ನೆಚ್ಚ ಮಾಡಿತು. ಕಳೆದ ಐದು ವರುಷಗಳಲ್ಲಿ ಮದರಾಸು ಸರಕಾರವು ಆಹಾರ ಸಹಾಯ (Food Subsidy)ಕ್ಕಾಗಿ 17½ ಕೋಟಿ ರೂಪಾಯಿಗಳನ್ನೂ ಆಹಾರ ಸಂಗ್ರಹಣ ಮತ್ತು ರೇಶನ್ ಹಂಚುವ ನೌಕರರಿಗಾಗಿ 4½ ಕೋಟಿ ರೂಪಾಯಿಗಳನ್ನೂ ವೆಚ್ಚ ಮಾಡಿತು!

ನೀರಾವರಿ-ಗೊಬ್ಬರ

ನಮ್ಮ ದೇಶವ ಆಹಾರದ ಕೊರತೆಯನ್ನು ಹೋಗಲಾಡಿಸಬೇಕಾದರೆ ನೀರಾವರಿ ಮತ್ತು ಗೊಬ್ಬರ ತಯಾರಿಕೆಗಳಿಗಾಗಿ ಮೊದ್ದ ದೊಡ್ಡ ಯೋಜನೆಗಳು ಆಗತ್ಯವಾಗಿವೆ ಅದರೆ ಅವುಗಳನ್ನು ಕೃತಿಯಲ್ಲಿ ತರಬೇಕಾದರೆ ಬಹಳ ಕಾಲ ಹಿಡಿದೀತು ಆದುದರಿಂದ ನಾವೀಗ ಕಮ್ಮಿ ಸಮಯದಲ್ಲಿ ಪೂರ್ತಿಯಾಗತಕ್ಕ ಚಿಕ್ಕ ಚಿಕ್ಕ ಯೋಜನೆಗಳ ಕಡೆಗೇ ಹೆಚ್ಚು ಗಮನ ಕೊಡಬೇಕಾಗಿದೆ. ಹೀಗೆ ಮಾಡಿದರೆ ಕೇಂದ್ರ ಸರಕಾರವು ಆಹಾರಸಾಮಗ್ರಿಗಳನ್ನು ಹೊರಗಿನಿಂದ ತರಿಸುವುದನ್ನು ನಿಲ್ಲಿಸಲು ನಿರ್ಧರಿಸಿದ ಅವಧಿ, ಅಂದರೆ 1951ನೆಯ ಇಸವಿಯ ಒಳಗೆ ಪರಮಾವಧಿ ಉತ್ಪತ್ತಿಯನ್ನು ಪಡೆಯಬಹುದು. ಅದುದರಿಂದ ಎರಡು ವರುಷ ಕಾಲದಲ್ಲಿ ಅತ್ಯವಸರದಿಂದ ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವ ಯೋಜನೆಯನ್ನು ತಯಾರಿಸಲಾಗಿದೆ. ಈ ಯೋಜನೆಯಂತೆ 1950-51 ನೇ ಇಸವಿಯಲ್ಲಿ ಸುಮಾರು ಆರು ಲಕ್ಷ ಟನ್ ಹೆಚ್ಚಿಗೆ ಆಹಾರ ಧಾನ್ಯಗಳು ದೊರೆಯಬಹುದೆಂದು ಅಂದಾಜು ಮಾಡಲಾಗಿದೆ.

ಈ ಯೋಜನೆಗಳಿಗೆ ಸುಮಾರು 3½ ಕೋಟಿ ರೂಪಾಯಿಗಳು ಖರ್ಚಾಗಬಹುದು. ಕೇಂದ್ರ ಸರಕಾರವು ಇದರಲ್ಲಿ ಸಮಾರು 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಡುವುದು. ನಮ್ಮ ಪ್ರಾಂತಿಕ ಸರಕಾರವು ಸುಮಾರು 2 ಕೋಟಿ 10 ಲಕ್ಷ ರೂಪಾಯಿಗಳನ್ನು ಕೊಡುವುದು.

ವಿಸ್ತಾರವಾದ ಸಾಗುವಳಿ

ಆಹಾರದ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಹೆಚ್ಚು ಪ್ರದೇಶದಲ್ಲಿ ಸಾಗುವಳಿ ನಡೆಯಬೇಕು. ಅಲ್ಲದೆ ಈಗ ಬೇಸಾಯವಾಗುತ್ತಿರುವ ಭೂಮಿಗಳ ಉತ್ಪತ್ತಿಯೂ ಹೆಚ್ಚಬೇಕು. ನಮ್ಮ ಪ್ರಾಂತದಲ್ಲಿ ಸುಮಾರು 60 ಲಕ್ಷ ಎಕ್ರೆ ಹಾಳುಬಿದ್ದ ಜಮೀನೂ 20 ಲಕ್ಷ ಎಕ್ರೆ ಬಂಜರು ಭೂಮಿಯೂ ಇದೆ. ಪ್ರಾಂತದ ಜನಸಂಖ್ಯೆಯಾದರೋ ಪ್ರತಿವರ್ಷವೂ ಅರ್ಧ ಮಿಲಿಯಕ್ಕಿಂತಲೂ ಸ್ವಲ್ಪ ಹೆಚ್ಚಾಗಿ ಏರುತ್ತಿದೆ. ಭೂಸುಧಾರಣೆ ಮತ್ತು ಕಳೆಹಬ್ಬಿದ ಪಾಗೂ ಸವೆದುಹೋದ ಜಮೀನುಗಳ ಸುಧಾರಣೆಯು ಅತ್ಯಗತ್ಯವಾಗಿದೆ. ಈಗ ಬೇಸಾಯವಾಗದೆ ಬಂಜರುಬಿದ್ದ ಕೆಲವು ಪ್ರದೇಶಗಳಲ್ಲಿ ಉಳುವ ಯಂತ್ರಗಳ (Traetors) ಸಹಾಯದಿಂದ ಆಹಾರದ ಬೆಳೆಯನ್ನು ಬೆಳೆಸಬಹುದು. ಈಗ ಕೃಷಿ ಇಲಾಖೆಯ ವಶದಲ್ಲಿ 157 ಉಳುವ ಯಂತ್ರಗಳು ಇವೆ. ಕೃಷಿಕರಿಗೆ ಇವುಗಳನ್ನು ಬಾಡಿಗೆಗೆ ಕೊಡಲಾಗುತ್ತಿದೆ. ಈ ವರ್ಷ ಇನ್ನೂ 78 ಉಳುವ ಯಂತ್ರಗಳನ್ನು ಕೊಂಡುಕೊಳ್ಳಲು ನಿಶ್ಚಯಿಸಿದೆ.

ಉತ್ಪತ್ತಿ ಹೆಚ್ಚಬೇಕು

ಪಶ್ಚಿಮದೇಶಗಳೊಡನೆ ಹೋಲಿಸಿ ನೋಡಿದರೆ ನಮ್ಮ ದೇಶದಲ್ಲಿ ಎಕ್ರೆ 1ಕ್ಕೆ ದೊರೆಯುವ ಉತ್ಪತ್ತಿಯು ತೀರಾ ಕಮ್ಮಿ. ಆಹಾರ ಬೆಳೆಗಳ ಉತ್ಪತ್ತಿಯನ್ನು ಹೆಚ್ಚಿಸಬೇಕಾದರೆ ಸುಧಾರಿತ ರೀತಿಯ ನೀರಿನ ಪೂರೈಕೆಯೇ ಮೊತ್ತಮೊದಲು ಬೇಕಾದುದು. ಎರಡನೆಯದಾಗಿ, ಸೇಂದ್ರಿಯ ಮತ್ತು ರಾಸಾಯನಿಕ ಗೊಬ್ಬರಗಳ ಪೂರೈಕೆಯನ್ನು ಹೆಚ್ಚಿಸುವುದೂ ಮುಖ್ಯವಾಗಿದೆ. ನೀರಿನ ಪೂರೈಕೆಗಾಗಿ ಬಾವಿ ತೋಡುವ ಯೋಜನೆಗೂ ಕೆರೆದುರಸ್ತಿ ಮತ್ತು ಇತರ ಚಿಕ್ಕ ನೀರಾವರಿ ಯೋಜನೆಗಳಿಗೂ ಧನ ಸಹಾಯ ಕೊಡಲಾಗುತ್ತಿದೆ. ಈವರೆಗೆ ಬಾವಿ ತೋಡಲು ಸಹಾಯ ಧನ ಕೊಡುವ ಯೋಜನೆ ಪ್ರಕಾರ 75,000ಕ್ಕಿಂತಲೂ ಹೆಚ್ಚು ಬಾವಿಗಳು ಅಗೆಯಲ್ಪಟ್ಟವೆ. ತೋಡುಗಳಿಗೂ ಹೊಳೆ ಇ



Approved firm by the Govt. of Mysore
Certificated by the Agent of the Govt. of
Ceylone & Indian.

ಉಡುಪಿಗೆ ಜೋಗಬೇಕೆ! ಆದರೆ ಉಳಿದುಕೊಳ್ಳುವುದೆಲ್ಲಿ

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಯಂತೂ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಆಹಾರ-ಕೃಷಿ

ರೈತನ ಜೀವನವು ಸುಧಾರಿಸಬೇಕು. ಪ್ರತಿಯೊಬ್ಬನೂ ಕೃಷಿಯಲ್ಲಿ ಆಸಕ್ತಿ ವಹಿಸಬೇಕು-

[ಮಾನ್ಯ ಮಂತ್ರಿಶ್ರೀ. ಎ ಬಿ ಶೆಟ್ಟರು ಅಖಿಲ ಭಾರತ ಆಕಾಶವಾಣಿಯಲ್ಲಿತ್ತ ಭಾಷಣದಿಂದ]

ವಿವಿಧ ಪಾತ್ರೆಗಳು

ಯಾವ ತ್ಯೂವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದುಲಾದವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಮ್ಯವಾಗಿ ಯೂಚಿಲ್ಲರೆಯಾಗಿಯೂಡೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.



ಶಾಖಾ ಕಚೇರಿ:—ಶ್ರೀ. ಕೆ. ಪಿ. ಭವಾನಿಶಂಕರ ಶೆಟ್ಟಿ, ಡಿವಿಜನಲ್ ಮೆನೇಜರ್, ಜಯಂತ್ ಬಿಲ್ಡಿಂಗ್, ಮೈದಾನ್ ರೋಡು, ಎಂಗಳೂರು.

ಗೂ ತಾತ್ಕಾಲಿಕವಾಗಿ ಕಬ್ಬು ಕಟ್ಟುವುದಕ್ಕೆ ರೈತರಿಗೆ ಸಹಾಯ ಕೊಡಲಾಗುತ್ತಿದೆ. 'ಬಿಯರ್' ಇಂಜಿನ್ನುಗಳು, 'ಪಂಪಿಂಗ್ ಸೆಟ್ಟು ಗಳು,' 'ಎಲೆಕ್ಟ್ರಿಕ್ ಮೋಟರ್ ಪಂಪ್ ಸೆಟ್ಟುಗಳು' ಇವನ್ನೆಲ್ಲಾ ರೈತರ ಉಪಯೋಗಕ್ಕಾಗಿ ಬಾಡಿಗೆಗೆ ಇಲ್ಲಿವೇ ಯೋಗ್ಯ ಬೆಲೆಗೆ ಕ್ರಯಕ್ಕೆ ಕೊಡಲಾಗುತ್ತಿವೆ. ಅಮೋನಿಯಮ್ ಸಲ್ಫೇಟ್ (Ammonium sulphate) ಮತ್ತು ಫೋಸ್ಫೇಟಿಕ್ ಫರ್ಟಿಲೈಸರ್ಸ್ ಇವನ್ನು ಗೊಬ್ಬರದಂತೆ ಉಪಯೋಗಿಸಲು ಅಸಲು ಬೆಲೆಗೆ ರೈತರಿಗೆ ಕೊಡಲಾಗುತ್ತಿದೆ. ಹಾಗೆಯೇ ಉತ್ತಮವಾದ ಸಸ್ಯ ಗೊಬ್ಬರದ ಬೀಜಗಳನ್ನೂ ರೈತರಿಗೆ ಅಸಲು ಕ್ರಯಕ್ಕೇ ಮಾರಲಾಗುತ್ತಿದೆ. ಸೊಪ್ಪು ಸದೆ, ಪಲ, ಸಗಣಿ ಇತ್ಯಾದಿಗಳನ್ನು ಹಾಳು ಮಾಡದೆ ಗೊಬ್ಬರವಾಗಿ ತಯಾರಿಸಲು ಪ್ರೋತ್ಸಾಹಿಸುವುದಕ್ಕಾಗಿ ಟನ್ನಿಗೆ ಅಥವಾ ಎರಡು ಗಾಡಿ ಗೊಬ್ಬರಕ್ಕೆ ಒಂದು ರೂಪಾಯಿಯಂತೆ ರೈತರಿಗೆ ಧನ ಸಹಾಯ ಕೊಡಲಾಗುತ್ತಿದೆ.

ಬೀಜಕ್ಕೆ ತಕ್ಕ ಬೆಳೆ

ಆಹಾರ ಧಾನ್ಯಗಳ ಉತ್ಪತ್ತಿಯು ಹೆಚ್ಚಬೇಕಾದರೆ ಉತ್ತಮ ಗೊಬ್ಬರ ಮಾತ್ರ ದೊರೆತರೆ ಸಾಲದು. ಉತ್ತಮ ತರದ ಬೀಜಗಳನ್ನೂ ಉಪಯೋಗಿಸಬೇಕು. ಇದಕ್ಕಾಗಿ ಒಳ್ಳೆ ಜಾತಿಯ ಭತ್ತ, ಜೋಳ ಇತ್ಯಾದಿಗಳ ಬೀಜಗಳನ್ನು ಕೊಂಡುಕೊಂಡು ರೈತರಿಗೆ ಹಂಚಲಾಗುತ್ತಿದೆ. ಬೆಳೆಗಳನ್ನು ನಾಶ ಮಾಡುವ ಕ್ರಿಮಿಕೀಟಗಳ ಹಾಗೂ ರೋಗಗಳ ನಿವಾರಣೆಗಾಗಿ ಸರಿಯಾದ ಉಪಾಯಗಳನ್ನು ಕೈಕೊಳ್ಳಲು ರೈತರಿಗೆ ಸಲಹೆ ಕೊಡಲಾಗುತ್ತಿದೆ. ಅಲ್ಲದೆ ಕೃಮಿನಾಶಕ ಔಷಧಗಳನ್ನೂ ಅವುಗಳನ್ನು ಉಪಯೋಗಿಸುವ ಉಪಕರಣಗಳನ್ನೂ ರೈತರಿಗೆ ಅರ್ಧ ಕ್ರಯಕ್ಕೆ ಮಾರಾಟಮಾಡಲಾಗುತ್ತಿದೆ. ಕೆಲವು ಕಡೆಗಳಲ್ಲಿ ಮಣ್ಣು ಸವೆಯುವುದನ್ನು ತಡೆಯುವುದೂ ಮಣ್ಣಿನ ಸಲ್ಲಿರೇಷನ ನಿಲ್ಲುವಂತೆ ಮಾಡುವುದೂ ಅತ್ಯಾವಶ್ಯಕವಾಗಿದೆ. ಅದಕ್ಕಾಗಿ ಕಟ್ಟೆಗಳನ್ನು ಕಟ್ಟುವುದೂ ಒಂದು ಪ್ರಾಮುಖ್ಯವಿಷಯವಾಗಿದೆ. ಬಳ್ಳಾರಿ, ಅನಂತಪುರ ಜಿಲ್ಲೆಗಳಲ್ಲಿ ಇದಕ್ಕಾಗಿ ಹೊತ್ತ ಮೊದಲ ಯೋಜನೆಯು ಪ್ರಾರಂಭವಾಗಿದೆ. ಉತ್ಪತ್ತಿ ಹೆಚ್ಚಬೇಕಾದರೆ ಎಲ್ಲರ ಸಹಕಾರವೂ ಬೇಕು. ಸರಕಾರ, ರೈತ, ಗಿರಾಕಿ ಎಂದು ಎಲ್ಲರೂ ಸಹಕರಿಸಬೇಕು. ಜನರಲ್ಲಿ ಆಗತ್ಯವುಳ್ಳ ಮಾನಸಿಕ ಪರಿಸ್ಥಿತಿಯನ್ನು ಉಂಟುಮಾಡಬೇಕು. ದೊರೆಯುವ ಪ್ರತಿಯೊಂದು ಅಂಗುಲ ಭೂಮಿಯನ್ನೂ ಆಹಾರ ಪೈರುಗಳನ್ನು ಬೆಳೆಸಲು ಉಪಯೋಗಿಸಬೇಕು. ಏನಾದರೂ ಬೆಳೆಸುವುದು ತನ್ನ ಕರ್ತವ್ಯವೆಂದು ಪ್ರತಿಯೊಬ್ಬನೂ ತಿಳಿಯಬೇಕು. ಹೀಗೆ ಆಹಾರದ ಕೊರತೆಯನ್ನು ನಿವಾರಿಸಲು ಎಲ್ಲಾ ಬಗೆಯಿಂದಲೂ ಪ್ರಯತ್ನಿಸಬೇಕು. ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಸಿದರೆ ಮಾತ್ರ ಸಾಲದು. ಅವುಗಳನ್ನು ವ್ಯರ್ಥಾ ಹಾಳು ಮಾಡದಂತೆಯೂ ಎಚ್ಚರ ತಕ್ಕೊಳ್ಳಬೇಕು. ಜನರು ತಮ್ಮ ಆಹಾರದ ಅಭ್ಯಾಸಗಳಲ್ಲಿ ಬದಲಾವಣೆ ಮಾಡಬೇಕು. ಅಕ್ಕಿಯನ್ನು ಕಮ್ಮಿ ಉಪಯೋಗಿಸಿ ತರಕಾರಿಗಳನ್ನೂ ಗೆಣಸು ಮರಗೆಣಸುಗಳನ್ನೂ ದಿನನಿತ್ಯದ ಆಹಾರದಲ್ಲಿ ಉಪಯೋಗಿಸಿಕೊಳ್ಳಲು ಕಲಿಯಬೇಕು. ತರಕಾರಿ, ಹಣ್ಣು, ಹಾಲು, ಬೆಣ್ಣೆ, ಮೊಸರು, ಮಜ್ಜಿಗೆ, ತುಪ್ಪ, ಮಾಂಸ, ಮೀನು, ಮೊಟ್ಟೆ ಇವುಗಳನ್ನು ಹೆಚ್ಚಾಗಿ ಉಪಯೋಗಿಸಬೇಕು. ಹೀಗೆ ಮಾಡಿದರೆ ಅಕ್ಕಿ ಮತ್ತು ಇತರ ಧಾನ್ಯಗಳ ಅವಶ್ಯಕತೆಯು ಕಡಿಮೆಯಾಗುವುದು. ದೇಹಕ್ಕೂ ಪೌಷ್ಟಿಕವಾದ ಆಹಾರವು ದೊರೆತಂತಾಗುವುದು.

ಒಕ್ಕಲುತನದಲ್ಲಿ ಭದ್ರತೆ

ಕೃಷಿಗೆ ಸಂಬಂಧವಾದ ಆರ್ಥಿಕ ಪರಿಸ್ಥಿತಿಯು ಸುರಕ್ಷಿತವಾಗದಿದ್ದರೆ ಉತ್ಪತ್ತಿ ಹೆಚ್ಚಿಸುವುದಕ್ಕೆ ಉತ್ಸಾಹವೇ ಇರಲಾರದು. ರೈತನಿಗೆ ಲಾಭಕರವಾದ ಹಿಡುವಳಿ ಇರಬೇಕು. ಅತನ ಒಕ್ಕಲುತನದಲ್ಲಿ ಭದ್ರತೆಯೂ ಇರಬೇಕು. ಮುಖ್ಯವಾದ ಆಹಾರ ಧಾನ್ಯಗಳಿಗೆ ಕನಿಷ್ಠ ಮಿತಿಯ ಕ್ರಯದಲ್ಲಿ ಭರವಸೆ ಇರಬೇಕು. ಇದು ಉತ್ಪತ್ತಿಯ ವೆಚ್ಚಕಳೆದು ರೈತನಿಗೆ ಸಾಕಷ್ಟು ಉಳಿಯುವಂತೆ ಇರಬೇಕು. ಆತನೂ ಅತನ ಕುಟುಂಬವೂ ಸರಿಯಾಗಿ ಜೀವನ ನಡೆಸಲು ಈ ಕ್ರಯವು ಅನುಕೂಲವಾಗಿರಬೇಕು. ರೈತನು ತನ್ನ ಅಲ್ಪ ಸ್ವಲ್ಪ ಆದಾಯದಿಂದ ಜೀವಿಸುವವನಾಗಿರುವುದರಿಂದ ಸುಧಾರಿತ ರೀತಿಯಲ್ಲಿ ಬೇಸಾಯ ಮಾಡಲು ಅವನಿಗೆ ಆಗ್ಗ ದರದಲ್ಲಿ ತಕ್ಕಷ್ಟು ಸಾಲ ಕೊಡಬೇಕು. ನಮ್ಮ ದೇಶದ ಜಹಜಾರು ಬೆಳೆಸುವಲ್ಲಾ ಹೆಚ್ಚಾಗಿ ಮಳೆ ಗಾಳಿಗಳ ಮೇಲೆ ಆಧರಿಸಿರುವುದರಿಂದ ಕೃಷಿಕರ ಆರ್ಥಿಕ ಪರಿಸ್ಥಿತಿಯನ್ನು ಸ್ಥಿರಗೊಳಿಸುವುದಕ್ಕೆ 'ಬೆಳೆ ವಿಮೆ' ಮಾಡುವ ಯೋಜನೆಯೊಂದೂ ಬೇಕೇ ಬೇಕಾಗಿದೆ. ಈ ಎಲ್ಲಾ ವಿಷಯಗಳಿಗೂ ಸರಕಾರವು ಸಕ್ರಿಯವಾದ ತಕ್ಕ ಗಮನವಹಿಸಿಕೊಡುವುದು. ಇಂದು ಆಹಾರ ಧಾನ್ಯಗಳನ್ನೂ ತರಕಾರಿ ಇತ್ಯಾದಿಗಳನ್ನೂ ಹೆಚ್ಚು ಬೆಳೆಸಿರಿ ಎಂದು ಜಳವಳಿಗಳನ್ನು ಮಾಡುತ್ತಿದ್ದೇವೆ. ಈ ವಿಷಯದಲ್ಲಿ ಕಟ್ಟಕಡೆಗೆ ರೈತರ ಕಡೆಗೇ ನಾವು ಗಮನಕೊಡಬೇಕಾಗಿದೆ. ನಮ್ಮ ದೇಶದಲ್ಲಿ ಹಳ್ಳಿಗಳೇ ಹೆಚ್ಚು. ಹಳ್ಳಿಗಳೇ ನಮ್ಮ ದೇಶದ ಬೆನ್ನೆಲುಬಿನಂತೆ. ಈ ಹಳ್ಳಿಗಳಲ್ಲಿರುವ ಸಾವಿರಾರು ಮಂದಿ ರೈತರೇ ನಮಗೆಲ್ಲರಿಗೆ ಬೇಕಾದ ಆಹಾರವನ್ನು ಬೆದಗಿಸುವವರು. ಆಹಾರದ ಕೊರತೆಯಿಂದ ದೇವಕೇಳಪ್ಪಡುತ್ತಿರುವ್ಯಈ ಬಿಕ್ಕಟ್ಟಿನ ಕಾಲದಲ್ಲಿ ರೈತರೆಲ್ಲಾ ನೆರವಾಗಬೇಕು. ಪ್ರತಿಯೊಬ್ಬ ರೈತನೂ ತನ್ನ ಗದ್ದೆಯಲ್ಲಿ ಎಷ್ಟು ಬೆಳೆ ಬೆಳೆಯಬಹುದೋ ಅಷ್ಟನ್ನು ಸಂಪೂರ್ಣ ಪಡೆಯಲು ಯತ್ನಿಸಬೇಕು. ಹಾಗಾದರೆ ನಮ್ಮ ಆಹಾರದ ಸಮಸ್ಯೆಯೇ ಬಗೆಹರಿಯಿತೆನ್ನಬಹುದು.

ಕೃಷಿ-ಕೈಗಾರಿಕೆಗಳ ಅಭಿವೃದ್ಧಿ

ಆಹಾರ ಧಾನ್ಯಗಳ ಸಂಗ್ರಹ, ರೇಶನ್ ಪದ್ಧತಿ, ನಿಯಂತ್ರಣ ಎಂದರೆ ಎಲ್ಲರಿಗೂ ಕಷ್ಟವಾದಂತೆ ತೋರುತ್ತಿದೆ. ಒಮ್ಮೆ ಆಹಾರದ ಕಷ್ಟವು ಬಗೆಹರಿದರೆ ನಮ್ಮ ಆರ್ಥಿಕ ಪರಿಸ್ಥಿತಿಯ ಸುಧಾರಿಸಬಹುದು. ನಮ್ಮ ದೇಶೋದ್ಧಾರ ಕಾರ್ಯಗಳನ್ನೆಲ್ಲ ಮುಂದುವರಿಸಬಹುದು. ಕೃಷಿ-ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಬಹುದು. ನಮ್ಮ ದೇಶವನ್ನು ಸಂಪತ್ತಿನಿಂದ ತುಂಬಿ ತುಳುಕಿಸಬಹುದು. ನಮ್ಮ ದೇಶದ ಕೋಟಿಗಟ್ಟಲೆ ಜನರ ಜೀವನ ಮಟ್ಟವನ್ನು ಏರಿಸಿ ಸುಖಮಯವಾಗಿಸಬಹುದು.

ಕಾಂಗ್ರೆಸ್ ಕಮಿಟಿಗಳ ಕರ್ತವ್ಯ

ನಮ್ಮಲ್ಲಿಯ ಕಾಂಗ್ರೆಸ್ ಸಂಸ್ಥೆಗಳೆಲ್ಲಾ ಹೆಚ್ಚು ಆಹಾರ ಉತ್ಪತ್ತಿ ಮಾಡುವ ಕಾರ್ಯದಲ್ಲಿ ನಿರತವಾಗಬಹುದು. ತಮ್ಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಇದಕ್ಕೆ ಅಗ್ರಸ್ಥಾನ ಕೊಟ್ಟರೆ ಎಷ್ಟೋ ಚೆನ್ನಾಗಬಹುದು. ಪ್ರತಿ ಕಚೇರಿಯಲ್ಲಿಯೂ ಕಾಂಗ್ರೆಸ್ ಕಮಿಟಿಗಳು ರೈತರೊಡನೆ ಸಂಬಂಧವಿಟ್ಟುಕೊಂಡು ರೈತರು ಸುಧಾರಿತ ರೀತಿಯಲ್ಲಿ ಬೇಸಾಯ ಮಾಡುವಂತೆ ಮಾಡುವುದಲ್ಲದೆ ಸರಕಾರವು ರೈತರಿಗೆ ಒದಗಿಸುವ ಸಹಾಯಗಳನ್ನೆಲ್ಲಾ ರೈತರು ಸಂಪೂರ್ಣ ಉಪಯೋಗಿಸಿಕೊಳ್ಳುವಂತೆ ಮಾಡಬೇಕು. ಹೆಚ್ಚು ಆಹಾರ ಬೆಳೆಸುವ ಚಳವಳಿಯು ಪತ್ರಿಗಳನ್ನು ಹಿಡಕೊಂಡು ಸಾಗುವಾರಸು. ಏಕೆಂದರೆ ಇದೊಂದು ರಾಷ್ಟ್ರೀಯ ಅಂದರೆ ಇಡೀ ದೇಶಕ್ಕೇ ಅನ್ವಯಿಸುವ ಪ್ರಶ್ನೆಯಾಗಿದೆ. ಕಾಂಗ್ರೆಸ್ ದೇಶದ ಅಷ್ಟಂತಪ್ಪ ವ್ಯಾಪಿಸಿರುವ ಸಂಸ್ಥೆಯಾದುದರಿಂದವಷ್ಟು ಹೆಚ್ಚಿನ ಜವಾಬ್ದಾರಿಕೆಗಳನ್ನು ನಿರ್ವಹಿಸುವುದರಲ್ಲಿ ಸಂದೇಹವಿಲ್ಲ. ಸಂಯುಕ್ತ ರಾಷ್ಟ್ರಗಳು ಈಗಾಗಲೇ ಆಹಾರ ಮತ್ತು ಕೃಷಿಗಾಗಿ ಒಂದು ಸಂಸ್ಥೆಯನ್ನು ಸ್ಥಾಪಿಸಿದೆ. ಎಲ್ಲರಿಗೆ ಬೇಕಾದ ಆಹಾರದ ಸಮಸ್ಯೆಯು ಅಂತರ ರಾಷ್ಟ್ರೀಯ ಸಮಸ್ಯೆಯೆಂದೇ ಪರಿಕ್ಷಿಸಲಾಗಿದೆ. ಹೀಗೆ ಆಹಾರ-ಕೃಷಿಗಳಲ್ಲಿ ಜನತೆ ಹೆಚ್ಚಿನ ಆಸಕ್ತಿ ವಹಿಸಿದರೆ ದೇಶದ [illegible] ಯು ಶೀಘ್ರದಲ್ಲೇ ಸುಧಾರಿಸಿ ಎಲ್ಲರಿಗೂ ಸುಖವಾಗಿರುತ್ತದೆ.

NOTICE.

Notice is hereby given to the public that the Karnavan of our Tarwad, Etappani chevert Tarwad of Bedadka village, South Kanara District, by name Kannan Nair is 88 years old and is of weak mind, and an imbecile. It is reliably learned that one Thiyyan Raman, son of Kottan of Mukkood and one Aingooran Veethil Kunhappa Nair/alias Chathu Nair in collusion with each other won over the abovesaid Karnavan Kannan Nair a few days back and made the latter sign and put his thumb impression on 3 or 4 blank papers. The blank papers, it is suspected, may be converted into receipts or other documents calculated to injure the interest of the tarwad and to secure unlawful gain to the abovesaid two persons or their friends and acquaintences who seek to work against the interests of the tarwad. We are junior members of the said tarwad. On behalf of the said tarwad we give notice that any such receipt or document brought into being under the above circumstances is invalid and is of no value and is not binding upon the tarwad.

(1) Cheveri Kunhambu Nair,
S/o Utha Amma.
(2) Cheveri Krishnan Nair.

ಡಿ. ಎನ್. ಪಂಡಿತರ ಶ್ರೇಷ್ಠವಾದ

ಪಾಥಿಸ್ ನೀಮ್

ಟೂಥ್‌ಪೌಡರ್ ಉಪಯೋಗಿಸಿರಿ

ಸ್ಟಾಕಿಸ್ಟರು: ನಾಯಕ್ಸ್ ಬೀಡಿ ವರ್ಕ್ಸ್, ಸಂತೆಕಟ್ಟೆ, ಉಡುಪಿ.

"ಗೋಪಾಲ ಭೇಷಜಾಶ್ರಮ" ಮಂಗಳೂರು.
(ಸ್ಥಾಪನೆ 1910)
ಸ್ಥಾಪಕರು:-ಆಯುರ್ವೇದ ಭೂಷಣ ಯಂ. ಸಿ. ಶಾಸ್ತ್ರೀ,

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಸುಲಭವಾಗಿರುವುದು.

ಇವರ
ನವಜೀವಾತು
ಎಂಬ
ಸೂತಿಕಾ ರಸಾಯನ

ಹೆಚ್ಚಿನ ಮಾಹಿತಿಗೆ—ಡಾ| ಯಂ. ಸಿ. ಶಾಸ್ತ್ರೀ, ಯಲ್.ವಿ
ಕೊಡಿಯಾಲಬೈಲು ಪೋಸ್ಟು, (ಮಂಗಳೂರು)
ಸ್ಟಾಕಿಸ್ಟರು:—ಡಾಲ ಏ. ಕೆ. ಶಿವರಾಮರಾವ್, ಕುಂಜಿಬೆಟ್ಟು, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಧ ಕಂಟ್ರೋಲ** ರೋಗ ಗೃಹಸ್ತ ಪೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆ ಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಟ್ಟು ನೀರಿನಲ್ಲಿ ಸೇವಿಸಬೇಕು.

ಬೆಲೆ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೨—೦—೦. ಪೋಸ್ಟೇಜ್ ಚಾರ್ಜು ೧ ಜಿಹೆ.

ಮಾಲಕರು:—ಹಾಲಪ್ಪಾ ಭೆರೀರಪ್ಪಾ ಹಾವಣಗೇರಿ

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನು ವಿಚಾರಿಸಿರಿ.

ಸಕ್ಕರೆ ಅಭಾವ

ಜನವರಿ ತಿಂಗಳಿಂದ ಪರಿಸ್ಥಿತಿ ಸುಧಾರಿಸಬಹುದು

ಕಾರಣಗಳಿವೆ ಹಳ್ಳಿಗಳಲ್ಲಿ ಈಗೀಗ ಕಾಫಿ, ಟೀ, ಕುಡಿಯುವ ರೂಢಿಯು ಹೆಚ್ಚುತ್ತಾ ಬಂದಿರುವುದರಿಂದ ಅಲ್ಲಿ ಸಕ್ಕರೆಯು ಹೆಚ್ಚು ಉಪಯೋಗಿಸಲ್ಪಡುತ್ತಿದೆ. ಹಳ್ಳಿಗಳಲ್ಲಿ ಜೀವನ ಮಟ್ಟವು ತುಂಬಾ ಏರಿದೆ. ಆದರಿಂದ ಸಕ್ಕರೆ ಉಪಯೋಗವೂ ಹೆಚ್ಚಿದೆ. ಮಧ್ಯಪಾನ ನಿರೋಧ ಪದ್ಧತಿಯು ಬೇ ಕುಡಿಯುವ ಅಭ್ಯಾಸಕ್ಕೆ ಉತ್ತೇಜನಕೊಟ್ಟಿದೆ. ಇವೆಲ್ಲವೂ ಒಳ್ಳೇದಕ್ಕಾದರೂ ಸಕ್ಕರೆಯ ಕೊರತೆಗೆ ಕಾರಣಗಳಾಗಿವೆಂಬುದನ್ನು ನಾವು ಮರೆಯಂಕಾಗದು. ಇದಲ್ಲದೆ ಹಳ್ಳಿಗಳಿಂದ ಜನರು ಹಿಂದೇ ಸವನೆ ಶಹರ[illegible] ಕಡೆಗೆ ವಲಸೆಬರುತ್ತಿದ್ದಾರೆ. ಪಟ್ಟಣಗಳಲ್ಲಿ ಅವರು ಕಾಫಿ, ಟೀ ಕುಡಿಯುವ ಹೊಸ ಅಭ್ಯಾಸಗಳನ್ನು ಅನುಸರಿಸಿ, ಸಕ್ಕರೆಯ ವೆಚ್ಚವನ್ನು ಇನ್ನಷ್ಟು ಏರಿಸುತ್ತಾರೆ. 1941ರಲ್ಲಿ ಮದ್ರಾಸು ನಗರದ ಜನಸಂಖ್ಯೆಯು 770,000ರಷ್ಟಿದ್ದುದು ಈಗ 1,300,000ಕ್ಕೇರಿದೆ. ಇದೇ ರೀತಿ ಪ್ರಾಂತದ ಇತರ ನಗರಗಳಲ್ಲಿಯೂ ಜನರು ತುಂಬಿರುವರು. ಈ ರೀತಿ ಹಳ್ಳಿಗಳಿಂದ ಜನರು ಬಲಸೆ ಬಂದು ಪಟ್ಟಣಗಳಲ್ಲಿ ತುಂಬಿರುವುದು ಮದ್ರಾಸು ಪ್ರಾಂತದಲ್ಲಿ ಮಾತ್ರವಲ್ಲ, ಹಿಂದುಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಹೀಗೆಯೇ ಜನರು ಪಟ್ಟಣಗಳಿಗೆ ಬರುತ್ತಿದ್ದಾರೆ. ಕೊನೆಯದಾಗಿ ಹಿಂದುಸ್ಥಾನದ ವಿಭಜನೆ. ನಿರಾಶ್ರಿತರು ಹಿಂದುಸ್ಥಾನಕ್ಕೆ ಬರುತ್ತಿರುವುದೂ, ಅವರು ಸಕ್ಕರೆ ಉಪಯೋಗಿಸುವುದೂ ಸಕ್ಕರೆಯ ಕೊರತೆಗೆ ಇನ್ನೊಂದು ಕಾರಣವೆನ್ನಬಹುದು.

ಜನವರಿಯಲ್ಲಿ

1948ರಿಂದ ಸಕ್ಕರೆಯ ಉತ್ಪತ್ತಿಯು ವೆಚ್ಚಕ್ಕಿಂತ ಕಡಿಮೆಯಾಗಿರುತ್ತದೆ. ನಿರಂಗಳಲ್ಲಿ ಉತ್ಪತ್ತಿಯಾದ ಪ್ರಮಾಣದಲ್ಲಿ ಶೇಕಡ 90ಕ್ಕಿಂತಲೂ ಹೆಚ್ಚಿನಂಶವನ್ನು ಕಳೆದ ಅಗೋಸ್ತು ತಿಂಗಳಲ್ಲಿ ಹೊರತರಲಾಗಿತ್ತು. ಅಂದರೆ ಈ ವರ್ಷದ ಅಂತ್ಯದ ವರೆಗೆ ಉಳಿಯುವುದು ಶೇಕಡ 10ರಷ್ಟು ಮಾತ್ರ ಅದರೆ ಬರುವ ಜನವರಿ ತಿಂಗಳಲ್ಲಿ ನಿರಂಗಳಿಂದ ಹೊಸ ದಾಸ್ತಾನುಗಳು ಬರಬಹುದೆಂದೂ, ಆಗ ಪರಿಸ್ಥಿತಿಯು ಸುಧಾರಿಸುವುದೆಂದೂ ನಮ್ಮ ಆಹಾರ ಖಾತಾ ಕಾರ್ಯದರ್ಶಿಯವರು ಭರವಸೆಯಿತ್ತಿದ್ದಾರೆ. ಆತನಕ ನಾವು ನಮ್ಮಲ್ಲಿರುವ ಸಕ್ಕರೆ ಪ್ರಮಾಣದಿಂದ ಮುಂದೆ ದಿಯಬೇಕಾಗಿದೆ.

ಸ್ವಾಭಾವಿಕವಾಗಿ ಸಕ್ಕರೆ ದಾಸ್ತಾನು ತಗ್ಗಿದೊದನೆಯೇ ಬೆಲೆಯು ಏರುತ್ತದೆ. ಆದರೆ ಅಗೋಸ್ತು ತಿಂಗಳಾಂತ್ಯದೊಳಗೆ ಸಂಯುಕ್ತ ಪ್ರಾಂತ ಸರಕಾರವು ನಿಯಂತ್ರಿತ ಏರ್ಪಾಡುಗಳನ್ನು ಕೈಕೊಂಡಿರುತ್ತದೆ. ಸಪ್ಟಂಬರ 2ರಂದು ಹಿಂದುಸ್ಥಾನ ಸರಕಾರವು ಬೇರೆಪದಲ್ಲಿದ್ದ ಯಾವತ್ತು ಸಕ್ಕರೆ ದಾಸ್ತಾನುಗಳನ್ನು ಸ್ವಾಧೀನಪಡಿಸಿದೆ ಅಂದು ಸುಮಾರು 100,000 ಟನ್ನು ಸಕ್ಕರೆ ದೊರತಿದೆ.

ಕೇಂದ್ರದಿಂದ ಸಹಾಯ

ಸಾಧಾರಣವಾಗಿ ಸಪ್ಟಂಬರಿಂದ ಜನವರಿಗೆ ಹಿಂದುಸ್ಥಾನಕ್ಕೆ ಸುಮಾರು 300,300 ಟನ್ನುಗಳಷ್ಟು ಸಕ್ಕರೆ ಬೇಕಾಗುತ್ತದೆ. ಹಿಂದುಸ್ಥಾನ ಸರಕಾರವು ಅತ್ಯವಸರದಲ್ಲಿ ದಾಸ್ತಾನುಗಳನ್ನು ಸ್ವಾಧೀನ ಪಡಿಸಿದ್ದರಿಂದ ಈಪೈಕಿ 100,000 ಟನ್ನುಗಳಷ್ಟು ಪ್ರಮಾಣವಾದರೂ ಪೇಟೆಯಿಂದ ಮಾಯವಾಗುತ್ತಿತ್ತು. ಜನತೆಗೆ ಇನ್ನಷ್ಟು ತೊಂದರೆಯಾಗುತ್ತಿತ್ತು. ಈಗ ಜನರಿಗೆ ಬೇಕಾದ ಪ್ರಮಾಣದ ಮೂರರಲ್ಲಿ ಒಂದಂಶವನ್ನಾದರೂ ಹಂಚುವಂತಾಗಿದೆ. ಸೆಪ್ಟಂಬರಿಂದ ಡಿಸಂಬರ ತಿಂಗಳಆಂತ್ಯದ ವರೆಗೆ ಮದ್ರಾಸು ಪ್ರಾಂತಕ್ಕೆ ಸುಮಾರು 40,000 ಟನ್ನುಗಳ ಸ್ಪೆಷಲ್ ಸಕ್ಕರೆ ಬೇಕಾಗುತ್ತದೆ. ಆದರೆ ಈ ಪ್ರಮಾಣವನ್ನು ಒದಗಿಸಿಕೊಳ್ಳಲು ಅಸಾಧ್ಯವಾದುದರಿಂದ ಹಿಂದುಸ್ಥಾನ ಸರಕಾರವು ನಮ್ಮ ಪ್ರಾಂತಕ್ಕೆ 14,700 ಟನ್ನುಗಳಷ್ಟು ಪೂರೈಸಲು ಒಪ್ಪಿದೆ. ಈ ಪ್ರಮಾಣದಲ್ಲಿ ಅರ್ಧ ಆಂಧ್ರ ಉತ್ತರ ಹಿಂದುಸ್ಥಾನದಿಂದ ಬರಬೇಕು.

ಪರಿಸ್ಥಿತಿಯನ್ನು ಕೆಡಿಸಲು ಪ್ರಕೃತಿಯೂ ಸ್ವಲ್ಪ ಪ್ರೋತ್ಸಾಹಿಸಿತೆನ್ನಬಹುದು. ಕರ್ನಾಟಕ ಜಿಲ್ಲೆಗಳಲ್ಲಿ ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ಉತ್ತರ ಹಿಂದುಸ್ಥಾನದಿಂದ ಬರಬೇಕಾದ ದಾಸ್ತಾನುಗಳಿಗೆ ತುಂಬಾ ವಿಳಂಬವಾಗಿದೆ.

ಪಸುಗೆ ಬಂತು

ಅಂತಹ ಸಂದರ್ಭಗಳಲ್ಲಿ ಮದ್ರಾಸು ಸರಕಾರವು ತಿರುಚಿ ಸಕ್ಕರೆ ಪಸುಗೆ ಏರ್ಪಾಡನ್ನು ಕೈಕೊಳ್ಳಬೇಕಾಯಿತು. ಒಬ್ಬನಿಗೆ ಪಾವ್ಕೆ 6 ತೊಲೆಗಳಂತೆ ಈಗ ಸಕ್ಕರೆ ಹಂಚಲಾಗುತ್ತದೆ. ಹೆಚ್ಚಿಗೆ ಆದಾಯದವರಿಗೆ 9 ತೊಲೆಗಳಷ್ಟು ಹೆಚ್ಚಿಗೆ ಕೊಡಲಾಗುತ್ತದೆ. ಪ್ರತಿ ಚಿಲ್ಲೆಗೆ ಇಂತಿಷ್ಟೇ ಸಕ್ಕರೆ ಪೂರೈಸಲಾಗುವುದೆಂದು ಸರಕಾರವು ಗೊತ್ತು ಪಡಿಸಿದೆ. ನ್ಯಾಯವಾದ ರೀತಿಯಲ್ಲಿ ಸಕ್ಕರೆ ಹಂಚುವಂತೆ ನೋಡಿಕೊಳ್ಳಬೇಕೆಂದೂ ಸದ್ಯ ಈ ಪ್ರಮಾಣವನ್ನು ಹೆಚ್ಚಿಸಲು ಅಸಾಧ್ಯವೆಂದು ಜನತೆಗೆ ವಿವರಿಸಬೇಕೆಂದೂ ಕಳೆಕ್ಟರರಿಗೆ ಆಪ್ತ ಪತ್ರ ಕೊಡಲಾಗಿದೆ. ಈಗಿರುವ ದಾಸ್ತಾನುಗಳಿಗೆ ಅನುಸಾರವಾಗಿ ಹೋಟೆಲುಗಳಿಗೆ ಸಪ ಸಕ್ಕರೆ ಹಂಚಲಾಗುತ್ತದೆ.

ಸಕ್ಕರೆ ಪಸುಗೆ ಪದ್ಧತಿಯಲ್ಲಿ ಕೊರತೆಗಳಿಲ್ಲವೆಂದಲ್ಲ. ಪಾಸನಲ್ಲಿ [illegible] ಸಾಕಷ್ಟಿಲ್ಲ. ಏಕಂದರೆ [illegible] ಸಮಗ್ರ ವಿತರಣೆ ಮಾಡುವುದಕ್ಕಿಂತ ಪಂಚೆ ಸಮೂಹಾಗ್ರವಾದ ವಿಚಾರ ವಿನಿಮಯಗಳು ನಡೆಯಬೇಕಾಗಿದೆ. ಅವಕ್ಕೆ ಸಮಯವಿದ್ದಿಲ್ಲ.

ಸಕ್ಕರೆ ಕೊರತೆಯನ್ನು ನಿವಾರಿಸಲು ಬೆಲ್ಲವನ್ನು ಹೆಚ್ಚಿಚ್ಚು ಉಪಯೋಗಿಸಬೇಕು. ಬೊಂಬಾಯಿಯಲ್ಲಿ ಹೋಟೆಲುಗಳು ಈಗಾಗಲೇ ಸಕ್ಕರೆಯ ಬದಲಿಗೆ ಬೆಲ್ಲ ಉಪಯೋಗಿಸಲೇಸಲಾರಂಭಿಸಿವೆಯಂತೆ. ಬೆಲ್ಲದ ವೆಚ್ಚವು ಹೆಚ್ಚಿದರೆ ಆದರ ಬೆಲೆಯೂ ಏರಬಹುದು ನಿಜ. ಆದರೆ ಸದ್ಯದ ಕಠಿಣ ಪ್ರಸಂಗದಿಂದ ನಾವು ಪಾರಾಗಬಹುದು ಸಕ್ಕರೆ ಮತ್ತು ಬೆಲ್ಲದ ಮೇಲಿದ್ದ ನಿಯಂತ್ರಣವನ್ನು ತೆಗೆಯಬೇಕೆಂದು 1946-47ರಲ್ಲಿ ನಮ್ಮ ಪ್ರಾಂತದಲ್ಲಿ ತುಂಬಾ ಚಳವಳ ನಡೆದುದರ ಫಲವಾಗಿ ಸರಕಾರವು ಕೊನೆಗೆ ನಿಯಂತ್ರಣಾಜ್ಞೆಯನ್ನು ರದ್ದುಪಡಿಸಿತು. ಆದರೆ ರಜ್ಜಿನಲ್ಲೇ ಈ ಪಸ್ತುಗಳ ಬೆಲೆ ಏರಿದುವಲ್ಲದೆಅವು ಪೇಟೆಯಿಂದ ಮಾಯವಾದವು. ಅಂತಹ ಪರಿಸ್ಥಿತಿಯಲ್ಲಿ ದಾಸ್ತಾನುಗಳನ್ನು ಸ್ವಾಧೀನ ಪಡಿಸುವುದು ಸಸ ಸುಲಭವಲ್ಲ. ಅವುಗಳಿವೆ ಸ್ಥಳಗಳನ್ನು ವೇಗನೇ ಕಂಡು ಹಿಡಿಯುವುದು ಕಸ್ಟ.

ಸ್ವಾವಲಂಬಿಯಾಗಲು ಯತ್ನಿಸಬೇಕು

ವೆಚ್ಚದ ಮೇಲೆ ತಿರುಗಿ ನಿಯಂತ್ರಣ ಮಾಡಿಸಬೇಕೆಂದು ಕೆಲವರು ಕೇಳುತ್ತಿದ್ದಾರೆ ಆದರೆ ಇದು ಸಾಧ್ಯವಿಲ್ಲ. ಆಹಾರ ರಾಜಕಾರ್ಯದರ್ಶಿಯವರು ಸೂಚಿಸಿದಂತೆ ಇದೆ ನಮ್ಮ ಪ್ರಾಂತದ ಒಂದು "ಗುಡಿಕೈಗಾರಿಕೆ" ಯಾಗಿದೆ. ಅದುದರಿಂದ ನಿಯಂತ್ರಣ ಮಾಡಲು ಬೇಕಾಗುವ ವಿವರಗಳನ್ನು ಸುಲಭವಾಗಿ ಒದಗಿಸಿಕೊಳ್ಳಲು ಸಾಧ್ಯವಿಲ್ಲ.

ಬಾವಾ ದೇಶದಿಂದ ಸಕ್ಕರೆ ಆಮದು ಮಾಡಬೇಕೆಂದು ಕೆಲವರು ಅಭಿಪ್ರಾಯ. ಇದಕ್ಕೂ ಸಾಧ್ಯವಿಲ್ಲ ಅ ರೀತಿ ತರಿಸಲಿಕ್ಕೆ ನವಿಷ್ಟ ಪಣವಿಲ್ಲ. ಇದಲ್ಲದೆ ನಮ್ಮ ದೇಶದ ಸೃಷ್ಟಿಯಿಂದ ನಾವು ನಮ್ಮದೇ ಗೃಹಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕಾಗಿದೆ. ನಾ ಹೊರಗಿನ ಸಹಾಯದ ಮೇಲೆ ಹೊಂ ಕೊಂಡಿದ್ದರೆ ನಾವೇ ಸ್ವಾವಲಂಬಿಗಳಾಗಲು ಯತ್ನಿಸಬೇಕು.

[ಮದ್ರಾಸು ಸಮಾಚಾರದಿಂದ]

ಆನ್ಮತಾಂಜನ

ತಲೆನೋವಿನಿಂದ, ತಿರೋವೇದನೆ, ಉಳುಕು ಕಾಯಿಲೆಗೆ, ಭುಜ ಹಲ್ಲು ವೇದನೆಗಳಿಗೂ, ಎದೆ ನೋವು, ಕೈಯಗಳು, ಬಾತುಕೊಳ್ಳುವುದು, ಚೇಳವಿಷಮಂಠಾಕಾದನ್ನು, ಸಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ.

REGD
ಹುಳುಕಡ್ಡಿ ಮಬ್ಬು ನಮ್ಮಲ್ಲಿ ಸಿಕ್ಕುತ್ತದೆ.
ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಗೊನೋರಿಯಾ ಸೆರಮಾರೋಗ ಉಷ್ಣ ರೋಗಕ್ಕೆ ಔಷಧ

ಒ ದಿಂಪಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಕೀವು ಬರುತ್ತಿದ್ದರೆ, ಥೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾರಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬೀಕೆಂಪು ನೆರಗು ಹೋಗುತ್ತಿದ್ದರೆ, ಹೊಲಿಕುಟು ಗಮಿರಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ 6 ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಧ್ಯಾಹ್ನ ಸಂಜೆ ಎರಡು ಸಾರಿ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರಿ ಒ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸೀಖಾರ, ಕೂಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂಕ್ಕೆ ಶರೂ. ಪೋಸ್ಟ ಚಾರ್ಜ ಲ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರೆ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ್ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ. ಗದಗ-

ಭುತುಸ್ರಾವ ನಿಂತಿತು

'ಕುಮಾರಿ' ಸಿಲ್ಲೆಗಳನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವು. ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀವ್ರ ಗುಣಹೊಂದಿ ಹುಟ್ಟು, ಯಾವ ಬಾಧಕವೂಯಿಲ್ಲ. ಸಾರಾರು ಮಂದಿಗೆ ಖಾತ್ರಿ ಗುಣವಾಗಿದೆ ಬೆಲೆ: ರೂ 3-[illegible] ಸ್ಪೆಶಲ್ ರೂ. 5 ಅಧಿಕಾರಿಕ ಸ್ಪೆಶಲ್ ರೂ. 8-[illegible] ಪನ್ನೆರಡಾಣೆ ಪ್ರತ್ಯೇಕ.]

MRS. P. DEVEE, F. DS. (N. J.
Tollygunge CALCUTTA.
ಸ್ವಾತಿಸ್ವರು: ಶಹಾಕಂಪನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.